ಯನಿಕ್ಕಿ ಬಾಗಿಲಲಿ ॥ ಒರೆಯನುಗಳಿಚಿ ಬಿತ್ತದಲಿ ಬಿಡ । ದರದನಿಕ್ಕೆಲದವರನೋಲಗ । ಕುರವಣಿಸಿದ
ನು ಮುಂದೆ ನಿಂದನು ದ್ರುಪದಭೂಪತಿಯಾ ॥೩೨॥ ಏನೆಲವೊ ಪಾಂಚಾಲ ಚಿಕ್ಕಂದಾನು ನೀನೊಂದಾ
ಗಿ ತಂದೆಯೊ । ಳೋದನುಂಡೆವು ಮರೆದು ಕಳೆದಾ ಹಾಮಹಾದೇವಾ ॥ ಏನು ಬಂದಿರಿ ಯೆಂಬಗುಣ
ವಚ । ನಾನುರಾಗವು ಸಾಲದೇ ಧನ । ವೇನು ಫಲ ಕಕ್ಕುಲಿತೆಯೆಮಗಿಲ್ಲೆಂದನಾ ದ್ರೋಣ ॥೩೩॥ ಸೂರಿ
ಗಳಿಗತಿಮೂರ್ಖರಿಗೆ ಗಂ । ಭೀರರಿಗೆ ಭಂಡರಿಗೆ ವೇದಾ । ಚಾರಸಂಯುಕ್ತರಿಗೆ ನಾಚಾರಪ್ರಸಕ್ತರಿಗೆ ॥
ಧೀರರಿಗೆ ಹಂದೆಗಳಿಗೆತ್ತಣ । ಸೇರುವೆಗಳೈ ಭೂಪರಿಗೆ ಬಡಹಾರುವರಿಗೆತ್ತಣದು ಸಖ್ಯತನವೆಂದನಾ ದ್ರುಪ
ದ ॥೩೪॥ ಎಲವೊ ನಿಸ್ವಾಸ್ಥನ ಸಹಿತೀ ಪೊಳಲ ಸುಡುವೆನು ನಿನ್ನ ಸೀಳಿದು । ಬಲಿಯ ಕೊಡುವೆನು ಭೂತ
ಗಣಕೆಟರಲ್ಲ ನೀನೆನಗೆ ॥ ಕಲಿತವಿದ್ಯೆಯ ಕೋಲಮಕ್ಕಳ । ಕಳುಹಿ ಕಟ್ಟಿಸಿ ವಾಮಪಾದದಿ । ತಲೆಯನೊದೆವೆ
ನು ಮರೆಯದಿರು ನೀನೆಂದನಾ ದ್ರೋಣ ॥೩೫॥ ಎಂದು ಭಾಷೆಯ ಮಾಡಿ ತನ್ನಯ । ನಂದನನ ನೊಡ
ಗೊಂಡು ಜನಪದ । ವೃಂದವಹಲವನು ಕಳೆದು ಬಂದನು ಹಸ್ತಿನಾಪುರಿಗೆ ॥ ಅಂದು ಸಕಲಕುಮಾರಕರು
ನಲ । ವಿಂದ ನಗರಿಯ ಹೊರಗೆ ಗುರಿಗಳ । ಮುಂದುವರಿದೆಸುತಿರಲು ಮುದದಲಿ ಕಂಡನಾ ದ್ರೋಣ ॥೩೬॥
ಬೆರಸಿವನು ನೆರವಿಯನು ನೋಡು । ತ್ತಿರೆ ಯುಧಿಷ್ಠಿರನೃಪನ ಹರಳುಂ । ಗುರುವಿಘಾತಿಯೊಳುಗಿದು ಬಿದ್ದು
ದಗಾಧಕೂಪದಲಿ ॥ ನೆರೆದು ತಡಿಯಲಿ ನಿಂದು ನೂರರು । ಮರುನಿರೀಕ್ಷಿಸಿ ಸಾಧ್ಯವಲ್ಲೆನು । ತಿರೆ ಮಗಂಗೆ
ಮುನೀಂದ್ರನೆಂದನು ಬೇಗ ತೆಗೆಯೆಂದು ॥೩೭॥ ಸರಳ ತೊಡಚಿ ತದೀಯಮಣಿಬಂ । ಧುರದ ಮು
ದ್ರಿಕೆಗೆಚ್ಚ ಹಿಳುಕಿನ । ಶಿರಕೆ ಶರವಾ ಹಿಳುಕಿನಲಿ ಕಣೆಯೆಚ್ಚ ಬಂಧದಲಿ ॥ ಸರಳಸಂದರ್ಭದಲಿ
ನಿಮಿಷಾಂ । ತರಕೆ ಫಣಿಪನ ಹೆಡೆಮಣಿಯನು । ದ್ಧರಿಸುವಂತಿರ ತೆಗೆದು ಬಿಸುಟನು ರತುನಮುದ್ರಿಕೆ
ಯ ॥೩೮॥ ಕಂಡು ಬೆರಗಾದರು ಕುಮಾರರ । ತಂಡ ತನತನಗೈದಿ ಭೀಷ್ಮನ । ಸಂಪಲೆದುದೀಮುನಿ
ಯನೀಗಲೆ ಸಂತವಿಡಿಯೆಂದು ॥ ಚಂಡಭುಜಬಲನವನ ಕಾಣಿಸಿ । ಕೊಂಡು ಕೊಟ್ಟನು ಭೀಷ್ಮನವರಿಗ ।
ಖಂಡವಿಭವವನತುಳಧನಪತಿಯಾದನಾ ದ್ರೋಣ ॥೩೯॥ ವರಮುಹೂರ್ತದೊಳಿವನ ನೂರರು । ವರ
ನು ಕೊಟ್ಟನು ಶಸ್ತ್ರವಿದ್ಯಾ । ಪರಿಣತರ ಮಾಡೆಂದು ದ್ರೋಣನ ಕೈಯಲಾ ಭೀಷ್ಮ ॥ ಗರುಡಿ ಕಟ್ಟಿ
ತು ನೂರುಯೋಜನ । ವರೆಯ ವಿಸ್ತಾರದಲಿ ಸಾವಿರ । ಕುರಿಯ ಹೊಯ್ದರು ಪೂಜಿಸಿದರಾ ಚದುರ
ಚಂಡಿಕೆಯ ॥೪೦॥ ಗರುಡಿಪೂಜಾವಿಭವಸಮನಂ । ತರದಲನಿಬರು ಸಮವತೊಡಗಿದ । ರರಸುಮಕ್ಕಳು

ಕೇಳಿದರು ನಾನಾದಿಗಂತದಲಿ ॥ ಬರುತಲಿದ್ದರು ಕೂಡೆ ಹಸ್ತಿನ । ಪುರಿಗೆ ವಿದ್ಯಾರ್ಥಿಗಳು ಪಾರ್ಥಿವ । ವರಕುಮಾರರು ಬಂದು ಕಂಡರು ಶಸ್ತ್ರಪಂಡಿತನಾ ॥೪೧॥ ರಾಯಬಲ್ಲೆ ಮುನ್ನ ಶಿಶುವನು । ತಾಯಿ ಬಿಸುಟಳು ಗಂಗೆಯಲಿ ರಾ । ಧೇಯನಾವನು ರಾಧೆಯೆಂಬವಳೊಲಿದು ಸಾಕಿದೊಡೆ ॥ ಆಯತಾಕ್ಷನು ಪರಶುರಾಮನೊ । ಳಾಯುಧದ ಶ್ರಮಗಲಿತು ಬಳಿಕದು । ವಾಯವಾದೊಡೆ ಬಂದನಾಗಜಪುರಿಗೆ ಕಲಿಕರ್ಣ ॥೪೨॥ ಬಂದ ಹಸ್ತಿನಪುರಿಗೆ ರಾಧಾ । ನಂದನನು ದುರ್ಯೋಧನನನೈತಂದು ಕಂಡನು ಕೌರವೇಶ್ವರನಿವರ ಕಾಣಿಸಿದ ॥ ಅಂದುಮೊದಲಾಗವರ ಸಖ್ಯಕೆ । ಸಂದ ಕಾಣೆನು ಕರ್ಣ ಕುರುಪತಿ । ಗೊಂದೆಜೀವನವೊಂದೆಮನಮತವೊಂದೆಕೇಳೆಂದ ॥೪೩॥ ಬೇಟೆ ಕರ್ಣನಕೂಡೆ ಹಗಲಿರು । ಳಾಟ ಕರ್ಣನಕೂಡೆ ಷಡುರಸ । ದೂಟ ಕರ್ಣನಕೂಡೆ ಶಸ್ತ್ರಾಭ್ಯಾಸವವಗೂಡೆ ॥ ತೋಟಿಮನದಲಿ ನಗೆಯಮಧುರದ । ನೋಟಕಣ್ಣಿನೊಳುಳಿದವರ ಕೂ । ಡಾಟಗಳು ತಾವಿಬ್ಬರೊಂದೆನಿಸಿದರು ಜಗವರಿಯೆ ॥೪೪॥ ಸುರಗಿಸಬಳಕಠಾರಿಯಬ್ಬಣ । ಹರಿಗೆ ಹಿರಿಯಬ್ಬಣವಡಾಯುಧ । ಪರಿಘಚಕ್ರಮುಸುಂಡಿತೋಮರಭಿಂಡಿವಾಳಚಯ ॥ ಪರಶುಕಕ್ಕಡೆಮುಸಲಹಲವು । ದ್ಗರಥನುರ್ವಂಪಾದಿಶಸ್ತ್ರ । ತ್ಕರದಲನಿಬರು ಕುಶಲರಾದರು ಮುನಿಯಗರಡಿಯಲಿ ॥೪೫॥ ಜನಪ ಕೇಳ್ ಭೀಮಸುಯೋ । ಧನರು ಗದೆಯಲಿ ಮಿಗಿಲು ಕರ್ಣಾ । ರ್ಜುನರು ಧನುವಿನಲಧಿಕರಾದರು ನೃಪಕುಮಾರರಲಿ ॥ ತನತನಗೆ ಸರ್ವಾಯುಧಂಗಳ । ಲನಿಬರರಿದರು ಕೂಡೆ ಗುರುವಿನ । ಮನಕೆ ಹತ್ತಿಯವಾದನರ್ಜುನನಸ್ತ್ರಶಿಕ್ಷೆಯಲಿ ॥

ಅಂತು ಸಂಧಿ ೬ಕ್ಕೆ ಪದ ೨೩೦ಕ್ಕಂ ಮಂಗಳಮಸ್ತು.

ಏಳನೆಯ ಸಂಧಿ.

ಸೂಚನೆ॥ ರಾಯಕಟಕಾಚಾರ್ಯನಿಂದಲಿ । ಗಾಯದಲಿನೊಂದನಲಮುಖದಲಿ
ರಾಯದ್ರುಪದನು ಪಡೆದ ದೃಷ್ಟದ್ಯುಮ್ನದ್ರೌಪದಿಯಾ ॥

ಕೇಳು ಜನಮೇಜಯಧರಿತ್ರೀ । ಪಾಲ ಕಲಿತರು ನಿಮ್ಮಪೂರ್ವನೃ । ಪಾಲಕರು ಸರಹಸ್ಯಸಾಂಗೋಪಾಂಗವಿದ್ಯೆಗಳ ॥ ಸ್ಥೂಲದಲಿ ಸೂಕ್ಷ್ಮದಲಿ ಬಹಳವಿ । ಶಾಲದಲಿ ಸಂಕೋಚದಲಿ ಲಘು । ಪಾಳಿಯಲಿ ಹಾರದಲಿ ವಿವಿಧಾನುಪ್ರಯೋಗದಲಿ ॥೧॥ ಎಡಬಲದಮಯಣಾಮಹೊಳಹಿನ । ಕಡಲ ತೆರೆ

ವರೆಯದತಿಬವಳಿಯ । ಬಿಡೆಯದುವಾಳಿಗಳ ಸೂಟಿಯ ಸರಳ ಸೋಹಿನಲಿ ॥ ಕದುಗಲಿಗಳೇರಾಟದಲಿ ಮಿಗೆ । ಜಡಿಪವಾಡದಪೃಷ್ಠಾಯತಿಕೆಗಿದು । ಪಡಿಯ ಸೆಳರೇವಂಶರೆಂದುದು ರಾಹುತಿಕೆಗಳಲಿ ॥೨॥
ನಗವನೊಡ್ಡಿದರೊಂದೆಸರಳಲಿ । ಹುಗಿಲುಗಳೆನವಿದೂರಪಾತಿ । ಗಗನಯಂತ್ರವನೆಸುವಜೋಕೆಯ ಜೋದವಿದ್ಯದಲಿ ॥ ಉಗಿವಬಿಡುವೆಡಬಲನ ಬವರಿಯ । ಲಗವಲವಣಿಯ ದಂತಿಶಿಕ್ಷೆಗೆ । ಮಿಗಿಲು ಭಗದತ್ತಾದಿಗಳಿಗೆಂದುದು ಕುಮಾರಕರ ॥೩॥ ರಥವ ರಕ್ಷಿಸಿಕೊಂಡು ನಿಜಸಾ । ರಥಿಯ ಕಾಯಿದು ಮುಂದೆ ಹೂಡಿದ । ರಥಹಯಂಗಳ ಪೈಗಳಲಿ ಮಸೆಗಾಣದಂದವಲಿ ॥ ಪೃಥುತರಿಪ್ರಶಸ್ತ್ರಾಸ್ತ್ರವನು ರಿಪು । ರಥಿಕರನು ಸಮರದಲಿ ಜಯಿಸುವ । ರಥಿಕವಿದ್ಯೆಯೊಳಿವರ ಸರಿ ಸುರನರರೊಳಿಲ್ಲೆಂದ ॥೪॥
ಇನಿಬರೊಳು ಬಿಲುಗಾರಸಾರ । ರ್ಜುನನೊ ಕರ್ಣನೊ ಭೀಮದುರ್ಯೋಧನರೊ ಮಾದ್ರೀಸುತರೊ ಮೇಣ್ದುಶ್ಶಾಸನಾದಿಗಳೋ ॥ ಮನದಿ ಕೈಯಲಿ ಕಂಗಳೋ ಲೋ । ಚನವೆ ಕಂಗಳೊ ಕಾಣಬೇಕೆಂ । ದೆನುತ ಗುರು ರಚಿಸಿದನು ಲಕ್ಷ್ಯವನೊಂದುವೃಕ್ಷದಲಿ ॥೫॥ ಕಾಣಬಾರದು ಲಕ್ಷ್ಯವಗ್ರದ । ಬಾಣಭಟರಿಗೆ ಕಟ್ಟಿದೊಡೆ ಯಿದು । ಕಾಣಿಸಿದಿರೆ ಮೋಣಿಸಿದಿರೆ ಹೂಡಿಪಂಬಿನಲಿ ॥ ಕಾಣರೇ ಕರ್ಣಾದಿಸುಭಟ । ಶ್ರೇಣಿಯೆಂಬೀಗುರುವಿನಣಕವ । ಸಾಣೆಯಿಟ್ಟವೊಲೆಚ್ಚು ಲಕ್ಷ್ಯವ ಕೆಡಹಿದನು ಪಾರ್ಥ ॥೬॥ ಹಿರಿದು ಮೆಚ್ಚಿ ಧನಂಜಯನಸಾ । ಹರಸಿ ಕೊಟ್ಟನು ಸಕಲವಿದ್ಯೆಯ । ಸುರುತರಹರ್ಷದಲಿ ಸೆಣಸಿದೊಡೇ । ಕಲವ್ಯಕನಾ ॥ ಬೆರಳ ಕೊಂಡನು ಪಾರ್ಥನನು ಪತಿ । ಕರಿಸಿದನು ತನಗಾದನೆಗಳಿನ । ಧರಧುರದ ಭೀತಿಯನು ಗೆಲಿದನು ನರನದೆಸೆಯಿಂದ ॥೭॥ ಇರಲಿರಲು ಫಲುಗುಣನನಕ್ಕಟ । ಗರೆದು ಶಸ್ತ್ರಾಸ್ತ್ರಪ್ರಸಂಗದ । ಪರಮಸಿದ್ಧಾಂತವನು ಕಲಿಸಿ ಮಹಾಸ್ತ್ರಸಂಗತಿಯ ॥ ಕರುಣಿಸಿದನಾಗ್ನೇಯಪೌರಂ । ಪರಮಹಾವಾಯವ್ಯವಾರುಣ । ಹರಸುಬ್ರಹ್ಮಾಸ್ತ್ರಸೌರೋರಗನಗಾದಿಗಳ ॥೮॥ ಒಂದುದಿನವೊಡ್ಡೋಲಗಕೆ ಗುರು ಬಂದು ಮನ್ನಿಸಿಕೊಂಡು ಸನುನಗ । ತೆಂದನಾಧೃತರಾಷ್ಟ್ರಗಂಗಾಸೂನುವಿದುರರಿಗೆ ॥ ಇಂದುಸಬಿಯಂತರವು ನಿಮ್ಮಯ । ನಂದನರಸೋದಿಸಿದೆನವರಭಿ । ನಂದನೀಯರೊ ನಿಂದ್ಯರೋನೀವ್ನೋಡಬೇಕೆಂದ ॥೯॥ ಸಕಲಶಸ್ತ್ರಾಸ್ತ್ರದಲಿ ಗಜಹಯ । ನಿಕರದೇರಾಟದಲಿ ಲೌಕಿಕ । ಪ್ರಕಟಮಾರ್ಗೀಕೃತಚತುರ್ದಶವಿಮಲವಿದ್ಯೆಯಲಿ ॥ ಸಕಲಲಕ್ಷಣಗಣಿತಗಾರುಡ । ಪಿಕಶುಭರತಾದ್ಯಖಿಲಕಳೆಯಲಿ । ವಿಕಳರೋಸಂಪೂರ್ಣರೋ ನೀವ್ನೋಡಬೇಕೆಂದ ॥೧೦॥ ಲೇಸನೆಂದುದು ಸುತರವಿದ್ಯಾ । ಭ್ಯಾಸರಚಿತಶ್ರಮವನಾವದು । ದೈಸು ನಿಮಗುತ್ಸವವಲೇ ತಪ್ಪಾವುದುಚಿತವಲೇ ॥ ಈಸುದಿನವೀಮಕ್ಕಳೊಡನಾ । ಯಾಸಪಡುಕಾವಮಾನ್ಯವೇ ಸಾ । ಪೇಕ್ಷಧನ್ಯರೊ ನಿಮ್ಮದೆಸೆಯಿಂದೆಂದನಾಭೀಷ್ಮ ॥೧೧॥ ಆದಿಯಲಿ ಪುರವೈರಿ ಬಳಿಕಿನೊ । ಳಾದನಗ್ರದಪರಶುಧರನೀ । ಮೇದಿನಿಯೊಳೀಯುಗದಲನುಪಮಶಸ್ತ್ರವಿದ್ಯೆಯಲಿ ॥ ವೈದಿಕದಲೀನಿಮ್ಮವರೋಲ್ದೊರೆ । ಯಾದರಾರು ಕುಮಾರಕರ ಪು । ಣ್ಯೋದಯದ ಕಂದೆರವೆಯ್ಸೆಲೆ ಯೆಂದನಾಭೀಷ್ಮ ॥೧೨॥ ಜೋಯಿಸನ ಕರೆದಖಿಳದಿವಸದೊ । ಳಾಯಿದರು ಶುಭದಿನವನವಗೆ ಪ । ಸಾಯದುಡುಗೊರೆಸಹಿತಮನ್ನಿಸಿ ಮನೆಗೆ ಕಳುಹಿದರು ॥ ರಾಯನಾಜ್ಞೆಯೊಳಿಭಪುರದ ಹೊರ । ಗಾಯತದಭೂಮಿಯಲಿ ವಾಸ್ತುವಿ । ಧೇಯವೆನಲಳವಡಿಸಿದರು ಹನ್ನೆರಡುಯೋಜನವ ॥೧೩॥ ತರವಿಡಿದು ರಚಿಸಿದರು ನೆರೆಯು । ಪ್ಪರಿಗೆಗಳ ಹಂತಿಗಳನಂತಃ । ಪುರವ ತತ್ಪಾರ್ಶ್ವದಲಿ ಭಾರಿಯಭದ್ರಭವನಿಕೆ

ಯ ॥ ಪುರಜನದ ಪರಿಜನದ ನೆಲೆಯು । ಪ್ಪರಿಗೆಗಳ ರಚಿಸಿದರು ಹಸ್ತಿನ । ಪುರದ ಸಿರಿ ಸಾಮಾನ್ಯವೇ ನರನಾಥಕೇಳೆಂದ ॥೧೪॥ ನೆರೆದುದಗಣಿತಕರಿತುರಂಗಮ । ವರವರೂಥಪದಾತಿಭೂವಿಶಾ । ಶ್ವರರು ಬಂದರು ನೋಡಲೆಂದು ದಿಗಂತಸಂತತಿಯ ॥ ವರಮುಹೂರ್ತದ ದಿವಸದಲಿ ಸಾ । ಗರದ ತೆರೆ ಬಿಟ್ಟಂತೆ ಕಳನೊಳು । ನೆರೆದು ನಿಂದುದು ಜನನಿಕರವೇನೆಂಬೆನದ್ಭುತವ ॥೧೫॥ ಸಂದಣಿಸಿ ನೃಪರಾಣಿವಾಸದ । ಗೊಂದಣದ ದಂಡಿಗೆಗಳಿಳಿದವು । ಮುಂದೆ ಹೊಯ್ಕಂಬಿಗಳ ಜೋಡಿಯ ಜನಪಲಾಯನದ ॥ ಬಂದರಾಗಾಂಧಾರಿಕುಂತಿಗ । ಳಿಂದುಮುಖಿಯರ ಮೇಳದಲಿ ನಡೆ । ತಂದುದಗಣಿತಪುರವಧೂನಿಕುರಂಬವೊಗ್ಗಿನಲಿ ॥೧೬॥ ವಿದುರಧೃತರಾಷ್ಟ್ರರುಸಹಿತ ಸುರ । ನದಿಯಮಗನೈತಂದು ನವಭ । ದ್ರದಲಿ ಕುಳ್ಳಿರ್ದನು ಪಸಾಯಿತಸಚಿವಜನಸಹಿತ ॥ ಒದರುವಗ್ಗದವಂದಿಗಳ ಪಿತೆ । ಸದೆವಬಹುವಿಧವಾದ್ಯರವವಿ । ಕ್ಕೊದೆದು ಹೊಯ್ದುದು ಲೋಕವಮೂರರ ಕರ್ಣಕೋಟರವ ॥ ಪರಿಪರಿಯಶೃಂಗಾರದಲಿ ನೂ । ರ್ವರುಸಹಿತದುರ್ಯೋಧನನು ಸಾ । ಲ್ವರುಸಹಿತ ಯಮನಂದನನು ತಮ್ಮಿರಡು ಪಾರ್ಶ್ವದಲಿ ॥ ಗುರುತನುಜಕೃಪಕರ್ಣಸುಬಲಾ । ದ್ಯರು ಪುರೋಭಾಗದಲಿ ಭೂಮೀಶ್ವರರಸಂಖ್ಯರು ಹಿಂದೆ ಬರಲೈತಂದನಾದ್ರೋಣ ॥೧೮॥ ಹೊಯ್ದಕೋಣನ ಕುರಿಯಹಿಂಡಿನ । ತೊಯ್ದರಕ್ತೋದನದ ರಾಶಿಯ । ನೈದೆ ದೆಸೆದೆಸೆಗಳಲಿ ಬಲಿದರು ಭೂತತುಷ್ಟಿಗಳ ॥ ಕೈದುಗಳ ತನಿವೆಳಗು ನೈದಿಲ । ವೈದುನನ ಮಾರಂಕವೆನೆ ಬಂ । ದೈದೆ ರಂಗಸ್ಥಳವ ಹೊಕ್ಕುದು ರಾಜಸುತನಿಕರ ॥೧೯॥ ಬಾಗಿಲಲಿ ಕಟ್ಟೆಗೆಯ ಕೈಗಳ । ಲಾಗುರೂಪ್ಪವಕ್ಕಪರು ನಿಂದರು । ಸೀಗುರಿಯ ಸುಳಿಪಿನತರಂಗದ ಸಾಲಸತ್ತಿಗೆಯ ॥ ಸಾಗರದ ಗಳಗರ್ಜನೋದ್ಭಟೆ । ಪೋಗಲಿದಕದು ಪಾಡೆಯೆನೆ ಚಾ । ಪಾಗಮಾಚಾರ್ಯನ ಗಡಾವಣೆ ಘುಲ್ಲಿಸಿತು ಜಗವಾ ॥೨೦॥ ಆಮಹಾಕಳನೆಂಟುದಿಕ್ಕಿನಸೋಮ ಕೀರಲು ಗಳಿಗೆವಟ್ಟಲ । ಸೌಮುಹೂರ್ತಿಕರಾಯತಧ್ವನಿಸಾಧುವಾದದಲಿ ॥ ಸೋಮವಂಶೋದ್ಭವನೃಪಾಲಲ । ಲಾಮನಗ್ಗದಧರ್ಮಸುತನುದ್ದಾಮಗುರುವಿಂಗೆರಗಿಬಿಂದನು ನುಡಿಸಿದನು ಧನುವಾ ॥೨೧॥ ಅರಸ ಕೇಳು ಯುಧಿಷ್ಠಿರನ ಪರಿ । ಪರಿಯಯೆಸುಗೆಯಚಾಪವಿದ್ಯಾ । ನಿರತಿಶಯಕೋಯೆಂದುಗರ್ಜಿಸಿತಾಸಭಾಜಲಧಿ ॥ ಸುರಗಿಹಿರಿಯಬ್ಬಣವಡಾಯುಧ । ಹುಬಗೆಚಕ್ರಮುಸುಂಡಿಮುದ್ಗರ । ಪರಶುಮೊದಲಾದಖಿಳಶಸ್ತ್ರಶ್ರಮವತೋರಿಸಿದ ॥ ಕರಿತುರಗದೇರಾಟಮೊದಲಾ । ಗಿರೆ ಸಮಸ್ತನೃಪಾಲವಿದ್ಯಾ । ಪರಿಣತಿಗೆಹಿಗ್ಗಿದರುಭೀಷ್ಮಾದಿಗಳು ಹರುಷದಲಿ ॥ ಪರಿವಿಡಿಗಳಲಿ ನಕುಲಸಹದೇ । ವರು ವಿವಿಂಶತಿಚಿತ್ರಬಲದು । ರ್ಮರ್ಷಣರು ತೋರಿದರು ಶ್ರಮವನು ನೂರ್ವರೊಗ್ಗಿನಲಿ ॥೨೨॥ ಈತ ಧರ್ಮಜನಿವನು ಮಾದ್ರೀ । ಜಾತರೀತಸುಲೋಚನನು ಬಳಿ । ಕೀತ ದೀರ್ಘಿಕ ವಿಂದನಿವನಿಂತೀತನಿವನೆಂದು ॥ ಈತ ಧನುವಿನಲೀತ ಖಡ್ಗದ । ಲೀತ ಪರಿಘದಲೀತ ಕುಂತದ । ಲೀತಬಲುಹೆಂದಂಧಭೂಪತಿಗರುಹಿದನು ವಿದುರ ॥೨೪॥ ಬಳಿಕ ನಾನಾದೇಶದರಸುಗ । ಳಿಳಿದು ತಮಗಳವಟ್ಟಶಸ್ತ್ರಾ । ವಳಿಗಳಲಿ ತೋರಿದರು ಮೆಚ್ಚಿಸಿ ತನ್ಮಹಾಸಭೆಯ ॥ ನೆಲನನಬ್ಬರಿಸುವಸಭಾಕಳ । ಕಳದ ಮೊರೆಯನು ತಿವಿವಪರಿವೆ । ಗ್ಗಳದಪಾಯವಧಾರು ಮಸಗಿದುದೊಂದು ಘಟ್ಟಿನಲಿ ॥೨೫॥ ಹಗಲುಕೈದೀವಿಗೆಯ ಬಿರುದಿನ । ವಿಗಡನಿವನಾರೆನಲು ಭೂಪಾ । ಳಿಗಳ ರತ್ನಪ್ರಭೆಯ ಲಹರಿಯ ಲಾವಣಿಗೆ ಮಿಗಿಲು ॥ ಝುಗಝುಗಿಪತನುರುಚಿಯ ಮಿಂಚನು । ಮಿಗುವಖಡ್ಗಚ್ಛವಿಯ

ತಲೆಯೊ । ತ್ತುಗಳ ಚಾವಡಿಯೊಳಗೆ ಕೌರವರಾಯನೈತಂದ ॥೨೬॥ ಹೊ ನಿರಂತರಗಜಬಜವು ತಾ । ನೇನು ಜೀಯವಧಾರು ಚಿತ್ತವ । ಧಾನವೆಂದುದು ಸಾಲಕಂಚುಕಿನಿಕರ ಕೈನೆಗಹಿ ॥ ಭಾನುವಿನ ಭಾರಣೆಯವೋಲು । ತ್ರಾನವಮುಖಚತುರಾಕ್ಷ ಭೂಪನ । ಸೂನು ಹೊಕ್ಕನು ರಂಗವನು ಭೀಷ್ಮಾದಿ ಗಳಿಗೆರಗಿ ॥೨೭॥ ಬವರಿಯಲಿ ಪಯಪಾಡಿನಲಿ ವೈ । ಲವಣಿಯಲಿ ಬಿನ್ನಾಣದಲಿ ಭಾ । ರವಣೆಯಲಿ ದೆಸ್ಲಾಳದಲಿ ವೇಗಾಯ್ತ್ತರೇಖೆಯಲಿ ॥ ತಿವಿವಮೊನೆಯೊಂದರಲಿ ನೂರಂ । ಗವನು ತೋರ್ಪವಿ ಭೇದದಲಿ ಕೌ । ರವಮಹೀಪತಿ ತೋರಿದನು ಶ್ರಮವನು ಕಠಾರಿಯಲಿ ॥೨೮॥ ಸುರಗಿಯಲಿ ಚಕ್ರ ದಲಿ ಹಲಪಲಿ । ಹರಿಗೆಯಲಿ ಕಕ್ಕಡೆಯಲುಸಿಯಲಿ । ಪರಿಘದಲಿ ಸಬಳದಲಿ ಗದೆಯಲಿ ಭಿಂಡಿವಾಳ ದಲಿ ॥ ಪರಪರಿಯ ಚಿತ್ರದ ಚಮತ್ಕೃತಿ । ಕರವ ತೋರಿಸಿದನು ಶರಾಸನ । ಶರವೆ ಶರಸಂಧಾನದೊ ಳಗಹುದೆನಿಸಿದನು ಸಭೆಯ ॥೨೯॥ ಧೀರರುರೇ ಜಗಜಟ್ಟಿ ರಾಜಕು । ಮಾರ ಚೌಪಟಮಲ್ಲ ಕುರುಕುಲ । ಕೈರವಾಮೃತಕಿರಣ ಧಿರುಘಿರು ಭಲರೆ ಭಲರೆನುತ ॥ ಭೂರಿಸಭೆಯಲಿ ಸುಲಿದು ಬಿಸುಡುವ । ಸೀರೆಗಳ ತೂಪಿರಿದು ಸುಳಿವು । ಪ್ಪಾರತಿಯ ತನಿಹರಕೆ ತಳಿತುದು ರಾಯನೇಮದಲಿ ॥೩೦॥ ಏರಿ ತೋರಿದ ನಶ್ವಗಜರಥ । ವಾರನೇಳನು ಸಭೆಯೊಳೊಂದನು । ನೂರುಪರಿಯಲಿ ತೋರಿದನು ಶಸ್ತ್ರಾಸ್ತ್ರಕೌಶ ಲವ ॥ ಮೀರಿ ಹೆಚ್ಚಿದ ಹರುಷದಿಂದು । ಬ್ಬೇರಿದನು ಧೃತರಾಷ್ಟ್ರನುಬ್ಬಿದ । ಳಾರುಮಡಿಯಲಿ ಜನ ನಿ ದುರ್ಯೋಧನನ ಪರಿಣತಿಗೆ ॥೩೧॥ ಮಸಗಿದಾನೆಯಕಂಡದಲಿ ಘೂ । ಡಿಸುವ ಕೇಸರಿಯಂತೆ ಜಂ ಭನ । ಬಸದ ಘೂಡಿಗೆ ಬೆದರದಿದಿರಹ ವಜ್ರಧರನಂತೆ ॥ ಪಸರಿಸಿದ ಪರಿವಾರವಮೃದೊ । ಳಸಮ ಬಲ ಹೊಳಕಿದನು ಮೇಘದ । ಮುಸುಕನುಗಿದಿನನಂತೆ ಮೈದೋರಿದನು ಕಲಿಭೀಮ ॥೩೨॥ ಗುರುನದೀ ಸುತ ವಿದುರ ಧೃತರಾ । ಷ್ಟ್ರರಿಗೆ ಕೈಮುಗಿದಾಯುಧದ ಪರಿ । ಪರಿಯ ಚಿತ್ರಶ್ರಮವ ಸಾಂಗೋ ಪಾಂಗಕೌಶಲವ ॥ ಕರಿತುರಗದೇರಾಟಮೊದಲಾ । ಗಿರೆ ಸುಯೋಧನರಚಿತವಿದ್ಯಾ । ಪರಿಣತಿಗೆ ಮಿಗಿ ಳವಿದೆನೆ ತೋರಿದನು ಕಲಿಭೀಮ ॥೩೩॥ ಕೋಲಗುರು ಚಿತ್ತೈಸು ಕುರುಭೂ । ಪಾಲ ಸಮ್ಮುಖನಾಗು ಹಿಡಿ ಮಾ । ರ್ಕೋಲನೆನ್ನೊಡನೆನುತ ತಿವಿದನು ಭೀಮ ಕುರುಪತಿಯ ॥ ಮೇಳವಿಸಿತೆರಡಂಕ ಬಂದಿಗೆ । ಕೋಲಹೊಯ್ಲಾಟದಲಿ ಬಳಿಕಾ । ಕೀಲುಗದೆಗಳ ಹಿಡಿದು ತರುಬಿದರಧಿಕರೋಷದಲಿ ॥೩೪॥ ಹೊಯ್ದ ರೊಡ್ಡಿದರಣದ ಮೊನೆಯಲಿ । ಹಾಯ್ದರೊಳಸುಳಿಯಿಂದ ಕಳೆದರು । ಕಾಯ್ದು ಹೊಗಿದರುಪ್ಪರಕೆ ಜಾರಿದರು ಪಡಿತಳಕೆ ॥ ಮೊಯ್ದದೆಗೆದರಡಹೊಯ್ಲಿನಲಿ ಬಲು । ಗಯ್ದುಗಾರರು ಮನದ ಖತಿಗಿದಿರೆಯ್ದ ದೆನೆ ಹೊಯ್ದಾಡಿದರುಕಲಿಭೀಮಕೌರವರು ॥೩೫॥ ಎಲೆಲೆ ಹಿಡಿಹಿಡಿ ಭೀಮನನು ತೆಗೆ । ಕೆಲಕೆ ದುರ್ಯೋಧನನನಿದುಮಂ । ಗಳದ ಬೆಳುದಿಂಗಳಿನ ಮಳೆ ಸುರಿದುದೆ ಮಹಾದೇವಾ ॥ ಕಳವಳಿಸಿ ಭೀಷ್ಮಾದಿಗಳು ನೃಪ । ತಿಲಕರಿಬ್ಬರ ನಡುವೆ ಹಾಯ್ದರು । ಕುಲಗಿರಿಗಳಂದದಲಿ ಕೃಪಗುರುಸುತರು ಮಹಿಲದಲಿ ॥೩೬॥ ತೆಗೆದರೀತನನಿತ್ತಲಾತನ । ನುಗಿದರತ್ತಲು ಜನದ ಗಳದಿಂ । ದೊಗೆದ ಗಾಢದ ಗಜಬಜವ ಧಟ್ಟಿಸಿದರಲ್ಲಲ್ಲಿ ॥ ಬೆಗಡುಗೊಂಡರು ಭೀಷ್ಮವಿದುರಾ । ದಿಗಳು ಮನದಲಿ ಮೇಲೆ ಹಬ್ಬು ವ । ಹಗೆಗಿದುಪಲಕ್ಷಣವಲಾ ಯೆಂದುದು ಬುಧವ್ರಾತ ॥೩೭॥ ಳಿಮಸಗಿದಂಬುಧಿಯವೋಲ್ಜನ । ಜಲಧಿಜಾತಕ್ಷೋಭೆಯಲಿ ವೆ । ಗ್ಗಳಿಸಿತಗ್ಗದ ಸಾಧುವಾದ ವಿವಾದರಭಸದಲಿ ॥ ಮೊಳಗಿದುವು ಕಲ್ಪಾಂ

ತಮೋಘಾ। ವಳಿಯ ಗುರುವೆನೆ ವಾದ್ಯತತಿ ಕಳ। ಕಳದೊಳರ್ಜುನದೇವನೆದ್ದನು ಮುನಿಯ ಸನ್ನಿ
ಯಲಿ ॥೩೮॥ ಈತನಾರರ್ಜುನನೆ ಹೋಹೋ। ಮಾತು ಮಾಣಲಿ ಮಾಣಲೆಂಬೀ। ಮಾತು ಹಿಂಚಿ
ತು ಮುನ್ನ ಮೌನದೊಳಿರ್ದುದಾಸ್ಥಾನ ॥ ಭೀತಕಳಕಳರಂಗದಲಿ ಪುರು। ಹೂತಸುತ ಮೈದೋರಿ
ದನು ಜನ। ವೀತನನು ಕೊಂಡಾಡುತಿರ್ದುದು ರಾಯ ಕೇಳೆಂದ ॥೩೯॥ ದ್ರೋಣ ಕೃಪ ಮೊದಲಾದ
ಮಾನ್ಯ। ಶ್ರೇಣಿಗೆರಗಿದನಮರನಿಕರಕೆ। ಗೋಣನೆತ್ತಿದನಿಟ್ಟು ಕರಪುಟವನು ಲಲಾಟದಲಿ॥ ಪ್ರಾಣಪದ
ವಿದು ನಿಖಿಳವಿದ್ಯೆಯ। ಜಾಣತನಕಿದು ವಿನಯವೆಂದುದು। ಕೇಣವಿಲ್ಲದೆ ನೆರವಿ ನೆರೆ ಹೊಗಳಿತು
ಧನಂಜಯನ ॥೪೦॥ ನಿಲುವಿನಲಿ ಸಂಸ್ಥಾನದಲಿ ಕೈ। ಚಳಕದಲಿ ಭಂಗಿಯಲಿ ಭರದಲಿ। ಉಳಿಯ
ಲೊಯ್ಯಾರದಲಿ ಮೋಡಾಮೋಡಿಯಂದದಲಿ ॥ ಅಳವಿಯಲಿ ಪಟುವಿಡಿಯಲೂಹಾ। ಬಲದಲವಧಾ
ನದಲಿ ಶಸ್ತ್ರಾ। ವಳಿಯ ಸಾಂಗೋಪಾಂಗಶ್ರಮವನು ತೋರಿದನು ಪಾರ್ಥ ॥೪೧॥ ತುರಗಚಯರೇ
ವಂತ ಮದಕುಂಜರಮಹಾದಿವಿಜೇಂದ್ರರಥ ಸಂ। ಚರಣವರಮಾರ್ತಾಂಡ ಎಂದಬ್ಬರಿಸೆ ಜನನಿಕರ॥
ತುರಗಗಜರಥ ವಿವಿಧಶಿಕ್ಷಾ। ಪರಿಣತಿಯ ತೋರಿದನು ಗುರುಕೃಪ। ಸುರನದೀಜರು ಮುಳುಗಿದರು
ಪುಳಕಾಂಬುಪೂರದಲಿ ॥೪೨॥ ಮತ್ತೆ ಕೊಂಡನು ಧನುವ ನೆರವಿಯ। ನತ್ತ ಹೊಯ್ಹೊಯ್ಹೋ
ಗಹೇಳ್ದು। ವೃತ್ತರೆದೆ ಜರ್ಝರಿತವಾಗಲು ತೋರಬೇಕೆನುತ ॥ ಬತ್ತಳಿಕೆಯಿಂದುಗಿದು ಹೂಡಿವಿ
ಯತ್ತಳಕೆ ಹಾಯ್ಸಿದನು ಕರ್ಬೊಗೆ। ಸುತ್ತಿ ಧಳ್ಳಿಸಿ ಮಸಗಿತಾಗ್ನೇಯಾಸ್ತ್ರಧಾರೆಯಲಿ ॥೪೩॥
ತೆಗೆಸಿದನು ಶಿಖಿಶರವ ಧನುವಿಂ। ದುಗಿಸಿದನು ವಾರುಣವನಭ್ರವ। ಮೊಗೆದುದದ್ಭುತವಾರಿಯುಪಸಂ
ಹರಿಸಿದನು ಮರಳಿ ॥ ಹಗಲನೊಂದೇತುತ್ತುಮಾಡಿದ। ವಿಗಡತಿಮಿರಾಸ್ತ್ರದಲಿ ತಿಮಿರವ। ತೆಗೆಸಿದನು
ಸೂರ್ಯಾಸ್ತ್ರದಲಿ ಬೆರಗಾಗೆ ಸುರನಿಕರ ॥೪೪॥ ಗಿರಿಶರದಲದ್ರಿಗಳ ಮೇಘದ। ಶರಟಿನಭ್ರವ ನು
ರಗಬಾಣದಿ। ನುರುಭುಜಂಗವ ನನಿಲಶರದಲಿ ತೀವ್ರಮಾರುತನ ॥ ಗರುಡವವ ತೋರಿದನು ಜನಪ್ರ।
ಬ್ಬರಿಸಲಡಿಗಡಿಗಂಧಭೂಪನ। ಕೊರಳು ಕುಸಿದುದು ನುಡಿಯ ನಾಟಕಹರ್ಷಭಾರದಲಿ ॥೪೫॥ ಇವರ
ಮುಖವರಳಿದುವು ಗಂಗಾ। ಭವಕೃಪದ್ರೋಣಾದಿಗಳ ಬಳಿ। ಕವರ ತಲೆಬಾಗಿದುವು ಧೃತರಾಷ್ಟ್ರಾದಿ
ಕೌರವರ ॥ ಇವರ ಜನನಿಯ ಮುಖದ ಸುಮ್ಮಾ। ನವನು ದುರ್ಯೋಧನನ ಜನನಿಯ। ಬವಳಿದು
ಮ್ಮಾನವನು ಬಣ್ಣಿಸಲರಿಯೆ ನಾನೆಂದ ॥೪೬॥ ಬಾಯಹೊಯ್ಲುಗುಣನ ಹೊಗಳುವ। ಬಾಯಿಗಳ
ದೇಸಾಯ್ತು ಕೌತುಕ। ವಾಯಕಿವದಿರ ಪಕ್ಷಪಾತವ ನೋಡುನೋಡೆನುತ ॥ ಸಾಯಕವ ತೂಗುತ್ತಲಾ
ಕರ್ಣಾಯತಾಂಬಕನೆಡಬಲದ ಕುರು। ರಾಯನನುಜರ ಮೇಳದಲಿ ಹೊರವಂಟನಾ ಕರ್ಣ ॥೪೭॥
ಗುರುಗಳಿಗೆ ಕೈಮುಗಿದು ಶಿರದಲಿ। ತರಣಿಮಂಡಲಕೆರಗಿ ನೋಡುವ। ನೆರವಿಗವನಾರೀತನಾರೆಂಬ
ದ್ಭುತವ ಬೀರಿ ॥ ಅರಸ ಕೇಳ್ಕೈ ವಿವಿಧಶಸ್ತ್ರೋ। ತ್ಕರದ ಶ್ರಮವನು ತೋರಿದನು ಕರಿ। ತುರಗ
ರಥವಾಹನದ ಶಿಕ್ಷಾವಿದ್ಯೆಗಳು ಸಹಿತ ॥೪೮॥ ಆವವಿಧದಲಿ ಪಾರ್ಥತೋರಿದ। ನಾವದಿವ್ಯಾಸ್ತ್ರಪ್ರಪಂ
ಚವ। ಪಾವಕಾನಿಲವಾರುಣಾದಿಯನೈದೆ ವಿರಚಿಸಿದ ॥ ಆವಿಧಾನದಲಾ ವಿಹಾರದ। ಲಾವಿಬಂಧದ
ಲರ್ಜುನನ ಬಾ। ಣಾವಳಿಯ ಬಿನ್ನಾಣವನು ತೋರಿದನು ಕಲಿಕರ್ಣ ॥೪೯॥ ಸೆಣಸುವೊಡೆ ಬಾಯೆಂ
ದು ಪಾರ್ಥನ। ಕೆಣಕಿದನು ಘನರೋಷಶಿಖಿಯಲಿ। ಕುಣಿದವಿಬ್ಬರಮೀಸೆ ಕಂಗಳೊಳುಗುವ ಕೆಂಪಿ

ನಲಿ ॥ ಕಣೆಕಣೆಗಳಾಟದಲಿ ಶರಖಂ । ಡಣೆಯ ಕೋಲಾಟದಲಿ ಖಣಿಖಣಿ । ಖಣಿಲುಖಣಿರವ ಮಸಗ
ಲಿಟ್ಟಾಡಿದರು ಚಳಕದಲಿ ॥೪೦॥ ರಾಯಸಭೆ ಕಳವಳಿಸೆ ಹೋಹೋ । ಹೋಯಿದೇನೇನೆನುತ ಹಿಡಿದರು।
ವಾಯುಸುತಕೃಪಗುರುಜ ದ್ರೋಣಾದ್ಯರು ಧನಂಜಯನ ॥ ಆಯಿತೆಲವೋ ಕರ್ಣ ನೀನನು । ನಾಯ
ಕನೊ ನೃಪಹಾರದಲಿ ಮೇ । ನ್ನಾಯಕನೊ ನೀನಾವನೆಂದನು ಕೃಪನು ಖಾತಿಯಲಿ ॥೪೧॥ ಈತನಾ
ವನು ಕರ್ಣನೆಂಬುವ । ನೀತನರ್ಜುನನೊಡನೆ ತಾಮಾ । ರಾತು ಕೈಮಾಡಿದನು ಕೈಕೊಳ್ಳನು ಧನಂಜ
ಯನ ॥ ಈತ ತಪ್ಪಲ್ಲೆನುತ ಮಿಗೆ ಮೈ । ಯಾತನಾಧೃತರಾಷ್ಟ್ರನೀತನ । ಮಾತೆ ಕಂಡಳು ಕುಂತಿ
ನೆನೆದಳು ಪೂರ್ವಸಂಗತಿಯ ॥೪೨॥ ಎನ್ನ ಮಗನೆನೆ ಬಂದುದಿಲ್ಲದು । ತನ್ನ ವಶವೇ ವಿಷ್ಣುಮಾಯೆ
ಯ । ಬಿನ್ನಣವಲೇ ಮಾತು ಬಿಗಿದುದು ಮನವನೊಳಗಿಕ್ಕಿ ॥ ತನ್ನ ತಾನೇ ಮರುಗಿ ಮೂರ್ಛಾ ।
ಪನ್ನೆಯಾದಳು ಕುಂತಿಯಿತ್ತಲು । ಖಿನ್ನನಾದನು ಕೃಪನ ನುಡಿಯಲಿ ದುಗುಡ ಮಿಗೆ ಕರ್ಣ ॥೪೩॥
ಈತನರಸಲ್ಲೆಂದು ಕೃಪ ಹಳಿ । ದಾತನೇ ತಪ್ಪೇನು ರಾಜ್ಯದೊ । ಳೀತನರಸೆನಿಸುವನು ಕರೆ ನಮ್ಮಯ
ಪುರೋಹಿತರ ॥ ಶಾತಕುಂಭಾಸನವ ಮಂಗಳ । ಜಾತವಸ್ತುವ ತರಿಸು ತರಿಸೆಂ । ದಾತತುಕ್ಷಣದಲಿ
ಸುಯೋಧನನೆದ್ದು ರಭಸದಲಿ ॥೪೪॥ ತರಿಸಿ ಭದ್ರಾಸನದೊಳೀತಂ । ಗರಸುಪದವಿಯೊಳಂಗದೇಶದ ।
ಸಿರಿಯನಿತ್ತನು ರಚಿಸಿದನು ಮೂರ್ಧಾಭಿಷೇಚನವ ॥ ಪರುಶನವನಿತ್ತಖಿಳಭೂಮೀ । ಶ್ವರರುಕಂಡರು
ಪೂರ್ವಸ್ತ್ರೈಲವ । ತರಣಿಯಂತಿರೆ ಕರ್ಣನೆಸೆದನು ರಾಜತೇಜದಲಿ ॥೪೫॥ ಈತನುತ್ಸವ ತನ್ನದೆಂದೇ ।
ಪ್ರೀತಿಯಲಿ ಬರೆ ಸಿಂಹಪೀಠವ । ನೀತನಿಳಿದೆರಗಿದನು ಪದದಲಿ ಬಳಿಕ ಜನಜನಿತ ॥ ಸೂತಸುತನಿವನೆಂ
ದು ಭುವನ । ಖ್ಯಾತವಾದುದು ಬಳಿಕ ನಸುನಗು। ತೀತನ ಕುಲವನೆತ್ತಿ ಭಂಗಿಸಿ ನುಡಿದನಾಭೀಮ ॥೪೬॥
ಇವನ ತಂದೆಯದಾರು ಪಾಂಡುವೊ। ಪವನನೋ ಕೃಪ ನಿಮ್ಮ ಜನ್ಮವ ।ನೆವಗೆ ಹೇಳಿರೆ ಹಿರಿಯಗುರುಗಳ
ತಾಯದಾವವಳೋ ॥ ಅವಗಡಿಸದಿರಿ ಹಿರಿಯತನಕಂ । ಜುವೆನು ನಿಮಗೆನುತಡಿಗಡಿಗೆ ಕೌ । ರವಮ
ಹೀಪತಿ ಬಂದು ನುಡಿದನು ಗುರುಕೃಪಾದಿಗಳ ॥೪೭॥ ಒಳಗೆ ಗಜಬಜವಾಯ್ತು ಕೈದುವ । ಕಳೆದುದ
ಲ್ಲಿಯದಲ್ಲಿ ಗುರುಕೃಪ । ರುಲುಹ ಕೇಳುವರಿಲ್ಲ ಕೈದೊಳಸಾಯ್ತು ಕಳನೊಳಗೆ ॥ ಇಳಿದುಭೀಷ್ಮಾದಿ
ಗಳು ತಮ್ಮಯ।ನಿಳಯಕೈದಿದರೆರಡುಬಲತ।ಮ್ಮೊಳಗೆ ತಾವೇ ಹಣಿದು ಮರದುದು ರಾಯಕೇಳೆಂದ॥೪೮॥
ಕೆಲರು ಭೀಮನನರ್ಜುನನ ಕೆಲ। ಕೆಲರು ಕರ್ಣನ ಕೌರವೇಂದ್ರನ । ಕೆಲರು ಹೊಗಳುತ ಬಂದು ಹೊಕ್ಕ
ರು ಹಸ್ತಿನಾಪುರವ ॥ ಬಳಿಕಲಾಮರುದಿವಸದಲಿ ಮ । ಕ್ಕಳುಗಳೆಲ್ಲರ ಕರೆಸಿ ಗರುಡಿಯ । ನಿಳಯದಲಿ
ಕುಳ್ಳಿರ್ದು ಗುರು ನುಡಿದನು ಕುಮಾರರಿಗೆ ॥೪೯॥ ಏನಿರೈ ಕುರುವಂಶನಳಿನೀ । ಭಾನುಗಳಿರ ವಿದಗ್ಧ
ಜನಸುರ । ಧೇನುಗಳಿರಾ ಇಂದುನಿಮ್ಮಲಿ ದಕ್ಷಿಣಾರ್ಥಿಗಳು ॥ ಏನನೀವಿರಿ ನಮಗೆ ಕೊಡೆ ಸಂ । ಪೂ
ರ್ಣರ್ಕೈ ಕೊಡಲಾಪಸತ್ವನಿ । ಧಾನವುಂಟೇಹೇಳಿರೆಂದನುದ್ರೋಣನನಿಬರಿಗೆ ॥೫೦॥ ಆವುದನು ಬಯ
ಸುವಿರಿ ನಿಮ್ಮಡಿ । ಯಾವಕಾರ್ಯವ ಬೆಸಸಿದುದು ತಂ । ದೀವವಿದಕೆ ವಿಚಾರವೇನೆಂದರು ಕುಮಾರ
ಕರು ॥ ತೀವಿದಗ್ಗದ ಹರುಷರಸದಲಿ । ಭಾವ ನೆನೆದುದು ಮುನಿ ವರನ ಶಿ। ಷ್ಯಾವಳಿಗೆ ನುಡಿದನು ನಿಜಾ
ಭಿಪ್ರಾಯಸಂಗತಿಯ ॥೫೧॥ ಕೇಳಿ ಬಲ್ಲಿರೆ ಗಂಗೆಯುತ್ತರ । ಕೂಲದಲಿ ಪಾಂಚಾಲದೇಶನೃ । ಪಾಲ
ನಲ್ಲಿಗೆ ದ್ರುಪದನೆಂಬವನತುಳಭುಜಬಲನು ॥ ಆಳುತನದಂಗದಲಿ ಪರರಿಗೆ । ಸೋಲನವನೊಟ್ಟೈಸಿ

ದ್ರುಪದನ್ನ । ಪಾಲಕನ ಪಿಡಿದೊಪ್ಪಿಸಿದೊಡೆಮಗಹುದು ಪರಿತೋಷ ॥ ಐಸಲೇ ಗುರುದಕ್ಷಿಣಾರ್ಥವಿ । ದೇಸುಘನ ತಂದೀವೆವೆಂದು ಪ । ಹಾಸದಲಿ ಕೈವೊಯ್ದು ತಮ್ಮೊಳು ನಗುತ ಕೌರವರು ॥ ಆಸುಯೋಧನಕರ್ಣಸಹಿತಮ । ಹೀಶತನುಜರು ಬೀಳುಕೊಂಡರು । ವಾಸಿ ಬಿದ್ದುದು ಪಾಂಡುಸುತಕೌರವಕುಮಾರರಿಗೆ ॥೧೩॥ ಥಾಳಿಯಿಟ್ಟುದು ರಾಯದಳ ಪಾಂ । ಚಾಲದೇಶಕೆ ಮುಂದೆ ಹೊಕ್ಕುದು । ಚೂಳಿಕೆಯಲಿ ಸುಯೋಧನಾದಿಗಳೂರನುರವಣಿಸಿ ॥ ಧೂಳಿಗೋಟೆಯ ಕೊಂಡಿವರು ರಾ । ಜಾಲಯಕೆ ಬರೆ ದ್ರುಪದನನುಜರು । ಸೋಲಿಸಿದರೈ ಕೌರವೇಂದ್ರನ ಬಲವ ಬರಿಕೈದು ॥೧೪॥ ಪುರದ ಹೊರಬಾಹೆಯಲಿ ತಾವೈ । ವರು ಮಹಾಸನ್ನಾಹಚಾಪ । ಸ್ಫುರಿತತೂಣೀಬದ್ಧಕಂಪಿತಖಡ್ಗಪಾಣಿಗಳು ॥ ಗುರುಸಹಿತಲಿವರಿದ್ದರಿತ್ತಲು । ಪುರಜನಂಗಳಮುಸಲಹತಿಯಲಿ । ಮುರಿದು ಬಂದುದು ಕೌರವೇಂದ್ರನ ಬಳವಿ ಘಾತಿಯಲಿ ॥೧೫॥ ಆತುಕೊಂಡರು ಪಾಂಡುಸುತರಭಿ । ಜಾತಸಮರವನಿವರ ಕೈಯಲಿ । ಮಾತುಹಲವಿಲ್ಲೆನುತ ಹೊಕ್ಕರು ಕೊಂದು ಪರಬಲವ ॥ ಘಾತಿಗಾನುವರಿಲ್ಲ ದೊರೆಯೆನು । ತಾತನನು ಮುತ್ತಿದರು ಗುರುಗಳಿಗೀತನೇ ದಕ್ಷಿಣೆಯೆನುತ ಹಿಡಿದರು ಮಹೀಪತಿಯ ॥೧೬॥ ಕೊಂಡುಬಂದರು ದ್ರೋಣನಿದಿರಲಿ । ದಿಂಡುಗೆಡಹಿದರೀತನನು ಕೈ । ಕೊಂಡನೆಲವೋ ದ್ರುಪದಸಖಪೂರ್ವವನು ನೆನೆಯೆನುತ ॥ ಭಂಡನಿವನನು ಸಾಕು ಬಿಡಿ ಸಲೆ । ಚಂಡಿಯಾದನು ದರ್ಪವಿಷ ಮುಂ । ಕೊಂಡು ಮೂರ್ಛಿತನೇನಮಾಡುವೆನೆಂದನಾ ದ್ರೋಣ ॥೧೭॥ ಎಲವೊ ಕೊಟ್ಟೆನು ಜೀವದಾನವ । ನಳಲು ನಿನಗೇಕಿನಿತು ಸಾಹಸ । ದಳವಿಯಲಿ ನೀನೆರಹು ಹಗೆಯನು ಭಂಡಹೋಗೆಂದು ॥ ಕಳೆದುಕೊಟ್ಟೆನು ನಿನ್ನ ರಾಜ್ಯದ । ನೆಲದೊಳರ್ಧವನಿತ್ತು ನೀ ನಡೆ । ಬಳಿಕಲೆಂದೊಡಬಡಿಸಿ ದ್ರುಪದನ ಬಿಟ್ಟನಾ ದ್ರೋಣ ॥೧೮॥ ಅರಸ ಕೇಳೈ ದ್ರುಪದನೀಪರ । ಪರಿಭವಕೆ ಗುರಿಯಾಗಿ ತನ್ನಯ । ಪುರವ ಹೊಗದೈತಂದು ಗಂಗಾತೀರದೇಶದಲಿ ॥ ಧರಣೀಸುರರಲಿ ಪುತ್ರಕಾಮ್ಯಾ । ಧ್ವರವ ವಿರಚಿಸಲಾಗಸತ್ತ್ವೋ । ತ್ಕರುಷವಂತರನರಸಿದನು ನಾನಾಗ್ರಹಾರದಲಿ ॥೧೯॥ ದ್ರೋಣಭಯದಲಿ ಸಕಲವಿಪ್ರ । ಶ್ರೇಣಿಯಿರೆ ಯಾಜೋಪಯಾಜರು । ಪ್ರಾಣನಿಸ್ಪೃಹರಾಗಿ ಮಾಡಿಸಿದರು ಮಹಾಕ್ರತುವ ॥ ಕೇಣವಳಿದಾಹುತಿಯನಮರರ । ಘ್ರಾಣಸಿಗ ಗ್ರಾಣಬಡಿಸಿ ದೇವ । ಶ್ರೇಣಿ ತಣಿದುದು ಸಲಿಸಿದರು ಪಾಂಚಾಲನಭಿಮತವ ॥೨೦॥ ಅರಸ ಕೇಳೈ ಕುಂಡಮಧ್ಯದೊಳುರಿಯ ಕರುವಿಟ್ಟೆರಸಿದರೊ ಭಾ । ಸುರಮಹಾನಲನಪರರೂಪೋ ತ್ಥಾನಿದೇನೆನಲು ॥ ಶರವಡಾಯುಧಚಾಪವರ್ಮೋ । ತ್ಕರಸಹಿತ ರೌದ್ರಾಂಗನಾಗವ । ತರಿಸಿದನು ಪಾಂಚಾಲಭೂಪತಿ ಭುಜವನೊಳ್ಳೈಸೆ ॥೨೧॥ ವೇದಿಮಧ್ಯವನೊಡೆದು ಮೂಡಿದ । ಳಾದರಿಸೆ ಜನವಮಮ ಕಾಮನ । ಕೈದುವೋ ತ್ರೈಲೋಕ್ಯಮೋಹನಮಂತ್ರದೇವತೆಯೋ ॥ ಕಾದುವೊಡೆ ಕರೆ ಹರಿಹರಬ್ರ । ಹ್ಮಾದಿಗಳಿಗೊರೆಯೆಂಬಹುಂಕೃತಿ । ಯಾದುದಾಕಾಮಂಗೆ ದ್ರುಪದಾತ್ಮಜೆಯ ಜನನದಲಿ ॥೨೨॥ ದ್ರೋಣವಧೆಗೀಮಗನು ಪಾರ್ಥಗೆ । ರಾಣಿಯೀಮಗಳೆಂದು ದ್ರುಪದ । ಕ್ಷೋಣಿಪತಿ ಸಲಹಿದನು ಸುತರನು ಸಾನುರಾಗದಲಿ ॥ ದ್ರೋಣನೀತನ ಕರೆಸಿ ಶಸ್ತ್ರದ । ಜಾಣಿಕೆಯ ಕಲಿಸಿದನು ವಿಗಡರ । ಕಾಣ್ಕೆನೀ ಕಲಶಜನಪರಿಯಲಿ ರಾಯ ಕೇಳೆಂದ ॥೨೩॥ ಮಗನು ಧೃಷ್ಟದ್ಯುಮ್ನ ದ್ರೌಪದಿ । ಮಗಳು ಭಾರದ್ವಾಜನೆತ್ತಿದ । ಹಗೆಗೆ ಪರಿವಾಯ್ತೆನುತ ಹಿಗ್ಗಿದ ದ್ರುಪದಭೂಪಾಲ ॥ ದುಗುಡದಲಿ ಕುರುರಾಯ ನೀದಾ । ಯಿಗರ ಬಿರುದಿನ ಬಿಂಕದಂಕೆಯ । ಬಿಗಿದಪರಿಯನು ನೆನೆದು ಮರುಗಿದನರಸ ಕೇಳೆಂದ ॥ ... ... ॥೨೪॥

ಅಂತು ಸಂಧಿ ೩ಕ್ಕೆ ಪದ ೩೦೪ಕ್ಕಂ ಮಂಗಳಮಸ್ತು.

ಎಂಟನೆಯ ಸಂಧಿ.

ಸೂಚನೆ|| ವಾಯುಸುತನುರಿವನೆಯು ಕೌರವ | ರಾಯ ಕೃತಕವ ಕಳೆದು ಹೊಕ್ಕನು | ತಾಯಿಯೊಡಹುಟ್ಟಿದರುಸಹಿತ ಮಹಾವನಾಂತರವ ||

ಕೇಳು ಜನಮೇಜಯಧರಿತ್ರೀ | ಪಾಲ ಗಜನಗರಿಯಲಿ ಕೌರವ | ರಾಳಿ ಪಾಂಡವರಾಳಿ ಸಣ್ಣ ಸಿನ ಕಾಲುಮೆಟ್ಟುಗಳ || ಸೂಳುಮತ್ಸರಬೆಳೆದುಪಾಡಿನ | ಚೂಳಿಗಲಹದ ಕದಡುಬೋಚನ | ತೋಳು ವಲರೊಳತೋಟಿ ಮಸಗಿತು ದಿವಸದಿವಸದಲಿ ||೧|| ಬೇಡಿಗಲಹದ ಕದಡು ಬೇಟನ | ಲ್ಪೇಡೆ ಹಚ್ಚಿತು ಬೇಡುಗಲಹದ | ಕ್ರೀಡೆಯೊಳಗವು ಕೊಂಡೆಸಗು ನಟಿಸಿತು ನಾಡುನಾಡಿನಲಿ || ಆಡುದೆರಡರಸಿಭಪುರಗ್ಳ ಕಾಳಾಮುಟಿನ್ನೇನೆಂದು ಪುರಜನ | ವ್ರಿದೆ ಹೆಮಂತು ಭೀಮದುರ್ಯೋಧನರ ಹೋರಟೆಗೆ ||೨|| ಬೇರೆ ಪಾಂಡವರಲಿ ರಾಯನ | ನೂರುಮಕ್ಕಳು ಪುರವನಾಳಲಿ | ಬೇರೆ ಕೌರವರಲಿ ಪಾಂಡವರಾಳಲಿಭಪುರಿಯ || ನೂರರೊಡನೈವರನು ಧರಿಸಿರೆ | ಲಾರದೀಪುರಿಯೆನುತ ಮುಗುಡವ | ಹೇರಿ ಹೊಪಕುಳಿಗೊಳುತಲಿ ದುರ್ಗದು ಹಸ್ತಿನಾನಗರ ||೩|| ಒಂದುದಿವಸ ಸುಯೋಧನನು ನಿಜ | ಮಂದಿರದೊಳೇಕಾಂತದಲಿ ಮನ| ನೊಂದು ನುಡಿದನು ಶಕುನಿಕರ್ಣಜಯದ್ರಥಾದ್ಯರಿಗೆ || ಅಂದು ಭೀಮಾರ್ಜುನರು ದ್ರುಪದನ ತಂದು ದಕ್ಷಿಣೆಯಿತ್ತುಗುರುವಿಗೆ | ಸಂದಸ್ಕೆ ಸಮರದಲಿ ಪರಿಭವವಾಯ್ತು ತಮಗೆಂದ ||೪|| ವನಜವನದಲಿ ತುರುಚೆ ಕಚ್ಚಿನ | ಬನಟ ಕದಸಿಗೆ ಚೂತಮಯಕಾ | ನನಟ ಬೊಬ್ಬಲಿ ಭೀಮಸೇನನ ಯಿರವು ತಮ್ಮೊಳಗೆ || ಇನಿತುಪಾರ್ಥನಮೇಲೆ ಯಮಳರ | ಜಿನುಗನಲಿ ಜಾರನು ಯುಧಿಷ್ಠಿರ | ಜನಪನಾಗಲಿ ಮೇಣ್ ಮಾಣಲಿ ಭೀತಿಯಿಲ್ಲೆಂದ ||೫|| ಹುದುನಡೆಯದಿವರೊಡನೆ ನಮ್ಮಲಿ| ಕದನವೇ ಕೈಗಟ್ಟುವುದು ಕಾ | ದಿದೊಡೆ ಹೆಬ್ಬಲವಹುದು ದುರ್ಬಲ ದೈವಗತಿ ಬೇರೆ || ನದಿಗಳರಳಿಯ ಹಾಸು ನಮಪಿಷ | ವುದರಬೀಪನಚೂರ್ಣಮಾವಂ | ಗವಲಿ ಸಾಪತ್ನ್ಯರಲಿ ಸಮರವ ಕಾಣೆ ತಾನೆಂದ ||೬|| ಮುಗುಡಮೇತಕೆ ಜೇಯ ಡೊಂಬಿನ | ಜಗಳವನು ತೆಗೆದರ್ನೃಪರ ಸುಂ | ಟಿಗೆಯಸಾಯ್ಸುವೆನವರ ತನುವನು ಯುದ್ಧರಂಗದಲಿ || ದಿಗುಬಲಿಯ ಕೊಡಿಸುವೆನು ಸಾಕಿ| ನ್ನೊಗುವಿಗೆಯ ಚಿಂತಾಂಗನೆಯನೋ | ಲಗಿಸದಿರು ಕುರುರಾಯ ಚಿತ್ತೈಸೆಂದನಾಕರ್ಣ ||೭|| ಹೊಡೆದು ಹೊಡೆಚಂಡಾಡಿ ರಿಪುಗಳ | ಗಡಣವನು ಯಮರಾಜಧಾನಿಗೆ | ನಡೆಸುವೆನು ನೀ ನೋಡುತಿರು ಸಾಕೊಂದು ನಿಮಿಷದಲಿ || ಕೊಡು ತನಗೆ ನೇಮವನು ಮುಗುಡವ | ಬಿಡು ಮನಸ್ಸಿನ ಕಂದುಕುಂದನು | ಹಿಡಿಯದಿರು ಕುರುರಾಯ ಚಿತ್ತೈಸೆಂದನಾಕರ್ಣ ||೮|| ಹಬ್ಬುಗೆಯ ಹದಿನಾಲ್ಕುಲೋಕದ | ಮೊಬ್ಬುಗಳನೀಡಾಡಿ ನಭದೊಳ | ಗೊಬ್ಬನೇ ರವಿ ತೊಳಗಿಬೆಳಗುವವೋಲು ಪಾಂಡವರ || ಕೊಬ್ಬುಗಳ ನಿಲಿಸುವೆನು ಧರೆಯೊಳ | ಗೊಬ್ಬನೇ ದುರ್ಯೋಧನನು ಮ | ತ್ತೊಬ್ಬರಿಲ್ಲೆಂದೆನಿಸಿ ತೋರುವೆನೆಂದನಾಕರ್ಣ ||೯|| ವಿದುರಭೀಷ್ಮಾದಿಗಳು ನಿನ್ನಯ | ಸದನದೊಳಗುಂಡುಟ್ಟು ಪರರ | ಭ್ಯುದಯವನೆ ಬಯಸುವರು ದೂರುವರೆಮ್ಮನವರು

ಗಳ ॥ ಪವನ ನೀನೇ ಬಲ್ಲೆ ಸಾಕಿ । ನ್ನದರ ಮಾತೇಕರಸ ತನ್ನಯ । ಕವನವನು ಚಿತ್ತೈಸು ಸಾಕಿನ್ನೆಂದನಾ ಕರ್ಣ ॥೧೦॥ ಸಹಜವಿನುಡಿ ಕರ್ಣನಾಡಿದ । ನಹುದು ಪಾಂಡವರೆಂಬವರು ಕಡು । ಸಹಸಿಗಳು ಗೆಲಲರಿದು ಕುಹಕೋಪಾಯಮಾರ್ಗದಲಿ ॥ ಅಹಿತರನು ಗೆಲಬಹುದು ಪರಿಕರ । ಸಹಿತವರುಗಳ ನಿಮ್ಮ ಚಿತ್ತಕೆ । ಬಹಡೆ ತನ್ನಭಿಮತವನವಧರಿಸೆಂದನಾ ಶಕುನಿ ॥೧೧॥ ಐದುಮುಖವಿರೈದುಭುಜಹದಿ । ನೈದುಕಂಗಳ ಹಿಗಡರುಪ್ರಸು । ಮೇದಿನಿಯ ಮೇಲೊಂದು ಶಿರಭುಜವೆರಡನಳವಡಿಸಿ ॥ ಆದಿಪುರುಷನು ಭೀಮಸೇನನ । ಲೈದೆ ಜನಿಸಿದನಾತನಿದಿರಲಿ । ಕೈದುಕಾರನದಾವನೈ ಹೇಳೆಂದನಾ ಶಕುನಿ ॥೧೨॥ ಅರಸ ಕೇಳ್ಬಿಲುವಿದ್ಯೆಯಲಿ ಮೂ । ವರು ಕಣಾ ನಾವರ್ಥ್ಯಪುರುಷರು । ಧರೆಯೊಳೊಬ್ಬಗೊಂದು ಗುಣ ಪಾರ್ಥಂಗೆ ಮೂರುಗುಣ ॥ ಭರತನಾಗಿಹನಾತನೊಬ್ಬನ । ನುಸಲಿ ಮಾರಾಂತು ಜೈಸಿ । ಮರಳಬಲ್ಲವನಾವನೈ ಹೇಳೆಂದನಾ ಶಕುನಿ ॥೧೩॥ ರಾಮಚಂದ್ರನ ಚರಣಯುಗ ನಿ । ಸ್ಸೀಮಭೀಷ್ಮಾಚಾರಿಯರ ಕಿರ । ವಾಮಹಾರಥದ್ರೋಣನೆದೆ ನತುಗುಪ್ತವು ಸಮರದಲಿ ॥ ಸೌಮನಸ್ಯನು ನಿಷ್ಪ್ರಕಂಪನ । ನಾಮನರ್ಜುನನೇಪಸಿದಿರಲಿ । ಭೂಮಿಯಲಿ ಬಿಲ್ಲಾಳದಾವವನೆಂದನಾ ಶಕುನಿ ॥೧೪॥ ಶತ್ರುಗಳ ಸಂಹರಿಸಿ ರಾಜ್ಯವ । ನೊತ್ತಿಯಾಳ್ವೆನೆಂಬ ಸಾಹಸ । ಸತ್ವಗುಣ ನಿನಗಿಲ್ಲ ಪಾಂಡವರತುಲಭುಜಬಲರು ॥ ಕ್ಷತ್ರಿಯರ ಮುಖದಿಂದ ರಿಪುಗಳ । ಕತ್ತುಹಾಯಿಕಿ ನೆಲನನೇಕ । ಚ್ಛತ್ರದಲಿ ಸಲಹುವುದು ಮತ ಕೇಳೆಂದನಾ ಶಕುನಿ ॥೧೫॥ ಸೋದರರುಗಳು ನೀವು ನಿಮ್ಮೊಳು । ಭೇದಮಂತ್ರವ ಮಾಡುವುದುಮು । ಯ್ಯಾದರೆಯೋ ನಾಸ್ತಿ ನಿಮ್ಮೊಡೆಯಲರಮನೆಯ ಸೇವಕರು ॥ ವಾದಿಸುವರೆತ್ತಂದ ನರ ಸಮು । ಗಾದಿಯೊಡೆಯರು ಕಂಡವರ ನುಡಿಯಬೇಕಾದರೆ ಮೋಹ್ನಾಣು ಬಿನ್ನಹವೆಂದನಾ ಶಕುನಿ ॥೧೬॥ ಪಕ್ಷಪರೆಡೇ ಲೋಕದೊಳ್ವಿತ್ತ । ಪಕ್ಷ ಪಾಂಡವರಾತ್ಮಪಕ್ಷ ಪಿ । ಪಕ್ಷ ತಂದೆಯ ಪಕ್ಷ ಸಪಕ್ಷವು ರಾಯದೆಸೆಯವರು ॥ ತಕ್ಷಕನ ತೆರನಂತೆ ನಿಮ್ಮನು । ಭಕ್ಷಿಸುವರಾವಂಗದಲಿ ನೀನೀಕ್ಷಿಸುವುದೈ ಪಾಂಡುಪುತ್ರರನೆಂದನಾ ಶಕುನಿ ॥೧೭॥ ಮೊಳೆಯಲೇ ಮುರುಡಿಸಲು ಬೇಹುದು । ಬಲಿದಬಳಿಕದು ನಿನ್ನ ಹವಣೇ । ಇಳೆಯೊಳರ್ಧವನಿತ್ತು ರಿಪುಗಳ ಪೆಚ್ಚಿಸಿದಬಳಿಕ ॥ ಗೆಲುವನಾವನು ದೇವದಾನವರೊಳಗೆ ಭೀಮಾರ್ಜುನರ ಕೈಮನ । ದಳವನರಿಯಾ ಭಾರವೈ ಮೇಲೆಂದನಾ ಶಕುನಿ ॥೧೮॥ ಧಾರಿಣಿಯೊಳು ಪಿಪೀಲಿಕೆಯು ವಿ । ಸ್ತಾರದಲಿ ಮಾಡಿದಮನೆಯ ಕಾಳೋರಗನು ಹೊಗುವಂತೆ ರಿಪು ಕುಂತೀಕುಮಾರಕರು ॥ ವೈರದಲಿ ಸಪ್ತಾಂಗವನು ಕೈ । ಸೂರೆಗೊಂಬರು ತಪ್ಪದಿದಕೆ ವಿ । ಚಾರವನು ಕಾಲದಲಿ ಮಾಡುವುದೆಂದನಾ ಶಕುನಿ ॥೧೯॥ ಹಿಂದೆ ನೀನವರುಗಳ ನಾನಾಚಂದದಲಿ ನೋಯಿಸಿದೆ ಮನದಲಿ । ಕಂದುಕುಂದನು ಕಷ್ಟವೃತ್ತಿಯನಾಚರಿಸುತಿಹರು ॥ ಇಂದು ನೀನಾ ಪಾಂಡುಪುತ್ರರ । ನಂದಗೆಡಿಸದೆ ಬಿಟ್ಟೆಯಾದೊಡೆ । ಮುಂದೆ ಬೆಟ್ಟಿತು ರಾಜಕಾರ್ಯವದೆಂದನಾ ಶಕುನಿ ॥೨೦॥ ಇರುಬಿನಲಿ ಸಿಕ್ಕಿರ್ದಹುಲಿಯನು । ಮರಿಪು ಕಳೆಯದೆ ತಳಪಟ್ಟಿಕೆ ಪಿ । ಟ್ಟಿರಿಯಬಹುದೇ ಕೊಂದು ಕೂಗದೆ ಬಿಡುವುದೇ ಬಳಿಕ ॥ ಕರುಬರಹ ಪಾಂಡವರುಗಳಗಲೆ । ಹರಿವ ನೆನೆ ಹೊರಬಿದ್ದರಾದೊಡೆ । ತರಿದು ಬಿಸುಡದೆ ಮಾಣ್ಬರೇ ಹೇಳೆಂದನಾ ಶಕುನಿ ॥೨೧॥ ಹರಿಹಯನು ವೃತ್ರಾಸುರನ ಸಂ । ಹರಿಸಲರಿಯದೆ ಗರುವದಿಂದಿರು । ತಿರಲವನು ದಿನದಿನದೊಳಣುವಣುಮಾತ್ರವನು ಬೆಳೆದು ॥ ಧರೆಯ ತುಂಬಲು ತನ್ನ ಸತ್ವದ । ನೆರೆವಣಿಗೆಗೈ

ಬಿಸವೆ ನಾನಾ । ತೆರದೊಳಾಯಸಗೊಳ್ಳನೇ ಹೇಳೆಂದನಾಶಕುನಿ ॥೨೨॥ ✓ಅಡವಿಯಲಿ ಜನಿಸಿದರು
ಬೆಳವಿಗೆ । ಯಡವಿಯೊಳಿಗನ್ನವರ ಬಾಳಿಕೆ । ಗಡವಿಯೇ ನೆಲೆಮನೆಯದಲ್ಲದೆ ಪಾಂಡುಪುತ್ರರಿಗೆ ॥
ಪೊಡವಿಯೊಡೆತನಸಲ್ಲದವರನು । ನಡೆಸುವುದು ಕಾಲವಲಿ ರಾಜ್ಯವ । ಕೊಡುವುದಾವಂಗದಲಿ ಮತವೆ
ಲ್ಲೆಂದನಾಶಕುನಿ ॥೨೩॥ ತಿಮಿರವಡಗಿಪಲೋಕ ರಕ್ಷಾ । ಕ್ರಮಣವಡಗಿವವಂತಿ ಕರ್ಮ । ಭ್ರಮೆಗಳ
ಡಗಿಪಯೋಗಿ ರುಚಿಯಡಗಿಪನಕ್ಷೋತ್ತಮನು ॥ ಹಿಮವಡಗಿಪಸರೋಜದಂತಿಹು । ದಮಲಮತ ಕೇಳ್ಪ
ಗೆಗಳಡಗಿದೊ । ಡಮರಪದವೆನಿಸುವುದು ಚಿತ್ತ್ರರೆಂದನಾಶಕುನಿ ॥೨೪॥ ಜಿಪದೆ ಸುಖದುಃಖಗಳೊಳೊಂ
ದನು । ಹಿಡಿದು ಸಪ್ಪನಹಾರವುಖದಲಿ । ನಡೆಯಲೊಂದರ ತುಷ್ಟಿಯೊಂದರನಷ್ಟ ತನಗಹುದು ॥
ಹಿಡಿವುದಿಹಪರವೆರಡರೊಳಗಳ । ವಡಿಕೆ ತನಗಹುದೊಂದನೊಂದನು । ಬಿಡುವುದಲ್ಲದೆ ಬೇರೆ ಮತವಿಲ್ಲೆಂ
ದನಾಶಕುನಿ ॥೨೫॥ ಭಾವಸ್ಫುರಣನನ್ನಾತಮ್ಮನು । ಮಾವನಳಿಯನು ಪುತ್ರಮಿತ್ರರು । ಸೇವಕರು
ಸಜ್ಜನರು ಸುಜನರು ಸತ್ಯಯುತರೆಂದು ॥ ಭಾವಿಸದಿರಾರುವನು ನಿನ್ನಯ । ಜೀವವುಳ್ಳನ್ನಬರ ನಿನ್ನಯ।
ದೈವವೇ ಗತಿಯೆಂದು ನಂಬಿಹುದೆಂದನಾಶಕುನಿ ॥೨೬॥ ಶತ್ರುಶೇಷವದೆಲ್ಲವೆಂದೆನು । ಹುತ್ತು ಬರಲಾ
ಗವುಕನಾ ಭೂ । ಪೋತ್ತಮರುಗಳು ವೈರಿರಾಯರ ವಂಶಬೀಜವನು ॥ ಬಿತ್ತುವರೆ ನೇತ್ರಾವಳಿಯ
ಮೀ । ಟಿತ್ತಿ ಕಾರಾಗಾರದೊಳಗೆ ಕಳತ್ರಸಹಿತನಶನದಲಧಿಕವ್ರತವ ಮಾಡೆಂದ ॥೨೭॥ ವಿಷವನುಣ
ದೆಂದಳುಕದುಪಭೋ । ಗಿಸಲು ಕೊಲ್ಲದೆ ಬಿಡುವುದೇ ಕರ । ಗಸದ ನಡು ಬಯಲಾದೊಡೆಯು ಕೊಯ್ದು
ಕ್ಕದೇ ವರುಷ ॥ ಶಿಶುವಿವನು ಸಾಮರ್ಥ್ಯಪ್ರಲಿಪ್ತನೆ । ಪುಸಿಕನಾ ಯೆಂದುಳಿಹಿದೊಡೆ ರ । ಕ್ಕಸನ
ಹನು ಮುಂದಕ್ಕೆ ತನಗವನೆಂದನಾಶಕುನಿ ॥೨೮॥ ಕಾಲವನು ಗೂಗೆಗಳು ನಿರ್ಜರ । ರೇಳಿಗೆಯನಾದ್ಯೆ
ತ್ಯರುಗಳು ತ । ಮಾಳಿ ರಪಿರಕ್ತಗಳನಾಬಲುಸಿದ್ರಿಯನು ಚೋರ ॥ ಕಾಲಭುಜಗನು ಗರುಡನುಳಿವನು
ತಾಳದಂದದ ಪಾಂಡವರು ನಿ । ನ್ನೇಳಿಗೆಯ ಸೈರಿಸರು ಚಿತ್ತ್ರಸೆಂದನಾಶಕುನಿ ॥೨೯॥ ಮಿಗಡರು
ದ್ರನು ಲೋಚನಾಗ್ನಿಯೊ । ಳೊಗುಮಿಗೆಯ ಕೋಪದಲಿ ಕಾಮನ । ಮಿಗೆ ದಹಿಸಿದಂದದಲಿ ರಿವುಕುಂತೀ
ಕುಮಾರಕರ ॥ ಹೊಗೆದು ಕಳೆ ಲಾಕ್ಷಾಭವನದಲಿ । ಪಗೆಗೆ ಹುಲವಹುದಲ್ಲದಿದರ್ದೊಡೆ । ಪಿಗಟಿಸುವುದೈ
ರಾಜಕಾರ್ಯವಿದೆಂದನಾಶಕುನಿ ॥೩೦॥ ಬಿಟವಿಘಣಿಯನು ಹೊದೆವಸಿಡಿಲನು । ಜಡಿವವಾರಿಯ ನಲವ
ರುಚಿಯನು । ನುಡಿವಪಿಸವನು ಹಾನಿವೃದ್ಧಿಯ ಹೆಚ್ಚುಕುಂದುಗಳ ॥ ಕಡುವದಗೆಯನು ಕಾಲಕರ್ಮದ।
ಗಡಣವನು ಸುಖದುಃಖದುದಯದ । ಕಡೆವೊಡಲ ಕಾಣಿಸುವನಾವನೆಂದನಾಶಕುನಿ ॥೩೧॥ ಇನಿತುಚಿಂ
ತಿಸಲೇಕೆ ಕೌರವ । ಜನಪ ನಿಮ್ಮಡಿಗಳಿಗೆ ತಾನೊಂದನುವ ಬಿನ್ನಹಮಾಡುವೆನು ಪಾಂಡವರ ನೆಳ
ಲಿರಲು ॥ ನಿನಗೆ ರಾಜ್ಯವನಾಳ್ವಫಲ ಸಂ । ಜನಿಸಲರಿಯದು ಕಾಲವಲಿ ನೀ । ನೆನೆಯುಪಾಯವನೊಂ
ದನೆಂದು ಕಳಿಂಗ ಕೈಮುಗಿದ ॥೩೨॥ ದೇವದಾನವರಂತೆ ಹದ್ದಿನ । ಹಾವಿನೋಲತಿವೈರಬಂಧದ । ತಾವು
ತವಣೆಯ ನೀರುಭೇದಿಸುವಂತೆ ಭೇದಿಸುತ ॥ ಕಾವವರ ಕಾವುತ್ತ ಕಂಟಕ । ಜೀವಿಗಳನಪಹರಿಸುತಂತ ।
ರ್ಭಾವಶುದ್ಧಿಯೊಳಿಳೆಯನಾಳುವುದೆಂದನಾಶಕುನಿ ॥೩೩॥ ವೈತ್ಯವಿನತಾಳಿಗೆಯೊಳಗ್ಗದ । ಶತ್ರು
ಗಳ ಸಾಮೀಪ್ಯದಲಿ ದು । ರ್ವೃತ್ತರೋಲಗದೊಳಗೆ ಸಿಂಹದ ಗುಹೆಯೊಳಹಿಪತಿಯ ॥ ಮತ್ತನೊಳ
ಗಿಹವೋಲು ಸಲೆ ಬಾ । ಳುತ್ತಲಂತಃಪುರದೊಳರಸಿರು । ತತ್ಯಧಿಕವೆಚ್ಚರಿಕೆಯಿರಬೇಕೆಂದನಾಶಕುನಿ॥

ಹಗೆಯ ಹೆಂಗಳನರಮನೆಗಳೊಳು । ಹೊಗಿಸಲಾಗದು ತನಗವರುಹೇ । ಳಿಗೆಯ ಹಾವಿನವೊಲು
ಸುಖತರವಲ್ಲವರಿನೃಪರಾ ॥ ಮಗಳ ಮಕ್ಕಳ ದೆಸೆಯವರನೋ । ಲಗಿಸುವರ ಬಾಹತ್ತರನಿಯೋ । ಗಿಗ
ಳನಂಬುವುದುಚಿತವೇ ಹೇಳೆಂದನಾಶಕುನಿ ॥೩೫॥ ದೈವಹೊಡೆದಂದದಲಿ ಬೆರೆತು ಸ । ಭಾವಲಯದಲಿ
ಗರ್ವವಿಭ್ರಮ । ಭಾವಭೂಷಿತನಾಗಿ ವೈಹಾಯಸವನೀಕ್ಷಿಸುತ । ಹಾವಿನಂದದೊಳಿರದೆ ಹಾಸ್ಯರ । ಸಾವ
ಲಂಬನನಾಗದೆಯು ಸುಖ । ಜೀವಿಯಾಗಿಹುದುತ್ತಮವು ಕೇಳೆಂದನಾಶಕುನಿ ॥೩೬॥ ಹೀನಮುಖಬಹು
ಮುಖಸರಾಜ್ಯಮುಖ । ದೀನಮುಖವಾಚಾಲಮುಖವ । ಜ್ಞಾನಮುಖವಂತಮೂರ್ಖಬಹಿಮೂರ್ಖವಾದ ಕಾ
ರ್ಯದಲಿ ॥ ಆನರೇಂದ್ರನ ವರ್ತನಕೆ ದುಃಸ್ಥಾನವಾಗದೆ ಬಿಡದು ಸಂಶಯ । ವೇನಿದಕೆ ಕುರುರಾಯ ಚಿತ್ತೈ
ಸೆಂದನಾಶಕುನಿ ॥೩೭॥ ಶಯನದಲಿ ವಸ್ತಿಯಲಿ ವೈಹಾ । ಳಿಯಲಿ ಬೇಟೆಯಲೂಟದಲಿ ಕೇ । ಳಿಯಲಿ
ಸುರತಕ್ರೀಡೆಯಲಿ ಮಜ್ಜನದಸಮಯದಲಿ ॥ ಜಯದ ಜೋಕೆಯಲೋಲಗದಮರ । ವೆಯಲಿ ವಾರಸ್ತ್ರೀ
ಯರುಗಳಲಿ । ಲಯವನೈದಿಸಬಹುದು ಚಿತ್ತೈಸೆಂದನಾಶಕುನಿ ॥೩೮॥ ರುಜೆಯನಲುಗುವರದನವನು
ದ್ರುಗು । ರಜವನನುಚಿತಜಾತಧೂಮ । ಧ್ವಜವರುಣವನವಿದ್ಯೆಯನು ಗೃಹವಾಸಕುಂಡಲಿಯ ॥ ವೃಜಿನ
ವನು ಕಂಪಿತವ ವೈರಿ । ವ್ರಜವನುಳುಹುವನೆಗ್ಗನೆಂಬಿದು । ಸುಜನರಭಿಮತ ನಿನ್ನ ಮತವೇನೆಂದನಾ
ಶಕುನಿ ॥೩೯॥ ಮಣಿದು ಕೂಪದ ಜೀವನವ ಕತೆ । ಗಣಿಸದೇ ಘಟಯಂತ್ರವ್ಯಗರಿಪು । ಹಣುಗಿಪರೆ
ಹರಿಣಂಗೆ ಗೆಲವೇ ಕಾರ್ಯಗತಿಯರಿದು ॥ ಮಣಿವುದಳುಕುವುದಾವಪರಿಯಿಂ । ದೆಣಿಸಿ ಮನದಲಿ ವೈರಿ
ರಾಯರ । ಹಣಿದಮಾಡುವುಪಾಯವಿದು ಕೇಳೆಂದನಾಶಕುನಿ ॥೪೦॥ ಅಹಿಯ ಬಾಧೆಯ ಬಲೆಗೆ ಸಿಲುಕಿದ ।
ಮಿಹಿರಬಿಂಬದವೊಲುಮಾಯಾ । ವಿಹರಣದ ವೀಥಿಯಲಿ ಸಿಕ್ಕಿದಜೀವರುಗಳಂತೆ ॥ ಅಹಿತರುಪಟಳದೊ
ಳಗೆ ಸಿಲುಕದೆ । ಕುಹಕರವದಿರಪರಿವ ನೆನೆ ಲೇ । ಸಹುದು ಕಾಲಕ್ಷೇಪವಿದಕೇನೆಂದನಾಶಕುನಿ ॥೪೧॥
ನಂಬುವರ ನೆರೆನಂಬು ನಂಬದ । ಡಂಬಕರ ನಂಬದಿರು ಸಂಗರ । ವೆಂಬಮಾತಿಗೆ ಹಂಬಲಿಸಿ ಬೆಂ
ಬೀಳ್ವ ಬಾಹಿರರ ॥ ನಂಬಿರಬಿರಲಿರಾಯಹನನವಿ । ಳಂಬನವ ಮಾಡದಿರುರೋಷಾ । ಡಂಬರವ ರಚಿ
ಸದಿರು ಬಹಿರಂಗದಲಿ ನೀನೆಂದ ॥ ಖೂಳನಪದಾತಾರನನುದು । ಮೂರ್ಖನಹಮಿತ್ರನನು ತನಗನು ।
ಕೂಲೆಯಲ್ಲದಸತಿಯನಂತಪಾರ್ಯಿಯಹನರನ ॥ ವ್ಯಾಳಯುತವಹನಿಳಯಪಿನಿತುವ । ಕಾಲದಲಿ ವರ್ಜಿ
ಸುವುದಲ್ಲದೊ । ಡೊಳಿಗವು ಹಿರಿದಹುದು ಚಿತ್ತೈಸೆಂದನಾಶಕುನಿ ॥೪೩॥ ಎಲ್ಲರಿಂ ಬಹುಧನವ ಕೊಳು
ನಿ । ನ್ನಲ್ಲಿ ಕಾಣಿಯ ಬರಿದೆ ಸೋಲದಿ । ರಿಲ್ಲವೆನ್ನದೆ ನುಡಿದು ಕಾಲಕ್ಷೇಪವನು ಮಾಡು ॥ ಬಳ್ಳಿದನು ನಮ
ಗೆಂಬನಯನುಡಿ । ಯೆಲ್ಲರಲಿ ಬೆಚ್ಚಂತೆ ರಿಪುಗಳ । ಗೆಲ್ಲಗೆಡಹುವಮಂತ್ರವಿದು ಕೇಳೆಂದನಾಶಕುನಿ ॥ ಧನವ
ನಿತ್ತಾದೊಡೆಯುಸಹಭೋ । ಜನವನುಂಡಾದೊಡೆಯುಮೋಹ್ನಜ । ತನುಜೆಯರನಿತ್ತಾದೊಡೆಯು ಬ
ಳಿಸಂದು ಬೇಸರದೆ ॥ ತನುವ ಬೆರಸಿದ್ದಾದೊಡೆಯು ನೂ । ತನಗುಣವ ನುಡಿದಾದೊಡೆಯು ರಿಪು । ಜನ
ಪತಿಯ ವಶಮಾಳ್ಪುದುಚಿತವಿದೆಂದನಾಶಕುನಿ ॥೪೫॥ ಕೋಶಪಾಸಾದಿಗಳ ಮಾಡಿ ಮ । ಹೀಸುರರ
ಮೇಲಾಯುಧಂಗಳ । ಸೂಸಿ ದೈವವ ಮುಟ್ಟಿ ಟವ್ಯಾಜ್ಞೆಗಳಲೊಡಬಡಿಸಿ ॥ ಹೇಸದರಿಭೂಪಾಲ
ರನು ನಿ । ಶ್ಶೇಷವೆನಿಸುವುದಲ್ಲದಿದರೊಡತೆ । ಹೈಸರಿಸುವುದು ರಾಜಕಾರ್ಯವಿದೆಂದನಾಶಕುನಿ ॥೪೬॥
ನರಕವಿಲ್ಲದನರರು ಸಾರಿಯ । ರುರುಜೆಯಿಲ್ಲದಯತಿಗಳಸುರರ । ವಿರಸವಿಲ್ಲದಸುರರು ಮಾಯಾಪಾಶ

ವನು ಹರಿದ ॥ ಪರಮತತ್ವಜ್ಞಾನಿಯಂತಿಹ । ಧರೆಯೊಳಗೆ ಹಾಗರಸುಗಳು ಹಗೆ । ಹರಿದು ಹೋಗಲಸಾಧ್ಯವಹುದೇನುಂಟು ಹೇಳೆಂದ ॥೪೭॥ ಮಸಗೆ ಮೂಡಿದ ಹೊಲನು ದುಷ್ಟ । ಪ್ರಸರದೇಳಿಗೆ ಪಾಪಿಯೊಲಗ । ಹುಸಿಯಬಾಳುವೆ ಹುದುಪಿನಾರಂಭದಫಲೋದಯವು ॥ ನಸಿದುಹೋಗವೆ ಲೋಕದೊಳಗವು । ಹೆಸರುವಡೆವವೆ ಹಗೆಯ ಹೆಚ್ಚುಗೆ । ಹಸನ ಕೊಡುವುದೆ ರಾಯ ಚಿತ್ತೈಸೆಂದನಾ ಶಕುನಿ ॥೪೮॥ ಜಾತಿಬಾವನ್ನದಲಿ ಸರ್ಪದ । ಭೀತಿ ಸತ್ಪುರುಷರಿಗೆ ದುರ್ಜನ । ಭೀತಿ ದೇವಾದ್ಯರಿಗೆ ದನುಜಾದಿಗಳ ಬಲುಭೀತಿ ॥ ಜಾತಮಾತ್ರಕೆ ಜನನಮರಣದ । ಭೀತಿ ಬೆಂಬಿಡದಂತೆ ಗೋತ್ರಜ । ಭೀತಿ ಭೂಪಾಲರಿಗೆ ಹಿರಿದಹುದೆಂದನಾಶಕುನಿ ॥೪೯॥ ಕರಣಿಕರು ಕರಣಿಕರೊಡನೆ ಸಹ । ಚರರು ಸಹಚರರೊಡನೆ ಸಾವಂ । ತರಲಿ ಸಾವಂತರುಗಳಾ ಮಂತ್ರಿಯಲಿ ಮಂತ್ರಿಗಳು ॥ ತರುಣಿಯರು ತರುಣಿಯರೊಡನೆ ಪರಿ । ಕರರು ಪರಿಕರರೊಡನೆಯಿರಲೊರ । ಸೂರಸು ಮಿಗೆ ಮಸೆವುದು ಕಣಾ ಭೂಭುಜನೆ ಕೇಳೆಂದ ॥೫೦॥ ವ್ಯಾಕುಲಿತವಿಪ್ರರ ವಿಸತಿಯ ದಿ । ವಾಕರನ ಲೋಕಾಯತರ ರ । ತ್ನಾಕರನ ಲಾವಕರ ಹಿಸುಣರ ದಾಯಭಾಗಿಗಳ ॥ ಶ್ಲೋಕಿಗರ ಮಾಯಾವಿಗಳ ಬ । ಪಿರ್ಕರನ ವಿನಿಯೋಗಿಗಳ ಸ । ಮ್ಯಕಮತ್ಸರದೊಳಗೆ ಬದುಕುವನಾವ ಹೇಳೆಂದ ॥೫೧॥ ಮಂಬು ಮಹಿಯನುಮುಸುಕುವಂತೆ ಧ । ನಂಜಯನು ಕಾನನವ ಸುಡುವಂ । ತಂಬಿಕೆಗಳುಮ್ಮಾಹವನು ಹೊಯ್ದೊಯ್ದೊರಸುವಂದದಲಿ ॥ ರಂಜಕರು ಪಾಂಡವರು ನಿನ್ನನು । ರಂಜಿಸುವರಾವಂಗದಲಿ ನವ । ಕುಂಜರನ ಕಾಲಾಟ ಸಿಂಹಕೆ ಸೇರುವುದೆಯೆಂದ ॥೫೨॥ ವನಿಗೆ ನಡೆದೊಳಪೊಕ್ಕು ಮರೆಗೂ । ಡಿನಲಿ ಸಿಲುಕಿದ ಹುಲಿಯವೋಲ್ಕಾ । ನನದಿ ಬೀಸಿಪ್ಪ ಬಲೆಯೊಳಗೆ ಗಾನಕ್ಕೆ ಮನಸೋಲ್ದು ॥ ಹನನವರಿಯವಮೃಗದವೋಲಿರು । ಬಿನಲಿಕಡಹಿದಕರಿಯವೋಲಿಪ್ಪ । ಜನಪರಭ್ಯುದಯದ ವಿನಾಶವನೆಸಗಬೇಕೆಂದ ॥೫೩॥ ಎಂದು ದುರ್ಬೋಧೆಗಳ ನಾನಾ । ಚಂದದಲಿ ಬೋಧಿಸಿ ರು । ನಂದಗೆಡಿಸಿ ತದೀಯವಂಶಚ್ಛೇದಮಾರ್ಗವನು ॥ ಒಂದುಗೂಡಿ ಸುಯೋಧನಂಗಾ । ನಿಸಿ ಕಳಿಂಗ ಲೋಕವ । ಕೊಂದನ್ಯೆ ಜನಮೇಜಯಕ್ಷಿತಿಪಾಲ ಕೇಳೆಂದ ॥೫೪॥ ಎಮ್ಮ ಬಹುಮಾನಾವಮಾನವು । ನಿಮ್ಮದಲ್ಲದೆ ಬೇರೆ ನಮ್ಮಯ । ಸೊಮ್ಮುಸಂಬಂಧದಲಿ ಹಿತವರ ಕಾಣೆನಾನಿನ್ನು ॥ ಸಮ್ಮತರು ಪಾಂಡವರಿಗಗ್ಗಿಯ । ಲೊಮ್ಮೆ ಹರಿವನು ನೆನೆವನೊದವಿದೊ । ಡೆಮ್ಮಸುಕೃತೋದಯದ ಫಲವೆಂದನು ಸುಯೋಧನನು ॥೫೫॥ ಎನೆ ಕಳಿಂಗಾದಿಗಳು ತಂತ । ಮ್ಮನುಮತವ ಹೇಳಿದರು ಕೌರವ । ಜನಪನವರಿಗೆ ಕೇಡನಿಶ್ಚೈಸಿದನು ಮನದೊಳಗೆ ॥ ಜನಕನಲ್ಲಿಗೆ ನಡುವಿರುಳು ಬಂ । ದನುನಯದೊಳೀಮಾತ ತೆಗೆದಂ । ದನು ವೃಕೋದರನೂಳಿಗವನರ್ಜುನನ ಸಾಹಸವ ॥೫೬॥ ಅರಿಗಳುದ್ಭವವಿನ್ನು ಗಂಟಲ । ನರಿವುದೆಮ್ಮನು ನೂರುಮಕ್ಕಳ । ನರಸ ಬರಿದೇ ಹಡೆದು ಕೆಡಿಸಿದೆ ತಾಯಜೌವನವ ॥ ಇರಲಿ ಭೀಮಾರ್ಜುನರು ಹಸ್ತಿನ । ಪುರದೊಳೆಮ್ಮನಿಬರನು ದೇಶಾಂ । ತರಕೆ ನೇಮಿಸು ಜೀಯ ನೂಕದು ಭೀಮನೊಡನೆಂದ ॥೫೭॥ ಅಕಟ ಮಗನೇ ಧರ್ಮಸುತ ಬಾ । ಧಕನೆ ಭೀಮಾರ್ಜುನರ ಮತಿ ಕಂ । ಟಕದೊಳೆರಗದು ಮಿಗೆ ನಡೆಯರು ಧರ್ಮನಂದನನ ॥ ಸಕಲರಾಜ್ಯಕೆ ಪಾಂಡುವೇ ಪಾ । ಲಕನು ತನ್ನೊಳು ತಪ್ಪಿದನೆ ಬಿಡು । ವಿಕಳಮತಿಗಳ ಮಾತನೆಂದನು ಮಗಗೆ ಧೃತರಾಷ್ಟ್ರ ॥೫೮॥ ಬೊಪ್ಪ ಬಿನ್ನಹವವರ ಜನಕನು । ತಪ್ಪಿ ನಡೆಯನು

ನಿಮಗೆ ನೀವಿನ್ನೊಪ್ಪಿಸುವುದಾಪಾಂಡುಸುತರಿಗೆ ರಾಜ್ಯವೈಭವವ ॥ ಅಪ್ಪುದಿಳೆ ಧರ್ಮಜನ ತರುವಾ । ಯಪ್ಪುದಾವಿಧಿಯಲ್ಲಿ ಸಂತತ । ತಪ್ಪದವರಿಗೆ ಸಲಲಿ ನೆಲವಿದು ಹೊಲ್ಲಹೇನೆಂದ ॥೨೯॥ ಜನಪ ಸುಖದಲಿ ನಿಮ್ಮ ತಮ್ಮನ । ತನುಜರೊಡನೆಯು ರಾಜ್ಯವಾಳುವು । ದನುನಯವಲಾ ಬೀಳುಕೊಡುವುದು ನಮ್ಮನೂರ್ವರನು ॥ ಜನಪರುಂಟೋಲೈಸಿಕೊಂಬರೆ । ತನಗಿರದೆ ಖಂಡೆಯದ ಸಿರಿ ಕರೆ । ಜನನಿಯನು ಬೀಳ್ಕೊಂಬೆವಿನ್ನೇನೆಂದು ನಿಂದಿರ್ದ ॥೩೦॥ ಎಲೆಮಗನೆ ಯೆನ್ನಾಣೆ ಬಾ ಕುರು । ಕುಲತಿಲಕ ನೀಹೋಗಲೆನ್ನೊಡ । ಲುಳಿವುದೇ ಮರಿಯಾನೆ ಬಾರೈ ಕಂದ ಬಾಯೆಂದು ॥ ಸೆಳೆದು ಬಿಗಿಯಪ್ಪಿದನು ಕಂಬನಿ । ದುಳುಕಿದನು ಹೇಳಿನ್ನು ಮೇಲಣ । ಬಳಕೆಯನು ರಿಪುರಾಜಕಾರ್ಯಕೆ ಬುದ್ಧಿಯೇನೆಂದ ॥೩೧॥ ನೀರಪ್ಪಿಷವಿಕ್ಕಿದೆವು ಕಿಚ್ಚಿನ । ಭಾರವಣ್ಣೆಯೆಸಮುದೊ ಪುಣ್ಯವ । ಹೋರಿಸುವೆವೊಪ್ಪಗದರೆ ಹೋಗಲಿ ನಮ್ಮ ಹಗೆ ಹರಿದು ॥ ಓರಣಿಸಿತ್ತೈ ವೈರಿಗಳ ವಿಸ್ತಾರ ಮರೆಯಲಿ ಬೀಯ ಬೂಚಿಸ । ಬಾಲಗುತ್ತಿದು ನಿಮ್ಮ ಚಿತ್ತಕೆ ಬಹೊಡೆ ಮಾಡುವೆವು॥೩೨॥ಆವತೆರದಲಿ ವೈರಿಘಟಕುಲ । ದಾವಗೆಯ ನಿಟಿಸುವಿರಿ ನಿಮ್ಮೊಳ । ಗಾವು ಹೊರಗೇ ಮಗನೆ ಸೊಗಸೆನೆ ನಿಮ್ಮ ವೈಭವಕೆ ॥ ಸಾವಪಾವಂಗವಲಿ ಮಿಗೆ ಸಂ । ಭಾವಿಸುವುದಾತೆರನ ನೀ ಹೇ । ಳಾವು ಸೊಗಸುವವೆಂದು ನುಡಿದನು ಮಗಗೆ ಧೃತರಾಷ್ಟ್ರ ॥೩೩॥ ಕರೆಸಿ ಪಾಂಡುಕುಮಾರಕರ ನೀ । ಧರೆಯ ಹಸುಗೆಯ ಮಾಡಿಕೊಡು ಕಲಿ । ತುರಗಭಂಡಾರವನು ಸಮಪಾಯಾದವಿಷಯದಲಿ ॥ ಇರವನವರಿಗೆ ವಾರಣಾವತಿ । ಪುರದೊಳಗೆ ಪರುಠವಿಸಿಕೊಡುತಾ । ನುರುಹಿ ಸುಡುವೆನು ಬಳಿಕ ಲಾಕ್ಷಾಭವನರಚನೆಯಲಿ ॥೩೪॥ ಅಹುದು ಮಗನೇ ಮಂತ್ರವಿದು ಮತ । ವಹುದು ಸವುಗಾಂಗೇಭೀಷ್ಮ ವಿದುರರು । ಕುಹಕಿಗಳು ಕೃತಭಿನ್ನವಾದೊಡೆ ಭಾರವದು ಮೇಲೆ ॥ ಗಹನಗತಿಯಲಿ ಗೂಢತರಸ । ನ್ನಹಿತಕರ್ಮಕಲಾಪದಲಿ ರಿಪು । ದಹನಸಿದ್ಧಿಯ ನೆನೆವುದೆಂದನು ಮಗಗೆ ಧೃತರಾಷ್ಟ್ರ ॥೩೫॥ ಜನಕನನು ಬೀಳ್ಕೊಂಡು ಕೌರವ । ಜನಪ ತನ್ನರಮನೆಯ ಸಚಿವರೊಳನುಪಮಿತವಿಶ್ವಾಸಸೂಚಕನನು ಪುರೋಚನನ ॥ ನೆನೆವ ರೌರವರಾಜಕಾರ್ಯದ । ಘನವನರುಹಿ ಸಮಗ್ರಧನಸಾ । ಧನವ ಜೋಡಿಸಿ ಕೊಟ್ಟು ಕಳುಹಿದನವನಗುಪ್ತದಲಿ ॥೩೬॥ ಆಪುರೋಚನನೆಂಬವನು ಬಲು । ಪಾಪಕರ್ಮನು ಕುರುಪತಿಗೆ ಒಳ । ಕಾಪುರಾಂತರದಿಂದ ಬಂದನು ವಾರಣಾವತಿಗೆ ॥ ಆಪುರದ ಜನವರಿಯದಂತಿರೆ । ಕಾಪುರುಷನಳವಡಿಸಿದನು ನಸು । ದೀಪಿತಾಗಿದೊಡೇಕರೂಪಪರಾಜಭವನವನು ॥೩೭॥ ನಿಗಮಸಂಸ್ಥಿತವಾಸ್ತುರಚನಾದಿಗಳನಾಯವ್ಯಯದ ತಾರಾದಿಗಳ ರಾಶಿಗ್ರಹಬಲದ ವಿಪರೀತಯೋಗದಲಿ ॥ ಹಗಲು ತೀರಲುತ್ತಳಿತ್ರ ಕೈದೀವಿಗೆಯ ಪಂತಿಯ ಬೆಡಗಿನಲಿಕೆ । ಜಗನು ಕೃತ್ರಿಮರಚನೆಯಲಿ ಮಾಡಿಸಿದನರಮನೆಯ ॥೩೮॥ ಅರಗಿನಲಿ ಭಿತ್ತಿಗಳ ನವಸ । ಜ್ಜರಸಗುಡಮಿಶ್ರದಲಿ ನೆಲೆಯು । ಪ್ಪರಿಗೆಗಳನವರಲಿ ಕವಾಟಸ್ತಂಭವೇದಿಗಳ ॥ ವಿರಚಿಸಿದ ನವಸೌಧಧಾಮ । ಸ್ಫುರಣಸಂಪ್ರಾವರ್ತದಲಿ ಪರ । ಪರಿಯ ಬಿನ್ನಾಣದೊಳಗರಗಿನಮನೆಯ ಮಾಡಿಸಿದ॥೩೯॥ಹಿರಿಯಭವನದ ಸುತ್ತುವಳಯದ । ಮುರುಹಿನಲಿ ಮನೆಮನೆಗಳಾಮಂ । ದಿರನಿಕಾಯಕೆ ಬಾಗಿಲೊಂದಾಪ್ರಾವರದೇಶದಲಿ ॥ ಇರವು ತನ್ನದು ಬಾಗಿಲಿಕ್ಕಿದು । ಹೊರಗೆ ಮುದ್ರಿಸಿ ಕಿಚ್ಚಚುಚ್ಚುವ । ಪರುಠವಣೆಯಲಿ ಖಳಪುರೋಚನನಂದು ನಿರ್ಮಿಸಿದ ॥೪೦॥ ಧರಣಿಪತಿ ಕೇಳಿತ್ತ ಹಸ್ತಿನ । ಪುರದೊಳಗೆ ಕುಂತೀಕುಮಾರರ । ಕರೆಸಿ ಕಟ್ಟೇಕಾಂತದಲಿ ಧೃತರಾಷ್ಟ್ರಭೂ

ಪಾಲ ॥ ಬೆರಗುಬಿನ್ನಾಣದಲಿ ಮಕ್ಕಳ । ಮರುಳುಮಾಡಿದನೇನ ಹೇಳುವೆ । ಸುಳಿವನೆಯ ಬೇಹಾರದಲಿ ಬಿಡಿ
ಸಲ್ಕೆ ಮನದಂದ ॥೨೧॥ ದುರುಳರೀ ಕೌರವರು ನೀವತಿ । ಗರುವರವದಿರು ಪಾಪಕರ್ಮರು । ಪರಮಪು
ಣ್ಯರು ನೀವು ತನ್ನವದಿರು ಕುಮಂತ್ರಿಗಳು ॥ ಎರಳೆ ತೋಳನ ಸಾದುಸುಣ್ಣದ । ನೆರವಿಗದು ಹಾವಗೆಯ
ಸೇರುವೆ । ಯರಸ ನಿನ್ನೊಡನೆನ್ನ ಕುನ್ನಿಗಳೆನುತ ಬಿಸುಸುಯ್ದ ॥೨೨॥ ತಂದೆಯಿಲ್ಲದ ನಿಮಗೆ ಹಿತರಾ
ರೆಂದು ಮರುಗುವೆನೆನ್ನ ಮಕ್ಕಳು । ಕೊಂದು ಹಿಂಡೆಯಕೂಳನುಂಬೊಡೆ ಹೇಸುವವರಲ್ಲ ॥ ಇಂದು
ನಿಮಗವರಿಂದಲುಪಹತಿ । ಬಂದಡಾದೊಡೆ ತನ್ನ ತಲೆಯಲಿ । ನಿಂದು ಹೋರೆವುದಕೀರ್ತಿಕಿಲ್ಬಿಷ ಮಗನೆ
ಕೇಳೆಂದ ॥೨೩॥ ತಾತ ಕೇಳುವಿರಿ ನೀವು ತನಗೆ । ಖ್ಯಾತಿ ಕೌರವರೆಂಬವರು ದು । ರ್ನೀತಿಕಾರರು ಭೀಷ್ಮ
ವಿದುರರು ಭೀತರವದಿರಿಗೆ ॥ ನೀತಿಸಮ್ಮತವಾಗಿ ಚಿತ್ತದೊ । ಳಾತ್ಮಮತವನು ಹೇಳಿ ಸಮ್ಮೊಳು । ಭೀತಿ
ಬೇಡೆಂದರಸ ಹಿಡಿವನು ಧರ್ಮಜನ ಕರೆವ ॥೨೪॥ ಬೇರೆ ಮತವೆಮಗೇನು ಬೊಪ್ಪನ । ಚಾರ ನಿಮ್ಮದು
ನೀವು ಬೊಪ್ಪನ । ನೂರುಮಡಿಯೆಮಗೊಳ್ಳಿದರು ಬೇರಿನ್ನು ಹಿತರುಂಟೇ ॥ ಬೇರಿರಿಸಿ ಕೂಡಿರಿಸಿ ನಿಮಗೆ
ಯು । ತೋರಿದಡೆ ಮತ ನಿಮ್ಮ ಸೇವೆಗೆ । ವಿಚಾರಬಲ್ಲೆನೆಯೆಂದು ಧರ್ಮಜ ನುಡಿದನರಸಂಗೆ ॥೨೫॥
ಎಲೆಯ ಮಂಚಿಯೊ ತಳಿತ ಮೊಕ್ಕೆಯೊ । ಹುಲಿಯ ಬಲೆಯೋ ನಾಗಸನ್ನೆಯೊ । ಸಲಿಯ ಗೋರೆಯೋ
ತಕ್ಕಿನುಂಡೆಯೊ ಸವಿಯ ಚಿತ್ರಕವೋ ॥ ಅರಸನಂಕೆಯ ಮನದಬಯಕೆಯ । ಹೊರೆಯ ಬಳಕೆಯ
ನೀಸಮಂಜಸ । ತರವ ಸಾತ್ವಿಕರತ್ತ ಬಲ್ಲರು ಭೂಪ ಕೇಳೆಂದ ॥೨೬॥ ಕಂದ ಮನಮುನಿಸಿಲ್ಲಲೇ ನಾ ।
ನೆಂದನುಡಿಗೊಡಬಡುವಿರಾದೊಡೆ । ಮುಂದೆ ಪುರವಿದೆ ವಾರಣಾವತವಿಲ್ಲಿಗರುವತ್ತು ॥ ಸಂದನಾಡು
ಸಮಸ್ತವಸ್ತುಗ । ಳಿಂದ ಪೂರಿತ ಹಸ್ತಿನಾಪುರ । ದಿಂದ ಮಿಗಿಲದು ರಾಜಧಾನಿಸ್ಥಾನ ನಿಮಗೆಂದ
॥೨೭॥ ಹೈಹನಾದ ಭವತ್ಕೃಪಾಸ । ನ್ನಾಹವೇ ಸಾಮ್ರಾಜ್ಯವಾವುದ । ನೂಹಿಸಿದೊಡಾಸ್ಥಿತಿಯೊಳ
ಹಗಹೆನೆಂದು ವಿನಯದಲಿ ॥ ಗಾಹುಗತಕವನರಿಯದವರು । ತ್ಸಾಹದಲಿ ಕೈಕೊಂಡು ಭೀಷ್ಮಗೆ । ಬೇಹ
ವಿದುರ ದ್ರೋಣಮುಖ್ಯರಿಗರುಹಿದರು ಹದನ ॥೨೮॥ ಧಾರಿಣೀಪತಿ ರತ್ನಮಯಭಂ । ಡಾರಸಹಿತ
ಗಜಾಶ್ವರಥಮುಖ । ವಾರವನು ಮಾಡಿದನು ಹಸಿಗೆಯನೆರಡುಭಾಗವನು ॥ ಕೌರವರಿಗೊಂದಿವರಿಗೊಂ
ದೆನೆ । ಲೋರಣಾದಳವಡಿಸಿ ಬಹು ವಿ । ಸ್ತಾರದಲಿ ಭೀಷ್ಮಾದ್ಯರಹುದೆನಲಿವರ ಮನ್ನಿಸಿದ ॥೨೯॥
ಇವರು ಶುಭಘಟನಾಸುಮುಹೂರ್ತ । ಪ್ರವರದಲಿ ಹೊರವಂಟರಾಜನ । ನಿವಹ ಮರುಗಿತರಣ್ಯವೇ ಗತಿ
ಯರಸ ನಮಗೆಂದು ॥ ಅವರ ಕಳುಹುತ ಬಂದರಾಕೌ । ರವರು ನಿಂದರು ಭೀಷ್ಮಕಲಶರೋ । ದ್ಭವರು
ಸುತರಿಗೆ ಬುದ್ಧಿಹೇಳಿದು ಮರಳಿದರು ಪುರಕೆ ॥೩೦॥ ವಿದುರನೊಡನೈತರುತ ಸಂಕೇ । ತದಲಿ ಸೂಚಿಸಿ
ಮರಳಿದನು ನೃಪ । ಸುದತಿ ವರಗಾಂಧಾರಿ ಮೊದಲಾದಖಿಳರಾಣಿಯರು ॥ ಮುದದ ಮುರಿವಿನಲಿವ
ರ ತೆಗೆದ । ಪ್ಪಿದರು ಭೂಪತಿಸಹಿತ ಕಡುಶೋ । ಕದಲಿ ಕಳುಹಿಸಿಕೊಂಡು ಬಂದರು ಹಸ್ತಿನಾಪುರಕೆ
॥೩೧॥ ಅರಸ ಕೇಳ್ ಹಸ್ತಿನಾಪುರ । ವರವ ಹೊರವಡುವಾ ಮುಹೂರ್ತಕೆ । ವರುಷವಿಪ್ಪತೊಂಬತಾ
ದುದು ಧರ್ಮನಂದನಗೆ ॥ ವರುಷಹದಿಮೂರರಲಿ ಹಸ್ತಿನಾಪುರದೊಳಿಪ್ಪರು ಹಿಂದೆ ಷೋಡಶ । ವರುಷ
ವನದೊಳಗಿಂತು ಲೆಕ್ಕವನೋದಿಕೊಳ್ಳೆಂದ ॥೩೨॥ ಬಂದರವರು ಕುಂತಿಸಹಿತಾ । ನಂದದಲಿ ವರವಾರ
ಣಾವತ । ಕಂಡು ಪುರಜನ ಕೂಡಿ ಕನ್ನಡಿ ಕಲಶವಿಭವದಲಿ ॥ ಬಂದು ಕಾಣಿದಿರಾಗಿ ಕುಂತೀ । ನಂದನರ

ತಮೋಘಾ । ವಳಿಯ ಗುರುವೆನೆ ಮಾಧ್ಯತತಿ ಕಳ । ಕಳದೊಳರ್ಜುನದೇವನೆದ್ದನು ಮುನಿಯ ಸನ್ನಿಯಲಿ ॥೩೮॥ ಈತನಾರರ್ಜುನನೆ ಹೋಹೋ । ಮಾತು ಮಾಣಲಿ ಮಾಣಲೆಂಬೀ । ಮಾತು ಹಿಂಚಿತು ಮುನ್ನ ಮೌನದೊಳಿರ್ದುದಾಸ್ಥಾನ ॥ ಭೀತಕಳಕಳರಂಗದಲಿ ಪುರು । ಹೂತಸುತ ಮೈದೋರಿದನು ಜನ । ವೀತನನು ಕೊಂಡಾಡುತಿರ್ದುದು ರಾಯ ಕೇಳೆಂದ ॥೩೯॥ ದ್ರೋಣ ಕೃಪ ಮೊದಲಾದ ಮಾನ್ಯ । ಶ್ರೇಣಿಗೆರಗಿದನಮರನಿಕರಕೆ । ಗೋಣನೆತ್ತಿದನಿಟ್ಟು ಕರಪುಟವನು ಲಲಾಟದಲಿ ॥ ಪ್ರಾಣಪದವಿದು ನಿಖಿಳವಿದ್ಯೆಯ । ಜಾಣತನಕಿದು ವಿನಯವೆಂದುದು । ಕೇಣವಿಲ್ಲದೆ ನೆರವಿ ನೆರೆ ಹೊಗಳಿತು ಧನಂಜಯನ ॥೪೦॥ ನಿಲುವಿನಲಿ ಸಂಸ್ಥಾನದಲಿ ಕೈ । ಚಳಕದಲಿ ಭಂಗಿಯಲಿ ಭರದಲಿ । ಲುಳಿಯಲೊಯ್ಯಾರದಲಿ ಮೋಡಾಮೋಡಿಯಂದದಲಿ ॥ ಅಳವಿಯಲಿ ಪರಿವಿಡಿಯಲೂಹಾ । ಬಲದಲವಧಾನದಲಿ ಶಸ್ತ್ರಾ । ವಳಿಯ ಸಾಂಗೋಪಾಂಗಶ್ರಮವನು ತೋರಿದನು ಪಾರ್ಥ ॥೪೧॥ ತುರಗಚಯದೇವಂತ ಮದಕುಂಜರಮಹಾದಿವಿಜೇಂದ್ರರಥ ಸಂ । ಚರಣವರಮಾರ್ತಾಂಡ ಎಂದಬ್ಬರಿಸೆ ಜನನಿಕರ ॥ ತುರಗಗಜರಥ ವಿವಿಧಶಿಕ್ಷಾ । ಪರಿಣತಿಯ ತೋರಿದನು ಗುರುಕೃಪ । ಸುರನಟೇಜರು ಮುಳುಗಿದರು ಪುಳಕಾಂಬುಪೂರದಲಿ ॥೪೨॥ ಮತ್ತೆ ಕೊಂಡನು ಧನುವ ನೆರವಿಯ । ನತ್ತ ಹೋಯ್ ಹೋಯ್ ಹೋಗಹೇಳ್ದು । ವೃತ್ತರೆದೆ ಜರ್ಝರಿತವಾಗಲು ತೋರಬೇಕೆನುತ ॥ ಬತ್ತಳಿಕೆಯಿಂದುಗಿದು ಹೂಡಿವಿಯತ್ತಳಕೆ ಹಾಯ್ಸಿದನು ಕರ್ಬೊಗೆ । ಸುತ್ತಿ ಧಳ್ಳಿಸಿ ಮಸಗಿತಾಗ್ನೇಯಾಸ್ತ್ರ ಧಾರೆಯಲಿ ॥೪೩॥ ತೆಗೆಸಿದನು ಶಿಖಿಶರವ ಧನುವಿಂ । ದಗಿಸಿದನು ವಾರುಣವನಭ್ರವ । ಮೊಗೆದುದದ್ಭುತವಾರಿಯುಪಸಂಹರಿಸಿದನು ಮರಳಿ ॥ ಹಗಲನೊಂದೇತುತ್ತು ಮಾಡಿದ । ವಿಗಡತಿಮಿರಾಸ್ತ್ರದಲಿ ತಿಮಿರವ । ತೆಗೆಸಿದನು ಸೂರ್ಯಾಸ್ತ್ರದಲಿ ಬೆರಗಾಗೆ ಸುರನಿಕರ ॥೪೪॥ ಗಿರಿಶರದಲದ್ರಿಗಳ ಮೇಘದ । ಶರದಿನಭ್ರವ ನುರಗಬಾಣದಿ । ನುರುಭುಜಂಗವ ನನಿಲಶರದಲಿ ತೀವ್ರಮಾರುತನ ॥ ಪರುಶವವ ತೋರಿದನು ಜನವಬ್ಬರಿಸಲಡಿಗಡಿಗಂಧಭೂಪನ । ಕೊರಳು ಕುಸಿದುದು ಸುಡಿಯ ಸಾಟಕಹರ್ಷಭಾರದಲಿ ॥೪೫॥ ಇವರ ಮುಖವರಳಿದುವು ಗಂಗಾ । ಭವಕೃಪದ್ರೋಣಾದಿಗಳ ಬಳಿ । ಕವರ ತಲೆಬಾಗಿದುವು ಧೃತರಾಷ್ಟ್ರಾದಿ ಕೌರವರ ॥ ಇವರ ಜನನಿಯ ಮುಖದ ಸುಮ್ಮಾ । ನವನು ದುರ್ಯೋಧನನ ಜನನಿಯ । ಜವಳಿದುಮ್ಮಾನವನು ಬಣ್ಣಿಸಲರಿಯೆ ನಾನೆಂದ ॥೪೬॥ ಬಾಯಹೊಯ್ಫಲುಗುಣನ ಹೊಗಳುವ । ನಾಯಿಗಳ ದೇಸಾಯ್ತು ಕೌತುಕ । ವಾಯಕಿವದಿರ ಪಕ್ಷಪಾತವ ನೋಡುನೋಡೆನುತ ॥ ಸಾಯಕವ ತೂಗುತ್ತಲಾ ಕರ್ಣಾಯತಾಂಬಕನೆಡಬಲದ ಕುರು । ರಾಯನನುಜರ ಮೇಳದಲಿ ಹೊರವಂಟನಾ ಕರ್ಣ ॥೪೭॥ ಗುರುಗಳಿಗೆ ಕೈಮುಗಿದು ಶಿರದಲಿ । ತರಣಿಮಂಡಲಕೆರಗಿ ನೋಡುವ । ನೆರವಿಗವನಾರೀತನಾರೆಂಬದ್ಭುತವ ಬೀರಿ ॥ ಅರಸ ಕೇಳ್ಕೈ ವಿವಿಧಶಸ್ತ್ರೋ । ತ್ಕರದ ಶ್ರಮವನು ತೋರಿದನು ಕರಿ । ತುರಗ ರಥವಾಹನದ ಶಿಕ್ಷಾವಿದ್ಯೆಗಳು ಸಹಿತ ॥೪೮॥ ಅವವಿಧದಲಿ ಪಾರ್ಥ ತೋರಿದ । ನಾವದಿವ್ಯಾಸ್ತ್ರಪ್ರಪಂಚವ । ಪಾವಕಾನಿಲವಾರುಣಾದಿಯನೈದೆ ವಿರಚಿಸಿದ ॥ ಆವಿಧಾನದಲಾ ವಿಹಾರದ । ಲಾವಿಬಂಧದಲರ್ಜುನನ ಬಾ । ಣಾವಳಿಯ ಬಿನ್ನಾಣವನು ತೋರಿದನು ಕಲಿಕರ್ಣ ॥೪೯॥ ಸೆಣಸುವೊಡೆ ಬಾಯೆಂದು ಪಾರ್ಥನ । ಕೆಣಕಿದನು ಘನರೋಷಶಿಖಿಯಲಿ । ಕುಣಿದವಿಬ್ಬರವಿಾಸೆ ಕಂಗಳೊಳುಗುವ ಕೆಂಪಿ

ಒಂಭತ್ತನೆಯ ಸಂಧಿ.

ಸೂಚನೆ|| ಬೆಂಬಿಡದೆ ಕಲಿಭೀಮ ಹಿಡಿದು ಹಿ | ಡಿಂಬಕನ ಮುರಿದವನತಂಗಿಹಿ |
ಡಿಂಬಿಯನು ಕೂಡಿದನು ಪಡೆದನು ಕಲಿಘಟೋತ್ಕಚನ ||

ಪದ|| ಕೇಳು ಜನಮೇಜಯಧರಿತ್ರೀ | ಪಾಲ ಯಮನಂದನನ ಪಾರ್ಥನ | ಕಾಲ್ತೊಡೆದು ಬಸಿವರುಣಜಲದಲಿ ಬಟ್ಟೆ ಕೆಸರಾಯ್ತು || ಮೇಲೆಯಮಳರು ಕುಂತಿಯುಮದೇ | ಮೇಳವಿಸು ಬೇಗದಲಿ ಕುರುಭೂ | ಪಾಲ ಪಿಡಿಯಲಿ ಕೊಲಲೆನುತ ಕಳ್ಳಿರ್ದರದವಿಯಲಿ ||೧|| ಉರಿಯಮನೆಯಲಿ ಸಾಯಲೀಯದೆ | ಸೆರಗ ಹಿಡಿದೆಳೆತಂದು ಕೊಯ್ದನು | ಕೊರಳನಕಟಾ ಭೀಮನೇ ಪಗೆಯೆಂದಳಾಕುಂತಿ || ಅರಸಪಿಡಿಯಲಿ ದಾನವರು ನಿಂ | ದಿರಿಕೆಯಲಿ ನುಂಗಲಿಕೆ ಪಾರ್ಥರು | ಧರೆಯೊಳಾವೆಂದೊದರಿದರು ಮಾದ್ರೀಕುಮಾರಕರು ||೨|| ಸಾಕುಸಾಕಾನಿರಲು ಹೆಕ್ಕಳಿಕೆ ಹೋಹೋಯೆನುತ ಹೊತ್ತನು | ನೂಕಿ ಹೆಗಲೆರಡರಲಿ ಕುಂತಿಯ ಧರ್ಮನಂದನನ || ಆಕಿರೀಟಿಯನೆಡದಲಾಮಾ | ದ್ರೀಕುಮಾರರ ಬಲದಬದಿಯೊಳ್ | ಗೌಕಿ ನಡೆದನು ಭೀಮನೊಡಹಾಯ್ದ್ದದೆಮು ಕಲುಮರನಾ ||೩|| ಬಂದನೀಪರಿ ಫಲಪ್ರಯೋಜನ | ದಿಂದ ಹೇರಡವಿಯಲಿ ಬಳಲಿದ | ನೆಂದನೇ ನೀರಡಿಸಿದಪೆ ಮೋಹ್ನಿದ್ರೆಗೆಳಸಿದನೇ || ತಂದು ಕಾನನಮಧ್ಯವಲಿ ತರು | ವೃಂದದಡಿಯೊಳಗಿಳುಹಿ ಬಳಿಕರ | ವಿಂದದೆಲೆಯಲಿ ನೀರ ತಂದೆರೆದನು ಮಹೀಶ್ವರಿಗೆ ||೪|| ತಳಿರ ತಂದೊಟ್ಟಿದನು ತರುವಿನ | ನೆಳಲೊಳಗೆ ವಿಶ್ರಮಿಸಿದರು ತನು | ಬಳಲಿಕೆಯು ಭಾರಣೆಯ ಕಡು ಜೋದಿಸಿದ ಜೊಂಪಿನಲಿ || ಝಳಕೆ ಕಂದಿದಮ್ರಿಯ ಬಾಡಿದಲುಲಿತವನನದ ಮಾಸಿಕೆದರಿದ| ತಲೆಯೊಳಿರೆ ತನ್ನವರನು ಕಂಡಳಲಳಲಿದನುಭೀಮ ||೫|| ತಾಯೆ ನೀ ಧಟ ನಾಗನಗರಿಯ | ರಾಯನರಸಿಯೆ ನಿನ್ನ ಮಕ್ಕಳು | ರಾಯರೆದೆದಲ್ಲಣರ ಧಾರಿಯ ಬಾಹುವಿಕ್ರಮರೇ || ಈಯವಸ್ಥೆಗೆ ಸೋಮವಂಶದ | ರಾಯತನವೆಂತಹುದು ಹೇಳೌ | ತಾಯೆ ಹೇಳೆನ್ನಾಣೆ ಹೇಳೆಂದಳಲಿದನು ಭೀಮ ||೬|| ಜನನಿಯಂಘ್ರಿಯನೊತ್ತಿ ಯಮನಂ | ದನನ ಚರಣವ ಮುರಿದು ಬಳಿಕ | ರ್ಜುನನ ಯಮಳರ ಪದವನೆಚ್ಚರದಂತೆ ಹಿಡಿಕಿಸುತ || ಅನಿಬರರವನು ನೋಡಿ ಪೂರ್ವವ | ನೆನೆದು ಬಿಸಿಬಿಸಿದಳುತ ಘನಕಾ | ನನದ ಮಧ್ಯದಲಿರ್ತನಿದ್ದನು ಬಿರುದು ಚಿಂತಿಸುತ ||೭|| ಶೌಕವದು ಬಲುನಿದ್ರೆ ನಿದ್ರೆಯ ನೂಕುವನು ಕಣ್ಣೆವೆಗಳಲಿ ನಸು | ತೂಕಡಿಕೆ ತೋರಿದೊಡೆ ಮುಗಿದಿರುವನು ಕೈಯೊಡನೆ || ನೋಕುವದು ಮ್ರಮರಪೆ ಮರವೆಯ | ನೋಕರಿಸುವುದು ಚಿತ್ತವೃತ್ತಿ ನಿ | ರಾಕುಲಾಂತಃಕರಣನಾದನು ಬಳಿಕ ಕಲಿಭೀಮ ||೮|| ವ್ಯಾಳಗಜಭೂದಾರವೃಕಶಾ | ರ್ದೂಲಸಿಂಹಾದಿಗಳ ಭಯವಾ | ಕೀಳದೈತ್ಯಪ್ರಕರಭಯವಹುದೆನ್ನ ಮರವೆಯಲಿ || ಹೇಳಲೇನದನಿನ್ನು ನಿದ್ರಾ | ವ್ಯಾಳವಿಷವನು ಮೊಗೆದು ನೂಸಿ ವಿಶಾಲಮತಿಯವಧಾನದಲಿ ಕಾದಿರ್ದನ್ನೈವರನು ||೯|| ಧರಣಿಪತಿ ಕೇಳೊಂದುಮಾರಿಯ | ಮುರಿವನಿವರಿಗೆ

ತದ ಸಾಂತರ । ದರಸುವೃಕ್ಷಹಿಡಿಂಬನೆಂಬವ ರತುಳಭುಜಬಲನು ॥ ಮುರಿಮುರಿದು ಮೂಗಾಳಿಯಲಿ ಮೂ । ಗರಳಿಮಾನವಗಂಧವಿದು ಗೋ । ಚರಿಸಿತೆನ್ನಾಣದೊ ಮಹಾದೇವೆನುತೆ ಜರೆಗಾದ ॥೧೦॥ ತಾಯೆ ಬಾರಾ ತಂಗಿ ಗಂಧದ । ವಾಯುವಿದೆ ಮೋಹಗಾರನಾಗಿ ನ । ವಾಯಭೋಜನವಿಂದುದೊರಕಿತು ಮನುಜಮಾಂಸದಲಿ ॥ ಸಾಯಲವದಿರ ಬಡಿದು ತಾ ತವು । ಗಾಯವಿದು ಕೃತಪುಣ್ಯಫಲವೆನೆ । ಮಾಯೆಗಾತಿ ಹಸಾಯವೆನುತ ಹಿಡಿಂಬಿ ಗಮಿಸಿದಳು ॥೧೧॥ ಬಂದಳವಳತಿರೌದ್ರರೂಪಿನೊ । ಳಂದು ಕಂಡಳು ದೂರದಲಿ ಹರಿ । ನಂದನನ ಸುಳಿದಲೆಯ ಪಪ್ಪಿಯ್ಯಾಸೆಗಳ ಕರ್ಕಶದ ॥ ಕೆಂದಳದ ಕೇಸರಿಯ ಕಂಗಳ ಸುಂದರರದನಚ್ಛವಿಯಲಿರೆ ಮನ । ಸಂದಳಾಖಳನನುಜೆ ಸೋತಳು ಭೀಮಸೇನಂಗೆ ॥೧೨॥ ಇವನ ರಮಣನ ಮಾಡಿಕೊಂಡೋ । ಡುವೆನು ವಿಪಿನಾಂತರಕೆ ಮುನಿದವ । ನಿವದಿರೈವರ ತಿನಲಿ ಮರದಡಿಯಲ್ಲಿ ಮಲಗಿದರ ॥ ಇವನು ತನ್ನಯ ರೌದ್ರಮಯರೂ । ಪವನು ಕಂಡೊಡೆ ಹೆದರುವನಲಾ । ಯುವತಿಯಹೆನೆಂದಸುರೆ ಸುಳಿದಳು ದಿವ್ಯರೂಪಿನಲಿ ॥೧೩॥ ಹೊಳೆವಕಂಗಳ ಕಾಂತಿ ಮುರಗ । ತ್ತಲೆಯ ಮೊತ್ತವ ಬಿಗಿಯೆ ಪ್ರಿಸು । ಮಳಕೆ ತೂಳುವತುಂಬಿಗಳ ತನುಲತೆಯ ಚೆಲುವಿಕೆಯ ॥ ಲಲನೆ ಸುಳಿದಳು ಕುಚದ ಭಾರಕೆ ಬಳುಕೆ ನಡು ಬಿಡದೊಲೆದು ಮೋಲುದು ॥ ತಳಯೆ ಸುಳಿಗುರುಳೊಲೆಯಲಾಕಲಿಭೀಮನಿದಿರಿನಲಿ ॥೧೪॥ ಭೀಮ ನೋಡಿದನು ನುಡಿಸಲೊಯ್ಯನೆ । ತಾಮರಸಮುಖಿ ಹೊದ್ದಿದಳು ನಿ । ಸ್ಸೀಮನ್ನ ನೀನಾರು ಮಲಗಿದಮರ್ತ್ಯರಿವರಾರು ॥ ಈ ಮಹಾರಣ್ಯದಲಿ ಬರವಿದು । ಕಾಮಿತವೆ ಕೋಮಲರಿಗೆನೆ ನಿ । ಷ್ಕಾಮಮನದಲಿ ಸತಿಯನುಡಿಸಿದನಾರು ನೀನೆಂದು ॥೧೫॥ ವನಹಿಡಿಂಬನಹಾಹಿಡಿಂಬಕ । ನನುಜೆ ತಾನು ಹಿಡಿಂಬಿ ಯಿಂತಾ । ವನವಿದೆಮ್ಮಾಶ್ರಮವಗಮ್ಯವಿದಖಿಳಮನುಜರಿಗೆ ॥ ನಿನಗೆ ಕಾಮಿನಿ ಬಂದೆನಣ್ಣನು । ಮುನಿದೊಡಿವದಿರ ತಿನಲಿ ನೀನೇ । ಳೆನಗೆ ವಲ್ಲಭನಾಗು ಕೊಂಡೊಯ್ವೆನು ಹಿಮಾಚಲಕೆ ॥೧೬॥ ನಿನ್ನನೊಲ್ಲೆನು ಮುನಿದೆಯಾದೊಡೆ । ನಿನ್ನದೈತ್ಯನ ಕೊಂಡು ಬಾ ಹೋ । ಗೆನ್ನ ಬಲುಹನು ನೋಡು ನೀನೆನಲಸುರೆ ವಿನಯದಲಿ ॥ ಮುನ್ನಲೇ ಮನುಮಥನ ಶರದಲಿ । ಛಿನ್ನೆಯಾಗಿಹೆ ಮರೆಯಹೊಕ್ಕೆನು । ತನ್ನ ನೀ ಹಿರಿ ಮುರಿದು ನುಡಿವರೆ ಎಂದಳಿಂದುಮುಖಿ ॥೧೭॥ ಅನುಜೆ ತಳುವಿದಳೆಂದು ರೋಷ । ಸ್ತನಿತಗದ್ಗದ ಕಂಠನೊದೆದೆ । ದ್ದನು ಮಹೀಮಂಡಲವನುಗ್ರಾಂಬಕನ ಜೊಂಪಿನಲಿ ॥ ಅನಿಲಸುತನಿದಿರೆದ್ದನೀತನೆ । ದನುಜನಿನ್ನವನಾಯ್ತು ತಪ್ಪೇ । ನೆನುತ ಹಳಚಿದೊತಾಹಿಡಿಂಬಕ ಜಡಿದು ಬೊಬ್ಬಿರಿದ ॥೧೮॥ ಬರಲಿಬೇಡನ್ನೊ ಕುನ್ನಿ ಮೆಲ್ಲನೆ । ತರುಬಿ ಕಾದುವುದೆಲವೊ ಪ್ರಿಮರೆ । ದೊರಗಿದವರೇಳ್ವರು ಕಣಾ ಸತ್ತಂತೆ ಸಾರೆನುತ ॥ ತರುಬಿ ಹಿಡಿದಾಭೀಮ ಬೆನ್ನಿನೊ । ಳೆರಗಿದನು ಹೆಮ್ಮರಕೆ ಹಾಯಿದ ಮುರಿದು ಮೊಯ್ದು ಹಿಡಿಂಬ ಕೊಡಹಿದನನಿಲನಂದನನ ॥೧೯॥ ಎದ್ದು ತಿವಿದನು ಖಳನ ಬಸುಯೊಳ । ಗದ್ದು ನೀತನಮುಷ್ಟಿ ಮುರಿದೊಡ । ನೆದ್ದು ನಿಮಿಷಕೆ ಸಂತವಿಸಿ ಹೆಮ್ಮರನ ಕೊಂಬಿನಲಿ ॥ ಗೆದ್ದೆಯಿದಕೊಳ್ಳೆನುತ ಖಳನು । ಬ್ಬೆದ್ದು ಹೊಯ್ದಾಡಿಮರಸಹಿತ ಹಿಡಿ । ದುದ್ದ ನೆಲದೊಳಗೊರಸಿ ಕೊಂದನು ಕಲಿಹಿಡಿಂಬಕನ ॥೨೦॥ ಕಳಕಳದೊಳಿವರೆದ್ದು ಯುವನತಿ । ಬಳ ಮಹಾದೇವೆಮ್ಮನೆಬ್ಬಿಸಿ ಬಳಿಕ ಕಾವದೆ ತಮ್ಮ ಕೆಡಿಸಲು ಕಾಕಬಳಸಿದೆಲಾ ॥ ಬಳಲಿದೆಮ್ಮನು ಹೊತ್ತು ತೊಳಲಿದ । ಬಳಲಿಕೆಯಲೀಕೇಡು ಲೇಸಾ । ಯ್ತುಳಿದೆ ಪುಣ್ಯವಿದೆಂದರಾಯಮನಂದನಾದಿಗಳು ॥೨೧॥ ಖಳ ಮಡಿಯ

ಲವನನುಜೆ ಭೀಮನ | ನೋಲಿಸಲರಿಯದೆ ಕುಂತಿಗೆಲ್ಲವ | ತಿಳುಹಿ ನುಡಿದಳು ತನ್ನ ಪೂರ್ವಾಪರದ ಸಂಗತಿಯ || ಹಲವು ಹಂಬಲಿ ವಿವರಿಸಿದಳಂ | ದಲೆದು ಭೀಮಗೆ ಹೇಳಿಸಿದಳಾ | ಫಲುಗುಣನ ಕೈಯಿಂದ ಧರ್ಮಜನಿಂದ ನುಡಿಸಿದಳು ||೨೨|| ಅರುಹಿ ನುಡಿಯಲು ಸರ್ವಥಾ ಖಳ | ನಾರಿಯನು ಕೈಕೊಳ್ಳೆನೆಂದೇ | ವೀರ ಬಲಿದನು ಬಳಿಕ ವೇದವ್ಯಾಸಮುನಿ ಬಂದು || ಸಾರನಯದಲಿ ತೋರಿ ತಿಳುಹಿ ಕುಮಾರಸಂಭವವವಧಿಯೆಂದಾ | ನಾರಿಯನು ಗಂಟಿಕ್ಕಿದನು ಮುನಿ ಭೀಮಸೇನಂಗೆ ||೨೩|| ವಲ್ಲಿಯುಪವನ ವರಸರೋವರ | ದಲ್ಲಿ ಕೇಳೀಶೈಲ ಹಿಮಗೃಹ | ದಲ್ಲಿ ರಹಸ್ಯೋದ್ಯಾನದಲ್ಲಿ ವಿಹಾರವನಭೂಮಿ || ಅಲ್ಲಿ ಗಲ್ಲಿಗೆ ಹಂದು ದೂರತಿ | ವಲ್ಲಭೆಯ ರಮಿಸಿದನು ಚಾಪಲ | ವಲ್ಲಿ ಜನಿಸಿದ ಕಲಿಘಟೋತ್ಕಚನಾ ಹಿಡಿಂಬಿಯಲಿ ||೨೪|| ನುಡಿದ ಸಮಯಕೆ ತನ್ನ ರಮಣಿಯ | ನೊಡಬಡಿಸಿ ಸ್ವೈರಂಬರಾಖ್ಯದ | ಒಡೆತನವ ನೆರೆಮಾಡಿ ನಿಲಿಸಿದನಾ ಘಟೋತ್ಕಚನ || ನಡೆದು ಬಂದರು ಶಾಲಿಹೋತ್ರನ | ನಡುವೆ ಕಂಡುಪಚರಿಸಿ ಕೊಂಡರು | ಪಡುವಲಭಿಮುಖರಾದರೆನಿಬರು ವಿಪ್ರವೇಷದಲಿ || ... ||೨೫||

ಅಂತು ಸಂಧಿ ೯ಕ್ಕೆ ಪದ ೭೦೩ಕ್ಕಂ ಮಂಗಳಮಸ್ತು.

ಹತ್ತನೆಯ ಸಂಧಿ.

ಸೂಚನೆ|| ವಿಕಟಭುಜಬಲರೇಕಚಕ್ರದೊ | ಳಕುಟಿಲರು ಭೂಸುರರ ರಕ್ಷಿಸಿ |
ಬಕನ ಮುರಿದರು ಮೆರೆದರಮಲಗುಣಾಗ್ರಹಾರದಲಿ ||

||ಪದ|| ಕೇಳು ಜನಮೇಜಯ ಮಹೀಪತಿ | ಶಾಲಿಹೋತ್ರಾಶ್ರಮವನಿಬರು | ಬೀಳುಕೊಂಡರು ಮತ್ತೆ ಕಂಡರು ಬಾದರಾಯಣನ || ಹೇಳಿದನು ನಿಮಗೇಕಚಕ್ರದಿ | ಶಾಲಪುರದೊಳಗಾರುತಿಂಗಳು | ಕಾಲಸವೆಯಲಿ ಬಳಿಕ ಬಳಸುವಿರುತ್ತರೋತ್ತರವ ||೧|| ಎಂದು ಮುನಿ ತಿರುಗಿದನು ಕುಂತೀ | ನಂದನರು ಸುಕ್ಷಾತ್ರತೇಜೋ | ವೃಂದವನು ಮುಸುಕಿದರು ವಿಮಲಬ್ರಹ್ಮರಕ್ಷೆಯಲಿ || ಅಂದವೇರಿದ ಗಡ್ಡ ದರ್ಭೆಗ | ಳಿಂದ ನೆರಿಯುಡಿಗೆಗಳ ನಾಟಕ | ದಿಂದ ಮಟ್ಟೆಯ ಧಟ್ಟುನೊಸಲಲಿ ದೇಸಿವಡೆ ಮೆರೆಯೆ ||೨|| ಅವನಿಪತಿ ಕೇಳೇಕಚಕ್ರವ | ನಿವರು ಹೊಕ್ಕರು ವಿಪ್ರನೊಬ್ಬನ | ಭವನದಲಿ ಮಾಡಿದರು ಬೀಡಾರವನು ವಿನಯದಲಿ || ಇವರು ಯಾಚಕವಿಷಯದಾತಿ | ಥ್ಯವನು ಕೈಕೊಂಡಲ್ಲಿ ಕತಿಪಯ | ದಿವಸವನು ನೂಕಿದರು ಭಿಕ್ಷಾವಿಹಿತವೃತ್ತಿಯಲಿ ||೩|| ತಂದ ಭಿಕ್ಷಾಶನವನೈವರು | ನಂದನರು ತಾಯಿಗೆ ನಿವೇದಿಸ | ಲಿಂದುಮುಖಿ ಭಾಗದ್ವಯವ ಸಾನಂದದಲಿ ಮಾಡಿ || ಒಂದು ಭಾಗ ವೃಕೋದರಂಗುಳಿ | ದೊಂದು ಭಾಗವ ತಾನು ನಾಲ್ವರು | ನಂದನರು ವಿನಿಯೋಗಿಸುವರವನೀಶ ಕೇಳೆಂದ ||೪|| ಸಿರಿಯ ಹೇಳ್ವೊಡೆ ಹಸ್ತಿ

ನಾಪುರದರಸುಗಳ ಸಂತಾನ ಶೌರ್ಯದಾಪರಿಯ ನೋಳ್ಪೊಡೆ ಶಕ್ರಸೂರ್ಯರ ತೇಜಕರೆ ಮಿಗಿಲು॥ ತಿರಿದಕೊಳನು ತಾಯಿ ಹಸುಗೆಯ । ಲೆರಡುಭಾಗವ ಮಾಡಿ ಮಕ್ಕಳ । ಹೊರೆದಳಿನ್ನುಳಿದವರ ಪಾಡೇ ನರಸ ಕೇಳೆಂದ ॥೫॥ ಉದಯವಾಗದಮುನ್ನ ಸುಬ್ರಾ । ಹ್ಮ್ಯದಮುಹೂರ್ತದಲೆದ್ದು ಜನನಿಯ । ಪದ ಯುಗಕ್ಕಭಿನಮಿಸಿ ಸಂಧ್ಯಾಮಠಕೆ ನಡೆತಂದು ॥ ವಿಟತಸಂಧ್ಯೋಪಾಸ್ತಿಜಪನಿಯ । ಮದಪುರಾಣ ಶ್ರವಣ ಮಧ್ಯಾ । ಹ್ನದಲಿಭಿಕ್ಷಾಟನಗಳಿವರಿಗೆ ನಿತ್ಯವಿಧಿಯೆಂದ ॥೬॥ ಭೋಜನೋತ್ತರವೇಳೆಯಲಿ ನೃಪ । ರಾಜವಾರ್ತಾಕಥನದಿಂದ ಮ । ಹಾಜಗಂಗಳೊಳಾಡುತಿರ್ದರು ನಿಜವಿನೋದದಲಿ ॥ ರಾಜತ ನವನು ಮರೆದರಾದ್ವಿಜ । ರಾಜತೇಜದಿ ಮೆರೆದರಾನರ । ರಾಜರಾಜರ ನೀತಿಯಿದು ಭೂಪಾಲ ಕೇಳೆಂದ ॥೭॥ ಇರಲಿರಲು ಮಾಸಾಂತರದಲಾ । ನೆರೆಮನೆಯ ಶೋಕಾರ್ತರವದ । ಬ್ಬರವ ಕೇಳಿದು ಕುಂತಿ ಸಾಯಂಕಾಲಸಮಯದಲಿ ॥ ಭರದಿನೈತಂದಕಟಭೂಸುರ । ವರವಿರೋಧವಿದೇನು ದುಃಖೋ । ತ್ಕರುಷವಾಕಸ್ಮಿಕವದೆಂದಳು ಕುಂತಿ ವಿನಯದಲಿ ॥೮॥ ನಾಳೆ ವೈವಾಹೋತ್ಸವದ ದೆ । ಖ್ಯಾಳಪಿದು ಮೊದಲೀವಸಂತದ । ಬಾಲಿಕೆಯರೋಕುಳಿಯ ಮಳೆಯಲಿ ಸಿಡಿಲು ಸುಳಿದುದೆನೆ ॥ ಹೇಳಿರೇ ನಿಮ ಗಾಢ್ಯಯವಸೆ । ಕೇಳಲಾಗದೆಯೆನಲು ದ್ವಿಜನಿದ । ಕೇಳಿ ಫಲವೇನವ್ವಯೆಂದನು ಸುಯ್ದುದು ಗುಡ ದಲಿ ॥೯॥ ಹೇಳಬೇಹುದು ತನ್ನ ನಿಷ್ಟುವ । ನಾಳಿಗೊಳ್ಳದಸುಜನನಿಕರಕೆ । ಕೇಳಬೇಹುದು ಟೀನರಪವಿ ಹ್ರೇಂದ್ರರುಪಹತಿಯ॥ಹೇಳು ನೀನೆಲೆವಿಪ್ರ ತಾನಿದ । ಕೇಳಿ ದುಃಖಿತೆಯಾಗಲಾಗದೆ । ಹೇಳ್ದು ದುಃಖಂ ಪಂಚಭಿಸ್ಸಹಯೆನ್ನದೇವಚನ ॥೧೦॥ ತಾಯೆ ಕೇಳೀವಿಪ್ರಪುರದೊಳ । ಗಾಯವುಂಟೆನಗೆಂದು ರಕ್ಕಸ । ನಾಯಿ ನೆಲಸಿಹನೂರಹೊರಗಣ ಶೈಲಶಿಖರದಲಿ ॥ ಆಯಿದೊಬ್ಬನ ಮನೆಮನೆಗೆ ಮೇ । ಲಾಯಿಮಹಿ ಷದ್ವಯಸಹಿತನಿ । ದಾರ್ಯದಲಿ ಹನ್ನೆರಡುಕಂಡುಗದಕ್ಕಿಯೋಗರವ ॥೧೧॥ ಇನಿತುವನು ಮನೆಮ ನೆಗೆ ಬಾರಿಯ । ದಿನಕೆ ತೆತ್ತೊಡೆತುಷ್ಟನಿಲ್ಲದ । ದಿನಕೆ ನುಂಗುವನೂರನೀಪರಿ ಹಲವುಕಾಲದಲಿ ॥ ಎನಗೆ ಬಂದುದು ತಾಯೆ ನಾಳಿನ । ದಿನದ ಬಾರಿಯಿದಕ್ಕೆ ತನ್ನಯ । ತನುಜತಾನುಳಿದಂತೆ ಮಾನಿಸ ರಿಲ್ಲ ತನಗೆಂದ ॥೧೨॥ ಮಗನನೀವೆನೆ ಪಾರಲೌಕಿಕ । ವೆಗಡಹುದಪಖ್ಯಾತಿ ತನ್ನನು । ತಗಹುದೈಹಿಕ ದಲ್ಲಿ ಬಳಿಕೀಸಂತತಿಚ್ಛೇದ ॥ ಬಗೆಯದೆನ್ನೊಡಲಸುರಘಾತಿಗೆ । ಮಿಗೆ ವಿಭಾಡಿಸಿ ಕೊಡುವೆನೆಂ ದೆನೆನಗುತ ಕುಂತೀದೇವಿ ನುಡಿದಳು ವಿಪ್ರಕೇಳೆಂದು ॥೧೩॥ ಐಸಲೇ ನಿಮಗಾದಗಸಣಿಯ । ದೇಸರಾ ಪತ್ತಂಜಬೇಡ ಮ । ಹಾಸುರನಬಾಣಸದ ಬೀಯಕೆ ರಪಣವುಂಟೆಮಗೆ । ಏಸುಕಂಡುಗದಕ್ಕಿಯೋಗರ । ವೈಸನೀನೆಳವಡಿಸು ಮೇಲುಂ । ಟೀಸುಸಾಧನವನಿತುವನು ತೆಗೆಸೆಂದಳಾಕುಂತಿ ॥೧೪॥ ತಿರುಗಿ ನಿಮ್ಮೊ ರೊಳಗೆ ಕೊಳನು । ತಿರಿದು ಸಲಹುವೆನೆನ್ನಮಕ್ಕಳ । ಧರೆಯಸಾಳುವಸತ್ವಸಹಸಿಗಳಿದ್ದುಫಲವೇನು । ಹೊರೆಯಲರಿಯೆನು ದುರುಳನೆರಡೆಂ । ಟರಿಯನದರೊಳಗೊಬ್ಬನುದರಕೆ । ನೆರಹಲಾರೆನು ಕೊಳನೆಂ ದಳು ಕುಂತಿ ನಸುನಗುತ ॥೧೫॥ ಸಾಕಲಾರೆನು ಮಗನನಾತನ । ನೂಕುವೆನು ನಿಮ್ಮಸುರನೂಟಕೆ । ಸಾಕು ತನಗುಳಿದವರೆನಲ್ದ್ವಿಜನದಕೆ ಬೆರಗಾಗಿ ॥ ಸಾಕಲಾರದೆ ಮಗನನುರಿಯಲಿ । ನೂಕಿದವರುಂಟೇ ಮಹಾಸತಿ । ಯಾಕೆವಾಳತನಕ್ಕೆ ನಮಿಸಿದೆನೆನುತ ಕೈಮುಗಿದ ॥೧೬॥ ಮರುಳಲಾ ಬ್ರಾಹ್ಮಣ ವೃಥಾವಿ । ಸ್ತರಣವಾಕ್ಯವೆ ತನ್ನ ನುಡಿ ಸಂ । ವರಿಸು ಬಂಡಿಯ ನಡೆಸು ಭಕ್ಷ್ಯವ ಸೂಪದಂಶಕವ ॥ ತರಿಸು

ತುಪ್ಪದ ಕೊಡನನೊದವಿಸು । ಹರವಿಗಳ ಪಾಲ್ಮೊಸರನೆನೆ ಭೂ । ಸುರನು ಕುಂತಿಗೆ ಕೈಯ್ಯಮುಗಿದನು ತಾಯೆ ಬೇಡೆನುತ ॥೧೭॥ ಎರವು ಮುಯ್ಯುಟ್ಟುಂಟು ವಸ್ತ್ರ । ತ್ಕರದೊಳಗೆ ಭಾವಿಸಲು ಮಕ್ಕಳ । ನೆರವಕೊಟ್ಟವರುಂಟೆ ಮಾರಿಯಸಾಲಿಗೆಯ ಸಫಿಗೆ ॥ ನೆರವಿ ಸಗದೇ ಸಮ್ಯನಿಪಪರ । ವೆರಡರಲಿ ಕೇಡಹುದು ಕಷ್ಟವು । ಗರುವೆಯುಹುದೌ ತಾಯೆ ನೀ ದಿಟ ಮನುಚಿಯಲ್ಲೆಂದ ॥೧೮॥ ಏಸನಿತ್ತು ದಧೀಚಿ ಲೋಗರ । ಹಾನಿಯನು ಕಾಯಿದನು ಶಿಬಿ ತಾ । ನೇಸನಿತ್ತನು ಕೇಳಿದ್ಯ ಜೀಮೂತವಾಹನನು ॥ ಏನುಮಾಡಿದನೆಂದು ನೀನದ । ನೇನುವನು ಕೇಳ್ದರಿಯಲಾ ಮ । ತ್ತೇನುವನು ನಿನ್ನವಸರಕೆ ಕೊಳ್ಳೆಂದಳಾಕುಂತಿ ॥೧೯॥ ಅವನರ್ಥ ಪರಾರ್ಥದಲಿ ಸಂ । ಜೀವಿನಿಯನ್ನೆದಿತು ಪರಾರ್ಥದೊ । ಳಾವನಸು ನಿರ್ವಾಣ ಮಾಡುದು ಲೋಕಮೂರರಲಿ ॥ ಆವಿರಂಚಪುರಂದರಾದಿಯ । ದೇವತತಿಗವರುಬ್ಬರೇ ಸಂ । ಭಾವನೀಯರು ಕೇಳು ಭೂಸುರ ಯೆಂದಳಾಕುಂತಿ ॥೨೦॥ ಬಲುಹಿಸಲಿ ಭೂಸುರನ ಚಿತ್ತವ । ತಿಳುಹಿ ಬಂದಳು ಮನೆಗೆ ಭೀಮನ । ಕಲಕೆ ಕರವಳು ಹೇಳಿದಳು ಹೇರಾಳವೌತಣವ ॥ ಉಲಿದು ಮುದವಲಿ ಭೀಮ ಬಾಹ । ಪ್ಪಳಿಸಿದನು ಯಮನಂದನಾದಿಗ । ಳಳಲಿ ನುಡಿದರು ದೈತ್ಯಜಯಸಂಶಯದಭೇದದಲಿ ॥೨೧॥ ಮರುಳುಗಳು ನೀವೆಂದವರಚ । ಪ್ಪಳಿಸಿದನು ಕಲಿಭೀಮಸೇನನು । ಪಿರುಳು ತೊಡಗಿತು ವಿಪ್ರಭವನದ ಪಾಕಮಯರಭಸ ॥ ಹೊರೆದಳೆನ್ನನು ತಾಯಿ ಕುಂತಿಯ । ಪರಸುವೆನು ಪಾರಣೆಯ ಹೊತ್ತಿನೊ । ಳರಸುನಾಳಿನೊಳಾನೆನುತ ಓಗ್ಗದನು ಕಲಿಭೀಮ ॥೨೨॥ ಪರಪರಿಯ ಬಹುಭಕ್ಷ್ಯಪಾಕದ । ಪರಿಮಳದಶಾಕಾದಿಗಳ ವೊ । ಗ್ಗರಣೆಗಳ ಸೌರಭಕೆ ತಿಳಿದುದು ನಿದ್ರೆಪವನಜನ ॥ ತರಣಿ ಸುಳಿವನು ಪೂರ್ವಸ್ಮೈಲದ । ಶಿರದ ಬಳಿಯಲಿ ಭೀಮ ಕುಂತಿಯ । ಕರೆದು ಕಳುಹಿದನಾಮಹೀಸುರಗೃಹಕೆ ಮಹಿಳೆವಲಿ ॥೨೩॥ ಏನು ಬಂದಿರಿ ತಾಯೆ ಚಾಪಳ । ವೇನೆನಲು ತೆಗೆ ಹೂಡು ಬಂಡಿಯ । ನೇನುಬಂಜಿದರ್ಚೆಡ ಭಕ್ಷ್ಯವ ಹಿಡಿಸು ಕುನಿಕಿಲಲಿ ॥ ಧಾನುವುರಿಸಿದನೆನಲು ಘನಸು । ಮ್ಮಾನದಲಿ ಸಾಧನಸಮಗ್ರವ । ಸೂನುಸುತಪಕಿದನು ಭ್ಯಾರಿಯ ಬಂಡಿ ಜವಜಡಿಯೆ ॥೨೪॥ ನಳನಳಿಪಬಹುವಿಧದ ಭಕ್ಷ್ಯಾ । ವಳಿಯ ಹೆಡಿಗೆಗಳೋರಣಿಸಿ ಮಂ । ವಳಿಸಿ ಹೂಡಿದಹಾಲುತುಪ್ಪದ ಹಲವುಹರವಿಗಳ ॥ ಬಳಸಿ ಮುಚ್ಚಿದವಿಪಿಧಶಾಕಾ । ವಳಿಯ ಬೋನದ ಬಿಗಿದಕುನಿಕಿಲ । ಕಳವೆಯಕ್ಕಿಯ ಕೂಳರಾಶಿಯ ಬಂಡಿ ಜೋಡಿಸಿತು ॥೨೫॥ ಮರಳಿ ಬಂದವಳು ಕುಂತಿ ಭೀಮನ । ಕರೆದಳೇಳ್ಳೆ ಪಾರಣೆಗೆ ಕಾ । ತರಿಸದಿರು ಖಳನೊಡನೆ ಸದೆವುದು ಸತ್ವದನುವರದು॥ ಬರವ ಬರದೇ ಬೀಯಮಾಡದಿ । ರುರವಣೆಯನರಿದಾನುವುದು ಸಂ । ಹರಿಸು ದೈತ್ಯನನೆಂದು ತಾಯ್ಹರಸಿದಳು ನಂದನನ ॥೨೬॥ ಬೆರಳ ದರ್ಭೆಯ ಹರಿದು ಧೌತಾಂ । ಬರವನುಟ್ಟನು ಬಿಗಿದು ಕುಂತಿಯ । ಚರಣರಜವನು ಕೊಂಡು ಧರ್ಮಜನಂಘ್ರಿಗಭಿನಮಿಸಿ ॥ ಹರುಷದಿಗೆ ಪರಿತಂದು ಬಂಡಿಯ । ಹರವ ಹಲಗೆಯನಡರಿದನು ಬಲು । ಹುರಿಯ ಹಗ್ಗವ ಹಿಡಿದು ಜಡಿದನು ಮೋಡಿದೆತ್ತುಗಳ ॥೨೭॥ ಪುರರೂಳಗೆ ಭಿಕ್ಷಾನ್ನದಿಂದ್ಯೆ । ವರು ಮಹಾಪಂಡಿತರು ನಿರ್ಧನ । ಪುರುಷರವರೊಳಗೊಬ್ಬನನುನಂಮೂರ ದಾನವನಾ ॥ ಪರಿವಿಡಿಯಭೋಜನಕೆ ತದ್ಭೂ । ಸುರನ ತಾಯ್ಕೊಟ್ಟಳಾಗದೇನ । ಚ್ಚರಿಯನುರಿ ಪವನಜನ ಮುತ್ತಿತು ನೋಟಕರ ನೆರವಿ ॥೨೮॥ ಪೌರಜನವೈತರಲು ಬಂಡಿಯ । ನೂರಹೊರವಂಡಿಸಿದನೆಲ್ಲರು । ದೂರದಲ್ಲಿರಿ ಸಾವವನೆ ತಾ ಸಾಕು ದೈತ್ಯನಲಿ ॥ ಸಾರಿ ನೀವೆಂದೆನುತ ಹೂಡಿದ । ಹೋರಿಗಳ

ಹೊಯ್ದುಬ್ಬರಿಸಿ ರಣ । ಧೀರಮಾರುತಿ ಮಿಕ್ಕ ಹರಿಸಿದನಸುರನಿದ್ದೆಡೆಗೆ ॥೨೯॥ ಎಡೆಯಲೇ ಭಕ್ಷ್ಯಾದಿ
ಗಳ ಬರಿ । ಹೆಡಗೆಯುಳಿದವು ಕೂಳೊಳೆರ್ಘವ । ಹೊಡೆದು ಸುರಿದನು ಹಾಲುತುಪ್ಪದ ಹರವಿಯೋ
ಜೆಯಲಿ ॥ ಕುಡಿದು ಪಕ್ಕಲೆನೀರನೊಯ್ಯನೆ । ನಡೆಸಿ ತಂದನು ಕಂಡು ದನುಜನ । ನುಡಿದನೆಲವೋ ಕು
ನ್ನಿ ಕೂಳಿದೆ ತಿನ್ನು ಬಾರೆನುತ ॥೩೦॥ ಕಂಡು ಖಳ ಬೆರಗಾದನಿವ । ನುದ್ದಂಡತನವೆಚ್ಚರಿಯಲಾ ಹರಿ ।
ಖಂಡಪರಶುಗಳಳುಕುವರು ತನ್ನೊಡನೆ ತೊಡಕುವೊಡೆ ॥ ಬಂಡಿತುಂಬಿದಕೂಳನಿವನಿಂ । ದುಂಡು
ಬದುಕಲಿ ಯೂರ ಪಾರ್ವರ । ಹಿಂಡುವೆನು ಯಿವಸಹಿತೆನುತೆ ಹಲುಮೊರೆದನಮರಾರಿ ॥೩೧॥ ಮತ್ತೆ
ಶೇಷಾನ್ನದಲಿ ತೋರುತ । ತುತ್ತುಗಳ ತೂಗುತ್ತ ಮಾರುತಿ । ಮತ್ತೆ ಕೊಂಡನು ಬಾಯೊಳವನನು
ಬೆರಳಲೇಡಿಸುತ ॥ ಇತ್ತಲೆನ್ನ ಯಹಸಿವು ಹೆಚ್ಚಿದೆ । ತುತ್ತು ಹೊಗದೊಳಗಿವನ ತೊಡಗಲ । ದೆತ್ತ
ಲಕಟಾ ವಿಧಿಯೆನುತ ಮುಳಿದೆದ್ದನಮರಾರಿ ॥೩೨॥ ಎರಡುಕೈಯನು ಬಲಿದು ಮುಷ್ಟಿಯೊಳೆರಗಿದನು
ಖಳ ಬೆನ್ನನೇನೆಂ । ದರಿಯನಿತ್ತಲು ಭೀಮ ಬಲುಮುತ್ತುಗಳ ತೋಟಿಯಲಿ ॥ ಮುರನ ಮುಳಿದೆರಗಿದೊ
ಡೆ ಪುನರಪಿ । ಮುರಿದು ನೋಡಿದು ಬಹೆನುನಿಲ್ಲೆನು । ತರೆಗೆಲಸ ಪೂರೈಸಲೆಂದನು ನಗುತ ಕಲಿಭೀಮ ॥
ಅರಸ ಕೇಳೈ ನಿಮ್ಮ ಭೀಮನ । ಪರಿಯನಾಪರಿ ಬಂಡಿ ತುಂಬಿದ । ಸರಕನೆಲ್ಲವ ಸಂತಪಿಟ್ಟನು
ತನ್ನ ಜಠರದಲಿ ॥ ವರಸಮಾಧಾನದಲಿ ಕೈದೊಳೆ । ದುರವಣಿಪತೇಗಿನ ತರಂಗದ । ಪರಬಲಾಂತಕನೆ
ದ್ದು ನಿಂದನು ಸಿಂಹನಾದದಲಿ ॥೩೪॥ ಉಂಡೆವೈ ಸಮುಚಿತ್ತದಲಿ ನೀ । ವ್ಕೊಂಡಿರೈ ಗಾಯಗಳನೆಡೆಯ
ಲಿ । ಹಿಂಡುವಿರಲೈ ಸಾವುಸಹಿತೀಯೂರಹಾರುವರ ॥ ಉಂಡೆವೈ ಹಲಕಾಲಕಿಂದಿನ । ಲುಂಡುಪೊಟ್ಟಕ
ಣಾ ನಿಧಾನವು । ಖಂಡಪರಶುವಿನಾಜ್ಞೆನುತ ಮದವೇರಿದನು ಭೀಮ ॥೩೫॥ ಖಾತಿಗೊಳ್ಳದಮುನ್ನ ಪವ
ನಜ । ನೋತು ಕೊಟ್ಟನು ತನ್ನ ಹೊಯ್ಗಳ । ಸಾತನೀತನು ಮುಳಿದಬಳಿಕಿವನೇನಮಾಡುವನೋ ॥ ಈ
ತನೆದ್ದನು ಗಜರಿ ಬಳಿಕಿನೊ । ಳಾತನಿದಿರಾದನುಸುರಾರಿಯ । ವಾತಜನ ಹೋರಟೆಗೆ ಕೊರಳಳುಕಿದುದು
ವಾಸುಕಿಯು ॥೩೬॥ ಹಿಡಿವರೊಬ್ಬರನೊಬ್ಬರುರದಲಿ । ಹೊಡೆದು ಹಿಂಗಿದರುಲಿದು ಹೆಮ್ಮರ । ನುಡಿಯೆ
ಹೊಯ್ದಾಡಿದರು ತಿವಿದರು ತೋಳಬಲುಹಿನಲಿ ॥ ಕೊಡಹಿದನು ಕಲಿಭೀಮನವನು । ಗಗ್ಗಡದ ಸತ್ವದಿ
ಯುಂಡೆಕೂಳಿನ । ಕಡುಹ ತೋರೆಂದೊರಲಿ ತುಡುಕಿದನನಿಲನಂದನನ ॥೩೭॥ ಸಿಕ್ಕಿದನು ಕಲಿಭೀಮನನೆ
ಕೈ । ಯಿಕ್ಕಿ ಕೊಟ್ಟನು ಮೆಯ್ಯನಸುರನ । ಹೊಕ್ಕು ತಿವಿದನು ತಿರುಗಿ ಬದಿಯೆಲು ನುಗ್ಗುನುಸಿಯಾಗೆ ॥
ಬಿಕ್ಕುಳಿಯ ತಾಳಿಗೆಯ ಮೂಗಿನೊ । ಳೊಕ್ಕ ರುಧಿರದಧಾರೆ ಬಿಗಿದುರೆ । ಡೊಕ್ಕರಿಸಲಸು ನೀಗಿತಸು
ರನ ತನುವ ನಿಮಿಷದಲಿ ॥೩೮॥ ಕೊಂದು ದನುಜನ ಹೆಣನ ಬಂಡಿಯ । ಹಿಂದೆ ಬಂಧಿಸಿ ಪುರದ ಬಾ
ಹೆಗೆ । ತಂದು ಬಿಟ್ಟನು ತನತನಗೆ ಜನಜಾಲ ಜೋಡಿಯಲಿ ॥ ಬಂದು ಕಂಡುದು ಹೆಣನ ಭೂಸುರ ।
ರಿಂದು ಧನ್ಯರು ವಿಪ್ರಜಾತಿಗೆ । ಸಂದುದಿನ್ನಗ್ಗಳಿಕೆಯೆಂದುದು ನೆರೆದಪೌರಜನ ॥೩೯॥ ಈಯಮಾನು
ಷಶಕ್ತಿಯಮರರ । ರಾಯಗಳವಲ್ಲೆಂದು ವಿಪ್ರನಿ । ಕಾಯಕಿದು ಸಾಮಾನ್ಯವೇ ನಮ್ಮಗ್ರಹಾರದಲಿ ॥
ಕಾಯಿದವರಿವರೆಂದು ವಿಪುಲ । ಶ್ರೀಯಪದ್ಮಜಸೋಮಧರನಾ । ರಾಯಣರು ಕೊಡಲೆಂದು ಹರಸಿತು
ಭೂಸುರವ್ರಾತ ... ... ॥೪೦॥

ಅಂತು ಸಂಧಿ ೧೦ ಕ್ಕೆ ಪದ ೪೬೩ ಕ್ಕಂ ಮಂಗಳಮಸ್ತು.

ಹನ್ನೊಂದನೆಯ ಸಂಧಿ.

ಸೂಚನೆ॥ ವೀರಕುಂತೀತನುಜರಿರುಳಂ । ಗಾರವರ್ಮನ ಗೆಲಿದು ಪೊಕ್ಕರು ।
ಧಾರಿಣೀಸುರವೇಷದಲಿ ಪಾಂಚಾಲಪಟ್ಟಣವ ॥

ಅರಸ ಕೇಳ್ಕೆ ಕಲಿಬಕಾಸುರ । ಮರಣಸಮನಂತರದೊಳಾಪುರ । ವರದೊಳಿರ್ದರು ವಿಮಲವಿ
ಪ್ರಸ್ತೋಮದೊಡಗೂಡಿ ॥ ವರುಷ ತುಂಬಿತು ನಮ್ಮ ಹಸ್ತಿನ । ಪುರವ ಹೊರವಂಟಂದಿನಲಿ ಯೆಂ ।
ದರಸ ಕುಂತೀದೇವಿಗೆಂದನು ಧರ್ಮಸುತ ನಗುತ ॥೧॥ ಆಸಮಯದಲಿ ಬಂದನೊಬ್ಬನು । ಭೂಸುರನು ಸ
ಕುತೂಹಲನು ಬಹು । ದೇಶಪರ್ಯಟನಪ್ರವಾಸಾಭ್ಯಾಸಪೇಕ್ಷೆಯಲಿ ॥ ಗ್ರಾಸಯಾಚಕನಾಗಿ ತಮ್ಮ ನಿ ।
ವಾಸದಲಿ ಸಲೆ ತುಷ್ಟನಾದವ । ಹೇಸುರನ ಮಾತಾಡಿಸಿದನಂದರಸ ವಿನಯದಲಿ ॥೨॥ ಎತ್ತಣಿಂದಲಿ
ಬರವು ಬಳಿಕ । ನ್ನತ್ತ ಗಮನವು ಪೂರ್ವಸುಕೃತವ । ಹೊತ್ತುದಿಂದಿನದಿವಸವಿದೆಲಾ ಸುಜನಸಂಸ
ರ್ಗ ॥ ಉತ್ತರೋತ್ತರಸಿದ್ಧಿಯಿಲ್ಲಿಂ । ದತ್ತಲೆಮಗೆನೆ ಹಸ್ತಿನಾಪುರ । ದತ್ತಣಿಂದವೆ ಬಂದೆವಾವು
ದು ದೇಶ ನಿಮಗೆಂದ ॥೩॥ ನಾವು ನಿಮ್ಮೋಪಾದಿಯಲಿ ತೀ । ರ್ಥಾವಲೋಕನಪರರು ಭಿಕ್ಷಾ । ಜೀವಿಗಳು
ನೀವೇಸುದಿನ ಗಜಪುರವಹೊರವಂಟು ॥ ಆವನಲ್ಲಿಗೆ ಪತಿ ಯುಧಿಷ್ಠಿರ । ದೇವನೋ ದುರ್ಯೋಧನನೊ
ಬಳಿ । ಕಾವುದುಂಟು ವಿಶೇಷಕೌರವಪಾಂಡುತನಯರಲಿ ॥೪॥ ಮರುಳುಗಳೊ ನಿಮ್ಮೀಣು ನಮ್ಮನು । ಮ
ರುಳುಮಾಡುವಪರಿಯೊ ಪಾಂಡವ । ರರಗುಮನೆಯಲಿ ಬೆಂದುದಲೋಕಪ್ರಸಿದ್ಧವಲೇ ॥ ಅರಸುಕೌ
ರವರಾಯನಾತನ । ಸಿರಿಯನಾತನ ಬಲುಹನಾತನ । ಪರಿಯನಭಿವರ್ಣಿಸುವೊಡರಿಯೆನು ವಿಪ್ರ ಕೇಳೆಂದ ॥
ಅಕಟ ಪಾಂಡವರಳಿವರೇ ಬಾ । ಧಕರೆ ಪರರಿಗೆ ಲೇಸಿನಲಿ ಕಂ । ಟಕವು ದುಗ್ಧವಿಷಂಗಳಲಿ ಹಾವಿಂಗೆ
ಹಾನಿಯಲೆ ॥ ವಿಕಳಪುಣ್ಯರು ನಿಲಲಿ ಕುರುರಾ । ಜಕದೊಳಗೆ ಭೀಷ್ಮಾದಿವೃದ್ಧ । ಪ್ರಕರಗುರುಸುತ
ಗುರುಕೃಪಾದ್ಯರು ಕುಶಲರೇಯೆಂದ ॥೬॥ ಗುರುಸುತಾದಿಸಮಸ್ತಪರಿಜನ । ಪುರಜನಕೆ ಸುಕ್ಷೇಮ ದ್ರುಪ
ದನ । ವರಕುಮಾರಿಯ ಮದುವೆಗಡ ಪಾಂಚಾಲನಗರದಲಿ ॥ ನೆರವುತಿದೆ ನಾನಾದಿಗಂತದ । ಧರಣಿಪ
ತಿಗಳು ಭೂರಿಯಲಿ ಮಿಗೆ । ಭರಿತದಕ್ಷಿಣೆಮೃಷ್ಟಭೋಜನವುಂಟು ನಮಗೆಂದ ॥೭॥ ಸಾರವಿದು ನೃಪ
ಕನ್ನಿಕೆಗೆ ವರ । ನಾರು ಲಗ್ನವದೆಂದು ಬಳಿಕಾ । ರಾರು ಬಂದರು ಭೂಪತಿಗಳಿದನೆಂದು ಕೇಳಿದಿರಿ ॥
ಭೂರಿಯಲಿ ನಮಗುಂಟೆ ಮೃಷ್ಟಾ । ಹಾರದಕ್ಷಿಣೆ ನಮ್ಮಭೀಷ್ಟಪಿ । ಹಾರವಾರ್ತೆಯಿದೆಂದು ಧರ್ಮ
ಜ ನುಡಿದನಾದ್ವಿಜಗೆ ॥೮॥ ಇವರು ಕಪಟೋಪಾಧ್ಯರೆಂಬುದ । ನವನು ಬಲ್ಲನೆ ಭೂಮಿದೇವ । ಪ್ರವ
ರನೈಸಲೆಯೆಂದು ಬಗೆದನು ಧರ್ಮನಂದನನ ॥ ಅವನಿಯಲಿ ಪಾತಾಳದಲಿ ಸುರ । ಭವನದಲಿ ಪಾಂಚಾ
ಲತನುಜೆಗೆ । ಯುವತಿಯರು ಸರಿಯಲ್ಲವೆಂಬುದ ಕೇಳ್ದವಾವೆಂದ ॥೯॥ ಈಕೆಗೆಣೆಯಹವರನನೀನರ
ಲೋಕದಲಿ ತಾ ಕಾಣೆನರ್ಜುನ । ನೀಕುಮಾರಿಯರಮಣನೆಂದೇ ಮನದ ಸಂಕಲ್ಪ ॥ ಈಕೆಯಪದೆಸೆಯು
ದಯದಲಿ ಕುಂ । ತೀಕುಮಾರಕರನಲಮುಖದಲಿ । ನಾಕದಲಿ ನೆಲೆಗೊಂಡರೆಂದುಮ್ಮಳಿಸುವನು ದ್ರುಪದ

॥೧೦॥ ಜ್ವಲನ ನೆರೆ ಸಂಗಿದನೊ ಮೇಣ್ಣೆಂ । ಜಲಿಸಿಬಿಟ್ಟನೊ ಬಲ್ಲನಾವನು । ಕಲುಹೃದಯನ್ಕೆ ಕಮಲಭ ವನೀಪಾಂಡುನಂದನರ ॥ ಸುಳಿವನ್ನರಿಸನಕಟ ಹಾಹೆಗ । ಳಳಿವಹರೆಯವೆ ತಿವತಿವಾಯೆಂ । ದಳಲುದೊರೆಯಲಿ ಮುಳುಗಿ ಮೂಡುವದು ಪದಪತಿಯೆಂದ ॥೧೧॥ ಅರಸ ಕೇಳ್ವನು ಸಕಲದೈವ । ಜ್ಞರಲುಪ ಶ್ರುತಿಗಳಲಿ ಋಷಿಗಳ । ಪರಮಸಿದ್ಧಾಂತದಲಿ ಮಂತ್ರಾವೇಶವಚನದಲಿ ॥ ಧರೆಯೊಳೀಗಳು ಪಾಂಡುಸುತಸಂ । ಚರಣೆಯುಂಟಿದು ಸತ್ಯವೆಂದುಪ । ಚರಿಸಿ ನುಡಿದು ಪುರೋಹಿತನು ಸಂತವಿಸುವನು ನೃಪನ ॥೧೨॥ ಸರಸಿಜಾಸನೆ ನೋಡಿ ನೃಪರಲಿ । ವರಿಸುವಳು ವಿಘ್ನನನೆಂದುಪ । ಚರಿಸುವನು ಸವಿವಾತುಗಳಸಾರಾಯಕ್ಷೋನೆಯಲಿ ॥ ಬರಿಸುವುದ ಬಹುದೇಶಭೂಪರಾ । ಶ್ವರರನವರೊಳು ಪುಣ್ಯದಲಿಗೋ । ಚರಿಸರೇ ಗರುವೆಯರ ದೇವಿಗೆ ಪಾಂಡುಸುತರೆಂದ ॥೧೩॥ ಅದೊಡೀಮಗುವಿನ ಮಹಾಪು । ಣ್ಯೋದಯದ ಫಲವೈಸಲೇಬರೆ । ಮೇದಿನೀಶ್ವರರೆಲ್ಲರಿಗೆ ಲೇಖಾರ್ಥಸಂತತಿಯ ॥ ಸೋದರರುಸಹಿತಾಸುಯೋಧನ । ನಾದಿಯಾದಸಮಸ್ತನೃಪರು ವಿ । ವಾದವಿಲ್ಲದೆ ಬರಲಿ ಕಟ್ಟಿಸು ಪಾವುಡವನೆಂದ ॥೧೪॥ ಬರೆದವೋಲೆಗಳಖಿಳಭೂಪರಾ । ಶ್ವರರಿಗುಮಗೋರಸಹಿತ ದೂತರು । ಹರಿದರುತ್ತರಪೂರ್ವದಕ್ಷಿಣಪಶ್ಚಿಮಂಗಳಿಗೆ ॥ ಧರೆಯ ಕನ್ಯಾಜನಶಿರೋಮಣಿ । ವರದುಪದತನುಜಾಸ್ವಯಂವರ । ಕರಸುಗಳು ಬಹುದೆಂದು ವಾಚಿಸಿತಖಿಳಲೇಖಾರ್ಥ ॥೧೫॥ ಮಾಡಿದೊಡೆ ಶತಯಾಗವನು ಕೈ । ಗೂಡುವಳು ಶಚಿ ಮುಖಸಹಸ್ರವ । ಮಾಡಿ ಮೇಣ್ ಜನಿಸಿದೊಡೆ ಬಹಳೀ ದ್ರೌಪದೀದೇವಿ ॥ ನೋಡುವೆವು ನಡೆ ಜನ್ಮಶತದಲಿ। ಕೂಡಿ ಕೊಬ್ಬಿದಪುಣ್ಯಫಲ ಕೈಗೂಡುವುದೊ ತಪ್ಪೇನೆನುತ ನೆರೆದುದು ನೃಪಸ್ತೋಮ॥೧೬॥ಅಪುರೋಹಿತವಚನದಲಿ ನಿ । ರ್ವಾಪಿತಾಂತರ್ವ್ಯಥೆಯಲವನಿಪ । ನಾಪುರಪ್ರಾಂತದಲಿ ಸುತ್ತಲು ಮೂರುಯೋಜನವಾ ॥ ತೋಪಿನಲಿ ಕಟ್ಟಿಸಿದನಗ್ಗದ । ಭೂಪರಿಗೆ ಭವನವನು ಕೇಳ್ಕೆ । ದ್ರೌಪದಿಯ ವೈವಾಹರಚನಾರಾಮಣೀಯಕವ ॥೧೭॥ ನೆರವ ಶಿಬೆ ನಾನಾದಿಗಂತದ । ಧರಣಿಪರು ಕನ್ಯಾರ್ಥಿಗಳು ಭೂ । ಸುರಸಮೂಹದ ಸಾಲು ನೆರೆದುದು ದಕ್ಷಿಣಾರ್ಥದಲಿ ॥ ಎರಡರೊಳು ನಿಮಗೇನು ಕನ್ಯಾ । ವರಣವೋ ಮೇಣ್ದಕ್ಷಿಣಾರ್ಥವೊ । ಬರವು ನಿಮಗುಂಟೇ ಯೆನುತ ದ್ವಿಜನಿವರೆಬೆಸಗೊಂಡ ೧೮॥ ಈಸುಪರಿಯಲಿ ನಮ್ಮನೀವಪ । ಹಾಸಮಾಡುವಿರಾವು ಭಿಕ್ಷುಕ । ರೈಸಲೇಕನ್ಯಾರ್ಥದಲಿ ನಾವೆತ್ತ ನೃಪರೆತ್ತ ॥ ಐಸನಿಮ್ನೊಡನಾವು ಬಹೆವೀ । ಭೂಸುರರ ನೆರವುಂಟಲಾ ಶುಭ । ವಾಸರವ ಬೆಸಗೊಂಬೆನೆಂದನು ಧರ್ಮಸುತನಗುತ ॥೧೯॥ ಅವನು ಬಳಿಕ ನಿಜಪ್ರಯೋಜನ । ಭವನಕೈದಿದನಖಿಳವಾರ್ತಾ । ವಿವರಣವ್ಯಾಖ್ಯಾನಸಮನಂತರದಸಮಯದಲಿ ॥ ಇವರು ತಮ್ಮೊಳಗೆಂದರವನೀ । ದಿವಿಜಪುರದಲಿ ದೈನ್ಯವೃತ್ತಿಯ । ನಿವಹ ನಿಲಲಿ ನಿರೀಕ್ಷಿಸುವೆವಾದು ಪದಪಟ್ಟಣವ ॥೨೦॥ ಅಲತಾಂಗಿಯ ಮುಮವೆಗವನೀ । ಪಾಲವರ್ಗದ ಬರವುಗಡ ಹರ । ನೊಳಿಗವ ಪೆಚ್ಚಾಳು ಮಕರಧ್ವಜನ ಮೌಳಿಗಡ ॥ ಮೇಳವಮಿಗಳಿಗೆ ಅಂಗಹ। ವಾಲಿಗಳು ಪರಿವಿಡಿಯವೇಧಿಗೆ । ಸೋಲುವವೆಯೆಂದೈವರಾಳೋಚಿಸಿದರೊಳಗೊಳಗೆ ॥೨೧॥ ಹರಸಚಿತ್ರೈಕಸಮುಳಲಗ್ನಾಂ । ತರದಲಿವರು ದಯದಲಿಹೊರವಂ । ಟರು ಸುವಿದ್ಯಾಪರಿಣತರ ಪಂಡಿತರ ಗಡಣವಲಿ ॥ ಬರುತ ಕಂಡರು ಕಳಸಕನ್ನಡಿ । ವರಯುವತಿಋಗವ್ಯೃಗದಬಲುಸು । ಸ್ವರಸುಗಂಧಾನಿಲಸು

ಸಂಗತಶಕುನಸೂಚಕವ ॥೨೨॥ ಚಾರುಶಕುನವಿದುತ್ತರೋತ್ತರ । ವಾರಿಗಿದು ಫಲಿಸುವುದೊ ಸವಿಸ್ತ್ಮಳು।

ಹಾರುವರ ಪುಲುವೊತ್ತ ಕನ್ಯಾಲಾಭಫಲವಿದಕೆ ॥ ಭೂರಿಭಾಗ್ಯನು ನಮ್ಮವಿಪ್ರರೊ । ಳಾರೆನುತ ತಛ್ಛಕುನಫಲವಿ । ಸ್ತಾರವನು ನೆರೆ ವಿವರಿಸುತ ನಡೆದುದು ಬುಧಸ್ತೋಮ ॥೨೩॥ ಧರಣಿಯಮರರ ಗಡಣದಲಿ ನಾ । ಲ್ಕೆರಡುಪಯಣಾಂತರದಲವನೀ । ಸುರರನುಳಿದಾಶ್ರಮದೊಳಗೆ ಪಾರಾಶರವ್ರತಿಯ ॥ ದರುಶನವಮಾಡಿದರು ಬಕಸಂ । ಹರಣವೃತ್ತಾಂತವನು ನೆರೆ ವಿ । ಸ್ತರಿಸಿದರು ವಿನಯದಲಿ ಬೀಳ್ಕೊಂಡರು ಮುನೀಶ್ವರನ ॥೨೪॥ ಗಮನಸಭರದಲಿ ಭಾರಿಯಧ್ವ । ಶ್ರಮವ ನೋಡದೆ ಭೂಮಿನಭದಲಿ । ತಮದ ಚಾವಡಿಯಿಕ್ಕಿದೊಡೆ ಗತಿಚಾಪಳವ ಬಿಡದೆ ॥ ದ್ಯುಮಣಿ ಕೈಸೆರೆಯಾಗಲಟವೀ । ಭ್ರಮಣದಲಿ ಬೆಳಗಡಗೆ ಭೂಪೋ । ತ್ತಮರು ಬಂದರು ಬಹಳಗಮನದೊಳರ್ಧರಾತ್ರಿಯಲಿ ॥೨೫॥ ಮುಂದೆ ಪಾರ್ಥನ ಬೀಸುಗೊಳ್ಳಿಗ । ಳಿಂದ ತಮದಾವಳಿ ಮುರಿಯೆ ಬಳಿ । ಸಂದು ಕುಂತೀದೇವಿ ಧರ್ಮಜನಕುಲಸಹದೇವ ॥ ಹಿಂದೆ ಭೀಮನ ಕೈಯ ಕೊಳ್ಳಿಯ । ಬಿಂದುಬೆಳಗಿನಲನಿಬರಟವೀ । ವೃಂದದಲಿ ಬರುತಿರ್ದರಿರುಳವನೀಶಕೇಳೆಂದ ॥೨೬॥ ಬರುತ ಕಂಡರು ಮುಂದೆ ಗಂಧ । ರ್ವರ ವಧೂನಿಕುರಂಬವನು ನೀ । ಪುರವ ಝುಣಝುಣರವದ ಕಂಕಣಝುಂಕೃತಿಧ್ವನಿಯ ॥ ಅರಳುಗಂಗಳ ಬೆಳಗಿನಲಿ ತಮ । ದಿರುಳು ಬೀತುದು ಬೆಸವುದಾಗಲೆ । ಕುರುಳ ಕಾಳಿಕೆಯಿಂದ ತತ್ಕಾಂತಾಕದಂಬದಲಿ ॥೨೭॥ ಲಲಿತತನುಕಾಂತಿಗಳ ಮೊಗೆದರು । ತಿಳಿಗೊಳನ ಜಲವೆಂದು ಕಂಗಳು । ಹೊಳೆಯೆ ಮರಿಮೀನೆಂದು ಹೆಕ್ಕಳಿಸಿದರು ಹಿಡುಹಿನಲಿ ॥ ಅಲರಿದಂಬುಜವೆಂದು ವದನಕೆ । ನಿಲುಕಿ ತುಂಬಿಗಳೆಂದು ಕುರುಳಿಂ । ಗಳುಕಿ ಕೈಗಳ ತೆರೆದರತಿಮುಗುದೆಯರು ಖಚರಿಯರು ॥೨೮॥ ಅವರ ಮುಖಕಾಂತಿಗಳ ಲಂಗ । ಛವಿಗಳಲಿ ಕಂಕಣದ ಹಾರದ । ವಿವಿಧ ರತ್ನಾಭರಣಕಿರಣದ ಲಲಿತಲಹರಿಯಲಿ ॥ ಸನೆದುದಗ್ಗದತಿಮಿರವವದಿರ । ನಿವರು ಕಂಡ ಜಲವಿಹಾರದ । ದಿವಿಜಸತಿಯರಲಾ ಯೆನುತ ಬರುತಿರ್ದರಡವಿಯಲಿ ॥೨೯॥ ನಾರಿಯರು ಕಂಡರು ಸುಲಜ್ಜಾ । ಭಾರದಲಿ ತಡಿಗಡಿಗೆ ಹಾಯ್ದದು । ಸೀರೆಗಳ ತೆರೆವಿಡಿದವರಂಗೋಪಾಂಗಲತೆಗಳಿಗೆ ॥ ಆರಿವರು ನಡುವಿರುಳು ದರ್ಪವಿ । ಕಾರದಲಿ ಕೈಕೊಳ್ಳರೆನುತಂ । ಗಾರವರ್ಮನು ಧನುವ ಕೊಂಡನು ನುಡಿಸಿದನು ನರನ ॥೩೦॥ ಈಸುಭರದಲಿ ಗಮನವೆಲ್ಲಿಗೆ । ದೇಶಕಾಲವನೋಡದೀಸ । ರ್ವಾಸುರದ ಸಂರಂಭವೇನೆನೆ ಪಾರ್ಥ ನಸುನಗುತ ॥ ದೇಶವಿದು ವನ ಕಾಲನಡುವಿರು । ಳ್ಕೈಸಲೇ ನಿಜಕಾರ್ಯಸಂಗತಿ । ಗೋಸುಗವೆ ಗತಿಯೆಂದನಾಗಂಧರ್ವರಾಜಂಗೆ ॥೩೧॥ ನರರು ಸುಳಿವುದು ಪೂರ್ವಭಾಗದ । ಲಿರುಳಿನುತ್ತರಭಾಗದಲಿ ಖೇ । ಚರರು ಸುಳಿವುದು ಸೀಮೆ ಚತುರಾನನನಸೃಷ್ಟಿಯಲಿ ॥ ಇರುಳಿನುತ್ತರಭಾಗವಿದು ನೀ । ವ್ನರರುಬಹುದುದ್ದಂಡದರ್ಪ । ಜ್ವರಿತವಿದಕೌಷಧಿಯನೆರೆವೆನೆನುತ್ತ ತೆಗೆದೆಚ್ಚ ॥೩೨॥ ಕನಲಿ ಫಲುಗುಣನಾದೊಡಿದಕೊ । ಳ್ಳೆನುತ ಕೊಳ್ಳಿಯೊಳಿಟ್ಟನಗ್ನಿಯ । ನೆನೆದು ಮಂತ್ರಿಸಲುರುಮುಖದ ಕಾರ್ಬೊಗೆಯವೊಬ್ಬಿನಲಿ ॥ ಹೊನಲುಗಿಡಿಗಳ ತಗಡುರಿಯ ತೊಂ । ಡಿನಲಿ ಮುತ್ತಿತು ರಥವನಾತನ । ಧನುವನಾತನ ತನುವನಾತನ ಸರಳ ಸಾರಥಿಯ ॥೩೩॥ ಉರಿದುದಾರಥವವನಮೈಯಲಿ । ಕರಿಕುವರಿತರಲೋಡಿ ಹೊಕ್ಕನು । ಸರಸಿಯನು ತಿಖಿಯೊಡನೆ ಹೊಕ್ಕುದು ನೀರನುರೆಸುರಿದು ॥ ತರುಣಿ ಹಾಹಾಕೆಟ್ಟೆನೆಂದ । ಬ್ಬರಿಸಲಾಗಂದರ್ವನಂಗನೆ । ಹರಿದಳೆಡೆಗೈಯಿಂದ ಸಂವರಿಸುತ್ತ ಬಿಡುಮುಡಿಯ ॥೩೪॥ ಬಂದುಯಮ**ನಂದನನ ಚರಣ । ದ್ವಂದ್ವದಲಿ ಚಾಚಿದಳು ನೊಸಲನು । ತಂದೆ ಕರುಣಿಸು ಕಾಂತ ಭಿಕ್ಷವ ಕರುಣಿಸೆನಗೆ**

ತಲು ॥ ಮುಂದುವರಿಯದಿರೆಲೆಧನಂಜಯ । ಕೊಂದರೆನ್ನಾಣೀಕೆಯರಸನ । ತಂದು ಕೊಡು ಬೇಗದಲಿ
ಉಪಸಂಹರಿಸು ತ್ರಿಶಿರವ ॥೩೫॥ ಎನೆ ಹಸಾದವೆನುತ್ತ ನಿಮಿಷದೊ । ಳನಲನನು ನಂದಿಸಿದನಿತ್ತಲು।
ಮನದದುಮ್ಮಾನದಲಿ ಲಜ್ಜಾವನತಮುಖನಾಗಿ ॥ ಮನುಜರಲ್ಲಿವರಾರೊ ನೋಡುವೆ । ನೆನುತ ಹತ್ತಿರೆ
ಬಂದು ನೀವಾ । ರಿನಿತುಸಾಹಸಮಲ್ಲರೆಂದರ್ಜುನನ ಬೆಸಗೊಂಡ ॥೩೬॥ ನರರು ವೈದೇಶಿಕರು ಕಾರ್ಯಾ
ತುರರು ನಾವೆನಲರ್ಜುನನನೃಪ । ಚರಿಸಿ ವಿವಿಧಗುಣಾನುಮುಖದಲ್ಲಿವರನಂಡಲೆಯೆ ॥ ಧರೆಯೊಳುಂಟೇ
ಪಾಂಡುಸುತರೆಂ । ಬರಸುಗಳು ನೀಕೇಳಿಬಲ್ಲೆ ನಿರುತವಾವವರೆಂದು ನುಡಿದನು ನಗುತ ಕಲಿಪಾರ್ಥ
॥೩೭॥ ಶಿವಶಿವಾದೊಡೆ ಯಮಪುರಂದರ । ಪವನನಶ್ವಿನಿಯರಿಗೆ ನೀವ್ಸಂ । ಭವಿಸಿದವರೇ ನೀವೆಮಗೆ
ಸಂಭಾವನೀಯರಲಾ ॥ ಇವೆ ಸಹಸ್ರತುರಂಗದಿವ್ಯೋ । ದ್ಭವವನರ್ಘ್ಯಾಭರಣರತ್ನ । ಪ್ರವರವಿವೆ ಕಾ
ರುಣ್ಯದಲಿ ಕೈಕೊಂಬುದಿವನೆಂದ ॥೩೮॥ ಬಂದವೆಮಗಿವು ನಿನ್ನಸಾರ್ವ್ವೇ । ರೆಂದು ಕಾಣ್ಕೆವು ಪರಮಬಾಂ
ಧವ । ರಿಂದುಮೊದಲಾಗೆಮಗೆ ನೀನೇ ಮೌಲ್ಯಧನವೆಂದ ॥ ಇಂದು ನಿಜರೂಪಡಗಿ ರಾಯರ । ವೃಂ
ದವನು ನೋಡುವೆವು ದ್ರುಪದನ ।ನಂದನೆಯ ವೈವಾಹರಚನೆಯೊಳೆಂದನಾಪಾರ್ಥ ॥೩೯॥ ಇವು ಮ
ದೀಯಸುವಸ್ತು ನಿನ್ನಯ । ಭವನದೊಳಗಿರಲೊಂದುಸಮಯದೊ । ಳಿವನು ತರಿಸುವೆವೆಂದು ಬಳಿಕಂ
ಗಾರವರ್ಮಂಗೆ ॥ ಇವರುವಿನಯವ ಮಾಡಿಗಮನೋ । ತ್ಸವದಲಿರೆ ಗಂಧರ್ವ ನಸುನಗು । ತಿವರಿಗೆಂ
ದನು ಧರ್ಮಶಾಸ್ತ್ರದ ಸಾರಸಂಗತಿಯ ॥೪೦॥ ಮುನಿಯದಿರು ಕಲಿಪಾರ್ಥ ನಿನ್ನಯ । ಘನತರದ ವಿಕ್ರ
ಮಕೆ ದಿವಿಜರು । ದನುಜಭುಜಗರು ನೆರೆಯರುಳಿದೀನರರ ಪಾಡೇನು ॥ ಅನುಪಮಾನಕ್ಷತ್ರವಹ್ನಿಗೆ । ಪಿ
ನುತವಿಮಲಬ್ರಹ್ಮತೇಜೋ । ಘನಸಮೀರ ಸಹಾಯನಾಗಲಸಾಧ್ಯವೇನೆಂದ ॥೪೧॥ ಅರಸ ನಿಮ್ಮೊಳು
ಪೂರ್ವದಲಿ ಸಂ । ವರಣನೆಂಬನು ಸೂರ್ಯತನುಜೆಗೆ । ಮರುಳುಗೊಂಡನು ಮರೆದು ಕಳೆದನು ರಾ
ಜವೈಭವವ ॥ ಬರಿಯಪಾರ್ಥಿವತೇಜದಲಿ ಗೋ । ಚರಿಸದಿರೆ ತತ್ಸತಿವಿವಾಹೋ । ತ್ಕರುಷವಾಯ್ತು
ವಸಿಷ್ಠನಮಲಬ್ರಹ್ಮತೇಜದಲಿ ॥೪೨॥ ಆವಸಿಷ್ಠನ ಕೌಶಿಕನ ಯು । ದ್ಧಾವಲಂಬನವೇನನೆಂಬೆನು । ದೇ
ವಕುಲವಂಜುವುದು ವಿಶ್ವಾಮಿತ್ರನುಬ್ಬಟೆಗೆ ॥ ಅವಿವಿಧಮಂತ್ರಾಸ್ತ್ರವನು ಶತ । ಸಾಸಿರವನಾಬ್ರಹ್ಮ
ದಂಡದ । ಡಾವರದಲೇ ಗೆಲಿದನೊಬ್ಬವಸಿಷ್ಠಮುನಿಯೆಂದ ॥೪೩॥ ಒದಗಲಾರದೆ ತನ್ನ ಸುಕ್ಷತ್ರದ
ಮಹತ್ವವ ಬಿಸುಟುಸುಬ್ರಾ । ಹ್ಮದಲಿ ಹೊಕ್ಕನು ವಿಗಡವಿಶ್ವಾಮಿತ್ರಮುನಿಯೆಂದು ॥ ಅದರಿನಿಂದೀ
ಕ್ಷತ್ರತೇಜದೊ । ಳುದಿತವಿಮಲಬ್ರಹ್ಮವನು ಕೂ । ಡಿದೊಡೆ ಕೌತುಕವೆಂದನಾಗಂಧರ್ವನರ್ಜುನಗೆ॥೪೪॥
ಇಲ್ಲಿಗಿದೆ ಸಾಲ್ಕೈದುಯೋಜನ । ದಲ್ಲಿ ಧೌಮ್ಯಾಶ್ರಮ ವಸಿಷ್ಠಂ । ಗಲ್ಲಿ ಸನ್ನಿಧಿಯಾವಸಿಷ್ಠಂಗಾತನ
ನುಜಾತ ॥ ಅಲ್ಲಿ ಪೌರೋಹಿತ್ಯವನು ನಿಮ । ಗೊಲ್ಲೆನೆನ್ನದೆ ಮುನಿಪಮಾಡಿದೊ । ಡೆಲ್ಲಲೇಸಹುದೆಂದು
ಕಳುಹಿದನಿವರನಾಖಚರ ॥೪೫॥ ಗಮಿಸಿದರು ಬಳಿಕವರು ಧೌಮ್ಯಾ । ಶ್ರಮಕೆ ಬಂದರು ಮುನಿಪನ
ಘ್ರ್ಯ । ದ್ಯಮಲಸತ್ಕಾರೋಚಿತವ ಕೈಕೊಂಡ ವಿನಯದಲಿ ॥ ಎಮಗೆ ಪೌರೋಹಿತ್ಯದಲಿ ಸಂ । ಕ್ರ
ಮಿಸಬೇಕೆಂದೊಡಬಡಿಸಿ ಭೂ । ರಮಣರಲ್ಲಿಂದೈದಿದರು ಪಾಂಚಾಲಪಟ್ಟಣವ ... ॥೪೬॥

ಅಂತು ಸಂಧಿ ೧೧ ಕ್ಕೆ ಪದ ೫೯೦ ಕ್ಕಂ ಮಂಗಳಮಸ್ತು.

ಹನ್ನೆರಡನೆಯ ಸಂಧಿ.

ಸೂಚನೆ॥ ಧರಣಿಪತಿ ನಿಜಸುತೆಯ ರೂಪೋ । ತ್ಕರದ ಸೌಭಾಗ್ಯದ ನಿರಂತರ ।
ಪರಮಶೋಭಾರಚನೆಯಲಿ ರಚಿಸಿದರು ಪಟ್ಟಣವ ॥

ಭೂಮಿಪತಿ ಕೇಳ್ನಿಮ್ಮಪಿತನಪಿ । ತಾಮಹರು ಧೌಮ್ಯಾಶ್ರಮಕೆ ಬಂ । ದಾಮುನೀಂದ್ರನ
ಕೂಡಿಕೊಂಡರು ಖಚರವಚನದಲಿ ॥ ರಾಮಣೀಯಕವಹಸುಶಕುನ । ಸ್ತೋಮವನು ವಿವರಿಸುತ ಹೊ
ಕ್ಕರು । ಭೂಮಿಲಂಬದ ನೃಪರ ನೆರವಿಯ ದ್ರುಪದಪಟ್ಟಣವ ॥೧॥ ಭರದಿನೈತಂದಖಿಳಭೂಮೀ । ಶ್ವ
ರರ ಘನಚತುರಂಗಪದಹತ । ಧರಣಿನಿರ್ಗತರೇಣುಪಟಲಪರಾಗಸಂಗದಲಿ ॥ ಅರುಣಮಯವಾಯ್ತಖಿಳ
ಜಗದಲಿ । ಸರಸಿಜಾಕ್ಷಿಯ ನೆನೆದು ಸಚರಾ । ಚರದ ಮುಖದಲಿ ರಾಗರಸವುಬ್ಬರಿಸಿದಂದದಲಿ ॥೨॥ ತರ
ಣಿಗುಂಟೇ ಸಮಯವನಿಲಗೆ । ತೆರಹುಗೊಡುವವರಾರು ಗಗನೇ । ಚರರ ಗಮನಸ್ತಂಭನತ್ರಾಣವಾತು
ಖಗಕುಲಕೆ ॥ ನೆರೆದಪಲ್ಲವಸತ್ತಿಗೆಯ ಝ । ಲ್ಲರಿಯ ಸಿಂದದ ಸೆಳೆಯ ಘನಸೀ । ಗುರಿಯ ಸಬಳದ ಸಾಲ
ಚಮರಂಗಳ ವಿತಾಯಿಯಲಿ ॥೩॥ ಚತುರುದಧಿಪರ್ಯಂತದವನೀ । ಪತಿಗಳೇಕಾವಿಷವಿರೋಧ । ಸ್ಥಿತಿ
ಯ ನೋಡದೆ ನೂಕಿ ನಡೆದರು ದ್ರುಪದಪುರಿಗಾಗಿ ॥ ಅತಿಬಲರು ಬಹುರಾಜಬಲಪದ್ಧತಿಗಳನು ನೋಡು
ತ್ತ ಬಂದರು । ಕೃತಕವಿಪ್ರೋತ್ತಮರು ಭಿಕ್ಷಾವಿಹಿತವೃತ್ತಿಯಲಿ ॥೪॥ ತಿರುಗುತಿದ್ದು ಪಾಂಚಾಲನಗ
ರಿಯ । ಹೊರವಳಯದಲಿ ಜಲಧಿಮಧ್ಯದ । ಕುರುವವೋ ಪಟ್ಟಣವೊ ಮಾಣಿದು ದೈವಗತಿಗಳಲಿ ॥
ಉರುಬಿದೊಡೆ ಪಾಂಚಾಲಭೂಪತಿ ತರುಬಲಾಸನೆ ಮಾವತನವಿದು । ಬರದೆ ಹೋಗದೆನುತ್ತ ಬಂದ
ನು ಧರ್ಮಸುತ ನಗುತ ॥೫॥ ಪುರದೊಳಗೆ ಹೇರಾಳಹಬ್ಬದ । ಹರಹಿನಲಿ ಬೀಡಾರ ಭಿಕ್ಷಾ । ಚರಿತರಿ
ಗೆ ದೊರಕುವುದೆ ಗುಡಿಗೂಡಾರಸಂತತಿಗೆ ॥ ಅರಸುಗಳುಸಾವೆಲ್ಲ ಭವಸಾಂ । ತರವದೇ ನಮಗೆಂದು
ಘಟಬಂ । ಧುರದಶಾಲೆಯ ಹೊಕ್ಕರಿವರು ಕುಲಾಲಭವನದಲಿ ॥೬॥ ಕೂಡೆ ಹೊಸಭಾಂಡದಲಿ ಭಿಕ್ಷ
ವ । ಬೇಡಿ ತೊಳಲಿದರಿವರುರಾಯರ । ಬೀಡು ಬಿಡುತಿರ್ದುದು ಬಹಳನಿಸ್ಸಾಳರಭಸದಲಿ ॥ ಬೀಡಿವರಿ
ಗಿದು ನೆಲನಿವರಿಗಿದು । ಮಾಡಿದರಮನೆಯಿವರಿಗಿದು ಕರು । ವಾಡವಿವರಿಗಿದೆಂದು ಪರುಠವಿಸಿದನು
ಪಾಂಚಾಲ ॥೭॥ ಕೇರಿಕೇರಿಯ ಬೀದಿಗಳ ಪ । ನ್ನೀರ ಚಳೆಯದ ಕಳಸಕನ್ನಡಿ । ತೋರಣದ ಸೂಸ
ಕದ ಮುತ್ತಿನ ಮಕರತೋರಣದ ॥ ಓರಣದ ಹೊಂಗೆಲಸದಖಿಳಾ । ಗಾರಪಜ್ಜೆಯ ಸೋಮವೀಥಿಯ
ಸೂರವೀಥಿಯ ರಚನೆಯಲಿ ರಚಿಸಿದರು ಪಟ್ಟಣವ ॥೮॥ ತೀವಿದುವು ಹೊಂಗೆಲಸಗತಿಯಲಿ । ಲೋವೆಗಳು
ಚೈತನ್ಯಮಯಚಿ । ತ್ರಾವಳಿಯ ಬೆಸುಗೆಗಳಲೆಸೆದುವು ಭವನಭಿತ್ತಿಗಳು ॥ ಹೂವಿನರಳಸ ಹರಹಿನಲಿ ರ
ಥ್ಯಾವಳಿಗಳೊಪ್ಪಿದವಗರುಧೂ । ಮಾವಳಿಯ ಕಂಪಿನಲಿ ಮಘಮಘಿಸಿದುವು ಮೇಘಚಯ ॥೯॥ ಕಾರಣಿ
ಯಕುಂಕುಮದ ಸಾದಿನ । ಸಾರಣೆಯ ನೆಲೆಗಟ್ಟುಗಳ ಕರ್ಪೂರಧೂಳಿಯ ಹೊಳಹುಗಳ ಪನ್ನೀರ ಪಕ್ಕ
ಲೆಯ ॥ ಚಾರುಚಳೆಯದ ಕೆಸರಿಡುವ ಕ । ಸ್ತೂರಿಗಳ ಪೂರಾಯಪರಿಮಳ । ಭಾರದಲಿ ಬಿರುಗಾಳಿ

ಕುಸಿದುದು ಹೇಳಲೇನೆಂದ ||೧೦|| ಮೇಲುಕಟ್ಟಿನದಿವ್ಯಚಿತ್ರದ | ಕೂಲನಿಚಯದ ಲಾಮಚದ ಬ |
ಲ್ಲಾಳದಡ್ಡಿಗಳೆಡೆಗೆಡೆಗೆ ರಂಜಿಸುವಪಟ್ಟೆಗಳ || ಮೇಲುವೊದಕೆಯಕರ್ಪುರದ ಹೊಂ | ಬಾಳೆಗಳ
ಮಲಯಜದಕಂಬದ | ಸಾಲುಗಳಲೊಪ್ಪಿದುದು ಚಪ್ಪರವೆರಡುಯೋಜನದ ||೧೧|| ಬಿಗಿದವೆಡೆಮಂಟ
ಪದ ಬಿಂಗಾ | ರಿಗಳ ಬಿಡೆಯದ ಚಮರಹೊಂಗೆ | ಜ್ಜೆಗಳ ಮುಕುರದ ಘಂಟೆಗಳ ಬಂಧುರದ ಬಾಸಿ
ಗದ || ಸುಗಮಬಂಧದ ಬಣ್ಣಸರದೋ | ಳಿಗಳ ಕಂಬದ ವಜ್ರಮಯಧಾ | ರೆಗಳಲೆಸೆದುದು ಭದ್ರ
ಮಂಟಪವಮಲಮಣಿಮಯದ ||೧೨|| ಕೀಲಿಸಿದಪಟ್ಟೆಗಳ ದಿವ್ಯದು | ಕೂಲದಲಿ ಹೊಂಬರಹದೆಲೆ
ಗಳ | ಚೂಳಿಕೆಯ ಕನ್ನಡಿಯ ತೋರಣವೆರಡುಪಕ್ಕದಲಿ || ಮೇಲುಮುತ್ತಿನ ಸೂಸಕದನೇ | ಪಾಳಚ
ಮರಿಯ ದಾಳಿಗಳ ಸಂ | ಮೇಳದಲಿ ಸಮತಳಿಸಿದರು ವೈವಾಹಮಂಟಪವ ||೧೩|| ಹೊಳೆವಭಿತ್ತಿಯ
ಸಾಲಭಂಜಿಕೆ|ಗಳಲಿ ಮೌಕ್ತಿಕವಜ್ರಮಣಿಮಂ | ಗಳಮಹಾರತ್ಮಿಯಲಿ ರಚನೆಯ ಚಿತ್ರಪತ್ರದಲಿ ||
ಇಳೆಗಿಳಿದಪುಷ್ಪಕವೊ ನೂತನ | ನಳಿನಮಿತ್ರನ ರಥವೊ ಮೇಣಿದು | ಜಲಧಿಶಯನನ ಸೆಜ್ಜೆ ಯೋ
ನಾವರಿಯೆವಿದನೆಂದ ||೧೪|| ಝಳವ ಝೋಂಪಿಸಿ ಬೀಸಿದವು ತಂ | ಬೆಲರ ಬೀಸಣಿಗೆಗಳ ಪರಿ
ಮಳ | ಕಲಿತಮಕರಂದದ ತುಷಾರದತುಹಿನರೇಣುಗಳಾ || ಸುಳಿವಸುತ್ತಣಸಾಲಭಜಿಕೆ | ಗಳಲಿ
ಸೂತ್ರಿಸಿ ರಚಿಸಿದರು ಮಂ | ಗಳದರಿಂಗಣ ಜಾಡಿಸಿತು ವೈವಾಹಮಂಟಪವ ||೧೫|| ವರಜವಾಜಿಯ
ಶೃಂಗಗಳ ಕರ್ಪುರದ ತವಲಾಯಿಗಳ ಸಾದಿನ | ಭರಣಿಗಳ ಮೃಗಸಾಭಿಗಳ ನಡಕಿದರು ಬಂಡಿಯಲಿ ||
ಸುರಿಸುರಿದು ಹಂತಿಗಳ ಹೊಂಗೊ | ಪ್ಪರಿಗೆಗಳ ತುಂಬಿದರು ಗಂಧದ | ಹಿರಿಯರಂಜಣಿಗೆಗಳ ಹಿಡಿ
ದರು ಸುತ್ತುವಳಯದಲಿ ||೧೬|| ಬಳಿಕ ಸೊದೆಗಳ ಭಾವಿಗಳು ಪ | ಕ್ಕಲೆಯ ಪನ್ನೀರುಗಳು ಲಿಡಿ
ದವು | ಹೊಳೆವಕ್ಕೈರಾಟಣದೆ ಕಾಂಚನಮಯದ ಡೋಣಿಗಳ || ತುಳುಕಿ ಬಿಗಿದರು ಕೊಪ್ಪರಿಗೆಗಳ |
ವಳಯದಲಿ ನವಯಂತ್ರಮಯಪು | ತ್ಥಳಿಗಳೇ ನೀಡುವವು ಬೇಡಿದರಿಗೆ ಸುವಸ್ತುಗಳಾ ||೧೭|| ಏಕ
ವಿಧದ ನವಾಯಿಯೇ ಮೂ | ಲೋಕದತಿಶಯವಸ್ತುರಚನಾ | ಸೌಕುಮಾರಿಯ ಸೇವೆಗಿದು ಸಾಕಾರ
ವಾದುದಲಾ || ಏಕಮಯಮತವಿಶ್ವಕರ್ಮ | ವ್ಯಾಕರಣಲಕ್ಷಣದಲಕ್ಷ್ಯಾ | ನೀಕಪಿದರೊಂದೊರೆಗೆಬ
ಹುದೇ ಭದ್ರಮಂಟಪಪಾ ||೧೮|| ವಿವಿಧವೀಣಾವಾದ್ಯಕೋಮಲ | ರವದ ಮಧುರಮೃದಂಗತತಿಗಳ |
ರವಣಿಗೆಗಳ ನಟ್ಟುವಿಗರುಗ್ಗಡಣೆಯಗಡಾವಣೆಯ || ನವವಿಧದ ವೈತಾಳಿಕರ ವರ | ಯುವತಿಯರ
ಭಾರಣೆಯ ಭೂಷಣ | ರವದ ಮೇಳವು ಮುತ್ತಿ ಮುಸುಕಿತು ಚಾರುಚಪ್ಪರವ ||೧೯|| ಸಾಳಗದ
ಸನ್ಮೋಹದದ ಮಳೆ | ಗಾಲವೋ ಗೀತವೊ ರಸಾಳಿಯ | ಕಾಲುವೆಯೊ ನವಕಾವ್ಯಬಂಧದ ಸಾರಸಂ
ಗತಿಯೋ || ಆಲಿಗಳಿಗಾಯುಷ್ಯಫಲಜೀ | ವಾಳುವೋ ನರ್ತನವೊ ಸೊಗಸಿನ | ಮೇಳವಣಿಗಳಪಾಟಿ
ಯಾದುದು ಜನದಕಣ್ಮನಕೆ ||೨೦|| ತೀವಿದರು ಹೊರವಳಯದಲಿ ನಾ | ನಾವಿಧದ ನಾಟಕದ ನರ್ತನ |
ಭಾವಕದ್ರಾವಕಸುಗಾಯಕಮಲ್ಲಚಿತ್ರಕರು || ಕೋವಿದರು ಕರುಷಕರು ಪಣ್ಯಾ | ಜೀವಿಮಾನವಮೂ
ಕಬಧಿರಾಂ | ಧಾವಳಿಗಳೊಪ್ಪಿದರ ಸಕಲ ದಿಶಾಸಮಾಗತರು ||೨೧|| ಕವಿಗಮಕಿವಾದಿಗಳು ವಾಗ್ಮಿ |
ಪ್ರವರಯಾಜ್ಞಿಕಮಾಂತ್ರಿಕರು ವೈ | ಷ್ಣವಮಹೇಶ್ವರಜೈನಭೈರವಬುದ್ಧಲಿಂಗಿಗಳು || ವಿವಿಧ
ವರ್ಣಾಶ್ರಮಸುಧರ್ಮ | ವ್ಯವಹರಣನಿಷ್ಠರು ವಿವಾಹೋ | ತ್ಸವಪ ಲೋಕನಕೌತುಕಿಗಳೊದಗಿದರಸಂ

ಖ್ಯಾತ ॥೨೨॥ ಗಣಿತವಂತರನೆರಪಿ ಸುಬ್ರಾ । ಹ್ಮಣರು ಸುಶ್ರೋತ್ರಿಯರು ವೈದಿಕ। ಗುಣದ ವಾಚಾಲಕರು ವಿಮಲಸ್ಮಾರ್ತಮಹಾಋಷಿಸಮರು ॥ ಪ್ರಖ್ಯಾತಋಷಿಗಳು ಮುನಿವರರು ಸಂ । ದಣಿಸಿತಖಿಳದಿಗಂತರವ ಘೋ । ಷಣೆಯ ವೇದವ್ರಾತ ನೆರೆದುದು ದ್ರುಪದನಗರಿಯಲಿ ॥೨೩॥ ಅರಸ ಕೇಳ್ಮೈ ಮೇಲೆ ವಿದ್ಯಾ । ಧರ ಮಹೋರಗಯಕ್ಷರಾಕ್ಷಸ । ಗರುಡಕಿನ್ನರಸಿದ್ಧವಸುಗಂಧರ್ವಭೂತಗಣ ॥ ವರಮರುದ್ಗಣ ರುದ್ರಮನು ಭಾ । ಸ್ಕರಸುಧಾಕರತಾರಕಾಗ್ರಹ । ಸುರಪಮುನಿಪದಿಕ್ಪಾಲತತಿ ನೆರೆದುದು ವಿಮಾನದಲಿ ॥೨೪॥ ಚಾರಣರ ಕೈವಾರ ತುಂಬುರ । ನಾರದರ ಸಂಗೀತ ರಂಭೆಯ । ಚಾರುನರ್ತನ ಚಿತ್ರರಥನ ಮೃದಂಗವಾದ್ಯದು ಶಬ್ದ ॥ ಅರುಭಟಿಸಿಗಲಳ್ಕಿಬವ್ರಂ । ಭಾಲಯೋಲಗದಲಿ ತದೀಯಮ । ಹಾರಭಸವಿತರೇತರಪ್ರತಿಬಿಂಬವಾಯ್ತೆಂದ ॥೨೫॥ ರಚಿಸಿದರು ಮಂಟಪವನವರವ । ರುಚಿತವೃತ್ತಿಯೊಳವನಿಪಾಲ । ಪ್ರಚಯವನು ಮನ್ನಿಸಿದರವರನು ವಿಪ್ರಸಭೆಯೊಳಗೆ ॥ ಪ್ರಚುರಮಣಿಯಿದೆ ಪದ್ಮರಾಗದ ರುಚಿರರತ್ನವು ಜಾತರೂಪದ । ಖಚಿತವಾದೊಡ ವ್ರ್ಯಾವೆನುತ ದ್ರುಪದ ಚಿಂತಿಸಿದ ... ॥೨೬॥

ಅಂತು ಸಂಧಿ ೧೨ ಕ್ಕೆ ಪದ ೪೩೪ ಕ್ಕೆ ಮಂಗಳಮಸ್ತು.

ಹದಿಮೂರನೆಯ ಸಂಧಿ.

॥ಸೂಚನೆ॥ ಕಮಲಮುಖಿ ನಡೆತಂದಳಂದಿನ । ಕಮಲೆಯೆನೆ ಪಾಂಚಾಲಸುತೆ ನಿಜ ।
ರಮಣರನು ನೋಡಿದಳು ಪೃಥ್ವೀಪಾಲಪಙ್ಕ್ತಿಯಲಿ ॥

ಅರಸ ಕೇಳ್ಪ್ರಥಮದಿವಸದ ಪ । ಸ್ತರಣವಾದುದು ಪೂರ್ವವೇದಿಯ । ವರನಿಗಮನಿರ್ಘೋಷಘಾತಿಸಿತಖಿಳಕಲ್ಮಷವ ॥ ಪುರದ ವರಮಹಿಳಾಶಿರೋಮಣಿ । ಪರಮಸೌಭಾಗ್ಯದ ಸಮುದ್ರದ । ಸಿರಿಯ ಪರಿಣಯಮಹಿಮ ಸಾರಿತು ಪಾಳೆಯಂಗಳಲಿ ॥೧॥ ತಿಗುರ ಗೆಲುವುದು ವಶ್ಯತಿಲಕಾದಿಗಳ ನಿಡುವುದು ಮೋಹನದ ಮಂ । ದ್ದುಗಳ ಮಾಯೆಯ ಬೀಸುವುದು ಸೂಸುವುದು ಸೊಗಸುಗಳ ॥ ಹಗಲುಡಾಹೆಯ ರೂಪುಗಳ ಗಾ । ವುಗರ ಮಾತೆಪ್ಪದ ಮನ್ಮಥನ ಕಾ । ಳೆಗದ ಖಾಡಾಖಾಡಿಯೆಂದರು ಹೊಯ್ದು ಡಂಗುರವ ॥೨॥ ಹರಸಿಕೊಂಡರು ನಿಖಿಳಪೃಥ್ವೀ । ಶ್ವರರು ಮಾಯಾಪುರವ ಕಾಂಚೀ । ಪುರದ ಜಾಳಾಂಧರದ ವಿವಿಳಸ್ಥಾನದೇವಂಗೆ ॥ ಕುಲಮುಖನ ಕಚ್ಛಾಯದಲಿ ಸ । ತ್ಕರಿಸಿ ಸಂಶಯಭೇದವರ್ಗದ । ಹರುಷದಲಿ ಹೊರವಂಟರೊಬ್ಬರನೊಬ್ಬರುರವಣಿಸಿ ॥೩॥ ಉಬ್ಬು ಮುಂದುದು ರಾಯರೊಬ್ಬರ । ನೊಬ್ಬರೀಕ್ಷಿಸಿ ಚೆಲುವಿನಲಿ ಸಿಂ । ಗೊಬ್ಬಿನಲಿ ಸಾಹಸಿಕೆಯಲಿ ಸೇನಾಸಮುದ್ರದಲಿ ॥ ಒಬ್ಬರೊಬ್ಬರಸೂಯೆಯೊಬ್ಬರ । ನೊಬ್ಬರಳುಕಿಸುವವದುಗಂಗಳ । ಹಬ್ಬದಲಿ ಮನಸಂಚುತಪ್ಪಿತಸಾಧ್ಯಚಿಂತೆಯಲಿ ॥೪॥ ಹೋರೆಗರ ಹೊಳ್ಳಿರಿತ ಜೋಯಿಸ । ರಾಮಭಟೆಗಳ ಬಿಂಕ ಮಾಂತ್ರಿಕ । ರೋರೆಮುಸುಕಿನ ಜಾಳು

ಜವವೀಸ್ಯಪರ ಚಾಳೈಸೆ ॥ ಪುರಪಿಪಪ್ಪಳಕಂಗಳಲಿ ಸಿಂ । ಗಾರಗಳು ಸೀವರ್ಣಸದೃಶಂ । ದೋರಣಿಸಿದ
ರು ಸಾಲಶೋಭಿತಸಿಂಹಪೀಠದಲಿ ॥೫॥ ಕೌರವರು ಯಾದವರು ಸಹಿತ । ಧಾರುಣೀಕ್ಷತ್ರಿಯರ ವಂಶಾವ
ವೀರಪಾರ್ಥಿವ ವಿತತಿ ಕುಳ್ಳಿರ್ದುದು ಮಹಾಸ್ಥಾನದಲಿ ॥ ಶಾರದೋದರ ಸೂಕ್ತಿ ಮಂತ್ರಿಕು । ಮಾರಚಾಪಾರಿಪು
ಡಪದೊಳಿಪ್ಪರು । ವಾರ ಬಳಸಿತು ಪೊಬ್ಬಿ ದೊಬ್ಬರ ಸಾಮ್ರಾಜ್ಯದಲ ॥೬॥ ಅಂತರಿಯದು ಪಾರ್ಥಿವರ ವಿ
ಭವಾ । ಲಂಕೃತಿಯ ನವನೀನಸಸ್ನೇಹ । ವಂ ಕಹಿಸು ಕಳಸನ್ಯ ಲಲಾವಪನಗೆ ತಸಗನುತ ॥ ಶಂಕರಾ
ರಿಯ ಮಕೆವಲಗು ಮಹಾ । ರಾಂಕವಸ್ಸಿನ ಪಂಕಯುಂಕೆಯ । ಪಿಂಕವನು ಪಿಸ್ತರಿಸುವೆನು ನರನಾಥ
ಕೇಳೆಂದ ॥೭॥ ತರಿಸು ಧನುವನು ಯಂತ್ರ ಪನ್ನಾಪ । ನಿಲಿಸು ತಳದ ದೆತಂಗಿಯನಲಂ । ಕರಿಸು
ದಂಡಿಗೆಯಿಂದ ತಾ ಕೋಲಿಸು ಮುಖೇಶ್ವರರ ॥ ಪರನ ಪಸಲಿ ಲಗ್ನ ಪಿಪವ । ಕ್ತ್ರಿರೆಯೆನುತ ಪಾಂ
ಚಾಲಭೂಪತಿ । ಕರೆದು ಧೃಷ್ಟದ್ಯುಮ್ನನನು ಪಸಸಿದನು ಬೇಗದಲಿ ॥೮॥ ಅರಸನಾಜ್ಞೆಯ ಮೇಲೆ
ಶತಸಾ । ವಿರನಿತಂಬಿನಿಯರು ಕುಮಾರಿಯ । ಹೊರಗೆ ಬಂದರು ತಿಗುಂದರು ಕುಂಕುಮದಲ
ವಯವವ ॥ ಅರಸಿ ಮಜ್ಜನಮಾಡಿ ಸೋತನ । ಪರಿಮಳಾಂಬುಲಮಲ್ಲಿಟ ನಯಯರ । ಕರವನೆಲಿನುಗ್ಗ ಪಣ್ಣೆ
ಯಲಿ ಬಂದಳು ನಿಜಾಲಯಕೆ ॥೯॥ ಹೊರೆಯ ಸಖಿಯರ ಸೋಗ ಸ್ಸೆಯಲಿ । ತರದ ಒಳಲದ ಚಿತ್ರ
ವೀಕೆಯ । ಧರಿಸಿ ಕುಸಿಯದು ಕೆಸಿಗೆಗೆ ಸುತ್ತಲಿಯ ನಸುಕಸದ ॥ ಅಲಂಕಿಯಾಗದು ನಾಸಿಕದ ಪ್ರಿ
ಪರಿಮಳದ ಪೂರದಲಿ ಗಂಧಾಂ । ತರಕೆ ನರಿಯದು ರೂಪಸೀನೆಂಬೆನು ನಿತಂಬಿನಿಯ ॥೧೦॥ ಮೊಲೆ
ಗಳಲಿ ಸಿಲುಕಿದೊಡೆ ನೋಟಕೆ । ಬಳಿಕ ಪುನರಾವೃತ್ತಿಯೇ ಕಂ । ಗಳಿಗೆ ಕಾಣಿಸಿದರಯು ನಿಮಿಷಕೆ
ಸಮಯವೆಲ್ಲಿಹುದು ॥ ಲಲಿತಸ್ಫಟಿಕಾಂತಿಗಳೊಳಪ್ಪರ । ಮುಳಗಿ ತೆಗವವರಾರು ಜಘನ । ಸ್ಥಳಕೆ ಮುರಿ
ದರೆ ಮರಳದಲೆ ಕಂಗಳಿಗೆ ಹುಸಿಯೆಂದ ॥೧೧॥ ಹೊಲಬುಗೆಡದೇ ಹೋಪವಕ್ಷ । ಸ್ಥಳದೊಳಗೆ ಜನ
ದೃಷ್ಟಿ ನಳಿತೋ । ಳ್ಗಳಲಿ ಸಿಕ್ಕಿ ಗುರೋಳಿಯಲಿ ಬಂದಳದ ಬೋಧೆಯಲಿ ॥ ಸುಳಿದೊಡಲ್ಲಿಯೆ ನಿಲ್ಲ
ವು ದಶನಾ । ವಳಿಯ ಬಿಂಬಾಧರದ ಕದಪಿನ । ಚೆಲುವಿಕೆಗೆ ನರರಾಲಿ ನೆರೆಯವು ನೃಪತಿ ಕೇಳೆಂದ ॥೧೨॥
ಅಸಿಯನಡುವಿನ ನಿಮ್ನನಾಭಿಯ । ಮಸಣಬಾಹೆಯ ತೋರಮೊಲೆಗಳ । ಮಿಸುಪ ತೊಡೆಗಳ ಜಾನು
ಜಂಘೆಯ ಚರಣಪಲ್ಲವದ ॥ ಎಸಳುಗಂಗಳ ತೊಳಗಿ ಬೆಳಗುವ । ಮುಸುಪಕಾಂತಿಯ ಮುಖದ ಕುರು
ಳಿನ । ಬಿಸಬಗಂಗಿಯ ರೂಪನಭಿವರ್ಣಿಸುವೊಡಾರೆಂದ ॥೧೩॥ ಪೊಸಪೊಡೆ ಕತ್ತುರಿ ಜವಾಜಿಗಳ ಸಲೇ
ಪರಿಮಳವು ಪೊಸದೆ । ಸೂಸಿ ದೆಸೆ ಕಂಪಿಸುತ ಮಸುಗುವ ಸುವಳಯೊಜನವ ॥ ಈ ಸಮಸ್ತವು
ನುಪ್ಪಥವರ್ಣದ । ದೋಷಗಳಿಗಿತಥಾತುಗಳ ಪಿ । ನ್ಯಾಸನೋ ವಸ್ತುಪಟಿಯ ಭಾವದ ಭಂಗಿ ಬೇರೆಂದ
॥೧೪॥ ಬೆರಳ ಚೆಲ್ವಿಕೆಯಿಂದ ಮುದ್ರಿಕೆ । ಸಿರಿಯ ಪಾದಗಸೆಪುರಂಗಳು । ಕರಚರಣಸೌಂದರ್ಯದ
ಲಿ ಬಲುಮೊಲೆಯ ಡಾಳದಲಿ ॥ ಕೊರಳ ಮುತ್ತಿನ ಹಾರಸುಮನೋ । ಹರದ ಕದಪುಗಳಿಂದ ಕರ್ಣಾ ।
ಭರಣ ಮೊಪ್ಪಿದವೇನನೆಂಬೆನು ರೂಪನಂಗನೆಯಾ ॥೧೫॥ ಎನಪಧರರಾಗದಲಿ ಮಿಗೆ ರಂ । ಜಿಸುವವೋ
ಲ್ಮಾಣಿಕ್ಯಮೆರೆದವು । ದಶನದ್ಯುತಿಯಿಂದ ಥಳಥಳಿಸಿದವು ಮುತ್ತುಗಳು ॥ ಮಿಸುಪದೇಹಚ್ಛವಿಗಳಲಿ
ಡಾ । ಳಿಸುವವೋಲ್ಭೂಷಣದ ಹೇಮ । ಪ್ರಸರ ಪಿಂದವು ತೊಗಲ್ಪಕಪಿಯಾರಭ್ಯ[illegible]ಚನೆಯ
॥೧೬॥ ಪರಿಮಳದ ಪರಮಾಣುಗಳ ಸಂ । ವಲಿಸಿ ಮುಕ್ತಾಫಲದ ಕೆಂಪಾ । ವರೆಯ ಮರಿದುಂಬಿಗಳ

ವರ್ಣಾಂತರವನಳವಡಿಸಿ ॥ ಸರಸಿರುಹಾಕ್ಷಿಯ ಗಾಂಭೀರ್ಯ । ಗಮನಗಳನಾಯ್ದು ಪರಿಷ್ಕರಿಸಿ ವರ
ವಿರಿಂಚಿಯೆ ಸೃಜಿಸಿದನು ಪಾಂಚಾಲನಂದನೆಯ ॥೧೭॥ ಸರಸಿಜಾನನದ್ಯುತಿಯುತನು । ಸರಸಿಯಲಿ
ಮುಳುಗಿದರೆಯಕ್ಷಿಗಳ । ಕುಚ ಕುಂಭಸ್ಥಳವೊ ಪುಷ್ಪದ ಸರಸ್ಸುಯವೊ ॥ ತರಳನಯನವೊ ಶ
ಫರಗಳೊ ತಾ । ಪರಿಚರ ಮುಕುರವೋ ಕೆಂಪಿನ ನಖವೊ । ಗುರುಳುಗಳೊ ಮಾಗಣವೊ ರದನವೊ
ಚಿತ್ರವಾಯ್ತೆಂದ ॥೧೮॥ ರಾಜಸೂಯದ ವಹ್ನಿಯಲ್ಲಿ । ರಾಜಪಾಂಡವರಾಯ್ದು ಮುಡಿಪಿದು ।
ರಾಜರಾಜನ ಪ್ರೋಲ್ಲದ ಕಾಪಿನ್ ... । ರಾಜಸೂಯ್ಯನವರ ... । ರಾಜಿಸಾಯ್ತು ತ
ಮಾಲಪತ್ರವಿ । ರಾಜತವ ಬನಸೀಯಕ್ಕಿಪಾಲಕ ಶಿಂದ ॥೧೯॥ ಬನಕ ಕೇಳು ಪಾಂಚಾಲ ಕನ್ಯಾಂಜನ ।
ವೆನೆ ಚಿತಾಕ್ಷ ಪ್ರಿಯವಾದವು । ವಿಮತಕಾರಿಗಳು ... ಸ್ವಸ್ಥವಿರದಲಿ ॥ ... ನಿದಂಬನಕಾರಕಾ
ಮಂ । ತನ ಕಪಟ್ರತಕಮಾಡಿದ ... । ... ಪ್ರಾಪ್ತಿಸದ ವರಪಾಂಚಾಲನಂದನೆಯ ॥೨೦॥
ಏನನೆಂಬೆನು ಮಾನಿನಿಯ ನಡೆ । ಮಾನಿಯನು ... ರತ್ನ ಸಿಂಹಾಸನನು ಟಿಪ್ಪಣಿವನಂಗ ಮಂತ್ರ
ಸೂತ್ರಕವ॥ ಮಾನಿನಿಯ ... ಮನು ಕುಚಾಗ್ರ ... ಮನಸಿನ್ನು ... ಮಾಳಿಗೆಯ ಮೋಹ
ನಪಸ್ಯಚಿತ್ರಕವ ॥೨೧॥ ನಾರಿಯನು ಸಂಸಾರ ... । ನಾರಿಯನು ಜನಪಯನಕಾರ । ನಾರಿಯನು
ಮುನಿಪ್ರಿಯ ಸರ್ವಸ್ವಹಾರಿಯನು ॥ ... ಗೆ ಮಾರಾಂಕವನು ವರ । ಪಾರಿಕಾಂಕ್ಷಿಯ ಚಿತ್ತಚಾ
ರ್ಯನಿ । ನಾರಿಯನು ದ್ರೌಪದಿಯನಭಿಮಾನಸೃಷ್ಟಿಸಿದಂದ ॥೨೨॥ ನಳಿನಮುಖಿಯರ ಸಕಲಸೃಷ್ಟಿ
ಗೆ । ... ಸೌಂದರ್ಯವನು । ... ರತಿಪತಿ ವರ್ಣ್ಯಕೋಶವಿದು ॥ ಲಲನೆಯರ
ಸೀಮಂತಮಣಿ ಜಗ । ದೊಳಗೆ ... । ... ಸೃಷ್ಟಿಯೆನಲು ಮೆರೆವುದು
ರೂಪವಂಗನೆಯ ॥೨೩॥ ಹೊಳೆಹೊಳೆ ... । ಪೆಳಿಯ ... ತನ್ನೊಳಿರುಚಿಯ । ಮು
ಕ್ಕುಳಿಸಿತಂಗಚ್ಛವಿ ತಪಂಗಳ ... ॥ ... ಪದ ಮುಖಮಂ । ಪಲವ
ಕಾಂತಿಯನೊದೆದು ... । ಬೆಳಗು ... ನಿತಂಬನಿಯ ॥೨೪॥ ಕಂಗಳಲಿ ಕು
ಡಿ ಮೇಳಪುಬ್ಬಿನ । ಹೊಂಗನಲಿ ... । ಭಂಗಿಯಲಿ ಪತಿಕರಣ ಸಕಲಸುಖೀಕರದಂಬದಲಿ॥
ಇಂಗಿತದ ಬಿರುಮುಗುಳ ಕಿರುಮುಳ । ವಂಗಹಾರದ ... । ಭಂಗಿಗಳು ... ಲಲಿತಾದಿಗ
ಳು ದ್ರೌಪದಿಯ ॥೨೫॥ ವರವಸಂತನ ... । ಬಿರುಮುಗುಳು ... ಸಿಗಳ ನಯ ।
ಸರದ ದನಿ ಕಲಕಳಭಲೀಲೆ ನವೀಕ್ಷುರಸಧಾರೆ ॥ ... ಸನೊಗರ ... ನ । ಸಿರಿಯ ಜೋಡ
ಣೆ ಜನಮನವನಾ । ವರಿಸಿದುದು ನಿಪ್ಪಸರದಲಿ ಪಾಂಚಾಲನಂದನೆಯ ॥೨೬॥ ಆರತಿಗಳೆತ್ತಿದರು ಬಳಿ
ಕು । ಪ್ಪಾರತಿಯ ಹಾಯ್ಕಿದರು ಮುತ್ತಿನ । ... ಸೂಸಿ ಹರಸಿ ಸುವಾಸಿನೀನಿಕರ ॥ ಚಾರು
ಮುಕುರವ ನೋಡಿ ನಿಂದಳು । ಭಾರತಿಯ ಗದುಮಾಯಿಯಲಿ ಜಂ । ಬೀರಫಲವನು ಕೊಂಡಳಂಗನೆ
ವಿಪ್ರಮಂತ್ರದಲಿ ॥೨೭॥ ಮುಂದೆ ... ಸಖಿಯರ । ಸಂದಣಿಯ ಸಾಲಿನಲಿ ದಂಡಿಗೆ । ಗಿಂ
ದುಮುಖಿ ಬಂದಳು ಸಿತಾಬ್ಜಕೆ ಲಕ್ಷ್ಮಿಯಂದದಲಿ ॥ ಹಿಂದೆ ಮುಂದಿಕ್ಕೆಲವನಾರಿ । ವೃಂದ ನೆರೆದುದು
ವೀರಪಟ್ಟಹದ । ದುಂದುಭಿಯ ಪಂಚಿಂದ ರವವಳ್ಳಿ ... ದುಂದುಭಿರವ ॥ ... ಮುಸುಕಿದವು ನವು ।
ಪಾಳಿಯಲಿ ಸೀಗುರಿಗಳಾಡಿದವು । ಪಾಲಿಯುವಗಾಹಿಸನು ಸೆಲನೆನಿ ತನಿಶುವಳಯದಲಿ ॥ ಬಾಲೆಯುರದ ಷಣುಗು

ದೆಯರನತಿಘಾ । ತಾಳಿಯರ ಕಡೆಗಣ್ಣ ತಾಳದ । ಬಾಲೆಯರ ಚಮರಿಯರ ನಲ್ಲದೆ ಕಾಣೆನಾನೆಂದ ॥
ನಿರಿದಲೆಯ ಚೊಲ್ಲೆಯದ ತುಂಬಿಯ । ಮುಂಗುರುಳ ಬೈತಲೆಯ ಮುತ್ತಿನ । ಹೆರೆನೊಸಲ ನಿಡುಹು
ಬ್ಬುಗಳ ಡಾಳಿಸುವಕದಪುಗಳ ॥ ತುರುಗೆವೆಯ ನಿಟ್ಟೆಸಳುಗಂಗಳ । ಮೆರೆವಸುಲಿಪಲ್ಲುಗಳೆಸೆವನು ।
ಣ್ಗೊರಳ ನಳಿತೋಳುಗಳ ನೀರೆಯರೈದಿತೊಗ್ಗಿನಲಿ ॥೩೦॥ ತೋರಮೊಲೆಗಳ ನಲಿವನತುಪ್ಪೊರ । ವಾ
ರಗಳ ನುಣ್ಗೊಡೆಯ ಕಿರುದೊಡೆ । ಯೋರಣದ ಹಾವುಗೆಯ ಪಜ್ಜೆಯ ಹಂಸೆಗಳ ಗತಿಯ ॥ ನೀರೆ
ಯರ ಮೈಗಂಪುಗಳ ತನಿ । ಸೂರೆಗೊಳಸುವ ತುಂಬಿಗಳ ಝೇಂಕಾರಗಳ ಕಡುಗರುವೆಯರು ನೆರೆದುದು ಸಖೀ
ನಿವಹ ॥೩೧॥ ಕೀಲಕಡಗದ ವಜ್ರಲಹರಿಯ । ಜೋಲೆಯದ [illegible] ರವೆಯದ । ತೋಳಬಂದಿಯ
ಕೊರಳ ತಿಸರದ ಬೆರಳ ಮುದ್ರಿಕೆಯ ॥ ನೀಲರತುನದ ಪದಕಮಾಣಿಕ । ದೋಲೆಗಳ ಮಾಂಗತಿಯ
ಮುತ್ತಿನ । ಮೇಲುಶೃಂಗಾರದ ಸಖೀಜನ ಸಂದಣಿಸಿತಲ್ಲಿ ॥೩೨॥ ಪಿಲಕದೇಕಾವಳಿಯ ಮುತ್ತಿನ । ತಿಲಕ
ಸೂಡಗಪಾಯವಟ್ಟದ । ಲಲಿತಬಂಧದ ವಜ್ರಲಹರಿಯ ತಾರಕಾವಳಿಯ ॥ ಹೊಳೆವ ಕಾಂಚಿಯ
ಕಿಂಕಿಣಿಯ ಸಂ । ಕುಲದ ನೇವುರವೀರಮುದ್ರಾ । ವಳಿಯ ಚರಣಾಭರಣದಬಲೆಯರೈದಿತೊಗ್ಗಿನಲಿ
॥೩೩॥ ಭ್ರೂಲತೆಯ ಬಿಲುಗಳ ಕಟಾಕ್ಷದ । ಕೋಲುಮೊದೆಗಳ ಬಾಹುಗಳ ಕರ । ವಾಳಿಗಳ ಕತ್ತುರಿಯತಿ
ಲಕದ ಹರಿಗೆಹಲಗೆಗಳ ॥ ತೋಳುಗಳಲೌಡಿಗಳ ಸೆಳ್ಳುಗು । ರೋಳಿಗಳ ಸುರಗಿಗಳ ಮಸ್ತಕ । ನಾಳು
ನಡೆದುದು ದ್ರೌಪದಿಯ ದಂಡಿಗೆಯ ಬಳಿಸಿವಲಿ ॥೩೪॥ ತೋರಮೊಲೆಗಳ ದಂತಿಘಟೆಗಳ । ಚಾರುಜ
ಘನದ ಜೋಡಿಸಿದಹೊಂ । ದೇರುಗಳ ಸುಳಿಗುರುಳುಗಳ ಜಲ್ಲರಿಯರುಥಾಡಿಗಳ ॥ ಚಾರುನಯನದಚಪಲಗ
ತಿಗಳ । ವಾರುವಂಗಳ ಮೇಲುವಸನದ । ಸಾರಸಿಂಧದ ಸೇನೆ ನಡೆದುದು ಸತಿಯಬಳಿಸಿವಲಿ ॥೩೫॥ ಯ
ತಿಗಳಿಗೆ ಮೊನೆದೋರು ತಣಸನು । ವ್ರತಿಗಳಿಗೆ ಪೀರುತ ಸಮಾಧಿ । ಸ್ಥಿತರಮೂಗನಮೇಳಿಡಾಯುಧಧಾ
ರೆಗಳನೆಳೆದು ॥ ಶ್ರುತಿವಿಹಿತಸತ್ಕರ್ಮಿಗಳ ಟೀ । ಕ್ಷಿತರಮತಿಯಲಿ ತವಮುದ್ರಾಂ । ಕಿತವನಾತ್ಮತ್ರ
ವಿಹಾರಿ ನಡೆದುದು ಯುವತಿಜನಕಟಕ ॥೩೬॥ ಆರು ನಿಲುವರು ಸಮ್ಮುಖಕೆ ಮದ । ನಾರಿಯದಂಡನಾರಿ
ಹರಿತಾ । ಹೇರುರದಹೆಂಗುಸುರೆ ಬೊಮ್ಮನು ಮಗಳ ಮೊರೆಗೇಡಿ ॥ ಘೋರವದು ಸುರಪತಿಯ ಕಥೆ ಮೈ
ಯಾರೆ ಹೊತ್ತನು ಮದನಮುದ್ರಾ । ಧಾರಿಯೆಂಬವ್ರೊಲೊದರುದುವು ಮುಂಗುಡಿಯ ಕಹಳೆಗಳು ॥೩೭॥
ಪಸರಿಸಿತು ತಂಬೆಲರು ಬೀತುದು । ಬಿಸಿಲ ಬಿಂಕ ಸರೋಜಸಂತತಿ । ಮಸುಳಿದುವು ಮದವೇರಿ ಮೆರೆದುವು
ತಾರಕಾನಿವಹ ॥ ಒಸರಿದವು ಶಶಿಕಾಂತ ನೃಪಲ । ಹಸರ ಹಂದುದು ಚಕ್ರವಾಕದ । ಬೆಸುಗೆ ಸಡಿಲಿತು
ಚಾರುಚಂದ್ರಾನನೆಯ ಬರವಿನಲಿ ॥೩೮॥ ಹೊಳೆವಕಂಗಳ ಬೆಳಗಿನಲಿ ಕ । ತ್ತಲಿಸಿದವು ಕಾಮುಕರ
ಮುಖ ತನು । ವಳಯಕಾಂತಿಯ ತಂಪಿನಲಿ ಬಾಡಿದವು ಬುದ್ಧಿಗಳು ॥ ಒಲಿದವಿಭ್ರಮದಿಂದಹಂಕೃತಿ ।
ತಿಲೆಗಳೊಡೆದುವು ಮೋಹನದ ಹೊ । ಯ್ಲೊಳಗಹೊಳೆವಡಗಿದುವು ಚಿತ್ತ ಮಹಾಮುನೀಶ್ವರರ ॥ ತ
ರುಣಿಯರ ನವನೀಲಮಣಿಗಳ । ಕುರುಳ ಕಬರಿಯ ಭರದವರಕ । ತ್ತುರಿಯತಿಲಕವಕಾಳಿಕೆಯಘನಕಾಂ
ತಿಲಹರಿಗಳ ॥ ಕೊರಳಹಾರದ ಕರ್ಣಪೂರದ । ಸರದ ಮೌಕ್ತಿಕರುಚಿಯ ಯಮುನಾ । ಸುರನದಿ
ಯ ಸಂಗದಲಿ ಮುಳುಗಿತು ಸಕಲನೃಪನಿಕರ ॥೪೦॥ ಪರಿಮಳಕೆ ಮಿಗೆ ಕವಿವತುಂಬಿಗೆ । ಕೆರಳುವರು
ಹುಬ್ಬಿನಲಿ ಪದನೇ । ವುರದನುಣ್ದನಿಗೆಳಸಿ ಮುತ್ತುವರಾಜಹಂಸೆಗಳ ॥ ಹೊರೆಯ ಕೆಳದಿಗೆ ದೂರುವ

ರತ್ನ । ಯರಗಿಳಿಗೆ ತಮ್ಮ ಧರೆಬಿಂಬದ । ಮುರಿವರಿದು ಮುಖದಿರುಹುವರು ಮುಗ್ಧಾಂಗನಾನಿವಹ
॥೪೧॥ ಕಂಗಳೋರೆಯ ತಾಳಿಸುವ ಹಾ । ಸಂಗಿಗಳ ಬಿಗುಹಿನ ದುಹಾರದ । ಭಂಗಿಗಳ ಬಲುವಿಟರ ಕರ
ಣಪಸಾರಂಗಳ ಸರೆಯ ॥ ಮುಂಗುಡಿಯ ನಿಜಸಾರಿಯರ ಕಪಿ । ವಂಗವಣಿಗಳ ಜೂಜುಗಾತಿಯ ।
ರಂಗನೆಯ ಪಂಡಿಗೆಯ ಬಳಿಹಿಡಿದಿಪರು ಪಿದಗ್ಧೆಯರು ॥೪೨॥ ಹಾವುಗೆಯ ಸೀಗುರಿಯ ಪರಚಮು । ದಾ
ವಳಿಯ ಕರ್ಪೂರರಗಂಧಪ । ಹೂವುಗಳ ಕತ್ತುರಿಯ ಸಾಪುಜವಾಜಿಕುಂಕುಮದ ॥ ಶ್ರೀವಿಪನುಪವುಭಾ
ಜನಸ್ವಜ । ಸಾವಳಿಯ ಕನ್ನಡಿಯ ಪಿಪಿಧಸ । ಶ್ರೀಪಿಳಾಸಿನಿಯರ ಕದಂಬಕಸ್ಪೈಟತೊಗ್ಗಿಸಲಿ ॥೪೩॥ ಧರ
ಣಿಪತಿ ಕೇಳಖಿಳಪೃಥ್ವೀ । ಶ್ವರರ ಬಹಳಾಸ್ಥಾನವಲಿ ಮೋ । ಹಿಸಿವರು ಮೋಹನದ ಮೋಡಾಮೋ
ಡಿಯಬಲೆಯರು ॥ ಅರಸುಗಳ ನಿಟ್ಟುನೋಟದಲ್ಲಿಯ । ಗರುವೆಯರ ನಸುನೋಟ ತಪ್ಪೊಳು । ಬೆರಸಿಕೊ
ಳ್ಳದಿದುವು ಪಾಡಾಪಾಡಿಯಂದದಲಿ ॥ ದಾಯ ತಪ್ಪಿತು ಗರುವರಾಟ ಪಿ । ದಾಯಗೆಟ್ಟಿತು ಖಟರ ನೋ
ಟ ನವಾಯಿಕಾರರ ಕೂಟ ಕುಸಿದುದು ಮದನ ಶರಹತಿಗೆ । ಗಾಯವಡೆದುದು ಷ್ಣತಿಯ ಘಾಟ ನವಾಯಿ
ಹೆಚ್ಚಿತು ಮತ್ತೆ ಬೇಟ ವದಾಯತಾಕ್ಷಿಯ ಕೂಟಕೆಳಸುವಚದುರಭೂಪರ ॥೪೫॥ ಕೆಲಕಡೆಯ ಕೆಳೆದಿ
ಯರ ಕಂಗಳುಹೊಳಹ ದುವ್ವಾಳಿಯಲಿ ಸುಮುಕ್ರಿಸ್ತಲಿತಕಂಧೂಳಿಯಲಿ ಪಾಸಿತು ಮನದ ಮಡಿವರ್ಗ ॥
ಬಳಿಗೆಹೊತ್ತುವಡಗೆಯ ಹೊರಗಣ । ತಳಿತಬಿಮ್ಮಿನನಗೆಯ ನೃಪ ಮಂ । ಡಲದ ಮ್ರಾಳಿಯನೇನನೆಂ
ಬೆನು ರಾಯಕೇಳೆಂದ ॥೪೬॥ ಚೆಲುವಿಕೆಯಚ್ಚೈತನ್ಯವೋ ಪರಿ । ಮಳದ ಪುತ್ತಳಿಯೋ ಲತಾಂಗಿಯ ।
ಸುಳಿವೊ ಲಾವಣ್ಯೈಕರಸಸಾಕಾರವಿಭ್ರಮವೋ ॥ ಲಲಿತಶೃಂಗಾರಾಬ್ಧಿಮಥನೋ । ಚ್ಚಲಿತಸುಧೆಯೋ
ಸಾಧಕರಿಗಿದು । ಫಲಿಸಿದೊಡೆ ಕೃತಕೃತ್ಯರಿವರೆಂದುದು ಸುರಕ್ಷೋಣಿಪ ॥ ಈಕೆಯಿಂದುಜನಿಸಿದೊಡೆ ಮದ
ನಂ । ಗೇಕೆ ದೇಹತ್ಯಾಗವಹುದು ಪಿ । ನಾಕಿ ತಾ ವೈರಾಗ್ಯದಲಿ ಹೊಗುವನೆ ತಪೋವನವ ॥ ನಾಕು
ಗೌತಮಮುನಿಯ ಮುಳಿಸಿನ । ಕಾಕುನುಡಿ ಫಲಿಸುವುದೆ ಯೆನುತಾ । ನಾಕಪತಿ ರಂಭಾದಿಸತಿಯರ ನೋ
ಡಿದನು ನಗುತ ॥೪೮॥ ತಂದರಾಪಾಂಚಾಲೆಯನು ಹೊ । ನ್ನಂದಣದಲಾಸ್ಥಾನಸೀಮೆಗೆ । ಮುಂದೆ
ಸಿಂಹಾಸನದ ನಾಲವುಸಾವುಧ್ಯೇಶ್ವರರ ॥ ನಂದಣಿಯಲವರವರನಿವಳ । ಕಂದು ತಿಳುಹಸಬೇಕೆನು
ತ ನೃಪ । ನಂದನನು ಹೊದ್ದಿದನು ಕಮಲಾನನೆಯ ಪಂಡಿಗೆಯ ॥೪೯॥ ತಂಗಿ ನೋಡಾ ತಾಯೆ ನಿ
ನ್ನಯ । ಕಂಗಳೊಲಿದವರ ಚಿತ್ತವಾರ್ಥಿ ತ । ರಂಗದಲಿ ತೂಗುವರ ತೋರುವೆನವನಿಪಾಲಕರ ॥ ಇಂ
ಗಿತದ ಲವರಂತರಂಗವ । ನಂಗವಟ್ಟದ ಒಳಕೆಯನು ಬಿಡಿ । ರಂಗದಲಿ ನಿಲಿಸುಯೆನುತ ನುಡಿದ
ನು ನಿಜಾನುಜೆಗೆ ॥೫೦॥ ಈತ ದುರ್ಯೋಧನವಹೀಶ್ವರ । ನೀತ ದುಶ್ಶಾಸನನು ದುರ್ಜಯ । ನೀತ
ದುಶ್ಶಳನೀತ ವಿಸ್ಸಹನೀತ ಚಿತ್ರರಥ ॥ ಈತಪುರ್ವಣನೀತ ಚಿತ್ರಕ । ನೀತಗಳು ಕುರುವಂಶದಲಿ ವಿ ।
ಖ್ಯಾತರಬಲೆ ನಿರೀಕ್ಷಿಸು ಧೃತರಾಷ್ಟ್ರನಂದನರ ॥೫೧॥ ನೋಡಳವರನು ನುಡಿಸಳೀತನ । ಕೂಡೆ ಭಾ
ವದೊಳಿವರ ಕೊಡಳು । ಡಾಡಿದಳಲಾ ಯೆನುತ ಧೃಷ್ಟದ್ಯುಮ್ನ ನಸುನಗುತ ॥ ನೋಡು ತಂಗಿ ವಿರಾ
ಟನುತ್ತರ । ಗೂಡಿ ಕೀಚಕರನು ಶ್ರುತಾಯುಧ । ಮೂಡಣರಸುಗಳನು ರವಿಧ್ವಜರೋಚಮಾನಕರ
॥೫೨॥ ನೀಲಚಿತ್ರಾಯುಧನು ದಕ್ಷಿಣ । ಚೋಳಕೇರಳಪಾಂಡ್ಯಧರಣೀ । ಪಾಲಕರೊಳೀಚಂದ್ರಸೇನಸ
ಮುದ್ರಸೇನಕರು ॥ ಲೋಲನಯನೆ ಕಳಿಂಗಧರಣೀ । ಪಾಲನೀತನು ಚೇಕಿತಾನನ್ನ । ಪಾಲನೀತನು ಭಾನು

ದತ್ತನವನೀಶನೋಡೆಂದ ॥ ಇತ್ತಲೀಕ್ಷಿಸು ಪೌಂಡ್ರಕನ ಭಗದತ್ತನನು ಕಾಂಭೋಜನನು ಪರದತ್ತನನು
ವರಹಂಸಡಿಬಿಕರ ಮಾದ್ರಭೂಪತಿಯ ॥ ಇತ್ತಲು ಜರಾಸಂಧಮಣಿಮಾನಿತ್ತ ಸಹದೇವನು ಬೃಹದ್ರಥ।
ನಿತ್ತಲೀತನು ದಂಡಧಾರಕನೃಪನು ನೋಡೆಂದ ॥ ಭೂರಿಭೂರಿಶ್ರವಸು ದಕ್ಷಿಣ। ವೀರಬಾಹ್ಲಿಕ ವಿಂದ
ಚಿತ್ರರಥ । ಗೀರಥನು ನೃಪವರಜಯದ್ರಥ ಶಿಬಿಶ್ರುತಾಯುಧರು ॥ ವೀರವೃದ್ಧಕ್ಷತ್ರ ಸೃಂಜಯ । ಚಾರ
ಭುಜಬಲಸೋಮದತ್ತನು । ವೀರವರ್ಣಾವಂತ್ತಲಿದೆ ತರಳಾಕ್ಷಿ ನೋಡೆಂದ ॥೩೫॥ ಈತ ರುಕ್ಮಾಂಗ
ದ ಜಯದ್ಬಲ । ನೀತ ಶ್ರುತಸೇನಚ್ಯುತಾಯುಧ । ಈತಗಳು ನಿಯತಾಯು ದೀರ್ಘೋದರಮಹೋದ
ರರು ॥ ಈತ ಮಹೀಷಾತ್ಮಜನು ವಿ । ಖ್ಯಾತಶಿಶುಪಾಲನು ಮಹಾಬಲ । ನೀತನಶ್ವತ್ಥಾಮ ಮಹಾಬಲ
ನೀತ ನೋಡೆಂದ ॥೩೬॥ ಭೂತಳದ ರವಿಯಂತೆ ಹೊಳೆಹೊಳೆ । ವಾತ ಕರ್ಣನು ತನುಜರೀತಂ । ಗೀ
ತಗಳು ವೃಷಸೇನನಗ್ಗದ ಚಿತ್ರಸೇನಕರು ॥ ಈತನಾಹನೆ ನೋಡೆನಲು ಭಾ । ವಾತಿಶಯಸಂಬಂಧಭಾ
ವದೊ । ಳೀತನನು ನೋಡುವಳು ತಿರುಹಿದಳಬಲೆ ಲೋಚನವ ॥೩೭॥ ಉಕ್ಕಿದಾಕಿವಿವೇಚಕಂ ಬೇ । ಟ
ಕ್ಕೆತಂದುದು ಕಂಗಳೀಕೆಯ । ಮುಕ್ಕುಳಿಸಿ ಮೈಸೋಂಕಿನಲಿ ಲಟಕಟಿಸಿದುದು ಹೃದಯ ॥ ಸಿಕ್ಕಿತಳಲಿಗೆ
ಸೋತು ಸೊಕ್ಕಿನ । ಚಿಕ್ಕಯೋ ಚಾಪಳವೊ ಸಿದ್ಧಿಯೊ । ಅಕ್ಕಜವು ತಾನೆನುತ ಚಿಂತಿಸಿತಾನೃಪವ್ರಾ
ತ ॥೩೮॥ ಇತ್ತ ನೋಡ್ ತಂಗಿ ಯದುಭೂ । ಪೋತ್ತಮನನವರಾಟಕವಳೀ । ಮತ್ತದಂತಿಯ ನಿ
ಖಿಳನಿಗಮಾವಳಿಶಿರೋಮಣಿಯ ॥ ಉತ್ತರೋತ್ತರರಮ್ಯಮೂರ್ತಿಯ । ನುತ್ತಮಾಮಲಕೀರ್ತಿಯನು
ಮನ । ದತ್ತು ನೋಡೆಸಖಿ ವಿಲ್ಲಕೃಷ್ಣನವಸನೀನೆಂದ ॥೩೯॥ ಮದನನಯ್ಯನು ಮೂಜಗವಮಾ । ಡಿದ
ನ ತಾತನು ರೂಪವಿಭವವ । ನಿದರೊಳಗೆ ನೀ ನೋಡುಕೋ ಯಾದವಶಿರೋಮಣಿಯ ॥ ಸುಗತಿಯರ
ಸೇರುವೆಗಳನು ನೋಡಿದೊಡೆ ಧಾರಿಣಿಲಕ್ಷ್ಮಿಕೃಷ್ಣನ । ಪದಯುಗವನೋಲೈಸುತಿಹರಬುಜಾಕ್ಷಿಕೇಳೆಂದ
॥೪೦॥ ಎನಲು ಬಕುತಿಯ ಭಾವರಸದಲಿ ನೆನೆದು ಹೊಂಪುಳಿವೋಗಿ ರೋಮಾಂ । ಚನದ ಮೈಯ್ಯಬ್ಧಿ
ನಲಿ ತನುಪುಳಕಾಂಬುಪೂರದಲಿ ॥ ಮನದೊಳಗೆ ವಂದಿಸಿದಳೆನಗೀ । ತನಲಿ ಗುರುಭಾವನೆಯ ಪ್ರತಿ
ಸಂ । ಜನಿಸಿತೇನೆಂಬೆಯೆನೆಂದಳು ಕಮಲಮುಖಿ ನಗುತ ॥೪೧॥ ಓಟಯನೀಕೃಷ್ಣಂಗೆ ನೀಲಾಂ । ಬರ
ನು ನೋಡಾದೊಡೆ ಮುರಾರಿಯ । ಹಿರಿಯಮಗನನು ಲೋಕಮೂಗರ ಬಂದಿಕಾರನನು ॥ ಹರನ ಕಿತ್ತಿ
ಗೆ ಬಗೆಯನೆಂಬೀ । ಬಿರುದು ಮನುಮಥನೀತನೀತನ । ವರತನುಜನನಿರುದ್ಧನಿದು ಯದುರಾಜಕುಲಪಿಂ
ದ ॥೪೨॥ ಸಾರಣಾ... ಲಿಂಬನೀತನು । ಚಾರುದೇಪಕನೀತನಮಲಾ । ಕ್ರೂರಸತ್ಯಕನೀತ ಸಾತ್ಯಕಿ
ಯಿತ ಕೃತವರ್ಮ ॥ ಸಾರವಾಂಜಸನೀತನೀತವಿ । ಮಾರಣಾಟಸಮಸ್ತಯಾದವ । ವೀರದಸಂಖ್ಯಾ
ತ ಕೃಷ್ಣಕುಮಾರರಿವರೆಂದ ॥ ಜಗವನಿಂದ್ರಿಯಕರ್ಣವಿಷಯಾ । ದಿಗಳನೆಲ್ಲವನೆತ್ತಿ ಮುಖದಲಿ । ತೆಗೆ
ದು ಶ್ರುತಿಶಿರದಮಲತತ್ವವನರಸುವಂದದಲಿ ॥ ಬಗೆಯ ಬಯಕೆಯ ಸೊಗಸುಗರವಾ । ಯಿಗನನರಸು
ತ ಕುಡಿತ್ರಗಣ್ಣಲಿ । ಮೊಗೆದು ನೂಸಿದಳಂಬುಜಾನನೆಯಖಿಲನೃಪಜನವ ॥೪೩॥ ಕೆಲರು ಮಧುರಾಪಾಂ
ಗದಲಿ ಕಂ । ಗಳ ಮರೀಚಿಯ ಬೆಳಗಿನಲಿ ಕೆಲ । ರೆಳನಗೆಯ ಮಿಂಚಿನಲಿ ಸಖಿಯರ ಮೇಳವಾತಿನಲಿ ॥
ಲಲನೆ ನೋಡಿದಳೆಂದು ಸೊಗಸಿನ । ಲೊಲಿವ ಸಖಿಯರಿಗೆಂದಳೆಂದೊಳ । ಗೊಳಗೆ ಬೆರೆತರು ಬಯಲ
ಮಧುವಿನ ಬಾಯ ಸವಿಗಳಲಿ ॥೪೪॥ ಗರುವೆಯಿಂಗಿತವರಿದು ದಂಡಿಗೆ । ಮುರಿದೊಡನೆಯ್ತಂದುದೀ

ಕೆಯ । ನೆರವಿ ಕಳುಹುತ ಕಂಗಳೆಲಿ ಕರಣೇಂದ್ರಿಯಂಗಳಲಿ ॥ ಬಿರಿಯದುಂಬದ ಝೋಂಪಿನಲಿ ಕೇ । ಸ
ರಿಯಹಿತವನಿಳಿಯದಿರ್ದರು । ಧರಣಿಪರು ಮುರವೈರಿಗಂಗಾಸೂನುಹೊರತಾಗಿ ॥೬೬॥ ಮಡಿಸಿದಲೆ
ಬೆರಳೊಳಗೆ ಬಾಯೊಳಗಡಸಿದೆಲೆಬಾಯೊಳಗೆ ಸಚಿವರ । ನುಡಿಯಕೇಳರು ಸುಳಿಯಕಾಣರು ಲೋ
ಚನಾಗ್ರವಲಿ ॥ ಕಡುಮುಳಿದಕಂದರ್ಪಶರವವ । ಗಡಿಸಿ ಕೈಗಳನೋಡಿ ನೃಪರಿವೆ । ಮಿಡುಕದಿರ್ದರು
ಬೆರಳಮೂಗಿನ ಹೊತ್ತುದುಗುಡದಲಿ ॥೬೭॥ ರಾಯನೆಂದನು ಸಕಲಧರಣೀ । ರಾಯರನು ಮನ್ನಿಸ
ದೆಮರಳಿದ । ಳಾಯತಾಕ್ಷಿ ಮಹಾಸ್ವಯಂವರದಲಿ ಮಹಾದೇವಾ ॥ ಜೋಯಿಸರ ಮೋರಗರ ಮೇಳಿ
ಕೆ । ಹೋಯಿತೇ ಹೊಳ್ಳಾಗಿ ಪಾಂಡವ । ರಾಯರನು ತೋರಿಸನೆ ಗದುಗಿನವೀರನಾರಯಣ ॥೬೮॥

ಅಂತು ಸಂಧಿ ೧೩ ಕ್ಕೆ ಪದ ೬೦೩ ಕ್ಕಂ ಮಂಗಳಮಸ್ತು.

ಹದಿನಾಲ್ಕನೆಯ ಸಂಧಿ.

ಸೂಚನೆ॥ ಅಮಿತಮಗೆ ತವಕದಲಿ ಭೂಪರೋ । ತ್ತಮರು ಹೋರಿದು ಬಳಲಿ ಜಾತ ।
ಶ್ರಮರು ಹಿಮ್ಮೆಟ್ಟಿದರು ಗೆಲಿದುದು ಧನುಮಹಾರಥರ ॥

ಕೇಳು ಜನಮೇಜಯನೃಪತಿ ಪಾಂ । ಚಾಲೆ ಪೊಕ್ಕಳು ಭದ್ರಮಂಟಪ । ಸಾಲೆಯನು ಮರಳಿದುದು ಮ
ನ್ಮಥನೊಡ್ಡು ಸತಿಯೊಡನೆ ॥ ಬಾಲೆಯನು ನಿಜರೂಪದರ್ಪದೊ । ಳಾಳಲರಿಯರೆ ಬಾಹುಬಲದಲಿ ।
ಸೋಲಿಸುವೊಡನುವಾಗಿಯೆಂದರು ಹೊಯ್ದುಡಂಗುರವ ॥೧॥ ಇದೆ ಮಹಾಧನು ಬಾಣಪಂಚಕ । ವಿದೆ
ನಭೋಗ್ರದ ಯಂತ್ರಹೊಳವು । ತ್ತಿದೆ ವಿಭಾಡಿಸಿ ಮೆರೆವನಾವನು ಬಾಹುವಿಕ್ರಮವ ॥ ಇದುವೆ
ಕಬ್ಬಿನಬಿಲುಶರಾವಳಿ । ಇದು ಕುಸುಮಮಯಯಂತ್ರವೆಬಲೆಯ । ಹೃದಯವಾತನೆರವಣಿಸಾತನೆಕುಸು
ಮಶರನೆಂದ ॥೨॥ ಎಂದು ಸಾರಿದು ಭಾರಿಧನುವನು । ತಂದು ಧರೆಗಿಳುಹಿದರು ಯಂತ್ರವ । ನಂದವಿ
ಟ್ಟರು ಗಗನದಲಿ ಗವಸಣಿಗೆಗಳನುಗಿದು ॥ ಮುಂದೆ ಕೂರಂಬುಗಳ ಥರಥರ । ದಿಂದ ನಿಲಿಸಿ ಸುಗಂ
ಧದಕ್ಷತೆ । ಯಿಂದ ಪೂಜೆಯ ರಚಿಸಿದರು ವೈದಿಕವಿಧಾನದಲಿ ॥೩॥ ಮಸಗಿದುದು ಬಹುವಾದ್ಯರವನಿ ।
ಪ್ಪಸರದಲಿ ನಿಸ್ಸಾಳತತಿ ಗರ್ಜಿಸಿದುವಾವರ್ಜಿಸುವವ್ರೋಲ್ಫನಯಂತ್ರಭೇಟಿಗಳ ॥ ಬಸಗೆಯಾಟವೊ ಬಿಲ್ಲ
ಹೊಯ್ಲಿನಾಹಸುಗೆಯಾಟವೊ ಗಮವರಿಗೆ ಗಂ । ಗಸೆಯ ಮಾಡಿತು ಚಾಪವಿತ್ತಲು ಭೂಪ ಕೇಳೆಂದ ॥೪॥
ನೆರವಿಯಲಿ ನಾನಾದಿಗಂತದ । ಧರಣಿಪತಿಗಳ ಹಮ್ಮಿಕೆಯಲು । ಬ್ಬರಿಸಿ ಪೊಕ್ಕರು ಬೇರೆಬೇರೊಬ್ಬೊ
ಬ್ಬರುಗವಣಿಸಿ ॥ ಹರಗಿರಿಗೆ ಮುಲುರಕ್ಕಸರು ಮು । ತ್ಸರಿಸುವಂತಾಯ್ತೇನನೆಂಬೆನು । ಧರೆಯ
ಬಿಡದೀಧನು ವಿಭಾಡಿಸಿ ಕೆಡಹಿತವನೀಪರ ॥೫॥ ಹಾರ ಹರಿದುದು ಕರ್ಣಪೂರದ । ಚಾರುಮಣಿಗ
ಳು ಸಡಿಲಿದವು ಪದ । ವೀರನೇವುರ ನೆಗ್ಗಿದವು ಕುಗ್ಗಿದವು ನೆನಹುಗಳು ॥ ನಾರಿಯರ ಕೈ ಹೊ

ಯ್ಲ ನಗೆಯ ನಿ । ಹಾರ ಜಡಿವುದು ಮುಸುಕುದಲೆಯ ಮೆ । ಹೇರವಣಿಗೆಯೊಳೇರಿಸಿ ಸಿಂಹಾಸ
ನವ ಸಾರಿದರು ||೬|| ಮಿಡುಕಬಲ್ಲಧನು ನಮ್ಮ ಜೋಡಿಸಿ । ಕೆಡಹುತಿದನಿನ್ನಾರು ಕೊರಳಲಿ । ತೊ
ಡಿಸಿ ತಿರುವೆನು ಸೆಳೆದು ಬಿಡುವರೊ ಯಂತ್ರದಲಿ ಶರವ ॥ ಕಡುಪಿನಣ್ಣನ ಕಾಬೆವೈಸಲೆ । ನುಡಿದು
ಮಾತುವುದೇನೆನುತ ಸಿರಿ । ಮುಡಿಯ ಮುಸುಕಿನ ರಾಯರಿದ್ದರು ಬಯಲಬಿಂಕದಲಿ ||೭|| ಐಸಲೇ
ಸೌಭಾಗ್ಯವೆಮಗೆ ಶ । ರಾಸನಾಕರುಷಣದೊಳತಿಶ್ರೊ । ಳ್ಳಾಸದಲಿ ಡಾವರಿಸಿ ಗೆಲಿದಳು ದ್ರುಪದ
ಸುತೆ ನೃಪರ ॥ ಲೇಸು ತಪ್ಪೇನಿದಕೆ ನುತ ಭ । ದ್ರಾಸನವನಿಳಿದುಲಿವ ತೊಡರಿನ । ಗೋಸಣೆಯ
ಘುಳಿಲುಗಳ ಮಗಧನೃಪಾಲನೈತಂದ ||೮|| ಬಿಲ್ಲಹೊರೆಗೈದಿದನು ಚೌಪಟ । ಮಲ್ಲ ನೋಡಿದನೈಸಲೇ ತ
ಪ್ಪಲ್ಲೆನುತ ಮೇಲ್ದಿರುಹಿದನು ಮುಂಗೈಯ ಸರಪಣಿಯ ॥ ಬಿಲ್ಲನೆತ್ತಿದೊಡಿವನನಂಗನೆ । ಯೊಲ್ಲಳೋ
ಮೇಣೊಲಿವಳೋ ಮಿಗೆಬಲ್ಲಿದನು ತಾನೀತನೆನುತಿರ್ದುದು ಸಖೀನಿವಹ ||೯|| ಈತ ಕುಸಿದೆತ್ತಿದೊಡೆ
ಧನು ಮಾ । ರಾತುಬವಸೋಕಿದೊಡೆ ಕಾರ್ಮುಕ । ವೀತಸಾರೆಂಪಲಯಟವ ಸೌಗೊತ್ತಿ ವೈಬಲಿದ ॥
ಘಾತಿಯಲಿ ಘಲ್ಲಿಸಿದೊ ಡಾಧನು । ಸೋತುದೆವೆಯಂತರಕೆ ತೊಲಗದು । ಘಾತುಗುಂಟದಸಳ್ಕಿದವಪ
ಳೈಗಳುಮಾಗಧನ ||೧೦|| ಬೆಮರಸಾರಿಸಿಕೊಂಡು ವಿಗತ । ಶ್ರಮನು ಪೊಳಕಾಲಿಕ್ಕಿ ದಂಡೆಯೊ । ಳ
ಮರಿ ದೇಹವ ಬಲಿದು ವಕ್ಷದೊಳೌಂಕಿ ಗಾಢದಲಿ ॥ ಕುಮತಿಯಲ್ಲಾಪಿದೊಡೆ ಬಿಟ್ಟುದು ಆಮಮ ಒ
ಮಾತ್ರಕ್ಕೆಘನವಿ । ಕ್ರಮವನೊಡೆದುದು ಸವೆದುದಾತನಗರ್ವವಿಭ್ರಮವ ||೧೧|| ಕೇಳಿದನು ಕಾಂತಾಕ
ದಂಬದ । ಗೋಳುಗಳ ಘೊಳ್ಳೆಂಬನಗೆಗಳ । ಕಾಳುಮಾಡಿದನೇಕೆ ಧನು ತಾನೇಕೆ ಸುಡುಯೆನುತ ॥ಬೇ
ಳುವೆಯಲುಡಿದಂಕದವೊಲು । ಬ್ಬಾಳುತನ ಹೈಸರಿಸೆ ಮುಸುಕಿನ । ವಹೌಳಿ ಹಿಮ್ಮೆಟ್ಟಿದನು ಕಡೆಯವತಿ
ರುಹಿ ಕಿರುದೊಡೆಗೆ ||೧೨|| ಕೆರಳಿದನು ದಮಘೋಷನಂದನ । ನರರೆ ಬಿಟ್ಟನ ಧನು ಪಿಭಾಡಿಸಿ । ತೆರ
ಳಿಚಿತಲಾ ವಿಗಡಚಕ್ರಾಯುಧನ ಮಾಗಧನ ॥ ಹರಿಬವೆನ್ನದು ಹೊಳ್ಳುಗಳೆನು । ದುರುಳಧನುವನ
ನಗುವಕೈನೆಯ । ತುರುಬಕೊಯ್ಸುವೆನೆನುತ ಕಲಿಶಿಶುಪಾಲನೈತಂದ ||೧೩|| ಇವನಲೇ ರಾವಣನು ಮು
ನ್ನಿನ । ಭವದೊಳಗೆ ತಪ್ಪಲ್ಲೆನುತ ಜನ । ನಿವಹ ನಡುಗಿತು ಕೋಮಲಾಂಗಿಯ ಪುಣ್ಯಪೆಂದೆನುತ ॥
ಅವನಿಪತಿ ಕೇಳೆಣೆವನಿವಚಾಪವನು ಬೋಳೈಸಿದನು ಬಲುಹೋಕಿವಯೆನುತ ಸಿವರಿಸಿದನು ಡಾವರಿಸಿದ
ನುಧನುವ ॥ ಏನನೆಂಬೆನು ಧನುಸಘಾಡದವಮಾನಭಂಗದ ಮೊದಲವಾನೆಯೆನೆ । ಮಾನಿನಿಯರಪಹಾಸ್ಯ
ವೀಜನರೀನೃಪಾಲಕರ ॥ ಹೀನನುಡಿಗಳ ಕಂಡು ದೈತ್ಯಸ । ಮಾನ ಮನದಲಿ ನೊಂದು ತಿರುಗಿದ । ನೇನ
ನೆಂಬೆನು ಸವೆದುದಾತನ ಗರ್ವವಿಭ್ರಮವ ||೧೪|| ಕಂಡುಮಾಗಧ ಕರೆದನೀಧನು । ಚಂಡಿಯಿದು ನಮ
ಗಲ್ಲ ನಾಮ್ಮಂ । ಕೊಂಡು ತಪ್ಪಿತು ನೊಪ್ಪಿತಾದುದು ಭಾರಿಯಗ್ಗಳಿಕೆ ॥ ಭಂಡರೀಭೂಮಿಪರು ದ್ರುಪದ
ನ । ಗುಂಡುದೊತ್ತಿರನಗೆಯಮಾನಲಿ । ಮಂಡೆಗಳಲಿವರೆನುತ ಹಾಯ್ದರು ತಮ್ಮಪಟ್ಟಣಕೆ ||೧೫|| ಗ
ರುವರೆಲ್ಲಾ ಚೈದ್ಯಮಾಗಧ । ರರಿದೆ ತಮ್ಮಯ ಪುರಕೆ ಗಮಿಸಿದ । ರರಸುಗಳ ಮಿಕ್ಕವರ ವಿಧಿಯನು
ಕೇಳು ನರನಾಥ ॥ ಧರಧುರದೊಳಭಿಮಾನಹಾನಿಯೆ । ಹುರುಳಹುದು ಬಿಲುಹೋರಟಿಗೆ ನಿಲ । ಲರಿ
ದೆನುತ್ತಂಗವಣೆಗುಂದಿತುನೆರೆದನೃಪನಿಕರ ||೧೬|| ದುರುಳ ಪಾಂಚಾಲನ ಕುಮಾರಿಯ । ವರಕಟಾಕ್ಷದ
ಬೀಸುವಲೆಯಲಿ । ಶರಮಹಾಧನುವೆಂಬಬಲುದಡಿವಲೆಯನಳವಡಿಸಿ ॥ ಧರಣಿಪಾಲಮೃಗಂಗಳನು ಸಲೆ।

ಬರಿಸಿ ಸದೆದನು ಹೊಲ್ಲಹೇನಂ । ತಿರಲಿ ನೋಡುವೆನೆನುತ ಶಲ್ಯನೃಪಾಲನೈತಂದ ॥ ಅಗ್ಗಳೆಯನಾ ಮಗಧ ಮೂರ್ತಿನ । ಲಗ್ಗಿಗನು ಶಿಶುಪಾಲ ಸೋಲದ । ನುಗ್ಗಿಯುಬ್ಬರಿಗಾಯ್ದು ಹಲಬರಿಗಾಯ್ದು ರಣ ಧೂಳಿ ॥ ತೆಗ್ಗಿ ವದೊ ಧನು ಧನುಷಿಘಾತಿಗೆ । ಮುಗ್ಗಿ ವನೊ ಮಾದ್ರೇಶನಿವರೊಳ । ಗಗ್ಗಳೆಯನ ಹನೆಂದು ನೋಡಿದರಂದು ನಾರಿಯರು ॥೧೯॥ ಬಂದನೀತನು ಧನುವ ನಾರಿದು । ನಿಂದು ಸಂವರಿಸಿ ವನು ಕಾಂತಾ। ವೃಂದವನು ನೋಡುವನು ಮನದಲಿ ಧಿಕ್ಕುಧಿಗಿಲೆನುತ ॥ ಸಂದಣಿಯನಭಕೊತ್ತಿ ಫಣಿ ಯಲಿ । ಮಂದರವ ಬಿಗಿವಂತೆ ಭುಜದಲಿ । ಮುಂಪುವರವವಚಿದನು ದಂಡೆಯನಿಕ್ಕಿ ಕೋಪದಲಿ ॥೨೦॥ ಕೊಕ್ಕರಿದೀಧನುವೀತನುಬ್ಬಿನೊ । ಳೆಳ್ಳೆಗೊಬ್ಬಿನೊಳಾಕಿ ತೊಡರಿನ । ಘುಲ್ಲಣೆಯ ಘನಕುಲಿಯೆ ಪಂಟಿಸಿ ನಿಮಿಷಮಾತ್ರವಲಿ ॥ ಬಿಲ್ಲು ಬಿಡದವನಿಯಲಿ ಬಿದ್ದನು । ಡೊಳ್ಳುಮೇಲಾಗಿತ್ತು ಸತಿಯರು । ಘೊಳ್ಳೆ ನಲು ನೃಪರು ಘೋರಧನುವನೆನುತ್ತ ಹೊರದೆಗೆದ ॥೨೧॥ ಹಿಂಗಿದನು ಮಾದ್ರೇಶನೀಧನು । ಭಂಗಿಸಿತು ಮಾನ್ಯರನು ಜಡಮಿದು । ಜಂಗಮತ್ವವಲೇನುಮದೊ ಜೋಂಪಿಸಿತಲ್ಲೆ ಜಗವ ॥ ಅಂಗನಾಪಾಣಿಗ್ರ ಹಣ ರಾ । ಯಂಗೆ ತಾನೀಮುಷ್ಟಧನುವನು । ಭಂಗಬಡಿಸದೆ ಬಿಡೆನೆನುತ ಕಲಿಕರ್ಣನೈತಂದ ॥೨೨॥ ಈತನರ್ಜುನನಲ್ಲಲೇ ರೂ । ಪಾತಿಶಯಪ್ರಖ್ಯಾತ ಯಂತ್ರವ । ನೀತಗೆಲಿದೊತ್ತೆಪ್ಪುಮೈಸಲೆ ತಂಗಿಗನು ನಾರ ॥ ಈತವರನಮುದೆನುತ ಲಲನಾ । ಜಾತವಾತನನೀಕ್ಷಿಸುತ ಸಂ । ಪ್ರೀತಿಯಲಿ ಕೊಂಡಾಡುತಿ ರ್ದುದು ರಾಯ ಕೇಳೆಂದ ॥೨೩॥ ತುಡುಕಿದನು ಚಾಪವನು ಮಹಿಯಿಂ । ಮಿಡುಕದಿರೆ ಮಂಡಳಿಸಿ ಜಾಡಿಸಿ । ಜಡಿದು ಜೇವೊಡೆಂಕಿದನು ದಂಡೆಯನಿಕ್ಕಿ ಕೋಪದಲಿ ॥ ಹೊಡಕಲಿಸಿ ಸತ್ವಾತಿಶಯವಿಂ । ಮಡಿಸೆ ಸರ್ಷಪಮಾತ್ರ ತಿರುವನು । ತೊಡಿಸಲರಿಯದೆ ಹಿಂಗಿ ಮಾನದೊಳಿರ್ದನಾಕರ್ಣ ॥೨೪॥ ಇವರು ನಾಲ್ವರಿಗೊಂದೆಪಥ ಹಲ । ರವಗಡಿಸಿ ಮುನ್ನುಳುಹಿದರು ಬಹು । ಭುವನಪತಿಗಳು ಭಾರಿಧನು ವಿದೆ ಭಾಮಿನಿಯ ಮುಂದೆ ॥ ಎವಗೆರವಗದುವಶವೆ ಬಾವನ್ನವನು ವೇಷ್ಟಿಸಿ ಭುಜಗವಿದೆಯೆಂ। ದವನಿ ಪರು ಹೊರೆಗುಂದಿದರು ಭಯಮುಖದದುಗುಡದಲಿ ॥೨೫॥ ಕ್ಷಿತಿಪ ಕೇಳ್ವೈ ವಿಗಡಚಾಪ । ವ್ಯತಿಕರಕೆ ದುರ್ಯೋಧನಾದಿ । ಕ್ಷಿತಿಪತಿಗಳಂಜಿದುದ ಕಂಡನು ನಗುತ ಬಲರಾಮ ॥ ಕೃತಕಧನುವನು ಮುಂದು ದ್ರುಪದನ । ಸುತೆಯ ಮುಂದಲೆವಿಡಿದು ತಹೆನು । ದ್ಧತನಲಾ ಪಾಂಚಾಲನೆನುತಿಳಿದನು ವರಾಸನವ ॥೨೬॥ ಹಲಧರನ ಮುಸಕವನು ಕಂಡನು । ನಳಿನನಾಭನಿದೇನಿಹೀತವೆ । ನಳಿಬಿರೆಲ್ಲಿಗೆ ಗಮನವಾವುದು ಕಾರ್ಯಗತಿ ನಿಮಗೆ ॥ ತಿಳುಹಿಯೆನೆ ಬೇರೇನು ಯಂತ್ರವ । ಕಳಚಿ ಬಿಸುಟು ಲತಾಂಗಿಯನು ಹಿಡಿ । ದೆಳೆದು ತಹೆನೆನಲೈಸಲೇ ಕೇಳೆಂದನಸುರಾರಿ ॥೨೭॥ ಏನಹರು ನಿಮಗಿಂದು ಕುಂತೀ। ಮಾನಿನಿಯರತ್ತೆಯ ರಲೇ ತ । ತ್ಸೂನುಗಳು ಮೈದುನರು ತತ್ಪುತ್ರಿಯರು ತಂಗಿಯರು ॥ ನಾನದಾಗವೆ ಮನಕೆ ಸಂಶಯ । ವೇನಿದಕೆ ತಪ್ಪಿಲ್ಲ ಕುಂತೀ । ಸೂನುಗಳು ದ್ರೌಪದಿಗೆ ರಮಣರು ನೋಡಿ ನೀವೆಂದ ॥೨೮॥ ಮೂಗಿ ನಲಿ ಬೆರಳಿಟ್ಟು ಮುಕುಟವ । ತೂಗಿದನು ಬಲರಾಮನವನಿಯ । ನೀಗಿ ಹೋದರ ಮಾತು ಪಾಂಡವರೆ ತ್ತಲಿವರೆತ್ತ॥ ಬೇಗುದಿಯೊಳುರಿಯದಮನೆಯೊಳೆಂ। ದಾಗ ಬಂದರು ಲೋಕವರಿಯೆ ಶ । ತಾಗ ಮಿಕ ನಿನಗಂಜುವೆನು ತಾನೆನುತ ಕೈಮುಗಿದ ॥೨೯॥ ಕ್ಷಿತಿಯೊಳವರುಳ್ಳೊಂದು ದ್ರುಪದನ । ಸುತೆಗೆ ಪತಿ ವರರೆಂದು ಯಂತ್ರ । ಚ್ಯುತಿಗೆ ನೀವುಂಟೆಂದು ತೋರಿತೆ ನಿಮ್ಮ ಚಿತ್ತದಲಿ ॥ ಕ್ಷಿತಿಗೆ ಪಾಂಡವ

ರಲ್ಲದಿಲ್ಲೀ । ಸತಿಗೆ ಪತಿ ಪೆರರಿಲ್ಲ ಕುಂತೀ । ಸುತರನೀಗಳೆ ತೋರುವೆನು ವಸುದೇವನಾಣೆಂದ ॥೩೦॥ ಇದು ವಿಚಿತ್ರವಲಾ ಗತಾಸುಗ । ಳುದಿಸಿದರ ಲೇಸೈಸಲೇ ಪಾ । ಪದಿಯನವರನುರಾಗಿಸಲಿ ಭೋಗಿಸಲಿ ಭೂತಳವ ॥ ಇದುವೆ ನಿಶ್ಚಯವಾದರವರ । ಭ್ಯುದಯವೆಮ್ಮಭ್ಯುದಯವೆಂದಾ । ಪದುಮನಾಭನ ಹೊಗಳಿ ಕುಳ್ಳಿರ್ದನು ಸರಾಗದಲಿ ॥೩೧॥ ಈಕೆಯನು ಮೆಚ್ಚಿಸುದು ರಾಜಾ । ನೀಕ ಸೌಂದರ್ಯದಲಿ ಚಾಪ । ವ್ಯಾಕರಣಪಾಂಡಿತ್ಯವೆಂಬೊಡೆಕಾಣೆನಾನೀಗ ॥ ಈಕೆಗಿನ್ನಾರೊಡೆಯರೋ ಕುಂ । ತೀಕುಮಾರಕರಿಲ್ಲಲೇ ಸುಡ । ಲೇಕೆ ನೆರಹಿದೆನಿವರನೆನುತಾದ್ರುಪದಚಿಂತಿಸಿದ ॥೩೨॥ ಹರಹರಾ ಯಿನ್ನಾರೊ ತಂಗಿಗೆ । ವರನು ವಾರಿಧಿವಲಯದವನೀ । ಶ್ವರರು ನೆರೆದಿದೆ ರೂಪುವಿಕ್ರಮವೆರಡುಹೊರತಾಗಿ ॥ ನರಪತಿಗಳಿವರೈಸಲೇ ಯಿ । ನ್ನರಸಿಗಾವುದು ಹದನೆನುತವಿ । ಸ್ತರದಗುಜುಗುಜು ಪಸರಿದುದು ಕಾಂತಾಕದಂಬದಲಿ ॥೩೩॥ ಅವನಿಪತಿಗಳು ಹೊಳ್ಳುವಾದ । ರವರೊಳಿಲ್ಲಲೆ ದಕ್ಷಿಣೆಯ ಹಾ । ರುವಮಹಾಜನವಿದೆ ಸಮುದ್ರಕೆ ಪಡಿ ಸಮುದ್ರವೆನೆ ॥ ಇವರೊಳಗೆ ಮುಂಗೈಯ ಬಲುಹು । ಳ್ಳವರು ನೆಗಹಲಿ ಧನುವನೀಯಂ । ತ್ರವನು ಜಯಿಸಲಿಯೆಂದು ಧೃಷ್ಟದ್ಯುಮ್ನ ಸಾರಿಸಿದ ... ॥೩೪॥

ಅಂತು ಸಂಧಿ ೧೦ ಕ್ಕೆ ಪದ ೬೩೭ ಕ್ಕೆ ಮಂಗಳಮಸ್ತು.

ಹದಿನೈದನೆಯ ಸಂಧಿ.

ಸೂಚನೆ॥ ರಾಯಸಭೆ ನಗಲೈದಿ ಯಂತ್ರದ । ದಾಯವನು ನೆರೆ ಗೆಲಿದು ನಿರ್ಜರ ।
ರಾಯನಂದನ ಕಾದಿ ಗೆಲಿದನು ಸಕಲರಿಪುನೃಪರ ॥

ಕೇಳು ಜನಮೇಜಯಧರಿತ್ರೀ । ಪಾಲ ಪಾಂಚಾಲೆಯ ಮನೋರಥ । ಶಾಲೆಯಲಿ ಸಾರಿದರಲೈ ಸಭೆಯಲಿ ಮಹೀಸುರರ ॥ ಏಳಿ ಭುಜಬಲವುಳ್ಳವರು ವಿ । ಶಾಲಿಯಲಿ ಬಿಲುವಿಡಿದು ಯಂತ್ರದ । ಕೋಲುಗಳ ಕೇವಣಿಪುದೆಂದರು ಹೊಯ್ದು ಡಂಗುರವ ॥೧॥ ಬೆರಸುವರು ಪಾರ್ಥಿವರು ಪಾರ್ಥಿವ । ವರರೊಡನೆ ತದಲಾಭಪಕ್ಷಾಂತರಕೆ ಪಾರ್ಥಿವಸುತೆಯನೀವುದು ವಿಪ್ರಜಾತಿಯಲಿ ॥ ಪುರುಷರನುಲೋಮದಲಿ ಕನ್ಯಾ । ವರಣವಹುದು ವಿಲೋಮದಲಿ ವಿ । ಸ್ತರಿಸಲೇಕಿದ ನೀವು ಬಲ್ಲಿರಿ ಶಾಸ್ತ್ರನಿರ್ಣಯವ ॥೨॥ ಎಂದು ಸಾರಿದದನಿಯನಾದ್ವಿಜ । ವೃಂದವಾಲಿಸಿ ನಮಗಿದೇಕರ । ವಿಂದವದನೆಯ ತೊಡಕು ತಗೆ ನಾವಾರು ಧನುವಾರು ॥ ಬಂದದಕ್ಷಿಣೆ ಮೃಷ್ಟಭೋಜನ । ದಿಂದ ತೃಪ್ತರು ನಾವು ನಮಗದ । ರಿಂದ ಬಹದುಷ್ಕೀರ್ತಿ ಬರಲೆಂದುದು ಬುಧವ್ರಾತ ॥೩॥ ವಚನಶೂರರು ನಾವು ಪಾರ್ಥಿವ । ನಿಚಯವೇ ಭುಜಶೂರರರನಿಬರ । ನಚಲಧನು ಭಂಗಿಸಿತು ನಮಗೀವಿದ್ಯೆ ವೈದಿಕವೇ ॥ ಉಚಿತವಲ್ಲಿದು ನಮ್ಮ ಸಾಹಸ । ರಚನೆಯನು ನೋಡುವೊಡೆಪಂಡಿತ । ನಿಚಯವಿದಿರಲಿ ನಿಲಲಿ ತೋರುವೆವಲ್ಲಿ ವಿಸ್ಮಯವ ॥೪॥ ಸಾಂಗ ವೇದಪದಕ್ರಮದ ಸರ್ವಾಂಗವಿಷಯದಲಖಿಳಪೌರಾ । ಣಂಗಳಲಿ ಮೀಮಾಂಸೆಯೊಳ್ ಸ್ಮೃತಿತರ್ಕ

ಶಾಸ್ತ್ರದಲಿ ॥ ಭಂಗಿಸುವೆವೀ ದ್ರೌಪದಿಯನಾ । ವಂಗದಲಿ ವಾತ್ಸ್ಯಾಯನಾದಿಯು।ಪಾಂಗವಿದ್ಯೆಯಲೆಮ್ಮ
ನೋಡೆಂದುದು ಬುಧಸ್ತೋಮ ॥೫॥ ಭರತದಲಿ ವೈದ್ಯದಲಿ ಕಾವ್ಯಸು । ವಿರಚಿತಾಲಂಕಾರದಲಿ ಗಜ।
ತುರಗಲಕ್ಷಣದಲಿ ಸಮಾಹಿತಮಂತ್ರತಂತ್ರದಲಿ ॥ ಸರಸಕವಿತಾರಚನೆಯಲಿ ವಿ । ಸ್ತರದುಪನ್ಯಾಸದಲಿ
ಭೂಪತಿ । ಕರೆಸಿ ನೋಡಲಿ ನಮ್ಮನೆಂದರು ದ್ವಿಜರು ತಮತಮಗೆ ॥೬॥ ಅಲ್ಲದಿರ್ದೊಡೆ ಶೋಧಿಸಿದ
ತನಿ । ಬೆಲ್ಲವಿಕ್ಕಿದಹೂರಿಗೆಯ ಮೆದೆ । ಯಲ್ಲಿ ಪರಡಿಯ ಸೇವಿಗೆಯ ಪರಿಪರಿಯಪಾಯಸದ ॥ ಪುಲ್ಲಿ
ಗೆಯ ತತ್ಸವಿಯ ಮಂಡಿಗೆ । ಯಲ್ಲಿ ನವಘೃತಸೂಪವಂಶಕ । ದಲ್ಲಿ ನೋಡಲಿ ನಮ್ಮನೆಂದುದು
ಧೂರ್ತವಟುನಿಕರ ॥೭॥ ರಸದ ಹೊರಲೇಪದಲಿ ಹುದುಗಿದ । ವಿಸುನಿಯಂತಿರೆ ಜೀವಭಾವ । ಪ್ರಸರ
ದೊಳಗವಲಂಬಿಸಿದಪರಮಾತ್ಮನಂದದಲಿ ॥ ಎಸೆವವಿಪ್ರಾಕಾರದಲಿ ರಂ । ಜಿಸುವಭೂಪತಿ ತತ್ಸಭಾಸ ।
ದ್ವಿಸರಮಧ್ಯದೊಳಿರ್ದ ಕೇಳಿದನೀಮಹಾಧ್ವನಿಯ ॥೮॥ ನೋಡಿದನು ತಮ್ಮನನು ಸನ್ನೆಯ । ಮಾಡಿ
ದೊತ್ತೆಕೈಕೊಂಡನವನಿಪ । ಗೂಡಿ ಕುಂತಿಗೆ ಭೀಮಸೇನಂಗೆರಗಿ ಮನದೊಳಗೆ ॥ ಕೂಡೆ ಕುಳ್ಳಿರ್ದಖಿ
ಳವಿಪ್ರರ । ನೋಡಿ ಮೆಲ್ಲನೆ ಘೋತ್ರದರ್ಭೆಯ । ಗೂಡ ಸಂವರಿಸುತ್ತ ಸಭೆಯಿಂದೆದ್ದನಾಪಾರ್ಥ
॥೯॥ ಏನಿಸಿದ್ಧಿಯುಪಾಧ್ಯರೆದ್ದಿರ । ದೇನು ಧನುವಿಂಗಲ್ಲಲೇ ತಾ । ನೇನುಮನದಂಗವಣೆ ಬಯಸಿದಿರೇ
ನಿತಂಬಿನಿಯ ॥ ವೈನತ್ರೇಯನ ವಿಗಡಿಸಿಪವಿಷ । ವೇನು ಸದರವೊ ಹಾವಡಿಗರಿಗೆ । ದೇನು ನಿಮ್ಮುತ್ಸಾ
ಹವೆಂದುದು ಧೂರ್ತವಟುನಿಕರ ॥೧೦॥ ಮದುವೆ ಬೇಕೇ ಶ್ರೋತ್ರಿಯಸ್ತೋಮ । ಮದಲಿ ಕನ್ಯಾರ್ಥಿ
ಗಳು ನಾವೆಂ । ಬುದು ನಿಜಾನ್ವಯವಿದ್ಯೆಯಲಿ ಕೊಡುವುದು ಪರೀಕ್ಷೆಗಳ ॥ ಮದುವೆಯಹುದಿದು ಸೌಖ್ಯ
ಪುಣ್ಯಾ । ಸ್ಪದವು ಭೂದೇವರಿಗೆ ನೀ ನೆನೆ । ಮದು ಭಗೀರಥಯತ್ನವೆಂದುದು ಭೂಸುರವ್ರಾತ ॥೧೧॥
ನೀವು ಸೈರಿಸಿ ನಿಮ್ಮ ಕಾರುಣ್ಯಾ । ವಲೋಕನವುಂಟಲೇ ಸ । ದ್ಭಾವದಲಿ ನೀವ್ರಚಿಸಿದಾಶೀರ್ವಾದಶಕ್ತಿ
ಯಲಿ ॥ ನಾವು ವಿಜಯರು ಚಾಪಯಂತ್ರವಿ । ದಾವಘನವೆಂಬರ್ಜುನನ ಸಂ । ಭಾವನೋಕ್ತಿಗೆ ನಿಲ್ಲ
ದವರೊದರಿದರು ತಮತಮಗೆ ॥೧೨॥ ಕ್ರಮಿತರವಧರಿಸಿಟಿರೆ ಶುದ್ಧ । ಭ್ರಮಿತಮೂಲನಹಿರಿಯವಿಷ್ಣು ।
ಕ್ರಮಿತರೇಟೀಕ್ಷಿತರೆ ಧನುವಿಗೆಯತ್ನಮಾಡಿದರೆ ॥ ಕ್ರಮವೆ ತಾನಿದ ಕ್ಷತ್ರಿಯರನಾ । ಕ್ರಮಿಸುವದು
ಸದ್ಧರ್ಮವೇ ಯು । ದ್ಧ್ರಮಿತನಿವ ನೆರೆಹಳಿವತಹನೀಶ್ರೋತ್ರಿಯರಸಭೆಗೆ ॥೧೩॥ ಕೆಲರು ಹೋಗದಿ
ರೆಂದು ಜರೆದರು । ಕೆಲರು ತಾನೇ ಬಲ್ಲನೆಂದರು । ಕೆಲರು ನುಡಿದರು ವಿಪ್ರಸಭೆಗಪಹಾಸ್ಯವಹುದೆಂದು ॥
ಕೆಲರು ತಪ್ಪೇನೆಂದು ಕಳೆದರು । ಕೆಲರು ಭದ್ರಾಕಾರನೀತಂ । ಗಳುಕುವುದು ಧನು ಭಾಗ್ಯಮುಖವೆಂ
ದುದು ಬುಧಸ್ತೋಮ ॥೧೪॥ ತೊಟ್ಟಹೊಸಯಜ್ಞೋಪವೀತದ । ಮೆಟ್ಟನೊಸಲಲಿ ಕುಶೆಯ ಕರಡಿಗೆ ।
ಕಟ್ಟಿಯಿರಿಕಿದಕಕ್ಷೆ ಬೆರಳಲಿ ಮುರಿದದರ್ಭೆಗಳ ॥ ಉಟ್ಟಬಾಸರಬಳಲುಗಚ್ಚೆಯ । ನಟ್ಟಹಾಸದ ಜನದ
ನಗೆಗಳ । ನಟ್ಟುವಿಗನೋಸರಿಸಿ ಸಭೆಯಲಿ ಮೆಲ್ಲನೈತಂದ ॥೧೫॥ ತಿರುಗಿ ಕಂಡರು ಸಕಲಪೃಥ್ವೀ ।
ಶ್ವರರು ಗಹಹಿಸಿದರಿದೇನರೆ । ಮರುಳೊ ಜಡನೋ ವಿಪ್ರವೇಷಚ್ಛನ್ನಸುರಪತಿಯೋ ॥ ಮರುಳು
ಗಳು ತಾವಕಟ ಮದನನ । ಸರಳ ಮರುಮೊನೆಗಾವನಂತಃ । ಕರಣ ನೆರೆ ಕಳವಳಿಸದೆಂದರು ನೆರೆದಸಭೆ
ಯೊಳಗೆ ॥೧೬॥ ಧನು ತನಗೆ ನೆಗಹಲ್ಕೆ ಕೃಷ್ಣಾ । ಜನವೊ ಸಾಲಗ್ರಾದೇವರೊ । ವಿನುತತುಳಸಿಯೊ
ಕುಶವೊ ದರ್ಭೆಯೊ ಸಮಿಧೆಗಳ ಹೊರೆಯೋ ॥ ನೆನೆದತಿಲವೋ ಮೌಣಿದಾಪಾ । ಸನದ ಕೊಳವಿಯೊ

ಬಣಗುವಿಪ್ರನ । ನೆನಹ ನೋಡಿರೆ ಘನವಲಾ ದ್ರೌಪದಿಯಸೌಭಾಗ್ಯ ॥೧೭॥ ಅಂಗವಿದು ಗಜತುರಗ
ಶಸ್ತ್ರಾ । ಸ್ತ್ರಂಗಳರಿತವು ನಮಗೆ ವಿಪ್ರಂ। ಗಂಗ ವೇದಪುರಾಣತರ್ಕಸ್ಮೃತಿಸುವಿದ್ಯೆಗಳು ॥ ಅಂಗವಂ
ಗಿಗಸಾಧ್ಯವಾದುದ । ನಂಗಿಗೊಡಬಹುವುದೆ ದ್ವಿಜಾತಿಗೆ । ಸಂಗತಾನುಷ್ಠಾನ ವರವೆಂದುದು ನೃಪ
ಸ್ತೋಮ ॥೧೮॥ ಲಹರಿ ಮಸಗಿದುದತ್ತ ಕಾಂತಾ । ಬಹಳ ಪಾರಾವಾರ ಹುಬ್ಬಿನ । ವಿಹೃತಿಗಳ ತೆರೆ
ಮಾಲೆಗಳ ಬೆಳುನಗೆಯ ಬುದುಬುದದ ॥ ಗಹಗಹಿಕೆ ಮಿಗೆ ಅಟ್ಟಹಾಸದ । ರಹಣಿಗಳ ರಭಸದ ವಿಡಂ
ಬದ। ವಿಹರಣದ ಚಲದೃಷ್ಟಿಗಳ ಮರಿಮೀನಹೊಳಹುಗಳ ॥೧೯॥ ಇತ್ತ ನೋಡೌ ತಾಯೆ ಹಾರುವ ।
ರತ್ತ ಗಡ್ಡದುಪಾಧ್ಯರನು ತಾವೆತ್ತವರು ಗಡ ಧನುವನೆಸುವರುಗಡ ತಿಮಿಂಗಿಲನ ॥ ಹೊತ್ತುಗಳೆವರೆ
ಲೇಸು ಬಳಿಕಿನ್ನುತ್ತಮರಲಾ ವಿಪ್ರರೆನೆ ತಲೆ। ಗುತ್ತಿ ನಾಚಿದಳಂಗುಟದೊಳಾಕುತ ಮಹೀತಳವ ॥೨೦॥
ಎಲವೊ ಮಟ್ಟಿಯ ಮದನದರ್ಭೆಯ । ತಿಲದ ಮನ್ಮಥವಿಮಲಧೋತ್ರದ । ತಳಿರುಗಾಸೆಯ ಕಾಮ
ಕೃಷ್ಣಾಜಿನದ ಕಂದರ್ಪ ॥ ನಳಿನಮುಖಿಯನು ವರಿಸು ಬಾ ನಿನ । ಗೆಳವಡುವನೆಲೆಯಕ್ಕ ಕೇಳೌ । ತಲೆ
ವಿಡಿವೆವಾವ್ನೋಡು ಯೆಂದರು ನಗುತ ಚಪಲೆಯರು ॥೨೧॥ ಅದೆ ಹಲಾಯುಧ ನೋಡು ವಿಪ್ರೌ ।
ಘದಲಿ ಪಾರ್ಥನ ಬರವು ಮೇಘುವ । ಹೊದರುಗಳ ಹರಿಪಶ್ವನಂತಿರೆ ವಿಪ್ರವೇಷದಲಿ ॥ ವಿದಿತವೇ
ವಸುದೇವನಾಣೆಂ। ದುದಕೆ ತಪ್ಪದಲೈ ಸಭಾಮ। ಧ್ಯದಲಿ ಬರುತಿರ್ಪಾತನರ್ಜುನನೆಂದನಸುರಾರಿ ॥೨೨॥
ಜನಪನೋ ಭೀಮಾದಿಗಳೊ ತ । ಜ್ಜನನಿಯೋ ತಾವೆಲ್ಲ ಭೂಸುರ । ಜನದಸಾಮೀಪ್ಯದಲಿ ಸಭೆಯೊ
ಳಗಿರ್ದರೆನೆ ಕೇಳ್ದು ॥ ನಿನಗಿದೆಂತವರರಿತವರಗಿನ। ಮನೆಗೆ ತಪ್ಪಿದರೆಂತು ಶಿವ ನೀ। ನೆನಿತುಮಾಯಾಸಿದ್ಧನೆಂ
ದನು ನಗುತ ಬಲರಾಮ ॥೨೩॥ ಅವನಿಪತಿ ಕೇಳಿತ್ತಲೀಪಾ । ರ್ಥಿವರ ಪರಿಹಾಸವನು ಕಾಂತಾ । ನಿವ
ಹದಲ್ಲಿ ನಿಬ್ಬರದನುಡಿಗಳನಾಮಹೀಸುರರ ॥ ವಿವಿಧಕಟುಮಧುರೋಕ್ತಿವಿಸ್ತಾ । ರವನು ಕೇಳುತ ಮುಗು
ಳುನಗೆಯಲಿ । ನವಮದದ್ವಿಪಗತಿಯ ಗರುವಾಯಿಯಲಿ ನಡೆತಂದ ॥೨೪॥ ಇವನ ಗತಿಮುಖಚೇಷ್ಟೆ
ಭಾವೋ । ತ್ಸವವಿಲಾಸವುಪೇಕ್ಷೆಭರವಂ । ಗವಣೆಗರುವಿಗ ಗಮಕಭಾವವಭೀತಿಭುಲ್ಲವಣೆ ॥ ಇವನವಿ
ಮಲಕ್ಷತ್ರವಿಕ್ರಮ । ವಿವನಕೊಂಡೆಯತನವಿವೇಕಾ । ಕಿವನುಘಾಟದವೀರನೆಂಬರುವೀರರರ್ಜುನನ
॥೨೫॥ ಬರುತ ಭೀಷ್ಮದ್ರೋಣಕೃಪರಿಂ । ಗೆರಗಿದನು ಮನದೊಳಗೆ ಯಾದವ । ರರಸಪಂತಿಯ ಹರಿ
ಯನಭಿವಂದಿಸಿದನಕ್ಷಿಯಲಿ ॥ ಸುರಪತಿಗೆ ಗುಹಗಣಪಟುಕಾ । ಲರಿಗೆ ರುದ್ರಾದಿತ್ಯವಸುಮು । ಖ್ಯರಿಗೆ
ಮಣಿದನು ಬಂದನಗ್ಗದಚಾಪವಿದ್ದೆಡೆಗೆ ॥೨೬॥ ಮೊದಲಲಂಬುಜಭವನನಾಮ। ಧ್ಯದಲಿ ಮಧುಸೂದನ
ನನಾಬಳಿ । ದುದಿಯಲಾಹ್ವಾನಿಸಿದನಗ್ಗದನೀಲಲೋಹಿತನ ॥ ಇದು ಮಹಾಭೂಮಿಪರ ಬಿಂಕವ ।
ನೊದೆದಧನುವೇ ಪೂತುರೆನುತೆ । ತ್ತಿದನು ಬಾಗೊತ್ತಿದನು ಕೊರಳಿಗೆ ತೊಡಿಸಿದನು ತಿರುವ ॥೨೭॥
ಹೊಯ್ದು ತಿರುವನು ಸೆಳೆದು ಕಿವಿವರೆ । ಗೊಯ್ದನಿದು ಹದವಿಲ್ಲಲಾ ಬಲು । ಹೆಯ್ದದಕಟಾ ಬರಿದೆ
ಹೆದರಿತು ಮಾಗಧಾದಿಗಳು ॥ ಕಯ್ದುಗೆದರಿದರೊಳಗೆ ಹೆಸರೆನ । ಗೆಯ್ದುಬೇಕೆಂದ್ಯೆಸಲೇ ಯೆನು ।
ತಯ್ದುಬಾಣವಕೊಂಡು ಯಂತ್ರದಹೊಳಹನೀಕ್ಷಿಸಿದ ॥೨೮॥ ತೂಗಿ ಕಿವಿವರೆಗುಗಿದು ಯಂತ್ರವ ।
ತಾಗಿಸಿದನಂಬಿನಲಿ ಪಾರ್ಥನ । ಲಾಗುವೇಗವನಾರುಬಲ್ಲರು ಯಂತ್ರಭೇದದಲಿ ॥ ಜಾಗುಧಣುಧಣುಪೂ
ತುಕಾರ್ಮುಕ । ಯೋಗಸಿದ್ಧನೆ ಮಝರೆ ಕೋದಂ । ಡಾಗಮತ್ರಿಪುರಾರಿಯೆಂದುದು ವಂದಿಸಂ

(1) ವನಲನ | ಪೊನಗೆ

ದ್ರೋಹ ॥೨೯॥ ಆಯೆನುತ ಬೊಬ್ಬಿರಿದು ವಿಪ್ರನಿ । ಕಾಯ ಕುಣಿದುದು ಕಮಲಮುಖಿ ನಿ । ರ್ದಾಯದಲಿ ಸೇರಿದಳು ಹಾರುವಗೆನುತ ಹರುಷದಲಿ ॥ ಆಯುವತಿಜನಜಲಧಿ ಮಸಗಿತು । ಬಾಯ ಮೌನದ ಬೆರಳಮೂಗಿನ । ರಾಯರಿದ್ದರು ಬಿಗಿದಬೆರಗಿನ ಹೊತ್ತದುಗುಡದಲಿ ॥೩೦॥ ಮೊಳಗಿದವು ನಿಸ್ಸಾಳತ್ರತಿಹೆ । ಕ್ಕಳದ ಹರ್ಷನೊಳಲ್ಲಿ ದಿವಿಜಾ । ವಳಿಯ ದುಂದುಭಿರವದಲುಬ್ಬಿದಸಾಧುವಾದಗಳ ॥ ಕಳಕಳದ ಕೊಲ್ಲಣಿಗೆಯಲಿ ಪೂ । ವಳೆಯ ಪೂರದ ಹರಹಿನಲಿ ಜನ । ಮುಳುಗಿತದ್ಭುತರಭಸವಳ್ಳಿರಿದುದು ಜಗತ್ರಯವ ॥೩೧॥ ಕಿತ್ತಸುರಗಿಯ ವೀರಭಟರರು । ಪತ್ತುಸಾವಿರವಕ್ಕೆ ಪಾರ್ಥನ । ಸುತ್ತುಮುತ್ತಿದರಂಗರಕ್ಷಣೆಗರಸನಾಜ್ಞೆಯಲಿ ॥ ಇತ್ತ ಮಹಿಳಾಜನದ ಮೌಳಿಯ । ಮುತ್ತು ಕುಸುಮಾಯುಧನಘಟ್ಟನ । ಮತ್ತಗಜವೈತಂದಳಲ್ಲಿಗೆ ದ್ರೌಪದೀದೇವಿ ॥೩೨॥ ತೊಲತೊಲಗು ಮನ್ಮಥನ ಹೊಗು । ಬ್ಬಲಗು ಬರುತಿದೆ ಸಾರುಸಾರೆಂ । ದುಲಿದು ಕಂಚುಕಿನಿಕರ ಹೊಯ್ದುದು ಮುಂದೆ ಸಂದಣಿಯ ॥ ನಳಿನಮುಖಿ ದಂಡಿಗೆಯೊಳೈತಂ । ದಿಳಿದಳೀತನ ಹೊರೆಯೊಳಾಗಳೆ । ಕಳಕಳದಲೊಳತೋಟಿ ಮಸಗಿತು ಹರುಷಲಜ್ಜೆಯಲಿ ॥೩೩॥ ಲಲಿತಮಧುರಾಪಾಂಗದಲಿ ಮು । ಕ್ಕುಳಿಸಿ ತಣಿಯವು ಕಂಗಳುಬ್ಬಿದ । ಪುಳಕಜಲದಲಿ ಮುಳುಗೆ ಮೂಡಿತು ಮೈ ನಿತಂಬಿನಿಯಾ ॥ ತಳಿತಲಜ್ಜಾಭರಕೆ ಕುಸಿದ । ವ್ವಳಿಸಿತಂತಃಕರಣವಾಂಗಿಕ । ಲುಳಿತಸಾತ್ವಿಕಭಾವವಗಡಿಸಿತ್ತು ಮಾನಿನಿಯ ॥೩೪॥ ಧರಣಿಪತಿ ಕೇಳ್ಬಹುಳಲಜ್ಜಾ । ಭರದ ಭಯದಲಿ ಬೆಮರಿಡುತ ಕುಚ । ಭರದಿ ಮೇಲುದು ಜಾರೆ ಜೋಡಿಸಿ ನಿಮಿರೆ ನಡನಡುಗಿ ॥ ತರುಣಿ ನಿಜತನುಪರಿಮಳದಲುರೆ । ಪೊರೆವಪೂವಿನವಂಡೆಯನು ನಿಜ । ವರನ ಕೊರಳಲಿ ಹಾಯ್ಕಿದಳು ಜಯವೆನೆ ಸುರಸ್ತೋಮ ॥೩೫॥ ಕೊರಳ ಪೂವಿನಪಂಡೆಯಲಿ ನಿಜ । ಕರದ ಧಾರೆಯ ಧನುವಿನಲಿ ತನು । ಪರಿಮಳದ ನಿಟ್ಟೆಸಳುಗಂಗಳ ಕೆಲದಯುವತಿಯಲಿ ॥ ವರನ ಪರಿ ಹೊಸತಾಯ್ತು ಹೊತ್ತನು । ಹರನ ಪಗೆ ಹಾರುಪಿಕೆಯನು ನ । ಮ್ಮರಸಿ ನೆರೆ ಪಾರುವತಿಯೆಂದರು ನಗುತ ಚಪಲೆಯರು ॥೩೬॥ ಜನಪ ಕೇಳೈ ಯುವತಿಯೊಡನ । ರ್ಜುನನ ತಂದರು ರಾಜಮಂದಿರ । ಕನಿಮಿಷಾವಳಿ ಹರೆದುದಭ್ರದೊಳಮರಪತಿಸಹಿತ ॥ ಮನದ ಸೂಯದ ಮುಖದ ಮಗುಡದ । ನುತಮಕುಟದ ಕೈಯಗಲ್ಲದ । ಕನಲಿಕೆಯ ಕೊನರುಗಳ ಕೌರವರಾಯ ಖತಿಗೊಂಡ ॥೩೭॥ ಪನುಪದ ಪಾಂಚಾಲಮಾಡಿದ । ಮಾನಭಂಗವ ಕಂಡಿರೇ ಕಾ । ನೀನಶಕುನಿಜಯದ್ರಥಾಶ್ವತ್ಥಾಮಮೊದಲಾದ ॥ ಮಾನನಿಧಿಗಳು ಕಂಡಿರೇ ಮದ । ದಾನಗಳು ನೀವ್ಕಂಡಿರೇ ಹದ । ನೇನೆನುತ ಕುರುರಾಯ ಮೊದಲಿಸಿದನು ತನ್ನವರಾ ॥೩೮॥ ಪಳೆಯಹುಲುಧನುವಿದನು ಹಾರುವ । ಸೆಳೆದಗಡ ಕೌಳಿಕದ ಯಂತ್ರವ । ಗೆಲಿದಗಡ ಗರುವಾಯಿಗೆಡಿಸಿದಗಡ ಮಹೀಶ್ವರರಾ ॥ ನಳಿನಮುಖಿ ಹಾಯ್ಕಿದಳುಗಡ ತಿರು । ಕುಳಿಯ ಕೊರಳಲಿ ಪಂಡೆಯನು ನೀ । ವುಲಿದು ಮದುವೆಯ ಮಾಡಿ ರೆಂದನು ಬೈದು ಭೂಮಿಪರ ॥೩೯॥ ಭಂಡರೋ ನೀವ್ನೈರವಧರಣೀ । ಮಂಡಲೇಶ್ವರರಕಟ ನಿಮ್ಮಯ । ಹೆಂಡಿರನು ಬಳುವಳಿಯ ಕೊಡಿ ಹಾರುವನ ಹೆಂಡತಿಗೆ ॥ ಗಂಡುಗಲಿಗಳ ನಿಮ್ಮನನಿಬರ । ಕಂಡುಪೇಕ್ಷಿಸಿ ಯಾಚಕನ ಕೈ । ಕೊಂಡಳಿದಕೇನುಂಟು ಮನದಲಿ ವಾಸಿ ನಿಮಗೆಂದ ॥೪೦॥ ವಾಸಿಗಳನರಸುವೊಡೆದ್ರುಪದನ । ಪಿಸಲಡಗನು ಹದ್ದುಕಾಗೆಗೆ । ಸೂಸಿ ವಿಪ್ರನ ಬಡಿದು ಬಿಡುವುದು ಮತ್ತೆ ತಿರಿದುಣಲಿ ॥ ಆಸರೋಜಾನನೆಯ ನಮ್ಮವಿ । ಲಾಸಿನಿಯ ವೀಧಿಯಲಿ ಕೂಡುವು ।

ದೈಸಲೇ ಯೆನುತೊಡನೊಡನೆ ಗರ್ಜಿಸಿತು ನೃಪನಿಕರ ||೪೧|| ದಾಳಿ ಹತ್ತಲಿ ಲಗ್ಗೆ ಪದಹತಿ| ಧೂಳಿಯಲ್ಲಿ ಹಿರಿಯಗಳನಗಲವ | ಹೂಳಿ ಕಳೆಯಲಿ ಹರಿದು ಹತ್ತಲಿ ತೆನೆಯ ಸರಿಸದಲಿ || ಕೋಲುಗುಂಡಿನಹತಿಗೆ ಹುರಿಯೊಡೆ | ದಾಳಹೊಯ್ಯೊಯ್ಯೆನುತ ಸಕಲನೃ | ಪಾಳಿ ಗರ್ಜಿಸಿ ಮುತ್ತಿದುದು ಪಾಂಚಾಲಪಟ್ಟಣವ ||೪೨|| ಕೂಡೆ ಗಜಬಜವಾಯ್ತು ಹರೆದುದು | ನಾಡ ಗಾವಳಿ ವಿಪ್ರಸಭೆ ತೆಗೆ | ದೋಡಿತೀಪಾಂಡವರು ಬಂದು ಕುಲಾಲಭವನದಲಿ || ನೋಡುತಿರ್ದರು ಲಗ್ಗೆಯಬ್ಬರ | ವೀಡಿಗೊಂಡುದು ದಿಗಂತವನು ಕೈ | ಮಾಡಿಕೋಟೆಯನಿಳಿದು ಬೆರಸಿದರಾಳುವೇರಿಯಲಿ ||೪೩|| ಹಲ್ಲಣಿಸಿದರು ಹೊಗುವಚೂಣಿಯ | ಚೆಲ್ಲಬಡಿದರು ಸುಸಕಡರುವ | ಬಿಲ್ಲಬಿರುದರ ವಿಘಾಟನೆತ್ತಿತು ಸಾಲಸಬಳಿಗರು || ಝಲ್ಲರಿಯ ಝಾಡಿಗಳ ವಾದ್ಯದ ಘಲ್ಲಣೆಯ ದಳ ನೆರೆದುದಲ್ಲಿಯ| ದಲ್ಲಿ ಮುತ್ತಿಗೆ ದೆಗೆಸಿದರು ಪಾಂಚಾಲನಾಯಕರು ||೪೪|| ಚೂಣಿ ಮುರಿದೈತರಲು ಬಹಳೆ | ಕ್ಷೋಣಿಶನಲಿ ಕುರುಪತಿಯು ಥಟ್ಟನ | ಹೂಣಿಗರು ಹುರಿಗೊಂಡು ಕವಿವರು ಕರ್ಣಮೊದಲಾಗಿ || ಸಾಣೆಯಲಗಿನ ಸರಗೆ ಪರಬಲ | ವಾಣೆಯಿಟ್ಟವೊಲಡಿವಿಡುಕದ | ಕ್ಷೀಣಬಲವೊಸರಿಸಿ ತೆಗೆದುದು ದ್ರುಪದಪರಿವಾರ ||೪೫|| ಪೊಡವಲಗ್ಗೆಯ ಧೂಳಿಯೇದ್ದಾ | ಪಟಿಯ ಬೈತಲೆಗವುಸಿಂದೂ | ರದ ಸುವಿಸ್ತರವಾಗಬಿರ್ದೊಡೆ ರಾಯಸಾನ್ನುತ || ಮದಮುಖರು ಮುಂಕೊಂಡು ದುರ್ಗವ | ಬೆದರಿಸಿತು ಬೇರೇನು ದ್ರುಪದನ | ಸದನಸೀಮೆಯ ಬೆರಸಿ ಹೊಯ್ದರು ರಾಜಬೀದಿಯಲಿ ||೪೬|| ಏಳು ಮನ್ನೆಯಗಂಡನಾಗು ನೃ | ಪಾಲ ವಧುವಿಯಮನೆಗೆ ರಾಯರ | ಧಾಳಿ ಬಿದ್ದಿನವಾಯ್ತು ನಡ ಸಂತೈಸು ಬೀಯಗರೆ || ಏಳನಲು ಕಳಕಳವನರ್ಜುನ | ಕೇಳಿದನು ಹೊದೆಯಂಬುಗಳ ತರ | ಹೇಳೆನುತ ಕವಿದೆಚ್ಚು ಮುರಿದನು ಭಟರ ಮುಂಗುಡಿಯ ||೪೭|| ಅದು ಬಳಿಕ ಕಲ್ಪಾಂತಮೇಘದ | ಮೊದಲಮಳೆಯೆನೆ ಕವಿದುದಂಬಿನ | ಹೊದರು ಹೊದುಗಿತು ರಾಯದಳ ಝೌಕುಳದರಕ್ತದಲಿ || ಕೆದರಿದರು ಕರ್ಣಾಟದಿಗಳು ನೆರೆ | ಬೆದರಿದರು ಮತ್ತೊಂದುದೆಸೆಯಲಿ | ಸದೆದು ಹೊಕ್ಕನು ಭೀಮ ಭಾರಿಯಮರನ ಕೊಂಬಿನಲಿ ||೪೮|| ತರುಬಿದನು ಮಾದ್ರೇಶ ಪವನಜ | ನುರುಬೆಯನು ಫಲುಗುಣನ ಬಾಣವ | ಮುರಿಯೆನುತ ರಾಧೇಯನಿರಿದನು ಸಿಂಹನಾದದಲಿ || ಕುರುಬರೋ ಘನಯಂತ್ರಭೇದಿಗೆ | ಕರುಬರೋ ಕಾಮುಕರೊಡನೆನೀ | ವಿರತಕಂಪ್ಪಿಸಿದಿರೆನುತ ಕೈಕೊಂಡನಾಭೀಮ ||೪೯|| ತುರಗರಥಸಾರಥಿಗಳನು ಹೊ | ಯ್ದೊರಸಿದನು ಪವಮಾನಸುತನುಬ್ಬರದಭಯದಲಿ ಶಲ್ಯ ಹಿಮ್ಮೆಟ್ಟಿದನು ಹಿನ್ನೆಲೆಗೆ || ನರನ ಶರಹತಿಗಳುಕಿ ಮೋರೆಯ | ಮುರುಹಿದನು ಕಲಿಕರ್ಣನವದಿರು | ಸರಿಯೆ ವಿಪ್ರರು ನಮ್ಮವಿಗ್ರಹಕೆಂದು ಖಾತಿಯಲಿ ||೫೦|| ಅರಸ ನಡ ದ್ರುಪದನ ಕಪಾಲದ | ಲಿರಲಿ ಮಾನಚ್ಯುತಿ ಮಹೀಸುತ | ವರರೊಡನೆ ಖತಿಯೇಕೆ ತೆಗವುದು ಹಸ್ತಿನಾಪುರಕೆ || ನೆರಹುವುದು ನೃಪವರ್ಗವನು ಬಂ | ದೊರಸುವುದು ದ್ರುಪದನ ಲಲಾಟದ | ಬರಹವನು ಕೇಳೆಂದು ನುಡಿವನು ಕರ್ಣ ಕುರುಪತಿಗೆ ||೫೧|| ಅಹುದು ಕರ್ಣನ ಮಾತು ತೆಗೆಯಲಿ | ಬಹಳಬಲವೀಹೊತ್ತಿನಲಿ ರಣ | ವಿಹಿತವಲ್ಲಾಕಿದೊಡೆ ತಪ್ಪದು ವಿಪ್ರವಧೆ ತಮಗೆ || ಮಹಿಮೆ ಮೀಸಲು ಹೋಗದೀಸರ | ಲಹಿತದರ್ಪವ ಮುಂದೆ ನೋಡಲು | ಬಹುದೆನುತ ತಿರುಗಿದನು ಕುರುಪತಿ ಹಸ್ತಿನಾಪುರಿಗೆ ... ||೫೨||

ಅಂತು ಸಂಧಿ ೧೫ ಕ್ಕೆ ಪದ ೬೪೯ ಕ್ಕಂ ಮಂಗಳಮಸ್ತು.

ಹದಿನಾರನೆಯ ಸಂಧಿ.

ಸೂಚನೆ॥ ವಿಮಳಮತಿಪಾಂಚಾಲಚಿತ್ತ । ಭ್ರಮೆಯನಪಹರಿಸಿದನು ದ್ರೌಪದಿ । ರಮಣಿಯಾದಳು ಹರನ ವರದಲಿ ಪಾಂಡುತನಯರಿಗೆ ॥

ಕೇಳು ಜನಮೇಜಯಧರಿತ್ರೀ । ಪಾಲ ಕೌರವನೃಪತಿ ಪಯಣದ । ಮೇಲೆ ಪಯಣದಲೈದಿ ಹೊ
ಕ್ಕನು ಹಸ್ತಿನಾಪುರವ ॥ ಹೇಳಲೇನುಳಿದಖಿಳಧರಣೀ । ಪಾಲಕರ ದುಮ್ಮಾನವನು ಪಾಂ । ಚಾಲದೇಶವ
ಕಳೆದು ಹೊಕ್ಕರು ತಮ್ಮ ನಗರಿಗಳ ॥೧॥ ಧಾತ್ರಿ ಹರಿದುದು ರಾಯದಳಸಂ । ಘಾತ ಸರಿದುದು ಮಿತ್ರ
ಸುಜನ । ವ್ರಾತ ನೆರೆದುದು ಮೊರೆದುದವನೀದೇವವರ್ಗಗ್ಗಳಿಕೆ ॥ ವಾತಜನು ಮರಗೊಂಚಿನಲಿ ಮಾ । ರಾತ
ರನು ಮನ್ನಿಸಿ ಕುಲಾಲನ । ಕೇತನಕೆ ಬಂದೆರಗಿದನು ಧರ್ಮಜನ ಚರಣದಲಿ ॥೨॥ ಇತ್ತಲರ್ಜುನನಿನಸು
ತನ ಬೆಂ । ಬತ್ತಿ ಮುರಳಿದರವನಿಪಾಲಕ । ಮುತ್ತಿಗೆಯ ತೆಗೆಸಿದನು ಜಯಲಕ್ಷ್ಮಿಯ ಸಮೇಳದಲಿ ॥ ಮತ್ತ
ರಾಯರ ಬೆನ್ನ ಕಪ್ಪವ । ತೆತ್ತಿದುತ್ಸಹವದನದಲಿ ಹೊಗ । ರೆತ್ತಿದಕ್ಷಿಯ ಹೊಳಹಿನಲಿ ಹೊಕ್ಕನು ನೃಪಾ
ಲಯವ ॥೩॥ ಈತನುದಯದೊಳಿಂದು ಭೂಸುರ । ಜಾತಿಗಾಯ್ತುಗ್ಗಳಿಕೆ ಪಾರ್ಥಿವ । ರಾತರಿಂದುಬ್ಬ
ಟೆಯ ಧನುವಿಂದವನವಶರಾಯ್ತು ॥ ಸೋತು ತೆಗೆದಮಹೀಶ್ವರರವಾ । ತೇತಕದು ಮುಖಪೂತೆ
ಸುತ ಜನ । ವೀತನನು ಕೊಂಡಾಡುತಿರ್ದುದು ನೆರವಿನೆರವಿಯಲಿ ॥೪॥ ಬಂದನೀತನು ಗಳಿಯಗರುವಿಕೆ ।
ಯಿಂದ ತರುಣಿಯ ಹೊರಗೆ ಬಾ ನೀ । ನೆಂದು ಕರೆದನು ಸತಿಸಹಿತ ತಿರುಗಿದನು ಮಹಿಳದಲಿ ॥ ಬಂದು
ಮುಖಿಯನು ಕುಂಭಕಾರನ । ಮಂದಿರದ ಹೊರಗಿರಿಸಿ ಫಲುಗುಣ । ಬಂದು ಮೈಯಿಕ್ಕಿದನು ಕುಂತಿಯ
ಚರಣಕಮಲದಲಿ ॥೫॥ ತಾಯೆ ಬಿನ್ನಹವಿಂದು ಧರಣೀ । ರಾಯರೆಲ್ಲರ ಗೆಲಿದು ತಂದೆನು । ನಾಯಕ
ವಸನ್ನುಪವಿತ್ರವಸ್ತುವನಮಲವಸ್ತುಕವ ॥ ತಾಯೆ ಚಿತ್ತೈಸಿದಿರೆಯೆನೆ ಕಡೆ । ಮಾಯಿಪಳು ತನಿಹರು
ಷದಲಿ ಲೇಸಾಯಿತೈವರು ಕೂಡಿ ಭೋಗಿಪುದೆಂದಳಾ ಕುಂತಿ ॥೬॥ ಎನೆ ಹಸಾದವೆನುತ್ತ ಕಮಲಾ ।
ನನೆಯ ಹೊಡವಂಡಿಸಿದನವ್ವೆಗೆ । ತನುಜ ನೀ ತಂದಮಲವಸ್ತುಕವಿದೆಯೊ ಶಿವಯೆನುತ ॥ ತನಗೆ
ನುಡಿ ತೊಡಲಿಸಿತಲಾ ನೀ । ವಿನಿಬರುಪಭೋಗಿಸುವುದೆಂದೆನು । ವನಿತೆಯೈವರಿಗರಸಿಯೇ ಲೇಸೆಂದಳಾ
ಕುಂತಿ ॥೭॥ ಜನನಿ ತಪ್ಪದು ನಿಮ್ಮ ನುಡಿ ಯಿದಾ । ವನಜಮುಖಿಯೆಂಮೈವರಿಗೆ ಸತಿ । ವಿನುತಗುರುವಚ
ನಾಂಬುನಿಧಿ ಮಕ್ಕಳಿಗಲಂಘ್ಯವಲೇ ॥ ಎನೆ ಯುಧಿಷ್ಠಿರನೃಪತಿ ಪಾರ್ಥನ । ಕನಲಿದನು ಕಲಿಭೀಮ
ನಲ್ಲೆಂ । ದನು ನಕುಲಸಹದೇವರನುಚಿತವೆಂದರರ್ಜುನಗೆ ॥೮॥ ಎಲ್ಲಧರ್ಮದಸಾರವನು ನೀ । ವ್ಬಲ್ಲಿರೈ
ಸಲೆ ಹೇಳ್ವುದಾವುದು ನಿಲ್ಲಿ ನೀವ್ಸಪಜೀವನಕುಲರು ನಿಮಗೆ ಮಾತೇಕೆ ॥ ಬಲ್ಲರುಳಿದಾ ಮನ್ವಾಯಭಾಷಿತ ।
ದಲ್ಲಿ ನೋಡಲು ಧರ್ಮಶಾಸ್ತ್ರದೊ । ಳೆಲ್ಲ ತಾಯಿಂದಧಿಕ ಗುರುವಿಲ್ಲೆಂದನಾ ಪಾರ್ಥ ॥೯॥ ಮಾತೃವಚ
ನವಲಂಘ್ಯವದು ವಿ । ಖ್ಯಾತಪದ್ಧತಿ ಲೋಕಯಾತ್ರಾ । ಭೀತಿಯಲಿ ಭಯವೇಕೆ ಧರ್ಮರಹಸ್ಯನಿಷ್ಠರಿಗೆ ॥
ಏತಕೀಲೋಕಾನುಸರಣೆ ವಿ । ಧೂತಕಿಲ್ಬಿಷವಾವುದದು ಧ । ರ್ಮಾತಿಶಯವಿಹಪರಕೆ ಕಡುಹಿತವೆಂದನಾ
ಪಾರ್ಥ ॥೧೦॥ ರಾಗಲೋಭವ್ಯಾಪ್ತಿಯಲಿ ನೀ । ವೀಗುರುವಿಗಳುಪುವರೆ ಸಲೆ ಧ । ರ್ಮಾಗಮವನಾಚರಿ
ಸುವದಲೇ ನಮ್ಮನುಷ್ಠಾನ ॥ ಈಗಳೀಗುರುವಚನಧರ್ಮ । ತ್ಯಾಗವೇನಿದು ಧರ್ಮವೇ ಯುಪ । ಭೋಗ

ಸ್ರೈವರಿಗೆಂದು ತಿಳುಹಿದನವರಸಾಪಾರ್ಥ ॥೧೧॥ ಪೊಡದಿರಿ ಸಂದೇಹಗಳ ಖಯ । ಬಿೋಡಿಯಿದರೊಳಗಿಲ್ಲ ಧರ್ಮದ । ಮೂಡಿಗೆಯೊಳಂಬಿರಲು ಬಹಿರಂಗದಲಿ ಬಳಸಧಿರಿ ॥ ಗೂಡುಹಲವಿಹಪಕ್ಷಿಯೊಂದಿದ । ನಾಡಬಾರದು ನಾಕು ಚಿಂತಿಸ । ಬೇಡಿ ನೀವೆಂದನಿಬರನು ತಿಳುಹಿದನು ಕಲಿಪಾರ್ಥ ॥೧೨॥ ಆದುದನುಮತ ತಮ್ಮೊಳಗೆ ತ । ತ್ಸೋದರರು ಸೌಹಾರ್ದದಿಂದ ತ । ಳೋದರಿಯನೊಲಿದೈವರಂಗೀಕರಿಸಿದರು ಬಳಿಕ ॥ ಆದರಣೆಯಲಿ ಕುಂತಿ ಸೊಸೆಗೆ ವೃ । ಕೋದರನ ಭೀಕ್ಷಾನ್ನಭಾಗದ । ಭೇದವನು ತಿಳುಹಿದಳು ತೊಡೆಯಲಿ ತೆಗೆನು ಕುಳ್ಳಿರಿಸಿ ॥೧೩॥ ಇಳಿದನಸ್ತಾಚಲಕೆ ರವಿನೃಪ । ತಿಲಕರೈವರು ವಿಹಿತಕೃತ್ಯಾ । ವಳಿಗಳನು ವಿಸ್ತರಿಸಿ ಕುಂತಿಯ ಚರಣಕಭಿನಮಿಸಿ ॥ ಜಲರುಹಾಕ್ಷನ ನಾಮಕೀರ್ತನ । ಲುಳಿತಪರಮಾನಂದರಸದಲಿ । ಮುಳುಗಿ ಮೂಡುತ್ತಿರ್ದರಂದು ಕುಲಾಲಭವನದಲಿ ॥೧೪॥ ಸಿಲುಕಿದುದು ಜನದೃಷ್ಟಿ ಬಲುಗ । ತ್ತಲೆಯ ಬಂಧದೊಳಂಧಕಾರದ । ಜಲಧಿಯಲಿ ಜಗವದ್ದುದೇನೆಂಬೆನು ಮಹಾದ್ಭುತವ ॥ ನಳಿನಮಿತ್ರನ ಬೇಹುಕಾರರ । ಸುಳಿವೊ ತಿಮಿರದ ಪಾಳೆಯದೊಳೆಸೆ । ನಿಳಯನಿಳಯದಸೊಡರು ತಳಿತುದು ಕೂಡೆ ನಗರಿಯಲಿ ॥೧೫॥ ಇವರಿಗುಂಟೇ ದೀಪತೈಲ। ದ್ರವಿಣವಿಲ್ಲ ಕುಲಾಲಭನನಕೆ। ಕಪಿವಕಗ್ಗತ್ತಲೆಯ ನುಗ್ಗೊತ್ತಿದುದು ಬೇರೊಂದು ॥ ನವಯುವತಿಯಾಭರಣಮಣಿರುಚಿ। ನಿವಹವಾಕೆಯ ನಯನಕಾಂತಿಗ । ಳವನಿಪತಿ ಕೇಳ್ನಿನ್ನ ಪಿತನ ಪಿತಾಮಹರ ಪರಿಯ॥೧೬॥ಜನಪನಂದನೆಗೊಂಡುಕೃಷ್ಣಾ। ಜಿನವನಿತ್ತರು ಶಯನಭಾಗಕೆ। ಜನನಿಯಂಘ್ರಿಯ ಬಳಿಯಲೊರಗಿದರೈವರೊಂದಾಗ ॥ ವನಿತೆಯವರಂಘ್ರಿಗಳ ತಲೆಗಿಂ । ಬಿನಲಿ ಮಲಗಿದಳಂದಿನಾಹವ । ಜನಿತಕೃತಿಯನು ನುಡಿವುತಿರ್ದನು ಪಾರ್ಥನರಸಂಗೆ ॥೧೭॥ ಗೆಲಿದಪರಿಯನು ಕೌರವೇಂದ್ರನ। ದಳವ ಮುರಿದಂದವನು ಕರ್ಣನ। ನಳುಕದೆಚ್ಚ ಶರಪ್ರಯೋಗದ ಚಾಪಕೌಶಲವ ॥ ಬಲಜಲಧಿ ಮುಕ್ಕಿರಿಕಿದೊಡೆ ಮಂ । ಡಲಿಸಿ ಮೊಗೆದಂದವನು ಶಸ್ತ್ರ । ವಳಿಯ ಸಂಹರಣವನು ವಿವರಿಸಿದನು ಮಹೀಪತಿಗೆ ॥೧೮॥ ಕುದಿರೆಯೇರಾಟವನು ಮಾತಂ । ಗದಸುಶಿಕ್ಷಾಬೇಧವನು ರಥ । ಚದಿತಕೌಶಲವನು ಶರಾಸನವೇದಸಂಗತಿಯ ॥ ಮದವದರಿಭಂಜನವ ದಿವ್ಯಾ । ಸ್ತ್ರದಲಿ ಮುಕ್ತಾಮುಕ್ತಸಮರಂ । ಗದ ಸುಸಂಗತಿಯಿಂದ ನೂಕಿದರಿವರು ಯಾಮಿನಿಯ ॥೧೯॥ ಆಯುಧದ ಲಕ್ಷಣವನಾದಿ। ವ್ಯಾಯುಧದ ಮಂತ್ರಪ್ರಭಾವವ । ನಾಯುಧದ ವಿವಿಧಪ್ರಯೋಗವನವರಪರಿವಿಡಿಯ ॥ ರಾಯರಂಗದ ಶಕ್ತಿವರ್ಗವು । ಪಾಯಗುಣಪಿಕ್ರಮ ಪರಾಕ್ರಮ । ನಾಯಕರ ಗುಣಕಥನದಲಿ ನೂಕಿದರು ಯಾಮಿನಿಯ ॥೨೦॥ ಮುನಿವಳೀಸತಿಯೆಂದಜನಿದಾಘಂ । ಗನೆಯು ನೂಕಿದರವನಿಸರು ಭಾ । ಮಿನಿಸಹಿತಲಿರಲಿತ್ತಲೀಪಾಂಚಾಲಭೂಪತಿಯ ॥ ತನುಜನಿವರಪರೀಕ್ಷೆಗೋಸುಗ । ಮುನಿಪಕಾಶ್ಯಪಗೂಡಿ ಕೇಳಿದ । ನನಿತುಮಾತೆಲ್ಲವನು ಮರೆಯಲಿ ನಿಂದು ರಜನಿಯಲಿ ॥೨೧॥ ಬಂದು ಧೃಷ್ಟದ್ಯುಮ್ನನಯ್ಯಂಗೆಂದವನಿನನಸ್ತಮಯುಸಂಧ್ಯಾ । ವಂದನೆಯ ತರುವಾಯ ಶಸ್ತ್ರಾಸ್ತ್ರಪ್ರಸಂಗದಲಿ॥ಸಂದಗಜಹಯರಥದ ಪರಿವಿಡಿ।ಯಿಂದವರು ನೃಪನೀತಿಸಂಗತಿ। ಯಿಂದ ರಾತ್ರಿಯ ಕಳಿದರಾರೆಂದರಿಯೆನಾನೆಂದ ॥೨೨॥ ಧರಣಿಪತಿ ಕೇಳ್ವಿಪ್ರರಾದೊಡೆ। ಸರಸನವಭೋಜನದ ಕಥೆ ಮೇ । ಣ್ಸಿರತಿಶಯವೇದಾಂಗವೇಪತೆದರ್ಥತರ್ಕಗಳ ॥ ಅರಸುಗಳಿಗಾಯುಧದ ಗಜರಥ । ತುರಗದೇರಾಟದ ಮಹಾಸ್ತ್ರದ । ವಿರಚನೆಗಳಿವುಜಾತಿವಿದ್ಯೆಗಳೆಂದನಾಮುನಿಪ ॥೨೩॥ ಭೂರಿಧನವರ್ಥನಸ

ದಾವ್ಯವಿಹಾರಲಾಭಾಲಾಭಚಿಂತೆಗ । ಳೂರುಜನಿ ಶರಿಗಂತ್ಯವರ್ಣಕೆಕೃಷಿಯವೊಾತುಗಳು ॥ ಆರನಾದರು
ಜಾತಿಧರ್ಮದ । ಸೇರುವೆಗಳೇ ಹೇಳುವುವು ನ । ಮ್ಮಾರೆಯಕೆಗಿವರಿಂದುಕ್ಷತ್ರಿಯರೆಂದು ಮುನಿನುಡಿದ
॥೨೪॥ ಇವರು ಪಾರ್ಥವರೊಗೆ ಕೇಳ್ವಾಂ । ಡವರು ನಿಸ್ಸಂದೇಹವೆಂದೇ । ನಿವಗೆ ಸಾವೆನ್ನೆವೆ ವಿವಾಹವ
ಪೂರ್ವಕಾಲದಲಿ ॥ ಅವರನುಪಚರಿಸೇಳು ರಚಿಸು । ತ್ಸವವಹಾಯ್ತಿದೆ ಪೂರ್ವಗಿರಿಯುಲಿ । ರವಿ
ಯುದಯವೆಂದಾಪುರೋಹಿತ ತಿಳುಹಿವನು ನೃಪನ ॥೨೫॥ ಬಳಗೆಯುಂಯಿತು ಮತ್ತೆ ಗುಡಿಯೆ । ತ್ತಿಸಿ
ತು ನಗರಿಯೊಳಧಿಕಹರುಷ । ವ್ಯಸರದಲಿ ರೋಮಾಳಿ ಪಲ್ಲವಿಸಿದುದು ನರಪತಿಯ ॥ ಬಿಸಜಬಂಧುವಿ
ನುದಯದಲಿ ನೃಪ । ವಿಸರಸಹಿತ ಕುಲಾಲಭವನದ । ವಸುಮತೀವಲ್ಲಭರ ಕಂಡನು ಬಂದುಪಾಂಚಾಲ॥
ಏಳಿ ಬಿಜಯಂಗೈವುದೆಂದು ನೃ । ಪಾಲಕರನುಚಿತದಲಿ ನಿಜಪಾ । ಜಾಲಯಕೆ ತಂದನು ನಿರೀಕ್ಷಿ
ಸುತನಿಬಿರಂಗಿತವ ॥ ಮೇಲುಮೊಗದ ಗಭೀರಗತಿಯ ಛ । ಡಾಳವನು ಕಂಡವರು ರಾಯರ । ಪೀಳಿಗೆಗಳ
ಹುದೆಂದು ನಿಶ್ಚೈಸಿದನು ಮನದೊಳಗೆ ॥೨೭॥ ಮುಮ ಮಂಗಳಮಜ್ಜನವ ಮಾ । ಡಿದರು ದಿವ್ಯಾಂ
ಬರವನುಟ್ಟರು । ಸುದತಿಯರ ಪರಿವಾಣದಾರತಿಗಳನು ಕೈಕೊಳುತ ॥ ಪದಕಕರ್ಣಾಭರಣಹಾರಾಂ ।
ಗದವಿನೊಪ್ಪಂಬಡೆದಿವನು ಪೂ । ಸಿದರು ಸಾಮಜವಾಜಿಕತ್ತರಿಯಕ್ಷಕರ್ದಮವ ॥೨೮॥ ಬಾಸಿಗದ
ನೊಸಲಿನಲಿ ಮೆರೆವವು । ಹೇಶರ್ರವರು ಮಂಟಪದ ನೆಲ । ವಾಸಿಸಲಿ ಕುಳ್ಳಿರ್ದರನುಪಮರಾಜತೇಜ
ದಲಿ ॥ ಆಸೊಳಿಯ ಸಂಗಾತ ಕುಂತಿಪ । ಲಾಸದಲಿ ಕುಳ್ಳಿರ್ದಳಾವಿ । ಸ್ಯಾಸವನು ಜನ ನೋಡುತಿ
ರ್ದುದು ಬಿಗಿದಬೆರಗಿನಲಿ ॥೨೯॥ ಜಲವನಂಬಳಿಯಿಂದ ದ್ರುಪದನು । ತಳೆದುಮರೆದವ ಬರಲಿ ಯಂ
ತ್ರವ । ಗೆಲಿಪಗರುವನು ನಿಮ್ಮಪಂಚಕರೊಳಗೆಯೆನೆನಗುತ ॥ ಇಳಿದನವನಿಪ ಭೀಮನೊಯ್ಯನೆ । ಸುಳಿ
ವನರ್ಜುನ ಹಿಂದೆ ಯಮಳರು । ನಳಿನವದನೆಯ ಹೊರಗೆ ಬಂದರು ಭೂಪಕೇಳೆಂದ ॥೩೦॥ ಬಿಸುಟನಂ
ಜಳಿಯುದಕವನುನಿ । ಪ್ಪಸರದಲಿ ಬೆರಗಾಗಿ ಭೂಪರ । ಮುಸುಡನೆವೆಯಿಕ್ಕದೆ ನಿರೀಕ್ಷಿಸುತೆಂದನಾದ್ರು
ಪದ ॥ ಅಸುರರೋ ಸುರರೋ ಭುಜಂಗರೊ । ವಸುಮತೀಶರೊ ನೀವು ಛಟಮಾ । ನಿಸರ ಪರುಠವ
ವಲ್ಲ ನೀವಾರೆಂದು ಬೆಸಗೊಂಡ ॥೩೧॥ ಈತನಗ್ರದಭೀಮನರ್ಜುನ । ನೀತನಿವರ್ಗೆ ಯಮಳರಂಬವೆ ।
ರೀತಗಳು ನಮ್ಮಿಂದ ಕಿರಿಯರು ನಾವು ಪಾಂಡವರು ॥ ಮಾತೆಯೆಮ್ಮೈವರಿಗೆ ಜಗವಿ । ಖ್ಯಾತೆ ಕುಂತೀ
ದೇವಿ ತಾನಿಂ । ದೀತಳೋದರಿಯಾವಳೆಮ್ಮೈವರಿಗೆವಧುವೆಂದ ॥೩೨॥ ಕೊಂಡುಹರಿದುದು ಹರುಷ
ವಾಬ್ಧಿ । ಹ್ಮಾಂಡದಗ್ರಕೆ ಮಗಳಿಗೈವರು । ಗಂಡರೆನೆ ಮಗುಳದ್ದುಪಾತನ ಮನ ರಸಾತಳಕೆ ॥ ಕಂಡು
ಬಲ್ಲರೆ ಕಂಗಳಲಿ ಕಿವಿ । ಗೊಂಡು ಕೇಳ್ದಿರೆ ಮುನ್ನ ನವಗೇ । ಭಂಡತನವನು ಮಾಡುವರೆ ನೀವೆಂದ
ನಾದ್ರುಪದ ॥೩೩॥ ಲೋಕಸಂಮತವಲ್ಲ ಶಾಸ್ತ್ರಾ । ನೀಕದಭಿಮತವಲ್ಲ ಕಾಪಥ । ವೇಕೆ ನಿಮಗಿದು
ಪಾಂಡುಪುತ್ರರು ನೀವು ಧಾರ್ಮಿಕರು ॥ ಪ್ರಾಕೃತರೆ ನೀವಕಟ ನಿಮ್ಮ ವಿ । ವೇಕವೇನಾಯ್ತಿಲ್ಲಿಯಿಹ
ಪರ । ಲೋಕಕಿದು ಸಾಧನವೆಯೆಂದನು ದ್ರುಪದಭೂಪಾಲ ॥೩೪॥ ಕಾಮಮೋಹಿತರಲ್ಲ ವಿಷಯ
ಸ್ತೋಮಭಂಗಿತರಲ್ಲ ಧರ್ಮದ । ಸೀಮೆಯೊಳಗೆಳ್ಳನಿತನವಮಾನಿಸುವರಾವಲ್ಲ ॥ ಈಮಹಾಸತಿಯೆ
ಮಗೆ ಜನನಿಯ । ನೇಮದಲಿ ವಧುವಾದಳಿಂದು ವಿ । ರಾಮವೇಕೆ ವಿವೇಕಕೆಂದನು ಧರ್ಮಸುತನಗುತ॥
ಏಕಪತಿಬಹುಸತಿಯರೆಂಬುದು । ಲೋಕಪದ್ಧತಿ ಕಂಡೆವಾವಿಂ । ದೇಕೆ ಪತ್ನಿಗೆ ಪುರುಷಪಂಚಕ

ವನು ಮಹಾದೇವಾ ॥ ಲೋಕಶಾಸ್ತ್ರವಿರುದ್ಧವನು ಕಿವಿ । ಯೋಕರಿಸುತಿದೆ ಕಣ್ಮನಕೆ ಸು । ವ್ಯಾಕು
ಲತೆ ಹಿರಿದಾದುದೆಂದನು ದ್ರುಪದಭೂಪಾಲ ॥೩೬॥ ಆಸಮಯದಲಿ ದೇವವೇದ । ವ್ಯಾಸಮುನಿಯೈತಂ
ದನಲ್ಲಿ ಮ । ಹೀಶಸಭೆಯಿದಿರೆದ್ದು ಕಂಡುದು ಕಾಣಿಕೆಯ ನೀಡಿ ॥ ದೋಷಗರ್ಭಿತಧರ್ಮವನು ನಿ ।
ಶ್ಚೈಸಲರಿಯದಮೂಢಮತಿಗೆ ಮು । ನೀಶ ಕೃಪೆಮಾಡೆಂದು ಪ್ರಿಯೊಕ್ಕಿದನು ಪಾಂಚಾಲ ॥೩೭॥ ನೆಗ
ಹಿದನು ದ್ರುಪದನನು ಯಮಜಾ । ದಿಗಳನೆತ್ತಿದನೊಬ್ಬರೊಬ್ಬರ । ತೆಗೆದು ತಕ್ಕೈಸಿದನು ಮುದದಲಿ
ಪಾಂಡುನಂದನರ ॥ ದುಗುಡವೇಕೈ ದ್ರುಪದನಿನ್ನಯ । ಮಗಳ ಸೌಭಾಗ್ಯದಲರುಂಧತಿ । ಸೊಗಸಿ ರಂ
ಜಿಸಲರಿಯಳೆಂದನು ಕೃಷ್ಣಮುನಿ ನಗುತ ॥೩೮॥ ಅಹುದೆಲೇ ಬಳಿಕೇನು ತಂಗಿಯ । ಬಹಳಸುಕೃತೋ
ದಯದಲರಗಿನ । ಗೃಹದ ಗಂಟಲನೊದೆದು ಸುಳಿದರು ಪಾಂಡುನಂದನರು ॥ ಗಹನಯಂತ್ರವನೆಚ್ಚ ಪಾ
ರ್ಥನ । ಮಹಿಳೆಗೆನ್ನ ಕುಮಾರಿಗೀಗಲು । ಬಹುಪತಿಗಳಾಯ್ತಿದನು ನೀವ್ನಿಶ್ಚೈಸಬೇಕೆಂದ ॥೩೯॥
ದ್ರುಪದಧೃಷ್ಟದ್ಯುಮ್ನಪಾಂಡವ । ನೃಪರು ಕಾಶ್ಯಪಗೂಡಿ ಹೊಕ್ಕರು । ವಿಪುಳತರಕಾರುಣ್ಯದಿಂದೇ
ಕಾಂತಮಂದಿರವ ॥ ನೃಪತಿಸಂಶಯವೇಕೆ ನಾವಿದ । ನಪಹರಿಸುವೆವು ಪಾಂಡುಪುತ್ರರ । ನುಪಚರಿಸು
ವೈವಾಹವನು ವಿಸ್ತರಿಸು ಸಾಕೆಂದ ॥೪೦॥ ವಿಧಿವಿಹಿತಲೋಕಾಪವಾದವ । ನಧಿಕರಿಸಿ ವರ್ಣಾಶ್ರ
ಮಕೆ ಸು । ವ್ಯಧಿಕರಣ ಹುಗದಂತೆ ಸದ್ವ್ಯವಹಾರಮಾರ್ಗದಲಿ ॥ ವಿಧಿಸಿದೊಡೆನಿಮ್ಮಂಘ್ರಿಗಳಸಂ ।
ನಿಧಿಯಲೇ ಪಾಣಿಗ್ರಹಣವನು । ವಿಧುಮುಖಿಗೆ ಮುದದಿಂದ ಮಾಡುವೆನೆಂದನಾದ್ರುಪದ ॥೪೧॥ ಧರ
ಣಿಪತಿ ಕೇಳಿವರ ತಾಯ್ಮಂ । ದರಿಯದಾಡಿದಳಾನುಡಿಯನು । ತ್ತರಿಸಬಾರದು ಧರ್ಮವಿದು ಪರಮಾ
ತೃಭಕ್ತರಿಗೆ ॥ ಗುರುವಚನದ ನಿಮಿತ್ತವರಪತಿ । ಕರಿಸಿ ಚರಿಸಿದಪೂರ್ವಜನ್ಮದ । ಸರಸಿಜಾಕ್ಷಿಯ ಕಥೆ
ಯನರುಪುವೆನಿನ್ನು ಕೇಳೆಂದ ॥೪೨॥ ಮುನ್ನ ನಾರಾಯಣಿಯೆನಿಪುದೀ । ಕನ್ನಿಕೆಯ ಹೆಸರೊಬ್ಬಗು
ಣಸಂ । ಪನ್ನಮುನಿಪನ ವಧು ಪತಿವ್ರತೆಯರಿಗೆ ಗುರುವೆನಿಸಿ ॥ ಉನ್ನತೋನ್ನತಭಕ್ತಿಭಯದಲಿ ।
ತನ್ನ ಪತಿ ಪರದೈವವೆಂದು ವಿ । ಪನ್ನನನು ಕೊಂಡಾಡುತಿರ್ದಳು ರಾಯ ಕೇಳೆಂದ ॥೪೩॥ ಆತ
ಪೋನಿಧಿ ಕುಷ್ಠರೋಗಪ । ರೀತಭೀಭತ್ಸಯಲಿ ಹುದುಗಿರ । ಲೀತಳೋದರಿ ಭಜಿಸುತಿರ್ದಳು ಭಾವಶು
ದ್ಧಿಯಲಿ ॥ ಆತನೀಕೆಯ ಕೃತ್ಯದಲಿ ಭಾ । ವಾತಿಶಯದಲಿ ಖೋಡಿಯನು ಹಿಡಿ । ವಾತನಾಗಿರಲೊಂದು
ದಿನವಿಂತಾಯ್ತು ಕೇಳೆಂದ ॥೪೪॥ ಕೊಳೆತಬೆರಳನು ಭುಕ್ತಶೇಷದೊ । ಳಿಳುಹಿದೊಡೆಕಂಡೀಕೆ
ಚಿತ್ತದೊ । ಳಳುಕದುಪಭೋಗಿಸೆ ಮುನೀಶ್ವರನದಕೆ ಹರುಷದಲಿ ॥ ಎಲೆಗೆ ಮೆಚ್ಚಿದೆನಿನ್ನು ನೀಮನ ।
ವೊಲಿದುದನು ಬೇಡೆನಲು ಬಳಿಕಾ । ಲಲನೆ ನುಡಿದಳು ದಿವ್ಯರೂಪಿನೊಳೆನ್ನ ನೆರೆಯೆಂದು ॥೪೫॥
ದ್ರುಪದ ಕೇಳಾಕುಷ್ಠದೇಹವ । ನಪಹರಿಸಿ ಕಂದರ್ಪರೂಪಿನೊ । ಳುಪಚರಿಸಿ ಕಾಮಿನಿಯನವನತಿಕಾ
ಮಕೇಳಿಯಲಿ ॥ ತಪಸಿ ತಣಿದನು ತನ್ನ ಮುನ್ನಿನ । ತಪವ ನೆನೆದನು ತಣಿಯದಿರೆ ಯಿವಾ । ಚಪಲಲೋ
ಚನೆ ಸೆರಗ ಹಿಡಿದಳು ಹೋಗದಿರಿಯೆನುತ ॥೪೬॥ ದಿಟ್ಟೆಹೆಂಗುಸೆ ನೃಪರ ಬಸುರಲಿ । ಹುಟ್ಟು ನೀ
ಹೋಗೆಂದು ಶಾಪವ । ಕೊಟ್ಟನೀಕೆಗೆ ಹಾಯ್ದನಾಮುನಿಪತಿ ತಪೋವನಕೆ ॥ ನಟ್ಟಡವಿಯಲಿ ನಳಿನ
ಮುಖಿ ಕಂ । ಗೆಟ್ಟು ಭಜಿಸಿದಳಖಿಳದುರಿತಘ । ರಟ್ಟನನು ದಿವಿಜೇಂದ್ರವಂದ್ಯನನಿಂದುಶೇಖರನ ॥೪೭॥
ಹಲವುಕಾಲದಿ ತಪದೊಳಕಟಾ । ಬಳಲಿದಳಲಾ ಮುನಿಯವಧುವೆಂ । ದಿಳಿದನೀಶ್ವರನಾತಪೋವನಕಾಕೆ

ಯಿದಿರಿನಲಿ ॥ ಸುಳಿಯೆ ಕಂದೆರೆದಬಲೆ ಕಂಡಳು । ಸುಲಭನನು ಭಕ್ತರಿಗೆ ತರ್ಕಾ । ವಳಿಗೆ ದುರ್ಲಭ
ನನು ದುರಾಸದವುಹಿಮಧೂರ್ಜಟಿಯ ॥ ತರುಣಿ ಮೈಯಿಕ್ಕಿದಳು ಕರದಲಿ । ಶಿರವನೆಗಹಿದನಬುಜಲೋ
ಚನೆ । ವರವ ಕೊಟ್ಟೆನು ಬೇಡಿಕೊಳ್ಳೆನೆ ತರುಣಿ ತಲೆವಾಗಿ ॥ ಹರಪತಿಂದೇಹಿಪ್ರಭೋಶ್ರಂ । ಕರಪತಿಂ
ದೇಹಿಪ್ರಭೋಯಂ । ವರಸಿಬೇಡಿದಳೈದುಬಾರಿ ಮಹೇಶನಲಿ ವರವ ॥೪೯॥ ಆದೊಡೈವರುಪತಿಗಳ
ಹರು ತ । ಳೋದರಿಯೆ ನಿನಗೆನಲು ಬೆಚ್ಚಿದ । ಳೀದುರಿತ ತನಗೇಕೆನುತ ಸತಿ ಮುಚ್ಚಿದಳು ಕಿವಿಯ ॥
ಆದೊಡಂಜದಿರಂಜದಿರು ವರ । ವೇದಬಾಹಿರವಲ್ಲ ಸತಿಯರೊ । ಳಾದಿಪಾತಿವ್ರತ್ಯ ನಿನಗೆಂದನುಮುಖ
ಧ್ವಂಸಿ ॥೫೦॥ ಶ್ರುತಿಗಳೆಂಬುದೆ ಯೆಮ್ಮನುಡಿ ಸಂ । ಸ್ಮೃತಿಗಳೆಮ್ಮಯಚೇಷ್ಟೆ ಧರ್ಮದ । ಗತಿವಿಚಾ
ರಸಲೆಮ್ಮನೇಮವು ವಿಹಿತವಿಧಿಯೆಂದು ॥ ಕ್ರತುಗಳೀಮಸ್ವಾದಿಗಳು ಸುರ । ತತಿಗಳಬುಜಭವಾದಿದೇವ ।
ಪ್ರತತಿಯಸ್ಮದಾಜ್ಞೆಯೊಳಗೆಂದಾಸತಿಗೆ ಶಿವನುಡಿದ ॥೫೧॥ ನಿನ್ನ ಕಥನವೆ ಪುಣ್ಯಕಥನವು । ನಿನ್ನ
ಚರಿತವೆ ಪುಣ್ಯಚರಿತವು । ನಿನ್ನ ನೆನೆದಂಗನೆಗೆ ಬಹುದು ಪತಿವ್ರತಾಭಾವ ॥ ಎನ್ನನುಜ್ಞೆಗೆ ಧರ್ಮ
ಚಿಂತಾ । ಪನ್ನೆಯಾಗದಿರೆಂದು ಕೃಪೆಯಲಿ । ತನ್ನ ಸಿರಿಕರತಳವನಿರಿಸಿದನುತ್ತಮಾಂಗದಲಿ ॥ ಹರನ
ನುಡಿಯೇ ವೇದ ಹರಸಾ । ಚರಣೆಯೇ ಸನ್ಮಾರ್ಗ ಹರ ಪತಿ । ಕರಸಿ ನುಡಿದುದೆ ಪರಮಪಾವನಧರ್ಮತ
ತ್ವವದು ॥ ಬರೆಹಸಹಿತಾವಿಧಿಯನೊರಸಲು । ಹರ ಸಮರ್ಥನು ಹರನ ಬರೆಹವ । ನೊರಸಲಾಪರ
ತ್ರೋರಿಸಾಬ್ರಹ್ಮಾದಿದೇವರಲಿ ॥೫೩॥ ಅದರಿನೈವರಿಗೇಕೆ ವಧುವೆಂ । ಬುದು ಮಹೇಶ್ವರನಾಜ್ಞೆ
ನೀನಿ । ನ್ನಿದಕೆ ಚಿಂತಿಸಬೇಡ ಬಳಿಕಾಪಾಂಡುನಂದನರ ॥ ಹದನನರುಹುವೆ ಕೇಳು ನೃಪ ಪೂ ।
ರ್ವದಲಿ ಸುರಪತಿ ಶಂಕರನ ಶಾ । ಪದಲಿ ನವೆದನು ಹಲವುಯುಗ ಕೈಲಾಸಕುಹರದಲಿ ॥೫೪॥ ಬಳಿಕ
ಲಿಂದ್ರನು ಮರವೆಯಲಿ ಕಳೆ । ವಳಿಸಲಾತಂಗೀತನಂದದಿ । ಹಲವುಯುಗಸೆರೆಯಾಯ್ತು ರಜತಾಚಲದ
ಕುಹರದಲಿ ॥ ಬಿಲವಲೀಪುಯ್ಯವರಿಂದ್ರರು । ಸಿಲುಕಿದರು ಶಂಕರನ ಖತಿಯಲಿ । ಬಳಿಕ ಬಿಡುಗಡೆ
ಯಾಯ್ತು ಕಾತ್ಯಾಯನಿಯದೆಸೆಯಿಂದ ॥೫೫॥ ಜನಿಸುವುದು ನೀವೈವರಿಂದ್ರರು । ಮನುಜಲೋಕ
ದೊಳರಸುಕುಲದಲಿ । ವನಿತೆ ನಿಮ್ಮೈವರಿಗೆಯಹಳೊಬ್ಬಳೆ ನಿಧಾನವಿದು ॥ ಎನಲು ನಡುಗಿದರಕಟ
ಮೊದಲಲಿ । ಮನುಜಜನ್ಮವೆ ಕಷ್ಟವದರೊಳು । ವನಿತೆಯೊಡಹುಟ್ಟಿದವರಿಗೊಬ್ಬಳೆ ಶಿವಶಿವಾ
ಯೆಂದು ॥೫೬॥ ಹರಹರ ತ್ರಾಯಸ್ವ ಕರುಣಾ । ಕರ ಮಹಾದೇವೀದುರಂತದ । ನರಕಭಾಜನಮುಚಿ
ತವೇ ನಿಮ್ಮಂಘ್ರಿದರ್ಶನಕೆ ॥ ಕರುಣಿಸೈ ಮತ್ತೊಂದುಪಾಯದಲಿ । ವರವನೆನೆ ನಸುನಗುತ ಗೌರೀ ।
ವರನು ತಿಳುಹಿದನೈವರಿಂದ್ರರಿಗರಸ ಕೇಳೆಂದ ॥೫೭॥ ಖೇಡತನವೇಕೆಳ್ಳನಿತು ಖಯ । ಖೋಡಿಯಿ
ದರೊಳಗಿಲ್ಲ ಮುನಿವಧು । ಬೇಡಿದಳು ಪೂರ್ವದಲಿ ವರವನು ಪಂಚವಾಕ್ಯದಲಿ ॥ ಜೋಡೆನಿಸಿದಳು
ನಾರಿ ಧರ್ಮಕೆ । ಕೇಡು ಬಾರದು ನಿಮ್ಮನೆರಕೆ । ಟ್ಟಾಡಿದರ ಬಾಯ್ಹುಳಿವುದೆಂದನುಬಾಲಶಶಿಮೌಳಿ॥
॥೫೮॥ ಎನೆ ಪ್ರಸಾದದಲಿಂದುಶೇಖರ । ನನು ಸುರೇಂದ್ರರು ಬೀಳುಕೊಂಡರು । ಜನಿಸಿದರು ಬಳಿಕವರು
ಮಹಿಯಲಿ ಮರ್ತ್ಯರೂಪಾಗಿ ॥ ನಿನಗೆ ಮಗಳೀವನಿತೆ ಕುಂತಿಯ । ತನುಜರಿವರಳಿಯಂದಿರೇ ನೀ । ನೆನಿ
ತುಧನ್ಯನೊ ಶಿವಯೆನುತ ತಲೆದೂಗಿದನು ಮುನಿಪ ॥೫೯॥ ಎಲೆಮರುಳೆ ಪೂರ್ವದಲಿ ತಾವ್ತಾ । ಮ್ಮೊಳಗೆ
ಗೈದುದಿಸಿದರೆನಿನ್ನನು । ಕಳಿವರಿದು ಬೋಳೈಸಿತಾಹಂಕಾರವಮಕಾರ ॥ ತಿಳಿಯದಿರೆ ನೋಡ್ದಾದೊ

ಡೆನುತ । ಗಳೆಯಮುನಿಪತಿ ದಿವ್ಯದೃಷ್ಟಿಯ । ಸಲಿಸಿದೊಡೆ ನೋಡಿದನು ದ್ರುಪದನು ಪಾಂಡುನಂದನರ ॥೬೦॥ ಮೆರೆವದೇಹಪ್ರಭೆಗಳಲಿ ಮಿರು । ಮಿರುಪದಿವ್ಯಾಭರಣಕಿರಣದ । ತುರುಗಿನಲಿ ತನಿಹೊಳೆವದಿವ್ಯಾಂಬರದಕಾಂತಿಯಲಿ ॥ ಅಲವೊಡಾಯ್ತಿಲ್ಲವಯವಪಕಂ । ಪರಿವತೇಜಃಪುಂಜರಸಮಯ । ಪೆರಕವೆನಲಿವರೈವರೊಪ್ಪಿದರಂದು ತೇಜದಲಿ ॥೬೧॥ ಮನದ ಸಂತೋಷದ ಬಡಿವಡೋವಾಂ । ಚನದ ಹುದುಗುವಹೊದರುಗಂಗಳ । ಜನುಗುವಾತಿನ ಪೂತಪರುಷದ ಹೊಂಗಿದ್ರತ್ನವದ ॥ ಕೊಸವ ಬೆವರಿನ ಕಳಿದಚಿಂತೆಯ । ಮನದಭಾವದ ರಾಗರಸದು । ಬ್ಬಿನಲಿ ಹೊಂಪುಳಿಹೋದನವರನು ಕಂಡು ಪಾಂಚಾಲ ॥೬೨॥ ಅರಸ ಕಂಡ್ರೆ ನರಪತಿಗಳೋ । ಸುರಪತಿಗಳೋ ಮನದಸಂಶಯ । ಪರಿದುದೇ ಪಳಿವಿಲ್ಲಲೌ ಲೇಸಾಗಿ ನೋಡೆನಲು ॥ ಪರಮಪುಣ್ಯ ನೀ ಪುಣ್ಯದಲಿಗೋ । ಚರಿಸಿದ್ರೆ ನಿಮ್ಮೊಡೆಯ ನೇಮವ । ತಿರದೊಳಾಂತೆನು ಧನ್ಯ ತಾನೆಂದರಸ ಕೈಮುಗಿದ ॥೬೩॥ ನಂಬಿದ್ರೈಲೇಸಾಗಿ ಲಗ್ನವಿ । ಲಂಬವಾಗದೆಧಾರೆಯೆರೆ ಕಲಿ । ಶಾಂಬುವಿದೆ ನೀ ಹೋಗು ಕಾಶ್ಯಪ ಹೋಮಸಾಧನವ ॥ ತುಂಬಿ ಪಹಿಲದಲುವನಿಯಮರಕ । ದಂಬ ನೆರೆಯಲಿ ಯೆನಲು ದ್ರುಪದನ । ಹೆಂಬೆಳೆಯ ತನಿಪರುಷ ಹೊಡೆದೋರಿದುದು ಪುಳಕದಲಿ ॥೬೪॥ ಸಾರಿದರು ಮೌಕ್ತಿಕಗಳ ಗುಡ । ಬೀರಗೆಗಳೊದಗಿದವು । ಲಗ್ನವಿಹಾರದಾತೀರ್ವಾದಪಾಯತರವದ ರಭಸದಲಿ ॥ ಧಾರೆಯೆರೆದನು ದ್ರುಪದ ಪಾಂಡುಕು । ಮಾರರಿಗೆ ನಿಜಸುತೆಯನಕಿವಿ । ಸ್ತಾರಸಿತು ವೈವಾಹರಚನೆ ವಿಶಾಲವಿಭವದಲಿ ॥೬೫॥ ಹೋಮಸಮನಂತರದವಳಿಥ । ರಾಮರರ ಪೂಜೆಯಲಿ ಭೂತ । ಸ್ತೋಮತುಷ್ಟಿಯ ಮಾಡಿದರು ಸನ್ಮಾನದಾನದಲಿ ॥ ಆವಯುನಿಂದ್ರಂಗೆರಗಿದರು ನೃಪ । ಭೀಮಹಾಸತಿಸಹಿತ ಪ್ರಿಯದಲಿ । ಪ್ರೇಮದಲಿ ಪ್ರಿಯಮಗಿಗಿ ತೆಗೆದಪ್ಪಿದನು ಪಾಂಡವರು ॥೬೬॥ ಪರಮವೈಭವದಲಿ ಚತುರ್ಥಿಯ । ಮರುದಿವಸದೋಕುಳಿಯ ಪುರಜನ । ಪರಿಜನದ ಸುಮ್ಮಾನಶರಧಿಯ ಸಾರಸಂಪದವ ॥ ವರಮುನಿಪನೀಕ್ಷಿಸಿದನನಿಬರ । ಪರಸಿ ನಯನೀತಿಗಳ ಹೇಳಿದ । ಮರಳಿ ಬಿಲಯಂಗೈದು ಹೊಕ್ಕನು ಬದರಿಕಾಶ್ರಮವ ॥

ಅಂತು ಸಂಧಿ ೧೬ ಕ್ಕೆ ಪದ ೭೫೬ ಕಂ ಮಂಗಳಮಸ್ತು.

ಹದಿನೇಳನೆಯ ಸಂಧಿ.

ಸೂಚನೆ॥ ಧಾಳಿಯಲಿ ಬಂದರಿಬಲದ ಪೆ । ಚ್ಚಾಳತನವನು ಮುರಿದು ಸಂಧಿಯ ।
ಮೇಲೆ ಧರ್ಮಜ ಬಂದು ಹೊಕ್ಕನು ಹಸ್ತಿನಾಪುರವ ।

ಕೇಳು ಜನಮೇಜಯನೃಪತಿ ಪಾಂ । ಚಾಲಸುತೆಯ ವಿವಾಹವಾರ್ತೆಯ । ಕೇಳಿದಯಲ್ಕೈ ಕೌರವರು ಮರುಗಿದರು ಮರುಕುಳಿಸಿ ॥ ಆಳನೆರಹಿದನಖಿಳದಳದೆ । ಕ್ಖಾಳವನು ನೋಡಿದರು ಭೂಮಿಪಾ । ಪಾಲಸಂಕುಲಸಹಿತ ಬಂದರು ದ್ರುಪದಪುರಿಗಾಗಿ ॥೧॥ ಏನ ಹೇಳುವೆ ನಿನ್ನವರ ಜಯ । ಮಾನವ

ಮತ್ತೊಂದುಮುಖ್ಯೈಕದ । ಮಾನಭಂಗಸ್ಥಿತಿಯನೆಲೆಜನಮೇಜಯಕ್ಷಿತಿಪಾ ॥ ಭಾನುವಿನ ಮುಂಚಿನ ಶಿಲೋಚ್ಚಯ । ಸಾನುವಿನ ವಜ್ರದ ತರಕ್ಷುವ । ಧೇನುವಿನ ಹೋರಟೆಯ ಹವಣಾದು ಭೂಪಕೇಳೆಂದ ॥೨॥ ಮುರಿದುದಾಹೆಬ್ಬಲ ವಿಘಾತಿಯ । ಲೊರಗಿದರು ಪಟುಭಟರು ಗಜಹಯ । ದೊರತೆ ಬತ್ತಿತು ಭೀಮ ಪಾರ್ಥರ ಶರನಿದಾಘದಲಿ ॥ ಉರುಕುಗೊಂಡರು ನಿಚ್ಚಟರು ಕೈ । ಮರೆದುಪಾಚೆಯ ದೊರೆಗಳಿವದಿರು । ನೆರೆ ವಿಭಾಡಿಸ ತೆಗೆದುಹಾಯ್ದರು ಹಸ್ತಿನಾಪುರಕೆ ॥೩॥ ಬಳಿಕ ಪಾಂಚಾಲಕನ ಭೀತಿಯ । ಮೊಳಕೆಯುರಿದುದು ಹರಿದುಮತ್ಸರಜಲಧಿವಳಯದ ಭೂತಳಾಗ್ರದ ಭೂತಳೇಂದ್ರರಲಿ ॥ ಹೊಳೆಹೊಳೆವರವಿರಶ್ಮಿಗಳ್ವ್ರ । ಜ್ವಲಿಸುವಂತಿರೆ ಪಾಂಡುನಂದನ । ರಳಹಿನುಬ್ಬಟೆ ಬಿಸಿಲು ನೆರೆ ಪಸರಿಸಿತ್ತು ದೆಸೆದೆಸೆಗೆ ॥೪॥ ಬಂದನಲ್ಲಿಗೆ ಸಕಲಯಾದವ । ವೃಂದಸಹಿತ ಮುರಾರಿ ಕುಂತೀ । ನಂದನರು ಬರಲಿದಿರುಗಾಣಿಸಿಕೊಂಡನುಚಿತದಲಿ ॥ ತಂದಬಹುವಿಧವಸ್ತುಕಾರವ । ನಂದು ಕೊಟ್ಟನು ಗಜರಥಾಶ್ವವ । ನಿಂದುವದನೆಯರಿಗೆ ವಿಚಿತ್ರಾಂಬರವಿಭೂಷಣವ ॥೫॥ ಮಗನೆ ಧರ್ಮಜ ಕೇಳು ಭೀಮಾ । ಟಗಳೆ ಹುರಿಯವೃಷ್ಣಿದೇವಸ । ಮಗನು ಸೋದರಮಾವನೀತನು ನಿಮಗೆ ವಸುದೇವ ॥ ವಿಗತಲೀಯಾಪದವನ್ನ ಪರು ಬರಿ । ಘಗಳು ನಿಮಗೆಂದೈವರೆನು ಕೈ । ನೆಗಹಿ ಕಮಲೋದರನ ಕೈಯಲಿ ಕೊಟ್ಟಳಾಕುಂತಿ ॥೬॥ ವನದೊಳಪಗತನಾದನಿವರ । ಯ್ಯನು ಕುಮಾರರ ಬಾಲ್ಯಕಾಲದೊ । ಳೆನಗೆ ರಕ್ಷಾಭಾರ ಬಿದ್ದುದು ಪತಿಪರೋಕ್ಷದಲಿ ॥ ಇನಿಬರನು ಗಜಪುರಿಗೆ ಕೊಂಡೊ । ಯ್ದನು ಸುಯೋಧನನಿಂದ ವೈರವು ಜನಿತವಾಯಿತು ಬಳಿಕ ಲಾಕ್ಷಾಭವನದಹನದಲಿ ॥೭॥ ಉರಿಯೊಳುಳಿದೆವು ನಿಮ್ಮ ಚರಣ । ಸ್ಮರಣಬಲದಲಿ ಬಹಳವಿಪಿನಾಂ । ತರದೊಳಗೆ ತೊಳಲಿದೆವು ಹೊರೆದೆವು ಸಾಯದೊಡಲುಗಳ ॥ ಬರಬರಲು ತತ್ಸರ್ವದುಃಖೋ । ತ್ತರನಿವಾರಣ ದ್ರುಪದಕನ್ಯಾ । ವರಣ ನಿನ್ನಂಘ್ರಿದರುಶನವೆಂದಳಾಕುಂತಿ ॥೮॥ ದೇವಿ ಚಿತ್ತೈಸೌಪಚಾರಿಕ । ಭಾವವೇ ಧರ್ಮಜನು ಭೀಮನು । ಭಾವನವರು ಧನಂಜಯಾದಿಗಳೆಮಗೆ ಮೈದುನರು ॥ ಈಯುಪಾಧಿಸ್ಥಳದೊಳಂತ । ರ್ಜೀವನಪ್ರಾಣಾದಿವಾಯುಗ । ಳಾವು ನಿಮ್ಮೈವರಿಗೆ ಕಾರಣವೆಂದನಸುರಾರಿ ॥೯॥ ದ್ರುಪದ ಗುಡಿಗಟ್ಟಿದನು ಕುಂತಿಯ । ವಿಪುಳಹರುಷವನೇನನೆಂಬೆನು । ದ್ರುಪದಯದುಪರಿವಾರವುಲಿದುದು ಜಲಧಿಘೋಷದಲಿ ॥ ಅಪದೆಸೆಯ ಮುಗಿಲೊಡೆದು ಹೊಳೆಹೊಳೆ । ದುಪರಚರರವಿಯಂತೆ ತತ್ಕ್ಷಣ । ವಿಪುಳತೇಜಃಪುಂಜರೆಸೆದರು ಪಾಂಡುನಂದನರು ॥೧೦॥ ಇದಿರೊಳವನಿಪ ಭೀಮನೆಡವಂ । ಕದಲಿ ಮಾದ್ರೀಸುತರು ಬಲವಂ । ಕದಲಿ ದೇವಕಿಕುಂತಿವಸುದೇವಾದಿಯದುನಿಕರ ॥ ಮುದದಿಯೈವರ ರಮಣಿ ಬಲವಂ । ಕದಲಿ ಕರುಣಾಳುವಿನ ವಾಮಾಂ । ಕದಲಿ ಫಲುಗುಣನೊಪ್ಪೆ ಮೆರೆದನು ದಾನವಧ್ವಂಸಿ ॥೧೧॥ ಆವುದೋ ಧರ್ಮಜನ ಭೀಮನ । ಭಾವಶುದ್ಧಿ ಧನಂಜಯನ ಸುಕೃ । ತಾವಲಂಬನಸಾರವೆಂತುಟೊ ಶಿವಮಹಾದೇವಾ ॥ ತಾವುಗಾಣವು ವೇದವುಪನಿಷ । ದಾವಳಿಗಳೋಲೈಸಿ ಕೃಷ್ಣ ಕೃ । ಪಾವಿಲಾಸವನೋಡಿಯೆಂದುದು ಸಕಲಸುರನಿಕರ ॥೧೨॥ ಅರಸ ಚಿತ್ತೈಸಂದಿನೋಲಗ । ಹರೆದುದಾಹರಿಸನೆ ಬಿಟ್ಟುದು । ಪುರದ ಬಹಿರುದ್ಯಾನವೀಥಿಗಳೊಳಗೆಹರಹಿನಲಿ ॥ ಕುರುನೃಪಾಲನ ಗುಪ್ತಚಾರರು । ಅರಿದರೀವಾರ್ತೆಯನು ಪುರದಲಿ । ಹರಹಿದರು ನೆರೆ ಕೇಳಿದನು ಧೃತರಾಷ್ಟ್ರನೀಹದನ ॥೧೩॥ ಕರೆಸಿದನು ಗಾಂಗೇಯಗೌತಮ । ಗುರುಸುಯೋಧನಶಲ್ಯಸೈಂಧವ । ಗುರು

ತನುಜರಾಧೇಯವಿದುರಕಳಿಂಗಸೌಬಲರ ॥ ಚರಮುಖಪ್ರತಿಪನ್ನ ಬಂಧುರ । ತರವಚೋವಿನ್ಯಾಸಕರ್ಣ । ಜ್ವರವೊ ಕರ್ಣಾಮೃತವೊ ಕೇಳಿರೆಯೆಂದನಂಧನೃಪ ॥೧೪॥ ಕೇಳಿರೈ ಹೇಳುವೆನು ಯಾದವ । ರಾಳು ಬಂದುದುಗಡ ಜನಾರ್ದನ । ಕೋಳುವೋದನುಗಡ ಯುಧಿಷ್ಠಿರಭೀಮಪಾರ್ಥರಿಗೆ ॥ ಗಾಳಿ ಬೆಂಬಲವಾಗಲುರಿಯಚ । ಡಾಳವನು ನಿರ್ವ್ಯಸಬಹುದೆ ವಿ । ಕಾಳಿಸಿತಲೈ ನಿಮ್ಮ ಗಾರುಡವೆಂದನಾ ನೃಪತಿ ॥೧೫॥ ಎನಲು ಗರ್ಜಿಸುತರಸ ಮುರರಿಪು । ಜನಗಿದೊಡೆ ಗಿರಿ ಜರಿವುದೇ ಯಮ । ತನುಜಭೀಮಾರ್ಜುನರು ಹಿಡಿದಿರೆ ಗಗನವಡಗುವುದೇ ॥ ದನುಜರಿಪುವಿನೊಳೇನಹುದು ಬರ । ಲನಿಮಿಷರು ನೆರವಾಗಿ ರಣದಲಿ । ಜನಪ ನೋಡೆಂದರು ಜಯದ್ರಥಸೌಬಲಾದಿಗಳು ॥೧೬॥ ಕೊರತೆಯಲ್ಲಿದು ನಿನ್ನ ಸಾಮ್ಯಂ । ಡರದೆಪಿ ವರತಿಬಲರು ಕೃಷ್ಣನ । ಬರಿಸಹಾಯದಲೇನು ಭೀಮಾರ್ಜುನರ ಬಲುಹೇನು ॥ ನೆರವಣಿಗೆಯುಳ್ಳವರಲ್ಲೈ ಹೊ । ಕ್ಕಿರಿದರಣಹಸಿಯುಂಡತೇ ನೀ । ಮುಯಿರೇ ಭೂಪಾಲಯೆಂದನು ನಗುತ ಗಾಂಗೇಯ ॥೧೭॥ ಇವರ ಬಲುಹಂತಿರಲಿ ಸಾಕಿ । ನ್ನಿವರ ಕರೆಸು ವಿರೋಧಬಂಧ । ವ್ಯವಹೃತಿಗೆ ಫಲವಿಲ್ಲ ಮೂಲಚ್ಛೇದಕರ್ಮವಿದು ॥ ಅವರು ಮುನ್ನತಿಬಲರು ಕೃಷ್ಣನ । ಹವಣ ನೀನೇ ಬಲ್ಲೆಯಿನ್ನೀ । ಸವಡಿಪಾಳೆಯ ಸೋಕು ಲೇಸಲ್ಲೆಂದನಾಭೀಷ್ಮ ॥೧೮॥ ಕರೆಸು ವಿದುರನ ಕಳುಹಿ ವಾರಣ । ಪುರದ ರಾಜ್ಯವಿಭಾಗವನು ವಿ । ಸ್ತರಿಸಿ ಕೊಡು ಭಂಡಾರವನು ದಾಯಾದಮಾರ್ಗದಲಿ ॥ ನರಯುಧಿಷ್ಠಿರಭೀಮರನು ನೀ । ಬರಿಸು ನಿಮ್ಮವಗುಣವ ನೋಡದೆ । ಬೆರಸಿ ಕೊಡುವೆವು ಕೂಡಿ ಬದುಕುವುದೆಂದನಾಭೀಷ್ಮ ॥೧೯॥ ಕರೆಸಿಕೊಡಿರೈ ನಿಮ್ಮ ಚಿತ್ತಕೆ । ಬರಿಸಿ ನಡೆಸುವೆನೆನ್ನ ಮಕ್ಕಳ । ದುರುಳತನದಿಂದಾದಹಂದಣ ಮಕ್ಕಳಾಟಿಕೆಯ ॥ ಮರೆದು ಕಳೆಯಲಿ ಪಾಂಡುನಂದನ । ರರವಿಗರ ಬಾ ವಿದುರ ಭೀಷ್ಮನ । ಪರಮಮತವೇ ನನ್ನ ಮತ ಹೋಗೆಂದ ಧೃತರಾಷ್ಟ್ರ ॥೨೦॥ ಕಳುಹಿದರು ವಿದುರನನು ಬುದ್ಧಿಯ । ಕಲಿಸಿ ಭೀಷ್ಮಾದಿಗಳು ಪಯಣದ । ಲಲಿತಸನ್ನಾಹದೊಳು ಪರುಠವಿಸಿದನು ಪಾವುಡವ ॥ ಬಳಿಕ ಸುಮುಹೂರ್ತದಲಿ ವಿಪ್ರ । ವಳಿಗಳಾಶೀರ್ವಾದದಲಿ ಮಂ । ಗಳತೆ ಮಿಗಿಲೊಲವಿಂದ ಹಸ್ತಿನಪುರವ ಹೊರವಂಟ ॥೨೧॥ ಕೇಳು ಭೂಪತಿ ಹಲವುಪಯಣದ । ಮೇಲೆ ಪಯಣದಲೈದಿದನು ಪಾಂ । ಚಾಲಪುರವನು ಬಂದನರಮನೆಗಧಿಕಹರ್ಷದಲಿ ॥ ಕೇಳಿದರು ಕೌಂತೇಯರೀತನ । ಲಾಲಿಸಿದರಿದಿರೈದ ತನುಪುಳ । ಕಾಳಿಯಲಿ ಮೈ ಮುಳುಗೆ ತೆಗೆದಪ್ಪಿದರು ತಮುತಮಗೆ ॥೨೨॥ ಕ್ಷೇಮವನು ಕುಶಲವನು ಬಂಧು । ಸ್ತೋಮದಲಿ ಕೇಳಿದರು ತಮ್ಮ । ಕ್ಷೇಮಕುಶಲವ ಹೇಳಿದರು ಪೂರ್ವಾಪರಸ್ಥಿತಿಯ ॥ ಭೂಮಿಪತಿ ಚಿತ್ತೈಸು ಬಳಿಕನ । ರಾಮಣೀಯಕಯಾದವೇಂದ್ರಶ್ರೀ । ರೋಮಣಿಯ ಸಂಮೇಳವನು ಹೇಳಿದನು ವಿದುರಂಗೆ ॥೨೩॥ ತಂದಪಾವುಡವನಿತುವನು ಯಮ । ನಂದನಂಗೊಪ್ಪಿಸಿದ ದ್ರುಪದಮು । ಕುಂದಧೃಷ್ಟದ್ಯುಮ್ನಕಂದರ್ಪಾನಿರುದ್ಧರಿಗೆ ॥ ತಂದವಸ್ತುವನಿತ್ತುವನು ಸಾ । ನಂದದಲಿ ನೀಡಿದನು ನಗುತರ । ವಿಂದನಾಭನ ಪದಕೆ ಮೈಯಿಕ್ಕಿದನು ಭಕ್ತಿಯಲಿ ॥೨೪॥ ತೆಗೆದು ತಕ್ಕೈಸಿದನು ಭೀಷ್ಮಾ । ದಿಗಳ ಕುಶಲವ ಕೇಳಿದನು ನಸು । ನಗುತ ಮೈದಡವಿದನು ವಿದುರನನಾಕೃಪಾಜಲಧಿ ॥ ವಿಗಡನಾಧೃತರಾಷ್ಟ್ರನೀ ಬಂ । ಧುಗಳ ನೆನೆವನೆ ಪಾಂಡುಸುತರಂಗೆ। ಸೊಗಸುವನೆ ನೀ ಬಂದಲೇಸಾಯ್ತೆಂದನಸುರಾರಿ ॥೨೫॥ ಕಳುಹಿದನು ಬೀಡಾರಕಾತನ । ಬಳಿಯ ಪರಿವಾರವನು ಮನ್ನಿಸಿ । ಬಳಿಕ ಮರುದಿನ ಮೇಳವಿಸಿದರು ಮಂತ್ರಶಾಲೆಯಲಿ ॥ ತಿಳುಹಿದನು ಧೃತರಾ

ಷ್ಟ್ರಭೀಷ್ಮರ । ಲಲಿತಮತವನುಬಂಧುವರ್ಗ । ಸ್ಖಲಿತವನು ಸ್ಥಿರಿಸುವುದೆಂದನು ವಿನಯದಲಿ ವಿದುರ ॥ ಕರೆಸಿದನು ಧೃತರಾಷ್ಟ್ರಸಾತನ । ಚರಣವನು ಕಾಬುದು ನದೀಸುತ । ಗುರುಕೃಪರು ನಿಮಗೊಳ್ಳಿದರು ನೀವಖಿಳರಾಜ್ಯದಲಿ ॥೨೭॥ ಮುರಹರನನ ಹುದೆನಿಸಿ ಭೂಮೀ । ಶ್ವರರ ಮೆಚ್ಚಿಸಿ ಭೀಮಸನನುಮನ । ಬರಿಸಿ ಪಾರ್ಥನನೊಲಿಸಿ ಮಾದ್ರೀಸುತರನೊಡಬಡಿಸಿ ॥ ಅರಸಿಗಭಿಮತವೆನಿಸಿ ಪಾಂಚಾ । ಲರಿಗೆ ಕಾರ್ಯವಿದೆನಿಸಿ ಕುಂತಿಗೆ । ಪರಮಹರುಷವ ರಚಿಸಿ ನುಡಿದನು ಸಂಧಿಯನುವಿದುರ ॥೨೮॥ ಕದಡು ತಿಳಿದುದು ಕಾರ್ಯಗತಿಗಾ । ಸ್ಪದವೆಕೊಟ್ಟರು ಬಳಿಕ ಸುಮುಹೂ । ರ್ತದಲಿ ಪಯಣವ ಮಾಡಿದರು ಪಾಂಚಾಲದಳಸಹಿತ ॥ ಯದುಶಿರೋಮಣಿವೆರೆಸಿ ಬಹುಪಯ । ಣದಲಿ ಬಂದರು ಮೇಲೆ ಕೌರವ । ರಿದಿರುಗೊಂಡರು ಕೂಡೆಹೊಕ್ಕರು ಹಸ್ತಿನಾಪುರವ ॥೨೯॥ ಬಂದು ಕಾಣಿಕೆಗೊಟ್ಟು ಗಂಗಾ । ನಂದನ ಧೃತರಾಷ್ಟ್ರನನುಸಾ । ನಂದದಲಿ ಗಾಂಧಾರಿಯನು ಗುರುಗೌತಮಾದಿಗಳ ॥ ವಂದಿಸಿದರಿವರೈವರವರಾ । ನಂದಜಲಪರಿಲುಳಿತನಯನಾ । ಸ್ಪಂದ ಪರಿತೋಷದಲಿ ತೆಗೆದಪ್ಪಿದರು ಪಾಂಡವರ ॥೩೦॥ ಕರೆಸಿ ತನ್ನ ಕುಮಾರಕರನೂ । ರ್ವರನು ಕಾಣಿಸಿದನು ಪರಸ್ಪರ । ಪರಮಸಂಪ್ರೀತಿಗಳ ನಿಬಿಡಾಲಿಂಗನೋತ್ಸವದ ॥ ದರುಶನೋಚಿತಮಾನ್ಯಮಾನ । ಸ್ಫುರಣದಲಿ ವಿಸ್ತರಿಸಿ ಸೈಂಧವ । ಗುರುತನುಜರಾಧೇಯಸೌಬಲರಪ್ಪಿದರು ನೃಪನ ॥೩೧॥ ಯಾದವರು ಪಾಂಚಾಲರಲಿ ಸಂ । ಪಾದಿಸಿದುದನ್ಯೋನ್ಯಘನಸಂ । ವಾದಸುಖಸಂಪ್ರೀತಿಮಿರೆಯಲ್ಕಿಷ್ಟಸತ್ಕಾರ ॥ ಆದುದುತ್ಸವ ಜನಜನಿತ ಹರು । ಷೋದಧಿಯ ಹೊನಲಿನಲಿ ಹಿಂದಣ । ಭೇದಕರ್ದಮವಡಗಿಪೋಯ್ತು ಮನೀಶಕೇಳೆಂದ ॥೩೨॥ ವೀತ್ಯಮರನ್ಯೋನ್ಯಪರಮ । ಪ್ರೀತಿಗಳ ಬೆಳವಿಗೆಯಲಿದ್ದರು । ಭೂತಳಾಧಿಪರೈದುಸಂವತ್ಸರಗಳೊಂಪಾಗಿ ॥ ಖ್ಯಾತವಿದುಪಾಂಚಾಲಪುರದೊಳ । ತೀತವಾಯಿತ್ತೊಂದುವರುಷವ । ಭೀತಧರ್ಮಸುತಂಗೆಮೂವತ್ತಾರುಸಮನಾಯ್ತು ... ... ॥೩೩॥

ಅಂತು ಸಂಧಿ ೧೭ ಕ್ಕೆ ಪದ ೬೪೯ ಕ್ಕಂ ಮಂಗಳಮಸ್ತು.

ಹದಿನೆಂಟನೆಯ ಸಂಧಿ.

ಸೂಚನೆ॥ ದಾಯಭಾಗದೊಳಖಿಳರಾಜ್ಯ । ಶ್ರೀಯ ಹಸುಗೆಯ ಕೊಂಡು ಪಾಂಡವ ।
ರಾಯರೊಪ್ಪಿದರಿಂದ್ರನಿರ್ಮಿತರಾಜಧಾನಿಯಲಿ ॥

ಕೇಳು ಜನಮೇಜಯಧರಿತ್ರೀ । ಪಾಲ ನಿಮ್ಮಯ ಪೂರ್ವಜರು ಸಮ । ಪಾಳಿಗಳ ಸೇರುವೆಯೊಳಿದ್ದರು ಸಾನುರಾಗದಲಿ ॥ ಬೇಳವೋಳದ ಬೇಟೆಗಳ ವ್ರಿ । ಹಾಳಿಗಳ ಜೂಜಿನ ಸಮಂಜಸ । ಲೀಲೆಗಳ ಕೇಳಿಯಲಿ ಕಳಿದರು ವರುಷಪಂಚಕವ ॥೧॥ ಕರೆಸಿದನು ಧೃತರಾಷ್ಟ್ರಭೂಪತಿ । ಮುರಹ

ರನ ದ್ರುಪದನ ಯುಧಿಷ್ಠಿರ । ನರವೃಕೋದರಭೀಷ್ಮಗುರುಕೃಪಕರ್ಣಶಕುನಿಗಳ ॥ ಎರಡುಭಾಗವ ಮಾಡಿ ಪಿತ್ರ್ಯಂ । ಧರೆಯ ರಾಜ್ಯವನುಭಯರಾಯರು । ಹೊರೆಹೊಗದೆ ಪಾಲಿಸಲಿ ಪಂತದೊಳೆಂದ ನಂಧನೃಪ ॥೨॥ ಅಹುದು ಹೊಲ್ಲೆಹವಲ್ಲ ಬುಧ್ಧಿರ । ಕುಹಕ ಕೊಳ್ಳದು ಬೇರೆರಾಜ್ಯದೊ । ಳಿಹರೆ ಸೇರುವೆ ದೃಢವಹುದು ದಾಯಾದಮಾರ್ಗದಲಿ ॥ ಗಹನವೇಕಾಮಿಷಸಮುದ್ಭವ । ದಹಿತತನಮುತ್ತರ ಣಾವತಿದ. । ಸ್ನಹವಲೇ ನೀ ನೆನೆದಹದ ಲೇಸೆಂದನಾಭೀಷ್ಮ ॥೩॥ ಅರಸ ಕೇಳ್ಕೈ ಸಕಲರಾಜ್ಯವ । ನೆರಡು ಭಾಗವ ಮಾಡಿ ಪೂರ್ವೋ । ತ್ತರದ ದಕ್ಷಿಣಪಶ್ಚಿಮಂಗಳ ಹೆಚ್ಚುಕುಂದುಗಳ ॥ ನೃಪನಗರಬರ್ವಟ ಮಡಂಬ । ಸ್ಫುರಿತಖೇಟಗ್ರಾಮವೆಂಬವ । ನೆರಡುಭಾಗವ ಮಾಡಿದರು ಕೂಡಿದರು ಸಮವಾಗಿ ॥೪॥ ಪುರಸುರೇಂದ್ರಪ್ರಸ್ಥ ವರಸಂ । ಗಿರವು ಧರ್ಮಸುತಂಗೆ ಹಸ್ತಿನ । ಪುರಸುಯೋಧನಗುಭಯರಾಯ ರ ರಾಜಧಾನಿಗಳು ॥ ಚರಮದಕ್ಷಿಣವಾಗಿ ಪೂರ್ವೋ । ತ್ತರವಿಲಂಬಿತವಾಗಿ ಓಮಸಾ । ಗರವಮಧ್ಯದ ಭೂಮಿಯನು ಸೇರಿಸಿವರೆರಡಾಗಿ ॥೫॥ ವಾರಣಪ್ರತತಿಯಸಘಾಟದ । ವಾರುವಂಗಳ ಮಣಿಮಯ ದಹೊಂ । ದೇರುಗಳನಾಭರಣವನು ತೆಗೆಸಿದರು ಸಮನಾಗಿ ॥ ಕೌರವರುಪಾಂಡವರುಗಳ ಮನ । ದೋರೆಪೋರೆಯ ತಿಳುಹಿ ವೈರವಿ । ಕಾರವನು ಬಿಡಿಸಿದರು ಭೀಷ್ಮಾದಿಗಳು ಹರುಷದಲಿ ॥೬॥ ಬಳಿಕ ಸುಮುಹೂರ್ತದಲಿ ಹೊರಗುಡಿ । ಬಳಸಿ ಹೊಯ್ದುವು ರಾಣಿವಾಸವ । ನಿಳಯನಿಳಯದ ತಳಿಗೆದಂಬು ಲಮಂಗಳಾರತಿಯ ॥ ಫಲಸಮೂಹದ ಕಾಣಿಕೆಯ ಕೆ, । ಕೊಳುತ ಗಾಂಧಾರಿಗೆ ಮಹೀಶನ । ಲಲನೆ ಯರಗಭಿನಮಿಸಿ ಕಳುಹಿಸಿಕೊಂಡರುಚಿತದಲಿ ॥ ಕಳುಹಲ್ಕೆತಂದಂಧನೃಪತಿಯ । ನಿಲಿಸಿದರು ನಿಳಯ ದಲಿ ಕೌರವ । ಕುಲದ ಸೂರ್ವರ ಕರ್ಣಶಕುನಿಜಯದ್ರಥಾದಿಗಳ ॥ ನಿಲಿಸಿದರು ಗಜಪುರದ ಯೋಜನ । ದಳತೆಯಲಿ ಗುರುಭೀಷ್ಮವಿದುರರು । ಕೆಲವುಪಯಣವ ಬಂದು ಕಳುಹಿಸಿಕೊಂಡರುಚಿತದಲಿ ॥೮॥ ಭೂಮಿಲಂಬದ ನೃಪರ ಒಲದು । ಪ್ಪಾಮವಿಭವದೊಳಸುರರಿಪುಸಹಿ । ತೀಮಹೀಪಾಲಕರು ಬಂದರು ಹಲವುಪಯಣದಲಿ ॥ ರಾಮಣೀಯಕರಚನೆಯುಲಿ ಸು । ತ್ರಾಮನಗರಿಯ ಸೂತ್ರಧಾರೆಯ । ಲಾಮ ನೋಹರವಿಶ್ವಕರ್ಮವಿನಿರ್ಮಿತದಪುರಕೆ ॥೯॥ ಧರಣಿಪತಿ ಚಿತ್ರ್ಕೈಸಿಳಾವೃತ । ಪರುಷಮಧ್ಯದ ಹೇಮ ಗಿರಿಯವೊ । ಲರಮನೆಯ ಸಿರಿ ಸೋಲಿಸಿತು ಸುರರಾಜವೈಭವವ ॥ ಹರಿಯ ವೀಧಿಯ ಸೋಮವೀ ಥಯ । ಮುರಿವುಗಳ ಕೇರಿಗಳ ನೆಲೆಯು । ಪ್ಪರಿಗೆಗಳ ಕೊಂಗಲಸದಲಿ ಹೊಳಹೊಳೆದುದಾನಗರ ॥೧೦॥ ಹೇಮನಿರ್ಮಿತದೇವಸದನ । ಸ್ತೋಮದಲಿ ಮಣಿಮಯದ ಫಣಿಪನ । ಹೇಮವೇದಿಯ ವಿವಿಧರತ್ನಾ ವಳಿಯ ಹಸೆರವಲಿ ॥ ಕಾಮರಿಪುವಿಂಗೊರೆಯಕಟ್ಟುವ । ಸಾಮಲೋಚನೆಯರ ವಿಲಾಸದ । ಲಾಮಹಾ ಪುರವೆಸೆದುದಿಂದ್ರಪ್ರಸ್ಥನಾಮದಲಿ ॥ ನಿತತವಿಭವದಲಿಂದ್ರಸಮರಾ । ವತಿಯ ಹೊಗುವಂದದಲಿ ದ್ರುಪದದಾ । ಚ್ಯುತರು ಸಹಿತವನೀಶಹೊಕ್ಕನು ರಾಜಮಂದಿರವ ॥ ಕೃತಯುಗದೊಳಾತ್ರೇತೆಯಲಿ ಭೂ । ಗತಿಗಳಾದರನಂತಕುಂತೀ । ಸುತರ ಸಿರಿಗೆಣೆಯಾದುದಿಲ್ಲವನೀಶ ಕೇಳೆಂದ ॥೧೨॥ ಬಂದು ಕಂಡುದು ಸಕಲಪುರಜನ । ವಂದು ಕಾಣಿಕೆಯಿತ್ತು ಸುಭಟರ । ಸಂದಣಿಯ ಗಜಹಯರಥದ ಪದಧೂ ತಧೂಳಿಯಲಿ ॥ ಮಂದಿರದ ಬಾಗಿಲಗತಾಗತ । ವೃಂದದೊತ್ತೊತ್ತೆಯಲಿ ಪುರಜನ । ನಿಂದುದಲ್ಲಿಯ ದಲ್ಲಿ ಪಡೆಯದೆ ರಾಜದರ್ಶನವ ॥೧೩॥ ಅತಿಶಯವನೇನೆಂಬೆನಮರಾ । ವತಿಯ ಭೋಗಾವತಿಯ

ಮುಷ್ಯ । ಸ್ಥಿತದ ನಾಯಕರತುನದಂತಿರೆ ಮೆರೆದುದಾನಗರ ॥ ಸತತವೀಪರಿವಿಭವವೀಜನ । ವಿತತಿಗಳ ಸನ್ಮಾರ್ಗದಲಿ ಸಂ । ಗತಿಗಳೀವಿಸ್ತಾರವೀಪರಿಭೂಪಕೇಳೆಂದ ॥೧೪॥ ದ್ರುಪದಧೃಷ್ಟದ್ಯುಮ್ನಮೊದಲಾ । ದಪರಿಮಿತಬಾಂಧವನಿಕಾಯವ । ನುಪಚರಿಸಿ ಕಳುಹಿದನು ಭೂಪತಿ ಪಂಚಕೈಕಯರ ॥ ವಿಪುಳಕಾರುಣ್ಯದಲಿ ಪಾಂಡವ । ನೃಪಜನವ ಸಂತೈಸಿ ದಾನವ । ರಿಪು ನಿಜಾವಾಸಕ್ಕೆ ಬಿಜಯಂಗೈಯಲನುವಾದ ॥೧೫॥ ಕರೆಸಿ ಕುಂತೀ ದ್ರೌಪದಿಯರನು । ಕರುಣವಚನಾಮೃತದ ರಸದಲಿ । ಹೊರೆದು ಕೃತದಾಯಾದವಿಷಮವಿರೋಧವರ್ತನವ ॥ ಅರುಹಿ ಸುಯ್ಧಾನದ ಸಮಾಹಿತ । ತರದ ಬುದ್ಧಿಯಗಲಿಸಿ ಯಾದವ । ರರಸ ಬಿಜಯಂಗೈದನಾದ್ವಾರಕಿಗೆ ಹರುಷದಲಿ ॥೧೬॥ ಕಳುಹಿದನು ಪಾಂಚಾಲರನು ಯದು । ತಿಲಕ ಮೊದಲಾದಖಿಳಬಾಂಧವ । ಕುಲವನುತ್ಸಾಹದಲಿ ಹೊರೆದನು ನಾಡುಬೀಡುಗಳ ॥ ಬೆಳಗುವತೆಯನ್ಯಾಯಪಾರಡಿ । ಕಳವುದಳವುಳಬಾತ್ರಿಡಾವರ । ಕೊಲೆಹುಸಿಗಳಿಲ್ಲಿವರ ರಾಜ್ಯದೊಳರಸ ಕೇಳೆಂದ ॥೧೭॥ ಯಾಗವಹ್ನಿಯ ಧೂಮದಲಿ ದಿಗ । ಭಾಗವಿವರಣವಡಗಿತು ಹವಿ । ರ್ಭಾಗಭೋಜನದಿಂದಲಾಮುದಪೂರ್ಣವಮರರಿಗೆ॥ ಯಾಗದಕ್ಷಿಣೆಗಳಲಿ ಬಹಳ । ತ್ಯಾಗದಾನಕೆ ಲಕ್ಷಕಟಿಸಿ ತಾ । ವಾಗ ಕೈಯಾನರು ಯುಧಿಷ್ಠಿರನೃಪನ ರಾಜ್ಯದಲಿ ॥೧೮॥ ಬಲಿಯ ನಹುಷನ ದುಂದುಮಾರನ । ನಳನ ಸಗರನ ನೃಗನ ಶಾಕುಂ । ತಳನ ಪುರುಕುತ್ಸನ ಹರಿಶ್ಚಂದ್ರನ ಪುರೂರವನ ॥ ಇಳೆಯವಲ್ಲಭರೆನಿಪರಾಜಾ । ವಳಿಯ ಮನವುಚ್ಚಗಳನುರ್ವೀ । ಲಲನೆ ಮರೆದಳು ಮೆರೆದಳಾಧರ್ಮಜನರಾಜ್ಯದಲಿ ॥೧೯॥ ಆದಿಯುಗದೊಳು ಧರ್ಮವಿಪ್ಪುದು । ಪಾದನಾಲ್ಕರ ಗಾಢಗತಿಯಲಿ । ಪಾದಪೂರ್ಣತೆಯವಾದುದಾ ತ್ರೇತಾಪ್ರಭಾವದಲಿ ॥ ಪಾದವೆರಡತಗಿದವು ದ್ವಾಪರ । ದಾದಿಯಲ್ಲಿ ಯುಧಿಷ್ಠಿರನ ರಾ । ಜ್ಯೋದಯದಲಂಕುರಿಸಿ ಸುಳಿವುದು ನಾಲ್ಕುಪಾದದಲಿ ॥೨೦॥ ಅರಸ ಚಿತ್ತೈಸಾಯುಧಿಷ್ಠಿರ । ನರಪತಿಯ ರಾಜ್ಯಪ್ರಭಾವೋ । ತ್ಕರುಷವಿಸ್ತರವೇನನೆಂಬೆನು ನಾಕದಂತಿರಲಿ ॥ ಪರಮವಿಭವದೊಳೊಂದುದಿನವೈ । ವರು ನಿಜಾಸ್ಥಾನದಲಿ ಹರಿವಿಷ್ಟರದೊಳಿರ್ದರು ಕಂಡರತಿದೂರದಲಿ ನಾರದನ ॥೨೧॥ ಬಂದನಿವರೋಲಗಕೆ ಗಗನದಿ । ನಿಂದುಮಂಡಲವಿಳಿವವೋಲ್ನೃಪ । ವೃಂದವೆದ್ದಭಿನಮಿಸಿದುದು ಪದಯುಗಕೆ ಮುನಿಪತಿಯಾ ॥ ಇಂದು ಧನ್ಯರು ನಾವಲಾ ಮುನಿ । ವಂದ್ಯದರ್ಶನವಾಯ್ತು ಪೂರ್ವದಿ । ದೆಂದು ಕುಂತೀತನುಜರುದಿರೆದ್ದಂಘ್ರಿಗೆರಗಿದರು ॥೨೨॥ ಹರಸಿದನು ಮುನಿಯರ್ಘ್ಯಪಾದ್ಯೋ । ತ್ಕರವ ಮಧುಪರ್ಕಾಸನಾದಿಯ । ನುಸಮಾಡಿದನಮರಮುನಿ ಕೈಕೊಂಡ ಹರುಷದಲಿ ॥ ಪರಿಮಿತದಸಮಯದ ವಚೋವಿ । ಸ್ತರಣವುಂಟೆನೆ ರಾಯನೋಲಗ । ಹರದುದವನೀಪಾಲ ಬಿನ್ನಹಮಾಡಿದನು ಮುನಿಗೆ ॥ ಸಸಿ ಬಿಜಯಂಗೈದಹದನೇನ । ಗೇನನುಗ್ರಹವಚನ ನಿಮ್ಮಡಿ । ಗೇನಸಾಚೆಸಗೈವುದೆನಗಾಜ್ಞಾಪಿಸುವುದೆಂದ ॥ ನೀನಘಾಟಿವ ರಾಜಋಷಿ ನೀ । ಮಾನವನೆ ಧರ್ಮಸ್ವರೂಪನು । ನೀನು ಭವಪಾಲೋಕಸಾರ್ಥವು ನಮ್ಮಬರವೆಂದ ॥೨೪॥ ಅನುಜರೆನು ಹೇಳ್ವೊಡೆ ಭೀಮಾ । ರ್ಜುನರು ಮಧುವಾರಂಬೊಡಮರಾಂಗನೆಯರಿಗೆ ನೂರೆಂಟುಮಡಿಯೀದ್ರೌಪದೀದೇವಿ ॥ ಘನಸಹಾಯನು ಹಮಣಿನವನೆಂ । ಬೆನೆ ಚತುರ್ದಶಭುವನಪತಿ ನೃಪ । ನಿನಗೆ ಪಾಡೇಪನ್ನಗೇಂದ್ರಸುರೇಂದ್ರರಿಂದಿನಲಿ ॥೨೫॥ ಅದರೊಡ್ಡೊಂದು ಮೈಮರೆಗೆ ಮಗು । ಮಾವಶಿವಾಪ್ರಸು ಮಹೇಶ್ವರ । ನಾಪಿಯಲಿ ಕರುಣಿಸಿದವರದಲಿ ಪುಣ್ಯಕಥನಪಿದು ॥

ಮೇದಿನಿಯೊಳೇಕಾವಿಷಸ್ಥಿತಿ । ಯಾದಿಯಿಂದು ವಿಗ್ರಹಕೆ ತಮ್ಮೊಳು । ಕಾದಿವರು ಸುಂದೋಪಸುಂದರು ಭೂಪ ಕೇಳೆಂದ ॥೨೭॥ ಅರಸುಗಳು ತಾವಿಬ್ಬರೇಕೋ । ದರರು ಬಲುಗೈಗಳು ಸುರಾಸುರ । ನರರೊಳಡು ಪಾಯೆಯಲಿ ವೆಂಟಣಿಸಿದರು ಭೂತಳವ ॥ ನೆರೆದು ಸುರರು ಸರೋಜಪೀಠಂ । ಗರುಹಿದರು ಬಳಿಕಾತ ನಿವರನು । ಪರಿಹರಿಸುವುದಕೇನುಪಾಯವೆನುತ್ತ ಚಿಂತಿಸಿದ ॥೨೮॥ ಬಳಿಕಸಂಖ್ಯಾತದ ಸುರೋರಗ । ಲಲನೆಯರಲಿ ತಿಲಾಂಶಮಾತ್ರದ । ಚಲುವಿಕೆಯನೇ ತೆಗೆದು ನಿರ್ಮಿಸಿದನು ವರಾಂಗನೆಯ ॥ ಬೆಳಗಿನಾ ಕೆಯ ಹೆಸರು ದಿವಿಜಾ । ವಳಿಯೊಳ್ಳಿದೆ ತಿಲೋತ್ತಮಾಹ್ವಯ । ದಳಿಕುಲಾಳಕಿಗಬುಜಭವ ನೇಮಿಸಿ ದನೀಹದನ ॥ ಅವರ ಕೆಡಿಸುವಹದನ ಕೈಕೊಂ । ಡವನಿಗೈತಂದಳು ವಿನೋದದೊ । ಳಿವದಿರಿದ್ದರು ಬನದೊಳಗೆ ಮದಿರಾಮದೋದ್ಧತರು ॥ ಯುವತಿಯನು ಕಂಡರು ಕಟಾಕ್ಷದ । ಸವಡಿಗೋಲಿಂದೊಡೆ ದುದೆದೆ ಹರಿ । ದವರು ಹಿಡಿದರು ವಾಮದಕ್ಷಿಣಕರಗಳಂಗನೆಯಾ ॥೨೯॥ ಎನಗೆ ವಧು ತಾ ಮುನ್ನ ಕಂಡೆನು । ತನಗೆ ಸತಿ ತಾ ಮುನ್ನ ಹಿಡಿದೆನು । ತನಗೆನಗೆ ನೀ ನಿಲ್ಲು ನೀ ನಿಲ್ಲೆನುತ ಹೊಯ್ದಾಡಿ ॥ ಜನಪರಿಬ್ಬರು ಮಡಿಯಲಮರಾಂ । ಗನೆ ಮುಗುಳ್ನಗೆನಗುತಲಬುಜಾ । ಸನನ ಹೊರೆಗೈತಿದಳು ಕುಂತೀ ತನುಜ ಕೇಳೆಂದ ॥೩೦॥ ಅದರಿನೀಜೀವರಿಗೆ ದುಸ್ಥಿತಿ । ಸ್ವದತಿಯರದೆಸೆಯಿಂದ ರಾಜ್ಯಪ । ಹುದುವಿನಲಿ ಮೋಕ್ಷಾರ್ಥಗತಿಯಲನರ್ಥ ತಪ್ಪದಲೇ ॥ ಸುದತಿ ನಿಮ್ಮೈವರಿಗೆಯಿಹಳಾ । ಪದಿ ಮಹಾಸತಿ ರಾಗ ಲೋಭದ । ಕದನದಲಿ ಕಾಳಗದಿದ್ದೊಡೆ ತುದಿಗೆ ಲೇಸೆಂದ ॥೩೧॥ ಅರಸ ಚಿತ್ತೈಸೊಂದು ವತ್ಸರ । ವಿರಲಿ ನಿಮ್ಮೊಬ್ಬರಲಿ ಸತಿ ಮರು । ವರುಷಕೊಬ್ಬನೊಳಿಂತು ಪಂಚಕಕ್ಕೈದು ವರುಷದಲಿ ॥ ಅರಸಿಯನು ಪತಿಸಹಿತೆ ಮಂಚದೊ । ಳಿರಲು ಕಾಬುದು ಸಲ್ಲದದು ಗೋ । ಚರಿಸಿದೊಡೆ ಬಳಿಕದಕೆ ಪ್ರಾಯಶ್ಚಿತ್ತವಿಧಿಯುಂಟು ॥೩೨॥ ಆರು ಕಂಡರು ಆತನೊಬ್ಬನೆ । ಧಾರುಣಿಯಲಿ ಸುತೀರ್ಥಯಾತ್ರಾ । ಭಾರದಲಿ ತಿರುಗುವದು ಸುತ್ತಲು ವರುಷವೊಂದರಲಿ ॥ ಚಾರುನಿಷ್ಕೃತಿಯೆನಲು ಮುದದಲಿ । ನಾರದನ ದಿವ್ಯೋಪದೇಶಕೆ । ಸಾರಹೃದಯ ಹಸಾದವೆಂದನು ತಮ್ಮದಿರುಸಹಿತ ॥೩೩॥ ಮಂಗಳವ ನಿಮಗೆಂದು ಹಂಸೆಯ । ಬೆಂಗೆ ಹಾಯ್ದನು ಬಳಿಕ ನಭದೊಳ । ಭಂಗಮುನಿಯಡಗಿದನು ತಮ್ಮೊಳಗೆಂದರೀನೃಪರು ॥ ಅಂಗನಾವಿಷಯದಲಿ ಸೀಮಾ । ಸಂಗತಿಯ ಸೇರಿಸಿದನೈ ಮುನಿ । ಪುಂಗವನ ಕರುಣದಲಿ ಗದುಗಿನವೀರನಾರಯಣ ॥೩೪॥

ಅಂತು ಸಂಧಿ ೧೮ ಕ್ಕೆ ಪದ ೮೩೪ ಕ್ಕಂ ಮಂಗಳಮಸ್ತು.

ಹತ್ತೊಂಭತ್ತನೆಯ ಸಂಧಿ.

ಸೂಚನೆ. ಅಸುರಾರಿವಿರೋಧಿಪುರದಲಿ । ವಾಸವಾತ್ಮಜ ಮದುವೆಯಾಗಿ ವಿ
ಲಾಸದಲಿ ಹೊಕ್ಕನು ಸುಭದ್ರಾಸಹಿತನಿಭಪುರವ ||

ಪದ|| ಕೇಳು ಜನಮೇಜಯಧರಿತ್ರೀ । ಪಾಲ ನಾರದಮುನಿ ನರೇಂದ್ರನ । ಬೀಳುಕೊಂಡನು [illegible]ತಿಯಲಿ ಚಿಗಿದನಂಬರಕೆ || ಮೇಲೆ ಬಳಿಕೊಂದವಗಡವನೇ । ಹೇಳುವೆನು ಪಾರ್ಥಂಗೆ ಬಂದುದ [illegible]ಯ್ಕಿಸಲಿ ವಿದೇಶಭ್ರಮಣವಾಯ್ತೆಂದ ||೧|| ನರನ ವಳಿತದೊಳೊಂದುಸಮಯದೊ । ಳಿರುಳು [illegible]ಘೆಯಲಿ ಭೂ । ಸುರರು ಬಾಯ್ಬಿಡುತೈದೆಯಿಂದ್ರಪ್ರಸ್ಥಪುರವರವ || ಮೊರೆಯ ಬಾಯ್ಗಳ [illegible]ಗಳ । ಹುಂದವೃಗಳ ಸೆಕೆಯ ಸುಯ್ಗಳ । ತರವಿಟ್ಟಿಗಳ ಕಳಕಳವ ಕೇಳಿದನು ಕಲಿಪಾರ್ಥ ||೨|| [illegible]ರ ಬಾಧೆಗಳನಾ । ದರಿಸಿ ಕೇಳಿದು ಸಂತವಿಸಿ ಪರಿ । ಹರಿಸಿಕೊಡುವೆನು ದುಷ್ಟಪಾಟಚ್ಚ[illegible] || ಮರಳಿನೀವೆಂದವರ ಬೀಳ್ಕೊಂ । ಡನಿವಾರಣ ಬಂದನಗ್ಗದ । ಶರಧನುವ ಕೊಳೆ [illegible]ಯನ ಸಜ್ಜೆಯರವನೆಗೆ ||೩|| ಸಮಯವೇನೆನೆ ಜೀಯ ರಾಯನು । ರಮಣಿಯೊಡನೇಕಾಂ[illegible]ವಿತ್ತಹರುಷನು ನಿಂದು ನೆನೆದನು ತನ್ನ ಮನದೊಳಗೆ || ಅಮರಮುನಿಮತವೊಂದು ಪ[illegible]ರಮಣಿರಮಣರದರುಶನವಿದ । ಕ್ರಮವೆನಿಪ್ಪದಿವಚನ ಸಂಘಟಿಸಿತ್ತು ತನಗೆಂದ ||೪|| ಕ[illegible]ರಲಿ ಖಳರಭಿ । ಯೋಗವಾತ್ಮಾಶ್ರಮಣ ಬಹುದುರಿ । ತಾಗಮವು ತನಗಾವುದೋ ಕರ್ತವ್ಯ[illegible] || ಈಗಲೀಸಂದಿಗ್ಧಸಮಯ । ತ್ಯಾಗಧರ್ಮವಿರೋಧಕೃತ್ಯವಿ । ಭಾಗವಾವುದೊ ಶಾಸ್ತ್ರದೃಷ್ಟಿಯೊಳೆಂದು ಚಿಂತಿಸಿದ ||೫|| ಎರಡುಪಾತ್ರಕವಿವೆ ಬಲಾಬಲ । ವೆರಡರೊಳು ಸಾಮಾನ್ಯಪಕ್ಷಾಂ । ತರವಿಶೇಷವದಾವುದವರೊಳಗೆಂದು ಚಿತ್ತದಲಿ || ಒರೆದೊರೆದು ನೋಡಿದನು ತೂಕವ । ಬರೆಸಿ ಕಾಹಿನ ಕಂದುಕಂದದನು । ಪರಿಕಿಸುತ ನಿಶ್ಚೈಸಿ ತಿಳಿದನು ತನ್ನ ಮನದೊಳಗೆ ||೬|| ಅರಸನರಸಿಯರೊಂದು ಮಂಚದೊಳಿರಲು ಕಂಡೊಡೆ ಭೂಪ್ರದಕ್ಷಿಣ । ವರುಷವೊಂದರೊಳಿದಕೆ ಪ್ರಾಯಶ್ಚಿತ್ತವಿಧಿಯುಂಟು|| ಧರಣಿಯಮರರುಪಪ್ಲವವ ಪರಿ । ಹರಿಸದಿರಲಾಪಾತಕಕೆ ಸಂ । ಹರಣವುಂಟೇ ಶಾಸ್ತ್ರದೃಷ್ಟಿಯೊಳೆಂದು ಚಿಂತಿಸಿದ ||೭|| ಎನುತ ನರನೊಳಹೊಕ್ಕು ತನ್ನಯ । ಧನುಶರಂಗಳ ಕೊಂಡು ನುಡಿದನು । ಮುನಿವಚನಸಂಘಟಿತನೃಪದಂಪತಿವಿಲೋಕನದ || ಘನದುರಿತನಿಷ್ಕೃತಿಗೆ ವರುಷದೊ । ಳೆನಗೆ ದೇಶಭ್ರಮಣವಾಯ್ತೆಲೆ । ಜನಪ ಚಿಂತಿಸಬೇಡೆನುತ ಹೊರವಂಟನಾಪಾರ್ಥ ||೮|| ಇರಿದು ಕಳ್ಳರ ಪಳ್ಳಿಗಳ ಕುರಿ । ದರಿದು ಭೂಸುರರೂರುಗಳ ಸೆರೆ । ತುರುಳಗಳನು ತಂದಿತ್ತನರ್ಜುನನಾಮಹೀಸುರರ || ತುರುಗಿವಾತ್ರೀವಾದವಾಳಿಗಳು । ಕರೆಯೆ ಹಟ್ಟಿದವೀರಕೀರ್ತಿಯ । ತೊರೆಗಳೊಳು ತೇಕಾಡುತಿರ್ದುದು ಸಕಲಬುಧನಿಕರ ||೯|| ಧಾರುಣೀಪತಿ ಕೇಳು ಗಂಗಾ । ತೀರಕೈದಿದನರ್ಜುನನು ಭಾ । ಗೀರಥೀಸ್ನಾನಾವಗಾಹವಿಶುದ್ಧವಿಗ್ರಹನ || ದೂರದಲಿ ಕಂಡುರಗರಾಜಕುಮಾರಿ ಮರಿಸಿದಳೊಲವಿನಲಿ ಜಂ । ಭಾರಿತನಯನನಿಳುಹಿದಳು ಪಾತಾಳಮಂದಿರಕೆ || ವಿಭವದಲಿ ವಾಸುಕಿಯ ತಂಗಿಯ । ನುಭಯವಂಶವಿಶುದ್ಧೆ

ಯನು ಹಲ । ನಿಭನು ಪಾಣಿಗ್ರಹಣವನು ಮಾಡಿದನು ವೊಲವಿನಲಿ ॥ ಅಭಿವರ್ತಕಿ ಡಾವಿನೋದದ ।
ರಭಸದಲಿದಿನಸವೆಯೆ ಗರ್ಭ । ಪ್ರಭವವಾಯ್ತು ಕುಮಾರ ಜನಿಸಿದನುರಗನಾರಿಯಲಿ ॥೧೧॥ ಸುತ್ತನಿ
ರಾವಾನೆನಿಸಿಸಿ ತೊಳಗಿದ । ನತಿಬಹಳಬಲಸಾತನನು ನಿಜ । ಸತಿಯನಲ್ಲಿಯೆ ನಿಲಿಸಿ ಕಳುಹಿಸಿಕೊಂಡ
ನುಚಿತ್ರದಲಿ ॥ ಕ್ಷಿತಿಗೆ ಬಂದನು ಜಾಹ್ನವೀಸಂ । ಗತಸಮುದ್ರವತೀರದಲಿ ಸೇ । ವಿತಸಕಲತೀರ್ಥೌಘನುಸ್ಸೈಟ
ದನಿಂಪ್ರಟಿಜ್ಮುಖವ ॥೧೨॥ ಅರಸ ಕೇಳುತ್ತರದಪೂರ್ವದ । ಪರಮತೀರ್ಥವ್ರಾತವನು ವಿ । ಸ್ತರಿಸಿ
ಸಾಗರತೀರದಲಿ ದಕ್ಷಿಣದಿಶಾವರಕೆ ॥ ತಿರುಗಿದನು ತತ್ಪಂಚಗೋದಾ । ವರಿಯ ತೀರಕೆ ತುಂಗಭದ್ರಾ
ವರನದಿಯನುತ್ತರಿಸಿ ಕಾಂಚೀನಗರಕೈತಂದ ॥೧೩॥ ಆನಗರದಧಿದೈವನಿಕರಕೆ । ತಾ ನಮಿಸಿ ತತ್ಸಕಲ
ತೀರ್ಥ । ಸ್ನಾನಕರ್ಮವ ರಚಿಸಿ ಬಂದನು ಜಲಧಿತೀರದಲಿ ॥ ವಾನರರ ಭುಜಬಲಸಮಾಖ್ಯಾ । ನೂಪ
ಶಾಸನವನು ಸುರಾಂವಿ । ತಾನರಪಿರಾಮುವನು ಕಂಡನು ಸೇತುಬಂಧನವ ॥೧೪॥ ವರಧನುಷ್ಕೋಟಿ
ಯಲಿ ಮಿಂದಿ । ಶ್ವರಸದಾಂಬುಜಕೆರಗಿ ತತ್ಪುರಿ । ಸರದ ಪಂಚತಟಾಕದಲಿ ಘನಮಕರರೂಪದಲಿ ॥
ಸುರವಧುಗಳಿರಲವರ ಶಾಪವ । ಪರಿಹರಿಸಿ ತತ್ತೀರ್ಥಸೇವಾ । ಪರಮಪಾವನಕರಣಸಾದನು ಭೂಪ
ಕೇಳೆಂದ ॥೧೫॥ ಈತನನು ಕಂಡರಿದು ಪಾಂಡ್ಯಮ । ಹೀತಳಾಧಿಪ ನಿಜಕುಮಾರಿಯ । ನೀತಗಿತ್ತನು
ಬಭ್ರುವಾಹನನಾದನಾಕೆಯಲಿ ॥ ಈತ ಕಳುಹಿಸಿಕೊಂಡು ದೈತ್ಯಾ । ರಾತಿಗೆರಗಿಯನಂತಶಯನ । ಖ್ಯಾತಿ
ವಿಭವವನೀಕ್ಷಿಸುತ ಹರುಷದಲಿ ನಡೆತಂದ ॥೧೬॥ ಸದಿನದವನುತ್ತರಿಸಿ ಹಲಪರ । ಪದಯುಗಳಕಭಿನ
ಮಿಸಿ ತದ್ದೇ । ಶದ ಸುತೀರ್ಥಕ್ಷೇತ್ರವೆನಿತ್ರುಳ್ಳನಿತಸಾದರಿಸಿ ॥ ಮುದದಮುಳಿವಿನಹಂಸೆಗಳ ತನಿ । ಮ
ದದ ಚಾದಗೆವಕ್ಕಿಗಳ ಮೇ । ಘದ ಸನಾಪದ ಮೇಳವವ ನೋಡುತ್ತ ನಡೆತಂದ ॥೧೭॥ ಒಡ್ಡ
ವೆರದುಡು ಮೇಘಘಟೆ ಜಿಸಿ । ಲೊಡ್ಡು ಮುರಿದುದು ಚಂದ್ರಸೂರ್ಯರ । ನಡ್ಡವಿಸಿ ಹಿಡಿಗೂಳ
ಹಿಡಿದವು ಮುಗಿಲ ಚೂಣಿಗಳು ॥ ಕಡ್ಡಿ ತಡೆವುದೆ ಕಡಲನುಡುಗಣ । ದೊಡ್ಡ ಕಾಣೆನು ಮುಗಿಲ ಜನ
ಕಗೆ । ಲಡ್ಡುಗೆಗಳಾದವು ಸಮಸ್ತಗ್ರಹಸುತಾರೆಗಳು ॥೧೮॥ ಆಳ ಕರ ಕಟಕವನು ಸೂರ್ಯನ । ಮೇಲೆ
ಬರಹೇಳೆಂಬ ಮೇಘ ನೃ । ಪಾಲಕನಡಂಗುರವೊ ಮೊಳಗುವವಸಿಡಿಲಿನಬ್ಬರವೊ ॥ ಆಲಿಕಲ್ಲುಗಳೊ
ಮುಗಿಲ ಮುಂಗುಡಿ ॥ ಯಾಳಹೊಯ್ಲಲಿ ಬೀಳ್ವತಾರಾ । ಮಾಲೆಗಳೊ ಜೀಮೂತಲತೆ ಲಂಬಿಸಿದು
ದಂಬರವ ॥೧೯॥ ಮಿಂಚಿದವು ದೆಸೆಗಳಲಿ ಗಮನಕೆ । ಮುಂಚಿದವು ಹಂಸೆಗಳು ನಭದಲಿ । ಹೊಂಚಿ
ದುದು ಜೀವನಕೆ ಜೀವನವಿರಹಿನಿಕುರಂಬ ॥ ಪಂಚಮಿತಿಯರೊ ಮೇಣಿವರು ಪತಿ । ವಂಚಿಸಿಯರೋ
ಗ್ರೀಷ್ಮಕಾಲದ । ಪಂಚತೆಯೊಳಾಲಿಂಗಿಸಿತು ದಿಗ್ವಧುಗಳೆಂಬುದವ ॥೨೦॥ ಜನಪ ಕೇಳ್ಕೆ ಕಾರ್ಮುಗಿಲ
ಮುಂ । ಬನಿಗಳೊಳು ಮಹಿಲದಲಿ ಕೇರಳ । ಜನಪದದ ತೌಳವದ ಕೊಂಕಣ ವಿಷಮವೀಥಿಯಲಿ ॥
ಜಿನುಗಿನಲಿ ಬಹುಮಳೆಗಳಲಿ ನೆನೆ । ನೆನೆದು ಸಾಗರತೀರದಲಿ ಬಂ । ದನು ಕಿರೀಟಿ ವಿಚಾರಿಸುತ ಮುರ
ಹರನ ಪಟ್ಟಣವ ॥೨೧॥ ಪುರವ ಹೊರವಂಟೆಂಟುತಿಂಗಳು । ಪರಿಹರಿಸಿತೀಕೃಷ್ಣರಾಯನ । ಪುರದೊ
ಳಗೆ ನೂಕುವೆನು ವರ್ಷಾಕಾಲವಿಭ್ರಮವ ॥ ವರುಷವೊಂದು ಸಮಾಪ್ತಿ ಬಳಿಕಿನೊ । ಳರಸನಂಘ್ರಿವಿ
ಲೋಕನಾವಿ । ಸ್ತರಣವಹುದೆಂದಾತ ನಿಶ್ಚೈಸಿದನು ಮನದೊಳಗೆ ॥೨೨॥ ಅರಸ ಕೇಳ್ಸನ್ಯಾಸಿವೇಶದ
ಪರಿಕರವನಳವಡಿಸಿ ಶೌರಿಯ । ಪುರದ ಹೊರಬಾಹೆಯಲಿ ಹೆಚ್ಚಿದಬನದ ಮಧ್ಯದಲಿ ॥ ಇರುಳು ಕಗ್ಗ

ತ್ತಲೆಯೊಳಿಕುವ । ಸಿ ಐಳಿಗೆ ಸಲೆ ಸೇವ್ಯಗೊಳುತು । ಬ್ಬರಿಸಿ ಕೃಷ್ಣನ ನೆನೆವುತಿದ್ದನು ಮರನ ಹೊಳ್ಳಿ ನಲಿ ॥೨೩॥ ದೇವನತ್ತಲು ಸತ್ಯಭಾಮಾ । ದೇವಿಯರ ಮೇಳದಲಿ ಯಿರುತಿ । ರ್ದೀವಿಲಾಸವ ನೆನೆದು ನಕ್ಕನು ಶಕ್ರನಂದನನ ॥ ಆವಳೋ ನೆನಹಿನಲಿ ನುಳಿದಳು । ಭಾವದಲಿ ಸುಮ್ಮಾನವೇನೆನೆ । ದೇವಿ ಬೇರೊಂದಿಲ್ಲ ಮನ ನಿಸ್ಸಾಸ್ಸೆ ಕೇಳೆಂದ ॥೨೪॥ ನರನ ನೀ ಕೇಳ್ದರಿಯಲಾ ಸ್ಸೋ । ದರದಮೈದುನನೆ ನಗೆ ಕುಂತಿಯ । ವರಕುಮಾರಕನಾತನೀದ್ವಾರಾವತಿಯ ಹೊರಗೆ ॥ ಮರದ ಪೊಳ್ಳೊಳು ಹೊಕ್ಕು ಸಿಕ್ಕಿದ । ನರಿಯಲ್ಲೊಲ್ಲೆಸಾನೆ ನಾನುಪ । ಚರಿಸಿ ಬಹೆನೆಂದೆನುತ ಮಂಚವನಿಳಿದನಸುರಾರಿ ॥೨೫॥ ಅರಸಿ ಕೇಳೀಬಂದಪಾರ್ಥನ । ಕರೆದುಪಾಯಾಂತರದೊಳೀವೆನು । ಸರಸಿಜಾನನೆಯನು ಸುಭದ್ರೆಯ ನಿಂದುತಪ್ಪಿದೊಡೆ ॥ ಕರೆಸಿ ದುಯೋರ್ಧನಗೆ ಕೊಡಿಸುವ । ಭರವು ಬಲಭದ್ರನದು ಪಾರ್ಥನ । ಬರವು ಲೇಸಾಯ್ತೆನುತ ಹೊರವಂಟನು ನಿಜಾಲಯವ ॥೨೬॥ ಬಂದನಲ್ಲಿಗೆ ಫಲುಗುಣನ ಕಂ । ಡೆಂದನೀ ಸ್ಥಲದ ಸವಿಾಪದೊ । ಳಿಂದು ನಿಲು ಬಲಭದ್ರನೈತಹನುಚಿತವಚನದಲಿ ॥ ಮಂದಿರಕೆ ಬರಹೇಳಿದೊಡೆ ಬಾ । ಹೊಂದಿ ನಿನ್ನಿಷ್ಟಾರ್ಥ ಸಿದ್ಧಿಪ್ಪ ದೆಂದು ಪಾರ್ಥನ ಸಂತವಿಸಿ ಮರಳಿದನು ಮುರ ವೈರಿ ॥೨೭॥ ಪರಮಹಂಸನ ಸುಳಿವು ಸಾಕ್ಷಾ । ತ್ಸರಸಿಜಾಕ್ಷನ ಲೀಲೆಗಡ ನ । ಮ್ಮರಸಭ್ಯುದಯಪ್ರಪಂಚವಿದೆಂದು ನಗರದಲಿ ॥ ಹರಿಪಿದನು ಹುಸಿವಾರ್ತೆಯನು ತಾ । ನರಿಯದಂತಿರೆ ಬಳಿಕ ನೀಲಾಂ । ಬರನು ಬಹಳೋತ್ಸವದೊಳೈದಿದನಾತನಿದ್ದೆಡೆಗೆ ॥೨೮॥ ವಂದಿಸಿದೆನಾಮುನಿಪತಿಯನಘ । ವಂದಿತಾಶೀರ್ವಾದ ಸಂಗತಿ । ಯಿಂದ ಹಿಮಿಸಿದನು ಚತುರ್ದಶವಿದ್ಯೆಗಳಗತಿಯ ॥ ನಿಂದು ಮೂಗನ ಬೆರಳಿನಲಿ ನಾವು ನಂದ ಮಿಗೆ ಬೆರಗಾಗಿ ನಪ್ಪುಯ । ಮಂದಿರಕೆ ನೀವ್ಬಿಜಯಮಾಡುವುದೆನುತ ಕೈಮುಗಿದ ॥೨೯॥ ನಾವು ಭಿಕ್ಷುಕರೆಮಗೆ ರಾಜಗೃ । ಹಾವಲಂಬನವೇಕೆ ಸ್ಥಲವ । ನಾವಳಿಗಳಲಿ ವರನದೀತೀರದಲಿ ವಾಸಿಪೆವು । ಭಾವಿತಪ್ರಾರಬ್ಧಕರ್ಮಫ । ಲಾವಳಿಯನುಪಭೋಗಿಸುತ ದೇ । ಹಾವಸಾನವ ವೀಕ್ಷಿಸುತ್ತಿಹೆವೆಂದನಾ ಪಾರ್ಥ ॥೩೦॥ ಅಹುದು ನಿರ್ವೇಕಾಂತಭವನದೊ । ಳಿಹುದು ಚಾತುರ್ಮಾಸ್ಯವಿದು ಸಂ । ನ್ನಿಹಿತವಾಯ್ತುದನೊಕೆ ಬಿಜಯಂಗೈವುದಿಷ್ಟ್ಯಿಯಲಿ ॥ ವಿಹಿತಚರಿತರು ನೀವಲಾ ನಿ । ರ್ವಹಿಸುವೆನುತಿಶುಶ್ರೂಷೆಯನು ಕಿಂ । ಗಹನವಾಡುವೆಂದು ತಂದನು ಯತಿಯನರಮನೆಗೆ ॥೩೧॥ ಇವರನರಮನೆಯೊಳಗೆ ಕನ್ಯಾ ಭವನಮಧ್ಯದೊಳಿರಿಸಿ ಬಳಿಕಿನೊ । ಳಿವರ ತಿಶುಶ್ರೂಷೆಗೆ ಸುಭದ್ರಾದೇವಿಯನು ಕರೆಸಿ ॥ ಇವರಪೂರ್ವ ಮಹಾತ್ಮಕರು ನೀ । ನಿವರದೇವಾರ್ಚನಸಮಾಧಿ । ಪ್ರವರದಲಿ ಬೆಸಸಿಮುದ ಮಾಡುವುದೆಂದು ನೇಮಿಸಿದ ॥೩೨॥ ಹೊರಗೆ ಕೃಷ್ಣನ ಕರೆದಿವೆಲ್ಲವ । ನರುಹಿದೊಡೆ ಮರುಳಾಡಿದನು ಮೈ । ಮರೆದು ತಂಗಿಯ ನೊಯ್ದು ಬಿಸುಟಿರೆ ಬಣಗುತಿರುಕನಲಿ ॥ ಅರಸುಮಗಳನು ತೊತ್ತುಗೆಲಸಕೆ । ಪರುಠವಿಸಿದಿರೆ ಶಿವಶಿವಾ ನಾ । ವರಿಯೆವಲ್ಲಿಯಲೇಸ ಹೊಲ್ಲೆ ಹವೆಮ್ಮದಲ್ಲೆಂದ ॥೩೩॥ ಮರುಳೆ ನೀಹೋಗಾರನೇನಂ । ದರಿಯೆ ಯತಿ ಸರ್ವಜ್ಞನೀತನು । ತಿರುಕನೇ ಸಾಕ್ಷಾತುಲಕ್ಷ್ಮೀಕಾಂತಸನ್ನಿಭನು ॥ ಬರಲಿ ಮಾಣಲಿ ಹಾನಿವೃದ್ಧಿಯ । ಹರಿಬವೆನ್ನದು ಯತಿಮಹಾತ್ಮರ । ನರಿಯದವರೇ ನಾವೆನುತ ಗಜರಿದನು ಬಲರಾಮ ॥೩೪॥ ಆದೊಡೊಳ್ಳಿತು ತಂಗಿ ಬೆಸಗೈ । ದಾದರಿಸಲೀಯತಿಪತಿಯ ನಿಮ । ಗೀದುರಾಗ್ರಹವೇಕೆ ಕಾಂಬಿರಿ ಫಲ ವನಗ್ರದಲಿ ॥ ಹೋದೆವಿದೆವೆನದೊಳನುತ್ತುಬು । ಜೋದರನು ಹಿಂಗಿದನು ಹರಿಯವಿ । ನೋದರ

ಚನೆಯನೇನನೆಂಬೆನು ಭೂಪ ಕೇಳೆಂದ ||೩೫|| ಬಾಲಕಿಗೆ ಸನ್ಯಾಸಿದೇವರ । ಮೇಲೆ ಮನವಾಯ್ತವರಿಗೀ
ಕೆಯ । ಮೇಲೆ ನೆಲಸಿತು ಚಿತ್ತ ಕಾಣೆನು ಜಪಸಮಾಧಿಗಳ ॥ ಮೇಳವಿಸಿತನ್ಯೋನ್ಯರಾಗ ಚ । ಡಾಳಿಸಿ
ದುದಭಿಲಾಷೆ ಕಾಮನ । ಬೇಳುವೆಗೆ ಬೆಂಡಾದುದಿಬ್ಬರ ಧೈರ್ಯವಡಿಗಡಿಗೆ ||೩೬|| ಮಿಡುಕುವುದು
ಬಾಯ್ಬಿತ್ತವವಳಲಿ । ತೊಡಕಿದುದು ಜಪಮಾಲೆ ಬೆರಳಲಿ । ನಡೆಯುತಿಹುದಕ್ಷಿಗಳು ಮುಕ್ಕುಳಿಸಿಹವು
ಮಾನಿನಿಯ ॥ ಮೃಡನ ಪೂಜೆಗೆ ಕೈ ಸುಭದ್ರೆಯ । ಹಿಡಿಹಿನಲಿ ಮನ ಪರಸಮಾಧಿಯ । ತೊಡಹು
ಹೊರಗೊಳಗಿಂದುಮುಖಿ ನರನಾಥ ಕೇಳೆಂದ ||೩೭|| ಜಾರಿದುದು ಮಳೆಗಾಲವತಿಜಿಳು । ಸೇರಿದುವು
ಮುಗಿಲುಗಳು ಕತ್ತಲೆ । ಸೂರೆವೋದುದು ಹಗಲಿರುಳು ರವಿಶಶಿಗಳುಪಟಳಕೆ ॥ ತಾರಿದುವು ನದಿನದಗಳ
ಭರಕೆ । ಹಾರಿದುವು ಕಳಹಂಸೆಗಳು ತಲೆ । ದೋರಿದುವು ತಾವರೆಗಳೆನೆ ಬಂದುದು ಶರತ್ಸಮಯ||೩೮||
ಸುದತಿಯನು ಶುಭದಿವಸ ಸುಮುಹೂ । ರ್ತದೊಳಿರುಳು ವೈವಾಹವನು ಮಾ । ಡಿದರು ಹರಿವಸುದೇವ
ದೇವಕಿಯುಗ್ರಸೇನನೃಪ ॥ ಮದುವೆಯಾಯಿತು ಬಲನರಿಯದಂ । ದದಲಿ ಹೂಡಿದರಥವನೇರಿಸಿ । ವಧು
ವಳಿಗೆಸಹಿತರ್ಜುನನ ಕಳುಹಿದನು ಮುರವೈರಿ ||೩೯|| ಪುರವ ಹೊರವಂಟವರು ಬರಲು । ಬೈರಣೆಯಾ
ಯ್ತರಮನೆಯೊಳಗೆ ಸಂ । ಕರುಷಣಂಗರುಹಿದರು ಸನ್ಯಾಸಿಯ ಸಮಾಧಿಗಳ ॥ ಅರಸುಮಗಳನು
ಕೊಂಡು ಹಾಯ್ದನೆ । ತಿರುಕಮುನಿ ಮಝುಭಾಪು ಸ ಭಟರ । ಕರೆ ಮುರಾರಿಯ ಮಾತು ತಾಗಿತೆನುತ್ತ
ಗರ್ಜಿಸಿದ ||೪೦|| ಹೇಳಿವೇ ನಾವ್ ಮುನ್ನ ನೀವ್ ನೀ । ಲಾಳಕಿಯ ಕೆಡಿಸಿದಿರಲಾ ನೀ । ವಾಳ ನೆರಹಿ
ದೊಡಿನ್ನು ಮಾಡುವುದೇನು ಕಡುಮುಳಿದು ॥ ಚಾಳಿಸಿದುದಪಕೀರ್ತಿಯಕಟ ವಿ । ಕಾಳಿಸಿತು ಯದುವಂಶ
ವೆನೆ ಕರವಾಳ ಜಡಿದೈದಿದನು ಹಲಧರನರ್ಜುನನ ರಥವ ||೪೧|| ಮುಸುಕಿದನು ನಾರಾಚದಲಿ ನಿ । ಪ್ಪಸ
ರದಲಿ ಹಲಧರನ ಸೇನೆಯ । ಕುಸುರಿದರಿದನು ಕೊಂದನಗಣಿತಬಲವನಾಪಾರ್ಥ ॥ ಏಸವನೇ ಸನ್ಯಾಸಿ
ಮಾಡಿದ । ಹುಸಿಯುಪನ್ಯಾಸಕ್ಕೆ ಕೊಯ್ವೆನು । ರಸನೆಯನು ದೇವಕಿಯ ಮೇಲಾಣೆನುತ ಗರ್ಜಿಸಿದ
||೪೨|| ಬಳಿಕ ಹುಂದನು ಕೃಷ್ಣನೀತನ । ಕೆಲಕೆ ಕರೆದನು ಬಹಳಕೋಪವ । ನಿಲಿಸಿರೇ ಸಾಕಿನ್ನು ವಸು
ದೇವಂಗೆ ದೇವಕಿಗೆ ॥ ಮುಳಿವುದೀತನ ದೋಷವಲ್ಲಿದ । ತಿಳಿದವಾವರ್ಜುನನುಗಡ ನಾ । ವಳುಪಲಿನ್ನೇ
ಕೆನುತ ಬೋಧಿಸಿದನು ಹಲಾಯುಧನ ||೪೩|| ಅಕಟ ದುರ್ಯೋಧನಗೆ ತಪ್ಪಿಸಿ । ಸಕಲಯಾದವರಿಲ್ಲಿಗೈ
ದರೆ । ವಿಕಳಮತಿ ಸಾನ್ಯೆಸಲೇ ಕೃಷ್ಣನ ಕುಮಂತ್ರವಿದು ॥ ಅಕುಟಿಲಾಂತಃಕರಣತನ ಬಾ । ಧಕವಲೇ
ಗುರುವರಿಗೆನುತ ಸ । ಭ್ರುಕುಟಿರೌದ್ರಾನನನು ಮುರಿದನು ಪುರಕೆ ಬಲರಾಮ ||೪೪|| ಹರಿಸಹಿತ ಬಲರಾ
ಮನತ್ತಲು । ತಿರುಗಿದನು ಪವಮಾನಜವದಲಿ । ಪುರಕೆ ಬಂದನು ಪಾರ್ಥ ಪಯಣದಮೇಲೆ ಪಯಣದಲಿ॥
ಪುರದ ಬಹಿರೋದ್ಯಾನದಲಿ ಸಂ । ವರಿಸಿ ರಥವನು ನಿಲಿಸಿ ನೆಳಲಲಿ । ಪರಿಗತಶ್ರಮನಾಗಿ ನಗುತ ಸುಭ
ದ್ರೆಗಿಂತೆಂದ ||೪೫|| ಅರಮನೆಗೆ ನಡೆ ದ್ರುಪದನಂದನೆ । ಕರೆಸಿದೊಡೆ ನೀ ಹೋಗು ನಿರುತವ । ನರುಹ
ದಿರು ತುರುಗಾಹಿಗಳ ಮಗಳೆಂದ ನುಡಿ ಸಾಕು ॥ ಅರಸಿ ಮಿಗೆ ಮನ್ನಿಸುವಳಲ್ಲಿರು । ಕರಸಿಕೊಂಬೆನು
ಬಳಿಕಲೆಂದೀ । ಸರಸಿಜಾಕ್ಷಿಯ ಕಳುಹಿದನು ನಿಜರಾಜಮಂದಿರಕೆ ||೪೬|| ಬಂದಳಬಲೆ ಸಮಸ್ತಪುರ
ಜನ । ವಿಂದುವದನೆಯ ನೋಡುತಿದ್ದುದು । ಮಂದಿ ಕವಿದುದು ಮನುಜೆಯೇ ಸುರಲೋಕವಧುವೆನುತ॥
ಮಂದಿರಕೆ ಬರೆ ಬಾಗಿಲವಡಿರು । ನಿಂದರಲ್ಲಿಯದಲ್ಲಿ ಬಳಿಕರ । ವಿಂದಮುಖಿಯರು ಕಂಡು ದ್ರೌಪದಿಗ

ರುಹಿದರು ಹವನ ॥೪೭॥ ಕರೆಸಿ ಕಾಣಿಸಿಕೊಂಡು ಪಾಂಡವ । ರರಸಿ ಬೆಸಗೊಳಲೇಕೆ ಪಾರ್ಥನ । ಪರುಠವವಮಾತುಗಳನೆಂದಳು ನಗೆಯ ಮೊಳೆ ಮಿನುಗೆ ॥ ಸುರಭುಜಂಗಮಪಥವೊ ನೀವೇ । ನಾರಸುಮಗಳೋ ತಂಗಿ ನೀಗೊ । ಲ್ಲರ ಮುಗಳೆ ಪುಸಿಯೆನುತ ತಲೆವಾಗಿದಳು ಪಾಂಚಾಲಿ ॥೪೮॥ ಮಸಗಿದವು ನಿಸ್ಸಾಳತತಿ ಗರ್ಜಿಸಿದವರ್ಜುನ ಬಂದನಿದೆಯೆಂ । ದೊಸಗೆವಾತಿನೊಳೂರ ಸಖಿದರು ದೂತರಲ್ಲಲ್ಲಿ ॥ ಶಶಿಮುಖಿಯರುಪ್ಪಾರತಿಯ ಮಿಗೆ । ಲೆಸೆವ ರತ್ನಾವಳಿಯ ಕಾಂತಾ । ಪಿಸರ ನೂಕಿತು ಪಾರ್ಥ ಹೊಕ್ಕನು ರಾಜಮಂದಿರವ ॥೪೯॥ ಅರಸ ಧರ್ಮಜಗೆರಗಿ ಸಕಲಾ । ಧ್ಯರನು ಕಾಣಿಸಿಕೊಂಡು ದೇಶಾಂ । ತರದ ತೀರ್ಥೋನ್ನತಿಯ ಸಾವೃತ್ತಾಂತಸಂಗತಿಯ ॥ ಪುರಹರನ ಸೌಹೃದವ ಸಾತ್ವತ । ಕರುಣಾಕನ್ಯಾಲಾಭವನು ವಿ । ಸ್ತರಿಸಿ ಹರುಷಾಂಬುಧಿಯೊಳದ್ದಿದನಗ್ರಜಾನುಜರ ॥೫೦॥ ಅರಸ ಕೇಳ್ ದ್ರೌಪದಿಯ ಮನ । ಬಲಿಸಿ ಬೇರರಮನೆಯೊಳೇಕೆಯ । ನಿಲಿಸಿದನು ಹರುಷದಲಿ ಕಳಿದರು ಕಾಲವಿಭ್ರಮವ ॥ ಇರಲಿರಲು ಪಾರ್ಥಂಗೆ ಸುಭದ್ರೆಗೆ । ವರಕುಮಾರಕನುದಿಸಿದನು ವಿ । ಸ್ತರಣವಾಯ್ತಭಿಮನ್ಯುವಿನ ಜನನೋತ್ಸವಾಭ್ಯುದಯ ... ... ॥೫೧॥

ಅಂತು ಸಂಧಿ ೧೯ ಕ್ಕೆ ಪದ ೯೩೭ ಕ್ಕಂ ಮಂಗಳಮಸ್ತು.

ಇಪ್ಪತ್ತನೆಯ ಸಂಧಿ.

ಸೂಚನೆ. ಖಾಂಡವದ ವನದಹನದಾಪ್ಯೋ । ಚ್ಚಂಡಗಂಡರಗಂಡ ದಿವಿಜರ ।
ಹಿಂಡುಗೋಳಿಡೆ ಧಾಳಿಯಿಟ್ಟನು ಚಂಡಗಾಂಡೀವಿ ॥

ಕೇಳು ಜನಮೇಜಯಧರಿತ್ರೀ । ಪಾಲ ಪಾರ್ಥಸುಭದ್ರೆಯಲಿ ಭೂ । ಪಾಲತಿಲಕನು ಜನಿಸಿದನಲ್ಲೈ ಜಾತಮಾತ್ರದಲಿ ॥ ಮೇಲುಮೊಳಗಿನ ದುಂದುಭಿಯ ದಿವಿ । ಜಾಳಿಗಳ ಹೂಮಳೆಯ ಹರುಷದ । ಮೇಳವದ ವೈಸಿರಿಯನೇನೆಂಬೆನು ಧನಂಜಯನ ॥೧॥ ಕಲಿತನಕೆ ನೆಲೆಯಾಯ್ತು ಭುಜದಾಗ್ಗಳಿಕೆಗಾಸ್ಪದವಾಯ್ತು ನಿಜಚಾಪಳವ ಬಿಸುಟಳು ವೀರಸಿರಿ ವಿಕ್ರಮದ ಸಿರಿಸಹಿತ ॥ ಹಳಿವು ಕಳವಳ ಭೀತಿ ಭಂಗ । ಸ್ಖಲನ ಕಂಪನವೆಂಬಿವಾತನ । ನೆಳಲಸೀಮೆಯ ಸೋಂಕಲಮ್ಮವು ಭೂಪ ಕೇಳೆಂದ ॥೨॥ ಜಾತಕರ್ಮದನಂತರದ ವಿಖ್ಯಾತನಾಮವಿಧಾನವನು ಸಂ । ಪ್ರೀತಿಯಲಿ ಮಾಡಿದನು ಋಷಿಭೂಪತಿಯನುಜ್ಞೆಯಲಿ ॥ ವೀತಭಯನಭಿಮನ್ಯುವೆನೆ ಬಲು । ಖ್ಯಾತ ನಡೆಗಿತು ಲೋಕಮೂರರೊ । ಳೀತನುದಯದ ಕೀರ್ತಿ ಪಸರಿಸಿತರಸ ಕೇಳೆಂದ ॥೩॥ ಯಮಸುತಗೆ ಭೀಮಗೆ ಕಿರೀಟಿಗೆ । ಯಮಳರಿಗೆ ಸುಕುಮಾರಕರು ನಿಜ । ರಮಣಿಯಲಿ ಜನಿಸಿದರು ಸುತಸೋಮಕನು ಪ್ರತಿವಿಂಧ್ಯ ॥ ವಿಮಲಶ್ರುತಕೀರ್ತಿಪ್ರತಾಪೋ । ತ್ತಮನು ಶ್ರುತಸೇನಾಖ್ಯನುರುವಿ । ಕ್ರಮಶತಾನೀಕಾಭಿಧಾನರು ದ್ರುಪದತನುಜೆಯಲಿ ॥೪॥ ಇವರು ಕಳುಹಿದ ಹರುಷವಾರ್ತಾ । ಶ್ರವಣರಸದಲಿ ಮನ ಪುಳಕಿಗಿಯೆ । ದವತಿರೋಮಣಿ ರಾಮವಸುದೇವಾದಿಗಳ

ಸಹಿತ । ಇವರ ಪುರಸ್ಕೃತಂದುಪವರು । ತ್ಸವದಿದಿಗೊಂಡೊಸಗೆಯಲಿ ಬಾಂ । ಧವರ ಸಂಭಾವಿಸಿದ ರೈ ಯಮುನಂದನಾದಿಗಳು ॥೫॥ ಅರಸಿ ಕಾಣವು ವೇದತತಿ ತಾ । ನರಸಿ ಬಂದನು ಭಕ್ತರನು ತನ । ಗೆರಗಿ ಮೆಚ್ಚಿಸಲರಿಯರಜರುದ್ರಾಮರೇಶ್ವರರು ॥ ಎರಗುವನು ಯಮಜಂಗೆ ತನ್ನನು । ಕುರುಹುಗಾಣವು ವೇದಶಿರವಿದು । ಮರವೆಯೋ ಹರಿ ಬಂದು ಕಂಡನು ಧರ್ಮನಂದನನ ॥೬॥ ಲೀಲೆಯೋ ಇದು ಮೇಣು ಕೃಷ್ಣನ । ಬಾಲಕೇಳಿಯ ನೆನಹೊ ಬೊಮ್ಮದ । ಕೌಳಿಕದ ಕಣ್ಮಾಯೆಯೋ ಶಿವಶಿವ ಮಹಾದೇವ॥ ಕಾಲಿಗೆರಗಿದ ಕೃಷ್ಣನನು ಭೂ । ಪಾಲ ತೆಗೆದಪ್ಪಿದನು ನಿಗಮದ । ಮೌಳಿ ತಲೆವಾಗಿದುದು ಲಜ್ಜಾಭೂರಿಭಾವದಲಿ ॥೭॥ ಅರಸಸಹಿತ ಸಮಸ್ತಯಾದವ । ಪರಿಕರದ ಮೇಳದಲಿ ಯಾದವ । ರರಸುಪ್ರಿಯಂಗೆದು ಕುಂತಿಯಪುತ್ರರ ಭವನದಲಿ ॥ ಅರಸಿಯರ ಸುಕುಮಾರವರ್ಗವ । ಕರೆಸಿ ಕಾಣಿಸಿಕೊಂಡು ದಿವ್ಯಾ । ಭರಣವಸನಾದಿಯಲಿ ಮನ್ನಿಸಿದನು ಮಹೀಶ್ವರರ ॥೮॥ ಜಲಧಿಮಧ್ಯದೊಳಿರವೊ ಗಗನ । ಸ್ಥಳವೊ ಮೇಣು ಮಹಾಂಧಕಾರದ । ಕಳಿವುಗಳವೈಕುಂಠವೋ ಮುನಿಜನದ ಹೃದ್ಗುಹೆಯೋ॥ ತಿಳಿಯೆ ಸಚರಾಚರದ ಚೇತನ । ದೊಳಗೆಯೋ ನೆಲೆಯಾವುದೆಂಬ । ಗ್ಗಳೆಯದೈವದ ನಿಲವ ಕಂಡರು ಪಾರ್ಥಭವನದಲಿ ॥೯॥ ಈತನರ್ಜುನನರಮನೆಯೊಳಿಧಿ । ಜಾತನೆನಿಪಭಿಮನ್ಯುವನು ಸಂ । ಪ್ರೀತಿಯಿಂದಪ್ಪಿದನು ಕೊಟ್ಟನು ಬಾಲತೊಡಿಗೆಗಳ ॥ ಖ್ಯಾತಪಂಚದ್ರೌಪದಿಯ ಸಂ । ಜಾತರನು ಮನ್ನಿಸಿ ಮಹಾವಿಭ । ವಾತಿಶಯದಲಿ ಪತಿಕರಿಸಿದನು ಪಾಂಡುನಂದನರ ॥೧೦॥ ಅರಸ ಕೇಳೈ ಹಲವುದಿನ ಸಂಚರಿಸಿ ಸೌಖ್ಯದೊಳಿರ್ದ ತಮ್ಮಯ । ಪುರಿಗೆ ಬಲಭದ್ರನನು ಯಾದವರಾಯವಳಸಹಿತ ॥ ಹರಿ ಸಮಾಧಾನದಲಿ ಕಳುಹಿಸಿ । ನರನೊಡನೆ ಮೃಹಾಳಿಮೃಗಯಾ । ವರವಿಹಾರದೊಳಿದ್ದನಿಂದ್ರಪ್ರಸ್ಥನಗರಿಯಲಿ॥ ಹರಿಧನಂಜಯರೊಂದುಮೃಗ । ಹರಿಣಕೇಳೀಕಳಾಪದಲಿ ಸಂ । ಚರಿಸಿ ಬನದಲಿ ಬಳಿಕ ಮಾರ್ಗಶ್ರಮದ ಭಾರದಲಿ ॥ ಬರುತ ನೀರಡಸಿದರು ಕಂಡರು । ಸರಸಿಯನು ರಥವಿಳಿದು ನೆಳಲಲಿ । ಪರಿಹೃತಶ್ರಮರಾಗಹು ಹೊಕ್ಕನು ಸರೋವರವ ॥೧೨॥ ಆಸಮಯದಲಿ ಬಂದನೊಬ್ಬನು । ಭೂಸುರನು ಕಡುಗಳ ತೃಷಾರದ । ಪೀನಸಗಡ್ಡದ ಸುಳಿದಲೆಯ ಕಬ್ಬೊಗೆಯ ಜುಂಜುಗಳ ॥ ಬೂಸರದ ಬಿಳಲುಡಿಗೆ ಮುಟ್ಟಿಯ । ಧೂಸರದ ಮೈವೊಡೆಗೆ ಮಿರಿಯ ವಿ । ಲಾಸದಲಿ ನಡೆತಂದನರ್ಜುನದೇವನಿದ್ದೆಡೆಗೆ ॥೧೩॥ ಹರಸಿ ವೇದಾರ್ಥವನು ಪಿಂಗೆ ವಿ । ಸ್ತರಿಸಿ ಕೊಂಡಾಡಿದನು ವಿಪ್ರನ । ಪರಮಯೋಗ್ಯತೆಗಾರಿಸಿ ಪರಮೇಷ್ಠಿಹೊರತಾಗಿ ॥ ಬರವಿದೇನೆನಗೇನನುಗ್ರಹ । ವರಸಿದೊಡನಿಮ್ಮಿಷ್ಟವನು ಗಿರೆ । ಚರಿಸುವೆನು ತಾನನುತ ನುಡಿದನು ಪಾರ್ಥ ಭೂಸುರಗೆ ॥೧೪॥ ಪಾರ್ಥ ಕೇಳತಿಗಯನಸ್ಪೃಹ । ಸಿರ್ಥಿಗಳು ಸಾಮಾದ್ಯವೆಮ್ಮ । ಷ್ಟಾರ್ಥಸಿದ್ಧಿಯ ಘಟಿಸು ಸಾಕು ಸಮಗ್ರಫಲವಹುದು ॥ ಅರ್ಥವೆಂಕನ್ನತಿಥಿಯಿರಲು ಪ । ರಾರ್ಥಸಾಧನತನವೆ ಪರಮ । ಸ್ವಾರ್ಥವೆಂಬರು ಸುಜನರೆಂದನು ಕಪಟದ್ವಿಜನಗುರ್ತ ॥೧೫॥ ಕೊಟ್ಟೆನೆಂದನು ಪಾರ್ಥನಿವರೊಡ । ಬಟ್ಟೆನುಡಿಗೇಳಿದನುಜಘು । ರಟ್ಟಿ ಬಂದನು ಪವನನಂದನು ಹವ್ಯವಾಹನನ ॥ ಕೊಟ್ಟುದೇನು ಕಿರೀಟಿಯಿವರೇ । ಮುಟ್ಟಿದೊಡೆ ಮುನಿವವರಲ್ಲೈ ನೀ । ಕೊಟ್ಟುದಣಬಡಿಸುವುದು ಭಾರವಿದೆಂದನಸುರಾರಿ ॥೧೬॥ ಮುಖರನಾದ್ಯೆ ಪಾರ್ಥ ಬರ್ಗ । ವ್ಯಾಸಖರ ಬಾಣಸಮಾತನೀತನು । ಸುಖವೆ ಹೇಳೈ ತಂದೆ ಖಾಂಡವವನದ ನಿರ್ದಹನ ॥ ನಿಖಿಳನಿರ್ಜರಬಲಸಹಿತ ಶತ । ಮಖನೊ

ಡನೆ ವಿಗ್ರಹವಲಾ ಸಂ । ಮುಖಕೆ ಬಂದುದು ಭಂಗವೆಂದನು ನಗುತ ಮುರವೈರಿ ॥೧೭॥ ಭಂಗವೇಕೈ ಕೃಷ್ಣ! ನಿರ್ಜರ । ಪುಂಗವನ ಗೆಲಿದವನ ಬಾಣಾಸು । ಗಂಗೆ ಬಾಣಾಸವಮಾಡುವೆನು ಖಾಂಡವವುಹಾವ ನವ ॥ ಅಂಗವಣೆಯನು ನೋಡು ನೀನೇ । ಕಾಂಗದಲಿ ನಿರ್ವಹಿಸುವೆನು ಭಯ । ಭಂಗವುಂಟೇ ನಿನ್ನ ಕೃಪೆಯಿರಲೆಂದನಾಪಾರ್ಥ ॥೧೮॥ ಮೆಚ್ಚಿದನು ಘೃತಯೋನಿ ಪೂತುರೆ । ನಿಚ್ಚಟನು ನೀನೆನುತ ಕಿಡಿಗಳ । ಬಿಚ್ಚಲುದಿರಿತು ಚಾಪಮಾರ್ಗಣರಥತುರಂಗಚಯ ॥ ಅಚ್ಚರಿಯನೇನೆಂಬೆನೈಸ । ಪ್ರಾರ್ಚಿ ಯಿತ್ತನು ವನವನಿಂದ್ರನ । ಮುಚ್ಚುಮರೆಯೇಕಿನ್ನು ನಮಗುಣಬಡಿಸು ಸಾಕೆಂದ ॥೧೯॥ ಧರಣಿಪತಿ ಕೇಳಗ್ನಿಯಿತ್ತನು । ಹರಿಧನಂಜಯರಿಗೆ ರಥಂಗಳ । ನುರುಶರಾವಳಿದಿವ್ಯಧನುಕೌಮೋದಕೀಗದೆಯ ॥ ವರತನುತ್ರಸಿತಾಸ್ತ್ರವಕ್ಷಯ । ಶರನಿಷಂಗಾದಿಗಳನಿವರು । ಬ್ಬರಿಸಿದರು ಹರುಷದಲಿ ನೆನೆದರು ನಯನ ವಾರಿಯಲಿ ॥೨೦॥ ಹೂಡಿದರು ರಥವೆರಡನಿವರು ಸ । ಘಾಡದಲಿ ಕಪಿಗರುಡಸಿಂಧವ । ಜೋಡಿಸಿದ ರೇರಿದರು ನಗುತ ಧನಂಜಯಾಚ್ಯುತರು ॥ ಮೂಡಿಗೆಯ ಮೊನೆಗಣೆಗಳಿಗೆ ಕೈ । ನೀಡಿ ಬೊಬ್ಬಿರಿದರು ದಿಗಂತವ । ನೀಡಿರಿದುದಬ್ಬರಣೆ ಬಿರಿದುದು ಧರಣಿ ಧಾಳಿಯಲಿ ॥೨೧॥ ಬೊಬ್ಬಿರಿದು ಹರಿ ಪಾಂಚಜನ್ಯನ । ನುಬ್ಬಿ ದನಿಮಾಡಿದನು ಪಾರ್ಥನ । ತೆಬ್ಬಿನಬ್ಬರ ತೀವಿತಾಬ್ರಹ್ಮಾಂಡಮಂಡಲವ ॥ ಗಬ್ಬರಿಸಿ ದುದು ಗಗನವನು ಶರ । ದುಬ್ಬರದ ಬಲುಗಿಡಿಯು ಗಡಣವು ಹಬ್ಬಿ ಹರಿದವು ದೆಸೆದೆಸೆಗೆ ನರನಾಥ ಕೇಳೆಂದ ॥೨೨॥ ಧಾಳಿಯಿಟ್ಟರು ಸುರವನಕೆ ಸುರ । ಜಾಲ ಸುರಿಯಿತು ಬೊಬ್ಬೆಯಲಿ ದೆ । ಸ್ಸಾಳಿಸಿ ದುದುತ್ಪಾತಶತ ಖಾಂಡವದ ಮಧ್ಯದಲಿ ॥ ಕಾಳಿಗಳ ಕುಡಿಮೀನವೋಲ್ವಿಹ । ಗಾಳಿ ಹುದುಗಿತು ನಡುಗಿದರು ವನ । ಪಾಲಕರು ನಿಂದೊಣಗಿದವು ಹರಿಚಂದನಾದಿಗಳು ॥೨೩॥ ತೂಗಿ ಬಾಣವ ಹೂಡಿ ಕಿವಿವರೆ । ಗಾಗಿ ಬರಸೆಳವಾರಿ ಬೊಬ್ಬಿರಿ । ದಾಗಲಿಂತೆಂದನು ಧನಂಜಯನುನಾಥನಂಜಯಗೆ ॥ ಈಗಲೀ ವನದೊಳಗೆ ಖಗಮೃಗ । ನಾಗಸುರದನುಜಾದಿಜೀವರ । ಹೋಗಲೀಯದೆ ತರುಬಿ ಶರದಲಿ ಕಾಯಬೇಕೆಂದ ॥೨೪॥ ಹೈ ಸಮಗ್ರಾತಿಥ್ಯದಲಿ ನಿಮ । ಗೀಸಮಸ್ತಪ್ರಾಣಿಸಹಿತ ಸು । ರೇಶನುದ್ಯಾನವನು ಕೊಟ್ಟೆನು ಬಾಣಧಾರೆಯಲಿ ॥ ನೀ ಸಮಾಧಾನದಲಿ ಸುಪುರೋ । ಡಾಶವಿದೆ ಸಮಿದಾಜ್ಯಸಹಿತ ಮ । ಹಾಸುವಿಸ್ತಾರದಲಿ ಕೊಂಬುದು ಭೀತಿ ಬೇಡೆಂದ ॥೨೫॥ ಎನುತ ಬಿಡೆ ತಿರುವಾಯನೊದೆದು । ಬ್ಬಿನಲಿಬೊಬ್ಬಿರಿದಂಬು ಸುರಪನ । ವನವ ಮುತ್ತಿತ್ತು ಕೂಡೆ ಹೊತ್ತಿತು ಹೊಗೆಯ ಹೊರಳಿಯಲಿ ॥ ತನಿಗಿಡಿಯ ದಳ್ಳುರಿಯ ಸಾಲಿಗೆ । ಗೊನೆಗಳಲ್ಲಾಡಿದವು ಕದಳಿಗಳ । ಗಿನಲಿ ಲಂಬಿಸಿ ಚುಂಬಿಸಿದುದುರಿ ಲಲಿತನಂದನವ ॥೨೬॥ ಹೊದರಿನಲಿ ಭುಗುಭುಗಿಲುಭುಗಿಲೆಂ । ದೊದೆದುದುರಿಯಂಬರವನೊಣಗಿದ । ಬಿದಿರಮೆಳೆಯಲಿ ಧಗಧಗಿಸಿ ಛಟಛಟನೆಛಟಛಟಿಸಿ ॥ ಕದಳಿಖರ್ಜೂರಾದಿತರುಜಾ । ಲದಲಿ ಸಿಮಿಸಿಮಿ ಸಿಮಿಸಿಮಾಯತ । ವೊದಗೆ ಗಹನೋದರದೊಳಗೆ ಘಾಡಿಸಿತು ಘನವಹ್ನಿ ॥೨೭॥ ಏನನೆಂಬೆನು ಬವಿಜರಾಜೋ । ದ್ಯಾನಹಾನಿಯನಾತನಾಳು ಕೃ । ಶಾನುವಿನ ತನಿಗೊಬ್ಬನೀಕೃಷ್ಣಾರ್ಜುನರ ಬಲುಹ ॥ ಆನಿಖಿಳನಿರ್ಜರರು ತಾಗಿ ವಿ । ಮಾನಗತಿಯಲಿ ಹಾಯ್ದರಂದವ । ಮಾನಗತಿಯಲಿ ಗಗನದಲಿ ಗೀರ್ವಾಣಪತಿಪುರಕೆ ॥೨೮॥ ಹೊಗೆಯ ಬಳಿಯಲಿ ತಳಿತಹುಯ್ಯಲ । ಬೆಗಡಿದೇನೋ ಕೇಳೆನುತ ಸಿರಿ । ಮೊಗದಮುಗುಡದ ಸಾವಿರಾಲಿಯೊಳುಗುವಕಿಡಿಗಳಲಿ ॥ ಹಗೆಗಳಾರು ನಿವಾತಕವಚಾ । ದಿಗಳೊ ತಾನಾರಂ

ಬಶಕ್ರನ । ದುಗುಡವನು ದೇವಾಳಿ ಕಂಡುದು ದೂರಿದರು ನರನ ॥೨೯॥ ನಿನಗೆ ಮಗನೇ ಪಾರ್ಥ ನಿನ್ನರ । ಮನೆಯ ಬಾಣಸದಾತನೇ ಶಿಖಿ । ಯನುಜನೇ ಮುರವೈರಿ ನಿನಗನುಕೂಲರಾದರಲೇ ॥ ಬನದಬೇಗೆಯೊ ಪರಿಭವಾಲಂ । ಬನದ ವೊಸಗೆಯೊ ಬಂದುದಿದೆ ಬಿಡು । ಮನೆಯಮನ್ನೆಯಗಂಡನಾಗೆಂದುದು ಸುರಸ್ತೋಮ ॥೩೦॥ ಐಸಲೇ ನಮ್ಮವರಲಾ ಹೋ । ಹೋ ಸುರರು ಕಳವಳಿಸದಿರಿಯಾ । ಪೈಸನಾಹುತಿಗೊಳಲಿ ಪಾವಕನೆಮ್ಮ ಖಾಂಡವವ ॥ ಈಸುರರಿಗಾನರರಿಗಂತರ । ವೇಸು ಪೂತುರೆ ಕಾಲಗತಿಯೆನು । ತಾಸುರೇಶ್ವರಖಾತಿಗೊಂಡನು ಕೃಷ್ಣಪಾರ್ಥರಿಗೆ ॥೩೧॥ ಕಾಹು ತೆಗೆಯಲಿ ಕಲ್ಪಮೇಘ । ವ್ಯೂಹಗಳ ಬರಹೇಳು ಕಾಂಬೆನು । ಸಾಹಸವನಿದರೊಳಗೆ ಕೃಷ್ಣಧನಂಜಯದ್ವಯದ ॥ ಈಹದಕೆ ಪಡಿಪಚ್ಛವಿಲ್ಲವ । ಗಾಹಿಸಲಿ ಖಾಂಡವವ ಹುಲ್ಲೆಯ । ಊಹೆಗಳ ಹೆಬ್ಬುಲಿಗೆ ಹಾಯ್ವವೆನುತ್ತ ಗರ್ಜಿಸಿದ ॥೩೨॥ ಅರಸ ಕೇಳ್ ಕಲ್ಪಾಂತಮೇಘೋ । ತ್ಕರದ ಪಾಳೆಯವೆತ್ತಿ ಬಿಟ್ಟುದು । ಧರಣಿಯಗಲಕೆ ಥಾಳಿಯಿಟ್ಟವು ಸಿಡಿಲ ಮಿಂಚುಗಳು ॥ ಕರಿಯಭರಕೈಗೆಣೆಯೆನಿಪನಿ । ಷ್ಠುರದಧಾರಾಸಾರ ತೆರಳಿಚಿ । ಸುರಿದುದಾ ಖಾಂಡವದ ಸೀಮಾಸನ್ನಿವೇಶದಲಿ ॥೩೩॥ ಆ ಸಕಲಸಾಗರವನೊಂದೇ । ಶ್ವಾಸದಲಿ ತೆಗೆದೆತ್ತಿ ಮುಗುಚಿದು । ವೀಸಮಸ್ತ ಬಲಾಹಕಾವಳಿ ಬನದ ಮಧ್ಯದಲಿ ॥ ಏಸುಸಾಹಸಸತ್ವ ತನಗುಂ । ಟೆಸರಲಿ ತಲೆಯೆತ್ತಿ ಜಲದಲಿ । ಗಾಸಿಯಾದನು ವಹ್ನಿ ನುಡಿದನು ಕೃಷ್ಣಪಾರ್ಥರಿಗೆ ॥೩೪॥ ಕಳಹಿದಿಂದ್ರನ ಕೂಡೆ ಕಲ್ಪದ । ಮಳೆಗಳಿವು ಮೊಣಸಿದುವು ಪುಟವ । ನೆಳೆದು ಮಣಲಿನ ತುತ್ತನರ್ಜುನ ಕಾಯ್ದುಕೊಳ್ಳೆನಲು ॥ ಮಳೆಗೆ ಶರಪಂಜರವ ವಿರಚಿಸಿ । ಬಳಿಕ ವಾಯವ್ಯಾಸ್ತ್ರದಲಿ ನಿ । ಸ್ಖಲಿತಮೇಘವ್ರಜವನೆಚ್ಚನು ಪಾರ್ಥ ವಹಿಲದಲಿ ॥ ಏನ ಹೇಳುವೆನರಸ ಪಾರ್ಥನ । ಸೂನಶಕ್ತಿಯನುರುಬಿದನು ಪವ । ಮಾನಶರದಲಿ ಪುಷ್ಕಳಾವರ್ತಾದಿಘನಸುಟಿಯಾ ॥ ಭಾನುತಿಮಿರಂಗಳಿಗೆ ಮೇಘಮು । ಹಾನಿಲಂಗಳಿಗಾವುದಂತರ । ಸೋನೆ ತೆಗೆದುದು ಹೊಗೆದುದಾ ಖಾಂಡವಮಹೋದ್ಯಾನ ॥೩೬॥ ಹಾರಲೂಟತು ಮೇಘವನು ಕಿಡಿ । ತೂರಲುಬ್ಬರಿಸಿದುದು ವಹ್ನಿಯ । ನೇರಿಸಿತು ಖಾಂಡವದೊಳಗೆ ಬಿರುಗಾಳಿ ಸುಳಿಸುಳಿದು ॥ ಮೋರೆಯೊಣಗಿದುದಮರರಿಗೆ ಮೈ । ಮಾರಿಗಳ ಸುಡು ಮೂಲೆಯುವದಿರು । ಮೀರಿದರಲಾಯೆನುತ ಸುರಪತಿ ತರಿಸಿದನು ಗಜವ ॥೩೭॥ ನೆರೆದುದಮರರು ಸಿದ್ಧವಿದ್ಯಾ । ಧರಮಹೋರಗಯಕ್ಷರಾಕ್ಷಸ । ಗರುಡಕಿನ್ನರಸಾಧ್ಯಗುಹ್ಯಕಭೂತಗಂಧರ್ವ ॥ ತರಣಿವಸುರುದ್ರಾದಿಗಳುಮೋ । ಹರಿಸಿದರು ಮುಂಗುಡಿಯಲಿಂದ್ರನ । ಸಿರಿಯ ರಭಸವನೇನನೆಂಬೆನು ಭೂಪ ಕೇಳೆಂದ ॥೩೮॥ ಮಸಗಿತಮರವ್ರಾತವಭ್ರವ । ಮುಸುಕಿದವು ಝಲ್ಲರಿಗಳಿಂದ್ರನ । ವಿಶಸನಕೆ ವೆಚ್ಚಿಸುವೆ ವಸುಗಳನೆನುತ ತಮತಮಗೆ ॥ ಮುಸುಕಿದವು ಮೃಗರಾಜಸಿಂಹದ । ಮುಸುಕನುಗಿವಂದದಲಿ ಬಾಣ । ಪ್ರಸರವನು ಹರಹಿದರು ಮುಂದೆ ಧನಂಜಯಾಚ್ಯುತರ ॥೩೯॥ ಹೂಣೆ ಮಿಗೆ ಹೊಕ್ಕೆಚ್ಚರೋ ಬಹು । ಬಾಣವನು ದೃಢಬಾಣರೋ ಗೀ । ರ್ವಾಣರೋ ನೀವಾರು ನುಡಿಯಿರಲೈ ಮಹಾದೇವಾ ॥ ಸಾಣೆಯಲಗಿಗೆ ಸಾರರೀತನಿ । ಶೋಣಿತವ ನೀವ್ಕೊಡದೆ ಸುರಪತಿ । ಯಾಣೆ ಹಿಂಮೆಟ್ಟಿದೊಡೆನುತ ಬೊಬ್ಬಿರಿದು ನರನೆಚ್ಚ ॥ ತುರುಗಿ ಕೂರಂಬುಗಳು ಮೈಯಲಿ । ಮುರಿದುದರ್ಜುನನೆಸುಗೆಯಲಿ ಕೈ । ಮರೆದುದಮರನಿಕಾಯ ಕೆದರಿತು ದೊರೆಯ ಮನ್ನಿಸದೆ ॥ ಮುರಿದುದೀ ಕೃಷ್ಣಾರ್ಜುನರ ಬೊ । ಬ್ಬಿರಿತಕವರೆದೆಯೊಡೆಯಲಿಂದ್ರನ । ಮರೆಯ ಹೊಕ್ಕು

ದ್ರದೇವಸಂತತಿ ಭೂಪ ಕೇಳೆಂದ ||೪೧|| ನರರು ರಚಿಸಿದಹವ್ಯಕವ್ಯೋ | ತ್ತರಹವಿರ್ಭಾಗವನು ತಿಂದು
ಬ್ಬರಿಸಿ ದೇವಸ್ತ್ರೀಕದಂಬದ ಖೇಳಮೇಳದಲಿ || ಇರವು ನಿಮಗೀರಾದ್ರುಬಾಣ | ಸ್ಫುರಿತಕರ್ಕಶವಿಸ್ಫು
ಲಿಂಗೋ | ತ್ಕರದ ಝಳ ನಿಮಗೇಕೆಯೆಂದನು ಪಾರ್ಥ ನಸುನಗುತ ||೪೨|| ಮುರಿದುನಿರ್ಜರಸೇನೆಗಭ
ಯದ | ಕರವ ನೆಗಹಿ ಕರೀಂದ್ರನನು ತಿರ | ಬಿರಿಯಲಂಕುಶಮೊನೆಯೊಳೊತ್ತಿ ಮಹೋಗ್ರಕೋಪ
ದಲಿ || ನರಮುರಾಂತಕರಿದಿರಿನಲಿ ಮದ | ಕರಿಯ ಬಿಟ್ಟನು ಶಕ್ರನಾತನ | ಬಿರುದ ಸಂಭಾವಿಸಿದರ
ಭ್ರದ ಸೂತಮಾಗಧರು ||೪೩|| ನಮುಚಿಮಸ್ತಕಶೂಲ ಬಲಸಂ | ತಮಸಭಾಸ್ಕರ ಜಂಭಭುಜವಿ |
ಕ್ರಮಮಹಾಂಬುಧಿಕುಂಭಸಂಭವ ವೃತ್ರಗಿರಿವಜ್ರ || ಕಮಲಭವಹರವಿಷ್ಣುಹೊರಗಾ | ದಮಿತಸು
ರಗಣಮೌಳಿಮಣಿಸಂ| ಕ್ರಮಣಚತುರಪದಾಬ್ಜಯೆಂದುದುವಂದಿಸಂದೋಹ ||೪೪|| ನೂಕಿದನು ಸುರ
ಪತಿ ಗಜವನ | ವ್ಯಾಕುಲರಲೇ ಕೃಷ್ಣಪಾರ್ಥರಿ | ದೇಕೆ ನಿಮಗೀವಾಸಿ ವಾಸವ ಲೇಸು ಮರಳುವುದು ||
ನಾಕನಿಳಯರು ತಂದಗೆಲವೇ | ನಾಕು ಸೋಲುವರಲ್ಲ ನಿಮಗೆ ವಿ | ವೇಕವುಳ್ಳೊಡೆ ತಿರುಗಿಯೆಂದನು
ಹರಿಗೆ ಕಲಿಪಾರ್ಥ ||೪೫|| ಜನಪ ಕೇಳಾಸಮಯದೊಳು ವಾ | ಗ್ವನಿತೆಯರಸನು ಗಗನಮಾರ್ಗದೊ |
ಳನಿಮಿಷಾಧಿಪನಲ್ಲಿಗೈತರೆ ಕಂಡು ಸುರನಿಕರ || ತನತನಗೆ ಭಾಳದಲಿ ನಿಜಕರ | ವನರುಹವ ಮುಗಿಯಿ
ಸಿದುಬಂದ್ರಂ | ಗನುವರವ ಮಾಣಿಸಲುಬೇಕೆಂದಿಳಿದನಬ್ಜಭವ || ಮರುಳನೈ ನೀನಿವರನಾರೆಂ | ದರಿ
ಯಲಾ ನಾರಾಯಣನು ಮುರ | ಹರನು ನರನಲ್ಲಾ ಧನಂಜಯನಿವರು ಕಿರುಕುಳರೇ || ಮರುಳು
ನೀನೆಂದಿಂದ್ರನಾನೆಯ | ತಿರುಹಿದನು ಪರಮೇಷ್ಠಿಯಿತ್ತಲು | ಧರಣಿಪತಿ ಕೇಳನಲಕೇಳಿಯನಾವನಾಂ
ತದಲಿ ||೪೬|| ಜಂಬುಚೂತಪಲಾಶವಟಡಾ | ಳಿಂಬಬಿಲ್ವತಮಾಲಚಂಪಕ | ನಿಂಬಬಕುಳಕಪಿತ್ಥಕುಟ
ಜವಶೋಕಪುನ್ನಾಗ | ತುಂಬುರರಳಿಲವಂಗಪೂಗಕ | ದಂಬಗುಗ್ಗುಳಸಾಲತಿಲಕೌ | ದುಂಬರಾದಿದ್ರು
ಮಕುಲವನಾಲಿಂಗಿಸಿತು ವಹ್ನಿ ||೪೭|| ಸುಳಿಸುಳಿದು ಶಶಿಕಾಂತಮಯದ | ಗ್ಗಳದ ವೇದಿಕೆಗಳಲಿ
ನೀಲದ | ನೆಲೆಯಚೌಕಿಗೆಗಳಲಿ ಮಂಟಪದಲಿ ಲತಾವಳಿಯ || ಲಲಿತ್ರಸೌಧದ ಚಾರುಚಿತ್ರಾ | ವಳಿಯ
ಮೇಲ್ಕಟ್ಟುಗಳ ಭವನಂ | ಗಳಲಿ ಬಿಟ್ಟುದು ಕೂಡೆ ಪಾಳೆಯ ವಹ್ನಿಭೂಪತಿಯ ||೪೮|| ಕುರುಳತ್ರಂ
ಬಿಯ ತನಿಗೆದರಿ ಮುಖ| ಸರಸಿಜವ ಚುಂಬಿಸಿ ತಮಾಲದ | ತುರುಬ ಹಿಡಿದಧರಪ್ರವಾಳದ ರಸವ ನೆರೆ
ಸವಿದು || ಉರುಪಯೋಧರಬಿಲ್ವವನು ಹೊ | ಯ್ದೊರಸಿ ಕದಳಿಯನುಣ್ದೊಡೆಯನಿ | ಟ್ಟೊರಸಿ ರವಿ
ಸಿತು ವನಸಿರಿಯ ಪಿಪ್ಪಲದಳಾಂಗದಲಿ ||೫೦|| ಧರಣಿಪತಿ ಕೇಳ್ಶರಭಮೃಗಪತಿ | ಕರಿಕಳಭಶಾರ್ದೂಲ
ಸೂಕರ | ಕರಡಿಕಾಸರಶಲಮೃಗಾವನಖಡ್ಗಗೋಮಾಯು | ಬರಳೆಮೊಲಸಾರಂಗವಾನರ | ನುರುಕು
ರಂಗಪ್ರಮುಖಮೃಗಕುಲ | ಮುರುಚಿಬಿದ್ದುದು ಧಳ್ಳುರಿಯ ಬೆಳ್ವೂರವಲೆಗಳಲಿ ||೫೧|| ಶುಕಮರಾಳಮ
ಯೂರಟಿಟ್ಟಿಭ | ಪಿಕಚಕೋರಕಪೋತವಾಯಸ | ಬಕಪದಾಯುಧಚಕ್ರವಾಕಕಳಿಂಗಕಲವಿಂಕ || ಕುಕಿ
ಲಸಾರಸಕಾಕಂಪುಟಾ | ತಕಭರದ್ವಾಜಾದಿಪಕ್ಷಿ | ಪ್ರಕರ ಬಿದ್ದುದು ಬಿಗಿದಕೇಸುರಿಕಣ್ಣಿವಲೆಗಳಲಿ
||೫೨|| ಹರಡೆಗೀಜಗಮರಗೊಡಲೆಕಾ | ಬುರುಲೆಲಾವುಗೆಗೌಜುಪಾರಿವ | ನಿರಿಲೆಸಾಳುವಚಿಲಿಮಿಲಿಗ
ಚಂಬೋತಮೀನ್ಬುಲಿಗ||ಮರಕುಟಿಗ ಕಬ್ಬಕ್ಕಿಕೊಟ್ಟುಗ | ವರಲೆ ಕೊಂಚೆ ಕಪಿಂಜ ಗಿಂಚುಲುಗರಿಗಮೊ
ದಲಾದಖಿಳಖಗಕುಲ ಬಿದ್ದುದುರಿಯೊಳಗೆ ||೫೩|| ಜಳಕೆ ತಿಳಿಗೊಳದುದಕ ಕಾದು | ಚ್ಚಳಿಸಿದುವುತನಿ

ಗುದಿದುವೆತ್ತಾಸ್ಯ । ವಳಿಗಳಂಬುಜದೆಸಳು ಸೀದುವುತುಂಬಿಗಳ ಸಹಿತ ॥ ಹಿಳಿದು ಸಿಡಿದುವು ಚಾರುಚಂದ್ರೋ । ಪಳರಚಿತಸೋಪಾನರತ್ನಸಾ । ವಳಿಯರಾಶಿಗಳಿದ್ದಲಾದುವು ಬಿದ್ದಕಿಡಿಗಳಲಿ ॥೩೪॥ ಇಟ್ಟಣಿಸಿ ಛಿಟಿಛಿಟಿಸಿ ಶಿಖಿ ಪುಟ । ವಿಟ್ಟುದೊಣಗಿಲ ಹೊದರಿನಲಿ ಮಿಗೆ । ತೊಟ್ಟಕಬ್ಬೊಗೆಜಗೆಯಹೊರಳಿಯಕಿಡಿಯಗಡಣದಲಿ ॥ ಹುಟ್ಟಿದುರಿ ಹೆಮ್ಮರನ ಸುತ್ತಲು । ಕಟ್ಟಿತಲ್ಲಿಯ ತೊಡಕಿನಲಿ ಭುಗಿ । ಲಿಟ್ಟು ಕವಿದುದು ತುದಿಗೆ ಬಹುಶಾಖೋಪಶಾಖಿಗಳ ॥೩೫॥ ಹೊಗೆಯ ಹಬ್ಬುಗೆ ಸತ್ಯಲೋಕವ । ನುಗಿದುದುರಿನಾಲಿಗೆಯ ಗರವೊ । ಟ್ಟಗೆಯ ತೋಳಲಿಕೆ ತೆರಳಿಚಿತು ತೆತ್ತೀಸುಕೋಟಿಗಳ ॥ ಹಗಲಗಡಿತು ಹೊಕ್ಕದೋ ಕಡೆ! ಮುಗಿಲು ಕಾಣೆನು ದಿವವನೆತ್ತಣ । ಗಗನಮಣಿನಕ್ಷತ್ರಚಂದ್ರಮರರಸ ಕೇಳೆಂದ॥ ಛಿಳಿಛಿಳಿಲುಛಿಳಿರವದ ಘುಳುಘುಳುಘುಳುಘುಳುಘುಳಧ್ವನಿಮಯದಿ ಕಪಿಗಳ । ಕಿಳಿಕಿಳಾಯತರವದ ಮೃಗಸಂಕುಳದ ಕಳಕಳದಿ ॥ ಹಿಳಿದುರಿವಹೆಬ್ಬಿದಿರ ಗಂಟಿನ । ಠಳಠಳತ್ಕಾರದಿ ದಿಶಾಮಂಡಳದ ಮೂಲೆಗಳೊಡೆದುದದ್ಭುತವಾಯ್ತು ವನದಹನ ॥೩೭॥ ಅರಸ ಕೇಳೈಮುನ್ನ ವಿತಳಕೆ । ಗರುಡಭಯವಾಯ್ತೆಂದು ತಕ್ಷಕ । ನಿರಿಸಿದನು ನಿಜಸುತನನಮರೇಶ್ವರನನುಜ್ಞೆಯಲಿ ॥ ಇರಲಿರಲು ಸುತರಾದರಾತಂ । ಗುರಗವಂಶದೊಳಶ್ವಸೇನಗೆ । ಹಿರಿದು ಹೆಚ್ಚಿತು ತಕ್ಷಕನ ಸಂತತಿ ವನಾಂತದಲಿ ॥೩೮॥ ಆವಹಾವನವಹ್ನಿಭೂತ । ಸ್ತೋಮಸಂಹೃತಿಕರ್ಮಶೌರ್ಯೋ । ದ್ದಾಮವವಗಾಹಿಸುತೆ ಬರುತಿರೆ ಮುಂದೆ ಚೂಣಿಯಲಿ ॥ ಧೂಮವಿಳಿದುದು ಹುತ್ತಿನಲಿ ನಿ । ಸ್ಸೀಮಜನಿತಜ್ವಾಲೆಗಳ ಜಳ । ವಾಮಹೋರಗಚಯವ ಚುಂಬಿಸಿತರಸ ಕೇಳೆಂದ ॥೩೯॥ ಹೂಸಿ ಹುತ್ತಿನ ಮಣ್ಣ ರಂಧ್ರಿಸಿ । ಕಾಸಿದುವುಫಣಿಕುಲವ ಮೋಣೊಡ್ಡಿ । ಛ್ವಾಸದಲಿ ಡಾವರಿಸಿದವು ಕಿಡಿ ಧೂತಧೂಮದಲಿ ॥ ಅಸುರದ ಕಬ್ಬೊಗೆಯ ಕವಚದ । ಕೇಸುರಿಗಳೊಳಬಿದ್ದುದುರಿ ಹೊರ । ಸೂಸಿ ಹಿಡಿದುವು ಹಾವುಗಳ ಬಲುಹೊದರಹೊರಳಿಗಳ ॥೪೦॥ ಹೆಡೆಯಮಣಿಗಳ ಕಂಡು ಸೂಸಿದ । ಕಿಡಿಗಳಹಹಾಯೆನುತ ಶಿರಗಳ । ಕೊಡಹಿ ಮರುಗಿದರುರಗಿಯರು ಮರಿಗಳಿಗೆ ಮೈಚಾಚಿ ॥ ಕಡುಹೊಗೆಯ ಕೇಸುರಿಯ ಕಿಡಿಗಳ । ಗಡಣದಲಿ ಕೌರೆದ್ದು ಮೈಗಳ । ಕೊಡಹಿ ಬಿಸುಸುಯ್ಯುತ್ತ ಮುಗ್ಗಿದವಹಿಗಳುರಿಯೊಳಗೆ ॥೪೧॥ ಹುದಿದುರಿವಹುತ್ತಿನಲಿ ಕೂಳ್ಗುದಿ । ಗುದಿದು ಸರ್ಪಸ್ತೋಮಮಧ್ಯದೊ । ಳೊಡೆದು ಹಾಯಿದನಶ್ವಸೇನನು ಗಗನಮಂಡಲಕೆ ॥ ಕೆದರಿದವುಕೆಂಗಿಡಿಗಳುರಿಯುಬ್ಬಿದುದು ಘುಳುಘುಳುರಭಸ ಮಿಗೆ ಹೆ । ಚ್ಚಿದುದು ತಬ್ಬಿದುದೀಕ್ಷಣನ ತಡವರಿಸಿ ಗಗನದಲಿ ॥೪೨॥ ಉರಿಯ ಗಂಟಲನೊದೆದು ಫಣಿ ಮಿ । ಕ್ಕುರವಣಿಸೆ ಹಾಹಾ! ಧನಂಜಯ । ಹರಿವುತಿದೆ ಹಾ ವೊಂದು ಹೋದುದುಬಾಯ ತುತ್ತೆನಗೆ॥ತರಿಸಿ ಕೊಡು ಶರವೇಡೆಯನು ವಿ। ಸ್ತರಿಸು ವಹಿಲದೊಳೆನಲು ವೈಶ್ವಾ । ನರನ ಮಾತಿಗೆ ನಗುತ ಕೊಂಡನು ವಿಜಯಗಾಂಡಿವವ ॥೪೩॥ ಆವಶರಸಂಧಾನವೋ ಗಗ । ನಾವಲಂಬಿಯ ಕೊರಳನೆಚ್ಚನು । ಪಾವಕನಮಧ್ಯದಲಿ ಬಿದ್ದುದು ಮುಂಡವಹಿಪತಿಯಾ ॥ ಜೀವವುಳಿದುದು ಶಿರದೊಳಾತಂ । ಗಾವಿಗಡಫಣಿನುಡಿದುದೆಲೆ ಗಾಂ । ಡೀವಿ ಮರೆಯದಿರೆನ್ನ ಹಗೆಯಲಿ ಮರಣನಿನಗೆನುತ ॥೪೪॥ ಎಂದು ಗಗನದೊಳ್ಗುಲಿದು ಫಣಿಶಿರ । ವಂದು ಪಾಯ್ದುದು ಧರೆಗೆರಾಥಾ । ನಂದನನಬತ್ತಳಿಕೆಯಲಿ ಶರವಾಗಿ ಜಗವರಿಯೆ ॥ ಸಂದುದದುಬಳಿಕಿತ್ತಲಿಂದ್ರನನಂದನದ ಬೇಗೆಯಲಿ ಬದುಕಿತು । ವಂಧಪಾಲನ ಸುತಚತುಷ್ಟಯವರಸ ಕೇಳೆಂದ ॥೪೫॥ ಮೆಚ್ಚಿಸಿದುದವುವಹ್ನಿ ಸೂ

ಕ್ತ್ರವ । ನುಚ್ಚುರಿಸಿ ತಜ್ಜ್ವಲನಮುಖವನು । ಬಿಚ್ಚಿ ಬದುಕಿದುವಾಮುನಿಯ ಸಂತಾನಪಕ್ಷಿಗಳು ॥ ಹೆಚ್ಚಿದುರಿಹಬ್ಬುಗೆಯ ಹೊಯ್ಲಲಿ । ಬೆಚ್ಚಿ ಮಾಯನರ್ಜುನನ ಹೊಗಳಿದು । ಕಿಚ್ಚಿನಲಿ ಬದುಕಿದನು ಧರಣೀಪಾಲ ಕೇಳೆಂದ ॥೬೬॥ ಖಗಚತುಷ್ಟಯಮಯಸಹಿತಮುರರಿ । ನುಂಗುಳಿತುಳಿದಸಮಸ್ತಭೂತಾಳಿಗಳನಾಹುತಿಗೊಂಡನಗ್ನಿ ಧನಂಜಯಾಜ್ಞೆಯಲಿ ॥ ಗಗನದಿಂದಿಳಿತಂದು ಸುರಪತಿ । ಮಗನ ಮನ್ನಿಸಿಕೊಟ್ಟನಗ್ಗದ । ಗಗನಮಣಿಗೆಣೆಯೆನಿಪಮಕುಟವನೊಲಿದು ಪಾರ್ಥಂಗೆ ॥೬೭॥ ಹರಿಗೆ ವಂದಿಸಿ ಮಗನನೊಲಿದಾ ದರಿಸಿ ಮರಳಿದನಿಂದ್ರನಿತ್ತಲು । ಭರದಿನಿವರೈತಂದರಿಂದ್ರಪ್ರಸ್ಥಪುರವರಕೆ ॥ ಧರಣಿಪತಿಗಾಖಾಂಡವದಳ್ಳುರಿಯ ಹೋಮದ ಹೊಸಕಥೆಯ ವಿಸ್ತರಿಸಿ ಹೇಳಿದನಸುರರಿಪು ಭೀಮಾದಿಗಳು ನಲಿಯೆ ॥೬೮॥ ಧಾರಿಣೀಶ್ವರರೈವರನು ಸುಕು । ಮಾರವರ್ಗವನಾಸುಭದ್ರಾ ನಾರಿಯನು ಪಾಂಚಾಲಿಯನು ತತ್ಸಕಲಬಾಂಧವರ ಸೂಳಿಗಳ ಸಚಿವಾದಿನೃಪಪರಿ । ವಾರವನು ಪತಿಕರಿಸಿ ಬಂದನು । ದ್ವಾರಕಿಗೆ ಹರುಷದಲಿ ಗದುಗಿನವೀರನಾರಯಣ ... ... ॥೬೯॥

ಅಂತು ಸಂಧಿ ೨೦ ಕ್ಕೆ ಪದ ೯೪೩ ಕ್ಕಂ ಮಂಗಳಮಸ್ತು.

ಇತಿ ಶ್ರೀಮದಚಿಂತ್ಯಮಹಿಮ ಗದುಗು ವೀರನಾರಾಯಣಚರಣಾರವಿಂದ ಮಕರಂದ ಮಧುಪಾನಪುಷ್ಟ ಷಟ್ಪದೀ ನಿಕಾಯ ಶ್ರೀಮತ್ಕುಮಾರವ್ಯಾಸ ಯೋಗೀಂದ್ರ ವಿರಚಿತಮಪ್ಪ ಕರ್ಣಾಟ ಭಾರತ ಮಹಾಪ್ರಬಂಧದೊಳ್ ಆದಿಪರ್ವಂ ಸಮಾಪ್ತಮಾದುದು.

॥ ಶ್ರೀರಸ್ತು ॥

ಶ್ರೀ ವೇದವ್ಯಾಸಾಯ ನಮಃ.

ಕರ್ಣಾಟಭಾರತ — ಸಭಾಪರ್ವವು.

ಸೂಚನೆ. ಸಭೆಯೊಳೋಲಗದೊಳು ವಿರಿಂಚಿ ಪ್ರಭವನನುಮತದಿಂದ ಧರಣೀ ।
ವಿಭು ಮಹಾಕ್ರತುರಾಜಸೂಯವನೊಲಿದು ಕೈಕೊಂಡ ॥

ಕೇಳು ಜನಮೇಜಯಧರಿತ್ರೀ । ಪಾಲ ಖಾಂಡವವನದ ವಹ್ನಿ । ಜ್ವಾಲೆ ತೆಗೆದುದು ಕೂಡೆ ಹೊಗೆದುದು ಹೋದರ ಹೊಸವೆಳೆಯ ॥ ಮೇಲುಗಾಳೆಗದಬ್ಬರದಲಿ ಸಿರಿ । ಲೋಲಸಹಿತರ್ಜುನನು ವಿಕ್ರಮದೇಳಿಗೆಯ ಪರಿತೋಷದಲಿ ತಿರುಗಿದನು ಪಟ್ಟಣಕೆ ॥೧॥ ದೂತರೈದಿದರವರ ಸೂರೆಯ । ಕೈತವಕಿಗರು ಕೃತಕವಾರ್ತರ್ । ಭೀತಪುರಜನವಮುಖದ ದುಗುಡದ ದಡ್ಡಿಗಳನುಗಿದು ॥ ಜಿತುವಿಂದ್ರನ ಬಲುಹ ವಿಗಡನ । ವೀತಿಹೋತ್ರನ ವಿಲಗ ತಿದ್ದಿ ವಿ । ಧೂತಪ್ರಬಲ ಬಂದನಿದೆಯೆಂದರು ಮಹೀಪತಿಗೆ ॥೨॥ ಹೂತುದರಸನ ಹರುಷಲತೆ ಫಲು । ಹೂತವಿಜಯದ ವಿಜಯವಾರ್ತೆ । ಶ್ರೋತ್ರಸುಖಸಂಪ್ರೀತಿನಯನಜಲಾಭಿಷೇಕದಲಿ ॥ ಮಾತು ಹಿಂಚಿತು ಮುಂಚಿದುದು ಸಾಯ । ನಾತಿಥಿವ್ರಜಮುಸುಕಿತಸುರವಿಘಾತಿಪಾರ್ಥನನಖಿಲಸಂತನಕುಲಾಟಬಾಂಧವರ ॥೩॥ ತಳಿತಗುಡಿಗಳುಸಾಲಕಲಶದ । ನಿಳಯನಿಳಯದ ಬೀದಿಬೀದಿಯ । ತಳಿರತೋರಣದೋರಣದನವಮೌಕ್ತಿಕತೋರಣದ ॥ ತಳಿಗೆದಂಬುಲದಾರತಿಯ ಮಾಂಗಳಿಕೆರಭಸದೊಳಖಿಳರಾಜಾ । ವಳಿಗಳೊಸಗೆಯೊಳಿದಿರು ಹೊಕ್ಕರು ರಾಜಮಂದಿರವ ॥೪॥ ಹಿರಿಯರಂಘ್ರಿದ್ವಯಕೆ ಮಣಿದರು । ಕಿರಿಯರುಚಿತಕ್ಷೇಮಕುಶಲದಿ । ಪರರಚಿತಪುರರಂಧ್ರಮಧುರವಚೋವಿಳಾಸದಲಿ॥ ಅರಸನಿವರನು ಮನ್ನಿಸಿದನಾ । ದರಿಸಿತನ್ಯೋನ್ಯಾನುರಾಗ। ಸ್ಫುರಿತತೇಜೋಭಾವವಿಭ್ರಮ ಭೂಪತಿವ್ರಾತ ॥೫॥ ಅರಸ ಕೇಳ್ ಬಳಿಕ ಹರಿ ನಿಜ । ಪುರಕೆ ಬಿಜಯಂಗೈವವಾರ್ತೆಯ । ನೊರೆದನವನೀಶಗೆ ಭೀಮಧನಂಜಯಾದ್ಯರಿಗೆ ॥ ಅರಸಿಯರುಗಭಿಮನ್ಯುಧರ್ಮಜ । ನರವೃಕೋದರಸೂನುಮೊದಲಾ । ಗಿರೆ ಸಮಸ್ತಜನಂಗಳನು ಮನ್ನಿಸಿದನುಚಿತದಲಿ ॥೬॥ ವರಮುಹೂರ್ತದೊಳಮೃತಯೋಗೋ । ತ್ಕರಶುಭಗ್ರಹದೃಷ್ಟಿಯಲಿ ಹಿಮ । ಕರಶುಭಾವಸ್ಥೆಯಲಿ ಕೇಂದ್ರಸ್ಥಾನಗುರುವಿನಲಿ ॥ ಧರಣಿಸುರರಾಶೀರ್ವಚನವಿ । ಸ್ತರಣದಧಿದೂರ್ವಾಕ್ಷತೆಗಳು । ಬ್ಬರದವಾದ್ಯಗಡಾವಣೆಯಲಸುರಾರಿಹೊರವಂಟ ॥೭॥ ಕರಯುಗದ ಚಮ್ಮಟಿಕೆ ವಾಘೆಯ । ಲರಸರಥವೇರಿದನು ಮುಕುಂದ । ಭರದ ಭಾರದ ಸತ್ತಿಗೆಯ ಪಲ್ಲವಿಸಿದನು ಭೀಮ ॥ ಹರಿಯುಭಯಪಾರ್ಶ್ವದಲಿ ಸಿತಚಾ । ಮರವ ಚಿಮ್ಮಿದನರ್ಜುನನು ಬಂ । ಧುರದ ಹಡಪದ ಹೆಗಲ್ಕೈದಿದರರ್ಜುನಾನುಜರು ॥೮॥ ಪೌರಜನಪುರಜನನೃಪಾಲಕು

ಮೊರೆಸಚಿವಪಸಾಯ್ತಭಟಪರಿ । ವಾರ ಧೌಮ್ಯಪ್ರಮುಖಸೂರಿಸಮಾಜರೊಗ್ಗಿನಲಿ ॥ ಕೇರಬಳಿವಿಡಿದೈದಿದರು ಮುರ । ವೈರಿ ವಿರಹವಿಧೂತವದನಾಂ । ಭೋರುಹರ ಸಂತೈಸಿ ಬೀಳ್ಕೊಟ್ಟನು ಕೃಪಾಜಲಧಿ ॥೯॥ ಅರಿನೃಪರು ಕುಹಕಿಗಳು ನೀವೇ । ಸರಸಹೃದಯರಧರ್ಮಶೀಲರು । ಪರರು ನೀವತಿಧರ್ಮನಿಷ್ಠರು ಹಾನಿಯುಂಟದಕೆ ॥ ಅರಸನಾರೋಗಿಸೆ ವಿಹಾರದೊಳಿರುಳುಹಗಲು ಮೃಗವ್ಯಸನನೆ । ಚ್ಚರಿನೊಳಿಹುದೆಂದನಿಬರನು ಬೀಳ್ಕೊಟ್ಟನಸುರಾರಿ ॥೧೦॥ ನಾಲಗೆಗಳಸುರಾರಿಗುಣಾನಾ । ಮಾಳಿಯಲಿ ತುರುಗಿದವು ಕಂಗಳು । ನೀಲಮೇಘಶ್ಯಾಮನಲಿ ಬೆಚ್ಚವು ನಿಹಾರದಲಿ ॥ ಬಾಲಕೇಳೀಕಥನ ಸುಧೆಯೊಳ । ಗಾಳಿ ಮುಳುಗುತ ಕಳುಹುತನಿಬರು । ಸಾಲಭಂಜಿಕೆಯಂದವಾದರು ಕೃಷ್ಣವಿರಹದಲಿ ॥೧೧॥ ಕಳುಹಿ ಕಂಗಳು ಮರಳಿದವುಮನ । ಕಳುಹದಾದ್ಯಾರಾವತಿಗೆ ಮಂ । ಗಳಮಹೋತ್ಸವದೊಸಗೆನುಡಿಯಲಿ ಹೊಕ್ಕನಸುರಾರಿ ॥ ಬಳಿಕವರು ನಿಜರಾಜಭವನ । ಸ್ಥಳಕೆ ಬಂದರು ಸೌಮನಸ್ಯದ । ಲಿಳೆಯ ಪಾಲಿಸುತಿರ್ದರವನೀಪಾಲ ಕೇಳೆಂದ ॥೧೨॥ ಮುರಹರನ ನೇಮದಲಿ ಮಯ ವಿ । ಸ್ತರಿಸಿದನು ಮಣಿನಾಳ್ಕೃತಿಗಳು । ವರಸಭಾಮಂಟಪವನನಿಬರಿಗವಕೃತಜ್ಞನಲೆ ॥ ಕಿರಣಲಹರಿಯ ವಿವಿಧರತ್ನೋ । ತ್ಕರದ ರಚನಾಶಿಲ್ಪವಿದು ದೇ । ವರಿಗಸಾಧ್ಯವು ಶಿವಶಿವಾ ಯೆನೆ ಮೆರೆದುದಾಸ್ಥಾನ ॥೧೩॥ ಹತ್ತುಸಾವಿರಕೈಪ್ರಮಾಣದ । ಸುತ್ತುವಳಯದ ಮಣಿಯುತಿಲೆಗಳ । ತತ್ತವಣೆಗಳ ತಕ್ಕವೆಳಗಿನ ಬಳಿಯ ಲಮಗಳಿ ॥ ಸುತ್ತುವಳಯದ ಪದ್ಮರಾಗದ । ಭಿತ್ತಿಗಳ ವೈಡೂರ್ಯಶಿಲೆಗಳ । ಮತ್ತವಾರಣವರಪಿಧಾನವಲೆಸೆದು ದಾಸ್ಥಾನ ॥೧೪॥ ಕರೆಸಿದನು ಮಯನೆಂಟುಸಾವಿರ । ಸುಗರಕ್ಕಸಕಿಂಕರರ ನಿಜ ಶಿರದೊಳಾಂತರು ತಂದರಂದು ಪ್ರಸ್ಥಪುರವರಕೆ ॥ ಆರಸಂಗಾಣಿಸಿಕೊಂಡನದನಾ । ದರಿಸಿದನು ಭೀಮಂಗೆ ಭಾರಿಯ । ವರಗದಾದಂಡವನು ಕಾಣಿಕೆಯಿತ್ತು ಪೂಜಿಸಿದ ॥೧೫॥ ಇದು ಪುರಾತನಸಗರವಂಶಾ । ಭ್ಯುದಯಯುವನಾಶ್ವನ ಗದೆ ಕೃತಾಂತನ ಕರದ ದಂಡವನಂಡಲೆವಬಲದ ॥ ಮುದವಲೊಪ್ಪುವುದೆನುತ ಮಯನತಿ । ಮುದದಿಬಳಿಕಾದೇವದತ್ತಾ । ಖ್ಯವಮಹಾಶಂಖವನುಪಾರ್ಥಗೆಕೊಟ್ಟುಕೈಮುಗಿದ ॥೧೬॥ ಒಸಗೆವೊರವಮು ಮಯನ ಮಗೆ ಮನ್ನಿಸುವನವನಿಪನಂಗಚಿತ್ತದೊಳ । ಳಸುರಕಿಂಕರರನಿಬರನು ಸನ್ಮಾನವಾನದಲಿ ॥ ಒಸೆದು ಕಳುಹಿದನಾತನನು ದೆಸ । ದೆಸೆಯ ಯಾಚಕನಿಕರ ನೂಕಿತು । ಮಸುಕಿತೈ ಧರ್ಮಜನ ಕೀರ್ತಿಯ ಝಾಡಿ ಮೂಜಗವ ॥೧೭॥ ದಿವಸದಿವಸದೊಳುಂಡುದವನೀ । ದವಿಜಸಂತತಿ ಹತ್ತುಸಾವಿರ । ವವರನೇನೆಂದೆಣಿಸುವನು ಮಾರ್ಗಣಮಹೋದಧಿಯ ॥ ವಿವಿಧರತ್ನಾಭರಣಕಾಂಚನ । ನವದುಕೂಲದ ದಿಂಡಿನಲಿ ಬುಧ । ನಿವಹ ತಣಿದುದನಂತಕೃಪಣಾನಾಥಜನಸಹಿತ ॥೧೮॥ ಆಮಹೋತ್ಸವವೇಳುದಿನವಧಿ । ಯಾಮರಂಜಿತವಾಯ್ತು ಶುಭದಿನ । ರಾಮಣೀಯಕಲಗ್ನದಲಿ ಹೊಕ್ಕನು ಮಹಾಸಭೆಯ ॥ ಭೂಮಿಪಾಲರನಂತಸುಜನ । ಸ್ತೋಮವನು ಜರಮರ್ತ್ಯರನಿಪಸ ॥ ನಾಮಂದ್ರದರು ರಾಯನೆಡವಲವಂಕದಿಂದಿನಲಿ ॥೧೯॥ ಹೊಳೆಹೊಳೆದುದಾಸ್ಥಾನಕಾಂತಾ । ವಳಿಯ ಕಂಗಳ ಬೆಳಗಿನಲಿ ತನಿ । ಮುಳುಗಿತೋಲಗ ಲಲಿತರಸಲಾವಣ್ಯಲಹರಿಯಲಿ ॥ ವಿಲಸದಮಳಾಭರಣರತ್ನಾ । ವಳಿಯ ರಶ್ಮಿಯಲುಡುಗಡಗ ಪ । ಜ್ಜಳಿಸಿತಾಸಭೆ ದೀಪ್ತಿಮಯವಿವಿಧಾನುಭಾವದಲಿ ॥೨೦॥ ಮೇಳವಲಿ ಗಂಧರ್ವರಿಪ್ಪ । ತ್ತೇಳುತುಂಬುರಸಹಿತಶುದ್ಧದ । ಸಾಳಗದಸಂಕೀ

ರ್ಣದೇಶೀಯವಿವಿಧರಚನೆಗಳ ॥ ಬಾಳೆಯರ ಸ್ವರಗಣಿಕೆಯರ ಮುಖ । ಚಾಳೆಯರ ಸಂಗೀತತಾಳದ ।
ತೂಳುವರೆ ತುಂಬಿದುದು ಕುಸುಮಾಯುಧನ ಕಳಕಳವ ॥೨೧॥ ಆ ಮಹಾಸಭೆಯಲಿ ಯುಧಿಷ್ಠಿರ । ಭೂ
ಮಿಪತಿ ದೂರದಲಿ ಕಂಡನು । ತಾಮರಸದಳನಯನಸನ್ನಿಭ ಭಾವಭಾವಿತನಾ ॥ ಹಾ ಮಹಾದೇವೆತ್ತ
ಣದ್ಭುತ । ಧಾಮವಿದು ದಿನಮಣಿಯ ತೇಜ । ಸ್ತೋಮವೆರಡರ ಧಾತುವೆನುತೀಕ್ಷಿಸಿದರಾದೆಸೆಯ ॥
ಲಲಿತತೇಜಃಪುಂಜ ಮಿಗೆ ಥಳ । ಥಳಿಸಿತತಿದೂರದಲಿ ಬೆಳಗಿನ । ಗೊಳಸನುಡಿದಂತಾದುದಾಗಳೆ
ತೋರಿತಾಕಾರ ॥ ತಳಿತುದವಯವ ಶುದ್ಧವರ್ಣ । ಸ್ಥಳವು ನಿಮಿಷಕೆ ಮುನಿವರಾಕೃತಿ । ಹೊಳೆದು
ದಾಕ್ಷಣವೀತನಾರದನೆಂದುದಖಿಳಜನ ॥೨೩॥ ದಣಿಯದಾತನ ಬೆರಳು ನಾರಾ । ಯಣರವದ ವೀಣೆಯ
ಲಿ ಹೃದಯಾಂ । ಗಣದ ಸೀಮೆಗೆ ಬಿಡಯವಾಗದು ಕೃಷ್ಣಪದಕೇಳಿ ॥ ಪ್ರಣವರೂಪದ ಭಾವಶುದ್ಧಿ
ಯ। ಕಣಿ ಮುರಾರಿಯ ತನ್ಮಯದನಿ । ಗುಣಮುನೀಶ್ವರನಿಳಿದನಿಂದ್ರಪ್ರಸ್ಥಪುರವರಕೆ ॥೨೪॥ ಬಂ
ದನರಮನೆಗಾಮುನಿಯನಭಿ । ವಂದಿಸಿದುದಾಸ್ಥಾನವಿದಿರಲಿ । ನಿಂದು ಬಿಜಯಂಗೈಸಿ ತಂದರು ಸಿಂಹ
ವಿಷ್ಟರಕೆ ॥ ಸಂದಮಧುಪರ್ಕಾದಿಸತ್ಕೃತಿ । ಯಿಂದ ಪೂಜಿಸಿ ವಿನಯ ಮಿಗೆ ನಗು । ತೆಂದನವನೀ
ಪಾಲನುಚಿತೋಕ್ತಿಯಲಿ ನಾರದನ ॥೨೫॥ ಕುಸಲವೇ ನಿಮ್ಮಂಘ್ರಿಗಳಿಗಿಂ । ದೊಸಗೆ ಯಾಯಿತ್ತು
ನಮಗೆ ದರುಶನ । ವಸಮಸಂಸ್ಕೃತಿಪಙ್ಕದಗ್ಧರಿಗಮೃತವರ್ಜವಲೇ ॥ ಪಶುಪತಿಯ ಪರಮೇಷ್ಠಿಯ
ಮುರ । ದ್ವಿಷನ ಸಾಮರ್ಥ್ಯದ ಸಗಾಢದ। ದೆಸಕ ನಿಮಗೆಂಟಂವು ಕೊಂಡಾಡಿದನು ನಾರದನ ॥೨೬॥
ಕುಶಲವೆಮಗಿಂದ್ಯೈದೆ ನೀನೀ । ವಸುಮತೀವಧುಗೊಳ್ಳಿದನೆ ಶೋ । ಭಿಸುವುದೇ ಭವದಾಜ್ಞೆಯಲಿ
ವರ್ಣಾಶ್ರಮಾಚಾರ ॥ ದೆಸೆದೆಸೆಗಳಮಳಾಗ್ನಿಹೋತ್ರ । ಪ್ರಸರಧೂಮಧ್ವಜಗಳೇ ನಿಂ । ದಿಸರಲೇ
ದುರ್ಜನರು ಸುಜನರನೆಂದನಾಮುನಿಪ ॥೨೭॥ ಅರ್ಥದಿಂ ಧರ್ಮವನು ಧರ್ಮದಿ। ನರ್ಥವನು ಧರ್ಮಾ
ರ್ಥವೆರಡನು । ವ್ಯರ್ಥಕಾಮದ ಳಳಿಯಲೇ ರಾಜ್ಯಾಭಿಲಾಷೆಯಲಿ ॥ ಅರ್ಥಸಾಧನಧರ್ಮಸಾಧನ ।
ವರ್ಥಧರ್ಮದಲುಭಯಲೋಕಕ। ನರ್ಥಸಾಧನ ಕಾಮವೆಂದನು ಮುನಿ ನೃಪಾಲಂಗೆ ॥೨೮॥ ಮಾನ್ಯ
ರನು ಧಿಕ್ಕರಿಸವೇಣವ । ಮಾನ್ಯರನು ಮನ್ನಿಸೆಯಲೇಸು । ಮಾನ್ಯರನುಸತ್ಕರಿಸುವಾಹಳಿವಾವಿಕಾರಿ
ಗಳ ॥ ಅನ್ಯರನು ನಿನ್ನವರ ಮಾಡಿಯ । ನನ್ಯರನು ಬಾಹಿರರ ಮಾಡಿವ । ದಾನ್ಯರನು ನಿಗ್ರಹಿಸೆಯೆ
ಲೆಭೂಪಾಲ ಕೇಳೆಂದ ॥೨೯॥ ಖಳರ ಖಂಡಿಸುವಾಮದವ್ಯಾ । ಕುಲರ ದಂಡಿಸುವಾದರಿದ್ರರ । ನೊಲಿ
ದು ರಕ್ಷಿಸುವಾಸುಮಾಯಾವಿಗಳ ಶಿಕ್ಷಿಸುವಾ ॥ ಕುಲಯುತರ ಕೊಂಡಾಡುವಾರಿಪು। ಬಲದತಲೆಚಂ
ಡಾಡುವಾದು । ರ್ಬಲರನತಿಬಾಧಿಸೆಯಲೇ ಭೂಪಾಲಕೇಳೆಂದ ॥೩೦॥ ಜಾತಿಸಂಕರವಿಲ್ಲಲೇ ಜನ ।
ಜಾತದಲಿ ಹೀನೋತ್ತಮರು ನಿ । ರ್ನೀತರೇ ನಿಜಮಾರ್ಗದಲಿ ಕುಲವಿಹಿತಧರ್ಮದಲಿ ॥ ಖ್ಯಾತರೇ
ಸತ್ಪುರುಷರಧಿಕ । ದ್ಯೂತಕೇಳಿಗಳಿಲ್ಲಲೇ ಮೃಗ । ಯಾತಿರೇಕವ್ಯಸನಕಿರಿದೇ ರಾಯನಿನಗೆಂದ ॥೩೧॥
ಘುಸಣಿಯಿಲ್ಲಲೆನಿನಗೆ ಸಪ್ತ । ವ್ಯಸನದಲಿ ನಿನ್ನನುಜತನುಜರ । ಮುಸುಡಧರ್ಮದಲಿರದಲೇ ವೈದಿಕ
ವಿಧಾನದಲಿ ॥ ಸಸಿನವೇ ನಿನ್ನರತಖಳರಿಗೆ । ಹುಸಿಕರಿಗೆ ಡಂಬಕರಿಪಜ್ಞರಿ । ಗುಸುರುವಾ ನಿನ್ನಂತ
ರಂಗವನೆಂದನಾ ಮುನಿಪ ॥೩೨॥ ಹುರುಡಿಗರ ನೇಕಾಂತದೊಳಗಾ । ದರಿಸುವರು ಭೇದಕರ ಬುದ್ಧಿಗೆ।
ತೆರಹುಗೊಡುವರು ಕುಟಿಲರಿಗೆ ವಿಶ್ವಾಸಹೀನರಿಗೆ ॥ ಮರುಳುಗೊಂಬರು ಖೂಳರಿಗೆ ಭಂ । ಡರಗೆ

ತೆರುವರು ಧನವನೀಧರೆ । ಯರಸುಗಳಿಗಿದು ಸಹಜ ನಿನ್ನಂತಸ್ಥವೇನೆಂದ ॥೩೩॥ ಒಳಗೆ ಕುಜನರು ಹೊರಗೆ ಧರಣೀ । ವಳಯವಮಾನ್ಯರು ಛತ್ರಚಮರದ । ನೆಳಲು ಖೂಳರಿಗಾತಪದ ಬಲುಬೇಗೆ ಬುಧಜನಕೆ ॥ ಒಳಗೆ ರಾಜದ್ರೋಹಿಗಳು ಹೊರ । ವಳಯದಲಿ ಪತಿಕಾರ್ಯನಿಷ್ಠರು । ಬಳಸಿಹುದು ನೃಪಚರಿತ್ರನಿನ್ನಂತಸ್ಥವೇನೆಂದ ॥೩೪॥ ಖೂಳರೊಡನೆ ವಿನೋದ ಭಂಡರೊ । ಳಾಳಿ ಸ್ವಾಮಿದ್ರೋಹರೊಡನೆ ಸ । ಮೇಳ ನಂಬುಗೆ ಡಂಭರೊಡನೆ ವಿಕಾರಿಯೊಡನಾಟ ॥ ಸೂಳೆಯರು ಸಮಜೀವಿಗಳು ಕುಲ । ಬಾಲಕಿಯ ರೋಗಡಿಕೆಯವರು ನೃ । ಪಾಲಜನಕಿದು ಸಹಜ ನಿನ್ನಂತಸ್ಥವೇನೆಂದ ॥೩೫॥ ಅರುಗುಣದೊಳುಪಾಯನಾಲ್ಕರೊ । ಳೇರಿಹುದೆ ಮನ ರಾಜಧರ್ಮದ । ಮೂರುವರ್ಗದೊಳಿಚ್ಛೆರುಂಟೇ ನಯವಿಧಾನದಲಿ ॥ ಮೂರುಶಕ್ತಿಗಳೊಳಗೆ ಮನ ಬೇ । ರೂರಿಹುದೆ ಸಪ್ತಾಂಗವಲಿ ಮೈ । ದೋರಿಹ್ಯ ಬೇಸರೆಯಲೇ ಭೂಪಾಲ ನೀನೆಂದ ॥೩೬॥ ಪ್ರಜೆಗಳನುರಾಗಿಗಳೆ ಸುಭಟ । ವ್ರಜಕೆ ಜೀವಿತ ಸಂದಿಹುದೆ ವರ । ಸುಜನರಿಗೆ ಸಂತೋಷವೇ ಮಧುರೋಕ್ತಿರಚನೆಯಲಿ ॥ ವಿಜಯಭೀಮರು ಯಮಳರಿವರ । ಗ್ರಜರೊಳನುಜರಭಿನ್ನರೇ ಗಜ । ಬಜಕೆಯಂತಃಪುರದೊಳಿಲ್ಲಲೆ ರಾಯ ಕೇಳೆಂದ ॥೩೭॥ ವಿಹಿತಕಾಲದಮೇಲೆ ಸಂಧಿಯ । ನಹಿತರೊಳು ವಿರಚಿಸುವ ಮೇಣ್ವಿ । ಗ್ರಹದ ಕಾಲಕೆ ವಿಗಡಿಸುವುದೆಂಬರಸು ನೀತಿಯಲಿ ॥ ವಿಹಿತವೇ ಮತಿ ವೈರಿರಾಯರ । ವಿಹರಣವನವರಾಳ್ಕುಮರೆಯ । ಬಹಳತೆಯನಲ್ಪತೆಯನರಿವೈ ರಾಯನೀನೆಂದ ॥೩೮॥ ಒಂದರಾಯಕೆ ಬೀಯ ಸಮ ಮ । ತ್ತೊಂದುಕಡೆಯಲಿ ಹೀನಫಲವಿ । ನ್ನೊಂದುಕಾರ್ಯದುಪೇಕ್ಷತೆಗೆ ಮೊದಲಿಲ್ಲಕಡೆಯಿಲ್ಲ ॥ ಒಂದು ದುರ್ಘಟದೈವನಾಘಾತ । ವೊಂದುಶಂಕಿತಫಲವೆನಿಪ್ಪವ । ಹಿಂದುಗಳವೈ ಮಂತ್ರದಲಿ ಭೂಪಾಲಕೇಳೆಂದ ॥೩೯॥ ನೆನೆದಮಂತ್ರವನಿನ್ನೊಳಾಲೋ । ಚನೆಯು ನಿಶ್ಚಯವಿಲ್ಲದಿರಲೊ । ಬ್ಬನಲಿ ಮೇಣ್ಬಾಲಬರಲಿ ಜಡರಲಿ ಮತಿವಿಹೀನರಲಿ ॥ ಮನಬರಡರಲಿ ಸಲೆ ವಿಧಾವಂ । ತನಲಿ ಮಂತ್ರಾಲೋಚನೆಯ ಸಂ । ಜನಿಸಿ ಪರಿಹಿನೊಳಳಿಯಲೇ ಭೂಪಾಲ ಕೇಳೆಂದ ॥೪೦॥ ಕಿರಿದುಪೇಕ್ಷೆಯ ಬಹಳಫಲವೆ ಸು । ಹೊರೆವುದಿದು ಮೇಣಲ್ಪಭೇದಕೆ । ಮುರಿವುದಿದು ವಿಕ್ರಮಕೆ ವಶವಿದು ನೀತಿಸಾಧ್ಯವಿದು ॥ ಹರಿವುದಿದು ನಯಶಕ್ತಿಗೆಂಬುದ । ನರಿದು ನಡೆವೈ ರಾಜಧರ್ಮದ । ಹೊರಿಗೆಯನು ಮರೆದಿರೆಯಲೇ ಭೂಪಾಲ ಕೇಳೆಂದ ॥೪೧॥ ಪರರು ಮಾಡಿದಸದ್ಗುಣಂಗಳ । ಮರೆಯಲೇ ಪರರವಗುಣಂಗಳ । ಮರೆದು ಕಳೆವಾಮಾನ್ಯರಿಗೆ ನೀಮಾಡಿದವಗುಣವ ॥ ಮರೆಯಲೇ ನೀಮಾಡಿದುಚಿತವ । ಮರೆದು ಕಳೆವಾ ಸಾರವಿದು ಸ । ತ್ಪುರುಷರಭಿಮತವಿದು ಕಣಾ ಭೂಪಾಲ ಕೇಳೆಂದ ॥೪೨॥ ಭಜಿಸುವಾಭಕ್ತಿಯಲಿ ದೈವ । ದ್ವಿಜಗುರುಸ್ಥಾನವನು ದೇಶ । ಪ್ರಜೆಯನರ್ಥಾಗಮದ ಗಡಣೆಗೆ ಗಾಸಿಮಾಡೆಯಲೆ ॥ ಕುಜನರಭಿಮತದುಗ್ರದಂಡ । ವ್ಯಜನದಲಿ ಜನಜಠರವಹ್ನಿಯ । ನೃಜಿಸೆಯಲೆ ಭವದೀಯರಾಜ್ಯಸ್ಥಿತಿಯಹೇಳೆಂದ ॥೪೩॥ ಆಣೆಗಪಜಯವಿಲ್ಲಲೇ ಕೀ । ಳಾಣೆಟಂಕದೊಳಿಲ್ಲಲೇ ನಿ । ತ್ರಾಣದಲಿ ಸಂಗರವ ಹೊಗೆಯಲೆ ಶೌರ್ಯಗರ್ವದಲಿ ॥ ವಾಣಿಯ ವಸುಚಿತವಲಿ ಧರ್ಮದ । ಲೂಣೆಯವ ನಹಿತರಲುಪೇಕ್ಷೆಯ । ಕೇಣವನು ದಾನದಲಿ ಮಾಡೆಲೆರಾಯಕೇಳೆಂದ ॥೪೪॥ ಕಳವು ಪುಸಿ ಹಾದರ ವಿರೋಧ । ಸ್ಖಲಿತವಾರಡಿ ಬಂದಿ ದಳವುಳ । ಬೆಳುಗವತೆಯನ್ಯಾಯ ಪರಿಭವ ತಕ್ಕುಡೊಳ್ಳಾಸ ॥ ಪಳಿವು ವಂಚನೆ ಜಾತಿಸಂಕರ । ಕೊಲೆವಿರೋಧವುವಿಕೃತಮಾಯಾ । ವಳಿಗಳೆಂಬಿವು ನಿನ್ನೊ

ಳಿಲ್ಲಲೆರಾಯ ಕೇಳೆಂದ ॥೪೫॥ ರಣಮುಖದೊಳಂಗನೆಯಲಾರೋ । ಗಣೆಯಲರಿಗಳ ಕೂಟದಲಿ ವಾ
ರಣತುರಗದೇರಾಟದಲಿ ವಿವಿಧಾಯುಧಂಗಳಲಿ ॥ ಎಣೆನೃಪರ ಸೋಂಕಿನಲಿ ಸಜ್ಜೆಯ । ಲಣಿಯುಮ
ಜ್ಜನದಲಿ ಮಹಾಮೃಗ । ಗಣನೆಯೊಳಗೆಚ್ಚರಿಕೆಯುಂಟೇ ರಾಯ ನಿನಗೆಂದ ॥೪೬॥ ನುಡಿದರೆರಡನಾಡ
ದಿರು ಕಾರ್ಯವಬಿಡದಿರಾವನೊಳಾದೊಡೆಯು ನಗೆ । ನುಡಿಯ ಕುಂದದಿರೊಡೆಯದಿರು ಹೃದಯವನು
ಕಪಟಿಯಲಿ ॥ ಬಡಮನವಮಾಡದಿರು ಮಾರ್ಗದೊ । ಳಡಿಯಿಡದಿರನುಜಾತ್ಮಜರೊಳೊ । ಗ್ಗೊಡೆ
ಯದಿರು ನೃಪನೀತಿ ಯಿದು ಭೂಪಾಲಕೇಳೆಂದ ॥೪೭॥ ನೀತಿವಿಡಿದರಸಂಗೆ ಬಹಳ । ಖ್ಯಾತವಿದು
ಜನರಾಗ ರಾಗ । ವ್ರಾತದಿಂ ಧನ ಧನದಿ ಪರಿಕರ ಪರಿಕರದಿ ಜಯವು ॥ ಆತಜಯದಿಂ ಧರ್ಮ
ಧರ್ಮಸ । ಮೇತದಿಂ ಸುರತುಷ್ಟಿತುಷ್ಟಿಯ । ನೀತಿಯಿಂದಿಹಪರವ ಗೆಲುವೈರಾಯನೀನೆಂದ ॥೪೮॥
ಮಂತ್ರವುಳ್ಳವನವನೆ ಹಿರಿಯನು । ಮಂತ್ರವುಳ್ಳವನವನೆ ರಾಯನು । ಮಂತ್ರವುಳ್ಳವನವನೆ ಸಚಿವನಿ
ಯೋಗಿಯೆನಿಸುವನು । ಮಂತ್ರವಿಲ್ಲದ ಬರಿಯಬಲುತಳ । ತಂತ್ರದಲಿ ಫಲವಿಲ್ಲವೈ ಸ್ವಾ । ತಂ
ತ್ರ್ಯವೆನಿಸಲ್ಕರಿವುದೇ ಭೂಪಾಲ ಕೇಳೆಂದ ॥೪೯॥ ಸತ್ಯವುಳ್ಳೊಡೆ ಧರಣಿ ಸಾರುಗು । ಸತ್ಯವುಳ್ಳೊಡೆ
ಪದವಿಸಾರುಗು । ಸತ್ಯವುಳ್ಳೊಡೆ ಸಕಲರಾಜ್ಯದ ವೀರಸಿರಿ ಸಾರ್ಗು ॥ ಸತ್ಯವೇ ಬೇಹುದು ನೃಪರಿಗಾ ।
ಸತ್ಯ ಭುಜಬಲಗೂಡಿ ಮಂತ್ರದ । ಸತ್ಯವೇ ಸತ್ವಾಧಿಕವು ಭೂಪಾಲ ಕೇಳೆಂದ ॥೫೦॥ ಮೇಲನರಿಯದ
ನೃಪನ ಬಾಳಿಕೆ । ಗಾಳಿಗೊಡ್ಡಿದಸೊಡರು ನೀರದ । ಜಾಲದೊಡ್ಡಣೆ ಸುರಧನುವಿನಾಕಾರ ಶವದುಡಿಗೆ॥
ಬಾಳಿಗಾಸಿದಕೊರಳು ಭುಜಗನ । ಹೇಳಿಗೆಯಲಿಕ್ಕಿದಕರವು ಬೆ । ಳ್ಳಾರಹಬ್ಬಗೆಯವನ ಸಿರಿ ಭೂಪಾಲ
ಕೇಳೆಂದ ॥೫೧॥ ಆಯವಿಲ್ಲದ ಬೀಯವನು ಪ್ರೊ । ಪಾಯವಿಲ್ಲದಗಾಯವನು ನಿ । ರ್ದಾಯವಿಲ್ಲದ
ಮಂತ್ರವನು ಲೇಸಾಗಿ ಮಿಗೆ ರಚಿಸಿ ॥ ನ್ಯಾಯವಿಲ್ಲದನಡವಳಿಯನ । ನ್ಯಾಯಹೊದ್ದುವಪಾತಕವ
ನಿಜ । ಕಾಯದಲಿ ನೀ ಧರಿಸೆಯೆಲೆಭೂಪಾಲಕೇಳೆಂದ ॥೫೨॥ ಫಲವಹುದ ಕೆಡಲೀಯದಳಿ ಪರಿ ।
ಮಳವಕೊಂಬಂದದಲಿ ನೀನಾ । ಳ್ವಿಳೆಯ ಕರದರ್ಥವನು ತೆಗೆವೈ ಪ್ರಜೆಯ ನೋಯಿಸದೆ ॥ ಹಲವು
ಸನ್ಮಾನದಲಿ ನಯದಲಿ । ಚಲಿಸದಿಪ್ಪಂದದಲಿ ರಾಜ್ಯವ । ನಿಲಿಸುವಭಿಮತಮಂತ್ರಿಯುಂಟೇ ರಾಯ
ನಿನಗೆಂದ ॥೫೩॥ ಸೂಕರನ ತುಂಬಿಯ ಮರಾಳನ । ಭೇಕವೈರಿಯ ಕಾರುರಗಕಪಿ । ಕೋಕಿಲನ ಬರ್ಹಿ
ಯ ಸುಧಾಕಿರಣನ ದಿನಾಧಿಪನ ॥ ಆಕಸದ ದರ್ಪಣದ ಬಕರ । ತ್ನಾಕರನಲೊಂದೊಂದುಗುಣವಿರ ।
ಬೇಕು ನೃಪರಿಗೆ ನಿನ್ನೊಳುಂಟೇ ರಾಯ ಹೇಳೆಂದ ॥೫೪॥ ನೆಚ್ಚದಿರು ಸಿರಿಯನುವೃಥಾಮದ । ಗಿಚ್ಚಿ
ನುರಿಯಲಿ ಬೇಯದಿರು ಮಿಗೆ । ಬೆಚ್ಚಿ ಬೆದರದಿರೆಡರಿನಲಿ ಸತ್ಯವನು ಚಲಿಸದಿರು ॥ ಮೆಚ್ಚದಿರಸತ್ಯ
ವನು ಗುಣವನು । ಮುಚ್ಚದಿರು ದುಷ್ಕೀರ್ತಿಸಾರಿಯ । ಮಚ್ಚದಿರು ಮರುಳಾಗದಿರು ಭೂಪಾಲ ಕೇ
ಳೆಂದ ॥೫೫॥ ಹಲವುವಿನಿಯೋಗದಲಿ ಸುದತಿಯ । ರೊಲುಮೆಯಲಿ ಸಕಲಾಂಗದಲಿ ನಿ । ಸ್ಖಲಿತ
ನಿಜವನೆ ಧರಿಸುವಾಶ್ರಮವರ್ಣಭೇದದಲಿ ॥ ಹಳಿವು ನಿನಗಾವಂಗದಲಿ ಬಳಿ । ಸಲಿಸದಲೆ ಪರತತ್ವದಲಿ
ವೆ । ಗ್ಗಳಿಸವಲೆ ವೈರಾಗ್ಯಮತ ಭೂಪಾಲ ನಿನಗೆಂದ ॥೫೬॥ ಪರಿಜನಕೆ ದಯೆಯನು ಪರಸ್ತ್ರೀ ।
ಯರಲಿ ಭೀತಿಯ ಹಗೆಗಳಲಿ ನಿ । ಷ್ಕರುಣತೆಯ ಬಡವರಲಿದಾನವ ದೈವಗುರುದ್ವಿಜರಾ ॥ ಚರಣ
ಸೇವೆಯಲಾರ್ತತೆಯ ಪಿಸು । ಣರ ನುಡಿಗಳಲಿ ಮೂರ್ಖತೆಯ ನೀ । ವಿರಚಿಪೆಯೊ ಬೇಸರುವೆಯೋ

ಭೂಪಾಲ ಕೇಳೆಂದ ॥೫೭॥ ಮೋಹದವಳಲಿ ವೈದ್ಯರಲಿ ವೈ । ಗಾಹಿನವರಲಿ ಬಾಣಸಿಗರಲಿ । ಬೇಹ ಮಂತ್ರಿಗಳಲಿ ವಿಧಾವಂತರಲಿ ಹಿರಿಯರಲಿ ॥ ದೇಹರಕ್ಷಕರಲಿ ಸದೋದಕ । ವಾಹಿಯಲಿ ಹಡವಾಳಿಯಲಿ ಪ್ರ । ತ್ಯೂಹವನುವಿರಚಿಸೆಯೆಲೇ ಭೂಪಾಲಕೇಳೆಂದ ॥೫೮॥ ತರುಣಿಯಲಿ ಹಗೆಗಳಲಿ ಬಹಳೈಶ್ವರಿಯದಲಿ ಶಸ್ತ್ರಾಂಗಿಯಲಿ ಸಂ । ಸ್ತರಣದಲಿ ಮದ್ಯಪಿಯಲಬಲಾರ್ಥಿಯಲಿ ಶೃಂಗಿಯಲಿ ॥ ಉರಗನಲಿ ನದಿಯಲಿ ಸಖಿಯರಾ । ತುರಿಯದಲಿ ದುರ್ಮಂತ್ರಿಯಲಿ ದು । ಶ್ಚರಿತನಲಿ ವಿಶ್ವಾಸಿಸೆಯೆಲೇ ಭೂಪಕೇಳೆಂದ ॥೫೯॥ ಧೂಳರನು ಧವಳರನು ಠಕ್ಕನ । ಠೌಳಿಕಾರನ ಕೃತಕಮಾಯಾ । ಜಾಲರನು ಕಾಹುರರನಂತರ್ದಾಹಕರ ಶಠರ ॥ ಖೂಳರನು ಖಳರನು ವಿಕಾರಿಯ । ಚಾಳ್ನುಡಿಗಳ ಜಡಮತಿಯನೀ । ನಾಳಿಗೊಂಬೆಯೊ ಲಾಲಿಸುವೆಯೋ ರಾಯ ಹೇಳೆಂದ ॥೬೦॥ ಆವಕಾಲದೊಳಾವಕಾರ್ಯವೆದಾವನಿಂದಹುದವನ ಮನ್ನಿಪ । ತಾವಿದೆಂಬುದನರಿದಿಹೈ ಮೃಗಜೀವಿಯಂದದಲಿ ॥ ಲಾವಕರ ನುಡಿಗೇಳಿ ನಡೆದರೆ । ಭೂವಳಯದೇಕಾಧಿಪತ್ಯದ । ತಾವು ಕೆಡುವುದನರಿದಿಹೈ ಭೂಪಾಲ ಕೇಳೆಂದ ॥೬೧॥ ಅರಸು ರಾಕ್ಷಸ ಮಂತ್ರಿಯೆಂಬವ । ಮೊರೆವಹುಲಿ ಪರಿವಾರ ಹದ್ದಿನ । ನೆರವಿ ಬಡವರ ಬಿನ್ನಪವನಿನ್ನಾರು ಕೇಳುವರು ॥ ಉರಿಯುರಿವುತಿದೆ ದೇಶನಾವಿ । ನ್ನಿರಲುಬಾರದೆನುತ್ತ ಜನಬೇ । ಸರಿನ ಬೇಗೆಯಲಿರದಲೇ ಭೂಪಾಲಕೇಳೆಂದ ॥೬೨॥ ಧನದಲುರುಧಾನ್ಯದಲಿ ನೆರೆದಿಂ । ಧನದಉದಕದ ಹೆಚ್ಚುಗೆಯುಲಂ । ಬಿನಲಿ ಶಸ್ತ್ರೌಘದಲಿ ಶಿಲ್ಪಿಗಳಲಿ ಶಿಲಾಳಿಯುಲಿ ॥ ವನವಳಯ ಕೋಟಾವಳಯಜೀ । ವನವಳಯಗಿರಿವಳಯದುರ್ಗವು । ವೆನಿಪದುರ್ಗಾವಳಿ ಸಮಗ್ರವೆ ಭೂಪ ಕೇಳೆಂದ ॥೬೩॥ ಕೃಷಿಮೊದಲು ಸರ್ವಕ್ಕೆ ಕೃಷಿಯಿಂ । ಪಸರಿಸುವುದಾಕೃಷಿಯನುದ್ಯೋ । ಗಿಸುವ ಜನವನು ಪಾಲಿಸುವುದಾಜನಪದದಜನದಿ ॥ ವಸುತೆರಳುವುದು ವಸುವಿನಿಂ ಸಾ । ಧಿಸುವೊಡಾವುದಸಾಧ್ಯವದರಿಂ । ಕೃಷಿವಿಹೀನನ ದೇಶವದು ನಿರ್ದೇಶಕೇಳೆಂದ ॥೬೪॥ ಸತಿಯರೊಲುಮೆಯ ವಿಟರುಗಳನಾ । ಸತಿಯರ ಸ್ಥಿತಿಗತಿಗೆ ತಾನೆಂ । ದತಿಶಯೋಕ್ತಿಯ ನುಡಿವವರನರಮನೆಯ ಕಾಹಿಂಗೆ ॥ ಪತಿಕರಿಸಿದರೆ ಜಗವರಿಯಲಾ । ಕ್ಷಿತಿಪರಭಿಮಾನವು ಮುಹೂರ್ತಕೆ । ಗತವಹುದು ನೀನರಿದಿಹೈ ಭೂಪಾಲಕೇಳೆಂದ ॥೬೫॥ ಕಡುಗಧಾರೆಯ ಮಧು ಮಹಾಹಿಯ । ಹೆಡೆಯ ಮಾಣಿಕ ವಜ್ರದಿಂ ಬಿಗಿ । ದೊಡಲಿಗೊಡ್ಡಿದಸುರಗಿ ಕಡುಗೆರಳಿವ ಮೃಗಾಧಿಪನ ॥ ನಡುಗುಹೆಯೊಳಿಹವಸುಧೆಯಘುಟಿವೀ । ಪೊಡವಿಯೊಡೆತನ ಸದರವೇ ಕಡು । ಬಡವರಿಗೆ ದೊರಕೊಂಬುದೇ ಭೂಪಾಲ ಕೇಳೆಂದ ॥೬೬॥ ಮಗಗೆ ಮುನಿವನು ತಂದೆ ತಂದೆಗೆ । ಮಗ ಮುನಿವನೊಡಹುಟ್ಟಿದರು ಬಲು । ಪಗೆ ಕಣಾ ತಮ್ಮೊಳಗೆ ಭೂಪರ ಕುಲದ ವಿದ್ಯೆ ಯಿದು ॥ ಬಗೆಯೆ ನಿನ್ನೊಡಹುಟ್ಟಿದರು ಮಂ । ತ್ರಿಗಳೊಳಾಪ್ತರಖಿನ್ನರೇ ದಾ । ಯಿಗರೊಳಂತರ್ಬದ್ಧವುಂಟೇ ರಾಯ ನಿನಗೆಂದ ॥೬೭॥ ಮಲೆವರಾಯರ ಬೆನ್ನ ಕಪ್ಪವ । ನಲಗಿನಲಿ ಕೊಂಡಾಂತಮನ್ನೆಯ । ಕುಲದ ತಲೆ ಚೆಂಡಾಡಿ ಗಡಿಗಳ ದುರ್ಗದಲಿ ತನ್ನ ॥ ಬಲುಸಚಿವರನು ನಿಲಿಸಿ ತಾ ಪುರ । ದಲಿ ವಿನೋದದಲಿರುತ ಹರುಷದ । ಲಿಳೆಯಪಾಲಿಸುವವನರಸು ಭೂಪಾಲ ಕೇಳೆಂದ ॥೬೮॥ ಮನ್ನಣೆಯೊಳಲ್ಪತೆಯ ನುಡಿಯೊಳ । ಗುನ್ನತಿಯನೆಸಗುವುದು ಪರರಿಗೆ । ತನ್ನವರಿಗುಗ್ಗಡದ ಪರಿಕರಣೆಯನು ಮಾತಿನಲಿ ॥ ಭಿನ್ನವನು ತೋರುವುದು ರಾಯರ । ಗನ್ನಗತಕಕಣಾ ವಿಪುಳಸಂ । ಪನ್ನಮತಿ ನಿನಗುಂಟೆ ಭೂಮಿಪಾಲ

ಕೇಳೆಂದ ॥೬೯॥ ಧನದಿ ಪಂಡಿತರಶ್ರುತತಿಯಾ । ಧನದಿ ಕಾಂತೆಯುರೆಖಿಳವಸ್ತುಗಳೈದೆ ಸೇರುವುದು ॥ ನೆನಹು ತೃಪ್ತಿಯೊಳೈದದದರಿಂ । ಧನವೆ ಸಾಧನವರಸಿಗಾಧನ । ವನಿತು ದೊರೆಕೊಳಲಿದಿರದಾರ್ಕೈ ಧಾತ್ರಿಪತಿಗಳಲಿ ॥೭೦॥ ಶೂರ ಧೀರನುದಾರಧರ್ಮ್ಮೋ । ದ್ಧಾರ ವಿವಿಧವಿಚಾರ ಸುಜನಾ । ಧಾರ ರಿಪುಸಂಹಾರ ಚತುರೋಪಾಯಸಾಕಾರ ॥ ಸಾರಮಂತ್ರವಿಚಾರ ಭುವನಾ । ಧಾರ ಸುಜನ ಸ್ವಾಮಿ ಕಾರ್ಯ್ಯಾ । ಗಾರನೆನಿಸುವಮಂತ್ರಿಯುಂಟೇ ರಾಯ ನಿನಗೆಂದ ॥೭೧॥ ತಿಳಿದವನ ಮತಿವಿದನ ಭಾಷಾ ವಳಿಲಿಪಿಜ್ಞಾನ ಸಾಕ್ಷರಿಕವಂ । ಡಲಿಕಸಾಮಂತರನಶೇಷರನಿಂಗಿತವನರಿತು ॥ ಸಲೆ ಕರೆವಕಳುಹಿಸುವ ನಿಲಿಸುವ । ಬಲುಹನುಳ್ಳನ ಸುಕೃತದುಷ್ಕೃತ । ಫಲಿತಕಾರ್ಯಕೆ ಮಂತ್ರಿಯುಂಟೇ ರಾಯ ನಿನಗೆಂದ ॥ ಜರೆನರೆಯ ಮೈಸಿರಿಯ ಕುಲವೃ । ದ್ಧರನು ಹೀನಾಂಗರನು ಹಿಂಸಾ । ಚರಿತರನು ಜಾತ್ಯಂಧರನು ಧನದಾಸೆಯಳಿದವರ ॥ ಅರಮನೆಯ ಸಂರಕ್ಷಣಾರ್ಥದೊ । ಳಿರಿಸಿದೊಡೆಮಾನೋನ್ನತಿಕೆವಿ । ಸ್ತರಣವಹುದಿದನರಿದಿಹೆ ಭೂಪಾಲಕೇಳೆಂದ ॥ ಗುಳಿಕೆವರನೀಕ್ಷಿಸುತ ಬಟ್ಟೆಯ । ಮೆಳೆ ಮರಂಗಳ ಹೊಯ್ಲ ತಪ್ಪಿಸಿ । ನೆಳಲನರಸುತ ವೇಗಗತಿಸಾಮಾನ್ಯಗತಿಗಳಲಿ ॥ ಬಳಿವಿಡಿದು ಭೂಭುಜರ ಯಾನಂ। ಗಳೊಳಗಳುಕದೆ ಢಗೆಯ ಸೈರಿಸಿ । ಬಳಸುವವನೇ ಛತ್ರಧಾರಕನರಸಕೇಳೆಂದ ॥೭೪॥ ಬೇಸರದೆ ಕಾಳೋರಗನನ । ಡ್ಕೈಸಿಕಟ್ಟಿರುವೆಗಳು ಮಿಗೆ ವೇ । ಡೈಸಿಕಡಿವರೆಯಟ್ಟುವಂದದಹಿತಬಲದೊಳಗೆ ॥ ಓಸರಿಸದೊಳಹೊಕ್ಕು ಸಮರವಿ । ಳಾಸವನು ನೆರೆ ಮೆರೆದು ಕೇಶಾ। ಕೇಶಿಯಲಿ ಹಿಡಿದಿರಿವವನ ಕಾಲಾಳು ಕೇಳೆಂದ ॥೭೫॥ ಪಟ್ಟಸಾಟಿಯಲರಿನೃಪರ ನರೆ । ಯಟ್ಟಿ ಮೂದಲಿಸುತ್ತ ಮುಂದಣ । ಘಟ್ಟನೊಡೆಹಾಯ್ದಹಿತಬಲದೊಳಗಾನೆ ಪರಿಪರಿದು ॥ ಹಿಟ್ಟುಗುಟ್ಟುತ ಹೆಣನ ಸಾಲುಗ । ಳೊಟ್ಟು ಮೇರೆಯಲು ಕಳನ ಚೌಕದೊ । ಳಟ್ಟಿಯಾಡಿಸಬಲ್ಲವನೆ ರಾವುತನು ಕೇಳೆಂದ ॥೭೬॥ ಹೆಬ್ಬುಲಿವನೊಡೆತುಳಿದು ಧರಣಿಯ । ನಿಬ್ಬಗಿಯ ಮಾಡಿಸುತ ಹಾಯ್ದಳ । ದೊಬ್ಬುಳಿಯ ಹರೆಗಡಿದು ಕಾದಿಸುತಾನೆಗಳ ಮೇಲೆ ॥ ಬೊಬ್ಬಿರಿದು ಸರವಳಿಯ ಕರೆವುತ । ಉಬ್ಬೆಸಿ ಬವರದಲಿ ರಿಪುಗಳಿ । ಗುಬ್ಬಸವನೆಸಗುವನೆ ಜೋದನು ರಾಯ ಕೇಳೆಂದ ॥೭೭॥ ಒಂದುಕಡೆಯಲಿ ದಳ ಮುರಿದು ಮು । ತ್ತೊಂದುದಿಕ್ಕಿಲಿ ಮುನ್ನೆಯರು ಕವಿ । ದೊಂದುದೆಸೆಯಲಿ ಬಲದೊಳೊಂದನೆಯಧಿಕಬಲವೆನಿಸಿ ॥ ಬಂದು ಸಂತಾಪದಲಿ ಕಾಳೆಗ । ದಿಂದ ಪುರದಲಿ ನಿಂದು ಕರಿಕರಿ । ಗುಂಮುವಕ್ಷಿತಿಪಾಲನೇ ಭೂಪಾಲಕೇಳೆಂದ ॥೭೮॥ ಕ್ರದುರೆಗಳನಾರೈದು ರಥವನು । ಹದುಳಿಸುತ ಸಾರಥಿಯನೋವುತ । ಲಿದಿರಮುರಿವುತ ತನ್ನ ಕಾಯಿದ್ದುಕೊಳುತ ಕೆಲಬಲನ ॥ ಸದೆದು ಪುರಳುವಲಾಗುವೇಗದ । ಕದನಕಾಲಾನಲನವನು ತಾ । ಮೊದಲಿಗನಲೈ ರಥಿಕರಿಗೆ ಭೂಪಾಲ ಕೇಳೆಂದ ॥೭೯॥ ದೊರೆಯ ಕಾಣುತ ವಂದಿಸುತ್ತಂ । ಕರಿಸುತಂತರಿಸುತ್ತಮುಗೆ ಹ । ತ್ತಿರನೆನಿಸದತಿದೂರನೆನಿಸದೆ ಮಧ್ಯಗತನೆನಿಸಿ ॥ ಪರಿವಿಡಿಯಲೋಲೈಸುತರಸನ । ಸಿರಿಮೊಗವನೀಕ್ಷಿಸುತ ಬೆಸಸಲು । ಕರಯುಗವನಾನುವನೆ ಸೇವಕನರಸ ಕೇಳೆಂದ ॥೮೦॥ ನರಕಕರ್ಮವ ಮಾಡಿಯಿಹದೊಳು । ದುರಿತಭಾಜನರಾಗಿ ಕಡೆಯಲಿ । ಪರಕೆ ಬಾಹಿರರಾಗಿ ನಾನಾಯೋನಿಯಲಿ ಸುಳಿದು॥ ಹೊರಳುವರು ಕೆಲಕೆಲರು ಭೂಪರು । ಧರಿಸುವರಲೈ ರಾಜಧರ್ಮದ । ಹೊರಿಗೆಯನು ' ಮರೆದಿರೆಯಲಾ ಭೂಪಾಲ ಕೇಳೆಂದ ॥೮೧॥ ನೃಗನ ಭರತನ ದುಂದುಮಾರನ। ಸಗರನ ಪುರೂರನ ಯಯಾತಿಯ

ಮಗನನಹುಷನ ಕಾರ್ತವೀರ್ಯಾನ ನಳನ ದಶರಥನ ॥ ಹಗಲಿರುಳು ವಲ್ಲಭರ ವಂಶದ । ವಿಗಡರಲಿ ಯಮಸಭನು ಸರಿಯೋ । ಮಿಗಿಲೊ ಯೆನಿಸುವ ನೀತಿಯುಂಟೇ ರಾಯನಿನಗೆಂದ ॥೮೨॥ ಆಮುನೀಂದ್ರನ ವಚನರಚನಾ । ತಾಮರಸಮಕರಂದಕೇಳಿಯ । ಲೀಮಹೀಶಮನೋಮಧುವ್ರತವುಬ್ಬಿತೊಲವಿನಲಿ ॥ ರೋಮಪುಳಕದ ರುಚಿರಭಾವ । ಪ್ರೇಮಪೂರಿತಹರುಷರಸದ । ದ್ದಾಮನದಿಯಲಿ ಮುಳುಗಿ ಮೂಡಿದನರಸಕೇಳೆಂದ ॥೮೩॥ ಎಲೆಮುನಿಯೆ ನೀವ್ರಚಿಸಿದೀನಿ । ವ್ವರ್ಗಳನೃಪಾಲನಯಪ್ರಪಂಚವ । ಬಳಸಿದೆನು ಕೆಲಕೆಲವನಿನ್ನುರೆ ಬಳಸುವೆನು ಕೆಲವ ॥ ಇಳಿದು ಧರಣಿಗೆ ಸುಳಿದು ನೀತಿ । ಸ್ಖಲಿತಜಡರನು ತಿದ್ದಿ ತಿಳುಹುವ । ಸುಲಭತನದಲಿ ದೇವಮುನಿ ನಿನಗಾರು ಸರಿಯೆಂದ ॥೮೪॥ ಮುನಿಯೆ ಬಿನ್ನಹವಿಂದು ನೀವಿಂ । ದ್ರನ ವಿರಿಂಚಿಯ ಯಮನ ವರುಣನ । ಧನಪತಿಯ ಶೇಷನ ಸಭಾಮಧ್ಯದಲಿ ಸುಳಿವಿರಲೆ ॥ ಇನಿತುರಚನೆಗೆ ಸರಿಯೊ ಮಿಗಿಲೋ । ಮನುಜಯೋಗ್ಯಸ್ಥಾನವೋ ಮೇ । ಣೆನಲು ನಗುತೆಂದನು ಮುನೀಶ್ವರನಾಯುಧಿಷ್ಠಿರಗೆ ॥೮೫॥ ಜನಪಕೇಳುತ್ಸೇಧಶತಯೋ । ಜನತದರ್ಧದೊಳಗಲದಳತೆಯಿ । ದೆನಿಪುದಿಂದ್ರಸ್ಥಾನವಲ್ಲಿಹುದಖಿಳಸುರನಿಕರ ॥ ಜನಪರಲ್ಲಿ ಯಯಾತಿಯಾತನ । ಜನಕನೃಗನಳ ಭರತಪೌರವ । ರೆನಿಪರಖಿಳಕ್ರತುಗಳಲಿ ಸಾಧಿಸಿದರಾಸಭೆಯ ॥೮೬॥ ವೈದಿಕೋಕ್ತಿಗಳಲಿ ಹರಿಶ್ಚಂ । ದ್ರಾದಿರಾಯರು ರಾಜಸೂಯದೊ । ಳಾದರನಿಬರೊಳಗ್ಗಳೆಯರಿಂದ್ರಂಗೆ ಸರಿಮಿಗಿಲು ॥ ಆದೊಡಾಪುರುಹೂತಸಭೆಯೋ । ಪಾದಿ ಯಮನಸ್ಥಾನವಲ್ಲಿವಿ । ಷಾದದಲಿ ನಿಮ್ಮಯ್ಯನಿಹನಾತನ ಸಮೀಪದಲಿ ॥೮೭॥ ವರುಣಸಭೆಯೊಳಗಿಹವು ಭುಜಗೇ । ಶ ರಸಮುದ್ರನದೀನದಾವಳಿ । ಗಿರಿತರುವ್ರಜವೆನಿಪಸಂಖ್ಯಾರಹಿತವಸ್ತುಗಳು ॥ ಅರಸ ಕೇಳು ಕುಬೇರ ಧಯಾ । ಪರಿಯಗಲವೆಂಭತ್ತುಯೋಜನ । ಹರಸಖನ ಸಿರಿ ಸದರವೇ ಭೂಪಾಲ ಕೇಳೆಂದ ॥೮೮॥ ಬಗೆಯೊಳಗೆ ಮೊಳೆವುದು ಚತುರ್ದಶ । ಜಗವೆನಲು ಜಾವಳವೆ ತಸ್ಯೋ । ಲಗದಸಿರಿ ರವೇಷ್ಟಿಗೇನರಿದೈ ಮಹೀಪತಿಯೆ ॥ ಸುಗಮಗಾನಿಯರುಪನಿಷದವಿ । ದ್ಯೆಗಳು ವೇದಕ್ರತುಪುರಾಣಾ । ದಿಗಳು ಬಿರುದಾವಳಿಯ ಪಾಠಕರಾತನಿದಿರಿನಲಿ ॥೮೯॥ ಮುನಿಗಳೇ ಮಾಣಿಯರು ಮಂತ್ರಾ । ಗನೆಯರೋಲೆಯಕಾತಿಯರು ಸುರ । ಜನವೆ ಕಿಂಕರಜನವು ಸೂರ್ಯಾದಿಗಳೆ ಸಹಚರರು ॥ ಘನಚತುರ್ದಶವಿದ್ಯೆಪಾಠಕ । ಜನವೆಲೈ ಪಾಡೇನು ಪದುಮಾ । ಸನನಪರುಷವಮಾಸಭೆಗೆ ಸರಿಯಾವುದೈ ನೃಪತಿ ॥೯೦॥ ಇನಿಬರಾಸ್ಥಾನದಲಿ ಸುಕೃತಿಗಳೆನಿಪತೇಜಸಿ ಗಳುಗಡ ಸುರ । ಮುನಿಹರಿಶ್ಚಂದ್ರಂಗೆ ಸೇರಿದಸುಕೃತಫಲವೇನು ॥ ಜನಪನಪದೆಸೆಗೇನು ದುಷ್ಕೃತ । ವೆನಲು ನಕ್ಕನು ರಾಜಸೂಯದ ಘನವನರಿಯಾ ಧರ್ಮನಂದನಯೆಂದನಾಮುನಿಪ ॥ ಈಮಹಾಕ್ರತುಪರಮನೀಮಾ । ಡಾ ಮಹೀಶ್ವರಪಂಕ್ತಿಯಲ್ಲಿ ನಿ । ರಾಮಯನು ನಿಮ್ಮಯ್ಯನಿಹನು ಸತೇಜದಲಿ ಬಳಿಕ । ಸೋಮವಂಶದ ರಾಯರೊಳಗು । ದ್ದಾಮರಹಬಲುಗೈಕುಮಾರ । ಸ್ತೋಮ ನೀವಿರಲಯ್ಯಗೇನರಿದೆಂದನಾಮುನಿಪ ॥೯೧॥ ಮುನಿಯಮಾತಿನ ಬಲೆಗೆ ಸಿಲುಕಿತು । ಜನಪತಿಯ ಚೈತನ್ಯಮೃಗವೀ । ತನವಚೋವರುಷದಲಿ ನನೆದವು ಕರಣವೃತ್ತಿಗಳು ॥ ಮನದಲಂಕುರವಾಯ್ತು ಸಾಲಿಗೆಗೊನೆಯಲೆರಡೆಲೆಯಾಯ್ತು ಯಜ್ಞಾದ । ನೆನಹು ಭಾರವಣೆಯಲಿ ಬಿದ್ದುದು ಧರ್ಮನಂದನನ ॥೯೨॥ ಕಳುಹಿದನು ಸುರಮುನಿಯನುದರದೊ । ಳಿಳಿದುದಂತಸ್ತಾಪಯಜ್ಞಾದ । ಬಲುಹನೆನೆವಡಿಗಡಿಗೆ ಕಂಪಿಸಿ

ಕೈಯಗಲ್ಲದಲಿ ॥ ಒಲೆದೊಲೆದು ಭಾವದಲಿ ಮಿಗೆ ಕಳ । ವಳಿಸಿ ಪದುಳಿಸಿಕೊಳುತ ಭೂಪತಿ । ತಿಲಕ ಚಿಂತಿಸಿ ನೆನೆವುತಿದ್ದನು ವೀರನಾರಯಣನಾ ॥ ... ... ॥೯೪॥

ಅಂತು ಸಂಧಿ ೧ಕ್ಕೆ ಪದ ೯೪ಕ್ಕಂ ಮಂಗಳಮಸ್ತು.

ಎರಡನೆಯ ಸಂಧಿ.

ಸೂಚನೆ॥ ಬಲಿಮಥನಫಲುಗುಣರು ಸಹಿತ । ಗ್ಗಳೆಯನೇಕಾಂಗದಲಿ ರಣದಲಿ
ಕಲಿಜರಾಸಂಧನನ ಸೀಳಿದು ಬಿಸುಟನಾಭೀಮ ॥

ಕೇಳು ಜನಮೇಜಯಧರಿತ್ರೀ । ಪಾಲ ಮಂತ್ರಾಲೋಚನೆಗೆ ಭೂ । ಪಾಲಕರೆಸಿದನನುಜರನು ಧೌಮ್ಯಾದಿಮಂತ್ರಿಗಳ ॥ ಮೇಳವದ ತನಿವೆಳಗುಗಳ ಮಣಿ। ಮೌಳಿಮಂಡಿತರುಪ್ಪರದ ಪಡಿ । ಸೂಳು ಪಾಯವಧಾರಿಸಲಿ ಹೊಕ್ಕರು ಸಭಾಸ್ಥಳವ ॥೧॥ ದ್ರುಪದಧೃಷ್ಟದ್ಯುಮ್ನಮತ್ಸ್ಯಾ । ಧಿಪತಿಕೇಕಯ ಪಾಂಡವಾತ್ಮಜ । ರು ಪತಿಕಾರ್ಯವಿಚಾರನಿಷ್ಠರು ಬಂದರೋಲಗಕೆ ॥ ನೃಪತಿಹದನೇನಮರಮುನಿವರ । ನುಪಚರಿತಮಂತ್ರಾರ್ಥಸಿದ್ಧಿಗೆ । ರಪಣ ನಮಗುಂಟೀಗ ಬೆಸಸೆಂದರು ಯುಧಿಷ್ಠಿರಗೆ ॥೨॥ ಧರೆ ನಮಗೆ ವಶವರ್ತಿಖಂಡೆಯ । ಸಿರಿ ನಮಗೆ ಮೈವಳಿ ಯುಧಿಷ್ಠಿರ । ನರಸುತನ ನಳನಹುಷನೃಪಭರತಾದಿಭೂಮಿಪರ ॥ ಮರೆಸಿತೆಂಬುದು ಲೋಕವೀನಿ । ಬ್ಬರದ ಹೆಸರೆಮಗಿಂದು ಬೊಪ್ಪನ । ಸಿರಿಯನೇವಣ್ಣಿಸುವೆನೆಂದನು ಸುಯ್ದು ಯಮಸೂನು ॥೩॥ ಅಲ್ಲಿ ಸುರರಲಿ ಸುಪ್ರತಿಷ್ಠಿತ । ನಲ್ಲಗಡ ಪಾಂಡುಕ್ಷಿತೀಶ್ವರ । ನಿಲ್ಲಿ ವೈಭವಕೇನುಫಲನಾವವರ ಸದ್ಗತಿಗೆ ॥ ಇಲ್ಲಿ ರಚಿಸಿದ ರಾಜಸೂಯದಿ । ನಲ್ಲವಹುದಯ್ಯಂಗೆ ಮುಖ ವಿದು । ದುರ್ಲಭವು ಕೈಕೊಂಡೆವಾವುದು ಮಂತ್ರವಿದಕೆಂದ ॥೪॥ ಆಗಲಿದಕೇನರಸ ದೀಕ್ಷಿತ । ನಾಗು ನಿರುಪಮರಾಜಸೂಯಕೆ। ಭಾಗಧನವನು ಭೂಮಿಪರ ಸದೆದೆಳೆದು ತಹೆವೆಂದು ॥ ಆಗರುವರುಬ್ಬೇಳೆ ತಪ್ಪೇ । ಸಾಗಲೀಗೋವಿಂದಮತ್ರದಲಿ । ತೂಗಿ ನೋಡುವೆವಿದರತೂಕವನೆಂದನಾಭೂಪ ॥೫॥ ಕಳುಹಿದನು ಸಾರಥಿಯ ಸಾರಥ । ಕೆಲವು ದಿವಸಕೆ ಕೃಷ್ಣಭವನ । ಸ್ಥಳದೆ ಹೊರಬಾಹೆಯಲಿ ಚಾಚಿತು ಚಪಳಗಮನದಲಿ॥ಒಳಗೆ ಬಂದನು ಪಾವುಡವ ಮುಂ ! ದಿಳುಹಿದನು ಕೃಷ್ಣಂಗೆ ಪಾಂಡವ । ತಿಲಕನಟ್ಟಿದಹದನ ಬಿನ್ನಹವಮಾಡಿದನು ಬಳಿಕ ॥೬॥ ತಿಳಿದನಲ್ಲಿಯ ರಾಜಕಾರ್ಯದ । ನೆಲೆಯನಕ್ರೂರಾದಿಸಚಿವರ । ತಿಳುಹಿದನು ಶಿಶುಪಾಲಕಂಸನವಮಾವನಿಂತಿವರ॥ಕೊಲುವೊಡಿದುಹದ ನಮ್ಮ ಭಾವನ। ನಿಳಯದುತ್ಸಹಸಾಮನ

ಸ್ಯವೆ । ಬಳಸುವರ ಹೊತ್ತಿದು ಮನೋರಥಸಿದ್ಧಿನಮಗೆಂದ ॥೭॥ ಎಂದು ವಸುದೇವಾದಿಯಾದವ ।
ವೃಂದವನು ಬಲಭದ್ರರಾಮನ । ಹಿಂದಿರಿಸಿ ಬಳಿಕಿಂದ್ರಸೇನನ ಕೂಡೆ ಯೋಲವಿನಲಿ॥ಬಂದನಿಂದ್ರಪ್ರ
ಸ್ಥಪಟ್ಟಣ । ಕಂದುವೊಸಗೆಯ ಗುಡಿಯತೋರಣ । ದಿಂದ ಕನ್ನಡಿಕಳಸವಲಿ ಕೊಂಡಾಡಿದರು
ಹರಿಯ ॥೮॥ ಪುರಕೆ ಬಿಜಯಂಗೈಸಿ ತಂದರು । ಹರಿಯನರಮನೆಗನಿಬರಂತಃ । ಪುರದ ಕಾಣಿಕೆ
ಗೊಂಡು ಬಾಂಧವಜನವನುಚಿತದಲಿ ॥ ಹರಸಿ ಮಧುರಪ್ರೀತಿಯಿಂದಾ । ದರಿಸಿ ಮಂತ್ರಾಳೋಚನೆಯ
ಮಂ । ದಿರದೊಳೇಕಾಂತದಲಿ ಭೂಪತಿಗೆಂದನಸುರಾರಿ ॥೯॥ ಏನುಕರೆಸಿದರೈ ಪ್ರಯೋಜನ । ವೇನು
ನಿಮ್ಮುತ್ಸಾಹಶಕ್ತಿಯೊ । ಳೇನು ದುರ್ಘಟವೇನು ಶಂಕಿತವೇನು ಸಂಸ್ಖಲಿತ ॥ ದಾನವರ ಕೌರವರ
ವೈರದೊ । ಳೇನುವಿಗ್ರಹವಿಲ್ಲಲೇ ಹದ । ನೇನೆನಲು ಕೃಷ್ಣಂಗೆ ಬಿನ್ನಹಮಾಡಿದನು ನೃಪತಿ ॥೧೦॥ ದನು
ಜರಲಿ ಕುರುಸೇನೆಯಲಿ ಭಯ । ವೆನಗೆ ಭಾರಿಯೆ ನಿಮ್ಮ ಘನಪದ । ವನಜವಿದು ಸೀಸಕವಲೇ ತನ್ನು
ತ್ತಮಾಂಗದಲಿ ॥ ಮುನಿಯ ಹೇಳಿಕೆ ಬೊಪ್ಪಗಮರೇಂ । ದ್ರನಲಿ ಸಮರಸವಿಲ್ಲಗಡ ನ । ಮ್ಮನಿಬರಲಿ
ಸಾಮರ್ಥ್ಯವಿದ್ದದಕೇನುಫಲವೆಂದ ॥೧೧॥ ಪಿತನ ಪರಮಪ್ರೀತಿಗುನ್ನತ । ಗತಿಗೆ ನಿರ್ಮಳರಾಜಸೂಯ ।
ಕ್ರತುವೆ ಸಾಧನವೆಂದು ಮುನಿಯುಪದೇಶಿಸಿದತನಗೆ ॥ ಕ್ರತುಮಹಾಕ್ರತುಸಕಲಧರಣೀ । ಪತಿಗಳ
ರ್ಥವ ಗುಣದಲೀಯ । ವ್ರತವೆನಗೆ ಸಂಕಲ್ಪವಾಯ್ತಿದಕೇನು ಹದನೆಂದ ॥೧೨॥ ತಿರುಗಿದೊಡೆಸಂಕಲ್ಪ
ಹಾನಿಯ । ಪರಮಪಾತಕವಿದು ವ.ಹಾನಿ । ಷ್ಮರದಮುಖವಿನ್ನಮರಮುನಿಪತಿ ದೇವಲೋಕದಲಿ ॥ ಹರ
ಹುವನು ಪುಹಾಸ್ಯಮಯಸಾ । ಗರವ ದಾಟಿಸು ಜೀಯ ಭವಸಾ । ಗರಪನಿದುಮಿಗಿಲೇ ಮುರಾಂತಕ
ಯೆಂದನಾಭೂಪ ॥೧೩॥ ನಕ್ಕನಸುರವಿರೋಧಿ ಮುನಿಹಾ । ಯಿಕ್ಕಿದನಲಾ ಬಲೆಯನಕಟಾ । ಸಿಕ್ಕಿದಿ
ರಲಾ ಸ್ವಾಮಿದ್ರೋಹರು ಸವರರ್ವೇ ನೃಪರು ॥ ಅಕ್ಕಜವ ಮುಖಪಿದರಚೂಣಿಗೆ । ಚುಕ್ಕಿಯಾಯಿತು
ಮನ ಮಹೀಶನ । ಮಕ್ಕಳಾಟಿಕೆಯಾಯ್ತುನುತ ತೂಗಿದನು ಸಿರಿಮುಡಿಯ ॥೧೪॥ ಕೆದರಿ ಸಪ್ತದ್ವೀಪ
ಪತಿಗಳ । ಸದೆದು ರಚಿಸುವರಾಜಸೂಯದ । ಹದನನಂಘೈಸುವನದಾರೀವರ್ತಮಾನದಲಿ॥ ಸುದತಿಯರ
ಸೂಳೆಯರ ಮುಂದು । ಬ್ಬಿದೆಯಲಾ ನಾರದನ ಘುಲ್ಲಣೆ । ಗಿದು ಸುದುರ್ಘಟವಿಂದು ಬಿದ್ದವಿಘಾತಿ
ಬಲುಹೆಂದ ॥೧೫॥ ಮೊದಲಲೇ ನಿಮ್ಮವರು ನಿಮ್ಮ । ಭ್ಯುದಯವನು ಸೇರುವರೆ ಕೌರವ । ರದರೊಳ
ಗ್ಗದಕರ್ಣಶಕುನಿಜಯದ್ರಥಾದಿಗಳು ॥ ಕುದುಕುಳಿಗಳೀಚೆಯಲಿ ಕಂಸನ । ಮದಮುಖನ ಪರಿವಾರವಿದೆ
ದೂ । ರದಲಿ ಮಗಧನ ಹೊರೆಯಲದನೇಬಣ್ಣಿಸುವೆನೆಂದ ॥೧೬॥ ಕಾಲಯವನಾದಂತವಕ್ರನೃ । ಪಾಲ
ರಲಿ ದುರುದುಂಬಿಯೈ ಶಿಶು । ಪಾಲಪೌಂಡ್ರಕರೆಂಬರಿಗೆ ಸಮದಂಡಿಯೆಮ್ಮೊಡನೆ ॥ ಖೂಳರಿರ್ವರು
ಹಂಸಡಿಬಿಕರು । ಸಾಲುವನ ಮುರನರಕರಾಳಿನ । ಮೇಳವವನೇನೆಂಬೆನೃಭೂಪಾಲಕೇಳೆಂದ ॥೧೭॥ ಕೆಲ
ವರಿದರೊಳು ನಮ್ಮ ಕೈಯಲಿ । ಕೊಲೆಗೆ ಭಂಗಕೆ ಬಂದುಬಿಟ್ಟರು । ಕೆಲಕೆ ಸರಿವವನಲ್ಲ ಮಲೆವರಮಾ
ರಿ ಮಾಗಧನು ॥ ಬಳಿಕೆಮಗೆ ಬಲವದ್ವಿರೋಧದ । ತೊಳಸುಬಿದ್ದುದು ತೋಟಿಗಾರದೆ । ಜಲಧಿಮಧ್ಯ
ದಲೂರಕಟ್ಟಿದೆವರಸಕೇಳೆಂದ ॥೧೮॥ ವಸುವದೇವನ ಮುರಿದೊಡಾತನ । ದೇವಿಯರುಬಳಿಕೆಮ್ಮದೂ
ರಿದ । ರಾವಿಗಡಮಗಧಂಗೆ ಮಧುರೆಯಮೇಲೆ ದಂಡಾಯ್ತು ॥ ನಾವು ನಾನಾದುರ್ಗದಲಿ ಸಂಭಾ ।
ನಿಸಿದೆವಾತನನು ನಿಮ್ಮೊಡ । ನಾವು ಕೂಡಿದೊಡಾತಮುನಿಯನೆ ಭೂಪಕೇಳೆಂದ ॥೧೯॥ ಅರಸಕೇಳ್ನೊ

ರೊಂದುವಂಶದ । ಧರಣಿಪರು ಮಾಗಧನ ಮನೆಯಲಿ । ಸೆರೆಯಲೈದರೆ ಬಿಡಿಸಬೇಕು ನಿರಂತರಾಯ
ದಲಿ॥ ದುರುಳನವಭಗದತ್ತಬಾಹ್ಲಿಕ । ನರಕವೃದ್ಧಕ್ಷತ್ರಮೊದಲಾ। ದರಸುಗಳು ಬಲಗರ್ವಿತರಸಂಖ್ಯಾ
ತರಹರೆಂದ ॥೨೦॥ ಅವರಗಲಿ ಮತ್ತಿತ್ತಲುತ್ತರ । ದವನಿಪರು ಧಕ್ಕಡರುಧರಣೀ । ಧವರೊಳಧಿಕಕು
ಠಾರರೆಗ್ಗದಚೀನಬೋಟಕರು ॥ ರವಿಯುದಯಗಿರಿಶಿಖರದಲಿ ಪಾ । ರ್ಥಿವರು ದಕ್ಷಿಣಚೋಳಪಾಂಡ್ಯ।
ಪ್ರವರರದೆ ವಿಕ್ರಮಹಿರಣ್ಯಾಮದಾಂಧರವರೆಂದ ॥೨೧॥ ಔಕಿ ಚತುರಂಗದನೃಪಾಲರ । ನೂಕಬಹು
ದಿದಕೇನು ಯಾಗ । ವ್ಯಾಕರಣಕಿವರುಬ್ಬರೇ ದೂಷಕರು ಧರಣಿಯಲಿ ॥ ಈಕುಠಾರರು ಕದನಮು
ಖದವಿ । ವೇಕಿಗಳು ಶಿಶುಪಾಲಮಾಗಧ । ರಾಕೆವಾಳರು ವೈರಿರಾಯರೊಳರಸಕೇಳೆಂದ ॥೨೨॥ ಅಧಿಕ
ರಿವರಿಬ್ಬರೊಳಗಾವನಾ । ಗಧನೆ ಬಲುಗೈ ರಾಜಸೂಯಕೆ । ಸಬರವನು ಸಾಕಾಣೆಸಾತನ ಖಂಡೆಯದ
ಮೊನೆಗೆ ॥ ನಿಧನವಲ್ಲದೆ ಧನವ ನೆರಹುವ । ಹವನ ನೀನೇಕಾಂಬೆಯಾತನ । ವಧೆಯು ಹರಿಯದು
ನಮ್ಮ ಕೈಯಲಿ ರಾಯಕೇಳೆಂದ ॥೨೩॥ ಕಂಸನನು ಕೆಡಹಿದೆವು ಮುರಿದೆವು । ಹಂಸಡಿಬಿಕರ
ಪೌಂಡ್ರಕರ ನಿ । ರ್ವಂಶವೆನೆ ಸವರಿದೆವು ಮುರನರಕಾದಿದಾನವರ ॥ ಹಿಂಸೆಯಿವನಲಿ ಹರಿಯದಿವನಿ ।
ಸ್ಸಂಶಯನು ವಿಜಯವಲಿ ಯಾಗ । ಧ್ವಂಸಕನ ನೆರೆ ಮುರಿವುಪಾಯವ ಕಾಣೆಸಾನೆಂದ ॥೨೪॥
ಈಸುಘನವೇ ಕೃಷ್ಣಯಾಗ । ದ್ವೇಷಿಗಳು ಪಿರಿದಾಗಲೆಮಗಿ । ನ್ನೈಸಲೇ ವರರಾಜಸೂಯಾಧ್ವರಕೆ
ಸನ್ಯಾಸ॥ ಈಸುಭೃತ್ಯರು ನಿನ್ನ ಕೈಯಲಿ । ಗಾಸಿಯಾದರು ಮಗಧನೊಬ್ಬನು । ವಿಾಸಲಳಿಯನುಗಡ
ಮಹಾದೇವೆಂದನಾಭೂಪ ॥೨೫॥ ಅಹಹ ಯಾಗವ್ರತಕೆ ಭಂಗವ। ತಹುದೆ ಜೀಯ ಮುರಾರಿಕೃ
ಪೆಸ । ನ್ನಿಹಿತನಾಗಲಿ ಸಾಕು ನೋಡಾ ತನ್ನ ಕೈಗುಣವ ॥ ಬಹಳಬಲನೇ ಮಾಗಧನು ನಿನ । ಗಹಿತನೇ
ತಾವೀಳೆಯವ ಸ್ವರ । ಮಹಿಳೆಯರ ತೋಳಿನಲಿ ತೋರುವೆನೆಂದನಾಭೀಮ ॥೨೬॥ ಮುರುಕಿಸುಮ
ನ್ನೆಯರತನಾಳವ । ಮುರಿವೆನಖಿಳನೃಪಪತಿಗಳ । ತೆರಿಸುವೆನು ಹೊರಿಸುವೆನು ನೆತ್ತಿಯಲವರ ವಸ್ತು
ಗಳ ॥ ಕರುಬನೇ ಮಾಗಧನು ರಣದಲಿ । ತರುವೆನಾತನ ನಿಮ್ಮಯಾಗದ । ಹೊರಿಗೆ ತನ್ನದು ಕರೆಸು
ರುಷಿಗಳನೆಂದನಾಭೀಮ ॥೨೭॥ ಅಹುದಲೇ ಬಳಿಕೇನು ಯಾಗೋ । ಪಹರಣಕೆ ಸನ್ಯಾಸಗಡ ವಿ ।
ಗ್ರಹದಲಧಿಕರು ಗಡ ಜರಾಸಂಧಾದಿನಾಯಕರು ॥ ಮಹಿಮಮನ್ನೆಯರಧ್ವರವ ನಿ । ರ್ವಹಿಸಲೀಯ
ರುಗಡ ಶಿವಶಿವಾ। ರಹವ ಮಾಡಿದನರಸನೆಂದನು ನಗುತ ಕಲಿಪಾರ್ಥ ॥೨೮॥ ಏಕೆ ಗಾಂಡಿವವಿದು
ಶರಾವಳಿ ।ಯೇಕೆ ಯೈಂದ್ರಾಗ್ನೇಯವಾರುಣ। ವೇಕೆ ರಥವಿದು ರಾಮಭೃತ್ಯಧ್ವಜವಿಳಾಸವಿದು। ಲೋಕ
ರಕ್ಷಾಶಿಕ್ಷೆಗಿಂತಿವು । ಸಾಕು ಹುಲುಮಂಡಲಿಕರಿವಟರ । ನೂಕಲರಿಯದೆ ಜೀಯ ಜಂಜಡವೇಕೆ ಬೆಸ
ಸೆಂದ ॥೨೯॥ ನೆರಹು ಹಾರುವರನು ದಿಗಂತಕೆ । ಹರಹು ನಮ್ಮನು ಬಂಧುವರ್ಗವ । ಕರೆಸು ರಚಿಸಲಿ
ಕಾಣಬೇಹುದು ಕದನಕಾಮುಕರ ॥ ಸೊರಹಲರಿಯೆನು ಸಾಧುಗಳನಾ । ದರಿಸುವೆನು ಚಾವಟೆಯರನು
ಚಿ । ಮ್ಮುರಿಯಬಿಗಿಸುವೆನವರಿಯರ ಕಡೆಗಣ್ಣಕಣ್ಣೆಯಲಿ ॥೩೦॥ ಅಹುದು ಭೀಮಾರ್ಜುನರ ನುಡಿ
ನಿ । ರ್ವಹಿಸದೇ ಬಳಿಕೇನು ನಿಜಕುಲ । ವಿಹಿತವಲ್ಲಾ ವಿನಯವಿಕ್ರಮವಿದ್ಯೆನೃಪನೀತಿ ॥ಗಹನವೇ ಗಂಡು
ಗರಿಗಿದಿರಾ । ರಹಿತಬಲಪಿನ್ನರಸ ಚಿಂತಾ । ಮಹಿಳೆಗವಸರ ವಲ್ಲ ಮನವಾಡಿತೆಂದನಸುರಾರಿ ॥೩೧॥
ಎಮಗೆ ಭೀಮಾರ್ಜುನರ ಕೊಡು ರಪು । ರಮಣಿಯರ ಸೀಮಂತಮಣಿಗಳ । ನಿಮಿಷದಲಿ ತರಿಸುವೆನು

ಹರಸುವೆನಹಿತಭೂಮಿಪರ ॥ ಸಮರಜಯವಿನ್ನಾಯ್ತು ಯಜ್ಞೋ । ದ್ಯಮವು ಕೆನಿಷ್ಪ್ರತ್ಯೂಹವಿನ್ನು । ಭ್ರಮೆಯ ಮಾಡದಿರೆಂದು ನೃಪತಿಗೆ ನುಡಿದನಸುರಾರಿ ॥೩೨॥ ಕಂಗಳನುಬ್ಬರು ಚಿತ್ತನೀವೆ । ನ್ನಂಗಸು ವಣೆಗಿನ್ನೇನು ಭಯವಾ । ವಂಗವಲಿ ನಂಬಿಹೆವಲೇ ನಿಮ್ಮಂಘ್ರಿಪಂಕಜವ ॥ ಸಂಗರದ ಜಯನಿನ್ನದಲ್ಲಿಯು । ಭಂಗ ನಿನ್ನದು ಭಕ್ತಜನದನು । ಸಂಗಿ ನೀನಿರಲೇನು ನಮಗೆಂದೆಂದನಾಭೂಪ ॥೩೩॥ ವಿಗಡಯಾಗಕೆ ಸಕಲರಾಯರು । ಹಗೆ ಮರುತ್ತನು ಕಾರ್ತವೀರ್ಯಾ । ದಿಗಳು ಕೆಲವರಶಕ್ತರಾದರು ರಾಜಸೂಯದಲಿ ॥ ಬಗೆಯುಳಿಸು ದುಷ್ಕಾಲವಸುರರೊ । ಳಗಡ ಮಾಗಧನವನ ಮುಂದೊಡೆ । ಸುಗಮ ನಿಮ್ಮಯ್ಯಂಗೆ ಸುರಪದವೆಂದನಸುರಾರಿ ॥೩೪॥ ಆರವನು ಹಿರಿದಾಗಿ ನೀಕ್ಕೆ । ವಾರಿಸುವೆ ಕಮಲಾಕ್ಷ ಮಾಗಧ । ನಾರುಭಟೆ ತಾನೇನು ಮರ್ತ್ಯರೋ ಸಹಜವಿಕ್ರಮರೋ ॥ ಧೀರರುವೆ ಸಿಡಿಲಂತೆ ಸಕಲವು । ಹೀರನ[illegible] ನೃಪಸನ್ನು । ನ್ನೆಂಗಡ ನೆಗೆವೊಡೆಂದವನು ನಗುತ ಮುರವೈರಿ ॥೩೫॥ ಧರಣಿಪತಿ ಕೇಳ್ಬೃಹದ್ರಥ । ನರಸು ಮಾಗಧಮಂಡಲಕೆ ತ । ತ್ಪುರಿ ಗಿರಿವ್ರಜನೆಂಬುವದಲ್ಲಿ ಸಮಸ್ತವಿಭವದಲಿ ॥ ಧರೆಯ ಪಾಲಿಸುತಿದ್ದ ನಾತಂ । ಗರಸಿಯರು ಸೇರಿದರು ಕಾಶೀ । ಶ್ವರನ ತನುಜೆಯರುಬ್ಬರದ್ಭುತರೂಪಗುಣಯುತರು ॥೩೬॥ ಅವರೊಡನೆ ಸುಖಸತ್ಕಥಾಸಂ । ಭವವಿನೋದದಲಿದ್ದನೀನೃಪ । ಧನಫಲವ ಪುತ್ರಂಗೆ ಬಹು ದುಃಖೋಪಚಯನೆಂದು ॥ ಅವನಿಪತಿ ವೈರಾಗ್ಯದಲಿ ರಾ । ಜ್ಯವನು ಬಿಸುಟು ತಪಃಪ್ರಭಾವ । ವ್ಯವಹರಣೆಯಲಿ ತನುವ ನೂಕುವೆನೆನುತ ಹೊರವಂಟ ॥೩೭॥ ಊರಹೊರವಡವೃತ್ತ ಕಂಡನು । ಪಾಂಕಾಂಕ್ಷಯರೊಬ್ಬನನು ಮುನಿವೀರಕಾಂಕ್ಷೆಯನಾಂಗಿರಾತ್ಮಜಚಂಡಕೌಶಿಕನ ॥ ನಾಯಿಯರು ಸಂತನನ ಚರಣಾಂ । ಭೋರುಹಕ್ಕಭಿನಮಿಸಲಾತಿವಿ । ಸ್ತಾರಿಸಿದ ಕಾಶೀರ್ವಚನವನು ಮುನಿ ನೃಪಾಲಂಗೆ ॥ ಏನಿದರಸರೆ ವನದಲಿ ಮ । ಹಾತ್ಮನೆನಲನಸತ್ಯಶಾಟಿಂ । ತಾನರೂಪನ ಮಗಡಸುವು ನಿಮ್ಮಂಘ್ರಿಸೇವೆಯಲಿ ॥ ಹಾನಿ ಮಷ್ಕೃತಕಹುದಲೇ ಸುತ । ಹೀನರಾಜ್ಯವ ಬಿಸುಟೆ ನಸಗ್ಗ । ಕಾನನದ ಸಿರಿ ಸಾಕೆನುತ ಬಿಸುಸುಯ್ದನಾಭೂಪ ॥೩೯॥ ಐಸಲೇ ಸುತಹೀನರಾಜ್ಯವಿ । ಳಾಸವಿಷ್ಫಲವಹುದಲೇ ಸಂ । ತೋಷವೇ ಸುತಲಾಭವಾದೊಡೆ ಹೊಲ್ಲೆಯೇನಿದಕೆ ॥ ಆಸಮರ್ಥಮುನೀಂದ್ರನಂತ । ಭಾರ್ಸಿತ್ರಾತ್ಮಧ್ಯಾನಸುಖಿಸಿ । ನ್ಯಾಸಪರಲಂಕದಲಿ ಬಿದ್ದುದು ಮಧುರಚೂತಫಲ ॥೪೦॥ ಕಂಡರಿವು ಮುನಿ ಬಳಿಕ ಭೂಪತಿ । ಗೆಂದನಿದಕೋ ಪುತ್ರಸಂತತಿ । ಗಿಂದು ಸಾಧನವಿದನು ಕೊಡು ನೀನೊಲಿದು ವಧುಗೆನಲು ॥ ಕಂದಿದಾನನವುಜ್ಜ್ವಲಪ್ರಭೆ । ಯಿಂದ ಬೆಳಗಿತು ರಾಣಿಯರ ಸಹ । ತಂದು ಮುನಿಪದಕೆರಗಿ ಪರಿತೋಷದಲಿ ನಿಂದಿರ್ದ ॥೪೧॥ ವರವನೊಂದನು ಹೆಸರುಗೊಂಡು । ಧರಣಿಪತಿಗಾಮುನಿಪ ಕೊಟ್ಟನು । ಪುರಕೆ ಮರಳಿದನರಸನಾಮುನಿ ತೀರ್ಥಯಾತ್ರೆಯಲಿ ॥ ಸುಂದನತ್ತಲು ಚೂತಫಲವಿದ । ನೆರಡುಮಾಡಿ ಬೃಹದ್ರಥನು ತ । ನ್ನರಸಿಯರಿಗಿತ್ತನು ಯುಧಿಷ್ಠಿರ ಕೇಳು ಕೌತುಕವ ॥೪೨॥ ಬಲಿದುದವರಿಗೆ ಗರ್ಭದಿನನದ । ನೆಲೆಯ ಕಾಲಕೆ ಸತಿಯರುದರದೊ । ಳಿಳಿದುದೊಂದೊಂದವಯವದ ಸೀಳಿರದು ಸಸ್ರವಾಗ ॥ ಬಳಿಕ ಕಂಡವರಕಟ ದುಷ್ಕೃತ । ಫಲವೆ ಸುಡಲಿವನೆನುತ ಬಿಸುಟರು । ಹೊಳಲ ಹೊರಬಾಹೆಯಲಿ ನಡುವಿರುಳರಸ ಕೇಳೆಂದ ॥೪೩॥ ನಡುವಿರುಳು ಜರೆಯೆಂಬರಕ್ಕಸಿ । ಯಡಗನರಸುತ ಬಂದು ಕಂಡಳು ಮಿಡುಕುವೀಸೀಳೆರಡುವನು ಹೊರೆಹೊಳಲ ಬಾಹೆಯಲಿ ॥ ತುಡುಕಿದಳು ಸೀಳ್ದೊಳಕೆ ತಿನ್ನದೆ । ಮಡಗಿ

ದರೊ ಕೌತುಕವದೇನೀ । ಯಡಬಲವನಂದಸುರೆ ದಿಟ್ಟಿಸಿ ನೋಡಿದಳಃ ಶಿಶುವೆ ॥೪೪॥ ಶಿಶುವನಾರೋ ಸೀಳ್ದುತಿನ್ನದೆ । ಬಿಸುಟು ಹೋದರೆನುತ್ತ ಜರ ಸಂ । ಧಿಸಿದಳಾಕಸ್ಮಿಕದ ಸೀಳೆರಡನುವಿನೋದದಲಿ ॥ ಪಸರಿಸಿದುದಸು ಮೇಘರವ ಘೂ । ರ್ಮಿಸುವವ್ರೋಳ್ಬಿರಿದನು ಗಿರಿಗಳ । ಬೆಸುಗೆ ಬಿಡೆ ನಡುವಿರುಳು ಕೋಳಾಹಳಿಸಿತಾರಭಸ ॥೪೫॥ ಊರಹೊರವಳಯದಲಿದೇನು ಮ । ಹಾರಭಸವಿರುಳೆನುತ ಪರಿದುದು । ಪೌರಜನ ಝೊಂಪಿಸುವಕ್ಕೈದೀವಿಗೆಯ ಬೆಳಗಿನಲಿ ॥ ಆರಿವಳು ತಾನೆನುತ ಕಂಡುದು । ದೂರೆದಲಿ ದಾನವಿಯನವಳಘು । ನೋರುಗಳಸೋಗಿಲಲಿ ಕೈದೊಟ್ಟಿಲ ಕುಮಾರಕನ ॥೪೬॥ ನಿಂದುದಲ್ಲಿಯದಲ್ಲಿ ರಕ್ಕಸಿ । ಯೆಂದುಭಯದಲಿ ಬಳಿಕ ಕರುಣದ । ಲೆಂದಳವಳಂಜದಿರಿ ಹೋಹೋ ಯೆನುತ ಕೈನೆಗಹಿ ॥ ಇಂದಿವನು ಮಗನೆನಗೆ ಭೂಪತಿ । ಬಂದಸಾದೊಡೆಕೊಡುವೆನೀತನ । ನೆಂದೊಡಾಕ್ಷಣ ಕೇಳಿ ಹರಿತಂದನು ಮಹೀಪಾಲ ॥೪೭॥ ಅರಸ ಕೋ ನಿನ್ನವನೆ ನೀ ಮುನಿ । ವರಕುಮಾರನನೆನ್ನ ಹೆಸರಲಿ । ಕರೆವುದೀತನ ಸೀಳಬೆಚ್ಚವಳಾನು ಬೆದರದಿರು ॥ ಜರೆಯೆನಿಪ್ಪುದಭಿಧಾನವೆನ್ನದು । ವರಜರಾಸಂಧಕನಿವನು ಸುರ । ನರರೊಳಗೆ ಬಲುಗೈಯಹನೆಂದಿತ್ತಳರ್ಭಕನ ॥೪೮॥ ಅಸುರೆಯನು ಮನ್ನಿಸಿದನಾಕೆಯ । ಪೆಸರಮಗನಿವನೆಂದು ಲೋಕ । ಪ್ರಸರವರಿಯಲು ನಲವಿನಲಿ ಸಾಕಿದನು ಮಾಗಧನು ॥ ಅಸುರರಲಿ ಮರ್ತ್ಯರಲಿ ಸುರರಲಿ । ಯೆಸಕವುಳ್ಳವನೆನಿಸಿದನು ಸಾ । ಹಸದ ಜೋಡಿಸೆ ಜಡಿದುದವನಲಿ ರಾಯ ಕೇಳೆಂದ ॥೪೯॥ ಅದರಿಸಾಮಾಗಧನ ಮುರಿದ । ಲ್ಲದೆ ನೃಪಾಲಕರಂಜ ಕಪ್ಪದೊ । ಳೊದಗಲರಿಯರು ಮೆರೆಯಲೀಯರು । ಯಾಗಸಂಪದವ ॥ ಇದುನಿಧಾನವು ಭೀಮಪಾರ್ಥರಿ । ಗಿದು ಮುಹೂರ್ತವು ಮೀಳೆಯವ ತಾ । ಕದನವಿಜಯದ ವೀರಸೇಸೆಯನಿಕ್ಕಿ ಕಳುಹೆಂದ ॥೫೦॥ ಮರೆಯದೇತಕೆ ರಾಜಸೂಯದ । ಹೊರಿಗೆ ನಿನ್ನದು ರಾಣಿಕವಸಾ । ನರಿಯೆನೆಮ್ಮಭಿಮಾನಪ್ರಾಣದೊಡೆಯನಲೆ ॥ ಕಿರಿಯರಿವದಿರು ರಾಜಸೂಯದ । ಕರುಬರತಿಬಲ್ಲಿದರು ಕೃಪೆಯನು । ಮೆರೆವುದೆಂದಸುರಾರಿಯಂಘ್ರಿಗೆ ಚಾಚಿದನು ಶಿರವ ॥೫೧॥ ಎತ್ತಿದನು ಮುರವೈರಿ ರಾಯನ । ಮಸ್ತಕವ ನಸುನಗುತ ಕರೆಸು ಮು । ಹೂರ್ತಿಕರನಕ್ಷೋಹಿಣಿಯ ಬರಹೇಳು ದಳಪತಿಯ ॥ ಸುತ್ತಣರಸುಗೊಳಿಯುಡುಗೊರೆ । ಯಿತ್ತು ದೂತರ ಕಳುಹು ಬಳಿಕಿನೊ । ಳುತ್ತರೋತ್ತರಸಿದ್ಧಿ ನಿನಗಹುದೆಂದನಸುರಾರಿ ॥೫೨॥ ರೂಷಿಸಿದಸುಮುಹೂರ್ತದಲಿ ಹೊರಬೀಡು ಬಿಟ್ಟುದು ದಧಿಯ ದೂರ್ವೆಯ । ಕೂಡಿದಕ್ಷತೆಗಳ ಸುಲಾಜಾವಳಿಯ ಮಂಗಳದಾ ॥ ಜೋಡಿಗಳ ಜಯರವದ ದೈತ್ಯವಿ । ಭಾಡಸೂಕ್ತದ ವಿಗಡಬಿರುದುಪ । ವಾಡಗಳ ಪಾಠಕರ ಗಡಬಡೆ ಗಾಡಿಸಿತು ನಭವ ॥೫೩॥ ಆಳು ನಡೆಯಲಿ ಮಗಧರಾಯನ । ಮೇಲೆ ದಳಪತಿ ಮುಕುಂದದಳಪತಿ । ಹೇಳಿಕೆಗೆ ಭೀಮಾರ್ಜುನರೆ ಬರಹೇಳು ಹೇಳೆನುತ ॥ ಆಳುಸಾರಿದರವನಿಪತಿಗಳು । ಮೇಳದಲಿ ಹೊರಹೊಂಟು ಬರದೆ । ಖ್ಯಾಳವನು ನೋಡಿದರು ನಡೆದರು ಪಯಣಗತಿಗಳಲಿ ॥೫೪॥ ಜನಪ ಕೇಳೈ ಕೃಷ್ಣಭೀಮಾ । ರ್ಜುನರು ವಿಮಳಸ್ನಾತಕವ್ರತ । ಮುನಿಗಳಾದರು ನಡೆದು ಪಯಣಪಯಣದಲಿ ॥ ಜನದ ಕಾಣಿಕೆಗೊಳುತ ನಾನಾ । ಜನಪದಂಗಳ ಕಳಿದು ಗಂಗಾ । ವಿನುತನದಿಯನು ಹಾಯ್ದು ಬಂದರು ಪೂರ್ವಮುಖವಾಗಿ ॥೫೫॥ ಬರುತ ಕಂಡರು ಕೊಡೆಕೊಬ್ಬಿದ । ಸಿರಿಯ ನೂರೂರುಗಳ ಸೊಂಪಿನ । ಭರತವನು ಗೋಧನಸಮೃದ್ಧಿಯ ಧಾನ್ಯರಾಶಿಗಳ ॥ ವರನದಿಯ

ಕಾಲುವೆಯ ತೋಟದ । ತೆರಳಿಕೆಯ ಪನಸಾಮ್ರಪೂಗೋ । ತ್ಕರದ ರಮ್ಯಾರಾಮಮಂಡಿತಮಗಧಮಂಡಲವ ॥೫೬॥ ಮೆಳೆಗಳೇ ದ್ರಾಕ್ಷೆಗಳು ವೃಕ್ಷಾ । ವಳಿಗಳೇ ಸಹಕಾರದಾಡಿಮ । ಫಳಿತಪನಸಕ್ರಮುಕಜಂಬೂಮಾತುಳಂಗಮಯ ॥ ಕಳವೆಶಾಲಿಯಮಯವು ಹೊಲ । ಸ್ಖಲಿತಲಕ್ಷ್ಮೀಮಯವು ನಗರಾ । ವಳಿಗಳೆನೆ ಶೋಭಿಸಿತು ಜನಪದವಿವರ ಕಣ್ಣುಮನಕೆ ॥೫೭॥ ದೇಶ ಹಗೆವನದೆಂಬ ಕಡ್ಡಿಯ । ಗಾಸಿಮಾಡಿದುದೇ ವಿನೋದದ । ಲೈಸುಪಡೆ ನಡೆತಂದು ಬಿಟ್ಟುದು ಗಿರಿಯತಪ್ಪಲಲಿ ॥ ಆಸರೋಜದ ಬಂಧುಚರಮಾ । ಶಾಸತಿಯ ಚುಂಬಿಸೆ ಗಿರಿವ್ರಜ । ವಾತಿಖರವನು ಹತ್ತಿದರು ಹರಿಭೀಮಫಲುಗುಣರು ॥೫೮॥ ವೃಷಭಚರ್ಮನಿಬದ್ಧಭೇರಿಗ । ಳೆಸೆದವಕ್ಷತೆಗಂಧಮಾಲ್ಯ । ಪ್ರಸರದಲಿ ಶೈಲಾಗ್ರದಲಿ ಸಂಪನ್ನಪೂಜೆಯಲಿ ॥ ಅಸುರರಿಪುಭೀಮಾರ್ಜುನರು ತ । ದ್ವಿಷಮಭೇರೀತ್ರಯವ ಹೊಯ್ದೆಬ್ಬಿಸಿದರದ್ಭುತರವ ದಿಗಿಲು ಕೆಡೆದುದು ಧರಿತ್ರಿಯಲಿ ॥೫೯॥ ಏನಿದದ್ಭುತವೆಂದು ನಡುವಿರುಳಾನರೇಶ್ವರನಮಳಪೀಠದಿ । ಥಾನದಲಿತಚ್ಛಾಂತಿಗೋಸುಗಕರೆಸಿಭೂಸುರರ ॥ ದಾನದಲಿ ವಿವಿಧಾಗ್ನಿಕಾರ್ಯವಿ । ಧಾನದಲಿ ವಿಪ್ರಸುವಚನದ । ಗಾನದಲಿಮಗಧೇಶನಿದ್ದನು ರಾಯ ಕೇಳೆಂದ ॥೬೦॥ ಇವರು ಗಿರಿಯಿಂದಿಳಿದು ರಾತ್ರಿಯೊ । ಳವನ ನಗರಿಯ ರಾಜಬೀದಿಯ । ವಿವಿಧವಸ್ತುವ ಸೂರೆಗೊಂಡರು ಹಾಯ್ದು ದಳದುಳವ ॥ ತಿವಿದರಡ್ಡೈಸಿದರನುಬ್ಬಿದ । ತವಕಿಗರು ಮಗಧೇಂದ್ರರಾಯನ । ಭವನವನು ಹೊಕ್ಕರು ವಿಡಂಬದ ವಿಪ್ರವೇಷದಲಿ ॥೬೧॥ ಉರವಣಿಸಿದರು ಮೂರುಕೋಟೆಯ । ಮುರಿದರಾದ್ವಾರದಲಿ ರಾಯನ । ಹೊರೆಗೆ ಬಂದರು ಕಂಡರಿದಿರೆದ್ದನು ಜರಾಸಂಧಾ ॥ ಧರಣಿಯಮರರಪೂರ್ವಿಗರು ಭಾ । ಸುರವು ಭವ್ಯಾಕಾರರೆಂದಾ । ದರಿಸಿ ಮಧುಪರ್ಕಾದಿಗಳ ಮಾಡಿದನು ಭಕ್ತಿಯಲಿ ॥೬೨॥ ಕೇಳಿದನು ಕುಶಲವನು ಕುಶಲವ । ಹೇಳಿದರು ಕುಳ್ಳಿರಿಯೆನಲು ಭೂ । ಪಾಲಕರು ಕುಳ್ಳಿರ್ದರೆವೆಯಿಕ್ಕದೆನಿರೀಕ್ಷಿಸುತ ॥ ಹೇಳಿರೈ ನಿಮಗಾವದೇಶ ವಿ । ಶಾಲಗೋತ್ರವದಾವುದೆನುತವಿ । ಲೋಲಮತಿ ಚಿಂತಿಸಿದನಿವದಿರು ವಿಪ್ರರಲ್ಲೆಂದು ॥೬೩॥ ಸ್ನಾತಕವ್ರತವೇಷದಲಿ ಬಂ । ದಾತಗಳು ತಾಪಿವರು ಶಸ್ತ್ರ । ವ್ರಾತದಲಿ ಶಿಕ್ಷಿತರು ಕರ್ಕಶಬಾಹುಪಾಣಿಗಳು ॥ ಕೈತವದಿನೈತಂದರರ್ಥವ । ನೀತಿಗಳ ಬಯಸರು ವಿರೋಧ । ಪ್ರೀತಿಮುಖರಿವರಾರು ಶಿವಶಿವಯೆನುತ ಚಿಂತಿಸಿದ ॥೬೪॥ ಆರಿವರು ದೇವತ್ರಯವೊ ಬಂ । ಭಾರಿಯಮವಸುರುತರೊ ರವಿರಜ । ನೀರಮಣಪಾವಕರೊ ಕಪಟಸ್ನಾತಕವ್ರತದ ॥ ಧಾರಿಣೀಶ್ವರರೊಳಗೆ ಧೃಷ್ಟರ । ದಾರುತನ್ನೊಳು ತೊಡಕಿ ನಿಲುವವಿ । ಕಾರಿಗಳಸಾಕಾರನೆಂದವನು ತನ್ನ ಮನದೊಳಗೆ ॥೬೫॥ ಈಗ ಮಿಡುಕುಳ್ಳವರು ಮಹಿಯಲಿ । ನಾಗಪುರದವರಸುಗಳು ನಮ್ಮವ । ರಾಗಿಪರು ಪಾಂಡುವಿನ ಮಕ್ಕಳು ಪೂರಾ ಖಳರಲ್ಲ ॥ ನಾಗರೋಪಾಂತ್ಯದ ನರೇಂದ್ರರ । ಭೋಗಿಸಿದಮುತ್ತುಗಳು ಭಾವಿಸ । ಲೀಗಯಾಳರ ಗರ್ವವೇನನುನಿಮಿತ್ತವಾಯ್ತೆಂದ ॥೬೬॥ ಯಾದವರು ಹಿಂದೆಮ್ಮೊಡನೆಹಗೆ । ಯಾದವರು ಬಳಿಕವರೊಳಗೆ ತುರು । ಗಾದವನ ಕರುಗಾದವನ ಮಾಧವನ ಮಾತೇನು ॥ ಮೇದಿನಿಯ ಮಂಡಳಿಕಮನ್ನೆಯ । ರಾದವರು ನಮ್ಮೊಡನೆ ಸೆಣಸುವ । ರಾದೊಡಿದುದು ಕಾಲವಶದಿನಿದುಚಿತ್ರವಾಯ್ತೆಂದ ॥೬೭॥ ಬವರಿಗರು ನೀವ್ ವಿಪ್ರವೇಷದ । ಜವನಿಕೆಯ ಜಾಣಾಯ್ಲತನದಿಂ । ದವಗಡಿಸಿ ಹೊಕ್ಕಿರಿಯಪದ್ವಾರದಲಿನೃಪಸಭೆಯ ॥ ನೃಪಗಿದೇನೀವಸನಕಪಟ ।

ವ್ಯವಹರಣೆ ಕೃತ್ರಿಮವೊ ಸಹಜವೊ । ರವಣ ಮತ್ತೇನುಂಟು ಹೇಳಿನ್ನಂಜಬೇಡೆಂದ ॥೧೮॥ ಸ್ನಾತಕವ್ರತರೇನು ಪಾರ್ಥಿವ । ಜಾತಿಗಿಲ್ಲಾ ವೈಶ್ಯಕುಲಕಿದು । ಪಾತಕವು ಸಾವಿಂದು ಪಾರ್ಥಿವಜಾತಿಸಂಭವರು ॥ ಸ್ನಾತಕರು ನಾವ್ ವೈರಿಗೃಹದಲಿ । ಭೀತರದ್ವಾರಪ್ರವೇಶವ । ನೀತಿಯಲ್ಲ ಪುರಾಣಸಿದ್ಧವಿದೆಂದನಸುರಾರಿ ॥೧೯॥ ವೈರಭವವಹವೆ ನಮ್ಮದಿದು ನಾವ್ ವೈರಿಗಳೆ ನಿಮಗೆಮಗೆ ಜನಿಸಿದ । ವೈರಬಂಧನಿಮಿತ್ತವಾವುದು ನಿಮ್ಮಪಕ್ಷದಲಿ ॥ ಆರು ನೀವೀ ಬ್ರಾಹ್ಮಣರು ನಿಮ । ಗಾರು ಪಾದ್ಯರು ಹೇಳಿ ನಿಮ್ಮವಿಕಾರಬರಿದೇ ಹೋಗದೆಂದನು ಮಗಧಪತಿ ನಗುತ ॥೨೦॥ ಮುರಿದು ಹಲಬರಿಳಾಧಿನಾಥರ । ಸೆರೆಯಲಿಕ್ಕಿದೆ ರಾಜ್ಯಮದದಲಿ । ಮರೆಪು ಮಾನ್ಯರನಿರಿದು ಹೆಚ್ಚಿಸಿಕೊಂಡೆ ಭುಜಬಲವ ॥ ಅರಿಯದಳುಪಿದ ಪಾತಕಕೆ ಬಿಡು । ಸೆರೆಯ ಪ್ರಾಯಶ್ಚಿತ್ತವಿದು ಸಾ । ವುರುವವೇಷದುಪಾಧ್ಯರೆಂದನು ನಗುತ ಮುರಹರನು ॥೨೧॥ ಅನ್ಯಪಾಲರ ಮಗನೊ ಮೊಮ್ಮನೊ । ನೀನವರ ಬಾಂಧವನೊ ಭೃತ್ಯನೊ । ಊನವಕ್ಷನೊ ಬೆರಳಬಡಗನೊ ಕುರುಳಕೋಮಳನೋ ॥ ಏನು ನಿನ್ನಂಘವಣೆ ನೀನಾ । ದಾನವೇಂದ್ರರ ಸೆರೆಯ ಬಿಡುಗಡೆ । ಗೇನನೆಂಬೆನು ರಹವನೆಂದನು ತೂಗಿ ಮಣಿಶಿರವ ॥೨೨॥ ಎಲವೊ ಧರೆಯಲಧರ್ಮಶೀಲರ । ತಲೆಯ ಚೆಂಡಾಡುವೆವು ಧರ್ಮವ । ನೊಲಿದು ಕೊಂಡಾಡುವೆವು ಶಿಕ್ಷಾರಕ್ಷಣವ್ಯಸನ ॥ ನೆಲೆ ನಮಗೆ ನೀನರಿಯೆ ರಾಜಾ । ವಳಿಯ ಬಿಡ ಘಡ ಬಂಡವಿದ್ಯೆಯ । ಬಳಸುವಾನವ್ಯೋಡನೆಯೆಂದನು ದಾನವಧ್ವಂಸಿ ॥೨೩॥ ಇವರುಗಡ ಜಗದವನಶಿಕ್ಷಾ । ಸವನದಲಿ ದೀಕ್ಷಿತರುಗಡ ಕೈ ತವದ ಭಂಡರು ನೀವೊ ನಾವೋ ನೋಡದಂತಿರಲಿ ॥ ಕವಡತನದಲಿ ಧಿಟ್ಟರಹಿರಂ । ಘವಣೆಯೊಳ್ಳಿತು ನಿಮ್ಮನಿಜವನು । ವಿವರಿಸಿರೆ ನೀವಾರು ಹೇಳೆಂದನು ಜರಾಸಂಧ ॥೨೪॥ ಕೇಳಿ ಮಾಡುವುದೇನು ತಾನಸು । ರಾಳಿಧೂಳೀಪಟಲ ವೈರಿನೃ । ಪಾಲಚೌಪಟಮಲ್ಲನೀತನು ಭೀಮಸೇನಕನಾ ॥ ಭಾಳನೇತ್ರನ ಭುಜಬಲದ ಸಮ । ವಾಳಿಯರ್ಜುನನೀತನೇಳಾ । ಕಾಳಗವಕೊಡು ನಮ್ಮೊಳೊಬ್ಬರಿಗೆಂದನಸುರಾರಿ ॥೨೫॥ ಕೇಳಿ ಕೆದರಿದ ಕಡುನಗೆಯಲುತ । ಬೀಳುತೇಳುತ ಬಿರುವನಿಯ ಕ । ಣ್ಣಾಲಿಗಳ ಜುಮ್ಮಿಗ್ಗರೋಮದ ಜಡಿವಬಿಡುದಲೆಯ ॥ ಸೂಳುನಗೆ ಬಿಳಿನಗೆಯಲಡಗಿಡಿ । ಗಾಳಿಮುಸುಗುಬ್ಬಸದಲಿದ್ದು ಕ । ರಾಳಮತಿ ಸಂತೈಸಿ ನೆರೆ ತನ್ನವರಿಗಿಂತೆಂದ ॥೨೬॥ ಈತನಾರೆಂದರಿವಿರೈ ನಂ । ಮಾತನೀತನು ನಮ್ಮ ಕಂಸಂ । ಗೀತನಳಿಯನು ನಮಗೆ ಮೊಮ್ಮನು ಮಗನು ದೇವಕಿಗೆ ॥ ಈತ ಕಾಣಿರೆ ಹಿಂದೆ ಚೌರಾ । ಶೀತಿದುರ್ಗದೊಳೋಡಿ ಬದುಕಿದ । ನೀತ ಬಲುಗೈಬಂಟನೆಂದನು ಮಗಧಪತಿ ನಗುತ ॥೨೭॥ ಕೊಳಲರಾಗದರಹಿಯೊ ಕಲ್ಲಿಯ ಕಲಸುಗೋಲೋ ಹಳ್ಳಿಕಾತಿಯ । ನೊಳಗುಡಿಯ ಹಾದರವೊ ತುರುಗಾಹಿಗಳ ತೋಹುಗಳೋ ॥ ಬಲುಸರಳಸರಿವಳೆಯ ವಿದ್ರುಳೊಡೆ । ಗಲಸುಗಳಡಾಯುಧದ ತಳ್ಳುಕಿನ । ಕೊಳುಗುಳದ ಜಯಸಿರಿಯ ಕಾಹಿನೊಳಾರು ನೀನೆಂದ ॥೨೮॥ ಹೋರಿ ಹೆಂಗುಸು ಬಂಡಿ ಪಕ್ಷಿ ಸ । ಮೀರಣಾಶ್ವಾಜಗರಗಾರ್ದಭ । ವೀರರೀತನ ಘಾತಿಗಳುಕಿತು ಕಂಸಪರಿವಾರ ॥ ಆರುಭಟೆಯುಳ್ಳವನು ಕಂಸನ । ತೋರಹತ್ತನ ತೊಡಕಿವನು ಗಡ । ಭಾರಿಯಾಳಹನುಂಟು ಶಿವಶಿವಯೆಂದನಾ ಮಗಧ ॥೨೯॥ ಎಲವೊ ಗೋವಳ ನಿನ್ನ ಕಂಸನ । ನಿಳಿಯವ್ರೋ ಪೌಂಡ್ರಕನ ಕದನದ । ಖಳನೋ ಹಂಸನ ಹೋರಟೆಯೊ ಮೋಣ್ಡಿಭಿಕನ ಡಾಹಾಮೊ ॥ ಹುಲಿಗೆ ಮೊಲನ ಭಾಗ್ಯಗತನೆ ಕರಿ । ಕಳಭ ಸಿಂಹಕೆ ಸುಯೆ ನೀನಿ ! ನ್ನಳವನರಿಯವೆ ಹೊ

ಕ್ಕ ಕೆಣಕಿದೆ ಕೆಟ್ಟೆ ಹೋಗೆಂದ ॥೮೦॥ ಇದುವೆ ಪಿತ್ತದ ವಿಕಳವೋ ಮ । ದ್ಯದ ವಿಕಾರವೊ ಭಂಗಿತ
ಲೆಗೇ । ರಿದುದೊ ಭಟನಾದೊಡೆ ವಿಘಾತದಲೇಳು ಕಾಳಗಕೆ ॥ ಸದನ ನಿನ್ನದು ಸೂಳೆಯರ ಮುಂ ।
ದೊದರು ಫಲವೇನೆದ್ದು ಬಾ ಬಾ । ಳದಲಿ ಬರೆದುದ ತೊಡೆವೆನೆಂದನು ದಾನವಧ್ವಂಸಿ ॥೮೧॥ ಎಲ
ವೊ ಗೋಪಕುಮಾರ ಕಂಸನ ಲಲನೆಯರ । ವೈಧವ್ಯದುಃಖಾ । ನಲನ ನಂದಿಸಲಾಯ್ತು ನಿನ್ನಯ ರು
ಧಿರಜಲಧಾರೆ ॥ ಅಳಿದ ಕಂಸನ ಕಾಲಯವನನ । ಕಳನ ಹುಂಬವ ಗೆಲಿದು ದೈತ್ಯಾ । ವಳಿಯ ಬಂಧು
ತ್ವವನು ಬಳಸುವೆನೆಂದನಾ ಮಾಗಧ ॥೮೨॥ ಗೋವಳರು ನಿರ್ಲಜ್ಜರದರೊಳು । ನೀವು ಗರುವರು ರಾಜ
ಪುತ್ರರು । ಸಾವ ಬಯಸುವನೊಡನೆ ಬಂದಿರಿ ತಪ್ಪ ಮಾಡಿದಿರಿ ॥ ನೀವು ಮಕ್ಕಳು ನಿಮ್ಮ ಪಿರಿಯರ ।
ಠಾವಿನಲಿ ಬುಧರಿಲ್ಲಲಾ ನಿಮ । ಗಾವ ಹದನಹುದೆನುತ ನುಡಿದನು ಭೀಮಫಲುಗುಣರ ॥ ಸಾಕಿದೇತಕೆ
ಹೊಳ್ಳುನುಡಿಗೆ ವಿ । ವೇಕಿಗಳು ಮೆಚ್ಚುವರೆ ಯುದ್ಧ । ವ್ಯಾಕರಣಪಾಂಡಿತ್ಯವುಳ್ಳೊಡೆ ತೋರಿಸುವು
ದೆಮಗೆ ॥ ಈ ಕಮಲನೇತ್ರಂಗೆ ಘಡ ನೀ । ನಾಕವಾಳನೆ ತಿವಿಕಿದಾ ಜಗ । ದೇಕದೈವದ ಕೂಡೆ ದಂಡಿಯೆ
ಯೆಂದನಾ ಭೀಮ ॥೮೪॥ ದಿಟ್ಟರಹಿರೋ ನಾವನರಿಯದೆ । ಕೆಟ್ಟರೆಲಾ ಕಾಳಗೋವನ । ಗೊಟ್ಟಿ
ಯಾಟಿಕೆ ಗುರುಗಳಾದಿರಿ ನಿಮ್ಮ ಗುರುಸಹಿತ ॥ ಚಟ್ಟಳೆಯ ಚತುರಾಸ್ಯನಿವರೊಡ । ಹುಟ್ಟಿದರ ಸವು
ಜೋಳಿಗಡ ಜಗ । ಜಟ್ಟಿಗಳು ತಾವಿವರೆನುತ ತಲೆದೂಗಿದನು ಮಾಗಧ ॥೮೫॥ ಬೈದು ಫಲವೇನೆಮಗೆ
ಮೇಳದ । ಮೈದುನರು ನೀವಲ್ಲಲೇ ದಳ । ವೈದೆ ನೂಕಲಿ ನಿಮ್ಮ ಮೂವರುಸಹಿತ ನಮ್ಮೊಡನೆ ॥ ಕೈದು
ವುಂಟೇ ತರಿಸಿ ಕೊಡಿಸುವೆ । ನೈದಿ ನೀವಾಳಾಗಿ ನಿಮ್ಮೊಡ । ನೈದುವೆನು ಬಲರಾಮನುಳಿದಾನೆಂದನಾ
ಮಾಗಧ ॥೮೬॥ ಎಲವೊ ಬಾಹಿರ ಮಾಗಧ ಮಲಧರ । ನುಳಿಯೆ ಪಾಂಡವನೃಪರು ಸಂಯಮ । ತಳವು
ನಿನಗೊಬ್ಬಂಗೆ ಸೇರುವುದೇ ಮಹಾದೇವಾ ॥ ಅಳಿವು ತಪ್ಪದು ನುಡಿಯೊಳಲ್ಪವ । ಬಳಸಲೇತಕೆ ವೀರ
ನಹೆ ನ । ಮ್ಮೊಳಗೆ ಮೂವರೊಳೊಬ್ಬನನು ವರಿಸೆಂದನಸುರಾರಿ ॥೮೭॥ ಆಕಟ ನಿಮಗೀ ಸಮರವಾ
ವ । ಸ್ಯಕವೆ ನಮಗಾಖ್ಯಾತಿಯಲ್ಲಿದು । ಸಕಲಜನ ನಗದಿರೆಯೆನುತ ನೋಡಿದನು ತನ್ನವರ ॥ ಪ್ರಕಟ
ವೈ ನಿಸ್ವಾಳುತನ ಯದು । ನಿಕರಕಾವಂಜುವೆವು ರಣಸಾ । ಹಕಪಲಾಯನಪಂಡಿತರು ನೀವೆಂದನಾ ಮಾ
ಗಧ ॥೮೮॥ ಪಾರ್ಥ ನೀ ಮಗುವೆಮ್ಮೊಡನೆ ರಣ । ದರ್ಥಿಯಾದರೆ ಭೀಮಸೇನ ಸ । ಮರ್ಥನಹನಾ
ತಂಗೆ ಕೊಟ್ಟೆನು ಕಳನ ಕಾಳಗವ ॥ ವ್ಯರ್ಥವಿದು ತಾ ಹೋಗಲಿನ್ನು ಪ । ದಾರ್ಥಕಂಟಕವಾಗಲೇತಕೆ ।
ತೀರ್ಥವೈಸಲೆ ಶಸ್ತ್ರಧಾರೆಯಿದೆಂದನಾ ಮಾಗಧ ॥೮೯॥ ತಳಿದನು ಚಂದನದ ಸಾದಿನ । ಭರಣಿಗಳ
ಕರ್ಪೂರವರಕ । ಸ್ತೂರಿಜವಾಜಿಪ್ರಮುಖಬಹುವಿಧಯಕ್ಷಕರ್ದಮವ ॥ ಹರಿವೃಕೋದರಪಾರ್ಥರಿದಿರಲಿ
ಭರಣಿಗಳ ನೂಕಿದನು ಮಾಲ್ಯಾಂ । ಬರವಿಲೇಪನದಿಂದಲಂಕರಿಸಿದರು ನಿಜತನುವ ॥೯೦॥ ಅಂಕಕಿಬ್ಬ
ರು ಭಟರು ತಿಲಕಾ । ಲಂಕರಣಶೋಭೆಯಲಿ ರಣನಿಶ್ಶಂಕರನುವಾದರು ಸುಕರ್ಪೂರವೀಳೆಯಂಗೊಂ
ಡು ॥ ಬಿಂಕದುಬ್ಬಿನ ರೋಮಪುಳಕದ । ಮುಂಕುಡಿಯ ಸುಮ್ಮಾನದಂಕೆಯ । ಝುಂಕೆಗಳ ಭರಭುಲ್ಲ
ವಿಸಿದುದು ಭೀಮಮಾಗಧರ ॥೯೧॥ ರಣದೊಳಾವುದು ಕೈದು ಹಿರಿಯು । ಬ್ಬಣವೊ ಪರಿಘವೊ ಸುರ
ಗಿಯೋ ಡೊಂ । ಕಣಿಯೊ ಗದೆಯೋ ಭಿಂಡಿವಾಳವೊ ಪರಶುತೋಮರವೋ ॥ ಕಣೆ ಧನುವೊ
ಕಕ್ಕಡೆಯೊ ಮುಷ್ಟಿಯೊ । ಹಣಿದಕಾವುದು ಸದರವದರಲಿ । ಕೆಣಕಿ ನೋಡಾ ತನ್ನನೆಂದನು ಭೀಮ

ಮಾಗಧನ ॥೯೨॥ ಆಯುಧಂಗಳಲೇನು ನೀನಾ । ಗಾಯುತಬಲನೆಂಬರಾನುಡಿ । ವಾಯವ್ಯೋ ಕಲಿ
ಭೀಮ ದಿಟವ್ಯೋ ನೋಡಬೇಹುದಲೆ ॥ ಆಯಿತೇ ಸಮಜೋಳಿ ನಿನಗದು । ಪಾಯವ್ಯೋ ಚೊಕ್ಕೆಯ
ವ್ಯೋ ನುಡಿ ವಚನ । ದಾಯುತವನೆನಗೆನುತ ಹತ್ತಾಹತ್ತಿಗನುವಾದ ॥೯೩॥ ಧರಣಿಪತಿ ಕೇಳ್ಮಾಗಧನ
ಮಂ । ದಿರದ ರಾಜಾಂಗಣದೊಳವನೀ । ಸುರರು ನೋಟಕರಾದರಲ್ಲಿ ಮುರಾರಿಫಲುಗುಣರು ॥ ಎರ
ಡುಬಲ ಮೋಹಿಸಿ ನಿಂದರು । ಘರದ ಹೊರಬಾಹೆಯಲಿ ಕೃತಸಂ । ಚರಣ ಕಾರ್ತಿಕಶುದ್ಧಪಾಡ್ಯ
ದೊಳಾಹವಾರಂಭ ॥೯೪॥ ಸಿಡಿಲು ಜೊಬ್ಬಿಡುವಂತೆ ಹೊಯ್ದರು । ಮುಡುಹುಗಳ ಮಝುಪ್ಪೊತು
ಮಲ್ಲೆನು । ತಡಿಗಡಿಗೆ ನೂಕಿದರು ಲವಣಿಯ ನೀಡಿ ಸಾರದಲಿ ॥ ತುಡುಕಲೀಯದೆ ತಿರುಗಿದರುಗಡ ।
ಬಡಿಸಿ ದಂಡೆಯೊಳೊತ್ತಿದರು ಸಮ । ಚಡಿಸಿ ನಿಂದರು ನೀಲನಿಷಧಾಚಲಕೆ ಮಲೆವಂತೆ ॥೯೫॥ ಸಿಕ್ಕ
ರೊಬ್ಬರಿಗೊಬ್ಬರುರೆ ಕೈ । ಸಿಕ್ಕ ಹುಯರು ಕೊಂಡಹೆಜ್ಜೆಯ । ತಕ್ಕಿನಲಿ ಪೈಗೊಡರು ತಿರಿಮುರಿ
ವುಗಳ ಮಂಡಿಗಳ ॥ ಇಕ್ಕಿದರು ಗಳಹತ್ತದಲಿ ಸಲೆ । ಸಿಕ್ಕ ಸತಾಣದಲಿ ಮಿಗೆ ಸರಿ । ಮೊಕ್ಕ ಒ
ಡಿದರು ಬಿನ್ನಣದ ಚೊಕ್ಕೆಯದ ಜೋಡಿಯಲಿ ॥೯೬॥ ಒಡಿಸಿಗಳಹತ್ತವನು ಡೊಕ್ಕರ । ಕೊಡೆಮುರಿ
ವಸಕುಟುಂಬಡೊಕ್ಕರ । ಕಡಸಿ ಕತ್ತರಿಸುಟ್ಟಸುವ ಗಳಹತ್ತಡೊಕ್ಕರವ ॥ ತಡವ ಚೌಮಂಗುಲದುಮಂ
ಗುಲ ಕೊಪ್ಪೆಮುರಿವಪಟ್ಟಸಕೆಚಾಚುವ । ಝಡಿತೆಗೊಡಗುವಭಟರು ಹೆಣಗಿದರರಸಕೇಳೆಂದ ॥೯೭॥
ಎಳೆದು ದಣುವಟ್ಟೆಯಲಿ ಜೊಪ್ಪರ ದೊಳಗೆ ಜಾಳಿಸಿ ಚಿಮ್ಮಿರುಝಡಿತೆಯ । ಸೆಳೆದು ಮುಡುಹಿನಲೌಕಿ
ಬಿಗಿದರು ಪಟ್ಟನುಡುಹಿನಲಿ ॥ ಸುಳಿವು ಮರ್ಕಟಬಂಧದಲಿ ಕರ । ವಳಯದಲಿ ಕೈಮುಡುಕಿ ತಿರುವ ।
ಟ್ಟಳೆಯ ಚಲ್ಲಣಸಟ್ಟೆಯವರೊಮಗಿದರು ಪಟುಭಟರು ॥೯೮॥ ಆಗಡಿಯಲಿ ಲೋಟಿಸಿ ನಿರಂತರ
ಲಗಡಿಯಲಿ ಲಾಗಿಸಿ ನಿಬಂಧದ । ಬಿಗುಹುಗಳ ಕುಂಭಿಯ ಕುಹರದ ನಾಗಬಂಧಗಳ ॥ ತೆಗಹುಗಳ
ತೊಡಕುತುಳುಕಿನ । ಬಿಗಳುಗಳ ಜೋಡಣೆಯ ನಿಡುಸು । ಯ್ಲುಗಳ ಸಂರಂಭದ ಸಗಾಢರು ಹೊಕ್ಕು
ಹೆಣಗಿದರು ॥೯೯॥ ಧೂಳಿ ಕುಡಿದುದು ಬೆಮರ ಸಾಕೆಂದ್ಧೂಳಿ ನೆನಿದುದು ಬೆಮರನಲಿ ತಳ । ಮೇಲುನಿಪ್ಕಿ
ಷಕೆ ಮೇಲುತಳಪಿಸ್ಸುಗಳ ಬಿಗುಹುಗಳ ॥ ಸೂಳುನಾಸಾಪುಟದ ಪವನನ । ತಾಳಿಗೆಯ ಕರ್ಪುರದ ಕವಳ
ದ । ತೋಳತಕ್ಕೆಯ ತವಕಿಗರು ಹೆಣಗಿದರು ಪಟುಭಟರು ॥೧೦೦॥ ತೀರದಿಬ್ಬರ ಸತ್ವವವನಿಯ । ಸಾರದಿ
ಬ್ಬರ ಬಲುಹು ಗಾಣವು । ಪಾರುಕಾಣೆಯವದುಬ್ಬರ ಭುಜಬಲಾಟೋಪ ॥ ಸಾರವಳಿಯದು ಮುಳಿ
ಸು ದರ್ಪದ । ಧಾರೆ ಮುರಿಯದು ಜಯದ ತೃಷ್ಣೆಯ । ತೋರಹತ್ತರು ಹೆಣಗಿದರು ಕಲಿಭೀಮಮಾಗ
ಧರು ॥ ಪ್ರೊತುಮರ್ಝು ಬಿಗುಟ್ಟು ಘಣಾಘಣ । ವಾತಸುತ ಪರಬಲಭಯಂಕರ । ಸೋತನೋ ಪ್ರತಿ
ಮಲ್ಲನೆಂದರು ಕೃಷ್ಣಫಲುಗುಣರು ॥ ಭೀತನಾದನು ಭೀಮಸಹಿತನಿ । ಘಾತಿಮಾಗಧರಾಯ ಮಲ್ಲ ।
ವ್ರಾತಕುಲಗಿರಿವಜ್ರನೆಂದುದು ಮಗಧಪರಿವಾರ ॥೧೦೨॥ ಅಲಸಿದರು ಬಿನ್ನಣಕೆ ಬಿಗುಹಿನ । ಕಳಿವು
ಗಳ ಬೇಸರಿಕೆಯಲಿ ಕಡು । ಲುಳಿ ಮಸಗಿ ಧಾವರಿಸಿ ಮನವನುಪಾಯಡಾವರಕೆ ॥ ತೊಲಗಿ ನಿಂದರು
ಕರ್ಪುರದ ಧನಿ । ಹಳುಕನಣಲೊಳಗಡ್ಡಸಿ ದಂಡೆಯ । ಬಲಿದು ಬರಸಿಡಿಲೆರಕವೆನೆ ತಾಗಿದರು ಬಳಸಿ
ನಲಿ ॥೧೦೩॥ ಬಾಳುಹೊಯ್ಲೋ ಸಿಡಿಲ ತೋಡರಿನ । ಸೂಳುಗಳೊ ಸಿಡಿದಲೆಯ ಗಿರಿಗಳ । ಬೀಳ್ಳು
ಗಳೊ ಬಿರುಹೊಯ್ಲಧಾರೆಯ ಸಿಡಿಯ ತುಂಡುಗಳೋ ॥ ತೋಳನೆಗಹಿನ ಮುಷ್ಟಿಘಾತದ । ಮೇಲು

ಗಾಯದ ಲುಳಿಯ ಘೋಳಾ | ಘೋಳಿಗಳನಾರೈಸುವರು ಕಲಿಭೀಮಮಾಗಧರ ||೧೦೪|| ಕುಸಿದು
ಗಾಯವೆ ಕಳೆದು ವಕ್ಷದ || ಬೆಸುಗೆ ಬಿಡೆ ಸಿಡಿದೆದ್ದು ಹೊಯ್ಲಿಗೆ | ನುಸುಳುತಿರ್ಪುದು ಪ್ರಿಯನೊ
ಡ್ಡಿದೊಡಾಕಿ ಘಟ್ಟಿಸುವ || ಅಸಮಸೆಗೆ ಪ್ರಿಯಳುಕದೆರಗುವ | ಹುಸಿವಜಾರುವಪೋಳವ ಹಣುಗುವ
ಬೆಸುವಬಿಡಿಸುವದಿಟ್ಟವಾಳರು ಹೊಕ್ಕು ಹೆಣಗಿದರು ||೧೦೫|| ಪವನಜನ ರಾವಣನ ಝಾಡಿಯ | ತಿವಿ
ತಗಳು ಚಾಣೂರಕೃಷ್ಣರ | ಜವಳಿಹೊಯ್ಲಿನವರೊಳಗೆ ಜೋಡಿಸಲೇನಪ್ಪಳವೆನು || ಶಿವನ ಡಮರುಗ
ದಾಟವೋ ಭೈರವನ ಪಣೆಗಣ್ಣಾಟವೋ ಪಿರಿ | ದಿಪಿಗುಳಿಸದೆಕ್ಕಾಳವುಸಗಿತು ಭೀಮಮಾಗಧರ ||೧೦೬||
ಕುಣಿದವಿಬ್ಬರ ಮುಷ್ಟಿ ಯಿಬ್ಬರ | ಹಣೆಯಲೆದೆಯಲಿಡ ಪೋರೆಯಲಿ ಭುಜ | ಪಣಾಸಿನಲಿ ಕಂದದಲಿ
ಶಿರದಲಿ ಬದಿಯಲುದರದಲಿ || ಝಣಾವಿರೋಧಿವಿಭಾರ ಝಣಾಝಣಾ | ಝಣಾಜಗತ್ರಯಜಟ್ಟಿ
ಝಣಾಝಣಾ | ಝಣಾಝಣಾಶಂಬುಬ್ಬರೆಸೆ ಮಸಗಿದುದಾಸ ಬಾಹುಯುಲಿ ||೧೦೭|| ಹೊಯ್ಲ ಹೊದ
ರೆದ್ದವು ವಿಘಾತದ | ಕಯ್ಲಳಿಯ ಕಡುಗಾಯಗಾಯಕೆ ಮುಯ್ಲವಣೆ ಲಂಬಿಸಿತು ಕಡುಹಿನ ಖತಿಯ
ಕೈಮಸಕ || ಹೊಯ್ಲ ಹೊಗೆಗಳ ಹೋರಟೆಯ ಮೇ | ಗಾಯ್ಲ ಮುಷ್ಟಾಮುಷ್ಟಿಗತಿಯ ದೃ | ಢಾ
ಯ್ಲರಪ್ಪಳಿಸಿದರು ಪದಘಟ್ಟಣೆಗೆ ನೆಲ ಕುಸಿಯೆ ||೧೦೮|| ಅವಸಾಧನೆಯೊ ವಿಘಾತಿಯ | ಲಾವಣಿ
ಗಗವಿಗಳು ಬಿರಿದವು | ಪ್ರೈವಳಿಯಲುಕ್ಕಿದುದು ಕಡುಹಿನಖತಿಯಸ್ಯೆಮಸಕ || ತಾವರೆಯ ತೆತ್ತಿಗನ
ಕುಮುದವ | ಜೀವಿಗನ ಮಿಗೆನೀಲ ನೋಟವೊ | ಳಾವಿಗಡರುಗಳಪಸಿ ತಿವಿದಾಡಿದರುಬೇಸರದೆ
||೧೦೯|| ತೆಗೆಯತೆರ್ಪಿನಕೃಷ್ಣರೀತನ | ನಗುಮುರವನವರವನನರಿಳಿನ | ಪಗಲು ವಿವರಣೆಯಿಲ್ಲ ಮಜ್ಜ
ನಭೋಜನಾದಿಗಳ || ಒಗೆಗೆ ತಾರರು ಬಾಹುಸತ್ವದ | ಹೊಗರು ಹೋಗದು ಮನದ ಖ್ಯಾತಿಯ |
ತೆಗಹುತಗ್ಗದು ಹೊಕ್ಕು ತಿವಿದಾಡಿದರು ಬೇಸರದೆ ||೧೧೦|| ಸತ್ವ ಸವೆಯದು ಮನವ ಮುಳಿಸಿನ | ಬಿತ್ತು
ಬೀಯದು ಜಯದ ಬಳಕೆಯ | ಸುತ್ತು ಸಡಿಲದು ಬಿಂಕ ಬೀಯದು ನೋಯದುಪಾಟೋಪ || ತೆತ್ತುಕೈ
ಕಂಪಿಸದು ಮುಷ್ಟಿಯ | ಹತ್ತುಗೆಗೆ ಮನ ಝೋಂಪಿಸದುದು | ಪೆತ್ತು ಮೆಟ್ಟಿದರೊಬ್ಬರೊಬ್ಬರ ಮ
ರ್ಮಘಾತದಲಿ ||೧೧೧|| ಅಲಸ ಕೇಳ್ದದನೆಯುಟವಸವೊ | ಳುರುಭಯಂಕರವಾಯ್ತು ಕದನದ | ಭರ
ದೊಳೆಡೆವೆರಪಿಲ್ಲ ವಿಶ್ರಮವಿಲ್ಲ ನಿಮಿಷದಲಿ || ಎರಡುದೆಸೆಯಲಿ ನೀಳೆಯವಕ ಪೂರ್ರದ ಕವಳದ ಕೈಚ
ಳಕದಲಿ ತೆರಹನಲ್ಲದೆ ಮತ್ತೆ ಕಾಣೆನು ಯುದ್ಧರಂಗದಲಿ ||೧೧೨|| ಭರದಭಾರಣೆಯಲಿ ಚತುರ್ದಶಿ
ಯಿರುಳು ಮಗಧನ ಬಾಹುಸತ್ವದ | ಮುಬಿವು ಮೊಳೆತುದು ಶೌರ್ಯ ಸೆಡೆದುದು ಭಯದ ಬಿಗುಹಿ
ನಲಿ || ಉರುಪರಾಕ್ರಮತೇಜ ಪಡುಮಣಿ | ತರಣಿಯಾದುದು ಧಟ್ಟಣೆಯ ಧರ | ಧುರಕೆ ನಿರ್ದ್ರವ
ಜಹ್ವೆಯಾದುದು ನಿಮಿಷನಿಮಿಷದಲಿ ||೧೧೩|| ಬೇಸುಕೆ ಬೇರೂರಿದುದು ಜಯ | ದಾಸೆ ಜಾರಿತು ದಿಟ್ಟ
ತನದವಿ | ಳಾಸ ಹಾರಿತು ಸುಪ್ರತಾಪದ ಕೆಂಪು ಕುಂದಾಯ್ತು || ವಿಾಸಲಳಿದುದು ಮುಳಿಸು
ಶೌರ್ಯದ | ವಾಸಿ ಪೈಸರವಾಯ್ತು ರಣದಾ | ವೇಶವಿಳಿದುದು ಮಗಧಪತಿಗಿದನರಿದನಸುರಾರಿ ||೧೧೪||
ಹೊರಗೆ ಬಲಿದೊಳಡಿಳ್ಳವನು ಪರ | ರರಿಯದಂತಿರೆ ತಿವಿದಮಗಧನ | ಪರಿಯನರಿದನು ದನುಜರಿಪು
ಪರರಿಂಗಿತಜ್ಞನಲೆ || ಅರಿವುದರಿದೆ ಚರಾಚರಂಗಳ | ಹೊರಗೊಳಗು ತಾನಲ್ಲದಿಲ್ಲದ | ನರಿಯನೇ
ಶಿವಯೆಂದನಾಜನಮೇಜಯನುನಗುತ || ಎಲೆವೆಪವನಜ ಮಾಗಧೇಶ್ವರ | ನಳವನರಿದಾ ನಿನ್ನ ತಂದೆಯ

ಬಲುಹು ಕೊಂಡೀರೂಪವ ಮುರಿ ನೆನೆನೆನೆ ಸಮೀರಣನ ॥ ಬಲುಮುಗಿಲು ಬಿರುಗಾಳಿಯೊಡ್ಡಿನೊ । ಳಳುಕದೇ ಘಡ ಬೇಗಮಾಡೆನೆ । ಕಲಿವೃಕೋದರನನಿಲರೂಪಧ್ಯಾನಪರನಾದ ॥೧೧೭॥ ಧ್ಯಾನದಲಿ ತನ್ಮಯತೆಯಾಗಲು । ನೂನಸಾಹಸಿ ಮಾಗಧನ ಮಾ । ಹಾನರೇಂದ್ರನ ತುಡುಕಿ ಹಿಡಿದನು ಮಲ್ಲಗಂಟನಲಿ ॥ ಆನಗೆಯನೇವಣ್ಣಿಸುವೆನನು । ಮಾನಿಸದೆ ಬೀಸಿದನು ಭವಣೆಯ । ಭಾನುಮಂಡಲದಂತೆ ತಿರುಗಿದನಾ ಜರಾಸಂಧ ॥೧೧೮॥ ಬರಸೆಳೆದು ಕರದಿಂದ ಮಾಗಧ । ನೆರಡುಕಾಲನು ಹಿಡಿದು ಸೀಳಿದು । ಧರೆಗೆ ಬಿಸುಟನು ಸಂಧಿಸಿದವಾ ಸೀಳ್ಗಳು ತತ್‌ಕ್ಷಣಕೆ ॥ ಮರಳಿ ಪವನಜ ಹಿಡಿದು ಸೀಳುವ । ನಿರದೆ ಮಗುಳವು ಸಂಧಿಸುವವೀ । ಪರಿ ಹಲವು ಸೂಳಿನಲಿ ಭೀಮನೊಳೊದಗಿದನು ಮಗಧ ॥೧೧೯॥ ಮುರಮಥನನವನರತ ನಿಜಕರ । ವಿರಡ ಪಲ್ಲಟವಾಗಿ ಸಂಘಸ । ಲರಿವಿದಾರಣ ಭೀಮ ನೋಡುತ ಮರಳಿ ಮಾಗಧನಾ ॥ ಎರಡು ಸೀಳನು ಮಾಡಿ ಹೊಯ್ದು । ಬ್ಬರಿಸಿ ಪಲ್ಲಟವಾಗಿ ಸೇರಿಸಿ । ತಿರುಗಿಸಿದನೇನೆಂಬೆನುನ್ನತ ಬಾಹುಸತ್ವದಲಿ ॥ ತಿರುಹಿದನು ನೂರೆಂಟು ಸೂಳನು । ಧರೆಯೊಳಪ್ಪಳಿಸಿದನು ಬಳಿಕಾ । ಪುರಜನದ ಪರಿಜನದ ಹಾಹಾರವದ ರಹಿ ಮಸಗೆ ॥ ತೆರಳಿತಲ್ಲಿಯದಲ್ಲಿ ಮಾಗಧ । ನರಸಿಯರು ಬಿಡುಮುಡಿಯ ಜತರವ । ಕರವ ಬಿರುಹೊಯ್ಲಿನಲಿ ಹೊರವಂಟರು ನಿಜಾಲಯವ ॥೧೨೦॥ ಮನೆಮನೆಯ ಕದವಿಕ್ಕಿದವು ನೃಪ । ವನಿತೆಯರು ಹೊರವಂಟರಲ್ಲಿಯ । ಮನುಜರಡಗಿದರದ್ರಿಗುಹೆಯಲಿ ಬೇಹಬೇಹವರು ॥ ಜನದ ಕೋಲಾಹಲವನಾತನ । ತನುಜರೋಟವನವನಸತಿಯರ । ನನದವನು ಕಂಡಸುರಹರ ಸಾರಿದನು ಕೈನೆಗಹಿ ॥೧೨೧॥ ಅಂಜದಿರಿ ಪುರದವರು ವನಿತೆಯ ರಂಜದಿರಿ ಮಾಗಧನ ಪರಿಜನ । ವಂಜದಿರಿ ಮಂತ್ರಿಪ್ರಧಾನಪಸಾಯ್ತರಾದವರು ॥ ಅಂಜದಿರಿ ಕರೆಯಿವನ ಮಗನು । ಭಂಜಿಸುವಡಿಲ್ಲ ಕಟ ಭೀಮ ಧ । ನಂಜಯರು ಕೊಟ್ಟಭಯವೆಂದನು ನಗುತ ಮುರವೈರಿ ॥ ಮುರಿದು ಕಡಹಿಂದರಿರಾಯನಲ್ಲಿಯು । ಸೆರೆಯಮನೆಗಳ ಹೊಕ್ಕು ರಾಯರ । ಸೆರೆಗಳನು ಬಿಡಿಸಿದನು ನಾನಾದ್ವೀಪಪಾಲಕರಾ ॥ ಮರವು ಮಣಿಮಯರತ್ನಮಳೆಯದ । ಮಿರುಪರಥವನು ಕೊಂಡು ನಗರದ । ಹೊರವಳೆಯದಲಿ ಬಂದು ಹೊಕ್ಕರು ತಮ್ಮ ಪಾಳೆಯವ ॥೧೨೩॥ ಪೌರಜನಕಾಣಿಕೆಗಳಲಿ ಕಂ । ಸಾರಿ ಭೀಮಾರ್ಜುನರ ಕಂಡರು । ಧರಣೀಪಾಲಕರು ಬಂದರು ಬೆನ್ನಲಿವರುಗಳ ॥ ಘೋರವಡಗಿದುದೆಮ್ಮ ಕಾರಾ । ಗಾರಬಂಧವಿಮುಕ್ತಮಾಯ್ತು ನೃಪ । ಕಾರವೆಮ್ಮಿಂದಾವುದೆಂದರು ನೃಪರು ಕೈಮುಗಿದು ॥೧೨೪॥ ನವದಿರತಿದುಃಖದಲಿ ಬಿಡುಗಡೆ । ಪವನಸುತನಿಂದಾಯ್ತು ನಿಜರಾ । ಜ್ಯವನು ಹೋಗುವುದು ಪೌರಜನಪರಿಜನವ ಸಲಹುವುದು ॥ ಎವಗೆ ಮಾಳ್ಪುಪಕಾರ ಬೇರಿ । ಲ್ಲವನಿಪರ ವರರಾಜಸೂಯಕೆ । ನಿವನಿವಗೆ ಮುಂಕೊಂಡು ಬಹುದೆಂದನು ಮುರಾಂತಕನು ॥೧೨೫॥ ನಗರಜನಮಂತ್ರಿಪ್ರಧಾನರಾ । ದಿಗಳು ಸಹಿತ ಕುಮಾರನೈತಂ । ದಗಧರನ ಪದಕೆರಗಿದನು ಭೀಮಾರ್ಜುನಾಂಘ್ರಿಯಲಿ ॥ ಮಗಗೆ ತಂದೆಯ ಮಾರ್ಗದಲಿ ನಂ । ಬುಗೆಯೊ ಕರುಣಾರಕ್ಷಣದ ನಂ । ಬುಗೆಯೊ ಚಿತ್ತವಿಸೆಂದರಾಮಂತ್ರಿಗಳು ಕೈಮುಗಿದು ॥೧೨೬॥ ಶವವ ಸಂಸ್ಕರಿಸುವುದು ಮಾಗಧ । ನವನಿಯಲಿ ಸಹದೇವಗಭಿಷೇ । ಕವನು ಮಾಡಿಸದಲ್ಲದೆತ್ತಲು ಮುರಿವುದಿಲ್ಲೆಂದು ॥ ಅವರಿಗಭಯವನಿತ್ತು ಪರಿವಾ । ರವನು ಕಳುಹಿದರಿತ್ತಲಾತನ । ಯುವತಿಯರು ಬೇಡಿದರು ವಹ್ನಿಯ ಪಡೆದು ಮರಳಿದರು ॥೧೨೭॥ ಆವನ ಸಂಸ್ಕಾರದಲಿ ನಾರೀ । ನಿವಹ ಸಹಗತವಾಯ್ತು ವೈದಿಕ ।

ವಿವಿಧವಿಧಿಯಲಿ ಮಾಡಿದರು ಶೇಷಕ್ರಿಯಾದಿಗಳ ॥ ಅವನ ಮಗಸಹದೇವನಾತಂ । ಗವನಿಯಲಿ ಪಟ್ಟಾಭಿಷೇಕೋ । ತ್ಸವವ ಮಾಡಿಸಿ ಕೊಟ್ಟನಭಯವನಾಪರಿಗ್ರಹಕೆ ॥೨೮॥ ತೇರುಗಳ ತೇಜಿಗಳ ನಾಭಂ । ಡಾರವನು ಗಜಘಟೆಸಹಿತವಿ । ಸ್ತಾರವಿಭವವನೊಪ್ಪಗೊಂಡರು ಮಗಧನಂದನನಾ ॥ ಧಾರುಣಿಯನವಗಿತ್ತು ಸಕಳವು । ಹೀರಮಣರನು ಕಳುಹಿ ಬಂದನು । ವೀರನಾರಾಯಣನು ಶಕ್ರಪ್ರಸ್ಥಪುರವರಕೆ ... ... ॥೨೯॥

ಅಂತು ಸಂಧಿ ೨ ಕ್ಕೆ ಪದ ೨೨೩ ಕ್ಕಂ ಮಂಗಳಮಸ್ತು.

ಮೂರನೆಯ ಸಂಧಿ.

ಸೂಚನೆ॥ ಭೂಪತಿಯ ನೇಮದಲಿ ಜಂಬೂದ್ವೀಪನವಖಂಡದಲಿ ಸಕಳವು
ಹೀಪತಿಗಳನು ಗೆಲಿದು ಕಪ್ಪವತಂದನಾಪಾರ್ಥ ॥

ಕೇಳು ಜನಮೇಜಯಧರಿತ್ರೀ । ಪಾಲ ಪಾಂಡವಪುರಿಗೆ ಲಕ್ಷ್ಮೀ । ಲೋಲ ಬಿಜಯಂಗೈದ ಭೀಮಾರ್ಜುನರ ಗಡಣದಲಿ ॥ ಬಾಲೆಯರ ಕಡೆಗಣ್ಣ ಮಿಂಚಿನ । ಮಾಲೆಗಳ ಲಾಜಾಭಿವರುಷದ । ಲಾಲನೆಯ ರಚನೆಯಲಿ ಹೊಕ್ಕನು ರಾಜಮಂದಿರವ ॥೧॥ ಕಂಡು ಕೃಷ್ಣನ ನಿವರಕಾಣಿಸಿ । ಕೊಂಡನರಸುಕ್ಷೇಮಕುಶಲವ । ಕಂಡುಬೆಸಗೊಳಲೇಕೆಬಹುಮಾತಿನಲಿಫಲವೇನೂ ॥ ಕಂಡೆವೈನಿನ್ನಮಳಕರುಣಾ । ಖಂಡಜಲಧಿಯ ಭಕ್ತಜನಕಾ । ಖಂಡಲದ್ರುಮವೆಂದು ತಕ್ಕೈಸಿದನು ಹರಿಪದವ ॥೨॥ ನಡೆದಪರಿಯನು ರಿಪುಪುರವನವ । ಗಡಿಸಿ ಹೊಕ್ಕಂದವನು ಮಗಧನ । ತೊಡಕಿ ತೋಟಿಯ ಮಾಡಿ ಭೀಮನ ಕಾದಿಸಿದಪರಿಯ ॥ ಬಿಡದೆ ಹಗಲಿರುಳೊದಗಿ ವೈರಿಯ । ಕಡೆಯ ಕಾಣಿಸಿ ನೃಪರ ಸೆರೆಗಳ । ಬಿಡಿಸಿ ಬಂದಂದವನು ನಿಸ್ತರಿಸಿದನು ಮುರವೈರಿ ॥೩॥ ಎಲೆಮಹೀಪ ನಿನ್ನಯಜ್ಞಾ । ಸ್ಥಳಕೆ ಬಾಧಕವಿಲ್ಲ ವನವಲಿ । ಪುಲಿಯಿರಲು ಗೋಧನಕುಲಕೆ ಯವಸಾಂಬುಗೋಚರವೇ ॥ ನೆಲನ ಗರುವರ ಗೊಂದಣವನಂ । ಡಲೆವನಖಿಳದ್ವೀಪಪತಿಗಳ । ನೆಳಲ ಸೈರಿಸನಳಿದನವನಿನ್ನೇನು ನಿನಗೆಂದ ॥೪॥ ರಚಿಸು ಯಜ್ಞಾರಂಭವನು ನೃಪ । ನಿಚಯವನು ದಾಯಾದ್ಯರನು ಬರಿ । ಸುಚಿತವಚನದಲೆಮ್ಮ ಕರಸಿದರಾಕ್ಷಣಕೆ ಬಹೆವು ॥ ಸಚಿವರುಪಡೆ ಕಳುಹು ಬದರಿಯ । ರುಚಿರಋಷಿಗಳ ಕರೆಸು ನಿನ್ನಭಿ । ರುಚಿಗೆ ನಿಷ್ಪ್ರತ್ಯೂಹವೆಂದನು ದಾನವಧ್ವಂಸಿ ॥೫॥ ಎಂದು ಕಳುಹಿಸಿಕೊಂಡು ದ್ವಾರಕಿ । ಗಿಂದಿರಾಪತಿ ಮಾಗಧನ ರಥ । ದಿಂದ ಬಿಜಯಂಗೈದನನಿಬರು ಕಳುಹಿ ಮರಳಿದರು ॥ ಬಂದವೇದವ್ಯಾಸಧೌಮ್ಯರ । ನಂದು ಕರೆಸಿ ಯುಧಿಷ್ಠಿರನು ನಿಜ । ಮಂದಿರದೊಳೊಪ್ಪಿದನು ಪರಿಮಿತಜನಸಮೂಹದಲಿ ॥೬॥ ಅಕಟ ನಾರ

ದನೇಕೆ ಯಜ್ಞ | ಪ್ರಕಟವನು ಮಾಡಿದನು ನವಗೀ | ಸಕಲಧರಣೀಕ್ಷತ್ರವರ್ಗದ ವಿಜಯ ಕಿರುಕು
ಳವೇ || ವಿಕಟಜಂಬೂದ್ವೀಪವರ್ತಿಪಾ | ಲಕರು ನಮ್ಮನಿಬರಿಗೆ ಸದರವೆ | ಸುಕರವೇ ವರರಾಜಸೂಯ
ವೆನುತ್ತ ಚಿಂತಿಸಿದ ||೭|| ಮಣಿವರಪ್ಪುರಸುಗಳು ಮಾಡದೆ | ಮಣಿದೆವಾದರೆ ಕೀರ್ತಿಕಾಮಿನಿ | ಕುಣಿವ
ಳೈ ತ್ರೈಜಗದ ಜಿಹ್ವಾರಂಗಮಧ್ಯದಲಿ || ಬಣಗುಗಳು ನಾವಂದು ನಾಕದ | ಗಣಿಕೆಯರು ನಗುವರು
ಸುಯೋಧನ ನಣಕವಾಡುವ ಪಾತಾಯ್ತು ತೆರನೆಂದರ ಸಚಿಸಸಯ್ದ ||೮|| ಎನಲು ಧಿಮ್ಮನೆ ನಿಂದುಭು
ಗಿಲೆಂ | ದನು ಕಿರೀಟಿ ವೃಥಾಭಿಯೋಗದ | ಮನಕಥಕೆ ಮಾರಾಂಕವಾಯ್ತೇ ಪರಮಹಾದೇವಾ ||
ನಿನಗೆ ಕೀರ್ತಿವಧೂಟಿ ಕುಣಿವಳೆ | ಜನದ ಜಿಹ್ವಾರಂಗದಲಿ ಹಾ | ಯೆನುತ ತಲೆದೂಗಿದನು ಘನಶೌ
ರ್ಯಾನುಭಾವದಲಿ ||೯|| ಮುನಿಯದೇ ಮನ್ನಿಯರು ನಾಕದ | ಗಣಿಕೆಯರು ನಗುವರೆ ಸುಯೋಧನ |
ನಣಕವಾಡುವನೇ ಶಿವಾ ತಪ್ಪೇನು ತಪ್ಪೇನು || ಕರಗಳಿವೆ ನಾಳೆನಲಿ ಬಿಲ್ಲಿನ | ಕರಗಳೊಳಗಾಂಡೀವ
ವಿದೆ ನಿ | ಗರ್ಣವೊ ತಾನರ್ಜುನನ ಮಹೀರುಹವಂದೆನೆ ಪಾರ್ಥ ||೧೦|| ಸಕಲಜಂಬೂದ್ವೀಪವರ್ತಿಪಾ |
ಲಕರ ಭಂಡಾರಾರ್ಥಕಿದಸು | ಪ್ರಕಟವೆಂದುಂಗುರವನಿತ್ತನು ನೃಪನಹಸ್ತದಲಿ || ಸುಕರದುಷ್ಕರವೆಂ
ಬ ಚಿಂತಾ | ನಿಕಳತೆಗೆ ನೀ ಪಾತ್ರನೇ ನಾ | ಧಕರನೇ ಸಂಹರಿಪೆ ತ್ರಾ ವೀಳಯವನೆನಗೆಂದ ||೧೧||
ಪ್ರೋತ್ಸಫಲುಗುಣ ನಿನ್ನ ಕುಲಕಭಿ | ಜಾತ್ಯಶೌರ್ಯಕೆ ಗರುವಿಕೆಗೆ ಸರಿ | ಮಾತನಾಡಿದೆ ಸಲುವುದ್ರೈ
ನಿನಗೆನುತ ಕೊಂಡಾಡಿ || ಈತನುತ್ತರದೆಸೆಗೆ ಭೀಮನು | ಶಾತಮನ್ಯುವ ದೆಸೆಗೆ ಯಮಳರ | ಭೀತ್ರಿ
ರಿದ್ದೆ ಸೆಗೆಂದು ವೇದವ್ಯಾಸನೇವಿಸಿದ ||೧೨|| ನೆರಹಿ ಬಲವನು ನಾಲ್ಕುದಿಕ್ಕಿಗೆ | ಪರುಠವಿಸಿದರು
ಫಲುಗುಣನನು | ತ್ತರಕೆ ಮೂಡಲು ಪವನಸುತ ದಕ್ಷಿಣಕೆ ಸಹದೇವಾ || ವರುಣದಿಕ್ಕಿಗೆ ನಕುಲನಿನಾ
ಲ್ವರಿಗೆ ಕೊಟ್ಟನು ವೀಳೆಯವ ಹಿರಿ | ಯರಸಿ ತಂಡಳು ತಳಿಗೆ ತಂಬುಲವಂಗಳಾರತಿಯ ||೧೩|| ವರ
ಮುಲಗ್ನದೊಳಿಂದು ಕೇಂದ್ರದೊ | ಳಿರಲು ಗುರುಭಾರ್ಗವರು ಲಗ್ನದೊ | ಳಿರೆ ಶುಭಗ್ರಹ ದೃಷ್ಟಿ
ಸಕಳೇಕಾದಶಸ್ಥಿತಿಯಾ || ಕರಣತಿಥಿನಕ್ಷತ್ರವಾರದೊ | ಳುರದಲಭಿಮತಸಿದ್ಧಿಯೋಗದೊ | ಳರಸನನು
ಜರು ದಿಗ್ವಿಜಯಕನುವಾದರೊಗ್ಗಿನಲಿ ||೧೪|| ಅರಸವೇದವ್ಯಾಸಧೌಮ್ಯಾ | ದ್ಯರಿಗೆ ಬಲವಂದೆರಗಿ ಕುಂ
ತಿಯ | ಚರಣಧೂಳಿಯ ಕೊಂಡು ವಿಪ್ರವ್ರಜಕೆ ಕೈಮುಗಿದು || ಅರಸಿಯರು ದೂರ್ವಾಕ್ಷತೆಯ ದಧಿ
ವಿರಚಿತದವಮಾಂಗಲ್ಯವನು ವಿ | ಸ್ತರಿಸೆ ಬಹುವಿಧವಾದ್ಯದಲಿ ಹೊರಹೊಂಟರರಮನೆಯಾ ||೧೫||
ಅರಸ ಕೇಳೈ ಮೊದಲಲರ್ಜುನ | ಚರಿತವನು ವಿಸ್ತರದಲರುಪುವೆ | ನರುಪರಾಕ್ರಮಿ ನಡೆಮುಬಿಟ್ಟನು
ಸಾಲ್ವದೇಶದಲಿ || ಪುರಕೆ ದೂತರ ಕಳುಹಲವನಿವ | ರುರವಣೆಗೆ ಮನವಳುಕಿ ಕೊಟ್ಟನು | ತುರಗಗಜ
ರಥಘನವಿಲಾಸಿನಿ ಜನವನುಚಿತದಲಿ ||೧೬|| ಅವನ ಕಾಣಿಸಿಕೊಂಡು ರಾಜ್ಯದೊ | ಳವನನಿಲಿಸಿ ತದೀ
ಯಸೇನಾ | ನಿವಹಸಹಿತಲ್ಲಿಂದ ನಡೆದನು ಮುಂದೆ ಮಹಿಲದಲಿ || ಅವನಿಪತಿ ಕಟ್ಟದೇವನೆಂಬವ | ನಾಗ
ಡಿಪ ಸರ್ವಸ್ವವನು ಕೊಂ | ಡವನಬಲಸಹಿತಾದ್ಯಮತ್ಸ್ಯನಕನ ಝೋಂಪಿಸಿವ ||೧೭|| ಆತನನುಗೆಲಿ
ದನು ಸುಸಾಭವ | ನೀತಿಗೆಡಿಸಿ ತದೀಯಸೇನಾ | ವ್ರಾತಸಹಿತಲ್ಲಿಂದ ಪತಿವಿಂಧ್ಯಕನನಪ್ಪಳಿಸಿ || ಆತನ
ರ್ಥವ ಕೊಂಡು ತತ್ಪ್ರಾ | ಗ್ಜ್ಯೋತಿಷಕೆ ಧಾಳಿಟ್ಟನಲ್ಲಿ ಮ | ಹಾತಿಬಲನವನೊಡನೆ ಬಲುಹಾಯ್ತ
ರ್ಜುನನ ಸಮರ ||೧೮|| ಜನಕರಬೋಟಕಕಿರಾತರ | ನೂನಬಲಸಹಿತೀ ಮಹೀಪತಿ | ಸೂನು ಕಾದಿದನೀ

ತನಲಿ ಭಗದತ್ತನೆಂಬವನು ॥ ಈನರನ ಶರಜಾಲವನು ಕ । ಲ್ಪಾನಲನ ಕಾಲಾಟವಿದರೊಡ್ಡ । ಸಾನ
ಲಿಂಪಾಸ್ರ್ಯಗೆ ಸವರವೆ ರಾಯ ಕೇಳೆಂದ ॥೧೯॥ ಮುರಿಯದಾಬಲವೀತನುರುಬೆಗೆ । ಹರಿಯದೀಬಲ
ವುಭಯುವಲಿ । ಕುಂದರಿಯ ಕನ್ಯಾರಿಯ ಕಡಿತಕೆ ಕಾಣೆನವಧಿಗಳ ॥ ಅಂಯುಪೀತನ ದುರ್ಗವೀಬಲ ।
ದಿರುವುಗಳ ಬೇಳಂಬವನು ಬೇ । ಸರದೆ ಕಾದಿದವನೆಂಟುದಿನ ಭಗದತ್ತನೀತನಲಿ ॥೨೦॥ ಆವನ್ಕೈ ನೀನ
ಭಕ್ತರಸಂ । ಭಾವಿತನು ಹೇಳನೆ ಯುಧಿಷ್ಠಿರ । ದೇವನನುಜಕಣಾಘನಂಜಯನೆನಲು ಮಿಗೆ ಮೆಚ್ಚಿ ॥
ನಾವು ನಿಮ್ಮಯ್ಯಂಗೆ ಸಖರಿಂ । ದಾವು ನಿನ್ನವರೇನು ಬೇಹುದು । ನೀವೆಮಗೆ ಕಡುಮಾನ್ಯರೆಂದನು
ಕಂಡನರ್ಜುನನ ॥೨೧॥ ಆದರೆಮಗೆಯು ದಿವಿಜಪತಿಯೋ । । ಪಾಟ ನೀವೆಮ್ಮಂಣಾದೇವನ । ಮೇದಿ
ನೀ ಸಾಮ್ರಾಜ್ಯಪದವಿಯ ರಾಜಸೂಯವನು ॥ ಆದರಿಸಿ ಸಾಕೆನಲು ಗಜಹಯ । ವಾದಿಯಾದಸ
ಮಸ್ತವಸ್ತುವ । ನೈದೆ ಕೊಟ್ಟನು ಫಲುಗುಣಂಗೆ ಸುಮಿತ್ರಭಾವದಲಿ ॥೨೨॥ ಬಂದುತ್ತಿಂಗಳು ಪಲ
ವುಮನ್ನಣೆ । ಯಿಂದ ಮನ್ನಿಸಿ ತನ್ನಸೇನಾ । ವೃಂದವನು ಹೇಳಿದನು ಬಳಿಯಲಿ ಕಳುಹಿದನು ನರಸಾ॥
ಮುಂದೆ ನಡೆದನು ರಾಮಗಿರಿಯಲಿ । ನಿಂದು ಕಪ್ಪವ ಕೊಂಡು ನಡೆದನು । ಮುಂದಣಿ ಶಾಸ್ಯಪಲಿ
ಹೊಕ್ಕನು ಭುವನಪರ್ವತವ ॥೨೩॥ ಆಗಿರೀಂದ್ರನಿವಾಸಿಗಳ ಸಂ । ಭಾಗಧನವನು ಕೊಂಡು ಬಳಿಕ
ಮು । ಹಾಗಜಾಶ್ವನವಸೂರೆಗೊಂಡನು ಮುಂದೆ ದಂಡೆತ್ತಿ ॥ ಆಗಯಾಳರ ಗಾವಿಲರ ನಿ । ರ್ಭಾಗ
ಧೇಯರ ಮಾಡಿಯುತ್ತರ । ಭಾಗದಲಿ ತಿರುಗಿತ್ತು ಪಾಳಯವರಸ ಕೇಳೆಂದ ॥೨೪॥ ಗಿರಿಯ ತಪ್ಪಲ
ವನಚರರ ಸಂ । ಹರಿಸಿ ಮುಂದೆ ಬೃಹಂತಕನ ಕಾ । ತರಿಸಿ ಕಾಣಿಸಿಕೊಂಡು ಸೇನಾಬಿಂದುನಗರಿ
ಯಲಿ ॥ ಇರವ ಮಾಡಿ ಸುಧಾಮದ್ರೈತ್ಯರ । ನುರೆ ವಿಭಾಡಿಸಿ ಪಾರ್ವತೇಯರ । ಪುರವ ಕೊಂಡು
ವುಲೂಕರನ ಪೌರವತಭಂಗಿಸಿದ ॥೨೫॥ ಮುಂದೆ ದಸ್ಯುಗಳೇಳುವನು ಕ್ಷಣ । ದಿಂದ ಕಾಶ್ಮೀರಕರ
ಸಾಧಿಸಿ । ಬಂದು ದಶಮಂಡಲವ ಲೋಹಿತರನು ವಿಭಾಡಿಸಿದ ॥ ತಂದಕಪ್ಪವ ಲಾತ್ರಿಗರ್ತರ । ನಂದು
ಹುಮ್ಮಳಿಸಿ ಗರುವಿತರನಾ । ನಂದುಟಂಕಣದಾಭಿಚಾರಕರೂಷಕರ ಗೆಲಿದ ॥೨೬॥ ಧಾಳಿಯಿಟ್ಟನು
ರೋಚಮಾನನ । ಮೇಲೆ ಕಪ್ಪವ ಕೊಂಡು ಬಿಟ್ಟನು । ಪಾಳಯವು ಚಿತ್ರಾಯುಧನ ನರಸಿಂಹನಗರಿ
ಯಲಿ ॥ ಮೇಲೆ ಮಂಗರ ಮುರಿದು ವರನೇ । ಪಾಳಕರ್ಪರಮಹೋತ್ತಿಯರನು ವಿ । ಶಾಲಕಾಂಭೋಜಾದಿ
ಗಳನಪ್ಪಳಿಸಿದನು ತಿರುಗಿ ॥೨೭॥ ಪಾರಸೀಕಕಿರಾತಬರ್ಬರ । ಪಾರಿಯಾತ್ರರ ಮುರಿದು ಸರ್ವವಿ ।
ಹಾರವನು ಮಾಡಿದನು ಮ್ಲೇಚ್ಛಸಹಸ್ರಕೋಟಿಗಳ ॥ ಕ್ಷಾರಕರ ಮಹೋತ್ಕರ ಮೊಕ್ಕರ । ಪಾರಕರ
ಬುರಸಾಣಭೂಪರೆ । ಚಾರುಭಟೆಯಲಿ ಕಾದಿಕೊಂಡನು ಸಕಲವಸ್ತುಗಳ ॥೨೮॥ ಬಿಡಿಸಿನಸಾಹಿ
ಮಗಿರಿಯ ಪಾ । ರ್ಶ್ವದ ಕಿರಾತರ ಮುಂದೆ ಮಾಯ । ವ್ಯದಲಿ ಶೋಧಿಸಿ ಮುರಿದಿದನು ಹಿಮಗಿರಿಯ
ಕುಕ್ಷಿಯಲಿ ॥ ಪುದಿದನಾನಾದ್ರೋಣಿಗಳನು । ಧ್ಯದಕಿರಾತಪುಳಿಂದನಿಚಯವ । ಸದೆದು ಹತ್ತಿದನಗ್ರ
ಶಿಖರಕೆ ಪಾರ್ವತೀಪಿತನ ॥೨೯॥ ಎರಡುಸಾವಿರಯೋಜನವು ಹಿಮ । ಗಿರಿಯ ಬಹಳೋತ್ಸೇದಶಿಖರಕೆ ।
ಸಂಸದಲಿ ಹತ್ತಿದುದು ಪಾಳಯವೇನು ಹೇಳುವೆನು ॥ ಕರಿತುರಗವರರಥಪದಾತಿಗೆ । ಪಡಗಣಸೆಯೆಲ್ಲಿ
ಯದು ಹಿಮಗಿರಿ । ಯೆರಡುಸಾವಿರದಗಲತಿರುಗಿತು ರಾಯಕೇಳೆಂದ ॥೩೦॥ ಗಿರಿಯ ಕೋಣೆಯ ಕುಹ
ರಗುಹೆಗಳ । ಗರುವರುಂಟಿಂದಾಪುಳಿಂದರ ನೊರಸಿ ಕಾಣಿಸಿಕೊಂಡು ಕೊಂಡನು ಸಕಲವಸ್ತುಗಳಾ ॥

ಗಿರಿಯನಿಳಿವುದು ನಡೆದು ಬಲಸಿಂ । ಪುರುಷಖಂಡದ ಬಹಳನದಿಗಳ । ಲೆರಡುತಡಿಯಲಿ ತಳಿತು ಬಿಟ್ಟ
ದುವನವನಂಗಳಲಿ ॥೩೧॥ ಅದು ಗಣನೆಗೊಂಭತ್ತುಸಾಸಿರ । ವದರೊಳಿಪ್ಪುದು ಯಕ್ಷಕಿನ್ನರ । ಸುದ
ತಿಯರು ಕಿಂಪುರುಷರತಿರಾಗಿಗಳು ಸುಖಮಯರು ॥ ಇದರ ಘುಲ್ಲಣೆಗಾನಲೇನ । ಪ್ಪುದು ತದೀಯಜ
ನಂಗಳಿತ್ತುದು । ಸುದತಿಯರನಾವುಂಡಲಕೆ ಮಿಗಿಲಾದವಸ್ತುಗಳ ॥೩೨॥ ಅಲ್ಲಿ ಕೆಲಕಡೆಯಲ್ಲಿ ಗಿರಿ
ಗುಹೆ । ಯಲ್ಲಿ ನೆರೆವಕಿರಾತವರ್ಗವ । ಚಲ್ಲಬಡಿದಪಹರಿಸಿದನು ಬಹುವಿಧಮಹಾಧನವ ॥ ಮೆಲ್ಲಮೆಲ್ಲನೆ
ಹೇಮಕೂಟದ । ಕಲ್ಲನಡರಿದನಾಮಹಾದ್ರಿಗ । ಳೆಲ್ಲಹಿಮಶೈಲದ ಮಹೋನ್ನತಿಬಹಳವಿಸ್ತಾರ ॥೩೩॥
ಅಡಸಿತೀಬಲವಿದರಬೊಬ್ಬೆಯ । ಗಡಬಡೆಗೆ ಪದಘಟ್ಟಣೆಗೆ ಹುಡಿ । ಹುಡಿಯಲಾ ಗಿರಿಕೋಟಿಕೋಳಾ
ಹಳದ ಕೊಬ್ಬಿನಲಿ ॥ ನಡೆದು ಬಿಟ್ಟುದು ಗಿರಿಯ ತುದಿಯಲಿ । ತುಡುಕಿದುದು ಸಾಸಾದಿಗಂತವ । ತಡೆ
ಯದವ ಭುತವಾದ್ಯಗಜಹಯರಥದ ನಿರ್ಘೋಷ ॥ ಹೇಮಕೂಟದ ಗಿರಿಯಗಂಧ । ರ್ವಾಮರರ
ಘೋಂಪಿಸಿದನವರು । ಪ್ಪಾದ್ಯವಸ್ತುವ ಕೊಂಡನಿಳಿದನು ಬಳಿಕ ಪರ್ವತವ ॥ ಆಮಹಾಹರಿವರುಷ
ದಲ್ಲಿಯು । ಸೀಮೆಯೋಜನನವಸಹಸ್ರವಿ । ರಾಮವದರೊಳಗೆಲ್ಲ ವಿವರಿಸಲರಿಯೆ ದಾನೆಂದ ॥೩೫॥
ಉತ್ತರೋತ್ತರದೇವಭೂಮಿಗ । ಳೆತ್ತಣವರೀದಳನಿಚಯತಾ । ನೆತ್ತ ಭೂರಿಧ್ವನಿಯನೀಗಜಬಜವ
ನೀಜನವಾ ॥ ಎತ್ತಲೆಂದರಿಯರು ವಿನೋದಕೆ । ತೆತ್ತರಲ್ಲಿಯ ಪಕ್ಷಿಮೃಗಹಯ । ವುತ್ತಮಾಂಗನೆಯ
ರೆನು ಮನ್ನಿಸಿ ಕಂಡುಫಲುಗುಣಗೆ ॥೩೬॥ ಎರಡುಕಡೆಯಂಬುಧಿಯ ಪಾರ್ಶ್ವದ । ದುರುಳರನು
ಘಟ್ಟಿಸಿ ತದೀಯರು । ವೆರಸಿಬಡಗಳು ನಡೆದುದಲ್ಲಿಯ ನಿಷದಪರ್ವತಕೆ ॥ ಎರಡುಸಾವಿರಯೋಜನದ
ತಟಿ । ವರೆಗೆ ಹತ್ತಿತು ಟಿಕ್ಕಿತಾಗಿರಿ । ಬಿರಿಯೆ ಬಿರುಸೊಳ್ಳೆಸಿದವು ನಿಸ್ಸಾಳಕೋಟಿಗಳ ॥೩೭॥ ಮೇಲೆ
ನಿಷಧಾಚಲವ ಸುತ್ತಲು । ಧಾಳಿಹರಿದುದು ದೆಸೆದೆಸೆಯ ದೈ । ತ್ಯಾಳಿ ಹಿಡಿದದುಷ್ಟದಾನವಮಂಡ
ಲೇಶ್ವರರಾ ॥ ಶೈಲಶಿಖರದೊಳುಳ್ಳಭೂರಿಗಳ । ತಾಳುಬಾಗಿಲ ಕುತ್ತರಲಿ ಕಾ । ಲಾಳುಹೊಕ್ಕುದು
ಹೊಯ್ದು ಕಟ್ಟಿತು ಕೂಡೆ ಸೂರೆಗಳಾ ॥೩೮॥ ಗಿರಿಯ ಶಿಖರದ ಮೇಲ್ಕಡೆಯನಾ । ಚರಿಸಿನಿಷಧಾಚ
ಲವನಿಳಿವುದು । ನರನ ಪಾಳೆಯ ಬಿಟ್ಟುದಾಗಲಿಳಾವೃತದಮೇಲೆ ॥ ಅರಸಕೇಳೊಂಭತ್ತುಸಾವಿರ ।
ಪರಿಗಣಿತಯೋಜನವ ನೆಲಸುರ । ಗಿರಿಯಸುತ್ತಣ ದೇಶವತಿರಮಣೀಯತರವೆಂದ ॥೩೯॥ ಚೂಣಿಗಾ
ನುಮೆಲ್ಲ ಪಾರ್ಥನ । ಬಾಣಕೆದಿರಾರುಂಟುವಾದ್ಯ । ಶ್ರೇಣಿ ಚಾತುರ್ಬಲದ ಘುಲ್ಲಣೆಗೆಲ್ಲಗರ್ವಿತರು ॥
ನೂಕಿಹೊಕ್ಕನು ಕನಕಶೈಲ । ದ್ರೋಣಿಗಳದುರ್ಬಲಸುರೌಘವ । ನಾಣೆಗಂಜಿಸಿ ಕಳೆದು ಕೊಂಡನು
ಸಕಲವಸ್ತುಗಳಾ ॥೪೦॥ ಹರಿದು ಹತ್ತಿತು ಗಂಧಮಾದನ । ಗಿರಿಯ ಸುತ್ತಣಯಕ್ಷವಿದ್ಯಾ । ಧರರ
ನಂಜಿಸಿಕೊಂಡನಲ್ಲಿಯಸಾರವಸ್ತುಗಳಾ ॥ ಗಿರಿಯನಿಳಿದರು ಜಂಬುನೇರಿಲ । ಮರನ ಕಂಡರು ಗಗನ
ಚುಂಬಿತ । ಮೆರಡುಸಾವಿರಯೋಜನಾಂತದೊಳತಿವಿಳಾಸದಲಿ ॥೪೧॥ ಅದರ ಫಲಹೇರಾನೆಗಳ ತೋ ।
ರವಲಿಪವುಗಿರಿಸಾರತಲೆಗಳ । ಹೊದರಿನಲಿ ಬಿದ್ದೊಡೆದು ಹೊಳೆಯಾದುದು ಮಹಾರಸದಾ ॥ ಅದು
ಸುಧಾಮಯವಾಯ್ತು ಜಂಬೂ । ನದಿಜಲಸ್ಪರ್ಶದಲಿ ಜಾಂಬೂ । ನದಸುವರ್ಣವೆಯಾದುದಾನದಿಯೆ
ರಡುತಡಿವಿಡಿದು ॥೪೨॥ ಆರಸೋದಕಪಾನವೆ ಸಂಸಾರಸೌಖ್ಯದ ಸಿದ್ಧಿಯಿತರಾ । ಹಾವವಿಂಧನಶಂ
ಡುಲಾಗ್ನಿಕ್ರಮವಿಧಾನವದು ॥ ನಾರಿಯರುಸಹಿತಲ್ಲಿ ಸಿದ್ಧರು । ಚಾರಣರು ರಮಣೀಯತೀರವಿ ।

ಹಾರಗಳು ಬಹುರತ್ನದಿಂ ಮನ್ನಿಸಿದನರ್ಜುನನ ||೪೩|| ಕೇಳಿ ಸೊಗಸಿದಪಸ್ತ್ರಂಪಿಗೆ ಶಂ । ಣಾಲಿ ಬಿದ್ದಣವಾಯ್ತುಲಾಸುರ । ಪಾಲಪದ್ಮದರೊಳಗೆ ಬಹುದೇಶಿಗರಾಸಿಗಳ ॥ ಧಾಳಿಧಟ್ಟಣೆಗಸು ವರ್ಣಿಸಿ । ಪಾಳೆಯದನುಪನನಸನ್ನೋವದ । ನಾಲೆಯಲಿ ನಿಪಸಿದನು ಬಹುವಿಧವಸ್ತುಯುಕ್ತಿಯಲಿ ||೪೪|| ಲಲಿತದಿವ್ಯಾಭರಣರತ್ನಾ । ವಳಿಯನನುಕರಿಸಿದನು ಪಾಳೆಯ । ಸುಳಿವುದವರಾಚಲದ ಕೇಸರಕ್ಷಿತಿಗಳ ಕಳಿವ ॥ ಹೊಳೆಹೊಳೆವಮ್ರೇರುಪಿನ ಸನ್ನಣ । ವಳಿಯುದರ್ಧವನಾಕ್ರಮಿಸಿ ಕೈ । ವಳಿಸಿ ಬಿಟ್ಟನು ಹೊಕ್ಕಿಳಾವ್ರತವರುಷಸೀಮೆಯಲಿ ||೪೫|| ಸೇನೆ ಪಡುವಲು ತಿರುಗಿ ಸನ್ನಣ । ವಾನುಪೂರ್ವಿಯ ಗಂಧಮಾದನ । ಸಾನುವನು ಪೆಂಠಣಿಸಿಯಡರಿತು ಚೂಣಿಶೃಂಗದಲಿ ॥ ಆನರೇಂದ್ರನನಿಳಿದು ಪಡುವಣ । ಕಾನನಂಗಳ ಕೇತುಮಾಲದ । ಕಾನನಂಗಳ ಕಳಿದು ಬಿಟ್ಟುದು ಸೇನೆ ಒಳಸಿನಲಿ ||೪೬|| ಅಲ್ಲಿ ಸಾಗರತೀರಪರಿಯಂ । ತಲ್ಲಿ ಗಜಹಯವೆಲ್ಲಿ ಸಂಪತಿಯು । ಕಲ್ಲಿ ಮಣಿಗಣವೆಲ್ಲಿ ಬಹುಧನವೆಲ್ಲಿ ರಮಣೀಯ ॥ ಅಲ್ಲಿಗಲ್ಲಿಗೆ ನಡೆದು ಸಾಧಿಸಿ । ಚೆಲ್ಲೆ ಕಿಮುರದಕೋಶಭಾಗಗ । ಳೆಲ್ಲವನು ಹೊಕ್ಕರಿಸಿ ತೆರಳಿಚಿದನು ಮಹಾಧನವ ||೪೭|| ಎಡಕಡೆಯಲೊಂಭತ್ತುಸಾವಿರ । ನಡುನೆಲನನಾಕ್ರಮಿಸಿ ಮೂಡಣ । ಕಡೆಗೆ ತಿರುಗಿತು ಗಂಧಮಾದನಗಿರಿಯನೇರಿಳಿದು ॥ ನಡೆದಿಳಾವ್ರತದೊಳಗೆ ಬಿಟ್ಟುದು । ಪಡೆಸುರಾದ್ರಿಯನುಳುಹಿ ಬಲದಲಿ । ನಡೆಯಲತಿದೂರದಲಿ ಕಂಡರು ಮಂದರಾಚಲವ ||೪೮|| ಇದುವೆ ಕಡೆಗೋಲಾಯ್ತುಗಡೆ ಪೊಂ ದುದಧಿಯನು ತಾನಿದು ಮಹಾಗಿರಿ । ಯಿದರಚಿಂತೆಕವ ನೋಡಬೇಕೆಂದರ್ಜುನನ ಸೇನೆ ॥ ಒದರಿ ಹತ್ತಿತು ನಡುಮಣಿರಿದು । ಗರ್ದಲಿ ಬೆಟ್ಟಂಗಳಲಿ ನೃಪಪ । ದ್ವದ ಮಹಾಹವವಾಯ್ತು ಪಾರ್ಥನ ಚೂಣಿಯವರೊಡನೆ ||೪೯|| ಇಳುಹಿದರು ಚೂಣಿಯನು ಮುಂದರೆ । ನೆಲೆಯ ಭಟರೌಕಿದರು ಭಾರಿಯ । ತಲೆವರಿಗೆಗಳಲೊತ್ತಿದರು ಹೊಗಿಸಿದರು ದುರ್ಗವನು ॥ ಕಲುವಳೆಯ ಕೋಲಾಹಲಕ್ಕಿವ । ರಳ್ಳಕದಿರಿದರು ಸುರಗಿಯಲಿ ತೆನೆ । ವಳಿಯ ಹಿಡಿದರು ಹೊಯ್ದು ಕೇಶಾಕೇಶಿಯುದ್ಧದಾಳಿ ||೫೦|| ಶಕರು ಖದ್ಯೋತಪ್ರತಾಪರು । ವಿಕಳಚಿಂಪುರು ದಿಗ್ಭ್ರಮೆಯವರೇ । ಣಕರು ಪಶುಪಾಲಕಪುಳಿಂದರು ಕಂಕಣಾಹ್ವಯರು ॥ ಸಕಲದಸ್ಯುಗಳೈದೆ ಸೋತರು । ವಿಕಳಬಲವೊಪ್ಪಿಸಿತು ಸರ್ವಸ್ವಕವ ಸಂಧಾನದಲಿ ನೆಲೆಯಾಯ್ತಲ್ಲಿಯರ್ಜುನಗೆ ||೫೧|| ಶೋಧಿಸಿದನಾಗಿರಿಯನಾಪ್ರಿಯ । ಹಾದಿಯಲಿ ಹೊರವಂಟು ಬರಮುರ । ಯಾದೆಗಿಕ್ಕಿದಬೆಟ್ಟವಿದ್ದುದು ಮಾಲ್ಯವಂತಗಿರಿ ॥ ಭೇದಿಸಿದನದರೊಳಗುಹೊರಗಿನ । ಲಾದವಸ್ತುವ ಕೊಂಡು ತತ್ಪ್ರಕ । ಲೋದರವನೇರಿಳಿದು ಭದ್ರಾಶ್ವಕ್ಕೆನಡೆತಂದ ||೫೨|| ಅದು ಮಹಾರಮಣೀಯತರವಂ । ತದರೊಳಿದ್ದುದು ಶುದ್ಧಭೋಗಾ । ಸ್ಪದರುಯಕ್ಷೋರಕ್ಷಗಂಧರ್ವಾಪ್ಸರೋನಿಕರ ॥ ಕುದುರೆರಥಗಜಪತ್ತಿನಿರ್ಘೋ । ಷದಲಿ ಬೆಬ್ಬಳೆಯಾಯ್ತು ಬೇಳಂ । ಬದ ವಿಘಾತಿಗೆಸಿಲುಕಿತ್ತುದು ಸಕಲವಸ್ತುಗಳ ||೫೩|| ದೊರಕಿತಲ್ಲಿಯಪೂರ್ವವಸ್ತೂತ್ಕರ ಸಮುದ್ರದ್ವೀಪಪರಿಯಂ । ತರ ನಡೆದನೊಂಭತ್ತುಸಾವಿರಯೋಜನಾಂತರವಾ ॥ ತಿರುಗಿದನು ಭದ್ರಾಶ್ವವನಾ । ಕರಿಸಿ ಬಡಗಲು ನಡೆದರಲ್ಲಿಯ । ಗಿರಿಯಕಂಡರು ಹತ್ತಿದರು ಹರುಷದಲಿ ಬೊಬ್ಬಿಡುತ ||೫೪|| ನೀಲಗಿರಿಯಗ್ರದಲಿ ಬಿಟ್ಟುದು । ಪಾಳೆಯವು ಬೊಬ್ಬೆಯಲಿ ದಿಕ್ಕಿನ । ಮೂಲೆ ಬಿರಿದುದು ಜರಿದ ವದ್ರಿಗಳೇ ನನುಸುರುವೆನು ॥ ಮೇಲುದುರ್ಗದ ಸಂಧಿಗೊಂದಿಯೊ । ಳಾಳು ಹರಿದುದು ಸೂರೆಗೊಂಡು

ವಿ । ಕಾಲವಸ್ತುವ ತಂದನಲ್ಲಿದ್ದರಸುಗಳ ಗೆಲಿದು ॥೪೬॥ ಎರಡುಸಾವಿರದಧ್ವವದು ನ । ತ್ತೆರಡು
ಸಾವಿರವಗಲವದರಾ । ಕುಸಿದ ರನ್ನಕಭೂಮಿಗಿಳಿವನು ಹೊಕ್ಕರಾನೆಲನ ॥ ಬಸಿಸ ಕೇಳಲ್ಲಿ ಸಮು
ನ್ನೊ । ಹದವ ವಸ್ತುವ ಕೊಂಡು ಸನಿಕಾ । ಸಿನವಗಲಕೆ ಸುತ್ತಿಬಂದರು ಗೆಲಿದು ಗುರ್ಜರರ ॥೪೭॥
ಅರಸ ಕೇಳಲ್ಲಿಂದ ಬಡಗಲು । ಹರಿದು ಬಿಟ್ಟರು ಹತ್ತಿದರು ಬೆ । ಸರದೆ ಕಲುದುಗ್ಗಾಲಿ ಒಮಳ್ಳ ೯
ತ್ತಸರ್ವತ್ರ ॥ ಗಂಧಮಾದನ ತೊಲಗುವಲ್ಲಿ ಗಂಧರವ ಕೊಳ್ಳದಹೋಯಿಸಲಿ ಹೊ । ಕ್ಕುಬರು ಗುಸ್ಸಿಸಿ
ಕೊಂಡರಲ್ಲಿಯ ಸಾರವಸ್ತುಗಳ ॥ ಇಳಿವಸಾಗರಿಯನು ಹಿರಣ್ಮಯ । ದೊಳಗೆ ಬಿಟ್ಟನು ಪಾಳೆಯ
ವತ । ದ್ವಲಯ ವಿಗಡಿಒಭತ್ತುಸಾವಿರಯೋಜನಾಂತರವ ॥ ಬಳಸಿ ಬಂದನು ಪಿವುಲಸೌಧಾ ।
ವಳಿಯ ನೆರೆಯ ಸ್ವರ್ಗನಗರ ವರ । ಬಲರಮುಣ ಕುಂತೀತನುಜ ಹೊಸಗಿವನ ತಪಾತಪಾಗ ॥೪೮॥ ಈತ
ಘಾರಕ ನೆರಸ್ವರ ಕಮುಣ । ಜಾತಗತ ತತ್ವಧರ್ಮಭೂಪಸಮು । ಲಿತ್ತಸ್ವಪತಿ ಗೆಲಿದನುತ್ತರಲು ದೇವಭೂ
ವಿಸರ ॥ ಈತ ಗಂಧಸುತನಪ್ರೊಲ್ಲರು । ಹೂತತರಯನಪ್ರೊಲು ಭುವನ । ಖ್ಯಾತನೆಂದಾಸ್ತ್ರಿಕಟಕ
ಕ್ರೊಂಡಾಡಿತರ್ಜನನರ ॥೪೯॥ ತನತನಗೆ ತರುಣಿಯರು ಹೂಪಲ । ತನಿಪಳಿಯ ಕರವರು ಕನತ್ಕಾಂ ।
ಚನವಿಭೂಷಣಾತಪ್ತಚಮ ಪ್ರೊಂತವರುಷ್ಟಿಗೆಯ ॥ ವನಿತೆಯರಸಾಪ್ರಶದಲಿ ವಿಶಾ । ಟನಿಪರನವ್ಯಗ
ಪಕ್ಷಕೃಷ್ಣಾ । ಚಿರವನಂತನನಿತ್ತು ಸತ್ಕರಿಸಿದರು ಫಲುಗುಣನ ॥೫೦॥ ಧಾರುಣೀಪತಿ ಕೇಳು ದಳ
ನಡು । ದಾಂಬಡಗಣಾಶ್ರಂಗಪರ್ವತ । ದೂರಿಯಲಿ ದೊರೆಗಳನು ಘಟ್ಟಿಸಿ ಸಳೆದುಬರುಧನವ ॥
ಭಾರಣೆಯ ಮುಂಗುಡಿಯ ಕೊಳ್ಳೆಗ । ಳೋರಣಿಸಿ ತುಡುಗೇರಿ ಸದ್ದರ । ಚಾರಣರ ವಿದ್ಯಾಧರರ
ಮುತ್ತಿದರು ಮನ್ನಿಸದೆ ॥೫೧॥ ಅರಸುಮೋಹರಯುತ್ತರಾಗಿ । ಎರಡುಸಾವಿರದಗಲವದರಲಿ । ತುರು
ಗಿಬಿಟ್ಟಿತು ಸೇನೆ ಸೂಳೈಸಿದವು ನಿಸ್ಸಾಳ ॥ ಬಿಂದುಸಾಗರ ಕೆಳಗಣುತ್ತರ ಕುರುಗಳೆದುರುಘ್ಘಾರಿತ
ವಾಯ್ತು । ಬ್ಬರಕೆ ಬಡಗಣಾಕಡಲು ಕವಿತರು ತಳವಡಿಮ್ಮೆಳಲ ॥ ಸರವಲಿಯ ನೃಪರು ಮೂಡಲ ।
ಹರಿಯಬಿಟ್ಟರು ಪಾರ್ಥನಿದ್ದಡೆ । ಗರವಕೇಳವರುಗಳು ಬಂದರು ಕಂಡರರ್ಜುನನ ॥ ಗುರಿಯಸಳೆಯಬ
ರಿತ್ತಲುತ್ತರ । ಕುರುಗಳಿಗೆ ನಂಸ್ಥಾನವದು ಗೋ । ಚರಿಸಲರಿಯದು ನರರ ಕಾಲ್ದಳಗಂದವರುಮ
॥೫೨॥ ಅಲ್ಲವಾಕ್ರಮಿಸಿದರೆ ನಿನಗು । ರಲ್ಲಿ ಕಾಣಂ ದೊರಕಲರಿಯದು । ಬಲ್ಲವರುತ್ತರ ಕುರು
ಗಳನಿನಗೆ ಬಾಂಧವರು ॥ ಗೆಲ್ಲವಲಿಘಲವಿಲ್ಲ ಸಾಹಸ । ವಲ್ಲಿ ಮೆರೆಯದು ಮರ್ತ್ಯದೇಹದಿ । ಳಿಲ್ಲಿ
ಸುಳಿವುದು ಭಾರವೆಂದರು ಚರರು ಫಲುಗುಣಗ ॥೫೩॥ ಮಣಲದು ನಮಗವರು ಬಂಧು । ಶ್ರೀಯ
ಗಳು ಗಡ ಹೋಗಲದು ಕ । ಟ್ಟಣೆಯುವುದು ನಿಮ್ಮದೇಶನೊಳುಳ್ಳವಸ್ತುಗಳ ॥ ಮಣಿಯವ ಪಾಡ
ದೆಸುಯಕ್ಷ್ಣವೆ । ಕಾಣಿಕೆಯನೀವುದು ಯುಧಿಷ್ಠಿರ । ನಿಣ ನೃಪಗನ ತಂದು ಕೊಟ್ಟರು ಸಾಲವಸ್ತು
ಗಳ ॥೫೪॥ ತಿರುಗಿತಲ್ಲಿಂದತ್ತ ಪಾಳಯ । ಮರದುಬಿಟ್ಟ ಹಿರಣ್ಮಯದಲಿ । ಕುಸಿದ ರಮ್ಯಕದಲ್ಲಿದ್ದವ
ಳಾವೃತದಂದ ವಕ್ಷಿಣಾ ॥ ಧರುಮನೈಸುತ ಹರಿವರ್ಷಕಿಂ ಪುರುಷವನು ದಾಟುತ ಕಿಂಪುರುಷವ । ಗಂ
ಯಮನಾಮರುಳವು ಬಂದುದು ತೆಂಕಮುಖವಾಗಿ ॥೫೫॥ ಕಳುಹಿ ಕಳೆದನು ಬಂದ ಕೂಡಿದ । ಬಲವನ
ವೆರೆವರೆಲ್ಲ ಯಾಗ । ಸ್ಥಳಕೆ ಬಹನೇಮದಲಿ ಹರಿದುದು ನಿಜಪುರಂಗಳಿಗೆ ॥ ನೆಲವಲಯದದವಸ್ತುವಿದನು ।
ತಳವಡಿಸಿದನೊ ಭೂಯೆನುತ ಸುರ ರುಲಿಯೆ ಹೊಕ್ಕನು ಪಾರ್ಥನಿಂದ್ರಪ್ರಸ್ಥಪುರವರವ ...॥೫೬॥

ಅಂತು ಸಂಧಿ ೩ಕ್ಕೆ ಪದ ೬೯೦ಕ್ಕಂ ಮಂಗಳಮಹಾ.

ನಾಲ್ಕನೆಯ ಸಂಧಿ.

ಸೂಚನೆ: ಮಖಸಿದ್ಧಿಗೆ [illegible] ಭೂಪತಿ [illegible]
ಸಾಗರಾಂತದ ಧರೆಯ [illegible]

ಕೇಳು ಜನಮೇಜಯಧರಿತ್ರೀ | ಪಾಲ ಯಮನಂದನನ ಭಾಗ್ಯದ | ಮೇಳಿಕೆಗೆ ಬಹರುಂಟೆ ನಳನಹುಷಾದಿರಾಯರಲಿ || ಆಳು ನಡೆದುದು ಭೀಮಸೇನನ | ಧಾಳಿಯುದಯದಿಸೆಗೆ ತತ್ಪದವನೀ | ಪಾಲಕರು ತಂತಮ್ಮ ನಿಬಿಡಿತ ಸ್ವಾನುರೂಪದಲಿ ||೧|| ನಡೆದು ಕೊಟ್ಟನು ರೋಚಮಾನನ | ಹಿಡಿದು ಬಿಟ್ಟನು ಸಹಪರಿತ್ರವ | ನಡಕಿತನಿಳುಹಿ [illegible] | ಘಟಿಸಿ [illegible] | ಬಡೆಯುದೇನೆನೆ ಭೀಮಸೇನನ | ಪಡೆಯೊಳು | ಶಿಶುಪಾಲ ಬಂದನು ಕಂಡನುಚಿತದಲಿ ||೨|| ಹಸುಬಂದೆಯಪೂರ್ವಕಮೆನೆ ಯಾ | ಗಾಸುರಾಗಮನದುಪಲಕ್ಷಿತಂ | ಮಾನದಲಿ ಶಿಶುಪಾಲ ಹೇಳಿಸಿದನು ಮಹಾಧನವ || ಮಾನಿಸರ ಕಳುಹಿದೊಡೆ ಸಾಲದೆ | ನೀನಿದಕೆ ಬಂದುಚಿತದಲಿ ಸ | ನ್ಮಾನಿಸುತ ನಿಲಿಸಿದನು ತಿಂಗಳುಪವನನಂದನ ||೩|| ನಡೆದು ಮುಂದೆ ಕಳಿಂಗದೇಶದೊಳು | ಕದಸಿ ಬಿಟ್ಟನು ಕೋಸಲೆವಂತನ | ಹಿಡಿದು ಕಪ್ಪವ ಕೊಂಡು ನಡೆದನು ಕೋಸಲೇಶ್ವರನ || ಅಡವಿಪಲ್ಲಿಯ ಘನ ಪಯೋಧಿಯ | ಕಡೆಯ ಕೋಟೆಯ [illegible] | ಯೊಡೆದು [illegible] ||೪|| ಆಳು ನಡೆದುದು ಪೂರ್ವದಲಿ ಗೋ | ಪಾಲನೆ [illegible] ರತ್ನದ | [illegible] ||೫|| [illegible]

ತಮಿಳರ | ಗಮಿಸಿ [illegible] || [illegible] ||೬|| [illegible] ಕಾಳಿದಪ [illegible] | ಗೆಲಿದು [illegible] | ದೊಳಗೆ [illegible] ತಂದು || [illegible] | [illegible] ಕರ್ಣನ ಗೆಲಿದು ಕಪ್ಪವ | [illegible] ಯಲಿ ನಡೆದನು [illegible] ||೭|| ಸೂರೆಗೊಂಡಲ್ಲಿಂದೆ ನಡೆದನು | ವಿಶಾಲ ಗಂಗಾಸಂಗಮದ ಕ್ಷೈ | [illegible] ವಶವಾಯ್ತು || [illegible] | [illegible] ಭಂಡಿಯಲಿ [illegible] | [illegible] ಹೊಯ್ದನು ವಾಸುದೇವನ [illegible] ||೮|| [illegible] ಪುರವರವನಲ್ಲಿಂದ [illegible] | [illegible] ಮಾಡಿದನು [illegible] | [illegible] ಯಲಿ || ತೆರಳಿಯಲ್ಲಿಂದಿಂದ್ರಸೇನನ | ನೊರಸಿ ಭಂಡಾರವನು ಹೇರಿಸಿ | [illegible] ದನು ಲುಬ್ಧಕರುಸಹಿತ ||೯|| ಸಾರೆಲೋಹಿತನೆಂಬಸಾಗರ | ತೀರವಾಸಿಗಳೊಳಕುರುಪದ ವಿ | ಕಾರಚೋನೆಗಟೀನಬೋಟಕರನು ನಿವಾಸಿಗಳ || ಓರೆಬಾಗಿನ ಕಾದುವಕೊಳ್ಳದ | ಗಾಂಕರನಪ್ಪಳಿಸಿ ಮೂಲೆಯುವಿ |

ಹಾಟಗಳ ಬಗೆಗೈದು ತುಂಬಿಸಿದನು ಸುವಸ್ತುಗಳ ॥ ಧಾಳಿ ಹುಯ್ದು ಪಂಚಗೌಳವ । ರಾಳವೃದ್ಧಿ ಯರಾಂಧ್ರಜಾಳಾಂ । ದ್ರಾವಿಳಿಗಳನಪ್ಪಳಿಸಿ ಹೂಡಿಸಿದನು ಮಹಾಧನವ ॥ ಮೇಲುದುರ್ಗದ ಪಾರ್ವತೀ ಯರಿ । ಗಾಳು ಹರಿದುದು ಸಂದುಗೊಂದಿಯ । ಶೈಲಗುಹೆಗಳೊಳಗೆ ಸಿಹಿಡಿದನು ಬಹಳಧನಯು ತರ ॥೧೧॥ ಆರಸಿದನು ಪಾವೆಗಳಲಬ್ಧಿಯ । ಕುರುವಡಲಿ ಕೊಬ್ಬಿದಧನಾಢ್ಯರ । ಮುರಿದು ಮರಳಿದು ಕೆಲಬಲದಲಾದ್ವೀಪಪಾಲಕರ ॥ ಸೆರೆವಿಡಿದು ತನಿಸೂರೆಯಲಿ ಪಡೆ । ನೆರೆದಣಿಯಲಾಮ್ಲೇಚ್ಛವರ್ಗವ । ತರಿದು ಶೋಧಿಸಿ ತೆಗೆದನಲ್ಲಿಯ ಸಾರವಸ್ತುಗಳ ॥೧೨॥ ಆಮಹಾಖೋಟಕಮಹಾಹ್ವಯ । ಧಾಮದಲಿ ದಸ್ಯುಗಳನಳಿದು । ಸ್ತ್ರೀಮಯವನಕರೂಷಕರ ತ್ರಾಗಿದನು ಪಟಲದಲಿ ॥ ಹೇಮಮುಕ್ತಾರಜತಚಂದನ । ರಾಮಣೀಯಕವಸ್ತುವಿಚಯದ । ಸೀಮೆಗಳ ಸಾವರಿಯೆ ನಳವಡಿಸಿದನು ಕಲಿಭೀಮ ॥೧೩॥ ಮರಳೆಯನಿಲಜನಾಮಹಾದ್ಭುತ । ತರದ ವಸ್ತುವನಾನಲಾಪ್ರದೆ । ಧರಣಿಯನೆ ಸಂದಣಿಸಿದವಸಂಖ್ಯಾತರಥಯೂಥ ॥ ಅರಸುಗಳಸಹಿತ ಮಹಾಬಲ । ಮೆರಸಿ ಬಂದನು ಭೀಮನಣ್ಣನ । ಚರಣಕೆರಗಿದನರ್ಜುನನ ತಕ್ಕೈಸಿದನು ನಗುತ ... ... ॥೧೪॥

ಅಂತು ಸಂಧಿ ೪ ಕ್ಕೆ ಪದ ೩೦೪ ಕ್ಕಂ ಮಂಗಳಮಸ್ತು.

ಐದನೆಯ ಸಂಧಿ.

ಸೂಚನೆ॥ ಬಡಿದು ವಿವಿಧದ್ವೀಪಪತಿಗಳ । ಹಿಡಿದು ಕಪ್ಪವ ಕೊಂಡು ತೆಂಕಣ ।
ಕಡಲವಳಯದ ನೃಪರ ಗೆಲಿದನು ವೀರಸಹದೇವ ।

ಕೇಳು ಜನಮೇಜಯಧರಿತ್ರೀ । ಪಾಲ ಸಹದೇವನ ಸಗಾಢಿಕೆ । ಯಾಳುತನವಿದರಾರರಹವಣಲ್ಲಂಬಿತೆರನಾಯ್ತು । ಆಳು ನಡೆದುದು ತೆಂಕಣಾವನೀ । ಪಾಲಕರ ಪಿರಿಸಿಗ್ಗೆ ತನ । ವಾಳಿಗೀತನ ದೆಸೆಗೆ ದೆಸೆಗೆಟ್ಟುದು ದಿಗಂತದಲಿ ॥೧॥ ಶೂರಸೇನನ ನಡೆದು ನೆರೆ ಭಂ । ಡಾರವೆಲ್ಲವ ಕೊಂಡು ತೆಂಕಣ । ವೀರಮತ್ಸ್ಯನ ಗೆಲಿದು ಸರ್ವಸ್ವಾಪಹಾರದಲಿ ॥ ಭೂರಿಬಲನಹದಂತವಕ್ತ್ರನ । ವಾರಣಾಶ್ವರಥಂಗಳನು ಕೊಂ । ಡಾರ ಭಟೆಯಲಿ ಮುಂದೆ ನಡೆದನು ತೆಂಕಮುಖವಾಗಿ ॥೨॥ ಖಳನಿಶಾಚರಕೋಟಿಗಳನಳಿ । ಗಳಿಗೆಯೊಳನಾಕ್ರಮಿಸಿದನು ಪಂ । ಡಳಿಕವನ್ನೆಯರಾಪರ ಚತುರಂಗಪಡಹತಿಗೆ ॥ ಹೊಳೆವ ಪತ್ರಯುಗಂದಾರ್ಗವಿಪಿನ । ಸ್ಥಳದ ಧರಣಿಪದಿರುವಂದ । ಗ್ಗಳೆಯ ಗಜರಥಹಯಸಹಿತ ತೆತ್ತರು ಸುವಸ್ತುಗಳ ॥೩॥ ಬಂದು ಕರದೃಢಭೋಜಮೊಮ್ಮನ । ಮುಂದಿರದ ಸ್ವಕ್ಷೇಮಕನೃಪ । ಸಂದು ಕೇಳಿದು ಕೊಟ್ಟನತಿಸಯಸಾರವಸ್ತುಗಳ ॥ ಮುಂದೆ ಚರ್ಮಣ್ವತಿಯ ಜಂಬಕು । ನಂದನವಪಪ್ಪಳಿಸಿ ಗಜಹಯವೃಂದವನು ಕೊಂಡತ್ತ ಬಿಟ್ಟನವಂತಿದೇಶದಲಿ ॥೪॥ ತರುಭಿದೊಡೆವಿಂದಾನುವಿಂದರ । ಮುರಿದು

ಕಪ್ಪವಕೊಂಡು ಭೀಷ್ಮಕ । ನರಪತಿಯ ಗೆಲಿದಲ್ಲಿ ವಸ್ತ್ರಿಸಿಕೊಂಡನುಚಿತವಲಿ ॥ ಬರಬರಲು ಕುಂತಲನೃಪ
ನನಾ । ಕರಸಿ ಕಪ್ಪವಕೊಂಡು ಖಳತತಿ । ತ್ರಿರಕಿಳಿಂಧ್ರಕರೆಂಬ ಬೇಡರ ಧುರದೊಳೋಡಿಸಿದ ॥೫॥ ಉರ
ವಣಿಸಿ ದಳ ತುಂಗಭದ್ರಾ । ವರನದಿಯನುತ್ತರಿಸಿ ಪಂಪಾ । ಸರದ ತಡಿಯಲಿ ಬಿಟ್ಟನಾ ವಿರುಪಾಕ್ಷಸೀಮೆ
ಯಲಿ ॥ ಗಿರಿಚರರ ವನಚರರ ಬಿಂಕವ । ನೊರಸಿ ಕಿಷ್ಕಿಂಧಾದ್ರಿಯಲಿ ಸಂ । ಚರಿಸಿ ಬಿಟ್ಟುದು ಕಟಕ ಬಹು
ವಿಧವಾದ್ಯರಭಸದಲಿ ॥೬॥ ಕೇಳಿದನು ಕಿಷ್ಕಿಂಧಗಿರಿಯವಿ । ಶಾಲಶೃಂಗವನೇರಿ ಘನನಿ । ಸ್ಸಾಳವೊಳಗಿ
ದೊಡೊಡನೆ ಮೊಳಗಿತು ಗಿರಿಗುಹಾನಿಕರ ॥ ಅಳಿದೆತ್ತಣದೆನುತ ಕಪಿಬಲ । ಜಾಲ ನೆರೆದುದು ಮುರಿದು ತ
ರುಶಿಲಾ । ಖಾಳಿಗಳ ಕೈದುಗಳ ಕೈಯಲಿ ತರುಬಿದರು ಬಲವ ॥೭॥ ಕವಿದುದೀ ಚತುರಂಗಬಲ ಸಂ । ತವಿಸಿ
ಲಗ್ಗೆಯ ಮಾಡಿ ವಾನರ । ನಿವಹದಲಿ ಕರೆವುದು ಶರಾಳಿಯ ಸುಭಟಮೇಘಚಯ ॥ ತಿವಿವರಂಬಿನ ಸೋನೆ
ಗಳುಕದೆ । ಸವಡಿಮರನಲಿ ಸದೆದು ಹೊಕ್ಕುದು । ರವಿಸುತನ ಸಂತತಿ ಸುಷೇಣನು ವೀರವೃಷಸೇನ ॥೮॥
ದೊರೆಗೆದೊರೆಯಿರಿಬರಾಗಿ ಕಾದಿತು । ತೆರಳಿದವು ದಿನವೇಳು ಪುಯ್ಯಂ । ಬರವಿಘಾತಿಯೊಳೊದಗೆ ಮೆಚ್ಚಿ
ದರು ಭಯವಾನರರು ॥ ಅರಸನೀನಾರೆನೆ ಯುಧಿಷ್ಠಿರನರಪತಿಯ ಕಥೆವೇಳೆ ಕೊಟ್ಟರು । ಪರಮವಸ್ತುಪ್ರ
ಚಯವನು ಮಾದ್ರೀಕುಮಾರಂಗೆ ॥೯॥ ತೆರಳಿತಲ್ಲಿಂ ಬಳಿಕ ತೆಂಕಣ । ನರಪತಿಗಳಾನುವರ ಸೇನೆಯ ।
ಖುರಪುಟಕೆ ನಗ್ಗಾಗಿ ತೆತ್ತರು ಸಕಲವಸ್ತುಗಳ ॥ ಉರವಣಿಸಿ ಬಲ ನಡೆದು ನದಿಗಳ । ನರಸಿ ಕಾವೇರಿಯಲಿ
ಬಿಟ್ಟುದು ಹರಿದುದಲ್ಲಿಂ ಮಾಳಿ ಘನ ಮಾಹಿಷ್ಮತೀಪುರಕ ॥೧೦॥ ದಾಳಿಯೆನಲಿಬರಾಗಿ ಹೊರವಂ । ಟಾಳು
ತಾಗಿದುದಲ್ಲಿಗಧಿಪತಿ । ನೀಲನೆಂಬಾತನು ಮಹಾಹವವಾಯ್ತು ಚೂಣಿಯಲಿ ॥ ಹೇಳಲದ್ಭುತವುರಿವುದ
ಧಿಕ । ಜ್ವಾಲೆಯಲಿ ಚತುರಂಗಬಲ ಹರ । ಭಾಳನಯನಕವಾಟ ತೆರೆದಂತಾಯ್ತು ನಿಮಿಷದಲಿ ॥೧೧॥
ಉರಿಸಮುದ್ರದೊಳದ್ದುದೋ ಮೋ । ಹರವು ತೆಗೆತೆಗೆ ಕನ್ನಿಗಳ ಕಾ । ತುಸಲೀಯಬರಾನೆ ಮುಂದಯಲಿ
ಹೊಕ್ಕ ಕುದುರೆಗಳು ॥ ಮುರಳಿಚಲಿ ತೇರುಗಳ ಸೂತರು । ಕರದ ವಾಘೆಯ ಸೆಳೆ ಪದಾತಿಯು । ತಿರುಗೆ ಹೊಯ್ ಹೊ
ಯ್ಯೆನುತ ಪಿರಿಗೆ ಗುರಿದನು ಸಹದೇವ ॥೧೨॥ ರಾಯದಳವೇಕುರಿದುದೇನಿದ । ರಾಯತವು ಹೊಸತಾಯ್ತು
ವೈಶಂ । ಪಾಯಮುನಿ ಹೇಳೆನಲು ನಗುತಿಂತೆಂದನಾ ಮುನಿಪ ॥ ರಾಯ ಕೇಳ್ಪೂರ್ವದಲಿ ಕಮ । ಲಾಯ
ತಾಕ್ಷಿಯರುಂಟು ಹಲಬರು । ವಾಯುಸಖ ಪರದಾರಗಮನವ ಮಚ್ಚಿದನು ಬಳಿಕ ॥೧೩॥ ಪಾವಕ ದ್ವಿಜವೇ
ಷದಲಿ ಬಂದಾ ವಧುಗಳೊಡನಿರಲು ನಗರವ । ಕಾವವರು ಹಾದರವ ಹಿಡಿದರು ಹವ್ಯವಾಹನನಾ ॥ ಕೋವಿ
ದರ ಮುಂದಿಕ್ಕಿದೊಡೆ ಧರ್ಮಾವಲಂಬನಶಾಸ್ತ್ರಗಳನು । ದ್ಭಾವಿಸಲು ಭುಗಿಲೆಂದು ತೋರಿದನಗ್ನಿ ನಿಜತ
ನುವ ॥೧೪॥ ಧರಣಿಸುರರಲಿ ಸುಪ್ರಧಾನರು । ವೆರಸಿ ಬಂದಗ್ನಿಯ ಪದತ್ರಯ । ಕೆರಗಿ ಕೋಪಸ್ತಂಭವ
ನುಮಾಡಿದರು ದೈನ್ಯದಲಿ ॥ ಪುರದಲದು ಮೊದಲಾಗಿ ಕಾಮಿನಿ । ಯರಿಗೆ ಹಾದರ ಸಲುವುದೀಪ್ಸಿ । ಸ್ತರಣ
ವೆಂದು ಕೃಶಾನು ನಂಬುಗೆಗೊಂಡನಾ ನೃಪನ ॥೧೫॥ ಅದುವೆ ಮೊದಲಾಗೀಗಳಲ್ಲಿಯ । ಸುದತಿಯರು ಸ್ವ
ಚ್ಛಂದಚಾರಿಯ । ರದರಿನಾ ನೃಪತಿಗೆ ಸಹಾಯವನಗ್ನಿ ಮಾಡುವನು ॥ ಇದನರಿತು ಸಹದೇವನುಪವಾ ।
ಸದಲಿ ಮಿಂದು ಕುಶಾಗ್ರಸಂಸ್ತರ । ಣದಲಿ ಪವಡಿಸಿ ಬೇಡಿಕೊಂಡನು ವಹ್ನಿಸೂಕ್ತದಲಿ ॥೧೬॥ ಯಾಗವಿ
ದು ನಿನಗೋಸುಗವೆ ನೃಪಯಾಗಬುದ್ಧಿಗೆ ಬಂದೆವಲ್ಲದೆ । ಮೇಗೆ ತಾನುದಿಸಿದೆ ಧನಾಶ್ರಯಲಿವನ ಮುರಿಯ
ವಲೆ ॥ ಈಗ ನೀನಡ್ಡೈಸಲೆಮ್ಮಯ । ಯಾಗ ಹಾಳಿಯಲಿ ನಿನಗೆ ಮಾಣಲಿ । ಯಾಗ ಪೌರೋಹಿತ್ಯವೆಂದನು

ನಗುತ ಸಹದೇವ ॥೧೭॥ ಎಂದು ನಾನಾವಿಧವರಸ್ತುತಿ । ಯಿಂದ ಹೊಗಳಿದರಗ್ನಿ ಮೆಚ್ಚಿದ । ರಿಂದು ಬಿಡಿಯೆನೆ ಬಿಟ್ಟನೀತನ ಮಾರಿದೆನು ನಿನಗೆ ॥ ಎಂದು ಶಿಖಿ ಹಿಮ್ಮೆಟ್ಟಲಾದಳ । ಮುಂದೆ ನಡೆದುದು ನೀಲಪುರದಲಿ ಸಂದಣಿಸಿ ಬಳಿಕಾತನೀತನ ಕಂಡು ಪೊಡಮಟ್ಟ ॥೧೮॥ ತೆತ್ತನವ ಸರ್ವಸ್ವವನು ತಾ । ನೆತ್ತಿ ಬಂದನು ಕೂಡೆ ಬಳಿಕಿನೊ । ಳುತ್ತರೋತ್ತರವಾಯ್ತು ಸಹದೇವನಿಗೆ ದಿಗ್ವಿಜಯ ॥ ಮತ್ತೆ ಸಹ್ಯಾಚಲದ ಕೊಳ್ಳದ । ಕುತ್ತುಗನ ಭೂಪರ ವಿಭಾಡಿಸಿ । ಸುತ್ತಿ ಬಂದಾಕರಿಸಿದನು ತದ್ದ್ವೀಪನಿವಾಸಿಗಳ ॥೧೯॥ ಇಳಿದು ಕೊಂಕಣಗೌಳವರ ಕೇ । ರಳರ ಸದೆದು ಮಹಾರ್ಘರತ್ನಾ । ವಳಿಯ ಹೇರಿಸಿದನು ಸುಚಿತ್ರಾಂಬರವಿಲೇಪನವ ॥ ಜಲಧಿಯಂತದ್ವೀಪಪತಿಗಳ । ಕುಲವ ಶೋಧಿಸಿ ಚೋಳಪಾಂಡ್ಯರ । ದಳವ ಘಟ್ಟಿಸಿ ಕೊಂಡನನುಪಮಸಾರವಸ್ತುಗಳ ॥೨೦॥ ಕಳುಹಿದನು ಮಿಗೆಯಾಪ್ತಪತ್ರಾ । ವಳಿಯ ತನುಜನ ಬಳಿಗೆ ತತ್ಕ್ಷಣ । ದೊಳಗೆ ಹೇಳಿಕೆಯಾಯ್ತು ಪುವಾರಕೆ ಘಟೋತ್ಕಚನಾ ॥ ತಿಳಿದಕಾರ್ಯರ್ಥೀರಕಪ್ರೋವೇ । ಣ್ಯಾಳಜನದಹೃದಯಾಂಧಕಾರದ । ಹೊಳಕೆಯೊಳ್ ತಾನೆನುತಿರಲು ನಡೆತಂದನಾದನುಜ ॥೨೧॥ ಪಾಳೆಯವ ಹೊಕ್ಕನು ಘಟೋತ್ಕಚ । ನಾಳುಸಹಿತಯ್ಯಂಗೆ ನಮಿಸಿದ । ನೂಳಿಗವ ಹೇಳೆನಗೆ ಬೆಸಸಾ ರಾಜಕಾರ್ಯವನಾ ॥ ವೀಳೆಯವ ತಾಯೆನಲು ನಗುತಿಪ್ಪ । ಶೀಲವಿನಯಕೆ ಮೆಚ್ಚಿದನು ಬಲು । ದೋಳಿನಲಿ ಸೆಳೆದಪ್ಪಿ ಮುಂಡಾಡಿದನು ನಂದನನ ॥೨೨॥ ಮಗನೆ ಲಂಕೆಗೆ ಪೋಗುವಾನವ । ರಿಗೆ ಮಹೋದಧಿಗಮ್ಯವಲ್ಲತಿ । ವಿಗಡತನ ಬೇಡಲ್ಲಿ ವಿನಯದಲೆನ್ನ ಕಾರಿಯವ ॥ ಸೊಗಸಿ ತೇಸಾಮದಲಿ ಕಪ್ಪವ । ತೆಗೆವುದವಗಡಿಸಿದೊಡೆ ಬಳಿಕಲ್ಲಿಗೆ ಸರಾಳಿಗಳವೆ ವಿಘಾತಿಗೆ ದೋಷವಿಲ್ಲೆಂದ ॥೨೩॥ ಎನೆ ಹಸಾದವ ಹಾಯ್ಕಿ ಭೀಮನ । ತನಯ ಕಳುಹಿಸಿಕೊಂಡು ತೆಂಕಲು । ಮನಟವುನ್ನಿಪೆ ಬಂದರಾಮೇಶ್ವರದ ಶಿವಗೃಹಕೆ ॥ ವಿನಯ ಮಿಗೆ ಪೊಡವಂಟು ರಘುನಂ । ದನನ ಕೀರ್ತಿಸ್ತಂಭಡಂಬರ । ವೆನಿಪ ಸೇತುವ ಕಂಡು ನಡೆದನು ತೆಂಕಮೊಗವಾಗಿ ॥೨೪॥ ತೋರಲತ್ತಿದೂರದಲಿ ಲಂಕೆಯ । ಮೂರುಶಿಖರದ ದುರ್ಗವುದಧಿಗೆ । ವಾರಿದಧಿಯೆನೆ ಮೆರೆದುದಂದು ಮಣಿಪ್ರಭಾವದಲಿ ॥ ನೂರು ಯೋಜನ ಸೇತುಮೂಲವ । ಮೀರಿ ನಡೆದನು ಬಡಗವಾಗಿಲ । ಸೇವಗಳಿನ ಪಡುಮೊಗವ ದಾಟಿದನು ಮಲದಲಿ ॥೨೫॥ ಕೇರಿಕೇರಿಗಳೊಳಗೆ ನಿಜಪರಿ । ವಾರಸಹಿತ ವೃಕೋದರಾತ್ಮಜ । ನಾರವನು ತಾನಾರೆನಲು ನಡೆತಂದ ನೊಲವಿನಲಿ ॥ ವೀರದಾನವವರ್ಗದಲಿ ಬಹ । ತೋರಹತ್ತನ ಕಂಡಪೂರ್ವವಿ । ಕಾರವಾನಿಸನಲ್ಲೆನುತ ಮುತ್ತಿದುದು ಪೌರಜನ ॥೨೬॥ ಬಂದನರಮನೆಗಾಗಿ ಬಾಗಿಲ । ಮುಂದಣೆಡಬಲಹೇಮವೇದಿಯ । ಸಂದಣಿಯ ಜನ ನೋಡಲೆಂದನು ದೋರಪಾಲರಿಗೆ ॥ ಇಂದು ಸಾವುತ್ತರದ ಭೂಮಿಪ । ರಿಂದ ಬಂದೆವು ಹೇಳು ನಿಜಪತಿ । ಗೆಂದೊಡವ ಬಂದನು ವಿಭೀಷಣದೇವನೋಲಗಕೆ ॥ ಜೀಯ ಬಿನ್ನಹ ಬಂದನುತ್ತರೆ । ರಾಯನಟ್ಟಿದ ದೂತನೆನೆ ತ । ಪ್ಪಾಯಿತೇ ಹೊಗಿಸೆನಲು ಕರೆದನು ಕಲಿಘಟೋತ್ಕಚನ ॥ ವಾಯು ತನುಜನ ಸುತನು ತನ್ನಪ । ಸ್ಥಾಯಿತರು ಸಹಿತೊಳಗೆ ಹೊಕ್ಕನ । ಪಾಯಿಯಲಿ ನಡೆತಂದು ಕಾಣಿಕೆಗೊಟ್ಟು ಪೊಡವಂಟು ॥೨೮॥ ಬಿಗಿದ ಮರಕತಮಣಿಯ ನೆಲಗ । ಟ್ಟುಗಳ ಹವಳದ ಹಲಗೆಗಳ ಮಾ । ಳಿಗೆಯ ವೈಡೂರ್ಯದ ಕವಾಟದ ವಜ್ರಭಿತ್ತಿಗಳಾ ॥ ಹೊಗರಿಡುವ ಹರಿನೀಲಮಣಿವೇ । ದಿಗಳ ಮುತ್ತಿನಲಂಬಳದ ಲೋ । ವೆಗಳ ಕಾಂತಿಯ ಲಳಿಯಲಹರಿಯೊಳಿದ್ದನಸುರಾರಿ ॥೨೯॥ ಇತ್ತ ಬಾರೈ ಕುಳ್ಳಿ

ರೆತ್ತಣ । ದೆತ್ತ ಬರವಾರೆಟ್ಟಿದರು ನೀ । ವೆತ್ತಣವರೇನೆಂದು ನಿಮ್ಮಭಿಧಾನವೇನುಸುದ ॥ ಬಿತ್ತ
ರಿಸಿ ಹೇಳೆನಲು ಕೈಮುಗಿ । ಯುತ್ತ ನುಡಿದನು ರಾವಣಾನುಜ । ಚಿತ್ತವಿಸುವುದೆಮ್ಮ ಖಳ ಪೂರ್ವೋ
ತ್ತರದ ಸಂಗತಿಯ ॥೩೦॥ ಸೋಮವಂಶದಲರಸುಗಳು ನಿ । ಸ್ಸೀಮಬುದ್ಧರು ಪಲಬರದರೊಳು ।
ಭೂಮಿಗಧಿಪತಿಪಾಂಡುವಾತಂಗೈವರಾತ್ಮಜರು ॥ ಆಮಹೀಪತಿ ಧರ್ಮನಂದನ । ಭೀಮಫಲುಗುಣ
ನಕುಲನಲ್ಲಿ ಸ । ನಾಮ ಸಹದೇವಾಖ್ಯನಿನಿಬರು ಚಿತ್ತವಿಸಿ ಯೆಂದ ॥೩೧॥ ಅರಸನೆಂದೊಡೆ ಸಕಲಧರ್ಮ
ಕೆ । ಕರಚರಣವಾದಂತೆ ಯಾತನ । ಕಿರಿಯರಿಹರು ಚತುರ್ವಿಧೋಪಾಯ ಸ್ವರೂಪದಲಿ ॥ ಸುರಮು
ನಿಯ ಮತದಿಂದ ಯಾಗೋ । ತ್ಕರುಷಕಾದುದು ಬುದ್ಧಿ ಜನಪಾ । ಧ್ವರದ ದಿಗ್ವಿಜಯಾಭಿಸಂಧಿಗೆ
ಮಾಡಿದನು ಮನವ ॥೩೨॥ ಬಡಗಲರ್ಜುನ ನುತ್ತರಾಬ್ಧಿಯ । ತಡಿಯನೆಲಪರಿಗಂತ ವಸ್ತುವ ।
ಜಡಿದು ತಂದನು ಮೂಡಲಾಕರಿಸಿದನು ಕಲಿಭೀಮ ॥ ಪಡುವಲರ್ಜುನನನುಜತೆಂಕಣ । ಕಡೆಗೆ ಸಹದೇ
ವಾಖ್ಯನೀಪರಿ । ನಡೆಯುತಿದ್ದನು ತಾ ಘಟೋತ್ಕಚಭೀಮಸುತನೆಂದ ॥೩೩॥ ಅರಸನೊಂದು ನಿಮಿತ್ತ
ದೇಶಾಂ । ತರಪರಿಭ್ರಮಣದಲಿ ವಿಪಿನಾಂ । ತರದೊಳಿರೆ ಬಂದನು ಹಿಡಿಂಬಕನೆಂಬಸುರಪತಿ ॥
ಕೆರಳಿಬಿದೊಡಾ ಭೀಮನಾತನ । ನೊರಸಿದನು ಖಳನನುಜೆಯಾತಂ । ಗರಸಿಯಾದಳು ಸತಿಹಿಡಿಂಬಿಕೆ
ಮಾತೆ ತನಗೆಂದ ॥ ಇನಿಬರಿಗೆ ಪತಿ ದೇವಕೀನಂ । ದನನಘಾಸುರಮಥನ ಮಧುಸೂ । ದನಮು
ರಾಂತಕ ದೈತ್ಯಮರ್ದನ ಭಕ್ತಸುರಧೇನು ॥ ಮುನಿಹೃದಯಪರ್ಯಂಕ ಕರು । ಣಾವನಧಿ ರಾವಣ
ಕಂಠಕಾನನ । ಘನಪರಶು ಶ್ರೀಕೃಷ್ಣನೈವರಜೀವಸಖನೆಂದ ॥೩೪॥ ಕ್ರತುವಿದಸುರಾರಾತಿಗೀ
ಕ್ರತು । ಪತಿ ಯುಧಿಷ್ಠಿರದೂತನಾನಿದ । ರತಿಶಯವ ನೀಬಲ್ಲೆಯೆನೆ ನೋಡಿದನು ತನ್ನವರಾ ॥
ಇತರವಿದಧಿಂದಧಿಕ ಪುಣ್ಯಾ । ಪ್ರತತಿಯುಂಟೇ ರಾಮಚಂದ್ರನ । ವಿತತಕೀರ್ತಿ ತ್ರೇತೆ ಯಾದ್ವಾಪ
ರದಲಾಯ್ತೆಂದ ॥೩೫॥ ತಾವು ಮರ್ತ್ಯರುಪೂರ್ವಯುಗದವ । ರಾವು ತಮ್ಮಂತರವ ನೋಡದೆ ।
ದೇವರೆದೆದಲ್ಲಣದ ಲಂಕೆಯ ತಾವನೀಕ್ಷಿಸದೆ ॥ ಆವುದುಚಿತಾನುಚಿತವೆಂಬುದ । ಭಾವಿಸದ ಗರ್ವಿ
ತರನೋಡಿ । ನ್ನಾವ ಸುದರವೊ ನಾವೆನುತ ಗರ್ಜಿಸಿತು ಖಳನಿಕರ ॥೩೬॥ ನೊಸಲಿನಲಿ ಕಣ್ಣುಳ್ಳ
ಳ್ಳದೇವನು ॥ ಪೊಸೆದು ಲಂಕಾದ್ವೀಪಪತಿಗೆ । ವಿಸುಕಲನ್ನನು ಬಂದು ಕಂಡಪನಲ್ಲ ಪಟ್ಟಣವ ॥
ಬಿಸುಜಸಂಭವನಾದಿದೇಯ । ಪ್ರಸರವಿಂಗೆ ನಡುಗುತ್ತಲಿಪ್ಪವು । ನಸಿಗಳಹಮಾನವರ ಪಾಡೇನೆನುತ
ಗರ್ಜಿಸಿತು ॥೩೭॥ ಕಾಳಗದೊಳಿಂದೆಮಗೆ ದಿವಿಜೇಂ । ದ್ರಾಳಿಯಲಿ ಸಮಭಟರ ಕಾಣೆವು । ಪೇಳ
ವೇ ಮಝು ಪೂತು ಮರ್ತ್ಯರ ಸಹಸವೆಮ್ಮೊಡನೆ ॥ ತೋಳನಳವಿಗೆ ಮಲಿತ ಮೃಗತತಿ । ಜಾಲದಂತಿ
ಹುದೆಂದು ಮಂದಕ । ರಾಳಮತಿಗಳು ನಗಲು ಕಂಡನು ಕಲಿಘಟೋತ್ಕಚನು ॥೩೮॥ ನಾಲಗೆಯ
ನೆಣಗೊಬ್ಬುಗಳಲಿ ಛ । ಡಾಳಿಸಿದರೇನಹುದು ಸಭೆಯಲಿ । ಕಾಳಗದೊಳಿದಿರಾರು ಭೀಮಾರ್ಜುನರ
ಭಾರಣೆಗೆ ॥ ಆಳುತನವಂತಿರಲಿ ಕೃಷ್ಣನ । ಮೌಳಿ ಬೆಸಸಲಿ ಕೇಳ್ವೆನೆನಿಕ । ಟ್ಟಾಳುಗಳ ದೇವನು
ವಿಭೀಷಣನಗುತಲಿಂತೆಂದ ॥೪೦॥ ಕಾಲವಾವುದು ತನ್ನ ಶಕ್ತಿಯ । ಕೀಲುಮೇಲಾವುದು ಸಹಾಯದ ।
ಮೇಲುಕರಗೆ ನೀರ ನೋಡದೆ ಬಯಲಗರ್ವದಲಿ ॥ ಸೋಲುವುದು ಜಗವಿಪಾಪದ ಗತಿ । ಕಾಳಹು
ಮು ಖಳರಲಿಯಲದನುಬ್ಬಾಳುವರು ಬರಿದೆಂದು ಜರೆದನು ತನ್ನ ಮಂತ್ರಿಗಳ ॥೪೧॥ ಅದಲನೀಮಿ

ಪರದಲೀ ಹರಿ । ಯುದಯಿಸಿದನಾಕಾಲದಲಿ ಸಲ । ಹಿದನು ನಮ್ಮನು ಹಿಡಿವನಿವರನು ವರ್ತಮಾನದಲಿ ॥ ಮದದ ದರ್ಪದಲಂಬುಜಾಕ್ಷನ । ಪದವ ಮರೆದೊಡೆ ಪಾತಕದದು । ಗದದಲಿ ಕೆಡಹನೆ ನಮ್ಮನೆಂದು ವಿಭೀಷಣನು ನುಡಿದ ॥೪೨॥ ತರಿಸಿದನು ಭಂಡಾರದಲಿ ಪರಿ । ಪರಿಯ ಪೆಟ್ಟಿಗೆಗಳನು ಕಂಠಾ । ಭರಣಕಂಕಣ ವಜ್ರಮಾಣಿಕಮರಕತಾವಳಿಯ ॥ ಚರಣನೂಪುರಝುಳಪಟಿಗೆಯುಂ । ಗುರುಕಿರೀಟಾಂಗದ ಸುಕರ್ಣಾ । ಭರಣವನು ತೆಗೆಸಿದನು ಭೀಮಕುಮಾರನೊಡನುತ ॥೪೩॥ ನೀಲಮಣಿಕಾಂತಿಗಳ ಹೊಯ್ಲಲಿ । ಕಾಳರಜನಿಯೊಲಾಯ್ತು ಮುತ್ತಿನ । ಧಾಳಧವಳಿಸಲಾಯ್ತು ಚಂದ್ರಿಕೆ ತಮವ ಡೊಕ್ಕರಿಸಿ ॥ ಮೇಲೆ ಝೊಂಪಿಸಿಲಾಯ್ತು ಮಾಣಿಕ । ದೇಳಿಗೆಯ ಲಹರಿಯಲಿ ಪರರ । ತ್ನಾಳಿ ರುಚಿಯಲಿ ಚಂಡಿಯಾಯಿತು ದಿವಸವಂದಿನಲಿ ॥೪೪॥ ತೆಗೆಸಿದನು ಗಜದಂತಮಯ ಪೆ । ಟ್ಟಿಗೆಗಳನು ಕರ್ಪುರದ ತವಲಾ । ಯಿಗಳ ಪವಳದಮಂಚವನು ಮಣಿಖಚಿತರಚನೆಗಳ ॥ ಬಿಗಿದವಜ್ರಪ್ರಭೆಯ ಹೊನ್ನಾ । ಯುಗದಖಡ್ಗಕಟಾರಿಗಳ ಝಗ । ಝಗಿಪ ಹೊಂಗೆಲಸದ ವಿಚಿತ್ರದ ಜೋಡುಸೀಸಕವ ॥೪೫॥ ಗುಳವ ರೆಂಚೆಯ ಹಕ್ಕರಿಕೆಹ । ಲ್ಲಳವ ಮುಕಿಕಾಂಚನಮಯಂಗಳ । ಕೆಲಸಗತಿಗಳ ಹೇಮರೇಖೆಯವಿವಿಧಚಿತ್ರಗಳ ॥ ಬಿಳಿಯಚಾಮರಯಹೊರೆಗಳುರುಹ । ತ್ತಳದ ಕಟ್ಟಿಗೆಬೀಯಟಿಗೆಗಳ ಹದ । ಪಿಲುಕಿದೀಯಶರಾಳಿಗಳ ತಂದಿಳುಹಿದರು ಚರರು ॥೪೬॥ ಬಲಮುರಿಯ ಶಂಖಗಳ ಗಂಧದ । ಬಲುಹೊರೆಯ ಕೃಷ್ಣಾಗರುವಿನೊಟ್ಟಿನ ಸುರಂಗಿನಪಟ್ಟುಪಟ್ಟಾವಳಿಯ ದಿಂಡುಗಳ ॥ ಪ್ರಲಿದೊಗಲ ಕೃಷ್ಣಾಜಿನಂಗಳ । ಹೊಳೆವಹೊಂಗೊಪ್ಪರಿಗೆಚಿತ್ರಾ । ವಳಿಯ ಸತ್ತಿಗೆ ಹೇಮಘಟಸಂತತಿಯನೊಟ್ಟಿದರು ॥೪೭॥ ಕೀಲಿಸಿದನರಮನೆಯ ಹೇಮದ । ತಾಳಮರಹದಿನಾಲ್ಕನಧ್ವರ । ಶಾಲೆಯಿದಿರಲಿ ತೋರಣಸ್ತಂಭಗಳಹವೆಂದು ॥ ಮೇಲೆ ರಾಕ್ಷಸಟಂಕದಚ್ಚಿನ । ಜಾಳಿಗೆಗಳನು ತರಿಸಿ ಕಟ್ಟಿಸಿ । ಮೇಲುಮುದ್ರೆಗಳಿಕ್ಕಿದವು ಕರೆಸಿದನು ಹೊರೆಯವರ ॥೪೮॥ ಕುಲಗಿರಿಯನೊಡಮೀಟಿ ತಮ್ಮಯ । ತಲೆಯೊಳಾನುವಕರ್ಕಶಾಂಗದ । ಕಲುಬಲೆಯ ಪೇರೊಡಲ ಮಿಡುಕಿನ ಕಾಳರಕ್ಕಸರ ॥ ಸೆಳೆದು ಹೊತ್ತರು ಹೊರೆಯನಿವರಿ । ಟ್ಟಳಿಸಿ ಹೊರವಂಟರು ವಿಭೀಷಣ । ಕಳುಹಿದನು ಪವಮಾನಸುತನಂದನನ ಸತ್ಕರಿಸಿ ॥೪೯॥ ದನುಜನಬ್ಧಿಯ ದಾಟಿ ಸಹದೇ । ವನ ಸಮೀಪಕೆ ಬಂದು ರಾವಣ । ನನುಜಮಾಡಿದಬಹುಳಸತ್ಕಾರವನು ಬಿನ್ನವಿಸಿ ॥ ಅನಿಬರನು ಕಾಣಿಸಿದನಾಕಾಂ । ಚನಮಯದ ಹೊರೆ ಲಕ್ಕಸಂಖ್ಯೆಗಳನು ಪವಿತ್ರರಕ್ಕಸರ ಕಂಡಂಜಿದುದು ನೃಪಕಟಕ ॥೫೦॥ ಲಾಲಿಸಿದನಾಖಿಳರನೆತ್ತಿತು ಪಾಳೆಯವ ನಡೆತಂದು ಪಯಣದ । ಮೇಲೆ ಪಯಣವನೈದಿ ಬಂದನು ತಮ್ಮ ಪಟ್ಟಣಕೆ ॥ ವೆಗ್ಗಲೊಗುವಸುಮ್ಮಾನಸಿರಿಯ ಚ । ಢಾಳದಲಿ ತಂದಖಿಳವಸ್ತುವ । ನಾಲಯದೊಳೊಪ್ಪಿಸಿದನವನೀಪತಿಗೆ ಸಹದೇವ ॥೫೧॥

ಅಂತು ಸಂಧಿ ೫ಕ್ಕೆ ಪದ ೩೫೩ಕ್ಕಂ ಮಂಗಳಮಸ್ತು.

ಆರನೆಯ ಸಂಧಿ.

ಸೂಚನೆ| ನಕುಲ ಪಶ್ಚಿಮದೆಸೆಯ ಭೂಪಾ | ಲಕರ ಗೆಲಿದನು ನೆರೆದ ರತ್ನ
ಪ್ರಕರದಿಂದಳಕಾಪುರಿಗೆ ಮಿಗಿಲಾಯ್ತು ನೃಪನಗರ ||

ಕೇಳು ಜನಮೇಜಯ ಧರಿತ್ರೀ | ಪಾಲ ಪಶ್ಚಿಮದೆಸೆಯ ಭೂಮೀ | ಪಾಲಕರ ಮೇಲೆತ್ತಿ ನಡೆದನು ನಕುಲನೊಲವಿನಲಿ || ಧಾಳಿ ಹರಿದುದು ಮರುಮಯವನನೀ | ಪಾಳರೋಹಿತ್ರರೆಂದೆನಿಪ ಭೂ | ಪಾಲಕರ ಮುರಿದವರ ಸಪ್ತಾಂಗವ ವಿಭಾಡಿಸಿದ ||೧|| ಹೇಮಕನ ಸ್ಕಂಧಕನೆಂಬಸ | ನಾಮರನು ಮುರಿದನು ಕಳಿಂಗದ | ಭೂಮಿಪರ ಸದೆದನು ತ್ರಿಗರ್ತರ ಶಿಬಿಯ ಸಂತತಿಯ || ಹೇಮಮಾತ್ರವನುಳುಹದವರ | ಭೂಮಿಗಳನವರ್ಗಿತ್ತು ವಸ್ತುಸ್ತೋಮವನು ನೆರಹಿದನು ನಡೆದನು ಮುಂದೆ ಪಶ್ಚಿಮಕೆ ||೨|| ಮುರಿದನಗ್ರದ ಚೇಕಿತಾನರ | ನೆರಗಿದನು ಬರ್ಬರ ತುರುಷ್ಕರ | ನೊರಗಿಸಿದನಾಹವದೊಳಾಭೀರಕರ ಬಾಹ್ಲಿಕರ || ಸೆರೆಯ ಹಿಡಿದನು ಪಾರ್ವತೇಯರ | ನುರುಕುಗೊಳಿಸಿದ ಚೀನರಂಬ | ಷ್ಠರನು ಸಿಂಧುಸರಸ್ವತೀತೀರದ ಮಹೀಶ್ವರರ ||೩|| ರಣದ ಸಂಕೇತಗಳೊಳುತ್ಸವ | ರಣಸಮರ್ಥರ ಹಿಡಿದನು ಚಾ | ರಣರ ಖರ ನಾಣರನು ಪುಷ್ಕರವರನಿವಾಸಿಗಳ || ಹಣಿದನಲ್ಲಿಂದತ್ತ ಮಿಗೆ ಪಾ | ವಣಟಗಂತದಲದ್ದುಸರಪ | ಟ್ಟಣದವರ ಪಂಚನದ ಭೂಮಿಯ ಭೂಮಿಪರ ಗೆಲಿದ ||೪|| ಖ್ಯಾತಿಕರ ವರ್ಣ್ಣ ಕಟಕರ ಕೃತ | ಯಾತಿಕರ ಯೌಧೇಯ ಸೌವೀ | ರಾತಿಶಯ ಬಡಹಾರರ ಮಳ ದ್ವಾರಪಾಲಕರ || ಘಾತಿಸಿದನವರುಗಳ ವಿತ್ತ | ವ್ರಾತವನು ಹೇರಿಸಿದನೆಡಬಲ | ದಾತಗಳನಪ್ಪಳಿಸಿ ತೆಗೆದನು ಸಕಲವಸ್ತುಗಳ ||೫|| ಮಾವನಲ್ಲಿಗೆ ಬಂದೊಡಾ ಮಾ | ದ್ರಾವನೀಪತಿ ಶಲ್ಯ ಮಿಗೆ ಸಂ | ಭಾವಿಸಿದನೊಲಿದಿತ್ತನೀತಂಗಖಿಳವಸ್ತುಗಳ || ತೀವಿದರು ಭಂಡಿಯಲಿ ಮುಂದಣ | ಚಾವಟೆಯ ಚಪಳರಿಗೆ ಹರಿಯೆ ನೃ | ಪಾವಳಿಗಳಲ್ಲಲ್ಲಿ ತೆತ್ತರು ಕಂಡುವಸ್ತುಗಳ ||೬|| ತಳಿತ ಬಿಟ್ಟುದು ಸೇನೆ ಪಡುವಣ | ಜಲಧಿಯ ಕರವಳಿಗಳಲಿ ಕೇವಳಿಸಿದರು ಕೊಳ್ಳಣಿಗೆಯಲಿ ಕೊಂಡರು ಸುವಸ್ತುಗಳ || ಕಳಿಸಿದರು ಹಿಮಗಿರಿಯ ಮಾಲೆಗೆ | ನಿಲುಕಿ ಸಕಲಮ್ಲೇಚ್ಛಭೂಪಾ | ವಳಿಯ ಭಂಗಿಸಿ ಹೇರಿಸಿದನೊಂಟೆಗಳಲಾಧನವ ||೭|| ಹೇರಿದವು ಬಹುಧನವನೊಂಟೆಗ | ಳಾರುಸಾವಿರ ಮಿಕ್ಕವಸ್ತುವ | ಹೇರಿದವು ಯೆತ್ತುಗಳ ಸೂಡಿದ ಭಂಡಿಸಾವಿರವು || ಆರುಲಕ್ಷತುರಂಗಗಳು ಷ್ಟ್ರಗ | ಳಾರುಕೋಟಿಗಳಾನೆಗಣನೆಯ | ಮೀರಿದವು ಮೃಗಪಕ್ಷಿಕೋಣನ ಕುರಿಯ ಹಿಂಡುಗಳು ||೮|| ಮರಳಿತೀತನ ಸೇನೆ ಬಂದನು | ಪುರಕೆ ಕಂಡನು ಧರ್ಮಪುತ್ರನ | ಚರಣಕೆರಗಿದನಖಿಳವಸ್ತುವ ಬೇರೆ ತೋರಿಸಿದ || ಅರಸನುತ್ಸವವನು ವೃಕೋದರ | ನರನಕುಲಸಹದೇವನಂತಃ | ಪುರದ ಹರುಷದ ಸಿರಿಯನದನೇವಣ್ಣಿಸುವೆನೆಂದ ||೯|| ಕಳವು ಹುಸಿ ಹಾದರ ವಿರೋಧ | ಸ್ಖಲಿತವಾರಡಿ ಬಂದಿ ದಳವುಳ | ಬೆಳುಗವತೆಯನ್ಯಾಯ ಪರಿಭವತಕ್ಕುಡೊಳ್ಳಾಸ || ಹಳಿವುವಂಚನೆ ಜಾತಿಸಂಕರ | ಕೊಲೆಯುಡಾವರವಿ

ಕೃತಿವಮಾಯಾ । ವಳಿಗಡಗಿದಪಿಯುಧಿಷ್ಠಿರನೃಪನರಾಜ್ಯದಲಿ ॥೧೦॥ ನೃಗನ ಭರತನ ದುಂದುಮಾ
ರನ । ಸಗರಪೂರೂರವನನಾಭನ । ಮಗನ ನಹುಷನ ಕಾರ್ತವೀರ್ಯನ ನಳನ ದಶರಥನ ॥ ಹಗಲಿರುಳು
ವಲ್ಲಭರವಂಶದ । ವಿಗಡರಲಿ ಯಮಸೂನು ಸರಿಯೋ । ಮಿಗಿಲೊ ಬಲ್ಲವಸಾರೆನಲು ಸಲಹಿದನು
ಭೂತಳವ ॥೧೧॥ ದ್ವಾಪರದ ಮರೆಜವನಿಕೆಯಲಿ । ದ್ವಾಪರವೊ ಕೃತಯುಗವೊ ಧರ್ಮದ । ರೂಪು
ನಾನಾವಿಧದಲವತರಿಸಿತೊ ದಿಗಂತದಲಿ ॥ ಸ್ಥಾಪಿಸಿತು ಪಶ್ಚಾತ್ಪ್ರಮದ ಧ । ರೋಪಚಯವೆರಡಂ
ಘ್ರಿಮುರಿದು ವಿ । ರೂಪವಾದುದುಧರ್ಮಹೀ ಧರ್ಮಜನರಾಜ್ಯದಲಿ ॥೧೨॥ ಬಡಗಲುತ್ತರಕುರುಗಳಿ
ತ್ತಲು । ಪಡುವಲುದಧಿವಿಭೀಷಣನಪುರ । ಗಡಿಕೃತಾಂತನದೆಸೆಗೆಮೂಡಲುದಿನಪನುದಯಾದ್ರಿ ॥
ಪೊಡವಿಯಿದರಲಿ ಯಮಜನಾಜ್ಞೆಗೆ । ನಡುಗುವುದು ರಾಯಂಗೆ ತೆತ್ತುದು । ಗಡ ಸುವಸ್ತುವನೇನಸಾ
ಧ್ಯವು ಕೃಷ್ಣನೊಲಿದವಂಗೆ ॥೧೩॥ ಇಳೆಯ ಸಪಿದರು ಮೂರುಯೋಜನ । ವಳಯದಲಿ ಪಡಿಯಗಳು
ಕೋಟಾ । ವಳಯ ಸುಯ್ದಾನದಲಿ ಹೊಯ್ದರು ರತ್ನಕಾಂಚನವ ॥ ಕೆಲದೊಳ್ಳಗಾವುದದೊಳಿ
ಕ್ಕಿದ । ತಳಿಯ ಮಧ್ಯದೊಳಖಿಳವಸ್ತು । ವಳಿಯನೊಟ್ಟಿದರದರ ಕೆಲದಲಿ ರಾಯಕೇಳೆಂದ ॥೧೪॥
ಹತ್ತುಯೋಜನವಳಯದಲಿ ಮಿಗೆ । ಸುತ್ತುವೇಲಿಯ ಮಧ್ಯದಲಿ ಹಯ । ಮತ್ತಗಜರಥಗೋಮಹಿ
ಷಿವರಸ್ತ್ರೀನಿಭದ ಚಯಕೆ ॥ ಉತ್ತಮಾಂಗನೆಯರಿಗೆ ಭವನಗ । ಳಿತ್ತ ಬೇರೆರಮಾಯ್ತು ನೃಪಯಾ ।
ಗೋತ್ತಮಕೆ ಪರುಠವಿಸಿದರು ಭೂಪಾಲಕೇಳೆಂದ ॥೧೫॥ ಬಳಿವಸೋದೆಯ ಭಾವಿ ನೂರರ । ವಳಯ
ತುಂಬಿತು ತೈಲಘೃತಮಧು । ಗಳಲಿ ವರಗುಡಶರ್ಕರಾದಿಯ ಕಣಜಕೋಟಿಗಳು ॥ ಕಳವೆಯಕ್ಕಿಯ
ಗೋಧಿಕಡಲೆಯ । ಪೊಳಕರಾತಿಯದೇಸುಯೋಜನ । ದಳತೆ ಯೆಂದಾರವರೆಂದನು ಮುನಿನೃಪಾ
ಲಂಗೆ ॥೧೬॥ ನೆರೆದುಪರ್ವತವನಂತವವನೀ । ಶ್ವರರು ಮಾಮಾಡರು ಚತುಸ್ಸಾ । ಗರದ ಮಧ್ಯದಲಾಜ್ಞೆ
ಸಂದುದು ಧರ್ಮನಂದನನ ॥ ಕರೆಸು ಚಕ್ರವರ್ತಿ ಮುಹೂರ್ತಾ । ಧ್ವರಕೆ ಸಮಯವಿದೆಂದು
ಪಾರಾ । ಶರಿಯ ಧೌಮ್ಯರು ಮಂತ್ರಶಾಲೆಯೊಳೆಂದರವನಿಪಗೆ ॥೧೭॥ ಹೋಗು ಫಲುಗುಣ
ಕಂಸಮಥನನ । ಬೇಗ ಬಿಜಯಂಗೈಸಿ ತಾ ನೃಪ । ಯಾಗವಾತನ ಹೊರೆ ಮದೀಯಜಯಾಭಿ
ವೃದ್ಧಿಗಳು ॥ ಆಗಳೇ ರಥವಾದ ಪಟ್ಟೆಯ । ನಾಗಕೇತನವೆನಲು ಮನವನು । ವೇಗದಲಿ ಕಲಿ
ಪಾರ್ಥ ಬಂದನು ಕಂದನಾಚ್ಯುತನ ॥೧೮॥ ಬಿನ್ನಹಿಸಿದನು ರಾಜಸೂಯದ । ಸನ್ನುವಸ್ತುನಿಧಾನವನು
ಮೇ । ಲಿನ್ನು ದೇವರು ಬಲ್ಲಿರುತ್ತರಕಾರ್ಯಸಂಗತಿಯ ॥ ನಿನ್ನ ಕೃಪೆಯಲಿ ರಾಜಮುಖಿ ನಿ । ಷ್ಪನ್ನ
ವಾದರೆ ಬೊಪ್ಪನಿಂದ್ರನ । ಮನ್ನಣೆಯ ಪೈಸೋಂಕಿನೋಲಗ ಸುಲಭವಹುದೆಂದ ॥೧೯॥ ಕರೆಸಿ
ಯಾದವನಾಯಕರ ಸಂ । ವರಣೆಯನು ನಿಜಪುರದ ರಾಹಿಂ । ಗಿರಿಸಿ ಬಲದೇವಂಗೆ ನೇಮಿಸಿ ಸಕಲರ
ಕ್ಷಣವ ॥ ತರಿಸಿ ಭಂಡಾರದಲಿ ವಿವಿಧಾ । ಭರಣವಸನಾದಿಗಳ ಹೇರಿಸಿ । ಹರಿ ಧನಂಜಯನೊಡನೆ
ಬಂದನು ಬಂಧುಜನಸಹಿತ ॥೨೦॥ ಇದಿರುವಂದನು ಧರ್ಮಸುತಹರಿ । ಪದಪಯೋಜವಲೆರಗಿದನು ನಿನ ।
ಗಿದು ವಿನೋದವಲೇ ವಿಮುಕ್ತಗೆ ಭಕ್ತಸಂಸ್ತರಣ ॥ ಕುದಿದು ಮರುಗಿದವರಸಿ ನಿನ್ನಯ । ಪದವ
ಕಾಣದೆ ಸುತಿಗಳೆಮ್ಮಯ । ಸದನವಖಿಳಾಮ್ನಾಯನಿಕರವನೇಡಿಸುವುದೆಂದ ॥೨೧॥ ನಗುತ ಸಾಕೇ
ಳೆಂದು ರಾಯನ ।ತೆಗೆದು ತಳ್ಕಿಸಿ ಕೈಯತಳುಕಿನೊ । ಳಗಧರನು ನೃಪಸಭೆಗೆ ಬಿಜಯಂಗೈದನೊಲವಿನಲಿ ॥

ಮುಗಿದಕರದಲಿ ವ್ಯಾಸಧೌಮ್ಯಾ । ದಿಗಳು ಮೈಯಿಕ್ಕಿದರಖಿಳಮಂ । ತ್ರಿಗಳು ಸಚಿವರು ನೆರೆದರಾ ಲೋಚನೆಯಭವನದಲಿ ॥ ಕಳುಹಿದನು ನಾನಾನೃಪರ ನಂ । ದಲಿಕೆ ದೂತರನಖಿಳ ಋಷಿಸಂ । ಕುಲಕೆ ಶಿಷ್ಯರ ಪರುಠವಿಸಿದನು ಹಸ್ತಿನಾಪುರಿಗೆ ॥ ಕಳುಹಿದನು ನಕುಲನನು ಬಳಿಕಿ । ತ್ತಲು ನೃಪಾಧ್ವರಶಾಲೆ ಗಲ್ಲಿಯು । ನೆಲನ ಶೋಧಿಸಿ ಕರೆಸಿದರು ಬಹುವಿಧದ ಶಿಲ್ಪಿಗರ ॥೨೩॥ ಮಯನ ಮತದಲಿ ವಿಶ್ವಕರ್ಮನ । ನಯವಿವೇಕದಲಮಲಮುಖಶಾ । ಲೆಯನು ನಿರ್ಮಿಸಿದರು ಸುಲಕ್ಷಣಶಾಸ್ತ್ರಸೂತ್ರದಲಿ ॥ ನಿಯತಪತ್ನೀ ಶಾಲೆ ಜನವೇ । ದಿಯವರಾಂತರವೇದಿ ಮುಖವೇ । ದಿಯ ಬಹಿರ್ವೇದಿಗಳನಳವಡಿಸಿದರು ಮಹಿಳದಲಿ ॥೨೪॥ ಬಿಗಿದಬಿಂಗಾರಿಗಳ ಮೇಲ್ಕ । ಟ್ಟುಗಳ ಮಣಿಮಯಸೂಸಕದ ಲೋ । ವೆಗಳ ಮುಖಮಂಟಪದ ಚೌರಿಯ ನವಫಲಾವಳಿಯ ॥ ಹೊಗರನೀಲದ ವಪಯಿಯ ನೆಲಗ । ಟ್ಟುಗಳ ಚಪ್ಪರವದೆಡೆಯೆತ್ತೆಯ ಚಾ । ಕಿಗೆಯ ಚತುರಂಗದ ವಿಚಿತ್ರದರಚನೆ ಚೆಲುವಾಯ್ತು ॥೨೫॥ ಪುರದ ಹೊರವಳಯದಲಿ ಯಮುನಾ । ವರನದಿಯ ತೀರದಲಿ ಧರಣೀ । ಶ್ವರನಗರವನೆ ಮಾಡಿದರು ನವರತ್ನಮಯವಾಗಿ ॥ ಸುರಪುರದ ಮಾರಾಂಕಭುಜಗೇ । ಶ್ವರನ ಭೋಗಾವತಿಯ ಶಿಲ್ಪದ । ಗುರುವೆನಿಸಿತೀನಗರ ನಾರಾಯಣನ ಕರುಣದಲಿ ... ... ॥೨೬॥

ಅಂತು ಸಂಧಿ ೬ ಕ್ಕೆ ಪದ ೩೮೧ ಕ್ಕಂ ಮಂಗಳಮಸ್ತು

ಏಳನೆಯ ಸಂಧಿ.

ಸೂಚನೆ॥ ಸಕಲಋಷಿಮುಖ್ಯರು ಮಹೀಪಾ । ಲಕರು ನೆರೆದರು ವಿಶ್ವಭೂತ ।
ಪ್ರಕರ ತಣಿದುದು ಧರ್ಮಪುತ್ರನ ರಾಜಸೂಯದಲಿ ॥

ಕೇಳು ಜನಮೇಜಯಧರಿತ್ರೀ । ಪಾಲ ದೂತರು ಹೋದರವನೀ । ಪಾಲರಿಗೆ ಋಷಿಗಳಿಗೆ ಭೂಸುರವೈಶ್ಯಶೂದ್ರರಿಗೆ ॥ ಹೇಳಲೇನದ್ಭುತವನಂಬುಧಿ । ವೇಲೆಯುದ ಮಧ್ಯದ ಸಮಸ್ತಜ । ನಾಳಿ ನೆರೆದುದು ವಿಲಸದಿಂದ್ರಪ್ರಸ್ಥನಗರಿಯಲಿ ॥೧॥ ಚೋಳಸಿಂಹಳಪಾಂಡ್ಯಕೇರಳ । ಮಾಳವಾಂಧ್ರಕರೂಷಬರ್ಬರ । ಗೌಳಕೋಸಲಮಗಧಕೇಕಯಹೂಣಸೌವೀರ ॥ ಲಾಳಯೋನೆಗಚೀನಕುರುನೇ । ಪಾಳಶಿಬಿಕಾಶ್ಮೀರಭೋಟವ । ರಾಳವರದೇಶಾಧಿಪತಿಗಳು ಬಂದರೊಗ್ಗಿನಲಿ ॥೨॥ ಭೂರಿಭೂರಿಶ್ರವನು ಬಾಹ್ಲಿಕ । ಶೂರಸೇನ ಕಳಿಂಗ ಸಲೆ ಗಾಂ । ಧಾರ ಸೌಬಲ ಸೋಮದತ್ತ ಸುಷೇಣ ಭಗದತ್ತ ॥ ವೀರಪೌಂಡ್ರಕನೇಕಲವ್ಯನು । ರಾರಿಗಳು ಶಿಶುಪಾಲಯವನರು । ಮಾರವೌರವದಂತವಕ್ರರು ಬಂದರೊಗ್ಗಿನಲಿ ॥೩॥ ಸಕಳದಳಮೇಳಾಪದಲಿ ಭೀ । ಷ್ಮಕನು ರುಗ್ಮನು ಚಿತ್ರರಥನಾ । ಲ್ವಕನು ರೋಹಿತರೋ

ಚನರಾನಸಮುದ್ರಸೇನಕರು ॥ ಪ್ರಕಟಬಲರುತ್ತರದಿಶಾಪಾ । ಲಕರು ಕುರುಪರಿಯಂತ ರಾಜ । ಪ್ರಕರ ನೆರೆದುದು ವಿಳಸದಿಂದ್ರಪ್ರಸ್ಥನಗರಿಯಲಿ ॥೪॥ ದ್ರುಪದಧೃಷ್ಟದ್ಯುಮ್ನರಣಲೋ । ಲುಪಯುಧಾಮನ್ಯುತ್ತಮೌಂಜಸ । ರುಪಚಿತರು ಬಂದರು ಸಗಾಢದಲಿವರಬಾಂಧವರು ॥ ಕೃಪಜಯದ್ರಥಭೀಷ್ಮಮಾದ್ರಾ । ಧಿಪತಿಕರ್ಣದ್ರೋಣಮೊದಲಾ । ದಪರಿಮಿತಬಲಸಹಿತ ಕೌರವರಾಯ ನಡೆತಂದ ॥ ಗುರುತನೂಜಸುಶರ್ಮವಂಗೇ । ಶ್ವರಬೃಹದ್ರಥಭೀಮರಥದ್ರು । ಮರುಷಣರು ವರಭಾನುದತ್ತವಿಕರ್ಣದುಸ್ಸಹರು ॥ ವರವಿವಿಂಶತಿದೀರ್ಘಭುಜದು । ರ್ದಶರುದುರ್ಜಯಶಂಕುಕರ್ಣಾ । ದ್ಯರುಸಹಿತದುಶ್ಶಾಸನನು ಹೊರವಂಟನರಮನೆಯ ॥೬॥ ಬಂದುದೆ ಚತುರಂಗವವನಿಪ । ವೃಂದವವರವರುಚಿತವಿಗಿಲಿಪ । ರಂದುಭೀಷ್ಮದ್ರೋಣಕೃಪಧೃತರಾಷ್ಟ್ರರಿಗೆ ನಮಿಸಿ ॥ ವಂದನೀಯರಿಗೆರಗಿ ಸಮರಿಗೆ । ನಿಂದು ಕುಶಲಕ್ಷೇಮಸಂಗತಿ । ಯಿಂದ ಸತ್ಕರಿಸಿದನು ನೃಪ ವಿದುರಾದಿಬಾಂಧವರ ॥೭॥ ಜನಪ ಕೇಳೀಚೆಯಲಿ ಬಂದುದು । ಮುನಿಗಳಾಂಗಿರ ಕಣ್ವ ಭೃಗು ಜೈ । ಮಿನಿಸುಮಂತ ವಸಿಷ್ಠ ಶೌನಕ ಗಾರ್ಗ್ಯ ಬೃಹದಶ್ವ ॥ ಸನಕ ಶುಕ ಜಾಬಾಲಿ ತಿತ್ತಿರಿ । ವಿನುತಮಾರ್ಕಂಡೇಯ ಮುದ್ಗಲ । ತನಯರೋಮಶಕುತ್ಸವತ್ಸರು ರೈಭ್ಯನಾರದರು ॥೮॥ ಚ್ಯವನ ಗೌತಮವೇಣುಜಂಘು । ಪ್ರವರ ಕೌಶಿಕ ಸತ್ಯತಪ ಭಾ । ರ್ಗವ ಸುಮಾಲಿ ಸುಮಿತ್ರ ಕಾಶ್ಯಪ ಯಾಜ್ಞವಲ್ಕ್ಯಋಷಿ ॥ ಪವನಭಕ್ಷಕ ದೀರ್ಘತಪಗಾ । ಲವನು ತಿತಶಾಂಡಿಲ್ಯಮಾಂಡ । ವ್ಯವರರೆಂಬಮಹಾಮುನೀಂದ್ರರು ಬಂದರೊಗ್ಗಿನಲಿ ॥೯॥ ದೇಶದೇಶಾಂತರದ ವಿದ್ಯಾಭ್ಯಾಸಿಗಳು ಮೊದಲಾಗಿವರ್ಣನಿ । ವಾಸಿಗಳು ಫಲಮೂಲದಧಿಘೃತದುಗ್ಧಭಾರದಲಿ ॥ ಆಸಮಸ್ತಮಹೀತಳದ ಧನ । ರಾಶಿ ಜನಸಂತತಿಯನೇಕನಿ । ವಾಸದಲಿ ನೆರೆ ಕಾಣಲಾಯಿತು ನೃಪತಿ ಕೇಳೆಂದ ॥೧೦॥ ವಿಕಳವಾಮನಮೂಕಬಧಿರಾಂ । ಧಕರು ಮಾಗಧಸೂತವಂದಿ । ಪ್ರಕರಮಲ್ಲಮಹೇಂದ್ರಜಾಲಿಮಹಾಹಿತುಂಡಿಕರು ॥ ಸುಕವಿತಾರ್ಕಿಕವಾಗ್ಮಿವೈತಾ । ಳಿಕಸುಗಾಯಕಕಥಕಮಾರ್ದಂ । ಗಿಕರು ನೆರೆದುದು ನಿಖಿಳಯಾಚಕನಿಕರ ಸಂದಣಿಸಿ ॥೧೧॥ ಕರೆಸಿ ಭೀಷ್ಮಂಗೆರಗಿ ನುಡಿದನು । ಧರಣಿಪತಿಬಾಲಕರು ನಾವ । ಧ್ವರವಿದಗ್ಧದರಾಜಸೂಯ ಮಹಾಮಹೀಶ್ವರರು ॥ ನೆರೆದುದಖಿಳದ್ವಿಜಜನವಾ । ದುಸಲುಹಿಯೆನು ಹೆಚ್ಚುಕುಂದಿನ । ಕುರುಹನೀಕ್ಷಿಸಲಾಗದೆಂದನು ಮುಗಿದು ಕರಯುಗವ ॥೧೨॥ ಚಿಂತೆಯೇಕೈ ಕೃಷ್ಣನಾರೆಂ । ದೆಂತು ಕಂಡೆ ಚತುರ್ದಶಾಂಶದ । ತಂತುರೂಪನು ತಾನೆ ಯೆನ್ನದೆ ನಿನಗೆ ಶ್ರುತಿವಚನ ॥ ತಂತುವಿನ ಪಟವೃತ್ತಿಕೆಯಘಟ । ದಂತೆ ಜಗವೀತನಲಿ ತೋರ್ಕುಮು । ರಾಂತಕನ ಸುಯ್ದಾನ ನಿನಗಿರಲಂಜಲೇಕೆಂದ ॥೧೩॥ ಕರೆಸು ಧೌಮ್ಯಾದಿಗಳನಿಲ್ಲಿಯ । ಪರುಠವವ ಮಾಡೆಂದು ಭೀಷ್ಮನು । ಗುರುಸುತ ಕೈಕೊಂಡನೆಲ್ಲರ ಮೇಲುನೋಟವನು ॥ ಅರಸ ಕೇಳ್ ಧೃತರಾಷ್ಟ್ರಬಾಹ್ಲಿಕ । ವರಬೃಹದ್ರಥಸೋಮದತ್ತರು । ಪರಮಪೂಜ್ಯರು ಮಾನನೀಯರು ಯಜ್ಞವಾಟದಲಿ ॥೧೪॥ ಸವನಸಾಧನಸರ್ವಸಂಭಾ । ರವನು ಧೌಮ್ಯನು ತರಿಸಿಕೊಡಿಸುವ । ನವನಿಪತಿಗಳ ಪಾರುಪತ್ಯದ ನೋಟ ಸಂಜಯಗೆ ॥ ವಿವಿಧಋಷಿಯಾಜ್ಞಿಕರು ಮಾಂತ್ರಿಕ । ನಿವಹ ಸಹದೇವಂಗೆ ಭೋಜ್ಯ । ಪ್ರವರದಧಿಕಾರದ ನಿಯೋಗ ಯುಯುತ್ಸುವಿನಮೇಲೆ ॥೧೫॥ ನೆರೆದಭೂಸುರತತಿಯ ನೋಟಕೆ । ಕರೆಸಿ ಕುಳ್ಳಿರಿಸುವನು ಸಾತ್ಯಕಿ । ಭರದಿನೆಂಜಲ ತೆಗೆಸಿ ಸಾರಿಸುವದು ಪಿಕ

ರ್ಣಂಗೆ ॥ ಅರಸ ಕೇಳ್ಭೋಜನದ ಸಮ್ಮಾನಂ । ತರದ ವೀಳೆಯಗಂಧಮಾಲ್ಯಾಂ । ಬರವನೀವಧಿಕಾರ
ದುಶ್ಶಾಸನನ ವಶವಾಯ್ತು ॥೧೬॥ ವಿತತಭೂಸುರದಕ್ಷಿಣೆಗೆ ಗುರು । ಸುತ ನಿಯೋಗಿ ಸಮಸ್ತರತ್ನ ।
ಪ್ರತತಿಗಳನಾರೈದು ತರಿಸುವನಾಕೃಪಾಚಾರ್ಯ ॥ ಘೃತವು ದಧಿ ಮಧು ತೈಲ ಕತ್ತುರಿ । ಸಿತಲವಣ
ಸಂಭಾರಶಾಕೋ । ಚಿತಸುವಸ್ತುವ ಕೊಡುವ ಕೊಂಬಾರೈಕೆ ವಿದುರಂಗೆ ॥೧೭॥ ಅರಸ ಕೇಳ್ಕೈ ಪಾಕ
ಶಾಲೆಯ । ಹಿರಿಯಪಂತಿಗಳಲಿ ಚತುರ್ದಶ । ಕಲಸುಟಿಗೆಗೆ ಪ್ರಿಯಾದುವುವು ಸಂಭಾರವನು ಹೇಳಿ ॥
ಹುವರುಚಿತದ್ರೋಣಿಯಲಿ ಸುರಿ । ಸುರಿದು ಸೇದುವರಾಟಿಳಿಂಗಳೊ । ಳಿರವ ಘೃತಮಧುತೈಲಧಾರಾ
ರಚನೆ ಚಲುವಾಯ್ತು ॥೧೮॥ ಧರಣಿಪತಿ ಕೇಳ್ ದ್ರೋಣ ಮೊದಲಾ । ಗಿರೆ ಸಮಸ್ತಪ್ರಜೆ ಪಿಧಾವಂ ।
ತರಿಗೆ ಭೋಜನಗಂಧಮಾಲ್ಯಾಂಬರವಿಲೇಪನದ ॥ ಉರುನಿಯೋಗಗಳಿಂದ್ರಸೇನನು । ವರವಿಶೋಕನು
ರುಗ್ಮನತಿಬಂ । ಧುರಸಮಿಶಾಕಪತಾಕಸೇನರು ಸೂತರೈವರಿಗೆ ॥೧೯॥ ಅರಸ ಕೇಳ್ಕೈ ಬಳಿಕ ಪೃಷ್ಟ ।
ಶ್ವರುಗಭಿನವ ಗಜರಥಾವಳಿ । ತುರಗಶಸ್ತ್ರಾಸ್ತ್ರಗಳನೀವನಿಯೋಗ ಕರ್ಣನದು ॥ ಕರೆಕರೆದು ಯೋ
ಗ್ಯಾತಿಶಯವರಿ । ವರಿದು ಯೋಷಿಜ್ಜನಕೆ ಮಾದ್ರೇ । ಶ್ವರನು ಕೊಡುವವನಾದನುಭಕೋತ್ಸವದ ಸಿರಿ
ವಿಗಲು ॥ ಸಕಲಮಣಿಕಾಂಚನದುಕೂಲ । ಪ್ರಕರಪೀದುಯೋರ್ಧನನ ವಶ । ನಕುಲನವರವರುಚಿತ
ವೃತ್ತಿಯ ಮಧುರವಚನದಲಿ ॥ ಪ್ರಕಟಸುಮನವನಿಪರ ಸೇನಾ । ನಿಕರದಾರೈಕೆಗಳು ಪಾಂಚಾ । ಲಕನಿ
ಗಾದುದು ರಂಜಿಸಿತು ಪರಿಪಾಟಿಯೊಡ್ಡವಣೆ ॥೨೦॥ ಆದುದನುಪಮ ಕುಂಡವರ್ತ । ವೇದಿಯ ಸಮಿಧಾ
ಪದಲಿ ಹೋತೃಗಳ । ಶೋಧಿತಸ್ರುಕ್ಸ್ರುವಂಗಳಾಸ್ಥಂಡಿಲದ ಸೀಮೆಯಲಿ ॥ ಆದುದಿ ಪರಿಚಾರಕರು ಸಂ ।
ಪಾದಿಸಿದ ಸ್ಮೃತಚರುಪುರೋಡಾ । ಶಾದಿಸಂಭಾರಂಘುವನುವಾಯ್ತು ನಿಮಿಷದಲಿ ॥೨೧॥ ಕರೆಸಿದರು
ಋತ್ವಿಕ್ಕುಗಳನ । ಧ್ವರ್ಯುವಾದನು ಯಾಜ್ಞವಲ್ಕ್ಯನು । ವರಸುಸಾಮಗರಸರುಗಳುದಾತೃಹೋ
ತೃಗಳು ॥ ಪರಮಪೈಲನಿಕಣ್ವವರತಿ । ತ್ತಿರಿಗಳಾಗ್ನೀಧ್ರಾದಿರಾಜಾ । ಧ್ವರನಿಯೋಗಗಳಾಯ್ತು
ವೇದವ್ಯಾಸಾಜ್ಞೆಯಲಿ ॥೨೨॥ ಆಸದಸ್ಯತ್ವವನು ವೇದ । ವ್ಯಾಸ ಕೈಕೊಂಡನು ಮುನೀಂದ್ರರು
ಹಾಸವಾಮದ ಬಕಶೈಲಾಶಾಂಡಿಲ್ಯನಾರದರು ॥ ಭೂಸುರರು ಸಾಮಾಚಕರು ಧರ । ಣೀಶಯಜ್ಞೋ
ಪಕ್ರಮಪವಿ । ನ್ಯಾಸವಲಿ ಬಂದನು ಯುಧಿಷ್ಠಿರನಚ್ಯುತನ ಹೊರಗೆ ॥೨೩॥ ದೇವ ನಿನ್ನಯ ಕರು
ಣಾವಲಿ ಸಕ । ಳಾವನೀಪತಿವಿಜಯಬಹಳಾ । ಧಾರ್ಮವಿಜ್ಞಾನಸಮಾರಂಭಸಿಸ್ತರ ॥ ಈ ವಿಭವ
ವೈಭವ ಸಿಸಗೆ ಸಂ । ಭಾವಿತವೆ ವರರಾಜಸೂಯಕೆ । ದೇವ ದೀಕ್ಷಿತನಾಗು ನೀನೆಂದೆರಗಿದನು ಪದಕೆ
॥೨೪॥ ಮುನಿಮ ಹಿಡಿದೆತ್ತಿದನು ರಾಯನ । ಪಣೆಯನಸುಮಕರದಿನಿಥ ಕಡು । ಗುಣವು ಬಾಯ
ನ್ನಣೆ ಬೇಯೆಂದಪ್ಪಿ ನೈದಿದಡವಿ ॥ ಗುಣಪಮನು ನಿನಗೆಂದು ಕುಲಟನ । ಮುನಿಯ ದೀಕ್ಷಿತನಾಗು
ಮದವಾ । ರಣನೆ ದೀಕ್ಷಿತನಾಗೆನುತ ಬೋಳೈಸಿದನು ಹರಸಿ ॥೨೫॥ ಎನೆ ಹಸಾದವೆನುತ್ತ ಯಮನಂ ।
ದನನು ವೈಶಾಖದ ಚತುರ್ದಶಿ । ದಿನವಲುತ್ತರಪೂರ್ವವೇದಿವರಾಭ್ಯದ್ದೈಕ್ಯದಲಿ ॥ ವಿನುತಪುಣ್ಯಾಹದ
ಮಹಿಮಾ । ಚನೆಯ ನಿಗಮಪವಿತ್ರಜಲಪಾ । ವನನು ಮರುದಿನ ಯಜ್ಞದೀಕ್ಷಿತನಾದನೊಲವಿನಲಿ
॥೨೬॥ ಹುದಿದನವನೀತಾನುಲೇಪದ । ಹೊದೆದ ಕೃಷ್ಣಾಜಿನದ ಹಸ್ತಾ । ಗ್ರದಲೆಸೆವ ಕುರಂಗಶೃಂಗದ
ಯಾಜಮಾನ್ಯದಲಿ ॥ ಉದಧಿಗೊರೆಗಟ್ಟುವ ಚತುರ್ವೇ । ದದ ಮಹಾಘೋಷದಲಿ ಮುನಿಕ್ರಮ । ಪದ

ದ ನೆನಹಿನ । ಸಾಣೆಯಲಿ ಸವೆಯಿತ್ತು ಕೌರವನೃಪನ ನಿರ್ದೇಶ ॥೭॥ ಅಕಟ ಕೌರವರಾಯ ರಾಜ । ನ್ಯಕಶಿರೋಮಣಿಯಿರಲು ಧರೆ ರಾಜ । ಕವಿಹೀನವಿಡಂಬವಾಯ್ತೇ ಶಿವಶಿವಾಯೆನುತ ॥ ಸಕಲದಳ ನಾಯಕರು ಮಂತ್ರಿ । ಪ್ರಕರ ಚಿಂತಾಂಬುಧಿಯೊಳದ್ದಿರೆ । ಶಕುನಿ ಬಂದನು ಕೌರವೇಂದ್ರನ ರಾಜ ಮಂದಿರಕೆ ॥೮॥ ಕರೆದು ಬಾಗಿಲವರಿಗೆ ತನ್ನಾಯ । ಬರವನರುಹಿದೊಡವರು ರಾಯನ । ಹೊರೆಗೆ ಬಂದರು ನುಡಿವರಂಗೈತಳದ ಬಾಯ್ಗಳಲಿ॥ ಅರಸ ಬಿನ್ನಹ ಮಾವದೇವರು । ದರುಶನಾರ್ಥಿಗಳೆನಲು ಮನದಲಿ । ಕುರುನೃಪತಿ ಚಿಂತಿಸುತ ಬರಹೇಳೆಂದು ನೇಮಿಸಿದ ॥೯॥ ಹೊಕ್ಕನೀತನು ಕೌರವೇಂದ್ರನ। ನೆಕ್ಕಟಿಯೊಳಿರೆ ಕಂಡು ನುಡಿಸಿದ । ನಕ್ಕಜದ ರುಚಿಯೇನು ಮಾನಸವ್ರೀಳೆರಜವ್ರೀ ॥ ಮುಕ್ಕುಳಿಸಿ ಕೊಂಡಿರದಿರಾರಿಗೆ । ಸಿಕ್ಕಿದೆಯೊ ನೀ ಮಂತ್ರಿನಿಯರಿಗೆ । ಮಕ್ಕಳಾಟಿಕೆ ಬೇಡ ನುಡಿ ಧೃತರಾಷ್ಟ್ರಸಾಣೆಂದ ॥೧೦॥ ಮಾವ ನೀಮ್ಮರುಳಾದಿರೇ ನನ । ಗಾವರುಚಿ ಯಿಲ್ಲಂಗನೆಯರುಪ । ಜೀವಿಯೇ ನೀವರಿಯರೇ ಹಿಂದೀಸುಕಾಲದಲಿ ॥ ನೋವು ಬೇರಿಲ್ಲೆನಗೆ ನಿಳಯಕೆ । ನೀವು ಬಿಜಯಂಗೈವುದಂತ । ಭಾರ್ಗವವನ್ನುಯನೇಕೆ ಬೆದಕುವಿರೆಂದನಾಭೂಪ ॥೧೧॥ ಏನು ನಿನ್ನಂತಸ್ಥ ಹೃದಯಕ್ಕೆ । ಶಾನುಸಂಭವವೇಕೆ ನುಡಿ ದು । ಮ್ಮಾನವೇಡಸ್ಮಾಣೆನುತ ಸಂತೈಸಿದನು ನೃಪನ ॥ ಏನುಭಯಬೇಡೆಂದೆನಲು ಯಮು । ಸೂನುವೈಭವವನ್ನುದಗ್ಧವು । ನೋನುಭಾವವನೇಕೆ ನುಡಿಸುವಿರೆಂದನಾಭೂಪ ॥೧೨॥ ಹೇಳುಹೇಳೇನೇನು ಪಾಂಡುಸ್ಯ । ಪಾಲಪುತ್ರರ ವಿಭವವನ್ನು । ಜ್ವಾಲೆಯಲಿ ಮನ ಬೆಂದುದೇ ಹರಹರ ವಿಚಿತ್ರವಲಾ ॥ ಪಾಲಕನು ಧರ್ಮಜನು ಸಲೆ ಕಾ । ಟ್ವಾಳಗಳು ಭೀಮಾರ್ಜುನರು ಬ । ಳ್ಳಾಳ ಹಬ್ಬುಗೆಯ್ಯಸಲೇ ಪಾಂಡವರ ಸಿರಿಯೆಂದ ॥೧೩॥ ಅವರು ಎತ್ತಿದತದ ರಾಜ್ಯ । ಪ್ರವರಪಾತ್ರರು ನಿನ್ನಸೂಯಯ । ಕವಲುಮನದ ಕುಠಾರಬುದ್ಧಿಯ ಕಲುಷಭಾವನೆಯ ॥ ಎವರಣೆಯನವರೆತ್ತ ಬಲ್ಲರು । ಶಿವಶಿವಾ ಭುವನೈಕವಾನ್ಯರ । ನವಗಡಿಸಲುಂಗೈಸಿದ್ಯೆ ಮಾಣೆಂದನಾಶಕುನಿ ॥೧೪॥ ಲೇಸು ಬಿಜಯಂಗೈಯುನೀವೆ । ನ್ನಾನಸರಾಗ್ಣುಯನೇಕೆ ಕಣಕುವಿ । ರಾಸುರಪದೇಕನ್ನೊಡನೆ ಸೈರಿಸುವುದುಪಹತಿಯಾ ॥ ಈಸುನುಡವರೆಮಾವಯೆನುತಮ । ಹೀಶಕಂಬನಿದುಂಬಿನೆನಲುನ । ಸರಕ ಬಿಸುಸುಯ್ದು ಧೊಪ್ಪನೆ ಕೆಡೆದನವನಿಯಲಿ ॥೧೫॥ ಎತ್ತಿದನು ಕಂಣೊರೆಯ ತಿರುವನಿ । ಮುತ್ತುಗಳ ಕೇವಣಿಯ ಶಕುನಿನೃ । ಪೋತ್ತಮನ ಬಾ ಕಂದ ಬಾ ಯೆಂದಪ್ಪಿ ಕೌರವನಾ ॥ ಕತ್ತು ಬಿಗಿದುವೆನಹಿತರನು ನಿನ । ಗತ್ತನಿಂದ್ರಪ್ರಸ್ಥಪುರವನು । ಹೆತ್ತತಾಯ್ಮಾಂಧಿಯ ಸಂತೋಷಿಸುವ ಬಳಿಕೆಂದ ॥೧೬॥ ಮಾವ ಕೇಳತಿಬಲರುಫಲುಗುಣ । ಪಾವಮಾನಿಗಳೈಮಂಗ ತಾ ಬೀವೆಸಖುಗೂಡಂವನನಿಬರಗೆಲವು ಗೋಚರವೇ ॥ ಸಾವುದಲ್ಲದ ತನಗೆ ಬೇರಿ । ನ್ನಾವಪರಿಯಲಿಸಮತ ಸೇರದು । ಜೀವಿತವ್ಯವನವರ ನಿಕರದೊಳರಸಿ ಕೊಳ್ಳೆಂದ ॥೧೭॥ ಗೆಲುವೆ ನಾನಂಜದಿರು ಪಾಂಡವ । ರಳವಳವನಾನರಿವೆ ನೃಪನ । ಗ್ಗಳದಧರ್ಮಜ್ಞನು ವಿಶೇಷದ್ಯೂತಲೋಲುಪನೂ ॥ ಗೆಲುವ ಮೋಡಿಯನರಿಯನಾತನ ನಳಿಯ ಬಲ್ಲನು ಜೂಜುಗಾರರ । ಕುಲಶಿರೋಮಣಿತಾನೆಯೆಂದನು ಶಕುನಿ ಕೌರವಗೇ ॥೧೮॥ ಕಪಟವನು ನೆರೆಮಾಡಿ ಜೂಜಿನೊ । ಳುಪರಿಕಾರ್ಯವ ಜೈಸಿಕೊಡುವೆನು । ನಿಪುಣರಿನ್ನಂದವಲಿ ಲೋಕದೊಳಿಲ್ಲ ಕೈತವದ ॥ ಅಪದೆಸೆಗೆ ಭಯಗೊಳ್ಳದಿರು ನೀ । ಷ್ಕೃಪೆಯಲಿರು ಗುರುಭೀಷ್ಮವಿದುರಾ । ದೃಪಸರರ

ಕೈಕೊಳ್ಳದಿರು ನೀನೆಂದನಾ ಶಕುನಿ ॥೧೯॥ ಎನ್ನ ಬಹುಮಾನಾವಮಾನವು ನಿನ್ನದೈಸಲೆ ಮಾವ ನೀ ಸಂ
ಪನ್ನ ಕೃತ್ರಿಮವಿದ್ಯನಾದೊಡೆ ತೊಡಚು ಸಾಕದನು ॥ ಅನ್ನಿಗರಿಗರುಹದಿರು ನಮ್ಮವ । ರೆನ್ನದಿರು
ವಿದುರಾದಿಗಳನುಪ । ಸನ್ನ ಮಂತ್ರವನರುಹು ಬೊಪ್ಪಂಗೆಂದನವನೀಶ ॥೨೦॥ ನೀನರುಹು ನಿಮ್ಮಯ್ಯ
ಮನಗೊ । ಟ್ಟಾ ನರೇಂದ್ರರ ಕರಸಿಕೊಟ್ಟೊಡೆ ಮಾನನಿಧಿಯೇ ಸಕಲಧರೆಯನು ಸೇರಿಸುವೆ ನಿನಗೆ ॥
ನೀನೆ ಹೋಗೀಯೆನ್ನ ಕಡುಹು । ವ್ಯಾಸವನು ಬೊಪ್ಪಂಗೆ ನುಡಿವರೆ । ತಾನೆ ಕರೆಸುವ ನರುಹುವೆನು
ಜನಕಂಗೆ ನಿಜಮತವ ॥೨೧॥ ಆಹುದು ಬಳಿಕೇನೆನುತ ಬಂದನು । ಕುಹಕಮತಿ ಧೃತರಾಷ್ಟ್ರ ನರಪನ ।
ಗುಹಸಮಯದಲಿ ಹೊಕ್ಕನಂದೇಕಾಂತಮಂದಿರವ ॥ ಬಹಳ ಶ್ರೀವ್ಯಸನವಲಿದು । ಸ್ನುಷಮನೋವ್ಯ
ಥೆಯಲ್ಲಿ ಕುಮಾರಕ । ನಿಹುದನರಿಯರೆ ನೀವೆನುತ ಬಿಸುಸುಯ್ದನಾ ಶಕುನಿ ॥೨೨॥ ಏನು ಶಕುನಿ ಮಗಂಗೆ
ದುಗುಡವ । ದೇನು ಕಾರಣವಾರ ದೆಸೆಯಿಂ । ದೇನು ಸಾಧ್ಯವದೇನು ಭಯ ಮೇಣಾವುದಭಿಲಾಷೆ ॥ ಏನು
ವನು ವಂಚಿಸದೆ ಹೇಳೆ । ನ್ನಾಣೆಗೇಕೈ ಮರುಕವೇಸನಿಜ । ಸೂನುವನು ನೀ ಕರೆಸಿ ಬೆಸಗೊಳ್ಳೆಂದನಾ
ಶಕುನಿ ॥೨೩॥ ಕರೆಸಿದನು ದುರಿಯೋಧನನನಾ । ದರಿಸಿ ಕಟ್ಟೇಕಾಂತದಲಿ ಮಗ । ವರು ವಿಚಾರಿಸಿ
ದರು ನಿಜಾನ್ವಯಮೂಲನಾಶನವ ॥ ಭರತಕುಲನಿರ್ವಾಹಕನು ಜಗ । ಕುರುಕುಲಾನ್ವಯದೀಪ
ಬಾಯೆ । ನ್ನರಸ ಬಾ ಯೆನ್ನಾಣೆ ಬಾಯೆಂದಪ್ಪಿದನು ಮಗನ ॥೨೪॥ ದುಗುಡವೇಕೈ ಮಗನೆ ಹಿರಿಯೊ ।
ಲಗವನೀಯೆಗದೇಕೆ ವೈಹಾ । ಳಿಗಳ ಬೇಟೆಗಳವನಪಾಲಪನೋದಕೇಳಿಗಳ ॥ ಬಗೆಯೆಗಡ ಬಾಂಧವರ
ಸಚಿವರ । ಹೊಗಿಸಗಡ ನಿನ್ನರಮನೆಯನೀ । ಹಗಲು ನಿನಗೇಕಾಯ್ತು ಕತ್ತಲೆಯೆಂದನಂಧ
ನೃಪ ॥೨೫॥ ಹೇಳಲಮ್ಮೆನು ನೀವು ಧರ್ಮದ । ಕೋಳಿಯಲಿ ಸಿಲುಕಿದವರೆನ್ನನು । ಖೂಳನೆಂದು
ಕಷ್ಟನೆಂಬಿರ ಸೂಯನೆಂಬಿರಲೇ ॥ ಕಾಲಭಂಜಕಯಾಯ್ತು ತನ್ನಯ । ಬಾಳಿಕೆಯ ಬೆಳ್ಳಂಬ ನೀತಕೆ ।
ಕೇಳುವಿರ ನೀವೆಂದು ಸುಯ್ದನು ತುಂಬಿ ಕಂಬನಿಯ ॥೨೬॥ ಮುನಿಚರಿತ್ರರು ನೀವು ರಾಜಸ । ತನಯ
ಮದವಲಿ ಲೋಕಯಾತ್ರೆಯ । ನನುಸರಿಸುವವರಾವು ನೀವೇ ಭೋಗನಿಸ್ಪೃಹರು ॥ ಅನುದಿವಸರಾ
ಗಿಗಳು ನಾವೆ । ಮ್ಮನುಮತವ ಪಾಲಿಸುವರಾರೆಂ । ದೆನುತ ಸುಯ್ದನು ಮರುಗಿ ಬೈದನು ತನ್ನದು
ಷ್ಕೃತವ ॥೨೭॥ ಈಸುಕಳವಳವೇನು ಚಿತ್ತದ । ಧ್ಯಾಸಕೆಗೆ ಹೊಳ್ಳಾಸವೇಕೆ ವಿ । ಳಾಸಕೂಸೆಯ
ವೇನು ಹೇಳಾ ನೆನಹಿನಘರುಚಿಯ ॥ ವಾಸಿಗಳ ಪ್ರಸರವನೆನ್ನಲಿ । ಸೂಸಬಾರದೆ ನಿನ್ನ ಪರುಷಕೆ ।
ಪ್ರಸರವದೇನೆಂದು ಬೆಸಗೊಂಡನು ಸುಯೋಧನನ ॥೨೮॥ ಏನನೆಂಬೆನು ಬೊಪ್ಪ ಕುಂತೀ । ಸೂನು
ಗಳ ಸಾಮರ್ಥ್ಯದರ್ಪಣವನು । ದಾನವಾರಿಯ ಹಾಸುಹೊಕ್ಕಿನ ಸೌಖ್ಯಸಂಗತಿಯ ॥ ತಾನಪುಂಸಕನಾ
ದವರಿಯನು ದೇನವಿಸ್ತರಿಸುವೆನು ಲಜ್ಜಾ । ಹಾನಿನಿಗೆ ತನ್ನೊಕ್ಕತನವಂದಳಿದು ಹೋಯ್ತೆಂದ ॥೨೯॥
ನಗೆದುಬುಗುಡಿದೆ ಹಣೆಯಲವರೋ । ಲಗದ ಸಭೆಯಲಿ ನನೆವಸೀರೆಯ । ತೆಗೆಸಿಕೊಟ್ಟರು ತಂದು
ಮಣಿಮರ್ಗದ ನವಾಂಬರವ ॥ ಬಗೆಗೊಳಿಸುವವರೆನ್ನನವರೋ । ಲಗದ ಸೂಳೆಯರವನ ಸೂಳಿನ ।
ನಗೆಯ ನೆನೆನೆನೆದೆನ್ನಮನ ಜರ್ಝರಿತವಾಯ್ತೆಂದ ॥೩೦॥ ಇದಕೆ ಕಾರಣವೇನು ಹಣೆನೊಂ । ದುದಕ
ದೇನು ನಿಮಿತ್ತವೆನಲರಿ । ಸದನದಲಿ ಮಯನಿತ್ತ ಸಭೆಯನು ದೇವರರಿಯಿರಲೇ ॥ ಮುದದಿ ನಾ ಧರ್ಮ
ಜನು ಘನಸಂ । ಪದದ ಲೋಲಗವಿತ್ತನಾದ್ರೌಪದಿ । ನಿಜಾನುಜ ಮಂತ್ರಿ ಸಚಿವ ಪಸಾಯಿತರು ಸ

ಹಿತ ॥೩೧॥ ಆಮಹಾಸಭೆ ದೇವನಿರ್ಮಿತ । ರಾಮಣೀಯಕವಿವಿಧರತ್ನ । ಸ್ತೋಮತೇಜಃಪುಂಜ
ಭಂಜತನಯನವಿಸ್ಮಯಲಿ ॥ ಸಾಮದಲಿ ಸಮ್ಮಾನ ಯುಧಿಷ್ಠಿರ । ಭೂಮಿಪತಿ ಕರೆಸಿದನು ತನ್ನು ।
ದ್ದಾಮವಿಭವವನೆನಗೆ ತೋರಲು ತತ್ಸಭಾಸ್ಥಳಕೆ ॥೩೨॥ ಹರಹಿನಲಿ ಹಿರಿದಾಯ್ತು ಕಂಪಾ । ವರೆಯ
ವನ ಬೇರೊಂದು ಕಾಣದೊ । ಖರುವೆಣ್ಣೆಯ ಬೆಳಬಂಗಳೊಳಕಿದುದೊಂದು ತಾಣದಲಿ ॥ ಹರಿವಯ
ಮಸಾನಡಿಯನಲ್ಲಿಗೆ । ತಿರಿಸಿದೆವರಾರೆನಲು ಮಣಿಬಿಂಬ । ಧರಡವಳಗಿಸಲಹುದು ಮರುದುದು ತನ್ನ ಜಾ
ಣ್ಮೆಯ ॥೩೩॥ ಹೊಕ್ಕ ಸಾಲಲಿ ಹೊಳೆವ ಮಣಿರುಚಿ । ಮುಕ್ಕುಳಿಸಿದವು ಕಂಗಳನು ನಡ । ಟಕ್ಕಲನ
ನೋಡಿದೊಡ ಮರೆದೊಳಸುದವಾಲಿಗಳು ॥ ಉಕ್ಕುವಮಲಪ್ರಭೆಗಳಲಿ ಮನ । ಸಿಕ್ಕಿ ಹೊಲಬಳಿ
ದುದು ವಿವೇಕವ । ತೊಕ್ಕಲಿಸಿ ಕೆಡಹಿದವು ಬಹುವಿಧರತ್ನಕಾಂತಿಗಳು ॥೩೪॥ ಹಿಡಿದವೆನ್ನೊಡೆಯನು
ಮಣಿರುಚಿ । ಯೆಡತರದೊಳಿಕ್ಕಿದನು ಭಿತ್ತಿಯ । ಬಿಡೆಯಗಲಿ ಪುಳಕಿಸುವನೀಲದಲಳಿಯಲಹುದಯಲಿ ॥
ತಡಿಯ ಕಾಣೆನು ತಳಿತಕಾಂತಿಯ । ಕಡಲ ವಿಮಲಸ್ಫಟಿಕಜಲದಲಿ । ಮಿಡುಕಲಂಜದವಂಘ್ರಿಗಳು
ನರನಾಥ ಕೇಳೆಂದ ॥೩೫॥ ಸ್ಥಳವೆ ಜಲರೂಪದಲಿ ಜಲವೇ । ಸ್ಥಳದ ಪರಿಯಲಿದ್ದುದದು ಕೆಲ । ಬಲನ
ಭಿತ್ತಿಯ ಕಂಭಕಂಭದ ನಡುವೆ ಭಿತ್ತಿಗಳು ॥ ಹೊಳಹುವನೇ ಕಂಡೆನು ವಿವೇಕದ । ಕಳೆವು ಚಿತ್ರದ ಸೆರೆ
ಮಹಾರದೊ । ಳಿಳಿದವಕ್ಷಿಗಳಿಂತು ನೋಡೆನು ತಂದೆ ಕೇಳೆಂದ ॥೩೬॥ ಮುಂದೆ ವಿಮಲಸ್ಫಟಿಕಭೂ
ಮಿಯ । ನೊಂದುತಾವಿನೊಳೀಕ್ಷಿಸುತ ಕೊಳ । ನೆಂದು ಬಗೆದೆನು ನಿಂದು ಸಂವರಿಸಿದೆನು ಮುಂಜೆ
ರಗ ॥ ಅಂದು ದ್ರೌಪದಿ ಸಹಿತ ಪಾರ್ಥ । ವೃಂದ ಕೈಗಳ ಹೊಯ್ದು ಹಿಗೆ ಘೊಳ್ಳೆಂದು ನಕ್ಕುದು
ನೊಂದು ತಲೆವಾಗಿದೆನು ಲಜ್ಜೆಯಲಿ ॥೩೭॥ ಊಹೆಯಲಿ ತಡವರಿಸಿ ಹಜ್ಜೆಯ । ಗಾಹುಗತಕದೊಳಿ
ದ್ದತ ಕಾಂತಿಯ । ಸೋಹೆಯುಳ್ಳ ಹದೆ ಬೀದಿಯಲಿ ಕಂಡೆನು ಸರೋವರವ ॥ ಆಹರಿಬವನು ಮುರಿವೆ
ನುಡಿದ । ನೂಕಿಸಿದೆ ಸ್ಫಟಿಕವೆಂದು । ತ್ಸಾಹಿಸಲು ನೀರಾಯ್ತು ನನೆದೆನು ನಾಭಿದಘ್ನದಲಿ ॥೩೮॥
ಮತ್ತೆ ಘೊಳ್ಳೆಂದುದು ನೃಪಾಲನ । ಮತ್ತಕಾಶಿನಿಯರು ಯುಧಿಷ್ಠಿರ । ನಿತ್ತ ದಿವ್ಯದುಕೂಲವನು
ತವಿಗಡರ್ತೊಡಚಿದೆನು ॥ ಚಿತ್ರತೆಸ್ಕಿಭಿಮಾನನಮ್ಮಲನಿಧಿ । ಮತ್ತೆ ಮಾಯೆಯ ಮಸಕವನು ನಿ ।
ಷ್ಕೃತ್ರಿಮಿಸಿ ದೊಪ್ಪಯಿಸಿದನು ಕೌರವರರಾಯ ॥೩೯॥ ಸಂಚಿಸಿದುದೊಂದೆಡೆಯಬಾಗಿಲು ।
ಪಂಚಿಸಿತು ಭಿತ್ತಿಯಲಿ ತತ್ಪ್ರತಿ । ಬಿಂಬವೆಂಬಾನರಿಯದೊಡಹಾಯಿದೆನು ಚೌಕಿಗೆಯ ॥ ಎಂಬ
ನೀನನು ಹೊರಳೆ ನಗನ್ನ । ತಂಬಿನಿಯರನು ಭೀಮಪಾರ್ಥರ । ಡಂಬರವ ಕಂಡನುವಹಿಡಿದೆನು
ನೊಂದಿಕೊಳ್ಳೆಂದ ॥೪೦॥ ನೊಂದುದೇ ಮಣಿ ಮನದೊಳಗೆ ಕದು । ನೊಂದೆನವದಿರ ನಗೆಗೆ ನಡೆದೆನು ।
ಮುಂದೆ ನೋಡು ಬಾಗಿಲನು ಕಂಡೆನ್ನ ಮನದೊಳಗೆ ॥ ಹಿಂದೆ ಯೋಗಿದ ಭಂಗವೇ ನಾ । ಕೆಂದು ಸುಪ್ರ
ಷ್ಠೆಯಲಿ ಬಾಗಿಲ । ನೊಂದುತಾವಿನೊಳರಸಿ ತಡವರಿಸಿದೆನು ಭಿತ್ತಿಗಳ ॥೪೧॥ ನಗೆಗೆನಗೆ ಕಾಂಚಣಿ
ವಿವೇಕದ । ಹೊಗೆಗೆ ಹೊಗೆ ಸಿಲುಕಿಯಾದುದಲ್ಲಿಯ । ಹಗರಣಿಗರಾದೆನದು ನೋಟಕದ ಜನವಾಯ್ತು ॥
ನಗುವವರ ಜರೆದನೆ ಯುಧಿಷ್ಠಿರ । ನಗೆಯ ಮರೆದನೆ ಭೋಪ್ಪ ನಿಮ್ಮಯ । ಮಗನ ಮಸ್ತಾರೋಪಿದು ಚಿತ್ತ
ವಿಸಿ ನೋವೆಂದ ॥೪೨॥ ಒಡ್ಡವಿಸಿತೆನ್ನಾಟ ನಗೆಯೊಳ । ಗದ್ದಬಿದ್ದಳು ಪಾಂಡುಪುತ್ರರ । ಹೊಡ್ಡ
ಬಿಂಕದಲವರು ಬಿರಿದರು ಭೀಮಫಲುಗುಣರು ॥ ಖಡ್ಡಿಗರು ವೆನ್ನಿಂದ ರೋಷದ । ಗೊಡ್ಡು ನಾನಾ

ದೆನುವಿಘಾತಿಯು । ಬಡ್ಡಿಗಿನ್ನು ಕಬಡುಕಿಜಿನು ಧೃತರಾಷ್ಟ್ರ । ಕೇಳೆಂದ ॥೪೩॥ ಸಿಂಗಿಯನು ಬಿತ್ತಿದೆನು ಪಾಂಡವ । ರಂಗದಲಿ ತತ್ಕಾಲದ ಬೆಳಸಿನ । ಸಿಂಗಿಯಲಿ ತಾನಾವೆನಲ್ಲದೊಡಗ್ಗಿಕುಂಡದಲಿ ॥ ಭಂಗಿಸುವೆನಾ ಫಲದೊಳೆನ್ನನು । ನುಂಗಬಾರದು ತನ್ನಿಂ ಮೇಣ್ । ಗಂಗೆಯಲಿ ಬಿದ್ದೊಡಲನೀಗುವೆನೆನುತ ಬಿಸುಸುಯ್ದ ॥೪೪॥ ಆಯುಧಿಷ್ಠಿರಸಹಿತ ನೀನೇ । ನಾಯಕಾಗರು ಮೇಣಾ ನಪಿತೃ । ತಾಯಿ ಸಂತಸಬಡಲಿ ದುಶ್ಶಾಸನನ ಪಟ್ಟದಲಿ ॥ ರಾಯತನವೇನೆಂದು ಲೋಕದ । ಲಾಯದಲಿ ಧಿಟವೇದು ನುಡಿವೆರು । ಜೋಯಿಸರು ಸಾಕವರ ವಚನ ನಿರರ್ಥವಲ್ಲೆಂದ ॥೪೫॥ ಪುರದಲೆಂಭತ್ತೆಂಟುಸಾವಿರ । ಧರಣಿಯಮರರು ನಿತ್ಯಪಡೆಯುವ । ರರಸ ಕೇಳ್ಕೆ ಹತ್ತುಸಾವಿರ ಹೊನ್ನತಳಿಗೆಯಲಿ ॥ ವರಯತೀಶ್ವರರು ಹತ್ತುಸಾವಿರ । ವರಮನೆಯಲುಂಬುದು ನೃಪಾಲಾ । ಧ್ವರದ ಸಿರಿಯನು ನೀವೆ ಕಂಡಿರಿಯೆಂದನಾ ಭೂಪ ॥೪೬॥ ಕೇಳಿದನು ಬಿಸುಸುಯ್ದು ನಕುಲ ವಿ । ಕಾಳಿಸಿತೆ ಕೌರವನ ಬುದ್ಧಿ ವಿ । ಟಾಳಸಂಗತಿಯಾಯ್ತಲಾ ಪಿಸುಣಾರ ಕರಳಿಬದು ॥ ಕೇಳು ಮಗನೇ ಧರ್ಮಪುತ್ರನ । ಮೇಲೆ ಮುನಿವರೆ ರಾಜಋಷಿ ನರ । ಪಾಲಮಾತ್ರವೆ ಶಿವಮಹಾದೇವೆಂದನಾ ಭೂಪ ॥೪೭॥ ಸತಿಯರಲಿ ನಿಮ್ಮವ್ವೆ ಸುಪತಿವ್ರತೆ ಮಹಾಖಳ ನೀನು ಪೇಜ । ಸ್ಥಿತಿಯಲೂಣೆಯವಿಲ್ಲ ನಿನ್ನಯ ಬುದ್ಧಿದೋಷವಿದು ॥ ಕೃತಕವೋ ಸಹಜವೋ ನಪಿನ ಸ್ಥಿತಿಯ ಕಂಡೆನು ಶಿವಶಿವಾ ದು । ರ್ಮತಿಗಳಾವುದ ನೆನೆಯರೆಂದನು ಸುಯ್ದು ಧೃತರಾಷ್ಟ್ರ ॥೪೮॥ ಪಾಂಡುವಿನ ಮಕ್ಕಳು ಗಳಾರಾ । ಪಾಂಡುವಿನಲೆನ್ನಲ್ಲಿ ಭೇದವೆ । ಕಂಡೆಲಾ ನೀನವರಗೇನಪರಾಧ್ಯವೇ ಧರಣಿ ॥ ಉಂಡು ಬದುಕುವಬಹಳಭಾಗ್ಯರ । ಕಂಡಸೂಯಂಬಡುವಖಡ್ಡರ । ಭಂಡರೆನ್ನವೆ ಲೋಕ ನಿನಗಿದು ಸಾಧ್ಯವಲ್ಲೆಂದ ॥೪೯॥ ಆದುದು ಬೊಪ್ಪ ವೃಥಾಭಿಮಾನದ । ಕುಹಕಿ ಹೋಗಲಿ ನಿಮ್ಮ ಚಿತ್ತಕೆ । ಬಹಕುಮಾರರ ಕೂಡಿ ನಡೆವುದು ಪಾಂಡುನಂದನರ ॥ ಮಹಿಯ ಹಂಗಿಂಗೋಸುಗವೆ ಬಿ । ನ್ನಹವ ಮಾಡಿದೆನೆನಗೆ ಧಂಟನ । ರಹಣಿ ಬಂದುದು ಸಾಕಲೇ ಸೊಗಸಾಯ್ತು ಲೇಸೆಂದ ॥೫೦॥ ತಾಯೆ ಸೇವೆಯಗೊಂಡೆನಯ್ಯಂ । ಗಾಯುಧಿಷ್ಠಿರನಾತ್ಮಜನಲೇ । ವಾಯುಸುತನರನಕುಲಸಹದೇವರು ಕುಮಾರರಲೇ ॥ ಈಯುಗದಲಿನ್ನವರಸಂತತಿ । ದಾಯಭಾಗಿಗಳಾಗಿ ಬದುಕಲಿ । ರಾಯರೆಲ್ಲಾ ಮತ್ತೆ ನಮ್ಮನು ರಕ್ಷಿಸುವರೆಂದ ॥೫೧॥ ಅರಸ ಧರ್ಮಿಷ್ಠನು ಯುಧಿಷ್ಠಿರ । ಧರಣಿಪತಿ ಯುತ್ತಮನು ಪವನಜ । ನರರು ವಿನಯಾನ್ವಿತರು ನೀವೇ ಪುತ್ರವತ್ಸಲರು ॥ ಧರಣಿಗಾಪಿನ್ನಸಲೇ ನೂ । ರ್ವರುಕುಮಾರರು ಹೊರಗೆ ನಿಮ್ಮಯ । ಕರುಣಾಪೇ ಸಾಮ್ರಾಜ್ಯ ನಮ್ಮನು ಪೇಳಕೊಡಿರೆಂದ ॥೫೨॥ ಆಯಫಲವಭಿಮಾನ ಹೋಗಲಿ । ಕಾಯರ್ಪೇಕೆಂಬರೆ ನೃಪಾಲರೆ । ಬಾಯತಂಬುಲ ತಿಂದು ಹೊರೆವೆವು ಬೆಂದ ಬಸುರುಗಳ ॥ ಆಯುಧಫಲವಾಚಂದ್ರತಾರಕ । ಕಾಯವಧ್ರುವವೆಂಬೊಡಿದಕೆ ಸ । ಹಾಯವಿದೆಲಾ ಕಾಲಕೂಟ ಕಠೋರರನಟಯೆಂದ ॥೫೩॥ ಅರಸನಭ್ಯುದಯವನು ಭೀಮನ । ಧರಧುರವನರ್ಜುನನ ಪಂಕವ । ನರಸಿಯಾಟೋಪವನು ಮಾದ್ರೀಸುತರ ಸಂಭ್ರಮವ ॥ ಹೊರೆಯದೃಷ್ಟದ್ಯುಮ್ನದ್ರುಪದಾ । ವೈರ ನೃಧಾಡಂಬರವ ಕಂಡೆದೆ । ಬಿರಿದುದಳುಕಿದೆನಳುಕಿದೆನು ಸಂತವಿಸಲರಿದೆಂದ ॥೫೪॥ ಕರಗಿದಳು ಗಾಂಧಾರಿ ಕಂಬನಿ । ಮರುಗಲಲಿ ಧೃತರಾಷ್ಟ್ರನೆದೆಜ । ಝುರಿತವಾದುದು ಮಗನ ಮಾತಿನ ಮೊನೆಗಳುತಿಗಳಲಿ ॥ ಸುರಿವನಯನಾಂಬುಗಳ ಮೂಗಿನ । ಬೆರಳ ತೂಗುವಮುಕುಟದವನೀ । ಶ್ವರುನ

ಮೌನದೊಳಿದ್ದನೊಂದುಘಳಿಗೆಮಾತ್ರದಲಿ ||೫೫|| ಮಾತು ಸೊಗಸದಲಾ ವೃಥಾ ನೀ | ವೇತಕೆನ್ನನು
ಕರೆಸಿದಿರಿ ನಿ | ಮ್ಮಾತಗಳು ಭೀಮಾರ್ಜುನರುಸಹಿತೀಮಹೀತಳವ || ತಾತ ನೀವಾಳುವುದು ರಾಯ
ಸು | ನೀತಸಾಧರ್ಮಜನು ಧರ್ಮವಿ | ಘಾತಕರು ನಾವೆಮ್ಮ ಕಳುಹುವುದೆನುತಹೋದವಂ ||೫೬||
ಎಲೆಗೆ ಕರೆಯಾಪಾಪಿಕೌರವ | ಕುಲಕುಠಾರನ ನಿನ್ನ ಮಗನೊಡ | ನಳಿವೆನ್ಯಸಲೆ ಪಾಂಡು ಪುತ್ರರ ವೈರ
ಬಂಧದಲಿ || ತಿಳುಹಿ ತಾಯೆನಲಾಕೆ ಶಕುನಿಯ | ಕಳುಹಿ ಕರೆಸಿದೊಡಾತ ಮರಳಿದ | ನಳಲುದೊರೆ
ಯಲಿ ಮೂಡಿ ಮುಳುಗಿದನಂದು ಧೃತರಾಷ್ಟ್ರ ||೫೭|| ಏನನೆಸದೈ ಮಗನೆ ಕುಂತೀ | ಸೂನುಗಳ
ರಾಜ್ಯಾಪಹಾರದೊ | ಳೇನುಬುದ್ಧಿವಿಲಾಸವಾವುದು ಕಾರ್ಯಗತಿ ನಿನಗೆ || ದಾನದಲಿ ಮೋಕ್ಷಾನುದಲಿ
ಭೇ | ದಾನುಮತದಲಿ ದಂಡದಲಿ ನೀ | ವೇನನಿಶ್ಚೈಸಿದಿರಿ ಹೇಳಿನ್ನಂಜಬೇಡೆಂದ ||೫೮|| ತಿಂದವಿಷವ
ಳ್ಕಿದವು ಮಡುವಿನೊ | ಳಂದು ಬಿಸುಟರೆ ಮುಳುಗ ಸುಖದಲಿ | ಮಿಂದು ಹೊರವಂಟರು ಮಹಾ
ಗ್ನಿಯ ಭವನಭಂಗದಲಿ || ಬಂದುಕೂಡಲು ಸೀಯದನಿಬರು | ಬಂದರವು ಮೊದಲಾದಕೃತ್ರಿಮ |
ದಿಂದ ಪಾಂಡವರಳಿದುದಿಲ್ಲಿದಕೇನು ಹದನೆಂದ ||೫೯|| ನೀವು ಚಿತ್ತವಿಸಿದೊಡೆ ನೆತ್ತದೊ | ಳಾವು
ಸೋಲಿಸಿ ಕೊಡುವೆವವರನು | ನೀವು ಕರೆಸುವುದಿಲ್ಲಿಗುಚಿತಪ್ರೀತಿವಚನದಲಿ || ನಾವು ಜಾಣರು ಜೀಯ
ಜೂಜಿನ | ಜೀವಕಳೆಯಲಿ ಧರ್ಮಸುತನಿದ | ನಾವಹವನೆಂದರಿಯನಾತನ ಜ್ಯಸಬಹುದೆಂದ ||೬೦||
ಅಹುದು ತಪ್ಪೇನಿದುವೆ ಸಾಧನ | ವಹುದು ವಿದುರನ ಬುದ್ಧಿಗಳಿಮತ | ವಹಡೆ ಕಾಸುವೆವ್ನೆನಲೇ ಬೆಸ
ಸುವೆನು ವಿದುರಂಗೆ || ಕುಹಕವಾತನಲಿಲ್ಲ ನೋಡುವನಿಹಪರತ್ರದ ಹಿತವನಿದನಿ | ರ್ವಹಿಸಿಕೊಡು
ವೊಡೆ ಮಂತ್ರವೆಂದನು ಮಗಗೆ ಧೃತರಾಷ್ಟ್ರ ||೬೧|| ಖೂಳರಲಿ ಸತ್ಕಳೆಗಳನು ನೆರೆ | ಕೇಳದವರಲಿ
ಮಂತ್ರಬೀಜವ | ನಾಳಿಯಿಲ್ಲದವಂಗೆ ರೂಪವಿಳಾಸವಿಭ್ರಮವ || ಹೇಳುವಂತಿರೆ ನಿಮ್ಮ ವಿದುರನ |
ಕೇಳಿಸಿದರಾಕಾರ್ಯಗತಿಗೆ ವಿ | ತಾಳವಾಗದೆ ಜೊಪ್ಪಯೆಂದನು ನಗುತ ಕುರುರಾಯ ||೬೨|| ಅರುಹಿ
ದೊಡೆ ವಿದುರಂಗೆ ಕಾರ್ಯವ | ಮುರಿವನಾತನು ಬಳಿಕ ನಿಮ್ಮಯ | ಕಿರಿಯತಮ್ಮನ ಮಕ್ಕಳಿಗೆ ಕೊಡಿ
ಹಸ್ತಿನಾಪುರವ || ಹರಕುಗೆಳು ನಾವೃರುಮಕ್ಕಳು | ಹೊರಗೆ ಬದುಕುವೆವ್ನೆನಲೇ ನಿ | ಮ್ಮರುವಮ
ಕ್ಕಳುಗೂಡಿ ಸುಖದಲಿ ರಾಜ್ಯವಾಳೆಂದ || ಪಾರಲೌಕಿಕದುಳಿವನೈಹಿಕ | ದೋರೆಪೋರೆಯನಿಂದು
ಬಲ್ಲವ | ರಾರು ಹೇಳಾವಿದುರನಲ್ಲದೆ ನಮ್ಮಕ್ಕೈಕದಲಿ ||೬೩|| ಸಾರವಾತನ ಮಾತು ನಯವಿ | ಸ್ತಾರ
ಸಹಿತಿಹುದಲ್ಲಿ ನಂಬುಗೆ | ದೂರವಿಲ್ಲೆನಗರಿಯೆ ನೀನಿಲ್ಲೆಂದನಂಧನೃಪ ||೬೪|| ತಿಳುಹಿ ವಿದುರನನಾನ
ವರ ಕರೆಯಲು | ಕಳುಹುವೆನು ಯಮಸೂನು ನಿಮ್ಮಯ | ಬಲುಹಿನಲಿ ಒಳುಕುವನೆ ಭೀಮಾರ್ಜುನರು
ಕಿರುಕುಳರೇ || ತಿಳಿವೊಡೀತನ ಬುದ್ಧಿಯೇ ನಿ | ರ್ಮಲಿನವಹುದು ನಿಧಾನವಿದು ನೀ | ಕಳವಳಿಸದಿದ್ದೊಡೆ
ಮನೋರಥಸಿದ್ಧಿಯಹುದೆಂದ ||೬೫|| ನೀ ಕರುಣದಲಿ ನಮ್ಮ ಸಲಹುವೊಡಾಕುಮಾರರ ಕರೆಸಿಕೊ
ಟ್ಟೊಡೆ | ಸಾಕು ಮತ್ತೊಂದಿಹುದಲೇ ಪಾಂಚಾಲನಂದನೆಯ || ನೂಕಿ ಮುಂದಲೆವಿಡಿದು ಶ್ರೋತ್ರಿಯೋಳಾ
ಕೆಯನುಕುಳ್ಳಿರಿಸಿದಂದು ವಿ | ಶೋಕನಹೆನಾದಿವಸದಲಿ ಕೃತಕೃತ್ಯತಾನೆಂದ ||೬೬|| ಪೋಗು ನೀನೆಂ
ದವನ ಕಳುಹಿದ | ನಾಗಮನದೊಳಗಧಿಕಚಿಂತಾ | ಸಾಗರದೊಳೋರಂತೆ ಮುಳುಗಿದನಂದು
ಧೃತರಾಷ್ಟ್ರ || ಈಗಳಿನಸವಿಗಳುಪಿ ಮೇಲಣ | ತಾಗನರಿಯನು ಕಂದನಿದಕೆ | ನ್ನೇಗುವೆನು

ಗಾಂಧಾರಿ ನಿ[illegible] ॥೭॥ ಅವರು ಕಪ್ಪುವನೆ[illegible]ತನ । [illegible] ನೀನೇ
ಕಂಪೆ [illegible] । ಅವರು [illegible] ಗೆ[illegible]ಯಲಿ ಬಳಸಂದವ್ಯಾಗವಂತೆ ॥ ನನಗೆ ಬಹು
ಪತಿವ್ರತೆಯಾಗಿ । ನಿನ್ನ [illegible] ಲೋಕವ[illegible] । [illegible]ಪಳಲಿ ಮರುಗಿದನಂ
ದು [illegible] ॥೮॥ [illegible] ಮಾಡಿದವರು [illegible] । ತೋರುವರೆನ್ನನು ತೊಡಕಿಸುವ
ನೇ । [illegible]ವರವರು [illegible]ರವಸ್ತಕವನು [illegible] । ಹೊರಗೊಳಗೆ [illegible]ದನಿದು [illegible] । ಅಬ
[illegible] ಹೃದಯದ । [illegible] ಮರುಗಿದನು [illegible] ॥೯॥
ಏಕೆ [illegible] ಅಂದರೆ । [illegible] । [illegible]ಲೋರೆದು [illegible]
[illegible] ॥ [illegible] । [illegible] । [illegible]
ಟಿ ಪಾಂಡವರನಂದನು ಸತಿಗೆ ಗಾಂಧಾರಿ ॥೧೦॥ [illegible] ನಿನ್ನವ
[illegible] । [illegible] ॥ [illegible]ಸತ್ತಿಲ್ಲಿಗರಾ
ರೆ[illegible] । [illegible] ॥೧೧॥ ಕೆಗೆಸಿ [illegible]ರನಲಿ ಬಹು
[illegible] । [illegible] ॥ [illegible]
[illegible] । [illegible] । [illegible] ॥೧೨॥
[illegible] । [illegible] ಪುರವಲಿ [illegible]ಪನೇಕಾಂ
[illegible] ॥ [illegible] । [illegible] ಕಲ್ಪಿಸಿಯ ಕಲ[illegible] । [illegible]ಯನೆ ನಿ
[illegible] ॥೧೩॥ [illegible] ಪಾಂಡವರನಂ । [illegible] ನಿಗ
ಲೊಸಥ [illegible] । [illegible] ॥ [illegible] ।
ನ್ನವರು [illegible] । [illegible] ॥೧೪॥ ಅವರ
[illegible] । [illegible]ವಾಯ್ತು ಬೆಳಪಿಗೆ ಪಾಂ
[illegible] । [illegible] ರಪಿಸಲಿ ನೀ
[illegible] ॥೧೫॥ [illegible] । [illegible]ಸವಲಿ [illegible]
ತ್ರೀ । [illegible] ॥ [illegible] ನಿನ್ನ [illegible] । [illegible]
ತಿ[illegible] । [illegible] ॥೧೬॥ [illegible] ಕಣ್
ಣವರೆ [illegible] । [illegible] ಕಡಿ
ಸಿದೆಲಾ ॥ [illegible] । [illegible] । [illegible]ಯಲಿ [illegible]
[illegible] ॥೧೭॥ [illegible] । [illegible] ಒಲ್ಲೆನು [illegible]
[illegible] । [illegible] ತನಯರಿಗೆ ॥ [illegible] ಮಹಾಸಭೆಯಲ್ಲಿ
[illegible] । [illegible] । [illegible] ರಪಿಸು[illegible]ಯೊಲ್ಲೆ [illegible] ॥೧೮॥
[illegible] । ನನಲಿ [illegible]ದ್ಯೂತದಲಿ ನಿಲಿ । [illegible]
ವನಿಲದಸಬಳವಲಿ॥ತುಟಿಗೆ ತಾನಿದಪಷ್ಯ ಕುರುವ । ಗರ್ದವಿನಾಶಕಬೀಜವದು। ನಿಮಗಿದಿರೊಳಗೆ ಸೊಗ

ಸಾಪವೇ ಕೈಕೊಂಡನೈಸೆಂದ ॥೨೯॥ ಕರೆದು ತಾ ನೀನವರನುಜಾನುಜ । ಚರಿಸಂಪದ ಸಹಿತ ನಿನ್ನ
ಯ । ಕರಣವೃತ್ತಿಗೆ ಕಳವವನವೇ ನಮ್ಮ ವಾತ್ರಗಳು ॥ ಪರಿಕರವನುಪಚರಿಯದಿಸಿನಾ । ಪುರಸ್ತರು
ನೀ ಹೋಗು ಪಾಂಡವ । ಧರಣಿಪರನೊಡಗೊಂಡು ಬಾಯೆಂದಟ್ಟಿದನು ನೃಪತಿ ॥೩೦॥ ಕರೆಸಿದನು
ಭೀಷ್ಮಂಗೆ ಗುರುಕೃಪ । ರವರನ್ನು ಕಪ್ಪೃತ್ಯವೇನೆಂ । ದರಿಯಬಿನ್ನೈಸುಶಕ್ತಿಗೆ ಪುರದ ಪರಾಧಿ
ತಲೆ ॥ ಹಿರಿದು ಕುರುವಂಶಲತೆ ಹೊ । ಕ್ಕಿರಿದನೇ ಧೃತರಾಷ್ಟ್ರ ನೀಚ । ಸರಿಯಲಾರೆನು ಕರೆದು
ತಾ ಹೋಗೆಂದರವರಂದು ॥೩೧॥ ಅಭವನುರುಮೂರ್ತಿಗೆ ಶಿಕ್ಷಲಗ್ನದೆ । ವಿಧಿ... ಸೇರವಂತು
ಸುರಸಂ । ನಿಧಿಸು ಬಂದನು ಹಲವು ಪಯಣದಲಿವರ ಪಟ್ಟಣಕೆ ॥ ರಭಸ ಹಿಗ್ಗಿಗೊಂಡು ತಂದರು
ಸಭೆಗೆ ಮಾನ್ಯಯಘೋಷ ಪಟಹರ । ಪ್ರಭವಸತ್ಕಾರದಲಿ ಕೇಳ್ದರು ಕುಶಲಸಂಗತಿಯ ॥೩೨॥ ಧರಣಿಪತಿ
ಗಾಂಗೇಯಗೌತಮ । ಗುರುತನುಜಗುರುಕರ್ಣ ... । ಕುರುನೃಪತಿಯನುಜಾತ್ಮಜರು ಗಾಂಧಾರ
ಧಾಸುವತಿ ॥ ವರಸುಚಿವನಾಮಂತ್ರಪುರಜನ । ಪುರದ ಸಂಗಳ ಕುಶಲವನು ಪ । ಸ್ತ್ರೀಗಳವನು ವಿದುರನು
ಮಹೀಪತಿಗಾಪ್ತಬಾಂಧವರ ॥೩೩॥ ಸಾಧುಜನಂಗಳನಿತ್ತ ಭೂಪನ । ಸೋಲಿಸಿದನು ನಾನಾಕಥಾಸಂ ।
ಭಾವನಾನಂತರದ ಮಜ್ಜನ ಭೋಜನಾದಿಗಳ ॥ ಅಧಿಕಸತ್ಕಾರದಲಿ ಬಿಡ । ನಾನಾನವ ... ಬಳಿ
ಕ ಸ । ಭಾವಳಯದಲಿ ಪಾಂಡುಸುತರಿಗೆ ನುಡಿದನಾ ವಿದುರ ॥೩೪॥ ಧರಣಿಪತಿ ಬೆಸಸಿದನು ನೀವ್ಕೆ ।
ವರ ... ರಾಜಸೂಯವ । ಸ್ಥಿರವ ... ಕಥಾ ... ಯಲಿ ಬಳಲಿದಿರಿ ॥ ವರಸಭೆಯ
ರಚಿಸಿದರು ಹಸ್ತಿನ । ಪುರಿಗೆ ... ವಿಭವೋ । ತ್ಕರದಲಿ ... ರಚಿಸುವ
... ॥೩೫॥ ನೋಡುವುದು ಬಾಂಧವರ ಸ...ತಿ । ... ಭಯದಲಿ । ...
... ಸಮರಜಯಬೀಜ । ... ಯ । ... ನ
ಭ್ಯುದಯಬಳಿ । ... ॥೩೬॥ ...
... । ... ಭೀಷ್ಮರುಳಿದವ । ರಂಜಿನೋಪಾಯಿಯಲಿ ನಿಲುವರು ಹಲವು ಮಾತೇನು ॥ ...
ರರು ನೃಪಕರ್ಣ... ಶಕುನಿಗ । ... ನಿನ್ನ ... । ... ಯಂಗ್ರ...
ನೀವೆಂದ ॥೩೭॥ ಕರೆಸುವನು ಧೃತರಾಷ್ಟ್ರ ... ನ । ... ರಸನಲಿ ಧೃತರಾಷ್ಟ್ರ ... । ಗರಡು
ಮನವೇ ಭಾವಭೇದವೆ ಪಾಂಡುಭೂಪನಲಿ ॥ ವರವೆ ದೊರಕಲಿ ... । ಬರಲಿ ಭಯ
... ಭೂಪನ । ಕರಣಾಕೃತಿಗೆ ಹಸಾದವೆಂದನು ಧರ್ಮನಂದನನು ॥೩೮॥ ದ್ಯೂತವ್ಯಗ...
ವ್ಯಸನಪಾರ । ... । ... ಸಂಗತಿಯು ॥
... ವ್ಯಸನವಿದು ಸಂ । ... । ... ॥
ದೆಂದನಾ ವಿದುರ ॥೩೯॥ ಬಳರು ಕೌರವರಕ್ಷಘೋರ್ತರ । ... ಶಕುನಿ ... । ... ಯವ
ತಿ ದೌರ್ಜನ್ಯಮುಖದೀಕ್ಷಿತನು ಕಲಿಕರ್ಣ ॥ ... ಭೀಷ್ಮದ್ರೋಣರೆ ನೆ । ... ಸರು ನಮ್ಮ ಭೂ
ಪನ । ಬಳಕೆಗನ್ನಡಿನೋಡಿಕೊಳಿ ನೀವೆಂದನಾ ವಿದುರ ॥೪೯॥ ... ಕರ್ಣ ... । ಶಕು
ನಿಗಳ ದುಷ್ಕೃತ್ಯ ಭೀಷ್ಮಾ । ದ್ಯಕುಟಿಲರು ಸುಯೋಧನಮಂತ್ರಸಂಗತಿಗೆ ॥ ... ವೆಮ್ಮಯ್ಯ
ನೆಂಬುದು । ವಿಕಳವಲ್ಲಲೆ ವಿಧುರ ... । ಅಕನಲೇ ಧೃತರಾಷ್ಟ್ರನಾತನಂಜ ... ॥೪೦॥

ಕರೆಸಿ ನಿಮ್ಮಯ ಮಂತ್ರಿಜನಮು । ಖ್ಯರ ಪಸಾಯ್ತರ ಕೇಳುವುದು ಮನ । ದೊರೆಗೆ ಲೋಕಕೆ ಬಹರೆ
ಭೀಮಾದಿಗಳ ಮತವಿದು ॥ ಅರಸ ನಿಶ್ಚೈಸುವುದೆನಲು ನೀ । ಮರುಳೆ ವಿದುರ ಭವದ್ವಚೋವಿ ।
ಸ್ತರಕೆ ಪಡಿಸಣವುಂಟೆ ಶಿವಶಿವಯೆಂದನಾ ಭೂಪ ॥೯೨॥ ಹೋಹುದೇನಭಿಮತವೆ ಧೂರ್ತ್ತ । ವ್ಯೂಹ
ವದು ಭೀಷ್ಮಾದಿಹಿರಿಯರು । ಸಾಹಸಿಗರಲ್ಲದೆ ರಹಸ್ಯಕೆ ಸಲ್ಲರವರುಗಳು। ಕಾಹುರರು ಕೌರವರು
ಸಮರೋ । ತ್ಸಾಹಶಕ್ತಿಗೆ ತಾವದಲ್ಲ । ವ್ಯಾಹತವೆ ಮತವೆಂದು ಭೀಮಾದಿಗಳ ಬೆಸಗೊಂಡ ॥೯೩॥
ಜೀಯ ಬಿನ್ನಹವಿಂದು ದೇಹ। ಚ್ಛಾಯೆಗುಂಟೇ ಬೇರೆಚೇಷ್ಟೆ ನ । ವಾಯುಯೇ ನಮ್ಮನಿಬರಿಗೆ ರಾಜಾ
ಭಿಮಾನದಲಿ ॥ ನೋಯೆ ನೊವುದು ನಿಮ್ಮದೇಹದ । ಬೀಯದಲಿ ಸಾರ್ವಬೀಯವಹುದೆ । ನಮ್ಮಾಯತಂ
ಸ್ವಾತಂತ್ರ್ಯವೆಮಗಿಲ್ಲೆಂದನಾ ಭೀಮ ॥೯೪॥ ಕರೆಸುವನು ಧೃತರಾಷ್ಟ್ರ ನಿಮ್ಮನು । ಕರೆವೆವಣ್ಣಿಹಸು
ಯೋಧಸಾಹ್ಯರ । ಮರುಳುಗಳ ಮಾತೇನು ಹಿತವರು ನೀವಲಾ ನನಗೆ ॥ ಧರಣಿಯಿದು ಶಾಶ್ವತವೆ
ತಂದೆಗೆ । ಹಿರಿಯನಾಧೃತರಾಷ್ಟ್ರನಾಜ್ಞೆಯ । ಶಿರದೊಳಾಂತೆನು ಬಹೆನೆನುತ ನಿಶ್ಚೈಸಿದನು
ನೃಪತಿ ॥೯೫॥ ಇರುಳ ನೂಕಿದರುದಯದಲಿ ಭೂ । ಸುರರ ಕರೆಸಿದರಮಳಸಾಂವ । ತ್ಸರಿಕನಮು
ಹೂರ್ತದಲಿ ಹೊಯಿಸಿದರವರು ಹೊರಗುಡಿಯ ॥ ಪುರದ ಕಾಹನು ಸಚಿವಸಾವಂ । ತರಿಗೆ ನೇಮಿಸಿ
ಸಕಲದಳವೋ । ಹರದ ದೆಖ್ಖಾಳವನು ಕಂಡನು ಪುರವಹೊರವಂಟು ॥೯೬॥ ಬಿಗಿದರೆಂಚೆಯ
ಹೊಪ್ಪಿಣಿಯ ಹೊರ। ಜಿಗಳ ಜೋಡಿಯ ಪಕ್ಕಘಂಟೆಯ । ಝಗೆಯ ಮೊಗರಂಬದ ನವಾಯಿಯ
ಮಣಿಯುಜಲವಟೆಯು ॥ ಬಿಗಿದಕೊರಂಕುಶದ ಮಾವಂ। ತಿಗನಸನ್ನೆಗೆ ಕುಸಿದದಂತಿಯ । ಹೆಗಲ
ಹೊಂಗವುದಿಗೆಗೆ ವಿಜಯಂಗೈದನಾ ಭೂಪ ॥೯೭॥ ತಿಳಿತವಿನನುದಯದಲಿ ತಾರಾ । ವಳಿಗಳದ್ಭುತವೆ
ನಲು ಮುಕ್ತಾ । ವಳಿಯ ಧವಳಛತ್ರದೆಸಬಳಕೊಲೆವಚಂಗಳ ॥ ಕೆಲಬಲದ ಭೀಮಾರ್ಜುನರ ಗಜ ।
ದಳದ ಮುಂದೆ ಕುಮಾರವರ್ಗದ । ಸುಳಿವುಗಳ ಸೌರಂಭದಲಿ ಹೊರವಂಟನಾ ಭೂಪ ॥೯೮॥ ಮುಂದೆ
ಮೋಹರ ತೆಗೆದು ನಡೆವುದು। ಸಂದಣಿಸಿ ನಕುಲಾದಿಭೂಪರು । ಹಿಂದೆ ಮಣಿಕೇವಣದದಡ್ಡಿಯ ಬಿಗ
ಪಟ್ಟಿಯಗವ ॥ ಗೊಂದಣದ ಹೆಮ್ಮಕ್ಕಳಿದ್ದೆಸೆ । ಯಂದಣದ ಸಂದಣಿಗಳಲಿ ನಡೆ। ತಂದವನಿಬರರಾಣಿ
ವಾಸವದಂಡಿಗೆಗಳಂದು ॥೯೯॥ ಉಡಿಗೆಗಳ ದೇಸಿಯವಿಳಾಸದ। ತೊಡಿಗೆಗಳ ಮೌಳಿಯ ನವಾ
ಯಿಯ ಮುಡಿಗಳಬಲದೋರೆನೋಟದ ಬಳ್ಳಿವೆಳಗುಗಳ ॥ ಕಡುಬೆಮರತನುಪರಿಮಳದೊಳೆಪ ।
ಪಿಡಿವಗಗನೋದರದ ಗರುವೆಯ। ರಡಸಿದರು ದ್ರುಪದಾತ್ಮಜೆಯ ದಂಡಿಗೆಯ ಬಳಸಿನಲಿ ॥೧೦೦॥
ಭೂರಿಭೇರೀವಾದ್ಯರವಕ್ಕೆ । ನಾರಿಗಳ ಕಳಕಳದೊಳಡಗಿತು। ನಾರಿಯರ ನೇವುರದ ಮೊಳಗಿನೊಳದ್ದು
ದಾರಭಸ ॥ ಆರು ಹೊಗಳುವರಾವಿಭವವ । ಸ್ತಾರಪಣವನು ಪಯಣಗತಿಯಲಿ। ಭೂರಮಣನೈತಂದು
ಹೊಕ್ಕನು ಹಸ್ತಿನಾಪುರವ ... ... ॥೧೦೧॥

ಅಂತು ಸಂಧಿ ೧೦ ಕ್ಕೆ ಪದ ೭೬೪ ಕ್ಕಂ ಮಂಗಳಮಸ್ತು.

ಹದಿಮೂರನೆಯ ಸಂಧಿ.

ಸೂಚನೆ॥ ವೀತರಾಗದ್ವೇಷಭಯನನ । ಜಾತಶತ್ರುವನಕಟ ಕಪಟ ।
ದ್ಯೂತದಲಿ ಕುರುರಾಯ ಗೆಲಿದನು ಧರ್ಮನಂದನನ ॥

ಕೇಳು ಜನಮೇಜಯ ಧರಿತ್ರೀ । ಪಾಲ ಪಾಂಡವನೃಪರನರಮನೆ । ಬೀಳುಗೊಂಡುದು ವಿಳಸದಿಂ ದ್ರಪ್ರಸ್ಥಪುರಸಹಿತ ॥ ಮೇಲೆ ನೆಗಳುವದುರ್ನಿಮಿತ್ತವ । ನಾಲಿಸಿದರೇ ದೈವದೋಷವನಿ । ಹಾಲಿತಾಂ ತ್ಯಾಕರ್ಣಪತ್ರೈ ತಂದರಿಭಪುರಿಗೆ ॥೧॥ ಹರಡೆ ಕೆದರುತ್ತು ಬಲದಲುಸಿಯದ । ಉಲಿಯಲೊದರುತ್ತು ಹಸುಬನೆಡದಲಿ । ಕಲಿಯ ಹಕ್ಕಿಯ ತಾರು ಹಂಗಸವಾವ್ರುದುಡಿಕೆಗಳ ॥ ನಗಳೊಪಲಪವಿದಿರಿನಲಿ ಮೋ । ಹರವ ಮೊಲನಡಹಾಯ್ದು ನಾನೆಗ । ಳರಿಚಿ ಕೆಡೆದವು ಮುಗ್ಗಿದವು ರಥವಾಜಿಗಳು ನೃಪರ ॥೨॥ ಶಕುನಗತಿ ಸಾಮಾನ್ಯವಿದು ಕಂ । ಟಕವನೆಲೆ ಜನ್ಮದಲಿ ಸಹಾ । ಧಿಕದೊಳಿಪ್ಪರು ಸೌಬಗುರು ಭಾವಾಬ್ಜ ಬಾಂಧವರು ॥ ವಿಕಳದೆಸೆ ನಿಮ್ಮಡಿಗೆ ವೈರಿ । ಪ್ರಕರಕುನ್ನತದೆಸೆ ಮಹೀಶಾ । ಲಕಶಿರೋಮಣಿ ಪುರಕೆ ಮರಳೆಂದರು ಮಹೀಸುರರು ॥೩॥ ಮರಳಲಹುದೆ ಮೃಗವ ಸಿಕ್ಕಿದ । ಕೊರಳುಗಣ್ಣಿಯ ಕುಣಿಕೆಯಾರಲಿ । ಅರಿವುದೈವನ್ನಿಸಿದನೇ ಮೌಹೂರ್ತಿಕರ ನುಡಿಯ ॥ ಕರೆಸುವನು ಧೃತರಾಷ್ಟ್ರನವನಿಗೆ । ನರಿನೊಲಂಗಳ ಹಕ್ಕಿ ಹಲಗಳಿಯ । ಕರಹಮೇಗುವವೆಂದು ಜರೆದನು ಶಕುನಕೋವಿದರ ॥೪॥ ಪರಿಪರರರಸಾಳುಗಳು ರಾಯನ । ಬರವನರುಹಿದರಂದ ಭೂಪತಿ । ಪುರದೊಳಗೆ ಗುಡಿಗಟ್ಟಿಸಿದನತ್ಯಧಿಕಹರ್ಷದಲಿ ॥ ಸುರನದೀಜ ದ್ರೋಣ ಗೌತಮ । ಗುರುಜ ಕರ್ಣ ಜಯದ್ರಥಾದಿಗಳುರುವಿಭವದಿಂ ಬಟರುಗೊಂಡರು ಹೊಗಸಿದರು ಪುರವ ॥೫॥ ಸೇನೆ ಬಿಟ್ಟುದು ಪುರದ ಬಹಿರು । ದ್ಯಾನವೀಧಿಗಳೊಳಗೆ ಕುಂತೀ । ಸೂನುಗಳು ಸುಮುಹೂರ್ತದಲಿ ನಡೆತಂದರಿಭಪುರಿಗೆ ॥ ಆ ನಗರದೊತ್ತೊತ್ತೆಗಳ ಸಾ । ಮಾನಿನಿಯರು ಹಾರತಿಯನವ । ರಾನ ಸೇಂದ್ರ ಪುರಪ ಧಿ ವಿಭಾಡಿಸಿ ಬಿಸಲ ಬೀದಿಗಳ ॥೬॥ ವಿವರ ರಾಜಜನದ ತಳಿಗೆಗ । ಳಾರತಿಯ ಸೇಸೆಗಳ ಲಾಜೆಯ । ತೋರಮುತ್ತಿನ ಸಾಳಿಯ ಮಂಗಳರವ ಬಹಳ ಕಳಹ ॥ ಓರಣದ ತೋರಣದ ಗುಡಿಗಳ । ದಾರಿವೀಧಿಗಳೊಳಗೆ ಬಂದರು । ಭೂರಮಣರುತ್ಸಾಹದಲಿ ಧೃತರಾಷ್ಟ್ರನರಮನೆಗೆ ॥೭॥ ಇಳಿದರಾನೆಯ ನವಾಳೆರಥ್ಯಾ । ವಳಿಯ ತೇಜಿಗಳನು ಕಳುಪಿದರು । ಬಳಿಕ ಶಿರೋಮಣಿಗೆರಗಿದರು ಧೃತರಾಷ್ಟ್ರ ಭೂಪತಿಗೆ ॥ ಕುಲತಿಲಕ ಬಾ ಕಂದ ಭರತಾ । ವಳಿವಸದ ವರಕಂದ ಧರ್ಮ । ಸ್ಥಲಲಿತಾವಳಿಕಂದ ಬಾ ಯೆಂದಪ್ಪಿದನು ನೃಪನ ॥೮॥ ಬಾ ಮಗನೆ ರಿಪುರಾಯಮನ್ಮಥ । ಭೀಮ ಬಾರೈ ಭೀಮ ರಣಾನಿ । ಸ್ಸೀಮ ಫಲುಗುಣ ಬಾ ಸಕಲಸಹದೇವ ಬಾ ಯೆನುತ ॥ ಪ್ರೇಮರಸದಲಿ ಬೇರೆಬೇರು । ದ್ದಾಮಭುಜನಪ್ಪಿದನು ಚಿತ್ತ ಸ । ತಾಮಸದ ಕನಿಷ್ಠ ಪುಸುಕಿತ್ತು ಹರ್ಷದ ರಚನೆಯಲಿ ॥೯॥ ಹರಸಿದನು ಕಾಣಿಕೆಯ ಕೊಂಡೈ । ವರ ಪುರೋಹಿತಿಯನು ಕುಮಾರರ । ನರಸಿಯರನನಿಬರ ವಚೋರಚನೆಯಲಿ ಮನ್ನಿಸಿದ ॥ ಅರಸ ಗಾಂಧಾರಿಯನು ವಂದಿಸಿ । ಪರುಶನದ ಕೊಡು ಯೋಗೆನಲು ಕಡು । ಹರುಷ ಮಿಗಲೈತಂದರಾ ಗಾಂಧಾರಿಯರಮನೆಗೆ ॥೧೦॥ ಬಂದು ಕಾಣಿಕೆಗೊಟ್ಟು ವಂದಿಸಿ । ನಿಂದರೈ

ವರು ತನ್ನ ಕೆಳದಿಯರಿಂದ ತರಿಸಿದಳಾರತಿಯನುಪ್ಪಾರತಿಯನೊಲಿದು ॥ ಚಂದವಿಗೆ ಸಾವಿರದ ಸಂಖ್ಯೆಯ । ಚಂದ್ರಮುಖಿಯರ ತಳಿಗೆಯಾರತಿ । ಸಂಪಣಿಸಿದವು ಜಯಸಬುದ ಘೋಷಿಸಿದುವಂಬರವ ॥೧೧॥ ಅರಸಿ ಕಾಣಿಸಿಕೊಂಡಳೀನೃಪ । ರರಸಿಯನು ಸುಕುಮಾರಕರನವ । ರರಸಿಯರ ಸಖಿಯರ ವಿಳಾಸಿನಿಯರ ಪಸಾಯ್ತಿಯರ ॥ ತರಿಸಿ ಕೊಟ್ಟನು ಬೇರೆಬೇರೆನಿ । ಬರಿಗೆ ಯುಡುಗೊರೆಗಂಧಮಾಲ್ಯಾ । ಭರಣವನು ರಾಜೋಪಚಾರವಿಳಾಸವಿಭವದಲಿ ॥೧೨॥ ಬೀಳುಕೊಟ್ಟಳು ಬಳಿಕ ಕುರುನೃಪ । ನಾಲಯಕೆ ಕರೆದೊಯ್ದು ಕುಂತಿಯ । ಕಾಲಿಗೆರಗಿದನವರನುಚಿತೋಕ್ತಿಯಲಿ ಮನ್ನಿಸಿದ ॥ ಬಾಲಮೃಗವೊಳಗಾಯ್ತಲಾ ತೊಡು । ಕೋಲಸೆಂಪರು ನಗುತ ಮನದಲಿ ಕೌಳಿಕವಕುಹಕಿಗಳು ಕೌರವರಾಯಶಕುನಿಗಳು ॥೧೩॥ ಖಳರ ಹೃದಯದ ಕಾಳಕೂಟದ । ಹಳಕು ಬಲ್ಲರೆ ಮಾನ್ಯರವದಿರ । ಲಲಿತಮಧುರವಕ್ರೋವಿಳಾಸಕೆ ಮರುಳುಗೊಂಡರಲೈ ॥ ಅಳುಪಿದೊಡೆ ಮಧುಕರನ ಮರಿ ಜೋ । ಬ್ಬಲಿಯ ವನದೊಳಗೇನಹುದು ನೃಪ । ತಿಲಕರಿದ್ದರು ಬೇರೆ ರಚಿಸಿದ ರಾಜಭವನದಲಿ ॥೧೪॥ ಬಂದು ಕಂಡುದು ನಿಖಿಳಪುರಜನ । ವಂದು ಕಾಣಿಕೆಯಿತ್ತು ಕೌರವ । ನಂದನರು ಸಚಿವರು ಪಸಾಯ್ತರು ಯೋಗಿಮಂತ್ರಿಗಳು ॥ ಸಂದಣಿಸಿದುದು ಕವಿಗಮಕಿಸಟ । ವಂದಿಮಾಗಧವಲ್ಲಗಾಯಕ । ವೃಂದದೀನಾನಾಥರೋಲಗಿಸಿದರು ಧರ್ಮಜನ ॥೧೫॥ ಆದಿವಸವನು ಮಧುರಗೇಯವಿ । ನಾದದಲಿ ಕವಿವಾದಿವಾಗ್ಮಿವಿನೋದದಲಿ ನೂಕಿದರು ಮಜ್ಜನಭೋಜನಾದಿಯಲಿ ॥ ಆದುದುತ್ಸವವಂದಿನಿರುಳುಂಡಿ । ಹಾದಿಯಲಿ ಕಂಡನು ಕನಸ ಪಾ । ಸಾದಶಿಖರವು ಮುರಿದು ಬಿದ್ದುದನಡವಿಮಧ್ಯದಲಿ ॥೧೬॥ ಅರಸನುಷ್ಣವಡಿಸಿದನವನೀಶ್ವರವಿಚಿತ್ರಸತ್ಕ್ರಿಯೆಗಳನು ವಿಸ್ತರಿಸಿದನು ದುಸ್ವಪ್ನ ಕುಂತ್ರವಿಭಿನ್ನ ಚೇತನನು ॥ ಕರೆಸಿ ಧೌಮ್ಯನಿಗರುಹಲತಿಪು । ಸ್ತರದ ಕನಸಿದು ಶಾಂತಿಕರ್ಮವ । ಪುರದೊಳಗೆ ವಿರಚಿಸುವೆನೆಂಬದಿರೆಂದನಾಮುನಿಪ ॥೧೭॥ ಪುರದೊಳೆಲ್ಲಿಯ ಶಾಂತಿ ನಾರದ । ನೊರೆದನುತ್ಪಾತಪ್ರಬಂಧದ । ಹೊರಿಗೆಯನು ನಿಮ್ಮಕ್ರಸಿರಿಯವಿಧ್ವಂಸಕರವೆಂದು ॥ ಇರುಳು ನಾನಾಸ್ವಪ್ನಕಾನನ । ಗಿರಿಪರಿಭ್ರಮಣೈಕಚಿಂತಾ । ಭರಿತನಾದೆನು ಧ್ರುವಕ್ಕತಪ್ಪ ಸಭೋಗ್ಯವೆನಗೆಂದ ॥೧೮॥ ಜನಪ ಕಳುಹಿದ ದೂತರವರರ । ಮನೆಗೆ ಬಂದರು ಜೀಯ ಧೃತರಾ । ಷ್ಟ್ರನಸಮಯವಾಯಿತ್ತು ನಿಮ್ಮಡಿ ಬಿಜಯಮಾಡುವುದು ॥ ಎನಲು ತನ್ನ ಕುಮಾರರರಸುತ । ನ್ನನುಜರನು ಸಚಿವಪ್ರಧಾನರ । ನನಿಬರನು ಕರೆಸಿದನು ನೃಪ ಹೊರವಂಟನರಮನೆಯ ॥೧೯॥ ಬಂದು ಧೃತರಾಷ್ಟ್ರನ ಪದಾಬ್ಜಕೆ । ವಂದಿಸಲೊಡನಪ್ಪನೆ ಬಾರೈ । ತಂದೆ ಬಾರೆಂದೆಳೆದು ಕುಳ್ಳಿರಿಸಿದನು ಮಂಚದಲಿ ॥ ನಂದನರು ಭೀಮಾರ್ಜುನಾದಿಗ । ಳಂದು ಪರಿವೇಷ್ಟಿಸಿದರಿತ್ತಲು । ಕಂದುಹೃದಯದ ಕೌರವೇಂದ್ರನಿದನ ಕೇಳೆಂದ ॥೨೦॥ ಕರೆಸಿದನು ಶಕುನಿಯನು ಕರ್ಣನ । ಗರುಹಿದನು ಸ್ತಂಭವನನೆಕ್ಕಟಿ । ಗರೆದು ಹೇಳಿದ ಕೃತ್ರಿಮದ ಹಾಸಂಗಿಗಳ ರಚಿಸಿ ॥ ಪರಸಿ ಕೊಂಡರು ಗಣಪ ಯಕ್ಷೀ । ಸ್ಥಳ ಕಳಾವತಿ ದುರ್ಗಭವನೇ । ಶ್ವರಗಳಿಗೆ ವಿವಿಧೋಪಚಾರದ ಬಲಿವಿಧಾನದಲಿ ॥೨೧॥ ಖ್ಯಾತಸಿದ್ಧಿಯ ಮಂತ್ರವರವಿ । ದ್ಯಾತಿಶಯವಿಕ್ಷೇಪರಕ್ಷವಿ । ಧೂತರಿಪುಮತಿಯಂತ್ರಪರಸನ್ಮೋಹನೌಷಧಿಯ ॥ ಈತಗಳು ಮೇಳವಿಸಿದರು ನಿ । ರ್ಭೀತರಿವರಿದನೆತ್ತ ಬಲ್ಲರು । ಕೈತವದ ಕಣಿ ಕೌರವೇಶ್ವರ ಬಂದನರಮನೆಗೆ ॥೨೨॥ ಚಿತ್ತವಿಸಿದಿರೆ ಬೊಪ್ಪ ಮಯನಿವ । ಗೆತ್ತ ಸಭೆಯಿದು ದೇವನಿರ್ಮಿತ ।

ವೆತ್ತ ಮಾನವಕರ್ಮವೆತ್ತಲು ಸರಸವಲ್ಲದಕೆ ॥ ಇತ್ತನಿಮ್ಮಡಿ ಮಾಡಿಸಿದಸಭೆ । ಯೆತ್ತ ಬಿಜಯಂಗೈದು ನೋಡಿದೊ । ಡುತ್ತಮವಲಾಯೆಂದನಾದುರ್ಯೋಧನನು ನಗುತ ॥೧೩॥ ಆಸಭೆಯ ನೋಡುವೆವು ಶಿಲ್ಪದ । ದೇಸಿಗಾರರ ಕೈಮೆಗಳು ಲೇ । ಸೈಸಲೇ ಬೇರೇನು ಮಾನುಷದೈವಕೃತಿಯೆಂದು ॥ ಈಸುಸಂಪ್ರಿಯನಮ್ಮಲುಂಟೇ । ಲೇಸೆನುತ ನೃಪನೆದ್ದು ಕೈಗೊಡ । ಲಾಸಭೆಗೆ ಧೃತರಾಷ್ಟ್ರ ಬಂದನು ರಾಜಗಣಸಹಿತ ॥೧೪॥ ಬಗಿದನೀಲದಸರಿಯನೆಲಗ । ಟ್ಟುಗಳವೈಡೂರಿಯದ ಮಣಿಭಿ । ತ್ತಿಗಳ ವಜ್ರವವೇದಿಗಳ ವಿದ್ರುಮದಲೋವೆಗಳ ॥ ಜಗೆಯಲಹರಿಯ ಜಾಳಿಗೆಯ ಪ । ಚ್ಚೆಗಳಪಾಗಾರದ ಸುರತ್ನಾ । ಳಿಗಳಲೆಸೆದುದು ರಾಜಸಭೆ ತತ್ಕ್ಷಿಶವಮಾತ್ರದಲಿ ॥೧೫॥ ಕವಿದುವರುಣಾಂಶುಗಳ ಲಹರಿಯ ಲವಣಿ ಲಾವಣಿಗೆಯಲಿ ನೀಲ । ಚ್ಛವಿಯ ಟೀಫಿತಿ ಝಳುಪಿಸಿತು ದೆಸೆದೆಸೆಯ ಭಿತ್ತಿಗಳ ॥ ತಿವಿದುವೆಳಮುತ್ತುಗಳ ಚಂದ್ರಿಕೆ । ಜವಳಿಸಿದವೊಂದೊಂದನೌಕಿದ । ಪಿವಗಳಿತಮಣಿಕಿರಣವೇಣೀಬಂಧಬಂಧುರಟ ॥೧೬॥ ಅಲ್ಲಿ ಪಮಳೋದ್ಯಾನಪೀಟಿಗ । ಳಲ್ಲಿ ತಾವರೆಗೊಳದ ರಚನೆಗ । ಳಲ್ಲಿ ಹಂಸಮಯೂರಮಧುಕರಶುಕಪಿಕಾನೀಕ ॥ ಅಲ್ಲಿ ಕೇಳೀಶೈಲ ಹಿಮಗೃಹ । ವಲ್ಲಿ ವಿವಿಧವಿಳಾಸರಚನೆಗ । ಳಲ್ಲಿ ಹೊಯ್ಕಯ್ಯನಿಸಿ ಮೆರೆದುದು ಪಾಂಡವರ ಸಭೆಯ ॥೧೭॥ ಸ್ಥಳವನೇ ಜಲವೆಂದುನಿವ್ರಿಗಳ । ಜಲವನೇ ಸ್ಥಳವೆಂದ್ಯಬಾಗಿಲ । ನೆಳಲ ಭಿತ್ತಿಯ ಹಾಯ್ದು ಬಾಗಿಲ ಭಿತ್ತಿಯೆಂಬಳೆದು ॥ ಕಳವಳಿಸುವನೆ ಧರ್ಮಸುತನಾ । ಕೊಳನನೇ ಕೊಳನೆಂದು ಬಾಗಿಲ । ನೆಳಲ ಹೊಗಳುತ ಬಂದು ಹೊಕ್ಕನು ಬಹಳಚೌಕಿಗೆಯ ॥೧೮॥ ಕೆಲಸದಲಿ ಶಿಲ್ಪದಲಿ ರತ್ನಾ । ವಳಿಯ ಘಾಟನಮಾಯೆಯಲಿ ಸಭೆ । ಯೆಳೆಗಪೂರ್ವವಲಾ ಮಹಾದೇವೆಂತು ರಚಿಸಿದರೋ ॥ ವಿಳಸದಾಯಮ್ಯಯದ ವಿಶ್ರುತ । ವಳಯದುನ್ನತವಾಸ್ತುಲಕ್ಷಣ । ದೊಳಗೆ ಸೇರಿದುದೆಂದು ನೃಪ ಕೊಂಡಾಡಿದನು ಸಭೆಯಾ ॥೧೯॥ ಸೂಸಕದಮುತ್ತುಗಳ ತಾರಾ । ರಾಶಿಗಳ ಹಬ್ಬುಗೆಯ ನೀಲದ । ಹಾಸರಗಳೇ ಹೋಲುತಿದ್ದುವು ಗಗನಮಂಡಲವ ॥ ಸೂಸಕಂಗಳ ಮುಂದ ಮುತ್ತಿನ । ದೇಸಿಕಾತಿಯರಾನನೇಂದುಗ । ಳೆಸುಧಾಕರವೆನಲು ಗೆಲಿದುದು ಸಭೆ ನಭಸ್ಥಳವ ॥೨೦॥ ಗುರುನದೀಸುತಕರ್ಣಸೈಂಧವ । ಗುರುತನುಜಭಗದತ್ತ ಬಾಹ್ಲಿಕನುರುಯವನಸೌವೀರಕ ಸಲ್ಯಹೃದ್ಯಮಾಗಧರು ॥ ಅರಸುಗಳು ನಾನಾಟಗಂತದ । ಧರಣಿಪರು ಸಚಿವರು ಪಸಾಯ್ತರು । ನರಡುಪಂಟನಪಟಿವಸದೋಲಗದೊಡ್ಡು ಚೆಲುವಾಯ್ತು ॥೨೧॥ ಧರಣಿಪತಿ ಕೇಳೊಂದುಹರಿಯಂತರ ವಿಶಾಲಮಹಾಸಭಾವಿ । ಸ್ತರಣಿಯದರಲಿ ತೆರಹ ಕಾಣೆನು ತೀವಿತವನಿಪರು ॥ ಹೊರಗೆ ರಾವುತರು ರಥದವರು ಜೋ । ದರು ಪದಾತಿಗಳಿದ್ದುದಂದಿನ । ಸಿರಿ ಸುರೇಂದ್ರನ ಪಾಡಿಗೈವಡಿ ಹತ್ತುಮಡಿ ಯೆಂದ ॥೨೨॥ ಒಂದುಕಡೆಯಲಿ ಕವಡಿಕಯ ಜೂ । ಜೊಂದುಕಡೆಯಲಿ ಗದ್ಯಪದ್ಯವ । ದೊಂದುಕಡೆಯಲಿ ವಾರವಧುಗಳ ಸಾರಸಂಗೀತ ॥ ಒಂದುಕಡೆಯಲಿ ತರ್ಕಗೋಷ್ಠಿಯ । ದೊಂದುಕಡೆಯಲಿ ಕೌರವೇಂದ್ರನ । ಮುಂದೆ ಜಡಿದುದು ರಭಸಹಾಸಂಗಿಗಳ ಸಾರಿಗಳ ॥೨೩॥ ಅಡಲರಿಯನುಗಡ ಯುಧಿಷ್ಠಿರ । ನಾಡುವೊಡೆ ಬರಹೇಳು ಮೇಣಾ । ನೋಡುತಿರಲಾವಾಡುವೆವು ಸಭೆಯಲಿ ವಿನೋದದಲಿ ॥ ಪ್ರೌಢಯಿಲ್ಲದಸರಸನೆತ್ತವ । ನಾಡಲರಿಯದನೃಪತಿ ಮೃಗವೆಂ । ದಾಡುತಿಹರರಿವವರು ತಾವಲ್ಲೆಂದನಾಶಕುನಿ ॥೨೪॥ ಅಹುದು ಹೊಲ್ಲೆಹವಾವುದಾಡಲು । ಬಹುದು ಸುಜನರಕೂಡೆ ನೀವೇ । ಕುಹಕವಿದ್ಯಾ

ಸಾರ್ವಭೌಮರು ಶಕುನಿ ಕೌರವರು ॥ ಸುಹೃದಯರಿಗತಿಕುಟಿಲರಲಿ ನಿ । ಸ್ಪೃಹರಿಗತಿರಾಗಿಗಳೊಡನೆ ದು । ಸ್ಸಹಕಣಾ ಸಂಮೇಳವೆಂದನು ಧರ್ಮಸುತ ನಗುತ ॥೩೫॥ ನೀವು ಸುಹೃದಯರಿಂದು ದುರ್ಜನ । ರಾವು ನಿಸ್ಪೃಹರಾಗಿಗಳು ರಾ । ಗಾವಲಂಬರು ನಾವಲೇ ನೀವರಿಯರೇ ನಿಜವ ॥ ನೀವು ನಾವೆಂಬೀಪೃಥಗ್ಭಾ । ವಾವಲಂಬನವೇಕೆ ನಿಮ್ಮಲಿ । ನಾವು ನಮ್ಮಲಿ ನೀವೆಯೆಂದನು ನಗುತ ಕುರುರಾಯ ॥೩೬॥ ಇರಲಿ ಬಾಂಧವರಿದರೊಳೆರಡು । ಟ್ಟರದೆ ನಿಲಲದು ಲೇಸಲಾ ವಿ । ಸ್ತರಿಸಲೇಕೆ ದ್ಯೂತದುರ್ವ್ಯಸನಪ್ರಪಂಚವಿದು ॥ ತರುಣಿವಿಟಚಾರಣಕುಶೀಲಕ । ಭರತಗಣಿಕಾಯೋಗ್ಯವಿಷಯಕೆ । ಗರುವರೊಲಿವರೆ ಯೆಂದನಾಕುಂತೀಸುತಗೆ ಯಮಸೂನು ॥೩೭॥ ದ್ಯೂತವಿದು ದುರ್ವ್ಯಸನವೆಂಬುವ । ನೀತಿವಿದನೇ ಶ್ರೋತ್ರಿಯರಿಗ । ಖ್ಯಾತಿಯದು ಯತಿಗಳಿಗೆ ಮೋಹನಿರ್ಭೀತಭೂಪರಿಗೆ ॥ ದ್ಯೂತಮೃಗಯಾಸ್ತ್ರೀವ್ಯಸನ ನೃಪ । ಜಾತಿಗೋಸುಗವಾದುವಿದರ ರ । ಗಾತಿಶಯವರಿಯದನು ನರಪಶುಗವೆಂದನಾಶಕುನಿ ॥೩೮॥ ಅರಸ ಕೇಳಕ್ಕಾಳಗಕೆ ಜೂಜಿಗೆ । ಕರೆದೊಡೊಲ್ಲೆನಲಿಸದೊಡ ಬಿಕನ । ಗರುವನೇ ಕ್ಷತ್ರಿಯರೊಳಗೆ ನೃಪಧರ್ಮ ನೀನರಿಯ ॥ ಕರೆದವಾವ್ ಬೊಪಿಂಗೆ ಬೇಕೇ । ಧರಣಿಪತಿ ಬಾ ರಾಜಧರ್ಮವ । ನೊರಸುವೊಪ್ಪಸಿಲ್ಲೆಂದು ಹೇಕ್ಷಿಸಿ ನುಡಿದನಾಶಕುನಿ ॥೩೯॥ ರಾಜಧರ್ಮವಿದಹುದು ಕಳಪಿನ । ಜೂಜು ಧರ್ಮದವಗುನೊ ಪೊಮ್ಮನೊ । ಬೀಜವಾವುದು ನಿಮ್ಮ ಕಪಟದ್ಯೂತನಿರ್ಣಯಕೆ ॥ ರಾಜಪರಿಪಾಟಗಳ ಪಂಥದ । ಜೂಜಬಲ್ಲೊಡ ಕರೆಯ ಬಾರದೊ । ಮಾಜನಾರ್ದನನಾಣೆ ಯೆಂದನು ಧರ್ಮನಂದನನು ॥೪೦॥ ಭೂರಮಣ ಕೇಳುಳಿನೃಪಸಂ । ಹಾರಬೀಜದ ಕರ್ಮಫಲಸಂ । ಸ್ಕಾರವಳ್ಳೆಯನಿರಿದು ನೂಕಿತು ಧರ್ಮನಂದನನ ॥ ಧೀರನಲ್ಲಾ ಧರ್ಮಶಾಸ್ತ್ರವಿ । ಚಾರಸಾರಜ್ಞಾನನಿಷ್ಠೆಯೊ । ಘೋರಿಯುಂಟೇ ದ್ಯೂತಕೇಳಿಗೆ ಮಾಡುವನು ಮನವ ॥೪೧॥ ಇಂದುವದನೆಗೆ ದಕ್ಷಿಣಾಕ್ಷಿ । ಸ್ಪಂದವಾಯಿತು ಭೀಮಪಾರ್ಥರ । ಗಂದು ಕತ್ತಿತು ಹೃದಯ ಮಾಮಧುಜಾಕ್ಷಿಗಳಸಹಿತ ॥ ಕಂಟದವು ಮೋರೆಗಳು ಗಂಗಾ । ನಂದನದ್ರೋಣಾಟಸುಜನರ । ಗಂದವೇರಿತು ಮುಸುಡು ಶಕುನಿಸುಯೋಧನಾಟಗಳ ॥೪೨॥ ಕುರುಪತಿಯ ಕೃತಪುಣ್ಯಬೀಜಾಂ ॥ ಕುರದ ಕಾಲದಗಂತ್ರದವನೀ । ಶ್ವರಸಮೂಹಚಮೂನಿಬರ್ಹಣಸಂಚಸಾಸಮಯ ॥ ಅರಸಕೇಳ್ಕುಂತೀಕುಮಾರರ । ಸಿರಿಯ ಮಗುಡದ ಹೊತ್ತು ಮಿಗೆ ಗಬ್ಬರಿಸಿತ್ತೈ ಧರ್ಮಜನ ಗಾಢದ ಬುದ್ಧಿಪರ್ವತವ ॥೪೩॥ ವ್ಯಸನತೃಷ್ಣೆಯು ಕೀಳುಚಿತ್ತದ । ಮಿಸುನಿಯೊಳು ಬೆರಸಿತು ಸುಬುದ್ಧಿಯ । ರಸವು ಹಾರಿತು ಹುಟ್ಟದರಾಗದ್ವೇಷವಹ್ನಿಯಲಿ ॥ ಮುಸುಡ ತಿರುಹಿತು ತಿಳಿವು ಲಜ್ಜೆಯ । ದೆಸೆಗೆ ಮರ್ಯಾದೆವಾಯ್ತು ಪರಿಭವ । ದೆಸಗೆಯನು ಸೂಚಿಸಿತು ಲಕ್ಷ್ಮಿಗೆ ಧರ್ಮಜನ ಹೃದಯ ॥೪೪॥ ಹಲವುಮಾತಿನಲೇನು ಭೂಪತಿ । ತಿಲಕಸಿಲುಕಿದನವದಿರೊಡ್ಡಿದ । ಬಲೆಗೆ ಬಂದನು ಸತ್ಯಸಾರಿಯ ಗುರಿಯ ಗದ್ದುಗೆಗೆ ॥ ಕೆಲದಲನುಜರು ಮಾಮಡಲಿಮಣಿ । ವಳಯಮಂಚದಲಂಧನೃಪನಿದಿ । ರಲಿ ಸುಯೋಧನಕರ್ಣಶಕುನಿಜಯದ್ರಥಾದಿಗಳು ॥೪೫॥ ಹಲಗೆಯಿಕ್ಕಿತು ಹೊನ್ನಸಾರಿಗ । ಳಿಳುಹಿದವು ಹೇಳೊಡ್ಡವನು ಕಳ । ಕಳವ ನಿಲಹೇಳೆನುತ ಮಿಗೆ ಗರ್ಜಿಸಿದನಾಶಕುನಿ ॥ ನೆಲಕೆ ಹಾಯ್ಕಿದನಡಗಡಿಗೆ ಮಂ । ಡಳಿಸಿ ಸಾರಿಯ ಹೂಡಿ ಕುರುಪತಿ । ಗೆಲಿದ ಹೋಗೆಂಪೂಜರುಂಗಿಪ್ಪನು ತೊಡೆಯನಪ್ಪಳಿಸಿ ॥೪೬॥ ಆಟವಾರಂಭಿಸದು ಎರಿಬೊ । ಬ್ಬಾಟವೇತಕೆ

ವಿಜಯಸಿರಿವಾ । ಚಾಟರಿಗೆ ಮೆಚ್ಚುವಳೆ ತೋರಾ ದ್ಯೂತಕೌಶಲವ ॥ ತೋಟಿ ಬೇಕೇ ಕೈಯಹೊಯ್ದೂ
ತಾಟವೇತಕೆ ಧರ್ಮನಂದನ । ಸಾಟಿವೊಳ್ಳಿತು ಬಲ್ಲೆನೆಂದನು ಶಕುನಿ ನಸುನಗುತ ॥೪೭॥ ಏನ್ನ
ಲೆಕ್ಕಕೆ ಶಕುನಿ ಭೂಪತಿ । ನಿನ್ನೊಡನೆ ಕೈಹೊಯ್ದುನೊಡ್ಡುವ । ನೆನ್ನೊಡನೆ ಹೇಳೆಂದು ನುಡಿದನು ಕೌರವ
ರರಾಯ ॥ ನಿನ್ನೊಳಾಗಲಿ ನಿನ್ನವಮಾವನ । ಮುನ್ನ ಬರಲಿದಕೇನೆನುತ ಸಂ । ಪನ್ನಶಠರೊಡನಳ
ವಿಗೊಟ್ಟವನೀಶನಿಂತೆಂದ ॥೪೮॥ ಹೇಮಭಾರದ ವಿಮಲರತುನ । ಸ್ತೋಮವಿದೆ ಪಣವೆನಲು ಕೌರ
ವ । ಭೂಮಿಪತಿಯೊಡ್ಡಿದನು ಧರ್ಮಜಹೆಸರಿಸಿದಧನವ ॥ ಆಮಹಿಪಶಕುನಿಗಳು ಸಾರಿ । ಗ್ರಾಮವನು
ಕೆದರಿದರು ತಿವಿದಾಡು । ದಾಮಸಗಳುಬ್ಬೆದ್ದುಬ್ಬರ ಕರಣವೃತ್ತಿಗಳು ॥೪೯॥ ದುಗನ ಹಾಯಿಕು
ತನಗೆ ಹಾಯ್ಕು । ತ್ರಿಗಸವೆಂಬುಬ್ಬರದ ಹಾಸಂ । ಗಿಗಳ ಬೊಬ್ಬೆಯ ಸಾರಿಗಳ ಮುಗಿಲುಮುಗಿಲನಿಸ್ವನವ ॥
ಉಗಿವಸಗಗಳುಬ್ಬಿದು ಹಾರದ । ಬೆಗುಡುಗಳ ಬೇಟಗಳ ತಳಿಸಾ । ರಿಗಳ ಧಾಳಾಧೂಳಿ ಮಸಗಿತು
ಭೂಪಕೇಳೆಂದ ॥೫೦॥ ರಾಯ ಸೋತನು ಶಕುನಿ ಬೇಡಿದ । ದಾಯ ತನಗುಪ್ಪಿಗೆಯಲೊದಗಿದ । ವಾಯ
ತದ ಕೃತ್ರಿಮವಲೇ ಕೌರವರ ಸಂಕೇತ ॥ ಆಯಿತೀ ಹಲಗೆಯನು ಕೌರವ । ರಾಯ ಗೆಲಿದನು ಮತ್ತೆ
ಪಣವೇ । ನಾಯಿತೆಂದನು ಶಕುನಿ ಯಮನಂದನನನೀಕ್ಷಿಸುತ ॥೫೧॥ ಕನಕಮಯರಥವೆರಡುಸಾವಿರ ।
ವೆಸಗೆ ಹೂಡಿದವೆಂಟುಸಾವಿರ । ವಿನುತವಾಜಿಗಳೊಡ್ಡವೆಂದನು ಧರ್ಮನಂದನನು ॥ ಜನಪತಿಗೆ ತಾನೈಸಲೇ
ಹಾ । ಯ್ಕೆನುತ ಸಾರಿಯ ಕೆದರಿದನು ದು । ರ್ಜನರಿಗೊಲಿದುದು ದೈವಗತಿ ಬೊಬ್ಬಿರಿದನಾಶಕುನಿ ॥
ಸೋತೆಯರಸಾ ನಿನಗೆ ಜೂಜಿನ । ಭೀತಿಯುಂಟೇ ಮಾಣು ಮೇಣಾ । ನೀತನೇ ನುಡಿ ಮೇಲಣೊ
ಡ್ಡವ ಹಲವುಮಾತೇನು ॥ ಕಾತರಿಸಬೇಡೆನಲು ಧಡ ಪಣ । ಭೀತನೇ ನಾನಕಟನುತ ಕುಂ । ತೀತನುಜ
ನೊಡ್ಡಿದನು ಸಾವಿರಮತ್ತಗಜಘಟೆಯ ॥೫೩॥ ಮದುವೆಮುಗಿವ ಗಜಘಟೆಗಳೆಂ । ದಾದುರಾತ್ಮಕ ನಾಡಿ
ದನು । ದುರ್ಭೇದಪದವದರ ಕಪಟಮಂತ್ರವಸಾವನರಿವವನು ॥ ಆದುದರಸರ ಸೋಲವಿನ್ನೇ । ನಾದು
ದೈ ಭೂಪತಿಯ ಗಜಘಟೆ । ತೀದವೇ ಮೇಲೇನು ಪಣವುಂಟೆಂದನಾಶಕುನಿ ॥೫೪॥ ಧಡ ದುಪದ್ರನೆ ತಾನು
ತನ್ನಯ । ಮಡದಿಯರ ಕೆಳದಿಯರು ಸಾವಿರ । ಮಡಿ ಸುಯೋಧನರಾಜಭವನದ ವಾರನಾರಿಯರ ॥
ನುಡಿಯಬೇಕೇ ಧರ್ಮಸುತ ನಿಂ । ಮಡಿಗಳೊಡ್ಡಿದಬಳಿಕ ಗೆಲಿದವ । ರೊಡವೆಯೈಸಲೆ ಹಾಯ್ಕುಹಾ
ಯ್ಕೆಂದೊದರಿದನು ಶಕುನಿ ॥೫೫॥ ವಿನನಾಡಿದೊಡೇನುಫಲ ದೈ । ವಾನುಕೂಲ್ಯದ ಕಾಣಿಕೆ ಬೇರಹು
ದಾನರೇಂದ್ರನ ಸಾರಿ ಸೋತುದು ನಿಮಿಷಮಾತ್ರದಲಿ ॥ ಆನರೋಧಿಯ ಹತ್ತುಸಾವಿರ । ಮಾನಿನಿಯ
ರಸು ಮತ್ತೆ ಸೋತನು । ಮಾನನಿಧಿಯೇ ಮತ್ತೆ ಪಣವೇನೆಂದನಾಶಕುನಿ ॥೫೬॥ ಅರಮನೆಯರ ವೈಗಾ
ಹುಗಳ ಕಂ । ಕರರು ಸಾವಿರವಿದೆ ರಥಾನಿ । ವ್ಯರಸನಲಿ ಪಣವೇನೆನಲು ನೀವೇನನೊಡ್ಡಿದಿರಿ ॥ ಪು
ರಳಿ ಬೆಸಗೊಳಬೇಡ ನಮ್ಮಲಿ ಬರಹವದುಹಾಯ್ಕೆನುತ ಸಾರಿಯ । ಬರಸಿ ತಿವಿದಾಡಿದನು ಹೆಕ್ಕಳಿಸಿಕ್ಕಿ
ದನು ಶಕುನಿ ॥೫೭॥ ಅರಸ ಸೋತೈ ಸಾರಿಯರ ಜಯ । ಮರಳಿತಿತ್ತಲು ಮನಕೆ ಭೀತಿಯ । ಬೆರಕೆ
ಯುಳ್ಳೊಡೆ ಬಿಟ್ಟುಕಳೆ ಪೈಸರಕೆ ಸಮಯವಿದು ॥ ಅರಸುಪಂಥದವಾಸಿ ಮನಕು । ಬ್ಬರಿಸುವೊಡೆ ಪ
ಣವೇನು ಹೇಳೈ । ಧರಣಿಪಾಲ ಯೆನುತ್ತ ರಂಗಣಾಗೂಣಿದನಾಶಕುನಿ ॥೫೮॥ ಬಲವೊ ಸೌಬಲಪಾಂಡು
ಬಿನವು । ಕ್ಕಳಕಣಾ ಚತುರಂಬುನಿಧಿಮೇ । ಖಳೆಯವೃತ್ತಿರೆಕಾರುಸರೇಂದ್ರರ ಸೀಮೆಪರಿಯಂತ ॥ ನೆ

ಲವಿದೆಮ್ಮದು ನೃಪರೊಳಗೆ ನಾ । ವುಳಿಯೆ ಧರಣಿಪರಾರು ರಥಸಂ । ಕುಳವನೊಡ್ಡುವೆನೊಂದು ಭಾ
ರಗೆ ಹತ್ತುಸಾವಿರವ ॥೨೯॥ ಈರಥಕೆ ನಾಲ್ವತ್ತುಸಾವಿರ । ವಾರುವಂಗಳ ಕೋಟವಾಪರಿ । ವಾರವಿ
ದೆಲಾ ರಪಣವೆಂದನು ಸುಬಲತನಯಂಗೆ ॥.ವೀರನಹೆಯ್ಯೆ ಧರಣಿಪತಿ ತೆಗೆ । ಸಾರಿಗಳ ಬಿಡುಸೆರೆಯ
ಬಿಗಿದುದು । ಹಾರದಲಿ ನೀಸೋತೆ ಹೋಗೆಂದೊದರಿದನು ಶಕುನಿ ॥೩೦॥ ಆವಕೌಳಿಕಮಂತ್ರತಂತ್ರದ
ಡಾವರದಡೊಳ್ಳಾಸವಿಕ್ಕಿದ । ದೀವಸದ ಬೇಳುವೆಯನೇನೆಂಬೆನು ಮಹೀಪತಿಯ ॥ ಆವವಸ್ತುವನರಸ
ನೊಡ್ಡುವ.। ನಾವವಹಲದಲಾತ ಸೋಲಿಸಿ । ಕೈವಳಿಸಿದನೊ ಬಲ್ಲನಾವವನೆಂದನಾಮುನಿಪ ॥೩೧॥ ಅ
ರಸ ನೀಗಿದೆ ಹತ್ತುಸಾವಿರ । ವರರಥವನಿನ್ನೇನು ಸಾಕೀ । ಸರಲಿ ನಿಲುವುದು ವಿತ್ತವುಂಟೇ ಮತ್ತೆ ಹೆ
ಳೆನಲು ॥ ಮರುಳೆ ನಾಬಲ ಚಿತ್ರಗಧನೀ । ನರಗೆ ಕೊಟ್ಟನು ತೇಜಿಗಳ ತಿತ್ತಿರಿಯಬಣ್ಣದ ಹತ್ತುಸಾ
ವಿರತುರಗವವೆಯಂದ ॥೩೨॥ ಆಡಿದನು ನೃಪನಾಕ್ಷಣಕೆ ಹೋ । ಗಾಡಿದನು ಖೇಚರರ ಘಾಡಾ । ಖಾ
ಡಿಯಲಿ ಝಾಡಿಸಿದ ಹಯವನು ಹತ್ತುಸಾವಿರವ ॥ ಹೂಡಿದನು ಸಾರಿಗಳ ಮರಳಿ । ನ್ನಾಡುವೊಡೆ
ಪಣವಾವುದೈ ವಾ ।. ತಾಡಿಯೆನೆ ಮನದಲಿ ಮಹೀಪತಿ ಧನವ ಚಿಂತಿಸಿದ ॥೩೩॥ ಅಗಣಿತದಧನವುಂ
ಟು ಹಾಸಂಗಿಗಳ ಹಾಯಿಕು ಸೋತವಸ್ತುವ । ತೆಗೆವೆನೀಗಳೆ ಶಕುನಿ ನೋಡಾ ತನ್ನ ಕೌಶಲವ ॥ ದು
ರ್ಗಾಹಲಗೆಗೆ ಹತ್ತುಮಡಿರೇ । ಖಗೆ ಗಜಾಶ್ವನಿಕಾಯರಥವಾ । ಜಗಳುಸಹಿತಿದೆ ಸಕಲಸೈನಿಕವೆಂದನಾ
ಭೂಪ ॥೩೪॥ ಆಯಿತಿದು ಪಣವಹುದಲೇ ನೃಪ । ಹಾಯಿಕಾಹಾಸಂಗಿಗಳ ನಾ । ಹಾಯಕರು ಪತಿ
ಗಿಲ್ಲ ಕೃಷ್ಣಾದಿಗಳು ನಿನ್ನವರು ॥ ದಾಯಕಂದರವೊಡೆ ಸುಯೋಧನ । ರಾಯನುಪಚಿತಪುಣ್ಯವಕಟಾ।
.ದಾಯವೇ ಬಾಯೆಂದು ಮಿಗೆ ಬೊಬ್ಬಿರಿದನಾಶಕುನಿ ॥೩೫॥ ಮತ್ತೆ ಹೇಳುವುದೇನು ಸೋಲವ । ಬಿತ್ತಿ
ಬೆಳೆದನು ಭೂಪನವರಿಗೆ । ತೆತ್ತನೈ ಸರ್ವಸ್ವಧನವನು ಸಕಲಸೈನಿಕವ ॥ ಮತ್ತೆ ಪಣವೇನೆನಲು ಬಳಿ
ಕರು । ವತ್ತುಸಾವಿರಕರಿಕಳಭವಂ । ಭತ್ತುಸಾವಿರ ತುರಗ ಶಿಶುಗಳ ನೊಡ್ಡಿದನು ಭೂಪ ॥೩೬॥
ಅರಸ ಕೇಳೀತುರಗಪೀರಥ । ಕರಿನಿಕರಪೇಸೈನ್ಯಹಸ್ತಿನ । ಪುರಿಗೆ ಬಂದುದು ತಮ್ಮ ಕೂಡೆ ವಿನೋ
ದಕೇಳಿಯಲಿ ॥ ಕುರುಪತಿಯವಶವಾಯ್ತು ಬಳಿಕಿನ । ಮರಿಗುದುರೆಮರಿಯಾನೆಗಳನು । ಚ್ಚರಿಸಿ
ಸಾರಿಯ ಸೋಕಿದಾಗಲೆ ಸೋತನಾಭಪ ॥೩೭॥ ಅಕಟ ಸಾಲದೆ ಜೂಜುನಿರ್ಬಂ । ಧಕವೆ ಶಿವಶಿವ
ತಾನಿದೆತ್ತಣ । ಶಕುನಿಯೆತ್ತಣಭರತಕುಲದಮಹಾಮಹೀಶ್ವರರು ॥ ಪಿಕಳಚೇಷ್ಟೆಯದೇನು ವೃದ್ಧ
ಪ್ರಕರಕಿದು ವಿಳಸವೆ ವಿಘಾತಿಗ । ಸಕಲಜನಸಮ್ಮತವೆಯೆಂದನು ಖಾತಿಯಲಿ ವಿದುರ॥೩೮॥ವರಪುರೂ
ವನಹುಷನವನೀ । ಶ್ವರತಿಲಕದುಷ್ಷಂತಕುರುಸಂ । ವರಣನವಲಯಯಾತಿಯಾದಿಪರಂಪರಾಗತದ॥
ಭರತಕುಲವಿದರೊಳಗೆ ವಂಶೋದ್ಧರರಿಳೆಯಬೆಳಗಿದರು ನೀನವತರಿಸಿ ತಂದ್ಯೆ ತೊಡಕನೆಂದನು ಖಾತಿ।
ಯಲಿ ವಿದುರ ॥೩೯॥ ಸೋಲವೆಚ್ಚಿದುದುಬವರನೊಡ್ಡದ । ಮೇಲೆ ಹೇರಿದುದೊಡ್ಡವೀಗಳು । ಮೇಲ್ವಗ್ಗೆ
ನೀನಾದೆ ಕುಸಿದರು ಪಾಂಡುನಂದನರು ॥ ಸೋಲವಿದು ಕಾಲಾಂತಕನ ವೈ । ಸಾಲ ಸಾರಿದೆನಕಟಸಾ
ಕಿ। ನ್ನೇಳು ಕೌರವನೃಪತಿಯೆಂದನು ಖಾತಿಯಲಿ ವಿದುರ ॥೪೦॥ ಗೆಲಿದಧನವಕ್ಕುವುದೆ ಸೋತವ । ರಳು
ಕಿದವರೇ ಪಾಂಡುಪುತ್ರರ ಬಲುಹ ಬೆಸಗೊಳ್ಳಾ ತದೀಯಶ್ರವಣದೃಷ್ಟಿಗಳ ॥ ಎಲೆಸುಯೋಧನ
ವಿಷದಮಧುರವು । ಕೊಲುವುದೋ ಮನ್ನಿಸುವುದೋ ಕ । ಕ್ಕಲಿತೆಗಿದು ಕಢೆಹಾರವಾಗಲಿ ಸಾಕು

ತೆಗೆಯೆಂದ ॥೨೧॥ ಗೆಲಿದದರ್ಪದದಡ್ಡಿ ತೆಗೆ ಸೌ । ಬಲನ ಬೀಳ್ಕೊಡು ನಿಖಿಲಬಾಂಧವ । ಕುಲಸಹಿತ
ನೀ ಮಧುರವಚನದಲಿವರ ಸಂತೈಸು ॥ ನೆಲನನೇಕಚ್ಛತ್ರವಲಿ ಪದ । ಗೊಳಿಸು ಬಿಡು ಕುಹಕವೊಡಿಪು
ನಿಜಾನ್ವಯ । ಮುಳಿವು ಬೆಸಗೊಳು ಬೇಹಹಿರಿಯರನೆಂದನಾವಿದುರ ॥೨೨॥ ಖೂಳನೆಂಬೆನೆ ಸಕಲಕಲೆ
ಗಳ । ಬಾಳುವನೆಗಡ ನಿನ್ನ ಬುದ್ಧಿ ವಿ । ಶಾಲಮತಿ ನೀನೆಂಬೆನೇ ಜಗದಜ್ಞರಧಿದೈವ ॥ ಕೇಳಿದೊಡೆ
ಮೇಣಹಿತಹಿತವನು । ಹೇಳುವುದು ಪಾಂಡಿತ್ಯ ನಿನ್ನನು । ಕೇಳಿದವರಾರೆಂಬು ಜರೆದನು ಕೌರವರ
ರಾಯ ॥೨೩॥ ಹಿತವ ನೀನವರಿಗೆ ಕುಟುಂಬ । ಸ್ಥಿತಿ ವಿಡಂಬಕೆ ನಾವು ಕುಂತೀ । ಸುತರೊಡನೆ
ಸಮ್ಮೇಳವೆಮ್ಮೊಳು ವೈಮನಸ್ಯಗತಿ ॥ ಕೃತಕಮಾರ್ಗದ ಮೋಡಿಯಲಿ ಪರಿ । ಚಿತನು ನೀನಲ್ಲಕ್ಷವಿ
ಮಲ । ಕ್ರತುವಿಧಾನವನಕ್ಷದೀಕ್ಷಿತರರಿವರಿಪನೆಂದ ॥೨೪॥ ನೀ ಹಿತವನೆ, ಶಕುನಿ ರಾಜ । ದ್ರೋಹಿಯೆ,
ಹುಸಿಯಲ್ಲ ನೀನೇ । ಹೋಹುದೈ, ನಿನಗಾವುದಭಿಮತವಾದಿಗಂತರಕೆ ॥ ಐಹಿಕಾಮುಷ್ಮಿಕದ ವಿಭವೋ ।
ತ್ಸಾಹನಿಸ್ಪೃಹರಾವಲೇ ಸಂ । ದೇಹವೇ ನೀವರಿವಿರೆಂದನು ತೂಗಿ ತುದಿವೆರಳ ॥೨೫॥ ಗುರುಗಳುಸಿರ
ರು ಭೀಷ್ಮನೆಮ್ಮನು । ಕೆರಳನೀ ಕೃಪ ನುಡಿಯನಯ್ಯನ । ಕೊರಳು ಕೊಂಕದು ಬಾಹ್ಲಿಕನ ಮನ ನೋಯ
ದಿನ್ನು ಬರ ॥ ಹಿರಿಯರಿವರೇನಜ್ಞರೇ ನೀ । ಪರಮತತ್ವಜ್ಞಾನಿಯೇ ಕಾ । ತರಿಸದಿರು ನೀನೆಂದು
ಟಿಕ್ಕರಿಗಳೆದನಾಭೂಪ ॥೨೬॥ ಇವರ ಜನಪಾಧ್ವರವನಡಹಾ । ಯ್ದವನಸಾಗಳೆ ದೇವಕೀಸುತ । ನವ
ಬದನು ನವಿಮ್ಮವಿನೋದದ್ಯೂತಸಂಪದದ ॥ ನವನವಿಷ್ಣುವಿಕಾರಿಯನು ಕರಿ । ಭವಿಸುವವರನು ಕಾಣೆ
ತ್ರಿವಯಿಂ । ದವನಿಪತಿ ನಿಜಮುಷ್ಟಿನಲಿ ಹೂಳಿದನು ಪರಿಚರರ ॥೨೭॥ ಮಣೆಯೆ ನೀನಿಲ್ಲೀಯನರ್ಥವ ।
ಕುಣಿಕೆಗೊಳಿಸಿದನೀಸಹಿತ ನಿ । ಸ್ಸೃಣಗಳಹಪ್ರಂಪವನನೀರಾಧೇಯಶಕುನಿಗಳ ॥ ರಣದೊಳಗೆ
ಭೀಮಾರ್ಜುನರ ಮಾ । ರ್ಗಣವಧಾರೆಗೆ ಪೀರನಾಪಾ । ಯಣಾನೆ ನೇಬಿಸಿ ಕೊಡುವನರಿದಿರು ಯೆಂದ
ನಾವಿದುರ ॥೨೮॥

ಅಂತು ಸಂಧಿ ೧೪ಕ್ಕೆ ಪದ ೮೪೨ಕ್ಕಂ ಮಂಗಳಮಸ್ತು

ಹದಿನಾಲ್ಕನೆಯ ಸಂಧಿ.

ಸೂಚನೆ॥ ರಾಯಪಾಂಡವರರಸಿಕಮಲದ । ಳಾಯತಾಕ್ಷಿಯ ಪರಿಭವವ ನೆರೆ
ಕಾಯಿದುದೆಲಾ ವೀರನಾರಾಯಣನ ಸಿರಿನಾಮ ॥

ಕೇಳು ಜನಮೇಜಯಧರಿತ್ರೀ । ಪಾಲ ವಿದುರನ ಮಾತ ಮುರಿದು ನೃ । ಪಾಲನಟ್ಟಿ ಕರಿಸಿದನು
ಕಣುಸನ್ನೆಯಲಿ ಸೌಬಲನ ॥ ಏಳು ಧರ್ಮಜ ಸೋತೆಲಾ ನಿ । ನ್ನಾಳುಕುದುರೆಯನಿನ್ನು ಸಾಕು
ದ । ಯಾಳುವಲ್ಲ ಸುಯೋಧನನು ಧನವಿಲ್ಲ ನಿನಗೆಂದ ॥೧॥ ತೆಗೆವೆನೇ ಸಾರಿಗಳ ನಿನ್ನೀ । ನಗೆಮೊಗ

ವಸಿರ ಸೀದು ಕರಿಯಾ। ಯ್ತು ಗುಳುತಿದೆ ನಿನ್ನನುಜರಿಂಗಿತ ರೋಷಪಾವಕನ ॥ ಸೊಗಸು ಬೀಯ
ವು ರಸಣಾಪಿಲ್ಲವ। ಬೆಗಡು ನೋಯದು ಚಿತ್ರಧರ್ಮಜ। ತಗಹು ಸಾಯದು ನಿನಗೆನುತ ಗಹಗಹಿಸಿದನು
ಶಕುನಿ ॥೨॥ ಒಲಿವೊಡಸ್ಸಿಲ ವಿತ್ತವಿಸರ। ಉಳಿವುದೇ ನೀ ನಗುವವೊಲ್ಲ। ನ್ನೊಳಗುಡಿಳ್ಳವೆ ರಪ
ಣಾವಿದೆಲಾ ಬಹಳಭಂಡಾರ ॥ ಸುಳಿಸು ಪಾಸಂಗಿಗಳ ಮೋಹರ। ಗೆಲಿಸು ಸಾರಿಯನೊಂದು ರೇ
ಖೆಯ। ಬಳಿಯಲೊಂದೇಕೋಟಿಧನವೆಂದೊದರಿದನು ಭೂಪ ॥೩॥ ದುಗುಣಕಿಕ್ಕಿದನರಸನಾಚೆಗೆ। ತೆಗೆ
ದನವವೂರೆಂದು ನಾಲ್ಕ। ಕ್ಕಿಗಿದನವನಿಪನೈದಕೆಳೆದನು ಬಹಳವನು ಶಕುನಿ ॥ ತೆಗೆದನಿಮ್ಮಡಿಗರಸ
ನವಸಾ। ತ್ರಿಗುಣಪಂಚಕಸಪ್ತನವವು। ಪ್ರಗುಣವೆಂದನು ಶಕುನಿ ಸೋಲಿಸಿದನು ಮಹೀಪತಿಯ ॥೪॥
ಎಣಿಸಿದನು ರೇಖೆಗಳನಿಮ್ಮಡಿ। ಗಣಿತಸಂಖ್ಯಾಸಿದ್ಧವಸ್ತುವ। ನೆಣಿಸೆ ಬರ್ದಸಂಖ್ಯೆಯಾಯಿತು ಹಲ
ಗೆಯೊಂದರಲಿ ॥ ಗುಣನಿಧಿಯೆ ಮಗುಳೊಡ್ಡಲಾಪರೆ। ಪಣವನುಬುಡಿಸು ಕೇಳ್ವೆನೆನೆ ನೃಪ। ಗುಣಿ
ರೋಷಮಣಿ ಧರ್ಮಸುತ ನಸುನಗುತಲಿಂತೆಂದ ॥೫॥ ಹೂಡು ಸಾರಿಯ ರೇಖೆ ರೇಖೆಗೆ। ಮೂಡಿದರ್ಬು
ದಧನ ಸುಯೋಧನ। ನಾಡಿ ನೋಡಲಿ ಹಾಯ್ಕು ಹಾಸಂಗಿಗಳ ಹಾಯ್ಕೆನುತ ॥ ಆಡಿದನು ಯಮ
ಸೂನು ಸೋಲದಾ। ಡಾಡಿಯಲಿ ಸಾರಿಗಳೊಡನೆ ಹೋ। ಗಾಡಿದನು ಭಂಡಾರವನು ಭೂಪಾಲ
ಕೇಳೆಂದ ॥೬॥ ಸಾರಿ ಸೋತವು ಸೋಲ ನಿನಗೆನು। ಸಾರಿ ನೀಪ್ಪವರು ವಸಾಂತ್ರಕೆ। ಸಾರಿ ಸಾಕಿ
ನ್ನೊಡ್ಡಲಾಪರೆ ಮತ್ತೆ ನುಡಿ ಧನವ ॥ ಭೂರಮಣ ಹೇಳೆನಲು ರೇಖೆಯ। ಧಾರೆಯೊಪ್ಪಕೆ ಸಪ್ತ
ಸಂಖ್ಯೆಯ। ಭೂರಿಧನವಿದೆ ರಪಣವೆಂದನು ನಗುತ ಯಮಸೂನು ॥೭॥ ಬರಹಕಿಂಪುಡಿ ಸೂರೆ ಮಡಿ
ಸಾ। ಸಿರವಮಡಿಸಯಂತವಿಕ್ಕಿತು। ಹರುಷನಗೆಕೋನೆವೊಯ್ತು ಹೆಚ್ಚಿತು ಕಲಿಮಲಾಪಿಗೆ ॥
ಸ್ಥಿರತೆ ಹಿಂಗಿತು ಪಾಸಿಪಾಡಿನ। ಪರುಳತನವುಬ್ಬೆದ್ದುದಟಗಡ। ಗರಸನೊಡ್ಡಿದ ಮೇಲೆಮೇಲೊಡ್ಡ
ವನು ಪಿರಚಿಸಿದ ॥೮॥ ತ್ರಿಲಿತಿಂದ ಪ್ರಸ್ಥ ದುರ್ಲಭಂ। ಸಾರ ತನ್ನ ರಮಣಿಯ ಹೃಕಪ। ವಾರಕದ
ಭಂಗಾರವೊತ್ತಿತು ಕೋಟಿಸಂಖ್ಯೆಯಲಿ ॥ ಸೇರಿತದು ಕುರುಪತಿಗೆ ರಾಯನ। ಸಾರಿಯರ ಸಿಪಿಧಾಭರ
ಣಾಸಿರ। ಸಾರ ವೊಡ್ಡಿತು ಕೊಂಡು ಮುಗ್ಗಿತು ಖಿತ್ತರನ ನೃಪನಾ ॥೯॥ ನಕುಲಸಹದೇವಾರ್ಜುನರ
ಮಣ್ಣ। ಮುಕುಟಕಾರ್ಯಾಭರಣವಿಪ್ಪ। ಟಿಕವಮುಕ್ತಾಭರಣವೊಡ್ಡಿತು ಹಲಗೆಯೊಂದರಲಿ ॥ ಸಿಕ್ಕ
ಪಾಯಿದ ಸಿಪಮುಕವರ್ಣವ। ನಕಟ ಬಿಲ್ಲಣೆ ಸಾಧಿಸಿ। ವಕನು [illegible] ಸುಧೆಯ
ಮುಳಿಸಿನಲಿ ॥೧೦॥ ಕೋಶಲಾ [illegible] ಂತೆಯ ನಿಮಿಷ। ಪೇತುದೇ ನಿನ್ನ ಹಳಿಸಿದ ಪಿ। ಖ್ಯಾತಿ ಬರೆತ
ದು ಹೇಡಿಗೆಪಲತುಮನಪವಾಸಿಗಳ ॥ ಪ್ರೀತಿಯುಂಟೆ ನಿಮಗೆ ಮತ್ತೆ। ದ್ಯೂತದಲಿ ಧನಪಿಲ್ಲಲಾ
ಗ। ವಾರ್ತೆರೇಕವ ಹೇಳುಗೊಂಡಿರೆಯಂದನಾಶಕುನಿ ॥೧೧॥ ಖಿನ್ನನಾದನು ರಾಜ್ಯಲಕ್ಷ್ಮಿಯ। ಬೆನ್ನ
ಕಂಡನು [illegible] ನೋಡಿದನು। ಜೋಹ್ನತಿಯಲವನೀಶನಿದ್ದನು ಮರಿದಮಹಿಮೆಯಲಿ। ಇನ್ನು [illegible]
ನೆನೊ ಪಿರಿಯ ಭಗಗಳನ್ನು ಭಂಗಿಸಿ ನುಡಿದುದದಕಿನ್ನನ್ನ ನಿಕ್ಕೆ ದ್ಯೂತಪಿದಯವ ಸಾಧಿಸುವೆನೆಂದ ॥೧೨॥
ಒಲಿವೊ ಧಿಕ್ಕೃತ ಶಕುನಿ ಗರ್ವದ। ತಳಿ ಮರುಕವದೇ ನಿನ್ನ ಮಮತೆ। ಗಳಿಗೆ ಜೂಡಿದವಗಾದಿದೆತ
ನ್ನಂತರಂಗದಲಿ ॥ ಬಳವಧನವೇಗುಪ್ತದ ಜೀವ। ಸ್ಥಳವಿದೇ ಮೇಲೊಪ್ಪವೊಂದೇ। ಹಲಗೆ
ಯೊಡ್ಡಿದೆನೆನ್ನ ನಕುಲನ ನೆಂದನಾ ಭೂಪ ॥೧೩॥ ವಾಸಿಗನುಜನನೊಡ್ಡಿದೊಡೆನವ। ರಸರಲಿ ಭಯ

ಪೇಸು ನೋಡುವ । ವ್ಯಸಲೇ ನೃಪ ಹಾಯ್ಕ ಹಾಸಂಗಗಳ ಹಾಯ್ಕೆನುತ ॥ ಆಶಕುನಿ ಪೂರ್ವಾರ್ಜಿ
ತದ ತೊ । ಳ್ಳಿಸವರಿ ದಾವಂಸಿ ಧರ್ಮಜಪಿ । ನಾಸಿಕುಲನ ಗೆಲಿದು ಬೊಬ್ಬಿರಿದವನಿಪನ
ಜರೆದ ॥೧೪॥ ಅರಸ ಸೋತ್ಸ್ರೆ ನಕುಲನನು ಹೇ । ಪರುಸಬರು ಹೇಳೊಡ್ಡವನು ಪಿ । ಸ್ತರಿಸಲೊಂದೇ
ಹಲಗೆ ಸೋಲ್ವುದು ಹೇಳೆನುತ್ತೆನಲು ॥ ಪರಿಸಿದನು ಸಹದೇವನನು ನೆರೆ । ಪರಿಕಿಸುವೆನೆನ್ನಖಿಳ
ವಸ್ತು । ತ್ಕರವನಂಪನು ಧರ್ಮನಂದನನರಸನಕ್ಕೆಂದ ॥೧೫॥ ಹರುಬದಲಿ ತನ್ನಖಿಳವಸ್ತು । ತ್ಕರವ
ಮರಳಿಸುವನು ಮಹೀಪತಿ । ಕಿರಿಯತಮ್ಮನನೊಡ್ಡಿದನು ಮಾದ್ರೀಕುಮಾರಕನ ॥ ಅರಸಹಾಯವೆ
ಬಾ ಬಯಾಂಗವ । ಸಿರಿಯೆ ಬಾ ಕುರುರಾಯರಾಜ್ಯೋ । ತ್ಕರುಷಸಿದ್ಧಿಯೆ ಬಾಯೆನುತ ಗರ್ಜಿಸಿದ
ನಾಶಕುನಿ ॥೧೬॥ ಪನ ಬಣ್ಣಿಸುವೆನು ವಿಕಾರಗ । ಳೇನ ನೆನೆಯರು ಕಪಟವಿಧದಲಿ । ಮಾನನಿಧಿ ತಾ
ಸೋತನನುಪಮ್ಯಯಮಹಾಧನವ ॥ ಗ್ಲಾನಿಚಿತ್ತದೊಳಿಲ್ಲ ಲೇಸು ಮ । ನೋನುರಾಗವೆ ಭೀಮ
ಪಾರ್ಥರು । ತಾನಿದೊಮ್ಮಗೆ ಬದುಕಿದರು ನಿವಗೆಂದನಾಶಕುನಿ ॥೧೭॥ ಭೇದಮಂತ್ರವ ಮಾಡಿ
ನಮ್ಮನು । ಛೇದಿಸುವಗಡ ಸುಬಲಸುತನಿ । ಹೀದುರಾತ್ಮನ ನೋಡಿರಿತ್ತ ಸಭ್ಯರು ಶಿವಾಯೆನುತ ॥ ಆದು
ರಾಗ್ರಹ ಲೋಕಕಂಟಕ । ಪಾದಪದನಿಧಿಗ್ರಸ್ತಪಿ । ಸೋದಕರ್ದಮದುಗ್ಧನೊಡ್ಡಿದನಾಧನಂಜ
ಯನ ॥೧೮॥ ಬಲಧನಂಜಯ ನಿನ್ನನೊಡ್ಡಿದ । ಛಲಿಯುಧಿಷ್ಠಿರನಿಲ್ಲಿ ಸೋತೊಡೆ । ಬಳಿಕ ನಿನ್ನನು
ಮಾರಿದನಲಾ ಕೌರವೇಶ್ವರಗೆ ॥ ತಿಳಿದು ಭೀಮಾರ್ಜುನರು ನೀವ್ಹಿ । ಮ್ಮೊಳಗೆ ಬಲಿದಹುದೆನಲು ಖತಿ
ಯಲಿ । ಮುಳಿದು ಹೃದಯ ಭೀಮಪಾರ್ಥರು ಸುಬಲನಂದನನ ॥೧೯॥ ದೇಹಿಗೆರವೇ ದೇಹವೆಲವೋ ।
ದೇಹಧೂಪಿತಧರ್ಮಪುತ್ರನ । ದೇಹನಾವಿದರೊಳಗೆ ನಿನ್ನಕುಮಂತ್ರಭಾವಿತದ ॥ ಊಹೆಗೊಂಬುದೆ
ಕಪಟಬಂಧವ । ಗಾಹಿಸುವೆ ಸಾಕಿನ್ನು ಮೇಲಣ । ಗಾಹುಗತಕಗಳೆಮ್ಮೊಳೆಂದರು ಜರೆದು ಸೌಬಲನ ॥೨೦॥
ಮೇಲೆ ಹೇಳುವುದೇನು ನಾರಿಯ । ಸಾಲು ಮುಂದದು ಸರೆಯ ಕಳಪಿನ । ಕಾಲುಕೀಲ್ಗಳಸಾರು ಬಲ್ಲ
ರು ಕುಟಿಲಕೋವಿದರ ॥ ಹೇಳುವುದುಂಮುನ್ನ ಶಕುನಿಗೆ । ಹೇಳುವುದು ಬೇಕಾದದಾಯವು । ಕಾಳಿಕದ
ಪಿಧಿಪಾಶ ದೊಡೆತು ನೀಗಿತರ್ಜುನನ ॥೨೧॥ ಸೋತರರಸರಿ ಮತ್ತೆ ಹೇಳೇ । ದ್ಯೂತಶಿಖಿಗಾಹುತಿಯ
ನನೆ ಕುರಿ । ಭೀತನುಒನೊಡ್ಡಿದನು ಬಿಗಿದುಬಾಸುರಂತಕನ ॥ ಆತುಮೊಂದರಗಳಿಗೆ ಸೌಬಲಿ । ಸೋತ
ಧರ್ಮಜ ಗೆಲಿದ ಧರ್ಮಜ । ಸೋತ ಸೌಬಲ ಗೆಲಿದನೆಂಬವೊಲಾಯ್ತು ಘನರಭಸ ॥೨೨॥ ಅವಲಗೆ
ಸೋತುದು ಯುಧಿಷ್ಠಿರ । ನೂಹೆ ಮುರಿದುದು ಮುಂದುಗೆಟ್ಟನು । ರಾಹು ಹಿಡಿದಹಿಮಾಂಶುಮಂಡ
ಲದುಳಿದಕಳೆಯೆಂತೆ ॥ ತಾಯಿನಲಿ ತೊಟ್ಟಸದಮೃಗದವೊ । ಊಹೆಯಳಿದುದು ಯಂತ್ರಸೂತ್ರದ ।
ಹಾಹೆಯಂತಿರ ನೃಪತಿ ಚಿತ್ತದು ಹಗೆಗೆ ತನುಧನವ ॥೨೩॥ ಜನಪ ಮಾಂದೆ ಭೀಮಸೇನಾ । ರ್ಜುನರು
ಸುತೊಡಹುಟ್ಟಿದರ ಸ । ರ್ಧನಿಕನಾಗಿಯು ಮತ್ತೆ ಬಿಡದೇ ದ್ಯೂತದುರ್ವ್ಯಸನ ॥ ಎನಲು ಶಕುನಿಯ
ಜರೆದು ತಾನೇ । ಧನವಲಾ ಸಾಕೆಂದುಹಲಗೆಯೊ । ಳೆನಗೆ ಜಯಹೇದಾಯವೆಂದೊಡ್ಡಿದನು ಜನ
ನಾಥ ॥೨೪॥ ಹೇಳಲೇನದನವರು ರಿಸಿದ । ಬೇಳುವೆಯನಾಶಕುನಿಯೊಡ್ಡಿದ । ಕಾಲುಕುಣಿಕೆಯೊ
ಳಾರು ಹೀಳರು ನೃಪತಿ ನಿಮಿಷದಲಿ ॥ ಹೇಳುಗೊಟ್ಟನು ತನ್ನ ರಾಜನ । ಚಾಲಪಿಸ್ಸದು ಬಿಗಪಚರ
ಗಿನೊ । ಳಾಲಿಸುವಿರೇ ಜೀಯ ಪಣವೇನೆಂದನಾಶಕುನಿ ॥೨೫॥ ಎಲವೊ ಸೌಬಲ ಸಾಕಿದೊಂದೇ ।

ಜೂಜಿನಲಿ ಕುರು । ರಾಯ ಗೆಲಿದನು ಕೋಶವನು ಗಜತುರಗರಥಸಹಿತ ॥ ನೋಯಲಾಗದು ಹಲವು ಮಾತೇ । ನಾಯುಧಿಷ್ಠಿರನೃಪತಿ ಸೋತನು । ತಾಯೆ ಭೀಮಾರ್ಜುನನಕುಲಸಹದೇವನೀವ್ವಹಿತ ॥೫೦॥ ಅರಳಿದಂಬುಜವನಕೆ ಮಂಜಿನ । ಸರಿಯು ಸುರಿವಂದದಲಿ ಸುಗ್ಗಿಯ । ಸಿರಿಯ ಹೊಸಬೆಳುದಿಂಗಳನು ಬಲುಮುಗಿಲು ಕವಿವಂತೆ ॥ ಚರನ ಬಿನ್ನಹಕರಸಿಮೊದಲಾ । ಗಿರೆ ಸಮಸ್ತಸಖೀಜನದ ಮುಖ । ಸರಸಿರುಹ ಬಾಡಿದವು ಮುಸುಕಿತು ಮೌನಮಯಜಲಧಿ ॥೫೧॥ ದೂತ ಹೇಳ್ಕೆ ತಂದೆ ಜೂಜಿನ । ಜಾತರುಪುವಾಡಿದನೆ ಸೋತನೆ । ಕೈತವದಬಗೆಗಾರರವದಿರು ಶಕುನಿಕೌರವರು ॥ ದ್ಯೂತದಲಿ ಮುನ್ನೇನನೊಡ್ಡಿದ । ಸೋತನೇನನು ಶಿವಶಿವಾ । ನಿ । ರ್ಧೂತಕಿಲ್ಬಿಷನರಸನೆಂದಳ್ದ್ರೌಪದಿದೇವಿ ॥೫೨॥ ತಾಗಿದುದಲಾ ಸಾರದಾದ್ಯರ । ಸಾಗತವನರುಹಿದರು ಹಿಂದೆ ವಿ । ಯೋಗನಾಯಿತೆ ಲಕ್ಷ್ಮಿಗಿಂದ್ರಪ್ರಸ್ಥಪುರವರದ ॥ ಹೋಗಲದು ಮುನ್ನೇನನೊಡ್ಡಿದ । ನೀಗಿದನುಗಡ ತನ್ನನೆಂತಿದ । ರಾಗುಹೋಗೇನೆಂದು ನುಡಿದಳ್ಪ್ರಾತಿಕಾಮಿಕನ ॥೫೩॥ ಮೊದಲಲರ್ಘವ ಹೆಸರುಗೊಂಡೊ । ಡ್ಡಿದನು ಸೋತನು ಮರಳೆಮಗುಳೊ । ಡ್ಡಿದನು ಹೇರಾಳದಲಿ ಧನವನು ಕರಿಘಟಾವಳಿಯ ॥ ಕುದುರೆರಥನಿಮ್ಮಡಿಯಮೇಳದ । ಸುದತಿಯರನೊಡ್ಡಿದನು ಸೋತನು । ತುದಿಯಲನುಜರನೊಡ್ಡಿ ಸೋತನು ತಾಯೆ ಕೇಳೆಂದ ॥೫೪॥ ಬಳಿಕ ತನ್ನನೆ ಸೋತ ನಿಲ್ಲಿಂ । ಬಳಿಕ ನಿಮ್ಮಡಿಗಳಿಗೆ ಬಂದುದು । ಖಳರು ಶಕುನಿಸುಯೋಧನರು ನೀವಾಗಳೆಂದಿರಲೆ ॥ ಅಳುಕಬೇಡಿನ್ನೇನು ಭೂಪತಿ । ತಿಲಕ ತನ್ನನು ಮುನ್ನ ಸೋಲಿದು । ಬಳಿಕ ತನ್ನನು ಸೋತನೇ ಹೇಳೆಂದಳಿಂದುಮುಖಿ ॥೫೫॥ ಅಹುದು ತನ್ನನು ಮುನ್ನ ಸೋತನು । ಮಹಿಳೆಗೊಡ್ಡಿದೆನೆಂದು ನಿಮ್ಮನು । ಮಹಿಪ ಸೋತನು ನೀವು ಬಿಜಯಂಗೆಯ್ಯಬೇಹುದೆನೆ ॥ ವಿಹಿತವಿದು ಮಾನುಷವೆ ದೈವದ । ಕುಹಕವೈಸಲೆ ಮಗನೆ ತಾನೇ । ಬಹೆನು ನೀ ಹೋಗೊಮ್ಮೆ ಹೇಳೀಮಾತನಾಸಭೆಗೆ ॥ ಮುನ್ನ ತನ್ನನು ಸೋತಬಳಿಕಿನೊ । ಳೆನ್ನ ಸೋತರೆ ಸಲುವುದೇ ಸಂ । ಪನ್ನವಿಮಲಿಜ್ಞಾನರರಿದೀಪ್ರಶ್ನೆಗುತ್ತರವ ॥ ಎನ್ನ ಮೆಚ್ಚಿಸಿಕೊಡಲಿ ತಾ ಬಹೆ । ನೆನ್ನ ಹೋಗೆನಲವನು ಭಯದಲಿ । ತನ್ನೊಳಗೆ ನಡುಗುತ್ತ ಬಂದನು ಕೌರವನ ಸಭೆಗೆ ॥೫೭॥ ಜೀಯ ದೇವಿಯರೆಂದ ಮಾತಿದು । ರಾಯ ಮುನ್ನವೆ ತನ್ನ ಸೋತಬು । ಜಾಯತಾಕ್ಷಿಯ ಬಳಿಕ ಸೋತರೆ ಧರ್ಮಸೂಕ್ಷ್ಮದಲಿ ॥ ರಾಯಸಭೆಯಲಿ ಹಿರಿಯರರಿದದ । ರಾಯತವನರುಹಿದೊಡೆ ಬಹೆನೆಂ । ದಾಯುವತಿ ಬಿನ್ನಹವ ಮಾಡಿದಳೆಂದು ಕೈಮುಗಿದ ॥೫೮॥ ರಾಯ ಸೋತನು ತನ್ನನಾವ । ನ್ಯಾಯದಲಿ ತಪ್ಪುದಿಲ್ಲ ತೊತ್ತಿರಲಾಯದಲಿ ಕೊಡುವೆವು ಕರೆಯೆನಲಿವನು ಗರಹೊಡೆದು ॥ ವಾಯುಸುತನಂಜುಸುವನೆಂದೀ । ನಾಯಿ ಬೆದರಿದನಕಟ ದೂತನ । ಬಾಯ ನೋಡಾ ಯೆನುತ ಮಿಗೆ ಗರ್ಜಿಸಿದ ಕುರುರಾಯ ॥೫೯॥ ತಮ್ಮ ಬಾರೈ ಹೋಗು ದಿಟನೀ । ನಮ್ಮವರೆ ಹಿಡಿದೆಳೆದು ತಾ ನೃಪ । ರೆಮ್ಮಕಿಂಕರರೈವರಿವರಿದ್ದೇನಮಾಡುವರು ॥ ತಮ್ಮಕರ್ಮವಿಪಾಕಗತಿ ನೆರೆ । ತಮ್ಮನೇ ಕೆಡಿಸುವುದು ಧರ್ಮವಿ । ದೆಮ್ಮ ಕಾರಣವಲ್ಲ ನೀ ಹೋಗೆಂದನಾಭೂಪ ॥೬೦॥ ಗಾಳಿಯಳ್ಳೆಯನಿರಿಯಲಗ್ನಿ । ಜ್ವಾಲೆಯಲಿತಟ್ಟೆಯವೆಕಡುಹಿನ । ಕಾಳಕೂಟದನದಿಗೆ ನಂಜಿನಹೊನಲು ಬೆರಸಿದೊಡೆ ॥ ವಾಳೆಯವೆ ದುಶ್ಶಾಸನನು ಜಗ । ದೂಳಿಗದದುರುಳುದುಂಬಿಕುರುಪತಿ । ಮೇಲೆನೇಮಿಸಲುಚಿತಗೈವನೆಭೂಪಕೇಳೆಂದ ॥೬೧॥ ಹರಿದನವಬೀದಿಯಲಿ ಬೆಡುದಲೆ । ವೆರಸಿ ಸತಿಯ

ರಮನೆಯಬಾಗಿಲ। ಚರರು ತಡೆದೊಡೆ ಮೆಟ್ಟಿದನು ತಿವಿದನು ಕಠಾರಿಯಲಿ ॥ ತರುಣಿಯರು ಕಂಡಂಜಿ
ಹೊಕ್ಕರು।ಸರಸಿಜಾಕ್ಷಿಯ ಮರೆಯನೀಖಳ।ನುರವಣಿಸಿದನು ರಾಹು ತಾರಾಗಣವ ತಗುಳ್ವಂತೆ ॥೬೨॥
ಬಂದನಿವನಬುಜಾಕ್ಷಿಯಿದಿರಲಿ। ನಿಂದನೆಲೆಗೇ ಗರುವತನವಿದು। ಹಿಂದೆ ಸಲುವೆದು ಸಲ್ಲದೆದು ಕುರು
ರಾಜಭವನದಲಿ ॥ ಇಂದು ಮರೆ ನಡೆ ನಮ್ಮ ತೊತ್ತಿರ। ಮುಂದೆ ಮೆರೆ ನಡೆ ಮಂಚದಿಂದಿಳಿ।
ಯೆಂದು ಜರೆದನು ಕೌರವಾನುಜನಾ ಮಹಾಸತಿಯ ॥೬೩॥ ಜನಪನನುಜನು ನೀನೆಸಗೆ ಮೈ। ದುನ
ನಲೇ ತಪ್ಪೇನು ಯಮನಂ। ದನನು ಸೋಲಲಿ ನನ್ನ ಪ್ರಶ್ನೆಗೆ ಕೊಡಲಿ ಮರುವಾತ್ರ ॥ ಅನುಜ
ಕೇಳ್ಕೆ ಪುಷ್ಪವತಿ ತಾ। ನೆನಗೆ ರಾಜಸಭಾಪ್ರವೇಶವ। ದನುಚಿತವಲೇ ಹೇಳೆನಲು ಖಳರಾಯ ಖತಿ
ಗೊಂಡ ॥೬೪॥ ಎಲ್ಲಿಯದು ದುಷ್ಪ್ರಶ್ನೆ ಮರುಳೆ। ತಲಯದು ನೀ ಪುಷ್ಪವತಿಯಹೆ। ಗಲ್ಲಿ ಫಲವತಿ
ಯಾಗು ನಡೆ ಕುರುರಾಯಭವನದಲಿ ॥ ಖುಲ್ಲರವರು ತಮ್ಮ ಸೋತರು। ಬಲ್ಲವಿಕೆಯುಚಿತವನು
ಮಾಳಿಸು। ನಲ್ಲ ತೋರಾಯೆನುತ ತಪ್ಪಿದನಹಹ ಸಿರಿಮುಡಿಗೆ ॥೬೫॥ ಆಮಹೀಶ್ರಕ್ರತುವರದೊಳು।
ಪ್ರಾಮಮುನಿಜನರಚಿತಮಂತ್ರ। ಸ್ತೋಮಪುಷ್ಕಳಪೂತಪುಣ್ಯಜಲಾಭಿಷೇಚನದ ॥ ಶ್ರೀಮುಡಿಗೆ
ಕೈಯಿಕ್ಕಿದನು ವರಕಾಮಿನೀನಿಕುರುಂಬವಕಟಕಟಾ ಮಹಾಸತಿ ಶಿವಶಿವಾಯೆಂದೊರಲಿತಲ್ಲಲ್ಲಿ ॥೬೬॥
ಕೆದರಿದುವು ಸೂಸಕದಮುತ್ತುಗ। ಳುದುರಿದುವು ಸೀಮಂತಮಣಿಗಳ। ಹೊದರು ಮುರಿದುವು ಕರ್ಣ
ಪೂರದರತ್ನದೋಲೆಗಳು ॥ ಸುದತಿಯರು ಗೋಳಿಡುತ ಬರೆ ಮು। ಟ್ಟಿದನು ತಿವಿದನು ಕಾಲಲಡಬಿ।
ದ್ದುದು ಸಖೀಜನವೆಳೆದು ಝಾಡಿಸಿ ಜರೆದು ಝೋಂಪಿಸಿದ ॥೬೭॥ ಮಣಿದ ತನುವಿನ ವೇಗಗತಿಯಲಿ।
ಝಣಝಣಿಪನೂಪುರವರವ। ಕಂಕಣದದನಿ ನೇವುರದ ಹೊಂಗಿರುಗೆಜ್ಜೆಗಳ ರಭಸ ॥ ಗಣಿಕೆ
ಯರ ಕೆಳದಿಯರ ಹಾಹಾ। ರಣಿತಕಿವು ನೆರೆ ಪಾಪವಾಪ। ಟ್ಟಣವ ತುಂಬಿತು ಶೋಕವವನೇನೆಂಬೆನ
ದ್ಭುತವ ॥೬೮॥ ಹಡಪಗಿತಿಯರು ಸೀಗುರಿಯಕ। ನ್ನಡಿಯವರು ಮೇಳದವಿನೋದದ। ನುಡಿನಗೆಯ
ಸಖಿಯರು ಪಟ್ಟಾಯ್ತಿಯರಾಪ್ತದಾಸಿಯರು ॥ ಒಡನೆ ಬಂದರು ಕಂಬನಿಯ ಬಿಡು। ಮುಡಿಯ
ಹಾಹಾರವದ ರಭಸದ। ನಡೆಯಲಖಿಳವಿಲಾಸಿನಿಯರು ಸಹಸ್ರಸಂಖ್ಯೆಯಲಿ ॥೬೯॥ ನಗೆಮೊಗವ
ನೊಸ್ಕೆಯು ಪಯೋಧರ। ಯುಗಳ ನೋಡುವಸಖ್ಯದಲಿ ದೃಗು। ಯುಗಳಜಲಬಿಂದುಗಳಿಗಾಜಲ
ಬಿಂದುಸುರಿವಂತೆ ॥ ಒಗುವಖಂಡಿತಹಾರಮುಕ್ತಾ। ಳಿಗಳು ಮೆರೆದವು ಮಾನಿನಿಯರು। ಬ್ಬೆಗದರೋ
ದನರೌರವದೊಳ್ಕೈತಂದಳಿಂದುಮುಖಿ ॥೭೦॥ ಚೆದರುಗಂಗಳ ಬಿಟ್ಟಮಂಡೆಯ। ಹುದಿದಹಾಹಾರ
ವದ ತೊಡಕಿದ। ಪದಯುಗದ ಮೇಲುದಿನ ಬೀದಿಯ ಧೂಳಿಧೂಸರದ ॥ ವದನಕಮಲದ ಖಳನ
ವಾಮಾಂ। ಗದಲಿ ಬಾಗಿದತನುಲತೆಯ ವರ। ಸುದತಿ ಬಂದಳು ರಾಜಸಭೆಗೆ ನೃಪಾಲಕೇಳೆಂದ ॥೭೧॥
ಅಹಹ ಪಾಂಡವರಾಯ ಪಟ್ಟದ। ಮಹಿಳೆಗೀ ವಿಧಿಯೇ ಮಹಾಕ್ರತು। ವಿಹಿತಮಂತ್ರಜಲಾಭಿಷಿಕ್ತ
ಕಚಾಗ್ರಕಿದು ವಿಧಿಯೇ ॥ ಮಿಹಿರಬಿಂಬವ ಕಾಣದೀನೃಪ। ಮಹಿಳೆಗಿದು ವಿಧಿಯೇ ವಿಧಾತ್ರನ।
ಕುಹಕವೈಸಲೆ ಶಿವಶಿವಾಯೆಂದರು ಸಭಾಜನರು ॥೭೨॥ ತುಳುಕಿದವು ಪುಳಕಾಂಬುವಾಸಭೆ। ಯೊಳಗೆ
ದುಶ್ಶಾಸನಸುಯೋಧನ। ಖಳಶಿರೋಮಣಿಶಕುನಿಕರ್ಣಜಯದ್ರಥಾದ್ಯರಿಗೆ ॥ ತಳಿತದದ್ಭುತಖೇದ
ಮುಖ। ಮಂಡಲಕೆ ಸೀರೆಯನವುಚಿ ನಯನೋ। ದ್ಗಳಿತಜಲಧಾರೆಯಲಿ ನನೆದುದು ಸಭೆ ವಿಷಾದವ

ದಲಿ ॥೭೩॥ ವ್ಯಾಕುಲವನಿದ ಕಾಂಬಕಂಣುಗ । ಳೇಕೆ ರಾಜಕುಮಾರಿಯಾಕೆಯ । ಶೋಕರಸವನು ಕುಡಿವಕರ್ಣದ್ವಯವಿದೇಕೆಮಗೆ ॥ ಏಕೆ ವಿಧಿನಿರ್ಮಿಸಿದನೋ ನಾ । ವೇಕೆ ಸಪ್ರಾಣರೊ ಶಿವಾಯೆಂ । ದಾಕುಠಾರರ ಬೈದುದಾಸಭೆಯಲಿ ಬುಧವ್ರಾತ ॥೭೪॥ ವನಜಮುಖಿಯಳ್ಕೆಯನು ದುಶ್ಶಾ । ಸನನದುರ್ನೀತಿಯನು ದುರ್ಯೋ । ಧನನ ದುಶ್ಚೇಷ್ಟೆಯನು ಕಂಡೀಭೀಮಫಲುಗುಣರು ॥ ಮನದೊಳಗೆ ಕೌರವನ ಕರುಳನು । ತನಿರಕುತದಲಿ ಕುದಿಸಿದರು ವಾ । ಚನಿತಕರ್ಮಕ್ರಿಯೆಗೆನೆನೆವುದನರಿದಸಾಭೂಪ ॥೭೫॥ ಹುಬ್ಬಿನಲಿ ನಿಲಿಸಿದನು ಪವನಜ । ನುಬ್ಬಟೆಯನರ್ಜುನನ ವಿಕೃತಿಯ । ನಿಬ್ಬರಾಲಾಪವನು ಧರ್ಮಜರ ಹಸ್ತನಿಷ್ಠೆಯಲಿ ॥ ಹಬ್ಬಿದುದು ಭೀಷ್ಮಂಗೆ ಶೋಕದ । ಮಬ್ಬು ಗುರು ಗೌತಮರು ವಿದುರನು । ಸರ್ಬಖೇದಾಂಬುಧಿಯೊಳದ್ದರು ಭೂಪಕೇಳೆಂದ ॥೭೬॥ ಅರಸ ಕೇಳೈ ಬಳಿಕ ಹಸ್ತಿನ । ಪುರದೊಳಾಯಿತ್ತು ವಾರ್ತೆ ಬಳಿಕೀ ಪುರದ ಬಹಿರೋದ್ಯಾನವೀಥಿಗಳೊಳಗೆ ಹರಹಿನಲಿ ॥ ಅರಸಿಯರು ಸೌಭದ್ರನವರ್ಕೆ । ವರು ಕುಮಾರರು ಮಂತ್ರಿಗಳು ಮುಖ್ಯರು ಪಸಾಯ್ತರು ಕೇಳಿದಸು ಪಾಂಡವಪರಾಜಯವ ॥೭೭॥ ಬಂದರಿದಿರೊಳು ಕೌರವರ ಕಡಿ । ನಂದನರ ಕಡಿಯಾವುದೆನೆ ಸಾ । ವಂದದಲಿ ಹೊಯ್ದಾಡಿ ಹಿಡಿವೆವು ಸುರರಸೂಳೆಯರ ॥ ಎಂದು ತಮ್ಮೊಳು ನೆರೆದು ಸೇನಾ । ವೃಂದಸಜ್ಜೋಡಿನಲಿ ಕಾಳಗ । ಕಂದು ಮೋಹರಿಸಿದರು ಹಸ್ತಿನಪುರದ ಬಾಹೆಯಲಿ ॥೭೮॥ ಇತ್ತಲಬಲೆಯ ವಿಧಿಯ ಕೇಳತಿ । ಮತ್ತನೈ ಧೃತರಾಷ್ಟ್ರಸುತನೀ । ಮತ್ತಗಜಗಾಮಿನಿಯ ಬಿಡಿಸಿದ ನವನಕೈಯಿಂದ ॥ ನೆತ್ತ ಸೋತುದು ನಿನ್ನ ನೊಡ್ಡಿನ್ನ । ಪೋತ್ತಮನ ಸಲೆ ಮಾರಮಾರಿದ । ನತ್ತೊಡೇನಹುದೆಲೆಗೆ ತೊತ್ತಿರಹಿಂಡ ಹೋಗು ಯೆಂದ ॥೭೯॥ ಲಲಿತಬುದ್ಧಿಗಳೇಕೆ ನಾವೇ । ಲಲನೆಯರು ಸತಿ ಧಿಟ್ಟೆಯೆನ್ನದಿ । ರೆಲೆಸುಯೋಧನ ರಾಜಸಭೆಯಿದು ದೋಷರಹಿತವಲೆ ॥ ಗೆಲವಿದೆಂತುಟೊ ತನ್ನ ಸೋಲಿದು । ಬಳಿಕ ಸೋತೊಡೆ ಧರ್ಮಗತಿಯನು । ತಿಳಿದು ಹೇಳಲಿ ತತ್ಸಭಾಸದರೆಂದಳಿಂದುಮುಖಿ ॥೮೦॥ ಹಿರಿಯರಿಲ್ಲದಸಭೆ ಮನುಷ್ಯರ । ನೆರವಿಯದು ಸಭೆಯಲ್ಲ ಮೂರ್ಖರು । ಹಿರಿಯರಲ್ಲ ಯದಾರ್ಥಭಾಷಣಭೀತಚೇತನರು ॥ ಹಿರಿಯರಿದೆ ಸಾಮಾಜಿಕರು ಸ । ಚ್ಚರಿತರಿದೆಲಾ ಸ್ತ್ರೀಮತವನು । ತ್ತರಿಸಲಾಗದೆ ಧರ್ಮಶಾಸ್ತ್ರದೊಳೆಂದಳಿಂದುಮುಖಿ ॥೮೧॥ ಚಪಳೆ ಫಡ ಹೋಗಿವಳು ಹಲಬರ । ನುಪಚರಿಸುವುದನರಿಯಲಾದುದು । ದ್ರುಪದ ನಂದನೆ ನಡೆ ವಿಳಾಸಿನಿಯರವಿಧಾನದಲಿ ॥ ಕೃಪಣನೇ ಕುರುರಾಯ ನಿನಗಿ । ನ್ನುಪದೆಸೆಯ ಹೊಲೆ ಹೋಯ್ತು ರಾಯನ । ವಿಪುಳವಿಭವವನನುಭವಿಸು ನಡೆಯೆಂದನಾಕರ್ಣ ॥೮೨॥ ಅಹುದಲೇ ಬಳಿಕೇನು ದಾಸ್ಯಕೆ । ವಿಹಿತವಾಯಿತು ನಿನ್ನ ತನುವಿನ । ಲಹಮನೋವ್ಯಥೆಯೇಕೆ ರಾಣೀವಾಸವೀಧಿಯಲಿ ॥ ಮಹಿಳೆಯರ ಸಖ್ಯದಲಿ ಸೌಖ್ಯದ । ರಹಣಿಗೊಡಬಡುವಾರಕದಲತಿ । ಬಹಳಭೂಷಣಭಾರದಲಿ ಮೆರೆಯೆಂದನಾಶಕುನಿ ॥೮೩॥ ವಾರಕದವಿವಿಧಾಭರಣಶೃಂ । ಗಾರದಂತಿರಲೀಕೆಯಾಡಿದ । ಸಾರಭಾಷೆಗೆ ನೆನೆಯರೇ ನಿರ್ವಾಹಸಂಗತಿಯ ॥ ಓರೆಪೋರೆಯೊಳಾಡಿ ಧರ್ಮದ । ಧಾರಣೆಯ ಧಟ್ಟಿಸುವುದಿದು ಗಂರಿಭೀರರಿಗೆ ಗರುವಾಯಿಯೇ ಸುಡಲೆಂದನಾಭೀಷ್ಮ ॥೮೪॥ ತುಟ್ಟಿಸಲಿ ಧನಮಾನಗರ್ವದ । ಬೆಟ್ಟಮು । ಯಲಿ ಜೀವವೊಡಲನು । ಬಿಟ್ಟು ಹಿಂಗಲಿ ಬಿಡೆನು ಸತ್ಯವನೆಂದು ಯಮಸೂನು ॥ ನೆಟ್ಟನೇ ನಿಶ್ಚೈಸಿದುದನೊಡಹುಟ್ಟಿದರು ಮನ್ನಿಸಿದರಲ್ಲದೆ । ಹುಟ್ಟಿ ಹೊಂದಲುಗತಿಯಹುದೆ ನಿನಗೆಂದನಾಭೀಷ್ಮ ॥೮೫॥

ಅಳಿಯದಂತಿರೆ ಸತ್ಯಧರ್ಮದ। ನೆಳಲು ನೆಗ್ಗದೆ ಕೀರ್ತಿವಧುವಿನ। ಸುಳಿವು ನೋಯದೆ ತಳಿರು ಬಾಡದೆ
ಧೈರ್ಯಸುರಕುಜದಾ ॥ ಹಳಿವಿಗಳು ಪದವೈರಿವರ್ಗದ । ಕಳಕಳಕೆ ಮೈಗೊಡದೆ ನೃಪನಿ । ರ್ಮಳ
ದಲಿದ್ದೊಡೆ ನಿನಗೆ ಸದರವೆ ಯೆಂದನಾಭೀಷ್ಮ ॥೮೬॥ ಸೋತಬಳಿಕಿವರೆಮ್ಮ ವಶವ। ಖ್ಯಾತಿಯಲಿ ನಾವ್ನ
ಡೆವರಲ್ಲ ವೃಥಾತಿರೇಕದಿ ನೀವು ಘೂರ್ಮಿಸಲಂಜುವೆವೆ ನಿಮಗೆ ॥ ಈತಳೋದರಿ ತೊತ್ತಿರಲಿ ಸಂ।
ಘಾತವಾಗಲಿ ಸಾಕು ನಿಮ್ಮಗು । ಮಾತೆನುತ ಕುರುರಾಯ ಜರೆದನು ಭೀಷ್ಮಗುರುಕೃಪರ ॥೮೭॥
ನೊಂದನೀಮಾತಿನಲಿ ಮಾರುತ । ನಂದನನು ಸಹದೇವನನು ಕರೆ । ದೆಂದನಗ್ನಿಯ ತಾ ಯುಧಿಷ್ಠಿರ
ನೃಪನ ತೋಳುಗಳ । ಮಂದಿನೋಡಲು ಸುಡುವೆನೇಳೇ । ಳೆಂದು ಜರೆದೊಡೆಹಿಡಿದು ಮಾದ್ರೀ ।
ನಂದನನ ನಿಲಿಸಿದನು ಫಲುಗುಣ ನುಡಿದನನಿಲಜನ ॥೮೮॥ ಏನಿದೇನೈ ಭೀಮ ನಿಲು ಯಮ । ಸೂನು
ಶಿವಶಿವ ಗುರುವಲಾ ನಮ । ಗೀನಿತಂಬನಿಯಾದಿಯಾದಸಮಸ್ತವಸ್ತುಗಳು ॥ ಈನರೇಂದ್ರಗೆ ಸರಿಯೆ
ಕುಂತೀ । ಸೂನುವೇ ಪ್ರಾಣಾರ್ಥದಿಂದಸು। ಘಾನನೈ ನಮಗೀತನೇಗತಿಯೆಂದನಾಪಾರ್ಥ ॥೮೯॥
ಹಿಂಗಿಹೋಗಲಿ ತನುವನಸು ಸ । ಪ್ತಾಂಗ ಬೇಯಲಿ ಖೋಡಿ ಮನದಲಿ । ಹಿಂಗುವುದೆ ಹರಹರ ಧನಂ
ಜಯ ಕಾಕ ಬಳಸಿದೆಲಾ ॥ ಅಂಗನೆಯಮೇಲೊಡ್ಡವೇ ಲಲಿ । ತಾಂಗಿಗೀವಿಧಿಯೇಕೆ ನಮಗೀ । ಭಂಗ
ಸಾಲದೆ ಸುಡುವೆನಾದೊಡೆ ತನ್ನ ತೋಳುಗಳ ॥೯೦॥ ಈಯವಸ್ಥೆಗೆ ತಂದಕೌರವನಾಯಿಗಳ ನಿಟ್ಟೆಲುವ
ಮುರಿದು ನಾಮಾಯಿಯಲಿ ಘಟ್ಟಿಸದೆ ಕೊಬ್ಬಿದತನ್ನತೋಳುಗಳಾ ॥ ವಾಯುಸಖನಲಿ ಸುಡುವೆನೀ
ಗಳೆ। ಬೀಯವಾಗಲಿ ದೇಹವಾಚಂದ್ರಾಯತವೆಯೆಂದೊಡನೊಡನೆ ಮಿಡುಕಿದನು ಕಲಿಭೀಮ ॥೯೧॥
ಅಕಟ ಧರ್ಮಜಭೀಮಘಫಲುಗುಣ । ನಕುಲಸಹದೇವಾದ್ಯರಿರ ಬಾ । ಲಕಿಯನೊಪ್ಪಿಸಿಕೊಟ್ಟಿರೇ
ಮೃತ್ಯುವಿನತಾಳಿಗೆಗೆ ॥ ವಿಕಳರಾದಿರೆ ನಿಲ್ಲಿ ನೀವೀ । ಗಕುಟಿಲರಲಾ ಭೀಷ್ಮಗುರುಬಾ । ಹ್ಲಿಕಕೃಪಾದಿ
ಗಳುತ್ತರವ ಕೊಡಿಯೆಂದಳಬುಜಾಕ್ಷಿ ॥೯೨॥ ಕಂಗಳಿಂದನುಯೋಗ ನಿಜಹ। ಸ್ತಾಂಗುಲಿಯೊಳು
ತ್ತರ ಲಸದ್ಭ್ರೂ । ಭಂಗದಲಿಸಂದೇಹ ಮುಖವಿಕೃತಿಯಲಿದುರ್ನೀತಿ ॥ ಇಂಗಿತದಲಾಂಗಿಕದಭಾವಾ।
ಭಂಗಪರಿಯನುಯೋಗಯುಕ್ತನ । ಯಂಗಳಲಿ ತಿಳಿದುಸುರದಿರ್ದುದು ಸಭೆ ಸುಭೀತಿಯಲಿ ॥೯೩॥
ಅರಿದು ಮೌನವೊ ಮೇಣು ಮಾನಿನಿ। ಯೊರಲುತಿರಲೆಂದಾದುಪೇಕ್ಷೆಯೊ । ಮುರಿದು ನುಡಿವುದ
ಸಾಧ್ಯವೋ ಮೇಣಾವುದಿದರೊಳಗೆ ॥ ಅರಿಯಿರೇ ಸಮವರ್ತಿದೂತನ। ಮುರುಕವನು ನೀವೇಕೆ
ನಿಮ್ಮನು । ಮರೆದಿರೆಂದು ವಿಕರ್ಣ ಜರೆದನು ತತ್ಸಭಾಸದರ ॥೯೪॥ ಹುಸಿವಚನಪಾರುಷ್ಯಲಲನಾ ।
ವಿಷಯಮೃಗತೃಷ್ಣಾಪಿಪಾಸಾ । ವ್ಯಸನಿ ಬಲ್ಲನೆ ಧರ್ಮತತ್ವರಹಸ್ಯನಿಶ್ಚಯವ॥ ಉಸುರಲಮ್ಮಿರೆ ವೈದಿ
ಕದ ತನಿ । ರಸದ ಸವಿ ನಿಮಗಲ್ಲದಾಂಗೆ । ಬಸಿದುಬೀಳ್ವುದು ಭೀಷ್ಮಯೆಂದುವಿಕರ್ಣಗರ್ಜಿಸಿದ ॥೯೫॥
ತನ್ನ ಸೋತಾಗಲೆ ಮಹೀಪತಿ। ಯನ್ಯನಾದನು ಸತಿಗೆ ತನ್ನಂ । ಮುನ್ನ ಸೋತೊಡೆ ತನ್ನಧನವೈಸಲೆ
ವಿಚಾರಿಸಲು॥ ಅನ್ಯನನ್ಯಳಸೋತಗಡತಾ। ತನ್ನಧನವೆಂದರಸ ಶಕುನಿಯ । ಚಿನ್ನಣಕೆ ಬೆಳ್ಳಾದನೆಂದು
ವಿಕರ್ಣಖತಿಗೊಂಡ ॥೯೬॥ ಫಡ ವಿಕಾರವೆ ನಂಮೊಡನೆ ಬಾ। ಯ್ಬಡಿಕತನವೇ ಕುರುಮಹೀಪತಿ ।
ಯೊಡನೆ ಹುಟ್ಟಿದೆಯಾದಕಾರಣ ಬಿಟ್ಟೆವೀಸರಲಿ ॥ ನುಡಿದರೇ ಭೀಷ್ಮಾದಿಗಳು ನೀ। ನೊಡಬಡಿಸ
ಲೆಂತರಿವೆ ಧರ್ಮದ। ಕಡೆಮೊದಲ ಕೈವಾರ ನಿನಗೇಕೆಂದನಾಕರ್ಣ ॥೯೭॥ ಏಕಪತಿ ಬಹುಸತಿಯರೆಂ

ಬುದು । ಲೋಕಪದ್ಧತಿಯಾದುದದುತ್ತಾ । ನೇಕಸತಿ ಬಹುಪತಿಗಳಿದು ವೈದಿಕವಿರುದ್ಧವಲೇ ॥ ಲೌಕಿಕ
ವ್ಯವಹಿತದಕರ್ಮವ । ನೀ ಕುಮಾರ್ಗಗಳಲ್ಲಿ ಕಂಡೆವು, ನೀ ಕುರುವ್ರಜದೊಳಗೆ ಜನಿಸಿ ವಿಕರ್ಣಹೋ
ಗೆಂದ ॥೯೮॥ ಅಹುದು ಕರ್ಣನ ನುಡಿ ವಿಕರ್ಣನು । ಬಹುವಚನಪಂಡಿತನು ಬಾಹಿರ । ನಹುದಲೇ
ಕುರುರಾಜವಂಶದೊಳುದಿಸಿ ಫಲವೇನು ॥ ಅಹಿತಹಿತವಿಜ್ಞಾನಿಯಲ್ಲದ । ಬೃಹದುದುರೆಕಿಂಕರನ
ನುಡಿ ಕಿಂ । ಗಹನವೇ ಕಲಿಕರ್ಣಯೆಂದನು ನಗುತ ಕುರುರಾಯ ॥೯೯॥ ಹಾರಪದಕಕಿರೀಟಮಣಿಕೇ ।
ಯೂರಕರ್ಣಾಭರಣವೆಂಬಿವು । ಭಾರವೆಲ್ಲಾ ತೆಗೆಯಹೇಳ್ದಾಕ್ಷಿಣ್ಯವೇನಿದಕೆ ॥ ನಾರಿಗೀವಸ್ತ್ರಾಭರಣ
ಶೃಂ । ಗಾರವೇಕಿನ್ನಿವನು ತೆಗೆ ಕೈ । ವಾರವಿದಕೇಕೆಂದು ದುಶ್ಶಾಸನಗೆ ನೇಮಿಸಿದ ॥೧೦೦॥ ತೆಗೆದು
ಬಿಸುಟರು ಹಾರಪದಕಾ । ದಿಗಳನಿವರೈವರು ದುಕೂಲವ । ನುಗಿದು ಹಾಯ್ಕಿದರುದ್ಧರಿವರೊಂದೊಂದು
ವಸ್ತ್ರದಲಿ ॥ ಹೊಗೆವೊಗದ ಕಿಡಿಗಣ್ಣಕೆವಿಮ್ಮ । ಸೆಗಳ ಗುಜುರನ ಜುಂಜುಗೇಶದ । ವಿಗಡನೆದ್ದನು
ಬಂದು ಹಿಡಿದೆನು ದ್ರೌಪದಿಯ ಸೆರಗ ॥೧೦೧॥ ಮರುಹಿದರು ಮಾಸುಡುಗಳ ಮಿಗೆನೀ । ರೊರೆವಕಂಗ
ಳಲಕಟಕಟ ನಿ । ಷ್ಠುರವಿದೇಕಪಕೀರ್ತಿಯೇಕನುಚಿತವಿದೇಕೆನುತ ॥ ಕರಗಿದರು ಕಂದಿದರು ಮಮ್ಮಲ ।
ಮರುಗಿದರು ಭೀಷ್ಮಾದಿಗಳು ಜ । ರ್ಝರಿತರಾದರು ತಡೆಯಲಾರದೆ ಖಳನ ದುಷ್ಕೃತವ ॥೧೦೨॥
ಅಳುಕಿದನೆ ಸುಡಲವನ ಮೇಲುದ । ಸೆಳೆದನುನ್ನತಕುಚವ ನಳಿತೋಳ್ । ಗಳಲಿ ಮುಚ್ಚಿದಳಬಲೆ ಬೆಚ್ಚಿ
ದಳವನನಿಷ್ಠುರಕೆ ॥ ಕಳವಳಿಸಿದಳು ಬೆರಳಿನಲಿದ್ದುಗು । ಜಲವ ಬಿಟರುತ ನೋಡಿದಳು ನೃಪ । ತಿಲಕನನು ಭೀ
ಮಾರ್ಜುನರ ಮಾದ್ರೀಕುಮಾರಕರ ॥೧೦೩॥ ಮುಂದವನಿಬರ ಮೋರೆ ಮಹಿಪನ । ಕೊರಲಕೊಂಕಿ
ನಲಿದ್ದರಾಸೋ । ದರರು ಸಾರವನಲ್ಲಿ ಕಾಣದೆ ಭೀಷ್ಮಗುರುಕೃಪರಾ ॥ ಮರಳಿ ನೋಡಿದಳಕಟ ಗಂಗಾ
ವರಕುಮಾರದ್ರೋಣಕೃಪರೇ । ಸೆರಗ ಬಿಡಿಸಿರೆ ತಂದೆಗಳಿರೆಂದೊರಲಿದಳು ತರಳೆ ॥೧೦೪॥ ಕ್ರೂರನಿವ
ದುಶ್ಶಾಸನನು ಗಾಂ । ಧಾರಿ ಬಿಡಿಸೌ ಸೆರಗ ಸೊಸೆಯ । ಲ್ಲಾರು ಹೇಳೌ ತಂಗಿಯಲ್ಲಾ ನಿಮಗೆ ಭಾನು
ಮತಿ ॥ ವೀರಸೈಂಧವನರಸಿ ರಾಜಕು । ಮಾರ ನೀ ನಾದನಿಯಲಾ ಖಳ । ರೌರವದೊಳದ್ದುವನು
ಬಿಡಿಸೆಂದೊರಲಿದಳು ತರಳೆ ॥೧೦೫॥ ಎಲೆ ವಿಳಾಸಿನಿಯರಿರ ಭೂಪನ । ತಿಳುಹಿರೌ ತಾಯ್ಗಳಿರ
ನೀವಿಂ । ದೆಲೆ ಪಸಾಯ್ತಿಯರಿರ ಸಹೋದರಿಯೆಂದು ಕೌರವನ ॥ ತಿಳುಹಿರೌ ಶರಣಾಗತರ ತಾ ।
ನುಳುಹಿಕೊಂಬುದು ಧರ್ಮವಕಟಾ । ಕಲುಹೃದಯರೌ ನೀವೆನುತ ಹಲುಬಿದಳು ತರಳಾಕ್ಷಿ ॥೧೦೬॥
ಧಾರುಣೀಪತಿಗಳಿರ ರಾಜಕು । ಮಾರರಿರ ಮಂತ್ರಿಗಳಿರಾ ಪು । ವಾರಕಿದು ಪಂತವೆ ವಿಚಾರಿಸಿನಿರಪ
ರಾಧಿಯನು ॥ ನಾರಿಯೊಬ್ಬಳನಕಟ ಸಭೆಯಲಿ । ಸೀರೆಯೊರೆಯುಚರ್ಮವರು ಕೆಟ್ಟನು । ಕಾರಣಿಕರಿಲ್ಲಾ
ಶಿವಾ ಎಂದೊರಲಿದಳು ತರಳೆ ॥೧೦೭॥ ಪತಿಗಳೆನ್ನನು ಮಾರಿ ಧರ್ಮ । ಸ್ಥಿತಿಯ ಕೊಂಡರು
ಭೀಷ್ಮಮೊದಲಾ । ದತಿರಥರು ಪರಹಿತವ ಬಿಸುಟರು ವಧ್ಯಭೀತಿಯಲಿ ॥ ಸುತನ ಸಿರಿ ಕಡುಸೊಗಸಲಾ
ಭೂ । ಪತಿಗೆ ಗಾಂಧಾರಿಗೆ ಯನಾಥೆಗೆ । ಗತಿಯ ಕಾಣೆನು ಶಿವಶಿವಾ ಯೆಂದೊರಲಿದಳು ತರಳೆ ॥೧೦೮॥
ವೈದೆಗೆದು ಪೀಪ್ರಾಣವಾಯುಗ । ಳೈದು ಬಳಿಕೆನಗಾರು ಮರುಗುವ । ರೈದೆತನವೊಂದುಳಿಯಲುಳಿವುದು
ಮಿಕ್ಕ ಮಹಿಮೆಗಳು ॥ ಬೈದು ಫಲವೇನಿನ್ನು ನಿನ್ನಯ । ಮೈದುನರ ಮರುಳಾಟಕೆನ್ನನು । ಕಾಯ್ದು
ಕೊಳ್ಳೈ ಕೃಷ್ಣಯೆಂದೊರಲಿದಳು ಲಲಿತಾಂಗಿ ॥೧೦೯॥ ಸುಲಿವರೊರೊಳಗುಟ್ಟಸೀರೆಯ । ನೆಲೆ

ಮುರಾಂತಕ ರಕ್ಷಿಸೈ ಶಶಿ । ಕಳೆಗೆ ಸದರವೆ ರಾಹು ರಚಿಸಿದತುಟಿಯತೋಟಿಯದು ॥ ಸೆಳವರೆಸುವನು
ಖಳರು ಸೀರೆಯ । ಸುಲಿದರುಳಿಯೆನು ಕೃಷ್ಣ ಕರುಣಾ । ಜಲಧಿಯೇ ಕೈಗಾಯಬೇಕೆಂದೊರಲಿದಳು
ತರಳೆ ॥೧೧೦॥ ಗತಿವಿಹೀನರಿಗಕಟ ನೀನೇ । ಗತಿಯಲ್ಲೈ ಗೋವಿಂದ ರಿಪುಬಾ । ಧಿತರಿಗಬಲರಿಗಾರ್ತ
ರಿಗೆ ನೀ ಪರಮಬಂಧುವಲಾ ॥ ಸತಿಪಶುದ್ವಿಜಬಾಧೆಯಲಿ ಜೀ । ವಿತವ ತೊರೆವರು ಗರುವರದುಹಿಂ ।
ಗಿತೆ ಸುಯೋಧನಸಭೆಯೊಳೆಂದೊರಲಿದಳು ಲಲಿತಾಂಗಿ ॥೧೧೧॥ ಕಾಯಿದ್ದೈ ಕರುಣದಲಿ ದಿವಿಜರ ।
ತಾಯಪರಿಭವವನು ಪಯೋಧಿಯ । ಹಾಯಿದಮರಾರಿಗಳ ಖಂಡಿಸಿ ತಲೆಯಚೆಂಡಾಡಿ ॥ ಕಾಯಿದ್ದೈ
ಜಾನಕಿಯನೆನ್ನನು । ಕಾಯಬೇಹುದು ಹೆಣ್ಣಹರಿಬಕೆ । ನೋಯಬಲ್ಲರೆ ಕೆಲಬರೆಂದೊರಲಿದಳು ತರ
ಳಾಕ್ಷಿ ॥೧೧೨॥ ವೇದವಧುಗಳ ಕಾಯ್ದೆಲಾ ತಮ । ಬಾಧೆಯಲಿ ಖಳನಿಂದ ಧರಣಿಮ । ಹೋದಧಿಯ
ಲಕ್ಕಾಡಿದೊಡೆ ದಾಡೆಯಲಿದಾನವನ॥ ಕೋದು ಹಾಕೀಭೂತಧಾತ್ರಿಯ । ಕಾದೆಲಾ ಕಾರುಣ್ಯಸಿಂಧುವೆ!
ಮೇದಿನೀಪತಿ ಮನ್ನಿಸೆಂದೊರಲಿದಳು ತರಳಾಕ್ಷಿ ॥ ರಕ್ಷಿಸಿದೆ ಯೋಗಿನಿಗೆ ಬೆದರುವ । ದಕ್ಷಸುತೆಯನು
ಕೋಪಶಿಖಿಮಹ ರಾಕ್ಷನಾಜಮದಗ್ನಿಮುನಿಪನ ನುಡಿಯನನುಕರಿಸಿ ॥ ರಕ್ಷಿಸಿದೆ ರೇಣುಕೆಯನೆನ್ನನು ।
ಪೇಕ್ಷಿಸಿದಿರೈ ಕರುಣದಲಿ ಕಮ । ಲಾಕ್ಷ ಬಿಡಿಸಾ ಸೆರಗನೆಂದೊರಲಿದಳು ಹರಿಣಾಕ್ಷಿ ॥೧೧೪॥ ದೇವಕೀ
ದೇವಿಯರ ಸೆರೆಯನು । ದೇವಕೃಪೆಯಲಿ ಬಿಡಿಸಿದ್ದೈ ಕರು । ಣಾವಲಂಬನಕಳಚಿದ್ದೈ ಹದಿನಾರುಸಾವಿ
ರದಾ ॥ ದೇವಕನ್ಯಾಬಂಧನವನಭಿ । ಭಾವಕರ ಕೌರವರ ಭಂಗಿಸಿ । ದೇವ ಬಿಡಿಸೈ ಸೆರಗನೆಂದೊದರಿ
ದಳು ಪಾಂಚಾಲೆ ॥೧೧೫॥ ಶಿಶುವಧೆಗೆ ಸೀವರಿಸಿದಸುರನ । ಬಸುರಹೂಮಾಲೆಯನು ನೀ ತುರು । ಬಿಸಿ
ದೆಲಾ ನಖರಾಜಿಗಬಲನಕಾಯ್ದು ಕರುಣದಲಿ ॥ ಶಿಶುವನಯ್ಯಂಗಿತ್ತುಜಲಧಿಯ । ಮುಸುಕನುಗಿದತಿಕ
ರುಣಿಯೇ ಹಿಂ । ಗುಸಿನ ಹರಿಬಕೆ ಕೃಪೆಯಮಾಡೆಂದೊದರಿದಳು ತರಳೆ ॥೧೧೬॥ ತುರುವನುಂಗಿದ
ಫಣಿಯ ಗಂಟಲ । ಮುರಿದು ಕಾಯ್ದೈ ಗೋವುಗಳ ಗಿರಿ । ಮರೆಯಲಿಂದ್ರನ ಖಾತಿಗಳುಕದೆ ಕಾಯ್ದೆ
ಗೋಕುಲವ ॥ ಮೆರೆದೆಲಾ ಕೃಪೆಯಲಿ ಗಜೇಂದ್ರನ । ಮುರಿಯಲೀಯದೆ ಖಳನು ಸೋಕಿದ । ಸೆರಗ
ಬಿಡಿಸೈ ಕೃಷ್ಣ ಯೆಂದಳು ಪಾಂಡವರ ರಾಣಿ ॥೧೧೭॥ ಒದೆದೊಡೆತೊಲಿದವರುಂಟೆ ಬೈದೊಡೆ । ಪದವ
ನಿತ್ತವರುಂಟೆ ಕರುಣಾ । ಸ್ಪದರಸಾಕೇಳ್ದರಿಯೆನೇ ಕಮಲಾಸನಾದ್ಯರಲಿ ॥ ಪದವ ಸೋಂಕಿದಮೂ
ಹೊರಡುತಿ । ದ್ದಿದುದುಗಡ ಹೆಂಗುಸಿನ ಹೇರಾ । ಳದ ಕೃಪಾಳುವೆ ಕೃಷ್ಣ ಸಲಹೆಂದೊದರಿದಳು
ತರಳೆ ॥೧೧೮॥ ಸೊಕ್ಕಿದಂತಕದೂತರನು ಸದೆ । ದೊಕ್ಕಲಿಕ್ಕಿಯಜಾಮಿಳನ ಹಿಂ । ದಿಕ್ಕಿಕೊಂಡೆ
ಯಲ್ಲೈ ದುರಾತ್ಮಕ್ಷತ್ರಬಂಧದಲಿ ॥ ಸೊಕ್ಕಿದರು ಕೌರವರು ಖಳರಿಗೆ । ಸಿಕ್ಕಿದೆನು ನಿನಗಲ್ಲದಾರಿಗೆ। ಕಕ್ಕು
ಲಿತೆ ಬಡುವೆನು ಮುರಾಂತಕಎಂದಳಿಂದುಮುಖಿ ॥೧೧೯॥ ಚರಣಭಜಕರ ಮಾನಹಾನಿಯ।ಹರಿಬವಾ
ರದು ಕೃಷ್ಣನಾಮ । ಸ್ಮರಣ ಧನಿಕರಿಗುಂಟೆ ಘಲ್ಲಣೆ ಘೋರಪಾತಕದ ॥ ಪರಮಭಕ್ತಕುಟುಂಬಕನು
ನೀ । ಕರುಣಿಯಲ್ಲದೊಡೀ ಕುಟುಂಬಕೆ । ಶರಣರದಾರೈ ಕೃಷ್ಣ ಸಲಹೆಂದೊರಲಿದಳು ತರಳೆ
॥೧೨೦॥ ನಾಥರಿಲ್ಲದ ಶಿಶುಗಳಿಗೆ ನೀ । ನಾಥನೈ ಗೋವಿಂದ ಸಲಹೈ । ಯೂಥಪತಿಗಳು
ಬಿಸುಟ ತರುಣಿಗೆ ಕೃಪೆಯ ನೀ ಮಾಡೈ ॥ ನಾಥರಿಲ್ಲೆನಗಿಂದು ದೀನಾ । ನಾಥ ಬಾಂಧವ
ನೀನಲ್ಲೈ ವರ । ಮೈಥಿಳೀಪತಿ ಮನ್ನಿಸೆಂದೊದರಿದಳು ಮೃಗನಯನೆ ॥೧೨೧॥ ಹೊಲಬುದ

ಪ್ಪಿದ ಹುಲ್ಲೆ ಬೇಡನ । ಬಲೆಗೆ ಬಿದ್ದಂತಾದೆನೈ ಬಲು । ಹಳುವದಲಿ ತಾಯ್ಬಿಟ್ಟ ಶಿಶು ತಾ
ನಾದೆನೆಲೆಹರಿಯೆ ॥ ಕೊಲುವನೈ ಕಾಗೆಗಳ ಕಟ ಕೋ । ಗಿಲೆಯಮರಿಯನು ಕೃಷ್ಣ ಕರುಣಾ ।
ಜಲಧಿಯೇ ಕೈಗಾಯಬೇಕೆಂದೊರಲಿದಳು ತರಳೆ ॥೧೨೨॥ ಅಕಟ ಹಂಸೆಯ ಮರಿಯ ಮೋದುವ ।
ಬಕನ ತೆಗೆಸೈ ಗಿಡಗನೆರಗುವ । ಶುಕನ ಶೋಕವ ಮಾಣಿಸೈ ವಾಣಿಯವೆ ಭಕುತರಲಿ ॥ ಪ್ರಕಟಭೂತ।
ಗ್ರಹದಬಾಧೆಗೆ । ವಿಕಳೆ ನಿನ್ನಯಬಿರುದ ತಡೆದೆನು । ಭಕುತವತ್ಸಲನಹರೆ ಸಲಹೆಂದೊದರಿದಳು
ತರಳೆ ॥೧೨೩॥ ಅರಿಗೊರಲುವೆನೈ ಖಳಾಪ । ಸ್ಮರವಿದೆ ಸೆರೆಹಿಡಿದು ತನ್ನನು । ವಾರಿಗೆಯು ವೈರಾ
ಗ್ಯಗಡ ಮತ್ಪ್ರಾಣವಿಭುಗಳಿಗೆ ॥ ಘೋರತರಭವದುರಿತತರುವಿನ । ಬೇರಸುಡುವಿನಿನ್ನ ನಾಮಕೆ ।
ನಾರಿಯಳ್ಕೆಯನಿಲಿಸಲೇನರಿದೆಂದಳಿಂದುಮುಖಿ ॥೧೨೪॥ ಕರುಣಿ ನೀಕಾರುಣ್ಯಪಾತ್ರದ । ತರಳೆತಾ
ದೀನಾರ್ತಿ ದುಃಖೋ । ತ್ತರಣ ನೀ ದೀನಾರ್ತದುಃಖಿತೆಯಾನು ಜಗವರಿಯೆ ॥ ಪರಮಪಾಲಕ ನೀನೆ
ಗತ್ಯಂ । ತರದವಿಹ್ವಲೆ ತಾನಲಾ ನಿ । ಷ್ಠುರವಿದೇನೈ ಕೃಷ್ಣಯೆಂದೊರಲಿದಳು ತರಳಾಕ್ಷಿ ॥೧೨೫॥
ಮರೆದೆನಭ್ಯುದಯದಲಿ ನೀನೆಂ । ದರುವೆನಾಪತ್ತಿನಲಿ ಮುದದಲಿ । ಪುರುಷಸುವೆನುಬ್ಬಿನಲಿ ಕಳವಳಿಸು
ವೆನು ಖೋಡಿಯಲಿ ॥ ಅರಿಯದಜ್ಞರ ಗುಣವ ದೋಷವ । ನರಸುವರೆ ನಿನ್ನಡಿಯ ಕೃಪೆಯನು ।
ಮರೆಯಲಾಗದೆ ಕೃಷ್ಣಯೆಂದೊರಲಿದಳು ನಳಿನಾಕ್ಷಿ ॥೧೨೬॥ ಋಷಿಗಳತಿತಾರ್ಕಿಕರು ಕವಿಗ । ವ್ಯಾಸ
ನಿಗಳು ಕೋವಿದರು ಮಿಕ್ಕಿನ । ವಿಷಯದೆರೆಮೀನುಗಳು ಮೋಘಮನುಷ್ಯರೆಂಬವರು ॥ ಒಸೆದು
ನಿನ್ನವರೆಂದು ಬಗೆವರೆ । ಬಸಿದುಬೀಳುವಕೃಪೆಯ ನೀತೋ । ರಿಸೆಯದೇನೈ ಕೃಷ್ಣಯೆಂದೊರಲಿದಳು
ನಳಿನಾಕ್ಷಿ ॥೧೨೭॥ ತುಸಮೊದಲು ಚತುರಾಸ್ಯಪರಿಯಂ । ತೆನಿಪ್ಪವೇ ಭುವನದಲಿ ಜೀವ । ಪ್ರಸರವಿ
ಪ್ಪದು [illegible] ತಾರತಮ್ಯದಲಿ ॥ ಉಸುರುಹಸರಣವಿಲ್ಲದೆನ್ನು । ಬ್ಬಸದ ಭೀತಿಯಬೇಗೆ
ಮಿಗೆ ದಾ । ಹಿಸುವುದೈ ಕಾರುಣ್ಯನಿಧಿ ಯೆಂದೊರಲಿದಳು ತರಳೆ ॥೧೨೮॥ ನಂದಗೋಪಕುಮಾರ
ಗೋಪೀ । ವೃಂದವಲ್ಲಭ ದೈತ್ಯಮಥನ ಮು । ಕುಂದ ಮುರಹರ ಭಕ್ತವತ್ಸಲ ಘನಕೃಪಾಜಲಧಿ ॥
ನೊಂದೆನೈ ನುಗ್ಗಾದೆನೈ ಗೋ । ವಿಂದಕೃಪೆಮಾಡಕಟೆನುತ ಪೂ । ರ್ಣೇಂದು ಮುಖಿ ಹಲುಬಿದಳು
ಬಲುತೆರತೆರದಿಂದಲಚ್ಯುತನ ॥೧೨೯॥ ಇತ್ತ ದ್ವಾರಾವತಿಯೊಳಗೆ ದೇ । ವೋತ್ತಮನು ಭಕುತರಿಗೆ
ತನ್ನನು ॥ ತೆತ್ತು ಬದುಕುವನೆಂಬಪರಮವ್ರತದನಿಷ್ಠೆಯನು ॥ ಚಿತ್ತದಲಿ ನೆಲೆಗೊಳಿಸಿ ರುಕ್ಮಿಣಿ ।
ಸತ್ಯಭಾಮೆಯರೊಳು ಸಮೇಳದ । ನೆತ್ತಸಾರಿಯ ಹರಹಿ ಹಾಸಂಗಿಯನು ದಾಳಿಸುತ ॥೧೩೦॥ ಕೇಳಿ
ದನು ಮುರವೈರಿ ತನ್ನಯ । ಮೇಳದ್ವರಸತಿಯ ಹುಯ್ಯಲ । ನಾಳಿನೊಂದಪಮಾನವಾಳ್ದಂಗೆಂಬ
ನುಡಿಯಿಂದ ॥ ಕೋಳುಹೋದುವೆ ಪಾಂಡುಪುತ್ರರ । ಬಾಳುವೆಗಳಕಟೆನುತ ಲಕ್ಷ್ಮೀ । ಲೋಲ
ಚಿಂತಿಸಿ ನುಡಿದ ರುಕ್ಮಿಣಿದೇವಿಗೀಹದನ ॥೧೩೧॥ ಕ್ರೂರದುರಿಯೋಧನನು ದ್ರುಪದಕು । ಮಾರಿ
ಪಾಂಚಾಲೆಯನು ಸಭೆಯಲಿ । ಸೀರೆಯನು ಸುಲಿಯಲ್ಕೆ ಕಾಯ್ಕೈ ಕೃಷ್ಣಯೆಂದೆನುತ ॥ ನಾರಿಯೊರ
ಲುತ್ತಿಹಳು ವುಟ್ಟ । ಸೀರೆಸೆಳೆಯಲು ಬಳಿಕ ಲಕ್ಷಯ । ಸೀರೆಯಾಗಲಿ ಯೆಂದ ಗದುಗಿನವೀರ
ನಾರಯಣ ॥ ... ... ॥೧೩೨॥

ಅಂತು ಸಂಧಿ ೧೪ ಕ್ಕೆ ಪದ ೯೩೪ ಕ್ಕಂ ಮಂಗಳಮಸ್ತು.

ಹದಿನೈದನೆಯ ಸಂಧಿ.

ಸೂಚನೆ। ಸೋಲದಲಿ ಮನನೊಂದಧರಣೀ । ಪಾಲರನು ಸಂತೈಸಿಯಂಧನೃ ।
ಪಾಲ ಕಳುಹಿದರಿವರು ಹೊರವಂಟರು ಪುರಾಂತರವ ॥

ನಿಯತಮತಿ ಚಿತ್ತೈಸು ಜನಮೇ । ಜಯಮಹೀಪತಿ ದೇವತಾಭ । ಕ್ತಿಯಲದೇನಾಶ್ಚ
ರ್ಯವೋ ಶಿವಶಿವಮಹಾದೇವಾ॥ ಜಯಜಯೆಂದುದು ನಿಖಿಳಜನ ಘೂ । ಡಿಯಲಿ ಘೋಂಪಿಸಿ ಸೆಳೆ
ವಸೀರೆಗೆ । ಲಯವ ಕಾಣೆನು ಕರುಣವೆಂತುಟೊ ದೇವಕೀಸುತನಾ ॥೧॥ ಉಗಿದು ಹಾಯ್ಕುವಖಳನ
ನಿಡುದೋ । ಳುಗಳು ಬಳಲಿದವಳ್ಳೆ ಹೊಯ್ದವು । ಧಗೆಯ ಡಾವರವಾಯ್ತು ಬಹಳಸ್ವೇದಜಲಜ
ಡಿಯೆ ॥ ತೆಗೆದು ನಿಂದನು ಸೀರೆಯೊಟ್ಟಿಲ । ಗಗನವನು ಗಾಹಿಸಿತು ಗರುವೆಯ । ಬಗೆಗೆ ಬೀಸರ
ವಿಲ್ಲ ಬೆರಗಾಯ್ತುಮಹಾಸ್ಥಾನ॥೨॥ಆಮಹಾಸತಿ ಶಿವಶಿವಾ ಲಜ್ಜಾಮಹೋದಧಿ ಬತ್ತುವದೆನಿರ್ಣಾ
ಮರೇಕುಂತೀಸುತರು ಪಪ್ಪರ ಪರಾಭವಕೆ॥ ಆಮುಕುಂದನ ದಿವ್ಯನಾಮ । ಪ್ರೇಮರಸಕಿದು ಸಿದ್ಧಿಯೆಂ
ದೆನ। ಲಾ ಮಹಾಸ್ಥಾನದಲಿ ಬೆಳೆದುದು ಬೆರಗುಬಿಂಕದಲಿ ॥೩॥ ಅಕ್ಷಯ ದೈವಪ್ರೇಮಪಿದೆಲಾ ।
ಮಹಿಳೆಯಲಿ ಮಾನವರಕೃತಿಗಲ । ಬಹುದೆ ಗರು[illegible]ಯಗಾಹಿಸಿತು ಗೋವಿಂದನಭಿಧಾನ ॥ ಅಹಿತವಹಕು
ರುರಾಜಕುಲಘನ। ಗಹನಭೀಮಧನಂಜಯಾದ್ಯರ । ವಿಹರಣದಲಿ ವಿನಾಶವಹುದೆಂದುದು ಬುಧ
ಸ್ತೋಮ ॥೪॥ ಬೆಗಡಿನಲಿ ಮುದಖೇದನಯನಾಂ । ಬುಗಳೊಳಾನಂದಾಶ್ರುಶೋಕದ । ಬಗೆಯೊಳು
ಬ್ಬಿದನಗೆಯಲಾಸ್ವೇದದಲಿ ರೋಮಾಂಚ ॥ ದುಗುಡದಲಿ ಪರಿತೋಷ ಕಂದಿದ । ಮೊಗದಲುಜ್ಜ್ವಲ
ವೃತ್ತಿ ಭೀಷ್ಮಾ । ದಿಗಳೊಳಗೆ ಪಲ್ಲಟಿಸುತಿರ್ದುದು ಪಡಿಮುಹೂರ್ತದಲಿ ॥೫॥ ನೆನೆದೆ ನೀನನುಚಿತವ
ನೀಹೊ। ತ್ತಿನಲಿ ದ್ರುಪದಾತ್ಮಜೆಯ ದೈವದ। ನೆನಹಿನಲಿ ದೂರಡಗಿತರೆ ಬೆಳಸಾದುದಪಕೀರ್ತಿ ॥ ವನಿ
ತೆಯನು ಬಿಡು ಪಾಂಡುನೃಪನಂ। ದನರ ನೀನೊಲಿದಂತೆ ಮಾಡುವು। ದನುನಯವು ನಿನಗೆಂದು ನುಡಿ
ದನು ವಿದುರ ಕುರುಪತಿಗೆ ॥೬॥ ದೈವವೀದ್ರೌಪದಿಗೆ ಸೀರೆಯ । ನೈವುದಲ್ಲದೆ ಬಿಡಿಸಲಾಪುದೆ । ದೈವ
ತೊತ್ತಿರ ಹುರುಡುಗೆಲಸವ ಹಿಂದುಗೂಡದಲಿ ॥ ದೈವವಿವಳಿಗೆ ತಾನಲೇ ತ। ನ್ನೈವರಕ್ಕಿದಮಾತು
ರಿಪುಗಳ । ಮೈವಳಿಯ ನುಡಿಗಾರೆ ನೀ ಸಾರೆಂದನಾಭೂಪ ॥೭॥ ನೀತಿಮರುಳನು ವಿದುರನೀತನ ।
ಮಾತಿನಲಿ ಫಲವೇನು ತೊತ್ತಿರೊ। ಳೀತಳೋದರಿ ಬೆರಸಿ ಬದುಕಲಿ ಕರ್ಣ ಕಳುಹಿವಳ ॥ ಈತತುಕ್ಷ
ಣಾದೃಷ್ಟಬಂಧನ। ವೀತರಲಿ ಮಾಡಿದಳೊ ಲಜ್ಜಾ । ಜಾತವುಳಿದುದು ಬೆಳದಸೀರೆಯ ಕಟ್ಟಿ ಹೊರ
ಸೆಂದೆ ॥೮॥ ಇವಳಲೇ ನಮ್ಮನಿಬರಭಿಮಾ। ನವನು ಸೆಳೆದಳಲಾ ಸ್ವಯಂವರ। ಭವನದಲಿ ಭಂಗಿಸಿ
ದಳೆಮ್ಮನು ಸಭೆಯೊಳೆಡಹಿದರೆ ॥ ಇವಳು ಬಹುವಿಧಪುಣ್ಯಾಶಕ್ತಿಯೊ। ಳೆವಗೆ ಸಿಲುಕಿದಳಿಂದು
ತೊತ್ತಿರ । ಸವಡಿವೇಟದ ಸವಿಯ ಸುರಿಯಲಿ ಭಂಡಪಿಂಡರಲಿ ॥ ಬೂತುಗೆಡೆವನೊಳೆಂಬೆನೇ ಮರು।
ಮಾತನೆಲೆಗಾಂಗೇಯ ತಮ್ಮಡು। ನೀತಿಯೇ ತಾನಿವರಧನವೇ ಧರ್ಮಮಾರ್ಗದಲಿ ॥ ಸೋತನರ
ಸನು ತನ್ನನೆನ್ನನು । ಸೋತುದನುಚಿತವೆಂಬ ಬೆಡಗಿನ । ಮಾತನರಿಯದಮೂಢರನು ಸುಡಲೆಂದಳಿಂ

ದುಮುಖಿ ॥೧೦॥ ಸೋತುದಿಲ್ಲಾ ನಿನ್ನ ಸೋತುದ । ನೀತಿಯೆಂಬುದ ವಿಹಿತವೇ ತ । ನೀತನುಡಿಯಲಿ ಧರ್ಮಪುತ್ರನು ಸತ್ಯಸಂಧನಲೇ ॥ ನೀ ತಳೋದರಿ ತರಿಚುಗೆಡದೀ । ಮಾತಿನಲಿ ತಾಬಿಡುವೆನೇ ನಿ । ನ್ನಾತಗಳ ನುಡಿಸೆಂದು ಖಳ ಘಟ್ಟಿಸಿದನಂಗನೆಯ ॥೧೧॥ ಜೀಯ ಮಾತೇನಿವಳೊಡನೆ ರಿಪು । ರಾಯರಿಗೆ ದಾಸತ್ವವಾಗಲು । ಬಾಯಬಡಿಕೆಯದಾರೊಡನೆ ತದ್ದಾಸಧನವಲ್ಲಾ ॥ ಆಯತಾಕ್ಷಿಯನಿನ್ನು ನಿಮ್ಮಪ । ಸಾಯಿತೆಯರಲಿ ಕೂಡು ತೊತ್ತಿರ । ಲಾಯಬೇಡುಪಕಾರವೆಂದೆರಗಿದನು ಕಲಿಕರ್ಣ ॥೧೨॥ ಎಲೆಗೆಭಜಿಸಾ ಕೌರವಾನ್ವಯ । ತಿಲಕನನು ನಿನ್ನವರ ಮರೆ ನಿ । ನ್ನುಳಿವನೆನೆ ಯೀಸಮಯದಲಿ ಕಾಲೋಚಿತಕ್ರಮವ ॥ ಬಳಸು ನೀನೆನೆ ಗಜರಿದಳು ಕುರು । ತಿಲಕನನು ತರಿದೊಟ್ಟಿ ರಣದಲಿ । ತ್ರಿಳಿರಕುತದಲಿ ತಣಿವನನಿಲಜನೆಂದಳಿಂದುಮುಖಿ ॥೧೩॥ ಏಕೆ ಕೆಣಕಿದೆ ಕರ್ಣಬೂತಿನ । ಬೀಕರಿನ ಬದಗಿಯನು ಸಮರದೊ । ಳೀಕೆಯನಿಲಜ ಮುರಿವನೆನುತವೆ ತನ್ನ ಮುಂಜೆರಗ ॥ ನೂಕಿ ತೊಡೆಗಳ ತೋರಿಸುತ್ರ ಲೋ । ಕೈಕವೀರನನೇಡಿಸಿದರ । ವ್ಯಾಕುಲನ ಮನಖಂಡಿಯೋದುದು ಖತಿಯ ಹೊಯ್ಲಿನಲಿ ॥ ನೋಡಿದನು ಪರಿಘುವನು ಕಡೆಗ । ಣ್ಣಾಡಿತಿವದಿರಮೇಲೆ ಮೈಯಲೆ । ಝಾಡಿಗೆದರಿತು ರೋಮಝಳಪಿಕೆತ್ತರುಣಮಯನಯನ ॥ ಮೂಡಿತುರಿ ಸುಯ್ಲಿನಲಿ ರೋಷದ । ಬೀಡು ಭೀಮನ ಕಂಡು ಧರ್ಮಜ । ಬೇಡಿಕೊಂಡನು ತನ್ನ ಕೊರಳಿನ ಬೆರಳಸನ್ನೆಯಲಿ ॥೧೫॥ ಸೈರಿಸಕಟಾ ಭೀಮರೋಷವಿ । ಕಾರಕಿದು ಹೊತ್ತಲ್ಲ ಸರ್ವವಿ । ಕಾರದಲಿ ಕೌರವರು ಮೆರೆಯಲಿ ಕಾಲವವರದಲಾ ॥ ಧಾರುಣೀಶನ ಧರ್ಮತತ್ವದ । ಸಾರವುಳಿದರೆ ಸಾಕು ಮಿಕ್ಕಿನ । ನಾರಿಧನವಭಿಮಾನ ಬೇಯಲಿಯೆಂದನಾ ಪಾರ್ಥ ॥೧೬॥ ಕ್ಷಮೆಯೆ ಧನವೆಂದಿದ್ದವಿವಳಲಿ । ಮಮತೆಯನು ಮಾಡಿದೆವೆ ನಾವು । ಭ್ರಮಿಸುವರೆ ದೇವೇಂದ್ರತೃಣವಿವಸಾವಪಾಡೆವಗೆ ॥ ರಮಣಿಯಾಡಿದಧರ್ಮಪದವಿದು । ಕುಮತಿಗಳ ಮತವಲ್ಲದಿದ್ದೊಡೆ । ತಮಗೆದಾಸಿಯೆದ್ರುಪದನಂದನೆಯೆಂದನಾಪಾರ್ಥ ॥೧೭॥ ಶ್ರುತಿತದರ್ಥಸ್ಮೃತಿಗಳಲಿ ಪಂ । ಡಿತರು ಪುಣ್ಯತರುಂಟು ಪಾರ್ಥ । ಸ್ಮೃತಿಯ ಬಳಿಕಾದರಿಸುವೆವು ನಿಮಗಾದದಾಸ್ಯದಲಿ ॥ ಕೃತಕವಿಲ್ಲದೆ ನಡೆದು ತೋರಾ । ಸತಿಯ ಸೆರೆಯನು ಬಿಡಿಸಲೆಮ್ಮಾ । ಕ್ಷಿತಿಯೊಳಾರುಂಟೆಂದು ಕೌರವರಾಯ ಗರ್ಜಿಸಿದ ॥ ಭಾಷೆಯೇಕಿವನೊಡನೆ ದುರುಪದಿ । ದಾಸಿಯಲ್ಲೆಂಬವನದಿವಸವ । ದೇಸುಬಲಹೋಫೂತುಮರುಳು ತಾನಿಂದ್ರಸುತನೆಂಬ ॥ ಐಸರಲಿ ದೇವೇಂದ್ರ ತೃಣಗಡ । ವೈಸಲೇ ನೀಮುನಿದೊಡೀನುಡಿ । ದಾಸಭಾವದ ಬಣಗುಗಳಿಗೇಕೆಂದನಾಕರ್ಣ ॥೧೯॥ ನೂಕಿಸಾ ತೊತ್ತಿರಮನೆಗೆ ತಡವೇಕೆ ತರುಣಿಯನಿನ್ನು ನೀನು ವಿ । ವೇಕದಲಿ ನನ್ನಂತೆ ತೆಗೆ ಸಾಕಿವರ ಮಾತೇನು ॥ ಈ ಕುಠಾರರ ಕಳುಹಿ ಕಳೆ ತಾ । ವೇಕೆ ನೃಪಸಭೆಯಲಿ ವರಾಸನ । ವೇಕೆನುತ ಕುರುಪತಿಗೆ ನುಡಿದನು ಕರ್ಣ ಖಾತಿಯಲಿ ॥೨೦॥ ಅಹುದಲೇ ಬಳಿಕೇನು ನೀನತಿ । ಬಹಳಮತಿಯೈ ಕರ್ಣ ನೀನೀ । ಕುಹಕಕೋಟಿಯನೆತ್ತ ಬಲ್ಲೆ ವೃಥಾಭಿಮಾನಿಗಳ ॥ ರಹಣಿ ಸಾಕಂತಿರಲಿ ತೊತ್ತಿರ । ಸಹಚರರ ಸೂಳಾಯಿತರ ಕರೆ । ಮಹಿಳೆಯನು ನೂಕೆಂದು ದುಶ್ಶಾಸನಗೆ ನೇಮಿಸಿದ ॥೨೧॥ ಸುಳಿವಹುಲ್ಲೆಯ ಸೋಹಿನಲಿ ಕುಕ್ಕುಳಿಸಿದರೆ ಕುಕ್ಕುರನ ಕೈಯಲಿ । ತಳುವಹುದೆ ಜನಮೇಜಯಕ್ಷಿತಿಪಾಲ ನಿನ್ನವರಾ ॥ ಬಳಲಿಕೆಯನೇನೆಂಬೆನ್ನೈ ಹಿಡಿ । ದೆಳೆಯೆ ಹಲುಬಿದಳಕಟ ರಾಯನ । ಲಲನೆಗೀವಿಧಿಯೇ ಮಹಾದೇವೆಂದು

ದಖಿಳಜನ ॥೨೨॥ ಮಾಣಿಸೈ ಗಾಂಗೇಯ ಗುರು ನಿ । ಮ್ಮಾಣೆಯಡಿ ಕೃಪ ಕೃಪೆಯಮಾಡೈ । ರಾಣಿ
ವಾಸಂಗಳಿರ ನಿಲಿಸಿರೆ ನಿಮ್ಮ ಮೈಮುನನ ॥ ಪ್ರಾಣವಿದಕೊಳಹೇಳಿರೌ ಸಾ । ಕೂಣೆಯವ ಹೊರಲಾರೆನೆ
ನುತಾ । ರಾಣಿ ಹಲುಬಿದಳೊಡೆಮುರುಚಿ ಹೆಣಗಿದಳು ಖಳನೊಡನೆ ॥೨೩॥ ಮಾವ ನಿಮ್ಮಯ ನೇತ್ರ
ವಂತ । ಭಾರ್ಗವದಲಿ ಬೆರಸಿದೊಡೆ ವಿಜ್ಞಾ । ನಾವಲಂಬನದಿಟ್ಟಿ ಬೆಂದುದೆ ನಿಮ್ಮ ಹೃದಯದಲಿ ॥
ದೇವಿಯರಿಗಿದು ಸೊಗಸಲಾ ಸ । ಖ್ಯಾವಳಿಗೆ ಸೇರುವುದಲಾ ನಿ । ರ್ಜೀವರಾದಿರೆ ನೀವೆನುತ ಹಲುಬಿ
ದಳು ಲಲಿತಾಂಗಿ ॥೨೪॥ ಕ್ಷಿತಿಯೆ ಬಿಡಿಸಾ ಸೆರಗನೆಲೆಪಾ । ರ್ವತಿಯೆ ತನ್ನದು ಧರ್ಮವಾದೊಡೆ ।
ಗತಿ ತನಗೆ ನೀವಾಗಿರೌ ಕಮಲಾದಿಶಕ್ತಿಗಳು ॥ ಸತಿಯಹಲ್ಯಾದಿತಿವರಾರುಂ । ಧತಿಮಹಾಮಾಯಾ
ದಿದೇವ । ಪ್ರತತಿ ಬಿಡಿಸಿರೆ ಸೆರಗನೆಂದೊರಲಿದಳು ಪಾಂಚಾಲೆ ॥೨೫॥ ಅಂಧನೊಬ್ಬನೆ ಮಾವ ನೀವೇ ।
ನಂಧರಾದಿರೆ ಪಾಂಡು ಕರುಣಾ । ಸಿಂಧು ನೀಸ್ಥಿರಸುವುದೇ ತನ್ನ ವಿಪತ್ತಿನಲಿ ॥ ಅಂಧಕಾಸುರಮ
ಥನ ನೀನೇ । ಬಂಧಿಸಿದೆಲಾ ಪೂರ್ವವರಸಂ । ಬಂಧವನು ನೀ ಸೆರಗ ಬಿಡಿಸೆಂದೊದರಿದಳು
ತರಳೆ ॥೨೬॥ ಸೊಸೆಯಲಾ ದೇವೇಂದ್ರಯೆನ್ನಯ । ಗಸಣಿಯಾರದು ಹಿರಿಯಮಾವನ । ವಶವಲಾ
ತ್ರೈಜಗದ ಜೀವರ ಜೀವವಿಭ್ರಮಣ ॥ ಉಸುರು ನಿನ್ನಾಧೀನವೀದು । ವ್ಯಸನಿಗಳ ಕೊಂಡಾಡು
ವರೆ ಕರು । ಣಿಸು ಸಮೀರಣಯೆಂದು ಹಲುಬಿದಳಾಶ್ವಿನೇಯರಿಗೆ ॥೨೭॥ ಮಾವದಿರು ಮೊದಲಾದ
ದಿಕ್ಪಾ । ಲಾವಳಿಗೆ ನಮಿಸಿದೆನು ನೈದಿಲ । ತಾವರೆಯಮಿತ್ರರಿಗೆ ಮಂಡೆಯೊಳಿಟ್ಟೆನಂಜುಳಿಯ ॥ ಕಾವು
ದೆನ್ನನು ಹೆಂಗುಸಲ್ಲಾ । ಹಾವು ಹಲಬರ ನಡುವೆ ಸಾಯದು । ದೇವರಿಗೆ ದೂರೈದಲೆಂದೊರಲಿದಳು
ಲಲಿತಾಂಗಿ ॥೨೮॥ ಬಾಯ ಬಿಡಲೇಕಕಟ ಬಳಲಿದೆ । ತಾಯೆ ಕೈದೋರಸರು ನಿನ್ನಯ । ರಾಯರೈ
ವರು ಕೆಲಬಲದ ಜನರೇನಮಾಡುವರು ॥ ನ್ಯಾಯ ನಿನ್ನದು ದೈವದೊಲುಮೆಯ । ದಾಯ ತಪ್ಪಿತು
ಬರಿದೆ ಧೈರ್ಯದ । ಬೀಯಮಾಡದಿರೆಂದು ನುಡಿದನು ವಿದುರನಂಗನೆಗೆ ॥೨೯॥ ಎಲೆಗೆ ನಿನ್ನವರೇನ
ಮಾಡುವ । ರೊಲೆಯೊಳಡಗಿದಕೆಂಡವಿವರ । ಗ್ಗಳಿಕೆ ನಂದಿದುವೆನುತ ಮುಂಚೆರಗೆತ್ತಿ ಮಾನಿನಿಗೆ ॥
ಖಳನು ತೊಡೆಗಳ ತೋರಿಸಿದೊಡತಿ । ಮುಳಿದು ಕೊಟ್ಟಳು ಶಾಪವನು ನಿ । ನ್ನಳಿವು ತೊಡೆಯಲಿ
ಮುಗಿವುದೆಂದಳು ಮುಗುದೆ ಖಾತಿಯಲಿ ॥೩೦॥ ಕಡಲ ತೆರೆಗಳ ತರುಬಿ ತುಡುಕುವ । ವಡಬನಂದದಿ
ಮೇಘಪಟಲವ । ನೊಡೆದು ಸೂಸುವಸಿಡಿಲಿನಂದದಿ ಸಭೆಯೊಳಡಹಾಯ್ದು ॥ ಕುಡಿ ಕುಠಾರನ ರಕು
ತ್ರವನು ತಡೆ । ಗಡಿ ಸುಯೋಧನನೂರುಗಳ ನಿ । ಮ್ಮಡಿಸಿಮುನಿಯಲಿ ಧರ್ಮಸುತನನುತಿದ್ದನಾಭೀ
ಮ ॥೩೧॥ ಹೆದರುಹೊಕ್ಕರು ಸಭೆಗೆ ಕೌರವ । ನೆದೆಬಿರಿದುದಾಸ್ಥಾನಜಲನಿಧಿ । ಕದಡಿತುಕ್ಕಿದಬೆರಗಿನಲಿ ಬಳ್ಳಾ
ದನವನೀಶ ॥ ಹದನಹುದು ಹಾಯೆನುತಲಿದ್ದರು । ವಿದುರಭೀಷ್ಮದ್ರೋಣರಿತ್ತಲು । ಕೆದರುಗೇಶದಕಾಂತೆಹು
ಬ್ಬಿದಳುಹರುಷಪುಳಕದಲಿ ॥೩೨॥ ಒಡೆಯನೈತರಲಿಕ್ಷುದೋಟದ । ಬಡನುಗಳೋಡುವವ್ಯೂಲೀಕೆಯ । ಹಿಡಿ
ದೆಳೆವಖಳಹಾಯ್ದನಾ ಕೌರವನ ಹೊರೆಗಾಗಿ ॥ ನುಡಿ ತರುಣಿ ತಸ್ಮಾಣೆ ಭೀತಿಯ । ಬಿಡಿಸಿದೆನಲಾ ರಾಯ
ನಾಜ್ಞೆಯ । ತಡಿಕೆವಲೆ ನುಗ್ಗಾಯ್ತು ಹೋಗಿನ್ನೆಂದನಾ ಭೀಮ ॥೩೩॥ ಉರವಕೋಪಾಗ್ನಿಯಲಿ
ಕರ್ಣನ । ಶಿರದಭಾಂಡದಲಿವನ ನೊರೆನೆ । ತ್ತರಿನಲಿವನಗ್ರಜನ ಕೊಬ್ಬಿದನೆಣನ ಕೊಯ್ಕೊಯ್ದು ॥
ದುರುಳಶಕುನಿಯ ಕಾಳಿಜದೊಳೊಡ । ವೆರಸಿ ಕುಡಿಸಿ ಮಹೋಗ್ರಭೂತದ । ನೆರವಿಗುಣಲಿಕ್ಕುವೆನು

ಸತಿ ಕೇಳೆಂದನಾ ಭೀಮ ॥೩೪॥ ಕೊಂಬೆನೇ ಧರ್ಮಜನ ಧರ್ಮದ । ಡೊಂಬನೇ ಮುದಿಗುರುಡನಿಕ್ಕಿದ ನಂಬುಗೆಯ ವಿಷವೈಸಲೇ ತಲೆಗೇರಿತ್ತಗ್ರಜನ ॥ ಡೊಂಬಿಗರ ಡಾವರಿಗರಿವದಿರ । ತಿಂಬೆನೀಗಳೆ ತರುಣಿ ಕೇಳೆನು । ತಂಬುಜಾಕ್ಷಿಯ ಸಂತವಿಟ್ಟನು ಕುರುಳನೇಲಿಸುತ ॥೩೫॥ ಇಳಿದನರ್ಜುನನಾಸಭಾಮಂ । ಡಲದ ವೇದಿಯನಹಹ ಧರ್ಮಜ । ನುಳಿವನೇ ನುಡಿಯಡಹಿದರ ಸಿಗ್ಗುರೇಳ್ಗು ಸದ್ಗುಣಕೆ ॥ ಕಳವಳದ ಕಾಪುರದ ಕಾಲುವೆ । ಗೊಳಗುಕೊಡಬರು ಭೀಮರಿಪುಗಳ । ಹಿಳಿವೊಡಿದು ಹೊತ್ತಲ್ಲೆನುತ ಹಿಡಿವನು ವೃಕೋದರನ ॥೩೬॥ ಮಾಣಲದು ಕೌರವರ ಸೂರ್ವರ । ಗೋಣಬನ ಕಾಳೆಗದೊಳೆನ್ನಯ । ಕೇಣಿ ತನ್ನಯ ಗದೆಗೆ ದುರಯೋಧನನ ತೊಡೆಗಳಿಗೆ ॥ ವಾಣಿಯವು ದುಶ್ಶಾಸನನ ತನಿ । ಶ್ರೋಣಿತವ ತಾ ಕುಡಿಯದಿರೆ ನಿ । ಸ್ಸಾಣೆ ಸ್ವೈರಣೆಗಿದುವೆ ಫಲವೆಂದೊದರಿದನು ಭೀಮ ॥೩೭॥ ಧರಣಿಜಲಪಾವಕ ಸಮೀರಾ । । ದ್ಯರುಗಳಲತಿಲ ಶಕ್ರನಿರುಋತಿ । ವರುಣ ವಾಯು ಕುಬೇರ ಯಮರೆಂಬಖಿಳ ದಿಗಧಿಪರು ॥ ಬರೆದುಕೊಂಡಿರಿ ಭಾಷೆಯನು ಸುರ । ನರಫಣಿವ್ರಜವೆಂಬ ಭೀಮನ । ಧರಧುರದ ಧಟ್ಟಣೆಗೆ ಧೃತಿಗೆಟ್ಟುದು ಕುರುಸ್ತೋಮ ॥೩೮॥ ಬಲಸಿದ್ಧ ಭಾಷೆಯನು ದೇವಾಸುರರ ಸಾಕ್ಷಿಯಲಾಯ್ತು ಕರ್ಣನ । ಕೊರಳಿಗೆನ್ನಯ ಬಾಣಕುಂಗುರವುಡಿಕೆಯಿಂದಿನಲಿ ॥ ಸುರನರೋರಗರುದಿರೆಂದ । ಬ್ಬರಿಸಿದನು ಕಲಿಪಾರ್ಥ ಶಕುನಿಯ । ತಿರಿಕೆ ಕೊಟ್ಟೆನು ಸಂಚಕಾರವನೆಂದ ಸಹದೇವ ॥೩೯॥ ಅರಸ ಕೇಳಾಶ್ಚರ್ಯವನು । ಗಜ ಪುರದೊಳಗೆ ನೆಲ ಬಾಯ್ಬಿಟ್ಟದು । ಸುರಿದುದರುಣಾಂಬುವಿನ ಮಳೆ ತತ್ಪುರದ ಮಧ್ಯದಲಿ ॥ ನರಿಗಳವನಿಪನಗ್ನಿಹೋತ್ರದೊ । ಳೊರಲಿದವು ಸುಸ್ವರದಲಿ ಹೂಂ । ಕರಿಸುತಿರ್ದವು ದೇವತಾಪ್ರತಿಮೆಗಳು ನಗರಿಯಲಿ ॥೪೦॥ ಉಗುಳಿದವು ಕುಳುಗಿಡಿಗಳನು ಕೈ । ದುಗಳು ಮಾರುವಪಟ್ಟವಾನೆಗ । ಳೊಗುಮಿಗೆಯ ಕಂಬನಿಗಳಭ್ರದಿ ಧೂಮಕೇತುಗಳು ॥ ನೆಗಳಿದವು ಬಿರುದಾಳಿ ಗಿಲಗಳೆ । ಮುಗುಚಿ ಮುರಿದವು ದೇವತಾ ಭವನಂಗಳ ಶಿಖರವನಂತವದ್ಭುತವಾಯ್ತು ನಿಮಿಷದಲಿ ॥೪೧॥ ಭಾರಿಸಿತು ದೆಸೆದೆಸೆಗಳಲಿ ಹಾ । ಹಾರವಾಪಿಭಾರ್ಗವತೊಳಗಿರೆ । ತಾರಕೆಗಳಿನಬಿಂಬವನು ಝೊಂಪಿಸಿದನಾ ರಾಹು ॥ ತೋರಣದಲುರಿ ತಳಿತು ರಾಜ । ದ್ವಾರ ಹೊಗೆದುದು ದೆಸೆಗಳಂಬರ । ಧಾರುಣಿಯೊಳುತ್ಪಾತ ಬಿಗಿದುದು ಮೊಗೆಮದದ್ಭುತವ ॥೪೨॥ ನಡುಗಿತಿಳೆ ನಡುಹಗಲು ಕತ್ತಲೆ । ಯಡಸಿತಾಕಾಶದಲಿ ಹೆಮ್ಮರ । ನುಡಿದು ಬಿದ್ದವು ಸಲಿಲವುಕ್ಕಿತು ಕೂಡೆ ಕೆರೆತೊರೆಯಾ ॥ ಉಡಿದವವದಿರ ಕೆಯ್ಕೈದುಗ । ಳೊಡನೊಡನೆ ಸಿಡಿಲೆರಗಿತಾಸಭೆ । ಸೆಡೆಮುದಲ್ಲಿಯದಲ್ಲ ಹುದುಗಿತು ಭೀತಿಗರಹೊಡೆದು ॥೪೩॥ ಅಹಹ ಭೂತಕ್ಷೋಭವಿದು ನಿ । ರ್ದಹಿಸುವುದು ಕುರುಕುಲವನಕಟೀ । ಮಹಿಳೆ ಯೊರಲಿದಳಮರನಿಕರಕೆ ದೈವಕೃತವಿದಲೇ ॥ ಕುಹಕಿ ಮಕ್ಕಳನಿಕ್ಕಿ ಮೌನದೊ । ಳೆಹರೆ ಬಾ ಧೃತರಾಷ್ಟ್ರ ಪಾಂಡವ । ಮಹಿಳೆಯನು ಸಂತೈಸು ನಡನಡೆ ಯೆಂದನಾಭೀಷ್ಮ ॥೪೪॥ ಇದಕೆ ನಿಸ್ಸಂದೇಹವೇ ವರ । ಸುದತಿಯನುನೀಬೇಡಿಕೊಳ್ಳು ಯ । ಜ್ಞದಲಿ ಪಾವಕಗುದಿಸಿದಳು ಪಾಂಚಾಲೆ ಮಾನಿನಿಯೇ ॥ ಇದು ಭವತ್ಸಂತಾನವಿಲಯಾ । ಸ್ಪದಕಣಾ ನಡೆ ಪಾಪಿಯೆಂದಾ । ವಿದುರಗುರುಕೃಪರೌಕಿವರು ಧೃತರಾಷ್ಟ್ರಭೂಪತಿಯ ॥೪೫॥ ಭೇದಮಿಗೆ ನಡೆತಂದು ನೃಪತಿ ತ । ಳೋದರಿಯ ನುಡಿಸಿದನು ಮಗಳೆ ಪಿ । ಷಾದವನು ಬಿಡು ಮಾತಮನ್ನಿಸು ಮಾವ ನಾ

ನಿನಗೆ ॥ ಈದುರಾತ್ಮರ ಮಾತು ಬೇಡವೆ ಭೇದವೇ ದುಶ್ಯಳೆಗೆ ನಿನಗೆಂದಾದರಿಸಿ ನುಡಿದನು ವಿಪತ್ತಿನಲಾ
ಮಹಾಸತಿಯಾ ॥೪೭॥ ಮಗಳೆಹೆನು ಸೊಸೆಯಹೆನು ನಿಮ್ಮಯ । ಮಗನ ಕಣ್ಣಿಗೆ ಕಾಳಕೂಟದ ।
ಮಗಳೊ ಸೊಸೆಯೋ ನಾದಿನಿಯೊ ಬೆಸಗೊಳ್ಳಿ ನಿಮ್ಮವನ ॥ ಅಗಡುಮಾಡಿದು ನಿಮ್ಮಮಕ್ಕಳ ।
ವಿಗಡತನಕಂಜದರೊ ದುರಿತದ । ಸೊಗಡಿಗಂಜದರೋ ಪೃಥಾಸುತರೆಂದಳಿಂದುಮುಖಿ ॥೪೮॥ ಧರ್ಮ
ನಿಮ್ಮದು ತಾಯೆ ಕಿಲ್ಬಿಷ । ಕರ್ಮವೆಂಬುದು ಲೋಕವರಿಯಲು । ನಿರ್ಮಲರು ನಿಷ್ಪಾಪಪಂಕಲಪ್ರ
ದಯರಾವ್ ಜಗಕೆ ॥ ದುರ್ಮತಿಗಳಿವದಿರ ಕುಚೇಷ್ಟೆಯ । ನಮ್ಮ ನೀಕ್ಷಿಸಿ ಮರೆ ಮಗಳೆ ಸ । ದ್ಧರ್ಮ
ಮತಿಗಳು ನೀವೆನುತ ತಿಳುಹಿದನು ದ್ರೌಪದಿಯ ॥ ದುರುಳರೆನ್ನ ಮಗರು ದುರಂತ । ಕರಣರಾವ್
ದುಶ್ಚೇಷ್ಟೆಯೆಮ್ಮದು । ದುರಭಿಮತದುಷ್ಪೂರ್ವರೆನ್ನ ಕುಮಾರರರಭಿಧಾನ ॥ ಕರುಣೆಗಳು ಕಮನೀಯ
ಗುಣಬು । ಧುರರು ಶೌರ್ಯಬಲಪ್ರಭಾಪ್ರೋ । ತ್ತರರು ನಿನ್ನವರೆಂದು ನಯದಲಿ ತಿಳುಹಿದನು
ಸತಿಯಾ ॥೪೯॥ ತಾಯೆ ಬೇಡ್ ವರವ ತಾನ । ನ್ಯಾಯದಲಿ ನಿಮ್ಮನು ನಿರರ್ಥಕೆ । ನೋಯಿಸಿದೆನದ
ನೆನೆಯದಿರಿ ಸರ್ವಾಪರಾಧವನು ॥ ದಾಯಗೆಡೆ ನಿನ್ನವರು ಕೊಲುವೊಡೆ । ಕಾಯಲಾಪನೆರುಂಟೆ
ವರವ । ನ್ಯಾಯುಧರಲೇ ನೀವೆನುತ ತಿಳುಹಿದನು ಧೃತರಾಷ್ಟ್ರ ॥೫೦॥ ವರನ ನಿತ್ತರೆ ಮಾವ
ಭೂಮೀ । ಶ್ವರರ ದಾಸ್ಯವ ಬಿಟ್ಟುಕಳೆ ಮು । ತ್ತೆರಡನೆಯ ವರವೇನು ವಚನಿಸು ಕೊಟ್ಟೆನಾನಿ
ನಗೆ ॥ ನರವೃಕೋದರನಕುಲಸಹದೇ । ವರಿಗೆ ಕೊಡಿ ಶಸ್ತ್ರಾಸ್ತ್ರಗಜರಥ । ತುರಗನಿಕರವನೆಂದೊ
ಡೆಂದನು ಮತ್ತೆ ಧೃತರಾಷ್ಟ್ರ ॥೫೧॥ ವರವೆರಡು ಸಂದವು ಮನೋರಥ । ಭರಿತವಾಗಲಿ ಮತ್ತೆ
ಹೇಳೆನೆ । ತರುಣಿಯೆಂದಳು ಧರ್ಮಶಾಸ್ತ್ರಪ್ರಕಟಪದ್ಧತಿಯ ॥ ಪರವು ವೈಶ್ಯರಿಗೊಂದು ನೃಪಸತಿ ।
ಗೆರಡು ನೃಪರಿಗೆ ಮೂರು ಭೂದೇ । ವರಿಗೆ ನೂರಧಿಕಾರವೆಂದಳು ನಗುತ ಪಾಂಚಾಲೆ ॥೫೨॥ ಹಾರ
ಲತಿಶಯತೃಷ್ಣೆ ನಾಶಕೆ । ಕಾರಣವಲೇ ಮಾವ ವರವಿದು । ಭಾರಿಯಾದೊಡೆ ಬೇಡಲಘುವನು ಕರುಣಿಸು
ವುದೆನಲು ॥ ಭಾರವಾವುದು ಮಗಳೆ ಕೊಟ್ಟೆನು । ಧಾರುಣೀಪತಿ ವಿಜಯಮಾಡಲಿ । ವೈರಬಂಧದ
ಕಂದುಕಲೆಯನು ಮರೆದು ಕಳೆಯೆಂದ ॥೫೩॥ ಪೂತುರೇ ಪಾಂಚಾಲೆ ಭುವನ । ಖ್ಯಾತೆಯಾದೆಗೆ ಜಾಗು
ನಿನ್ನಯ । ಪೈತಲೆಯಮಣಿ ನೂರುಪೋದುದ ಮತ್ತೆ ಬಿಡಿಸಿದಲೇ ॥ ಪೀತಪುರ ಫಲವಾಯ್ತಲಾ ನಿ ।
ನ್ನಾತಗಳ ಬಹುಖೇದಜಲಧಿಗೆ । ಸೇತುವಾದೆಗೆ ನೀನೆನುತ ತಲೆದೂಗಿದನು ಕರ್ಣ ॥೫೪॥ ಹೊಕ್ಕಗೂಡಿನ
ಹುಲಿಗಳನು ಹೊರ । ಗಿಕ್ಕಿದೆಯಲಾ ಯಿರುಬಿನಲಿ ಬಿ । ದ್ದಕ್ಕಲಂಗಳ ನೋಯಲೀಯದೆ ಕೆಲಕತೆಗೆ
ದೆಯಲಾ ॥ ಸೊಕ್ಕಿದುರುಪಿನಾನುಗಳೆಗಂಟಲೊ । ಳಿಕ್ಕಿದವಲಾ ಗಾಣ ಗಂಟಲ । ಸಿಕ್ಕಿಬಿಡಿಸಿದ ಗರುವೆ
ನೀನೆಂದುಲಿದನಾಕರ್ಣ ॥೫೫॥ ಘುಡುಘುಡಿಸಿದನು ರೋಷವಹ್ನಿಯ ತಡಿಯ ಹೊಕ್ಕನು ಬಿಗಿದ
ಹುಬ್ಬಿನ । ಬಿಡೆಯಬವರಿಯಲಳಿಯಲವಣೆಯ ಲೋಚನದ್ವಯದ ॥ ಕಡುಮುಳಿಸಿನುಬ್ಬಟೆಯ ಮಾ
ರುತಿ । ಕಡುಹಿನಲಿ ಭುಗಿಭುಗಿಪಭಾರಿಯ । ಕಿಡಿಗೆದರ ನೋಡಿದನು ಬಾಗಿಲ ಲಾಳಮುಂಡಿಗೆಯ ॥
ಹಗೆಗಳೇ ಕೌರವರು ತೆಗೆ ಬಲು । ವಗೆಕಣಾ ಕಾಮಾದಿರಿಪುಗಳು । ಸಗಳಿಕೆಯ ನಸಿಯಾಗವೇ ನಿಜಸತ್ಯ
ಭಾಷೆಗಳು ॥ ಉಗುಳುಗುಳು ರೋಷವನು ರಾಧೆಯ । ಮಗ ವಿಕಾರಿಕಣಾ ವೃಕೋದರ । ಬೆಗಡುಗೊ
ಳಿಸದಿರಮ್ಮನೆಂದನು ಧರ್ಮನಂದನನು ॥೫೬॥ ಬಾ ವೃಕೋದರ ನಕುಲ ಬಾ ಸಹ । ದೇವ ಬಾರೈ

ತಮ್ಮ ಫಲುಗುಣ । ದೇವಿಯರು ನೀವ್ಬನ್ನಿಯೆನಲವನೀಶನೈತಂದು ॥ ಆವುದೈ ಕರ್ತವ್ಯ ನೀವೇ । ದೈವಗುರುಪಿತರೆಂದು ಮಿಗೆ ಸಂ । ಭಾವನೋಕ್ತಿಯಸಾಡಿದನು ಧೃತರಾಷ್ಟ್ರಭೂಪತಿಗೆ ॥೫೮॥ ಮಕ್ಕಳೆನಗಲ್ಲವರು ನೀವೇ । ಮಕ್ಕಳೈವರು ಮಗನೆ ನಮ್ಮದು । ಮಕ್ಕಳಾಟಿಕೆಯಾಯ್ತಲಾ ಸೌಬಲನ ದೆಸೆಯಿಂದ ॥ ಮಿಕ್ಕು ನೀ ಸೈರಿಸುವುದೆಮ್ಮದು । ಬಕ್ಕುಡಿಯಬೇಳಂಬ ನಿಮ್ಮಲಿ । ಕಕ್ಕುಲಿತೆಯಿಲ್ಲೆಂದು ತೆಗೆದಪ್ಪಿದನು ಧರ್ಮಜನ ॥೫೯॥ ಎನ್ನನೀಕ್ಷಿಸಿ ಮಗನೆ ಮರೆ ನಿನ । ಗನ್ಯಳೇ ಗಾಂಧಾರಿ ಪಿತನೆಂ। ದೆನ್ನ ಕಾಬಿರಿ ವೃದ್ಧನೆಂದು ಗತಾಕ್ಷತಾನೆಂದು ॥ ಮನ್ನಿಸುವಿರೆಲೆ ಮಕ್ಕಳಿರ ಸಂ । ಪನ್ನಸತ್ಯರು ನೀವು ಕರ್ಮಿಗ । ಳೆನ್ನವರು ದೋಷಾಭಿಸಂಧಿಯ ಮರೆದುಕಳೆಯೆಂದ ॥೬೦॥ ರೋಷಿಗಗ್ಗದ ರಾಜಸೂಯದ । ಲೂಡಿ ನಿರ್ಜರಕಟಕವನು ಖಯ । ಖೋಡಿಯಿಲ್ಲವೆ ಸಲಿಸಿದೈ ತ್ರಿದಿವದಲಿ ಪಾಂಡುವನು ಮಾಡುವೆಯಲಾ ಮಗನೆ ಯೆನ್ನೀ । ಗೂಡ ಬಿಸುಟರೆ ಸುರರಸಂಗಡ । ವಾಡುವಂತಿರೆ ತನಗೆ ಗತಿ ನೀನಲ್ಲದಾರೆಂದ ॥೬೧॥ ಪಾಲಿಸವನಿಯ ನೆನ್ನ ಮಕ್ಕಳ । ಖೂಳತನವನು ಮನಕೆ ತಾರದಿ । ರಾಲಿಸದಿರಪರಾಧಿ ವಾಚಾಳರ ವಚೋತ್ತರವ ॥ ಕಾಲದೇಶಾಗಮದ ನಿಗಮದ । ಡಾಳವರಿದೈಹಿಕಪರತ್ರವಿ । ಟಾಳಿಸದೆ ನಡೆ ಕಂದ ಯೆಂದನು ಮರಳಿ ತೆಗೆದಪ್ಪಿ ॥೬೨॥ ತರಿಸಿದನು ಮಣಿವರ್ಗದಮಳಾಂ । ಬರವ ಸಂಬುಜಮುಖಿಗೆ ರತ್ನಾ । ಭರಣವನು ವಿವಿಧಾನುಲೇಪನಚಿತ್ರಸಂಪುಟವ ॥ ಅರಸನಿತ್ತನು ವೀಳೆಯವ ಕ । ರ್ಪುರದ ಪತಲಾಯಿಗಳ ನಭ್ಯಂ । ತರಕಿವರ ಕಳುಹಿದನು ಗಾಂಧಾರಿಯನು ಕಾಣಿಸಿದ ॥ ನೋಡಲಾಗದು ಮಕ್ಕಳಿರ ಕುಲ । ಗೇಡಿಗರ ಕಪಟವನು ನಮ್ಮನು । ನೋಡಿ ಮರೆವುದು ಪಾಂಡುವೆಂದಿಹುದಂಧಭೂಪತಿಯ ॥ ಸಾಡೆ ತಾಯೇ ನೊಂದೆ ಬಾ ಮಗ । ಮಾಡಿದನುಚಿತಮರ್ಮವೆಲ್ಲವ ಮಾಡಿದೆನು ತಾನೆಂದಳಾ ದ್ರೌಪದಿಗೆ ಗಾಂಧಾರಿ ॥೬೪॥ ಮರೆದೆನಾಗಳೆ ವಿಗಡವಿಧಿಯೆ । ಚ್ಚರಿಸಿದೊಡೆ ಹರಿಭಕ್ತಿ ಮುಖದಲಿ । ಮುರಿದುದೆಮ್ಮಯ ಪೂರ್ವದುಷ್ಪ್ರಾರಬ್ಧಕರ್ಮಫಲ ॥ ಹೆರರನೆಂಬುದು ಖೂಳತನವೇ । ನರಿಯದವರೇ ಪಾಂಡುಸುತರೆಂ । ದುರುಬೆಯಲಿ ಬಿನ್ನವಿಸಿದಳು ಗಾಂಧಾರಿಗಬುಜಾಕ್ಷಿ ॥೬೫॥ ಸಾಕು ನೇಮವ ಕೊಡಿ ಯೆನುತ ಕುಂ । ತೀಕುಮಾರರು ಬೀಳುಕೊಂಡರು । ನೂಕಿ ಹೊಕ್ಕುದುದಾರವಟ್ಟದಲಿವರ ಪರಿವಾರ ॥ ತೋಕಿದವು ಸೀಗುರಿಗಳೆಡಬಲ । ದಾಕೆಯಲಿ ಪಾಂಡವಕುಮಾರಾ । ನೀಕ ಬೆರಸಿತು ಗಜತುರಗರಥಪಾಯದಳಸಹಿತ ॥೬೬॥ ಕಳಿದೆವೇ ಖಳರೊಡ್ಡಿದಿರುಬಿನ । ಕುಳಿಗಳನು ಕೃತಪ್ಪುಮಾಡದೆ । ಸಲಹಿದೆವೆ ಸತ್ಯವನು ಸುಜನರ ಕಲೆಗೆ ಸಂದೆವಲೇ ॥ ಕಳವಳದ ಕಡುಗಡಲೊಳಾಳದೆ । ಸುಳಿದೆವಿತ್ತಲು ಶ್ರೀಪತಿಯ ಯದುತಿಲಕ ಗದುಗಿನ ವೀರನಾರಾಯಣನ ಕರುಣದಲಿ ॥೬೭॥

ಅಂತು ಸಂಧಿ ೧೫ಕ್ಕೆ ಪದ ೧೦೬೧ಕ್ಕಂ ಮಂಗಳಮಸ್ತು

ಹದಿನಾರನೆಯ ಸಂಧಿ.

ಸೂಚನೆ॥ ದ್ಯೂತಮುಖದಲಿ ನಿಖಿಳರಾಜ್ಯವ । ಸೋತು ತನ್ನನುಜಾತಮುನಿಸಂ ।
ಘಾತಸಹಿತವನೀಶ ವನವಾಸಕ್ಕೆ ಹೊರವಂಟ ॥

ಕೇಳು ಜನಮೇಜಯಧರಿತ್ರೀ । ಪಾಲ ಕುಂತಿಯನಂದನರು ತ । ಮ್ಮಾಳೊಡನೆ ಹೇಳಿದರು ಸೌಭದ್ರಾದಿತನಯರಿಗೆ ॥ ಬಾಲಕಿಯ ಬೇಳಂಬವನು ಜೂ । ಜಾಳಿಗಳ ಜಜ್ಝರತನವನು । ಕೇಳಿ ಬೈದುದು ಸೇನೆ ಖತಿಯಲಿ ಖಳಚತುಷ್ಟಯವ ॥೧॥ ಎತ್ತಿತೀಪಾಳೆಯವು ನಿಜಪುರ । ದತ್ತ ತಿರುಗಿತು ಜನಜನಿತರಾ । ಜೋತ್ತಮನ ತಡೆಯಾಯ್ತು ಸತ್ಯಕ್ಷಮೆಪರಾಕ್ರಮಕೆ ॥ ಇತ್ತಲಡುಪಾಯ್ಬೇಗೆ ಬಿಸುಗುದಿ । ಕಿತ್ತಡವು ಕಾರ್ಪಣ್ಯ ಕಪಟ ಖ । ಳೋತ್ತಮರ ಹೃದಯದಲಿ ಹುದುಗಿತ್ತು ನೃಪತಿ ಕೇಳೆಂದ ॥೨॥ ರವಿಯುದಯದಲಿ ಕೌರವೇಂದ್ರನ । ಭವನಕೈತಂದನು ಕುಠಾರರ । ಜವಳಿಯನು ಕರೆಸಿದನು ರಾಧಾಸುತನಸೌಬಲನ ॥ ಅವನಿಪತಿಗಾಂಧಾರಿಯರು ಪಾಂ । ಡವರ ಮನ್ನಿಸಿ ಕಳುಹಿದರು ತ । ಮ್ಮವನಿಗೈದಿದರೆಂದನಾದುಶ್ಶಾಸನನುನಗುತ ॥೩॥ ಮುರಿಮುರಿದು ಪಟ್ಟಣವ ನೋಡುತ । ನರವೃಕೋದರರೌಡುಗಚ್ಚುತ । ತಿರುಗಿದರುಗಡ ಗಾಢಬದ್ಧಭ್ರುಕುಟಿಭೀಷಣರು ॥ ಕರಿಯಸೊಗಡಿನಮೃಗಪತಿಗೆ ಮೈ । ಹರಿದಹಂಬಿಗೆ ನೊಂದಹಾವಿಂ । ಗರಸ ಮೈಚಾಚಿದೆಮಲಾ ನೀನೆಂದನಾಶಕುನಿ ॥೪॥ ಅವರ ಹೆಂಡಿರ ಮುಂದಲೆಯ ಹಿಡಿ । ದವಗಡವ ಮಾಡಿಸಿದೆ ಪಟ್ಟದ । ಯುವತಿಯಾಕೆಯಭಂಗಬಡಿಸಿದೆ ನಿನ್ನಲಾಪನಿತ ॥ ಅವಳದೈವೋದಯವದೈಸಲೆ । ಸವಡಿಸೀರೆಯ ಸುತ್ತು ಸಡಿಲದು । ನಿವಗದಾಗಳೆ ಮರೆದು ಹಿಂಗಿದುವೆಂದನಾಕರ್ಣ ॥೫॥ ಬೊಪ್ಪನಿತ್ತನು ವರವನೆಮಗದು । ತಪ್ಪಿಸಲಿ ತೀರುವುದೆ ಭೀಮನ । ದರ್ಪಕರ್ಜುನನುಬ್ಬಟೆಗೆ ಮಾಡಿದೆವು ಮುದ್ದುಗಳ ॥ ತಪ್ಪಿಸಿತಲೇ ದೈವಗತಿನ । ಮ್ಮಪ್ಪನೇ ಕೆಡಿಸಿದನು ನಮಗಿ । ನ್ನುಪ್ಪುದಾಗಲಿಯೆಂದು ಸುಯ್ದನು ಕೌರವರರಾಯ ॥೬॥ ಜಯವಹುದೆ ನಿರ್ವೇದದಲಿ ನಿ । ರ್ಭಯವಹುದೆ ಬಿಸುಸುಯ್ಲಿನಲಿ ನಿ । ರ್ಣಯವಹುದೆ ರಿಪುನೃಪರಿಗಿದು ತಾನೀತಿಮಾರ್ಗದಲಿ ॥ ನಿಯತವಿದು ನಿಶ್ಶೇಷ ನಿಮ್ಮ । ನ್ವಯಕೆ ನಿರ್ವಾಹವನು ಗಾಂಧಾ । ರಿಯಲಿ ನಿಮ್ಮಯ್ಯನಲಿ ಬಿಸಗೊಳ್ಳೆಂದನಾಶಕುನಿ ॥೭॥ ಅರಸ ಕೇಳ್ ಧೃತರಾಷ್ಟ್ರಭೂಪತಿ । ಯರಮನೆಗೆ ನಡೆತಂದರೀನಾ । ಲ್ವರು ವಿಷಾದವಿಡಂಬವಿಹ್ವಲಕರಣವೃತ್ತಿಯಲಿ ॥ ಪರಿಮಿತದಿ ಕುಳ್ಳಿರಿಸಿದರು ಸಹ । ಚರನ ಶೋಧಿಸಿ ಕಡುರಹಸ್ಯದೊ । ಳರಸಿಯನು ಬರಹೇಳಿದರು ಗಾಂಧಾರಿದೇವಿಯನು ॥೮॥ ಅವರದಾಸ್ಯವ ಬಿಡಿಸಿ ನೀ । ರಾಜ್ಯವನು ಕರುಣಿಸಿನೀತಿಯಲಿ ನಿ । ಮ್ಮವರ ಕಳುಹಿದಿರೆಂದು ಕೇಳಿದೆವಾಯ್ತು ಪರಿತೋಷ ॥ ಅವರು ನಿಮಗತಿಭಕ್ತರೈ ಬಾಂ । ಧವರಲೇ ತಪ್ಪೇನು ಧರ್ಮಜ । ಪ್ರವರರಿಗೆ ನೀವೊಲಿದಿರೆಂದನು ಕೌರವರರಾಯ ॥೯॥ ನಾವಲೇ ಹೊರಗವರ ಹೆಂಡಿರ । ಹೇವಗೆಡಿಸಿದೆವವರ ಸೋಲಿಸಿ । ಜೀವಮಾತ್ರವನುಳುಹಿ ಸೆಳೆದೆವು ಸಕಲವಸ್ತುಗಳ ॥ ನೀವು ಕರುಣಿಸಿದಿರಿ ಕೃಪಾರಸ । ಭಾವ ಹಿರಿಯ

ರಲುಂಟೆಲೇ ತ। ಪ್ಪಾವುದೈ ತಪ್ಪಾವುದೆನುತಲ್ಲಾಡಿದನು ಶಿರವ ॥೧೦॥ ತಾಯೆ ನೀವುವೆ ಹಗೆಯ ಕೈಯಲಿ। ಸಾಯಲಾರೆವು ಸಾಗರಾಂತದ। ರಾಯರಿಲ್ಲಾ ಹೊರೆಯಲಾಪೆವು ಬೆಂದಬಸಿರುಗಳ॥ ಕಾಯಿದನು ಕರುಣದಲಿ ತಂದೆ ಸ। ಹಾಯವಹಪಾಂಡವರ ಕೂಡಿಯೆ। ರಾಯ ಬದುಕಿರಲೆಮ್ಮ ಕಳುಹೆಂಡೆರಗಿದನು ಪದಕೆ ॥೧೧॥ ಏಕೆ ಬೆಸಗೊಳ್ಳಬಲೆ ಸುತನವಿ। ವೇಕವಿಷಮಗ್ರಹವಿಕಾರ। ವ್ಯಾಕರಣದುರ್ಲಲಿತದುಷ್ಕೃತವಿಪ್ರಳಾಪವಿದು॥ ಈಕುಲವನೀಪುರವನೀಲ। ಕ್ಷ್ಮೀಕರವನೀಜಗವನೀವಿಭ। ವಾಕೃತಿಯನಂಬುಧಿಯೊಳದ್ದುವ ನಿನ್ನವ ಗನೆಂದ ॥೧೨॥ ಸರಿಹಸುಗೆಯಿಂದರ್ಧರಾಜ್ಯದ। ಸಿರಿಗೆ ಯೋಗ್ಯರು ಬಾಹುಸತ್ವಕೆ। ಸುರರುಸರಿಯಿಲ್ಲಿವರಪಾಡೇ ಮನುಜಜಂತುಗಳು॥ ಚರಿತವೆಂಬರೆ ಋಷಿಗಳಿಗೆ ಗೋ। ಚರಿಸದವರಾಚರಣೆ ನಿನಗೆಂ। ತರಿವಿಸಾಶನಸಿದ್ಧಿಯೆಂದನು ಮಗಗೆ ಧೃತರಾಷ್ಟ್ರ ॥೧೩॥ ಬೇಹವರು ಸರರಾಜ್ಯಕದು ಸಂ। ದೇಹವೇ ಮೇಲವರಸತ್ವದ। ಸಾಹಸದ ಸತ್ಯದ ಸದಾಚಾರದ ನಿವಾಸರಲೇ॥ ಸ್ನೇಹಿತರು ನಿನಗವರಮೇಲವ। ಗಾಹಿಸದೆವನ್ಯಾಯದಲಿ ಸ। ದ್ರೋಹರಾವಿನ್ನೆಮಗೆ ನೀವುವೆಯೆನುತ ಹೊರವಂಟ ॥೧೪॥ ಕಲಕಿತ್ತರಸನ ಕರಣ ಕಂಗಳ। ಕುಳಿಗಳಲಿ ನೀರೊರೆತವಕ್ಕಟಕ। ಟೆಲೆಗೆ ಕರೆಯಾಪಾಪಿಮಗನನು ಕುರುಲಾಂತಕನ॥ ಸೆಳೆದು ತಂದರು ಕರ್ಣಶಕುನಿಗ। ಳಳಲಿಗನ ತೆಗೆದಪ್ಪಿದನು ಕುರು। ತಿಲಕ ನೀನುಳಿದೊಡಲುಳಿವೆನೆ ಯೆಂದನಂಧನೃಪ ॥೧೫॥ ಏನ ಮಾಡುವೆವವರ ಕಿಡಿಸುವೊ। ಡೇನುಪಾಯವನು ಕಂಡೆ ದೈವಾ। ಧೀನನಿಷ್ಠುರ ಮುರಿವುದರಿದನ್ಯಾಯತಂತ್ರದಲಿ॥ ಏನು ನಿನ್ನಭಿಮತವು ನಿನ್ನೊಳ। ಗಾನು ಹೊರಗೇ ಕಂದ ನುಡಿ ದು। ಮ್ಮಾನ ಬೇಡೆನ್ನಾಣೆನುತ ಸಂತೈಸಿದನು ಮಗನ ॥೧೬॥ ನೊಂಚರವರಗ್ಗಳಿಸಿ ಹೃದಯದೊ। ಳೊಂದಿ ಬೆರಸರು ಮರಹುತೆರಹಿನೊ। ಳಂದಗೆಡಿಸುವರಲ್ಲದುಳುಹರು ನಿನ್ನಸಂತತಿಯ॥ ಒಂದುಸತ್ತಿಗೆ ನಮ್ಮದಿಲ್ಲಿಗೆ। ನಿಂದು ದೆನಿಸಲಿ ನಾವು ನಿಲಲವೆ। ರೊಂದುಸತ್ತಿಗೆಯಾಗಿ ಸಲಹಲಿ ಸಕಳಭೂತಳವ ॥೧೭॥ ಹುದುವ ಸೈರಿಸಿ ಬಳಸಿದರು ದುರು। ಪಟಿಯನವರ್ಕೈವರು ಧರಿತ್ರಿಯ। ಹುದುವ ಸೈರಿಸಲಾರೆನವರೊಡನಿಂದುಮೊದಲಾಗಿ॥ ಒದೆದು ಕಳೆ ನಮ್ಮನಿಬರನು ನೇ। ಹದಲಿ ಸಲಹೈವರನು ನೀನಿಂ। ದೊದೆವುದೈವರ ನಮ್ಮ ಹಿಡಿ ಬೇರಿಲ್ಲವುತವೆಂದ ॥೧೮॥ ಅನಿಲಜನ ಬಾಯ್ಬಡಿಕತನವ। ರ್ಜುನನ ಬರಿಬೊಬ್ಬಾಟ ಸಹದೇ। ವನ ಸಗರ್ವದಮಾತು ಮೈಯಿಕ್ಕುವುವು ಬಳಿಕಿನಲಿ॥ ವನೆವೊಗವಕಾಣಿಸದೆ ಘನಕಾ। ನನದೊಳಗೆ ಸುಳಿವಂತೆ ಮಂತ್ರವ। ನೆನೆದೆನಿದು ನಿಮ್ಮಡಿಯ ಚಿತ್ತಕೆ ಬಹರೆ ಬೆಸಸೆಂದ॥ ಮರುಳುಮಗನೇ ಶಿವ ಶಿವಾ ಮನ। ಬರಡನೇ ತಾನಕಟ ನಿಮ್ಮೈ। ಸಿರಿಯ ಹಗೆ ದಾಯಾದ್ಯರುಗಳಭ್ಯುದಯದಲಿ ಸೊಗಸೆ॥ ದುರುಳರವದಿರು ದೈವಮುಖದೆ। ಚ್ಚರಿಕೆ ಘನಕೆಡರೆಂದು ಮೇಗರೆ। ಹೊರೆಮನದ ಸೂಸಕದ ನೇಹವನರಸುತಿಹೆನೆಂದ ॥೨೦॥ ಕರಸಿಕೊಡಿ ನೀವಿಲ್ಲಿಗವರ್ಕೈ। ವರನು ಜೂಜಿನಲೊಂದುಹಲಗೆಯ। ಲರಸ ನೀ ಚಿತ್ತವಿಸು ಹನ್ನೆರಡುಬುದವಿಪಿನದಲಿ॥ ವರುಷವೊಂದಜ್ಞಾತವದರೊಳ। ಗರಿದವಾದೊಡೆ ಮರಳಿ ವಿಪಿನಕೆ। ವರುಷಹನ್ನೆರಡಕ್ಕೆ ಕೊಡುವೆವು ಮತ್ತೆ ವೀಳಯವ॥ ಅಹುದು ಮಂತ್ರವಿದೆಂದು ಚಿತ್ತಕೆ। ಬಹರೆ ಕಳುಹಿ ಮನುಷ್ಯರನು ಕರ। ಸಹಿತರನು ವಿದುರಾದಿಗಳ ಕೊಂಡೆಯಕೆ ಕಿವಿಗೊಡದೆ॥ ಕುಹಕವುಂಟೇ ನಮ್ಮ ಕಳುಹುವು॥ ದಹಮತವ ಬೆಸಸೆನಲು ನಿಮ್ಮೊಳು। ಕುಹಕವುಂಟೇ ಮಗನೆ

ಕರೆಸುವೆನೀಗ ಪಾಂಡವರ ॥೨೧॥ ಪ್ರಾತಿಕಾಮಿಕ ಬಾ ಯುಧಿಷ್ಠಿರ । ಭೂತಳೇಶನ ಕರೆದು ತಾರ್ಥ್ಯೆ । ತಾತ ಕಳುಹಿದನೆಂಬುದಿಂದ್ರಪ್ರಸ್ಥದಲ್ಲಿರಲಿ ॥ ಪ್ರೀತಿಪೂರ್ವಕವಲ್ಲದಲ್ಲಿ ವಿ । ಖ್ಯಾತಿಯಿಲ್ಲೆಂದುಚಿತವಚನದೊ । ಳಾತಗಳನೊಡಗೊಂಡು ಬಾ ಹೋಗೆಂದನಂಧನೃಪ ॥೨೩॥ ಕೇಳಿವರು ಭೀಷ್ಮಾದಿಗಳು ಬರ । ಹೇಳಿದರೆ ಪಾಂಡವರನಕಟಾ । ಹೇಳಿವರೆ ಕೌರವರಸೂರ್ವರನಂತಕಾಲಯಕೆ ॥ ಹೇಳಿಪರೆ ಹೇಳಿಗೆಯಹಾವಿನ । ಮೇಲುಮುಚ್ಚಳ ತೆರೆಯಲೆಂದಿದ । ಕೇಳಿದೆವೆ ಕೌತುಕವನೆಂದರು ಕುದಿದು ತಮ್ಮೊಳಗೆ ॥೨೪॥ ಉರುವಮಕ್ಕಳನಿಕ್ಕಿ ಸಾಧಿಸು । ವಂಕೆಯಾವುದು ಹೇಳಲಾಗದೆ । ಕುಬಗಳೇ ನಿನ್ನವರು ಬಲ್ಲರೆ ಮೇಲಣಪಜಯವ ॥ ಮರುಗುವಳು ಗಾಂಧಾರಿ ಮಕ್ಕಳ । ಹರುವಕಂಡರೆ ಮೇಲೆ ನಿನಗೇ । ನರಿಯಬಾರದಲಾ ಮರುಳೆಯೆಂದಳಲಿದನು ಭೀಷ್ಮ ॥೨೫॥ ಕೊಂಬುದೇ ಖಳಜನಕೆ ಸಾಧುಗ । ಳೆಂಬವಮಾತು ವಿಧಾತೃಕಲ್ಪಿತ ವೆಂಬ ವಿಷದುಗ್ಗಡಕೆ ಗಾರುಡವೇನಮಾಡುವುದು ॥ ತುಂಬುವುದು ಬತ್ತುವುದು ಕಾಲನ । ಡೊಂಬಿದಾರಿಗೆ ಸಾಧ್ಯ ಸಾವೇ । ನೆಂಬುದಿದಕೆಂದಳಲಿದರು ಭೀಷ್ಮಾದಿ ಸಜ್ಜನರು ॥೨೬॥ ಇವರ ವಂಚಿಸಿ ರಜನಿಮಧ್ಯದೊ । ಳವನ ಕಳುಹಿದೊಡಾತನೈತಂ । ದಿವರಪಾಳಯದೊಳಗೆ ಹೊಕ್ಕನು ಹಲವುಪಯಣದಲಿ ॥ ಅವನಿಪತಿ ಮರುದಿವಸ ಬೀಡೆ । ತ್ತುವನಿಧಾನವನರಿದು ರಾಯನ । ಭವನಿಕೆಯ ಹೊರಬಾಹೆಯಲಿ ದಂಡಿಗೆಯನವನಿಳಿದ ॥೨೭॥ ಕರೆದು ಹೇಳಿದನಾತ ಪಡಿಹಾ । ರರಿಗೆ ತಾನೈ ಪ್ರಾತಿಕಾಮಿಕ । ನರಸ ಕಳುಹಲು ಬಂದೆನಗ್ಗದರಾಜಕಾರಿಯಕೆ ॥ ಧರಣಿಪಾಲಂಗರುಹಿಯೆನೆ ನೃಪ । ವರಗೆ ಬಿನ್ನಹಮಾಡೆ ಕರಸಿದೊ । ಡಿರದೆಹೊಕ್ಕನು ದೂತನಂದಾರಾಯನೋಲಗವ ॥೨೮॥ ದರುಶನವನಿತ್ತವನಿಪಾಲನ । ಚರಣದಲಿ ಮೈಯಿಕ್ಕಿ ನಿಂದನು । ನರವೃಕೋದರನಕುಲಸಹದೇವರಿಗೆ ಕೈಮುಗಿದು ॥ ಧರಣಿಪನ ಮೊಗಸನ್ನೆಯಲಿ ಕು । ಳ್ಳಿರಲಿದೇನೈ ಪ್ರಾತಿಕಾಮಿಕ । ಬರವು ಬೇಗದೊಳಾಯೆನುತ ಬೆಸಗೊಂಡನಾಭೀಮ ॥೨೯॥ ಬರವು ಬೇರೇ ನೊಡೆಯರಟ್ಟಿದ । ರರಸನಲ್ಲಿಗೆ ಹಿಂದೆ ಜೂಜಿನೊ । ಳೊರಸೊರಸು ಮಿಗೆ ಮಸೆದುದಿತ್ತಂಡಕ್ಕೆ ಮನಮುನಿಸು ॥ ಹರೆದುಹೋಯ್ತದು ಹೃದಯಶುದ್ಧಿಯೊ । ಳೆರಡರಸುಗಳು ಜೂಜನಾಡಲಿ । ಮರಳಿಬಿಜಯಂಗೈವುದೆಂದಟ್ಟಿದನು ಧೃತರಾಷ್ಟ್ರ ॥೩೦॥ ಮರಳಿ ಕರೆಸುವುದೆಂದು ಕಂಬನಿವೆರಸಿ ಕುರುಪತಿ ಪಿತನ ಚಿತ್ತವ । ಕರಗಿಸಿದನೋ ಮೇಣು ತಾ ಕರಸಿದಳೊ ಗಾಂಧಾರಿ ॥ ಕರಸುವದಿರು ಭಂಡರೋ ಮೇ । ಣ್ಮರಳಿ ಹೋದರು ಭಂಡರೋ ನೀ । ನರಿವುದೇನೈ ಪ್ರಾತಿಕಾಮಿಕನೆಂದನಾಭೀಮ ॥೩೧॥ ಬೊಪ್ಪನವರಟ್ಟಿದರೆ ಶಿವಶಿವ । ತಪ್ಪನೆನೆವರೆ ಭೀಮ ಸೈರಿಸು । ತಪ್ಪನಾಡಿದೆನೆವಗೆ ಮುನಿವಳೆ ತಾಯಿ ಗಾಂಧಾರಿ ॥ ತಪ್ಪಲೊಮ್ಮೆಗೆ ಪಾಂಡು ಕುಂತಿಗೆ । ಮುಪ್ಪಿನಲಿ ಮರುಳಾಟವಾಗಲಿ । ತಪ್ಪುವನೆ ಧೃತರಾಷ್ಟ್ರನೆಂದನು ನಗುತ ಯಮಸೂನು ॥೩೨॥ ಖಳರು ಮೊದಲಲಿ ಕೌರವರು ಕಲಿ । ಮೊಳೆಯನಂಕುರಿಸುವಕುವಿದ್ಯಾ । ಕಲಿತವಾಯರು ಕರ್ಣಶಕುನಿಗಳವರ ಸಂಗದಲಿ ॥ ತಿಳಿದು ನಡೆವವನಲ್ಲವಿದು ನಿ । ಮ್ಮಲದನೀತಿಗೆ ಸಲ್ಲ ನಿಜಪಿತ । ನೊಳಗು ನಿರ್ಮಳವಿಲ್ಲವೆಂದನು ನಗುತ ಕಲಿಭೀಮ ॥೩೩॥ ನೆನಹಿನಭಿಮತವಲ್ಲ ದುರ್ಯೋಧನನ ಸೌಬಲಕರ್ಣರಭಿಮತ । ಜನಪ ಧೃತರಾಷ್ಟ್ರನಿಗೆ ಗಾಂಧಾರಿಗೆ ಯಲಂಘ್ಯವಿದು ॥ ಅನುನಯದ ಹೊತ್ತಲ್ಲ ನೀವ್ಹ । ಸ್ತಿನಪುರಿಯ ಹೊ

ಕ್ಕಾಗ ಘನಕಾ । ನನಕೆ ಗಮಿಸುವಿರೆಂದರಾಧೌಮ್ಯಾದಿಮಂತ್ರಿಗಳು ।೩೪॥ ಕರೆಯೆಕಾದ್ಯುವುದಾಡು
ವದು ಸಂ । ಗರಕೆ ಜೂಜಿಂಗಿದು ಮಹೀಶ್ವರ । ಪರಮಧರ್ಮವಲೇ ನಿದಾನಿಸೆ ವೈದಿಕಾಂಗದಲಿ ॥ ಗುರು
ವಲಾ ಧೃತರಾಷ್ಟ್ರನಾತನು । ಕರೆಸಿದಲ್ಲಿ ವಿಘಾತಿ ಬಂದರೆ । ಬರಲಿ ಸೈರಿಸಬಲ್ಲೆನೆಂದನು ಧರ್ಮನಂ
ದನನ ॥೩೫॥ ಜನಪನಾಜ್ಞೆಯ ಮೀರ್ಧ ಬಳಸವು । ದನುಚಿತವು ನಮಗಿನ್ನು ಭೀಮಾರ್ಜುನನಕು
ಲಸಹದೇವರ್ಭಿಮತವೆಮ್ಮ ಮತವೆನಲು ॥ ಮನವೊದಲು ಕರಣಂಗಳಾತ್ಮಂ । ಗನುಚರರೊ ಬಾಧ
ಕರೊ ನಿಮ್ಮಯ ಮನಕೆ ಚೆಮ್ಮಾವುಗೆಗಳೆಂದರು ತಪನಜಾದಿಗಳು ॥ ಮರಳಿ ಪಾಳೆಯ ಬಿಡಲಿ ತ್ರಿಪ್ಪರ।
ಕರೆಸಿ ಪೇಳೆನುತವನಿಪತಿಗಜ । ಪುರಿಗೆ ತಿರುಗಿದನರಿಯನೇ ಕೌರವನಕೃತ್ರಿಮವ ॥ ಕೊರಳಲಿಕ್ಕಿದ ಪ
ಧಿಯ ಕಣ್ಣಿಯ । ಹುರಿಬಲುಹಲೇ ಧರ್ಮಸುತನೊಡೆ । ಮರಿಚಲಾಪನೆ ಕೇಳು ಜನಮೇಜಯಮಹೀ
ಪಾಲಾ ॥೩೬॥ ಸುತರು ಸಚಿವರು ಮಂತ್ರಿಗಳು ನಿಜ । ಸತಿಯರಾಪ್ತರು ಬಂಧುಗಳು ಭೂ । ಪತಿಗ
ಳನುಜರು ಬುಧರು ಚಾತುರ್ಬಲದನಾಯಕರು ॥ ಮತವು ಮರಳುವದಲ್ಲ ಧರಣೀ । ಪತಿಯನುತ್ಸಾಹಿ
ಸುವಗತಿ ಸಂ । ಗತವಲೇ ನಮಗೆನುತ ನಡೆದುದು ಬುಧಜನಸ್ತೋಮ ॥೩೭॥ ಭರದಪಯಣದಲಿವರು
ಹಸ್ತಿನ । ಪುರದ ಹೊರಬಾಹೆಯಲಿ ಬಿಟ್ಟರು । ಪರಿರಚಿತಗಜತುರಗಶಾಲೆಯ ವಿಪುಳವೀಥಿಯಲಿ ॥
ಬಿರಿಯೆ ನೆಲನಳ್ಳಿರಿವವಾದ್ಯದ ।ಮೊರೆವಭೇರಿಯ ಬಹಳಕಹಳಾ । ಸ್ವರದ ಕಳಕಳ ತೀವಿತಬ್ರಹ್ಮಾಂಡ
ಖರ್ಪರವ ॥೩೮॥ ವಿನಿದದ್ಭುತರಭಸವಿದೆಲಾ । ಮಾನನಿಧಿಗಳು ಮರಳಿ ಕುಂತೀ । ಸೂನುಗಳ ಬಲ
ಬಂದು ಬಿಟ್ಟುದು ಪುರದಬಾಹೆಯಲಿ ॥ ಏನು ಕೌರವರೊಡನೆ ತ್ವರಸಂ । ಧಾನವೋ ವಿನಯಾನುಗು
ಣಸಂ । ಧಾನವೋ ತಾನೆನುತ ಗಜಬಜಸಿದುದು ಗಜನಗರ ॥೪೦॥ ಪುರವ ಹೊಕ್ಕನು ನೃಪತಿ ಪರಿಮಿತ।
ಪರಿಜನದಲಾರಾಜಬೀದಿಯ । ನೆರವಿನೆರವಿಯ ಜನದ ಪುನರಾಗಮನವಿಸ್ಮಯವ ॥ ಪರಿಣತಸ್ತ್ರೀಬಾಲ
ವೃದ್ಧರ । ವಿರಸವಚನವನಾಲಿಸುತ ನೃಪ । ನರಮನೆಗೆ ಬಂದೆರಗಿದನು ಧೃತರಾಷ್ಟ್ರನಂಘ್ರಿ
ಯಲಿ ॥೪೧॥ ಸೋಲದಲಿ ಮನನೊಂದು ಹೋಹುದು । ಹೋಲದೆಮ್ಮಭಿಮತಕೆ ನಿಮ್ಮೊಳು । ಮೇಳ
ದಿಂದೊಂದಾಗಿ ಮಜ್ಜನಭೋಜನಾದಿಗಳ ॥ ಲೀಲೆಯಲಿ ಮಾಡುವದು ಸದ್ಯೋ । ತಾಳಿಯಲಿ ರಮಿಸು
ವದು ಮನದವಿ । ಟಾಲವಿಲ್ಲದೆ ಬದುಕಿ ನಿಮ್ಮೊಳಗೆಂದನಂಧನೃಪ ॥೪೨॥ ಕೃತಕವಿಲ್ಲದೆ ಬಂದೆ ನೀವೀ।
ವ್ಯತಿಕರಕೆ ಮನ ಬಹರೆ ಸುಖಸಂ । ಗತಸುಹೃದ್ದ್ಯೂತದಲಿ ರಮಿಸೈ ಕಂದ ಹೋಗೆಂದು ॥ ಸುತತ್ರನದ
ಸೌಹಾರ್ದಸಂಭ್ರಾ । ವಿತದ ಹೊರಬಾಹೆಯಲಿ ಧರಣೀ । ಪತಿಯನುಪಚರಿಸಿದನು ಚದುರಿಗತನದಿ ಧೃತ
ರಾಷ್ಟ್ರ ॥೪೩॥ ಸರ್ವಲೋಕವಿನಾಶಕರವೀ । ಗುರ್ವಣೆಯದೈವಾಭಿವಾಕಕೆ । ದರ್ವಿಯಾಯಿತು ಧರ್ಮ
ಪುತ್ರನಬುದ್ಧಿ ವಿಸ್ತಾರ ॥ ಸರ್ವಜನವೊಂದೆಸೆ ಯುಧಿಷ್ಠಿರ । ನೊರ್ವನೊಂದೆಸೆ ಶಕುನಿಕೌರವ ।
ರಿರ್ವರೊಂದೆಸೆ ಜೂಜಿನಭಿಮತವರಸ ಕೇಳೆಂದ ॥೪೪॥ ಕಂದುಕಳ್ಳಿದ್ದುದು ಸಭಾಸದ । ವೃಂದ ನೆರೆ
ದುದು ಮತ್ತೆ ಜೂಜಿನ । ದಂದುಗದ ದುರ್ವ್ಯಸನ ಮುಸುಕಿತು ಧರ್ಮನಂದನನ ॥ ತಂದು ಮಣಿಮ
ಯಸಾರಿವಲಗೆಯ । ನಂದು ಮೋಹರಿಸಿದರು ಜೂಜಂ । ಗಿಂದುಕುಲದ ಮಹೀಶನನುವಾದನು ಸರಾ
ಗದಲಿ ॥೪೫॥ ಎಳ್ಳನಿತುಖಯಖೋಡಿಚಿತ್ತದೊ । ಳಿಲ್ಲನಿಜಪಾಂಡಿತ್ಯಪರಿಣತೆ । ಬಿಲ್ಲಬಿಸುಟುದು ಬೆದ
ರಿಹೋಯ್ತು ವಿವೇಕವಿಸ್ತಾರ ॥ ಎಲ್ಲರೊಡನೆಯೆ ಕೇಳಮೇಳಕೆ । ಚೆಲ್ಲಣಿವ ವೆಂಟಣಿಸಲಾಜನ ।

ವೆಲ್ಲ ಮರುಗಿತು ಧರ್ಮಜನ ಮರುಜೂಜಿನುಬ್ಬಟೆಗೆ ॥೪೬॥ ತೆಗೆದು ಸಾರಿಯ ಹೂಡಿ ಹಾಸಂ । ಗಿಗಳ
ಹೊಸೆದನು ಶಕುನಿ ಧರ್ಮಜ । ಹೊಗಳು ಹೊಕ್ಕೆಯನು ವಚನಿಸೊಡ್ಡವನಿದು ವಿನೋದವಲೇ ॥
ಬಗೆವವೊಂದೇಹಲಗೆ ಮೇಳಣ । ದುರ್ಗುಣಸಲ್ಲದು ಜೂಜುಗಾರರ । ವಿಗಡತನವಲ್ಲೆಂದು ನೃಪತಿಗೆ
ಸೂಸಿದನು ನಗೆಯ ॥೪೭॥ ಲಲಿತರಾಗದ ರಸದಗೋರಿಯ ಬಿಲುಸವಿಯ ಮೃಗದಂತೆ ವಿಷಯದ ।
ಕ್ಷುಳಿಯೊಳಗೆ ಕಾಲ್ದೊಡಕಿ ಬಿದ್ದಸುಯೋಗಿಯಂದದಲಿ । ಕಲಿತವಿಕಳಾವೇಶದಲಿ ವಿ । ಸ್ಖಲಿತವಿವಿಧ
ಶ್ರೋತ್ರನಯನಂ । ಚಲಿತನೆಂದನು ಶಕುನಿ ನೀನಡಿಯೊಡ್ಡವೇನೆಂದು ॥೪೮॥ ಧರಣಿಪತಿ ಕೇಳ್ ಕೃಷ್ಣ
ಧಾರುಣಿ । ಕುರುಪತಿಯ ನೆಲನೊಡ್ಡನಿಮ್ಮ । ಯೆರಡರಸುಗಳೊಳಾರು ಸೋತರು ಸೋತಭೂ
ಪತಿಗೆ ॥ ವರುಷಹನ್ನೆರಡರಲಿ ವನದೊಳ । ಗಿರವು ಮೇಣಜ್ಞಾತವೊಂದೇ । ವರುಷ ಹದಿನಾಲ್ಕರಲಿ
ಹೊಗುವುದು ತಮ್ಮಪಟ್ಟಣವ ॥೪೯॥ ಮರೆಯಲಿಹುದಜ್ಞಾತವಾಸದೊ । ಳುಡಿದಾದೊಡೆ ಮತ್ತೆ
ವನದಲಿ । ಚರಿಸುವುದು ಹನ್ನೆರಡುವರುಷವು ಸತ್ಯಭಾಷೆಯಲಿ ॥ ಮುರಿದು ತಪ್ಪಿದನೃಪನನೀಶ್ವರ ।
ಸರಿವನೈಸಲೆ ರಾಜಧರ್ಮವ । ಮೆರೆವರಾಡುವುದೊಡ್ಡವೀಪರಿಯೆಂದನಾಶಕುನಿ ॥೫೦॥ ಅಂಜುವರೆ
ನಿಲು ಜೂಜುಗಾರರ ಭಂಜವಣೆಗೊಳಗಹರೆ ಬಾ ನೃಪ । ರಂಜಲಿಸಿ ಬಿಡಬಹುದೆ ಪರಮದ್ಯೂತರ
ಸಸುಧೆಯು ॥ ರಂಜಕರು ನಾವಲ್ಲ ಜೂಜಿಗೆ । ಕಂಜಭವ ತಾನೆನ್ನೊಡನೆ ಕೆಲ । ರಂಜದಿಹರಾರೆಂದು
ಗರುವವ ಸೂಸಿದನು ಶಕುನಿ ॥೫೧॥ ಉಗ್ರಭಾಷೆಯದೇಕೆ ಶಿವಶಿವ । ವಿಗ್ರಹಪ್ರತಿಮುಖದ ವಿಷಮಾ ।
ವಗ್ರಹದಲಿದು ಬೆಂಡುಹೋಗದೆ ಭರತಸಂತಾನ ॥ ನಿಗ್ರಹಿಸಲೇಕಕಟ ಕುರುಕುಲ । ದಗ್ರಿಯನನೆಂದ
ಖಿಳಸಚಿವರು । ದಗ್ರಚರಿತರು ಮುರಿದು ನುಡಿದರು ನೀತಿವಚನದಲಿ ॥೫೨॥ ವಿದುರ ಗುರು ಗುರು
ಸೂನು ಬಾಹ್ಲಿಕ । ನದಿಯಮಗ ಗಾಂಧಾರಿ ಕುಂತೀ । ಸುದತಿ ಭೂರಿಶ್ರವಯುಯುತ್ಸುವಿಕರ್ಣಸೃಂ
ಜಯರು ॥ ಇದು ವಿಷಮವೆಂದಾಕ್ಷಪದ್ರೌ । ಪದಿವೃಕೋದರಪಾರ್ಥಯಮಳರು । ಕುದಿದರೊಳಗೊ
ಳಗಾಡಲಮ್ಮದೆ ರಾಯರಿದಿರಿನಲಿ ॥೫೩॥ ಕ್ಷಿತಿಪಕೇಳೀ ದುರ್ವ್ಯಸನವಿಷಮ । ವ್ಯತಿಕರದ ಭಾಷೆಯನು
ನೃಪ ಮಿಗೆ । ಪತಿಕರಿಸಿದನು ಹೊಸೆದು ಹಾಸಂಗಿಗಳ ಹಾಯ್ಕಿದನು ॥ ಸತಿಯ ದಕ್ಷಿಣನಯನವೀಭೂ ।
ಪತಿಯ ವಾಮಭುಜಾಕ್ಷಿಗಳು ದು । ರ್ಗತಿಯ ಸೂಚಿಸಿ ತೋರುತಿರ್ದವು ಧರ್ಮನಂದನನ ॥೫೪॥
ದಾಯವೇ ಮಝುಪೂತು ದುಗತಿಗ । ಸಾಯಸವಲೇ ಚೌಕವೊಂದೇ । ಕಾಯಲಾಗದೆ ಹಾಯ್ಕುಹಾ
ಯ್ಕೆಂದೊದರಿ ಗರ್ಜಿಸಿದ ॥ ರಾಯ ಸೋತನು ಧರ್ಮಸುತ ಕುರು । ರಾಯ ಗೆಲಿದನು ಕಟ್ಟುಗುಡಿ
ಯನು । ರಾಯನೂರೊಳಗೆಂದು ಮಿಗೆ ಬೊಬ್ಬಿರಿದನಾಶಕುನಿ ॥೫೫॥ ಹಣುಗಿತರಸನ ವದನ ತಾಳಿಗೆ ।
ಯೊಣಗಿತವನಿಗೆ ನಟ್ಟದಿಟ್ಟಿಯ । ಮಣಿದನೆನಹಿನ ಮುರಿದಮಹಿಮೆಯ ತಾಗಿದಪದೆಸೆಯ ॥ ಜುಣು
ಗಿದುಬ್ಬಿನ ಸತ್ಯದಲಿಕೇ । ವಣಿಸಿದರಿವಿನ ವಿಕೃತಿಕರ್ಮದ । ಕುಣಿಕೆಗೊಲೆದೊಲೆದರಸನಿದ್ದನು ಹೊತ್ತ
ದುಗುಡದಲಿ ॥೫೬॥ ಉಬ್ಬು ಮುರಿದುದು ತಮ್ಮೊಳೊಬ್ಬರ । ನೊಬ್ಬರೀಕ್ಷಿಸಿ ಕೈಯಗಲ್ಲದ । ನಿಬ್ಬ
ರವೆ ನಿಡುಸುಯ್ಲ ಖೋಡಿಯಮನದ ಕಳ್ಳುದಿಯ ॥ ಜಬ್ಬುರಿಯ ಜಾಣಿಕೆಯ ಚಿಂತೆಯ । ಹಬ್ಬುಗೆಯ
ಹರವಸವ ಖೇದದ । ಮಬ್ಬಿನಲಿ ಹಣುಗಿದರು ಪವನಜಫಲುಗುಣಾದಿಗಳು ॥೫೭॥ ಕಂಡನೇ ಧೃತರಾ
ಷ್ಟ್ರನನು ಕೈ । ಕೊಂಡನೇ ವನದೀಕ್ಷೆಯನು ಪಿತ । ನಂಡಲೆದು ಕೃಷ್ಣಾಜಿನವನುಡುಗೊರೆಯನಿತ್ತನ

ಲೇ ॥ ಚಂಡಿಗೊಂಡರೆ ನನಗೆ ನಿನ್ನಿನ । ಭಂಡತನ ಬಾರದಲೆ ವನವಾ । ಖಂಡಲಪ್ರಸ್ಥವಲೆ ನಿನಗಿ
ನ್ನೆಂದಳಿಂದುಮುಖಿ ॥೫೮॥ ಕಳೆದು ಬಿಸುಟರು ಮತ್ತೆ ರತ್ನಾ । ವಳಿಯ ವಿವಿಧಾಭರಣವನು ಪರಿ ।
ಲಲಿತಕೃಷ್ಣಾಜಿನವ ಹೊದೆದರು ಹಾಯ್ಕಿ ಹಚ್ಚಡವ ॥ ನಳಿನಮುಖಿ ನಳನಳಿಪಮುಕ್ತಾ । ವಳಿಯ
ಲಂಕಾರವನುಗಿದು ಸಭೆ । ಯೊಳಗೆ ಬಿಸುಟಳು ನಿಂದಳಬಲೆ ನಿಜಾಭಿರೂಪದಲಿ ॥೫೯॥ ಸಾಲದೇ
ನಿಮಗಿನ್ನು ಕೌರವ । ರೋಲಗದ ಫಲವಾಯ್ತಲಾ ವನ । ಮಾಲೆ ಕೊರಳಿಂಗಲ್ಲ ಚರಣಾಭರಣವಾ
ಯಿತಲೇ ॥ ಬೀಳು ಕೊಳಿರೇ ಬೊಪ್ಪನವರನು । ಮೇಲೆ ಮೋಹದತಾಯಲಾ ನಡೆ । ಯೇಳಿಕಳುಹಿಸಿ
ಕೊಂಬೆವೆಂದನು ಭೂಪತಿಗೆ ಭೀಮ ॥೬೦॥ ಬಂದರವರರಮನೆಗೆ ನೇಮವೆ । ಯೆಂದು ಪದಕೆರಗಿದೊಡೆ
ಕಣ್ಣಿನೀ । ರಿಂದಸನೆದನು ತಂದೆ ಮಕ್ಕಳ ಬಿಟ್ಟು ಬದುಕುವನೇ ॥ ಇಂದುಮುಖಿ ಮರುಗಿದಳು ಪಾಪಿ
ನ್ನೆಂದು ಕಾಬೆವು ನಿಮ್ಮನಕಟಕ । ಟೆಂದಳತಿಮೋಹಿತ್ರಯಲಾ ಕುಂತೀಕುಮಾರರಿಗೆ ॥೬೧॥ ವನದೊಳತ್ಯಾ
ಯಾಸನೀವಂ । ತನುಭವಿಸುವಿರಿ ಪಾಪಿದುರ್ಯೋಧ । ಧನನ ದುರ್ಜನಸಂಗ ನಿಮಗಿದು ಸಿಂಗಿಯಾದು
ದಲೇ ॥ ವನಿತೆ ನಿಮ್ಮೊಡನೆಂತು ತೊಳಲುವ । ಳನವರತ ಗಿರಿಗುಹೆಯ ಘಟ್ಟವ । ನೆನುತ ನುಡಿದಳು
ಕುಟಿಲಗರ್ಭದಗುಣದಬೆಳವಿಗೆಯ ॥೬೨। ಬೀಳುಕೊಡಿರೇ ಸಾಕು ಬಹಳಕ್ಕೆ । ಪಾಳುಗಳಲಾ ವಿಧಿಯ
ಚಿತ್ತವಿ । ಟಾಳಗತಿಗೇಸಾಯ್ತು ಹದಿಮೂರಬುದವವಧಿಯಲೇ ॥ ಮೇಲೆ ನಿಮ್ಮಾತ್ಮಜರಿಗವನೀ ।
ಪಾಲನೆಯ ಪರುಠವದಪಟ್ಟವ । ಪಾಲಿಸುವಿರಿದಕೇನುಹೊಲ್ಲೆಹವೆಂದನಾಧೌಮ್ಯ ॥೬೩॥ ಫಲಕುಜದ
ಪಲ್ಲವದ ಪದಕರ । ತಳದ ವಿಪುಲತ್ರಮಾಲಪತ್ರದ । ಲಲಿತಕೇತಕಿನಖದ ದಾಡಿಮದಂತಪಂಗ್ತಿಗಳ ॥
ನಳಿನನನನದ ಮಧುಪಕುಲಕುಂ । ತಳದ ವನಸಿರಿ ಸವತಿಯಾದಳು । ಜಲಜಮುಖಿಪಾಂಚಾಲೆಗೆಂದನು
ಧೌಮ್ಯಮುನಿನಗುತ ॥೬೪॥ ಇವರು ಕಳುಹಿಸಿಕೊಂಡರಾನೃಪ । ಭವನವನು ಹೊರವಂಟರೊಡನು ।
ತ್ಸವವಿಹೀನರು ವಿದುರಭೀಷ್ಮದ್ರೋಣಗೌತಮರು ॥ ಅವನಿಪತಿದುರ್ಯೋಧನಾದಿಗ । ಳವನಸಹಭವ
ರುಳಿಯೆ ಬಂದುದು । ವಿವಿಧಜನದೊತ್ತೊತ್ತೆ ಮಸಗಿತು ರಾಜಬೀದಿಯಲಿ ॥೬೫॥ ಸಂದಣಿಸಿದುದು
ಕೇರಿಕೇರಿಯ । ಮಂದಿ ಮನೆಮನೆಮೇಲೆ ಘನತರ । ವೃಂದದಲಿ ಪುರಸದನಶಿಖರೌಘದಲಿ ಶೋಕಿ
ಸುತ ॥ ನಿಂದುದಲ್ಲಿಯದಲ್ಲಿ ನೋಟಕ । ರಂದ ಕೆತ್ತುದು ಬೀದಿ ಪುರಜನ । ಬಂದಿಯಲಿ ಸಿಲುಕಿದನೃ
ಪಾಲರು ನಡೆದರೊಗ್ಗಿನಲಿ ॥೬೬॥ ಕುತ್ತುದಲೆಗಳ ಮೃಗದತೊಗಲಿನ । ಸುತ್ತುಹೊದಕೆಗಳೆಡದಕೈಗ
ಳೊ । ಳೆತ್ತಿದಾಯುಧತತಿಯ ಭಂಗದಭೂರಿತಾಪದಲಿ ॥ ಹೊತ್ತುವೆದಗಳ ಹೊಗೆವಮೋರೆಯ ।
ಕಿತ್ತಡದಕಡುಗೋಪಸಮತೆಗ । ಳಿತ್ತಡಿಯತಡವಾಯ್ತುನೃಪರೈತಂದರೊಗ್ಗಿನಲಿ ॥೬೭॥ ಮುಂದಣಾ
ತನುಪಾರ್ಥಸಾತ್ರನ । ಹಿಂದೆ ಭೂಪತಿ ಧರ್ಮಪುತ್ರನ । ಹಿಂದೆ ಮಾದ್ರೀತನಯರಿಬ್ಬರಹಿಂದೆಪಾಂ
ಚಾಲೆ ॥ ಹಿಂದೆ ಕುಂತೀದೇವಿಯಾಕೆಯ । ಹಿಂದಣಾತನು ಭೀಮನೆಂದಾ । ಮಂದಿತೋರಿದುದೊಬ್ಬ
ರೊಬ್ಬರಿಗವರನೀಕ್ಷಿಸುತ ॥೬೮॥ ಮರನಜೋಡು ಪುರಾಂತಕನಸಮ । ದೊರೆ ವಿರಿಂಚನಪಾಡು
ಶಕ್ರನ । ಸರಿಸದವರಿಗೆ ಭಂಗವೀವಿಧಿಯಿದಾವಿಪತ್ತುಗಳೇ ॥ ನರರನೀಕೌರವರಮಿಕ್ಕಿನ । ನೊರಜುಗಳ
ಪಾಡೇನು ಶಿವಶಿವ । ಕರುಣಿಯಲ್ಲವಿಧಾತ್ರನೆಂದುದು ನೆರೆದಜನನಿಕರ ॥೬೯॥ ಕೇಳಿದಭಿಮನ್ಯುಪ್ರ
ಮುಖಭೂ । ಪಾಲತನುಜರು ಸಚಿವರಾಪ್ತರು । ಪಾಳೆಯದತಲ್ಲಣದಕಯಖೋಡಿಯಮನೋವ್ಯ

ಥೆಯಾ ॥ ಹೇಳಲರಿಯೆನು ಬಂದುಕಂಡರು । ಗೋಳಿಡುತ ಪದಕೆರಗಿದರು ನೃಪ । ನಾಲಿನೀರೇರಿದವು ನನೆದರು ನಯನವಾರಿಯಲಿ ॥೨೦॥ ಕರೆಸಿದನು ಪರಿವಾರವನು ನಿಮ । ಗರಸು ಕೌರವನೆಮ್ಮಗಜರಥ । ತುರಗಕೊಟ್ಟಿಗೆಯೆತ್ತುಭಂಡಿಕೊಟಾರಕೊಪ್ಪರಿಗೆ ॥ ಸರಕುಸರ್ವಸ್ವಗಳು ಕೌರವ । ನರಮನೆಗೆ ನಡೆಯಲಿ ವನಾಂತದೊಳಿರವು ನಮಗೆಂದರುಹಿದನು ಸಚಿವರಿಗೆ ಸಹದೇವ ॥೨೧॥ ಕರಿಗಳನು ಕೌರವನಮಾವಂತರ್ಗೆ ಕೈಗೊಳಿಸಿದರು ರಥಹಯ । ತುರುಗಳುಂ ಕೈವರ್ತಿಸಿತು ಸೂತರಿಗೆ ಗೋವರಿಗೆ ॥ ಸರಕನವನಿಪನನುಚರರಿಗು । ತ್ತರಿಸಿದರು ಪಾರಕವನೊಪ್ಪಿಸಿ । ವರಸುಭಟರಳವಡಿಸಿಕೊಂಡರು ಕಾನನೋಚಿತವ ॥೨೨॥ ಹರಿದನಿಂದ್ರಪ್ರಸ್ಥಕಾತನ । ಚರರು ಸಚಿವರು ಹೊಕ್ಕು ಪಾಂಡವರರಮನೆಯ ಮುದ್ರಿಸಿದರಲ್ಲಿಯ ನಾಡುಬೀಡುಗಳ ॥ ಕರೆಸಿ ಕಾಣಿಕೆಗೊಂಡು ಠಾಣಾಂ । ತರದನಾಯಕವಾಡಿಗಳ ಸಂ । ವರಣೆಗಳ ಸಂತವಿಸಿದರು ಕುರುರಾಜಮುದ್ರೆಯಲಿ ॥೨೩॥ ಅರಸ ಕೇಳಾದ್ಭುತ್ಯರ್ಯವನು ಗಜ । ಪುರದ ಬೀದಿಯೊಳಿವರು ಬರುತಿರೆ । ದುರುಳದುಶ್ಶಾಸನನು ಮಿಗೆ ಹರಿತಂದ ನೇಡಿಸುತ ॥ ಬೆರಳನಾಡಿಸಿ ಹೋದರೀಹೋ । ದರಸುಕಾನನದೆತ್ತು ಪುನರಪಿ । ಸರಿದವೆತ್ತುಗಳೆನುತ ಬಂದನು ಹಿಂದೆ ಪವನಜನ ॥೨೪॥ ತಿರುಗಿ ಕಂಡನು ಭೀಮನುಬ್ಬಿದ । ಪರುಷಹೃದಯನ ಮನದರೋಷದೊಳರಸನನು ನೋಡಿದನು ಭೂಪತಿ ಮೊಗದಸನ್ನೆಯಲಿ ॥ ತಿರುಹಿದನು ತಮ್ಮನನು ಗದೆಯನು । ತಿರುಗಿ ಹಾಯಿಕಿ ಹಿಡಿದು ಮಾರುತಿ । ಯರಿಸನಾಜ್ಞೆಯೊಳಂಜಿ ನಡೆದನು ನೃಪತಿ ಕೇಳೆಂದ ॥೨೫॥ ಪುರವ ಹೊರವಂಟವರು ಗಂಗಾ । ವರನದಿಯ ತೀರದಲಿ ನಿಂದರು । ಪುರಜನವ ಕಳುಹಿದರು ಧೃತರಾಷ್ಟ್ರನ ಪಸಾಯಿತರ ॥ ಗುರುಜನಕೆ ಪೊಡಮಟ್ಟು ಬೀಳ್ಕೊಂ । ಡರು ನದೀಜದ್ರೋಣಕೃಪರನು । ಕರೆದು ಕುಂತಿಯ ನಿಲಿಸಿದರು ವಿದುರನ ನಿವಾಸದಲಿ ॥೨೬॥ ಕಳುಹಿ ಮರಳಿದು ವಿದುರನರಸನ । ನಿಲಯಕೈತಂದನು ಕುಮಾರರ । ಕಳುಹಿ ಬಂದೈ ತಮ್ಮ ಮತವೇನಾಯುಧಿಷ್ಠಿರನ ॥ ಉಳಿದವರ ಹದನೇನು ದುರುಪದ । ಲಲನೆಯೇನೆಂದಳು ನಿದಾನವ । ತಿಳಿದು ಬಂದೈ ಹೇಳೆನುತ ಧೃತರಾಷ್ಟ್ರ ಬೆಸಗೊಂಡ ॥೨೭॥ ಮುನಿಪ ಜಪಿಸುತ ಹೋದನಗ್ನಿಯ । ವಿನುತಸೂಕ್ತವನೆತ್ತುಗೈದುವಿ । ನನಿಲಜನು ದುಗುಡದಲಿ ಫಲುಗುಣಯಮಳರೊಂದಾಗಿ ॥ ವನಿತೆಯನು ನಡುವಿಟ್ಟು ಹೊರವಂ । ಟನು ಯುಧಿಷ್ಠಿರನೃಪತಿ ನಿಯತದಿ । ನೆನೆವುತಿದ್ದನು ವೀರನಾರಾಯಣನಪದಯುಗವ ॥ ॥೨೮॥

ಅಂತು ಸಂಧಿ ೧೬ ಕ್ಕೆ ಪದ ೧೧೯ ಕ್ಕಂ ಮಂಗಳಮಸ್ತು.

ಇತಿ ಶ್ರೀಮದಚಿಂತ್ಯಮಹಿಮ ಗದುಗು ವೀರನಾರಾಯಣಚರಣಾರವಿಂದ ಮಕರಂದ ಮಧುಪಾನ
ಪುಷ್ಟವಚಷಟ್ಪದೀ ನಿಕಾಯ ಶ್ರೀಮದ್ಯೋಗೀಂದ್ರ ಕುಮಾರ ವ್ಯಾಸ ವಿರಚಿತ
ಮಹಾ ಕರ್ನಾಟಭಾರತ ಕಥಾಮಂಜರಿಯೊಳ್ ಸಭಾಪರ್ವಂ ಸಮಾಪ್ತಮಾದುದು.

|| ಶ್ರೀರಸ್ತು. ||

ಶ್ರೀವೇದವ್ಯಾಸಾಯನಮಃ.

ಕನ್ನಡಮಹಾಭಾರತ—ಅರಣ್ಯಪರ್ವ.

ಮೊದಲನೆಯ ಸಂಧಿ.

ಸೂಚನೆ|| ಸಕಲರಾಜ್ಯವನುಳಿದಿವರು ಕಾ | ಮ್ಯಕಮಹಾಕಾನನದೊಳಗೆ ಕೀ |
ಚಕಕುಲಾಂತಕ ಕೆಡಹಿದನು ಕಿಮ್ಮೀರದಾನವನ ||

ಕೇಳು ಜನಮೇಜಯಧರಿತ್ರೀ | ಪಾಲ ಗಂಗಾತೀರದಲಿ ಭೂ | ಪಾಲಕರು ಗುರುಭೀಷ್ಮವಿದು
ರಾದ್ಯಖಿಳಬಾಂಧವರ || ಬೀಳುಗೊಟ್ಟರು ಗಜಪುರದ ಜನ | ಜಾಲವನು ಕಳುಹಿದರು ಗಂಗಾ |
ಕೂಲದುತ್ತರಭಾಗದಲಿ ಮಾಡಿದರು ವಿಶ್ರಮವ ||೧|| ನಿಲಿಸೆ ನಿಲ್ಲದೆ ಬಂದರರಸನ | ಬಳಿಯಲಗ್ಗದ
ಮಂಡಲೇಶ್ವರ | ರೊಲಿದು ಸೋದರರಾಜಪುತ್ರರು ಹಲವುಮನ್ನಣೆಯ || ಬಲುಭಟರು ಬಾಹತ್ತರ
ದನಿ | ಶ್ಚಲನಿಯೋಗಿಗಳಾಶ್ರಮಿಗಳ | ಗ್ಗಳೆಯವಿಪ್ರಸ್ತೋಮ ಬಂದುದು ಕೋಟಿಸಂಖ್ಯೆಯಲಿ ||೨||
ತಿರುಗಿ ಕಂಡನು ಭೂಮಿಭಾರದ | ನೆರವಿಯನು ಗಲ್ಲದಲಿ ಕರವಿ | ಟ್ಟರಸ ತಲೆದೂಗಿದನು ಸುಯ್ದನು
ಬೈದು ದುಷ್ಕೃತವ || ಧರಣಿ ಸೇರದುದಹಿತರಿಗೆ ಕರಿ | ತುರಗರಥಮಮಗಿಲ್ಲ ವಿಪಿನದ | ಪರಿಬವಣೆಗಿ
ವರೇಕೆ ಬೆಸಗೊಳು ಭೀಮ ನೀನೆಂದ ||೩|| ನಿಲ್ಲಿರೈ ದ್ವಿಜನಿಕರ ಕಳುಹಿಸಿ | ಕೊಳ್ಳಿರೈ ಪುರವರ್ಗ
ನೇಮವ | ಕೊಳ್ಳಿರೈ ಪರಿವಾರ ಮಕ್ಕಳುತಂದೆಮೊದಲಾಗಿ || ಎಲ್ಲಿ ಮೆಳೆಮರಗಾಡುಪಲ್ಲವ | ಫುಲ್ಲಫ
ಲಪಾನೀಯಪೂರಿತ | ವಲ್ಲಿರಾಯನ ಸೆಜ್ಜೆಯರಮನೆಯೆಂದನಾಭೀಮ ||೪|| ಅವನಿಪತಿ ಚಿತ್ತವಿಸು
ಬಕುಳಾ | ರ್ಣವವ ಹೊಗು ಹಿಮಗಿರಿಯಲಿರು ಭೂ | ವಿವರಗತಿಯಲಿ ಗಮಿಸು ಗಾಹಿಸು ಗಹನಗ
ಹ್ವರವ || ಎನಗೆ ನೀನೇ ಜೀವ ನೀನೇ | ವಿವಿಧಧನಗತಿ ನೀನೆಮತಿ ನೀ | ನವಗಡಿಸಬೇಡಕಟ ಕೃಪೆ
ಮಾಡೆಂದುದಖಿಳಜನ ||೫|| ತುಂಬಿದುದು ಕಂಬನಿಯನಕಟ ವಿ | ಡಂಬಿಸಿತೆ ವಿಧಿಯೆನ್ನನಿನಿಬರ |
ನಂಬಿಸುವಪರಿಯಂತುವಸನಗ್ರಾಸವಾಸದಲಿ || ತುಂಬಿಸಿರಿಗೆಡಹಿಯೊಳಲಕ್ಷ್ಮಿಯ | ಮುಂಬಿಗ
ನೊಳಪದೆಸೆಯ ಕುಂತದ | ಚುಂಬಿಗನೊಳೇನುಂಟುಫಲವೆಂದರಸ ಬಿಸುಸುಯ್ದ ||೬|| ಖೇದವೇಕಲೆ
ನೃಪತಿ ಹರುಷವಿ | ಷಾದದಲಿ ಸುಖದುಃಖದಲಿ ನುತಿ | ವಾದಪರಿವಾದದಲಿ ಸಮಬುದ್ಧಿಗಳಲಾದ್ವಿ
ಜರು || ಈದುರಂತದಚಿಂತೆ ಬೇಡೆಲೆ | ದ್ವಾದಶಾತ್ಮನ ಭಜಿಸಿದೊಡೆಭ | ಕ್ಷ್ಯಾದಿಬಹುವಿಧದನ್ನ
ಸಿದ್ಧಿಪುದೆಂದನಾಧೌಮ್ಯ ||೭|| ಧರಣಿಪತಿ ಕೇಳ್ಧೌಮ್ಯವಚನಾಂ | ತರದೊಳಮರನದೀವಿಗಾಹನ |
ಪರಮಪಾವನಕರಣನೀಕ್ಷಿಸಿ ತರಣಿಮಂಡಲವ || ಮರುಹಿ ಮೂಲಾಧಾರಪವನನ | ನುರುಸುಷುಮ್ನೆಗೆ

ನೆಗಹಿ ನಿಚ್ಚಟ । ವರಸಮಾಧಿಯಲಿವನ ಮೆಚ್ಚಿಸಿದನು ಮಹೀಪಾಲ ॥೮॥ ವರವ ಕೊಟ್ಟೆನು ನಿನಗೆ ಹೇಮದ । ಚರುಕವಿದೆ ವಿವಿಧಾನ್ನಪಾನೋ । ತ್ಕರದ ತವನಿಧಿ ನಿನ್ನ ವಧು ಬಾಣಸನಕರಣದಲಿ ॥ ವಿರಚಿಸಲಿ ಬಳಿಕುಣಲಿ ಶತಸಾ । ವಿರವನಂತವು ನೀವು ಬಳಿಕಂ । ಬುರುಹಮುಖಿ ಮರುದಿವಸವೀಪರಿ ಯೆಂದನಾದ್ಯುಮಣಿ ॥೯॥ ಭೂಮಿಪತಿ ಭುಲ್ಲವಿಸಿದನು ನಿಸ್ಸೀಮಸಂತೋಷದಲಿ ಸುಜನ । ಸ್ತೋಮ ರಕ್ಷಣಕಾದನಿರ್ವಾಹದನಿರೂಢಿಯಲಿ ॥ ಆಮುನೀಂದ್ರಂಗೆರಗಿ ಬಳಿಕೀ । ಭಾಮಿನಿಯ ಕರೆದೀಹ ದನ ಸು । ಪ್ರೇಮದಿಂದರುಹಿದನು ತನ್ನ ಸಹೋದರವ್ರಜಕೆ ॥ ಇವರು ತಿರುಗಿದರುತ್ತಲಡವಿಯ । ಭವಣಿಗೆಯ ಭಾರಾಂಕಭಾಷೆಯ । ಲವಿರಳಿತಜನಜಾಲಸಹಿತಾರಣ್ಯಮಾರ್ಗದಲಿ ॥ ಅವನಿಪತಿ ಕೇಳ ತ್ತಲಾಕೌ । ರವನ ನಗರಿಗೆ ಪಾರಿಕಾಂಕ್ಷಿ । ಪ್ರವರನೊಬ್ಬನು ಬಂದು ಹೊಕ್ಕನು ರಾಜಮಂದಿ ರವ ॥೧೧॥ ಮುನಿಯ ಸತ್ಕರಿಸಿದನು ಕೌರವ । ಜನಪನಾಋಷಿಮುಖ್ಯನೀತನ । ವಿನಯರಚನೆಗೆ ಮೆಚ್ಚಿ ನುಡಿದನು ರಾಜಕಾರಿಯವ ॥ ನಿನಗಿದೊಂದೇಕೊರತೆ ಪಾಂಡವ । ಜನಪರನು ಜೂಜಿನಲಿ ಸೋಲಿಸಿ । ಕನಲಿಸಿದೆ ಮದರಿಂದ ಬಲುಗೇಡಹುದು ನಿನಗೆಂದ ॥೧೨॥ ಹೋದಕೃತಿಯಂತಿರಲಿ ಸಾಕಿ । ನ್ನಾದರೆಯು ಕೌಂತೇಯರನು ಕರೆ । ದಾದರಿಸಿಕೊಡು ಧರೆಯ ನೆನೆ ಒಪ್ಪುರಿಸಿ ಖ್ಯಾತಿಯಲಿ ॥ ಹೊ ಯ್ದತೊಡೆಯನು ಹಗೆಗೆ ಕೊಡುವನೆ । ಮೇದಿನಿಯ ನೆನೆ ರೋಷಶಿಖಿಯಲಿ । ಕಾದಬೀತನಹೃದಯ । ಶಪಿಸಿದನಂದು ಮೈತ್ರೇಯ ॥೧೩॥ ತೊಡೆಗಳನು ಕಲಿಭೀಮ ಬವರದೊ । ಳುಡಿದು ಕೆಡಹಲಿಯೆಂದು ಶಾಪವ । ಕೊಡಲು ಮುನಿಪನ ಸಂತವಿಟ್ಟನು ಬಂದು ಧೃತರಾಷ್ಟ್ರ ॥ ತೊಡಗೆ ಬಂದುದು ತೋಟಿ ಸಾಕಿ । ನ್ನೊಡಬಡಿಸಿ ಫಲವಿಲ್ಲ ನಮ್ಮಯ । ನುಡಿಗೆ ಮರುಮಾತಿಲ್ಲ ಸುತ ಮುನಿ ಸಂದನಾಶ್ರಮಕೆ ॥ ಆಮಹಾಮುನಿಶಾಪಭಯವನು । ಭೀಮಸೇನನ ಬಲುಹ ನೆನೆನೆನೆ । ದಾಮನಸ್ಸಿನ ಬೇಗೆಯಲಿ ಬೆದೆ ಬೆಂದು ಬೇಸರಲಿ ॥ ಭೂಮಿಪತಿ ಕರೆಸಿದನು ವಿದುರನ । ನಾಮಹಾಜ್ಞಾನಿಯನು ಮುನಿಪನ । ತಾ ಮಸವನರುಹಿದೊಡೆ ಬಳಿಕಿಂತೆಂದನಾವಿದುರ ॥೧೪॥ ತಪ್ಪದಿದು ನಿಸ್ಸಾತ್ರಗಳ ಭುಜ । ದರ್ಪತೀವ್ರ ಜ್ವರದ ವಿಕಳರ । ನೊಪ್ಪಿತಾದೆ ಸುಯೋಧನಾದ್ಯರು ಜನಿಸಲೀಧರೆಗೆ ॥ ತಪ್ಪುವುದೆ ಋಷಿವಾಕ್ಯಸಂ ಧಿಯೊ । ಳಪ್ಪಿಗೊಳು ಪಾಂಡವರನಲ್ಲದೊ । ಡಪ್ಪಿಕೊಂಬಳು ಮೃತ್ಯು ನಿನ್ನ ಕುಮಾರಕರನೆಂದ ॥ ಎನಲು ಕಿಡಿಕಿಡಿಯಾಗಿ ಕೌರವ । ಜನಪನೀತನ ಬೈದುಕುಂತೀ । ತನುಜರಲಿ ಬಾಂಧವನಲಾ ಹೋಗ ವರ ಹೊರಗೆಂದು ॥ ಮುನಿದು ಗರ್ಜಿಸೆ ಜೀಯ ಕರಲೇ । ಸೆನುತ ಮನದುಬ್ಬಿನಲಿ ಪಾಂಡವ । ಜನಪರ ಹಕಾಮ್ಯಕವನಾಂತರಕ್ಕೈದಿದನು ವಿದುರ ॥೧೫॥ ಇದಿರುಗೊಂಡರು ಹಿರಿದುಮನ್ನಿಸಿ । ವಿದುರನನು ಕೊಂಡಾಡಿ ಗುರುನೃಪ । ನದಿಜಧೃತರಾಷ್ಟ್ರಾದಿಗಳ ಸುಕ್ಷೇಮಕುಶಲಗಳ ॥ ವಿದುರನಾಗಮನಪ್ರ ಪಂಚವ । ಹವನನೆಲ್ಲವ ಕೇಳಿದರು ಹೇ । ಳಿದನು ನಿಜವೃತ್ತಾಂತವನು ವಿದುರಂಗೆ ಯಮಸೂನು ॥೧೬॥ ಇತ್ತಲೀವಿದುರನ ವಿಯೋಗದ । ಚಿತ್ತದಂತಸ್ತಾಪದಲಿ ನೃಪ । ಮತ್ತೆ ದೂತರ ಕಳುಹಿ ಕರೆಸಿದ ನಾತನನು ಪುರಕೆ ॥ ಹೆತ್ತಮಕ್ಕಳ ಬಿಡು ಪೃಥಾಸುತ । ರತ್ತ ತಿರುಗೆನೆ ಖಾತಿಗೊಂಡೆನು । ಮತ್ತೆ ಮುನಿಯದಿರೆಂದು ವಿದುರನನಪ್ಪಿದನು ನೃಪತಿ ॥೧೭॥ ಆವವನದಲಿ ಪಾಂಡುಸುತರಿಗೆ । ಠಾವು ನಿನ ಗೇನೆಂದರನಿಬರ । ನಾವವನದಲಿ ಕಂಡೆ ಕೂಡೆನಿತುಂಟು ಪರಿವಾರ ॥ ಆವುದಭಿಮತ ಭೀಮಸೇನನ ।

ಭಾವವೇನು ಯುಧಿಷ್ಠಿರಾರ್ಜುನ । ರಾವಭಂಗಿಯಲಿದ್ದರೆಂದನು ನಗುತಧೃತರಾಷ್ಟ್ರ ॥೨೦॥ ಅರಸ ಕೇಳ್ಗಂಗಾನದಿಯನು । ತ್ತರಿಸಿದವರಿಗೆ ಕಮಲಮಿತ್ರನ । ಕರುಣವಾಯಿತು ಕನಕಪಾತ್ರೆಯೊಳಕ್ಷಯಾನ್ನದಲಿ ॥ ಪರಿಕರದ ಪರುಠವಣೆಯಲಿ ಸಾ । ವಿರದಶತಸಂಖ್ಯಾತಧರಣೀ । ಸುರನಿಯೋಗಿಗಳಾಪ್ತಜನಸಹಿತೈದಿದರು ವನವ ॥೨೧॥ ಜನಪ ಕೇಳ್ಕಿಮ್ಮೀರನೆಂಬವ । ನನಿಮಿಷರಿಗುಬ್ಬಸದ ಖಳನಾತನ ವಿಭಾಡಿಸಿ ಹೊಕ್ಕರವರಾರಣ್ಯಮಂದಿರವ ॥ ದನುಜನೇ ಕಿಮ್ಮೀರನಾತನ। ನನಿಲಜನೊ ಫಲುಗುಣನೊ ಕೊಂ । ದಾತನು ಯುಧಿಷ್ಠಿರನೋ ಸವಿಸ್ತರವಾಗಿ ಹೇಳೆಂದ ॥೨೨॥ ಅರಸ ಕೇಳೆಂದೇಕಚಕ್ರದೊ । ಳೊರೆಸಿದನಲಾ ಭೀಮನಾತಗೆ । ಹಿರಿಯನೇ ಕಿಮ್ಮೀರಬಾಂಧವನಾಹಿಡಂಬಕಗೆ । ಧರಣಿಪಾಲನ ಸಪರಿವಾರದ । ಬರವ ಕಂಡನು ತನ್ನ ತಮ್ಮನ । ಹರಿಬವನು ಮರಳಿಚುವೆನೆನುತಿದಿರಾದನಮರಾರಿ ॥೨೩॥ ಇವರು ಮೂರೇದಿನಕೆ ಕಾಮ್ಯಕ । ನವಮಹಾಶ್ರಮಕಾಗಿ ಬರೆ ದಾ । ನವನು ದಾರಿಯ ಕಟ್ಟಿ ನಿಂದನು ಕೈಯಮುಷ್ಟಿಯಲಿ ॥ ಅವನ ಕಂಗಳ ಕೆಂಪಿನಲಿ ಮೇ । ಣವನ ದಾಡೆಯ ಬೆಳಗಿನಲಿ ಖಳ । ನವಯವವ ಕಂಡಳುಕಿ ನಿಂದರು ಮುಂಗುಡಿಯಭಟರು ॥೨೪॥ ಮುಂದೆ ಘೋರಾರಣ್ಯವಿದೆ ಸುರ । ಬಂದಿಕಾರನ ಕಾಹಿನಲಿ ಕಾ । ಳಿಂದಿಯುದರದ ಮೊಬ್ಬಿನಂತಿದೆ ತೀವ್ರತರತಿಮಿರ ॥ ಇಂದಿನಿರುಳಲಿ ಬದುಕಿದೊಡೆ ಸಾ । ವಂದಗಮಗಿಲ್ಲೆನುತ ಭಯದಲಿ । ನಿಂದುದಲ್ಲಿಯದಲ್ಲಿ ಪಾಂಡುಕುಮಾರಪರಿವಾರ ॥೨೫॥ ಅಡಿಗಡಿಗೆ ಮಾನಿಸರ ಸೊಗಡವ । ಗಡಿಸುತಿದೆ ಬರಹೇಳು ನೆತ್ತರ । ಗುಡಿಹಿಗ್ಗೈನೆಯರಲ್ಲಿ ಶಾಕಿನಿಡಾಕಿನೀನಿಕರ ॥ ತಡೆಯಬೇಡೋ ತಿನ್ನೆನುತ ಬೊ । ಬ್ಬಿಡುತ ಖಳನುರುಬಿದನು ರಾಯನ । ನುಡಬ ಹೊಕ್ಕಳು ಮರೆಯನರ್ಜುನಭೀಮಧರ್ಮಜರ ॥೨೬॥ ಎಲೆಲೆರಾಕ್ಷಸ ಭೀತಿಹೋಗದೆ । ನಿಲುನಿಲೆಲವೋ ನಿಮಿಷಮಾತ್ರಕೆ । ಗೆಲುವರರಸುಗಳೆನುತ ಮುನಿರಕ್ಷೋಘ್ನಸೂಕ್ತವನು ॥ ಪಲವುವಿಧದಲಿ ಜಪಿಸಿ ದಿಗುಮಂ । ಡಲದ ಬಂಧವ ರಚಿಸಿ ಜನಸಂ । ಕುಲವ ಸಂತೈಸಿದನು ಧೌಮ್ಯನು ಮುಂದೆ ಭೂಪತಿಯ ॥ ಆರುನೀವ್ನಡುವಿರುಳು ಪಾಂಡುಕು । ಮಾರರಾವೆನಲಿತ್ತಲೇನು ವಿ । ಚಾರ ಬಂದಿರಿ ಹೇಳಿ ನೀವಾಬಕಹಿಡಿಂಬಕರ ॥ ವೈರಿಗಳಲಾ ಹೊಲ್ಲಹೇನುಮಿ । ಕಾರಿಗಳನೊಡಹೊಯ್ದು ಶೋಣಿತ । ವಾರಿಯೋಕುಳಿಯಾಡಬೇಹುದೆನುತ್ತ ಖಳ ಜರೆದ ॥೨೮॥ ಮಿಡಿದನರ್ಜುನನಧನುವನಾತನ । ಜಡಿದು ನಿಂದನು ಭೀಮನಸುರನ । ಕೆಡಹಿ ಕಾಮ್ಯಕವನದ ಭೂಮಿಯ ಭೂತಸಂತತಿಗೆ ॥ ಬಡಿಸುವೆನು ನೀಸೈರಿಸೆನುತವ । ಗಡಿಸಿದನು ಕಲಿಭೀಮನಂತ್ಯದ । ಸಿಡಿಲು ಸೆರೆಬಿಟ್ಟಂತೆ ಬೊಬ್ಬಿಡುತೆದ್ದನಮರಾರಿ ॥೨೯॥ ಎಂಬೆನೇನನು ಪವನಜನ ಕೈ । ಕೊಂಬದೈತ್ಯನ ಹೆಮ್ಮರನ ಹೆ । ಗ್ಗೊಂಬ ಮುರಿದನು ಸವರಿದನು ಶಾಖೋಪಶಾಖೆಗಳ ॥ ತಿಂಬೆನಿವನನು ತಂದು ತನ್ನಹಿ । ಡಿಂಬಕನ ಹಗೆ ಸಿಲುಕಿತೇ ತಾ । ನಂಬಿದುದು ನೆರೆದೈವವೆನುತಿದಿರಾದನಮರಾರಿ ॥೩೦॥ ಹೊಯಿದನವನುರವಣಿಸಿ ಮುರಿದೊಳ । ಹೊಯಿದು ಹೊಕ್ಕನು ಭೀಮನೆಲವೋ । ಕಯಿದುಮರನೇಸಳೆಗೆಸೆಡೆವುದೆಭದ್ರಮದದಂತಿ ॥ ಕಯಿದುವಿಲ್ಲಾ ತರಿಸಿಕೊಡುವೆನ । ಡಾಯುಧವ ಬಿಡುಸರಳನೆನುತವ । ಹೊಯಿದು ಹುರಿಯೋಹುರಿಯೆನುತ ಗಹಗಹಿಸಿದನು ಭೀಮ ॥೩೧॥ ಮುರುಕಿಸುವಪವನಜನನೆತ್ತಿಯ । ನೆರಗಿದನು ಬಳಿಕವನ ಹೊಯ್ಲಿನ । ಬಿರುಸಿನೈಯ್ಯನೊ ಸಿಡಿಲಶಿಷ್ಯನೊ ವಜ್ರಕರಹತಿಯೋ ॥ ಕರಗಿದಾಮಯಣಾಮದಿಗಳಿಂ ।

ಪೆರೆದಕಾಹಿನಕರುವೆನಲು ಕು । ಕ್ಕುರಿಸಲಸುರನನಿಕ್ಕಿದನು ಚಾಪಲಚಪೇಟದಲಿ ॥೩೨॥ ಡೆಂಡಣಿಸಿ ಸುರವೈರಿ ದೊಪ್ಪನೆ । ದಿಂಡುಗೆಡೆದನು ನೀಲಶೈಲದ। ದಂಡಿಗಾರನ ದೇಹಗರ್ತದ ರಕ್ತನಿರ್ಝರದಾ ॥ ದೊಂಡೆಗರುಳಿನ ಬಾಯಚೋಲಿನ । ಕುಂಡಲಿತಕರಜಂಘೆಗಳ ಬಿಡು । ಮಂಡೆಗೆದರಿದಖಳನ ಕಂಡುದು ಭೂಸುರವ್ರಾತ ॥೩೩॥ ಅರಸ ಹೇಳುವುದೇನು ಹೋರಿದ । ನರೆಗಳಿಗೆ ಕೊಂಡಾಡಿ ಬಳಿಕಿಟ್ಟೊರಸಿ ಹುಡಿಯಲಿ ಹೂಳಿದನು ಕಿಮ್ಮೀರದಾನವನಾ ॥ ಬೆರಸಿ ತೀವಿಪ್ರೌಘವೀಮುನಿ । ವರಿಯರೀಕಾಮಿನಿಯರೀನೃಪ । ವರನ ಪರಿಕರವಾಮಹಾಕಾಮ್ಯಕವನಾಂತರವ ॥೩೪॥ ತಳಿತು ಬಿಟ್ಟುದು ಕೂತ್ತೆ ಪರಹಿನ ಹಳುವದೊಳ್ದ್ವಿಜವರ್ಗ ರಚಿಸಿದ । ತಳಿರಗುಡಿಗಳ ಪರ್ಣಶಾಲೆಯ ಭದ್ರಭವನಿಕೆಯ ॥ ಮೆಳೆಯ ಮಂಟಪ ಹೊದರುಮರುಗಲು । ನೆಳಲಚೌಕಿಗೆ ವಿಪುಳವಟಸಂ । ಕುಲದೊಳೋಲಗಶಾಲೆ ಮೆರೆದುದು ಧರ್ಮನಂದನನಾ ॥೩೫॥ ಆಸಕಲಸಾಮ್ರಾಜ್ಯಲಕ್ಷ್ಮಿವಿ । ಳಾಸವರಮನೆಗಳನು ಮರೆಸಿದು । ದೀಶರಭಶಾರ್ದೂಲಸೇವಿತಘೋರಕಾಂತಾರ ॥ ಆಸುಧಾಕಲಿತಾನ್ನವೇ ಫಲ । ರಾಶಿಯಾದುದು ಗೇಯರಸವಿನ್ಯಾಸವೇ ಮಧುಮಕ್ಷಿಕವ್ರಜಜಂಬುಕಧ್ವಾನ ॥೩೬॥ ದಿನಪ ಕೃಪೆಮಾಡಿದನಲೇ ಕಾಂ । ಚನಮಯದ ಭಾಂಡವನು ಬಳಿಕಾ । ವನಜಮುಖಿ ಮಾಡಿದಸುಪಾಕದ ಷಡುರಸಾನ್ನದಲಿ ॥ ಮುನಿಜನಕೆ ಪರಿಜನಕೆ ಭೂಸುರ । ಜನಕೆ ತುಷ್ಟಿಯಮಾಡಿ ಭೂಪತಿ । ವನದೊಳಿದ್ದನು ವೀರನಾರಾಯಣನಕರುಣದಲಿ ॥೩೭॥

ಅಂತು ಸಂಧಿ ೧ ಕ್ಕೆ ಪದ ೩೭ ಕ್ಕಂ ಮಂಗಳಮಸ್ತು.

ಎರಡನೆಯ ಸಂಧಿ.

ಸೂಚನೆ॥ ಸಕಲಯದುಬಲಸಹಿತ ಭಕ್ತ । ಪ್ರಕರಪಾಲಕನೊಲವಿನಲಿ ಕಾ ।
ಮ್ಯಕಮಹಾಕಾನನಕೆ ಬಿಜಯಂಗೈದನಸುರಾರಿ ॥

ಅರಸ ಕೇಳೈ ದ್ವಾರಕಾಪುರ । ವರಕೆ ಬಂದುದು ವಾರ್ತೆ ಪೀತಾಂ । ಬರನ ಬಹಳಾಸ್ಥಾನದಲಿ ವರ್ತಿಸಿದುದಡಿಗಡಿಗೆ ॥ ಧರೆಸಹಿತ ನಿಜವಸ್ತುವಾಹನ । ಪರಮವಿಭವವ ಬಿಸುಟು ಭಾರಿಯ । ಪರಿಭವದಿ ನಟ್ಟಡವಿಪೊಕ್ಕರು ಪಾಂಡುಸುತರೆಂದು ॥೧॥ ಕೇಳಿ ತಲೆದೂಗಿದನು ಮೂಗಿನ । ಮೇಲುವೆರಳಿನ ಹೊತ್ತದುಗುಡದ । ತೂಳಿದುಬ್ಬೆಯ ನಟ್ಟನೋಟದ ನೆಗ್ಗಿದುತ್ಸವದಾ ॥ ಹೂಳಿದೂಹೆಯ ಹಿಳಿದನೆಗಹಿನ । ಹೇಳಲರಿದೆನೆ ಹುದಿದಭಾವದ । ಲಾಲಿಸಿದನಸುರಾರಿ ದೂತವ್ರಜದ ಬಿನ್ನಪವ ॥೨॥ ಅಕಟ ಕಪಟದ್ಯೂತದಲಿ ನೃಪ । ಮುಕುರನುನ್ನತಿ ಮುರಿದುದೇಕಾ । ಳಿಕಬಲೀಕೌರವರು ಕೊಂಡರೆ ಧರ್ಮಜನನೆಲನ ॥ ಅಕುಟಿಲರಿಗೇಕಿದು ನಿರಾಬಾ । ಧಕರಿಗೇಕಿದು ಸಕಲಸುಜನ ।ಪ್ರಕರವಂದ್ಯರಿಗೇಕೆನುತ್ತಸುರಾರಿ ಚಿಂತಿಸಿದ ॥೩॥ ಹಿರಿದು ಹರ ಚಿಂತಿಸಿದನೀವ್ಯತಿ । ಕರವನರಿಯದವಮುಗುದರಿದನಾ । ರರಿವರೈ ವಿಶ್ವಂಭರಾಭಾರಾಪನೋದನಕೆ ॥ ಧರಣಿಯಲಿ ಮೈಗೊಂಡು ದೈತ್ಯರ ನೊರಸಿದನು ಬಳಿ

ಕೆಳಿದಪಾಂಡವ । ಕುರುನೃಪರ ಕದಡಿರಿದನೆಲೆಭೂಪಾಲಕೇಳೆಂದ ॥೪॥ ಏನನೆಂಬೆನು ಜೀಯ ಕಡು
ದುಂ । ಮಾನದಲಿ ಹೊರವಂಟು ಬಂದನು । ದಾನವಾಂತಕನೈದಿದವು ದಂಡಿಗೆಗಳರಸಿಯರ ॥ ಅನಿ
ಖಿಳನೃಪವರ್ಗಯಾದವ । ಸೇನೆ ಕವಿದುದು ಪಾಂಡುಪುತ್ರರ । ಕಾನನವ ಕರುಣಾಳು ಹೊಕ್ಕನು
ಹಲವುಪಯಣದಲಿ ॥೫॥ ಕೇಳಿದಾಗಳೆ ಬಂದರಾಪಾಂ । ಚಾಲಕೇಕಯಧೃಷ್ಟಕೇತನೃ । ಪಾಲ ಕುಂತೀ
ಭೋಜ ಸೃಂಜಯಸೋಮಕಾದಿಗಳು ॥ ಮೇಲೆಮೇಲೀನಾಲ್ಕುದಿಕ್ಕಿನ । ಮೂಲೆಯರಸುಗಳಿವರ ಕಂ
ಡುಪ । ಲಾಲಿಸಲು ಬರುತಿರ್ದರಾಕಾಮ್ಯಕವನಾಂತರಕೆ ॥೬॥ ಇವರು ಬಂದರು ನಿಖಿಳಭೂಸುರ ।
ನಿವಹಸಹಿತಿದಿರಾಗಿ ವರಬಾಂ । ಧವರೊಳಬಿವಂದ್ಯರಿಗೆ ತತ್ಸಮರಿಗೆ ಕನಿಷ್ಠರಿಗೆ ॥ ಅವರಿಗವರವರು
ಚಿತಸತ್ಕಾ । ರವನು ಮಾಡಿ ಮುರಾರಿಯಂಘ್ರಿಯ । ನವಿರಳಾಶ್ರುಗಳಿಂದ ತೊಳೆದರರಸಕೇಳೆಂದ ॥೭॥
ಬೇರೆಬೇರೈವರನು ತೆಗೆದು ಮು । ರಾರಿಯಪ್ಪಿದನಡಿಗಡಿಗೆ ದೃಗು । ವಾರಿಗಳನೊರಸಿದನು ಪೀತಾಂಬ
ರದ ಸೆರಗಿನಲಿ ॥ ಸಾರುಸಾರೆನಲುಗ್ಗಡಣೆಯ ವಿ । ಕಾರವಿನ್ನೇಕೆನುತ ರಾಯನ । ನಾರಿ ಬಂದಳು
ಕವಿದು ಬಿದ್ದಳು ಹರಿಯಚರಣದಲಿ ॥೮॥ ಒರಲಿದಳು ದೆಸೆಯೊಡನೊದರೆ ಮಿಗೆ । ಹೊರಳಿದಳು
ಹರಿಪಾದದಲಿ ಮೈ । ಮರೆದಳಂಗನೆ ತನುವ ಮುಸುಕಿದಕೇಶಪಾಶದಲಿ ॥ ಕರಗಿದಳು ಕಂದಿದಳು ಮ
ಮ್ಮಲ । ಮರುಗಿದಳು ಕುಂದಿದಳು ದೃಗುಜಲ । ದೊರತೆಯುಕ್ಕಿತು ಮೇಲೆಮೇಲೆ ಮಹೀಶನಂಗನೆಗೆ ॥
ಹಿಂದೆ ಸೆಳೆಸೀರೆಯಲಕಟ ಗೋ । ವಿಂದ ರಕ್ಷಿಸನಾಥನಾಥ ಮು । ಕುಂದ ಕಾಯೈ ಕೃಷ್ಣ ರಕ್ಷಿಸು
ಕರುಣಿಸಸುರಾರಿ ॥ ಇಂದಿರಾಪತಿಯೇ ಯಶೋದಾ । ನಂದನನೆ ಕಾರುಣ್ಯನಿಧಿ ಸಲ । ಹೆಂದರುಳುಹಿ
ದದೈವ ನೀ ಮೈದೋರಿದೈ ತನಗೆ ॥೧೦॥ ಶ್ರುತಿಗಳಿಗೆ ಮೈದೋರೆ ಸುಪತಿ । ವ್ರತೆಯರಿಗೆ ಗೋಚ
ರಿಸೆ ಯತಿಸಂ । ತತಿಯ ನಿರ್ಮಳಸಾರಸಮ್ಯಜ್ಞಾನದೀಧಿತಿಗೆ ॥ ಮತಿಗೊಡದಮಹಿಮಾಂಬುನಿಧಿ
ಯೆನ । ಗತಿಶಯವನೇ ಮಾಡಿ ಲಜ್ಜಾ । ಸ್ಥಿತಿಯನುಳುಹಿದದೈವ ನೀ ಮೈದೋರಿದೈ ತನಗೆ ॥೧೧॥
ಹೆಸರುಗೊಂಡೊಡೆ ಹಿಂದೆ ಬಂದು । ಬ್ಬಸದಭಾರವ್ಯಸನವನು ಹಿಂ । ಗಿಸಿದೆ ಸಾಕ್ಷಾದ್ದೃಷ್ಟದರುಶನ
ವೇನನಿತ್ತಪುದೋ ॥ ಹೆಸರುಗೊಳಲರಿಯದೆ ಮನೋವಾ । ಗ್ವಿಸರ ಮರಳಿದತರ್ಕನಿಗಮ । ಪ್ರಸರ
ಣದ ಪರದೈವ ನೀ ಮೈದೋರಿದೈ ತನಗೆ ॥೧೨॥ ಪತಿಗಳಿವರಂಜದರು ಧರ್ಮ । ಸ್ಥಿತಿಯನರಿದವರ
ಳುಕಿದರು ತ । ತ್ಪಿವೃತತಾಮಹಗುರುಗಳಡಗಿದರವನಿಯಲಿ ಬಗಿದು ॥ ಗತಿವಿಹೀನೆಗೆ ಕೃಷ್ಣ ನೀನೇ । ಗತಿ
ಯೆನುತ ಬಾಯ್ಬಿಡಲು ಲಜ್ಜಾ । ಸ್ಥಿತಿಯನುಳುಹಿದದೈವ ನೀ ಮೈದೋರಿದೈ ತನಗೆ ॥೧೩॥ ದಾನಯ
ಜ್ಞತಪೋವ್ರತಾನು । ಷ್ಠಾನನಿಷ್ಠರು ಕಾಣರಪ್ಪುವಿ । ಧ್ಯಾನಯೋಗದ ಸಿದ್ಧರರಿಯರು ನಿನ್ನ ಸುಳಿವು
ಗಳ ॥ ಜ್ಞಾನಮಧ್ಯತ್ರಿಪುಟಿಯನು ಸಂ । ಧಾನರಹಿತಜ್ಞಪ್ತಿರೂಪನು । ತಾನೆನಿಪ ಪರಬೊಮ್ಮ
ನೀ ಮೈದೋರಿದೈ ತನಗೆ ॥೧೪॥ ಕಾಯಿದೈ ಪ್ರಹ್ಲಾದಮಾರ್ಕಂ । ಡೇಯವನಗಜವಂಬರೀಷನ ।
ಕಾಯಿದೈ ಕಾರುಣ್ಯದಲಿ ಪಾತಕಿಯ ಜಾಮಿಳನ । ಕಾಯಿದೈಗೋವಿಂದಯೆನೆ ತ । ನ್ನಾಯತಿಕೆಯ
ಭಿಮಾನವನು ನೀ । ಕಾಯಿದೈ ಹರಿಯೆನುತ ಪದದಲಿ ಹೊರಳಿದಳು ತರಳೆ ॥೧೫॥ ಏಳು ತಾಯೆ
ಸರೋಜಮುಖಿ ಪಾಂ । ಚಾಲೆ ನೊಂದೆ ತಂಗಿಯೆನುತ ಕೃ । ಪಾಳು ಕಂಬನಿದೊಡೆದು ಕೊಡಹಿದ
ನವಯವದರಜವ ॥ ಮೇಲುಮುಚ್ಚಳತೆರೆದತನುವಿನ । ಹೇಳಿಗೆಯ ಶೋಕಾಹಿಯಂತಿರೆ । ಲೋಲ

ಲೋಚನೆಯುಳಲು ಮಿಗೆ ಹೆಕ್ಕಳಿಸಿತಡಿಗಡಿಗೆ ॥೧೬॥ ಆಸಕಲಪರಿವಾರವಾಧರ । ಣೀಶ್ವರಾಮುನಿನಿಕರ ಮಾಜನ । ಮಾಸತೀನಿಕುರುಂಬವಾಗಜಘೋಟಕವ್ರಾತ॥ ಆಸರೋಜಾನನೆಯ ಬಹಳ । ಕ್ಲೇಶಗಳ ಕಂಡ ಕ್ಷಿಜಲವಾ । ರಾತಿಯಲಿ ತೇಕಾಡುತಿರ್ದುದು ರಾಯ ಕೇಳೆಂದ ॥೧೭॥ ಮುಡಿಯ ಸಂವರಿಸಬಲೆ ಸೀರೆಯ । ನುಡು ನವಾಂಬರವಿದೆ ವಿರೋಧವ । ಬಿಡು ಸುಯೋಧನರಾಜಸಂತತಿಯುರಿದುದಿನ್ನೇನು॥ ಕೆಡಿಸಿಕೊಂಡರು ಸಾಯ್ಗಳಿನ್ನದ । ನುಡಿದು ಫಲವೇನಕಟ ಕೈಕೊಂ । ಡಡವಿಯನು ಭವಸವೆಯ ಸ್ವೈರಿಪುದೆಂದನಸುರಾರಿ ॥೧೮॥ ತುರುಬ ಕಟ್ಟುವಪದನ ನಿಮ್ಮಡಿ । ಯರಿಯದೆಂಬೆನೆ ಸಕಲಸಚರಾ । ಚರದ ಚೇತನರೂಪ ದೇಹಿನಿಕಾಯಕೃತಸಾಕ್ಷಿ ॥ ತರಿದು ದುಶ್ಶಾಸನನ ವಕ್ಷದೊ । ಳೊರೆವರಕ್ತದೊಳದ್ದಿ ಕಟ್ಟುವ । ಕುರುಬನರಿಯಾ ಕೃಷ್ಣಯೆಂದಳು ಕಮಲಮುಖಿ ಸೆಗುತ ॥೧೯॥ ಐಸಲೇ ದುರ್ಯೋಧನಾದಿಗ । ಳೇಸರವರು ಭೀಮಪಾರ್ಥರ । ಬೀಸರಕೆ ಬಲುಗೈಯೆ ಬರ್ಹಿರ್ಮುಖರ ಭಾರವಣೆ ॥ ದೂಸಕನ ರಕ್ತದಲಿ ನಿನ್ನಯ । ಕೇಶವನು ಕಟ್ಟಿಸುವೆ ನಿನ್ನಯ । ಭಾಷೆ ತನ್ನದು ತಾಯೆ ತವಕಿಸಬೇಡ ನೀನೆಂದ ॥೨೦॥ ವರತಪಸ್ವಿನಿ ನೀನು ನಿನ್ನನು । ಕೆರಳಿಚಿದರೇ ಕುನ್ನಿಗಳು ಮಿಗೆ । ಭರತಸಂತತಿ ಫಲಿತಕದಳಿಯತೆರದೊಳಾಯಿತಲಾ ॥ ಕುರುಡನರಿಯದೆ ಹೋದರೆಯು ಕರು । ಗುರುಡರಾದರೆ ಭೀಷ್ಮವಿದುರಾ । ದ್ಯರು ಮಹಾದೇವೆನುತ ಮುರರಿಪು ತೂಗಿದನು ಶಿರವ ॥೨೧॥ ಶಕುನಿಕಲಿಸಿದಕಪಟವೇಕೌ । ಳಿಕಡಜೂಜಿದು ನಿಮ್ಮನೀಕಾ । ವ್ಯಕಕೆ ತಂದುದು ಜೂಜಿನಲಿ ತಾನಿಲ್ಲಲೇ ಯನಲು ॥ ಸಕಲಜೀವರ ಕರ್ಮಸಾಕ್ಷಿ । ಪ್ರಕರಚೈತನ್ಯಸ್ವರೂಪಾ । ತ್ಮಕನು ನೀನಲ್ಲಿಲ್ಲ ಹುಸಿಯಲ್ಲೆಂದಳಿಂದುಮುಖಿ ॥೨೨॥ ದೇವಿ ತಾನಿದನರಿದೊಡಾವಸು । ದೇವನಾಣೆ ಮಹಾದ್ಭುತವನದ । ನೇಮೊಗಳ್ವೆನು ಯದುನೃಪಾಲವಿತ್ವರಂಪರೆಯಾ ॥ ನೀವು ಮಾಡಿದಯಜ್ಞಮುಖದವ । ಳಾವಳಿಯೊಳಾವಿರಲು ಮುತ್ತಿತು । ದೇವರಿಪುಬಲನಿಕರವಸ್ಮದ್ದ್ವಾರಕಾಪುರಿಯಾ ॥೨೩॥ ಲಗ್ಗೆಗಳುಕುವುದಲ್ಲಲೇ ಬಲು । ದುರ್ಗವದು ದುರ್ಭೇದದರೊಳ । ಗಗ್ಗಳೆಯರಿದ್ದುದು ಹಲಾಯುಧಮುಸ್ಮಘಾದಿಗಳು ॥ ಒಗ್ಗಿ ಕವಿವೆಕರೋರದೈತ್ಯರ ॥ ನುಗ್ಗುನುಸಿಮಾಡಿದರು ಹರಣದ । ಸುಗ್ಗಿ ಮೆರೆದುದುಮಾರ್ಬಲದೊಳಬುಜಾಕ್ಷಿ ಕೇಳೆಂದ ॥೨೪॥ ಅಳುರೆ ಮುತ್ತಿಗೆದೆಗೆದು ಸಾಲ್ವನ । ದಳ ಮುರಿದು ನಿಜಪುರಕೆ ಹಾಯ್ದುದು । ಗೆಲವು ಸಾತ್ಯಕಿರಾಮಕಾಮಾದಿಗಳ ವಶವಾಯ್ತು ॥ ಬಳಿಕ ನಿಮ್ಮಯ ರಾಜಸೂಯಕೆ । ಕಳಶವಿಟ್ಟು ಮದೀಯನಗರಿಯ । ಕಳಕಳವ ಸಂತೈಸಿ ನಡೆದೆವು ಸಾಲ್ವಪಟ್ಟಣಕೆ ॥೨೫॥ ಏನನೆಂಬೆನು ಸಾಲ್ವಪುರದ ನ । ವೀನಮಾಯಾರಚನೆಯನು ನಮ । ಗಾನಲಸದಳವುಳಿದಗೀರ್ವಾಣರಿಗೆ ಗೋಚರವೆ ॥ ದಾನವನ ಮಾಯಾಪುರದ ಸಂ । ಸ್ಥಾನವರ್ಮವನರಿದು ಶರಸಂ । ಧಾನದಲಿ ಸಂಹರಿಸಿದೆವು ಸಾಲ್ವಾದಿರಿಪುಭಟರ ॥೨೬॥ ಅತ್ತಲಾಕೋಳಾಹಳದಲಿರ । ಲಿತ್ತಲಾದುದು ಜೂಜು ನಿಮ್ಮವಿ । ಪತ್ತು ಕಂಡುದು ತೆರಹ ತಪ್ಪಿಸಿ ನಮ್ಮಸುಳಿವುಗಳ ॥ ಇತ್ತಲಾವಿರೆ ಮೇಣು ದೋರಕಿ । ಯತ್ತಲಿರೆ ನೀವಡಪಿಮೊಕ್ಕರೆ । ಹೆತ್ತಳೇ ದೇವಕಿ ಮಗನನೆಂದನು ಮುರಧ್ವಂಸಿ ॥೨೭॥ ದ್ವಾರಕಾತತ್ಪುರದಲಿರುವತಿ । ದೂರದಲ್ಲಿರು ಮೇಣು ನಮ್ಮಯ । ಸಾರೆ ನಿಮ್ಮಡಿಯಿರಲಿ ನಿವಿಷ್ಮಾಪಾಂಡುನಂದನರ ॥ ಭಾರ ನಿಮ್ಮದು ಭಕ್ತಜನದಾ । ಧಾರ ನಿಮ್ಮದನಾಥರಾವತಿ । ಕಾರುಣಿಕನೀನೆಂದು ಬಿದ್ದಳು ಮತ್ತೆ ಚರಣದಲಿ ॥೨೮॥ ಮಗನ ಕರೆದೊಡೆಯ

ಮನದೂತರ । ತಗುಳುವಂದು ಸಮಿಾಪವರ್ತಿಯೆ । ನಗಧರ ಶ್ರೀಕಾಂತ ಸಲಹೆನೆ ಮುನಿಕುಮಾರಕನ ॥ ಉಗುಳಿಚಿದೆಲಾ ಮೃತ್ಯುವಿನ ತಾ । ಳಿಗೆಯೊಳಂದು ಸಮಿಾಪವರ್ತಿಯೆ । ಜಗದುದರ ನೀ ಜಾಣನಹೆಯೆಂದಳು ಸರೋಜಮುಖಿ ॥೨೯॥ ಅಯಿತೇಳೌ ತಂಗಿ ನೀ ಪಿರಿ । ದಾಯಸವನನುಭವಿಸಲುದಿಸಿದೆ । ರಾಯನಾಡಿದಭಾಷೆಸಲಲಿ ವನಪ್ರವಾಸದಲಿ ॥ ವಾಯುತನುಜನ ಕೈಯಲೇ ನಿ । ನ್ನಾಯತಿಕೆಯಹುದಾಪ್ರತಿಜ್ಞೆಗೆ । ತಾಯೆ ತಾ ಹೋಗೆಯೆಂದು ಕೊಟ್ಟನು ಸತಿಗೆ ಸಂಬುಗೆಯ ॥೩೦॥ ಸಂತವಿಟ್ಟನು ಬೇರೆಬೇರೆ ಕೃ । ತಾಂತಸುತಭೀಮಾದಿಗಳ ಮುನಿ । ಸಂತತಿಯ ಮನ್ನಿಸಿದನವರವರುಚಿತವೃತ್ತಿಗಳಲಿ ॥ ಎಂತು ಹದಿಮೂರಬುದವೀನ್ನೃಪ । ಸಂತತಿಗೆ ಸೌಹಾರ್ದವೆಕಟ ವೆ । ಸಾಂತರದೊಳೆಂದಸುರರಿಪು ನುಡಿದನು ಯುಧಿಷ್ಠಿರಗೆ ॥೩೧॥ ಕಳುಹುವುದು ಸುಭದ್ರೆಯನು ನಿಜ । ಲಲನೆಯರ ಒಪರವರ ತಾಯ್ವನೆ । ಗಳಿಗೆ ಬೀಳ್ಕೊಡು ನಿಮ್ಮ ಪಂಚದ್ರೌಪದೀಸುತರ ॥ ಹಳುವದಾಟಲಿ ದ್ರುಪದನಂದನೆಯಳಲುಖಿಗಿಂಧನವಲೇ ಕುರು । ಕುಲದಕರಡವಬಣಬೆ ಕಾದುತಿರುವವು ಕೇಳೆಂದ ॥೩೨॥ ಎಂದು ಕಳುಹಿ ಸುಭದ್ರೆಯನ ನ । ನಂದನನ ಬೀಳ್ಕೊಳಿಸಿದನು ನೃಪ । ನಂದನರ ಕಳುಹಿಸಿದನಾಪಾಂಚಾಲನೃಪನೊಡನೆ ॥ ಇಂದುವದನೆಯ ಸಂತವಿಟ್ಟ ಮು । ಕುಂದ ರಥವೇರಿದನು ಕುಂತೀ ॥ ನಂದನರು ಕಳುಹುತ್ತ ಬಂದರು ಕಮಲಲೋಚನನ ॥೩೩॥ ಬೀಳುಕೊಂಡರು ಕೃಷ್ಣನನು ಪಾಂ । ಚಾಲಪತಿಯನು ಪಂಚಕೇಕಯ । ಚೋಳಕೇರಳಪಾಂಡ್ಯಕುಂತೀಭೋಜನಂದನರ ॥ ಬೀಳುಕೊಟ್ಟರು ದೃಷ್ಟಕೇತುನೃ । ಪಾಲಮೊದಲಾದಖಿಳಧರಣೀ । ಪಾಲಕರು ದುಗುಡದಲಿ ಹೊಕ್ಕರು ತಮ್ಮ ನಗರಂಗಳ ॥೩೪॥ ಸಂತವಿಸಿ ಪಾಂಡವರನಾಮುನಿ । ಸಂತತಿಯ ಮನ್ನಿಸಿ ಮಹೀಭಾ । ರಾಂತರವ ನಿಶ್ಚಯಿಸಿ ಭಾರತಪಾರಿಶೇಷಕವ ॥ ಅಂತಕಾಂತಕ ನಲವು ಮಿಗೆ ಜಗ । ದಂತರಂಗಸಾನ್ನಿಧ್ಯ ಲಕ್ಷ್ಮೀ । ಕಾಂತ ಬಿಜಯಂಗೈದು ಹೊಕ್ಕನು ದ್ವಾರಕಾಪುರಿಯ ... ... ॥೩೫॥

ಅಂತು ಸಂಧಿ ೨ಕ್ಕೆ ಪದ ೭೦ಕ್ಕಂ ಮಂಗಳಮಸ್ತು.

ಮೂರನೆಯ ಸಂಧಿ.

ಸೂಚನೆ॥ ಬರುತ ಕಂಡನು ಕಣ್ವನಾಶ್ರಮ । ವರದ ಜಂಬೂಫಲವ ಮಾರುತಿ ।
ತರಲು ಯಮಸುತ ಹಲುಬೆ ಮುರರಿಪು ಶಾಖೆಗಡರಿಸಿದ ॥

ಕೇಳು ಜನಮೇಜಯಧರಿತ್ರೀ । ಪಾಲ ಯಮಸುತ ಮುನಿಜನಂಗಳ । ಮೇಳದಲಿ ಹೊರವಂಟು ತನ್ನನು ಜಾತರೊಡಗೂಡಿ ॥ ತಾಳಿಗೆಯ ತಲ್ಲಣದ ಗಿರಿಗಳ । ಮೇಲೆ ಚರಿಸುತ ಬಂದು ವಿಪಿನ । ವ್ಯಾಳಗಜಶಾರ್ದೂಲಸಿಂಹಾದಿಗಳನೀಕ್ಷಿಸುತ ॥೧॥ ಬರಬರಲು ಮುಂದೊಂದುವನದೊಳು । ಚರಿಪ ಪಕ್ಷಿಮೃಗಾಳಿ ತಳಿತಿಹ । ಬಿರಿಮುಗುಳನೀಕ್ಷಿಸುವಮರಿದುಂಬಿಗಳ ಮೇಳವದ ॥ ಪರಿಪರಿಯ ಮರಫೂ

ಫಲಂಗಳನಿರದೆ ಕೊಡುತಿರೆ ಪಕ್ಷಿಮೃಗಕುಲ। ನೆರೆಸಿ ಮೆರೆದವು ಬನದಸುತ್ತಲು ರಾಯ ಕೇಳೆಂದ ॥೨॥
ತುಂಬುರರಳಿ ಲವಂಗ ಪಾದರಿ । ನಿಂಬೆ ಚೂತ ಪಲಾಶ ಪನಸು ಸು । ಜಂಬುವಕುಳಾಶೋಕ ವಟ
ಪುನ್ನಾಗ ಚಂಪಕದ ॥ ಕುಂಭಿನಿಯೊಳುಳ್ಳಖಿಳವೃಕ್ಷಕದಂಬದಲಿ ವನ ಮೆರೆದುದದನೇ । ನಂಬೆನೀ
ಪರಿವಾರ ತುಂಬಿತು ಲಲಿತನಂದನವ ॥೩॥ ತಿಳಿಗೊಳನ ಮಧ್ಯದಲಿ ನೆರೆದಿಹ ' ನಳಿನ ನೃಪನಿದಿರಿನಲಿ
ಮಧುಪಾ । ವಳಿರವದ ನಾಯಕರ ಪಿಕಪಾಠಕರನೃತ್ಯಗಳ ॥ ಲಲಿತನವಿಲಿನ ವಾದ್ಯಗಳ ಘುಳು
ಘುಳಿಪಕೊಳರ್ವಕ್ಕಿಗಳ ಲಕ್ಷ್ಮೀ । ಲಲನೆಯರಮನೆಯೆನಲು ಮೆರೆದುದು ಭೂಪ ಕೇಳೆಂದ ॥೪॥ ಬಂದು
ಭೂಪತಿ ಕೊಳನತೀರದಿ । ನಿಂದು ತವುಗಾಶ್ರಮದ ತಾವಹು । ದೆಂನು ಭೀಮಂಗರುಹಲಾಕ್ಷಣವಾತ।
ನೈತಂದು ॥ ತಂದು ತಳಿರನು ಪರ್ಣಶಾಲೆಗ । ಳಂದದಲಿ ರಚಿಸಿದನು ಭೂಸುರ । ವೃಂದ ಬಿಟ್ಟುದು
ಧರ್ಮಪುತ್ರನ ಸುತ್ತುವಳಯದಲಿ ॥೫॥ ದಿನಪನಪರಾಂಬುಧಿಯನೈದಿಲು । ವನಜ ಮುಗಿದವು
ಚಕ್ರವಾಕದ। ಮನಕೆ ಖತಿ ಕುಮುದಿನಿಗೆ ಮುದ ಯಾಮಿನಿಗೆ ಸುಮ್ಮಾನ ॥ ಕನಕಮಯವರರಥವನಡ
ರಿದುದನುಜರನು ಸಂಹರಿಸೆ ಕಮಲಿನಿ । ಮನದೊಳುತ್ಸಾಹಿಸಲು ರವಿಯುದಯಾಚಲಕೆ ಬಂದ ॥೬॥
ಋಷಿಗಳೊಳು ಮೇಳವು ವರಾಸನ । ವೆಸನಬನದೊಳು ಬಳಿಕ ಗಂಗಾ । ಪ್ರಸರದಲ್ಲಿ ಸ್ನಾನಭೋಜ
ನಕಾಲದಲಿ ಪಾನ ॥ ಮಿಸುಪಸ್ತುತಿಯವಿಲಾಸಗಳ ಸಂ । ತಸದಿ ಕೇಳ್ವಸವಾಸಪೂರಿತ । ವಸುಮತೀ
ಧರಯಮಜನೆಸೆದನು ಭೂಪ ಕೇಳೆಂದ ॥೭॥ ಇರುತಿರಲು ಕಲಿಭೀಮ ಮೃಗಯಾ । ತುರದಲಖಿಳಕಿ
ರಾತರುಗಳೊಡ । ನೆರೆಸಿ ಹೊಕ್ಕನು ಗಿರಿತರುವ್ರಜಬಹಳಕಾನನವ ॥ ವರಹ ಮರೆ ಸಾರಂಗ ಪೆರ್ಬು
ಲಿ । ಕರಡಿ ವೃಕ ಶಾರ್ದೂಲ ಕೇಸರಿ । ಕರಿಕಳಭವೋಡಿದವು ದೆಸೆದೆಸೆಗೈದಿತಲ್ಲಣಿಸಿ ॥೮॥ ಹಾಸಗಳ
ಬಡಿದೆಳೆವನಾಯ್ಗಳ । ಬೀಸುವಲೆಗಳ ಕಾಲಕಣ್ಣಿಯ । ಸೂಸುವಲೆಗಳ ಧನುಸರಳಭಾಸುರದಕುಪ್ಪ
ಸದ ॥ ಕೇಶದಲಿ ತಳಿರುಗಳ ಬಿಗಿದು ವಿ । ಳಾಸದಲಿ ಹೊರವಂಟು ಹೆಬ್ಬುಲಿ । ಬೀಸಿದರು ಬೇಂಟೆಗರು
ಬಹಳಮೃಗಂಗಳನು ಕೆಡಹಿ ॥೯॥ ಕೊಡಹಿ ಬಿಸುಟನು ಕೇಸರಿಯ ಕಾ । ಲ್ವಿಡಿದು ಸೀಳಿದಕರಿಗಳನು
ಬೆಂಬಿಡದೆ ಹಿಡಿದಪ್ಪಳಿಸಿದನು ಶಾರ್ದೂಲಹೆಬ್ಬುಲಿಯ ॥ ಅಡಗೆಡಹಿ ಪೋರ್ಮರಿವರಾಹನ । ಮಡದ
ಲುರೆ ಘಟ್ಟಿಸಿ ವಿನೋದದಿ । ನಡೆಯೆ ಧರೆ ಕಂಪಿಸಿತು ಭೀಮನ ಪದದಘಲ್ಲಣೆಗೆ ॥೧೦॥ ಬಂದನತಿ
ಬೇಂಟೆಯಲಿ ಚರಿಸುತ । ನಿಂದು ಹತವಾದಖಿಳಮೃಗಗಳ । ನಂದು ವ್ಯಾಧರ ನಿಕರಕಿತ್ತನು ಪವನಜಾ
ತ್ಮಜನು ॥ ತಂದರವದಿರು ತವತವಗೆ ಪರಿ । ತಂದು ತರುಶಿಖಿಯಿಂದ ದಹಿಸಿದ । ರಂದು ಮಾಂಸವನೊ
ಲಿದು ಭಕ್ಷಿಸಿದರು ವಿನೋದದಲಿ ॥೧೧॥ ಮುಂದೆ ಕಂಡನು ದೂರದಲ್ಲಿಹ । ನಂದನದ ಮೇಳೆ ತರುನಿ
ಕಾಯದ । ಸಂದಣಿಯ ಪೂಗೊಂಚಲಿನ ಪಲ್ಲವನಿಕಾಯದಲಿ ॥ ಗೊಂಪಣಾದ ತರುಮಧ್ಯದಲ್ಲಿಹು ।
ದೊಂದುಜಂಬೂವೃಕ್ಷ ಮೆರೆದಿರೆ । ನಿಂದು ನೋಡಿದು ಭೀಮ ವಿಸ್ಮಯಗೊಂಡನಾಕ್ಷಣಕೆ ॥೧೨॥
ಇದು ವಿಚಿತ್ರದ ಫಲವು ತಾನೊಂ । ದಿದೆ ಮತಂಗಜಗಾತ್ರದಲಿ ತಾ । ನಿದನು ಕೊಂಡೊಯ್ವೆನು
ಮಹೀಪಾಲಕನ ದರುಶನಕೆ ॥ ಗದೆಯ ಕಕ್ಷದಲೌಕಿ ಮಾರುತಿ । ಮಧುರಿಪು ವನೆನೆಯುತ್ತಲಾನಂ।
ದದಲಿ ವೃಕ್ಷವನಡರಿ ಕೊಯ್ದಿಳುಹಿದನು ನಿಮಿಷದಲಿ ॥೧೩॥ ಫಲವ ಕೊಂಡಾಭೀಮಬೇಗದಿ । ನಲವಿ
ನಲಿ ನಡೆತಂದು ಭೂಪನ । ನಿಳಯದಲಿ ತಂದಿಳುಹಿದೊಡೆಯಮಸೂನು ಬೆರಗಾಗಿ ॥ ಕೆಲದಲಿದ್ದನು

ಜರಿರ ಋುಷಿಜನ । ಗಳಿರ ನೋಡಿರೆ ಯೆನಲು ಶಿವಶಿವ । ನಳಿನನಾಭನೆ ಬಲ್ಲನೆಂದರು ಸಕಲಋುಷಿವರರು ॥೧೪॥ ಎನಲು ಸಹದೇವನ ಯುಧಿಷ್ಠಿರ । ಜನಪ ಬೆಸಗೊಳುತಿರಲು ಬಿನ್ನಹ । ದನುಜರಿಪುಹರ ಕಮಲಭವರಿಗೆ ಕೊಡುವಶಾಪವನು॥ಅನುವಕಾಣೆನು ಕಣ್ವಮುನಿತಾ ಮುನಿದಸಾದೊಡೆಶಪಿಸುವನುಯೆಂ । ದನು ತ್ರಿಕಾಲಜ್ಞಾನಿ ಮಾದ್ರೀಸುತನು ಭೂಪತಿಗೆ ॥೧೫॥ ವರುಷಕೊಂದೇಫಲವಹುದಅದ । ನಾತ ಯೋಗಧ್ಯಾನದಲಿ ಕಂ । ದೆರೆದು ಕರಸಂಪುಟವನೆರಳಿಚಲಾಗಲಾಫಲವು ॥ ಇರದೆ ಹಸ್ತದೊಳಿಳಿಯಲಾ ಮುನಿ । ಹರುಷದಿಂದದಕಳೆದು ಕೊಂಬನು । ಪರಶಿವಧ್ಯಾನೈಕದೃಷ್ಟಿಯೊಳಿಪ್ಪನಾಮುನಿಪ॥೧೬॥ಕಂದೆರೆದು ಮುನಿ ನೋಡಿದೊಡೆತಮಗಿಂದುಹರಿವಹುದೆನುತಧರ್ಮಜನೊಂದು ಫಲುಗುಣಭೀಮಸಹದೇವಾದಿಗಳುಸಹಿತ ॥ ಬಂದನತಿವೇಗದಲಿಪವನಜನ । ನಿಂದವೃಕ್ಷವತೋರಿಸಿದನೇ । ನೆಂದುಬಣ್ಣಿಪೆಬಹಳಕೊನೆಗಳ ಗಗನಚುಂಬಿತವ ॥೧೭॥ ಕಂಡು ಯಮಸುತನತಿ ಯದಿನಿದ್ರ ಖಂಡಪರಶುವೆ ಬಲ್ಲ ಸಾಮ್ಯಂ । ಕೊಂಡು ಮಾಡಿದದುಷ್ಕೃತದ ಫಲವೆನುತ ಬಿಸುಸುಯ್ದ ॥ ಚಂಡವಿಕ್ರಮಭೀಮಸದ ಕೈಕೊಂಡು ತಾನವಿವೇಕದಲಿ ಯುದ್ದಂಡತನದಿಂ ತಂದ ಹತ್ತಿಸಲರಿದು ನಮಗೆಂದ॥ ಹೇಳಿರೈ ಭೂಸುರರು ಋುಷಿಗಳು । ಮೇಲೆ ಹತ್ತುವುಪಾಯವನು । ಋುಷಿಜಾಲದೊಳಗೆಂದೆನಲು ನುಡಿದನು ಧೌಮ್ಯ ನಸುನಗುತ ॥ ಹೇಳಲರಿದಿದ ನಿಮ್ಮ ಸಲಹುವ । ಬಾಲಕೇಳಿಯ ಕೃಷ್ಣ ಬಲ್ಲನು । ಕಾಲವನು ನೂಕದೆ ಮಹಾತ್ಮನ ಭಜಿಸು ನೀನೆಂದ ॥೧೯॥ ಎನಲು ಭೂಪತಿ ಕೃಷ್ಣ ರಕ್ಷಿಸು । ದನುಜರಿಪು ಗೋವಿಂದ ರಕ್ಷಿಸು । ವನಜನಾಭ ಮುಕುಂದ ರಕ್ಷಿಸು ರಾವಣಾಂತಕನೇ ॥ ಮನಸಿಜನಪಿತ ರಾಮ ರಕ್ಷಿಸು । ಘನಮಹಿಮ ಕೇಶವನೆ ರಕ್ಷಿಸು । ನೆನೆವಭಕ್ತರು ಭಾಗ್ಯನಿಧಿ ಮಾಧವನೆ ರಕ್ಷಿಪುದು ॥ ಎಂದು ಭಜಿಸುತ್ತಿರಲು ನೃಪಗೋ । ವಿಂದನಮಳಜ್ಞಾನದಲಿ ಸಾ । ನಂದದಿಂದಲೆ ಸತ್ಯಭಾಮಾದೇವಿಯರಕೂಡೆ ॥ ಮಂದಮತಿಪವಮಾನಜನ ಕತ । ದಿಂದ ಪಾಂಡುಕುಮಾರರಿಗೆ ಕೇ । ಡಿಂದು ಬಹುದಾಋುಷಿಯ ಶಾಪದಿ ಶಿವಶಿವಾಯೆಂದ ॥೨೧॥ ಎನುತ ಸಿಂಹಾಸನವನಿಳಿದಾ । ದನುಜರಿಪು ಕಮಲಾಕ್ಷಿ ನೀನಿ । ಲ್ಲೆನುತ ಮನವೇಗದಲಿ ಬಂದನು ಧರ್ಮಜನ ಹೊರೆಗೆ ॥ ನೆನೆಯೆ ಲಕ್ಷ್ಮೀಕಾಂತಬಂದನು । ಘನದುರಿತದಾವಾಗ್ನಿ ಬಂದನು । ಯೆನುತ ಮೈಯಿಕ್ಕಿದನು ಮುನಿಜನಸಹಿತ ಯಮಸೂನು ॥೨೨॥ ತೆಗೆದು ತಕ್ಕೈಸಿದನು ಭೂಪನ । ಮಿಗೆ ಹರುಷದಲಿ ಭೀಮಪಾರ್ಥರ । ನೆಗಹಿ ಮೈದಡವಿದನು ಮಾದ್ರೀಸುತರ ದ್ರೌಪದಿಯ ॥ ನಗುತ ಋುಷಿಜನ ವಿಪ್ರಧೌಮ್ಯಾ । ದಿಗಳನುಚಿತೋಕ್ತಿಯಲಿ ಮನ್ನಿಸು । ತಗಧರನು ನೋಡಿದನು ಜಂಬೂಫಲದ ಘನತರವ ॥೨೩॥ ಕಾಳುಮಾಡಿದಿರಕಟಕಟ ನೀ । ವ್ಮೇಲನರಿಯದೆ ಋುಷಿಯಶಾಪವ । ಪಾಲಿಸದೆ ವರಮೂರ್ಖತನದಲಿ ನೆನೆದಿರನುಚಿತವ ॥ ಏಳಿ ಫಲವನು ತೊಟ್ಟಸರಿಸಕೆ । ಕಾಲವಲಿ ತಂದಿರಿಸಿ ನಿಮ್ಮನು । ಕೂಲಧರ್ಮಂಗಳನು ಬೇಗದಿ ಹೇಳಿ ನೀವೆಂದ ॥೨೪॥ ಎನಲು ತಂದಿರಿಸಿದರು ಫಲವನು ವನಜನಾಭನ ಹೇಳಿಕೆಯಲಾ । ಕ್ಷಣಕೆ ಕುಂತೀತನುಜ ಹೇಳೆನೆ ಕೈಗಳನು ಮುಗಿದು ॥ ಇನಶಶಿಗಳಿಂದಾ ನಲಾಂತಕ । ದನುಜಮರ್ದನಸಮೀರಹರಸಖ । ಮನುಮಹಾರಿಯೆ ನೀವು ಚಿತ್ತವಿಸೆನುತಲಿಂತೆಂದ ॥೨೫॥ ಶ್ಲೋಕ॥ ಮಾತೃವತ್ಪರದಾರಾಂಶ್ಚ। ಪರದ್ರವ್ಯಾಣಿಲೋಷ್ಟವತ್ ॥ ಆತ್ಮವತ್ಸರ್ವಭೂತಾನಿ । ಯಃಪಶ್ಯತಿಸಪಶ್ಯತಿ ॥೧॥ ಪದ॥ ಪರಸತಿಯೆ ನಿಜಜನನಿ ಪರ

ಧನ । ವಿರದೆಲ್ಲೊಪ್ಪುವು ಜೀವರಾಶಿಯ । ಪರರ ನೋವನು ತನ್ನ ನೋವೆಂದನುತ ಭಾವಿಸುವೆ ॥ ನಿರುತವೆನೆ ಫಲಧರೆಯ ಬಿಟ್ಟಂ । ತೆರದೊಳೊಮ್ಮಳನಗೆಯೆ ಮುರಹರ । ಮರುತಸುತ ಬಾರೆನಲು ನುಡಿದನು ಮುಗಿದು ಕರಯುಗವ ॥೨೬॥ ಶ್ಲೋಕ॥ ಪ್ರಾಣಂವಾಪಿಪರಿತ್ಯಜ್ಯ । ಮಾನಮೇವಾಭಿರಕ್ಷಯೇತ್ ॥ ಅನಿತ್ಯಮಧ್ರುವಂಪ್ರಾಣಂ । ಮಾನಮಾಚಂದ್ರತಾರಕಂ ॥೨॥ ॥ಪದ॥ ಜೀವವೀಕ್ಷಣವಳಿದು ಹೋಗಲಿ । ಕಾವುದಭಿಮಾನವನು ನಿತ್ಯದ । ಭಾವವಾಗಿಹುದಾತ್ಮವಾಚಂದ್ರಾರ್ಕವಭಿಮಾನ ॥ ನಾವುಬೇರೊಂದರಿಯೆವಿದ್ದುದ । ದೇವರಿಗೆ ಬಿನ್ನವಿಸಿದೆವು ಯೆನ । ಲಾವಬೇಗದಲಡರಿದುದೊ ಫಲವರಸ ಕೇಳೆಂದ ॥೨೭॥ ಏನು ನಿನ್ನಭಿಮತವು ಪಾರ್ಥ ನಿ । ಧಾನವನು ನುಡಿಯೆನಲು ಹೇಳುವೆ । ಮಾನನಿಧಿ ನಿಮಗರುಹುವೆನು ಚಿತ್ತವಿಸಿ ನೀವೆನುತ ॥ ಧ್ಯಾನದಲಿ ಕೈಮುಗಿದು ಶಂಕರ । ನೀನೆ ಗತಿಯೆಂದೆನುತಲಾಶಕ್ತಿ । ಭಾನುದಿಗುಪಾಲರಿಗೆ ನಮಿಸುತ ಕೇಳಿನೀವೆಂದ ॥೨೮॥ ಶ್ಲೋಕ॥ ನಿಮಂತ್ರಣೋತ್ಸವಾವಿಪ್ರಾ । ಗಾವೋನವತೃಣೋತ್ಸವಾಃ ॥ ಭರ್ತಾರ್ಗವೋತ್ಸವಾನಾರ್ಯಃ । ಅಹಂಕೃಷ್ಣರಣೋತ್ಸವಃ ॥೩॥ ಪದ॥ ಪರಗೃಹದಭೋಜನಕೆ ವಿಪ್ರರು । ಪರಿಣಮಿಸುವರೊಲ್ಪಶುಸಮೂಹವು । ಇರದೆ ನವತೃಣದಿಂದ ತುಷ್ಟಿಯನೈದುವಂದದಲಿ ॥ ವರಸತಿಯು ನಿಜಪತಿಯ ಕಂಡಾ । ಹರುಷವಹುದೆನಗಾಹವದಲೆಲೆ । ಹರಿಯ ಯೆನೆ ಬೇಗದಲಿ ಫಲವಡರಿತ್ತು ನಿಮಿಷದಲಿ ॥೨೯॥ ಶ್ಲೋಕ ॥ ಧರ್ಮೋಜಯತುನಾಧರ್ಮಃ । ಸತ್ಯಂಜಯತುನಾನೃತಂ ॥ ಕ್ಷಮಾಜಯತುನಕ್ರೋಧೋ । ವಿಷ್ಣುರ್ಜಯತುನಾಸುರಃ ॥೪॥ ಪದ॥ ಧರ್ಮವನು ನೆರೆ ಜಯಿಸಲರಿಯದ । ಧರ್ಮ ಸತ್ಯವ ಮಿಾರಲರಿವುದೆ । ನಿರ್ಮಳದ ಸೈರಣೆಯ ಗೆಲುವುದೆ ಕ್ರೋಧ ಭಾವಿಸಲು ॥ ಕರ್ಮಹರಕೃಷ್ಣನನು ಗೆಲುವೊಡೆ । ದುರ್ಮತಿಗಳಹ ಅಸುರರೆನಲಾ । ಧರ್ಮತತ್ವವ ನಕುಲ ವಿರಚಿಸಲೈದಿತಾಫಲವು ॥೩೦॥ ಶ್ಲೋಕ॥ ಸತ್ಯಂಮಾತಾಪಿತಾಜ್ಞಾನಂ । ಧರ್ಮೋಭ್ರಾತಾದಯಾಸಖಾ ॥ ಶಾಂತಿಃಪತ್ನೀಕ್ಷಮಾಸೂನುಷ್ಷಡೇತೇಮಮಬಾಂಧವಾಃ ॥೫॥ ಪದ॥ ಸತ್ಯವೇ ನಿಜಮಾತೆ ಜಾನವೆ । ನಿತ್ಯವಹಪಿತ ಧರ್ಮವನುಜನು । ಮತ್ತೆ ದಯೆಯೇಮಿತ್ರಶಾಂತಿಯೆ ಪತ್ನಿಕ್ಷಮೆಸೂನು ॥ ಸತ್ಯವನು ಸಹದೇವನುಡಿಯಲ್ಕತ್ಯಧಿಕಫಲ ಮೇಲೆ ಚಿಗಿಯಲು । ಮತ್ತೆ ಮುರರಿಪು ದ್ರುಪದಸುತೆ ಬಾಯೆಂದನುಚಿತ್ತದಲಿ ॥೩೧॥ ಶ್ಲೋಕ॥ ಸುಂದರಂಪುರುಷಂದೃಷ್ಟ್ವಾ । ಭ್ರಾತರಂಪಿತರಂಸುತಂ ॥ ಯೋನಿದ್ರ್ರವತಿನಾರೀಣಾಂ । ಸತ್ಯಂಬ್ರೂಹಿಮಹಕೇಶವ ॥೬॥ ಪದ॥ ಭಾವವಹಪುರುಷರನು ಕಾಣುತ । ಭಾವಿಸಲು ಪಿತಸುತರ ಅನುಜರ । ತಾವಿನಲಿಯಾದರೆಯು ಯೋನಿದ್ರವಣ ಸತಿಯರಿಗೆ ॥ ಭಾವದಲಿ ಮರೆಪಿಡಿದು ನುಡಿಯ । ಲ್ಕಾವಿಗಡಫಲವಡರದಿರುತಿರೆ । ದೇವ ನುಡಿದನು ವಂಚಿಸದೆ ನಿಶ್ಚಯವ ಹೇಳೆಂದು ॥೩೨॥ ಶ್ಲೋಕ॥ ಪಂಚಮೇಪತಯಸ್ಸಂತಿ । ಷಷ್ಠಸ್ತುಮಮರೋಚತೇ ॥ ಪುರುಷಾಣಾಮಭಾವೇನ ಸರ್ವಾನಾರ್ಯಃ ಪತಿವ್ರತಾಃ ॥೭॥ ಪದ॥ ಪತಿಗಳೀಶ್ವರನಾಜ್ಞೆಯಿಂದವೆ । ಯತಿಶಯದಲೈವರು ಮನಸ್ಸಿನ । ಮತದಲಾರಾಗಿಹುದು ಬೇರೊಂದಿಲ್ಲ ಚಿತ್ತದಲಿ ॥ ಪೃಥುವಿಯಲಿ ಪರಪುರುಷರನು ದು । ರ್ಮತಿಯೊಳೊಡಬಡುವವಳು ಸತಿಯೇ । ಸತತ ಕರುಣಾಕರ ಯೆನಲು ಫಲ ತಾವನಡರದುದು ॥೩೩॥ ಹರುಷ ಮಿಗಲುಷಿಜನಕೆಧೌಮ್ಯನು । ಕರಗಳನು ನೆಗಹುತ ಯುಧಿಷ್ಠಿರ । ಧರಣಿಪತಿ ಕೇಳ್ಕೃಷ್ಣನಿರೆ ನಿನಗಾವುದರಿ

ದೆಂದು ॥ ಇರದೆ ದೇವನ ಪಾದಪಂಕಜ । ಕೆರಗಿದುದು ಮುನಿನಿಕರಬುಧಜನ । ನಿರತಪರಮಾನಂದ ದಿಂದ್ಯೈದಿದರು ತಪ್ಪನವ ॥೩೪॥ ಮುನಿಪಕಣ್ವನು ಕಣ್ದೆರೆದು ಪರ । ಮನನು ಜಾನಿಸಿ ಕರವನ ರಳಿಚ । ಲೊನೆದು ಬಿದ್ದುದು ಪಣ್ಣು ಕಂಡನು ನಗುತ ಮನದೊಳಗೆ ॥ ವನಜನಾಭನ ತಂತ್ರವಿದು ಪಾ । ವನಸ್ವರೂಪನ ನೋಳ್ಪೆನೆಂದಾ । ಮುನಿಪ ಫಲಸಹಬಂದು ಕಂಡನು ಕೃಷ್ಣ ಪಾಂಡವರ॥೩೫॥ ಇದರೊಳಿರಿಸಿದನಾಫಲವ ಸಂ । ಮುದದಿ ಹೊಂಪುಳಿವೋಗಿ ಮುನಿಯಾ । ಪದುಮನಾಭಂಗೆರಗಿ ತೆಗೆ ನೀ ಫಲವನೆಂದೆನಲು ॥ ಮದನಪಿತ ನಸುನಗುತ ಮುನಿಪನ । ಹದುಳ ಮಿಗೆ ಸೈಪಿಟ್ಟು ನೆಗಹಿದ ! ಮುದಿ ತಫಲವನು ಹಂಚಿಹೇಳಿದನಾನೃಪಾಲಂಗೆ ॥೩೬॥ ಬರಿಸಿ ಋಷಿಗಳನವರವರ ತರ । ವರಿದು ಕೊಡಿಸಿ ದನುಳಿದುದನು ಭೂ । ಸುರಸಹೋದರರಿಂಗೆ ಮುನಿಸತಿಯರಿಗೆ ದ್ರೌಪದಿಗೆ ॥ ಮುರಹರಗೆ ತನ್ಮುನಿಪ ಕಣ್ವಂ । ಗಿರಿಸಿಕ್ಕೈವೀಸಿದೊಡೆ ಫಲವನು । ಹರುಷಮಿಗೆ ಭುಂಜಿಸಿತು ಭೂಪತಿ ಕೇಳುಕೌತುಕವ ॥೩೭॥ ಪಾರಣೆಯನುರೆ ಮಾಡಿ ಮುನಿಪ ಮ । ಹೀರಮಣನನು ಬೀಳುಕೊಟ್ಟನು । ದಾರಲಕ್ಷ್ಮೀಕಾಂತನನು ಬೀಳ್ಕೊಂಡು ಮತ್ತೊಂದು ॥ ಸಾರವಹಸುಸ್ಥಾನಕ್ಕೈದಿದ । ನಾರು ಭಾವಿಸಬಲ್ಲರಾಮುರ । ವೈರಿಯ ನುಪಮಮಹಿಮೆಗಳ ಭೂಪಾಲ ಕೇಳೆಂದ ॥೩೮॥ ದೇವ ನಿಮ್ಮಮಳಾಂಘ್ರಿಕಮಲವ । ನಾವನೆನೆವನ ವಂಗೆ ಜಪತಪ । ನಾವುಹುಟ್ಟಿಲ್ಲೆಂಬುದೈ ವರವೇದಶಾಸ್ತ್ರಗಳು ॥ ನಾವಲೇ ಕೃತಕೃತ್ಯರಿಂದೀ । ದೇವಸಾಕ್ಷಾತ್ಕರದರ್ಶನ । ಭಾವವೋ ಯಿದು ನಮಗೆನುತ ಹೊಗಳಿದನು ಸಹದೇವ ॥೩೯॥ ಹರಿಯೊ ಲಿದು ಮೈದಡವಿ ಯೈವರ । ತರುಣಿಯನು ಸಂತೈಸಿಯಾಮುನಿ । ವರರನುಪಚರಿಸಿದನು ಬುದ್ಧಿಯ ನೊರೆದು ಧರ್ಮಜಗೆ ॥ ಉರುತರೋತ್ತರಸಿದ್ಧಿ ನಿಮಗಿ । ನ್ನಿರದೆ ಫಲಿಸುವುದೆಂದು ಸೂಚಿಸಿ । ಮರಳಿ ತನ್ನಯಪುರಿಗೆ ಗಮನೋದ್ಯೋಗಮನನಾದ ॥೪೦॥ ಬಂದನಾಭೂಪತಿ ಮುರಾಂತಕ । ನಂದಣದ ಬಲದೆಸೆಯಲನಿಲಜ । ಮುಂದೆ ವಾಮದಿ ಪಾರ್ಥಯಮಳ ದ್ರೌಪದೀದೇವಿ ॥ ಹಿಂದೆ ಬರೆ ಕಿರಿದೆಡೆ ಯಲಲ್ಲಿಯೆ । ನಿಂದು ಕಳುಹಿದನೆಲ್ಲರನು ಗೋ । ವಿಂದನೇರಿದ ರಥವೆ ಗದುಗಿನವೀರನಾರಯಣ ॥೪೧॥

ಅಂತು ಸಂಧಿ ೩ ಕ್ಕಂ ಪದ ೧೧೩ ಕ್ಕಂ ಮಂಗಳಮಸ್ತು.

ನಾಲ್ಕನೆಯ ಸಂಧಿ.

ಸೂಚನೆ॥ ಭಜಿಸಿದನು ನರನಿಂದ್ರಕೀಲದೊ । ಳಜಸುರಾರ್ಚಿತಚರಣಕಮಲನ ।
ತ್ರಿಜಗದಧಿಪತಿಯನು ಮಹಾನಟನಂಯಧೂರ್ಜಟಿಯ ॥

ಕೇಳು ಜನಮೇಜಯಧರಿತ್ರೀ । ಪಾಲ ಪಾಂಡುಕುಮಾರರಟವಿಯ । ಪಾಳಿಯಲಿ ಪರುಠವಿಸಿ ದರು ಪದಯುಗಪರಿಭ್ರಮವ ॥ ಲೋಲಲೋಚನೆಸಹಿತ ತತ್ಕುಲ । ಶೈಲದಲಿ ತದ್ವಿಪಿನದಲಿ ತ । ತ್ಕೂಲ ವತಿಗಳತೀರದಲಿ ತೊಳಲಿದರು ಬೇಸರದೆ ॥೧॥ ಫಳಮೃಗಾವಳಿ ಸವೆದುದಿನ್ನೀ । ಹಳುವು ಸಾಕಿನ್ನೊಂ

ದರಣ್ಯ। ಸ್ಥಳವ ನೋಡಲಿ ಕಟಕ ನಡೆಯಲಿ ವಿಪ್ರಸಂಕುಲದ ॥ ಸುಲಭವೀವನವೆಂದು ತಮ್ಮೊಳು। ತಿಳಿದು ಪಾರ್ಥಯುಧಿಷ್ಠಿರರು ಮುನಿ। ಕುಲಸಹಿತ ನಲವಿಂದ ಹೊಕ್ಕರು ದ್ವೈತಕಾನನವ ॥೨॥ ಅರಸ ಕಳುಹಿದ ದೂತನಾಗಜ। ಪುರವ ಹೊಕ್ಕು ತದೀಯವಾರ್ತೆಯ। ಭರದ ವಿವರವನರುಹಿ ಬಂದನು ಕಂಡನವನಿಪನ ॥ ಕುರುನೃಪಾಲನ ಮದವಸಾತನ। ಸಿರಿಯಸಾತನ ಒಲುಹಸಾತನ। ಪರಿಯನರುಹಿದೊಡಂಬುಜಮುಖಿಪವನಜರೂ ಕಳವಳಿಸೆ ॥೩॥ ಮೂದಲಿಸಿದಳು ದ್ರುಪದತನುಜೆ ವೃ। ಕೋದರನರ್ಜುನನನವನಿಪ। ಸಾದಿಯಾದೈವರನು ಕೌರವನೃಪನ ಪತಿಕರಿಸಿ ॥ ಆದೊಡಿದೆ ಕುರುರಾಜವಂಶ। ಚ್ಛೇದಘೋರಕುಠಾರವೆನುತ ವೃ। ಕೋದರನು ತೂಗಿದನು ಗದೆಯನು ಗಾಢಕೋಪದಲಿ ॥೪॥ ಪಕಿದೇಕೆ ವೃಥಾನಿಶಾಟ। ವ್ಯಾಕರಣಪಾಂಡಿತ್ಯವಕಟವ ವಿ। ವೇಕರಹಿತನೆ ನೀ ವೃಕೋದರ ದ್ರುಪದಸುತೆಯಂತೆ ॥ ಸಾಕು ಸಾಕೈ ತಮ್ಮ ಸತ್ಯವೆ। ಸಾಕು ನಮಗೆ ಮದೀಯಪುಣ್ಯ। ಶ್ಲೋಕತೆಯನುಳುಹೆಂದು ಗಲ್ಲವ ಹಿಡಿದನನಿಲಜನ ॥೫॥ ಅರಸಿ ನಿನ್ನಯ ಶೋಕವಹ್ನಿಯೊ। ಳುರಿವುದರಿನೃಪಜಲಧಿ ಕೇಳಂ। ಬುರುಹಲೋಚನೆ ನಿನ್ನ ಲೋಚನವಾರಿಪೂರದಲಿ ॥ ಕುರುನೃಪಾಲನ ಸಿರಿಯ ಶೋಕ ಸ್ಫುರದನಲನುಜ್ವಲಿಸುವುದು ರಿಪು। ವಿರಚಿತದವಿಪರೀತಕಿದು ವಿಪರೀತವಹುದೆಂದ ॥೬॥ ಆಸಮಯದಲಿ ಬಂದನಗ್ಗದ। ಭೂಸುರ ಶ್ರೀಕಂಠನೋ ಪ। ದ್ಮಾಸನನ ಪಲ್ಲಟವೊ ಕಮಲಾಂಬಕನ ಚುಂಬಕವೋ ॥ ಭಾಸುರಕ್ರತುಶತದ ರೂಪವಿಳಾಸವೋ ಶ್ರುತಿಕೋಟಿಕನ್ಯಾವಾಸಭವನವೊ ದೇವದೇವವ್ಯಾಸಮುನಿರಾಯ ॥೭॥ ಹಾ ಮಹಾದೇವಾ ಇದಾರು ಮ। ಹಾಮುನೀಶ್ವರರೆನುತ ಮುನಿಪ। ಸ್ತೋಮವೆದ್ದುದು ಧರ್ಮನಂದನನವರಿಗಿದಿರಾಗಿ ॥ ಪ್ರೇಮಪುಳಕದ ನಯನಸಲಿಲದ। ರೋಮಹರ್ಷದ ಸತ್ಯಭಾವದ। ಭೂಮಿಪತಿ ಮೈಯಿಕ್ಕಿದನು ಮುನಿವರನ ಚರಣದಲಿ ॥೮॥ ವಿವಿಧಮುನಿಗಳ ಗೋತ್ರನಾಮ। ಪ್ರವರಸಹಿತರಭಿವಾದಕವರೋ। ತ್ಸವವ ಕೈಕೊಳುತನಿಬರನು ಮನ್ನಿಸಿದನುಚಿತದಲಿ ॥ ಯುವತಿ ಪದಕೆರಗಿದೊಡೆ ಭೂಯಾ। ತ್ತವಮನೋರಥವೆನುತ ನಸುನಗು। ತವನಿಪಾಲನ ಪರ್ಣಶಾಲೆಗೆ ಮುನಿಪನೈತಂದ ॥೯॥ ಇದೆ ಪವಿತ್ರಪಲಾಶಪತ್ರದ। ಲುದಕವರ್ಘ್ಯಾಚಮನಪಾದ್ಯ। ಕ್ಕಿದೆ ವಿಮಳದರ್ಭೋಪರಚಿತಾಸನವಿಳಾಸದಲಿ ॥ ಇದನು ಕಾಂಚನಪಾತ್ರಜಲವೆಂ। ದಿದು ವರಾಸನವೆಂದು ಕೈಕೊಂ। ಡುದು ಯಥಾಸಂಭವದಲೆಂದನು ಧರ್ಮನಂದನನು ॥೧೦॥ ಈ ಪವಿತ್ರೋದಕವಲೇ ದೋ। ಷಾಪಹರದರ್ಭಾಸನದಲಿಂ। ದೀಪೃಥುವಿ ಸರ್ವಾಧಿಪತ್ಯವು ಸೇರುವುದು ನಿನಗೆ ॥ ಭೂಪ ಕೇಳೈ ಜೇನನೊಣದ ಮ। ಧೂಪಚಯವ ವಕಿಲ್ಲಲೇ ಸ। ರ್ವಾಪಹಾರವು ಪರರಿಗಾ ಕೌರವನ ಸಿರಿಯೆಂದ ॥೧೧॥ ಒಡಲು ಬೀಳಲಿ ಮೇಣು ತಮ್ಮದಿ। ರಡವಿಯಲಿ ಹಾಯಿಕ್ಕಿ ಹೋಗಲಿ। ಮಡದಿ ಮನೆಯಲಿ ಬಸಿದು ಬೀಳಲಿ ಧರಣಿ ಕುರುಪತಿಗೆ ॥ ಎಡೆಯಲುಳಿವಿವರಾಗುಹೋಗಿನ। ಗೊಡವೆಯೆನಗಿಲ್ಲೆನ್ನ ಸತ್ಯದ। ನುಡಿಗೆ ಹಾದರವಿಲ್ಲದಂತಿರೆ ಕರುಣಿಸುವುದೆಂದ ॥೧೨॥ ಬಾಧೆಯುಂಟೇ ನಿನ್ನ ಸತ್ಯಕೆ। ಸಾಧಿಸುವುದವಧಿಯನು ನಿನ್ನ ವಿ। ರೋಧಿಗಳಿಗೆ ನಿವಾಸವಹುದು ಕೃತಾಂತಲೋಕದಲಿ ॥ ಆಧಿಪತ್ಯಭ್ರಮಿತರಲಿ ರಾಜ್ಯಾಧಿಯಲಿ ಕಡೆಗೊಂಡಿರಖಿಳನಿ। ರೋಧವನು ಕಡನನು ಸವೃದ್ಧಿಕವಾಗಿ ಕೊಡಿಯೆಂದ ॥೧೩॥ ಆವುದರಿದಿವರಿಗೆ ಭವತ್ಕರು। ಣಾವಲೋಕನವುಂಟು ಪುನರಪಿ। ದೇವಕೀನಂದನನಲೊದಗುವಮೇಲುನೋಟದಲಿ ॥ ಈ

ವಿಪತ್ತ್ರೀಸರದು ಪಾಂಡವ । ಜೀವಿಗಳು ನೀವಿಬ್ಬರಿರಲೆಂ । ದಾವಿಭಾಂಡಕಶೌನಕಾದಿಗಳೆಂದರಾ ಮುನಿಗೆ ॥೧೪॥ ಕರೆಸಿದುಪದಾತ್ಮಜೆಯ ಕಂಬನಿ । ಯೊರತೆಯಾರಲುನುಡಿದನಾಕೆಯ । ಕರುಣದಲಿ ಕಿವಿಗೊಂಡಕಳಕಳವನು ವಿಭಾಡಿಸಿದ ॥ ಧರಣಿಪತಿಗೇಕಾಂತಭವನದೊ । ಳೊರೆದನೀಶ್ವರವಿಷಯ ಮಂತ್ರಾ । ಕ್ಷರವನಂಗೋಪಾಂಗಮುದ್ರಾಶಕ್ತಿಗಳುಸಹಿತ ॥೧೫॥ ಇದುಮಹೇಶ್ವರ ಶೋಕಹರವಿಂ । ತಿದು ವಿರೋಧಿಬಲಪ್ರಭಂಜನ । ವಿದು ಸಕಲಪುರುಷಾರ್ಥಸಾಧನವಖಿಳದುರಿತಹರ ॥ ಇದು ಮಹಾ ಧಿವ್ಯಾಧಿಹರವಿಂ । ತಿದನು ನೀ ಕೊಳ್ಳರ್ಜುನಂಗೊರೆ । ವುದು ರಹಸ್ಯದೊಳೆಂದು ಮುನಿಕರುಣಿಸಿದನರಸಂಗೆ ॥೧೬॥ ಪಾರ್ಥನೈದುವುದಿಂದ್ರಕೀಲದೊ । ಳರ್ಥಿಸಲಿ ಶಂಕರನನಖಿಳ । ಸ್ವಾರ್ಥಸಿದ್ಧಿಗೆ ಬೀಜವಿದು ಬೇರೊಂದು ಬಯಸದಿರು ॥ ವ್ಯರ್ಥರವದಿರು ನಿನ್ನ ಹಗೆಯು ಕ । ದರ್ಥನದೊಳಿನ್ನೇನು ಜಗಕೆ ಸ । ಮರ್ಥನೊಬ್ಬನೆ ಶಂಭು ಕೃಪೆಮಾಡುವನು ನಿನಗೆಂದ ॥೧೭॥ ಇಂದುಮುಖಿಯನು ಭೀಮನನು ಯಮ । ನಂದನನನರ್ಜುನನಯಮಳರ । ನಂದು ಕೊಂಡಾಡಿದನು ವೈದಡಪಿನನು ಪೋಪದಲಿ ॥ ಬಂದು ಸಂದಣಿಸಿದಮುನಿದ್ವಿಜ । ವೃಂದವನು ಮನ್ನಿಸಿ ನಿಜಾಶ್ರಮ । ಮಂದಿರಕೆ ಮುದದಿಂದ ಬಿಜಯಂಗೈದನಾಮುನಿಪ ॥೧೮॥ ಅರಸ ಕೇಳ್ಮೈ ಮುನಿಪನತ್ತಲು । ಸರಿದನಿತ್ತಲು ಪಾರ್ಥನನು ನೃಪ । ಕರೆದು ವೇದವ್ಯಾಸನಿತ್ತುಪದೇಶವಿಸ್ತರವ ॥ ಅರುಹಿದನು ಕೈಲಾಸನಿಮ್ಮಾ । ವರುಷದಲ್ಲಿಹುದುವಿಂದ್ರಕೀಲದ । ಗಿರಿ ಮಹೇಂದ್ರಕ್ಷೇತ್ರವಲ್ಲಿಗೆ ಹೋಗು ನೀನೆಂದ ॥೧೯॥ ಅಲ್ಲಿ ಭಜಿಸುವುದಮಳಗಿರಿಜಾ । ವಲ್ಲಭನನಾಮ್ನಾಯಚೋದ್ಯಗೆ । ದುರ್ಲಭನನಾದೈವವನು ಬ್ರಹ್ಮೇಂದ್ರಭಾಸ್ಕರರ ॥ ಬಲ್ಲನೆಂಬರ ಬಹುಳಗರ್ವವ । ಘಲ್ಲಿಸುವಗಡ ತನ್ನ ಭಕ್ತರು । ಬಲ್ಲಿದರು ತನಗೆಂಬ ಬೋಳೆಯರರಸನಿಹನೆಂದ ॥೨೦॥ ಹಗಲು ನಿಷ್ಠೆ ಪ್ರತ್ಯೂಷದಲಿ ಶಶಿ । ಮೌಳಿ ಮೈದೋರಲಿ ತಡೆಯದಿರು । ದಾಳಿಗಳು ಸಿದ್ಧಿಸಲಿ ಸೇರಲಿ ಶಿವನ ಕೃಪೆ ನಿನಗೆ ॥ ಸೋಲದಿರು ಸುರಸತಿಯರಿಗೆ ಸಂಮೇಳವಾಗದಿರವರೊಡನೆ ಕೈ । ಮೇಳವಿಸುವುದು ಕಾಮವೈರಿಯ ಚರಣಕಮಲದಲಿ ॥೨೧॥ ಮುಗ್ಗದಿರು ಮಾಯೆಯಲಿ ಮದದಲಿ । ನೆಗ್ಗದಿರು ರೋಷವವಿಡಂಬದ । ಲಗ್ಗೆಯುತನದಿಂದ ಹುಂಕೃತಿಭರದಿ ಮರೆಯದಿರು ॥ ಅಗ್ಗಿಸದಿರಾತ್ಮನನು ಲೋಭದೊ । ಳೊಗ್ಗದಿರು ಲಘುವಾಗದಿರುಮಿಗೆ । ಹಿಗ್ಗದಿರು ಹೊಗಳಿಕೆಗೆ ಮನದಲಿ ಪಾರ್ಥ ಕೇಳೆಂದ ॥೨೨॥ ಆಡದಿರಸತ್ಯವನು ಕಪಟವ । ಮಾಡದಿರು ನಾಸ್ತಿಕರೊಡನೆ ಮಾ । ತಾಡದಿರು ಕೆಳೆಗೊಳ್ಳದಿರು ವಿಶ್ವಾಸಘಾತಕರ ॥ ಖೋಡಿಗಳೆಯದಿರಾರುವನು ಮೈ । ಗೂಡದಿರು ಪರವಧುವಿನಲಿ ರಣ । ಖೇಡನಾಗದಿರೆಂದು ನುಡಿದನು ನೃಪತಿಯರ್ಜುನಗೆ ॥೨೩॥ ಕ್ರೂರರಿಗೆ ಶಠರಿಗೆ ಮೃಷಾಹಂ । ಕಾರಿಗಳಿಗತಿಕುಟಿಲರಿಗೆಯುಪ । ಕಾರಿಯುಪಘಾತರಿಗೆ ಭೂತದ್ರೋಹಿಜೀವರಿಗೆ ॥ ಜಾರರಿಗೆ ಜಡರಿಗೆ ನಿಕೃಷ್ಟ । ಚೋರರಿಗೆ ಪಿಸುಣರಿಗೆ ಧರ್ಮವಿ । ದೂರರಿಗೆ ಕಲಿಪಾರ್ಥ ಕೇಳ್ಪರಲೋಕವಿಲ್ಲೆಂದ ॥೨೪॥ ಭ್ರಾತೃಮಿತ್ರವಿರೋಧಕಗೆ ಪಿತೃ । ಮಾತೃಘಾತಿಗೆ ಋಣನಿಗುತ್ತಮ । ಜಾತಿನಾಶಕನಿಂಗೆ ವರ್ಣಾಶ್ರಮವಿದೂಷಕಗೆ ॥ ಜಾತಿಸಂಕರಕಾರಿಗಾಕ್ರೋ । ಧಾತಿರೇಕಗೆ ಗಾಢಗರ್ವಿಗೆ । ಭೂತವೈರಿಗೆ ಪಾರ್ಥ ಕೇಳ್ಪರಲೋಕವಿಲ್ಲೆಂದ ॥೨೫॥ ಸ್ವಾಮಿಕಾರ್ಯವಿಘಾತಕಂಗತಿ । ಕಾಮುಕಗೆ ಮಿಥ್ಯಾಪವಾದಿಗೆ । ಭೂಮಿದೇವದ್ವೇಷಿಗತ್ಯಾಶಿಗೆ ಬಕವ್ರತಿಗೆ ॥ ಗ್ರಾಮಣಿಗೆ ಪಾಷಂಡಗಾತ್ಮವಿ ।

ರಾಮಕಾರಿಗೆ ಕೂಟಸಾಕ್ಷಿಗೆ । ನಾಮಧಾರಿಗೆ ಪಾರ್ಥ ಕೇಳ್ಪರಲೋಕವಿಲ್ಲೆಂದ ॥೨೬॥ ಅದರಿಸಾವಂ
ಗುಪಪತಿಯ ಮಾ । ಡದಿರು ಸಚರಾಚರದ ಚೈತ । ನ್ಯದಲಿ ನಿನ್ನನೆ ಬೆರಸಿ ಕಾಬುದು ನಿನ್ನ ತನು
ವೆಂದು ॥ ಬೆದರದಿರು ಬಲುತಪಕೆ ಶೂಲಿಯ । ಪದಯುಗವ ಮರೆಯದಿರು ಹರಿಯನು । ಹೃದಯದಲಿ
ಪಲ್ಲಟಿಸದಿರು ಸುಖಿಯಾಗು ಹೋಗೆಂದ ॥೨೭॥ ಕರುಣಿಸಲಿ ಕಾಮಾರಿ ಕೃಪೆಯಿಂ । ಪರಮಹಾ
ಸ್ತ್ರವನಿಂದ್ರಯಮಭಾ । ಸ್ಕರಹುತಾಶನನಿಋತಿವರುಣಕುಬೇರಮಾರುತರು ॥ ಸುರರುವಸುಗಳುಸಿದ್ಧ
ವಿದ್ಯಾ । ಧರಮಹೋರಗಯಕ್ಷಮುನಿಕಿಂ । ಪುರುಷರೀಯಲಿ ನಿನಗೆ ವಿಮಳಸ್ವಸ್ತಿವಾಚನವ ॥೨೮॥
ಎನೆ ಪಸಾದವೆನುತ್ತ ಯಮನಂ । ದನಗೆ ಭೀಮಂಗೆರಗಿದನು ಮುನಿ । ಜನಕೆ ಮೈಯಿಕ್ಕಿದನು ಮುಳು
ಗಿದನಕ್ಷತೌಘದಲಿ ॥ ವನಜಮುಖಿಮುನಿವಧುಗಳಾಶೀ । ರ್ವಿನುತದಧಿದೂರ್ವಾಕ್ಷತೆಯನು । ಬ್ಬಿನಲಿ
ಕೈಕೊಳುತ್ತನಿಬರನು ಮನ್ನಿಸಿದನುಚಿತದಲಿ ॥೨೯॥ ನೆನೆಯದಿರು ತನುಸುಖವ ಮನದಲಿ । ನೆನೆ ವಿರೋ
ಧಿಯ ಸಿರಿಯನೆನ್ನಯ । ಘನತರದಪರಿಭವವ ನೆನೆ ನಿಮ್ಮಗ್ರಜರ ನುಡಿಯ ॥ ಮುನಿವರನ ಮಂತ್ರೋ
ಪದೇಶವ । ನೆನೆವುದಭವನ ಚರಣಕಮಲವ । ನೆನುತದುರುಪದಿಯೆರಗಿದಳು ಪಾರ್ಥನ ಪದಾಬ್ಜದಲಿ ॥
ಹರನ ಚರಣವ ಭಜಿಸುವೆನು ದು । ರ್ಧರತಪೋನಿಷ್ಠೆಯಲಿ ಕೇಳೆಲೆ । ತರುಣಿ ಪಾಶುಪತಾಸ್ತ್ರವಾದಿ
ಯದಿವ್ಯಮಾರ್ಗಣವ ॥ ಪುರಹರನ ಕೃಪೆಯಿಂದ ಪಡೆದಾ । ನರಿಗಳನು ಸಂಹರಿಸಿ ನಿನ್ನಯ । ಪರಿ
ಭವಾಗ್ನಿಯ ನಂದಿಸುವೆನಿಲ್ಲೆಂದನಾಪಾರ್ಥ ॥೩೧॥ ಬಿಗಿದಬತ್ತಳಿಕೆಯನು ಹೊನ್ನಾ । ಯುಗದ
ಕಡುಗಕತಾರಿಚಾಪವ । ತೆಗೆದನಳವಡೆಕಟ್ಟಿಬದ್ದುಗದಾರಗೊಂಡೆಯವ ॥ ದುಗುಡಹರುಷದ ಮುಗಿಲ
ತಲೆಯೊ । ತ್ತುಗಳಿಗಿಟ್ಟೆಡೆಯಾಗಿ ಗುಣಮಾ । ಳಿಗಳಮಣಿ ಕಲಿಪಾರ್ಥ ಬೀಳ್ಕೊಂಡನು ನಿಜಾಗ್ರ
ಜನ ॥ ಹರಡೆವಾಮದಲುಲಿವಯೆ ಮಧುರ । ಸ್ವರದಲಪಸವ್ಯದಲಿ ಹಸುಬನ । ಸರಸಮಾಹಿತವಾಗೆ
ಸೂರ್ಯೋದಯದಸಮಯದಲಿ ॥ ಹರಿಣಭಾರದ್ವಾಜನುಡಿಕೆಯ । ಸರ್ಗುನಕುಲನ ತಿದ್ದುಗಳ ಕು ।
ಕ್ಕುರನ ತಾಳಿನ ಶಕುನವನು ಕೈಕೊಳುತ ನಡೆತಂದ ॥೩೩॥ ನೀಲಕಂಠನ ಮನದಬಯಕೆಗೆ । ನೀಲಕಂಠನೆ
ಬಲಕೆ ಬಂದುದು । ಮೇಲುಪೋಗನಸಿದ್ಧಿ ದೈತ್ಯಾಂತಕನ ಬುದ್ಧಿಯಲಿ ॥ ಕಾಲಗತಿಯಲಿ ಮೇಲೆ ಪರ
ರಿಗೆ । ಕಾಲಗತಿಯನು ಕಾಬೆನೈ ಸಲೆ । ಶೂಲಧರನೇ ಬಲ್ಲನೆನುತೈತಂದನಾ ಪಾರ್ಥ ॥೩೪॥ ಅರಸ ಕೇಳೈ
ಬರುತ ಭಾರತ । ವರುಷವನು ದಾಂಟಿದನು ತಂಪಿನ । ಗಿರಿಯ ತಪ್ಪಲನಿಳಿದನಾ ಹರಿವರುಷಸೀಮೆಯಲಿ॥
ಬೆರಸಿದನು ಬಳಿಕುತ್ತರೋತ್ತರ । ಸರಣಿಯಲಿ ಸೈನಡೆದು ಹೊಕ್ಕನು । ಸುರರಸೇವ್ಯವನಿಂದ್ರಕೀಲವ
ಮಹಾವನಾಂತರವ ॥೩೫॥ ಗಿಳಿಯ ಮಿದುಮಾತುಗಳ ಮರಿಗೋ । ಗಿಲೆಯ ಮಧುರಧ್ವನಿಯ ಹಂಸೆಯ ।
ಕಳರವದ ಮರಿನವಿಲ ಕೇಕಾರವದ ನಯರಸದ ॥ ಮೊಲುದನಿಯ ಪಾರಿವದ ತುಂಬಿಯ । ಲಲಿತಗೀತದ
ವನದ ಸಿರಿ ಬಗೆ । ಗೊಳಿಸಿತೈಪೂರ್ವಾಭಿಭಾಷಣದಲಿ ಧನಂಜಯನ ॥೩೬॥ ಸೊಂಪೆಸೆವಕೋಗಿಲೆಯ
ಸರ ದೆಸೆ । ತಂಪೆಸೆವತಂಬೆಲರ ಹೂವಿನ । ಜೊಂಪವನು ಝೋಂಪಿಸುವಮರಿದುಂಬಿಗಳ ಮೇಳ
ವದ ॥ ಪೆಂಪುಗುವತಾವರೆಗೊಳಂಗಳ । ತಂಪಿನೊದಗಿನವನದ ಸೊಗಸಿನ । ಸೊಂಪು ಸೆಳೆದುದು
ಮನವನೀತನನರಸಕೇಳೆಂದ ॥೩೭॥ ಚಾರುತರಪರಿಪಕ್ವನವಖ । ರ್ಜೂರರಸಧಾರಾಪ್ರಪಾಸು ಮ ।
ನೋರಮೇಕ್ಷುವಿಖೇದವಿಶ್ರಾಂತರಸನಿಪಾನೇಷು ॥ ಭೂರಿಜಂಬುಮಧೂಕಪನಸ । ಸ್ಫಾರರಸಪೂರೇಷಕ

ಲಿತವಿ । ಹಾರಸುರಮಹಿಳಾಭಿರಂಜನವಚಳವನಭೂಮಿ ॥೩೮॥ ವಿಲಸದಭ್ರಂಲಿಹಮಹಾತರು । ಕುಲದಿನಮರನದೀಸ್ತನಂಧಯ । ಫಲರಸದನದಿಗಳಲಿ ದಿಕ್ಕೂಲಂಕಷೋನ್ನತಿಯ ॥ ಸುಳಿವಪರಿಮಳಪವನನಿಂ ಕಂ। ಗೊಳಿಸಿತರ್ಜುನಕಾರ್ಯಸಿದ್ಧಿ । ಸ್ಥಳದೊಳಂತರ್ವಿಘ್ನಕಾನನವರಸಕೇಳೆಂದ ॥೩೯॥ ಇಲ್ಲಿ ನಿಲ್ಲರ್ಜುನ ತಪೋವನ । ಕಿಲ್ಲಿನೆಲೆ ಸ್ರುತಿಯುವತಿಸೂಸುವ । ಚೆಲ್ಲೆಗಂಗಳಮೊನೆಗೆವಿಲಾಸಲುಗೆಡದದಿವ್ಯ ಸಿರಿಯಾ ॥ ದುರ್ಲಲಿತದಷ್ಟಾಂಗಯೋಗದ । ಕೊಲ್ಲಣಿಗೆಯಲಿಕೂಡದಪ್ರತಿ । ಮಲ್ಲತಿವನಕ್ಷೇತ್ರವಿದೆಯೆಂದನು ನಭೋನಿಸದ ॥೪೦॥ ಪರಶಿವನ ಬೀಳ್ಕೊಂಡು ಮಾರ್ಗಾಂ , ತರದೊಳಾರಡೆಗೈದು ಹೊಕ್ಕನು । ಪರನ ಕರುಣಾಸಿದ್ಧಿಸಾಧನವೆನಿಪಗಿರಿವನವ ॥ ಮರುದಿವಸದುದಯದಲಿ ಮಿಂದನು । ಸರಸಿಯಲಿ ಸಂಧ್ಯಾಭಿಮುಖದಲಿ । ತರಣಿಗರ್ಘ್ಯವನಿತ್ತು ದೇವಪೂಜಕೆ ಕೈಮುಗಿದ ॥೪೧॥ ವಿನುತಶಾಂಭವಮಂತ್ರಜಪಸಂ । ಜನಿತನಿರ್ಮಳಭಾವಶುದ್ಧಿಯ । ಮನದೊಳರ್ಜುನನೆತ್ತಿ ನಿಂದನು ದೀರ್ಘಬಾಹುಗಳ ॥ ನೆನಹು ನೆಮ್ಮಿತು ಶಿವನನಿತರದ । ನನೆಗೊನೆಯ ತೆರಳಿಕೆಯ ತೊಡಚೆಯ । ಮನದಸಂಚಲನಿಲಿಚಿಪೋದುದು ಕಲಿಧನಂಜಯನ ॥೪೨॥ ಮುಗುಳುಗಂಗಳ ಮೇಲುಗುಡಿದೋ । ಳುಗಳ ಮಿಡುಕುವತುಟಿಯ ತುಟಿಗಾ । ಲುಗಳ ಹೊರಿಗೆಯ ತಪವನಿರಿಗೆಯ ನಿಷ್ಪ್ರಕಂಪನದ ॥ ಬಿಗಿದಬಿಲ್ಲಿನ ಬೆನ್ನಬತ್ತಳಿ । ಕೆಗಳ ಕಿಗ್ಗಟ್ಟಿನಕಠಾರಿಯ । ಹೆಗಲಕಡುಗದಹೊಸತಪಸಿ ತೊಡಗಿದನು ಬಲುತಪವ ॥ ಅರಸ ಕೇಳೈ ವಿಪ್ರವೇಷವ । ಧರಿಸಿ ಧರೆಗಿಳಿದನು ಸುರೇಶ್ವರ । ತರಹರಿಸದೀಮಾತನೆಂದನು ನಿಜಕುಮಾರಂಗೆ ॥ ಮುಂಚ ಮೌಕ್ತಿಕ ಲೇಪ ಹೇಮಾ । ಚರಣ ಚರ್ಮ ಮೃಕೂಲ ಮಿಳಿಹ । ಮರಿಯಹೂವಿನಮಂಡೆಗೇನನಿನಾಸನೇಕೆಂದ ॥೪೪॥ ಆವನೇರಿಕೆ ಜಪಕೆ ಚಾಪಶ । ರಾವಳಿಗೆ ಶಮೆದಮೆಗೆ ಕಡುಗಕ । ದಾವಸಮ್ಮೇಳನವಿಭೂತಿಗೆ ಕವಚಸೀಸಕಕೆ ॥ ಆವುದಿವರಭಿಧಾನ ತಪವೋ । ಹಾವಳಿಗವಿದ್ಯಾಸಮಾಧಿಯೊ । ನೀವಿದೆಂತಹಋಷಿಗಳೆಂಬುದನರಿಯೆ ನಾನೆಂದ ॥೪೫॥ ಕಂದೆರೆದು ನೋಡಿದನು ನೀವಾ । ನೆಂದರೆಯು ಹೃದಯಾಬ್ಜಪೀಠದ । ಲಿಂದುಮೌಳಿಯ ನಿರಿಸಿ ಮೆಚ್ಚಿಸುವೆನು ಸಮಾಧಿಯಲಿ ॥ ಇಂದಿನೀಬಹಿರಂಗಚಿನ್ಹೆಯ । ಕುಂದುಹೆಚ್ಚಿನಲೇನುಫಲವೆನ । ಲಂದು ತಲೆದೂಗಿದನು ಸುರಪತಿ ತೋರಿದನು ನಿಜವ ॥೪೬॥ ಮಗನೆ ನಿನ್ನಯ ಮನದನಿಷ್ಠೆಗೆ । ಸೊಗಸಿದೆನು ಪಿರಿದಾಗಿ ಹರನಿ । ಲ್ಲಿಗೆ ಬರಲಿಕರುಣಿಸಲಿ ನಿನ್ನಮನೋಭಿವಾಂಛಿತವ ॥ ಜಗಗೆ ಪರವಹುದೆಂಪು ಸುರಮೌ । ಳಿಗಳ ಮಣಿ ಸರಿದನು ವಿಮಾನದ । ಲಗಧರನ ಮೈದುನನ ಮಹಿಮೆಯನಿನ್ನು ಕೇಳೆಂದ ... ... ॥೪೭॥

ಅಂತು ಸಂಧಿ ೮ ಕ್ಕೆ ಪದ ೧೬೦,ಕ್ಕಂ ಮಂಗಳಮಸ್ತು.

— ——◆—— —

ಐದನೆಯ ಸಂಧಿ.

ಸೂಚನೆ॥ ಮುನಿನಿಕರ ಬಿನ್ನವಿಸೆ ಕರುಣಾ । ವನಧಿ ಶಂಭು ಕಿರಾತಮಯುರೂ ;
ಪಿನಲಿ ಹೊಕ್ಕನು ವನದಲೆಚ್ಚನು ಮೂಕದಾನವನ ॥

ಮರಳಿದನು ದೇವೇಂದ್ರನತ್ತಲು । ಹಲೆನೊಡನೆ ಹೊರೆಯೇರಿದಂತಃ । ಕರಣ ಓಗ್ಗಿತ್ತು
ಹುದುಗಿದನು ಬಹಿರಂಗಭಾವನೆಯ ॥ ಧರಣಿಮೊದಲೆನೆಭೂತಪಂಚಕ । ಮರುತಪಂಚಕವಿಷಯ
ವಿಂದ್ರಿಯ । ಕರಣವಿಪ್ಪತ್ತೈದುತತ್ವಾತ್ಮಕನ ಚಿಂತಿಸಿದ ॥೧॥ ಮೇಲೆವಿದ್ಯಾರಾಗನಿಯತಿಯ । ಕಾಲ
ಕಲೆಯಾತ್ಮಕನವಮಾಯೆಯ । ಮೇಲುಪ್ರೋಗಿನಶುದ್ಧವಿದ್ಯಾರೂಪನೀಶ್ವರನಾ ॥ ಕೇಳು ನೃಪತಿ ಸದಾ
ಶಿವನನು । ತ್ರಾತ್ರಿಳಶಕ್ತಿಯ ಸಖಿಲತತ್ವದ । ಮೌಳಿಮಣಿಯನಖಂಡಚಿನ ಮಯಶಿವನ ಚಿಂತಿಸಿದ ॥೨॥
ಮೂರುದಿನಕೊಮ್ಮೆ ಜಲದಾ । ಹಾರದಲಿ ನೂಕಿದನು ತಿಂಗಳ । ನಾರುದಿವಸಕೆಜಲವಕೊಂಡನು
ತಿಂಗಳೆರಡರಲಿ ॥ ಮೂರುತಿಂಗಳ ಕಳಿದನಿಂತೀ । ರಾರುದಿವಸಕೆ ಕಂದಮೂಲಾ । ಹಾರದಲಿ ತರಗೆಲೆ
ಯಲಿರ್ದನು ನಾಲ್ಕುಮಾಸದಲಿ ॥೩॥ ಬಳಿಕ ಪವನಾಹಾರದಲಿ ನಿ । ಸ್ಖಲಿತಶಿವಪದಭಕ್ತಿಸುಧೆಯಲಿ ।
ತಳಿತರೋಮಾಂಚನದಕಂದದಕುಂದದವಯವದ ॥ ಥಳಥಳಿಸುವಾನನದ ಸತ್ಪ್ರೇ । ಚ್ಛಲಿತಚಿತ್ತದ
ಸುಪ್ರಭಾಸದ । ಬೆಳವಿಗೆಯಲುತ್ಕ್ರಮವಾಯಿತ ತಪಧನಂಜಯನಾ ॥೪॥ ಯಮದಲುತ್ಸಾಹಿಸಿದನಿಯ
ಮ । ಶ್ರಮವ ಗೆಲಿದನು ಶಂಭುವಿನ ಪದ । ಕಮಳಬಯಸಿಕೆಯಾದುದೆತ್ತಿದಜೀವಪರಮನಲಿ ॥ ಭ್ರವಿ
ಸುವಿಂದ್ರಿಯಗುಣವನುಗಿದಾ । ಕ್ರಮಿಸಿ ಶಂಕರಭಾವವಲಿಸಂ । ಕ್ರಮಿಸಿ ಧರಿಸಿ ಸಮಾಧಿಯನುತ್ತ
ಳೆದಾತ್ಮಪರನಾದ ॥೫॥ ಪಿಮಳಮತಿ ಕೇಳಿಂದ್ರಿಯಾರ್ಥ । ಭ್ರಮೆಯಜಾಗ್ರದವಸ್ಥೆಯಂತಃ । ಸ್ತಿಮಿ
ರಕರಣಭ್ರಮೆಯಲುದಿತಸ್ವಪ್ನವೀಧಿಯಲಿ ॥ ಗಮಿತತದ್ವಾಸನೆಯಬೀಜ । ಕ್ರಮಸುಷುಪ್ತ್ಯವಸ್ಥೆ
ಯಲಿ ಸಂ । ಕ್ರಮಿಸದಗ್ಗದತುರ್ಯಶಿವನನು ಪಾರ್ಥಚಿಂತಿಸಿದ ॥೬॥ ತಾನೆ ಶಿವನೋ ಮೇಣುಶಿವನ ॥
ಧ್ಯಾನತನವದ್ವೈತವನುಸಂ । ಧಾನವಿದು ಜವನಿಕೆಯೊ ಜೀವಾತುಮನಜಂಜಡಕೆ ॥ ಧ್ಯಾನವೋಮೇಣ್ಧ್ಯೇ
ಯರ್ಥವೋ ತಾಧ್ಯಾನಕರ್ತೃವೊ ತ್ರಿಪುಟಿರಹಿತನೊ । ತಾನು ಮೇಣೆನಲಾಯ್ತುಚಿತ್ತದಶುದ್ಧಿಯರ್ಜುನನಾ
॥೭॥ ಮುನಿಯದೇನೈಚಿತ್ರವಾಯ್ತು । ರ್ಜುನನಚಿತ್ತದೊಳೇನುತ್ತಾಮಸ । ಜನಿತಕರ್ಮವೊ ಶುದ್ಧತತ್ವ
ಜ್ಞಾನಜಲಧಿಯಲಿ ॥ ಮನಮುಳುಗಿಮುಗುಳೆದ್ದು ಶಿತಿಕಂ । ಠನಲಿ ಶಸ್ತ್ರಾಸ್ತ್ರವನು ಬೇಡಿದ ।
ನೆನಲು ಜನಮೇಜಯಗೆ ಮುನಿಯಿಂತೆಂದ ನಸುನಗುತ ॥೮॥ ಅರಸ ಕೇಳ್ಕೈ ರಾಜಸಾಂತಃ । ಕರಣ
ವನು ಕಾಮ್ಯೈಕಸಿದ್ಧಿ । ಸ್ಫುರಣೆಗೋಸುಗ ತಪವಲೇ ರಾಜ್ಯಾಭಿಲಾಷೆಯಲಿ ॥ ಹರಚರಣನಿಕ್ಷಿಪ್ತ
ಚೇತಃ । ಸ್ಫುರಣೆ ತತ್ಪರಿಯಂತ್ರಉಕ್ಕಿತು । ಪರಮವಸ್ತುನಿಜಸ್ವಭಾವಕೆಚಿತ್ರವೇನೆಂದ ॥೯॥ ಮೇಲೆ
ಮೇಲೀತನ ತಪೋಗ್ನಿ । ಜ್ವಾಲೆ ಜಡಿದುದು ತಡೆದುದಭ್ರ । ಸ್ಥಾಳಿಯಲಿ ಸ್ರೈವರವಸೂರ್ಯಾರ್ಚಂ
ದ್ರಮಃ ಪ್ರಭೆಯ ॥ ಥಾಳಿಸುವಪರಿಧೌತಮಾನಕ । ರಾಳತೇಜೋಗರ್ಭತಪಧೂ । ಮಾಳಿಯಲಿ
ಮೇಘಾಳಿ ಮಸಗಿದುದರಸ ಕೇಳೆಂದ ॥೧೦॥ ಆತನುಗ್ರತಪಃಪ್ರಭಾವಿ । ಖ್ಯಾತಿ ವಿಗಡಿಸಿತಖಿಳಲೋಕ

ವ್ರಾತ್ರತವನು ಸೋತವನು ಕೌರವನೋ ಯುಧಿಷ್ಠಿರನೋ ॥ ಈತನೀಶ್ವರಶಸ್ತ್ರವನು ಕೈ । ಯಾತು ಕೊಂಡೊಡೆ ಬಳಿಕ ರಿಪು ನೃಪಜಾತವಿದಿರೇ ಕೇಳು ಜನಮೇಜಯಮಹೀಪಾಲಾ ॥೧೧॥ ಏನನೆಂಬೆನು ಪಾರ್ಥನುಗ್ರತ । ಪೋನಿಧಾನಜ್ವಾಲೆಯನು ಸಂ । ಧಾನಿಸವನು ತತ್ಪರಿಸರದ ಪಾವನತಪೋಧನರಾ ॥ ಮೌನವುರೆ ಸೀದುದು ಜಪಾನುಷ್ಠಾನ ಬಿಡೆ ಬೆವರಿತು ಸಮಾಧಿ । ಧ್ಯಾನ ಸೀಕರಿಯಾಯ್ತು ಸಾರವಿಚಾರಶಮೆಸಹಿತ ॥೧೨॥ ಶ್ರುತಿಯ ಲುಳಿ ತಗ್ಗಿತು ವಿವೇಕ । ಸ್ಥಿತಿಗೆ ಪಲ್ಲಟವಾಯ್ತು ಮತ್ಸರ । ಮತಿಯ ಮೈಲಿಗೆ ಬಿದ್ದುದಾತ್ಮಜ್ಞಾನಸದೃಷ್ಟಿಯಲಿ । ಧೃತಿಯ ಹೊರಬಾಹೆಯಲಸೂಯಾ । ಸತಿಯ ಕಾಹಿನಮನೆಯಲಿದ್ದರು । ಯತಿಗಳೀತನ ತಪದ ತೇಜದ ಹೊದರಹೊಯ್ಲಿನಲಿ ॥೧೩॥ ಕೋಪ ಪಸರಿಸಿತಾಧಿಭೌತಿಕ । ತಾಪ ತಳಿತುದು ಹೃದಯವೀಶ್ವರ । ರೂಪವನು ಮುಚ್ಚಿದುದು ಮಾಯಾಮೋಹಮುದ್ರೆಯಲಿ । ಶಾಪಭೀತರಹಂಮಮತ್ವಕೃ । ತಾಪರಾಧರು ವಿಕೃತಗುಣಯ । ಜ್ಞೋಪವೀತರು ಮಸಗಿದರು ಮುನಿಗಳು ತಪೋವನದ ॥೧೪॥ ಹಳಿದು ಹಾವಸೆ ಮನದೊಳಿದ್ದರು । ಕೆಲರು ಕೆಲರೆಡೆಯಾಡತಿರ್ದರು । ತಿಳಿವುಮರವೆಗಳಲ್ಲಿ ಕೆಲರುಪಶಾಂತಿಭಾವದಲಿ ॥ ಕೆಲರರುದೇನಿವಗಿಲ್ಲಿ ತೊಲಗಿಸಿ । ಕಳೆವುದೀತನನೆಂದು ತಮ್ಮೊಳು । ಕಳವಳಿಸುತೊಮ್ಮೊತ್ತವಾದುದು ಸಕಲಮುನಿನಿಕರ ॥೧೫॥ ಕೆದರಿದವು ಜಡೆಯಕ್ಷಮಾಲೆಗ । ಳುದುರಿದವು ಕರದಲಿ ಕಮಂಡಲ । ವದುರಿದವು ಹಳುವಾಯ್ತು ಹರಿಣಾಜಿನ ಮುನೀಶ್ವರರ ॥ ಕದಡಿತಂಗವಿಭೂತಿ ಕಡುಗೋಪದಲಿ ಹುಂದರು ಪರಗಿರಿಯ ಹ । ತ್ತಿದರು ಕಂಡರು ರಾಜಮೌಳಿಯ ರಾಜಮಂದಿರವ ॥೧೬॥ ಶಿವನ ಭವನವ ದೂರದಲಿ ಕಂ । ಡಿವರು ಮೈಯಿಕ್ಕಿದರು ವರಮುನಿ । ನಿವಹ ಬಂದುದು ಬಾಗಿಲವದಿರು ಬಿನ್ನಹದ ಹದನ ॥ ವಿವರಿಸಲು ಕರಸಿದನು ಕರುಣಾ । ರ್ಣವನ ಕಂಡರು ಮೈಯ ಚಾಚಿದ । ರವನಿಯಲಿ ಜಯಜಯ ಮಹೇಶನಮಃಶಿವಾಯೆನುತ ॥೧೭॥ ಏಳಿರೈ ಸಾಕೇಳಿರೈ ಸಾ । ಕೇಳಿ ಕುಳ್ಳಿರಿ ಬಂದಕಾರ್ಯವ । ಹೇಳಿಯೆನೆ ಮುನಿನಿಕರವೆದ್ದುದು ನೊಸಲಕೈಗಳಲಿ ॥ ಹೇಳಿ ನೀವ್ಹೇಳಿನ್ನು ಹಿರಿಯರು । ಹೇಳಿಯೆನುತೊಳಗೊಳಗೆ ಘೋಳಾ । ಘೋಳಿಮಸಗಿದುದೊಬ್ಬಮುನಿ ನಿಲಿಸಿದನು ಕಳಕಳವ ॥೧೮॥ ನೀಲಲೋಹಿತ ಚಿತ್ತವಿಸು ಶಶಿ । ಮೌಳಿ ಬಿನ್ನಹ ನಿಗಮಮಹಿಳಾ । ಮೌಳಿಮಣಿನೀರಾಜಿತಾಂಘ್ರಿಸರೋಜನವಧಾನ ॥ ಪಾಲಿಸುವುದಾರ್ತರನು ಪರಮಕೃ । ಪಾಳುನೀನತಿದೀನರಾವು ವಿ । ಟಾಳಸಂಗತಿಯಾದುದೆಮ್ಮಯ ಜಪತಪಸ್ಥಿತಿಗೆ ॥೧೯॥ ಶಾಂತಿಯೇ ಮನೆ ನಿಮ್ಮ ಚರಣದ ಚಿಂತೆಯೇ ಮನೆವಾರ್ತೆ ವರವೇ । ದಾಂತತತ್ವರಹಸ್ಯಮನನಾದಿಗಳು ಸರ್ವಸ್ವ ॥ ದಾಂತಿಯೇ ಸುಖಭೋಗ ಮಾಯಾ । ಶ್ರಾಂತಿಯೇ ಮಾಹಾತ್ಮ್ಯವಿವುಋಷಿ । ಸಂತತಿಗೆ ವರ್ತನವಲೇ ವೈದಿಕವಿಧಾನದಲಿ ॥೨೦॥ ಹೋದಹೊಲಬಿಲ್ಲಿವರೊಳಗೆ ದು । ರ್ಭೇದತಪವೇ ಹೊಗವುತದೆ ಹೊ । ಳ್ಳಾದವೆಮ್ಮ ಸಮಾಧಿ ಸ್ಮರಣೆಶಮದಮಾದಿಗಳು ॥ ಕಾದುದಾವನಭೂಮಿ ತರಗು । ಲ್ಮಾದಿಗಳು ಕಟ್ಟೊಣಗಲಾದವು । ತೀದುದೆಮ್ಮಯ ನಿತ್ಯವಿಧಿಯೊಬ್ಬನದೆಸೆಯೊಳಿಂದು ॥೨೧॥ ರಾಯನೋ ಮೇಣವನು ರಾವುತ । ಪಾಯಕನೊ ಋಷಿಯಲ್ಲ ಋಷಿಗೇ । ಕಾಯುಧಂಗಳ ಗೊಡವೆ ನಮಗೇಕದರಬೂತಾಟ ॥ ಸಾಯಕದ ಬತ್ತಳಿಕೆಚಾಪದ । ಡಾಯುಧದ ಕುಶವೆರಳಜಡೆಗಳ । ನಾಯುತದಲನುಚಿತದನಂಗದ ತಪಸಿ ಯಿಹನೆಂದ ॥೨೨॥ ಆಡಿದೊಡೆ ನಾವ್ಮುನಿಗಸೂಯವ ಮಾಡಿದವರು

ಗಳಿಂದುನಿಮ್ಮಡಿ । ಗೊಡದಿದ್ದರೆ ಬಿಸಲರಾಶಿಯನುರಿಯಸೂತಕವ ॥ ಕೊಡಿತೆಮ್ಮಯ ನಿತ್ಯವಿಧಿ ತ್ರಪ । ಗೇಡಿಯನು ಬಿಡದೆಬ್ಬಿಸೆಮಗೆಡೆ । ಮಾಡಿಕೊಡಬೇಕೆಂದು ಮತ್ತೆರಗಿದರು ಶಿವಪದಕೆ ॥ ಮತ್ತೆ ನಮ್ಮನು ಪಿಸುಣರೆಂದೇ । ಚಿತ್ತವಿಸಲಾಗದು ತಪೋವನ । ಹೊತ್ತುತದೆ ವಿಪರೀತತಪಸಿಯ ತೀವ್ರತೇಜದಲಿ ॥ ಇತ್ತಲೊಂದುತಪೋವನವನೆಮ । ಗಿತ್ತು ಕರುಣಿಸು ಮೋಕ್ಷಕಾರಿಯ । ನೆತ್ತಿ ಕಳೆ ಕಾರುಣ್ಯನಿಧಿ ಯೆಂದುದು ಮುನಿಸ್ತೋಮ ॥೨೪॥ ಕೇಳುತವೆಸಾರೋ ಯೆನುತಶಶಿ । ಮೌಳಿವಿಮಲ ಜ್ಞಾನದೃಷ್ಟಿಯೊ । ಳಾಳನರಿದನು ಮನದೊಳಗೆನಮ್ಮವನಲಾಯೆನುತ ॥ ಬಾಲಹಿಮಕರಕಿರಣನೊಡನೆ ಸ । ಮೇಳವಹನಗೆ ಮಿಸುಗೆ ಮುನಿಜನ । ಜಾಲವನು ನೋಡದನು ಕರೆದನು ಕೃಪೆಯ ತನಿಮಳೆಯ ॥೨೫॥ ಅರಿದೆವಾವಂಜದಿರಿ ಹುಯ್ಯಲ । ಬರಿದೆ ತಂದಿರಿ ನಿಮ್ಮಗೆಲವಿಂ । ಗೆರಗುವವನವನಲ್ಲ ಬೇರಿಹುದಾತನಂಘವಣೆ ॥ ಅರುಹಲೇಕೆ ಭವತ್ತಪೋವನ । ವೆರೆ ನಿಮಗೆ ಸಾವವನನೆಬ್ಬಿಸಿ । ತೆರಹ ಮಾಡಿಸಿಕೊಡುವೆನೆಂದನು ನಗುತಶಶಿಮೌಳಿ ॥೨೬॥ ಏಳಿನೀವಾಶ್ರಮಕೆಪೋಗಿಚ । ಡಾಳಿಸದು ಮುನಿವರನ ತಪವಿ । ನ್ನೇಳಿದಿಟಭಯವಿಲ್ಲವೆಂದು ಕರಾಂಬುಜವನೆಗಹಿ ॥ ಬೀಳುಕೊಟ್ಟನು ಸಕಲಮುನಿಜನ । ಜಾಲವನು ಕರೆ ಭೂತನಿಕರವ । ಮೇಳವಿಸಹೇಳೆಂದು ನಂದೀಶ್ವರಗೆನೇಮಿಸಿದ ॥ ಅರಸ ಕೇಳ್ಬೆ ಬೇಂಟೆಯೆಂದೀ ।ಶ್ವರನ ಕಟಕದೊಳೊದರಿದುದು ಡಂ।ಗುರುದ ದನಿ ಡಾವರದೊಳ್ಬಿದಿತು ನಿಖಿಳಭುವನವನು ॥ ಪರಮಕರುಣಾಸಿಂಧು ಭಕ್ತನ । ಹೊರೆವಭರದಲಿ ಭೂರಿಮೃಗಯಾ । ಚರಣೋಸುಗ ಶಬರವರರೂಪದಲಿ ರಂಜಿಸಿದ ॥೨೮॥ ತೆಗೆದು ತಲೆಮಾಲೆಯನು ಹಸುರಂ । ಗಿಗಳ ತೊಟ್ಟನು ಸುತ್ತುಬರೆಹೀ । ಲಿಗಳಹರಹಿನಪಾರಿವದಚಲ್ಲಣವನಳವಡಿಸಿ ॥ ಬಿಗಿಜಡೆಯ ಶಶಿಮುಖಕೆ ಪತ್ರ । ಳಿಗಳ ಕಟ್ಟಿಕಿರಾತವೇಷದ ವಿಗಡಬೇವರದೇವ ಕೊಂಡನು ಚಾಪಮಾರ್ಗಣವ ॥೨೯॥ ದೇವನನುರೂಪದಲಿ ನಿಂದರು, ದೇವಿಯರು ಗುಹಗಣಪತಿಗಳೆ ।ಲ್ಲಾವಿನೋದವ ನೋಡಿ ಧರಿಸಿದರೊಲಿದು ಶಾಬರವ ॥ ಆವಿಗಡನಂದೀಶವೀ । ರಕದೇವಲಕ । ರೇಣುಕಮಹೋದರ । ದಾವಶಿಖಿಮುಖವೀರಭದ್ರಾಸ್ಯಖಿಲಭೂತಗಣ ॥೩೦॥ ಅರಸಕೇಳೆ ಸಪ್ತಮಾತೃಕೆ । ಯರು ಮಹೋಪನಿಷನ್ನಿತಂಬಿನಿ । ಯರು ದಿಶಾದೇವಿಯರು ಶ್ರುತಿವಿದ್ಯಾದಿಶಕ್ತಿಯರು ॥ ಉರಗಿಯರು ವಿದ್ಯಾಧರಿಯರ । ಪ್ಸರಿಯರೌಷಧಮಂತ್ರದೇವತೆ । ಯರು ಪುಳಿಂದಿಯರಾಯ್ತು ಪರಮೇಶ್ವರಿಯಬಳಸಿನಲಿ ॥೩೧॥ ಧೃತಿ ಮಹೋನ್ನತಿ ತುಷ್ಟಿ ಪುಷ್ಟಿ । ಸ್ಮೃತಿ ಸರಸ್ವತಿ ಸಂವಿದಾಯಕಿ । ಮತಿ ಮನಸ್ವಿನಿ ಸಿದ್ಧಿ ಕೀರ್ತಿ ಖ್ಯಾತಿ ನಿಯತಮತಿ ॥ ಗತಿ ಕಳಾವಾನಿನಿ ಕಳಾವತಿ । ರತಿ ರಸಾವತಿ ಚಂಡಿ ಜಯೆ ಮಧು । ಮತಿಯೆನಿಪದೇವಿಯರು ಶಬರಿಯರಾಯ್ತು ನಿಮಿಷದಲಿ ॥೩೨॥ ಮಾರಿ ಚಾಮುಂಡಿಶ್ಮಶಾನಾ । ಕಾರವತಿ ವರಕಾಳರಾತ್ರಿಮ । ಹೀರಮಣಿ ಜಯಲಕ್ಷ್ಮಿ ಯೋಗಿನಿ ಯಜ್ಞದೇವಿಯರು ॥ ವೀರಸಿರಿ ವನಲಕ್ಷ್ಮಿಶಾಕಿನಿ । ನಾರದೇವತೆಡಾಕಿನೀಮುಖ । ಭೂಪಶಕ್ತಿಯರೈದೆ ಶಬರಿಯರಾಯ್ತು ನಿಮಿಷದಲಿ ॥೩೩॥ ಚಾಳಿಸಿದಹದವಿಲ್ಲುಗಳ ಬಡಿ ।ಕೋಲುಗಳ ಸಂಕಲೆಯನಾಯ್ಗಳ । ಕೋಲುವಲೆಗಳಸಿಡಿವಲೆಯ ಮಿಡಿವಲೆಯ ದಡಿವಲೆಯ ॥ ಕಾಲುಗಣ್ಣಿಯ ಹೆಬ್ಬಲೆಯ ಬೆ । ಳ್ಳಾರವಲೆಗಳ ಮಯಣದಂಟಿನ । ಮೇಲುಕೊಂಬಿನ ಬೇಟೆಗಾರರು ಬಳಸಿದರು ಶಿವನ ॥೩೪॥ ಶ್ರುತಿಗಳೊಳಗಿತರ್ಕಶಾಸ್ತ್ರದ । ಗತಿಯ ಸೋಹಿನ ಮಂತ್ರಮಯಸಂ । ತತಿಯ ಸೊಂಪಿನ ವಿವಿಧಜಪಯಜ್ಞಾದಿಗಳ

ಬಲೆಯ ॥ ವ್ರತದ ಜಂತ್ರದಕಣ್ಣಿಗಳ ಸ । ತ್ಕೃತಿಯಕಲ್ಗುಂಡುಗಳ ಯೋಗ । ಸ್ಥಿತಿಯಸರಳಿನ ಶಬರರೈದಿತು ಶಿವನ ಬಳಸಿನಲಿ ॥೩೫॥ ಶ್ರವಣಮನನದಬೀಸುವಲೆ ಶಾಂಭವಸುವೇಧಾದೀಕ್ಷೆಗಳ್ಬಲು । ಗವಣೆಗಳ ಪಶುಪಾಶಬಂಧದಬೋಳೆಯೆಂಬುಗಳ ॥ ನವವಿಧಾಮಲಭಕ್ತಿಗಳ ರಣ । ತವಕದೀಹದಹುಲ್ಲೆಗಳ ಮೃಗ । ಭವವಿದಾರಣಸುಭಟರೈದಿತು ಶಿವನನೇಮದಲಿ ॥೩೬॥ ಸೋಹಿದೊಡೆ ದೆಸೆದೆಸೆಗೆ ಹಾಯ್ದುದು । ಮೋಹತಮ ಡಂಭಾದಿಮೃಗತತಿ । ತೋಹಿನಲಿ ಬಿದ್ದುದು ಮಹಾಪಾತಕಮದೇಭಚಯ ದ್ರೋಹದೀಹಾಮೃಗವಸೂಯವ । ರಾಹಸಂಕೀರ್ಣೋಪಪಾತಕ । ದೇಹವಳಿದವನಂತವದರೊಳು ಶಿವ ಬೇಂಟೆಯಲಿ ॥೩೭॥ ಜಯಜಯೆಂದುದು ನಿಖಿಳಜಗ ಸುತಿ । ಚಯಭಡಾಳಿಸಿ ಹೊಗಳುತಿರ್ದುದು । ನಯನಗೋಚರವಾಯ್ತು ಸಾಕ್ಷಾತ್ಪರಮಶಿವತತ್ವ ॥ ಲಯದಜನನದ ಸುಳಿಯಸಂಸ್ಕೃತಿ । ಮಯಸಮುದ್ರವ ಸುರಿದು ಸಲೆ ನಿ । ರ್ಭಯವು ಭಕುತರಿಗೆಂಬವೊಲುಮಸಗಿತು ಮಹಾಸಬುದ ॥೩೮॥ ಹೇಳ್ವ ತೊಡೆ ರೋಮಾಂಚನವಲೇ । ಕೇಳು ನೃಪ ಕೈಲಾಸವಾಸಿಯ । ಲೀಲೆಯನು ನಿಜಭಕ್ತಜನಸಂ ದರ್ಶನಾರ್ಥವಲೇ ॥ ಆಳುನಡೆತಂದಿಂದ್ರಕೀಲದ । ಶೈಲವನು ಬೆರಸಿತು ಮಹಾದ್ಭುತ । ದೇಳಿಗೆಯನೇನೆಂಬೆನೈ ಕೈರಾತವಿಭ್ರಮವ ॥೩೯॥ ಇಂಬಿನಲ್ಲಿಹಮೂಕದಾನವ । ನೆಂಬನೊಬ್ಬನು ತನ್ಮಹಾದ್ರಿನಿ । ತಂಬವನದ ನಿಕುಂಜನಲಿ ನಿರ್ಭಯವಿಹಾರದಲಿ ॥ ಚುಂಬಿಸಿತು ಬಲುರಭಸವೆನೆ ವಿಲ । ಯಾಂಬುಧಿಯ್ಯು ಕಳಕಳವನಮರರ । ತಿಂಬೆನೀಕ್ಷಣವೆನುತ ಖಳನಾಲಿಸಿದನಾಘ್ರಾನಿಯು ॥೪೦॥ ಹಂದಿಯಾದನು ದನುಜನಾಗಿರಿ । ಕಂದರವಹೊರವಂಟು ಬೇಂಟೆಯ । ಮಂದಿಯೊಳಗಡಹಾಯ್ದನೆತ್ತಿದನಡ್ಡಬಿದ್ದವರಾ । ಹಂದಿಯೋ ತಡೆ ನಾಯಗಳ ಬಿಡಿ । ಹಿಂದೆ ಹಿಡಿ ಕೆಡೆಕುತ್ತು ಕೈಕೊ । ಳ್ಳೆಂದು ಗಜಬಜಿಸಿತ್ತುಗಾವಳಿ ಗಹನಮಧ್ಯದಲಿ ॥೪೧॥ ಎಳೆವರೆಯ ನಡುವಿದ್ದರಾಹುವೊ । ಲಳವಡುವದಾಡೆಗಳಲೊಗಮಿಗೆ । ಬೆಳೆದ ನೀಲಾಚಲಕೆ ಸರಿಯೆಂದನಿಪಹೇರೊಡಲ ॥ ಮುಳಿದು ಗರ್ಜಿಸಿ ಕಿಡಿಸುರಿವಕಂ । ಗಳಲಿ ರೌದ್ರಾಟೋಪದಲಿ ಕೆ । ಕ್ಕಳಸಿದಿಕ್ಕೆಲನೋಡುತಿರ್ದುದು ದೇವಸಂತತಿಯ ॥೪೨॥ ಕೂಡೆ ಕಟ್ಟಿತು ಭೂತಗಣ ದನಿಮಾಡಿ ಜಡಿದುಬ್ಬರಿಸಿ ಮೋರೆಯ । ನೀಡಿ ನಾಯ್ಗಳು ತುಡುಕಿದವು ತಿರುಗಿದೊಡೆ ಹಿಮ್ಮಡಿಯ ॥ ರೂಢಿಸುತ ಕವಿದೆತ್ತಲೊಂದೇ । ದಾಡೆ ಬರೆತುದು ನೂರುಗಾಯವ । ನೋಡುತಿರ್ದುದು ಸೇನೆ ಕಂಡನು ಶೂಲಿ ಸೂಕರನ ॥೪೩॥ ಇಡುವಸಲ್ಲೆಹಬಲ್ಲೆಹದ ಹೆ । ಗ್ಗಡಿಯನುಗುಳುವಬಾಯಧಾರೆಯ । ನುಡಿದು ಹರನಮಹೋಗ್ರತರಜಾಯಿಲನಜಂಗುಳಿಯಾ ॥ ಕಡಿದು ಕೆಡಹಿ ಪುಳಿಂದಶಬರಿಯು । ರಡಗೆಡೆಹಲೊಡಹಾಯ್ದು ಮಿಗೆ ಘುಡಿಘುಡಿಸಿ ಕವಿದೈತರಲು ಧೃತಿಗೆಟ್ಟುದು ಗಣಸ್ತೋಮ ॥೪೪॥ ಇದುವೆ ಸಮಯವಲಾ ಯೆನುತ ಹೂ । ಡಿದನು ಬಾಣವನುಗಿದು ಪೂರಾ । ಯದಲಿ ತೂಗಿ ಪಿನಾಕಿ ಯೆಚ್ಚನು ಮೂಕದಾನವನ ॥ ಒದೆದು ಹಾಯ್ದುದು ಬಾಣ ಗರಿದೋ । ರಿದುದು ಬದಿಯಲಿ ಕೊಡಹಿ ಗೋಳಿಡು । ತದು ಧನಂಜಯನತ್ತ ಹೋದುದು ಹೊತ್ತಕಣೆಸಹಿತ ॥೪೫॥ ಬಂದು ಗಿರಿಕಂದರದೊಳಿಹಮುನಿ । ವೃಂದದೊಳಗಡಹಾಯ್ದು ಕೆಡಹುತ । ಹಂದಿ ಮೋರೆಯ ನೆಗಹಿ ಮಲೆವುತ ಗಜರಿ ಗರ್ಜಿಸಿತು ॥ ಮಂದಿ ಬೆದರುತ ಗೋಳಿಡುತಲಾ । ಇಂದುಧರನೇ ಬಲ್ಲ ಶಿವಶಿವ । ಯೆಂದು ಮೊರೆಯಿಡೆ ಕೇಳಿ ಕಂದೆರೆದೆದ್ದನಾಪಾರ್ಥ ॥೪೬॥ ಕಂಡನರ್ಜುನನೀವರಾಹನ । ದಂಡಿ ಲೇಸಲ್ಲೆನುತ ಬಾಣವ । ಗಾಂಡಿ

ವೆಧೊಳಳವಡಿಸಿ ಬೊಬ್ಬಿರಿದೆಚ್ಚನಾಖಳನ ॥ ದಿಂಡುಗೆಡೆದುದು ಕಾಲ ಕೊಡಹುತ । ಗಂಡಶೈಲದ ವೋಲು ಭೂತವೆ । ದಿಂಡುದರಿಯುವಹಂದಿ ಬಿದ್ದುದು ಪಾರ್ಥನಿದಿರಿನಲಿ ॥೪೭॥ ಬಂದನೀಶ್ವರನಾವು ಕೆಡಹಿದ । ಹಂದಿ ನಮ್ಮದು ತೆಗೆಯಿ ಯೆನೆ ನರ । ನೆಂದನೆಮ್ಮಂಬಿನಲಿ ಬಿದ್ದುದು ನಾರು ನೀನೆನಲು ॥ ಬಂದುದೇಕಾವಿಷವಿರೋಧರ । ಕುಂದು ಪಾರ್ಥನ ಚಿತ್ತದಲಿ ಬಾ । ಲೇಂದುಧರನೆಂದೆತ್ತಬಲ್ಲನು ಕಣಿಕಿದನು ಶಿವನ ... ... ॥೪೮॥

ಅಂತು ಸಂಧಿ ೫ ಕ್ಕಂ ಪದ ೨೮೮ ಕ್ಕಂ ಮಂಗಳಮಸ್ತು.

ಆರನೆಯ ಸಂಧಿ.

ಸೂಚನೆ॥ ಕದನಮುಖದಲಿ ಹಿರೋಡಿಯಿಲ್ಲದೆ । ಬೆದರದೊದಗಿದನರಗೆ ಕಾರು । ಣ್ಯದಲಿ ಕಾಮವಿರೋಧಿ ಕೊಟ್ಟನು ಪಾಶುಪತಶರವ ॥

ಎಲೆಕಿರಾತ ಮದೀಯಬಾಣದ । ಬಲೆಗೆ ನೀವ್ಮೃಗವಾಗದಿರು ನಿ । ನ್ನಳವ ಮರೆಯಾ ಬನದ ನರಿಮೊಲಹುಲ್ಲೆ ಹರಿಣನಲಿ ॥ ಗೆಲಿದಗರುವನು ನೀನು ನಿನ್ನ । ಗ್ಗಳಿಕೆಗಾವಂಜುವೆವು ನಿನ್ನೀ । ದಳಕೆ ಪತಿಯುಂಟಾದೊಡಾತನ ಕೊಂಡುಬಾ ಯೆಂದ ॥೧॥ ಎನಲು ನಕ್ಕನು ಶಂಭು ಭಕ್ತನ । ಮನದಧೃತಿಯನು ಭುಜಬಲವನಾ । ತನಪರಾಕ್ರಮಲಕ್ಷ್ಮಿಯನು ಪಾರ್ವತಿಗೆ ತೋರಿಸುತ ॥ ನೆನೆದು ನುಡಿದನಿದೇನು ತಮ್ಮಡಿ । ನಿನಗೆ ತಪದಲಿ ಖಡ್ಗವೇಕೀ । ಧನುಶರಾವಳಿಯೇಕೆ ನಿನ್ನಂಘವಣೆಯೇನೆಂದ ॥೨॥ ಏಕೆ ನಿನಗೀತಪದ ಚಿಂತೆ ವಿ । ವೇಕಶಾಸ್ತ್ರವಿಚಾರವಿದು ವಿಪಿ । ನೌಕಸದ ಸಂಹಾರವಿದ್ಯಾವೃತ್ತಿ ನಿನ್ನದಲೇ ॥ ಆಕೆವಾಳರ ಕರೆಸು ನೀನೇ । ಕಾಕಿ ನಿನ್ನಲಿ ಹರಿಯದಾಹವ । ವೇಕೆ ನಿನಗೀಗೆಂದು ಕಪಟಕಿರಾತನನು ಜರೆದ ॥ ನೀವು ಬಲ್ಲಿರಿ ಶಾಸ್ತ್ರದಲಿ ಶ । ಸ್ತ್ರಾವಳಿಯಲಾವಿಂದು ಪಕ್ಷಿಮೃ । ಗಾವಳಿಯ ಬೇಂಟೆಯಲಿ ಬಲ್ಲೆವು ಜಾತಿಧರ್ಮವಿದು ॥ ನೀವು ಬಲುಹುಳ್ಳವರು ನಿಮ್ಮೊಡ । ನಾವು ಸೆಣಸುವರಲ್ಲ ನಿಮ್ಮವೊ । ಲಾವಖುಪಿಶಸ್ತ್ರಜ್ಞನಾತನ ಬಿರುದ ತಡೆಯೆಂದ ॥೪॥ ಕಟಕಿಯೇಕೆ ಪುಳಿಂದ ನಾವು । ಬಟ್ಟೆಯ ತಪಸಿಗಳೆಂಬುದಿದು ವಿ । ಸ್ಫುಟವಲೇ ತಪ್ಪೇನು ನಿನ್ನೊಡನೆಂದು ಫಲವೇನು ॥ ಜಟೆಮೃಗಾಜಿನಭಸ್ಮದೊಡಲು । ತ್ಕಟದಧನುಶರಖಡ್ಗದಲಿ ಧೂ । ರ್ಜಟಿಯಿಹನು ನಾವವರ ಶಿಷ್ಯರು ಶಬರ ಕೇಳೆಂದ ॥೫॥ ಲೋಕಶಿಕ್ಷಕರಲ್ಲಲೇ ನಮಗೇಕೆ ನಿಮ್ಮಯ ತಪದಚಿಂತೆ ಪಿ । ನಾಕಧರನಡಹಾಯ್ದೊಡೆಯಾ ಬಿಡೆವೆಮ್ಮವಾಸಿಗಳ ॥ ಈಕಳೆಂಬವಿದೆಮ್ಮದೆನುತ ವ । ನೌಕಹದ ನೆಳಲಿನಲಿ ನಿಂದು ಪಿ । ನಾಕಿ ನುಡಿದನು ಕಡಿದನೀತನ ಸ್ಥಿರಣೆಯಮನವ ॥೬॥ ಮುಸುಗಿದನು ನಿಮ್ಮಾತನಗಿದೆ । ಬ್ಬಿಸಿದಹುಲಿಯೋ ನೊಂದಹಂದಿಯೊ । ಹಸಿದಭುಜಗನೊ ಕಾದಕಟ್ಟುಕ್ಕಿನಭಡಾಳಿಕೆಯೋ ॥ ಉಸುರುಗಳ ಕರ್ಬೊಗೆಗಳಾಲಿಯ । ಬಿಸಿಗುದಿಯ ಬಲುಕೆಂಡವಂಬಿನ । ಹೊಸಮಸೆಗಳುರಿ ಝಾಡಿ ಝಳಿಪಿಸೆಪಾರ್ಥ ಖತಿ

ಗೊಂಡ ॥೭॥ ಆದೆ ಹಿಡಿದಕೊಳ್ಳೆನುತ ಕೆನ್ನೆಗೆ । ಸೇದಿ ಬಿಟ್ಟನು ಸರಳನದು ಹಿಂ । ದಾದುದಾಬಳಿಸ
ರಳನದ ಹಿಂದಿಕ್ಕಿ ಮತ್ತೊಂದು ॥ ಹೋದುದದಹಿಂದಿಕ್ಕಿ ಮತ್ತೊಂ । ದೈದಿತತಿವೇಗಾಯ್ಲ್ತನದನು ।
ಮಾದಸಾಧ್ಯದಸರಳು ಕವಿದವು ಬಿಟ್ಟಸೂಟಿಯಲಿ ॥೮॥ ಏನಹೇಳುವೆನರಸ ಶರದಭಿ । ಮಾನದೇವತೆ
ಯುಂಟಲಾ ಹರಿ । ಸೂನುವರಿಯದೊಡಂಬೆಯರಿಯಳೆ ಚಂಡಿಕಾದೇವಿ ॥ ಭಾನುಮಂಡಳದಂಧಕಾ
ರದ । ವೈನತೇಯನ ಭುಜಗತತಿಯಸ । ಮಾನಧರ್ಮವ ಕಂಡೆನೀಶ್ವನೊಳರ್ಜುನಾಸ್ತ್ರದಲಿ ॥೯॥
ಮತ್ತೆ ಸುರಿದನು ಸರಳಮಳೆ ಯನ । ದೆತ್ತ ನಭ ದೆಸೆಯತ್ತ ಧಾರುಣಿ । ಯೆತ್ತಲರ್ಜುನನೆತ್ತ ಕಪಟ
ಕಿರಾತ ತಾನೆತ್ತ ॥ ಹೊತ್ತಹೊಗರಿನ ಮೊರೆವಗರಿಗಳ । ತತ್ತುಗಿಡಗಳ ಹೊಳೆವಧಾರೆಯ । ಮೊತ್ತ
ದಂಬೌಕಿದವು ಮೃತ್ಯುಂಜಯನ ಸಮ್ಮುಖಕೆ ॥೧೦॥ ಮಂಜು ಮುಸುಕಿದೊಡೇನು ಪರ್ವತ । ವಂಜುವುದೆ
ಹಾಲಾಹಲವನೊಣ । ನೆಂಜಲಿಸುವುದೆ ವಡಬಶಿಖಿ ನನೆವುದೆ ತುಷಾರದಲಿ ॥ ಕಂಜನಾಳದಿ ಕಟ್ಟುವಡೆ
ವುದೆ । ಕುಂಜರನು ನರಶರದ ಜೋಡಿನ । ಜುಂಜುಮಳೆಯಲಿ ಜಾನ ವೀಧರ ಜಾರುವನೆ ಯೆಂದ ॥೧೧॥
ಕೆರಳಿದನು ಹೇರಂಬ ಗುಹನ । ಬ್ಬರಿಸಿದನು ರೋಷದಲಿ ಮಸಗಿತು । ಥರಥರದವರವೀರಭದ್ರಾದ್ಯಖಿ
ಳಭೂತಗಣಾ ॥ ಹರನು ಕಂಡನಿದೇನಿದೇನ । ಚ್ಚರಿ ಧನಂಜಯನೆಮಗೆ ನೂರ್ಮಡಿ । ಕರಹಿತವ ನಿ
ಮ್ಮಿಂದ ನೀವ್ಗಜಬಜಿಸಬೇಡೆಂದ ॥೧೨॥ ಎನುತ ಕೊಂಡನು ಧನುವನಾಪಾ । ರ್ಥನ ಶರೌಘವನೆ
ಚ್ಚೊಡೀಶನ । ಮೊನೆಗಣೆಯಲಕ್ಕಾಡಿದವು ಬಾಡಿದವು ಬಳಿಸರಳು ॥ ಕನಲಿ ಕಿವಿವರೆಗುಗಿದು ಫಡ
ಹೋ । ಗೆನುತ ಮಗುಳೆಚ್ಚನು ಧನಂಜಯ । ನನಿತುಶರವನು ಕಡಿದು ಮದನವಿರೋಧಿ ಮಗು
ಳೆಚ್ಚ ॥೧೩॥ ಎಸುಗೆಯೊಳ್ಳಿತು ಶಬರನತಿಸಾ । ಹಸಿಕನೈ ಬಿಲ್ಲಾಳಲಾ ಸರ । ಬೆಸನನೆಚ್ಚನು ನಮ್ಮೊ
ಡನೆ ಮುಝುಪೂತು ಪಾಯ್ಕನುತ ॥ ಹೊಸಮಸೆಯ ಹೊಗರಲಗುಗಳ ದ । ಳ್ಳಿಸುವಧಾರೆಯ ಕೆಂಗರಿ
ಯಧೌ । ಳಿಸುವಕಣೆಗಳ ಶರನಿಧಿಯ ಕವಿಸಿದನು ಕಲಿಪಾರ್ಥ ॥೧೪॥ ಈಡಿರಿದವೊಂದೊಂದರಲಿ
ಹೊಗೆ । ಝಾಡಿ ಝಳಿಪಿಸೆ ಉರಿಗಳಲಿ ಸರ । ಳೋಡಿದವು ಗಾಂಡಿವವನೊದೆದು ಮಹೇಶನಿದಿರಿನಲಿ॥
ಕಾಡಿದೊಡೆಕಾರುಣ್ಯನಿಧಿ ಕೋಂ । ಡಾಡುತಿರ್ದನು ಪಾರ್ಥನಂಬಿನ । ಮುಡಿಗೆಯ ಸಂವರಣೆ ಸವೆ
ದುದು ಸವೆಯದಾಟೋಪ ॥೧೫॥ ಎಲೆಕಿರಾತಕಿರಾತರೊಳಗ । ಗ್ಗಳೆಯನಹೆಯೋ ದೆವದಾನವ ।
ರೊಳಗೆ ಸ್ಥೈರಿಸಿ ನಿಲುವನಾವನು ನಮ್ಮವಿಲಗದಲಿ ॥ ಅಳುಕದಿರು ಕಲಿಯಾಗೆನುತ ತ್ರುದಿ । ಹಿಳುಕ
ಮಂತ್ರಿಸಿ ದಿವ್ಯಬಾಣಾ । ವಳಿಗಳಲಿ ಬಾಲೇಂದುಮೌಳಿಯನೆಚ್ಚನಾಪಾರ್ಥ ॥೧೬॥ ಏಸುಮಂತ್ರಾ
ಸ್ತ್ರದಲಿ ಮುಸುಕಿದೊ । ಡೈಸುವನು ಪರನುಂಗಿದನು ಮಗು । ಳೇಸುಕೂರಂಬುಗಳನೆಚ್ಚೊಡೆಕಡಿದನಂ
ಬಿನಲಿ ॥ ಈಸುವೆಗ್ಗಳರಾರೆನಿಪಭಿ । ಜ್ಞಾಣ್ಣಿಶಿ ಬೇಡಾಕ್ಷಾತ್ರತಾಮಸ । ವೇಸುಬಲುಹೋ ನಿಮ್ಮಜಾ
ತಿಗೆ ರಾಯ ಕೇಳೆಂದ ॥೧೭॥ ಅಂದು ಖಾಂಡವವನದ ದಹನದಿ । ಬಂದುದಕ್ಷಯಬಾಣವಿದು ತಾ ।
ಇಂದುಬರೆತುದು ಬಹಳಜಲನಿಧಿ ಬತ್ತುವಂದದಲಿ ॥ ಇಂದುಮೌಳಿಯ ಸೇವೆಗಂದುಪು । ಳಿಂದಕಂಟ
ಕನಾದನೇ ಹಾ । ಯೆಂದುಗರ್ಜಿಸಿ ಚಾಪದಿಂದಪ್ಪಳಿಸಿದನು ಶಿವನ ॥೧೮॥ ಕಳಚಿದನು ದಂಡೆಯನು
ಗಾಯದ । ಉಳುಕಿದನಲಾಯೆನುತ ಮಗುಳ । ಪ್ಪಳಿಸಿದನು ಮೇಲ್ವಾಯ್ದು ಹೊಯ್ದನು ಜರೆದು
ಝೋಂಪಿಸುತ ॥ ಮೆಲುನಗೆಯಲರ್ಜುನನ ಚಾಪವ । ಸೆಳೆದುಕೊಂಡನು ತನ್ನ ಭಕ್ತನ । ಬೆಳವಿಗೆ

ಯಮಾಡಿದನು ಘೋಯೆಂದುದು ಸುರಸ್ತೋಮ ॥೧೯॥ ತಿಳಿವನಗಿದಡಿಗಿಕ್ಕಿ ಮರವೆಯ । ಕಳಕ
ಳವೆ ಮೇಲಾಯ್ತು ತಾಮಸ । ಜಲನಿಧಿಯ ತಾಯ್ಮಳಲ ಮುಟ್ಟಿತು ಮನ ಧನಂಜಯನಾ ॥ ಸೆಳೆದ
ನೊರೆಯಲಡಾಯುಧವ ಬೀ । ಳೆಲವೊ ಶಬರಯೆನುತ್ತ ಹೊಯ್ದನು । ತಳಿರಲೆಯ ತಳಿವೆಳವರೆಯ
ನೆಲೆವನೆಯಪಶುಪತಿಯ ॥೨೦॥ ಆಯುಧದ ಬರಿಮುಷ್ಟಿಯುಳಿಯಲ । ಡಾಯುಧವ ಶಿವಕೊಂಡನೀ
ತನ । ಬಾಯಹವಣಿನ ತುತ್ತುಹುದೆ ತ್ರಿಪುರಾರಿಯೊಡ್ಡವಣೆ ॥ ರಾಯಕೇಳ್ಕೆ ಪಾರ್ಥನುಬ್ಬಟೆ ।
ಬೀಯದೀಸರಮುತ್ತಮತ್ತೆ ವಿ । ಡಾಯಿಯಾಯ್ತುಚಪಲತನದವಿವೇಕಮೂಢ ಮೃಗಿಯೆ ॥೨೧॥
ಮರನಪೆಗ್ಗೊಂಬುಗಳಲಿಟ್ಟನು । ಶಿರುಹಿ ಕಲ್ಗುಂಡುಗಳ ಮಳೆಯಲಿ । ಹರನಸಾದಿದನೇನನೆಂಬೆನು
ಪಾರ್ಥನುರವಣೆಯ ॥ ಸರಳ ಸಾರದಲಿನಿತ್ತುವನು ಕ । ತ್ತರಿಸಿ ಕರುಣಾವನಧಿ ನುಡಿದನು । ಮರುಳೆ
ತಮ್ಮಡಿ ಕೈದುವುಳ್ಳೊಡೆ ಕೊಂಡುಬಾಯೆಂದ ॥೨೨॥ ಕೈದುವೇಕೆ ಪುಳಿಂದನಮ್ಮೊಡ । ನೈದಿಸಾ
ಭುಜಯುದ್ಧದಲಿ ಬಲು । ಗೈದುವಿದೆಲಾ ಮುಷ್ಟಿ ನಿನಗಡುಪಾಯ ಚೊಕ್ಕೆಯವ ॥ ಕಾಯ್ದುಕೊಳ್ಳ
ನುವಾಗು ನಿನ್ನವ । ರೈದಿ ನೋಡಲಿ ಯೆನುತ ಭುಜವನು । ಹೊಯ್ದು ನಿಂದನು ಪಾರ್ಥನುರೆ ಬೆರ
ಗಾಗೆ ಭೂತಗಣ ॥೨೩॥ ಕಂಡಿರೇ ದೇವಿಯರು ನರನು । ದ್ದಂಡತನವನು ತರಗೆಲೆಯ ಕೈ । ಕೊಂಡು
ತಿಂಗಳುನಾಲ್ಕು ಪವನಗ್ರಾಸದಿಂ ಬಳಿಕ ॥ ದಂಡಿಸಿದನೀದೇಹವನು ನಾ । ವಂಡಲೆಯಲೊದಗಿದನಲೇ
ಸವು । ದಂಡಿಯಲಿ ನಮ್ಮೊಡನೆ ಯೆಂದನು ನಗುತ ಶಶಿಮೌಳಿ ॥೨೪॥ ಹಾರಿತಾಯುಧವೆಂದು ಭೀತಿಗೆ ।
ಮಾರುವೋದನೆ ವೀರರಸ ನೊರೆ । ಯಾರಿತೇ ನಿಜಬಾಹುಶಕ್ತಿಯೊಳುಂಟೆ ಖಯಖೋಡಿ ॥ ವಿಶಾರಿ
ಹತಕಂತುಕದವೊಲು ಪುಟ । ವೇರುತದೆ ವಿಕ್ರಮ ಚಡಾಳಿಸಿ । ಬೀರುತದೆ ಭುಜಭಾರಿಯಂಕವ ದೇ
ನೋಡೆಂದ ॥೨೫॥ ಈತನರನೆಂಬವಕಣಾ ಸಂ । ಗಾತಿ ನಾರಾಯಣಋಷಿಗೆ ತಾ । ವೀತಗಳು ಹವಿ
ಯಂಶಭೂತರು ಭಕ್ತರಿವರೆಮಗೆ ॥ ಈತನೆಮ್ಮಯ ಪಾಶುಪತವಿ । ಖ್ಯಾತಬಾಣವ ಬೇಡಿ ತಪದಲಿ
ವೀತರಾಗದ್ವೇಷಿಯಾದನು ಕಾಂತೆ ಕೇಳೆಂದ ॥೨೬॥ ಕೊಡುವೆನೀತಂಗೆಮ್ಮ ಶರವನು । ಮಡದಿ
ಮತ್ತೆಯು ನೋಡು ಪಾರ್ಥನ । ಕಡುಹನೆನುತಿದಿರಾತು ಬಾಹುಪ್ಪಳಿಸಿ ಬೊಬ್ಬಿಡುತ ॥ ಹಿಡಿದರಿಬ್ಬರು
ಕೈಗಳನು ಹೊ । ಕ್ಕೊಡನೆ ಹತ್ತಾಹತ್ತಿಯಲಿ ಮಿಗೆ । ಜಡಿತೆಯಲಿ ಚಾಳೈಸಿದರು ಬಹುವಿಧದಬಿನ್ನ
ಣವ ॥ಬಿಗಿವ ಬಿಡಿಸುವ ಬಿಡಿಸಿದಾಕ್ಷಣ । ತೆಗೆವ ಕಳಚುವ ಕೊಂಬ ಲಳಿಯಲಿ । ಹೊಗುವ ಹತ್ತುವ
ಲವಣಿಯಲಿ ಲಾಲಿಸುವ ಹೊರವಡುವ ॥ ಚಿಗಿವ ತೊಡಚುವ ಬಿಗಿವ ಬಿಡಿಸುವ । ಬಗಿವ ಬಳಸುವ
ಬಂಧಗತಿಯಲಿ । ಲಗಡಿಸುವ ಲೋಕೈಕವೀರರು ಹೊಕ್ಕು ಹೆಣಗಿದರು ॥೨೮॥ ಕರವಳಯತಳಹತ್ತ
ಡೊಕ್ಕರ । ಶಿರವಘಣುವಟ್ಟತಳಖೊ । ಪ್ಪರದುಮಂಗುಲಕಂದಡೊಕ್ಕರತೋರಹತ್ತದಲಿ ॥ ಸರಿಸಮಂ
ಕಡಬಂಧಪಟ್ಟಿಸ । ಉರಗಬಂಧನಬಾಹುದಣ್ಣಾವಂ । ತರಲಗಡಿಯೆಂಬಿನಿತರಲಿ ತೋರಿದರು ಕೌಶಲವ ॥
ಮುರಿವ ಬಿಡಿಸುವೆಢಗೆಯಸ್ಥೈರಿಸಿ । ತೆರಳಿಚುವ ತಳಮೇಲುಗಳಲು । ತ್ತರಿಸುವೇಳುವ ಬೀಳ್ವ ಹತ್ತುವ
ಸುಳಿವವಂಚಿಸುವ ॥ ಹೊರಳ್ವ ತನುಹೋರಟೆಯ ಸತ್ತ್ವೋ । ತ್ಕರುಷ ಸರಿಯೆನೆ ಶಂಭು ಶಿಷ್ಯಗೆ । ಪರಿವಿಡಿ
ಯ[illegible]ಸುವೊಲಿದ್ದನು ಭೂಪ ಕೇಳೆಂದ ॥೩೦॥ ಗಾಯವುಂಟೇ ತೋರು ನಿನಗಡು । ಪಾಯೊ ಬಿಡ
ಜ[illegible]ವನೆನುತಲಿ । ಜೇಯನೊಡನಿದಿರೆದ್ದು ಶಿವಿದನು ಹರನ ಹೇರುರವ ॥ ಗಾಯಘಾತಿಗೆ ನಿಮು

ಮೆತ್ತಿಮೆ । ಗಾಯಿತೆನುತ ಪುರಾರಿ ಕಡುಪ್ರೌರಾಯದಲಿ ಕರವೆತ್ತಿ ನಸುತ್ತಿವಿದನು ಧನಂಜಯನ॥೩೧॥
ತರೆಹರಿಸಿ ನರನಿಕ್ಕಿದನು ಶ೦ । ಕರನ ವಕ್ಷಸ್ಥಳವನೆತ್ತೆಯಲಿ । ಮುರಿದು ಕಳಚಿ ಗಿರಿಶನೆರಗಿದನಿಂದ್ರ
ನಂದನನ ॥ ಮರಳಿತಿವಿದನು ಪಾರ್ಥನಾತನ । ಶಿರಕೆ ಕೊಟ್ಟನು ಶಂಭುವಿಂತಿ । ಬ್ಬರ ವಿಷಮಗ
ಯದ ಹಾವಣೆ ಘುಲ್ಲಿಸಿತುಜಗವ ॥೩೨॥ ಸುಯ್ಲ ಹೊಗೆಗಳಹೊದರು ದಿವಿಗುಳ । ಮಯ್ಲಳಿಯ
ಮುರಿವುಗಳ ದೃಢವೇ । ಗಾಯ್ಲರಿಕ್ಕಿದ ಗಾಯಗಾಯಕೆ ಮುಷ್ಟಿಕಿಡಿಯೇಳೆ ॥ ಶಯ್ಲಹತಿಗಳಭಾರಣೆ
ಯಬಲು । ವೊಯ್ಲ ಬೆಳೆಸಿರಿವಂತರಿವರೆನ । ಲಯ್ಲಪ್ಪೈಲದಜರಡುಗಳೆ ನರಸಾಥಕೇಳೆಂದ ॥೩೩॥
ತಾ್ರಣವೆಂತುಟೊ ಶಿವಶಿವಾಸ । ತಾ್ರಣನಹೆ ಬಹುದಿವಸಭುವನ । ಪಾ್ರಣವೇಪೋಷಣವಲಾ ಮಝು
ಪೊತು ಜಗಜಟ್ಟಿ ॥ ಕಾಣೆನಿವಗೆ ಸಮಾನರನು ಶಿವ । ನಾಣೆಗುಣದಲಸೂಯವೇತ । ನ್ನಾಣೆ ನೋಡಾ
ಶಬರಿ ಯೆಂದನು ನಗುತ ಮದನಾರಿ ॥೩೪॥ ನಿನಗೆ ನಾ ಬೆರಗಾದೆ ನೀಸಿಂ । ದೆನಗೆ ಮೆಚ್ಚಿದೆ ದೇವ
ದಾನವ । ಜನನಿನಗೆ ಪಾಡಲ್ಲ ನೀಹಲ್ಲಣಿಸಿದ್ಯೆ ನಮ್ಮ ॥ ಇನನೊ ಮೇಣ್ದೇವೇಂದ್ರನೋ ಹರ । ತನು
ಜನೋ ಹರಿಯೋ ಮಹಾದೇ । ವನೊ ಕಿರಾತನೊ ನೀನೆನುತ ಮತ್ತೆರಗಿದನು ಶಿವನ ॥೩೫॥ ಗಾಯ
ವನು ಮುನ್ನಿಸುತ ಶಿವ ಪೂ । ರಾಯದಲಿ ಮುಟ್ಟಿದನು ಪಾರ್ಥನ । ಬಾಯೊಳೊಕ್ಕುದು ರುಧಿರ
ನಾಸಿಕದೆರಡುಬಾಹೆಯಲಿ ॥ ನೋಯನೊಂದನು ಮಾರಿ ಮುನಿಯಲ । ಪಾಯವಾನುದೆ ಕಟಕಟಾತ ।
ಪ್ಪಾಯಿತೇ ತಪ್ಪಾಯ್ತೆನುತ ಮರುಗಿದನು ಮದನಾರಿ ॥೩೬॥ ಬಿರಿದುದೀತನ ಗರ್ವಗಿರಿ ಮಡ
ಮುರಿದುದೀತನ ಶಕ್ತಿ ಸಲೆ ಟಿ । ಬ್ಬರಿಸಿತಿಂದ್ರಿಯವರ್ಗ ನೆಗ್ಗಿತು ನೆನಹಿನೊಡ್ಡವಣೆ ॥ ಹರಿದುದಂ
ತಃ ಸ್ವೇದಜಲ ಕಾ । ಹುರತೆ ಕಾಲ್ವೊಳೆಯಾಯ್ತು ಮತಿನಿ । ಬ್ಬರದಬೆರಗಿನ ಬೇಟದಲಿ ಬೆಂಡಾದನಾ
ಪಾರ್ಥ ॥೩೭॥ ಆವಸುವ್ರತಭಂಗವೋ ಮೇಣಾವದೈವದ್ರೋಹವೋ ತಾ । ನಾವಶಿವಭಕ್ತಾಪರಾ
ಧಿಯೊ ಪೂರ್ವಜನ್ಮದಲಿ ॥ ಆವಹಿರಿ ಯರಹಳಿದೆನೋ ಮೇ । ಣಾವಧರ್ಮವನಳಿದೆನೋ ತನ ।
ಗಾವಪರಿಪರಿಭವವಮಹೀರುಹ ಫಲಿತವಾಯ್ತೆಂದ ॥೩೮॥ ಈತ ಧಿಟಕೆ ಪುಳಿಂದನೇ ವಿ । ಖ್ಯಾತನರ
ತಾನಲ್ಲಲೇ ಧಿಟ । ಜಾತಪಾರ್ಥನೆ ತಾನಿಧಾನಿಸೆ ಶಬರನಿವನಲ್ಲ ॥ ಈತ ಪಲ್ಲಟವಾದನೋ ಮೇ ।
ಣ್ಶ್ವೇತತುರಗನಪಲ್ಲಟವೊಕುಂ । ಶೀತನುಜ ತಾನಲ್ಲ ನಿಶ್ಚಯವೆನುತ ಚಿಂತಿಸಿದ ॥೩೯॥ ಅರಿದನೇ ಶಿವ
ನೆಂದು ದೈವದ ಸರಿಯಬಲುಹನು ಕಂಡೊಡೆಯುಧಿಟ । ವರಿಯಬಹುದೆ ರಹಸ್ಯಮಾಯಾಗೋಪಿತಾ
ತ್ಮಕನ ॥ ಅರುಹಿಕೊಡವೇ ವೇದಶಿರವೆ । ಚ್ಚರಿಸಿ ತನ್ನನಖಂಡಚಿನ್ಮಯ । ದರಿವು ತಾನೆಂಧಾವನರಿ
ವನು ರಾಯ ಕೇಳೆಂದ ॥೪೦॥ ಹಂದಿಯೇತಕೆ ತನಗೆ ಬನದ ಪು । ಳಿಂದನಲಿ ಸೆಣಸಾಗಲೇಕೆ ಪು । ಳಿಂದ
ನೇಮಾನ್ಯಕನು ನಾವವಮಾನ್ಯರಾದೆವಲೇ ॥ ಇಂದುಮೌಳಿಯುಪೇಕ್ಷೆಯೋ ತಾ । ನಿಂದು ಶಿವಪದ
ಭಕ್ತಿಶೂನ್ಯನೊ । ಮಂದಭಾಗ್ಯನು ತಾನಲಾ ಹಾಯೆನುತ ಚಿಂತಿಸಿದ ॥೪೧॥ ಏಕೆ ಚಿಂತೆವೃಥಾಮ
ನೋವ್ಯಥೆ । ಕಾಕಲಾ ನಾನಜ್ಞನಾಗೆ ಪಿ । ನಾಕಿ ಮಾಡುವುದೇನು ಮರೆವೊಗುವೆನು ಮಹೇಶ್ವ
ರನ ॥ ಈಕಿರಾತನಪರಿಬವನು ಬಳಿ । ಕೇಕನಿಮಿಷಕೆ ಗೆಲುವೆನೆನೆನುತ ವಿ । ವೇಕಸಿರಿಯ ಕಟಾಕ್ಷವಿತ್ತಿಕೆ
ಮಾರಿವನು ಮನವ ॥೪೨॥ ಮೃಣಲಲಿಂಗವ ಮಾಡಿದನು ನಿ ॥ ರ್ಗುಣನ ಸಗುಣಾರಾಧನೆಯ ಮ ॥
ನ್ನಣೆಗಳಲಿ ವಿಸ್ತರಿಸಿದನು ವಿವಿಧಾಗಮೋಕ್ತದಲಿ ॥ ಕಣಗಿಲೆಯ ಬಂದುಗೆಯ ಕಕ್ಕೆಯ । ಸೊಣಬಸರಿ

ಸದಕುಸುಮದಲಿ ರಿಪು । ಗಣಭಯಂಕರನರ್ಚಿಸಿದನಂಧಾಸುರಾಂತಕನ ॥೪೩॥ ಅಮಲಶ್ರೈವಸ್ತ್ರವವ
ಹೇಳಿದು । ನಮಿಸಿದನು ಬಲವೆಂದು ಪುನರಪಿ । ವಿಮಲಮತಿ ಮೈಯಿಕ್ಕಿದನು ನಿಜಭಾವಶುದ್ಧಿಯಲಿ ॥
ಕಮಲಭವಸುರವಂದ್ಯ ಗಿರಿಜಾ । ರಮಣ ಭಕ್ತಕುಟುಂಬಿ ದೇವೋ । ತ್ತಮ ತ್ರಿಯಂಬಕ ಪುಷ್ಟಿವ
ರ್ಧನ ಕರುಣಿಸುವುದೆಂದ ॥೪೪॥ ಗೆಲಿದನೆನ್ನನು ಶಬರನೀತನ । ಗೆಲುವಶಕ್ತಿಯ ಕೊಡು ಕಿರಾತನ ।
ಬಲುಹು ಭಂಗಿಸಿತೆನ್ನ ಬಿಂಕವನೊಡೆಯನೀನಿರಲು ॥ ಹಲವು ಮಾತೇನಿವನ ಮುರಿವ । ಗಳಿಕೆಯನೆ
ಕೃಪೆಮಾಡೆನುತ ಪರ । ಬಲಭಯಂಕರ ಭುಜವನೊದರಿಸುತಿತ್ತಮುಂದಾದ ॥೪೫॥ ಕಾಣಬಹುದೋ
ಶಬರ ನಿನ್ನೀಪ್ರಾಣವೆನ್ನಾಧೀನವರಿಯಾ । ಸ್ಥಾಣುವಿನ ಬಲುಹುಂಟು ಹಿಂಡುವೆನಿನ್ನ ನಿನ್ನಸುವ ॥
ಗೋಣ ಮುರಿವೆನು ಮಿಡುಕಿದೊಡೆ ಶಿವ । ನಾಣೆ ಬಾ ಸಂಮುಖಕೆ ಹಾಣಾ। ಹಾಣಿಗಿನ್ನನುವಾಗೆನು
ತಲೆವೆಯಿಕ್ಕಿದೀಕ್ಷಿಸಿದ ॥೪೬॥ ಕಂಡನರ್ಜುನನೀಕಿರಾತನ । ಮಂಡೆಯಲಿ ತಾಮಳಲಲಿಂಗದ । ಮಂಡೆ
ಯಲಿ ಪೂಜಿಸಿದಬಹುವಿಧಕುಸುಮಮಂಜರಿಯ ॥ ಕಂಡನಿತ್ತಲು ಮುರಿದು ಪುನರಪಿ । ಕಂಡನೀಶ
ಬರಂಗಿದೆತ್ತಣ । ದಂಡಿಯೋ ಹಾಯೆನುತ ಸ್ತೈವೆರಗಾದನಾಪಾರ್ಥ ॥೪೭॥ ಆಗಲಿದನಾರ್ತ್ರೈಪಿನೆನು
ತವೆ । ಯಾಗಮೋಕ್ತದಿ ಮತ್ತೆ ಲಿಂಗದ । ಮೇಗಡೆಯನಿರ್ಮಾಲ್ಯವನು ಬೇರಿರಿಸಿಭಕ್ತಿಯಲಿ ॥ ಹೂ
ಗಳನು ತಿರಿದೊಟ್ಟಿ ಕರುಣಾ । ಸಾಗರನ ಬಲವಂದು ದಕ್ಷನ । ಯಾಗಹರನೆ ನಮಶ್ಶಿವಾಯೆನುತಿತ್ತ
ಮುಂದಾದ ॥೪೮॥ ಮತ್ತೆ ಕಂಡನು ಖಂಡಪರಶುವಿ । ನುತ್ತಮಾಂಗದಲೀಚೆಯಲಿ ಲಿಂ । ಗೋತ್ತ
ಮಾಂಗದಮೇಲೆಕಾಣನು ಕುಸುಮಮಂಜರಿಯ ॥ ತುತ್ತಿದವು ಕೌತುಕವ ರಂಜಿಸಿ । ಹೊತ್ತವದು
ಭುತವನು ಭಯಾನಕ। ವೆತ್ತರಸದಲಿ ಮುಳುಗಿದವು ಕಂಗಳು ಧನಂಜಯನಾ ॥೪೯॥ ಶಿವನಲಾ ಸಾಕ್ಷಾ
ಚ್ಚತುರ್ದಶ । ಭುವನಕರ್ತುವಲಾ ಕಿರಾತ । ವ್ಯವಹರಣೆಯಲಿ ಸುಳಿದುದಸ್ಮದನುಗ್ರಹಾರ್ಥವಲಾ ॥
ಎಮಗಿದನಶನತಪದ ಪಿತ್ತದ । ಬವಣಿ ತಲೆಗೇರಿದುದಲಾ ಶಿವಶಿವ। ಮಹಾದೇವೆನುತ ಮರುಗಿದನಂದು
ಕಲಿಪಾರ್ಥ ॥೫೦॥ ಹೃದಯವಿಬ್ಬಗಿಯಾಯ್ತು ಕಂಗಳು । ಬೆದರಿದವು ವೈವರ್ಣವದಲಿ ತನು । ಗದಗ
ದಿಸಿತಡಿಗಡಿಗೆ ಜಡಿದುದು ರೋಮಹರುಷದಲಿ ॥ ಉದುರಿದವು ನೇತ್ರಾಂಬು ಬಿಂಕದ। ಬೆದರಿಕೆಯ
ಮೂಢತೆಯ ತಿಳಿವಿನ । ಮುದದ ಭೇದದ ಗಾಯಘಾತಿಗೆ ಪಾರ್ಥನೊಳಗಾದ ॥೫೧॥ ಸ್ವೇದಜಲದಲಿ
ಮಿಂದು ಪುನರಪಿ । ಖೇದಪಂಕದೊಳದ್ದು ಬಹಳವಿ । ಷಾದರಜಲದಲಿ ಹೊರಳಿ ಭಯರಸನದಿಯೊ
ಳೀಸಾಡಿ ॥ ಮೈದೆಗೆದು ಮಾರನಾಗಿ ದೆಸಯಲಿ । ಬೀದಿವರಿವುತ ವಿವಿಧಭಾವದ । ಭೇದದಲಿ ಮನ
ಮುಂದುಗೆಡುತಿರ್ದುದು ಧನಂಜಯನಾ ॥೫೨॥ ಏಸುಬಾಣದಲೆಚ್ಚೊಡೆಯುಹೊರ । ಸೂಸಿದವು ನಾನ
ರಿದುದಿಲ್ಲ ಮ । ಹಾಶರೌಘವ ಕಳುಹೆ ನುಂಗಿದೊಡರಿದೆನೇ ಬಳಿಕ ॥ ಆಶರಾಸನಖಡ್ಗವನು ಕೊಳ್ಳ ।
ಲೈಸರೊಳಗೆಚ್ಚತ್ತೆನೇ ಹಿಂ। ದೇಸುಜನ್ಮದ ಜಾಡ್ಯಜವನಿಕೆಯಾಯ್ತು ತನಗೆಂದ ॥೫೩॥ ಆವನನು ಜಪ
ಯಜ್ಞದಲಿ ಸಂ । ಭಾವಿಸುವರಾವನ ಪದಾಂಬುಜ । ಸೇವೆಯಲಿ ಸನಕಾದಿಗಳು ಧನ್ಯಾಭಿಮಾನಿ
ಗಳು ॥ ಆವನೊಬ್ಬನು ನಾದಬಿಂದುಕ । ಯಾವಿಶೇಷಾತೀತನೀತನೊ । ಯಾವು ಸಮರಕೆ ಸೆಣಸಿದೆವಲಾ
ಶಿವಶಿವಾಯೆಂದ ॥೫೪॥ ಆವನನುಯಜ್ಞಾದಿಕರ್ಮದೊ । ಯಾವನನು ನಿಯಮಾದಿಯೋಗದೊ ।
ಯಾವನನುವಿವಿಧಾರ್ಚನಾಂಕಿತಭಕ್ತಿಮಾರ್ಗದಲಿ ॥ ಆವನನು ಜೀವಾತ್ಮಚೈತ । ನ್ಯಾವಲಂಬನನೆಂದು

ಭಜಿಸುವ । ರಾವು ರಣದಲಿ ಸೆಣಸಿದೆವಲಾ ಶಿವಶಿವಾಯೆಂದ ॥೫೫॥ ಲೋಕವಾವನ ಮಾಯೆಯಿಾ
ಜಗ । ಕಾಕವಾಳರವಿರುಚಂದ್ರಾದಿ । ನಾಕಿಗ್ರಹತತಿತಾರೆಗಳಾರತೇಜದಲಿ ॥ ಲೋಕರಚನಾರಕ್ಷೆ
ಸಂಹೃತಿ । ಯಾಕರಣ್ಣೆ ತಾನಾರದಾಜಗ । ದೇಕದೈವದಕೂಡೆ ತೋಡಿಯೆ ಶಿವಶಿವಾಯೆಂದ ॥೫೬॥
ಜೀವರೂಪನು ಸಾಕ್ಷಿ ಕೂಟ । ಸ್ಥಾವಲಂಬನ ಕರ್ತೃ ಚೇತನ । ನಾವನೀಕ್ಷೇತ್ರಜ್ಞನಂತರ್ಯಾಮಿ
ಸಂಜ್ಞೆಯಲಿ ॥ ಆವನಮಲ ಪ್ರತ್ಯಗಾತ್ಮನು । ನಾವನುರುಪರಮಾತ್ಮನೀಶ್ವರ । ರಾವಸಾತನಕೂಡೆ
ಕದನವ ಶಿವಶಿವಾಯೆಂದ ॥೫೭॥ ಸ್ಫುರದಲಿಂಗನುಲಿಂಗಮೂಲೋತ್ಕರನು ದಾರವ್ಯಕ್ತಸದಸ। ತ್ಪರದ
ಪರಶಿವನಾರುಶ್ಶೈವೋತ್ಕರುಷಲಿಂಗದಲಿ ॥ ಪರಮಪರರೂಪಾತ್ಪರಾತ್ಪರ । ತರ ನಿರೂಪನದಾವನಾ
ತನೊ । ಳರರೆ ನಾವೆಚ್ಚಾಡಿದೆವಲಾ ಶಿವಶಿವಾಯೆಂದ॥ ಆರಕಾರವುಕಾರವಿಮಲಮ । ಕಾರಯುಕ್ತೋ ಕಾಕ್ಷ
ರದವಿ । ಸ್ಫುರಿಯಾವನು ಮಾತೃಕಾಕ್ಷರರೂಪನಕ್ಷಯನು ॥ ಆರುವಾಙ್ಮಯನಾರು ವಾಚೋ । ದೂರ
ನಾರು ವಚೋನಿಯಾಮಕ । ನಾರವನಕೂಡೆವಗೆ ಕಲಹವೆ ಶಿವಶಿವಾಯೆಂದ ॥೫೯॥ ಗಾಹುಹತ್ತಾಹ
ತ್ತಿಗಡ ನಿ । ರ್ದೇಹನೊಡನೆ ಮಹಾಶರೌಘಕೆ । ಮೋಹುಗಡ ಜೀವನವು ಮೃತ್ಯುಂಜಯನ ಸೀಮೆ
ಯಲಿ ॥ ಆಹ ಮೊದಲೆಗಡ ಸುನಿಗಮ । ವ್ಯೂಹದೂರನಕೂಡೆ ಹರನೊಡ । ನಾಹವಕೆ ಸಮಜೋಳಿ
ನಾವ್ಗಡ ಶಿವಶಿವಾಯೆಂದ ॥೬೦॥ ಎವಗೆರಡುಕಣ್ಣು ವಿಶ್ವತೋಚ । ಕ್ಷುವಿನೊಡನೆ ಸಕ್ರೋಧದರುಶನ।
ವೆವಗೆರಡುಭುಜವಿಶ್ವತೋಭುಜನೊಡನೆಸಂಗ್ರಾಮ ॥ ಭುವನಚರಣನ ವಿಶ್ವತೋಮುಖ । ಶಿವನ ನ
ವಿಮ್ಮಕಾಲುನಾಲಿಗೆ । ಯವಗಡಿಸಿ ಗೆಲಲಾವ್ನಸಮರ್ಥರೆ ಶಿವಶಿವಾಯೆಂದ ॥೬೧॥ ಹೊಡಿ ಜಗವನು ಜಗ
ದಜೀವರ । ಕೂಡೆ ಬೆರಸಿ ಸಮಸ್ತವಿಷಯದೊ ।ಳಾಡಿ ಸೊಗಸುವನಾತನುಪಭೋಗಪ್ರಪಂಚದಲಿ ॥
ಹೂಡದಳಿಯದಗಮಿಸಿಮರಳದ । ಕೂಡದಗಲದನಿತ್ಯತೃಪ್ತನಿ । ರೂಢನೊಡನೆಚ್ಚಾಡಿದೆವಲಾ ಶಿವಶಿವಾ
ಯೆಂದ ॥ ಆವನೊಬ್ಬನಣೋರಣೀಯನ । ದಾವನುರು ಮಹತೋಮಹೀಯನ । ದಾವ ನಿರುತಂ ದೃಷ್ಟಿ
ಸಂಗತವಿಶ್ವಸಮಯದಲಿ ॥ ಆವನೊಬ್ಬನ ನಾಮರೂಪುಗು । ಣಾವಲಂಬನನಲ್ಲದೀಶ್ವರ । ನಾವನಾತ
ನೊಳೆಮಗೆ ತೋಟಿಯೆ ಶಿವಶಿವಾಯೆಂದ ॥೬೩॥ ಸೇವ್ಯನನು ಸತ್ಕೃತಿಗಳಲಿ ದ್ರ । ಷ್ಟವ್ಯನನು ದೃಢ
ಚಿತ್ತದಲಿ ಮಂ । ತವ್ಯನನಶ್ರೋತವ್ಯನನು ಸಂಕೀರ್ತಿತವ್ಯನನು ॥ ಅವ್ಯಯನನಕ್ಷಯನನಭವನ । ನವ್ಯ
ಥನನ ಜ್ಞಾನದಲಿ ಚೇ । ತವ್ಯಂದೇಸೆಣಸಿದೆವಲಾ ಶಿವಶಿವಾಯೆಂದ ॥೬೪॥ ಸ್ಫುರದಕಾರಾದಿಯ ಹಕಾ
ರೋ । ತ್ತರದಶಬ್ದಬ್ರಹ್ಮಮಯವಿ । ಸ್ತರದಹಂತತ್ವದ ಮಹತ್ತತ್ವಾತಿಶಯಪದದ ॥ ಪುರುಷ ಮೂ
ಲಪ್ರಕೃತಿಗಳನು । ತ್ತರಿಸಿ ತೊಳತೊಳತೊಳಗಿಬೆಳಗುವ । ಪರಮಶಿವನಲಿ ಸೆಣಸಿದೆವಲಾ ಶಿವಶಿವ
ಯೆಂದ ॥೬೫॥ ಸರಸಿಜಾಸನವಿಷ್ಣುರುದ್ರೇ । ಶ್ವರಸದಾಶಿವರಾವಳೊಬ್ಬಳ । ಚರಣಸೇವಾಸಂಗದ
ಲ್ಲಿಯೆ ಸುಪ್ರಸ್ಥಿತರು ॥ ಪರಮಶಕ್ತಿಯದಾವನಂಘ್ರಿಗೆ । ಶಿರವನೊಡ್ಡಿಹಳಾಮಹೋತ್ತಮ । ಪರಮ
ಶಿವನಲಿ ಸೆಣಸಿದೆವಲಾ ಶಿವಶಿವಾಯೆಂದ ॥೬೬॥ ಈಪರಿಯಲರ್ಜುನನ ಮನದನು । ತಾಪವನು ಕಾಣು
ತ್ತಶಾಬರ । ರೂಪರಚನೆಯ ತೆರೆಯಮರೆಯಲಿ ಮೆರೆವಚಿನ್ಮಯದ ॥ ರೂಪನವ್ಯಾಹತನಿಜೋನ್ನತ
ರೂಪರಸದಲಿ ನರನಚಿತ್ತದ । ತಾಪವಡಗಲು ತಂಪನೆರೆದನು ತರುಣಶಶಿಮೌಳಿ ॥೬೭॥ ಅರಸ ಕೇಳೈ
ನಿಮ್ಮಪಾರ್ಥನ । ಪರಮಪುಣ್ಯೋದಯವನೀಶನ । ಕರುಣವನು ಶುಕಸನಕಸಿದ್ಧಾಧ್ಯರಿಗಗೋಚರದ ॥

ನಿರುಪಮಿತನಿಜ ರೂಪವನು ವಿ । ಸ್ತರಿಸಿದನು ವಿವಿಧಪ್ರಭಾವೋ । ತ್ಕರದ ನಿರುಗೆಯ ತೋರಿದನು ಸುತಿಕೋಟಿ ಕೈಮುಗಿಯೆ ॥೧೮॥ ಬಲಿದಚಂದ್ರಿಕೆಯೆರಕವೆನೆ ಥಳ । ಥಳಿಸಿ ಬೆಳಗುವಕಾಯಕಾಂತಿಯ । ಪುಲಿದೊಗಲ ಕೆಂಜೆಡೆಯ ಕೇವಣದಿಂದುಫಣಿಪತಿಯಾ ॥ ಹೊಳೆವಹರಿಣನಅಕ್ಷಮಾಲಾ । ವಲಯದ ಭಯದ ವರದಕರಪರಿ । ಕಲಿತನೆಸೆದನು ಶಂಭು ಸದ್ಯೋಜಾತವಕ್ತ್ರದಲಿ ॥೧೯॥ ಹೊಳೆವಕುಂಕುಮ ಕಾಂತಿಯಲಿ ಥಳ । ಥಳಿಪತನುಗಜಚರ್ಮದುಡಿಗೆಯ । ಲಲಿತದಂತಪ್ರಭೆಯ ದರಹಸಿತಾನನಾಂಬುಜದಾ ॥ ವಿಲಸಿತಾಭಯವರದಕರಪರಿ। ಲುಳಿತಪರಶು ದೃಢಾಕ್ಷಮಾಲಾ । ವಳಿಗಳೊಪ್ಪಿರೆ ವಾಮದೇವಾನನದಿ ರಂಜಿಸಿದ ॥೨೦॥ ಕಾಳಮೇಘಸುವರ್ಣದುರುದಂ । ಷ್ಟ್ರಾಳಿಭೀಷಣನಮಳಜಪಮಣಿ । ಮಾಲಿಕೆಯ ಸುತಿಮೃಗದಪಾಶಾಂಕುಶದ ಡಮರುಗದ ॥ ಶೂಲಘನಖಟ್ವಾಂಗದ್ರುಹಿಣಕ । ಪಾಲಫಣಿವಲಯದ ಕರೋಟೀ । ಮಾಲೆಯಿಂದ ಮಹೋಗ್ರನೆಸೆದನಘೋರವಕ್ತ್ರದಲಿ ॥೨೧॥ ಪರಶು ಡಮರುಗ ಖಡ್ಗ ಖೇಟಕ । ಶರಧನುಶ್ಶೂಲದ ಕಪಾಲದ।ಕರದ ರಕ್ತಾಂಬರದ ಫಣಿಪನ ಭೋಗಭೂಷಣದಾ॥ ಸ್ಫುರದಘೋರದಭೇದದಶಭುಜವ । ಕರದ ಪರಶುಮೃಗಂಗಳಲಿ ತ। ತ್ಪುರುಷಮುಖದಲಿ ಮೆರೆದನೆರಕದಮಿಂಚಿನಂದದಲಿ ॥೨೨॥ ಎಳೆಯಮುತ್ತಿನಥಾಳವನು ಮು । ಕ್ಕುಳಿಸಿದಂಗಚ್ಛವಿಯ ಭಯವರ। ಲುಳಿತಜಪಮಣಿವೇದಪಾಶಾಂಕುಶದ ಡಮರುಗದಾ॥ಲಲಿತಖಟ್ವಾಂಗದ ಕಪಾಲದ। ಹೊಳೆವಶೂಲದಕರದ ನಿಗಮಾವಳಿಶಿರೋಮಣಿ ಮೆರೆದನಂದೀಶಾನವಕ್ತ್ರದಲಿ ॥೨೩॥ ಬೇರೆಬೇರುರಗಣ್ಣಗಳ ಪೂ । ತ್ಕಾರದಹಿಬಂಧದ ಜಟಾಕೋ । ಟೀರಭಾರದ ಮುಖಚತುಷ್ಟಯಭುಜಚತುಷ್ಟಯದಾ ॥ ವಾರಿಜಾಸನವಿಷ್ಣುರುದ್ರಾ । ಧಾರನೀಶ್ವರಪಂಚವಕ್ತ್ರಾ । ಕಾರದಲಿ ಶಿವ ಮೆರೆದ ಪಂಚಬ್ರಹ್ಮರೂಪದಲಿ ॥೨೪॥ ಶ್ರುತಿಗಳುಪನಿಷದಾದ್ಯಖಿಳದೇವತೆಯರಾಕಲ್ಪಿತಕಿರಾತಾ ಕೃತಿಯನುಳಿದರು ಸುಳಿದರೀಶನ ಸುತ್ತುವಳಯದಲಿ ॥ ಸ್ಮಿತಮಧುರಮುಖಕಾಂತಿಕಲ್ಲೋ । ಲಿತಕಟಾಕ್ಷಚ್ಛವಿಯಲೀಶನ । ಧೃತಿಯಲೀಡಿರಿದೆಡದಲೆಸೆದರು ಗೌರಿದೇವಿಯರು ॥೨೫॥ ಸನಕನಾರದ ಭೃಗುಪರಾಶರ। ತನುಜ ಭಾರದ್ವಾಜಗೌತಮ । ಮುನಿವಸಿಷ್ಠಸನತ್ಕುಮಾರನುಕಂಕನುಪಮನ್ಯು ॥ ವನಕೆ ಬಂದರು ಪಾರ್ಥಕೇಳಿದು । ನಿನಗೆ ಸಿದ್ಧಿಗಳೆಮಗೆ ಲೇಸಾ। ಯ್ತೆನುತ ಮೈಯಿಕ್ಕಿದುದು ಹರನಂಘ್ರಿಯಲಿ ಮುನಿನಿಕರ ॥೨೬॥ ಜಯಜಯೆಂದುದು ನಿಖಿಳಜಗವ । ಕ್ಷಯನ ದರುಶನಕೆಂದು ಸುತಿಕೋ। ಟಿಯ ಗಡಾವಣೆ ಗಾಸಿಯಾದುದು ಹರನ ಘಲ್ಲಣೆಗೆ ॥ ನಿಯತವೇನೋ ಜನ್ಮಶತಸಂ । ಚಯದೊಳರರೆ ಕೃತಾರ್ಥನರ್ಜುನ। ಜಯವೆನಲು ಮೊಳಗಿದವು ಭೇರಿಗಳಮರಕಟಕದಲಿ ॥೨೭॥ಬಿಟ್ಟಸೂಟಿಯೊಳೆದ್ದು ಹರುಷಕೆ। ಕೊಟ್ಟ ಮನವನು ನೋಡುತಿರ್ದನು।ನಟ್ಟದೃಷ್ಟಿಯೊಳುಗುವಜಲದಲಿ ರೋಮಪುಳಕದಲಿ॥ ಬಿಟ್ಟ ಹಿಡಿದನು ಹರನ ಕಾಣದೆ । ತೊಟ್ಟರುಝುಗೆಗಳ ರೋಮಹರುಷದ । ಲಿಟ್ಟೆಡೆಯ ಮೈದವಕದರ್ಜುನ ನಿಂದು ಬೆರಗಾದ ॥೨೮॥ ಹರಹಿನಲಿ ಹೊದರೆದ್ದು ಹರುಷದ। ಹೊರೆಳಿಯಲಿ ತೊಡಕರಿಸಿ ಚಿತ್ತವ। ತಿರುಹಿ ಹಿಡಿದನು ಮನಕೆ ಬುದ್ಧಿಯ ಹಮ್ಮುಹಮ್ಮುಗೆಯ ॥ ಕೊರಳುಗೊಳಿಸಿ ಕುಲಾಲಚಕ್ರದ । ಪರಿಭವಣಿಗೆಯ ಪಾಡಿನಲಿ ಕಾ । ತರಿಸುತವನಿಗೆ ಮೈಯನಿತ್ತನು ನೀಡಿ ಭುಜಯುಗವ ॥೨೯॥ ಕ್ಷಮಿಸುವುದು ಸರ್ವೇಶ ಸರ್ವೋ । ತ್ತಮ ವೃಥಾಸುಭಟಾಭಿಮಾನ । ಭ್ರಮಿತನನು ಮೋಹಾಂಧಕೂಪಜಲಾವಗಾಹದಲಿ ॥ ಸ್ತಿಮಿತನನು ದುರ್ಬೋಧವೇದ

ಭ್ರಮಿತನನು ಕಲ್ಯಾಣಪದನಿ । ಗರ್ವಿತನನು ಕಾರುಣ್ಯನಿಧಿ ಕೈಗಾಯಬೇಕೆಂದ ॥೮೦॥ ಅರಿದರಿದು ಮತಿಗೆಟ್ಟಮಾನವ । ಕುರಿಯಲಾ ನೆರೆ ಕಂಡುಕಂಡೆಚ್ಚರದ ಖೂಳನಲಾವಿವೇಕದಮೂಗುಮಾರಿಯಲಾ ॥ ಬರಿಮನದ ಬಾಹಿರನೊಳೆನ್ನಲಿ । ಮರೆವುದಪರಾಧವನು ನಿನ್ನನೆ । ಮೆರೆವುದೈ ಕಾರುಣ್ಯನಿಧಿ ಕೈಗಾಯಬೇಕೆಂದ ॥೮೧॥ ದೇವದೇವ ಕೃಪಾಂಬುನಿಧಿ ಭ । ಕ್ತಾವಲಂಬನ ಭಕ್ತದೇಹಿಕ । ಸೇವಕಪ್ರಿಯ ಭೂತಭಾವನ ಭಾವನಾತೀತಾ ॥ ದೇವವಂದಿತ ಕಾಲರೂಪ ಮಹಾವಿಭವ ಭವರಹಿತ ಪಾವನ । ಪಾವಕಾಂಬಕ ಸುತಿಕುಟುಂಬಕ ಕರುಣಿಸುವುದೆಂದ ॥೮೨॥ ಜಯ ಜಗತ್ತ್ರಯನಾಥ ಭಕ್ತಾ । ಶ್ರಯ ಸದಾಶಿವ ಭಕ್ತವತ್ಸಲ । ಲಯವಿಹೀನ ಮಹೇಶ ಮನ್ಮಥಹರ ಮಹಾದೇವಾ ॥ ಭಯರಹಿತ ಭಾಳಾಕ್ಷ ಲೋಕ । ವ್ಯಯಭವನ ದುರ್ಲಕ್ಷ ದೇವ । ತ್ರಯನಮಸ್ಕೃತ ನಿಗಮಸತ್ಕೃತ ಕರುಣಿಸುವುದೆಂದ ॥೮೩॥ ಸರ್ವಗತ ಸರ್ವಜ್ಞ ಸರ್ವದ । ಸರ್ವಭಾವನ ಸರ್ವತೋಮುಖ । ಸರ್ವಪೂಜಿತ ಸರ್ವಸಾಧಕ ಸರ್ವಗುಣನಿಲಯ ॥ ಸರ್ವಸರ್ವಾಶ್ರಯಸಮಾಹಿತ । ಸರ್ವಮಯ ಸರ್ವೇಶ್ವರೇಶ್ವರ । ಸರ್ವದುಃಖಾಪಹ ಮಹೇಶ್ವರ ಕರುಣಿಸುವುದೆಂದ ॥೮೪॥ ರೂಪರಹಿತ ಸರೂಪ ನಿರ್ಮಲ । ರೂಪ ವಿಶ್ವಾಧಾರ ಸದಸ । ದ್ರೂಪ ರೂಪ ವ್ಯೋಮರೂಪಕ ಸರ್ವತೋರೂಪಾ ॥ ರೂಪರಸಗಂಧಾದಿವಿಷಯವಿರೂಪ ರೂಪಾತೀತ ಸಂವಿ । ದ್ರೂಪ ವಿಮಲವಿರೂಪಲೋಚನ ಕರುಣಿಸುವುದೆಂದ ॥೮೫॥ ರಚಿತಮಾಯ ವಿಮಾಯ ಮಾಯಾ । ನಿಚಿತ ಮಾಯಾಧಾರ ಮಾಯಾ । ರುಚಿರ ಮಾಯಾರೂಪ ಮಾಯಾಮಯ ಜಗನ್ಮಾಯಾ ॥ ಶುಚಿಸತೇಜೋಬಲ ಹಿರಣ್ಯ । ಪ್ರಚಯತೇಜ ಸುತೇಜ ಗೌರೀ । ಕುಚಯುಗಾಂಕಿತವಕ್ಷನೀಕ್ಷಿಸಿ ಕರುಣಿಸುವುದೆಂದ ॥೮೬॥ ಪರಮಹಂಸ ಪರಾತ್ಮ ಪರಮೇ । ಶ್ವರ ಪರಬ್ರಹ್ಮೈಕವಿಗ್ರಹ । ಪರಮಶಿವ ಪರತತ್ವರೂಪ ಪರಾತ್ಪರಾನಂದಾ ॥ ಪರಮಗುಣ ಪರಶಕ್ತಿವಾಗೀ । ಶ್ವರ ಪರಾರ್ತಿಹರೇಶ ಪರಶಂ । ಕರ ಪರಂಜ್ಯೋತಿಯೆ ಪರೋತ್ತಮ ಕರುಣಿಸುವುದೆಂದ ॥೮೭॥ ಲಿಂಗಮಯ ನಿರ್ಲಿಂಗ ತೇಜೋ । ಲಿಂಗ ಲಿಂಗಾತ್ಮಕ ಸದಾಶಿವ । ಲಿಂಗನಿರ್ಮಳಲಿಂಗ ಲಿಂಗಸ್ಥಿತಮಹಾಲಿಂಗಾ ॥ ಲಿಂಗ ವಿಲಸಿತ ಲಿಂಗಚಿನ್ಮಯ । ಲಿಂಗ ಚೇತನ ಲಿಂಗದುರ್ಗಾ । ಲಿಂಗಿತಾಂಗವಿಲಾಸ ಶಂಕರ ಕರುಣಿಸುವುದೆಂದ ॥೮೮॥ ನಿರವಧಿಕ ನಿರ್ಮಾಯ ನಿಸ್ಪೃಹ । ನಿರುಪಮಿತ ನಿರ್ದ್ವಂದ್ವ ನಿರ್ಗುಣ ॥ ನಿರವಯವ ನಿರ್ಲೇಪ ನಿರವಗ್ರಹನಿರಾಧಾರ ॥ ನಿರುಪಮ ನಿರಾಮಯನಿರಂತರ । ನಿರವಶೇಷ ನಿರಂಗ ನಿರ್ಮಲ । ನಿರತಿಶಯ ನಿಷ್ಕಳ ಮಹೇಶ್ವರ ಕರುಣಿಸುವುದೆಂದ ॥೮೯॥ ವಾಮದೇವ ದುರಂತ ವಿಮಲ । ವ್ಯೋಮಕೇಶ ಕೃತಾಂತಹರನಿ । ಸ್ಸೀಮ ಮೃತ್ಯುಂಜಯ ಸಮಂಜಸ ಸರ್ವತೋಭದ್ರಾ ॥ ಭೀಮ ಭರ್ಗ ಕಪರ್ದಿ ಕಲ್ಪಿತ । ನಾಮರೂಪತ್ರಯ ವೃಷಧ್ವಜ । ಕಾಮಹರ ಕರುಣಾಮಹಾರ್ಣವ ಕರುಣಿಸುವುದೆಂದ ॥೯೦॥ ಹರಹರಾ ತ್ರೈಮೂರ್ತಿರೂಪನು । ಧರಿಸಿಯತುಳಮಹಾಷ್ಟಮೂರ್ತಿಯ । ಧರಿಸಿಯನುಪಮವಿಶ್ವಮೂರ್ತಿಯ ಧರಿಸಿ ರಂಜಿಸುವ ॥ ಪರಿಯನರಿವವರಾರು ದೇವಾ । ಸುರಮುನೀಶರಿಗರಿದು ಕೃಪೆಯಿಂ । ಕರುಣಿಸಲುಬಂದೈ ಮಹಾದೇವೆಂದನಾಪಾರ್ಥ ॥೯೧॥ ದೇವಸುರದನುಜೇಶವಂದಿತ । ದೇವಮನುಮುನಿನಿಕರಪೂಜಿತ । ದೇವ ತತ್ವಾಕಾರ ಭಾವಿಪೊಡತಿನಿರಾಕಾರಾ ॥ ದೇವ ಸಾಕಾರದಲಿ ನಿಜಭಕ್ತಾವಳಿಯನುದ್ಧರಿಪಶಿವ ಮಾದೇವ ಕರುಣಿಸಿದೈಯನಾಥಂಗೆಂದನಾಪಾರ್ಥ ॥೯೨॥ ಹರನೆ ಗಂಗಾಧರನೆ ಗಿರಿಜಾ । ವರ

ನೆ ಶಶಿಶೇಖರನೆ ದಕ್ಷಾಧ್ವರಹರನೆ ಶಂಕರನೆ ನಿಜಭಕ್ತರಮನೋಹರನೇ॥ಕರುಣಿಸುವುದುದ್ಧರಿಸುವುದು ಸಂ । ಹರಿಸು ಮತ್ಪರಿಭವವನೆಂದುರು। ತರದಭಕ್ತಿಯಲಂದು ಸೈಗೆಡೆದಿರ್ದನಾಪಾರ್ಥ ॥೯೩॥ ಧರಣಿಪತಿ ಕೇಳೀಶನೀತನ। ಹೊರೆಗೆ ಬಿಜಯಂಗೈದು ಪಾರ್ಥನ । ಶಿರವ ಹಿಡಿದೆತ್ತಿದನು ಬಿಗಿಯಪ್ಪಿದನು ಬರಸೆಳೆದು ॥ ಮರುಳುಮಗನೆ ಮಹಾತಪಸ್ಸಂ । ಚರಣೆಯಲಿ ನೊಂದೈಯೆನುತ ಕಡು । ಗರುಣಿ ಕರುಣಾಮೃತಸಮುದ್ರದೊಳದ್ದಿದನು ನರನ ॥೯೪॥ ಕೂಡೆ ಮೈದಡವಿದನು ಚೈಮುಂ । ಡಾಡಿದನು ಮನನೋಯದಿರು ನೀ । ಮಾಡಿದುಪಹತಿಯೆಂಬುದೆಮಗರ್ಚನೆನಮಸ್ಕಾರ ॥ ಕೋಪದಿರು ಕೊಂಕದಿರು ಭಕ್ತಿಗೆ । ನಾಡೆ ಮೆಚ್ಚಿದೆನೆನ್ನ ಚಿತ್ತಕೆ । ಖೋಡಿಯಿಲ್ಲೆಲೆಮಗನೆ ಗುಹಗಣಪತಿಗಳಾಣೆಂದ ॥೯೫॥ ನರನು ನೀ ಪೂರ್ವದಲಿ ಪೀತಾಂ । ಬರನ ವಿಮಲಾಂಶಪ್ರಸೂತನು। ಪರಮಋಷಿ ನೀನೆನ್ನ ಭಕ್ತನು ಚಿಂತೆಬೇಡಿನ್ನು ॥ ವರದನಾದೆನು ಮಗನೆ ಶಸ್ತ್ರೌ । ತ್ಕರವನಿದನೀ ಮುನ್ನ ಕೊಳ್ಳೆಂ । ದುರುತರಪ್ರೇಮದಲಿ ಕೊಟ್ಟನು ಖಡ್ಗ ಶರಧನುವ ॥೯೬॥ ಸಲಿಸುವೆನು ನೀ ಬೇಡಿದುದ ನಿ । ಸ್ಖಲಿತವಂಜದಿರಿನ್ನು ಸಾಕೆನೆ । ಸುಲಭನೀಭಕ್ತರಿಗೆ ಭಯವಿನ್ನೇಕೆ ನಮಗೆನುತ ॥ ಸಲಿಸು ಪಾಶುಪತಾಸ್ತ್ರವನು ವೆ । ಗ್ಗಳದಬೊಮ್ಮಶಿರೋಸ್ತ್ರವನು ಕೈ । ಗೊಳಿಸುವುದು ಕೃಪೆಯುಳ್ಳೊಡೆಂದನು ನಗುತ ಕಲಿಪಾರ್ಥ ॥೯೭॥ ಸವೆಡಿನುಡಿಯಂತೇ ಚತುರ್ದಶ । ಭುವನಪಾಹವದಕ್ಷವೀಬಾ । ಣವನು ಕೊಟ್ಟೆನು ಮಗನೆ ಬೊಮ್ಮಶಿರೋಮಹಾಶರವ ॥ ದಿವಿಜದನುಜಭುಜಂಗಮಾದಿಗ । ಳವಗಡಿಸಲುರೆ ಹೆಚ್ಚುವುದು ಸಂ । ಭವಿಸದಾಹುತಿಯೆಂದು ಶರವುದ್ದಂಡಬಲವೆಂದ ॥೯೮॥ ಸರಸಿಯಲಿ ಮಿಂದಾಚಮನವಿ । ಸ್ತರಣೆಯೆಲ್ಲವ ಮಾಡಿ ಶೂಲಿಯ । ಚರಣದಲಿ ಮೈಯಿಕ್ಕಿ ನಿಂದನು ಭಾವಶುದ್ಧಿಯಲಿ ॥ ಸರಳಸಾಂಗೋಪಾಂಗಮಂತ್ರೋ । ಚ್ಚರಣಸಂಹೃತಿಮೋಕ್ಷವನು ವಿ । ಸ್ತರಿಸುತ ರಹಸ್ಯದಲಿ ಕೊಟ್ಟನು ಪಾಶುಪತಶರವ ॥೯೯॥ ಜಗವುಘೋಯೆಂದುದು ಜಯಧ್ವನಿ । ಗಗನದಲಿ ಗಾಡಿಸಿತು ಹೂವಿನ । ಮುಗುಳಸರಿವಳೆ ಸುರಿದುದೀಶ್ವರನಂಘ್ರಿಕಮಲದಲಿ ॥ ಥಗೆಯತಳಿ ಮುರಿದುದು ಮನೋರಥ । ದಗಳು ತುಂಬಿತು ನರನ ಮನಬು । ದ್ಧಿಗಳು ನೆರೆಸಿಲುಕಿತ್ತು ಹರಷೋತ್ಸವದ ದಾಳಿಯಲಿ ॥೧೦೦॥ ಹರನ ಕೋಮಲಪಾಣಿಕಮಲ । ಸ್ಪರುಶಪೀಯೂಷದಲಿ ಮುಳುಗಿದ । ನರನ ತನು ನಿರ್ಮೋಕಮುಕ್ತಭುಜಂಗನಂದದಲಿ ॥ ಕಿರಣಲಹರಿಯ ಲಳಿಯ ದಿವ್ಯೋ । ತ್ಕರದ ಚಪಲಚ್ಛವಿಯ ಚಾರು। ಸ್ಫುರಣದಲಿ ಬೋಳೈಸಿದುದು ಸುರನರರ ಕಣ್ಮನವಾ ॥೧೦೧॥ ಸುರಮುನೀಶರ ವೇದಮಂತ್ರೋ।ಚ್ಚರಣನಾದದ ಗರುಡಗಂಧ । ರ್ವರ ಮಹಾಸ್ತುತಿರವದ ತುಂಬುರನಾರದಾದಿಗಳ ॥ ವರರಸಾನ್ವಿತಗೀತದೂರ್ವಶಿ । ಯರ ಸುನೃತ್ಯದ ದಿವ್ಯವಾದ್ಯದ । ಹರನ ಕರುಣಾಂಬುಧಿಯಲೋಲಾಡಿದನು ಕಲಿಪಾರ್ಥ ॥೧೦೨॥ ಧರೆಗೆಸೆವಧರ್ಮಾರ್ಥಕಾಮೋ । ತ್ಕರವನನುಪಮಮೋಕ್ಷಪದವನು। ಧುರದೊಳಹಿತರ ಗೆಲುವಶೌರ್ಯೋನ್ನತಿಯ ಸಾಹಸವ ॥ ಕರುಣಿಸಿದನಪ್ಪಿದನು ಕರೆದನು । ಗಿರಿತನುಜೆ ನೀನುದ್ಧರಿಪುದೀ । ಪರಮಭಕ್ತನನೆನಲು ಕರುಣದೊಳೀಕ್ಷಿಸಿದಳಗಜೆ ॥೧೦೩॥ ಗಿರಿಜೆ ತ್ರಿಜಗನ್ಮಾತೆ ರಕ್ಷಿಸು । ಪರಮಕರುಣಾಮೂರ್ತಿ ಜಗದೊಳು । ಸಿರಿ ಸರಸ್ವತಿ ಚಂಡಿ ದುರ್ಗಿಯರೆಂಬ ನಾಮದಲಿ ॥ ಚರಿಸುತಿಹನಿನ್ನೇಕಮೂರ್ತಿಯ । ಪರಿಯನರಿವವರಾರೆನುತ ತ । ಚ್ಚರಣಯುಗಳಕ್ಕೆರಗಿ ಪುಳಕಿತನಾದನಾಪಾರ್ಥ ॥೧೦೪॥ ಕಂಜನಾಭನಮೈದುನನೆ ಬಾ । ಅಂಜದಿರುನಿನಗಾಂತರಿಪುಗಳ ।

ಭಂಜಿಸುವಸಾಮರ್ಥ್ಯದನುವನು ತಳೆದು ರಂಜಿಸುವ ‖ ಅಂಜನಾಸ್ತ್ರವನಿತ್ತು ಮಗನೆ ಧ। ನಂಜಯನೆ ನಿನಗೆನುತ ಕರುಣದಿ। ಮಂಜುಳಾರವದಿಂದ ತಚ್ಛಸ್ತ್ರವನು ಬೆಸಸಿದಳು ॥೧೦೫॥ ಒಂದುದಶಶತಸಾವಿರದಹೆಸ । ರಿಂದ ಲಕ್ಷವುಕೋಟಿಯರ್ಗಣಿತ । ದಿಂದ ನಿನಗಾಂತದಟರಿಪುಗಳ ತಿಂದು ತೇಗುವುದು ‖ ಬಂದು ಬೆಸನನು ಬೇಡುವುದು ತಾ। ನೊಂದುಶರರೂಪಾಗೆನುತಮುದ। ದಿಂದವರಮಂತ್ರೋಪದೇಶವನಿತ್ತಳರ್ಜುನಗೆ ‖ ಕರಿಮುಖನ ಷಣ್ಮುಖನ ಚರಣ । ಕ್ಕೆರಗಿ ನುತಿಸುತ್ತಿರಲು ಪಾರ್ಥನ, ಪರಮಭಕ್ತಿಗೆ ಮೆಚ್ಚಿ ತೆಗೆದಪ್ಪಿದರು ಕರುಣದಲಿ ‖ ವರಮಹಾಸ್ತ್ರಂಗಳನು ಮಂತ್ರೋ । ತ್ಕರವನವರೊಲಿದಿತ್ತುಗೆಲು ನೀ । ಧುರದೊಳಹಿತರನೆಂದು ಹರಸಿದರಾಧನಂಜಯನ ॥೧೦೭॥ ಸರಳ ಸಾಂಗೋಪಾಂಗವನು ನಿನ । ಗರುಹಿದೆನು ನೀನಿನ್ನು ಶಕ್ರನ । ಪುರಕೆ ನಡೆ ನಿಮ್ಮುತ್ತರೋತ್ತರಕಾರ್ಯಗತಿಗಳಿಗೆ ‖ ಪರಿಸಹಾಯನು ನಮ್ಮಸತ್ವದ । ಪರಮರೂಪಾತ್ತನುಕಸಾ ನೀ । ನರಿದರೆಂದು ಮಹೇಶ ಬೀಳ್ಕೊಟ್ಟನು ಧನಂಜಯನ ‖ ನಿಮ್ಮಕಥೆ ವೇದೋಕ್ತವಾಗಲಿ । ನಿಮ್ಮಚರಿತ ಸುಚರಿತವಾಗಲಿ । ನಿಮ್ಮಕಥನಾಮೃತವನಾಲಿಸಿ ಕೇಳ್ದರಘ ಕೆಡಲಿ ‖ ನಿಮ್ಮ ನಿಂದಿಸುವವರುಗಳು ದು । ಷ್ಕರ್ಮಿಗಳು ಪಾತಕರು ತಾನಿದು ನಮ್ಮ ಮತವೆಂದಭವ ಹರಸಿದನಾಧನಂಜಯನ ‖ ದೇವಿಯರು ಗುಹಗಣಪಮುಖ್ಯಗ । ಣಾವಳಿಗೆ ಪೊಡಮಟ್ಟನವರ ಕೃ । ಪಾವಲೋಕನದಿಂದ ಹೊಂಪುಳಿವೋದನಡಿಗಡಿಗೆ ‖ ದೇವ ಬಿಜಯಂಗೈದ ರಜತ । ಗ್ರಾವಶಿಖರಕೆ ಮನದೊಳಗೆ ಸಂ । ಭಾವಿಸಿದನೀವೀರನಾರಾಯಣನಮೈದುನನ ॥೧೧೦॥

ಅಂತು ಸಂಧಿ ೬ ಕ್ಕೆ ಪದ ೩೧೮ ಕ್ಕಂ ಮಂಗಳಮಸ್ತು.

ಏಳನೆಯ ಸಂಧಿ.

ಸೂ॥ ಹರನ ಪಾಶುಪತಾಸ್ತ್ರಲಾಭೋ । ತ್ಕರುಷಹರ್ಷೋತ್ಸವದಲಿಂದ್ರನ ।
ಪುರವ ಹೊಕ್ಕನು ಪಾರ್ಥನೆಸೆದನು ಶಕ್ರತೇಜದಲಿ ॥

ಕೇಳು ಜನಮೇಜಯಧರಿತ್ರೀ । ಪಾಲ ವರಕೈಲಾಸವಾಸಿಯ । ಬೀಳುಗೊಂಡನು ತದ್ವಿಯೋಗದಲಿಂದ್ರಕೀಲದಲಿ ‖ ಮೇಲುದುಗುಡದಲಸ್ತ್ರಲಾಭವ । ನಾಲಿಸದೆ ಶಂಕರಪದಾಂಬುಜ । ದೋಲಗದ ಸಿರಿ ತಪ್ಪಿತೆನುತುಮ್ಮಳಿಸಿದನು ಪಾರ್ಥ ॥೧॥ ಮರುಳ ದೇವಾರ್ಚನೆಯೊ ಕನಸಿನಸಿರಿಯೊ ಶಿಶುವಿನ ಕೈಯರತ್ನವೊ । ಪರಿಯಹೂಮಾಲೆಯೊ ಮದೀಯವಿವೇಕವಿಭ್ರಮವೋ ‖ ಹರನನೀಚರ್ಮಾಕ್ಷಿಯಲಿ ಗೋ । ಚರಿಸೆ ಬೇಡಿದುದಂಬು ಮರ್ತ್ಯದೊ । ಳಿರವು ಮರುಭೂಮಿನ್ನ ಪುಣ್ಯವೆನುತ್ತ ಬಿಸುಸುಯ್ದ ॥೨॥ ಅರಸ ಕೇಳದ್ಭುತವನಿತ್ತಲು। ಚರಮದಿಗ್ಭಾಗದಲಖಿಳಜಲ। ಚರನಿಕಾಯದ ಮುಂಗುಡಿಯಲಿಕ್ಕಿಲದ ಫಣಿಕುಲದಾ ‖ ವರನದೀನದಕೋಟಿಗಳ ಸಾ। ಗರದ ಪರಿವಾರದಲಿ ಬಂದನು । ವರುಣನಮರೇಂದ್ರನ ಕುಮಾರನ ಕ್ರಾಂತವಕದಲಿ ॥೩॥ ವಿಕಟರಾಕ್ಷಸಯಕ್ಷಜನಗು ।ಹ್ಯಕರು ಕಿನ್ನರಗಣಸಹಿತಪುಷ್ಪಕದಲೈತಂದನು ಧನೇಶ್ವರನಾತಪೋವನಕೆ ‖ ಸಕಲಪಿತೃಗಣಸಹಿತದೂತ । ಪ್ರಕರಧರ್ಮಧ್ವಕ್ಷರೊಡನಂ। ತಕ

ನು ಬೆರಸಿದನಿಂದ್ರಕೀಲಮಹಾವನಾಂತರವ ||೪|| ಹಿಡಿದಸಾಲಿನ ಸತ್ತಿಗೆಯ ಬಲ | ನೆಡಕೆ ಕೆದರುವ
ಸೀಗುರಿಯ ಮುಂ | ಗುಡಿಯ ವಿದ್ಯಾಧರಮಹೋರಗಯಕ್ಷರಾಕ್ಷಸರ ||ಜಡಿವಕಹಳಾರವದ ನೆಲನು |ಗ್ಗ
ಡಣೆಗಳ ಕೈವಾರಿಗಳ ಗಡ | ಬಡೆಯ ಗರುವಾಯಿಯಲಿ ಗಗನದಿನಿಳಿದನಮರೇಂದ್ರ ||೫|| ಕಂಡನನಿಬ
ರ ಬರವನೊಲಿದಿದಿ | ಗೊಂಡನವರವರುಚಿತದಲಿ ಮುಂ | ಕೊಂಡು ಮನ್ನಿಸಿ ಮನವ ಪಡೆದನು
ಲೋಕಪಾಲಕರ ||ಖಂಡಪರಶುವಿನಸ್ತ್ರವನು ಕೈ | ಕೊಂಡೆನಿನಗೇನರಿದು ನೀನು| ದ್ದಂಡಬಲನೆಂದನಿಬ
ರುಪಚರಿಸಿದರು ಫಲುಗುಣನ ||೬|| ಆಮಹಾಸ್ತ್ರಕೆ ಬಳುವಳಿಯ ಕೊ | ಳ್ಳೀಮದೀಯಾಸ್ತ್ರವನೆ
ನುತ ಸು | ತ್ರಾಮನಿತ್ತನು ದಿವ್ಯಬಾಣವನಿಂದ್ರಸಂಜ್ಞಕವ || ಸಾಮವರ್ತಿಕದಂಡವಾರುಣ |
ತಾಮಸವ ಸಮ್ಮೋಹನನಿವಂ | ದಾಮಹಾಂತಕವರುಣಧನವರು ಕೊಟ್ಟರಂಬುಗಳ ||೭|| ಎಲೆಧ
ನಂಜಯ ನಿನಗಿದೇನ | ಗ್ಗಳದ ಶರವೇ ನಿನ್ನಭಕ್ತಿಗೆ | ಸಿಲುಕಿದನು ಶಿವನಾತನಂಬಿದೆ ನಿನ್ನ ಸೀಮೆ
ಯಲಿ || ಸುಲಭ ನಿನಗಿಂದಮಳಲಕ್ಷ್ಮೀ | ನಿಲಯ ನೀನೇಪೂರ್ವದಲಿ ನಿ | ರ್ಮಲಿನನರಋಷಿ
ಯೆಂಬ ಹಳಿ ತೆಗೆದಪ್ಪಿದನು ಮಗನ ||೮|| ಕೃತತಪಸ್ಸಿಂ ಭಿನ್ನಭೇದ | ಕ್ಷತಶರೀರವ್ಯಥೆಯನಮರಾ|
ವತಿಯೊಳಗೆ ಕಳೆ ರಥಸಹಿತ ಕಳುಹುವೆನು ಮಾತಲಿಯ || ಕ್ರತುಶತದ ಕೈಗಾಣಿಕೆಯ ದೀ | ಕ್ಷಿತರ
ಸಿರಿಯಂತರವ ಮನವಾ | ರತೆಯವೆಂತುಟೊ ಕಾಣಬೇಹುದು ಪಾರ್ಥನೀನೆಂದ||೯||ಕೃಪಸಾದವು ನೂ
ರುಯಜ್ಞದ | ವ್ಯಾಮೋಹನಾಡನು ಮೆಚ್ಚಲೆವಿಮ್ಮಾ| ಊಹೆಗಳಿಗಳವಡ.ವದೊಲ್ಲೆವೆ ನಿಮ್ಮಕರುಣದಲಿ ||
ಐಹಿಕದಲಾಮುಷ್ಮಿಕದ ಸಂ| ನಾಹ ಸಂಭವಿಸುವುದೆ ನಿಷ್ಪ್ರ | ತ್ಯೂಹವೆಂದೆರಗಿದನು ಫಲುಗುಣನಿಂದ್ರ
ಸಂಪ್ರೀತಿಯಲಿ ||೧೦|| ಬೀಳುಕೊಟ್ಟನು ನರನನೀದಿ | ಕ್ಪಾಲರಂತರ್ಧಾನದೊಡನೆ ಸ | ಮೇಳರಾದರು
ಶಕ್ರಸಾರಥಿ ಸುಳಿದನಭ್ರದಲಿ || ಜಾಳಿಗೆಯ ಮಣಿವೆಳಗುಗಳ ವ್ಯಾ| ಹಾಳಿಗಳ ವೈಡೂರ್ಯದೀಪ್ತಿನಿ|
ವಾಳಿಗಳ ಸುಪತಾಕೆ ಬೆಳಗುವಹೇಮರಥಸಹಿತ ||೧೧|| ಅರಸ ಕೇಳ್ಕೈ ಹತ್ತುಸಾವಿರ | ತುರಗನಿಕರದ
ಲಳಿಯದಿವ್ಯಾಂ| ಬರದ ಸಿಂಧದ ಸಾಲಸತ್ತಿಗೆಗಳ ಪತಾಕೆಗಳ || ಖರರುಚಿಯ ಮಾರಾಂಕವೋ ಸು
ರ | ಗಿರಿಯ ಸೋದರವೋ ಮೃಗಾಂಕನ | ಮರುದಲೆಯೊ ಮೋಹನಲು ರಥ ಹೊಳೆದಿಳಿದುದಂಬರದಿ
||೧೨||ಏನಿದಚ್ಚರಿ ಮೇಲೆಮೇಲೆ ನ | ವೀನದರ್ಶನವೆನ್ನ ಪುಣ್ಯಾ | ಸ್ಥಾನವೈಸಲೆಯೆನುತ ನರನಿದಿರಾದ
ನಾರಥಕೆ || ನೀನಹೈ ಕಲಿಪಾರ್ಥನೆಂಬವ |ಹಾನರೇಶ್ವರನೆನುತ ಮಿಗೆ ಸುಸ್ಮಾನಿಸುತ ಸುರಪತಿಯ ಸಾ
ರಥಿ ನಿಲಿಸಿದನು ರಥವ ||೧೩|| ಲಲಿತಹೇಷಾಧ್ವನಿಯ ಹಯವಂ| ಡಲದ ಮೌಳಿಯ ಮೋಲುದಾಯದ|
ಲುಳಿಯ ಚಿತ್ರಾಕೃತಿರವದ ಪಲಪಲತೆರದ ಫಳಹರದಾ || ಚಲತುರಗಖುರಹತಿಯ ರಭಸೋ | ಚ್ಚಲಿತ
ಧೂಳೀಧೂಸರದ ರಥ|ದೊಳಗೆ ನಿಂದಾಶಕ್ರಸಾರಥಿ ನುಡಿಸಿದನು ನರನ ||೧೪|| ಏಳು ಫಲುಗುಣಹರಿ
ವರೂಥದ | ಮೇಲೆ ಬಿಜಯಂಗೈವಬಹಳಫ | ಲಾಳಿಯಿದೆಲಾ ನಿನ್ನ ಪುಣ್ಯಾದ್ರುಮದ ಬೇರೊಡೆದು ||
ಸಾಲಕುರಿದರಿಹಿಗಳಕರ್ಮದ | ಕೂಲಿಗರ ಜಡಜಂಝುಪೂಗರ | ಜಾಲದವರನಿಮಿಷರ ಪುರಿ ವಶವಾ
ಯ್ತುನಿನಗೆಂದ ||೧೫|| ಬಲ್ಲರಾರದನಶ್ವಮೇಧದ | ಮಲ್ಲರನು ಕೃತರಾಜಸೂಯರು | ಬಲ್ಲರೇ ಕಡೆ
ಬೀಡ ಕೋಟೆಯ ಗುಡಿಯ ಬೊಡ್ಡಿಯರಾ ||ಎಲ್ಲಿಯಮರಾವತಿ ನರಾಧಮ | ರೆಲ್ಲಿ ನಾವೀಶ್ವರನಕರು
ಣದ | ಭುಲ್ಲವಣೆಯಲಿ ಭಾಗ್ಯನೆಂದನು ನಗುತ ಕಲಿಪಾರ್ಥ || ಎನುತ ತೇರಿನೊಳೊಂದುಕಾಲಿ | ಟ್ಟ

ನು ಧನಂಜಯನಿಂದ್ರಕೀಲದ । ವನಕೆ ಕೈಮುಗಿದೆರಗಿ ನುಡಿದನು ಮಧುರವಚನದಲಿ ॥ ಮುನಿಜನವೆ ಪರ್ವತವೆ ಪಂಕಜ । ವನವೆ ತರುಲತೆಗುಲ್ಮಖಗಮೃಗ । ವನಚರವೆ ನಾ ಹೋಗಿ ಬಹೆನೇ ನಿಮ್ಮನುಜ್ಞೆಯಲಿ ॥೧೭॥ ಎಂದು ರಥವೇರಿದನು ಪಾರ್ಥಪು । ರಂದರನ ಸಾರಥಿಗುಣೌಘವ । ನೊಂದುಸಾಲಗೆಯಿಂದ ಹೊಗಳಿದನಾಧನಂಜಯನಾ॥ಗೊಂದಣ ದವಾಘೆಗಳನೆಲ್ಲವ। ನೊಂದುಗೂಡಿ ಕಿರೀಟಿ ದೃಷ್ಟವಾಗೆಂದು ಮತ್ತಲಿ ಚಪ್ಪರಿಸಿದನು ಚಪಲವಾಜಿಗಳ॥೧೮॥ಆವಜವವೇನೆಂಬಗತಿ ಮೇ । ಣಾವಧೃಥವೇಗಾಯ್ಲತನ ತಾ । ನಾವಸೂಟಿಯದಾರುಬಲ್ಲರು ವಹಿಲವಿವರಣವ ॥ ತೀವಿತಾಕಾಶವನು ಹೇಷಾ । ರಾವ ಸೂತ್ರನ ಹುಂಕೃತಿಧ್ವನಿ।ಯೀವಿಗಡರಥಚಕ್ರಚೀತ್ಕೃತಿ ಚಪಲನಿರ್ಘೋಷ॥೧೯॥ತೇರು ಮೇಲಕ್ಕಡರೆ ನುಡಿದನು। ಸಾರಥಿಗೆ ಕಲಿಪಾರ್ಥ ವಿವರಿಸು । ಧಾರಿಣಿಯಪರ್ವತಸಮುದ್ರದ್ವೀಪನದನದಿಯ ॥ ತೋರುವೀಲೋಕಂಗಳಳತೆಯ । ಸೂರಿಯನ ರಥಗತಿಯನೆಸೆವಾ । ಮೇರುವನು ಪಸರಿಸಿದಗಿರಿಗಳ ತಿಳಿಯ ಹೇಳೆಂದ ॥ ಧರೆಯಸಾಂತವರಾರು ಧಾರಿಣಿ । ಯಿರವದೇತರಮೇಲೆ ದಿಗ್ದೇ। ವರಪುರಂಗಳವೆಲ್ಲಿಹವು ಬೊಮ್ಮಾಂಡವೆನಿತಗಲ ॥ ಉರುತರಗ್ರಹತಾರೆಯಾಧ್ರುವ । ನಿರವು ಮೇಲೆನಿತೆನಿತುಯೋಜನ । ವರುಹೆನಲು ಪಾರ್ಥಂಗೆ ಮತ್ತಲಿ ನಗುತ ವಿವರಿಸಿದ ॥ ಕೇಳು ನೀನೆಲೆಪಾರ್ಥ ತಾರಾ । ಮಾಲೆಗಳ ವಿವರವನು ರವಿರಥ।ಕಾಲಚಕ್ರವನೈದಿ ಗಗನಾಂಗಣದಿ ಚರಿಯಿಪುದು ॥ಲೀಲೆಯಿಂದಬ್ಜೋದರನು ಸಲೆ। ಪಾಲಿಸುವಲೋಕಗಳನೆಂದವ।ಶೂಲಿಯಂಘ್ರಿಯ ನೆನೆದು ಪೇಳಿದ ಭುವನಕೋಶವನು॥೨೨॥ಕೆಳಗಣಂಡಕಟಾಹ ತೊಡಗಿಯೆ।ಜಲವು ತುಂಬಿಹುದದರ ಘಾತವು। ತಿಳಿಯಲಿಪ್ಪತ್ತೈದುಕೋಟಿಯಪವಣ ಪಡೆದಿಹುದು ॥ ಇಳೆಯದರಮೇಲೊಂದುಕೋಟಿಯ । ದಳದಲಿಹುದಲ್ಲಿಂದಮೇಲಣ। ದಳತೆಯದು ಚವ್ವೀಸಕೋಟಿಯಜಾಂಡಪರಿಯಂತ ॥೨೩॥ ಪತ್ತಿರೆಯಲಿಹುದತಳವಲ್ಲಿಂ । ದತ್ತ ವಿತಳಸುತಳತಳಾತಳ । ದೊತ್ತಿನಮಹಾತಳ ರಸಾತಳ ಕೆಳಗೆಪಾತಾಳ॥ಬಿತ್ತರದ ಲೋಕಂಗಳೇಳು ಧ। ರಿತ್ರಿಯೊಳಗೊಂದೊಂದದರಂತರ । ಪತ್ತುಪತ್ತುಸಹಸ್ರಯೋಜನ ಪಾರ್ಥ ಕೇಳೆಂದ ॥೨೪॥ ಉತ್ತಮವು ಭೂಲೋಕವಲ್ಲಿಂ । ದತ್ತಭುವಸುವಲೋಕವಲ್ಲಿಂ । ದತ್ತ ಮಹಜನಲೋಕವಲ್ಲಿಂದತ್ತ ತಪಲೋಕ ॥ ಉತ್ತಮೋತ್ತಮವಿವಕೆ ಮೇಲಣ । ಸತ್ಯಲೋಕಾದಿಗಳ ನೋಡಿ ಧ । ರಿತ್ರಿಯಲಿ ಬಲುಗಾಹ ಕೊಟ್ಟನು ಲೋಕಪಾಲಕರ ॥೨೫॥ ತರವಿಡಿದಮೇಲಣಜಗಂಗಳು । ತರಣಿಮಂಡಲತೊಡಗಿಯತಿವಿ । ಸ್ತರವೆನಿಸಿ ಬೊಮ್ಮಾಂಡಪರಿಯಂತಡಕಿಲಾಗಿಹವು ॥ ಮರುತನಾಧಾರದಲಿ ಲಕ್ಷ್ಮೀ । ಕರವೆನಿಸಿ ದೇವರುಗಳಿಂದವೆ । ಭರಿತವಾಗಿಹವವರ ಮಹಿಮೆಯ ಹೇಳಲರಿದೆಂದ ॥೨೬॥ ಧಾರುಣಿಯನಹಿತಾಳ್ದನಾತನ । ವೀರಕಮಠನು ಹೊತ್ತನನಿತರ। ಭಾರವನು ನಿಜಶಕ್ತಿ ಧರಿಸಿಹಳೊಂದುಲೀಲೆಯಲಿ ॥ ತೋರಗಿರಿಗಳುವೆರಸಿದಿಳೆತಾ । ನೀರೊಳದ್ದುವುದೆಂದು ಸಲೆ ಮದ । ವಾರಣಂಗಳು ಧರಿಸಿಕೊಂಡಿಹವೆಂಟುದಿಕ್ಕಿನಲಿ ॥೨೭॥ ಧರಣಿ ತಾನೈವತ್ತುಕೋಟಿಯ । ಹರಹು ಸಪ್ತಸಮುದ್ರಹೊರಗಾ । ವರಿಸಿ ಜಂಬೂದ್ವೀಪ ನಡುವಿಹುದಲ್ಲಿ ಭದ್ರಾಶ್ವ ॥ ವರುಷಭಾರತಕೇತುಮಾಲವು । ಕುರುವರುಷವಿವು ಪತ್ರವಾಸುರ । ಗಿರಿಯ ಹೊರಗಾಗಿಹವು ಕರ್ಣಿಕೆಯಂತೆಕನಕಾದ್ರಿ ॥೨೮॥ ಲೆಕ್ಕದೊಳು ಹದಿನಾರುಸಾವಿರ। ಮಿಕ್ಕವಸುಧೆಯೊಳಾಳುಗೋಲದು । ಮಿಕ್ಕಚೌರಾಶೀತಿಸಾಸಿರಯೋಜನದ ನಿಲವು ॥ ಲೆಕ್ಕಿಸಲು ಗಿರಿಶಿಖರದಗಲವ । ದಕ್ಕು

ಮೂವತ್ತೆರಡುಸಾವಿರ । ದಿಕ್ಕಿನೊಡೆಯರಿಗೆಂಟುಪಟ್ಟಣವದರಮೇಲಿಹವು ॥೨೯॥ ನಡುವೆ ಚತುರಾ
ನನನ ಪಟ್ಟಣ । ದೆಡೆದೆರವು ಹದಿನಾರುಸಾವಿರ । ಕಡುಚಲುವಿನಿಂದೆಸೆವವಿಸುನಿಯಕೋಟಿ ನವರತ್ನ॥
ಎಡೆಗೆಡೆಗೆಕೇವಣಿಸಿದಂಗಡಿ । ಗಡಣೆಯಿಲ್ಲದಹರ್ಮ್ಯನಿಚಯಕೆ । ಪಡಿ ಚತುರ್ದಶಭುವನದೊಳಗಿಲ್ಲೆ
ನಿಸಿ ಮೆರೆದಿಹುದು ॥೩೦॥ ಹರಳುಗಳ ಕೇವಣದ ಮಂಗಳ । ಕರವೆನಿಪ ತೊಡಿಗೆಗಳ ದಿವ್ಯಾಂ। ಬರದಿ
ಬೆಳಗುವತನುಲತೆಯ ನವಮಣಿಯ ಮೌಳಿಗಳಾ ॥ ತರಳಲೋಚನದಿಂದುವದನದ । ಪರಮಸೌ
ಭಾಗ್ಯದ ವಿಲಾಸದ । ಪರಿಜನಂಗಳು ಕಮಲಭವಪುರದಲ್ಲಿ ನೆಲಸಿಹರು ॥೩೧॥ ಹಲವುನೆಲೆಚ
ಲುವಿಕೆಗೆ ಸಲೆ ಹೊಂ । ಗಲಸ ಲೋಕಕೆ ವಿಲಸಹೇಮದ । ಕೆಲಸಗತಿಯಲಿ ಚಲುವೆನಿಸಿದು
ಪ್ಪರಿಗೆ ನೋಳ್ಪರಿಗೆ ॥ ಹೊಳಹಿನಲಿ ಥಳಥಳಸುತಿಹುದಾ । ನಳಿನಪೀಠನ ಭವನ ಸಭದಿಂ । ದಿಳಿ
ವಗಂಗೆಯ ಧಾರೆ ಮೆರೆವುದು ಪುರದ ಬಾಹೆಯಲಿ ॥೩೨॥ ಮೇರೆಯಿಲ್ಲದದೇವತತಿಗಳ । ಭಾ
ರದಿಂ ಜಗ ಜರಿವುದೆಂದಾ । ಮೇರುವಿಂಗಾನಿಸಿದರಜತಸ್ತಂಭವೋ ಮೇಣು ॥ ಸಾರತರಸುಕೃತ
ವನು ಸಂಚಿಸಿ । ಧೀರತೈದುವಸತ್ಯಲೋಕದ। ದಾರಿಯೆಂಬಂದದಲಿ ಗಂಗೆಯಧಾರೆಮೆರೆ ದಿಹುದು ॥೩೩॥
ನರಸುರರುಮೊದಲಾದಸಚರಾ । ಚರಚ ಜೀವರಘಂಗಳನು ಸಂ । ಹರಿಸಲೋಸುಗ ಸತ್ಯಲೋಕದಿನಿಳಿ
ದು ಬಹಗಂಗೆ॥ ಧರೆ ಧರಿಸಲರಿದೆಂದು ಕನಕದ। ಗಿರಿಯಶಿಖರದನಡುವೆ ಬರುತಿಹ। ಪರಮಪಾವನೆ ತಿರುಗಿ
ಹರಿದಳು ನಾಲ್ಕುಮುಖವಾಗಿ॥೩೪॥ ಅಳಕನಂದೆ ಸುಚಕ್ಷುನಿರ್ಮಲ। ಜಲಜಭದ್ರೆಯು ಸತ್ಯೆಯೆಂಬಿವು।
ತಿಳಿಯೆ ದಕ್ಷಿಣವಾದಿಯಾಗಿ ಪ್ರದಕ್ಷಿಣಾರ್ಧದಲಿ ॥ ಸುಳಿದು ಮೇರುವಿನಿಂದ ಕುಲಗಿರಿ । ಗಿಳಿದು
ಜಾಹ್ನವಿ ನಾಲ್ಕುದಿಕ್ಕಿನ । ಜಲನಿಧಿಯ ಬೆರಸಿದಳು ಕೇಳ್ಜಗದಘವನಪಹರಿಸಿ ॥೩೫॥ ಸುರಗಿರಿಯ
ಮೊದಲಲ್ಲಿ ಕೀಲಕ । ಗಿರಿಯ ನಾಲ್ಕವರಲ್ಲಿ ಕೇಸರ । ಸರಸಿನಾಲ್ಕರುಣೋದೆ ಭದ್ರೆ ಸಿತೋದೆ ಮಾನ
ಸದಾ॥ ಹೊರಗೆ ನಾಲ್ಕುದ್ಯಾನಕೀಲಕ। ಗಿರಿಯುದಯವೈವತ್ತುಯೋಜನ।ಹರಹು ತಾನು ಸಹಸ್ರಯೋ
ಜನವದರಶಿಖರದಲಿ ॥೩೬॥ ಸುರಪತಿಯ ದಿಕ್ಕಿನಲಿ ಬೆಳೆದಿಹ । ದರಳಿಜಂಬೂವೃಕ್ಷ ತೆಂಕಲು । ಹಿರಿದೆ
ನಿಪತನಿವರ್ಣ್ಣರಸ ನದಿಯಾಗಿ ಹರಿದಿಹುದು ॥ ವರುಣನಿಹದೆಸೆಯಲಿ ಕದಂಬವು । ಹರಸಖನ ದಿಕ್ಕಿನಲಿ
ವಟಕುಜ । ಸುರರಿಗಾಶ್ರಯವೆನಿಸಿ ಕೀಲಕಗಿರಿಯಮೇಲಿಹುದು ॥೩೭॥ ಮಂದರಾಚಲ ಮೂಡ ತೆಂ
ಕಲು । ಗಂಧಮಾದನ ವಿಮಳಪಶ್ಚಿಮ । ದಿಂದ ಬಡಗ ಸುಪಾರ್ಶ್ವವೆಂಬಿವು ಕೀಲಕಾದ್ರಿಗಳು ॥ ನಂ
ದನವು ಬಡಗಣದು ಪಡುವಣ । ಚಂದವಹವೈಭ್ರಾಜ ತೆಂಕಲು । ಗಂಧಮಾದನ ಚೈತ್ರರಥ ಮೂಡ
ಣದು ಕೇಳೆಂದ ॥೩೮॥ ಶೀತಳಾಂತಕಕುಂಡ ಮಳಯ ಕು । ರಾತಿವೈರಂತಕವು ಮೂಡಲು । ನೀತಿವಿ
ದನೆ ತ್ರಿಕೂಟ ಶಿಶಿರಪತಂಗರುಚಿ ನಿಷಧ ॥ ಖ್ಯಾತವಿವು ತೆಂಕಣದ ಕಪಿಲನ । ಜಾತಿವಾರಿಧಿಗಂಧಮಾ
ದನ । ತಾತವಿವು ಸುಖವಾಸಮಿಗೆ ವೈಡೂರ್ಯಪಶ್ಚಿಮದಿ ॥೩೯॥ ನಾಗಕಾಲಾಂಜನವು ಹಂಸನು ।
ಮೇಗೆ ವೃಷಭನು ಶಂಖಕೂಟವ । ನೀಗಳೀಕ್ಷಿಸು ಬಡಗಲೆಕ್ಕಕೆನಾಲ್ಕುವನು ಬಳಿಕ ॥ ಮೇಗೆ ಕೇಳೀರೈ
ದುದೆಸೆಗಳ। ಲಾಗಿರಿಯ ಹೊರಗಿಹರು ಸುರಜನ। ಯೋಗಿಸಿದ್ಧನಿಷೇವಿತರು ತಾವಾಗಿ ವಿಭವದಲಿ ॥೪೦॥
ಧಾರಿಣಿಯ ನಡುವಳಸಿ ಬೆಳೆದಿಹ । ಮೇರುಗಿರಿಯನು ಬಳಸಿ ವೃತ್ತಾ । ಕಾರವಾಗೆಸೆದಿಹುದು ಜಂ
ಬೂದ್ವೀಪನವಖಂಡ ॥ ಮೇರೆಯಾಗಿಹಗಿರಿಕುಲಂಗಳ । ತೋರದಗಲವದುನ್ನತಂಗಳ । ಸಾರಹೃದ
ಯನೆ ನಿನಗೆ ಕಲಿಮಲದೂರ ತಿಳುಹುವೆನು ॥೪೧॥ ಕುರುಹಿರಣ್ಮಯರಮ್ಯಕವು ಸುರ । ಗಿರಿಯನೊಳ

ಕೊಂಡಿಪ್ಪಿಳಾವೃತ । ಹರಿವರುಷಕಿಂಪುರುಷಭಾರತವುತ್ತರಾದಿಗಳು ॥ ಪಿರಿಯಶೃಂಗಶ್ವೇತನೀಲದ ಗಿರಿನಿಷಧವಾಹೇಮಕೂಟದ । ಗಿರಿ ಹಿಮಾಲಯವಾಗಪರಜಲಧಿಯನು ಮುಟ್ಟಿಹವು ॥೪೨॥ ಸುರಗಿರಿಯಬಳಸಿಪ್ಪಿಳಾವೃತ । ವರುಷದಿಂದವೆ ಮೂಡಲೊಪ್ಪುವ । ಪಿರಿಯಗಿರಿಮಾಲ್ಯವತ ಜಲನಿಧಿತನಕ ಭದ್ರಾಶ್ವ ॥ ವರುಷ ಪಡುವಣ ಗಂಧಮಾದನ । ಗಿರಿತೊಡಗಿಯಾಪಶ್ಚಿಮಾಶಾ । ಶರಧಿಪರಿಯಂತಿಪ್ಪವರುಷವು ಕೇತುಮಾಲವದು ॥೪೩॥ ವರುಷಮಧ್ಯದ ಪರ್ವತಂಗಳ। ಹರಹು ತಾನೆರಡೆರಡುಸಾವಿರ । ವರುಷನವನವನವಸಹಸ್ರವದಾರುಮಧ್ಯದಲಿ ॥ ವರುಷವದು ಮೂವತ್ತನಾಲ್ಕರ । ಪರಿಗಣಿತ ಮೂಡಣದು ಪಡುವಣ । ದೆರಡು ತಾನದರಂತೆ ಮೆರೆವುದು ಹೊರಗೆ ಲವಣಾಬ್ಧಿ ॥೪೪॥ ದೇವಕೂಟದ ಜಠರವೆಂಬಿವು । ಭಾವಿಸಲು ಮಾಲ್ಯವತದಿಕ್ಕಿಲ । ನಾವಿಧದಿ ಕೈಲಾಸಪರ್ವತ ಗಂಧಮಾದನವು ॥ ಕೋವಿದನೆ ಕೇಳ್ಭೂಮಿವಲಯದೊ । ಳಾವಿಶಾಲದ ಪಾರಿಯಾತ್ರದ । ದೇವಯೋಗ್ಯದ ಗಿರಿಗಳಿಕ್ಕಿಲನಿಷಧಪರ್ವತಕೆ ॥೪೫॥ ನೀಲಗಿರಿಯಿಕ್ಕೆಲಕ ವಾರಿಧಿ । ವೇಲೆ ನಿಷ್ಪ್ರತಿಶೃಂಗವಿವು ಮ್ಯ। ನೀಳದಲಿ ಪೂರ್ವಾಪರದ ಜಲನಿಧಿಯ ಮುಟ್ಟಿಹವು ॥ ಹೇಳಿದೆಂಟುಪಪರ್ವತಾಗ್ರವಿ । ಶಾಲ ತಾನೆಂಭತ್ತುಯೋಜನ । ಕೇಳಿಳಾವೃತವೇಲೆಯಾಗಿಹಗಿರಿಯಲೆಕ್ಕವನು ॥೪೬॥ ವರುಷದೊಡೆಯನಿಳಾವೃತಕೆ ಸಂ । ಕರುಷಣನು ಭದ್ರಾಶ್ವದೊಳು ಹಯ । ಶಿರನು ಹರಿವರುಷಕ್ಕೆ ನರಹರಿ ಕೇತುಮಾಲದಲಿ ॥ ಸಿರಿಯರಸ ರಮ್ಯಕಕೆ ಮತ್ಸ್ಯನು । ಪಿರಿಯಕಮಠ ಹಿರಣ್ಮಯಕೆ ಕುರು। ವರುಷದಲ್ಲಿ ಮಹಾವರಾಹನು ಪಾರ್ಥ ಕೇಳೆಂದ ॥೪೭॥ ರಾಮ ಕಿಂಪುರುಷಕ್ಕೆ ಭಾರತ । ಭೂಮಿ ನರನಾರಾಯಣನು ತಿಳಿ । ನಾಮಧಾರಕಹನುಮ ವಸುಧಾದೇವಿ ನಾರದನು ॥ ಆಮನು ಜಗಚ್ಚಕ್ಷು ಲಕ್ಷ್ಮೀ । ಪ್ರೇಮದಿಂ ಪ್ರಹ್ಲಾದ ನಿಜನಿ। ಸ್ಸೀಮಭದ್ರಶ್ರವ ಸದಾಶಿವನಿವರು ಪಾಲಕರು ॥೪೮॥ ವರುಷವನುಗಿರಿಗಳನು ಬಳಸಿಹ । ಪಿರಿಯಲವಣಸಮುದ್ರ ತದನಂ । ತರದಿ ದೀಪಪ್ಲಕ್ಷವಿಕ್ಷುಸಮುದ್ರವಲ್ಲಿಂದ ॥ ಇರಲು ಶಾಲ್ಮಲವದರಹೊರಗಣ । ಸುರೆಯಶರಧಿಯನೊಂದನೊಂದಾ । ವರಿಸಿ ಪರಿಭಾವಿಸಲು ತದ್ವಿಗುಣಂಗಳಾಗಿಹವು ॥೪೯॥ ತಿಳಿವೊಡಾಸುರೆಯಿಂದ ಕುಶಘೃತ । ಜಲಧಿ ಕ್ರೌಂಚದ್ವೀಪವೆಂಬಿವ । ರಳತೆ ಗಿಮ್ಮಡಿಯಾಗಿ ದಧಿಯಸಮುದ್ರವಲ್ಲಿಂದ ॥ ಇಳೆಯಮೇಲೆಸೆದಿಪ್ಪಶಾಕದ। ಬಳಿಯ ದುಗ್ಧವಿದೊಂದನೊಂದನು। ಬಳಸಿಕೊಂಡಿಹವಬ್ಜನಾಭನ ನಿಳೆಯವದನೋಡಾ ॥೫೦॥ ಚಲುವಿಕೆಗೆ ನೆಲೆಯೆನಿಸಿ ಮೆರೆವುದು। ಪಳಯವೆಂದೂಯಿಲ್ಲ ಲಕ್ಷ್ಮೀ । ನಿಳಯನಿಹನನವರತ ಸುಳಿಯವು ಮೃತ್ಯುಮಾಯೆಗಳು ॥ ಬಳಕೆ ಸಲ್ಲದು ಕಲಿಯಕಾಲದ । ಹೊಲಬು ಹೊದ್ದದು ಹರಿಯ ರೂಪನು । ತಳೆದಪುರವನು ಕ್ಷೀರವಾರಿಧಿ ಬಳಸಿಕೊಂಡಿಹುದು ॥೫೧॥ ಯೋಗಿಗಳ ನೆಲೆವೀಡು ಬೊಮ್ಮದ । ಸಾಗರವು ಸನಕಾದಿಮುನಿಗಳ । ಭೋಗಭೂಮಿಯನಂತವೆನಿಸಿರ್ದುಪನಿಷತ್ತುಗಳಾ ॥ ಆಗರವು ಮೂಲೋಕದರ್ಪಣವಾಗಿದುಗ್ಧೋದಧಿಯೊಳೆಸೆವುದು। ಶ್ರೀಗಧೀಶನನಗರ ನೋಡಲೆ ಪಾರ್ಥನೀನೆಂದ ॥೫೨॥ ನಳಿನನಾಭನ ದುಗ್ಧಶರಧಿಯ । ಬಳಸಿಕೊಂಡಿಹಪುಷ್ಕರದ ಹೊರ । ವಳೆಯದಲಿ ಮೆರೆದಿಪ್ಪುದಾಸ್ವಾದೂದವಾರಾಶಿ ॥ ಇಳೆಗೆ ಕೋಟೆಯನಿಕ್ಕದಂತಿರೆ । ಬೆಳೆದಲೋಕಾಲೋಕಪರ್ವತ । ತಿಳಿವೊಡಲ್ಲಿಂದತ್ತ ತಿಮಿರವಜಾಂಡಪರಿಯಂತ ॥೫೩॥ ಲಕ್ಕಜಂಬೂದ್ವೀಪವಾಪರಿ । ಲಕ್ಕಲವಣಸಮುದ್ರನಾಲುಕು । ಲಕ್ಕದೀಪಪ್ಲಕ್ಷವಿಕ್ಷುಸಮುದ್ರವೊಂದಾಗಿ ॥ ಲಕ್ಕವೆಂಟುಸುಶಾಲ್ಮಲಿಯು

ಸುರೆ । ಲಕ್ಕಷೋಡಶಕುಶಘೃತಂಗಳು । ಲಕ್ಕಮೂವತ್ತೆರಡು ಕ್ರೌಂಚದ್ವೀಪ ದಧಿಗೂಡಿ ॥೪೪॥
ಲಕ್ಕತಾ ನರವತ್ತು ನಾಲ್ಕಾ । ಗಿಕ್ಕು ಶಾಕ ಕ್ಷೀರಕೋಟಿಯ । ಲಕ್ಕವಿಪ್ಪತ್ತೆಂಟು ಪುಷ್ಕರಸುಜಲವೊಂ
ದಾಗಿ ॥ ಮಿಕ್ಕಕೋಟಿದ್ವಯದ ಮೇಲಣ । ಲಕ್ಕವೈವತ್ತಾರುಯೋಜನ । ವಕ್ಕು ಹೇಮದಭೂಮಿ
ಲೋಕಾಲೋಕಗಿರಿಸಹಿತ ॥೪೫॥ ಹತ್ತುಲಕ್ಕವು ಹೀನವಾಗಿ । ಪ್ಪತ್ತುಕೋಟಿತಮಂಧದೂರ್ವರೆ ।
ಸುತ್ತುವರೆ ಬಳೆದಿಹುದು ಗರ್ಭೋದಕದಪರಿಯಂತ ॥ ಇತ್ತಸುರಗಿರಿಯಿಂದ ಹಿಂದೆ । ಪ್ಪತ್ತುಕೋ
ಟಿಯ ಕೂಡಿ ನೋಡೆ ಧ । ರಿತ್ರಿತಾನೈವತ್ತುಕೋಟಿಯ ಲೆಕ್ಕನೋಡೆಂದ ॥೪೬॥ ವರುಷವೊಂಭತ್ತಾ
ಗಿಹುದು ವಿ । ಸ್ತರದಜಂಬೂದ್ವೀಪವೊಂದೇ । ವರುಷವೇಳಾಗಿಹವು ತಾಶರಸಂಖ್ಯೆಯದ್ವೀಪ ॥ ನಿರುತ
ಕಡೆಯದ್ವೀಪವೆಂಬುದು । ವರುಷವೆರಡಾಗಿರಲು ಮಾನಸ । ಗಿರಿಯದರಮೇಲಿಹುದು ಚಕ್ರದಕಂಬಿಯಂ
ದದಲಿ ॥೪೭॥ ವರುಷವೆರಡಾಗೊಪ್ಪುತಿಹವು । ಷ್ಕರದನಡುವಣಮಾನಸೋತ್ತರ । ಗಿರಿಯುದಯ
ವೈವತ್ತುಸಾವಿರ ಹರಹುತದ್ವಿಗುಣ ॥ ಪಿರಿದು ಪುಣ್ಯಶ್ಲೋಕ ಕೇಳಾ । ಗಿರಿಯುಶಿಖರದಮೇಲೆ
ದಿಗ್ದೇ । ವರಪುರಂಗಳು ಸಿರಿಗೆ ನೆಲೆವನೆಯೆನಿಸಿ ಮೆರೆದಿಹವು ॥೪೮॥ ಸುರಪನದುವೇ ಸ್ವರ್ಗಸಾರವು ।
ನಿರುತದಲಿ ಸಂಯಮಿನಿಯೆಂಬಾ । ಪುರವು ಕಾಲನ ನಗರಿ ತೆಂಕಲು ಪಶ್ಚಿಮಾದ್ರಿಯಲಿ ॥ ವರುಣ
ನದು ಶುದ್ಧವತಿ ಯಕ್ಷೇ । ಶ್ವರಗೆ ಸೇವಾಕಾಂತಿಮತಿ ಶಿಖಿ । ನಿರುತಿಮರುದೀಶಾನ್ಯರಿಗೆಯವರವರನಾ
ಮದಲಿ ॥೪೯॥ ಉರಗನಾಳಾಂಬುಜಕುಸುಮವೀ । ಧರಣಿ ಕರ್ಣಿಕೆ ಮೇರುಗಿರಿ ಕೇ । ಸರನಗಂಗಳು
ಬಳಸಿ ಕೇಸರದಂತೆ ಸೊಗಯಿಪವು ॥ ಸರಸಿರುಹಸಂಭವನು ಮಧ್ಯದೊ । ಳಿರಲು ಭೂತಲವೈದೆ ಮೆರೆ
ವುದು । ಸಿರಿ ಮಹಾವಿಷ್ಣುವಿನ ನಾಭೀಕಮಲದಂದದಲಿ ॥೫೦॥ ಧರೆಯ ವರ್ಷದ್ವೀಪಗಿರಿಗಳ । ಶರಧಿ
ಗಳ ಸುರಶೈಲದಗ್ರದ । ಹರಹಚತುರಾನನನಪಟ್ಟಣದಿರುವ ತಿಳುಹಿದೆನು ॥ ಸರಸಿರುಹಬಂಧುವಿನ ರಥ
ವಿಹ । ಪರಿಯ ಚರಿಸುವಪಥವ ತಾರೆಗ । ಳಿರವ ನೀಕೇಳೆಂದುಮಾತಲಿ ನುಡಿದನರ್ಜುನಗೆ ॥೫೧॥
ಗಾಲಿಮಾನಸಗಿರಿಯ ಶಿಖರದ । ಮೇಲೆ ತಿರುಗುವುದೊಂದುಕಡೆ ಸುರ । ಶೈಲದಲಿ ಬಿಗಿದಚ್ಚು ಕೋಟಿ
ಯಮೇಲೆ ಯೈವತ್ತು ॥ ಏಳುಲಕ್ಕದ ನೀಳರಥದ ವಿ । ಶಾಲವದು ಮೂವತ್ತುಸಾವಿರ । ಮೇಲೆ ಧ್ರುವ
ಮಂಡಲಕೆ ಬಿಗಿದಿಹುದನಿಲಪಾಶದಲಿ ॥೫೨॥ ಹರಿಯ ಗಾಲಿಯ ನಾಭಿಮೂರ । ಚ್ಚೆರಿಯಚಾತು
ರ್ಮಾಸಗಳು ಘನ । ತರದ ಷಡುಋತು ಬಳೆ ಷಡಂಗವೆ ನೇಮಿ ಚತುರಯುಗ ॥ ತರವಿಡಿದ ಸಂವತ್ಸ
ರವು ಘನ।ತರದ ಪರಿವತ್ಸರವಿಧಾವ । ತ್ಸರವುವಿದ್ವತ್ಸರವು ವತ್ಸರವೆನಿಪವೊಳೆಯಾಯ್ತು ॥೫೩॥ ಉರ
ಗನಾಳದ ಹೊರಜಿ ನವಸಾ । ವಿರದಕುರಿಗುಣಿಯಿಾಸುಗಳುತಾ । ವೆರಡುಮಡಿ ತೊಂಭತ್ತುವೊಂದುಸ
ಹಸ್ರದರ್ಧವದು ॥ ಪರಿಯನೊಗನದರನಿತುಸಂಖ್ಯೆಗೆ । ಸರಿಯೆನಿಪಮೇಲಚ್ಚು ಮಂಗಳ । ತರವೆನಿಪ
ನವರತ್ನರಚನೆಯ ಚಿತ್ರತರವೆಂದ ॥೫೪॥ ಕರಸಹಸ್ರನ ರಥಕೆ ಹೂಡಿದ । ತುರಗ ಛಂದೋಮಯವು
ಸಾರಥಿ । ಯರುಣಕಾಲವೆ ಗಾಲಿನವಕೋಟಿಯನು ಚರಿಯಿಸುಗು ॥ ವರವರೂಥದ ಮಧ್ಯದಲಿ ವಿ ।
ಸ್ತರದ ಮಣಿಪೀಠದಲಿ ಮಿಗೆ ದಿವ । ಕರನು ಗ್ರಹಭವನಕ್ಕೆ ಸಲೆಯಾಧಾರವಾಗಿಹನು ॥೫೫॥ ಹರಿ
ತರಣಿಗಿಂದುವಿಗೆ ಕರ್ಕಟ । ಧರಣಿಜಂಗಜವೃಶ್ಚಿಕವು ಹಿಮ । ಕರನತನಯಗೆಮಿಥುನಕನ್ಯೆ ಬೃಹಸ್ಪ
ತಿಗೆ ಚಾಪ ॥ ಪಿರಿಯಋಷ ತುಲೆ ವೃಷಭದಾನವ । ಗುರುವಿನವು ಮೃಗ ಕುಂಭ ಮಂದಂ । ಗಿರವು

ನಿಜಗೃಹ ರಾಹುಕೇತುಗಳವರ ಕೂಡಿಹರು ॥೬೬॥ ಲಕ್ಕ ಉರ್ವಿಗೆ ರವಿಯೆ ಪಥ ಶಶಿ । ಲಕ್ಕವೆರಡು
ತ್ರಿಲಕ್ಕಯೋಜನ । ಲೆಕ್ಕಿಸಲು ನಕ್ಷತ್ರಬುಧನಿಹ ನೈದುಲಕ್ಕದಲಿ ॥ ಲಕ್ಕವೇಳಾಶುಕ್ರಕುಜನವ । ಲಕ್ಕ
ಗುರು ಹನ್ನೊಂದುಲಕ್ಕವು । ಮಿಕ್ಕವಸುಧಾತಳಕೆ ಶನಿ ಹದಿಮೂರುವರೆಲೆಕ್ಕ ॥೬೭॥ ವಿದಿತವಿಂತಿದು
ಸಪ್ತಋಷಿಗಳ । ಸದನವದು ಹದಿನಾಲ್ಕುಲಕ್ಕವು । ಮುಂದಿನೆಲಸಿಹ ಧ್ರುವನು ತಾ ಹದಿನೈದುಲಕ್ಷದಲಿ ॥
ಅದರಮೇಲಿಹವಿಷ್ಣುಪದದಲಿ । ಸದಮಳಾತ್ಮಕ ಶಿಂಶುಮಾರನು । ಪದುಳದಲಿ ಸಕಲಕ್ಕೆ ಸಲೆಯಾಧಾ
ರವಾಗಿಹನು ॥೬೮॥ ವರಕುಮಾರಕ ನೀನು ಕೇಳ್ಕೆ । ಪಿರಿಯಲೋಕಾಲೋಕವೆಂಬಾ । ಗಿರಿಯ ಬಳಸಿದ
ಕಾಳಗತ್ತಲೆ ಯೊಳಗೆ ಮೆರೆದಿಪ್ಪಾ ॥ ಧರೆಯೊಳರುಣದ್ವೀಪವದರೊಳು । ನೆರೆದಮಂದೇಹರುಗ
ಳಂದ । ಚ್ಚರಿಯದಲಿ ಸರಸೀರುಹಾಸನನಿಂದ ಜನಿಸಿದರು ॥೬೯॥ ಹರಿಹರವಿರಿಂಚಿಗಳುಮೊದಲಾ
ದುರುವದೇವರುಗಳೊಳು ಮತ್ತಾ । ಧರವಿಡಿದಹದಿನಾಲ್ಕುಜಗದೊಳಗುಳ್ಳದೇವರಲಿ ॥ ತರಣಿಯತಿ
ಬಲವಂತನೆಂಬುದ । ನರಿದು ಮಂದೇಹಾಸುರರು ಸಾ । ಸಿರಕರದದಿನನಾಥನೊಳು ಕಾಳಗವ ಬಯಸಿ
ಹರು ॥೭೦॥ ಪರಿಕಿಸಲು ಪರಮಾತ್ಮದಿನಕರ । ಹರಿಹರವಿರಿಂಚಿಗಳು ಸೂರ್ಯನ । ನೆರೆದು ಸುತಿ ಕೈ
ವಾರಿಸುತ್ತಿರೆ ಘನಮಹಾಮಹಿಮ ॥ ಕಿರಣದುರಿಯ ಮಹಾಪ್ರತಾಪನು । ತರಣಿಯೆಂದಾತನೊಳು
ಕಾದಲು । ಸರಸಿರುಹಸಂಭವನ ಮೆಚ್ಚಿಸಿ ವರವಪಡೆದಿಹರು ॥೭೧॥ ಕಾಲವೆಂಬುದು ರವಿಯ ಗಾಲಿಯ ।
ಕಾಲಗತಿಯೈಸಲೆ ಕೃತಾಂತಗೆ । ಲೀಲೆ ಸೃಷ್ಟಿಗೆ ಲಯವು ಸಚರಾಚರಗಳೆಂಬಿವನು ॥ ಕಾಲಚಕ್ರದ
ಖಚರಗತಿಯಲಿ । ಕಾಳಗತ್ತಲೆಯನು ನಿವಾರಿಸಿ । ಪಾಲಿಸುವಲೋಕಂಗಳನಿತುವ ಪಾರ್ಥ ನೋ
ಡೆಂದ ॥೭೨॥ ಅವನಿಪತಿ ಕೇಳಿಂದ್ರಸಾರಥಿ । ವಿವರಿಸಿದನರ್ಜುನಗೆ ಭೂಮಿಯ । ಭುವನಕೋಶವ
ಸನ್ನಿವೇಶವನದ್ರಿ ಜಲಧಿಗಳ ॥ ಇವುಕುಲಾದ್ರಿಗಳಿವು ಪಯೋಧಿಗ । ಳಿವು ಮಹಾದ್ವೀಪಂಗಳಿವು ಪಾ ।
ನವರಧರಣೀಸ್ವರ್ಗ ಮೇಲಿನ್ನಿತ್ತ ನೋಡೆಂದ ॥೭೩॥ ಈವಿಮಾನಿದ ಸಾಲಸಂದಣಿ । ತೀವಿಕೊಂಡಿದೆ
ಗಗನತಳದಲಿ । ದೇವಕನ್ಯಾಶತಸಹಸ್ರದ ಕೇಳಮೇಳದಲಿ ॥ ಭೂವಳಯದಲಿ ಸುಕೃತಿಗಳು ನಾ ।
ನಾವಿಧದ ಜಪಯಜ್ಞದಾನತ । ಪೋವಿಧಾನದಲೊದಗಿದವರನು ಪಾರ್ಥ ನೋಡೆಂದ ॥೭೪॥ ಭೂತ
ದಯೆಯಲಿ ನಡೆವನೀತೋ । ಪಾರ್ತ ನಿರ್ಮಳಸತ್ಯಭಾಷಿತ । ನೀತ ತೀರ್ಥವಿಹಾರಿ ಸಜ್ಜನನೀತ
ಗುಣಿಯೀತ ॥ ಈತನಿರ್ಮತ್ಸರನಸೂಯಾ । ತೀತನಿವನತಿವಿಪ್ರಪೂಜಕ । ನೀತಮಾತಾಪಿತರಭಕ್ತನು
ಪಾರ್ಥನೋಡೆಂದ ॥ ಈತನಿಂದ್ರಿಯವಿಜಯಸತ್ಕೃತ । ನೀತನಿವವೇದಾಧ್ಯಯನಪರ । ನೀತಪರಹಿತನಿವ
ಯಥಾಲಾಭೈಕಸಂತೋಷಿ ॥ ಈತಶುಚಿ ರುಜುವೀತ ನಿಸ್ಪೃಹ । ನೀತನಿರ್ಭಯನೀತ ನಿರ್ಮಳ । ನೀತ
ರಾಗದ್ವೇಷರಹಿತನು ಪಾರ್ಥನೋಡೆಂದ ॥೭೬॥ ಇತ್ತ ನೋಡೈಸ್ವಾಮಿಕಾರ್ಯಕೆ । ತೆತ್ತನೊಡಲನು
ವರರಣಾಗ್ರದೊ । ಳಿತ್ತಲೈದನೆ ಭೂಮಿಕನ್ಯಾಗೋಧನಾವಳಿಯ ॥ ಇತ್ತವನು ಸತ್ಪುತ್ರನನು ತಾ ।
ಹೆತ್ತವನು ಗೋವಿಪ್ರಬಾಧೆಗೆ । ಸತ್ತವನನೆಲೆಪಾರ್ಥ ನೋಡುತ್ತಮವಿಮಾನದಲಿ ॥೭೭॥ ಮೇಲೆ
ಮೇಲೈದರೆಸುತರಾ । ಮಾಲೆಗಳವೊಲು ರಾಜಸೂಯದಮೇಲುಯಜ್ಞದ ವಾಜಿಮೇಧದ ಭೂರಿಸುಕೃ
ತಿಗಳು ॥ ಕಾಳಗದೊಳರಿಸುಭಟತಿತಕರ । ವಾಳಧಾರಾತೀರ್ಥಸೇವಿನ್ನ । ಪಾಲರೈದರೆ ದೀಪ್ಯಮಾನವಿಮಾ
ನಮಧ್ಯದಲಿ ॥೭೮॥ ಈತಭರತನು ದೂರದಲಿತೋ । ಪಾರ್ತನುಹರಿಶ್ಚಂದ್ರನಳನೃಗ । ರೀತಗಳುಪುರು

ಕುತ್ಸನೀತಮರುತ್ತನೃಪನೀತ ॥ ಈತ ಹೈಹಯ ದುಂದುಮಾರಕ । ನೀತನಹುಷದಿಳೀಪದಶರಥ । ನೀತರಘು ತಾನೀತ ಶಂತನುಪಾರ್ಥನೋಡೆಂದ ॥೭೯॥ ಇದೆಯಸಂಖ್ಯಾತಕ್ಷಿತೀಶ್ವರ । ರುದಿತಕೃತಪುಣ್ಯೋಪಚಯಭೋ । ಗದಲಿಭಾರತವರುಷ ನಿಮ್ಮದು ಪುಣ್ಯಭೂಮಿಕಣಾ ॥ ಇದರೊಳಗೆ ಜಪಯಜ್ಞದಾನಾ । ಭ್ಯುದಯವೈದಿಕಕರ್ಮನಿಷ್ಠರ । ಪದವಿಗಳ ಪರುಠವಣೆಯನು ಕಲಿಪಾರ್ಥ ನೋಡೆಂದ ॥೮೦॥ ಹೊಳವುತದೆ ದೂರದಲಿ ರಜತಾ । ಚಲವ ಕಂಡಂದದಲಿ ಕೆಲದಲಿ । ಬಲವಿರೋಧಿಯ ಪಟ್ಟದಾನೆ ಸುರೇಂದ್ರನಂದನನೆ ॥ ನಿಳಯವದೆ ನಸುದೂರದಲಿ ಥಳ । ಥಳಿಸುವಮಲಮಣಿಪ್ರಭಾಪರಿ । ವಳಯರಶ್ಮಿನಿಬದ್ಧವಮರಾವತಿಯ ನೋಡೆಂದ ॥೮೧॥ ಹೊಕ್ಕನಮರಾವತಿಯನರ್ಜುನ । ನೆಕ್ಕಸರದಲುಪಾರ್ಜಸಿದಪು । ಣ್ಯಕ್ಕೆ ಸರಿಯೇ ನಳನಹುಷಭರತಾದಿಭೂಮಿಪರು ॥ ಉಕ್ಕಿದವು ಪರಿಮಳದ ತೇಜದ । ತೆಕ್ಕೆಗಳು ಲಾವಣ್ಯಲಹರಿಯ । ಸೊಕ್ಕುಗಳ ಸುರಸೂಳೆಗೇರಿಗಳೊಳಗೆ ನಡೆತಂದ ॥೮೨॥ ಇಳಿದು ರಥವನು ದಿವಿಜರಾಯನ । ನಿಳಯವನು ಹೊಕ್ಕನು ಕಿರೀಟಿಯ । ನಳವಿಯಲಿ ಕಂಡಿದಿರುಬಂದನು ನಗುತ ಶತಮನ್ಯು ॥ ಸೆಳೆದು ಬಿಗಿಯಪ್ಪಿದನು ಕರದಲಿ । ತಳುಕಿ ಕರವನು ತಂದು ತನ್ನಯ । ಕೆಲದೊಳಗೆ ಕುಳ್ಳಿರಿಸಿದನು ಸಿಂಹಾಸನಾರ್ಧದಲಿ ॥೮೩॥ ನೂರುಪಶುಗೆಡಹಿಗೆ ಸುರೇಂದ್ರನು । ಮಾರುವನು ಗದ್ದುಗೆಯ ಬರದೇ । ಸೂರೆಗೊಂಡನು ಸುರಪತಿಯ ಸಿಂಹಾಸನದ ಸಿರಿಯ ॥ ಮೂರುಯುಗದರಸುಗಳೊಳೀತಗೆ । ತೋರಲೆಣೆಯಿಲ್ಲೆನಲು ಶಕ್ರನ । ನೂರುಮಡಿತೇಜದಲಿ ತೊಳತೊಳಗಿದನು ಕಲಿಪಾರ್ಥ ॥೮೪॥ ನುಸಿಗಳಿವರು ಮರ್ತ್ಯರೆಂಬುವ । ರೊಸಗೆಯಮರಾವತಿಯೊಳೇನಿದು । ಹೊಸತಲಾ ಬಂದಾತನಾರೋ ಪೂತುರೇಯೆನುತ ॥ ವಸುಗಳಾದಿತ್ಯರು ಭುಜಂಗಮ । ವಿಸರ ಗಂಧರ್ವಾದಿದೇವ । ಪ್ರಸರಬಂದುದು ಕಾಣಿಕೆಗೆ ಪುರುಹೂತನಂದನನ ॥೮೫॥ ಅಂದಿನುತ್ಸವದಮರನಿಕರದ । ಸಂದಣಿಯನೇನೆಂಬೆನಿಂದ್ರನ । ಮಂದಿರದೊಳೊತ್ತೊತ್ತೆಯಾದುದು ಜನದ ದೊಂಬಿಯಲಿ ॥ ಮಂದಿ ತೊಲಗಲಿ ತೆರಹುಗೊಡು ಹೊ । ಯ್ಮಂದಣಾವರನು ಗಜಬಜವಮಾ । ಣೆಂದುಗರ್ಜಿಸಿತಿಂದ್ರಸಾಸ್ಥಾನದಲಿ ಸುರನಿಕರ ॥೮೬॥ ನೂಕು ಬಾಗಿಲ ಚಾಚು ಬಣಗುದಿ । ಪೌಕೆಸರ ನಿಲಿಸಲ್ಪಪುಣ್ಯರ । ನೇಕೆ ಹೊಗಿಸಿದೆ ಬಹಳದಾನತಪೋವಿವರ್ಜಿತರ ॥ ಓಕುಳಿಯನೆವದಿಂದ ತೆಕ್ಕೆಯ । ಬಾಕುಳಿಗಳುರವಣಿಸಿತೇ ತಮ । ಗೇಕೆ ರಂಭಾದಿಗಳ ಸೋಂಕೆಂದುದು ಸುರಸ್ತೋಮ ॥೮೭॥ ತೊಲಗಿ ಸೋಮಂದಿಯನು ತೆಗೆ ಬಾ । ಗಿಲನೆನಲು ಕವಿದುದು ಸುರೇಂದ್ರನ । ಲಲನೆಯರು ಲಾವಣ್ಯಲಹರಿಯಲಲಿತವಿಭ್ರಮದಾ ॥ ಸುಳಿಗುರುಳ ನಿಟ್ಟೆಸಳುಗಂಗಳ । ಹೊಳೆವಕದಪಿನ ನುಣ್ಗೊರಳ ಬಲು । ಮೊಲೆಯ ಮೋಹರ ನೂಕಿತಮರೀವಾರನಾರಿಯರು ॥೮೮॥ ಉಗಿಬರೋ ಕತ್ತುರಿಯ ತವಲಾ । ಯಿಗಳ ಮುಚ್ಚಳವನೆ ಕವಾಟವ । ತೆಗೆಯೆ ಕವಿದರು ದಿವ್ಯಪರಿಮಳಸಾರ ಪೂರವಿಸೆ ॥ ಹೊಗರಲಗುಹೊಳಪುಗಳ ಕಡೆಗ । ಣ್ಣುಗಳ ಬಲುಗರುವಾಯಿ ಮುಸುಕಿನ । ಬಿಗುಹುಗಳ ಬಿರುದಂಕಕಾತಿಯರಿಂದ್ರನೋಲಗವ ॥೮೯॥ ನೇವುರದ ನುಣ್ದನಿಯ ಕಾಂಚಿಯ । ಕೇವಣದ ಕಿಂಕಿಣಿಯ ರಭಸದ । ನೇವಣಗಳೊಲಹುಗಳ ಮೌಳಿಯ ಮುರಿದ ಮುಸುಕುಗಳ ॥ ಭಾವದುಬ್ಬಿನ ಚೆಲ್ಲಗಂಗಳ । ಡಾವರದಡೊಳ್ಳಾಸಕಾತಿಯ । ರಾವಿಬುಧಪತಿಯೋಲಗವ ಹೊಕ್ಕರು ನವಾಯಿಯಲಿ ॥೯೦॥ ವರತಿಲೋತ್ತಮೆ ರಂಭೆ ಮಧುರ । ಸ್ವರೆ ಘೃತಾಚಿ ಸುಕೇಶಿ

ಗೌರೀ । ಶ್ವರಿ ವರೂಥಿನಿ ಪೂರ್ವಚಿತ್ತಿ ಸುಲೇಖಿ ಚಿತ್ರರಥಿ ॥ ಸುರಭಿಗಂಧಿನಿ ಚಾರುಮುಖಿ ಸೌಂ । ದರಿಯನಿಧಿಯೂರ್ವಶಿ ಸುಲೋಚನೆ । ಸುರಸೆಯೆನಿಪಂಗನೆಯರೈದಿತು ಕೋಟಿಸಂಖ್ಯೆಯಲಿ ॥೯೧॥ ಏನನೆಂಬೆನು ಜೀಯಶಕ್ರಾ । ಸ್ಥಾನವಲ್ಲಾ ದಿವ್ಯವಾದ್ಯಸು । ಗಾನನರ್ತನವಿಮಳತೂರ್ಯತ್ರಯದ ಮೇಳವದಾ ॥ ಆನಿತಂಬಿನಿಯರ ಸುರೇಖಾ । ಸ್ಥಾನಕದ ನಿರುಗೆಲಸ ಸುಧಾಳದ । ನೂನಸಮ್ಮೋಹನದ ತೂಕದ ಭಾವಭಂಗಿಗಳ ॥೯೨॥ ರಸದಸಂಸ್ಥಾಪನೆಯ ಭಾವದ । ಬೆಸುಗೆಗಳ ಹಸ್ತಾಭಿನಯದೃ । ಕ್ಪ್ರಸರಣದ ವರಸಾತ್ವಿಕಾಂಗಿಕಸುಗತಿವಿಭ್ರಮದ ॥ ವಿಷಮಸಮಕರಣದ ಕಳಾಪದ । ಕುಸುರಿಗಳ ವರಲಾಸ್ಯತಾಂಡವ । ವೆಸೆದುದೈ ರಂಭಾದಿನರ್ತಕಿಯರಲಿ ಹೊಸತೆನಿಸಿ ॥೯೩॥ ಗಾನರಸದಲಿ ಮುಳುಗಿತಮರಾ । ಸ್ಥಾನವೆತ್ತಣವಾದ್ಯನರ್ತನ । ಗಾನನರ್ತನವೆನಲು ಸಮ್ಮೋಹಿಸಿತು ಘನವಾದ್ಯ ॥ ಗಾನವಾದ್ಯವಿದೆತ್ತ ನೃತ್ಯರ । ಸಾನುಭವ ಭಾರವಿಸಿತನ್ಯೋ । ನ್ಯಾನುರಂಜಕವಾಯ್ತು ತೂರ್ಯತ್ರಯದ ಮೇಳಾಪ ॥೯೪॥ ಈಯಮಾನುಷನೃತ್ಯವಾದ್ಯಸು । ಗೇಯರಸದಲಿ ಮುಳುಗಿಕರಣದ । ಲಾಯತೊಡಕದೆ ಪಾರ್ಥನಿದ್ದನು ಧೈರ್ಯಶಿಖರದಲಿ ॥ ಈಯುವತಿ ತಾನಾವಳೋ ಕುಸು । ಮಾಯುಧನ ಖಂಡೆಯವಲಾ ಮರುಳು । ಮಾಯೆಯೆನುತೂರ್ವಶಿಯನವೆಯಿಕ್ಕದೆ ನಿರೀಕ್ಷಿಸಿದ ॥೯೫॥ ಪಾರುಖಾಣ್ಯಯವಿತ್ತನಾಜಂ । ಭಾರಿಯೂರ್ವಶಿರಂಭೆಮೇನಕೆ । ಗೌರಿಮೊದಲಾದಖಿಳಪಾತ್ರಕೆ ಪರಮಹರುಷದಲಿ ॥ ನಾರಿಯರು ನಿಖಿಳಾಮರರು ಬೀ । ಡಾರಕೈದಿತು ಹರಿದುದೋಲಗ । ವಾರತಿಯಹರಿವಾಣ ಸುಳಿದುದು ಸಾಲಸೊಡರುಗಳ ॥೯೬॥ ಅರಸ ಕೇಳಾರೋಗಿಸಿದರಿ । ಬ್ಬರು ಸಮೇಳದಲಿದ್ದು ಬೇರೊಂ । ದರಮನೆಗೆ ಕಳುಹಿದನು ಪವಡಿಸುವರೆ ನಿಜಾತ್ಮಜನ ॥ ಸುರಪನಿತ್ತಲು ಚಿತ್ರಸೇನನ । ಕರೆಸಿದನು ಫಲುಗುಣನ ಭಾವವ । ನರುಹಿದನು ನಮ್ಮೂರ್ವಶಿಯ ಕಳುಹೆಂದು ನೇಮಿಸಿದ ॥೯೭॥ ಇನಿಬರಿರೆ ರಂಭಾದಿಸೀಮಂ । ತಿನಿಯರೊಳಗೂರ್ವಶಿಯೊಳಾದುದು । ಮನ ಧನಂಜಯನೀಕ್ಷಿಸಿದನನಿಮೇಷದೃಷ್ಟಿಯಲಿ ॥ ವನಿತೆಯನು ಕಳುಹೇಳು ನೀನೆಂ । ದೆನೆ ಪಸಾದವೆನುತ್ತ ದೇವಾಂ । ಗನೆಯ ಭವನಕೆ ಬಂದನೀತನು ಹರಿಯನೇಮದಲಿ ॥೯೮॥ ತಾಯೆ ಚಿತ್ತೈಸರಮನೆಯ ಸೂ । ಳಾಯಿತನು ಬಂದೈದನೆನೆ ಕಮ । ಲಾಯತಾಂಬಕಿ ಚಿತ್ರಸೇನನ ಕರೆಸಿದಳು ನಗುತ ॥ ತಾಯೆನುತ ವಸ್ತ್ರಾಭರಣದ ಪ । ಸಾಯವಿತ್ತಳು ಪರಿಮಳದ ತವ । ಲಾಯಿಗಳ ನೂಕಿದಳು ವರಕಸ್ತೂರಿಯ ಕಪ್ಪುರದ ॥೯೯॥ ಆಣಕವಲ್ಲಿದು ರಾಯನಟ್ಟಿದ । ಮಾಣಿಹವೋ ನಿಜಕಾರ್ಯಗತಿಗಳ । ಕಾಣಿಕೆಯೋ ಕರ್ತವ್ಯವಾವುದು ನಿಮಗೆ ನಮ್ಮಲ್ಲಿ ॥ ಗುಣಭರಿತ ಹೇಳೆನಲು ನಸುನಗೆ । ಕುಣಿಯೆ ಮುಖದಲಿ ಮಾನಿನಿಗೆ ಮೆಂ । ಟಣಿಸಿ ಲಜ್ಜಾ । ಭರದಿ ನುಡಿದನು ದೂತನೀಮಾತ ॥೧೦೦॥ ಎಮಗೆ ಮಗನರ್ಜುನನು ನೀನಿಂ । ದೆಮಗೆ ಸೊಸೆಯಹುದಾತನಂತ । ಸ್ತಿಮಿರವನು ಕಳೆ ನಿನ್ನ ಕುಚಯುಗಕಾಂತಿಲಹರಿಯಲಿ ॥ ಕಮಲಮುಖಿ ನೀ ಕಮಲವಾತನು । ಭ್ರಮರ ನೀಸುರವನದಸಿರಿ ಮಧು । ಸಮಯವರ್ಜನನೆಂದು ಬೆಸಸಿದನಮರಪತಿಯೆಂದ ॥೧೦೧॥ ಕೇಳುತವೆ ರೋಮಾಂಚ ಲಜ್ಜೆಯ । ಜೋಳಿ ಯೆದ್ದುದು ಝೊಂಪಿಸಿತು ಪುಳ । ಕಾಳಿ ಭಯವನು ಪಂಟಿಸಿದುದನುರಾಗದಭಿಮಾನ ॥ ಮೇಲೆಮೇಲಭಿಲಾಷೆ ಧೈರ್ಯವ । ಚಾಳವಿಸೆ ಪರಿತೋಷಪೂರಣ । ದೇಳುಮೊಳಗಾಯ್ತುತ್ತರಕೆ ನಸುಬಾಗಿದಳು ಶಿರವ ॥೧೦೨॥ ಆತನುತ್ತಮನಾಯಕನು ವಿ ।

ಖ್ಯಾತೆ ನೀ ಸುರಲೋಕದಲಿ ಲ । ಜ್ಜಾತಿಶಯವೇಕಿಲ್ಲಿ ನಾವೇ ನಿಮ್ಮ ಪರಿವಾರ ॥ ಸೋತೊಡೆಯು ದಿಟ ಭಂಗವಲ್ಲ ಪು । ರಾತನದ ನಳನಹುಷಭರತಯ । ಯಾತಿನೃಪರೊಳಗೀತನಗ್ಗಳನೆಬಲೆ ಕೇಳೆಂದ ॥೧೩॥ ರಾಯನಟ್ಟಿದನೇಮಗಡ ಕಮ । ನೀಯವಲ್ಲಾ ನಿನ್ನ ನುಡಿ ರಮ । ಣೀಯತರವಿದು ನಿನ್ನ ರಚನೆ ಮಹಾನುಭಾವವಲೆ ॥ ಆಯಿತಿದು ನೀ ಹೋಗೆನುತಲೆಬು । ಜಾಯತಾಕ್ಷಿ ಮಹೋತ್ಸವದಿ ನಾ । ರಾಯಣನ ಮೈದುನನ ಬರೆದಳು ಚಿತ್ತಭಿತ್ತಿಯಲಿ ॥ ... ... ॥೧೪॥

ಅಂತು ಸಂಧಿ ೭ ಕ್ಕೆ ಪದ ೪೨೨ ಕ್ಕಂ ಮಂಗಳಮಸ್ತು.

ಎಂಟನೆಯ ಸಂಧಿ.

ಸೂ॥ ಭಯಭರಿತಭಕ್ತಿಯಲಿ ಕಾಮಾ । ರಿಯನು ಗೆಲಿದರ್ಜುನನು ಹರವೈ ।
ರಿಯನು ಗೆಲಿದನು ಧೈರ್ಯದಿಂದೂರ್ವಶಿಯಶಾಪದಲಿ ॥

॥ಪದ॥ ಕೇಳು ಜನಮೇಜಯಧರಿತ್ರೀ । ಪಾಲ ಪಾರ್ಥನ ಮೈಯ ಹುಲುರೋ । ಮಾಳಿ ಹರಿದುದು ಮನುಮಥನ ಖಂಡೆಯದ ಗಾಯದಲಿ ॥ ಬೀಳುಕೊಟ್ಟಳು ಚಿತ್ರಸೇನನ । ನಾಲತಾಂಗಿಸಹಸ್ರಸಂಖ್ಯೆಯ । ಕೇಳಮೇಳದ ಸತಿಯರನು ಕರೆಸಿದಳು ಹರುಷದಲಿ ॥೧॥ ವನಜಲೋಚನೆ ಮಾಡಿದಳು ಮ । ಜ್ಜನವನ ವಿಮಳದುಕೂಲಪರಿಮಂ । ಡನದಲೆಸೆದಳು ವಿವಿಧರತ್ನಾಭರಣಶೋಭೆಯಲಿ ॥ ತನತನಗೆ ಭರಣಿಗಳಲನುಲೇ । ಪನವ ತಂದರು ವಿಳಸದಧಿವಾ । ಸನೆಯ ಕುಸುಮದ ಮೊಗ್ಗಯಲಿ ರಚಿಸಿದರು ಸಿರಿಮುಡಿಯ ॥೨॥ ತಿಗುರಗೆಲಿದಳು ತಿಲಕವನು ತೆ । ತ್ತಿಗರಲಂಕರಿಸಿದರು ಹೊಳಹಿನ । ಹೊಗರ ಹೊಸಜೌವನದ ಜೋಡಿಯರ್ಝಾಡಿಯಿಮ್ಮಡಿಸೆ ॥ ಉಗಿದೊರೆಯ ಕೂರಲಗೊ ಧಾರೆಯ । ಮಿಗೆ ಹಿಡಿದ ಖಂಡೆಯವೊ ಕಾಮನ । ಹಗೆಗೆ ಹುಟ್ಟಿದಧೂಮಕೇತುವೊ ರೂಪೊ ಸುರಸತಿಯಾ ॥೩॥ ಪರಿಮಳದ ಪುತ್ಥಳಿಯೊ ಚೆಲುವಿನ । ಕರುವಿನೆರಕವೊ ವಿಟರ ಪುಣ್ಯದ । ಪರಿಣತೆಯೊ ಕಾಮುಕರ ಭಾಗ್ಯದ ಕಲ್ಪತರುಫಲವೋ ॥ ಸ್ಮರನ ವಿಜಯಧ್ವಜವೊ ಮನ್ಮಥ । ಪರಮಶಾಸ್ತ್ರದಮೂಲಮಂತ್ರವೊ । ಸುರಸತಿಯರಧಿದೇವತೆಯೊ ವರ್ಣಿಸುವೊಡರಿದೆಂದ ॥೪॥ ಲೋಕವಶ್ಯದತಿಲಕವೋ ಜಗ । ದೇಕರತ್ನವೊ ವಿಗಡಮುನಿಚಿ । ತ್ತಾಕರುಷಣದ ಮಂತ್ರವಾದವೊ ರುಷಿತಪಃಫಲವೋ ॥ ಲೋಕಸೌಂದರ್ಯೈಕಸರ್ಗವೊ । ನಾಕಸುಖಸಾಕಾರವೋ ರೂ । ಪೈಕತಾಣವೊ ಚಿತ್ರವಾಯ್ತೂರ್ವಶಿಯ ಬರವಿನಲಿ ॥೫॥ ನೆರೆದರಬುಲೆಯರಂಗವಟ್ಟದ । ಪರಿಮಳದ ಮುತ್ತಿಗೆಯ ತಂಬಿಯ । ತೆರಳಿಕೆಯ ಕತ್ತಲೆಯ ಕೆದರುವಕಣ್ಣಬೆಳಗುಗಳ ॥ ಪರಿಪರಿಯಹೊಂದೊಡಿಗೆಗೆಳ ಪರಿ । ಪರಿಗಳುಡಿಗೆಯದೇಸಿ ಮಿಗೆ ಪರಿ । ಪರಿಯಮುಡಿಗಳ ಬಳಸಿದರು ಮುಗ್ಧೆಯರು ಬಾಲಕಿಯ ॥೬॥ ಹೆಗಲುಹಡಪದ ಹಿಡಿದಮುಕರಾ । ಳಿಗಳ ಚಿಮ್ಮುವಸೀಗುರಿಯ ಹಾವುಗೆಯ ಹೇಮನಿಬಂಧಕಳಶದ ತಾಳವೃಂತಕದ ॥ ಮಗುಳಯರು ಮನುಮಥನ ಮೊನೆಯಾ । ಳುಗಳು ಮುಸುಕಿತು ಮಾನಿನಿಯ ದಂ । ಡಿಗೆಯ ಮೈಕಾಂತಿಗಳ ದೂವಾಳಿಗಳ ಲಹರಿಯಲಿ ॥೭॥ ತುರುಗಮೇಧದ ರಾಜಸೂಯದ । ವರಮಹಾಕ್ರತುಕಾರರೀಕೆಯ । ಚರಣದುಂಗುಟತುದಿಯ ಕಾಬರೆ ಪೊತುಫಲುಗುಣನ ॥ ಪರಮಪುಣ್ಯವದೇನು ತಾನಿ । ದ್ದರಮನೆಗೆ ಸತಿಬಂದಳೇನ । ಚ್ಚರಿಯೆನುತ ಹೊಗಳಿ

ದರು ಮಹಾಗಿರೀಂದ್ರನಂದನನ ||೮|| ಧರಣಿಪತಿ ಕೇಳಮಳ ತೊತ್ತಿರ । ಹೊರಗೆಲಸದವದಿರ ಪಸಾ
ಯಿತೆ । ಯರಿಗೆ ಪಡಿಗವನೀಡಸಲ್ಲರು ಸೋಮಯಾಜಿಗಳು || ವರುಣಸೂನು ಜಯಂತ್ರನಳಕೂ ।
ಬರೆರು ಸಮಯವನೊಮ್ಮೆ ಕಾಣದೆ । ವರುಷವ್ರೋಲೈಸುವರು ಸೌಧದದಾರವಟ್ಟದಲಿ ||೯|| ಜನಮನದ
ಸಂಕಲೆವನೆಯೊ ಲೋ । ಚನಮೃಗದತಡೆವೇಟಕಾತಿಯೊ, ಮನುಮಥನ ಸಂಜೀವನೌಷಧಿಯೋ ಮ
ಹಾದೇವಾ || ಮನಸಿಜನ ಮಾರಾಂಕಕಾಮುಕ । ಜನದ ಜೀವಾರ್ಥಕ್ಕೆ ವಿಭುಮೆಂ । ದೆನಿಸಿದೂರ್ವಶಿಬಂ
ದಳರ್ಜುನದೇವನರಮನೆಗೆ || ಮೆಲುನುಡಿಗೆ ಗಿಳಿಹೊದ್ದಿದವು ಸರ । ದುಳಿಗೆ ಕೋಗಿಲೆಯೌಕಿದವು
ಪರಿ । ಮಳದಪಸರಕೆ ತೂಳಿದವು ತುಂಬಿಗಳು ಡೊಂಬಿಯಲಿ || ಹೊಳೆವಮುಖಕೆ ಚಕೋರಚಯವಿ
ಟ್ಟಳಿಸಿದವು ನೇವುರದ ಬೊಬ್ಬೆಗೆ । ಸಿಲುಕಿದವು ಹಂಸೆಗಳು ಕಮಲಾನನೆಯ ಕೆಳದಿಯರ ||೧೧||
ಅಲರ್ದಪೊಂದಾವರೆಯಹಂತಿಯೊ । ತಳಿತಮಾವಿನಬನವೊ ಮಿಗೆ ಕತ್ತಲಿಪಬಹಳತಮಾಲಕಾನನವೋ
ದಿಗಂತದಲಿ ||೧೨|| ಹೊಳೆವವಿದ್ರುಮವನವೊ ಕುಸುಮೋಚ್ಚಲಿತಕೇತಕಿದಳವೊ ರಂಭಾ । ವಳಿಯೊ
ಕಾಂತಾಜನವೊ ಕಮಲಾನನೆಯಪುಂಗಡಿಯೋ || ಬಂದಳೂರ್ವಶಿಬಳ್ಳಿಮಿಂಚಿನ । ಮಂದಿಯಲಿ
ಮುರಿದಿಳಿವಮರಿಮುಗಿ । ಲಂದದಲಿ ದಂಡಿಗೆಯನಿಳಿದಳು ರಾಜಭವನಲಿ || ಮುಂದೆಪಾಯವಧಾರು
ಸತಿಯರ । ಸಂದಣಿಯ ಸಿಂಜಾರವದ ಸೊಗ । ಸಿಂದಶಬ್ದಬ್ರಹ್ಮ ಸೋತುದು ಸೊರಹಲೇನೆಂದ ||೧೩||
ಬಾಗಿಲಲಿಬಾಗಿಲಲಿ ನಿಂದರು । ಸೋಗೆಗಣ್ಣಬಲೆಯರು ಸೆಜ್ಜೆಯ । ಬಾಗಿಲಲಿ ಚಾಮರದ ಹಡಪದ
ಚಪಲೆಯರುಸಹಿತ || ಆಗ್ಗುರುವೆ ಹೊಕ್ಕಳು ಮಹಾಹಿಯ । ಭೋಗತಲ್ಪದ ಹರಿಯೊಲಿಹಶತ್ರ । ಯಾಗ
ಸುತನನು ಕಂಡಳಂಗನೆ ಮಣಿಯಮಂಚದಲಿ ||೧೪|| ಹೊಳೆವಮಣಿದೀಪಾಂಶುಗಳ ಮು । ಕ್ಕುಳಿಸಿ
ದವು ಕಡೆಗಂಗಳಿಂದೂ । ಪಳದ ಭಿತ್ತಿಯ ಬೆಳಗನಣೆದುದು ಬಹಳತನುಕಾಂತಿ || ಕೆಳದಿಯರ ಕಂಠದಲಿ
ಕೈಗಳ । ನಿಳುಹಿ ನಿಂದಳು ತರುಣಿ ನೃಪಕುಲ । ತಿಲಕನಂಗೋಪಾಂಗದಲಿ ಹರಹಿದಳು ಕಣ್ಮನವ ||೧೫||
ಎಳೆಯಬೆಳುದಿಂಗಳವೊಲೀಕೆಯ । ಥಳಥಳಿಪಮುಖಚಂದ್ರಮನ ತಂ । ಬೆಳಗು ಸುಳಿದುದು ಸಾರತರ
ಪರಿಮಳದ ಪೂರದಲಿ || ತಿಳಿದುದೀತನ ನಿದ್ರ ಕರಣಾ । ವಳಿಯ ಪರಮಪ್ರೀತಿರಸದಲಿ । ಮುಳುಗಿ
ಸುಖಭಾರದಲಿ ಭುಲ್ಲವಿಸಿದನು ಕಲಿಪಾರ್ಥ ||೧೬||ಹರಮಹಾದೇವೀಯಘಾಟದ । ಪರಿಮಳವಿದೆತ್ತಣ
ದೆನುತ ಮೈ । ಮುರಿದು ಕಂಡನಪೂರ್ವಪರಿಮಳಸಾರ್ಥದಲಿ ಪಾರ್ಥ || ಕಿರಣಲಹರಿಯ ದಿವ್ಯರತ್ನಾ ।
ಭರಣರುಚಿರತರಪ್ರಭಾಪಂ । ಜರದೊಳಗೆ ಹೊಳೆಹೊಳೆವಮದನಾಲಸೆಯನೂರ್ವಶಿಯ ||೧೭||
ಹಾಮಹಾದೇವಿಯರಲಾ ಸು । ತ್ರಾಮನೋಲಗದೊಳಗೆ ನರ್ತನ । ರಾಮಣೀಯಕರಚನೆಯಲಿ ರಂ
ಜಿಸಿದಳಾಸಭೆಯ || ಈಮಹಿಳೆಯಭಿವಂದನೀಯೆ ನಿ । ರಾಮಯದ ಶಶಿವಂಶಜನನಿ ಸ । ಸಾಮಯಲ್ಲಾ
ಶಿವಯೆನುತ ಮಣಿಮಂಚದಿಂದಿಳಿದ ||೧೮|| ಏನಿಬಿಜಯಂಗೈದಿರಿತ್ತಲು । ಮಾನನಿಧಿ ಕುಳ್ಳಿರಿ ಸುರೇಂ
ದ್ರನ । ಮಾನಿನಿಯರಭಿವಂದನೀಯರು ನಾವ್ಕೃತಾರ್ಥರಲಾ || ಏನುಬೆಸನೆನಗೇನುಹದ ನಿಮ ।
ಗಾನು ಮಗನುಪಚಾರವೇಕೆ ಮ । ನೋನುರಾಗದಲರುಹಿಯೆಂದನು ಪಾರ್ಥನೂರ್ವಶಿಗೆ ||೧೯|| ನುಡಿಗೆ
ಮರೆವುಗು ಹರನ ನೀನನು । ಸರಿಸ ನಿಮ್ಮಯ್ಯಂಗೆಹೇಳಿದು । ನಿರುತ ತಪ್ಪದು ಹೋಗೆನುತ ಮೊಗದಿರು
ಹಿದಳೆ ಚಪಳೆ ||೨೦|| ಮೂಗಸಾದನು ಬಹಳಧೈರ್ಯದ । ಬೇಗಡೆಯ ಬಿಡೆ ಬಿಗಿದಬೆರಗಿನ । ಮೂಗಿ

ಬೆರಗಾದಳು ಮನೋಜನ । ಸಡಗರಕೆ ತೆಕ್ಕಿದಳು ಪಾರ್ಥನ । ನಡವಳಿಗೆ ಮೆಚ್ಚಿದಳು ಬೆಚ್ಚಿದಳಂಗಪ್ರಸ್ತ್ರದಲಿ ॥ ಕಡುಗಿದಳು ಖಾತಿಯಲಿ ಲಜ್ಜೆಯ । ಬಿಡಯದಲಿ ಭಯಗೊಂಡಳಂಗನೆ । ಮಿಡುಕಿದಳು ವಿವಿಧಾನುಭಾವದರಸದಭಂಗಿಯಲಿ ॥೧೦॥ ಏಕೆ ನುಡಿದನೊ ಚಿತ್ರಸೇನನ । ದೇಕೆ ನಾ ಕೈಕೊಂಡೆನೆತ್ತಣ । ಕಾಕುಮೂಳಗೆ ಕೋಳುಹೋದೆನೊ ಕಾಮನೆಂಬುವಗೆ ॥ ಲೋಕವರ್ತಕವಲ್ಲದಿವನನ । ದೇಕೆ ವಿಧಿ ನಿರ್ಮಿಸಿದನೋ ನಾ । ನೇಕೆ ನರನೇಕೆನುತ ಸುಯ್ದಳು ಬೈದು ಕಮಲಜನ ॥೧೧॥ ವಿಕಳಮತಿಯೋ ಮೋಣಿವ ನಪುಂ । ಸಕನೊ ಜಡನೋ ಶ್ರೋತ್ರಿಯನೊ ಬಾಧಕನೊ ಖಳನೋ ಖೂಳನೋ ಮಾನವವಿಕಾರವಿದೋ ॥ ವಿಕಟತಪಸಿನ ದೇವದೈತ್ಯರ । ಮುಕುಟಮಾಂತುದು ಮಾಮಪಾದವ । ನಕಟ ಕೆಟ್ಟೆನಲಾ ಯೆನುತ ಕರಗಿದಳು ನಳಿನಾಕ್ಷಿ ॥೧೨॥ ಎಲವೊ ರಾಯನ ಹೇಳಿಕಯಲಂ । ಡಲದನೆನ್ನನು ಚಿತ್ರಸೇನಕ । ನಲುಗಿ ನಟ್ಟವು ಕಾಮಶರವೆನ್ನಂತರಂಗದಲಿ ॥ ಬಲಿದು ಬಂದಬಲೆಯರ ಟಿಕ್ಕರಿಗಳವುದೇ ವಿಟಧರ್ಮವಕಟಾ । ತಿಳಿಯಲಾ ತಾನಾವಳೆಂಬುದನೆಂದಳಿಂದುಮುಖಿ ॥೧೩॥ ಶಿವಶಿವೀ ಮಾತೇಕೆ ಕಾಮನ । ಬವಣಿಯಲಿ ನೀವರಿಯದಿರೆ ವಾ । ಸವನ ನೇಮವು ಚಿತ್ರಸೇನನ ನುಡಿಗಳಂತಿರಲಿ ॥ ಎವಗೆ ಕರ್ತವ್ಯದಲಿ ಮನಸಂ । ಭವಿಸುವುದೆ ನೀವೆಮ್ಮ ವಂಶೋ । ದ್ಭವಕೆ ಜನನಿಯಲಾಯೆನುತ ವಿನಯದಲಿ ನರ ನುಡಿದ ॥೧೪॥ ನಾರಿ ನೀ ಪೂರ್ವದಲಿ ನಿಮ್ಮಪು । ರೂರವನಸತಿ ನಿನಗೆ ಬಳಿಕ ಕು । ಮಾರಜನಿಸಿದ ನಾಯುವಾತನೊಳುದಿಸಿದನಹುಷ ॥ ವೀರರಾಜಪರಂಪರೆಯು ಬರಲಾಗಿಗಾವುದಿಸಿದೆವು ನಮ್ಮವಿಚಾರಿಸಿದುದಿಲ್ಲಾ ಎನುತ ನಯದಲಿನರನುಡಿದ ॥೧೫॥ ಪ್ರಣವವೆದರ್ಥವಿಚಾರವೆತ್ತಲು । ಗಣಿಕೆಯರ ಮನೆಯ ಸ್ವರಾಕ್ಷರ । ಗಣಿತಲಕ್ಷಣವೆತ್ತ ರತಿಕೇಳೀವಿಧಾನದಲಿ । ಉಣಗುಭಾರತವರ್ಷದವದಿರ । ಭಣಿತೆಯೆಮ್ಮೀ ದೇವಲೋಕಕೆ । ಸಣಬಿನಾರವೆ ಚೈತ್ರರಥದೊಳಗೆಂದಮುಖಿ ॥೧೫॥ ಅಯ್ಯನಯ್ಯನ ನಿಮ್ಮವರ ಮುತ್ತಯ್ಯನಾತನ ಭಾವ ಮೈದುನನಯ್ಯನಗ್ರಜರನುಜರೆಂಬೀಜ್ಞಾತಿಬಾಂಧವರ ॥ ಕೈಯಲಗಲಿ ಹೋಯ್ದು ತಿರಸರದುಯ್ಯಲಾಡಿದವರ್ಗೆ ಮೋಕ್ಷವು । ದಯ್ಯಗಳಿಗಾನೊಬ್ಬಳೆಂದಳು ನಗುತ ನಳಿನಾಕ್ಷಿ ॥೧೬॥ ಮರೆಯಮಾತಂತಿರಲಿ ನಾಕದ । ಮುರಿದುಕಳೆ ಮಾನಿನಿಯರಿಚ್ಛೆಯನರಿಯದವೆನುಸುರೇಂದ್ರನಾಗಲಿ ಚಂದ್ರನಾಗಿರಲಿ ॥ ಕುರಿಕಣಾ ಘಡಖೂಳನೀನೆಂ । ದರಿಪೆಯೆನೆ ನಡನಡುಗಿ ಕೈಮುಗಿ । ದೆರಗಿ ಮಗುಳೀಮಾತನೆಂದನು ಪಾರ್ಥನೂರ್ವಶಿಗೆ ॥೧೭॥ ಇದು ಮನುಷ್ಯಶರೀರತದ್ಧ । ರ್ಮದಲಿ ತನ್ನವಸಾನಪರಿಯಂ । ತಿದರೊಳವ್ಯಭಿಚಾರವಲಿ ವರ್ತಿಸಿದಬಳಿಕಿನಲಿ ॥ ತ್ರಿದಶರಲ್ಲಿಗೆ ಬಂದರಾಮಾ । ರ್ಗದಲಿ ನಡೆವುದು ದೇವತಾದೇ । ಹದಲಿ ಬಲವತ್ತರವು ದೇಹವಿಶೇಷವಿಧಿಯೆಂದ ॥೧೮॥ ಅಹುದಹುದಲೇಶ್ರುತಪಥದಲಿ । ಬಹಿರ ನೀವೇ ಸ್ಮಾರ್ತವಿಧಿಸಂ । ನಿಹಿತರೆಂಬುದನರಿಯದೇ ಮನುಜಗದ ಜನವೆಲ್ಲಾ ॥ ಮಹಿಳೆಯೊಬ್ಬಳೊಳೈವರೊಡಗೂ । ಡಿಹರು ನೀವೇನಲ್ಲಲೇ ನಿ । ಸ್ಪೃಹರು ನೀವ್ನಮ್ಮಲ್ಲಿ ಹರಹರಯೆಂದಳಿಂದುಮುಖಿ ॥೧೯॥ ತಾಯ ನೇಮದಲಂದು ಕಮಲದ । ಳಾಯತಾಕ್ಷಿಯ ಕೂಟವೈವರಿ । ಗಾಯಿತದು ತಪ್ಪೇನು ಜನನಿಯ ನುಡಿಯಲಸ್ಪೃವೆಲೇ ॥ ಕಾಯಸೌಖ್ಯಕೆ ಕಾಮಸುಖದ ವಿ । ಡಾಯತತ್ವವಕೆ ವೇಡೆಗೊಂಡು ಸ । ವಾಯಿಯಲಿ ದುರ್ಗತಿಗೆ ದುಮ್ಮಾಳಿಸುವನಲ್ಲೆಂದ ॥೨೦॥ ತಾಯ ನೇಮದಲೈವರಿಗೆ ಕಮ । ಲಾಯತಾಕ್ಷಿಯ ಕೂಟವೇ ಸುರ । ರಾಯ ನಿಮ್ಮಯ್ಯನು ವಿಲಂಘ್ಯವೆ ನಿಗೆ

ಪಿತೃವಚನ ॥ ರಾಯನಟ್ಟಲು ಬಂದೆನೀಕ್ಷಿಸು । ಮಾಯುಧನ ಕಗ್ಗೊಲೆಯ ಕೆದರುವು । ಪಾಯವನು ನೀ ಬಲ್ಲೆಯೆಂದಳ ವನಿತೆ ವಿನಯದಲಿ ॥೩೨॥ ಸರಸಿಜದ ಮಧುಮಧುಕರನನು । ಕರಿಸಿದೊಡೆ ಚಂದ್ರಿಕೆ ಚಕೋರನ । ವರಿಸಿದೊಡೆ ನಿಧಿ ಲಕ್ಷ್ಮಿ ಸುಳಿದೊಡೆ ನಯನವೀಥಿಯಲಿ ॥ ಗರುವೆಯರು ಮೇಲಿಕ್ಕಿ ಪುರುಷನ । ವರಸಿದೊಡೆ ಜಾರುವರೆ ಸುಡಲಾ । ಸರಸಿಜವನಾ ಚಂದ್ರಿಕೆಯ ನಾನಿಧಿಯ ನಾವಧುವ ॥೩೩॥ ತ್ರಿಳುಹಿದೊಡೆ ಸುರಲೋಕದ ವರತಿ । ಗಳಹೆಯರಲಾಯೆಂಬೆ ಮನ್ಮಥ । ಖಳ ಕಣಾ ನಿಷ್ಕರುಣಿ ನೀ ಸೌಭಾಗ್ಯ ಗರ್ವದಲಿ ॥ ಲುಮೊ ಬಿದ್ದುದು ವಾಸಿಯಲಿ ಕಂ । ದೋಳಸುಗೊಂಡುದು ಕಾಮಶರಮನ । ವಳುಕೆ ಕೆಡಹಿತು ವಿರಹತಾಪದಲೆಂದಳಿಂದುಮುಖಿ ॥೩೪॥ ಕಾಡಲಾಗದು ನಿಮ್ಮೊಡನೆ ಮರಿ । ದಾಡಲಮ್ಮೆನು ಮನಕೆ ಧೈರ್ಯವ । ಜೋಡ ತೊಟ್ಟಿದಿರಾಗಿ ನಿಲೆ ನನೆಯಂಬು ನಾಟುವವೇ ॥ ಖೋಡಿಯೇಕಿದಕವ್ವೆ ಮಕ್ಕಳ । ನೋಡಬಂದೊಡೆ ಬೇರೆ ಕಷ್ಟವ । ನಾಡುವರೆ ಬಲ್ಲವರು ಬಿಜಯಂಗೈಯಿ ನೀವೆಂದ ॥ ರೋಷವೆರಡಲೆಯಾಯ್ತು ಲಜ್ಜೆಯ । ಮೀಸಲಳಿದುದು ಬಲುವಿಧದ ಬಹು । ವಾಸಿಗಳು ಪಲ್ಲವಿಸಿದವು ತೆಲ್ಲೈಸಿ ತನುತಾಪ ॥ ಆಸೆಪೈಸರವೋಯ್ತು ಕಡುರುಳ । ಸೂಸಿದುದು ಸುಯ್ಲಿನಲಿ ಕಂಗಳು । ಕೇಸುರಿಯ ಮುಕ್ಕುಳಿಸಿ ಕಾಮಿನಿಯಾ ॥೩೬॥ ಸೊಂಪಡಗಿತ್ತು ಮುಖೇಂದು ತನುಲತೆ । ಕಂಪಿಸಿದುದಡಿಗಡಿಗೆ ಮೈತನಿ । ಗಂಪಿನಲಿ ಮಘುಮಘಿಸಿತಮಲಸ್ವೇದಸಲಿಲದಲಿ ॥ ತಂಪಿನಲಿ ಶಿಖಿ ಮಧುರದಲಿ ಕಟು । ನುಂಪಿನಲಿ ಬಿರಿಸ ಮೃತದಲಿ ವಿಷ । ಗುಂಪಿನಲಿ ನೆಲೆಯಾದವೋಲ್ಸತಿಗಾಯ್ತು ಘನರೋಷ । ಕೆತ್ತಿದವು ತುಟಿ ಕದಪಿನಲಿ ಕೈ । ಪತ್ತಿಸುತ ತೂಗಿದಳು ಶಿರವನು । ತತ್ತರೋಷಾಯುಧವ ಮಸೆದಳು ಧಾರೆಗಂಗಳಲಿ ॥ ಎತ್ತಿದುಬ್ಬೇಗದ ವಿಕಾರದ । ಚಿತ್ತಬುದ್ಧಿಮನಂಗಳಾತ್ಮನ । ಜೊತ್ತಿಸಿದವೆದ್ದು ಭೂತದಹಂಕಾರದಲಿ ಕಾಮಿನಿಯಾ ॥೩೮॥ ಎಲವೊ ಭಂಡರ ಭಾವ ಖೂಳರ । ನಿಳಯ ಖಳರಘನಾಥ ವಂಚಕ । ತಿಲಕ ಗಾಪಿಲರೊಡೆಯ ಬಂಧುವೆ ದುಷ್ಟನಾಯಕರಾ ॥ ಎಲೆಮರುಳೆ ತಾನಾವಳೆಂಬುದ । ತಿಳಿಯಲಾ ನೀನಾವನೆಂಬುದ । ನಿಳೆಯರಿಯದೇ ಭಂಡ ಫಡ ಹೋಗೆಂದಳಿಂದುಮುಖಿ ॥೩೯॥ ಒಲಿದು ಬಂದವರಾವು ಸೊಬಗಿನೊ । ಳೊಲಿಸಿ ಮರುಗಿಪ ಮಿಂಡ ನೀನತಿ । ಸುಲಭರಾವ ದುರ್ಲಭನು ನೀ ದೇವೇಂದ್ರಕಟಕದಲಿ । ಎಲೆ ನಪುಂಸಕ ಗಂಡುವೇಷದ । ಸುಳಿವು ನಿನಗೇಕೆನುತ ರತಿಕಳ । ವಳಿಸಿ ಕರವೆತ್ತಿದಳ ಹಿಡಿಹಿಡಿಶಾಪ ವಿದೆಯೆನುತ ॥೪೦॥ ತಳುಕಿತದ್ಭುತರೋಷ ಸುಯ್ಲಿನ । ಝಳವೊಡೆದು ಮೂಕುತಿಯ ಮುತ್ತಿನ ॥ ಬೆಳಕು ಕುಂದಿತು ಕುಂದಿತಮಳಚ್ಛವಿ ಮುಖಾಂಬುಜದಾ ॥ ಹೊಳೆಹೊಳೆವ ಕೆಂದಳದ ಸೆಳ್ಳುಗು । ರೊಳಮಯೂಖದ ಮಣಿಯಮುದ್ರಿಕೆ । ಗಳ ಮರೀಚಿಯಲೆಸೆದುದೆತ್ತಿದ ಹಸ್ತವೂರ್ವಶಿಯಾ ॥೪೧॥ ರಾಹು ತುಡುಕಿದ ಶಶಿಯೊ ಮೇಣೌದ್ರಾಹಿ ಮಸ್ತಕಮಾಣಿಕವೊ ಕಡು । ಗಾಹಿನಮೃತವೊ ಕುಪಿತಸಿಂಹದ ಗುಹೆಯ ಮೃಗಮದವೋ ॥ ಲೋಹಧಾರೆಯ ಮಧುವೊ ಕಳಿತಹ । ಳಾಹಳದ ಕಜ್ಜಾಯವೆನಿಸಿತು । ರೂಹು ಸುಮನೋಹರ ಭಯಂಕರವಾಯ್ತು ಸುರಸತಿಯಾ ॥೪೨॥ ನರಮೃಗಾಧಮ ನಿಮ್ಮ ಭಾರತ । ವರುಷಭೂಮಿಯೊಳೊಂದು ವರುಷಾಂ । ತರ ನಪುಂಸಕನಾಗಿ ಚರಿಸು ನಿರಂತರಾಯದಲಿ ॥ ಹರಿಯನಂಗುಲಿಗಳ ಧನಂಜಯನೊಲೆದು ನಿಜಶಿರವ ॥ ಆಗಲಿದು ಸುರಭವನವಧುಗಳು । ನಾಗರಿಗರಿಂ ವರೆತ್ತ । ಭಾರತ । ಭೂಗತರು ತಾವೆತ್ತಲಿದು ಘಟಿಸಿದುದು ವಿಧಿಯೆಂದ ॥೪೪॥ ಸುರಪತಿಗೆ ಸೂಚಿಸಿದನೇಮೋ

ನಂಗುಲಿಗಳ ಧನಂಜಯನೊಲಿದು ನಿಜಶಿರವ ॥ ಆಗಲಿದು ಸುರಭವನವಧುಗಳು । ನಾಗರಿಗರಿವರೆತ್ತ ಭಾರತ । ಭೂಗತರು ತಾವೆತ್ತಲಿದು ಘಟಿಸಿದುದು ವಿಧಿಯೆಂದ ॥೪೪॥ ಸುರಪತಿಗೆ ಸಂಚಿಸಿದೆನೇ ವೋ । ಣ್ಕರಸಿದೆನೆ ಕಮಳಾನನೆಯ ನಿ । ಷ್ಠುರದನುಡಿಗಪರಾಧವುಂಟೇ ತಾನು ಮಾಡಿದುದು ॥ ವರು ಷತನಕ ನಪುಂಸಕದಲಾ । ಚಲಸಬಲ್ಲೆನೆ ಸಾಕು ದೇಹಾಂ । ತರವನಂಗೀಕರಿಸುವೆನಲಾ ತನ್ನಸುಡ ಲೆಂದ ॥೪೫॥ ಎಲೆವಿಧಾತ್ರ ಕೃತಾಪರಾಧ । ಸ್ಥಳಕೆ ದಂಡಪ್ರಾಪ್ತಿಯಲ್ಲದೆ । ವಿಲಸಿತದವೇದಾರ್ಥದಲಿ ಮನ್ವಾದ್ಯಮಾರ್ಗದಲಿ ॥ ಚಲಿಸದಾಚರಿಸಿದೊಡೆ ಧರ್ಮ । ಸ್ಥಳದೊಳೇನುನಿಮಿತ್ತವಕಟಾ । ಗಳಿತ ಪೌರುಷನಾಗಿ ಬದುಕುವೆನಲ್ಲ ತಾನೆಂದ ॥೪೬॥ ತಪವನಾಚರಿಸಿದೊಡೆವರಪಾ । ಶುಪತಶರವೆನಗಾಯ್ತು ಧರ್ಮವೆ । ತಪವಲಾಯೆಂದರಿದು ನಡೆದೊಡೆ ಷಂಡತ್ವನವಾಯ್ತು ॥ ತಪವೆರಡು ಸರಿಫಲದೊಳಾ ದುದು । ವಿಪರೀತದಗತಿ ಗಹನತರವೇ । ವಿಪುಳಕರ್ಮಸ್ಥಿತಿಯೆನುತ ತೂಗಿದನು ನಿಜಶಿರವ ॥೪೭॥ ಶಿವನ ಶರವೆನಗಾಯ್ತು ರಿಪುಕೌ । ರವರ ರಕುತದ ರಾಟಳವನೆ । ತ್ತುವೆನು ಕಟ್ಟಾಮುಡಿಯನೆಂಬೆನು ದುರುಪದೀಸತಿಗೆ ॥ ಇವಳು ಭಂಗಿಸಿ ಬೂತುಗೆಡಹಿದ । ಹವಣನಾರಿಗೆ ಹೇಳುವೆನು ವರ । ಯುವ ತಿಗೀನುಡಿಯೊಸಗೆಯೇ ಹಾಯೆನುತ ಬಿಸುಸುಯ್ದ ॥೪೮॥ ಅರಸ ಕೇಳೈ ಚಿತ್ರಸೇನನ । ಕರೆಸಿ ಯೂರ್ವಶಿ ಪಾರ್ಥ ಮಾಡಿದ । ದುರುಳತನವನು ದೂರಿದೊಡೆಸುರಸತಿಯ ಸಂತೈಸಿ ॥ ಸುರಪತಿಗೆ ಗಂಧರ್ವನಿವರಿ । ಬ್ಬರನಿರೋಧನಿಬಂಧನವನೆ । ಚ್ಚರಿಸಲರ್ಜುನನರಮನೆಗೆ ಬಂದನು ಬಲಧ್ವಂಸಿ ॥ ಮಗನನಪ್ಪಿದನೆನ್ನತಂದೆಗೆ । ದುಗುಡವೇಕೆನ್ನಾನೆಗೆತ್ತಣ । ಬೆಗಡಿದೆನ್ನರಸಂಗಿದೆತ್ತಣದೆಸೆಯದು ವಸ್ಮಾನ ॥ ಮೊಗದ ತನಿಹೊಳಹಳಿಕೆ ನೇತ್ರಾಂ । ಬುಗಳೊಳದ್ದುದು ನಿಜಮನೋವ್ಯ । ತ್ತಿಗಳೊಳಗೆ ನುಡಿ ಮುಳುಗಿತೇನಿದು ಚಿತ್ರವಾಯ್ತೆಂದ ॥೫೦॥ ನುಡಿಸೆ ತಲೆವಾಗಿದನು ಲಜ್ಜೆಯ । ಝುಡಿತೆಯಲಿ ಝೊಂಪೇರಿದಂದದಿ । ಮಿಡುಕದಿರೆ ಮಗುಳಪ್ಪಿ ಹರಿ ಮೊಗನೆಗಹಿ ಮುಂಡಾಡಿ ॥ ಬಿಡು ಮನೋ ಗ್ಲಾನಿಯನು ಸತಿ ಕೆಡೆ । ನುಡಿದುದೆಲ್ಲವನೆನಗೆ ಸ್ಫುರಿಸು । ಮಡದಿಯರಲೇನುಂಟು ಗುಣವೆನ್ನಾಣೆ ಹೇಳೆಂದ ॥೫೧॥ ಎಲೆಕಿರೀಟಿ ವೃಥಾಮನೋವ್ಯಥೆ । ತಳಿತುದೇಕೂರ್ವಶಿಯ ಶಾಪದ । ಒಳುಕಿದ್ದೈ ತತ್ಕ್ರೋಧ ನಿನಗುಪಕಾರವಾಯ್ತು ಕಣಾ ॥ ಹಳುವದಲಿ ಹನ್ನೆರಡುವರುಷದ । ತಲಹಿನಜ್ಞಾತದಲಿ ವರುಷವ । ಕಳೆವುದಿದುಸಾಧನವೆಯಾಯ್ತು ಶಿಖಂಡಿತನವೆಂದ ॥೫೨॥ ಖೋಡಿಯಿಲ್ಲೆಲೆವಂಗನೆ ಚಿಂತಿಸ । ಬೇಡ ನಿಮ್ಮಜ್ಞಾತದಲಿ ನೆರೆ । ಜೋಡಲಾ ಜಾಣಾಯ್ಲರಿಪುಜನದೃಷ್ಟಿಶರಹತಿಗೆ ॥ ಕೂಡಿ ತಿದು ಪುಣ್ಯದಲಿ ಸುರಸತಿ । ಮಾಡಿದಪಕೃತಿ ನಿನ್ನ ಭಾಷೆಯ । ಬೀಡ ಸಲಹಿದುದರಿಯೆ ನೀ ಸಾಹಿತ್ಯ ನಲ್ಲೆಂದ॥೫೩॥ ಎಂದು ಪಾರ್ಥನ ಸಂತವಿಟ್ಟು ಪು । ರಂದರನು ತನ್ನರಮನೆಗೆ ನಡೆ । ತಂದನರ್ಜುನನಸ ಹಿತ ವಿವಿಧವಿನೋದವಿಭವದಲಿ ॥ ಅಂದು ಶಿಖಿಪವನಾದಿಗಳು ನಲ । ವಿಂದ ಕೊಟ್ಟರು ಶರವನಮರೀ । ವೃಂದ ಸೂಸಿತು ಸೇಸೆಯನು ಜಯರವದ ರಭಸದಲಿ ॥೫೪॥ ಸುರಪನರುಹಿದನಸ್ತ್ರಶಸ್ತ್ರ । ತ್ಕರರ ಹಸ್ತವನಮರಭುವನದ । ಭರತವಿದ್ಯೆಯನರುಹಿಸಿದನಾಶಸ್ತ್ರವಿಧಿಯಿಂದ ॥ ಸುರರಿಗಲಗಣಸಾದ ದೈತ್ಯರ । ನೊರಸಿವನು ತತ್ಕೀರ್ತಿಲತೆ ಕುಡಿ । ವರಿದು ಬೆಳೆದುದು ವೀರನಾರಾಯಣನಮೈದುನನಾ ॥೫೫॥

ಅಂತು ಸಂಧಿ ೮ ಕ್ಕೆ ಪದ ೪೭೭ ಕ್ಕಂ ಮಂಗಳಮಸ್ತು.

29

ಒಂಭತ್ತನೆಯ ಸಂಧಿ.

ಸೂಚನೆ॥ ಸಕಲಮುನಿಜನಸಹಿತಗಿರಿವನ । ನಿಕರದಲಿ ತೊಳಲಿದನು ರಾಜ । ನೃಪಶಿರೋಮಣಿ ಧರ್ಮನಂದನ ತೀರ್ಥಯಾತ್ರೆಯಲಿ ॥

ಅರಸ ಕೇಳೈ ಪಾರ್ಥನಿದ್ದನು । ವರುಷವೈದರೊಳಿಂದ್ರಭವನದ । ಸಿರಿಯ ಸಮ್ಮೇಳದ ಸಗಾಢದ ಸೌಮನಸ್ಯದಲಿ ॥ ನರನ ಹದನೇನೋ ಧನಂಜಯ । ನಿರವದೆಲ್ಲಿ ಕಿರೀಟಿ ನಮ್ಮನು । ಮರೆದು ಕಳೆದನಲಾಯೆನುತ ಯಮಸೂನು ಚಿಂತಿಸಿದ ॥೧॥ ಕಳುಹಿದನು ಲೋಮಶನನವನೀ । ತಳಕೆ ಸುರಪತಿ ಸಿತಹಯನ ಕೌ । ಶಲವನೊಡಹುಟ್ಟಿದರಿಗರುಹಲಿಕಭ್ರಮಾರ್ಗದಲಿ ॥ ಇಳಿದನಾಮುನಿಪತಿ ಧರಿತ್ರೀ । ತಳಕೆ ಕಾಮ್ಯಕನಾಮವನದಲಿ । ತಳಿರ ಗೂಡಾರದಲಿ ಕಂಡನು ಧರ್ಮನಂದನನ ॥೨॥ ಈತನಿದಿರೆದ್ದರ್ಘ್ಯಪಾದ್ಯವ । ನಾತಪೋನಿಧಿಗಿತ್ತು ಬಹಳ । ಪ್ರೀತಿಯಲಿ ಬೆಸಗೊಂಡನವರಾಗಮನಸಂಗತಿಯ ॥ ಆತನಮಲಸ್ವರ್ಗಸದನಸು । ಖಾತಿಶಯವನು ತಿಳುಹಿದನು ಪುರುಹೂತಭವನದಲರ್ಜುನನವಾರ್ತೆಯ ವಿವರಿಸಿದ ॥೩॥ ನುಡಿನುಡಿಗೆ ಸುಕ್ಷೇಮಕುಶಲವ । ನಡಿಗಡಿಗೆ ಬೆಸಗೊಂಡು ಪುಳಕದ । ಗುಡಿಯ ಬೀಡಿನ ರೋಮಪುಳಕದ ಪೂರ್ಣಹರುಷದಲಿ ॥ ಪೊಡವಿಯಧಿಪತಿ ಬಳಿಕ ತೊಳಲಿದ । ನಡವಿಯಡವಿಯತೀರ್ಥಯಾತ್ರೆಗೆ ।ಮಡದಿ ನಿಜಪರಿವಾರವವನೀದೇವಕುಲಸಹಿತ ॥೪॥ ವರಪುಲಸ್ತ್ಯಮುನೀಂದ್ರ ಭೀಷ್ಮಂ । ಗರುಹಿದುತ್ತಮತೀರ್ಥವನು ವಿ । ಸ್ತರಿಸಿದನು ಲೋಮಶಮುನೀಶ್ವರನವನಿಪಾಲಂಗೆ ॥ ಧರಣಿಪತಿ ಬೃಹದಶ್ವನನು ಪತಿ । ಕರಿಸಿ ನಿಜರಾಜ್ಯಾಪಹಾರದ । ಪರಮದುಃಖಪರಂಪರೆಯನರುಹಿದನು ಖೇದದಲಿ ॥೫॥ ಆತನೀತನ ಸಂತವಿಟ್ಟು । ದ್ಯೂತದಲಿ ನಳಚಕ್ರವರ್ತಿಮ । ಹೀತಳವ ಸೋತನು ಕಣಾ ಕಲಿಯಿಂದ ಪುಷ್ಕರಗೆ ॥ ಭೂತಳವ ಬಿಸುಟಡವಿಗೈದಿದ । ನಾತನಿಜವಧುಸಹಿತ ವನದಲಿ । ಕಾತರಿಸಿ ನಿಜಸತಿಯ ಬಿಸುಟನು ಹಾಯ್ದನಡವಿಯಲಿ ॥೬॥ ಬಳಿಕ ಕರ್ಕೋಟಕನದೆಸೆಯಿಂ । ದಳಿಯೆ ನಿಜ ಋತುಪರ್ಣಭೂಪನ । ನಿಳಯಕೋಲೈಸಿದನು ಬಾಹುಕನೆಂಬನಾಮದಲಿ ॥ ಲಲನೆ ತೊಳಲಿದು ಬರುತ ತಂದೆಯ । ನಿಳಯವನು ಸಾರಿದಳು ಬಳಿಕಾ । ನಳಿನಮುಖಿಯಿಂದಾಯ್ತು ನಳಭೂಪತಿಗೆ ನಿಜ ರಾಜ್ಯ ॥೭॥ ಆತನಾಪತ್ತದು ಮಹೀಪತಿ । ನೀತಳೋದರಿಸಹಿತ ನಿನ್ನೀ । ಭ್ರಾತೃಜನಸಹಿತೀಮಹಾಮುನಿಮುಖ್ಯಜನಸಹಿತ ॥ ಕಾತರಿಸುತಿಹೆ ನಿನ್ನ ಪೋಲು ವಿ ।ಖ್ಯಾತರಾರೈ ಪುಣ್ಯತರರೆಂದಾತಪೋನಿಧಿ ಸಂತವಿಟ್ಟನು ಧರ್ಮನಂದನನ॥೮॥ನಳಮಹೀಪತಿಯಕ್ಷಹೃದಯವ । ತಿಳಿದು ಋತುಪರ್ಣನಲಿ ಕಾಲವ । ಕಳೆದು ಗೆಲಿದನು ಪುಷ್ಕರನ ವಿದ್ಯಾತಿಮಹಿಮೆಯಲಿ ॥ ಗೆಲಿದು ಕೌರವಶಕುನಿಗಳು ನಿ । ನ್ನಿಳೆಯ ಕೊಂಡರು ಮರಳಿ ಜೂಜಿಂ । ಗಳುಕಬೇಡೆಂದಕ್ಷಹೃದಯವ ಮುನಿಪ ಕರುಣಿಸಿದ॥೯॥ಬಳಿಕ ಲೋಮಶಸಹಿತ ನೃಪಕುಲತಿಲಕ ಬಂದನಗಸ್ತ್ಯನಾಶ್ರಮ । ದೊಳಗೆ ಬಿಟ್ಟನು ಪಾಳೆಯವನಾಮುನಿಯ ಚರಿತವನು ॥ ತಿಳುಹಿದನು ಲೋಮಶನು ವೃತ್ರನ । ಕಲಹಕೆಂದು ದಧೀಚಿಮುನಿಪತಿ । ಯೆಲುವನಮರರು ಬೇಡಿದುದನರುಹಿದನು ಜನಪತಿಗೆ ॥೧೦॥ ಆಮುನಿಯ ಕಂಕಾಳದಲಿ ಸು । ತ್ರಾಮ ಕೊಂದನು ವೃತ್ರನನು ಬಳಿ । ಕಾಮಹಾದಾನವರ ರಕ್ಕಸಕೋಟಿಜಲಧಿಯಲಿ ॥ ಭೀಮಬಲರಡಗಿದರು ಬಂದೀ । ಭೂಮಿ

ಯಲ್ಲಿ ವಸಿಷ್ಠನಾಶ್ರಮಾ । ದಾಮುನೀಂದ್ರರ ತಿಂದರವರು ಸಹಸ್ರಸಂಖ್ಯೆಯಲಿ ॥೧೧॥ ಚ್ಯವನನಾ
ಶ್ರಮದೊಳಗೆ ಮೂರನು । ತಿವಿದು ಭಾರದ್ವಾಜನಾಶ್ರಮ । ಕವರ ಮುನಿದೆಪ್ಪತ್ತ ನುಂಗಿದರೇನನು
ಸುರುವೆನು ॥ ದಿವಿಜರಿತ್ತಲಗಸ್ತ್ಯನನು ಪರು। ತವಿಸಿದರು ಸಾಗರವನಾಮುನಿ । ಹವಣಿಸಿದ ಜಠರದಲಿ
ಕೊಂದನು ದೈತ್ಯದಾನವರ ॥೧೨॥ ಸಗರಸುತಚರಿತವನು ಕಪಿಲನ । ದೃಗುಶಿಖಿಯಲುರಿದುದನು ಬಳಿ
ಕವ । ರಿಗೆ ಭಗೀರಥನಿಳುಹಿದಮರನದೀಕಥಾಂತರವ ॥ ವಿಗಡಮುನಿಯಿಲ್ವಲನವಾತಾ । ಪಿಗಳ
ಮರ್ದಿಸಿ ವಿಂಧ್ಯಗಿರಿಹ। ಬ್ಬುಗೆಯ ನಿಲಿಸಿದಗಸ್ತ್ಯಚರಿತವ ಮುನಿಪ ವರ್ಣಿಸಿದ ॥೧೩॥ ಕೇಳಿದನು
ನೃಪಋಷ್ಯಶೃಂಗವಿ । ಶಾಲಕಥೆಯ ಕಳಿಂಗದೇಶವ । ಕೂಲವತಿಗಳ ಮಿಂದು ಗಂಗಾಜಲಧಿಸಂಗಮದ ॥
ಮೇಲೆ ವೈತರಣಿಯ ವರೋತ್ತರ । ಕೂಲವನು ದಾಂಟಿದನು ನೃಪಕುಲ । ಕಾಲಯಮನಾಶ್ರಮಕೆ
ಬಂದರು ರೇಣುಕಾಸುತನ ॥೧೪॥ ಪರಶುರಾಮನ ಕಾರ್ತವೀರ್ಯನ । ಧುರದೊಳಿಪ್ಪತ್ತೊಂದುಸೂಳಿ
ನೊ । ಳರಿದರಾಯರ ಕಂಠನಾಳದ ನೆತ್ತರಿನನದಿಯ ॥ ಪರಮಪಿತೃತರ್ಪಣವನಾತನ । ಪರಶುವಿನ
ನೆಣವಸೆಯ ತೊಳಹದ । ವರನದಿಯ ವಿಸ್ತರಣವನು ಕೇಳಿದನು ಯಮಸೂನು ॥೧೫॥ ಬಂಪನವನಿಪ
ನಾಪ್ರಭಾಸದ । ವಂದನೆಗೆ ಬಳಿಕಲ್ಲಿ ಯಾದವ । ವೃಂದದರ್ಶನವಾಯ್ತು ಬಹುವಿಧತೀರ್ಥತೀರದಲಿ॥
ಮಿಂದನಾತಗೆ ಗಯನಚರಿತವ । ನಂದು ಲೋಮಶ ಹೇಳಿದನು ನಲ । ವಿಂದ ಸಂಯಾತಿಚ್ಯವನಸಂವಾ
ದಸಂಗತಿಯ ॥೧೬॥ ಚ್ಯವನಮುನಿಯ ವಿವಾಹವನು ರೂ । ಪವನು ಮುನಿಗಶ್ವಿನಿಗಳಿತ್ತುದ ।
ನವರಿಗಾಮುನಿಮುಖಹವಿರ್ಭಾಗಪ್ರಸಂಗತಿಯ ॥ ಅವರಗಿಂದ್ರನ ಮತ್ಸರವ ದಾ । ನವನ ನಿರ್ಮಾ
ಣವನು ಬಳಿಕಿನೊ । ಳವನಿಪಗೆ ಮಾಂಧಾತಚರಿತವನೊರೆದನಾಮುನಿಪ ॥೧೭॥ ಸೋಮಕನ ಚರಿತವ
ಮರುತ್ತಮ । ಹಾಮಹಿಮನಾಚಾರಧರ್ಮ । ಸ್ತೋಮವನು ವಿರಚಿಸಿ ಯಯಾತಿಯ ಸತ್ಕಥಾಂತ
ರವ ॥ ಭೂಮಿಪತಿ ಕೇಳಿದನು ಶಿಖಿಯು । ದ್ದಾಮತನವನು ತನ್ನ ಮಾಂಸವ । ನಾಮಹೇಂದ್ರಾಗ್ನಿಗ
ಳಿಗಿತ್ತವಿಚಿತ್ರವಿಸ್ತರವ ॥೧೮॥ ಕೇಳಲಷ್ಟಾವಕ್ರಚರಿತವ । ಹೇಳಿದನು ಲೋಮಶಮುನೀಂದ್ರ ನೃ ।
ಪಾಲಕಂಗರುಹಿದನು ಯಾವಕ್ರೀತಋಷಿಯ ಸತ್ಕಥೆಯ ॥ ಬಾಳಡವಿ ಬಯಲಾಯ್ತು ಫಲಮೃಗ । ಜಾಲ
ಸವೆದುದು ಗಂಧಮಾದನ । ಶೈಲವನದಲಿ ವಾಸವೆಂದವನೀಶಹೊರವಂಟ ॥೧೯॥ ಅರಸ ಬಂದವನು
ಗಂಧಮಾದನ । ಗಿರಿಯ ತಪ್ಪಲಿಗಗ್ನಿಹೋತ್ರದ । ಪರಮಋಷಿಗಳು ಮಡದಿಸಕಲನಿಯೋಗಿಜನಸ
ಹಿತ ॥ ಸರಸಿ ನೆರೆಯವು ಸ್ನಾನಪಾನಕೆ । ತರುಲತಾವಳಿಗಳು ಯುಧಿಷ್ಠಿರ । ನರಮನೆಯ ಸೀವಟಕೆ
ಸಾಲವು ನೃಪತಿ ಕೇಳೆಂದ ॥೨೦॥ ಮರುದಿವಸವಲ್ಲಿಂದ ಬೆಟ್ಟದ । ಹೊರಗೆ ನಡೆತರಲಭ್ರದಲಿ ಗುಡು ।
ಗುರಿದು ಮೆರೆದುದು ಮೇಘ ಮಿಂಚಿದವಖಿಳದೆಸೆಗಳಲಿ ॥ ಬರಸಿಡಿಲ ಬೊಬ್ಬೆಯಲಿ ಪರ್ವತ ।
ಬಿರಿಯೆ ಬಲುಗತ್ತಲೆಯ ಬಿಂಕಕೆ । ನರರ ಕಣ್ಣಮನ ಹೂಳೆ ತೂಳಿತು ಮಳೆ ಮಹೀತಳವ ॥೨೧॥
ಮರನ ಮರ ತಕ್ಕೈಸಿದವು ಕುಲ । ಗಿರಿಯ ಗಿರಿ ಮುಂಡಾಡಿದವು ತೆರೆ । ತೆರೆಗಳಲಿ ಗಂಟಿಕ್ಕಿದವು ಸಾಗ
ರದಸಾಗರದಾ ॥ ಧರಣಿಗಿಕ್ಕಿದಿಳಿಂಪನಡಕಿಲು । ಜರಿಯದಿಹುದೇ ಜಗದ ಬೋನಕೆ । ಹರಿಗೆ ಹೇಳೆನೆ
ಬೀಸಿದುದು ಬಿರುಗಾಳಿ ಬಿರುಸಿನಲಿ॥೨೨॥ಕೆದರಿತಲ್ಲಿಯದಲ್ಲಿ ಮಳೆಯಲಿ।ಹುದುಗಿತಲ್ಲಿಯದಲ್ಲಿ ಕಣಿಗಿಲು।
ಕದಳಿಗಳ ಮರೆಗೊಂಡುದಲ್ಲಿಯದಲ್ಲಿ ಹರಿಹರಿದು ॥ ಬೆದರಿತಲ್ಲಿಯದಲ್ಲಿ ಕರೆಕರೆ । ದೊದರಿತಲ್ಲಿಯದಲ್ಲಿ

ಬಲುಮಳೆ । ಸದೆದುದಿವರನು ಸೇಡುಗೊಂಡುದು ಜನದ ಸುಮ್ಮಾನ ॥೨೩॥ ಬಗಿದು ಹೊಕ್ಕರು ಮೆಳೆಗಳನು ಮಿಂ । ಚುಗಳ ಕಂಬೆಳಗಿನಲಿ ದಾರಿಯ । ತೆಗೆತೆಗೆದು ಸಾರಿದರು ಸಂದಣಿ ಮರನ ಹೆಮ್ಮರನ ॥ ಬಿಗಿದರೋಮದ ಹುದಿದಕೈಗೊ । ಪ್ಪಿಗಳ ನಡುಕದ ಮೈಯ ಕಡುಸೇ । ಡೆಗಳ ಶೀತದ ಸಕಲಜನ ಹುದುಗಿದುದರಣ್ಯದಲಿ ॥೨೪॥ ಹೊಳೆವ ಕಂಗಳ ಕಾಂತಿ ಬಲುಗ । ತ್ತಲೆಯ ಝಳಪಿಸೆ ಘೋರವಿಪಿನದೊಳಳಿಕುಲಳುಕಿ ಬಂದಳೊಬ್ಬಳೆ ಮಳೆಗೆ ಕೈಯೊಡ್ಡಿ ॥ ಬಲಿದು ಮೈ ನಡನಡುಗಿ ಹಲುಹಲು । ಹಳಚಿ ನನೆದಳು ವಾರಿಯಲಿ ತನು । ಹಳಹಳಿಸೆ ಬಳಲಿದಳು ಚರಣದ ಹೊಸಲ ಹೋರಟೆಗೆ ॥೨೫॥ ಎಡಹುಬೆರಳಿನ ಕಾಲಮುಳುಗಳ । ಕಡುಮಳೆಯ ಘಾಟುಳಿಪಗಾಳಿಯ । ಸಿಡಿಲುಮಿಂಚಿನ ಘಲ್ಲಣೆಯ ಘೋರಾಂಧಕಾರದಲಿ ॥ ಒಡನೆ ಮಾನಿಸರಿಲ್ಲ ಕರೆದರೆ । ನುಡಿವರಿಲ್ಲ ಕರದ್ವಯದಿ ತಡ । ವಿಡುತ ಪೈಸರದೊಳಗೆ ಸೂಸಿತು ಮೈ ಮಹಾಸತಿಯ ॥೨೬॥ ಗಾಳಿಗೊರಗಿದ ಕದಳಿಯಂತಿರೆ । ಲೋಲಲೋಚನೆ ಥಟ್ಟುಗೆಡೆದಳು । ಮೇಲುಸುರ ಬಲುಮೂರ್ಛೆಯಲಿ ಮುದ್ರಿಸಿದಚೇತನದ ॥ ಬಾಲೆಯಿರೆ ಬೆಳಗಾಯ್ತು ತೆಗೆದುದು ಗಾಳಿಬಿರುಮಳೆ ಭೀಮನಕುಲನೃ । ಪಾಲರರಸಿದರೀಕೆಯನು ಕಂಡವರ ಬೆಸಗೊಳುತ ॥೨೭॥ ಬರುತ ಕಂಡರು ಬಟ್ಟೆಯಲಿ ನಿ । ರ್ಭರದ ಮೂರ್ಛಾಮೋಹಿತಾಂತಃ । ಕರಣೆಯನು ಹಾಯೆನುತ ಬಿದ್ದರು ಪವನಜಾದಿಗಳು ॥ ಧರಣಿಪತಿ ತೆಗೆದೀಕೆಯನು ಕು । ಳ್ಳಿರಿಸಿ ತನ್ನಯ ತೊಡೆಯಮೇಲಾ । ದರಿಸಿ ಮಂತ್ರಿಸಿ ನೀರತಳಿದನು ರಕ್ಷೆಗಳ ರಚಿಸಿ ॥೨೮॥ ಉಪಚರಿಸಿ ರಕ್ಷೋಘ್ನಸೂಕ್ತದ । ಜಪವಮಾಡಿಸಿ ವಚನಮಾತ್ರದ । ರಪಣದಲಿ ರಚಿಸಿದನು ಗೋಧನಭೂಮಿದಾನವನು ॥ ನೃಪತಿ ಕೇಳೊಂದೆರಡುಗಳಿಗೆಯೊ । ಳಪಹರಿಸಿದುದು ಮೂರ್ಛೆ ಸತ್ವ । ವ್ಯಪಗತೈಶ್ವರ್ಯರನು ಕಂಡಳು ಕಾಂತೆ ಕಣ್ದೆರೆದು ॥೨೯॥ ನೆಲೆಮನೆಯ ಮಾಡದಲಿ ರತ್ನಾ । ವಳಿಯ ನುಣ್ಬೆಳಗಿನಲಿ ಹಂಸೆಯ । ತುಳಿಯಮೆಲ್ವಾಸಿನಲಿ ಪವಡಿಸುವೀಕೆಗಿಂದೀಗ ॥ ಹಳುವದಲಿ ಘೋರಾಂಧಕಾರದ । ಮಳೆಯೊಳೊಬ್ಬಳೆ ನಡೆದು ನೆನೆದೀ । ಕಲುನೆಲದೊಳೊರಗಿದಳೆನುತ ಮರುಗಿದನು ಧರಣೀಶ ॥೩೦॥ ಹರೆದುದುಬ್ಬಿದ ಮೂರ್ಛೆ ಕರಣೋ । ತ್ಕರದ ಕಳವಳವಡಗಿತರಸನ । ನರಸಿ ಸಂತೈಸಿದಳು ತಪ್ಪೇನಿದು ಪುರಾಕೃತದ ॥ ಪರುಠವಣೆಗೇಕಳಲು ಮುಂದಣ । ಗಿರಿಯ ಗಮನೋಪಾಯವನು ಗೋಚರಿಸಿರೇ ಸಾಕೆಂದಳಂಬುಜಮುಖಿ ಮಹೀಪತಿಗೆ ॥೩೧॥ ಇದೆ ಮುನಿವ್ರಜವಗ್ನಿಹೋತ್ರಿಗ । ಳಿದೆ ಕುಟುಂಬಿಗಳಾಪ್ತಪರಿಜನ । ವಿದೆ ವರಸ್ತ್ರೀಬಾಲವೃದ್ಧನಿಯೋಗಿಜನಸಹಿತ ॥ ಇದೆ ಮಹಾಕಾಂತಾರವಿನಿಬರ । ಪದಕೆ ವನಮಾರ್ಗದಲಿ ಸೇರುವ । ಹದನ ಕಾಣೆನು ಶಿವಶಿವೆಂದಳು ಕಾಂತೆ ಭೂಪತಿಗೆ ॥೩೨॥ ಆಯತಾಕ್ಷಿಯ ನುಡಿಗೆ ಪಾಂಡವ । ರಾಯ ಮೆಚ್ಚಿದನಿನ್ನು ಗಮನೋ । ಪಾಯವೆಂತೆಂದೆನುತ ಚಿಂತಿಸಿದನು ಘಟೋತ್ಕಚನ ॥ ರಾಯ ಕೇಳೈ ಕಮಲನಾಭನ । ಮಾಯೆಯೋ ನಾವರಿಯೆವಾಕ್ಷಣ । ವಾಯುವೇಗದಲಭ್ರದಿಂದಿಳಿತಂದನಸುರಾರಿ ॥೩೩॥ ವೀರದೈತ್ಯನ ಬಹಳದುಪ್ಪರಿ । ವಾರವದಸಾರೆಣಿಸುವರು ಮುಂ । ಗಾರಿರುಳ ತನಿಯೆರಕ ನೀಲಾಚಲದ ಖಂಡರಣೆ ॥ ಘೋರರಾಹುವ್ಯೂಹವೆನೆ ಸುರ । ವೈರಿಗಳ ಮೈಗಾಂತಿಲಹರಿಯ । ಪೂರದಲಿ ಜಗ ಮುಳುಗೆ ಬಂದುದು ಲಕ್ಷಸಂಖ್ಯೆಯಲಿ ॥೩೪॥ ದೇವ ಬೆಸಸಾ ನಮ್ಮ ಬರಿಸಿದು । ದಾವಹದನು ನವೀನಭಟರಿದೆ । ದೇವರಿಪುಗಳು ಹೇಳು ನೆನಹಿನರಾಜಕಾರಿಯವ ॥ ಆವುದೆನಗುದ್ಯೋಗವೆನೆ

ಸಂಭಾವಿಸಿದನಸುರನನು ಜಾರುವ । ಜೀವವಮರುತನ ಮರಳಿ ನಿಲಿಸಿತು ನಿಸ್ನ ನುಡಿಯೆಂದ ॥೩೫॥ ದುರ್ಗ
ವಿದೆ ನಮ್ಮಂಘ್ರಿಶಕ್ತಿಯ । ನುಗ್ಗು ಬೀತುದು ಸಾಹಸಿಗ ನೀ । ನಗ್ಗಳೆಯರಿದೆ ನಿನ್ನವರು ಪಡಿಗಿರಿಗ
ಳಾಗಿರಿಗೆ ॥ ಹುಗ್ಗಿಗರ ಹೆಗಲೇರಿಸೊಂದೇ । ಲಗ್ಗೆಯಲಿ ನಡೆಸೆನೆ ಹಸಾದದ । ವೊಗ್ಗೆಗೈಗಳ ದನುಜ
ತಗ್ಗಿದನರಸನಿದಿರಿನಲಿ ॥೩೬॥ ಹೊತ್ತನರಸನನರಸನನುಜರ । ನೆತ್ತಿದನು ನೃಪನರಸಿಯನು ಬಳಿ । ಕೆತ್ತಿ
ಕೈಪಿಡಿಸಿದನು ಭಟರಿಗೆ ತೋರಿಪರಿಜನವ ॥ ಹೊತ್ತನಿಬರನಸುರಭಟರೊ । ತ್ತೊತ್ತೆಯಾದುದು ಬೆನ್ನಿ
ನಲಿ ಬಿಗಿ । ದೆತ್ತಿ ಹಾಯ್ದರು ಮುಗಿಲ ತಟ್ಟಿನ ಪರಿಯಜೋಡಿನಲಿ ॥೩೭॥ ಅಸುರದೇಹಸ್ಪರ್ಶವ
ಸಮಂ । ಜಸವಲಾ ತನಗೆನುತ ಮುನಿಲೋ । ಮಶನು ಗಗನೇಚರರ ಗತಿಯಲಿ ಬಂದನಿವರೊಡನೆ ॥
ವಿಷಮಗಿರಿಕಾನನಕದಧ್ವ । ಪ್ರಸರವನು ಹಿಂದಿಕ್ಕಿ ಹೊದ್ದಿದ । ರೆಸೆವನರನಾರಾಯಣಾಶ್ರಮವರತ
ಪೋವನವ ॥೩೮॥ ಅಲ್ಲಿಯಖಿಳಋಷಿವ್ರಜವು ಭೂ । ವಲ್ಲಭನ ನಾತಿಥ್ಯಪೂಜಾ । ಸಲ್ಲಲಿತಸಂಭಾ
ವನಾಮಧುರೋಕ್ತಿರಚನೆಯಲಿ ॥ ಅಲ್ಲಿಗಲ್ಲಿಗೆ ಸಕಲಮುನಿಜನ । ವಲ್ಲಭನು ಮನ್ನಿಸಿದನಾವನ । ದಲ್ಲಿ
ನೂಕಿದನೆಂಟುದಿನವನು ನೃಪತಿ ಕೇಳೆಂದ ... ... ॥೩೯॥

ಅಂತು ಸಂಧಿ ೯ ಕ್ಕೆ ಪದ ೫೧೬ ಕ್ಕಂ ಮಂಗಳಮಸ್ತು

ಹತ್ತನೆಯ ಸಂಧಿ.

ಸೂ॥ ಕಂಡನಡವಿಯೊಳನಿಲಜನನಾ । ಖಂಡಲನ ತನುಜನ ಪತಾಕಾ ।
ದಂಡದಲಿ ನಿಲುಹಂತೆ ವರವನು ಪಡೆದನಾಭೀಮ ॥

॥ಪದ॥ ಕೇಳು ಜನಮೇಜಯಧರಿತ್ರೀ । ಪಾಲ ನರನಾರಾಯಣಾಶ್ರಮ । ಕೂಲವತಿಗಳನಂದ
ನದ ನಿರ್ಮಳಸರೋವರದ ॥ ಕೇಳಿಕೆಯನವಿಲುಗಳ ತುಂಬಿಯ । ಮೇಳವದ ಗೀತದ ವಿನೋದದ । ಲಾಳಿ
ದರು ವನವಾಸಸಾಮ್ರಾಜ್ಯವನು ಸೊಗಸಿನಲಿ ॥೧॥ ಪರಮಧರ್ಮಶ್ರವಣಸೌಖ್ಯದೊ । ಳರಸನಿರೆ
ಬದರಿಯಲಿ ಪೂರ್ವೋ । ತ್ತರದದೆಸೆವಿಡಿದೆಸಗಿತತಿಶಯಗಂಧಬಂಧುರದ ॥ ಭರಣಿ ಮನ್ಮಥಪೋತ
ವಣಿಜನ । ತರಣಿ ತರುಣಭ್ರಮರಸೇವಾ । ಸರಣಿಯೆನೆ ಸುಳಿದುದು ಸಮೀರಣನಾಮಹಾದ್ರಿಯಲಿ ॥೨॥
ಸರಸಸೌಗಂಧಿಕದ ಪರಿಮಳ । ಭರದ ಭಾರವಣೆಯಲಿ ತಿಳಿಗೊಳ । ನುರುಬುದೆರೆಗಳ ತಿವಿಗಳಿನ ತುಂ
ತುರುತುಷಾರದಲಿ ॥ ಪೊರೆದೊಗುವಪರಿದುಂಬಿಗಳ ಮೋ । ಹರದ ಮೋಹಾಮೋಡಿಯಲಿ ಡಾ । ವರಿ
ಸಿತ್ತೈದಿಂದ್ರಿಯದಲೊಂದಿರೆ ಸಕಲಮುನಿಜನವ ॥೩॥ ಮೇಲುರತದಲಿ ಪರಿಮಳದ ವೈ । ಹಾಳಿಯಲಿ
ಸಲೆ ಬೀದಿವರಿದು ಛ । ಡಾಳಿಸುವಸೊಗಸಿನಲಿ ಸೊಂಪಾದಳು ಸರೋಜಮುಖಿ ॥ ಸೋಲಿಸಿತಲಾ ಚೂ
ಣಿಯಲಿ ಸಂ । ಪಾಳಿಸಿದಸೌ ಗಂಧಪಿನ್ನು ವಿ । ಶಾಲಪದುಮವದೆಂತುಟೆನುತವೆ ತೂಗಿದಳು ತಿರವ ॥೪॥
ಅರಸನಲಿ ಮೇಣ್ಕುಲಸಹದೇ । ವರಲಿ ತನ್ನ ಮನೋರಥಕೆ ವಿ । ಸ್ತರಣವಾಗದು ನುಡಿವೊಡಿಲ್ಲ
ರ್ಜುನಸಮೀಪದಲಿ ॥ ಅರಿಭಯಂಕರಭೀಮನೇ ಗೋ । ಚರಿಸುವನಲಾಯೆನುತಲಾತನ । ಹೊರೆಗೆ
ಬಂದಳು ನಗುತ ನುಡಿದಳು ಮಧುರವಚನದಲಿ ॥೫॥ ಹಿರಿಗು ಸೊಗಸಾಯ್ತೆನಗೆ ಪೂರ್ವದ । ಪರಿ

ಮೇಳದ ಕೇಳಿಯಲಿ ನೀನಾ । ಸರಸಿಜವ ತಂದಿತ್ತು ತನ್ನ ಮನೋರಥವ್ಯಥೆಯ ॥ ಪರಿಹರಿಪುದೆನಲಬು ಜವದನೆಯ । ಕುರುಳನುಗುರಲಿ ತಿದ್ದಿದನು ತ । ತ್ಸರಸಿಜವ ತಹೆನೆನುತ ಕೊಂಡನು ನಿಜಗದಾಯುಧವ ॥೬॥ ಬಿಗಿದು ಬತ್ತಳಿಕೆಯನು ಹೊಸ್ತಾ । ಯುಗದ ಖಡ್ಗ ಶರಾಸನವ ಕೊಂ । ಡಗಧರನ ನೆನೆದನಿಲಸುತ ಹೊರವಂಟನಾಶ್ರಮವ ॥ ಬಗಿದು ಹೊಕ್ಕನರಣ್ಯವನು ಬೊ । ಬ್ಬೆಗಳ ಬಿರುಬಿನ ಬಾಹುಸತ್ವದ । ವಿಗಡಭೀಮನ ಕಾಲುದುಳಿ ಕಂಪಿಸಿತು ಕಾನನವ ॥೭॥ ಒದರಿದೊಡೆಪರ್ವತದಶಿಖರದ । ಉದುರಿದವು ಹೆಗ್ಗುಂಡುಗಳು ಮುರಿ । ದೊದೆಯೆ ಬಿದ್ದವು ಬೇರುಸಹಿತ ಮಹಾದ್ರುಮಾದಿಗಳು ॥ ಗದೆಯಹೊಯ್ಲಲಿ ಗಂಡಶೈಲವೊ । ಕದಳಿಗಳೊ ಸಾವರಿಯೆವುಬ್ಬಿದ । ಮದಮುಖನ ಪರಿಮುಸಕ ಮುರಿದುದು ಗಿರಿತರುವ್ರಜವ ॥೮॥ ಮುಡುಹುಸೋಂಕಿದೊಡಾಮಹಾದ್ರಿಗ । ಳೊಡನೆ ತೋರಹತರು ಕೆಡೆದವಡಿಯಿಡಲು ಪಜ್ಜೆಗೆ ತಗ್ಗಿದುದು ನೆಲಸಹಿತ ಹೆದ್ದೆವರು ॥ ಒಡೆದುದಿಳೆ ಬೊಬ್ಬಿರಿತಕೀತನ । ತೊಡೆಯ ಗಾಳಿಗೆ ಹಾರಿದವು ಕಿರು । ಗಿಡಮರಂಗಳು ಮೀರಿ ನಡೆದನು ಭೀಮನಡವಿಯಲಿ ॥೯॥ ಹುಲಿಕರಡಿಕಾಡಾನೆಸಿಂಹಾ । ವಳಿಗಳೀತನ ದನಿಗೆ ಯೋಜನ । ವಳಯದಲಿ ಹಾಯ್ದೋಡಿದವು ನೋಡುತ್ತ ಮುರಿಮುರಿದು ॥ ಹಳುವ ತಳಪಟವಾಯ್ತು ದಿಗ್ಗಜ । ತುಳಿದಬಾಳೆಯವನದವೊಲು ವೆ । ಗ್ಗಳೆಯನೈ ಕಲಿ ಭೀಮ ಬಂದನು ವನದಮಧ್ಯದಲಿ ॥೧೦॥ ಬಿರಿದವದ್ರಿಗಳನಿಲಸುತನು । ಬ್ಬರದಬೊಬ್ಬೆಗೆ ಮಿಕ್ಕಮೃಗತತಿ । ಶರಭಶಾರ್ದೂಲಂಗಳಿಲ್ಲ ವಿಲೋಚನಾಂತದಲಿ ॥ ಮುರಗಿರ್ದವ್ವುಗಗಿಗದಮಾತೇ । ನರಸ ಭೀಮನ ದನಿಗೆ ಬೆಚ್ಚದೆ । ಗಿರಿಗುಹೆಗಳೇ ಮಲೆತು ನಿಂದವು ದನಿಗೆದನಿಗೊಡುತ ॥೧೧॥ ಆಮಹಾದ್ರಿಯ ತಪ್ಪಲಲಿ ನಿ । ಸ್ಸೀಮಕದಳೀಷಂಡದಲಿ ರಘು । ರಾಮನಾಮಸುಧಾಭಿಷೇಕಸಮಗ್ರಸೌಖ್ಯದಲಿ ॥ ಭೀಮವಿಕ್ರಮನಿದ್ದನೀಯು । ದ್ದಾಮಸಿಂಹಧ್ವನಿಗೆ ನಿದ್ರಾ । ತಾಮಸದ ತನಿವದವಡಗೆ ಕಂದೆರೆದನಾಹನುಮ ॥೧೨॥ ಏನಿದೆತ್ತಣರಭಸವೀಗಿರಿ । ಸಾನುವಿದಮಾನುಷವಿಹಾರ । ಸ್ಥಾನವಿವನಾರೋ ಮಹದೇವಾ ಪ್ರಚಂಡನಲಾ ॥ ಈನಿನದವೆಮ್ಮಂದಿನಗ್ಗದ । ವಾನರನ ಗರ್ಜನೆಗೆ ಗುರುವಾ । ಯ್ತೇನನೆಂಬೆನೆನುತ್ತಮೆಲ್ಲನೆ ಮಿಡುಕಿದನು ಹನುಮ ॥೧೩॥ ಮುರಿಯದಂತಿರೆ ಲಘುವಿನಲಿ ಹೆ । ಮ್ಮರನನೊಯ್ಯನೆ ನೆಮ್ಮಿ ಕುಳ್ಳಿ । ರ್ದರಿದಿಶಾಪಟನುಡಿಸಿದನು ಪವಮಾನನಂದನನ ॥ ಭರವಿದೆಲ್ಲಿಗೆ ಮರ್ತ್ಯನೋಖೇ । ಚರನೊ ದೈತ್ಯನೊ ದಿವಿಜನೋ ಕಿಂ । ನರನೊ ನೀನಾರೆಂದು ಭೀಮನ ನುಡಿಸಿದನು ಹನುಮ ॥೧೪॥ ನಾವು ಮರ್ತ್ಯರು ದೂರದಲಿ ರಾ । ಜೀವಗಂಧಸಮೀರಣನ ಸಂ । ಭಾವನೆಗೆ ಸೊಗಸಿದಳು ಸತಿಯಾಕೆಯ ವಚಸ್ಸಿನಲಿ ॥ ತಾವರೆಯ ತಹೆನೆನುತ ಸಿಂಹವಿ । ರಾವದಲಿ ವಿಕ್ರಮಿಸೆ ವಿಗಡನ । ದಾವರಿಸಿ ಬಲುಬಾಲ ತಡೆದುದು ಪವನಜನ ಪಥವ ॥೧೫॥ ಗದೆಯ ಮೊನೆಯಲಿ ನೂಕಿದನು ರೋ । ಮದಲಿ ಚರಿಸದು ಬಾಲನೋಡಿದ । ನಿದು ವಿಚಿತ್ರವಲಾಯೆನುತ ನುಡಿಸಿದನು ಕಪಿವರನ ॥ ಒದೆದೊಡದ್ರಿಗಳಳಿವವೆನ್ನಂ । ಗದಲಿನಾ ಬಲ್ಲಿದನು ಬಾಲದ । ಕದವ ತೆಗೆ ಬಟ್ಟೆಯಲೆನುತ ಗರ್ಜಿಸಿದನಾ ಭೀಮ ॥೧೬॥ ನೀವು ಬಲ್ಲಿದರಿದಕೆ ಸಂಶಯ । ವಾವುದಲ್ಲದೊಡೀಮದದ್ವಿಪ । ವೀವಿಹಗಕುಲವೀಮೃಗವ್ರಜವಂಜುವವೆನಿಮಗೆ ॥ ನಾವು ವೃದ್ಧರು ನಮ್ಮ ಬಾಲವ । ನಾವು ಹದುಗಿಸಲಾರೆವೀಗಳು । ನೀವು ತೊಲಗಿಸಿ ಬಿಜಯಮಾಡುವುದೆಂದನಾಹನುಮ ॥೧೭॥ ಐಸಲೇ ತಪ್ಪೇನೆನುತ ತನ । ಗೇಸುಬಲುಹುಂ

ಟ್ಟಿಸರಲಿ ಕ । ಟ್ಟಾಸುರದಲೌಂಕಿದನು ಬಾಲವನೊದರಿ ಬೊಬ್ಬಿಡುತ ॥ ಗಾಸಿಯಾದನು ಪವನಸುತನೆ । ಳ್ಳೈಸು ಮಿಡುಕದು ಬಾಲಪೂರ್ಧ್ವ । ಶ್ವಾಸಲಹರಿಯಲಡಿಗಡಿಗೆ ಲಟಕಟಿಸಿದನು ಭೀಮ ॥೧೮॥ ತೆಗೆದು ಸ್ಥೈರಿಸಿ ನಿಂದು ಹೊಯ್ದು । ಳ್ಳೈಗಳು ತಾವರೆವಡಗಲೊಳತಾ । ಳಿಗೆಗೆಕಳವಳ ನೂಕಿದನು ಕಪ್ಪುರದ ಹುಳುಕುಗಳ ॥ ಧಗೆಯಡಗೆ ಮರುವಲಗೆಗೌಡೊ । ತ್ತುಗಳ ಬಲಿದವಯವದ ಸತ್ರಾ । ಣಿಗಳ ಲೀವನು ತಾವುರಿಯಲೊದಗಿದನು ಬಾಲದಲಿ ॥೧೯॥ ಮಿಡುಕದದು ಮೇಹಿಯಿಂದ ಭೀಮನ । ಕಡುಹು ನಿಂದುದು ಬಾಲದಲಿ ತುದಿ । ನಡುಕದನಿಲಜನಂಗವಟ್ಟದ ಕಡುಹು ಕಂಪಿಸದು ॥ ತೊಡಕಿ ಕೆಟ್ಟುದು ಕಾರ್ಯ ದುರ್ಬಲ । ನೊಡನೆ ಭಂಗವ್ಯಾಪ್ತಿ ತನ್ನನು । ಸುಡಲೆನುತ ಹಿಮ್ಮೆಟ್ಟಿ ಮುಮ್ಮಲಮರುಗಿದನು ಭೀಮ ॥೨೦॥ ಈತ ಕಪಿರೂಪದಸುರೇಂದ್ರನೊ । ಭೂತನಾಥನೊ ಮೇಣು ವಿಮಳ । ತ್ರೇತೆಯಲಿ ದಶಮುಖನ ಹಾಣಾಹಾಣಿಗಳ ಕಪಿಯೋ ॥ ಏತರವು ನಮ್ಮುಬ್ಬಟೆಗಳಿಂ । ದೀತ ಗೆಲಿದನು ಬಾಲದಲಿ ಸ । ತ್ವಾತಿಶಯವಿನ್ನಿವನೊಳೆಂತುಟೊ ಶಿವಶಿವಾಯೆಂದ ॥೨೧॥ ಭೀಮಗಡ ತಾನೌಕಿ ನಿಲಲು । ದ್ದಾಮಬಾಲದನಿದ್ರೆ ತಿಳಿಯದು । ರೋಮತತಿ ಮಸೆಗಾಣಿಸಿದವೆನುತುತ್ತಮಾಂಗದಲಿ ॥ ಈಮನುಷ್ಯಶರೀರವಪಜಯ । ಧಾಮವಲ್ಲಾ ಶಿವಶಿವಾ ನಿ । ಸ್ಸೀಮಕಪಿ ನೀನಾರೆನುತ ಪವನಜನ ಬೆಸಗೊಂಡ ॥೨೨॥ ನಾವು ವಾನರರಡವಿಯಲಿ ಫಲ । ಜೀವಿಗಳು ನಿಸ್ಸತ್ವರಿಲ್ಲಿಯ । ತಾವಬಿಡಲನ್ಯತ್ರ ಗಮನತ್ರಾಣವಿಲ್ಲೆಮಗೆ ॥ ನೀವು ಬಿಟವಾರ್ಯೆ ಮಹಾಸಂ । ಭಾವಿತರು ಸುರನರಭುಜಂಗರೊ । ಳಾವ ಕುಲ ನಿಮಗೆಂದು ಭೀಮನನುಡಿಸಿದನು ಹನುಮ ॥೨೩॥ ಮನುಜರಾ ವ್ಯೋಮಾಭಿಕುಲದಲಿ । ಜನಿಸಿದನು ವರಪಾಂಡುವಾತನ । ತನುಜರಾವು ಯುಧಿಷ್ಠಿರಾರ್ಜುನಭೀಮಯಮಳರೆನೆ ॥ ವನಕೆ ಬಂದೆವು ನಮ್ಮ ದಾಯಾ । ದ್ಯನ ವಿಕಾರದ್ಯೂತಕೇಳೀ । ಜನಿತಕಲ್ಬಷದಿಂದ ರಾಜ್ಯಭ್ರಂಶವಾಯ್ತೆಂದ ॥೨೪॥ ಬಳಿಕ ಸೌಗಂಧಿಕದ ಪವನನ । ಬಳಿವಿಡಿದು ನಾಬಂದೆನೆಮ್ಮಯ । ಲಲನೆ ಕಾಮಿಸಿದಳು ಸಹಸ್ರದಳಾಬ್ಜದರುಶನವ ॥ ತಿಳಿಯಲಿದು ವೃತ್ತಾಂತ ನೀನ । ಸ್ಖಲಿತಬಲ ನೀನಾರು ತನ್ನನು । ತಿಳುಹಹೇಳು ಮಹಾತ್ಮಕಪಿ ನೀನೆನುತ ಕೈಮುಗಿದ ॥೨೫॥ ನಾವು ಹಿಂದಣಯುಗದ ರಾಘವ । ದೇವನೋಲೆಯಕಾರರಾಸು । ಗ್ರೀವಸಖ್ಯರು ಪವನನಿಂದಂಜನೆಗೆ ಜನಿಸಿದೆವು ॥ ನಾವು ನಿಮ್ಮೊಡಹುಟ್ಟಿದರು ಸಂ । ಭಾವಿಸಿತು ನಿಮ್ಮಿಷ್ಟವೆನೆ ನಗು । ತಾವೃಕೋದರನೆರಗಿದನು ಕಲಿಹನುಮನಂಘ್ರಿಯಲಿ ॥೨೬॥ ಜರುಗಿನಲಿ ಜಾಂಬೂನದದ ಸಂ । ವರಣೆಕಾರಂಗೆಡೆಯಲಿದ್ದುದು । ಪರಮನಿಧಿ ಮಝು ಫೂತುಪುಣ್ಯೋದಯದಫಲವೆನುತ ॥ ಸರಸಿಯೆತ್ತಲು ಗಂಧವೆತ್ತಲು । ಬರವಿದೆತ್ತಣಿದೆತ್ತ ಘಟಿಸಿದು । ದರರೆ ಮಾರುತಿ ತಂದೆ ನೀನೆಂದೆನುತ ಬಣ್ಣಿಸಿದ ॥೨೭॥ ತೀದುದೆಮಗೆ ವನಪ್ರವಾಸದ । ಭೇದವರ್ಜುನನಗಲಿಕೆಯದು । ಭೇರ್ದವಿಷವಿಂದಿಳಿದುದ್ದೈ ಶಿವಶಿವಮಹಾದೇವಾ ॥ ಹೋದರಾಜ್ಯಭ್ರಂಶ ಬಹಳವಿ । ಷಾದ ಬೀತುದು ನಿಮ್ಮಕಾರು । ಣ್ಯೋದಯವು ನಮಗಾಯ್ತಲಾ ಚರಿತಾರ್ಥರಾವೆಂದ ॥೨೮॥ ಹಿರಿಯರೆನಗಿಬ್ಬರು ಯುಧಿಷ್ಠಿರ । ಧರಣಿಪತಿ ನೀನೊಬ್ಬನಯ್ಯಂ । ದಿರುಗಳಿಬ್ಬರು ಮಾರುತನು ನೀನೊಬ್ಬನೆಂದೆನಗೆ ॥ ಗುರುಗಳಿಬ್ಬರು ಬಾದರಾಯಣ । ಪರಮಋಷಿ ನೀನೊಬ್ಬನೆಂದುಪ । ಚರಿಸಿದನು ಪವಮಾನನಂದನನಂಜನಾಸುತನ ॥೨೯॥ ಲಲಿತವಚನಕೆ ನಿನ್ನ ಭುಜದ । ಗ್ಗಳಿಕೆಗಾಮೆಚ್ಚಿದನು ಹಿಮಕರ । ಕುಲಪವಿತ್ರರು

ಜನಿಸಿದಿರಲಾ ಪಾಂಡುಜಠರದಲಿ ॥ ಗೆಲವು ನಿಮಗಹಿತರಲಿ ಪಾರ್ಥನ । ಕೆಲವುದಿವಸಕೆ ಕಾಬಿರೆಮಗೆ
ಯು । ಫಲಿಸಿತೀದಿನವೆಂದು ಕೊಂಡಾಡಿದನು ಹನುಮಂತ ॥೩೦॥ ಅಂಜುವೆನು ಬಿನ್ನಹಕೆ ಬಾಂಧವ ।
ಪಂಜಿಕೆಯನಭಕೊತ್ತುತಿದೆಕೇ । ಳಂಜನಾಸುತ ತನ್ನ ಸಲುಗೆಯ ಮಾತ ಸಲಿಸುವೊಡೆ॥ ಅಂಜದೆಂಬೆನು
ದನುಜಪುರಕೆ ಧ । ನಂಜಯನ ಹೊತ್ತಿಸಿದಖಳರನು । ಭಂಜಿಸಿದಸಾಗರವದಾಂಟಿದರೂಪತೋರೆಂದ ॥೩೧॥
ಈಯುಗದ ಗುಣಧರ್ಮಮಾತ್ರೆ । ತಾಯುಗದ ಪರಿಗೈದದಾತ್ರೇತಾಯುಗವು ಸರಿಯಲ್ಲ ಕೃತಯುಗದೇ
ಕದೇಶದಲಿ ॥ ಆಯುಗದಲಾಮನುಜರಾಸ । ತ್ವಾಯುತದ ಸಾಮರ್ಥ್ಯಮಾತ್ರರು । ವಾಯಯುಗದಲಿ
ಸಲ್ಲದೆಂದನು ನಗುತ ಹನುಮಂತ ॥೩೨॥ ಕೃತಯುಗದವರು ತ್ರೇತೆಯವರಿಂ । ದತಿಪರಾಕ್ರಮಯುಕ್ತರವ
ರದು । ಭುತದಬಲವೀತ್ರೇತೆಯವರಲಿ ದೋಪರಸ್ಥಿತಿಗೆ ॥ ವಿತತಸತ್ವರು ಕಲಿಯುಗದ ದು । ರ್ಮತಿಮ
ನುಷ್ಯಮಾತ್ರ ಹೀನಾ । ಕೃತಿಕನಾ ಯುಗಧರ್ಮ ಕೃತಮೊದಲಾಗಿ ಕಲಿಯುಗಕೆ ॥೩೩॥ ಹೀನಸತ್ವರು ಸತ್ಯ
ಧರ್ಮವಿ । ಹೀನರರ್ಥಪರಾಯಣರು ಕುಜ । ನಾನುರಕ್ತರು ವರ್ಣಧರ್ಮಾಶ್ರಮವಿದೂಷಕರು ॥
ದಾನಿಗಳು ದುಷ್ಪಾತ್ರದಲಿ ಗುಣ । ಮಾನಿಗಳು ಗರ್ವಿತರು ವಿದ್ಯಾ । ಜ್ಞಾನಿಗಳು ಕಲಿಯುಗದಮನು
ಜರು ಭೀಮಕೇಳೆಂದ ॥೩೪॥ ಅದರಿನೀದಾಪರದಕಡೆಯಲಿ । ಯುದಿತಮಾನುಷಕರ್ಮಸಂಶಯ । ವಿದ
ರೊಳೆಮ್ಮಯ ರೂಪು ಗೋಚರವಲ್ಲ ಮರ್ತ್ಯರಿಗೆ ॥ ಇದು ನಿಧಾನವು ಭೀಮಯೆನೆ ತ । ತ್ಪದಯುಗಕೆ ಮ
ಗುಳೆರಗಿನಿರ್ಬಂ । ಧದಲಿ ಬಿನ್ನಹಮಾಡಲಮ್ಮೆನು ರೂಪತೋರೆಂದ ॥೩೫॥ ಅದೊಡಿನ್ನು ನಿರೀಕ್ಷಿಸೆನುತ
ನಿ । ನಾದದಲಿ ನೆಲ ಬಿರಿಯೆ ಬಾಲದ । ಬೀದಿವರಿ ಬಾಸಣಿಸೆ ಘನನಕ್ಷತ್ರಮಂಡಲವ ॥ ಮೇದಿನಿಯ
ಹೊರೆಗಾರರಳ್ಳೆದೆ । ಯಾದವಳುಕಿದವದ್ರಿಗಳು ಸ । ಪ್ತೋದಧಿಗಳಂಜಿದವೆನಲು ಹೆಚ್ಚಿದನು ಕಲಿಹ
ನುಮ ॥೩೬॥ ಮೇರುವಿನ ತಪ್ಪಲಲಿ ಬೆಳೆದಬ । ಲಾರಿಚಾಪವೊ ಮೇಣ್ತ್ರಿವಿಕ್ರಮ । ನಾರುಭಟೆಯಲಿ
ಜಡಿವಜ್ಯೋತಿರ್ಗಣದ ಬಲುಮಿಳಿಯೋ ॥ ಚೂರಿಸುವಬಲುಬಾಲವೋ ಜಂ । ಭಾರಿಭವನವನ
ಳ್ಳಿರಿಯೆ ತ್ರಿಪು । ರಾರಿಯೊಡ್ಡಿನ ಹೊಳಹಿನಲಿ ಹೊಳೆಹೊಳೆದನಾಹನುಮ ॥೩೭॥ ನೋಡಿದನು ನಡು
ಗಿದನು ಕಂಗಳ । ಕೋಡಿಯಲಿ ನೀರೊರೆಯ ಹರುಷದ । ರೂಢಿಯಲಿ ಝೊಮ್ಮೆದ್ದುಮನ ಡೆಂಡಣಿಸಿ
ಭೀತಿಯಲಿ ॥ ಬಾಡುಮೋರೆಯನೆತ್ತಿ ಕೈಗಳ । ನೀಡಿ ಕಂಗಳ ಮುಚ್ಚಿ ಮರಳಿದು । ನೋಡಿ ಶಿವಶಿವಯೆ
ನುತ ಬೆಚ್ಚಿದನಡಿಗಡಿಗೆಭೀಮ ॥೩೮॥ ಸಾಕುಸಾಕಂಜಿದೆನು ಮನುಜರು । ಕಾಕಬಲರು ನಿಜಸ್ವಭಾವವ ।
ನೇಕೆ ಬಿಡುವೆವು ತಿಳಿದುತಿಳಿಯೆವು ಕಂಡೊಡಂಜುವೆವು ॥ ಸಾಕು ಪೂರ್ವದ ರೂಪಿನಲಿ ನಿ । ವ್ಯಾಕು
ಲನ ಮಾಡೆನಲು ಪವನಜ । ನಾಕಪೀಶ್ವರ ನಗುತ ಮುನ್ನಿನ ರೂಪಕೈಕೊಂಡ ॥೩೯॥ ಅಂಜದಿರು
ನೀನಿನ್ನು ಮೆಚ್ಚಿದೆ । ನೆಂಜಲಿಸು ನಾ ಸಲಿಸುವೆನು ನ । ಮ್ಮಂಜನಾದೇವಿಯರು ಕುಂತೀದೇವಿಯರಾದ
ರಲೆ ॥ ರಂಜಕರು ನಾವಲ್ಲ ಹೇಳು ಸ । ಮಜಸದಲೆನೆ ಭೀಮ ನಗುತ ಧ । ನಂಜಯನ ಟಕ್ಕೆಯಕೆ ಬಿಜಯಂ
ಗೈಯಬೇಕೆಂದ ॥೪೦॥ ಐಸೆ ಸಲಿಸಿದೆನೆನುತಲಾಕಪಿ । ಯಾಸಮಯದಲದೃಶ್ಯವಾಗೆ ವಿ । ಕಾಸವಾದುದು
ವಿಸ್ಮಯಕೆ ಪವಮಾನನಂದನನ ॥ ಆಸುಗಂಧಿಕಕಮಲ ತಾನಿ । ನ್ನೇಸುದೂರವೊ ದ್ರುಪದಸುತೆ ತನ
ಗೇಸುಮುನಿವಳೊ ಹಾಯೆನುತ ಹರಿದನು ವನಾಂತರವ ॥೪೧॥ ಧರಣಿಪತಿ ಕೇಳ್ಬಹಳವಿಪಿನಾಂ । ತರ
ವನಂತವ ಕಳಿದು ಬರೆಬರೆ । ಸರಸಿಜದ ಮೋಹರದ ಮುಂದೈತಪ್ಪಪರಿಮಳದ ॥ ಮೊರೆವತುಂಬಿಯ

ತಟ್ಟುಗಳ ತನಿ । ವರಿವ ತಂಪಿನ ತುರುಗಲಿನ ತ । ತ್ಸರಸಿಯನು ದೂರದಲಿ ಕಂಡುಬ್ಬಿದನು ಕಲಿಭೀಮ ॥ ಒಗುಮಿಗೆಯ ಪರಿಮಳದ ಕಂಪಿನ । ತೆಗಡತೆಕ್ಕೆಯ ಬೀದಿವರಿಗಳ । ಮುಗುಳವೊಗ್ಗೆಯ ತೆಗೆವತುಂಬಿಯ ಲಳಿಯಲಗ್ಗಳ ॥ ಹೊಗರಹೊರಳಿಯ ಕಿರಿದೆರೆಯನೂ । ಕುಗಳ ತಳಿತತುಷಾರಭಾರದ । ಸೊಗಸ ಸೇರಿಸಿ ಮಂದಮಾರುತನಪ್ಪಿದನು ಮಗನ ॥೪೩॥ ಝಳದಲಳಿ ಲಟಕಟಿಸೆ ಮಾರ್ಗ । ಸ್ಖಲಿತಖೇದಸ್ವೇದಬಿಂದುಗ । ಳೊಳಸರಿಯೆ ರೋಮಾಳಿ ಚಾಳಿಸೆ ತೃಷೆಯದೆಸೆ ಮುರಿಯೆ ॥ ತಳಿತುದಾಪ್ಯಾಯನ ಮನೋರಥ । ಫಲಿಸಿತ್ತರಸಿಯ ಹರುಷದರ್ಪಣ । ಬೆಳಗುವದು ಮಝ ಭಾಪೆನುತ ಭುಲ್ಲವಿಸಿದನು ಭೀಮ ॥೪೪॥ ಸಾರೆ ಬರೆವರೆ ಕಂಡನಲ್ಲಿ ಕು । ಬೇರನಾಳಿದ್ದುದು ತದೀಯಸ । ರೋರುಹದ ಕಾಹಿನಲಿ ಯಕ್ಷರು ಲಕ್ಷಸಂಖ್ಯೆಯಲಿ ॥ ಸಾರೆ ಚಾಚಿದಹರಿಗೆಗಳ ತರ । ವಾರಿಗಳ ಹೊದೆಯಂಬು ಚಾಪಕ । ತಾರಿಶಲ್ಲೆ ಹಸಬಳಗಳ ಸೋಪಾನಮಾರ್ಗದಲಿ ॥೪೫॥ ಎದ್ದರವರಿದಿರಾಗಿ ಭೀಮನ । ಹೊದ್ದಿದರು ನೀಸಾರು ಹದ್ದಿಗೆ । ಬಿದ್ದಿನನೊ ಮೇಣ್ಮಿತ್ರಭಾವದ ಲೆವಗೆಬಿದ್ದಿನನೋ ॥ ಉದ್ದುರುಟುತನ ನಿನ್ನ ಮೋರೆಯ । ಲಿದ್ದುದೈ ನೀಸಾರು ನಿನಗೇ । ನಿದ್ದುದಿಲ್ಲಿಯೆನುತ್ತ ಜರೆದರು ಯಕ್ಷರನಿಲಜನ ॥೪೬॥ ನಾವಲೇ ಕುಂತೀಕುಮಾರರು । ಭೂಮಿಭೂವಲ್ಲಭರು ನಮ್ಮಯ । ದೇವಿಗಾದುದು ಬಯಕೆ ಸೌಗಂಧಿಕಸರೋರುಹದ ॥ ತಾವು ಕಾಣಿಸಿ ಕೊಂಡುಬಹುದಾ । ತಾವರೆಯನೆನೆ ಬಂದೆವಿಲ್ಲಿಗೆ । ನೀವು ಕಾಹಿನಬಂಟರೆಂಬುದನರಿಯೆವಾವೆಂದ ॥೪೭॥ ಐಸಲೇ ತಪ್ಪೇನು ನೀ ಯ । ಕ್ಷೇಶನಲ್ಲಿಗೆ ಹೋಗಿ ಬೇಡುವು । ದೀಸರೋರುಹವಾವಘನ ಧನಪತಿಯುದಾರನಲೆ ॥ ಮೀಸಲಿನ ಸರಸಿಯಲಿ ದೃಷ್ಟಿಯ । ಸೂಸಬಹುದೇ ರಾಯನಾಜ್ಞಾ । ಭಾಷೆಯಲ್ಲದೆ ಬಗೆಯಲರಿದೆಂದುದು ಭಟಸ್ತೋಮ ॥೪೮॥ ಬೇಡಲರಿಯೆವು ಬೇಡುವರಕೂ । ಡಾಡುವರು ಸಾವಲ್ಲ ಕದನವ । ಬೇಡಬಲ್ಲೆವು ಕರೆಯಿ ಕೊಡಲಾಪರೆ ಧನೇಶ್ವರನ ॥ ಬೇಡುವುದು ಗದೆ ನಿಮ್ಮ ವಕ್ಷವ । ತೋಡಿ ನೆತ್ತರುಗೊಳದಲೋಕುಳಿ । ಯಾಡುವುದನೆಂದನಿಲಸುತಬೀಸಿದನು ನಿಜಗದೆಯ ॥೪೯॥ ಎಲಲೆ ಕವಿಕವಿ ಯಕ್ಷರಾಕ್ಷಸ । ದಳವನರನೊಟ್ಟೈಸುವನೆ ಪೆ । ಬ್ಬುಲಿಯ ಹಿಂಡಿಗೆ ಹೋತ ಹೊಡಕರಿಸಿತು ಮಹಾದೇವ ॥ ತಲೆಯ ಹೊಯ್ಸೆಂಡಾಡು ತಿನ್ನವ । ನೆಲುವನೆನುತೀಟಿಯಲಿ ಸಬಳದ । ಲಲಗಿನಲಿ ಖಡುಗದಲಿ ಹೊಯ್ದರು ಪವನನಂದನನ ॥೫೦॥ ತಾಗಿದೆಳೆಮುಳ್ಳಿನಲಿ ಮದಗಜ । ಸೀಗುರಿಸುವುದೆ ಭಟರ ಕೈದುಗ । ಳೇಗುವವು ಪವಮಾನಸುತ ಕೈದೋರೆ ಖಾತಿಯಲಿ ॥ ತಾಗಿದವಟರನಿಕ್ಕಿದನು ರಣ । ದಾಗಡಿಗರನು ಯೆಕ್ಕಿದನು ಕೈ । ದಾಗಿಸಿದನನಿಬರಲಿ ಗಂಡುಗತನದಘಾಡಿಕೆಯ ॥೫೧॥ ಘಾಡಿಸಿತು ಗಜಬಜ ಕುಬೇರನ । ಬೀಡಿನಗ್ಗದಬಂಟರೇ ಕೈ । ಮಾಡಿರೈ ಕೊಳಗಾಹಿಗಳು ಫಡ ಹಿಂಗಬೇಡೆನುತ ॥ ಝಾಡಿಸುವಮಣಿಮಯದ ಗದೆಯಲಿ । ತೋಡುವೊಯ್ಲಿನ ತುಡುಕುಗಾಯದ । ನೀಡುಮೊನೆಗಳ ವಿಗಡನಿಕ್ಕಿದನದಟರಕ್ಕಸರ ॥೫೨॥ ಹಾರಿದವು ಹಂಸೆಗಳು ತುದಿಮರ । ನೇರಿದವು ನವಿಲುಗಳು ತಾಂಡವ । ನೂರಿ ನೀರೊಳು ಮುಳುಗಿ ಮರಳವು ಜಕ್ಕವಕ್ಕಿಗಳು ॥ ಚೀರಿದವು ಕೊಳರ್ವಕ್ಕಿ ಜಲದಲಿ । ಜಾರಿ ತಾವರೆಯೆಲೆಯಮರೆಗಳ । ಲೆರಡಿಗಳಡಗಿದವು ಕೋಳಾಹಳಕೆ ಪವನಜನ ॥೫೩॥ ಚೆಲ್ಲಿದರು ರಕ್ಕಸರು ಯಕ್ಷರು । ಬಿಲ್ಲ ಬಿಸುಟರು ಗುಹ್ಯಕರು ನಿಂ । ದಲ್ಲಿ ನಿಲ್ಲರು ಕಿನ್ನರರನಿನ್ನೇನನುಸುರುವೆನು ॥ ಗೆಲ್ಲವಿದು ಲೇಸಾಯ್ತು ಮಾನವ । ನಲ್ಲಿ ಸಮಗೀಭಂಗ ಭಯರಸ । ವೆಲ್ಲಿ ಭಾಪುರೆ ವಿಧಿಯೆನುತ ಬೆಚ್ಚಿತು

ಭಟಸ್ತೋಮ ॥೫೪॥ ಗಾಯವಡೆದರು ಕೆಲರು ಕೆಲರಸು । ಬೀಯವಾದುದು ಬಿಡುದಲೆಯ ಬಲು । ನಾಯಕರು ಸಂತೈಸಿದರು ಕೌಬೇರ ಭವನದಲಿ ॥ ವಾಯುಸುತನೀವಿಜಯಸಿರಿಯಪ । ಸಾಯಿತಂಗಭಿಷೇಕವೆಂದು ಗ । ದಾಯುಧವನಲುಬಿದನು ಕೊಳನಲಿ ಚಾಚಿದನು ತಡಿಗೆ ॥೫೫॥ ತೊಳೆದು ಚರಣಾನನವ ನಡುಗೊಳ । ದೊಳಗೆ ಹೊಕ್ಕಡಿಗಡಿಗೆ ಮಿಗೆ ಮು । ಕ್ಕುಳಿಸಿ ತೀರದಲುಗುಳಿ ದಿವ್ಯಾಂಭೋಜಪರಿಮಳವ ॥ ವಿಲಸದಲಿ ತನಿಹೊರೆದಶೀತಳ । ಜಲವ ಕುಡಿದಾಪ್ಯಾಯನಾಂತರ । ಲಲಿತ ಹೃದಯ ನಿಮಿರ್ದು ಹಿಡಿದನು ಕಮಳಪಂಙ್ಕ್ತಿಗಳ ॥೫೬॥ ಚಾಚಿದನು ಬರಿಕೈಯನಬುಜಕೆ । ಚಾಚುವಿಭಪತಿಯಂತೆ ತುಂಬಿಗ । ಳಾಚೆಘಾಳಧ್ವನಿಯ ಧಟ್ಟಣೆ ಮಿಗಿಲು ಚದರಿದವು ॥ ವೀಚಿ ಮಸಗುವಕೊಳನು ಜನರುಷಿ । ಯಾಚರಣೆಯೊಳು ಕಮಳವನವನು । ಲೋಚಿನಲಿ ಲಾವಣಿಗೆಕೊಂಡನು ಭೀಮ ನಿಮಿಷದಲಿ ॥೫೭॥ ತಿರಿದು ತಾವರೆವನವ ಕಕ್ಷದೊ । ಳಿರುಕಿ ಗದೆಯನು ಕೊಂಡು ಸರಸಿಯ । ಹೊರವಳಯದಲಿ ನಿಂದು ಕಾಹಿನ ಯಕ್ಷರಾಕ್ಷಸರ ॥ ಬರಲಿ ಕರೆದನುನಿಮ್ಮ ಕೊಳನಿದೆ । ಬರಿದೆ ದೂರಿದಿರೆಮ್ಮನೆನುತಾ । ಸರಿನ ಮಾತಿನ ನಲವಿನಲಿ ಮರಳಿದನು ಕಲಿಭೀಮ ॥೫೮॥

ಅಂತು ಸಂಧಿ ೧೦ ಕ್ಕಂ ಪದ ೫೪೭ ಕ್ಕಂ ಮಂಗಳಮಹಾಶ್ರೀ.

ಹನ್ನೊಂದನೆಯ ಸಂಧಿ.

ಸೂಚನೆ॥ ಭೀಮ ಕೊಂದನು ಕಲಿಜಟಾಸುರ । ನಾಮಹಾಮುನಿಮಾನನನು ಬಳಿ ।
ಕೀಮಹೀತಳಕಿಳಿದು ಕಂಡನು ಪಾರ್ಥನಗ್ರಜನ ॥

॥ಪದ॥ ಕೇಳು ಜನಮೇಜಯಯುಧಿಷ್ಠಿರ । ನೋಲಗದೊಳುತ್ಪಾತಶತವಿವ । ರಾಲಿಗಳನಂಜಿಸಿದವತಿರಂಜಿಸಿದವದುಭುತವ ॥ ಕೇಳಿದನಿದೇನೆಂದು ವರವಿ । ಪ್ರಾಳಿಯನು ಧೌಮ್ಯಾದಿಋಷಿಗಳು । ಹೇಳಿದರು ತಚ್ಛಕುನಸಂಗತಿಗಳ ಫಲೋತ್ತರವ ॥೧॥ ಸರಸಸೌಗಂಧಿಕದ ಪುಷ್ಪೋ । ತ್ತರಕೆ ಪವನಜ ಹೋದನೆಂಬುದ । ನರಸಿಯಿಂದರಿದವನಿಪತಿ ಪೂರಾಯದುಗುಡದಲಿ ॥ ನರನ ಹದನೇನೋವೃಕೋದರ । ನಿರವು ತಾನೆಂತೆನುತ ಚಿಂತಾ । ಭರಿತನಿದ್ದನು ಭೀಮಸೇನನ ಕ್ರಾಂಬತವಕದಲಿ ॥೨॥ ಆಸಕಲಪರಿವಾರರಾಣೀ । ವಾಸಸಹಿತಾರಣ್ಯಭವನಾ । ಭ್ಯಾಸಿ ಬಂದನು ಭೀಮಸೇನನ ಗಮನಪಥವಿಡಿದು ॥ ಆಸುಗಂಧಕಪದುಮಪರಿಮಳ । ಬಾಸಣಿಸಿತೀಜನಮನೋವಿ । ನ್ಯಾಸವನು ಯಿದೆಬಂದಪವನಜನೆಂದುದೀಕಟಕ ॥೩॥ ಎನಲು ಬಂದನು ಭೀಮನಂಬುಜ । ವನವಿದಿರ್ರುಬಂದಂತೆ ಕಂಪಿನ । ತನಿರಸದ ತಾವರೆಯ ತೆಕ್ಕೆಯ ತೋಳತೋರಿಕೆಯ ॥ ಜನುಗುದುಂಬಿಯ ಜಾಳಿಗೆಯ ತನಿ । ಮಿನುಪಮೋರೆಯ ಕಣ್ಣಕೆಂಪಿನ । ಘನಭಯಂಕರರೂಪಭೀಮನ ಕಂಡನವನೀಶ ॥೪॥ ಸೆಳೆದು ತಕ್ಕೈಸಿದನು ತಾವರೆ । ಗೊಳದ ತೋಟಿಯ ಹದಕೆ ಕಂಪಿಸಿ । ಬಳಿಕ ಕಪಿದರ್ಶನದ ಕೌತೂಹಲಕೆ ಭುಲ್ಲವಿಸಿ ॥ ನಳಿನಗಂಧದ ಗಾಢತರಸುಖ । ದೊಳಗೆ ಹೊಂಪುಳಿವೋಗಿಭೂಪತಿ । ತಿಲಕನಿದ್ದನು ಗಂಧಮಾದನಗಿರಿಯ ತಪ್ಪಲಲಿ ॥೫॥ ಗಿರಿಯ ತುದಿಗೇರುವಮಹೀಶನ । ಭರವಸವನಶರೀರದನಿ ಪರಿ । ಹರಿಸಲಿಳಿದನು ಮರಳಿ ಬಂದನು ಬದರಿಕಾಶ್ರ

ಮಕೆ ॥ ಅರಸ ಕೇಳ್ಳೆ ಮತ್ತೆ ಮೂರಿಯ । ಪರುಠವವೆನನಿಲಜನು ಬೇಟೆಗೆ। ಹರಿದನಿತ್ತಲು ಬಂದು ಮು
ತ್ತಿತ್ತು ದಾನವರ ಧಾಳಿ ॥೬॥ ಖಳಜಟಾಸುರನೆಂಬನೊದ್ವಿಜ । ಕುಲವನಂಜಿಸಿ ಯಮಳರೊಡ । ನಿಟ್ಟ
ಳಿಸಿ ಕಾದಿ ಕಠೋರದಲಿ ಪಿಡಿದನು ಮಹಾಸತಿಯ ॥ ಬಲುಗಡಿಯನಿವನೊಡನೆ ಹೋರಿದು । ಬಳಲಿದ
ರು ಬೆಂಬತ್ತಿದರು ಗಾ । ವಳಿಯ ಗಜಬಜ ತಿರುಗಿತಿತ್ತಲು ಪವನಜನ ಹೊರೆಗೆ ॥೭॥ ತಳಿರಕೈಗಳ
ಮೊರೆಯಬಾಯ್ಗಳ । ಜಲದಕಂಗಳ ತಾಪದಿಂದೊಳ । ಝಳದಿ ಯುಗಿವಳ್ಳೆಗಳ ಬಲುಭಯವಾಂತ
ಕೊರಳುಗಳ ॥ ಕಳಕಳದ ಕಾಲುವೆಯ ಭಂಗದ । ಹೊಳಹುಗಳ ಹೊಲುವೆಯ ಸವ್ವಾ । ಕುಲರ ಕಂಡ
ನು ಭೀಮನೇನೇನೆಂದು ಬೆಸಗೊಂಡ ॥೮॥ ಹಿಡಿದರರಸಿಯನವನಿಪತಿ ಹಿಡಿ । ಪಡೆದನನುಜರುಸಹಿತ ಹಾ
ರುವ । ರಡವಿಯಲಿಹಾಯ್ದರು ಚೆಲ್ಲಿತು ನಿಮ್ಮ ಪರಿವಾರ ॥ ಕಡುಹು ಘನವಿದೆ ದಾನವರ ಮಂ । ಗ
ಡವೆಸಲು ಘನಸಿಂಹನಾದದ । ಸಿಡಿಲಶಿಕ್ಷಾಗುರುವೆನಲು ಮೊಳಗಿದನು ಕಲಿಭೀಮ ॥೯॥ ಧಾಳಿಯಿಟ್ಟ
ನು ದಾನವರ ದೆ । ಕ್ಕಾಳದಲ್ಲಿಗೆ ಘಲ್ಲಿಸಿದನು । ಬ್ಬಾಳುಗಳನಿಟ್ಟರಿಸಿ ಬಿಡಿಸಿದ ತನ್ನವರ ಸೆರೆಯ ॥
ಸೀಳಿ ಸಾಯ್ಗಳನೆತ್ತರಿನ ತನಿ । ಗಾಲುವೆಯಲೇ ಬೆಳಸುವೆನು ದಿವಿ । ಜಾಳಿಗಳ ಸಂತೋಷಪಸಿಯನೆನು
ತ್ತ ಗರ್ಜಿಸಿದ ॥೧೦॥ ಮಸಗಿತಿಬ್ಬರಿಗದುಭುತಾಹವ । ಪುಸುರಧಾಳಾಧೂಳಿ ಮಿಗೆ ಘು । ಟ್ಟಿಸಿದನವ
ನನು ದಂಡೆಯಲಿ ತಡೆಗಾಲಲೊಡೆಹೊಯ್ದು ॥ ಬಿಸುಗುದಿಯ ನವರುಧಿರಜಲ ಜಾ । ಳಿಸೆ ನವದ್ವಾರ
ದಲಿ ದೈತ್ಯನ । ಕುಸುಕಿರಿದು ತಿವಿತಿವಿದು ಕೊಂದನು ಕಲಿಜಟಾಸುರನ ॥೧೧॥ ಅರಸ ಕೇಳಾದಾನ
ವನ ತನು । ಬಿರಿದು ಬಿದ್ದುದು ಬಾಂಹಣೆನು । ಬ್ಬರದ ಹೊಲಸಿನ ಗವಲು ಕವಿದುದು ಕೂಡೆ ವನದೊ
ಳಗೆ ॥ ಧರಣಿಪತಿ ತದ್ಬದರಿಕಾಶ್ರಮ । ವರತಪೋವನದಿಂದ ತೆಂಕಲು । ತಿರುಗಿ ಬಂದನು ಸಾರಿದನು
ವೃಷಪರ್ವತಾಶ್ರಮವ ॥೧೨॥ ಆತಪೋವನವಿವರ ಘಲ್ಲಣೆ । ಗಾತುದಿಲ್ಲ ವಿನೋದದಲಿ ವಿ । ಖ್ಯಾತ
ಶೈಲದ ಮೇಖಲೆಯ ತುದಿಗೇರಿದನು ಭೀಮ ॥ ಈತನನು ಹಳಚಿದನು ದೈತ್ಯನ । ಭೀತಮಣಿಮಾನೆಂಬು
ವನು ಪದ । ಘಾತಿಯಲಿ ಲಟಕಟಿಸೆ ಗಿರಿ ಕಾದಿದರು ಪಟುಭಟರು ॥೧೩॥ ಕೊಂದನವನನು ವಿಗತಶಾ
ಪನು । ನಿಂದನಿದಿರಲಿ ಯಕ್ಷರೂಪಿನ । ಲಂದಗಸ್ತ್ಯನ ಶಾಪವೃತ್ತಾಂತವನು ವಿವರಿಸಿದ ॥ ಬಂದನ
ಲ್ಲಿಗೆ ಯಕ್ಷಪತಿ ನಲ । ವಿಂದಲಿವರನು ವಿವಿಧವಸ್ತು । ಗಳಿಂದ ಸತ್ಕರಿಸಿದನು ಕೊಂಡಾಡಿದನು ಪಾಂಡ
ವರ ॥೧೪॥ ಅರಸನತಿಸಂತೋಷಮಯಸಾ । ಗರದಿ ಮುಳುಗುವನೊಮ್ಮೆ ನಿಮಿಷಕೆ । ನರನ ವಿರಹದ
ದುಃಖಸಾಗರದೊಳಗೆ ಸೈಗೆಡೆವ ॥ ಪರಮಋಷಿಗಳ ಮಧುರವಚನೋ । ತ್ಕರಕೆ ತಿಳಿವನದೊಮ್ಮೆ ಪುನ
ರಪಿ । ಮರುಳಹನು ಫಲುಗುಣನ ನೆನೆನೆನೆದರಸ ಕೇಳೆಂದ॥೧೫॥ ಅರಸನಲಿ ಬೇರೂರಿ ಮಾಗುಳಂ । ಕುರಿ
ಸಿದುದು ಭೀಮನಲಿ ನಕುಲನ । ಲೆರಡುಮೂರೆಲೆಯಾಯ್ತು ಸಹದೇವನಲಿ ಕವಲೊಡೆದು ॥ ಅರಸಿ
ಯಲಿ ಸಲೆ ಹೂತು ಕಾತು । ಬ್ಬರಿಸುತಿದ್ದುದು ಶೋಕಲತೆ ತ । ತ್ಪರಿಕರದ ಕರಣಾವಳಿಯ ಹಬ್ಬು
ಗೆಯ ಹರಹಿನಲಿ ॥೧೬॥ ಮರೆದನೋ ನಮ್ಮಿನಿಬರನು ಬಿಟ । ಮರೆಯಲುಚಿತವಲೇ ಸುರೇಂದ್ರನ ।
ಸೆರಗು ಸೋಂಕುವೆಸಲುಗೆಯುಂಟೇ ಮರ್ತ್ಯಜಾತಿಯಲಿ ॥ ಉರುವಸುರಪದಸಾರಸೌಖ್ಯದೊ । ಳರಿಯ
ನೋ ನಮ್ಮಾ ಪ್ರವಾಸದಾಸರೆಗೆ ನರನಂಘ್ರೈಸನೆಂದವನೀಶ ಚಿಂತಿಸಿದ ॥೧೭॥ ವಾಮನಯನಸ್ಫು
ರಣಪರಿಗತ । ವಾಮಬಾಹುಸ್ಪಂದವಾದುದು । ಭಾಮಿನಿಗೆ ಭೂಪತಿಗೆ ಚಲಿಸಿತು ದಕ್ಷಿಣಾಂಗದಲಿ ॥

ವೈಮನಸ್ಯವ್ಯಸನನಿರಸನ । ಕೇಮಹಾಶಕುನಂಗಳಿವೆ ಯೆಂ । ದಾಮಹೀಪತಿ ನೆನೆಯುತಿರ್ದನು ಫಲುಗು ಣನ ಬರವ ॥೧೮॥ ಅರಸ ಕೇಳ್ಕೈ ಹಿಮದ ಹೊಯ್ಲಿನ । ಸರಸಿಜಕೆ ರವಿಯಂತೆ ಶಿಶಿರದ । ಸರಿದೆಲೆಯ ವನದಲಿ ವಸಂತನ ಬರವಿನಂದದಲಿ ॥ ಸುರವಿಮಾನಶ್ರೇಣಿಗಳ ನವ । ಪರಿಮಳದ ಪೂರದಲಿ ಭಾರತ, ವರುಷಕಿಳಿದನು ಪಾರ್ಥ ಬಂದನು ಧರ್ಮಜನ ಹೊರೆಗೆ ॥೧೯॥ ಏನನೆಂಬೆನು ಜೀಯ ಕುಂತೀ । ಸೂನು ಕಂಡನು ದೂರದಲಿ ಸುರ । ಮಾನಿನೀಜನದಂಗವಟ್ಟದ ಪೂರ್ವಪರಿಮಳದ ॥ ಆನನೇಂದುಗಳಾಭ ರಣಮೈ । ಕ್ಕಾನುಕೃತತಾರಾಮಯೂಖವಿ । ತಾನದಲಿ ಹೊಳೆಹೊಳೆದು ಮೆರೆವಮಹೇಂದ್ರಮಣಿ ರಥವ ॥೨೦॥ ಆರದೀರಥವೆನುತ ತಿರುಗಿ ಮ । ಹೀರಮಣಸಾಲಿಗಳು ಹರಿದವು । ಭಾರಣೆಯ ಜನನ ಯನಕೋಟಿಯ ಕೊಲ್ಲಣಿಗೆ ಮಿಗಲು ॥ ಭೂರಿಮಣಿರಶ್ಮಿಗಳ ಚಿಮ್ಮುವ । ಚಾರುಚಮರಿಯ ತುರಗನಿ ಕರಗ । ಭೀರಹೇಷಾರವದಲಿಳಿದುದು ರಥ ಸುರೇಶ್ವರನ ॥೨೧॥ ರಥಮಹೇಂದ್ರನದೀತನೆಮ್ಮತಿ । ರಥನೆ ಲಾ ಸೆರೆ ನೋಂತು ಪಡೆದಳೊ । ಪೃಥೆಯೆನುತ ಕವಿದುದು ಮುನಿವ್ರಜ ಮಿಕ್ಕವರ ನಗುತ ॥ ಮಥಿತರಿ ಪುವವದಾನಲೋಕ । ಪ್ರಥಿತದಿರುಪಯವೆಂಬಸುರಸಾ । ರಥಿಯ ನೆಲನುಗ್ಗಡಣೆಯಲಿ ನಗುತಿಳಿದಸಾ ರಥವ ॥೨೨॥ ಅರಸಕೇಳುಬ್ಬಿನಲಿ ಧೌಮ್ಯನ । ಧರಣಿಪನ ರೋಮಶನ ಭೀಮನ । ಚರಣದಲಿ ಮೈಯಿಕ್ಕಿ ಕೈಮುಗಿದೆರಗಿಮುನಿಜನಕೆ ॥ ಹರಸಿದನು ಹೊರವಂಟನಕುಲಾ । ದ್ಯರನು ಮಧುರಪ್ರೀತಿವಚನ । ಸ್ಫುರದ ಮಂದಸ್ನೇಹದಲಿ ನೋಡಿದನು ಪರಿಜನವ ॥೨೩॥ ಬಿಗಿದಗವಸಣಿಗೆಯಲಿ ಸೂರ್ಯನ । ನುಗಿವಪೋಮಾ ಣಿಕ್ಯಮಣಿರ । ಶ್ಮಿಗಳ ರಹಿ ರಂಜಿಸೆ ಸುರೇಶ್ವರನಿತ್ತಭೂಷಣವ ॥ ತೆಗೆತೆಗೆದು ಯಮನಂದನಂಗೋ । ಲಗಿಸಿ ಭೀಮಂಗಿತ್ತು ನಕುಲಾ । ದಿಗಳ ಮೈಯಲಿ ತೊಡಿಸಿದನು ಕೈಯಾರ ಕಲಿಪಾರ್ಥ ॥೨೪॥ ಕರಸಿ ಕಾಣಿಸಿದನು ಧನಂಜಯ । ಸುರಪತಿಯ ಸಾರಥಿಯನಮರೇ । ಶ್ವರವರೂಥದ ಸನ್ನಿವೇಶದ ಸಕಲಶೋಭೆ ಗಳ ॥ ಅರಸಮೊದಲಾದಖಿಳಜನಭೂ । ಸುರರು ಕಂಡರು ಮಾತಲಿಯ ಸ । ತ್ಕರಿಸಿ ಸಂಭಾವಿಸಿದನವನೀ ಪತಿ ಸರಾಗದಲಿ ॥೨೫॥ ಕುಶಲವೇ ದೇವೇಂದ್ರನಾತನ । ಶಶಿವದನೆಯರು ಸುಖಿಗಳೇ ರಾ । ಕ್ಷಸರು ವಶವ ರ್ತಿಗಳೆ ನಿರ್ಜರನಗರಿ ನಿರ್ಭಯವೇ ॥ ದೆಸೆಯವರು ಮೂಲೆಗಳವರು ಮ । ನ್ನಿಸುವರೇ ಸುರಲೋಕಸು ಖವನು । ವ್ಯಸನಭರ ಭಂಗಿಸದಲೇ ಹೇಳೆಂದನಾಭೂಪ ॥೨೬॥ಭಜಿಸಿದೈ ಭರ್ಗನನು ಶಾಂಭವ । ಯಜನ ಸಾರಸಮಾಧಿ ಶಿವಪದ । ರಜವ ಬೆರಸಿತೆ ಬಗೆಯ ಕುಣಿ ತೆವರಾಯ್ತೆ ತಡಿದೆಗೆದು ॥ವಿಜಯಶಬ್ದವು ಪಾರ್ಥ ಕೃತಿಯಲಿ । ಯಜಿಡವಲ್ಲಲೆ ವೈರಿರಾಯರ । ಕುಜನತಾವಿಚ್ಛೇದಸಾಧ್ಯವೆ ಯೆಂದನಾಭೂಪ ॥೨೭॥ ಜೀ ಯಚಿತ್ರಸೇನಿಂದ್ರನಲ್ಲಿ ಸಹಾಯವಾದನು ಶಿವನಕಾರು । ಣ್ಯಾಯುಧವೆ ಮಾಸೆದುದು ಸುರೇಂದ್ರಸ್ನೇಹಸಾ ಣೆಯಲಿ ॥ ಆಯಿತೇ ಧೂರ್ಜಟಿಯ ಶರ ಲೋ । ಕಾಯತರಿಗೇನೆಂಬೆನದು ನಿ । ರ್ದಾಯದಲಿ ವಶವರ್ತಿ ಯಾಯ್ತೆನಗೆಂದನಾಪಾರ್ಥ । ೨೮ ॥ ರನ ಕರುಣಾಲಾಭ ಲೋಕೋ । ತ್ತರದ ಪರಿತೋಷದಲಿ ಸಾನಿರೆ । ಸುರಪ ಕಳುಹಿದನೀರಥವನೀವಿಮಳಮಾತಲಿಯ॥ ಕರೆಸಿದನು ನಿಜನಗರಿಗಾನಿ । ರ್ಜರನಿಕರವಾಸತಿಯ ರಾ ದಿ । ಕ್ಪರಿವೃಢರು ಕೊಂಡಾಡಿತೆನ್ನನು ರಾಯ್ತಕೇಳೆಂದ ॥೨೯॥ ಪಾಶುಪತಶರಭುವನದೂರ್ಧ್ವ । ಶ್ವಾಸ ಕೃತಿಕೋವಿದನಲೇ ಚಿತ್ರಸೇಬಲ್ಲಿರಿ ನಿಮ್ಮಡಿಗಳಾವ್ಯಾಸಯದೇವೀಧಿಯಲಿ॥ಆಶರವಲೇ ಸೇರಿತೆನಗೆಮ। ಹೇಶನಿಂದಲ್ಲಿಂದ ಬಳಿಕಸು । ರೇಶನತಿಮನ್ನಿಸಿದನಮರಾವತಿಯೊಳೊಲವಿನಲಿ ॥೩೦॥ ಖ್ಯಾತಿವಡೆದೆನುತಿ

ವನ ಕಾರು । ಖ್ಯಾತಿಶಯಕಿದು ಫಲವೆ ಸಾಕಿ । ನ್ನೇತಕಿದು ರಾಜಸವಿಡಂಬವಿಕಾರಕುಚಿತವಲೇ ॥ ವೀತಿಹೋತ್ರಪರೇತಪತಿಪುರು । ಹೂತವರುಣಾದಿಗಳು ಕಂಡ । ವಾತ್ರದಲಿ ತೋಳೆದರು ಮನೋರಥಕಲಿತಕರ್ದಮವ ॥೩೧॥ ಕೇಳಿ ಮಿಗೆ ಹಿಗ್ಗಿದನು ತನುಪುಳ । ಕಾಳಿ ತಳಿತುದು ಹರುಷವಾರಿಗ । ಳಾಲಿಗಳ ಹೂಳಿದವು ತೂಳಿದವಾಂತರವ್ಯಥೆಯ ॥ ತೋಳ ಹಿಡಿದೆಳೆದಪ್ಪಿ ಪಾರ್ಥನ । ಬೋಳವಿಸಿದನು ಪೌರವಾನ್ವಯ । ಪಾಲಕನೆ ಯೆಂದರಸ ಮುಂಡಾಡಿದನು ಫಲುಗುಣನ ॥೩೨॥ ಮುರಿದುದಿನ್ನೇನಹಿತ ಬಲ ಹಗೆ । ಹರಿದುದೀದ್ರೌಪದಿಯ ಮೌಳಿಗೆ । ಕರುಬಿದವರಿಗೆ ಕಾಣಲಾಯ್ತು ಕೃತಾಂತನೋಲಗವ ॥ ಕರೆದನೇ ಕರುಣವನು ಹರಹರ । ಹೆರೆನೊಸಲ ಬಲುದೈವವಿನಿತರ । ಹೊರಿಗೆ ಗದುಗಿನ ವೀರನಾರಾಯಣನ ಕರುಣದಲಿ ... ... ॥೩೩॥

ಹನ್ನೆರಡನೆಯ ಸಂಧಿ.

ಸೂಚನೆ॥ ಲೀಲೆ ಮಿಗೆ ನರನಮರಲೋಕದ । ಕಾಲಕೇಯನಿವಾತಕವಚರ
ಸೀಳ ಬಿಸುಟಂದವನು ಬಣ್ಣಿಸಿದನು ಮಹೀಪತಿಗೆ ॥

ಕೇಳು ಜನಮೇಜಯಧರಿತ್ರೀ । ಪಾಲ ಧರ್ಮಜನರ್ಜುನನನುಪ । ಲಾಲಿಸಿದನುರೆ ಮುಳುಗಿದನು ಪುಳಕಾಶ್ರುಪೂರದಲಿ ॥ ಹೇಳು ಪಾರ್ಥ ಕಪರ್ದಿಯಸ್ತ್ರ । ವ್ಯಾಳಸಂಗ್ರಹಣಪ್ರಪಂಚವ । ನಾಲಿಸುವೆನೆನೆ ನೃಪತಿಗಭಿವರ್ಣಿಸಿದನಾಕಥೆಯ ॥೧॥ ಹರನ ಶರಲಾಭಾರ್ಥಸಿದ್ಧಿಗೆ । ಕರೆಸಿದನು ಸುರನಾಥ ನಾಗದ । ಲರುಹಲಾಸುರರಿಪುಗಳೊಳಿಗವನು ಸುರಾಚಾರ್ಯ ॥ ಅರಿಗಳೆವಗೆ ನಿವಾತಕವಚರು ಸುರಪದವಿ ಸೋಪದ್ರವದನಿ । ಷ್ಠುರವಿದೆಂದು ರಹಸ್ಯದಲಿ ನನಗೆಂದನಮರೇಂದ್ರ ॥೨॥ ಶಿವನ ಶರ ನಿನಗಾಯ್ತು ನಿರ್ಜರ । ನಿವಹವಿದೆ ನಾಕದಲಿ ಬಲುದಾ । ನವರು ವಿಲಗದ ವೀಚಿವೋದುದು ಸಗ್ಗ ಸೌಖ್ಯಫಲ ॥ ಜವನಭಯ ಜೀವರಿಗೆ ದುರ್ಜನ । ರವಗಡವು ಸುಜನರಿಗೆ ತಮ ಶಶಿ । ರವಿಗಳಿಗೆ ಮುನಿವಂತೆ ಖಳರಿದೆ ಯೆಂದನಮರೇಂದ್ರ ॥೩॥ ಮುದದ ನೆಲೆ ಶುಭದಿಕ್ಕ ಸೊಗಸಿನ । ಸದನ ಸೌಖ್ಯದ ಗರುಡಿ ಸೊಂಪಿನ । ಪದವಿ ಲೀಲೆಯ ತಾಣ ತಾಯ್ವನೆ ಕೇಳಮೇಳವದ ॥ ಮದದ ಮಡು ಭೋಗೈಕನಿಧಿ ಸಂ । ಪದದ ಜನ್ಮಸ್ಥಳ ಮನೋರಥ । ದುದಯಗಿರಿ ಹಿಂದೀಸುದಿನವಮರಾವತೀನಗರ ॥೪॥ ಕಳವಳದನೆಲೆ ಭಯದ ಜನ್ಮ । ಸ್ಥಳ ವಿಷಾದದ ಹೇಟೆ ಖಾತಿಯ । ನಿಳಯ ಖೋಡಿಯ ಕಟಕ ಭಂಗದ ಸಂಭವಾಸ್ಥಾನ ॥ ಅಳುಕಿನಂಗಡಿ ಹಳುವಿನಾಡುಂ । ಬೊಲ ನಿರೋಧದಶಾಲೆ ದುಗುಡದ । ಕಳನೆನಿಸಿತೀನಗರಿಯಾಗಲು ಪಾರ್ಥ ಕೇಳೆಂದ ॥೫॥ ಸಿಡಿಲಕಾಲದೊಳೆರಗುವಂತಿರೆ । ಕಡಲಕಲ್ಪದೊಳುಕ್ಕುವಂತಿರೆ । ಪೊಡವಿಯಾಕಸ್ಮಿಕದೊಳಿಳಿವಂತಿರೆ ರಸಾತಳಕೆ ॥ ತುಡುಕುವುದು ರಕ್ಕಸರ ಭಯ ಹುಡಿಹುಡಿಯಹುದು ಸುರವಿಭವವೆಮಗಿ । ನ್ನಡಿಯಿಡುವವರು ನಿವಾತಕವಚರು ಪಾರ್ಥ ಕೇಳೆಂದ ॥೬॥ ಕೆತ್ತಕದ ತೆಗೆಯದು ಸುರಘುದ । ಹೊತ್ತಸರಕಿಳಿಯದು ಸುಕಲ್ಪಿತ । ಮತ್ತಗಜರಥವಾಜಿ ತೆಗೆಯವು

ಪುರದ ಬಾಹೆಯಲಿ ॥ ತೆತ್ತು ಹರಿಯದು ಕಾದಿ ರಣದಲಿ । ಸತ್ತು ಹಿಂಗದು ಸುರರ ಸತಿಯರು ।
ತೊತ್ತಿರಾದರು ಖಳರ ಮನೆಗಳಿಗೆಂದನಮರೇಂದ್ರ ॥೭॥ ಭಯದ ಬಾಹೆಯಲಪಸರದ ನಿ । ಶ್ಚಯದ
ದುಮ್ಮಾನದ ವಿಘಾತಿಯ । ಲಯದಲಾವಣಿಗೆಯ ವಿರಾಗದ ತಡಿಯ ಸಂಕಟದ ॥ ಪಯದಪಾಡಿನ
ಹೃದಯಕಂಪದ । ನಯನದೊರತೆಯ ಬಗೆಯ ಕೊರತೆಯ । ಜಯದ ಜೋಡಿನ ದೇವರಿದೆ ನೋಡೆಂ
ದನಮರೇಂದ್ರ ॥೮॥ ಅವರುಪೇಕ್ಷೆಯ ಉಳಿವಿನಲಿ ನ । ಮ್ಮವರ ಬೇಹಿನ ಸುಳಿವಿನಲಿ ಮೋ । ಣವರನ
ಳುಕಿಸುವಾಧಿದೈವಿಕಕರ್ಮಗತಿಗಳಲಿ ॥ ದಿವಿಜರಿಂದವರುಳಿದರಾದಾ । ನವರ ಮರ್ದಿಸಿ ದೇವಲೋ
ಕವ । ನೆವಗೆ ನಿರುಪದ್ರವದಲಿತ್ತೆವಮಾಡೆಂದನಮರೇಂದ್ರ ॥೯॥ ಹೈಹಸಾದವು ನಿಮ್ಮ ಕೃಪೆಯವ ।
ಗಾಹಿಸುವೊಡರಿದೇನು ದೈತ್ಯರು । ಸಾಹಸಿಗರೇ ಸದೆವೆನೀ ಸುರಜನಕೆ ಹಿತವಹರೇ ॥ ಆಹರಾಸ್ತ್ರದೊಳ
ಮರವೈರಿ । ವ್ಯೂಹಭಂಜನವಹುದು ನಿಷ್ಪ್ರ । ತ್ಯೂಹನಿಶ್ಚಯವೆಂದು ಬಿನ್ನವಿಸಿದನು ಸುರ
ಪತಿಗೆ ॥೧೦॥ ಈರಥವನೇ ಹೂಡಿಸಿದೆನೀ । ಸಾರಥಿಯ ಬೆಸಸಿದನು ಸುರಪತಿ । ವಾರ ನೇದುದನೆಣಿ
ಸಲಳವೇ ಕೋಟಿಜಿಹ್ವೆಯಲಿ ॥ ವಾರಣದ ಹಯರಥಪದಾತಿಯ । ಭಾರಣೆಗೆ ದೆಸೆ ನೆರೆಯದಿಂದ್ರನ ।
ವೀರಭಟರೆನ್ನೊಡನೆ ನೆರೆದುದು ರಾಯ ಕೇಳೆಂದ ॥೧೧॥ ಹೋಬಿಗರು ಹರಿದರು ಸುರೇಂದ್ರನ ।
ದಳದ ಮೊನ್ನರ ಸನ್ನೆಯಲಿ ದಿಗು । ವಳಯದಗಲದಲೊಲೆವಲಲಿತಚ್ಛತ್ರಚಮರಗಳ ॥ ಜಲಧಿ ಜಲ
ಧಿಯ ಹಳಚಲಗಿದ । ವ್ವಳಿಪವಾದ್ಯಧ್ವನಿಯ ಡಾವರ । ಕಳೆದುದಸುರರ ಧುರದ ಧೈರ್ಯವನರಸ
ಕೇಳೆಂದ ॥೧೨॥ ಆಳು ನಡೆದುದು ಮುಂಗುಡಿಯ ಹರಿ । ಧಾಳಿ ನೂಕಿ ಹಿರಣ್ಯನಗರಿಯ । ಮೂಲೆ
ಗೈದಿತು ಹೊಯ್ದರಲ್ಲಿಯ ಬಿನುಗುಬಿಚ್ಚಟಿಯ ॥ ಸೂಳವಿಸಿದವು ಸನ್ನೆಯಲಿ ನಿ । ಸ್ಸಾಳ ದನುಜಪು
ರೋಪಕಂಠದ । ಕೂಲವತಿಗಳ ತೀರದಲಿ ಬಿಡಿಸಿದೆನು ಪಾಳೆಯವ ॥೧೩॥ ಅರಿಯದಾಪಟ್ಟಣವಿ
ದೇನೋ । ಹೊರಗೆ ಗಜಬಜವೆನೆ ಸುಪರ್ವರ । ಕುರುಹುಗಳನರಿದಮರರಿಪುಗಳು ಹರಿದರರಮನೆಗೆ ॥
ಬಿರುಗೆಯ ಸುಮ್ಮಾನದುಬ್ಬಿನ । ನೆರೆನಗೆಯ ನಯನಾಂಬುಗಳ ಖಳ । ನೆರಗಲತಿಸುಮ್ಮಾನವೇನೆಂದ
ಸುರ ಬೆಸಗೊಂಡ ॥೧೪॥ ಜೀಯ ಬಲೆಗಳ ತೆಗೆಸು ನಡೆ ನಿ । ರ್ದಾಯದಲಿ ನಿಮ್ಮಡಿಯ ಬೇಟೆಗೆ ।
ರಾಯಮೃಗವೈತಂದವಿವೆ ನಗರೋಪಕಂಠದಲಿ ॥ ಹೋಯಿತಸುರರ ಕೈಯಹೊಸೆದಿರು । ಪಾಯ
ಪಾಯವಧಾರೆನಲು ಖಳ । ರಾಯ ಕೇಳುತ ಮೃಗವದಾವುದೆನುತ್ತ ಬೆಸಗೊಂಡ ॥೧೫॥ ಜೋಡಿಸಿದ
ನಮರೇಂದ್ರನಮರರ । ವೇಡೆಯಾಯ್ತು ಹಿರಣ್ಯನಗರಿಗೆ । ಗಾಢಬಲರದೆ ಬಂದು ವರುಣಯಮಾಗ್ನಿ
ವಾಯುಗಳು ॥ ರೂಢಿಗಚ್ಚರಿಯಾಯ್ತಲಾ ಪರಿ । ಗೂಢಮೃಗಗಣವಿಲ್ಲವಿದೆ ನಿ । ರ್ಮೂಢರನು
ಹಿಡಿತರಿಸುಯೆಂದನು ದೂತನೊಡೆಯಂಗೆ ॥೧೬॥ ಇವನ ಹೊಯ್ಕುಟವಾಯಕೊಯ್ತು । ಪ್ಪುವನೆ ಸುರ
ಪತಿ ಶಿವಶಿವಾ ಸುರ । ರವಗಡಿಸುವರೆ ವೇಡೆಗಡ ಹೈರಣ್ಯನಗರಿಯಲಿ ॥ ಇವನ ಸೀಳೆನೆ ಹೊರಗೆ
ಸುರಸೈ । ನ್ಯವನು ಸೀಳಿದು ಬಳಿಕ ನೀನಿ । ನ್ನವನ ಮನವೊಲಿವಂತೆ ಮಾಡೆನೆ ಖಳನು ಖತಿಗೊಂಡ॥
ಬಂದನೇ ಸುರರಾಯನಕಟಕ । ಟಂದು ಮುತ್ತಿತೆ ದಿವಿಜಗಣ ತರು । ಣೇಂದುಧರನೇ ತರಿಸಿದನೊ ಶಿವ
ಶಿವ ವಿಶೇಷವಲಾ ॥ ಇಂದಿನಲಿ ಕಡೆ ತನಗೆ ಮೋಹಪು । ರಂದರನು ನಿರ್ನಾಮನೈಸಲೆ । ಯೆಂದು
ಬಿಟ್ಟನು ಚೂಣಿಯನು ಪಟುಭಟರ ಬೊಬ್ಬೆಯಲಿ ॥೧೮॥ ಧರಣಿಪತಿ ಚಿತ್ತೈಸು ವೇಳೆಯ । ಶಿರವನೊ

ಡೆದುಬ್ಬೇಳ್ವಘನಸಾ । ಗರದವೊಲು ಪಿಡಿದೊದರಿ ಕವಿದುದು ಕೂಡೆ ಪಂಕದಲಿ ॥ ಕರಿತುರಗರಥವಾ
ಜಿಕಾಲಾ । ಳುರವಣಿಸಿತೇನೆಂಬೆನಸುರರ । ದೊರೆಯ ಸನ್ನೆಗೆ ಸೂಳವಿಪನಿಸ್ಸಾಳರಭಸದಲಿ ॥೧೯॥
ಕವಿದುದಸುರರ ಚೂಣಿ ಬೊಬ್ಬೆಯ । ವಿವಿಧವಾದ್ಯಧ್ವನಿಯ ಕಹಳಾ । ರವದ ಕೋಳಾಹಳಕೆ ತುಂಬಿ
ತು ಬಹಳಭೇರಿಗಳು ॥ ರವಿಯನಾಕಾಶವ ದಿಗಂತವ । ತಿವಿದು ಕೆದರುವಧೂಳಿ ತಿಮಿರಾ । ರ್ಣವ
ವಲ್ಲೈ ತ್ರಿಜಗವೆನಲು ಝೂಂಪಿಸಿದುದರಿಸೇನೆ ॥೨೦॥ ದಾನವರ ಧಕ್ಕಡತನವನದ । ನೇನನೆಂಬೆನು
ಜೀಯ ತೂಳಿದ । ವಾನೆಗಳು ತರುಬಿದವು ತೇಜಿಗಳುರುಬಿದವು ತೇರು ॥ ಆನಲಳವೇ ಭಟರ ಶರಸಂ ।
ಧಾನವನು ಬಲುಸರಳಸೂಟಿಯ । ಸೋನೆಯಲಿ ಜಗ ನನೆಯಿತೆನೆ ಜೋಡಿಸಿತು ಖಳಸೇನೆ ॥೨೧॥
ಮುರಿದುದಮರರ ಚೂಣಿ ದಾನವ । ರುರುಬೆಗಳುಕಿತು ಸಿದ್ಧವಿದ್ಯಾ । ಧರಮಹೋರಗಯಕ್ಷರಾಕ್ಷಸ
ಗುಹ್ಯಕಾದಿಗಳು ॥ ಹೊರಗೆ ವನವೀಧಿಯಲಿ ಕಾಹಿನ । ಕುರುವದಲಿ ಗೋಪುರದೊಳಾಕಿತು ।
ಸುರರು ಮುರಿದರು ಮೇಲುಗಾಳಗವಾದುದಸುರರಿಗೆ ॥೨೨॥ ಕೆಣಕಿದಸುರರ ಕೋಲುಗಟ್ಟಿತು । ಬಣ
ಗುಸುರರೋಸರಿಸಿ ಭಾರಾಂ । ಕಣವನೆನ್ನಿದಿರಿನಲಿ ಸುಭಟರು ಸೂಸಿ ದೆಸೆದೆಸೆಗೆ ॥ ರಣವನದನೇನೆಂ
ಬೆನ್ನೈ ಧಾ । ರಿಣಿಪತಿಯೆ ವಿಗ್ರಹದ ವಿಸ್ತಾ । ರಣನಿಗುರ್ಗಣೆ ವಿಗಡಿಸಿತು ವಿಬುಧರ ವಿಡಾಯಿ
ಗಳ ॥೨೩॥ ಬಳಿಕ ಬಿಟ್ಟನು ರಥವನೀಮೂ । ತಳಿವಿಭಾಡಿಸಿ ಹೊಕ್ಕ ಚೂಣಿಯ । ಬಲಸಮುದ್ರದ
ಮಧ್ಯದಲಿ ಮುಳುಗಿತು ವರೂಥವಿದು ॥ ಬಲದಲೆಚ್ಚನು ಹಿಂದುಮುಂದಿ । ಟ್ಟಳಿಸಿದೊಡೆನಿಟ್ಟೊರಸಿ
ದೆನು ಮುಂ । ಕೊಳಿಸಿ ಮೇಲ್ವಾಯ್ದವರ ಮುರಿದೆನು ವಾಮಭಾಗದಲಿ ॥೨೪॥ ಕೆಟ್ಟುದಹಿತರ ಚೂಣಿ
ರಿಪುಜಗ । ಜಟ್ಟಿಗಳು ನುಗ್ಗಾಯ್ತು ದವಿಜರ । ಘಟ್ಟಿನಲಿ ಬೊಬ್ಬಾಟವಾಯ್ತು ಗಭೀರಭೇರಿಗಳು ॥
ಬಿಟ್ಟಮಂಡೆಯಲಸುರಸುಭಟರು । ಬಿಟ್ಟುಕೊಂಡರು ಕೂಡೆ ಹೆಣಸಾ । ಲಿಟ್ಟುದುರೆಯೆನಲರುಣಜಲ
ನಗರೋಪಕಂಠದಲಿ ॥೨೫॥ ನೂಕಿ ದೈತ್ಯರ ಚೂಣಿಯನು ಮುರಿ । ದೌಕಿ ದುರ್ಗವ ಹೊಗಿಸಿದನು ಸ ।
ವ್ಯಾಕುಲರು ಸೂಸಿದರು ಭಯವ ನಿವಾತಕವಚಂಗೆ ॥ ಆಕೆವಾಳರು ಜೀಯ ನಮ್ಮ ದಿ । ವೌಕಸರ ಪರಿ
ಯಲ್ಲ ಯುದ್ಧ । ವ್ಯಾಕರಣಪಾಂಡಿತ್ಯವುಂಟೆಂದೆನ್ನದೊರೆದರು ॥೨೬॥ ಕೇಳಿದನು ಕಡುಗೋಪದಲಿ
ಸಿಡಿ । ಲೇಳಿಗೆಯಲೆದ್ದನು ಸುರೇಂದ್ರಗೆ । ಮೇಲುಗಾಳಗವೇ ಸುಪರ್ವರು ನಮ್ಮಸದೆವರಲೇ ॥ ಕಾಲ
ಗತಿಯೋ ಮೇಣ್ಕಪರ್ದಿಯ । ಕೀಲಕವೊ ರವಿಯೊಡನೆ ತಮ ಕೈ । ಮೇಳವಿಸಿತೇ ಶಿವಶಿವಾಯೆನುತ
ಸುರಹಲುಮೊರೆದ ॥೨೭॥ ಭಟರ ಬರಹೇಳೋ ಸುರೇಂದ್ರನ । ಕಟಕವಿಕ್ಕಿದವೇಡೆಯಲಿ ಲಟ । ಕಟಿ
ಸುತಿದೆ ದಾನವರು ಮಾನಚ್ಯುತಿಯ ಮನ್ನಿಸದೆ ॥ ನಿಟಿಲನಯನನನೇಳಿಸುವಚಾ । ವಟೆಯರಾವೆಡೆ
ಚದುರರಣಲಂ । ಪಟರ ಬರಹೇಳೆನುತ ಮಿಗೆ ಗರ್ಜಿಸಿದನಮರಾರಿ ॥೨೮॥ ನೆರೆದುದಸುರರ ಕಾಲಕೂ
ಟದ । ಕರುವಿನೆರಕವೊ ಸಿಡಿಲ ದಳ್ಳುರ । ತಿರುಳದಡ್ಡಿಯೊ ವಿಲಯಭೈರವನುಬ್ಬಟೆಯ ಪಡೆಯೋ
ಹರನ ನಯನಜ್ವಾಲೆಯವದಿರ । ಗರುಡಿಯೋ ಗಾಢಾಯ್ಲತೇಜದ । ದುರುಳದಾನವಭಟರು ಬಂದು
ದು ಕೋಟಿಸಂಖ್ಯೆಯಲಿ ॥೨೯॥ ನೆರೆದಿರೈ ಪರಿಭವದ ನೆಲೆಯಲಿ । ನೆರೆದಿರೈ ದುಷ್ಕೀರ್ತಿಸತಿಯಲಿ ।
ನೆರೆದಿರೈ ಸಲೆ ಹೊರೆವಿರೈ ದುಷ್ಕೃತಿಯಲೊಡಲುಗಳ ॥ ಸುರರಲೇ ನೀವ್ನಿಮ್ಮ ಹೆಂಡಿರ । ಕುರುಳ
ಕೈದೊಳಸಿಂಗೆ ಮಿಗೆ ಕಾ । ತರಿಸುತಿದೆ ವಾಸವನೊಡನೆ ವಾಸಿಗಳ ಬಿಡಿಯೆಂದ ॥೩೦॥ ಜೀಯ ಖಾತಿಯಿ

ದೇಕೆ ದಿವಿಜರ । ರಾಯನರಸಿಯ ನಿನ್ನ ತೊತ್ತಿರ । ಲಾಯದಲಿ ತೋರುವೆವು ತಾತಾ ವೀಳಯವೆನೆನುತ್ತ ॥ ಹಾಯಿದರು ತಮತಮಗೆ ಮುಂಗುಡಿ । ದಾಯದಲಿ ಥಟ್ಟಿಸುವನಿಸ್ಸಾ । ಳಾಯತದ ಬಹುವಿಧದವಾದ್ಯದ ಲಳಿಯ ಲಗ್ಗೆಯಲಿ ॥೩೧॥ ಒಡೆದುದಿಳೆಯೆನೆ ಸಮವಿಷಮದುರಿಗಡಲು ಶಿವಶಿವಯೆನೆ ನಿಹಾರದ । ದಡಿಗದಾನವರೈದಿ ಕವಿದುದು ಕೆದರಿ ಸುರಬಲವ ॥ ಥಡಥಡಿದಿರಾಗಲಿ ಸುರೇಂದ್ರನ । ತುಡುಕಹೇಳಾ ಕಾಲವಿದಲಾ । ತೊಡರೆನುತ ಹೊಯ್ದರುಬ್ಬಿತಸುರರು ಸುರರ ಸಂದಣಿಯ ॥೩೨॥ ಮುರಿದುದಮರರು ಮತ್ತೆ ಬೊಬ್ಬಿರಿ । ದುರುಬಿದೆನು ಹೆಸರೆನಿಸಿದಸುರರ । ತರಿದೆನದರೊಳು ಕೋಟಿಸಂಖ್ಯೆಯನೈಂದ್ರಬಾಣದಲಿ ॥ ಹರಿದುದಮರಾರಿಗಳು ಕೋಟಿಯ । ಹೊರಗೆ ಸುರಬಲವೌಕಿಬಿಟ್ಟುದು । ತುರುಗಿತಮರರು ಖಳನ ದುರ್ಗದತುದಿಯ ತೆನೆಗಳಲಿ ॥೩೩॥ ಎಲೆಲೆ ಸುರಪತಿಯಾಳು ಕೋಟಿಯ । ನಿಳಿಯುತದೆ ನಡೆಯೆನುತ ದಾನವ । ರುಲಿದು ಕವಿದುದು ಖಾತಿಯಲಿ ಮಿಗೆ ಭಾಷೆಗಳ ಕೊಡುತ ॥ ತಲೆಯಹೊಯ್ದಡಗೆಡಹು ಸುರಪನ । ಲಲನೆಯರ ಮುಂದಣವಿಕಾರಿಗ । ಳೆಲವೊ ಸರಿಯೋ ಪೂತು ಮಝುಯೆನುತ್ತೈದಿದರು ಭಟರು ॥೩೪॥ ಏನನೆಂಬೆನು ಜೀಯ ಬಳಿಕಾ । ದಾನವಾಧಿಪರುಬ್ಬೆಯನು ಸು । ಮ್ಮಾನವನು ತರಹರಿಸಲಳವೇ ಖಳರ ಘುಲ್ಲಣೆಯ ॥ ವೈನತೇಯನ ಪಕ್ಷಗತಪವ । ಮಾನನಂತಿರೆ ಭಟರಸುಯ್ಲಿನ ಲಾನಿರೂಢಿಯಸುರರು ಹಾರಿತು ಸೂಸಿ ದೆಸೆದೆಸೆಗೆ ॥೩೫॥ ತೋರುತೋರಮರೇಂದ್ರಸಾವೆಡೆ । ತೋರಿಸೈರಾವತವದೆತ್ತಲು । ತೋರಿಸುಚ್ಚೈಶ್ರವವನೆಲ್ಲಿಹರಗ್ನಿಯಮಗಿವರು ॥ ತೋರಿರೈಕೈಗುಣವನಸುರರ । ಗಾರುಗೆದರದಗರ್ವಿತರ ಮೈ । ದೋರಹೇಳಾ ಕಾಣಬಹುದೆನುತುರುಬಿದರ ಭಟರು ॥೩೬॥ ಕರೆದರವದಿರು ಕಲ್ಪಮೇಘದ । ಬಿರುವಳೆಯವೊಲು ಸರಳನನಿತುವ । ತರಿದು ತೆತ್ತಿಸಿದೆನು ತದಂಗೋಪಾಂಗದಲಿ ಶರವ ॥ ಅರಿಯರೆನ್ನನು ಶಕ್ರನೆಂದೇ । ತರುಬಿದಿಙ್ಮಂಡಲವ ಮುಸುಕಿದ । ರಿರಿತಕಂಜದದಿಟ್ಟನಾವೆನು ಸುರರ ಥಟ್ಟಿನಲಿ ॥೩೭॥ ಝಗಝಗಿಪಬಾಣಾಗ್ನಿ ಭುಗುಭುಗು । ಭುಗಿಲೆನಲು ದಿವ್ಯಾಸ್ತ್ರತತಿಯಲಿ । ಹೊಗೆಯ ತೋರಿಸಿದೆನು ಚತುರ್ದಶಭುವನ ಭವನದಲಿ ॥ ವಿಗಡರದ ಲೆಕ್ಕಿಸದೆ ಲೋಟಿಸಿ । ಮಗುಚಿದರು ಮದ್ಬಾಣಮಹಿಮೆಯ । ನೊಗಡಿಸಿತು ಕಾಲಾಗ್ನಿ ಕಾಲಾಂತಕರಿಗಾಸಮರ ॥೩೮॥ ದೊರೆಗಳೇರಿತು ರಥತುರಂಗಮ । ಕರಿಗಳಲಿ ಕಾಲಾಳ ಬಿಂಕವ । ನರಸ ಬಣ್ಣಿಸಲರಿಯೆನಾಸುರಕರ್ಮಕಲಹವಲೇ ॥ ಸರಿಗರೆದ್ದುದು ಮೂರುಕೋಟಿಯ । ಸುರರು ಸರಿಗಳಲಿಟ್ಟರಶನಿಯ । ಶರದಲೆಡೆಯಲಿ ತರುಬಿದರು ಕೈಸೋತುದೆನಗೆಂದ ॥೩೯॥ ಲಟಕಟಿಸುವಾಮೂರುಕೋಟಿಯ । ಭಟರು ಕರೆದರು ಕಲುವಳೆಯನು । ಬ್ಬಟೆಯನದನೇನೆಂಬೆನವದಿರ ಸಮರಸಂಭ್ರಮವ ॥ ಕುಟಿಲಕದನದೊಳೊದಗಿತದು ಕಲು । ಗುಟಿಕಶರಶತಕೋಟಿಯಲಿ ಪಡಿ । ಭಟಬಲವ ಬೆದರಿಸಿದೆ ಚಿತ್ತೈಸೆಂದನಾಪಾರ್ಥ ॥೪೦॥ ತೆರಳದವದಿರು ಹೂಡಿದರು ದ । ಳ್ಳುರಿಯಧಾರೆಯಪಾವಕಾಸ್ತ್ರವ । ನರಸ ಹೊಗೆದುದು ಭುವನ ಹೊಯ್ದುದು ಝಳ ಜಗತ್ತ್ರಯವಾ ॥ ಸರಕುದೆಗೆದುದು ಸತ್ಯಲೋಕಕೆ । ಥರಥರದಜಗವಿಂದ್ರಸಾರಥಿ । ಜರಿದು ಜವಗುಂದಿದನು ಝಾಡಿಸುವನಲನುಬ್ಬೆಯಲಿ ॥ ಸಾರಥಿಯ ಸಂತೈಸಿ ತೇರಿನ । ವಾರುವಂಗಳ ನೇಣನೋಜೆಯೊ । ಳೋರಣಿಸಿ ಸಂವರಿಸಿ ರಥವನು ವರುಣಬಾಣದಲಿ ॥ ವಾರಿಧಿಯ ಕೆದರಿದನು ಕಟ್ಟುವು । ಭೋರಿಗಿಡಗಳು ಮಾರುತನ ಕೈ । ವಾರ ಕುಂದಿದುದಸುರಮುಖದನಲಾಸ್ತ್ರಪರಿಹರಿಸಿ ॥೪೧॥ ಅವರು ಮಗುಳೆಚ್ಚರು

ಶಿಲೀಮುಖ । ದವೆಯವದೊಳುಬ್ಬೆದ್ದ ಗಿರಿಗಳು । ಕವಿಯೆ ಕಡಿದೊಟ್ಟಿದೆನು ಭಾರಿಯವಜ್ರಬಾಣ
ದಲಿ॥ಅವರು ತಿಮಿರಾಸ್ತ್ರದಲಿ ಕೆತ್ತರು । ಭುವನನೆಯನದ ಕದವನಾಗಳೆ । ರವಿಯಶರದಲಿ ಮುರಿದೆನಗುಳಿ
ಯನರಸಕೇಳೆಂದ ॥೪೩॥ ಬಳಿಕ ಸುರಿದರು ಹಾವುಗಳ ಹೆ । ಮ್ಮಳೆಯನಲ್ಲಿಗೆ ಗರುಡಬಾಣವ । ಸುಳಿ
ಸಿದೆನು ಬಳಿಕಾದುದರ್ಧಗ್ರಾಸವಾಶರಕೆ ॥ ಉಲಿದು ದನುಜರು ಮತ್ತೆ ಕೆಂಡದ । ಮಳೆಯ ಕರೆದರು
ಮರಳಿ ಜಲಧಿಯ । ತುಳುಕಿದೆನು ತೊಡಕಾಯ್ತು ಸಾರಥಿ ಮತ್ತೆ ಬಸವಳಿದ ॥೪೪॥ ಸಾರಥಿತ್ವದ
ಕೈಮೆ ತಪ್ಪ್ರತಿ । ಕಾರಶರಸಂಧಾನವೆರಡರ । ಭಾರ ಬಿದ್ದುದು ಮೇಲೆ ದನುಜರ ಮೂರುಕೋಟಿ
ಯದು ॥ ಧೀರರಾತ್ಮಸ್ಮೃತಿಗೆ ನಾಚದ । ರಾರು ಜೀಯ ಮಹಾಹವದವಿ । ಸ್ತಾರವನು ಮಾತಲಿಯ
ಕೈಯಲಿ ಚಿತ್ತವಿಸಿಯೆಂದ ॥೪೫॥ ತೊಡಚಿದೆನು ಬೊಮ್ಮಾಸ್ತ್ರವನು ಹುರಿ । ಯೊಡೆದುದಸುರರು
ಮಲೆತವರನಿ । ಕ್ಕಡಿಯ ಮಾಡಿತು ಬಂದುದಳಿವು ನಿವಾತಕವಚರಿಗೆ ॥ ಕಡುಹಿನಿಂದಾಗ್ನೇಯವಾ
ರುಣ । ದಡಬಳಿಗರನು ಬಾಚಿದವು ಬರ । ಸಿಡಿಲ ಸರೆಬಿಟ್ಟಂತೆ ಕಳಚಿದವಸುರಬಲದಸುವ ॥೪೬॥
ಕಾಳದನುಜರು ಮೂರುಕೋಟಿಯೊ । ಳಾಳುಳಿಯದಕ್ಕಾಡಿತಮರರ । ಸೂಳೆಯರ ಸೆರೆ ಬಿಟ್ಟುದ
ರಿನಗರೋಪಕಂಠದಲಿ ॥ ಧೂಳಿಪಟವಾಯಿತು ಹಿರಣ್ಯಪು । ರಾಲಯದ ನೆಲೆಗಟ್ಟು ಮುರಳಿದು । ಕಾಳಿ
ಕೇಯರ ಪುರಕೆ ಬಂದೆನು ರಾಯ ಕೇಳೆಂದ ॥೪೭॥ ಕೆರಳಿತಲ್ಲಿ ನಿವಾತಕವಚರ । ಮರಣವಾರ್ತೆಯ
ಕೇಳಿದಸುರರು । ಪುರದ ಬಾಹೆಯೊಳಡ್ಡಹಾಯ್ದರು ತರುಬಿದರು ರಥವ ॥ ಅರಸ ಚಿತ್ತೈಸವದಿರಲಿ
ಪರಿ । ಪರಿಯಮಾಯಾರಚನೆ ರಂಜಿಸಿ । ತೆರಡುಸಾವಿರ ಮಡಿಗೆ ಮಿಗಿಲು ನಿವಾತಕವಚರಿಗೆ ॥೪೮॥
ಬೀಸಿದರು ಬಿರುಗಾಳಿಯಾಗಿ ಮ । ಹಾಸಮುದ್ರದ ನೂಕುತೆರೆಯಲಿ । ಬೇಸರಿಸಿದರು ಹರಿದರವನಿಯ
ಲಗ್ನಿರೂಪಾಗಿ ॥ ಆಸುರದ ತಮವಾಗಿ ರವಿಶತ । ದಾಸರಿನ ಬಿಸಿಲಾಗಿ ಮಾಯಾ । ಭ್ಯಾಸಿಗಳು ಮೋ
ಹಿಸುವರದನೇಂಬಣ್ಣಿಸುವೆನೆಂದ ॥೪೯॥ ಘೋರತರವದು ಬಳಿಕ ದುಷ್ಪ್ರತಿ । ಕಾರವಿತರರಿಗಿಂದು
ಮೌಳಿಯ । ಸಾರತರಕೃಪೆಯಾಯ್ತಲೇ ಸರಹಸ್ಯಸಾಂಗದಲಿ ॥ ಭಾರಿಸಿದುದಾವಂಗದಲಿ ಮಾ ।
ಯಾರಚನೆಯಾವಿಧದಲಾವಾ । ಯಾರಚನೆರಿಯನು ಸೀಳಿ ಬಿಸುಟಿನು ಶಿಲ್ಪದಲಿ ಖಳರ ॥೫೦॥ ಮುರಿ
ದುದಸುರರ ಮಾಯೆ ಕಾಹಿನೊ । ಳೆರೆದರಸದವೊಲವರು ನಿಜದಲಿ । ತರುಬಿ ನಿಂದರು ತೂಳಿದರು
ಗಜಹಯರಥೌಘದಲಿ ॥ ತರಿದವುಗಿದವು ತುಂಡಿಸಿದವಗಿ । ದೆರಗಿದವು ಸೀಳಿದವು ಕೊಯ್ದವು । ಕೊರೆದು
ಕುಪ್ಪಳಿಸಿದವು ನಿಮಿಷಕೆ ಶರವರಿವ್ರಜವ ॥೫೧॥ ಜೀಯ ವಿಗಡಬ್ರಹ್ಮಶರವಿಂ । ದಾಯುಧದ ಮುಂ
ಗುಡಿಯಲಿರಿದುದು । ಮಾಯಕಾರ ಮೋಹರವನುಬ್ಬಟೆ ಚತುರ್ಬಲವ ॥ ಹೋಯಿತಸುರರ ಸೇನೆ ಸರಿ
ದುದು । ನಾಯಕರು ನಾನಾದಿಗಂತ । ಸ್ಥಾಯಿಗಳು ಸಗ್ಗಾದಿಭೋಗಕೆ ಭೂಪ ಕೇಳೆಂದ ॥೫೨॥
ಕಡುಹುವಗ್ಗದಕಾಲಕೇಯರ । ಗಡಣವಡಗಿತು ಸುರರ ಬಲುಸೆರೆ । ಬಿಡಿಸಿದವು ಬಳಿಕಾಯ್ತು
ಕಡುಸುಮ್ಮಾನ ಸುರಕುಲಕೆ ॥ ಒಡೆದುದಿಳೆಯೆನೆ ಬಾಹುವಿನ ಬಿರು । ನುಡಿಯ ಕೈಗಳ ತುದಿವೆರಳ
ಬೊ । ಬ್ಬಿಡಿಕೆಗಳ ಸುರಭಟರು ಹರಿದರು ಮುಂದೆ ಸುರಪುರಕೆ ॥೫೩॥ ಕಟ್ಟು ಗುಡಿಯನು
ಖೋಡಿಯೇ ಜಗ.। ಜಟ್ಟಿಗಳು ನುಗ್ಗಾಯ್ತಲೇ ನಿ । ನ್ನಟ್ಟಸಿ ಸುರಕುಜವಲೇ ಕೊಡದೇ ಮನೋ
ರಥವ ॥ ಕೆಟ್ಟುದಹಿತನಿವಾತಕವಚರ । ಘಟ್ಟು ಹುಡಿಯಾಯಿತ್ತು ದನುಜರ । ಹುಟ್ಟುಪುರಿದುದು

ಜೀಯ ಚಿತ್ತೈಸೆಂದರಿಂದ್ರಂಗೆ ॥೫೪॥ ...ಕೇಯರ ನಗರಿಯಲಿ ದು । ವ್ವಾಳಿಸಿತಲೇ ಪ್ರತ್ಯ ದಿವಿಜರ । ಸೂಳೆಯರು ಸೆರೆಬಿಟ್ಟು ಬಂದ... ಯಕ್ಷಕಿನ್ನರರ ॥ ಕಾಲ ಸಂಕಲೆ ಕಡಿದವಾಖಳ । ರೂಳಿಗಕೆ ಕಡೆಯ...ಯ್ತು ಸುರಪುರ । ಪಾಳುವೇ... ಕಾಹು ತೆಗೆಯಲಿ ಯೆಂದರಾಚರರು ॥೫೫॥ ಪುರದ ಬಾಹೆಯ ಕೋರಡಿಯ ಸಂ । ವರಣೆ ತೆಗೆ... ನಿರ್ಭಯದಿ ಸಂ । ಚರಿಸುವುದು ನಂದನದೊಳಗೆ ನಿಮ್ಮಡಿಯರಾಣಿಯರು ॥ ತರತರದ ಕೊ... ವ ಕಾಹಿನ । ಸುರಭಟರು ಸುಖನಿದ್ರೆಗೈಯಲಿ । ನಿರುತ ನಿಜನಿಳಯದೊಳಗೆಂದುದು ಸುರಜನವ್ರಾತ ॥೫೬॥ ಕೇಳಿದನು ಹರುಷಾಶ್ರು ಹೊದೆಸಿದ । ವಾಲಿಗಳ ಸಾವಿರವನುಬ್ಬಿದ । ಮೇಲುಮುದದ ಸರೋಜಪುಳಕದ ಸರ್ವಸೌಖ್ಯದಲಿ ॥ ಬಾಲೆಯರ ಬರಹೇಳು ರತುನನಿ । ವಾಳಿಗಳ ತರಹೇಳೆನುತ ಸುರ । ಮೌಳಿಮಂಡಿತಚರಣನೆದ್ದನು ಬಂದನಿದಿರಾಗಿ ॥೫೭॥ ಕವಿದುದಮರವ್ರಾತ ಕಾಂತಾ । ನಿವಹ ಹೊರವಂಟುದು ಸುರೇಂದ್ರನ । ಭವನದಲಿ ಗುಡಿ ನೆಗಹಿತಮರಾವತಿಯ ಚೌಕದಲಿ ॥ ತವತವಗೆ ತನಿವರಿವಜನದು । ತ್ಸವವನದನೇನೆಂಬೆನಂದಿನ । ದಿವಸದೊಸಗೆಯನಮರಲೋಕದೊಳರಸ ಕೇಳೆಂದ ॥೫೮॥ ಇದಿರು ಬಂದನು ಪದಯುಗವಲೆರ । ಗಿದೊಡೆ ಬಿಗಿದಪ್ಪಿದನು ಸುಮ್ಮಾ । ನದ ಸಗಾಢವನೇನನೆಂಬೆನು ಸಾಲಿಗಳ ॥ ಹೊದರಿನಲಿ ಹೊದಿಸಿದನು ಮಿಗೆ ನಾ । ದಿದನು ಹರುಷಾಶ್ರುಗಳಲೆನ್ನ । ಭ್ಯುದಯವೇ ನಿಮ್ಮಡಿಯ ಕರುಣಾಕಟಾಕ್ಷಕೃಪೆಯೆಂದ ॥೫೯॥ ಸುರರು ಕೊಂಡಾಡಿದರು ಸುರಮುನಿ । ವರರ ಪರಮಾಶೀರ್ವಚೋವಿ । ಸ್ತರಕೆ ಫಲವಿದಲಾ ಭವತ್ಕರುಣಾಂಬಕಾಲೋಕ ॥ ಅರಿಸುಭಟಸಂತೋಷಮಯಸಾ । ಗರವ ಸುರಿಯವೆ ಸರಳು ವಡಬ । ಸ್ಫುರಣ ಮೇಘಜ್ವಾಲೆ ಜಾಲಕರಾಳಜಿಹ್ವೆಯಲಿ ॥೬೦॥ ಲೇಸುಮಾಡಿದೆ ನಾಕವನು ಖಳ । ರೀಸುದಿವಸ ವಿಭಾಡಿಸಿದರೆ ಸು । ರೇಶನಾಪತ್ತಾಪನಿವಾರ್ಪಣವ ರಚಿಸಿದೆಲಾ ॥ ಈಸುಪುಣ್ಯೋದಯಕೆ ಪೂರ್ವಮು । ಹೀಶಕುಲ ನೋಂತುದು ಯೆನುತ ಸಂ । ತೋಷಮಯಜಲಧಿಯಲಿ ತೇಂಕಾಡಿದನು ಯಮಸೂನು ॥೬೧॥ ಹೊಗಳೆ ನಿಲ್ಲದು ಜಿಹ್ವೆ ತೆಕ್ಕೆಯ । ಸೊಗಸಿನಲಿ ಮೈದಣಿಯದೀಕ್ಷಣ । ಯುಗಳ ಬೀಯದು ನೋಡಿ ಪಾರ್ಥನ ಮಾತ ಸವಿಸವಿದು ॥ ತೆಗೆದು ನಿಲ್ಲವು ಕರ್ಣಯುಗ ಸುರ । ನಗರಿಯುತ್ತಮಗಂಧಭರದಲಿ । ಮುಗಿಯದರಸನ ಗಂಧವಹವವನೀಶ ಕೇಳೆಂದ ॥೬೨॥ ನೃಪನ ಮುದವನು ಭೀಮಸೇನನ । ವಿಪುಳ ಸುಮ್ಮಾನವನು ನಕುಲನ । ಚಪಲಮುದವನು ಪುಳಕವನು ಸಹದೇವನವಯವದ ॥ ದ್ರುಪದಸುತೆಯುತ್ಸವವ ಮುನಿಜನ । ದಪಗತಗ್ಲಾನಿಯನು ಪುರಜನ । ದುಪಚಿತಾನಂದವನು ಬಣ್ಣಿಸಲರಿದು ತಂಗೆಂದ॥ ಶಿವನ ಘಾಟದ ಶರ ಚತುರ್ದಶ । ಭುವನಭಂಜನವಿದು ಮಹೀಯಾ । ಹವಕೆ ಹೂಣಿಗವಾಯ್ತುಲಾಹೇರಾಳಸುಕೃತವಿದು ॥ ಎವಗೆ ತೋರಿಸಬೇಹುದೀಶಾಂ ಭವಮಹಾಸ್ತ್ರಪ್ರೌಢಕೇಳೀ । ವಿವರಣಾವಕಾಬತಿಯಾಯ್ತೆಂದನು ಧನಂಜಯಗೆ ॥ ಜೀಯ ನಿಮ್ಮ...ಯನು ಶಂಭುವಿ । ನಾಯುಧದಲೇ ಸಲಿಸಿದ ಪೆನಾ । ಗ್ನೇಯವಾರುಣವೈಂದ್ರಕೌಬೇರಾಸ್ತ್ರಕೌಶಲವ ॥ ಆಯತವ ತೋರಿಸುವೆನೀಗಳ । ನಾಯತವ್ರು ರವಿತುರಗರಾಜಿಗೆ । ಲಾಯ ನೀಡಿತು ಪಶ್ಚಿಮಾಶಾಗಿರಿಯ ತಪ್ಪಲಲಿ ॥೬೪॥ ಅರಸ ಕಳುಹಿದ ನಿಂದ್ರಸೂತನ । ನರಮನೆಗೆ ಬಂದನು ಧನಂಜಯ । ವೆರಸಿ ಪರ್ಣದ ಜೌಕಿಗೆಯಲಿ ಮುನೀಂದ್ರಮೋ

ಳದಲಿ ॥ ಅರಸಿ ಬಣ್ಣಿಸಿದಸೊಡರ ಬಲಿದಳು । ಹರಸಿದರು ಮುನಿವಧುಗಳಕ್ಷತೆ । ಪೆರಸಿ ಗದುಗಿನ ವೀರ ನಾರಾಯಣನಮೈದುನನ ... ... ॥೬೬॥

ಅಂತು ಸಂಧಿ ೧೨ ಕ್ಕೆ ಪದ ೬೭೩ ಕ್ಕಂ ಮಂಗಳಮಸ್ತು.

ಹದಿಮೂರನೆಯ ಸಂಧಿ

ಸೂಚನೆ॥ ಅಡವಿಯಲಿ ಫಣಿಭೋಗದಲಿ ಬಿಗಿ । ವಡೆದು ಬಳಲಿದಭೀಮಸೇನನ । ಬಿಡಿಸಿದನು ಯಮಸೂನು ಧರ್ಮಕಥಾಪ್ರಸಂಗದಲಿ ॥

ಕೇಳು ಜನಮೇಜಯಧರಿತ್ರೀ । ಪಾಲ ಪಾಶುಪತಾಸ್ತ್ರವೇದದ । ಪಾಳಿಯುಚ್ಚಾರಣೆಯಲಿ ತತ್ಪ್ರಣವಸ್ವರೂಪವೆನೆ ॥ ಮೇಳವಿಸಿತರುಣಾಂಶು ಪೂರ್ವದಿ । ಶಾಲತಾಂಗಿಯ ಮಂಡನೋಚಿತ ಮಾಳಿಮಾಣಿಕವೆನಲು ಮೆರೆದುದು ಬಿಂಬ ದಿನಮಣಿಯ ॥೧॥ ಅರಸನುಪ್ಪವಡಿಸಿದನೆದ್ದನು । ವರವೃಕೋದರನರ್ಜುನನ ದೃಗು । ಸರಸಿರುಹವರಳಿದವು ಮಾದ್ರೀಸುತರು ಮೈಮುರಿದು ॥ ಹರಿಯ ನೆನೆದರು ನಿದ್ರೆ ತಿಳಿದುದು । ಪರಿಜನಕೆ ಮುನಿನಿಕರವೆದ್ದುದು । ತರಣಿಸಂಧ್ಯಾಸಮಯಸತ್ಕೃತಿಜಪಸಮಾಧಿಯಲಿ ॥೨॥ ಮುನಿಜನಕೆ ಕೈಮುಗಿದು ಯಮನಂ । ದನನ ಚರಣಕ್ಕೆರಗಿ ಶಂಭುವ । ನೆನೆದ ಗವಸಣಿಗೆಯಲಿ ತೆಗೆದನು ಗರುವಗಾಂಡಿವವ ॥ ಜನಪ ಕೇಳ್ಕೆ ಕೊಪ್ಪಿನಲಿ ಸಿಂ । ಜನಿಯ ಸಿಕ್ಕಿದನಳ್ಳಿರಿದು ಮಾ । ರ್ದನಿ ದಿಗಂತದಲೊದರಲೊದರಿಸಿದನು ಮಹಾಧನುವ ॥೩॥ ಘೋರತರಲಯಭೈರವನ ಹುಂಕಾರವೋ ಸಂಹಾರಸುತಿಯೋ । ಕಾರವೋ ಕಲ್ಪಾಂತತಾಂಡವವೇದಪಂಡಿತನ ॥ ಅರುಭಟೆಯೋ ಮೋಕ್ಷ್ತ್ರವಿಕ್ರಮ । ವೀರಪದಭಿನ್ನಾಬ್ಜಜಾಂಡಕ । ಠೋರರವವೆನೆ ಮೆರೆದುದರ್ಜುನಚಾಪಟಂಕಾರ ॥೪॥ ಏನಿದದ್ಭುತರವವೆನುತ ವೈಮಾನಿಕರು ನಡುಗಿದರು ಗ । ರ್ವಾನುಸಯಗತವಾಯ್ತು ಲೋಸುರಪುರದ ಗರುವರಿಗೆ ॥ ಆನಿರುತಿಯಮವರುಣವಾಯು ಕೃ । ಶಾನುಧನದಮಹೇಶ್ವರೈತರ । ಲಾನೆಯಲಿ ಹೊರವಂಟನಂಬರಗತಿಯಲಮರೇಂದ್ರ ॥೫॥ ಬೆದರಿದುದಭ್ರದೊಳಮರಗಣಮುನಿ । ವರರುಸಹಿತ ಯುಧಿಷ್ಠಿರಾದಿಗ । ಳೆರಡುಮಂಕವ ಹೊದ್ದಿದರು ಕರಿತನಯನೆಡಬಲವ ॥ ತರುನಿಕರಗಿರಿನಿಚಯವಲ್ಲಿಯ । ಪರಿಜನವು ತರುಬಿದುದು ನನಗಿದ । ನರಸ ಕೇಳ್ದಸಳಲವೆ ನರನ ಮಹಾಸ್ತ್ರಸಾಟಕವ ॥೬॥ ಮೊದಲೊಳನಲಮಹಾಸ್ತ್ರವನು ಹೂ । ಡಿದನು ಹೊಗೆದುದು ಭುವನದಿಕ್ಕುಗ । ಳೊದರಿದವು ಪಂಠಿಸಿತು ರವಿರಥ ಗಗನಮಾರ್ಗದಲಿ ॥ ಉದಧಿಯುದಧಿಯ ತೆರೆಯ ಗಂಟಿ । ಕ್ಕಿದವು ಹರಹರ ಹೇಳಬಾರದ । ಹೊದರು ಹೊದಿಸಿತು ಕೀಳು ಮೇಲಣ ಜಗದ ಪಂತಿಗಳ ॥೭॥ ಅಹಹ ಬೆಂದುದು ಭುವನವಿದು ವಿ । ಗ್ರಹದ ಸಮಯವೆ ತಮ್ಮಲೀಲೆಗೆ । ಕುಹಕಮತಿಗಳು ತಂದರ್ಸೈ ತ್ರೈಜಗಕೆ ತಲ್ಲಣವ ॥ ರಹವಿದೇ

ನೆಂದಭ್ರಾತೃಗಳದಿಂ । ಮಹಿಗೆ ಬಂದನು ದೇವಮುನಿ ದುಸ್ಸಹವಿದೇನೈ ಪಾರ್ಥ ಹೋಹೋ ಸಾಕುಸಾ
ಕೆಂದ ॥೮॥ ತೊಡಚದಿರು ಬ್ರಹ್ಮಾಸ್ತ್ರವಿದು ಬಾ । ಯ್ಗುಡಿಯನಿದು ನಿಮಿಷದಲಿ ಭುವನವ । ನಡು
ಗಿ ತಣಿಯದಿದೊಂದು ಮತ್ತೀಶಾಂಭವಾದಿಗಳ ॥ ತೊಡಚಿದೊಡೆ ಸಂಹಾರಸಮಯವ । ನೆಡೆಯಲನು
ಭವಿಸುವುದು ಜಗವಿದು। ಕೆಡಿಸದಿರು ಕೆಡಿಸದಿರು ತೆಗೆತೆಗೆಯೆಂದನಾಮುನಿಪ ॥೯॥ ಲಕ್ಷ್ಯವಿಲ್ಲದೆ ತೊಡಚು
ವೊಡೆ ನಿ । ರ್ಲಕ್ಷ್ಯಶರವೇ ನೀನುಪಾರ್ಜಿಸಿ । ದಕ್ಷಯವಲೇ ಪಾರ್ಥ ಗಣನೆಯ ಗುತ್ತಿನಂಬುಗಳೇ ॥ ಶಿಕ್ಷೆ
ರಕ್ಷೆಗೆ ಬಾಣವೊಂದೇ । ಲಕ್ಷ್ಯವಿದು ನೀನರಿಯದುದಕೆ ವಿ । ಲಕ್ಷ್ಯನಾದೆನು ನಾನೆನುತ ಮುನಿನುಡಿದನ
ರ್ಜುನಗೆ ॥೧೦॥ ಹರ ಮಹಾಸ್ತ್ರಾದಿಗಳ ಲೀಲೆಯ । ನರಸನೋಡಲುಬೇಹುದಾದರೆ । ಬೆರಸು
ವುದು, ತತ್ಸಮಯ ಸ್ಮರಿಸು ನೃಪನ ಕಣುಮನವ ॥ ಹೊರೆವಹೇರಾಳದ ಮಹಾಸಂ । ಗರವಹುದು
ಮುಂದಣಕಥಾವಿ । ಸ್ತರವ ವಿರಚಿಸಬಾರದನುಚಿತವೆಂದನಾಮುನಿಪ ॥೧೧॥ ಅರಸ ಕೇಳೈ ನಾರದನ
ನುಡಿ । ಗುರುತರದಲೀಪಾರ್ಥನಾಬಿಲು । ದಿರುವ ಮಗುಳಿಳುಹಿದನು ಮುನಿಪನ ಮಾತ ಮನ್ನಿಸುತ ॥
ಹರೆದುದಮರರಮೇಲೆ ನೋಡುವ । ನೆರವಿ ದಿಗುಪಾಲಕರು ನಿಜಮಂ । ದಿರಕೆ ಸರಿದರು ದೇವಮುನಿ
ಹಾಯಿದನು ಗಗನದಲಿ ॥೧೨॥ ಇವರು ಕಾಮ್ಯಕಕಾನನವನನು । ಭವಿಸಿ ಬಳಿಕಲ್ಲಿಂದ ಹೊರವಂ ।
ಟವೆಗಡೆಯ ಪರ್ವತಕೆ ಬಂದರು ಯಾಮುನಾಹ್ವಯದ ॥ ದಿವಿಜರಿಪು ಹೈಡಿಂಬನಾತುದಿ । ಗವರನೇರಿ
ಸಿದನು ತದಗ್ರದೊ । ಳವನಿಪತಿ ಕೆಲದಿವಸವಿದ್ದಲ್ಲಿಂದ ಹೊರವಂಟ ॥೧೩॥ ಅರಸ ಕೇಳೈ ಕಾರ್ತಿಕೇ
ಯನ । ವರಮಹಾಶ್ರಮಕೈದಿದನು ಮುನಿ । ವರರು ಸಹಿತೊಲವಿನಲಿ ನೂಕಿದನೊಂದುವತ್ಸರವ ॥
ಧರಣಿಪತಿ ಬೃಹದಶ್ವನಾಶ್ರಮ । ವರಕೆ ಬಂದನು ತೀರ್ಥಸೇವಾ । ಪರಮಪಾವನಕರಣನಿರ್ದನು ಪ
ರ್ಣಶಾಲೆಯಲಿ ॥೧೪॥ ಬಂದನೊಬ್ಬನು ಪವನಸುತನಪು । ಕಿಂದನಟವೀತಟದ ಖಗಮೃಗ । ವೃಂದದಿ
ಕ್ಕಿಯ ಹಕ್ಕಿಯಾಡುಂಬೊಲದ ಸೋಹೆಗಳ ॥ ನಿಂದನೆಲೆನೀದಾರ್ಣಹಜ್ಜೆಗ । ಳಿಂದ ಭೇದಿಸಿ ಜೀಯ
ಚಿತ್ತವಿ । ಸೆಂದು ಬಿನ್ನಹಮಾಡಿದನು ಕಲಿಭೀಮಸೇನಂಗೆ ॥೧೫॥ ಇದೆ ಮಹಾತಾಂತಾರವತಿದೂ ।
ರದಲಿ ವೃಕಶಾರ್ದೂಲಕೇಸರಿ । ಕದಡಿ ಕಳಭಕ್ರೋಡಖಡ್ಗಿಲುಲಾಯಸಾರಂಗ ॥ ಮದದ ರಹಿಯಲಿ
ಮಾನಿಸರು ಸೋಂ । ಕಿದೊಡೆಸಡೆಯವು ಹೊಲನ ಹೊದರಿ । ಕ್ಕಿದವು ದೀಹದ ಹಿಂಡಿನಂತಿರೆ ಜೀಯ
ಚಿತ್ತೈಸು ॥೧೬॥ ಮೇಹುಗಾಡಿನೊಳವರ ಮೃ ಮಿಗೆ । ಸೋಹಿಧರೆ ಸುವ್ವಲೆಯ ಸುಬ್ಬಲೆ । ಯಾಹ
ವದಲೇ ತೋಳ ತೆಕ್ಕೆಯ ತೋಟಿ ತೇಗುವರೆ ॥ ತೋಹಿನಲಿ ತೊದಳಾಗಿ ಗೋರಿಯ । ಗಾಹಿನಲಿ
ಗುರಿ ಗಡಬಡಿಸೆ ಬಲು । ಸಾಹಸಕ್ಕಂಜುವೆವು ನೀವೇಳೆಂದನಾಶಬರ ॥೧೭॥ ಕಂಡಮೃಗಮೈದೆಗೆಯದಿ
ಕ್ಕೆಯ । ಹಿಂಡು ಹೊಳಹಿನ ಹುಲಿಯ ಮೇಕೆಯ । ಮಿಂಡವಂದಿಯಲಾವಣಿಗೆಯ ಲುಲಾಯಲಾಲ
ನೆಯ । ತೊಂಡುಮೊಲನ ತೊಡಂಕು ನವಿಲಿನ । ಖಂಡೆಯದ ಮೊನೆ ನಡದಖಡ್ಗಬ ! ಹಿಂಡುಗಳ
ತೋರಿಸುವೆ ನೇಳೆಂದನಿಲಜಗೆ ನುಡಿದ ॥೧೮॥ ಅಂಗಚಿತ್ತವನಿತ್ತನಾಶಬ । ರಂಗೆ ಬಲೆಗಳ ತೆಗೆಸಿದನು
ಹಸು । ರಂಗಿಯನು ತೊಟ್ಟನು ಚಡಾಳಿಸಿ ಪದದೊಳಕ್ಕಡವ ॥ ಸಿಂಗಶರಭವನಳವಿಗೊಡ್ಡಲವ । ರಂ
ಗುಲಿಘುಲಡುಪಾಯಲೌಡಿಯ । ಜಂಗುಳಿಯ ಜೋಡಿಸಿದನಂದು ಜವಾಯ್ಲಜಾಯಿಲನ ॥೧೯॥ ಮಡಿ
ದಕೊಡಕೆಗಳೊಡ್ಡಿದುರದೊ । ಪ್ಪಿಡಿಯ ನಡುವಿನ ಕೊಂಕಿದುಗುರಿನ । ನಿಡುವೊಡಲ ನಿರ್ಮಾಂಸಜಂ

ಸೊಯ ಕೆಂಪಿನಾಲಿಗಳ । ಸಿಡಿಲುಗಳ ಗರ್ಜನೆಯ ಗಗನವ । ತುಡುಕುವಾಗುಳಿಕೆಗಳ ಮೊರಹಿನ । ಮಿಡುಕುಗಳ ಸಾಯ್ದ್ರುಕಿದವು ಹಾಸದವಿಳಾಸದಲಿ ॥೨೦॥ ಹೆಸರಸಾಯ್ಗಳ ಹಾಸ ಹರಿದು । ಬ್ಬಸದಲೂಳಿದವದಿರಿ ಹಿಡಿಮೃಗ । ಮುಸಗಿದವು ಹದವಿಲುಗಳೊಬೆದವು ಹೆದೆಯ ಹರಿವಿನಲಿ ॥ ನುಸುಳಿದವು ಮೊಲನುರಿಯಹೊಗೆಗಳ । ದೆಸೆವಿಡಿದು ಕೆದರಿದವು ಹೊಲದಲಿ । ಹಸುಬಹರಡೆಗಳೇನನೆಂಬೆನು ಶಕುನಸೂಚಕವ ॥೨೧॥ ಬಗೆಯನವಶಕುನವ ಮೃಗವ್ಯದ । ಸೊಗಸಿನಲಿ ಸಿಲುಕಿದಮನೋವೃ । ತ್ತಿಗಳೊಳುಂಟೆ ವಿವೇಕಧರ್ಮವಿಚಾರವಿಸ್ತಾರ ॥ ಹೊಗರೊಗುವಕೊಂಗರಿಯ ಬಿಲುಸರ । ಳುಗುಳ ಹೊದೆಗಳ ನಡೆದುದಡವಿಯ । ಬೆಗಡುಗೊಳಿಸುತ ಮುಂದಮುಂದೆ ಪುಳಿಂದಸಂದೋಹ ॥೨೨॥ ಬಂಡಿಗಳ ಬೆಳ್ಳಾರವಲೆಗಳ । ಖಂಡವಲೆಗಳ ತಡಿಕೆವಲೆಗಳ । ಗುಂಡುವಲೆಗಳ ಬೀಸುವಲೆಗಳ ಕಾಲುಗಣ್ಣಿಗಳ ॥ ದಂಡಿವಲೆಗಳ ತೊಡಕುವಲೆಗಳ । ಹಿಂಡುವಲೆಗಳ ಮಯಣವಂಟಿನ । ಮಂಡವಿಗೆಬಲೆಗಳ ಕಿರಾತರು ಕೆದರಿತಗಲದಲಿ ॥ ೨೩ ॥ ಏನನೆಂಬೆನು ಜೀಯ ಹೊಕ್ಕನು । ಕಾನನವನನಿಲಜನು ಶಬರವಿ । ತಾನವಿಕ್ಕಿದವೇಡೆಗಳ ಬೆಳ್ಳಾರಸುತ್ತುಗಳ ॥ ಕಾನನವನಳಿವಿನ ಶಿಲೋಚ್ಚಯ । ಸಾನುವಿನ ಗಹ್ವರದಗಂಡ । ಸ್ಥಾನದೀರ್ಘದ್ರೋಣಿಗಳಲರಸಿದರು ಮೃಗಕುಲವ ॥ ಬೊಬ್ಬೆಗಳ ಪಟಹಪ ಮೃದಂಗದ । ಸಬ್ಬಲಗ್ಗಯ ಸೋಹಿನಲಿ ಸುಳಿ । ವಬ್ಬರಕೆ ಹಿಂಡೊಡೆದು ಹಾಯ್ದವು ಸೂಸಿದವು ದೆಸೆಗೆ ॥ ತೆಬ್ಬಿದವು ಬೆಳ್ಳಾರವಲೆ ಹರಿ । ದುಬ್ಬಿಹಾಯ್ದೊಡೆವೇಡೆಯವರಿಗೆ । ಹಬ್ಬವಾಯ್ತೇನೆಂಬೆನಗಣಿತಮೃಗನಿಪಾತನವ ॥೨೫॥ ಹೊಕ್ಕು ತಿವಿದರು ಸಬಳದಲಿ ಜಡಿ । ವೆಕ್ಕಲನನಳವಿಯಲಿ ಹರಿಣನ । ನಿಕ್ಕಿದರು ನಾರಾಚದಲಿ ಸೈವರಿದು ಸೈರಿಭನ ॥ ಸೆಕ್ಕಿದರು ಸುರಗಿಯಲಿ ಹೊದರಲಿ । ಹೊಕ್ಕಹುಲಿಗಳ ಕೆಣಕಿ ಖಡ್ಗದ । ಲಿಕ್ಕಡಿಯತೋರಿದರು ತೂರಿದರಖಿಳಮೃಗಕುಲವ ॥ ೨೬॥ ಕಳಚಿ ಹಾಸವನುಬ್ಬರಿಸಲ । ಸ್ವಳಿಸಿ ಕಂಠೀರವನ ಮೋರೆಗೆ । ನಿಲುಕಿದವು ಕದುಬಿದವು ಹಾಯ್ದವು ಹಣುಗಿ ತುಡುಕಿದವು ॥ ಸೆಳೆದವುಡಿದಕ್ಕಳಿಸಿಯೆಡಬಲ । ಬಳಸಿದವು ಮೆಲುವಾಯ್ದವು ವೆ । ಗ್ಗಳಿಸಿದವು ಕುಸುಬಿದವು ಕುನ್ನಿಗಳಖಿಳಮೃಗಕುಲವ ॥೨೭॥ ಗಾಯವಡೆದೆಕ್ಕಲನ ರಭಸದ । ಜಾಯಿಲನ ಗಳಗರ್ಜನೆಯ ಘೂ । ರಾಯದೇರಿನ ಕರಡಿಕಾಡಾನೆಗಳ ಕಳಕಳದ ॥ ನೋಯಲೊರಲುವಶರಭಸಿಂಹಲು । ಲಾಯಮೃಕಶಾದೂರ್ಲಶಶಗೋ । ಮಾಯುಮೊದಲಾದಖಿಳಮೃಗರವ ತುಂಬಿತಂಬರವ ॥೨೮॥ಮುಳುದೊಡಕಿನೊಳು ಕೂದಲೊಂದೇ । ಸಿಲುಕಿ ನಿಂದವು ಚಮರಿಮೃಗ ಮರಿ । ಗಳಿಗೆ ಮೊಲೆಗೊಡುತಿರುಕಿನಲಿ ಹುದುಗಿದವು ಹುಲ್ಲೆಗಳು ॥ ಎಳವರಿಯನಡಗಲಿಸಿ ನಿಂದವು । ಮಲೆತು ಸಿಂಹದಮಿಥುನಹಿಂಡಿನ । ಕಳಭವನು ಹಿಂದಿಕ್ಕಿ ವನಕರಿ ತೂಳಿದವುಪಡೆಯ ॥೨೯॥ ಪಡೆ ಬೆದರೆ ಪಡಿತಳಿಸಿ ಪವನಜ । ಹಿಡಿದು ಬೀಸಿದನಾನೆಗಳನವ । ಗಡಿಸಿ ಸಿಂಹವ ಸೀಳಿದನು ಹಾಯ್ದೆತ್ತುವೆಕ್ಕಲನ ॥ ಮಡದಲುರೆಘಟ್ಟಿಸಿದಮುಷ್ಟಿಯೊಳಡಸಿ ತಿವಿದನು ಹುಲಿಯಕರಡಿಯ । ಕೆಡಹಿದನು ಕೊಂದನು ವನಾಂತದೊಳಖಿಳಮೃಗಕುಲವ ॥೩೦॥ ಈತನುರುಬೆಗೆ ಬೆದರಿತುರುಸಂ । ಘಾತದಲಿ ಹಬ್ಬಂದಿಯೊಂದು ವಿ । ಘಾತದಲಿ ಹಾಯ್ದುದು ಕಿರಾತವ್ರಜವ ನೊಡೆದುಳಿದು ॥ ಈತನರೆಯಟ್ಟಿದನು ಶಬರ । ವ್ರಾತವುಳಿದುದು ಹಿಂದೆಭೀಮನ । ಭೀತಿಯಲಿ ಹೊಕ್ಕುದು ಮಹಾಗಿರಿಗಹನಗಹ್ವರವ ॥೩೧॥ ಮುಡುಹು ಸೋಂಕಿದೊಡುಲಿದು ಹೆಮ್ಮರ । ನುಡಿದು ಬಿದ್ದುದು

ಪಾದಘಾತದೊ । ಳಡಿಗಡಿಗೆ ನೆಗ್ಗಿದುದು ನೆಲನುಬ್ಬರದ ಬೊಬ್ಬೆಯಲಿ ॥ ಜಡಿದುದಬುಜಭವಾಂಡವೆ
ನಲವ । ಗಡತೆಯಭೀಮನ ಕಳಕಳಕೆ ಕಿವಿ । ಯೊಡೆದು ತಿಳಿದುದು ನಿದ್ರೆಮುರಿದಿಕ್ಕಿಯ ಮಹೋರಗನ ॥೩೨॥
ತೆಕ್ಕೆ ಸಡಿಲಿತು ತರಗೆಲೆಯಹೊದ । ರಿಕ್ಕರಿಸೆ ಮೈಮುರಿಯಲನಿಲಜ । ನೆಕ್ಕತುಳದಲಿ ಮೇಲೆಹಾಯ್ದನು
ಕಾಣದಹಿಪತಿಯ ॥ ಸಿಕ್ಕಿದವು ಹೆದ್ದೊಡೆಗಳುರಗನ । ತೆಕ್ಕೆಯಲಿ ಡೆಂಡಣಿಸಿ ಫಣಿಪತಿ । ಡೊಕ್ಕರಕೆ
ಹಬ್ಬಿದನು ಬಿಗಿದನು ಭಟನ ಪೇರುರವ ॥೩೩॥ ಭಟ ಮರಳೆ ಸಂತೈಸಿಕೊಂಡಟ । ಮಟಿಸಿ ಗದೆಯಲಿ
ಹೊಯ್ದುಬಿಗುಹಿನ । ಕಟಕವನುಬಿಚ್ಚಿದನು ಹೆಚ್ಚಿದಸಾಕಿಬೊಬ್ಬಿಡುತ ॥ ಪುಟದಕಂತುಕದಂತೆ ಫಣಿ
ಲಟ । ಕಟಿಸಲೌಕಿತು ಗಡಗನೆರಕೆಯ । ಪುಟದಗಿರಿಯುಂದದಲಿ ಗಿರಿಗಿರಿಗುಟ್ಟಿದನು ಭೀಮ ॥೩೪॥ ಝಾ
ಡಿಸಲು ಝಾಡಿಸಲು ಬಿಗುಹತಿ । ಗಾಡಿಸಿತು ಕೊತ್ತಹಿದೊಡೆ ಮಿಗೆ ಮೈಗೂಡಿ ಬಿಗಿದುದು ಭುಜಗವಳಯದ
ಮಂದಿರಾದ್ರಿಯೆನೆ ॥ ರೂಡಿಸಿದಭುಜಬಲದ ಸಿರಿಯ । ಕ್ಕಾಡಿತೇ ತನಗೆನುತ ಖಾಡಾ । ಖಾಡಿಯಲಿ
ಕಾತರಿಸಿ ಕಳವಳಿಸಿದನು ಕಲಿಭೀಮ ॥೩೫॥ ಅರಸ ಕೇಳಿತ್ತಲು ಮಹೀಶನ । ಹೊರೆಯುಲಾಯ್ತುತ್ಪಾತಶ
ತ ನಿ । ಷ್ಠುರವಿದೇನೋ ದೈವಕೃತಫಲವಾವುದಿವಕೆನುತ ॥ ಕರೆಸಿ ಧೌಮ್ಯಂಗರುಹಲಿದು ನ । ಮ್ಮರ
ಸುಗಳಿಗೆಸಘಾತಸೂಚಕ । ವರಿದಿದರ ನಿರ್ವಾಹವೆಂದೊಡೆ ನೃಪತಿ ಚಿಂತಿಸಿದ ॥೩೬॥ ಭೀಮಸಾವೆಡೆ
ಯೆನೆ ಕಿರಾತ । ಸ್ತೋಮಸಹಿತಮೃಗವ್ಯಕೇಳೀ । ಕಾಮನೈದಿದನೆನಲು ನೃಪ ಹೊರವಂಟನಾಶ್ರಮವ ॥
ಭೂಮಿಸುರರೊಡನೈದಿ ಬರೆ ಸಂಗ್ರಾಮಧೀರನಹಜ್ಜೆವಿಡಿದು ಮಹೀಮನೋಹರನರಸಿ ಹೊಕ್ಕನು ಘೋ
ರಕಾನನವ ॥೩೭॥ ಹುದುಗಿದಗ್ಗದಸತ್ವದುಸ್ಸಹ । ಸದ ನಿರೂಢಿಯ ಸೋಸಮಯಗದು । ಗದಿತಕಂಠದ
ತಳಿತಭಂಗದತಿರುಗುವಾಲಿಗಳ ॥ ಹೆದರೆದೆಯ ಹೇರಾಳಶೋಕದ । ಕೆದರುಗೇಶದ ಕೆಲಕೆಜಾರಿದ । ಗದೆ
ಯ ಗರುವಾಯಳಿದಭೀಮನ ಕಂಡಸಾಭೂಪ ॥೩೮॥ ಅಕಟ ಹಿಂದನುಭವಿಸಿದೆನು ಕಂ । ಟಕಹಲವನೀ
ಪರಿಯ ಬಲುಕಂ । ಟಕಮಹಾಕರ್ದಮದೊಳದ್ದಿತೆ ವಿಧಿಮಹಾದೇವಾ ॥ ವಿಕಟನಾಗಾಯುತವ
ದತ್ರಾ । ಣಕನ ಸಾಹಸವಡಗಿತೇ ವನ । ನಿಕಟ ಭುಜಗಾಟೋಪಶಾಳಿಯೊಳೆನುತ ಬಿಸುಸುಯ್ದ ॥೩೯॥
ಏನು ಕುಂತೀಸುತನಪಾಯವಿ । ದೇನು ಫಣಿಬಂಧನವಿಧಾನವಿ । ದೇನು ನಿನಗೆ ವಿನೋದವೋ ತ್ರಾಣಾ
ಪಜಯವಿಧಿಯೋ ॥ ಏನಿದಕೆ ಕರ್ತವ್ಯನವಗೀ । ಹೀನದೆಸೆಗೆ ನಿಮಿತ್ತದುಷ್ಕೃತ । ವೇನು ಶಿವಶಿವ
ಯೆನುತ ನುಡಿಸಿದನನಿಲನಂದನನ ॥೪೦॥ ನೋಡಿದನು ಕಂದೆರೆದು ಕಂಠಕೆ । ಹೂಡಿದುರಗನ ಘೋರ
ಬಂಧದ । ಗಾಢದಲಿ ನುಡಿ ನೆಗ್ಗಿ ನುಡಿದನು ಬೆರಳ ಸನ್ನೆಯಲಿ ॥ ಖೇಡನಾದನಜಾತರಿಪು ಮಾ ।
ತಾಡಿಸಿದನಹಿಪತಿಯನೆಲೆ ಸಾಡಾಡಿಗಳ ನಾಟಕದ ಫಣಿಯಲ್ಲಾರು ನೀನೆಂದ ॥೪೧॥ ಅನಿಲಸುತನಪರಾ
ಧಿಯೋ ನೀ । ವಿನಯಹೀನನೊ ಮೇಣು ಪರಪೀಡನ ವೃಥಾದುಷ್ಕರ್ಮಸಂಗ್ರಹಬೇಹುದೇ ನಿನಗೆ ॥
ದನುಜನೋ ಗಂಧರ್ವನೋ ಯ । ಕ್ಷನೊ ಸರೀಸೃಪರೂಪದಿವಿಜೇಂ । ದ್ರನೊ ನಿಧಾನಿಸಲರಿಯೆ
ನೀನಾರೆಂದನವನೀಶ ॥೪೨॥ ಕೇಳಿದನು ಫಣಿ ಭೀಮಸೇನನ । ಮೌಳಿತಲ್ಪದ ತಲೆಯ ಹೊಳಹಿನ ।
ನಾಲಗೆಯ ಚೂರಣದ ಝುಡಿತೆಗೆ ಚಲಿಸುವಾಲಿಗಳ ॥ ಮೇಲುಮೊಗದಲಿ ನೃಪನ ನುಡಿಗಳ । ನಾಲಿ
ಸುತ ನುಡಿದನು ಕರಾಳಾ । ಭೀಳದಂಷ್ಟ್ರಾಂತರವಿಸಂಸ್ಥಿತಜಿಹ್ವೆಗಳ ಜಡಿದು ॥೪೩॥ ಏನಹನು ನಿನ
ಗೀತನೀನಾ । ರೇನು ನಿನ್ನಭಿಧಾನ ವಿಪ್ರನ । ಸೂನುವೋ ಕ್ಷತ್ರಿಯನೊ ವೈಶ್ಯನೊ ಶೂದ್ರಸಂಭ

ವನೋ ॥ ಏನುನಿನಗಿವನೇಕೆ ಬರವು ನಿ । ದಾನವನು ಹೇಳೆನಲು ಕುಂತೀ । ಸೂನು ನುಡಿದನು ತನ್ನ ಪೂರ್ವಾಪರದ ಸಂಗತಿಯ ॥೪೪॥ ಸೋಮವಂಶ ಪರಂಪರೆಯೊಳು । ದ್ದಾಮಪಾಂಡುಕ್ಷಿತಿಪನುದಿಸಿದ । ನಾಮಹೀಶನಸುತಯುಧಿಷ್ಠಿರನೆಂಬುದಭಿಧಾನ ॥ ಭೀಮನೀತನು ಪಾರ್ಥನಕುಲಸ । ನಾಮಸಹದೇವಾಖ್ಯಪಾಂಡವ । ನಾಮಧೇಯರು ನಾವೆಯೆಂದನು ಭೂಪನಾಫಣಿಗೆ ॥೪೫॥ ಬೀತುದಖಿಳೈಶ್ವರ್ಯ ಕಪಟ । ದ್ಯೂತದಲಿ ಕೌರವರು ಕೊಂಡರು । ಭೂತಳವನೆಮಗಾಯ್ತು ಬಳಿಕಟವೀಪರಿಭ್ರಮಣ ॥ ಈತನೆನ್ನೊಡಹುಟ್ಟಿದನು ನೀ । ನೀತನನು ಬಿಡಬಹುದೆ ಬಿಡು ವಿ । ಖ್ಯಾತರಿಗೆ ಪರಪೀಡೆ ಧರ್ಮವಿನಾಶಕರವೆಂದ ॥೪೬॥ ಆದೊಡೆಲೆಧರಣೀಶ ಧರ್ಮವ । ಸಾದರಿಸುವೈ ಧರ್ಮವೆಂಬುದು । ವೇದಮಾರ್ಗವಲೇ ಸುಧರ್ಮದ ಸಾರಸಂಗತಿಯ ॥ ಕೈದುವುಳ್ಳೊಡೆ ಕಾದು ನಿನ್ನಯ । ಸೋದರನ ಬಿಡುವೆನು ಮನಃಪರಿ । ಭೇದವನು ಬಿಸುಟೆನ್ನು ಧರ್ಮರಹಸ್ಯವಿಸ್ತರವ ॥೪೭॥ ಉಸುರಬಹುದೇ ಧರ್ಮತತ್ವ । ಪ್ರಸರಣವಿದೇನೆಂದು ನೀಶಂ । ಕಿಸಲು ವೇದಸ್ಮೃತಿಪುರಾಣತ್ರಾಣ ತುಷ್ಟಿಸದೆ ॥ ಎಸೆವವಿಪ್ರರ ಮತಿಗೆ ಸಂಭಾ । ವಿಸುವಧರ್ಮವನರುಹುವೆನು ನೀ । ಬೆಸಗೊಳೆಂದನು ಧರ್ಮಸುತ ನಹುಷಂಗೆ ವಿನಯದಲಿ ॥೪೮॥ ಎಸೆವವಿಪ್ರರ ಮತಿಗೆ ಸಂಭಾ । ವಿಸುವಧರ್ಮಸ್ಥಿತಿಯನಭಿವ । ರ್ಣಿಸುವೆನೆಂದೈ ಭೂಪತಿಯೆ ಭೂದೇವಕುಲದೊಳಗೆ ॥ ಎಸೆವವಿಪ್ರನದಾರು ಪರಿಶೋ । ಭಿಸುವುದೈ ಬ್ರಾಹ್ಮಣ್ಯವೇತರ । ದೆಸೆಯೊಳಿದನೇ ಮುನ್ನ ಹೇಳೆನೆ ಭೂಪನಿಂತೆಂದ ॥೪೯॥ ಉರಗ ಕೇಳ್ಪಿತೃಮಾತೃವಂಶೋ । ತ್ಕರ ವಿಶುದ್ಧಸದಾಗ್ನಿ ಹೋತ್ರದ । ಭರ ದಮಸ್ವಾಧ್ಯಾಯಸತ್ಯವಹಿಂಸೆಪರಿತೋಷ ॥ ವರಗುಣಂಗಳಿವಾವನಲಿ ಗೋ । ಚರಿಸಿದಾತನೆ ವಿಪ್ರನೆಂಬರು । ಹಿರಿಯರೆಂದನು ಧರ್ಮಸುತ ನಹುಷಂಗೆ ವಿನಯದಲಿ ॥೫೦॥ ಆಯಿತಿದು ಮತ್ತವಾವುದೈ ಸ್ವಾ । ಧ್ಯಾಯವೆಂಬುದದೇನು ಸತ್ಯದ । ಕಾಯವಾವುದು ಹಿಂಸೆಪರಿತೋಷಂಗಳಿಂದೇನು ॥ ರಾಯ ಹೇಳಿವರರಿವ ನಿಜಗುಣ । ದಾಯತವನೆನೆ ಧರ್ಮವತಿರಮ । ಣೀಯವೆನೆ ನಹುಷಂಗೆ ವಿರಚಿಸಿದನು ಮಹೀಪಾಲ ॥೫೧॥ ನಿಯತವೀಶ್ರೋತ್ರಾದಿಪಂಚೇಂ । ದ್ರಿಯದ ನಿಗ್ರಹ ದಮವೆನಿಪ್ಪುದು । ಭಯವನಿತರರಿಗಾಗಲೀಸದಿಹುದೇಯಹಿಂಸಕಣಾ ॥ ನಯವಿದನೆ ಚಿತ್ತೈಸು ಲೋಕ । ತ್ರಯವನೊಂದೇಸತ್ಯದಿಂದವೆ । ಜಯಿಸಬಹುದಾಸತ್ಯವುಳ್ಳೊಡೆವಿಪ್ರನವನೆಂದ ॥೫೨॥ ಸತ್ಯವೇ ಸ್ವಾಧ್ಯಾಯ ಸತ್ಯವೆ । ನಿತ್ಯಕರ್ಮವಿಧಾನವೊಂದೇ । ಸತ್ಯವೇ ಜಪ ಹೋಮಯಜ್ಞವಿಧಾನ ದಾನ ತಪ ॥ ಸತ್ಯವುಳ್ಳೊಡೆಶೂದ್ರನವನಿಂ । ದತ್ಯಧಿಕನಾದ್ವಿಜರೊಳಗೆ ವರ । ಸತ್ಯಹೀನನೆ ಹೀನಜಾತಿಗನೆಂದನಾಭೂಪ ॥೫೩॥ ಧೀರನಾವವ ದಿಟ್ಟನಾರು ವಿ । ಕಾರಿಯಾರು ವಿನೀತನಾರಾ । ಚಾರಹೀನನದಾರು ಸುವ್ರತಿಯಾರು ಶಠನಾರು ॥ ಕ್ರೂರನಾರತಿಕಷ್ಟನಾರು ವಿ । ಚಾರಿಯಾರು ವಿಮುಕ್ತನಾರು ವಿ । ದೂರನಾರಿಹಪರಕೆ ಭೂಮಿಪಾಲ ಹೇಳೆಂದ ॥೫೪॥ ನಾರಿಯರ ಕಡೆಗಣ್ಣ ಹೊಯ್ಲಿನ । ಧಾರೆಗಳುಕದನಾವನಾತನೆ । ಧೀರನಾತನೆ ದಿಟ್ಟನಬಲೆಯರುಬ್ಬುಗವಳದಲಿ ॥ ಮೀರೆದಪ್ಪುವನೇ ವಿಕಾರಿ ವಿ । ಚಾರಪರನೆ ವಿನೀತನನ್ಯಾ । ಚಾರಯುತನಾಚಾರಹೀನನು ಫಣಿಪ ಕೇಳೆಂದ ॥೫೫॥ ಕೃತಕವಲ್ಲ ದ್ವಂದ್ವಸಹನೇ । ವ್ರತಿ ಮುಮುಕ್ಷು ವಿಚಾರಯುಕ್ತನು । ಕೃತಕನೇ ಶಠನಪ್ರಗಲ್ಭಕೃತಘ್ನನೇ ಕ್ರೂರ ॥ ಕ್ಷಿತಿಗೆ ಲೋಭಿಯೆ ಕಷ್ಟನಾತ್ಮಾ । ರತನೆಮುಕ್ತನು ವೇದ

ಮಾರ್ಗ|ಚ್ಯುತನೆ ಲೋಕದ್ವಯಕೆ ದೂರನು ಘಣಿಪ ಕೇಳೆಂದ॥೫೬॥ಆರು ಭಂಡರು ಸುಜನನಿಂದ್ಯರು|ದಾ
ರುಹಾಲಾಹಳಸರೂಪರು|ದಾರು ಸಾಹಸಿಯಾರು ಸಜ್ಜನನಾರು ಶುಚಿಯಾರು॥ಆರು ಹಗೆ ಸಖಿಸಾರು
ಸೇವ್ಯನ | ದಾರು ದುರ್ಲಭನಾರು ದುಸ್ಸಹ| ನಾರು ದುರ್ಮತಿ ರು ಧರ್ಮಜ ತಿಳಿಯ ಹೇಳೆಂದ ॥೫೭॥
ವ್ಯಸನಿ ನಿಂದ್ಯನು ರಣದೊಳೊಡೆಯನ | ಬಿಸುಟುಹೋಹನೆ ಭಂಡನತಿಸಾ ಹಸಿಕನೇ ಸೇವ
ಕನು ಮಿತ್ರದ್ರೋಹಿಯೇ ವಿಷವು ॥ಪಿಸುಣನೇ ಹಗೆ ಪರಸತಿಗೆ ಮನ | ಮಿಸುಕದವನೇ ಶುಚಿ ಪರಾರ್ಥ |
ವ್ಯಸನಿಯೇ ಸಜ್ಜನನು ಸರ್ಪಾಧೀಶ ಕೇಳೆಂದ ॥೫೮॥ ವಿನುತಪಗತತತ್ವಜ್ಞಾನತೀಸೇ | ವ್ಯನು ಸುದುರ್ಲ
ಭನೇ ಜಿತೇಂದ್ರಿಯ | ನನುಗುಣನೆ ಸಖಿಸಾರು ಸ್ಮರಿಸದವನೆ ದುಸ್ಸಹನು ॥ ಮನುಜರಲಿ ದುರ್ಮತಿಯ
ಲಾದು | ಜನನುಗಾಶ್ರಯವೆಂದು ತೋರಿದು | ದೆನಗೆ ನಿನಗಭಿಮತವೆ ಕೈಕೊಳ್ಳೆಂದನಾ ಭೂಪ॥೫೯॥
ಅಹುದಲೇ ಬಳಿಕೇನು ವಿದ್ಯಾ | ಮಹಿಮದಾನತಪೋಗುಣಕೆ ಸು | ನಿಹಿತನೀ ಧರ್ಮದಲಿ ಸತ್ಯಾಚಾ
ರಶೀಲದಲಿ ॥ ಕುಹಕಿಯಲ್ಲ ವಿರೋಧಿಯಲ್ಲತಿ | ಸಹಿಯೈ ಸಾರಾಜ್ಞನಲ್ಲೆನ | ಬಹುದೆ ನಿನ್ನಕು
ಶಿಗಳನೆಂದನು ನಹುಷನರಸಂಗೆ ॥೬೦॥ ಅರಸ ಕೇಳೈ ಕ್ಷಾತ್ರತೇಜವ | ಹೊರೆವುದೇ ಬ್ರಾಹ್ಮಣ್ಯ
ಶಕ್ತಿ | ಸ್ಫುರಣೆ ನೀನೀ ಬ್ರಹ್ಮವರ್ಗದ ಸಾರಸೌಖ್ಯವಲಿ ॥ ಮರೆದೆಲಾ ವಿಪ್ರಾಪಮಾನವೆ | ಸಿರಿಗೆ ನಂ
ಜುಕಣಾ ಮಹೀಸುರ | ವರರುಪಾಸನೆ ನಿನಗೆ ನೀ ಕೃತಕೃತ್ಯನಹೆಯೆಂದ ॥೬೧॥ ನೂರು ಯಜ್ಞದ ಹೊ
ಯ್ಲರಿಗೆ ಹರಿ | ದೇರಿದೆನು ಸುರಪತಿಯ ಪೀಠವ | ಸೂರೆಗೊಡಿಸಿತು ಪದವಿಯದು ವಿಪ್ರಾಪಮಾನ
ದಲಿ ॥ ಮೂರುಮಾತ್ರೆನ್ನ ಮಹೀಸುರ | ರೇರಿಸಿದರೇರುವುದು ಮುನಿದೊಡೆ | ಕಾರಿಸುವರೈ ನೂರುಯ
ಜ್ಞವ ನೆಂದನಾ ನಹುಷ ॥೬೨॥ ಎನ್ನ ವೃತ್ತಾಂತದ ನಿಧಾನವ | ಮುನ್ನವೇ ಬೆಸಗೊಳಲು
ಹೇಳಿದೆ | ನಿನ್ನ ನಿನ್ನಭಿಧಾನವನು ನೀನಾವನೆಂಬುದನು ॥ ಇನ್ನು ಕೇಳುವೆನೆನಲು ನಿಮ್ಮಲಿ |
ಮುನ್ನಿನವರ ಯಯಾತಿಯಯ್ಯನು | ನನ್ನ ನಾಮವೆ ನಹುಷನೆಂಬುದು ನೃಪತಿ ಕೇಳೆಂದ ॥೬೩॥
ಮಾಡಿದೆನು ಮಖಶತವನದು ಹೋ | ಗಾಡಿತಿಂದ್ರನನಲ್ಲಿತನಗೆಡೆ | ಮಾಡಿತರಮನೆ ಕಂಡುದಾತೆ
ತ್ರೀಸಕೋಟಿಗಳು ॥ ನಾಡುಬೀಡೆನಗಾಯ್ತು ವಶ ಖಯ | ಖೋಡಿಯಿಲ್ಲದೆ ಶಕ್ರಪದದಲಿ |
ಝಾಡಿಸುವೆನದನೇನ ಹೇಳುವೆನೆನುತ ಬಿಸುಸುಯ್ದ ॥೬೪॥ ಅರಸ ಕೇಳೈ ರಂಭೆಯೂರ್ವಶಿ | ವರತಿ
ಲೋತ್ತಮೆ ಗೌರಿ ಮೇನಕಿ | ಸುರಸೆ ಸುವದನೆ ಮಂಜುಘೋಷೆ ಸುಕೇಶಿಮೊದಲಾದ ॥ ಸುರಪತಿಯ
ರೆನ್ನರಮನೆಯತರೊ | ತ್ತಿರುಗಳಾದರು ಮೂರುಲಕ್ಷದ | ಹೊರಗೆ ಮೂವತ್ತಾರುಸಾವಿರವೆಂದ
ನಾನಹುಷ ॥೬೫॥ ಈಸುನಾರಿಯರಿರಲು ಬಯಲಭಿ | ಲಾಷೆ ದಿವಿಜೇಶ್ವರನ ರಾಣೀ | ವಾಸ
ದಲಿ ಗರಿಗಟ್ಟಿ ತಂದುದು ತನ್ನನೀವಿಧಿಗೆ ॥ ಪೀಸಲಿನ ಮಾನಿನಿಯರಲಿ ಮನ | ದಾಸೆ ಮನುಜರ
ಮುರಿವುದಕೆ ನಾ | ನೈಸಲೇ ದೃಷ್ಟಾಂತವೆಂದನು ನಹುಷನರಸಂಗೆ ॥೬೬॥ ಆಧಿ ಬಿದ್ದುದು ಶಚಿಯ
ಮೇಲಣಾ | ವೇಧೆಯಲಿ ವಿಟಬುದ್ಧಿ ಸಿರಿಗುಪ | ರೋಧವೈಸಲೆ ಸತಿಯುಪಾಯವ ಮಾಡಿ ಶಿಶುಗಳಿಗೆ ॥
ಬೋಧಿಸಿದೊಡವರೆನ್ನ ವಾಹನ | ಸಾಧವೆಯಾದರು ಮುನೀಂದ್ರವಿ | ರೋಧವಾಯ್ತೆನಗಲ್ಲಿ ಶಪಿ
ಸಿದನಂದಗಸ್ತ್ಯಮುನಿ ॥೬೭॥ ಸರ್ಪಗತಿ ಸರ್ಪತ್ವವೆನೆ ಫಡ | ಸರ್ಪನೀನಾಗೆಂದೊಡೆನ್ನಯ | ದರ್ಪ
ವನು ಕೆಡೆನೂಕಿ ಬಿದ್ದೆನು ಮುನಿಯ ಚರಣದಲಿ ॥ ಸರ್ಪತನ ದನುಭವಕೆ ಕಡೆಯೆಂ | ದಪ್ಪುದೆನೆ ಧರ್ಮ

ಜನ ವೆರವಾ । ಗ್ದರ್ಪಣದಲಹುದೆಂದನಿಂದಿದು ಘಟಿಸಿತೆನಗೆಂದ ॥೬೮॥ ಎನುತ ದಿವ್ಯಾವಯವ ಕಾಂತಿಯ । ಮಿನುಗುವೋಹರದೇಳ್ಗೆ ಮೂಡಿದ । ವನಿಮಿಷಾಂಗನಲುರಗಕಾಯದ ಕೋಹಳೆಯನುಗಿದು ॥ ಜನಪ ನಿನ್ನೊಡಹುಟ್ಟಿದರ ಕೊ । ಳ್ಳೆನುತ ಹೇಮವಿಮಾನದಲಿ ಸುರ । ವನಿತೆಯರ ವಂಗಡದಲೆಸೆದನ ನಹುಷನಭ್ರದಲಿ ॥೬೯॥ ದ.ಗುಡದಲಿ ಬರೆ ಭೀಮಸೇನನ । ತೆಗೆದು ಬಿಗಿಯಪ್ಪಿದನು ಖೇದದ । ಹೊಗರಿದೇಕೆ ವೃಥಾಮನೋವ್ಯಥೆಯೇನು ತಾಳದಿರು ॥ ಜಗವರಿಯೆ ನಮ್ಮನ್ವಯದ ಪೂ । ರ್ವಿಗನಲಾ ನಹುಷಂಗೆ ಬಂದು । ಬ್ಬೆಗದ ಹದನಿದು ನಮ್ಮ ಪಾಡೇನೆಂದನಾಭೂಪ ॥೭೦॥ ನಿನ್ನ ದೆಸೆಯಿಂದಾಯ್ತು ಲೇಪ್ರತಿ । ಪನ್ನಶಾಪವಿಮೋಕ್ಷವಿದರಲಿ । ನಿನ್ನ ದರ್ಪಕೆ ಹಾನಿಯೇ ಹೇರಾಳಸುಕೃತವಿದು ॥ ತನ್ನರಿಷ್ಟವನೀಕ್ಷಿಸದೆ ಪರ । ರುನ್ನತಿಯ ಬಯಸುವರು ಸಜ್ಜನ । ರೆನ್ನು ಸಾಕೆಂದೊರಸಿದನು ಪವನಜನ ಕಂಬನಿಯ ॥೭೧॥ ತಿಳುಹಿ ತಂದನು ಸಕಲಮುನಿಸಂ । ಕುಲಸಹಿತ ತನ್ನಾಶ್ರಮಕೆ ಕ್ಷೋ । ಮಲ್ಲೆಯ ಕೈಯಿಂದೊರಸಿದನು ಭೀಮನ ಮನೋವ್ಯಥೆಯ ॥ ಹಳಿವು ನಮಗೆಲ್ಲಿಯದಪಾಯದ । ಜಲಧಿಗಳು ಬತ್ತುವವು ಯದುಕುಲ । ತಿಲಕಗದುಗಿನವೀರ ನಾರಾಯಣನಕರುಣದಲಿ ॥೭೨॥

ಅಂತು ಸಂಧಿ ೧೩ ಕ್ಕೆ ಪದ ೭೪೫ ಕ್ಕಂ ಮಂಗಳಮಸ್ತು.

ಹದಿನಾಲ್ಕನೆಯ ಸಂಧಿ.

ಸೂ॥ ಕರುಣಿ ಬಿಜಯಂಗೈದು ಪಾಂಡವ । ಧರಣಿಪನ ಸಂತೈಸಿ ಯಾದವ ।
ರರಸನಿದ್ದನು ಸಕಲಮುನಿಜನಸಹಿತ ವನದೊಳಗೆ

ಪದ॥ ಚಿತ್ತವಿಸು ಜನಮೇಜಯಕ್ಷಿತಿ । ಪೋತ್ತಮನೆ ಧರ್ಮಜನ ಮುಖದಲಿ । ಕೆತ್ತುದುಗುಡವ ಬಿಡಿಸಿ ಭೀಮನ ತಂದನಾಶ್ರಮಕೆ ॥ ಮತ್ತಕಾಶಿನಿಧೌಮ್ಯನಿಖಿಲಮ । ಹೋತ್ತಮರು ಪೀಯೂಷಮಧುರರ । ಸೋತ್ತರದನುಡಿಗಳಲಿ ನಾದಿದರನಿಲಜನ ಮನವ ॥೧॥ ಮುಗಿಲು ಬೆಳತುದು ಬರಿಯಗಡಬಡೆ । ಗಗನಕುಳಿದುದು ಕೊಂಡನೆಲನನು । ತೆಗೆದು ನಿಂದುದು ಮೋಡಿಯಂಕದವೊಲು ನದೀನಿವಹ ॥ ನಗುವಕೊಳನೆಭ್ಯಾಗತೆಯ ಹಂ । ಸೆಗಳು ಮೆರೆವವು ಮೊರೆವತುಂಬಿಯ । ಸುಗಡತನ ತಾವರೆಯೊಳೆಸೆದುದು ಶರದಸಮಯದಲಿ ॥೨॥ ಸವೆದುದೀವನವಿಲ್ಲಿ ಫಲಮೃಗ । ನಿವಹ ಬೀತುದು ನಮ್ಮ ಕಾಲಾ । ಟವನು ಸೈರಿಸಿ ನಿಲುವವನವನು ಕಾಣೆ ನಾನೆನುತ ॥ ನಮಗೆ ಮಗುಳಾಕಾಮ್ಯಕದವನ । ಭವನವೈಸಲೆಯೆಂದು ಮುನಿಜನ । ನಿವಹಸಹಿತವನೀಶ ಕಾಮ್ಯಕವನಕೆ ನಡೆತಂದ ॥೩॥ ಆಶರತ್ಕಾಲವನು ತದ್ವನ । ವಾಸದಲಿ ನೂಕಿದನು ಘನಪರಿ । ತೋಷಸೂಚಕಶಕುನವಂಗಸ್ಫುರಣೆಮೊದಲಾದ ॥ ಮೀಸಲಳಿಯದಹರುಷರಸದಾ । ವೇಶದಲಿವ.ನವುಕ್ಕಿ ಹಿಗ್ಗಿದ । ನೀಶಕುನ ಸುಮ್ಮಾನವಿದಕೇನಹುದು ಫಲವೆಂದ ॥೪॥ ಇದಕೆ ಕೃಷ್ಣಾಗಮನವೇ ಫಲ । ದುದಯವೈಸಲೆಯೆನುತಲಿರೆ ಬಂ । ದಿದಿರೆ ನಿಂದನು ದೂತನಮಲದ್ವಾ

ರಕಾಪುರದ ॥ ಇದೆ ಕೃಪಾನಿಧಿ ಬಂದನಸುರಾ । ಭ್ಯುದಯಘಾತಕ ಬಂದ ರಿಪುಬಲ । ಮದನಮದಹರ
ಬಂದನಿದೆ ಯೆಂದನು ಮಹೀಪತಿಗೆ ॥೫॥ ಸೂಚಿಸಿದವೇ ಶಕುನ ಪುನರಪಿ । ಗೋಚರಿಸಿತೇ ಗರುವನಿಧಿ
ನಾ । ಮಾಚರಿಸಿತೇನೋ ಶಿವಾ ಭವಭವಸಹಸ್ರದಲಿ ॥ ನಾಚಿದವು ನಿಗಮಂಗಳಾವನ । ಸೂಚಿಸುವವೆ
ಮ್ಮೊಳಗೆ ಕೃಪೆಯಲ । ರೋಚಕವನಾದ್ಯವಮಾಡೆದೆನುತ್ತ ಹೊರವಂಟ ॥೬॥ ಹಳುವವನು ಹೊರವಂಟು
ಗರುಡನ । ಪುಳವಿಧೆಯ ದೂರದಲಿ ಕಂಡನು । ತುಳುಕಿದವು ಸಂತೋಷಜಲ ನಿಟ್ಟೆಸಳುಗಂಗಳಲಿ ॥
ತಳಿತರೋಮಾಂಚದಲಿ ಸಮ್ಮುದ । ಪುಳಕದಲಿ ಪೂರಾಯದಬ್ಬಿನ । ಲಿಳೆಯೊಡೆಯ ಮೈಯಿಕ್ಕುತೈದಿ
ದನಖಿಳಜನಸಹಿತ ॥೭॥ ಇಳಿದು ದಂಡಿಗೆಯಿಂದ ಕರುಣಾ । ಜಲಧಿ ಬಂದನು ಕಾಲುನಡೆಯಲಿ ।
ಸೆಳೆದು ಬಿಗಿಯಪ್ಪಿದನಿದೇನಾಸುರವಿದೇನೆನುತ ॥ ಬಳಿಕ ಭೀಮಾರ್ಜುನರ ಯಮಳರ । ನೊಲಿದು
ಮನ್ನಿಸಿ ಸತಿಯಲೋಚನ । ಜಲವ ಸೆರಗಿನೊಳೊರಸಿ ಸಂತೈಸಿದನು ಬಾಲಕಿಯ ॥೮॥ ಕುಶಲವೇ ಕುರು
ರಾಯನೊಳಿಗ । ವೆಸಗದಲೆ ನಿಮ್ಮತ್ತಲವಧಿಯ । ದೆಸೆ ಸಮೀಪಿಸೆ ತೊಳಲಿದಿರಲಾ ವನವನಾಂತದಲಿ ॥
ಪಶುಪತಿಯ ಹಿಡಿವಂಬು ಕೈವ । ಶಿಸಿತುಗಡ ಪಾರ್ಥಂಗೆ ಸಮಗಂ । ದೊಸಗೆಯಾಯಿತು ಪುಣ್ಯವೆಂ
ದನು ಹರಿ ಯುಧಿಷ್ಠಿರಗೆ ॥೯॥ ಆಗಲೀಕೃಷ್ಣವೆಕೆ ನಮ್ಮಯ । ತಾಗುಘಟ್ಟಿನರಕ್ಷೆ ತೊಡಚಿದು । ದಾಗ
ಳಿದ್ದುದು ಪಾಶುಪತಶರವದರಬಳಿವಿಡಿದು ॥ ಈಗಳೊಸಗೆಯೆ ಯೆಮ್ಮ ಪಂಚಕ । ದಾಗುಹೋಗನು
ಹೊತ್ತುನಡಸಿದೆ । ಯಾಗಳಾಯ್ತ ಮಗೊಸಗೆಯೆಂದನು ನೃಪತಿ ವಿನಯದಲಿ ॥೧೦॥ ತೊಳಲಿದೆವಲಾ
ಕೃಷ್ಣ ತಪ್ಪದೆ । ಹಳುವಹಳುವವನಮರಪುರದಲಿ । ಕೆಲವುದಿನವಿರಲರ್ಜುನಂಗಾಯ್ತೂರ್ವಶಿಯಶಾಪ ॥
ಖಳರನಲ್ಲಿ ನಿವಾತಕವಚರ । ಗೆಲಿದು ಬಂದನು ಪಾರ್ಥನದರೊಳು । ಕೆಲಬರಸುರರ ಕಾದಿ ಕೊಂದನು
ಭೀಮನಡವಿಯಲಿ ॥೧೧॥ ಇಂತು ತಲೆಯೊತ್ತುತ್ತ ಮಹಾವಿಪಿ । ನಾಂತರವ ತೊಳಲಿದೆವು ಬಳಿಕವ ॥
ನಾಂತದೊಳಗಿಂದಾದುದೂಳಿಗನಹುಷನೃಪತಿಯಲಿ ॥ ಭ್ರಾಂತಿಯೈಸಲೆ ಭೀಮನುರಗಾ । ಕ್ರಾಂತನಾ
ದನು ಧರ್ಮಕಥೆಯಲಿ । ಸಂತವಾಯ್ತು ವಿಶಾಪವಾದನು ನಹುಷನಾಕ್ಷಣಕೆ ॥೧೨॥ ಮರಳಿ ಕಾಮ್ಯಕ
ವನದಳದಮಂ । ದಿರವ ನೆಲೆಮಾಡಿದೆವು ಬಹು । ವಿಸ್ತರಣವಿದು ಹಿಂದಾದವಿಪಿನಾಂತರಪರಿಭ್ರಮದ ।
ಕರುಣಿ ನಿಮ್ಮಡಿಯಂಘ್ರಿಕಮಲದ । ದರುಶನದಿನಾಯಾಸಪಾರಂ । ಪರೆಗೆ ಬಿಡುಗಡೆಯೆನುತ ಮೈಯಿ
ಕ್ಕಿದನು ಯಮಸೂನು ॥೧೩॥ ರಾಯ ಕೇಳಾಕ್ಷಣಕೆ ಮಾರ್ಕಂ । ಡೇಯನಾರದರಿಳಿದರಬುಜದ । ಳಾ
ಯತಾಕ್ಷಂಗೆರಗಿದರು ಭಯಭರಿತಭಕ್ತಿಯಲಿ ॥ ತಾಯಿ ಕರುಗಳ ಬಿಡದವೊಲು । ನಿರ್ದಾಯದಲಿ ನಿಜ
ಭಕ್ತಸಂಗದ । ಮಾಯೆ ಬಿಡದೈ ನಿನ್ನನೆಂದರು ಹೊರಳಿ ಚರಣದಲಿ ॥೧೪॥ ತಪದಲರಿದು ಸಮಾಧಿಯೋ
ಗಡ । ಉಪಶಮದಲುಬ್ಬೆದ್ದು ಹೋಮದ । ಜಪದ ಜಂಜಡದೊಳಗೆ ಸಿಲುಕಿ ಜನಾರ್ದನನ ಮರೆವ ॥
ಅಪಸರರು ನಾವ್ಕರ್ಮನಿಷ್ಠೆಯ । ಕೃಪಣರೆಮಗೆಯು ತನ್ನ ತೋರುವ । ಕೃಪೆಯ ನೋಡೈ ಭೂಪನೆ
ನುತೀಕ್ಷಿಸಿದರಚ್ಯುತನ ॥೧೫॥ ಈಯಘಾಟದದೈವವಿದು ನಿ । ದಾನಯದಲಿ ನಿಮ್ಮೊಳಗೆ ಸೇರಿತು ।
ರಾಯರಿದ್ದರು ಹಿಂದೆ ಭರತಭಗೀರಥಾದಿಗಳು ॥ ಆಯಿತೇ ಯಮರಿಗೆ ಸರೋಜದ । ಳಾಯತಾಕ್ಷನ
ಚರಣಸೇವೆ ನಿ । ರಾಯಸದ ಸಹವಾಸಭೋಜನವೆಂದನಾನೃಪನ ॥೧೬॥ ವರುಷಹದಿನಾರರಲಿ ಮೃ
ತ್ಯುವು । ಪರುಠವಿಸಿದುದು ಕರ್ಮಗತಿ ಮುರ । ಹರನ ಸೇವೆಯ ಮಾಡಿ ಸವೆದೆನು ಸರ್ವಭಾವದಲಿ ॥

ಕರುಣಿ ಬಿಜಯಂಗೈದು ಮೃತ್ಯುವಿ । ನರಿವಗಂಟಲೊಳಿಳಿವತನ್ನನು । ಬರೆಸೆಳೆದನೆಂದಮಳಮಾರ್ಕಂ
ಡೇಯಮುನಿ ನುಡಿದ ॥೧೭॥ ಓಕರಿಸಿದಳು ಮೃತ್ಯುವೆನ್ನನು। ಲೋಕದಲಿ ಹೊರಗೆಂದು ಯಮಗಿಮ ।
ರಾಕರಣೆಗಳ ಜೀವಜಾತಿಯೊಳಿಲ್ಲವಿವನೆಂದು ॥ ಲೋಕದಲಿ ಡಂಗುರವ ಹೊಯ್ಸಿದ । ನೀಕಮಲನಾ
ಭನುಕಣಾ ಕರು । ಣ್ಯೈಕನಿಧಿ ನಿಮಗೊಲಿದನೆಂದನು ಮುನಿ ಯುಧಿಷ್ಠಿರಗೆ ॥೧೮॥ ಧರಣಿಪತಿ ಕೇಳ್ಪ್ರ
ಳಯದಲಿ ಸಾ । ಗರದತೆರೆ ಮುಂದಾಡಿದವು ಸಾ । ಗರದತೆರೆಯಲಿ ಸಕಲಜಲಧಿಗಳೇಕರೂಪದಲಿ ॥
ಧರೆಯ ಮುಳುಗಿಸಿ ಮೇಲೆಮೇಲು । ಬ್ಬರಿಸಿ ಜಗದಡಿಕಿಲಿನ ಜೋಡಿಯ । ಜರುಹಿದವು ನೀರೇರಿತಗ್ಗದ
ಸತ್ಯಲೋಕದಲಿ ॥೧೯॥ ಜಗದಜೀವರ ಕರ್ಮಬೀಜಾ । ಳಿಗಳ ಭೈತ್ರವ ತನ್ನ ಬಾಲಕೆ । ಬಿಗಿದು ನೀರಲಿ
ಸುಳಿಸಿದನು ಮತ್ಸ್ಯಾವತಾರದಲಿ ॥ ಬಗೆಯಲಾ ಹುಲುಯಿತಾತನೇದ್ಯ । ಗ್ಯುಗಕೆ ಗೋಚರನಾದನರಸುವ ।
ನಿಗಮವೀತನ ಹಜ್ಜೆಗಾಣವು ರಾಯ ಕೇಳೆಂದ ॥೨೦॥ ಮರಳಿ ಹೂಡಿದನೀ ಜಗದ್ವಿ । ಸ್ತರಣವನು
ಮಾಯಾಮಹೋದಧಿ । ಹೊರೆದನುನ್ನತಸತ್ಯದಲಿ ಮೇಲಾದಲೋಚನದ ॥ ಉರಿಯಲದ್ದುವನಿದನು
ಲೀಲಾ । ಚರಿತವಿದು ಕೃಷ್ಣಂಗೆ ನಿನ್ನಯ । ಸಿರಿಯೆ ಸಿರಿ ಬಡತನವೆ ಬಡತನವೆಂದನಾಮುನಿಪ ॥೨೧॥
ಅರಸಕೇಳ್ಕಲ್ಪಾಂತದಲಿ ಬಿಡ। ಬೆರಿದುದೀಬ್ರಹ್ಮಾಂಡಬಹಿರಾ। ವರಣಜಲನಿಧಿ ಜಲದೊಳೊಂದಾಯ್ತೋ
ನನುಸುರುವೆನು ॥ ಹರಿವಿನೋದದೊಳಾಲದೆಲೆಯಲಿ । ಸಿರಿಸಹಿತ ಪವಡಿಸಿದನಿನಶಶಿ । ಕಿರಣವಿಲ್ಲ ಮ
ಹಾಂಧಕಾರಸಭಾರವಾಯ್ತೆಂದ ॥೨೨॥ ಈನೆಲನನೀಚಂದ್ರಸೂರ್ಯಕೃ । ಶಾನುತೇಜವನೀಸಮೀರಣ ।
ನೂನಭುವನವ ಕಾಣೆನೊಂದೇ ಸಲಿಲಸೃಷ್ಟಿಯಲಿ ॥ ಏನಹೇಳುವೆನೆನ್ನ ಚಿತ್ತ । ಗ್ಲಾನಿಯನು ಬಲು
ತೆರೆಯ ಹೊಯ್ಲಿನೊ । ಳಾನು ಮುಳುಗುತ್ತೇಳುತಿದ್ದೆನು ರಾಯಕೇಳೆಂದ ॥೨೩॥ ಹೇಳಲೇನದಮೃ
ತ್ಯುವಿನಸಗೋ । ನಾಳಿಯೊಳಗಂದಿಳಿಯಲೊಲ್ಲದೆ । ಕಾಳುಮಾಡಿದೆನೇ ಮುರಾರಿಯ ಭಜಿಸಿ ಭಕ್ತಿ
ಯಲಿ ॥ ಬಾಲಕನೊಳವಗುಣವನಕಟಾ । ತಾಳಬಹುದೇ ತಾಯೆ ಮೃತ್ಯುವೆ । ತಾಳಿಗೆಯ ತೆಗೆದೆನ್ನ
ನೊಳಕೊಳ್ಳೆಂದು ಹಲುಬಿದನು ॥೨೪॥ ನೀರುಹೊಕ್ಕದು ನೂಕಿ ವಿವಿಧ । ದ್ವಾರದಲಿ ಬೆಂಡೇಳ್ವನೊ
ಮ್ಮತಿ । ದೂರ ಮುಳುಗುವೆನಡ್ಡಬೀಳ್ವೆನು ತೆರೆಯ ಹೊಯ್ಲಿನಲಿ ॥ ಮೂರಿಗುಬ್ಬಸವೆನ್ನ ಮರಣವ ।
ಸಾರು ಕಂಡರು ಹೇಸಿ ನನ್ನನು । ದೂರಬಿಸುಟಳು ಮೃತ್ಯು ಬಳಲಿದೆನಿಂತು ಹಲಕಾಲ ॥೨೫॥ ಮು
ಳುಗುತೇಳುತ ಬರುತ ವಟಕುಜ । ದೆಲೆಯಲೀತನ ಕಂಡೆನೈನಾ । ನೆಳತಟಿಕೆ ಬಿದ್ದಂತೆ ತೆರೆಯಡತರಕೆ ತನಿಗೆ
ಡೆದು ॥ ಜಲಜಸಂಭವನಾಜಲವ ಮು । ಕ್ಕುಳಿಸುತುಗುಳುತ ನಾಲ್ಕುಮುಖದಲಿ । ಸಿಲುಕಿ ನಿಗುರುತ ನಿಲುತ
ಬಂದನು ಕಂಡನೀಹರಿಯ ॥೨೬॥ ಅರುನೀನೆನುತಾತನೀತನ । ನಾರಿದನು ಬೆಸಗೊಳಲು ಜಗದಾ ।
ಧಾರಕನು ಜಗದುದರಹರಿ ತಾನೆಂದೊಡಜ ನಗುತ ॥ ಭೂರಿಜಗವೆನ್ನುದರದಲಿ ನೀ । ನಾರು ಜಗಕೆಂದೆ
ನುತ ಗರುವ ವಿ । ಕಾರದಲಿಪರಮೇಷ್ಠಿ ನಿಜತೇಜನ ಪಚಾರಿಸಿದ ॥ ಆದವೇನಿನ್ನುದರದಲಿ ಜಗ । ವಾದೊ
ಡೀಕ್ಷಿಪೆನೆನುತಲೀಕಮ । ಲೋದರನು ಕಮಲಜನ ಜಠರವ ಹೊಕ್ಕು ಹೊರವಂಟ ॥ ಭೇದಿಸಿದೆನಾನೆನ್ನ
ಜಠರದೊ । ಳಾದಲೋಕವನೆಣಿಸಿ ಬಾಯೆನ । ಲಾದುರಾಗ್ರಹಿ ಯಿಳಿದನಸುರಾಂತಕನ ಜಠರದಲಿ ॥೨೭॥
ಹೊಲಬುದಪ್ಪಿದನಲ್ಲಿ ಭುವನಾ । ವಳಿಗಳಿದ್ದವು ಕೋಟಿರುದ್ರಾ । ವಳಿಗಳಿದ್ದವು ಕೋಟಿಪರಮೇಷ್ಠಿ
ಗಳು ಶತಕೋಟಿ ॥ ಹುಲುನೊರಜುಸಾಗರದ ಸಲಿಲವ । ನಳೆವವೊಲು ನೊಳ ಹಾರಿ ಗಗನದ ।

ತಲೆಗಡೆಯ ಕಾಣಿಸುವೆನೆಂಬವೊಲಾಯ್ತು ಕೇಳೆಂದ ॥ ಹಲವು ಯುಗಪರಿಯಂತರಲ್ಲಿಯೆ । ತೊಳಲಿ
ಕಡೆಗಾಣದೆ ಕೃಪಾಳುವ । ನೊಲಿದು ಹೊಗಳಿದನಜನು ವೇದಸಹಸ್ರಸೂಕ್ತದಲಿ ॥ ಬಳಿಕ ಕಾರುಣ್ಯಾ
ದಲಿ ನಾಭೀ । ನಳಿನದಲಿ ತೆಗೆದನು ವಿರಿಂಚಿಗೆ । ನಳಿನಸಂಭವನೆಂಬ ಹೆಸರಾಯ್ತಂದುಮೊದಲಾಗಿ ॥
ಆಮಹಾಜಲಕಗ್ನಿ ಮುಖದಲಿ । ಹೋಮವಾಯ್ತು ತದಗ್ನಿಯಡಗಿದು । ದಾಮರುತ್ತಿನಲಾ ಬಹಳ
ಬಹಿರಾವರಣಪವನ ॥ ವ್ಯೋಮದಲಿ ತದಹಮ್ಮಹತ್ತುವಿ । ರಾಮವಾಪ್ರಕೃತಿಯಲಿ ಮಾಯಾ ।
ಕಾಮಿನಿಗೆ ಪರಮಾತ್ಮನಲಿ ಲಯವೆಂದನಾ ಮುನಿಪ ॥೩೧॥ ಏಸುದಿನವೀಜಗದ ಬಾಳುವೆ । ಯೈಸುದಿನ
ವೀಪ್ರಳಯಮಯಪರ । ಭಾಸಮಾನಬ್ರಹ್ಮತೇಜೋರೂಪವೈಸುದಿನ ॥ ಲಸದಾನಂದೈಕರಸಕೆ ಪ ।
ರಾಸಿತಾವಿದ್ಯಾಪ್ರಪಂಚವಿ । ಲಾಸವಾಯ್ತು ವಿಭಾಗಸೃಷ್ಟಿವಿಧಾನಚಿಂತೆಯಲಿ ॥೩೨॥ ಏಕಮೇವಾ
ದ್ವಿತಯಮೆಂಬನಿ । ರಾಕುಳಿತತೇಜೋನಿಧಿಗೆ ಮಾ । ಯಾಕಳತ್ರದೊಳಾಯ್ತು ನಿಜಗುಣಭೇದವವ
ರೆರಡ ॥ ಆಕಮಳಭವನೀಮುಕುಂದಪಿ । ನಾಕಿಯೆಂಬಭಿಧಾನದೊಳ್ತ್ರಿಗು । ಣಾಕೃತಿಯ ಕೈಕೊಂಡನು
ರುಲೀಲಾವಿನೋದದಲಿ ॥೩೩॥ ಆರಜೋಗುಣಕಬುಜಭವನಧಿ । ಕಾರಿ ತನ್ನ ಶರೀರಧರ್ಮವ ।
ನಾರಿಯನು ಮಾಡಿದನು ಶತರೂಪಾಭಿಧಾನದಲಿ ॥ ಸೇರಿಸಿದನರ್ಧದಲಿ ಮನುವನು । ದಾರಚರಿತನು ಸಕ
ಲಧರ್ಮದ । ಸಾರವನು ವಿಸ್ತರಿಸಿದನು ಮನು ಭುವನವಿಭುವಾಗಿ ॥೩೪॥ ಭೃಗುಪುಲಸ್ತ್ಯವಸಿಷ್ಠದಕ್ಷಾ ।
ದಿಗಳೆನಿಪ್ಪನವಪ್ರಜೇಶ್ವರ । ರೊಗುಮಿಗೆಯ ಮಾಡಿದನು ಸೃಷ್ಟಿಗೆ ಬೇರೆಬೇರವರ ॥ ಜಗದಜೋಡ
ಣೆಯಾಯ್ತು ಭೂತಾ । ಳಿಗೆ ಚತುರ್ವಿಧಸೃಷ್ಟಿಯೊಡ್ಡಣೆ । ನಿಗಮಮತದಲಿ ಹೊಡಿತವನೀಪಾಲಕೇ
ಳೆಂದ ॥೩೫॥ ಆದಿಯಲಿ ಕೃತಯುಗಹರಿಶ್ಚಂದ್ರಾದಿಗಳು ಸೂರ್ಯಾನ್ವಯಕೆ ಬಾಧ । ನಾದಿನಿಮ್ಮನ್ವ
ಯಕೆ ಬಳಿಕ ಪುರೂರವಕ್ಷಿತಿಪ ॥ ಮೇದಿನಿಯನಾಯುಗದಲವರೋ । ಪಾದಿ ಸಲಹಿದರಿಲ್ಲ ಬೆಳಗಿತು
ವೇದಬೋಧಿತಧರ್ಮ ಸೂರ್ಯಪ್ರಭೆಗೆ ಮಿಗಿಲಾಗಿ ॥೩೬॥ ಆಯುಗದತರುವಾಯಲಾತ್ರೇ । ತಾಯು
ಗವಲೇ ಬಳಿಕ ಧರ್ಮದ । ಲಾಯದಲಿ ಕಟ್ಟಿದರಧರ್ಮವನೊಂದುಪಾದದಲಿ ॥ ರಾಯ ಕೇಳೈ ದ್ವಾಪ
ರದಲಿ ದ್ವ । ಯಾಯಿಯಲಿ ತಾಧರ್ಮವೆರಡಡಿ । ಬೀಯವಾದುದು ನಿಂದುದೆನಿಸಿತು ನಿನ್ನದೆಸೆ
ಯಿಂದ ॥೩೭॥ ಕಲಿಯರಾಜ್ಯದಲೊಂದುಪಾದದ । ಸಲುಗೆ ಧರ್ಮಕ್ಕಹುದುಗಡ ಮೆ । ಗ್ಗಳೆಯವದರೊ
ಳಸತ್ಯಧರ್ಮದ್ರೋಹಮಾತ್ಸರ್ಯ ॥ ಕಳವು ಹಿಂಸೆಯನೀತಿ ಲೋಭ । ಸ್ಖಲಿತಮಾರಡಿ ಠಕ್ಕು ॥
ವಂಚನೆ । ಹಳಿವು ಹಾದರ ಕವಟತೆಯೆಂಬಿವರುಬ್ಬು ಹಿರಿದೆಂದ ॥೩೮॥ ಈಯಧರ್ಮವ ಪತಿಕರಿಸಿ ತ ॥
ನ್ನಾಯತಕೆ ಭೂತಳವ ತಂದು ನಿ । ರಾಯಸದಲೇ ಬಳಸುತಿರ್ದನು ದುಂಧುಮೆಂಬಸುರ ॥
ರಾಯ ಕೇಳಾದೈತ್ಯನನು ತ । ನ್ನಾಯುಧಕೆ ಬಲಿಗೊಟ್ಟು ಬಳಿಕ । ಸ್ಥಾಯಿಧರ್ಮವಬ
ಲಿದು ಕೊಟ್ಟನು ದುಂಧುಮಾರನೃಪ ॥೩೯॥ ಆನೃಪನ ರಾಜ್ಯದಲಿ ಯಜ್ಞಾವಿ । ಧಾನವೈ
ದಿಕವಿಧಿಕೃತಾನು । ಷ್ಠಾನಯಮನಿಯಮಾದಿಯೋಗವಿಶಿಷ್ಟನೀತಿಯಲಿ ॥ ದೀನಭಾವವನುಳಿದು
ಯಾಚ್ಞಾ । ಹೀನವೃತ್ತಿಯ ಬಿಸುಟು ಲೋಕದ । ಭಾನುತೇಜದಲೆಸೆದುದಂದುಮಹೀಸು
ರವ್ರಾತ ॥೪೦॥ ರಣದೊಳಹಿತರ ಶಿರದ ಮಿದುಳ್ । ತಣಿವು ಶಸ್ತ್ರಕೆ ವಿತ್ತ ಭೂಸುರ । ಗಣಕೆ
ಮೆರೆಯುಯೌವನದವಿಭ್ರಮ ನಿಜಸತೀಜನಕೆ ॥ ಗುಣಮನುಷ್ಯಪ್ರಜಕೆ ಪರಿರ । ಕ್ಷಣವಶೇಷಪ್ರಜೆಗೆ

ನಲುಧಾ । ರಿಣಿಪತಿಗಳೊಪ್ಪಿದರು ಕೃತಯುಗಪ್ರಾದಿಕಾಲದಲಿ ॥೪೧॥ ಪ್ರೌಢನೇ ವ್ಯವಹರಿಸಲಗ್ಗದ ।
ಮೂಢನೇ ಬರಲೊಂದೆಸತ್ಯನಿ । ರೂಢಿಯಲಿ ವಾಣಿಜ್ಯಸುವ್ಯವಹಾರಮಾರ್ಗದಲಿ ॥ ಗಾಢವಿಕ್ರಯ
ಸಕ್ರಯದೊಳೇ । ಗೂಢಕರುಮೂಲ್ಯೈಕಲಾಭನಿ । ರೂಢಪರರೊಪ್ಪಿದರು ವೈಶ್ಯರು ಧರ್ಮಕಾಲದಲಿ ॥
ನಿಜಕೃಷಿವ್ಯವಸಾಯದಲಿ ತ । ದ್ವಿಜಕುಲದ ಶುಶ್ರೂಷೆಯಲಿ ಪಾ । ದಜರು ಕೃತಕೃತ್ಯರು ಚತುರ್ವರ್ಣ
ದಲಿ ಮಾರ್ಗವಿದು ॥ ನಿಜನಿಜಾಂಗದ ಧರ್ಮಗತಿಯಲಿ । ಮಜಡರಾದೊಡೆ ಮನುಜರಾದವ । ರಜನ
ಪರಮಾಯುಷ್ಯಪರಿಯಂತಿಹರು ನರಕದಲಿ ॥೪೩॥ ನಯವಿದನೆ ಕೇಳ್ವೇದಶಾಸ್ತ್ರಾ । ಧ್ಯಯನದಲಿ
ಪಿತೃಮಾತೃಶುಶ್ರೂ । ಷೆಯಲಿ ಗುರುಪರಿಚರ್ಯದಲಿ ವಿಮಲಾಗ್ನಿಕಾರ್ಯದಲಿ ॥ ನಿಯತಮೌನವ್ರ
ತದ ಸಂಗ । ಪ್ರಿಯದ ಶೌಚಾಸ್ತೇಯದಿಂದ್ರಿಯ । ಜಯದವಿಮಲಬ್ರಹ್ಮಚರ್ಯಾಶ್ರಮದಗತಿ
ಯೆಂದ ॥೪೪॥ ದೇವಗುರುಪಿತೃವನ್ಹಿಶುಶ್ರೂ । ಷಾವಧಾನನಿರಂತಷಟ್ಕ । ರ್ಮಾವಲಂಬನಿಜೋನ್ನ
ತಾಲಾಭೈಕಸಂತೋಷ ॥ ಪಾವನವ್ರತನಿಜಪುರಂಧ್ರೀ । ಸೇವೆ ಸತ್ಯಾಸ್ತೇಯಶೌಚಗು । ಣಾವಳಿಗ
ಳುಳ್ಳಾತ ಗೃಹಪತಿಯೆಂದನಾಮುನಿಪ ॥೪೫॥ ವನವನದೊಳಾಶ್ರಮದೊಳಗೆ ಕುಲ । ವನಿತೆಸಹಿತಮ
ಲಾಗ್ನಿಹೋತ್ರದ । ನೆನಹು ತಪ್ಪದೆ ಕಂದಮೂಲಫಲಾಶನಂಗಳಲಿ ॥ ವಿನಯಯಜ್ಞತಪೋವ್ರತಾ
ದಿಗ । ಳನಿತರಲಿ ನಿಷ್ಠಾತ್ಮನಾದೊಡೆ । ವಿ-ತ್ರವಾನಪ್ರಸ್ಥನೆಂಬರು ರಾಯ ಕೇಳೆಂದ ॥೪೬॥ ಮದನ
ನಂಬನು ಮುರಿದು ರೋಷವ । ಕದನದಲಿ ಸೋಲಿಸಿದು ಲೋಭವ । ನೊದೆದು ಮೋಹವನೊಕಿ
ಯಿಗಿದಾಮದವ ಮತ್ಸರದಾ । ಎದೆಯಲಂಕವ ಬರೆದು ವೈರಾ । ಗ್ಯದ ಸುಸುಮ್ಯಗ್ಜ್ಞಾನಯೋಗದ
ಪದವ ಬೆಳೆ ಸಿರಿವಂತನೇ ಯತಿಯೆಂದನಾಮುನಿಪ ॥೪೭॥ ಧರಣಿಪತಿ ಕೇಳ್ಜಾತಿವರ್ಗದ । ಪರಮ
ಧರ್ಮದಸಾರವಿದನಾ । ಚರಿಸಿ ಸಿದ್ಧಿಯನೈದಿದನು ಪಿತೃಮಾತೃಭಕ್ತಿಯಲಿ ॥ ಒರೆಗೆ ಬಣ್ಣಕೆ ಬೆರಸಿ
ವೇದೋ । ಚ್ಚರಿತಧರ್ಮವನರುಹಿದನು ಭೂ । ಸುರಗೆ ಧರ್ಮವ್ಯಾಧನೆಂಬನ ಕಥೆಯ ಕೇಳೆಂದ ॥೪೮॥

ಅಂತು ಸಂಧಿ ೧೮ ಕ್ಕೆ ಪದ ೭೯೩ ಕ್ಕಂ ಮಂಗಳಮಸ್ತು.

ಹದಿನೈದನೆಯ ಸಂಧಿ.

ಸೂಚನೆ ॥ ಮುನಿಗಳುಪಕಥೆಯಲಿ ಯುಧಿಷ್ಠಿರ । ಜನಪತಿಯ ಸಂತೈಸಿ ಕಾಮ್ಯಕ ॥
ವನದಿನಸುರಾರಿ ಬಂದನು ದ್ವಾರಕಾಪುರಿಗೆ ॥

ಪದ॥ ಕೇಳು ಜನಮೇಜಯಧರಿತ್ರೀ । ಪಾಲ ಮಾರ್ಕಂಡೇಯಮುನಿಪತಿ । ಹೇಳಿದನು ವೇದೋ
ಕ್ತಧರ್ಮದಸಾರಸಂಗತಿಯ ॥ ಶೀಲಗುಣಸಚ್ಚರಿತ್ರದಲಿ ಸಂ । ಮೇಳವಿಸಿ ಮುದ್ಗಲ್ಯವಂಶವಿ । ಶಾಲ
ನೊಬ್ಬನು ವಿಪ್ರನಿರ್ದನು ಬೊಮ್ಮಚರಿಯದಲಿ ॥೧॥ ಧರಣಿಪತಿ ಕೇಳಾಮಹೀಸುರ । ವರನು ವೇದಾ
ಧ್ಯಯನಪರನನ । ವರತವಿದ್ಯಾಭ್ಯಾಸಶೀಲನು ವನದಲೊಂದುದಿನ ॥ ಮರದಮೊದಲಲಿ ವೇದಪಾಠದ ।

ಲಿರೆ ಮಹೀರುಹದಗ್ರದಲಿ ಸಂಚರಿಸುತಿಹಖಗವಿಷ್ಟ ಬಿದ್ದುದು ಮೇಲೆ ಭೂಸುರನ ॥೨॥ ಮೇಲೆ ನೋಡಿ
ದೊಡಧಿಕರೋಷ ಜ್ವಾಲೆಯಲಿ ಗರಿ ಸೀದು ಧರಣಿಯ । ಮೇಲೆ ಬಿದ್ದುದು ವಿಹಗವೀತನಮುಂದೆ ತನು
ಬೆಂದು ॥ ಲೀಲೆಯಲಿ ಭೂದೇವನಲ್ಲಿಂ । ಮೇಲೆ ಭಿಕ್ಷಾಟನಕೆ ಭೂಸುರರಾಲಯದ ಪಂತಿಯಲಿ ಹೊಕ್ಕನು
ರಾಯ ಕೇಳೆಂದ ॥೩॥ ಬಂದು ಮನೆಯಲಿ ಭಿಕ್ಷೆಗೋಸುಗ । ನಿಂದನಾಮನೆಯಾಕೆ ಭಿಕ್ಷವ । ತಂದಹೆನು
ನಿಲ್ಲೆನುತ ಪತಿಪರಿಚರ್ಯೆಯನು ಮಾಡಿ ॥ ತಂದು ಭಿಕ್ಷವ ಹಿಡಿಯೆನಲ್ದ್ವಿಜ । ನಂದು ಮುನಿದೀಕ್ಷಿಸಿ
ದೊಡಾಸತಿ । ಯೆಂದಳೆಲೆಮರುಳೇ ಕುಜಾಗ್ರದ ವಿಹಗನಲ್ಲೆಂದು ॥೪॥ ಬೆರಗಿನೊಳು ದ್ವಿಜನಿರ್ದ
ನಿದನೆಂ । ತರಿತಳೆನುತೆಲೆವಿಪ್ರ ನಿಗಮವ । ನರಿಯೆ ಧರ್ಮರಹಸ್ಯತತ್ವದ ಸಾರಸಂಗತಿಯ ॥ ಅರಿದು
ಪತಿಪರಿಚರ್ಯೆಯಲಿ ಕೈ । ಮರೆಯದಾರಾಗಲಿ ಸುಧರ್ಮದೊ । ಳಿರೆಕವುಳ್ಳೊಡೆಧನ್ಯರೆಂದಳು ಕಾಂತೆ
ಭೂಸುರಗೆ ॥೫॥ ಇಲ್ಲಿಗಿದೆ ನಾಲ್ಕೈದು ಯೋಜನ । ದಲ್ಲಿ ಪಟ್ಟಣವದರೊಳೊಬ್ಬನು । ಬಲ್ಲನಗ್ರದ
ಧರ್ಮಮುದ್ರಾಘಟನವಿಘಟನವ ॥ ಅಲ್ಲಿಗೈದುಪದಾತನಲಿ ನೀ । ನೆಲ್ಲವನು ತಿಳಿ ನಿನ್ನ ಚಿತ್ತದೊ ।
ಳಿಲ್ಲಲೇ ಪರಿಪಾಕವೆಂದುಪದೇಶಿಸಿದಳಬಲೆ ॥೬॥ ಹೆಸರು ಧರ್ಮವ್ಯಾಧನಾತನ । ದೆಸೆಯೊಳರಿ ಹೋ
ಗೆನಲು ಬಂದನು । ವಸುಧೆಯಮರನು ನಗರಿಗಾಸತಿ ಕೊಟ್ಟ ಕುರುಹಿನಲಿ ॥ ಹಸಿದು ಬೀದಿಗಳೊಳಗೆ
ತೊಳಲಿದು । ಗಸಣಿಗೊಳುತ ಪುರಾಂತದಲಿ ಕ । ರ್ಕಶಪುಳಿಂದರ ಕೇರಿಯಿರೆ ಕಂಡಲ್ಲಿಗೈತಂದ ॥೭॥
ಬಸೆನೆಣನ ಸುಂಟಿಗೆಯ ಹರಹಿವ । ಹಸಿಯತೊಗಲಿನ ತಳಿತ್ತಖಂಡದ । ಹಸುಗದುರುಗಲ ಕಾಳಿಜದ ಜಂಗ
ಡೆಯ ಗಳಗೆಗಳ ॥ ಬಸೆಯ ಹರವಿಯ ಸಾಲ ತೊರಳೆಗೆ । ಬೆಸಳಿಗೆಯ ಕುರಿದಲೆಯ ಪಂತಿಯ । ಕುಸುರಿದೆ
ಲುವಿನ ಕೋದಮಿನಂಗಡಿಯಲೈತಂದ ॥೮॥ ಬರಬರಲು ದೂರದಲಿ ವಿಪ್ರನ । ಬರವ ಕಂಡಿದಿರಾಗಿ
ಬಂದುಪಚರಿಸಿದನು ಬಂದ್ಯೆ ಪತಿವ್ರತೆ ಯೆನ್ನ ದೂರಿದಳೆ ॥ ಧರಣಿಯಮರೋತ್ತಮ ಮುಗಿದು ಸಂ । ಚರಣ
ಯೋಗ್ಯಸ್ಥಾನವಲ್ಲಾ । ದರಿಸುವೊಡೆಬಾಯೆನುತ ತನ್ನಾಲಯಕೆ ಕೊಂಡೊಯ್ದ ॥೯॥ ಒಳಗೆ ಮಂ
ಚದಮೇಲೆ ನಡುಗುವ । ತಲೆಯ ತೆರಳಿದಮೈಯ್ಯ ಬೆಳುಪಿನ । ತಲೆನವಿರ ತಗ್ಗಿದಶರೀರದ ನೆಗ್ಗಿದವ
ಯವದ ॥ ತಳಿತಸೆರೆಗಳ ತಾರಿದಾನನ । ದಿಳಿದಹುಬ್ಬಿನ ಹುದಿದಕಣ್ಗಳ । ಚಲಿತವಚನವ ವೃದ್ಧರನು
ತೋರಿದನು ಮುನಿಸುತಗೆ ॥೧೦॥ ಇವರು ಮಾತಾಪಿತೃಗಳೆನ್ನಯ । ಯುವತಿಯಿವಳಿವಳೆನ್ನ ಮಗನಿಂ ।
ತಿವರ ರಕ್ಷೆಗೆ ಬೇಂಟೆಯಾಡುವೆನಡವಿಯಡವಿಯಲಿ ॥ ಕವಲುಗೋಲಲಿ ಮೃಗಗಣವ ಕೊಂ । ದವನು
ತಹೆನಂಗಡಿಯಲವ ಮಾ । ರುವೆನು ಲೋಭವನಲ್ಲಿ ಮಾಡೆನು ವಿಪ್ರ ಕೇಳೆಂದ ॥೧೧॥ ದೊರಕಿದನಿ
ತಾದ್ರವ್ಯದಲಿ ವಿ । ಸ್ತರಿಸುವೆನು ಸಕುಟುಂಬವಿದನೇ । ಹೊರೆವೆನಾರ್ಜಿಸುವೆನು ಕುಟುಂಬಕೆ ತಕ್ಕನಿತು
ಧನವ ॥ ನಿರುತವಿದು ಮಾತಾಪಿತರ ಪರಿ । ಚರಿಯದಲಿ ರಾಗಾದಿದೋಷಾ । ಚರಣವದು ಮನವ
ಚನಕಾಯದೊಳಿಲ್ಲ ತನಗೆಂದ ॥೧೨॥ ಭೂತಹಿಂಸೆಯಿದಲ್ಲ ನಮಗಿದು । ಮಾತೃಪಿತೃರಕ್ಷಾರ್ಥವೆಮ್ಮಯ ।
ಜಾತಿಧರ್ಮವು ಮಾಂಸವಿಕ್ರಯಮೃಗವಧಾದಿಗಳು ॥ ಜಾತಿಧರ್ಮತ್ಯಾಗಕರ್ಮವಿ । ಜಾತಿಧರ್ಮ
ಗ್ರಹಣವೇ ವಿ । ಖ್ಯಾತಕುಂಭೀಪಾಕಸಾಧನ ವಿಪ್ರ ಕೇಳೆಂದ ॥೧೩॥ ವಿತತಭಾಷಿತವನ್ಯವಿತ್ತಾ ।
ಹೃತಿಪರವ್ಯಾಪಾರವಾತ್ಮ । ಸ್ತುತಿ ಪರಸ್ತ್ರೀವ್ಯಸನವತ್ಯಾಸ್ವಾದ ಬಕವೃತ್ತಿ ॥ ಕೃತವಿನಾಶನ ಡಂಭ
ಹಿಂಸಾ । ರತಿ ನಿಜಾನ್ವಯಧರ್ಮಕರ್ಮ । ಚ್ಯುತಿಗಳಿವು ದೋಷಾಂಕುರಂಗಳು ವಿಪ್ರ ಕೇಳೆಂದ ॥

ಸಾಂಗವೇದಾಧ್ಯಯನ ಸಜ್ಜನ । ಸಂಗ ಶಾಸ್ತ್ರಶ್ರವಣ ತೃಷ್ಣಾ । ಭಂಗ ಯಜನ ಧ್ಯಾನಮೌನವ್ರತ
ಸದಾಚಾರ ॥ ಮಾಂಗಲಿಕಕರ್ಮಾಭಿಯೋಗ ಕುಲಾಂಗನಾರತಿಯಾತ್ಮಚಿಂತೆ ಪ । ರಾಂಗನಾವೈಮು
ಖ್ಯವಿವು ಸದ್ಧರ್ಮಗತಿಯೆಂದ ॥೧೫॥ ಧನಮದವ ಸತ್ಕುಲಮದವ ಯೌ । ವನಮದವ ವಿದ್ಯಾಮದ
ವ ಪರಿ। ಜನಮದವ ವೈಭವಮದವನಾಚಾರಪದಮದವ ॥ ಮನನದಿಂ ಶ್ರವಣಾದಿ ನಿಧಿಧ್ಯಾ। ಸನದಿನಿವುಗ
ಳನೊತ್ತಿ ವಿಪ್ರಾ । ವಿನಯಸೌಶೀಲ್ಯದಲಿ ನಡೆವುದು ವಿಪ್ರರೇಳೆಂದ ॥೧೬॥ ನೀವು ಜಾತಿಯೊಳಧಿಕ
ತರರಿಂ । ದಾವು ಜಾತಿವಿಹೀನರಾಗಿಯೆ । ಭಾವಶುದ್ಧಿಯಲೇ ಸ್ವಧರ್ಮಾಚಾರಮಾರ್ಗದಲಿ ॥ ಆವ
ದೂಣೆಯುವಿಲ್ಲವೀದ್ವಿಜ । ದೇವಗುರುಪರಿಚರ್ಯೆಯಲಿ ಸಂ । ಭಾವಿತರು ನಾವಾದೆವೆಮ್ಮನು ನೋಡಿ
ನಡೆಯೆಂದ ॥೧೭॥ ಈಪರಿಯಲುರುಧರ್ಮಕಥನಾ । ಳಾಪದಲಿ ಮುನಿಸುತಗೆ ಸಂದೇ। ಹಾಪನೋದವ
ತಿಳುಹಿ ಕಳುಹಿದನಾಮಹೀಸುರನ ॥ ಭೂಪ ಕೇಳೈ ಕ್ಷತ್ರಧರ್ಮಕ । ಳಾಪದಲಿ ನಿನಗಿಲ್ಲ ಕೊರತೆ ಕೃ ।
ತಾಪರಾಧರು ಕೌರವರು ನಿರ್ನಾಮರಹರೆಂದ ॥೧೮॥ ಬಾಹುಬಲ ಬಲವಲ್ಲ ದೈವ ! ದ್ರೋಹಿಗಳಿಗೆ
ಸುಧರ್ಮನಿಷ್ಠುರ । ಸಾಹಸವು ಕಿರಿದಾದೊಡೆಯು ಕೊಯ್ವರು ವಿರೋಧಿಗಳ ॥ ಆಹರಾತ್ಮಜ ಹಸುಳೆತ
ನದ । ವ್ಯೂಹದಲಿ ತಾರಕನನಿಕ್ಕನೆ । ಯಾಹವದಜಯಸಿರಿಯು ಧರ್ಮದ ಬೆನ್ನಲಿಪ್ಪುದೆಂದ ॥೧೯॥
ಎಂದು ಮಾರ್ಕಂಡೇಯಮುನಿ ಯಮ । ನಂದನನನನೇಕೇತಿಹಾಸಕಥೆಗಳ । ಲಿಂದವಿಟ್ಟನು ಚಿತ್ತವನು
ಖಯಖೋಡಿಗಳ ಕಳೆದು ॥ ಕಂದುಕಸರಿಕೆಯೇಕೆ ನಿಮಗೆ ಮು । ಕುಂದನೊಲಿಪಿದೆ ಬಯಕೆ ಬೇರೆ ।
ಕೆಂದು ಮಾರ್ಕಂಡೇಯನಾರದರಡರಿದರು ಸಭೆಯ ॥೨೦॥ ಅರಸ ಕೇಳೈ ದ್ರೌಪದಿಗೆ ಹರಿ । ಯರಸಿ
ನುಡಿದಳು ಸತ್ಯಭಾಮಾ । ಸರಸಿಜಾನನೆ ಸಗನುಡಿಯ ಸಮ್ಮೋಹಕೇಳಿಯಲಿ ॥ ಅರಸಿ ಕೌತುಕವೆನಗೆ
ನೀನೈ । ವರಿಗೆ ಸತಿ ವಲ್ಲಭರಚಿತ್ತಾ । ಕರುಷಣವು ನಿನಗೆಂತು ಸೇರಿಹುದೇಕಭಾವದಲಿ ॥೨೧॥
ಮಂತ್ರಸಿದ್ಧಿಯೊ ಮೇಣು ಶಾಬರ । ಯಂತ್ರರಕ್ಷೆಯೊ ಮೂಲ್ಯವೌಷಧ । ತಂತ್ರತಿಲಕವೊ ರಮ
ಣರಿವರೈವರ ವಶೀಕರಣ ॥ ಯಂತ್ರಮಯಹಾಕೆಗಳು ನೃಪರೀ । ಯಂತ್ರಸೂತ್ರದ ಕೃತಿಕೆ ನಿನ್ನನಿ ।
ಯಂತ್ರಣವ ಹೇಳೌ ನಿಧಾನವನೆಂದಳಿಂದುಮುಖಿ ॥೨೨॥ ದೇವಿಯೆಂದಳು ಸತ್ಯಭಾಮಾ । ದೇವಿ
ಯರು ಮುಗುದೆಯರಲಾ ನಾ । ನಾವಮಂತ್ರದ ತಂತ್ರತೊಡಕಿನ ತೋಟಿಯುಳ್ಳವಳು ॥ ಭಾವಶು
ದ್ಧಿಯಲೈವರನು ಸಂ । ಭಾವಿಸುವೆನವರವರಚಿತ್ತದ । ಭಾವವರಿದುಪಚರಿಸುವೆನು ಚತುರತೆಯಚಾ
ಳಿಯಲಿ ॥೨೩॥ ಬಲವರಿದು ಹತ್ತುವದು ಚಿತ್ತದ । ನೆಲೆಯರಿದು ನೆಮ್ಮುವುದು ಮುರಿವಿನ। ಹೊಳವರಿ
ದುಹಿಂಗುವುದು ಹೊಗುವದು ಮನದೊಳೊಳವರಿದು ॥ಸುಳಿವರಿದು ಸೋಂಕುವುದು ತವಕಕೆ । ಬಲಿದು
ಮುನಿವುದು ಸವಿಯಬೇಟವ । ಬೆಳಸಿ ಬೆಸೆವುದು ಬಗೆಯಲೆಂದಳು ನಳಿನಮುಖಿ ನಗುತ ॥೨೪॥ ರಸಿಕ
ಹರಿ ಹದಿನಾರುಸಾವಿರ । ಶಶಿಮುಖಿಯರಲಿ ಬೇಟಚೌಗಿನ । ದೆಸಕ ಬಿಮ್ಮಿತು ಬಗೆಯ ಭಂಗವ್ಯಾಪ್ತಿ
ಕೃಷ್ಣನಲಿ ॥ ನುಸುಳು ನೆಲೆಡಿಳ್ಳಾಯ್ತು ಪ್ರಸರ। ಬೆಸುಗೆ ಬಿಗುಹುಳುಕೊತ್ತುಕಲೆಗಳ । ರಸದ ಪಸರವ
ನರಿಯಬಾರದು ವಿಗಡಪಿಟರುಗಳ ॥೨೫॥ ನೀವು ಮುಗುದೆಯರತಿವಿದಗ್ಧನು । ದೇವಕೀಸುತನೆನ್ನ ವರು
ಧ । ರ್ಮಾವಲಂಬರು ದಿಟ್ಟರಲ್ಲ ಮನೋಜಲೀಲೆಯಲಿ ॥ ನೀವು ಸೊಬಗಿನನಿಧಿಯಲೇ ಶತ । ಸಾವಿ
ರದಸತಿಯರಲಿ ಕೃಷ್ಣನ । ಜೀವವಿಶ್ರಮಸತಿಯರೆಂದಳು ನಗುತ ತರಳಾಕ್ಷಿ ॥೨೬॥ ಅರಸ ಕೇಳೈ ಸತ್ಯ

ಭಾಮಾ । ಸರಸಿಜಾನನೆ ದ್ರುಪದಸುತೆಯುರು । ಸರಸಮೇಳದಲೊಪ್ಪಿದರು ಚತುರೋಕ್ತಿಲೀಲೆಯಲಿ ॥ ಹರಿಯುಧಿಷ್ಠಿರಭೀಮಪಾರ್ಥರು । ವರಮುನಿಗಳಿತಿಹಾಸಮಯಬಂ । ಧುರಕಥಾಕೇಳಿಯಲಿ ಕಳಿದರು ಹಲವುದಿವಸಗಳ ॥೨೭॥ ಹಗೆಗಳಮರಾರಿಗಳು ನಮ್ಮಯ । ನಗರಿಶೂನ್ಯಾಸನದಲಿದ್ದುದು । ವಿಗಡ ರಾಮಾದಿಗಳು ವಿಷಯಂಗಳವಿನೋದಿಗಳು ॥ ಅಗಲಲಾರೆನು ನಿಮ್ಮವನದೋ ! ಲಗಕೆ ಬಿಡೆಯವ ಕಾಣೆನೆಂದನು । ನಗುತ ಕರುಣಾಸಿಂಧು ಯಮನಂದನನ ಮೊಗನೋಡಿ ॥೨೮॥ ನುಡಿದ ಕಾಲಾವಧಿಗೆ ಜರೆತೆರೆ । ಯಡಗಿದವು ಜಾಣಿನಲಿ ಸತ್ಯವ । ನಡಸಿದಿರಿ ಕಡೆಸಾರಿಗೆಯಲುನ್ನತಿಯಕೆಡಿಸದಿರಿ ॥ ಕಡು ಮನದಕರ್ಣಾದಿಗಳು ಕೈ । ದುಡುಕಿದೊಡೆಕೈಗಾಯ್ದುಧರ್ಮದ । ತಡಿಗೆ ಜಾರಿ ಜಯಾಧ್ವದಲಿ ಜಂಘಾಲರಹಿರೆಂದ ॥೨೯॥ ಮರೆಯಲಿಹಕಾಲದಲಿ ಬಲಿದೆ । ಚ್ಚರಲಿಹುದು ಬೇಕಾದೊಡೆಮಗೆ । ಚ್ಚರಿಸಿ ಕಾರ್ಯಸ್ಥಿತಿಯನೇ ಚರಿಸುವುದು ನಿಮ್ಮೊಳಗೆ ॥ ಅರಿದಿಹುದು ನೀನೆಂದು ರಾಯಂ । ಗರುಹಿ ಭೀಮಾದಿಗಳಿಗುಚಿತವ । ನೆರೆನುಡಿದು ದುರುಪದಿಯ ಮನ್ನಿಸಿ ಮರಳಿದನು ಪುರಕೆ ॥೩೦॥ ಅರಸಿ ಹರಿಯಾವನ್ನಾಯತತಿಕು । ಕ್ಕರಿಸಿದವು ಮುನಿಗಳ ಸಮಾಧಿಗೆ । ಕರುಬುವವರಾವಲ್ಲ ಕಾಣರು ನಖಗಕೊನೆಗಳನು ॥ ಅರಸ ತಾನೇ ಹರಿ ಹರಿದು ತ । ನ್ನರಕದವರನು ಬಿಡದೆ ಸಲಪುವ । ಕರುಣಾವಂತುಟೊ ರಾಯಗದುಗಿನವೀರನಾರಯಣನ ... ... ॥೩೧॥

ಅಂತು ಸಂಧಿ ೧೫ಕ್ಕೆ ಪದ ೮೫೫ಕ್ಕಂ ಮಂಗಳಮಸ್ತು.

ಹದಿನಾರನೆಯ ಸಂಧಿ.

ಸೂಚನೆ ॥ ವಿಪಿನದಲಿ ಪಾಂಚಾಲೆ ಭಕುತಿಯ । ತಪದಲಿರೆ ದೂರ್ವಾಸನುಗ್ರವ ।
ನಪಹರಿಸಿ ಹರಿ ಮರಳಿ ಹೊಕ್ಕನು ದ್ವಾರಕಾಪುರಿಯ ॥

ಪದ॥ ಕೇಳು ಜನಮೇಜಯಧರಿತ್ರೀ । ಪಾಲ ಪಾಂಡುಕುಮಾರಕರುವಿಪಿ । ನಾಲಯದೊಳನುಭವಿಸಿದರು ಸಂವತ್ಸರಾಷ್ಟಕವ ॥ ಲೀಲೆ ಮಿಗೆಯೈತಂದು ಯಮುನಾ । ಕೂಲದಲಿ ವರತೀರ್ಥಸೇವಾ । ಶೀಲರಿದ್ದರು ಸಕಲಮುನಿಜನಸಹಿತ ಹರುಷದಲಿ ॥೧॥ ಆಸುಯೋಧನನೇಕಛತ್ರವಿ । ಳಾಸ ದುರ್ವಿರರಾಜ್ಯಪದವಿ । ನ್ಯಾಸವಿಭವದ ಸುಖದ ಸೌಖ್ಯವನನುಭವಿಸುತಿರಲು ॥ ಭೂಸುರವ್ರಜನಿಕರವರವಿ । ವ್ಯಾಸಮುನಿಜನಸಹಿತ ವರದೂ । ರ್ವಾಸಮುನಿಪತಿ ಬಂದು ಹೊಕ್ಕನು ಹಸ್ತಿನಾಪುರವ ॥೨॥ ಮುನಿಯ ಬರವನು ಕೇಳಿ ದುರ್ಯೋ । ಧನನು ಭೀಷ್ಮದ್ರೋಣಗೌತಮ । ರಿನತನಯ ಗುರುಸೂನು ವಿದುರಾದಿಗಳನೊಡಗೊಂಡು ॥ ವಿನುತಭೂಸುರನಿವಹಕಾಂತಾ । ಜನದಕನ್ನಡಿಕಲಶವಾದ್ಯ । ಧ್ವನಿಸಹಿತಲಿದಿರಾಗಿ ಕಾಣಿಕೆಯಿತ್ತು ನಮಿಸಿದರು ॥೩॥ ವಂದನೆಯ ಕೈಕೊಳುತ ಗಂಗಾ । ನಂದನನ ಕೈವಿಡಿದು ಬರೆ ಕೃಪ । ಮುಂದೆ ಕರ್ಣಾದಿಗಳ ಗಡಣದಿ ಹೊಕ್ಕನರಮನೆಯ ॥ ಬಂದನಂಗನೆಸಹಿತ ನಮಿಸಿದ ।

ನಂಧನೃಪನನು ಹರಸಿ ಹರುಷದ । ಲಂದು ಮುನಿ ಮಂಡಿಸಿದನುನ್ನತಸಿಂಹಪೀಠದಲಿ ॥೪॥ ಹೊಳೆವ
ಹೊಂಗಳಶೋದಕದಿ । ಮುನಿಕುಲಲಲಾಮನ ಪಾದಪದ್ಮವ । ತೊಳೆದು ಮಧುಪರ್ಕಾದಿಮನ್ನಣೆ
ಯಿಂದ ಸತ್ಕರಿಸಿ ॥ ಬಳಿಕ ಕುಶಲವ ಕೇಳ್ದು ಮುನಿಸಂ । ಕುಲವನೊಲಿದಾದರಿಸಲಿತ್ತಲು । ಪೊಲವು
ಮಿಗೆ ಯೆಡೆಯಾದುದಾರೋಗಣೆಗೆ ಮುನಿ ಹೊಕ್ಕ ॥೫॥ ಷಡುರಸಾನ್ನದಲಾದರಣೆಯಿಂ । ದುಡು
ಗೊರೆಗಳಿಂ ತುಷ್ಟಿಬಡಿಸಿದ । ಪೊಡವಿಪಾಲಕರುಷಿಗಳಷ್ಟಾಶೀತಿಸಾವಿರವ ॥ ಕಡುಸುಖದ ಸನ್ಯಾಸಿ
ವೇಷದ । ಮೃಡನು ಮುದದಲಿ ಕೌರವನ ಮೈ । ದಡವಿ ಮೆಚ್ಚಿದೆ ಮಗನೆ ಬೇಡೊಲಿದುದನು ನಿನ
ಗೆಂದ ॥೬॥ ಅರಸ ಕೇಳಂಗೈತಳದಲಿಹ । ಪರುಷವನು ಕಲ್ಲೆಂದು ಟಿಕ್ಕೆಯ । ಪರಳಿನಲಿ ಹರುಷಿಸುವ
ಮೂಢಮನುಷ್ಯರಂದದಲಿ ॥ ಅರಸಕೌರವನೆಂದನೆನಿಬರು । ವೆರಸಿ ಪಾಂಡವರರಸಿಯುಣ್ಣಲೊಡ ।
ನಿರದೆ ಕವಳವ ಬೇಡಿಯಭ್ಯಾಗತರು ನೀವೆಂದ ॥೭॥ ಭೂಪ ಕೇಳೆರಡುಂಟೆ ನಿನ್ನಾ । ಳಾಪವನು ಕೈಕೊಂ
ಡೆನೆನುತ ಮ । ಹಾಪರಾಕ್ರಮಿಯೇಳಲೊಡನೆದ್ದುದು ನೃಪಸ್ತೋಮ ॥ ತಾಪಸರು ಬಳಿವಿಡಿದು ಬರೆ
ಬಳಿಕಾ । ಪುರವ ಹೊರವಂಟು ಭವನಿರ್ಲೇಪ ಭೀಷ್ಮದ್ರೋಣರನು ಕಳುಹಿದನು ಮನೆಗಳಿಗೆ ॥೮॥
ಅಗಡುಕೌರವನೊಡ್ಡಿದನಲಾ । ವಿಗಡವನು ಮುನಿಯುಗ್ರರೋಷದ । ಸೆಗಳಿಕೆಗೆ ಪಾಂಡವರು ಸವಿದು
ತ್ತಾದರೆಕಟನುತ ॥ ದುಗುಡದಲಿ ಗಾಂಗೇಯವಿದುರಾ । ದಿಗಳು ಮನೆಯೊಳಗಿತ್ತಕೌರವ । ನಗುತ
ಕರ್ಣಾದಿಗಳಗಡಣದಿ ಪೊಕ್ಕನರಮನೆಯ ॥೯॥ ಮರುದಿವಸ ಸತಿಯುಂಡಸಮಯವ । ನರಿದು ಮುನಿ
ಪತಿ ಬರಲು ಕಪಟದ । ನಿರಿಗೆಯನು ಬಲ್ಲನೆ ಯುಧಿಷ್ಠಿರನೆದ್ದು ಸಭೆಸಹಿತ ॥ ಕಿರಿದೆಡೆಯಲಿದಿರಾಗಿ
ಭಕುತಿಯ । ಹೊರಿಗೆಯಲಿ ಕುಸಿವಂತೆ ನೃಪಬಂ । ದೆರಗಿದನು ಮುನಿವರಗೆ ತನ್ನನುಜಾತರೊಡ
ಗೂಡಿ ॥೧೦॥ ಕುಶಲವೇ ನಿಮಗೆನುತ ಲೈವರ । ನೊಸಲ ನಿಜಕರತಳದಲೆತ್ತುತ । ಲೊಸೆದು ಧೌಮ್ಯಾ
ದ್ಯಖಿಳಭೂಸುರಜನವ ಮನ್ನಿಸುತ ॥ ಹೊಸಕುಶೆಯ ಪೀಠದಲಿ ಮುನಿವೇ । ಷ್ಟಿಸಿದನರ್ಘ್ಯಾಚಮನ
ಪಾದ್ಯ । ಪ್ರಸರಮಧುಪರ್ಕಗಳ ಮಾಡಿ ಮಹೀಶನಿಂತೆಂದ ॥೧೧॥ ದೇಶ ಕಾನನ ವಸನ ವಲ್ಕಲ ।
ಭೂಸುರವ್ರಜವಾತ್ಮಜನವ್ರ ಪ । ಲಾಶಪರ್ಣವೆ ಪಾತ್ರೆ ಭೋಜನ ಕಂದಮೂಲಫಲ ॥ ಈ ಸರಿತ್ಪಾ
ನೀಯಮಜ್ಜನ । ವಾಸವೇ ಗುಹೆ ಭವನ ರಾಜ್ಯವಿ । ಳಾಸವೆಮ್ಮದು ಜೀಯ ಚಿತ್ತೈಸೆಂದ ಯಮ
ಸೂನು ॥೧೨॥ ಧಾರಿಣೀಪತಿ ಹೇಳಬಹುದುಪ । ಚಾರವೇಕಿದು ರಾಜ್ಯಪದವಿ । ಸ್ತಾರವಾವುದು
ರಾಜಋಷಿ ನಿನಗಾರು ಸರಿಯುನ್ನು ॥ ಸಾರೆಯಾಯ್ತಸ್ತಮಯಸಮಯಕು । ದಾರವನ್ನಿಯ ವಿವಿ
ಧಪೀಡಾ । ಕಾರಕುಂಟೆ ಚಿಕಿತ್ಸೆಯೆಂದನು ಮುನಿ ನೃಪಾಲಂಗೆ ॥೧೩॥ ಆವಜನ್ಮದ ಸುಕೃತಫಲ ಸಂ ।
ಭಾವಿಸಿದುದೋ ನಿಮ್ಮ ಭರವಸೆ । ದಾವ ಪಡೆವನು ಕೊಟ್ಟೆನೆಂದನು ನೃಪತಿ ಕೈಮುಗಿದು ॥ ಆವಿಗಡ
ಮುನಿ ಬಳಿಕನುಷ್ಠಾ । ನಾವಲಂಬನಕತ್ತ ಯಮುನಾ । ದೇವಿಯರ ಹೊಗಲಿತ್ತ ನೃಪ ಕರಸಿದನು
ದುರುಪದಿಯ ॥೧೪॥ ಅರಸಿಯಾರೋಗಿಸಿದಭಾವವ । ಬರವಿನಲಿ ನೃಪನರಿದು ಅರಸನ । ಹರುಷವ
ಡಗಿತು ಧೈರ್ಯ ಸುಕ್ಕಿತು ವೃಷ್ಣನಯನಾಂಬು ॥ ಉರಿಹೊಡೆದಕೆಂದಾವರೆಯವೊಲ್ । ಕರುಕುವಡೆ
ದುದು ಮುಖ ಕಪೋಲಕೆ । ಕರವನಿಟ್ಟನು ಮುಂದುಗೆಟ್ಟು ಮಹೀಶ ಚಿಂತಿಸಿದ ॥೧೫॥ ತುಡುಕಿ ಸುರ
ಪನ ಸಿರಿಯ ಶರಧಿಯ । ಮಡುವಿನಲಿ ಹಾಯ್ಕಿದನು ರೋಷವ । ಹಿಡಿದರೀಗಳೆ ಸುಟ್ಟು ಬೊಟ್ಟಿಡು

ವನು ಜಗತ್ತ್ರಯವ ॥ ಮೃಡ ಮುನಿದು ಕೋಪಿಸಲಿ ಶಾಪವ । ಕೊಡಲಿ ಸಾಸದಕಂಜೆನೆನ್ನಯ । ನುಡಿಗನೃತ ಸಂಭಾವಿಸಿತಲಾ ಕೆಟ್ಟೆನಾನೆಂದ ॥೧೬॥ ಏನಿದೇನೆಲೆ ನೃಪತಿ ಚಿತ್ತ । ಗ್ಲಾನಿಯನು ಬಿಡು ನಿನ್ನ ವಚನಕೆ । ಹಾನಿಯುಂಟೇ ಸದಪೆ ಸುರಪನ ಸಗ್ಗಗಿಗ್ಗವನು ॥ ಆನೆ ವರವರಿದೆಳೆದುತಹೆ ಸುರ । ಧೇನುವನು ನಿಮ್ಮಡಿಗೆನುತ ಪವ । ಮಾನಸುತ ನಿಜಗದೆಯ ಜಡಿದನು ಬೇಗ ಬೆಸಸೆನುತ ॥೧೭॥ ಬರಿಯನುಡಿಯೇಕಕಟ ನಿಮ್ಮಯ । ಹೊರಿಗೆವಾಳನು ಕೃಷ್ಣನಾತನ । ಮರೆಯಹೊಕ್ಕರಿಗುಂಟೆ ದೋಷ ದರಿದ್ರ ಮೃತ್ಯುಭಯ ॥ ಮರೆದಿರ್ದ್ಯ ಸೆಳೆಸೀರೆಯಲಿ ಸತಿ । ಯೊರಲಲಕ್ಷಯವಿತ್ತು ತನ್ನನು । ಮೊರೆದ ಮಹಿಮಾರ್ಣವನ ಭಜಿಸುವುದೆಂದನಾಥೌಮ್ಯ ॥೧೮॥ ಕ್ಷತ್ರತೇಜದತೀವ್ರಪಾತನಿ । ಮಿತ್ರನಿಮಗಂಜನು ಸುರೇಶ್ವರ । ಸತ್ಯ ಕೆಡುವರೆ ಸಾರೆಯಿದೆಲಾ ಕೌರವನ ನಗರ ॥ ಸತ್ಯಮಾರಿಯ ಸುರಭಿಗಳುಪಿದ। ಕಾರ್ತವೀರ್ಯಾರ್ಜುನನ ಕಥೆಯನು । ಮತ್ತೆ ಹೇಳುವೆ ಭಜಿಸು ಕೃಷ್ಣನನೆಂದನಾಥೌಮ್ಯ ॥೧೯॥ ನಾಮವನು ನಂಬಿದಮಹಾತ್ಮರ । ನಾಮವನು ನೆನೆದವರು ಪಡೆವರು । ಕಾಮಿತವನೆಲೆನಿಮ್ಮನೆಲೆ ನಿಮಗಮಿಯಬಾರದಲೇ ॥ ನಾಮನಿನ್ನಲಿ ಕೃಪೆ ವಿಶೇಷವು । ಕಾಮಿನಿಗೆ ಕರಗುವನು ಕೃಷ್ಣನು । ಯಾಮಹಿಳೆ ಭಜಿಸುವುದು ಬೇಗದಲೆಂದನಾಥೌಮ್ಯ ॥೨೦॥ ಭೂಸುರರ ಕಳಕಳವೆ ನೃಪನಾ । ಕ್ಲೇಶವನು ಪವಮಾನಸುತನಾ । ಕ್ರೋಶವನು ನರನಾಟವನು ಮಾದ್ರೇಯರುಪಟಳವ ॥ ಆಸರೋಜಾನನೆ ನಿರೀಕ್ಷಿಸು । ತಾಸುರದಮುಖದಲಿ ಮುನಿಮಂ । ಕ್ರೋಪದೇಶದ ಬಲುಮೆಯಿಂದವೆ ನೆನೆವಳಚ್ಯುತನ ॥೨೧॥ ಮುಗುದೆಮಿಗೆ ನಿಂದಿರ್ದು ಸಮಪದ । ಯುಗಳದಲಿ ಸೂರ್ಯನ ನಿರೀಕ್ಷಿಸಿ । ಮುಗಿದುಕೈಗಳ ಮಗುಳೆ ಯೆವೆಯನು ಮುಚ್ಚಿ ನಾಸಿಕವ ॥ ನೆಗೆವ ಪುಳಕಾಂಬುಗಳು ಮೈಯಲಿ । ಬಿಗಿದು ಪೊನಲಾಗಿರಲು ಹಿಂಮೊಟ । ಗೊಗುರ್ವಕ್ಕುಂತಳದಬಲೆ ಕಾಮಿಸಿ ನೆನೆದಳಚ್ಯುತನ ॥೨೨॥ ತ್ರಿರವಾವರ ದೈತ್ಯಕುಲಸಂ । ಹಾರ ಭಕ್ತಜನಾರ್ತಿಪರ ಭವ । ದೂರ ಸಕಲಚರಾಚರಾತ್ಮಕ ದುಷ್ಟಕಂಸಹರಾ ॥ ಚಾರುಗುಣಗಂಭೀರ ಕರುಣಾಕರ ವಿಹಿತವಿಚಾರಪಾರಾ । ವಾರ ಹರಿ ಮೈದೋರೆನುತ ಹಲುಬಿದಳು ಲಲಿತಾಂಗಿ ॥ ನೀಲಕಂಠನ ನೇತ್ರವಹ್ನಿ । ಜ್ವಾಲೆಗಾಹುತಿಯಾಗಿ ಮಗ್ಗದ । ಕಾಲಕಾಮನ ಪಥವ ಪಡೆದರು ಪಾಂಡುನಂದನರು ॥ ಏಳುದೇವೈ ಯೆನ್ನನುಡಿಯನು । ಪಾಲಿಸೈ ಸಂಕಲ್ಪವಳಿದೊಡೆ । ಹಾಳು ಹೊರುವುದು ಕೃಷ್ಣ ಮೈದೋರೆಂದಳಿಂದುಮುಖಿ ॥೨೪॥ ಹಿಂದೆ ನಾಸೋಪಾಯದಿರುಬಿನ । ಬಂಧನವ ಬಿಡಿಸಿದೆಯಲ್ಲೈ ಗೋ । ವಿಂದ ಶರಣಾನಂದಕಂದ ಮುಕುಂದ ಗುಣವೃಂದ ॥ ಇಂದು ರುದ್ರನು ತಪ್ಪಿಸಾಭಸ । ಬಂದೊಡೆಮ್ಮನುಕಾವರಾರೆಲೆ । ತಂದೆ ನೀನೇಗತಿಯೆನುತ ಹಲುಬಿದಳು ಲಲಿತಾಂಗಿ ॥೨೫॥ ಅರಸುವೆನೆ ಪರಿಪೂರ್ಣ ಕೇಳೆಂ । ದರುಹುವೆನೆ ಸರ್ವಜ್ಞ ನಾಕೆಂ । ದೊರಲಲಾರೆನು ತಾಯಿ ನೀನೆಮಗಾವು ಶಿಶುಗಳಲೇ ॥ ಕುರುಹುದೋರ್ದೈ ಕೃಷ್ಣ ಕರುಣವ । ಕರೆದು ಕಳೆಯಲು ಭಕುತರಾರ್ತಿಯ । ನುಡವಿಪ್ರಳೆಘೋರಟ್ಟರಾರುಂಟೆಂದಳಿಂದುಮುಖಿ ॥೨೬॥ ಮುನ್ನವೇ ಮುನಿದಂಬರೀಷನ । ಬೆನ್ನನೆತ್ತಲು ಹರನ ನೇತ್ರದ । ವಹ್ನಿಯೊಳಗುದಯಿಸಿದಕೆಂಗಿಡಿ ಸುಡಲು ಕಂಗೆಡುತ ॥ ಉನ್ನತೋನ್ನತ ಕೃಷ್ಣರಕ್ಷಿಸು। ಪನ್ನಗಾಸನ ಹರಿಯೆ ರಕ್ಷಿಸು। ಅನ್ಯಗತಿಯೆನಗಾರೆನುತ ಹಲುಬಿದಳು ಭೂಪಾಲ ॥೨೭॥ ಬಳಿಕ ನಿನ್ನಯವರಸುದರ್ಶನ । ಸುಳಿವುದೋರಲು ಕೋಟಿಸೂರ್ಯರ । ಬೆಳಗು ಬೀರಲು ಹೊತ್ತಿವು

ರಿಪುರಿಲೋಕವಮೂರರಲಿ ॥ ಬಲುಬಿಸಿಲು ಬಾಯ್ಗಾಂತಚಂದ್ರಿಕೆ । ಹೆಳಗೆನಲು ಘನರೋಷವಸ್ಥೆಯ ।
ಬೆಳಗು ಬೀತುದು ಚಕಿತಚಂದ್ರಮಸಾದ ದೂರ್ವಾಸ ॥೨೮॥ ಅಗಿದುಬೆಂಬತ್ತಿದೊಡೆ ಮುನಿಪರೂ ।
ಜಗವನೆಲ್ಲವ ತೊಳಲಿ ಭಕುತಿಯ । ಬಿಗುಹಿನಲಿ ಪೈಯಿಕ್ಕ ಸುತಿಸಾರೂಪ್ಯಮಾನದಲಿ ॥ ಹೊಗಳಿದೊ
ಡೆ ಹಿಂಗಿದವಲಾ ಸುರ । ರುಗಳುಘೇಯೆನಲಂಬರೀಷನ । ಬೆಗಡ ಬಿಡಿಸಿದಕೃಷ್ಣ ಪೈಮೋನೆಂದಳಿಂದು
ಮುಖಿ॥೨೯॥ಅವನಿಪತಿ ಕೇಳಖಿಳನಿಗಮ । ಸ್ತವಕೆ ತಾನೆಡೆಗುಡದವಾಹಿಪಾ । ರ್ವವನನೇಕುಭವಂಗಳಲಿ
ಭಜಿಸಿದರೆಹೊ ನಿನ್ನವರು॥ ಯುವತಿಯಕ್ಕೆಯ ಪ್ರೈಸದೆ ಯಾ। ದವತಿರೋಹಿತೆ ಸುಳಿದನಾಪಾಂ। ಡವರು
ಕಂಡರು ದೂರದಲಿ ಖಗರಾಜಕೇತನವ ॥೩೦॥ ಮುಗುಳುನನೆಗಳ ಹೂಂಗುವಂಗದ । ನಗೆಮೊಗದೊಳಾ
ನಂದಬಿಂದುಗ । ಳೊಗುವಕಂಗಳ ಹೊತ್ತಹರುಷಸ್ಪಂದಸಂಪ್ರದಾ ॥ ಬಗೆಯಬೆರಸದ ಪರವಸ
ದೊಳಾ । ನಗೆಯೊಳೆಡೆಗೊಂಡಮಳಜನ್ಮದ । ಮುಗುದಪಾಂಡವರೆರಗಿದರು ಧೌಮ್ಯಾದಿಗಳುಸಹಿತ ॥
ರಥವನಿಳಿದಸುರಾರಿ ಸುಮನೋ । ರಥವಿಡಿದು ಬಪ್ಪಂತೆ ಕುಂತೀ । ಸುತರ ನಿಜಭುಜವಾರೆ ತೆಕ್ಕೈಸಿ
ದನು ಹರುಷದಲಿ ॥ ಕ್ಷಿತಿಯಮರರಾಶೀರ್ವಚನಸಂ । ಸ್ತುತಿಗೆ ತಲೆವಾಗುತ್ತ ಮಿಗೆ ದ್ರುಪ । ದದಿಯ
ಹೊರೆಗೈದಿದುದುಘೇಯೆಂದುದಸುರ ಸ್ತೋಮ ॥೩೧॥ ಧ್ಯಾನಗೋಚರನಾಗಿ ವನಿತೆಯ । ಮಾನಸದಲಿ
ಹಪರಮಹಂಸನು । ಮಾನುಷಾಕೃತಿಯಾಗಿ ತೋರಿದಬಾಹ್ಯರಚನೆಯಲಿ ॥ ಮಾನಿನಿಯ ಪೈಡಡವಿ
ಚಿಂತೆಯ। ದೇನು ತಂಗಿ ಲತಾಂಗಿ ಹೇಳಾ । ಮೌನಮುದ್ರೆಯದೇನೆನಲು ಕಂದೆರೆದಳಿಂದುಮುಖಿ ॥೩೨॥
ಉಬ್ಬಿದಳು ಹರುಷದಲಿ ದುಗುಡದ । ಕೊಬ್ಬ ಮುರಿದುದು ಪುಳಕವಾರಿಯೊ । ಳೊಬ್ಬುಳಿಯೊಳೊ
ಡೆಹಾಯ್ದು ನಿಂದವು ನಯನವಾರಿಗಳು ॥ ಸಬ್ಯತಾಲತೆ ಹೂತು ಪಸರಿಸಿ । ಹಬ್ಬಿ ಫಲವಾದಂತೆ
ಕಾಯವ । ನಿಬ್ಬರದಲೀಡಾಡಿದಳು ಹರಿಪದವಸಯೋಜದಲಿ ॥೩೩॥ ಧರಣಿಯನು ಬಿಡಪಳೆದು ಪೆಚ್ಚಿದ।
ಚರಣವಿದು ಸುರನದಿಯ ಸೃಜಿಸಿದ। ಚರಣವಿದುಕಲ್ಲಾದಹಲ್ಯಾಶಾಪನಿರುಹರಣ॥ ಚರಣವಿದು ಕಾಳಿಂ
ಗಮರ್ದನ। ಚರಣವಿದು ಶಕಟಪ್ರಭಂಜನ। ಚರಣವಿದೆಲಾಯೆನುತ ಕೊಂಡಾಡಿದಳು ಹರಿಪದವ ॥೩೪॥
ಸ್ತೋತ್ರಕೀಗಳು ಸಮಯವೇ ಹೇ । ಳೇತಕೀಸ್ತುತಿತಂಗಿ ಚಿತ್ತದೊಳಾತುರವಿದೇನೆನುತ ಹಿಡಿದೆತ್ತಿದನು
ಮಸ್ತಕವ॥ ಬೀತತರುಶುಕನಿಕರಕೀವುದೆ। ಶೌತಣವಸಲೆ ತುಷ್ಟಿಬಡಿಸುವ । ರೀತಿಯನು ನೀ ಬಲ್ಲೆಯೆಂದಳು
ಕಮಲಮುಖಿನಗುತ ॥೩೫॥ ಶೌರಿ ಕೇಳ್ ಸಾಕ್ಷಾತಶಿವ ನಮ। ಗಾರವಹದೂರ್ವಾಸಮುನಿ ಪರಿ। ವಾರಸಹಿತೈ
ತಂದೊಡಭ್ಯಾಗತೆಯನೃಪನಿತ್ತ ॥ ತೀರಿತಕ್ಷಯದನ್ನವಿಂದುಮ । ಹಾಋಷಿಂದ್ರಗುಪಾರ ನಿನ್ನ
ಯ । ವೀರಮೃದುನನೆಂದು ಬಿನ್ನೈಸಿದಳು ನಳಿನಾಕ್ಷಿ ॥೩೬॥ ನಾವು ಹಸಿದೈತಂದೊಡೀಪರಿ । ವೇಳಿ
ನಾನಾದೂರ ದೂರುವು । ದಾವುದುಚಿತವು ಹೇಳೆನಲು ನಡನಡುಗಿ ಕೈಮುಗಿದು ॥ ದೇವ ನಿಮ್ಮಯ
ಹಸಿವು ಕಳಿವೊಡೆ । ಭಾವಶುದ್ಧಿಯಭಕುತಿಬೇಹುದು । ನಾವುಚಂಚಲಚಿತ್ತರೆಂದಳು ಕಮಲಮುಖಿ
ನಗುತ ॥೩೭॥ ಮಾತುಗಳು ಸೊಗಸುವುದೆ ಹಸಿವಿಂ । ದಾತುರರಿಗೆಲೆತಂಗಿತಾರಾ । ಪ್ರೀತಿವಿದರೊಳಿ
ದಿತ್ತುದೇ ಕ್ಷುಧೆಗಮೃತಪುಂಜವದು॥ ಏತಕೀಜಂಜಡವೆನಲು ಜಲ । ಜಾತಮುಖಿ ಕಂಪಿಸುತ ಕುಮುದಾ।
ರಾತಿ ಕೊಟ್ಟಾಸ್ಥಾಲಿಯನು ತಡವಿದಳು ಕರದಿಂದ ॥೩೮॥ ಕಂಡು ಕಿಂಚಿತ್ಪಾಕಶೇಷವ । ಕೊಂಡು
ಬಂದೊಡೆ ಕೃಷ್ಣನದ ಕೈ । ಕೊಂಡು ಸವಿದನು ತಣಿದು ತಲೆದೂಗಿದನು ತೇಗಿದನು ॥ ಪಾಂಡವರ

ಪತಿಕರಿಸಿ ನಲಿವುತ । ಚಾಂಡನುಡಿದನು ಹೃದಯಕ್ಷುಧೆಯನು । ಖಂಡಿಸಿದೆಲಾಯೆನುತ ಕೊಂಡಾಡಿದನು ದ್ರೌಪದಿಯ ॥೪೦॥ ಅರಸ ಕೇಳ್ ಚೆಯಲಿ ವನದು । ಬ್ಬರದ ತನುವಿನ ತಳಿತರೋಮದ । ಭರದ ತುಷ್ಟಿಯ ಬಳಿಯತೇಗುವ ಹಿಗ್ಗುವಳ್ಳೆಗಳ ॥ ಕೊರಳ ಕಡರುವ ಹೊಟ್ಟೆಗಳ ಖುಷಿ । ವರರು ಸಹ ದೂರ್ವಾಸಮುನಿಯ । ಚ್ಚರಿಯವಾಳುತ ತನ್ನೊಳಿಂದನು ಮುರಹರನ ಬರವ ॥೪೧॥ ಬಂದನೇ ಗೋವಿಂದಭಕುತರ । ಬಂಧುವಲ್ಲಾ ಆತ್ರನೊಳು ಮನ । ಸಂದಮನುಜರ ನೆಣಸವಣಿಪರಾರು ಭುವನದಲಿ ॥ ಎಂದೆನುತ ದೂರ್ವಾಸಮುನಿಪತಿ । ಬಂದು ಕಂಡನು ಪರ್ಣಶಾಲೆಯ । ಲಂದು ಕುಂತೀಸುತಸಹಾಯನ ಕೃಷ್ಣರಾಯನನು ॥೪೨॥ ಕಾಣುತಿದಿರೆದ್ದಸುರಮರ್ದನ । ಕಾಣಿಕೆಯ ಕೊಟ್ಟೆರಗಿ ಹೋ ಹೋ । ಸ್ಥಾಣುವಿನ ಬರವೆತ್ತಣಿಂದಾಯ್ತೆನುತ ಕೈಮುಗಿಯೆ ॥ ಮಾಣು ಮಾಧವ ನಿಲ್ಲು ಮಾನವ । ಸಾಣೆಯದನಾಟಕದ ನುಡಿಯಿದು । ಜಾಣನೀನಹೆಯೆನುತ ಮುನಿ ಹಾಯ್ದಪ್ಪಿದನು ಹರಿಯ ॥೪೩॥ ಯತಿಗಳ್ಳೆತರೆ ಗಾರುಹತ್ಯ । ಪ್ರತತಿ ವಂದಿಸಬೇಹುದಾಪ । ದ್ಧತಿಯ ತೋರುವೆಪಂಥವೈಸಲೆ ನೀನು ವಂದಿಪುದು ॥ ಅತಿಸಹಜವೈ ಕೃಷ್ಣ ಕುಳ್ಳಿರು । ಸುತಿಶಿರೋಮಣಿ ಕುಳ್ಳಿರಮ್ಮಾ । ಹತಗ್ರಹಸ್ತನು ಕುಳ್ಳಿರೆನುತವೆ ಮುನಿಪ ಮಂಡಿಸಿದ ॥೪೪॥ ತುಂಬಿ ಕುಳ್ಳಿರ್ದಖಿಳಮುನಿನಿಕ । ರುಂಬಸಭೆಯೊಳಗಿದ್ದ ಮುನಿಪಂ । ಗಂಬುಜಾನನೆ ನಮಿಸೆ ಹರಸಿಬನ್ನೆದೆಯಾಗೆನುತ ॥ ಹಂಬಲಿಸುತಿಹನಿಗಮಶಾಸ್ತ್ರಗ । ಳಿಂಬುಗಾಣದಗಾಧದೈವದ । ಬೆಂಬಳಿಯಲಿರಲಿನ್ನದಾವುದಸಾಧ್ಯನಿಮಗೆಂದ ॥೪೫॥ ಮೈವಶವ ಮಾಡದಿರಲೇ ಪರ । ದೈವವನು ಕುರುಕುಲದಬೇರನು । ಕೊಯ್ವನೀ ಹರಿ ಒಳಿಸಲಿಸಿ ಭೀಮಾರ್ಜುನಾಸ್ತ್ರದಲಿ ॥ ಕಾವನೈ ನಿಮ್ಮೈವರನು ಕೈ । ಗಾವನೇ ಪರರಾಜ್ಯಲಕುಮಿಯ । ಕೈವಿಡಿವ ಸಂಕಲ್ಪಸಿದ್ಧಿಪುದೆಂದನಾಮುನಿಪ ॥೪೬॥ ಎಲೆಮುನೀಶ್ವರ ನಿಮ್ಮನುಡಿಯ । ಸ್ಖಲಿತವಿದು ಯಿಹಪರದಗತಿನಿನ್ನೊಲವು ಕೃಷ್ಣನ ಕರುಣೆಯಿರಲಿನ್ನಾವುದರಿದೆಮಗೆ ॥ ನಳಿನಸಖನಪರಾಂಬುರಾಶಿಯ । ನಿಲುಕುತೈದನೆ ಹಸಿದು ದೀಮುನಿ । ಬಳಗವಾರೋಗಣೆಗೆ ಚಿತ್ತವಿಸೆಂದ ಯಮಸೂನು ॥೪೭॥ ಬೇರು ನೀರೂಡಾಗೆ ತಣಿಯವೆ । ಭೂರುಹದ ಶಾಖೋಪಶಾಖೆಗ । ಳೋರಣೆಯ ನಿಜದೇಹವಂಗೋಪಾಂಗನೆಂದೆನಿಪ ॥ ಶ್ರೀರಮಣ ಸಂತೃಪ್ತನಾದೊಡೆ । ಬೇರೆ ಭೋಜನವೆಮಗೆ ಬೇಹುದೆ । ಭೂರಮಣ ಕೇಳೆನುತ ಮತ್ತಿಂತೆಂದನಾಮುನಿಪ ॥೪೮॥ ಮೃಷ್ಟಭೋಜನದಿಂದನಾವ್ಸಂ । ತುಷ್ಟರಾಗೊಲಿದುದನು ಬೇಡೆನೆ ದುಷ್ಟಕೌರವ ನಮ್ಮನಟ್ಟಿದ ಧೂರ್ತವಿದ್ಯೆಯಲಿ ॥ ಕಷ್ಟವೇ ಕೈಗಟ್ಟಿತಲ್ಲದೆ । ಕೆಟ್ಟರೇ ಪಾಂಡವರು ಹರಿಪದ । ನಿಷ್ಠರನು ನಿಲುಕುವನೆ ದುರ್ಜನನೆಂದನಾಮುನಿಪ ॥೪೯॥ ಎಂದು ಹರಯನು ಹೊಗಳಿ ನಾನಾ । ಚಂದದಲಿ ಪಾಂಡವರ ತಿಳುಹಿ ಮುನೀಂ । ದ್ರ ತನ್ನಾಶ್ರಮಕೆ ಸರಿದನು ತಾಪಸರುಸಹಿತ ॥ ಅಂದು ಕುಂತೀನಂದನರಿಗಾ । ನಂದಸುಖವನು ಕರೆದು ದೇವಮು । ಕುಂದಬಿಜಯಂಗೈದು ಹೊಕ್ಕನು ದ್ವಾರಕಾಪುರಿಯ ... ... ॥೫೦॥

ಅಂತು ಸಂಧಿ ೧೬ ಕ್ಕೆ ಪದ ೮೭೫ ಕ್ಕಂ ಮಂಗಳಮಸ್ತು.

ಹದಿನೇಳನೆಯ ಸಂಧಿ.

ಸೂಚನೆ॥ ರಾಯುಕುರುಪತಿ ವಿದುರಗುರುಗಾಂ , ಗೇಯುಕೃಪರಲ್ಲೆನಲು ಪಾಂಡವ ;
ರಾಯ ವಿಪಿನಕೆ ಘೋಷಯಾತ್ರೆಯ ನೆವದಲೈತಂದ ॥

ಕೇಳು ಜನಮೇಜಯಧರಿತ್ರೀ । ಪಾಲ ನಿಜನಗರಕ್ಕೆ ಲಕ್ಷ್ಮೀ । ಲೋಲ ಬಿಜಯಂಗೈದನಿತ್ತಲು ಪಾಂಡುನಂದನರು ॥ ಮೇಲುದುಗುಡದ ಮುಖದಚಿಂತೆಯ । ಜಾಳಿಗೆಯ ಜಡಮನದಲಿದ್ದರು । ಸೂಳುಸುಯ್ಲಿನ ಹೊಯ್ಲನಾಸಾಪುಟದ ಬೆರಳಿನಲಿ ॥ ಸೂರೆವೋದುದು ರಾಜ್ಯಸಿರಿ ಮುಮ್ಮಾರುವೋದುದು ಲಜ್ಜೆಬೆಟ್ಟವ । ಸೇರಿ ಕಾನನಕಿಳಿದು ವನದಿಂದಡರಿ ಗಿರಿಕುಲವ ॥ ತಾರುತಟ್ಟಿಗೆಹಾಯ್ವಸುಖಮನ । ದೇರು ಮಸಗಿ ಮುರಾರಿ ಕೃಪೆಯನು । ತೋರಿಯಡಗಿದನಕಟವಿಧಿಯೆಂದಳಲಿದನು ಭೂಪ ॥೧॥ ಎಹಗೆ ಸ್ವೈರಿಸಿನಿಂದರೋ ವ್ರಜ । ಮಹಿಳೆಯರು ಕೃಷ್ಣಾಂಘ್ರಿವಿರಹದ । ದಹನದಾಪಸ್ತಂಭಕೌಷಧದಾನಶೌಂಡರಿಗೆ ॥ ಆಹಹ ಕೊಡುವೆನು ನನ್ನನೆನ್ನುತು । ಮ್ಮಹದ ಮೊನೆ ಮುರಿದವನಿಪತಿ ನಿ । ಸ್ಪೃಹೆಯಲಿದ್ದನು ರಾಜಕಾರ್ಯವಿಹಾರಲೀಲೆಗಳ ॥೨॥ ಅರಸ ಕೇಳೈ ಹಸ್ತಿನಾಪುರ । ವರಕೆ ಕಾಮ್ಯಕವನದಿನೊಬ್ಬನು । ಧರಣಿಸುರನೈತಂದು ಕರ್ಣಾದಿಗಳಮನೆಗಳಲಿ ॥ ಇರಲಿರಲು ಧೃತರಾಷ್ಟ್ರಭೂಪತಿ । ಕರೆಸಿ ಬೆಸಗೊಂಡನು ಯುಧಿಷ್ಠಿರ । ನಿರವನಟವೀಕ್ಷಿತಿಪರಿಭ್ರಮಣೈಕಭೀಷಣವ ॥೩॥ ವಿವಿಧವನಪರ್ಯಟ್ಟಣದಾಯಾ । ಸವನು ತತ್ಪರಿಸರದ ಕಂಟಕ । ನಿವಹವನು ದಾನವರ ದಕ್ಕಡತನದ ಧಟ್ಟಣೆಯ ॥ ಅವಚಿದಾಪತ್ತಿನ ಮನಃಖೇ । ದವನು ಖೋಡಿಯ ಖತಿಯ ಲಜ್ಜಾ । ವಿವರಣವನರುಹಿದನು ಧೃತರಾಷ್ಟ್ರವನೀಶಂಗೆ ॥೪॥ ಈ ವಿಧಿಯೆ ಪಾಂಡವರಿಗಕಟಾ । ಸಾವು ಸೇರದು ತನಗೆ ತಾವ್ಯು । ನ್ನಾವನೋಹಿಯನಳಿದೆನೋ ಭವಭವಸಹಸ್ರದಲಿ ॥ ಈವಿಲಾಸವನೀವಿಭವಸಂ । ಭಾವನೆಯನೀವಜವನೀವು । ತಾವ್ರವಳಿಯ ಸುಡಲೆನುತ ಮಿಗೆ ಮರುಗಿದನು ಧೃತರಾಷ್ಟ್ರ ॥ ಮರಳಿಮರಳಿ ಯುಧಿಷ್ಠಿರನ ಮನ । ದಿರವ ಭೀಮನ ಖತಿಯ ಪಾರ್ಥನ । ಪರಿಯ ನಕುಲನ ನಿಲವನಾಸಹದೇವನಾಯತವ ॥ ತರಳೆಯುಬ್ಬೆಯನಾಪುರೋಹಿತ । ವರನ ಭೇದವನಾಮುನೀಂದ್ರರ । ಪರಗತಿಯನಡಿಗಡಿಗೆ ಕೇಳಿದು ಮರುಗಿದನು ನೃಪತಿ ॥೫॥ ಅಳಲುಮೀಧೃತರಾಷ್ಟ್ರನುರುಕೆಳ । ಕಳವಕೇಳಿದು ಕರ್ಣಶಕುನಿಗ । ಳುಲಿದು ತಂಬುಲ ಸೂಸೆ ನಕ್ಕರು ಹೊಯ್ದು ಕರತಲವ ॥ ಖಳಶಿರೋಮಣಿಗಳು ಮಹೀಶನ । ನಿಳಯಕೈತಂದರು ಸುಲೋಚನ । ಜಲವ ಸೆರಗಿನೊಳೊರಸಿ ನುಡಿದರು ಭೇದವೇಕೆನುತ ॥೬॥ ಭೇದವೇಕೆಂದೇನು ಮಕ್ಕಳು । ಬೀದಿಗರವಾದರು ವನಾಂತದ । ಲಾದಚಿತ್ತವ್ಯಥೆಯ ಕೇಳಿದು ಬೆಂದುದೆನ್ನೊಡಲು ॥ ಆದಿವಾಕರನಂತೆ ನಿಚ್ಚಲು । ಕಾದುದುದಯಾಸ್ತಮಯದಲಿ ದನು । ಜಾರಿ ಖಳರೊಡನಟವಿಗೋಟಲೆಯೆಂದುಬಿಸುಸುಯ್ದ ॥೭॥ ಈಕುಮಾರಕರಲ್ಲಲೇ ಕುಂ । ತೀಕುಮಾರರು ನವೆಯುತಿದ್ದರೆ । ನಾಕುನಾಕೆಳೆಲೇಕೆ ಸತ್ವಾಧಿಕರು ಸಜ್ಜನರು ॥ ಈಕುರುಕ್ಷಿತಿಯೊಳೆನ್ನಾ । ಯ್ಕೆಕಲವವುಂಟೇ ವಿಚಾರಿಸಿ । ಶೋ

ಕವನು ಬಿಡು ಬಯಲಡ್ಡೊಂಬೇಕೆಂದನಾಶಕುನಿ ॥೧೦॥ ವಿಷಯಲಂಪಟರೆಕ್ಷಲೀಲಾ । ವ್ಯಸನಕೋಸುಗ ವೊತ್ತೆಯಿಟ್ಟರು । ವಸುಮತಿಯನನ್ಯಾಯವುಂಟೇ ನಿನ್ನ ಮಕ್ಕಳಲಿ ॥ ಉಸುರಲಮ್ಮದೆ ಸತ್ಯವನು ಪಾ । ಲಿಸಲು ಹೊಕ್ಕರರಣ್ಯವನು ತ । ದ್ವ್ಯಸನಫಲಭೋಗಿಗಳಿಗಳಲುವಿರೇಕೆ ನೀವೆಂದ ॥೧೧॥ ಅವರು ಕುಹಕೋಪಾಯದಲಿ ಕೌ । ರವರ ಕೆಡಿಸದೆ ಮಾಣರರ್ಜುನ । ಪವನಜರ ಭಾಷೆಗಳ ಮರೆದಿರೆ ಜೂಜು ಸಭೆಯೊಳಗೆ ॥ ಅವರು ಸುಜನರು ನಿಮ್ಮವರು ಖಳ । ರವರು ಸದಮಲಸಾಧುಗಳು ಕೌ । ರವರಸಾಧುಗಳೆಂದು ತೋರಿತೆ ನಿಮ್ಮ ಚಿತ್ತದಲಿ ॥೧೨॥ ಗಳಹನೆನಿಲಜಗಾಢ ಗರ್ವದ । ಹುಳುಕನರ್ಜುನನವರ ದೇಹದ । ನೆಳಲು ಮಾದ್ರೀಸುತರು ಮಕ್ಕಳು ವಿಪುಳಸಾಹಸರು ॥ ಅಳಲಬಹುದರಸಂಗೆ ಗಳಿಗೆಗೆ । ತಿಳಿವನವದಿರ ಸಂಗದಲಿ ಮನ । ಮುಳಿವನೆರಡಿಟ್ಟಿಹನು ಧರ್ಮಜನೆಂದನಾಶಕುನಿ ॥೩॥ ಅವರವನವಾಸದ ದಿನಂಗಳು । ನವಗೆ ಸುದಿನ ಸುಖಾನುಭವವೆನ । ರವಧಿ ತುಂಬಿದಬಳಿಕ ನೋಡಾ ಸಾಧುಗಳ ಪರಿಯ ॥ ನಿವಗೆ ದುರ್ಯೋಧನನ ಸಾಮ್ರಾ । ಜ್ಯವ ನಿರೀಕ್ಷಿಸುವರ್ತಿಯಲಿ ಪಾಂ । ಡವರ ಹಂಬಲ ಮರೆವುದುಚಿತವು ಕರ್ಣಹೇಳೆಂದ ॥೧೪॥ ಬೇವುತಾಪರಿಪಕ್ವವಾದೊಡೆ । ಹಾವುಮೆಕ್ಕೆಗೆ ಸಾಕ್ಷಿಗಡ ಧ । ರ್ಮಾರ್ಗವಪಮಾನದ ಕವಿಗೆ ಕಾಮಪಾಪಗಳ ನೆರವಿಗಡ ॥ ಆವಿಡಂಬದ ಶಕುನಿಕರ್ಣರು । ಜೀವಸಖರೆ ತಪ್ಪೊಳಗೆ ದು । ರ್ಭಾವಭೀಕರಹೃದಯ ನುಡಿದನು ಕರ್ಣನರಸಂಗೆ ॥೧೫॥ ಆಹ ಶಕುನಿಯ ಮಾತಿನಲಿ ಸಂ । ದೇಹವೇ ಪಾಂಡವರು ಬಂಧು । ದ್ರೋಹಿಗಳು ತಮ್ಮವಧಿ ತುಂಬಲು ಕೇಡ ತಹರೆಂಬ ॥ ಈಹದನು ತಪ್ಪುವುದೆ ನೀವತಿ । ಮೋಹದಲಿ [illegible] ಬೀಸಿಬಿದ್ದರ । ಕಾಪ್ಪುರುಷರು ಕೌರವರ ಕೆಡಿಸುವರೆಂದನಾಕರ್ಣ ॥ ಈಸಿರಿಯ ಸುಗ್ಗಿಯಲಿ ನಿನ್ನವ । ರೇಸುಹೆಚ್ಚುಗೆಯಾಗಿ ಬದುಕಿದ । ರೈಸುವನು ನೀ ನೋಡಿ ಹಿಗ್ಗದೆ ಪಾಂಡುನಂದನರು ॥ ಗಾಸಿಯಾದರು ಗುಟ್ಟುಬೆಟ್ಟದ । ಹೈಸರದೊಳೆಂದಳಲಿ ಮರುಗುತ । ಸೂಸಿದ್ರೆ ಸಾಹಿತ್ಯಭಾಷೆಯಾನೆಂದನಾಕರ್ಣ ॥೧೭॥ ಸೊಗಸು ತಳಿತುದು ತರಳಮನ ತಳ । ವೆಗ್ಗುಚಿದಂತಾಯ್ತು ವರೊಲವು ಕಾ । ಡಿಗೆಯ ಕೆಸರೊಳಗದ್ದ ನೀಲದಸರಿಗೆ ಸರಿಯಾಯ್ತು ॥ ಮುಗುಳುಗರಗಳ ಬಾಷ್ಪಬಿಂದುವ । ನುಗುರುಕೊನೆಯಲ ಮಿಡಿದು ಕರ್ಣನ । ಹೊಗಳಿದನು ಬಳಿಕೇನು ಸಿಂಗಿಯಲುಂಟೆ ಸವಿಯೆಂದ ॥೧೮॥ ಹೋಗಲಾ ಪಾಂಡವರ ಚಿಂತೆಯ । ನೀಗಿದೆನು ನೀವಿನ್ನು ನೆನೆವು । ದ್ಯೋಗವೇನೆನೆ ನಗುತ ನುಡಿದರು ಕರ್ಣ ಶಕುನಿಗಳು ॥ ಈಗಳೀವಿಭವದವಿಲಾಸದ । ಭೋಗದಗ್ಗಳಿಕೆಗಳ ಭುಜದ । ಪಾರ್ಗವುವನವರಿದ್ದವನದಲಿ ತೋರಬೇಕೆಂದ ॥೧೯॥ ನಾಡೊಳಗೆ ತುರುಹಟ್ಟಿಯಲಿ ಹೊಲ । ನಾಡಿ ಹೆಚ್ಚಿದಗೋಕದಂಬವ । ನೋಡುವುದು ನೆವ ಕುರುಪತಿಯು ಗಾಢದಸಗಾಡಿಕೆಯ ॥ ನೋಡಿ ನಸಿಯಲಿ ಪಾಂಡುಸುತರವ । ರಾಡುಗಾಡಿನ ಹೊಲನ ಹೊರೆಯಲಿ । ಕೂಡೆ ತನು ಪರಿಮಳದಲರವುನೆಯಂಗನಾನಿವಹ ॥೨೦॥ ವನದ ಚಿಮ್ಮಂಡೆಗಳ ಘೋರ । ಧ್ವನಿಗಳಲಿ ಕಿವಿ ಮೃಗಕುಲದ ಸೊಗ । ಡಿನಲಿ ನಾಸಿಕ ರೌದ್ರಭೂತಾಲೋಕನದಿ ನಯದ ॥ ಜನಪರುರೆ ಬೆದರುವರು ನಿನ್ನರ । ಮನೆಯ ಸತಿಯರ ನೇವುರದ ನು । ಣ್ದನಿಗಳಲಿ ತನಿಗಂಧದಲಿ ರೂಪುಗಳ ಸೊಗಸಿನಲಿ ॥೨೧॥ ಸಿರಿಗೆ ಸಫಲತೆಯಹುದು ನಾನಿದ । ನರಿಯೆ ನೀವವರಿದ್ದವಿಪಿನಾಂ । ತರಕೆ ಗಮಿಸುವುದುಚಿತವೇ ಮನಮುನಿಸು ನೆರೆಬಲಿದು ॥ ಕೆರಳಿದೊಡೆ ಕಾಳ

ಹುದು ಭೀಮನ । ದುರುಳತನವೀ ಕೌರವೇಂದ್ರನ । ಹುರುಳು ಹುರಿಯೇರುವುದು ಮತವಲ್ಲೆಂದನಂಧ
ನೃಪ ॥೨೨॥ ಹೊಕ್ಕು ಹೊಗೆವವರೊಡನೆ ಸೆಣಸಿನ । ಸಾಣೆಯಿಕ್ಕವು ಮಸೆವಕದನವ । ಕಾಣೆವೆಮ್ಮರಿ
ಕೆಯಲಿ ಸಲುಗೆಯ ಸ್ವಾಧ್ಯಸಾಮದಲಿ ॥ ರಾಣಿಯರ ರಹಿಯಿಂದ ರಂಜಿಸಿ । ಜಾಣಿನಲಿ ಬಹೆವರಸ
ನಿಮ್ಮಡಿ । ಯಾಣೆಯಿಂದೊತ್ತಬಡಿಸಿವರು ನೃಪಕರ್ಣಶಕುನಿಗಳು ॥೨೩॥ ಪರಿಮಿತದಲೀವಾರ್ತೆ ನೆಗ
ಳಿದು । ದರಮನೆಯಲಿದನ್ನೈದೆ ಕೇಳಿದು । ಗುರುವಿದುರಗಾಂಗೇಯಕೃಪರಳಲಿದರು ತಮ್ಮೊಳಗೆ ॥ ಕರೆಸಿ
ನುಡಿದರು ಕರ್ಣಸೌಬಲ । ಕುರುಪತಿಗಳಿಗೆ ಘೋಷಯಾತ್ರಾ । ಭರವನೆರಡೆವು ಹೋಹುದನುಚಿತವೆಂ
ದರನಿಬರಿಗೆ ॥೨೪॥ ಅವಗಡೆಯಸಾರ್ವಭೌಮ ನೀವೆಂ । ಬವರು ನಿಸ್ಸೀಮರು ಚತುರ್ಬಲ । ನಿವಹ
ನಿಲ್ಲದು ತುಡುಕುವುದು ತುಳಿವುದು ತಪೋವನವ ॥ ವಿವಿಧಋಷಿಗಳನೇಡಿಸುವರೀ । ಯುವತಿಯರು
ಕೈಕಾಲುಮೆಟ್ಟಿನ । ಬವರಗಂಟಿಕ್ಕುವುದು ಲೇಸಲ್ಲೆಂದನಾಭೀಷ್ಮ ॥೨೫॥ ಸಾರಿದೆವು ನಿಮ್ಮೊಡನೆ ಬಾ
ರೆವು । ದೂರಲಾಗದು ನಿಮ್ಮನಿನಿಬರ । ಮೀರಿದೊಡೆ ರಣಭಂಗ ತಪ್ಪದು ಹೋಗಬೇಡೆನಲು ॥ ದೂರ
ತಾರೆವು ನಿಮಗೆ ಸಾಕ್ಷ್ಯ । ಮೀರಿ ನಡೆಯೆವು ಕಾರ್ಯಗತಿಯಲಿ । ಜಾರುಜಡತೆಯ ಮಾಡೆವೆಂದನು
ಕೌರವರರಾಯ ॥೨೬॥ ಆದೊಡಲ್ಲಿ ಶುಭಾಶುಭದ ಫಲ । ಬೀದಿವರಿಸುವುದೈಸಲೇ ನಿಮು । ಗೀದುರಾ
ಗ್ರಹವೇಕೆ ಕ್ಷಾಬಿರ್ಕಿ ಫಲವನಗ್ರದಲಿ ॥ ಆದುದಾಗಲಿ ಹೋಗಿಯೆನೆ ದ್ದು । ಭೇದಗರುವಗ್ರಂಥಿಕಲ್ಲು
ಷವಿ । ನೋದಶೀಲರು ಭುಜವ ಹೊಯ್ದರು ನೋಡಬಹುದೆನುತ ॥೨೭॥ ಕೇರಿಯಲಿ ಸಾರಿದರು
ಕೊಟ್ಟರು । ವಾರಕವನೆಬಲಾಜನಕೆ ಭಂ । ಡಾರಸವೆದುಡು ಗಣಿಕೆಯರಿಗಾಭರಣವಾನದಲಿ ॥ ಸಾರಪರಿ
ಮಳವಸ್ತುಗಳ ಬಲು । ಭಾರಣೆಯ ಪೆಟ್ಟಿಗೆಗಳೊಟ್ಟಿತು । ತೇರುಗಳಮೇಲೊವಗಿತಕ್ಷೋಹಿಣಿಯ
ರಾಣಿಯರು ॥೨೮॥ ಬಿಗಿದಬೀಯಗಬದ್ದರದಬಂಡಿಗಳು ರಾಣೀವಾಸದಂದಣ । ತೆಗೆದು ಮೊರಲುವ
ಕಂಚುಕಿಗಳುಗ್ಗಡದರಭಸದಲಿ ॥ ಗಗನವಡಗಿತು ಪಲ್ಲವದ ಸ । ತ್ತಿಗೆಯ ಸಾಲಿನ ಝಲ್ಲರಿಯಝಾ ।
ಡಿಗಳಲಾಡುವಚಮರಸೀಗುರಿಗಳ ಪತಾಕೆಯಲಿ ॥೨೯॥ ಸವಡಿಯಾನೆಯಮೇಲೆ ಗಣಿಕಾ । ನಿವಹ ದಂ
ಡಿಗೆಗಳಲಿ ಕೆಲಬರು । ಯುವತಿಯರು ಕೆಲರಶ್ವಚಯದಲಿ ರಥನಿಕಾಯದಲಿ ॥ ಯುವತಿಮಯವ್ರೋ
ಸೃಷ್ಟಿ ಗಣಿಕಾ । ಯುವತಿಯರ ನೆಲನೀಮದೋ ದಿಗುವಿವರಕರೆದುದೊ ಕಾಂತೆಯರನೆನೆ ಕವಿದುದಗಲ
ದಲಿ॥೩೦॥ಅರಸಕೇಳೈ ಹತ್ತುಸಾವಿರ । ಕರಿಘಟಾವಳಿಯೆಂಟುಸಾವಿರ । ವರವರೂಥವು ರಾವುತರ ವಾಘೆ
ಯಲಿಹಯಕೋಟಿ ॥ ಬಿರುದಿನಗ್ಗದಭಟರ ಸಂಖ್ಯೆಯ । ನರಿಯೆನಿಂತಿದು ಘೋಷಯಾತ್ರೆಯ । ಪರು
ಠವಣೆಗೊದಗಿದಚತುರ್ಬಲವವನಿಪಾಲಕನ ॥೩೧॥ ನೆರೆದುದಗಣಿತವಂದಿಗಳು ಕವಿ । ವರರು ವಿದ್ವಾಂ
ಸರು ವಿಧಾವಂ । ತರು ಸುನರ್ತಕಕಥಕಪರಿಹಾಸಕರು ಪಾಠಕರು ॥ ಚರರು ಮಲ್ಲರು ಬೇಂಟೆಗಾ
ರರು । ಪರಿಜನಾವಳಿಸಹಿತ ನಗರಾಂ । ತರದ ಪಯಣದಮೇಲೆಪಯಣದಲರಸನೈತಂದ ॥೩೨॥ ಅರಸ
ಕೇಳಿವರತ್ತ ಪಯಣದ । ಭರದಿನೈತರೆ ಮುಂದೆ ವಾಯಸ । ವೆರಡು ತಮ್ಮೊಳು ಕದನಮುಖದಲಿ ವಾ
ಮದೆಸೆಗಾಗಿ ॥ ಪರಿದವಲ್ಲಿಂಬಳಿಕ ಹಸುಬನ । ಸರುವು ವಾಮದಿ ಗರ್ದಭನ ಬಲ । ಕರಿಯಹಕ್ಕಿಯ
ತಡೆಯು ಮನ್ನಿಸದೈದಿದನು ಭೂಪ॥೩೩॥ಅರಸ ಕೇಳೈ ದ್ವೈತವನ ಬಂ। ಧುರನದೀನದತೀರದಲಿ । ಸರ
ಸಿಯಲಿ ದೀರ್ಘಿಕೆಗಳಲಿ ನದದಲಿ ವರತಟಾಕದಲಿ ॥ ಬೆರಸಿ ಬಿಟ್ಟುದು ಕೂಡೆ ಪಾಳೆಯ । ವರಮನೆಯ

ಗುಡಿ ನೆಗಹಿದವು ವಿ । ಸ್ತರಿಸಿದವು ಮಂಡವಿಗೆಚ್ಚಣ್ಣೆಯಭದ್ರಭವನಗಳು ॥೩೪॥ ಕರೆಸಿದನು ಕಿಲ್ಲಾರಿಗಳನಾ । ದರಿಸಿ ಹಟ್ಟಿಯ ತುರುಗಳೆಲ್ಲವ । ತರಿಸಿ ನೋಡಿದನಲ್ಲಿ ಹಿಂಡಿನ ಕೋಟಿಸಂಖ್ಯೆಗಳ ॥ ಹರಿವ ಹಾರುವ ಪಂಠಿಸುವ ಸ್ರೈ । ವರಿವ ಮರಳುವ ಮುರಿವ ನಿಲುವೆಳೆ । ಗರುಗಳನು ನೋಡಿದನು ನಗುತ ನರೇಂದ್ರನೊಲವಿನಲಿ ॥ ಬೆಳೆವಿಣಿಲಮಿಡಿಗಲೆವಬಾಲದ । ನೆಲಕೆ ನಿಗುರುವಗಂಗೆದೊವಲಿನ । ಹಲಗೆಬೆನ್ನಿನ ಸಿಡಿಲವುರಿಯೆನೆ ಮೆರೆವಹುಂಕೃತಿಯ ।. ಕೆಲವಿದಿರುಬರೆಲಯದಿಯದ್ರಿಯ । ಹಳಚುವಂತಿರೆ ಹರಿವಹಾರುವ ।ಸಲಗನಳ್ಕಿರದಾಡುತಿರ್ದವು ಹಿಂಡುಹಿಂಡಿನಲಿ ॥ ತರಿಸಿ ಹೋರಿಯಗವಿಯ ಗೂಳಿಯ ಬರಿಸಿದನು ಕೆಲಕೆಲವಕೃಷಿಕರಿ।ಗಿರಿಸಿದನು ಗೋಲಕ್ಷವಿತ್ತನು ವಿಪ್ರಸಂಕುಲಕೆ॥ಕರೆಸಿ ಕೊಟ್ಟನು ಭಟ್ಟರಿಗೆ ಮ । ಲ್ಲರಿಗೆ ವಿಟರಿಗೆ ನಟವಿಧಾವಂ । ತರಿಗೆ ಬಹುವಿಧಬಹಳವಂದಿಗೆ ಮಾಗಧವ್ರಜಕೆ ॥೩೭॥ ಅಂಗಚಿತ್ತವನಿತ್ತು ಮೊದಲಸ । ಮಂಗನನು ಪತಿಕರಿಸಿ ಹಿಂಡಿನ । ವಂಗಡದ ಗೋಪಾಲನಿಕರಕೆ। ಕೊಟ್ಟನುಡುಗೊರೆಯ ॥ ಹಿಂಗಿದವು ತುರು ಬೇಟೆಯಾಡಿವ್ಯ । ಗಂಗಳಿಗೆ ಮದ್ದರೆದು ಕಡಿವಾ । ಗಂಗಳನು ಕೊಡಿಸಿದನು ಪರಿವಾರಕೆ ವಿನೋದದಲಿ ... ... ॥೩೮॥

ಅಂತು ಸಂಧಿ ೧೭ ಕ್ಕೆ ಪದ ೯೧೩ ಕ್ಕಂ ಮಂಗಳಮಸ್ತು.

ಹದಿನೆಂಟನೆಯ ಸಂಧಿ.

ಸೂಚನೆ॥ ಪರಿವಿಡಿಯುಲಾದ್ವೈತವನದಲಿ । ಬೆರಸಿ ಬಿಟ್ಟುದು ಬೀಡು ಗಂಧ ।
ರ್ವರಿಗೆ ಕೌರವಬಲದೊಡನೆ ಮಸೆದುದು ಮಹಾಸಮರ ॥

ಕೇಳು ಜನಮೇಜಯಧರಿತ್ರೀ । ಪಾಲ ತುರುಪಳ್ಳಿಗಳ ನೋಡಿ ವ । ನಾಳಿ ತಪ್ಪದೆ ಬೇಂಟೆಯಾಡಿ ಸಮಸ್ತಬಲಸಹಿತ ॥ ಲೀಲೆ ಮಿಗಲಾಪಾಂಡವರ ವನ । ವೇಲೆಯಲಿ ನಿಸ್ಸಾಳರಭಸದ। ಸೂಳ ಸಂಕೇತದಲಿ ನೃಪ ಬಿಡಿಸಿದನು ಪಾಳೆಯವ ॥೧॥ ಲಾಯ ನೀಡಿತು ಮುಂದೆ ರಾವುತ । ಪಾಯಕರಿಗೆ ಡವಂಕ ಮಂತ್ರಿಪ । ಸಾಯತರು ಕರ್ಣಾದಿಗಳಿಗೆಡೆಯಾಯ್ತು ಬಲವಂಕ ॥ ರಾಯನರಮನೆವಸ್ತುಕ್ರಿತಕದ ಕಳ । ಶಾಯತದ ಬೆಳಗಿನಲಿ ಪಾಂಡವ। ರಾಯರೆಲೆವನೆಗಳನು ನಗುತಿದ್ದುದು ನವಾಯಿಯಲಿ॥ ಅರಸ ಕೇಳೈ ಕೌರವೇಶ್ವರ । ನರಸಿಯರು ಲೀಲೆಯಲಿ ಶತಸಾ । ವಿರಸಖೀಜನಸಹಿತ ಹೊರವಂಟರು ವನಾಂತರಕೆ ॥ ಸರಸಿಜದ ನಿಜಗಂಧದಲಿ ತನು । ಪರಿಮಳವ ತಕ್ಕೈಸಿ ವನದಲಿ । ತರಳೆಯರು ತುಂಬಿದರು ಮರಿದುಂಬಿಗಳ ಡೊಂಬಿನಲಿ ॥೩॥ ಕೆಲರು ಹೊಂದಾವರೆಯ ಹಂತಿಯ । ಕೊಳನ ಹೊಕ್ಕರು ಬಿಲ್ವಫಲಗಳ ನಿಲುಕಿ ಕೊಯಿದರು ಕೊಡಹಿ ಮೊಲೆಗಳ ಮೇಲುದಿನ ನಿರಿಯ ॥ ಕೆಲರು ಹೂಗೊಂಚಲಿನ ತುಂಬಿಯ । ಬಳಗವನು ಬೆಂಕೊಂಡರುಲಿವರ । ಗಿಳಿಗೆ ಹಾರದ ಬಲೆಗಳನು ಹಾಯ್ಕಿದರು ಕೊಂಬಿನಲಿ ॥೪॥ ಪಾರಿವದ ಪಾಠ್ಯರನು ನಮಿಸುತ । ವಾರನಾರಿಯರಾನನದಲಿ ಚ । ಕೋರಿಗಳ ಚಾಳೈಸಿ

ದರು ಕೆಲರಂಗಪರಿಮಳಕೆ ॥ ಸಾರಿದೊಡೆ ಮರಿದುಂಬಿಗಳ ಸುಳಿ । ಪಾರಣೆಯ ಬೆಸಗೊಳುತ ನಗುತ
ವಿ । ಕಾರಿಗಳು ಮೆಡ್ಡೈಸಿದರು ನೃಪ ಮುನಿನಿಜಾಶ್ರಮವ ॥೬॥ ನೇಪುರದ ದನಿ ಘಟ್ಟಿಸಿತು ವೇ । ದಾವ
ಳಿಯ ನಿರ್ಘೋಷವನು ನಾ । ನಾವಿಭೂಷಣಕಾಂತಿ ಕೆಣಕಿತು ಮುನಿಸಮಾಧಿಗಳ ॥ ಆವಧೂಜನದಂ
ಗಗಂಧ । ಪ್ರಾವರಣ ಹುತಚರುಪುರೋಡಾ । ಶಾವಳಿಯ ಸೌರಭವ ಮುಸುಕಿತು ವನದವಳಯದಲಿ ॥
ಹೊಕ್ಕರಿವರಾಶ್ರಮವ ತುರುಗಿದ । ತಕ್ಕರಂತಃಕರಣತುರಗಕೆ । ದುಕ್ಕುಡಿಯನಿಕ್ಕಿದರು ತಿರುಹಿದರೆರ
ಡುಮಾಘೆಯಲಿ ॥ ಸಿಕ್ಕಿದವು ಧಾಳಿಯಲಿ ಧೈರ್ಯದ । ದಕ್ಕಡರ ಮನಹರಹಿನೊಳ್ಹಾ । ಯಿಕ್ಕಿದರು
ಕಡೆಗಣ್ಣಬಲೆಗಳ ಮುನಿಮೃಗಾವಳಿಗೆ ॥೭॥ ಸ್ರುಕುಸ್ರುವವ ಮುಟ್ಟಿದರು ಧೌತಾಂ । ಶುಕದೊಳಗೆ
ತಂಬುಲವ ಕಟ್ಟಿದ । ರಕಟುಪಾಧ್ಯರ ಮೋರೆಯೆನುತೇಡಿಸುತ ಬೆರಳಿನಲಿ ॥ ಚಕಿತಧೃತಿಯರು ದೀಕ್ಷಿತರ
ಚಂ । ಡಿಕೆಗಳನು ತುಡುಕಿದರು ಮುನಿಮಟು । ನಿಕರಶಿರದಲಿ ಕುಣಿಸಿದರು ಕುಂಚಿತಕರಾಂಗುಲಿಯ ॥೮॥
ರಾಯರೆಂಬವರಿಲ್ಲಲಾ ಸ್ವಾ । ಧ್ಯಾಯ ಕೆಟ್ಟುದು ಮುಟ್ಟಿದರು ಪಾ । ಧ್ಯಾಯರನು ಶೂದ್ರಿಯರು
ಸೆಳೆದರು ಮೌಂಜಿಮೇಖಲೆಯ ॥ ಹಾಯಿದರು ಯಜ್ಞೋಪವೀತಕೆ । ಬಾಯಲೆಂಜಲನಿಡಿಯಬರು
ವರ । ಲಾಯೆನುತ ಬಿಟ್ಟೋಡಿದರು ಸುಬ್ರಹ್ಮಚಾರಿಗಳು ॥೯॥ ಕೆದರಿದರು ಗಡ್ಡವನುಪಾಧ್ಯರು । ಬೆದ
ರಿನಿಂದರಿದೇನಿರವು ಮಾ । ಡಿದಮಿಟಾಳವ ಹೇಳುವೆವು ಕುಂತೀಕುಮಾರಗೆ ॥ ಇದು ಮಹಾಋಷಿಸೇ
ವಿತಾಶ್ರಮ । ವಿದರ ಶಿಷ್ಟಾಚಾರವನು ಕೆಡಿ । ಸಿದವರೇ ಕ್ಷಯವಹರು ಹರಹರಯೆಂದರಾದ್ವಿಜರು ॥೧೦॥
ಹೇಳಿದೊಡೆ ಕುಂತೀಕುಮಾರರು । ಕೇಳಿ ಮಾಡುವುದಾವುದೋ ವನ । ಪಾಲಕರು ತಾವಿಂದು ಪೃಥ್ವೀ
ಪಾಲನೆಮ್ಮೊಡೆಯ ॥ ಹೇಳಿ ಬಳಿಕರ್ಜುನನ ಭೀಮನ । ಧಾಳಿಯನು ತಹುದೆನುತಲತಿಘಾ । ತಾಳಿ
ಯರು ಮುನಿಜನವ ಬೈದರು ಬಹುವಿಕಾರದಲಿ ॥೧೧॥ ಶಾಂತರಿದೆ ವಿಜಿತೇಂದ್ರಿಯರು ವೇ । ದಾಂತ
ನಿಷ್ಠರು ಸುವ್ರತಿಗಳ । ಶ್ರಾಂತವೇದಾಧ್ಯಯನಯಾಜ್ಞಿಕಕರ್ಮಕೋವಿದರು ॥ ಸಂತತಾನುಷ್ಠಾನಪರ
ರನ । ದೆಂತು ನೀಮಾಕ್ರಮಿಸುವಿರಿ ವಿ । ಭ್ರಾಂತರೌ ನೀವೆನುತ ಜರಿದರು ಕಾಮಿನೀಜನವ ॥೧೨॥
ಒದೆದು ಪದದಲಿ ಕೆಂದಳಿರತೋ । ರಿದೆವಶೋಕೆಗೆ ಮದ್ಯಗಂಡೂ । ಷದಲಿ ಬಕುಳದ ಮರನ ಭುಲ್ಲವಿ
ಸಿದೆವು ಕುರುವಕಕೆ ॥ ತುದಿಮೊಲೆಯ ಸೋಂಕಿನಲಿ ಹೂದೋ । ರಿದೆವು ಕಣ್ಣೋರೆಯಲಿ ತಿಲಕವ ।
ಕದುಕಿದೆವು ನೀಮಾವಘನಪದವೆಂದರಬಲೆಯರು ॥ ಬಟ್ಟಮೊಲೆಯ ಸೋಂಕಿನಲಿ ಶಾಂತರ । ತಲೆಕೆಳಕ
ಮಾಡುವೆವು ಕಡೆಗ । ಣ್ಣಲಗಿನಲಿ ಕೊಯ್ದೊತ್ತುವೆವು ವಿಜಿತೇಂದ್ರಿಯರ ಮನವ ॥ ಎಳನಗೆಗಳಲಿ
ವೇದಪಾಠರ । ಕಲಕಿ ಮಿಗೆ ವೇದಾಂತನಿಷ್ಠರ । ಹೊಳಸಿ ಮುಮ್ಮಳಿಸುವೆವೆಮಗಿದಿರಾರು ಲೋಕ
ದಲಿ ॥೧೩॥ ಎನುತ ಕವಿದಾದು ಮತ್ತೆ ಕಾಂತಾ । ಜನ ಸುಯೋಧನನರಮನೆಯ ಸೊಂ । ಪಿನ
ಸಖೀನಿಕುರುಂಬ ತುಂಬಿತು ವರತಪೋವನವ ॥ ಮನಸಿಜನ ದಳ ನೂಕಿತೇಳೇ । ಳೆನುತ ಚೆಲ್ಲಿತು ಮುನಿ
ನಿಕರ ನೃಪ । ವನಿತೆಯಿದಿರಲಿ ಸುಳಿದರಿಮದಿರು ಮಂದಿ ಸಂದಣಿಸಿ ॥೧೪॥ ಈಕೆ ಪಾಂಡವಸತಿಕಣಾ
ತೆಗೆ । ಯಾಕೆಯತಿದಾರಿದ್ರಮಾನುಷ । ಯಾಕೆಯೆಲ್ಲೊಳಗಿಹಳು ರಾಣೀವಾಸವೆಂಬರಲೇ ॥ ಈಕೆಯ
ಹುದಲ್ಲಿದಕೆ ಪಣವೇ । ನೀಕೆ ಬಣಗಕಟೆಂದು ಕಾಂತಾ । ನೀಕ ತಮ್ಮೊಳು ನುಡಿವುತಿದ್ದುದು ತೋರಿ
ಬೆರಳಿನಲಿ ॥೧೫॥ ಕುಣಿವರೆಂದುಗೆಕಾಲ ಝಣಝಣ । ಝಣಝಣತ್ಕೃತಿರಭಸ ಮಿಗೆ ಕಂ । ಕಣದ

ದನಿದೋರುವರು ನುಡಿನುಡಿ ಸಿಕ್ಕಿ ಕಂಠದಲಿ ॥ ಮಣಿಮಯದ ಕುಂಡಲವನಲುಗಿಸಿ । ಯೆಣಿಸುವಂತಿರೆ ಕೊರಳಹಾರದ । ಮಣಿಗಳನು ಮುತ್ತುಗಳ ಮೆರೆವರು ಮುರಿದಮೌಳಿಯಲಿ ॥೧೭॥ ಬಳಿಯಲೈದಿತು ಮುನಿಗಳಿವರುಪ । ಟಳವನೆರಸಂಗರುಹಿದರು ಪೆ । ಗ್ಗಳಿಸಿ ಭೀಮಂಗೆಂದರರ್ಜುನಯಮಳರಿದಿರಿನಲಿ ॥ ಉಳಿದರೆಮಗೀವನವಿಟಾಳ । ಪ್ರಳಯವಾದುದು ಕಾನನಾಂತರ । ನಿಳಯದಲಿ ನಿಲಿಸೆಮ್ಮನೆಂದುದು ಸಕಲಮುನಿನಿಕರ ॥೧೮॥ ಅರಸಲಾಕುರುರಾಯಸಾತನ । ಬರವು ತುರುಪಟ್ಟಿಗಳ ಗೋವಿ । ಸ್ತರಣಕೋಸುಗವೈಸೆ ಪಾಳೆಯ ಸಾರ್ವಭೌಮನದು ॥ ಪರಿಸರದಲಿದ್ದುದು ವಿನೋದಕೆ । ತರುಣಿಯರು ಬರಲೇಕೆ ನೀವ । ಬ್ಬರಿಸುವಿರಿ ನಮ್ಮವರಲಾಯೆಂದನು ಮಹೀಪಾಲ ॥೧೯॥ ಔಡುಗಚ್ಚಿದನಂಘ್ರಿಯಲಿ ನೆಲ । ಬೀಡು ಬಿಡಲೊದೆದನು ಕರಾಂಗುಲಿ । ಗೂಡಿ ಮುರಿದೌಕಿದನು ಖತಿಯಲಿ ನಿಜಗದಾಯುಧವ ॥ ನೋಡಿದನು ಕುರುರಾಯನಲಿ ಹೊ । ಯ್ದಾಡಿ ಬರಬೇಕೆಂಬಭೀಮನ । ಮೋಡಿಯನು ನೃಪನರಿದು ಸಂತೈಸಿದನು ಸಾಮದಲಿ ॥೨೦॥ ಕರೆಸಿದನು ನೃಪವಾರಿಕೇಳಿಗೆ । ವರವಧೂವರ್ಗವನು ಕೇಳಿಸು । ತಿರುಗಿತಂಗಜಘಟ್ಟ ಝಣಝಣರವದ ರಭಸವಲಿ ॥ ಸರಿದಿಳಿವಗಿರಿಯೊಂಗುಕ್ಕೈಯಲಿ । ಸುರಿವರಳ ಮುಡಿಯೊಂದುಕ್ಕೈಯಲಿ । ಭರದಿ ಗಮನಸ್ವೇದಜಲ ಮಘಮಘಿಸೆ ದೆಸೆದೆಸೆಗೆ ॥೨೧॥ ಬಾವುಲೆಗಳಳ್ಳಿರಿಯಲೇಕಾ । ವಳಿಗಳನು ಕಲಕೊತ್ತಿ ಮೇಲುದ । ಕಳಚಿ ನಡುಗಿಸಿ ನಡುವನಂಜಿಸಿ ಜಘನಮಂಡಲವ ॥ ಅಳಕನಿಕರವ ಕುಣಿಸಿ ಮಣಿಕುಂ । ಡಲವನಲುಗಿಸಿ ಹಣೆಯ ಮುತ್ತಿನ । ತಿಲಕವನು ತನಿಗೆದರಿ ನಡೆದುದು ಕೂಡೆ ಸತಿನಿವಹ ॥೨೨॥ ತಾರಕೆಗಳುಳಿದಂಬರದ ವಿ । ಸ್ತಾರವೋ ಗತಹಂಸಕುಲಕಾ । ಸಾರವೋ ನಿರ್ಮಲತಪೋವನವೆನಲು ರಂಜಿಸಿತು ॥ ನಾರಿಯರ ದಳ ತಿರುಗಿದೊಡೆ ತನಿ । ಸೌರಭದದಳ ತೆಗೆಯದಾಕಾಂ । ತಾರದೊಳಗೇನೆಂಬೆನಾಸೌಗಂಧಬಂಧುರವ ॥೨೩॥ ಅರಸ ಕೇಳೈ ವಾರಿಕೇಳಿಗೆ । ಕುರುಪತಿಯ ನೇಮದಲಿ ಶತಸಾ । ವಿರಸರೋಜಾನನೆಯರೈದಿತು ವನವನಂಗಳಲಿ ॥ ಪರಿಮಳದ ಪಸರಣದ ಪದ್ಮಾ । ಕರಸಹಸ್ರದ ಸಾಲ ಸುಮನೋ । ಹರಮಹೋದ್ಯಾನವನು ಕಂಡೈತಂದರಬಲೆಯರು ॥೨೪॥ ರಾಯಕುವರರು ಸಚಿವಮಂತ್ರಿಪ । ಸಾಯತರಮಕ್ಕಳು ಚಮೂಪರ । ನಾಯಕರ ನಂದನರು ವಿಟರು ವಿನೋದಿಗಳು ಪುರದಾ ॥ ಆಯತಾಕ್ಷಿಯರೊಡನೆ ರಾವುತ । ಪಾಯಕರಸುತರಾಳಮೇಳನ । ವಾಯಿಗಳ ನಾಗರಿಕರೈದಿತು ಕೋಟಿಸಂಖ್ಯೆಯಲಿ ॥೨೫॥ ತವಗ ತಳಿ ಮುಳುವೇಲಿ ಬಾಗಿಲ । ಜವಳಿಗದ ಬೀಯಗದಲಿದ್ದುದು । ಬವಿಜವನವುದ್ದಂಡತರಪರಿಮಳದ ಪೂರದಲಿ ॥ ಯುವತಿಯರ ದಳ ನೂಕಿತುದಕೋ । ತ್ಸವವೃಥಾಕೇಳಿಯಲಿ ಕನಕೋ । ದ್ಭವಕವಾಟವನೊದೆದು ಕರೆದರು ಕಾಹಿನವರುಗಳ ॥೨೬॥ ಆರಿವರು ಕರೆವವರೆನುತಸುರ । ವೀರರೌಕಿತು ಬಾಗಿಲಲಿ ನೀ । ವಾರೆನಲು ತೆಗೆ ಕದವನರಿಯಾ ರಾಯನರಮನೆಯಾ ॥ ವಾರನಾರಿಯರವನಿಪತಿಯ ಕು । ಮಾರರಿದೆ ಬೇಹವರು ಸರಸಿಯು । ವಾರಿಕೇಳಿಗೆ ಬಂದೆವೆಂದರು ಗಜರಿ ಗರ್ಜಿಸುತ ॥೨೭॥ ಹೊಗಬಹುದೆ ಗಂಧರ್ವರಾಯನ । ಮಗನವನವಿದು ನೋಡಿದೊಡೆ ದೃಗು । ಯುಗಳದೆವೆ ಸೀವುದುಕಣಾ ಫಡ ಹೋಗಿಹೋಗಿಯೆನೆ ॥ ತೆಗೆ ವಿಕಾರವೆ ನಮ್ಮೊಡನೆ ತೆಗೆ । ತೆಗೆ ಕದವ ಗಂಧರ್ವನಾರಿಗೆ । ಮಗನದಾವವನೆನುತ ಹೊಕ್ಕರು ತಳಿಯ ಮುರಿದೊದೆದು ॥೨೮॥ ಒಗ್ಗಲಿದವು ಕಹಳೆಗಳು ಕಾಹಿನ । ಸುರಭಟರು ನೆರೆದಳಿಮುಸಂಡಿಯ । ಪರಶುಮುದ್ಗರಚಾಪಮಾರ್ಗ

ಣಸಬಳಸೂನಗೆಯ ॥ ಹರಿಗೆಖಡ್ಗದಲರಿಭಟರ ಚ । ಪ್ಪರಿಸಿದರು ಗಂಧರ್ವಭಟರಿಗೆ । ಕುರುಪತಿಯ ಸುಭಟರಿಗೆ ತೊಡಕಿತು ತ್ರೋಟಿ ತೋಪಿನಲಿ ॥೨೯॥ ಚೆಲ್ಲಿದರು ಚಪಳೆಯರು ಮುನಿಜನ । ವೆಲ್ಲ ಪಾಂಡವರಾಶ್ರಮದ ಮೊ । ಗ್ಗಲ್ಲಮೊನೆಗಣೆ ಮೊರೆದು ಮುರಿದವು ಮೊನೆಯಮುಂಬಿಗರ ॥ ಚೆಲ್ಲೆಗಂಗಳ ಯುವತಿಯರ ಸಾ । ನಲ್ಲಿ ಕಾಣೆನು ಕಾಮುಕರು ಸಿಂ । ದಲ್ಲಿ ನಿಲ್ಲದೆ ಹರಿದರವನೀಪತಿಯ ಪಾಳೆಯಕೆ ॥೩೦॥ ಬರಿಯಮಕ್ಕಳ ತಂಡವೇ ಹೊ । ಕ್ಕಿರಿಪುದವದಿರನುರುಪಿ ದಿವಿಜರು । ಜರೆದು ನೂಕಿತು ತೋಪಿನೊಳಬಿದ್ದವರ ಹೊರವಡಿಸಿ ॥ ಮುರಿದು ತಳಿಗಳ ಬಲಿದು ಬಾಗಿಲ । ಹೊರಗೆ ನಿಂದರು ವಾರಿಕೇಳಿಯ । ಮರೆದು ಶೋಣಿತವಾರಿಕೇಳಿಗೆ ಬನ್ನಿ ನೀವೆನುತ ॥೩೧॥ ನೃಪಸುತರ ಪಡಿಬಲಕೆ ಬಂದಿತು । ವಿಪುಳಬಲ ಹಲ್ಲಣಿಸಿ ಹೊಯ್ಲ । ಯ್ಯಪಸರರ ಗಂಧರ್ವಸುಭಟರನೆನುತ ಸೂಟಿಯಲಿ ॥ ಕುಪಿತರರೆಯಟ್ಟಿದರು ತೋಪಿನ । ಕಪಿಗಳಾವೆಡೆ ಕಾಣಬಹುದೆನು । ತುಪಚರಿತರೊಳಸರಿಯೆ ಹೊಗಿಸಿದರವರನಾವನವ ॥೩೨॥ ಬಂದಬಲ ಹೇರಾಳ ತೆಗೆತೆಗೆ । ಯೆಂದು ತೋಪಿನಕತ್ತೆಗೆ ಹಾಯಿದು । ನಿಂದು ನೆರಹಿದರದಟಗಂಧರ್ವರು ಭಟವ್ರಜವ ॥ ಬಂದುಪದುನಡುವನಕೆ ಕೌರವ । ವೃಂದವನು ಕರೆದರು ವಿನೋದಕೆ । ಬಂದಿರೈ ನಾರಾಚಸಲಿಲಕ್ರೀಡೆಯಿದೆಯೆನುತ ॥೩೩॥ ಮುರಿಯೆಸುತ ಗಂಧರ್ವಬಲ ಮು । ಕ್ಕುರಿಕಿ ಕೌರವಬಲವ ತತ್ತರ । ದರಿದು ತರಪರವಿಲ್ಲೆನಿಸಿ ಹೊಗಿಸಿದರು ಪಾಳೆಯವ ॥ ಹೊರಗುಡಿಯ ಹೊರಪಾಳೆಯದ ಭಟ । ರರುಹಿದರು ಕುರುಪತಿಗೆ ಖತಿಯಲಿ । ಜರೆದು ಜೋಡಿಸಿ ಬಿಟ್ಟನಕ್ಷೌಹಿಣಿಯನಾಯಕರ ॥೩೪॥ ಹಲ್ಲಣಿಸಿತೀಚಾತುರಂಗವ । ದೆಲ್ಲ ಕವಿದುದು ಹೊಕ್ಕು ದಿವಿಜರ । ಚೆಲ್ಲಬಡಿದರು ಚಾಚಿದರು ತೋಪಿನ ಕವಾಟದಲಿ ॥ ನಿಲ್ಲದೌಕಿದರಂತಕನ ಪುರ । ದೆಲ್ಲೆಯಲಿ ಹೆಕ್ಕಳದ ಖಡುಗದ ಘಲ್ಲಣೆಯ ಖಣಿಖಟಿಲಗಾಢಿಕೆ ಕಂಟಿಸಿತು ನಭವ ॥೩೫॥ ಬಲದ ಪದಘಟ್ಟಣೆಗೆ ಹೆಮ್ಮರ । ನುಲಿದು ಬಿದ್ದವು ಸಾಲಪೂಗಾ । ವಳಿಕಪಿತ್ಥಲವಂಗ ತುಂಬುರ ನಿಂಬ ದಾಳಿಂಬ ॥ ಫಲಪಲಾಶರಸಾಲತಮಿಗು । ಗ್ಗುಳ ಮಧೂಕಾಶೋಕ ಬಿಲ್ವಾ । ಮಲಕ ಜಂಬೀರಾದಿಗಳು ನುಗ್ಗಾಯ್ತು ನಿಮಿಷದಲಿ ॥೩೬॥ ಕದಡಿದವು ಸರರಸಿಗಳು ಕೆಡೆದವು । ಕದಳಿಗಳು ಗೊನೆಸಹಿತ ಮುಂಡಿಗೆ । ಮುದುಡಿ ನೆಲಕೊರಗಿದವು ಮಿರುಗುವನಾಗವಲ್ಲಿಗಳು ॥ ತುದಿಗೊನೆಯ ಚೆಂದೆಂಗು ಖರ್ಜೂರ । ರದಲಿ ಕಾಣೆನು ಹುರುಳ ಸಾರಂ । ಗದ ವಿಶ್ರಾಮವನೇನನೆಂಬೆನು ನಿಮಿಷಮಾತ್ರದಲಿ ॥೩೭॥ ತೋಟ ಹುಡಿಹುಡಿಯಾಯ್ತು ಮುರಿದುದು ತೋಟಿಯಲಿ ನಮ್ಮವರು ಹಗೆಗಳ । ಘಾಟವವರಾಚೆಯಲಿ ದುರ್ಬಲ ನಮ್ಮದೀಚೆಯಲಿ ॥ ಆಟವಿಕದಳ ಹೊಯ್ದು ಮಿಂಡರ । ಮಿಾಟನೆತ್ತಿದರವರು ಕಾಹಿನ । ಕೋಟಲೆಗೆ ನಾವೊಲ್ಲೆವೆಂದರು ಚಿತ್ರಸೇನಂಗೆ ॥೩೮॥ ಅವರು ಮರ್ತ್ಯರು ನಮ್ಮದಕಟಾ । ದಿವಿಜರೀವಿಧಿಯಾದುದೇ ಕವಿ । ಕವಿಯೆನುತ ಬೇಹವರಗಿತ್ತನು ರಣಕೆ ವೀಳೆಯವ ॥ ಗವಿಯ ಗರುವರು ಗಾಢಿಸಿತು ಮಾ । ನವರ ಮುರುಕಕೆ ಮುರಿದುದೀಸುರ । ನಿವಹ ಸುಡಲಾಹವವನೆನುತ್ತೈದಿದರು ಸೂಟಿಯಲಿ ॥೩೯॥ ಆತುದಿದು ತೋಪಿನಲಿ ಗಂಧ । ರ್ವಾತಿರೇಕವ ಸೈರಿಸುತ ಪದ । ಘಾತಧೂಳೀಪಟಲ ಪರಿಚುಂಬಿಸಿದುದಂಬರವ ॥ ಭೀತಿ ಬಿಟ್ಟುದೆ ಮನುಜರಿಗೆ ನ । ಮ್ಮಾತಗಳ ಕೂಡಹುದಲೈ ಕಾ । ಲಾತುದೇ ಕಲಿತನವೆನುತ ಕೈಕೊಂಡರವಗಡಿಸಿ ॥೪೦॥ **ಆರು ನಿಲುವರು ದೇವಲೋಕದ । ವೀರರಲ್ಲಾ ವಿಗಡರೆಸುಗೆಯ । ಭೂರಿಬಾಣದ ಹಿಂಡು**

ತರಿದವು ಹೊಗುವಗಂಡಿಗರ ॥ ವಾರುವನ ಮುಖದಿರುಹಿದವು ಮದ । ವಾರಣಂಗಳ ಕೊಡಹಿದವು ಹೊಂ । ದೇಗು ಮುಗ್ಗಿದವೊಗ್ಗು ಮುರಿದುದು ಮಿಗುವಕಾಲಾಳ ॥೪೧॥ ಮುರಿದುದಿದು ಗಂಧರ್ವಬಲ ಮಿ । ಕ್ಕುರುಬಿಕೊಂಡೇ ಬಂದುದಗ್ಗದ । ಗರುವರಳಿದುದು ಬರಿಯದುರುಯಶವುಳಿದುದರಸಂಗೆ ॥ ಕರಿತುರಗರಥಪಾಯದಳಹೆಣ । ಹೊರಳಿಗೆಟ್ಟಿತು ಪಾಳೆಯದ ಗೋಪುರದ ಹೊರಬಾಹೆಯಲಿ ನಿಂದು ದು ಬಳಕೆ ಬೇಹವರು ॥೪೨॥ ಮುರಿದು ಬರುತದೆ ಜೀಯ ನಾಯಕ । ರುರಿವವರ ಬಲುಗಾಯದಲಿ ಕು । ಕ್ಕುರಿಸಿದರು ಗಂಧರ್ವರಿದೆ ಕಡೆವನದ ಕಾಹಿನಲಿ ॥ ಮರಳಿ ಪಾಳೆಯ ಬಿಡಲಿ ಮೇಣ್ಹಾಗೆ । ಯಿರಿ ತಕಂಗೈಸುವರ ಬಿಡು ಕೈ । ಮರೆಯಬೇಡೆನೆ ಬೆರಳ ಮೂಗಿನಲರಸ ಬೆರಗಾದ ... ॥೪೩॥

ಅಂತು ಸಂಧಿ ೧೮ ಕ್ಕೆ ಪದ ೯೪೪ ಕ್ಕಂ ಮಂಗಳಮಸ್ತು.

ಹತ್ತೊಂಭತ್ತನೆಯ ಸಂಧಿ.

ಸೂಚನೆ॥ ರಾಯದಳವನು ಮುರಿದು ಕೌರವ । ರಾಯನನುಜರು ಸಹಿತ ಗಗನಕೆ । ಹಾಯಿದನು ಗಂಧರ್ವಪತಿ ಸುರಪತಿಯ ನೇಮದಲಿ ॥

ಕೇಳು ಜನಮೇಜಯಧರಿತ್ರೀ । ಪಾಲ ವನಪಾಲಕರ ಜಗಳದೊ । ಳಾಳು ನೊಂದುದು ಧರೆಗೆ ಬಿದ್ದುದು ತೋಟತೋಹಿನಲಿ ॥ ಆಲಿಗಳ ಕೀಳ್ನೋಟದೊಲಹಿನ । ಮೌಳಿಯುಬ್ಬೆಯ ಸೂಲ ದುಗು ಡದ । ಜಾಳಿಗೆಯ ಜಡಮನದಲಿದ್ದನು ಕೌರವರರಾಯ ॥೧॥ ಜೀಯ ದುಗುಡವಿದೇಕೆ ದಿವಿಜರ । ರಾ ಯತಿಖಿಯನುನಿರುತಿಜಲಧಿಪ । ವಾಯುಧನದಶಿವಾದಿಗಳ ಸಾಹಸಕೆ ಮೂವಡಿಯ ॥ ರಾಯಭಟರಿದೆ ನೇಮಿಸಾ ಸುರ । ರಾಯನೂರಿನ ಹಾಡುಗರ ಹುಲು।ನಾಯಕರಿಗಿನಿತೇಕೆ ಖತಿ ಬೆಸಸೆಂದನಾಕರ್ಣ ॥೨॥ ನೇಮವಾಯಿತು ಸುಭಟರೊಳಗೆ ಸ । ನಾಮರೆದ್ದರು ಕರ್ಣಸೌಬಲ । ಭೂಮಿಪತಿಯನುಜಾತಬಾಹ್ಲಿಕ ಶಲ್ಯನಂದನರು ॥ ಸೋಮದತ್ತನ ಮಗ ಕಳಿಂಗ ಸು । ಧಾಮಚಿತ್ರಮಹಾರಥಾದಿ ಮ । ಹಾಮಹಿಮರನುವಾಯ್ತು ಗಜಹಯರಥನಿಕಾಯದಲಿ ॥೩॥ ನೂಕಿದರು ಮುಂಗುಡಿಯವರು ಬನ । ದಾಕೆಯಲಿ ಹೊಯ್ದರು ವಿರೋಧಿ ವಿ । ವೇಕಸರನಿಕ್ಕಿದರು ಸಿಕ್ಕಿದರುರವ ಸಬಳದಲಿ ॥ ಆಕೆವಾಳರು ಕರ್ಣಶಕು ನಿಗ । ಳೇಕೆ ನಿಲುವರು ಬಿರುದುಪಾಡಿನ । ನೇಕಭಟರೊಳಬಿದ್ದು ತಿವಿದರು ಬೆರಸಿ ಪರಬಲವ ॥೪॥ ಮತ್ತೆ ಮುರಿದುದು ದೇವಬಲ ಬೆಂ । ಬತ್ತಿ ತಿವಿದರು ಕೌರವನ ಭಟ । ರೆತ್ತಿಹಾಯ್ಕಿದರದಟಗಂಧರ್ವರಭಟವ್ರಜವ ॥ ತೆತ್ತಿಸಿದಶರದೇರ ಸುರಿಗರು । ಳೊತ್ತುಗೈಗಳ ತಾಳಿಗೆಯ ತಲೆ । ಹೊತ್ತು ರಕ್ತದರಹಿಯಲೋಡಿತು ಸೇನೆ ಸುರಪುರಕೆ ॥೫॥ ಹುಯ್ಯಲಾದುದು ಚಿತ್ರಸೇನನ । ಬಯ್ಯಲೇತಕೆ ಬೇರೆ ಗಾಯದ । ಮೆಯ್ಯಬಿಸುಟಾಯುಧದ ಬೆನ್ನಲಿ ಬಿಟ್ಟಮಂಡೆಗಳ ॥ ಸುಯ್ಯಬಹಳದಭಟರು ತೊದಳಿಸು। ತೊಯ್ಯನೆಂದರು ಜೀಯ ಕರ್ಣನ । ಕಯ್ಯಲಮರರ ಜೀವವದೆ ಜಾರುವುದು ಹಿತ ನಿಮಗೆ ॥೬॥ ಕಳವೆ

ಳಿಸದಿರಿ ಧನುವ ತಾಹೆ । ಬ್ಬಲವ ಕರೆಕರೆ ಹುಲುಮನುಷ್ಯರ । ಬಲುಹುಗಡ ಬಯಲಾಯ್ತು ಗಡ ಗಂಧರ್ವರಾಟೋಪ ॥ ನೆಲನೊಳೊಕ್ಕರೆ ಶೋಣಿತಕೆ ರಾ । ಟಳವ ಹಿಡಿ ಬರಹೇಳು ಶಾಕಿನಿ । ಕುಲವ ಡಾಕಿನಿಯರನು ನೆತ್ತರು ಗುಡುಹಿ ಕೈನೆಯರ ॥೭॥ ಏನ ಹೇಳುವೆನರಸ ದಿವಿಜರ । ಸೇನೆಯಲ್ಲಾ ಛತ್ರಚಮರ ವಿ । ತಾನದಲಿ ನಭವಿಲ್ಲ ನೆಗಹಿದ ಸಬಳಸೆಲ್ಲೆಹಕೆ ॥ ಮ್ಯಾನುಸುಳಿ ಕಾಣೆನು ಸಮೀರನ । ಭಾನುಕಿರಣದ ಸುಳಿವನೀಶ್ವರ । ತಾನೆಬಲ್ಲನು ಶಿವಶಿವೆನೆ ಜೋಡಿಸಿತು ನಿಮಿಷದಲಿ ॥೮॥ ತಿನ್ನಡಗ ಕೊಯ್ನೆಣನ ಮನುಜರ । ಬೆನ್ನಲುಗಿ ತನಿಗರುಳನಕಟಾ । ಕನ್ನಿಗಳಿರುದ್ಯಾನವನವನು ಕೆಡಿಸಿ ಕಳೆದಿರಲಾ॥ ಮುನ್ನ ಮುರಿದವರಾರೆನುತ ವಿ । ತ್ಪನ್ನರನು ತೊಲಗಿಸುತ ಸುರಪನ । ಮನ್ನಣೆಯ ಗಂಧರ್ವಬಲ ಬೆರಸಿದುದು ಪರಬಲವ ॥೯॥ ಹೊಯ್ದರೊಳಬಿದ್ದವರ ಮುಂದಲೆ । ನಾಯ್ದು ತಿವಿದರು ಮುರಿದ ಮೊಳೆಯ । ಹೊಯ್ದು ಕರುಳಿನ ಮಿದುಳ ಜೋರಿನ ಬಸಿವ ಶೋಣಿತದ ॥ ಕೈಯುಗಳ ಖಣಿಕಟಿಲ ಹೊಯ್ಲಿನ । ಬಾಯ್ದಣಿಯೆ ಬೈಗುಳಿನಲುಭಯದ । ಕೆಯ್ದುಗಾರರು ನೀಗಿದರು ನಿಜಪತಿಯ ಹಣರಿಣವ ॥೧೦॥ ಬಿಟ್ಟಸೂಟಿಯ ಕುದುರೆಗಾರರ । ನಿಟ್ಟೆಡೆಯಲೌಕಿದವು ದೇಭದ । ಘಟ್ಟಗಳನುಬ್ಬೆದ್ದು ಹರಿಸುವ ರಥದವಾಜಿಗಳ ॥ ಬಿಟ್ಟನಾರಾಚದ ವಿಘಾತದೊ । ಳಿಟ್ಟಸೆಲ್ಲೆಹ ಸಬಳಬಿಟ್ಟೇ । ರಿಟ್ಟಿಗಳ ಮಳೆ ನಾದಿದವು ಕಾದಿದರು ಚೂಣಿಯಲಿ ॥೧೧॥ ಮುರಿದಚೂಣಿಯಭಟರು ತಂದರು । ಬಿರಿಸಿನರೆ ನೆಲೆಗಿದು ನಿಹಾರದೊ । ಳಿರಿದು ನೆರೆಸೊಪ್ಪಾಗಿ ಸಾರಿದು ಸರಿದು ಹಿನ್ನೆಲೆಗೆ ॥ ಸುರಿಯಲಂಬರುಣಾಂಬುಗಳ ನದಿ । ಹೊರಮುರಿಯೆ ದೊರೆನಿಕ್ಕಿದರುಬೊ । ಬ್ಬಿರಿದಿರಿವಡನಿ ಘಟ್ಟಿಸಿತ್ತುನಿಸ್ಸಾಳಯದದನಿಯ ॥೧೨॥ ನೂಕಿದೊಡೆ ಕರ್ಣಾದಿದೊರೆಗಳ । ಡಾಕಸಾನುವರಾರು ದಿವಿಜಾ । ನೀಕದಲಿ ಧಕ್ಕಡರ್ಸುರು ದುವ್ವಾಳಿಸಿತು ನಭಕೆ ॥ ತೋಕಿದವು ನಾರಾಚ ದೆಸೆದೆಸೆ । ಯೋಕರಿಸಿದವು ಸರಳನೆನೆ ಸ । ವ್ಯಾಕುಳರ ಹಿಂದಿಕ್ಕಿ ಹಿಂಡಿದವಸುವನತಿಬಲರ ॥೧೩॥ ಮುರಿದುದಾಗಂಧರ್ವಬಲ ಹೊ । ಕ್ಕಿರಿದು ಕೌರವರಾಯದಳದಲಿ । ಕುರುಹಿನವರಪ್ಪಿದರು ಖಚರೀಜನದ ಕುಚಯುಗವ ॥ ಉರುಬಿತರೆನೆಲೆ ಚಿತ್ರಸೇನನ । ಸೆರಗ ಹಿಡಿದುದು ಸಮರಹೊಯ್ಲೊ । ಯ್ಯಾರಿಮನದ ಕನ್ನಿಗಳನೆನುತೇರಿದನು ಮಣಿರಥವ ॥೧೪॥ ಧನುವ ಕೊಂಡನು ತನ್ನ ತೂಕದ । ವಿನುತಭಟರೊಗ್ಗಾಯ್ತು ವಾದ್ಯ । ಧ್ವನಿಯ ಥಟ್ಟಣೆ ಧಾತುಗೆಡಿಸಿತು ಜಗದ ಜೋಡಿಗಳ ॥ ಮನುಜರಿವದಿರ ಮುರಿದು ಬಹಭಟ । ರನಿಮಿಷರು ಬಯಲಾಯ್ತು ಕಟಕಟ । ದನುಜರಿಪುಗಳ ದೆಸೆಗಳಳಿದವೆ ಶಿವಶಿವಾಯೆಂದ ॥೧೫॥ ನೂಕಿದನು ಗಂಧರ್ವಸೇನೆಯೊ । ಳಾಕೆವಾಳರ ಮುಂದೆ ತಾನವಿ । ವೇಕಿಯೋ ದೊರೆತನದಲ್ಲಿದ್ದನು ಸಕಲದಳಸಹಿತ ॥ ಸೋಕಬಹುದೇ ಕರ್ಣಕೆಲಬಲ । ದಾಕೆವಾಳರ ಕೋಂಬನೇ ನೆರೆ । ತೋಕಿದನು ಗಂಧರ್ವಜಲಧಿಯನೊಂದುನಿಮಿಷದಲಿ ॥೧೬॥ ಗಾಯವಡೆದರು ಕೆಲರು ನೆಲದಲಿ । ಲಾಯನೀಡಿತ್ತು ಕೆಲಬರಿಗೆ ಘೂ । ರಾಯದೆಸುಗೆಗೆ ಹಸುಗೆಯಾದರು ಭಟರು ದೆಸೆದೆಸೆಗೆ ॥ ಆಯುಧದ ಮೊದೆಯೊಟ್ಟಿತಾಕ । ರ್ಣಾಯತಾಸ್ತ್ರನ ಕೆಣಕಿ ಖೇಚರ । ರಾಯದಳ ನುಗ್ಗಾಯ್ತು ದೊರೆ ಹೊಕ್ಕನು ಮಹಾಹವವ ॥೧೭॥ ತೊಲಗು ಮರ್ತ್ಯರಿಗೀಸುದರ್ಪದ । ಕಲಿತನವೆ ಫಡ ನಿಮಿಷ ಸೈರಿಸು । ಹುಲುಭಟರ ಹುರಿದೀಪ್ರತಾಪಾನಳನ ಸೆಗಳಿಯಲಿ ॥ ಅಳುಕುವುದೆ ಖಚರೇಂದ್ರ ಜಲಧರ । ನೆಲವೊ ತೋರಾ ಚಾಪವಿದ್ಯಾ । ಕಲೆಯ

ನೆನ್ನೊಡನೆನುತ ಬೊಬ್ಬಿರಿದೆಚ್ಚನಿನಸುತನ ||೧೮|| ಹೇಳಬಹುದೆ ಸುರೇಂದ್ರಭವನದ | ಸೂಳೆಯರ ಸೂಳಾಯತದ ವಾ | ಚಾಳತನವೇ ನೆರವೆ ನಟರಿಗೆ ಮುಖ್ಯವಿದ್ಯೆಯಲಾ || ಆಳುತನದಂಗದಲಿಬಹರೆ ಶ್ರ | ರಾಳಿಯಲಿ ಮಾತಾಡೆನುತ ಕೆಂ | ಗೋಲಿನಲಿ ಸಲೆ ಹೊಳಿದನು ಉದ್ಯಾನವನತಳವ ||೧೯|| ಪ್ರೊತುಮಾಯ್ದು ಮರ್ತ್ಯರಲಿ ಬಿಲುವಿ | ದ್ಯಾತಿಶಯ ಕಿರಿದುಂಟಲಾ ತಾ | ನೀತ ಕರ್ಣನೆ ಕೌರವೇಂದ್ರಗೆ ಬೇಹಭಟನಿವನೇ || ಆತುಕೊಳ್ಳಾದೊಡೆಯೆನುತ ದಿ | ಗ್ವ್ರಾತವಂಬಿನಲಡಗೆ ರಿಪುಶರಜಾತವನು ಹರೆಗಡಿದು ಕರ್ಣನ ಧನುವ ಖಂಡಿಸಿದ ||೨೦|| ಇದುಶರಾವಳಿಯಹುದು ಸರಿಗಮ | ಪಧನಿಗಳ ಸರವಲ್ಲಲಾ ಸೇ | ರಿದಧನುರ್ವಿದ್ಯಾತಿಶಯಯೋಗ್ಯತೆ ವಿಶೇಷವಲಾ || ಇದೆ ಮನುಷ್ಯರ ಕಲುಹೆ ನೋಡೆನು | ತೊಡರು ಹೊಸಚಾಪದಲಿ ಕಲಿ ಚಿ | ಮ್ಮಿದನು ಚಾಮೀಕರಸುರೇಖಾವಳಿ ತಿಲೀಮುಖವ ||೨೧|| ಕಡಿದು ಗಂಧರ್ವನ ಶರೌಘವ | ನಡಸಿ ನೆಟ್ಟವು ಕರ್ಣಶರ ಸ್ರೈ | ಗೆಡಹಿದವು ಕಿಂಪುರುಷ ಗುಹ್ಯಕ ಯಕ್ಷರಾಕ್ಷಸರ || ಹೊಡಕರಿಸಿ ಹೊದರೆದ್ದು ಬಲ ಸಂ | ಗಡಿಸಿ ತಲೆವರಿಗೆಯಲಿ ಕರ್ಣನ | ಹಿಡಸರಳಪೇಟಿಯಲಿ ಬೆಪರದೆ ನೂಕಿತಳವಿಯಲಿ ||೨೨|| ಸಂಧಿಸಿತು ಪಡೆ ಚಿತ್ರಸೇನನ | ಹಿಂದೆ ನಿಲಿಸಿ ವಿರೋಧಿಶರಹತಿ | ಗಂಡವಳಿಯದೆ ಮುತ್ತಿದುದು ಕಟ್ಟಳವಿಯಲಿ ರಥವ || ಮುಂದುಗೆಟ್ಟನು ಕರ್ಣನೆನೆ ಕೈ | ಗುಂದಿದರು ಸೌಬಲಸುಯೋಧನ | ನಂದನರು ದುಶ್ಶಾಸನಾದಿ ಸಮಸ್ತ ಪರಿವಾರ ||೨೩|| ನೊರಜಿನೆರಕೆಯ ಗಾಳಿಯಲಿ ಹೆ | ಮ್ಮರದ ಬೊಡಲಳುಕುವುದೆ ಘಡ ಕಾ | ತರಿಸದಿರಿ ಕೌರವರೆನುತ ಕಲಿಕರ್ಣ ಬೊಬ್ಬಿರಿದ || ಶರನಿಧಿಗೆ ಬಡಬಾಗ್ನಿ ಮುನಿವವೊ | ಉರುವಣಿಪ ಹೆಬ್ಬಲವನೊಂದೇ | ಸರಳಿನಲಿ ಸವರಿದನು ಸುಳಿಸಿದನೌಕಿ ನಿಜರಥವ ||೨೪|| ಗೆದ್ದುದೇ ರಣವೆಲವೊ ಬವಿಜರ | ದೊಡ್ಡಿಯದ ಸೂಳೆಯರ ಚೌರಿಗೆ | ಬಿದ್ದನರ ವೀಳೆಯದ ಬವಗರು ಭಟರ ಮೋಡಿಯಲಿ || ಹೊಯ್ದೊಡೆ ಮುರುಳಹರೆ ಭಯರಸ | ಗದ್ದುಗೆಯ ಮಂಜಿಡಿಕೆ ಮನದವ | ರಿದ್ದು ಫಲವೇನೆನುತ ಕೈಮಾಡಿದನು ಕಲಿಕರ್ಣ ||೨೫|| ನೊಂದುದಾತನ ಪೊರೆಯ ಸುಭಟರ | ಸಂದಣಿಗಳಿಕ್ಕಲಿಸಿ ಬಿದ್ದುದು | ಮುಂದೆಬಲು ಗಂಧರ್ವಬಲವಿನಸುತನ ಶರಹತಿಗೆ || ಬಂದುನಿಮಿಷಕೆ ಮತ್ತೆ ಪಡಿಬಲ | ಬಂದುಪಗಣಿತ ಯಕ್ಷರಾಕ್ಷಸ | ವೃಂದ ಮುಕ್ಕುರುಕಿದುದು ಕರ್ಣನ ರಥದ ಮುಂಕಣಿಯ ||೨೬|| ಅರಸ ಕೇಳಿಚೆಯಲಿ ಕೌರವ | ರರಸ ಬಂದನು ಸರ್ವದಳಸಹಿ | ತೆರಡುಬಲದುಬ್ಬರದ ಬೊಬ್ಬೆಗೆ ಬಿರಿದುದವನಿತಳ || ನರವೃಕೋದರ ನಕುಲ ಮೊದಲಾ | ದರು ಕುತೂಹಲವಿವರಸುತ್ತಣ | ಮೊರಡಿಗಳ ಮೇಲಿದ್ದು ನೋಡಿದರೀ ಮಹಾಹವವ ||೨೭|| ತೆಗೆಸಿದನು ನೃಪ ನಿನಸುತನ ಮು | ತ್ತಿಗೆಯು ನೆರೆದೊಡ್ಡಿನಲಿ ನೂಕುವ | ಹೊಗರಗಣೆಗಳ ಮೊಯ್ವಡಾಯುಧಕಡಿವಪರಶುಗಳ || ಬಿಗಿಯಸಬಳದಲೋಡಿಸುವ ಲೌ | ಡಿಗಳ ಚಿಮ್ಮುವ ಸುರಗಿಗಳ ತಾ | ಳಿಗದ ರೌದ್ರಾಟೋಪ ರಂಜಿಸಿತಮರರಾಲಿಗಳ ||೨೮|| ನೂಕಿದರು ತೋಳ್ಬನತುಬಿಗ ವುಗು | ಳ್ಕಿತ್ತರು ಪಾಳೆಯಕೆ ಮುರಿದು | ದಿವೌಕಸರು ಜಾರಿದರು ಜೋಡಿಸಿ ಮತ್ತೆ ಕುರುಬಲವ || ತೋಕುವರು ಗಂಧರ್ವರು ಭಯಾ | ನೀಕದೋಹರಿಸಾಹರಿಯಸು | ವ್ಯಾಕುಲರನೀಕ್ಷಿಸುತಲಿದ್ದರು ಪವನಜಾದಿಗಳು ||೨೯|| ಈಸುಕೊಂಡಾಡಿದರೆ ಸುರರುಪ | ಹಾಸಸಾಡುವರೆಮ್ಮನೆನುತ ಮ | ಹಾಸಗರ್ವರು ಚಿತ್ರಸೇನನ ಮನ್ನಣೆಯಭಟರು || ಪಾಶಚಕ್ರಮು

ಸುಂಡಿ ಪರಿಘ । ಪ್ರಾಸ ಪರಶುಕೃಪಾಣಸಬಳಶ । ರಾಸನಾದಿಯ ಕೈದುಗಾರರು ಕವನಕನ್ವಾಯ್ತು
ಜೋಡುಮಾಡಿತು ಖಚರಬಲ ಕೈ । ಗೂಡಿ ಕವಿದುದು ಚಿತ್ರಸೇನನ । ಜೋಡಿಯಲಿ ಜಝ್ಝರರಿದ್ದರು
ಮುಂದೆ ಮುಂಗುಡಿಯ ॥ ಆಡಿದೊಡೆ ಹಾವಿಂಗೆ ಹದ್ದಿನ । ಕೂಡೆ ಮಾರುಕವೆ ಘಡ ಯೆನುತ ಕೈ ।
ಮಾಡಿದರು ರಿಪುಭಟರು ನಿಂದರು ನಿಮಿಷಮಾತ್ರದಲಿ ॥೩೧॥ ಗಳಿಯಹಿಂಡಿನಮೇಲೆ ಗಿಡಗ । ಬಳ
ಗ ಕವಿದಂದದಲಿ ಸೂಟಿಯ । ಲಳವಿಗೊಡ್ಡಿದಚಾತುರಂಗವ ಚಿನಕಡಿಯಮಾಟ ॥ ಎಲೆಸುಯೋಧನ
ಬೀಳು ಕೈದುವ । ನಿಳುಹಿ ಖೇಚರರಾಯನಂಘ್ರಿಯೊ । ಳೆಲವೊ ರವಿಸುತ ಹೋಗೆನುತ ಹೊಕ್ಕಿರಿ
ದರುರವಣಿಸಿ ॥೩೨॥ ಗರುವರೇ ನೀವೆಲವೊ ಸುರಪನ । ಪುರದವಸ್ತುವಿಗರು ಸುಯೋಧನ । ಸರವುನೆ
ಯವಸ್ತುವಿಗಳಿಗೆ ಪಾಡಹರೆ ತೊಡುಕುವೊಡೆ ॥ ಅರಘುಪರಿಯಂತಾರು ನೀವೆನು । ತರಿಭಟಾಗಾಗ್ನೇ
ಯವಾರುಣ । ನಿರುತಿಮೊದಲಾದಸ್ತ್ರಚಯವನು ಕವಿಸಿದನು ಕರ್ಣ ॥೩೩॥ ನೈರುರುತಿಕಾಗ್ನೇಯ
ಯಾವ್ಯಕ । ವಾರುಣಕೆ ಸುರರೊಡೆಯರೆವ್ಮಲಿ । ವೈರಬಂಧವಿದುಂಟೆ ಸಾಧನವಹರೆ ದಿವ್ಯಶರ ॥ ಸೇ
ರದರೆ ನಿನಗಾದರಿದಕೋ । ವಾರುಣಾಪ್ರತಿಕಾರಪಾವಕ । ನೈರುತ್ತಾದಿಗೆ ಕೊಳ್ಳೆನುತ ಗಂಧರ್ವಪತಿ
ಯೆಚ್ಚ ॥೩೪॥ ಗಬ್ಬರಿಸಿದವು ದಿವ್ಯಶರ ಭಯ । ಗಬ್ಬವಸಪತಿಕಾರಶರ ಮಗು । ಕೆಬ್ಬಿಸಿದನಿನಸೂನು
ಪರ್ವತತಿಮಿರಫಣಿಶರವ ॥ ಪಬ್ಬತಕೆ ವಜ್ರಾಸ್ತ್ರತಿಮಿರದ । ಹಬ್ಬುಗೆಗೆ ರವಿಬಾಣ ಹಾವುಗ । ಳೊ
ಬ್ಬಳಿಗೆ ಗರುಡಾಸ್ತ್ರವನು ಗಂಧರ್ವಪತಿಯೆಚ್ಚ ॥೩೫॥ ಸವೆದವಿನಸುತನಂಬು ಖೇಚರ । ನವಗಡಿಸಿ ಕ
ವಿದೆಚ್ಚನೀತನ । ಸವಗಸೀಸಕಜೋಡು ತೊಟ್ಟವು ಸರಳಜೋಡುಗಳ ॥ ಕವಿದುದೆಡಬಲನಂಕದಲಿ
ಸುರ । ನಿವಹ ಸೂಟಿಯ ಸರಳಸೋನೆಗೆ । ಡವರಿಸಿದವಡಿಗಡಿಗೆ ಕರ್ಣನ ರಥದ ವಾಜಿಗಳು ॥೩೬॥
ಜೋಡು ಹರಿದುದು ಸೀಸಕದ ದಡಿ । ಬೀಡು ಬಿರಿದುದು ತಲೆಯ ಚಿಪ್ಪಿನ । ಜೋಡು ಜರಿದುದು ಮನ
ಕೆ ಸುರಿದುದು ಸೊಗಡ ರಣರಭಸ ॥ ಖೋಡಿ ಕೊಪ್ಪರಿಸಿದುದು ಧೈರ್ಯವ । ನೀಡಿರಿದುದಪದೆಸೆ ವಿ
ಕಾಳಿಸಿ । ಖೇಡತನ ಭುಲ್ಲೈಸುತಿದ್ದುದು ಭಾನುನಂದನನ ॥೩೭॥ ಮತ್ತೆಕೊಂಡನು ಬಿಲುಸರಳನಭ ।
ಕೊತ್ತಿದನು ರಣಭಯವನಹಿತನ । ಕುತ್ತಿದನು ಕಂಗಳಲಿ ಕುಡಿದನು ಮನದಲರಿಭಟನ ॥ ಕೆತ್ತಿದನು
ಕೂರಲಗಿನಲಿ ಮುಳು । ಮುತ್ತ ಹೂತಂದದಲಿ ಹುದುಗಿದ । ನೆತ್ತರಿನ ನೆಣವಸೆಯಲೆಸೆದನು ರಣದೊ
ಳಾಖಚರ ॥೩೮॥ ನೊಂದೊಡಬ್ಬಿತು ದರ್ಪತಿಖಿ ಖತಿ । ಗೊಂದುಮುದದುಬ್ಬಿನಲಿ ಘಾತದ । ಕಂದುಕ
ದವೊಲ್ಕುಣಿವುದಾತಃಖೇದ ಕೊಬ್ಬಿನಲಿ ॥ ನೊಂದುದಿನಿಸಿಲ್ಲಕಟದೈತ್ಯರ । ದಂದುಗದಲಾವಿಂದು
ಮರ್ತ್ಯರು । ಬಂದಿವಿಡಿದರೆ ಬಲುಹನೆನುತೋರಂತೆ ಚಿಂತಿಸಿದ ॥೩೯॥ ಖತಿಯಲುಗಿದನು ದಿವ್ಯಬಾಣ
ಪ್ರತತಿಯನು ರಥಸೂತಹಯಸಂ । ತತಿಶರಾಸನ ಕೇತುದಂಡಚ್ಛತ್ರಚಾಮರವ ॥ ಹುತವಹನೊಳೊ
ಟ್ಟಿದನು ಸಮರ । ವ್ಯತಿಕರದಲಾಗ್ನೇಯಶರ ಚಿಂ । ಮಿತು ಚಡಾಳಿಸಿ ಕೆಂಡ ಕೆದರಲು ಕರ್ಣ ಬೆರ
ಗಾದ ॥೪೦॥ ವಿರಥನಾದನು ಹಲಗೆಖಡ್ಗದ । ಲರಿಭಟನ ಸಂಮುಖಕೆ ಚಿಮ್ಮಿದ । ರೆರಡನೊಂದಂಬಿನಲಿ
ಕಡಿದನು ಜಡಿದನಿನಸುತನ ॥ ತಿರುಗಿ ಹಾಯ್ದನು ಬಳಿಕ ಕರ್ಣನ । ಮುರಿವ ಕಂಡು ವಿಕರ್ಣ ತನ್ನಯ ।
ವರರಥವ ಚಾಚಿದನು ಬೋಳೈಸಿದನು ರವಿಸುತನ ॥೪೧॥ ಹೈಸರಿತೋ ಕುರುಚತುರ್ಬಲ । ಗಾಸಿಯಾ
ದನು ಕರ್ಣನಿದು ದೊರೆ । ಗೈಸಲೇ ದುಮ್ಮಾನವೆನುತಲ್ಲಲ್ಲಿ ಕುರುಸೇನೆ ॥ ಓಸರಿಸಿತಡತರದಮುಖದಲಿ ।

ಸೂಸಿದರು ಸಮರಥರು ಸೋಲವ । ಸಾಸುಯೋಧನ ನಗುತ ಕಂಡನು ನೋಡಿ ಕೆಲಬಲನ ॥೪೨॥
ಅವನಿಪನ ಮೊಗಸನ್ನೆಯಲಿ ಸೂ । ಳವಿಸಿದವು ನಿಸ್ಸಾಳಕೋಟಿಗ । ಳವಡಿದುದು ಬಹುವಿಧದವಾದ್ಯ
ಧ್ವನಿ ದಿಶಾಮುಖವ ॥ ತವತವಗೆ ಧುರತೋರಹತ್ತರು । ತವಕಿಸುತ ಹುರಿಯೇರಿದರು ಕೌ । ರವರು
ಕರ್ಣನ ಹರಿಬದಾಹವವೆಮಗೆತಮಗೆನುತ ॥೪೩॥ ಮುರಿದು ದಳ ಸಂವರಿಸಿ ಪಡಿಮುಖ । ಕುರುಬಿ
ದುದು ದುರಿಯೋಧನಾನುಜ । ರರಸಿದರು ಗಂಧರ್ವನಾವೆಡೆ ತೋರುತೋರೆನುತ ॥ ತರುಬುವುದು
ಜಯವೊಮ್ಮೆ ಮನದಲಿ । ಕರುಬುವುದು ಮತ್ತೊಮ್ಮೆ ತಪ್ಪೇ । ನಿರಿದಸಹಸವ ತೋರೆನುತ ಬೆರಸಿದರು
ಪರಬಲವ ॥೪೪॥ ಅರಸನನುಜರೆ ನೀವು ಕರ್ಣನ । ಹರಿಬದವರೇ ಹರಹರೆಮಗಿ । ನ್ನರಿದಲ್ಲೈ ನಿಮಗೀ
ಸುಖವುರುಘೋಂಪಿಸಿದುದಿನ್ನೇನು ॥ ತರಹರವು ನಮಗಿಲ್ಲಲಾ ಫೂ । ತುರೆಯೆನುತ ಪಡಿತಳಿಸಿ ಗಂಧ ।
ರ್ವರ ಚಮೂಪರು ನೂಕಿದರು ತರುಬಿದರು ಪರಬಲವ ॥೪೫॥ ಎಚ್ಚರಿರಿದರು ಹೊಯ್ದರಿಟ್ಟರು ।
ಚುಚ್ಚಿದರು ಸೀಳಿದರು ನೂಕಿದ । ರಿಚ್ಚಟರ ಸೇರಿದರು ದಡಿವಲೆಕಣ್ಣೆವಲೆಗಳಲಿ ॥ ಕೊಚ್ಚಿದರು
ನುಗ್ಗಿದರುಕೊಯ್ದರು । ನುಚ್ಚುನುರಿಮಾಡಿದರು ಹರಿಬಕೆ । ಹೆಚ್ಚಿಹೊಗುವವನೀಶನನುಜರ ಮುನ್ನಣೆ
ಯ ಭಟರ ॥೪೬॥ ಗಾಯವಡೆಯದರಿಲ್ಲ ಸಾಯದೆ । ನೋಯದವರಿಲ್ಲೆರಡುಬಲದಲಿ । ಬೀಯವಾದರು
ಸುಭಟರಿಗೆ ಗಂಧರ್ವಪತಿ ಮುಳಿದು ॥ ರಾಯನನುಜರ ತಟ್ಟಿದನು ದೀ । ರ್ಘಾಯುವನು ಹಿಡಿದನು
ವಿಕರ್ಣನ । ನೋಯಲೆಚ್ಚನು ಕೆದರಿದನು ಕೌರವಚತುರ್ಬಲವ ॥೪೭॥ ಘಡಯೆನುತ ಕುರುರಾಯ
ನಾತನ । ಪಡಿಮುಖಕೆ ನೂಕಿದನು ಜೋಡಿಸಿ । ಜಡಿವನಿಸ್ಸಾಳಾಯತ್ರದ ಕಹಳೆಗಳ ಕಳಕಳದಾ ॥
ಬಿಡುರಥದ ಧಟ್ಟಣೆಯ ಥಾಳಿಯ । ಕಡುಗುದುರೆಗಳ ನೆತ್ತಿಯಂಕುಶ । ದೆಡೆಯ ಘಟೆಯಾನೆಗಳ
ದಳ ಸಂದಣಿಸಿತೊಗ್ಗಿನಲಿ ॥೪೮॥ ನುಗ್ಗನಿವ ಕೈಕೊಂಬನೇ ರಣ । ದಗ್ಗಳರ ಮೂಳೆಯಲಿ ಕದ
ನದ । ಹುಗ್ಗಿಗರ ಸಾಕಿದನು ಶಾಕಿನಿಡಾಕಿನೀಗಣವ ॥ ಬಗ್ಗಿ ಕವಿವರನಿಂದ್ರಲೋಕದ । ಸುಗ್ಗಿಯಲಿ
ಸೇರಿಸಿದನಾಹವ । ದುಗ್ಗಡವನೇನೆಂಬೆನೈ ಗಂಧರ್ವವಿಕ್ರಮವ ॥೪೯॥ ಮೀಟೆನಿಪಗಂಧರ್ವರೊಂದೇ ।
ಕೋಟಿ ಕವಿದುದು ಕುರುಬಲಕೆ ಪಡಿ । ಗೋಟೆಯಾದುದು ನೃಪತಿ ಸಿಲುಕಿದನವರ ಮೇಡೆಯಲಿ ॥ ದಾಟಿ
ತರಸನ ಧೈರ್ಯ ಕೈದುಗ । ಳಾಟ ನಿಂದುದು ಕರದ ಹೊಯ್ಲಿನ । ನೋಟಕರು ಘೋಳೆಂದರಿತ್ತಲು
ಪಾಂಡವರ ವನದಿ ॥೫೦॥ ಅರರೆ ದೊರೆದೊರೆ ಡೊಂಬಿಯಲಿ ಡಾ । ವರಿಸುವರ ಹೊಯ್ದೊಯ್ಯೆ
ನುತ ಖೇ । ಚರರ ಕಂಬಿಗಳಾಡಿದವು ಸುತ್ತಲು ಸುಯೋಧನನ ॥ ಅರಸರಂಜದಿರಂಜಬೇಡೆನು ।
ತುರವಣಿಸಿ ಕೌರವನರೇಂದ್ರನ । ಕರದ ಧನುವನು ಕಳೆದುಕೊಂಡನು ಖಚರಪತಿ ನಗುತ ॥೫೧॥ ಹಯದ
ಪಡಿವಾಘೆಯಲಿ ಬಾಹು । ದ್ವಯವ ಬಿಗಿದನು ತನ್ನ ರಥದಲಿ । ಜಯವಿಹೀನನ ತಂದು ಕುಳ್ಳಿರಿಸಿ
ದನು ಕೌರವನ ॥ ಭಯಭರಿತದುಶ್ಶಾಸನನ ದು । ರ್ಜಯನ ಚಿತ್ರಾಂಗದವಿಕರ್ಣನ । ನಯವಿದೂ
ರರ ತಂದರಿಪ್ಪತ್ತೈದುಸಹಭವರ ॥೫೨॥ ಇಳಿದು ಗಜವನು ಕೈದುಗಳ ನೆಲ । ಕಿಳುಹಿ ಜೋದರು
ಮಾರುವದಿನಿಳೆ । ಗಿಳಿದು ರಾವುತರು ಹಾಯ್ಕಿದರು ದೂಹತ್ತಿಲೌಡಿಗಳ ॥ ಬಿಲುಸರಳ್ಗಳ ಬಿಸುಟು
ರಥಿಕರು । ನೆಲಕೆ ಹಾಯ್ದರು ಕೈಯ ಕೈದುವ । ನಿಳುಹಿ ಪಯದಳ ಬೀಳುಗೊಂಡುದು ಖೇಚರೇ
ಶ್ವರನ ॥೫೩॥ ಮುಟ್ಟದಿರಿ ಪರಿವಾರ ಕೈದುವ । ಕೊಟ್ಟು ಹೋಗಲಿ ದೊರೆಗಳಾದರ । ಬಿಟ್ಟುವರಿ

ಗಮರೇಂದ್ರನಾಣೆಯೆನುತ್ತ ಸಾರಿದರು ॥ ಕೆಟ್ಟುದೀ ಕುರುಪತಿಯ ದಳ ಜಗ । ಜಟ್ಟಿಗಳು ಕರ್ಣಾದಿಗಳು ಮುಸು । ಕಿಟ್ಟು ಜಾರಿತು ಕಂಡದೆಸೆಗವನೀಶ ಕೇಳೆಂದ ॥೫೪॥ ಖಿನ್ನನಾದನು ಪಾರ್ಥನನಿಳಿಜ । ನುನ್ನತೋತ್ಸವನಾದನತಿಸಂ । ಪನ್ನಸಮ್ಮದರಾದರಾಮಾದ್ರೀಕುಮಾರಕರು ॥ ಇನ್ನು ಪಾಂಡವ ರಾಜ್ಯಸಿರಿ ಯೆಮ । ಗಿನ್ನು ಲೇಸಹುದಕಟ ದೈವದ । ಗನ್ನಗತಕವೆಯೆನುತ ಹಿಗ್ಗಿತು ಮುನಿವಧೂನಿಕರ ॥೫೫॥ ಭಾವನವರರ್ತಿಯಲಿ ಜಲಕೇ । ಳೀವಿನೋದಕೆ ಬಂದು ಗಂಧ । ರ್ವಾವಳಿಯ ಕೇಳಿಯಲಿ ಚಿತ್ರೈಸಿದಿರಲಾಯೆನುತ ॥ ದೇವಿಯರು ನಸುನಗುತ ಚಿತ್ತದ । ಚಾವಡಿಯಲೋಲೈಸಿಕೊಂಡಳು । ಭೂವಳಯದೇಕಾಧಿಪತ್ಯದ ಸೌಖ್ಯಸಂಪದವ ॥೫೬॥ ಕೇಳಿದನು ಯಮಸೂನು ದುಗುಡವ । ತಾಳಿದನು ನೆಳನಹುಷಭರತನೃ । ಪಾಲಪಾರಂಪರೆಯಲುದಿಸಿದಸೋಮವಂಶದಲಿ ॥ ಕೋಳುವೋದುದೆ ಕೀರ್ತಿ ನವಿಮ್ಮ । ಬಾಳಿಕೆಯ ಸುಡಲೆನುತ ಚಿಂತಾ । ಲೋಲಚಿತ್ತನು ನೆನೆವುತಿದ್ದನು ವೀರನರಯಣನ ॥೫೭॥

ಅಂತು ಸಂಧಿ ೧೯ ಕ್ಕೆ ಪದ ೧೧೧೨ ಕ್ಕಂ ಮಂಗಳಮಸ್ತು.

ಇಪ್ಪತ್ತನೆಯ ಸಂಧಿ.

ಸೂಚನೆ॥ ರಾಯದಳವನು ಮುರಿದು ಕೌರವ । ರಾಯನನು ಕೊಂಡೊಯ್ವ ಖೇಚರ । ರಾಯನನು ತಾಗಿದನು ಮುರಳಿಚೆತಂದನಾಪಾರ್ಥ ॥

ಕೇಳು ಜನಮೇಜಯಧರಿತ್ರೀ । ಪಾಲ ಸಿಕ್ಕಿದನತ್ತ ಕುರುಭೂ । ಪಾಲನದನೇಹೇಳುವೆನು ಪಾಳೆಯದ ಗಜಬಜವ ॥ ಆಳು ನಡೆದುದು ಕಂಡಮುಖದಲಿ । ಕೀಳುಮೇಲೊಂಪಾಯ್ತು ಧನಿಕರ । ಪೀಳಿಗೆಯ ಧನ ಸೂರೆವೋದುದು ಕೇರಿಕೇರಿಯಲಿ ॥೧॥ ಕುದುರೆ ಹಾಯ್ದವು ಕಂಡಮುಖದಲಿ । ಮದಗಜಾವಳಿಯೋಡಿದವು ರಥ । ಕೆದರಿದವು ಕಾಲಾಳು ಹಾಯ್ದರು ಬಿಟ್ಟಮಂಡೆಯಲಿ ॥ ಕದಡಿದುದು ಜನಜಲಧಿ ಝೋಡಿಸಿ । ಬೆದರಿದವು ಕೇರಿಗಳು ರಾಯನ । ಹದನದೇನೇನೆನುತ ಹರಿದರು ಹರೆದರಗಲದಲಿ ॥ ಗಾಳಿಯುರಿದುದು ರವಿಯ ಕಿರಣಕೆ । ಬಾಲೆಯರು ಗೋಚರವೆ ದಡ್ಡಿಯ । ಮೇಲು ಬೀಯಗದಂಗರಕ್ಷೆಯ ಕಂಚುಕೀಜನದ ॥ ಮೇಳವವದೇನಾಯ್ತೊ ಬೀದಿಯ । ಗಾಳುಮಂದಿಯ ನಡುವೆ ಕುರುಭೂ । ಪಾಲನರಸಿಯರಳುತ ಹರಿದರು ಬಿಟ್ಟಮಂಡೆಯಲಿ ॥೩॥ ಕುರುಪತಿಯ ದುಶ್ಶಾಸನಾದಿಗ । ಳರಸಿಯರು ಭಟಭಟರೊಳೊದರಿದ । ರರಸನುಪಹತಿಗೊಪ್ಪುಗೊಟ್ಟರೆ ಕರ್ಣಶಕುನಿಗಳು ॥ ಗುರುನದೀಸುತರಿದ್ದೊಡೀಪರಿ । ಪರಿಭವಕೆ ಪಾಡಹುದೆ ಪಾಂಡವ । ರರಸನಿಹವನವಾವುದೆಂದರಸಿದಳು ಭಾನುಮತಿ ॥೪॥ ಅರಸಿಯರು ಸಖಿಯರು ಕುಮಾರಕ । ರರಸನನುಜರ ಹೆಂಡಿರನಿಬರು । ವೆರಸಿ ಬಂದಳು ಭಾನುಮತಿಯಮುತನುಜನಾಶ್ರಮಕೆ ॥ ಕರುಣಿ ರಕ್ಷಿಸು ಸೋಮವಂಶೋ । ದ್ಧರಣ ರಕ್ಷಿಸು ಸತ್ಯಧರ್ಮದ । ಸಿರಿಯೆ ರಕ್ಷಿಸೆನುತ್ತ ಧೊಪ್ಪನೆ ಬಿದ್ದಳಂಘ್ರಿಯಲಿ ॥೫॥ ನಾದಿದಳು ನೃಪನಂಘ್ರಿಯನು ನಯ । ನೋದಕದ ಧಾರೆಯಲಿ ಭಾಳವ । ತೇದು ತಿಲಕದ ಗಂಧದಲಿ ಬೈತಲೆಯ ಮುತ್ತುಗಳ ॥ ಆದರಿಸಿ ನವಕುಸ್ತು

ಮೊದಲಿ ಘನ । ರೋದನಧ್ವನಿಮಂತ್ರದಲಿ ನೃಪ । ಪಾದಪೂಜೆಯ ರಚಿಸುವವೊಲೊಪ್ಪಿದಳು ಭಾನುಮತಿ ॥೬॥ ಖಳರು ಕೌರವರಿಂದು ಸಜ್ಜನ । ಕುಲಶಿರೋಮಣಿ ನೀನು ಕರುಣಾ । ಜಲಧಿ ನಿನಗಪರಾಧಿಗಳು ನಾವಹೆವು ಜಗವರಿಯೆ ॥ ಹುಳಿಗೆ ಹಾಲಳುಕಿದೊಡೆ ಹಾಲಿನ । ಜಲಧಿ ಕೆಡುವುದೆ ಜೀಯ ನಿನ್ನವ । ರೆಳಸಿಕೊಂಡರು ಕಾಯಬೇಕೆಂದೊರಲಿದಳು ತರಳೆ ॥೭॥ ರಾಯರಿಗೆ ಬಿನ್ನಹವ ಮಾಡೌ । ತಾಯೆ ದುರುಪದಿದೇವಿಯೇ ಹಿರಿ । ದಾಯಸವ ಪಡಿಸಿದನು ಕುರುಪತಿ ನಿನ್ನ ಮೈದುನನು ॥ ನೋಯಿಸಲು ಸಿರಿಖಂಡನಿಜಗುಣ । ದಾಯತವ ಬಿಡದಂತೆ ನೀವೇ । ಕಾಯಬೇಹುದು ಪತಿಯನೆಂದೊರಲಿದಳು ಭಾನುಮತಿ ॥೮॥ ಚುಂಬಿಸಿತು ಕಡುಶೋಕ ಮಿಡಿದನು । ಕಂಬನಿಯನುಗುರಿನಲಿ ಘನಕರು । ಣಾಂಬುನಿಧಿ ಸೀಗುರಿಸಿ ಮೈಗೂಡಿರಿದರೋಮದಲಿ ॥ ಹಂಬಲಿಸಬೇಡಕಟ ಕುರುಪತಿ । ಯೆಂಬನಾರೌ ಭೂಪನವರೇ । ನೆಂಬರೇಳೌ ತಾಯೆಯೆನುತೆತ್ತಿದನು ಭಾಮಿನಿಯ ॥ ಭೀಮ ಬಾ ಕುರುರಾಜಕುಲಚೂ । ಡಾಮಣಿಯ ತಾ ಹೋಗು ಕದನೋ । ದ್ದಾಮದರ್ಪನ ತಾ ನಿಜಾನ್ವಯಕುಮುದಚಂದ್ರಮನ ॥ ತಾಮನೋವ್ಯಥೆ ಬೇಡ ನೃಪಚಿಂ । ತಾಮಣಿಯ ತಾಯೆನಲು ಕರಯುಗ । ತಾಮರಸವನು ಮುಗಿದು ಬಿನ್ನಹವಮಾಡಿದನು ಭೀಮ ॥೧೦॥ ಬೆಸಸಬೇಹುದು ನೀತಿಶಾಸ್ತ್ರದ । ಬೆಸುಗೆತಪ್ಪದೆ ರಾಜಧರ್ಮದ । ಮುಸುಡುಕಂದದೆ ಖೋಡಿಮಿಡಿಯದೆ ಕುಶಲರಾದವರು ॥ ಎಸಗುವದು ನಾವಾವಕಾರ್ಯದೊ । ಳಸುಮನಿಕ್ಕಿ ತದರ್ಥವನು ಪರ । ರೆಸಗಿದೊಡೆ ನಮಗೇನುಬಾಧಕವೆಂದನಾಭೀಮ ॥೧೧॥ ತಮ್ಮ ಸಂಕಟಕಿವರು ವಿನಯವ । ನೆಮ್ಮಿ ಬಿನ್ನಹಮಾಡುತಿದೊಡೆ । ನಿಮ್ಮಡಿಗೆ ಪರಿತೋಷವೇ ಕರ್ತವ್ಯವಿಷಯದಲಿ ॥ ಎಮ್ಮ ಮನ ಮುಂಚುವುದು ಕಾರ್ಯ್ಯದ । ಹಮ್ಮುಗೆಯು ನೀವರಿಯಿರೇ ತಮ । ತಮ್ಮ ದುಷ್ಕೃತ ತಮಗೆ ಫಲಿಸಿದರೇನು ನಿಮಗೆಂಢ ॥೧೨॥ ಅನುಜ ಕೇಳಪಕಾರಿಜನದಲಿ । ನೆನೆವುದುಪಕಾರವನು ಗುಣಹೀ । ನನಲಿ ಗುಣವನು ತೋರುವುದು ಗರುವರಿಗೆ ತೊಡಿಗೆಯದು ॥ ಅನುಜನಲ್ಲಾ ನಮಗೆ ಕೌರವ । ಜನಪನವರಪರಾಧಶತವನು । ನೆನೆವೊಡಿದು ಹೊತ್ತೇ ಮಹಾಬೇವೆಂದನಾಭೂಪ ॥೧೩॥ ಭರತವಂಶದೊಳವರ ಭಂಗವೆ । ನಿರುತವೆಮ್ಮದು ನಮ್ಮ ಭಂಗ । ಸ್ಫುರಣವವರದು ತಾವರಿಯರಾವರಿವೆಮೀಹದನ ॥ ಪರರ ಕಲಹಕೆ ನಾವು ನೂರೈ । ವರುಗಳಂತಃಕಲಹಕದು ನೂ । ರ್ವರು ವಿಚಾರಿಸಲೈವರಾವೆಂದನು ಮಹೀಪಾಲ ॥೧೪॥ ಆವನಾಗಲಿ ಬೇಡಿದಂಗೊಲಿ । ದೀವುದೇ ನೃಪಧರ್ಮ ಹಗೆಕೆಳೆ । ಯಾವನಾಗಲಿ ಸೆಣಸಿದೊಡೆಕಾದುವುದೆ ನೃಪನೀತಿ ॥ ಆವನಾಗಲಿ ಶರಣುವೊಕ್ಕೊಡೆಕಾವುದೇ ಕ್ಷತ್ರಿಯರ ಮತವಿಂ । ತಾವುದುಚಿತವು ಭೀಮ ನೀ ಹೇಳೆಂದನಾಭೂಪ ॥೧೫॥ ಅರಿಗಾರುಪಕಾರಿಗಳು ಮೇ । ಣಾರಿಗಾರಪಕಾರಿಗಳು ತಾ । ನಾರಿಗಾರುಂಟವರವರ ಕೃತಕರ್ಮಸಂಸ್ಕಾರ ॥ ಹೋರಿಸುವುದಳಿಸುವುದು ಸೌಖ್ಯಕೆ । ಸೇರಿಸುವುದಿದಕಹಿತಹಿತರೆಂ । ದಾರ ಮುರಿವುದು ಮನ್ನಿಸುವುದೈ ಭೀಮ ಹೇಳೆಂದ ॥೧೬॥ ಅದರಿನಾಚೆಯಭವದ ದುಷ್ಕೃತ । ವೊದಗಿತೀಜನ್ಮದಲಿ ವನವಾ । ಸದ ಪರಿಕ್ಲೇಶಾನುಭವಕಿವರೇನಮಾಡುವರು ॥ ಒದಗಿದುತ್ಸವದಲ್ಲಿ ಪರರ । ಭ್ಯುದಯವನು ಬಯಸುವುದು ಪರರಿಗೆ । ಮುದವನಾಚರಿಸುವದು ಧರ್ಮಜ್ಞರಿಗೆ ಗುಣವೆಂದ ॥೧೭॥ ಎಣಿಸಲೇಕಿದನದನು ಕೌರವ । ಗಣ ಮರಳಿ ಬಂದಲ್ಲದಾರೋ । ಗಣೆಯ ಮಾಡೆನು ಪಾರ್ಥ ನೀನ್ನುಡಿ ನಿನ್ನ ಹವಣೇನು ॥ ರಣದೊಳರಿಗಳ ಮುರಿದು ಕುರುಧಾ । ರಿಣಿಪ

ತಿಯೆ ತಹುದುಂಟೆಯೆನೆ ಬಿಲು । ಗಣೆಗಳನು ತಿದ್ದಿದನು ಫಲುಗುಣ ಹೂಡಿದನು ರಥವ ॥೧೮॥ ಎಮೆ
ಗೆ ನುಡಿ ಬೇರುಂಟೆ ನೀತಿ । ಭ್ರಮಿತರಾವಲ್ಲನಿಲಸುತನು । ಭ್ರಮಿತನವ ಸೈರಿಸುವುದೈ ಕಾರುಣ್ಯನಿಧಿ
ನೀನು ॥ ನಿಮಿಷದಲಿ ಗಂಧರ್ವಕನಸಾ । ಕ್ರಮಿಸಿ ಕೌರವಗಣವನೀಪದ । ಕಮಲದಿದಿರಲಿ ಕೆಡಹಿ
ತೋರುವೆನೆನುತ ಹೊರವಂಟ ॥೧೯॥ ಮುರಿದು ಚೆಲ್ಲಿದಸಕಲಕುರುಬಲ । ನೆರೆದುದರ್ಜುನನೊಡನೆ
ಸೂಟಿಯೊ । ಳರಿಭಟನ ಬೆಂಬತ್ತಿದನು ಫಡ ನಿಲ್ಲುನಿಲ್ಲೆನುತ ॥ ಸೆರೆಯ ಬಿಡು ಗಂಧರ್ವಲೋಕವ
ನುರುಹುವೆನು ಹಿಂದಿಕ್ಕಿಕೊಂಬನ । ತಿರವ ಚಂಡಾಡುವೆನೆನುತಕವಿದೆಚ್ಚನಾಪಾರ್ಥ ॥ ಸರಳಿನುಬ್ಬೆಗೆ
ಸೆಡದು ಸಮರಕೆ । ತಿರುಗಿ ನಿಂದುದು ಖಚರಬಲವು । ಬ್ಬರದಬೊಬ್ಬೆಯಲುರುಬಿದುದು ಶರಹತಿಗೆ
ಸೈರಿಸುತ ॥ ಉರುಳಿದವು ಗಂಧರ್ವಶಿರ ನಭ । ಸರಳಮಯ ದಿಗುಜಾಲವಂಬಿನ । ಹೊರಳಿಯಲಿ ಹೊ
ದಿಸಿದುದೆನಲು ಕವಿದೆಚ್ಚನಾಪಾರ್ಥ ॥೨೧॥ ಮೊರೆವಗರಿಗಳ ಮೊನೆಯಲುದಿರುವ । ಹೊರಳಿಗಿಡಿಗಳ
ಬಾಯಧಾರೆಗ । ಳುರಿಯಹೊದರಿನ ಹುದಿದಹೊಂಬರಹದ ಸುರೇಖೆಗಳ ॥ ಸರಳು ಹೊಕ್ಕವು ಹೆಕ್ಕಿ
ದವು ಖೇ । ಚರಬಲವನೊಕ್ಕಿದವು ತೂರಿದ । ವರಿಭಟನ ಚುಚ್ಚಿದವು ಹೆಚ್ಚಿದವೆಂಟುದೆಸೆಗಳಲಿ ॥೨೨॥
ಕೋಲ ಬಲುವಳೆಗೊಡ್ಡಿಹರಿಗೆಯ । ಮೇಳೆಯವ ಮರೆಗೊಂಡು ಖೇಚರ । ರಾಳು ನಿಂದಚ್ಚಿತು ನಿಹಾ
ರದಲರ್ಜುನನ ರಥವ ॥ ಕೋಲುಗಳನಾಹರಿಗೆ ಹಲಗೆಯ ಮೇಳೆಯವನಾಮರೆಯಲುಗಿದೆಸು । ವಾಳ
ನೊಂದಂಬಿನಲಿ ಸಂದಣಿಗೆಡಹಿದನು ಪಾರ್ಥ ॥೨೩॥ ಮುಟ್ಟಿ ಹೆಣನನು ಖಚರಬಲ ಹುರಿ । ಗಟ್ಟಿ
ತಲೆವರಿಗೆಯಲಿ ಪಾರ್ಥನ । ಕಟ್ಟಳವಿಯಲಿ ಚೂರಿಸಿದರುಬ್ಬಣದಮೊನೆಗಳಲಿ ॥ ದಿಟ್ಟರಹಿರೋ ಕೌರ
ವೇಂದ್ರನ । ಕಟ್ಟಿದಾತನ ಕರೆಯಿ ನಿಮ್ಮನು । ಮುಟ್ಟಿದರೆ ನೃಪನಾಣೆಯೆನುತೊಡಹಾಯ್ಸಿದನು ರ
ಥವ ॥೨೪॥ ಗಜಬ ಪದಘಟ್ಟಣೆಯ ಬಹಳಾಂ । ಬುಜದವೊಲು ರಥಚಕ್ರಹತಿಯಲಿ । ಗಿಜಿಗಿಜಿಯ
ಮಾಡಿಸಿದಖೇಚರಚಟುಲಪಟುಭಟರ ॥ ವಿಜಯನಲ್ಲಾ ಸುರಪುರದಮೌ । ರಜಿಗನಾವೆಡೆ ಕುರುಬಲದ
ಗಜ । ಬಜದ ಗರುವನ ತೋರೆನುತ ತೂಳಿದನು ಕಲಿಪಾರ್ಥ ॥೨೫॥ ಅಳವಿಯಲಿ ಕೈಮಾಡಿ ಖೇಚರ
ರಳಲಿಗರು ಮುಮ್ಮುಳಿತರಾದರು । ಬೆಳಗಿದವು ದಿವ್ಯಾಸ್ತ್ರಧಾರೆಗಳಖಿಳದಿಗುತಟವ ॥ ತಳಪಟದೊ
ಳಾಸೆರೆಸಹಿತ ಕೈ । ಚಳಕದಲಿ ತೆಗೆದೆಸುತ ಸಮರಕೆ । ಮಲೆತು ನಿಂದನು ಚಿತ್ರಸೇನನು ಪಾರ್ಥನಿದಿರಿ
ನಲಿ ॥೨೬॥ ಬಿಡು ಸೆರೆಯನವಗಡೆಯತನವೆಂ । ಮೊಡನೆ ಸಲ್ಲದು ಸೂಳೆಯರ ಸುರೆ । ಗುಡಿಹಿಗಳ
ರಸವಾದಿಗಳ ಸೇರುವೆಯಲೊಪ್ಪುವುದು ॥ ಫಡಯೆನುತ ನಾರಾಚದಲಿ ಬಲ । ನೆಡನ ಕೀಲಿಸಿ ಪಂಗಡೆಯ
ಮುಂ । ಗುಡಿಯ ಕಟ್ಟಿದನಂಬಿನಲಿ ಖಚರಾಧಿಪನ ರಥವ ॥೨೭॥ ನೂಕದಿರಲಾಹವಕೆ ಸಮ್ಮುಖ ।
ವೇಕೆನುತ ಹತ್ತಿದನು ಗಗನವ । ನಾಕಿರೀಟಿಯ ಗೆಲುವೆನೆಂದುಬ್ಬರದಬೊಬ್ಬೆಯಲಿ ॥ ನಾಕನಿಳಯರ
ಮಾರ್ಗದೊಳಗ । ವ್ಯಾಕುಳನು ಭುಲ್ಲೈಸಿದೊಡೆ ಲೋ । ಕೈಕವೀರನಲಾ ಧನಂಜಯನಡರಿದನು ನಭ
ವ ॥೨೮॥ ಎಲೆವೊ ಕೌರವಸಹಿತ ಕಮಠನ । ಕೆಳಗೆ ಧ್ರುವನಿಂ ಮೇಲೆ ಹೊಕ್ಕೊಡೆ । ಕೊಲುವೆನಲ್ಲದೆ
ಬಿಡುವೆನೇ ಫಲ ನಿಲುನಿಲ್ಲೆನುತ ॥ ತುಳುಕಿದನು ಕೆಂಗೋಲಸಿನವಂ । ಡಲಕೆ ದಿಗ್ಭ್ರಮೆಯಾಯ್ತು
ನಭದಲಿ । [illegible]ವಿಮಾನತತಿ ಚೆಲ್ಲಿದವು ದೆಸೆದೆಸೆಗೆ ॥೨೯॥ ತಿರುಗಿ ನಿಂದನು ಖಚರಪತಿ ನಿ ।
ಷ್ಠುರ[illegible] ಪಾರ್ಥ [illegible]ಡು । ಮರುಳೊ ಮೂಢನೊ ಜಡನೊ ಪಿತ್ತಭ್ರಾಂತಿವಿಹ್ವಲನೊ ॥

ಧುರದಕೌತುಕಗರಳಮೂರ್ಛೆಗಂ । ತರಿತ್ರಹೃದಯನೊ ನಿಲ್ಲು ಚಾಪದ । ಶರವನುಪಸಂಹರಿಸಿ ನಮ್ಮ
ಯ ಮಾತ ಕೇಳೆಂದ ॥೪೦॥ ಹುಲಿಯ ಮುರಿದ್ರೊತ್ತಿದೊಡೆ ಪತ್ರಸಂ । ಕುಲಕೆ ಸಂಕಟವೇನು ವಾಯಸ।
ಕುಲವ ಕೈಮಾಡಿದೊಡೆ ಕೋಟಲೆಯೇನು ಕೋಗಿಲೆಗೆ ॥ ಖಳರ ಕೊಪ್ಪರಿಸಿದೊಡೆ ಸುಜನರ । ತಲೆಗೆ
ವೇದನೆಯೇನು ಕೌರವ । ಕುಲವನದ್ದಿದೊಡೇನು ಜಠರದಶೂಲೆ ನಿನಗೆಂದ ॥೪೧॥ ಹೋದವಾರಿಯ
ಕರೆದು ಮನೆಯೊಳ । ಗಾದರಿಸಿದವರುಂಟೆ ನೀರಲಿ । ನಾದಕೆಂಡವನುರುಹಿ ಮುಡಿದವರುಂಟೆ ಮಂಡೆ
ಯಲಿ ॥ ಕೈದು ಮುರಿದೊಡೆ ಹಗೆಗೆ ತನ್ನಯ । ಕೈದುಕೊಟ್ಟವರುಂಟೆ ಕುರುಪತಿ । ಶೀದಡೀತನ ಬಿಡಿ
ಸಿಕೊಂಬಿರೆ ಲೇಸುಲೇಸೆಂದ ॥೪೨॥ ಜನಪನೀತಿಯೊ ಮೇಣುಖೋಳೆಯ । ತನವೊ ಬಿಲುಜಾಣಿ
ಕೆಯೊ ಬಿಂಕವೊ । ನಿನಗೆ ಕದನದ ಕಲುಹೆಯೋ ನಾವರಿಯೆವಿದನೀಗ ॥ ಬನಕೆ ಮರಳ್ದೈ ಮರುಳೆ ನೀ
ಹುದು । ವನೆಯಹಾವನು ಹದ್ದು ಹಿಡಿದೊಡೆ । ಮನಕತವಮಾಡುವರೆ ಬಿಜಯಂಗೈಯಿ ನೀವೆಂದ ॥
ನಟರಲಾ ನೀವ್ಸುರಪುರದ ಚಾ । ವಟೆಯರ್ಕ ಚತುರೋಕ್ತಿಗಳಲಟ । ಮಟಿಸಿದೊಡೆ ನಾ ಮರಳುವೆನೆ
ಬಿಡುಬಿಡು ಸುಯೋಧನನ ॥ ಕಟುಮಧುರವುರಿಸೀತವತಿಸಂ । ಕಟವುಸುಖವಿಷವಮೃತವಾವುದು । ಘ
ಟಿಸಿತಗ್ರಜನಾಜ್ಞೆಯಿದು ನಮಗೆಂದನಾಪಾರ್ಥ ॥೪೪॥ ಧರ್ಮವಾಗಲಿ ಮೇಣುಜಗದಲ । ಧರ್ಮವಾಗಲಿ
ರಾಜಮಂತ್ರದ ।ಮರ್ಮವಾಗಲಿ ನೀತಿಬಾಹಿರವಾಗಲದು ಪೇಣು ॥ ಧರ್ಮಪುತ್ರನ ಬೆಸನು ವೈದಿಕ ।
ಧರ್ಮವೆಮಗದು ರಾಜಮಂತ್ರದಾನಿರ್ಮಲಿಸಮತಮಮಗೆ ಬೇರೊಂದಿಲ್ಲ ಮತವೆಂದ ॥೪೫॥ ನುಸುಳು
ಗಂಡಿಯಿದೆಲ್ಲಕೌರವ। ಪಸುಮತಿಶ್ರನನಕಟ ಬಿಡು ನಿನ್ನ ಸಿರಿಗುಬ್ಬಸವಮಾಡೆನಂಘ್ರಿಗಳಾಣೆ ಧರ್ಮಜನ॥
ಮಸಗುವರೆ ಹಿಡಿ ಧನುವ ನೆನುತೆ। ಬ್ಬಿಸಿದನವಿರಳಶರವನಾತನ ಮುಸಿಕಿದವು ಮುಕ್ಕಿರಿಸಿದವು ರಥಸನ್ನಿವೇ
ಶದಲಿ ॥೪೬॥ ಕೋಲ ಬರಿದೇ ಬೀಯಮಾಡದಿ । ರೇಳು ಫಲುಗುಣ ಮರುಳು ನೀ ದಿಟ । ಕೇಳುವರೆ
ನಾವಿವನಕಟ್ಟಿದೆವಿಂದ್ರನಾಜ್ಞೆಯಲಿ ॥ ಪಾಲಿಸಾ ನಿಮ್ಮಯ್ಯ ಬೆಸಸಿದ। ನೇಳಿಸದೆ ಕೇಳೆನಲು ಕೆಂಗರಿ।
ಗೋಲ ತೂಗುತ ಪಾರ್ಥ ನುಡಿದನು ಚಿತ್ರಸೇನಂಗೆ ॥೪೭॥ ಕುರುಪತಿಯ ಕಟ್ಟುವೊಡೆ ಸುರಪತಿ ।
ಕರೆದು ಬೆಸಸಿದ ನಿನಗೆಯವಗೆ । ಮ್ಮರಸ ನೇಮವ ಕೊಟ್ಟನೀಕುರುಪತಿಯ ಬಿಡಿಸೆಂದು ॥ ಸುರಪತಿಗೆ
ಕೃತಕಾರ್ಯ ನೀನಾ । ಗಿರಲು ನಾವಕೃತಾರ್ಥರಾಗಿಯೆ । ಮರಳಿ ಭೂಪನ ಕಾಬೆವೈಸಲೆ ಜಾಣನಹೆ
ನೆಂದ ॥೪೮॥ ಬಿಡುವೆಯಾದೊಡೆ ನೃಪನಸೆರೆಯನು । ಬಿಡಿಸುವೆನು ಮೇಣಲ್ಲದಿರ್ದೊಡೆ । ಬಿಡಿಸುವೆನು
ನಿನ್ನುಸುರಸೆರೆಯನು ನಿನ್ನ ದೇಹದಲಿ ॥ ಮಡಿಗೆ ತೆರಹಿಲ್ಲೇಳೆನುತ್ತ ಕೈ । ಗಡಿಯಲೆಚ್ಚನು ಕಾಲಕೂ
ಟದ । ಕಡಲು ಕವಿವಂದದಲಿ ಕವಿದವು ಪಾರ್ಥನಂಬುಗಳು ॥೪೯॥ ಕಡಿದನರ್ಜುನನಂಬನೀಸವ । ಗಡ
ವಿದೇಕೈ ಮರುಳೆ ಕೆಂಡವ । ಮಡಿಲೊಳಿಕ್ಕುವುದರ್ತಿಯೇಸಂಧಾನ ನಿಮಗೆಮಗೆ ॥ ಬಿಡುವೆನಿನಿಬರ·
ಸೆರೆಗಳನು ನಿ । ನ್ನೊಡೆಯನಲ್ಲಿಗೆ ಕೊಂಡು ನಡೆಯೆಂ । ದೊಡನೆ ಬಂದನು ಧರ್ಮರಾಯನ ಬಳಿಗೆ
ಖಚರೇಂದ್ರ ॥೫೦॥ ಸೋಲವೆಮ್ಮದು ನಿಮ್ಮ ತಮ್ಮನು । ಮೇಲುಗೈ ನಿಮ್ಮಡಿಗಳಾಜ್ಞಾ । ಪಾಲಕರು
ಭೀಮಾರ್ಜುನರು ಮಾದ್ರೀಕುಮಾರಕರು ॥ ಕಾಳಗದೊಳೆಮ್ಮಖಿಳಖಚರರ । ಧೂಳಿಪಟಮಾಡಿದನು
ಲಕ್ಷ್ಮೀ । ಲೋಲ ನಿಮಗೊಲಿದಿಹನು ಗದುಗಿನವೀರನಾರಯಣ ... ॥೫೧॥

ಅಂತು ಸಂಧಿ ೨೦ ಕ್ಕೆ ಪದ ೧೦೫೪ ಕ್ಕಂ ಮಂಗಳಮಸ್ತು.

ಇಪ್ಪತ್ತೊಂದನೆಯ ಸಂಧಿ.

ಸೂಚನೆ|| ಕಳುಹಿದನು ಯಮಸೂನು ವಂಶ । ಪ್ರಳಯನಂ ಪ್ರಾಯೋಪವೇಶವ ।
ತಿಳುಹಿ ದೈತ್ಯರು ಸಂತವಿಟ್ಟರು ಕೌರವೇಶ್ವರನ ||

ಕೇಳು ಜನಮೇಜಯಧರಿತ್ರೀ । ಪಾಲ ಕೌರವನೃಪನ ತಂದು ಕೃ । ಪಾಳುವಿನ ಚರಣಾಗ್ರ
ದಲಿ ಕೆಡಹಿದನು ಕಲಿಪಾರ್ಥ || ತೋಳ ಹಿಂಗಟ್ಟುಗಳ ಮೋರೆಯ । ಕಾಳಿಕೆಯ ಬಿಡುದಲೆಯ ನೀರೊ
ರೆ । ಮಾಲಿಗಳ ಕುರುಭೂಪನಿದ್ದನು ತಮ್ಮದಿರುಸಹಿತ ||೧|| ಕೊಳ್ಳಿ ಸೆರೆಯನು ನಿಮ್ಮ ಸಹಭವ
ರೆಲ್ಲರಂ ಕಡುಮೂರ್ಖರಿದು ನಿ । ಮ್ಮೆಲ್ಲರಿಗೆ ಮತವೈಸಲೇ ನಾವೆಂದು ಫಲವೇನು || ಖುಲ್ಲರಿವದಿರ
ಬಿಡಿಸಿದೊಡೆ ತಳುವಿಲ್ಲದಹುದಪಘಾತ ಸಾಕಿ । ನ್ನೆಲ್ಲಿಯದು ನಯ ಬೀಳುಗೊಡಿ ನೀವೆಂದನಾ
ಖಚರ ||೨|| ಮಾನಭಂಗವು ಬರಲಿ ಮೇಣಭಿ । ಮಾನವಾಲಿಂಗಿಸಲಿ ಚರಣದೊ । ಳಾನತರ ಪಾಲಿ
ಸುವುದೇ ಕ್ಷತ್ರಿಯರ ಧರ್ಮವಿದು || ನೀನೆಮಗೆ ಬಾಂಧವನೆನುತ ಸ । ನ್ಮಾನದಲಿ ಕಳುಹಿದನು ಬಳಿ
ಕು । ದ್ಯಾನದಲಿ ದೇವೇಂದ್ರನೆತ್ತಿದನಳಿದಖೇಚರರ ||೩|| ಕಳುಹಿದನು ಖೇಚರನ ನವನಿಪ । ತಿಲಕ
ನೋಡಿದನೀತನನು ನಿಜ । ಲಲನೆಯನು ಕರೆದನು ಸುಯೋಧನನೊಂದನಕಟೆನುತ || ನಳಿನಮುಖಿ
ಹೆಡಗೈಯ ಬಿಡು ಕಲು । ನೆಲನು ಹಾಸಿಕೆ ಹಂಸತಲ್ಪದ । ಪಳಿಕಿನಲಿ ಪವಡಿಸುವಗೀವಿಧಿಯೇ ಶಿವಾ
ಯೆಂದ ||೪|| ಬಂದಳಬುಜಾನನೆ ಸುಯೋಧನ । ನಂದವನು ನೋಡಿದಳು ಸುಯ್ದಳು । ಬೆಂದವಿಧಿ
ಬಂಧನವ ತಂದುದೆ ಸಾರ್ವಭೌಮರಿಗೆ || ಬಂದು ಕೈಗಲ್ಲದಲಿ ಬಿಡಿಸಿದ । ಳೊಂದು ಕೈಯಲಿ ಭುಜ
ದಪಾಶವ । ನಿಂದುಮುಖಿ ದುರಿಯೋಧನನ ದುಶ್ಶಾಸನನುಸಹಿತ ||೫|| ಕೆಳದಿಯರ ಕೈಯಿಂದ ಕೊ
ಯ್ಸಿದ । ಳುಳಿದ ಕೌರವನನುಜವರ್ಗದ । ಬಲುಹುರಿಯನೇಣುಗಳ ನವದಿರ ಗೋಣುಗಳು ಮಣಿಯೆ||
ಅಳಲಿಸಿದನೇ ಖಚರನಾತನ । ಕೊಲಿಸಬೇಹುದು ಕಳುಹಿ ಕಷ್ಟವ । ಬಳಸಿದಿರಿ ಭೂಪಾಲಯೆಂದಳು
ನಳಿನಮುಖಿ ನಗುತ ||೬|| ಅರಸನೊಂದೈ ಮರ್ದನಕೆ ಮ । ಲ್ಲರುಗಳಿಲ್ಲೆಮಗೊತ್ತುವವು ಕಲು ।
ಹರಳು ಮಜ್ಜನಭೋಗಿಸುವರಸಿತಾಂಬು ತಿಳಿಗೊಳನು || ಹರಿಣಶಾರ್ದೂಲಾದಿ ಚರ್ಮಾಂ । ಬರವೆ
ಸುಮುಕಟ್ಟೆಮಗೆ ರತ್ನಾ । ಭರಣವೇ ರುದ್ರಾಕ್ಷಿಯೆಂದಳು ನಗುತ ತರಳಾಕ್ಷಿ ||೭|| ವಾರುವವು ವಟ
ಶಾಖಿ ಗಿರಿಗಳು । ತೋರಕರಿಗಳು ಭದ್ರಗಜ ವನ । ಭೂರುಹದನೆಳಲೆಮಗೆ ಸತ್ತಿಗೆ ಪಲ್ಲವಾವೃತ || ಚಾರು
ಚಾಮರ ಕಿರುಮೊರಡಿ ವಿ । ಸ್ತಾರಪೀಠವು ಹಂತಿಗಾರರು । ಭೂರಿಸರ್ಪಾವಳಿಗಳರಮನೆ ಹೊದರು
ಹೊಸಮೆಳೆಯ ||೮|| ಈ ವಿಪತ್ತಿನ ನಿಮ್ಮಡಿಯ ಸಂ । ಭಾವಿಸುವೊಡೆಮಗಾದವಸ್ಥೆಗ । ಳೀವಿಧಿಗ
ಳೇಕೆಮ್ಮ ಬಾಳಿಕೆ ಯೆಂದು ದುಗುಡದಲಿ || ದೇವನಿರ್ಪನು ಧರ್ಮಸುತನಿ । ನ್ನಾವುದುಚಿತಾನುಚಿತವಂ
ಬುದ । ಭಾವನವರೇ ಬಲ್ಲರೆಂದಳು ದ್ರೌಪದಾದೇವಿ ||೯|| ಮಾನಿನಿಯ ಕಟಕಿಯ ಮಹಾಸ್ತ್ರಕೆ ।
ಮೌನವನು ಮರೆಗೊಂಡು ಕಲುಷ । ಧ್ಯಾನನಿದ್ದನು ಚಿತ್ತದಲಿ ಬೇರೊಂದ ಚಿಂತಿಸುತ || ಭಾನುಮತಿ ಕೈ
ಮುಗಿದಳೀಕ । ರ್ಣಾನುಗತತಾಟಂಕಮುದ್ರೆಯ । ನೀನಲ್ಲೈ ದಯಗೈದೆಯೆಂದಳೆರಗಿದಳು ಚರಣದಲಿ ||

ಎತ್ತಿದನು ರಾಣಿಯನು ನೃಪ ತಲೆ । ಗುತ್ತಲೇಕೈನಿನಗೆ ಬಂದಾ । ಪತ್ತುನಮ್ಮದು ನಮ್ಮತೊಡಕಿನ
ತೋಟಿಗಳು ನಿನಗೆ ॥ ಹೆತ್ತತಾಯ್ಗಾಂಧಾರಿನದಿನಾ । ವಿತ್ತಡಿಗಳಕಟಕಟ ನೀದು । ಶ್ಚಿತ್ತನಾಗದಿ
ರೆಂದು ನುಡಿದನು ನೃಪತಿ ಕೌರವಗೆ ॥೧೧॥ ದ್ರೋಣರೆಂದುದವಮಾಡೆ ಭೀಷ್ಮನ । ವಾಣಿ ವಿಷವೈ ನಿನ
ಗೆ ವಿದುರನು । ರಾಣಿಕವನಿನ್ನಲ್ಲಿ ಬಲ್ಲನೆ ಬಗೆಯೆ ನೀನಿವರ ॥ ಪ್ರಾಣವಾಯುಗಳವರು ಸುಭಟ ।
ಶ್ರೇಣಿ ದೇಹಕೆ ನಿನ್ನ ತನು ನಿ । ತ್ರಾಣವದರಿಂದಾಯ್ತು ಪರಿಭವವೆಂದನಾಭೂಪ ॥೧೨॥ ಬಿಡಿಸಿ
ದದರಿಂ ದ್ವಯವಿಷಾದದ । ತಡಿಯ ಚಿತ್ತದ ನೃಗೆ ಬೇರೊಂ । ದೆಡೆಯಲಿದ್ದುದು ಬೀಳುಕೊಂಡನು
ಧರ್ಮನಂದನನ ॥ ಒಡನೆ ಬಂದರು ರಾಣಿಯರು ಕೈ । ಗುಡಿಯ ವರಸುದ್ದಿಯಲಿ ಸೂಸಿದ । ಪಡೆಯು
ಧವಿಷಕೆ ನೆರೆದುದಿನಸುತಸೌಬಲರುಸಹಿತ ॥೧೩॥ ಭಟರ ಬೊಬ್ಬೆಗಳಡಗಿದವು ಬಾ । ಯ್ದುಟಿಗಳಾ
ಡವು ವಂದಿನಿಕರಕೆ । ಪಟಹಪಣವ ಮೃದಂಗ ವಿದ್ದವು ಮೌನದೀಕ್ಷೆಯಲಿ ॥ ಚಟುಲಗಜಹಯರಥದ
ವರು ಲಟ । ಲಟಿಸದಿದ್ದರು ಕೌರವೇಂದ್ರನ । ಕಟಕ ದುಮ್ಮಾನದಲಿ ಬಂದುದುಹಸ್ತಿನಾಪುರಕೆ ॥೧೪॥
ಹೊಗಲಿ ಪಾಳೆಯಪುರವನೆಂದು । ಬೈಗದ ಬೆಳೆ ಸಿರಿವಂತನೆತ್ತಿದ । ದುಗುಡದಲಿ ಕುಳ್ಳಿರ್ದನಾಸುರನ
ದಿಯ ತೀರದಲಿ ॥ ಹೊಗೆವಮೋರೆಯ ನೆಲಕೆ ನಟ್ಟಾ । ಲಿಗಳ ನಿಖಿಳೇಂದ್ರಿಯದ ರೇಚಕ । ಬಿಗಿಯೆ
ಬೇಗೆಯ ಬೇಸರಿನ ಬೆಸಗುದಿಯ ಸುಯ್ಲಿನಲಿ ॥೧೫॥ ತರಿಸಿ ಗಂಗಾಜಲವ ಗೋಮಯ । ಮರಸಿ
ಕುಶಸಮ್ಮಾರ್ಜನೆಯ ವಿ । ಸ್ತರಿಸಿ ಪರಿಕರಶುದ್ಧಿಯಲಿ ಪಸರಿಸಿದಬರ್ಹಿಯಲಿ ॥ ನಿರಶನವ್ರತವೆಂದು
ಮಂತ್ರೋ । ಚ್ಚರಿತಸಂಕಲ್ಪದಲಿ ಕೌರವ । ರರಸ ಪವಡಿಸಿದನು ಕೃತಪ್ರಾಯೋಪವೇಶದಲಿ ॥೧೬॥
ಹೊಗಿಸಬೇಡಾರುವನು ಕರ್ಣಾದಿಗಳು ಮೊದಲಾಗೆಂದು ದಡ್ಡಿಯ । ನುಗುಳುಗಂಡಿಯಕಾಹ ಕೊ
ಟ್ಟನು ತನ್ನ ಬೇಹವರ ॥ ದುಗುಡದಲಿ ಪರಿವಾರ ಬಂದೋ । ಲಗಿಸಿ ಹೊರಗೇ ಹೋಗುತಿರ್ದುದು ।
ನಗುತ ಹೊಕ್ಕಳು ಭಾನುಮತಿ ಕಂಚುಕಿಯನೊಡೆನೂಕಿ ॥ ಏನುದಿಟ ಸಂಕಲ್ಪವಿನಿತಕೆ । ನಾನು ಹೊ
ರಗೇ ಹೊಗುವವೇಳು ಕೈ । ಶಾನುವನು ಬೀಳುವೆವು ನಡೆ ಭಾಗೀರಥೀಮಡುವ ॥ ಮಾನನಿಧಿಯೇ
ವಿವಿಧಗರಳವಿ । ತಾನವನು ತರಿಸುವೆನು ನಿಶ್ಚಯ । ಮೇನು ನಿರಶನಮರಣವೇಕೆಂದಳು ಸರೋಜಮುಖಿ
॥೧೮॥ ತರುಣಿ ನೀ ಹೆಸರಿಸಿದವಿವು ದು । ರ್ಮರಣಸಾಧನವಮಲದರ್ಭಾ । ಸ್ತರಣವಿದು ಪಾವನವ
ಲಾ ಪ್ರಾಯೋಪವೇಶದಲಿ ॥ ಪರಿಹರಿಸುವೆನು ದೇಹವನು ಸುಡ । ಲರಸುತನವನು ಪಾಂಡುಪುತ್ರರ ।
ಕರುಣಕಲುಷಿತಕಾಯವಿದನಾದರಿಸುವೆನೆ ಯೆಂದ ॥೧೯॥ ಈ ನಿರಾಹಾರವು ನಿರರ್ಥಕ । ಮೇನನೆಂಬೆನ್ನ
ಜೀಯ ಮುರಿದಭಿ । ಮಾನ ಬೆಸವುದೆ ಬಣ್ಣಿವಳಿವುದೆ ಬಂದಮುರಿಯಶದ ॥ ಆ ನದೀಸುತವಿದುರರೆಂ
ಮದ । ನೀನುಪೇಕ್ಷಿಸಿ ಕಳೆವೆ ಹೆಂಗಸು । ನೀನರಿಯೆಯೆನಬೇಡ ಚಿತ್ತೈಸೊಂದುಬಿನ್ನಪವ ॥೨೦॥
ತಮ್ಮ ನೆರೆ ಧಟ್ಟೈಸಿ ರಣದಲಿ । ನಮ್ಮ ಬಿಡಿಸಿದರವರು ನೀವಿ । ನ್ನೆಮ್ಮ ಹಿಂದಣ ಹಳಿವ ನೋಡದಿ
ರೆಂದು ಯಮಸುತನಾ ॥ ನಮ್ಮ ನಗರಿಗೆ ಕರೆಸಿ ಧರೆಯನು । ತಮ್ಮ ಪಟ್ಟಣಸಹಿತ ಕೊಟ್ಟೊಡೆ । ನಿಮ್ಮ
ನೀಗಲು ಲೋಕ ಮೆಚ್ಚುವುದೆಂದಳಿಂದುಮುಖಿ ॥೨೧॥ ಕರೆಸಿದೊಡೆ ದಿಟಬಾರರವರಾ । ದರಣಿಯನು
ಕೈಕೊಂಡು ನಿಲುವರು । ವರುಷಹದಿಮೂರಾದೊಡಲ್ಲದೆ ಮೆಟ್ಟರೀನೆಲನ ॥ ಅರಿಗಳುಪಟಲದಿಂದ
ತಪ್ಪಿಸಿ । ಮರಳಿಚಿದಜೀವೋಪಕಾರಕೆ । ಕುರುಕುಲಾಗ್ರಣಿ ಲೇಸುಮಾಡಿದನೆಂಬುದೀಲೋಕ ॥೨೨॥

ನುಡಿದವಧಿಹದಿಮೂರುವರುಷದ । ಹೆಡತಲೆಯನೊದೆದೆದ್ದು ನಮ್ಮಿ । ಪ್ಪೊಡವಿಯರ್ಧಕೆ ಬಲೆಯ ಬೀಸದೆ ಬಿಡುವರೇ ಬಳಿಕ ॥ ನುಡಿಯ ಸಲಿಸದಮುನ್ನ ನೀಕೊ । ಟ್ಟೊಡೆ ಕೃತಜ್ಞತೆ ತಪ್ಪುವುದು ಮಿಗೆ । ನುಡಿಯಲಮ್ಮೆನು ರಾಜಕಾರ್ಯವನೆಂದಳಿಂದುಮುಖಿ ॥೨೩॥ ಮರೆವಹಗೆಯೇ ನಾವು ಮಾಡಿದ । ನರಿಯಲಾ ಮೊದಲಿಸಿ ಮರ್ಮವ । ನಿರಿವಸುರಗಿಕಣಾ ಸದಾಪಾಂಚಾಲೆ ಪವನಜರು ॥ ಮರುಗಲೇತಕೆ ಭಾನುಮತಿ ನಿ । ನ್ನಿರುವಮಗನಲಿ ರಾಜ್ಯಭಾರವ । ಹೊರಿಸಿ ಬದುಕುವುದೆನ್ನ ಕಾಡದೆ ಹೋಗು ನೀನೆಂದ ॥೨೪॥ ಸಾಕುಸಾಕೀಮಾತಿನಲಿ ಮಗ । ನೇಕರಾಜ್ಯದ ಪಟ್ಟವಾಯ್ತಾವಿ । ವೇಕಿಗಳಿಗಧಿದೈವವೇ ತಾನೀಸುಹಿರಿದಲ್ಲ ॥ ಮೂಕಭಾವದ ದೀಕ್ಷೆ ತನಗೆಂ । ದಾಕಮಲಮುಖಿಯಿದ್ದಳಿತ್ತಲು । ನೂಕಿದವು ದಂಡಿಗೆಗಳರಮನೆಯಿಂದ ಸಂದಣಿಸಿ ॥೨೫॥ ಬಂದಳಾಗಾಂಧಾರಿ ಸೊಸೆಯರ । ವೃಂದಸಹಿತುರವಣಿಸಿ ಹೊಕ್ಕಳು । ನಿಂದು ನೋಡಿದಳಾತನಿರವನು ಕುಶೆಯಹಕ್ಕೆಯಲಿ ॥ ಕಂದಿದಳು ಕಡುಶೋಕಶಿಖಿಯಲಿ । ಬೆಂದಳೇನ್ಮೈ ಮಗನೆ ಹಾಸಿಕೆ । ಯಂದ ಲೇಸಾಯ್ತೆನುತ ಕುಳ್ಳಿರ್ದಳು ಸಮೀಪದಲಿ ॥೨೬॥ ಏನುದರ್ಭಾಸ್ತರಣಶಯನವಿ । ದೇನುಕಾರಣ ನಿರಶನವ್ರತ । ವೇನು ಸಾಧಿಸಲಾದುದೀಪ್ರಾಯೋಪವೇಶದಲಿ ॥ ಏನಸಿದ್ಧಿಯಿದಕ್ಕೆ ಮೋಹಿದ । ಮೌನಮುದ್ರೆಯ ಬಿಸುಟು ಹೇಳೆ । ನ್ನಾಣೆಯೆನುತವೆ ಹಣೆಯ ಹಣೆಯಲಿ ಚಾಚಿದಳು ಮಗನ ॥೨೭॥ ತಾಯ ಹೇಳುವುದೇನು ಪಾಂಡವ । ರಾಯರುಳುಹಿದವೊಡಲನಿದನಿದ । ರಾಯಸವನಾಹೇಳಲರಿಯೆನು ಹೊರಗೆ ಕೇಳುವುದು ॥ ನೋಯಲೇತಕೆ ನಿಮಗೆ ಮಕ್ಕಳು । ತಾಯೆ ನೂರುಂಟನಿಬರಲಿ ಕುಂ । ದಾಯಿತೊಂದೈಸಲೆ ಮನೋವ್ಯಥೆಯೇಕೆ ನಿಮಗೆಂದ ॥೨೮॥ ಮಾಡಿದೆನು ಸಂಕಲ್ಪವಿದರೊಳು । ಗೂಡ ಕಳಚುವೆನೊಮ್ಮೆ ನೀವೇ । ನೋಡಿ ಸಂತಸಪಡುವುದಾದುಶ್ಶಾಸನಾದಿಗಳ ॥ ಕೇಡಿಗನು ಕುರುವಂಶಕೆಂದಿಳೆ । ಯಾಡುವುದು ತನ್ನೊಬ್ಬನನು ನಾ । ಮೊಡಿದೆನು ನೆರೆ ಮುಳುಗಿದೊಡೆ ಕುಲಕೆಲ್ಲ ಲೇಸೆಂದ ॥ ಉಸುರುಬೀಯದಮುನ್ನ ರಾಜ್ಯವ । ನೊಸೆದು ಕೊಟ್ಟೆನು ಪಟ್ಟಬಂಧನ । ದೊಸಗೆಯಲಿ ಕೌತುಕವನೀಕಿವಿಯಾರೆ ಕೇಳುವೆನು ॥ ಅಸುವನಳುಕದೆ ಬಿಡುವೆನೌ ಶಂಕಿಸದೆ ದುಶ್ಶಾಸನಗೆ ಪಟ್ಟವ । ನೆಸಗಿ ನಡೆಯೌ ತಾಯೆ ಬಿಜಯಂಗೈಯಿ ನೀವೆಂದ ॥೩೦॥ ಆಸಮಯದಲಿ ವಿಗತನಯನಮ । ಹೀಶ ಬಂದನು ಜನಪದದ ವಿ । ನ್ಯಾಸದುಗ್ಗಡಣೆಯಲಿ ವಿದುರನ ಹೆಗಲ ತೋಳಿನಲಿ ॥ ಆಸರಿನ ಬೇಗುದಿಯ ಬೆಂಕಿಯ । ಬೇಸರಿನ ಬಿಸುಸುಯ್ಲ ರಾಣೀ । ವಾಸಕುಲವಿದಿರೆದ್ದದಖಿಳಾಭರಣರಭಸದಲಿ ॥೩೧॥ ಸಂತವಿಡಿರೇ ಮಗನ ನಿಜದೇ । ಹಾಂತಕೃತಸಂಕಲ್ಪಗಡ ನೃಪ । ನಂತರಂಗವ ಕರೆಸಿಯೆಂದಳಲಿದಳು ಗಾಂಧಾರಿ ॥ ಭ್ರಾಂತಿ ಬಿಗಿದಿದೆ ಚದುರಚಿತ್ತಕೆ । ಚಿಂತೆ ಬೇರೊಂದಾಯ್ತು ರಾಯನ । ಹಂತಿಕಾರರು ಬರಲಿ ಹಿಡಿಯಲಿ ನಿರಶನವ್ರತವ ॥೩೨॥ ಸಾಕು ಮಗನೆ ದುರಂತಚಿಂತೆಯಿ । ದೇಕೆ ಸಂಕಲ್ಪಾಭಿಯೋಗ । ವ್ಯಾಕುಲತೆ ಬೇಡೇಳು ಪಾಲಿಸು ಸಕಲ ಭೂತಳವ ॥ ಆಕುಮಾರರ ಕರೆಸಿ ಗುಣದಲಿ । ಸಾಕುವುದು ಜೀವೋಪಕಾರಕೆ । ಕಾಕ ನೆನೆಯದಿರೆನುತ ಮುಂಡಾಡಿದನು ನಂದನನ ॥೩೩॥ ಸವೆದು ಹೋಯ್ತಾಯುಷ್ಯ ತನಗಿ । ನ್ನವನಿಯಾಗದು ಮೊರೆ ಯುಧಿಷ್ಠಿರ । ಪವನಜರು ನಿನಗನ್ಯರೇ ಕರೆಸುವುದು ರಾಜ್ಯದಲಿ ॥ ಅವರುಗಳ ನಿಲಿಸುವುದು ನೆಲದ । ರ್ಧವನು ದುಶ್ಶಾಸನಿಗೆ ಕೊಡುವುದು । ನಿಮಗೆ ಚಿತ್ತಕೆ ಬಹರೆ ಯೆಂದನು ತಂದೆಗವನೀಶ

॥೩೪॥ ಆದರವರಂತಿರಲಿ ನಿನಗಿ । ನ್ನೀದುರಾಗ್ರಹ ಬೇಡ ನಿನಗಳಿ । ವಾದೊಡೀಕುರುವಂಶವಳಿವುದು
ಪಟ್ಟವಾವನಲಿ ॥ ಬೀದಿಗಲಹದೊಳೊಮ್ಮೆ ಪೈಸರ । ವಾದೊಡದು ಪರಿಹರಿಸಿದವರೇ । ಸೋದರರಲಾ
ಹೆಚ್ಚುಕುಂದೇನೆಂದನಂಧನೃಪ ॥೩೫॥ ಕಲಹ ಬೀದಿಯೊಳಾಯ್ತು ಕಟ್ಟಿದ । ರಳಿವಿನೋದದಲಹಿತ
ರಡಹೊ । ಯ್ದಳೆದು ತಂದನು ಪಾರ್ಥನೆಮ್ಮಯ ತೋಳ ನೇಣುಗಳ ॥ ನಳಿನಮುಖಿ ಕಡುಮಹುಳಿ
ಯಲಿ ಮೂ । ದಲಿಸಿ ಕೊಯ್ದಳು ತನಗೆ ಭಂಗದ । ಉಳಿವುದೆತ್ತಣಮಾತು ಕರುಣಿಸು ಬೊಪ್ಪ ನೀ
ವೆಂದ ॥೩೬॥ ದೋಷ ನಿಮಗಿಲ್ಲೆನ್ನ ಮೇಲಭಿ । ಲಾಷೆಯನು ಬಿಡಿ ನಿಮ್ಮ ಮಗ ಕುಲ । ಭೂಷಣನಲಾ
ಧರ್ಮಸುತನಾತನಲಿ ಹುರುಡಿಸುವ ॥ ರೋಷವುಂಟೇ ತನಗೆ ನಿಮಗಿದು । ದೂಷಣವೆ ತಾನಲ್ಲ ನಾನಾ
ಪೋಷಿಸುವೆನೈ ಪಾಂಡುಸುತರರಸಾಗಬೇಕೆಂದ ॥೩೭॥ ಸಾರವೀನುಡಿ ಕಟಕಿಯಲ್ಲ ವಿ । ಚಾರಪರರಿಗೆ
ನಿಮ್ಮ ಚಿತ್ತಕೆ । ಬಾರದಿದ್ದೊಡೆನಿಲಲಿ ದುಶ್ಶಾಸನನ ಕರೆಸುವುದು ॥ ಸೇರಿಸುವುದವನಿಯನು ಮೇಣಿ
ದು । ಭಾರವೇ ನಿಮ್ಮರಮನೆಗೆ ವಿ । ಸ್ತಾರದಿಂದವೆ ಬಿಜಯಮಾಡೆನುತತ್ತ ಮುಂದಾದ ॥೩೮॥ ಮು
ನಿಸಿನಲಿ ಧೃತರಾಷ್ಟ್ರ ತನ್ನರ । ಮನೆಗೆ ತಿರುಗಿದನಿತ್ತ ನಾರೀ । ಜನವನೆಲ್ಲವ ಬೀಳುಕೊಟ್ಟನು
ಬೈದು ಖಾತಿಯಲಿ ॥ ಮನಕತದಿ ಕಾತರಿಸಿ ಗಂಗಾ । ತನುಜಗುರುಜದ್ರೋಣಗೌತಮ । ರನುಚಿತ
ಪ್ರಾರಂಭಭೀತರು ಬಂದರೊಗ್ಗಿನಲಿ ॥ ರಾಯನೀಹಹದನೇನು ನಿದ್ರಾ । ನಾಯಕಿಯ ಮೇಳವದಲ್ಲೆ
ದನೆ ಜೀಯ ಯೆನಲೊಳಹೊಕ್ಕು ನಿಂದರು ನೃಪಸಮೀಪದಲಿ ॥ ಆಯಿತೇ ಸಾವೆಂದನುಡಿಯಿದು ।
ಹೋಯಿತನಶನದಿಂದ ದೇಹದ । ಬೀಯದಲಿ ಸಂಕಲ್ಪಗಡ ಹೇಳೆಂದನಾಭೀಷ್ಮ ॥೪೦॥ ಈಸುದಿನ ಸಾ
ಮ್ರಾಜ್ಯಸೌಖ್ಯವಿ । ಳಾಸದಲಿ ಬಳಸಿದೆನು ಸಾಕಿ । ನ್ನೀಶರೀರವ ನೂಕಿ ನಿಲುವೆನು ಮುಕ್ತಿರಾಜ್ಯದಲಿ
ಆಶೆಯವನಿಯೊಳಿಲ್ಲ ವಿಷಯಾ । ಭ್ಯಾಸಿಗೊಮ್ಮೆ ವಿರಕ್ತಿದೆಸೆಯಹು । ದೈಸಲೇ ಗುರು ನೀವು ಬೆಸ
ಸುವುದೆಂದನಾಭೂಪ ॥೪೧॥ ಕೇಳಿದೆವು ಹಿಂದಾದಖೇಚರ । ರೂಳಿಗವನಡಹಾಯ್ದು ನಿಮ್ಮವ । ನೋ
ಲಯಿಸಿದಂದವನು ನಿನಗದರಿಂದ ಪರಿಭವವೇ ॥ ತಾಳದಂತಿರಲವರ ಕರೆಸುವೆ । ವೇಳು ಭೀಮಾರ್ಜು
ನರ ನಿನಗಿ । ನ್ನಾಳುಗೆಲಸದೊಳಿರಿಸಿ ನಡೆಸುವೆನೆಂದನಾಭೀಷ್ಮ ॥೪೨॥ ಮೊದಲು ಧೃತರಾಷ್ಟ್ರಂಗೆ
ತಾ ಜನಿ । ಸಿದುದು ಬಳಿಕೀದೇಹಧರ್ಮಜ । ನುದರದಿಂದವೆ ಬಂದುದಿನ್ನವರೊಡನೆ ಮತ್ಸರವೇ ॥
ಅದು ನಿಲಲಿ ದುರ್ವಿಷಯವೈರಾ । ಗ್ಯದಲಿ ದೇಹವ ಬಿಡುವೆನಲ್ಲದೆ । ಬೆದರು ಭಂಗದೊಳಿಲ್ಲ ಬಿಜಯಂ
ಗೈಯಿ ನೀವೆಂದ ॥೪೩॥ ನಾವು ಪಡಿಬಾಹಿರರು ಬೀಯದ । ಸೇವಕರು ಸಮಹಂತ್ರಿಗಾರರಿ । ಗೀವುದೈ
ದೃಢಮುದ್ರಿತಾಂತರ್ಮಾನಸಾಮೃತವ ॥ ಭೂವಧುವ ಬೋಳೈಸು ಕಾನನ । ಜೀವಿಗಳು ತಮ್ಮೊಲಿದು
ದಾಗಲಿ । ಸಾವುದನುಚಿತವೆಂದು ನುಡಿದರು ಭೀಷ್ಮಗುರುನೃಪರು ॥೪೪॥ ಎಮ್ಮ ನುಡಿಗಳಪಥ್ಯವಾ
ದೊಡೆ । ನಿಮ್ಮ ಕರ್ಣಾದಿಗಳ ಕರೆಸುವು । ದೆಮ್ಮ ನುಡಿಗವರೆಂದಮಾತನುಸಾರಿಯೆನಿಸಿದೊಡೆ ॥ ಒಮ್ಮೆ
ಕೈಕೊಂಬುದು ವೃಥಾ ನೃಪ । ಧರ್ಮವನು ಬಿಡಬೇಡ ಸಮರವೆ । ನೆಮ್ಮಿ ಸಾವುದು ಗುಣವು ಗರುವರಿ
ಗೆಂದನಾಭೀಷ್ಮ ॥೪೫॥ ಕದನವಾಗಲಿ ಪಾಂಡುಸುತರಲಿ । ಕದಡ ಮಾಡುವುದುಚಿತವೇ ನಮ । ಗಿದಿರು
ಬಳಿಕಾರುಂಟು ಭಾರತವರುಷಸೀಮೆಯಲಿ ॥ ಇದನರಿತು ಸಂಕಲ್ಪಭಂಗಾ । ಸ್ಪದವ ಮಾಡುವುದೊಳ್ಳಿ
ತೇ ನಿಜ । ಸದನಕಭಿಮುಖರಾಗಿ ಕರುಣಿಪುದೆಂದನಾಭೂಪ ॥೪೬॥ ಐಸಲೇ ದೈವೋಪಹತಮನ ।

ದಾಸರಾರಿಂದಡಗುವುದು ಸಾ । ವಾಸನೂರಲಿದೊಡಾಗದವರೇ ಬಂದು ನಿಲಿಸುವರು ॥ ಈಸರಲಿ ಮರ ಳುವೆವೆನುತ ನಿಜ । ವಾಸಕೈದಿದರಿತ್ತ ಪೋಹಿದ । ಪಾಶಕುನಿಕರ್ಣಾದಿಗಳ ಪಂಡಿಗೆಗಳೊಗ್ಗಿನಲಿ ॥೪೭॥ ಹೊಕ್ಕು ರಾಯನ ಕಂಡಿರೇ ನೀ । ಹಕ್ಕಿಹುಲ್ಲಿನಲಿರವು ಹರಹರ । ಮಕ್ಕಳಾಟಕೆಯಾವುದಗ್ಗದಸಾರ್ವಭೌ ಮರಿಗೆ ॥ ಸಿಕ್ಕುವನು ಹಗೆ ತನಗೆ ತಾನೇ । ಸಿಕ್ಕುವನು ಹಗೆಗಳಿಗೆ ಲೋಕದೊ । ಳಕ್ಕಜವೆ ಜಯವಜಯ ವೆಂದರು ಕರ್ಣಶಕುನಿಗಳು ॥೪೮॥ ಹರಿಬ ಬೇಕೇ ಪುತ್ತ್ರ ಗಂಧ । ರ್ವರಿಗೆ ಪೂತ್ತರನಟ್ಟಭೀಮನ । ನ ರನೊಳನುಸಂಧಾನವೇ ನಾಲ್ಕೆಂಟುದಿವಸದಲಿ ॥ ಧರೆಯೊಳವರರದಂತೆ ಘಟ್ಟಿಸಿ । ತೆರಳಿಚುವೆವಿದಕಕಟ ದರ್ಭೆಯ । ಹರಿಹಿ ಹಕ್ಕೆಯನಿಕ್ಕಲೇಕೆಂದೊದರಿದರು ಖಳರು ॥೪೯॥ ಪೂತನವರಂಗಟ್ಟುವುದು ತಾ । ಬೂತುಭೀಮಾರ್ಜುನರಕೂಡೆ ವಿ । ಘಾತಿ ಕೈಯೊಡನುಚಿತವೇ ಕೆಡೆನುಡಿವುದೇಲೋಕ ॥ ಈತನುವನೀ ಪರಿಯಲೇ ನಿ । ರ್ಭೂತವನೆ ಮಾಡುವೆನು ನನ್ನನು । ಜಾತನಲಿ ಭೂವಧುವ ಸೇರಿಸಿ ಬದುಕಿ ನೀವೆಂದ॥ ೫೦॥ ನಿನ್ನೊಡನೆ ಹುತವಹನ ಹೊಗುವೆವು । ಮನ್ನಣೆಯಮಾತಲ್ಲ ನಿನ್ನಿಂ । ಮುನ್ನ ಮುಂಡಿತಶಿರದ ಲೆಸೆವೆವು ತೀರ್ಥಯಾತ್ರೆಯಲಿ ॥ ಎನ್ನಮತ ಸೌಬಲನಮತವಿದು । ಪಿನ್ನಕೆಲರಲಿ ಬೆರಸುವುದ ಬೇ । ರ ನ್ನಮಾತೇಕೆನುತ ಮುರಿದರು ತಮ್ಮಮನೆಗಳಿಗೆ ॥೫೧॥ ಉಳಿವಭಟ್ಟರ ನಿಲಿಸಿದನು ಸಮ । ಸಲನ ಹೊ ಗಳುವಕಾಹಕರ ಕಳ । ಕಳವ ಸಭಕೊತ್ತಿದನು ಕಹಳಾರವಕೆ ಕೋಪಿಸುತ ॥ ತಲೆಮುಸುಕಿನಲಿ ತಾರಿ ದೊಡದನ । ತಳಿತಮಗುಡಲಿ ಪೋರೆಯಲಿ ಕುರು । ಕುಲಭಯಂಕರನೃಪನು ದುಶ್ಶಾಸನನು ನೃಪ ನ ॥೫೨॥ ಹೊಕ್ಕನೊಳಗನು ರಾಯನಂಘ್ರಿಯೊ । ಳೊಕ್ಕನೊಡಲನು ಲೋಚನಾಂಬುಗ । ಳುಕ್ಕಿದ ವು ಕಳವಳಿಸಿದವು ಕರಣೇಂದ್ರಿಯಾದಿಗಳು ॥ ಬಿಕ್ಕಿದನು ಬಿಂಬಿಂದು ಸೆರೆಗಳು । ಮುಕ್ಕುರಿಕಿದವು ಕೊರಳ ಹೃದಯದೊ । ಳೊಕ್ಕಲಿಕ್ಕಿತು ಶೋಕಪಾವಕನಾನೃಪಾನುಜನ ॥೫೩॥ ಅನುಜನದ್ಭುತಶೋಕ ರಸದಲಿ । ಕೊನರುತರಸನ ಮೋಹ ಕುರುಕುಲ । ವನಪರಶು ಕುಳ್ಳಿರ್ದನೊಯ್ಯನೆ ಮಾನಿನಿಯ ಮಲ ಗಿ ॥ ನಿನಗಿದೇನುದ್ವೇಗವೀಹ । ಸ್ತಿನಪುರದ ಸಾಮ್ರಾಜ್ಯಸಿರಿ ದಿವು । ಜನಪರಿಗೆ ಹುರುಡಿಸಳೆ ಹೇಳೆ ನುತೆತ್ತಿದನು ಹಣೆಯ ॥೫೪॥ ಸೆಳೆದು ಬಿಗಿಯಪ್ಪಿದನು ಲೋಚನ । ಜಲವ ತೊಡೆದನು ಪಾಂಡುಪು ತ್ರರು । ಸೆಳೆದುಕೊಳ್ಳರೆ ನೆಲನನಕಟಾ ಮತ್ಪರೋಕ್ಷದಲಿ ॥ ಕುಲವನೀಸುದ್ಧರಿಸು ಸೇಸೆಯ । ತಳಿವೆ ನಾ ಮುಂದಿಟ್ಟು ಬರಿದ । ನ್ನಳಲಿದರು ಪ್ರಾಯೋಪವೇಶವ ಬಿಡನು ನಾನೆಂದ ॥೫೫॥ ಅಳಿದರಳಿವೆ ಭವತ್ಪರೋಕ್ಷದೊ । ಳುಳಿವೆನೇ ನಿನ್ನರಸಿ ಧರೆಗಾ । ನಳುಪುವೆನೆ ನಿನ್ನಳಿವನೀಕ್ಷಿಸಿ ಧೈರ್ಯವೇ ತನಗೆ॥ ನೆಲನ ಕುಂತಿಯಮಕ್ಕಳೇ ಕೈ । ಕೊಳಲಿ ಮಾಣಲಿ ಸಿರಿಗೆ ಸೇಸೆಯ । ತಳಿವರಿಗೆ ತಳಿನಿನ್ನ ಬಿಡದಿಹ ಬಾಷೆ ನನಗೆಂದ ॥೫೬॥ ಧಾತುಗೆಡಲೇಕೀಸುಕಾತರೆ । ಬೀತುಹೋಹುದು ಜೀತಮರನೇ । ಕಾತಿಹುದ ಲೈ ಹತವಿಧಿಗೆ ವಿಪರೀತಕೃತಿ ಸಹಜ ॥ ಆತಗಳು ಸಮುಗುಪಕರಿಸಿ ವಿ । ಖ್ಯಾತರಾದರು ಮರಳಿ ನಾವಿ। ನ್ನಾತಗಳನಳುಕಿಸುವುಪಾಯವ ಕಂಡೊಡೇನೆಂದ ॥೫೭॥ ಮರುಳುತಮ್ಮ ವೃಥಾ ಖಳಾಡಂ । ಬರವಿದ ಲ್ಲದೆ ಪಾಂಡುಪುತ್ರರ । ಪರಿಭವಿಸಲೊಡಬಡುವರೇ ವಿದುರಾದಿಬಾಹಿರರು ॥ ಅರಮನೆಗೆ ನೀ ಹೋ ಗು ಹಸ್ತಿನ । ಪುರಕೆ ನೀನರಸಾಗು ಮೋಹದ । ಮರುಳತನವೀಕ್ಷತ್ರಧರ್ಮದೊಳಿಲ್ಲ ಕೇಳೆಂದ ॥೫೮॥ ಮಗಗೆ ಮುನಿವನು ತಂದೆ ತಂದೆಗೆ । ಮಗ ಮುನಿವನೊಡಹುಟ್ಟಿದರು ಬಲು । ಪಗೆಕಣಾತಮ್ಮೊ

ಳಗೆ ಭೂಪರ ಋಲ್ಲವಿದ್ಯವಿದು ॥ ಜಗದ ಪರಿವಿಡಿಯೆಮ್ಮೊಳಲ್ಲದೆ । ಸೊಗಸಿ ರಾಜ್ಯವನಿತ್ತ ನಿನಗದು । ಮಗುಚಿದರೆ ಯೆನ್ನಾಣೆಯೆನುತಪ್ಪಿದನು ಖಳಪತಿಯು ॥೫೯॥ ಭ್ರಾಂತಿಯೇಕೆ ಭವತ್ಪರೋಕ್ಷದೊ । ಳಂತಕನ ಪುರವಲ್ಲದುರ್ವಿ । ಕಾಂತೆಗಳುಪಿದೆನಾದೊಡೊಡಹುಟ್ಟಿದನೆ ನಿಮ್ಮಡಿಯು ॥ ಸಂತವಿಡು ವೀವಾತು ಸಾಕ । ನ್ನಂತರಲಿಸಿಮಗೇನು ಹದನಾ । ಯ್ತಂತರದೊಳಾಹದನನೀಕ್ಷಿಪೆನೆನುತ ಹೊರವಂಟ ॥೬೦॥ ಧರಣಿಪತಿ ಕೇಳ್ಬಳಿಕ ಹಸ್ತಿನ । ಪುರದ ನಿಖಿಳಶ್ರೇಣಿ ಕುಲನಾ । ಗರಿಕಜನ ಪರಿವಾರಪಾಡಿ ಪಸಾಯ್ತಪೌರಜನ ॥ ಅರಸ ಬಿಜಯಂಗೈದು ನಮ್ಮನು । ಹೊರೆವುದಲ್ಲದೊಡಾವನಾಂತರ । ವರಕೆ ನೇಮವ ಕೊಡುವುದೆಂದೂರಲಿದರು ತಮತಮಗೆ ॥೬೧॥ ಪರಿಜನದೊಳವರವರ ಮುಖ್ಯರ । ಕರಸಿದನು ದುಶ್ಶಾಸನನು ನಿಮ । ಗರಸುನೃಪನೀತಿಯಲಿ । ಪಾಲಿಸುವನು ಮಹೀತಳವ ॥ ಧರೆಯನಾತಂಗಿತ್ತೆವೆಮಗೀ । ಸುರನದೀತೀರದಲಿ ಕಾಶೀ । ಶ್ವರನಸನ್ನಿಧಿಯಿರವು ಘಟಿಸಿದುದೆಂದನಾಭೂಪ ॥೬೨॥ ರಾಯನೀಪರಿ ನುಡಿದು ಜನಸಮು । ದಾಯವನು ಕಳುಹಿದನು ಸುಮನೋ । ಭೂಯಸಾಪೇಕ್ಷನು ಸಮಾಧಿಯೊಳಿರಲು ರಾತ್ರಿಯಲಿ ॥ ದಾಯವಿದು ತಮಗೆಂದು ದೈತ್ಯನಿ । ಕಾಯ ಬಂದು ರಸಾತಳಕೆ ಕುರುರಾಯನನು ಕೊಂಡೊಯ್ದು ತಿಳುಹಿದರವರು ಸಾಮದಲಿ ॥ ಅರಸ ನೀ ಪ್ರಾಯೋಪವೇಶದಿ । ಮರಣದೀಕ್ಷಿತನಾದೆಗಡ ನಿ । ಮ್ಮರಸುಗುಲಕನುಚಿತವ ನೆನೆದೈ ಕಾಕಬಳಸಿದೆಲಾ ॥ ಸುರರು ಪಾಂಡುಕುಮಾರರಾಗವ । ತರಿಸಿದರು ನೆಲವವರಿಗೈ ನಾ । ಪಿರಲು ಸುಡಲೀದೈತ್ಯಜನ್ಮವನೆಂದರಾಖಳರು ॥೬೩॥ ಸಾಯಬರು ನಿನಗೆಂದು ಮೊದಲು ಸ । ಹಾಯರಾವಾಹವಕೆ ರಿಪುಕೌಂ । ತೇಯರಿಗೆ ಕೊಡಬೇಡವಿನ್ನು ತಿಲಾಂಶಭೂತಳವ ॥ ಲಾಯಸಹಿತೀಗಜರಥಾಶ್ವನಿ । ಕಾಯ ನಿನ್ನದು ದೈತ್ಯಸಚಿವಪ । ಸಾಯಿತರು ನಿನ್ನವರು ಸಾವೆವು ನಿಮ್ಮಸಮರದಲಿ ॥೬೪॥ ಮಾನವನು ನಾನಿನ್ನು ನೀವೋ । ದಾನವರು ಗಂಧರ್ವರಿಂದಭಿ । ಮಾನವನಗಕ್ಕಾಡಿಹೋಯಿತು ಹೇಳಲೇನದನು ॥ ಮಾನಿನಿಯ ಮೂದಲೆಯನಾಪವ । ಮಾನಸುತನ ಸಗರ್ವವಚನವ । ನೇನಹೇಳುವೆನೆನುತ ಸುಯ್ದನು ಕೌರವರರಾಯ ॥೬೫॥ ನರರು ನೀವ್ದಾನವರು ಸಾವಂ । ದೊರೆದರೊಡಹುಟ್ಟಿದರುನಿಮಗಿ । ನ್ನರಸವೇಳಾಯ್ತೊರುವೆಗ್ಗಳದೈತ್ಯಭಟರೆಲ್ಲ ॥ ಸುರಪುರದ ಸೂಳೆಯರ ಪಡಿಗವ । ನಿರಿಸುವರು ಗಂಧರ್ವರವದಿರ । ಕರುಳ ತಿಂಬೆವು ನಾವೆನುತ ಗರ್ಜಿಸಿತು ಖಳನಿಕರ ॥೬೬॥ ಎಂದು ಭೂಪನ ತಿಳುಹಿ ಕಳುಹಲು । ಬಂದು ಮರಳಿ ಮಹೀತಳಕೆ ತ । ನ್ನಿಂದುವದನೆಯ ಮಾತಿನಲಿ ನಿಂದವನು ತಾನಾಗಿ ॥ ಬಂದನರಮನೆಗೆಖಿಳಜನವಾ । ನಂದರಸದಲಿ ಮುಳುಗೆ ಪುರದಲಿ । ಸಂದಣಿಸಿದವು ಗುಡಿಗಳೊಸಗೆಯಲಳಿಯಲಗ್ಗಗಳ ॥೬೭॥ ಮತ್ತೆ ನೆಗ್ಗಿತು ನಯವ ಧರ್ಮದ । ಕುತ್ತುದಲೆ ನೆಗಹಿದುದು ಸತ್ಯದ । ಬಿತ್ತು ಹುರಿದುದು ಪಟ್ಟಗಟ್ಟಿದುದಾಕೃತಘ್ನತೆಗೆ ॥ ನೆತ್ತಿಕಣ್ಣಾಯ್ತಧಮತೆಗೆ ನಗೆ । ಯೊತ್ತಿತಾರಡಿ ಸುಜನಮಾರ್ಗವ । ಕೆತ್ತುದಟಮಟವೀಸುಯೋಧನ ಸೌಮನಸ್ಯದಲಿ ॥೬೮॥ ಮರೆದು ಕಳೆದನು ಬಂದಲಜ್ಜೆಯ । ಬರನಟಿನವನು ಮುಂದಣುಪಹತಿ । ಗುರುವದೈತ್ಯರ ಮೈತ್ರಿಯನು ನೆನೆನೆನದುಹಿಗ್ಗಿದನು ॥ ಮುರಿದುದಿನ್ನೇನಹಿತದರ್ಪದ । ಹೊರಿಗೆಯೆಂದು ತ್ಸವದಲವನಿಪ । ಮರೆದನಧ್ವರಶಾಲೆಯಲಿ ಮಾಡಿದ ಮಹಾಕ್ರತುವ ॥೭೦॥ ಕೇಳಿದರು ಪಾಂಡವರು ಕುರುಭೂ । ಪಾಲಕನ ಸಂಕಲ್ಪವನು ಪಾ । ತಾಳದಲಿ ಸುರವೈರಿವರ್ಗದ ಸಖ್ಯಸಂಗತಿಯು ॥ ಮೇಲಣ

ಧ್ವರಕವರ್ಮವನು ನಗು । ತಾಲಿಸಿದರಡಿಗಡಿಗೆ ಲಕ್ಷ್ಮೀ । ಲೋಲನಂಘ್ರಿಯ ನೆನೆಯುತಿದ್ದರು ವೀರನಾರಯಣನ ॥ ॥೬೧॥

ಅಂತು ಸಂಧಿ ೨೧ ಕ್ಕೆ ಪದ ೧೧೨೪ ಕ್ಕಂ ಮಂಗಳಮಸ್ತು.

ಇಪ್ಪತ್ತೆರಡನೆಯ ಸಂಧಿ.

ಸೂಚನೆ॥ ರಾಯನರಸಿಯ ಹಿಡಿದೆಳವರಿಪು । ರಾಯದಳವನು ಮುರಿದು ಫಲುಗುಣ ।
ವಾಯುಜರು ಪರಿಭವಿಸಿ ಬಿಟ್ಟರು ಕಲಿಜಯದ್ರಥನ ॥

ಕೇಳು ಜನಮೇಜಯಧರಿತ್ರೀ । ಪಾಲಲೆಕ್ಕಕೆ ಸಂದವಟವೀ । ಪಾಳಿಪರಿಯಟಣಪ್ರಬಂಧಕ ವರುಷಹನ್ನೊಂದು ॥ ಮೇಲೆಮೇಲೌಕುವವಿಪತ್ಕ । ಲ್ಲೋಲಕೋಳಾಹಲಿತಕಲುಷಕ । ರಾಳಕಾಲಾಂಬುಧಿಯನೀಸಾಡಿದರು ಬೇಸರದೆ ॥ ೧ ॥ ಸಿಂಧುದೇಶಕಬಂದನವನಿಪ । ಬಂಧಕೃತಯಲಿ ಬಳಿಕ ಬಿಡುಗಡೆ । ಯಂದಭೂಪತಿಯಳಿಯ ಕೇಳಿದನಾಜಯದ್ರಥನು ॥ ಅಂಧತೆಯನೇನೆಂಬೆನೈ ಪ್ರತಿ । ಬಂಧಕರು ಬೇಡೆನಲು ನಯದಘಿ । ಸಂಧಿಯಲಿ ಸೀವರಿಸಿ ಸಂವರಿಸಿದನು ಸೈನಿಕವ ॥೨॥ ನೆರಹಿದನು ಹದಿನಾರುಸಾಪಿರ । ಕರಿಘಟೆಯನೈವತ್ತುಸಾವಿರ । ತುರುಗವನು ಹದಿನಾಲ್ಕುಸಾವಿರಕನಕಮಯರಥವ ॥ ಚರಣಚೌಪಟರೈದುಲಕ್ಷವ । ಬರಸಿದನು ಬಹುವಾದ್ಯರವದ । ಕೈರವೊಡೆಯೆ ಸೂಳೈಸೆ ಮೇಳೈಸಿದನು ಮೋಹರವ ॥ ಜೀಯ ಭಾಸ್ಕರಭೌಮರಶುಭ । ಸ್ಥಾಯಿಗಳು ಗುರುಮಂದರಭಿಭವ । ದಾಯಿಗಳು ವಿಪರೀತದೆಸೆ ಬುಧಶುಕ್ರರಾಹುಗಳು ॥ ಯಾಯಿಗಳಿಗಪಜಯನಿವಾಸ । ಸ್ಥಾಯಿಗೊಳ್ಳಿತು ಚಿತ್ತವಿಸಿಯೆನೆ । ಜೋಯಿಸರ ಜಪಿವಲೆಗೆ ಸಿಲುಕೆನೆನುತ್ತ ಹೊರವಂಟ ॥೪॥ ಉರಿಹೊಗೆಯ ದಿಕ್ಕಿನಲಿ ಹಕ್ಕಿಗ । ಳೊರಲಿದವು ಗೋಮಾಯುರವವ । ಬ್ಬರಿಸಿದುದು ದೆಸೆದೆಸೆಗಳಲಿ ಸೂಚಿಸಿತು ರಣಭಯವ ॥ ದುರುಳನದ ಕೈಕೊಂಬನೇ ಕುರು । ನರಪತಿಯಸತ್ಸಂಪ್ರದಾಯದ । ಗರುಡಿಕಾರನಲಾ ಚತುಷ್ಟಯದುಷ್ಟಮಂತ್ರಿಗಳ ॥೫॥ ಭರದಪಯಣದಮೇಲೆ ಪಯಣದ । ಉರವಣಿಸಿ ನಡೆತಂದು ಪಾಂಡವ । ರರಸನಿಹವಿಮಲಾಶ್ರಮದ ವಿಪಿನೋಪಕಂಠದಲಿ ॥ ಹರಹಿದವು ಗುಡಿ ಗಜಹಯದ ಮಂ । ದಿರರಚನೆ ರಹಿಯಾಯ್ತು ಬಿಟ್ಟನು । ಕುರುನೃಪಾಲನ ಮೈದುನನು ಭೂಪಾಲ ಕೇಳೆಂದ ॥೬॥ ಏನ ನೆನೆದನೊ ದುಷ್ಟಮಂತ್ರವಿ । ತಾನಪೇಕ್ಷಿತ ಕಳುಹಿದನು ಮದ । ನಾನುರಾಗದಲಾಭರಣವನುಲೇಪನಾದಿಗಳ ॥ ಸಾನುನಯದಲಿ ಪಾಂಡುಪುತ್ರರ । ಮಾನಿನಿಗೆ ಕೊಡಿ ನಿರ್ಜನದೊಳಬು । ಜಾನನೆಯ ಸೇರಿಸುವುದೆಮಗೆಂದಟ್ಟಿದನು ಚರರ ॥ ಬನದೊಳಡಗಿದರವರು ಕುಂತೀ । ತನುಜರೈವರು ಬೇಂಟೆಯಾಡಲು । ನೆನೆದು ಧೌಮ್ಯನನಬುಜಮುಖಿಯಾಶ್ರಮದ ಕಾಹಿನಲಿ ॥ ಮುನಿಜನಂಗಳ ನಿಲಿಸಿಕೊಂಡರು । ಧನುವ ಬೆಂಬತ್ತಳಿಕೆಗಳ ನೃಪ । ಜನಲಲಾಮರು ಬನಬನದೊಳರಸಿದ

ರು ಮೃಗಕುಲವ ॥೮॥ ಹೋದರವರತ್ತಲು ಶಿಕಾರಕೆ । ಸೋದರೀಲನ ಶಿಷ್ಟರುಬ್ಬಟೆ । ಬೀದಿವರಿದು
ದು ಪರ್ಣಶಾಲೆಗೆ ಬಂದರಂಗನೆಯ ॥ ಆದರಿಸಿ ಮುನಿಜನವನೊಯ್ಯನೆ । ಕೈದುಗಳ ಹೊರಗಿರಿಸಿ
ದೂರದ । ಲಾದುರಾತ್ಮರು ಕಂಡು ಮೈಯಿಕ್ಕಿದರು ಮಾನಿನಿಗೆ ॥೯॥ ದೇವಿ ಚಿತ್ತೈಸುವುದು ನಿಮ್ಮ
ಯ । ಭಾವ ಕೌರವನೃಪನ ಮೈದುನ । ಭಾಪಸಲು ದುಸ್ಸಳೆಯ ರಮಣನ ಕಲಿಜಯದ್ರಥನ ॥ ಈವಿವಿ
ಧರತ್ನಾಭರಣ । ಪಟ್ಟಾವಳಿಯನನುಲೇಪನಾದಿಯ । ಪಾವುಡವನವಧರಿಸಬೇಕೆಂದಳುಹಿದರು ಮುಂದೆ
॥೧೦॥ ಎಸೆವಳೇ ದುಸ್ಸಳೆ ಜಯದ್ರಥ । ಕುಶಲನೇ ಪಾವುಡವ ನೀವೊ । ಪ್ಪಿಸುವುದೊಡೆಯರ ಮುಂ
ದೆ ಬಿಜಯಂಗೈವರೀಕ್ಷಣಕೆ ॥ ಶಿಶುಗಳಾವೆಮಗೇಸ್ವಸಂತ್ರತೆ । ಯೆಸಕವೆಲ್ಲಿಯದಕಟ ವಸ್ತು । ಪ್ರಸರ
ವೆಮಗೇಕೆನುತ ನುಡಿದಳು ನಗುತ ಜಳಸಾಕ್ಷಿ ॥೧೧॥ ಸಾರಸೀರೆಯ ನುಡುವೆವೆಮಗಾ । ಹಾರವೇ ಫಲ
ಮೂಲತತಿ ಶೃಂ । ಗಾರವೆಮಗೆ ಪತಿವ್ರತಾಗುಣವಲ್ಲದಿತರದಲಿ ॥ ಸೇರುವುದೆ ಮನವಿದನು ಪಾಂಡು
ಕು । ಮಾರರಿಗೆ ತೋರಿಸುವುದೈ ಬೀ । ಡಾರವನು ಬಿಡಿ ಬೇರೆ ವನದೊಳಗೆಂದಳಿಂದುಮುಖಿ ॥೧೨॥
ತಾಯೆ ನೀನಿವನೊಪ್ಪುಗೊಂಬುದು । ರಾಯಬಿಡವನೆ ಮತ್ತೆ ಪಾಂಡವ । ರಾಯರಿಗೆ ಪಾವುಡವನ
ಟ್ಟುವನಿದನುಪೇಕ್ಷಿಸದೆ ॥ ಆಯತಾಂಬಕಿ ತೆಗಸಿಯೆನೆ ನಡೆ ರಾಯನಸವಿದೇಕೆನುತ ದೂತರ । ಸಾಯುವ
ತಿ ಜರೆದೊಳಗೆ ಹೊಕ್ಕಳು ತಳಿರಮಂಟಪವ । ಮಸುಳಿತವರ ಮೋರೆ ಕಾರ್ಯದ । ಬೆಸುಗೆ ಹತ್ತದೆ
ಸತಿಯ ನುಡಿಯಲಿ । ರಸವ ಕಾಣದೆ ಭೀತಿಯಲಿ ಮರಳಿದರು ಪಾಳೆಯಕೆ ॥ ಉಸುರಲಮ್ಮವು ಚೀಯಸೋ
ಳಳು । ಶಶಿವದನೆ ಗುಣಸಾಮದಲಿ ಸಾ । ಧಿಸುವುದರಿದೆನೆ ತಾನೆ ನೋಡುವೆನೆನುತ ಹೊರವಂಟ ॥೧೩॥
ಹೆಗಲಹಿರಿಯುಬ್ಬಣಿಕತಾಲಿಯ । ಬಿಗಿದುಡಿಗೆ ರತ್ನಾಭರಣ ಝುಗ । ಝುಗಿಸೆ ಝಣಝಣರವದ ರಸಭದ
ಖಡಿಯತತಿ ಮೆರೆಯೆ ॥ ಬಗೆಯ ಸಾದುಜವಾಜಿಕಸ್ತುರಿ । ಯಗರುಪರಿಮಳದಂಗವಟ್ಟದ । ವಿಗಡಹೊ
ಕ್ಕನು ವನವಸಾಪಾಂಚಾಲೆಯಾಶ್ರಮವ ॥೧೪॥ ತೊಲಗಿದುದು ಮುನಿನಿಕರವೀತನ । ಸುಳಿವ ಕಂಡಾಸು
ತೇಜವಲಿ ಖಳ । ತಿಲಕ ಬಂದನು ಪರ್ಣಶಾಲೆಯ ಮುಖದಮಂಟಪಕೆ ॥ ಲಲನೆಯೊಳೆ ಹೊಗಲೊಡನೆ
ಹೊಕ್ಕನು । ನಳಿನಮುಖಿ ಬಂದವ ಜಯದ್ರಥ । ನಳುಕಲೇಕೌ ದ್ರೌಪದಿಯೆ ನೀನೆನುತ ಮಂಡಿಸಿದ ॥
ಬೆವರಲೇತಕೆ ನಮ್ಮನಾದರಿಸಿ । ಮದವಳಿಗೆ ನೀನಾದರೊಡಹು । ಟ್ಟಿದನು ನೀನಹೆ ಯೆನಗೆ ನಿಮ್ಮಲಿ
ಬೇರೆ ಭಯವೇನು ॥ ಸದನವಿದು ಪತಿಶೂನ್ಯ ತಾನೆಂ । ಬುದು ಪತಿವ್ರತೆಯೆಲ್ಲಿಯನುಚಿತ । ವಿದು ವಿ
ಚಾರವ ಬಲ್ಲೆ ನೀನೆಂದಳು ಸರೋಜಮುಖಿ ॥೧೬॥ ಅಹಹ ಪಾತಿವ್ರತ್ಯವತಿಸ । ಸ್ನಿಹಿತವಲ್ಲಾ ನಿನಗೆ
ಹಲಬರ । ಮಹಿಳೆ ಸತಿಯೆನಿಸುವರ್ಸೂಳೆಯರೇಕಪುರುಷರಲಿ ॥ ವಿಹರಿಸುವರೇ ಲೋಕಧರ್ಮದ ।
ರಹಣಿ ರಚಿಸುವುದಲ್ಲೇ ನವು । ಗಹುದು ಮತವಲ್ಲದೊಡೆ ಮಾಣಲೆನುತ್ತ ಮುರಿದೆದ್ದ ॥೧೮॥ ತರಳೆ
ಮಿಗೆ ತಲ್ಲಣಿಸಿ ತಳಿರೊ । ವಳಿಯ ಹೊಗುತಿರಲಟ್ಟಿ ಮೇಲುದ । ಬರಸೆಳೆದು ತುರುಬಿಂಗೆಹಾಯ್ದನು
ಹಿಡಿದು ಕುಸುಬಿದನು ॥ ಒರಲಿದಳು ಹಾ ಭೀಮ ಹಾ ನೃಪ । ವರಧನಂಜಯ ಹಾಯೆನುತ ಕಾ । ತರ
ಸೆ ಕಮಲಾನನೆಯ ಕಂದವನೌಚಿ ಹೊರವಂಟ ॥೧೯॥ ರಾಣಿವಾಸವಲಾ ಯುಧಿಷ್ಠಿರ । ನಾಣೆ ಬಿಡು
ಬಿಡೆನುತ್ತ ಸುಜನ । ಶ್ರೇಣಿಯಡ್ಡೈಸಿದೊಡೆ ಬೀಸಿದನವನು ಖಂಡೆಯವ ॥ ರಾಣಿ ನಡೆನಡೆ ನಮಗೆ
ಪಾಂಡವ । ರಾಣೆಯಿಟ್ಟರು ಮುನಿಗಳಲ್ಲಿಹ । ಜಾಣು ತಪ್ಪದೆನುತ ಹೊರವಂಡಿಸಿದನಾಶ್ರಮವ ॥೨೦॥

ಒಡನೆ ಬಂದನು ಧೌಮ್ಯಮುನಿಯಡಿ । ಯಿಡುತ ರಘುನರಕ್ಷೋಘ್ನಸೂಕ್ತವ । ನಡಿಗಡಿಗೆ ಜಪಿಸುತ ಜಯದ್ರಥ ಬೇಡಬೇಡೆನುತ ॥ ಮಿಡುಕದ್ಯೆತರಲೌಕಿ ಹೊಕ್ಕನು । ಪಡೆಯುಪುಷ್ಯದ । ರಥವನೇರಿಸಿ । ನಡೆಪಸವ ಸೂಟಿಯಲಿ ತಾಟಿಸಿ ರಥದವಾಜಿಗಳ ॥೨೧॥ ಚೆಲ್ಲಿತೀ ಮುನಿಯೂಥ ದೆಸೆದೆಸೆ । ಗೆಲ್ಲ ಹರಿದುದು ಬಾಯ ಮೊರಗಳ । ಪಲ್ಲವದಪಾಣಿಗಳ ಸೂಸುವ ಸಮಿಧೆ ಬರ್ಹಿಗಳ ॥ ತಲ್ಲಣದ ತೋಹಿನವಿಷಾದದ । ವಲ್ಲರಿಯ ಮೂದೊಪಬೆಗಳ ಹೊ । ಯ್ವಳ್ಳಿಗಳ ಮುನಿಜನವ ಕಂಡರು ಪಾಂಡುನಂದನರು ॥೨೨॥ ಏನು ಗಬಬಿ ಋಷಿಜನಂಗಳಿ । ಗೇನಪಾಯವೊ ನಮ್ಮ ಬನದಲಿ । ನಾಸವರೆದು ಘಟನ ಮರ್ಗ್ಗಿಯನ್ನಲ್ಲಾಯೆನುತ ॥ ಆನರೇಂದ್ರರು ನೋಡಿ ಹರಿವ ಮೃಗ । ಯಾನಿರೂಥಿಯ ಬಿಸುಟು ಬಂದನಿ । ದೇನಿದೇನೊಳಿಗವೆನುತ ಬೆಸಗೊಂಡನವರುಗಳ ॥೨೩॥ ಹೇಳಲಮ್ಮೆವು ಜೀಯ ಸಿಂಧುನೃ । ಪಾಲ್ಲದಶಮುಖನಾದನಾಪ್ರಾಂ । ಚಾಲಿ ಜಾನಕಿಯಾದಳಿಂದಿನರಾಜಕಾರ್ಯವಿದು ॥ ಮೇಲೆ ರಾಘವತನದ ತೋಟಿಯ । ತೋಳಬಂಕವು ನಿಮ್ಮದೆನೆ ನರ । ಪಾಲಸಾಹಸ್ರಯಲಂಪು ಹರಿದರು ಭೀಮಫಲುಗುಣರು ॥೨೪॥ ಐದುವರೆ ಉಪುಮರೆಣಿಸುದ್ಧಿಯು । ಕೈದು ಮನೆಯಲ್ಲಿಹುದು ಬೇಂಟೆಯ । ಕೈದು ಕೈಯಲಿ ಸಮಯಪಿಲ್ಲ ಮಹಾಸ್ತ್ರಕರ್ಷಣಿಕ ॥ ಪೈದುಸನ ಮೈ ಸರಸಕೇಹುಲು । ಗೈದು ಸಾಲದೆ ತಂಗಿ ದುಸ್ಸಳೆ । ಯೈದೆತನಬಯಲಾಯ್ತೆನುತ ಮಂಚಿತ್ತರು ಖಳನ ॥೨೫॥ ಕಂಡರಡವಿಯಲವನ ನೆಲವೋ । ಭಂಡ ಘಡ ಹೋಗಟರೆನುತಕ್ಕೈ । ಕೊಂಡು ಸುರಿದರು ಸರಳಸಾಪಂಗಳಿಯ ಸೇನೆಯಲಿ ॥ ಭಂಡರವಟರು ತಾವು ಕಡುಹಿನ । ಖಂಡಯಡ ಸಂಪಂತಪರು । ಪ್ಪಂಡಭಟರೆನುತಾ ಜಯದ್ರಥ ನಿಲಿಸಿದನು ಬಲವ ॥ ಸೆರೆಸಹಿತ ತಾನೈದುವೆನು ನಃ । ವುರಪ ನೀವಾನುವದು ಭೀಮನ । ನುವುದರ್ಜುನನೊಡನ ನಿಮಗುಗ್ಗಡಪಸಮರದಿದು ॥ ಇರತಕಂಪಪನ್ನಪುಕಾಯದ । ಹೊಲಗಯುಳ್ಳ ಸವಾಯಿಜರು ಟನ । ಮುರುಕವುಳ್ಳ ಭಟಾಳಿ ನಿಲುವುದು ತಪವುಪಂಭಟರ ॥೨೭॥ ಖಂಡು ವಾಘೆಯ ಕಂಡು ರಥವನು । ಮುಂದೆ ದುವ್ವಾಳಿಸಿದನಿತ್ತಲು । ಹಿಂದೆ ನಿಂದುದು ಗಜರಥಾಶ್ವಪದಾತಿಚತುರಂಗ ॥ ಇಂದು ಮಪನೆಯ ತೇರು ಹಾಯ್ದುದೆ । ಮುಂದೆ ಹೊಳ್ಳಗರಪ್ಪಹಿಸಿದೊಡೆ । ಹಿಂದೆ ಹೊಲ್ಲಹವೇನನುತ ಹೊಕ್ಕೆಚ್ಚನಾಪಾರ್ಥ ॥೨೮॥ ಮುರಿದು ಮರಸನು ಭೀಮಸುತತರ । ತರುಬಿದನು ಮಲತಾನೆಗಳ ಹೊ । ಕ್ಕರಗವನು ತುರುಗವರು ಭಟರಭ್ರದ ಏಮಾನದಲಿ ॥ ಜುಂತಪಗನಂಡೆಗಳ ಪುದುಳಿಸ । ನಿರಿಗರುಳ ನೆಣವಸೆಯ ಜಿನಿಯಲಿ । ಮೆರೆದು ಹಾಮರನಲ್ಲಿ ತಳಿತುದು ಹೂತುದೆಂಬಂತೆ ॥೨೯॥ ಸಾಯಸಾವತಿಬಲರನೆಲ್ಲರ । ಕಾಯಲಿರಿಸಿದ ಭಟರ ತಲೆಗಳು । ಬೀಯವಾದವು ಮತ್ತೆ ರಪಣವ ತೋರಿಸಾರಣಕೆ ॥ ರಾಯರಂಗವನೆತ್ತ ಬಲ್ಲನಿ । ಜಾಯುಧವ ಹಿಡಿ ನಿನ್ನ ಬಿರುದನ । ಬಾಯಲೆರೆವುದು ಮಧುವನೆನುತುರವಣಿಸಿದನು ಭೀಮ ॥೩೦॥ ಧನುವ ಕೊಂಡನು ಸರಳಸಾರದ । ಅನಿಲಜನ ಮುಸುಕಿದನು ಪಾರ್ಥನ । ಮೊನೆಗಣೆಯ ತರಿದೊಟ್ಟ ಬೊಬ್ಬಿರಿದನು ಜಯದ್ರಥನು ॥ ತನತನಗೆ ಸೈಂಧವನ ಬಂಗಾ । ಹಿನಭಟರು ಭಾರಣೆಯಲೊದಗಿದ । ರನಿಬರನು ನಿಮಿಷಾರ್ಧದಲಿ ನಿರ್ಣೈಸಿದನುಪಾರ್ಥ ॥೩೧॥ ಅಂಜದಿರು ಕಮಳಾಕ್ಷಿ ಧೌಮ್ಯನಿ । ರಂಜನನು ನಿನಗಿಂದು ಸುಕೃಪದಿ । ಪಂಜರವಲಾಯೆನುತ ಹಾಯ್ದನು ಪವನಸುತ ರಥಕೆ ॥ ಕುಂಜರನು ಕೈಯಿಕ್ಕೆ ನಿಲುಕದೆ । ಕಂಜವನವನಿಲಜನ ಝಾಡಿಯ । ಜಂಜಡಕೆ ಧಿಟ್ಟನೆ ಜಯದ್ರಥನರಸ ಕೇಳೆಂದ ॥೩೨॥ ಸೆಳೆದೊಡಾಯುಧ

ವಾತನೀತನ । ನಿಲುಕಿಹೊಯ್ದನು ದಂಡೆಯಿಂದದ । ಕಳಚಿ ಮಾರುತಿ ಹೊಕ್ಕೊಡವ ಚಿಮ್ಮಿದನು ಚೀಲ ಯವ ॥ ಖಳನ ಬಾಹುವನೊದೆದು ತುರುಬಿಗೆ । ನಿಲುಕಿ ಕುಸುಬಿದನವನ ಗೋಣಿನ । ಲಲಗ ಹೂಡಲು ಕಂಡನರ್ಜುನನಾವೃಕೋದರನ ॥೩೩॥ ಭೀಮ ಬಿಡಿಸದಿರವನ ಗಂಟಲ । ನೀಮದಾಂಧನನೊಯ್ದು ಕೆಡ ಹುವ । ಭೂಮಿಪತಿಯಂಘ್ರಿಯಲಿ ಕಾಯಲಿ ಮುನಿದು ಮೇಣ್ಕೊಲಲಿ ॥ ತಾಮಸನ ಬಿಗಿಯೆನಲುನಗು ತು । ದ್ದಾಮನೆಂದನು ಕೊಲುವನೆಂದೇ । ಕಾಮಿಸಿದೆನ್ನೈ ಪಾರ್ಥ ಕೆಡದೇ ಯೆನ್ನ ಸಂಕಲ್ಪ ॥೩೪॥ ನೆನೆಯದಿರು ಸಂಕಲ್ಪಹಾನಿಯ । ನನುಚಿತಕೆ ಮನದಾರದಿರು ಮಾ । ನಿನಿಯಿರಲಿ ರಥದಿಂದ ಕುನ್ನಿಯ ಕೆಡಹು ಧಾರುಣಿಗೆ ॥ ಮುನಿಪನೇರಲಿ ರಥದವಾಜಿಯ । ನನುಗೊಳಿಸಿ ಸಾರಥ್ಯದಲಿ ಬರ । ಲೆನುತ ಭೀ ಮನ ಮನದ ಖತಿಯನು ಬಿಡಿಸಿದನು ಪಾರ್ಥ ॥೩೫॥ ವೈರಿಬಾಹುದ್ವಯವ ಬದ್ದುಗೆ । ದಾರದಲಿ ಕಟ್ಟಿ ದನು ನಾರೀ । ಚೋರ ನಡೆನಡೆಯೆನುತ ತಿವಿದನು ಬಿಲ್ಲಕೊಪ್ಪಿನಲಿ ॥ ಕೌರವೇಂದ್ರನ ಮತವೊ ನಿನ್ನ ವಿ । ಕಾರವೋ ಹೆಂಗಳ್ಳವಿದ್ಯೆಯ । ನಾರುಕಲಿಸಿದರೆನುತ ತಂದರು ಧರ್ಮಜನ ಹೊರೆಗೆ ॥೩೬॥ ಸಿಂಧು ಭೂಪನಲಾ ಭುಜಾಗ್ರದ । ಬಂಧನವ ಬಿಡು ಭೀಮ ಶಿವಶಿವ । ನೊಂದೆನೈ ನಿಷ್ಕರುಣಿಗಳು ನೀವೆಂದನ ವನೀಶ ॥ ಕೊಂದು ಬಿಸುಡುವನೇಮ ಕಂದ । ಪಾಂಧಕನನುಳುಹುವೊಡೆ ತನಗಿಂ । ನ್ನಿಂಧನವ ಮಾ ಡಿಸುವದೈಸಲೆ ಯೆಂದನಾಭೀಮ ॥೩೭॥ ಹದನಿದೊಳ್ಳಿತು ತಂಗಿ ವೈಧ । ವ್ಯದಲಿ ನವೆಯಳೆ ಸುಬಲ ನಂದನೆ । ಯುದರಕುಂತೀದೇವಿಯುದರಕೆ ಭಿನ್ನಭಾವನೆಯೇ ॥ ಕದನದಲಿ ಹಿಡಿವಡೆದವರ ಕೊಲು । ವುದು ನರೇಂದ್ರರ ಧರ್ಮವಲ್ಲೆಂ । ದಿದರ ಮೇಲಾವರಿಯೆವೆಂದನು ಧರ್ಮನಂದನನು ॥೩೮॥ ಈತನ ಳಿಯದೆ ಮತ್ಪ್ರತಿಜ್ಞಾ । ಖ್ಯಾತಿ ಮಸುಳದೆ ತಿದ್ದುವನುವನು । ಭೂತಳಾಧಿಪ ನೀವು ಬೆಸಸುವುದೆನಲು ಮುನಿಜನವ ॥ ಅತ ನೋಡಿದನಾವುಟದಕನು । ನೀತಿಯೆನೆ ಧೌಮ್ಯಾದಿಸುಜನ । ವ್ರಾತ ನಿಶ್ಚೈಸಿದರು ಮನದಲಿ ಧರ್ಮನಿರ್ಣಯವ ॥೩೯॥ ಮಾನಧನರಿಗೆ ವಧೆಯೆನಿಪುದಭಿ । ಮಾನಭಂಜನವಿವನುಕಟ್ಟಭಿ । ಮಾನಿ ಭಂಗಿಸಿ ಬಿಟ್ಟೊಡೀತಂಗಿದುವೆ ಮರಣವಲಾ ॥ ಈ ನುಡಿಯ ಸಲಿಸಿದೊಡೆ ಯಿವನಪ । ಮಾನಹತನಿದು ಧರ್ಮನಿಶ್ಚಯ । ವೇನುಸಂಶಯವಿಲ್ಲೆನುತ ನುಡಿದುದು ಮುನಿಸ್ತೋಮ ॥೪೦॥ ಅಹು ದೆನುತ ಕಲಿಭೀಮ ಮಾಡಿದ । ರಹವನದನೇನೆಂಬೆನೈ ಕೂ । ರಿಹಕಟಾರಿಯಹಣಿಗೆಯಲಿ ಬಾಚಿದನು ಸಿರಿಮುಡಿಯ ॥ ಆಹಿತಶಿರವಿದಲಾಯೆನುತ ಗೃಹ । ಮಹಿಳೆಯರು ವಿಹಿತಾಂಗುಲಿಯ ಸಂ । ಪ್ರಹರಣಾ ದಿ ಪರಿಭವಿಸಿದರು ಘೊಳ್ಳೆನಲು ನಿಖಿಲಜನ ॥೪೧॥ ಬಿಟ್ಟರೀತನತೋಳ ಹಿಂಗೈ । ಗಟ್ಟುಗಳನೆಲೆಕುನ್ನಿ ಹೋಗೆನೆ । ಕೆಟ್ಟಕೇಡದನೇನಹೇಳುವೆನಾಜಯದ್ರಥನಾ । ಬಟ್ಟೆಯಿಂದುರುಳುವೆನೊ ಹಾಸರೆ । ಗಟ್ಟಿ ಹೊಗುವೆನೊ ಮಡುವನೆನುತಡಿ । ಯಿಟ್ಟನಂತಃಕಲುಷಚಿತ್ತ ದುರಂತಚಿಂತೆಯಲಿ ॥೪೨॥ ಚಿಂತಿಸಿದೊ ಡೇನಹುದು ಹೊಗುವೆನು । ಕಂತುಮಥನನಮರೆಯ ನಿವದಿರಿ । ಗಂತಕನು ತಾನಹೆನು ಗೆಲುವೆನು ಬಳಿ ಕ ಬವರದಲಿ ॥ ಭ್ರಾಂತಿಯೇ ಬಿಡು ತನ್ನನೆನುತ ಪು । ರಾಂತಕಧ್ಯಾನದಲಿ ವಿಮಲ । ಸ್ವಾಂತನೇಕಾ ಗ್ರದಲಿ ಭಜಿಸಿದನಿಂದುಶೇಖರನ ॥೪೩॥ ಇವನನಿಷ್ಠೆಗೆ ಮೆಚ್ಚಿ ಗೌರೀ । ಧವನು ಮೈದೋರಿದನು ರಾ ಜ್ಯ । ಪ್ರವರಕೊಟ್ಟನು ಬೇಡು ಸಾಕು ಭವನ್ಮನೋರಥವ ॥ ವಿವರಿಸೆನೆ ಕಂದೆರೆದು ಮುಂದಿಹ । ಶಿವನ ಕಂಡನು ಮೈಯ ಚಾಚಿದ । ನವನಿಯಲಿ ಜಯಜಯ ಮಹೇಶ ನಮಶ್ಶಿವಾಯೆನುತ ॥೪೪॥ ವರದನಾ

ದೈ ಶಂಭು ಕರುಣಾ । ಕರ ಹಸಾದವು ಪಾಂಡುಸುತರ್ಗೆ । ವರನು ದಿನವೊಂದರಲಿ ಗೆಲುವುದು ತನಗ ಭೀಷ್ಟವಿದು ॥ ಕರುಣಿಸ್ಕೆ ತನಗೆನಲು ನಕ್ಕನು । ಗಿರಿಸುತೆಯು ಮೊಗನೋಡಿ ಭಾರಿಯು । ವರವ ವಿವರಿಸಿದನು ಜಯದ್ರಥನೆಂದನಿಂದುಧರ ॥೪೫॥ ಪಾಶುಪತಶರವೆನ್ನ ಸತ್ವವಿ । ಳಾಸವದೆ ಫಲುಗುಣನ ಕೈಯಲಿ । ವಾಸವಾಬ್ಜಭವಾದಿಬಿರುದರ ಬಗೆಯದಾಹವಕೆ ॥ ಅಸುಭಟನೊಬ್ಬನಸುಳಿಯೆ ಮಿ । ಕ್ಕೇಸು ಪಾಂಡವರುಗಳನೊಂದೇ । ವಾಸರದಲವಗಡಿಸು ಹೋಗೆಂದನು ಮಖಧ್ವಂಸಿ ॥೪೬॥ ಸಾಕು ಜೀಯ ಹಸಾದವೆಂದವಿ । ವೇಕನಿಧಿ ಬೀಳ್ಕೊಂಡನೀಶನ । ನೀಕುಮಾರರು ವನದೊಳಿದ್ದರು ಖತಿಯ ಭಾರದಲಿ ನೂಕುನೂಕಾಡುವವಿಪತ್ತಿನ । ವ್ಯಕೃತಿಗೆ ನಾನೊಬ್ಬನೇ ಧಿಟ । ವಾಕೆವಾಳನೆ ಶಿವಶಿವಾಯೆಂದರಸ ಬಿಸುಸುಯ್ದ ॥೪೭॥ ಬಂದಮಾರ್ಕಂಡೇಯಮುನಿಗಭಿ । ವಂದಿಸಿದನೀಬ್ರಹ್ಮಸೃಷ್ಟಿಯ । ಲಿಂದುತಾನಲ್ಲದೆ ಸುಧಾಕರಸೂರ್ಯವಂಶದಲಿ ॥ ಹಿಂದೆ ನವೆದವರಾರು ಪರಿಭವ । ದಿಂದ ನಮ್ಮಂದದಲಿ ವಿಪಿನದೊಳಿಂದುಮುಖಿಯರು ಭಂಗವಟ್ಟರೆ ಯೆನುತ ಬಿಸುಸುಯ್ದ ॥೪೮॥ ಎನಲು ನಕ್ಕನು ಮುನಿಪನವನಿಪ । ಜನಶಿರೋಮಣಿ ಕೇಳು ನಿಮ್ಮಾ । ವನದೊಳಬುಜಾನನೆಯ ಕೊಂಡೋಡಲು ಜಯದ್ರಥನು ॥ ಅನುಜರಾಗಳೆ ಹರಿದು ಮರಳಿಚಿ । ವನಜಮುಖಿಯನು ತಂದರವನನು । ನೆನೆಯಬಾರದವಿಧಿಯಮಾಡಿದರೆಂದನಾಮುನಿಪ ॥೪೯॥ ಅರಸಮುನಿಯದಿರಾವಪಾಡಿನ । ನರಪತಿಗಳ್ಗೆ ನೀವು ವಿಶ್ವಂ । ಭರೆಯ ಘನತೆಯ ಕೇಳಿದರಿಯಾ ಕೈಟಭಾಂತಕನಾ ॥ ವರಮುನಿಯಶಾಪವನು ತಾನೇ । ಧರಿಸಿ ನರರೂಪಿನಲಿ ನವೆದುದ । ನರಸ ಬಣ್ಣಿಸಲೆನ್ನ ಹವಣಲ್ಲೆಂದನಾಮುನಿಪ ॥೫೦॥ ಆಡವಿಯಲಿ ತೊಳಲಿದನು ರಾಮನ । ಮಡದಿಯನು ರಕ್ಕಸನು ಕದ್ದನು । ಕೆಡಿಸಿ ಬಳಿಕರಸಿದನು ರಾಣೀವಾಸವನುಕೂಡೆ ॥ ಕಡಲಮಧ್ಯದ ಖಳನೊಡನೆ ಕೈ । ಹೊಡೆದುದಲ್ಲಿಗೆ ತೆತ್ತಿಗರು ನಾ । ಡಡವಿಗೋಡಗವಾಳುಕುದುರೆಗಳಸುರವಿಗ್ರಹಕೆ ॥ ಸಾಗರದತೆರೆಗಳಲಿ ಗಿರಿಗಳ । ತೂಗಿ ಸೇನೆಯ ನಡೆಸಿ ದಶಮುಖ । ನಾಗ ಕೆಡಿಸಿದು ರಾಮರಮಣಿಯ ಬಿಡಿಸಿದಾಯಸವ ॥ ಈಗಳೀನರರೇನನಾನುವ । ರಾಗರುವರಘುರಾಯುವಜ್ರಕೆ । ಬೇಗಡೆಯ ವಿಧಿ ಮಾಡಿತೆಂದನು ಮುನಿ ನೃಪಾಲಂಗೆ ॥೫೨॥ ಎಂದು ರಾಮಾಯಣಾವ ವಿಸ್ತರ । ದಿಂದ ಹೇಳಿದು ಸಂತವಿಟ್ಟನು । ಕಂದುಕಸರಿಕೆಯಡಗಿತಾಧರ್ಮಜನ ಚಿತ್ತದಲಿ ॥ ಸಂದಣಿಸೆ ತನುಪುಳಕ ಪರಮಾ । ನಂದರಸದಲಿ ಮುಳುಗಿ ಬಳಿಕರ । ವಿಂದನಾಭನ ನೆನೆಯುತಿದ್ದರು ವೀರನರಯಣಿನ ... ॥೫೩॥

ಅಂತು ಸಂಧಿ ೨೨ ಕ್ಕೆ ಪದ ೧೧೭೭ಕ್ಕಂ ಮಂಗಳಮಸ್ತು.

ಇಪ್ಪತ್ತಮೂರನೆಯ ಸಂಧಿ.

॥ಸೂಚನೆ॥ ಧರಣಿಪತಿ ತಂದಿತ್ತನಾದ್ವಿಜ । ನರಣಿಯನು ಬಳಿಕಮಲಧರ್ಮದ । ಸರಣಿಯಿಂದಿತ್ತಿದನು ವನದಲಿ ನಿಜಸಹೋದರರ ॥ ॥ಪದ॥ ಕೇಳು ಜನಮೇಜಯಧರಿತ್ರೀ । ಪಾಲ ರಾಮಾಯಣಾವನಾಮುನಿ । ಹೇಳಿದನು ಹೂಳಿದನು ಭೂಪನ ಮಾನಸವ್ಯಥೆಯ॥ ಹೇಳಿದನು ಸಾವಿತ್ರಿಯುನ್ನತ

ತ । ಶೀಲವನು ಪತಿಭಕ್ತಿಯಿಂದವೆ । ಕಾಲ ನುಂಗಿದಪತಿಯ ಮರಳಿಚಿತಂದಸಂಗತಿಯ ॥೧॥ ಪತಿಭಕತಿ ಯುನ್ನತಿಕೆಯಲಿ ನಿ । ಷ್ಕೃತೆಯಲಾ ಸಾವಿತ್ರಿಯಾಕೆಯ । ನುತಚರಿತ್ರದವೋಲು ನಿಮ್ಮದ್ರೌಪದೀದೇವಿ ॥ ಹಿತವನಾಚರಿಸುವಳು ವಂಶೋ । ನ್ನತಿಯನುದ್ಧರಿಸುವಳು ನಿಮಗೆಂದು । ಹತಿಯದೆಲ್ಲಿಯದೆಂದು ಮಾರ್ಕಂಡೇಯಮುನಿ ನುಡಿದ ॥೨॥ ಮೌನನಿಧಿ ಸಾವಿತ್ರಿಯುಪಾ । ಖ್ಯಾನವನು ಕೇಳಿದನು ಚಿತ್ತ । ಗ್ಲಾನಿಯನು ಬೀಳ್ಕೊಟ್ಟನವುಳೋತ್ಸಾಹಭಾವದಲಿ ॥ ಕಾನನಾನುಭವಕ್ಕೆ ಕಡೆಯಿ । ಸ್ನೇನು ಸಮಗೆನುತತುಳಹರುಷಾ । ನೂನಕಂತೀತನಯರಿದ್ದರು ಪರ್ಣಶಾಲೆಯಲಿ ॥೩॥ ಹಿಂಗಿದವು ಹನ್ನೊಂದವರೆವರು । ಷಂಗಳಟವೀತಟದೊಳಿರಲರು । ಬಿಂಗಳೊಳಗೊಂದಾದುದಾಪತ್ತಾ ಯುಧಿಷ್ಠಿರಗೆ ॥ ತುಂಗವಿಕ್ರಮಸಾಮುನೀಶ್ವರ । ಸಂಗತಿಯ ಸೊಗಸಿನಲಿ ಬಹುಟವ । ಸಂಗಳನು ನೂಕಿದನು ನೃಪತಿ ಪ್ಪಲಾಶಶಾಲೆಯಲಿ ॥೪॥ ವಿಮಲವಾನಪ್ರಸ್ಥಜನದಾ । ಶ್ರಮದೊಳಗೆ ಸಾರಂಗಮೃಗವಿಳಿ । ದಮರನೌಪಾಸನದ ಸಾಧನದರಣಿಯನು ಕೊಂಡು ॥ ಕವುಳಸಖನುದಯದಲಿ ಸಂಧ್ಯಾ । ರಮಣಿಯಭಿವಂದನೆಗೆ ಸನ್ಮುನಿ । ಸಮಿತಿ ಹಿಂಗಿದಡಿಂದೆ ಕೊಂಡೋಡಿತು ವನಾಂತರಕೆ ॥ ೫ ॥ ಎಲೆಲೆಮೃಗವರಣಿಯನು ವಂಚಿಸಿ । ಕಳೆದುದೋ ಕಾಳಾಯ್ತೆನುತ ತ । ಲ್ಲಣಿಸಿದಳು ನಿಜಪತಿಯ ಭಯದಲಿ ಮುನಿಯುವಧುವೆಂದು ॥ ಹೊಳೆಯ ಸಂಧ್ಯಾಸಾಧನಗಳು ಕಳ । ವಳಿಸಿಹೋದ್ವಿಜನಿದು ಪಾರ್ಥಿವ । ಕೇಳಿಯಬಿಟ್ಟರಲಾಯೆನುತ ಹರಿತಂದರಾಶ್ರಮಕೆ ॥ ಎಲೆಯುಧಿಷ್ಠಿರ ದೋಷವಿದುನಿ । ಸ್ತ್ರೀಳಿಸಿಗ್ರೆದು ವುದರಣಿಯನು ಮೃಗ । ಸೆಳೆದುಕೊಂಡೋಡಿದರ ಹೊಕ್ಕದು ಬಹಳ ಕಾನನದಾ ॥ ಅಗ್ನ್ಯಾಂ ಸ್ವಾಧಾನವಿತರರ । ಹಳಿದಿಗಾನೊಳಗಾದೆನೆನೆ ಮುನಿ । ತಿಲಕನೌಪಾಸನವನಬಪನನಿತ ಹೋದವಿಟ ॥೭॥ ಜಾಳಿಸಿದಹದವಿಲ್ಲು ಮುಷ್ಕೋನೆ । ಬೋಳೆಗಳು ನಿಡುಗುಂಡುಗಳ ಬಡಿ । ಕೋಲುಗಳ ನೆಕ್ಕಡವನುರುಪಾರಿಯದಕುಪ್ಪಸವ ॥ ಮೇಳವಿಸಿಕೊರ ವಂಟನವನೀ । ಪಾಲಬೇಂಟೆಗೆ ಮೃಗದಹೆಜ್ಜೆಯ । ಮೇಲೆ ಹೆಜ್ಜೆಯ ನಡಸುವನು ತನ್ನನುಜರೊಡಗೂಡಿ ॥೮॥ ತರಣಿಯನ್ನವನುಸಂದು ಮಾಯಾ । ಹರಿಣನನು ಬೆಂಬತ್ತಿ ವಿಪ್ಪಲ । ಕರಣಾಪಾದಂಡದಲಿ ವಿಮದಾರಣ್ಯವಾಸದಲಿ ॥ ಧರಣಿಪತಿ ಬಳಿಸಲಿಸಿ ಮುನಿಪತಿ । ಯರಣಿಯನು ಕೊಂಡೊಯ್ದಹುಲುಮೃಗ । ಸರಣಿಯಲಿ ಸ್ಪರಿದನಂವಾಕರ್ಣಮಾರ್ಗಣನು ॥೯॥ ಇರುಬಿನೊಳಗದ ಕುತ್ತು ಹೆಮ್ಮರ । ಮರುಗಳೊಳಗದ ತೊಡಚು ಬಾಣವ । ನೆರಗಿ ತಿವಿ ತೋಟಿಟ್ಟಿಯಲಿ ಸಿದುವಲೆಯನೊಡ್ಡೆನುತ ॥ ಅರಸಿದರು ನಟ್ಟಡವಿಯಲಿ ಮುಂದುರುಬಿದರು । ಬಿಳ್ಳಾರಬಲೆಗಳ । ಪರಿಪಿ ಸೊಪ್ಪಿನ ತೋಹಿನಲಿ ಸಿಲುಕಿಸಿದರಾ ಮೃಗವ ॥೧೦॥ ಕೇಳು ಜನಮೇಜಯ ಹಿಮಾಂಶುವಿ । ಶಾಲವಂಶಜರಡವಿಯಲಿ ಮುನಿ । ಸಾಲನರಣಿಯನೊಯ್ದಮೃಗವನು ಹಿಡಿವರೊಳಬಿದ್ದು ॥ ಮೇಲೆತೋರುವಥಗೆ ಮಿಹಿರಪರ । ಬಾಗಗಳೊಣಗಿದವು ಬಳಲಿಕೆ । ಯೇಳಿಗೆಯಲಾತನ್ನ ಲತೆಯರುಬಿನಲಿ ಮಲಗಿದರು ॥೧೧॥ ಮೂದವಾದುದು ನಿಳಯುಮೀಕಾಂ । ತಾರ ನಿರ್ಜಲಪ್ರದೇಶಲಂಘಿಗೆ । ಭಾರ ಪಥವಿನ್ನೇನುಹದವನೆಂದರಸನಳವಳಿದು ॥ ನೀರಸಾರ್ಕ್ಕೆ ಹೋಗು ನಕುಲನ । ರೋರುಹದವಪತ್ರದಲಿ ಪೊಟ್ಟಣ । ವಾರಿಯನು ಕಟ್ಟೆಂದು ಕುಂತೀಸೂನು ನೇಮಿಸಿದ ॥ ಬಗೆವನೇ ಬಳಲಿಕೆಯನತಿಸಹ । ಸಿಗಳ ದೇವನು ಹಿರಿಯ

ಸಾಜ್ಞೆಯು । ನುಗುಳಲಮ್ಮದೆ ಧನುವ ಕೊಂಡನು ನಡೆದನತಿಪಥವ ॥ ಮೃಗುವುನೋಳ್ವಂಜು
ಳದ ಕಂಜಾ । ಳಿಗಳ ಕಡುಪರಿಮಳದ ಪಸರದ । ಸೊಗಸು ತೀವಿತು ವಿಮಳಪದ್ಮಾಕರದ ಪವಮಾ
ನ ॥೧೩॥ ಹಿತವನ್ನೆ ಹಿರಿಯಯ್ಯನೆನಗಂ । ಪತುಳಬಲ ಪರಿತೋಷದಲಿ ಮಾ । ರುತನ ಬಳಿವಿಡಿದ್ಯೆ
ದಿದನು ನಕುಲಾಂಕನಾ ಕೊಳನ ॥ ಹತಿಯುಹುದು ನಿನಗೊಪ್ಮೆ ತಪ್ಪದು । ಹಿತವು ಬಳಿಕೆಂಬಂ
ತೆ ಖಗಸಂ । ತತಿಗಳುಲಿದೊಪ್ಪಿದವು ಪಪ್ಮಾಕರದ ತೀರದಲಿ ॥೧೪॥ ಇರದಿನಲಿ ರಚನೆಯಲಿ ಮ
ಧುರೋ । ತ್ತರವ ನೆರೆ ಬೀರುತ್ತಲಂತಃ । ಕರಣದಲಿ ಕತ್ತರಿಸಿ ಕೊಂಡಿಹಕುಜನನಂದದಲಿ ॥
ಪರಿಮಳದ ಪಸರದಲಿ ಶೈತ್ಯೋ । ತ್ಕರುಷದಲಿ ಲೇಸೆನಿಸಿ ಕುಡಿದೊಡೆ ಹರಣವನೆ ಹಿಂಗಿಸುವಸ
ರಸಿಯುವಾರ ಚೆಲವಾಯ್ತು ॥೧೫॥ ಖಳನ ಸತ್ಯವರೋಲು ವಂಚಿಸಿ । ಗೆಲಿದುದಾತನ ಮನವ
ಮಾಯುಯ । ಚೆಲುವಿನಂತಿರೆ ಚದುರಕೆಡಿಸಿತು ತಿಳಿಯಲರಿದೆನಿಸಿ ॥ ಲಲನೆಯರ ಹೃದಯುದವೊಲೀ
ಕ್ಷಿಸೆ । ನೆಲೆಯನೀಯದವಕ್ಕತಕಸರಸಿಯು । ಸುಲಭತೆಗೆ ಸಹದೇವನಣ್ಣನು ಸೋತು ನಡೆತಂದ ॥೧೬॥
ಇಳಿದು ಮೊನೆವುುಂಚೆರಗನಗ್ರಕೆ । ಬಲಿದು ಹೊಕ್ಕನು ಜಾನುದಘ್ನ । ಸ್ಥಳವನಂಜುಳಿಯಿಂದ
ತೊಳೆದನು ಚರಣವದನವನು ॥ ತುಳುಕಿದನು ವಾರಿಯನು ತನ್ನಯ । ಬಳಲಿಕೆಯನಪಹರಿಸಿ
ಭೂಪತಿ । ಗಳಿಗೆ ಬಳಿಕಾನೊಯ್ವೆನೆಂದನು ಮನ್ನಿಸಿದನಂದು ॥೧೭॥ ಜಲವನಂಜುಳಿಯಿಂದ ಮೊ
ಗೆದೀಂ । ಟಲು ನೆನೆಯಲಭ್ರದಲಿ ಗುಹ್ಯಕ । ನುಲಿದನೆಲೆನಕುಲಾಂಕಮಾಣೆನಗುತ್ತರವ ರಚಿಸಿ ॥ ಬ
ಳಿಕಸಲಿಲವನೀಂಟು ಮಾತುಗ । ಳೊಳವು ಮರುಳಾಗದಿರೆನಲು ಥಗೆ । ಗಳುಕಿ ಬಳಲಿದ್ದು ಮೇಲೆ
ಯಾಲಿಸಿ ವಿಚಾರಿಪನು ನುಡಿಯ ॥೧೮॥ ಜಡಿಯಲೆರಡಳ್ಳೆಗಳು ಕೊರಳಲಿ । ಕುಡಿದನುದಕವನಬುಜ
ದೆಲೆಯಲಿ । ಹಿಡಿದನನಿಬರಿಂಗಮಳಜಲವನು ಮರಳಿನಿಮಿಷದಲಿ ॥ ತಡಿಯನಡರಿದ್ದು ಧೊಪ್ಪನವನಿಗೆ ।
ಕೆಡೆದು ಪರವಶನಾದನಿತ್ತಲು । ತಡೆದನೇಕೆಂದಟ್ಟಿದನು ಸಹದೇವನನು ನೃಪತಿ ॥೧೯॥ ತವಕ ದಿಗೆ
ನಡೆತಂದು ಪೈವುರೆ । ಪವನ ಕಂಡನು ಬವಳಥಗೆ ಪರಿ । ಹರಿಸಲುದಕವ ಕುಡಿದು ಬಳಿಕಾರ್ದೈವೆನಿದನೆ
ನುತ ॥ ಲವಲವಿಸಿ ತಾಳಿಗೆಯ ತಲ್ಲಣ । ದವನು ಹೊಕ್ಕನು ಕೊಳವನವಳಾಂ । ಬುವನು ಮೊಗೆದನು
ಮೊಗಕೆ ಮೋಹಲು ಮೇಲೆದನಿಯಾಯ್ತು ॥೨೦॥ ಬಿಡುಬಿಡೆಲೆಸಹದೇವ ಯೆನ್ನಯ । ನುಡಿಗೆ ಮಾ
ರುತ್ತರವ ಕೊಡು ಮುಂ । ಗೆಡದೆ ಮುಂದಣ ನಿನ್ನವನ ಕಂಡಿಂತು ಮರುಳಹರೆ॥ ಮುಡಿಯಲೆಳಸದಿರೆನ
ಲು ಥಗೆಯುವ । ಗಡಿಸೆ ಸೈರಿಸಲರಿಯದುತ್ತರ । ಗೊಡದೆ ಜಲವೀಂಟಿದನು ದಾಂಟಿದುದಸು ಕಳೇಬರ
ದ ॥೨೧॥ ಈತನತಿಸೈರಿದೆವನತ್ತಲು । ಕಾತರಿಸಿನ ಭೂಪನಿಬ್ಬರ । ಮಾತು ಮುಖದಿರುಹಿತ್ತು ಶಿಶು
ಗಳಿಗಾವಪದನಾಯ್ತೋ ॥ ತಾತ ಹೋಗೈ ಪಾರ್ಥಬಾಲಕ । ರೇತಕತ್ತಲೆ ತಡೆದರೆಂಬುದ । ನೀತಿಳಿದು
ತಾ ಜಲವನೆನೆ ಕೈಕೊಂಡು ನಡೆತಂದ ॥೨೨॥ ಹಿಮದಗಾಳಿಯಪಥವಿಡಿದು ಮ । ಧ್ಯಮದಪಾಂಡವನೈ
ತರುತ ಮುಂ । ದಮಲಸರಸಿಯ ತೀರದಲಿ ಕೆಲಿಸಿದಮಗ್ಗುಲಲಿ ॥ ಯಮಳರೊರಗಿರೆ ಕಂಡು ಮನದ
ಲಿ । ತಮುವ ಹಿಡಿದನು ನೀರುಗುಡಿಟೀ । ಮಮತೆ ಪಿಂಗಲಾರೈವೆನೆನುತಿಳಿದನು ಸರೋವರವ ॥೨೩॥ ಚ
ರಣವದನವ ತೊಳೆದು ಥಗೆಥಾ । ವರಿಸಲಕ್ಷಮನಾಗಿ ಕರದಲಿ । ತೆರೆಗಳನು ತೆಗೆ ನೂಕಿ ಮೊಗೆದನು ಗರ
ಳಮಯಜಲವ ॥ ಮರುಳೆ ನೀ ಕೌಂತೇಯ ಮಾದ್ರೇ । ಯರನು ನೋಡುವುದಿತ್ತನನಗು । ತ್ತರವನಿ

ತ್ತುದಕವನು ಕುಡಿಯೆಂದುದು ನಭೋವಚನ ||೨೪|| ಮೇಲೆಯಾರೈವನೆ ಸುತ್ತಪಷ್ಟಾ | ಲೋಲಚಿತ್ತನು ಕಾಮಿ ಮೃಗಯಾ | ಕೇಳಿಲಂಪಟನರ್ಥಲಾಭದ್ಯೂತಲೋಲುಪನು || ಕೇಳು ಜನಮೇಜಯ ತಟಾಕದ | ಕಾಳಕೂಟವ ಕುಡಿದನರ್ಜುನ | ಕಾಲಿಡುತ ಡೆಂಡಣಿಸಿ ಮೈಮರೆದವರ ಕೂಡಿದನು ||೨೫|| ತಡೆದರತ್ತಲು ಮೂವರನುಜರು | ಮಡಿದರೇನೋ ಚಿತ್ರವಾಯಿತು | ನಡೆ ಸಮೀರಕುಮಾರ ನೀ ಹೋಗತ್ತ ತಳುವದಿರು || ತಡೆಯದೈತಹುದೆನೆ 'ಹಸಾದವ | ನುಡಿಯನಾನುತ್ತೈದಿ ಹಜ್ಜೆಯ | ಹಿಡಿದು ಬಳಸಲಿಸಿದನು ಬರೆಬರೆ ಕಂಡನದ್ಭುತವ ||೨೬|| ಘಟ್ಟಗೆಡೆದಸುಗಳೆದತನ್ನೊಡ | ಹುಟ್ಟಿದರನೀಕ್ಷಿಸಿದನು ಸುರಿನ | ಬಟ್ಟೆಯನು ನೋಡಿದನು ಮೂಗಿನ ಬಳಿಯ ಬೆರಳಿಟ್ಟು || ಮುಟ್ಟಿತಿವರಿಗೆ ಮರಣವಿನ್ನೇ | ನಟ್ಟ ಕೊಲುವೆನು ಜವನಮೃತ್ಯುವ | ನಿಟ್ಟಿಲುವನುದುರಿಸುವೆನೆನುತೊದರಿದನು ಕಲಿಭೀಮ ||೨೭|| ಮನ್ನಣೆಗೆ ಹಿರಿಯಯ್ಯನೆಂದಾ | ನಿನ್ನು ಬಗೆವೆನೆ ಜವನಗಂಟಲ | ಮುನ್ನ ತಿರುಹುವೆನೆನುತ ಕಿಡಿಕಿಡಿವೋದನಾಭೀಮ || ಇನ್ನೊದರ ಫಲವೇನು ಕುಡಿವೆನು | ಮುನ್ನಜಲವನು ಬಳಿಕ ನೋಡುವೆ | ತನ್ನವರ ಮಾರ್ಗವನೆನುತ ಮೊಗೆದನು ವಿಷೋದಕವ ||೨೮|| ಮಾಣು ಮಾರುತ್ತರವ ಕೊಡು ಮುಂ| ಗಾಣಬೇಹುದು ತಂದೆ ತನಗೀ | ಕ್ಷೋಣಿಯಲಿ ಪೂರ್ವದಪರಿಗ್ರಹವೀಸರೋವರವು || ಜಾಣನಾದೊಡೆ ಜಾರಬಿಡು ಬಗೆ | ಕೇಣವನುನೀನೆನಲು ಗಗನದ | ವಾಣಿಯನು ಮನ್ನಿಸದೆ ಮಾರುತಿಯಿಾಂಟಿದನು ಜಲವ ||೨೯|| ದಡದಡಿಸಿ ಕೊಳನಿಂದ ಹೊರಗಡಿ | ಯಿಡುತ ಬಳಲಿದನನಿಲಸುತನವ | ರೊಡನೆ ಮೈಯಿಕ್ಕಿದನು ಕಳಚಿದನೀಲಗಿರಿಯಂತೆ || ಅಡೆಗೆಡೆದನಾಭೀಮನಿತ್ತಲು | ಕಡುನಿರೋಧವ ಹಿಡದು ತಾನೇ | ನಡೆದು ಬಂದನು ಧರ್ಮಸುತನಾಕೊಳನ ಪಥವಿಡಿದು ||೩೦|| ಮೇಲೆ ಮಗುಳ್ದಾಲಿಗಳ ಚಾಚಿದ | ತೋಳಮೇಲಿನ ತಲೆಯ ಸುಯ್ಲಿನ | ಲೀಲೆಯಡಗಿದಮುಖದ ಮಸುಳಿದಕಾಯಕಾಂತಿಗಳ || ಮೇಲುಮುಸುಕಿನ ಮಗ್ಗುಲಿನಲಿಹ | ನಾಲುವರನೀಕ್ಷಿಸುತ ಭೂಪತಿ | ಕೋಲುಮರುಮನೆಗೊಂಡವೋಲ್ಮರುಗಿದನು ಚಿತ್ತದಲಿ ||೩೧|| ಮುಸುಕನರೆದೆರೆದವರವರಮೊಗ | ದುಸುರುಗಳನಾಲಿಸಿದನಕಟಾ | ಶಿಶುಗಳಿಗೆ ಕಡುಹಾನಿಯಾಯಿತೆ ಶಿವಮಹಾದೇವಾ || ನಿಶಿತಶಸ್ತ್ರದ ಗಾಯವಿಲ್ಲು| ಬ್ಬಸದ ಸಾವಿಸ್ನಾವುದೋನಾ | ನಸುಗಳೆಯದೇಕುಳಿದೆನೆಂದಳಲಿದನು ಯಮಸೂನು ||೩೨|| ಇಂದಿನಲಿ ಕಡೆಯಾಯ್ತಲಾವಿಮ | ಳೇಂದುವಂಶಕೆ ಕೌರವನಛಲ | ಸಂದುದಿನ್ನಹಿತಾವನೀಶರಿಗಾಯ್ತು ಪರಿತೋಷ || ಕೊಂದರಾರಕಟಕಟೆನುತ್ತರ | ವಿಂದನಾಭನ ಕೃಪೆಗೆ ಬಾಹಿರ | ನಿಂದು ತಾನಾದೆನೆ ಮಹಾದೇವೆಂದು ಬಿಸುಸುಯ್ದ || ||೩೩|| ಹೋಗಲಿನ್ನೀನೀರುಗುಡಿದಿವ | ರಾಗುಹೋಗರಸುವೆನೆನುತ ಢಗೆ | ತಾಗಿದವನಿಪನಿಳಿದು ಹೊಕ್ಕನು ವಿಷಸರೋವರವ || ಬಾಗಿ ಮೊಗೆದನು ಜಲವನಭ್ರದೊ | ಳಾಗಲಾದುದು ರಭಸವೆಲೆಸಕ | ಳಾಗಮಜ್ಞಾ ಮಹೀಶ ಕೇಳೆಂದುದು ನಭೋನಿನದ ||೩೪|| ಅನುಜರವಿವೇಕಿಗಳು ಪುಣ್ಯ | ಜನದಲಧಿಕನು ನೀನಿಧಾನಿಸಿ | ನನಗೆ ಮಾರುತ್ತರವನಿತ್ತು ನಿರಂತರಾಯದಲಿ || ತನುವಿಗಾಪ್ಯಾಯನವ ಮಾಡುವು | ದೆನಲು ಕೇಳಿದು ಢಗೆಯ ಸೈರಿಸಿ | ಘನಪಥದ ನುಡಿಯಾರದೆಂದವನೀಶನಾಲಿಸಿದ ||೩೫|| ಬಿಸುಟನುದಕವನಾನುಡಿಯನಾ | ಲಿಸಿದನಾರೈ ನೀನು ನಿನಗಾ | ಗಸದಲಿರವೇನಸುರನೋ ಕಿನ್ನರನೊ ನಿರ್ಜರನೋ | ಉಸುರೆನಲು ತಾರ್ಯಕ್ಷನೀಸಾ | ರಸವು ನನ್ನದು ನಿನ್ನತಮ್ಮದಿ | ರಸುವನೆಳೆದವನಾನು ಕೇಳ್ಕೈ ಧರ್ಮಸು

ತಯಿಂದ ॥ ಬಾಲಕರು ನೀವೆನ್ನ ಮಾತನು । ಕೇಳಿ ಯುದಕವ ಕುಡಿವುದೆನೆ ಭೂ । ಪಾಲ ನಿನ್ನ ವರೆನ್ನ ಮಾತನು ಕೇಳಿ ಮನ್ನಿಸದೆ ॥ ಮೇಲುಗಾಣದೆ ನೀರುಕುಡಿದು ವಿ । ತಾಳಿಸಿದರಿಂದೆನ್ನ ಮಾತನು । ಕೇಳಿ ನೀನುತ್ತರವ ರಚಿಸೆನೆ ನೃಪತಿ ಹೇಳೆಂದ ॥೩೭॥ ಜಲನಿಧಿಗೆ ಸರಿ ಸರಸಿಯಾವುದು । ನೆಲಕೆ ಹಿತವನದಾರು ಮತ್ರ್ಯ । ವಳಿಗೆ ಮಾತೆಯದಾರು ಸೂರ್ಯಪ್ರಭೆಗೆ ಸರಿಯೇನು ॥ ತಿಳುಹು ಧರ್ಮಜ ಸಕಲಧರ್ಮಾವಳಿಯ ಸಾರವನೆನಲು ಯಕ್ಷನ । ಬಲುಮೆಗವನೀಪಾಲನತಿಪರಿತೋಷದಲಿ ನುಡಿದ ॥೩೮॥ ಗಗನವೆಬುಧಿಗೆ ಸರಿಸರೋವರ । ಜಗಕೆ ಹಿತವನು ಶಕ್ರನುನುಜಾ । ದಿಗಳಮಾತಾರೂಪು ಗೋವುಗಳಿದು ನಿಧಾನಮತ ॥ ಬಗೆಯಲುಗ್ಗದ ಸತ್ಯವೆಂಬುದು । ಗಗನಮಣಿಗೆಣೆಯೆನಲು ಚಿತ್ತಕೆ । ಸೊಗಸಿ ತಲೆದೂಗಿದನು ಮಗುಳಿಂತೆಂದನಾಖಚರ ॥೩೯॥ ನಯವಿದನೆ ಕೇಳಾವನಸ್ಯಕ್ಷ । ತ್ರಿಯನು ವಿಪ್ರರೊಳಾವನೈ ಶ್ರೋ । ತ್ರಿಯನು ಸುಜನರೊಳಾವನೈ ಮಾಪುರುಷನೆಂಬುವನು ॥ ನಿಯತಧೀಮನದಾರುದೇವ । ಪ್ರಿಯನದಾವನು ಕಠಿನ ಕಷ್ಟಾ । ಶ್ರಯನದಾವನು ಧರ್ಮಸುತ ಹೇಳೆಂದನಾ ಖಚರ ॥೪೦॥ ಧೃತಿಯುತಕ್ಷತ್ರಿಯನು ವೇದ । ಪ್ರತಿಯುತ ಶ್ರೋತ್ರಿಯನ ಹಿಂಸಾ । ರತನು ಮಹಪುರುಷನು ಸುಧೀಮನು ಸಾಧುಸೇವಕನು ॥ ಸತತಪರರುಪಕಾರಿದೇವ । ಪ್ರತತಿಪ್ರಿಯನು ಪರರಗುಣದು । ನ್ನತಿಯ ಸೈರಿಸದವನು ಕಷ್ಟನು ಯಕ್ಷಕೇಳೆಂದ ॥೪೧॥ ನಿಂದ್ಯನಾವನು ಲೋಕದೊಳಗಭಿ । ವಂದ್ಯನಾವನುಜೀವವಿರೆ ಮೃತ । ನಂದಡಾವನು ದೇಶಕಳಿವಹುದಾರ ದೆಸೆಯಿಂದ ॥ ಸಂದ ಯಜ್ಞವದೆಂತು ಕೆಡುವುದು । ತಂದೆಹೇಳೈ ತನಗೆನಲು ಸಾ । ನಂದದಿಂದವೆ ಕಾಣಿಸಿದನಾಖಚರಗುತ್ತರವ ॥ ಕೇಳು ಪರನಿಂದಕನೆ ನಿಂದ್ಯನು । ಹೇಳಲೇಂ ಪರಹಿತನೆ ವಂದ್ಯನು । ಹೇಳಿದಿಚ್ಛೆಗೆ ನಡೆವನೃಪನಿಂದಳಿವುದಾದೇಶ ॥ ಕೇಳು ನಡೆವೀನೇ ದರಿದ್ರನು । ಸಾಲದೆನಿಸಿದ ದಕ್ಷಿಣೆಯ ಯ । ಜ್ಞಾಳಿ ನಿಷ್ಫಲವೆಂದುನುಡಿದನು ರಾಯ ಕೌಂತೇಯ ॥೪೩॥ ನರಕಿಯಾವನು ಸುಜನರಲಿ ಬಾ । ಹಿರನದಾವನು ಲೋಕ ವಲಿಯಲು । ವರ್ಣಿಪಿರೆ ಹೊಂದಿದನದಾವನು ಭೂಮಿಪಾಲರಲಿ ॥ ಮರುಳದಾವನು ಮಾನಭಂಗದ । ಭರತನಾವನು ಹೇಳುಧರ್ಮಜ । ಸರಸಿಯಲಿಬಳಿಕುದಕವನು ಕುಡಿಯೆಂದನಾಖಚರ ॥೪೪॥ ಎನೆ ಕೃತಘ್ನನೆನರಕಿವಿದ್ಯಾ । ಧನಮದಾಂಧನೆ ಬಾಹಿರನು ಹೊ । ಕ್ಕನುವರವ ಹಿರಗುವಮಹೀಪತಿ ಜೀವಪಿರೆ ಮೃತನು ॥ ವಿನುತಗುರುವರಿಯದನೆ ಮರುಳಂ । ಗನೆಯರಲಿ ವಿಶ್ವಾಸಪರನೇ । ಜನವರಿಯಲಭಿಮಾನಹೀನನು ಯಕ್ಷಕೇಳೆಂದ ॥೪೫॥ ಒಲೆದನೊಡಲನು ಧರ್ಮಸಂಗತಿ । ಗಳ ಸುಸಂವಾದದಲಿ ನಿಜತನು । ಪುಳಕವುಬ್ಬರಿಸಿದುದು ಗಬ್ಬರಿಸಿದುದುದು ಪ್ರಕೃತವ ॥ ಎಲೆಮಹೀಪತಿ ಮೆಚ್ಚಿದೆನು ಬೇ । ಡಳಿದತಮ್ಮಂದಿರಲಿಯೊಬ್ಬನ । ತಲೆಯ ಬದುಕಿಸಿಕೊಡುವನೆನೆ ಯಮತನುಜನಿಂತೆಂದ ॥೪೬॥ ಅಸುವನಿತ್ತೌ ಖಚರಪತಿ ಜೀ । ವಿಸಲಿ ನಕುಲನು ಧನ್ಯನಾನೆನೆ । ನಸುನಗುತ ಚೇತರಿಸಿಮೈಮುಂದೆದ್ದನಾನಕುಡ ॥ ನಿಶಿತಮತಿ ಮೆಚ್ಚಿದೆನು ಬೇಡಿ । ನ್ನಸುವ ನೊಬ್ಬಂಗಿತ್ತನೆನೆಜೀ । ವಿಸಲಿ ಸಹದೇವಾಂಕನೆಂದನು ಧರ್ಮನಂದನನು ॥೪೭॥ ಜನಪ ನಿನ್ನಾಳಾಪವೆನ್ನಯ । ಮನಕವಿಸ್ಮಯವಾಯ್ತುಭೀಮಾ । ರ್ಜನರು ನಿನ್ನೊಡಹುಟ್ಟಿದರು ನೀನವರಿಗತಿಹಿತನು ॥ ಅನುಜರವರಿರಲೇಕೆ ಮಾದ್ರೀತನುಜರೆಂಬರ ಒಯುಸಿದೈಸೇ । ಳೆನಲು ನಸುನಗೆ ಮೊಳೆಯೆ ನುಡಿದನುಧರ್ಮನಂದನನು ॥೪೮॥ ಸಾವು ಬೊಪ್ಪಂಗಾಗೆಮಾ

ದ್ರೀ । ದೇವಿ ತನ್ನನು ಕರೆದು ಶಿಶುಗಳ । ನೋವ್ವುಕ್ಕೇಡಿದು ನಿನ್ನದಾರ್ಯೆದಿವರ ಸಲಹುವುದು ॥ ಭಾವ ಭೇದವನಣುವ ಬಗೆಯದೆ । ಕಾವುದೆಲೆ ಮಗನೆಂದುಬೆಸಸಿದ । ಳಾವಪರಿಯಲಿ ಮರೆವೆನ್ಸೆ ಮಾದ್ರೀಕು ಮಾರಕರಾ ॥೪೯॥ ಎನಲು ಮೆಚ್ಚಿದನುಳಿದಭೀಮಾ । ರ್ಜನರ ಹರಣವನಿತ್ತು ನಿಜನಂ । ದನನನ ಪ್ಪಿದನೊಲವಿನಲಿ ಯಮರಾಜನೈತಂದು ॥ ತನುಜ ಸಾಕಿನ್ನಾಯ್ತು ನಿಮಗೇ । ವನನಿವಾಸವು ಬೀಳು ಗೊಡು ಮುನಿ । ಜನವನಿನ್ನಜ್ಞಾತವಾಸಕೆ ಮನವಮಾಡೆಂದ ॥೫೦॥ ನೀವು ಪಾಂಡವರೆಂದು ನಿಮ್ಮ ನೆ । ದಾವಮಾನವರರಿಯದಿರಲಿ ಮ । ಹಾವಿಭವದಲಿ ಬೆಳಗುವದು ಬಳಿಕವನಿಮಂಡಲವ ॥ ದೈವಬ ಲ ನಿಮಗುಂಟು ಮೇಣಿ । ನ್ನಾವುದರಿದಲ್ಲೆಂದು ತನುಜನ ನೋವಿ ಮನ್ನಿಸಿ ಬೀಳುಗೊಟ್ಟನು ಪಾಂ ಡುನಂದನರ ॥೫೧॥ ಅರಣಿಯನು ತಂದಿತ್ತು ಧರಣೀ । ಸುರನ ಮನ್ನಿಸಿ ಮುನಿಗಳನು ಭೂ । ಸುರರ ಸಚಿವರ ಪರಿಕರರಥಾವ್ಯಾದಿಮಂತ್ರಿಗಳ ॥ ವರಸುಭದ್ರಾದೇವಿಪಾಂಚಾ । ಲರನು ದೃಷ್ಟ ದ್ಯುಮ್ನ ಮೊದಲಾ । ಗಿರೆ ನಿಜಾಪ್ತರನವರವರಮಂದಿರಕೆ ಕಳುಹಿದನು ॥೫೨॥ ಜಯ ನಮೋಜಯ ಭಕ್ತರಘು ಸಂ । ಹರ ನಮೋಜಯ ಸಕಲಭುವನೇ । ಶ್ವರ ನಮೋಜಯ ಕೃಷ್ಣ ಕೇಶವ ವಿಷ್ಣು ವಾಮ ನನೇ ॥ ಪರಮಪುಣ್ಯಶ್ಲೋಕ ಜಯ ಜಗ । ಭರಿತ ನಿರ್ಮಳರೂಪ ಜಯಜಯ । ಕರುಣಿ ರಕ್ಷಿಸು ರಾ ಯಗದುಗಿನವೀರನಾರಯಣಾ ॥೫೩॥

ಅಂತು ಸಂಧಿ ೨೩ ಕ್ಕೆ ಪದ ೧೨೩೦ ಕ್ಕಂ ಮಂಗಳಮಸ್ತು.

ಇತಿ ಶ್ರೀಮದಚಿಂತ್ಯಮಹಿಮ ಗದಗು ವೀರನಾರಾಯಣಚರಣಾರವಿಂದ ಮಕರಂದ ಮಧು ಪಾನಪುಷ್ಟವಚಃಷಟ್ಪದಿ ನಿಕಾಯ ಶ್ರೀಮತ್ಕುಮಾರವ್ಯಾಸ ಯೋಗೀಂದ್ರ ವಿರಚಿತವು ಪ್ಪ ಕರ್ಣಾಟಭಾರತಕಥಾಮಂಜರಿಯೋಳ್ ಅರಣ್ಯಪರ್ವ ಸಮಾಪ್ತವಾದುದು.

॥ ಶ್ರೀರಸ್ತು. ॥

ಶ್ರೀವೇದವ್ಯಾಸಾಯನಮಃ.

ಕನ್ನಡ ಮಹಾಭಾರತ-ವಿರಾಟಪರ್ವ.

ಮೊದಲನೆಯ ಸಂಧಿ.

॥ಸೂಚನೆ॥ ಕಾಯಿದರು ಸತ್ಯವನು ವನವಾ । ಸಾಯತವ ನೆರೆಗೆಲಿದು ಪಾಂಡವ । ರಾಯರೋ ಲೈಸಿದರು ಬಂದು ವಿರಾಟನಗರಿಯಲಿ ॥ ॥ಪದ॥ ಕೇಳು ಜನಮೇಜಯಧರಿತ್ರೀ । ಪಾಲಮುನಿಜನ ನೃಪಜನಂಗಳ । ಬೀಳುಗೊಟ್ಟನು ಭೂಮಿಪತಿ ಬಲವಂದು ಹುತವಹನ ॥ ಮೇಲುಶಕುನದ ಚಾರುನಿನ

ದವ | ನಾಲಿಸುತ ಸೋದರರುಸಹಿತವೆ | ಲಾಲಯವ ಹೊರವಂಟು ಸಾರಿದರೊಂದುವಟಕುಜವ ||
ಬಂದು ವಟಕುಜದಡಿಯಲನಿಬರು | ನಿಂದು ದುರುಪದಿಸಹಿತ ಬಳಲಿಕೆ | ಯಿಂದ ವಿಶ್ರಮಿಸಿದರು
ಚಿಂತಿಸಿ ಧರ್ಮನಂದನನು || ಹಿಂದೆ ಹನ್ನೆರಡಬುದ ಸವೆದುವು | ಮುಂದಣೀವಿಂಗೇನುಗತಿ ಬಳಿ
ಕೊಂದುವರ್ಷಾಜ್ಞಾತವಾಸಕ್ಕಾವಠಾವೆಂದ ||೨|| ಬಡಗಲವರೆದು ಮೂಡಣವರುಸುಗ | ಳೊಡೆಗೆಣೆಯ
ರಾಗಿಹರು ತೆಂಕಣ | ಕಡೆಯವರು ಕಂಡಿಹರು ಕೆಲಬಲದವರು ಕೊಂಡೆಯರು || ಪಡುವಣವರತಿಕೃಶ
ರು ನಾವಿ | ಸ್ನಡಗಿರಲು ತೆರನಾವುದೆಂದೆನೆ | ನುಡಿವನರ್ಜುನದೇವನವನೀಪತಿಗೆ ವಿನಯದಲಿ ||೩||
ಬಳಿತವನು ಹೊಕ್ಕಿರದು ಕೌರವ | ರೊಳಗೆ ಹಗೆಯಾಗಿಹನು ಕೀಚಕ | ಬಲ ವಿರಾಟಂಗವನದೆಸೆಯಿಂ
ಭಯವಿಹೀನವದು || ಮುಳಿದು ಹೇಳಿಕೆಯಾದರವಿಸುತ | ಕಲಿತ್ರಿಗರ್ತಾದಿಗಳೆನಿಪಮಂ | ಡಳಿಕರನು
ಕೈಕೊಳ್ಳದಾಳುವೆರವರು ಪಶ್ಚಿಮವ ||೪|| ನೃಪತಿ ನಿಶ್ಚೈಸಿದನು ಮತ್ಸ್ಯ | ಧಿಪನ ನಗರಿಯೊಳಲ್ಲಿ
ಸ್ವೈರಿಸಿ | ಕೃಪಣತನದಲಿ ನೂಕಬೇಹುದು ನುಡಿದುವತ್ಸರವ || ಗುಪಿತನೆಂತಳವಡುವುದಾಶ್ರಯ | ದೆಸದೆ
ಸೆಯನೆಂತಾನುಪಿರಿ ನಿ | ಷ್ಕೃಪೆಯೊಳೆಂತಾನೆಂಬೆನೆಂದನು ಧರ್ಮನಂದನನು ||೫|| ದೇವ ನಿಮ್ಮಯ
ಮತವೆ ಮತವೆಮ | ಗಾವವೇಷದ ವಿವರ ನಿಮಗದ | ನೀವು ಬೆಸಸುವುದೆಂದು ಭೀಮಾರ್ಜುನರು ಬಿನ್ನ
ವಿಸೆ || ನಾವು ಭೂಸುರವೇಷದಲಿ ಸಂ | ಭಾವಿತರು ಮತ್ತಲ್ಲಿ ಸನ್ಯಾ | ಸಾವಲಂಬನ ಕಂಕನೆಂಬಭಿಧಾ
ನ ತನಗೆಂದ ||೬|| ವಲಲನೆಂಬಭಿಧಾನದಲಿ ನೃಪ | ನಿಳಯವನು ಸಾರುವೆನು ತಾನೆಂ | ದುಲಿಯೆ
ಮಾರುತಿ ನುಡಿದ ವರನಾಟ್ಯವಿದವೇಷವನು || ಫಲುಗುಣನು ಹಯಗೋನಿವಾಸ | ಸ್ಥಳವಿಳಾಸಿತರೆನ
ಲು ಯಮಳರು | ಲಲನೆ ಬಿನ್ನಹಮಾಡಿದಳು ಸೈರೇಂಧ್ರಿವೇಷವನು || ತೊಳಲಿದಿರಿ ಹನ್ನೆರಡುವರು
ಷವು | ಹಳುವದಲಿ ನೊಂಪಡಗ ಪರರೊಡ | ನುಳಿಗೆಲಸಮೊಳಗಿವಿದೆಂತೈ ಸಾರ್ವಭೌಮನಿಗೆ || ಬಳಲಿ
ದಿರಿ ಹಿರಿದಾಗಿ ನಿಮ್ಮುವ | ನಳಲಿಸಿದೆನೆನ್ನಿಂದ ಪಾಪಿಗ | ಳೊಳರೆ ಭುವನದೊಳೆಂದು ಕುಂತೀಸೂನು
ಬಿಸುಸುಯ್ದ ||೮|| ಒಡಲ ಬಳಿನೆಳಲಿಂಗೆ ಗತಿ ಬೇ | ರ್ಪಡಿಸಿಹುದೆ ಸುಖದುಃಖವಿವು ಸ | ಮ್ಮಡಿಗಳಲಿ
ತನುನಾಲ್ಕರಲಿ ಜೀವಾತ್ಮ ನೀವೆಮಗೆ || ಅಡವಿಯೇ ಸಾಮ್ರಾಜ್ಯ ನಿಮ್ಮಡಿ | ಯೊಡನಿರಲು ನೀವಿಲ್ಲದಾ
ಪುರ | ಪೆಡವಿ ನಮಗಹುದೆಂದು ಬಿನ್ನವಿಸಿದರು ಭೂಪತಿಗೆ ||೯|| ತುಷ್ಟನಾದನು ನೃಪತಿಕೃತಪರಿ |
ಶಿಷ್ಟಪಾಲನು ಜಗದೊಳುತ್ಕೃ | ಷ್ಟಚರಿತನು ತೆಂಕದೆಸೆಗೆ ಸಹೋದರರುಸಹಿತ || ದುಷ್ಟಮೃಗಗಳ
ಬೇಂಟೆಯಾಡಿ ವ | ಸಿಷ್ಟಮುನಿಯಾಶ್ರಮದಸುಜನರ | ರಿಷ್ಟವನು ಪರಿಹರಿಸುತೈತಂದರು ಸರಾಗದ
ಲಿ ||೧೦|| ಬಂದು ಮತ್ಸ್ಯಪುರೋಪಕಂಠದ | ನಂದನದ ಕೆಲಕಡೆಯಲನಿಬರು | ನಿಂದು ನಾಲುಕುದೆಸೆ
ಯನೀಕ್ಷಿಸಿಕನಿಜನಿವಾಸದಲಿ || ತಂದಚರ್ಮದಲಖಿಳಕೈದುವ | ನೊಂದುಹೆಣನಾಕಾರದಲಿ ಬಿಗಿ | ದೊಂ
ದುಬನ್ನಿಯಮರದ ತುದಿಯಲಿ ಕಟ್ಟಲೇರಿದರು ||೧೧|| ತೆಗೆಯದಿರಿ ನೀವೆಂದು ತುರುಗಾ | ಹಿಗಳನಂ
ಜಿಸಿ ಧರ್ಮಸುತದೃಗು | ಯುಗವ ಮುಚ್ಚಿ ಸುರೇಂದ್ರಯಮವರುಣಾದಿಗಳಿಗೆರಗಿ || ವಿಗಡನೀಕಲಿಭೀ
ಮ ನೀಕೈ | ದುಗಳನೀತಂಗೀಯದಿರಿ ಕೈ | ಮುಗಿದು ಬೇಡಿದೆನೆಂದು ಸುರರಿಗೆ ನುಡಿದನವನೀಶ ||
ಈವುದಾಬೇಡಿದರೆ ಪಾರ್ಥಗಂ | ಗೀವುದೀಯಜ್ಞಾತವಾಸದೊ | ಳೀವಿಗಡಭೀಮಂಗೆ ಕೊಡದಿರಿಯೆನಲು
ಖತಿಗೊಂಡು || ನೀವು ಕುಂತಿಯಮಕ್ಕಳಾದಿರಿ | ನಾವು ದುರ್ಯೋಧನನವರು ತ | ಪ್ಪಾವುದಿದಕೆಂದನಿಲ

ಸುತಸೌಡೊತ್ತಿ ಗರ್ಜಿಸಿದ ||೧೩|| ಸುರನಿಕರ ಕಾದಿರಲಿ ಮೇಣೀ | ಧರಣಿ ಕೊಡೆನೆಂದಿರಲಿ ಹಸ್ತಿನ | ಪುರಿಗೆ
ಧಾಳಿಯನಿಡುವೆನಮರರ ಮೋರೆಗಳತಿವಿದು || ಉರುತರಾಸ್ತ್ರವನೊಯ್ವೆನೆಂದ | ಬ್ಬರಿಸಿ ಮಾರುತಿ
ನುಡಿಯೆ ತಮ್ಮನ | ಭರದ ಖತಿಯನು ನಿಲಿಸಿ ಸಂತೈಸಿದನು ಸಾಮದಲಿ ||೧೪|| ಅವಧಿಯೊಂದೇವ
ರುಷವಿದರೊಳ | ಗೆವಗೆ ಸೈರಣೆಯುಂಟು ನೀ ಮುನಿ | ದವಗಡಿಸಿದೊಡೆ ಬಳಿಕ ಸೈರಿಸಲರಿಯೆ ಮನ
ಮುಳಿಸು || ಅವನಿಯಲಿ ಹನ್ನೆರಡು ವರುಷವು | ನವೆದುದುಂ ನಿಷ್ಫಲವಲಾ ಕೌ | ರವನ ಗೆಲ್ಲಾಗಹುದು
ನೀನೇ ಬಲ್ಲೆ ಹೋಗೆಂದ ||೧೫|| ಹದುಳವಿಟ್ಟನು ಭೀಮನನು ನಿ | ರ್ಮದನು ಮತ್ಸ್ಯನ ಪುರಿಗೆ ಯತಿ
ವೇ | ಷದಲಿ ಬಂದನು ಹೊನ್ನ ಸಾರಿಯ ಚೀಲಕಕ್ಷದಲಿ || ಇದಿರೊಳಾನತರಾಯ್ತು ಕಂಡವ | ರುದಿತ
ತೇಜಃಪುಂಜದಲಿ ಸೊಂ | ಪೊದವಿ ಬರಲು ವಿರಾಟ ಕಾಣಿಸಿಕೊಂಡನುಚಿತದಲಿ ||೧೬|| ಇತ್ತ ವಿಜ
ಯಂಗೈದಿ ಹಿರಿಯರು | ದತ್ತಣಿಂದೈ-ತಂದಿರ್ದೆಯು | ತ್ಯುತ್ತಮದ ವೇಷದ ಮಹಾತ್ಮರ ಕಂಡು ಬ
ದುಕಿದವು || ಚಿತ್ತೈಸು ಭೂಪಾಲ ಪಾಂಡವ | ರತ್ತ ವನವಾಸಕ್ಕೆ ನಡೆಯಲು | ಇತ್ತ ಬಂದೆವು ಮು
ನ್ನಿನೋಲಗವಂತುಸಿತಾಗಿ || ಕೆಟ್ಟುದಿಂದ್ರಪ್ರಸ್ಥ ಪಾಂಡವ | ರುಟ್ಟು ಹೋದರು ನಾರಸೀರೆಯ | ನ
ಟ್ಟಡವಿ ಮನೆಯಾಯ್ತು ರಾಜಾನ್ವಯದ ರಾಯರಿಗೆ || ಬಿಟ್ಟರೆಮ್ಮನು ಜಠರಭರಣಕೆ | ನೆಟ್ಟನಾಶ್ರ
ಯವಿಲ್ಲದಿರೆ ಕಂ | ಗೆಟ್ಟು ಬಂದೆವು ಕಂಕನೆಂಬಭಿಧಾನ ತನಗೆಂದ ||೧೮|| ಓಲಗಕೆ ಬಂದಖಿಳರಾಯರ |
ಮೌಳಿಮೌಕ್ತಿಕಮಣಿಮಯೂಖನಿ | ವಾಳಿಯಲಿ ನೆರೆ ಮೆರೆವುದಾತನ ಪಾದಪದ್ಮಯುಗ || ಕಾಲವಾ
ವನನಾವಪಲಯಲಿ | ಕೀಳುಮಾಡದು ಧರ್ಮಪುತ್ರನ | ನಾಳುಗೊಂಡನು ಮತ್ಸ್ಯನಲೆ ಜನಮೇಜಯ
ಕ್ಷಿತಿಪಾ ||೧೯|| ಆದುದೈ ನಿರ್ವಾಹ ಕಂಕಂ | ಗಾದುದಾ ಮತ್ಸ್ಯೇಶನಿಂದ ವಿ | ವಾದವಿಲ್ಲದೆ ಸೇವೆ ನಿಜ
ವಾದಂತೆ ಇರುತಿರಲು || ಹೋದವಿತ್ತಲು ಕೆಲವುದಿನ ತನ | ಗಾದಸಾಹಾಯ್ಯದಲಿ ಬಹುಬಲ | ಭೇದಿ ಮಾ
ರುತಿ ಬಂದು ಕಂಡನು ಮತ್ಸ್ಯಭೂಪತಿಯ ||೨೦|| ಏನುಪರಿಣತೆ ನಿನಗೆ ಬಾಣಸಿ | ಯಾನು ಭೀಮನ
ಮನೆಯವನು ಮ | ತ್ತೇನು ಭುಜಬಲವಲವೆನಗ್ಗದಮಲ್ಲವಿದ್ಯೆಯಲಿ || ನೀನಧಿಕನೆಂದಾಸಮೀರನ |
ಸೂನುವನು ಮನ್ನಿಸಿದನಿತ್ತಲು | ಮಾನಸಿಧಿ ಮರುದಿವಸ ಹೊಕ್ಕನು ಪಾರ್ಥನಾಹೊಳಲ || ಸುರಪ
ನರಸಿಯ ಶಾಪದಲಿ ಸಿತ | ತುರಗನರೆವೆಣ್ಣಾಗಿ ಮತ್ಸ್ಯೇ | ಶ್ವರನ ಮಗಳಿಗೆ ನಾಟ್ಯವಿದ್ಯಾಭ್ಯಾಸಸಂಗ
ದಲಿ || ಇರಲು ಯಮಳರು ತುರಗಗೋವ್ರಜ | ಭರಣರಾದರು ಬಳಿಕ ಪಾಂಡವ | ರರಸಿಸಾಂದಳೊಲವಿ
ನಲಿ ವೈರಾಟಪಟ್ಟಣವ ||೨೨|| ತರಣಿಗಂಜಿದೊಡಿಂದು ತಲೆಗಾ | ಯ್ದಿರಿಸಿದನೊ ಮರೆಯಾಗಿ ತಿಮಿ
ರದ | ಹೊರಳಿಗಳನನೆ ಮುಡಿಗ ಮೋಹಿದವೇಣಿ ವಲ್ಲರಿಯಾ || ಹಿರಿದು ಸೈರಿಸಲಾರೆನೆಂದೊಡ | ನಿರಿ
ಸಿದನೊ ಕೈರವವನನಲಂ | ದರರೆಕಂಗಳಧಾಳವೊಪ್ಪಿರ ಬಂದಳಬುಜಮುಖಿ ||೨೩|| ಮೊಲೆಯ ಮೇಲು
ಮು ಜಾರಿ ಜಾರದ | ಲಲಿಮನರು ಕಂಗಳನ ಮಿಂಚಿನ | ಹಿಳುಕನೆಡನಡೆಗಟ್ಟು ನಿಂದರು ಚಿತ್ತವಿಹ್ವಲರು
ತಳುಪ್ಪಸರು ತಲೆದೂಗಿ ತೋರಿದು | ದಲಗು ಮರುಮೊನೆಯೆನುತ ವಿಟರಳ | ವಳಿಯೆ ನಡೆತರುತಿ
ರ್ದಳಂಗನ ರಾಜಪಥಿಯಲಿ ||೨೪|| ಎಲೆಲೆ ಮದನನಗಜವು ತೊತ್ತಳ | ದುಳಿದುದೋ ಕಾಮುಕರನೆನೆ
ಗಾ | ವಳಿಯೊಳಗೆ ಗಾಢಾಯ್ತು ಗಜಪಿಕೆ ವಿಟವಿದೂಷಕರ || ಅಳುಕಿದರು ಮನುಮತನಗರುಡಿಯ |
ಬಲುಮಗಾರರು ಬಂದೆಗ್ಗದ | ನಳಿನಮುಖಿ ಬಹುಜನದ ಮನಕಚ್ಚರಿಯನೊದವಿಸುತ ||೨೫|| ಜನ

ದ ಜಾಣಕ್ಕಾಡಲಾಮೋ । ಹನವುಹಾಂಬುಧಿಯೊಳಗೆ ನೃಪನಂ । ಗನೆಯ ಭವನಕೆ ಬರಲು ಬೆರಗಾಯ್ತಖಿಳನಾರಿಯರು ॥ ಏನಿತೆಮಾನಿಸೆಯಲ್ಲ ಮನುಜರಿ । ಗನಿತುರೂಪೆಲ್ಲಿಯದು ವಿಸ್ಮಯ । ವೆನುತ ಮನದೊಳಗಳುಕಿದರು ಮತ್ಸ್ಯೇಶನರಸಿಯರು ॥೨೬॥ ಬರವ ಕಂಡು ಸುಧೇಷ್ಣೆ ಮನದಲಿ । ಹರುಷ ಮಿಗೆ ಹೊಂಗಿದಳು ಕರೆಕರೆ । ತರುಣಿಯಾರೆಂದಟ್ಟಿದಳು ಕೆಳದಿಯರನನಿಬರನು ॥ ಸರಸಿಜಾಯತಗಂಧವನು ಮೋ । ಹರಿಸಿ ಮುಂಚುವಪರಿಮಳವನಂ । ದರಸಿ ಬೀರುತ ಬಂದು ಹೊಕ್ಕಳು ರಾಜಮಂದಿರವ ॥೨೭॥ ಕೆಳದಿಯರು ಕಾಣಿಸಿದರರಸನ । ಲಲನೆಯನು ಪರಿಯಂಕಪೀಠದ । ಕೆಲಕೆ ಕರೆದಳು ಕಮಲವದನೆಯನುಚಿತವಚನದಲಿ ॥ ನಳಿನಮುಖಿ ನೀನಾರು ನಿನಗಾ । ರೊಳರು ರಮಣರು ಮಾಸಿಕೊಂಡಿಹ । ಮಲಿನ ವೃತ್ತಿಯಿದೇಕೆನುತ ಬೆಸಗೊಂಡಳಂಗನೆಯ ॥೨೮॥ ಅತುಳ ಬಲಗಂಧರ್ವರೈವರು । ಪತಿಗಳೆನಗುಂಟೆನ್ನ ಚಿತ್ತಕೆ । ಖತಿಯ ಮಾಡಿದರೊಂದುವರುಷವು ಬಿಡುವೆನವರುಗಳ ॥ ಸತತವಾಕುಂತೀಕುಮಾರರ । ಸತಿಯುರೋಲೈಸಿದ್ದೆ ಬಳಿಕವ । ರತಿಗಹನವನನಿಷ್ಟರಾದರು ತನಗೆ ಬರವಾಯ್ತು ॥ ಏನಮಾಡಲುಬಲ್ಲೆ ಯೆಂದೊಡೆ । ಮಾನಿನಿಯ ಸಿರಿಮುಡಿಯ ಕಟ್ಟುವ । ಸೂನಮುಡಿಸುವ ವರಕಟಾಕ್ಷಕೆ ಕಾಡಿಗೆಯನಿಡುವ ॥ ಏನ ಹೇಳಿದ ಮಾತಬಲ್ಲೆನು । ಸಾನುರಾಗದ್ದೊಳ್ಳೆಂದೆನಲು ವರ । ಮಾನಿನಿಯು ನಸುನಗುತ ನುಡಿಸಿದಳೆಂದುವಿನಯದಲಿ ॥೩೦॥ ಎನಲು ಮೆಚ್ಚಿದಳಾವಿರಾಟನ । ವನಿತೆ, ವೀರರ ವಧುವನಾಸಘ । ಜನದೊಳಗ ನೇಮಿಸಿದಳನಿಬರಿಗಾಯ್ತು ನಿರ್ವಾಹ ॥ ಮನದ ಢಗೆಯಡಗಿದವು ಮತ್ಸ್ಯೇ । ಶನಪುರಾಂತರದೊಳಗೆ ಮೈಮರ । ಸನುಪಮಿತಭುಜಸತ್ವರಿದ್ದರು ಭೂಪ ಕೇಳೆಂದ ॥೩೧॥ ಆಸುಧೇಷ್ಣಾದೇವಿಯರ ನಿಡು । ಕೇಶವನು ಹಿಕ್ಕುವಳು ಮುದದಲಿ । ವಾಸು ಮಲ್ಲಿಗೆಯರಳದೆಖ್ಖಾಳವನು ಮುಡಿಸುವಳು ॥ ಆಸತಿಯು ಮನವೊಲಿದು ನಡೆವಳು । ಲೇಸುಲೇಸೆಂದೆನಿಸಿ ಬಾಳುವ । ಬಾಸೆಯನು ಸಲಿಸುತ್ತಲಿರ್ದಳು ಪತಿಗಳಾಜ್ಞೆಯಲಿ ॥೩೨॥ ಯಮನ ಮಗ ಸನ್ಯಾಸಿವೇಷದಿ । ಪವನಸುತ ಬಾಣಸಿನ ಮನೆಯಲಿ । ಟಪಜರಾಯನ ತನಯನಿರ್ದ ಶಿಖಂಡಿವೇಷದಲಿ ॥ ಜವಳಿಮಕ್ಕಳು ತುರಗಗೋವ್ರಜ । ನಿವಹರಾದರು ಕಮಲಮುಖಿ ಕಾ । ಲವನು ಕಳೆದಳು ರಾಯನೊಲುಮೆಯ ಕೆಳದಿಯರಕೂಡೆ ॥೩೩॥

ಅಂತು ಸಂಧಿ ೧ಕ್ಕೆ ಪದ ೩೩ಕ್ಕಂ ಮಂಗಳಮಸ್ತು.

॥ಸೂಚನೆ॥ ಅರಸು ಕುರು: [illegible] ಳಗವ । ಕರಸಿ ಕಳುಹಲು ವಲ್ಲಲ ಕೊಂದನು ಮತ್ಸ [illegible] ಯಧರಿತ್ರೀ । ಪಾಲ ಕುಂತೀತನುಜರ್ಬವರ । ನಾಳುಗ [illegible] ಕಾಲವನು ಕಳೆವುತ್ತಲಿರ ದು । ತ್ರೈಲಕುರುಪತಿ ಪಾಂಡ [illegible] ನು ಮನದೊಳಗೆ ॥೧॥ ಆದುದವಪವಪಂಭ್ರಮಣಾವಿ । ನ್ನಾ [illegible] ಳವರೀಗ ಹದಿಮೂರೆ ಬುದನವವರಲಾ ॥ ಆಡುಂಬಾತ್ಮರ [illegible] ನಾಥಕವದೇನೆಂದು [illegible] ಲಾದದಲಿ ಮಲ್ಲರನು

ಬರಹೇಳೆಂದು ನೇಮಿಸಿದ ॥೨॥ ಕರೆಯಲೊಡನೈತಂದರಾಮ । ಲ್ಲರು ಮಹೋತ್ಸವದಿಂದ ಸರ್ವಾ ।
ಭರಣಭೂಷಿತಗಂಧಮಾಲ್ಯಾಂಬರವಿಲೇಪನರು ॥ ಕರಿಗಿರಿಗಳವರಲ್ಲಿ ಜನಿಸಿತೊ । ಹರಯೊಸಲ್ಲು ಜೀ
ಮೂತಮುಖ್ಯರು । ಕುರುಪತಿಯು ಬಳಿಗೈದು ಬೆಸನೇನೆಂದರವನಿಪನ ॥೩॥ ಮಲ್ಲಕೇಳ್ ಜೀಮೂತಧರಣಿ
ಯೊ । ಳೆಲ್ಲಿ ಕುಂತೀತನುಜರಿಪ್ಪರೊ । ಒಲ್ಲವಿಕೆಯಲಿ ದೇಶಗಳ ತಿರುಗಾಡಿಸೂಹೆಯಲಿ ॥ ನಿಲ್ಲದಿಲ್ಲಿಗೆ
ತಿಳಿದುಕಳುಹಿಸು । ಎಲ್ಲವೇತಕೆ ಹೋಗೆನಲು ಕರ । ಪಲ್ಲವವ ಮುಗಿದುತ್ತ ಬಿನ್ನೈಸಿದನು ಜೀಮೂ
ತ ॥೪॥ ಜೀಯ ಪಾಂಡವರಿದ್ದ ಠಾವನು । ಬಾಯಮಾತಲ್ಲರಸ । ಬೇಕು ಮ । ಹಾಯತದ ಕುಶಲದಲಿ ಬ
ಹುವಿಧದಿಂದಲೆಂದೆನಲು ॥ ರಾಯನೆಂದನು ಜಟ್ಟಿಗರ ಕೂ । ಡಾಯತದಲೈದುವದು ಮಲ್ಲರ । ದಾಯದ
ಲಿ ವ್ಯವಹರಿಸಿ ತಿಳಿವುದು ಮಂತ್ರ ನಿನಗೆಂದ ॥೫॥ ನಿನ್ನ ಸಾಹಸವರಿವೆನಂತಿರ । ಲಿನ್ನು ಪರಿಕಿಸಬೇ
ಕು ಮಲ್ಲರ । ಉನ್ನತದ ಸಾಹಸವ ಶೌರ್ಯವ ನಿನ್ನ ಮುಂದೆನಲು ॥ ನಿನ್ನಿಯಿಂದವೆ ನೋಡೆನುತ ಸಂ । ಪ
ನ್ನ ಶೌರ್ಯನು ವಿವರಿಸಿದ ನ । ತ್ಯುನ್ನತದ ಬಂಧುಗಳ ಭುಜಬಲದಿರವನರಸಂಗೆ ॥೬॥ ಬಲ್ಲಿಹರುಕು
ಶಲದಲಿ ಕಾಳಗ । ವಲ್ಲಿ ನಿಜವಿಕ್ರಮರು ಮೇಗರೆ । ಯಲ್ಲ ಧರ್ಮಜ್ಞರು ಮಹಾಹವವೀರರವರೆನಲು ॥
ಎಲ್ಲವೆದ್ದುದು ಜೀಯ ಕುರುಕುಲ । ಮಲ್ಲನೋಡೆನುತುಲಿದು ಚೌಪಟ । ಮಲ್ಲನಾಜೀಮೂತನಿರ್ಸ್ಕೈಸಿದ ಪ
ರಾಕ್ರಮವ ॥೭॥ ಪುಂಡರೀಕನ ಪಿಂಗಳಾಕ್ಷನ । ಚಂಡಬಲಜಗ ಜಟ್ಟಿರಣದು । ದ್ದಂಡಕೇಸರಿ ವೀರ
ಬಾಹು ಮಹಾಮದೋನ್ನತದ ॥ ಹಿಂಡುಗಲ ಕನುವುಗ್ರಕೇಶಿಪ್ರ । ಚಂಡಭೈರವರಾಹು ಕಲಿಭೀ । ರುಂ
ಡನೆಂಬತಿಬಲರ ತೋರಿದನಾನರಾಧಿಪಗೆ ॥ ೮ ॥ ಕದನಕರ್ಕಶ । ಕಾಲಭೈರವ । ಮಧುವನನ ನರಸಿಂಹ
ಘಾಟನ । ಸದೆಮಳ್ಳಿವನಾಗರಿಕ ಜಟ್ಟಿಗವೀರಭೇತಾಳ ॥ ಗದೆ ವಿಭಾಂಡನ ದೈತ್ಯನರಸುರ । ಚದುರಚ
ಪಳರ ಬಲವನೊಬ್ಬನೆ । ಸದೆವವರನೈನೂರ ತೋರಿದನಾನರಾಧಿಪಗೆ ॥೯॥ ಒಬ್ಬನಾಲ್ಸಾವಿರವ ಕೊಂಬ
ವ । ನೊಬ್ಬ ನಗ್ಗಜವೆರಡ ಮೇಣ್ಮ । ತ್ತೊಬ್ಬ ನೂರರಬದಿಯನೊದಗಿದ ಸಾಮ್ಯಗಾಧಿಪನಾ ॥ ಹೆ
ಬ್ಬುಲಿಯನಾರೇಳಸೀಳಿದ । ನಿಬ್ಬರುಗಳೊಂದಾಗಿ ಕೂಡಿಯೆ । ಬೊಬ್ಬುಳಿಯ ನೊಡೆವಂತೆ ಕೊಂದ
ರು ಹಲವುಮಲ್ಲರನು ॥೧೦॥ ಉಡಿದನೊಬ್ಬನೆ ಗಜದದಾಡೆಯ । ಕೆಡಹಿದನು ಕೇಸರಿಯ ಬೀಳುವ । ಸಿಡಿ
ಲವೋ । ಲಾರ್ಭಟಿಸಿ ತೂಳುವನಿವನು ಪ್ರತಿಭಟನಾ ॥ ಮಡಿದನಿವನೆಂದೆನಿಸಿ ಹೊಕ್ಕೊಡ । ನೊಡನೆ ತಿವಿ
ವನು ಜೀಯ ಗಡ ಗಡ । ಬಡೆಯಮಾತಲ್ಲೆಂದನನುಪಮಮಲ್ಲಜೀಮೂತ ॥೧೧॥ ಹೊಡೆದು ಭುಜವನು
ಹೂಂಕರಿಸಿ ಕಿಡಿ । ಯಿಡುವವಿಗಾಸೆಯ ತಿದ್ದುತೊಲವಿನ । ಲಡಿಗಡಿಗೆಯಾರ್ಭಟಿಸಿ ನಿಂದಾಮಲ್ಲಜೀ
ಮೂತ ॥ ನುಡಿ ನೃಪತಿ ಹದನೇನು ರಿಪುಗಳ । ಮಡುಹಿ ಬರಲೋ ಮೇಣು ಕೈಸೆರೆ । ವಿಡಿದು ತರಲೋ
ನಿಶ್ಚಯವನುಸುರೆಂದನಾಮಲ್ಲ ॥೧೨॥ ಈ ಪರಿಯ ಜಟ್ಟಿಗಳು ತಮ್ಮಪ್ರ । ತಾಪವನು ವಿಸ್ತರಿಸೆ ಕು
ರುಕುಲ । ದೀಪನಪ್ಪಣೆಗೊಟ್ಟು ಮಗುಳೆಂತೆಂದ ನವರೊಡನೆ ॥ ವ್ಯಾಪಿಸುವದವನಿಯಲಿ ಮಲ್ಲರ ತೋ
ಪುಜಾಳಿಯ ಮೆರೆದು ಹೊಗಳಿಸಿ । ಯಾಪುರವಲೇ ತನ್ನ ಬಿರುದಾವಳಿಪರಾಕ್ರಮವ ॥೧೩॥ ಸುದ್ದಿಯಿ
ಲ್ಲದೆ ಹೋದಪಾಂಡವ । ರಿದ್ದರಾದೊಡೆ ಬಿಡುಗಲರದ । ಯುದ್ಧ ಕೇಳದೆ ತಿರುಗಿಸುವುದೊಬ್ಬನನು
ಕರಿಪುರಿಗೆ ॥ ಉದ್ಧುರುಟತನ ಬೇಡ ಮಲ್ಲರ । ಗೆದ್ದು ನೀವಾರಾಜಕಾರ್ಯಕೆ । ಬುದ್ಧಿವಂತಿಕೆ ನಮ್ಮೊ
ಳುಂಟೆಂದನು ಸುಯೋಧನನು ॥೧೪॥ ತರಿಸಿದನು ಚೊಂದೊಡವ ರತ್ನಾ । ಭರಣಮೊಪ್ಪುವತೋಳ

ಭಾಪುರಿ । ವರಮಣಿಗಳಿಂದೆಸೆವಪಿರುದಿನ ಕಡೆಯುಸರಪಳಿಯು ॥ ಕೊರಳ ಹಾರದ ವಜ್ರಮಾಣಿಕ । ದು
ರುಗಿದತ್ತಿದಚೀನಚೀನಾಂ । ಬರವನಿತ್ತುಪಚರಿಸಿದನು ಕಲಿಮಲ್ಲಸಂತತಿಯ ॥೧೫॥ ಚಂದನದ ಕುಂ
ಕುಮದ ಕತ್ತುರ । ಯಿಂದಲನುಲೇಪನಜವಾಜಿಸು । ಗಂಧಕಪ್ಪುರಪೀಳಯುವ ಸಾರಾಮ್ರಫಲಗಳನು ॥
ಅಂದಮಂಗಲ್ಲವನು ಕೊಡಿಸಲು । ಯಿಂದು ದಿನಪರು ಪಡಿಯಿಯೆನಲಾ । ನಂದೆಬಂ ನಿಂದಿದರು ನೇ
ಮವನಿತ್ತು ಹೋಗೆಂದ ॥೧೬॥ ಹೊಡಿಸಿದರು ಭೇರಿಗಳತಂಬಟ ।ಎಡಬಲದ ಡೌಡೆಗಳ ವಿಗೆ ಬೊ। ಬ್ಬಿಡು
ವನಿಸ್ಸಾಳದ ಮಹಾರವದಾಯುಗಡಿಬಿಡಿಯಾ ॥ ಘುಡುಘುಡುಸ್ವರವಸೆಯಲಂಬರ । ವೊಡೆದುದೋಯೆಂ
ಬಂತೆ ನಗರವ । ನೊಡನೆ ಹೊರವಂಟರು ನೃಪಾಲನ ಮಲ್ಲಸಂದೋಹ ॥೧೭॥ ಸುರನದಿಯನುತ್ತರಿಸಿ
ನಾನಾ । ಪರಿಯ ದೇಶವ ಹೊಕ್ಕು ಗೋದಾ । ವರಿಯ ತೀರದಪಟ್ಟಣವ ಶೋಧಿಸುತಪಯಣದಲಿ॥ ಬ
ರುತಲಂತಾತುಂಗಭದ್ರಾ । ವರನದಿಯ ರಾಜ್ಯಾಂತದೊಳು ಪಿಂಗೆ । ಪರಿಕಿಸುತ ಜೀಮೂತ ನಡೆದನು ಮ
ಲ್ಲಜನವೆರಸು ॥೧೮॥ ಬಂದನೀಪರಿ ಹಲವುಯೋಜನ । ದಿಂದಲೊಂದಿನರಾತ್ರಿಯಲಿ ಮುದ । ದಿಂದ ಮ
ಲಗಿರಲೊಬ್ಬಮಲ್ಲನು ಬೆದರಿ ಕನಸಿನಲಿ ॥ ಬಂದುದುದಕೋಮೃತ್ಯು ಹಾಹಾ । ಯೆಂದು ನಿದ್ರೆಯನುಳಿ
ದು ಹುಂಗೂಳ । ಯಿಂದು ಮಲ್ಲರು ಗಜಬಜಿಸೆ ಜೀಮೂತನಿಂತೆಂದ ॥೧೯॥ ಏನಿದೇನಾಶ್ಚರ್ಯಕರೆಯು
ವ । ನೇನ ಕಂಡನು ಕನಸಿನಲಿ ತಾ । ನೇನನೆಂಬನು ರಹವನೆನುತಡಿಗಡಿಗೆ ಬೆರಗಾಗಿ ॥ ಮೌನದಲಿ
ಮುಳುಗಿದರು ತಂದರು । ಹೀನಹೃದಯನನೆಂದನವನು ಮ । ನೋನುರಾಗವನುಳಿದು ಕನಸಿನ ಭಯವು
ದಿಟವೆಂದು ॥೨೦॥ ಕಾಲವಲ್ಲದ ಕಾಲಮೃತ್ಯುವಿ । ನೇಳಿಗೆಯನೇನೆಂಬೆ ಮಲ್ಲರ।ಪಾಳೆಯವ ಹೊಕ್ಕೊಡನೆ
॥ಪದ॥ ಕೇಳು ಜನಮೇಜಯ ಸುಯೋಧನ । ನಾಳು ಮುತ್ತಿತು ತುರುಗಳನು ಮೇ । ಲಾಳು ಕವಿದುದು ಭೀಷ್ಮಕರ್ಣದ್ರೋಣಮೊದಲಾಗಿ ॥ ಕೋಲಸೂಟಿಯ ಸುವಳೆಗೆ ಗೋ । ಪಾಲ ಪಡೆ ಮುಗ್ಗಿದುದು ಗೋವರ । ಸಾಲ ಹೊಯ್ದರು ಕರ್ಣದುಶ್ಶಾಸನಪಯದ್ರಥರು ॥೧॥ ರಾಯಚಮೂಣಿಯ ಚಾತುರಂಗವ । ನಾಯಕರು ಮೇಳವಿಸಿ ಸಮರೋ । ಪಾಯದಲಿ ಹಿಂಟಕ್ಕಿ ಕವಿದರು ಕೋಡ ಕೈಯವರು॥ ನಾಯಿಲಲಸಪ ಗೋವರನು ಕೈ । ಗಾಯದೆನುತವೆ ಸರೆಯ ಕೊಂಡರು । ಮಾಯವಾಯಿತು ಹರಿಬಕಾರರ ಸೇನೆ ರಣದೊಳಗೆ ॥೨॥ ಮೇಲುದಳಕಿದಿರಾಗಿ ಬರೆ ಹಂ । ಗಾಳಗದೊಳೊಡೆಮುರಿದು ಗೋವರು। ಧೂಳಿಗೋಟೆಯಕೊಂಡರಮರರರಾಜಧಾನಿಗಳ ॥ ಸಾಲರಿದು ಕೆಟ್ಟೋಡಿದರು ಗೋ । ಪಾಲನೊಬ್ಬನ ಹಿಡಿದು ಮೂಗಿನ । ಮೇಲೆ ಸುಣ್ಣವ ಬರೆದು ಬಿಟ್ಟರು ಹಗೆಯ ಪಟ್ಟಣಕೆ ॥೩॥ಗರುವಗೋವರು ಹುಯ್ಯಲಿಗೆ ಹರಿ । ಹಂದು ಕೆಡೆದರು ರಾಯಮೋಹರ । ತೆರಳಿ ತುರುಗಳ ಹಿಡಿದು ಹಿಂದಿಕ್ಕಿದರು ಕಾಳಗಕೆ ॥ ಬಿರುದರನು ಬರಹೇಳು ಹೋಗೆನೆ । ಕರದ ಬಿಲ್ಲನು ಬಿಸುಟು ಬದುಕಿದ । ತಿರವ ತಡಹುತ ಗೋಪನೊಬ್ಬನು ಪುರಕೆ ಹರಿತಂದ ॥೪॥ ಗಣನೆಯಿಲ್ಲದು ಮತ್ತೆ ಮೇಲಂ । ಕಣದ ಭಾರಣೆ ನೂಕಿತೆಲವೋ । ರಣದವಾರ್ತೆಯದೇನೆನುತ ಜನವೆಲ್ಲ ಗಜಬಜಿಸೆ ॥ ರಣವು ಕಿರಿದಲ್ಲೆನುತ ಧಗೆ ಸಂ । ದಣಿಸಲವನೈತಂದು ಮೇಳದ । ಗಣಿಕೆಯರ ಮಧ್ಯದಲಿ ಮೆರೆದಿರೆ ಕಂಡನುತ್ತರನ ॥೫॥ ಬೆಗಡು ಮುಸುಕಿದಮುಖದ ಭೀತಿಯ । ಧಗೆಯಹೊಯ್ಲಿನ ಹೃದಯತುದಿನಾ । ಲಗೆಯ ತೊದಳಿನ ನುಡಿಯ ಬೆರಗಿನ ಬರೆತತಾಳಿಗೆಯ ॥

ಅಗಿವಹುಯ್ಯಲುಗಾರರೆ ಒಹಳೋ | ಲಗಕೆ ಬಂದನು ನೃಪವಿರಾಟನ | ಮಗನ ಕಾಲಿಂಗೆರಗಿದನು ದೂ ಬದನು ಕಳಕಳವ ||೬|| ಏಳು ಮನ್ನೆಯಗಂಡ ಸಾಗು ನೃ | ಪಾಲ ಕೌರವರಾಯ ತುರುಗಳ | ಕೋಳ ಹಿಡಿದನು ಸೇನೆ ಬಂದುದು ಧರಣಿಯಗಲದಲಿ || ಧಾಳಿ ಬರುತಿದೆ ಕರೆಸಿಕೋ ನಿ | ನ್ನಾಳು ಕುದುರೆಯ ರಾಣಿವಾಸದ | ಗೂಳೆಯವ ತೆಗೆಸೆಂದು ನುಡಿದನು ಬಿನ್ನಹದ ಬಿರುಬ ||೭|| ಏನೆಲವೊ ತುದಿಮೂಗಿನಲಿ ಬಿಳು | ಪೇನು ಧಗೆಹೊಯ್ದೇಕೆ ಬಂದೆಯ | ದೇನು ನಿನ್ನನರಣವನೆಯ್ದನು ಗೆಲಿದುದೇನಾಯ್ತು || ಏ ನುಭಯ ಬೇಡೆನ್ನ ಕಲಹನಿ | ಧಾನವಾರ್ತೆಯನೆನಲು ಕೌರವ | ಸೇನೆ ಬಂದುದು ತುರುವ ಹಿಡಿದರು ಬಡಗದಿಕ್ಕಿನಲಿ ||೮|| ರಾಯ ತ್ರಾಸ್ಯತಂದನಾತನ | ನಾಯಕರು ಗುರುಸುತನು ಗುರುಗಾಂ | ಗೇಯ ಶಕುನಿ ವಿಕರ್ಣ ಕರ್ಣ ಜಯದ್ರಥಾದಿಗಳು || ಜೀಯ ಬಿನ್ನಹ ದಳದ ತೆರಳಿಕೆ | ತಾಯಿಮಳಲಂಬುಧಿಗೆ ಮೋಹರ | ದಾಯತವ ನಾನೆತ್ತ ಬಲ್ಲೆನು ಹೊಕ್ಕು ಹೊಗಳುವೊಡೆ ||೯|| ಎತ್ತ ದುವ್ವಾಳಿಸುವೊಡಾಲಿಗ | ಳತ್ತಲಾನೆಯ ಘಟ್ಟ ಕಾಲಾ | ಳೊತ್ತರದ ರಥವಾಜಿ ರೂಢಿಯರಾಯರಾವುತರು || ಸುತ್ತ ಬಳಸಿ ಹುದೆತ್ತ ಮನ ಪು | ವತ್ತ ಮೋಹರವಲ್ಲದನ್ಯವ | ಮತ್ತೆ ಕಾಣೆನು ಜೀಯ ಹದನಿದು ವೈರವಾಹಿನಿಯ ||೧೦|| ಒಟ್ಟಿದರೊ ಪಡಿನಲಸನವನಿಯ | ದಟ್ಟಿಯೋ ಮೋಣೆನಲು ಝಲ್ಲರಿ | ಯೊಡ್ಡು ತಳಿತುದು ಚಮರಸೀಗುರಿಗಳ ಪತಾಕೆಯಲಿ || ಅಡ್ಡಹಾಯ್ದಿನಕಿರಣಪವನನ | ಖಡ್ಡತನ ನಗೆಯಾಯ್ತು ಕೌರವ | ನೊಡ್ಡನಭಿವರ್ಣಿಸುವೊಡರಿಯೆನು ಜೀಯ ಕೇಳೆಂದ ||೧೧|| ಬಳಿಗೆ ನೀ ಕಾದುವೊಡೆ ದುರ್ಗವ | ಬಲಿಸು ಬವರವ ಹಿಂದುಗಳೆಯದೆ | ನಿಲುವ ಮನ ನಿನಗಾಗಲುಂಟೇ ನಡೆಯಬೇಕೆನಲು || ಕೆಲಬಲನ ನೋಡಿದನು ಮೀಸೆಯ | ನಲುಗಿದನು ತನ್ನಿದಿರ ಮೇಳದ | ಲಲನೆಯರ ಮೊಗನೋಡುತುತ್ತರ ಬಿರುದ ಕೆದರಿದನು ||೧೨|| ನೂಕು ಕುನ್ನಿಯ ಸಾಹಸವದ ಭೀ | ತಾಕುಳನು ತಾನೀಗ ಹೆಂಡಿರ | ಸಾಕಿ ಬದುಕುವಲೌಲ್ಯತೆಯಲೊಟ್ಟೈಸಿ ಬಂದನಗೆ || ಕಾಕಬಳಸುವನಿವನು ತಾನು | ದ್ರೇಕಿಸಿಯೆ ಸಮರದಲಿ ನಿಲಲು ಪಿ | ನಾಕಧರನಿಗೆ ನೂಕದೆಂದನು ಸತಿಯರಿದಿರಿನಲಿ ||೧೩|| ಎನಿತು ಬಲ ಘನವಾದೊಡೇನದು | ನಿನಗೆ ಗಹನವೆ ಜೀಯ ಜಗದಲಿ | ದಿನಪನಿದಿರಲಿ ಧಿಟ್ಟತನವೇ ತಮದ ಗಾವಳಿಗೆ || ಬಿನುಗುರಾಯರ ಬಿಂಕ ಗೋವರ | ಮೊನೆಗೆ ಮರದೊಡೆ ಸಾಕು ನಿಂದಿರು | ಜನಪ ತೋರಿಸು ಕೈಗುಣವ ಕೌರವನ ಥಟ್ಟಿನಲಿ ||೧೪|| ಎಂದೊಡುಬ್ಬರಿಸಿದನು ತಾ ಕಲಿ | ಯೆಂದು ಬಗೆದನು ಮೀಸೆಯನು ಬೆರ | ಳಿಂದ ತಿರುಹುತ ಮುಗುಳುನಗೆ ಹರುಷದಲಿ ಮೈಮರೆದ || ಸಂದಣಿಸಿ ರೋಮಾಂಚ ಕೆಲಬಲ | ದಿಂದುಮುಖಿಯರ ನೋಡಿದನು ನಲ | ವಿಂದ ನುಡಿದನು ತನ್ನ ಪೌರುಷತನದ ಪರಿಣತೆಯ ||೧೫|| ಅಹುದಹುದು ತಪ್ಪೇನು ಜೂಜಿನ | ಕುಹಕದಲಿ ಪಾಂಡವರ ಸೋಲಿಸಿ | ಮಹಿಯ ಕೊಂಡಂತೆನ್ನ ಕೆಣಕಿದನೇ ಸುಯೋಧನನು || ಸಹಸದಿಂದ ವೆತ್ತುರುವ ಮರಳಿಚಿ | ತಹೆನು ಬಳಿಕಾ ಕೌರವನ ನಿ | ರ್ವಹಿಸಲೀವೆನೆ ಸೂರೆಗೊಂಬೆನು ಹಸ್ತಿನಾಪುರವ ||೧೬|| ಹಿಡಿದು ರಾಜ್ಯವ ಕೊಂಡು ಹೆಂಗುಸ | ಬಡಿದು ಪಾಂಡವರಾಯರನು ಹೊರ | ವಡಿಸಿ ಕೊಬ್ಬಿದ ಭುಜಬಲವನೆನ್ನೊಡನೆ ತೋರಿದನೆ || ಬಡಯುಧಿಷ್ಠಿರನೆಂದು ಬಗೆದನೆ | ಕಡುಗಿದೊಡೆ ಕೌರವನ ಕೀರ್ತಿಯ | ತೊಡೆವೆನರಿಯನಲಾ ಎನುತ ಸುಕುಮಾರ ಖತಿಗೊಂಡ ||೧೭|| ತನಗೆ ಬಡಪಾಂಡವರ ತೆವಳದ | ಮನದ ಗರ್ವದ ಕೊಬ್ಬು ಕಾಲನ | ಮನೆಯನಾಳಿಪುದಲ್ಲದಿದ್ದೊಡೆ ತನ್ನ ವೈ

ವನು ॥ ನೆನೆದು ದುರ್ಯೋಧನನು ತಾವೆ । ದ್ದಿನಿಯನಾಳ್ವನೆ ಹಾ ಮಹಾದೇ । ವೆನುತಲುತ್ತರ ಬಿರುದ ನುಡಿದನು ಹೆಂಗಳಿದಿರಿನಲಿ ॥ ೧೮ ॥ ಜವನ ಮೀಸೆಯ ಮುರಿದನೋ ಭೈ । ರವನ ದಾಡೆಯನಲುಗಿದನೊ ವ್ಯ । ತ್ಯಯಿನಿನ ಮೇಲುದ ಸೆಳೆದನೋ ಕೇಸರಿಯ ಕೆಣಕಿದನೋ ॥ ಬವರವನು ತೊಡಗಿದನಲಾ ಕೌ । ರವನ ಕಟಕ ಮರುಳಾದನೆಂದಾ । ಯುವತಿಯರ ಮೊಗನೋಡುತುತ್ತರ ಬಿರುದ ಕೆದರಿದನು ॥ ಆರೊಡನೆ ಕಾದುವೆನು ಕೆಲಬರು । ಹಾರುವರು ಕೆಲರಂತಕನ ನೆರೆ । ಯೂರವರು ಕೆಲರಥಮಕುಲದಲಿ ಸಂದು ಬಂದವರು ॥ ವೀರರೆಂಬವರವರು ಮೇಲಿನ್ನಾರ ಹೆಸರುಂಟವರೊಳೆಂದು ಕು । ಮಾರ ನೆಣಗೊಬ್ಬಿನಲಿ ನುಡಿದನು ಹೆಂಗಳಿದಿರಿನಲಿ ॥೨೦॥ ಘೊಡವಿಪತಿಗಳು ಬಂದು ತುರುಗಳ । ಹಿಡಿವರೇ ಲೋಕದಲಿ ಯಥಮರ । ಬಡವನೆದ ಮನ್ನೆಯರ ಮೈಸಿರಿ ಕೌರವನೊಳಾಯ್ತು ॥ ಕಡೆಗೆ ದುರಿಯಶವುಳಿವುದಲ್ಲದೆ । ಬಿಡುವೆನೇ ಗೋಧನವನೆನ್ನೊಳು । ತೊಡಕಿ ಬದುಕುವನಾವನೆಂದನು ಖಂಡೆಯವ ಜಡಿದು ॥೨೧॥ ಖಳನ ಮುರಿವೆನು ಹಸ್ತಿನಾಪುರ । ದೊಳಗೆ ಠಾಣಾಂತರವನಿಕ್ಕುವೆ । ತೊಲಗಿಸುವೆ ಕೌರವನ ಸೇನೆಯ ಧೂಳಿಪಟಮಾಡಿ ॥ ಗೆಲವ ತಹೆನೆಂದುತ್ತರನು ಕೋ । ಮಲೆಯರಿದಿರಲಿ ಬಾಯ್ಗೆ ಬಂದುದ । ಗಳಹುತಿದ್ದನು ಬೇಕುಬೇಡೆಂಬವರ ನಾಕಾಣೆ ॥೨೨॥ ಅರಿಯನೇ ಗಾಂಗೇಯನನು ತಾ । ನರಿಯದವನೇ ದ್ರೋಣ ಕುಲದಲಿ । ಕೊರತೆಯೆನಿಸುವಕರ್ಣನೆಂಬವನೆನಗೆ ಸಮಬಲನೆ ॥ ಬರಿಯಬಯಲಾಡಂಬರದಿ ಬರ । ತುರುವ ಹಿಡಿದೊಡೆ ತನ್ನ ಹೆಂಡಿರ । ಸೆರೆಯ ತಾರದೆ ಮಾಣ್ಬೆನೆಂದನು ನಾರಿಯರ ಮುಂದೆ ॥೨೩॥ ನುಡಿದು ಫಲವೇನಿನ್ನು ಸಾರಥಿ । ಮಡಿದ ನಿನ್ನಿನ ಬವರದಲಿ ತಾ । ಮುಡುಹನಾದೆನು ಶಿವಶಿವಾ ಇಂದೆನ್ನ ಕೈಮನಕೆ ॥ ಗಡಣಿಸುವಸಾರಥಿಯನೊಬ್ಬನ । ಪಡೆದೆನಾದೊಡೆ ಕೌರವೇಂದ್ರನ । ಪಡೆಗೆ ಹಬ್ಬವ ಮಾಡುವೆನು ತೋರುವೆನು ಕೈಗುಣವ ॥೨೪॥ ಸಾರಥಿಯ ಶಿವ ಕೊಟ್ಟನಾದೊಡೆ । ಮಾಗುಬ್ಬಸವಾಗದಂತಕ । ನೂರುತುಂಬದೆ ದೊಳ್ಳು ನೂಕದೆ ರಣಪಿಶಾಚರಿಗೆ ॥ ದೋರೆಗರುಳಲಿ ದಾನವಿಯರೊಡ । ಲೇರು ಹತ್ತದೆ ಹಬ್ಬವಾಗದೆ । ಭೂರಿ ಭೇತಾಳರಿಗೆ ಹೋದುದೆ ಬರಿದೆ ರಣವೆಂದ ॥೨೫॥ ಕೇಳಿದನು ಕಲಿಪಾರ್ಥನೀತನ । ಬಾಲಭಾಷೆಗಳೆಲ್ಲವನು ಪಾಂ । ಚಾಲೆಗೆಕ್ಕಟಿ ನುಡಿದನಾವಿನ್ನಿಹುದು ಮತವಲ್ಲ ॥ ಕಾಲ ಸವೆದುದು ನಮ್ಮ ರಾಜ್ಯದ । ಮೇಲೆ ನಿಲುಕಲುಬೇಕು ಕೌರವ । ರಾಳು ನವಗೋಸುಗವೆ ಬಂದುದು ಕಾಂತೆ ಕೇಳೆಂದ ॥೨೬॥ ನರನ ಸಾರಥಿಯೆಂದು ನೀನು । ತ್ತರೆಗೆ ಸೂಚಿಸಿ ತನ್ನನೀಗಳೆ । ಕರಸೆನಲು ಕೈಕೊಂಡು ದುರುಪದಿ ಬಂದಳೊಲವಿನಲಿ ॥ ತರುಣಿ ಕೇಳರ್ಜುನನ ಸಾರಥಿ । ವರಬೃಹನ್ನಳೆ ಕಾಂಡವಾಗ್ನಿಯ । ಹೊರೆದನಿವ ತಾನೆಂದು ಸತಿಯುತ್ತರೆಗೆ ಹೇಳಿದಳು ॥೨೭॥ ಕೇಳಿ ಹರುಷಿತೆಯಾದಳುತ್ತರೆ । ಯೋಲಗಕೆ ಬಂದಣ್ಣನಂಘ್ರಿಗೆ । ಲೋಲಲೋಚನೆಯೆರಗಿ ಕೈಮುಗಿದೆಂದಳೀಹದನ ॥ ಕೇಳಿದೆನು ಸಾರಥಿಯ ನೆಲೆಯನು । ಕಾಳಗಕೆ ನಡೆಯಣ್ಣ ದೇವನ್ನ । ಪಾಲಕರ ಬಯಿಸೆಂದೊಡುತ್ತರ ನಗುತ ಬೆಸಗೊಂಡ ॥೨೮॥ ತಂಗಿ ಹೇಳಾ ತಾಯೆ ನಿನಗೀ । ಸಂಗತಿಯನಾರೆಂದರಾವನ । ನಂಗನೆಯುಳ್ಳವನೆ ಸಾರಥಿತನದ ಕೈಮೆಯುಳಿ ॥ ಮಂಗಳವಲೇ ಬಳಿಕ ರಣದೊಳ । ಭಂಗನಹೆ ನಿನ್ನಾಣೆ ತನ್ನಯ । ತುಂಗಪೌರುಷಮಾತ್ರನವನೊಳುಹಿದೆ ಹೇಳು ಹೇಳೆಂದ ॥೨೯॥ ಎಂದಳೀಸ್ತ್ರೀ ಇಂದ್ರಿಸುರಪನ । ನಂದನವ ನುಡುವಂದು ಪಾರ್ಥನ । ಮುಂದೆ ಸಾರ

ಥಿಯಾದಗಡ ನಾವರಿಯೆವೀಹದನ ॥ ಹಿಂದುಗಳೆಯದೆ ಕರೆಸು ನಮ್ಮ ಬೃ । ಹಂದಳೆಯನೆನೆ ನಗುತ
ಲೇಸಾ । ಯ್ತೆಂದು ಪರಮೋತ್ಸಾಹದಲಿ ಸ್ವರ್ಗೇಂದ್ರಗಿಂತೆಂದ॥೩೦॥ಸಾರಥಿಯ ಕೊಟ್ಟೆನ್ನನುಳುಹಿದೆ
ವಾರಿಜಾನನೆ ಲೇಸುಮಾಡಿದೆ । ಕೌರವನ ತನಿಗರುಳ ಬಗೆವೆನು ತಡವ ಮಾಡಿಸದೆ ॥ ಸಾರಿ ನೀನೇ ಹೋ
ಗಿ ಪಾರ್ಥನ । ಸಾರಥಿಯ ತಾ ಯೆನಲು ನಮ್ಮನು । ವೀರ ಬಗೆಯನು ನಿಮ್ಮತಂಗಿಯು ಕಳುಪಿ ಕರೆ
ಸುವುದು ॥೩೧॥ ತಾಯೆ ನೀನೇ ಹೋಗಿ ಸೂತನ । ತಾ ಯೆನಲು ಕೈಕೊಂಡು ಕಮಲದ । ಳಾಯತಾ
ಕ್ಷಿ ಮನೋಭವನ ಮರಿಯಾನೆಯಂದದಲಿ ॥ ರಾಯಕುವರಿ ನವಾಯಗತಿಗರು । ನಾಯಿಯಲಿ ಬರೆ ವಿ
ಟರ ಕರಣದ । ಲಾಯ ತೊಡಕಿತು ತೆಗೆದಳಂಗನೆ ಜನರ ಕಣ್ಮನವ ॥೩೨॥ಐದುಶರನೇಕೊಂದುಬಾಣವಿ
ದೈದದೇಇನ್ನುಮಮ ಕಾಮನ । ಕೈದುಗಾರತನಕ್ಕೆ ಕೋಡದೆ ಕೊಂಕದಿಪರಾರು ॥ ಬಯ್ಯುಕೊಳ್ಳನೆ
ಮುನಿ ಮನವನಡ । ಹಾಯ್ದು ಹಿಡಿಯನೆ ಹಿರಿಯರನು ವಿಧಿ । ಕೊಯ್ದುನಕಟಾ ಕೊರಳನೆಂದುದು ನ
ಗುತ ವಿಟನಿಕರ ॥೩೩॥ ಅರಳುಗಂಗಳ ಬೆಳಗುಹೊಯ್ದು । ಬ್ಬರಿಸೆ ಚಿತ್ತದ ತಿಮಿರ ಹೆಚ್ಚಿತು । ಕುರು
ಳಕಾಳಿಕೆಯಿಂದ ಮುಖ ಬಿಳುಪೇರೆ ವಿಟಜನದ ॥ ಸರಸತರಲಾವಣ್ಯರಸದಿಂ । ದುರಿ ಮಸಗೆ ಜನಹೃ
ದಯದಲಿ ಮೈ । ಪರಿಮಳದ ಪಸರದಲಿ ಪದ್ಮಿನಿ ಬಂದಳೊಲವಿನಲಿ ॥೩೪॥ ನಡೆ ನಡೆಯ ಬಂಧಿಸಿತು
ನೋಟವ । ನುಡಿಗಿಸಿತು ಕುಡಿನೋಟ ಸಖಿಯರ । ನುಡಿ ಸಮೇಳದ ಮಾತುಮುನಿಬರ ಮಾತ ಮಾಣಿಸಿ
ತು ॥ ಕೆಡಸಿತಧರದ ರಾಗ ರಾಗವ । ಬಡತನವ ಹೆಚ್ಚಿಸಿತು ನಡುಪಿನ। ಬಡತನವು ವಿಟಜನಕೆನಲು ನಡೆ
ತಂದಳಿಂದುಮುಖಿ ॥೩೫॥ ಕುರುಳ ತಿದ್ದುತ ಮೊಲೆಗೆ ಮೇಲುದ । ಸರವೃತೇಕಾವಳಿಯ ಪಲ್ಲನೆ । ತಿ
ರುಹಿಹಾಯ್ಕುತ ಬಿಡುಮುಡಿಯನೆಡಗೈಯೊಳೊಂದಿಸುತ ॥ ವರನಿಖಾರಿಯ ನಿರಿಯರಭಸದ । ಚರ
ಣದಂದುಗೆದನಿಯ ಗಮನದ । ಭರದಿ ಕಿರುಬೆಮರಿಡುತೆ ನಡೆತರುತಿರ್ದಳಿಂದುಮುಖಿ ॥೩೬॥ ಬರವ
ಕಂಡನು ಪಾರ್ಥನೇನು । ತ್ತರೆ ಕುಮಾರಿ ಕಠೋರಗತಿಯಲಿ । ಬರವು ಭಾರಿಯಕಾರಿಯವ ಸೂಚಿಸು
ವುದೆನೆ ನಗುತ ॥ ಬರವು ಬೇರಿಲ್ಲೆನ್ನಮಾತನು । ಹುರುಳುಗೆಡಿಸದೆ ಸಲಿಸುವೊಡೆ ನಿಮ । ಗರುಹಿದಪೆನೆನೆ
ಮೀರಬಲ್ಲೆನೆ ಮಗಳೆ ಹೇಳೆಂದ ॥ ಪುರಕೆ ಹಾಯ್ದರು ಹಸ್ತಿನಾಪುರ । ಪರಸುಗಳು ಹೊಲಸೊಳಗೆ ಶ
ತಸಾ । ವಿರದ ತುರುಗಳ ಹಿಡಿದರೆಳೆದರು ಗೋವಪಡೆ ಕಾದಿ ॥ ಮರಳಿಚುವೊಡೆಮ್ಮಣ್ಣದೇವನ। ಧುರಕೆ
ಸಾರಥಿಯಿಲ್ಲ ನೀವಾ । ನರನ ಸಾರಥಿಯೆಂದು ಕೇಳಿದೆವೆಂದಳಿಂದುಮುಖಿ ॥೩೭॥ ಇನ್ನು ನೀವೇ ಬ
ಲ್ಲಿರೆನೆ ನಡೆ । ನಿನ್ನಮಾತನು ಮೀರಬಲ್ಲೆನೆ । ಮುನ್ನ ಸಾರಥಿಯಹೆನು ನೋಡುವೆನೆನುತ ವಹಿಲದಲಿ॥
ಬೆನ್ನಲಬಲೆಯನೈದಲೊಸಂ । ಪನ್ನಬಲನೋಲಗಕೆ ಬರೆ ಹರು । ಷೋನ್ನತಿಯಲುತ್ತರಕುಮಾರನು
ಕರೆದು ಮನ್ನಿಸಿದ ॥೩೮॥ ಎಲೆಬೃಹನ್ನಳೆ ತೆತ್ತುದೆನಗ । ಗ್ಗಳೆಯರೊಳು ವಿಗ್ರಹವು ಸಾರಥಿ । ಯಳಿ
ದನೆನ್ನವ ನೀನು ಸಾರಥಿಯಾಗಿ ಸಮರದಲಿ ॥ ಉಳುಹಬೇಹುದು ನೀ ಸಮರ್ಥನು । ಫಲುಗುಣನ ಸಾ
ರಥಿಯಲ್ಲೆ ನೀ । ನೊಲಿದು ಮೆಚ್ಚಲು ಕಾದಿ ತೋರುವೆನಹಿತಸೇನೆಯಲಿ ॥೩೯॥ ಭರತವಿದ್ಯಾವಿಷಯ
ದಲಿ ಪರಿ । ಚರಿಯತನ ನವಗಲ್ಲದೀಸಂ । ಗರದಸಾರಥಿತನವ ಮರೆದೆವು ಹಲವುಕಾಲದಲಿ ॥ಅ.ಭಟರು
ಭೀಷ್ಮಾದಿಗಳು ನಿಲ । ಲರಿದು ಸಾರಥಿತನದ ಕ್ರಮನ । ಬರಡರಿಗೆ ದೊರಕೊಂಬುದೇ ರಣಸೂರೆಯ
ಲ್ಲೆಂದ ॥೪೦॥ ಆನಿರಲು ಭೀಷ್ಮಾದಿಗಳು ನಿನ । ಗೇನಮಾಡಲುಬಲ್ಲರಳುಕದೆ। ನೀನು ನಿಲು ಸಾಕೊಂ

ದುನಿಮಿಷಕೆ ಗೆಲುವೆನವರುಗಳ ॥ ತಾನದಾರೆಂದರಿಯೆಲಾ ಗುರು । ಸೂನುಕರ್ಣದ್ರೋಣರೆಂಬವ । ರಾನರಿಯದವರಲ್ಲ ಸಾರಥಿಯಾಗು ಸಾಕೆಂದ ॥೪೨॥ ವೀರನಹೆ ಬಳಿಕೇನು ರಾಜಕು । ಮಾರನಿರುವೊಡೆ ಹರೆಯವಲ್ಲಾ । ಸಾರಥಿತ್ವವ ಮಾಡಿ ನೋಡುವ ರಥವ ತರಸೆನಲು ॥ ವಾರುವದ ಮಂದಿರದಲಾಯಿದು । ಚಾರುತುರುಗಾವಳಿಯ ಬಿಗಿದನು । ತೇರ ಸಂವರಿಸಿದನು ರಥವೇರಿದನು ಕಲಿಪಾರ್ಥ ॥೪೩॥ ಮಂಗಳಾರತಿಯೆತ್ತಿದರು ನಿಖಿ । ಳಾಂಗನೆಯರುತ್ತರಗೆ ನಿಜಸ । ರ್ವಾಂಗಶೃಂಗಾರದಲಿ ಹೊಳೆಯುತ ಬಂದು ರಥವೇರಿ ॥ ಹೊಂಗೆಲಸಮಯಕವಚವನು ಪಾ । ರ್ಥಂಗೆ ಕೊಟ್ಟನು ಜೋಡುಸೀಸಕ । ದಂಗಿಗಳಸಳವಡಿಸಿ ರಾಜಕುಮಾರನನುವಾದ ॥೪೪॥ ನರನು ತಲೆಕೆಳಗಾಗಿ ಕವಚವ । ಸರಿವುತಿರೆ ಘೊಳ್ಳೆಂದು ಕೈಹೊ । ಯ್ದರಸಿಯರು ನಗೆ ನಾಚಿದಂತಿರೆ ಪಾರ್ಥ ತಲೆವಾಗಿ ॥ ತಿರುಗಿ ಮೇಲ್ಮುಖವಾಗಿ ತೊಡಲು । ತ್ತರೆ ಬಳಿಕ ನಸುನಗಲು ಸಾರಥಿ । ಯರಿಯ ತಪ್ಪೇನೆನುತಲುತ್ತರ ತಾನೆ ತೊಡಿಸಿದನು ॥೪೫॥ ಕವಚವನು ತೊಡಲರಿಯದವನೆ । ಹವಕೆ ಸಾರಥಿತನವ ಮಾಡುವ । ಹವಣು ತಾನೆಂತೆನುತಲಿದ್ದರು ನಿಖಿಳನಾರಿಯರು ॥ ಬವರವನು ನಮ್ಮಣ್ಣಗೆಲಿದಪ । ನವರ ಮಣಿಪರಿಧಾನವಾಭರ । ಣವನು ಸಾರಥಿ ಕೊಂಡುಬಾಯೆಂದಳು ಸರೋಜಮುಖಿ ॥೪೬॥ ನಸುನಗುತ ಕೈಕೊಂಡನರ್ಜುನ । ನೆಸಗಿದನು ರಥವನು ಸಮೀರನ । ಮಿಸುಕಲೀಯದೆ ಮುಂದೆ ಮಿಕ್ಕವು ವಿಗಡವಾಜಿಗಳು ॥ ಹೊಸಪರಿಯ ಸಾರಥಿಯಲಾ ನಮ । ಗೆಸದಳವು ಸಂಗಾತ ಬರಲೆಂ । ದುಸುರದುಳಿದುದು ಹಿಂದೆ ಪುರದಲಿ ಚಾತುರಂಗಬಲ ॥೪೭॥ ಗತಿಗೆ ಕುಣಿದವು ನಾಸಿಕದ ಹುಂ । ಕೃತಿಯ ಪವನನ ಹಳಿವಲುಳಿಯಲಿ । ಗತಿಯ ಸಂಚಿತಪಂಚಧಾರಾಪ್ರೌಢವಾಜಿಗಳು ॥ ವಿತತರಥಪದದಳಿತವಸುಧೋ । ತ್ಪತಿತಧೂಳೀಪಟಲಪರಿಚುಂ । ಬಿತದಿಶಾಮುಖನೈದಿದನು ಕುರುರಾಯ ಮೋಹರವ ॥೪೮॥

ಅಂತು ಸಂಧಿ ೬ಕ್ಕೆ ಪದ ೩೭೭ಕ್ಕಂ ಮಂಗಳಮಸ್ತು.

ಏಳನೆಯ ಸಂಧಿ.

ಸೂಚನೆ॥ ಚಂಡರಿಪುಬಲವಿಲಯಹರನು । ದ್ದಂಡಬಲಶಸಾಸ್ತ್ರವನುಕೈ । ಗೊಂಡು ಸುರಪನ ಸೂನು ತಡೆದನು ವೈರಿಮೋಹರವ

॥ ಪದ ॥ ಎಲೆಪರೀಕ್ಷಿತತನಯ ಕೇಳ್ನೃಪ । ತಿಲಕನತಿವೇಗದಲಿ ರಥವನು । ಕೊಳುಗುಳಕೆ ತರೆ ಕಂಡನುತ್ತರ ಮುಂದೆ ದೂರದಲಿ ॥ ತಳಿತಕುಂತದ ಬಾಯುಧಾರೆಯ । ಹೊಳವುಗಳ ಹೊದರೆದ್ದಸಿಂಧದ । ಸೆಳೆಯಸೀಗುರಿಗಳಸುರಂಭದ ಸಕಲಮೋಹರವ ॥೧॥ ಕರಿಘಟಾವಳಿಯೊಡ್ಡುಗಲ್ಲಿನ । ತುರಗನಿಕರದ ತೆರೆಯ ತೇರಿನ । ಹೊರಳಿಗಳ ಸುಳಿಯಾತಪತ್ರದ ಬಹಳ ಬುದ್ಬುದದ ॥ ನರನಿಕಾಯದ ಜಲಚರೌಘದ । ತರದವಾದ್ಯಧ್ವನಿಯರವದು । ಬ್ಬರದೊಳಿದ್ದುದು ಬಹಳಬಲನಿಧಿಯಂತೆ ಕುರುಸೇನೆ ॥೨॥ ಜಡಿವಖಡ್ಗದ ಕಿಡಿಯ ಸೇನೆಯ । ಕಡುಹುಗಳ ಕೇಸುರಿಯ ಬಲದು । ಗ್ಗಡದ ರಭಸದ ರೌದ್ರರವಳಟಛಟಿತನಿಸ್ವನದ ॥ ಇಡಿದಧೂಳಿಯ ಧೂಮರಾಶಿಯ । ಪಡೆ

ವಿರಾಟನ ಮಗನ ಕಂಗಳಿ । ಗೊಡನೊಡನೆ ದಾವಾಗ್ನಿಯಂತಿರೆ ತೋರಿತಿದಿರಿನಲಿ ॥೩॥ ಪ್ರಳಯಮೇಘ
ದ ಮಾತೃಕೆಯೊ ಕರಿ । ಕುಳವೊ ಸಿಡಿಲಿನ ಗರುಡಿಯೋ ಕಳ । ಕಳವೊ ಕಲ್ಪಾನಲನ ಧೂಮಾವಳಿಯೊ
ಕೈದುಗಳೋ ॥ ನೆಲನದಡ್ಡಿಯ ಬೆಟ್ಟದಡವಿಯೊ । ತಳಿತತರೆಕ್ಕೆಯವೋ ಜಗಂಗಳನಳಿವಜಲಧಿಯೊ
ಸೇನೆಯೋ ನಾವರಿಯೆವಿದನೆಂದ ॥೪॥ ಕಾಲಕೂಟದ ತೊರೆಯೊ ಮಾರಿಯ । ಗೂಳೆಯವೊ ಮೃ
ತ್ಯುವಿನ ಗಂಟಲ । ತಾಳಿಗೆಯೊ ಭೈರವನ ಥಟ್ಟೋ ಜವನಜಂಗುಳಿಯೋ ॥ ಕಾಲರುದ್ರನ ನೊಸಲ
ನೆಟ್ಟಿ । ಜ್ವಾಲೆಯೋ ಕೌರವನಸೇನಾ । ಜಾಲವೋ ಶಿವಯೆನುತ ಹೆದರಿದನಂದು ಸುಕುಮಾರ ॥೫॥
ಕಡೆಗೆ ಹಾಯುವ ಕಂಗಳೀಬಲ । ಗಡಲ ಮನವೀಸಾಡಲಾರದು । ಪೊಡಲುವಿಡಿದಿರದೇನ ಕಾಣಲುಬಾ
ರದದ್ಭುತವ ॥ ಪೊಡವಿಯಿಾದುದೊ ಮೋಹರವನೆಸಿದ । ರೊಡನೆ ಕಾದುವನಾವನಾತನೆ । ಮೃಡನು ಶಿವ
ಶಿವ ಕಾಟ ಗೆಲಿದೆವು ಬಲಕ ನಮೊಯೆಂದ ॥೬॥ ಹಸಿದಮಾರಿಯ ಮಂದೆಯಲಿ ಕುರಿ । ನುಸುಳಿದಂ
ತಾದೆನು ಬೃಹನ್ನಳೆ । ಎಸಗದಿರು ತೇಜಿಗಳ ತಡೆ ಚಮ್ಮಟಿಕೆಯನು ಬಿಸುಡು ॥ ಮಿಸುಕಬಾರದು ಪ್ರ
ಳಯ್ಯಕಾಲನ । ಮುಸುಕನುಗಿವವನಾವ ಕೌರವ । ನಸಮಬಲನೈ ರಥವ ಮರಳಿಚು ಜಾಳಿಸುವೆನೆಂದ
॥೭॥ ಎಲೆಕುಮಾರಕ ಮೊದಲ ಚುಂಬನ । ದೊಳಗೆ ಹಲುಬಿದ್ದಂತೆ ಕಾಳಗ । ಬೆಳಸಲರಿಯದಮು
ನ್ನ ಹಿಡಿದೈ ಸಮರಭೀತಿಯನು ॥ ಅಳುಕಲಾಗದು ನಿಮ್ಮ ತಂದೆಯ । ಕುಲಕೆ ಕುಂದನುತಾರದಿರು ಮ
ನ । ಗೆಲವಿನಲಿ ಕಾದೆನುತ ರಥವನು ಬೇಗ ಹರಿಸಿದನು ॥೮॥ ಸಾರಿ ಬರಬರಲವನ ತನು ಮಿಗೆ । ಭಾ
ರಿಸಿತು ಮೈಮುರಿದು ರೋಮಪಿ । ಕಾರ ಘನಕಾಹೇರಿತವಯವ ನಡುಗಿ ಡೆಂಡಣಿಸಿ ॥ ಭೂರಿಭಯ
ತಾಪದಲಿ ತಾಳಿಗೆ । ನೀರು ದೆಗೆದುದು ತುಟಿಯೊಣಗಿ ಸುಕು । ಮಾರ ಕಣ್ಣಿವೆ ಸೀಯೆ ಕರದಲಿ ಮು
ಚ್ಚಿದನು ಮುಖವ ॥೯॥ ಏಕೆ ಸಾರಥಿ ರಥವ ಮುಂದಕೆ । ನೂಕಿ ಗಂಟಲ ಕೊಯ್ಯೆ ಸುಡುಸುಡು ।
ಕಾಕಲಾ ಕಣ್ಣೊಡೆಪವೇ ಕಾಸಾ ಮಹಾಬಲವ ॥ ನಾಕನಿಳಯರಿಗರಿದು ನಿನಗೆ ವಿ । ವೇಕವೆಳ್ಳನಿತಿಲ್ಲ
ತೆಗೆತೆಗೆ । ಸಾಕು ವಾಘೆಯ ಮರಳಿ ಹಿಡಿ ತೇಜಿಗಳ ತಿರುಹೆಂದ ॥೧೦॥ ನುಡಿಯ ಕೇಳದೆ ಮುಂದ
ಹತ್ತೆಂ । ಟಡಿಯನರ್ಜುನ ರಥವ ಹರಿಸಲು । ಹಿಡಿದಬಿಲ್ಲಂಬುಗಳು ಬಿದ್ದವು ಕೈಯ ನೆರೆ ತೆಗೆದು ॥
ಹಿಡಿ ಹಯವನಿಲಗಾರಸಾರಥಿ । ನುಡಿವವರು ನಾವ್ಬಗೆಗಳೇ ನಿ । ನ್ನೊಡೆಯರೆಲ್ಲಸ್ವಾಮಿದುರುಹಿಕೆ
ಲೇಸುಲೇಸೆಂದ ॥೧೧॥ ಎಂದೊಡರ್ಜುನ ನಗುತ ರಥವನು । ಮುಂದೆನಾಲ್ಕೆಂಟಡಿಯನೂಕಲು । ಕೊಂದ
ನೀಸಾರಥಿಯೆನುತ ಸಂವರಿಸಿ ಮುಂಜೆರಗ ॥ ಬಂದು ಮೆಲ್ಲನೆ ರಥದ ಹಿಂದಕೆ । ನಿಂದು ಧುಮ್ಮಿಕ್ಕಿದ
ನು ಬದುಕಿದೆ । ನೆಂದು ನಿಟ್ಟೋಟದಲಿ ಹಾಯ್ದನು ಪಟ್ಟಮಂಡೆಯಲಿ ॥೧೨॥ ನೋಡಿದನು ಕಲಿ
ಪಾರ್ಥನೀಕೇ । ಡಾಡಿ ಕೆದರಿದಕೇಶದಲಿ ಕೆ । ಟ್ಟೋಡುತಿರಲೆಲೆಪಾಪಿ ಹಾಯ್ದನು ಹಿಡಿಯಬೇಕೆನುತ ॥
ಕೂಡೆ ಸೂಟಿಯೊಳಟ್ಟಲಿಳೆಯ । ಲ್ಲಾಡಲೆಹಿಪತಿ ಹೆದರಲಿತ್ತಲು ನೋಡಿ । ಕೌರವಸೇನೆ ಕೆಡೆದುದು
ನಗೆಯಕಡಲೊಳಗೆ ॥೧೩॥ ಎಲೆಲೆ ಕಾದಲುಬಂದವೀರನ । ಬಲುಹ ನೋಡಾ ಶಿವಶಿವಾ ಬೆಂ । ಬಳಿ
ಯಲಟ್ಟುವವೀರನಾವನೊ ಸುಭಟನಹನವನು ॥ ತಿಳಿಯಲರಿದಿವನಾವನೋ ವೆ । ಗ್ಗಳೆಯನಹನಾಕಾರ
ದಲಿ ನೆರೆ । ಫಲುಗುಣನ ಹೋಲುವನನುತ ಗಜಬಜಿಸಿತರಿಸೇನೆ ॥೧೪॥ ಈತಸಾರಥಿಯಳವಿಯಲಿ ಮಿ
ಗು । ವಾತನುತ್ತರನರ್ಜುನಂಗೀ । ಸೂತತನವೆತ್ತಲು ನಪುಂಸಕವೇಷ ವೀಕ್ಷಿಸಲು ॥ ಈತನರ್ಜುನನಾಗ

ಲೊಪ್ಪುರು । ಹೂತನಾಗಲಿ ರಾಮನಾಗಲಿ। ಆತೊಡರಿವೆನು ಬರಲಿ ಯೆಂದನು ಖಾತಿಯಲಿ ಕರ್ಣ॥೧೫॥ ಇತ್ತಲರ್ಜುನನುತ್ತರನ ಬೆಂಬತ್ತಿ ಬಂದನು ಹೋದೆಯಾದೊಡೆ । ಕಿತ್ತು ಬಿಸುಡುವೆ ನಿನ್ನ ತಲೆಯನು ನಿಲ್ಲುನಿಲ್ಲೆನುತ ॥ ಮೃತ್ಯುವೋ ಸಾರಥಿಯೊ ಪಾಪಿಯ । ನೆತ್ತಣಿಂದವೆ ಮಾಡಿಕೊಂಡೆನೆ । ನುತ್ತಮರಳಿದ್ದು ನೋಡಿ ನಿಲ್ಲದೆ ಮತ್ತೆ ಸೈವರಿದ ॥೧೬॥ ಇಟ್ಟಣಿಸಿ ಸರ ನೂರು ಹಜ್ಜೆಯೊ । ಳಟ್ಟಿ ಹಿಡಿದನಿದೇನ ಮಾಡಿದೆ । ಹುಟ್ಟಿದೆಯೊ ಹಾದರಕೆ ಕ್ಷತ್ರಿಯಬೀಜವೋ ನೀನು ॥ ದಿಟ್ಟತನ ಮಿಗೆ ಹೆಂಗಳೆದಿರಲಿ । ಹೊಟ್ಟೆಗುಟ್ಟಿದೆ ಹಗೆಳೆದಿರಲಿ।ಬಿಟ್ಟುಕೊಂಡೆ ದುರಾತ್ಮ ಮುರಿದೆ ವಿರಾಟನನ್ವಯವ॥೧೭॥ಹಲುಗಿರಿದು ಬಾಯೊಳಗೆ ಬೆರಳಿಟ್ಟಳುಕಿ ತಲೆವಾಗಿದನು ಸಾರಥಿ। ಕಳುಹು ಕಳೆಯ್ಯೆ ನಿನ್ನ ಬಸುರಲಿ ಮರಳಿ ಬಂದವನು॥ಕೊಳುಗುಳದೊಳೀಯೊಡ್ಡಮುರಿವಗ್ಗಳೆಯರುಂಟೇ ಲೋಗರಿಂದವೆ। ಕೊಲಿಸದಿರು ನೀ ಕುತ್ತಿ ಕೆಡಹು ಕಠಾರಿಯಿದೆಯೆಂದ॥೧೮॥ಮನದಲೊಡಲೊಡೆವಂತೆ ನಗುತರ್ಜುನನು ಗಜರಿದ ನೆಲನೊ ಸಭೆಯಲಿ । ವನಜಮುಖಿಯರ ಮುಂದೆ ಸೊರಹಿದೆ ಬಾಯ್ಗೆ ಬಂದಂತೆ ॥ ಅನುವರದೊಳೇನಾಯ್ತು ರಿಪುವಾ । ಹಿನಿಯನಿರಿಯದೆ ನಾಡ ನರಿಯವೊ । ಲೆನಗೆ ನೀ ಹಲುಗಿರಿಯೆ ಬಿಡುವೆನೆ ಕಾದು ನಡೆಯೆಂದ ॥೧೯॥ ಹೇವ ಬೇಡಾ ವೀರರೀಪರ । ಜೀವಗಳ್ಳರ ಪಥವ ಹಿಡಿವರೆ । ಸಾವಿಗಂಜಿದವೇ ನಪುಂಸಕರೆಮ್ಮನೋಡೆನಲು ॥ ನೀವು ವೀರರು ನೆರೆ ನಪುಂಸಕ । ರಾವು ಸಾವವರಲ್ಲ ಲೋಕದ । ಜೀವಗಳ್ಳರಿಗಾವು ಗುರುಗಳು ಬಿಟ್ಟು ಕಳುಹೆಂದ ॥೨೦॥ ಹರುಕನ್ನೇ ನೀನೆಲವೊ ರಾಯರೊ । ಳರುವನೃಪ ನಿಮ್ಮಯ್ಯ ನೀನಿಂ । ದಿರಿದು ಮೆರೆವವಸರವಲಾ ಜವ್ವನದ ಧುರಭರವು ॥ ಸರಿಗಳೆಯದಪಕೀರ್ತಿ ರವಿಶಶಿ । ಮುರಿದು ಬೀಳ್ವನ್ನಬರವೆಲೆ ನರ । ಗುರಿಯೆ ನಡೆ ಕಾಳಗಕೆನುತ ಹಿಡಿದೆಳೆದನುತ್ತರನ ॥೨೧॥ ಕೊಳುಗುಳದೊಳೋಡಿದೊಡೆಹಜ್ಜೆಗೆ । ಫಲ ಮಹಾಪಾತಕವು ಮುಂದಣಿ । ಗೊಲೆದು ಹಜ್ಜೆಯನಿಡಲು ಹಜ್ಜೆಯೊಳಶ್ವಮೇಧಫಲ ॥ ಅಳಿದನಾದೊಡೆ ದೇವಲೋಕದ । ಲಲನೆಯರು ತೊತ್ತಿರು ಸುರೇಂದ್ರನು । ನೆಲನನುಘ್ಘುಡಿಸುವನು ವೀರಸ್ವರ್ಗವಹುದೆಂದ ॥ ೨೨ ॥ ಧುರದಲೋಡಿದ ಪಾತಕವ ಭೂ । ಸುರರು ಕಳಿದಪರಶ್ವಮೇಧವ। ಧರಣಿಯೊಳ್ಪ್ರತ್ಯಕ್ಷವಾಗಿಯೆ ಮಾಡಬಹುದೆಮಗೆ ॥ ಸುರರ ಸತಿಯರು ಸೊಲ್ಲೆಮಗೆ । ನ್ನರಮನೆಯ ನಾರಿಯರೆ ಸಾಕೆ । ಮ್ಮರಸುತನವೆಮಗಿಂದ್ರ ಪದವಿಯು ಬಿಟ್ಟು ಕಳುಹೆಂದ ॥೨೩॥ ಆಳೊಳೊಡ್ಡುಳ್ಳ್ಳವನು ಭಾರಿಯ । ತೋಳುಗಳ ಹೊತ್ತವನು ಮನೆಯಲಿ ಸೂಳೆಯರ ಮುಂದೊದರು ಬಾಷ್ಪಳಗೆಡಹಿ ಓದೀಗ ॥ ಕೋಲನಿಕ್ಕದೆ ಗಾಯವಡೆಯದೆ । ಕಾಲ್ಮುವೇಗವತೋರಿದ್ದೊಡೆ ನಿ । ನ್ನೋಲಗದೊಳೆಂತಕಟನಾಚದೆ ಕುಳ್ಳಿತಿಹೆಯೆಂದ ॥೨೪॥ ಕೆತ್ತುಕೊಂಡಾನಾಚಿಕೆಗೆ ನೆರೆ। ಕುತ್ತಿಕೊಳಬೇಕೆಂಬ ಗಾದೆಯ । ನೆತ್ತ ಹೊದ್ದಿಸಬೇಡ ನಾವಂಜುವೆವು ಕಾಳಗಕೆ॥ಕೆತ್ತಿಗನು ನೀನಹಿತನಂತಿರೆ।ಮಿತ್ತುವಹರೇ ನಿನಗೆ ಬೇಡಿದ। ನಿತ್ತು ಸಲಹುವೆನೆನ್ನ ಕೊಲ್ಲದೆ ಬಿಟ್ಟುಕಳುಹೆಂದ॥೨೫॥ ಒಳಿತವನು ವಾರುವವ ಮುಕ್ತಾ । ವಳಿಯಲಂಕಾರವನು ರಥವನು । ಲಲನೆಯರ ನಾನೀಸಿಕೊಡುವೆನು ರಾಜಭವನದಲಿ ॥ ಎರೆಬ್ಬ ಹನ್ನಳೆ ನಮ್ಮ ಬೊಪ್ಪನು । ಸಲಹಿದಕೆ ಕೈಯೊಡನೆ ತೊಟಗೆ । ಸಲುಮನವಲಾನಿನ್ನದೆಂದೊಡೆ ಪಾರ್ಥನಿಂತೆಂದ ॥೨೬॥ ಪೊಡವಿಪತಿಗಳ ಬಸುರ ಬಂದೀ । ಯೊಡಲ ಕಕ್ಕುಲಿತೆಯನು ಕಾಳೆಗ । ದೆಡೆಗೆ ಮಾಡಿದರಿಲ್ಲ ಭೂತಭವಿಷ್ಯಮಾನದಲಿ ॥ ನುಡಿಯಬಹುದೇ ಬಂಜೆವಾತನು ।

ಸುಡುಸುಡೆಲವೋ ರಾಜಬಾಹಿರ। ನಡೆ ವರೂಥದ ಹೊರೆಗೆ ಕಾದಲುಬೇಡ ಬಾಯೆಂದ॥೨೭॥ ಕಾದುವೆ
ನು ಮಾರೊಡ್ಡಿನಲಿ ನೀ । ನೈದಿಸೆನ್ನಯ ರಥವ ಮನದಲಿ । ಭೇದತನವನು ಬಿಟ್ಟು ಸಾರಥಿಯಾಗು
ಸಾಕೆನಲು ॥ ಆದಿಯಲಿ ನೀನಾವರಾಯರ । ಕಾದಿ ಗೆಲಿದೈ ಹುಲುಬೃಹನ್ನಳೆ । ಯಾದನಿನಗೀಕದನನಾ
ಟಕವಿದ್ಯವಲ್ಲೆಂದ ॥೨೮॥ ಎನ್ನವಂದಿಗ ರಾಜಪುತ್ರರಿ । ಗಿನ್ನು ಮೊಗಸಲು ಬಾರದಿದೆ ನೀ । ನೆನ್ನ
ಸಾರಥಿಮಾಡಿಕೊಂಡೀಬಲವ ಜಯಿಸುವೆಯ ॥ ಅನ್ಯರನು ಮನಗಾಬರಲ್ಲದೆ । ತನ್ನತಾ ಮನಗಾಬರೇ
ಯಿಾ । ಗನ್ನಗತಕವ ಸಾವುಬಲ್ಲೆವು ಬಿಟ್ಟು ಕಳುಹೆಂದ ॥ ಎಲವೊಸಾರಥಿಯಾಗು ನಡೆ ನೀ । ಗಳಹಿ
ದೊಡೆ ಕಟವಾಯ್ಗ ಕೊಯ್ವೆನು । ಕೊಲುವೆನೀಪ್ರತಿಭಟನಿಕಾಯವ ನಿನ್ನ ಸಾಕ್ಷಿಯಲಿ ॥ ಬಳಿಕ ನೀನ
ಗು ನಡೆಯೆನುತ ರಿಪು । ಬಲಭಯಂಕರನುತ್ತರನ ಹೆಡ । ತಲೆಯ ಹಿಡಿದಿನೊಳೌಂಕಿ ತಂದನು ರಥವ
ನೇರಿಸಿದ ॥೩೦॥ ಭೇದತನ ಬೇಡೆಲವೊ ರಣದೊಳ । ಗೋಡಿಸುವೆನಹಿತರನು ಹರಣವ । ಹೂಡಿಸುವೆ
ನಂತಕನ ನಗರಿಗೆ ಘಟ್ಟನಡೆಹೊಯ್ದು ॥ ಕೋಡದಿರು ಕೊಂಕದಿರು ಧೈರ್ಯವ । ಮಾಡಿ ಸಾರಥಿಯಾ
ಗೆನುತ ಕಲಿ । ಮಾಡಿಕೊಂಡೊಯ್ದನು ಸಮಿಾಪದ ಶಮಿಯ ಪೊದೆಗಾಗಿ ॥೩೧॥ ಮರನನೇರಿದರೊಳ
ಗೆ ಪಾಂಡವ । ರರಿಸಿ ಹೋದರು ಕೈದುಗಳ ಮಿಗೆ । ಹರಣಾಭರಣಾಕ್ಷಮೆಗಳಲಿ ನೀನೆನಗೆ ನೀಡೆಸಲು ॥
ಅರಸುಮಕ್ಕಳು ಮುಟ್ಟಲನುಚಿತ । ಮರದ ಮೇಲಣ ಹೆಣನಿದೇನೈ । ವರಬೃಹನ್ನಳೆ ಮತ್ತೆ ಕೆಲಸವ
ಹೇಳು ತನಗೆಂದ ॥೩೨॥ ಹೊರಗೆ ತೊಗಲಲಿ ಬಿಗಿದು ಕೆಲಬಲ । ನರಿಯದಂದದಿ ಪಾಂಡುನಂದನ । ರು
ರುವಕೈದುವ ಕಟ್ಟಿದರು ಹೆಣನಲ್ಲ ತೆಗೆಯೆನಲು ॥ ಸೆರಗನಳವಡಿಸಿಕ್ಕಿ ಭೀತಿಯ । ತೊರೆದು ತುದಿಗೇರಿ
ದನು ನೆಣ್ಣಾಳ । ಹರಿದು ಕೈದುವ ಬಿಟ್ಟು ಕಂಡಂಜಿದನು॥೩೩॥ ಭಯಹೊಡೆದು ಕಾಲಭುಜಗನ ನಾಲಗೆ
ಯೊ ಶರ । ಜಾಲವೋ ಕಲ್ಪಾಂತವಹ್ನಿ । ಜ್ವಾಲೆಯೋ ಕೈದುಗಳೊ ಕಾಲಾಂತಕನದಾಡೆಗಳೋ ॥
ತೋಳು ದರಿಸುವವೆಂತು ನೋಡಿದೊ । ಡಾಲಿಯುರೆ ಬೆಂದವು ಬೃಹನ್ನಳೆ । ಕಾಳುಮಾಡಿದೆ ಕೊಂದೆ
ಯೆನುತೋರಂತೆಹಲುಬಿದನು ॥೩೪॥ ಹೊಗರಹೊರಳಿಯ ಹೊಳೆವಬಾಯ್ಧಾ । ರೆಗಳ ತಳಪದ ಕಾಂ
ತಿ ಹೊನ್ನಾ । ಯುಗದ ಬಹಳಪ್ರಭಶರೌಘಾನಲನ ಗಹಗಹಿಸಿ ॥ ಝುಗಝುಗಿಸೆ ಕಣ್ಮುಚ್ಚಿ ಕೈಗಳ ।
ಮುಗಿದು ಸಾರಥಿಗೆಂದ ನೆನ್ನನು । ತೆಗೆದುಕೊಳ್ಳೈ ತಂದೆ ಸಿಲುಕಿದೆನ ಸ್ತ್ರಾಸೀಮೆಯಲಿ ॥೩೫॥ ತ್ರುಡುಕ
ಬಹುದೇ ದ್ರೋಹಿ ಹಾವಿನ । ಕೊಡನ ನಿನಗಿವು ಕೈದುಗಳೆ ಬರ । ಸಿಡಿಲ ಥಾವಣಿಯಾಗುತಿವೆ ಕೈಯಿ
ಕ್ಕಲಂಜುವೆನು ॥ ಬಿಡಿಸು ಸಾರಥಿಯೆನ್ನನೆನೆ ಫಡ । ನಡುಗದಿರು ಫಲುಗುಣನ ನೆನೆ ಕೈ । ದುಡುಕುಕೈ
ವಶವಹವು ತೆಗೆ ಸಾಕೆಂದನಾಪಾರ್ಥ ॥೩೬॥ ಉಲಿದು ಸತ್ವದೊಳೌಂಕಿ ಕಾಯುವ । ಬಲಿದುತೆಕ್ಕೆಯೊ
ಳೊತ್ತಿ ಬೆವರನು । ಬಳಲಿ ನೀಡಿದನರ್ಜುನನ ಕರತಳಕೆ ಗಾಂಡಿವವ ॥ ಬಲುಹಿನಿಂದವುಡೊತ್ತಿ ತೆಗೆ
ತೆಗೆ । ಮುಳಿದಬಿಲುಗಳ ನೀಡಿ ಮರನನು । ಮಲಗಿ ಧಗೆಯಿಂದಳ್ಳೆ ವೊಯ್ದು ಕುಮಾರನಿಂತೆಂದ ॥೩೭॥
ಗುಣಯನೆತ್ತಲುಬಹುದು ಬಿಲುಗಳ । ಕೆರಳಿಚುವೊಡಾರೆನು ಬೃಹನ್ನಳೆ । ಧರಿಸಲಾಪ್ಪೆ ನೀ ಸಮರ್ಥನು
ನಿನಗೆ ಶರಣೆಂದ ॥ ಸರಳ ಪೊದೆಗಳ ದೇವದತ್ತವ । ಪರಶುತೋಮರಕುಂತವಸಿಮು । ದ್ಗರಗದಾದಂ
ಡಾದಿಶಸ್ತ್ರವ ತೆಗೆದು ನೀಡಿದನು ॥೩೮॥ ಹೇಳು ಸಾರಥಿ ಬಿಲ್ಲಿದಾವನ । ತೋಳಿಗಳವಡುವುದು ಮ
ಹಾಸರೆ । ಬಾಲ ಬೆಸಗ್ರೆದಸವಿಷಾಗೆಮಿಕ್ಕಬಿಲ್ಲುಗಳ ॥ ಕಾಳಗದೊಳಿವನಾರು ತೆಗೆವರು ಮೇಲುಗ್ಗೆ

ದುಗಳಾಂಗವು ಕೈ । ಮೇಳವಿಸುವುವು ಮನದ ಸಂಶಯ ಹಿಂಗಹೇಳೆಂದ ॥೩೯॥ ಇದುಕಣಾ ಗಾಂಡೀವ ಮಿದಂ । ಬಿದು ಮಹಾಧನು ಪಾರ್ಥನದು ಬಳಿಕ ಇದು ಯುಧಿಷ್ಠಿರಚಾಪವೀಧನು ಭೀಮಸೇನನದು ॥ ಇದು ನಕುಲಕೋದಂಡವಿಲುತಾ । ನಿದುವೆ ಸಹದೇವನದು ಭಾರಿಯ ಗದೆಯಿದನಿಲಜನದು ಕಿರೀಟಿಯ ಬಾಣವಿವು ಯೆಂದ ॥೪೦॥ ಅವರವರ ಬತ್ತಳಿಕೆಚಾಪವ । ನವರಶರವನು ಕಂಬುಖಡ್ಗವ । ಕವಚಸೀಸಕಜೋಡುಗಳವಿರುದುಗಳಕ್ಕೆಯುವ ॥ ವಿವಿಧಶಸ್ತ್ರಾಸ್ತ್ರವನು ಫಲುಗುಣ । ವಿವರಿಸಲು ಬೆರಗಾಗಿ ಸಾರಥಿ । ಯುವನು ತಾಸಾರಂದು ಮತ್ಸ್ಯನ ಸೂನು ಬೆಸಗೊಂಡ ॥೪೧॥ ಅರು ನೀನರ್ಜನನೊ ನಕುಲನೊ । ಮಾರುತನ ಸುತನೋ ಯುಧಿಷ್ಠಿರ । ವಿರನೋ ಸಹದೇವನೋ ಮೇಣವರ ಬಾಂಧವನೋ ॥ ಧೀರ ಹೇಳ್ಳೈ ದೇಹಿಕೂಂಭನು । ಕಾರಣವ ವಿಸ್ತರಿಸು ಪಾಂಡುಸು । ಮಾರರಾಯುಧತತಿಯ ನೀನಂತರವೆ ಹೇಳೆಂದ ॥೪೨॥ ಅದೊಡಾನರ್ಜನನು ಬಾಣಸಿ । ಯಾದವಲಲನು ಭೀಮ ವರಯತಿ । ಯಾದಂಕನು ಧರ್ಮಪುತ್ರನು ಸಮ್ಮಗೋಕುಲವ ॥ ಕಾದವನು ಸಹದೇವ ರಾವುತ । ನಾದವನು ನಕುಲನು ವಿಳಾಸಿನಿ । ಯಾದವಳು ಸೈರಂಧ್ರಿ ರಾಣೀವಾಸವೆಮಗೆಂದ ॥೪೩॥ ಅಹುದು ಬಳಿಕೇನುಳಿದವರಗೆ । ಮಹಿಮೆ ತಾನಲ್ಲಿಯದು ಕಾಣಲು । ಬಹುದಲಾ ಜೀವಿಸಿದರತಿಶಯವನು ಮಹಾದೇವಾ ॥ ಗಹನವಾತದೆ ನುಡಿದತಪ್ಪನ । ಬಹಳತೆಯ ಭಾವಿಸದೆ ತನ್ನನು । ಕುಹುಕಿಯೆನ್ನದೆ ಕಾಯಬೇಕೆಂದೆರಗಿದನು ಪದಕೆ ॥೪೪॥ ಮೆಳ್ಳಯನು ನೆಗಹಿದನು ನಿನ್ನಯ । ಮೇಲೆ ತಪ್ಪಿಲ್ಲೆನುತ ಫಲುಗುಣ । ಬೋಳವಿಸಿ ನಿಂದರ್ದ ಕೈಮುಗಿದುತ್ತರನು ನಗುತ ॥ ಬಾಲಕನ ಬಿನ್ನಪವನೊಂದನು । ಕೇಳಬೇಹುದು ನಿಮ್ಮದಶನಾ । ಮಾಳಿಯನು ಪೇಳಲ್ಪಮತಿಯನು ತಿಳುಹಬೇಕೆಂದ ॥೪೫॥ ಎನಲು ನಸುನಗುತರ್ಜನನು ಫಲು । ಗುಣ ಧನಂಜಯ ಜಿಷ್ಣು ಸಿತವಾ । ಹನ ವಿಜಯ ಭೀಭತ್ಸು ಪಾರ್ಥ ಕಿರೀಟಿಮೊದಲಾದ ॥ ವಿನುತಕೃಷ್ಣನು ಸವ್ಯಸಾಚಿಗ । ಳೆನಿಪಪೆಸರನು ತಿಳುಹಿ ಪುನರಪಿ । ತನಗೆಬಂದಂದವನು ವಿಸ್ತರವಾಗಿ ವಿರಚಿಸಿದ ॥೪೬॥ ನಂಬಿದನು ಲೇಸಾಗಿ ನಿಶ್ಚಯ । ವಿಂಬುಗೊಂಡುದು ಪಾರ್ಥ ನಿನಗೀ । ಡೊಂಬಿದ್ದಕ್ಕೈ ಯಿಲುಬ್ಬೃಹನ್ನಳೆತನದ ಬಹುರೂಪು ॥ ಅಂಬುಜಾಕ್ಷನ ಸಾಹಸ ಪ್ರತಿ । ಬಿಂಬವಲ್ಲಾ ನೀನು ನಿನ್ನ ವಿ । ಡಂಬಿಸಿದರೂಪಿಂಗೆ ಕಾರಣವೇನು ಹೇಳೆಂದ ॥೪೭॥ ಇದುಕಣಾ ಧರ್ಮಜನ ಸತ್ಯಾಭ್ಯುದಯಕೋಸುಗವುರ್ವಸಿಯ ಶಾ । ಪದಲಿ ಬಂದುದು ಹೊತ್ತು ನೂಕಿದನೊಂದುವತ್ಸರವ ॥ ಇದಕೆನಮ್ಮೊಡಾಯ್ತು ನಿರ್ವಿ । ಘ್ನದಲಿ ನೂಕಿದೆವವಧಿಯನು ತ । ನ್ನದಟುತನವನು ಭೀತಿಗೊಳ್ಳದ ನೋಡು ನೀನೆಂದ ॥೪೮॥ ಬಳೆಯ ನೆಗ್ಗೊತ್ತಿದನು ಕೌರವ । ಬಲದ ಗಂಟಲಬಳೆಯ ಮುರಿವವೊ । ಲಲಘುಸಾಹಸಿ ವಳಿಯನುಟ್ಟನು ಮಲ್ಲಗಂಟಿನಲಿ ॥ ತಲೆನವಿರ ಹಿಂತಿಲಿಂದು ತಿಲಕವ । ಗೆಲಿದು ಕಗ್ಗಟ್ಟಿನ ಕಠಾರಿಯ । ಹೊಳೆವಗೊಂಡೆಯ ಮೆರೆಯೆ ಗಂಡಂದವನು ಕೈಕೊಂಡ ॥೪೯॥ ತೇರ ತೆಗೆದನು ತನ್ನ ಮುನ್ನಿನ । ವಾರುವಂಗಳ ಹೂಡಿದನು ಕಪಿ । ವೀರ ನೆನೆಯಲು ಬಂದು ಮಂಡಿಸಿದೆನು ಧ್ವಜಾಗ್ರದಲಿ ॥ ಚಾರುಸೀಸಕ ಜೋಡುಕುಲಿಶದ । ಸಾರಕವಚವ ಬಿಗಿದು ಬೊಬ್ಬೆಯ । ಭಾರವಣೆ ಮಿಗೆ ಧನುವ ಕೊಂಡನು ತಿರುವನೇರಿಸಿದ ॥೫೦॥ ರಾಯಧರ್ಮಜ ಬಾಳುಗೆನುತ ನಿ । ಜಾಯುಧದ ಗುರುವಿಂಗೆರಗಿ ಸುರ । ರಾಯನಂದನನೊಲವಿನಲಿ ಗಾಂಡಿವವ ಜೇವಡಿಸಿ ॥ ರಾಯಕುವರನ

ಸೂತತನದ ವಿ | ಡಾಯಿಯರಿಯಲುಬಹುದೆನುತ ಸಮ | ರಾಯತಾಸ್ತ್ರನು ಪಾರ್ಥ ಮೈದೋರಿದನು ಪರಬಲಕೆ ||೫೧|| ಸಡಿಲಬಿಡೆ ವಾಘೆಯನು ಚಿಮ್ಮಿದ | ಮೊಡನೊಡನ ಮೇಗಾಯ್ತು ತೇಜಿಗ | ಳೊಡೆದುಟಳೆಯೆನೆ ಗಜರು ಮಿಗೆ ಗರ್ಜಿಸಿದವಳ್ಳಿರಿದು || ಕುಡಿನೊರೆಯ ಕಟವಾಯ ಲೋಳೆಯ | ಲೊಡಲ ಸಂಚದನುಡಿಯ ಘುಡುಘುಡು | ಘುಡಿಪನಾಸಾಪುಟದ ಹುಂಕೃತಿ | ಮಸಗೆ ಮುಂಚಿದವು ||೫೨|| ಅರು ಕೌರವನಲ್ಲಿ ಭೀಷ್ಮನ | ದಾರು ಕೃಪನಾವವನು ದ್ರೋಣನ | ದಾರು ಬಲದೊಳಗಾವನಶ್ವತ್ಥಾಮನೆಂಬುವನು || ವೀರ ತಿಳುಹೆನಗಲ್ಲಿ ಕರ್ಣನ | ದಾರು ನಾ ಕಂಡರಿಯೆನನಲಾ | ವೈರಿದಲ್ಲಣ ಪಾರ್ಥ ನಗುತುತ್ತರನೊಳಿಂತೆಂದ ||೫೩|| ಉದಯದರುಣನ ಕರುವ ಹಿಡಿದಂ | ದದಲಿ ವರ್ಣಚ್ಛವಿಯಲೊಪ್ಪುವ | ಕುದುರೆಗಳ ಥಳಥಳಿಸಿ ಬೆಳಗುವಕೊಡನಹಳವಿಗೆಯ || ಗದಗದಿಪಮಣಿಮಯದ ತೇರನ | ಕದನಕೋಳಾಹಳನು ಗರುಡಿಯ | ಸದನಸರ್ವಜ್ಞನನು ನೋಡೈ ದ್ರೋಣನವನೆಂದ ||೫೪|| ನವರತುನಕೇವಣದ ರಥವತಿ | ಜವದ ತೇಜಿಯ ತೆಕ್ಕೆಗಳ ರೌ | ರವದ ರೌದ್ರಾಯುಧದ ಗಡಣದ ಹರಿಯ ಹಳವಿಗೆಯ || ಬವರಭೈರವನಾತನತಿಬಲ | ಶಿವನನೊಸಲಂದದಲಿ ಮೆರೆವವ | ನಿವನು ಜಿತಸಂಗ್ರಾಮನಶ್ವತ್ಥಾಮನು ನೋಡೆಂದ ||೫೫|| ಖುರದಲವನಿಯ ಹೊಯ್ದು ಲಹರಿಯ | ಉರಮುಸಗಲುಬ್ಬಿದ್ದ ತೇಜಿಯ | ಮೆರೆವಮುಕ್ತಾವಳಿಯ ತೇರಿನ ನವವಿಳಾಸವಲಿ || ಸರಳ ತಿರುಹುತ ನಿಂದು ಧನುವಿನ | ನಿರುತವನು ನೆರೆ ನೋಡಿ ತಾಝೇಂ | ಕರಿಸುವವನತಿಬಲಕೃಪಾಚಾರಿಯನು ನೋಡೆಂದ ||೫೬|| ಲಲಿತರತ್ನಪ್ರಭೆಯ ತೇರಿನ | ಉಲಿವಬಹುವಿಧವಾದ್ಯರಭಸದ | ಕಳಕಳದ ಕಡುದರ್ಪದಿಂದಳ್ಳಿರವತೇಜಿಗಳ || ಉಳಿಯಲಹರಿಯಲಗ್ಗಗಳ ಮೋ | ಹಳಿಸಿ ಬಿಲುಝೇಂಕಾರರವದಿಂ | ದುಲಿವವನು ಕಲಿಕರ್ಣನತುಳಪರಾಕ್ರಮಾನಳನು ||೫೭|| ಅತ್ತಲೈದನೆ ಬಹಳಬಲದೊ | ತ್ತೊತ್ತೆಯಲಿ ನಮ್ಮುಭಯರಾಯರ | ಮುತ್ತಯಿಸು ತಾನೆಸಿಸಿ ಹೂಡಿದಬಿಳಿಯತೇಜಿಗಳ || ತೆತ್ತಿಸಿದಹೊಂದಾಳಸಿಂದದ ಸತ್ತಿಗೆಯ ಸಾಲಿನಲಿ ಬಪುಕಳಲ | ಮೃತ್ಯುವಾತನು ವೀರಗಂಗಾಸುತನು ನೋಡೆಂದ ||೫೮|| ಆಗವಹಾವಿನಹಳವಿಗೆಯ ಮಿಗೆ | ನೆಗಹಿ ಮುಸುಕದ ಝಲ್ಲರಿಯ ಚೋ | ಡಿಗಳ ತುಡುಕುವತಂಬಟಂಗಳ ಮೊರೆವಚಂಬಕದ || ನೆಗಹಿ ಸಿಗುರುವತಕ್ಕೆಯದ ಮದ | ಮೊಗುವಕರಿಗಳ ಮಧ್ಯದಲಿ ತಾ | ನಗಡುದುರ್ಯೋಧನನು ಜೂಜಿನಜಾಣನವನೆಂದ ||೫೯|| ಅವನ ಬಲವಂಕದಲಿ ನಿಂದವ | ನವನು ಭೂರಿಶ್ರವನು ಮತ್ತಾ | ಭುವನಪತಿಯೆಡವಂಕದಲಿ ನಿಂದವ ಜಯದ್ರಥನು || ತವತವಗೆ ಬಲುಗೈಗಳೆನಿಸುವ | ಶಿವನ ನೊಸಲಂದದಲಿ ಮೆರೆವವ | ರವನಿಪಾಲಕರನುಜರನು ನೋಡೆಂದನಾಪಾರ್ಥ ||೬೦|| ಹೊಗಳಲೆನುಪಮಸೈನ್ಯಪಂಕ್ತೀ | ದ್ವಿಗುಣವಂಧಾಸುರನ ಸೇನೆಗೆ | ತ್ರಿಗುಣವಿದು ರಾವಣನಮೋಹರಕೆನುತ ಫಲುಗುಣನು || ಹಗೆಯ ಭುಜದಗ್ಗಳಿಕೆಯನು ನಾ | ಲಗೆ ದಣಿಯೆ ಕೈವಾರಿಸುತ ಮಿಗೆ | ನಿಗುಚಿದನು ಫಲುಗುಣನು ತಾ ಗಾಂಡಿವವ ಜೇವಡೆದು ||೬೧|| ಖುರಪುಟದಲಾಕಾಶಭಿತ್ತಿಯ | ಬರೆವಮೋಲ್ಪೂರಿಯನ ತುರಗವ | ಕರೆವಮೋಲ್ಕೈಗಟ್ಟಿ ದುವ್ವಾಳಿಸುಮೊಡಾಹವಕೆ || ಅರರೆ ಪೊತುರೆ ಹಯವೆನುತ ಚ | ಪ್ಪರಿಸಲೊಡೆನಿಗುರಿದವು ಕೆಂದೂ | ಳಿರದೆ ನಭಕುಪ್ಪರಿಸಿ ರವಿಮಂಡಲವನಂಡಲೆಯೆ ||೬೨|| ತುರಗಗರ್ಜನೆ ರಥದ ಚೀತ್ಕೃತಿ | ವರಧನುಷ್ಟಂಕಾರ ಕಪಿಯ | ಬ್ಬರಣೆ ಪಾರ್ಥನ ಬೊಬ್ಬೆ ನಿಷ್ಠುರದೇವದತ್ತರವ || ಅರರೆ

ಹೊದರೆದ್ದವು ಗಿರಿವ್ರಜ । ಬಿರಿಯೆ ಜಲಸಧಿ ಜರಿಯೆ ತಾರಕೆ । ಸುರಿಯೆ ಸುರಕುಲ ಸರಿಯೆ ಭೀತಿ ಯುಲಹರಿ ಬಲಹರಿಯೆ ॥೬೩॥ ಶಿರವು ಸಿಡಿಲೆರಗಿದವೊಲುತ್ತರ । ತಿರುಗಿ ಬಿದ್ದನು ಮೂರ್ಛೆಯುಲಿ ಹೊಡೆ । ಮರಳಿದವು ಕಣ್ಣಾಲಿ ಕಾರಿದವರುಣವಾರಿಗಳ ॥ ಹೊರಳುತಿರಲೆಲೆಪಾಪಿ ಸ್ಥೈರಿಸ। ಲರಿಯನಿ ನ್ನೇನೆನುತ ಫಲುಗುಣ । ಸೆರಗಿನಲಿ ಬೀಸಿದನು ಕುಳ್ಳಿರಿಸಿದನು ರಥದೊಳಗೆ ॥೬೪॥ ಏನು ಮತ್ಸ್ಯ ಕುಮಾರ ಬವಣಿಯಿ । ದೇನು ನಿನಗೆಂದೆನಲು ಜಗದವ । ನಾನದಂದದ ಸಿಡಿಲು ಸುಳಿದುದು ಬಿರಿದು ದೆನ್ನೊಡಲು ॥ ಆನಲಾಪೆನೆ ನಿನ್ನ ಬಹಳ । ಧ್ವಾನವನು ಸಾಕಿನ್ನು ಕಳಹು ಪ. । ಹಾನಿದಾನವ ಮಾ ಣುವಮಾಣೆನೆ ಪಾರ್ಥನಿಂತೆಂದ ॥೬೫॥ ಖೇಡನಾಗದಿರದ್ಭುತಧ್ವನಿ । ಮಾಡೆನಂಜದಿರಂಜದಿರು ಧೃತಿ ಮಾಡಿಕೊಂಡೀರಥವ ಜೋಡಿಸೆನುತ್ತ ಸಂತೈಸಿ ॥ ಮೂಡಿಗೆಯಲಂಬುಗಿದು ತಿರುವಿಗೆ । ಹೂಡಿದನು ಫಲುಗುಣನ ಕದನವ । ನೋಡಲಮರಶ್ರೇಣಿ ಮೇಳೈಸಿತ್ತು ಗಗನದಲಿ ॥ ॥೬೬॥

ಅಂತು ಸಂಧಿ ೭ ಕ್ಕೆ ಪದ ೪೪೩ ಕ್ಕಂ ಮಂಗಳಮಸ್ತು.

ಎಂಟನೆಯ ಸಂಧಿ.

ಸೂಚನೆ॥ ಕದನಚೌಪಟಮಲ್ಲ ಪರಬಲ । ಮದನಮದಹರರುದ್ರಸಹಿತರ । ಸದೆದು ಮರಳಿಚಿದನ ವಿರಾಟನ ನಿಖಿಳಗೋಕುಲವ॥

॥ಪದ॥ ಭಯವು ಭಾರವಿಸಿತ್ತು ಜನಮೇ । ಜಯಮಹೀಪತಿ ಕೇಳು ಕುರುಸೇ। ನೆಯಲಿ ಭೀಷ್ಮ ದ್ರೋಣರರಿದರು ಪಾರ್ಥನೆಂಬುದನು ॥ ಜಯವು ಜೋಡಿಸಲರಿಯದಿದು ಸಂ । ಶಯದ ಸುಳಿವುತಾ ತಶತವಿದು । ಲಯದ ಬೀಜವು ಭೀಷ್ಮ ಚಿತ್ತವಿಸೆಂದನಾ ದ್ರೋಣ ॥೧॥ ಸುರಿವುತಿವೆ ಕಂಬನಿಗಳನು ಗಜ । ತುರುಗಚಯ ವೊರೆಯುಗಿದೊಡಾಯುಧ । ಮುರಿದು ಬಿದ್ದುದು ಬೀಸುತಿದೆ ಬಿರುಗಾಳಿ ಬಲ ಬೆದರೆ ॥ ಹರಿವುತಿವೆ ತಾರಕೆಗಳ ಭ್ರದೊ । ಳರುಣಮಯಜಲಧಾರೆಯಿದೆ ತರ । ತರದಲಿದೆ ಪಡಿಸೂರ್ಯಮಂಡಲವೆಂದನಾದ್ರೋಣ ॥ ಇದೆ ಬಹಳ ಭೂಕಂಪವದ್ಭುತ । ವಿದೆ ದಿಶಾವಳಿ ಧೂಮಕೇತುಗ । ಳಿದೆ ಪತಾಕಾಭಂಗವಿದೆ ವಿಪರೀತಪರಿವೇಷ ॥ ಇದು ಸಮಾಹಿತವಲ್ಲ ರಾಜಾ । ಭ್ಯುದಯಕರವೇ ಭೀಷ್ಮನಮ್ಮನು । ಸದೆಯದಿಹನೇ ಸುರಪನಂದನನೆಂದನಾದ್ರೋಣ ॥೩॥ ಬಿರಿಯಲಬುಜಭವಾಂಡವಿದೆ ಕಪಿ । ವರನ ಕಳಕಳ ದೇವದತ್ತದ । ಥರಥುರದ ದೆಖ್ಖಾಳವಿದೆ ಗಾಂಡಿವದ ಬೊಬ್ಬೆಯಿದೆ ॥ ನರನನಿಷ್ಠುರ ಸಿಂಹರವವಿದೆ । ತುರುಗಿ ದಳ್ಳುರಿ ಸಾರುತಿದೆ ಸಂ । ಗರಕೆ ಸಾಹಸಮಲ್ಲ ಮೊಳಗಿದನೆಂದ ನಾದ್ರೋಣ ॥೪॥ ಬಲವ ಬೆದರಿಸಿ ಹಗೆಯ ಭುಜದ । ಗ್ಗಳಿಕೆಯನೆ ಕೊಂಡಾಡಿ ಸಾಮಿಯ । ನಿಳಿಕೆ ಗಾಬಿರಿ ನಿಮ್ಮ ಪೈಕಕೆ ಖುಲ್ಲತನ ಸಹಜ ॥ ಫಲುಗುಣನೆಯಾಗಲಿ ಸುರೇಂದ್ರನೆ। ನಿಲಲಿ ಭಾರ್ಗವರಾ ಮನಾಗಲಿ। ಗೆಲಿದು ಕೊಡುವೆನು ನಿಮಿಷಕೆಂದನು ಖಾತಿಯಲಿ ಕರ್ಣ ॥೫॥ ನರನು ನರನೆಂದನವರತ

ತಲೆ । ಬುಯಿ ಹೊಗಳುವರಾನಿರಲು ಸಂ । ಗರಕೆ ತಲೆದೋರಿದೊಡೆ ತರಿವೆನು ಲೋಕಪಾಲಕರ ॥
ನರನ ತೆತ್ತಿಗರೆಂಬ ತತ್ತ್ವಡೆಪುರದೊಳಗೆ ಕೌರವನವರು ಮು । ಶ್ಚರಿತರೆರಡಿಪ್ಪಹಿರಿ ಖೂಳರು ನಿಮ್ಮೊ
ಳೇನೆಂದ ॥೬॥ ಹೊಕ್ಕ ತಾ ಬಳಿಸಲಿಸಿದೊಡಹಿಂ। ದಿಕ್ಕಿಕೊಂಬವರಾರು ಹಗೆವನ। ಸಿಕ್ಕಿದುರಗನ ಸೆಳವ
ನಾವನು ಗರುಡತುಂಡದಲಿ ॥ ಮುಕ್ಕತುಳದಲಿ ವೈರಿಪಾರ್ಥನ । ನೊಕ್ಕಲಿಕ್ಕುವೆನರಸ ನಿನ್ನೀ । ಚುಕ್ಕಿ
ಗಳ ಚಾಪಲವ ಕೇಳಬರೆಂದನಾಕರ್ಣ ॥೭॥ ಎನಲು ಭುಗಿಲೆಂದನು ಕೃಪಾಚಾ । ರ್ಯನುಸುಯೋಧ
ನ ಕೇಳು ರಾಧಾ । ತನಯನಿವ ಬೊಗುಳಿದೊಡೆ ನಿಶ್ಚಯವೆಂದು ನಂಬದಿರು ॥ ಅನುವರದೊಳರ್ಜುನ
ನ ಗೆಲುವೊಡ। ಯೆನಗೆ ನಿನಗೀತಂಗೆ ಕಲಬುಂ । ಗನಿಮಿಷರಿಗಳವಲ್ಲ ಬಲ್ಲೆ ಪಾರ್ಥನದಟುಗಳ ॥೮॥
ಮಾಡಿದನು ಹರನೊಡನೆ ಖಾಡಾ । ಖಾಡಿಯನು ಸುರಪತಿಯ ತೋಟವ । ಬೇಡಿದೊಡೆ ಬೇಳಿದನು
ವಹ್ನಿಗೆ ರಾಜಸೂಯವಲಿ ॥ ರೂಢಿಗುತ್ತರ ಕುರುಗಳರ್ಥವ । ಹೂಡಿಸಿದನರಮನೆಗೆ ದೈತ್ಯರ । ಬೀ
ಡ ಬಂಗೈದನು ಹಿರಣ್ಯಕಪುರನಿವಾಸಿಗಳ ॥೯॥ ಬಾಗಿಸಿದಬಿಲ್ಲಿನಲಿ ರಾಯರ । ಮೂಗ ಕೊಯ್ದನು ಮದು
ವೆಯಲಿ ನೀ । ನೀಗಳೊದರುವೆ ಕೌರವೇಂದ್ರನನಂದು ಬಿಡಿಸಿದೆಲಾ ॥ ಆಗರುವ ಸೈಂಧವನ ಮುಡಿಯು
ವ । ಬಾಗಿಸಿದಭಟನಾರು ಪಾರ್ಥನ। ಲಾಗುವೇಗವನಾರುಬಲ್ಲರು ಕರ್ಣ ಕೇಳೆಂದ ॥೧೦॥ ಮರುಳ ಕ
ರ್ಣಗ ಕೂಡಿನ ಕೋರವ । ಬರಿದೆ ನಾಸವ ನಿಮ್ಮ ಕಣ್ಣಿಗೆ । ನರನು ದೊಡ್ಡಿತು ವುಳಿದವೀರರ ಕಣ್ಗೆ
ತುಸವಾತ್ರ ॥ ಮರುಳುಹಾರುವಗದ್ಯಪದ್ಯದ । ಸರಸವಿದ್ಯೆಗಳಲ್ಲದೀಸಂ । ಗರದ ಕರ್ಕಶವಿದ್ಯೆ ನಿ
ಮಗೇಕೆಂದನಾಕರ್ಣ ॥೧೧॥ ಹಣಗ ಮಟ್ಟಿಯ ಬಡಿದು ದರ್ಭೆಯ । ಹಣಿದು ಬೆರಳಲಿ ಸಕ್ಕ ಥೋ
ತ್ರದ । ದಣಿಬವನು ನೆಲಪಿಡಿದು ಮಹಳದಮನೆಯ ಚೌಕದಲಿ ॥ ಮಣಗೆ ಮಂಡಿಸಿ ಕುಳ್ಳಿತುಂಬ ।
ತಣಿವ ವಿದ್ಯೆಯು ಎಲ್ಲರಲ್ಲವೆ । ರಣವಿಚಾರದ ವಿದ್ಯೆ ನಿಮಗೇಕೆಂದನಾಕರ್ಣ ॥೧೨॥ ಇಂದು ಪಿತೃದಿ
ನವೆಂದು ಸಂಕ್ರಮ । ವೆಂದು ಸೂರ್ಯಗ್ರಹಣ ಹಬ್ಬದಿನ । ವೆಂದು ಯಜ್ಞಾರಂಭದನ ವಡ್ಡಂತಿ
ಲೇಸೆಂದು ॥ ಬಂದು ನಾನಾವುಬ್ಬದ ವಾನಕ । ತಂದವಸ್ತುವ ಬಾಚಿ ಹೊಳ್ಳಿಸಿ ॥ ತಿಂದು ಕೂಚ್ಛದ
ನಿಮಗೆ ಸುಭಟರ ಮಾತದೇಕೆಂದ ॥೧೩॥ ಬಲ್ಲರೈ ಕೌರವನ ಧನವನು । ಹೊಳ್ಳಿಸಲು ವೃಷ್ಟ್ಯನ್ನವೆಂದವ।
ಡೊಳ್ಳುವಳಸಿಯ ರಾಜಗುರುತನದಿಂದ ಬರತಿಹಿರಿ॥ ಬಿಲ್ಲ ವಿದ್ಯಾ ವಿಷಯರವುಭಟ। ಮಲ್ಲರೊಡನೆಯ
ಕದನವಿದು ಜಡ । ರಲ್ಲರಿಗೆ ಸುಲಭವ ಜಪಾನುಷ್ಠಾನವಲ್ಲೆಂದ ॥೧೪॥ ಕೇಳಿದಶ್ವತ್ಥಾಮ ಕಿಡಿಗಳ ।
ನಾಲಿಗಳಲುಗುಳಿದನು ಕೇಳಲ । ಖೂಳ ಸೂತನ ಮಗನೆ ಸುಭಟಾಂಗದಲಿ ಖರೆಯೆನಲಾ ॥ ಕೇಳು ಜಾ
ತಿಗೆ ತಕ್ಕನುಡಿಗಳು । ಮೇಳವಿಸದವು ಕುಲವ ನಾಲಗೆ । ಹೇಳಿತೆಂಬುದು ತಪ್ಪದಾಯಿತು ಕರ್ಣ ಕೇಳೆಂ
ದ ॥೧೫॥ ನಗುವ ವಿಪ್ರರನಾವರಾಯರ । ಮಗನು ಹೇಳಾ ದಾನಧರ್ಮ । ದ್ವಿಗಳೊಳಧರ್ಮನಾರು
ಕೊಂಬರು ದ್ವಿಜರು ಹೊರಗಾಗಿ ॥ ಜಗವ ರಕ್ಷಿಸಲಾವು ಕೊಂಬೆವು । ಮಗುಳೆ ಕೊಡುವವು ಕ್ಷತ್ರ
ವೈಶ್ಯಾ । ದಿಗಳು ಕೊಡುವರು ತತ್ಪ್ರತಿಗ್ರಹಯೋಗ್ಯರಲ್ಲೆಂದ ॥೧೬॥ ಉಳಿದವರ್ಣತ್ರಯಕೆ ಬಸಕೈ।
ವಳೆತಯಲಿ ಶೂದ್ರನು ಕೃತಾರ್ಥನು । ತಿಳಿಯೆ ನೀನಾರಿದರೊಳಗೆ ಕೆಂಬುವನೊ ಕೊಡುವವನೊ ॥
ಕುಲವಿಹೀನನ ತಂದು ಕೌರವ । ತಿಲಕ ಪತಿಕರಿಸಿದೊಡೆ ನಾಲಗೆ । ಯುಲಿಯಲಾಯಿತು ಕರ್ಣ ನಿನ್ನಯ
ಭವವ ನೆನೆಯೆಂದ ॥೧೭॥ ಪರರು ಪತಿಕರಿಸಿದೊಡೆ ಲಜ್ಜೆಗೆ । ಶಿರವ ನಸುಬಾಗುವರು ಗರುವರು ।

ದುರುಳನೀ ದುರುದುಂಬಿತನದಲಿ ನಿನ್ನ ಹೊಗಳಿದೊಡೆ ॥ ಗರುವವಾನ್ಯರು ಮೆಚ್ಚುವರೆ ಸಸಿ । ನಿರು ಮಹಾತ್ಮರು ನಿನ್ನೊಡನೆ ಯು । ತ್ತರವ ಕೊಡುವರೆ ಗಳಹತನ ಸಮ್ಮೊಪನೆ ಬೇಡೆಂದ ॥೧೮॥ ತೆಗೆದು ತಾಳಿಗೆ ಗಡಸಹಿತ ನಾ । ಲಗೆಯ ಕೀಳ್ವೆನು ಮುನಿದು ತನ್ನೊ । ಲಗವ ತೆಗೆಸಲಿ ಕೌರವನು ನಿನಗೊಲಿದು ಪತಿಕರಿಸಿ ॥ ಅಗಣಿತದ ಗರುವರನು ನಿಂದಿಸಿ । ನಗುವೆ ನಿನ್ನನು ಕೊಲುವೆನೆಂದಾ । ಳುಗಳ ದೇವನು ಸೆಳೆದನಶ್ವತ್ಥಾಮ ಖಂಡೆಯವ ॥೧೯॥ ಆಳುಮುತ್ಸರದಧಿಕರೋಷದ । ಮೇಲುನುಡಿಯಿಂ ಕುಂಸ ಕುರುಭೂ । ಪಾಲನಿಬ್ಬರ ತೆಗೆದನುಚಿತೋಕ್ತಿಯಲಿ ಸಂತೈಸಿ ॥ ಕಾಳಗಕೆ ತತ್ತ್ವವನ್ನೊಡನೆ ನಿ । ಮ್ಮಾಳುತನವನು ತೋರಿಯೊಳಗೊಳ । ಗಾಳುವಾಸಿಯು ತೋರು ಬೇಡೆಂದರಸ ಮಾಣಿಸಿದ ॥೨೦॥ ಬಂದು ಭೀಷ್ಮಂಗೆರಗಿ ಕೃಪಮುಗಿ । ದೆಂದನೀತನು ಪಾರ್ಥನಾಹೊಹ । ಹಿಂದಣಿಂತರ ನವೆಯಬೇಹುದು ವರುಷಹದಿಮೂರ ॥ ಸಂದುದಿಲ್ಲಜ್ಞಾತವಾಸಕೆ । ಮುಂದೆ ದಿನವುಂಟಿನ್ನು ಲೆಕ್ಕ । ಕ್ಕೆಂದು ಕುರುಪತಿ ನುಡಿಯೆ ನಗುತಿಂತೆಂದನಾಭೀಷ್ಮ ॥೨೧॥ ಮಗನೆ ಕೇಳ್ಕೃಪಮುಖರು ಕೇಳಿ । ಮಿಗುವವರೆಡೆಮಾಸ ಮಾಸಾ । ದಿಗಳನವರನುಭವಿಸಿದರು ಮುನ್ನೂರುವತ್ಸರವ ॥ ಮಿಗುವವಧಿ ಯುಧಿಷ್ಠಿರನ ಯು ನಿನ್ನಿನಹಗಲು ಸನ್ನದು ಪಾಂಡುಪುತ್ರನಯುಗ । ಹೊಗುವೊಡಿಂದಿನವಸವವರದು ಕಂಡ ಕೇಳೆಂದ ॥೨೨॥ ಬಲಭ ಮೇರೆಯನೊದೆದು ಹಾಯಲಿ । ನೆಲನನಾಳುವಲಿ ದಿಗಭವನವಂ । ಡಲಕೆ ಪಾಳಿಕಯಿಡಲಿ ನಡೆವಾಡಲಿ ಕುಲಾದ್ರಿಗಳು ॥ ಅಳುಪಲುಂಟೆ ಸತ್ಯಭಾಷೆಗ । ಕಲಿಯುಧಿಷ್ಠಿರನೃಪತಿಯುಸ್ಸಾಯ । ತಿಲಕನಲ್ಲಾ ಕಂದ ಕೌರವಯೆಂದನಾಭೀಷ್ಮ ॥೨೩॥ ಸಾಕದಂತಿರಲಿನ್ನು ಕಾಳಗ । ನೂಕಲುಂಟುದು ಪಾರ್ಥ ಕೊಲುವೊಡ । ಬೇಕುಬೇಡಲಿಬವರ ಕಾಣೆನು ಹಲವುಮಾತೇನು ॥ ಆಕುಮಾರರ ಕರಸಿ ಸಂಧಿಯ । ನಾಕವಾಳರ ಮುಂದೆ ಮಾಡಲು । ಲೋಕದಲ್ಲಿ ನಿನಗಿಲ್ಲ ಸರಿ ಕುರುರಾಯ ಕೇಳೆಂದ ॥೨೪॥ ಕಂಡುದಳಿಪ ಪಿರೋಭಗಮಗೆಯು । ಕೊಂಡುದ ಬಲ ಕೃಪಮುನಿಮುಂ । ಕೊಂಡು ಹೊಕ್ಕಿದು ಕಳನದಲ್ಲದೆ ಪಾಂಡುಸುತರೊಡನೆ ॥ ಬಂಡಿ ಮೇಲೊಟ್ಟಿಲಿದು ಬದುಕುವ । ಭಂಡತನವೆನಗಿಲ್ಲ ಕೃಪರವ । ಕೊಂಪಸಗಬ್ಬೆಕೆಂದು ಬಿನ್ನಪಿಸಿದನು ಕುರುರಾಯ ॥೨೫॥ ಮೇಲೆನಗಳುವಹುದನಸಲ್ಲಂ । ಮೇಲ ನೀಸ ಬಲ್ಲೆಯೆನ್ನುತ ವಿ । ಶಾಲಮತಿ ಬಿಸುಸುಯ್ದು ಕೌರವ ಕೆಟ್ಟನೆಕಟನುತ ॥ ಕಾಳಗವನಾವಾನುಪವು ಪಶು । ಬಾಲನಹಿತಿಭವುಲಗೆ ನೀಕರೆ । ಪಾಳೆಯದನ ನಡಯೆಂದು ಸೇನೆಯನರಡ ಮಾಡಿಸಿದ ॥೨೬॥ ಕೌರವೇಂದ್ರನ ಕೂಡೆ ಸೇನಾ । ಭಾರವನು ಪರುಠವಿಸಿ ಕಳುಹಿದ । ನಾರುಭಟೆಯಲಿ ಭೀಷ್ಮನಿಂದನು ಘಟ್ಟುಮೆಯ್ಯಸಿ ॥ ವೀರಕರ್ಣದ್ರೋಣಗೌತಮ । ಭೂರಿಬಲಗುರುಸೂನುಶಕುನಿಮ । ಹಾರಥಾದಿಯ ಕೂಡಿಕೊಂಡನು ನರನ ಸಂಗರಕೆ ॥೨೭॥ ಇತ್ತಲಖಿಳಮಹಾರಥಾದಿಯ । ನುತ್ತರೆಲ್ಕ ಸುಯೋಧನನು ಪುರ । ದತ್ತ ಗೋಕುಲಸಹಿತ ಹಾಯ್ದನು ಪೂರ್ತಿಮಯ್ಯನುತ ॥ ಮುತ್ತಿಯನು ಮಾಡಿದನಿಯೋಗದ । ತತ್ತ್ವವಣೆ ಲೇಸಾಯಿತ್ತು ಬೇಗದೊ । ಳುತ್ತರನೆ ಕೊಳ್ಳಡದವಾಘಿಯನೆಂದನಾಪಾರ್ಥ ॥೨೮॥ ತುರುಗಳನು ಮರಳಿಚುವುದದು ನಮ । ಗೆರುವಕಾರ್ಯವುಮುಖ್ಯಕೆಲಸದ । ಹೊರಗೆಯನು ನಿರ್ಣೈಸಿ ಬಳಿಕನಲಿವರಸಾಹಸವ ॥ ಅಲದುಕೊಂಬನು ಕೊಳ್ಳ ವಾಘೆಯ । ನಿರಿತದೆಡೆಯಲಿ ಭೀತಿಗೊಳ್ಳದೆ । ತರದು ತಿರುಗುವವಾಗುವೇಗವ ನೋಡು ನೀನೆಂದ ॥೨೯॥ ಎನಲು ಚಪ್ಪರಿಸಿದನು ತೇಜಿಗ । ಳನಿಲಜವದಲಿ ನಿಗು

ರದವು ಮು ।ಮ್ಮೊನೆಯವರ ಮನ್ನಿಸದೆ ಬೆಂಬತ್ತಿದನು ಕೌರವನ ॥ ಜನಪ ಬಿಡುಬಿಡು ತುರುಗಳನು ಫಲು । ಗುಣಕಣಾ ಬಂದವನು ಕುರುಕುಲ । ವನದವಾನಳನರಿಯೆನುತಲುತ್ತರನು ಬೊಬ್ಬಿರಿದ ॥ ॥೩೦॥ ಎಲೆಲೆ ನರ ಜಾರಿದನು ರಾಯನ । ಬಳಿಯ ಹತ್ತಿದಸಡ್ಡಹಾಯ್ದತಿ । ಬಲನ ತೆಗೆ ನಮ್ಮತ್ತಲೆನುತಾದ್ರೋಣಗೌತಮರು ॥ ಹಿಳುಕ ಕನ್ನೆಗೆ ಸೇಟ ಬೊಬ್ಬೆಯ । ಕಳಕಳಟಯಡಗಟ್ಟಿದರು ನಿ । ಲ್ಲೆಲವೊ ಫಲುಗುಣ ಕಾಟ ನೀನೊಟ್ಟೈಸಿಪೋಗೆನುತ ॥೩೧॥ ನಗುತ ಫಲುಗುಣನೆರಡೆರಡುಕೋ । ಲುಗಳನವರವರಂಘ್ರಿಗೆಚ್ಚನು । ತೆಗೆದು ಹಾಯ್ದನು ಮುಂದೆ ಕೌರವರಾಯಮೋಹರಕೆ ॥ ಹೊಗರೊಗುವಹೊಸಕಣೆಯ ದಟ್ಟಿಯ । ಬಿಗಿದನೆಡಬಲನಿಟಬನಲಿ ಸ । ಗಳಿಗೆಯಸಸಿಯಂತಾಯ್ತು ಕೌರವಸೇನೆ ನಿಮಿಷದಲಿ ॥೩೨॥ ಬಂದವಾನೆಗಳರ್ಜುನನ ಬಲು । ದಿರುಪಿನಬ್ಬರಕತಿರಥರ ಬಾ । ಯ್ದೆರಳೆ ಹಾಯ್ದವು ವೀರಹನುಮನ ಗಾಢಗರ್ಜನೆಗೆ ॥ ತಿರವೊಡೆದು ಸಿಡಿಯಿತು ಕಿರೀಟಿಯ । ಪರಮಶಂಖಧ್ವನಿಗೆ ಕುರುಬಲ । ಹೊರಳಿಯೊಡೆಮುದು ಹಾರಿ ಬಿದ್ದುದು ಹೆದರಿ ಹಮ್ಮೈಸಿ ॥೩೩॥ ಎಲೆಲೆ ನರನೋ ಸುಭಟಜೀವನ । ದಳವುಳಿಗನೋ ಟಟ್ಟರಾಯರ । ದಳದ ದಾವಾನಲನೊ ಪಾರ್ಥನೊ ಕಾಲಭೈರವನೋ ॥ ಗೆಲುವರಾವೆಡೆ ಕರ್ಣಕೃಪಸೌ । ಬಲಜಯದ್ರಥರೆಂಬವರ ಹೆಡ । ತಲೆಗೆ ನಾಲಗೆ ಹೋಯಿತೆಂದುದು ಕೂಡೆ ಕುರುಸೇನೆ ॥೩೪॥ ಮರಳಿ ಹೊಡೆ ಹಿಂಡಾಕಳನು ಗೋ । ವರನು ಬಿಡು ಹೆಡಗೈಯ ಹೊಯ್ಲು । ಮ್ಮರಸ ನಯದಪ್ಪಿದನು ತುರುಸೆರೆವಿಡಿವರೇ ನೃಪರು ॥ ಕೊರಳ ಕಡಿತಕೆ ಹೊತ್ತಹಗೆವನ । ಸರಳಿಗಸುಗಳ ತೆರಟರೆಂದ । ಬ್ಬರಿಸಿ ಕುರುಬಲ ಬಾಯಬಿಟ್ಟುದು ರಾಯರಟರಿನಲಿ ॥ ಬೊಬ್ಬಿರಿದು ನರನಸಲು ಕಣೆಗಳು । ಹಬ್ಬಿದವು ಹುರಿಗೊಂಡು ಹೂಣಿಗ । ರೊಬ್ಬುಳಿಯ ಹರಿಗಡಿದು ಕಲಿಗಳ ಹೊದರ ಮೆದೆಗೆಡಹಿ ॥ ತೆಬ್ಬನೂದದುರೆ ಬಳಿಕ ಗಿರಿವೊರೆ । ದಬ್ಬರಿಸಿ ಕಬ್ಬಕ್ಕಿ ಗಗನವ । ಹಬ್ಬಿದಂತಿರೆ ಮುಸುಗಿದವು ಫಲುಗುಣನ ಶರಜಾಲ ॥೩೬॥ ತುಡುಕಿ ಖಂಡವ ಕಚ್ಚಿ ಹಾರುವ । ಗಿಡಿಗನಂತಿರೆ ಭಟರ ಗಂಟಲ । ಕಡಿದು ಹಾಯ್ವಂಬುಗಳು ಬಳಿಯಲಿ ಕೊಂದ್ರತ್ತಲೆಗಳಲಿ ॥ ಅಡಸಿದವು ನಿರಿನಿಟಿಲುಗರದೆಲು । ವೊಡೆಯೆಘಟ್ಟಿಗದಾನೆಗಳ ನಡೆ । ಗೆಡಹಿದವು ಗರಿಸಹಿತ ಹಾಯ್ದವು ಹಯದ ಹೊಟ್ಟೆಯಲಿ ॥೩೭॥ ಕರುಳ ಬಾಯಲಿ ಕಾರಿ ಕಾಲಾ । ಳೊರಳಿ ಕೆಡೆದುದು ಬೋಳೆಯಂಬುಗ । ಳಲಿಯೆ ಸಮಸೀಳಾಗಿ ಬಿದ್ದವು ಗಜದ ಹೋಳುಗಳು ॥ ಕೊರಳು ಹರಿದೊಡನದ್ದರಕುತದ । ಹೊರಳಿಗಳ ಹೊನಲಿನಲಿ ಮುಳುಗಿತು । ತುರುಗರಥದಳರಾಜಿ ಹೊಸಕುಮ್ಮರಿಯ ಸೋಲಿಸಿತು ॥೩೮॥ ಹರಿಗೆ ಖಂಡಿಸಿ ಜೋಡುಸೀಸಕ । ಜರಿದು ಬಲುದೋಳುಡಿದು ಗೋಣರೆ । ಹರಿದು ನಿಟ್ಟೆಲು ಮುರಿದು ತೊಡೆಯರೆಗಡಿದು ತಲೆಯೊಡೆದು ॥ ನರಹರಿದು ಕರುಳೊಕ್ಕುನಣನು । ಬ್ಬರಿಸಿ ಕಾಳಿಜ ಹಾಯ್ದು ನೆತ್ತರು । ಸುರಿದು ತಳದಗಲದಲಿ ಹೊರಳೆತು ವೈರಿಪಾಯದಳ ॥೩೯॥ ಮುಂದೆ ಕಪಿವಂಬುಗಳು ಸುಭಟರ ಕೊಂದು ಬಿದ್ದವು ಮತ್ತೆ ಬಳಿಯಲಿ । ಬಂದವಕೆ ಗುರಿಯಿಲ್ಲ ಹೇಳುವೆನೇನನದ್ಭುತವ ॥ ಬಂದುಗುರಿಗೆರಡಂಬ ತೊಡಬೇ । ಡೆಂದು ಪಾರ್ಥನ ಬೇಡಿಕೊಂಡವು । ಸಂದಮಂತ್ರಾಸ್ತ್ರಂಗಳೆಲೆಜನಮೇಜಯಕ್ಷಿತಿಪ ॥೪೦॥ ಹಿಕ್ಕಿದವು ಹಯ ಬಲದಸುಭಟರ । ನೊಕ್ಕಿ ತೂರಿದ ವಾನೆಗಳ ಸಾ । ಲಿಕ್ಕಿ ನೆಟ್ಟವೆ ಬಹಳ ರಕ್ತದ ಕೆಸರ ಕೈಗಳಲಿ ॥ ಮುಕ್ಕಿದವು ಮಲೆತವರ ಮಾಂಸವ । ನಿಕ್ಕಿದವು ದ್ವಿಜಗಣಕೆ ಸತ್ವವ

ನಿಕ್ಕಿದವು ದಿಗುವಳಯದಲಿ ರಣಧೀರನಂಬುಗಳು ॥೪೧॥ ಒಗ್ಗೊಡೆಯದೌಕಿದಮಹೀಶರು। ಮುಗ್ಗಿದರು ಮುನ್ನಾಳಮೇಳದ । ಹೊಗ್ಗಿನಲಿ ಮುಂಕೊಂಡು ಬಿರುದರು ಬಿಸುಟರೊಡಲುಗಳ ॥ ನುಗ್ಗುನುಸಿಯಾಯ್ತತಿರಥರು ಗಜ । ಮೊಗ್ಗರದಮೊನೆ ಮುರಿದು ಕಾಲನ । ಸಗ್ಗಳೆಯು ಸೆಳದಂತೆ ಸುರಿದವು ರಕ್ತಧಾರೆಗಳು ॥೪೨॥ ಕಾಲದಲಿ ಪರಿಪಕ್ವವಾದವಿ । ಶಾಲಿತಸ್ಥಾವರದಜಂಗಮ । ಜಾಲವನು ಕಾಲಾಗ್ನಿಕವಿಕವಿದಟ್ಟಿಸುಡುವಂತೆ ॥ ಮೇಲುಮೇಲೊಡಗವಿವಬಾಣ। ಜ್ವಾಲೆಯಲಿ ಕುರುಸೈನ್ಯಕಾನನ। ಮಾಲೆಯನು ಕಲಿಪಾರ್ಥಪಾವಕನುರುಹಿದನು ಮುಳಿದು ॥೪೩॥ ದೇವ ಬಿಲ್ಲಾಳಾವಲಾಘವ। ದಾವಘಾಡಿಕೆಯಾವ ಚಳಕವ । ದಾವಶರಸಂಧಾನವಾವವಿಹಾರವಾವಪರಿ ॥ ರಾವಣನೊಳಿಂದ್ರಾರಿರಾಘವ । ದೇವಲಕ್ಷ್ಮಣರಲ್ಲಿ ಕಾಣೆನಿ । ದಾವಧನುಶರವಿದ್ಯೆ ಮಝಭಾಪೆಂದನಾಹನುಮ ॥೪೪॥ ಕಾಣಬಾರದು ಬಿಡುವಹೂಡುವ । ಕೇಣವನು ಪರಮಾಣುಪುಂಜವ । ಕಾಣವೇ ಕಣ್ಣುಗಳು ನಮ್ಮವು ಮರ್ತ್ಯರಾಲಿಗಳೆ ॥ ಜಾಣಪಣವಿದು ಶಿವ ಸುದರ್ಶನ । ಪಾಣಿಗಳಿಗಹುದಮರಪತಿಪದ । ದಾಣೆ ಹುಸಿಯಲ್ಲೆನುತ ಬೆರಗಾಯಿತ್ತು ಸುರಕಟಕ ॥೪೫॥ ಏರುವಡೆದರು ಕೆಲರು ಕೆಲರಸು । ಸೂರೆವೋದುದು ಕೆಲರು ಕೆಲರೆದೆ । ಡೋರುಗಳು ಪೂರಾಯುಗಾಯದಲುಸುರ ತೆಗೆಬಗೆಯು ॥ ಕಾರಿದರು। ರಕ್ತವನು ಸಗ್ಗಕೆ । ಗೂರುಮಾರಾಡಿದರು ತಲೆಗಳ ಹೇರಿದರು ಹರಣವನು ಪೊಟ್ಟಿಗೆಕಾಲನರಮನೆಗೆ ॥ ಚೆಲ್ಲಿಹೋಯಿತು ಕೆಲರು ಕೆಲಬರು । ಬಿಲ್ಲ ಬಿರುದರು ಕೋಲ ಬಿಸುಟರು । ಗಲ್ಲಗೆಡದರು ಕೆಲರು ಪಾರ್ಥನ ಕೋಲತೋಹಿನಲಿ ॥ ಮೆಲ್ಲಮೆಲ್ಲನೆ ಸರಿವಕೌರವ । ಮಲ್ಲನನು ಕಂಡಟ್ಟಿದನು ತುರು । ಗಳ್ಳ ಹೋರದಿರೆನುತ ಮೂದಲಿಸಿದನು ಕಲಿಪಾರ್ಥ ॥೪೬॥ ಕಾಯಲಾಪರೆ ಕರೆಯಿರಾಕ । ರ್ಣಾಯತಾಸ್ತ್ರರನಕಟಕೌರವ । ರಾಯಸಿಲುಕಿದನೆಲ್ಲಿಭೀಷ್ಮದ್ರೋಣಕೃಪರೆನುತ ॥ ಬಾಯಬಿಡೆಕುರುಸೇನೆಗುರುಗಾಂ। ಗೇಯಶಕುನಿವಿಕರ್ಣಕೃಪರಾ। ಥೇಯಸೈಂಧವಚಿತ್ರಸೇನಾದಿಗಳು ಜೋಡಿಸಿತು ॥೪೭॥ ಇತ್ತ ತುರಗಳ ಬಿಸುಟು ರಾಯನ । ತೆತ್ತಿಗರು ತಲ್ಲಣಿಸಿ ಹಾಯ್ದರು । ಹೊತ್ತಿದವು ಮುಸುಡುಗಳು ಸಂಗರವಿಜಯಗರ್ವಿತರ ॥ ಸುತ್ತಗೋವರ ಸನ್ನೆಯಲಿ ಪುರ । ದತ್ತ ಮುಂದಾದವು ಪಶುವ್ರಜ । ವುತ್ತರನು ಮುಳುಗಿದನು ಪರಿತೋಷಪ್ರವಾಹದಲಿ ॥೪೯॥ ಬಿಗಿದಕಚ್ಚುಲ ತೊರೆದುಗುವಹಾ । ಲುಗಳ ನಿಗೆ ಸೂಳೆದ್ದಬಾಲದ । ಮೊಗನೆಗಹಿ ದೆಸೆದೆಸೆಯ ನೋಡುತ ಬೆಚ್ಚಿ ಬಿರುವರಿವ ॥ ಅಗಿದು ಸರಳಿಸಿ ನಿಲುವಹೊಸಬರ । ಸೊಗಡಿಗವ್ವಳಿಸುತ್ತ ಗೋವರು । ತೆಗೆದಪಥದಲಿ ತೆಕ್ಕವರಿದವು ಹಿಂಡುಹಿಂಡಿನಲಿ ॥೫೦॥ ಕೆಲವುಕಡೆಗಂಡಿಳು ಬಾಲದ । ಬಳಿಗೆ ಮೂಗಿಟ್ಟಡಿಗಡಿಗೆ ಮನ । ನಲಿದು ಮೋರೆಯನೆತ್ತಿ ಸುಕ್ಕಿಸಿ ಮತ್ತೆ ಹರಿಹರಿದು ॥ ಮಲೆತುಕಾಲಲಿ ನೆಲನ ಕೆರದ । ವ್ವಳಿಸಿ ಮೆತ್ತೊಂದಿದಿರುವರೆ ಬಲು ಸಲಗನೀಡಿಬದಾಡುತಿರ್ದುದು ಹಿಂಡುಹಿಂಡಿನಲಿ ॥೫೧॥ ತಿರುಗಿ ಕೆಂದೂಳಿಡುತ ತುರುಗಳು । ಪುರಕೆಹಾಯ್ದುವು ನಲವು ಮಿಗಲು । ತ್ತರಕಿರೀಟಿಗಳಾಂತುಕೊಂಡರು ಮತ್ತೆ ಕಾಳಗವ ॥ ಅರಸುಮೋಹರ ಮುರಿದು ಹರಿಬವ । ಮರಳಿಚುವಮಿಡುಕುಳ್ಳವೀರರ । ಧುರಕೆ ಬರಹೇಳೆನುತ ಬಾಣವ ತೂಗಿದನು ಪಾರ್ಥ ॥೫೨॥

ಅಂತು ಸಂಧಿ ೮ ಕ್ಕೆ ಪದ ೪೯೫ ಕ್ಕಂ ಮಂಗಳಮಸ್ತು.

ಒಂಭತ್ತನೆಯ ಸಂಧಿ.

||ಸೂಚನೆ|| ಶ್ರಾವ್ಯರಿಪುಬಲಜಲಧಿವಡಬನ | ಜೇಯನರ್ಜುನ ನಿಖಿಳಕೌರವ| ರಾಯಗಳವನ್ನು/ ಜೈಸಿದನು ಸಮ್ಮೋಹನಾಸ್ತ್ರದಲಿ ||

||ಪದ|| ಮರಳಿದ್ರವು ತುರು ಮಾರಿಗೌತಣ | ಮರಳಿ ಹೇಳಿತು ಹಸಿದಹೆಬ್ಬುಲಿ | ಮೊರೆಯೆ ದನಿದೋರದವು ಹುಲುಮೃಗವೇನನುಸುರುವೆನು || ಧರಣಿಪನೆ ಹಿಂದಿಕ್ಕಿ ಸೌಬಲ| ಮರುಳದುಶ್ಶಾಸನಜಯದ್ರಥ | ರುರುಬಿದರು ತರುಬಿದರು ಪುರಬಿಲಕಾಲಭೈರವನ ||೧|| ಹತ್ತುಸಾವಿರರಥಸಹಿತ ಭಟ | ರೊತ್ತಿ ಕವಿದರು ಲಗ್ಗೆವರೆಯಲಿ | ಬಿತ್ತರಿಸಿ ಬೈಬೈದು ಸಾರುವ ಗೌರುಗಹಳೆಗಳ || ಸತ್ತಿಗೆಯಸಾಲುಗಳೊಳೆಂಬರ | ಕೆತ್ತುದೆನೆ ಕುಲಶೈಲನಿಚಯದ | ನೆತ್ತಿ ಬಿರಿಯಲು ಮೊಳಗಿದವು ನಿಸ್ಸಾಳಕೋಟಿಗಳು ||೨|| ಚಂಬಕನ ಪರಿಪಕ್ಕಿಡಮರುಗ | ಬೊಂಬುಳಿಯ ಗೋಮುಖದ ಡೌಡೆಯ | ಕೊಂಬುಕಹಳೆಯ ರಾಯಗಿಡಿವಿಡಿಪಟಹಪಟುಪಣವ || ತಂಬಟದ ನಿಸ್ಸಾಳವಂಬರ | ತುಂಬಿದುದು ನೆಲಕುಸಿಯೆ ಬಲವಾ | ಡಂಬರದಲರ್ಜುನನ ಮುಸುಕಿತು ದೊರೆಯ ಸನ್ನೆಯಲಿ ||೩|| ಮರಳಿದ್ರವು ತುರುವೆಂಬ ಗರ್ವದ | ಗಿರಿಗೆ ಕೋಕುಲಿಶವನು ಸೇನೆಯ | ನೊರಸಿದುತ್ಸವಜಲಧಿಗಿದೆಕೋ ವಾಡಬಾನಲನು || ಅರಸನಳುಕಿದನೆಂಬಬಯಲು| ಬ್ಬರದಬೆಳೆ ಸಿಲುಗದೆ ನಿದಾಘದ | ಬಿರುಬಿಸಿಲುಕೊಳ್ಳೆಂದು ಕೈಗೊಂಡೆಚ್ಚರತಿರಥರು ||೪|| ಮೊಗಕೆ ಹರಿಗೆಯನೊಡ್ಡಿ ಕಾಲಾ| ಳಗದು ಕವಿದುದು ಸರಳ ಸರಿಯಲಿ | ಬಿಗಿದಬಲ್ಲಾಳೌಕಿತುರುವಣಿಸಿದರು ಸಬಳಿಗರು|| ಉಗಿದಡೊಡಾಯುಧವಲಿರಿದರುಭಾ | ಷೆಗಳರಾವುತರು ಕೆಂಗರಿಯಕೋ | ಲುಗಳಹೆಮ್ಮಳೆಗರೆದು ಕವಿದರು ಚೋದರುರವಣಿಸಿ ||೫|| ಅರರೆ ರಾವುತರಾವುತೆಂಬ | ಬ್ಬರಣೆ ಮಸಗದುದೊಂದುದೆಸೆಯಲಿ| ಸರಿಸಸಬಳಿಗ ಪೂತುಪಾಯಕುಯೆಂಬಕಳಕಳಿಕೆ || ಧಿರುರೆ ಸಾರಥಿಹಳುಹಳೆಂಬ| ಬ್ಬರಣೆ ಮಸಗಿದುದೊಂದುಕಡೆಯಲಿ | ಕರಿಘಟೆಯ ಕಡುಹೊಂದುಕಡೆಯಲಿ ಮುಸುಕಿತರ್ಜುನನ ||೬|| ಸುರಪಸವಪಿಯ ಚೆಲುವಿ ದೊಡೆಸೂರ | ರರಮನೆಯಗಾಯಕರ ಗೆಲಿದೊಡೆ| ಜರಡುಜಂತ್ರುದಮಾನನೆಚೊಡ್ಡದ ರಾಯಕಟಕದಲಿ || ಗೋರವನೊಳು ಕಾದಿದೊಡೆ ಹೆಂಗುಸ| ನಿರುಳುಕದ್ದೋಡಿದೊಡೆಧಿಟನೀಧುರಕೆ ಧೀರನೆ ಪಾರ್ಥ ಘಡಯೆನತೆಚ್ಚರತಿರಥರು ||೭|| ಭಂಡರುಲಿದೊಡೆ ಗರುವರದವಾ | ಕೊಂಡು ನುಡಿವರೆ ಸಾಕಿದೇತಕೆ | ದಂಡುವರಿಪೆನು ನಿಮಿಷಸ್ಥಿರಿಸಿ ನಿಂದು ಕಾದುವೊಡೆ || ಕೊಂಡಹಜ್ಜೆಗೆ ಹಂಗಿಗರು ಪಿಂಗೆ | ಗಂಡುಗೆಡದಿರಿ ನಿಮ್ಮ ಬಗೆಗಳ | ಕಂಡುಬಲ್ಲೆನೆನುತ್ತ ಫಲುಗುಣನೆಚ್ಚನತಿರಥರ ||೮|| ಗುರುಸುತನ ಬಳಿ ರಥವನೈಸಾ | ವಿರವ ಕೊಂದನು ಕರ್ಣನೊಡನೆಯು | ವರಮಹಾರಥರೆಂಟುಸಾವಿರವನು ರಣಾಗ್ರದಲಿ || ಗುರುನದೀಜರ ಬಳಿರಥವಸಾ | ವಿರವ ಕೃಪಸೈಂಧವಸುಯೋಧನ | ರರಸುಘಟ್ಟಿನ ರಥವ ಮುರಿದನು ಹತ್ತುಸಾವಿರವ ||೯|| ತುರುಗದಳವೆಂಬತ್ತುಸಾವಿರ | ಕರಿಘಟೆಯನೈವತ್ತುಸಾವಿರ | ವರ ರಥವ ಹುಡಿಮಾಡಿದನು ಹನ್ನೆರಡುಸಾವಿರವ || ಧುರಕೆ ವೆಗ್ಗಳವಾದರಧಿಕರ | ತಿರವ ತರಿದನು ಮೂರುಕೋಟಿಯ | ನರಸುಕಾಲಾಳುಗಳ ಗಣನೆಯನರಿಯೆನಾನೆಂದ ||೧೦|| ಸವಗ ಸೀಳಿತು ಕೃಪನ ಭೀಷ್ಮನ | ಕವಚ ಹರಿದುದು ದ್ರೋಣನೊಂದನು | ರವಿಯಮಗೆ

ಮಸೆಗಂಡನಶ್ವತ್ಥಾಮ ಮೈಮರೆದ ॥ ಅವನಿಪತಿಗೇರಾಯ್ತು ಸಲೆ ಸೈಂ । ಧವ ಶಕುನಿ ದುಶ್ಶಾಸನಾದಿಗ । ಳವಯವದೊಳಂಬುಗಳನಾಯ್ದರು ತೋದರಕ್ತದಲಿ ॥೧೧॥ ಕಡಿವಡೆದುದಾಚತುರಂಗಬಲ ಬೆಂಗೊಡದೆ ನಾಯಕರಾಂತು ತಮಗಿನ್ನೊಡಲುಗಳವೇಲಾಸೆಯೇಕೆನೆನ್ನುತ ಮಿಗೆ ಮಸಗಿ ॥ ಸೆಡೆದು ಸೊಪ್ಪಾದಖಿಳಸುಭಟರ । ಗಡಣವನು ಮೇಳೈಸಿ ಮಗುಳವ । ಗಡಿಸಿ ನೂಕಿತು ಸೇನೆ ಭೀಷ್ಮದ್ರೋಣರಾಜ್ಞೆಯಲಿ ॥೧೨॥ ಖತಿಯಲಶ್ವತ್ಥಾಮನೀರವಿ । ಸುತನ ಜರೆದನು ಗಾಯವಡೆದೈ । ಪ್ರತಿಭಟನ ಭಾರವಣೆ ಲೇಸೇ ಕರ್ಣ ನೀನರಿವೈ ॥ ಅತಿಬಲನು ನೀನಪ್ರಹಿತಬಲವನ । ಹುತವಹನು ನೀನಿರಲು ಕುರುಭೂ । ಪತಿಯ ಬಲ ನುಗ್ಗಾಯ್ತಲಾ ನಿಷ್ಕರುಣಿ ನೀನೆಂದ ॥೧೩॥ ಭಟನು ನಾನಿರಲುಭಯರಾಯರ । ಕಟಕದೊಳಗಿನ್ನಾವನೆಂದು । ಬ್ಬಟೆಯ ನುಡಿಗಳ ನುಡಿದು ಬಾಚಿದೆ ಕೌರವನ ಧನವ ॥ ಭಟನು ಫಲುಗುಣನಹನು ತೋರಾ । ಪಟುತನವನೆಲೆಯುಪಚಯಿಸೈ । ಪಿಟಸಿ ಪಿಪ್ಪಲಸಾದೆಯೆಂದನು ದ್ರೋಣಸುತ ನಗುತ ॥೧೪॥ ಆಗಳೇಳಿಸಿ ನುಡಿದನುತ್ತರಾ । ನೀಗಳೇನಾಯಿತ್ತು ನುಡಿಗಳತಾಗನರಿಯದೆ ತರಿಚುಗೆಡೆವರೆ ಗರುವರಾದವರ ॥ ಈಗಳಾವ್ಹಾರುವರು ಕ್ಷತ್ರಿಯ । ನಾಗಿ ನೀನರ್ಜುನನ ತುರುಗಳ । ಬೇಗ ಮರಳಿಚಿ ತಂದು ತೋರದೆ ಮಾಣೆ ವಿಟವೆಂದ ॥೧೫॥ ಎಲವೊ ಗರುಡಿಯ ಕಟ್ಟಸಾಮುವ । ಕಲಿಸಿ ಬಳಿಕಾಕೋಲಮುಕ್ಕಳೆ । ಬಲದಿ ಬಹುಕುವಕೃಪಣವೃತ್ತಿಯ ನಿಮ್ಮ ಕೂಡೆಮಗೆ ಕಲಹವೇತಕೆ ಕಾಣಬಹುದೆಂ । ದಲಘುಭುಜಬಲ ಭಾನುಸುತ ಕಡು । ಮುಳಿದು ಘಡಘಡ ಪಾರ್ಥನೈದೋರೆನುತ ಮಾರಾಂತ ॥೧೬॥ ಇತ್ತಲಿತ್ತಲು ಪಾರ್ಥ ನಿಲುನಿಲು । ಮೃತ್ಯುವಿನ ಹಾರುವರಸಂಜಿಸಿ । ಹೊತ್ತುಗಳೆದರೆ ಹೋಹುದೇ ಕೈದೋರು ಮೈದೋರು ॥ ತೆತ್ತಿಗರ ಕರೆ ನಿನ್ನ ಬೇರ್ಕನು । ಕಿತ್ತು ಕಡಲೊಳು ತೊಳೆವರಿಪುಭಟ । ಮೃತ್ಯುವಬಯಾ ಕರ್ಣನೆನುತಿದಿರಾಗಿ ನಡೆತಂದ ॥೧೭॥ ಉಂಟು ನೀನಾಹವದೊಳಗೆ ಗೆಲ । ಲೆಂಟೆದೆಯಲಾ ನಿನ್ನ ಕೋಲುವ । ರುಂಟೆ ವೀರರು ಕೌರವೇಂದ್ರನ ಬಹಳಕಟಕದಲಿ ॥ ಟೆಂಟಣಿಸದಿದರಾಗು ನಿನ್ನಯ । ಸುಂಟಿಗೆಯನಿತ್ತಖಿಳಭೂತದನಂಟನರ್ಜುನನೆನಿಸಿಕೊಂಬೆನು ಕರ್ಣಕೇಳೆಂದ ॥೧೮॥ ಚಕಿತಚಾಪರು ಗಾಢಬದ್ಧ । ಭ್ರುಕುಟಭೀಷಣಮುಖರು ರೋಷ । ಪ್ರಕಟಪಾವಕವಿಸ್ಫುಲಿಂಗರು ಹೊಕ್ಕು ಸಮತಳಿಸಿ ॥ ವಿಕಟಶೌರ್ಯೋತ್ಕಟವಹಾಸಾ । ಯಕರು ನಿಷ್ಠುರಸಿಂಹಗರ್ಜನ । ವಿಕಳಿತಾಚಲಸನ್ನಿವೇಶರು ಹೊಕ್ಕು ತರುಬಿದರು ॥೧೯॥ ಪೂತುರೇ ಬಿಲುಗಾರ ಮಝರೇ । ಸೂತನಂದನ ಬಾಣರಚನಾ । ನೂತನವಬಿಲುವಿದ್ಯೆ ಭಾರ್ಗವಸಂಪ್ರದಾಯವಲಾ ॥ ಆತುಕೊಳ್ಳೈ ನಮ್ಮ ಬಲುಮಗ । ಳೇತರತಿಶಯವೆನುತ ಸರಳಿನ । ಸೇತುವನು ಕಟ್ಟಿದನು ಗಗನಾಂಗಣಕೆ ಕಲಿಪಾರ್ಥ ॥೨೦॥ ಮೇಲುಗೈಯಹೆ ಬಿರುದರೊಳು ಬಿ । ಲ್ಲಾಳು ನೀನಹೆ ಚಾಪವಿದ್ಯಾ । ಭಾಳನೇತ್ರನೆ ಗರುಡಿಯಲ್ಲಾ ಕಲಿತವನೆ ನಿನಗೆ ॥ ಕೋಲು ನಮ್ಮವು ಕೆಲವು ಸಮುಗೈ । ಯಾಳೆ ನಿಮಗಾವೆನುತ ನೋಟಕ । ರಾಲಿ ಝೊಂಪಿಡೆ ಕರ್ಣತುಡುಕಿದನಂಬಿನಂಬುಧಿಯ ॥೨೧॥ ಅಹಹ ಫಲುಗುಣ ನೋಡಲಮ್ಮೆನು । ಬಹಳಬಾಣಾವೃತವಾದುದು । ಮಹಿ, ಮಹಾದೇವೆನುತ ಸಾರಥಿ ಮುಚ್ಚಿದನು ಮುಖವ ॥ ರಹವ ಮಾಡದಿರೆಲವೊ ತನಗಿದು । ಗಹನವೇ ನೋಡೆನುತ ನರನತಿ । ಸಹಸದಲಿ ಕೆದರಿದನು ಕರ್ಣನ ಬಾಣಪಂಜರವ ॥೨೨॥ ವೀರನಲ್ಲಾ ಬನದರಾಜಕು ।

ಮಾರನೆಲ್ಲಾ ಕೌರವನ ಬಡಿ । ಹೋರಿಯುಲ್ಲಾ ತಿಳಿದಿರ್ಕೈ ದಿಟವೇಕಚಕ್ರದಲಿ ॥ ಸಾರಿಯುರ ಪಾವಕ
ದಚೋಹವ । ಸಾರು ತೆಗೆದರು ಪಾರ್ಥ ನಿನಗೀ । ಶೌರಿಯುದಸಿರಿಯೆಂತೆನುತ ತೆಗೆದೆಚ್ಚನಾ ಕರ್ಣ
॥೨೩॥ ಬಲುಗಡಿಯನಹೆ ಬೇಟೆಗಾರರ । ಬಳಗವುಳ್ಳವನಹೆ ವಿರೋಧಿಯ । ದಳಕ ನೀನೊಡ್ಡುಳ್ಳಭಟನ
ಹೆ ಸ್ವಾಮಿಕಾರ್ಯದಲಿ ॥ ತಲೆಯ ತೆರುವವನಹೆ ಕುಭಾಷೆಗೆ । ಮುಳಿವವರು ನಾನಲ್ಲ ಸೈರಿಸು । ಬಳಿ
ಕೆನುತ ಕಲಿಪಾರ್ಥ ಸುರಿದನು ಸರಳಸರಿವಳೆಯ ॥೨೪॥ ಅದ್ದನೋ ಬಾಣಾಂಬುಧಿಯಲೊಡೆ । ಬಿದ್ದ
ನೋ ವಿತಳವಲಿ ಮೇಗ್ಸ್ಫಿಥಿ । ಕದ್ದನೋ ಕೈವಾರವೇತಕೆ ಕಾಣೆವಿನಸುತನಾ ॥ ತಿದ್ದಿತಾತನದೆಸೆ ನದೀ
ಸುತ । ನಿದ್ದನಾದೊಡೆ ಕೌರವೇಂದ್ರನ । ಹೊದ್ದಹೇಳೆಂದೊದರುತಿರ್ದುದು ಕೂಡೆ ಕುರುಸೇನೆ ॥೨೫॥
ಇಡಿದಪೋಡದಮುತ್ತಿಗೆಯ ಮೇ । ಲೊಡೆದು ಮೂಡುವರವಿಯವೋಲ್ನೈರೆ । ಕಡಿದು ಶರಪಂಜರ
ವ ಮುಸುಕಿದನರ್ಜುನನ ರಥವ ॥ ನಡುಗಿದನು ವೈರಾಟ ಹಯುವಡಿ । ಗಡಿಗೆ ನೊಂದವು ಹನುಮನಂ
ಬರ । ವೊಡೆಯೆ ಬೊಬ್ಬಿರಿದನು ಮಹಾದ್ಭುತವಾಯ್ತು ನಿಮಿಷದಲಿ ॥೨೬॥ ಸ್ತೋಲವಾಯ್ತಿತು
ಕರ್ಣಗೆಂಬರ । ಸಾಲಗೆಯ ಕೊಯ್ಲೈಲವೊ ಮಝಬಿ । ಲ್ಲಾಳುರಾಯನ ಪಟ್ಟದಾನೆ ವಿರೋಧಿಭೂ
ಪತಿಯಾ ॥ ಭಾಳದಕ್ಕರ ತೊಡೆಯಿತೋ ತೆಗೆ । ಕಾಳಗವನೆಂದಖಿಳ ಕುರುಬಲ । ಜಾಲ ಬೊಬ್ಬಿಡೆ
ಕರ್ಣ ಮೆರೆದನು ಬಿಲ್ಲಬಲುಮೆಯಲಿ ॥೨೭॥ ಅರಿಭಟನ ಶರಜಾಲವನು ಸಂ । ಹರಿಸಿದನು ನಿಮಿಷ
ದಲಿ ಫಲುಗುಣ । ನೆರಡುಶರದಲಿ ಸಾರಥಿಯನೈದಂಬಿನಲಿ ಹಯುವ ॥ ಶರಚತುಷ್ಟಯದಿಂದ ಕರ್ಣ
ನ । ಕರದ ಬಿಲ್ಲನು ಕಡಿಯೆ ಭಗ್ನೋ । ತ್ಕರುಷಭಂಗಿತನಾಗಿ ಮುರಿದನು ಮೋನದಲಿ ಕರ್ಣ ॥೨೮॥ ಓ
ಟವೇ ಯಪಜಯದ ಬೊಡ್ಡಿಯ । ಬೇಟವೇ ಬೆಸಗೊಳ್ಳಿರ್ಕೈ ವೊಳ । ತೋಟಿಗೊತ್ತಾಳಹುದು ನಾಲಗೆ
ಯಿಾಗಳೇನಾಯ್ತು ॥ ಲಟವಿಕಭೂಪತಿಯ ಕೀರ್ತಿಯ । ಕೂಟಣಿಗರೊಗ್ಗಾಯ್ತು ತೆಗೆ ಮರು ।
ಳಾಟವಿನ್ನೇಕೆನುತ ಪಾರ್ಥನ ತಾಗಿದನು ದ್ರೋಣ ॥೨೯॥ ಇದಿರುಗೊಳ್ಳೆ ಪಾರ್ಥ ವಿಪ್ರರ । ಗದಟು
ತ್ರನವೆಲ್ಲಿಯದು ಕರ್ಣನ । ಸದೆಬಡಿದ ಸಾಹಸಕೆ ಹಿಗ್ಗದಿರೆಮ್ಮ ಕೈಗುಣವ ॥ ಕದನದಲಿ ನೀ ನೋಡ್ದು
ಕೈಸಾ । ರಿದವು ಗಡ ಕಾಮಾರಿ ಹಿಡಿವ । ಗ್ಗದಶರಾವಳಿಯದರಪರಿಯಂತೆಮಗೆ ತೋರೆಂದ ॥೩೦॥ ಇ
ದಿರುಗೊಂಡೆನು ವಂದಿಸಿದೆನೆ । ನ್ಮ್ಮದಯ ನಿಮ್ಮದು ನಿಮ್ಮ ಕೃಪೆಯಲಿ । ವಿದಿತವೆನಗೀವಿದ್ಯೆ ನೀ
ವ್ಕಾಮಾರಿ ಮುರವೈರಿ ॥ ಹೃದಯ ನಿಮ್ಮದು ಕಾಳಗಕೆ ನಿ । ಮ್ಮದಿರೊಳಾಳೇ ತಾನು ಕರುಣಾ । ಸ್ಪದ
ರು ನೀವೆಂದೆಚ್ಚನರ್ಜುನನೆವರವೋಹರಕೆ ॥೩೧॥ ವಿನಯವುಚಿತವೆ ತತ್ತ್ಸಮರದ । ಮೊನೆಯೊಳಾರಿ
ದಿರಾದೊಡಿರುವುದು । ಜನಪರಿಗೆ ಕರ್ತವ್ಯವದು ಸಾಕುಳಿದಮಾತೇನು ॥ ತನುಜ ಸೈರಿಸುಸೈರಿಸೆಂದೆ ।
ಚ್ಚನು ನಿರಂತರಬಾಣವರುಷವ । ನನಿಮಿಷಾವಳಿ ಪೂತುರೆನೆ ಕೈದೋರಿದನು ದ್ರೋಣ ॥೩೨॥ ಭಾ
ವಿಸಲ್ಪ್ರತಿಬಿಂಬದಲಿ ಬೇ । ರಾವುದತಿಶಯವುಂಟು ನೀವೆನ । ಗಾವಪರಿಯಲಿ ಕಲಿಸಿದಿರಿ ನಿಮಗೊಪ್ಪಿ
ಸುವೆನವನು ॥ ನೀವು ನೋಡುವುದೆನುತ ನರನೆಸ । ಲಾವುದೆಂಬರವಾವುದವನಿಯ । ದಾವುದರಿಬಲವೆನ
ಲು ಹಬ್ಬಿತು ಪಾರ್ಥಶರಜಾಲ ॥೩೩॥ ವಿಷಯಲಂಪಟತನದಲೌಪ್ವಿ । ರ್ಮಿಸಿದಪೆಶ್ವತ್ಥಾಮನನು ನ ।
ಮ್ಮಸೆವಮೋಪದಕಂವನ್ನೆಯೆಲೆಪಾರ್ಥ ನೀನೆಮಗೆ ॥ ಎಸುಗೆಗಾರರದಾರಿಗೀಶರ । ವಿಸರ ಸಂಭವಿಸು
ವುದಿದಾರಿಗೆ । ವಿಷಮವೀರನ ಕೈಯ ಚಳಕವಿದೆಂದನಾ ದ್ರೋಣ ॥೩೪॥ ಎನುತ ಸುರಿದನು ಸರಳ

ಸಾರವ । ನನಲಗರ್ಭದ ಬಾಯಧಾರೆಗ । ಳನಿಲಗರ್ಭದ ಗರಿಗಳಶನಿಯಗರ್ಭಮಿಂಚಿಗಳ ॥ ಮೊನೆ
ಯ ಬಂಬಲುಗಿಡಿಯ ಹೊಗರಿನ । ತನಿಹೊಗೆಯ ಹೊದರುಗಳ ಪುಂಖ । ಧ್ವನಿಯ ಥಟ್ಟಣೆ ಮಿಗ
ಲು ಕವಿದವು ದ್ರೋಣನಂಬುಗಳು ॥೩೫॥ ದೇವಭಾರದ್ವಾಜ ಬಲುವಿ । ದ್ಯಾವಿಷಯನವರುದ್ರ ಘನ
ಶಸ್ತ್ರಾವಳೀನಿರ್ಮಾಣನೂತನಕಮಲಭವ ಯೆನುತ ॥ ಕೋವಿದನ ಶರತತಿಪ್ರಕರವನು ಗಾಂ । ಡೀವಿ
ಯಗಣಿತಬಾಣಭಾನುಕ । ರಾವಳಿಯಲಪಹರಿಸಿದನು ಸುರರಾಜಸುತ ನಗುತ ॥೩೬॥ ಹಿಳುಕನೀದು
ದೊ ಗಗನವಂಬಿನ । ಜಲಧಿ ಜರಿದುದೊ ಪಾರ್ಥನೆಂಬ । ಗ್ಗಳವಿರಿಂಚನ ಬಾಣಸೃಷ್ಟಿಯೊ ಬಲ್ಲನಾ
ವವನು ॥ ಇಳೆಯ ಮರ್ತ್ಯರು ಶಿವಶಿವಾ ತೆಗೆ । ಫಲುಗುಣಗೆ ಸರಿಯೆಂಬವರಬಾ । ಯ್ಬುಳಿವುದೋ
ಗುಡಾಕೇಶೆ ಮತ್ಸರವೆಂದುದಮರಗಣ ॥೩೭॥ ಬಳಿಕ ಪಾರ್ಥನ ಬಾಣದಲಿ ಬಸ । ವಳಿಯೆ ಸಾರಥಿ
ಮೆಲ್ಲಮೆಲ್ಲನೆ । ತೊಲಗಿಸಿದನಾರಥವನಿತ್ತಲು ಕರ್ಣನೀಕ್ಷಿಸಿದ ॥ ಎಲೆಲೆ ಕಟಕಾಚಾರ್ಯ ಗೆಲಿದ
ನು । ಫಲುಗುಣನನಿನ್ನೇನು ಕೌರವ । ಬಲದಹಗೆ ಹರಿವಾಯ್ತು ರಾಜಾಭ್ಯುದಯವಿನ್ನೆಂದ ॥೩೮॥
ಫಡಫಡೆಲವೋ ಕರ್ಣ ಸಾರಥಿ । ಮಡಿದೊಡೇನಮಸೋಲವೇ ಕಾ । ಳ್ಗಡೆಯದಿರು ನೋಡಾದೊಡ
ಯ್ಯನ ಹರಿಬವಾಹನವ ॥ ನುಡಿಗೆ ತೆರನಾಯ್ತೆಂಬಖುಲ್ಲರ । ಬೆಡಗನೋಡೆನುತುಗ್ರಚಾಪವ । ಮಿಡಿ
ದು ಮಂಡಿಸಿ ಹರನ ಹೋಲುವಸುಭಟ ಮಾರಾಂತ ॥೩೯॥ ಆವುದೈ ನೀನರಿದಬಿಲುವಿ । ದ್ಯಾವಿಷಯಘನ
ಚಾಪವೇದಾ । ರ್ಥಾವಳಿಯಶರವಸೂಕ್ತಿಕೋಪನ್ಯಾಸವೆಂತೆಂತು ॥ ಕೋವಿದರ ಭೂಸುರರ ಯುಕ್ತಿ
ಯ । ನೀವು ಕೊಂಡಿರೆ ಶಸ್ತ್ರವಿದ್ಯಾ । ಭಾವಗೋಷ್ಠಿಯ ಬಲ್ಲೊಡರಿಯೆಂದೆಚ್ಚನರ್ಜುನನ ॥೪೦॥ ಅ
ಕ್ರಮವತ್ರಿಭುವನವಿದ್ಯಾಚಕ್ರವರ್ತಿಗಳೆಂದು ನೀವೀ । ವಿಕ್ರಮದ ಮಾತಿನಲಿ ಮೇಗರೆ ಮೆರವಭಟರು
ಗಳೇ ॥ ಶಕ್ರನಳುಕುವಬಾಹುಬಲರಿಪು । ಚಕ್ರದೊಳಗಿನ್ನಾರಿಗುಂಟಿದು । ವಕ್ರಭಣಿತೆಗೆ ಸಲುವುದಶ್ವ
ತ್ಥಾಮನನುತೆಚ್ಚ ॥೪೧॥ ಅರ್ಜುನನ ಶರವಿದ್ಯೆವಿವರಿಸೆ । ದುರ್ಜಯವಲಾ ಗರುವತನದಲಿ । ಗರ್ಜಿಸಿ
ದೊಡೇನಹುದೆನುತ ಗುರುಸೂನು ಹರುಷದಲಿ ॥ ನಿರ್ಜರರು ಮಝಭಾಪುರೆನಲಾ । ವರ್ಜಿಸಿದತಿರುವಿ
ನಲಿ ಸಂಗರ । ನಿರ್ಜಿತೇಂದ್ರಿಯನೆಸಲು ಕಣೆಗಳು ಕವಿದವಂಬರಕೆ ॥೪೨॥ ಗುರುತನೂಜನಲಾ ವಿಭಾ
ಡಿಸಿ । ಹುರುಳುಗೆಡಿಸಲುಬಹುದೆ ನೋಡು । ತ್ತರಸುಯೋಧನಸೈನ್ಯಶರಧಿಯ ಗುಂಪಿನತಿಬಲರ ॥
ಹರನ ಸರಿದೊರೆಯಸ್ತ್ರವಿದ್ಯಾ । ಧರರು ಮರ್ತ್ಯರೊಳಾರು ಲೇಸೆಂ । ದುರುಳೆಗಡಿದನು ಪಾರ್ಥ
ನಶ್ವತ್ಥಾಮನಂಬುಗಳ ॥೪೩॥ ಗುರುಸುತನ ಶರಜಾಲವನು ಸಂ । ಹರಿಸಿ ಮಗುಳಸ್ತ್ರೌಘವನು ವಿ ।
ಸ್ತರಿಸಿದನು ಕಲಿಪಾರ್ಥನೀತನ ಸರಳುಗಳ ಸವರಿ ॥ ತರಣಿಬಿಂಬವ ನಭವಹೂಳ್ದುದು । ಗುರುಸುತನ
ಸಾಮರ್ಥ್ಯವಿಂತಿ । ಬ್ಬರಿಗೆ ಸಮಬಲವಾಗಿ ಸಮತಳಿಸಿತ್ತು ರಣಕೇಳಿ ॥೪೪॥ ತೀರವರ್ಜುನನಂಬು ರಣದ
ಲಿ । ತೀರಿದವು ಗುರುಸುತನ ಶರಕ್ರ । ವಾರವೇ ಕೈಗುಂದಿ ನಿಂದನು ದ್ರೋಣನಂದನನು ॥ ವೀರರು
ಮೊಗದಿರುಹಿತ್ತಲಾ ರಣ । ಧೀರನಶ್ವತ್ಥಾಮ ಸೋತನು । ಸಾರೆನುತ ಕೃಪನುರುಬಿದನುತರುಬಿದನು
ಫಲುಗುಣನ ॥೪೫॥ ತಂದೆಮಕ್ಕಳು ಸೋತರಿನ್ನೇ । ನೆಂದು ಮುಯ್ಯಾನದಿರ್ಪು ನಿಲುನಿ । ಲ್ಲೆಂದು ಕೃ
ಪನಸಹಾಯ್ದು ಪಾರ್ಥನ ರಥವ ತರುಬಿದನು ॥ ಬಂದಪರಿ ಲೇಸೆನುತ ಫಲುಗುಣ । ನೊಂದು ಕವ
ಲಂಬಿನಲಿ ಗುರುಗಳಿ । ಗಿಂದು ವಂದಿಸಬೇಕೆನುತ ಕೀಲಿಸಿದನಾರಥವ ॥೪೬॥ ತರಹರಿಸಿ ಶರವೈದರಲಿ

ಸಂ । ಹರಿಸಿಕೊಳ್ಳೆಂದೆಚ್ಚೊಡೀತನ । ತುರಗವನು ತಾಗಿದವು ನೊಂದವು ರಥದ ವಾಘೆಗಳು ॥ ಕೆರಳಿ ಫಲುಗುಣನರ್ಧಚಂದ್ರದ । ಸರಳಿನಲಿ ಸಾರಥಿಯ ತುರಗವ । ಕರದಬಿಲ್ಲನು ಕಡಿಯೆ ತೊಲಗಿದನಾ ಕೃಪಾಚಾರ್ಯ ॥೪೭॥ ಎಲೆಲೆ ಕರ್ಣದ್ರೋಣಗುರುಸುತ । ರಲಘುಭುಜಬಲಕೃಪನು ಹೊಕ್ಕಿರ । ದಳುಕಿದರು ಮರುಳುಭಾಪುರೆಂತಹುಟಿಯೊ ಪಾರ್ಥನಗ್ಗಳಿಕೆ ॥ ಗೆಲುವನೊಬ್ಬನೆ ನಮ್ಮ ಬಲದಲಿ । ನಿಲುಕಿ ಹಿಂಗುವಸುಭಟರಿನಿಬರು । ಸುಲಭವೆಮಗೀಸೋಲವೆಂದುದು ಕೂಡೆ ಕುರುಸೇನೆ ॥೪೮॥ ಬಾಯಬಿಟ್ಟುದು ಸಕಲ ಕೌರವ । ರಾಯದಳವಡಮುಖದಲಘಟರು । ಹಾಯಿದರು ತವಪೇನು ತೆರದರಸಾಯ್ತು ಕುರುಸೇನೆ ॥ ಕಾಯಬೇಕೆಂದೆನುತ ವರಗಾಂ । ಗೇಯ ಚಾಪವ ಪಿಡಿದು ಬೆರಳಲಿ । ಸಾಯಕವ ತೂಗುತ್ತ ತಡೆದನು ಪಾರ್ಥನುರವಣೆಯ ॥೪೯॥ ಓಡಿದವರಲ್ಲಲ್ಲಿ ಧೈರ್ಯವ । ಮಾಡಿತಚ್ಚಾಳೊಗ್ಗಿನಲಿ ಹುರಿ । ಗೂಡಿತಬ್ಬರ ಮಗುಳೆ ನಿಬ್ಬರವಾಯ್ತು ನಿಮಿಷದಲಿ ॥ ಕೂಡೆ ಗುಗುಗಿಟ್ಟಿತು ಚತುರ್ಬಲ । ಜೋಡುಮಾಡಿತು ಕಪಿದುದೀತನ।ಕೂಡೆ ಘನಗಂಭೀರಭೇರಿಯಬಹಳರಭಸದಲಿ ॥೫೦॥ ತೊಲಗು ರಾಯಪಿತಾಮಹನ ಖತಿ । ಬಲುಹು ತೆತ್ತಿಗರಹರೆ ರುದ್ರನ । ನಳಿನನಾಭನ ಕರಸು ನೀ ಸಾರು ಸಾರೆನುತ ॥ ಉಲಿವಬಳಿಯಮಹಾರಥರ ಕಳ। ಕಳದ ಕಹಳೆಯಪಾಠಕರ ಗಾ।ವಳಿಯಬಿರುದಿನ ಬಹಳತೆಯಲ್ತಂದ ನಾಭೀಷ್ಮ ॥೫೧॥ಪೂತುರೇ ಕಲಿಪಾರ್ಥ ಭುವನ । ಖ್ಯಾತನಾದೈ ಕಂಡ ದ್ರೋಣನ । ಸೂತಸುತಕೃಪಗುರು ತನೂಜರ ಗೆಲಿದೆ ಬಳಿಕೇನು ॥ ಬೀತುದೇ ನಿಮ್ಮವಧಿ ಕುರುಕುಲ । ಜಾತವನು ಹರೆಗೆಡಿದು ನಿಮಯ।ಭೂತಳವನಾಳುವಿರೆ ನೀವೆಂದೆಚ್ಚನಾಭೀಷ್ಮ ॥೫೨॥ ನಿಮ್ಮ ಕಾರುಣ್ಯಾವಲೋಕನ । ವೆಮ್ಮಸಿರಿ ಬೇರೆಮಗೆ ಕಾಳಗ । ದೆಮ್ಮಗೆಯ ವಿಕ್ರಮದ ವಿವರಣವಿದ್ಯೆಫಲಿಸುವುದೇ ॥ ಬಿಮ್ಮು ಬೀಸರವಹುದೆ ನಿಮ್ಮಯ । ಸೊಮ್ಮಿನವರಿಗೆ ಬೇರರರಾಜ್ಯದ। ಹೆಮ್ಮೆತಾನಮಗೇಕೆನುತ ಕ್ರೈಯೊಡನೆ ನರನೆಚ್ಚ ॥೫೩॥ ಎನಲು ಪಾರ್ಥನ ಬಾಣವನು ಖಂ । ಡಿಸುತ ಸೂತನ ನೆರಡರಲಿ ಕೀ। ಲಿಸಿದನೈವಂಬಿನಲಿ ಹನುಮನ ಹಣೆಯನೊಡೆಯೆಚ್ಚ ॥ ನಿಶಿತಶರವೆಂಟರಲಿ ಕವಚವ । ಕುಸುರಿದರಿದನು ನರನ ವಕ್ಷದ । ಬಿಸುಗೆಬಿಡೆ ಮೂರಂಬಿನಲಿ ಮುರಿಯೆಚ್ಚಬೊಬ್ಬಿರಿದ ॥೫೪॥ ಅರಿಯಶರಹತಿಗುತ್ತರನ ತನು। ಬಿರಿಯೆ ಬಸವಳಿದನು ಕಪೀಶ್ವರ।ನೊರಲಿದನು ರಾವಣನ ಗಾಯವ ನೆನೆದನಡಿಗಡಿಗೆ ॥ ಮರೆದ. ಮಲಗಿದಸೂತನನು ನಾ। ಲ್ಕರಡು ಗಳಿಗೆಯ ಬೀಸಿ ಮೂಗಿನೊ।ಳೆರಲ ಕಂಡನು ಪಾರ್ಥನೆತ್ತಿದನಳುಕಿದುತ್ತರನ॥೫೫॥ ಕವಳವಿದಕೋ ಬಾಣಶಾಸ್ತ್ರ । ನಿವಹಧಾರಾಸ್ತಂಭವಿಸ್ತಾ । ಹವದೊಳಂಜದಿರೆನುತೆ ಕೊಡಲುತ್ತರನ. ದುಗುಡದಲಿ ॥ ಬವರದ್ಹಾದಿಯನರಿಯದನ ಕೊಂ । ದವನು ನೀನೋ ಭೀಷ್ಮನೋ ಯೆನ । ಲವನ ನುಡಿಗರ್ಜುನನು ನಗುತಪರಾಧವುಂಟೆಂದ ॥೫೬॥ ಹದುಳಿಸಿನ್ನಂಜದಿರು ಬಾಣಾ । ಘದ ವಿದಾರಣ ವಿದು ವಿಚಾರಿಸ। ಲೆದೆಬಿರಿದು ತಾನೊಂದೆನಿದೆ ನೋಡೆನ್ನ ಗಾಯವನು ॥ ಒದೆದುಕೊಳುತ್ತೈಥಾನೆ ಸಿಂಧದ । ತುದಿಯ ಹನುಮನು ಮೆಪ್ರಮಯದೇ । ಹದಲಿ ನೆಟ್ಟವು ಕೋಲು ಮುನಿದೊಡೆ ರುದ್ರನೀಭೀಷ್ಮ । ಎಂದು ಮೂರಂಬಿನಲಿ ಗಂಗಾ । ನಂದನನ ಮುಸುಕಿದನು ಸಾರಥಿ । ನೊಂದನಾಧ್ವಜದಂಡವುಡಿದುದು ರಥ ವಿಸಂಚಿಸಿತು ॥ ಮುಂಮುಗೆಟ್ಟನು ಭೀಷ್ಮನಹುದೋ । ಕಂದಯೆನುತಾರಂಬಿನಲಿ ಖತಿ । ಯಿಂ

ದುದು ಅರುಣಮಯೂಖಲ । ನೆರವಣಿಗೆಯಲಿ ನಿಂದು ತೊಟ್ಟನು ನರ ಮಹಾಶರವ ॥ ತರಿದನೆಡೆಯ
ಲಿ ಭೀಷ್ಮನುರೆ ಬೊ । ಬ್ಬಿರಿದು ಬಳಿಕಾಗ್ನೇಯಬಾಣವ । ಗರಿಯ ಮಂತ್ರಿಸಿ ಹೂಡಿದನು ಕುರು
ಸೇನೆ ಕಳವಳಿಸೆ ॥೫೯॥ ವರುಣ ಬಾಣದಲಸ್ತ್ರವನು ಸಂ । ಹರಿಸಿದನು ಕಲಿ ಭೀಷ್ಮನೊಬ್ಬೊ। ಬ್ಬ
ರು ಪರಾಜಯ ರೋಷಪಾವಕ ವಿಸ್ಫುಲಿಂಗಿತರು ॥ ಹರಿಸಿದರು ಕೌಬೇರಮಾರುತ । ನಿರುತಿ ಯ
ಮ ಪುರುಹೂತ ಶಂಕರ । ಪರಪರಿಯ ಪ್ರತ್ಯಸ್ತ್ರವನು ಗಾಂಗೇಯ ಫಲಗುಣರು ॥೬೦॥ ಮವೆ
ತುನಿಲುವೊಡೆ ಭೀಷ್ಮನಲ್ಲದೆ । ಕೆಲರು ಪಾರ್ಥನ ದಿವ್ಯ ಬಾಣಕೆ । ವಳಿಯ ಗಾರಾಗಾರಗಿನ್ನೀ ಭೀಷ್ಮ
ನುರುವಣಿಗೆ ॥ ಕಲಿಧನಂಜಯ ನಲ್ಲದಿದಿರಲಿ । ನಿಲುವರುಂಟೇ ಭುಜಗ ಸುರನರ । ರೊಳಗೆ ಕೆಲರೆಂ
ದಿಂದ್ರ ನುಡಿದನು ಬೆರಳನೊವೆದೊವೆದು ॥೬೧॥ ಪೂತುಪಾಯಕುಪಾರ್ಥ ಬಿಲು ವಿ । ದ್ಯಾತಿಶಯ
ದಲಿ ಭೀಷ್ಮನೀಪುರುಹೂತನಮರಾರಿಗಳಮಿಕ್ಕರಲಾಮಹಾದೇವ ॥ ಈತಗಳು ಜನಿಸಿದೊಡೆ ಹಿಂದೆ
ಮ । ಹೀತಳವ ಕದ್ದೊಯ್ವನೇ ಖಳ । ಸೀತೆಬನದಲಿ ನವೆವಳೇ ಯೆನುತಿರ್ದುದಮರಗಣ ॥೬೨॥
ಹಿಂದೆ ಕರ್ಣನ ಕೈಮೆಯನು ಗುರು । ನಂದನನಬಿಲುಗಾರತನವನು । ಮಂದರೋಪಮ ಧೈರ್ಯವಾ
ಚಾರಿಯನ ಪರಿಣತಿಯ ॥ ಇಂದು ಕೃಪನಗ್ಗಳಿಕೆಯನು ನಲ । ವಿಂದ ಕಂಡೆಸುಪಾರಪರಿಯ । ಲ್ಲೆಂದ
ನುತ್ತರನರ್ಜುನಗೆ ಗಾಂಗೇಯನುರವಣೆಯ ॥೬೩॥ ಎನೆಕುಮಾರಕ ಕಾರ್ತವೀರ್ಯಾ । ರ್ಜುನನನಾತ
ನ ತೋರತೋಳಿನ । ಬನವಕಡಿದನು ವೀರಭಾರ್ಗವರಾಮನತಿಬಲನು॥ ಮುನಿದು ಮಲೆತೊಡ ಭೀಷ್ಮ
ನಾತನ । ಮನಕೆ ಭೀತಿಯ ನಿತ್ತನೀತನೊ । ಳೆನಗೆ ಸರಿನೂಕುವದೆ ಕಾಳಗವೆಂದನಾಪಾರ್ಥ ॥೬೪॥
ಮತ್ತೆಗಂಗಾಸೂನು ಪಾರ್ಥನ । ತೆತ್ತಿಸಿದನೈದಂಬಿನಲಿ ರಥ । ಕಿತ್ತುಮುಗುಚಲು ಮೂರು ವಜ್ರಾ
ಸ್ತ್ರದಲಿ ಕೀಲಿಸಿದ ॥ ಹುತ್ತಕುರುಗನು ಬಗಿದು ಹೊಗುವವೊ । ಲುತ್ತರಿಸಿದವು ಸರಳು ಮಿಗೆ ಧೃ
ತಿ । ವೆತ್ತು ಫಲುಗುಣನವರ ನೆಚ್ಚನು ಹತ್ತುಬಾಣದಲಿ ॥೬೫॥ ನರನಶರದಲಿ ಭೀಷ್ಮನೆದೆತನು । ಬಿ
ರಿಯೆ ಮೈಮೂರ್ಛೆಯಿಸಿತು ಸಲೆ ತರ । ಹರಿಸಲರಿಯದೆ ಮಲಗಿನಿಂದನು ರಥದ ಕಂಬುಗೆಯ ॥ ಅರರೆ
ಸೋತನು ಭೀಷ್ಮನಿನ್ನೀ । ನುರಿದುದೋ ಕುರುಸೇನೆ ಯಾವೆಡೆ । ದೊರೆಯನುತ ಬಾಯ್ಬಿಡಲು
ಕೌರವರಾಯ ಮಾರಾಂತ ॥೬೬॥ ಸೀಳುನಾಯ್ಗಳ ಬಾಯಕೆಲಬಲ । ದಾಳಹಂಗನ ಮೋರೆಯೆ ಸು
ಭಟರ । ಸೋಲವದುರಾಯರಿಗೆ ಸೋಲವೆ ನೂಕುನೂಕೆನುತ ॥ ಕೋಲಹೊದೆಗಳ ಕೆದರಿಸಿಂಧದ ।
ಮೇಲೆಹಾವನುಹಾಯ್ಕಿಸಾರಥಿ । ಮೇಳವಿಸಲವನಿಪನ ರಥವನು ನೆರೆದುದತಿರಥರು ॥೬೭॥ ಕಲಕಿ ಕೆ
ದರಿದ ಬಲಜಲಧಿಯೊ । ಬ್ಬುಳಿಗೆಬಂದುದು ತಳಿತಸತ್ತಿಗೆ । ಗಳವಿಡಾಯಿಯಲಳ್ಳಿರಿವ ನಿಸ್ಸಾಳಕೋ
ಟಿಗಳ ॥ ಉಲಿವಕಹಳೆಯ ಬೈಗುಳೆಡಗೈ । ತಳದಬಾಯ್ಬಲಗೈಯನೊವೆವುತ । ಬಳಿಕ ಭಟ್ಟರು ಹೊಗ
ಳಿದರು ಕೌರವನ ಬಿರುದುಗಳ ॥೬೮॥ ಒಗ್ಗುಮುರಿಯದೆ ಸೇನೆವೊಳಗುವ । ಲಗ್ಗವರೆಯಲಿ ಹಣಿಸಿ
ತುಳಿದೊಡೆ । ಮುಗ್ಗಿಕವಿದುದು ಕೌರವೇಂದ್ರನ ಮೊಗದಸನ್ನೆಯಲಿ ॥ ಹುಗ್ಗಿಗರಬಲು ಹುರಿಯನಿಗು
ಚುವೆ । ನೆಗ್ಗುವೆನು ನಿಲ್ಲೆನುತ ಸೇನೆಯ । ನಗ್ಗದಲೊಳಿಕ್ಕಿದನು ಫಲುಗುಣನಗಣಿತಾಸ್ತ್ರದಲಿ
॥೬೯॥ ವೀರರಿದಿರಹ ಹೊತ್ತು ರಣವೈ । ಲಾರರಾದರು ಮರಳಿತೆಗೆವುದು । ಭೈರವನ ಸಾರೂಪ್ಯ
ವಾದರು ಪೂತಮಝರೆನುತ॥ ಕೌರವನು ಕರ್ಣಾದಿಗಳ ನುಡಿ । ಹೋರೆಹದಿರಿನೊಳವಗಡಿಸಿ ಹೊಂ ।

ದೇರದುವ್ವಾಳಿಸುತ ಮೂದಲಿಸಿದನು ಫಲ್ಗುಣನ ॥೨೦॥ ಬಾಲವೃದ್ಧರ ವಿಪ್ರರನು ನೀ । ಕಾಳಗ
ದೊಳೋಡಿಸಿದೆನೆಂಬೆ । ಮೇಲುಪೋಗಿನಲಿರಲು ಬೇಡೆಲೆಪಾರ್ಥ ಮರುಳಾದೈ ॥ ಅಳಿದಡವಿಯೆ ರಾ
ಜ್ಯವಲ್ಲದೆ । ಮೇಲೆಧರಣಿಯ ಬಯಸಿದೊಡೆನಿವು । ಗಾಳಲೀವೆನೆ ಹೋಗುಹೋಗಾರಣ್ಯಕೆನುತೆಚ್ಚ
॥೨೧॥ ಗಾರುಗೆಡೆಯುದ್ಧಿರೆಲವೊ ಸತ್ಯವ । ಮೀರಲಮ್ಮದೆ ಲೋಕ ನಿನ್ನನು । ದೂರಬೇಕೆಂದಡವಿಯೊ
ಕ್ಕೆವು ಹೊಲ್ಲೆಯೇನಿದಕೆ ॥ ಜಾರಹೋಯಿತ್ತವಧಿಯಿನ್ನೀ । ಮಿರಿಗಳಳುವ ನಿನ್ನಗಂಟಲ । ನೂ
ರಿ ರಾಜ್ಯವ ತೆಗೆವೆ ಸ್ಥಿರಿಸೆನುತ್ತ ನರನೆಚ್ಚ ॥೨೨॥ ಅರಿಯೆನೀನೆಲೆ ಮರುಳೆಗರುಡನ । ತರವಳಿಕೆ
ಯಲಿ ಹಾವುಕನ್ನವ । ಕೊರೆದುಬದುಕುವುದೇ ವೃಥಾಕಕ್ಕುಲಿತೆನಿನಗೇಕೆ ॥ ತರಿದುತಿರಿಕಲ್ಲಾಡುವೆನು
ನಿ । ಮ್ಮರುವರೈವರ ಶಿರವನರ್ಜನ । ಬರಿದೆಗಳಹದಿರೆನುತ ಕೌರವರಾಯ ತೆಗೆದೆಚ್ಚ ॥೨೩॥ ಗರು
ಡನೀನಹೆ ನಿನ್ನಪಕ್ಕವ । ಮುರಿದು ಹಡತಲೆಗಡಬೆನ್ನೆಲು । ಮುರಿಯೆ ದುವ್ವಾಳಿಸುವ ಮುರಿಂಪು
ಪೆನ್ನ ನೀನರಿಯಾ ॥ ತರಹರಿಸಿ ಕಲಿಯಾಗುಯೆಂದ । ಬ್ಬರಿಸಿ ಕೌರವ ನೆದೆಯನಗುಳಿದ । ನೆರಡು
ಬಾಣದೊಳರುಣ ಜಲದೊರತೆಗಳ ಕಾಣಿಸಿದ ॥೨೪॥ ನವನಿಕಾರಿಯಮಲ್ಲಿಸೀರೆಗ । ಳವಯವದ
ರಕುತದಲಿ ತೋದವು । ಜವವಳಿದು ಸಾರಥಿಯು ಸೂಚಿಸಿ ರಥವ ಮರಳಿಚಿದ ॥ ಕವಿದನರ್ಜನ ನೋಡಿ
ದರುಕೌ । ರವ ಪಲಾಯನವಕಟಕಟ ಪಾ । ರ್ಥವರ ಪಂತವೆ ಮರಳಿನಿಂದರು ಕೊಲುವುದಲ್ಲೆಂದ ॥
॥೨೫॥ ಮಾತುಹಳಸವ ಮುನ್ನಕೈಗಳು । ಸೋತು ತೆಗೆದವೆಹೊಕ್ಕುವಾತಿಮ । ನೀತಿಯೇ ಪರಪತಿಗ
ಳಿಗೆ ಬಹುಭಂಗವನ್ನಯಕೆ ॥ ಭೀತನಲ್ಲದೆ ಕಾದಿಮಡಿದನ । ಮಾತುಗಳಲಾಪುಣ್ಯ ಕಥನವು । ಭೂತ
ಳಾಧಿಪ ಮರಳಿ ನೋಡೆನ್ನಾಣೆ ನೀನೆಂದ ॥೨೬॥ ಹುರುಳು ಗೆಟ್ಟುದು ಗರುವತನವೆಂ । ದರಸನಾಚಿ
ದ ನಧಿಕ ಶೌರ್ಯೋ । ತ್ಕರುಷದಲಿ ಕಲಿಯಾಗಿ ನಿಂದನು ಮತ್ತೆ ಕಾಳಗಕೆ ॥ ದೊರೆಯು ದುಗುಡ
ವ ಕಂಡು ತಮತಮು । ಗುರವಣಿಸಿದರು ಸಕಲ ಸುಭಟರು । ಹೊರಳಿಗಟ್ಟಿತು ಸೇನೆ ನಿಚ್ಚಟರಳಿವ ನಿ
ಶ್ಚಯಿಸಿ ॥೨೭॥ ನೊಂದನವನಿಪನೆಂದು ಪಾರ್ಥನ । ಕೊಂದು ತೋರುವೆ ನೆಂದರವಿಸುತ । ನೊಂ
ದು ಕಡೆಯಲಿ ಪೊಳಗದನು ಬಲುಬಿಲ್ಲಜೇವಡೆದು ॥ ಒಂದು ಕಡೆಯಲಿ ಮಸಗಿದರು ಗುರು । ನಂದ
ನನು ವೃಷಸೇನ ಸೈಂಧವ । ರೊಂದು ಕಡೆಯಲಿ ಭೀಷ್ಮ ಕೃಪದುಶ್ಶಾಸನಾದಿಗಳು ॥೨೮॥ ಗುರುಚ
ಡಾಳಿಸಿ ಹೊಕ್ಕ ನೊಮ್ಮಿಂ । ಗುರುವಣಿಸಿದನು ಬಾಹ್ಲಿಕನು ಭಾ । ಸುರ ಕಳಿಂಗ ಸುಕೇತು ಭೂರಿಶ್ರ
ವನು ದುಸ್ಸಹನು ॥ ನರನಮುತ್ತಿದರೊಂದು ಕಡೆಯಲಿ । ತೆರಳಿಕೆಯ ತೇರಿನಲಿ ಬಲಮೋ । ಹರಿಸಿ ಕ
ವಿದುದು ಸುತ್ತ ಮುತ್ತಿತು ಕಲಿಧನಂಜಯನ ॥೨೯॥ ಅಂಗವಿಸಿತರಿಸೇನೆ ಲೋಕವ । ನುಂಗಿಯು
ಗುಳುವ ಕಡಲುಭಾರ್ಗವ । ರಂಗಭೂಮಿಯ ತೊಳೆವ ಜಲಧಿಯ ಜೋಕೆಯಂದದಲಿ ॥ ಭಂಗಿತರು
ಮರುವಲಗೆಯಲಿ ಸ । ರ್ವಾಂಗ ಬಲಜೋಡಿಸಿತು ನಮ್ಮಳಿ । ವಿಂಗೆಹದನೇನೆನುತ ಮತ್ಸ್ಯನಸೂ
ನು ಚಿಂತಿಸಿದ ॥೩೦॥ ನೆರೆದತಿಮಿರದ ಥಟ್ಟುಸೂರ್ಯನ । ತೆರಳಿಚುವ ಮೋಲ್ಮೇಘ ಘಟೆಗಳು । ಮು
ರಿದು ಮೋಹರವೌಕಿಪವನನ ಸೆರೆಗಹಿಡಿವಂತೆ ॥ ತೆರಳದೊತ್ತಂಬರಿಸಿ ಕುರುಬಲ । ಮೊರಲಿ ಹೆಣನನು
ತುಳಿದು ಮೇಲ । ಬ್ಬರಿಸಿ ಬರೆ ಸಮ್ಮೋಹನಾಸ್ತ್ರವ ಹೂಡಿದನು ಪಾರ್ಥ ॥ ಎಸಲು ಸಮ್ಮೋಹನದ ಶರ
ಪಸ । ರಿಸಿತು ಬಲದಲಿ ಬಹಳ ನಿದ್ರಾ । ವ್ಯಸನ ವಿಹ್ವಲಿತಾಂತರಂಗರು ಮೈಯನೊಲೆದೊಲೆದು ॥೩೧॥

ಉಸುರಸಂಚದ ನಾಡಿಯಾವಗಾ । ಹಸಲು ಕೊರೆದರು ಗುರುಸುತಾತತಲೆ। ಮುಸುಕನಲಿ ನೆರೆ ತೆಕ್ಕೆ ಗೆಡದು
ದು ನಿಖಿಳಕುರುಸೇನೆ ॥೮೨॥ ತನುವನೊಲೆವವು ದಡನಡುಗುತ । ಗೊನೆಯು ಜೋಲಿಸಲಲ್ಲಿ ಮಡಿಗಾ ।
ಡಿನಲಿಕುಸಿದವು ಕೊರಳ ಮರಳಿಚಿ ಕೈಯ್ಯನೊಳಗಿಟ್ಟು ॥ ತೊಸೆಪು ಕೆಡೆದವು ಜೋದರಾಗಳು । ಕ
ನಲಿ ಕೆಡವರು ಗುರುನದೀಜರ । ಘನಬಲಂಗಳೊಳಯ್ತ ಕೋಟಿ ಗಜಂಗಳುರಳಿದವು ॥೮೩॥ ದು
ಗುಯುಗಳವರೆದೆತೆಯೆರೋಮಾ । ಳಿಗಳು ತೆಕ್ಕೆಯು ಸಾರೆ ಕೊರಳರೆ । ಮುಗುಳೆ ಹಿಂಗಾಲೊಗ್ಗಿಂಡು
ಖುರವನು ತೂಗಿ ಯೊಲೆದೊಲೆದು ॥ ಬಿರುಹು ಸಹಿತವೆ ಹೊಸ್ನಮರ ಗೋ । ಡುಗಳ ಮೇಲಡಗೆ
ಡೆದು ನಿದ್ರಾ । ಮುಗುದರಾವರು ರಾವುತರ್ಕ್ಯ ತೂಕಡಿಸಿದವು ತುರಗ ॥೮೪॥ ಬಿಲುಸೆಳೆಯೆ ಕೈದುಗಳು
ಕೈಯಿಂ । ಚಲಿಸಲೊಬ್ಬರ ನೊಬ್ಬರತ್ತಲು । ಮಲಗಿ ಬೆಂಬತ್ತಳಿಕೆ ಬದಿಯೊಳಗಡಸಿ ತೋಳುಗಳ ॥
ತಲೆಯೊಳಾನಿಸಿ ಗುರುಗುರಿಸಿ ರಥ । ದೊಳಗೆ ಸಾರಥಿವೆರಸಿನಿದ್ರಾ । ಕುಳರುಜೋಮ್ಮಿನಮೇಲೆ ಮೈ
ಮರೆತಿರ್ದರತಿರಥರು ॥೮೫॥ ಸರಳಸೊಕ್ಕವ ಗಡಿಸಿಸಲೆ ಮೈ । ಮರೆದನಿತ್ತಲು ದ್ರೋಣ ರಥದಲಿ ।
ಪರಮ ನಿದ್ರಾಗುಪ್ತನಾದನು ತನ್ನ ಮಗಸಹಿತ ॥ ಕರದವಿಲುಶರ ಸಹಿಯೆ ಕಂಗಳು । ಮುರಿಯೆ ಕ
ರ್ಣನು ಕೆನ್ನೆಯೆದೆಯೊಳು । ದುರುಳ ದುರ್ಯೋಧನ ಸಹಿತ ಪ್ರುಪಾಚಪಿದಂಸ್ನೇನೆ ॥೮೬॥ ಸೇನೆ
ಮೈಮರೆದೊರಗಿದದೆಟನಿ । ಧಾನವೊಗದರುಹಿತ್ತು ನಿದ್ರಾ । ಮನಿಸ ವಿಭ್ರಮಿಸಿತ್ತು ಬಲುಸಂಸಾರ
ದಂದದಲಿ ॥ ಏನಹೇಳುವೆ ನೆದನುಕದನದ । ಕಾನನದೊಳತಿ ರಥರು ಮಯಿಯರು । ಹೀನಬಲಸಮ್ಮೋಹನಾ
ಸ್ತ್ರದಬಾಧೆಗೊಳಗಾಯ್ತು ॥೮೭॥ ಕನಸುಮೇಣೆಚ್ಚರ್ಮು ಸುಷುಪ್ತಿಗ । ಳೆಸಿಪವಸ್ಥಾತ್ರಿತಯದಲಿ ಜೀ
ವನುಪಿಸಂಚಿಸಿಬೀಳ್ಪನಲ್ಲದೆ ಶರಕೆ ಸಿಲುಕುವನೇ ॥ ಇನಿತು ಬಲತೂಕಡಿಸಿಘೂರ್ಂಪಿಸಿ । ತನಿಗಡೆಯೆ
ಭಾಗೀರಥೀನಂ । ದನನು ನಿರ್ಮಲನಾಗಿ ತೊಳತೊಳಗಿದನು ರಥದೊಳಗೆ ॥೮೮॥ ಎಣಿಸುವರ ಯೋ
ಕಾದಶಾಕ್ಷೋ । ಹಿಣಿಯ ಬಲವನು ಪಾರ್ಥನೊಬ್ಬನ । ರಣದೊಳಡಗೆಡಹಿದನು ಮೋಹನ ಮಂತ್ರ ಬಾ
ಣದಲಿ ॥ ಕುಣಿದು ಕುಸುಮದ ಸಮುಗಳ ಸಂ । ದಣಿಯ ಸಪುರರು ಸೂಸಿದರು ಫಲು । ಗುಣನರಥ
ವನು ನೂಕದನು ನಿಜಮುಹಿಪಲದ್ದೆಡೆಗೆ ॥೮೯॥ ಇಳಿದು ದ್ರೋಣನ ಚರಣಕಮಲಂ । ಗಳಿಗೆ ತನ್ನ
ಯ ನೊಸಲಚಾಚಿದ । ನೆಳವಿಯಲಿ ಭೀಷ್ಮಂಗೆ ಪ್ರಯಿಕ್ಷದನು ರಥದೊಳಗೆ ॥ ಸೆಳೆದು ಕರ್ಣನ ಮು
ಕುಟಪಟ್ಟೆಯು । ಸೆಳದು ದುರ್ಯೋಧನನ ವಸ್ತ್ರವ । ಸುಲಲಿತಾಭರಣವನು ನೀತೆಗೆಯೆಂದನುತ್ತರ
ಗೆ ॥೯೦॥ ಧರಣಿಪಾಲರ ಮಕುಟವನು ಕ । ತ್ತರಿಸಿ ದುಶ್ಶಾಸನನ ಘನಶಿರ । ವರದ ರತ್ನವನುಡಿದು
ಭೂರಿಶ್ರವಜಯದ್ರಥರ ॥ ಹೊರಳಿಚಿದನು ವಿಶೋಕ ಕುವರರ । ಹುರುಳುಗಡಿಸಿದನಖಿಳರಾಯರ ।
ಶಿರಕೆ ಭಂಗವ ಹೊರಿಸಿ ಫಲುಗುಣನಡರಿದನು ರಥವ ॥೯೧॥ ಫಲುಗುಣನ ನೇಮದಲಿ ರಥದಿಂ । ದಿಳಿ
ದನುತ್ತರನವನಿಪನಕೋ । ಮಲಸುವಸ್ತ್ರಾಭರಣ ಕರ್ಣನ ಕೃಪನ ಗುರುಸುತನ ॥ ಸುಲಲಿತಾಂಬರ
ರತ್ನಭೂಷಣಗಳನು ಕೊಂಡಡರಿದನು ರಥವನು । ಬಿಲುದುಡುಕಿ ಗಾಂಗೇಯ ನೆಡಹಾಯ್ದನು ಧನಂಜ
ಯನ ॥೯೨॥ ಎರಡು ಶರದಲಿ ಚಾಪವನು ಕ । ತ್ತರಿಸಿ ಭೀಷ್ಮವ ನಿಲಿಸಿ ಕೌರವ । ಧರಣಿಪಾಲನ ಮ
ಕುಟವನು ಮೂರಂಬಿನಲಿ ಕಡಿದು ॥ ತಿರುಗಿದನು ಕಲಿಪಾರ್ಥನಗುತು । ತ್ತರಸಹಿತ ಬನ್ನಿಯಲಿ ಕೈದು
ವ । ನಿರಿಸಿ ಮುನ್ನಿನಹುಲುರಥದಿ ನಿಜನಗರಗೈತಂದ ॥ ... ॥೯೩॥

ಅಂತು ಸಂಧಿ ೯ಕ್ಕೆ ಪದ ೫೭೭ಕ್ಕಂ ಮಂಗಳಮಸ್ತು.

ಹತ್ತನೆಯ ಸಂಧಿ.

ಸೂಚನೆ ॥ ರಾಯಕೌರವಸೈನ್ಯಕದಳೀ । ವಾಯುವುತ್ತರಸಹಿತ ನಿರ್ಜರ । ರಾಯನಂದನ ಬಂದ
ಹೊಕ್ಕನು ಮತ್ಸ್ಯಪುರವರವ ॥

ಪದ॥ ಕೇಳು ಜನಮೇಜಯಧರಿತ್ರೀ । ಪಾಲ ಭಂಗಪಲಖಿಳಕೌರವ । ಜಾಲ ತಿರುಗಿತು ದುಗುಡದಲಿ
ಗಜಪುರಕೆ ನಡೆತಂದು ॥ ಮೇಲುಮುಸುಕಿನ ಮೊಗದ ವಾದ್ಯದ । ಮೇಳ ಮೋನದಲಖಿಳನೃಪರು ನಿ ।
ಜಾಲಯಂಗಳ ಬಂದು ಹೊಕ್ಕರು ಹೊತ್ತದುಗುಡದಲಿ ॥೧॥ ಬಳಿಕ ಫಲುಗುಣನೆತ್ತಲಾಮರ । ದೊ
ಳಗೆ ಕೈದುವನಿರಿಸಿ ಮುನ್ನಿನ । ಹುಲುರಥವ ಮೇಳೈಸಿ ಸಾರಥಿತನವನೆಳವಡಿಸಿ ॥ ಇಳಿದು ಪಾರ್ಥನ
ಮೈದಡವಿ ಕಪಿ । ಕುಲಲಲಾಮನು ವನಕೆ ಹಾಯ್ದನು । ಹೊಳಲ ಹೊರೆಯಲಿ ನಿಂದು ನಗುತುತ್ತ
ರನೊಳಿಂತೆಂದ ॥೨॥ ಕರೆಸು ದೂತರಿಗರುಹು ನೀನೇ । ಧುರವ ಜಯಿಸಿದೆನೆನ್ನು ಸಾರಿ । ದ್ಧರವನೆ
ರುಹದಿರೆಂದು ಪಸರಿಸು ನಿನ್ನ ವಿಕ್ರಮವ ॥ ಅರಸ ನಿನ್ನನೆ ಮನ್ನಿಸಲಿ ಪುರ । ಪರಿಜನಂಗಳು ನಿನ್ನ
ವಿಜಯದ । ಹರುಷದಲಿ ಹೆಚ್ಚಿರಲಿ ನಿರುಪಿಸಿದಂತ ಮಾಡೆಂದ ॥೩॥ ಎನಲು ನೀನೇ ಬಲ್ಲೆ ಕರಲೇ ।
ಸೆನುತ ದೂತರ ಕರೆದು ಮತ್ಸ್ಯನ । ತನಯ ಕೌರವಬಲವ ಜಯಿಸಿದನೆಂದು ಪೇಳುವುದು ॥ ಜನಕ
ನಲ್ಲಿಗೆ ಪೋಗಿಯೆಂದಾ । ತನು ನಿಯಾಮಿಸುತಿರ್ದನೆತ್ತಲು । ಜನಪಕುಂತೀಸುತನುಸಹಿತೈತಂದನರ
ಮನೆಗೆ ॥೪॥ ಅರಮನೆಯ ಹೊಕ್ಕವನಿಪತಿಯು । ತ್ತರನ ಕಾಣದೆ ಕಂದನೆತ್ತಲು । ಸರಿದನೆನೆ ರಾಣಿ
ಯರು ಬಿನ್ನವಿಸಿದರು ಭೂಪತಿಗೆ ॥ ಕುರುಬಲವನಂಗೈಸಿ ಮಿಗೆಯು । ತ್ತರೆಯು ಗುರು ಸಾರಥಿತನ
ವನೆನು । ಕರಿಸಿದನು ಕೆಲಬಲನ ಹಾರದೆ ಕದನಕೈದಿದನು ॥೫॥ ಎಂದರೊಡಲೊಳು ಕೂರಲಗು ಮುರಿ
ದಂದದಲಿ ಕಳವಳಿಸಿದನು ಮನ । ನೊಂದನಕಟ ಕುಮಾರನೆತ್ತಲು ರಾಯದಳವೆತ್ತ ॥ ಬಂದವರು
ಭೀಷ್ಮಾದಿಗಳು ತಾ । ನಿಂದು ಶರಹರಿಸುವೊಡೆ ತಾನೇ । ನೆಂದುಧರನೇ ಮರುಳೆಲಾ ಮಗನೆನುತ ಚಿಂ
ತಿಸಿದ ॥೬॥ ಮಗಗೆ ಪಡಿಬಲವಾಗಿ ಬಲುಮಂ । ತ್ರಿಗಳನವನಿಪ ಬೀಳುಗೊಟ್ಟನು । ದುಗುಡಬಿಂ
ದಿರೆ ಹೊಳಲ ಕೈಸೂರೆಗಳ ತಳಕಳದ ॥ ಮೊಗದ ಹರುಷದಲಖಿಳದೂತಾ । ಳಿಗಳು ಬಂದುದು ಗುಡಿ
ಯ ಕಟ್ಟಿಸು । ನಗರಿಯಲಿ ಕಳುಹಿದರು ಗೊಳಸು ಕುಮಾರಕನನೆನುತ ॥೭॥ ರಾಯಕುವರಪಿತಾಮಹ
ನು ರಿಪು । ರಾಯಕುವರಕುಠಾರ ಕೌರವ । ರಾಯಘಟ್ಟವಿಭಾಡ ಕುರುಕುಲಗಜಕೆ ಪಂಚಾಸ್ಯ ॥
ಜೇಯಬಿನ್ನಹ ಕರ್ಣಗುರುಗಾಂ । ಗೇಯಮೊದಲಾದಖಿಳಕೌರವ । ರಾಯದಳವನು ಗೆಲಿದು ವುತ್ತರ
ತುರುವ ಮರಳಿಚಿದ ॥೮॥ ಕೇಳಿ ಮಿಗೆ ಹಿಗ್ಗಿದನು ತನು ಪುಳ । ಕಾಳಿ ತಳಿತುದು ಬಹಳಹರುಷದ ।
ಥಾಳಿಯಲಿ ಮನ ಮುಂದುಗೆಟ್ಟುದು ಕಂಗಳರಳಿದವು ॥ ಲಾಲಿಸುತ ಸರ್ವಜ್ಞಚಿತ್ತವ । ಧೂಳಿಜನ
ದ ಪಸಾಯಿತವ ದೂ । ತಾಳಿಗಿತ್ತನು ಸುಳಿದರವದಿರು ರಾಯನೋಲಗವ ॥೯॥ ಇದಿರುಗೊಳಹೇಳೆ
ನಲು ಸರ್ವಾಂ । ಗದಲಿ ಮಣಿಮೌಕ್ತಿಕದ ಸಿಂಗಾ । ರದಸುರೇಖೆಯ ಲಲಿತಚಿತ್ರಾವಳಿಯ ಮುಸುಕುಗಳ ॥
ಸುದತಿಯರು ಹೊರವಂಟರೊಗ್ಗಿನ । ಮೃದುಮೃದಂಗದ ಕಹಳೆಗಳು ಸಂ । ಪದದ ಸೋಂಪಿನಲೆಸೆ
ಯೆ ರಾಜಾಂಗನೆಯರನುವಾಯ್ತು ॥೧೦॥ ಕವಿದು ನೂಕುವಹರುಷವನು ಸಂ । ತವಿಸಲರಿಯನು ಕಂ

ಕನಿನ್ನೊಡ । ನೆವಗೆ ವಿಮಳದ್ಯೂತಕೇಳಿಗೆ ಚಿತ್ತವಾಯ್ತೆನಲು ॥ ಅವನಿಪತಿ ಕೇಳ್ದೊಜಿನಲಿ ಪಾಂ
ಡವರು ಸಿಲುಕಿದರವರ ವಿಧಿಯನು । ಭುವನದಲಿ ಬಲ್ಲವರೆದಾರೆಂದನು ವಿರಾಟಂಗೆ ॥೧೧॥ ಅವರು
ರಾಜ್ಯವನೊಡ್ಡಿ ಸೋತವೊ । ಲೆವಗೆ ಪಣ ಬೇರಿಲ್ಲ ಹರ್ಷೋ(। ತ್ಸವಕುಮಾರಾಭ್ಯುದಯವಿಜಯಶ್ರೀ
ವಣಸುಖ ಮಿಗಿಲು ॥ ಎವಗೆ ಮನವಾಯ್ತೊಡ್ಡು ಸಾರಿಯ । ನಿವಹವನು ಹೂಡೆನಲು ಹೂಡಿದ
ನವನಿಪತಿ ನಸುನಗುತ ಹಾಸಂಗಿಯನು ಹಾಯ್ಕಿದನು ॥೧೨॥ ಕೇಳಿ ಸಮತಳಿಸಿತ್ತು ಮತ್ಸ್ಯನ್ನ ।
ಪಾಲನೆಂದನು ಕಂಕ ನೋಡ್ಕೆ । ಕಾಳಗವನುತ್ತರನು ಗೆಲಿದನು ರಾಯಘಟ್ಟನಲಿ ॥ ಶೂಲಪಾಣಿಗೆ
ಸೆಡೆಯದಹಿತಭ । ಟಾಳಿ ಸೋತುದು ದಿವಿಜನರರೊಳು । ಹೋಲುವವರುಂಟೇ ಕುಮಾರನನೇ
ನುಹೇಳೆಂದ ॥೧೩॥ ಸೋತುದುಂಟರಸೇನೆ ಸುರಭಿ । ವ್ರಾತ ಮರಳಿದುದುಂಟು ಗೆಲವಿದು । ಕೌತು
ಕವಲೇ ಬಗೆಯಲದ್ಭುತವೆಮ್ಮಚಿತ್ತದಲಿ ॥ ಮಾತು ಹೋಲುವಿಯಹುದು ಜಗವಿ । ಖ್ಯಾತಸಾರಥಿಯಿ
ರೆ ಕುಮಾರಗೆ । ಭೀತಿ ಬಳಿಕೆಲ್ಲಿಯದು ತಪ್ಪೇನೆಂದನಾಕಂಕ ॥೧೪॥ ಎಲೆಮರುಳೆ ಸನ್ಯಾಸಿ ಮತ್ಸರ ।
ದೊಳಗೆ ಮುಳುಗಿದಚಿತ್ತ ನಿನ್ನದು । ಗೆಲವಿನಲಿ ಸಂದೇಹವೇ ಹೇಳಾವುದದ್ಭುತವು ॥ ಅಳುಕುವನೆ
ಸುಕುಮಾರ ಸಾರಥಿ । ಬಲುಹನುಳ್ಳವನೇ ನಪುಂಸಕ । ನಲಿ ನಿರಂತರಪಕ್ಷವೆಂದು ವಿರಾಟ ಖತಿಗೊಂ
ಡ ॥೧೫॥ ಸಾರಿಯರ ವ್ಯಗುರುಹು ಪುರುಷರ । ಚಾರುಚಿತ್ತವ ಕೂಡಿಕೊಂಡಿಹ । ಸಾರಥಿಯದೆಸೆ
ಯಿಂದ ಗೆಲಿದನು ಗೆಲಿದನೆಂಬುದನು ॥ ಸ್ವೈರಿಸಿದೆ ನಾನಿನ್ನವರೆ ಮತ್ತಾ । ರೊಡನೆ ಮಾತಾಡದಿರು
ನಿ । ಸ್ಸಾರಹೃದಯನು ಕಂಕ ನೀ ದುಷ್ಟಾತ್ಮ ಹೋಗೆಂದ ॥೧೬॥ ಖತಿಯ ಹಿಡಿಯದಿರರಸ ದಿಟನೀ ।
ನತಿಶಯವ ಬಯಸುವೊಡೆ ಜನಸ । ಮ್ಮತವು ಸಾರಥಿ ಗೆಲಿವನೆಂದೇಹೊಯ್ಸು ಡಂಗುರವ ॥ ಸುತನು
ಸಾರಥಿಯಿಂದು ಸಾರಿಸು । ವಿತಥವಲ್ಲಿದು ಪಕ್ಷಪಾತ । ಸ್ಥಿತಿಯನಾಡೆವು ಕವಲುನಾಲಗೆಯಿಲ್ಲ ತನಗೆಂ
ದ ॥೧೭॥ ನಿನ್ನ ಮೋಹದ ಕಂಗಳಿಗೆ ಮಗ । ನುನ್ನತೋನ್ನತಸತ್ವವೆಂದೇ । ಮುನ್ನ ತೋರಿತು ಹೊ
ಲ್ಲೆಯವೆ ಸಾಂಸಾರಿಕಭ್ರಮೆಗೆ ॥ ಇನ್ನು ಗೆಲಿದವನಾ ಬೃಹನ್ನಳೆ । ನಿನ್ನ ಮಗಗಳುಕುವರೆಭೀಷ್ಮನು ।
ಕರ್ಣಕೃಪಗುರುತನೂಭವರೆಂದನಾಕಂಕ ॥೧೮॥ ಎನಲು ಖತಿ ಬಿಗುಹೇರಿ ಹಲುಹಲು । ದಿನುತ ಕಂಗ
ಲುರಿಯನುಗುಳುತ । ಕನಲಿ ಬಿಗಿದೌಡೊತ್ತಿ ಕನಕದ ಸಾರಿಯನು ನೆಗಹಿ ॥ ಜನಪತಿಯಹಣೆಯೊಳ
ಡೆಯಲಿಡೆ ಜಾ । ಜಿನಗಿರಿಯ ನಿರ್ಝರದವೊಲು ಭೋಂ । ಕೆನಲು ರುಧಿರದ ಧಾರೆ ಸಿಡಿದುದು ಶಿರದ
ಸೆಲೆಯೊಡೆದು ॥೧೯॥ ಸ್ವೈರಿಸುತ ಕೈಯೊಡ್ಡಿರಕುತದ । ಧಾರೆಯನು ಕೈತುಂಬ ಹಿಡಿದತಿ । ಧೀರ
ನೋರೆಯನೋಟದಲಿ ಸ್ವೇಂದ್ರಿಯನು ಕರೆಯೆ ॥ ನಾರಿ ಹರಿತಂದಕಟ ನೊಂದನು । ಕಾರುಣಿಕ
ಸನ್ಯಾಸಿಯೆನುತ ನಿ । ಕಾರಿಸಿದಸೆರಗಿನಲಿ ತೊಡೆದಳು ಬಹಳಶೋಣಿತವ ॥೨೦॥ ಮಡದಿ ಕರಪಲ್ಲವದ
ಲೊರಸಿದ । ಡಿಗಡಿಗೆ ಹಣೆಯನು ಕಪೋಲವ । ತೊಡೆದು ತೊಳೆದಳು ಮುಖವನದನವಕಂಡು ಬೆರಗಾ
ಗಿ ॥ ಹಿಡಿದೆರಕುತವನೇಕೆ ಕಾಮಿನಿ । ನುಡಿ ನಿಧಾನವನಿವರು ನೊಂದರೆ । ಮಿಡುಕಲೇತಕೆ ನೀನೆನು
ತ ಮರುಪದಿಯ ಬೆಸಗೊಂಡ ॥೨೧॥ ಉರಿದು ಹೋಹುದು ನಿನ್ನ ರಾಜ್ಯದ । ಸಿರಿಯು ಬದುಕಿದೆ
ಯೊಂದುಕಣೆಯಕೆ । ಪರಮಯತಿ ಕಾಯಿದನು ಕೈಯಲಿ ತುಂಬಿ ಶೋಣಿತವ ॥ ಅರಸ ಕೇಳೀಮು
ನಿಯ ನೆತ್ತರು । ಧರೆಯೊಳಕ್ಕೊಡೆಯಾಪ್ರದೇಶವ । ನೊರಸಿ ಕಳೆವನು ಧಿಟ ಬೃಹನ್ನಳೆಗೇರಿಸಿದ

ಚಂದ್ರಕಾಂತಕೆ । ಬೆರಗನಿತ್ತನುಜಕ್ಕವಕ್ಕಿಯು ಸೆರೆಯ ಬಿಡಿಸಿದೆನು॥ ಕೆರಳಿ ನೈದಿಲ ಸಿರಿಯ ಸೂರೆಯು । ತರಿಸಿದನು ರಿಪುರಾಯರಾಜ್ಯವ। ನೊರಸಿದನು ರವಿ ಮೂಡಣಾದ್ರಿಯೊಳಿತ್ತನೋಲಗವ ॥೩॥ ಹರಹರ ಶ್ರೀಕಾಂತನೆನುತ್ತ । ವರಕುಮಾರಕರುಪವಡಿಸಿದ । ರರಿವಿದಾರರು ಮಾಡಿದರು ಮಾಂಗಲ್ಯಮಜ್ಜನವ ॥ ವರವಿಭೂಷಣಗಂಧಮಾಲ್ಯಾಂ । ಬರದಿಪರಿವೃತರಾದರವನೀ । ಸುರರಿಗಿತ್ತರು ಧೇನುಮಣಿಕನಕಾದಿವಸ್ತುಗಳ ॥೪॥ ತಮದ ಗಂಟಲನೊಡೆದಹರುಷ । ದ್ಯುಮಣಿ ಮಂಡಲದಂತೆ ಜೀವ । ಭ್ರಮೆಯ ಕವಚವ ಕಳೆದು ಹೊಳೆಹೊಳೆವಾತ್ಮನಂದದಲಿ ॥ ವಿಮಲಬಹಳಕ್ಷತ್ರ ರಶ್ಮಿಗ । ಳಮರಿ ದೆಸೆಗಳ ಬೆಳಗೆ ರಾಜೋ । ತ್ತಮಯುಧಿಷ್ಠಿರದೇವನೆಸೆದನು ರಾಜತೇಜದಲಿ ॥೫॥ ಪರಮ ಸತ್ಯವ್ರತ ಮಹಾಕ್ರತು । ವರದಲವಭೃತ ಮಜ್ಜನವ ವಿ । ಸ್ತರಿಸಿ ಭೀಮಾದಿಗಳುಸಹಿತ ವಿರಾಟನಗೆಮನೆಗೆ ॥ ಅರಸ ಬಂದನು ಮಣಿಖಚಿತಕೇ । ಸರಿಯ ಪೀಠವನಡರಿದನು ನಿಜ । ಚರಣಸೇವೆಯ ಲೆಸೆದರೊಡಹುಟ್ಟಿದರು ಪರುಠವಿಸಿ ॥೬॥ ಅವನಿಪನ ಸಿಂಹಾಸನವನೇ । ರುವಸಗರ್ವಿತರಾರು ನೋಡಿದ । ಡೆವೆಗಳುರಿವುದು ಹಾಯೆನುತ ಕಂಚುಕಿಗಳೈತಂದು ॥ ಇವರನೀಕ್ಷಿಸಿ ಕ್ಷಾತ್ರತೇಜವ । ನೆವಗಡಿಸಲಂಜಿದರು ಹರಿತಂ । ದವದಿರೆಬ್ಬಿಸಿ ಬಿನ್ನವಿಸಿದರು ಮತ್ಸ್ಯಭೂಪತಿಯ ॥೭॥ ಜೀಯ ಸಿಂಹಾಸನಕೆ ದಿವಿಜರ । ರಾಯನೋ ಶಂಕರನೊ ಮೇಣ್ನಾ । ರಾಯಣನೊ ನರರಲ್ಲ ದೇವರು ಬಂದು ನೋಡುವುದು ॥ ಕಾಯಲಸದಳವೆಮಗೆನಲು ನಿ । ರ್ದಾಯದಲಿ ನೆಲೆಗೊಂಡನಿರ್ಜರ । ರಾಯನಾರೆಂದೆನುತಲಾಗ ವಿರಾಟ ಚಿಂತಿಸಿದ ॥೮॥ ಕರಸಿಕೊಂಡು ಪುರೋಹಿತನನು । ತ್ತರನನಖಿಳಮಹಾಪ್ರಧಾನರ । ನರಮನೆಯ ಹೊರವಂಟು ವೋಲಗಶಾಲೆಗೈತರುತ॥ ಕರಗಿ ಸೂಸಿದಚಂದ್ರಬಿಂಬದ । ಕಿರಣಲಹರಿಗಳೆನಲು ವಿವಿಧಾ। ಭರಣ ಮುಕ್ತಾಪ್ರಭೆಯ ಕಂಡನು ನೃಪತಿ ದೂರದಲಿ ॥೯॥ ಹರನ ನಾಲುಕುಮುಖಮಧ್ಯದ। ದ್ಭುರಿತದೀಶಾನನದೊಲಿರೆ ಸೋ । ದರಚತುಷ್ಟಯ ಮಧ್ಯದಲಿ ಕಂಡನು ಯುಧಿಷ್ಠಿರನ ॥ ಅರಸಿಯನು ವಾಮದಲಿ ವಿವಿಧಾ । ಭರಣಮಣಿರಶ್ಮಿಗಳ ಹೊದರಿನ।ಹೊರಳಿಯಲಿ ಕಣ್ಣಾಲಿ ಕೋರೈಸಿದವು ನಿಮಿಷದಲಿ ॥೧೦॥ ಮೇಳವೆಘಡ ಮನದ ಮತ್ಸರ। ಕಾಲಿಡಲು ತೆರಹಿಲ್ಲ ಮನುಜರ। ಹೋಲುವೆಯ ನಾಟಕದ ನಿರ್ಜರಮಂಡಲೇಶ್ವರರು ॥ ಆಲಿಗಳು ಮೇಲಿಕ್ಕಲಮ್ಮವು । ಶೂಲಪಾಣಿಯ ಪರಮತೇಜದ । ಚೂಳಿಯೋ ಶಿವಶಿವಯೆನುತ್ತ ವಿರಾಟ ಬೆರಗಾದ ॥೧೧॥ ವಲಲಕಂಕಬೃಹನ್ನಳೆಯ ಮೈ । ಸುಳಿವ ಹೋಲುವರೆಂದು ಕೆಲಬರು । ಕೆಲರಿದೆತ್ತಣನರರು ತೆಗೆ ಸುರಲೋಕಪಾಲಕರು ॥ ತಿಳಿಯಲರಿದೆಮಗೆಂದು ಕೆಲಬರು । ತಳವೆಳಗುಗೊಳುತಿರಲು ಮಂದಿಯ । ಕೆಲಕೆ ನೂಕಿಯೆ ತಂದೆಗುತ್ತರ ನಗುತ ಕೈಮುಗಿದ ॥೧೨॥ ತಾತ ಬಿನ್ನಹ ನಿನ್ನ ವೈರಿ । ವ್ರಾತವನು ಗೆಲಿದಾತನೀತೊ। ಪಾರ್ಥನೀತನ ಮುಂದೆ ಮೆರೆವವ ಕೀಚಕಾಂತಕನು॥ ಈತನಕುಲನು ವಾಮದಲಿ ನಿಂ । ದಾತ ಸಹದೇವಾಂಕನನಿಬರಿ । ಗೀತಹಿರಿಯನು ಧರ್ಮನಂದನನೆಂದು ತೋರಿಸಿದ ॥೧೩॥ ರಮಣಿಯೈವರಿಗೀಕೆ ಕೆಲದಲಿ । ಕಮಲಮುಖಿಯನು ನೋಡು ತಾವಿವರಮಳ ಗುಣಗಂಭೀರರಾಯರು ಪಾಂಡುನಂದನರು ॥ ನಮಗೆ ಭಾರಿಯ ಭಾಗ್ಯಲಕ್ಷ್ಮಿಯ । ಮಮತೆಯಾಯ್ತಿನ್ನೇನು ನೃಪಪದ । ಕಮಲದಲಿ ಬೀಳುವೆವು ನಡೆನಡೆ ಧನ್ಯಹೆರವೆಂದ ॥೧೪॥ ಈತನೇ ಧರ್ಮಜನು ಧಿಟಶಾ। ನೀತನೇ ಪವನಜನು ನಿಶ್ಚಯ। ವೀತನೇ ಫಲುಗುಣನು ಮಾದ್ರೀತನುಜರೇ ಯಿವ

ರು ॥ ಈತಳೋದರಿ ದ್ರುಪದಸುತೆಯೇ । ಕೌತುಕವಲೇ ಭುವನಜನವಿ । ಖ್ಯಾತರೆಲ್ಲಿಂದೆಲ್ಲಿ ಮೂಡಿದರೆ ನುತ ಬೆರಗಾದ ॥೧೫॥ ವರುಷವೊಂದಜ್ಞಾತವಾಸವ । ನಿರದೆ ನೂಕಿದರಿಲ್ಲಿ ಬಳಿಕೆಯು । ಹೊರೆಯ ಹೆಸರವು ಬೇರೆ ನಡವಳಿಯುಂಗವದು ಬೇರೆ ॥ ಮರುಳಿನಂತಿರೆ ಜಗಕೆ ತೋರನೆ । ಪರಮತತ್ವಜ್ಞಾನಿ ನವಿಸ್ಮಾ । ಯರಸುತನ ಫಲವಾಯ್ತು ನಡೆಯೆಂದನು ಕುಮಾರಕನು ॥೧೬॥ ದರುಶನಕೆ ಮಣಿರತುನ ಕನಕವ । ತರಿಸಿ ಮುದದಲಿ ಮುಳುಗಿ ನಿಜಪುರ । ಕರಸಹಿತ ಮೈಯಿಕ್ಕಿದನು ಕಾಣಿಕೆಯನೊಪ್ಪಿಸಿದ ॥ ವರನೃಪಾಲ ತ್ರಾಹಿ ಭುವನೇ । ಶ್ವರ ಪರಿತ್ರಾಯಸ್ವ ಕರುಣಿಸು । ಕರುಣಿಸೆಂದಂಘ್ರಿಗಳ ಹಿಡಿದನು ಮತ್ಸ್ಯಭೂಪಾಲ ॥೧೭॥ ಬಗೆದನೆಪರಾಧವನು ಕರುಣಾ । ಳುಗಳ ಬಲ್ಲಹ ನೀನು ನಿಮ್ಮಂ । ಘ್ರಿಗಳಿಗೀತಲೆ ಬಂಟ ನೀನಿದ ಕಾಯಬೇಕೆನುತ ॥ ಮಿಗೆ ಭಕುತಿಭಾವದಲಿ ನಿಜ । ಮಂತ್ರಿಗಳು ಮಕ್ಕಳು ಸಹಿತವನಿಸನಂ । ಬುಗೆಯು ಮೆರೆದನು ಮತ್ಸ್ಯಭೂಪಮಹೀಶರಿಬ್ಬರಿನಲಿ ॥೧೮॥ ಆಸುಧೇಷ್ಣಕುಮಾರಿಯೊಡನೆ ವಿ । ಳಾಸಿನೀಜನಸಹಿತ ರಾಣೀ । ವಾಸದಲ್ಲಿಗೆ ಬಂದು ಕಾಣಿಕೆಕೊಟ್ಟು ಪೊಡವಟ್ಟು ॥ ಆಸಕಲಪರಿವಾರಪುರಜನ । ದೇಶಜನಕಾಣಿಕೆಯ ನಿತ್ತು ಮ । ಹೀಶನಿಗೆ ಮೈಯಿಕ್ಕಿ ಕಂಡರು ಬಹಳ ಹರುಷದಲಿ ॥೧೯॥ ಮುಗುಳು ನಗೆಯಲಿ ಭೀಮಪಾರ್ಥರ । ಮೊಗವ ನೋಡಿದನವನಿಪತಿ ಕೈಮುಗಿದು ತಲೆವಾಗಿದರು ತಮ್ಮಂದಿರು ಮಹೀಪತಿಗೆ ॥ ತೆಗೆಸಿದರು ಕಾಣಿಕೆಯನಾಮಂ । ತ್ರಿಗಳ ನಾಪರಿವಾರವನು ದೃಗು । ಯುಗದ ಕರುಣಾರಸದಲಂಬರ ಹೊರೆದು ಮನ್ನಿಸಿದ ॥೨೦॥ ತಿರುವನೆತ್ತಿ ವಿರಾಟಭೂಪನ । ಕರೆದು ಹತ್ತಿರೆ ಪೀಠದಲಿ ಕು । ಳ್ಳಿರಿಸಲೊಡೆಮುರುಚಿದನು ಕೆಲದಲಿ ಗದ್ದುಗೆಯ ಸರಿದು॥ ಪರಮಸುಕೃತವಲಾ ಧರಾಧೀ । ಶ್ವರನ ದರುಶನವಾಯ್ತು ಧನ್ಯರು । ಧರೆಯೊಳೆಮಗಿನ್ನಾರು ಸರಿಯೆಂದನು ವಿರಾಟನೃಪ ॥೨೧॥ ದೇಶ ನಿಮ್ಮದು ನಗರ ಹೆಚ್ಚಿದ । ಕೋಶ ನಿಮ್ಮದು ನನ್ನ ಜೀವವಿ । ಳಾಸ ನಿಮ್ಮದು ಸಲಹಬೇಹುದು ಬಿನ್ನಹದ ಹದನ ॥ ಈಸಮಂಜಸ ಟವಸದಲಿಸಿಂ । ಹಾಸನದಲಭಿಷೇಕವನು ಭೂ । ಮೀಶ ವಿಸ್ತರಿಸುವೆನು ಚಿತ್ತೈಸೆಂದನಾಭೂಪ ॥೨೨॥ ಎನಲು ನಗುತೆಂದನು ಮಹೀಪತಿ । ವಿನಯಮಧುರರಸಾಭಿಷೇಕವ । ನೆನಗೆ ಮಾಡಿದೆ ಸಾಕು ಪುನರುಕ್ತಾಭಿಷೇಕವದು ॥ ಜನವಿದೆಮ್ಮದು ನೀನು ನಮ್ಮಾ । ತನು ಧರಿತ್ರಿಯಿದೆಮ್ಮದೆಂಬೀ । ನೆನಹು ತಾನುಪಚಾರ ನಮಗೇಕೆಂದನಾ ಭೂಪ ॥೨೩॥ ನೊಂದವರು ಭೀಮಾರ್ಜುನರು ಹಗೆ । ಯಿಂದ ಹಳುವವ ಹೊಕ್ಕು ಮನಸಿನ । ಕಂದು ಕಸರಿಕೆ ಹೋಗದಾದುಯೋಧನಾದಿಗಳ ॥ ಕೊಂದು ಕಳದಲಿ ಮತ್ತೆ ಗಜಪುರ । ಗೆಂದು ಗಮಿಸುವೆವೆಂಬ ತವಕಿಗ । ರಿಂದು ತಾವೇ ಬಲ್ಲಿರೆಂದನು ಧರ್ಮನಂದನನು ॥೨೪॥ ಎಂದನುತ್ತರನರಸನಂಘ್ರಿಯೊ । ಳಂದು ಮಕುಟವ ಚಾಚಿ ಬಿನ್ನಹ । ವಿಂದು ನೇಮವ ಕೊಡಿ ಕುಮಾರಿಯನೀವೆನರ್ಜುನಗೆ॥ ಎಂದೊಡೇಳೇಳೆಂದು ನಸುನಗೆ । ಯಿಂದ ಪಾರ್ಥನ ನೋಡೆ ಕೈಮುಗಿ । ದೆಂದನಾತನು ಮನದ ನಿಶ್ಚಯವನು ಯುಧಿಷ್ಠಿರಗೆ ॥೨೫॥ ವರುಷವಿವಳಲಿ ನಾಟ್ಯವಿದ್ಯೆಯ । ಪರುಠವಿಸಿದೆನು ತಂದೆಯಂತೀ । ತರುಣಿ ಭಜಿಸಿಳಾಪ್ರಕಾರರಹಸ್ಯ ದೇಶದಲಿ ॥ ಗುರುತನವ ಗರುವಾಯಿಯೆತ್ತಲು । ಅರಸಿಯೆಂಬುದಿದಾವಮತವೀ । ವರಕುಮಾರಿಯನೀವೊಡಭಿಮನ್ಯುವಿಗೆ ಕೊಡಲೆಂದ ॥೨೬॥ ಪ್ರವಗ್ರೆ ನೀವೇನಾತನೇನಗೆ । ತ್ಸವದೊಳಾಗಲಿಯೆನೆ ವಿರಾಟನ । ನವನಿಪತಿ ಮನ್ನಿಸಿದನಿತ್ತನು ನಗುತ ವೀಳೆಯವ ॥ ಎವಗೆ

ಪರಮಸ್ವಾಮಿಯೆಮ್ಮ । ತ್ರಿಪದ ನೆಲೆಯೆಮ್ಮ ವರನು ಯಾ । ದವಶಿರೋಮಣಿ ಕೃಷ್ಣನಭಿಮತವೆ
ಮ್ಮ ಮತವೆಂದ ॥೨೭॥ ಪ್ರಾಪಸಿಯೆಂದೆನಿಪ ಸೇಮಗೆಮಗೆ ಕ । ಟ್ರೋಡೆಯ ಕೃಷ್ಣನು ಕೃಷ್ಣನೊಡಬ ।
ಟ್ಟೊಡೆ ವಿವಾಹ ನಿರಂತರಾಯವು ಚಿಂತೆಬೇಡೆನಲು ॥ ಒಡಬಡಲಿ ಮೇಗೆರಲಿ ಗುರ್ವನಿ । ಮ್ಮಡಿಮು
ರಾರಿಯು ತೋರಿಸುವಿರಾ । ದೊಡೆ ಕೃತಾರ್ಥನು ತಾನೆನುತ ಹಿಗ್ಗಿದನು ಮತ್ಸ್ಯನೃಪ ॥೨೮॥ ಪರಿಪ
ರಿಯ ಪಾವುಡವ ಕಟ್ಟಿಸಿ । ಪರುಷದಲಿ ಬಿನ್ನಹದ ವೋಲೆಯ । ಬರೆಸಿದನು ವೇಗಾಯ್ಲದೂತರ ನಟ್ಟಿ
ದನು ಭೂಪ ॥ ಚರರು ಪಯಣವನೋಲೆ ಪಯಣದ । ಭರಬ ಬಂದರು ಕೃಷ್ಣರಾಯನ । ಪುರಕೆ ಪ
ರಿತೋಷವಲಿ ಹೊಕ್ಕರು ರಾಜಮಂದಿರವ ॥೨೯॥ ಬರವ ಬಿನ್ನಹವಮಾಡೆ ಪಡಿಹಾ । ರರು ಮುರಾರಿಯು
ನೇಮದಲಿ ಚಾ । ರರನು ಹೊಗಿಸಲು ಬಂದು ಹೊಕ್ಕರು ಕೃಷ್ಣನೋಲಗವ ॥ ದರುಶನವ ಮಾಡುತ್ತ
ಚರಣಾಂ । ಬುರುಹದಲಿ ಪ್ರಣಮಿಸಿ ವಚನದಿಂದಿರುಳಿಳುಹಿದರವರು ಕಳುಹಿದ ಬಿನ್ನವತ್ತಳೆಯ ॥೩೦॥
ನಸುನಗುತ ಮುರವೈರಿ ಮಿಗೆ ಮ । ನ್ನಿಸಿದನವರನು ಪಾಂಡುತನಯರ । ಕುಶಲವನು ದುರುಪದಿಯ
ಸುಕ್ಷೇಮವನು ಬೆಸಗೊಳಲು ॥ ಕುಶಲರೆನಿಬರು ಬಿಡಿಯ ಭಕ್ತ । ವ್ಯಸನಭಾರವು ನಿಮ್ಮಲಿಪ್ಪ ಜೀ । ವಿ
ಸುವುದಂದೇ ಪಾಂಡುನಂದನರೆಂದರಾಚರರು ॥೩೧॥ ಕಳುಹಿದುಡುಗೊರೆ ಬಿಡಿಯ ನಿಮ್ಮಡಿ । ಗಳಿಗೆ ರಾ
ಣೀವಾಸವರ್ಗಕೆ । ಬಲಗೆವಸುದೇವಂಗೆ ದೇವಕಿಯುಗ್ರಸೇನರಿಗೆ ॥ ಕುಲಗುರುಗಳಿಕ್ರೂರುದ್ಧವ । ಬಲು
ಭುಜನು ಕೃತವರ್ಮಸಾತ್ಯಕಿ । ಲಲಿತಸಾಂಬಕುಮಾರಕಂದರ್ಪಾನಿರುದ್ಧರಿಗೆ ॥೩೨॥ ಎನಲು ನಸುನಗೆ
ಯಿಂದ ಕುಂತಿಯ । ತನುಜರಟ್ಟಿದ ಪಾವುಡಂಗಳ । ನನಿತುವನು ತೆಗೆಸಿದನು ಕೆಲದಲಿ ಸಂಧಿವಿಗ್ರಹಿಯಾ ॥
ದೆನುಚಿಹರಸೀಕ್ಷಿಸಲು ಲಿಖಿತವ । ನೆನಸಿಯದೊಳಳವಡಿಸಿ ಬಿನ್ನಹ । ವೆನುತ ನೇಮವ ಕೊಂಡು ಕಳಕ
ಳವಡಗೆ ವಾಚಿಸಿದ ॥ ಸ್ವಸ್ತಿ ಪಾಸವರಾಯಕುಂಜರ । ಮಸ್ತಕಾಂಕುಶಬೇಲಸಾಪ । ರ್ಯಸ್ತಯದುಕುಲಸಿಂ
ಹಸಂಸ್ಕೃತಜನ್ಮಮರಿತಭಯಾ ॥ ಹಸ್ತಕಲಿತಸುದರ್ಶನೋದ್ಧ್ವಗ । ಭಸ್ತಿಲವಶಮಿತಾರ್ಕಪರವೃಢ । ವಿ
ಸ್ತರಣಚಿತ್ತೈಕಸು ಕುಂತೀಸುತರ ಬಿನ್ನಹವ ॥೩೩॥ ದೇವನಿಮ್ಮಡಿಗಳ ಕೃಪಾಸಂ । ಜೀವನಿಯಲೆಮ್ಮಸುಗ
ಳೊಡಲಿನ । ತಾವಮೆಚ್ಚಿ ಪವೊಪೆದು ಹಾಯ್ದರು ಪಿಪಿಸವಂದಿರವೆ ॥ ಈ ವರುಷದಜ್ಞಾತವಾಸಗ ।
ತಾವಶೇಷಣವಾಯ್ತು ಕಂಗಳಿ । ಗೀವುದವಯವದರುಶನಾಮೃತ ಪಾನಸಂಪದವ ॥೩೪॥ ದಾಟಿದೆವು
ನುಡಿದವಧಿಯನು ಪ್ರೆ । ರಾಟಪುರದಲಿ ತುರುಪಿಡಿದು ಮ್ಯ । ನೋಟಕೋಸುಗ ಬಂದು ನುಗ್ಗಾಯಿ
ತ್ತು ಕುರುಸೇನೆ ॥ ತೋಟಿ ಬಯಿಸಿದೊಡೆಮ್ಮನುಬದು ಪಿ । ರಾಟ ಮನ್ನಿಸಿ ತನ್ನ ಮಗಳ ಕಿ । ರೀಟಿ
ತನಯಂಗೀವಭರಪಿವ ದೇವರವಧರಿಸಿ ॥೩೫॥ ಮದುವೆ ಯೆಂಬುದು ನೆವ ನಿಜಶ್ರೀ । ಪದವ ತೋರಿಸ
ಬೇಕು ವನವಾ । ಸದ ಪರಿಕ್ಲೇಶಾನುಸಂತಾಪವನು ಬೀಳ್ಕೊಡಿಸಿ ॥ ಕದಡುಹೋಗಲು ತಾಣಬೇಹುದು ।
ಹದುಳವಿಟ್ಟೆಮಗುಚಿತನಚನವ । ಪದವಳಿಯಲುತ್ಸಾಹ ಸಸಿಯನು ದೇವ ಸಲಹುವುದು ॥೩೬॥ ಕರು
ಣಿಬಿಪಿಯಂಗ್ರೆಮ ಭಕ್ತರ । ಸೊರೆಯಬೇಹುದು ಬೇಡಿಕೊಂಬೆನು । ಅರಸಲೇಕೆಳಗುಂಟಿತಾಯ್ತಾನ
ರಸುವಂದದಲಿ ॥ ಚರಣಭಕ್ತಕುಟುಂಬನೆಂಬೀ । ಬಿರುದು ಪಾಲಿಸಿ ಬಿನ್ನಹವನವ । ಧರಿಸಿ ಕಾಣಿಸಿಕೊ
ಡುವುದೆಮಗೆ ಮಹಾಪ್ರಸಾದವನು ॥೩೭॥ ಕೇಳಿ ಹರುಷಿತನಾಗಿ ಕಡುಕರು । ಣಾಳು ಹೊಂಪುಳಿವೋ
ಗಿಭಕ್ತರ । ಮೇಲನೊಲವಿನ ಬಹಳ ಪರಮಸ್ನೇಹ ಪಸರಿಸಿತು ॥ ಕೇಳಿದೆವೆ ಹರಹರ ಯುಧಿಷ್ಠಿರ ।

ನೇಳಿಗೆಯ ನಾಕೌರವೇಶ್ವರ । ನೂಳಿಗವನೆನುತಸುರರಿಪು ನೋಡಿದನು ಕೆಲಬಲನ ॥೩೯॥ ಚಿಂತೆ ಬೀತು ದು ಪಾಂಡುಮಾವನ । ಸಂತತಿಗಳಜ್ಞಾತವಾಸವ । ನೆಂತು ಪಂತದಮೇಲೆ ಕಳಿದರೊ ನಮ್ಮ ಪುಣ್ಯ ವಿದು ॥ ಕುಂತಿದೇವಿಯ ರುಮ್ಮಳಿಸೆ ನಾ । ವೆಂತು ಬದುಕುವೆ ನಕಟೆನುತ್ತಾ ನಿ । ರಂತರವು ಮರುಗುವ ನು ಬೊಪ್ಪನು ಶಿವಶಿವಾಯೆಂದ ॥೪೦॥ ಭುವಣಿಗೆಯು ಬಂಡವಿಯಲಿ ಪಾಂ । ಡವರು ನವೆದರು ರಾಜ್ಯವನು ಯಾ । ದವರು ನಾವನುಭವಿಸುತಿದ್ದೆವು ನವೆದರಿನ್ನು ಬರ ॥ ಅವರ ಸೊಗಸೇ ನಮ್ಮ ಸೊಗ ಸುಗ । ಳವರ ದುಗುಡವೆ ನಮ್ಮದವರಿಂ । ದವರ ವಿಮಳಾಭ್ಯುದಯ ನಮಗೆಂದಸುರರಿಪು ನುಡಿದ ॥೪೧॥ ಕಾಲ ಕೈಗೂಡುವೊಡೆ ಲೇಸಿನ । ಮೇಲೆ ಲೇಸುಗಳೊದಗುವವು ಭೂ । ಪಾಲ ಕುಂತಿಯಸುತರ ಬೆಳವಿಗೆ ಮೊದಲ ಮಂಗಳವು ॥ ಏವೇಲೆ ತಂಗಿಯ ಮಗನ ಮದುವೆ ವಿ । ಶಾಲಸುಖವದು ನಿಖಿಳಯಾದವ । ಜಾಲ ಪಯಣವ ಮಾಡಲೆಂದಸುರಾರಿ ನೇಮಿಸಿದ ॥೪೨॥ ಚರರುಗುಡುಗೊರೆ ಗಂಧನಿಖಿಲಾ । ಭರ ಣಕತ್ತುರಿ ಕರ್ಪುರವರವನಿ । ತ್ತರಿದಿಶಾಪಟ ಬೀಳುಗೊಟ್ಟನು ರಾಯಸವ ಬರೆಸಿ ॥ ಮರಳಿ ದೂತರು ಬಂದು ಮತ್ಸ್ಯನ । ಪುರವ ಹೊಕ್ಕರು ಕೃಷ್ಣರಾಯನ । ಕರುಣದಳತೆಯ ಬಿನ್ನವಿಸಿದರು ಪಾಂಡುತನ ಯರಿಗೆ ॥೪೩॥ ಬಳಿಕ ಸುಮುಹೂರ್ತದಲಿ ಮತ್ಸ್ಯನ । ಹೊಳಲ ಹೊರವಂಟುತ್ತರದಿಶಾ । ವಳಯದಲಿ ರಚಿಸಿದರುಪಪ್ಲವ್ಯಾಖ್ಯಪುರವರವ ॥ ನೆಲನಗಲವಲಿ ಕಟ್ಟಿ ಕೇರಿಯ । ನಳವಡಿಸಿದರು ನಿಖಿಳನೃಪರಿಗೆ। ಬಳಿಯನಟ್ಟಿದನುತ್ತರೋತ್ತರವಾದುದಿವರುದಯ ॥೪೪॥ ಜೋಳಿ ಹರಿದವು ನಿಖಿಳರಾಯರಿ । ಗೋಲೆ ಯುಡುಗೊರೆಯಿಕ್ಕಿದವು ಪಾಂ । ಚಾಲಪತಿ ಹೊರವಂಟ ಮೂರಕ್ಷೋಣಿಬಲಸಹಿತ ॥ ನೀಲನು ಯುಧಾಮನ್ಯು ಸಮರಕ । ರಾಳಧೃಷ್ಟದ್ಯುಮ್ನ ಕೀರ್ತಿವಿ । ಶಾಲಧೀರಶಿಖಂಡಿ ಸಹಿತಾ ದ್ರುಪದನೈ ತಂದ ॥೪೫॥ ಇದಿರುಗೊಂಡರು ಹರುಷದಲಿ ದುರು । ಪದಿಯ ಬಾಂಧವ ಪ್ರೈಕವನು ಮಿಗೆ । ಮುದ ದಿಕಾಣಿಸಿಕೊಂಡರಖಿಳ ಮಹಾಮಹೀಶ್ವರರ ॥ ಒದಗಿತಖಿಳಕ್ಷೋಣಿಬಲಸಂ । ಪದವನುನ್ನತವಸ್ತು ಸೊಂ । ಪೊದವಿದವು ಕೈಗೈದು ಮದುವೆಯ ಮಂಗಳಾಭ್ಯುದಯ ॥೪೬॥ ದೇವನೀಬಹನೆಂದು ಬಂದ ರು । ದಾವಣಿಯುಹವಣರಿದು ಬಳಿಕ ಮ । ಹಾವಿಳಾಸದೊಳೊಪ್ಪವಿಟ್ಟರು ತಮ್ಮ ನಗರಿಗಳ ॥ ಹೂವಲಿಯ ವೀಥಿಗಳ ನವರ । ತ್ನಾವಳಿಯ ಸೂಸಕದ ಭದ್ರದ । ಲೋವೆಗಳಲಂಬಳದಲೆಸೆದವು ಕೇರಿಕೇರಿಗಳು ॥೪೭॥ ಚಾರುತರ ಕತ್ತುರಿಯ ಸಾದಿನ । ಸಾರಣೆಯ ಕುಂಕುಮದ ರಸಗಳ । ಕಾರಣೆಯ ನವಚಿತ್ರಪತ್ರದ ಬಹಳ ಭಿತ್ತಿಗಳ ॥ ಓರಣದ ಬೀದಿಗಳ ತಳಿಗೆಯ । ತೋರಣದ ಹೊಂಬಗಲಿಗಳ ಪಂ । ನೀರಚಳೆಯ ದರಚನೆಯಲಿ ಮನೆಮನೆಗಳೊಪ್ಪಿದವು ॥೪೮॥ ಕಟ್ಟಿದವು ಗುಡಿಮನೆಗಳಲಿ ಮೇ । ಲ್ಕಟ್ಟು ಬಿಗಿದವು ಪುರದಸಾರಿಯ । ರುಟ್ಟುತೊಟ್ಟರು ಕಳಶಕನ್ನಡಿಸಹಿತ ದೇಶಿಯಲಿ ॥ ಇಟ್ಟಣಿಸಿ ಗಜವಾಜಿರಥ ಸಾ । ಲಿಟ್ಟು ತೋರುವವನುಜರಾಯುಧ । ರಟ್ಟನನು ನಡೆದಟರುಗೊಂಡರು ಪಾಂಡುನಂದನರು ॥೪೯॥ ಕ ಳಶಕನ್ನಡಿ ವಾದ್ಯರವಮಂ । ಗಳಮಹಾಂಬುಧಿ ಮಸಗಿದವೊಲು । ಜ್ವಲಪತಾಕಾವಳಿಯ ವಿಮಳಚ್ಛ ತ್ರಚಾಮರದ ॥ ಹೊಳೆವಕಂಗಳ ಮುಖದ ಕಾಂತಿಯ । ಪೊಳೆಗಳೊಡ್ಡಿನ ಮಂಪಗಮನದ । ತಳಿತ ಮುಸುಕಿನ ಮೌಳಿಕಾಂತೆಯರೈದಿತೊಗ್ಗಿನಲಿ ॥೫೦॥ ಹೊಳಹು ಮಿಗೆ ದೂರದಲಿ ಗರುಡನ । ಹಳವಿಗೆಯ ಕಂಡಂದಣಂಗಳ । ನಿಳಿದು ವೈವ್ಯೆಯಿಕ್ಕಿದರು ದ್ರುಪದವಿರಾಟಪಾಂಡವರು ॥ ಬಳಿಕ ಭೂಪರು

ಪರಮಸ್ವಾಮಿಯೆಮ್ಮ । ತ್ಪವದ ನೆಲೆಯೆಮ್ಮ ಪರನು ಯಾ । ದವಶಿರೋಮಣಿ ಕೃಷ್ಣನಭಿಮತವೆ
ಮ್ಮ ಮತವಂದ ॥೨೭॥ ಪ್ರಾಪಿಯೆಂದೆತ್ತನಿನಗೆನಗೆ ಕ । ಟ್ಟೊಡೆಯ ಕೃಷ್ಣನು ಕೃಷ್ಣನೊಡಬ ।
ಟ್ಟೊಡೆ ವಿವಾಹ ನಿರಂತರಾಯವು ಚಿಂತೆಬೇಡೆನಲು ॥ ಬಿಡಬಿಡಲಿ ಮೇಗಿರಲಿ ಗುರ್ಕನಿ । ಮ್ಮಡಿಮು
ರಾರಿಯ ತೋರಿಸುವಿರಾ । ನೋಡಿ ಕೃತಾರ್ಥನು ತಾನೆನುತ ಹಿಗ್ಗಿದನು ಮತ್ಸ್ಯನೃಪ ॥೨೮॥ ಪರಿಪ
ರಿಯ ಪ್ರಾಭೃತವ ಕಟ್ಟಿಸಿ । ಹರುಷದಲಿ ಬಿನ್ನಹದ ವೋಲೆಯ । ಬರೆಸಿದನು ವೇಗಾಯ್ಲದೂತರ ನಟ್ಟಿ
ದನು ಭೂಪ ॥ ಚರರು ಪಯಣವನೋಲೆ ಕಾರ್ಯಾಪ । ಭರದಿ ಬಂದರು ಕೃಷ್ಣರಾಯನ । ಪುರಕೆ ಪ
ರಿತೋಷದಲಿ ಹೊಕ್ಕರು ರಾಜಮಂದಿರವ ॥೨೯॥ ಬರವ ಬಿನ್ನಹಮಾಡೆ ಪಡಿಹಾ । ರರು ಮುರಾರಿಯ
ನೇಮದಲಿ ಚಾ । ರರನು ಹೊಗಿಸಲು ಬಂದು ಹೊಕ್ಕರು ಕೃಷ್ಣನೋಲಗವ ॥ ದರುಶನವ ಮಾಡುತ್ತ
ಚರಣಾಂ । ಬುರುಹದಲಿ ಮೈಯಿಕ್ಕಿ ದೇವನನಿದಿರೊಳಿಳುಹಿದರವರು ಕಳುಹಿದ ಬಿನ್ನವತ್ತಳೆಯ ॥೩೦॥
ನಸುನಗುತ ಮುರವೈರಿ ಮುಗಿ ಮ । ನ್ನಿಸಿದನವರನು ಪಾಂಡುತನಯರ । ಕುಶಲವನು ದುರುಪದಿಯ
ಸುಕ್ಷೇಮವನು ಬೆಸಗೊಳಲು ॥ ಕುಶಲರೆನುಬರು ಜೀಯ ಭಕ್ತ । ವ್ಯಸನಭಾರವು ನಿಮ್ಮಲಿರೆ ಜೀ । ವಿ
ಸುವುದಂದೇ ಪಾಂಡುನಂದನರೆಂದರಾಚರರು ॥೩೧॥ ಕಳುಹಿದರು ಗೊರೆ ಜೀಯ ನಿಮ್ಮಡಿ । ಗಳಿಗೆ ರಾ
ಣೀವಾಸವರ್ಗಕೆ । ಬಲಗೆ ವಸುದೇವಂಗೆ ದೇವಕಿಯುಗ್ರಸೇನರಿಗೆ ॥ ಕುಲಗುರುಗಳಕ್ರೂರುದ್ಧವ । ಬಲು
ಭುಜನು ಕೃತವರ್ಮಸಾತ್ಯಕಿ । ಲಲಿತಸಾಂಬಕುಮಾರಕಂದರ್ಪಾನಿರುದ್ಧರಿಗೆ ॥೩೨॥ ಎನಲು ನಸುನಗೆ
ಯಿಂದ ಕುಂತಿಯ । ತನುಜರಟ್ಟಿದ ಪತ್ರಪಂಗಳ । ನನಿಮಿಷನು ತೆಗೆಸಿದನು ಕೆಲದಲಿ ಸಂಧಿವಿಗ್ರಹಿಯಾ ॥
ದೆನುತ ಪರೀಕ್ಷಿಸಲು ಲಿಖಿತದ । ಕನಕಸಂಪುಟದೊಳಗಳವಡಿಸಿ ಬಿನ್ನಹ । ವೆನುತ ನೇಮವ ಕೊಂಡು ಕಳಕ
ಳವಡಗೆ ವಾಚಿಸಿದ ॥ ಸ್ವಸ್ತಿ ದಾನವರಾಯಕುಂಜರ । ಮಸ್ತಕಾಂಕುಶನೀಲನಾಭ । ವ್ಯಸ್ತಯದುಕುಲಸಿಂ
ಹಸಂಭೃತಜನ್ಮಮರಿತಭಯಹಾ ॥ ಹಸ್ತಕಲಿತಸುದರ್ಶನೋರ್ಧ್ವಗ । ಭಸ್ತಿಲವಶಮಿತಾರ್ಕಪರವೃಷ । ವಿ
ಸ್ತರಣಚಿತ್ತೈಸು ಕುಂತೀಸುತರ ಬಿನ್ನಹವ ॥೩೩॥ ದೇವನಿಮ್ಮಡಿಗಳ ಕೃಪಾಸಂ । ಜೀವನಿಯಲೆಮ್ಮಸುಗ
ಳೊಡಲಿನ । ತಾವಮೆಟ್ಟಿದವೊದವು ಹಾಯ್ದವು ಪಿಸಿನಮಂದಿರವ ॥ ಈ ವರುಷದಜ್ಞಾತವಾಸಗ ।
ತಾವಶೇಷಣವಾಯ್ತು ಕಂಗಳಿ । ಗೀವುದವಯವದರುಶನಾವೃತ ಪಾನಸಂಪದವ ॥೩೪॥ ಪಾಡಿದೆವು
ನುಡಿದವಧಿಯನು ಮೈ । ನಾಟಕುರದಲಿ ತುರುವಿಡಿದು ಮೈ । ನೋಟಕೋಸುಗ ಬಂದು ನುಗ್ಗಾಯಿ
ತ್ತು ಕುರುಸೇನೆ ॥ ತೋಟಿ ಜಯಿಸಿದೊಡೆಮ್ಮನರಿದು ವಿ । ರಾಟ ಮನ್ನಿಸಿ ತನ್ನ ಮಗಳ ಕಿ । ರೀಟಿ
ತನಯಂಗೀವಭರದಿಹ ದೇವರವಧರಿಸಿ ॥೩೫॥ ಮದುವೆ ಯೆಂಬುದು ನೆವ ನಿಜಶ್ರೀ । ಪದವ ತೋರಿಸ
ಬೇಕು ವನವಾ । ಸದ ಪರಿಕ್ಲೇಶಾನುಸಂತಾಪವನು ಬೀಳ್ಕೊಡಿಸಿ ॥ ಕದಡುಹೋಗಲು ಕಾಣಬೇಹುದು ।
ಹದುಳವಿತ್ತೆಮಗುಚಿತವಚನದ । ಪದವಳಿಯಲುತ್ಸಾಹ ಸಸಿಯನು ದೇವ ಸಲಹುವುದು ॥೩೬॥ ಕರು
ಣಿಬಿಜಯಂಗೈವುದು ಭಕ್ತರ । ನೋಡುಬೇಹುದು ಬೇಡಿಕೊಂಬೆವು । ಅರಸಲೇಕೆಳಗುಂದಿತಾಯಸ್ಥಾನ
ರಸುವಂದದಲಿ ॥ ಚರಣಭಜಕಕುಟುಂಬವೆಂಬೀ । ಬಿರುದು ಪಾಲಿಸಿ ಬಿನ್ನಹವನವ । ಧರಿಸಿ ಕಾಣಿಸಿಕೊ
ಡುವುದೆಮಗೆ ಮಹಾಪ್ರಸಾದವನು ॥೩೭॥ ಕೇಳಿ ಹರುಷಿತನಾಗಿ ಕಡುಕರು । ಣಾಳು ಹೊಂಪುಳಿವೋ
ಗಿಭಕ್ತರ । ಮೇಲನೊಲವಿನ ಬಹಳ ಪರಮಸ್ನೇಹ ಪಸರಿಸಿತು ॥ ಕೇಳಿದೆವೆ ಹರಹರ ಯುಧಿಷ್ಠಿರ ।

ನೇಳಿಗೆಯ ಸಾಕೌರವೇಶ್ವರ । ನೂಳಿಗವನೆನುತಸುರರಿಪು ನೋಡಿದನು ಕೆಲಬಲನ ॥೪೯॥ ಚಿಂತೆ ಬೀತು ದು ಪಾಂಡುವಮಾವನ । ಸಂತತಿಗಳಜ್ಞಾತವಾಸವ । ನೆಂತು ಪಂತದಮೇಲೆ ಕಳಿದರೊ ನಮ್ಮ ಪುಣ್ಯ ವಿದು ॥ ಕುಂತಿದೇವಿಯರುಮ್ಮಳಿಸೆ ನಾ । ವೆಂತು ಬದುಕುವೆ ನಕಟಿನುತ್ತ ನಿ । ರಂತರವು ಮರುಗುವೆನು ಬೊಪ್ಪನು ಶಿವಶಿವಾಯೆಂದ ॥೫೦॥ ಭವಣೆಗೆಯ ಬಂಡವಿಯಲಿ ಪಾಂ । ಡವರು ನವೆದರು ರಾಜ್ಯವನು ಯಾ । ದವರು ನಾವನುಭವಿಸುತಿದ್ದೆವು ನವೆದರಣ್ಣಬರ ॥ ಅವರ ಸೊಗಸೇ ನಮ್ಮ ಸೊಗಸುಗ । ಳವರ ದುಗುಡವೆ ನಮ್ಮದದರಿಂ । ದವರ ವಿಮಳಾಭ್ಯುದಯ ನಮಗೆಂದಸುರರಿಪು ನುಡಿದ॥೫೧॥ ಕಾಲ ಕೈಗೊಡುವೊಡೆ ಲೇಸಿನ । ಮೇಲೆ ಲೇಸುಗಳೊದಗುವವು ಭೂ । ಪಾಲ ಕುಂತಿಯಸುತರ ಬೆಳವಿಗೆ ಮೊದಲ ಮಂಗಳವು ॥ ಮೇಲೆ ತಂಗಿಯ ಮಗನ ಮದುವೆ ವಿ । ಶಾಲಸುಖವದು ನಿಖಿಳಯಾದವ । ಜಾಲ ಪಯಣವ ಮಾಡಲೆಂದಸುರಾರಿ ನೇಮಿಸಿದ ॥೫೨॥ ಚರಣಗುಡುಗೊರೆ ಗಂಧನಿಖಿಲಾ । ಭರಣಕತ್ತುರಿ ಕರ್ಪುರವರವನಿ । ತ್ತರಿದಿಶಾಪಟ ಬೀಳುಗೊಟ್ಟನು ರಾಯಸವ ಬರೆಸಿ ॥ ಮರಳಿ ಮೂತರು ಬಂದು ಮತ್ಸ್ಯನ । ಪುರವಹೊಕ್ಕರು ಕೃಷ್ಣರಾಯನ । ಕರುಣದಳತೆಯ ಬಿನ್ನವಿಸಿದರು ಪಾಂಡುತನಯರಿಗೆ ॥೫೩॥ ಬಳಿಕಸುಮುಹೂರ್ತದಲಿ ಮತ್ಸ್ಯನ । ಹೊಳಲ ಹೊರವಂಟುತ್ತರವಿಸಾ । ವಳಯದಲಿ ರಚಿಸಿದರುಪಪ್ಲವ್ಯಾಖ್ಯಪುರವರವ ॥ ನೆಲನಗಲವಲಿ ಕಟ್ಟಿ ಕೇರಿಯ । ನಳವಡಿಸಿದರು ನಿಖಿಳನೃಪರಿಗೆ। ಬಳಿಯನಟ್ಟಿದನುತ್ತರೋತ್ತರವಾದುದಿವರುದಯ ॥೫೪॥ ಜೋಳಿ ಹದವು ನಿಖಿಳರಾಯರಿ । ಗೋಲೆಯುಡುಗೊರೆಯಿಕ್ಕಿದವು ಪಾಂ । ಚಾಲಪತಿ ಹೊರವಂಟ ಮೂರಕ್ಷೋಣಿಬಲಸಹಿತ ॥ ನೀಲನು ಯುಧಾಮನ್ಯು ಸಮರಕ । ರಾಳಧೃಷ್ಟದ್ಯುಮ್ನ ಕೀರ್ತಿವಿ । ಶಾಲಧೀರಶಿಖಂಡಿ ಸಹಿತಾ ದ್ರುಪದನೈತಂದ ॥೫೫॥ ಇದಿರುಗೊಂಡರು ಹರುಷದಲಿ ದುರು । ಪದಿಯ ಬಾಂಧವ ಪ್ರೈಕವನು ಮಿಗೆ । ಮುದದಿ ಕಾಣಿಸಿಕೊಂಡರಖಿಳ ಮಹಾಮಹೀಶ್ವರರ ॥ ಒದಗಿತಖಿಳಕ್ಷೋಣಿಬಲಸಂ । ಪದವನುನ್ನತವಸ್ತುಸೊಂ । ಪೊದವಿದವು ಕೈಗೈದು ಮದುವೆಯ ಮಂಗಳಾಭ್ಯುದಯ ॥೫೬॥ ದೇವನೀಬಹನೆಂದು ಬಂದರು । ದಾವಣಿಯುಹವಣರಿದು ಬಳಿಕಮ । ಹಾವಿಳಾಸದೊಳೊಪ್ಪವಿಟ್ಟರು ತಮ್ಮ ನಗರಿಗಳ ॥ ಹೂವಲಿಯ ವೀಥಿಗಳ ನವರ । ತ್ನಾವಳಿಯ ಸೂಸಕದ ಭದ್ರದ । ಲೋವೆಗಳಲಂಬಳದಲೆಸೆದವು ಕೇರಿಕೇರಿಗಳು॥೫೭॥ ಚಾರುತರ ಕತ್ತುರಿಯ ಸಾದಿನ । ಸಾರಣೆಯ ಕುಂಕುಮದ ರಸಗಳ । ಕಾರಣೆಯ ನವಚಿತ್ರಪತ್ರದ ಬಹಳ ಭಿತ್ತಿಗಳ ॥ ಓರಣದ ಬೀದಿಗಳ ತಳಿಗೆಯ । ತೋರಣದ ಹೊಂಜಗಲಿಗಳ ಪಂ । ನೀರಚಳೆಯ ದರಚನೆಯಲಿ ಮನೆಮನೆಗಳೊಪ್ಪಿದವು ॥೫೮॥ ಕಟ್ಟಿದವು ಗುಡಿಮನೆಗಳಲಿ ಪೋ । ಲ್ಕಟ್ಟು ಬಿಗಿದವು ಪುರದಸಾರಿಯ । ರುಟ್ಟತೊಟ್ಟರು ಕಳಶಕನ್ನಡಿಸಹಿತ ದೇಶಿಯಲಿ ॥ ಇಟ್ಟಣಿಸಿ ಗಜವಾಜಿರಥ ಸಾ । ಲಿಟ್ಟು ತೋರುವವನುಜರಾಯಘ । ರಟ್ಟನನು ನಡೆಟರುಗೊಂಡರು ಪಾಂಡುನಂದನರು ॥೫೯॥ ಕಳಶಕನ್ನಡಿ ವಾದ್ಯರವಮಂ । ಗಳಮಹಾಂಬುಧಿ ಮಸಗಿದವೊಲು । ಜ್ವಲಪತಾಕಾವಳಿಯ ವಿಮಳಚ್ಛತ್ರಚಾಮರದ ॥ ಹೊಳೆವಕಂಗಳ ಮುಖದ ಕಾಂತಿಯ । ಮೊಲೆಗಳೊಡ್ಡಿನ ಮಂಪಗಮನದ । ತಳಿತ ಮುಸುಕಿನ ಮೌಳಿಕಾಂತೆಯರೈದಿತೊಗ್ಗಿನಲಿ ॥೬೦॥ ಹೊಳಹು ಮಿಗೆ ದೂರದಲಿ ಗರುಡನ । ಹಳವಿಗೆಯ ಕಂಡಂದಣಂಗಳ । ನಿಳಿದು ವೈವೈಯಿಕ್ಕಿದರು ದ್ರುಪದವಿರಾಟಪಾಂಡವರು ॥ ಬಳಿಕ ಭೂಪರು

ಪರಮಸ್ವಾಮಿಯೆಮ್ಮ । ಕೃಪೆಯ ನೆಲೆಯೆಮ್ಮ ವರನು ಯಾ । ದವಶಿರೋಮಣಿ ಕೃಷ್ಣನಭಿಮತವೆ
ಮ್ಮ ಮತವೆಂದ ॥೨೭॥ ಪ್ರೌಢಿಯೊಡೆತನವಾಗೆ ಮಗೆ ಕ । ಟ್ಟೊಡೆಯ ಕೃಷ್ಣನು ಕೃಷ್ಣನೊಡಬ ।
ಟ್ಟೊಡೆ ವಿವಾಹ ನಿರಂತರಾಯುವು ಚಿಂತೆಬೇಡೆನಲು ॥ ಒಡಬಡಲಿ ಮೇಣಿರಲಿ ಗುರ್ಕನಿ । ಮ್ಮಡಿಮು
ರಾರಿಯ ತೋರಿಸುವಿರಾ । ನೋಡಿ ಕೃತಾರ್ಥನು ತಾನೆನುತ ಹಿಗ್ಗಿದನು ಮತ್ಸ್ಯನೃಪ ॥೨೮॥ ಪರಿಪ
ರಿಯ ಪಾವುಡವ ಕಟ್ಟಿಸಿ । ಪರುಷದಲಿ ಬಿನ್ನಪದ ವೋಲೆಯ । ಬರೆಸಿದನು ವೇಗಾಯ್ಲುದೂತರ ನಟ್ಟಿ
ದನು ಭೂಪ ॥ ಚರರು ಪಯಣವನೋಲೆ ಸುಯ್ದಾಡ । ಭರಟ ಬಂದರು ಕೃಷ್ಣರಾಯನ । ಪುರಕೆ ಪ
ರಿತೋಷದಲಿ ಹೊಕ್ಕರು ರಾಜಮಂದಿರವ ॥೨೯॥ ಬರವ ಬಿನ್ನಹ ಮಾಡೆ ಪಡಿಹಾ । ರರು ಮುರಾರಿಯ
ನೇಮದಲಿ ಚಾ । ರರನು ಹೊಗಿಸಲು ಬಂದು ಹೊಕ್ಕರು ಕೃಷ್ಣನೋಲಗವ ॥ ದರುಶನವ ಮಾಡುತ್ತ
ಚರಣಾಂ । ಬುರುಹದಲಿ ಪ್ರಣಮಿಸಿ ದಕ್ಷಿ । ಣಪಾಣಿಯಲಿ ಕುಳಿತವರು ಕಳುಹಿದ ಬಿನ್ನವತ್ತಳೆಯ ॥೩೦॥
ನಸುನಗುತ ಮುರಹರನು ಮಿಗೆ ವಾ । ಚಿಸಿದನವರನು ಪಾಂಡುತನಯರ । ಕುಶಲವನು ದುರುಪದಿಯ
ಸುಕ್ಷೇಮವನು ಬೆಸಗೊಳಲು ॥ ಕುಶಲರೆನುಬರು ಜೀಯ ಭಕ್ತ । ವ್ಯಸನಘಾರವು ನಿಮ್ಮಲಿರೆ ಜೀ । ವಿ
ಸುವುದರಿದೇ ಪಾಂಡುಸಂತತಿಗೆಂದರಾ ಚರರು ॥೩೧॥ ಕಳುಹಿದುಡುಗೊರೆ ಜೀಯ ನಿಮ್ಮಡಿ । ಗಳಿಗೆ ರಾ
ಣೀವಾಸವರ್ಗಕೆ । ಬಲಗೆ ವಸುದೇವಂಗೆ ದೇವಕಿಯುಗ್ರಸೇನರಿಗೆ ॥ ಕುಲಗುರುಗಳಕ್ರೂರರುದ್ಧವ । ಬಲು
ಭುಜನು ಕೃತವರ್ಮ ಸಾತ್ಯಕಿ । ಲಲಿತಸಾಂಬಕುಮಾರಕಂದಪ ಪಾರ್ನಿರುದ್ಧರಿಗೆ ॥೩೨॥ ಎನಲು ನಸುನಗೆ
ಯಿಂದ ಕುಂತಿಯ । ತನುಜರಿಟ್ಟ ಮಹಾಪ್ರದಾನಗಳ । ನನಿತುವನು ತೆಗೆಸಿದನು ಕೆಲದಲಿ ಸಂಧಿವಿಗ್ರಹಿಯಾ ॥
ದೆನುತ ಪರಸಂಕ್ಷಿಸಲು ಲಿಖಿತವ । ನನುನಯದೊಳಳವಡಿಸಿ ಬಿನ್ನಹ । ವೆನುತ ನೇಮವ ಕೊಂಡು ಕಳಕ
ಳವಡಗೆ ವಾಚಿಸಿದ ॥ ಸ್ವಸ್ತಿ ದಾನವರಾಯಕುಂಜರ । ಮಸ್ತಕಾಂಕುಶ ಚೇಲಸಾಪ । ರ್ಯಸ್ತ ಯದುಕುಲಸಿಂ
ಹ ಸಂಸೃತಜನ್ಮ ದುರಿತಭಯಾ ॥ ಹಸ್ತಕಲಿತಸುದರ್ಶನೋರ್ಧ್ವಗ । ಭಸ್ತಿ ಲವಶಮಿತಾರ್ಕ ಕರ್ಪಟವೃಷ । ವಿ
ಸ್ತರಣಚಿತ್ತ್ರೈಕಸು ಕುಂತೀಸುತರ ಬಿನ್ನಹವ ॥೩೩॥ ದೇವ ನಿಮ್ಮಡಿಗಳ ಕೃಪಾಸಂ । ಜೀವನಿಯಲೆಮ್ಮ ಸುಗ
ಳೊಡಲಿನ । ತಾವಮುಟ್ಟಿ ವಪ್ರೋಪಮ ಹಾಯ್ದುವು ಪಿಸಿನವಂದಿರವೆ ॥ ಈ ವರುಷದಜ್ಞಾತವಾಸಗ ।
ತಾವಶೇಷಣವಾಯ್ತು ಕಂಗಳಿ । ಗೀವುದವಯವದರುಶನಾಮೃತ ಪಾನಸಂಪದವ ॥೩೪॥ ಪಾಟಿದೆವು
ನುಡಿವವಧಿಯನು ಪ್ರ । ನಾಟಪುರದಲಿ ತುರುವಿಡಿದು ಮ್ಮಿ । ನೋಟಕೋಸುಗ ಬಂದು ನುಗ್ಗಾಯಿ
ತ್ತು ಕುರುಸೇನೆ ॥ ತೋಟಿ ಬಯಿಸಿದೊಡೆಮ್ಮನಮ್ಮು ವಿ । ರಾಟ ಮನ್ನಿಸಿ ತನ್ನ ಮಗಳ ಕಿ । ರೀಟಿ
ತನಯಂಗೀವ ಭರದಿದ ದೇವರವಧರಿಸಿ ॥೩೫॥ ಮದುವೆ ಯೆಂಬುದು ನೆವ ನಿಜಶ್ರೀ । ಪದವ ತೋರಿಸ
ಬೇಕು ವನವಾ । ಸದ ಸಂಕ್ಲೇಶಾನುಸಂತಾಪವನು ಬೀಳ್ಕೊಡಿಸಿ ॥ ಕದಡುಹೋಗಲು ಕಾಣಬೇಹುದು ।
ಹುದುಳಪಿಟ್ಟೆಮಗುಚಿತವಚನವ । ಪದವಳಿಯಲುತ್ಸಾಹ ಸಸಿಯನು ದೇವ ಸಲಹುವುದು ॥೩೬॥ ಕರು
ಣಿಬಿಜಯಂಗೈವುದು ಭಕ್ತರ । ಸೊಗಯಬೇಹುದು ಬೇಡಿಕೊಂಬೆನು । ಅರಸಲೇಕೆಳಗುಂದಿತಾಯಸ್ತಾನ
ರಸುವಾದವಲಿ ॥ ಚರಣಘಟಕಕುಟುಂಬನೆಂಬೀ । ಬಿರುದು ಪಾಲಿಸಿ ಬಿನ್ನಹವನವ । ಧರಿಸಿ ಕಾಣಿಸಿಕೊ
ಡುವುದೆಮಗೆ ಮಹಾಪ್ರಸಾದವನು ॥೩೭॥ ಕೇಳಿ ಹರುಷಿತನಾಗಿ ಕಡುಕರು । ಣಾಳು ಹೊಂಪುಳಿವೋ
ಗಿ ಭಕ್ತರ । ಮೇಲನೊಲವಿನ ಬಹಳ ಪರಮಸ್ನೇಹ ಪಸರಿಸಿತು ॥ ಕೇಳಿದೆವೆ ಹರಹರ ಯುಧಿಷ್ಠಿರ ।

ನೇಳಿಗೆಯು ಸಾಕೌರವೇಶ್ವರ । ನೂಳಿಗವನೆನುತಸುರರಿಪು ನೋಡಿದನು ಕೆಲಬಲನ ॥೩೯॥ ಚಿಂತೆ ಬೀತು
ದು ಪಾಂಡುಮಾವನ । ಸಂತತಿಗಳಜ್ಞಾತವಾಸವ । ನೆಂತು ಪಂತದಮೇಲೆ ಕಳಿದರೊ ನಮ್ಮ ಪುಣ್ಯ
ವಿದು ॥ ಕುಂತಿದೇವಿಯರುಮ್ಮಳಿಸೆ ನಾ । ವೆಂತು ಬದುಕುವೆ ನಕಟೆನುತ್ತ ನಿ । ರಂತರವು ಮರುಗುವ
ನು ಬೊಪ್ಪನು ಶಿವಶಿವಾಯೆಂದ ॥೪೦॥ ಭವಣಿಗೆಯ ಬಂಡಪಿಯಲಿ ಪಾಂ । ಡವರು ನವೆದರು
ರಾಜ್ಯವನು ಯಾ । ದವರು ನಾವನುಭವಿಸುತಿದ್ದೆವು ನವೆದರಿನ್ನಬರ ॥ ಅವರ ಸೊಗಸೇ ನಮ್ಮ ಸೊಗ
ಸುಗ । ಳವರ ದುಗುಡವೆ ನಮ್ಮದದರಿಂ । ದವರ ವಿಮಳಾಭ್ಯುದಯ ನಮಗೆಂದಸುರರಿಪು ನುಡಿದ ॥೪೧॥
ಕಾಲ ಕೈಗೂಡುವೊಡೆ ಲೇಸಿನ । ಮೇಲೆ ಲೇಸುಗಳೊದಗುವವು ಭೂ । ಪಾಲ ಕುಂತಿಯಸುತರ ಬೆಳವಿ
ಗೆ ಮೊದಲ ಮಂಗಳವು ॥ ಮೇಲೆ ತಂಗಿಯ ಮಗನ ಮದುವೆ ವಿ । ಶಾಲಸುಖವದು ನಿಖಿಳಯಾದವ ।
ಜಾಲ ಪಯಣವ ಮಾಡಲೆಂದಸುರಾರಿ ನೇಮಿಸಿದ ॥೪೨॥ ಚರರುಗುಡುಗೊರೆ ಗಂಧನಿಖಿಲಾ । ಭರ
ಣಕತ್ತೂರಿ ಕರ್ಪೂರವರವನಿ । ತ್ತುರುದಿಶಾಪಟ ಬೀಳುಗೊಟ್ಟನು ರಾಯಸವ ಬರೆಸಿ ॥ ಮರಳಿ ಮೂತರು
ಬಂದು ಮತ್ಸ್ಯನ । ಪುರವ ಹೊಕ್ಕರು ಕೃಷ್ಣರಾಯನ । ಕರುಣದಳತೆಯ ಬಿನ್ನವಿಸಿದರು ಪಾಂಡುತನ
ಯರಿಗೆ ॥೪೩॥ ಬಳಿಕ ಸುಮುಹೂರ್ತದಲಿ ಮತ್ಸ್ಯನ । ಹೊಳಲ ಹೊರವಂಟುತ್ತರದಿಶಾ । ವಳಯದಲಿ
ರಚಿಸಿದರುಪಪ್ಲವ್ಯಾಖ್ಯಪುರವರವ ॥ ನೆಲನಗಲವಲಿ ಕಟ್ಟಿ ಕೇರಿಯ । ನಳವಡಿಸಿದರು ನಿಖಿಳನೃಪರಿಗೆ ।
ಬಳಿಯನಟ್ಟಿದನುತ್ತರೋತ್ತರವಾದುದಿವರುದಯ ॥೪೪॥ ಜೋಳಿ ಹರಿದವು ನಿಖಿಳರಾಯರಿ । ಗೋಲೆ
ಯುಡುಗೊರೆಯಿಕ್ಕಿದವು ಪಾಂ । ಚಾಲಪತಿ ಹೊರವಂಟ ಮೂರಕ್ಷೋಣಿಬಲಸಹಿತ ॥ ನೀಲನು
ಯುಧಾಮನ್ಯು ಸಮರಕ । ರಾಳಧೃಷ್ಟದ್ಯುಮ್ನ ಕೀರ್ತಿವಿ । ಶಾಲಧೀರಶಿಖಂಡಿ ಸಹಿತಾ ದ್ರುಪದನೈ
ತಂದ ॥೪೫॥ ಇದಿರುಗೊಂಡರು ಹರುಷದಲಿ ದುರು । ಪದಿಯ ಬಾಂಧವ ಪೈಕವನು ಮಿಗೆ । ಮುದ
ದಿ ಕಾಣಿಸಿಕೊಂಡರಖಿಳ ಮಹಾಮಹೀಶ್ವರರ ॥ ಒದಗಿತಖಿಳಕ್ಷೋಣಿಬಲಸಂ । ಪದವನುನ್ನತವಸ್ತು
ಸೊಂ । ಪೊದವಿದವು ಕೈಗೈದು ಮದುವೆಯ ಮಂಗಳಾಭ್ಯುದಯ ॥೪೬॥ ದೇವನೀಬಹನೆಂದು ಬಂದ
ರು । ದಾವಣಿಯ ಹವಣರಿದು ಬಳಿಕ ಮ । ಹಾವಿಳಾಸದೊಳೊಪ್ಪವಿಟ್ಟರು ತಮ್ಮ ನಗರಿಗಳ ॥ ಹೂವಲಿಯ
ವೀಥಿಗಳ ನವರ । ತ್ನಾವಳಿಯ ಸೂಸಕದ ಭದ್ರದ । ಲೋವೆಗಳಲಂಬಳದಲೆಸೆದವು ಕೇರಿಕೇರಿಗಳು ॥೪೭॥
ಚಾರುತರ ಕತ್ತೂರಿಯ ಸಾದಿನ । ಸಾರಣೆಯ ಕುಂಕುಮದ ರಸಗಳ । ಕಾರಣೆಯ ನವಚಿತ್ರಪತ್ರದ
ಬಹಳ ಭಿತ್ತಿಗಳ ॥ ಓರಣದ ಬೀದಿಗಳ ತಳಿಗೆಯ । ತೋರಣದ ಹೊಂಜಗಲಿಗಳ ಪಂ । ನೀರಚಳೆಯ
ದರಚನೆಯಲಿ ಮನೆಮನೆಗಳೊಪ್ಪಿದವು ॥೪೮॥ ಕಟ್ಟಿದವು ಗುಡಿಮನೆಗಳಲಿ ಮೇ । ಲ್ಕಟ್ಟು ಬಿಗಿದವು
ಪುರದನಾರಿಯ । ರುಟ್ಟುತೊಟ್ಟರು ಕಳಶಕನ್ನಡಿಸಹಿತ ದೇಶಿಯಲಿ ॥ ಇಟ್ಟಣಿಸಿ ಗಜವಾಜಿರಥ ಸಾ ।
ಲಿಟ್ಟು ತೋರುವವದನುಜರಾಯುಘ । ರಟ್ಟನನು ನಡೆದಿದಿರುಗೊಂಡರು ಪಾಂಡುನಂದನರು ॥೪೯॥ ಕ
ಳಶಕನ್ನಡಿ ವಾದ್ಯರವಮಂ । ಗಳಮಹಾಂಬುಧಿ ಮಸಗಿದವೊಲು । ಜ್ವಲಪತಾಕಾವಳಿಯ ವಿಮಳಚ್ಛ
ತ್ರಚಾಮರದ ॥ ಹೊಳೆವಕಂಗಳ ಮುಖದ ಕಾಂತಿಯ । ಮೊಲೆಗಳೊಡ್ಡನ ಮಂಪಗಮನದ । ತಳಿತ
ಮುಸುಕಿನ ಮೌಳಿಕಾಂತೆಯರೈದಿತೊಗ್ಗಿನಲಿ ॥೫೦॥ ಹೊಳಹು ಮಿಗೆ ದೂರದಲಿ ಗರುಡನ । ಹಳವಿ
ಗೆಯ ಕಂಡಂದಣಂಗಳೆ । ನಿಳಿದು ಮೈಮೈಯಿಕ್ಕಿದರು ದ್ರುಪದವಿರಾಟಪಾಂಡವರು ॥ ಬಳಿಕ ಭೂಪರು

ಕಾಲುನಡೆಯಲಿ । ನಲಿದು ಬರುತಿರಲಾನೆಯಿಂದಿಳಿ । ಗಿಳಿದು ಬಿಜಯಂಗೈದನಸುರಾರಾತಿ ಕರುಣದ
ಲಿ ॥೫೧॥ ಇತ್ತನವರಿಗೆ ಸಮಯವನು ದೇ । ವೋತ್ತಮಮುನಿಗಮೌಘವರಸಿದೊ । ಡತ್ತಲಿತ್ತಲು ಸರಿ
ವಮುನಿಗಳ ಮನಕೆ ಕೈಗೊಡದ ॥ ಹೆತ್ತಮಕ್ಕಳು ನಿಲಲಿ ಭಕ್ತರ । ನಿತ್ತಕರೆ ನೆನೆವರಿಗೆ ತನ್ನನು ।
ತೆತ್ತು ಬದುಕುವೆನೆಂಬ ಬೋಳೆಯರರಸ ನಡೆತಂದ ॥೫೨॥ ಬಲದ ಪದಘಟ್ಟಣೆಯ ರಜದಿಂ । ಬೆಳು
ಪಡಗಿದಂಬರದ ಮಾರ್ಗದ । ಝಳದ ಕಿರುಬೆಮರುಗಳ ಲಲಿತಕಪೋಲಮಂಡಲದ ॥ ಕೆಲದಪಾಯ
ವಧಾರುಗಳ ಕಳ । ಕಳದ ಕರುಣಾರಸವ ಸೂಸುವ । ಮೆಲುನಗೆಯ ಸಿರಿಮೊಗದ ಕೃಷ್ಣನ ಕಂಡುದಾ
ಸೇನೆ ॥೫೩॥ ಬಾಗಿದವು ಭರಿಕೈಗಳನು ಹಣೆ । ಗಾಗಿ ಮುರುಹಿದವಾನೆಗಳು ತಲೆ । ವಾಗಿ ಗುಡಿಗಟ್ಟಿ
ದವು ಹೇಷಾರವದ ತೇಜಿಗಳು ॥ ತೂಗಿ ತನುಮನು ಪುಳಕದಲಿ ಮನ । ಲಾಗುಮಿಗೆ ಕೈಮರೆದು ಹರು
ಷದ । ಸಾಗರದಲೋಲಾಡುತಿರ್ದುದು ಕೂಡೆ ತಳತಂತ್ರ ॥೫೪॥ ಅಂಗನೆಯರರವಿಂದನಾಭನ । ಮಂ
ಗಳಶ್ರೀಮೂರ್ತಿಸುಧೆಯನು । ಕಂಗಳಲಿ ಕುಡಿಕುಡಿದು ಪಡೆಯರು ಮತ್ತೆ ತಣಿವುಗಳ ॥ ಅಂಗಜನ
ಪೆತ್ತಯ್ಯನೀರೂ । ಹಿಂಗೆ ಬಡವನೆ ಯೆನುತ ಮುರಹರ । ನಂಗ ಶೋಭೆಯ ಬಂದಿಯಲಿ ಸಿಲುಕಿ
ತ್ತು ಸತಿನಿವಹ ॥೫೫॥ ಎರಡು ಸೇರೆಯ ತುಂಬಿ ರತ್ನವ । ಸುರಿದುಕೈಯಿಕ್ಕಿದನು ಭೂಪತಿ । ಚರಣ
ದಲಿ ಚತುರಾಸ್ಯಜನಕನ ವಿಮಳಭಕ್ತಿಯಲಿ ॥ ನರವೃಕೋದರನಕುಲಸಹದೇ । ವರು ವಿರಾಟದ್ರುಪದಮೊ
ದಲಾ । ಗಿರೆ ಸಮಸ್ತನೃಪಾಲಕರು ಕೈಯಿಕ್ಕಿತೊಗ್ಗಿನಲಿ ॥೫೬॥ ತಿರವ ನೆಗಹಿ ಯುಧಿಷ್ಠಿರನ ಕೈ ।
ಮುರಿಯಲೀಯದೆ ಕೃಷ್ಣನಪ್ಪಿದ । ನುರುತರಪ್ರೇಮದಲಿ ಭೀಮಾರ್ಜುನರ ಯಮಳರನು ॥ ಹರುಷದ
ಲಿ ತೆಗೆದಪ್ಪಿ ಭೂಮೀ । ಶ್ವರರ ಮನ್ನಿಸಿದನು ವಿಳಾಸಿನಿ । ಯರ ವಿಡಾಯಿಯಲರಸಿ ಕಂಡಳು
ಬಂದು ಮುರಹರನ ॥೫೭॥ ಕಾಣಿಕೆಯ ಕೈಕೊಂಡು ರಾಣಿಯನ । ರಾಣಿಯನು ಮನ್ನಿಸಿದ ತನ್ನಯ ।
ರಾಣಿವಾಸದ ಹೊರೆಗೆ ನೇಮವ ಕೊಟ್ಟು ಕಳುಹಿದನು ॥ ರಾಣಿರುಕುಮಿಣಿಯಾದಿ ಯಾದ । ಕ್ಷೋಣಿ
ಧರನರಸಿಯರನನಿಬರ । ಕಾಣಿಕೆಯ ಕೊಟ್ಟೆರಗಿ ದುರುಪದಿ ಕಂಡಳೊಲವಿನಲಿ ॥೫೮॥ ದರುಶನವನೊ
ಲಿದಿತ್ತು ವಸುದೇ । ವರನು ದೇವಕಿದೇವಿಯರ ಸಂ । ಕರುಷಣನ ಮಹದುಗ್ರಸೇನನ ಕಂಡನವನೀಶ ॥ ವ
ರಸುಭದ್ರಾದೇವಿ ಭಾವಂ । ದಿರಿಗೆ ವಂದಿಸಿದಳು ಕುಮಾರನು । ಹರುಷದಲಿ ಬಿಗಿಯಪ್ಪಿದನು ಅಭಿಮ
ನ್ಯುಪಾಂಡವರ ॥೫೯॥ ಕೈದಣಿಯೆ ವಸುದೇವನಳಿಯನ । ಪೈದಡವಿದನು ಮಗನೆ ಬನದೊಳ । ಗೊ
ಯ್ದು ವಿಧಿ ಬಂಧಿಸಿತಲಾ ಸಾಕಿನ್ನು ದೈವವನು ॥ ಬೈದು ಮಾಡುವುದೇನು ದುರುಪದಿ । ಯೈದೆತನ
ವುಂಟಾಗಿ ದುರಿತವ । ಕೊಯಿದು ನರಲೋಕಕ್ಕೆ ಬಂದಿರಿ ನಮ್ಮ ಪುಣ್ಯವಲಿ ॥೬೦॥ ಅರಸಿಯೈದೆತನ
ಕ್ಕೆ ನಮ್ಮವರ ನಿಜಾಯುಷ್ಯಕ್ಕೆ ರಾಜ್ಯದ । ಸಿರಿಯ ಸೊಂಪಿಗೆ ನಿಮ್ಮ ಮಗನಿರೆ ಕೃಷ್ಣ ಹೊಣೆ
ನಮಗೆ ॥ ಸುರರು ಸುಯಿಲ್ಲೆಮಗೆ ಮಿಕ್ಕನ । ನರರು ಗಣ್ಯವೆ ಮಾವ ಕೇಳೆಂದರಸ ವಸುದೇವನನು
ಮಧುರೋಕ್ತಿಯಲಿ ಮನ್ನಿಸಿದ ॥೬೧॥ ತಂದೆ ಬೇಡೆಮಗವ್ವೆ ಬೇಡೆಮ । ಗಿಂದು ಮುನಿಯರ ನೊಲ್ಲೆ
ಮಾವ್ಮನ । ಕಂದ ಮುಕ್ತಿಯಹೆವು ಭಕ್ತರಿಗೆಂಬ ಸನವರತ ॥ ನೊಂದೆನೆಂಬನು ತನ್ನವರು ಮನ ।
ನೊಂದರಾದೊಡೆ ತನ್ನವರ ಸುಖ । ದಿಂದ ತನ್ನದೆಂಬುದೇ ಸಿರಿಕೃಷ್ಣಮೂರ್ತಿನೆಂದ ॥೬೨॥ ಅ
ರಸಿಯರ ಬಗೆಗೊಳ್ಳ ಮಕ್ಕಳ । ಸರಕುಮಾಡನು ದೇಶಕೋಶವ । ಸಿರಿಯ ಗಣಿಸನು ಖಡ್ಡಿಗೊಳ್ಳ

ನು ಸಕಲಸಂಪದವ ‖ ಹರಿಪರಾಯಣರೆಂದೊಡವರಿಗೆ । ಹರಿಹಿಕೊಂಬನು ಮಗನೆ ಶೀಲವು । ನರರ ಪ ರಿಯಲ್ಲೆಂದನಾ ವಸುದೇವನಳಿಯಂಗೆ ‖೬೩‖ ಲೋಗರೇ ನೀವೆಮಗೆ ನಿವಗರ। ಗಾಗಿಕರಗುವನದು ನಿಲ ಲಿ ತನ । ಗಾಗದವರಿಗೆ ತನ್ನ ತೆರುವನು ಕೊಲುವಹಗೆಗೊಲಿವ ‖ ಲೋಗರೆನ್ನವರೆಂದು ಲೋಗರಿ ಗಾಗಿ ಬಮಕುವನೆಂಬಬಲುಗ್ರ । ಬಾಗಿ ಕೃಷ್ಣನನೇನಹೇಳುವೆನೆಂದನರಸಂಗೆ ‖೬೪‖ ಬೊಪ್ಪನವರೇ। ಯೆಮ್ಮ ದೂರದೆ । ಯಿಪ್ಪವರು ತಾವಲ್ಲ ಸಾಕಿ । ನ್ನೊಪ್ಪದಲಿ ಬಾಯೆಂದು ಪುರಿರಪ್ರು ಕರೆದನವನಿ ಪನ ‖ ಚಪ್ಪರಿಸಿ ಕೌರವರು ತುರುಗಳ । ತಪ್ಪಿಸಿದುದೇನಾಯ್ತು ಪಾರ್ಥನ । ದರ್ಪದನುಪೆಂತೆಂದು ಬೆ ದಗೊಂಡನು ಮುರಧ್ವಂಸಿ ‖೬೫‖ ಊಹಗಲ್ಲಿಯದರ್ಪ ಮನುಜನ । ಸಾಹಸವು ಬೇರೇನು ಯಂತ್ರ ದ । ಹಾಹೆಯಂತ್ರವನುಳಿದುಚೇಷ್ಟಿಸಲರಿವುದೇಬೇರೆ ‖ ದೇಹಿ ನೀನಾವೆಲ್ಲ ನಿನ್ನಯ । ದೇಹವಿದರೊಳಗೆ ಮಗೆ ಗರ್ವದ । ಗಾಹಿದೆಲ್ಲಿಯದೆಂದು ಬಿನ್ನವಿಸಿದನು ಯಮಸೂನು ‖೬೬‖ ಎಸಳು ಮೊನೆಯೊಂ ದಾಗಿ ತಾವರೆ । ಮುಸುಕುತಿದೆ ನೈದಿಲೆಯನೆತ್ತಿಯ । ಬೆಸುಗೆ ಬಿಡುತಿದೆ ಜಕ್ಕವಕ್ಕಿಯ ತೆಕ್ಕೆ ಸಡಿಲುತಿ ದೆ ‖ ದೆಸೆದೆಸೆಯ ತಾಣಾಂತರದ ಹೊಂ। ಬಿಸಿಲು ಬೀತುದು ಜೀಯ ಬಿನ್ನಹ । ವಸುಧೆತಂಪೇರಿತ್ತು ಸಂಧ್ಯಾಸಮಯವಾಯ್ತೆಂದ ‖೬೭‖ ನಗುತ ಹರಿ ನಿಂದಿರಲು ಕೈದಂ। ಡಿಗೆಯವರು ಹೊದ್ದಿದರುರೂ ವಾ । ರಿಗೆಗೆ ಬೀಜಯಂಗೈದನುಘೆಯೆಂದುದು ಸುರಸ್ತೋಮ ‖ ಬಿಗಿವದಡ್ಡಿಯಬದ್ಧರದ ಬೀ । ಯ ಗದ ರಾಣೀವಾಸದಂದಣ । ತೆಗೆದು ನಡೆದುದು ಮುಂದೆ ಸಂತೋಷದಲಿ ಯದುಸೇನೆ ‖೬೮‖ ಹೊ ಕ್ಕನಸುರಾರಾತಿ ಪಾಂಡವ । ರಿಕ್ಕಿಲದ ಬರೆ ನಗರಜನ ಮೈ । ಯಿಕ್ಕಿ ಬೀದಿಯ ಧೂಳು ಕವಿದುದ ಮುಂದೆ ಸಂದಣಿಸಿ ‖ ಹೊಕ್ಕು ಹೊಗಳುವ ಸುತಿಗಳಿಗೆ ಕೈ । ಮಿಕ್ಕಕಳ್ಳನು ಪಾಂಡು ಸುತರಿಗೆ । ಸಿಕ್ಕಿ ದನು ಶಿವಯೆನುತಲಿರ್ದುದು ಸೂರಿಸಂದೋಹ ‖೬೯‖ ಮೇಲೆ ಬೀಳುವಮಂದಿಯನು ಕೈ । ಗೋಲಿನ ವರಪ್ಪಳಿಸೆ ಲಕ್ಷ್ಮೀ। ಲೋಲನವದಿರ ಜರೆದು ಕಾಣಿಸಿಕೊಳುತ ಪುರಜನವ ‖ ಮೇಲುನೆಲೆಯುಪ್ಪರಿಗೆಗ ಳ ವರ । ಬಾಲೆಯರ ಕಡೆಗಂಗಳೆಸೆವನಿ । ವಾಳಿಗಳ ಕೈಕೊಳುತ ಹೊಕ್ಕನು ರಾಜಮಂದಿರವ ‖೭೦‖ ಹಿಡಿದರಾರುತಿಗಳನು ಬಣ್ಣದ । ಸೊಡರುಸುಳಿದವು ಮುಂದೆ ನೆಲನು। ಗ್ಗಡಪಧೀಮಾರ್ಜನರ ಮೇಳಾ ಪದಲಿ ಹರುಷದಲಿ ‖ ಹಿಡಿದಕೈದೀವಿಗೆಗಳನು ಕೈ । ದುಡುಕಿ ತಿವಿದಾಡುತ್ತ ಕಾಂತಿಯ । ಕಡಲ ಮ ಣಿಮಯಪೀಠದಲಿ ಮಂಡಿಸಿದನಸುರಾರಿ ‖೭೧‖ ಬೀಳುಗೊಟ್ಟನು ಸಕಲಭೂಮಿಪಾ । ಪಾಲರನು ಕುಂತಿಯ ಕುಮಾರರ । ಮೇಳದಲಿ ಪರಿಮಿತದಲಸುರಾರಾತಿ ನಸುನಗುತ ‖ ಸೋಲದಲಿ ಮೃದಣಿ ದು ಕುರುಭೂ । ಪಾಲನುಚಿತವ ಮಾಡಿ ರಾಜ್ಯವ । ನಾಳಿಸುವಹದನುಂಟೆ ನಿಮ್ಮಾಳಾಪವೇನೆಂದ ‖೭೨‖ ಮರಳಿದವು ತುರುವಿತ್ತಲಹಿತರು । ಸರದರತ್ತಲು ಮತ್ಸ್ಯ ನಮ್ಮೈ । ವರನು ನಾವೆಂದರಿದು ಕೊಂಡಾಡಿದನು ವಿನಯದಲಿ ‖ ವರಸುಭದ್ರಾನಂದನಂಗು । ತ್ತರೆಯನೀವರ್ತಿಯಲಿ ಯಿರಲಾ । ಕರ ಯಲಟ್ಟಿದೆವೆಂದು ಬಿನ್ನವಿಸಿದನು ಭೂಪಾಲ ‖೭೩‖ ಕೊಳುಕೊಡೆಗೆ ಸೇರುವೊಡೆ ಮದುವೆಯ । ನೊ ಲಿದು ದೇವರು ಮಾಡುವುದು ಮೇ । ಲಿಳೆಯ ಕಾರ್ಯವ ಬುದ್ಧಿಗಲಿಸುವುದೆಮ್ಮನುದ್ಧರಿಸಿ ‖ ಬಳಿಕ ಬಿಜಯಂಗೈವುದಿದು ಹದ । ನೆಲೆ ದಯಾಂಬುಧಿ ಕೇಳೆನಲು ನೃಪ । ತಿಲಕನುಚಿತದ ಬಿನ್ನಹಕೆ ಮನ ಮೊಲಿದು ಹರಿ ನುಡಿದ ‖೭೪‖ ಕೊಳುಕೊಡೆಗೆ ತಪ್ಪೇನು ವಸುವಿನ । ಕುಲವಿರಾಟನು ಚಂದ್ರವಂಶಾ

ವಳಿಯುವರು ನೀವಾಭಿಜಾತ್ಯದೊಳಿಲ್ಲ ಮಳಿವುಗಳು ॥ ಒಳುನುಡಿಗಳಲಿ ದೈವಶಕುನಾ । ವಳಿಗಳಾದೊಡೆ
ಹರುಷದಲಿ ಮಂ । ಗಳಮುಹೂರ್ತವ ಮಾಡಿಯೆಂದನು ಕೃಷ್ಣ ನಸುನಗುತ ॥೭೫॥ ಒಸಗೆಯಲಿನಿ
ಸ್ಸಾಳತತಿ ಗ । ರ್ಜಿಸಿದವಖಿಳಜನಂಗಳುತ್ಸಾ । ಹಿಸಿತು ಕನ್ಯಾವರಣವಾಯಿತು ವೈದಿಕೋಕ್ತಿಯಲಿ ॥
ಎಸೆಯಲಭಿಮನ್ಯುವನು ಸಿಂಗಾ । ರಿಸಿತು ಯದುಪಾಂಚಾಲಮತ್ಸ್ಯ । ಪ್ರಸರದಲಿ ಮೆಟ್ಟಕ್ಕಿ ಜೀರಿಗೆ
ಬೆಲ್ಲವನುವಾಯ್ತು ॥೭೬॥ ವರಮುಹೂರ್ತದಗಳಿಗೆವಟ್ಟಲ ಭರಿತದೊಳು ಪುಣ್ಯಾಹವದವಿ । ಸ್ತರ
ದಲಕ್ಷತೆ ದಳಿದು ತಂದರು ವಿಮಳಮಂಟಪಕೆ ॥ ಪರಮಋಷಿಗಳ ಹೋಮದಲಿ ಶಿಖಿ । ವರನಬಲ
ಗೊಂಡರು ಕುಮಾರಿಯು । ವರಿಸೆ ವೈದಿಕದಿಂದ ಬಂದಳು ವರನ ವಾಮದಲಿ ॥೭೭॥ ವಿಭವವೈವಡಿ
ಯಾಗೆ ಸದ್ವಿಜ । ಸಭೆಯನಾರಾಧಿಸಿದ ನವನೀ । ವಿಭುಗಳಿತ್ತರು ಮುಯ್ಯಗಳುಡುಗೊರೆ ರತ್ನಭೂಷಣ
ವ ॥ ಅಭವಸನ್ನಿಭ ವೀರಸಾಗಂ । ದಿಭಗಮನೆಯರು ಕೃಷ್ಣನರಸಿಯ । ರಭಿಜನಾಮಲತಿಲಕನನು ಹರ
ಸಿದರು ಹರುಷದಲಿ ॥೭೮॥ ಇದು ಶುಭೌಘದ ಗರುಡಿ ಬಹುಸಂ । ಪದದನೆಲೆವನೆ ಸೊಂಪಿನಾಗರ ।
ವಿದು ಪರಾನಂದಪ್ರವಾಹದ ಜನ್ಮಭೂಮಿಯಿದು ॥ ಮುದದ ಕೇಳೀಸ್ಥಾನ ವಿಮಲಾ । ಭ್ಯುದಯದೋ
ಲಗಸಾಲೆ ಲಕ್ಷ್ಮೀ । ಸದನವೆನೆ ರಂಜಿಸಿದುದಭಿಮನ್ಯುವಿನ ವೈವಾಹ ॥೭೯॥ ಯಾದವರು ಪಾಂಚಾಲ
ಮತ್ಸ್ಯರು । ಮೇದಿನೀಪತಿಪಾಂಡುಸೋಮಕ । ರಾದಿಯಾದನ್ವಯವನಗಣಿತಬಂಧುಬಳಗವನು ॥ ಆ
ದರಿಸಿದನು ವಿನಯದಲಿ ವಿ । ತ್ತಾದಿಸತ್ಕಾರದಲಿ ತಣಿದುದು । ಮೇದಿನೀಜನವವನಿಪನ ಸನ್ಮಾನದಾನದ
ಲಿ ॥೮೦॥ ವರಚತುರ್ಥಿಯೊಳಿರುಳು ಮೆರೆದರು । ಪುರದಲುತ್ಸಾಹದಲಿ ದಂಪತಿ । ವರರು ಭೂಮೀ
ಚಾರಚಮರದ ಚಾತುರಂಗದಲಿ ॥ ಮರುದಿವಸವವಭೃತವ ನೆರೆ ವಿ । ಸ್ತರಿಸಿದರು ಪನ್ನೀರಹೊಂಗೊ
ಪ್ಪರಿಗೆಗಳ ಕುಂಕುಮದ ಪಟವಾಸಕದ ರಚನೆಯಲಿ ॥೮೧॥ ಕನಕಮಣಿಗಳ ತೊಟ್ಟು ಜಾದಿಯ । ನ
ನೆಯಆವಳಿಕೆಯಲಿ ಮದನನ । ಮೊನೆಯ ಖಾಡಾಖಾಡಿಖಾತಿಯರ್ಯೆದೆ ಹೊಯ್ವೊಯ್ದು ॥ ದನುಜಹರ
ನರಸಿಯರು ಕುಂತಿಯ । ತನಯರರಸಿಯರೊಡನೆ ಮತ್ಸ್ಯನ । ವನಿತೆಯರು ಪಾಂಚಾಲಿನಿಯರೋ
ಕುಳಿಯನಾಡಿದರು ॥೮೨॥ ಧರಣಿ ನನೆದುದು ಗಂಧರಸಕ । ಸ್ತೂರಿಯಪನ್ನೀರುಗಳ ಹೊನಲೊಡ ।
ವೆರಸಿ ವಸೆ ಕಂಪಿಟ್ಟುದಂಬುಧಿ ನವತುಷಾರದಲಿ ॥ ತರಣಿ ಪರಿಮಳಿಸಿದನು ಪವನನ । ಸುರಭಿತನವ
ಚ್ಚರಿಯೆ ಗಗನದ । ಪರಮಸೌರಭ ಕರಸಿಕೊಂಡುದು ಸಕಲಸುರಕುಲವ ॥೮೩॥ ಬಳುವಳಿಯ ನಿಖಿ
ಳಾವನೀಮಂ । ಡಲವನನುಪಮಕೋಶವರ್ಗದ । ಲಲನೆಯರ ಗಜವಾಜಿರಥಪಾದಾತಿಗೋವ್ರಜವ ॥ ಆ
ಳಿಯಗಿತ್ತು ವಿರಾಟನೃಪಯದು । ಕುಲವನಾಪಾಂಚಾಲಚೈದ್ಯಾ । ವಳಿಯನುತ್ತಮವಸ್ತುವಾಹನ
ದಿಂದ ಮನ್ನಿಸಿದ ॥೮೪॥ ಆದುದಭಿಮನ್ಯುವಿನ ಮದುವೆ ಮ । ಹಾದಯಾಂಬುಧಿಕೃಷ್ಣರಾಯನ ।
ಪಾದವರುಶನವಾಗಲಿಮ್ಮಡಿಸಿತ್ತು ನಮ್ಮುದಯ ॥ ಮೇದಿನಿಯನಾವೊತ್ತೆಯಿಟ್ಟೆವು । ಕಾದುಕೊಂಡೆ
ವು ಸತ್ಯವನು ಮೇ । ಲಾದುದನು ನೀ ಕರುಣಿಸೆಂದರು ವೀರನರಯಣನ ॥ ॥೮೫॥

ಅಂತು ಸಂಧಿ ೧೧ಕ್ಕೆ ಪದ ೭೧೪ಕ್ಕಂ ಮಂಗಳಮಸ್ತು.

ಇತಿ ಶ್ರೀಮದಚಿಂತ್ಯಮಹಿಮ ಗದುಗು ವೀರನಾರಾಯಣ ಚರಣಾರವಿಂದ ಮಕರಂದಮಧುಪಾನಪುಷ್ಟವಚಃಷಟ್ಪದನಿಕಾಯ ಶ್ರೀಮತ್ಕುಮಾರ ವ್ಯಾಸಯೋಗೀಂದ್ರ ವಿರಚಿತಮಪ್ಪ ಕರ್ನಾಟ ಭಾರತ ಕಥಾಮಂಜರಿಯೊಳ್ ವಿರಾಟಪರ್ವ ಸಮಾಪ್ತಮಾದುದು

ಶ್ರೀರಸ್ತು.

ಶ್ರೀಗುರುಭ್ಯೋನಮಃ.

ಕನ್ನಡ ಮಹಾಭಾರತ—ಉದ್ಯೋಗಪರ್ವ.

ಮೊದಲನೆಯ ಸಂಧಿ.

॥ಸೂಚನೆ॥ ನಂಬಿದವರಿಗೆ ತನ್ನ ತೆತ್ತಿಹೆನೆಂಬಬಿರುದನು ಮೆರೆದು ಭಕ್ತಕುಟುಂಬಿ ಸಾರಥಿಯಾದನೊಲಿದರ್ಜುನಗೆ ಮುರವೈರಿ ॥

॥ಪದ॥ ಕೇಳು ಜನಮೇಜಯಧರಿತ್ರೀ । ಪಾಲ್ಕಕುಂತೀತನಯರುನ್ನತ । ದೇಳಿಗೆಯನೇನೆಂಬೆನೈ ಕಾರುಣ್ಯಸಿಂಧುವಲಾ ॥ ಶ್ರೀಲತಾಂಗಿಯರವಮಣಿನಿಬರೊ । ಳಾಳೊಡೆಯನೆಂದೆಂಬಭೇದವ । ಪೇಳುಕೊಟ್ಟೇ ನಡೆಸುತಿರ್ದನುತನ್ನ ಮೈದುನರಾ ॥೧॥ ಹೋಲಿಕೆಗೆ ಬಾಯಾರಿ ವೇದದ । ತಾಳಿಗೆಗಳೊಣಗಿದವು ಘನತೆಯು । ಮೇಲೆ ತನ್ನದು ಘನತೆಯೆಂಬುದನತ್ತ ಬೇರಿರಿಸಿ ॥ ಕಾಲಿಗೆರಗುವನಾಯುಧಿಷ್ಠಿರ । ನೇಳಲೆಡನೇಳುವನು ಕೃಷ್ಣನ । ಲೀಲೆಯನುಪಮವೆಂದುವೈಶಂಪಾಯಮುನಿ ನುಡಿದ ॥೨॥ ಒಂದುದಿನವೊಡ್ಡೋಲಗಕ್ಕೈ । ತಂದನಖಿಳಾವನಿಯರಾಯರ । ಮಂದಿಯಲಿ ಮುರವೈರಿ ನುಡಿದನು ರಾಜಮಂತ್ರವನು ॥ ಹಿಂದೆ ಜೂಜಿನ ವಿಲಗದಲಿ ಮನ । ನೊಂದರವರಡವಿಯಲ್ಲಿ ಧರೆಗಿ । ನ್ನೆಂದು ಸೇರುವರೇನುಹದನೀಪಾಂಡುತನಯರಿಗೆ ॥೩॥ ದೇವ ನೀನೇ ಬಲ್ಲೆ ನಿಮ್ಮಯ । ಭಾವನೀಧರ್ಮಜನ ಬಹುಮಾ । ನಾವಮಾನದ ಹೊರಿಗೆ ನಿನ್ನದು ಹರಣಭರಣವನು ॥ ನೀವು ಬಲ್ಲಿರಿ ಕಾಲಲೊದೆದುದ । ನೋವಿ ತಲೆಯಲಿ ಹೊತ್ತು ನಡೆಸುವೊ । ಡಾವು ಬಲ್ಲೆವು ಜೀಯಯೆಂದನು ದ್ರುಪದಭೂಪಾಲ ॥೪॥ ಕಳುಹುವುದು ಶಿಷ್ಟರನು ಧರಣೀ । ತಳವ ಬೇಡಿಸುವುದು ಸುಸಾಮವ । ಬೆಳಸುವುದು ಭೀಷ್ಮಾದಿಗಳ ಕಟ್ಟುವುದು ವಿನಯದಲಿ ॥ ತಿಳಿವುದಾತನ ನೆಲೆಯನಲ್ಲಿಂ । ಬಳಿಕನಯವಿಲ್ಲೆಂದೊಡಾಹವ । ದೊಳಗೆ ಕೈದೋರುವುದು ಮತವೆಂದನು ಮುರಧ್ವಂಸಿ ॥೫॥ ಎಲೆಮುರುಳೆ ಮುರವೈರಿ ಕೌರವ । ನೊಲಯನೀಹದನನ್ನು ಯುಧಿಷ್ಠಿರ । ನೆಳೆಯ ಸೋತನು ಜೂಜುಗಾರರ ಮೋರೆ ಮಾರ್ಗದಲಿ ॥ ನೆಲನ ಪಾಳಲಿ ಮತ್ತೆ ಗೆಲಿದೇ । ಕೊಳಲಿ ಮೇಣ್ಕಾದಲಿ ಸುಯೋಧನ । ನೊಳಗೆ ತಪ್ಪಿಲ್ಲೆಂದು ನುಡಿದನು ನಗುತ ಬಲರಾಮ ॥೬॥ ಲೇಸನಾಡಿದೆ ರಾಮ ಬಳಿಕೀ । ನಾಸುಯೋಧನನಧಮನೇ ನೀ । ನೀಸನೇರಿಸಿಕೊಂಡು ನುಡಿದಾಮತ್ತೆ ಕೆಲಬರಲಿ ॥ ಆಸುರದಕತ್ತಲೆಯ ಬೀಡಮ । ಹಾಸಹಾಯವು ಗೂಗೆಗಳಿಗುಪ। ಹಾಸವೇ ದಿಟವೆಂದು ಸಾತ್ಯಕಿ ನಗುತ ಖತಿಗೊಂಡ ।೭॥ ಬಲನ ಮಾತೇನಿವರ ಭಾಗ್ಯದ । ನೆಲೆಯೆ ಘಡ ಕೌರವರ ಶತಕದ । ತಲೆಗೆ ತಾ ವೀಳೆಯವನೆಲೆಕುಂತೀಕುಮಾರಕನೆ ॥ ನೆಲನನೆಲಗಿನ ಮೊನೆಯಲಲ್ಲದೆ । ಮೆಲುನುಡಿಯ ಸಾಮದಲಿ ಗೆಲುವಬ । ಲಿಳೆಯ ಕೊಂಬರೆ ಧರೆಯೊಳಧಿಕಕ್ಷತ್ರಿಯಾತ್ಮಜರು ॥೮॥ ಕಾದಿ ಸಾವುದು ಮೇಣು ರಿಪುಭಟ । ನಾದವನ ನೆತ್ತಿಯಲಿ ಸಬಳವ । ಕೊಂಡು ಕೊಂಬುದು ನೆಲನನಿದು ಕ್ಷತ್ರಿಯರ ಮಕ್ಕಳಿಗೆ ॥ ಮೇದಿನಿಯ ಬೇಡುವೊಡೆಮುಟ್ಟಿಯ

ತೇದು ಹಣೆಯಲಿ ಬಡಿದು ದರ್ಭೆಯ । ಕೋದು ಸ್ವಸ್ತಿಯ ಹಾಕುವುದು ಹಾರುವರ ಮಕ್ಕಳಿಗೆ ॥೯॥

ಎನಲು ನಕ್ಕನು ದ್ರುಪದನಿದು ಸ । ನ್ಮಸುಮತವು ಕಾಳಗದೊಳಗಿನ । ಮೊನೆಯೊಳಲ್ಲದೆ ಮಹಿಯ ಕೊಡುವರೆ ಕೌರವೇಶ್ವರರು ॥ ವಿನುತಸಾತ್ಯಕಿ ಕೇಳು ನೆಲೆಯಿದು । ಧನಪರನ್ನಬರೊಬ್ಬದೂತನ । ವಿನಯದಲಿ ಕಳುಹುವುದು ಸಾಮವ ಬೆಳಸಿ ನೋಡುವುದು ॥೧೦॥

ವಿಹಿತವಿದು ಪಾಂಚಾಲಕನ ಮತ । ವಹುದು ರಾಯರಿಗಟ್ಟುವುದು ವಿ । ಗ್ರಹವ ಸೂಚಿಸಿಕರೆದು ಕೊಂಬುದು ಬೇಹಭೂಭುಜರ ॥ ಬಹಳ ಸಂವರಣೆಯಲಿ ರಣಸಂ । ನಿಹಿತವಾಗಿಹುದಿತ್ತಲತ್ತಲು । ಮಹಿಯಬೇಡಿಸಕಳುಹುವುದು ತೆರನೆಂದನಸುರಾರಿ ॥೧೧॥

ಮದುವೆಗೋಸುಗ ಬಂದೆವಾವಿ । ನ್ನಿದರ ಮೇಲಣ ರಾಜಕಾರ್ಯದ । ಹದನನಟ್ಟುವುದರುಹುವುದು ಬಹೆವಾವು ಕರೆಸಿದೊಡೆ ॥ ಹದುಳವಿಹುದೆಂದಸುರರಿಪು ಕರು । ಣದಲಿ ಕುಂತೀಸುತರಸಾದ್ರಾ । ಪಟಿಯನಭಿಮನ್ಯುವ ಸುಭದ್ರೆಯ ಹರಸಿ ಬೀಳ್ಕೊಂಡ ॥೧೨॥

ಕೂಡಿಕೊಂಡಿಹುದವರ ಮಕ್ಕಳ । ನೋಡಲಾಗದು ಹೆಚ್ಚುಕುಂದನು । ಸಾಡ ಬೇಡಲು ಬುದ್ಧಿವಂತರನೆಲ್ಲಿಗಟ್ಟುವುದು ॥ ಕೂಡೆ ಶೋಧಿಸಿ ಸಜ್ಜೆಯಲಿ ಮೈ । ಗೂಡಿಯಾರೋಗಣೆಗಳಲಿ ಕೈ । ಮಾಡಿ ಬೆರಸಿಹುದೆಂದು ದ್ರುಪದವಿರಾಟರಿಗೆ ನುಡಿದ ॥೧೩॥

ಎಂದು ಕಳುಹಿಸಿ ಕೊಂಡು ನಾರೀ । ವೃಂದ ಯದುಕುಲಸಹಿತ ದೇವಮು । ಕಂದ ಬಿಜಯಂಗೈದು ಹೊಕ್ಕನು ದ್ವಾರಕಾಪುರವ ॥ ಒಂದುದಿನದಾಲೋಚನೆಯ ನೆಲೆಯಿಂ । ದ ಕರೆದು ಪುರೋಹಿತನನಲ । ವಿಂದ ಕಳುಹಿದ ದ್ರುಪದನಾಕೌರವನ ಪಟ್ಟಣಕೆ ॥೧೪॥

ಒಲೆಯುಡುಗೊರೆಸಹಿತ ಧರಣೀ । ಪಾಲರಿಗೆ ಪಾಂಡವರ ಶಿಷ್ಟರು । ಕಾಳಗಕೆ ನೆರವಾಗಲೋಸುಗ ಕರೆದರಲ್ಲಲ್ಲಿ ॥ ಆಳುಕುದುರೆಯ ಕೂಡಿ ದೆಸೆಗಳ । ಮೂಲೆಯರಸುಗಳೆಲ್ಲ ಕುರುಭೂ । ಪಾಲನಲ್ಲಿಗೆ ಕೆಲರು ಕೆಲಬರು ಪಾಂಡುತನಯರಿಗೆ ॥೧೫॥

ಧರಣಿಯೆಡೆಗೆಡೆ ರಾಯಮೋಹರ । ತೆರಳಿತಿಬ್ಬರುರಾಯರಿಗೆ ಕೈ । ನೆರವುದೋರಲು ಕವಿದುಬಂದುದು ಕಾಣೆನಳತೆಗಳ ॥ ಅರಿಗಳತಿಹೆಚ್ಚಿದರು ಮೈಮರೆ । ದಿರಲು ಧರಣಿಗೆ ಮಾನ್ಯವಹುದೆ । ನ್ನುರುವಣಿಸಬೇಕೆಂದು ದುರ್ಯೋಧನನು ಚಿಂತಿಸಿದ ॥೧೬॥

ಹದನನಾಪ್ತರಿಗರುಹಿದನು ಗು । ಪ್ತದಲಿ ಕೃಷ್ಣನನೊಳಗುಮಾಡುವ । ಮುದದಿ ಬಂದನು ಕೌರವೇಂದ್ರನು ದ್ವಾರಕಾಪುರಿಗೆ ॥ ಇದನು ಭೇದಿಸಿ ಬೇಹಿನವರರು । ಹಿದರು ಕುಂತೀಸುತರಿಗತಿವೇ । ಗದಲಿ ಧರ್ಮಜನಳುಕಿ ಕಳುಹಿದನಿಂದ್ರನಂದನನ ॥೧೭॥

ಬೀಳುಕೊಂಡರ್ಜುನನು ಲಕ್ಷ್ಮೀ । ಲೋಲನಲ್ಲಿಗೆ ಬರುತ ಕಂಡನು । ಲೀಲೆಯಲಿ ನರ್ತಿಸುವನವಿಲನು ಬನದೊಳಡಹಾಯ್ದು ॥ ಮೇಲೆ ಹಂಗನ ಬಲದ ಹರಿಣೀ । ಜಾಲದೆಡರನು ತಿದ್ದುವಲ್ಲಿ ವಿ । ಶಾಲಶಕುನವನಾಲಿಸುತ ಹರುಷದಲಿ ನಡೆತಂದ ॥೧೮॥

ಮೊರೆದು ಮಿಗೆ ತಲೆಯೊತ್ತಿ ತೆರೆಮೈ । ಮುರಿದು ಘುಳುಘುಳು ಘುಳಿತಘನನಿ । ಷ್ಠುರನಿನಾದದ ಗಜರು ಗಾಢಿಸಿ ಬಹಳ ಲಹರಿಯಲಿ ॥ ತೆರೆತೆರೆಯ ತಿವಿದೆದ್ದು ಗಗನವ । ನಿರದೊದೆದು ಪಿತಳಕ್ಕೆ ಸುಳಿ ಭೋಂ । ಕರಿಸಿ ಸಾಗರನುಬ್ಬುಗವಳವ ಕೊಂಡವೊಲು ಕುಣಿದ ॥೧೯॥

ಪೂತುಮಝು ಸಾಗರನ ಬಿಗುಹು ಮ । ಹಾತಿಶಯವೈಯಿವನನಂಜಿಸ । ಲಾತಗಳು ಊರ್ಮಿಗಳು ಬೆಟ್ಟವನೊಟ್ಟಿ ನೆತ್ತಿಯಲಿ ॥ ಈತ ನಮಗಂಜುವನೆ ಯೆನುತ ವಿ । ಧೂತರಿಪುಬಲ ಮುಂದೆ ಕಂಡನು । ಪಾತಕದ ಹೆಡತಲೆಯ ದಡಿಯನು ದ್ವಾರಕಾಪುರವ ॥೨೦॥

ಅಟ್ಟಿಬಳಲಿದಶ್ರುತಿಗೆ ಹರಿಮೈ । ಗೊಟ್ಟರಾವಿದು ತಾಪಸರು ಜಪ । ಗುಟ್ಟ

ಜಿನುಗಿದೊಡವರೆನುಜ್ಜೀವಿಸಿದರಾವಿದಲಾ ॥ ಹುಟ್ಟುಸಾವಿನ ವಿಲಗ ಜೀವರ । ಬಿಟ್ಟತಾವಿದು ಕಾಲಕ ರ್ಮದ । ಕಟ್ಟುಮುರಿವೊಡೆತಾವಲಾ ಯಿಮುಶಿವಶಿವಾಯೆಂದ ॥೨೧॥ ಪರಮ ನಾರಾಯಣಪರಾಯಣ। ನೆರವೆ ಪರತರವೆಂದು ಮುರಹರ। ಖರೆದತಾವಿದು ಮುಕುತಿಯಿಮವರೊಳು ಕರತಲಾಮಲಕ ॥ ಭರಿತಬೊ ಮ್ಮದ ಸುತ್ತುದೊಳಸನು । ಸರಿದತಾವೀತರ್ಕತಂತ್ರದ । ತರದ ಯುಕುತಿಯು ತೊಳಸಿ ಗೊಲ್ಲದತಾವ ಲಾಯೆಂದ ॥೨೨॥ ಹೊಗಳುತರ್ಜುನನಸುರರಿಪುವಿನ । ನಗುಗ್ಗೆತಂವರವುನೆಯು ಹೊಗ । ಲಗಧರನು ಮಂಚದಲಿ ನಿಪ್ರಾಂಗನೆಯು ಕೇಳಿಯುಲಿ॥ ಸೊಗಸು ಮಿಗಲತಿ ದೆರೆದಲೋಚನ । ಯುಗಳ ಸಮತಳಿಸಿದ ಸುಷುಪ್ತಿಯು । ಬಿಗುಹಿನಲಿ ಪರಮಾತ್ಮನೆಸೆದನು ಭ್ರಾಂತಿಯೋಗದಲಿ ॥೨೩॥ ಮುಕುಳಕರಪುಟನಾಗಿ ಭಯಭರ । ಭಕುತಿಯುಲಿ ಕಲಿಪಾರ್ಥನಬುಜಾಂ । ಬಕನನೆಬ್ಬಿಸಲಮ್ಮದೊಯ್ಯನೆ ಚರಣಸೇವೆಯಲಿ ॥ ಅಕುಟಿಲನು ಸಾರಿದನು ಬಳಿಕೀ । ವಿಕಳದುರ್ಯೋಧನನು ನಿಗಮ । ಪ್ರಕರಮೌಳಿಯಮೌಳಿಯತ್ತಲು ಸಾರ್ದುಮಂಡಿಸಿದ ॥೨೪॥ ಇರಲು ನಿಮಿಷದೊಳಸುರರಿಪು ಪ್ಪೆ ೯ ಮುರಿದನುಪ್ಪವಡಿಸಿದನಿದಿರಲಿ । ಸುರಪತಿಯು ಸೂನುವನು ಕಂಡನು ನಗೆಯುಮೊನೆ ಮಿನುಗೆ ॥ ತಿರುಗ ನೋಡುತ ತಲೆಯುದೆಸೆಯಲಿ । ಕುರುಕುಲೇಶ್ವರನತಿವಿಕಾರತೆ । ಯಿರವಕಂಡನಿದೇನಿದೇನೆಂದಸುರರಿಪು ನುಡಿದ ॥೨೫॥ ವೀಳೆಯವ ತಾ ಕೊಂಡು ಕುರುಭೂ । ಪಾಲಪಾರ್ಥರಿಗಿತ್ತು ಲಕ್ಷ್ಮೀ । ಲೋಲ ನುಡಿದನು ವುಭಯರಾಯರಿಗಿತ್ತ ಬರವೇನು ॥ ಪೇಳಿರೈ ಬರವಘಟಿತವಲಾ ಸಂ । ಮೇಳವೇ ಕಡುಮಾನ್ಯರೆವಿರ್ಮ್ಮ । ಯಾಲಯಕೆ ಬರವೇನೆನಲು ಕುರುರಾಯನಿಂತೆಂದ ॥೨೬॥ ಯಾದವರುಕೌರವರೊಳುಂಟೇ । ಭೇದವಾವೈತಂದೊಡೆ ಮ್ಮೊಳ । ಗಾದಲಾಘುವವೇನು ನಿಮ್ಮವೊಲಾರು ಸಖರೆಮಗೆ ॥ ಸೋದರರ ಮನ ಕದಡಿತ್ತೈ ದಾ । ಯಾ ದವಿಷಯದಲಿನ್ನು ಧರಣಿಗೆ । ಕಾದುವೆವು ನಮ್ಮಿಬ್ಬರಿಗೆ ಬಲವಾಗಬೇಕೆಂದ ॥೨೭॥ ಕೌರವೇಶ್ವರ ಕೇಳು ಧರಣೀ । ನಾರಿಯನಿಬರಿಗೊಕ್ಕತನವಿ । ದ್ವಾರವೆುಚ್ಚಿದಳಾರ ಸಂಗಡವುರಿಯಹಾಯಿದಳು ॥ ಭೂರಿಮುಮಕಾರದಲಿ ನೃಪರು ವಿ । ಚಾರಿಸದೆ ಘರೆಯೆಮ್ಮದೆಂದೇ । ನಾರಕದ ಸಾಮ್ರಾಜ್ಯಕೈದುವ ರೆಂದು ಹರಿ ನುಡಿದ ॥೨೮॥ ಸಾಡಿಗೋಸುಗ ಸೋದರರು ಹೊ । ಯ್ದಾಡಿಹರಿಹಂಚಾದರೆಂಬುದ । ನಾಡದಿಹುದೇ ಲೋಕ ಕಮಲಜನುಸುರಿಹನ್ನಬರೆ ॥ ಬೇವಕಟ ನಿಮ್ಮೊಳಗೆ ನೀವ್ ಕೈ । ಗೂಡಿ ಬದುಕ್ಕುವುದೊಳ್ಳಿತಾವ್ ನೆರೆ । ನೋಡಿ ಸಂತಸಬಡುವೆವೆಂದನು ರುಕ್ಮಿಣೀರಮಣ ॥ ತಗರ ಡ ಖತಿಗೊಳಿಸಿ ಬಲುಗಾ । ಳಗವ ನೋಡುವರಂತೆ ನಿಮ್ಮನು । ತೆಗೆತೆಗೆದು ಕಲಿಮಾಡಿ ಬಿಡುವರು ಖುಲ್ಲರಾದವರು ॥ ನಗುತ ಹೆರೆ ಹಿಂಗುವರು ಪಿಸುಣರು । ಜಗುಳ್ವರವದಿರು ಬಳಿಕಕಡೆಯಲಿ । ಹೊಗುವರೈ ನೀವಿಬ್ಬರಪ ಕೀರಿತಿಯು ಹಾದರಕೆ ॥೩೦॥ ಅವಧರಿಸು ಮುರವೈರಿ ಧರ್ಮ । ಶ್ರವಣಕೋಸುಗ ಬಾರೆವಾವ್ ಪಾ ರ್ಥಿವರ ಪಂತದ ಕದನವಿದ್ಯಾಕಾಮವೆಮಗಾಯ್ತು ॥ ನಿಮಗೆ ನಾವಿತ್ತಂಡ ಸರಿ ಪಾಂ । ಡವರಿಗೆಯು ಮನದೊಲವಿನಲಿ ಕೌ । ರವರಿಗೆಯು ಬಲವಾಗಬೇಕೆಂದನು ಸುಯೋಧನನು ॥೩೧॥ ಎನಲು ತಂ ಬುಲ ಸೂಸೆ ನಗುತ । ಜರ್ನನ ಮೊಗನೋಡಿದನಸುರರಿಪು । ವೆನುವ ಹೇಳೈ ಪಾರ್ಥಯೆನೆ ತಲೆವಾಗಿ ಕೈಮುಗಿದು ॥ ಎನಗೆ ಮತ ಬೇರೇನು ದುರಿಯೋ । ಧನನ ಮತವೇನನ್ನ ಮತನಿಂ । ಮನುನಯವೆ ನ ಯುವೆಮ್ಮೊಳೀಸ್ವಾತಂತ್ರ್ಯವಿಲ್ಲೆಂದ ॥೩೨॥ ಇದೆದೊಡಾವಿಹೆವೊಂದುಕಡೆಯಲಿ । ಕಾದುವವರಾವಲ್ಲ

ಸೈನ್ಯದ । ಯಾದವರು ಕೃತವರ್ಮಸಾರಾಯಣ ಮಹಾಸೇನೆ ॥ ಕಾದುವವರಹರೊಂದು ದೆಸೆಯೆರ । ಡಾದುಟದರೊಳೆ ಮೆಚ್ಚಿದುದ ನೀ । ಸಾದುಸಿ ವುಸೆಂದು ಪಾರ್ಥಂಗಸುರರಿಪು ನುಡಿದ ॥೩೩॥ ಮುರ ಮಥನ ಚಿತ್ತೈಸು ಕೌರವ । ರರಸನತಿಸಿರಿವಂತನಿಪ ಸಂ । ತುಸಲಾಪನು ಬಹಳ ಯಾದವಸೈನ್ಯಸಾಗ ರವ ॥ ಘರೆಯುಸಂಪದಪ್ಪಿದಡಹಿಯು । ತಿರುಗಾಪಿನಿಬರನುಸಲೆ ಸಂ । ತರಿಸಲಾಪವೆ ಕೃಷ್ಣ ನೀನೇ ಸಾ ಕು ನಮಗೆಂದ ॥೩೪॥ ನಾವು ಬಡವರು ಬಡವಂಗೆ ಘಟ । ನೀವೆ ಬೆಂಬಲವೆಂಬ ಬಿರುದನು । ದೇವ ಕೇಳಿದು ಬಲ್ಲೆವೆಂದನು ಪಾರ್ಥಕೃಷ್ಣಂಗದು ॥ ನೀವು ಸುಖವಲಿ ಪಾಂಡವರನು । ಜ್ಜೀವಿಸುವದೆಮಗುಳಿದ ಯದುಭೂ । ಪಾವಳಿಯು ಕೃತವರ್ಮಾದಿಯೇಕೆಂಬನು ಸುಯೋಧನನು ॥೩೫॥ ಮರೆಯಮಾತುಗಳೇಕೆ ಪಾಂ ಡವ । ರರಕ ನಿಮ್ಮಲಿ ಹಿಂದು ಪಾರ್ಥಂಗೆ । ಮರೆಗುಡಿವ ಹಿರಿದಾಗಿ ಮನವಮುಚ್ಚುಂಟು ನಿಮ್ಮೊಳಗೆ ॥ ಉರುವಕಾರ್ಯಕೆ ಕಡೆಯಲಾಪೆ । ಹೊರಗೆ ಸಾಕಂತಿರಲಿ ನೀ ಹೊ । ಕ್ಕಿರಿಯಲಾಗದು ಕೃಷ್ಣಯೆಂದ ನು ಕೌರವರರಾಯ ॥೩೬॥ ಮೊಲೆಯುಂಬಂದೊಬ್ಬದನುಜೆಯು । ಹಿಳಿದೆವೊದೆದೆವು ಶಕಟನನುತನು । ಗಳೆದೆ ಧೇನುಕವತ್ಸನಘಹಯವೃಷಭಭುಜಗರನು ॥ ಬಲುಗಜವ ಮಲ್ಲರನು ಮಾವನ । ನೆಳೆದು ಮಾ ಗಧಬಲವ ಬಿರುಕ್ಕೆ । ದೆಳಸಿದೆವು ದಾನವರ ಯೂಥವನಾಹವಾಗ್ರದಲಿ ॥೩೭॥ ಕಾಲಯವನನ ದಂತವ ಕ್ರನ । ಸೀಳಿದೆವು ಮುರನರಕಕುಂಭನ । ಸಾಲುವನ ಪೌಂಡ್ರಕನ ಡಿಬಿಕನ ಹಂಸವೋಹರವ ॥ ಕಾಳಗ ದೊಳಿಟ್ಟರಸಿ ಬಾಣನ । ತೋಳತರುವಂದಾಯ್ತು ಥಾಳಾ । ಧೂಳಿಯಾಹವವಿಂದು ಮೌಳಿಯೊಳೆವು ಗೆ ಮುಳಿಸಿನಲಿ ॥೩೮॥ ಹಸುಳೆತನವೊದಲಾಗಿ ಬಲುರ । ಕ್ಕಸರೊಡನೆ ತಲೆಯೊತ್ತಿ ರಣದಾ । ಯುಸ ವ ಸೈರಿಸಿ ಹೊಯ್ದುಕೊಂದೆವು ಕೋಟಿದಾನವರ ॥ ಮಿಸುಕಲಾರೆವು ಚಕ್ರ ಭಂಡಾ । ರಿಸಿತು ಮುನ್ನಿ ನಜವ್ವನದ ಬಲ । ಮಸುಳಿತಾವುಂಡಾಡಭಟ್ಟರು ನೃಪತಿ ಕೇಳೆಂದ ॥೩೯॥ ಎನಲು ಖರ್ರೆ ಲೇಸೆಂದು ದು ರಿಯೋ । ಧನನು ಕಳುಹಿಸಿಕೊಂಡು ಬಲರಾ । ಮನನು ಕೃತವರ್ಮನನು ಕಂಡನು ನಿಖಿಳಯಾದವ ರ ॥ ವಿನುತಬಲಸಹಿತೊಲವಿನಲಿ ಹ । ಸ್ತಿನಪುರಗೆ ಹಾಯಿದನು ಬಳಿಕೀ । ದನುಜರಿಪು ನಸುನಗುತ ಲಿಂತೆಂದನು ಧನಂಜಯಗೆ ॥೪೦॥ ಸುರಗಿಯನು ಬಿಸುಟೊರೆಯನಂಗೀ । ಕರಿಸಿದಂದದಲಾಹವದ ಧು ರ । ಭರದ ಯಾದವಬಲವನೊಲ್ಲದೆ ಮಂದಮತಿಯಾಗಿ ॥ ಮರುಳೆಕಾದದಕಟ್ಟದೆಮ್ಮನು । ಬರಿದೆ ಬ ಯಸಿದೆ ಯಿದನು ಕೇಳ್ದೊಡೆ । ಮರುಳುಗುಟ್ಟದೆ ಮಾಣ್ಬರೇ ನಿಮ್ಮಣ್ಣತಮ್ಮದಿರು ॥೪೧॥ ಎನಲು ಗಹಗಹಿಸಿದನಿದಾರಿಗೆ । ಮನವ ಕದ್ದಾಡುವಿರಿ ನಿಜತಿ । ಷ್ಯನಲಿ ನಾಟಕದಿಂದ್ರ ಜಾಲವೆ ನಿಮ್ಮಗರುಡಿ ಯಲಿ ॥ ಎನಗೆ ಶ್ರಮವುಂಟದು ನಿಲ್ಲಲಿಯೆ । ನ್ನನುಜರಗ್ರಜರರಿಯರೇ ನಿ । ಮ್ಮನುಪಮಿತಮಹಿಮಾ ವಲಂಬವನೆಂದ ನಾಪಾರ್ಥ ॥೪೨॥ ನಾವು ಬರಿಕೈಯವರು ಬರಲೇಹು । ಗಾವುವಲ್ಲಿಯ ಕೆಲಸ ಉಂಡುಂ । ಡಾವು ಕುಳ್ಳಿಹರಲ್ಲ ಹಂಗಾಗಿರೆವು ಕನಸವಲಿ ॥ ದೇವನೆಂದೇ ನೀವು ಬಗೆವಿರಿ । ದೇವತನ ನಮ್ಮಲ್ಲಿಲವ ವಿ । ಲ್ಲಾವು ಬಾರೆವು ಬಂದುಮಾಡುವದೇನು ಹೇಳೆಂದ ॥೪೩॥ ದೇವಮಾತ್ರವೆ ನೀವು ದೇವರ । ದೇವ ರೊಡೆಯರು ಹೊಗಳುವೊಡೆವೇ । ದಾವಳಿಗಳಳವಲ್ಲ ಸಾಕಾಮಾತದಂತಿರಲಿ ॥ ನಾವು ಭಕತರು ಭಕತಭೃ ತ್ಯರು । ನೀವು ಸಾರಥಿಯಾಗಿ ಭೃತ್ಯನ । ಕಾವುದೆಂದರ್ಜನನು ಹಣೆಚಾಚಿದನು ಹರಿಪದಕೆ ॥೪೪॥ ಎನ ಲುನಗುತತ್ತಿದನು ಸಾರಥಿ । ತನವ ಕೈಕೊಂಡೆನು ಕೃಪಾಳುವಿ । ಸನುನಯುವನಾನೆತ್ತಬಲ್ಲೆನು ಭೃತ್ಯವ

ರ್ಗದಲಿ ॥ ತನಗಹಂಕೃತಿಯೈವರಾಳೋ । ಚನೆಯ ಪಡಿಹಾರಿಕೆ ಕಿರೀಟಿಯು । ಮನೆಯ ಬಂಡಿಯ ಬೋವತನವೆಲೆನೃಪತಿ ಕೇಳೆಂದ ... ... ॥೪೫॥

ಅಂತು ಸಂಧಿ ೧ ಕ್ಕೆ ಪದ ೪೫ ಕ್ಕಂ ಮಂಗಳಮಸ್ತು.

ಎರಡನೆಯ ಸಂಧಿ.

ಸೂಚನೆ ॥ ಬಂದು ಕಂಡನು ಸಂಜಯನು ಯಮ । ನಂದನನನಲ್ಲಿಂದ ಮರಳಿದು । ಬಂದು ಕೌರವ ನೃಪತಿಗರುಹಿದನವರ ಮಾತುಗಳ ॥

ಪದ ॥ ಎಲೆಪರೀಕ್ಷಿತತನಯ ಕೇಳು । ಮ್ಮಳಿಸಿದನು ಯಮಸೂನು ಮುರರಿಪು । ಫಲುಗುಣಗೆ ಕೈಗೊಡುವನೋ ಕೌರವರಿಗೊಳಗಹನೋ ॥ ತಿಳಿಯಲರಿದೆನುತಿರಲು ಬಲ ಗ । ಣ್ಣಲುಗಿತಿದಿರೊಳು ಕೈಯಗುಡಿಯಲಿ । ಸುಳಿದನೊಬ್ಬನು ಬಹಳಮಾರ್ಗಶ್ರಮದ ಭಾರದಲಿ ॥೧॥ ಇದಿರುಗೊಳ್ಳೇಳರಸ ಕಟ್ಟಿಸು । ಮುದದಿ ಗುಡಿಯನು ರಣದೊಳಹಿತರ । ಸದೆವ ಹೋಗಿನ್ನೇನು ಸಂಶಯ ಸುರರುದಿರರುಡಳು ॥ ಪದವನರಸಿದೊಡಾಳಿಗೊಂಡನು । ಸದಮಲಶ್ರುತಿತತಿಯನೆಂಬ । ಗ್ರದಮಹಾಪರದೈವ ಬಿಜಯಂಗೈವುತಿದೆಯೆಂದ ॥೨॥ ಕಥೆಯೆ ನಿನ್ನೊಡಮುಟ್ಟಿದಪನ ಸಾ । ರಥಿತನವ ಕೈಕೊಂಡ ನಿನ್ನೀ । ಪೃಥವಿ ನಿನ್ನಯರಾಣಿವಾಸವು ಚಿಂತೆ ಬೇಡಿದಕೆ ॥ ವ್ಯಥಿತವಾಯಿತು ಸೈಂಬಲಂಸಂ । ಪ್ರಥಿತಸಾಹಸನಾದೆ ನೀನೆನೆ ಶಿಥಿಲಸಂಶಯನಂಗಚಿತ್ತವನಿತ್ತನಾತಂಗೆ ॥೩॥ ಉಕ್ಕಿ ವಿಸಟಂಬರಿವಹರುಷದ । ತೆಕ್ಕೆಯಲಿ ಕೈಗೊಡುವನೃಪತಿಗ । ಳಿಕ್ಕಲಿಸೆ ಹೊರವಂಟನರಸನು ಸಕಲದಳಸಹಿತ ॥ ಮಿಕ್ಕು ಬರೆಬರೆ ಕೃಷ್ಣನನು ಕಂ । ಡೊಕ್ಕನೊಡಲನು ಚರಣದಲಿ ಸಾ । ಕಕ್ಕಬಿಡಿದೆನೆನುತ ನೆಗಹಿದನಂದು ಧರ್ಮಜನ ॥೪॥ ಪರಕೆ ಪರತರವಸ್ತುವನು ಗೋ । ಚರಿಸಿದೆವಲೈ ಮುನಿಜನಂಗಳ । ವರಸಮಾಧಿಗೆ ಸಮಯವಿಲ್ಲದದೈವ ನಮಗೊಲಿದೈ ॥ ಕರುಣಿ ಬಿಜಯಂಗೈದೆಯೆನೆ ಮುರ । ಹರನು ನಗುತಿಂತೆಂದನಾಪೀ । ನರನ ಸಾರಥಿಯಾದೆವೆಲ್ಲಿಯ ವಸ್ತು ತಾನೆಂದ ॥೫॥ ಬಯಲಿಗೆಮ್ಮನು ಸಾಚಿಸದೆ ಪಾ । ಳಿಯಕೆ ನಡೆಯೆಂದಸುರರಿಪು ಸೇನೆಯನು ಕೈವೀಸಿದನು ಬಂದನು ರಾಜಮಂದಿರಕೆ ॥ ನಿಯತಚಿತ್ತಲು ಕೇಳು ಜನಮೇ । ಜಯಮಹೀಪತಿ ಧರ್ಮಸುತನೋ । ಲೆಯ ಹದನನರಿವಂತೆ ಶಲ್ಯನೃಪಾಲ ಹೊರವಂಟ ॥೬॥ ಮೇಳವಿಸಿ ಹೊರವಂಟನಗಣಿತ । ದಾಳುಕುದುರೆಯ ಕೂಡಿ ಬರುತಿರೆ । ಕೇಳಿದನು ಕುರುರಾಯಸಾಮುಪ್ರಾಧಿಪನ ಬರವ॥ ಆಳೊಳಗ್ಗಳನದಟಶಲ್ಯನೃ । ಪಾಲಕನ ತಿರುಹಿದೊಡೆಗೆಲುವುದು । ಕಾಳಗವು ನಮಗೆಂದು ನಿಶ್ಚೈಸಿದನು ಮಂತ್ರದಲಿ ॥೭॥ ಎಂದಖಿಳವಸ್ತುಗಳ ಜೋಡಿಸಿ । ಮುಂದೆ ಪಾಳೆಯಬಿಡುವತಾವಿನೊ । ಳಂದಮಿಗೆ ಮಾಡಿದನು ಗುಡಿಗೂಡಾರಚೌಕಿಗೆಯ ॥ ಒಂದುಯೋಜನಗಲದಲಿ ಹಯ । ವೃಂದಗಜಶಾಲೆಗಳ ಪರುತವ । ದಿಂದ ರಚಿಸಿದಕೂಳುಕವಣವನಖಿಳಪೋಹರಕೆ ॥೮॥ ಬಂದು ಬಿಡುವನ್ನಬರ ಮುನ್ನಿನ । ಮಂದಿರವ ಹೊಗುವಂತೆ ಶಲ್ಯನ । ಮಂದಿ ಸಂತೋಷದಸಮುದ್ರದಿ ಮೂಡಿ ಮುಳುಗಾಡಿ ॥ ಮುಂದೆ ನಡೆಯಲು ಮತ್ತೆ ಮುನ್ನಿನ । ಚಂದದಿಂ ಮನೆಮನೆಗಳನು ಸುಖ । ದಿಂದ ರಚಿಸಿದನಂದು

ಕುರುಪತಿ ಪಯಣಪಯಣದಲಿ ॥೯॥ ಆರು ನಯದಲಿ ನಮ್ಮಖಿಳದಳ । ಭಾರವನು ಸಲೆ ತಡೆದವನು ಕು
ರು । ವೀರನೋ ಯಮನಂದನನೊ ಮಿಗಿಲಾಗಿ ಮೆಚ್ಚಿದೆನು ॥ ಆರು ಮಾಡಲಿಯವರು ಬಂದೊಡೆ ।
ಮಾರಬೇಕೆನ್ನೊಡಲ ತೆರುವೆನು । ವೀರವೈದೋರಲಿಯೆನುತ ಹೊಯಿಸಿದನು ಡಂಗುರವ ॥೧೦॥ ನ
ಗುತ ಕೌರವರಾಯ ನಿವರೋ । ಲಗಕೆ ಬರಲಿದಿರೆದ್ದು ಮುದದಲಿ । ತೆಗೆದು ಬಿಗಿಯಪ್ಪಿದನು ಕುಶಲ
ವನೆಯ್ದೆ ಬೆಸಗೊಂಡ ॥ ಮಗನೆ ನೀನೇ ರಚಿಸಿದಾತನು । ಬಗೆದಣಿಯೆ ಬೇಡುವುದು ತು । ಹಂಗಿಗನು ನಿ
ನಗೆನೆ ಮಾವ ಬಿನ್ನಹ ಮರಳಿ ನೀವೆಂದ ॥೧೧॥ ಎನಗೆ ಬೆಂಬಲವಾಗು ಕುಂತೀ । ತನಯರನು ಬಿಡು
ಮರಳು ನೀಹ । ಸ್ತಿನಪುರಿಗೆ ತನಗಿತ್ತ ವರವೆನೆ ಶಲ್ಯ ಮನವಳುಕಿ ॥ ತನಯ ಕೈಕೊಂಡೆನು ಯುಧಿ
ಷ್ಠಿರ । ಜನಪನಳಿಯನು ನೀನು ಲೋಗನೆ । ಯೆನಗೆ ನೀವಿತ್ತಂಡಸರಿ ನಿಮ್ಮತ್ತ ಬಹೆನೆಂದ ॥೧೨॥
ಆಗಲಿದೆನು ಹಲಕಾಲ ವೈವರ । ಮೊಗವನೀಕ್ಷಿಸಿ ಮರಳುವೆನು ಬಂ । ಧುಗಳ ದರುಶನ ಫಲವಲೇ
ಸಂಸಾರತರುವಿಂಗೆ ॥ ಮಗನೆ ಸೇನೆಯ ಕೊಂಡು ವಾರ್ಣ । ನಗರಿಗೈದುವುದೆಂದು ಭೂಪನ । ಮಗು
ಳಿಚಿದನಾಶಲ್ಯ ಬಂದನು ಪಾಂಡವರ ಹೊರೆಗೆ ॥೧೩॥ ಇದಿರುಗೊಂಡರು ಕಾಣಿಕೆಯನಿ । ಕ್ಕಿದರು ತೆ
ಗೆದಪ್ಪಿದರು ಹಲಕಾ । ಲದಲಿ ಹೂಳಿದಹರುಷವನು ಕೈಗೊಳಗುಮಾಡಿದರು ॥ ಮುದದಿನೆಲ್ಲರ ಕುಶಲ
ವನು ಕೇ । ಳಿದನು ದುರಿಯೋಧನಗೆ ಸಿಲುಕಿದ । ಹದನನೆಲ್ಲವ ಹೇಳಿದನು ನಿರ್ವಿಣ್ಣಮನನಾಗಿ ॥೧೪॥
ಆದೊಡೇನಲೆಕಂದ ತಪ್ಪದು । ಮೇದಿನಿಯಸಿರಿ ನಿನಗೆ ಸತ್ಯವ । ಕಾದು ಹದಿಮೂರಬ್ದ ನವೆದಿರಿ
ಮುಂದೆ ಲೇಸಹುದು ॥ ಕಾದ ವೃತ್ರಾಸುರನ ಮುರಿದಪ । ವಾದದಲಿ ಸಿರಿ ಹೋಗಿ ದುಃಖಿತ । ನಾದ
ನಿಂದ್ರನು ಮತ್ತೆ ಬದುಕಿದಶಚಿಯದೆಸೆಯಿಂದ ॥೧೫॥ ನಹುಷನನು ಕೆಡೆನೂಕಿ ಋಷಿಗಳ । ಮಹಿಮೆ
ಯಲಿ ಸಾಮ್ರಾಜ್ಯದಲಿ ಸಂ । ನಿಹಿತನಾದನು ಮತ್ತೆ ದಿವಿಜರರಾಯನೊಳಗಾಗಿ ॥ ಅಹಿತರವಗಡಿಸಿ
ದೊಡೆ ಕುಸಿದನು । ಬಹಳಲೇಸನು ಬಳಿಕ ಕಂಡನು । ಮಹಿ ನಿನಗೆ ಬೆಸಕೈಯ್ವ ಬದುಕುವಿರೆಂದನಾಶ
ಲ್ಯ ॥೧೬॥ ಆದೊಡಾಕರ್ಣಂಗೆ ಸಾರಥಿ । ಯಾಪಿರಾದೊಡೆ ಸಮರಮುಖದಲಿ । ವಾದತೇಜೋವಧೆ
ಯ ಮಾಡುವುದವನನವಗಡಿಸಿ ॥ ಕಾದುಕೊಡುವುದು ನಾವು ಗೆಲುವವೊ । ಲಾದರಿಸುವುದು ನಮ್ಮನೆಂ
ದಾ । ಮೇದಿನೀಪತಿ ಶಲ್ಯನನು ಸತ್ಕರಿಸಿ ಕಳುಹಿದನು ॥೧೭॥ ಬೀಳುಕೊಂಡನು ಶಲ್ಯನಿತ್ತಲು । ಹೇ
ಳುವರ ಮತಿ ಮುರಿಯೆ ನೋಟಕ । ರಾಲಿ ಝುಮ್ಮಿಡೆ ಕಾದುವರ ಮನ ಮೂರುಕವಲಾಗೆ ॥ ಜಾಳಿ
ಗೆಯ ಹೊಗಲರಗಿನುರಿಯ ಚ । ಡಾಳ ನಭದಲಿ ಝಗಝಗಿಸೆ ಹೇ । ರಾಳದೊಡ್ಡವಣೆಯಲಿ ಬರು
ತಿರ್ದುದು ನೃಪವ್ರಾತ ॥೧೮॥ ದೆಸೆಗಳೆಂಟರಮೂಲೆ ಬಿರಿಯಲು । ಪಸರಿಸಿತು ಹಳೆಬೊಮ್ಮಗಹುದೇರ
ಹೊಸವಿಧಾತ್ರನ ಸೃಷ್ಟಿಯಿದು ಹೆಸರೇನು ಹೊಗಳುವನ ॥ ಕುಸಿಯನೇ ಕೂರುಮನು ಭಾರಕೆ । ನಸಿ
ಯನೇ ನಾಗೇಂದ್ರನಾನೆಗ । ಳುಸುರು ಹದುಳವೆ ನೋಡೆನಲು ಬಂದುದು ನೃಪವ್ರಾತ ॥೧೯॥ ಚೋಳ
ಪಾಂಡ್ಯರು ಕೇರಳರು ಶಿಶು । ಪಾಲನಂದನಧೃಷ್ಟಕೇತುಕ । ರಾಳಮಾಗಧಚೀನಭೋಟಕಖರ್ಪರಾದಿಗ
ಳು ॥ ಮೇಲೆಮೇಲೈತಂದು ಭೀಮಂ । ಗಾಳುದೋರಿದರತ್ತ ಕುರುಭೂ । ಪಾಲಕನ ಕೂಡಿದರು ಭಗ
ದತ್ತಾದಿಭೂಭುಜರು ॥೨೦॥ ದ್ರುಪದರಾಜಪುರೋಹಿತನು ಕುರು । ನೃಪನನಿತ್ತಲು ಬಂದು ಕಂಡ
ನು । ವಿಪುಳಮತಿ ಮಾತಾಡಿದನು ನಿಜರಾಜಕಾರಿಯವ ॥ ಕೃಪಣತನದಲಿ ಕೌರವನು ಗುರು । ಕೃಪನ

ಭೀಷ್ಮನ ಮತವನೊಲ್ಲದೆ । ಚಪಳಕರ್ಣನ ಕೂಡಿ ನಿಶ್ಚೈಸಿದನು ಕಾಳಗವ ॥೨೧॥ ನೆನೆದಮತವನು
ತನ್ನ ತಂದೆಯು । ಮನದಮಚ್ಚದೊಳೊರೆದು ಕರ್ಣನ । ನೆನಹಿನಲಿ ಪುಟವಿಟ್ಟು ಶಕುನಿಯ ನೀತಿಯ
ಲಿ ನಿಗುಚಿ॥ ಅನುಜಮತದಲಿ ವಿಸ್ತರಿಸಿ ಮ್ಮ। ದುನನ ನುಡಿಯಲಿ ಬಣ್ಣವಿಟ್ಟನು। ಜನಪನಪಕೀರ್ತ್ಯಂಗ
ನೆಗೆ ತೊಡಿಸಿದನು ಭೂಷಣವ ॥೨೨॥ ಹರುಷದಲಿ ಸಂಜಯನನಾಗಳೆ । ಕರೆಸಿಕುರುಪತಿ ಬುದ್ಧಿಗಲಿ
ಸಿದ । ನರಿನೃಪರ ಪಾಳೆಯಕೆ ಹೋಹುದು ನುಡಿವುದುರವಣಿಸಿ ॥ ಧರೆಯ ಬೇಡಿಸಿ ಕಳುಹಿದಿರಿ ಸಂ ।
ಗರದೊಳಸಿಧಾರೆಯಲಿ ಕೊಡುವೆವು । ಬರಿದೆ ಕೊಟ್ಟೊಡಧರ್ಮವೆಂಬುದು ಧರ್ಮಪುತ್ರಂಗೆ ॥ ೨೩ ॥
ಬೀಳುಕೊಂಡನು ಮಂತ್ರಿಪಯಣದ । ಮೇಲೆ ಪಯಣವನೆಯ್ದಿ ಪಾಂಡುನೃ । ಪಾಲಕರ ಪಾಳೆಯಕೆಬಂ
ದನು ರಾಯಗರುಹಿಸಲು ॥ ಕೇಳಬೀಡಾರವನು ಬೀಯುವ । ಹೇಳಿಸಿದನಾಮರುದಿವಸವೊ । ಡ್ಡೋಲಗ
ವ ರಚಿಸಿದನು ಕುಂತೀಸುತನು ಠೀವಿಯಲಿ ॥೨೪॥ ಹರಿ ವಿರಾಟದ್ರುಪದಕೈಕಯ । ರಿರವು ಬಲವಂಕದಲಿ
ಪಾಮದ । ಲಿರೆ ವೃಕೋದರ ಫಲುಗುಣಾದಿಗಳಮಳ ಮಂತ್ರಿಗಳು ॥ ತರುಣಿಯರು ಪರಿಮಳದ ಜಂಗದು ।
ಭರಣಿಯರು ಮನುಮಥವಿರಿಂಚನ । ತರಣಿಯರು ಕುಳ್ಳಿರ್ದರರಸನ ಹಿಂದೆ ಮೋಹರಿಸಿ ॥೨೫॥ ಕರಣಿಕ
ರು ಮಂತ್ರಿಗಳು ವೈದ್ಯರು । ಸರಸಕವಿಗಳು ತಾರ್ಕಿಕರು ವರ । ಭರತ ನಿಪುಣರು ಗಾಯಕರು ಪಾಠಕ
ರು ವಾಗ್ಮಿಗಳು ॥ ಕರಿತುರಗಶಿಕ್ಷಕರು ಲಕ್ಷಣ । ಪರಿಣತರು ಮಾಂತ್ರಿಕರು ಸಾಂವ । ತ್ಸರರು ಪರಿಹಾ
ಸಕರು ವೈತಾಳಿಕರು ರಂಜಿಸಿತು ॥೨೬॥ ಮಾವುತರು ಚಿತ್ರಿಕರು ಮಲ್ಲರು । ರಾವುತರು ಶಿಲ್ಪಿಗರು
ಮಾಯಾ । ಕೋವಿದರು ಕರ್ಣಾಂತ್ರಿಕಳರು ಮೂಕವಾಮನರು ॥ ದ್ರಾವಕರು ಜೂದಾಳಿಗಳು ಪ
ರಿ । ದಾವಣೆಯದಾದೇಶಿಗಳು ಮೃಗ । ಜೀವಿಗಳು ಶಾಕುನಿಕರೆಸೆದರು ರಾಜಸಭೆಯೊಳಗೆ ॥ ೨೭ ॥
ಸಾಲಮಕುಟದ ರತ್ನರಶ್ಮಿಯೆ । ಥಾಳಿಗೊಂಡುದು ತಮವನಿಸ್ನಾ । ಮೇಲುಪೋಗಿನ ಕಿತ್ತಕಡುಗಪ್ರಭೆ
ಯ ಹಂಗೇಕೆ ॥ ಮೇಲೆ ಕೈದೀವಿಗೆಗಳಧಿಕ । ಜ್ವಾಲೆಯಿದು ಪುನರುಕ್ತವೆನೆ ಭೂ । ಪಾಲನೋಲಗವೆ
ಸೆಪುದಿಂದ್ರನ ಸಭೆಗೆ ವೆಗ್ಗಳಿಸಿ ॥೨೮॥ ಕಳಕಳವೆ ಘತ ಮಾಣು ಮಾಣೆಂ । ದುಲಿಯೆ ಕಂಚುಕಿನಿಕ
ರವಂಗೈ । ತಳದ ಪಾದದ ರಾಯರಿರ್ದರು ಮಣಿಯಮುಕುಟದಲಿ ॥ ನಳಿನನಾಭನು ನಗುತ ಪರಮಂ ।
ಡಲದ ಶಿಷ್ಟನು ಬರಲಿ ಯೆನೆ ಬಾ । ಗಿಲಲಿ ಕೈದುವ ಕೊಂಡು ಹೊಗಿಸಿದರಂದು ಸಂಜಯನ ॥೨೯॥
ಬಂದು ಕಾಣಿಕೆಗೊಟ್ಟು ಹರುಷದ । ಲಂದು ಮೈಯಿಕ್ಕಿದನು ಭಯದಲಿ । ನಿಂದು ನೋಡಿದ ನೆಡದ
ಬಲದ ಮಹಾಮಹೀಶ್ವರರ ॥ ಸಂದಯಮನೋ ನಿರುತಿಯೋ ಪು । ರಂದರನೊ ಪಾವಕನೊ ವರುಣ
ನೊ। ಮಂದಿಯಿದು ಮಾನಿಸರೆ ಮಾಮಾಯೆನುತ ಬೆರಗಾದ ॥೩೦॥ ಸುಳಿದಲೆಯ ಕೆಮ್ಮೀಸೆಗಳಮಿಗೆ।
ಬೆಳೆದಮುಡುಹುಗಳೊಡ್ಡಿದುರದು। ಚ್ಚಳಿತಲೋಮದ ನೊಸಲ ಡೋರಿಯ ತಲೆಯ ಕಲಿಮುಖದ ॥ ಬ
ಲಿದಹುಬ್ಬಿನ ತೋರತೋಳಿನ । ಹೊಳೆವಡಾಯುಧಮೊಗದ ಹೊಗರಿನ । ಕಲಿಮನದಕದನಪ್ರಚಂಡರ
ಕಂಡು ಬೆರಗಾದ ॥೩೧॥ ಹಳುವದಲಿ ಹನ್ನೆರಡುವರುಷವು । ತೊಳಲಿದರು ಸಿರಿ ಹೋಗ ನಿಮಿಷಕೆ । ನೆರೆ
ದರಾಯರು ನೆರೆದು ಜೀಯೆನುತಿದೆ ಮಹಾದೇವಾ ॥ ನಳಿನನಾಭನ ಕರುಣದಳತೆಗೆ । ಸಿಲುಕದಿಹುದೇ
ನುಂಟು ಮುರರಿಪು । ಮುನಿದೊಡಾವನ ಮುರಿಯನೆಂದನು ತನ್ನ ಮನದೊಳಗೆ ॥೩೨॥ ಇಳುಹಿದನು
ಮಹಿಯಲಿ ಮಹೀಪತಿ । ಕಳುಹಿದುಡುಗೊರೆಗಳನು ಭೂಪತಿ । ತಿಲಕ ಧರ್ಮಜನೊಪ್ಪುಗೊಂಡನು

ನೃಪನ ಪಾವುಡವ ॥ ಒಲವು ಬೊಪ್ಪನಲುಂಟಲಾ ಮ । ಕ್ಕಳನು ಮರೆಯನು ಲೇಸು ಸಂಜಯ ।
ತಿಳುಹುತಾತನ ಕುಶಲವನು ಗಾಂಧಾರಿದೇವಿಯರ ॥೩೩॥ ಗುರುಪಿತಾಮಹಗೌತಮರ ಸ । ಚ್ಚರಣ
ಕಮಲಂಗಳಿಗೆ ಕುಶಲವೆ । ಗುರುಸುತನು ಸುಕ್ಷೇಮಿಯೇ ಕುರುರಾಯನಿರವೆಂತು॥ ಕುರುಪತಿಯ ಸೋ
ದರರು ಮಕ್ಕಳು । ಸರಸಿಜಾನನೆ ಭಾನುಮತಿ ಮಿ । ಕ್ಕರಸಿಯರು ಕರ್ಣಾದಿಗಳು ನಿರ್ವೃತರೆ ಹೇಳೆಂ
ದ ॥೩೪॥ ಸುಖಿಗಳೆನಿಬರು ಜೀಯ ನಿಮ್ಮಯ । ನಿಖಿಳಬಾಂಧವರನು ಸಹೋದರ । ಸಖಸುತಾದಿಗಳ
ನು ಪುರೋಹಿತ ಪೌರಪುರಜನದ ॥ ಮುಖಸಮಸ್ತರ ಮೊದಲು ಪಂಕಜ । ಮುಖಿಯರನು ಬೆಸಗೊಂ
ಡು ಕಳುಹಿದ । ರಖಿಳಗುರುನಂದನರು ಭೀಷ್ಮದ್ರೋಣಕೃಪರೆಂದ ॥೩೫॥ ಮುನ್ನ ಭೀಷ್ಮದ್ರೋಣಗೌ
ತಮ । ರುನ್ನತದಕಾರುಣ್ಯದಲಿ ಸಂ । ಪನ್ನಸಾಹಸರಾದೆವಾದರಿಸಿದೆವು ಧರ್ಮವನು ॥ ಇನ್ನು ಧೃತ
ರಾಷ್ಟ್ರವನೀಶನು । ತನ್ನ ಮಕ್ಕಳ ಬಾಂಧವಪ್ರತಿ । ಯುನ್ನತಿಯ ನೆರೆ ಕಾಬನೆಂದನು ಧರ್ಮಸುತ
ನಗುತ ॥ ಏನುಬಂದಿಹುದನು ನಿಮ್ಮವ । ರೇನನೆಂದರು ಕೌರವೇಶ್ವರ । ನೇಸನೆಕ್ಕಟಿ ಬುದ್ಧಿಗಲಿಸಿದನಿ
ವರ ಮಾತುಗಳ ॥ ಏನುವನು ನೀನುಳುಹದಿರು ವಿನ । ಯಾನುಗತವಾಗಿರಲಿ ಮೇಣ್ ಕಾ । ರ್ಯಾನು
ಗತವಾಗಿರಲಿ ಬಿನ್ನವಿಸೆಂದನಸುರಾರಿ ॥೩೭॥ ನಾಡ ಬೇಡುವೊಡೆಮ್ಮೊಡನೆ ಹೊ । ಯ್ದಾಡುವುದು ಸಂ
ಪ್ರತಿಗೆ ಚಿತ್ತವ । ಮಾಡಲಾಗದು ಸಂಧಿ ವೀರಕ್ಷತ್ರಿಯರ ಮತವೇ ॥ ಬೇಡುವರೆ ಪಾರ್ಥರು ತಾವದ
ನಾಡಬಾರದು ತಮ್ಮ ಜನನವ । ನೋಡಿ ನುಡಿದರು ಪಾಂಡುಸುತರಲ್ಲೆಂದು ಹೇಳೆಂದ ॥೩೮॥ ಮೊದ
ಲಲಮಳಬ್ರಹ್ಮಚರ್ಯವು । ಮದುವೆಯಾದುದು ಬಳಿಕ ವನವಾಸದಲಿ ವಾನಪ್ರಸ್ಥವೆಂಬಾಶ್ರಮವನಳವ
ಡಿಸಿ ॥ ತುದಿಗೆ ತಾ ಸನ್ಯಾಸವನು ಮಾ । ಡಿದನು ಮಗುಳಳುಪಿದೊಡೆರಾಜ್ಯದ । ಪದವಿಗನುಚಿತವಾ
ಯ್ತು ಯಮಜಂಗೆಂದು ಹೇಳೆಂದ ॥೩೯॥ ತಳಿತಜವ್ವನದುಬ್ಬುಗಳ ಕಳೆ । ವಳಿಗರರ್ಜುನಭೀಮರೆಂಬ
ವ । ರೊಳಗೆ ವೈರವ ಬಿತ್ತಿ ಸುಡುವನು ಕೃಷ್ಣ ಹಗೆ ತಮಗೆ ॥ ಉಳಿದದ್ರುಪದವಿರಾಟರೆಂಬೀ । ಹು
ಳುಗಳೊದವಿನಲೊರೆಗೆಡುವರು । ತಿಳಿಯೆ ತಾನೇ ಕಡೆಗೆ ಕೆಡಹಿರನೆಂದು ಹೇಳೆಂದ ॥೪೦॥ ಸಾಕು ಕೌ
ರವನಾಯಮಾತನ । ದೇಕೆ ಚಿತ್ತೈಸುವಿರಿ ಮಾತನ । ನೂಕುನೂಕು ಕುಠಾರದುರ್ಯೋಧನನನೊಡೆ
ಹೊಯ್ದು ॥ ಶಾಕಿನಿಯರನು ರಕುತವಾರಿಯೊ । ಳೋಕುಳಿಯನಾಡಿಸುವೆ ನಿಲು । ತಡವೇಕೆನುತ ಘುಡಿ
ಘುಡಿಸಿ ಕಿಡಿಕಿಡಿಯಾದನಾಭೀಮ ॥೪೧॥ ಬಸಸುವುದು ಹಿಂದಾದಜೂಜಿನೊ । ಳೆಸೆವಜಾಡ್ಯವೆ ಸಾಕು ಧ
ರ್ಮಜ । ದೆಸೆಗೆ ನೀವಿನ್ನುತ್ತರಾಯಿ ಸುಯೋಧನನಕುಲವ ॥ ದೆಸೆದೆಸೆಯದೈವಂಗಳಿಗೆ ಹಸ । ರಿಸು
ವೊಡೆಮ್ಮನು ಕಳುಹೆನುತ ಗ । ರ್ಜಿಸಿದರಂದಭಿಮನ್ಯುಸಾತ್ಯಕಿಭೀಮನಂದನರು ॥೪೨॥ ಕದಡಿತಾಯಾಸ್ಥಾ
ನಕಲ್ಪಾಂ । ತದ ಮಹಾಸಿಡಿಲಂತೆ ವೀರರು । ಕೆದರಿತಮತವಮಗೆದ್ದು ನುಡಿದರು ಖಂಡೆಯವ ಜಡಿದು ॥
ಉದಿರೆ ಹೊಯ್ವೆವು ಹಲುಗಳನು ಕಿ । ಬ್ಬದಿಯಲುಗಿವೆವು ಕರುಳನಹಿತನ । ತಿದಿಯ ಸುಲಿವೆವು ಬೆಸಸು
ನೇಮವನೆಂದರತಿರಥರು ॥೪೩॥ ಆತನಿಂದೇನಹುದು ಹೊಲ್ಲಹ । ವಾತನಿಂದೇನಹುದು ಲೇಸುಗ । ಳಾ
ತನಿಂದೇ ಬರಲಿ ಹಿಂದಣಕಾನನಾಯಸದ ॥ ಯಾತನೆಯ ಸೈರಿಸಿದನಮಗಿ । ನ್ನಾತ ನುಡಿದೊಡೆ ಹಾನಿ
ಯೇ ನೀವ್ । ಕಾತರಿಸದಿರಿ ಯೆಂದು ಸಂತೈಸಿದನು ಯಮಸೂನು ॥೪೪॥ ಕಳುಹಿದನು ಬೀಡಾರಕವ
ನಿಪ । ತಿಲಕನಾಸಂಜಯನನಲ್ಲಿಂ । ಬಳಿಕ ಮರುದಿನ ಕೃಷ್ಣಪಾರ್ಥರು ಸಂಜಯನ ಕರೆಸಿ ॥ ಬಲುಹು

ಮೆಲುಹಿನ ನುಡಿಗಳಿಂದವೆ । ತಿಳುಹಿದರು ಬಳಿಕಿತ್ತಲೋಲಗ । ದೊಳಗೆ ದೂತನ ಕರೆಸಿ ಬೀಳ್ಕೊಟ್ಟನು ಯುಧಿಷ್ಠಿರನು ॥೪೫॥ ಜನಕನನು ಗಾಂಧಾರಿದುರಿಯೋ । ಧನನನವರೊಡಹುಟ್ಟಿದರನಂ । ಗನೆಯು ರನು ದುಶ್ಶಳೆಯು ಸೈಂಧವಕರ್ಣಶಕುನಿಗಳ ॥ ವಿನುತಬಾಹ್ಲಿಕಶಲ್ಯಭಗದ । ತ್ತನ ನದೀಸುತ ಗುರುಕೃಪರ ಗುರು । ತನುಜರನು ವಂದಿಸಿದರುಚಿತದಲೆಂದು ಹೇಳೆಂದ ॥೪೬॥ ವರಪುರೋಹಿತರನು ಸುಸಾಮಂ । ತರನು ವೈದ್ಯರ ವಿದುರನನು ಮು । ತ್ತರಮನೆಯ ವಿಶ್ವಾಸಿಗಳನೋಲಗಪಗಣಿಕೆಯರ ॥ ಕರಿಹಯಾಧ್ಯಕ್ಷರನು ಪಡಿಯಾ । ರರನು ಬಾಹತ್ತರನಿಯೋಗದ । ಪರಿಜನದ ಕುಶಲವನು ಕೇಳಿದನೆಂದು ಹೇಳೆಂದ ॥೪೭॥ ಹೊನ್ನಿನಲಿ ಮಧುರೋಕ್ತಿಯಲಿ ವಿವಿ । ಧಾನ್ನದುಡುಗೊರೆಗಳಲಿ ದೂತನ । ಮನ್ನಿಸಿದನವನೀಶನುಚಿತದಲವನ ಬೀಳ್ಕೊಟ್ಟ ॥ ಪನ್ನಗನ ಸಿರಿಮಂಚದಾತನು । ಬೆನ್ನಲಿರಲೀಪಾಂಡುತನಯರಿ । ಗಿನ್ನು ಮಂಗಳವೆನುತ ಸಂಜಯ ಬಂದನಿಭಪುರಿಗೆ ॥ ... ॥೪೮॥

ಅಂತು ಅಂಧಿ ೨ ಕ್ಕೆ ಪದ ೯೩ಕ್ಕಂ ಮಂಗಳಮಸ್ತು.

ಮೂರನೆಯ ಸಂಧಿ.

ಸೂಚನೆ ॥ ತಿಳುಹಿದನು ವಿದುರನು ಮಹೀಪತಿ । ತಿಲಕನನು ನಯನೀತಿಧರ್ಮದ । ಗಳಸುಸಂಗತಿಯಿಂದ ನೂಕಿದರಿವರು ಯಾಮಿನಿಯ ॥

ಪದ ॥ ಬಂದನಾಧೃತರಾಷ್ಟ್ರರಾಯನ । ಮಂದಿರಕೆ ಕಂಡನು ಮಹೀಶನ । ನೊಂದೆರಡುಮಾತಿನಲಿ ಸೂಚಿಸಿ ಮರಳಿದನು ಮನೆಗೆ ॥ ಅಂದಿನಿರುಳೊಳು ನಿದ್ರೆಬಾರದೆ । ನೊಂದು ವಿದುರನ ಕರೆದು ರಾಯನ । ತಂದೆ ಬಿಸುಸುಯ್ಯುತ್ತನುಡಿದನು ವಿದುರದೇವಂಗೆ ॥ ನಾಳೆ ಸಭೆಯಲಿ ಬಂದಹದನನು । ಹೇಳುವನು ಸಂಜಯನು ಸಂಧಿಯೊ । ಕಾಳಗವೊ ಮುಂದರಿಯಬಾರದು ಮಗುಡವಾಯ್ತೆನಗೆ ॥ ಹೇಳು ನಿರುತವನಿಂದಿನಿರುಳನು । ಬೀಳುಕೊಟ್ಟುದು ನಿದ್ರೆಯೆನೆ ಭೂ । ಪಾಲಕನ ಸಂತೈಸಿ ಮತ್ತಿಂತೆಂದನಾವಿದುರ ॥೨॥ ಬಲವಿಹೀನನು ಬಲ್ಲಿದನ ಕೂ । ಡೊಲಿದು ತೊಡಕಿದವಂಗೆ ಕಾಮದ । ಕಳವಳದಲಿರ್ದವಗೆ ಧನದಳಲಿಂದಮರುಗುವಗೆ ॥ ಕಳವಿನಲಿ ಕುದಿವಂಗೆ ದೈವದ । ನೆಲೆಯನರಿಯದವಂಗೆ ದಿಟವಿದು । ತಿಳಿಯಬಾರದು ನಿದ್ರೆಯೆಂದನು ಭೂಪತಿಗೆ ವಿದುರ ॥೩॥ ಒಂದರಿಂದೆರಡಹುದ ನರಿ ಮೂ । ರಂದವನು ತಿಳಿ ನಾಲ್ಕರಲಿ ಮನ । ಗುಂದದಿರದೈದರಲಿ ವರ್ಜಿಪುದಾರನೇಳರಲಿ ॥ ಬಂದಿಸದಿರೆಂಟನು ವಿಚಾರಿಸಿ । ಮುಂದುವರಿವೊಂಬತ್ತರಲಿ ಮನ । ಗುಂದಿಸದಿರೀರೈದರಲಿ ಭೂಪಾಲ ಕೇಳೆಂದ ॥೪॥ ತನ್ನ ಚಿಂತೆಯದೊಂದು ದೈವದ । ಗನ್ನಗತಕವದರಡು ಭಾವದ । ಮನ್ನಣೆಯ ಬಗೆ ಮೂರು ದೈವದ ಭಿನ್ನಮುಖನಾಲ್ಕು ॥ ತನ್ನ ನೆನಹಿನವೋಲ್ಬು ಕಾರ್ಯವು । ಚೆನ್ನಹಡೆ ಲೋಕಕ್ಕೆ ತಾ ಬೇ । ರಿನ್ನು ದೈವವದೇಕೆ ತಾನೇ ದೈವರೂಪೆಂದ ॥೫॥ ಒಂದುವರ್ಣವನರುಹಿದವ ಗುರು । ವೊಂದುಪಾಯದಲುಳುಹಿದವಗುರು । ಬಂದವಿಗ್ರಹದೊಳಗೆ ರಕ್ಷಿಸಿದಾತ ಪರಮಗುರು ॥ ಒರದೆರಡುಮೂರೈಸಲೇತಾ । ನೆಂದು ಗರ್ವೀಕರಿಸಿದವರುಗ । ಳೊಂದುವರು ಚಾಂಡಾಲಯೋನಿಯೊಳರಸ ಕೇಳೆಂದ ॥೬॥ ತನ್ನ

ಕಾರಿಯಕಾರಣವನುಳಿ । ದನ್ಯಥಾಚಿಂತೆಯನು ಮಾಡುವು । ದುನ್ನತಿಕೆತಾನಲ್ಲನೀತಿಜ್ಞರಿಗೆಭಾವಿಸಲು॥ ಮನ್ನಿಸುವುದಾತ್ಮನನು ಸಿಕ್ಕಿದ। ನನ್ಯರಿಗೆ ಮಾಡುವುದದಲ್ಲದೆ । ತನ್ನ ತಾಮರೆದಿಹುದು ಮತವಲ್ಲೆಂದನಾವಿದುರ ॥೭॥ ಹಾವು ಹಲವನು ಹಡೆದು ಲೋಕಕೆ । ಸಾವತಹವೊಲು ನೂರುಮಕ್ಕಳ। ನಾವಪರಿಯಲಿ ಹಡೆದು ಕೆಡಿಸಿದೆ ಭೂಮಿಭಾರಕರ ॥ ಭಾವಿಸಲು ಸರ್ವಜ್ಞ ಸರ್ವಗು । ಣಾವಲಂಬನನೊಬ್ಬ ನರ್ಜನ । ದೇವ ಸಾಲದೆ ನಾಡ ನಾಯಿಗಳೇನು ಫಲವೆಂದ ॥೮॥ ದ್ರೌಪದೀಪವ ತೊಳಲಿ ಕರ್ಮಕ । ಳಾಪದಲಿ ಕುದಿಕುದಿದು ನಾನಾ। ರೂಪಿನಿಂದಾರ್ಜಿಸುವಧರ್ಮದ ಗೊಡವೆ ತಾನೇಕೆ ॥ ಭೂಪ ಕೇಳ್ಳೆ ಸತ್ಯವೊಂದೇ। ಸೋಪನವು ಸಕಲಾರ್ಥಕಂ ಪೋ। ಣ್ಯಾಪಹಾರಿಯುತಾನೆಯಾಗಿಹುದೆಂದನಾವಿದುರ ॥೯॥ ಪಾಪದಿಂದಾರ್ಜಿಸಿದೊಡರ್ಥವನಾ । ಫಲವನುಂಬವರಿಗಿಲ್ಲಾ । ಪಾಪವೊಬ್ಬಂಗಪ್ಪುದಾರ್ಜಿಸುವಾಗಮನದಿಂದ ॥ ಕಾಪಥವನಾಶ್ರೈಸಿ ಕೋಪಾ । ಟೋಪದಿಂದುತ್ತಮರ ಸರ್ವ । ಸ್ವಾಪಹಾರವ ಮಾಡಿ ಬದುಕುವುದಾವಗುಣವೆಂದ ॥೧೦॥ ಬವರಮುಖದಲಿ ವೈರಿರಾಯರ। ನವಗಡಿಸಿತಂದಾಧನವ ಭೂ । ದಿವಿಜಸಂತತಿಗಿತ್ತ ಫಲವಿನಿತೆಂದು ಗಣಿಸುವೊಡೆ ॥ ದಿವಿಜಪತಿಗಾಗದು ಕಣಾ ಮಾ। ನವಪತಿಗೆ ತದ್ಧರ್ಮವಿದು ನಿ । ನ್ನವನು ನೀತಿಯನರಿಯನೈ ಧೃತರಾಷ್ಟ್ರ ಕೇಳೆಂದ ॥೧೧॥ ಧರಣಿಯಮರರ ಧನದಿ ಸಲಹಿದ । ಕಂತುರಗವೊದಲಾದವಳವು । ಬ್ಬರಟ ಹೆಚ್ಚಿಹುದರಿನೃಪಾಲರ ಯುದ್ಧಪರಿಯಂತ ॥ ಬಿರಿದು ನಸಿವುದು ವಾಹಿನಿಗೆ ಮೇಲೆ । ತರೆ ಮಳಲಕಟ್ಟೆಯವೊಲಿದನರ । ದರಸುಗಳು ವರ್ಣೋತ್ತಮರದೆಸೆಗಂಜಬೇಕೆಂದ ॥೧೨॥ ಉರಗನೌಡಿದೊಡದರವಕ್ತ್ರದೊ । ಳಿರದೆ ಮೇಣಾದಷ್ಟದೇಹದೊ। ಳಿರದೆ ರುಧಿರವು ಸೂಸುವೊಲು ದುಷ್ಟಾಧಿಕಾರಿಗಳ ॥ ಒರಸೊರಸಿಸಿಂ ಜನಪದದ ಧನ । ಹರೆವುದರಸಂಗಲ್ಲದಾಪ್ರಜೆ । ಗಿರದುಭಯದಿಂ ಪಿಂಗುವುವನು ಭೂಪ ಕೇಳೆಂದ ॥೧೩॥ ಉರಗನಗಿದೊಡೆ ಪೋಲುಶಸ್ತ್ರದ । ಲಿರಿದೊಡೊಬ್ಬನೆ ಸಾವನದರಿಂ । ವರಸು ನೆಗಳಿವಮಂತ್ರಭಿನ್ನಿಸಲರಿನೃಪಾಲಕರ ॥ ಧರೆಸಹಿತ ತತ್ಸಕಲಬಲಸಂ । ಹರಣವಹುದದನರಿದು ಭೂಪೋ । ತ್ತಮರರಸ್ಯದ ಮಂತ್ರವೆಂತೇ ರಾಯನಿನಗೆಂದ ॥೧೪॥ ಪಿಸುಣಧರ್ಮದಲಾರ್ಜಿಸಿದ ಧನ । ವ್ಯಸನಿಸಿರಿ ನರ್ತಿಸುವುವವರಿಂ । ದೇಶಮಂಗಳಪುತ್ರಮಿತ್ರಕಳತ್ರಸಂಪದಯು ॥ ಪ್ರಸರಿಸುವುದು ಬಂದಬಳಿವಿಡಿ । ಪಾಸುರದ ಧನವಿದನರಿದು ಭೂ । ವಿಭಾಪ ಹಿಡಿಯಧರ್ಮವ ಬಿಟ್ಟು ಕಳೆಯೆಂದ ॥೧೫॥ ಹುಲುವನಟ ತನ್ನಿಚ್ಛೆಯಲಿ ದಹ । ನೆರಡ ಕೆಡಿಸುವವೋಲು ನಾರಿಯ । ರುರವಣಿಸಿ ಕೈಗೊಟ್ಟು ನಡೆಸಿದೊಡುಭಯವಂಶವನು ॥ ನೆರಹುವರು ನೀರೊಳಗೆ ಮೇಣಿಯ । ಮುರಿಯಲೀಯದೆ ಮಾರ್ಗದಲಿ ಮ। ತ್ಸರಿಸದಾಳುವುದವನಿಯು ಭೂಪಾಲ ಕೇಳೆಂದ ॥೧೬॥ ಧರೆಯೊಳಗೆ ಕಡುಮೂರ್ಖರಿವರಿ । ಬ್ಬರು ಕಣಾ ದುರ್ಯೋಧನನು ವಿರ । ಚಿರನು ಗೋಗ್ರಹಣದಲಿ ವನಭಂಗದಲಿ ಮುಂಕೊಂಡು ॥ ಅರಿನೃಪರ ಸತ್ವಾತಿಶಯದು । ಬ್ಬರದ ಯುದ್ಧವ ಕಂಡು ಕಂಡೆ । ಚ್ಚರದೆ ಮರುಳಹುದುಚಿತವೇ ಭೂಪಾಲ ಕೇಳೆಂದ ॥೧೭॥ ಕರಣಿಕನ ಹಗೆಗೊಂಡವಂಗೈ । ಶ್ವರಿಯಹಾನಿ ಚಿಕಿತ್ಸಕನನಾ । ದರಿಸದಾತಂಗಾಗದಾಯುಷ್ಯಾಭಿವೃದ್ಧಿಗಳು ॥ ಅರಸ ಕೇಳಾಯುಷ್ಯ ಭಾಗ್ಯಗ । ಳೆರಡು ಕೆಡುವುವುತಪ್ಪದವನೀ । ಸುರರ ಬದ್ಧದ್ವೇಷ ಲೇಸಲ್ಲೆಂದನಾವಿದುರ ॥೧೮॥ ಧರೆಯೊಳಗೆ ರವಿಮಂಡಲವನೊದೆ । ದುರವಣಿಸಿ ಹಾಯ್ವರು ತಾವಿ । ಬ್ಬರುಕಣಾ ಸನ್ಯಾಸಿಯಾಗಿಯು ಯೋಗ ಮಾರ್ಗದಲಿ ॥ ಹರಣವನು ಬಿಟ್ಟವರುಗಳು

ಸಂ। ಗರದೊಳಭಿಮುಖರಾಗಿ ಮರಣಾಂ। ತರವನೆಯ್ದುವರವರುಯವನೀಪಾಲಕೇಳೆಂದ ॥೧೯॥ ಮಾತೃ
ಪಿತೃಗಳ ಶತ್ರುಭಾವವ । ನಾತು ನಿಜಸಂತಾನದಲಿ ಸಂ । ಪ್ರೀತಿಯನು ನೆಲೆಗೊಳಿಸಿ ಸರ್ವಜ್ಞಾಧಿ
ಕಾರದಲಿ ॥ ಖ್ಯಾತವನು ಮಾಡಿದೊಡೆ ಹಂಸ। ವ್ರಾತಮಧ್ಯದ ಬಕನವೊಲು ವಿ । ಖ್ಯಾತಸಭೆಯೊಳು
ಯೋಗ್ಯರಹರೇ ಭೂಪಕೇಳೆಂದ ॥೨೦॥ ಸುರರಮೇಳದಲಾಡುವವರಿ । ಬ್ಬರುಕಣಾ ಪ್ರಭುವಾಗಿ
ಯೂ ಕ್ಷಮೆ । ವೆರಸಿದವನು ದರಿದ್ರನಾಗಿಯುದಾನಿಯೆನಿಸುವನು ॥ ಅರಿದೆನಿಸಿದತಿ ಬಲನ ಧರ್ಮೋ ।
ತ್ಕರುಷದುರ್ಬಲಯುತನ ಸ್ಮರಣೆ । ಸರಿಸವೆನಿಸದು ರಾಯಚಿತ್ತೈಸೆಂದನಾವಿದುರ ॥೨೧॥ ಧರಣಿನುಂ
ಗುವಳಿಬ್ಬರನು ಸಂ । ಗರವ ಜಯಿಸದನೃಪನ ದೇಶಾಂ । ತರವ ಚರಿಸದ ಪಂಡಿತನ ವಿದುಶಾಸ್ತ್ರಸಿದ್ಧವ
ಲೆ ॥ ಅರಸುಕುಲದಲಿ ಹುಟ್ಟಿ ಸಾಪ । ತ್ನರುಗಳಿರೆ ದೇಹಾಭಿಲಾಷೆಯ । ಉರಗನಂತೊಳಗಿಹುದು
ಧರ್ಮವೆ ಯೆಂದನಾವಿದುರ ॥೨೨॥ ನರಜನುಮವೆತ್ತ್ಯಧಿಕವದರೊಳು । ಗುರುಹಿರಿಯರಿವರೆಂದು ದಾ
ನ । ಕ್ಕರುಹರಿವರಲ್ಲೆಂದು ನೋಡದೆ ಮೂಢಮಾರ್ಗದಲಿ ॥ ಕರೆದಪಾತ್ರಂಗಿತ್ತು ಪಾತ್ರನ । ಪರಿಹರಿ
ಸಲೀ ಯೆರಡರಿಂ ಸಂ । ಹರಣವೈಸುವುಪಾರ್ಜಿಸಿದಧನವರಸ ಕೇಳೆಂದ ॥೨೩॥ ತಂದೆತಾಯಿಗಳಿಬ್ಬರಾ
ತ್ಮಜ । ವೃಂದವನು ಮಿಗೆ ಸಲಹಿ ತತ್ಸ್ನತ । ಬಂದ ಲೇಸನು ಪಡೆವವೊಲು ತಜ್ಜನಪದದ ಧನವ ॥
ಹೊಂದಿಸದೆ ನೃಪಮಂತ್ರಿಗಳು ಸಾ । ನಂದದಲಿ ರಕ್ಷಿಸಿಯೆ ಬಳಿಕದ । ಬಂದ ಸಕಲೈಶ್ವರ್ಯಪದವಹು
ದರಸಕೇಳೆಂದ ॥೨೪॥ ಕಾಮಿನಿಯರಾರುಗಳು ಕಲಬರು । ಕಾಮಿತವ ಕಾಮಿಸುವರಲ್ಲದೆ । ತಾಮಸದಿ
ನಾಮೂರುಕರು ಪೂಜಿಸಿದಪೂಜೆಗಳ ॥ ಪ್ರೇಮದಿಂದೊಡಬಡುವರಲ್ಲದೆ । ಸೀಮೆವಿಡಿದಿಹುದಾಗದೆಂ
ಬುದ । ನಾಮದಾಂಧರು ಬಲ್ಲರೇ ಧೃತರಾಷ್ಟ್ರ ಕೇಳೆಂದ ॥೨೫॥ ತನ್ನ ಸುಖದುಃಖಂಗಳಿಗೆ ನಿ। ಭಿ
ನ್ನವಹಬಾಂಧವರ ವರ್ಜಿಸಿ । ಗನ್ನಗತನದಲುಂಡು ಜಾರುವಗಾವಿಲರ ಕೂಡಿ ॥ ಅನ್ಯರನು ಪತಿಕರಿಸಿ
ಬಹುಮಾ । ನ್ಯೋನ್ನತಿಕೆಯನು ವಿರಚಿಸುವುದಿದು । ತನ್ನ ತಾನೇ ಕೊಂದುಕೊಂಬುದು ಭೂಪಕೇಳೆಂ
ದ ॥೨೬॥ ಪಿತನಿರಲು ದಾತಾರನಿರೆ ನಿಜ । ಪತಿಯಿರಲು ಸುತದಾಸಸತಿಯರು । ತ್ರಿತಯರುಂ ಸ್ವಾ
ತಂತ್ರ್ಯದವರಲ್ಲಾವಕಾಲದಲಿ॥ ಕ್ಷಿತಿಯೊಳುತ್ತಮ ಮಧ್ಯಮಾಧಮ। ಗತಿಯ ಪುರುಷತ್ರಯವನವರಿಂ।
ಗಿತವ ಪರರಾಯತವನರಿವೈ ಭೂಪ ಕೇಳೆಂದ ॥೨೭॥ ಬೆಳಸುಘನತೃಣವಧಿಕಜಲನಿ । ರ್ಮಳವೆನಿಪಕಾ
ಲದಲಿ ಪರಮಂ । ಡಲಕೆ ನಡೆದುತ್ಕೃಷ್ಟಘಾತವಿಹೀನವೆಂದೆನಿಸಿ ॥ ಬಲುಹಹುದು ನಿಜಬಲಕೆ ಬಲವಾ।
ನೆಲನಮೆಟ್ಟಲು ವೈರಿಸೇನಾ । ವಳಿಗೆ ಹೀನತೆಯೆಂದನದುಧೃತರಾಷ್ಟ್ರ ಕೇಳೆಂದ ॥೨೮॥ ಮಾಲೆಗಾ
ರತಿಳೀ ಮುಖನಪಶು । ಪಾಲಕನವೊಲು ಪ್ರಜೆಯ ರಕ್ಷಿಸಿ । ಮೇಲೆ ತೆಗೆವೈ ಧನವನುಳಿದಂಗಾರಕಾರು
ಕನ ॥ ವೋಲುಗಡೆದುವ್ಯಾಘ್ರನಂತೆ ವಿ । ತಾಳಿಸಲಿ ಪ್ರಜೆನಸಿಯಲರಸಿನ । ಬಾಳಿಕೆಗೆ ಸಂದೇಹವರಿ
ಯಾರಾಯಕೇಳೆಂದ ॥೨೯॥ ಎಲ್ಲಿಹುದು ಋಣಭಯವು ಮನುಜರೊ । ಳಲ್ಲಿಹುದು ದೇವಾಂಶ ನಿಜ
ವಾ । ಗೆಲ್ಲಿಹುದು ಸನ್ಮಾರ್ಗಭೀಕರವಲ್ಲಿ ಬ್ರಾಹ್ಮಣ್ಯ ॥ ಎಲ್ಲಿಹುದು ಪರಸತಿಯರಂಜಿಕೆ ಯೆ। ಲ್ಲಿಹುದು
ವಿಜ್ಞಾನವಿದನರಿ । ದಲ್ಲದಿಹಪರವಿಲ್ಲಚಿತ್ತೈಸೆಂದನಾವಿದುರ ॥೩೦॥ ರಕ್ಷಿಸಿದಧನದಿಂ ಪುರಂಧ್ರಿಯ ।
ರಕ್ಷಿಸುವುದುಪುರಂಧ್ರಿಯಿಂದವೆ । ರಕ್ಷಿಸುವುದಾತ್ಮನನು ಧನವಿಡಿದಾವಕಾಲದಲಿ ॥ ಲಕ್ಷ್ಯಭೇದವನರಿದು
ನಡೆದು ವಿ । ಲಕ್ಷ್ಯವನು ಮರಿದಾತ್ಮರಕ್ಷೆಯ । ನೀಕ್ಷಿಸುವುದದುನಯುವಲ್ಲೈ ಭೂಪಾಲಕೇಳೆಂದ ॥೩೧॥

ತಿಳಿದು ನಾಲ್ವರೊಳೊರೆದಕಾರ್ಯದ । ಉಳಿವುದಿಬ್ಬರನಿಬ್ಬರೊಳು ಮು । ತ್ತುಳಿವುದೊಬ್ಬನನೊಬ್ಬ ನಿಂ ನಿಶ್ಚಯಿಸಿ ಬಳಿಕವನ ॥ ಕಳೆದು ತಾನೇ ತನ್ನೊಳಗೆ ಬಗೆ । ಗೊಳೆ ವಿಚಾರಿಸಿ ಮಾಳ್ಪಕಾರ್ಯಕೆ ಹಳಿವು ಹೊರುವುದೆ ರಾಯ ಚಿತ್ತೈಸೆಂದನಾವಿದುರ ॥೩೨॥ ನಿವಡಿಸಿದವಿದ್ಯಕ್ಕೆ ಸಮಬಂ । ಧುವನು ರೋಗಾವಳಿಗೆ ಸಮಶ । ತ್ರುವನು ಸಂತತಿಗಳಿಗೆ ಸಮಸಂತೋಷದುದಯವನು ॥ ರವಿಗೆ ಸಮವಹತೇಜ ವನು ವಾ । ಸವನ ಸಮಭಾಗ್ಯವನು ಬಲದಲಿ । ಶಿವನ ಬಲದಿಂದಧಿಕಬಲವನು ಕಾಣೆನಾನೆಂದ ॥೩೩॥ ಹಿರಿದು ಮಾನೋನ್ನತಿಕೆಯನು ಬಂ । ಧುರದ ಧವವನು ಗಾರುಹಸ್ಥ್ಯವ । ಪರಮಧರ್ಮವನಾವಬ ಯಸುವನವನ ಭವನದಲಿ ॥ ನಿರುತ ವೃದ್ಧಜ್ಞಾನಿವಂಶೋ । ತ್ಕರದರಿದ್ರುಪ್ರಿಯನಪತ್ಯಾಂ । ತರಭಗಿ ನಿಯಿನಾಲ್ವರಿರಬೇಕೆಂದನಾವಿದುರ ॥೩೪॥ ಧರಣಿಪತಿ ಚಿತ್ತೈಸು ಸಗ್ಗದ । ಲೊರೆದನಿಂದ್ರಂಗಮರ ಗುರು ದೇ । ವರಲಿ ಸಂಕಲ್ಪವನು ಕೃತವಿದ್ಯರಲಿ ವಿನಯವನು ॥ ಹಿರಿಯರಲಿ ಸಂಭಾವನೆಯ ಸಂ । ಹರಣಪದವನು ಪಾಪಕಾರ್ಯದೊ । ಳಿರದೆ ಮಾಡುವುದೆಂಬನಾಲ್ಕನು ರಾಯಕೇಳೆಂದ ॥೩೫॥ ಆವುದೀ ಲೋಕಕ್ಕೆ ಹಿತವವ । ನೋವಿ ನಡೆವ ಜನಕ್ಕೆ ನಿಂದೆಯ । ವಾವುದದನಾಚರಿಸಿಹ ನಾಸ್ತಿಕರ ನಂಬುಗೆ ಯ ॥ ತಾವುಗಾಣುತ ತತ್ವವಿಜ್ಞಾ । ನಾವಲಂಬನನೆನಿಪನಾತನು । ಭೂವಲಯದೊಳಗುತ್ತಮನು ಭೂಪಾಲಕೇಳೆಂದ ॥೩೬॥ ಪಿತನು ಗುರು ಸಖಿಯಾತ್ಮತಾಯಿಂ । ಬಿತಳಪಂಚಾಗ್ನಿಯನು ಕ್ರಮದಿಂ । ಪ್ರತಿದಿನಂ ಪೂಜೆಯನಮಾಳ್ಪುದು ಲೇಸಬಯಸುವೊಡೆ ॥ ಪಿತೃಗಳನು ದೇವರನು ವೃದ್ಧರ । ನತಿಥಿಗಳ ಪೂಜಿಸಿದ ನಾವವ । ಪಿತನ ಕೀರ್ತಿಯಧರ್ಮವನು ಪಡೆವವನೆ ಸುತನೆಂದ ॥೩೭॥ ಸಿರಿಯನುಳ್ಳವನವನೆ ಕುಲಜನು । ಸಿರಿಯನುಳ್ಳವನೇ ವಿದಗ್ಧನು । ಸಿರಿಯನುಳ್ಳವನೇ ಮಹಾತ್ಮನು ಸಕಲಗುಣಯುತನು ॥ ಸಿರಿಯನುಳ್ಳವನೇ ಸುಶೀಲನು । ಸಿರಿರಹಿತ ಶಿವನಾದೊಡಾಗಲಿ । ಸರಕುಮಾಡದು ಲೋಕವವನೀಪಾಲ ಕೇಳೆಂದ ॥೩೮॥ ಸಿರಿ ನೆಲೆಯೆ ಜೌವನ ನೆಲೆಯೆ ಮೈ । ಸಿರಿ ನೆಲೆಯೆ ತನು ನೆಲೆಯೆ ಖಂಡೆಯ । ಸಿರಿನೆಲೆಯೆ ನಿನಗರಸುತನವುಳ್ಳನ್ನ ನೀತಿಯಲಿ ॥ ಧರೆಯ ರಕ್ಷಿಸು ಬಂಧುಗಳನು । ದ್ಧರಿಸು ಧರ್ಮವ ಸಾಧಿಸಿಂತಿದು । ನರ ಪತಿಗಳಿಗೆ ನೀತಿ ಚಿತ್ತೈಸೆಂದನಾವಿದುರ ॥೩೯॥ ವರುಷವೈದರೊಳರಸೆನಿಸಿ ದಶ । ವರುಷದಾಸತ್ವವನು ಭಾವಿಸಿ । ವರುಷ ಹದಿನಾರರಲಿ ಪುತ್ರನ ಮಿತ್ರನೆಂದೆನಿಸಿ ॥ ಪರಿವಿಡಿಗಳಲಿ ನಡಿಸಿ ಮದವ । ತ್ಸರವ ಮಾಣಿಸದಿರದೆ ಮಕ್ಕಳ । ನರಮೃಗವ ಮಾಡುವರೆ ಭೂಮಿಪಾಲ ಕೇಳೆಂದ ॥೪೦॥ ಧನಮದದಿ ಕುಲಮ ದದಿ ವಿದ್ಯಾ । ಘನಮದದಿಯೌವನಮದದಿ ಗುರು । ವನು ವಿಭಾಡಿಸಿ ನೀನುತಾನೆಂದೆನ್ನುತ ಹೂಂ ಕರಿಸಿ ॥ ಮುನಿಸಿನಲಿ ಸಾತ್ವಿಕರೊಳೊಬ್ಬರ । ನನುಗೆಡಿಸಿ ಗರ್ಜಿಸಲು ನರಕದಿ । ಮುಣುಗಿದಲ್ಲದೆ ಬೇರೆ ಗತಿಯಿಲ್ಲೆಂದನಾವಿದುರ ॥೪೧॥ ಸಲಹಿದೊಡೆಯನ ದಿವ್ಯಮಂತ್ರವ । ಕಲಿಸಿದಾಚಾರ್ಯನನು ಅನುವರ । ದೊಳಗೆ ತಲೆಗಾಯಿದನ ದುರ್ಭಿಕ್ಷದಲಿ ಸಲಹಿದನ ॥ ಜಲದೊಳಕಳ್ದನನೆತ್ತಿದನ ನುರಿ । ಯೊಳಗೆ ಪರಿಹರಿಸಿದನ ಮರೆದವ । ನಿಳಿವನ್ನೈ ಕುಲಕೋಟಿಸಹಿತ ಮಹಾಂಧನರಕದಲಿ ॥೪೨॥ ಒಲಿವವಳ ಬಿಸುಟೊ ಲ್ಲದವಳಿಗೆ । ಹಲುಬುವವನಹಿತರಲಿ ಸಖ್ಯಾ । ವಳಿಯನೆಸಗುವನೆರಿಯದುದ ತಾಬಲ್ಲೆನೆಂಬವನು ॥ ಒಲಿದು ಕೇಳದೆ ಹೇಳುವವ ಕೈ । ನಿಲುಕಲರಿಯದಕಾರ್ಯದಲಿ ಹಂ । ಬಲಿಸಿ ಮರುಗುವನವನೆ ಮೂಢ ನು ರಾಯಕೇಳೆಂದ ॥೪೩॥ ಹರುಷದರ್ಪಕ್ರೋಧಲಜ್ಜಾ । ತುರತೆ ಮಾನಾವಮಾನವಿವರಲಿ । ನಿರುತಸ

ಮನೆಂದೆನಿಸಿ ಕೃತ್ಯಾಕೃತ್ಯಕೌಶಲವ ॥ ವಿರಚಿಸುವಕಾಲದಲಿ ತೀತ್ರೋ । ತ್ಕರದಿ ಭಯವೊಡ್ಡೈಸಲದ
ರಿಂ । ಪರಿಹರಿಸದಾಕಾರ್ಯವೆಸಗುವನವನೆ ಪಂಡಿತನು ॥೪೪॥ ಕರೆಕರೆದು ವೃಷ್ಟಾನ್ನವನು ಭೂ ।
ಸುರರಿಗೀವ ಸದಾಗ್ನಿಹೋತ್ರಾ । ಚರಿತನಹವೇದಾಂತವೇದಿಯಸಾಪತಿವ್ರತೆಯ ॥ ಉರುತರದಮಾಸೋ
ಪವಾಸಿಯ । ನಿರದೆ ಮಾಸಸಹಸ್ರಜೀವಿಯ । ನರಸ ಕೇಳಭಿವಂದಿಸುವರ್ಚೈಮೂರುಮೂರ್ತಿಗಳು ॥೪೫॥
ಬಿಸುಟು ಕಳೆವುದು ನೀತಿಶಾಸ್ತ್ರವ । ನುಸುರದಾಚಾರಿಯನ ವೇದ । ಪ್ರಸರವಿಲ್ಲದಋಷಿಜನವ ರಕ್ಷಿಸದ
ಭೂಭುಜನ ॥ ಒಸೆಯದಬಲೆಯನೂರೊಳಾಡುವ । ಪಶುವ ಕಾಯ್ದನನಡವಿಗುರಿಯಹ । ನುಸಿಯ
ನಾಪಿತನಿಂತರುವರನುರಾಯಕೇಳೆಂದ ॥೪೬॥ ವ್ಯಸನವೇಳರ ಕಾಲುಕಣ್ಣಿಯ । ಹಸರದೊಳಗಳವಳಿದು
ಹೆಚ್ಚಿದ । ವಿಷವುದಿರುಬಿನೊಳದ್ದು ಮಾಯಾಮಯದ ತೋಹಿನಲಿ ॥ ಬಸವಳಿದು ಷಡುವರ್ಗವೇಧೆ
ಯ । ನುಸುಳುಗಂಡಿಯ ನೀಕ್ಷಿಸದೆ ತಾ । ಮಸದೊಳಿರುತಿಹುದುಚಿತವೆ: ಹೇಳೆಂದನಾವಿದುರ ॥೪೭॥
ಅತಿಬಲನ ಹಗೆಗೊಳುವನಿಹಪರ । ಗತಿವಿಚಾರವ ಮರೆವಲೋಕ । ಸ್ಥಿತಿಯನುಲ್ಲಂಘಿಸುವ ಮರ್ಮ
ಜ್ಞರ ವಿರೋಧಿಸುವ ॥ ವಿತತಭಾಷಿತನಪ್ಪ ತನ್ನಿಂ । ಗಿತವನವರಾಯತವನರಿಯದ । ಕ್ಷಿತಿಪನವಮೂ
ಢಾತ್ಮನೈ ಭೂಪಾಲಕೇಳೆಂದ ॥೪೮॥ ಬಲುಹರಿದು ಕೋಪಿಸುವ ಬಮಕನ । ಬಳಿಯರಿದು ಕೊಡುವಾತ
ಹಿತವನು । ತಿಳಿದು ನಿರ್ಮಳನೆನಿಪ ಮೇಲಣತಾಗುಬಾಗುಗಳ ॥ ಹೊಲಬರಿದು ಸುಖದುಃಖದಲಿ ಸಂ ।
ಚರಿಸದಿಹ ಗಂಗಾಮಡುವಿನಂ । ತೊಳಗುದೋರದೆ ನಡೆವವನು ಪಂಡಿತನು ಕೇಳೆಂದ ॥೪೯॥ ದಾನ
ವಿಲ್ಲದವಿತ್ತ ಬುಧಸ । ಸ್ಮಾನವಿಲ್ಲದರಾಜ್ಯ ಬಲುಸು । ಯ್ಧಾನವಿಲ್ಲದ ಸುದತಿ ಧೀಮಾನಿಲ್ಲದಾಸ್ಥಾನ ॥ ಜ್ಞಾ
ನವಿಲ್ಲದತಪವು ವೇದಪ । ಧಾನವಿಲ್ಲದ ವಿಪ್ರ ಶರಸಂ । ಧಾನವಿಲ್ಲದಸಮರ ಮೆರೆಯದುರಾಯ ಕೇಳೆಂ
ದ ॥೫೦॥ ದಿನವ ಬಂಜೆಯಮಾಡದಿಹ ಪರ । ವಿನಯನಹ ವರದೈವಗುರುಪೂ । ಜನೆಯ ಬುಧಸೇವನೆಯ
ಕಾಲೋಚಿತದ ವಿತರಣವ ॥ ಮನನಬಿಂಶ್ರವಣದಿ ನಿಧಿಧ್ಯಾ । ಸನಬನಿವನನು-ಗೊಳಿಪನಾವನು । ಮನು
ಜರೊಳಗುತ್ತಮನಲೇ ಭೂಪಾಲಕೇಳೆಂದ ॥೫೧॥ ಸಲುವನೆಂದಂತಃಪುರಕೆ ಸಂ । ಚಲಿಸುವವನಾಪ್ತರ
ನು ಬಿಸುಟ । ಗ್ಲಳಿಸುವವನಹಿತರಲಿ ಧರ್ಮವನುಳಿದಧರ್ಮವನು ॥ ಸಲಿಸುವವನೇಕಾಂತದಲ್ಲಿಗೆ ।
ಸುಳಿವವನು ಹಸಿವಿಲ್ಲದುಂಬುವ । ನಿಳೆಯೊಳಗೆ ಮೂಢಾತ್ಮನೈ ಧೃತರಾಷ್ಟ್ರ ಕೇಳೆಂದ ॥೫೨॥ ಬುಧ
ರೊಳಗೆ ಹಗೆಗೊಳುವ ಬುಧರಂ । ನಿಧನಗೈದಪಬುಧರನೇಳಿಸ । ಬುಧರಜರೆದೊಡೆನಲಿವಬುಧರಂ
ಪೊಗಳ್ದರಂ ಪಳಿವ ॥ ಬುಧರನಧಮರ ಮಾಳ್ಪಬುಧರಂ । ವ್ಯಥೆಗೊಳಿಪಬುಧರ್ಗೀವರಂ ಕನ । ಲ್ವಾಧ
ಮಭೂಪರಿಗಂಟದಿಹುದೆ ವಿನಾಶಕರವೆಂದ ॥೫೩॥ ಕುಸುಮಫಲತಾಂಬೂಲಗಂಧ । ಪ್ರಸುರಭೋಜನಗಮ
ನನೆನಹಿಂ । ದೆಸೆವಕಾಯದೊಳೆನಿಬರೊರಗಿದೊಡೊಬ್ಬನೆಚ್ಚರಿಕೆ ॥ ಎಸೆಯಲನಿತುಮನೊಬ್ಬನೇ ವ ।
ರ್ಜಿಸುವುದವನೀಪಾಲರಿಗೆ ತಾ । ಸಸಿನವೆನಿಸದು ರಾಯ ಚಿತ್ತೈಸೆಂದನಾವಿದುರ ॥೫೪॥ ಕಳಿದತರ
ಣಿಯ ಕಿರಣದಲಿ ನಿ । ರ್ಮಳಿನಜಲದಲಿ ದುಗ್ಧಪಾನಂ । ಗಳಲಿ ವರಯುವತಿಯರ ಸಂಭೋಗಾಂತ
ರಂಗಳಲಿ ॥ ತಳಿತಹೋಮದ ಹೊಗೆಗಳಲಿ ದಿನ । ಬಲದೊಳಾಯುಷ್ಯಾಭಿವೃದ್ಧಿಯ । ಬೆಳವಿಗೆಗಳಹ
ವರಸ ಚಿತ್ತೈಸೆಂದನಾವಿದುರ ॥೫೫॥ ಎಳೆಯರವಿಶ್ಮೆಯಲಿ ಪ್ರೇತಾಂ । ಗಳದಧೂಮಜ್ವಾಲೆಯಲಿ
ಗಾ । ವಿಲವಯೋವೃದ್ಧೆಯರ ಸಂಭೋಗಾಂತರಂಗಳಲಿ ॥ ಕೊಳಚೆನೀರಿನಬಳಕೆಯಲಿ ಕ । ತ್ತಲೆಯ

ದಧ್ಯೋದನದಲಾಯುಷ । ವಿಳಿದು ಹೋಗದೆ ದಿನದಿನದೊಳವನೀಶ ಕೇಳೆಂದ ॥೫೬॥ ಮುಸುಳಿಸಿದ್ದದು ಕೂಲ ಕರದಲಿ । ಪಸರಿಸಿದುಗುರು ಭುಕ್ತ್ಯದುನ್ನತಿ । ಯೆಸೆವನಿಷ್ಠುರವಾಕ್ಯವುದಯಾಸ್ತಮಯಕಾಲದ ॥ ೫೭ ಎಸೆವನಿದ್ರಾಂಗನೆಯೊಳೊಂಟರೆ । ಬಿಸಜಲೋಚನನಾದೊಡೆಯು ವರ್ಜಿಸುವಳವರನು ಭಾಗ್ಯಸಿರಿ ಭೂಲಪಾಕೇಳೆಂದ ॥೫೮॥ ಒಂದುಮೊದಲಾರಂತ್ಯವಾದಾ । ಸಂದಪೂಗಫಲಕ್ರಮಂಗಳ । ಚಂದವನು ಚಿತ್ತೈಸು ಲಾಭವಲಾಭಸುಖದುಃಖ ॥ ಕುಂದದಿಹದಾಯುಷ್ಯಮರಣವಿ । ದೆಂದು ತತ್ಕಾಲದಲಿ ಭೋಗಿಸು। ವಂದವನು ಚಿತ್ತೈಸುವುದು ತಾಂಬೂಲಧಾರಕರ ॥ ನಾಗವಲ್ಲಿಯ ಹಿಂದುಮುಂದನು। ನೀಗಿ ಕಳೆಯದೆ ಚೂರ್ಣಪರ್ಣ । ತ್ಯಾಗವಿಲ್ಲದೆ ದಂತಧಾವನಪರ್ಣವನು ಸವಿದು ॥ ಭೋಗಿಸುವೊಡಮರೇಂದ್ರನಾಗಲಿ । ನಾಗಭೂಷಣನಾದೊಡವನನು । ನೀಗಿ ಕಳೆವಳು ಭಾಗ್ಯವಧು ಭೂಪಾಲ ಕೇಳೆಂದ ॥೫೯॥ ಸ್ನಾನಪಂಚಕನಿದ್ರ್ರವದ ಸಂ । ಸ್ಥಾನದಲಿ ನಿದ್ರಾಗಂನೆಯುಸ । ಸ್ನಾನಿಸುವೊಡಾಸಾದ್ರ್ರವದಪಂಚಕದ ಪರಿವಿಡಿಯು ॥ ಸ್ಥಾನವರಿದಾರೋಗಣೆಯುಸಂ । ಧಾನದಲಿ ಚಿತ್ತೈಸುವುದು ರಾ । ಜಾನುಮತವಿದು ಸಕಲಸುಖಕರಸೆಂದನಾವಿದುರ ॥೬೦॥ ಜನಜನಿತ ಮಲಮೂತ್ರಮೂರಾ । ರೆನಿಸುವುದು ರತಿಯೊಂದು ನಿಜಭೋ । ಜನವೆರಡು ಸುಯ್ಲೊಂದು ವರತಾಂಬೂಲ ಹದಿನೈದು ॥ ಇನಿತುವನು ತಪ್ಪದೆ ನಡೆಸಲಾ । ಜನಪಸಾರೋಗಣೆಗೆಸುಖಸಂ । ಜನಿಸುವುದು ಟನಚರಿಯದಿಂದವನೀಶಕೇಳೆಂದ ॥೬೧॥ ನೆರೆದಸಚರಾಚರವಿದೆಲ್ಲವು । ನರರನಿಜಭೋಜನಕೆ ಜನಿಸಿದ । ವರೆಸಕೇಳಿದರೊಳಗಭೋಜ್ಯಾಭೋಜ್ಯವನು ತಿಳಿದು ॥ ಪರಿಪಸಬಲ್ಲವರುಗಳುಘನ । ತರದಸುಕೃತವನೈದುವರು ಭೂ । ವರರೊಳಗೆ ಸಂದೇಹವೇ ಭೂಪಾಲಕೇಳೆಂದ ॥೬೨॥ ತುರುಗಹೃದಯಧ್ವನಿಯುಸಿಡಿಲಿನ । ಧರಧುರದಗರ್ಜನೆಯ ಸಾರಿಯ । ರಿರವಪುರುಷನ ಭಾಗ್ಯದೇವತೆಯೊಲಿವಕಾಲವನು ॥ ವರುಷದುದಯುವ ಬರನದಿನವನು । ವಿರಚಿಸುವರೆ ವಿಧಾತೃಗಳವ । ಲ್ಲರಸ ಕೇಳ್ಮಾನವರಿಗಿದುಗೋಚರಿಸಲರಿದೆಂದ ॥ ೬೩ ॥ ಬಡತನಗಳೆಡಸಿದೊಡೆ ಬಂಧುಗ । ಳೆಡಹಿಕಾಣರು ಭಂಟತಾನಾ । ದೊಡೆಯು ಬಂದಾಪತ್ತಿನೊಳಗೆ ಪರಾಙ್ಮುಖರೆಯಾಗಿ ॥ ನುಡಿಸದವನೇ ಹಗೆ ಶರೀರದೊ । ಳಡಸಿದಾರುಜೆ ಬಾಧೆಗಡವಿಯ । ಗಿಡಮರಂಗಳು ರಕ್ಷಿಸವೆ ಹೇಳೆಂದನಾವಿದುರ ॥೬೪॥ ಕಾಲದೊಳಗೆ ವಸಂತ ವಿದ್ಯಾ । ಜಾಲದೊಳಗೆ ಕವಿತ್ವ ಗಜವೈ । ಹಾಳಿಯಲಿದೇವೇಂದ್ರ ವಿಪ್ರಶ್ರೇಣಿಯೊಳು ವಾಣಿ ॥ ಭಾಳನೇತ್ರನು ದೈವದಲಿ ಬಿ । ಲ್ಲಾಳಿನಲಿ ಮನ್ಮಥನು ಧನದಲಿ । ಹೇಳಲೇನಭಿಮಾನವೇ ಧನವೆಂದನಾವಿದುರ ॥೬೫॥ ಮುಂದೆ ಗುರುವನು ಬಂಧುಜನವನು । ಹಿಂದೆ ಕರ್ಮಾಂತ್ಯದಲಿ ಸೇವಕ । ವೃಂದವನು ಕೊಂಡಾಡುವುದು ಸಾಹಿತ್ಯಭಾವವಿದು ॥ ಹಿಂದುಮುಂದಾವಾಗ ನಿನ್ನಯ । ನಂದನರ ನಾವುಗಳು ಹೊಗಳುವು । ದಂದವೇ ಭೂಪಾಲ ಚಿತ್ತೈಸೆಂದನಾವಿದುರ ॥೬೬॥ ತುರಗದೆಡಬಲ ಗಜದ ಸಮ್ಮುಖ। ತರುಣಿಯರುಗಳ ಸರ್ವತೋಮುಖ । ಹಿರಿದುದುರ್ಜನನಿದ್ದ ದೇಶವದೆಯ್ದೆ ವ್ಯಾಘ್ರಮುಖ ॥ ಭರದಿನಾದೇಶವನು ಬಿಟ್ಟರ। ವರಿಸದನ್ಯಗ್ರಾಮವವನಾಂ। ತರವನೈದುವುದಲ್ಲದಲ್ಲಿಹುದುಚಿತವಲ್ಲೆಂದ ॥೬೭॥ ಎತ್ತಲೆತ್ತಲು ಪೋಷಮನುಜಂ । ಗತ್ತಲತ್ತಲೆ ದೈವ ಕೂಡೆ ಬ । ರುತ್ತಿಹುದು ಬೆಂಬಿಡದೆ ನಾನಾದೇಶದೇಶದಲಿ ॥ ಮಿತ್ರನುರುಮಧ್ಯಸ್ಥ ಪುರುಷನ । ಮಿತ್ರನಾದಾಸೀನನೊಬ್ಬನು । ಕೃತ್ರಿಮನು ಸಹಜೀವಿಯುಂತ್ತಿವರ

ರಸಕೇಳೆಂದ ॥೭೮॥ ಗುರುವಿರೋಧ ಮಹೀಬುಧರ ಮ। ತ್ಸರವು ದೈವದ್ರೋಹ ಗುಣಸಾ। ಗರನ ಬಂಧುದ್ವೇಷವತ್ಯಾಲೀಢದೀನತನ ॥ ಕರಣಜನಪಾಂಡಿತ್ಯವೆಂಬಿವ । ನರವರಿಸದಂಗೈಸೆ ಭೂಪನ । ಸಿರಿಗೆ ಮೊಳೆಯದೆ ಕೇಡು ಚಿತ್ತೈಸೆಂದನಾವಿದುರ ॥೭೯॥ ಬಲುಪ್ರಧಾನನ ವೈರ ಹಿತವಹ । ಲಲನೆಯರ ಮನದಳಲು ಹಗೆಯಲಿ । ಬಳಸುವಂತಸ್ತವನನಾವಿಕರೊಡನೆ ಕೆಳೆಗೋಷ್ಠಿ ॥ ಬಲದೊಡನೆ ನಿರ್ಬಂಧ ಧರ್ಮದ । ನೆಲೆಯನರಿಯದದಾನಿಗಳ ಸಿರಿ । ಸುಳಿವ ಗಾಳಿಗೆ ಮಲೆವದೀಪವು ಕೇಳು ಧೃತರಾಷ್ಟ್ರ ॥೮೦॥ ಹುಸಿ ಪರದ್ರೋಹವು ಪರಸ್ತ್ರೀ । ವ್ಯಸನ ಪೇಯವಸೂಯೆ ಮಾನ । ವ್ಯಿಷತೆ ಪತಿತಸಮೇತವಾತ್ಮಸ್ತುತಿಯೆನಿಪ್ಪವನು ॥ ಬೆಸುಟು ತದ್ವಿಪರೀತದಲಿ ವ । ರ್ತಿಸುವನವನೇ ರಾಯನಾತಗೆ । ವಸುಧೆಯೊಳಗೆಣೆಯಾವನೈ ಭೂಪಾಲ ಕೇಳೆಂದ ॥೮೧॥ ಇದು ಸಮಾಹಿತವಿದು ಶುಭೋದಯ। ವಿದುಸಕಲಪುರುಷಾರ್ಥಸಾಧನ । ವಿದು ಸುಜನಸನ್ಮಾನವಿದು ಸಂಸಾರ ಸೌಖ್ಯಫಲ ॥ ಇದು ಸುಲಭವಿದು ಬಲವಿದಾವ್ಯಾ। ಮದ ಸುನಿಶ್ಚಯ ನೀತಿಕಾರ್ಯದ।ಹದವನರಿವಾಚರಿಸಬಲ್ಲವನವನೆ ಪಂಡಿತನು ॥೮೨॥ ಶತ್ರುಕಾಲಸುದೇಶವರ್ಗಸು । ಮಿತ್ರರುದಯಾಪಾಯಕರಣಸು । ಪುತ್ರನೆಂಬಿವು ಮೂರುತೆರನಾಗಿಪ್ಪುವಿದರೊಳಗೆ ॥ ಕ್ಷತ್ರಧರ್ಮವಿವೇಕವೆಂಬಿವ । ನ್ಯೋತ್ರಗೊಳಿಸನೆ ರಾಯನವಗೆ ಧ । ರಿತ್ರಿಯೊಳಗೆಣೆಯಾವನೈ ಭೂಪಾಲ ಕೇಳೆಂದ ॥೮೩॥ ಎಲ್ಲಿ ಸುಲಲಿತವಿದ್ಯೆ ಬಹುಮಾನ। ವೆಲ್ಲಿ ಗಣಿಕಾನಿಕರ ಗುಣಗಣ । ವೆಲ್ಲಿ ಗುಪ್ತ ಭೃತ್ಯಸ್ವಪ್ನ ವಿರೂಢಸಂದೋಹ ॥ ಎಲ್ಲಿ ಸಂಘಟನಿಚಯ ನೆರೆದಿಹು । ದೆಲ್ಲ ತನ್ನಾಧೀನಮಾಡಲು । ಬಲ್ಲವನೆ ನೃಪನಾತಗಿದಿರಾರೈ ಧರಿತ್ರಿಯಲಿ ॥೮೪॥ ದ್ವಾರವೊಂಭತ್ತೆಂದ್ರಿಯದ ಹಂ । ಕಾರಕರಣಚತುಷ್ಟಯಂಗಳ । ಸಾರಭೂತಾಧಿಕದ ಸುಳುವಿನ ಪಂಚವಾಯುಗಳ ॥ ಹೋರಟೆಗಳಲಿ ಬಳಲಿ ಜೀವನ । ಧೀರನಹವೊಲು ಪಾಂಡುಪುತ್ರರ । ಕೌರವರ ಬೇಳಂಬದಲಿ ಬೆಂಡಾದೆ ನೀನೆಂದ ॥೮೫॥ ಮತ್ತನನು ಶಾಂತನನು ಪ್ರಮದೋ । ನ್ಮತ್ತನತಿಕುಪಿತಾನನನು ಚಲ । ಚಿತ್ತನನು ಕಾಮುಕನುಲುಬ್ಧನು ಶೂರನೆಂಬವನು ॥ ಕ್ಷುತ್ತೃಷಿನದಗ್ಗಳಿಕೆಯಿಂತೀ । ಹತ್ತುಜನವಾವಾಗ ಧರ್ಮದ । ತತ್ತ್ವವನೆಗಳನರಿಯರೈ ಭೂಪಾಲಕೇಳೆಂದ ॥೮೬॥ ದಾನವಿಷ್ಟಾಪೂರ್ತಿ ವಿನಯಸ । ಮಾನದೇವಾರ್ಚನೆ ಮಹೀಸುರ । ಧೇನುಸಂತರ್ಪಣ ಮಹಾತಿಥಿಪೂಜೆ ಗುರುಭಕ್ತಿ ॥ ಧ್ಯಾನ ದೀನಾನಾಥಬಂಧುವಿ । ತಾನ ಶರಣಾಗತಸುರಕ್ಷಾ । ಸ್ನಾನತೀರ್ಥಂಗಳಲಿ ಮಾಡಲು ಬೇಹುದವನಿಪರು ॥೮೭॥ ಧರೆಯೊಳೀಹೊತ್ತಿನಲಿ ನಿನಗೈ । ಶ್ವರಿಯದಲಿ ಮಕ್ಕಳಲಿ ಖಂಡೆಯ । ಸಿರಿಯಲೊಡಹುಟ್ಟಿದರು ಸಪ್ತಾಂಗದಲಿ ಸತಿಯರಲಿ ॥ ಗುರುಪಿತಾಮಹಬಂಧು ಜನಮಿ । ತ್ರರಲದಾವುದು ಕೊರತೆ ಕೌಂತೇ । ಯರ ನೆರವಿಗರ ಮಾಡುವರೆ ಧೃತರಾಷ್ಟ್ರ ಕೇಳೆಂದ ॥೮೮॥ ಉಭಯಕುಲ ಶುದ್ಧಿಯಲಿ ಹೆಚ್ಚಿದ । ವಿಭವದಲಿ ವಿಗ್ರಹದಲಧಿಕ । ಪ್ರಭೆಗಳಲಿ ಸತ್ಯದಲಿ ಸಾಹಿತ್ಯದಲಿ ವಿನಯದಲಿ ॥ ಅಭವನಂಘ್ರಿಯ ಸೇವೆಯಲಿ ಹರಿ । ನಿಭನೆನಿಸಿ ಬದುಕುವನು ರಾಜ್ಯಕೆ । ವಿಭುವೆನಿಸುವನು ರಾಯ ಚಿತ್ತೈಸೆಂದನಾವಿದುರ ॥೮೯॥ ವೇಸಿಯಹಪರಿಯಂಕದಲಿ ನಿಜ । ದಾಸಿಯಹ ಶುಶ್ರೂಷೆಯಲಿ ನಿ । ರ್ದೋಷಿಯಹ ಪತಿಭಕ್ತಿಯಲಿ ಮೋಹದಲಿ ತಾಯೆನಿಸಿ । ॥ ಏಸುಕಾರ್ಯಕೆ ಮಂತ್ರಿಯೆನಿಸುವ । ಮೈಸಿರಿಯನುಳ್ಳವಳು ರಾಣೀ । ವಾಸವಂದ್ಯೆನಿಸುವಳೆಲೈ ಭೂಪಾಲಕೇಳೆಂದ ॥೯೦॥ ತಂದೆತಾಯಿಗಳಾಜ್ಞೆಯನು ಸಾ । ನಂದದಲಿ ಪಾಲಿಸುತ ಮ

ನವನು । ಮುಂಪುಗೆಡಿಸದೆ ಧರ್ಮದಲಿ ರಾಜ್ಯವನು ಪಾಲಿಸುತ ॥ ಬಂಧುಬಳಗವ ಸಲಹಿ ಭೂಸುರ । ವೃಂದವನು ನೆರೆ ಪೊರೆವೊಡವ ಸುತ । ವಂದ್ಯನೈಲೋಕಕ್ಕೆ ಚಿತ್ತೈಸೆಂದನಾವಿದುರ ॥೮೧॥ ಇಹಪರದ ಸುಖಸಂಗತಿಯ ಸಂ । ಗ್ರಹಿಸಿ ವೇದಾಚಾರಪಾಲಿ ಸ । ನ್ನಿಹಿತನಾಗಿ ಸಮಸ್ತ ಕಳೆಯುಲಭಿಜ್ಞನೆಂದೆನಿಸಿ ॥ ಅಹಿತಕುಲವನು ಸಮರದಲಿ ನಿ । ರ್ವಹಿಸಿ ಶರಣಾಗತರ ಪಾಲಿಸು । ತಿಹೊಡವನು ಮಗನೆಂದೆನಿಸುವನು ಭೂಪ ಕೇಳೆಂದ ॥೮೨॥ ಇಂದ್ರಿಯವನೊಡೆತುಳಿದು ಕರ್ಮದ । ಬಂದಿಯಲಿ ತಲೆಬಳಚಿ ವಿಷಯದ । ದಂದುಗವನೀಡಾಡಿ ಮಾಯಾಪಾಶವನು ಹರಿದು ॥ ದ್ವಂದ್ವದಲಿ ರೂಪಡಗಿ ವಿಶ್ವದ । ಲೊಂದಿ ಮೆರೆಯಲುಬಲ್ಲವನು ಗುರು । ವೆಂದೆನಿಸುವನು ರಾಯ ಚಿತ್ತೈಸೆಂದನಾವಿದುರ ॥೮೩॥ ಒಡಲೊಡವೆ ಮೊದಲಾದುವೆಲ್ಲವ । ತಪೆಯದೊಪ್ಪಿಸಿ ಗುರುವಿನಂಘ್ರಿಯ । ಹಿಡಿದು ಭಜಿಸುತ ಕೊಟ್ಟಕೆಲಸಂಗಳೊಳಗಿನಿತುವನು ॥ ಬಿಡದೆ ಮಾತುತ್ತರವನವಂಗೆ । ಕೊಡದೆ ಭಯಭಕ್ತಿಯಲಿ ತಪ್ಪದೆ । ನಡೆಯಬಲ್ಲವನವನೆಶಿಷ್ಯನು ರಾಯ ಕೇಳೆಂದ ॥೮೪॥ ಮುಕುತಿವಿದರುಗಳಾಗಿ ವಿದ್ಯಾಧಿಕರೆನಿಸಿ ಸಮಬುದ್ಧಿಗಳನಾಟಕವ ನಟಿಸುತ ಪರಮತತ್ವಜ್ಞಾನಪರರಾಗಿ ॥ ಸಕಲಕಳೆಯಲಭಿಜ್ಞರಹಿಹ । ಪ್ರೇರಕರು ಪರಪುರುಷಾರ್ಥಗಳು ವೈ । ದಿಕರಲೇ ವಿದ್ವಾಂಸರೆನಿಸುವರರಸ ಕೇಳೆಂದ ॥೮೫॥ ದಂಡನೀತಿಸ್ಮೃತಿಶಾಸ್ತ್ರೋ । ದ್ದಂಡದಪಾರಂಗರಸನಿಪುಣನ । ಪಂಡಿತಪ್ರಿಯಶಾಲಿಘೋಷಕಕರ್ಮದೀಕ್ಷಿತನಾ ॥ ಚಂಡದೈವಜ್ಞನಸಧಿಕಗುಣ । ಮಂಡನನ ಬಹುಶಾಸ್ತ್ರಪಠನನ । ಪಂಡಿತನಪೌರೋಹಿತನ ಮಾಡುವುದರಸ ಕೇಳೆಂದ ॥೮೬॥ ಸ್ಥೂಲಸೂಕ್ಷ್ಮಕೃತಜ್ಞನುತ್ಸವ । ಶೀಲನಕ್ರೋಧಿಯನದೀರ್ಘವಿ । ಶಾಲಸೂತ್ರಿಯ ವೃದ್ಧಸೇವಕ ಸತ್ಯವಾಕ್ಯುಚಿಯ ॥ ಕಾಲಭೀತ ವಿನೀತ ನವ್ಯಸ । ನಾಳಿ ಸೂರ ರಹಸ್ಯಸತ್ಕೃತಿ । ಲೋಲಸಾನ್ವಿತಮಂತ್ರಿಯುಂಟೇ ರಾಯನಿನಗೆಂದ ॥೮೭॥ ತುರಗಗಜಭಟರಳವರಿವಸಂ । ಗರಮಹೋತ್ಸಾಹನ ಜಿತಶ್ರಮ । ನರಿಕಟಕಭೇದಕನ ನಾನಾಯುಧವಿಶಾರದನ ॥ ಭರಿತಧೈರ್ಯನ ಪರಿಚಿತನ ಸಂ । ಗರಸದಾರನನೂರ್ಧ್ವರೋಮನ । ನಿರದೆಸೇನಾಪತಿಯ ಮಾಡುವುದರಸ ಕೇಳೆಂದ ॥೮೮॥ ತಿಳಿದವನ ಮತಿವಿದನ ಭಾಷಾ । ವಳಿಲಿಪಿಜ್ಞನ ಸಾಕ್ಷರನ ಮಂ । ಡಳಿಕ ಸಾವಂತರವಿಶೇಷದಲವಸರವನರಿದು ॥ ಸಲೆ ಕರೆವ ಕಳುಹಿಸುವ ನಿಲಿಸುವ । ಬಲುಹನುಳ್ಳನ ಸುಕರದಕ್ಷರ । ತಿಳಿವಹೃದಯನ ಸಂಧಿವಿಗ್ರಹಕೆಣಿಸಬೇಕೆಂದ ॥೮೯॥ ಮಿಸುಪಮಣಿಗಣಲೋಹಕಾಂಚನ । ವಿಸರಭೇದವನರಿವಕೊಟ್ಟದ । ನಸಿಯಲೀಯದೆ ತಾನು ಭಕ್ಷಿಸದಹಿ ನಿಧಾನವನು ॥ ಬಸೆದು ಕಾದಿಪ್ಪಂತೆ ಕಾದಿಹ । ಹುಸಿಯದಾಪ್ತನ ಬಹುಕುಟುಂಬ । ವ್ಯಸನವುಳ್ಳನ ಮಾಳ್ಪುದೈ ಭಂಡಾರರಕ್ಷಕನ ॥೯೦॥ ಮನವಚನಕಾಯದಲಿ ದಾತಾ । ರನಹಿತವನುಳ್ಳನ ವಿನೀತನ । ವಿನುತ ವನಿತಾನತಮುಖನ ನಿಷ್ಕಳಿತದೋಷಕನ ॥ ಮುನಿವವರ ಬುದ್ಧಿಯಲಿ ಸಿಲುಕದ । ವನ ವಿಶೇಷಕಳಾಪ್ರವೀಣನ । ಜನಪಚಿತ್ತೈಸುವುದಲೈ ತಾಂಬೂಲಧಾರಕನ ॥೯೧॥ ಪಿತೃಪಿತಾಮಹಸೂಪಶಾಸ್ತ್ರಾ । ಯುತನ ಕೈಕರಣೆಗಳಲಧಿಕನ । ನತಿಶುಚಿಯ ಸಂಗ್ರಹಿಯನಕ್ರೋಧಿಯನನಾಲಸನ ॥ ಪತಿಹಿತನ ಷಡುರಸವಿಶೇಷಾ । ನ್ವಿತನನಿತರಾಲಯವಿದೂರನ । ಪತಿಕರಿಸುವುದು ಸೂಪಕಾರತೆಗರಸ ಕೇಳೆಂದ ॥೯೨॥ ನಿಶಿತ ಪರಿಮಳಮೋದದಿಂ ಮೋ । ದಿಸುವ ಗಂಧದ್ರವ್ಯದಲಿ ಪಂ । ಳಿಸಿದ ಜೀವನಜೀವ ತನ್ನಯ ಜೀವನವೆಯೆಂದು ॥ ವಸುಮತೀಶರಿಗಿತ್ತು ತಾ ಭೋ । ಗಿಸದೆ ಬಳಸದೆ ರಾಜನನೋಲ । ವಿಸುವಮನೆವಾಸೀ

ಯಧಾರಕನರಸಕೇಳೆಂದ ॥೯೩॥ ಉನ್ನತ ನರೂಪಾಧಿಕನ ಸಂ । ಪೂರ್ಣದಕ್ಷನನನ್ಯರೆನ್ನ ವರೆನ್ನದನ ಪರ ರಿಂಗಿತಾಕಾರಪ್ರಭೇದಕನ ॥ ಮನ್ನಣೆಗೆ ಬೆರೆಯದನಸಾಪ್ತನ । ನನ್ಯಕಾರ್ಯೋಚಿತಸಮಪ್ರತಿ । ಪನ್ನಪ ಡಿಹಾರಕನ ಮಾಡುವುದುದರಸ ಕೇಳೆಂದ ॥೯೪॥ ಗ್ರಾಮಮೂರರ ಸಂಚರಣೆಗಳ । ಸೀಮೆಯಲಿ ಸರಿ ಗಮಪಧನಿಗಳ । ನೇಮತಪ್ಪದೆ ಹರಣಭರ್ಣದ ಹೊಂಪುತಿರುಪುಗಳ ॥ ಕೋಮಲಿತಶಾರೀರಹೃದಯ ದ । ರಾಮಣೀಯಕರಚನೆಯಲ್ಲಿ ಸ । ನಾಮನೆನಿಸುವನವನೆ ಗಾಯಕನರಸ ಕೇಳೆಂದ ॥೯೫॥ ತಾಳಲ ಯಬೊಂಬಾಳಮಿಶ್ರದ । ಹೇಳಿಕೆಯಸಾತಾಯಶುದ್ಧದ । ಸಾಳಗದ ಸಂಕೀರ್ಣದೇಸಿಯ ವಿನಿಧರಚನೆ ಗಳ ॥ ಮೇಳವರಿವುತ ವಾದ್ಯಸಾಧನ । ದೇಳಿಗೆಯ ಸಂಪೂರ್ಣಮಾರ್ಗದ । ಸೂಳುಗಳ ಲಯಮಾನವ ರಿದವನವನೆ ಗಾಯಕನು ॥೯೬॥ ಗಾಯದಲಿ ಪೆಣ್ಬೊಬ್ಬೆಯದಲಡು । ಪಾಯಿಗಳನುಪಕಾಯದೊ ಳಗೆ ನ । ವಾಯಿಗಳ ಬಿನ್ನಾಣದಲಿ ಬಳಿಸಂದು ಬೇಸರದೆ ॥ ಸ್ಥಾಯಿಯಲಿ ಸಂಚಾರದಲಿ ಸಮ । ಗೈಯೆನಿಸಿನಾನಾವಿನೋದದ । ದಾಯವರಿವವನವನೆ ಮಲ್ಲನುಕೇಳು ಧೃತರಾಷ್ಟ್ರ ॥೯೭॥ ಎಡಬಲನ ನಾರೈವುತೊಬ್ಬನ । ಬಿಡದೆ ನೋಡುತ ಮಕ್ಷಿಕಂಗಳ । ಗಡಣವನು ಕೆದರಿಸುತ ಕಿಗ್ಗಣ್ಣಿಕ್ಕಿ ಕೆಲಬಲನ॥ ಜಡಿದುನೂಕುವ ಸ್ವಾಮಿಕಾರ್ಯದ । ಕಡೆಯೆನಿಸುತಾವಾಗ ಸೇವೆಗೆ । ಸೆಡೆಯದವನೇ ಚಮರಧಾರಕ ನರಸಕೇಳೆಂದ ॥೯೮॥ ಗುಳಿತೆವರನೀಕ್ಷಿಸುತ ಬಟ್ಟೆಯ । ಮೆಳೆಮರಂಗಳ ಹೋಯ್ನುತಪ್ಪಿಸಿ । ನೆಳಲನ ರಸುತ ವೇಗದತಿ ಸಾಮಾನ್ಯಗತಿಗಳಲಿ ॥ ಬಳಿವಿಡಿದು ಭೂಭುಜರ ಯಾನಂ । ಗಳೊಳು ತಾ ಕಡೆಗೈಯ ಸ್ಸೆರಿಸಿ । ಬಳಸುವವನೇ ಛತ್ರಧಾರಕನರಸಕೇಳೆಂದ ॥೯೯॥ ಹರುಷದಲಿ ನಿಜಜನನಿ ಗರ್ಭವ । ಧರಿಸಿ ಕೊಂಡಾಡುವವೊಲುತ್ತಮ । ಪುರುಷರಂತರ್ಯಾಮಿಯನು ತಾಳ್ವಂತೆ ಭೂಭುಜರ ॥ ಧರಿಸಿ ಸುಖಸಂ ಗತಿಗಳಲಿ ಸಂ । ಚರಿಸುತಾಳ್ದನ ಹಾನಿವೃದ್ಧಿಯ । ಲಿರಲು ಬೆಸದರನೆನಿಸುವನು ಭೂಪಾಲಕೇಳೆಂದ ॥೧೦೦॥ ಹಿಂದೆಮಾಡಿದ ಸುಕೃತಫಲವೈ । ತಂದುಸಾರುವವೋಲು ಸಾಸಾ । ಚಂದದಾಪತ್ತಿನಲಿ ಹರಿ ನಿಜಭಕ್ತಸಂತತಿಯಾ ॥ ಮುಂದೆ ನಿಲುವವೊಲವನಿಪಾಲರ । ದಂದುಗದ ಹೊತ್ತಿನಲಿ ಗಜಹಯ । ವೃಂದವನೆ ಸಲಹುವನು ವಾಹಕ ನರಸಕೇಳೆಂದ ॥೧೦೧॥ ಪರ್ಬತವನೊಡೆದುಳಿಸಿ ಭೂಮಿಯ । ನಿಬ್ಬ ಗಿಯಮಾಡಿಸುತ ರಥಗಜ । ದೊಬ್ಬುಳಿಯ ಹರೆಗಡಿಸಿ ಕಾದಿಸುತಾನೆಗಳ ಮೇಲೆ ॥ ಬೊಬ್ಬಿರಿದು ಸರ ವಳೆಯ ಸುರಿಯುತ । ವುಬ್ಬರದಬವರದೊಳಗಹಿತರ । ಗುಬ್ಬಸವನೆಸಗುವನೆ ಜೋದನುರಾಯಕೇಳೆಂ ದ ॥೧೦೨॥ ಕುದುರೆಗಳನಾರೈದು ರಥವನು । ಹದುಳಿಸುತ ಸಾರಥಿಯ ಸಲಹು । ತ್ರಿದಿರ ಮುರಿಯೇತ ತನ್ನ ಕಾಯಿದುಕೊಳುತ ಕೆಲಬಲನ ॥ ಸದೆದು ಮುರಳುಮಲಾಗುವೇಗದ । ಕದನಕಾಲಾನಲನವನು ತಾ । ಮೊದಲಿಗನಲೇ ರಥಿಕರಿಗೆ ಧೃತರಾಷ್ಟ್ರ ಕೇಳೆಂದ ॥೧೦೩॥ ಬಿಟ್ಟಸೂಟಿಯಲರಿನೃಪಾಲರ । ಮು ಟ್ಟಿ ಮೂದಲಿಸುತ್ತ ಮೋಹಿದ । ಘಟ್ಟನೊಡೆಹಾಯ್ದಹಿತಬಲದೊಳಗಾನೆಮಂಮಲದು ॥ ಹೊಟ್ಟು ಗುಟ್ಟುತ ಹೆಣನ ವಟ್ಟಾ । ವಟ್ಟಿ ಮಸಗಲು ಕಳನಚೌಕದ । ಲಟ್ಟಿಯಾಡಿಸಬಲ್ಲೊಡವರಾವುತನು ಕೇ ಳೆಂದ ॥೧೦೪॥ ಬೇಸರದೆ ಕಾಳೋರಗನನ । ಡ್ಡೈಸಿ ಕಟ್ಟಿರುವೆಗಳು ಖಂಡವ । ಸೂಸಿ ಕಡಿಕಡಿದೊ ಟ್ಟೆದಂದದಲಹಿತಬಲದೊಳಗೆ ॥ ಓಸರಿಸದೊಳಹೊಕ್ಕು ಸಮರವಿ । ಳಾಸವನು ನೆರಮೆರೆದು ಕೇಶಾ । ಕೇಶಿಗೊದಗುವನೆಕಾಲಾಳರಸ ಕೇಳೆಂದ॥೧೦೫॥ ಬರಲು ಕಂಡೊಡೆ ವಂದಿಸುತ ಲಂ । ತರಿಸದತಿಮನ

ವರಿದು ಮಿಗೆ ಹ। ತ್ತಿರೆಯೆನಿಸದತಿದೂರವೆನಿಸದೆ ಮಧ್ಯಗತನೆನಿಸಿ ॥ ಪರಿವಿಡಿಯುಲೋಲಗಿಸುತರಸನ। ಸಿರಿಮೊಗವನೀಕ್ಷಿಸುತ ಬೆಸಸಿದ । ನರವರಿಸದಾಕ್ಷಣಕೆ ಮಾಡುವನವನೆ ಸೇವಕನು ॥೧೦೬॥ ಕುನಖಿ ಕುಷ್ಠಕುಶೀಲಕನ ಕುಬ್ಜನನು ವಿಧವಾಲಿಂಗಿ ದಾಸಿಯು । ತನುವಿಕಾರಿಯುನಂಗಹೀನನಪಂಗುಳಾಂಧಕನ ॥ ಘನರುಜಾಂಗನ ಬಿಡುದಲೆಯು ರೋ । ಧಿನಿಯುದಿಪ್ಪವಡಿಸುವಸಮಯದ । ಲಿನಿಬರನುಕಾಣ್ಬುದು ಮಹೀಶರಿಗಂಗವಲ್ಲೆಂದ ॥೧೦೭॥ ಕಲಸಕನ್ನಡಿ ಕರಿತು ರಗ ಗೋ । ಕುಲ ವೃಷಭ ಬುಧನಿಚಯ ಗಿರಿಸಂ । ಕುಳ ಸುವಾಸಿನಿ ಮಾತೃ ಪಿತೃ ವರವಾಹಿನೀನಿಚಯ ॥ ಜಲಧಿವಸನ ಚ್ಛತ್ರವುರ್ವಿ । ಲಲನೆಯರನೀಕ್ಷಿಸುವುದವನಿಪ । ತಿಲಕರುಪ್ಪವಡಿಸುವಸಮಯದೊಳರಸ ಕೇಳೆಂದ ॥೧೦೮॥ ಶ್ವಾನಕುಕ್ಕುಟಕಾಕಬಕಪವ । ಮಾನಖಗಪತಿಟಿವಿಜರಜನಿಕ್ಕ । ಶಾನುವಿನಗಾರ್ಧಭನ ವೃಷಭನ ಶಿಂಶುಮಾರಕನ ॥ ನೂನಹಯಕುಂಜರನವರ ಪಂ । ಚಾನನನ ಮೃಗಪೋತಕನ ಗುಣ। ವಾನರೇಂದ್ರನೊಳಿರಲು ಬೇಹುದು ಭೂಪಕೇಳೆಂದ ॥೧೦೯॥ ಪಲಪಲಯದಾನಂಗಳನು ಕರೆ । ಕರೆದು ಲೋಗರಿಗಿತ್ತು ಪರರನು । ಹೊರೆದು ತನ್ನಾಶ್ರಿತರ ನತಿಗಳೆದಾಪ್ತಬಾಂಧವರ ॥ ಸರುಕುಮಾಡದೆ ಗರ್ವದಿಂದು । ಬ್ಬರಿಸುತಿಹ ಪಾತಕರ ಪದವಿಯ । ನರಸಬಣ್ಣಿಸಲಾರು ಬಲ್ಲರು ಯಮನ ನಗರಿಯಲಿ ॥೧೧೦॥ ಮೂರುಕೋಟಿಯ ಕೋಟಿಯರ್ಧವ । ಮೀರಟಿಹ ರೋಮಾಳಿಸಂಖ್ಯೆಯೊ । ಳಾರನೆನ್ನದೆ ನಿಜಪತಿಯ ಸಹಗಮನದಲಿ ತನುವ ॥ ಮಾರಿದಬಲೆಯರುಗಳ ದೆಸೆಯಿಂ । ದಾರುಮಡಿ ಸ್ವರ್ಗಾದಿಭೋಗವ । ಸೂರೆಗೊಂಬುದು ತಪ್ಪದವನೀಪಾಲ ಕೇಳೆಂದ ॥೧೧೧॥ ಆವನೊಬ್ಬನು ಸತ್ಯಕೋಸುಗ । ಭಾವಶುದ್ಧಿಯ ಕೂಡಿ ದಶಪಂ। ಥಾವಸಾಧನನವನಧರ್ಮಗಳರ್ಥವನು ಯಮನು ॥ ಓವನನ್ಯಾಯದಲಿ ಸೂರ್‍ಯಳ । ನೋವಿ ರಚಿಸಿದವಂಗೆ ಗತಿಯಿ । ನ್ನಾವುದೆಂಬುದ ನಾರು ಬಲ್ಲರು ಭೂಪ ಕೇಳೆಂದ ॥೧೧೨॥ ಕೋಪವೆಂಬುದನರ್ಥಸಾಧನ । ಕೋಪವೇ ಸಂಸಾರಬಂಧನ । ಕೋಪದಿಂದುರುತರದ ಸುಕೃತವು ಲಯವನೈದುವುದು ॥ ಕೋಪವನು ವರ್ಜಿಸಲುಬೇಹುದು । ಕೋಪವುಳ್ಳವನಾವನಾಗಲಿ । ಕಾಪುರುಷನಿಹಪರಕೆ ಚಿತ್ತೈಸೆಂದನಾವಿದುರ ॥೧೧೩॥ ವೈದ್ಯನಲಿ ಮಾಂಸದಲಿ ದ್ವಿಜನಲಿ । ನಿದ್ರೆಯಲಿ ತರುವಿನಲಿವನದಲಿ। ವಿದ್ಯೆಯಲಿ ಪದವಿಯಲಿ ಸಂಖ್ಯಾಸಂಖ್ಯವೆಸರುಗಳಾ ॥ ತದ್ವಿಷಯಕೆ ಮಹಾಸಬುದವನು । ಹೊದ್ದಿಸುವುದತಿಕಷ್ಟವವರಿಗೆ। ಸದ್ಯಫಲವದು ತಪ್ಪದವನೀಪಾಲ ಕೇಳೆಂದ ॥೧೧೪॥ ಸೃಷ್ಟಿಸಂಹಾರದಲಿ ಭೂತದ। ಕಟ್ಟಳೆಯ ಗತಿವಿಗತಿಯಲಿ ನೆರೆ । ಮುಟ್ಟಿಸದ ವಿದ್ಯೆಯಲವಿದ್ಯೆಯಲಪ್ರತಿಮನೆನಿಸಿ ॥ ಸಷ್ಟಿಯಲಿ ತುಷ್ಟಿಯಲಿ ಮನವನು । ಬಿಟ್ಟು ಹಿಡಿಯದೆ ಕಾಲಕರ್ಮವ । ಮೆಟ್ಟಿ ನಿಲೆ ಭಗವಾನುಯೆನಿಸುವನರಸಕೇಳೆಂದ ॥೧೧೫॥ ಗರುವ ಮಾನ್ಯನನು ವನಿತದೈವಾ । ಪರನು ಕಡುಸುಖಿ ಭೋಗಿ ರೂಪೋ । ತ್ಕರನು ಧನಿಕನು ರಾಜಪೂಜ್ಯನು ಕೀರ್ತಿವಲ್ಲಭ[illegible] ॥ ಗುರುಜನಕೆ ಬಹುವಿದ್ಯೆಯುಳ್ಳವ । ನರಸ ಕೇಳ್ಕೆ ವಿದ್ಯೆಯಿಲ್ಲದ । ನರನು ನರಪಶುವವನಜನ್ಮ ನಿರರ್ಥಕ[illegible]ಎಂದ ॥೧೧೬॥ ವಿದ್ಯೆ ಸತ್ಕುಲ ಬಹುವಿವೇಕವು । ಬುದ್ಧಿಜಾಣ್ಮೆಯ ನುಡಿಯಾಸಡಗರ । ಶುದ್ಧಚಿತ್ತ ಸು[illegible]ಲ ಭುಜಬಲ ಭದ್ರವೆಂದೆನಿಸಿ ॥ ಉದ್ಯೋಗವು ಮೊದಲಾದಗುಣಗಳಿ । ವಿ[illegible] ಫಲವೇನೀಜಗದ ತೊರೆ । [illegible]ಮುದ್ದು ಹೊದ್ದದನರಗೆ ದಾರಿದ್ರ್ಯಂಗನಾವರಗೆ ॥೧೧೭॥ ಧರೆಯೊಳಗೆ ಶುಚಿಯಹನು ವೈಶ್ಯಾ । ನರ[illegible]ಪ ಕಾಂತಾದರ್ಶಿಯಹಕವಿ । ವರನು ಸುವ್ರತಕಾಮನೆನಿಸು

ವ ಬ್ರಾಹ್ಮಣೋತ್ತಮನು ॥ ಹರಿಹರಾತ್ಮಕನಾಮ ಕೀರ್ತನ । ವೆರಸಿ ಬದುಕುವನೊಬ್ಬನೀನಾ । ಲ್ವರು ಗಳಲ್ಲದೆ ಭುವನದೊಳಗನ್ಯತ್ರವಿಲ್ಲೆಂದ ॥೧೧೮॥ ಹರಿಭಕತಿಲೋಲುಪನೆನಿಸಿ ಶಂ । ಕರನ ಬದ್ಧದ್ವೇಷಿ ಯುಹಶಂ । ಕರನ ಭಕ್ತಿಯೊಳಧಿಕವಾಗಿಯು ವೈಷ್ಣವರೆಮ್ಮೊಲೆ ॥ ಎರಕವಿಲ್ಲದ ಕರ್ಮಚಂಡಾ । ಲರು ಗಳೆಪ್ಪತ್ತೈದುಕೋಟಿಯು । ನರಕದೊಳಗೋಲಾಡುತಿಹರೆಲೆ ರಾಯಕೇಳೆಂದ ॥೧೧೯॥ ಯತಿಕೆಡುಗು ದುಸ್ಸಂಗದಲಿ ಭೂ। ಪತಿಕೆಡುಗುದುರ್ಮಂತ್ರದಲಿ ವರ।ಸುತಕೆಡುಗು ಲಾಲನೆಗಳಲಿ ಕೃಷಿಕೆಡುಗುಪೇಕ್ಷೆಯ ಲಿ॥ ಮತಿ ಕೆಡಗು ಮಧುಪಾನದಲಿ ಸ। ದ್ಗತಿ ಕೆಡುಗು ದುಶ್ಚರಿತದಲಿ ನಿಜ । ಸತಿಕೆಡುಗು ದುರ್ವ್ಯಸನದಲಿ ಭೂಪಾಲಕೇಳೆಂದ॥೧೨೦॥ಉಂಡುತೀರಿಸಬೇಕು ತಾ ಮುಂ। ಕೊಂಡು ಮಾಡಿದಪುಣ್ಯಪಾಪದ। ತಂಡವ ನು ತರಹರಣವಿಲ್ಲದೆಭವಭವಂಗಳಲಿ ॥ ಹಿಂಡಿಹಿಳಿವುದುಬೆಂಬಿಡದೆ ಸವು। ದಂಡಿಯಲಿ ಹಗೆಕೆಳೆಗಳೆನ್ನದೆ। ಗಂಡುಗೆಡಿಸದೆಬಿಡುವುದೇ ವಿಧಿಯೆಂದನಾವಿದುರ॥೧೨೧॥ ಸ್ನೇಹಪೂರ್ವಕದಿಂದ ಮನದೊಳ। ಗೂಹಿ ಸಲು ಲಕ್ಷ್ಮೀಶನವರಿಗೆ। ಬೇಹಪುರುಷಾರ್ಥಂಗಳಹವೆಲ್ಲಿದ್ದರಲ್ಲಲ್ಲಿ ॥ ಈಹದನು ತಪ್ಪುವುದೆ ಕೂರ್ಮನು। ಮೋಹದಲಿ ತತ್ಸಂತತಿಗೆ ನಿ । ರ್ವಾಹವಹವೋಲರಸ ಚಿತ್ತೈಸೆಂದನಾವಿದುರ ॥೧೨೨॥ಕೂಡಿದೆಡೆಯಲ ಕೃತ್ಯಶತವನು । ಜೋಡಿಸಿದವರು ಮಿತ್ರರುಗಳಿಗೆ । ಕೇಡಚಿಂತಿಸಿದವರುಗಳು ಪುರುಷಾರ್ಥವನು ತಮ ಗೆ ॥ ಮಾಡಿದವರುಗಳಿಗೆ ವಿಘಾತಿಯ । ಹೂಡಿದವದಿರು ನರಕದೊಳಗೋ । ಲಾಡದಿಹರೇ ರಾಯ ಚಿತ್ತೈಸೆಂದನಾವಿದುರ ॥೧೨೩॥ ಕುಲಜನಾಗಲಕುಲಜನಾಗಲಿ । ಜಲರುಹಾಕ್ಷನ ನಾಮಕೀರ್ತನ । ದೊಳಗೆ ಬದುಕುವನಾವನಾತನೆ ಸುಕೃತಿಯೆಂಬುವನು ॥ ಉಳಿದಜಪತಪನಿಯಮಹೋಮಂ । ಗಳಲಿ ಸಂಸಾರಾರ್ಣವವನು । ಚ್ಚಳಿಸಬಹುದೇ ರಾಯ ಚಿತ್ತೈಸೆಂದ ನಾವಿದುರ ॥೧೨೪॥ ಜಾತರೂಪದ ಲೇಸುಹೊಲ್ಲಹ । ವೀತಿಹೋತ್ರನ ದೇಹಕಾರಣ । ಭೂತವಾಗಿ ಹವಹಗೆ ಸದಸತ್ತುಗಳ ಭೇದವನು ॥ ನೀತಿಮುಖದಿಂದರಿವುದುತ್ತಮ । ನೀತ ಮಧ್ಯಮನೀತ ಕನಿಯಸ । ನೀತನೆಂಬುದನರಸ ಚಿತ್ತೈಸೆಂದ ನಾವಿದುರ॥೧೨೫॥ ಅವನಿಯಲಿಜನಜನಿತಧನಧಾ । ನ್ಯವನು ಕಳುಹಲಗ್ಗೆದು ಸಂತೋ । ಷವನು ಮಾಡುವಕಡೆಯಲೊಂದೇ ನೂರುಮಡಿಯಾಗಿ ॥ ಲವಲವಿಕೆ ಮಿಗಲೆತ್ತಿ ಸಪ್ತಾಂ । ಗವನು ಸಲಹುತ್ತಿರಲು ಬೇಹುದು । ರವಿಯವೋಲು ಸಾಸಿರಮುಖದೊಳವನೀಶ ಕೇಳೆಂದ ॥೧೨೬॥ ಇನನುದಯಿಸಲಿ ಪಶ್ಚಿಮಾದ್ರಿಯೊ । ಳೆನಲನೊಮ್ಮೆ ಹಿಮಾಂಶುವಾಗಲಿ । ಕನಕಗಿರಿಯಳ್ಳಾಟವಾಗಲಿ ಪರ್ವತಾಗ್ರದಲಿ ॥ ವನಜ ವಿಕಸಿತವಾದೊಡೆಯು ಸ । ಜ್ಜನರುಗಳು ನುಡಿದೆರಡನಾಡರು । ಮನವಚನಕಾಯದಲಿ ಚಿತ್ತೈಸೆಂದನಾವಿದುರ ॥೧೨೭॥ಹರನಕೊರಳಿಂಗಾಭರಣವಾ। ದುರಗಪವನಾಶನವೆನಿಸುವಂ । ತರಸ ನಿನ್ನ ಯಬಸುರಬಂದೀನಹರು ಪಾಂಡವರು ॥ ನರಪಶುಗಳಾದರುಕಣಾ ನೀ। ನಿರಲು ವನವಾಸದಲಿ ಸೊಪ್ಪ ನ । ವರತಮೆಲುವುದೆ ರಾಯ ಚಿತ್ತೈಸೆಂದನಾವಿದುರ ॥೧೨೮॥ ದೇವತಾಸ್ಥಾನದಲಿ ವಿಪ್ರನ। ಭಾವಳ ಯದಲಿ ರಾಜಪುರುಷರ । ಸೇವೆಯಲಿ ರವಿಶಶಿಗಳುದಯಾಸ್ತಮಯ ಕಾಲದಲಿ ॥ ಗೋವುಗಳ ನೆರವಿ ಯಲಿ ವರವೃಂ । ದಾವನದೊಳುಪಹತಿಯ ಮಾಡುವ । ದಾವಗುಣ ಗರುವರಿಗೆ ಚಿತ್ತೈಸೆಂದನಾವಿದು ರ ॥೧೨೯॥ ನಾಯನಡುಬೀದಿಯವನು ನೆಚ್ಚಿ ವೃ । ಥಾಯ ಕೆಡಬೇಡಾ ಯುಧಿಷ್ಠಿರ । ರಾಯನನು ಕರಸುವುದು ಭೀಷ್ಮಾದಿಗಳ ಮುಂದಿಟ್ಟು ॥ ನ್ಯಾಯಮುಖದಲಿ ಸಕಲ ರಾಜ್ಯ । ಶ್ರೀಯನರ್ಥವನಿತ್ತು

ಳವನಿಯಲಿ ॥ ಪತನ ತಪ್ಪದು ಮರಳಿ ಬಾರದ । ಮತವನರಿದು ಮಹಾನುಭಾವರ । ಗತಿವಿಡಿದು ನಡೆವುದು ನಯವು ಕೇಳೆಂದನಾಮುನಿಪ ॥೧೪॥ ಸಕಲಧರ್ಮದ ಸಾರವನು ಮತಿ । ವಿಕಳನಾಗದೆ ಚಿತ್ತವಿಸು ಬಾ । ಧಕವದಾವುದು ನಿನಗದನು ನೀನನ್ಯರುಗಳಲ್ಲಿ ॥ ಯುಕುತಿಯಿಂದದ ಮಾಡದಿರು ನಿ । ರ್ಮುಕುತನಹೆ ಸಂಸಾರದಲಿ ಸಾ । ಧಕವಿದೊಂದೇ ಸಕಲಜನಮತವೆಂದನಾಮುನಿಪ ॥೧೫॥ ಒಂದು ವಸ್ತುವನೆರಡುಮಾಡುವೆ । ನೆಂದು ಬುದ್ಧಿಭ್ರಂಶದಲಿ ಮನ । ಸಂದು ಸಮ್ಯಗ್ಜ್ಞಾನದುದಯದ ನೆಲೆಯ ಕಾಣಿಸದೆ ॥ ದಂದುಗಂಬಡುತಿಹರು ತತ್ವದ । ಹಿಂದುಮುಂದರಿಯದೆ ಮಹಾತ್ಮರು । ಬಂದಪಥದಲಿ ಬಾರದೇ ಕೆಡುತಿಹುದು ಜಗವೆಂದ ॥೧೬॥ ಪ್ರಣವದೊಂದಾವರ್ಣವೂರರ । ಗುಣವಿಡಿದು ತೋರುವ ಚರಾಚರ । ವೆಣಿಸಬಾರದು ವಿಶ್ವವಲೆ ನಿಸ್ಯೂತವಾಗಿಹುದು ॥ ಹಣಿದು ಬೀಳುವಹೊಳೆವ ಜ್ಯೋತಿರ್ಗಣದವೊಲು ತೊಳತೊಳಗಿ ಬೆಳಗುವ । ಗುಣರಹಿತನ ನಿಜಸ್ವರೂಪವಿದೆಂದನಾಮುನಿಪ ॥ ನಳಿನಮಿತ್ರನು ಪಶ್ಚಿಮಾಂಬುಧಿ । ಗಿಳಿಯೆ ನಾನಾಪಕ್ಷಿಜಾತಿಗ । ಳುಲಿಯುತೈತಂದೊಂದುವೃಕ್ಷವನೇರಿ ರಾತ್ರಿಯನು ॥ ಕಳಿದು ನಾನಾದೆಸೆಗೆ ಹರಿವವೊ । ಲಿಳೆಯ ಭೋಗದ ದೃಷ್ಟಿ ತೀರಿದ । ಬಳಿಕ ಲೋಕಾಂತರವನೆಯ್ದುವರೆಂದ ನಾಮುನಿಪ ॥೧೮॥ ಪೊಡವಿಯೊಳಗುದಯಿಸಿದದುಷ್ಕೃತ । ಒಡೆದು ಭೂಪರನದು ಪುರೋಹಿತ । ರೆಡೆಗೆ ಬಳಿಕಾಮುಖ್ಯಶಿಷ್ಯನ ದೋಷ ಗುರುವಿನದು ॥ ಮಡದಿ ಮಾಡಿದ ಪಾತಕವು ಪತಿ । ಗೊಡಲಹುದು ಪರಮಾರ್ಥವಿದು ಪರ । ವಿಡಿಯನರಿಯದೆ ಕೆಡುವುದೀಜಗವೆಂದನಾಮುನಿಪ ॥೧೯॥ ದುರ್ಜನರಿಗರಜವುದು ಲೋಕವು । ಸಜ್ಜನರ ಲೆಕ್ಕಿಸದು ತಾರ್ಕ್ಷ್ಯನು । ಸೆಜ್ಜೆಯೊಳಗಿಹದಂದಶೂಕನನರ್ಚಿಸುವರೊಲಿದು ॥ ಉಜ್ವಲಿತಭಕ್ತಿಯಲಿ ಬಹಳವಿ। ತರ್ಜಯಲಿ ಮಹಾತ್ಮರಕ್ಕಿದ । ಹೆಜ್ಜೆಯಿದು ಲೋಕಕ್ಕೆ ಕೇಳ್ ನೀನೆಂದನಾಮುನಿಪ ॥೨೦॥ ತಳಪಟದೊಳಾಯುಷ್ಯರಾಶಿಯ । ನಳೆವಕೊಳಗವು ಸೂರ್ಯನೆಂಬುದ। ತಿಳಿವಹೋರಾತ್ರಿಯಲಿ ಸಂಖ್ಯೆಯ ಸಲಿಗೆಯಂಕಿಸದೆ ॥ ಬಳಸುವುದು ಸನ್ಮಾರ್ಗದಲಿ ಮುಂ। ಕೊಳಿಸುವುದು ಸದ್ಧರ್ಮದಲಿ ವೆ । ಗ್ಗಳಿಸದಿರು ಷಡುವರ್ಗದಲಿ ಕೇಳೆಂದನಾಮುನಿಪ ॥೨೧॥ ನಷ್ಟಿಯಿದು ಸಂಸಾರದೊಳಗು । ತ್ಕೃಷ್ಟವಿದುಮನ್ವಾದಿಮಾರ್ಗದ । ದೃಷ್ಟವಿದು ಲೋಕಾಂತರದ ಸುಖದುಃಖದೇಳಿಗೆಯಾ ॥ ಹುಟ್ಟುವೆಟ್ಟಿನ ಕಾಲಕರ್ಮದ । ಕಟ್ಟಳೆಯಿದೆಂದರಿದು ನಡೆವಂ । ಗಟ್ಟಳಿಸುವುದಿದಾವುದೈ ಹೇಳೆಂದನಾಮುನಿಪ ॥೨೨॥ ತಿಲೆಯ ರೂಹನು ಮೂಢರುಗಳ । ಗ್ಗಳೆಯ ಪಾವಕನನು ಮಹೀಸುರ । ಲಳೆಯೊಳಗೆ ಪರಮಾತ್ಮನೇ ಪರದೈವ ತಾನೆಂದು ॥ ಒಲಿದು ಪೂಜಿಸುತಿಹರು ಹೃದಯಾಂ । ಗಳದೊಳಗೆ ವರಯೋಗಿಗಳು ಕೈ । ವಳಸುವುದು ಜನಪಿಪ್ರಕಾರದೊಳರಸ ಕೇಳೆಂದ ॥೨೩॥ ಜ್ಞಾನಿಗಳನೊಡಬಡಿಸಬಹುದ । ಜ್ಞಾನಿಗಳನಹುದೆನಿಸಬಹುದು । ಜ್ಞಾನಲವವನು ಕೂಡಿಕೊಂಡಿಹದುರ್ವಿದಗ್ಧರನು ॥ ಏನ ತಿಳುಹಲು ಬಹುದು ವಿಷ್ಣು । ಕ್ಷೇನಗಳವಲ್ಲಿದನು ಮಿಕ್ಕಿನ । ಮಾನವರ ಪಾಡಾವುದೆಂದನು ಮುನಿ ನೃಪಾಲಂಗೆ ॥೨೪॥ ದಾನವೊಂದಾಪಾಲನೆಯ ಫಲ । ದಾನವೊಂದೇ ವುಭಯ ಪಿದರೊಳು । ದಾನದಿಂದಹುದಿಸಿದರಂಗಳ ಸೌಖ್ಯಸಂಪದವು ॥ ದಾನವೇ ಸಂಸಾರಸಾಧನ । ದಾನದಿಂ ಪಾರತ್ರಿಯಫಲವಿ । ಸ್ವರ್ಗನೆಂಬೆಸು ಕಡೆಯೊಳಚ್ಯುತಪದವಿ ಫಲವೆಂದ ॥೨೫॥ ಅರಸನೊಡೆಯನು ದಂಡನಾಥನು । ಗುರುಹಿರಿಯನುತ್ತಮನು ದೇವಾ । ಪರನು ಸಾಹಿತ್ಯ

ನು ಸದಸ್ಯನು ತತ್ಪುರುಷನೆಂದುಂ । ಪರಿಪರಿಯ ನಾಮಂಗಳಲಿಹಂ । ಕರೆಸುವರು ಜೀವಾತ್ಮ ತೊಲಗಿ
ದ । ಮರುದಿವಸ ಹೆಣನೆನ್ನರೇ ಹೇಳೆಂದನಾಮುನಿಪ ॥೨೭॥ ವರುಷವೊಂದರೊಳು ಮಾಸಮೂರರೊ ।
ಳಿರದೆ ಪಕ್ಷತ್ರಯದೊಳಗೆ ಬಂ । ದರುಹುವುದು ದಿನಮೂರರಲಿ ಸಂದೇಹಬೇಡಿದಕೆ ॥ ಧರೆಯೊಳುತ್ಕಟ
ಪುಣ್ಯಪಾಪೋ । ತ್ಕರದ ಫಲವಿದು ತಪ್ಪಬಾರದು । ಮರಳುವುದು ಪರಲೋಕದೆಸೆಗವನೀಶ ಕೇಳೆಂದ॥
ಒಂದು ಭೂಪಿಂಡದಲಿ ನಾನಾ । ಚಂದದಿಂ ಪ್ರಾಣಿಗಳು ಜನಿಸುವ । ಒಂದು ಜ್ಯೋತಿಸ್ಸಿನಲಿ ನಾನಾ
ಜ್ಯೋತಿಯುದಿಸುವವು ॥ ಒಂದುಪರವಸ್ತುವಿನ ಬಳಿಯಲಿ । ಬಂದುದಬುಜಭವಾಂಡಕೋಟಿಗ । ಳೆಂದರೆ
ಯುಬೇರಿಲ್ಲ ಸರ್ವವು ವಿಷ್ಣುಮಯವೆಂದ ॥೨೮॥ ತಾನಿವನು ಹಗೆ ಕೆಳೆವಿವೇಕ । ಜ್ಞಾನವಜ್ಞಾನಂಗಳಿ
ಹಪರ । ಹಾನಿವೃದ್ಧಿಯುಮಾರ್ಗವಾರ್ಗದೊಳೇಕಚಿತ್ತದಲಿ ॥ ದಾನಧರ್ಮಪರೋಪಕಾರವಿ । ಧಾನದೀ
ಕ್ಷಾಕರ್ಮನಿಷ್ಠರು । ಮಾನನೀಯರಲೇ ಮಹಿಪತಿ ಕೇಳು ನೀನೆಂದ ॥೨೯॥ ಕರಣಗುಣಸಂಹನನಸಂ
ಧ್ಯಾಂ । ತರದವಸ್ಥಾಂತರದ ಲೋಕೋ । ತ್ಕರದ ತಾಪತ್ರಯದ ಲಕ್ಷಣಲಕ್ಷಿತವನರಿದು ॥ ಪರಿವಿಡಿ
ಯಮೂರ್ತಿತ್ರಯಂಗಳ । ಗುರುಲಘುವನಾರೈದು ನಡೆವಂ । ಗರುದೆನಿಸುವುದವಾವುದೈ ಹೇಳೆಂದನಾ
ಮುನಿಪ ॥೩೦॥ ವೇದನಾಲ್ಕಾಶ್ರಮವು ತಾನಾ । ಲ್ಕಾದಿಮೂರುತಿ ನಾಲ್ಕು ವರ್ಣವಿ । ಭೇದನಾಲ್ಕಾಕರ
ಣ ನಾಲುಕುಪಾಯನಾಲ್ಕರಲಿ ॥ ಭೇದಿಸಲು ಪುರುಷಾರ್ಥನಾಲ್ಕರ । ಹಾದಿಯರಿದು ವಿಮುಕ್ತಿನಾಲು
ಕ । ನೈದುವನು ಸಂದೇಹವೇ ಹೇಳೆಂದನಾಮುನಿಪ ॥೩೧॥ ಭೂತವರ್ಣಸ್ಥಾನಪರ್ವನಿ । ಪಾತವಧ್ವರ
ಕೃತಕಕರ್ಕಶ । ಜಾತಿಮುಖಪಾರಣದಿ ಶರಸಂತತಿಯ ಸೋಹೆಗಳ ॥ ಧಾತುಮೂಲಾದಿಗಳನರಿವುದು ।
ಪ್ರೀತಿಯಿಂದಿಹಪರವ ಗೆಲುವುದು । ಭೂತಳದೊಳುತ್ತಮವಲೇ ಭೂಪಾಲ ಕೇಳೆಂದ ॥೩೨॥ ಆರು
ಗುಣರುತುವರ್ಣವರ್ಣವ । ದಾರುದರ್ಶನಪಾತ್ರವಂಗವ । ದಾರುಭೇದದ ಬಗೆಯನರಿವುದು ಶಿಷ್ಟ
ಮಾರ್ಗದಲಿ ॥ ತೋರಲೀಮಾಯಾಪ್ರಪಂಚವ । ಮೀರಿಕೇಡಿಲ್ಲದಪರವ ಕೈ । ಸೂರೆಗೊಂಬುದು ಪರ
ಮಮಂತ್ರವಿದೆಂದನಾಮುನಿಪ ॥೩೩॥ ಜಲಧರಸಮಾತ್ಯಕರಸದಿಕರ । ತಳಪಭಕ್ತಿಗಳಂಗದೀಪಾ । ವಳಿ
ಮುನೀಶ್ವರರುಗಳಧಾತುರ್ಗುಣದಿವೇಧೆಗಳ ॥ ತಿಳಿದು ತಾಳದಗತಿಯಗಮಕಂ । ಗಳನರಿದು ನಡವವ
ರುಗಳು ನಿ । ರ್ಮಳದಲೆಡಹದೆ ಬೆರಸಿಕೊಂಬುದು ಮುಕುತಿರಾಜ್ಯವನು ॥೩೪॥ ಕಾಯದಿಗ್ಬಂಧಪ್ರ
ಣಾಮವಿ । ಧೇಯವರ್ಜನೆ ಯೋಗಸಿದ್ಧನಿ । ಕಾಯನಾಲ್ಕರವಿಂದ್ರಿಯಸ್ಥಿತಿಗತಿಯನಾರೈದು ॥ ಆಯ
ವನು ವಿವರಿಸುತ ಮೇಲಣ । ಬೀಯವಿದು ತನಗೆಂಬುದನು ನಿ । ರ್ದಾಯದಲಿ ನಿಶ್ಚಯಿಸಬೇಹುದು
ರಾಯ ಕೇಳೆಂದ ॥೩೫॥ ನವನವಬ್ಯೂಹಂಗಳಬುಜೋ । ದ್ಭವನವಾಳಲಿಖಂಡನವರಸ । ನವನವದವಿ
ಗ್ರಹದನಾಟಕಲಕ್ಷಣನನರಿದು॥ ನವವಿಧಾಮಳಭಕ್ತಿರಸವನು । ಸವಿದು ನಿಲೆ ಸನ್ನಿತ್ಯವಸ್ತುವ । ನವರಸ
ವನಾರೈದು ನಡೆವುದು ಭೂಪಕೇಳೆಂದ ॥೩೬॥ ಹತ್ತುಮುಖದಲಿ ಲೋಕದೊಳಗು । ತ್ಪತ್ತಿಯಾದ
ಚರಾಚರಂಗಳ । ಉತ್ತಮಾಧಮರೆನ್ನದೇ ಹರಿ ಸರ್ವಗತನಾಗಿ ॥ ಸತ್ತುವನು ನಾನಾತರದಲಿ ವಿ । ಚಿ
ತ್ರಚರಿತನು ಕಪಟನಾಟಕ । ಸೂತ್ರಧಾರಕನೆಂದರಿದು ಸುಖಿಯಾಗು ನೀನೆಂದ ॥೩೭॥ ಲೇಸುಮಾಡಿದಿ
ರೆನ್ನಚಿತ್ತದ । ಬೇಸರಿಕೆ ಬಯಲಾಯ್ತು ನಿಮ್ಮುಪ । ದೇಶದಿಂದ ಕೃತಾರ್ಥನಾದೆನು ಗೆಲಿದೆನಿಹಪರ
ವ ॥ ಗಾಸಿಯಾದುದು ರಾಗ ಲೋಭದ । ಮೀಸಲಳಿದುದು ನಿಮ್ಮದೆಸೆಯಿಂ । ದೇಸುಧನ್ಯರೊ ನಾವು

ಚಿತ್ತೈಸೆಂದನಾ ಭೂಪ ॥೩೮॥ ಸ್ವರ್ಗವಾವುದು ನರಕವಾವುದು । ವಿಗ್ರಹದಲುಪಸಿದ್ಧಿಯಾವುದ । ನುಗ್ರಹಿಸಲೇನಹುದು ಪಾತ್ರಾಪಾತ್ರವೆಂದೇನು ॥ ಉಗ್ರವಾವುದು ದೈವದೊಳಗೆ ಸ । ಮಗ್ರವಾವುದು ಧರ್ಮದೊಳಗೆಯು । ನುಗ್ರಹಿಸಿಯುಪದೇಶಿಸಲು ಬೇಕೆಂದನಾ ಭೂಪ ॥೩೯॥ ಸುಲಭನತಿಸಾಹಿತ್ಯ ಮಂಗಳ । ನಿಳೆಯುನಗಣಿತ ಮಹಿಮನನ್ವಯ । ತಿಲಕನನುಪಮ ಚರಿತ ದೈವಾಪರನು ಪುಣ್ಯನಿಧಿ ॥ ಕುಲಯುತನು ಕೋಪಿದನು ಕರುಣಾ । ಜಲಧಿ ಕೌತುಕಯುಕ್ತಿವಿದನೆಂ । ದಿಳೆ ಹೊಗಳುತಿರಲವನೆ ಕೇಳೈ ಸ್ವರ್ಗಗತಿಯೆಂದ ॥೪೦॥ ಪಾತಕನು ಪತಿತನು ಕೃತಘ್ನನು । ಘಾತಕನು ಮರ್ಮನು ದುರಾಷ್ಯನ । ಧೀತಕನು ದೂಷಕನು ದುರ್ಜನನಪ್ರಯೋಜಕನು ॥ ನೀತಿರಹಿತನನಾರ್ಯ ಧರ್ಮನ । ಪೇತ ದೈವದ್ರೋಹಿಯೆಂಬುದು । ಭೂತಳವಿದೇ ನರಕ ಚಿತ್ತೈಸೆಂದ ನಾಮುನಿಪ ॥೪೧॥ ದೇಹವಿಡಿದಿಹ ಕರ್ಮವದು ನಿ । ರ್ದೇಹದಲಿ ದೊರಕುವ ಮಾನವದೆ । ದೇಹವೇ ಸಾಧನ ಸಕಲ ಪುರುಷಾರ್ಥಶೀಲರಿಂಗೆ ॥ ಐಹಿಕಾಮುಷ್ಮಿಕದ ಗತಿ ಸಂ । ಮೋಹಿಸುವ ದುಃಶೀಲದಲಿ ಸಂದೇಹವೇ ಧೃತರಾಷ್ಟ್ರ ಚಿತ್ತೈಸೆಂದನಾ ಮುನಿಪ ॥೪೨॥ ಗರುಡಪಂಚಾಕ್ಷರಿಯೊಳಲ್ಲದೆ । ಗರಳಭಯವಡಗುವುದೆ ವಿಷ್ಣು । ಸ್ಮರಣೆಯಿಂದಲ್ಲದೆ ಮಹಾಪಾತಕಕೆ ಕಡೆಯಹುದೆ ॥ ಹಿರಿದು ಸಂಸಾರಾಂಬುಧಿಯನು । ತ್ತರಿಸುವೊಡೆ ಗುರುಮುಖದೊಳಲ್ಲದೆ । ನಿರತಿಶಯವಿಸ್ತಾವುದೈ ಹೇಳೆಂದ ನಾಮುನಿಪ ॥೪೩॥ ತನ್ನ ಮನೆಯಲಿ ಮೂರ್ಖನತಿಸಂ । ಪನ್ನ ಪೂಜ್ಯನು ಭೂಮಿಪಾಲನು । ತನ್ನ ದೇಶದೊಳಧಿಕ ಸ್ವಗ್ರಾಮದಲಿ ಪ್ರಭು ಪೂಜ್ಯ ॥ ಭಿನ್ನವಿಲ್ಲದೆ ಹೋಹತಾವಿನೊ । ಳನ್ಯವೆನಿಸದೆ ವಿಶ್ವದೊಳಗು ಸಂ । ಪನ್ನ ಪೂಜ್ಯರು ಪಾತ್ರರೈ ವಿದ್ವಾಂಸರುಗಳೆಂದ ॥೪೪॥ ಒಬ್ಬನಹನೈ ಶೂರ ನೂರರೊ । ಳೊಬ್ಬನಹ ಸಾವಿರಕೆ ಪಂಡಿತ । ನೊಬ್ಬನಹನೈ ಶತ್ರು ಶತಸಾವಿರಕೆ ಲೋಕದಲಿ ॥ ಒಬ್ಬ ದಾನಿಯು ಕಾಣೆ ನಾನಿ । ನ್ನೊಬ್ಬರೊಬ್ಬರಿಗೊಂದುಗುಣವದು । ಸಬ್ಬಗುಣಸಂಪನ್ನರೈ ವಿದ್ವಾಂಸರುಗಳೆಂದ ॥೪೫॥ ಸತಿಯರಿಗೆ ಗತಿಯಾವುದೈ ನಿಜ । ಪತಿಗಳಲ್ಲದೆ ವಿಪ್ರಜಾತಿಗೆ । ಹುತವಹನು ವರ್ಣತ್ರಯಕೆ ಭೂದೇವರುಗಳಿರಲು ॥ ಕ್ಷಿತಿಯೊಳತಿಶಯವಾವುದೈ ಭೂ । ಪತಿಯೆ ಕೇಳಿಹಪರಕೆ ಸುಖಸಂ । ಗತಿಯನೊಲುವೊಡೆ ಪೂಜಿಸುವುದೈ ಬ್ರಾಹ್ಮಣೋತ್ತಮರ ॥೪೬॥ ಚೋರರನು ಕಂಟಕನ ಹಿಂಸಾ । ಚಾರನನು ಷಂಡನನು ಸಮಯವಿ । ಕಾರಭೇದಿಯನಿಂತಿರುವರನು ಕಂಡು ಮನ್ನಿಸದೆ ॥ ದೂರದಲಿ ವರ್ಜಿಸುವುದು ಬಹಿ । ಷ್ಕಾರಿಗಳು ಸರ್ವಜ್ಞವರುಗಳು । ಸಾರಿದುದು ಸರ್ವೇಶ್ವರನ ಮತವರಸ ಕೇಳೆಂದ ॥೪೭॥ ಮೊದಲಲಾ ಮಾಹಿಷನ ಸಾಮ । ರ್ಥ್ಯದಲಿ ವೃಷಲೀವಲ್ಲಭನನಂ । ತ್ಯದಲಿ ವಾಗ್ದೂಷಕನ ಕಂಡವರುಗಳ ಭಾಗ್ಯನಿಧಿ ॥ ಕದಡಿ ಹರಿವುದು ಕಂಡ ಮುಖದಲಿ । ಸದಮಳಿತ ಶಾಸ್ತ್ರಾರ್ಥನಿಶ್ಚಯ । ವಿದನರಿದು ನಡೆವುದು ನಯವು ಭೂಪಾಲ ಕೇಳೆಂದ ॥೪೮॥ ಕುಲರಹಿತ ಷಡುವರ್ಗಮುಖದಲಿ । ಗಳಿಸಿದರ್ಥವನುಂಡು ಕಾಲವ । ಕಳಿವನಿರ್ಭಾಗ್ಯರು ಕಣಾ ಮಾಹಿಷಿಕರೆಂಬುವರು ॥ ಇಳೆಯೊಳವರೊಡನಾಡಿದವದಿರು । ಗಳಿಗೆ ನರಕಾರ್ಣವದೊಳಾಳುತ । ಮುಳುಗುತಿರುತಿಹರಲ್ಲದೇ ಗತಿಯಿಲ್ಲ ಕೇಳೆಂದ ॥೪೯॥ ದೈವದಾಧೀನದಲಿ ಜಗವಾ । ದೈವಮಂತ್ರಾಧೀನ ಮಂತ್ರವು । ಭೂಮಿಬುಧರಾಧೀನವಾಗಿಹುದಾಗಿ ಲೋಕದಲಿ ॥ ದೈವವೇ ಬ್ರಾಹ್ಮಣನದಲ್ಲದೆ । ಭಾವಿಸಲು ಬುಧರಿಂದಧಿಕವಹ । ದೈವವೆಂಬುದದಾವುದೈ ಹೇಳೆಂದನಾ ಮುನಿಪ ॥೫೦॥ ಕೆಲಸಗತಿಯಲಿ ಕಡೆದಶಿಲೆಯನು । ಕಲುಕುಟಿಕನಿಳುಹುಪನದಲ್ಲದೆ । ಹಲವುಪರಿಯಿಂದದನು ಲೋಕಕೆ

ದ್ಯೆವವನು ಮಾಡಿ ॥ ಸಲಿಸುವವರುಂಟೇ ಸುರಾಸುರ । ರೊಳಗೆ ವಿಪ್ರೋತ್ತಮರುಳಿಯೆ ಜಗ । ದೊಳಗೆ ದೈವವದಾವುದೈ ಹೇಳೆಂದನಾಮುನಿಪ ॥೫೧॥ ಎಣಿಸಬಹುದೂರ್ವರೆಯ ಸೈಕತ । ಮಣಿಯ ನೊಯ್ಯಾರದಲಿ ಗಗನಾಂ । ಗಣದೊಳೈತಹ ವೃಷ್ಟಿಬಿಂದುವ ಲೆಕ್ಕಗೊಳಬಹುದು ॥ ಎಣಿಸಬಾರದ ದೊಂದುದಿವಿಜರ । ಗಣಕಗೋಚರವಾಗಿ ಸದ್ಬ್ರಾ । ಹ್ಮಣನೊಳೊಬ್ಬನ ರಕ್ಷಿಸಿದಫಲವರಸ ಕೇಳೆಂದ॥ ಜಾತಿಧರ್ಮವನನುಸರಿಸಿ ವರ । ಮಾತೃಪಿತೃಪರಿಚಯದೊಳಗೆ ನಡೆ । ವಾತ ಪರರ ಗುಣಾಗುಣಸ್ತುತಿ ನಿಂದೆಗಳನರಿದು ॥ ಭೂತನಾತನ ಭಕುತಿಯಲಿ ವಿ । ಖ್ಯಾತವಹಗುರುದೈವದಲಿ ಭಯ । ಭೀತಿಹಿರಿದಿರಲದುವೆ ಕೇಳ್ಸುಕೃತಕ್ಕೆ ಕಡೆಯೆಂದ ॥೫೩॥ ಅರ್ಥದಿಂದಹಸಿದ್ಧಿಯಾವುದ । ನರ್ಥವೆಂಬುದದೇನು ತನಗೆ । ಸ್ವಾರ್ಥವಾರು ಪರಾರ್ಥದಿಂದಹುದಾವುದುದವನಿಯಲಿ ॥ ತೀರ್ಥವಾವುದು ವಿಪ್ರರೊಳಗೆ ಸ । ಮರ್ಥರಾರು ಸುಧಾತ್ರಿಯೊಳಗೆಯು । ವ್ಯರ್ಥಜೀವಿಗಳಾರು ಚಿತ್ತೈಸೆಂದನಾಮುನಿಪ ॥೫೪॥ ಧನವನುಳ್ಳ ಮಹಾತ್ಮನಾವುದ । ನೆನೆದೊಡದು ಕೈಸಾರುವುದು ನಿ । ರ್ಧನಿಕನಾವುದ ನೆನೆದಬಯಕೆಯದಲ್ಲದೇ ಬೇರೆ ॥ ಧನಿಕನಂತೆ ಸಮಸ್ತಸುಖ ಸಂ । ಜನಿಸುವುದೆ ಸರ್ವಕ್ಕೆ ಸಾಧನ । ಧನವದಲ್ಲದೆ ಭುವನದೊಳಗನ್ಯತ್ರವಿಲ್ಲೆಂದ ॥೫೫॥ ವ್ಯರ್ಥರುಗಳೊಡನಾಟತನ್ನಯ । ಸ್ವಾರ್ಥರಲ್ಲದರುಗಳ ಕೂಟ ಪ । ರಾರ್ಥದಿಂದುಜ್ಜೀವಿಸಿದವನ ಬದುಕು ಲೋಕದಲಿ ॥ ಅರ್ಥವಿಲ್ಲದಸಿರಿಯು ಸಡಗರ । ವರ್ಥಯಿಲ್ಲದಬಾಳುವೆಗಳೀ । ಯರ್ಥಪಾರಂಪರೆಯಲೇ ಕೇಳೆಂದ ನಾಮುನಿಪ ॥೫೬॥ ಮಾಡುವುದು ಧರ್ಮವನು ಸುಜನರ । ಕೂಡುವುದು ಪರಪೀಡೆಯೆಂಬುದ । ಮಾಡಲಾಗದು ಕರಣಮೂರರೊಳಲ್ಲದಾಟವನು ॥ ಆಡಲಾಗದು ದಸಭ್ಯಜನವನು । ಕೂಡಲಾಗದಿದೆಂಬಮಾರ್ಗವ । ನೋಡಿ ನಡೆವುದು ತನಗೆ ಪರಮಸ್ವಾರ್ಥಕರವೆಂದ ॥೫೭॥ ಕರಿತುರಗಮೊದಲಾದವಸ್ತುಗ । ಳರಮನೆಗಳಲಿ ಪುತ್ರಮಿತ್ರರು । ತರುಣಿಯರು ಸಹಚರರು ಗೋತ್ರಜರಡವಿಯೊಳಗಿಕ್ಕಿ ॥ ತಿರುಗುವರು ನಿಜಸುಕೃತದುಷ್ಕೃತ । ವೆರಡುಬೆಂಬಿಡವಲ್ಲದುಳಿದುದ । ನರಸಬಲ್ಲವರಾರು ಧರ್ಮರಹಸ್ಯವಿಸ್ತರವ ॥೫೮॥ ಧರ್ಮದಾಧಾರದಲಿಹುದು ಜಗ । ಧರ್ಮವುಳ್ಳನನಾಶ್ರಯಿಸುವುದು । ಧರ್ಮವೇ ನೂಕುವದು ಜನ್ಮಾಂತರದ ಪಾತಕವ ॥ ಧರ್ಮವೇ ಸರ್ವಪ್ರತಿಷ್ಠಿತ । ಧರ್ಮವೆಂಬುದು ಪರಮಪದವಾ । ಧರ್ಮವನು ಬಿಟ್ಟಿಹುದು ಬದುಕಲ್ಲರಸ ಕೇಳೆಂದ ॥೫೯॥ ಪರಿಪರಿಯ ಯಜ್ಞವನು ವಿರಚಿಸಿ । ಸುರಪತಿಯ ಸಂತುಷ್ಟಿಬಡಿಸಲು । ಸುರಿವನವಸಂಪೂರ್ಣವಾಗಿ ಸುವೃಷ್ಟಿಯನು ಜಗಕೆ ॥ ಹರಿಹಯನು ಸಸ್ಯಾದಿಕಂಗಳ । ಹೊರೆಯಲೋಸುಗ ಮುಯ್ನೆಮುಯ್ಯಾ । ಗಿರುತಿಹನು ಭುವನದ್ವಯದೊಳವನೀಶ ಕೇಳೆಂದ ॥೬೦॥ ಎತ್ತಲಾನು ಸುತೀರ್ಥವೆಂಬುದ । ಚಿತ್ತವಿಸುವೊಡೆಸರ್ವತೀರ್ಥದ । ಸತ್ವವನು ಸನ್ನಿಹಿತವಾಗವಧರಿಸು ನೀನದನು ॥ ವಿಸ್ತರಿಸುವೆನು ವಿಪ್ರಪಾದವಿ । ಮುಕ್ತವಿಮಳೋದಕವನಾವನು । ನೆತ್ತಿಯಲಿ ಧರಿಸಿದವನವನು ಕೃತಾರ್ಥನಹನೆಂದ॥೬೧॥ ಶರಧಿಯೊಳು ಹದಿಯೋಗನಿದ್ರೆಯೊ । ಳಿರಲು ಭೃಗುವೈತಂದು ಲಕ್ಷ್ಮೀ । ಧರನ ವಕ್ಷಸ್ಥಳವನೊದೆಯಲು ಮುನಿಯ ಚರಣವನು ॥ ಸಿರಿಯುದರದೊಳಗೊತ್ತಿ ಧರಣೀ । ಸುರರ ಮೆರೆದನು ತೀರ್ಥಪಾದವ । ಧರೆಯೊಳಗೆ ಬುಧರಿಂದಧಿಕವಹದೈವವಿಲ್ಲೆಂದ ॥೬೨॥ ಮಾಡುತಿಹ ಯಜ್ಞವನು ಪರರಿಗೆ । ಮಾಡಿಸುವ ವೇದಾಧ್ಯಯನವನು । ಮಾಡುತಿಹತದ್ವಿಷಯದಲಿ ಯೋಗ್ಯರನು ಮಾಡಿಸುವ ॥ ಮಾಡು

ತಿಹದಾನವನು ಲೋಗರು । ನೀತುತಿರಲೊಳಕೊಂಬಗುಣವನು । ಮಾಡಿಕೊಂಡಿಹನೇ ಸಮರ್ಥನು ವಿಪ್ರರೊಳಗೆಂದ ॥೬೩॥ ವೇದಪುರುಷನ ವಿಗ್ರಹದಲಿ ವಿ । ಷಾದವಿಲ್ಲದ ಬಿಸಜಸಂಭವ । ಸಾದಿಯಾದ ಸಮಸ್ತದೇವರು ನೆಲೆವನೆಗಳಾಗಿ ॥ ಸೇದುಕೊಂಡಿಹರಂತು ಕಾರಣ । ವಾದಿಸದೆ ವಿಪ್ರೋತ್ತಮರನಭಿ। ವಾದಿಸುವುದುತ್ತಮವಲೇ ಕೇಳೆಂದ ನಾಮುನಿಪ॥೬೪॥ ಯುವತಿಯರು ಗಾಯಕರು ಕವಿಗಳು। ತವತವಗೆ ಕೈವಾರಿಸುವರಾ । ವವನವನೆ ಮಾವಗಲು ದೂಷಕನಿಹಪರಂಗಳಿಗೆ ॥ ಇವರು ಮೂವರು ನಿಂದಿಸುವರಾ । ವವನವನು ಸರ್ವಜ್ಞನೆನಿಸುವ । ನವನಿಪತಿಚಿತ್ತೈಸು ಧರ್ಮರಹಸ್ಯವಿಸ್ತರವ ॥ ೬೫ ॥ ಜ್ಞಾತವಾವುದಜ್ಞಾತವಾವುದು । ನೀತಿಯಾವುದು ದ್ವೈತವಾವುದ । ದ್ವೈತವಾವುದು ವೈದಿಕಾಂಗದಲಿ ॥ ಖ್ಯಾತಿಯಾವುದಖ್ಯಾತಿಯಾವುದು । ಜಾತಿಯಾವುದಜಾತಿಯಾವುದು । ಭೂತಳದೊಳವನೀಶ ಚಿತ್ತೈಸೆಂದನಾಮುನಿಪ ॥೬೬॥ ಧರಣಿಯಮರರ ಸೇವೆಯನು ವಿ । ಸ್ತರಿಸಿ ಸತ್ಕಾರದಲವರನಾ । ದರಿಸಿ ಬಹುಮಾನವನು ವಿರಚಿಸಿದಾಮಹಾತ್ಮರಿಗೆ ॥ ಎರವಹುದೆ ಸ್ವರ್ಗಾಪವರ್ಗದ । ಸಿರಿಯದೆಂಬುದನರಿದು ನಡವಂ । ಗುಂದೆನಿಸುವದದಾವುದೈ ಹೇಳೆಂದನಾಮುನಿಪ ॥೬೭॥ ಯೋನಿಮುಖವೆಂಬತ್ತನಾಲ್ಕನ । ಹೀನಜನ್ಮಂಗಳೊಳಗುದಯಿಸಿ । ಹಾನಿವೃದ್ಧಿಗಳಿಂದು ಜ್ಞಾನದ ಕಡೆಯಕಣೆಯದಲಿ ॥ ಮಾನವರ ಬಸುರಿನಲಿ ಬಂದ। ಜ್ಞಾತತತ್ವಮರಂಬಂತೆ ತಾ ಕ। ರ್ಮಾನುಗತವಾಗಿಹುದಲೇ ಭೂಪಾಲಕೇಳೆಂದ ॥೬೮॥ ಪಾನಟಿಂ ಸೂಕರನು ಬಧಿರವ । ಮಾನಟಿಂ ಕ್ಷಯರೋಗಿ ಗುರುಜನ । ಹಾನಿಯಿಂದವಕಷ್ಟ ಗರ್ದಟ ಕುಕ್ಕುಟಾನ್ವಯವು ॥ ಹೀನಗತಿಯಿಂದುರುಗ ನಾನಾ । ಯೋನಿಗಳ ಸಚರಾಚರವು ಕ। ರ್ಮಾನುಗತವಾಗುವಯಿಸುವುವವನೀಶ ಕೇಳೆಂದ ॥೬೯॥ ಪರರಪಟುತನವಾದದಲಿ ಮೂ । ಗರವೊಲಿಹ ಪರವಚನದುತ್ಕಟ । ದೊರೆಗೆ ಬಧಿರತ್ವವನು ಪರಗುಣದೋಷದರುಶನವು ॥ ದೊರಕಿದೊಡೆಜಾತ್ಯಾಂಧನೆನಿಸುವ । ಪುರುಷನಾವನವನು ಸಾಕ್ಷಾ । ತ್ಪರಮಪುರುಷೋತ್ತಮನಲೇ ಭೂಪಾಲ ಕೇಳೆಂದ ॥೭೦॥ ಇಷ್ಟಸಂತರ್ಪಣವ ಮಾಡಿ ವಿ । ಶಿಷ್ಟಪೂಜಾಪಾತ್ರರನು ಸಂ । ತುಷ್ಟಿಬಡಿಸಿ ಸಧರ್ಮದಲಿ ರಾಜ್ಯವನು ರಕ್ಷಿಸುತ ॥ ಕೊಟ್ಟವರ ಕೊಂಡವರ ಮತ್ತೊಡ । ಬಟ್ಟವರನನುಜಾತ್ಮಜರನೊಳಗಿಟ್ಟು ಕೊಂಡಿಹುದುಚಿತವದು ಭೂಪಾಲ ಕೇಳೆಂದ ॥೭೧॥ ನುಡಿದುದನು ಪೂರೈಸಿಕಾಲದ । ಕಡೆಯಕಾಣಿಸಿ ಹೋಹವರ ಬೀ। ಳ್ಕೊಡುತ ಹಳೆಯರನಾಪ್ತರನು ಮನ್ನಿಸುತ ತನ್ನವನು॥ ಹಿಡಿದು ಸೇವೆಯ ಮಾಡುವವರನು । ಬಿಡದೆ ನಾನಾತೆರದ ಪದವಿಯ । ಕೊಡುತಲಿಹುದಿದು ನೀತಿ ಚಿತ್ತೈಸೆಂದನಾಮುನಿಪ ॥೭೨॥ ವಿಲಗಸಾಗರವಾಗಿ ದೇಶವ । ಹಿಳಿದು ಹಿಂಡುತ ದಾನಧರ್ಮವ। ನುಳಿದು ದೇವಬ್ರಾಹ್ಮರುಗಳೆನ್ನದೆ ಕಂಡವರ ನೆಳೆದು ॥ ಗಳಿಗೆಸಂಖ್ಯೆಗೆ ದಂಡದೋಷವ। ಕೊಳುತ ಕಡೆಯಲಘೋರಗತಿಗಳೊಳ। ಗಿಳಿದು ಹೋಹುದನೀತಿ ಚಿತ್ತೈಸೆಂದ ನಾಮುನಿಪ ॥೭೩॥ ಯೋನಿಯಲ್ಲದಠಾವುಗಳಲಿ ವಿ । ಯೋನಿಯಲ್ಲದ ವಿಷಯದಲಿ ಪಶು । ಯೋನಿಯಲಿ ಸಂಭೋಗಿಸುವ ಪಾತಕರ ಪರಿವಿಡಿಯ ॥ ಏನಹೇಳಲುಬಹುದು ನರಕವಿ । ತಾನದೊಳಗೋಲಾಡಿ ಬಳಿಕಾ । ಶ್ವಾನಯೋನಿಯೊಳವರು ಜನಿಸುವರೆಂದ ನಾಮುನಿಪ ॥೭೪॥ ಜೀವಪರಮನ ಭೇದವನು ಸಂ। ಭಾವಿಸದೆ ವೇದಾಂತಶಾಸ್ತ್ರವಿ। ದಾವಮುಖವೆಂದರಿಯದೆಯೆ ದಾಸೋಹವೆಂದೆನುತ ॥ ಕೋವಿದರ ಸಂಗವನುಳಿದು ಮಾ । ಯಾವಿಲಾಸದ ನೆಲೆಯ ನೋಡದೆ । ಸಾವುತಿಹನೆ

ದ್ವೈತಿ ಚಿತ್ತ್ರಸೆಂದನಾವುನಿಪ ||೭೫|| ಉತ್ತಮರ ಸಂಗದೊಳಗೋಲಾ | ಡುತ್ತ ಮರ್ವಿಷಯಂಗಳನು ಮುರಿ | ಯೊತ್ತಿ ಸಕಲಚರಾಚರದ ಸುಖದುಃಖವನು ತಾನು || ಹೊತ್ತು ನಡೆಯುತ ಪುಣ್ಯಪಾಪವಿ | ದೆತ್ತಣದು ತನಗೆಂಬಕಾಣಿಕೆ | ಯುತ್ತರೋತ್ತರಸಿದ್ಧಿ ಚಿತ್ತ್ರಸೆಂದನಾವುನಿಪ ||೭೬|| ಪೊಡವಿಯೊಳಗೆ ಪುರೋಹಿತನ ನವ | ಗಡಿಸಿ ಧರ್ಮದ ಬಲದಿ ನಾಕಕೆ | ನಡೆವರಾಯುರ ಹೊಯ್ದಿಳಿಯಲಿಕ್ಕುವರಧೋಗತಿಗೆ || ಕೆಡಿಸುವರು ಶಾಸ್ತ್ರವನು ರಾಷ್ಟ್ರವ | ತಡೆಗಡಿಸಿ ಚತುರಂಗಬಲವನು | ಹುಡಿಹುಡಿಯ ಮಾಡುವರು ನಿರ್ಜರರರಸ ಕೇಳೆಂದ ||೭೭|| ಬಲಿಯ ರಾಜ್ಯ ವಿಭೀಷಣನ ಸಿರಿ | ಜಲನಿಧಿಯ ಗಂಭೀರ ಬಾಣನ | ಬಲುಹು ಹನುಮಾನುವಿನ ಭುಜಬಲ ವೀರರಾಘವನ || ಛಲ ದಧೀಚಿಯ ದಾನ ಪಾರ್ಥನ | ಕಳೆ ಯುಧಿಷ್ಠಿರನೃಪನ ಸ್ಮರಣೆ | ಗಳವಡುವಬದುಕುಳ್ಳೊಡದು ವಿಖ್ಯಾತಿ ಕೇಳೆಂದ ||೭೮|| ಇರುಳುಹಗಲನವರತಪತಿಪು | ಚರಿಯವನು ಮಾಡುತ್ತ ಪರಪುರುಷರನು ನೆನೆಯದೆಪಲವುಸಂತತಿಗಳಿಗೆ ತಾಯಾಗಿ || ಇರುತ ದೇವಬ್ರಾಹ್ಮರನು ತಾ | ನಿರುತ ಸತ್ಕರಿಸುತ್ತಲಂತಃ | ಪುರದಲೆಸೆಯೆ ಗೃಹಸ್ಥೆಯೆನಿಸುವಳರಸ ಕೇಳೆಂದ ||೭೯|| ಮಡದಿ ನಿಜನಿಳಯವನು ಬಿಟ್ಟಡಿ | ಗಡಿಗೆ ಪರಗೃಹದೊಳಗೆ ಬಾಯ್ನನು | ಬಡಿದು ಮನೆಮನೆವಾರ್ತೆಯೊಸ್ನದೆ ಬೀದಿಗಲಹವನು|| ಒಡಲಚೆತ ಪತಿಯೊಬ್ಬನುಂಟೆಂ | ದೆಷು [illegible]ಡದೆ ಟಿಟ್ಟ ಹತ್ತನು | ಹಡೆದೊಡೆಯು ವರ್ಜಿಸುವುದುತ್ತಮಪುರುಷರುಗಳೆಂದ ||೮೦|| ಹುಡಿಯನೋಸುತ್ತ ಮೇಲುವ | ನಡಿಗಡಿಗೆ ಸಲವುತ್ತ ಮೌನವ | ಹಿಡಿಪಥೋವುಯಾಗಿ [illegible] ಕೆಲಬಲನ|| ಬಿಡದೆ ನೋಡುತ ಮೊಗುಳುನಗೆಯಲಿ | ಜಡಿದು ಜಾರುವಜಾರವನಿತೆಯ | ಗೊಡವೆಗೊಳಗಾಗದವರುತ್ತಮಪುರುಷರುಗಳೆಂದ ||೮೧|| ಗುರುವಿನಲಿ ತಂದೆಯಲಿ ತಾಯಲಿ | ಹಿರಿಯರಲಿ ದೈವದಲಿ ಪಾಪದ | ಲಿರುಬಿನಲಿ ಗೋವಿನಲಿ ವರತೀರ್ಥದಲಿ ತನ್ನವನು || ಹೊರೆವಮಾತಾರನಲಿ ಮಂತ್ರದ | ಪರಮಸೇವೆಗಳಲ್ಲಿ ಧರಣೀ | ಸುರರೊಳಂಜಿಕೆ ಹಿರಿದಿರಲುಬೇಕೆಂದನಾವುನಿಪ ||೮೨|| ನೀತಿವಿದನಲ್ಲದಕುಮಂತ್ರಿ | ನೀತವರನಲ್ಲದಪುರೋಹಿತ | ರೀತಕವರಿಂದಾದಪುರುಷಾರ್ಥಂಗಳೆಯ್ದುವವು || ಕಾತರಿಸಿ ಸಮರಾಂಗಣಕೆ ಭಯ | ಭೀತಿಯಹಭೂಭುಜರ ದೆಸೆಯಿಂ | ಬೀತು ಹೋಗದೆ ಸಕಲಸಂಪದವರಸ ಕೇಳೆಂದ ||೮೩|| ಧರ್ಮವಾವುದು ಮೇಣು ಜಗದೊಳ | ಧರ್ಮವಾವುದು ರಾಜಮಂತ್ರದ | ಧರ್ಮವಾವುದು ಮಾರ್ಗವಾವುದಮಾರ್ಗವೆಂದೇನು || ಕರ್ಮವಾವುದು ವಿಧಿತಹಿತ್ತದು | ಷ್ಕರ್ಮವಾವುದದೆಂಬಭೇದವ | ನಿರ್ಮಿಸಾ ನಾಕೆಂದು ಬಿನ್ನಹಮಾಡಿದನು ಭೂಪ ||೮೪|| ಸತಿಸಹಿತ ನಿರಚಿಸಿದಧರ್ಮ | ಸ್ಥಿತಿ ಸಮೃದ್ಧಿಕವಾಗಿ ಸಲುವುದು | ಪತಿಗಳಲ್ಲದೆ ತನ್ನ ಸ್ವಾತಂತ್ರ್ಯದಲಿ ಮಾಡಿದುದು|| ಅತಿಶಯವನೆಯ್ದದು ಕಣಾ ಭೂ | ಪತಿಯೆ ಕೇಳಿಹಪರದಗತಿ ನಿಜ | ಸತಿಯದೆಸೆಯಿಂದಲ್ಲದೇ ಫಲಿಸುವುದು ಹುಸಿಯೆಂದ ||೮೫|| ಅತಿಥಿ ಪೂಜೆಯನುಳಿದು ಜೀವ | ಸ್ಥಿತರ ಧರ್ಮಸ್ಥಿತಿಯನಪಹರಿ | ಸುತ ಬಲದಲೀಯವನಿಯಲಿ ನಿರಿಯಣದ ಕಾಲದಲಿ || ಗತಿಗೆಡಿಸಿಕೊಂಡೊಯ್ದುವೈವ | ಸ್ವತನುನಾಯಕನರಕದೊಳಗ | ದ್ಧತ ಬಹನು ಕುಲಕೋಟಿಸಹಿತವನೀಶ ಕೇಳೆಂದ ||೮೬|| ತಮ್ಮ ಕಾರ್ಯನಿಮಿತ್ತಗರ್ವವ| ನೆಮ್ಮಿದೊಡೆ ಸದ್ಗರ್ವದಿಂದುರೆ | ದೊಮ್ಮಿತಹುದಾಕಾರ್ಯಮರ್ತ್ಯಚರಾಚರಂಗಳಲಿ || ನಿರ್ಮಮತೆಯಲಿ ನಡೆದು ಪಶ್ರುತ | ಲುಮ್ಮಹದಲ್ಯೆದುವವೊಲೌಕುತ | ಕರ್ಮಿಗ

ಳನೊಳಹೊಯ್ದು ಕೊಂಬುದು ಭೂಪ ಕೇಳೆಂದ ॥೮೭॥ ಅರಸ ಕೇಳ್ಳೆ ಮಾರ್ಗಮೂರಾ । ಗಿರುತಿಹವು
ಸಂಪೂರ್ಣದವ ಗುರು । ಪಂಚಯುಪರಿವರ್ತನೆಗಳೆಂಬಿನಿತನತಿಗಳೆದು ॥ ತಿರುಗಬಂದೊಡೆ ನಾಲ್ಕನೆ
ಯ ಮತ । ದೊರಕಲುವವೃದೆ ಕಳೆಗಳನು ಸಂ । ಗುಸುವನರೋತ್ತಮರಿಗವನೀಪಾಲ ಕೇಳೆಂದ ॥೮೮॥
ಕಾದುದಕದಾನ್ನಾನ ಸಿದ್ಧಿಯು । ವೈದಿಕಾಂಗದ ಮಂತ್ರಸಾಧನ । ವೇದಹೀನಂಗಿತ್ತ ಫಲವಾಶ್ರಾದ್ಧಕ
ರ್ಮದಲಿ ॥ ಐದು ದಕ್ಷಿಣೆಗಳೆಂಬಿವು । ಬೂದಿಯಲಿ ಬೇಳಿವನನಿಸ್ಸಿನ । ಹಾನಿಯಿಲ್ಲದೆ ಫಲವನೀಯು
ವು ಭೂಪ ಕೇಳೆಂದ ॥೮೯॥ ಇಹಪರದಗತಿದಾನಧರ್ಮದ । ಬಹಳತೆಗಳನು ತತ್ಸ್ವಭಾವದ । ವಿಹಿತವು
ಣ್ಯದ ಬೆಳವಿಗೆಯು ಫಲವೊಂದು ನೂರಾಗಿ ॥ ಬಹುದು ಸದ್ವಂಶದಲಿ ಜನಿಸಿಹ । ಮಹಿಪನಿರೆ ಲೋ
ಕಾಂತರದ ಸುಖ। ವಹುದು ಸಂತಾನಾಭಿವೃದ್ಧಿಯುನೃಪತಿ ಕೇಳೆಂದ॥೯೦॥ ಚೋರರನು ಕಾಣುತ್ತ ಮ
ರಳಿದು । ಚೋರನೆಂದೊಡೆ ಪತಿತನನು ನಿ । ಷ್ಠೂರತನದಿಂ ಪತಿತನೆಂದೊಡೆ ಸಾಮ್ಯದೋಷವದು ॥
ಸಾರುವುದು ಮಿಥ್ಯೋತ್ತರದಲಿ ವಿ । ಚಾರಿಸದೆ ನುಡಿದವಗಿಮ್ಮಡಿ । ನಾರಕದ ಫಲತಪ್ಪದವನೀಪಾ
ಲ ಕೇಳೆಂದ ॥೯೧॥ ವಿನುತಮಧುಕೈಟಭರ ಮೇದ । ಸ್ಸಿನಲಿ ಮೇದಿನಿಯಾದುದಿದನೀ। ನನುಭವಿಸುವೊ
ಡೆ ಪುಣ್ಯಕೀರುತಿಯೆಂಬ ಸುಮುಳವ ॥ ಹೊನಲಿನಲಿ ತರವಿಡಿದು ಲೇಸಾ । ಗನುಭವಿಸುವುದದಲ್ಲದಿದ್ದೊ
ಡೆ । ಮನುಜಮಾಂಸವ ಭಕ್ಷಿಸಿದಫಲವರಸ ಕೇಳೆಂದ ॥೯೨॥ ತನ್ನದಾನವನಪಹರಿಸಿಕೊಂ । ಡನ್ಯರಿ
ತ್ತುದಕಡ್ಡಬೀಳುವ । ಧನ್ಯರುಗಳರವತ್ತು ಸಾವಿರ ವರುಷ ಪರಿಯಂತ ॥ ಖಿನ್ನವಹವಿಷ್ಠೆಯೊಳು
ಕ್ರಿಮಿಗಳ । ಜನ್ಮದಲಿ ಹರಿಹರಿದು ನೀ। ನಿನ್ನು ಕೊಟ್ಟುದನುಳುಹಿಕೊಂಬುದು ಧರ್ಮವಲ್ಲೆಂದ॥೯೩॥
ಕರಣವುರರೊಳಿತ್ತವಸ್ತುವ । ನಿರಿಸಿಕೊಂಡಿಹ ಮಾಸಮಾಸಾಂ । ತರದೊಳೊಂದಕೆ ನೂರುಗುಣ
ದಲಿ ಕೋಟಿಪರಿಯಂತ ॥ ಬಿಡದಹುದು ದಾನಪ್ರಶಂಸೆಯುನಿರಿಸಿ ಕೊಂಡಿಹೆದಾನನರಕವ । ನೆರಡಕೊಂ
ದೇದಾನ ಕಾರಣವೆಂದನಾಮುನಿಪ ॥೯೪॥ ದ್ಯೂತದಲಿ ಮದ್ಯದಲಿ ಘುಸಕಂ । ಡೂತಿಯಲಿ ನಿದ್ರೆಯಲಿ
ಕಲಹದಿ । ಘಾತಿಯಲಿ ಮೈಥುನದಲಾಹಾರದಲಿ ಬಳಿಸಂದು ॥ ಕೈತವದ ವುದ್ಯೋಗದಲಿ ದು । ರ್ನೀ
ತಿಯಲಿ ಪರಸತಿಯರಲಿ ಸಂ । ಪ್ರೀತಿ ಬಲಿವುದು ಬೆದಕಬೆದಕಲು ಭೂಪ ಕೇಳೆಂದ ॥೯೫॥ ದುಷ್ಕೃ
ತವನೆಸಗುವರು ಫಲದಲಿ । ತಕ್ಕುಲಿಸುವರು ಸುಕೃತವೆಂಬುದ । ಲೆಕ್ಕಿಸರು ತತ್ಫಲವನೇ ಬಯಸುವರು
ಮಾನವರು ॥ ಇಕ್ಕದೆರೆಯದೆ ಬಿತ್ತಿ ಬೆಳೆಯದೆ । ಪುಕ್ಕಟೆಯ ಸ್ವರ್ಗಾದಿ ಭೋಗವು । ಸಿಕ್ಕಲರಿವು
ದೆ ರಾಯ ಚಿತ್ತೈಸೆಂದನಾಮುನಿಪ ॥೯೬॥ ವರಶ್ರುತಿಸ್ಮೃತಿಗಳುಕಣಾ ಭೂ । ಸುರರದೃಷ್ಟಿಗಳಿದರೊ
ಳೊಂದೇ । ಕೊರತೆಯಾಗಲು ಕಾಣೆನಿನಿತುವನೆರಡರರಿವಿನಲಿ ॥ ನಿರುತವಿದು ಜಾತ್ಯಂಧರೆನಿಸುವ ।
ರರಸಕೇಳೀಮಾಂಸದೃಷ್ಟಿಗ । ಳಿರವಲೇ ಸರ್ವತ್ರಸಾಧಾರಣವು ಲೋಕದಲಿ ॥೯೭॥ ವಾಚಿಸದೆ ವೇದಾ
ರ್ಥನಿಚಯವ । ನಾಚರಿಸದಾಲಸ್ಯದಿಂದುತ್ತು । ಕೋಚವಾಗಿ ಪರಾನ್ನಪೂರಿತ ತಪ್ತತನುವಾದ ॥
ನೀಚವಹಭೂಸುರರ ಕರುಳನು । ತೋಚುವಳಲೇ ಮೃತ್ಯುವವನುನಿ । ಶಾಚರನು ದ್ವಿಜನಲ್ಲ
ಚಿತ್ತೈಸೆಂದನಾಮುನಿಪ ॥೯೮॥ ಸರಸಿಜಾಸನವಿಷ್ಣುನಾಮ । ಸ್ಮರಣೆಯಲಿ ಶ್ರುತಿಮೂಲವಾ
ಕ್ಯೋ । ತ್ಕರುಷೆಯಲಿ ಭೂತಕ್ಕೆ ಹಿತವಪ್ಪನಡವಳಿಯನ್ನರಿದು ॥ ಪರವಚನವನು ತ್ರಿಕರಣದೊ
ಳು । ಚ್ಚರಿಸಲಾಗದು ಸರ್ವದಾ ಸ । ತ್ಪುರುಷರೆಭಿಮವಲ್ಲ ಚಿತ್ತೈಸೆಂದನಾಮುನಿಪ ॥೯೯॥

ಲೋಕಸಮ್ಮತವಾವುದದನು ನಿ। ರಾಕರಿಸುವವರುಗಳು ತಾವೇ। ನಾಕವಾಳರೆ ಜಗಕೆ ತಮ್ಮನದಾರು ಬಲ್ಲವ
ರು ॥ಬೇಕು ಬೇಡೆಂಬುದಕೆ ತಾವವಿ। ವೇಕಿಗಳು ಮೊದಲಿಂಗಪಾಪ್ರಮಾ । ಣೀಕರುಗಳವರಲ್ಲ ಚಿತ್ರ್ಯಸೆಂದ
ಸಾಮುನಿಪ ॥೧೦೦॥ ಉತ್ತಮರುಗಳ ನಿಂದಿಸುವರು। ವ್ಯರ್ತ್ತರಾಗಿಯಧರ್ಮಕೋಟಿಯೆ । ನಿತ್ಯವಿಧಿ
ತಮಗಾಗೆ ಧರ್ಮದತಾರತಮ್ಯವನು ॥ ಎತ್ತಲಿಂದಲಿಯುದೆ ಜಗಕ್ಕೆ ಜ । ಡತ್ವರಾಗಿಪವೇದಬಾಹ್ಯರ ।
ಮೃತ್ಯುದೇವತೆ ಮುರಿದು ಮೋಪದೆ ಬಿಡುವಳೇ ಯೆಂದ ॥೧೦೧॥ ಲೋಕದೊಳಗಣ ಪುಣ್ಯಪಾಪಾ।
ನೀಕವನು ಯಮರಾಜಸಾಲಯ । ಪಾಕವಾಳಗರುಹುವರು ಹಟನಾಲ್ಕುಮುಖವಾಗಿ ॥ ನಾಲ್ಕುಕಡೆ
ಯಲಿ ಕವಿದು ಬರಿಸುವ।ರೌಕಿ ದಿನಟನಪಲ್ಲಿ ಗರ್ವೋ । ದ್ರೇಕವಲಿ ಪ್ರಮರೆದು ಕೆಡಬೇಡೆಂದಸಾಮುನಿ
ಪ ॥೧೦೨॥ ಚಕ್ರಿಯೊಬ್ಬನು ಹತ್ತುಕಡಿಕರ। ಲೆಕ್ಕವಂತಾಚಕ್ರಹತ್ತರ । ಲೆಕ್ಕದೊಳಗಾಧ್ವಜಕಸಾಧ್ವಜಿ
ಹತ್ತರಸಮಾನ॥ ಮಿಕ್ಕವೇಸಿಗೆ ವೇಸಿಹತ್ತರ। ಲೆಕ್ಕವೊಬ್ಬರಸಂಗೆ ಪಾತಕ। ವೊಕ್ಕಲಿಕ್ಕುವುದರಸುತನ ಸಾ
ಮಾನ್ಯವಲ್ಲೆಂದ ॥ ಬಲುಕರಿಸಿ ಭೂಮಿಯೊಳಗೊಂದಂ । ಗುಲವನೊತ್ತಿದವಂಗೆ ಪಶುಸಂ । ಕುಲದ
ಲೊಂದೇಗೋವನಪಹರಿಸಿದ ದುರಾತ್ಮಂಗೆ ॥ ಅಳುಪಿ ಕನ್ಯಾರತ್ನದೊಳ । ಗೊಬ್ಬಳನು ಭೋಗಿಸಿದಂಗೆ
ನರಕದೊ । ಳುಳಿಹವಲ್ಲದೆ ಬೇರೆಗತಿಯಿಲ್ಲೆಂದ ಸಾಮುನಿಪ ॥೧೦೪॥ ದಾನವಿರಹಿತರಾಗಿ ಜನಿಸಿದ ।
ಮಾನವರು ದಾರಿದ್ರರದರಿಂ । ಹೀನಸುಕೃತಿಗಳಾಗಿಯವರಿಂ ಘೋರತರನರಕ ॥ ಆನರಕದಿಂ ಮರಳಿ
ಪಾತಕ । ಯೋನಿ ಮರಳಿ ದರಿದ್ರವದು ತಾ । ನೇನವಾಡಿಯು ಬೆನ್ನಬಿಡದವನೀಶ ಕೇಳೆಂದ ॥೧೦೫॥
ಪಾಕಶಾಸನನೈದಿ ವೃತ್ರನ । ಥಾಕಾಕೆಡಿಸಿ ದಧೀಚಿಯಸ್ಥಿಯ । ಲೌಕಿ ಹೊಯ್ಯಲು ದಾನತನವನು ನೀ
ರೊಡಲ ಗೆಡೆಯೆ ॥ ತೂಕಗುಂದಿ ಜಲಾಭಿದೇವತೆ । ಯಾಕಪರ್ಣಯ ಕರುಣದಲಿ ದ । ಭರ್ಾಕೃತಿಯ
ಕೈಕೊಂಡುದವನೀಪಾಲ ಕೇಳೆಂದ ॥೧೦೬॥ ಆದಿಯಲಿ ಕಮಲಾಸನನು ಮಧು । ಸೂದನನು ಮಧ್ಯದ
ಲಿ ಮೇಲಣ । ಾದಿಯಲಿ ಗಿರಿಜೇಶನಿರೆ ತ್ರಿಮೂರ್ತಿಮಯವಾಗಿ ॥ ಕಾದುಕೊಂಡಿಹರೈದೆ ಲೋಕ
ವ । ನೈದೆ ದ ಾಂಕುರದ ಮಹಿಮೆಯ । ಭೇದವನು ಬಣ್ಣಿಸುವನಾವನು ಭೂಪಕೇಳೆಂದ ॥ ಬೆರ
ಳ ಮೊದಲ ಿ ಭೂಸುರರು ನಡು । ಬೆರಳೆಡೆಗಳಲಿ ಪಾರ್ಥಿವರು ತುದಿ । ಬೆರಳೊಳಗೆ ವೈಶ್ಯರುಗಳೀಕ್ರ
ಮದಲಿ ಪವಿತ್ರವಿದು ॥ ಧರಸಬೇಹುದು ದರ್ಭಾಕರಾಂ । ಬುರುಹದಲಿ ದಿನದಿನದ ಸಂಧ್ಯಾಂ । ತರ
ದ ಸಮಯದಲರಸ ಚಿತ್ರ್ಯಸೆಂದಸಾಮುನಿಪ॥೧೦೭॥ ಪರಿದಪ್ಪಿದಪಿನ ಸುಕಲ್ಪಿತ । ಧಾರೆಯುದುಗಿದ
ದಾನ ದರ್ಭಾಕಾರ ವಿರಹಿತವಾದ ಸಂಧ್ಯಾಪಾದಸಾದಿಯಲಿ॥ ಪಾದಪೆಮ್ಮದಶೌಚ ವಿನಯದಿ । ಹಾರವಿ
ಲ್ಲದ ಪೂಜನೆಗಳುಪ। ಕಾರವಹುದೇ ರಾಯ ಚಿತ್ರ್ಯಸೆಂದಸಾಮುನಿಪ ॥೧೦೯॥ ಹರನಕೊರಳಿಂ
ಗಾಭರಣವಾ । ದುರಗ ಪವನಾಶನವೆನಿಸುವಂ । ತರಸ ನಿನ್ನಯ ಬಸುರ ಬಂದೇನಹರು ಪಾಂಡವ
ರು ॥ ಧರೆಯನಾಳುವ ಭಾಗ್ಯವಿಲ್ಲದೆ । ನರಪಶುಗಳಾದರು ಕಣಾ ನೀ । ನಿರಲವರಿಗೀ ವಿಧಿಯೆ
ಚಿತ್ರ್ಯಸೆಂದಸಾಮುನಿಪ ॥೧೧೦॥ ದೇವತಾಸ್ಥಾನದಲಿ ವಿಪ್ರಸ । ಭಾವಳಯದಲಿ ರಾಜಪುರುಷರ।
ಸೇವೆಯಲಿ ಗುರುಸದನದಲಿ ನದಿಯಲಿ ತಟಾಕದಲಿ ॥ ಗೋವುಗಳ ನೆರವಿಯಲಿ ವರವೃಂ । ದಾವ
ನದೊಳುಪಹತಿಯ ಮಾಡುವ । ದಾವಗುಣ ಗರುವರಿಗೆ ಚಿತ್ರ್ಯಸೆಂದಸಾ ಮುನಿಪ ॥೧೧೧॥ ದೆ
ಸೆಗಳೇ ವಾಸಸ್ಸು ರಾಜ್ಯ । ಪ್ರಸರಣವು ನಿರ್ಲಜ್ಜೆ ಜಡೆರಂ । ಜಿಸುವಧೂಳೀಧೂಸರದ ಗಂಗಾಧರನ

ವೋಲು ॥ ಎಸೆವಸುತಲ್ಲದಿರೆ ಸಲೆಸ್ತ್ರೀ । ಭಿಸುವುದೇ ಸಂಸಾರವೆಂಬುದು। ವಸುಧೆಯೊಳು ಪುಣ್ಯಾಧಿಕರುಗಳಿಗಲ್ಲದಿಲ್ಲೆಂದ ॥ ೧೧೨ ॥ ಗುರುಸುತನ ವೋಲಾಯು ನೀಲಾಂ । ಬರನವೋಲು ಬಲ ದಶರಥನವೋ । ಲ್ಪಿರಿ ನದೀಜನವೋಲು ಶೌರ್ಯವು ರಘುಪತಿಯವೋಲು ॥ ಅರಿವಿನಾಶನ ನಹುಷನವೊಲ್ಪೈ । ಸಿರಿಯು ಮಾರುತಿಯವೊಲು ಗತಿ ಸಂ । ವರಿಸುವುದು ಶಿವನೊಲಿದವರುಗಳಿಗಲ್ಲದಿಲ್ಲೆಂದ ॥೧೧೩॥ ಕ್ಷಿತಿಯವೊಲು ಪಾವನತೆ ಕುರುಭೂ । ಪತಿಯವೋಲಭಿಮಾನ ಲಕ್ಷ್ಮೀ । ಪತಿಯವೊಲು ಸತ್ಕೀರ್ತಿವಿದುರನವೋಲು ವಿಜ್ಞಾನ ॥ ಕ್ಷಿತಿಯವೊಲುಸ್ಥಿರತೆಸುಹೃತ್ಸಂ । ತತಿಯವೊಲುಪರಿಣಾಮ ಕುಂತೀ । ಸುತರವೊಲು ಕ್ಷಾತ್ರಿಕವು ತ್ರೈಲೋಕದೊಳಗಿಲ್ಲೆಂದ ॥೧೧೪॥ ಗಗನದಗಲದಲೊಲಿವದೃಷ್ಟಿಯೊ । ಳೊಗುವಕೀಲಾಲವ ಸಮುದ್ರವ । ಹೊಗುವನದಿ ನಾನಾಪ್ರಕಾರದ ರೂಪುಗಳಲೆಸೆವ ॥ ಜಗದುಗೆಯು ದ್ರೌಪದ ಪದಾಂಬುಜ । ಯುಗಳದರ್ಶನೆಪೊಡನೆಗಳಿವು । ಜಗದುದರಕನ ಮುಟ್ಟಿಪೇ ಭೂಪಾಲಕೇಳೆಂದ ॥೧೧೫॥ ಜಗದೊಳಗೆ ವಾರಾಹವಿಷ್ಣು । ಸ್ಥಳದೊಳಗೆ ವಾಮನನು ವನಸಂ । ಕುಳದೊಳಗೆ ನರಸಿಂಹನಾಗಿಯೆ ಭಕ್ತನಿಕರವನು ॥ ಸಲಹುತಿಹನೊಪ್ಪಿಯು ಜಗತ್ರಯು । ದೊಳಗೆ ಹೊರಗೆಂದೆನ್ನದೆಲ್ಲಿಯು । ಜಲರುಹಾಕ್ಷನು ಕೃಷ್ಣಕೇಶವನಲ್ಲದಿಲ್ಲೆಂದ ॥೧೧೬॥ ಕತ್ತಲೆಯು ಕಾಲಾಟ ಸೂರ್ಯನ । ನೆತ್ತುವುದು ದುಷ್ಕರ್ಮಕೋಟಿಗ । ಳೆತ್ತ ಮುಟ್ಟುವವೈ ಮಹಾಪುರುಷರನು ಖಗಪತಿಯು ॥ ತತ್ತುದೇ ವಿಷ ಕೃಷ್ಣರಾಯನ । ಭಕ್ತರುಗಳನುಭವಿಸುವುದು ತಾ । ಪಥ್ಯವೇ ಜೀವರಿಗೆ ನೀಹೇಳೆಂದನಾಮುನಿಪ ॥೧೧೭॥ ಅರುಹಬಾರದು ಮುಂದೆ ಬಹುದಿನ । ಬಿರಿಸು ನೀನೆಚ್ಚತ್ತು ನಡೆವೈ । ಮರೆಯುಟರು ನಿಸ್ವಾತ್ಮಜರ ಪ್ರೇಮಾನುಬಂಧದಲಿ ॥ ಬರಿದಹುದು ಬ್ರಹ್ಮಾಂಡನೀನದ । ನರಿಯೆ ಪೋಲಣಿತಾಗುಬಾಗಿನ । ಹೊರಗೆ ದೈವಾಧೀನವಾಗಿಹುದೆಂದನಾಮುನಿಪ ॥೧೧೮॥ ತೆರಹುಗುಡದೆ ಧರಿತ್ರಿಯೊಳಗೀ । ಚರದದೈತ್ಯಕಹಸ್ರಕೋಟಿಯು । ನಿರಿದು ಭೂಭಾರವನಿಳುಹಿ ನಿರ್ಜರರ ಮಗುಳಿವನು ॥ ಪರಿದುಹಾಯಿಕಿ ಭಕ್ತರನು ನೆರೆ । ಮೆರೆಯಲೋಸುಗ ಜನಿಸಿದನಲಾ । ಹರಿಯರಿಯಲಾ ಶ್ರೀ ಕೃಷ್ಣರಾಯನು ಮನುಜನಲ್ಲೆಂದ ॥ ಆತನಾಪಾಂಡವರ ಹರಿಬವ । ನಾತು ಪಾರ್ಥನ ರಥಕೆ ಸಾರಥಿ । ಸೂತನಾದನು ನಿಮಗೆ ಜಯವೆಲ್ಲಿಯದು ಭೂಪತಿಯೆ ॥ ಭೂತಳವನೊಪ್ಪಿಸುವುದವರಾ । ರಾತಿಯನು ಪರಿವೊಕ್ಕು ಬದುಕುವು । ದೀತತುಕ್ಷಣವಲ್ಲದಿದ್ದೊಡೆ ಕೆಡುವಿರಕಟೆಂದ ॥೧೨೦॥ ಜಲಧಿಯೊಳು ದುಗ್ಧಾಬ್ಧಿ ತೀರ್ಥಾ। ವಳಿಗಳೊಳು ಸುರನದಿ ಮುನೀಶ್ವರ । ರೊಳಗೆ ವೇದವ್ಯಾಸಭಾವೃತಿಗಳೊಳು ಹನುಮಂತ॥ ಜಲರುಹಾಕ್ಷನೆ ದೈವದೊಳು ಕೇ। ಳುಳಿದಧರಣೀಪಾಲರೊಳಗ। ಗ್ಗಳೆಯನೃಪಧರ್ಮಜನು ಚಿತ್ತೈಸೆಂದನಾಮುನಿಪ ॥೧೨೧॥ ಈಪರಿಯ ಬೋಧೆಯಲಿ ನೃಪನನು । ತಾಪವನು ಮಾಣಿಸುತ ಬುದ್ಧಿ । ವ್ಯಾಪನವ ಧೃತರಾಷ್ಟ್ರಭೂಪನ ಚಿತ್ತದಲಿ ನಿಲಿಸಿ ॥ ಕಾಪಥಂಗಳ ಬಿಡಿಸಿ ತತ್ವಕ । ಲಾಪವಿಮಲಜ್ಞಾನವಮರಿಯವ । ರೂಪತಾನೆಂಬಂತೆ ಸೂರ್ಯೋದಯವ ಕಾಣಿಸಿದ ॥೧೨೨॥ ಧರಣಿಪನ ಸಂತೈಸಿದನು ಮುನಿ । ವರನು ತನ್ನಾಶ್ರಮಕೆ ತಿರುಗಿದ । ನುರುತರಪ್ರೇಮದಲಿ ಧೃತರಾಷ್ಟ್ರವನೀಶ್ವರನು ॥ ಹರಿಯುವಮಹಾಸಂಪದದನರಲಿ । ಹೊರೆದು ಹೊಂಪುಳಿವೋಗಿ ಲಕ್ಷ್ಮೀ । ಧರನ ನೆನೆವನು ರಾಯಗದುಗಿನ ವೀರನಾರಯಣ ... ... ॥೧೨೩॥

ಅಂತು ಸಂಧಿ ೪೪ಕ್ಕೆ ಪದ ೩೫೪೪ಕ್ಕಂ ಮಂಗಳಮಸ್ತು.

ಐದನೆಯ ಸಂಧಿ.

|| ಸೂಚನೆ || ಬೀಳುಕೊಂಡುದು ರಜನಿ ಕುರುಭೂ | ಪಾಲನುಪ್ಪವಡಿಸಿದನೋಲಗ | ಶಾಲೆಯಲಿ ನೆರಹಿದನು ಸಭ್ಯರನಾಪ್ತ ಮಂತ್ರಿಗಳ ||

|| ಪದ || ಕೇಳುವೆವು ಕರೆ ಸಂಜಯನನವ | ರೋಲಗದ ವೈಸಿರಿಯನೆಂದು ನೃ | ಪಾಲನಟ್ಟಿದ ದೂತರೊಡನೈತಂದ ರೋಲಗಕೆ || ಮೇಳವಿಸಿದನು ಕುರುನೃಪತಿ ಜನ | ಜಾಲವನು ಲೇಸೆನುತ ಪಾಂಡುನೃ | ಪಾಲಕರ ಸಿಂಗ್ಥಕವೆಲ್ಲಿಯದೆನುತ ನಸುನಕ್ಕ ||೧|| ಬಂದು ವೈಯಿಕ್ಕಿದನು ಕುರುನೃಪ | ವೃಂದವನು ಗಾಂಧಾರಿಯನುಜ ಯಮ | ನಂದನನು ಬೆಸಗೊಂಡು ಕಳುಹಿದನುಚಿತವಚನದಲಿ || ಎಂದು ಬಳಿಕಿನ ರಾಜಕಾರ್ಯವ | ನಂದು ಬಿನ್ನೈಸಿದನು ಚಿತ್ತೈ | ಸೆಂದು ಧೃತರಾಷ್ಟ್ರಂಗೆ ದುರ್ಯೋಧನಗೆ ಕೈಮುಗಿದು ||೨|| ಜೀಯ ಬಿನ್ನಹವಿಂದು ಪಾಂಡವ | ರಾಯನೈಶ್ವರ್ಯವನು ಸಾವಿರ | ಬಾಯ ಸರ್ಪನು ಹೊಗಳಲೆಳವಲ್ಲೆನ್ನ ಪಾಡೇನು || ನಾಯಕರ ಕಡುಹುಗಳ ನವರನ | ರಾಯತನವನು ನಿಬರಿಗೆ ಕಮಲದ | ಳಾಯತಾಕ್ಷನ ಕರುಣದಳತೆ ವಿಚಿತ್ರತರವೆಂದ ||೩|| ಓಲಗದೊಳುಬ್ಬೆದ್ದು ನುಡಿಯಲಿ ಹೂಳಿ ತಮತಮಗೆನ್ನ ಜರೆದರು | ಕಾಳಗಕೆ ಕೈಗಟ್ಟಿ ಪಿಂಡೆದ್ದೋಡಿತವನಿಪರು || ಮೇಲೆ ಸಂತೈಸಿದನು ಧರ್ಮನೃ | ಪಾಲನಲ್ಲಿಂಬಳಿಕ ಮುರಹರ | ನಾಲಯಕೆ ಪವಿತ್ರದೊಳರ್ಜುನನೆನ್ನ ಕರೆಸಿದನು ||೪|| ದೇವನಿದ್ದನು ಸತ್ಯಭಾಮಾ | ದೇವಿಯರ ನಸುಮಂಗಿಯರ್ಜುನ | ದೇವಸಂಕದಮೇಲೆ ಸಿರಿಪದ ಪಂಕಜವನೀಡಿ || ನಾವು ಬರಲೆಮಗುಚಿತವಲಿ ಸಂ | ಭಾವನೆಯ ಮಾಡಿದನು ಸಮಗಿ | ನ್ನಾವುದನು ನೇಮಿಸಿದಿರೆನಲಿಂತೆಂದನಸುರಾರಿ ||೫|| ಎಮಗೆ ಸರಿಯಿತ್ತಂಡದಲ್ಲಿರು | ಮಮತೆ ಬೇರೊಬ್ಬರಲಿ ಪಕ್ಷ | ಭ್ರಮೆಯ ಮಾಡವು ಹಿತವ ಬಯಸುವೆನೆರಡು ಸಂತತಿಗೆ || ಕಮಲಮುಖಿಯುಟಿಪಿತಿದು ಲಕ್ಷ್ಮೀ | ರಮಣ ಲಕ್ಷ್ಮೀರಮಣ ಲಕ್ಷ್ಮೀ | ರಮಣ ಯೆಂದೊದರಿದೊಡೆ ಸಂಜಯ ಸೊಂದೆನಾನೆಂದ ||೬|| ಕಾಪ್ಪದೈ ಗೋವಿಂದ ಸಲಹೈ | ದೇವಕೀಸುತ ಗಂಡನೈವರ | ಭಾವಬೆಟ್ಟಿತು ನೀನಲ್ಲೈ ದೇಸಿಗರ ದೈವವಲೈ || ದೇವ ಕೆಟ್ಟೆನು ಕೆಟ್ಟೆನೈ ಕರು | ಣಾವಲಂಬನದಿಂದ ತಪ್ಪೆಯೈ | ಜೀವನವನೆಂದೊದರಿದಳು ಹಂಗಿಗನು ತಾನೆಂದ ||೭|| ಭಂಟನಹೆ ಭಕುತರಿಗೆ ನೆನೆವರು | ನಂಟರೆಮಗೊಲಿದಾತೆ ಹೊಗಳಿದ | ರೆಂಟುಮಡಿ ಹಿಗ್ಗುವೆವು ಪೆಚ್ಚೆವು ತಕ್ಕಸಾಧಕರ || ಉಂಟು ಪಾಂಡವರೈವರಲಿ ಬಲು | ನಂಟುತನ ಮರೆಯೋ ತಕೈವರ | ಕಂಟಕರು ನಮಗಾಪಕಂಟಕರೆಂದು ಹಲನುಡಿವ ||೮|| ನೆನೆವುದೆಂದನು ಪಾರ್ಥನಾತಾ | ವನದೊಳಗೆ ಗಂಧರ್ವರಲಿ ಬಂ | ಧನವನೀಗೋಗ್ರಹಣದಲಿ ಮಾಡಿದ ಮಹಾಯಸವ || ವನಜವದನೆಯ ಬಯಸಿದೊಡೆ ಬಿಲ್ಲಿನಲಿ ಬಡಿವಡೆದುದನು ಕೌರವ | ಜನಪ ಮರೆಯದಿರಲಾಗದೆಂದರಸಂಗೆ ಹೇಳೆಂದ ||೯|| ಧೀರ ಭೀಮನ ಗದೆಯ ಹೊಯ್ಲಿನ | ಭಾರಣೆಯ ಸಮ್ಮತುಳಚಾಪದ | ಸಾರಶಸ್ತ್ರಾವಳಿಯ ಮಳೆಗಾಲದ ಮಹಾದ್ಭುತವ || ವೀರನಕುಲನ ಸಾತ್ಯಕಿಯ ಶರ | ಸಾರವನು ಸಹದೇವಮತ್ಸ್ಯರು | ದಾರತೆಯ ನಿಮ್ಮರಸ ನೆನೆದಿಹುದೆಂದನಾಪಾರ್ಥ ||೧೦|| ಹಿಂದೆ ಜೂಜಿನ ಸಭೆಯೊಳಗೆ ಸಾ | ವೆಂದಮಾತುಗಳುಂಟು ತಾವದ | ಮುಂದೆ ನೋಡಲಿ ಕರ್ಣಶಕುನಿಸುಯೋಧನಾದಿಗಳು || ಯೆಂದು ನೆನೆವುದು ದೇಶಕಾ

ಲವ । ಹಿಂದುಗಳೆಯವು ಬೇಗ ಮಾಡುವು । ದೆಂದು ಬಿನ್ನಹಮಾಡಹೇಳಿದನರ್ಜುನನು ನಿಮಗೆ ॥ ತೊಡೆಗಳಿಗೆ ಸುಕ್ಷೇಮವೇ ನಿ । ನ್ನೊಡೆಯಗವನೊಡಹುಟ್ಟಿದನ ವೃ । ಜಡಿದುದೇ ಪಾಳಿಸದರನಿಬರಿಗಹುದು ರಕ್ತಜಲ ॥ ಒಡನೆ ಹುಟ್ಟಿದನೂರ್ಮರಲಿ ಪೃ । ಗಡಿಪರೇ ಬೆಸಗೊಂಬುದಂಜದೆ । ಯೊಡಯರಿಗೆ ಹಣೆಗೊಂಡೆ ಹೇಳೆಂದಟ್ಟಿದನು ಭೀಮ ॥೧೨॥ ಸಾಕು ಸಂಜಯ ಗಳಹದಿರು ಫಡ । ನೂಕಿವನನಾರಲ್ಲಿಗಟ್ಟಿದ । ರಾಕುತಾರರ ಬಯಲಗ್ರಹಗರ್ಜನೆಯ ಗರ ಹೊಡೆದು ॥ ತೇಕಿ ತಳಕೆಳತಾದನೀಯವಿ । ವೇಕಿಸಾಗರನೆಲೆನೃಪತಿ ಜಗ । ದೇಕವೀರನು ಕರ್ಣತಾನಿರೆ ಸಂಧಿಯೇ ಕಂದ ॥೧೩॥ ಮಂದಿಯಲಿ ಪೈಮರೆದು ಬಾಹಿರ । ನೆಂದವಮಾತನು ರಾಜಸಭೆಯಲಿ । ತಂದು ಹರಹುವನಿವನು ಶಿಷ್ಟನೆ ಜಗದಭಂಡನಲಾ ॥ ಇಂದುಮಾಳಿಯನೊಂದು ಬಾಗೆ । ಬಂದುಮುಂದನು ಮಾಡುವೆನು ತಾ । ಮಂದಿಕುಂತೀಮಕ್ಕಳಿದಿರೇ ತನಗೆ ಹೇಳೆಂದ ॥೧೪॥ ಭಂಡನೇ ಸಂಜಯನು ಲೋಕಪ । ಭಂಡನೀನೆಲೆಕರ್ಣನಿನಗಾ । ಪಾಂಡವರಪರಿಯಂತನೇ ನಿನಗವರ ಸೇನೆಯಲಿ ॥ ಗಂಡನೊಬ್ಬನು ಸಾಕು ಕೆದರುವೆ । ಖಂಡಗರ್ವದ ಮಾತನಿನ್ನನು । ದಿಂಡುವವನು ಮುನಿದೊಡರ್ಜುನನೆಂದನಾಭೀಷ್ಮ ॥೧೫॥ ಖುಲ್ಲನಿವನೈಕರ್ಣನಿವನೇ । ಬಲ್ಲಿದನು ತಾನೆಂದು ಬಿಟವಿವ । ನಲ್ಲಿ ನಂಬುಗೆಮಾಡದಿರು ಮರುಳೇ ಮಹೀಪತಿಯೆ ॥ ಇಲ ನೋಡರ್ಜುನಗೆ ಸತಿ ನರ । ರಲ್ಲಿ ನಿರ್ಜರರಲ್ಲಿ ಪನ್ನಗ । ರಲ್ಲಿ ಕೈಮಾಂಗಳೆ ಸಾವೆಂದೊರೆದನಾಭೀಷ್ಮ ॥೧೬॥ ಮುಳಿಯದಿರು ಗಾಂಗೇಯನೆಂದುಮಾಪರಮಮಂತ್ರವು ಪಾರ್ಥನನು ಸಂ । ಗರದೊಳಾನುವರಿಲ್ಲ ಕೇಳಮರಾಸುರಾಳಿಯಲಿ ॥ ಮರುಳರಾವಮಹೋಕ್ಷನುಡಿಗಳ । ಗರುವರಭಿಮತವಲ್ಲ ಸಂಧಿಗೆ । ಕೊರಳು ಕೊಳಿಸುವುದುಚಿತವೆಂದನು ದ್ರೋಣನರಸಂಗೆ ॥೧೭॥ ಹುರುಳುಗೆಡಿಸುವಿರಾವು ನುಡಿದೊಡೆ । ಕರಗಿ ಕುಂತೀ ಮಕ್ಕಳೆಂದೊಡೆ । ಹರಹಿಕೊಂಬಿರಿ ಡಿಂಬವೆಮ್ಮಲಿ ಜೀವವವರಲಿ ॥ ಭರತಸಂತತಿಯಲ್ಲಿ ಕೆಲಬರು ಸುರರು ಕೆಲಬರು ನರರೆ ಸಾಕಂ । ತಿರಲಿ ಸಮರದೊಳೆಮ್ಮ ನೋಡೆಂದನು ಸುಯೋಧನನು ॥೧೮॥ ಜೀವ ಮಗನೇ ಕೃಷ್ಣರಾಯನು । ರೂಢಿಸಿದ ಕಟ್ಟಾಳು ಕೆಲಕೆಲ । ರಾಡುವರು ಸಾಕ್ಷಾತಲಕ್ಷ್ಮೀಕಾಂತ ಪುಯೆಂದು ॥ ಸೂಟಿಕೊಂಡಹನವರಮಾತನು । ಕೇಡನವರಿಗೆ ಮೊದ್ದಲೀಯನು । ನಾಡನೊಪ್ಪಿಸು ಮಗನೆಯೆಂದನು ನಗುತ ಧೃತರಾಷ್ಟ್ರ ॥೧೯॥ ಮರುಳುಗಳಲಾ ಬೊಪ್ಪನವರೇ । ಮುರಹರನ ಹುಲಿಯೆಂದು ಮುನ್ನವ । ನುಬಿಹೆನು ನೀವಂಜಬೇಡಿ ನಿಮಗಾಗದವಸಾನ ॥ ಗುರುನದೀಸುತಮುಖ್ಯರಿರಲೀ । ಕುರುಕುಲಕೆ ಕೇಡಹುದೆ ಕೋಲುವೊಡೆ । ಸುರಪತಿಯ ಸುತನಳವೆಯೆಂದನು ಕೌರವರರಾಯ ॥೨೦॥ ಭಾರ ಹೆಚ್ಚಿದೊಡೊರಲಿ ಭೂಮಿ । ನಾರಿಬಿನ್ನಹಮಾಡಿದೊಡೆದೈ । ತ್ಯಾರಿ ಬಿಜಯಂಗೈದನವನಿಗೆ ಮನುಜವೇಷದಲಿ ॥ ಭೂಭುಜನುಜರನೊರಸಿದನು ಕೈ । ವಾರ ಬಳಿಕರ್ಜುನನ ಕೈಯಲಿ । ಕೌರವನ ಕೊಲಿಸುವನು ಸಾವಿನ್ನಂಜಲೇಕೆಂದ ॥೨೧॥ ಕಾವನಾತನೆ ಕೊಲುವನಾತನೆ । ಸಾವೆನಾತನ ಕೈಯಬಾಯಲಿ । ನೀವು ಪಾಂಡವರೊಡನೆ ಸುಖದಲಿ ರಾಜ್ಯಮಾಡುವುದು ॥ ಸಾವನಾನಂಜಿದೊಡೆ ಬದುಕುವ । ನೀವು ಚಿಂತಿಸಲೇಕೆ ನಿಮ್ಮನು । ಕಾವನೈ ಕರುಣದಲಿ ಗದುಗಿನವೀರನಾರಯಣ ॥

ಅಂತು ಸಂಧಿ ೫ ಕ್ಕೆ ಪದ ೩೭೬ ಕ್ಕೆ ಮಂಗಳಮಸ್ತು.

ಆರನೆಯ ಸಂಧಿ.

॥ ಸೂಚನೆ ॥ ಸಮರದನುಸಂಧಾನದಲಿ ಸಂ । ಭ್ರಮಿಸಿ ಶೌರಿ ಸಮೀರಸುತನಲಿ । ಸಮತೆಯನು ಸೇರಿಸಿದನಂದು ಸಮಗ್ರಸೂಕ್ತಿಯಲಿ ॥

॥ಪದ॥ ಕೇಳು ಜನಮೇಜಯಧರಿತ್ರೀ । ಪಾಲ ಧರ್ಮಜನಹಿತ ಮಂತ್ರಿಯ । ಬೀಳುಕೊಟ್ಟನು ಬಂದನಸುರಾರಾತಿಯಿದ್ದೆಡೆಗೆ ॥ ಮೇಲಣನುವಿನ್ನೇನು ಲಕ್ಷ್ಮೀ । ಲೋಲ ಕರುಣಿಸು ಕೌರವಕ್ಷಿತಿ । ಪಾಲಕರಲೆಮಗೇನು ಘಟಿಸುವುದೆಂದು ನೃಪ ನುಡಿದ ॥೧॥ ಕ್ಷಮೆಗೆ ಸೇರುವರಲ್ಲ ಮೂರ್ಖರು । ಕುಮತಿಗಳು ಮುಂದರಿಯದವರ । ಕ್ರಮವ ನೆಗಳಿದೊಡಳಿವುದನ್ವಯದಮಳಕೀರ್ತಿಗಳು ॥ ನಮಗೆ ಹದನೇ ನಿನ್ನ ಸಂಧಿಯೊ । ಸಮರವೋ ಚಿತ್ತೈಸ ಬೇಹುದು । ಕಮಲಲೋಚನಯೆಂದು ಬಿನ್ನೈಸಿದನು ಯಮಸೂನು ॥೨॥ ಯೇನುನಿನ್ನಭಿಮತವು ವರಸಂ। ಧಾನವೋ ಸಂಗ್ರಾಮವೋ ನಯ । ವೇನು ಮನದೊಳರಿಯೊಳಿರಿಸದೆ ಹೇಳು ನಿಶ್ಚಯವ ॥ ನೀನೊಲಿದಹದನಾವುದದನೊಲಿ । ದಾವುಘಟಿಸುವೆವೆಂದು ಕುಂತೀ । ಸೂನುವನು ಬೆಸಗೊಂಡನಸುರವಿರೋಧಿ ನಸುನಗುತ ॥೩॥ ಅಳಿವವೊಡಲಿದು ಅವನಿಸಾಗರ। ವುಳಿಯಲುಳಿವುದು ಕೀರ್ತಿಸೋದರ । ರೊಳಗೊಳಗೆಹೊಯ್ದಾಡಿ ಕೆಟ್ಟರು ಯೆಂಬದುರಿಯಶದಾ ॥ ಹಳಿವುಹೊರುವುದು ದೇವ ನುಡಲಾ । ನೆಲನನಾಕೌರವನ ಕೈಯಲಿ । ಕೆಲವುನಗರಿಯ ಕೊಡಿಸಿ ನಮ್ಮನು ಸಂತವಿಡಿಯೆಂದ ॥೪॥ ವರಕುಶಸ್ಥಳವನು ವೃಕಸ್ಥಳ । ಪುರವನಾವಂತಿಯನು ಕೌರವ । ಧರಣಿಪಾಲನಲೀಸಿಕೊಡುವುದು ವಾರಣಾವತವ ॥ ಶರಧಿಮೇಲೆಯೊಳೈದನೆಯಪುರ । ವರನ ನೊಲಿದುದ ಕೊಡಲಿ ಮನವು । ತ್ಸರವ ಮರೆದೋಲೈಸುವೆವು ಧೃತರಾಷ್ಟ್ರನಂಘ್ರಿಗಳ ॥೫॥ ನೀವು ಬಿಜಯಂಗೈದು ಸಂಧಿಯ । ನಾವಪರಿಯಲಿ ಘಟಿಸಿ ಕುರುಭೂ । ಪಾವಳಿಯೊಳೆಮ್ಮಿರವು ಸಂಭವಿಸುವವೊಲೆಸಗುವದು ॥ ಲಾವಕರ ನುಡಿಗಳಲಿ ಕೆಡುವುದು । ಕೋಪಿದರ ಮನವವರಮೇಲೆಮ । ಗಾವಮನಮುನಿಸಿಲ್ಲ ಸಂಧಿಯ ಘಟಿಸಿ ಸಾಕೆಂದ ॥೬॥ ಎನೆ ಮುರಾಂತಕನಳುಕಿ ಯಮನಂ । ದನನ ನುಡಿ ಸಂಧಾನದಲಿ ಸಂ । ಜನಿಸಿತಾದೊಡೆ ಕಾಣೆನವನಿಯಹೊರೆಗೆ ಹರಿವುಗಳ ॥ ಮನದೊಳನುಸಂಧಾನವಂತಕ । ತನುಜನಲಿ ತೊಳಸಾಯ್ತು ತೋಟಿಯ । ನೆನಹು ತಾನೇನೆನುತ ಚಿಂತಿಸುತಿರ್ದನಸುರಾರಿ ॥೭॥ ಎಲೆಕೃತಾಂತಜ ವೈರಿಭೂಮಿಪ ಕುಲಕೃತಾಂತ ಸರಾಗನಹೆ ನಿ । ರ್ಮಳಿನಧರ್ಮದಲಾಸುಯೋಧನನಧಿಕಕಲ್ಮಷನು ॥ ನೆಲವ ಕೊಡಲರಿಯನು ವೃಥಾಕ । ಕ್ಕುಲಿತೆಯಲ್ಲದೆ ಕಾಣೆನಿದರಲಿ । ಫಲವನೆನುತಸುರಾರಿ ನುಡಿದನು ಧರ್ಮತನಯಂಗೆ ॥೮॥ ಅರಸನಭಿಮತವಿಂದು ಸಂಧಿಗೆ । ಮರಳಿತೆಲೆ ಪವಮಾನಸುತ ನಿ । ನ್ನರಿತವಾವುದು ಮನವ ವಂಚಿಸಬೇಡ ಹೇಳೆನಲು ॥ ಧರಣಿಪತಿ ತಪ್ಪುವನೆ ಕರ್ಕಶ । ಭರದ ಕದನದಲೇನುಫಲ ಸೋ । ದರರ ವಧೆಗೊಡಬಡುವನಲ್ಲಸುರಾರಿ ಕೇಳೆಂದ ॥೯॥ ಹಗೆಯ ನಮ್ಮವರೊಳಗೆ ಯೆದೆಗಿ । ಚ್ಚುಗಳ ಖುಲ್ಲಕುಠಾರರಪನಂ । ಬುಗೆಯ ಬೆಳಸಿದರವು ಪುರಾಕೃತಕರ್ಮದವಶೇಷ ॥ ಬಗೆಯದವಮಾನವನು ಕೌರವ । ರಗಡುಮಾಡಿದರೆಲಿಬಚಿತ್ತದ । ದುಗುಡವಿಂದೆಮಗಿಲ್ಲ ಸಂಧಿಯ ರಚಿಸಿ ಸಾಕೆಂದ ॥೧೦॥ ಎಲೆಮಹಾದೇವಾಯ್ತುಹಾಲಾ । ಹಲಸುಧಾರಸವುಕ್ಕಿದುರಿಯ । ಗ್ಗಳಿಸಿ ಶೀತಳವಾಯ್ತು ಸಿಡಿಲಾಟೋಪ ನಯವಾಯ್ತು ॥ ಕೊಳುಗುಳಕೆ ಪವಮಾನನಂದನ । ನಳುಕಿದನು ಮಝು

ಮಾಯೆ ಕುಂತೀ । ಲಲನೆ ಹೆತ್ತಳು ಸುತರನೆಂದನು ಶೌರಿ ನಸುನಗುತ ॥೧೧॥ ಈತನಭಿಮತವಿದು ಜಗದ್ವಿ । ಖ್ಯಾತಸಾಹಸಿ ಪಾರ್ಥ ಹೇಳ್ಕ್ರಿ । ಮಾತನಾಳಾಪವನು ಕೇಳುವೆ ಶ್ರುತಿರಸಾಯನವ ॥ ಭೀತಿಬೇಡಿನ್ನೆನಲು ಬೇರೆ । ಮಾಗೇತರಭಿಮತಸೇನ ಬೆಸಸಿದೊ । ಡಾತುಕೊಂಬೆನು ತಿರದಲೆಂದನು ಪಾರ್ಥ ವಿನಯದಲಿ ॥೧೨॥ ನಕುಲನೀ ಹೇಳನುಮತವನಿ । ನ್ನಾಕೃತಿ ಸಮರವೊ ಸಾಮವೋ ಮೇ । ಣ್ನಾಕರಮಂತ್ರವನರುಹು ನೀನಿನ್ನಂಜಬೇಡೆನಲು ॥ ಉಕುತಿ ನಮಗಿನ್ನೇನುಭಯರಾ । ಜಕವ ಸಂತೈಸುವುದು ಬೇರೆ । ಮ್ಮಾಕುತಿಯೆಲ್ಲಿಯದೆಂದನಾವಾದ್ರೇಯನೊಲಿಸಲಿ ॥೧೩॥ ಆವುದಭಿಮತವೇನುಹದಸಹದೇವ ನೀ ಹೇಳೆನಲು ಜಿನ್ನಹ । ದೇವ ಸೇರದು ಸಂಧಿ ಸಂಗರಪೆಮಗೆ ಸೇರುವದು ॥ ಆವವಿಧದಲಿ ಸಮರವನೆ ಸಂ । ಭಾವಿಸುವುದೆನೆ ನಗುತ ವರರಾ । ಜೀವನಾಭನು ಕಳುಹಿದನು ದ್ರೌಪದಿಯೆಡೆಗೆ ಚರರ ॥೧೪॥ ದೇವಿ ಚಿತ್ತೈಸುವುದು ವರವಸು । ದೇವಸುತನಟ್ಟಿದನು ಸಂ । ಭಾವಿಸುವುದುರಾಯರಲಿ ಸಂಧಾನಸಂರಂಭ ॥ ನೀವು ಬಿಜಯಂಗೈವುದು ಚಿತ್ತದೊ । ಳಾವಹುದನಾಹದನಸಾರಾ । ಜೀವನಾಭಾದಿಗಳಿಗರುಹುವುದೆಂದರಾಚರರು ॥೧೫॥ ಹಿನುಹವನೇನೆಲವೊ ವರಸಂ । ಧಾನಸೇ ಕೌರವರೊಳಿಹುಸು । ಮ್ಮಾನನೇ ಸತಿಗಳಿಗೆ ಪಾಪಿಗಳಿಂದರೇ ಸತಿಯು ॥ ದಾನವಾಂತಕನೆಸಗುವನ ತ । ಪ್ಪೇನುತಪ್ಪೇನೆನುತ ನಸುನಸು । ಧ್ಯಾನನಾಂಬುಜವದನೆ ಬಂದಳು ಕೃಷ್ಣನೋಲಗಕೆ ॥ ಭ್ರೂಲತೆಯ ಸುರಚಾಪವುರುಕೇ । ಶಾಳಿಗಳ ಕಾರ್ಮುಗಿಲಪಾಂಗದ । ಸಾಲುಕುಡಿಮಿಂಚುಗಳ ನೂಪುರರವದಮೊಳಗುಗಳ ॥ ಆಲತಾಂಗಿಯು ಗಮನಪ್ರಮಳೆ । ಗಾಲದಂತಿರೆ ಧಾರ್ತರಾಷ್ಟ್ರಕು । ಲಾಳಿ ನಿಲುವುದೆ ಪವನಜನ ಸಂಪ್ರತಿಯಸೇರುವೆಗೆ ॥೧೭॥ ಕವಿದಚಿತ್ರಾವಳಿಯ ಪಟ್ಟೆಯ । ವಿವಿಧನೆಲಸುಗ್ಘಡಣೆಯಲಿ ವರ । ಯುವತಿ ಬಂದಳು ಸುಯಿಯರೊಯ್ಯಾರದಲಿ ನೃಪಸಭೆಗೆ ॥ ಸವಿಬಳಿಪಕದೊಳಗೆ ಮಿಂಚಿನ । ಗವಿಸಹಿತ ಮುಂಮೇಘುಬಂದು । ದ್ಭವಿಸಿತೆನೆ ಪಂಡಿಗೆಯನಿಳಿದಳು ಹೊಕ್ಕಳೋಲಗವ ॥೧೮॥ ಖಲೆಸವಿಸಾರಕುಮಾರಸಂಪ್ರತಿ । ಗೆಳಸಿದ್ದ ಕಲಿನಕುಲವ ಕುಲಬಲಿ । ಕಲಸಿದ್ದ ಕೈವಾರವಾದುದೆ ಕೌರವೇಂದ್ರನಲಿ ॥ ಕಲಿಸಿದ್ದೆ ಕೃಷ್ಣಂಗೆ ನೀಡಿಯ । ಬಳಸಿದ್ದೆ ಬಹುವಿಘವಸರಕಪಟ । ಕೆಳಸಿದ್ದೆ ಶತಕುಲವನೆಂದನಿಲಜನ ನೋಡಿದಳು ॥೧೯॥ ಬೇದಬಿಟ್ಟವನೇ ಮಹೀಪತಿ । ನಾಡೊಳ್ಳೆದೂರುಗಳನವಗಲಿ । ಮಾಡುವಾತನು ಕೃಷ್ಣನೆ ಸಂಧಾನವನು ನಿಮಗೆ ॥ ಕೇಡುಗನ ಕೌರವನೃಪಾಲನ । ಕೂಡಿಬದುಕುವ ಭೀಮಸೇನನೆ । ರೂಢಿಸಿತಲಾ ನಿಮ್ಮ ಸಿರಿ ಸೋದರರ ಸೇರುವೆಗೆ ॥೨೦॥ ಯತಿಗಳಾಬಿರಿ ನೀವ್ಪರೋಕ್ಷ । ಚ್ಯುತರಲೇ ಬಳಿಕೇನು ಧರ್ಮ । ಜ್ಞಾತೆಯು ನೆಲೆಗಳನವಮನವೆರಗುವುವೆ ಕೌರವಕೆ ॥ ಕ್ಷಿತಿಯಪಾಲಿಸುವುದು ವಿರೋಧಿ । ವ್ಯತಿಕರವ ಬಿಡಿಸುವುದು ಕುಂತೀ । ಸುತರು ಕೌರವನೃಪರೊಡನೆ ಸುಖದಲಿ ರಾಜ್ಯಮಾಡುವುದು ॥೨೧॥ ಸೋಲಗೆಲವೇ ಕೌರವರ ಸಂ । ಪಾಳಿಯೊಳು ಸೋದರರು ನೀವ್ ಪ್ರಾಂ । ಚಾಲರಾವೇ ಹೊರಗು ನಿಮ್ಮೊಳು ಸಲುಗೆಯೇಕೆಮಗೆ ॥ ಮೇಳವೇ ಸಿರಿ ಘಟಿಸಿತಮು ಜನ । ಜಾಲಹೆಂಡಿರಪೂರ್ವವೇ ಕ್ಷಿತಿ । ಪಾಲಕರು ನೀವಾಗಲೆಮಗದು ಪರಮಪರಿಣಾಮ ॥೨೨॥ ಭೀಮಬಲವಾರಾತಿಸೇನಾ । ಭೀಮ ಕುರುಕುಲಕುಸುಮಮಾರ್ಗಣ । ಭೀಮಮರದ್ವೈಮಾನಿನಿಯ ಮಾನಾಪಹಾನಿಗಳ ॥ ರಾಮನಬಲೆಗೆ ಕುದಿದಘನಸಂ । ಗ್ರಾಮವನು ನೀಕೇಳಿದರಿಯಾ । ಪ್ರೇಮದಲಿ ನೋಡೆನ್ನನೆಂದಳು ದ್ರೌಪದೀದೇವಿ ॥೨೩॥ ಧರೆಗೆ

ಕಟ್ಟಭಿಮಾನ ಹೆಂಡಿರ । ಹರಿಬವಾಹರಿಬದಲಿ ಕೆಡಹುವ । ದರಿಯನವಗಡಿಸಿದರೆ ಸಾವುದು ಪಂಥವುಳ್ಳ ರಿಗೆ ॥ ಸುರನರೋರಗರೊಳಗೆ ನಿಮ್ಮ । ವರಿಗೆ ಸರಿಯಿಲ್ಲಬಲೆಯೊಬ್ಬಳ । ಹರಿಬದಲಿ ಹಂಗಾದಿರೆಂಬಪದೆಸೆಯನಾನುವಿರಿ ॥೨೪॥ ಮುಂದಲೆಯ ಹಿಡಿದೆಳೆದು ಸಭೆಯಲಿ । ತಂದು ಸೀರೆಯ ಸುಲಿದೊಡವದಿರ । ಮುಂದೆ ಮೌನದೊಳಿದ್ದರಲ್ಲದೆ ಪತಿಗಳುಸುಂದರ ॥ ಅಂದು ನೀ ಹಿಂದಿಕ್ಕಿಕೊಂಡುದ। ನಿಂದುಮರದ್ಯೆ ಸಂಧಿಗೋಸುಗ । ಮುಂದುವರಿದ್ಯೆ ಕೃಷ್ಣಯೆಂದಳು ದ್ರೌಪದೀ ದೇವಿ ॥೨೫॥ ತನಯರೈವರ ವೀರಸಹದೇ । ವನುಘಟೋತ್ಕಚನೀ ಸುಭದ್ರಾ । ತನೆಯನೆಮ್ಮಯತಂದೆ ಮೂರಕ್ಷೋಹಿಣೀಸೇನೆ ॥ ಇನಿಬರುಂ ಕಾದುವರು ದುಶ್ಶಾ । ಸನನ ರಕುತವ ಸುರಿದು ಕುರುಕುಲ । ವನವ ಸುಡುವರು ನಿಮ್ಮ ಹಂಗೇಕೆರದಳಿಂದುಮುಖಿ ॥೨೬॥ ವರಸತಿಯು ಬಿಸುಸುಯ್ಲ ಗಾಳಿಯೊ । ಳುರಿ ಚಡಾಳಿಸಿ ರೋಷಮುಖದು । ಬ್ಬರದೊಳೌಡೊತ್ತಿದನು ಹಿಡಿದನು ಖತಿಯನಹಿತರಿಗೆ ॥ ತರುಣಿ ಸ್ಫುರಿಸುಸ್ಫುರಿಸಿನ್ನೀಸುರಿವಕಂಬನಿಗಳಿಗೆ ಶತಸಾ। ವಿರಮಡಿಯ ಕಂಬನಿಯ ಸುರಿಸುವೆ ಹಗೆಯಹೆಂಡಿರಲಿ॥೨೭॥ ಉರಿಹೊಗುವ ವಿೂಸೆಗಳ ಬೆರಳಲಿ । ಮುರುಹಿ ವಾಮದಕರದಿ ತರುಣಿಯ । ಕುರುಳ ಸಂತೈಸಿದನು ಕಿಡಿಕಿಡಿವೊಗ ಖ್ಯಾತಿಯಲಿ ॥ ನರಕಮರ್ದನ ಕೇಳು ಕೌರವ । ನರಿಗಳಿದಿರೇ ಕೀಳುವೆನು ಕುಲ । ಗಿರಿಗಳನು ತೊಡೆವೆನು ಕೃತಾಂತನ ಭಾಳದಕ್ಕರವ ॥೨೮॥ ಯಮಸುತನ ಹರುವೆಂತುಟಿಂ । ತಾಕ್ರಮಕೆ ಮೊಗದಿರುಹಿದೆನು ಬಳಿಕೀ । ಕಮಲವದನೆಯ ಹರಿಬವೆನ್ನದು ಪತಿಗಳಿನಿಬರಲಿ ॥ ಎಮಗೆ ಸಂಪ್ರತಿಯಿಲ್ಲಮನಘನ । ಸಮರವೇ ಸರ್ವತ್ರಕೋಪ । ಶ್ರಮಕೆ ರಿಪುರುಧಿರಾಂಬುಹನನವೆ ವಿಪುಳಫಲವೆಂದ ॥೨೯॥ ಕೆಡಹಿ ರಿಪುವನು ಕರುಳದಂಡೆಯ । ಮುಡಿಸುವೆನು ಮಾನಿನಿಗೆ ರಕುತವ । ಕುಡಿಯಲೆರೆವೆನು ಶಾಕಿನಿಯರಿಗೆತತ್ಸಹೋದರರಾ ॥ ನಡದು ಪ್ರಥಿಮೆಯ ಮಾಡಿ ಮುರರಿಪು । ಕೊಡಿಸು ಸಾಕ್ಕೆ ದೂರನಿವರಿಗೆ । ತಡೆಯದಾನೆರಡೂರ ಕೊಂಬೆನು ಕೌರವೇಂದ್ರನಲಿ ॥ ... ಸಂಧಿ ... ॥೩೦॥

ಅಂತು ಸಂಧಿ ೬ ಕ್ಕೆ ಪದ ೩೦ಕ್ಕಂ ಮಂಗಳಮಸ್ತು.

ಏಳನೆಯ ಸಂಧಿ.

॥ಸೂಚನೆ॥ ದುರಿತವಿಪಿನಕೃಶಾನು ಯದುಕುಲ । ವರಕುಶೇಶಯಭಾನು ನಿಜಪದ । ಶರಣಜನಸುರಧೇನು ಹೊಕ್ಕನು ಹಸ್ತಿನಾಪುರವ ॥

ಪದ॥ ದೇವ ಸಂಧಿಯನೊಲಿದು ಮಾಡುವು । ದಾವು ಮುಖದಿರುಹಿದೆವು ಯಿೂಸಹ । ದೇವ ನೀ ಸಾತ್ಯಕಿಯುಧಾಮನ್ಯುತ್ತ ಮೌಂಜಸರು ॥ ಭಾರವೆಮ್ಮದು ಬಳಿಕಲರ್ಜುನ । ದೇವಧರ್ಮಜನಕುಲರೆಂಬುದ । ನಾವು ಮಿಸುಕುವರಲ್ಲ ಚಿತ್ತೈಸೆಂದನಾಭೀಮ ॥೧॥ ಕೆಲರು ಸಂಪ್ರತಿಗೊಲಿವರಿತ್ತಲು । ಕೆಲರು ವಿಗ್ರಹಕೆಳಸುವವರಿದ । ರೊಳಗೆ ನಿರ್ಮಳವಲ್ಲದಿರೆ ನೃಪಕಾರ್ಯವೆಂತಹುದು ॥ ತಿಳಿಯ ಹೇಳವನೀಶ ಪರಮಂ । ಡಲಕೆ ಪಯಣವ ಮಾಡುವೆವು ನಾ । ವಳುಕಿದವರಲ್ಲೆನಲು ಕೃಷ್ಣಂಗರೆಸನಿಂತೆಂದ॥೨॥

ವಿದಿತವೈದೂರಗಳ ಕೊಟ್ಟೊಡೆ । ಹದುಳವಿಡುವುದು ಮುರಿದರಾದೊಡೆ । ಕದನವನೆ ಕೈಕೊಳ್ವುದುಚಿತಾನುಚಿತವನುವರಿದು ॥ ಹದನ ನೀನೆ ಬಲ್ಲೆ ಸಾಕಿ । ನ್ನಿದು ನಿಧಾನವು ಬಗೆಯಲೆಮ್ಮ । ಭ್ಯುದಯ ನಿಮ್ಮಾಧೀನವೆಂದನು ಧರ್ಮನಂದನನು ॥೩॥ ಪಯಣವನು ನಿಶ್ಚೈಸಿ ದನುಜಾ । ರಿಯನು ಬೀಳ್ಕೊಂಡವನಿಪತಿ ಪಾಳೆಯದೊಳಗೆ ಸಾರಿಸಿದನಗ್ಗದಮಂಡಲೀಕರಿಗೆ॥ನಯದೊಳಾವರುದಿವಸ ಮಂಗಳ । ಮಯಮುಹೂರ್ತದ ಜೋಯಿಸರ ಜೋ । ಕೆಯಲಿ ನಿರ್ಗಮನಿರುತನಾದನು ಕೃಷ್ಣನೊಲವಿನಲಿ ॥೪॥ ಮೊರೆಯೆ ದುಂದುಭಿಶಂಖಕಹಳಾ । ವರಮೃದಂಗಾದಿಗಳು ಭೂಸುರ । ಸುರಭಿಗಳ ಬಲವಂದು ದಧಿದೂರ್ವಾಕ್ಷತಾವಳಿಯಾ ॥ ಧರಿಸಿ ಧರಣೀದೇವರನು ಸ । ತ್ಕರಿಸಿ ಕರತಳದಿಂದ ನಾಸಿಕ । ದೆರಲ ಚಂದ್ರೋದಯವನೀಕ್ಷಿಸಿ ದೇವ ಹೊರವಂಟ ॥೫॥ ಘನಬಳಾಹಕಸೈನ್ಯಸುಗ್ರೀ । ವನನು ನಿರ್ಮಳ ಮೇಘಪುಷ್ಪನ । ನನುವಿನಲಿ ಹೂಡಿದನುದಾರುಕ ಹೇಮಮಯರಥವ ॥ ಧನುವಶಸ್ತ್ರಾಸ್ತ್ರವು ಸುದರ್ಶನ । ಕನಕಕವಚಕೃಪಾಣವನು ಸ್ಯಂ । ದನದೊಳಿಳುಹೆಂದಸುರರಿಪು ಸಾತ್ಯಕಿಗೆ ನೇಮಿಸಿದ ॥೬॥ ಇವಂಗವದಿರು ಸಟ್ವನೇ ಮುನಿ । ವವರುಸಾವಿವರವರು ಮತ್ತಂ। ತವರಿಗವನಿಯನೀಸಿಕೊಡುವುದು ನಮ್ಮಭರವಸಿಕೆ ॥ ಅವಗಡಿಸಿದೊಡೆ ಕಾದುವುದು ಕೌ । ರವರು ಖುಲ್ಲರು ರಥಗೊಳಗೆ ಕೈ । ದುವನು ತುಂಬೆಂದಸುರರಿಪು ಸಾತ್ಯಕಿಗೆ ನೇಮಿಸಿದ ॥೭॥ ತಳಿತಸಸ್ನಾಹದಲಿ ಸಾರಥಿ । ಸುಳಿಸಿದನು ಹೊಂದೇರನಭ್ರಕೆ । ತಳಿತವಮಳಚ್ಛತ್ರಚಾಮರಸಿತಪತಾಕೆಗಳು ॥ ಅಳುಕೆನೆಲನಕ್ಷೋಣಿಬಲವಿ । ಟ್ಟಳಿಸಿ ನಡೆದುದು ರಥಕೆ ದಾನವ । ಕುಲದಿಶಾಪಟಕೃಷ್ಣ ಬಿಜಯಂಗೈದ ನೊಲವಿನಲಿ ॥೮॥ ಕಳುಹುತ್ತೈತಂದಖಿಳ ಪಾಂಡವ । ಬಲಕೆ ನೇಮವ ಕೊಟ್ಟು ಧರ್ಮಜ । ಫಲುಗುಣನ ನಿಲಿಸಿದನು ಸಹದೇವನನು ನಕುಲನನು ॥ ಕಳುಹಿದನು ನೀ ಮರಳೆನಲು ಬೆಂಬಳಿಯಲನಿಲಜನೈದಿಹಗೆಯಲಿ । ಕಲಹಪನು ಮಸೆಯೆಂದು ನಂಬುಗೆಗೊಂಡು ಮರಳಿದನು ॥೯॥ ದೇವಿಯರು ನೀನ್ಮರಳಿಯೆನೆರಾ । ಜೀವನಾಭನಹೊರಗದ್ರೌಪದದೇವಿ ಬಂದಳು ನೊಸಲಚಾಚಿದಳಂಘ್ರಿಕಮಲದಲಿ ॥ ಸ್ಥಾವರಕೆ ಜಂಗಮಕೆ ನೀನೇ । ಜೀವಜೇಷ್ಟಕನವದಿರಂತ । ರ್ಭಾವವನು ನೆರೆಬಲಿಯಲಾಗದು ಸಂಧಿಕಾರ್ಯದಲಿ ॥೧೦॥ ಖಳರು ಯೆಮ್ಮನ್ನತಿಯ ಕೀಲನು । ಕಳಚಿ ಕಳೆವರು ಮರಳೆಮಾಡುವ । ರಳುಕಿದರು ತನ್ನವರು ಪತಿಗಳೆ ಪರಮವೈರಿಗಳು ॥ ಹಳಿವ ನೀನೆ ಬಲ್ಲೆನ್ನೀನೆ । ನ್ನಳಿವ ನೀನೆ ಬಲ್ಲೆ ಹಿರಿದಾ । ಗಳಲಿದೆನು ಸಲಹೆಂದು ಕಂಬನಿದುಂಬಿದಳು ತರಳೆ ॥೧೧॥ ಏಳುತಾಯೆ ಸರೋಜಮುಖಿ ವಿಪಿ । ನಾಲಯದೊಳತಿನವದೆ ನಿನ್ನವ। ರಾಳಿಗೊಂಡಂದವನು ಬಲ್ಲೆನು ನಿನ್ನ ಹರಿಬದಲಿ॥ ಕಾಳಗವನೇ ಬಲಿದು ತಹೆ ನಿವ ।ರೇಳಿಲವ ಮಾಡಿದೊಡೆ ರಿಪುಗಳ । ಸೀಳಿ ಕರುಳನು ಮುಡಿಸದಿಹೆನೇ ನಿನ್ನ ಕಬರಿಯಲಿ ॥೧೨॥ ದೇವಕಿಯ ಮೇಲಾಣೆ ವರವಸು । ದೇವನಂಘ್ರಿಗಳಾಣೆ ಮನುಮತ । ದೇವನಾಣೆ ನಿಧಾನವನು ಕೇಳಬಲೆ ನಿನ್ನಾಣೆ ॥ ನಾವುಸಂಧಿಯನೆವದಲವದಿರ । ಭಾವವನು ಕಲಿಮಾಡಿ ಕೋಪವ । ತೀವಿ ಸಂಧಿಯ ಮುರಿದುಬಹೆವಿದನಂಬು ನೀನೆಂದ ॥೧೩॥ ಮರಳಿದಳು ತರಳಾಕ್ಷಿ ಮುರರಿಪು । ಬರುತಲಾಬಟ್ಟೆಯಲಿ ಕಂಡನು । ವರಭರದ್ವಾಜ್ಯಾಖ್ಯ ಗೌತಮ ಕಣ್ವ ಮುನಿವರರ ॥ ಉರಗಮಾಲಿಮತಂಗಗರ್ಗ್ಯಾಂ । ಗಿರಸನಾರದ ಶುಕಪರಾಶರ । ಪರಶುರಾಮಶ್ವೇತಕೇತುಪ್ರಮುಖ ಮುನಿವರರ ॥೧೪॥ ಮುನಿವರರನುಪಚರಿಸಿದನು ಹ । ಸ್ತಿನಪು

ರಿಗೆ ಸಂಗಾತಬಹೆವೆಂ । ದೆನಲು ಬರಹೇಳಿದನು ಸಕಲಮಹಾತಪೋಧನರ ॥ ಘನಕುಶಸ್ಥಳಪುರದಲೆಡೆ
ಗೈ । ದನು ಸುಯೋಧನನಲ್ಲಿ ಗಟ್ಟಿವ । ವಿನುತದೂತರು ಬಿನ್ನವಿಸಿದರು ಮುರಹರನ ಬರವ ॥೧೫॥
ಕೇಳಿದನು ಧೃತರಾಷ್ಟ್ರಸಾಗ ಕೃ । ಪಾಳುವಿನ ಗಮನವನು ಚಿತ್ತವ । ಹೂಳಿ ಹೆಚ್ಚಿದ ಹರುಷದಲಿ
ಯುಬ್ಬೆದ್ದನಡಿಗಡಿಗೆ ॥ ಹೇಳಿದನು ವಿದುರಂಗೆ ಭಂಡಾ । ರಾಲಯದೊಳುಳ್ಳಮಳಮೌಕ್ತಿಕ । ಜಾಳಿ
ಗೆಯು ಪೆಟ್ಟಿಗೆಯೊಳಾಯಿಸುವರಸುರತ್ನಗಳಾ ॥೧೬॥ ಎಲೆವಿದುರ ಕೇಳೈಸುಯೋಧನ । ಸುಳಿಯೆ
ಸಕಲಮಹಾಪ್ರಧಾನರು । ನಳಿನನಾಭನನಿದಿರುಗೊಳಲಿ ಕೃತಾರ್ಥರಾದವರು ॥ ಹೊಳಲುಗುಡಿತೋರ
ಣದಲೆಸೆಯಲಿ । ಕಳಸಕನ್ನಡಿಸಹಿತ ನಡೆಯಲಿ । ನಳಿನವದನೆಯರೆಂದು ನೇಮಿಸಿದನು ಮಹೀಪಾಲ
॥೧೭॥ ತೆಗೆ ಸುವಸ್ತುವನೀಯದಿರು ಹರಿ । ಹಗೆಕಣಾ ಕುಂತೀಕುಮಾರರು । ಹಗೆಗಳೇ ಮನ್ನಿಸಿದರೆಂ
ದುಳುಹುವನೆ ಮುರವೈರಿ ॥ ನಗರಿಗಾತನು ಬರಲಿಯಾದವ । ನಗಡತನಕೌಷಧಿಯ ಬಲ್ಲೆನು । ಬಿಗಿದು
ಕೆಡಹುವೆನೆಂದು ನುಡಿದನು ಕೌರವರರಾಯ ॥೧೮॥ ಖಾತಿಗೊಂಡನು ಭೀಷ್ಮನೆಲೆಕಡು । ಪಾತಕನೆ ನೀ
ಕೃಷ್ಣನನು ಬಿಗಿ । ವಾತನೇ ಬಳಿಕೇನು ಬಲ್ಲೆನು ನಿನ್ನ ಸಾಹಸವ ॥ ಈತನುಡಿದೀಮಾತಕೇಳಲು ।
ಪಾತಕವು ಬಹುದೆಂದು ಗಂಗಾ । ಜಾತನೋಲಗದಿಂದ ಬಂದನು ತನ್ನ ಮಂದಿರಕೆ ॥೧೯॥ ಪುರವ ರ
ಚಿಸಿದರು ದಯದಲಿ ಬಿ । ತ್ತರ ಮಿಗಲು ಗಾಂಗೇಯಗೌತಮ । ಗುರುವಿದುರಶಲ್ಯಾದಿಸುಜನರು ಬಂ
ದರಿದಿರಾಗಿ ॥ ತರುಣಿಯರು ಕೆಂದಳಿರ ಕಲಶದ । ಕರತಳದ ಗರುವಾಯಿಯಲಿ ಪಂ । ಕರುಹನಾಭನನಿ
ದಿರುಗೊಂಡರುವಿವಿಧವಿಭವದಲಿ ॥೨೦॥ ಹೊಳಹು ಮಿಗೆ ದೂರದಲಿ ಗರುಡನ । ಹಳವಿಗೆಯು ಕಂಡ
ಖಿಳಜನವಂ । ಜುಳಿಯನಿಟ್ಟದ ಭಾಳದಲಿ ಪರಿಶುದ್ಧಭಾವದಲಿ ॥ ನಳಿನನಾಭನ ದಿವ್ಯಮೂರ್ತಿಯ ।
ಲಲಿತಕಾಂತಿಯ ಕಡಲೊಳಗೆ ನೆರೆ । ಮುಳುಗಿದುದು ಪರಜನದ ಕಣ್ಣುಮನವೊಂದುನಿಮಿಷದಲಿ॥೨೧॥
ಮಂದಿವ್ಯಯಿಕ್ಕಿತು ಮುರಾಂತಕ । ನಿಂದು ಮನದೊಲವಿನಲಿಗಂಗಾ । ನಂದನದ್ರೋಣಾದಿಗಳನೆತ್ತಿ
ದನು ಕರುಣದಲಿ ॥ ಮಂದಿರದಸುಕ್ಷೇಮಕುಶಲವ । ನಂದು ಕೇಳಿದು ವೀಳೆಯವನಾ । ಮಂದಿಗಿತ್ತ
ನು ದೇವ ಬಂದನು ಹಸ್ತಿನಾಪುರಿಗೆ ॥೨೨॥ ಗಿಳಿಯು ತುಂಬಿಯು ಹಂಸೆಗಳ ಕೋಗಿಲೆಯು ಕೊಳವಕ್ಕಿ
ಗಳ ಕೊಂಚೆಯು । ಕೊಳಲುವಕ್ಕಿಯು ಜಕ್ಕವಕ್ಕಿಯು ನವಿಲುಪಾರಿವವಾ ॥ ಕಳರುತಿಯ ಕರ್ಣಾಮೃತದ
ತನಿ । ವಳೆಯ ಕರೆದುದು ಯಾದವೇಂದ್ರನ । ಬಲದಕಿವಿಗಳಲಿಭಪುರಿಯ ಹೊರವಳಯದುದ್ಯಾನ॥೨೩॥
ನಸುಬಿರಿದಪರಿಪಕ್ವದಾಡಿಮ । ವಸರದೊಳಗರವಟ್ಟಿಗೆಯ ದರ । ಹಸಿತಪಂಕಜದಳದ ಮಕರಂದದತ
ಟಾಕದಲಿ ॥ ರಸಭರಿತಖರ್ಜೂರಫಲಸಂ । ಪ್ರಸರಸತ್ರವನೆಸಗಿಯುಪವನ । ವೆಸೆದುದೈ ಧಾರ್ಮಿಕನ
ವೊಲು ಯದುರಾಯನಿದಿರಿನಲಿ ॥೨೪॥ ಎಳೆಲತೆಯನೆರಗಿಸುತ-ಮಲತರೆ । ತಳಿರುಗಳನಲ್ಲಾಡಿವರಪರಿ ।
ಮಳದ ಕಪ್ಪವ ಕೊಂಡು ಮರಿದುಂಬಿಗಳ ಗೀತವನು ॥ ಸಲೆ ಸೊಗಸಿ ಮಕರಂದನೆಲೆಯಲಿ । ತಳಿತು
ಬೀಡನುಬಿಡುತ ಜನದಲಿ। ಸುಳಿದುದೈ ತಂಗಾಳಿ ಭೂಮಿಪಾಲನಂದದಲಿ ॥೨೫॥ ಮಘಮಘಿಪಹೊಂ
ಬಾಳೆಗಳ ರಸ । ವೊಗುವಮಧುರ ದ್ರಾಕ್ಷೆಗಳ ನಸು । ಮುಗಿಲ ತುಡುಕುವತೆಂಗುಗಳ ನೆರೆಕಾತಪನಸು
ಗಳ ॥ ಬಿಗಿದಪಣ್ಗೊನೆವಾಳೆಗಳ ಸೊಂ । ಪೊಗುವಕರ್ಪುರದದ್ರುಮೌಘ ದ । ಸೊಗಸು ಸೆಳೆದುದು
ಮನವನಾಗಜನಗರದುಪವನದ ॥೨೬॥ ಲಲಿತಶುಕಚಯಚಂಚುಪುಟದಿಂ । ದಳಿತಜಂಬೂಪಕ್ವಫಲರ

ಸ । ಲುಳಿತನವಮಕರಂದ ಮಧುರೋರ್ಝರನಿವಾತದಲಿ ॥ ತಳಿತಕಿನ್ನರಮಿಥುನಶುಕಪರಿ । ಮಳಿತಗೀತಶ್ರವಣಸಂದಾದ । ಸುಳಿನಸುಪ್ತಮರಾಳವೆಸೆದುದು ಗಜಪುರೋದ್ಯಾನ ॥೨೭॥ ಅರರೆಪಾತಾಳದ ವಿಸಾರಿನಿ । ಯರಿಗೆ ಜೌಂಗೆಯೋ ಸುದುರ್ಗದ । ಹಿರಿಯಗಳೊ ಬಲುಗೋಟೆಯೋ ನಿಚಣಿಗೆಯೋ ದಿವದಾ ॥ ಮುರಿಮುರಿದ ಹುಲಿಮುಖದ ಹೇಮದ। ಥರದತೆನೆಗಳ ವಜ್ರಮಯಬಂ। ಧುರಕವಾಟಸ್ಫುಟದಲೆಸದುದು ಹಸ್ತಿನಾನಗರ ॥೨೮॥ ಹೊಗಳುತೈತಂದಸುರರಿಪುಗಜ । ನಗರವನು ಹೊಕ್ಕನು ಸುಯೋಧನ । ನಗಣಿತೈಶ್ವರ್ಯವ ಮಹಾದೇವೆನುತ ನಲವಿನಲಿ ॥ ಬೀಗಿದಬೀದಿಯ ನಯದನೆಲೆಗ। ಟ್ಟುಗಳ ಮಣಿಮಯಹೇಮದುಪ್ಪರಿ । ಗೆಗಳ ಕೇರಿಗಳೊಳಗೆ ಬರುತಿರ್ದನು ಮುರಧ್ವಂಸಿ ॥೨೯॥ ಮಂದಗತಿಸುಳಿವಾನೆಕುದುರೆಯು । ಸಂಘಣಿಯಕೇಲಿಸಿದಭೂಮಿಪ । ರಂದಣದ ಸಾಲುಗಳ ತೆಕ್ಕೆಯಗಳಿಯದಾಳಿಗಳ ॥ ಮಂದಿಯಲಿ ಹೊಗಲಿನಿಲಗುಬ್ಬಸ । ವೆಂದೊಡುಳಿದವರಳವೆಯೆನಲರ । ವಿಂದನಾಭನು ಬಂದನಾಧೃತರಾಷ್ಟ್ರನರಮನೆಗೆ ॥೩೦॥ ಇದಿರುಗೊಂಡನು ಕಾಣಿಕೆಯನಿ । ಕ್ಕಿದನು ಕುಶಲಕ್ಷೇಮವನು ಕೇ । ಳಿದನು ಭಕತಿಯಲೆರಗಿದನು ಚರಣದಲಿ ಧೃತರಾಷ್ಟ್ರ ॥ ಸದನವನು ಹೊಕ್ಕಂತೆ ನಿಮಿಷಾರ್ಧದಲಿ ಕುಳ್ಳಿರ್ದನಿಬರನು ಕಳು । ಹಿದನು ಕಾರುಣ್ಯದಲಿ ಗದುಗಿನವೀರನಾರಾಯಣ ॥ ॥೩೧॥

ಅಂತು ಸಂಧಿ ೭ಕ್ಕಂ ಪದ ೪೩೭ ಕ್ಕಂ ಮಂಗಳಮಸ್ತು.

ಎಂಟನೆಯ ಸಂಧಿ.

॥ಸೂಚನೆ॥ ಶರಣದೇಹಿಕದೇವನೆಂಬೀ । ಬಿರುದ ಮೆರೆಯಲು ರಾಯಭಾರವ । ಧರಿಸಿ ಕೌರವನರಮನೆಗೆ ನಡೆತಂದನಸುರಾರಿ ॥

॥ಪದ॥ ಕೇಳು ಜನಮೇಜಯಧರಿತ್ರೀ । ಪಾಲ ಮುರಹರ ಗುರುನದೀಜರ । ಬೀಳುಕೊಟ್ಟನು ಕೃಪನ ಮನ್ನಿಸಿ ಮನೆಗೆ ಕಳುಹಿದನು ॥ ಆಲಯಕೆ ವಿದುರಂಗೆ ಕೊಟ್ಟನು । ವೀಳಯವನೊಡನೆಯ್ದಿ ಬಂದವನ್ನ । ಪಾಲಕರ ಮೊಗಸನ್ನೆಯಲಿ ಕಳುಹಿದನು ಮನೆಗಳಿಗೆ ॥೧॥ ಶೌರಿ ಕಾಣಿಸಿಕೊಂಡನಾಗಾಂ। ಧಾರಿಯನು ಸುಕ್ಷೇಮಕುಶಲವ । ನಾರಯಿದು ಕಾಣಿಕೆಯ ಕೊಂಡನು ಕೊಟ್ಟನುಡುಗೊರೆಯಾ॥ ಕೌರವನು ತನ್ನರಮನೆಗೆ ಹರಿ । ಬಾರದಿರನೆಂದಖಿಳವಿಧದಲಿ । ಸಾರವಸ್ತುವ ತರಿಸಿಯಾರೋಗಣೆಗೆ ಮಾಡಿಸಿದಾ ॥೨॥ ನಡುವೆ ಮಣಿಮಂಚದಲಿ ಮೇಲ್ವಾ । ಸಡಿಕಿಲನು ಪಚ್ಚಡಿಸಿದರು ಮೇ । ಲಡರಿದವು ಮಣಿಖಚಿತಚಿತ್ರದಮೇಲುಕಟ್ಟುಗಳು ॥ ಉಡುಗೊರೆಯ ತರಿಸಿದನು ರಾಯನ। ಮಡದಿಯರು ಹೊಂಗಳಸಜಲವನು । ಪಡಿಗವನು ಹಿಡಿದಸುರರಿಪುವಿನ ಬರವ ಹಾರಿದರು ॥೩॥ ತವತವಗೆಗಾಂಗೇಯಗುರುಕೃಪ । ರವಿಸುತಾದಿಗಳಸುರರಿಪುನಿಜ । ಭವನಕೈತಹನೆಂದುಸಪದರುಸಾರವಸ್ತುಗಳ ॥ ಅವನಿಪನ ಬೀಳ್ಕೊಟ್ಟುಕೌರವ । ಭವನವನು ಹೊರವಂಟು ವರಭಾ । ಗವತಮಸ್ತಕರತ್ನವಿದುರನ ಮನೆಗೆ ನಡೆತಂದ ॥೪॥ ತೊಲಗಿದವು ಜನಮನದ ಬಿಲುಗ । ತ್ತಲೆಗಳಿದಿರಲಿ ಕಂಡಜೀವರ ಹಲವುಜನ್ಮಾಂತರದದುರಿತಾಂಬೋಧಿಬತ್ತಿದವು ॥ ಬಳಿಕ ಮುನಿಗಳಸಹಿತ ಕರುಣಾ । ಜಲಧಿ ತಾನಾಕೌರವೇಂದ್ರನ । ಹೊಳ

ಲೊಳಗೆ ನಿಜಶರಣನಿಹವುನೆಗಾಗೆ ಬರುತಿರ್ದ ॥೫॥ ಕರಣ ನಿರ್ಮಳವಾಯ್ತು ಮನವು । ಬ್ಬರಿಸಿತತಿ ಪರಿತೋಷದೇಳಿಗೆ । ಪರಮಸುಖದಲಿ ತನುವ ಮರೆದನು ನಯನಜಲವೊಗಲು ಎರಡುಮೋರೆದಗಾಢ ಭಕ್ತಿಯು । ಭರದಲವಲವಿಕೆಯಲಿ ನಿಜನುಂ । ದಿರವಹೊರವಂಡುತ್ತ ಕಂಡನು ವಿದುರನಚ್ಯುತನ ॥೬॥ ಸಿರಿಮೊಗದ ಕಿರುಬೆಮರ ತೇಜಿಯ । ಖುರುಪುಟದ ಕೆಂಧೂಳಿ ಸೋಂಕಿದ । ಸಿರಿಮುಡಿಯ ಕುಡಿಮೀಸೆಯಲಿ ಕೆಂಪಡರ್ದರೇಣುಗಳ ॥ ಖರಮರೀಚಿಯ ಜಳಕೆ ಬಾಡಿದ । ತರುಣತುಲಸಿಯದಂಡೆಯೊಪ್ಪುವ । ಗರುವದೇವನ ಬರವ ಕಂಡನು ಬಾಗಿಲಲಿ ವಿದುರ ॥೭॥ ತನುವ ಮರೆದನು ಪುಳಕಜಲದಲಿ । ನನೆದು ನಾರಾಯಣನ ಪದದರು । ಶನದ ಹರುಷಾರಣ್ಯದಲಿ ಮನ ಹೊಲಬುದಪ್ಪಿದನು ॥ ನೆನೆವಸನಕಾದಿಗಳಿಗೊಪ್ಪಿಯು ಮನಗೊಡದವುಹಿಮಾವಲಂಬನು । ಮನೆಗೆ ಬಹ ಕರುಣಾಳುತನ ಹೊಸತೆನುತ ಹೊಂಗಿದನು ॥೮॥ ವೇದದೆರೆಕೆಗಳಡಗದುಪನಿಷ । ದಾದಿದಿವ್ಯಸ್ಮೃತಿಯ ಗಡಣೆಗೆ । ಹೋದಹೊಲಬಳವಡದುಮುನಿಗಳ ಮುಖಕೆ ಮನಗುಡದ ॥ ವಾದಿಕಡಗುವತಾರ್ಕಿಕರು ಬೆಂ । ಡಾದರಲ್ಲದೆ ನಿಜವನರಿಯದ । ನಾದಿಸಿದ್ಧನ ಬರವ ಕಂಡನು ಬಾಗಿಲಲಿ ವಿದುರ ॥೯॥ ತೊಳಲುವುಪನಿಷದೆರೆಕೆಯಿವು ಶ್ರುತಿ । ಗಳ ಸರಾಗದಬಳಕೆಯಿವು ಮುನಿ । ಗಳಸಮಾಧಿಗಳಾದಿಯಿವು ಯೋಗಿಗಳ ಬಗೆಗಳಿವು ॥ ಎಲೆಲೆ ಭಕತರ ಭಾಗ್ಯಶಾಲಿಯ। ಬೆಳಗಳಿವೆಲಾ ಶಿವ ಯೆನುತ ಪದ । ನಳಿನಯುಗಳದಲೋಡಲನೀಡಾಡಿದನು ಹರುಷದಲಿ ॥೧೦॥ ನೋಡಿದನು ಮನದಣಿಯೆ ಮಿಗೆ ಕೊಂ । ಡಾಡಿದನು ಬೀದಿಯಲಿ ಹರಿದೆಡೆ । ಯಾಡಿದನು ಭ್ರಮೆಯಾಯ್ತು ವಿದುರಂಗೆಂಬಗಾವಳಿಯ ॥ ಕೊಡೆ ಕುಣಿದನು ಮನೆಯ ಮುರ್ಧೀಡಾಡಿದನು ಮೈಮರೆದ ಹರುಷದ । ಗಾಢಿಕೆಯಲಪ್ರತಿಮನೆಸೆದನು ಭಕತಿಕೇಳಿಯಲಿ ॥೧೧॥ ಹಸಿದನಾವೈತಂದೊಡೀಪರಿ । ಮಸಗಿಕುಣಿದಾಡಿದರೆ ಮೇಣೀ । ವಸತಿಯನುಸುಗಿದೆತ್ತಿಬಿಸುಟರೆ ತನಗೆ ತೆರವಹುದೆ ॥ ವಸುಮತಿಯವಲ್ಲಭರು ಮಿಗೆ ಪ್ರಾರ್ಥಿಸಿದೊಡಲ್ಲದೆ ಬಂದವೈ ನಾ । ಚಿಸದಿರೈ ಬಾ ವಿದರಯೆನುತೊಳಹೊಕ್ಕನಸುರಾರಿ ॥೧೨॥ ನೆರೆಯೆ ಕೃತ್ಯಾಕೃತ್ಯಭಾವವ । ಮರೆದು ಕಳೆದನುಮನವುರಾರಿಯ । ನಿರೀಕಿಕೊಂಡವು ಕಂಗಳೊಡಬೆಚ್ಚವು ಪದಾಬ್ಜದಲಿ ॥ ಅರಿವು ಮಯಣಾಮಯದ ಭಕ್ತಿಯೊ । ಳರಗಿಸಿದಸಿದ್ಧಪುತ್ಥಳಿಯವೊಲು ಕಡು । ಬೆರಗ ಕೇಣಿಯ ಕೊಂಡು ಮೌನದೊಳಿದ್ದನಾವಿದುರ ॥೧೩॥ ಒಲವೊರವೆ ಕೌತುಕವು ಪಾಲ್ಗಡ । ಲೊಳಗೆ ಮಲಗುವ ವಿಷ್ಣು ವಿದುರನ । ನಿಳಯದೊಳಗೊಕ್ಕುಡಿತೆಹಾಲಲಿ ಹಸಿವನೂಕಿದನು ॥ ಹೊಲಬುಗೆಡಿಸಿದನೆಖಿಳನಿಗಮಂ । ಗಳನು ತನ್ನರಿಕೆಯ ಭಜಕಂ। ಗೊಲಿದು ತಾನೈತರಲು ಕರುಣದಘನತೆಯೆನೆಲೋಕ ॥೧೪॥ ಹರಿಯ ಪದಕಮಲಾಭಿಷೇಕವರಪಯೋಬಿಂದುಗಳು ಕೌರವ । ನರಮನೆಯನೊಳಕೊಂಬವೊಲ್ಕಡ... ...ಳಲು ॥ ... ಮುರಹರ ಸೊಡನೆ ಹಾಲಿನ । ಶರಧಿ ಮೇರೆಯನೊಡದು ಹಿಳಿಗ । ಚ್ಚರಿಯ... ...ಗಳಿದರು ಮುರಹರನ ॥೧೫॥ ತೊಲಗಿದಸು ಬಂದಂತೆ ತರಣಿಯ । ಹೊಳೆಹು ಸೋಂಕಿದ ಜಕ್ಕಯ । ಬಳಗದಂತಿರೆ ಕೃಷ್ಣರಾಯನ ಬರವತಾಕೇಳ್ದು ॥ ಪುಳಕಪಸರಿಸಿ ಪರಮಹರುಷವ । ತಳೆದುವನ ಕಾಣಿಕೆಯ ಕಂ । ಗಳಿಗೆ ಕಡುಲೋಲುಪತಿಮಿಗೆ ಹರಿತಂದಳಾಕುಂತಿ ॥೧೬॥ ಬರಲು ಕಂಡರಾರಿ ಮಂಚದೊ । ಳಿರದೆ ಧಿಮ್ಮನೆ ನಿಂದು ನರರಾ । ಚರಣಗಳ ನಾಟಕವ ತಾನೇ ನಟಿಸಿ ತೋ

ನು ॥ ಪಿರಿಯರಿಗೆ ತಾ ಪಿರಿಯನೆಂಬೀ । ಗರುವತನವನು ಬಿಸುಟು ಕುಂತಿಗೆ । ಕರವ ಮುಗಿದೆರಗಿದ
ನು ಮುನಿಜನನಿಕರವೃಷ್ಟಿಯನಲು ॥ ಅಮಿತಕರುಣಾಸಿಂಧುವಿನ ಪದ । ಕಮಲದಲಿ ಬಂದೆರಗಿ ಪುಳ
ಕೋ । ದ್ಗಮದ ತನಿಸುಖಪಾನರಸಸೌರಂಭದಲಿ ಮುಳುಗಿ ॥ ಗಮಿಸಲರಿಯದ ಗರ್ಘಣವೇದ । ಪ್ರಮಿ
ತಿಗಳು ನೀವೆಂತುನಡೆತಂ । ದೆಮಗೆ ಗೋಚರವಾದಿರೆಸುತವೆ ಹೊಗಳಿದಳು ಕುಂತಿ ॥೧೮॥ ದೇವಕಿ
ಯು ವಸುದೇವನನು ಬಲ ದೇವನಸೌಭದ್ರಾದ್ಯಿಯದು ಭೂ । ಪಾವಳಿಯ ಸುಕ್ಷೇಮಕುಶಲವ ಕುಂತಿ ಬೆಸ
ಗೊಳಲು॥ ದೇವ ನಗೆಮೊಗದಿಂದ ವರವಸು। ದೇವದೇವಕಿಯಾದಿಯಾಗಿರೆ। ಲಾಪಿಳಾಸಮಶಹೀರೀರವೆ
ನು ಕುಂತಿಗರುಹಿದನು ॥೧೯॥ ಯಮತನುಜನಧಿಕನು ಹಿಡಿಂಬಾ । ರಮಣನತಿಬಲ್ಲಿದನು ಪಾರ್ಥನ ।
ವಿಮಳವಿಗ್ರಹಲೇಸು ಸಕಲಮಹೀಶಪಂಪ್ರಿತರು॥ ಯಮಳರಿರವತಿ ಚೆಲುವನೇಹದ।ರಮಣಿಯಾಕೆಯಿಸು
ತರುಮಹದುರ್ಧರುಕೇಳೆಂದಸುರರಿಪು ಕುಂತಿಗೆ ತಿಯಾಮಿಸಿದ ॥೨೦॥ ನರನವಗನಭಿಮನ್ಯು ಕುಶಲನು
ವರಸುಭದ್ರಾದೇವಿಮೊದಲಾ।ಗಿರವು ಬಾಂಧವರೆಲ್ಲಜೀವಂತರು ನಿಧಾನಿಸಲು॥ ಪರಮಮಿತ್ರರು ತಮ್ಮೊ
ಳೊಂದಾ। ದರು ದ್ರುಪದನಕ್ಷೋಣಿಸೇನೆಯ । ನೆರವಬಂದನು ರಾಜಕಾರ್ಯದ ಬಳಕಿಲೇಸೆಂದ ॥೨೧॥
ಅದಿತಿಮಕ್ಕಳ ಹಡೆದುದೇಲೋ। ಕದಲಿ ಫಲ ಕೌಸಲೆಕುಮಾರರ । ಪದವ ಹಡದುದೇ ಸಫಲವಿನತಗೆ ಮ
ಕ್ಕಳಾದಪಲಾ ॥ಮುದಟ ನೀನೇ ಮಕ್ಕಳನುಪಡೆ । ಏದುವೆ ಫಲಕೇಳೆಂದು ಪರಿತೋ । ಷದಲಿ ಕುಂತಿಯ
ಹೊಗಳಿದನುಮುರವೈರಿಯುಚಿತದಲಿ ॥೨೨॥ ಲೋಕಪಮೆಚ್ಚಲು ನಿನ್ನಸುತರು ದ್ರ । ಢೈಕಸತ್ಯರು ನುಡಿ
ದಕಾಲವ । ನೂಕಿದರು ರಾಜ್ಯಾಭಿಲಾಷಗೆ ನೆರಹಿದರು ಬಲವ ॥ ಆ ಕುಮಾರರಗರ್ಧರಾಜ್ಯವ । ನೀಕುತಾ
ರರಲೀಸಿಕೊಡುವವಿ। ವೇಕದಲಿ ತಾ ಬಂದೆನೆಂದನು ಕುಂತಿಗಸುರಾರಿ॥೨೩॥ ಪರಮಪರಿತೋಷದಲಿ ಕೃ
ಷ್ಣನ । ವರಸುಧಾಮಯ ವಚನವನು ಪಂ । ಕರುಹಮುಖಿ ಕೇಳುತ್ತ ನೆನೆದಳು ನಯನವಾರಿಯಲಿ ॥
ಮುರಮಥನನಾಕುಂತಿಗೆಲ್ಲವ । ನೊರೆದು ವಿದುರನ ಕರೆದು ಕೌರವ । ನರಮನೆಯ ಸಮಯವನು
ನೋಡಿದು ತಮಗೆ ಹೇಳೆಂದ ॥೨೪॥ ಹೋಗುನೀನಾತಂಗೆ ಪಾಂಡವ । ರಾಗ ಸಮುದಯ ಬಂದನೆಂ
ಬರದ । ನೀಗಳರುಹುವುದಾತ ಮಾಡಿದಗುಣದ ಬೆಳವಿಗೆಯ ॥ ತಾಗುಬಾಗಿನ ಹವಣನಾತನ । ಲಾಗ
ನೋಡುವೆನೆನಲು ಕುರುಕುಲ । ಸಾಗರಾಗ್ನಿಯ ಮನೆಗೆ ಬಂದನು ವಿದುರ ಹರಿ ಬೆಸಸೆ ॥೨೫॥ ಓಲ
ಗದೊಳಿರ್ದಖಿಳಮೂರ್ಖರ । ಮೌಳಿಯನು ಕಂಡವಧರಿಸುಸಿರಿ । ಲೋಲಬಿಜಯಂಗೈಯಲವಸರವಂ
ತೆ ಹೇಳೆನಲು ॥ ನಾಳೆ ಕಾಣಿಸಿಕೊಂಬವಿನ್ನೀ । ಸಾಳಿಕಾರನಬರವು ಹಗೆವರ। ಪಾಲಿಸಿಯೆ ಬಳಿಸಂಧಿ
ಕಾರ್ಯಕೆ ಬಾರದಿರನೆಂದ ॥೨೬॥ ನೋಡಿರ್ಕ್ಯ ಪಾಂಡವರುಪಾತಕ। ರಾಡಿದಾಟವನಾಡಿದೊಡೆ ಯಿಾ ।
ನಾಡೊಳಗೆ ಹುದುಸಲುವುದವನಿಯೊಳಧಿಕಲೇಸೆನಿಸಿ ॥ ರೂಢಿಯೊಳಗಾಚಾರವಡಗಿತು। ಜೋಡಿಮಿಗೆ
ನಿಸಿದರನೀಬೀ । ಡಾಡಿಕೂಡಿದನೆಂದು ಹೋಯ್ದದನು ರವಿಸುತನ ಕರವ ॥೨೭॥ ನಾಳೆಬರಹೇಳೆಂ
ದು ವಿದುರನ । ಬೀಳುಕೊಟ್ಟನು ಬೇಹಭಟರಿಗೆ । ವೀಳೆಯವ ನೀಡಿದನು ಹರದುದು ರಾಯನಾಸ್ಥಾ
ನ ॥ ಜಾಳಿಸಿತು ತಮ ಮೂಡಣಾದ್ರಿಯ । ಮೇಲೆ ತಲೆದೋರಿದನು ರವಿ ಭೂ । ಪಾಲಕೌರವನಂದಿ
ರೊಡ್ಡೋಲಗವ ರಚಿಸಿದನು ॥೨೮॥ ಕರೆಸಿದನು ಮಣಿಮಕುಟಕಿರಣದ । ಗರುವರನು ಗಾಢಪ್ರತಾ
ರ । ಬಿರಿಸಿದನು ತೂಕದಮಹಾಮಂಡಳಿಕಮನ್ನೆಯರ ॥ ಧುರವಿಜಯಸಿದ್ಧರನು ಚಾಮಿಾ । ಕರದ

ಗದ್ದುಗೆಯಖಿಳಸಾವಂ । ತರನು ಪೃಥ್ವೀ । ಪಾಲರನು ನೆರಹಿದನು ಭೂಪಾಲ ॥೨೯॥ ಬಲದಗದ್ದುಗೆ
ಗಳಲಿ ಭಟರ । ಗ್ಗಳೆಯರವಿಸುತನಮಿಯುಮಗನೃಪ। ತಿಲಕದುಶ್ಶಾಸನ ಕೃಪದ್ರೋಣಾದಿ ನಾಯಕರು ।
ಹೊಳೆವರತುನದ ಸಾಲಮಕುಟದ । ಚಲುವಿಕೆಯ ಸೌರಂಭದಲಿ ಗಜ । ಗಲಿಸಿವರು ಮಾಣಿಕ್ಯಮ
ಯ ಭೂಷಣವಿಳಾಸದಲಿ ॥ ಸತಿಸಹಿತ ಧೃತರಾಷ್ಟ್ರಭೂಪತಿ। ಸುತನ ಬಲವಂಕದಲಿ ಕನಕೋಲ್ಲಿ ಚಿತದ
ಪೀಠದಲೆಸೆದನ್ನಾತನ ಬಲದಭಾಗದಲಿ ॥ ಚತುರಚತುರಾನನರು ಕರ್ನ । ಸ್ತುತಿಸಮಸ್ತಕಳಾಸ್ವತಂತ್ರ
ರು । ನುತಗುಣರು ನೃಪಸಭೆಯೊಳೆಸೆದರು ಭೂಸುಸಂದೋಹ ॥೩೦॥ ಮುಮಯುತಿಬಲಶಕುನಿ ಸೈಂಧ
ವ । ನಧಟನೃಪಕಾಂಭೋಜರಥಸಂ । ಪದನು ಭೂರಿಶ್ರವಸು ಲೋಚನವೀರವೃಷಸೇನ ॥ ಕದನಕಾಲಾ
ನಳರು ವರಹೇ। ಮದಮಕುಟರಚನೆಗಳಲೆಡವಂ । ಕದಲಿ ಕುಳ್ಳಿರ್ದರು ಮಹಾಯಾಸ್ಥಾನರಚನೆಯಲಿ॥
ತರುಣಶೃಂಗಾರದ ಮಹಾಬಂ । ಧುರದ ನೂರ್ವರು ಕೌರವೇಂದ್ರನ। ವರಕುಮಾರರು ಮುಂದೆ ಮೆರೆ
ದರು ಲಕ್ಷಣಾದಿಗಳೂ ॥ ವರಕಿರೀಟದ ಕಾಲತೊಡರಿನ ಕೊರಳಪದಕದ ಕೈಯಸುರಗಿಯ । ಲರಸನೆನು
ಜರುನೂರ್ವರೆಡವಂಕದಲಿ ರಂಜಿಸಿತೂ ॥೩೩॥ ಮಿಸುಪತಮ್ಮ ಮುಖೇಂದುವನು ಸ್ಮರಿಸದಚಂದ್ರನ
ಕಿತ್ತು ನಭದಲಿ । ಬಿಸುಟು ಬೇಗ=ಳಹಿಡಿದರೋ ಹೇಳೆನಲು ಸಭೆಯೊಳಗೆ ॥ ಶಶಿವದನೆಯರ ಕೈಯ
ಸೀಗುರಿ । ಯೆನೆದವಿಕ್ಕೆಲದಲಿ ಸುಯೋಧನ। ವಸುಮತೀಶನ ವೈಭವಾಯಾಸ್ಥಾನ ಚಲುವಾಯ್ತು॥೩೪॥
ಕಲಹವಿಲ್ಲದೆ ನೂಲಿನೆಳೆಯಲಿ । ತಲೆಯನರಿವವಿರೋಧಿರಾಯರ । ನಳುಕಿಸುವಸಾಮದಲಿ ನಿಲಿಸುವನಿ
ಖಿಳಭೂಭುಜರ ॥ ಬಲಿದರೊಳಲಂಚದಲಿ ಭಿದ್ರಿಸಿ । ಕೊಲುವಮುನಿದೊಡೆ ಮಂತ್ರಶಕ್ತಿಯೊ। ಳಳು
ಕಿಸುವಮಂತ್ರಿಗಳು ಮೆರೆದರು ವಾಮಭಾಗದಲಿ ॥೩೫॥ ನಿಗಮತರ್ಕಪುರಾಣಕಾವ್ಯಾ । ದಿಗಳ ವಿಸಟಂ
ಬರಿಗಳೊತ್ತೊತ್ತ । ತ್ತುಗಳೊಳಿಟ್ಟೆಡೆಯಾಗಿ ಹಿಗ್ಗದಜತರದಂಘ್ರಿಯರು । ಬಗೆಯುಪನ್ಯಾಸದಸುಶಾ
ಖಾ । ಳಿಗಳ ಬೀಳಲು ಬೆಳೆದಗಡ್ಡದ। ವಿಗಡಭೂಯೋಪಾಧ್ಯರಿದ್ದರು ರಾಜಸಭೆಯೊಳಗೆ ॥೩೬॥ ಸಲೆ
ಸಮಸ್ಯಕನಂತಪದ್ಯವ । ಗಳಿಲನನ್ವೇಸುವಸುಶಾಂತಿಯ । ಲಲಿತಮಧುರಸಮಾಧಿಸುಕುಮಾರಾದಿರಚ
ನೆಯಲಿ ಹಲವುಪಮೆಯುತ್ಪ್ರೇಕ್ಷೆರೂಪಕ । ಸುಲಲಿತಾಲಂಕೃತಿಚಮತ್ಕೃತಿ । ಗಳ ಚತುರ್ಭಾಷಾವಿಶಾ
ರದಕವಿಗಳೊಪ್ಪಿದರು ॥೩೭॥ ನುಡಿದು ತಲೆದೂಗಿಸುವಮರಗ । ನ್ನುಡಕೆ ಹಾಹಾಯೆನಿಸಿ ಮೆಚ್ಚಿಸುವ
ಡೆಪವಾಗ್ಮಿಗಳೋದಿ ಹೊಗಳಿಸಿಕೊಂಬಗಮಕಿಗಳು॥ ಕೊಡುವಪದವಿಗೆ ಸುಪ್ರಮೇಯದ । ಗಡಣಕಬುಜ
ಭವಾದಿವಿಭುಗಳು। ಬಿಡಿಸಲರಿದೆನಿಪತುಳತಾರ್ಕಿಕ ಜನಗಳೊಪ್ಪಿದರು ॥೩೮॥ ನುತಸುಭೋದಯ ಜೀ
ಯ । ಶತ್ರು । ಪ್ರತತಿಸಂಹಾರಕ ಸಮಸ್ತ। ಕ್ಷಿತಿಪತಬ್ರಹ್ಮಾಯುರಸ್ತುವೆನುತ್ತ ಕೈನೆಗಹಿ ॥ ನುತಗುಣ
ನ ಬಿರುದಾವಳಿಯ ಸಂ । ಗತಿಯನಭಿವರ್ಣಿಸುವ ಸಮಯೋ । ಚಿತದ ಮನ್ನಣೆವಡೆದು ಮೆರೆದುದು
ಭಟ್ಟಸಂದೋಹ ॥ ಬರೆದ ಬಳಿಕದುವಿಧಿಯಸೀಮೆಯ । ಭರಹ ನಿಜಕಾರ್ಯಾರ್ಥಲಾಭವು । ದೊರಕಿ-
ದೊಡೆಪತಿಯರ್ಥನೀರಲಿ ಬರದಲಿಪಿಯಂತೆ॥ ಬಯಗುಪಿತಲೋಲುಪರು ಲಂಚದ। ಪರಮಜೀವನಜಾಣ
ರಾಸಿರಿ । ಕರಣದವರೊಪ್ಪಿದರು ಭೂಪಾಲಕನ ಸಭೆಯೊಳಗೆ ॥೪೦॥ ನಳನ ನಹುಷನ ಶಾಲಿಹೋತ್ರನ।
ಬಲುಮೆಗಳು ಕಿರಿದೆಂಬವಿದ್ಯಾ । ನಿಳಯವರರೇವಂತತೋರಾಟವನು ನಸುನಗುತ ॥ ಬಲಿದದೃಢವಾಘೆ
ಗಳು ದುಷ್ಟಾ । ವಳಿಯಹಯಪ್ರೌಢಪ್ರತಾಪರು। ಹೊಳೆವಮಕುಟದ ಸಾಲುಗಳಲೊಪ್ಪಿದರು ರಾವುತ

ರು ||೪೧|| ಅತಿಮದದಿ ತನು ಸೊಕ್ಕಿದೈರಾ | ವತವಕಿವಿಡಿದೆಳೆವ ದಿಗ್ಗಜ | ತತಿಯನವಳಾಂಕುಶದ
ಲಂಜಿಸಿಕೆಲಬಲಕೆ ಬಿಡುವ || ನುತಗಜಾರೋಹಕರು ಕುರುಭೂ | ಪತಿಯ ಹೊರೆಯಲಿ ಮೆರೆದರೈವ
ರಾವತಿಯ ರಾಯನ ಸಭೆಯೊಳೆಸೆವುದು ಕೌರವಸ್ಥಾನ ||೪೨|| ನಡೆದು ಪರಮಂಡಲದ ರಾಯರ |
ಜಡಿದುಕಪ್ಪವತಪ್ಪತಿಪ್ಪರ | ಗಡಣಿಸೆದುಪು ಪವನವೇಗದ ರಾಯಭಾರಿಗಳು || ಕಡುಗಿದೊಡೆ ಕಾಲಂಗೆ
ಬಿರುದಿನ | ತೊಡರನಿಕ್ಕುವಜವನಪಾಡೆಯ| ತುಡುಕುವಗ್ಗದ ವೀರರೆಸೆದುದು ದಿಟ್ಟವಾಲಿಯಲಿ ||೪೩||
ಎಳೆಯುಮಿಂಚಿನ ಕಿಡಿಯಸೂಸುವ | ನಳಿನದೃಶೆಯರು ಶಶಿಯಬಿಂಬವ | ಹಳಿವಹುರುಡಿಸುವಸವುಮು
ಖಿಯರು ಕೋಮಲಾಂಗಿಯರು || ಸೆಳೆನಡುವಿನಗ್ಗಳೆಯರೊಪ್ಪುವ | ಕಲಶಕುಚಯರು ಜಘನಘನ
ಚಳ | ದೆಳೆಯರು ಕುರುರಾಯನೆಡವಂಕದಲಿ ಮೋಹಿದರು ||೪೪|| ಗಾನದಬಲೆಯರನುಪಮಿತಲಯ|
ತಾನಪಿಸ್ತ್ಯಾಸಾವಲಂಬನ | ಸಾನುರಾಗದಿ ಮರುಳುಗೊಳಿಸುವರಲ್ಲಿ ಪಲ್ಲವರ || ಆನಿತಂಬದಪೊಳೆವಮೊ
ಲೆಗಳೆ | ನೂನಮಧ್ಯದೊಳೆಸವಬಾಸೆಯ | ಮಾನವತಿಯರೆನಿಪ್ಪಹಸ್ತಿನಿಯರುಗಳೊಪ್ಪಿದರು ||೪೫||
ತಳಿತಹುಬ್ಬಿನಕುರುಳುಕೊಂಚಿಯ | ಬಳಲುಮುಡಿಗಳಕೆಂಪಿನಧರದ | ಚಲಿತನಯನದ ಗೌರ್ಣವರ್ಣದ
ನೂನರಾಗತೆಯ || ಜಲಜಗಂಧವ ಮೆರೆವರೋಮಾ | ವಳಿಯ ಮಿವರಮಧ್ಯಮದರತಿ | ಗಳಿರ್ದರು
ಚಿತ್ತಿನಿಶಂಕಿಣಿಯರು ನೃಪನ ಸಭೆಯೊಳಗೆ ||೪೬|| ಗರುವಿಕೆಯ ಗಾಡಿಕೆಯಸುರತಾ | ತುರದಚಿತ್ತದ
ಸುಗುಣಬುದ್ಧಿಯ | ತರಳತರಮೃದುಮಧುರ ವಚನದ ಪ್ರೌಢಮುಗ್ಧೆಯರ || ಸರಸಿಯರು ಕೆಡು
ಚಲುವೆಯರುತಿ | ಪ್ಸರಿಯಗೆ ಹೊಕ್ಕ್ರಗಳೆಸುವ | ಸರೆಸ ಪದ್ಮಿನಿರೊಪ್ಪಿದರು ಕರ್ಣಾಟವನಿತೆಯ
ರು ||೪೭|| ನಳಿನವದನದ ಹೊಳೆವಕಡೆಗಣ್ಣ | ಳಸುಕಾಂತಿಯ ನವವಿಳಾಸದ | ಬೆಳವಿಗೆಯ ಶೃಂ
ಗಾರದೊಯ್ಯಾರದವಿಡಂಬನದ || ಬಲುಮೊಲೆಯ ಹಂಸಗಳನಡೆಯಲಿ | ಬಲುಮನದಪುಗೆರತಿಗ
ಳಂತ್ಯದ | ಬಳಲಿಕೆಯಬೊಬ್ಬುಳಿಯವರ | ಚೋಳಿತಿಯಗೊಪ್ಪಿದರು ||೪೮|| ತೋಳುಗಳ ಕೋಮ
ಲಿಕೆಗಳ ಬಿಂ | ಬಾಳಕೇಶವ ಕೊಂಕುಗುರುಳಿನ | ಲೋಲನಯನದ ದಂತಿಗವನದ ಸುರಭಿಪರಿಮಳ
ದ || ಲೀಲೆಯಲಿ ಸೊಗಸುಪಮನೋಜನ | ಕೇಳಿಯಲಿ ಮಷ್ಯಮಿಯರೆನಿಸುವ | ಮಾಳವದ ಮಾನಿನಿ
ಯರೆಸೆದರು ಸಿರಿಯಸೊಬಗಿನಲಿ ||೪೯|| ಸುರತಸೌಖ್ಯವಲಂಪಟತ್ವದ | ಕರಿಯಗವನದಗಳಿಯನುಡಿ
ಗಳ | ಗುರುನಿತಂಬದಶಶಿಯಬಿಂಬವನೇಳಿಪಾವನದ || ಪುರುಷರನು ಬಲುತರದಿ ಮೋಹಿಪ | ಪರಿಮಳಗೆ
ಮಿಗೆಕವಿವತುಂಬಿಯ | ಸರಸಿಜಾಕ್ಷಿಯರೆಸೆದರಾಪಾಂಚಾಲನಾರಿಯರು ||೫೦|| ಅಸಿಯಜಂಘೆಯ ವಿ
ಕಟನಯದ | ಬಸುರಬಾಸೆಯ ಸೊಗಸು ಮಿಗೆ ರಂ | ಜಿಸುವನಡುವಿನ ಸುಳಿವನಾಭಿಯ ವೃತ್ತಕುಚ
ಯುಗದ || ಎಳೆವನಗೆಗಣ್ಣಳ ವಿನೋದ | ಪ್ರಸದೇಳ್ಗೆಯ ಕಾಮರಸ ಪಸ | ರಿಸುವಸುರತದ ಗುಜ್ಜರಿ
ಗಳೊಪ್ಪಿದರು ಸಭೆಯೊಳಗೆ ||೫೧|| ಘನತರವರದ ಪತಿಗೆ ವರಚುಂ | ಬನದಸೌಖ್ಯಕೆ ನಾಗರಿಕರಾ |
ಮನವಿಡಿದಕೈಕೊಂಬಸುರತಪ ಪಳತೆಯೊಳೆಸೆವ || ಮುನಿಸುಹರುಷದ ಸಕಲಸರಸವ | ಕಿಸುಗಳತುಂ
ಗೋರುಜಂಘೆಯ | ವನಜಮುಖಿಯರು ಮೆರೆವಸೌರಾಷ್ಟ್ರನಾರಿಯರು ||೫೨ ನುಡಿಯೊಳಮೃತದ
ರಸವನೇಳಿಪ | ನಡೆಯೊಳಂಚೆಯೊಳಣಕವಾಡುವ | ಕುಡಿತೆಗಣ್ಗಳ ಬಲೆಯ ಬಿಸಸುವರಭಿಕಮೃಗಕು
ಲಕೆ | ಬೆಡಗುನುಡಿಯಲಿ ಸುರತ ಭೋಗದ | ಕಡಲೊಳಗೆ ವಿಟಚಯವಮುಳುಗಿಪ | ಕಡುಗರುವಬಿ

ಬ್ಬೋಕರಿದ್ದರು ಬಹಳವಿಭವದಲಿ ॥೫೩॥ ಲಲಿತಸುಭಗಲತಾಂಗಿ ಸರಸಿಜ । ದಳವಲೋಚನೆ ಮಧ್ಯರತಿ ವಿಟ । ನೊಲಿದರೊಲಿವಳು ಬೆರಸ ಬೆರಸದೆ ಮನವ ಬೈಚಿಡುವ ॥ ನಳಿನಮುಖಿ ಬೇಟದಲಿ ಬೇಗೆಯ । ಬೆಳೆಸುವಳು ಕಡುಚಪಲಸುರತದ । ನೆಲೆಯನುಪವಕಳಿಂಗವನಿತೆಯರೋದರೊಗ್ಗಿನಲಿ ॥೫೪॥ ಆಳಕಾತಿ ಸರೋಜಮುಖಿಯನು । ಕೂಲರತಿ ಕಮನೀಯರೂಪಿಣಿ । ಲೋಲಲೋಚನೆ ಕಲಣಕುಚಯುಗೆ ರಾಗ ವತಿಯೆನಿಪ ॥ ಲೀಲೆಯಲಿ ಲೋಕವನು ಮೋಹಿಪ । ಸೋಲಿಸುವ ಸೊಬಗಿಯರು ಸಖಿಯರು । ಮೇಲವಣಿಯಲಿ ಮೆರೆದರೊಡ್ಡಿಯದೇಶದಬಲೆಯರು ॥೫೫॥ ಗುರುನಿತಂಬದ ತರಳನಯನದ । ಕರಯುಗ ಮನದ ಗೌರವವರ್ಣದ। ಸರಸಿಜಾನನಕಾಂತಿಗಳ ಪಾಟಳಿಯ ಪರಿಮಳದ ॥ ಹರುಷಕೇಳಿಯ ಕುಹಕಭಾವದ । ಬೆರಕೆಗಳ ಸಂಪೂರ್ಣಭಾವದ । ತರುಣಿಯರು ಲೇಸೆನಿಸಿದರು ಗೌಳವದನಾರಿಯರು ॥೫೬॥ ಒಲಿಸಲರಿಯರು ವಿಟನ ಚಿತ್ತವ । ನಿಲಿಸಲರಿಯರು ಕತ್ತುರಿಯಯುತಾ । ಪಲವುಮಾತಿನಲಸುವಹುಸಿಯವಿಟರಹುರಡಿನಲಿ ॥ ಕಲಹವನು ಕಲ್ಪಿಸುತ ವಲಿತರ । ಛಲಮನದೊಳಾನುವರು ಸುರತ । ಕ್ಕೊಲಿದು ಕೂಡುವಮನವಮಳಿಯಲಸತಿಯರೊಪ್ಪಿದರು ॥೫೭॥ ಮುಸುಕಿನಲಿ ಮೂಲೋಕವನು ಮೋಹಿಸುವಕಡೆನೋಟದಲಿ ಕಂಡವ ರಸುವನಲ್ಲಾಡಿಸುತ ಕೂಟದೊಳಮರಪದವಿಯನು ॥ ಹುಸಿಯೆನಿಸಿ ತೋರಿಸುವಮದನ । ನಹೆಸರಬಿರಿದನು ಜಗದೊಳಗೆ ಸಾ । ರಿಸುವರೆಸದಿಹರಲ್ಲಿ ಕೋಸಲದೇಶದಬಲೆಯರು ॥೫೮॥ ನೋಡಲರಿವರು ವಿಟನಚಿತ್ತವ । ಕೂಡಲರಿಯರು ಬೆಳಸಬೇಟವ । ಮಾಡಲರಿಯರು ಹಣವಿನಾಸೆಗೆ ಜೀವದುಳಿವೆಂದು ॥ ಬೇಡಿಬೇಸರಸುಪವಿಳಾಸದ । ಜೋಡಿಗಳ ತೋರಿಸುವಜವ್ವನ । ಗೇಡಿಗಳು ಚೆಲುವಾದರ್ಕೆಕೊಂಕಣದ ನಾರಿಯರು ॥೫೯॥ ಮುಡಿಯಭಾರದೊಳೊಲಿದು ತರುಬಿದ । ತೊಡವೆಗಳಚಲುವಿವರಯೂರ್ವಸಿ । ಪಡಿಯೆ ನಾರೆಂಬಮರನಯ್ಯಾರದೊಡಕೆಗಳನಳಿದು ॥ ಸಡಗರದಸುಳಿನುಡಿಗೆ ತಲೆಯನು । ಗೊಡಹಿಸುವವಿಗೆ ನೆರೆದರಾದರು । ಕಡೆಯಕಾಣಿಸವಘಟಿಯರು ಪತಿಯರೊಪ್ಪಿದರು ॥೬೦॥ ಮುಂದು ನೋಡಿದರಖಿಳರಾಯ । ರುಪರವ ಬಾಗಲು ಲಾಳಮಾಳವ । ತ್ರಾರಕಕೊಂಕಣಗೌಳಘೂರ್ಜರವಂಗಪಮ್ಮಾರ ॥ ವರತ್ರಿಗರ್ತರು ನೆರೆದುಜೀಯೆನು । ತಿರಲು ಕೋಮಲತೆಯರು ಸಿತಜಾ । ವರವ ಚಿಮ್ಮಲು ಭೂಪ ಮೆರೆದನು ಸಿಂಹಪೀಠದಲಿ ॥೬೧॥ ಆವದೇಸಿಯದಾವವಿಸ್ತರ । ವಾವದೇಶದ ಸಿರಿಯಸಡಗರ । ವಾವಪರಿಯ ವಿಳಾಸವಾವವಿಡಾಯಿ ತಾನೆನಲು ॥ ಹಾವುಹಳವಿಗೆಯಾದರಾಯನು । ರಾವಣಾರಿಯಕಾಣಿಕೆಗೆ ಬಲು । ಠೀವಿಯನು ತೋರಿದನು ಸಾರುವಭಟ್ಟರೋಳಿಯಲಿ ॥೬೨॥ ಬರಲಿ ಕರೆ ಕೈತವದಶಿಕ್ಷಾ । ಗುರುವನೆನುತವನೀಶ ದೂತರ । ಹರಿಯಬಿಟ್ಟನು ಪರಿಯನಿಳಯಕೆ ಹರಿಯ ಬೇಗದಲಿ ॥ ಚರರು ಹರಿತಂದಸುರರಿಪುವಿನ । ಚರಣದಲಿ ಪ್ಪಯಿಕ್ಕಿ ನೊಸಲಲಿ । ಕರಪುಟಾಂಜಲಿ ಮೆರೆವುತಿರೆ ಬಿನ್ನಹವ ಮಾಡಿದರು ॥೬೪॥ ದೇವ ದೇವರ ಸಮಯವೆನೆ ರಾ । ಜೀವನಾಭನು ಮುಗುಳುನಗೆಯಲಿ । ಭಾವನವರಟ್ಟಿದರೆ ಹರ ಹರ ಬಹೆವು ನಡೆಯೆನುತ ॥ ರಾವಣನ ಪರಿ ನೆಲಸಿತಿವನಲಿ ಸಾವಿಗಂಜುವನಲ್ಲ ಖಳನು ನ । ಯಾವಿಳನು ನಮ್ಮುಕುತಿ ಕೊಳ್ಳದು ವಿದುರ ಕೇಳೆಂದ ॥೬೪॥ ಎನುತ ಮಂಚವನಿಳಿದು ವರಕಾಂ । ಚನವರೂಥಕೆ ಕೈಗೊಡುವಯದು । ಜನಪರುಗ್ಗಡಣೆಯಲಿ ಬಿಜಯೆಂಗೈದನಸುರಾರಿ ॥ ಮುನಿನಿಕರ ಸಂದಣಿಸಿತಭ್ರದೊಳನಿಮಿಷಾವಳಿ ನೆರೆದಿಭಪುರಿ । ಜನವೊಡನೆ ನಡೆ

ತರಲುಹರಿಬರುತಿರ್ದನೋಲಗಕೆ ॥೧೫॥ ಕಲಿಮಲವ ಹೊಲೆಗಲಸಿದಿಭಪುರಿಯೊಳಗೆನಿರ್ಮಳವಾಯ್ತು ಕೃಷ್ಣನ। ಚಲುವದರುಶನದಿಂದ ಬೆಂದವು ಭವದಭಯಬೀಜ॥ಲಲನೆಯರು ತಮ್ಮತಮ್ಮನಯನಂಗಳಿಗೆ ದೇವನ ತೆಗೆದು ಸನುಮತ।ಪುಳಕರಾದರು ಕೇಳು ಜನಮೇಜಯ ಮಹೀಪಾಲ॥೧೬॥ಕಂಜಸಂಭವಪಿತನಬಂದನು। ನಂದಿನಲ್ಲಿ ಪವಡಿಸುವ ಬಂದನು। ನಂಜಿನಲಿ ಪವಡಿಸುವಬಂದನು।ಕುಂಜರನ ಮೊರೆಗೇಳಿ ಸಲಹಿದದೇವನಿದೆ ಬಂದ॥ ಅಂಜನಾಸುತನೊಡೆಯ ಬಂದನು।ಅಂಜಿದಮರರಿಗಭಯವಿತ್ತವ।ಭಂಜನೆಗೆ ಬಲುದೈವಬಂದನು ನೃಪತಿಯರಮನೆಗೆ॥೧೭॥ದೇವ ಬಂದನು ತನ್ನ ನೆನೆವರ। ಕಾವ ಬಂದನು ದೈತ್ಯಕುಲವುದಾವ ಬಂದನುಭಾಗವತಜನಲೋಲುಪನುಬಂದ॥ಭಾವಿಸುವಘಗಹಾರಿ ಬಂದನು।ವೊಲಿಬಂದೊಡೆ ತನ್ನಬೀರುವ ದೇವ ಬಂದನು ವೀರನಾರಾಯಣ ಬಂದನರಮನೆಗೆ॥೧೮॥ ಅರಸ ಬಂದನು ಭಾಗವತಜನ। ಪರುಷ ಬಂದನು ಭಕ್ತವತ್ಸಲ। ಕರುಣಿ ಬಂದನು ತನ್ನ ನೆನೆದೊಡೆಪರಮಪದವೀವ॥ಪರಮಪುರುಷೋತ್ತಮನುಬಂದನು।ದುರಿತದುರ್ಗವಿಘಾತ ಬಂದನು।ಸುರರ ಸಲಹುವದೇವ ಬಂದನು ನೃಪತಿಯರಮನೆಗೆ॥೧೯॥ಕ್ಷೀರವಾರಿಧಿಶಯನ ಬಂದನು । ವಾಂಛೋವರಕೃಷ್ಣ ಬಂದನು। ಧಾರಿಣಿಯ ಹೊರೆಯಿಳಿಯಲೋಸುಗ ಮನುಜವೇಷದಲಿ ॥ ಭೂರಿದನುಜರಸೊರಸಿ ಕೌರವ। ಪಾರಿಧಿಯ ಮುಕ್ಕಳಿಸಲೋಸುಗ । ಘೋರನೈತರುತಿರ್ದನಂದು ನೃಪಾಲನರಮನೆಗೆ ॥೨೦॥ ಸರಸಿಜಾಕ್ಷನು ಬಂದ ಯದುಕುಲ। ವರಶಿರೋಮಣಿ ಬಂದ ಮಾನವ । ಶರಧಿಬಡಬಾನಲನು ಬಂದನು ಕಾಮಪಿತ ಬಂದ॥ ದುರಿತಕದಳಕುಠಾರ ಬಂದನು । ಸುರಸಮೂಹಾರ್ಚಿತನು ಬಂದನು । ಅರಸಸಿರಿವರ ವೀರನರಹರಿ ಬಂದನೋಲಗಕೆ ॥೨೧॥ ಯಾದವರ ಕುಲತಿಲಕ ಬಂದನು । ಸಾಧುಸಜ್ಜನರರಸು ಬಂದನು । ಮೇದಿನಿಯ ಭಾರನಿವಹವಿಪಿನಕೃಶಾನುಯಿದೆ ಬಂದ ॥ ವೇದವೇದ್ಯನು ಬಂದನಿದೆ ಸನ । ಕಾದಿಪೂಜ್ಯನು ಬಂದನಭುಜಭವ । ಪಾಪಿದ್ವೇಷಿಯನು ಬಂದನು ನೃಪತಿಯೋಲಗಕೆ ॥೨೨॥ ಕಂದವರಕದುದುರಿತರಾಶಿಗೆ।ಕೆಂಡವನು ಬೀಳುತ್ತ ಕೈಗಳ ಮಂಡಗಾನಿಸಿದವರಿಗದ್ಭುತ ಕೋಟಿಗಳ ಕೊಡುತ ॥ ಕಂಡಮಾತ್ರಿಯಲಿ ಹೊಗಳಿದವರಿಗೆ । ಹಿಂಡುಮುಕ್ತಿಯ ಬೀರುವವನವ । ದ್ದಂಡದೇವನು ಬರುತಲಿರ್ದನು ನೃಪತಿಯೋಲಗಕೆ ॥೨೩॥ ರಾಮ ಬಂದನು ಸಕಲಮುನಿಜನ । ಪ್ರೇಮ ಬಂದನು ಪಾಂಡವರ ಸು । ಕ್ಷೇಮ ಬಂದನು ಲಕ್ಷ್ಮಣಾಗ್ರಜನಖಿಳದಾತಾರ ॥ ಭೂಮಿಯೊಳಗೈದಡಿಯ ಬೇಡಿದ । ಆ ಮಹಾತ್ಮನು ತಾನೆ ಬಂದನು । ಕಾಮಪಿತ ಮುರವೈರಿ ಬಂದನು ನೃಪತಿಯೋಲಗಕೆ ॥೨೪॥ ಸುರರ ಸಲಹಿದದೇವ ಬಂದನು। ನರನ ಜೀವನ ಸಖನು ಬಂದನು। ಪರಮಕರುಣೋದಯನು ಬಂದನು ಸಿರಿಯರಸ ಬಂದ ॥ ಸಿರಿಲತಾಂಗಿಯರಮಣ ಬಂದನು । ಸರಸಿಜಾಕ್ಷನು ತಾನೆ ಬಂದನು । ವರಅಹಲ್ಯೆಗೆ ಮೋಕ್ಷವಿತ್ತವ ಬಂದನೋಲಗಕೆ ॥೨೫॥ ಬರಲು ಮುರಹರನಿದಿರುವಂದರು। ಗುರುನದೀಜದ್ರೋಣಗೌತ್ತಮ । ಗುರುಸುತಾದಿಸಮಸ್ತಭೂಪಜವಮೂಹಸಂದೋಹ ॥ ಚರಣದಲಿ ಚಾಚಿದರು ಭೂಮೀಶ್ವರರು ಮಕುಟವನಂತತಾರಾ । ಪರಿವೃತೇಂದುವಿನಂತೆ ಮೆರೆದವು ಹರಿಯಪದಯುಗಳ ॥೨೬॥ ಅರಿದಲ್ತೆ ಮುರವೈರಿಸನಕಾ । ದ್ಯರ ಸಮಾಧಿಗೆ ಸುಳಿಯದಂಘ್ರಿಯ । ದರುಶನವಫಲಭೋಗಸಾರಿದುದಸ್ಮದಾಧ್ಯರಿಗೆ ॥ ಸುರನರೋರಗರೊಳು ಕೃತಾರ್ಥರು । ನಿರುತ ತಾವಲ್ಲದೊಡೆ ನಿಮ್ಮಯ । ಸರಸಿಜಾಂಘ್ರಿಯ ಸೇವೆ ದೊರೆಕುವುದಾವಮುನಿಗಳಿಗೆ ॥೨೭॥ ಎಂದು ಗಂ

ಗಾನಂದನನು ನಲ । ವಿಂದ ಕೈಗುಡೆ ಸುರನದಿಯುತುದಿ । ಯಿಂದ ಮರಿಮಿಂಚುಗಳ ಮುಗಿಲಿಳಿವಂತೆ ಭೂತಳಕೆ ॥ ಅಂದು ನೀಲಾಚಲನಿಕಾಯದ । ಸೌಂದರಾಂಗದ ಕೌಸ್ತುಭಪ್ರಭೆ । ಯಿಂದ ಕಾಂಚನರಥವನಿಳಿದನು ದಾನವಾರಾತಿ ॥೭೮॥ ಸಮರಸರ್ವಜ್ಞರುಗಳಂಘ್ರಿಗೆ। ನಮಿಸಿದರು ಬಹಳೋಲಗದ ಸಂಭ್ರಮದ ಸಿರಿ ತಲೆವಾಗುತಿರ್ದುದು ನೊಸಲಕ್ಕಗಳಲಿ ॥ ಕಮಲನಯನದ ದೇವನೇ ಸಾ । ಕೆಮಗೆ ಮಾಡುವುದೇನೆನುತ ತ । ಕ್ಕಮತಿ ಕೌರವ ನಿಳಿಯದಿರ್ದನು ಸಿಂಹ ವಿಷ್ಟರವ ॥೭೯॥ ಸೆಣಸುಸೇರದದೇವನಿದಿರಲಿ । ಮಣಿಯದಾತನ ಕಾಣುತವೆ ಧಾ । ರುಣಿಯನೊತ್ತಿದನುಂಗುಟದ ತುದಿಯಿಂದ ನಸುನಗುತ ॥ ಮಣಿಖಚಿತಕಾಂಚನದ ಪೀಠದ । ಗೋಣಿಸು ಮುರಿದುದು ಮೇಲೆ ಸುರಸಂ । ಧಣಿಗಳಾಯೆನೆ ಕವಿದು ಬಿದ್ದನು ಹರಿಯ ಚರಣದಲಿ ॥೮೦॥ ಧರಣಿಪತಿ ಸಿಂಹಾಸನದಮೇ । ಲಿರದೆ ಬಹರೆ ನಾವು ಬಂದೆ । ಹರಸುವೆವು ತಪ್ಪಾವುದೆನುತೆತ್ತಿದನು ಮಸ್ತಕವ ॥ ಸುರನದೀಸುತ ಕೈಗುಡಲು ಕೇ । ಸರಿಯ ಪೀಠಕೆ ದೇವ ಬಂದನು । ಕುರುಕುಲಾಗ್ರಣಿಗಳ ಸುಸನ್ಮಾನವನು ಕೈಕೊಳುತ ॥೮೧॥ ಹರಿಯ ಹರಿವಿಷ್ಟರದ ಬಲದಲಿ । ಧರಣಿಪತಿ ಕುಳ್ಳಿರ್ದನಾತನ । ಹಿರಿಯಮಗನೆಡವಂಕದಲಿ ಕರ್ಣಾದಿಗಳುಸಹಿತ ॥ ಹರಿಯ ನೇಮವ ಕೊಂಡು ಸನ್ಮುನಿ । ವರರು ಕುಳ್ಳಿರ್ದರು ನದೀಸುತ। ತರಿಸಿದನು ಪಡಿಗವನು ಹೊಂಗಳಸದ ಸುವಾರಿಗಳ ॥೮೨॥ ಚರಣಯುಗಳವ ತೊಳೆದು ತೀರ್ಥವ । ಶಿರದೊಳಿಟ್ಟು ಮಹಾನುಭಾವನ । ದರುಶನದಿ ಮಜ್ಜನ್ಮ ಸಫಲವೆನುತ್ತ ಕೈಮುಗಿದು ॥ ಪರಶುರಾಮಾದಿಗಳ ಪಿಗೆ ಸ । ತ್ಕರಿಸಿ ಗಂಧಾಕ್ಷತೆಗಳಿಂದು । ಪಚರಿಸಿ ಹೊಂಬಟ್ಟಲಲಿ ವೀಳೆಯವಿತ್ತನನಿಬರಿಗೆ ॥ ಕುಶಲವೇ ಕುರುರಾಯ ಬಾರೈ । ಮುಸುಡಮುಗುಡವಿದೇಕೆ ಬಾಯೆಂ । ದಸುರರಿಪುಕೌರವನ ಕರೆದನು ತನ್ನ ಸಮ್ಮುಖಕೆ ॥ ಉಸುರಲಮ್ಮೆನು ಭಾವತನದೊಂದೆಸಕ ಸಲುಗೆಯ ನೇಮವಾದೊಡೆ । ಬಿಸಜಲೋಚನ ಬಿನ್ನಹವನವಧರಿಸಬೇಕೆಂದ ॥೮೩॥ ನೀವು ಬಿಜಯಂಗೈವಿರೆಂದು ಮ । ಹಾವಿಳಾಸದೊಳಳವಡಿಸಿ ನಾ । ನಾವಿಧದ ಷಡುರಸವ ಗರುಡಿಯಲಿಂದುಸವೆಸಿದೆನು ॥ ದೇವ ನಮ್ಮರಮನೆಗೆ ಬಾರದೆ । ನೀವು ವಿದುರನ ಮನೆಯಲುಂಡಿರಿ । ಗೋವಳಿಗತನ ನಿಮ್ಮ ಮೈಸಿರಿ ತಪ್ಪದಾಯ್ತೆಂದ ॥೮೪॥ ಈಕೃಪನಸೇದ್ರೋಣನೀಗಂ । ಗಾಕುಮಾರನ ಮನೆಯ ಹೊಗದವಿ । ವೇಕಿ ತೊತ್ತಿನಮಗನ ಮನೆಯಲಿ ಹಸಿವನೂಕಿದಿರಿ ॥ ಸಾಕಿದಾತನು ನಂದಗೋಪನು । ಕಾಕಬಳಸಲುಸಲ್ಲದೇ ನಿಮಗೇಕೆ ರಾಯರ ನೀತಿಯೆಂದನು ನಗುತ ಕುರುರಾಯ ॥೮೫॥ ಪ್ರಿಯದಲುಂಬುದು ಮೇಣು ವಿಬುಧಾ । ಶ್ರಯದಲುಂಬುದು ಮಾನವರಿಗಿದು ನಿಯತವಿಂತಲ್ಲದೊಡೆ ಕೇಳೈ ಕೌರವರರಾಯ ॥ ಪ್ರಿಯನು ನೀನಲ್ಲೆಮಗೆ ವಿಬುಧಾ । ಶ್ರಯವು ತಾ ಮುನ್ನಿಲ್ಲ ನಿನ್ನಾ । ಲಯದಲೆಮಗೆಂತೂಟ ಸಂಭವಿಸುವುದು ಹೇಳೆಂದ ॥೮೬॥ ಕುರುಪತಿಯ ಬಿರುನುಡಿಯ ಕೇಳಿದು । ಕರಣದಲಿ ಕೋಪಾಗ್ನಿ ಯುಕ್ಕಲು । ಕೆರಳಿನಿರ್ಭೀತಿಯಲಿ ನುಡಿದನು ವಿದುರನರಸಂಗೆ ॥ ದುರುಳನೀನಾಡಿದನುಡಿಗೆ ಯು । ತ್ತರವ ನೀಯಲದೇಕೆ ನಿನ್ನಯ । ವರಜನನಿಗಾಪಿಯಲಿ ಗಂಡರದಾರು ಹೇಳೆಂದ॥ ಕಡುಮುಳಿಸಿನಲಿ ಭೀಮ ನಿನ್ನಯ । ತೊಡೆಗಳನು ಕಡಿವಾಸಮಯದೊಳು । ತಡೆದು ನಿನ್ನನು ಕಾಯಬೇಕೆಂದುಳುಹಿದೆನು ಧನುವ ॥ ಕೆಡೆನುಡಿಸಿಕೊಂಡಿನ್ನು ಕಾವೆನೆ । ನುಡಿದು ಫಲವೇನೆನುತ ವಿದುರನು । ಹಿಡಿದಬಿಲ್ಲನು ಮುರಿದನಾಕುರುರಾಯ ಬೆರಗಾಗೆ ॥೮೭॥ ಧನುಮುರಿಯೆ ಗಾಂ

ಧಾರಿಗತಲೋ । ಚನರು ಮಮ್ಮಲಮರುಗಿತರಸನ । ನೆನಹಿನ್ನೈವಡಿಯಾಯ್ತು ಭೀಷ್ಮದ್ರೋಣರಳಲಿದ
ರು ॥ ಮನದ ಪರುಷಟ ನಗುತ ಮಧುಸೂ । ದನನು ನುಡಿದನು ಮರುಳು ಕೌರವ । ಜನವ ಕೇಳ್ಕೈ ಮ
ತ್ತೆ ನಮ್ಮಯಶೀಲ ಬೇರೆಂದ ॥೪೮॥ ಹಗೆಯನೊಳಗಿಡಲಾಗದದು ವೈ । ರಿಗಳ ನಿಳಯದಲನ್ನಪಾ
ನಾದಿಗಳನುಣಲಾಗದು ನಿಧಾನಿಸೆ ರಾಜನೀತಿಯಿದು ॥ ಬಗೆಯ ನೀ ಪಾಂಡವರಿಗಹಿತನು । ವಿಗಡಪಾಂಡ
ವರೆನ್ನ ಜೀವನ । ಹಗೆಯನಂಬುವೆನೆಂತು ಹೇಳ್ಕೈ ಕೌರವರರಾಯ ॥೪೯॥ ಸೇರುವನು ಸಕಳಂಕಚಂದ್ರ
ನು । ವಾರಧಿಗೆ ನೀನೆಸಳಗೊಳ್ಳಿ । ಜಾರ ಜಾರೆಯಮಕ್ಕಳಿಗೆ ನೀಜೀವ ತಪ್ಪೇನೂ ॥ ಆರು ತಮ್ಮಂದ
ದಮಹಾತ್ಮರು । ಸೇರುವರಲ್ಕೆ ಪಾಂಡುಪುತ್ರರ । ಕೂರುಮೆಗೆ ನಾನೆನ್ನ ನೀಬಂದನುವ ಹೇಳೆಂದ ॥ ಕು
ಲದವನಹೃದಯಾಂಧಕಾರವ । ಕಳಚಲೆಂದು ಹಿಮಾಂಶು ಪರಹಿದ । ನೆಳೆಯ ಬೆಳುದಿಂಗಳೆನಲಾಸುರರಿ
ಪುಕುಲಾಂತಕನಾ ॥ ತೊಳಪದಶನಮಯೂಖತತಿ ಹೊಳ । ಹೊಳೆಯ ನುಡಿದನು ತತ್ಸಭಾಮಂ । ಡ
ಲ ಮಹಾಂಬುಧಿಸುಳಿದೆರೆಯ ತನಿಗರ್ಷಣವಡಗಿದವು ... ... ॥೫೦॥

ಅಂತು ಸಂಧಿ ೮ ಕ್ಕೆ ಪದ ೪೧೮ ಕ್ಕಂ ಮಂಗಳಮಸ್ತು.

ಒಂಭತ್ತನೆಯ ಸಂಧಿ.

ಸೂಚನೆ ॥ ಪಿಡುನೆಲನ ಕೇಳ್ದುಗರ ಮಾತಿಂ । ಗೊಡಬಡದಿರಂತಕನ ನಗರಿಗೆ । ನಡೆಯಬೇಡೆಂದಸುರ
ರಿಪು ಕೌರವನನುರೆ ಜರೆದ ॥

ಪದ ॥ ಅವಧಿ ಸವೆದುದು ಪಾಂಡವರು ನಿ । ನ್ನವರು ಜನವಾಸಪ್ರವಾಸದೊ । ಳವರು ನವೆದ
ರು ಕೂಡಿಕೊಂಡಹುದಧಿಕಗುಣ ನಿಮಗೆ ॥ ಅವನಿಯರ್ಧವನೀವುದೀಯ । ಧ್ರುವದ ಬಾಳಿಕೆಯೊಳಗೆ
ಪುರುಷಾ । ರ್ಥವನೆ ಸಂಚಿಸಕಲಿಯಬೇಹುದು ಭೂಪ ಕೇಳೆಂದ ॥೧॥ ಅರಸುತನ ತನಗಧಿಕವಾಗುತ ।
ಬರಬರಲು ಕಣ್ಣಾಲಿಗಳು ಪರ । ಪುರುಸಕಾಣವು ವರ್ತಮಾನದ ನೃಪರ ಬಳಕೆಯದು ॥ ಸಿರಿಯಮದವೆಂ
ಬಧಿಕತಾಮಸ । ದೊರಕಿದಕ್ಷಿಗೆ ನೀತಿಕಾರರ । ಪರಮವಚನಾಂಜನವು ಪ್ರಜ್ವಲಿಸುವುದು ನಯವೆಂದ ॥
॥೨॥ ಕೋಶ ಬಲುತಳತಂತ್ರ ಹೆಚ್ಚಿದ । ದೇಶ ದುರ್ಗವಮಾತ್ಯಮಿತ್ರವು । ಕೋಶಜನವೆಂಬುದುಕಣಾ
ಸಪ್ತಾಂಗಸನ್ನಾಹ ॥ ಯಿಾಸು ನಿನಗುಂಟಲ್ಲಿ ಮಿತ್ರವು । ಹೇಶರೆಂಬುದತೋರವೆ ಪಾಂಡವ । ರಾಸಹಾ
ಯವು ಬರಲು ನಿನಗಟರಿಲ್ಲ ಕೇಳೆಂದ ॥೩॥ ಹೇಳಿದೀಸಪ್ತಾಂಗದೊಳಗೊಂ । ದೇಳಿಧಿಟವಾಗಿರ್ದನೃಪತಿ
ಯ । ಬಾಳಿಕೆಗೆ ಸಂದೇಹವರಿಯಾ ರಾಜನೀತಿಗಳ ॥ ಹೇಳಲಮ್ಮುವೆವಲ್ಲ ಹಿರಿಯರು । ಹೇಳಿದೊಡೆನೀ
ಕೇಳೆ ಕುರುಕುಲ । ಮೌಳಿ ನಯದಲಿ ನಡೆಯಕಟ ಯೆಂದಸುರರಿಪುನುಡಿದ ॥೪॥ ಸಾಮವೆಂಬುದು
ರಾಜನೀತಿಗೆ । ತಾಮನೋಹರರೂಪು ಬದುಕುವ । ಭೂಮಿಪಾಲರನಂತವಿಭವಕೆ ಬೀಜಮಂತ್ರವಿದು ॥
ಸಾಮ ತಪ್ಪಿದಬಳಿಕ ನೀತಿವಿ । ರಾಮವಾಗದೆ ಬಿಡದು ದಂಡದ । ಸೀಮೆಯೆಂಬುದುಪಾಯದಲೆ ಸಾ
ಮಾನ್ಯತರವೆಂದ ॥೫॥ ಮಾಡಿದಪರಾಧಂಗಳನು ಮರೆ । ದಾಡರತಿಮೋಹದಲಿಧಿಟ ನೀ । ಗೂಡಿಬದು
ಕುವನುಡಿಯನುಡಿವರು ನಮ್ಮ ಮನ ಮೆಚ್ಚೆ ॥ ಕಾಡಿನೊಳಗಾಡಿದರು ದುಃಖವ । ತೋಡಿದರು ನೀನ

ಮಗುಚಿತಪೆ । ಮಾತಿ ಸಾಧನು ಕೊಡುವುದೆಂದನು ದಾನವಧ್ವಂಸಿ ॥೬॥ ವಿದುರನುತ್ಸವ ಕೃಪನ ಸಮ್ಮತ । ನದಿಯಮಗನೊಲವಂಧನೃಪನ । ಭ್ಯುದಯ ಕೇಳೆಂದಸುರರಿಪು ನಯನುಡಿಯ ಗರ್ಜಿಸಲು ॥ ಮದದ ಮೈಗಾಣಿಕೆಯ ಮನಲೇ । ಪದ ಮಹಾಖಳನಡ್ಡಮೊಗವಿದ । ಲುಪಧಿಯೊಳಗದ್ದಂತೆಯಿರ್ದುದು ರಾಯಸಾಸ್ಥಾನ ॥೭॥ ಅವನಿಗಿಂದ್ರಪ್ರಸ್ಥದಲಿ ರಾ । ಜ್ಯವನು ಕುಳಸಹಿತಿತ್ತು ನೀ ಪಾಂ । ಡವಪ್ರತಿಷ್ಠಾಚಾರ್ಯನೆಂಬೀಬಿರುದ ಸಲಿಸದೊಡೆ ॥ ಅವನಿಯಲಿ ನಿನ್ನೊಡನೆ ತಲೆಯೊ । ತ್ತುವನ್ನ ಪಾಲಕರಲ್ಲ ನುಡಿಗಳು । ಕಿವಿಗೆ ಕರ್ಕಶವೀಗಲಾದೊಡೆ ಮುಂದೆ ಲೇಸೆಂದ ॥೮॥ ಕಳಕಳಿಕೆತಗ್ಗದಸಭಾಸ್ಥಳ । ದೊಳಗೆ ಸಿಂಹಧ್ವನಿಯಲವನಿಪ । ಕುಲಕುಠಾರನು ಪರಶುರಾಮನು ನುಡಿದನರಸಂಗೆ ॥ ಎಲೆಸುಯೋಧನ ಕೃಷ್ಣರಾಯನ। ನೆಳಲಿಸುವರೇ ಲೋಭವೇಕೆ। ಗ್ಗಳದ ನಿರ್ಬಂಧನವು ಪ್ರಾಜ್ಞರಿಗುಚಿತವಲ್ಲೆಂದ॥೯॥ ದಿವಿಜರಿದಿರಲ್ಲೆಂದು ಡಂಭೋ। ದ್ಭವನು ನರನಾರಾಯಣಾಖ್ಯರ । ನವಗಡಿಸಿ ಮುರಿವಡೆದು ಕೆಟ್ಟನು ಗಾಢಗರ್ವದಲಿ ॥ ಅವರೊಳರ್ಜುನನರನು ಯದುಸಂ। ಭವನು ನಾರಾಯಣನು ಬಿಡು ಪಾಂ। ಡವರ ವೈರವನೆಂದು ಭಾರ್ಗವ ನುಡಿದನರಸಂಗೆ ॥೧೦॥ ತಪ್ಪು ನುಡಿಯನು ಪರಶುರಾಮನು। ದರ್ಪವಿದು ಲೇಸಲ್ಲ ಕೃಷ್ಣಂ। ಗೊಪ್ಪಿಸುವುದಥಾರ್ವನೀತಳವನು ಸರಾಗದಲಿ॥ ತಿಪ್ಪಿಸುವಿದೊಡ ಗರುಡದೇವನ। ದರ್ಪವನು ಹಿಂಸೆಳೆದು ಬಿಸುಟಂ। ತೊಪ್ಪಿತಾಗಬವೆಂದು ನುಡಿದನು ಕಣ್ವಮುನಿನಗುತ॥೧೧॥ ಅಹುದು ಕಣ್ವನ ಮಾತು ಕೃಷ್ಣನ । ಮಹಿಮೆ ಘನಪದನೆಂದುಗರ್ವ । ಗ್ರಹ ಹಿಡಿದು ಮರುಳಾಗದಿರು ಮುನ್ನೊಬ್ಬಗಾಲವನು ॥ ಬಹಳಗುರು ಕ್ಷಿಣೆಗೆ ತ್ರೊಳಲಿದು । ಮಹಿಯೊಳೆಲ್ಲಿಯು ಗಳಿಸದಿರಲವ । ನಹವ ಮುರಿದನು ಬಳಿಕ ವಿಶ್ವಾಮಿತ್ರಮುನಿ ಬಂದು ॥೧೨॥ ನಿಮ್ಮ ಪೂರ್ವಯಯಾತಿ ನಾಕದೊ । ಳೆಮ್ಮವರೋಲಾರುಂಟು ಜಗದಲಿ । ಧರ್ಮಪರನೆನೆ ಸುರರು ಹಡಿಕ್ಕಿದರು ಹಡತಲೆಗೆ ॥ ಧರ್ಮಪಥಹುಲುವಟ್ಟೆ ಯೆನಿಸಿದ । ಹಮ್ಮಿನಲಿ ಕೆಡಬೇಡ ನೀತಿಯ । ನಮ್ಮದವ ಕೆಡನೆಂದು ನಾರದ ನುಡಿದನರಸಂಗೆ ॥೧೩॥ ಅವನಿಪತಿ ಕೇಳಾವು ಪಾಂಡವ । ರವರು ಬನದಲಿ ಕಂದಮೂಲವ । ಸವಿದು ಕೊಂಬರು ಋಷಿಗಳಿಗೆ ಹಂಗೇಕೆ ಭೂಮಿಪರ ॥ ಇವರದಾವನಪಕ್ಷಪಾತ । ವ್ಯವಹರಣೆಯವರಲ್ಲ ಕೇಳಿ। ನ್ನಿವರ ನುಡಿಗಳನೆಂದು ನುಡಿದನು ಮತ್ತೆ ಮುರವೈರಿ ॥೧೪॥ ಬರಳ ಪಿಹಾಸಿಯೊಳಿಡುತ ಕಿರುನಗೆ। ವೆರಸಿ ಕರ್ಣಾಟಗಳ ವದನವ। ತಿರುಗಿ ನೋಡುತ ಹಲಯ ನುಡಿಗಳ ಕಿವುಡುಗೇಳುತ್ತ ॥ ಮರುಳುತನದಾಳಾಪವೇತಕೆ । ಮುರಹರನೆ ಪಾಂಡವರ ಹಂಬಲ। ಮರೆದು ಕಳೆ ಕರಣಕ್ಕಿಖಾತಿಯ ಬಳಸಬೇಡೆಂದ ॥೧೫॥ ಅವರು ನಮ್ಮೊಳು ಸರಸವಾಡುವ । ಹವಣದಲ್ಲದೆ ರಾಜಕಾರ್ಯವ । ನಿಹಿಗ ಯೋಚಿಸಿ ಕಳುಹಿದಂದವ ಮೆಚ್ಚಿ ನಾನಿದನು ॥ ಬವರ ಬೇಕೇ ಬೇಡಿಕೊಂಬುದು । ಅವನಿಗವನಿಯ ಮಾತ ನೀನಾ । ಡುವರೆ ಪಾಂಡವರೇಕೆ ನೀವೇಕೆಂದು ಖಳ ನುಡಿದ ॥೧೬॥ ಮಾವ ಪೊದಲುಸಹಲಿಯ ಮಧ್ಯದೊ । ಳಾವಿರಾಟನ ಸಖ್ಯ ಕಡೆಯಲಿ । ನೀವು ಮಮಪ್ರಾಣಾಹಿಯೆಂಬಿರಿ ನಿಮ್ಮ ಪಾಂಡವರ ॥ ನಾವು ಕಡಯಲಿ ಹೊರಗು ನಮಗ । ನ್ನಾವಭೂಪರ ಸಖ್ಯವಿದ್ದುದು । ದೇವ ನಾಚಿಸಬೇಡ ಸಂಧಿಯ ಮಾತು ಮರೆಯೆಂದ॥೧೭॥ ಮಾಡು ಸಂಧಿಯನೆಮ್ಮವಚನಕೆ। ಕೂಡದಿರು ನಿಪವಾತುಗಳ ನಿನ। ಗಾಡುವವರಿಗೆ ಚಿತ್ತಗೊಡದಿರು ಹಿಸುಣ ಹೊಗಿಸದಿರು ॥ ನಾಡನಾಲ್ಕಿಗೆಗಳೆಯರೆಂಬುದ । ಮಾಡಬರು ಪಾಂಡವನ್ನ

ಪಾಲರ। ಕೋಡ್ರುವಾಳಿಕೆ ಪಥ್ಯಕೇಳೆಂದಸುರರಿಪು ನುಡಿದ ॥೧೮॥ ನೀತಿಗಾಲಯ ನಿಮ್ಮ ಕುಲವಿ। ಖ್ಯಾತವದು ನೆಲೆ ಸಕಲ ಸೌಖ್ಯ । ವ್ರಾತಕಿದು ಸಚ್ಛ್ರೀಪವೆನಿಸಿತು ಕೌರವಾನ್ವಯವು ॥ ಭೂತಳದಲೋಲುಪತೆಯೊಳು ಕುಲ । ಘಾತಕನು ನೀನೆಂಬಕೀರ್ತಿಗೆ । ಯೋತುನೆಲೆಯಾಗದಿರು ಬೇಡಿದೆವೆಂದು ಹರಿನುಡಿದ ॥೧೯॥ ಧರೆಯನೃಪರಿಗೆ ಹಸ್ತಿನಾಪುರ । ದರಮನೆಯ ಬಾಗಿಲಲಿ ಸಮಯವು । ದೊರೆಕಲಂತದು ಪುಣ್ಯವೆಂಬೀಸಾರ್ವಭೌಮರಿಗೆ ॥ ಸಿರಿಗೆ ಪಾಂಡವರನ್ಯರಾದೊಡೆ । ಮೆರೆಯಲರಿವುದೆ ನಿಮ್ಮ ಸಿರಿಕಾ । ತರಿಗತನವನು ಮಾಣು ಕೇಳೆಂದಸುರರಿಪು ನುಡಿದ ॥೨೦॥ ಯಮಜನಿನಗೊಳ್ಳಿದನು ಪಾರ್ಥನ। ಮಮತೆ ನಿನ್ನಲಿ ಹಿರಿದು ಭೀಮನ। ತಮದನುದಿ ಹಿಂಗಿದ್ದವು ನಕುಲನು ನಿನ್ನೊಳೆರಡಿಲ್ಲ॥ ತಮತಮಗೆ ತಮ್ಮಿರ್ವರುಂ ನಿ । ನ್ನಮಲವಚನವಹಾರ ಹರುಷ । ಧ್ಭುಮಿತತನವನು ಮಾಡದಿರು ಸೋದರರ ಸಲಹೆಂದ ॥೨೧॥ ಆವರಿಗಿಂದ್ರಪ್ರಸ್ಥಪುರದಾ । ಜ್ಯವನು ಕುಳಸಹಿತಿತ್ತು ನೀಪಾಂ । ಡವಪ್ರತಿಷ್ಠಾಚಾರ್ಯನೆಂಬೀಬಿರುದ ಧರಿಸಿದರೆ ॥ ಆವನಿಯಲಿ ನಿನ್ನೊಡನೆ ತಲೆದೋ । ರುವ ನೃಪಾಲಕರಿಲ್ಲ ನುಡಿಗಳು । ಕಿವಿಗೆ ಕರ್ಕಶವೀಗಲಾದೊಡೆ ತುದಿಗೆ ಲೇಸೆಂದ ॥೨೨॥ ಧರ್ಮಜನ ಕಡುಮೋಹವೆಂಬುದು । ನಿಮ್ಮ ಚಿತ್ತದೊಳಿರಲಿ ಭೀಮನ । ಹಮ್ಮು ತಮ್ಮೊಳಗಿರಲಿ ಫಲುಗುಣನೊಲವದಂತಿರಲಿ ॥ ನಮ್ಮ ಭೂಮಿಯೊಳಿರ್ಪೆಯ ಬೇಡುವ । ರೆಮ್ಮ ಬಂಧುಗಳಲ್ಲ ಸಂಧಿಗೆ । ತಮ್ಮನೊಡಬಡನೆಂದು ದುಶ್ಶಾಸನನ ನೋಡಿದನು ॥೨೩॥ ಬಂಧುಕೃತ್ಯದ ಮಾತು ಸೂರ್ಯನ । ಗಂಧಕಾರವು ಸೇರುವುದೆ ನಿ । ರ್ಬಂಧದಲಿ ನೀವೇಕೆ ನುಡಿವಿರಿ ರಾಜಕಾರಿಯವ ॥ ಸಂಧಿಯಾಗದು ಪಾಂಡವರ ಸಂ । ಬಂಧನಮಗೇಕೆನುತ ಕರುಣಾ । ಸಿಂಧುವಿನ ಮೊಗನೋಡಿ ದುಶ್ಶಾಸನನು ಗರ್ಜಿಸಿದ ॥೨೪॥ ಕೆಡಿಸದಿರು ಧೃತರಾಷ್ಟ್ರಕುಲದಲಿ। ಕೊಡಲಿಯನು ನೀಹಿಡದು ವಂಶವ । ಕೆಡಿಸಿಕಳೆದೊಡೆ ಹಾನಿವೃದ್ಧಿಗಳೆಲ್ಲ ನಿನಗಹುದು ॥ ನುಡಿಗೆ ಸನುಮತರಾಗಿ ತಾಕುಲ । ಗಡಿಯನಿವ ಮುಂದರಿಯನೀವಿಂ । ತೊಡಬಡಿಸಿ ಪಾಂಡವರ ಸಾಮ್ಯವನೀಸಿಕೊಡಿಯೆಂದ ॥೨೫॥ ಈಪರಿಯ ನುಡಿಗೇಳು ದೈವದ । ಮೋಹ ತಪ್ಪಿದ ಬಳಿಕ ಸುಭಟರ । ಸಾಹಸಿಕೆ ಹುರುಳಿಲ್ಲ ನಂಬದಿರೆಮ್ಮ ಬಲುಹುಗಳ ॥ ಬಾಹಿರವ ನೀನಾಡದಿರು ವೈ । ದೇಹಿಯನು ಸೆರೆವೊಯ್ದ ಸ್ವಾಮಿ। ದ್ರೋಹಿಯನು ಹೋಲದಿರು ಕೌರವ ಯೆಂದನಾಭೀಷ್ಮ ॥೨೬॥ ನೆಲನ ಬೇಡುವಪಾಂಡವರ ಭುಜ । ಬಲದೊಳಗೆ ತುಂಡಿಲ್ಲ ನೀತಿಯ । ತಿಳಿಹಲ್ಕೆತಂದಸುರರಿಪು ಸಾಮಾನ್ಯಬಳನಲ್ಲ ॥ ಇಳೆಯೊಳರ್ಧವನೊಪ್ಪಿಗೊಡು ಯಮ । ಕುಲಲಲಾಮನ ನೇಮವನು ನೀ । ಸಲಿಸು ಕೆಡಿಸದಿರೀವಿಳಾಸವನೆಂದನಾದ್ರೋಣ ॥೨೭॥ ಪಲವು ಹೊಲ್ಲಹಗಳನು ಪಾಂಡವ । ರೊಳಗೆ ನೆನೆದೆನು ಮುಚ್ಚುಮರೆಯೇ । ನಿಳಯಲೋಭದ ಬಗೆಗೆ ನಗಳಿದರಾಜಕಾರಿಯವ ॥ ನೆಲನ ಕೊಂಡೆನು ಜೂಜಗಾರರ । ವಿಲಗದಲಿ ಪಾಂಡವಗೆ ಪುನರಪಿ । ಹಳುವವೇ ಶರಣಿಲ್ಲವಿಲ್ಲೆಲೆ ಕೃಷ್ಣ ಕೇಳೆಂದ ॥೨೮॥ ತಾಗುವೆಪಕೀರಿತಿಗೆ ಹೇಸುವ । ರಾಗಿ ಸತ್ಯವನುಳುಹಿ ಹಳುವವ । ನೀಗಿಸಿದೊಡದು ಕುಲಕೆ ಕುಂದೇ ಪಾಂಡುತನಯರಿಗೆ ॥ ನೀಗಿದರು ವನವಾಸವನು ಸಂ । ಭಾಗದವನಿಯ ಕೊಂಬ ಛಲವನು । ಹೋಗಬಿಡುವನೆ ಭೀಮನೆಂದನು ನಗುತ ಮುರವೈರಿ ॥೨೯॥ ಕೊಡು ವೃಕಸ್ಥಳವನು ಕುಶಸ್ಥಳ । ಪೊಡವಿಯಾವಂತಿಯನು ಕುಳದಲಿ । ಕೊಡಿಸಿ ಕಳೆ ಸಿರಿ ಕರಣದವರಲಿ ವಾರಣಾವತವ ॥ ಕೊಡು ನಿನಗೆ ಮನಬಂದುದೊಂ

ದನು । ನಡಿಸಿಕೊಡುವೆನು ಪಾಂಡವರನಿವ। ಗಡೆಯುತನ ಬೇಡಿನ್ನು ಕೇಳೆಂದಸುರರಿಪು ನುಡಿದ॥೩೦॥ ಪ
ರಮಪುರುಷನು ಕೃಷ್ಣರಾಯನು। ಕುರುಕುಲದ ಹಿರಿಯನು ನದೀಸುತ। ಪುರಮಥನಸಮಚಾಪವಿದ್ಯನು।
ದ್ರೋಣನಪರಂದ ॥ ಧರಣಿಪತಿ ಬಲುಹುಳ್ಳವರು ನಿ । ನ್ನರಮನೆಯಲುಂಟೇ ವಿಚಾರಿಸು । ಪಾರು
ಳುತನ ಬೇಡಿವರನುಡಿಗೇಳೆಂದನಾವಿದುರ ॥೩೧॥ ಬೇಡಿದೊಂದೊಂದೂರು ನಮ್ಮಯ । ನಾಡ ತಲೆ
ಮಂಡೆಗಳು ರಾಜ್ಯದ । ರೂಢಿಯೈದೂರುಗಳ ಬೆಳವಿಗೆ ಹಸ್ತಿನಾನಗರ ॥ ಚೇತಲಿಯನು ಮಾನನಿ
ಧಿ ಕೊಂ । ಡಾಡಲೇತಕೆ ಧರೆಯನೀರಡಿ । ಮಾಡಿಕೊಂಡ ಮಹಾತ್ಮ ನಿನಗಂಜುವೆನು ನಾನೆಂದ ॥ ೩೨॥
ಕರೆದು ಮೂರಡಿನೆಲನ ಧಾರೆಯ । ನೆರೆದು ಬಲಿ ತಳಕಿಳಿದನನ್ನೀ । ಧರೆಯೊಳೈದೂರುಗಳನಿತ್ತನಗಾ
ವಪದವಹುದು ॥ ಪರಮಪುರುಷನು ನೀನು ನಿನಗಾಂ। ಶರಣುಹೊಕ್ಕೆನು ಬಂಧಪಥದಲಿ । ಮರಳಿ ಬಿಜ
ಯಂಗೈವುದೆಂದನು ನಗುತ ಕುರುರಾಯ ॥೩೩॥ ಸಲಲಿ ನಿಜಪಾಂಡವರೊಳೆತ್ತಿದ । ಛಲದಬೇಳವಿಗೆಯ
ಕಟ ನಿಮ್ಮಯ। ಬಳಗ ಬದುಕಲಿ ಮತ್ತೆ ನವೆಯಲಿ ಧರ್ಮನಂದನನು ॥ ಜಲಧಿಸುರಿಯ ಮಹಿಯೊ
ಳೊಂದೇ। ಸ್ಥಳವನೈವರಿಗೀವುದೆನೆ ಕಳ । ವಳಿಸಿಯವಗಡಿಸಿದನು ಜಡಿದನು ದನುಜವೈರಿಯನು॥೩೪॥ ನೆ
ಲನೊಳರ್ಧವನೀವುದಿಲ್ಲೀ। ಸ್ಥಳವನೈದನು ಮುನ್ನ ಕೊಡೆಯೆ। ನ್ನಿಳೆಯೊಳಿಟವನು ಮೆಟ್ಟಲೀಯೆನೆ
ದೇಕೆಕೈವಾರ॥ ನೆಲನ ಕಡೆಯಲಿ ಮುಕ್ಕುಮೊನೆಯ। ಚ್ಚಳಿಪ ಧರಣಿಯ ಸಿತ್ತನಾದೊಡೆ। ಬಳಿಕ ನೀ ನ
ಗುಹೋಗು ಕದನಕೆ ಕೊಂಡು ಬಾಯೆಂದ॥೩೫॥ ದನವ ಕಾದುದು ತೀರ್ದ ಬನ। ಬನಕೆ ತೊಳಲ್ವು
ದು ಕಡೆಯನ್ನರಿತೆ । ಮುನಿಗಳೊಳು ಬೋಳುಗಳನೆರಗಿಸಿಕೊಂಬುದದ ಬಿಸುಟು ॥ ವನಧಿಯನೆ
ಯೆಡೆಗೊಂಡು ನಡುಹಾ । ಪಿನಲಿ ಹಕ್ಕೆಯ ಬಿಸುಟು ನಮ್ಮೊಳು । ಮನಕತವ ನೀ ತಿಳುಹಲೋಸು
ಗ ಬಹರೆ ಹೇಳೆಂದ ॥೩೬॥ ಖತಿಯ ಹಿಡಿದನು ಶೌರಿಮುಣಿಯದ । ಮತಗುಡದ ಫಣಿಕೇತನನು ಕಂ ।
ಡತುಲಬಲಗುರುಸಿಂಧುತನುಜಾಟಗಳ ಮೊಗನೋಡಿ ॥ ವ್ಯತಿಕರವನಿವಬಿಯಸಿ ಮಿಗೆ ಬೇ । ಡುತಲಿ
ಕದನವ ನೆನೆವಭೂಪನ । ಸತಿಯ ಕಪಿಯೊಳಗೋಲೆಯಸ್ಥಿರವರವೆ ತಾನೆಂದ ॥೩೭॥ ಕಡೆಗೆ ಧೃತರಾ
ಷ್ಟ್ರವನೀಶನು । ಮಡದಸುತಲೆನಾಥನಾಗಿಯೆ । ಕೆಡುವನೆಂಬುದ ಬಲ್ಲೆ ನಾಪಾಂಡವರ ರಾಜ್ಯದ
ಲಿ ॥ ಪಡಿಗೆ ಪವಮಾನಜನ ಸಮಯವ। ಹಡೆಯದಿಹ ತರುವಾಯಲೀತನು । ನಡಸಿಕೊಡುವನು ತಪ್ಪ
ದೆಕಟಕಟೆಂದನಾವಿದುರ ॥೩೮॥ ಮನದ ಸಂಕೇತದಲಿ ದುರಿಯೋ । ಧನನ ಕಟ್ಟಲು ವಿದುರಗಂಗಾ ।
ತನಯಧೃತರಾಷ್ಟ್ರವನಿಪರಾಳೋಚಿಸಿದಹದನ॥ ಮನದೊಳರಿದನು ಬಳಿಕ ದುಶ್ಶಾ । ಸನನು ದುರಿ
ಯೋಧನಗೆ ಮುನಿಬರ । ನೆನಹ ಬಿನ್ನಹಮಾಡಿದನು ಖಾತಿಯಲಿ ಕಳವಳಿಸಿ ॥೩೯॥ ಹೆತ್ತವರು ಮರ
ಳಿದರು ನಾವಿ । ನ್ನೆತ್ತ ತಿರುಗುವೆವಣ್ಣದೇವರೆ । ಚಿತ್ತವಿಸಿದಿರೆ ರಾಜಕಾರ್ಯದಹದ ವಿಸಂಚಿಸಿತು ॥
ಮುತ್ತಯನ ಕಿರಿಯಯ್ಯನಯ್ಯನ । ಚಿತ್ತಕೊಂಕಿತು ಸಾಕು ನಿಂದೆಗೆ । ನುತ್ತಲಗ್ರಜ ಸಹಿತಲೋಲ
ಗದಿಂದ ಹೊರವಂಟ ॥೪೦॥ ಮುನಿದು ದುರಿಯೋಧನನು ದುಶ್ಶಾ । ಸನನು ಕೆಲದರಮನೆಯೊಳಾ
ಳೋ । ಚನೆಯ ಮಾಡಿದರೆಂದು ಸೌಬಲಕರ್ಣರೊಡಗೂಡಿ ॥ ದನುಜವೈರಿ ಕುಮಂತ್ರದಲಿ ಬೊ। ಪ್ಪ
ನೊಳು ಖಾತಿಯನಿಕ್ಕಿದನು ಕೈ । ಮನದ ಕಲಿಗಳು ಕಟ್ಟಿ ಕೃಷ್ಣನನೆಂದು ಗಜಬಜಿಸೆ ॥೪೧॥ ಎರಡು
ಬಲವನು ಮಸೆದು ಕೊಲಿಸುವ । ಭರವು ಯಾದವನದು ನಿಧಾನಿಸ । ಲಿರಿ ನಮಗೆ ಮುರವೈರಿಯಲ್ಲದೆ

ಪ್ಪಾಂಡುಸಂದವಸರ ॥ ತರಿಸಿ ಘುಂನೇಣುಗಳನೀತನ । ಕರವೆರಡನೊಡೆಬಿಗಿದೊಡವದಿರು । ಕರಳಿ ಮಾ
ಡುವುಪಾಪ್ಪಿಪ್ರೆಂದನು ಕೌರವರರಾಯ॥೪೨॥ ಗಾಳಿಯುಪಶಮಿಸಿದೊಡೆವಹ್ನಿ ಜ್ವಾಲೆ ತಾನೇ ನಿಲುವುದೀ
ತನ। ತೋಳ್ಗಳಿಂದೊಡೆ ಬಳಿಕ ಮಸಗುಂದುವರು ಪಾಂಡವರು॥ ಮೇಳವಿಸಿ ನೇಣುಗಳನೆನುತ ನೃ। ಪಾಲ
ನೆವಟದು ಗಜಬಜಿಸುವುದ। ಸೊಲಿಸುತ ಸಾತ್ಯಕಿಯೊಡನೆ ಕೃತವರ್ಮನೆರುಹಿದನು॥೪೩॥ ಆಳುಕುದುರೆಯ
ಬಾಗಿಲಿಗೆ ಬರ । ಹೇಳು ಕೈದುವ ಕೊಂಡು ವೀರಭ । ಟಾಳಿ ಹತ್ತಿರೆ ನಿಲಲಿ ಕೃಪಸಿದರ ಕಪಿಕಪಿದು॥
ಬೀಳಬಡಿವುದು ಹೊಕ್ಕುಗಂಡನ । ಮೇಲೆ ಗಂಡನು ಕಡಿದು ಕುರುಭೂ । ಪಾಲಕನ ನೂರನತ್ತರಲಿ
ಸಾದುವುದು ಮೇದಿನಿಯ ॥೪೪॥ ಎಂದು ಸುಭಟರಿಗರುಹಿ ಸಾತ್ಯಕಿ । ಬಂದು ಕೃಷ್ಣನ ಕಿವಿಯ ಹತ್ತಿ
ರೆ । ನಿಂದು ವದನವ ಚಾಚಿ ಬಿನ್ನಹಮಾಡಿದನು ನಗುತ ॥ ಮಂದಮತಿಗಳು ತಪ್ಪಿದರು ಮನ । ಗುಂ
ದಲಾಗದು ಜೀಯ ಚಿತ್ತ್ಯ । ಸಂದೊಡಸುರಾರಾತಿ ನಗುತವೆ ಭೀಷ್ಮಗಿಂತೆಂದ ॥೪೫॥ ಪಂಣಿತಪಾರ್ಥಿ
ಗಳಿಗಂತಃ । ಕರಣನೆನವುದು ಸುಜನಸಂಗ ನಿ । ಷ್ಠುರತೆಗಲ್ಲದೆ ಮನವನೀಯರು ಮಹಿಯಮೂಢಜನ ॥
ಕರಗುವದು ಶಶಿಕಾಂತ ಚಂದ್ರನ । ಕಿರಣ ತಾಗಲು ವಜ್ರಹತಿಗ । ಬ್ಬರಿಸಿದಲ್ಲದೆ ಗಿರಿಗಳೊಡೆಯವು
ಭೀಷ್ಮಕೇಳೆಂದ ॥೪೬॥ ದೂತರನು ಕಟ್ಟುವುದು ರಾಯರ । ಗೇತರುಚಿತವು ನಮ್ಮ ಕಟ್ಟಲು । ಕಾತರ
ಸುತದ ನಿಮ್ಮ ಪೂರ್ವ್ಮರಿಟರನು ನೀ ಕರಸು ॥ ಮಾತನಾಡಿಸಿ ನೋಡು ನಮಗೀ । ಭೀತಿ ತಾನಿಲ್ಲನಲು
ಗಂಗಾ । ಜಾತ ಧೃತರಾಷ್ಟ್ರಂಗೆ ನುಡಿದನು ಕೌರವನ ಹದನ ॥೪೭॥ ಅವನಿಪತಿ ಕೇಳಿದನು ಆಗಳೆ ।
ಶಿವಶಿವೆಂದನು ವಿದುರ ಕರೆ ಕೌ । ರವನ ಮಗನೇ ಮೃತ್ಯುವಲ್ಲಾ ಭರತಸಂತತಿಗ ॥ ಅವಳ ಬರಹೇಳಿ
ತ್ತ ಮಗನಾ । ಟವನು ನೋಡಲಿ ಹೆತ್ತಮೋಹದ । ಹವಣುಗಳ ಬೆಸಗೊಂಬಗಾಂಧಾರಿಯನು ಕರ
ಯೆಂದ ॥೪೮॥ ಜನಪನಾಜ್ಞೆಯ ಮೇಲೆ ದುರಿಯೋ । ಧನನ ತಂದರು ಸಭೆಗೆ ಮತ್ತೀ । ವನಜಮು
ಖಿಗಿದನೆಂದೊಡಾಗಾಂಧಾರಿನಡತಂದು ॥ ದನುಜವೈರಿಯ ಕಟ್ಟುವೈ ಕೃ । ಷ್ಣನನು ಬಗವೈ ಧಟ್ಟಮ
ಗಹೆ । ತ್ತೆನಗೆ ಹರುಷವನಿತ್ತ ಯೆಂದಳು ಮುಳಿದು ಗಾಂಧಾರಿ ॥೪೯॥ ನಟ್ಟನಲೆಧೃತರಾಷ್ಟ್ರನೃ
ಪ ನೀ । ನಿಟ್ಟಕಿಚ್ಚಿದು ಪಾಪಮಗನನು । ಹುಟ್ಟಿದಂದೇ ಬಿಸುಡದಾದವು ಬಾಳುಗೇಡಿಯನು ॥ ಕ
ಟ್ಟುವನುಗಡ ಕೃಷ್ಣನನು ಮೈ । ಮುಟ್ಟುವನುಗಡ ಗಗನವನು ಬಲು । ಧಿಟ್ಟತನ ತಾನೇನು ಪೇಳು
ವೆನೆಂದಳಿಂದುಮುಖಿ ॥೫೦॥ ಪುರುಳಮಗನೇ ಕೃಷ್ಣರಾಯನ । ಕೆರಳಿಚುವರೇ ಯಾದವರು ನಮ ।
ಗೆರವಿಗರೆ ವಸುದೇವನಲಿ ತಾ ಭೇದವೇ ನಿನಗೆ ॥ ದುರುಳುತನವಿದು ಬೇಡ ಖುಲ್ಲರ । ನೆರವಿಯೊಳಗಾ
ಡಿದೊಡೆ ತಪ್ಪದು । ನರಕವೆಂದನು ಕುರುಪತಿಗೆ ಧೃತರಾಷ್ಟ್ರಭೂಪಾಲ ॥೫೧॥ ಎಲೆಮರುಳೆ ಧೃತರಾ
ಷ್ಟ್ರ ನಂಜಿನ । ಬಳಗವೀತನ ಬಂಧುಕೃತ್ಯದ । ಬಳಕೆಯಲಿ ನೀ ನಿನ್ನ ಕಂದನ ಬೇಡಿಕೊಳಲೇಕ್ಕೈ ॥
ಮುಳಿದು ಬಗುಳುವನಾಯ್ತೆ ಚಂದ್ರಮ । ನಳುಕುವನೆ ನರಿಯೊರಲಿದೊಡಕಳ । ವಳವಹುದೆ ಸಿಂಹ
ಕ್ಕೆಯೆಂದನು ಖಾತಿಯಲಿ ವಿದುರ ॥೫೨॥ ನೂರಜು ಪೊಕ್ಕೊಡೆ ಕಲಕುವುದೆ ಸಾ । ಗರದಜಲ ನೊಣ
ವೆರಗಿದೊಡೆ ಕುಲ। ಗಿರಿಗಳಲ್ಲಾಡುವವೆ ಕೇಳ್ ಧೃತರಾಷ್ಟ್ರಭೂಪತಿಯೆ ॥ ತೆರಳಲರವನ ಕೊಬ್ಬಿದೊ
ಳ್ಳೆಯ । ಮರಿಗೆ ಗರುಡನು ನಿನ್ನಮಕ್ಕಳ । ದುರುಳುತನಕಂಜುವೆನೆ ಮುರರಿಪು-ವೆಂದನಾವಿದುರ
॥೫೩॥ ಲೋಕವೈಮರೆವಂದು ಜಲಧಿಗ । ಳಾಕಿ ಹಳಚುವಹೊತ್ತು ತಾನಿಹ । ನೇಕಮೇವಾದ್ವಿತಿಯ

ಪರಮೇಕೈಕಮಹಿಮೆಂದು ॥ ಏಕಆತ್ಮಾಯೆಂದುವೇದಾ । ನೀಕ ಕೃಪಾರಿಸಲು ಪೆ ಚೆವನಿ । ರಾಕೃತಿಯು ಪರಬೊಮ್ಮರೂಪಿನ ತಾತ ನೋಡೀತ ॥ ಈತಸಾಮುಘಕ್ಕೈಟಭನ ಮುಂ। ಪಾತ ಜಲಧಿಯೊಳಿಳಿದು ವೇದವ । ನೀತ ತಂದವನು ಜಯನ ವಿಜಯನ ದೈತ್ಯಜನ್ಮಪನು ॥ ಈತನೊದೆದನು ಪೌಂಡ್ರಕನನಂ । ದೀತ ಕೊಂದನು ಹಂಸಡಿಬಿಕರ। ನೀತ ನೊರಸಿದನರಸ ಚಿತ್ತೈಸೆಂದನಾವಿದುರ॥೫೫॥ ಸಲಿಲಮಯವಾದಖಿಳ ಭುವನಾ । ವಳಿಗಳೊಳಗೆ ವಿರಿಂಚಿಯಾಳುತ । ಮುಳುಗುತ್ತೈತಂದಾಲದೆಲೆಮಂಚದಲಿ ಪವಡಿಸಿದ ॥ ಹೊಳವು ನೀನಾರೆಂದು ಜಠರದೊ । ಳಿಳಿಯಲಾ ಬ್ರಹ್ಮಾಂಡಶತದಲಿ । ಹೊಲಬುಗೆಡೆ ರೋಮಕ್ಕಳಲಿ ಬ್ರಹ್ಮನ ನೀತನುಗುಳಿದನು ॥೫೬॥ ಸೂಚಿಸುವಶ್ರುತಿನಿಚಯ ಬರಬರ । ನಾಚಿದವು ವೇದಾರ್ಥ ನೀತಿಯು । ವಾಚನಗಳ ಳವಡದೆ ನಿಂದವು ನಿಜವ ಕಾಣಿಸದೆ ॥ ಆಚರಿಸಲಳವಲ್ಲ ಮುನಿಗಳ । ಗೋಚರಕೆ ಮನಗುಡದಹರಿಯನು । ನೀಚರಂಯುದೆ ಬಿಗಿಯಲಳವಡಿಸಿಪರು ನೇಣುಗಳ ॥೫೭॥ ವಿದುರನಿಂತಿಂತೆನಲು ಮಿಂಚಿನ। ಹೊದರು ಹುರಿಗೊಂಡಂತೆ ರವಿಶತ । ವುದುರಿದ್ದವು ವೈಮುರಿದು ನಿಂದೆಡೆ ದೇವರಂಗದಲಿ ॥ ಸದದುದಾಸ್ಥಾನವನು ಘನತೇ । ಜದಲಿ ಹಂಪೆಗಲಾಗೆ ಹಂ ತೋ । ರಿದನು ನಿರುಪಮ ವಿಶ್ವರೂಪವನಾಮಹಾಸಭೆಗೆ ॥೫೮॥ ಚರಣದುಂಗುಟದಲ್ಲಿ ದೇವರು । ತುರುಗಿದರು ನೊಸಲಿನಲಿ ಕಮಲಜ । ಸುರಪಖಡ್ಗದೆ ರುದ್ರನಾಸ್ಯದೊಳಗ್ನಿವಾಯುಗಳು ॥ ಬೆರಳಲಿಂದ್ರಾದಿಗಳು ನಯನಾಂ। ಬುರುಹದಲಿ ರವಿ ನಾಭಿಯಲಿ ಭವ। ವರಭುಜಾಗ್ರದೊಳಖಿಳ ದಿಗುಪಾಲಕರು ರಂಜಿಸಿತು॥೫೯॥ ಸುರರು ಖಚರರು ಕಿಂನರರು ಕಿಂಪುರುಷರುರಗಸಿದ್ಧವಿದ್ಯಾ । ಧರರು ವಸುಗಳು ಮನುಗಳಾದಿತ್ಯರು ಭುಜಂಗಮರು ॥ ಗರುಡಗಂಧರ್ವಾಶ್ವಿನೀದೇ । ವರು ಸುಪರ್ವದೇವರಖಿಳಾ । ಪ್ಸರಸರೆಸೆದರು ರೋಮರೋಮದ ಕುಳಿಯ ಚಂದದಲಿ ॥೬೦॥ ಬಲವಭುಜದಲಿ ಪಾರ್ಥನೆಡದಲಿ । ಹಲಧರನು ಚರಣದಲಿ ಧರ್ಮಜ । ಕಲಿವೃಕೋದರನಕುಲಸಹದೇವಾದಿಯಾದವರು ॥ ಲಲಿತಕಾಂತಿಯೊಳಖಿಳತಾರಾ । ವಳಿಗಳ ಮಲಗ್ರಹಪಟಲ ಕುಳ । ತೆಳಗಿ ಮೆರೆದನು ವಿಶ್ವರೂಪವಿಹಾರಿ ಮುರವೈರಿ ॥೬೧॥ ಕಿವಿಗಳಲಿ ಕಂಗಳಲಿ ನಾಸಾ । ವಿವರದಲಿ ಹೊಗೆ ಮಸಗಿ ಥಳ್ಳಿಸಿ । ತಿವಿದುದಾಕಾಶವನು ಕಪಿದುದು ಕಾಂತಿ ದೆಸೆದೆಸೆಗೆ ॥ ಕಂಕಮುತರುಬ್ಬಾಳುತನ ಪರಿ । ಕ್ಕರ ಮಹಾದ್ಭುತವಾಯ್ತು ಕಂಡುದು । ಹರಿಯ ರೂಪವ ಕೊಬ್ಬಿನವರಲ್ಲದುಳಿದವರು ॥೬೨॥ ತಳುಕನುಗಡದಾಡಿ ಪುಳಕಿತ । ಪುಳಕದಲಿ ನನನನದು ಹರುಷದ। ಜಲಧಿಯಲಿ ಮನಮುಳುಗಿ ಭಕುತಿಯಭಾರದಲಿ ಕುಸಿದು ॥ ಅಳುಕಿ ತಮುಮುಗೆದ್ದು ಮುನಿಸಂಕುಲಸಹಿತ ಗಾಂಗೇಯಕೃಪನಿ । ರ್ಮಲವಿದುರಗುರುಸಂಜಯಾದಿಗಳೆರಗಿದರು ಪದಕೆ ॥೬೩॥ ಒಳಗೆ ಥಳಥಳಿಸಿನು ಬಾಹ್ಯದಲಿ ಪ । ಜ್ಜಳಿಸಿದನು ತಾನಲ್ಲದನ್ಯರೆ । ಬಳಿಕ ಬೇರೊಂದಲ್ಲದಂತಿರೆ ಕೂಡೆ ತೋರಿದನು ॥ ಒಳಗೆ ಬಿಗಿದಪ್ಪೊ ಹೊರಗೆ ಕೃಷ್ಣನ। ಸಿಲುಕಸುವಪ್ರೌಢಿಯೆ ಕೃಷ್ಣರು। ಹಲಬರಿಹರಾರಾರ ಕಟ್ಟುವಪಂದರಾಖಳರು ॥೬೪॥ ಅನುಪಮಾದ್ಭುಯದಲ್ಲಿ ಮುಳ್ಳಿನ । ಮೊನಗೆ ಮೋಹುವರಿಲ್ಲ ತೆರಹಿಂ । ಬಿನಿತುಪರಿಪೂರ್ಣದಲಿ ಸಭೆಯಣುಮಾತ್ರರೂಪದಲಿ ॥ ಮನದ ಬಗೆ ಮುಟ್ಟದಮಹಾಮಹಿ । ಮನನು ಕಟ್ಟುವೆವೆಂತೆನುತ ತನ। ತನಗೆ ಕರ್ಣಾದಿಗಳು ಕೈಗಳ ಕದಪ ತೂಗಿದರು॥೬೫॥ ವಿಮಳಕರುಣಾಸಿಂಧು ನೀನನು । ಪಮಚರಿತ್ರನು ನಿಮ್ಮಡಿಯ ಪದ । ಕಮಲದರುಶನದಿಂದ ಹಿಂಗಿದವಘದರಾತಿ

ಗಳು ॥ ಸಮತೆಯಲಿ ನೀ ನೋಡು ಶರಣರ । ಮಮತೆ ಬೇಹುದು ಜೀಯ ಲಕ್ಷ್ಮೀ । ರಮಣ ಕೃಪೆ ಮಾಡೆನುತ ವೈಯಿಕ್ಕಿದಳು ಗಾಂಧಾರಿ ॥೬೬॥ ಮಾನ ನಿನ್ನದು ಭಕತಜನದಪ । ಮಾನ ನಿನ್ನದು ನಿನ್ನ ಶರಣರ । ಹಾನಿವೃದ್ಧಿಗಳೆಲ್ಲ ನಿನ್ನದು ಬೇರೆಗತಿಯುಂಟೆ ॥ ಆನತರ ತೇಜೋಭಿಮಾನವ । ನೀನೊಲಿದು ಸಲಹೆಂದು ಮುದದಲಿ । ಭಾನುಮತಿ ವೈಯಿಕ್ಕಿದಳು ಮುರಹರನ ಚರಣದಲಿ ॥ ಕಂಗಳನು ಕರುಣಿಸಿದನಂಧನೃ । ಪಂಗೆ ಬಳಿಕೀಕೃಷ್ಣರಾಯನ । ಮಂಗಳಶ್ರೀಮೂರ್ತಿಯನು ಮನತಣಿಯೆ ತಾ ನೋಡಿ ॥ ಕಂಗಳೆಡಗಲಿ ದೇವ ನಿಮ್ಮಾ । ಯಂಗವಟ್ಟವ ಕಂಡಬಳಿಕೀ । ಕಂಗಳಿತರವ ಕಾಣಲಾಗದು ಕೃಪೆಯು ಮಾಡೆಂದ ॥೬೮॥ ತಾತ ಹೆದರದಿರೀಮುಕುಂದನ ಕೈ । ತವಕ ಬೆಚ್ಚದಿರು ಸಂಧಿಯ । ಮಾತು ತಾನಿದು ಹೃದಯವೇ ಬಸಗೊಳ್ಳಿ ಮುರಹರನ॥ ಈತನಂತರ್ಯಾಮಿಜೀವ । ವ್ರಾತದಲಿ ಜನಜನಿತಮೀಜಗ। ವೀತಸಾಕ್ಷ್ಯೊಯೊಳೊಲೆವುದೆಂದನು ಕೌರವರರಾಯ॥೬೯॥ ಸಂಗಿಯೆನಿಸನು ಜಗವ ಹುಟ್ಟಿಸಿ।ನುಂಗಿದೊಡೆ ನಿಷ್ಕರುಣಿಯೆನಿಸನು। ಅಂಗರಕ್ಷೆಯ ಮಾಡಿ ಮೋಹಿತನಲ್ಲ ಮೂಜಗಕೆ॥ ಜಂಗಮಸ್ಥಾವರಕೆ ಚೈತ। ನ್ಯಾಂಗರಕ್ಷನು ಘನಕೆ ಘನವಣು। ವಿಂಗೆ ತಾನಣುವೆನಿಪಪರತರವಸ್ತು ನೋಡೀತ॥೭೦॥ ಎನ್ನ ಹೃದಯದೊಳಿರ್ದ ಮುಕುಂದನು। ಗನ್ನದಲಿ ಸಂಧಿಯನು ರಿಪುಗಳೊ। ಳಿನ್ನು ತಾ ತನ್ನವರೊಳಿರ್ದಾನುಡವನೀಹದನ॥ ಭಿನ್ನನಂತಿರೆ ತೋರಿಭಸ್ಮಾ। ಭಿನ್ನನಂತಿರವೆರವ ತಿಳಿದುಲ। ಭಿನ್ನನೈ ಮುರವೈರಿ ಸಾವಿನ್ನಂಜಲೇಕೆಂದ॥೭೧॥ ಹಳಚುವುವು ಹಾಹೆಗಳು ಸೂತ್ರವ । ನೆಲುಗಿದೊಡೆ ತತ್ಪುಣ್ಯಪಾಪಾ। ವಳಿಗಳಾ ಹಾಹೆಗಳಿಗೊಂದೇ ಸೂತ್ರಧರನಿರಲು॥ ಕೊಲುವನನ್ಯರನನ್ಯರಿಂದವೆ । ಕೊಲಿಸುವನು ಕಮಲಾಕ್ಷನಲ್ಲದೆ ಉಳಿದಜೀವವ್ರಾತಕೀಸ್ವಾತಂತ್ರ್ಯವಿಲ್ಲೆಂದ ॥೭೨॥ ಇಳಿದನವನಿಗೆ ಧಾರುಣಿಯು ಹೊರೆ। ಗಳೆಯಲೋಸುಗವಿಲ್ಲಿ ನಮ್ಮೊಳ। ಗೊಳಗೆ ವೈರವಬಿತ್ತಿ ಬರಕೈವನು ಮಹಾಬಲವ॥ ಛಲಕೆ ಮಣಿಯದೆ ರಾವಣಾದಿಗ। ಳಳಿದರದೆಲಾ ಕೀರ್ತಿಕಾಯವಿ । ದಳಿವುದೆಗ್ಗದಕೀರ್ತಿಯುಳಿದಿರಲಂಜಲೇಕೆಂದ ॥೭೩॥ ನಾವು ಸಂಧಿಯನೊಲಿವೆವೆಮ್ಮಯ । ಭಾವದಲಿ ಹುಳುಕಿಲ್ಲ ಸಂಪ್ರತಿ । ದೇವನಭಿಮತವಲ್ಲ ಬಲ್ಲೆನು ಮುರಹರನ ಬರವ ॥ ನೀವು ಮೇಗರೆಯುರಿತದವರೆ । ರಾವಣಾದಿಯು ಬಗೆಯ ಬಲ್ಲೆನು। ಸಾವೆನೀತನ ಕೈಯಬಾಯಲಿ ಭೀತಿ ಬೇಡೆಂದ ॥೭೪॥ ಮಣಿದು ಬದುಕುವನಲ್ಲ ಹಗೆಯಲಿ। ಸೆಣಸಿ ಬಿಡುವವನಲ್ಲ ದಿಟವಧಾ। ರಿಣಿಯ ಸಿರಿಗೆಳುಪುವವನಲ್ಲಳುಕಿಲ್ಲ ಕಾಯದಲಿ ॥ ರಣಮಹೋತ್ಸವವೆಮ್ಮಮತ ಕೈ । ದಣಿಯೆ ಹೊಯ್ದಾಡುವೆನು ಕೃಷ್ಣನ । ಕೆಣಕಿದಲ್ಲದೆ ಮಹಿಲದಲಿ ಕೈವಲ್ಯವಿಲ್ಲೆಂದ ॥೭೫॥ ಎನಲು ನಸುನಗುತಸುರರಿಪುಮು । ನ್ನಿನಸ್ವರೂಪಾಕಾರವನು ಮಗು । ಳೆನುಕರಿಸಿ ಧೃತರಾಷ್ಟ್ರಭೀಷ್ಮರಿಗೆಂದನೀಹದನ ॥ ಘನಸುಯೋಧನಪಾಂಡುವಿನನಂ । ದಸರೊಳಾದವಿವಾದ ನಮಗೇ । ಕೆನುತ ರಾಜಾಲಯವನಸುರಧ್ವಂಸಿ ಹೊರವಂಟ ॥೭೬॥ ಬಂದು ವಿದುರನ ಮನೆಗೆ ದೇವಮು । ಕುಂದ ಕುಂತಿಯ ಕರೆದು ನಿನ್ನಯ। ಕಂದರೈವರಮೇಲೆ ಕೌರವನೃಪರ ಖತಿ ಹಿರಿದು ॥ ಇಂದು ಮುರಿದುದು ಸಂಧಿ ನಿನ್ನಯ । ಕಂದಕರ್ಣನ ಬೇಡಿಕೊಳು ನೀನೆಂದು ನೇಮಿಸಿ ಮರಳಿದನು ಮುರವೈರಿ ಹರುಷದಲಿ ॥ ವಿದುರಭಾರದ್ವಾಜಗೌತಮ । ನದಿಯಮಗಧೃತರಾಷ್ಟ್ರನಾತನ । ಸುದತಿಕರ್ಣವಿಕರ್ಣಶಲ್ಯಸುಬಾಹುಗುರುಸುತರು ॥ ವದನದುತ್ಸವ ಮಡಗಿ ಕೃಷ್ಣನ । ಪದವನೋಲೈಸುತ್ತಬರೆ ಕರು। ಣದಲಿ ಮುರಹರನವರನುಚಿತೋಕ್ತಿಯ

ಲಿ ಬೀಳ್ಕೊಟ್ಟ ॥೭೮॥ ನಯದೊಳೇಕಾಂತದಲಿ ಸಲೆ ತೋ । ರಿಯೆ ನುಡಿವುದವನಾಸೆಯನು ನೀವ್ ।
ಬಯಸಲಾಗದು ಹಿತವನೇ ಮಾಡುವುದು ಕುರುಕುಲಕೆ॥ ನಿಯತವಿದು ಪಾಂಡವರೊಡನೆ ಸಂ । ಧಿಯೆ
ಸದರ ಸಮರಂಗವಿದು । ನ್ವಯಕೆ ನಿರ್ಣಯವೆಂದು ನೀವಾತಂಗೆ ಹೇಳುವುದು ॥೭೯॥ ಎಂದುಗಾಂ
ಗೇಯಾದಿಗಳನರ । ವಿಂದನಾಭನು ಬೀಳುಕೊಟ್ಟನು । ನಿಂದನಾರವಿಸುತನ ಕರೆದನು ರಥದ ಹೊರೆಗಾ
ಗಿ ॥ ಬಂದು ಕಿರಿದೆಡೆಗಾಗಿ ಕಳುಹುವು । ದೆಂದು ನೇಮಿಸಿ ಬಳಿಕ ತಾಪಸ । ವೃಂದವನು ಕಾರುಣ್ಯನಿ
ಧಿ ಕಳುಹಿದ ತಪೋವನಕೆ ... ... ॥೮೦॥

ಅಂತು ಸಂಧಿ ೯ ಕ್ಕೆ ಪದ ೫೮೮ಕ್ಕಂ ಮಂಗಳಮಸ್ತು.

ಹತ್ತನೆಯ ಸಂಧಿ.

ಸೂಚನೆ ॥ ಸೆಣಸುವದಟರಗಂಡ ಸಮರಾಂ । ಗಣಕತುಲಭೇರುಂಡನಾವಿನ । ಮಣಿಯುಮಗನುದ್ದಂ
ಡಕರ್ಣನ ಕಂಡಳಾಕುಂತಿ ॥

ಪದ ॥ ಒಲಿದವರನುಜ್ಜೀವಿಸುವಬಗೆ । ಬಲುಹು ಮುರಮಥನಂಗೆ ಮುನಿದರ । ತಲೆಯ ಬರ
ಹವ ತೊಡೆವನಲ್ಲದೆ ಬಳಿಕ ಸ್ವೈರಿಸನು ॥ ನಳಿನನಾಭನು ಭುಜಕಳಂಗೆ ಬೆಂ । ಬಳಿಯ ಬಿರುದನು ಭೇದದಲಿ
ಕುರು । ಕುಲವ ಕೊಂದನು ಕೇಳು ಜನಮೇಜಯಮಹೀಪಾಲ ॥೧॥ ಇನತನೂಜನಕೂಡೆ ಮೈದುನ ।
ತನದ ಸರಸವನೆಸಗಿ ರಥದೊಳು । ದನುಜರಿಪುಬರಸೆಳೆದು ಕುಳ್ಳಿರಿಸಿದನು ಪ್ರೀತದಲಿ ॥ ಎನಗೆ ನಿಮ್ಮಡಿ
ಗಳಲಿ ಸಮಸೇ । ವನೆಯೆ ದೇವ ಮುರಾರಿಯಂಜುವೆ । ನೆನಲು ತೊಡೆಸೋಂಕಿನಲಿ ಸಾರಿದು ಶೌರಿ
ಯಿಂತೆಂದ ॥೨॥ ಭೇದವಿಲ್ಲೆಲೆಕರ್ಣ ನಿರ್ಮಳ । ಯಾದವರು ಕೌರವರೊಳಗೆ ಸಂಪಾದಿಸಿದೊಡನ್ವಯ
ದ ಮೊದಲೆರಡಿಲ್ಲ ನಿನ್ನಾಣೆ ॥ ಮೇದಿನೀಪತಿನೀನು ಚಿತ್ತದೊ । ಳಾದುದರಿಪಿಲ್ಲೆನುತ ದಾನವ । ಸೂ
ದನನು ರವಿಸುತಗೆ ಕಿವಿಯಲಿ ಬಿತ್ತಿದನು ಭಯವ ॥೩॥ ದಾನವಾಂತಕ ಬೆಸಸು ವಂಶವಿ । ಹೀನನನು
ನಿಮ್ಮಡಿಗಳೊಡನೆ ಸ । ಮಾನಿಸುವರೇ ನಾಕನುತ ರವಿಸೂನು ಕೈಮುಗಿದು ॥ ಮಾನನಿಧಿ ನಿನ್ನಾಣೆ ಬಾ
ರೈ । ನೀನು ನಮ್ಮೆಲ್ಲರ ಹವಣೆ ವರ । ಭಾನುವಂಶಲಲಾಮ ನೀ ರಾಮಂಗೆ ಸರಿಯೆಂದ ॥೪॥ ಕಳೆದು
ಕೊಂಡನು ಮೀಳೆಯವನಂ । ಜುಳಿಯಲಾತಂಗಿತ್ತು ಕರ್ಣನ । ಕೆಲಕೆ ಬರಸೆಳೆದವನ ಕರದೊಳು ಕರತ
ಳವನಿಕ್ಕಿ ॥ ಎಲೆದಿವಾಕರತನಯ ವಿನ್ನಹ । ಕುಲವನರಿಯೆಯಲಾ ಸುಯೋಧನ । ನಲಿ ವೃಥಾಸೇವ
ಕತನದಲಿಹುದುಚಿತವಲ್ಲೆಂದ ॥೫॥ ಲಲನೆ ಪಡೆದಳೈದುಮಂತ್ರದಿ । ಗಳಲಿ ಮೊದಲಲಿ ನಿನ್ನ ನಂತ
ರ । ದಲಿ ಯುಧಿಷ್ಠಿರದೇವ ಮೂರನೆಯಾತ ಕಲಿಭೀಮ ॥ ಫಲುಗುಣನು ನಾಲ್ಕನೆಯಲೈದನೆ । ಯಲಿ
ನಕುಲಸಹದೇವರಾದರು। ಬಳಿಕಮಾದ್ರಿಯಲೊಂದುಮಂತ್ರದೊಳಿಬ್ಬರುದಿಸಿದರು ॥೬॥ ಅದರನಾಪಾಂ
ಡವರಲೈವರ । ಮೊದಲಿಗನು ನೀನಿರಲು ಧರಣಿಯ । ಕದನಪಿತ್ಥಂಡಕ್ಕೆ ಕಾಮಿತವಲ್ಲ ನೀನಿರಲು ॥ ಇ

ದು ನಿಧಾನವು ಕರ್ಣ ನಿನ್ನ । ಭ್ಯುದಯವನೆ ಬಯಸುವೆನು ನಿನ್ನಯ । ಪದಕೆ ಕೆಡಹುವೆನೈವರನು ನಡೆ ತನ್ನಸಂಗಾತ ॥೭॥ ನಿನಗೆ ಹಸ್ತಿನಪುರದ ರಾಜ್ಯದ । ಘನತೆಯನು ಮಾಡುವೆನು ಪಾಂಡವ। ಜನಪಕೌರವಜನಪರೋಲೈಸುವರು ಗದ್ದುಗೆಯ ॥ ನಿನಗೆ ಕಿಂಕರವೆರಡುಸ್ಸಂತತಿ । ಯೆನಿಸಲೊಲ್ಲದೆ ನೀನು ದುರಿಯೋ । ಧನನ ಬಾಯ್ದಂಬುಲಕೆ ಕೈಯಾನುವರೆ ಹೇಳೆಂದ ॥೮॥ ಎಡದಮೈಯಲಿ ಕೌರವೇಂದ್ರರ । ಗಡಣ ಬಲದಲಿ ಪಾಂಡುತನಯರ। ಗಡಣವಿದಿರಲಿ ಮಾದ್ರವಾಗದಯಾದವಾದಿಗಳು ॥ ನಡುವೆ ನೀನೋಲಗದೊಳೊಪ್ಪುವ । ಕಡುವಿಳಾಸವ ಬಿಸುಟು ಕುರುಪತಿ । ನುಡಿಸೆ ಜೀಯಹಸಾದವೆಂಬುದು ಕಷ್ಟ ನಿನಗೆಂದ ॥೯॥ ಶೌರಿಯುವಲಿದಿರಿಲ್ಲ ಕುಲದಲಿ । ಸೂರಿಯನ ಮಗನೊಡನೆಹುಟ್ಟಿದ। ವೀರರೈವರು ಪಾಂಡುತನಯರು ನಿನ್ನ ವೈಭವಕೆ ॥ ಆರು ಸರಿಯೈ ಕರ್ಣ ನಡೆನಡೆ । ಧಾರಿಣೀಪತಿಯಾಗು ನೀನಿರೆ । ವೈರಪಿತ್ತಂಡಕ್ಕೆ ಬಳಿಕಿಲ್ಲೆಂದನಸುರಾರಿ ॥೧೦॥ ಕೊರಳಸೆಲೆಹಿಗ್ಗಿದುವು ದೃಗುಜಲ । ವೃರವಣಿಸಿ ಕಡುನೊಂದನೆಂಟಾ । ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ ॥ ಹರಿಯು ಹಗೆ ಪೊಗೆದೋರದುರುಹದೆ । ಬರಿದೆ ಹೋದುದೆ ತನ್ನ ವಂಶವ । ನರುಹಿ ಕೊಂದನು ಹಲವುಮಾತೇನೆಂದು ಚಿಂತಿಸಿದ ॥೧೧॥ ಕಾದಿ ಕೊಲುವೊಡೆ ಪಾಂಡುಸುತರು ಸ । ಹೋದರರು ಕೊಲಲಿಲ್ಲಕೊಲ್ಲದೆ । ಕಾದೆ ಸಾದೊಡೆ ಕೌರವಂಗೆವನಿಯಲಿ ಹೊಗಲಿಲ್ಲ ॥ ಭೇದದಲಿ ಹೊಕ್ಕಿರಿದನೋ ಮಧು। ಸೂದನಕಟಕಟೆನುತ ಘನಚಿಂ। ತೋದಧಿಯಲದ್ದವೊಲು ಮೌನದೊಳಿದ್ದನಾಕರ್ಣ ॥೧೨॥ ಏನುಪೇಳ್ಕೈ ಕರ್ಣ ಚಿತ್ತ । ಗ್ಲಾನಿಯಾವುದು ಮನಕೆ ಕುಂತೀ । ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ ॥ ಹಾನಿಯಿಲ್ಲೆನ್ನಾಣೆ ನುಡಿನುಡಿ । ಮೌನವೇತಕೆ ಮರುಳುತನ ಬೇ। ಡಾನು ನಿನ್ನ ಪದೆಸೆಯ ಬಯಸುವನಲ್ಲ ಕೇಳೆಂದ ॥೧೩॥ ಮರುಳುಮಾಡುವಮಹಿಯರಾಜ್ಯದ । ಸಿರಿಗೆ ಸೋಲುವನಲ್ಲ ಕೌಂತೇ । ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ ॥ ಹೊರೆದಪಾತ್ರಾರಂಗೆ ಹಗೆವರ । ತಿರವನ[illegible]ದೊಪ್ಪಿಸುವೆನೆಂಬೀ । ಭರದೊಳಿರ್ದನು ಕೌರವೇಂದ್ರನ ಕೊಂದೆ ನೀನೆಂದ ॥೧೪॥ ಒಡನೆ ಹುಟ್ಟಿದೆನೆಂಬಕಥನವ । ನೆಡೆಗುಡದೆ ಬಣ್ಣಿಸಿದೆ ವಿಜಯನ । ನೆಗಡುಬಾಣಕೆ ಬಲಿಯುನಿಕ್ಕುವಹದನ ಮಾಡಿಸಿದೆ ॥ ನುಡಿದು ಫಲವೇನಿನ್ನು ಕೇಳೆ । ನ್ನೊಡೆಯನಾದಂತಹೆನು ಬಾಣನು । ಪೊಡವಿಯಲಿ ನೀ ಹರಹಿಕೊಳು ನಿನ್ನವರ ನಿಲಿಸೆಂದ ॥೧೫॥ ವೀರಕೌರವರಾಯನೇ ವಾ । ದಾರಪಾತ್ರನ ಹಗೆಯೆ ಹಗೆ ಕೈ । ವಾರವೇ ಕೈವಾರವಾದಂತಹೆನು ಕುರುನೃಪತಿ ॥ ಶೌರಿ ಕೇಳ್ಕೆ ನಾಳೆ ಸಮರದ । ಸಾರದಲಿ ತೋರುವೆನು ನಿಜಭುಜ । ವಾರತೆಯ ಸಂಪನ್ನತನವನು ಪಾಂಡುತನಯರಲಿ ॥೧೬॥ ಪಲವುಮಾತೇನಖಿಳಜನಕೆ । ನ್ನಳಿವು ಸೊಗಸದು ಕೌರವೇಶ್ವರ । ನೊಲುಮೆ ತಪ್ಪಿಸಿ ಭುವನದೊಳಗೆನಗಾಪ್ತಜನವಿಲ್ಲ ॥ ಸಲಹಿದನು ಮನ್ನಣೆಯೊಯೆನಗ । ಗ್ಗಳಿಕೆಯಲ್ಲದೆ ಹೀನವೃತ್ತಿಯ । ಬಳಸಿ ನಡಸೆನು ಕೌರವೇಂದ್ರನನೆಂತು ಮರೆದಪೆನೋ ॥೧೭॥ ಮೋಡಿ ತಣಿಯನು ಬಿರುದ ಹೊಗಳಿಸಿ । ಮಾತಿ ತಣಿಯನು ನಿಚ್ಚಲುಚಿತವ । ಮಾಡಿ ತಣಿಯನು ಮಾನನಿಧಿಮನದೆಂತು ಮರೆವಪೆನು ॥ [illegible]ತಲಾಗನು ಕೃಷ್ಣ ಖ್ಯಾತಿಯ। ಮಾದಲಾಗದುಬಂದನಾದೊಡೆ । ರೂಢಿ ಮೆಚ್ಚದು ಕೌರವನ ಹಗೆ [illegible] ತನಗೆಂದ ॥೧೮॥ ಅರು[illegible]ಜಲಸಾಮ್ರ್ಯದಲಿ ಬಂಬಲುಗರುಳು ಚರುವಿನಯೆಲುವಿನೊಟ್ಟಲ । ಬೆರಳಸಮಿಧೆಯಸತಗನಹುತಾಮತಿಯರಚನೆಯಲಿ ॥ ಸಿರಕಪಾ

ಲದಪಾತ್ರೆಗಳ ತಿಲ । ದೊರಳೆಗಳ ಕೇಶೌಘದರ್ಭೌಘ । ಕುರುವಲಾಹವಯಜ್ಞದೀಕ್ಷಿತನಹೆನು ತಾನೆಂದ ॥೧೯॥ ವರಾಂಗೌತ್ರವನಾಯವು ನಾಳೀ । ಭಾರತವು ಚತುರಂಗಬಲದಲಿ । ಕೌರವರೊಣ ಹಿಂಗೆ ರಣದಲಿ ಸುಭಟಕೋಟಿಯನು ॥ ತೀರಿಸಿಯೆ ಪತಿಯುವಸರಕ್ಕೆ ಶ । ರೀರವನು ನೂಕುವೆನ್ನ ನಿಶ್ಚಯ । ವೀರಶೈವರ ಸೋಯಿಸೆನು ರಾಜೀವಸಖನಾಣೆ ॥೨೦॥ ಎನಲು ಕರ್ಣನ ದೃಢವ ಕಂಡನು । ಮನದೊಳುತ್ಸಾಹಿಸಿದನಾದೊಡೆ । ತನಯರೈವರ ಪದನು ನಿನ್ನದು ಬಲುಹ ಮಾಡುವೊಡೆ ॥ ಮನಕೆ ಖತಿಯುಹುದರುಹದಿರ್ದೊಡೆ । ತನಗೆ ಗುಣವಲ್ಲೆಂಬಕಾರಣ । ವಿನಿತನೊಡ್ಬಿಸಿದೆನು ನೀ ಸುಖಿಯಾಗು ಹೋಗೆಂದ ॥೨೧॥ ಬಂದೊಡೊಳ್ಳಿತು ಬಾರದಿದ್ದೊಡೆ । ಕಂದ ಕೇಳ್ನೆ ಮಧುರವಚನವು । ಮಂದಮತಿಯುಸುತಿಳುಹಿ ತಮ್ಮಂದಿರಿಗೆ ರಾಜ್ಯವನು ॥ ಇಂದು ಕೊಡಿಸುವದುಚಿತ ಸಂಪ್ರತಿ । ಗಂಬು ಸೇರಿಸು ನಿನ್ನದಾತನು । ಒಂದುಗಳೆಯನು ಕೌರವೇಶ್ವರನೆಂದನಸುರಾರಿ ॥೨೨॥ ಮಸೆದುಬತ್ತಂಪದಲಿ ಮತ್ಸರ । ಸಸಿತ ತಾನೀಗನೀತಿಯ । ನುಸುಬದೊಡೆಮನಗಾಣ್ಬನೇ ಕೌರವಮಹೀಶ್ವರನ ॥ ಪಿಷಮವದು ಕಟ್ಟಾಳುಮಂತ್ರದೊ । ಳೆಸಗಲಾಗದು ತನ್ನ ವೀರತೆ । ನುಸುಳಹುದು ಮುರವೈರಿ ಸಲ್ಲಿಯುನರಿಯೆ ನಾನೆಂದ ॥೨೩॥ ಸಳುಹಬೇಹುದು ದೇವ ದಿನಪತಿ । ಯಿಳಿದನಪರಾಂಬುಧಿಗೆ ಸಂಪ್ರತಿ । ಯುಳಿದಹೊತ್ತಿಂದೀಗ ನಟ್ಟನೆ ನೀವು ಪಾಂಡವರು ॥ ಹುಲುಸರವಿ ಹಾವಹುದು ಹುತ್ತಿನ । ತಲೆಯುಲಿರಲಜ್ಞನಿಗೆ ಹಿತುಣರ । ಬಳಿಕೆ ಹೊಗುವುದು ಕಳುಹಬೇಕೆಂದೆರಗಿದನು ಕರ್ಣ ॥೨೪॥ ಬೀಳುಕೊಂಡನು ಮನೆಗೆಬಂದು ವಿ । ಶಾಲಮತಿ ಚಿಂತಿಸಿದನಾಸಿರಿ । ಲೋಲನಮಾಡಿದಮಂತ್ರಮನದಲಿ ನಟ್ಟು ಬೇರೂರಿ ॥ ಕಾಳುಮಾಡಿದನಕಟ ಕೌರವ । ಬಾಳಲರಿಯದೆ ಕೆಟ್ಟನೀಗೋ । ಪಾಲ ಬಂದೇ ಬಿಡನು ಜೀವವ ಕೊಳ್ಳದಿರನೆಂದ ॥೨೫॥ ವೀರ ರವಿಸುತನೊಂದುದಿನ ರವಿ । ವಾರದಲಿ ಸಂತೋಷ ಮಿಗೆ ಭಾ । ಗೀರಥೀತೀರದಲಿ ತಾತಂಗರ್ಘ್ಯವನು ಕೊಡುತ ॥ ಸಾರಮಂತ್ರವ ಜಪಿಸುತಿರಲು ಪೃ । ದಾರಸುರಭೂಜನನುಕುಂತೀನಾರಿ ಕಾಣಲುಬಂದಳಾತ್ಮಜನಿದ್ದನೆಡೆಗಾಗಿ ॥೨೬॥ ಬರಲು ತಾಯ್ ದಿರಾಗಿ ರವಿಸುತ । ನಿರದೆ ಬಂದನು ದಂಡವಂತಿಕೆ । ಚರಣದಲಿ ಮೈಯಿಕ್ಕಲಾತನ ನೊಸಲ ನೆಗಹಿದಳು ॥ ಬರಸೆಳೆದು ಬಿಗಿಯಪ್ಪಿದಳು ನೀ । ರುರವಣಿಸಿದವು ನಯನದಲಿ ಸೆರೆ । ಕೊರಳೆಗಾಹಿದುದಳಲಿನಬುಧಿಯೊಳಾಳ್ದಳಾಕುಂತಿ ॥೨೭॥ ಆಸಮಯದಲಿ ಗಂಗೆ ನಾರೀ । ವೇಷದಲಿ ನಡೆತಂದಳೆಲೆಕುಂ । ತೀಸತಿಯೆ ಕೈಯೊಡೆಯಕಂದನನೊಪ್ಪುಗೊಳು ನೀನು ॥ ಈಸುದಿನಪಿವಸಾಗುಹೋಗಿನ । ಭಾಷೆಯನು ತಲೆಗಾಯ್ದೆನೆನ್ನಯ । ಭಾಗೆ ಸಂದುದೆನುತ್ತ ತಾಯಿಗೆ ಕೊಟ್ಟಳಾತ್ಮಜನ ॥೨೮॥ ಇರಲಿರಲು ರವಿ ಬಂದನಕ್ಕಟ । ಕರೆದನೀತನ ಕಿವಿಯೊಳೆಲ್ಲವ । ನೊರೆವ ನಿನಗೆಲೆಮಗನೆ ಕುಂತೀದೇವಿ ತಾಯಿಯುದು ॥ ಮುರಹರನ ಮತದಿಂದ ನಿನ್ನಯ । ಸರಳುಬೇಡಲು ಬಂದಳೆಂದಿನ । ಹರಿಗೆ ಕವಚವನಿತ್ತವೊಲು ಮರುಳಾಗಬೇಡೆಂದ ॥೨೯॥ ಬೆಸಸಿದುದಕೆ ಪಸಾದವೆಂದನು । ಬಿಸಜಬಂಧುವ ಕಳುಹಿದನು ಮು । ಸ್ಸಿಸಿದನಿತ್ತಲು ಮಾತೆಯನು ಭಯಭರಿತಭಕ್ತಿಯಲಿ ॥ ಒಸೆದು ಬಿಜಯಂಗೈದಪದವನು । ಪುಸುರಬೇಹುದು ತಾಯೆಯೆನೆ ಶೋ । ಕಿಸುತ ನುಡಿದಳು ಕುಂತಿ ಕರ್ಣನ ತೆಗೆದು ಬಿಗಿಯಪ್ಪಿ ॥೩೦॥ ಮಗನೆ ತಮ್ಮಂದಿರನು ಪಾಲಿಸು । ವಿಗಡತನವನು ಮಾಣು ನೀನೋ । ಲಗಿಸುವರೆ ಕುರುಪತಿಯ ನಿನಗವರಂದಿರೆಯಿತ್ತಂಡ ॥ ಸೊಗಸು ತಾನೆಂ

ದುದನು ಹಿಸುಣರ । ಬಗೆಯು ನೀ ಕೇಳದಿರು ನೀ ಮನ । ಬಿಗಿಸದಿರು ಸಲಿಸೆನ್ನ ವಚನವನೆಂದಳಾಕುಂತಿ ॥೩೧॥ ತಾಯಹುದು ತಾಬಲ್ಲೆನದು ಸಂ । ಜಾಯುತವು ಪಾಂಡವರು ತಮ್ಮದಿ । ರೀಯುಭಯರಾಯರಲಿ ಪಟ್ಟವದಹಿರಿಯು ತಾನಹುದು ॥ ರಾಯನೆನ್ನನು ನಚ್ಚಿ ಹೊರೆದನು । ಸಾಯಲಳುಕುವೆನೇ ಸುಡೇತರ । ಬೀರಿಳೆಯಬಾಳಿಕೆ ಕೃತಘ್ನತೆಗಿಲ್ಲ ಗತಿಯೆಂದ ॥೩೨॥ ಮಕ್ಕಳೈವರಿಗಾಹಿರಿಯನದು । ತಕ್ಕಮಾತವು ತಾಯೆ ಸಂದೇ । ಹಕ್ಕೆ ನೆಲೆಯಿಲ್ಲದು ನಿಲಲಿ ಧಾರಿಣಿಯ ಬಯಸುವರೆ ॥ ತಕ್ಕುದೇ ದಾತಾರನೆರಸಿಯೊ । ಛೊಕ್ಕತನವಿರಲಾರು ಮೆಚ್ಚುವ । ರಕ್ಕ ಹೇಳೌ ಹೇಸಳೇ ಜಯಲಕ್ಷ್ಮಿ ತನಗೆಂದ ॥೩೩॥ ಇಂದು ನೀವರುಹಿದಬಳಿಕ ರವಿ । ನಂದನನು ಯೆಂದರಿದೆನಲ್ಲದೆ । ಹಿಂದೆ ದುರಿಯೋಧನನದಾವುದ ಕೋಡಿ ಸಲಹಿದನು ॥ ಬಂದು ಪಾಂಡವರೊಡನೆ ಕೂಡಿದ । ರಿಂದು ಶೌರಿಯು ಮಾತವಂತಿರ । ಲಿಂದು ನೀವ್ಕಡಿ ಬಂದ ಕಾರ್ಯವ ಬೆಸಸಿನೀವೆಂದ ॥೩೪॥ ಆದೊಡೈವರ ಮಕ್ಕಳನು ತಲೆ । ಗಾದು ತೋರ್ಕ ಕಂದ ನಿನಗೆ । ನ್ಶೀದುರಾಗ್ರಹವೊಪ್ಪುವುದೆ ಕೌರವನ ಸೇವೆಯಲಿ ॥ ಹೋದಬಾಣವ ಮರಳಿ ತೊಡಟರು । ಮಾದು ಕಳೆ ವೈರವನೆನಲ್ಕಹ । ಸಾದವೆಂದನು ಬೀಳುಕೊಟ್ಟನು ಬಂದನರಮನೆಗೆ ॥೩೫॥

ಅಂತು ಸಂಧಿ ೧೦ ಕ್ಕಂ ಪದ ೬೦೩ ಕ್ಕಂ ಮಂಗಳಮಸ್ತು.

ಹನ್ನೊಂದನೆಯ ಸಂಧಿ.

ಸೂಚನೆ ॥ ಅವನಿಯುಬಿರಿತ್ತು ಗಗನ ತಾರಾ । ನಿವಹವನು ಬಿದಿರಿತ್ತು ವರಪಾಂ । ಡವರು ಕೇಣಿಕೊಳೆ ವೆಂಠಿಸಿದರು ಕದುರ ಕಂಠಣಿಸೆ ॥

ಪದ ॥ ಕೇಳುಜನಮೇಜಯಧರಿತ್ರೀ । ಪಾಲ ಸಂಧಿಯು ಮುರಿದು ಲಕ್ಷ್ಮೀಲೋ । ಲಸ್ರೆತರುತಿವರ ಹೊರೆಗಟ್ಟಿದನು ಸಾತ್ಯಕಿಯು ॥ ಕೇಳಿದನು ಮುರಹರನ ಬರವನು । ಮೌಳಿಮಸ್ತಕದಖಿಳಧರಣೀಪಾಲರೊಡನಿದಿರಾಗಿ ಬಂದನು ಧರ್ಮನಂದನನು ॥೧॥ ದೂರದಲಿ ದುಮ್ಮಾನಿಸಿದವಪ । ನಾರವಿಂದವ ಕಂಡು ಸಂಧಿಗೆ । ಸೇರರವರು ಬಲಿದುಮಾಹವವೀತನಂಗದಲಿ॥ ಶೌರಿಗಾಯ್ತವಮಾನವಿದಲೇ । ಮಾರಿಗುತ್ತರವೆನುತ ಬಂದನು । ಮಾರುತನ ಮಗನಸುರಮರ್ದನನಿಂಗಿತವನರಿದು ॥೨॥ ದರುಶನವ ನೀಡಿದರು ಕೃಷ್ಣನ । ಚರಣದಲಿ ಮೈಯಿಕ್ಕಿದರು ಮಿ । ಕ್ಕರಸುಗಳು ದ್ರುಪದಾದಿನಾಯಕರೆರಗಿದರು ಪದಕೆ ॥ ಪರಮಬಾಂಧವರೆಲ್ಲ ಚೀಮಂ । ತರೆ ನದೀಸುತವಿದುರಗುರುನೃಪ । ಗುರುತನುಜಧೃತರಾಷ್ಟ್ರಯೆಂದನು ಧರ್ಮನಂದನನು॥ ಭೂಮಿಪತಿ ನಿಜಬಾಂಧವರು ಸು। ಕ್ಷೇಮಿಗಳು ತಾವೆಲ್ಲ ನಿಮ್ಮಾ । ಕ್ಷೇಮಕುಶಲವ ಕೇಳಿವರು ಕಳುಹಿದರು ಹರಕೆಗಳ ॥ ಆಮಹಾ ಸಂಗ್ರಾಮಮುಖದಲಿ । ತೋಮರದ ಕಾಣಿಕೆಗಳಲಿ ಸು । ಪ್ರೇಮವನು ಬೆಸಸುವುದು ದುರಿಯೋಧನನ ಮತವೆಂದ ॥ ಭೂಮಿಯೊಳಗರ್ಧವನು ಬೇಡಿದೊ । ಡಾಮಹೀಪತಿಯೈವರಿಗೆ ಸಂ । ಗ್ರಾಮಭೂಮಿಯನ್ಶೆದೆ ಕೊಟ್ಟನು ನಿಮ್ಮೊಳಪ್ರಿಯನು ॥ ಸಾಮದಲಿ ಸೊಗಸಿಲ್ಲ ನೀವ್ ನಿ । ಸ್ಸೀಮರಾದೊಡೆ ಜೋಡಿಸುವುದು । ದ್ದಾಮಕುರುಭೂಮಿ

ಯಲಿ ಕುಳವರಿದವರ ಪತಿಕರಿಸಿ ||೫|| ಮುನಿದೊಡೆಯು ನಿಮ್ಮೊಳಗ್ರನೀವೇ | ಮನಕತವ ಮಾಡುವರೆ
ಯಗ್ರಜ | ರನುಜರಲಿ ಕದಡಾದೊಡುಪಶಮಿಸುವಿರಿ ನಿಮ್ಮೊಳಗೆ || ಎನಗೆ ನಿಮ್ಮಯ ದೂಸರಿಂದಾ |
ಯ್ತಿನಿತುಸಭೆಯಲಿ ಮಾನಹಾನಿಗ | ಳೆನಲು ನೊಂದನು ಧರ್ಮಸುತನಿಂತೆಂದ ನಸುನಗುತ ||೬|| ಮು
ಳಿದು ಸುರಗಿಯನುಗಿದು ಗಗನಕೆ | ನಿಲುಕಿ ಮಾಡುವದೇನು ನಿಮ್ಮಡಿ | ಗಳಿಗೆ ತಪ್ಪಿದಖಳರುವಖಿಳವ್ಯಾ
ಪ್ತಿಗೇಗುವರು || ಖಳರು ಮಾಡಿದಖತಿಯನೆನ್ನೊಳು | ತಿಳಿದು ಮರೆಯಲುಬೇಕು ಕರುಣಾ | ಜಲಧಿ
ನೀನೆಂದೆಂಘ್ರಿಗಳ ಪಿಡಿದನು ಯುಧಿಷ್ಠಿರನು ||೭|| ಬರಿದೆ ಕಾಡದಿರೇಳು ಮನದಲಿ | ಮರೆದೆವಾಗಳೆ ಕೌ
ರವನು ಮುಂ | ದರಿಯದನುಕರಿಸಿದನು ಹೋಗಲಿ ನಿಮ್ಮ ದೂರೇಕೆ || ನೆರವಣಿಗೆಯುಂಟಾದೊಡಿಂದಿ
ನ | ಮರುದಿವಸಸಂಗ್ರಾಮ ಸ್ಥಿರಿಸ | ಲರಿಯರವದಿರು ನಡೆ ಕುರುಕ್ಷೇತ್ರಕ್ಕೆ ಬೇಗದಲಿ || ಹಾನಿಯನು
ನೀ ಹೊತ್ತು ಭೃತ್ಯರ | ಮಾನವನು ಪತಿಕರಿಸಬೇಹುದು | ತಾನೊಡೆಯನಾದಂಗೆ ಗುಣವೆಂಬೊಡೆಯ
ನೀನಾಗಿ || ಮಾನಭಂಗವ ಧರಿಸಿಯೆಮ್ಮಭಿ | ಮಾನವನು ನೀನುಳುಹಿದ್ದೆ ಸಂಧಾನವನು ಕೇಳಿಸದೆ ಸಲ
ಹಿದೆಯೆಂದನಾಭೀಮ ||೮|| ಮಾರಿಯರಕೆಗಳಡಗದಂತಕ | ನೂಡುತುಂಬದೆ ಶಾಕಿನಿಯರೊಡ | ಲೋ
ರೆ ನನೆಯದೆ ಡಾಕಿನಿಯರಿಗೆ ಸೋಕುಸಾಲಿಡದೆ|| ಕೌರವನ ತನಿಗರುಳದಂಡೆಯ| ತೋರಣದ ಬಾಗಿಲಿನ
ವಿಭವದಿ | ವಾರಣಾಹ್ವಯನಗರಿಯನು ಹೊಗದಿಹೆನೆ ಹೇಳೆಂದ ||೧೦|| ತೋರು ನಡೆ ಗಜಬಜಿಸಲೇ
ಕಿಂ| ಸಾರುತಿಂಗಳೆ ನಾಳೆಪಯಣಕೆ | ಸಾರಿ ಸೇಳೆಂದವರುಪಪ್ಲಾವ್ಯಕ್ಕೆ ನಡೆತಂದು || ಬೇರೆಬೇರವನೀ
ಶರಿಗೆ ಪಡಿ | ಹಾರವನು ಕಳುಹಿದರು ಕೃಷ್ಣನ | ದೂರು ಬರಲಳವಡಿಸಿದರು ಸಂಗ್ರಾಮಸಾಧನವ ||
||೧೧|| ಗುಡಿಯ ಮಂಡವಿಗೆಗಳ ಮಂಗಡ | ದೊಡನೊಡನೆ ಸಂಭ್ರಮಿಸಿದ್ದವು ಬರ | ಸಿಡಿಲು ಬೊಬ್ಬಿ
ಡುವಂತೆ ಮಸೆದವು ಕೂಡೆ ಕೈದುಗಳು || ದಡಿಯ ಬಲಿಸುವಗುಳವ ರೆಂಚೆಯ | ಗಡಣಿಸುವಬಲುನೀ
ಲಗಾಪಿಯ | ತೊಡಿಸುವುತ್ಸಹವಾಯ್ತು ವರಪಾಂಡವರ ಬೀಡಿನಲಿ ||೧೨|| ಹಿಳುಕಿ ತಿದ್ದುವಬಿಲ್ಲಬಾಗಿ
ನ | ಹೊಳಹನೊಯ್ಯಾರಿಸುವಮಾರ್ತಿರು | ಗಳನುಜೋಡಿಸುವವರುಕೈದುವಮಸವಮಂಡಲಿಯ || ಕ
ಳಕಳಿಕೆ ಬಲುಹಾಯ್ತು ರಾವುತ| ರಲಿ ಗಜಾರೋಹಕರ ರಥಿಕಾ| ವಳಿಯರವ ರಂಗದಲಿ ಬಲುಸಂವರ
ಣೆಯೊಪ್ಪಿದವು ||೧೩|| ಚೂಳಿ ಹರಿದುದು ದೆಸೆದೆಸೆಗೆ ಭೂ | ಪಾಲರಿಗೆ ರಾಯಸದ ಹದನನು | ಕೇಳಿ
ದಾಗಲೆ ಕವಿದು ಬಂದರು ತಮ್ಮದಳಸಹಿತ || ಸೂಳವಿಸಿದವು ಸನ್ನೆಯಲಿ ನಿ | ಸ್ಸಾಳವಂದಿನ ಮರು
ದಿವಸ ಪ್ರೆ | ಹಾಳಿಯನು ಹೊರವಂಟರನಿಬರು ದೈತ್ಯರಿಪುಸಹಿತ ||೧೪|| ಎಲೆಲೆ ನೆಲ ಬೆಸವಾದುದೋ
ಬಲು | ದಳದ ತೆರಳಿಕೆ ತೀವಿತವನಿಯ | ತಳಪಟದ ಹುಬ್ಬುಸೆಯೊಳಬ್ಬರಿಸಿದವು ಬೊಬ್ಬೆಗಳು || ತಲೆ
ವರೆಯ ತೂಕದಲಿ ಫಣಿಪತಿ | ಬಳುಕತೊಡಗಿದ ತರಣಿ ಸೇನೋ | ಚ್ಚಲಿತಧೂಳಿಯ ಝುಗೆಯ ಕೊ
ಟ್ಟನು ಭೂಪ ಕೇಳೆಂದ ||೧೫||ಹಿಣಿಲ ಹಾಹೆಯ ಬಿರುದುಗಳ ಥಾ| ಟಣಿಯ ನಾಯಕವಾಡಿಗಳ ಸಂ|
ದಣಿಯ ಸಂಕುಲ ಕೈಯಚೌರಿಯ ವೀರನೂಪುರದ || ಕಾಣಿವಸುರಗಿಯ ಪಳಹರದ ತೊಂ | ಕಣಿಯ
ಭೇದಿಪಖಡ್ಗಬಿಲುಬಲು | ಕಣೆಯ ಸಂಖ್ಯೆಯಕೈದುಗಳ ಕಾಲಾಳ ನೋಡಿದರು || ಥಳಥಳಿಪಸೂನಿಗೆಯ
ಮುಂಮೊನೆ | ಗಳ ರಥಾಂಗದ ಮೇಲುಪಸರದ| ಪಳಹರದ ಖುರಹತಿಯ ಜೋಡಜವಾಯ್ಲಕುದುರೆ
ಗಳ || ಬಲದಬದ್ದರದೊಟ್ಟಿದಂಬಿನ | ಹೊಳೆವಹೊದೆಗಳ ಸೂತರುರವಣೆ | ಗಳ ಸುರೆಣ್ಣೆಯ ಗತಿ

ವಾಜಿಯ ರಥವ ನೋಡಿದರು ॥೧೭॥ ಅಳವಿಗೊಟ್ಟೊಡೆ ರವಿಯ ತುರಗವ । ನುಳುಹಿಮುಂಚುವಗತಿ
ಯ ನೊಸಲಲಿ। ಹೊಳೆವಕನ್ನಡಿಗಳ ಖುರಾಂತದಜೋಡುಚಲುವುಗಳ ॥ ಬಿಳಿಯಚೌರಿಯಝಲ್ಲರಿಯ
ಹ । ತ್ತಳದರಾಪ್ತರ ಸಹಸದಲಿ ನೆಲ। ನಲುಗೆ ನಿಗುರುವನಿಲುವನಿರುತದ ಹಯವ ನೋಡಿದರು ॥೧೮॥
ಸ್ಥಲದೆಡಬಲದೊರತೆಯೆನೆ ಸುಕ । ಪೋಲದಲಿ ಸೂಲಿಡುವ ಮದಜಲ । ಧಾರೆಗಳ ಬಲಿಕ್ಕೆಯ ಲೌಡಿ
ಯವಜ್ರಮುಷ್ಟಿಗಳ ॥ ಸಾಳಿವಿಲುಗಳ ರಾಯಜೋದರ । ಮೇಲವಣೆಗಳ ಚಿತ್ರಗತಿಶ್ರುಂ । ಡಾಲವನು
ನೋಡಿದರು ಗಜಸೇನಾಸಮುದ್ರದಲಿ ॥೧೯॥ ಅವನಿಪಾಲರ ಮಕುಟಮಣಿಗಳ । ನಿವಹದೆತ್ತಿದ ಖಡ್ಗ
ಪರುಶುಗ । ಳವಿಮಲದ ದೊರೆಗಳ ಪತಾಕಾವಳಿಯ ಬೆಳುನೊರೆಯ ॥ ವಿವಿಧಗಜಹಯ ಜಲಚರೌಘ
ದ। ಪವನಜನ ಕೈಸನ್ನೆಗಳ ಘನ । ಪವನಹತಿಯಲಿ ಲಹರಿಮಿಗಿಸಿತು ಬಹಳ ಬಲಜಲಧಿ ॥೨೦॥ ಹರಿ
ಯುಧಿಷ್ಠಿರರೊಂದು ಗಜಕಂ । ಧರದೊಳಿರ್ದರು ನಿಖಿಳಸೇನೆಯ । ತೆರಳಿಕೆಯ ತೋರಿಸುತ ಬಂದರು
ಭೀಮಫಲುಗುಣರು ॥ ವಿರುದಧೃಷ್ಟದ್ಯುಮ್ನ ಮೊದಲಾ । ಗಿರೆ ಶಿಖಂಡಿಯಸಹಿತ ದ್ರುಪದನು । ಭರ
ವಿಗಿಲು ತೋರಿದನು ಮೂರಕ್ಷೋಣಿ ಸೇನೆಯನು॥ ವರಯುಧಾಮನ್ಯೂತ್ತ ಮೌಂಜಸ। ಸುರುಶಿಖಂ
ಡಿ ಸುಚೇಕಿತಾನರು। ಧುರಧುರಂಧರವೀರಪಾಂಚಾಲಕ್ಷಿತೀಶ್ವರರು॥ ತುರುಕರಸು ಸಾಹಸ ಸಮುದ್ರರ।
ಮುರಿಯವನಖುರಸಾಳಕೇಶೀ । ಶ್ವರರಥಟ್ಟನು ತೋರಿದನು ಪಾಂಚಾಲಭೂಪಾಲ ॥೨೨॥ ವರಪಿರಾ
ಟನು ಶಂಖನೃಪನು । ತ್ತರಶರದ್ಯುಮ್ನ ಕಶ್ರುತಚಂ । ದ್ರರು ಶತಾನೀಕರು ಶತಾಯುಧರೆನಿಪನೃಪವ
ರರು ॥ ತುರಗ ಗಜರಥ ಪಾಯದಳಸಾ। ಗರವ ಸೌರಂಭದಲಿ ನಿಜಸಂ । ವರಣೆಯನು ತೋರಿದನು ತ
ಮ್ಮಕ್ಷೋಹಿಣೀದಳವ ॥೨೩॥ ಜಯಸಮರಸಾಮಗ್ರಬಲ ಕೈ । ಕೆಯನೃಪಾಲರು ತಂದರಕ್ಷೋ । ಣಿಯ
ನು ತೋರಿಸರ್ರುವಂಭಕಂಧರದ ಭೂಪತಿಗೆ ॥ ಭಯವಿಹೀನರು ಪಾಂಡ್ಯ ನೃಪಸಂ । ಜಯರು ಸೋಮ
ಕಭೂಪರಕ್ಷೋ । ಣಿಯನು ತೋರಿದರವನಿ ಕುಸಿದುದು ವಳೆದ ಪದಹತಿಗೆ ॥೨೪॥ ಚೈದ್ಯದೇಶದ ಧೃ
ಷ್ಟಕೇತುಬ । ಲೋದಧಿಯನಕ್ಷೌಹಿಣಿಯಮೊವ । ಲಾದುದೆನೆ ತೋರಿದನು ಕುಂತೀಭೋಜನಕ್ಷೋಣಿ॥
ಆದುವೇಳಕ್ಷೋಣಿಬಲ ಬೇ । ರಾದರಾಯಕವಾಟಿಯಲಿ ಹಿರಿ। ದಾದುದಾಹವಸೇನೆ ಗೋಚರವಲ್ಲ ಗಣ
ನೆಯಲಿ ॥೨೫॥ ಕ್ಷೇತ್ರಧರ್ಮನು ನೀಲನಭ್ರುವ । ಕ್ಷತ್ರಶೌರಿಯ ತನುಜ ವತ್ಸಜ । ಚಿತ್ರವರ್ಮ ಹಿರ
ಣ್ಯವರ್ಮನು ಚಾರುಚೇಷ್ಟಕನು ॥ ಶತ್ರುಮಥನನು ವಿಂಧ್ಯಗಿರಿಯಸ । ಹೋತ್ರರನ್ವಯದವರು
ಪಾಂಡವ । ಮೈತ್ರರೊದಗಿತು ಕೇಳು ಜನಮೇಜಯ ಮಹೀಪಾಲ ॥೨೬॥ ವೀರಪಾರ್ಥರಿಗಿರುಳು
ಸೋತಂ । ಗಾರವರ್ಮನು ಗಗನಚರಪತಿ । ವಾರಬಹಳದಿ ಬಂದು ಕಂಡನು ಕಲಿಯುಧಿಷ್ಠಿರನ ॥
ಕೌರವೇಂದ್ರನ ನೋಯಿಸಿದ ಧುರಧೀರಸಾಹಸಚಿತ್ರಸೇನನು । ವಾರಗುಣನಿಧಿ ಬಂದು ಕಂಡನು ಮಿತ್ರ
ಭಾವದಲಿ ॥ ಕಾಲರುಳ ಪಟ್ಟಣಕೆ ಚಂದ್ರನ । ತೋರಣವ ಬಿಗಿದಂತೆ ದಾಡೆಗ । ಳೋರಣದ ಹೊಳ
ಹುಗಳ ಹೊಗರಿಡುವೊಡಲ ಕಪ್ಪುಗಳ ॥ ಭಾರಿದೇಹಸುಭಟ ಭಯಂಕರ । ತೋರಪತ್ತನು ದೈತ್ಯಕು
ಲಪರಿ । ವಾರ ಬಹಳದಿ ಬಂದು ಕಂಡನು ಕಲಿಘಟೋತ್ಕಚನು ॥೨೮॥ ಬಲದ ಪೆಖ್ಯಾಳವನು ನೋ
ಡಿದ । ರೊಲಹಿನಲಿ ನಿಜಸೇನೆಸಹಿತತಿ । ಬಲರುಹಪಾಣ್ಡವಕ್ಕೆ ಬಂದರುಪೂಕ್ಕರಾಯವ ॥ ಬಳಿಕ ಸು
ಮುಹೂರ್ತದಲಿ ಹೊರಗುಡಿ । ಗಳನು ಹಾಯ್ಕಿದರಂದು ಯದುಕುಲ । ತಿಲಕ ಗದುಗಿನವೀರನಾರಾ

ಯಣನ ನೇಮದಲಿ ॥೨೯॥ ಪರಿಮಿತಕೆ ತನ್ನಾಪ್ತಸಚಿವರ । ಕರೆಸಿಕೊಂಡನು ಕೃಷ್ಣರಾಯಂ । ಗರಸಬಿನ್ನಹಮಾಡಿದನು ನೃಪಕಾರ್ಯಸಂಗತಿಯ ॥ ಧುರಕೆ ಸೇನಾನಾಥರಿಲ್ಲದೆ । ನೆರೆದಬಲಸಾಲಿರುಹೆ ಮುರಿದೊಡೆ । ಹರೆದವೊಲು ಹುರುಳಿಲ್ಲ ದಳಪತಿಯಾವನಹನೆಂದ ॥೩೦॥ ದ್ರುಪದನಾಗಲಿಯೆಂದು ಕೆಲಬರು । ವಿಪುಳಬಲದ ವಿರಾಟನಾಗಲಿ । ನೃಪತಿಖಂಡಿಯೆ ಯೆಂದು ಕೆಲಬರು ಭೀಮಸುತನೆಂದು ॥ ಅಪರಮಿತಮತವಾಗೆ ಸಶ್ವರ । ವ್ಯಪಗತಾರ್ಥಿಸುರೇಂದ್ರಸುತನೀ । ದ್ರುಪದಸುತ ಸೇನಾಧಿಪತಿಯಹುದೆಮ್ಮಮತವೆಂದ ॥೩೧॥ ಬಿಂಬವನು ಬೇರಿರಿಸಿ ಬಹುಮತ । ವೆಂಬಬಿಸಿಲಲಿ ರಾಜನಯವೆಂ । ದೆಂಬನ್ನೆಧಿಲು ನಯವುಗೆಟ್ಟುದು ಕೃಷ್ಣ ಹೇಳೆನಲು ॥ ಎಂಬುದೇ ನೀ ನಿಲಿಸು ಸುಭಟಕ । ದಂಬದಧಿಪತಿತನಕೆ ಫಲುಗುಣ । ನೆಂಬಮಾತೆಮ್ಮಭಿಮತವು ಭೂಪಾಲ ಕೇಳೆಂದ ॥೩೨॥ ಕರೆಸಿಧೃಷ್ಟದ್ಯುಮ್ನನನು ಸಂಗರದ ಸೇನಾಪತ್ಯವನು ವಿ । ಸ್ತರಿಸಲಳವಡಿಸಿದರು ಸುಮುಹೂರ್ತದ ಸರಾಗದಲಿ ॥ ಪುರದೊಳಗೆ ಗುಡಿ ನೆಗಹಿದವು ಭೂ । ಸುರರ ವಿಮಳಾಮ್ನಾಯರವ ವಿ । ಸ್ತರಿಸಲಳವಡಿಸಿದರು ಮಂಗಳವಿಹಿತವಸ್ತುಗಳ ॥೩೩॥ ಸೂಳವಿಸಿದವು ಕಟಕದಲಿ ನಿ । ಸ್ಸಾಳಕೋಟಿಗಳೆಲ್ಲಿರಿಯೆ ಹೆ । ಗ್ಗಾಳೆಗಳು ಸಾರಿದವು ಭಟರುಬ್ಬಟೆಯ ಬಿರುದುಗಳ ॥ ಲೋಲನಯನೆಯರಾರತಿಯ । ಸಮಸಾಲು ಸಂದಣಿಸಿದ್ದವು ವೆರಪಾಂ । ಚಾಲತನಯಂಗೆಸಗಿದರು ಮೂರ್ಧಾಭಿಷೇಚನವ ॥೩೪॥ ದರುಶನವನಿತ್ತಖಿಳಧರಣೀ । ಶ್ವರರು ಕಂಡರು ಸೂತಮಾಗಧ । ವರವಿಬುಧವೈತಾಳಿಕರ ಕಾರ್ಪಣ್ಯವಡಗಿದ್ದವು ॥ ಧುರಕೆ ಧೃಷ್ಟದ್ಯುಮ್ನನಾಜ್ಞೆಯೊ । ಳಿರವು ನಿಮಗೆಂದೈದೆ ಭೂಪಾ । ಲರ ನಿವಾಸಂಗಳಲಿ ಹೊಯ್ದರು ಚರರು ಡಂಗುರವ ॥೩೫॥ ರೂಢಿಸಿದಸುಮುಹೂರ್ತದಲಿ ಹೊರ । ಬೀಡ ಬಿಟ್ಟರು ರಣಕೆ ಪಯಣವ । ಮಾಡಲೋಸುಗ ಸಾರಿದರು ನೃಪಪಾಳೆಯಂಗಳಲಿ ॥ ಕೂಡಿತಾಹವಸೈನ್ಯಸಾಗರ । ವೀಡಿರಿದು ನಡೆಗೊಂಡುದಭ್ರದ । ರೂಢಿಗಳ ಜೋಡಿಗಳ ಜೋಕೆಯ ಘನತರಂಗದಲಿ ॥೩೬॥ ಹಂಯ ಚರಣಕ್ಕೆರಗಿ ವಿಜಯದ । ಹರಕೆಗಳ ಕೈಕೊಂಡು ರಥವನು । ತುರಗಗಜವನು ಗಡಣಮಿಗಲಡರಿದರು ಪಾಂಡವರು ॥ ಗರುಡಸಿಂಧವನೆಗಹಿ ದಾರುಕ । ನಿರದೆ ರಥದನು ಸುಳಿಸೆ ಘನಮೋ । ಹರದಮಧ್ಯದೊಳಸುರಧೂಳೀಪಟನು ಹೊರವಂಟ ॥೩೭॥ ಮುಂದೆ ಹರಿರಥ ನಡೆಯಲಾತನ । ಹಿಂದೆ ಧರ್ಮಜನೆಡಬಲದಲಾ । ನಂದನರು ಕೆಲಬಲದಲಾಭೀಮಾರ್ಜುನಾದಿಗಳು ॥ ಸಂದಣಿಸಿದುದು ಸೇನೆ ಸೈರಿಸಿ । ನಂದನಾದೊಡೆ ಫಣಿಗೆ ಸರಿಯೆ । ಲ್ಲೆಂದು ಸುರಕುಲವುಲಿಯೆ ನಡೆದುದು ಪಾಂಡುಸುತಸೇನೆ ॥೩೮॥ ಸಿಡಿಲು ಸಿಗುರೆದ್ದಂತೆ ಭಾರಿಸಿ । ಜಡಿವಕೈದುಗಳೊಳಗೆ ಮೊಳಗುವ । ಕಡುದೆರೆಯ ಲಹರಿಯವೊಲುರವಣಿಸಿದ್ದವು ಬೊಬ್ಬೆಗಳು ॥ ನಡುಗಿತವನಿಯುಜಾಂಡಖರ್ಪರ । ವೊಡೆಯೆಲವಣಿಯಲಗ್ಗಸೂಳಿನ । ಹೊಡಗುಳಿಸೊಳಬ್ಬರಿಸಿದವು ನಿಸ್ಸಾಳಕೋಟಿಗಳು ॥೩೯॥ ಪ್ರಳಯಜಲನಿಧಿಯಂತೆ ದಳ ಬರ । ಲಿಳೆ ಕುಸಿಯೆ ಕಮಠಂಗೆ ಮೇಲುಸಿಸು । ರುಲಿಯೆ ದಿಗುದಂತಿಗಳು ಮೊಣಕಾಲೂರಿ ಮನಗುಂದೆ ॥ ಬಲಮಹಾಂಬುಧಿಬಲುಗಡಲ ಮು । ಕ್ಕಳಿಸಿ ನಡೆದುದ್ಧುಕಡುಭರದ ಕಾ । ಲ್ದಳಿಯ ಕದನಾಳಾಪಕರಕಾಹುರಕೆ ಪೊಸತಾಯ್ತು ॥೪೦॥ ಗಜದಬೃಂಹಿತರವದ ವಾಜಿ । ವ್ರಜದ ಹೇಷಾಧ್ವನಿಯ ತೇರಿನ । ವಿಜಯಚೀತ್ಕೃತಿರವದ ಗಿಂಟಂಕಾರಕಳಕಳದ ॥ ಗಜಬಜಕೆ ಗಾಢಿಸಿತು ಬೊಬ್ಬೆಯ । ಗಜರುಗಳ ಗರ್ಜನೆಗೆ ನಡುಗಿತು ।

ತ್ರಿಜಗವೆನಲೈದಿದರು ಪಣಿಯದವೋಲೆ ಪಯಣದಲಿ ॥೪೧॥ ಅರಸಿ ನಡೆದುದು ರಾಯಕಟಕದ । ತೆರಳಿಕೆಯ ಸೌರಂಭವಿಳೆಗ । ಚ್ಚರಿಯ ಬೀರಿತ್ತು ವರಕುರುಕ್ಷೇತ್ರಕ್ಕೆ ಗಮಿಸಿದರು ॥ ಅರಿವಿಜಯಿಗಳು ನೆಲನ ಗೆಲಿದರು । ಹರಿಯ ನೇಮದಲೆಡೆಯರಿದು ಬಲ । ಶರಧಿ ಬಿಟ್ಟುದು ಕಳನ ಪಶ್ಚಿಮದೆಸೆಯ ಪಸರದಲಿ ॥೪೨॥ ಸೂಳವಿಸಿದವು ಸನ್ನೆಯಲಿ ನಿ । ಸ್ಸಾಳಲಗ್ಗಳಡಗಿದವು ಕಿರು । ಗಾಳೆ ಸನ್ನೆಯಲೂದಿದವು ಮಾಣಿಸಿದವಬ್ಬರವ ॥ ಕೇಳು ಜನಮೇಜಯಧರಿತ್ರೀ । ಪಾಲ ಮಾರ್ಗಶ್ರಮದ ಸೇನಾ । ಜಾಲ ಸ್ಥೈರಗಾಗಿ ನಿಂದುದು ಕಳನ ಮಧ್ಯದಲಿ ॥೪೩॥ ಪೇಲುಗುಡಿಗಳ ಭದ್ರದುಪ್ಪರ । ಶಾಲೆಗಳ ಮಂಡವಿಗೆಗಳ ಬ । ಲ್ಲಾಳದಡ್ಡಿಯ ಚಂಪೆಯದ ಗೂಡಾರದೋರಣಿಯ ॥ ಸಾಲುಕಳಸದ ಪೇಲುಗಟ್ಟಿನ । ಕೀಲಣದ ಹೊಂಗೆಲಸದಲಿ ರಾ । ಜಾಲಯವನನುಕರಿಸಿದರು ಕುಂತೀಕುಮಾರರಿಗೆ ॥ ಅರಮನೆಯ ಕೆಲದಲಿ ಮುರಾಂತಕ । ನರಮನೆಗಳಾಕೆಲದೊಳರ್ಜುನ । ನಿರವು ಹಿಂದಣಭಾಗದಲಿ ನಕುಲಂಗೆ ಗೂಡಾರ ॥ ಅರಿಭಯಂಕರಭೀಮಸೇನನ । ನಿರುಪಮಾಲಯವೆಡದಕಡೆಯಲಿ । ಸರಿಸದಲಿ ಸೂತ್ರಿಸಿತು ಸಹದೇವಂಗೆ ನೃಪಭವನ ॥೪೪॥ ವೀರಪಾಂಡವರೈವರರಸು ಕು । ಮಾರವರ್ಗದ ಮಂಡವಿಗೆ ಗೂ । ಡಾರವನೊಳಕೊಂಡು ಬಿಗಿದವು ತಳಿಯಕಟ್ಟುಗಳು ॥ ಓರಣದ ಸಾಲುಗಳ ಸುತ್ತಲು । ಭಾರಿಸಿತು ಪಾಂಚಾಲಮತ್ಸ್ಯರ । ಭೂರಿ ಬಿಟ್ಟದುವರ ಮಹೀಶನಗುಡಿಯಬಳಸಿನಲಿ ॥೪೫॥ ಕೇಳು ಜನಮೇಜಯಧರಿತ್ರೀ । ಪಾಲ ಬೀಡಿನ ತೆಕ್ಕೆ ಬಿಗಿದುದು । ಮೇಳೆಯದ ಬಲವದಕೆ ಹೊರವಳಯದಲಿ ಕಲುಗೋಟೆ ॥ ಮೇಲೆ ಪಡಿಯಗಳಾಶ್ರಯಕೆ ಮುಳು । ವೇಲಿ ದೇಹದ ಸಿಂಹಶರಭ । ವ್ಯಾಳಶಾರ್ದೂಲಾವಳಿಯ ಸುಯ್ದಾನವೊಪ್ಪಿದವು ॥೪೬॥ ಎರಡುಬಾಗಿಲಸೂತ್ರದಲಿ ವಿ । ಸ್ತರಿಸಿದಂಗಡಿ ಸೋಮವೀಧಿಯ । ತರಣಿವೀಧಿಯಲವರವರ ಪಾಳೆಯಕೆ ಮುರಿವುಗಳ ॥ ಸುರರು ಸೃಷ್ಟಿಸಬಾರದಿನ್ನೀ । ನರರುಗಳ ಪಾಡೇನು ಕೌಂತೇ । ಯರ ಸಮಗ್ರದ ಬೀಡು ಕುರುಭೂಮಿಯಲಿ ರಂಜಿಸಿತು ॥೪೭॥ ಬಲದ ಮುಂಗುಡಿ ಭೀಮನದು ಪಿಂ । ಗೆಳಿಯಲಾತನ ಕಾಹು ಬೀಡಿನ । ವಳಯದಾರೈಕೆಗಳು ಸಾತ್ಯಕಿಪಾರ್ಥನಕುಲರಿಗೆ ॥ ಬಲಮಹಾಂಬುಧಿಯೊಳಗಿರುಳ ತಳ । ವಳಿಕೆ ಹೈಡಿಂಬಂಗೆ ಪಾಂಡವ । ರುಳಿವು ಗದುಗಿನವೀರನಾರಾಯಣನ ಸುಯ್ದಾನ ॥ ... ... ॥೪೮॥

ಅಂತು ಸಂಧಿ ೧೧ಕ್ಕೆ ಪದ ೬೭೩ಕ್ಕಂ ಮಂಗಳಮಸ್ತು.

ಇತಿ ಶ್ರೀಮದಚಿಂತ್ಯಮಹಿಮ ಗದುಗು ವೀರನಾರಾಯಣ ಚರಣಾರವಿಂದ ಮಕರಂದ
ಮಧುಪಾನಪುಷ್ಟವಚಃ ಷಟ್ಪದಿ ನಿಕಾಯ ಶ್ರೀಮತ್ಕುಮಾರ ವ್ಯಾಸಯೋಗೀಂ
ದ್ರ ವಿರಚಿತಮಪ್ಪ ಕರ್ಣಾಟ ಭಾರತ ಕಥಾಮಂಜರಿಯೊಳ್ ಉದ್ಯೋಗ
ಪರ್ವಂ ಸಮಾಪ್ತಮಾದುದು.

ಶ್ರೀರಸ್ತು.

ಶ್ರೀ ವೇದವ್ಯಾಸಾಯನಮಃ.

ಕನ್ನಡ ಮಹಾಭಾರತ—ಭೀಷ್ಮಪರ್ವ

ಮೊದಲನೆಯ ಸಂಧಿ.

ಸೂಚನೆ || ವೈರಿಭಟಕುಲವಿಲಯಹರನುವು | ದಾರತೇಜೋಭದ್ರನಾಭಾ | ಗೀರಥೀಸುತ ಧರಿಸಿ
ದನು ಕುರುಸೇನೆಯೊಡೆತನವ ||

ಪದ || ಕೇಳು ಜನಮೇಜಯಧರಿತ್ರೀ | ಪಾಲ ಕೌರವರಾಯನಲ್ಲಿಗೆ | ಕಾಳಗದ ಕಾತರಿಗರಿವರ
ಟ್ಟಿದರು ಭಟ್ಟರನು || ಕೇಳಿದನು ಕುರುಭೂಮಿಯಲಿ ರಿಪು| ಜಾಲದುದಯನನಂದು ಕುರುಕುಲ| ಮೌ
ಳಿ ಬರಿಸಿದಪರಿಮಿತಕೆ ತನ್ನಾಪ್ತಮಂತ್ರಿಗಳ ||೧|| ರವಿಜಗುರುಸುತಶಲ್ಯಕಲಶೋ | ದ್ಭವನುಸೌಬಲರಾ
ದಿಯಾದವ | ರವನಿಪಾಲನ ಕಂಡರೆಂದೇಕಾಂತಭವನದಲಿ || ಅವನಿಪತಿ ಹದನೇನು ರಿಪುಪಾಂ | ಡವರ
ಬೀಡಿನ ಗುಪಿತವನು ಮಾ | ನವರು ಚಿತ್ತೈಸಿದಿರೆ ಬೆಸಸುವುದೆನಲು ನೃಪ ನುಡಿದ ||೨|| ಸಂದಣಿಸಿ
ಕುರುಭೂಮಿಯಲಿ ತಾ | ಮಂದಿ ಬಿಟ್ಟುದು ಸಾಡಗಾವಳಿ | ಬಂದುದಿಲ್ಲಿಗೆ ಕಳುಹಿದರು ದೂತರನು,
ದುರ್ಜನರು || ನಂದಗೋಪನ ಮಗನ ಕೊಂಡೆಯ | ದಿಂದ ಕಲಿಯೇರಿದರು,ಕೃಪಣರ | ಕೊಂದೊಡ
ಹುದಪಕೀರ್ತಿಯಿದಕಿನ್ನೇನುಹದನೆಂದ||೩|| ಭೂರಿನೆರೆದುದು ಗಾವಳಿಯು ಗುರು | ಭಾರಧೃಷ್ಟದ್ಯುಮ್ನ
ನದು ಗಡ | ಜಾರದೇವನ ಜೋಕೆ ಮಂದಿಯ ಕಾಹುಕಟ್ಟುಗಡ || ಧಾರುಣಿಯಲಂಪಟರು ಕದನವ |
ಹಾರಿ ಬಂದರಲ್ಲೈ ಕೃತಾಂತನ | ಭೂರಿಭೂತದಧಾತುವಾಯಿತು ಲೇಸುಲೇಸೆಂದ ||೪|| ನಾಡಮನ್ನೆಯ
ಸನ್ನೆಯರುಗಳ | ಕೂಡಿಕೊಂಡೆಮ್ಮೊಡನೆ ಕಲಹವ | ಮಾಡಿ ಮಹಿಪಾಲನೆಯ ಪಟ್ಟಕೆ ನೊಸಲನೊಡ್ಡು
ವನೆ || ನೋಡಿರೈ ನಿರುಪಮವಲಾ ಕಾ | ಡಾಡಿಗಳ ಕಲಿತನವನೆನೆಮಾ | ತಾಡಿದನು ಕಲಿಕರ್ಣನಾತನ
ಮನದಮೈಸಿರಿಯ ||೫|| ನೆರೆದದೊದ್ದೆಯನೊರಸಬಹುದೇ | ನರಿದೆ ಜೀಯ ವಿರೋಧಿರಾಯರ | ನೆ
ರವಿ ನಿನಗೇಗುವುದು ಗಹನವೆ ನಿನ್ನವೀರರಿಗೆ || ಕರಿಗಳಿಗೆ ಪ್ರತ್ಯೇಕವಿದ ಕೇ | ಸರಿಗಳೆಮ್ಮನು ಕಳುಹು
ನಿಮ್ಮಡಿ | ಪರಿಮಿತಕೆ ಬರಲಾವಭಾರವಿದೆಂದನಾಕರ್ಣ ||೬|| ಕಲಕುವೆನು ಪಾಂಡವರ ಸೇನಾ | ಜಲ
ಧಿಯನು ತೇರಿನಲಿ ತಲೆಗಳ | ಕಳುಹುವೆನು ಕದನದಲಿ ಕೈಮೀರಿದಕುಠಾರರನು || ಹೊಳಲ ಹೊರ
ಶೂಲದಲಿ ತಲೆಗಳ | ಸೆಳಸುವೆನು ತಾವೀಳೆಯವನೆಂ | ದಲಘುಭುಜಬಲಕರ್ಣ ನುಡಿದನು ಕೌರ
ವೇಂದ್ರಂಗೆ ||೭|| ಕುಲಿಶಪರಿಯಂತೇಕೆ ನೇಗಿಲ | ಬಳಿಯ ಹುಲುವೇಟಕೆ ವಿರೋಧಿಗ | ಳಲಿ ಬಲಕೆ
ಕಲಿಕರ್ಣನೀಪರಿಯಂತ ಸಂಗರವೆ || ಹೊಳಲ ಪರಿವಾರಕ್ಕೆ ಸಾರಿಸು | ಕೆಲಬಲದ ರಾಯರಿಗೆ ದೂತರ

ಕಳುಹಿಕರೆಯಿಸಿ ಕಾದಿಸೆಂದನು ಕೌರವರರಾಯ ॥೮॥ ಮೂಗಿನಲಿ ಬೆರಳಿಟ್ಟು ಮಕುಟವ ' ತೂಗಿದನು ಚತುರಂಗಬಲವನು । ಬೇಗದಲಿ ಕೊಳುಗುಳಕೆ ಕಳುಹಿಸು ಗೆಲಿಸು ಕಾಳಗವ ॥ 'ತಾಗಿಬಾಗಿದವರುಳು ತನದು । ದ್ಯೋಗವನದೇನೆಂಬೆನೆಕಟಕ । ಟೀಗಳಳಿದುದು ಕೌರವಾನ್ವಯವೆಂದನಾದ್ರೋಣ ॥ ಹಿಂದೆ ಬಗುಳುವನಿವನು ಬಾಯಿಗೆ । ಬಂದಪರಿಯಲಿ ಪಾಂಡುತನಯರ । ಕೊಂದನಾಗಳೆಕರ್ಣನಿನ್ನಾರೊಡನೆ ಸಂಗ್ರಾಮ ॥ ಹಿಂದೆ ಹಮ್ಮಿದಸಮರದಲಿ ನಡೆ । ತಂದು ಕಟ್ಟಿದ ಖೇಚರರಟ್ಟಿ। ರಂದು ನಿನ್ನನು ಬಿಡಿಸಿದವನರ್ಜುನನೊ ರವಿಸುತನೊ ॥೧೦॥ ಸಾಹಸಿಗರಲ್ಲಿಲ್ಲ ಹರಿ ತುರು । ಗಾಹಿ ಪಾಂಡವರ್ರವರಡವಿಯ । ಮೋಹುಕಾರರು ಬಂದಭೂಭುಜರೆಲ್ಲ ತಾ ನೆರವಿ ॥ ಆಹವಕೆ ನಿನ್ನೂರ ತಳವರ ಗಾಹಿನವರನು ಕಳುಹುವುದು ಸಂ । ದೇಹವೇ ನೀನಿಲ್ಲಿ ಸುಖದಲಿ ರಾಜ್ಯಮಾಡುವುದು ॥೧೧॥ ಎಲೆಸುಯೋಧನ ಕಾಳು ಗೆಡೆದೊಡೆ । ಫಲವನಿದರಲಿ ಕಾಣೆನಹಿತರ । ಬಲದ ಭಾರಣೆಬಲುಹು ಭೀಮಾರ್ಜುನರು ಬಲ್ಲಿದರು ॥ ನಳಿನನಾಭನ ಮಂತ್ರಶಕ್ತಿಯ । ಬಲುಹು ನೀನಿದ್ರ್ಯವ ರವರ । ಗ್ಗಳಸದೈವರು ಕೆಟ್ಟರಿನ್ನೇನೆಂದನಾದ್ರೋಣ ॥೧೨॥ ಅಸುರರಿಪುವಿನ ಮಾತ ನೀ ಮ । ನ್ನಿಸದೆ ಕೌರವಕುಲವನದ್ದಿದೆ । ನುಸಿಗಳಿವದಿರು ನೆರದು ಪಾರ್ಥನನೇನ ಮಾಡುವರು ॥ ಅಸುರರಲಿ ಸುರರಲಿ ಭುಜಂಗ । ಪ್ರಸರದಲಿ ಭೀಮಾರ್ಜುನರ ಸೈ । ರಿಸುವರುಂಟೇ ಕೆಟ್ಟರಿನ್ನೇನೆಂದನಾದ್ರೋಣ ॥೧೩॥ ಅವರಿಗಸುರಾಂತಕ ಸಹಾಯನು । ನಿವಗೆ ಗಂಗಾಸುತನ ಬಲವಾ । ಹವವನಾತನ ನೇಮದಲಿ ನೆಗಳುವುದು ನೀತಿಯಿದು ॥ ಅವರಿವರ ನುಡಿಗಳಲಿ ಫಲವಿಲ್ಲವನಿಪತಿ ಕೇಳೆನಲು ಕಲಶೋ । ದ್ಭವನ ನುಡಿಯಲಿ ಬಳಿಕ ಮಣಿದನು ಕೌರವರರಾಯ ॥೧೪॥ ಮತವಹುದು ತಪ್ಪೇನು ಗಂಗಾ । ಸುತನ ತಿಳಿವೆವು ವೀರಪಟ್ಟವ । ನತುಳಬಲಭೀಷ್ಮಂಗೆ ಕಟ್ಟುವೆನೆನುತ ಕುರುರಾಯ ॥ ಮತವ ನಿಶ್ಚಯದಿಂದ ಗುರುಗುರು । ಸುತನ ಕಳುಹಿದನಿತ್ತಲಬುಜ । ಪ್ರತತಿಯು ತ್ಸವವಡಗೆ ಪಡುವಣ ಕಡಲೊಳಿನನಿಳಿದ ॥೧೫॥ ವಿನುತ ಸಂಧ್ಯಾದೇವಿಗಭಿವಂ । ದನೆ ಜಪಾದಿಸಮಸ್ತ ದೇವಾ । ರ್ಚನೆಯ ಮಾಡಿಯೆ ರವಿತನೂಜನ ಕರಸಿ ಹಂತಿಯಲಿ ॥ ಜನಪನಾರೋಗಿಸಿದನಾಪ್ತಾ । ವನಿಪಸಚಿವರುಸಹಿತ ಭೀಷ್ಮನ । ಮನೆಗೆ ಬಂದನು ಕೇಳು ಜನಮೇಜಯಮಹೀಪಾಲ ॥೧೬॥ ಮುಂದೆ ಹರಿದರು ಕೈಯ ಕಂಬಿಯ । ಸಂದಣಿಯ ಪಡಿವಳರು ಗಂಗಾ । ನಂದನಂಗೀಹದನ ನರುಹಲು ಬಂದನಿದಿರಾಗಿ ॥ ಕಂದುಮೋರೆಯ ರಾಯನನು ತೆಗೆ । ದಂದಣದೊಳಾಲಿಂಗಿಸುತ ನಲ । ವಿಂದ ಮನ್ನಿಸಿತಂದ ನರಮನೆಗುಚಿತವಚನದಲಿ ॥೧೭॥ ಏನಿರುಳುನೀ ಬಂದಹದನಿದು । ಮಾನನಿಧಿ ಬೇಕಾದೊಡೆಮ್ಮನು । ನೀನು ಕರೆಸುವುದರುಹುವುದು ಬರವೇನು ಹೇಳೆನಲು ॥ ಏನಹೇಳುವೆ ನಗೆಯನನುಸಂ । ಧಾನವನು ಪಾಂಡವರು ಕುರುಭೂ । ಮಿಾನಿವಾಸಕೆಬಂದುಬಿಟ್ಟರು ಕಿರಿದು ಬಲವೆರಸಿ ॥೧೮॥ ಹರಿಯ ಹಿಸುಣಿಕೆಯುವರಚಿತ್ತವ । ಬೆರಸಿ ವೈರವ ಬಿತ್ತಿ ಬಂದೀ । ಧರೆಯ ಭಾಗವ ಬೇಡಿ ಕಲಹವ ಮಸೆದು ತಮ್ಮೊಡನೆ । ಹರನಸಮದಂಡಿಗಳು ನೀವೆಮ । ಗಿರಲು ಜಯಿಸುವವೀರನಾವನು । ಮರುಳತನವನು ಧರ್ಮಪುತ್ರನೊಳರಿಯಲಾಯ್ತೆಂದ ॥೧೯॥ ಬಂದರೇ ಪಾಂಡವರು ಸುದ್ದಿಯ । ತಂದರೇ ನಿನ್ನವರು ನಿನಗೇ । ನೆಂದು ಭಾಷೆಯನಿತ್ತರೈ ಕರ್ಣಾದಿನಾಯಕರು ॥ ಇಂದು ಸಂತತಿಗರುಹರಲ್ಲಾ । ಬಂದರೇನಪರಾಧವೇಮಿ । ನ್ನೆಂದುಪರಿಯಂತವರು ನವೆಯಲಿಯೆಂದನಾಭೀಷ್ಮ ॥೨೦॥ ಜಗದಗುರುವಲ್ಲಾ ಮುರಾಂತಕ ।

ನಗಣಿತನುಪಮಮಹಿಮನಲ್ಲಾ । ಸಗುಣನಿರ್ಗುಣನಹಮಹಾತ್ಮಮನಂತರಾತ್ಮಕನು ॥ ವಿಗಡಿಸಲು
ಜಯವಹುದೆ ಜಾಣರ । ಬಗೆಗೆ ಬಹುದೇ ನಿನ್ನ ಮತವೆಲೆ । ಮಗನೆ ಮರುಳಾದ್ಯಮದಾಂಧರ ಮಾತ
ನೀ ಕೇಳಿ ॥೨೧॥ ಮಿಕ್ಕಮಾತೇನಿನ್ನು ನೀ ಹಿಂ । ದಿಕ್ಕಿಕೊಂಡೊಡೆ ಕೊಲುವನಾವನು । ಮಕ್ಕಳಾದೊ
ಡದೇನುಬಲ್ಲೆನು ನಿಮ್ಮವಿಕ್ರಮವ ॥ ಹೊಕ್ಕುಹಗೆಗಳ ಹೊಯ್ದು ದಿಗುಬಲಿ । ಯಿಕ್ಕಿ ತನ್ನಯ ಹರು
ಷಜಲಧಿಯ । ನುಕ್ಕಿಸಲುಬೇಕೆನಲು ಕೇಳಿದು ಭೀಷ್ಮನಿಂತೆಂದ ॥೨೨॥ ದೈವಬಲವವರಲ್ಲಿ ನೀವೇ । ದೈವ
ಹೀನರು ಧರ್ಮಪರರವ । ರೈವರುಂಸತ್ಪುರುಷಶೀಲರು ನೀವಧರ್ಮಿಗಳು ॥ ಮುಯ್ಯುಸಾನುವವರ್ಗ ಲೋ
ಕವು । ಬೈವುದೈ ನಿಮ್ಮನಿಬರನು ನಿಮ । ಗೈವಡಿಯ ಸಹಸಿಗಳವರು ದುರ್ಬಲರು ನೀವೆಂದ ॥೨೩॥ ದ
ಯವನತ್ತಲುತಿದ್ದಿಯಿಮ್ಮನು । ಭಯಮಹಾಬ್ಧಿಯೊಳದ್ದಿ ಸಮರದ । ಜಯವನವರಿಗೆ ಮಾಡಿ ವ
ಮ್ಮಭಿಮತವ ಮರುಳ್ಮಾಡಿ ॥ ನಯವ ನೀವೊಯ್ದಿವರನಿಂಮನು । ನಿಯಮಿಸುವರಾರುಂಟು ಭಾಗ್ಯೋ
ದಯವಿಹೀನರು ನಾವೆನುತ ಕುರುರಾಯ ಬಿಸುಸುಯ್ದ ॥೨೪॥ ಉಚಿತವನು ನಾವರಿಯೆ ವಾರ್ಥಿಕ ।
ರುಚಿತವನು ನೆರೆ ನುಡಿಯೆ ನಿನಗದು । ರುಚಿಸದಿರ್ದೊಡೆ ಮಾಣಲಹಿತವ ನುಡಿವರಾವಲ್ಲ ॥ ವಚನವ
ತಿಗಾಢದಲಿ ನೆಟ್ಟುದು । ಸಚಿವನಯವಿನ್ನೇಕೆ ಸೇನಾ । ನಿಚಯಕೆಮ್ಮನು ಮೊದಲಿಗನ ಮಾಡರಸ ಹೋ
ಗೆಂದ ॥೨೫॥ ಖಳನ ಕಳುಹಿದನತಿಬಲನು ತ । ನ್ನೊಳಗೆ ತಿಳಿದನು ಪಾಂಡುನಂದನ । ರುಳಿವು
ನಮ್ಮಯ ಮೀಂ ಕಾದುವೊಡಸುರರಿಪುವಿಹನು ॥ ಅಳುಕಿ ಕಾದುವರಿಲ್ಲ ಹಾವಿನ । ಹಳವಿಗೆಯ
ಮೂರ್ಖಂಗದುರ ಬೆಂ । ಬಲವ ಕಾಣೆನು ತನಗೆ ಹದನೇನೆಂದು ಚಿಂತಿಸಿದ ॥೨೬॥ ಆದೊ
ಡೇನಿದಿರಾದಮುಬಲ । ವಾದುದನು ಸಂಹರಿಸಿಯೈವರ । ಕಾದು ಬಿಡುವನುವೊಡಲನಾಸಂಗ್ರಾಮ
ಭೂಮಿಯಲಿ ॥ ಆದುದಾಗಲಿ ಬಳಿಕ ಮಾಡುವ । ಭೇದ ಬೇರಿಲ್ಲೆನುತ ಮಿಗೆ ಸಂವಾದವನು
ಬೀಳ್ಕೊಟ್ಟ ಗಂಗಾಸೂನು ಪವಡಿಸಿದ ॥೨೭॥ ಮಗನೊಡನೆ ಮೊದಲಿಸಿ ಭೀಷ್ಮನು । ಪುಗು
ವಗಡ ಪರಸೇನೆಯಲಿ ಕಾ । ಳಗವ ನೋಡುವೆನೆಂಬವೊಲು ತಲೆದೋರಿದನು ದಿನಪ ॥ ನಗೆ
ಯುಡುಗಿ ನಾಚಿದ್ದವು ಕುಮುದಾ । ಳಿಗಳು ಹೊಂಗಾಣಿಕೆಯ ಹರುಷದೊ । ಳೊಗೆದು ವಿರಹವ
ಬೀಳುಕೊಟ್ಟವು ಜಕ್ಕವಕ್ಕಿಗಳು ॥೨೮॥ ಅರಸನುಪ್ಪವಡಿಸಿದನವನೀ । ಶ್ವರ ವಿಹಿತಸತ್ಕರ್ಮವನು ವಿಶ
ಸ್ತರಿಸಿ ಸಿಂಹಾಸನಕ ಬಂದನು ಹರುಷದುಬ್ಬಿನಲಿ ॥ ಚರರನಟ್ಟಿದನಖಿಳಧರಣೀ । ಶ್ವರನಿಕಾಯಕೆ
ಸಕಲಸುಭಟರ । ಬರಿಸಿದನು ತರಿಸಿದನು ಪಟ್ಟಕೆ ಬೇಹವಸ್ತುಗಳ ॥ ಗುರುಸುತನು ರವಿತನುಜಮಾದ್ರೇ ।
ಶ್ವರಕೃಪದ್ರೋಣಾದಿಗಳು ಬಂ । ದರಮನೆಯ ಪೊಕ್ಕರು ನದೀನಂದನನ ಬಳಿವಿಡಿದು ॥ ನೆರೆದುದವ
ನಿನಿರ್ಜರರು ಕೇ । ಸರಿಯಪೀಠವ ರಚಿಸಿ ವೈದಿಕ । ಪಂಣಿತರ ಮತದಿಂದ ವಿಸ್ತರಿಸಿದರು ಮಂಗಳ
ವ ॥೩೦॥ ಕಮಲಜನ ಹೋಲುವೆಯ ಧಾರುಣಿ । ಯಮರಕರದಲಿ ನಿಗಮಪೂತೋ । ತ್ತಮಸುಧಾರೆ
ಗಳಿಳಿದು ವಿಭಸನ್ನಿಭನ ಮಸ್ತಕಕೆ ॥ ಅಮಮ ಉರುತರವ್ಯೋಮಗಂಗಾ । ವಿಮಲನದಿ ಯಿಳಿತಂದು
ಸಾರ್ದುದೊ । ಹಿಮಗಿರಿಯಲೆಂಬಂತೆಯೆಸೆದುದು ಪಟ್ಟದಭಿಷೇಕ ॥೩೧॥ ಆರತಿಗಳೆತ್ತಿದ್ದವು ಬಳಿಕ ।
ಪ್ಪಾರತಿಯು ಸೂಸಿದವು ನೃಪಪರಿ । ವಾರವೆಲ್ಲರು ಬಂದು ಕಂಡರು ಕಾಣಿಕೆಯ ನೀಡಿ ॥ ಕೌರವೇಂದ್ರ
ನ ಮೋಹರದ ಗುರು । ಭಾರ ಭೀಷ್ಮಂಗಾಯ್ತು ಸಮರದ । ವೀರಪಟ್ಟವನಾಂತನಾಚಾರ್ಯಾದಿಗಳು

ಮಣಿಯೆ ॥೩೨॥ ಈನದೀನಂದನನ ಬಲದಲಿ ಸೇನೆ ಶಿವಗಂಜುವುದೆ ಕುಂತೀ । ಸೂನುಗಳಿಗಾರಣ್ಯಜಪವಿನ್ನವರಿಗಿಳೆಯೇಕೆ ॥ ಮಾನನಿಧಿ ಭೀಷ್ಮಂಗೆ ಸಮರಸ । ಮಾನಭಟನಿಸ್ವಾನವೆಂದು ಮ । ನೋನುರಾಗದಮೇಲೆ ಕೌರವರಾಯ ಬಣ್ಣಿಸಿದ ॥೩೩॥ ಎಲೆಮರುಳೆ ಭೂಪಾಲ ಕೌರವ । ಕುಲಪಿತಾಮಹನಹನು ಧರ್ಮಂ । ಗಳಲಿ ಪರಿಣತನಹನು ಕಾಳಗವೇಕೆ ಯಿವರೇಕೆ ॥ ಗಳದ ಗರಳದ ದನಿಯು ಭಟ್ಟನುಂ । ಡಳಿಯೊಡನೆ ಮನ್ನಣೆಯೆ ಹೇಳ್ಕೆ । ಕಳಿದಹರೆಯಂಗೆಂದು ಕಳವಳಿಸಿದನು ಕಲಿಕರ್ಣ ॥೩೪॥ ತೊಗಲು ಸಡಿಲಿದಗಲ್ಲ ಬತ್ತಿದ । ಹೆಗಲನಲುಗಿದನರೆತ ವಿಶ್ರಾಸ್ಥೆಯು । ಜಗುಳ್ದಹಲುಗಳ ಸಟ್ಟಿಕಂಗಳ ನೆಗ್ಗಿದಮಯುವದ ॥ ಅಗಿಯಲಲುಗುವತಲೆಯ ಮುಪ್ಪಿನ । ಮುಗುದನೀತನ ಜಯಸಹೇಳಿದು । ನಗೆಯೆಸೆದುದೈರಾಯಕಟಕದೊಳೆಂದನಾ ಕರ್ಣ॥೩೫॥ ಇಲ್ಲಿ ಭೀಷ್ಮರು ರಾಘವನ । ಬಲದಲ್ಲಿ ಜಾಂಬವರುಭಯವೀರರು । ಬಲ್ಲಿದರು ಬಳಿಕುಳಿದವೀರರ ಶೌರ್ಯವೊಪ್ಪುವುದೆ ॥ ನಿಲ್ಲು ನೀಕೊಲಲೆಳಸುವೊಡೆ ಹಗೆಯಲ್ಲಿಗೊಪ್ಪಿಸಿ ಕೊಲಿಸರೇತಕೆ । ಬಿಲ್ಲಿನಲಿ ಬಲಿದಸ್ತ್ರಗೆಡಹುವೆನೆಂದನಾ ಕರ್ಣ ॥೩೬॥ ಹಾನುಡಿಯದಿರು ನಿನ್ನ ಹವಣಿನ । ಮಾನಿಸನೆ ಸುರಸಿಂಧುಜಾತನು । ನೀನಿನಜಮೇಲರಿಯೆ ಜವ್ವನದುಬ್ಬುಗೊಬ್ಬಿನಲಿ ॥ ನೀನುಸಲಿಯೇರಾಮಕಟಕದ । ಹಾನಿಯನು ಕಾಯ್ದಾತ ಜಾಂಬವ । ನೇನುಕೊರತೆಯೆನುತ್ತ ನುಡಿದನು ಗರುಡಿಯಾಚಾರ್ಯ ॥೩೭॥ ರಣದೊಳೊಡ್ಡಿದರಾತಿಗಳನೀ । ಹಣೆಯಪಟ್ಟದವೀರಜಯಿಸಲು । ಹಣವಿಗಾನೋಲೈಸೆ ಮಾಡುವಿ ಸಮರದಲಿತಪವ ॥ ರಣದಲಿವರಡಗೆಡೆದರಾದೊಡೆ । ಮಣಿಯದಿರಿದಪೆನೆನ್ನಬರ ಮಾ । ರ್ಗಣೆಯನಾಹವದೊಳಗೆ ಸರಳಿಸೆನೆಂದನಾ ಕರ್ಣ ॥೩೮॥ ಗಳಹದಿರು ರಾಧೇಯ ನಿನ್ನಯ । ಕುಲವ ನೋಡದೆ ಮೀರಿದಪ್ಪುವೆ । ಸಲುಗೆಯದಲೇ ಸ್ವಾಮಿಸಂಪತ್ತಿನ ಸಗಾಢತನ ॥ ಕಲಿಗಳುಳಿದಂತೆನ್ನ ಸರಿಸಕೆ । ನಿಲುವನಾವನು ದೇವದಾನವ । ರೊಳಗೆ ನಿನ್ನೊಡನೆಂದು ಫಲವೇನೆಂದನಾ ಭೀಷ್ಮ ॥೩೯॥ ಕೇಳು ಕೃಪ ಕೇಳ್ಕೈ ಜಯದ್ರಥ । ಕೇಳು ಗುರುಸುತ ಶಲ್ಯ ಕುಂಭಜ । ಕೇಳು ದುಶ್ಶಾಸನ ವಿಕರ್ಣ ಸುಲೋಚನಾದಿಗಳು ॥ ಕಾಳಗದೊಳರಿ ದಶಸಹಸ್ರನೃ । ಪಾಲರನು ಮಣಿಖಚಿತ ನಿರ್ಮಲ । ಮೌಳಿಗಳ ದಿಗುಬಲಿಯಕೊಡುವೆನು ದಿವಸದಿವಸದಲಿ ॥೪೦॥ ಹರಿಯು ಚಕ್ರವ ತುಡುಕಿಸುವೆವಾ । ನರಪತಾಕನ ರಥವ ಹಿಂದಕೆ । ಮುರಿಯಲಿಸುವೆನು ಮಹಿಮರಿಬ್ಬರ ನಡವಳಿಯ ಕೆಡಿಸಿ ॥ ಸುರನರೋರಗರೊಳಗೆ ಮಿಡುಕು । ಳ್ಳರಿಗೆ ಕಟ್ಟಿದತೊಡರು ನೀನು । ಬ್ಬರಿಸಿ ನುಡಿವರೆನೊರಜ ಕೊಲುವೊಡೆ ಕೈದುವೇಕೆಂದ ॥೪೧॥ ಜಲಧಿಯುಬ್ಬಿದವೊಲು ಸಭಾಮಂ । ಡಳಿಯೊಳಗೆಸಂವಾದಹೃದಯುರ । ಕಳಕಳಿಕೆ ದಿಗುತಟವ ಗಬ್ಬರಿಸಿದುದು ಗುಪಿತದಲಿ ॥ ಕೆಲರುಭೀಷ್ಮನನಿನತನೂಜನ । ಕೆಲರು ಕೊಂಡಾಡಿದರು ಭೂಪತಿ । ಯಳುಕಿ ಭೀಷ್ಮನ ಬೇಡಿಕೊಂಡನು ವಿನಯಪರನಾಗಿ ॥೪೨॥ ಬೀಳುಕೊಂಡುದು ರಜನಿ ಮರುದಿನ । ವಾಳುಕುದುರೆಯು ನೆರಹಿ ಧರಣೀ । ಪಾಲಸುಮುಹೂರ್ತದಲಿ ಹೊಯ್ಸಿದನಂದು ಹೊರಗುಡಿಯ ॥ ಸೂಳವಿಸಿದವು ಲಗ್ಗೆಯಲಿ ನಿ । ಸ್ಸಾಳಕೋಟಿಗಳುರುಚತುರ್ಬಲ । ಮೇಳದಲಿ ಬಂದುದು ಸಮಸ್ತಮಹಾಮಹೀಶ್ವರರು ॥೪೩॥ ವೀರಧೃತರಾಷ್ಟ್ರಂಗೆ ವರಗಾಂ । ಧಾರಿಗೆರಗಿದಿನವರಹರಕೆಯ । ಭೂರಿಗಳ ಕೈಕೊಳುತಲವನೀ ಸುರರಿಗಭಿನಮಿಸಿ ॥ ಚಾರುಚಮರದ ನಿಕರದವರೊ । ಯ್ಯಾರಿಸಲು ಜಯರವದ್ಧುರಭಟದು । ದಾರವೆಸೆಯಲು ಬೀಳುಕೊಂಡನು ರಾಜಮಂದಿರವ॥೪೪॥

ಒಡನೊಡನೆ ಕರಿತುರಗವೇರಿದ । ರೊಡನೆ ಹುಟ್ಟಿದ ಶತಕುಮಾರರ । ಗಡಣದಾಪ್ತರು ಕರ್ಣ ಶಕುನಿ
ಜಯದ್ರಥಾದಿಗಳು ॥ ಅಡಸಿದ್ದವು ಝಲ್ಲರಿಗಳೆಭ್ರವ । ತುಡುಕಿದ್ದವು ಸೀಗುರಿಗಳಂತ್ಯದ । ಕಡಲವೊ
ಲು ಪಡೆ ನಡೆಯೆ ಹಸ್ತಿನಪುರವ ಹೊರವಂಟ ॥೪೬॥ ಧುಗುಧುಗಿಪ ಚಂಬಕನ ಗಜಕೋ । ಟೆಗಳ
ಮುಂದಣಡಾಂಡೆಗಳ ಮಿಗೆ । ಗಗನ ವೊಡನೊಡೆದೊದರೆ ಮೊರೆವ ಗಭೀರ ಭೇರಿಗಳ ॥ ಅಗಿವ ಪಟಹ
ಮೃದಂಗಕಹಳಾ । ಳಿಗಳ ಕಳಕಳ ಬಹಳ ದೆಸೆದಿ । ಕ್ಕುಗಳ ಮಾತಾಡಿಸಿ ಮಹಾಬಲ ತೆರಳಿತಿಭಪುರಿ
ಯು ॥೪೭॥ ಅಗಿವವಜ್ರದ ಹೊಳಹುಗಳೊ ಮಿಗೆ । ಹಗಲೊಡೆಯನ ಪ್ರಭೆಯೊ ಮಿಂಚಿನ । ಬಿಗಿ
ಯತೆಕ್ಕೆಯೊ ಸೂರ್ಯಕಾಂತಚ್ಛವಿಯ ತೆಕ್ಕೆಗಳೊ ॥ ಜಗುಳಿದೊರೆಗಳ ಜಾಳಿಹೊಗರಲ । ಗುಗಳಝು
ಳಪಿಸೆ ಹೊಳೆಹೊಳೆವ ಕೈ । ದುಗಳ ಹಬ್ಬುಗೆವೆಳಗು ಗಬ್ಬರಿಸಿದವು ದಿಗುತಟವ ॥೪೮॥ ಜಲಧಿಗಳ ಕು
ಡಿದುದು ನಭೋಮಂ । ಡಲವ ಸೆಳೆದುದು ಸುರನದಿಯಮು । ಕ್ಕುಳಿಸಿತಖಿಳಾದ್ರಿಗಳ ನುಂಗಿತು ದಿವ
ವನಳುಕಿಸಿತು ॥ ನೆಲನ ಸವಸಿತು ನೇಸರಿನ ಕಂ । ಗಳನು ತುಡುಕಿತು ನೆನೆಯಬಾರದು । ನಳಿನಭವಹರನಾ
ದನೆನುತುಚ್ಚಳಿಸೆಪದಧೂಳಿ ॥೪೯॥ ಸುರಿವಮದಗಜಧಾರೆಯಲಿ ಹೊಸ । ಸರಸಿಗಳು ಸಂಭವಿಸಿದವು
ನೃಪ । ವರರ ಮಕುಟದ ಮಣಿಯಲಾದವು ಚಂದ್ರಸೂರಿಯರು ॥ ಗಿರಿಗಳಾದವು ದಂತಿಯಲಿ ಪಡಿ ।
ಧರಣಿಯಾದವು ಛತ್ರಚಮರಿಯ । ಲರರೆ ನೂತನಸೃಷ್ಟಿಯಾಯ್ತು ವಿರಿಂಚಿಸೃಷ್ಟಿಯಲಿ ॥೫೦॥ ಅರ
ರೆ ನಡೆದುದು ಸೇನೆ ಕುಲಗಿರಿ । ಯೆರಡು ಕೂರುಮಫಣಿಪರಿಬ್ಬರು । ಕರಿಗಳೆಂಟ್ಟಿದಿಸಲು ಮಿಗೆ ಹದಿ
ನಾರನಳವಡಿಸಿ ॥ ಸರಸಿಜೋದ್ಭವ ರಚಿಸದಿರ್ದೊಡೆ । ಧರಿಸಲಾಪ್ಪುದೆ ಭರವನೆನೆ ಕುರು । ಧರೆಗೆ ಬಂ
ದುದು ಸೇನೆ ಪಯಣದಮೇಲೆ ಪಯಣದಲಿ ॥೫೧॥ ನಡೆದು ಬಿಡದು ಕೌರವೇಂದ್ರನ । ಪಡೆ ಕುರು
ಕ್ಷೇತ್ರಕ್ಕೆ ಮೂಡಣ । ಕಡೆಯಲೆಳವಡಿಸಿದರು ಬೀಡಾಯಿತ್ತು ಪಹಿಲದಲಿ ॥ ಗುಡಿಗಳನು ಹೊಯ್ಸಿದರು
ಲೋಹದ । ತಡಿಕೆಗಳ ನಳವಡಿಸಿ ಬೀಡಿನ । ನಡುವೆಬಿಡಿಸಿದ ನವನಿಪಾಲನ ರಾಜಮಂದಿರವ ॥೫೧॥ ಅ
ಳವಿನಾಲ್ವತ್ತೆಂಟುಯೋಜನ । ದಳವಿಯೊಳಗಿಟ್ಟಣಿಸಿ ಬಿಟ್ಟುದು । ವಳಯದಗಳಲ್ಲಲ್ಲಿ ತಳಿಮುಳು
ವೇಲಿಪಡಿಯಗಳು ॥ ಕೆಲದೊಳೊಪ್ಪುವನೇತ್ರವತಿ ನಿ । ರ್ಮಳಗಭೀರೋದಕದನದಿ ಕುರು । ಬಲದ
ಪಾಳೆಯದಂಪವಿದು ಕೇಳ್ಕೆ ಮಹೀಪಾಲ ॥೫೨॥ ಪಡೆಯ ಮುಂಗುಡಿ ಭೀಷ್ಮನದು ಬಲ । ದೆಡೆಗೆ
ಪಿಂಗಳಿಯಾತನದು ನೃಪ । ಗಡಣ ಬೀಡಿನ ಕಾಹು ಗಂಗಾಸುತನ ಗುರುಭಾರ ॥ ನಡೆವೊಡಾತನ ಮಾ
ತು ಮರಳಿದು । ಬಿಡುವೊಡಾತನ ನೇಮ ಕೌರವ । ಪಡೆಗೆ ಭಾರಿಯ ವಜ್ರಪಂಜರವಾದನಾಭೀಷ್ಮ
॥೫೩॥ ಕೇಳು ಜನಮೇಜಯಧರಿತ್ರೀ । ಪಾಲ ಧೃತರಾಷ್ಟ್ರಂಗೆ ಮಕ್ಕಳ । ಮೇಲೆ ಮನವಾಯ್ತಖಿಳ
ಶೋಕೋದ್ರೇಕಮನನಾಗಿ ॥ ಕಾಳಗದೊಳೇನಾದರೋ ಭೂ । ಪಾಲತಿಲಕರು ದೃಗುವಿಹೀನನ । ಬಾ
ಳಿಕೆಯ ಸುಡಲೆನುತ ತನ್ನೊಳು ಹಿರಿದು ಚಿಂತಿಸಿದ ॥೫೪॥ ಆಸಮಯದಲಿ ರಾಯ ವೇದ । ವ್ಯಾಸ
ಮುನಿಯೈತಂದು ಗತಪಾ । ತೋಷವನು ಸಂತೈಸಿ ಕರಸಿದನಂದು ಸಂಜಯನ ॥ ಆಸಮಯವೃ
ತ್ತಾಂತ ನಿನಗೆ ಸ । ಮಾಸವಿಸ್ತರವಾಗಿ ಬರಲಿ ಮ । ಹೀಶತಿಲಕಂಗರುಹುವುದು ನೀನೆಂದು ನೇಮಿಸಿ
ದ ॥೫೫॥ ಪರಮವೇದವ್ಯಾಸಮುನಿಪನ । ಕರುಣವಾಗಲು ಕಂಗಳಿಗೆ ಗೋ । ಚರಿಸಿತಾಭಾರತ ಮ
ಹಾಸಂಗ್ರಾಮಸೌರಂಭ ॥ ಧುರದ ವೃತ್ತಾಂತವನು ಚಿತ್ತೈ । ಸೌರಸ ತಿಳುಹುವೆನೆಂದು ಸಲೆ ವಿ ।

ಸ್ಮರಿಸಬಗೆದನು ಸಂಜಯನು ಧೃತರಾಷ್ಟ್ರಭೂಪತಿಗೆ ||೫೬|| ಅವಧರಿಸು ಧೃತರಾಷ್ಟ್ರ ಗಂಗಾ | ಭವನ ನೇಮದಲಂದು ಮಹದಾ | ಹವಕೆ ನಡೆವುದು ಕಟಕವಲ್ಲಿಗುಲೂಕನೆಂಬವನ || ಇವರು ಕಳುಹಿದೊಡವನುರಿಪುಪಾಂ | ಡವರ ಹೊರೆಗೈತಂದು ಮಹದಾ | ಹವಕೆ ನಿಂದರು ಧರ್ಮಪುತ್ರ ವಿಲಂಬವೇಕೆಂದ ||೫೭|| ಅಗ್ಗಳೆಯನೆಮ್ಮರಸ ಸಂಪ್ರತಿ | ನೆಗ್ಗಿ ಕೆಟ್ಟಿರಿ ನೀವು ನಿಮಗೀ | ಹುಗ್ಗಿಗರು ಹುರಿಗೂಡಿ ಗೆಲಿದೇನಿಳೆಯ ಕೊಡಿಸುವರೆ || ತಗ್ಗಿ ತಾವೂತೇಕೆ ರಣದಲಿ | ನುಗ್ಗುನುಗ್ಗಾಗದೆ ಸಹೋದರ | ರೊಗ್ಗ ಮುರಿಯದೆ ಮಾಣದುರೆಕೇಡಾಯ್ತು ನಿಮಗೆಂದ ||೫೮|| ಬೆಂಬಲಕೆ ತಾನೆಂದು ಬಯಲವಿ | ಡಂಬದಲಿ ಕಾಳಗವ ಮಸೆದಿರಿ | ನಂಬಿ ಕೆಡುವಿರಿ ಕೃಷ್ಣನನು ನೀವೇನ ಮಾಡುವಿರಿ || ಇಂಬುಗೈವುದು ನೀತಿ ರಣಕೆ ತ್ರಿ | ಯಂಬಕನ ನಮರಾಧಿಪನ ಕೈ | ಕೊಂಬನೇ ಭೂಪಾಲನೆನೆ ಕೈಕೊಂಡನಾಭೀಮ ||೫೯|| ಸೀಳು ಕುನ್ನಿಯ ಬಾಯನೆಲವೋ | ತೋಳತೀಟೆಯನೆವನನೆತ್ತಿಯ | ಮೇಲೆ ಕಳೆವೆನು ಕಲಕುವೆನು ಕೌರವಕುಲಾಂಬುಧಿಯ || ಹೇಳು ಹೋಗಾನಾಯನಾಡಿಸಿ | ಕೇಳುತಿರಲೇಕಹಿತಕೌರವ | ಕಾಲ ಪವನಜನೆಂದು ನಿನ್ನೊಡೆಯಂಗೆ ಹೇಳೆಂದ ||೬೦|| ಮಾಡಲಿದ್ದುದು ಬಹಳ ಪೌರುಷ | ವಾಡಿ ಕೆಡಿಸಲದೇಕೆ ಕೌರವ | ರಾಡಿ ಕೆಡಿಸಲಿ ನೀತಿಹೀನರ ಮಾತು ನಮಗೇಕೆ || ಮಾಡಿದೆವು ಗುರುಭಾರವನು ಮುರ | ಗೇಡಿಯಲಿ ರಣಪಾರುಪತ್ಯವ | ಮಾಡುವಾತನು ಕೃಷ್ಣನೆಂದನು ಧರ್ಮಸುತ ನಗುತ ||೬೧|| ವೈರಿದೂತನ ಕಳುಹಿದರು ಕೈ | ವಾರಿಗಳು ಜಯ ಜೀಯಯೆನೆ ಹೊಂ | ದೇರ ತರಿಸಿದನಬುಜನಾಭನ ಪದಯುಗಳಕೆರಗಿ || ವಾರುವನ ಖುರನಾಲ್ಕರಲಿ ಮಣಿ | ಚಾರುಕನಕವ ಸುರಿದು ತನ್ನಯ | ತೇರನೇರಿದನೊರಲಿದವು ನಿಸ್ಸಾಳಕೋಟಿಗಳು ||೬೨|| ಹರಿಯಬಲವಂದಣ್ಣನಂಘ್ರಿಗೆ | ಶಿರವ ಬಾಗಿ ನಿಜಾಯುಧವ ವಿ | ಸ್ತರಿಸಿ ಪವನಜಪಾರ್ಥಮಾದ್ರೀಸುತರು ರಥವೇರಿ|| ಧುರಕೆನಡೆದರು ದ್ರುಪದಸಾತ್ಯಕಿ | ವರವಿರಾಟಾದಿಗಳು ಚೂಣಿಯೊ | ಳುರವಣಿಸಿದುದು ಸೇನೆ ನಡೆದುದು ಮುಂದೆ ಮೋಹರಿಸಿ ||೬೩|| ಬಳಿಕಧೃಷ್ಟದ್ಯುಮ್ನನಾಜ್ಞೆಯೊ | ಳೆಳವಿಗೊಟ್ಟುದು ಬಂದು ಮೂಡಣ | ಜಲಧಿಗಾಂತುದು ಪಶ್ಚಿಮಾಂಬುಧಿಯೆಂಬರಭಸದಲಿ || ಪಳಹವದ ತೋಮರದ ಕುಂತಾ | ವಳಿಯ ಚಮರದ ಛತ್ರಮಯಸಂ | ಕುಳದಿನೆಸೆದುದು ಭೂತನಾಲ್ಕಾಕಾಶಗತವಾಗೆ || ||೬೪||

ಅಂತು ಸಂಧಿ ೧ಕ್ಕೆ ಪದ ೬೪ಕ್ಕಂ ಮಂಗಳಮಸ್ತು.

ಎರಡನೆಯ ಸಂಧಿ.

ಸೂಚನೆ|| ಸಾಮದಲಿ ರಿಪುಬಲದ ಸುಭಟ | ಸ್ತೋಮವನು ತನ್ನೊಳಗುಮಾಡಿದು |
ಭೂಮಿಪತಿಯಮನಂದನನು ಸಂಗ್ರಾಮಕನುವಾದ ||

ಪದ|| ಕೇಳು ಜನಮೇಜಯಧರಿತ್ರೀ | ಪಾಲ ಧೃಷ್ಟದ್ಯುಮ್ನಭೀಷ್ಮರ | ಪಾಳೆಯದಲಂದವಮ ಕೈಗೈದಿಳೆಗೆ ಹೊಸತೆನಿಸಿ || ಕಾಳಗಕ್ಕನುವಾಗಿ ರಥತುರ | ಗಾಳಿ ಕರಿಕಾಳಾಳುಸುಭಟರ | ಮೇಲುಗೈಚಮರಗಳವೀಕ್ಷಿಸುತಿರ್ದುದುಭಯಬಲ ||೧|| ಮಡವುಸೋಂಕದಮುನ್ನ ಗಗನವ | ತುಡುಕ

ಬಗೆದವು ತೇಜಿಗಳು ಕೈ । ಸಡಿಲೆ ವಾಘೆಯಸೂಸಿ ಸುಳಿದವು ರಥದ ವಾಜಿಗಳು ॥ ತುಡುಕುವಂಕುಶ
ದಿಂದ ಮುನ್ನಿಳೆ । ಯೊಡಯೆ ಗಜ ಗಾಡಿಸಿದವರಸನ । ಬಿಡುಹ ತಡೆಯೊಡೆಗಲಸಬಗೆದುದು ವಿಗಡ
ಪಾಯದಳ ॥೨॥ ಗಜಗಳುರುಗರ್ಜನೆಯುವಾಜಿ । ವ್ರಜದ ಹೇಷಾರವದ ತೇರಿನ । ಗಜಬಜದ ಕಾಲಾಳ
ಕಡುಹಿನ ಬೊಬ್ಬೆಯಬ್ಬರದ ॥ ಗಜರುವಗ್ಗದಕಹಳೆಗಳ ದಿ । ಗ್ವ್ರಜವ ನುಡಿಸುವರಾಯಗಿಡಿಗನ ।
ವಿಜಯಬಲ ತೊಡರಿಕ್ಕಿತ್ತೆ ಕಲ್ಪಾಂತಸಾಗರಕೆ ॥೩॥ ತಿಗಡಲೊದರುವಹರಿಗೆಗಳ ಗೌ । ರಗಿವಹೆಗ್ಗಾಳೆ
ಗಳ ರಭಸದೊ । ಳಗಿವಖಡುಗದ ಹೊದರ ಡೊಂಕಣಿಗಳ ಢಣಾಕೃತಿಯ ॥ ಬಿಗಿದಬಲುಬೊಬ್ಬೆಗಳ
ಬಿರುದರ । ವಿಗಡಮೂದಲೆಗಳ ಮಹಾಧ್ವನಿ । ಬಗಿದುದೈ ತಾವರೆಯತನಯನ ಕರ್ಣಕೋಟರವ
॥೪॥ ಕುಣಿವಕುದುರೆಯ ಮದಮುಖದ ಭಾ । ರಣೆಯಲೊದೆವಾನೆಗಳ ತುರುಗವ । ಕೆಣಕಿ ಕೀಲಿಸಿಹಿ
ಡಿವತೇರಿನ ಸೂತರೋಜೆಗಳ ॥ ಅಣೆವಹರಿಗೆಯನೊಬ್ಬರೊಬ್ಬರ । ಸಣಸಿನಲಿ ತಿವಿದಗಿವಭಟರೊ ।
ಡ್ಡಣೆಸಘಾಡಿಸಿತುಭಯಬಲದಲಿ ಭೂಪಕೇಳೆಂದ ॥೫॥ ತಳಪದಲಿ ಝಳಪಿಸುವಡಾಯುಧ । ಹೊಳೆ
ಹುಗಳ ಹೊಸಮಸೆಯ ಝಳಪದ । ಬೆಳಗುಗಳ ಬಿಟ್ಟೆಲರ ಧಾರೆಯ ಬಳ್ಳಿಮಿಂಚುಗಳ ॥ ಅಲಗಿನು
ಬ್ಬರ್ಗಿಡಿಯ ಹಬ್ಬುಗೆ । ಥಳಥಳಿಸಿ ಸೈದೆಗೆದುದೈ ಹೆ । ಬ್ಬಲದಿವಾಕರಶತವನೆನೆ ಹೆಸರಿಡುವನಾರೆಂದ
॥೬॥ ಕೇಳು ಜನಮೇಜಯಧರಿತ್ರೀ । ಪಾಲ ಭೀಷ್ಮನ ಹೊರೆಗೆ ಕುರುಭೂ । ಪಾಲ ಬಂದನು ಬಿನ್ನವಿ
ಸಿದನು ಮುಕುಳಕರನಾಗಿ ॥ ಮೇಳವಿಸಿ ಮಂಡಿಸಿದರಿಪುನೃಪ । ಜಾಲದೊಳು ಯಮಸೂನುವಾವ
ನ । ಮೇಲೆ ಭೀಮಾದಿಗಳ ವಿವರಿಸಿ ತೋರಬೇಕೆಂದ ॥೭॥ ನಸುನಗೆಯ ಚೂಣಿಯಲಿ ರತುನದ । ರ
ಸುಮೆಪಸರಿಸಿ ಕೌರವೇಂದ್ರಂ । ಗೆಸುರಿದನು ಕಲಿಭೀಷ್ಮ ನವಧರಿಸೈ ಮಹೀಪತಿಯೆ ॥ ಪಸರಿಸಿ
ದ ಮುಗಿಲೊಡ್ಡಿನಲಿ ಮಿಂ । ಚೆಸೆವವೊಲು ಗಜಬಲದ ಮಧ್ಯದೊ । ಳೆಸೆವನಾತನು ವೀರಧೃಷ್ಟ
ದ್ಯುಮ್ನನೋಡೆಂದ ॥೮॥ ಇವಕಣಾ ಪಾಂಡವರ ಸೇನಾ । ರ್ಣವಕೆನಾಯಕನಿವನ ಕೆಲಬಲ । ದವ
ರು ತೆಕ್ಕೆಯ ತೇರುತೇಜಿಯ ಥಟ್ಟನುನ್ನತಿಯ ॥ ಬವರಿಗರು ಪಾಂಚಾಲಕುಲಸಂ । ಭವರು ದ್ರುಪದ
ಸಹೋದರರು ಮ । ತ್ತಿವರು ಸೃಂಜಯ ವರಯುಧಾಮನ್ಯೂತ್ತಮೌಂಜಸರು ॥೯॥ ಡೊಂಕಣಿಯ
ಹೊದರುಗಳಲೆಡಬಲ । ವಂಕದಾನೆಯ ಥಟ್ಟುಗಳ ನಿ । ಶ್ಶಂಕಮಲ್ಲನು ದ್ರುಪದನಾತವಿರಾಟನೃಪನೀ
ತ ॥ ಮುಂಕುಡಿಯ ನಾಯಕರಿವರು ಪರಿ । ಯಂಕಕಾರರು ಯಿವರ ಬಳಿಯಲಿ । ಬಿಂಕದೆರಡಕ್ಷೋಣಿ
ಬಲವದೆ ಭೂಪಕೇಳೆಂದ ॥೧೦॥ ಇವರ ಮೋಹರದಾಚೆಯಲಿ ನಿಂ । ದವರ ಕುಂತಿಯಭೋಜಕೈಕೆಯ
ರಿವರ ಬಳಿಯಲಿ ತಳಿತುದೆರಡಕ್ಷೋಹಿಣೀಸೇನೆ ॥ ಇವರಹತ್ತಿರೆ ಮೋಹರಿಸಿ ನಿಂ । ದವರು ಪಾಂಡ್ಯ
ಶಿಖಂಡಿಸೋಮಕ । ರಿವರ ಮೋಹರದೊಳಗೆ ಯೊಂದಕ್ಷೋಹಿಣೀಸೇನೆ ॥೧೧॥ ಅರೆನೆಲೆಯ ದಳದತ್ತ
ದೃಷ್ಟಿಯ । ಧರಧುರದ ನೋಟದಲಿ ಕುಂತೀ । ವರಕುಮಾರಕರೈವರಮಳದ್ರೌಪದೀಸುತರು ॥ ಉರಿ
ಯಕರುವಿಟ್ಟಂತೆ ಪ್ರಳಯದ । ಹರನ ಖತಿ ಹೊಗುವಂತೆ ಸಿಡಿಲಿನ । ಹೊರಳಿ ಹೊದರೆದ್ದಂತೆ ನಿಂದಿ
ರ್ದವ ಘಟೋತ್ಕಜನು ॥೧೨॥ ಭೀಮಸೇನನ ಮಗನವನು ಸಂ । ಗ್ರಾಮಚೌಪಟನಿವನ ಬಳಿಯಲಿ
ತಾಮಸರು ಬಲುಮೊಗದ ಹೊಗರಿನ ಹೊಳೆವದಾಡೆಗಳ ॥ ಕಾಮರೂಪಿಗಳೊಂದು ಕೋಟಿಸ । ನಾವ
ದೈತ್ಯರು ಕುಂಭಕರ್ಣ । ಸ್ತೋಮವೆನಲೈದಿದೆ ಕೃತಾಂತನ ಕ್ರೂರಪರಿವಾರ ॥೧೩॥ ಅವನ ಬಳಿಯಲಿ

ಫಲುಗುಣಗೆ ಮಲೆ । ವವರ ಗಂಡನು ರಿಪುಕುಮಾರಕ । ನಿವಹದಾವಾನಳನ ನೋಡಭಿಮನ್ಯುಫಲುಗು
ಣನ ॥ ಕುವರನಿವಮಗನಲ್ಲ ಬಲುಗೈ । ಇವನ ಮೋಹರದೊತ್ತಿನಲಿ ನಿಂ । ದವರು ಸಾತ್ಯಕಿವಿಂದನ
ನುವಿಂದಾದಿನಾಯಕರು ॥೧೪॥ ಇವರೊಳೊಂದಕ್ಷೋಣಿಯಿದೆ ಮಾ । ಧವನಮನೆಯದುದುಷ್ಟಕೇತು ।
ಪುರನೀತನು ಚೈದ್ಯನಂದನನಿವರಕೂಡಿಹನು ॥ ಅವರ ಹೊರೆಯಲಿ ವೀರಸೇನಾ । ನಿವಹದಲಿ ಸಹದೇವ
ನಾತನ । ಸಮಹರೆಯನಕುಲಾಂಕರಿವರಾಹವಧುರಂಧರರು ॥೧೫॥ ಇತ್ತಲಿದೆ ಕಲ್ಪಾಂತರುದ್ರನ । ಮೊ
ತ್ತಕಾಳೋರಗನ ಜಂಗುಳಿ । ಮೃತ್ಯುವಿನ ಮೋಹರ ಕೃತಾಂತನ ಥಟ್ಟು ಭೈರವನ ॥ ತೆತ್ತಿಗರ ದಾವಣಿ
ಯೊಳೆಣ್ಣನ । ಮತ್ತವಾರಣಭೀಮಸೇನನ । ನಿತ್ತ ನೋಡೈ ಮಗನೆ ಕೌರವಕೇಣಿಕಾರರನು ॥೧೬॥ ಕೆಲ
ದಲಾತರುವಾಯಲಾಹವ । ದಳಲಿಗರ ಮೇಳದಲಿ ಮಕುಟದ । ಲಲಿತರತ್ನಪ್ರಭೆಯ ಲಹರಿಯ ಲಾವ
ಣಿಗೆ ಮಿಗಲು ॥ ಚಲತುರಂಗದ ಭಾರಿಯಾನೆಯ । ದಳದ ರಥಪಾಯ್ದಳದ ಹೊದರಿನ । ವಳಯದಲಿ
ನಿಂದಾತನೆಹಿತನು ರಾಯಧರ್ಮಜನು ॥೧೭॥ ತಿಳಿಯಲೊಬ್ಬನ ಮೈಯರೋಮದ । ಕುಳಿಯಲಬುಜ
ಭವಾಂಡಕೋಟಿಯ । ಸುಳಿವುಗಡ ಶ್ರುತಿನಿಕರ ಮೊರಲಿದೊಡೊಳಗುದೋರಗದ ॥ ಹಲವುಮಾತೇನಾ
ತನೀತನ । ಬಳಿಯ ಭಂಡಿಯ ಬೋವನಾಗಿಯೆ । ಸುಳಿವನೀತನ ನೋಡುಮಗನೇ ವೀರನಾರಯಣ
॥೧೮॥ ಆತನೆಡವಂಕದಲಿ ಹನುಮನ । ಕೇತನದ ಗರುವಾಯಿಯಲಿ ನವ । ಶಾತಕುಂಭ ವರೂಥದಲಿ
ನೆರತೀವಿದಸ್ತ್ರದಲಿ ॥ ನೂತನಾಶ್ವನಿಕಾಯ ಖುರಪುಟ । ಧೂತ ಧೂಳೀಪಟಲನಹಿತದಿ । ಶಾಪಟನು
ಜಯಯುವತಿವಿಟನರ್ಜುನನ ನೋಡೆಂದ ॥೧೯॥ ಅದೆ ಧುರಂಧರದುರುಳರೊಡ್ಡಿನ । ಹೊದರ ಬಣ್ಣಿ
ಸಲೆನಗೆ ನೂಕದು । ತುದಿಯನರಿಯನು ದಳದ ಮನ್ನೆಯಮಂಡಲೀಕರಿಗೆ ॥ ಕದನವಿದು ಬಾರಂಕವಾ
ರ । ಭ್ಯುದಯ ತಲೆದೋರುವುದೊ ನಮಗೇ । ಕದರ ಚಿಂತೆ ಮುರಾರಿಬಲ್ಲನು ಕಂದಕೇಳೆಂದ ॥೨೦॥
ಅವರೊಳೇಳಕ್ಷೋಣಿಬಲ ನ । ಮ್ಮವರೊಳಗೆ ಹನ್ನೊಂದು ಮತ್ತವ । ರಿವರ ಸಖ್ಯಕೆ ನೆರೆದುದೇಕಾ
ದಶಶತಕ್ಷೋಣಿ ॥ ತವಿಸುವೊಡೆ ತನಗೊಂದುದಿವ ಮೂ । ರ್ದಿವಸ ಗುರುವಿಗೆ ಐದುದಿವಸಕೆ । ರವಿ
ಜ ನಿಮಿಷ ದ್ರೌಣಿ ನಿಮಿಷಾರ್ಧಕೆ ಧನಂಜಯನು ॥೨೧॥ ಏಸಲು ಗುರುತನಯನ ಸಘಾಟಕೆ । ಕೊ
ನರತಾತನ ಮನವಜಾಂಡಕೆ । ತನುಪುಳಕಮುಬ್ಬಿನಲಿ ಪಾರ್ಥನ ಪಟುಪರಾಕ್ರಮದ ॥ ಮೊನೆಗಣೆಯ
ನುಡಿ ಸೋಂಕೆಕರ್ಣವ । ನನಿತುಕುಸಿದ ರಸಾತಳಕೆ ಕುರು । ಜನಪನನಿಬದ್ಧಪ್ರಳಾಪವ ಬಿಡಿಸಿದನು
ಭೀಷ್ಮ ॥೨೨॥ ತಾಗಲನುಗೈದೆರಡುಬಲ ಕೈ । ಲಾಗನೀಕ್ಷಿಸುತಿರಲು ರಿಪುಬಲ । ಸಾಗರವ ಸೌರಂಭವ
ನು ಬಿಡೆನೋಡಿ ಧರ್ಮಜನು ॥ ತೂಗಿದನು ಶಿರವನು ಮಹಾಹವ । ವೀಗಲಾಗದಮುನ್ನ ಭೇದದ ।
ಲಾಗನಲಿ ಭೀಷ್ಮಾದಿಗಳ ಮನವೊಲಿಸಬೇಕೆಂದ ॥೨೩॥ ಬಂದು ಭೀಷ್ಮನ ಚರಣಕಮಲ । ದ್ವಂದ್ವದಲಿ
ಚಾಚಿದನು ಮಕುಟವ । ನಿಂದೆನಾಹವದೊಳಗೆ ತನಗಿನ್ನೇನುನಿರ್ವಾಹ ॥ ಸಂದು ಕಾದುವೊಡೆನಗೆ
ಯಿನ್ನಂ । ದೆಂದು ಹರಿಯದು ಬವರವೆಮಗೇ । ನೆಂದು ಬೆಸಸುವಿರೆನುತೆ ಕರುಣವ ತೋರಿದನು ಭೂ
ಪ ॥೨೪॥ ನೀವಿರಿಯಲೀವುತ್ತರಾಯಿಗ । ಳಾವಪರಿಯಲಿ ಕೌರವನುಬಹ । ಳಾವಮಾನವ ನೆಗಳೆನಮ್ಮ
ಯ ಸತ್ಯಭಾಷೆಯನು ॥ ನೀವುಮೆಚ್ಚಲು ನಡಸಿದ್ದವು ತಲೆ । ಗಾವುದುಂಟೇ ಕರುಣಿಸಲ್ಲದೊ । ತಾವಹ
ದನೇನೆಮಗೆ ನೇಮಿಸಿ ಕಳುಹಬೇಕೆಂದ ॥೨೫॥ ಏಳುಮಗನೇ ತನ್ನ ನುಡಿಯನು । ಕೇಳೆನುತ ಭೂಪಾ

ಲತಿಲಕನ । ಮೌಳಿಯನು ಪಿಡಿದೆತ್ತಿ ಗಂಗಾಸೂನುನಸುನಗುತ ॥ ಆಳುಗೊಂಡನು ಕೌರವನಪರ ।
ರಾಳುತನವೆಮಗಾಯ್ತು ಪರಸೇ । ನಾಲಘುಸ್ಥಿತನೆನ್ನನೇತಕೆ ನುಡಿಸಿದಪ್ಪೆಯೆಂದ ॥೨೬॥ ಹಿರಿಯನಾ
ಗಲಿ ಸುಜನನಾಗಲಿ । ಗರುವನಾಗಲಿ ಅರ್ಥವುಳ್ಳನ । ಚರಣಸೇವಕರಹರು ಜಗದಲಿ ವರ್ತಮಾನವಿದು॥
ಪರರ ಭಜಕರಲಾವಗುಣವಾ । ದಿರವದಾವಗ್ಗಳಿಕೆ ಯಾವುದು । ಗರುವತನವೈತಂದೆ ಪುರುಷಾಧಮನು
ತಾನೆಂದ ॥೨೭॥ ಕೌರವನ ಹಣವೆಂಬಬಲುಹುರಿ । ಧಾರದಲಿ ನಾಬದ್ಧನಾದೆನು । ವೀರಸಾನೇಗೈವೆನೆನೆ
ಯಮಸೂನು ಕೈಮುಗಿದ ॥ ವೈರವೃತ್ತಿಯ ರಣದಲೆಮಗಿ । ನ್ನಾರುಗತಿ ನೀನುಭಯನೃಪರಿಗೆ । ಕಾ
ರುಣಿಕ ನೀ ಮುನಿದೊಡೆಮಗಿನ್ನಾಸೆಯಿಲ್ಲೆಂದ ॥೨೮॥ ಮಾನನಿಧಿ ಕೇಳ್ ಕೌರವಂಗಾ । ಧೀನವೆಮ್ಮ
ಯ ತನು ವಿಧಾತ್ರಾ । ಧೀನವೆಮ್ಮಯ ಜೀವವದು ಕಾರಣದಿನಾಹವಕೆ ॥ ನೀನು ಚಿಂತಿಸಬೇಡ ತನ್ನ
ವ । ಸಾನಕಾಲಕೆ ಮತ್ತೆ ಬರಲು ನಿ । ಧಾನಬುದ್ಧಿಯ ಕಲಿಸಿಕಳುಹುವೆ ಮರುಳೆನೀನೆಂದ ॥೨೯॥ ಎ
ನೆ ಹಸಾದವಹಾಯ್ಕೆಯುಮನಂ । ದನನು ಕಳುಹಿಸಿಕೊಂಡು ಗಂಗಾ ತನುಜನುಚಿತೋಕ್ತಿಗಳ ನೆನೆದಡಿ
ಗಡಿಗೆಪುಳಕಿಸುತ ॥ ವಿನುತಮತಿ ನಡೆತರಲುಸುಭಟರು । ತನತನಗೆ ತೊಲಗಿದರು ಪಾಂಡವ । ಜನಪ
ವೈಯಿಕ್ಕಿದನು ದ್ರೋಣನ ಚರಣಕಮಲದಲಿ ॥೩೦॥ ಅರಸ ಬಂದೆಯಪೂರ್ವವಾಯಿತು । ದರುಶನವು
ತಮಗೆನುತ ಗರುಡಿಯ । ಗುರು ಮಹೀಪಾಲಕನ ಮಕುಟವನೆತ್ತಿದನು ನಗುತ ॥ ಬರಸೆಳೆದು ಬಿಗಿ
ಯಪ್ಪಿದನು ಸಂ । ಗರಸಮಯದೊಳು ಬಹರೆ ನಿನ್ನಯ । ಭರವಸದ ಬಗೆಯೇನು ನೃಪಬಿನ್ನಹವ ಮಾ
ಡೆಂದ ॥೩೧॥ ಎಮಗೆ ದೇವರು ನೀನು ಗುರು ನೀ । ನೆಮಗೆ ತಾತನು ನೀನುಮಹದಾ । ಹವದೊಳಗೆ ಪ
ತಿಕರಿಸಿ ರಕ್ಷಿಸಲೊಡೆಯ ನೀನೆಮಗೆ ॥ ಅವನಿಯಾಸೆಯಲಿಂದು ತ್ರೆತ್ತುದು । ಬವರವೆಮಗಿನ್ನೇನುಗತಿ
ಕೌ । ರವಜಯಪ್ರಿಯನಿನ್ನು ನಮಗೆಂತೆಂದು ನೃಪನುಡಿದ ॥೩೨॥ ಅರಸಕೇಳರ್ಥಕ್ಕೆ ಧರಣಿಯ । ನರರು
ಕಿಂಕರರರ್ಥ ತಾಕಿಂ । ಕರತೆಯನು ಮಾಡುವುದು ಜಗದಲಿ ವರ್ತಮಾನವಿದು ॥ ನಿರುತಿ ಕೌರವರರ್ಥ
ದಲಿ ಕಿಂ । ಕರತೆಯೆಮಗಾಯಿತ್ತು ರಾಜ್ಯೈ । ಶ್ವರಿಯ ಪರಸೇನಾಲಘುಸ್ಥಿತರಾವು ಕೇಳೆಂದ ॥೩೩॥
ಆದೊಡೆಮಗಿನ್ನೇನುಗತಿ ರಣ । ವಾದಸಿದ್ಧಿಯದೆಂತು ಜಯಸಂ । ವಾದಕರು ತಮಗಾರೆನುತ ಗುರು
ಮತ್ತೆ ನಸುನಗುತ ॥ ಕಾದುವಾಸಮಯದೊಳಗೆಪ್ರಿಯ । ವಾದನುಡಿಯನು ಕೇಳಿದೊಡೆಯಿಾ । ಮೇದಿ
ನಿಯೊಳಾವಿರೆವು ಚಿಂತಿಸಬೇಡ ಹೋಗೆಂದ ॥೩೪॥ ಎನಲುಯಮನಂದನನು ಬೀಳ್ಕೊಂ । ಡೆನುನಯ
ದೊಳುತ್ಸಾಹಿಸುತ ಬಂ । ದನು ಮಹಾಸಂಗರದ ಮಧ್ಯದ ಕೃಪನ ರಥಕಾಗಿ ॥ ವಿನಯದಿಂ ಬಿನ್ನೈ
ಸಿ ಕೃಪನೆಂ । ದನು ನಿಧಾನಿಸಲಾವುದಿದು ಕೇಳ್ । ಜನಪ ನಿನ್ನನು ನಾವು ಕೊಲ್ಲೆವು ಮರಳು ನೀ
ನೆಂದ ॥೩೫॥ ಕೃಪನ ಬೀಳ್ಕೊಂಡತುಳಜಯಲೋ । ಲುಪನು ಶಲ್ಯನ ಹೊರೆಗೆ ಬಂದನು । ವಿಪುಳಮ
ತಿ ಬಿನ್ನೈಸಿದನು ನಿಜರಾಜಕಾರಿಯವ ॥ ಕೃಪೆಯ ಮಾಡುವದೆಮಗೆರಣದಲಿ । ತಪನತನಯನ ತೇಜ
ವನು ನಿ । ಷ್ಕೃಪೆಯೊಳವಗಡಿಸೆಂದು ಶಲ್ಯನೊಳಭಯವನು ಪಡೆದ ॥೩೬॥ ದಳದೊಳಗೆ ಬೇಹವರು
ಸಾಲ್ವರ । ನೊಳಗುಮಾಡಿಧರಾಧಿಪನ ಮನ । ಗೆಲವಿನಲಿ ತಿರುಗಿದನು ಕೌರವಮೋಹರವನುಳಿದು ॥ ತಿ
ಳಿದು ತನ್ನೊಳು ಭೀಮಸೇನನ । ಬಲುಗದಾಘಾತದಲಿ ಕುರುಕುಲ । ವಳಿವುದೆಂದು ಯುಯುತ್ಸು ರ
ಥದಿಂದಿಳಿದು ನಡೆತಂದ ॥೩೭॥ ಎರಡುಬಲ ಬೆರಗಾಗಿ ನೋಡು । ತ್ತಿರೆ ಯುಯುತ್ಸುಮಹೀಶನಂಘ್ರಿ

ಗೆ | ಕರವ ಮುಗಿದೆರಗಿದೊಡೆ ಪಿಡಿದೆತ್ತಿದನು ಕರುಣದಲಿ || ಧರಣಿಪತಿ ನೀನಾರೆನಲು ಕೇ | ಳರಸ ಕೌರವನನುಜ ನಿನ್ನನು | ಶರಣುಹೊಗಲ್ಕೆತಂದೆಯಭಯವನಿತ್ತು ಸಲಹೆಂದ ||೩೮|| ಹಿಂದೆ ರಾವಣನೆನುಜನಡೆದ್ಕೆ | ತಂದು ಶರಣಾಗತನ ರಕ್ಷಿಪನೆಂದು ರಾಘವನಂಘ್ರಿಕಮಲವ ಕಂಡು ಬದುಕಿದನು || ಇಂದು ನಿನ್ನಂಘ್ರಿಯನು ಮರೆಹೊಗ | ಲೆಂದು ಬಂದೆನು ಪತಿಕರಿಸಬೇ | ಕೆಂದು ಕೌರವನನುಜ ಬಿನ್ನೈಸಿದನು ಭೂಪತಿಗೆ ||೩೯|| ಎನಗೆ ಭೀಮಾರ್ಜುನರಹೊಲು ನೀ | ನನುಜನಲ್ಲದೆ ಬೇರೆ ನಿನ್ನಲಿ | ಮನವಿಭೇದವ ಬಲ್ಲನೇ ಬಾಯೆನುತಕೈವಿಡಿದು || ಜನಪನಭಯವನಿತ್ತು ಕೌರವ | ನನುಜನನು ಕೊಂಡೊಯ್ದನಾಹವ | ದನುಕರಣೆಯಲಿ ಸೇನೆ ಗಜಬಜಿಸಿತ್ತು ಬೊಬ್ಬೆಯಲಿ || ... ||೪೦||

ಅಂತು ಸಂಧಿ ೨ ಕ್ಕೆ ಪದ ೧೦೪ಕ್ಕಂ ಮಂಗಳಮಸ್ತು.

ಮೂರನೆಯ ಸಂಧಿ.

ಸೂಚನೆ || ರಾಯದನುಜಘರಟ್ಟಪಾಂಡವ | ರಾಯಜಂಗಮಜೀವ ನಿರ್ಜಿತ | ಮಾಯ
ನಿಜವನುತೋರಿ ಪಾರ್ಥನನೊಲಿದು ಬೋಧಿಸಿದ ||

ಪದ || ಹಳಚಲನುವಾಯ್ತುಭಯಸೇನಾ | ಜಲಧಿ ಕಳಕಳ ಮಿಗಲು ಮಾರುತಿ | ಮೊಳಗಿದನು ಪೌಂಡ್ರಕವ ಭೂಪನನಂತವಿಜಯವನು || ಇಳೆ ಬಿರಿಯೆ ಮಣಿಪುಷ್ಪಕವ ನಿ | ರ್ಮಲಸುಘೋಷದ ರವವ ಕೋಳಾ | ಹಳಿಸಿದರು ಸಹದೇವನಕುಲರು ಸಮರಕನುವಾಗಿ ||೧|| ಮುರವಿಜಯ ನಾಪಾಂಚಜನ್ಯವ | ನಿರದೆಫಲುಗುಣದೇವದತ್ತ | ಸ್ಫುರಿತರವವೆನೆ ರಚಿಸಿದರು ಮೂಲೋಕಮೈಮರೆಯೆ || ತುರಗವನು ಮೇಳೈಸಿ ವಾಘೆಯ | ತಿರುಹಿ ಚಮಟಿಗೆಯಲಿ ತೇಜಿಯ | ಬರಿದೆ ಬೆದರಿಸಿ ಕೃಷ್ಣ ಪಾರ್ಥನ ರಥವ ಹೊಳಸಿದನು ||೨|| ಚಟುಲಖುರಪುಟದಿಂದವುರ್ವೀ | ನಿಟಿಲನೆಗ್ಗತು ಬಹಳಧೂಳೀ | ಪಟಲಧೂಸರಜಗಗಳೆನಲಸುರಾರಿ ನಲವಿನಲಿ || ಪಟುಗತಿಯಗರುವಾಯಿಯಲಿ ಸಂ | ಘಟಿಸಿ ಹಯವನು ಸುಳಿಸಿದನು ಚೌ | ಪಟದಲೊಯ್ಯಾರಿಸುತ ಮಿಗೆ ಬೋಳೈಸಿದನು ಹಯವ ||೩|| ಗತಿಗೆ ಕುಣಿದವು ನಾಸಿಕದ ಹೂಂ | ಕೃತಿಗೆ ಮುಖದುನ್ನತಿಯ ಲುಳಿಯವ | ನತಿಶಯದ ಘಂಟೆಗಳ ಹೊಯ್ಲಿನ ಘಣಘಣ ಧ್ವನಿಯ || ವಿತತಸ್ವಕ್ಷ್ವದಲೋಳೆಗಳಲಾ | ಯತದವಾಘೆಯ ಜಠರದೇಶೋ | ನ್ನತಿಹಯಾವಳಿಖಳನ ಗೆಲಿದವು ಹರಿಯನೇಮದಲಿ ||೪|| ನಿಲಿಸಿದನು ಫಲುಗುಣನ ತೇರನು | ತಳಪಟದೊಳಿಂದೀಮಹಾರಥ | ರಳವಿಗೊಂಡಿಗೆ ನಿನ್ನೊಳುಂಟೇ ಕೈಮನದ ಕಡುಹು || ಉಳಿದಬಿಲುವಿದ್ಯಾಚಮತ್ಕೃತಿ | ಬಲುಹು ಗರುಡಿಯಲಲ್ಲದೀಲಪು | ಬಲಕೆ ತೋರಿಸಬಹುದೆ ಹೇಳೆಂದರ್ಜುನನ ಜರೆದ ||೫|| ಸಹಸವೆನ್ನದು ಜೀಯ ನೆರದಿ | ರ್ದಹಿತಬಲವೆನಗಾವಘನ ಬಿ | ನ್ನಹವ ಕೇಳ್ಕೆ ಕೃಷ್ಣ ಕೌರವರಾಯರೊಡ್ಡಿನಲಿ || ಬಹಳಬಲರಿವರಾರು ಸೇನಾ | ಗಹನದಲಿ ನಾಯಕರ ವಿವರಿಸ | ಬಹುದುಬೆಸಸೆನಗೆಂದು ನುಡಿದನು ಪಾರ್ಥ ಕೈಮುಗಿದು ||೬|| ಅವೊಡರ್ಜುನ ನೋಡು ಸೈನ್ಯವ | ಹೋದಧಿಯ ಮಧ್ಯದಲಿ ಮೆರೆವವ | ನಾ

ದುರಂತಪರಾಕ್ರಮನು ಗಂಗಾಕುಮಾರಕನು ॥ ಕಾದಲಿವನರಿದಖಿಳಬಲವಿಭು । ವಾದೊಡವನತಿಬಲನು ಕಾಲನ । ಕಾದಿಸಿದಚಲದಾಕವಲ್ಲನು ಭೀಷ್ಮ ನೋಡೆಂದ ॥೭॥ ಮಿಸುಪತುದಿವೆರಳಂಬು ಗೊಲೆಗೇ । ರಿಸಿದಬಿಲು ಮಣಿಮಯದ ಮಕುಟದ । ರಸುಮೆಗಳ ಝಾಡಿಯಲಿ ಹೊಂದೇರಿನ ವಿಡಾಯಿಯಲಿ ॥ ಮಸೆಗಣೆಯ ಬತ್ತಳಿಕೆ ತಿವಿರೇ । ರಿಸಿದಮೃ ಕತ್ತುರಿಯ ತಿಲಕದ । ನೊಸಲಿನಾತನನೋಡು ಗರುಡಿಯ ಜಾಣನಾದ್ರೋಣ॥೮॥ ರಾಯರೀತನ ಬಳಿಯಲಾಕ। ಶೌರ್ಯಯುತಾಸ್ತ್ರರು ಕಾಮುರ್ಕಸ್ವಾ। ಧ್ಯಾಯನಿಷ್ಠರು ಹತ್ತುಸಾವಿರ ಮಕುಟವರ್ಧನರು ॥ ಸಾಯಲಂಜದಸಿತಗರದೆ ತ । ಸ್ನಾಯತರಲಪ್ರತಿಮದೃಢಬಲ । ನಾಯಕರ ನೆರವಿಯಲಿ ಶಲ್ಯನೃಪಾಲನವನೆಂದ ॥೯॥ ಗಣನೆಗೆಟ್ಟಿದೆ ಹೆಗಲ ಹಿರಿಯು । ಬ್ಬಣದ ಕನಕದ ಝಗೆಯ ತಲೆ ಚ । ಡ್ಡಣೆಯ ನೇಣಿನ ಹೊಗರು ಮೋರೆಯ ಕೆಂಪಿನಾಲಿಗಳ ॥ ಮಣಿಮಯದ ತೇರುಗಳಲಾಸಂ । ದಣಿಯ ಮಾದ್ರೇಶ್ವರನಿವನು ಫಲು। ಗುಣನೆ ಯೆಕ್ಷಸು ಇವನೊಳೊಂದಕ್ಷೋಹಿಣೀಬಲವ ॥೧೦॥ ಕನಕಸಿಂಧವಘಟ್ಟ ಸಮ್ಮುಖ । ದಳಪಿಯಲಿ ವಿಕ್ರಮದ ಸೆಗಳಿಯ । ಝಳಪದಲಿ ಕಾಹೇರಿದಾಲಿಯ ಬಿಗಿದಹುಬ್ಬುಗಳ ॥ ಹಿಳುಕನೌಕಿದ ತುದಿವೆರಳ ನಡು । ಗಳದ ಕಪ್ಪಿನ ನೊಸಲ ನಯನದ । ಬಲುಭುಜನ ಸಮಚೋಳಿಯಶ್ವತ್ಥಾಮ ನಿಸ್ಸೀಮ ॥೧೧॥ ಆತನೊಡ್ಡಿನ ಸಾರೆ ಸಂಗರ । ಕಾತುಕೊಂಡದೆ ಕೃಪನ ದಳಸಂ । ಘಾತವೊಂದಕ್ಷೋಹಿಣೀಸುಭಟರ ಸಾಲ ಮಧ್ಯದಲಿ ॥ ಆತ ಗೌತಮನವರ ಬಳಿಯಲ । ಭೀತ ಬಾಹ್ಲಿಕವಿಂಧ್ಯರದೆ ವಿ । ಖ್ಯಾತರೊಂದಕ್ಷೋಹಿಣೀಕೌರವಸ್ಸೈನ್ಯಶರಧಿಯಲಿ ॥೧೨॥ ರಾಯರಣುಗರ ಮುಂದೆ ಕೌರವ । ರಾಯ ದಳಶೃಂಗಾರಮಲೆವರ । ರಾಯಮರ್ದನನೆಂದು ಬಿರುದಿನೊಳುಲಿವಕಹಳೆಗಳು ॥ ಜೀಯ ಜಯಜಯಯೆಂಬಪಂಡಿತ । ನಾಯಕರ ಮಧ್ಯದಲಿ ಬೆರಳಲಿ । ಸಾಯಕವ ತಿರುಹುವನು ಕರ್ಣನು ನೋಡು ಕಲಿಪಾರ್ಥ ॥೧೩॥ ಈತ ಮಾಳವನೀತ ಕೊಂಕಣ । ನೀತ ಗುಜ್ಜರನೀತ ಕೋಸಲ। ನೀತ ಬರ್ಬರ ನೀತಚೀನಕ ನೀತ ಹಂಮಿರಾರ॥ ಈತ ಕೇರಳ ನೀತ ಸಿಂಹಳ । ನೀತ ಜೀನಜ ನೀತ ಬೋಟಕ । ನೀತ ಮಾಗಧ ನೀತ ಗೌಳನೃಪಾಲ ನೋಡೆಂದ ॥೧೪॥ ಆಳುಗೆಲಸಕೆ ಕೆಲಬರರಸನ । ಕೇಳಮೇಳಕೆ ಕೆಲರು ಕೆಲಬರು । ಬಾಲೆಯರ ಕೊಳುಕೊಡೆಯ ಬಹಳದ ಬಂಧುಕೃತ್ಯದಲಿ ॥ ತೋಳಬಲವರೆಗೆಳಸಿ ಕೆಲಬರು । ಮೇಲೆನಮ್ಮಯ ಹಗೆಗೆ ಕೆಲಬರು । ಕಾಳಗದ ಕಾಮುಕ ನೃಪಾಲರ ನೆರವಿಯದೆಯೆಂದ ॥೧೫॥ ತಳಿತಪಲ್ಲವಸತ್ತಿಗೆಯ ಹೊಳೆ । ಹೊಳೆವಮೌಳಿಯ ರತುನಲಹರಿಯ । ಚಲಿಸಿ ಚಿಮ್ಮುವಚಮರಸೀಗುರಿಗಳ ವಿಡಾಯಿಗಳ ॥ ಹಲಗೆಯಲಿ ತೆತ್ತಿಸಿದಹಾವಿನ । ಹಳವಿಗೆಯ ಹೊಂದೇರ ನೃಪಮಂ। ಡಳಿಯ ಮಧ್ಯದೊಳಿಹನೆ ದುರಿಯೋಧನ ಮಹೀಪಾಲ॥೧೬॥ ಕಳಲಿದುರಗನ ನೆರವಿ ಟೊಪ್ಪರ । ಗಳದಸಾಳ್ವನಕಿಂಡು ಹಸಿದ । ವ್ಯಾಳಿಸಸಿಂಪಮೊತ್ತ, ಕುಪಿತಕೃತಾಂತ ನೊಡ್ಡವಣೆ ॥ ಕೊಲೆಗೆಲಸಕುಬ್ಬೆದ್ದರುದ್ರನ। ಬಳಗವೆನೆ ಹರಹರ ಮಹಾ[illegible]ಥ । ರ[illegible]ಗೊಟ್ಟದೆ ನೋಡು ದುರಿಯೋಧನ ಸಹೋದರರ ॥೧೭॥ ಉಳಿಗೆ ಮಿಂಚಿನಮುಂದೆ ಸುಗಿಯ । [illegible]ಳಕಕನಿಲನ ಘಟ್ಟ ಬಿಡಿಯ । ಬಳಿಗೆ ಪುರುಷಾಮೃಗದಸಾವಳಿಯೆನೆ ವಿಲಾಸದಲಿ ॥ ಹೊಳೆವಚೌರಿಯ ಸುತ್ತುಜಲ್ಲರಿ । ನೆಲಕಗಿವ ಜೋಡುಗಳ ತೇಜಿಯ । ದಳವ ನೋಡೈ ಪಾರ್ಥ ಬಳಸಿದಕಲಿಜಯದ್ರಥನ॥೧೮॥ ತೋರದಲಿ ಕುಲಗಿರಿಯಸತ್ವದ । ಸಾರದಲಿ ವಜ್ರವನು ನಿನದದಿ । ಕಾರಮೇಘಘ್ವನಿಯಸುಗಿದೇನೊಂ

ದು ಮಾಡಿದನೊ ॥ ವಾರಿಜೋದ್ಭವನೆನಲು ಜಾಡಿಯ । ಭಾರರೆಂಚೆಯ ಕೈಯ ಖಡುಗವ । ವಾರಣಾದ ಬಲಮಧ್ಯದಲಿ ಭಗದತ್ತನವನೆಂದ ॥೧೯॥ ಹೊಗರೊಗುವ ಸೂಲಿಗೆಯ ಸುಪತಾ । ಕೆಗಳ ಸಿಂಧದ ಹೊಳೆವಹೊಂಗಂ । ಬುಗೆಯ ಹೂಡಿದಹಯದ ಸೂತರ ಗಳದಗರ್ಜನೆಯ ॥ ಅಗಿವಚೀತ್ಕಾರದ ಭಡಾಳದ । ವಿಗಡರಥಿಕರ ರಹಿಯರಥವಾ । ಜಿಗಳ ನೋಡೈ ಪಾರ್ಥ ಭೂರಿಶ್ರವನ ಸೈನ್ಯವಿದು ॥೨೦॥ ಹಲಗೆ ಕಡಿತಲೆ ಹರಿಗೆ ಖಂಡೆಯ । ಹೊಳೆವಮುಡ್ಡಕಠಾರಿ ಡೊಂಕಣಿ। ಬಿಲುಸರಳು ತೋರೀಟಿ ಮುದ್ಗರ ಪಾಶ ಕೊಂತದಲಿ ॥ ತಲೆಯನೇಣಿನ ಕೈಯ ಚೌರಿಯ । ಝಳಿಯ ಜೋಡಿನ ಕಡೆಯ ಘಂಟೆಯ । ದಳವನೀಕ್ಷಿಸು ಪಾರ್ಥ ದುಶ್ಶಾಸನನ ಪಾಯದಳ ॥೨೧॥ ವೀರನಭಿಮನ್ಯುವಿನ ವೊಲು ರಣ । ಧೀರನೀತನ ನೋಡು ಕರ್ಣಕು । ಮಾರಕನು ವೃಷಸೇನನೀತನು ಚಿತ್ರಸೇನಕರು ॥ ಚಾರುಲಕ್ಷಣನವರು ನೂರುಕು । ಮಾರರಿದೆ ದುರ್ಯೋಧನಾತ್ಮಜ । ರಾರುವನು ಕೈಕೊಳ್ಳರವದಿರು ಸುಬಲನಂದನರು ॥೨೨॥ ಕರಿಘಟೆಯ ಕೂಲದಲಿ ಹಯರಥ । ನರರತೆರೆಮಾಲೆಯಲಿ ಬಲುರುಝು । ಲ್ಲರಿಯ ಬುದ್ಬುದತತಿಯಲಸ್ತ್ರದಕಿಡಿಯುವಡಬನಲಿ ॥ ಬಿರುದರಾಯರ ಮಕುಟರತ್ನದ । ಲರಿಬಲಾರ್ಣವ ಗಜರುಮಿಗಿಲ । ಳ್ಳಿರಿವುತಿದೆ ಬಹುವಿಧದ ವಾದ್ಯವಿಡಾಯರಭಸದಲಿ ॥೨೩॥ ಆಳಮಯವಖಿಳೋರ್ವಿ ಪದಹತಿ । ಧೂಳಿಮಯ ವಾಕಾಶ ರಥತುರ । ಗಾಳಿಮಯ ದಿಗುಜಾಲವೇನೆಂಬೆನು ಮಹಾದ್ಭುತವ ॥ ಕಾಳಗಕೆ ನೀನಲ್ಲದವನಿಯೊ । ಳಾಳ ಕಾಣೆನು ಪಾರ್ಥ ಸಾಕಿ । ನ್ನೇಳು ಬಾಣವ ತೂಗಿ ಮಾತಾಡಿಸು ಮಹಾರಥನುವ॥೨೪॥ಎಲೆಧನಂಜಯ ಹಗೆಯ ಹೆಚ್ಚಿದ।ಹಳುವವಿದೆ ನಿನ್ನತುಳಕೋಪಾ।ನಳನನೌತಣಿಸೈ ಸುಯೋಧನ ಸೈನ್ಯಗಿರಿವಜ್ರ ॥ ಎಲೆಸಮೀರಕುಮಾರ ರಿಪುಬಲ । ವಿಲಯಮೇಘನಿಕಾಯವಿದೆ ಭುಜ । ಬಲವ ತೋರೈ ತಂದೆ ನೋಡುವೆನೆಂದನಸುರಾರಿ ॥೨೫॥ ಮೆಟ್ಟಿ ನೋಡಿದನಹಿತರಾಯರ । ಘಟ್ಟಿಗಳತೆರಳಿಕೆಯನುತ್ಸವ । ಗೆಟ್ಟು ಫಲುಗುಣ ಸೆಡೆದು ಮನದಲಿ ನೊಂದು ತಲೆದೂಗಿ ॥ ಕೆಟ್ಟಕಾಯದ ಸುಖಕಳುಪಿಯೊಡ । ಹುಟ್ಟಿದರ ಕೈಯಾರೆಕೊಂದರೆ ।ಮುಟ್ಟದೇ ಕಡುಪಾಪ ಘನಪರಿತಾಪ ತನಗೆಂದ॥೨೬॥ ಕೆಲಬರೊಡಹುಟ್ಟಿದರು ಗುರುಗಳು । ಕೆಲರು ಕೆಲಬರು ಮಾವಮೈದುನ । ನಳಿಯ ಮಗ ಹಿರಿಯಯ್ಯ ಮುತ್ತಯ ಮೊಮ್ಮನೆನಿಸುವರು ॥ ಕಳನೊಳನಿಬರ ಕೊಂದು ಶಿವಶಿವ । ಕೆಲವು ದಿವಸದ ಸಿರಿಗೆ ಸೋಲಿದು । ಮುಳುಗುವನೆ ಹಾಹಾ ಭವಾಬ್ಧಿಯೊಳೆನುತ ಮನಮುರಿದ ॥೨೭॥ ಇದಿರುಗಾಣದೆ ಕೊಲೆಗೆ ನಿಬ್ಬರ । ಧದಲಿ ಬೆಸಸುವ ಕೃಷ್ಣನಕಟಾ । ಮದಮುಖನೊ ದುರ್ಬೋಧಕನೊ ವಂಚಕನೊ ಘಾತಕನೊ ॥ ಯದುಗಳನ್ವಯದೊಳಗೆ ಧರ್ಮಾ । ಸ್ಪದರು ಜನಿಸಿರಲಾ ಮುರಾರಿಯ । ಹೃದಯಬೆಟ್ಟಿತೆನುತ್ತ ಫಲುಗುಣ ತೂಗಿದನು ಶಿರವ ॥೨೮॥ ನರಕಕರ್ಮವ ಮಾಡಿ ೦ ಪದೊಳ । ದುರಿತಭಾಜನನಾಗಿ ಕಡೆಯಲಿ । ಪರಕೆ ಬಾಹಿರನಾಗಿ ನಾನಾಯೋನಿಯೊಳು ಸುಳಿದು ॥ ಹೊರಳುವನುವನುಕೃಷ್ಣನಾಯನು। ಕರುಣಿಸಿದನೈ ಹಿತವನಪಹರ। ಹರ ಮಹಾದೇವೆಂದುಜೋಳಕೆ ಬದುಕಿದೆನೆಯೆಂದ ॥೨೯॥ ಮುಳಿಯಲಾಗದು ಕೃಷ್ಣನಿಮ್ಮನು । ತಿಳುಹವೌನು ಸಮರ್ಥನೇ ಕುಲ। ಗೊಲ. ಕೊಕ್ಕರಿಸಿದೆನು ನಸೆಬೆನು ನಯನವಾರಿಯಲಿ ॥ ಬಲುಹನೀಮುಖದಲ್ಲಿ ತೋರುವೊ । ಡಳುಕಿದೆನು ಸಾಮ್ರಾಜ್ಯಸಂಪದ । ಗಳಿಪಸಕಲಭ್ರಾಂತಿ ಬೀತುದು ದೇವ ಕೇಳೆಂದ ॥೩೦॥ ಎಡಹಿದೊಡೆ ರುಜೆಯಾದಿಯಾಪ।

ತ್ತ್ರಡಸಿದೊಡೆ ಮೋಣಾವತೆರದಿಂ । ದೊಡಲುವಿಡಿದೊಡೆ ಮರಣತಪ್ಪದು ಸುರಲಗೊಳಗಾಗಿ ॥ ಕೆಡು ವಕಾಯುವನಂಬಿ ಬಂಧುಗ । ಳೊಡನೆ ವೈರವ ಮಸೆದು ನರಕಕೆ । ನಡವನೇ ತಾನೆನುತ ರಥದಲಿ ಬಿಲ್ಲ ನಿಳುಹಿದನು ॥೩೧॥ ಕರಗಲಂತಃಕರಣ ಚಿಂತಾ । ತುರನು ಸಂಗ್ರಾಮದ ವಿರಕ್ತಿಯು । ಲಿರಲು ಕಂಡ ನು ಕಮಲನಾಭನು ನಗುತ ಮನದೊಳಗೆ ॥ ತರಳನಿವನೆಸೆದೈ ಕ್ಷತ್ರಕಳೆಯುಲಿ । ಪರಿಚಿತನು ತಾನಲ್ಲ ನಯು ದಲಿ । ನರನ ಬೋಧಿಸಬೇಕೆನುತ ನುಡಿಸಿದನು ಫಲುಗುಣನ ॥೩೨॥ ಏನು ಫಲುಗುಣ ಸಮರದಲಿ ದು೦ । ಮಾನವಾವುದು ಹದನು ಶೌರ್ಯಕೆ । ಹಾನಿಯಲ್ಲಾ ತ್ರಿಜಗಚಾಪಟವಲ್ಲ ನೀನೆನಿಪ ॥ ಮಾನವ ರ್ಗವು ಮುರಿಯದೇ ರಿಪು । ಸೇನೆ ನಗದೇ ತತ್ತ್ವಸಮರವ । ನೀನುಪೇಕ್ಷಿಸಿ ನೋಡುತಿಹರೇ ಬಿಲ್ಲ ಹಿಡಿ ಯೆಂದ ॥೩೩॥ ಆವನಿಮ್ಮಯ ಕ್ಷಾತ್ರಧರ್ಮವ । ಭಾವಿಸದೆ ಮೋಣಾವಶತಿವಂ । ಶಾವಳಿಯು ನೆಮ್ಮ ಗೆಯು ನೋಡದೆ ತತ್ತ್ವಕಾಳಗಕೆ ॥ ಆವನಿಮ್ಮಗ್ಗಳಿಕೆಗುಚಿತವ । ತೀವಿ ಬಳಸದೆ ಕದನಮುಖದಲಿ । ಹೇವ ವೀರರಿಗೆಲ್ಲಿಯದು ವಿಸ್ಮಯವಲಾಯೆಂದ ॥೩೪॥ ಅಲಗನೊರಸೊರಸಿಲ್ಲ ಕೈಮೈ । ಗಳಲಿ ಮುಳುಗಿದ ಬಾಣವಿಲ್ಲವ ಗಳಿಸಿ । ನೊಸಲಲಿ ಮುರಿದಖಂಡೆಯವಿಲ್ಲ ನೋಡುವೊಡೆ ॥ ಕಲಹದಲಿ ಪಡಿಮುಖದಗಾ ಯದ । ಚಳರಕುತದೊರಹಿಲ್ಲ ನೀ ಮು । ನ್ನಳುಕಿ ಕೈದುವ ಹಾಯ್ಕಿದೈ ಸರಿಯಿಲ್ಲ ನಿನಗೆಂದ ॥೩೫॥ ತರುಣಿಯರ ಮುಂದಸ್ತ್ರಶಸ್ತ್ರವ । ತಿರುಹಬಹುದುಬ್ಬರಿಸಬಹುದ । ಬ್ಬರಿಸಬಹುದೆನಗಾರು ಸರಿ ತಾ ವೀರನೆನಬಹುದು॥ ಕರಿತುರಂಗದ ಬಹಳಶಸ್ತ್ರಾಸ್ತ್ರ । ತ್ಕರದ ಬಾಣದ ತಗಹಿನಲಿ ಮುಖ । ದರು ಹದಿಹ ಕಲಿಯಾರು ಕುಂತೀಸೂನು ಕೇಳೆಂದ ॥೩೬॥ ಬಂಧುಹನನಕೆ ಮನದಳಲು ಭವ । ವಿಂಧ್ಯದಲಿ ಬೆಳ್ಳಾಗಿ ರೌರವ । ಸಿಂಧುವಿನೊಳೋಲಾಡಬಹನೇ ಪರಮಪಾತಕನು ॥ ಸಂಧಿಯಲಿ ನಮ್ಮವನಿ ರಣ ಸಂ । ಬಂಧವುಂಟೇ ಬರಲಿ ರಣದಭಿ । ಸಂಧಿ ಸಾಕಿನ್ನೆನುತ ಫಲುಗುಣ ಬಾಗಿದನು ಶಿರವ ॥೩೭॥ ಎ ಲವೊ ಫಲುಗುಣ ನುಡಿದಭಾಷೆಯು । ಸಲಿಸಿಕಾನನದೊಳಗೆ ತೊಟ್ಟನೆ । ತೊಳಲಿ ಹದಿಮೂರಬುದ ಬಂದಾಪತ್ತನನುಭವಿಸಿ ॥ ನೆಲನ ಭಾಗೆಯ ಬೇಡಿ ಸಂಧಿಗೆ । ಕಳುಹಿದರಿ ಕೌರವನು ನೂಕಿಸಿ । ಕಳೆದ ನಿಪುಗಿನ್ನೇನು ಹೊಲ್ಲಹವೆಂದನಸುರಾರಿ ॥೩೮॥ ಎವಗೆ ನೀನುತ್ತರನ ಕಥೆವೇ । ಳುವ ನಗುವೆಯಾತನ ನು ನೀನೀ । ಬವರದಲಿ ಪಡಿಯಾದೆಲೋಗರನಿಂದೆ ತನಗಹುದು ॥ ಲವಲವಿಕಯಲಿ ಕಾದಬೇಕೆ । ಮ್ಮವ ನಿಯನು ಕೈಕೊಳ್ಳಬೇಕಂ । ಬವಗಡೆಯುತನವೆತ್ತಲಡಗಿತು ಪಾರ್ಥಹೇಳೆಂದ ॥೩೯॥ ಬಲುಹ ನೀ ನೂ ಡುವೊಡೆ ಪರಮಂ । ಡಳಿಕರನು ತಂದೊಡ್ಡು ಬಳಿಕೆ । ನ್ನಳವನೀಕ್ಷಿಸು ಸಡೆದೆನಾದೊಡೆ ನಿಮ್ಮ ಮೈ ದುನನೆ ॥ ಕೊಲುವೆನಂತೈ ಭೀಷ್ಮನನು ಮನ । ವಳುಕದೆಂತೈ ತಪ್ಪುವೆನು ಗುರು । ಗಳಿಗೆ ಕೃಪಗುರು ಸುತರನಿರಿವುದಿದಾವನಯ ವೆಂದ ॥೪೦॥ ಹೊಳೆದು ಹೋಹೈಶ್ವರ್ಯರಥಸಕೆ । ತಲೆಯ ಮಾರಿಯಧರ್ಮ ಕೋಟಿಯು । ಗಳಿಸಿ ಬಳಿಕಾಫಲವನಲಸದೆ ಭವಭವಂಗಳಲಿ ॥ ತೊಳಲಿ ಬಳಲುವ ಜೀವಭಾವದ । ಲುಳಿ ವುದಾವುದು ಲಾಗು ಮೂಢರ। ಬಳಕೆಗಾವಂಜುವೆವು ಸಂಗ್ರಾಮಕೆ ನಮೋಯೆಂದ ॥೪೧॥ ಆಲಿಸದೆ ಕು ಲಛಲವ ನೀತಿಯ। ಪಾಲಿಸದೆ ಕೊಲೆಗಡಿಗತನದಲಿ।ಮೇಲುಗಾಣದೆ ಬಂಧುಗಳ ಗುರುಗಳ ಸಹೋದರರ॥ ಕೋಲ ಮೊನೆಯಲಿ ಕೊಂದುನೆತ್ತರ । ಗೂಳನುಂಬಪ್ರೊಲಖಿಳರಾಜ್ಯದ । ಮೇಲೆ ಸೊಗಸುವ ಸಿರಿಯ ನೊಲ್ಲೊನು ಕೊಲುವನಲ್ಲೆಂದ ॥೪೨॥ ಆರನೈ ನೀ ಕೊಲುವೆ ನಿನ್ನಿಂ । ದಾರು ಸಾವರು ದೇಹಿಯೋ

ನಿಜ । ಧೀರಸಾತ್ಮನ ಕೊಲುವೆಯೋ ಧಿಟ ನಿನ್ನ ಹವಣೇನು ॥ ಚಾರುದೇಹಕೆ ಭೂತನಿಕರಕೆ । ವೈರವಿಲ್ಲುಳಿದಂತೆ ವಿಗತವಿ । ಚಾರ ನಚಲನಗಪ್ಯ ನದ್ವಯಸಾತ ನೋಡೆಂದ ॥೪೩॥ ತನುವಳಿದ ಬಳಿಕಿನಲಿ ತನು ಸಂ । ಜನಿಸುಗೆಂಬುದು ಭವಭವಂಗಳ । ತನುವಿನಲಿ ಕೌಮಾರಯೌವನವಾರ್ಧಕಂಗಳಲಿ ॥ ತನುವಿಕಾರಿಸುವುದು ಸುಕರ್ಮದ । ವಿನುತದುಷ್ಕೃತವೆಂಬಹುಸಿಕ । ಲ್ಪನೆಶರೀರಕ್ಕಲ್ಲದಾತ್ಮಂಗಿಲ್ಲ ಕೇಳೆಂದ ॥೪೪॥ ಅಳಿವನಲ್ಲುದಯಿಸುವನಲ್ಲ । ಗ್ಗಳಿಸುವವನಲ್ಲಡಗುವವನ । ಲ್ಲಳಿವದೇಹದಬಳಿಯ ಹೊಣೆಯೋ ಸಚ್ಚಿದಾತ್ಮಕನು ॥ ಕಳೆಚುವೊಡೆ ಕಾಯುವೆ ಕಳಲ್ಚುವು । ದುಳಿವುದಾವುದು ಚಿನುಮಯಂಗೀ । ಕಳಕಳದ ಕಾಲಾಟ ಕೊಳ್ಳದು ಪಾರ್ಥಕೇಳೆಂದ ॥೪೫॥ ನಿನಗೆ ಸಾವವನಲ್ಲನಿನ್ನಿಂ । ಬಿನಲಿ ನೋವವನಲ್ಲ ದಿಟ ನೀ । ಮುನಿದು ಗಗನಕ್ಕಲಗನುಗಿದೊಡೆ ಗಗನವಳುಕುವುದೆ॥ ತನುವಿಗೀಗುಣಧರ್ಮಕರ್ಮದ । ಹೊನಲ ಹೊಗುವನೆ ಶುದ್ಧನಿರ್ಮಲ । ಚಿನುಮಯಾತ್ಮಕನೆಲೆ ವೃಥಾಹಂಕಾರವೇಕೆಂದ ॥೪೬॥ ಆದೊಡೆಲೆಮುರವೈರಿ ಕೇಳಿದಿ । ರಾದಬಾಂಧವರಿನಿಬರನು ತಾ ।ಕಾದಿಕೊಂದನು ಪಾರ್ಥಪಾತಕನೆನ್ನದೇ ಲೋಕ ॥ ಈದುರಂತಕ್ಕೇನು ಗತಿಯುಪ । ಪಾದವಾವಂಗಾದುದಾತನ। ವೈದಿಕನು ಪರಗತಿಗೆ ಬಾಹಿರನೆಂದನಾಪಾರ್ಥ ॥೪೭॥ ಮರುಳೆ ಫಲುಗುಣ ಕೇಳು ಸೂರ್ಯನ । ಕಿರಣ ಹೊಲೆಯನ ನೋಡಿದೊಡೆ ಹೊಲೆ । ಹೊರೆವುದೇ ಸ್ನಾನದಲಿ ವಿಧಿಸಲು ಬಹುದೆ ನೋಡಿದೊಡೆ ॥ ಪರಮತತ್ವಜ್ಞಾನನಿಷ್ಠರ।ಚರತವೇ ಸುಚರಿತ್ರವಾವಂ।ಗರವುತಾಸತ್ಕರ್ಮದುಷ್ಕರ್ಮಾನುಗುಣವೆಂದ॥೪೮॥ಕೊಂದೆನಾನೆನಗಾಯ್ತು ಪಾತಕ । ವೆಂದು ಮನದಲಿ ಮರುಗುವಾತನು । ಬಂದಿಯಲಿ ಹಣೆಗೊಂಬವಾಹಂಕಾರಮಮಕಾರ ॥ಕಂದುಕಲೆ ತನಗೆತ್ತಣದು ನಿ । ರ್ದ್ವಂದ್ವಕನು ಮೃತಜಾತತಾನ।ಲ್ಲೆಂದು ಕಂಡನವಂಗೆ ಪಾಪದಲೇಪವಿಲ್ಲೆಂದ ॥೪೯॥ ಹರಿಯು ಚಿತ್ತೈಸ್ಯೆಯುಹಿಂ[illegible] ಪರಮಧರ್ಮವೆ ಯೆಂಬವಾಕ್ಯೋ । ಚ್ಚರಣೆಸಾರೋದ್ಧಾರವಲ್ಲಾಸಕಲದರುಶನಕೆ॥ನೆರವಿಯಿನಿಬರು ತನ್ನವರ ಕೊರೆ। ಳರಿತದಲಿ ಕೊಕ್ಕರಿಸದಿರ್ದೊಡೆ। ನರಕದೊಳುನೂರೊಂದುಕುಲ ಮುಳುಗಾಡದಿರದೆಂದ ॥೫೦॥ ನಿರುತವರ್ಜುನ ಕೇಳಹಿಂಸಾ । ಪರಮಧರ್ಮದ ತತ್ಸ್ವರೂಪವ । ನೊರವೆನಾಲಿಸು ಸಚ್ಚಿದಾನಂದೈಕಘನವೆನಿಪ ॥ ನಿರುಪಮಾತ್ಮನ ನಿಲವ ನೋಡದ । ನರಕ ಜಡನಾಜೀವನೆಂಬೀ । ದುರುಳತನವೇ ಹಿಂಸೆಯುರಿತೊಡಹಿಂಸೆ ಕೇಳೆಂದ॥೫೧॥ ನೆರವಿ ಬೇರೊಂದಿಲ್ಲ ಭೂತದ। ಹರಹು ಕರಣೇಂದ್ರಿಯದ ಸಂದಣಿ । ಮರುತಪಂಚಕಬುದ್ಧಿಕರ್ಮೇಂದ್ರಿಯದ ಕಾಲಣಿಕೆ ॥ ನೆರೆಯಲೊಡಲಾಗಿಹುದು ಕಲ್ಪನೆ । ಹರೆದು ಜೀವಭ್ರಾಂತಿ ಬೀತೊಡೆ । ಪರಮನಾಗಿಹನಲ್ಲಿ ಕೊಲುವೊಡೆ ಸಾವನಲ್ಲೆಂದ ॥೫೨॥ ಕರ್ಮವೇ ಹೊಡುವುದು ತನುವನು । ಕರ್ಮವೇ ಸಲಹುವುದು ಕಡೆಯಲಿ । ಕರ್ಮವೇ ಕಳಚುವುದು ಚಿತ್ತಭ್ರಮೆಯ ಬಾಹಿರರ ॥ ಕರ್ಮ ತಾನೇನಾದೊಡಾಗಲಿ । ನಿರ್ಮಮತೆಯಲಿ ಮಾಡಿ ನಮ್ಮಲಿ । ನಿರ್ಮಿಸಲು ಕಲಿಪಾರ್ಥ ನೀನಿರ್ಲೇಪನಹೆಯೆಂದ ॥೫೩॥ ಅಸುರರಿಪು ಕೇಳಾದಿಯಲಿ ಸಂ । ಚಿಸಿದಕರ್ಮವು ಜೀವರನು ಬಂ । ಧಿಸಲು ತದ್ಗುಣದೋಷಕರ್ಮವನೇಕೆ ತಾಗುವುದು ॥ ಪಸರಿಸಿದೆಲಾ ಸ್ಮಾರ್ತಮಾರ್ಗ । ಪ್ರಸರ ಕೊಂದೊಡೆ ಪಾಪವಾವನ । ನೆಸಗೆ ಪುಣ್ಯವೆನಿಪ್ಪವಿವರಕ್ಕೇನು ನೆಲೆಯೆಂದ ॥೫೪॥ ಸುಕೃತದುಷ್ಕೃತವೆಂಬವೇ ಬಾಧಕವು ಜೀವರಿಗೀಯಹಂಕೃತಿ । ವಿಕಳತೆಗೆ ತಾ ಜೀವ ಬೀಜದಚಿಟ್ಟುಮುರಿಗಳಿಗೆ॥ ಸಕಲಕರ್ತೃತ್ವಾದಿಭೋಕ್ತೃ । ತ್ವಕ

ವಿದಾತ್ಮಂಗಿಲ್ಲ ಪಿತ್ತಾ । ಧಿಕನು ತಿರುಗುತ ಲೋಕ ತಿರುಗುವುದೆಂಬತೆರನೆಂಬ್ಬೈ ॥ ಮರುಳೆ ಫಲುಗುಣ ಕೇಳು ಸಚರಾ । ಚರವೆನಿಪಜಗವೆನ್ನ ಲೀಲಾ । ಚರಿತದಲಿ ತೋರುವುದು ಹರೆವುದು ತನ್ನನೇಮದಲಿ॥ ನಿರುತ ನೀ ಕೇಳುವೊಡೆ ತಿಳಿಯುವು । ನರಸುರಾದಿಗಳೆಂಬಸಚರಾ । ಚರವಿದಾನಲ್ಲದೆ ವಿಚಾರಿಸಲನ್ಯವಿಲ್ಲೆಂದ ॥೫೬॥ ಜಗದೊಳಾನೇ ಚರಿಸುವೆನು ತ । ಜ್ಜಗವಿದೆಲ್ಲವು ತನ್ನ ಮಾಯೆಯೊ । ಳೊಗೆದು ತೋರಿಸಿ ಸುಳಿಸೆ ಸುಳಿವುದು ಹಿಡಿಯಲಡಗುವುದು ॥ ಮಗುವುತನದಲಿ ಕೂಡೆ ಮರೆವುದು । ಜಗವದಲ್ಲದೆ ನಿಜವ ಬೆರಸುವ । ವಿಗಡರಿಗೆ ಪರಮಾತ್ಮ ಚಿನುಮಯರೂಪು ತಾನೆಂದ ॥೫೭॥ ಬೀಸಿದೊಡೆ ಸಿಲುಕುವರು ಮಾಯಾ । ಪಾಶದಲಹಂಕಾರಿಗಳು ತ । ದ್ದೇಶಕಾಲಕ್ರಿಯೆಗಳಲಿ ನಿರ್ವಾಹವನು ಬೆದಕಿ । ಬೇಸರುವರಂತಿರಲಿ ಮಾಯಾ । ವ್ಯಸಿಕದ ಸಂಮೋಹನದ ಕಾ । ಳಾಸವರಿದವರೇನನರಿವರು ಪಾರ್ಥ ಕೇಳೆಂದ ॥೫೮॥ ಏಕನಾತ್ಮನನಂತನಜನ । ಶ್ಲೋಕನದ್ವಯನಮಲನಭವನ । ಲೋಕನಿಸ್ಪೃಹನಮಿತನಕ್ರಿಯನಮಿತನಬ್ರುವನು ॥ ಲೋಕತತಿಮಾಯಾವಿಲಾಸ ವಿ । ವೇಕಿಗಳಿಗಿವು ಬಯಲು ಫಲ ಗುಣ । ಸಾಕು ಗರ್ವವ ಬೀಳುಕೊಡು ಸೆಣಸೇಳು ಹಿಡಿ ಧನುವ ॥೫೯॥ ಜಡನಲಾ ನರನೇಸುತಿಳುಹಲು । ಬಿಡ ವಿಕಾರವನೆಂದು ಖಾತಿಯು । ಹಿಡಿಯಲಾಗದು ಸಲುಗೆಗಂಜಿಕೆಯೇಕೆ ಬಿನ್ನಹವು ॥ ಬಿಡು ಜಗವು ನೀ ಕಂಡನಿಮ್ಮಡಿ । ಯೊಡಲೊಳೋರಣಲೋಕಗಡ ಮಿಗೆ । ನುಡಿಯಲಮ್ಮೆನು ತತ್ಸ್ವರೂಪವ ತೋರಬೇಕೆಂದ ॥೬೦॥ ಈದಿವಿಜರೀಚಂದ್ರಸೂರಿಯ । ರೀದಿಶಾವಳಿಯೀಗಗನವೀ । ಮೇದಿನೀತಳವೀಸಮೀರಣವೀಜಲಾನಲರು ॥ ಈದನುಜರೀಭುಜಗನರರುಗ । ಳಾದಿಯಾಗಿಹಹರಹು ತನ್ನವಿ । ನೋದರೂಪಿನನಿರಿಗೆ ಬೇರಿನ್ನಾವರೂಪೆಂದ ॥೬೧॥ ಹರೆದು ಮೋಹಿಸು ನೀಚರಾಚರ । ನೆರೆದು ನಿಮ್ಮಯರೋಮಕೂಪದ । ಹೊರೆಯೊಳಗೆ ಹೊಳೆದಾಡುತಿಹುದೆಂಬಗ್ಗಳಿಕೆಗಳಿಗೆ ॥ ಹುರುಳೆನಿಪಹೇರಾಳದಂಗದ । ಸಿರಿಯ ತೋರ್ಕೆ ಸಾಕು ನಿರ್ಮಲ । ಪರಮತತ್ವವನೊಲ್ಲೆ ನಿನ್ನಯ ಭಕ್ತಿ ಸಾಕೆಂದ ॥೬೨॥ ದಾಸನಾನೆನಗಮಲಮೂರ್ತಿವಿ । ಲಾಸವನು ತೋರುವುದು ಸಲುಹುವು । ದೇಸರವನ್ನೆ ನಾನು ಸಮ್ಯಗ್ಜ್ಞಾನಭಾವನೆಗೆ ॥ ಮಾಸಲಳಿಯದಮಿಕ್ಕಬಳಕೆಯು । ಪಾಶ ತಾಗದನಿನ್ನ ಲೀಲಾ । ಭಾಸುರಶ್ರೀಮೂರ್ತಿಯನು ಮೈದೋರಬೇಕೆಂದ ॥೬೩॥ ಆದೊಡರ್ಜನ ನೋಡೆನುತ ಕಮ । ಳೋದರನು ಕೈಕೊಂಡನಗ್ಗದ । ಸಾದಿಪುರುಷಶ್ರೀನಿಜವ ವಿಶ್ವಾತ್ಮಕಾಕೃತಿಯ ॥ ಸಾಧಿಸುವಷಡುತರ್ಕಗಿರ್ಕದ ಭೇದಕೊಳ್ಳದಸಕಲಲೋಕದ । ಬೀದಿವಿಸಟಂಬರಿವ ವಿಮಳಪಿರಾಟ್ಸ್ವರೂಪವನು ॥೬೪॥ ಬಿಳಿದುಕರಿದೆಂಬಾರುಬಣ್ಣದ । ಹೊಲಬ ಹೊದ್ದಪಸೂರ್ಯಕೋಟಿಯ । ಹೊಳವುನಖದೀಧಿತಿಯ ಹೋಲದ ನಿಜದ ಹೊಸಪರಿಯ ॥ ಅಳಿವಿನಳತೆಯ ಜನನವಾರ್ತೆಯ । ಸುಳಿವು ಸೋಂಕದಸಕಲಲೋಕ । ಪ್ರಳಯಕಾರಣ ತೆಗೆದನಗ್ಗದ ವಿಶ್ವರೂಪವನು ॥೬೫॥ ಕಾಣರುಳಿದವರೀತನೊಬ್ಬನ । ಕಾಣಿಕೆಗೆ ಕೌತುಕವ ಕರೆದನು । ಕ್ಷೋಣಿತಾಮಳಬಹಳತೇಜದ ಹೊದರ ಹೊಯಿಲ್ಲನಲಿ॥ ಕಾಣಲರಿಯುವನಂತವೇದ । ಶ್ರೇಣಿ ಶಿವಶಿವ ರಾಯಪಾರ್ಥನ । ಜಾಣತನವೆಂತುಟೊ ವಿರೂಪನ ರೂಪಸೆರೆ ಸಿದ ॥೬೬॥ ಉಬ್ಬಿದನು ಹರುಷದಲಿ ಕಂಗಳ । ಗಬ್ಬಮುರಿದುದು ಮಸವನಿಗುರಿನ । ಹಬ್ಬುಗೆಯ ಹೊಲಬಳಿಯೆ ನಾಲಗೆಯುಡುಗೆ ಹೆಡತಲೆಗೆ ॥ ಸಬ್ಬಗತನ್ನೆ ಶಿವಶಿವಾ ಬಲು । ಮೊಬ್ಬಿನಲಿ ಮುಂದುಯುದೆನ್ನಯ । ಕೊಬ್ಬನೇವಣ್ಣಿಸುವೆನೆಂದಡಿಗಡಿಗೆ ಬೆರ

ಗಾದ ||೬೭|| ಇದೆ ನಿರಂಜನತತ್ವಸಾಮ್ರಾ। ಜ್ಯದ ಸಗಾಡಿಕೆ ಸಾವು ಕಡುಮೂ। ರ್ಖದಲಿ ವೈಮರೆದೆವು ಶರೀರದ ಬಂಧುಕೃತ್ಯವಲಿ ॥ ಯದುಗಳನ್ವಯದಾತ ನಮಗೊ। ಳ್ಳಿದನು ಸೋದರಭಾವನೆಂದೇ। ಮದಮುಖನು ಕಡುಗೇಡ ಕೆಟ್ಟೆನು ಶಿವಶಿವಾಯೆಂದ ||೬೮|| ಪರುಸ ಕಲ್ಲೆಂದಿಡಿಕಿ ಸುರತರು। ಮರನು ತೆಗೆಯೆಂದಮರಧೇನುವ। ಪರರಮನೆಯಲಿ ಮಾರಿ ಚಿಂತಾಮಣಿಯ ಕೈದುಡುಕಿ ॥ ಹರಳು ಟಿಕ್ಕೆಯಿದೆಂಬಪಾಪಿಗೆ। ಪರಮಗುರು ನಾಸಾದನೈ ಮುರ। ಹರನ ಮೈದುನನೆಂದು ಗರ್ವಿಸಿ ಕೆಟ್ಟೆ ನಾನೆಂದ ||೬೯|| ನೊರಜು ತಾನೆತ್ತಲು ಮಹತ್ವದ। ಗಿರಿಯದೆತ್ತಲು ಮಿಂಚುಬುಳುವಿನ। ಕಿರಣವೆತ್ತಲು ಹೊಳಹದೆತ್ತಲು ಕೋಟಿಸೂರಿಯರ ॥ ನರಮೃಗಾಧಮನೆತ್ತಲುನ್ನತ। ಪರಮತತ್ವವಿದೆತ್ತಲಕಟಾ। ಮರುಳು ತನ್ನವಗುಣವನಾವುದ ಕಡೆಗೆ ಹಲುಬುವೆನು ||೭೦|| ಮೇಳಗಡ ನಮಗೀತನಲಿ ಭೂ। ಪಾಲಕರುಗಡ ನಾವು ನಾಥ। ಯಾಳುಗಡ ದಿಟ ನಾವು ವೀರರುಗಡ ವಿಚಿತ್ರವಲಾ ॥ ಮೇಲುಗಾಣದಪಾರ್ಥಸಂಬೇ। ಕಾಳುಮೂಳನ ವಿಧಿಯನೇ ಹರಿ। ಹೇಳುವನು ಶಿವಯೆನುತ ಕಂಗಳನೆವೆಗಳಲಿ ಬಿಗಿದ ||೭೧|| ಅಡಿಗಡಿಗೆ ಕಣ್ದೆರೆದು ಮುಚ್ಚುವ। ನಡಿಗಡಿಗೆ ಮೈಬಿದಿರಿ ಬೆರಗಹ। ನಡಿಗಡಿಗೆ ಮೈಯೊಲೆವನುಬ್ಬಿದರೋಮಪುಳಕದಲಿ ॥ ಅಡಿಗಡಿಗೆ ನೆನೆನೆನೆದು ಹೊಂಗುವ। ನಡಿಗಡಿಗೆ ಭಯಗೊಂಡು ಕರಗುವ। ನೊಡಲನವನಿಗೆ ನೀಡಿ ನಿಡಿದೋಳುಗಳ ಪರಹಿದನು ||೭೨|| ಮುರಹರ ತ್ರಾಯಸ್ವ ಕರುಣಾ। ಕರ ಹರಿತ್ರಾಯಸ್ವ ಲಕ್ಷ್ಮೀ। ವರ ಪರಿತ್ರಾಯಸ್ವ ದನುಜಾಂತಕ ಪರಿತ್ರಾಹಿ ॥ ಚರಣಭಜಕಕುಟುಂಬಕನೆ ಘನ। ದುರಿತಕುಂಜರಕೇಸರಿಯೆ ಮುರ। ಹರ ನಿರೀಕ್ಷಿಸಿ ರಕ್ಷಿಸೆನ್ನನೆನುತ್ತ ಹೊರಳಿದನು ||೭೩|| ದೇವಭಕ್ತಜನಾರ್ತಪಾಲಕ। ದೇವ ಬಹಳಕೃಪಾಮಹಾರ್ಣವ। ದೇವ ಸರ್ವೇಶ್ವರ ಸದಾತ್ಮಕ ಸಕಲನಿಷ್ಕಳನ ॥ ಸೇವಕರಲಾರಯ್ಯುವಧೇ ಸುಗು। ಣಾವಗುಣವನು ನಿಮ್ಮಭೃತ್ಯನ। ಭಾವ ಬೆಚ್ಚಿತು ವಿಶ್ವರೂಪವ ಬೀಳುಕೊಡಿಯೆಂದ ||೭೪|| ಸೋಕಲರಿಯುವನಂತವೇದವು। ಮೂಕವಾದವು ಜೀಯ ಜಡನವಿ। ವೇಕಿಮಾನವ ಮನಕವೇನಿನ್ನಳವಿಗೈದುವೊಡೆ ॥ ಸಾಕಿಕೊಳ್ಳೈ ಕೃಷ್ಣ ನೋಡಲು। ನೂಕದೆನ್ನವೆ ಸೀವುಶಿವೆ ಕರುಣಾಕರನೆ ಕೈ ಮರೆಯದೇ ಕೃಪೆಮಾಡಬೇಕೆಂದ ||೭೫|| ಎಳನಗೆಯ ಸಿರಿಮೊಗದ ಮಿಂಚಿನ। ಹೊಳೆಹೊಳೆವನಿಟ್ಟೆಸಳುಗಂಗಳ। ತೊಳಪಕದಪಿನ ಮುಖದ ಕಾಂತಿಯ ಮಕರಕುಂಡಲದ ॥ ಲಲಿತಕಂಠದಕೌಸ್ತುಭೋರು। ಸ್ಥಳದ ನಿಡಿದೋಳುಗಳ ಕೋಮಲ। ವಲಯಪೀತಾಂಬರದ ಮುನ್ನಿನ ರೂಪತೋರೆಂದ ॥ ಪರಮಚಿನುಮಯ ನೀನು ಕರ್ಮದ। ಕರಣ ನಿನ್ನದು ನೀ ಚರಾಚರ। ಭರಿತ ಭಾರಿಯವಿಶ್ವಮಯನವ್ಯಕ್ತನದ್ವಯನು ॥ ನರನ ಮತಿಯಿದು ಮಂದಮತಿಗೇ। ಚರಿಸಲರಿವುದೆ ಜೀಯಮುರಹರ। ಕರುಣಿಸೈವೈದೋರು ತನ್ನೊಡನಾಡಿತನದನುವ ||೭೬|| ಅಳಕನಿಚಯದ ತುಂಬಿ ನೊಸಲಿಸ। ತಳಿತವೆಯ ನಿಡುಹುಬ್ಬುಗಳ ಕೋ। ಮಲಸುಮುಕ್ತಾಫಲಕೆ ಸೆಣಸುವದಂತಪಙ್ತಿಗಳ ॥ ಲಲಿತಚುಬುಕದ ಚಾರುತರಮಂ। ಡಲದ ಸುಳಿನಾಭಿಯ ಸುವೃತ್ತದ। ವಿಲಸಿತೋರುದ್ವಯದ ಮುನ್ನಿನ ರೂಪ ತೋರೆಂದ ||೭೭|| ನಳಿನನಾಭ ಮುಕುಂದ ಮಂಗಳ। ನಿಳಯ ಭಕ್ತವ್ಯಸನಿ ದೈತ್ಯ। ಪ್ರಳಯಪಾವಕ ಭಕ್ತವತ್ಸಲ ಭಕ್ತಸುರಧೇನು ॥ ಲಲಿತಮೇಘಶ್ಯಾಮ ಸೇವಕ। ಸುಲಭ ಶೀಲ ಮುರಾರಿ ಭಕ್ತಾ। ವಳಿಕುಟುಂಬಕ ಕೃಷ್ಣಕೇಶವ ಕರುಣಿಸುವು

ದೆಂದ ॥೭೯॥ ಪರಮಪುಣ್ಯಶ್ಲೋಕಪಾವನ । ಚರಿತ ಚಾರುವಿಲಾಸನಿರ್ಮಲ । ವರಕಥನಲೀಲಾವಿ
ನೋದ ಪ್ರಕಟಭುವನೇಶ ॥ ನಿರವಯವ ನಿರ್ದ್ವಂದ್ವ ನಿಸ್ಪೃಹ। ನಿರುಪಮಿತ ನಿರ್ಮಾಯ ಕರುಣಾ ।
ಕರ ಮಹಾತ್ಮ ಮನೋಜನಿಗ್ರಹ ಕರುಣಿಸುವುದೆಂದ ॥೮೦॥ ದೇವ ಲಕ್ಷ್ಮೀಕಾಂತ ಸಿತರಾ। ಜೀವಲೋ
ಚನ ಭೂತಭಾವನ। ರಾವಣಾಂತಕ ಗೋಪವೇಷವಿಲಾಸ ಜಯವಾಸ ॥ ದೇವಕೀನಂದನ ಯಶೋದಾ।
ದೇವಿಯುನ್ನತಪುಣ್ಯಫಲ ತಲೆ । ಗಾವುದೈ ತರುವಲಿಗೆ ತೋರೈ ಮುನ್ನಿನಾಕೃತಿಯ॥೮೧॥ ನಿಗಮನಿಕ
ರವ ಸೆಳೆವತಿರುಗುವ । ನಗಕೆ ಬೆನ್ನನುಕೊಡುವ ಜಲಧಿಯ । ಹೊಗುವಮಹಿಯನು ಮೊಗೆವಮಗುವಿ
ನನುಡಿಗೆವ್ಯಗುಡುವ ॥ ಗಗನಕಂಘ್ರಿಯ ನಿಡುವತಾಯ । ಕ್ಕಗಳಿಗಕ್ಕಿಯತೋರ್ಪರಾಣಿಯ । ಸೊ
ಗಸ ಸಲಿಸುವ ಬಗೆಯನೆನ್ನಲಿ ಕೃಪೆಯಮಾಡೆಂದ ॥೮೨॥ ಮರೆದುವಾಲಿಗೆಗೊನೆಗೆ ಸಾಮದ । ನಿರಿಗೆ
ನೆಲೆಗೊಳೆ ನಿನ್ನನೇ ಸಲೆ। ತೆರುವಬಿರುದನು ಬಲ್ಲೆ ನೊರಲಿದು ನಿನ್ನ ಹಲುಬಿದೊಡೆ॥ಉರುವಹೆಂಗುಸಿಗು
ನ್ನತಿಕೆಯಲಿ । ಸೆರಗುಬೆಳದುದ ಬಲ್ಲೆನೈ ನೈ । ಗನೆಪುದೈ ಕಾರುಣ್ಯವರುಷವನೆನ್ನಮೇಲೆಂದ ॥೮೩॥ ಹ
ಸುಳೆಗಮರಾಚಲದ ಹೊರೆ ಸೈ। ರಿಸುವುದೇ ಮರಿಹುಲ್ಲೆ ಸಿಂಹದ। ಮುಸಕಕಿದಿರೇ ಯೆಳೆಲತೆಯ ಕಡಿ
ವಾಳಿಗೆಗೆ ತೊಲೆಯೆ ॥ ಸಸಿದರಳೆ ಸಿಡಿಲೆರಗಿದೊಡೆಜೀ । ವಿಸುವುದೇ ನಿಮ್ಮಡಿಯ.ವಿಶ್ವ । ಪ್ರಸರರೂ
ಪಿಂಗಾನುಲಕ್ಷ್ಯವೆ ದೇವ ಹೇಳೆಂದ ॥೮೪॥ ಅಣಲೊಳಷ್ಟಾದಶಮಹಾಕ್ಷೋ । ಹಿಣಿಗಳಡಗಿದವೆಂಬು
ದಿದು ಭೂ । ಷಣವೆ ಚೀಯ ಮುರಾರಿನಿಮ್ಮಯ ರೋಮಕೂಪದಲಿ ॥ ಗಣನೆಗೆಟ್ಟಜರುದ್ರಸುರಸಂ।
ದಣಿಗಳಿವೆ ಜಠರದಜಗಂಗಳ । ಗಣಿಸಬಲ್ಲಸದಾರು ಸಾಕಿನ್ನೆನ್ನಸಲಹೆಂದ ॥೮೫॥ ವಿಶ್ವ ನಿನ್ನಯ ಮಾ
ಯೆ ನಿರ್ಮಲ । ವಿಶ್ವರೂಪನು ನೀನು ಬಗೆದೊಡೆ । ವಿಶ್ವ ನಿನ್ನೊಳು ಸುಳಿವುದಳಿವುದು ನಿನ್ನಲೀಲೆ
ಯಲಿ ॥ ವಿಶ್ವವಲ್ಲಭ ನೀನು ನಿನ್ನದು । ವಿಶ್ವಪಾಲಕ ವಿಶ್ವಚೇಷ್ಟಕ । ವಿಶ್ವದಾಧಾರನೆ ಜಡಾತ್ಮನ ಸ
ಲಹಬೇಕೆಂದ ॥೮೬॥ ವೀರ ದೈತ್ಯಕುಠಾರ ಗಳಿತವಿ । ಕಾರ ಗೋಪೀಜಾರ ನಿಗಮವಿ। ದೂರ ಸುಖಸಾಕಾರ
ನಿರ್ಗತಪಾಪಮಮಕಾರ ॥ ಧೀರ ಜಗದಾಧಾರ ಲಸದಾ । ಚಾರಕಮಲಾಗಾರ ಭುವನಾ । ಧಾರನಿರ್ಜಿ
ತಮಾರ ಮುರಹರ ಸಲಹಬೇಕೆಂದ ॥೮೭॥ ಭಯದ ಬಿಗುಹಿನ ಭಾವ ಭಕ್ತಿಯ । ನಯದ ಬಿನ್ನಹ
ದೋಜೆಯನು ಚಿನು । ಮಯನು ಕೇಳಿದುಮೆಚ್ಚಿ ಡಿಂಗರಿಗಂಗೆ ನಗುತೆಂದ ॥ ನಿಯತವೇ ನೀನಲ್ಲಲೇ ಸೇ।
ನೆಯನು ಕೊಲುವವ ಕಾವವನು ನಿ। ಶ್ಚಯವ ನಿನ್ನಲಿ ನೋಡಿ ಬಿನ್ನಹಮಾಡು ಬಳಿಕೆಂದ ॥೮೮॥ ಎ
ನಿತು ಗಜವಡಗಿದವು ಕೌರವ । ರೆನಿಬರಿದರೊಳಗಡಗಿಹರು ಧ । ರ್ಮನತನಯಭೀಮಾರ್ಜುನರು ಭೀಷ್ಮ
ಷ್ಮದ್ರೋಣಮೊದಲಾಗಿ ॥ ಇನಿಬರಡಗಿತ್ತು ನೋಡು ಬಾಂಧವ । ಹನನ ನಿನಗುಂಟಾದೊಡೀಗಳೆ । ನೆ
ನೆದು ಬಿನ್ನಹಮಾಡೆನುತ ಪಾರ್ಥಂಗೆ ಹರಿ ನುಡಿದ ॥೮೯॥ ಗುರುಗಳಿಗೆ ನಾತಪ್ಪೆನೆಂದೊಡ । ಮುರಿ
ದೊಡೆಮಗದು ಖಾತಿ ಭೀಷ್ಮನು । ವರಪಿತಾಮಹನೆಂದು ಪೇಳ್ದೊಡೆ ಬಳಿಕಸಹ್ಯವದು ॥ ಅರಿಬಲವು
ಮುನ್ನಳಿವುದೋ ನೀ । ನಿಂದೆಯೋ ಲೇಸಾಗಿ ಭಾವಿಸಿ । ನರ ನಿರೀಕ್ಷಿಸೆನುತ್ತ ನುಡಿದನು ಕೃಷ್ಣನ
ರ್ಜುನನ ॥೯೦॥ ನೆನೆದೊಡಜಕೋಟಿಗಳು ನಿನ್ನಯ । ಮನದೊಳಗೆ ಜನಿಸುವರುಪೇಕ್ಷೆಯೊ । ಳನಿ
ತುಕಮಲಜರಳಿವರೆಂದೊಡೆ ನಿನ್ನಮಹಿಮೆಯನು ॥ ನೆನೆಯಲಳವೇ ದೇವಸಾಕಿ । ನ್ನನುವರದೊಳೆ
ನಗೇನ ಬೆಸಸಿದೊ। ಡನಿತುವನು ಮುಖದಿರುಹಿದೊಡೆ ಡಿಂಗರಿಗನಲ್ಲೆಂದ ॥೯೧॥ ಮರಳಿ ಪನ್ನಿನರೂ

ಪನಂಗೀ । ಕರಿಸಿ ಮಾಘೆಯ ಕೊಂಡು ತುರಗಾ । ವಳಿಯುಳಿವಡೆಯುತ್ತ ಪಾರ್ಥಗೆ ಮಾಯೆಯನು ಬೀಸಿ ॥ ಶರಧನುವಕೊಳ್ಳೇಳು ಕೈಕೋ । ಪರಬಲದ ತೋಟಿಯನು ತೋರ್ಕೈ । ಬಿರುದಘಾತಕತನವನೆಂದನು ನಗುತ ಮುರವೈರಿ ॥೯೨॥ ಮೋಹ ಮಿಗೆ ಪಾಂಡವ ಮಮ । ಪ್ರಾಣಾಹಿಯೆಂಬೀಬಿರುದ ಸಲಹಲು । ಗಾಹಿನಲಿ ಮೇದಿನಿಯು ತಿಣ್ಣವ ತಿದ್ದ ಲೋಸುಗವೆ ॥ಆಹವದಲರ್ಜುನನ ರಥದಲಿ । ವಾಹಕನು ತಾನಾಗಿಶರಣ । ಸ್ನೇಹಸಂಸಾರಾನುರಾಗನು ಸುಳಿಸಿದನು ರಥವ ... ॥೯೩॥

ಅಂತು ಸಂಧಿ ೩ಕ್ಕಂ ಪದ ೧೯೬ಕ್ಕಂ ಮಂಗಳಮಸ್ತು.

ನಾಲ್ಕನೆಯ ಸಂಧಿ.

ಸೂಚನೆ॥ ಕವಿದು ಹಳಚಿತ್ತುಭಯಬಲ ಶಿವ । ಶಿವಮಹಾದೇವಮಮ ಪದರಜ । ರವಿಯ ತಿವಿದುದು ದಿವವನೆಳಿದುದು ಕುಸಿದನಹಿರಾಯ ॥

ಪದ॥ ಅವಧರಿಸು ಧೃತರಾಷ್ಟ್ರ ಗಂಗಾ । ಭವನ ಸುಯ್ಯೋಧಾನದಲಿ ಕೌರವ । ನಿವಹ ಧೃಷ್ಟದ್ಯುಮ್ನನಾರೈಕೆಯಲಿ ರಿಪುಸೇನೆ ॥ ಸವತಳಿಸಿ ಮೋಹರಿಸಿ ಕೈವೀ । ಸುವಮಹೇಶ್ವರ ನೀಕ್ಷಿಸುವದಾ । ಹವಮಹೋದ್ಯೋಗದಲಿ ಬೆರಗಾಯಿತ್ತು ಸುರಕಟಕ ॥೧॥ ಎರಡುಬಲ ಕೈಲಾಗನೀಕ್ಷಿಸು । ತಿರೆ ಕೃತಾಂತನ ಪುರಕೆ ವಾಹಿನಿ । ಸರಿವುದೆಂಬಂದದಲಿ ಕೈವೀಸಿದರು ಭೂಭುಜರು ॥ ಅರರೆ ಮೂಡಣಶರಧಿ ಪಡುವಣ । ಶರಧಿಗಾಂತುದೊ ರಣಚಮತ್ಕೃತಿ । ಸುರರನಯನಾಂಗಣಕೆ ಕವಿಸಿತು ಕೌತುಕಾಂಬುಧಿಯ ॥೨॥ ಎಲೆಲೆ ಕವಿಕವಿ ಬೆರಸುಬೆರಸಿ । ಟ್ಟಳಿಸು ತಿವಿತಿವಿ ಭಲರೆಭಲರತಿ । ಬಲರು ಹಿಂಚದಿರಿನ್ನು ಹೊಯ್ಹೊಯ್ ಚೂಣಿಗರನೆನುತ ॥ ಬಲಜಲಧಿ ಬೊಬ್ಬಿರಿದು ದಳವೆ । ಗ್ಗಳಿಸಿ ಹಳಚಿತು ಗಿರಿಯ ಬೆಸುಗೆಯು । ಕಳಚಿತಹಿಪನ ಕೊರಳು ಕುಸಿದುದು ಕಮಠನೆದೆ ಬಿರಿಯೆ ॥೩॥ ಒದರಿ ಜರೆದುರೆ ಹಳಚಿದೊಡೆ ನೆಲ । ನದಿರಿತಪ್ಪಳಿಸಿದೊಡೆ ದಿಕ್ಕರಿ । ಮದವಡಗಿದವು ಕುಣಿದರೆ ಮೆಟ್ಟಿದೊಡಹಿಪನೆದೆಯೊಡೆಯೆ ॥ ಹೊದರು ಮಿಗೆ ಹೊಕ್ಕಾಳಿ ಬೆರಳಿನ । ತುದಿಯ ಬೊಬ್ಬೆಯುರವದೊಳಗೆ ಜಗ । ವದಿರೆ ದಳವುಳಿಸಿತ್ತು ಕೌರವ ಪಾಂಡುಸುತಸೇನೆ ॥೪॥ ರಣದೊಳಾದುದು ಬೋನವಾರೋ । ಗಣೆಗೆ ಬಿಜಯಂಗೈವುದೈ ಚರ । ಗಣಸಹಿತವೆಂದತಿಬಲರು ಕಾಲಂಗೆ ದೂತರನು । ಅಣಿಯೊಳಟ್ಟಿದರೆನಲು ಪಡೆಯುರ । ವಣಿಯ ಪದಹತಿಧೂಳಿ ಗಗನಾಂ । ಗಣಕೆ ಕವಿದುದು ತೀವಿತಬುಜಭವಾಂಡಮಂಡಲವ ॥೫॥ ಚಲನದಿಂದುದಯಿಸಿದಶೂದ್ರತೆ । ಗಲಸಿ ಸುರಗಂಗೆಯಲಿ ಮಿಂದು । ಚ್ಚಳಿಸಿ ರಜತಾದ್ರಿಯಲಿ ಶೂಲಿಯ ಪದಯುಗವ ಭಜಿಸಿ ॥ ಬಳಿಕ ನಾಕವನೈದಿ ಸುಮನೋ । ಲಲನೆಯರ ಕುಂತಳಕೆ ಹಾಯ್ದುದು । ಬಲದಪದಹತಧೂಳಿಗೆಲಿದುದು ವಾಜಪೇಯಿಗಳ ॥೬॥ ಹರಿಗೆ ಕೆಂಪಿನನಖಗೆ ಸುರಾಂಗನೆ । ಯರಿಗೆ ಸುಭಟವ್ರಜಕೆ ಕುಂಟಣಿ । ವರದಿಶಾಂಗನೆಯರಿಗೆ ಬೈತಲೆಗೆಸವ ಸಿಂದೂರ ॥ ಸುರಪನನಿಮಿಷತ್ರನಕೆ ರಿಪುವೆನ । ಲುರವಣಿಸಿ ಕೆಂಧೂಳಿ ನಭಕು । ಪ್ಪರಿಸ ಹೊಯ್ದಾಡಿದುದು ಪರಚತುರಂಗಬಲ ಹಳಚಿ ॥೭॥ ಬಿಡದೆ ಕಡಿ

ದಾಡಿದುದು ಸೇನಾ। ಕಡಲು ರಕುತದಕಡಲನುಗುಳಿತು। ಬಿಡದೆ ಸುಂಟುರೆಗಾಳಿ ವಿಲಯದ ಮಳೆಯುಪಡೆ
ದಂತೆ॥ ಬಿಡದೆರಡು ಥಟ್ಟುಗಳಕೈಮ್ಮೈ। ವಿಡಿದು ಹರಿವರುಣಾಂಬುಜಲದಲಿ। ಕಡಿತುಗಳು ಬೆಂಡೇಳೆ ದಂತಿ
ಗಳಟ್ಟೆ ಕೊಡೆ ನೆಗೆಯೆ ॥೮॥ ಲಗ್ಗೆಮಸಗಿದಸೂಳುವೊಯ್ಲಿನ। ನೆಗ್ಗಿಸಲಿ ಮುಂಕೊಂಡು ಮೋಹರವೊ
ಗ್ಗೊಡೆದು ಹೆಣಗಿದುದು ಕೇಶಾಕೇಶಿಯುದ್ಧದಲಿ॥ ಮೊಗ್ಗರವ ಕೆದರಿದರು ಹೊಯ್ದಾಡಿ। ಮುಗ್ಗಿದರು
ಕಡಲಿಡುವರಕುತದ । ಸುಗ್ಗಿ ಶಾಕಿನಿಯರಿಗೆ ಸೇರಿತು ಭೂಪ ಕೇಳೆಂದ ॥೯॥ ತೆಗೆದುದುಬ್ಬಿದಚೂಣಿ ಹೆಣ
ಸಾ। ಲುಗಳು ಹರಿದವು ರಕುತದರೆವೊನ। ಲುಗಳು ಹರಿದವು ಹೊರದವಂತಕನುರುಪರಿಗ್ರಹವ॥ ಅಗಿದು
ಬಿದ್ದುದುಚೂಣಿ ಬಲುಗಾ। ಳಗವನೊಯ್ಯಾರಿಸುತ ರಾಯರು। ತೆಗಸಿದರು ಸೇನೆಯನು ನೂಕಿದರಂದು
ಬಿಲ್ಲವರ ॥೧೦॥ ಜಡಿವಕೈದುಗಳುಲಿಯೆ ಲೋಹವ। ನಡಸಿಕಾರಿದವಂದು ಖಣಿಖಟಿ। ಲಿಡುವದನಿ ತೀವಿ
ದುದು ನಳಿನಭವಾಂಡ ಮಂಡಲವ ॥ ಕಡುಗಿ ಹೊಯ್ದಾಡಿದರು ದಾವಣಿ । ವಿಡಿದು ಚೋಳುವಕರು
ಳ ಹಿಣಿಲೊಳು । ತೊಡಗಿ ತೋಟಿಯ ಭಟರು ಹಾರಿದರಂತಕನಪುರಿಗೆ ॥೧೧॥ ಪುಲಿದೊಗಲ ಸೀಸ
ಕದ ಕಿಗ್ಗ । ಟ್ಟೊಲೆವಸುರಗಿಯ ಕಾಂಚನದೊಳತಿ । ಬಲಿದಬಿಲ್ಲಿನ ಬಿಗಿದತಿರುವಿನ ಬೆರಳಹೊಯ್ಲು
ಗಳ ॥ ಬಲಿದಮುಂಗೈಹೊಡೆಯ ಬಿರುದಿನೊ । ಳುಲಿವ ಘಂಟೆಯ ಬೆನ್ನಗಿವ ಬತ್ತಳಿಕೆಗಳಲ್ಲೈದಿದ
ರು ಬಿಲ್ಲಾಳುಭಯಸೇನೆಯಲಿ ॥೧೨॥ ಬೊಬ್ಬಿರಿದು ಮೊಣಕಾಲನೂರಿದ । ರಬ್ಬರದಿನಿವಿರಾಂತು ಕಾ
ಲನ । ಹೆಬ್ಬೆಳಸು ಘನವಾಯ್ತು ಬರಹೇಳೆಂಬವೋಲೊದರಿ ॥ ಹಬ್ಬುಗೆಯ ಬಿಲ್ಲುಗಳ ಜೇವಡೆ । ಮ
ಬ್ಬುವೊಗರಿನಕಣೆಯ ಬಿರುದಿನ । ಕೊಬ್ಬಿದಾಳೆಚ್ಚಾಡಿತಿಕ್ಕಿದಮುಂದಿಚಂಡಿಸದೆ ॥ ಬೆರಳಶರಸಂಧಾನದೃ
ಷ್ಟಿಯ । ಮುರಿಯ ಮುಷ್ಟಿಯ ಮೂರಲೆಯ ಕಿವಿ । ವರೆಯತೆಗಹಿನ ತೋಟಿಕಾರರು ತುಳುಕಿದರು
ಕಣೆಯ ॥ ಆರರೆ ಕವಿಕವಿಯಂಬತೊಡುತೊಡು । ಕರುಳನುಗಿಯೆಂದೆಸಲು ಹೆಣಗಳು । ಹೊರಳಿದ
ವು ಹೊಡಕರಿಸಿದವು ಹೊಕ್ಕೆಸೆವಚೂಣಿಗರ ॥೧೪॥ ಕಣೆಕಣೆಯಹಳಚಿದವು ಮಾರ್ಗಣೆ । ಕಣೆಯ ಕಡಿ
ದವು ಕವಿವಕಣೆ ಕಿರು । ಗಣೆಯ ಮುಕ್ಕುಳಿಸಿದವು ಹೆಕ್ಕಳಿಸಿದವು ಹಂದೆಗಳ ॥ ಖಣಿಕಟಿಲು ಘುಳಿಘುಳಿ
ಲು ಧೊಪ್ಪನೆ । ಘಣಿಲು ಘುರಿಘುರಿಕೊಯ್ಯಸೀಳುವ । ಹೆಣಗೆಡಹುವಬ್ಬರಣೆ ಮಿಗಿಲೊದಗಿದರು ಬಿ
ಲ್ಲವರು ॥೧೫॥ ಉರಗಬಲದುರವಣೆಯೊ ವಾರಿಜ । ತರುಗಳುಪಶಾಖೆಗಳೊ ಕಾಲನ । ಹರವರಿಯ
ಹೆಬ್ಬೆಳಸ ಮುತ್ತುವವಿಹಗಸಂತತಿಯ॥ ತರಣಿ ತಲ್ಲಣಿಸಿದನು ಹೊಗರಲ । ಗುರಿಗೆದರಿ ಹೊಗರೆದ್ದು
ಹಿಳುಕ । ಬ್ಬರಿಸಿಗಬ್ಬರಿಸಿದವು ದಿಗುತಟವನು ಶರವ್ರಾತ ॥೧೬॥ ಹೆಣಗಿಹಿಣಿಲಿರಿದಭ್ರದಲಿ ಸಂ। ದಣಿಸಿ
ಕಣೆ ಕೈಕೊಂಡುದಂಬರ । ಮಣಿಯನಣೆದುದು ತಿಮಿರರಾಜನದಂಡು ಸಂದಣಿಸಿ ॥ ಮಣಿಮಕುಟದೆ
ಲೆಗೊಯ್ಲ ನೆಲದಾ। ವಣಿಯೊ ಗಗನಾರ್ಣವದ ವಾಡಬ। ಕಣವೊ ಕೌತುಕವೆನಿಸವೆಚ್ಚಾಡಿದರು ಬಿಲ್ಲವ
ರು ॥೧೭॥ ರೇಣುಹತ್ತಿದರವಿಯ ಮಸೆಯೊಲು । ಸಾಣೆಯಿಕ್ಕಿದ ಭಗಣರತ್ನವ । ಸಾಣೆಗೆಳೆಯಲು
ಕಮಲಭವಸೃಜಿಸಿದಸಲಾಕೆಗಳೊ ॥ ಕಾಣೆನಭ್ರವನವಮು ದಿಕ್ಕುಗ । ಳೇಣುಮುರಿದುದು ಹೊಕ್ಕೆಸುವ
ಬಿಲು ।ಜಾಣರುರವಣೆ ಯಾಚಿಸಿತು ಲೋಕದ ಧನುರ್ಧರರ ॥೧೮॥ ವೀರಧಣುಧಣು ಪೂತುರೇ ಬಿಲು।
ಗಾರ ಮಝ್ಝುಭಾಪೇ ಚಾಪತಂತ್ರವಿ । ಶಾರದಾ ಯೆನುತೊಬ್ಬರೊಬ್ಬರಬಿರುದ ಮೂದಲಿಸಿ॥ ಓರಣವಕಣೆ
ಗಳಲಿತಲೆಗಳ।ತೋರಣವ ಕಟ್ಟಿದರು ಸೇನಾ। ಮಾರಣವ ಬೇಳಿದರು ಅರುಣಜಲಾಜ್ಯದಾಹುತಿಯ ॥೧೯॥

ಪ್ರಳಯದಿವಸದ ಪಟುಪವನನೀ । ಹಿಳುಕುಗಾಳಿಯೊಳುದಿಸಿದನೊ ಬಿಡೆ । ಮೊಳಗಿವೋದುವ ಸಿಡಿಲುವಂಬಿನ ಮನೆಯೊಳುದಿಸಿದವೊ॥ ಜಲಧಿಯನು ಜಂಗುಳಿಸಿತುವರಕೆ। ಕುಲಿಶಭೀತಿಯ ಬಿರುಬುಗೆಣೆಬಳಿ । ಸಲಿಸಿ ಹುಡಿಮಾಡಿದರು ಸುಭಟರ ಗೋಣುಗುಂಮಾಡಿ ॥೨೦॥ ಕುಣಿದೆಸುವಕೂಕಿರಿವಜಿರುದರ । ನಣೆಕಿಸುವಬಲುಬಿಲ್ಲೊದು ಕೈ । ದಣಿಯೆ ಕಣುಸೆಟ್ಟಾಲಿಗೊಳೆತಳವುಂಡ ಮರಸಾಗೆ ॥ ಹೆಣಗಿದರು ರಣರೌಕಿಗರು ಬಿರು । ಗಣೆಯಲೆಚ್ಚಾಡಿದರುಸಂ । ದಣಿಸಿದರು ಕಿಗ್ಗಟ್ಟು ಸುರಗಿಯನುಗಿದು ಹಳಚಿದರು ॥೨೧॥ ಅಹಿತನಾಲಿಗೆ ವ್ಯತ್ಯಯಿನ ಹಲು । ಗಹಳೆಗಳ ಕಳದಂತೆ ಸಿಡಿಲಿನ । ಬಹಳದಾರಿ ತೆಗೆದಂತೆ ಕುಲಿಶದ ತಿರುಳ ಮಸದಂತೆ ॥ ಮಹಿಯದಿರಲಿಟರಾಗ ಸುರಗಿಯ । ಲಹಮಿನದಟರು ತಿರುತಿರುಗಿಜರೆ । ಅಹಿತರಬ್ಬಾಡಿದರು ಪಡೆದರು ರೌದ್ರರಂಜನೆಯ ॥೨೨॥ ಮಿಾರಿ ತಳಸಂಚದಲಿ ಮೊನೆಯನು । ತೋರಿ ತಿರುಪಿನೊಳಣೆದು ಕಳಚುವ । ರೇರುಗಾಣಿಸಿ ಮಧ್ಯಸಂಚಕೆ ನಿಲುಕಿ ಕೈಮಾಡಿ ॥ ಜಾರಿಸುರಗಿಯಲಣೆವರಳುಕದೆ । ಮಿಾರಲುಪ್ಪರಸಂಚದಲಿ ಕೈ । ದೋರಿ ದಂಡೆಯಲೊತ್ತಿ ಕಾದಿತು ಸುರಗಿಯತಿಬಲರು ॥೨೩॥ ಅಣೆದೊಡೌಕುವ ನೂಕಿ ಕವಿದೊಡೆ। ಹೆಣನ ತೋರುವ ಹಜ್ಜೆ ದೆಗದರೆ। ಜಣುಗಲೀಯದೆ ಮೇಲೆ ಕವಿಸುವಮಿಾರಿ ಕೈಮಾಡಿ ॥ ಕೆಣಕಿದರೆ ಬಂಕಿಸುವ ಧಟ್ಟಿಸಿ । ಹೆಣಗಿ ಮೊನೆಗೊಡೆ ದಂಡೆಯಲಿ ಬಲು । ಗಣೆಗಳೊದಗಿದವುವು ಮೆರೆದರು ಸುರಗಿಯತಿಬಳರು ॥೨೪॥ ಬೀಯವಾದರು ಬಿಲ್ಲವರು ಖಡು । ಗಾಯುಧರು ಕೈಕೊಳಲಿ ವಿಜಯು । ತ್ರೀಯು ತಪ್ಪದು ಸಮರಮುಖದಲಿ ಮಡಿದವಹಿವರಿಗೆ ॥ ರಾಯ ಮೆಚ್ಚಲು ರಣದೊಳೊದಗುವ । ರಾಯತಿಕೆಯೆಂತೆನುತ ಸೇನಾ । ನಾಯಕರು ನೂಕಿದರು ಖಂಡೆಯಕಾರಮೋಹರವ ॥೨೫॥ ತಾಟಿಸಿದರೊಡರೊಡನೆ ಕುಲಗಿರಿ । ದೂಟಿ ಬಿದ್ದವು ಚಿತ್ರವೆನೆ ನಡೆ । ಗೋಟೆಯೆನೆ ಮಂಡಳಿಸಿ ಬಲಿದರು ತೆಕ್ಕೆವರಿಗಗಳ ॥ ಸೋಟಕಾರಿಗಾಲಿಗಳಿಗಲ್ಲಾಟ ಮಿಗೆ ಪರಿಚಿತ್ರಗತಿಗಳ । ತೋಟಿಕಾರರು ಹೊಕ್ಕು ತಾಗಿದರುಭಯಸೇನೆಯಲಿ ॥೨೬॥ ಬಲಸಮುದ್ರದ ಬುದಬುದಂಗಳೊ । ತಿಳಿಯಲರಿದೆನೆ ಹರಿಗೆ ಮುಸುಕಿದ । ಖಳಿಯ ಚೌರಿಯ ಲುಲಿವಘಂಟೆಯ ಬಿರುದಿನತಿಬಲರು ॥ ತಳಪಟದೊಳೌಕಿದರುತೊಡೆಸಂ । ಕಲೆಯತೊಲಗದ ಕಂಭದಪ್ರತಿ। ಬಲರು ಹಾಹಾಹಾಣಿಯಲಿ ಹೊಯ್ದಾಡಿದರು ಕಡುಗಿ ॥೨೭॥ ಸಿಡಿಲುಸೋಲ್ತುದೊ ಜಡಿವನಿಸ್ವನ। ಕಡುವೊಗರುಬೆಸಲಾಯ್ತೊ ನಭವನು । ಹೊಡಗಳಿನೊಳುಚ್ಚಳಿಪಕಿಡಿ ವಡಬಾನಳನಪಿತನೊ॥ ಕುಡಿಮೊನೆಯ ಲಹಿಪತಿಯ ನಾಲಗೆ । ಗಡಣವುದಿಸಿದವೆನೆ ಕೃಪಾಣದ । ಕಡುಹು ಕೌತುಕವಾಯ್ತು ಖಂಡೆಯಕಾರಮೋಹರವ ॥೨೮॥ ಕರೆಕರೆದು ಮೂದಲಿಸಿ ಬಿರುದಿನ । ದುರುಳರುಬ್ಬಿನಮೇಲೆ ಹೊಕ್ಕು । ಬ್ಬರಿಸಿ ಹೊಯ್ದರು ಕಾದುಕರೆದರು ಕಾಲಕಿಂಕರರ॥ ಕರುಳುಗಿಯೆ ತಲೆ ಸಿಡಿಯೆ ನಿಟ್ಟೆಲು। ಮುರಿಯೆ ಮೂಳೆಗಳುದಿರೆ ಶೋಣಿತ । ಸುರಿಯೆ ಕಾಳಿಜ ಕೆದರೆ ತುಂಡಿಸಿ ಖಂಡ ಬೆಂಡೇಳೆ ॥೨೯॥ ಅಡಗಿ ಕಿಡಿಗಾರಿದವು ಲೋಹದ । ಕಡಿಕು ಸಿಡಿಲುಬ್ಬರದಲಣವನು। ಹೊಡೆದು ಕೈಬಂದುಗೆಯ ಕೀಲಣಮಿಕ್ಕಡಿಸಿ ಬೀಳೆ। ಘಡ ಸುಗಾಯವ ಬಿಸುಟವೋ ಮೊನೆ । ಗೊಡದಿರುಪ್ಪರದಲ್ಲಿ ಕೈಯಲಿ । ತುಡುಕಿರೋ ಮಿಡುಕದಿರಿ ಮಂಡಿಯನೆನುತ ಹಳಚಿದರು ॥೩೦॥ ಕಾಲು ಖಂಡಿಸಿ ಬೀಳೆ ಕರುಳಿನ । ಮಾಲೆಯಲಿ ತೊಡಕಿದರು ಹಣಿದದ । ಭಾಳೆಯಂತಿರಲುಡಿಯೆ ತೊಡೆನಡು ಕಡಿದು ಕಿಡಿಯೇಳೆ ॥ ತೋಳ ಕೊರೆವವು ನೆಲಕೆ ತ

ಲೆಯನು। ಕೀಲಿಸಿದರೆರಡಾಗಿ ತನುವನು। ಸೀಳಹೊಯ್ದರು ಬೈದು ತಾಗಿತು ಹರಿಗೆಯತಿಬಲರು ॥೩೧॥ ನೆಲಕೆ ಹೊಯ್ದುಬ್ಬರಿಸಿ ಬಾಗಿದ। ತಲೆವರಿಗೆ ತೆರಳದೆ ಸುಗಾಯದ। ಬಲದ ಬೆಳಸಿರಿವಂತರಹಿತರ ಕರೆದು ಮೂದಲಿಸಿ ॥ ಛಳಿಛಟಿಲು ಛಟಛಟಲು ಖಣಿಖಣಿ। ಖಳಿಲೆನಲು ಮಿಗೆ ಮೆರೆವರಿಪುಗಳ। ಕೊಲುವೆನೆಂದುರವಣಿಸಿ ಹೊಯ್ದಾಡಿದರು ಖಡ್ಗಿಗರು ॥೩೨॥ ನಿಲುಕ ಲಿಟ್ಟಿಡೆಯಾವ ಹಣನೊ। ಟ್ಟಿಲನೆ ಸವರುತ ಕುಣಿವಮುಂಡವ। ನೆಳದು ರುಧಿರದೊಳಿಕ್ಕಿ ಮೆಟ್ಟುವ ಮುಂದೆ ನಡೆನಡೆದು ॥ ತಲೆಮಿದುಳ ಜೋರಿನಲಿ ಜಾರುವ। ಕಲಹದಾತುರದಲ್ಲಿ ಭಟರ। ಪ್ಪಳಿಸಿ ಗಾಯಂಬಡೆದು ಕೆಡೆದುದು ಉಭಯ ಸೇನೆಯಲಿ ॥೩೩॥ ಉರುಳಿ ಬೀಳುವ ತಮ್ಮ ತಲೆಗಳ। ತಿರುಹಿ ರಿಪುಗಳನಿಡುವ ಸಿಡಿಲಿದ। ಶಿರವನರಿಯದೆ ಮುಂಡವಿದಿರಲಿ ಬೀದಿವರಿವರಿದು ॥ ಹರಿಗೆ ಹೊಳ್ಳಿಸೆ ಖಡುಗ ಖಂಡಿಸೆ। ಕೊರಳರಿಯಲಿಕ್ಕಿಸದೆ ಸೇನೆಯ। ಲುರುವಣಿಸಿ ತಿವಿದರು ಕಬಂಧದಲತುಳಭುಜಬಲರು ॥೩೪॥ ನೆಲಕೆ ನಿಗುರಿದಗಂಗೆವಾಳದ। ಬಿಳಿಯ ಚೌರಿಯಲುಲಿವ ಘಂಟೆಯ। ತೊಳಪಬದ್ದುಗೆದಾರಕಾಂಚನಮಯದ ಗೊಂಡೆಯದ ॥ ಉಲಿವಗೆಜ್ಜೆಯ ಚಲ್ಲಣದ ಹೊಂ। ಬಳಿದಹರಿಗೆಯ ಹೊಳವಕಡಿತಲೆ। ಗಳ ವಿಲಾಸರು ಬಂದು ಹೊಕ್ಕರು ಕುಳವಪಡೆಕಡುಗಿ ॥೩೫॥ ಉರುಬಿದೊಡೆ ವಡಬಾನಲನ ಮುಖ। ದಿರುಹಿ ಪ್ಯೈದೋರಿದೊಡೆ ಭುಜಗನ। ಬಿರುಬು ನಾಲಗೆಯುಬ್ಬಿ ಹೊಯ್ದೊಡೆಸಿಡಿಲಿನಬ್ಬರಣೆ ॥ ಮೆರವಹಜ್ಜೆಯ ದಂಡೆವಲಗೆಯ। ಮೆರೆಯಮೊಗದಂಡೆಗಳ ಜುಣುಗಿಸಿ। ತರುಬಿನಿಂದರು ಸಂದಕಡಿತಲೆಗಾರರೋಜೆಯಲಿ ॥೩೬॥ ಹಳಚಿದರು ತಗರಂತೆ ಗಜದವೊ। ಲೊಲೆದು ಕವಿದರು ಹಾವಿನಂತಿರೆ। ನಿಲುಕಿದರು ಸೂಕರನವೋಲ್ ಹೊಯ್ದೆತ್ತಿ ಹಾಯ್ಕಿದರು ॥ ಬಲಿದು ಚರಣಾಯುಧನವೋಲ್ಪರರಳವನೀಕ್ಷಿಸಿ ಕಪಿಯವೊಲು ಮ್ಯೆ। ಲಾಳಿವಡೆದು ಹತ್ತಿದರು ಕಡಿತಲೆಗಾರರುರವಣಿಸಿ ॥೩೭॥ ಕಡಿತಲೆಯ ಮಿಂಚುಗಳ ಹೊಯ್ಲಿನ। ಸಿಡಿಲುಗಳ ರಕ್ತಪ್ರವಾಹದ। ಕಡುವಳೆಯ ನೃತ್ಯದ ಕಬಂಧದ ಸೂಗೆನವಿಲುಗಳ ॥ ಬಿಡುಮಿದುಳ ಹೊರಳಿಗಳ ಹಂಸೆಯ। ನಡಹುಗಳ ನವಖಂಡದಲಿ ಹೆಣ। ನಡಪಿತಳಿತಿಳೆ ಸುರೆಪುದ್ಯೆ ಸಂಗ್ರಾಮಕಾರ್ಗಾಲ ॥೩೮॥ ಪಡಿತಳವಬೀಸಿದೊಡೆಕಾಲಿ। ಕ್ಕಡಿ ನಡುವೆತಾಗಿದರೆ ಯಂಡಲೆ। ಗಡಿದು ಬಿದ್ದುದು ನಿಲುಕಿನುಪ್ಪರತಿರವ ಮನ್ನಿಸದೆ ॥ ಮಡವ ಮೀರುವಕಚ್ಚಿಮಂಡಿಯ। ಮಡಿದೊಡೆಯ ತಲೆವೊರೆಯಹಲಗೆಯ। ಕಡಿತಲೆಯ ಕಡಿತುಳುವಪಡೆ ಹೊಯ್ದಾಡಿತಿಳೆ ಹಿಳಿಯೆ ॥೩೯॥ ಖಡುಗತೋಮರಪರಶುಗಳ ಕ। ಕ್ಕಡೆಯ ಕೊಂತದ ಭಿಂಡಿವಾಳದ। ಕಡುಗಲಿಗಳುರೆ ಮಸಗಿದರು ಹಿಗ್ಗಿದುದು ಯಮಲೋಕ ॥ ಬಿಡದೆ ನಾಯಕವಾಡಿಚೂಣಿಯ। ಹಿಡಿದು ಕಾದಿಸುವುಭಯರಾಯರು। ದಡಿಯವರ ಕೈಯಿಂದ ಕವಿಸಿದರಂದುಸಬಳಿಗರ ॥೪೦॥ ಕುಣಿವತೊಡರಿನಪೆಂಡೆಯದ ಡೊಂ। ಕಣೆಯ ಬಿರುದರು ನೂಕುನೂಕಣೆ। ಹಿಣಿಲ ಬಾವುಲಿಕಾರರಾವೆಡೆ ಭಾಷೆಯತಿಬಳರು ॥ ಹೊಣಕೆಯಿಂದವೆ ಹೆಂಡಿರಿದಿರೊಳ। ಗಣಕಿಸುವವಮಾತಲ್ಲ ದಿವಿಜರ। ಗಣಿಕೆಯರ ಬಯಸುವರು ನೂಕಲಿಯೆನುತ ಸಾರಿದರು ॥ ॥೪೧॥ ತಲೆಯಗಡಣೆಗೆಯಸುರರಂಭದ। ಪಳಿಯಸೀರೆಯ ಭಾಳಭೂತಿಯ। ಬಿಳಿಯಚೌರಿಯ ಝಗೆಯ ಸಬಳದ ಕಾಲತೊಡರುಗಳ ॥ ಉಲಿವಬಿರುದಿನ ಕಹಳೆಗಳ ಕಳ। ಕಳಿಕೆ ಮಿಗೆ ನಿಶ್ಶಂಕಮಲ್ಲರು। ದಳದೊಳಗೆ ತಲೆದೋರಿದರು ಡೊಂಕಣಿಯ ಪಟುಭಟರು ॥೪೨॥ ನಡೆವಡವಿಯೋ ಬಲುಬುಜ

ರವಂ । ಗಡವೊ ಸಬಳವೊ ತಿವತಿವಾ ಬಹು । ವಡಬವಹ್ನಿಜ್ವಾಲೆಗಳೊ ಸೇನಾಮಹಾಂಬುಧಿಯೊ ॥ ಪಡೆಯುಪದಧೂಳಿಯುಲಿ ಸವೆಯಲು । ಪೊಡವಿ ಪಾತಾಳದ ಫಣಿವ್ರಜ । ವಡರುವವೊರ ವಿಬಿಂಬಕನಲಾಯ್ತಾಕುತೂಹಳಿಕೆ ॥೪೩॥ ಮಿಕ್ಕು ಚೂರಿಸಲಹಿಯುನಾಲಗೆ । ಜಕ್ಕುಲಿಸಿದಂತಾಯ್ತು ಮೊನೆಗಳ । ತೆಕ್ಕೆಯುಲಿ ಕುಡಿಗೊಂಡು ಸುರಿದವು ರಕ್ತಧಾರೆಗಳು ॥ ಹೊಕ್ಕವರು ಹೆಣಗಿದರೆ ನಿರಿಗರು । ಟೊಕ್ಕವ ಡಗುದಿರಿದವು ಮೋಹರ । ಹಕ್ಕಲಾದುದು ಹರಿದು ಸಬಳಿಗರಿರಿದು ತೋರಿದರು ॥೪೪॥ ಬವರದಲಿ ಪ್ರಸರಿಸಿಪರಗಾ । ಯುವನು ವಂಚಿಸಿ ಭಟರು ಕೊಂದೆ । ತ್ತುವರು ಕೈಮಾಡಿದೊಡೆ ತಿವಿವರು ಕೋಡ ಕೈಯ್ಯವರು॥ ಕವಿದೊಡಾಕುವರಾಕಿದೊಡೆ ತಗ್ಗುವರು ತಗ್ಗಿದೊಡೆಡನೊಡನೆ ಜಾರುವರು ಜಾರಿದೊಡೆದ್ದು ತಿವಿವಾಡುವರು ಸಬಳಿಗರು॥೪೫॥ ಹೆಣನ ಹೋಳಿನ ಸಿಡಿದಡಗು ಡೆಂ।ಕಣಿಯುಲೆಸದುದು ಕಾಲಸಾರೋ । ಗಣೆಗೆ ಮಿಗೆ ಪಡಿಸಣವ ನೋಡದೆ ಮಾಣನೆಂಬಂತೆ ॥ ಕುಣಿವಕುಂತಾಗ್ರದಲಿ ಜೋಲುವ । ಹಿಣಿಲುಗರುಳೊಪ್ಪಿದವು ಜವನೀ । ರಣಕೆ ಬರೆ ಕಟ್ಟಿದ ಗುಡಿತೋರಣವನೆಂಬಂತೆ ॥೪೬॥ ದೆಸೆದೆಸೆಗೆ ತನಿವಡೆದು ಜೋಡಿಸಿ । ಮಸಗಿ ಬಾಣದಗೊರೆದು ಕೆಡಹುವ । ವಿಷಮವೀರರು ಝೂಡಿಸಿತು ಡೊಂಕಣಿಯ ತುದಿಗಳಲಿ ॥ ಬಸಿವ ಹೊಸರುಧಿರಕ್ಕೆ ಜೋಲುವ । ಕುಸುರಿಗರುಳಿಂದುದಿರುವಡಗಿನ । ವಸೆಗೆ ಬಂದೆರಗಿದವುಲೂಕಧ್ವಾಂತಸಂದೋಹ ॥ ಧುರದೊಳಗೆ ಬಿಲುಗಾರರೊಗ್ಗಿನ । ಹರಿಗೆಕಾರರು ಹಲಗೆಯವರು ಬ್ಬಗದಡೊಂಕಣಿಕಾರರಾಂತು ಕೃತಾಂತಮಂದಿರವ॥ ತರತರದಿ ತೀವಿದರು ರುಧಿರದ । ಹರಹು ಹೇರಾಳಿಸಿತು ಚೂಣಿಯ । ಲೆರಡು ಬಲದ ಪದಾತಿಸವೆದುದು ಹೇಳಲೇನೆಂದ ॥೪೭॥ ಧುರವ ನವಸಾಧಿಸಿದರೇರಲಿ । ತುರಗವಾವೆಡೆ ಪಟ್ಟಸಹಣದ । ಹಿರಿಯಸಹಣದ ವಿಮಲಸಹಣಿಗಳವರ ಕರೆಯೆನುತ ॥ ಧುರಧುರಂಧರರೊರಲಿದರು ಮೋ। ಹರಮಹಾಂಬೋನಿಧಿಯ ತೆರೆಯವೊ। ಲುರುವಣಿಸಿದವು ಕುದುರೆತಾರಕಿಯುದಿರೆ ನಲನದಿರೆ॥೪೯॥ ಬರಿಗಡಗತೆಳುಗಬ್ಬಿದುಕ್ಕಡಿ।ಯುರಗಕಡಿಯಣ ಮೊಗವಡಂಗಳ ।ತುರುಗ ವದನದಲೊಪ್ಪಿ ಬಿಗಿದಾವಣಿಯನಳವಡಿಸಿ॥ ಕೊರಳದಂಡೆಯಪಾರ್ಶ್ವಗಳಿಂಚೆಯ।ವೆರಡುಕಡೆಯುಲಿ ಸುತ್ತುಝಲ್ಲರಿ । ಪರಿಪರಿಯಹಕ್ಕರಿಕೆಯುಲಿ ಬೀಸಿದರು ಚೌರಿಗಳ ॥೫೦॥ ಹಳದಿಪಾರಿಯಪಚ್ಚೆ ಜೋನೆಗ । ಪಳಿಸುವರ್ಣಾವಳಿಯ ಸಂಧ್ಯಾ । ವಳಿಯುದಯರಾಗದಲಿ ರಚಿಸಿದಹಕ್ಕರಿಕ್ಕೆಗಳ ॥ ಕೆಲಬಲದ ಕುಣಿಕೆಗಳ ಕಳಚಿದೊ । ಡುಲಿವಘಂಟೆಯ ಮೊಗದಕನ್ನಡಿ । ಗಳ ವಿಲಾಸದಲಂದಲಂಕರಿಸಿದರು ಥಟ್ಟಗಳ ॥೫೧॥ ಸವಗವೊಚ್ಚೆಯ ಬಾಹುರೆಕ್ಕೆಯ । ವಿವಿಧವಜ್ರಾಂಗಿಗಳ ಸೀಸಕ । ಕವಚವನು ತೊಟ್ಟತುಳಬಲರೇರಿದರು ವಾಜಿಗಳ ॥ ಹವಣಿಸಿದವಾಘೆಗಳ ವಾಘೆಯ । ಸವೆಯಸರಿಸದಭಾರದಾಡೆಯ । ಗವಿಯಗರುವರು ನೂಕಿದರು ಸಂಗರಕೆ ತೇಜಿಗಳ ॥೫೨॥ ತರುಣಿಯರನೊಸಲಂತೆ ತಿಲಕದ । ಸರಿಸವದು ವೈವಾಹಗೇಹದ । ಸಿರಿಯವೋಲ್ಮಂಗಳಮಯವು ಮಲಯಾಚಲದ ಜನಪದದ ॥ ಅರಸಿನಂತಿರೆ ತಾರಮಯವೆನ । ಲುರವಣಿಸಿ ಮಾಡಿದೊಡೆ ನಿಡುವ । ಕ್ಕರಿಕೆಗಳ ಪರಿಪರಿಯೊಳಾಂತುದು ಜವಗ ವಾಜಿಗಳು ॥೫೩॥ ನಿಲುಕಿ ಹೊಡೆದವು ಕೀಲಸಡಲಿಸಿ । ಕುಲಗಿರಿಯ ಹೆಡತಲೆಯ ಮುಡಿದಾ । ವಳಿಕ ಸನ್ನೆಗೆಸನ್ನೆಗಭ್ರವ ತುಡುಕಲೊಡರಿಚುವ ॥ ದಳವುಳಿಸಿದವು ತಾಟಿಸಿದತೊಡೆ । ದುಳಿದವಖಿಳಾವನಿಯನೆನೆ ಮನ । ಲುಳಿಯ ಮನವೇಗಾಯ್ಲುವಾಜಿಯ ಥಟ್ಟ ನೂಕಿದರು ॥೫೪॥ ಖುರಪುಟದ ಕೆಂಧೂಳಿ

ಬಂಧಿಸೆ । ತರಣಿಯನು ಪವಮಾನಮಾರ್ಗವ । ನರರೆ ಕಟ್ಟಿತು ತೂಳಿತಿಂದ್ರನ ಸಾವಿರಾಲಿದಳ ॥ ಹರಿಸಬಾಧ ತಮಗಲ್ಲದಿಂತೀ । ತರಣಿವಾಯುಸುರೇಂದ್ರರಿಗೆ ಸಂ । ಚರಿಸಬೇಡೆಂಬಂತೆ ನಡೆದುದು ಘೋಟಕವ್ರಾತ ॥೫೫॥ ಖುರದಹೊಯ್ಲಲಿ ನಡುಗಿತಿಳೆ ಫಣಿ । ವರನ ಹೆಡೆಗಳು ನೊಂದವಂಬುಧಿ । ಹೊರಳಿದುವು ಹೋಗಾಡಿದುವು ಕುಲಗಿರಿಗಳಚಲತೆಯ ॥ ಅರರೆ ಸೂಠಿಯೊಳಟ್ಟಿದೊಡೆ ದಿ । ಕ್ಕರಿಯ ಸೊಕ್ಕಡಗಿದವು ನಿಗುರುವ । ತುರಗದಳ ವೊಡವೆರಸಿದವು ಕುರುಪಾಂಡು ಸೇನೆಯಲಿ ॥೫೬॥ ಹಿಡಿಯೆ ಜವನಿಕೆ ಸಮರವಾನವ । ಬಿಡುವಲೆಯ ಬಿರುದಾವಳಿಗಳು । ಗ್ರಡಣೆಗಳನಾಲಿಸುತ ಸಮ್ಮನ್ವಯುವ ಪಾಲಿಸುತ ॥ ಜಡಿವುದೂಹತ್ತಿಗಳ ಹಾಯಿಕಿ । ಹಿಡಿವಲೌಡಿಯ ಹತ್ತಳದತನಿ । ಗಡಣಿಗರು ಮೂದಲಿಸಿ ಕವಿದರು ರಾಯರಾವುತರು ॥೫೭॥ ನೂಲಹರಿಗೆಯ ಹೆಗಲಭಾರಿಯ । ತೋಳತೋಮರಲೌಡಿಗಳ ಕರ । ವಾಳತಳಪದ ಮಿಂಚುಗಳ ತನುಮನದಕೆಚ್ಚುಗಳ ॥ ಸಾಲುದಾವಣಿವಲೆಯ ಗಂಡರ। ಬಾಲಕತ್ತರಿಗರಗಸದ ಬಿರು। ದಾಳಿಗಳ ಛಲದಂಕರಾವುತರೊಗ್ಗ ನೂಕಿದರು ॥೫೮॥ ಹೊಡೆದು ಚಂಮಟಿಕೆಯಲಿ ದೊರೆಗಳ । ಹಿಡಿವಸಮ್ಮುಖದಲಿ ಕಠಾರಿಯ । ಲಡಸಿ ತಿವಿವಕೃಪಾಣದಲಿ ಕಡಿಸಾಲ್ಕತೋರಿಸುವ ॥ ಅಡವರದೊಳವನಿಪರ ತಹಮುಂ। ಗುಡಿಯಮುರಿವ ವಿಘಾತಿಯಲಿ ಘ । ಟ್ಟೊಡೆದುಹೊಯ್ವುತಿ ಭಾಷೆಗಳ ಬಿರುದಾಂಕಸ್ಮೈದಿದರು ॥೫೯॥ ಉಲಿವಕೈವಾರಿಗಳ ಲಗ್ಗೆಯ । ಬಲಿವತಂಬಟಕೋಟಿಗಳ ಭುಜ । ಬಲದಬಿರುದಿನ ಹೊಯ್ಲುಗಳ ನಿಸ್ಸಾಳನಿಸ್ವನದ ॥ ಘುಳಿಘುಳಿಪ ಬೊಗ್ಗುಗಳ ರವುಗಳ । ಹಳಚಿಸುವಕಹಳೆಗಳ ತುರಗಾ । ವಳಿ ಗಜರುವಬ್ಬರಣೆ ಮಿಗೆಕೈಕೊಂಡರತಿಬಳರು ॥೬೦॥ ಹೊಡೆದು ದೂಹತ್ತಿಗಳ ಗಾಯದ । ಲೊಡೆದುಸಿಡಿದವು ಲೋಹಸೀಸಕ । ವಡಸಿ ಬಲ್ಲೆಹ ಬಗಿದು ನಟ್ಟವು ಸರವಳಿಯ ನುಗಿದು ॥ ಹೊಡೆದಲೌಡಿಗಳೊತ್ತಿ ನೆತ್ತಿಯ । ಬಿಡುಮಿದಳ ಕೆದರಿದವು ರಕುತದ । ಕಡಲು ಕಡಲನುತೀವೆ ತಿವಿದಾಡಿದರು ರಾವುತರು ॥೬೧॥ ಜರೆದು ಸರಿಸದಲೇರಿದೊಡೆ ಸಿಡಿ । ಲುರವಣಿಸಿದಂತಾಯ್ತುಗಾಯವ। ನರುಹಿದೊಡೆ ದೂಹತ್ತಿರಾವುತಮಸ್ತಕಕ್ಕಿಳಿದು ॥ಕೊರೆದುದಿಳೆಯನು ಹೊಳೆದು ನೂಕಿದೊ। ಡೊರಲಿದರು ತಳಕವುತಕತ್ತರಿ। ದರಿದು ಹೊಯ್ದಾಡಿದರು ಗುಜ್ಜರರಾಯರಾವುತರು ॥೬೨॥ ಎಡನ ಹೊಯ್ದರು ಬಲದವರನಡ । ಗೆಡಹಿದರು ಮುಂಮೊಕದನೃಪರನು । ಸಿಡಿಲಪಡಿಯೆನಲೆರಗಿದರು ಸೂಠಿಯಲಿ ಸೈವರಿದು ॥ ಅಡಗುದರಿದರು ಮೋಹರವನೊ । ಗ್ಗೊಡೆದು ಚೂಣಿಯಬಲದಗೋಣಲಿ। ಖಡುಗ ವರ್ತಿಸಲೊದಗಿದರು ಮಾಳವದರಾವುತರು ॥೬೩॥ ಬೀಸುನೇಣಿನ ಸೆಳೆವನೆಗ್ಗುವ । ಸೂಸುಗಣೆಗಳ ಕಡಿವ ಕೊಡಲಿಯ । ಕೈಸುರಗಿ ಸೂನಿಗೆಯ ನಾನಾಯುಧದ ಗಡಣೆಗಳ ॥ ಓಸರಣೆಗೆಡದತಿಬಳರು ದಿನ । ವಾಸಿಕಾರರು ವೈರಿಬಲವನು । ಗಾಸಿಮಾಡಿದರೊಗ್ಗನಲಿ ಹಂಮಿೀರರಾವುತರು ॥೬೪॥ ಅರರೆ ಕವಿಕವಿ ಕದಳಿಯೊಳು ಮದ । ಕರಿಯು ತೊತ್ತಳದುಳಿದವೊಲು ದಿಂ । ಡುರುಳಿದವು ಹಯಕೋಟಿಯನು ಶತಕೋಟಿಯಂದದಲಿ ॥ ಸಿರವೊಡೆಯೆ ನಡು ಕಡಿಯೆ ಕೈಕ। ತ್ತರಿಸೆ ಕೋಳಾಹಳಮಹಾಸಂ । ಗರದೊಳಗೆ ಹೊಯ್ದಾಡಿದರು ಕಾಶ್ಮೀರರಾವುತರು ॥೬೫॥ ಕವಿದು ಮುಂದಲೆವಿಡಿದು ರಾವ್ತರ ॥ ತಿವಿದು ಜೀವವ ಕಳಚಿ ಕೆಲಬಲ । ದವರ ಹೊಯ್ದುವರವರ ಗಾಯವನೋಡದೊಳಹೊಯ್ದು । ಸವಗಖಂಡಿಸೆ ಜೋಡು ತುಂಡಿಸೆ ॥ ನವರುಧಿರದೊರೆಯೊಳಗೆಮುಹದಾ । ಹವದಲಂದೊದಗಿದರು ಗೌಳ

ನೃಪಾಲರಾವುತರು ||೬೬|| ಅಳವನರಿಯದೆ ಕೆಣಕಿ ತಹಮುಂ | ಕೊಳಿಸಿ ಕವಿದರ ಕೋಡಕೈಯಲಿ | ಯೊಳದೆಗೆದು ಮೋಹಿದೊ ಸಿಡಿಮಿಡಿಗೊಂಡು ಕೆಲಸಿಡಿವಡೆ ಗೆಲಿದೊಡುತ್ಸಾಹಿಸುವ ಸಿಲುಕಿದೊ ಡಳುವ ಕೆಟ್ಟೋಡಿದೊಡೆರದಲಿ | ನಿಲುವನಿರುಪಮವೀರರೊದಗಿತುತಿಗುಳರಾವುತರು ||೬೭||ಬವರಸವೆಯದೆ ತೇಜಿಗಳ ಬಲು | ಜವವು ಜಾರದೆ ಬಿಡುವತಿವಿದೊಡೆ | ಸವಗವನು ಸರಳಿಸುವಕವಿಡೆಡೆ ಕಾಲಯಮನಂತೆ || ಕವಿವರವ ಗೆಡಿಸಿದೊಡೆ ಹಿಮ್ಮೆ | ಟ್ಟುವರು ಭೂಮಾನದೊಳುಪಾಯದ | ವಿವರದೋಜೆಯ ಲೊದಗಿದರು ಕರ್ಣಾಟನಾಯಕರು ||೬೮|| ಉರುಬಿ ಹೊಯ್ದರು ಕೈದಣಿಯೆ ಹೊ | ಕ್ಕರಗಿದರು ನಿಪ್ಪಸರದಲಿ ಹೊ | ಕ್ಕುರುಬಿದರು ತಲೆಮಿದುಳ ಜೋರಿನಲೊರೆವರಕುತದಲಿ || ಸೆರೆಯುಬಿಟ್ಟರು ಖಗನಿಕರಕಾ | ಟಿರಿದು ಕಾಲನ ಬಲಕೆ ರುಧಿರದಕೆರೆಯ ತೂಬೆತ್ತಿದರು ಸಿಮ್ಮಳರಾಯರಾವುತರು ||೬೯|| ರಾವುತೋಮುಝುಪೂತು ರಾವುತು | ದೇವುರಾವುತು ಭಲರೆಭಲರೇ | ರಾವುತೋ ನಿಶ್ಶಂಕರಾವುತುಮಲ್ಲರೇಯೆನುತ || ರಾವುರಾವುತು ಭಾಪುರಾವುತು | ಭಾವುರಾವುತು ರಾವುತೋಯೆನು | ತೋಪಿ ಹೊಯ್ದಾಡಿದರು ರಣದಲಿ ಲಾಳರಾವುತರು ||೭೦|| ಗೌಳವಂಗಕಳಿಂಗವರನೇ | ಪಾಳಕದರಾವುತರು ವರಭೋ | ತಾಳಗಣದೊಳಗಡಿಸಿದರು ಕುರುಪಾಂಡವರ ದಳದ || ಹೇಳಲಳವಲ್ಲುಭಯದಲಿ ಹೇ | ರಾಳಕಾಳಗ ಕಿರಿದು ಕೆಡೆದುದು | ಕೇಳುವುದು ಬವರಕ್ಕೆ ಬಂದುದು ಮತ್ತಗಜಸೇನೆ ||೭೧|| ನೇಪಾಳದ ವಿಂಧ್ಯಗಿರಿಯಂ | ಜನಗಿರಿಯ ಮಲಯಾದ್ರಿಯಲಿ ಸಂ | ಜನಿಸಿದಾನೆಯ ಸೇನೆಯಲಿ ಕೈಸಿದರು ಚೌಂಗಳ || ಕನಕಘಂಟೆಗಳುಲಿಯೆ ಹೊರಜೆಯ | ತನತನಗೆ ಹಿಡಿದಡರಿ ಪೊರ್ವಾ | ಸನವ ವಂತಣಿಸಿದುದು ಗಜವಾರೋಹಕವ್ರಾತ ||೭೨|| ಭಾದಿಸಂಕಲೆ ಪಕ್ಕಘಂಟೆಯ | ಚಾರುಚಮರಿಯ ಕೊಡತಿಗಳ ಕೈ | ಯಾರ ಕೊರಂಕುಶದ ಬಿರುದರು ಹೊದ್ದಿದರು ಗಜವ || ಬಾರದೂಹತ್ತಿಗಳ ಗುಂಡಿನ | ತೋಲಲೌಡಿಯ ತೊಟ್ಟ ಬಲುಮದ |ವಾರಣದ ಮೋಹರವ ನೂಕಿದರುಭಯಸೇನೆಯಲಿ ||೭೩|| ಕಾಲನುಬ್ಬೆಗೆ ಕೊಡುವಸೀತಳ | ದಾಲವಟ್ಟವೊ ಮೇಣುವಿಲಯದ | ಗಾಳಿಯೋ ಮೇಣ್ಕನಕತಾಳವೊ ಕವಿಯ ಕೌತುಕವೋ || ಕಾಲುವೆರಸಿದನೀಲಗಿರಿಗಳ | ಧಾಳಿಯೋ ಮೇಣಂಜನಾದ್ರಿಯ | ಬಾಳಗವೊ ಬಂಕೈಗಳೋ ನೂಕಿದರು ದಂತಿಗಳ ||೭೪|| ಕಡೆಯಣಿಂದುವಿನಿರುಳುಗಳ ಮುಂ | ಗುಡಿಯೊ ಮುಸುಕಿದಕವಕದುಂಬಿಯೊ | ಬಿಡುಮುದದವಾರಿಗಳೊ ಹೊಸನಾರಾಸಿಗಳೊ ಮೇಣು || ಅಡಸಿ ಪದಹತಧೂಳಿ ಧುರವನು| ಕುಡಿದುದಾಮದವಾರಿ ರೇಣುವ | ನಡಗಿಸಲು ಮದದಂತಿಗಳು ಹೆಣಗಿದವು ತಮ್ಮೊಳಗೆ ||೭೫|| ಪಡೆಯೋಹೀನೇಂದುವಿನಿರುಳೊ ಮುಂ | ಗುಡಿಯುಮುಗಿಲೋ ಕವಿವತುಂಬಿಯೊ| ಬಿಡುಮುದದಧಾರೆಗಳೊ ಹೊಸವಾರಾಸಿಯೋ ಮೇಣು || ಅಡಸಿ ಪದಹತಧೂಳಿ ಮದವನು | ಕುಡಿದುದಾಮದಧಾರೆ ರೇಣುವ| ನುಡುಗಿಸಲು ಪದಧೂಳಿಗಳು ಹೆಣಗಿದವು ತಮ್ಮೊಳಗೆ ||೭೬|| ಕುಲಗಿರಿಗಳಗ್ರದಲಿಕೈಗಳ | ನಿಳುಹಿದನೊರವಿಯೆನಲು ಹೊಳೆಹೊಳೆ | ಹೊಳೆವಕೊರಂಕುಸದಬಿರುದರು ಹೊದ್ದಿದರು ಗಜವ || ಉಲಿವವಿಟರಲಿ ಲೌಡೆಬಿರುದಾ | ವಳಿಯ ಕಹಳೆಗಳೊದಿದುವುನೆಲ | ಮೊಳಗಿದಂತಿರಲೊದರಿದವುನಿಸ್ಸಾಳಕೋಟಿಗಳು ||೭೭|| ಹೊಕ್ಕರಾನೆಯಲೆರಡುಸೇನೆಯೊ | ಳೊಕ್ಕಲಿಕ್ಕಿದರೆಸೆವ ಜೋದರ | ತೆಕ್ಕೆಗೋಲಿನಮೇಲೆ ಮುಕ್ಕುಳಿಸಿದವು ದಿಗಂತತಟವ || ಉಕ್ಕಿನುರುಳ್ಗಳನಿಡುವಖಂಡೆಯ | ದಿಕ್ಕಡಿಯಲುಳಿಗಾರಪಟ್ಟೆಯ |

ದಕ್ಕಜದಹೊಯ್ಲಸೆಯೆ ಹೆಣಗಿದವಾನೆಗಾನೆಗಳು ॥೭೮॥ ತಿವಿವಕಳಚಮಕಳಚಲೊತ್ತುವ । ಕವಿದೊ
ಡಾನುಮನಿಂದೊಡೆಯೊತ್ತುವ । ಸಮೆಯೆ ತುಡುಕುವಮಿದುಕು ಮಿಗೆ ಕೈಕೈಯಜೋಡಿಸುವ ॥ ಭುವನಭ
ಯಮೊಳಗೊದರಿವುರವಣಿ । ಸುಮವಿಘಾತಿಸಿತೊಳ್ದುಸೀಳುವ । ನವಮದೇಭದ ಸಮರ ಸೋಲಿಸಿತಮ
ರರಾಲಿಗಳ ॥೭೯॥ ತಿರುಗಿಬಿಸುಟವು ಕಾಲುಗಾಹಿನ । ತುರಗಗಳ ಮುಂದಾರೆಕಾರರ ಶಿರವನೈದಾರೆಗ
ಳನಡಸಿವಮಣಿಲುಹೊಳಬಿನಲಿ । ಅರರೆ ಪಟ್ಟೆಯಲೌಡೆಖಂಡೆಯ । ಮಾಗಣೆಯ ಹೊಯ್ಲಿನಲಿ ರಿಪು
ಗಮ । ಮುರುಳಿದವು ತೆರಳಿದವು ಜೋದರಜೀವವಂಬರಕೆ ॥೮೦॥ ಮೆಟ್ಟಿ ಸೀಳಿದುಹಾಯ್ಕಿ ಕಾಡೆಯೊ ।
ಳೊಟ್ಟ ಮೋರೆಯೊಳೊಲೆವ ಹರಿದರೆ। ಯಟ್ಟಿಹಿರಿದಪ್ಪಳಿಸಿ ಜೋದರನಂಘ್ರಿಯೊಳು ಮೆಟ್ಟಿ ॥ ಇ
ಟ್ಟುಕೆಡಹುವ ಹೆಣನನೊಟ್ಟಿಲೊ । ಳೊಟ್ಟಿಮಸಗಿತು ತುರಗನರರಥ । ಡಿಟ್ಟೈತೆಯ ಸಲಿಸಿವವು ದಂತಿ
ವ್ರಾತವುಭಯದಲಿ ॥೮೧॥ ಕುತ್ತಿ ಹಿಂಗುವಭಟರದಾಡೆಯೊ । ಳೊತ್ತಿ ನೆಗೆಹಿದನರರ ರಕುತಕೆ ।
ಮುತ್ತಿಬಾಯ್ಗಳನೊಡ್ಡಿ ಕುಡಿದವು ಶಾಕಿನೀನಿಹವ ॥ ನೃತ್ಯವಿನ ಗಣವಿಭವಮಾಡೆಯ । ಸುತ್ತಿ
ಜೋಲುವಹಿಣಿಲುಗರುಳನು । ತುತ್ತಿಡಲು ತನ್ಮೊಳಗೆ ಮಸಗಿದರಸಮಸಮರದಲಿ ॥೮೨॥ ಅದರ
ನೃತ್ಯಪಿನೆರವಿಗೌಷಧ । ವರೆದವೆನೆಗಜಗಜವನಸಿಯ । ಟ್ಟಿದಪ್ರೋ ಬಲ್ಲೈಯ ಬಾಯಿಯಲಾಳನಿಂ
ಡಿಗಿಸ ॥ ಸಂಸಗುಂಡಿನಲೊಂದನೊಂದಿ । ಟ್ಟೊರಸಿದವು ಕೊಡಹಿಗವು ಸೀಳಿದುಹೊರಳಿಸಿವೆರಗವ
ವು ನಾನಾವಿಧದ ಕೊಲೆಗಳಲಿ ॥೮೩॥ ವ್ರಣದಬಂಧದ ಬಿಗಿಯುಪಾಡಗೆ । ಕೊಯ್ದು ಕವಿವವಿಹಂಗತ
ತಿಗಳ । ನಣಲೊಳಾಡುವತಲೆಗೆ ಕೈಗುತ್ತುವನಿಶಾಚರರ ॥ ಹೆಣನ ಬಿಸುಡುವಕ್ಕೆಗಳಲಿ ಸಂ । ದಣಿಸಿ
ದಂಕುಶದಿಂ ಕಪೋಲಕೆ । ಕೆಣಕುವವರಿಂ ಚಂಡಿಯಾದವು ಸೊಕ್ಕಿದಾನೆಗಳು ॥೮೪॥ ಅಡಸಿ ಸೇನೆ
ಯಮೇಲೆ ತಲೆಗಳ । ನಿಡುವಬಸುರನು ಬಗಿದು ಕರುಳ್ಗಳ । ತೊಡಹಿ ಸೂಸುವಮಿದುಳಸೊಗದೆ
ಣ್ದಸೆಗೆಸಾಲಿಡುವ ॥ ಅಡಗನಾಯಿದು ಕೆದರಿ ರಕುತವ । ತುಡುಕಿ ಚೆಲ್ಲುವಕರಿಯ ಬರಿಕ್ಕೆ । ಬಡಿಸಿದ
ವುಹುಟ್ಟಾಗಿ ಯಮರಾಜನ ಪರಿಗ್ರಹಕೆ ॥೮೫॥ ಕಾಲುಗಳಲೊಡೆದುಳಿದು ಮೋರೆಯ । ತೋಳಿನಲಿಬೀ
ಸಿಡುವರಥದಲಿ । ಹೋಳಿಸುವಕಾಲಡಿಯಲಿರುಕುವಹಲವುಕೊಲೆಗಳಲಿ ॥ ಕಾಲನೊಗಡಿಸಿ ಕೊಲುವ
ಮಡಿವಗಜಾಳಿಗಳಲಾರೋಹಕರು ಕೆಂ । ಗೋಲ ಮಳೆಗರೆದಾಲಿದರು ನೃಪಸೈನ್ಯವೆರಡರಲಿ ॥೮೬॥
ನೀಲಗಿರಿಗಳ ನೆಮ್ಮಿ ಕರೆದವೊ । ಕಾಲಮೇಘಾವಳಿಗಳನೆ ಬಿರು । ಗೋಲಮಳೆಗಳ ಕರೆದರುಭಯದ
ಜೋದದರವಗಡಿಸಿ ॥ ಮೇಲೆತೊಳಲುವಖಚರನಿ ಚಯದ । ಮಾಲೆಗೊಂಡವು ಧರೆಗೆ ಹಬ್ಬುಗೆ ।
ನಾಲಗೆಯ ಪಸರಿಸಿತು ಜೋದರ ರೋಷಶರಜಾಲ ॥೮೭॥ ಎಲೆಲೆ ವಿಂಧ್ಯಾಚಲದ ಹರಿಬಕೆ । ಕಳನ
ಹೊಕ್ಕವೊ ಕಣೆಗಳೆನುತಾ । ನಳಿನಸಖನಂಜಿದನು ಕೋಪಾಟೋಪಕಭ್ರದಲಿ ॥ ಅಲಗುಗಣೆಗಳೊ ಮೋ
ಘತರುವಿಲಿ । ತಳಿತಹೊಂಗೊಂಬುಗಳೊ ಬೀಳುವ । ತಲೆಗಳೋ ತತ್ಫಲಸಮೂಹವೊ ಚಿತ್ರವಾಯ್ತೆಂದ
॥೮೮॥ ಸರಳಸರಳಲಿಕಡಿವಕರಿಗಳ । ಕೊರಳಮುರಿಯೆಸುವೋರಣದಮೊಗ । ಮರೆಗೆಗಳ ಖಂಡಿಸು
ವಮೋರೆಯ ಕರವ ತುಂಡಿಸುವ ॥ ಸರಳುವದನವತಾಗಿಷೇಚಕ । ಕುರವಣಿಸಿ ತೆಗೆದೆಸುವಜೋದರ ।
ಧುರಚಮತ್ಕೃತಿ ಬೆರಗ ಸಲಿಸಿತು ದಿವಿಜಸಂತತಿಗೆ ॥೮೯॥ ವೀರಜೋದರು ಮೇಲುವಾಯಲು । ವೀ
ರಸಿರಿಬಿಗಿಯುಪ್ಪಿ ಮುತ್ತಿನ । ಹಾರ ಹರಿಯಲು ಕೆದರಿದವುದೆಸೆದೆಸೆಯಮುತ್ತುಗಳು । ವಾರಣದ

ಕುಂಭಸ್ಥಳಂಗಳ । ತಾರುಮೌಕ್ತಿಕನಿಕರವೋ ಮೇಣ್ । ಭಾರತಾಹವಕೌತುಕೋದಯುರಸಕೆನೆಲೆಯಾಯ್ತು ॥೯೦॥ ಘುರದ ಬಯಸಿ ವೀರಭಟರಿಗೆ । ಸುರಿವಲಾಜಾಕ್ಷತೆಯ ಧಾರಾ । ವರುಷದಂತಿರಲೆಸಮುದಭ್ರವಿಮಾನಭಾಗದಲಿ ॥ ಸರಿಸದಲಿ ಮುಕ್ತಾಳಿಯೊಪ್ಪಿದ । ವರವಿಜಯರೊಡಗೂಡಿ ಜಯುವಧು । ವಿರದೆ ಪುಳಕಿತೆಯಾದಳೆನೆ ಚಲುವಾದುದಾಕ್ಷಣಕೆ ॥೯೧॥ ವಿಗ್ರಹದೊಳಿದಿರಾದಕರಿಗಳ । ವಿಗ್ರಹಂಗಳು ಕೆಪೆದವಿಳೆಗ । ವ್ಯಗ್ರವೀರರು ಕಾದಿಕೊಂಡರು ಸುರರಕೋಟಿಗಳ ॥ ಉಗ್ರದಾಹವಭೂತಬಲಕೆಸ । ಮಗ್ರವಾಯ್ತಾಹಾರಸಂಗತ । ದಗ್ರಯರು ಕೈವೀಸಿದರು ತೇರುಗಳತಿಂತಿಣಿಯ ॥೯೨॥ ನೊಗನಬಿಗುಹಿನ ಕಂಧರದವಾ । ಜಗಳು ಕುಣಿದವುಪಲ್ಲವದಸೆರ । ಗಗಿಯೆ ಠೆಕ್ಕೆಯವೆತ್ತಿದವುಮುಂಮೊನೆಯಸೂನಗೆಯ ॥ ಹೊಗರುಗಳ ತೀಡಿದರು ಕೀಲ । ಚ್ಚುಗಳ ಮೇಳೈಸಿದರು ಬಲುಗಂ । ಬುಗೆಯಬದ್ಧರದೊಳಗೆ ತುಂಬಿದರಸ್ತ್ರಸಂತತಿಯ ॥೯೩॥ ಹಯನಿಕರ ಖುರಗಡಿಯವಜ್ರಾಂ । ಗಿಯನು ಹೊತ್ತವು ಜಡಿವಹೊಂಗಂ । ಟೆಯುಪಿಡಾಯ ವರೂಥವನು ಕವಿಸಿದವುಚೀತ್ಕೃತಿಯ ॥ ಜಯರಭಸವಳ್ಳಿರಿಯೆ ಸೂತ್ರಾ । ಶ್ರಯದಲತಿರಥನಿಕರ ರಥಸಂ । ಚಯವ ವೆಂಠಣಿಸಿದರು ತುಡುಕಿದರಖಿಳಕಾರ್ಮುಕವ ॥೯೪॥ ಪೂತು ಸಾರಥಿ ಭಾಪುಮಝರೇ । ಸೂತ ಧಿರುಧಿರುಯೆನುತ ರಥಿಕ । ವ್ರಾತಸಲೆ ಬೋಳೈಸಿ ಕೊಂಡರು ಹಯದವಾಘೆಗಳ ॥ ಅದುರಂಗದ ಖುರಪುಟವನಾ । ಶಾತಕುಂಭದ ಗಾಲಿಯುರುಬೆಯ । ನಾತತುಕ್ಷಣವಾ ರಥಂಗಳು ಕವಿದುದುಭಯದಲಿ ॥೯೫॥ ಹರಿವರಥ ದುರವಣೆಗೆ ನೆರೆಯದು । ಧರಣಿಯಂದಂಭೋಜಭವನೀ । ಧರೆಯನಿಮ್ಮಡಿಸಿದನೊ ಬಗೆಯನೆ ಬಹಳಸಮರದಲಿ ॥ ಹರಿವರಥಹತಧೂಳಿ ಮುಕರಾ । ಕರವ ಕುಡಿದುದುಚೀತ್ಕೃತಿಯ ಚ ॥ ಪ್ಪರಣೆ ಮಿಗಿಲುರುಬಿದವು ರಥವಾಘೆಯದ ರಿಸದಲಿ ॥೯೬॥ ಘನರಥದಚೀತ್ಕಾರಗಜರುವ । ಧನುವಿನಬ್ಬರಹಯದಹೇಷಾ । ನಿನದ ರಥಿಕರ ಬೊಬ್ಬೆಸೂತರಬಹಳಚಪ್ಪರಣೆ ॥ ಅನುವರದೊಳೊದಗಿತ್ತುವಿಳೆಯೊಳ್ । ಸ್ತನಿತಮೇಘಧ್ವಾಂತದನಿಸಂ । ಜನಿಸಿತೆನೆಹಳಚಿದವು ರಥರಥವೆರಡುಸೇನೆಯಲಿ ॥೯೭॥ ತೆಗೆತೆಗೆದುತಲೆವೆಮಟ್ಟುಕಾರರು । ಬಿಗಿವಬಿಲ ಗಳನತಿರಥರು ಕಂ । ಬುಗೆಯ ಮುಂದರು ಹಯವ ತರಿದರು ಸಾರಥಿಯ ಕೆಡಹಿ ॥ ಹಗಲ ಹೊಳಿದರಮಮಬಾಣಾ । ಟಗಳಲಸಮಮಹಾರಥರು ಕಾ । ಳಗದೊಳಹುದೆನಿಸಿದರು ಕಾಲನ ಪುರಪರಿಗ್ರಹವ ॥೯೮॥ ತಿರುಗೆತಿರಿಗಿದರೆಚೊಚ್ಚಡಚ್ಚರು । ಮರಳೆ ಮರಳಿದ ತಾಕಲೌಕಿದ । ರುರುವಣಿಸಲುರವಣಿಸಿದರು ಮಾರ್ತಾಗೆತಾಗಿದರು ॥ ಸರಳಿಗಂಬನು ಸೂತವಾಜಿಯ । ಶಿರಕೆ ಶಿರವನುರಥಕೆ ರಥವನು ।ಸರಿಯೆನಿಸಿ ಕಾದಿದರು ಸಮರಥಘನಮಹಾರಥರು ॥೯೯॥ ರಥವದೊಂದೆಸೆ ಹಯವದೊಂದೆಸೆ । ರಥಿಕರೊಂದೆಸೆ ಚಾಪರಣಸಾ । ರಥಿಗಳೊಂದೆಸೆಯಾಗಿ ಕೊಂದರು ಕಳನೊಳರಿಭಟರ ॥ ರಥಿಕರುರುವಣೆಯುಭಯಬಲದಲಿ । ವ್ಯಥಿತವಾಯ್ತಾಹವದೊಳತಿಮಹ । ರಥರು ಹೊಕ್ಕರು ಕೇಳು ಜನಮೇಜಯಮಹೀಪಾಲ ॥೧೦೦॥ ಅಳಿದುದೆರೆಡರ ಚೂಣಿಮುಂಗುಡಿ । ಯಳುಕೆ ಹೊನಲಾಯ್ತುರುಣಜಲ ದೊರೆ । ಗಳಿಗೆ ಹರಿವಿನ್ನಾಗಲೇನಹುದೆಂದು ಸುರರುಲಿಯೆ ॥ ದಳದಹೆಣನೊಟ್ಟಿಲಲಿ ಮೊಗಸುವೊ । ಡಳುಕಿದರುಮನ್ನೆಯರು ಬಳಿಕತಿ । ನೆಲೆಗಳಲಿ ಸೂಳವಿಸಿದವು ನಿಸ್ಸಾಳಕೋಟಿಗಳು ॥೧೦೧॥ ನರನ ರಥಕುಣಿದುದು ಯುಧಿಷ್ಠಿರ । ವರವರೂಥ ಸಘಾಡದಲಿ ಚೀ । ತ್ಕರಿಸಿತನಿಲಾತ್ಮಜನ ಸಿಂಧವು ಮುಂದುವರಿವುತಿ

ರೆ ॥ ಭರದಿ ಮಾದ್ರೀಸುತರ ತೇರುಗ । ಳುರವಣಿಸಿ ಯಭಿಮನ್ಯುಸಾತ್ಯಕಿ । ಯುರರೆ ಕೈಕೊಳಲಿತ್ತಲಾದುದು ಸಮರದುದ್ಯೋಗ ॥೧೦೨॥ ಇನನಮಗ ಗಜಬಜಿಸೆ ದುರಿಯೋ । ಧನನು ಬಿಲುಗೊಳಲಾತನನುಜರು । ಧನುವ ತುಡುಕೆ ಸುಶರ್ಮಶಲ್ಯರು ಸರಳಹೊದೆಗೆದರೆ ॥ ಮೊನೆಗಣೆಯನಳವಡಿಸೆ ಗುರುಗುರು ತನುಜನಸ್ತ್ರವ ತಿರುಹಿಸೇನಾ । ವನಧಿಗರ್ಜಿಸಲಾಯ್ತು ಸಂಕುಳಸಮರವುಭಯದಲಿ ॥೧೦೩॥ ಶಕುನಿ ಸಹದೇವನಲಿ ಶಲ್ಯನು । ನಕುಲನಲಿ ದುಶ್ಶಾಸನನು ಸಾ । ತ್ಯಕಿಯೊಡನೆ ಸೈಂಧವನು ಕುಂತೀಭೋಜಭೂಪನಲಿ ॥ ಸಕಲನಾಯಕರೆಂದು ಯುದ್ಧೋ । ದ್ಯುಕುತರಾದರು ಕೇಳುನೃಪಪಾ । ಲಕರ ಕೌಂತೇಯರ ಸವಿಗ್ರಹದುಗ್ರಸಮರಂಗ ॥೧೦೪॥ ಕಣೆಗೆದರಿ ದ್ರುಪದಾಂಕ ಗುರುವನು । ಕೆಣಕಿದನು ತತ್ತನುಜ ಭೀಷ್ಮನ । ಸೆಣಸಿದನು ಮೂದಲಿಸಿದನು ಲಕ್ಷಣನನಭಿಮನ್ಯು ॥ ರಣಕೆ ಕರೆದನು ಕೌರವಾನುಜ । ಗಣವನನಿಲತನೂಜನಿತ್ತಲು । ಕೆಣಕಿದನು ಭಗದತ್ತಭೀಮಕುಮಾರನುರವಣಿಸಿ ॥೧೦೫॥ ಕಲಹದಲಿ ಕರಿಘಟೆಯಹೊಯ್ಯೊಯ್ದು । ಯ್ದಲಸಿ ಕೌರವರನುಜರನು ಮುಂ । ಕೊಳಿಸಿ ಕೊಳ್ಳದೆ ಕಳುಹಿ ಬೇಸರದನಿಲಸುತ ಮಸಗಿ ॥ ನೆಲನಲುಬ್ಧನಬುದ್ಧಿಮರಣಕೆ । ಫಲಿಸಬೇಹುದು ಕರೆ ಸುಯೋಧನ ನಿಲಲಿ ಬವರಕ್ಕೆನುತ ಗದೆಯನು ತಿರುಹಿದನು ಭೀಮ ॥೧೦೬॥ ನಡೆದರಾಹವಕನಿಲನಂದನನೊಡನೆ ಸಾತ್ಯಕಿನಕುಲದ್ರುಪದರು । ತುಡುಕಿದರು ಬಿಲುಗೋಲಲೈದಿತು ಪವನಜನ ಚೂಣಿ ॥ ಗಡಣಿಸುವಮುಂಮುಖದ ಕೌರವ । ಪಡೆಯಹೇರಡವಿಯನು ಸವರಲು । ಕಡಿತಕಾರರು ಮುಂದೆ ಹೊಕ್ಕರು ನಕುಲಪಾರ್ಥಜರು ॥ ಕಡಿದರರಿಭಟಪಾದಪವನೆಡೆ । ಕೆಡಹಿದರು ಗಜಗಿರಿಗಳನು ರಥ । ದೆಡೆಗೆಡೆಯ ತೂರಿದರು ತುರಗವ್ರಜದ ಬಲುಮೆಳೆಯ ॥ ಕಡಿದು ಹರಹಿದರನಿಲಸುತಕಾ । ಲಿಡಲು ತೆರಹಿಲ್ಲ ಹಿತವಿಪಿನದ । ಕಡಿತ ತೀರಿತು ಹೊಕ್ಕನೆರನೆಲೆಗಾಗಿ ಕಲಿಭೀಮ ॥೧೦೭॥ ಎಲೆಲೆಯಿಳೆಯಕೃತಾಂತನೋ ನಂ । ಮಳಪಿಕೊಳ್ಳದು ಬೆಂಕೊಳಲಿ ಮುಂ । ಕೊಳಿಸದಿರಿ ಮರುಳಾಗದಿರಿ ಹುರುಳಾಗಿ ಹೆಂಡರಿಗೆ ॥ ಕೊಲೆಗಡಿಗನೋ ಭೀಮನೋ ರಿಪು । ಜಲಧಿಬಡಬಾನಳನೊ ತೊಲತೊಲ । ತೊಲಗಿಯೆಂದೋಡಿದುದು ಅರೆನೆಲೆಕೌರವನಸಮರೆಗೆ ॥೧೦೮॥ ಅದಟನಡ್ಡೈಸಿದೊಡೆ ಹೊದ್ದಿಹ । ಮದವ ತೊಡೆವೆನುಬಾಯಹೊಯ್ಯೊಯ್ಯು । ಕದನದಲಿ ನಡುಗಿಸುವನಾಯಕವಾಡಿಗಳನೆನುತ ॥ ಬೆದರದಿದಿರಾದನು ಜಯಸ್ತ್ರೀ । ಮದನಕಾಮನು ಕಪಟದಾಯನು । ವಿದಿತಮಾಯನು ರಣವಿಜೇಯನು ಕೌರವರರಾಯ ॥೧೦೯॥ ನಡೆವ ಸೇತಬಲಪಂಕದಲಿ ಮುಂ । ಗುಡಿಯವರು ಮೂದಲಿಸಿ ಕರೆದರು । ಬಿಡದೆ ಹಳಚಿತು ಕೋಡಕೈಯಡಬಲದ ರಾವುತರು ॥ ಒಡೆಯನಿದಿರಲಿ ಕಾದಿ ಸುಭಟರು । ಮಡಿವುತಿರ್ದುದು ಕೌರವನು ಬಿಲುದುಡುಕಿ ಕೈಕೊಂಡನಿಲಸುತಯುಂದಸುತ ಮಾರಾಂತ ॥೧೧೦॥ ಭುಜವನೊದರಿಸಿ ಸಿಹ್ಮರವದಲಿ । ಗಜರಿ ಗದೆಯನು ತಿರುಹಿ ಕುರುಭೂ । ಭುಜನನಟ್ಟಿದನಳವಿಗೊಂಡರೆ ಕೊಂದನತಿಬಳರ ॥ ತ್ರಿಜಗ ಮೆಚಭಾಪೆನಲು ಪವಮಾ । ನಜನು ರಿಪುಸೇನಾಂಬುಧಿಗೆ ಕುಂ । ಭಜನ ಕೈಪಲ್ಲಟವೊ ಕೇಳ್ ಜನಮೇಜಯಕ್ಷಿತಿಪ ॥೧೧೧॥ ಎಲವೊಮಾರುತಿ ನಿಮ್ಮಾಳಗೆ ಕೋ । ಮಳೆಯ ಹುದುವನು ಮೆಚ್ಚಿ ನಮ್ಮಲಿ । ನೆಲನ ಹುದುವನು ಬಯಸಿದಾಛಲದಂಕನೆಂದರಿಯ ॥ ನೆಲನ ಬೇಟವ ಬಿಸುಟು ಜೀವದಿ । ನುಳಿದು ತೊಲಗೆನೆ ಪವನಸುತ ಕಳ । ಕಳಿಸಿದನು ಕೌರವಮಹೀಪತಿಗೆಂದನುತ್ತರವ ॥೧೧೨॥ ಕೆಡಹಿ ದುಶ್ಶಾಸ

ನನ ರಕುತವ । ಕುಡಿದು ನಿನ್ನಯ ತೋರತೊಡೆಗಳ । ನುಡಿದುಕೊಂಬೆನು ಧರೆಯನಲ್ಲದೆಹುದುವ ಬ
ಯಸುವೆನೆ॥ ಪೊಡವಿದ್ರುಪದನತನುಜೆ ಸಮ್ಮುಯ।ಮುಡಬಯಲ್ಲವೆ ಲೋಗರಳುಪಿದೊ। ಡಡಗತರಿವೆನುತ್ತ
ಹೊಕ್ಕನು ಭೀಮನುರವಣಿಸಿ ॥೧೧೪॥ ಗಾಳಿಯುರುಬೆಗೆ ಮಲೆತ ಮೇಘದ । ತೋಳುವನಲನಗಡಯ
ಲಾಕುರು। ಪಾಲನೆತ್ತಲು ಭೀಮನತ್ತಲುತಿವತಿವಾಯೆನುತ॥ ಮೆಲಣಾಮರರ ಮಂದಿ ನಗನೃಪ। ಜಾಲ
ಜವಗೆ ಖಾತಿಯಲಿ ಕ। ಟ್ಟಾಳು ಹೊಕ್ಕನು ಭೀಮಸೇನನುರಥವ ಮುಬಯಸುತ ॥೧೧೫॥ ಎಲೆಲೆ ಫಡ
ಫಡ ದೊರೆಗೆವಹಿಲದ । ಕೆಲಸವಾದುದು ಭೀಮಕೌರವ । ರೊಳಗೆ ರಣವೆಂಬಳಲಿಗರುಹಿಂಟಕ್ಕ ಭೂಪ
ತಿಯ ॥ ಕಲಿವಿವಿಂಶತಿಚಿತ್ರಸೇನರು । ಬಿಲುದುಡುಕಿ ನಡೆತಂದುದನಿಬರ । ದಳವೃಕೋದರನಂದ ಕಂ
ಡುದು ಕಾಲನರಮನೆಯ ॥೧೧೬॥ ಕೋಲುಗರೆದರು ತೆಕ್ಕೆಯಲಿ ಬಿ । ಲ್ಲಾಳುಖಂಡೆಯದವರು ಹೂ
ಣಿಸಿ । ಹೋಳುಗರೆದರು ಭೀಮಸೇನನ ಬಳಿಯಪಟುಭಟರ ॥ ಮೇಲುಗಳಿದುದು ತುರಗಗಜದಸು ।
ಜಾಳಿ ಹೋದುದುವಾಗಲತಿರಥ । ಜಾಳಜೀಮೂತದಲಿ ಕಾಣಿಸಲಾಯ್ತು ಶರವರುಷ ॥೧೧೭॥ ಅಳ
ಲು ಮಿಾರಲು ಬಪ್ಪುಚತುರ್ಬಲ । ದಳವುದೋರಲು ಕಂಡು ಭಾಬಯ । ಕಳದುಕೊಂಡನುಬೇಗ ಹೇ
ಳಿದ ಕಾಲನರಮನೆಗೆ ॥ ಅಳಪಿಗೊಂಡುರವಣಿಸಿ ಪರಬಲ । ದಳವ ಹೊಯ್ದನು ಕುದುರೆಕಾರರ । ತ
ಲೆಯ ಮಿದುಳೊಟ್ಟಿದನು ಕೊಂದನು ಮಕುಟವರ್ಧನರ ॥೧೧೮॥ ಬಿಲುದುಡುಕಿ ಕೈಕೊಂಡುಸುಭಟಾ
ವಳಿಯ ಗೋಣಡಪಿಯನು ಭೀಮಾ । ಸಲಸಬಿಲಿನಕೇಣಿ ಕಾಣಕಾಣಿಸಲಾಯ್ತು ನಿಮಿಷದಲಿ ॥ ಇಳೆ
ಯೊಳೀಪವಮಾನನಂದನ । ನುಳಿಯೆ ಯಮರಾಜಂಗೆ ಬೆಸಕೈ । ವಳವಿ ಹಲಬಂಗಾಗಲೆಂದುದು ಸಮ
ಮರಭೂತಗಣ ॥೧೧೯॥ ಪವನಜನ ಕೈಘಾತಿಗಗ್ಗದ । ಬಮಂಗರನೀಕ್ಷಿಸುತ ರಥದನು । ಕನಿಸಿದನು ಕೈ
ವೀಸಿ ಮೋಹರಕಭಯವನು ಕೊಡುತ ॥ ಹವಣಿಸೈ ಹೇರಾಳದಾಟೋ । ಪವನು ಮಾಣಾ
ಜವದಬವರಕೆ । ತವಕಿಸೈ ತಪ್ಪೇನೆನುತ್ತುರವಣಿಸಿದನು ಭೀಷ್ಮ ॥೧೨೦॥ ಎಲೆ ಪಿತಾಮಹ ನೀವು ಕರು
ಣಿಸಿ । ದಳವ ನಿಮಗೊಪ್ಪಿಸುವೆಜಯವೆಮ । ಗುಳಿವು ಬೇರಂತೆನುತ ಕೊಂಡನು ಪವನಸುತ ಧನುವ ॥
ಚಳಕದಲಿ ತೆಗೆದೆಸೆಯಲಾತನ । ಹಿಳುಕಸೀಳಿದುಬಿಸುಟು ಭೀಮನ । ಗೆಲಿದನೆಂಟಂಬಿನಲಿ ಗಂಗಾಸೂ
ನು ನಿಮಿಷದಲಿ ॥೧೨೧॥ ಮೇಲೆ ಹೇಳಿಕೆಯಾಯ್ತುವರಪಾಂ । ಚಾಲಗೆ ಕೈಕೇಯಮತ್ಸ್ಯನೃ । ಪಾ
ಲವೈರಾಟನ ಸಮಗ್ರಕ್ಷೋಹಿಣೀ ಬಲಕೆ ॥ ಸೂಳು ಮಿಗೆಗರ್ಜಿಸುವಘನನಿ । ಸ್ಸಾಳಕೋಟಿಯ ಗಡಣ
ದಲಿ ಕೆಂ । ಗೋಲಸಬಮಳೆಗರೆದು ಗಂಗಾಸುತನ ಕೆಣಕಿದರು ॥೧೨೨॥ ಪೂತು ಮಝುಪಾಂಡವರ ಸು
ಭಟ । ವ್ರಾತ ಕವಿದುದುಕವಿದದುದೋ ಮ್ಮು। ಯ್ಯಾತುದೋ ಬೆಸಗೊಳ್ಳಿವೈವಸ್ವತನಪಬವಾರ॥ ಘಾತಿ
ಸುವೆನಿದನೆನುತ ತೊಡಚಿದ । ನೂತನಾಸ್ತ್ರಂಗಳಲಿ ಸುಭಟ । ವ್ರಾತವನು ಕಡಯಚ್ಚು ಪಲ್ಲಟಿಸಿದನು
ಕಡಿಕಡಿದು ॥೧೨೩॥ ಕಾಳಗಕ್ಕಿದಿರಾದಭೀಷ್ಮನ। ಕೋಲಹತಿಯಲಿ ಮಡಿದರಿಪುಭೂ । ಪಾಳಿ ಹಂದುದು
ಸುರರಹೆಂಡಿರ ಮುಡಿಯ ಮುಂದಲೆಗೆ ॥ ಮೇಲೆ ಮೇಲೈತಪ್ಪವೀರಭ । ಟಾಳಿಯೊಡ್ಡನಲಿದ್ದಸು
ಭಟರು ॥ ಸೂಳೆಬಂಟಿಕೆಯಿಂದ ಖಾಡಾಖಾಡಿಗೈದಿದರು ॥೧೨೪॥ ಮುಡುಹುಗಳಲೊಡೆಹಾಯ್ದು
ಕಾಲಲಿ । ಮಡವ ಮೆಟ್ಟುತ ತಂಬುಲಂಗಳ । ಲಿಡುತಲಿಂಕಂದೊರಯಕಟ್ಟುತ ನಾಯಕರ
ಹೆಸರಿಡುವ ॥ ತೊಡರನಿಕ್ಕುವಬೈದು ಸುಭಟರ । ಬಿಡುವಕಾದುವವೀರಭಟಬಂ । ದಿಡಿದುದ

ಮರಾವತಿಯ ಸೊಂಪಿನಸೊಳಗೇರಿಯಲಿ ॥೧೨೫॥ ಸುರಗಿಗಿತ್ತವ ಗಜಬಜವ ಪರಿ ॥ ಹರಿಸಲರಿಯದೆ ವೀರಭೀಷ್ಮನ। ಧುರವ ವೀಕ್ಷಿಸಲಿತ್ತಲೆಳವಡದೇನನುಸುರುವೆನು॥ ಅರರೆ ಅಂಬರಸರಸಿಗೀಭೂ। ಪರ ಸಿರದ ಪಂಕೇಜವನ ವಿಸ್ತರಿಸಲಾವುದೆನಲ್ಕೆ ಗಂಗಾಸೂನು ಕೈಕೊಂಡ ॥೧೨೬॥ ಬಳಸಿ ತಾರೆಗಳೆಸೆಯೆ ಚಂದ್ರರು । ಹಲಬರಾದರೊ ನಭದೊಳೆನೆ ಹೊಳೆ । ಹೊಳೆವ ಮಣಿಮಕುಟಗಳು ಸಂದಣಿಸಿದವು ಗಗನದಲಿ ॥ ಗೆಲಿದನಹಿತನಿಕಾಯವನು ರಿಪು । ಬಲದಿಶಾಪಟಭೀಷ್ಮನಿತ್ತಲು । ಕಲಿಯುಧಿಷ್ಠಿರನೃಪನ ವಿರಥನ ಮಾಡಿದನು ಶಲ್ಯ ॥೧೨೭॥ ಅರಸನನು ಹಿಂದಿಕ್ಕಿ ನಡೆದು । ತ್ತರನು ಶಲ್ಯನಸಾಂತು ನಿಂದನು ಸರಳಸೈವಳೆಗರೆಯೆ ಕವಿದನು ಶಲ್ಯಭೂಪಾಲ ॥ ಧುರದಿಶಾಪಟನಹೆ ವಿರಾಟನ । ಹಿರಿಯಮಗ ನೀನಮ್ಮಗೋಕುಲ । ಹರಣದಲಿ ಕಲಿಯಾಗಿ ಕಾದಿದೆಯೆನುತ ತೆಗೆದೆಚ್ಚ ॥೧೨೮॥ ಎಸಲು ಶಲ್ಯನ ಶರವ ಖಂಡಿಸಿ । ನಿಶಿತಬಾಣದಲುತ್ತರನು ತೆಗೆ । ದೆಸಲು ಕನಲಿದು ಶಲ್ಯನಭಿಮಂತ್ರಿಸಿ ಮಹಾಶರವ ॥ ಅಸಮಬಲನೀಕರ್ಣಪೂರದಿ । ನೆಸೆವಿರಾಟಕುಮಾರನಸು ಲಂ। ಘಿಸಿತು ಕಾಯವನೊದೆದು ಖಚರೀಜನದ ತೋಳಿನಲಿ ॥೧೨೯॥ ವೀರಶಲ್ಯದ್ರೋಣಕೃಪಭಾ । ಗೀರಥೀನಂದನನು ಪಾಂಡುಕು । ಮಾರಕರ ಸೇನೆಯಲಿ ಗೆಲಿದರು ಮುರಿದರಾಭಟರ ॥ ವೀರಸುಭಟರ ರಕುತಧಾರಾ । ಸಾರಲೋಹಿತಬಿಂಬವನಕೂ । ಪಾರದಲಿ ತೊಳವಂತೆ ಪಶ್ಚಿಮಜಲಧಿಗಿನನಿಳಿದ ॥೧೩೦॥ ಸೂಳವಿಸಿದವು ಸಂತವಿಸಿ ನಿ । ಸ್ಸಾಳಸೇನೆಯ ತೆಗಸಿದರು ಹೆ । ಗ್ಗಾಳೆ ಮೊಳಗಿದವಾನೆವರೆ ಗಜರಿದವು ಡೌಡೆಗಳು ॥ ಪಾಳಯಕ ತಿರುಗಿದರಖಿಳ ಭೂ । ಪಾಲಕರು ಗಂಗಾಸುತನ ಪಾಂ । ಚಾಲಕನ ನೇಮದಲಿ ಕೌರವ ಪಾಂಡುನಂದನರು ॥೧೩೧॥ ಇತ್ತಲೀ ಸಂಗ್ರಾಮಮಹಿಯಲಿ । ಮೃತ್ಯುವಿನ ಭಾಗ್ಯೋದಯವು ಕೈ । ವರ್ತಿಸಿತು ವೈವಸ್ವತಾಭಿಪ್ರಾಯ ಸಿದ್ಧಿಸಿತು ॥ ಮುತ್ತಿಗೆಯ ಜಂಬುಕಖಗಾಳಿಯ । ಚಿತ್ತ ನಿಶ್ಚಲವಾಯ್ತು ಸಲೆ ಮನ। ವೃತ್ತರೋತ್ತರವಾಯ್ತು ಶಾಕಿನಿ ಡಾಕಿನೀಜನಕೆ ॥೧೩೨॥ ಹೆಗಲಪಕ್ಖಲೆಗಳನು ಕವಿದುದು । ವಿಗಡಪ್ರೇತನಿವೃಂದ ಜೀಕೊಳ । ವಿಗಳ ಕೈರಾಟಳದಲ್ಲೈವಿತು ಶಾಕಿನೀನಿಕರ ॥ ತೊಗಲ ಕುನಿಕಿಲ ಭಂಡಿಗಳಲಾ । ರ್ದಗಿದು ಪೊಕ್ಕರು ರಕ್ಕಸರು ಬಾ । ಯ್ದೆಗೆದು ಜಂಬುಕಘೂಕಕಾಕವ್ಯೂಹವೈದಿದವು ॥೧೩೩॥ ಕರುಳನಣಲೊಳಗಡಸಿ ನಲಿದವು । ಮರುಳಬಳಗ ಕಪಾಲಪಾತ್ರೆಯ । ನೆರೆನೆಗಹಿ ಕೊಂಕಿನಲಿ ಕುಣಿದರು ಮುಕ್ತಕೇಶಿಯರು ॥ ಮೊರೆವೆಣನನೊಡನೆಲುತೆ ಹಾಡುತ । ಧುರದದಾನವನಿಕರ ಪಾಂಡವ । ಕುರುನೃಪರ ಹರಿಸಿದರು ಕೃಪರೆಗುಟ್ಟಿ ಭೂತಗಣ ॥೧೩೪॥ ಸಿಡಿದಕಣ್ಣಾಲಿಗಳನಾಯಿದು । ಕುಡುಕುಗೊಂಡವು ಕಾಗೆಗಳು ಹಿಂ । ಮಿಡಿಯನರವನು ಕಚ್ಚಿ ಸೆಳೆದವು ಜಂಬುಕಾದಿಗಳು ॥ ಅಡಗಕದುಕಿರಿದೊರಲಿ ಕರೆದವು । ಗಡಣದಲಿ ಗೂಗೆಗಳು ರಕುತದ । ಕಡಲಲೋಕುಳಿಯಾಡಿದರು ಭೇತಾಳಕಾಳಿಯರು ॥೧೩೫॥ ತಳಿತತಲೆಯೋಡಿನಲಿ ಶೋಣಿತ । ಜಲವ ಕಾಸಿದರೆಳಯಕರುಳನು । ಹಿಡಿದು ಹಿಂಡಿದರಿಕ್ಕಿದರು ಕುಸುಕಿದರು ಮೂಳೆಗಳ ॥ ತೆಳುದೊಗಲ ಚಕ್ಕಣದ ಕೈಚ । ಟ್ಟಳೆಯವರು ಹಂತಿಯಲಿ ಕುಡಿದರು। ಕೆಳೆಯರಿಗೆ ಸವಿದೋರೆ ಪ್ರೇತನಿಕರಗಣಡದಲಿ॥೧೩೬॥ ತೆಳುಪುದೊಗಲಿನ ಸೋಗೆಯುಡುಗೆಯ । ನೆಳೆಗರುಳಸಿಂಗಾರದುರುಬಿನ । ಕೆಳದಿಯರ ಕೈನೇಣಕಿರುದೊಟ್ಟಲಿನ ಬೊಂಬೆಗಳ ॥ ಎಳೆಮಿದುಳಕಜ್ಜಾಯ ಮೂಳೆಯ । ಹಳುಕುಕಾಳಿಜದಟ್ಟುಗುಳಿಗಳ । ಕಳೆಗಳಲಿ ಕೊಡಗೂಸುಪ್ರೇತನಿಕರವೊ

ಪ್ಪಿದವು ||೧೩೮|| ತೋಳಬರೆ ಕುಣಿದವು ಕಬಂಧದ | ಜಾಲದೊಡನೆ ಪಿಶಾಚಗಣ ಥೇ | ತಾಳಗಣಕ್ಕೆ
ವರೆಯ ಬಡಿದವು ಶಾಕಿನೀನಿಕರ || ಸಾಲುಮಿಗೆಸೊಗಸಿದುದು ರಣಭೂ | ತಾಳಿಯೆಲ್ಲಿಂದಿತ್ತ ಕೇ
ಳ್ವುದು | ಪಾಳೆಯಂಗಳೊಳೆರಡರಲಿ ಸಿಂಗರವುಹೋದ್ಯೋಗ || ಹಿಥಿದಲೋಹದಸೀಸ ಕಂಗಳ | ಬಲಿ
ಸಿದರು ಹೊಳ್ಳಾದಕವಚವ | ಹಲಿಸಿದರು ಹಕ್ಕರಿಕೆಸವಗದಬಿರುಕ ಬಿಗಿಸಿದರು || ಕಳಚಿದಾಯುತ
ದಾಯುಧವ ಕೀ | ಲ್ಗೊಳಿಸಿದರು ಖಡುಗಕ್ಕೆ ಕುಂತವ | ಕಳಚಿಕಾವನು ತೊಡಿಸುತಿರ್ದುದು ಸೇನೆಯೆರ
ಡರಲಿ ||೧೩೯|| ದಡಿಯುಬಲಿಸುವ ಗುಳವರೆಂಜೆಯ | ಗಡಣಿಸುವ ಹಕ್ಕರಿಕೆಗಳನಳ | ವಡಿಪ ವರಕಡಿ
ಯಣದಕಂಬಿಯ ಕೊಂಡಿಗಳ ಬಲಿನ || ವುಡಿದೆದೂಹತ್ತಿಗಳಕೀಲ್ಗಳ | ನಡಸಿಬೆಟ್ಟುವ ಲೋಹದಚ್ಚ
ನು | ತೊಡಿಸುತಿರಲಾಯ್ತೆರಡುಬಲದಲಿ ನಿದ್ರೆಗವಹಾನ ||೧೪೦|| ಅಸಿಯುಮಸಸುವಮುರಿದಲೌಡಿ
ಯ | ಬೆಸುವಕೊಂತಕಠಾರಿಗಳ ತಾ | ಳಿಸುವನೆರೆಸೊಪ್ಪಾದಹಿಳುಕಿನ ಗರಿಯ ಕೀಲಿಸುವ || ಹೊಸತಿರು
ವಕಟ್ಟುವಅಡಾಯುಧ | ಮಸೆವ ಹರಿಗೆಯುಬಲಿವ ಸುರಗಿಯ | ಬೆಸುವ ಬೆಳಗುವವೀರಭಟರೊಪ್ಪಿದ
ರು ಕಟಕದಲಿ ||೧೪೧|| ಹರಿದಕೊರಳನು ಬಿಗಿವಭುಜದಲಿ | ಮುರಿದಬಾಣವ ಕೀಳ್ವಹೊಟ್ಟೆಯ |
ಹರಿಗರುಳನಣೆದೊತ್ತಿ ಹೊಲಿಸುವ ಮದ್ದುಗಳಗಿಡಿವ || ಉರುವಶಾಕವನಸ್ಯದಲಿಹದ | ನರಿದುದಗ್ಗದ
ವೈದ್ಯತತಿಯ | ಚ್ಚರಿಕೆಯಲಿ ಸಂತವಿಸುತಿರ್ದುದು ವಾರುವಂಗಳನು ||೧೪೨|| ಒಡಲೊಳಗೆ ಪೊಕಿ
ಟ್ಟಸಬಳವ | ನುಡಿಯಲೀಯದೆ ಕೀಳ್ವಮದ್ದನು | ಗಿಡಿವಜೇವಣಿಗೆಯಲಿಸತ್ಪ್ರಾಣಿಸುವುದಾವ್ರಣವ||
ತೊಡೆದುಕಟ್ಟುವಹಸ್ತಿವೈದ್ಯರ | ಗಡಣವುಭಯದಲೆಸೆದುದೊರಲುವ | ಕಡಲ ರಭಸಕೆತೊಡರನಿಕ್ಕಿದು
ದುಭಯಸೇನೆಯಲಿ ||೧೪೩|| ಬಾದಣಿಸಿವೇರುಗಳ ಬಾಯಲಿ | ಕಾದಹಾರಂಗಿಗಳನಳತೆಗೆ | ಕೋದು
ಕೊಂಡರುವುಲಿಯ ಹೊಳಕದೆ ಹಿಡಿದಗಾಯವನು || ಅದವ್ಯೆಗಂಡಿಗಳ ರಕುತವ | ಸೋದಿಸುತ ಹಳೆ
ದುಪ್ಪವನುತೊಡೆ | ದಾದಬಿಸಿದರು ವೈದ್ಯಸಂತತಿ ವೀರಭಟರುಗಳ ||೧೪೪|| ಖಡುಗದಡಹೊಯ್ಲುಗ
ಳೊಳಗೆ ಮ | ದ್ದಡಸಿದರು ಸೂಕರನ ತುಪ್ಪವ | ತೊತೆದರಿರಿದೇರಿನಲಿ ಬಿಟ್ಟರು ತೈಲಪಾತೆಗಳಾ ||
ಕುಡಿಸಿದರು ಮಂತ್ರೋದಕವನೊಳ | ಗಡಸಿ ಕರುಳನು ಮುಚ್ಚಿ ಮಂತ್ರಿಸಿ | ತೊಡೆದರಖಿಳೌಷಧಿಗಳ
ನು ನೃಪಸೇನೆಯೆರಡರಲಿ ... ... ||೧೪೫||

ಅಂತು ಸಂಧಿ ೪ಕ್ಕಂ ಪದ ೬೪೧ಕ್ಕಂ ಮಂಗಳಂ.

ಐದನೆಯ ಸಂಧಿ,

ಸೂಚನೆ|| ರಾಯದನುಜಘಟೋತ್ಕಚನಂಘೋ | ಜಾಯುತಾಕ್ಷನ ಖಾತಿಯನು ಗಾಂ | ಗೇಯಭಯುಶಕ್ತಿ
ಯಲಿ ಗೆಲಿದನು ವರಸುದರ್ಶನವ ||

ಪದ|| ಕೇಳು ಜನಮೇಜಯಧರಿತ್ರೀ | ಪಾಲ ದಿನಕರನುದಯದಲಿ ಮುಂ | ಗಾಳಗದ ಗಾಢಪ್ರತಿ
ಜ್ಞರು ಬಂದು ಕಳನೊಳಗೆ || ಮೇಲನರಿದಂತಖಿಳ ಕುರುಭೂ | ಪಾಲನವರೊಡ್ಡಿದರು ಲಕ್ಷ್ಮೀ |

ಲೋಲನಾಜ್ಞೆಯೊಳಿವರು ಬಲಿದರು ತಮ್ಮ ಮೋಹರವ ॥೧॥ ದಳವೆರಡುದಳವಾಯ್ಗಳಿಬ್ಬರ । ಬಳಿಯ ಚೌರಿಯ ಸನ್ನೆಯಲಿ ಬಿಡೆ । ಹಳಚಿದರು ಹೊಯ್ದಾಡುತಿರ್ದುದು ಪಾಯದಳವಂದು ॥ ತುಳಿದು ಹೊಕ್ಕವು ದಂತಿಘಟೆ ದಳ । ವುಳಿಸಿ ಹರಿದುವು ತೇರುಗಳು ಕೈ । ಬಳಸಿತಿರಿದರು ರಾಯರಾವುತರು ಸಮರ ಸಮಯದಲಿ ॥೨॥ ಏನ ಹೇಳುವೆನುಭಯಬಲದಲ । ನೂನಪತಿತಾಶ್ವಗಳ ಸಡೆನೆಡ । ದಾನೆಗಳ ಹೊದರೆದ್ದು ಮುಗ್ಗಿದ ರಥದವಾಜಿಗಳ ॥ ಮಾನವರ ಕಡಿಖಂಡದೊಂಡೆಯ । ನೂನಭುಜಜಂಘೆಗಳ ರುಧಿರಾಂ । ಭೋನಿಧಿಯ ಹಳಹುಗಳ ಹೂರದವಿಗಡ ವಿಗ್ರಹದ ॥೩॥ ಅಳಿದುದೆರಡರ ಚೂಣಿ ದೊರೆಗಳ । ಬಲಕೆ ಹೇಳಿಕೆಯಾಯ್ತು ಘನಸಂ । ಕುಲಸುವಿಗ್ರಹ ಸಾಧಕರು ಕೈಮಾಡಿ ಕಡಿವಡೆಯೆ ॥ ದಳವುಳಿಸಿದನು ಭೀಮ ಕೌರವ । ಬಲವ ತರುಬಿದನಡ್ಡಬಿದ್ದರಿ । ಬಲದವಸುಭಟರಿಗಿತ್ತನಮರಾವತಿಯ ಸಂಪದವ ॥೪॥ ಮುರಿದು ಬಹನಿಜಸೇನೆಗಭಯವ । ಸೆರಗುದೋರಿದು ಭೀಮಸೇನನ । ತರುಬಿದನು ಕಲಿಭೀಷ್ಮ ಬಿಗಿದನು ಸರಳನಂಬರವ ॥ ತೆರಹುಗೊಡದಂಬುಗಳ ಭೀಮಗೆ । ಬೆರಗು ಬಲಿದುದು ಹೊಕ್ಕು ಸಾತ್ಯಕಿ । ಯಿರಿದು ಭೀಷ್ಮನ ಬಲದಲೂಡಿದನಖಿಳಖಗಕುಲವ ॥೫॥ ಬಳಿಕ ಸಾತ್ಯಕಿಭೀಷ್ಮರಿಗೆ ಬಲು । ಗಲಹಬಿದ್ದುದು ವಿಲಯರುದ್ರನ । ನಿಲವನೊಚ್ಚತಗೊಂಡ ಪರಬಲದೊಳಗೆ ಗಾಂಗೇಯ ॥ ತಳಪಟವ ಮಾಡಿದನು ಭಾಷೆಯ । ಬಳಿಗೆ ಕೊಂಡನು ಹತ್ತುಸಾವಿರ । ನೆಲನವಲ್ಲಭರನು ಯುಧಿಷ್ಠಿರರಾಜಸೇನೆಯಲಿ ॥೬॥ ಬೀಳಲವನೀಪತಿಗಳಲಿ ಹೀ । ಹಾಳಿಯಲಿ ಸಾತ್ಯಕಿ ಮುಳಿದು ಬಲು । ಗೋಲಿನಲಿ ಗಂಗಾತನೂಜನ ಸಾರಥಿಯನೆಸಲು ॥ ಮೇಲುಗಾಳೆಗವವರಸೇರಿತು । ಸೋಲ ಕುರುಪತಿಗಾಯ್ತು ಕಿರಣಾದ । ಗೂಳೆಯವುಪಡವಣಸಮುದ್ರಕೆ ತೆಗೆಯ ರವಿ ಸರಿದ ॥೭॥ ದಿನವೆರಡ ಹಿಂದಾದುದಿದು ಮೂ । ರನೆಯ ದಿವಸದ ಬಹಳ ವಿಗ್ರಹ । ದನುವನಾಲಿಸು ರಾಯಜನಮೇಜಯ ಮಹೀಪಾಲ ॥ ದಿನಪನುದಯಾಚಲದ ಚಾವಡಿ । ವನೆಗೆ ಬರೆ ಬಲವೆರಡುಗಳ ಗ । ರ್ಜನೆಗಳಲಿ ಬಂದೊಡ್ಡಿದರು ಕಣನೊಳಗೆ ಬಿಗುಹಿನಲಿ ॥೮॥ ಸೂಳು ಮಿಗಲಳ್ಳಿರಿವನಿಸ್ಸಾಳೋಳಿಗಳ ತಂಬಟದ ಕೊಂಬಿನ । ಗಾಳುಗೌರಿನ ಕಹಳೆಗಳ ಕಳಕಳದ ಬೊಬ್ಬೆಗಳ ॥ ಮೇಲವಣೆ ಭುಗಿಲಿಡಲು ಬೊಬ್ಬೆಯ । ಗೋಳುಘೋಷದ ಘಾತಿ ದೆಸೆಗಳ । ಸೀಳೆ ಸಿಡಿಲೆದ್ದೆರಡು ಬಲವೊಡೆವೆರಸಿ ಹಳಚಿದುವು ॥೯॥ ಜೋಳವಾಳಿಯೊಳುಂಡು ಮಾಡಿದ । ಸಾಲವನು ತಲೆಗಳಲಿ ತಿದ್ದಿದ । ರಾಳತರುಭುವಪತಿಗೆ ಹರುಷವ ಮಾಡಿ ತಮತಮಗೆ ॥ ಕಾಲನೂರ್ಕೆದದು ಸುರಸ್ತ್ರೀ । ಜಾಲ ನೆರೆಯದು ಗಗನ ಸುಭಟರ । ಸಾಲೊಳಡಗಿತು ಚಿತ್ರವೆನೆ ಹೊಯ್ದಾಡಿತುಭಯಬಲ ॥೧೦॥ ಬರಿಲಿ ಸಮರಕೆ ಭೀಮ ಸಾತ್ಯಕಿ । ಕರೆಯೆನುತ ಬಿಲುದುಡುಕಿ ರಥದಲಿ । ಸುಂಸತಾಳಧ್ವಜವನೆತ್ತಿಸಿ ಸಮರಥರ ನೆರಹಿ ॥ ಸರಳದೂಗುತ ಮಾರುಬಲವನು । ತರುಬಿನಿಂದನು ಭೀಷ್ಮನಗ್ಗದ । ಬಿರುದ ಸಂಭಾವಿಸುವ ಪಾಠಕಕೋಟಿ ಗಜಬಜಿಸೆ ॥೧೧॥ ಕಾಲಯಮನೋ ಭೀಷ್ಮನೋ ಘಡ । ಮೇಳವೇ ಮಝುಭಾಪುಮಾರಿಯ । ತಾಳಿಗೆಗೆ ತುತ್ತಾದರೋ ತಪವೇಕೆ ತೆಗೆಯೆನುತ ॥ ಆಳು ಮುರಿದುದು ಮೋಹರದಭೂ । ಪಾಲಕರು ಹುರಿಯೊಡೆದು ದೊರೆಗಳ ಮೇಲೆ ಬಿಸುಟರು ವೀರಗಂಗಾತನುಜನುಪಟಳವ ॥೧೨॥ ಸೋಲ ಮಿಗಲೊಳಸರಿದಸುಭಟರ । ಬೀಳಗಡಹಿಸಿ ಕಪಿಯಹಳವಿಗೆ । ಗೋಲನೆತ್ತಿಸಿ ಕೆಲಬಲದ ಮನ್ನೆಯರ ಮೂದಲಿಸಿ ॥ ಆಲಿಯಲಿ ಕಿಡಿಸೂಸೆ ಮೀಸೆಯ । ಮೇಲುದಿ

ರುಹಿದನೌಡುಗಚ್ಚಿ ಕ । ರಾಳರೋಷಮಹೋಗ್ರಧೀರನು ಪಾರ್ಥನಿದಿರಾದ ॥೧೩॥ ತೊಲತೊಲಗು ಕ
ಲಿಭೀಷ್ಮ ವೃದ್ಧರಿ । ಗೆಳೆ ಭಟರಕೂಡಾವುದಂತರ । ವಳಿಬಲವ ಹೆದರಿಸಿದಹೆಕ್ಕಳವೇಕೆ ಸಾಕೆನುತ ॥ ತು
ಳುಕಿದನು ಕೆಂಗೋಲಮಳೆಯನು । ನೆಲನೆದಾವುದು ದಿಕ್ಕದಾವುದು ಸಲೆ ನಭೋಮಂಡಲವದಾವುದೆನ
ಲ್ಕೆ ನರನೆಚ್ಚ ॥೧೪॥ ಪೂತುರೇ ಕಲಿಪಾರ್ಥ ವಿಶಿಖ । ವ್ರಾತಮಯವಾಯ್ತವನಿ ಕಾರ್ಮುಕ । ಭೂತ
ನಾಥನಗರುಡಿಯಲ್ಲಾ ಕಲಿತಮನೆ ನಿನಗೆ ॥ ಆತುಕೊಳ್ಳಾದೊಡೆ ಯೆನುತ ಕಪಿಕೇತನನ ಶರಹತಿಯನಂ
ತಾ । ಮಾತು ಹಿಂಚಿತು ಕಡಿದು ಬಿಸುಟನು ಕೃಷ್ಣಬೆರಗಾಗೆ ॥೧೫॥ ಆ ಸಮಯದಲಿ ರಣದಲೌಕಿದ।
ರಾಸುಯೋಧನಶಲ್ಯ ಸಲೆ ದುಃಶ್ಶಾಸನನು ಕೃಪಶಕುನಿ ಗುರುಸುತರಾದಿಯಾದವರು॥ಸೂಸಿದರು ಸರಳು
ಗಳನರ್ಜುನ ಗಾಸಿಯಾದನು ವಿಲಯಮೇಘದ। ಮೀಸಲಿನಮಳೆಗಾಲವೆನೆ ಮೋಹಿದವು ಶರಜಾಲ ॥೧೬॥
ಕುದುರೆ ಕಂಗೆಟ್ಟುವು ಮುರಾರಿಯ । ಹೃದಯ ಚಂಚಲವಾಯ್ತು ಗಾಲಿಗ । ಳದುರಿದವು ಗರುವಾ
ಯಿಗೆಟ್ಟನು ಮೇಲೆ ಹನುಮಂತ ॥ ಬೆದರಿದರು ಸಾಯಕರು ಪಾಂಡವ । ರದಟು ಮುರಿದುದು ಸುರ
ರು ಚಿಂತಿಸಿ ಕುದಿದರರ್ಜುನಪಕ್ಷಪಾತ ವ್ಯರ್ಥವಾಯ್ತೆನುತ ॥೨೭॥ ತೆರಳುವನೆ ಬಿಲುಗಾರರಿಗೆ ವರ ।
ಗುರುವಲಾ ಕಲಿಪಾರ್ಥನಿನಿಬರ । ಸರಳ ಕಡಿದನು ಕೃಪನನೆಚ್ಚನು ಗುರುಸುತನ ರಥವ ॥ ಹೊರಳಿಗಡಿ
ದನು ಶಲ್ಯನನು ಹೇಮಸಲೆಚ್ಚನು ಕೌರವನಹೇ । ರುರದಲಂಬನು ಹೂಳಿದನು ಸೀಳಿದನು ಸಮರಥ
ರ ॥೧೮॥ ಏರುವಡೆದನು ಶಲ್ಯರಕುತವ। ಕಾರಿದನು ದುಶ್ಶಾಸನನು ಕೈ। ಮೀರಿ ಕೈಕೊಂಡೆಚ್ಚು ಕೊಂ
ದನು ಮತ್ತೆ ಗುರುಸುತನ ॥ ಹೇರಿದುದು ಹಿಳುಕುಗಳು ಮೈಯಲಿ । ಜೋರು ಮಸಗಲು ಭೀಷ್ಮ ಕ
ಡುಕಾ । ಹೇರಿದನು ರೋಷಾಗ್ನಿವಿಷಮಜ್ವಾಲ ಮುಖನಾಗಿ ॥೧೯॥ ಮೊಗದಹೊಗರವಗಡಿಸಿ ಸುಯ್ಲ
ಲಿ । ಹೊಗೆಯ ಹೊದರಂಕುರಿಸೆ ಬಿಡುಗ । ಣ್ಣುಗಳೊಳೊಕ್ಕುದು ಕೆಂಪು ಸೊಂಪಡಗಿತು ಮಹಾ
ದೇವ ॥ ತೆಗೆವೆನರ್ಜುನನಸುವನೆನುತಾ । ಳುಗಳದೇವನು ಭೀಷ್ಮನಡಿಗಡಿ । ಗೊಗುಮಿಗೆಯ ಕೋಪದ
ಲಿ ತೋದನು ಕಣೆಗಳಲಿ ನರನ ॥೨೦॥ ನೊಂದು ಸೈರಿಸಿ ಮತ್ತೆ ಸರಳಿನ । ಸಂದಣಿಯ ಸೈಗರೆದನರ್ಜು
ನ । ನಿಂದುಭರ ಮುಖಭಾಪೆನಲು ಪಸರಿಸಿದನಂಬುಗಳ । ಮುಂದೆ ನಿಲಲರಿಯದೆ ವಿಟಾಳಿಸಿ । ಮಂ
ದಗತಿಯಲಿ ಕೆಲಸಿಡಿದು ಹರಿ। ನಂದನನ ತೆಗೆದೆಸುತ ಬಂದನು ಭೀಷ್ಮ ಮುಳಿಸಿನಲಿ ॥೨೧॥ ಎತ್ತಲೊಲೆ
ದನದೆತ್ತ ಸರಿದನ । ದೆತ್ತ ಜಾರಿದನೆತ್ತಲಡಗಿದ । ನೆತ್ತ ಹಿಂಗಿದನೆತ್ತಲುರುಬಿದನೆತ್ತಲವುಕಿದನು ॥ ಅತ್ತ
ಲತ್ತಲು ಹಯರಥವ ಬಿಡ । ದೊತ್ತಿ ಬೀದಿಗೆ ನೂಕಿ ಪಾರ್ಥನ । ಮುತ್ತಯನ ಸಂಮುಖಕೆ ಬಿಡದೌ
ಕಿದನು ಮುರವೈರಿ ॥೨೨॥ ಕೆರಳಿದನು ಕಲಿಭೀಷ್ಮನರ್ಜುನ । ನುರವಣೆಯ ಗೆಲುವೊಡೆ ಮುರಾರಿಯ ।
ಭರವಸವ ನಿಲಿಸಿದೊಡೆ ಸೋಲುವುದೆನುತ ನಸುನಗುತ ॥ ಹರಿಯ ಸಿರಿವೊಡಲಿನಲಿ ಸರಳಿನ । ಸರಿವಳೆ
ಯ ಸೈಗರಿಯೆ ಜೋಡಿನ । ಸರಪಣಿಯುಲಕ್ಕಾಡಿ ಹಾಯ್ದುವು ಭೀಷ್ಮನಂಬುಗಳು ॥೨೩॥ ಮತ್ತೆ ರಥ
ವನು ಹರಿಸಿ ಭೀಷ್ಮನು । ಹತ್ತೆಬರೆ ಕಟ್ಟಳವಿಯಲಿ ಹಾ । ಮುತ್ತಯನು ಸಿಲುಕಿದನು ಶಿವಶಿವಯೆ
ನುತ ಬಲ ಬೆದರೆ ॥ ಹತ್ತು ಶರವಲಿ ಕೃಷ್ಣರಾಯನ । ಮತ್ತೆ ಮುಸುಕಿದ ಬಹಳ ಭಾರ್ಗವ । ದತ್ತ
ಬಾಣವ ತೊಡಚಿ ಕೃಷ್ಣನ ನೊಸಲ ಕೀಲಿಸಿದ ॥೨೪॥ ಕೆಂಗರಿಯ ಮರಿದುಂಬಿ ತಾವರೆ । ಗಂಗವಿಸಿದ
ವೊಲಸುರರಿಪುವಿನ । ಮಂಗಳಾನನಕಮಲವಲಿ ಶರಜಾಲವಿನಿಡುಗರಿಯ ॥ ತುಂಗವಿಕ್ರಮನಂಬಕಿತ್ತು ಶ।

ದಂಗರಕುತಭಿಷೇಕರೌದ್ರಾ । ಲಿಂಗಿತನು ಬಲುಖತಿಯ ಹಿಡಿದನು ಭೀಷ್ಮನು ಪಟಳಕೆ ॥ ಕೆಂಪಕಾರಿದ ವಾಲಿಗಳು ಪ್ಪ್ರ । ಕಂಪಿಸಿದುದಡಿಗಡಿಗೆ ರೋಷದ। ಪೆಂಪಿನಲಿ ತಗ್ಗಿದನು ಗಂಟಿಕ್ಕಿದವು ಹುಬ್ಬುಗಳು ॥ ಸೊಂಪುಗೆಟ್ಟುದು ಸಿರಿವದನ ಮನ । ದಿಂಪು ಬೀತುದು ಭಕತವೋಹವ । ಲಂಪು ಮಸಗಿತು ಬಿಸುಟು ಕಳೆದನು ಹಯದ ವಾಘೆಗಳ ॥೨೬॥ ಕೆಂಡವಾಗಲಿ ಲೋಕ ದಿವಿಜರ। ಹೆಂಡಿರೋಲೆಯು ಕಳೆದು ಹೋಗಲಿ । ದಿಂಡುಗೆಡೆಯಲಿ ಮೇರು ಮೇದಿನಿ ನಿಲಲಿ ವಿತಳದಲಿ ॥ ಗಂಡು ಗೆಡಿಸಿದರಿಲ್ಲ ದಾನವ ದಿಂಡೆಯರು ಹಲರೆಪ್ಪೊಡನೆ ಮಾ । ಕೊಂಡವರು ಮಾಮಾಪ್ರತಿಜ್ಞೆಯು ತೊಡಕಬೇಡೆಂದ ॥೨೭॥ ಸಕಲ ಜಗದಳಿವಿನಲಿ ರುದ್ರಾ । ತ್ಮಕನು ವಿಷ್ಣುವೆಯೆಂಬನುಡಿ ಸ ।ವ್ಯಕುತವಾಗಲು ತೋರಿದನು ಘನರೋಷ ತಾಮಸವ ॥ ಚಕಿತವದನದ ಕೆಂಪಿನಬುಜಾಂ । ಬಕಯುಗಳನೊಲೆದೊಲೆದು ರೋಷ । ಪ್ರಕಟಪಾವಕ ವಿಸ್ಫುಲಿಂಗಿತಸಾದನಡಿಗಡಿಗೆ ॥೨೮॥ ಎಲೆಲೆಯೆತ್ತಣಧರಣಿಯೆತ್ತಣ । ಕುಲಗಿರಿಗಳೆತ್ತಣದಿಶಾಗಜ । ಕುಲವಿದೆತ್ತಣಸುರರಿದೆತ್ತಣಹರಚತುರ್ಮುಖರು ॥ ಸಲಹು ವಯ್ಯನು ಮುಳಿದು ಲೋಕವ । ಕೊಲೆಗೆಲಸಕಂಘೈಸಿದನು ಹಾ । ಪ್ರಳಯವಾದುದ ಕಾಲದಲಿಯೆಂದವರರೆದೆಯಾರೆ ॥೨೯॥ ನಳಿನ ಪತ್ರೋದಕದವೊಲು ಮಾ । ರೊಲೆದುದಬುಜಭವಾಂಡವಂಬುಧಿ । ಇಳಿದು ಗುಲ್ಫದ್ವಯಸವಾದುದು ಕಮಠನೆದೆಯೊಡೆಯೆ ॥ ನೆಲನಿದನು ಹಿಂದಿಕ್ಕಿ ಕೊಂಬ । ಗ್ಗಳೆಯರಾರೋ ಶಿವಶಿವಾ ಜಗ । ದಳಿವು ಜೋಡಿಸಿತೆನುತ ಕಡುಗಿದನಬುಜಭವನಂದು ॥೩೦॥ ಮುರಮಥನ ಕೆಲ್ಲೈಸಿ ನೋಡಿದ । ನುರುಭಯಂಕರಚಕ್ರವನು ದು । ರ್ದರುಸಧಾರಾಲೂಯಮಾನನಿಶಾಟಚಕ್ರವನು ॥ ತರಳತರಣಿಯ ಚಕ್ರವನು ಸಂಗರವಿನಿರ್ಜಿತ ಚಕ್ರವನು ಭಯ । ಭರಿತನಿರ್ಜರಚಕ್ರವನು ಕಡುಗೋಪ ಕಿಡಿಯಿಡಲು ॥೩೧॥ ನಿಶಿತಧಾರೆಯ ಹೊಳಹು ಸೂರ್ಯನ । ಮುಸುಕಿದುದು ಪರಿಲೂನದೈತ್ಯ । ಪ್ರಸರಗಳ ನಾಳಗಳ ವಿಶ್ರುತರುಧಿರ ಬಂಧಗಳ ॥ ವಿಸುಪಮೊನೆಗಳ ಮುರಿವುಗಳ ನೆಣ । ವಸೆಯ ತೊರಳೆಯ ತೊಂಗಲಿಸಲಂ । ದೆಸೆವಚಕ್ರವ ನೋಡಿದನು ದೈತ್ಯಾರಿ ಕೋಪದಲಿ ॥೩೨॥ ಹರಿದುಪಬ್ಬುವಬಳ್ಳಿವೆಳಗಿನ । ಮುರಿವು ಮಂಡಳಿಸಿದುದು ಶತಸಾ । ವಿರದಿವಾಕರಬಿಂಬವೆಸೆದುದು ಜಳದ ಹೊಯ್ಲಿನಲಿ ॥ ಸುರನರೋರಗಜನದ ಕಂಗಳ। ತೆರಹು ಕೆತ್ತುದು ಬತ್ತಿದುದಧಿಯೊ । ಳುರಿಮಳಲು ಮಾಣಿಕವು ಹುರಿದುದು ಚಕ್ರದೂಷ್ಮಯಲಿ॥೩೩॥ ನರನ ತೇರಿನ ಕುದುರೆಗಳು ಡಾ । ವರಿಸಿತತಿಥಗೆಸೆಗಳಿಗೆಯು ದ । ಳ್ಳುರಿಯ ಸಸಿಯಂತಾದನರ್ಜುನದೇವ ನಿಮಿಷದಲಿ ॥ ಕರಗಿ ಕೊರಗಿತು ಲೋಕ ಕೌರವ । ಧರಣಿಪಾಲರದೆತ್ತಣುರಿಯೋ । ಹರಸ ಕಣ್ಗೆಚ್ಚಲ್ಲಲೇ ಹಾಯನುತ ಹಲುಬಿದರು ॥೩೪॥ ತುಡುಕಿದನು ಚಕ್ರವನು ರಥದಿಂ । ಪೊಡವಿಯಲಿ ಧುಮ್ಮಿಕ್ಕಿದನು ಮು । ತ್ತೊಡನೆ ಬಳಿವರಿದೈದಲೊಡೆಬಿದ್ದವರನೊಡೆತುಳಿದು ॥ ಸುಡುವೆನಹಿತಾನ್ವಯವ ಭೀಷ್ಮನ । ಕಡಿದು ಭೂತಗಣಕ್ಕೆ ಬೋನವ । ಹಡೆವ ನೋಡೆನ್ನಲ್ಲಿ ಮೇಳವೆಯೆನುತ ಸೈವರಿದ ॥೩೫॥ ಶಿವಶಿವೆಂದುದು ನಿಖಿಳಜನ ಕೌ । ರವರು ಕಂಪಿಸೆ ಧಟ್ಟುಗೆಡೆದುದು । ಭುವನದಲಿ ಭಾರಿಸಿತು ಜಯಜಯಜಯಮಹಾಧ್ವಾನ । ತವತವಗೆ ತವಕದಲಿ ಪಾಂಡವ । ರವರು ನಡುಗಿತು ಪಾರ್ಥ ಬಲಗುರ । ವವಚಿದಂತಿರೆ ಮೂಗನಾದನು ಬೆರಳಮೂಗಿನಲಿ ॥೩೬॥ ಹರಿಮುಕುಂದ ಮುರಾರಿಲಕ್ಷ್ಮೀ । ವರನೆ ಕೇಶವ ಯೆನುತ ಚಾಪವ । ಶರವನವನಿಗೆ ಬಿಸುಟು ಮೈಯಿಕ್ಕಿದನು ಕಲಿಭೀಷ್ಮ ॥ ಕರಯುಗವ ಮುಗಿದೆ

ದ್ದು ಮುರಹರ । ಸರಸಿಜಾಂಬಕ ರಾಮ ರಕ್ಷಿಸು । ತರಳನಲಿ ಗುಣದೋಷದೆರಕೆಯೆ ದೇವ ಹೇಳೆಂದ ॥೩೭॥ ದೇವನಿಮ್ಮಯಖ್ಯಾತಿಪರಿಯಂ । ತಾವು ಲಕ್ಷ್ಯವೆ ನಾನು ನೊರಜಿನ । ದೇವಗಿರಿಯಂತರದ ಸಂಭಾವನೆಯೆ ನನ್ನೊಳಗೆ ॥ ದೇವಮುನಿಗಳ ನಗೆಯ ನೋಡದಿ । ದಾವುದುಚಿತವ ಮಾಡಿದಿರಿ ಮಹಿ । ನಾವಲಂಬವ ಮರೆದುದಕೆ ನಗೆ ಬಂದುದೆನಗೆಂದ ॥೩೮॥ ಅಲಸಿಕೆಯಲ್ಲಿ ನೂರುಸಾವಿರ । ನಳಿನಭವರೆಡಗಿದರು ಯೆಂಬ । ಗ್ಗಳಿಕೆಯೆತ್ತಲು ಹುಲುಮುಜರಾವೆತ್ತಲಿದಿರಾಗಿ ॥ ಇಳಿದು ಹರಿತಹುದೆತ್ತಲಿದು ನಂ । ಮಳತೆಗೈದುವುದಲ್ಲ ಲಜ್ಜೆಗೆ । ನೆಲೆಯ ಮಾಡಿದೆ ಹೊಡಿದ್ಯೆ ದುರಿಶಯುವ ತನಗೆಂದ ॥೩೯॥ ರೋಮರೋಮದೊಳಖಿಳಭುವನ । ಸ್ತೋಮ ನಲಿದಾಡುವುದು ಗಡ ನಿ । ಸ್ಸೀಮತನಗಡ ನಾವು ವೈರಿಗಳೆಂದು ಕೋಪಿಸುವ ॥ ಈ ಮರುಳುತನವೆತ್ತ ವೀರಣ । ತಾಮಸಿಕೆ ತಾನರಿಯದದೆ ರಘು । ರಾಮ ರಕ್ಷಿಸು ಬಯಲಿನಾಡಂಬರವಿದೇನೆಂದ ॥೪೦॥ ನೀನು ಖತಿಯನು ಹಿಡಿಯೆನಿನ್ನಸ । ಘಾನತನವನು ಬಲ್ಲ ಯೋಗಿಗ । ಳೇನನೆನ್ನರು ತಮ್ಮೊಳಗೆ ಕೈಯೊಯ್ದು ಮಿಗೆ ನಗುತ ॥ ಮಾನವರು ಕಡುಮೂರ್ಖರೆಂದೇ । ಮಾನಗರ್ವವ ತಡೆದೆ ಸಾಕಿ । ನ್ನೇನ ಪೇಳುವೆ ನಿನ್ನ ತಕ್ಕನು ಬಲ್ಲೆ ಹೋಗೆಂದ ॥೪೧॥ ಶತಪಿತಾಮಹರಡಗರೇ ನಿ । ಮತಿಮುರಿಯೆ ಮೇಣ್ ಭೂವಿಲಾಸ । ಸ್ಥಿತಿಯೊಳೇನು ತ್ಪನ್ನವಾಗವೆ ಬೊಮ್ಮಕೋಟಿಗಳು ॥ ಅತಿಶಯದ ಮಹಿಮಾಸ್ಪದನು ನೀ । ನತಿಗಹನವೆಂಬಳತೆಗಿಂತಿದು । ಕೃತಕವಲ್ಲಾ ದೇವ ಹೇಳೆನ್ನಾಣೆ ಹೇಳೆಂದ ॥೪೨॥ ದೇವ ನೀ ಧಿಟ ಕೊಲುವೊಡೆಯು ತಾ । ಸಾವೆನೇ ತಾನಾವನೆಂಬುದ । ದೇವರರಿಯಿರಲಾ ವೃಥಾಸಂಭಿನ್ನರೋಷದಲಿ ॥ ದೇವನಾಮದ ಜೋಡು ತನ್ನನು । ಕಾವುದೈಮುನಿದೊಡೆಯು ನಿಮ್ಮಗೆ । ನಾವು ಹೆದರೆವು ನಾಮಧಾರಕರೆತ್ತುಳಬಲರೆಂದ ॥೪೩॥ ಭಂಗವಲ್ಲಿದು ನಿನ್ನ ಸುನತೆಗೆ । ಡಿಂಗರಿಗರೇ ಮಿಗಿಲು ನಿನಗೆಯು । ಡಿಂಗರಿಗರೇ ಬಲ್ಲಿದರು ದಾಕ್ಷಿಣ್ಯವೇನಿದಕೆ ॥ ಮಂಗಳಾತ್ಮಕ ಕೇಳು ನಿನ್ನಯ । ಹಂಗನೊಲ್ಲೆವು ಮುಕುತಿಪಥದೊಳ । ಭಂಗವೆಂಡೆಯದಾಳಲ್ಲಿ ನಿಂಮಡಿಯ ಸಿರಿನಾಮ ॥೪೪॥ ಕಳುಹಿಕಳೆವುದು ಖ್ಯಾತಿಯನು ನೀ । ನುಳುಹಿಕೊಂಬುದು ತೇಜವನು ಧಿಟ । ಕೊಲುವ ಮನವೇ ಬಿಸುಡು ಚಕ್ರವನೆನ್ನ ಕಾಯದಲಿ ॥ ಅಳುಕಿ ರೋಮವು ಹುದುದಾದೊಡೆ । ಬಳಿಕತಾ ಡಿಂಗರಿಗನೇ ಯಿಾ । ಕಳಕಳಿಕೆಗಾನಂಜುವವನೇ ದೇವ ಹೇಳೆಂದ ॥೪೫॥ ನಚ್ಚಿ ಸಾಳಿನ ಬಿನ್ನಹಕೆ ಹರಿ । ಮೆಚ್ಚಿ ಮನದೊಳು ನಾಚಿ ಚಕ್ರವ । ಮುಚ್ಚಿದನು ಮುರಿದನು ಕಿರೀಟಿಯ ರಥದಹೊರಗಾಗಿ । ಬೆಚ್ಚಿ ಬೆದರುವ ಸೇನೆಗಭಯವ ಹಚ್ಚಿಕೊಟ್ಟನು ರಾಯಭೀಷ್ಮನ । ನಿಚ್ಚಟದಭಕ್ತಿಯನು ನೆನನೆನೆದೊವೆದನಡಿಗಡಿಗೆ ॥ ಹೋದುದೊಂದಪಮೃತ್ಯು ಲೋಕಕೆ । ತೀದುದಿಲ್ಲಾಯುಷ್ಯ ಮಹದಪ । ವಾದದೇವಂಗಾಗಿ ತಪ್ಪಿತು ಮುಚ್ಚುಮರೆಯೇಕೆ ॥ ಕಾದುಕೊಂಡನು ಭೀಷ್ಮನೀಕವ । ಲೋವರನಕೆರಳಿಚಿವಭಕತಿಯೊ । ಳಾದರಿಸುವುದು ಪುಣ್ಯವೆಂದನು ಕಮಲಭವ ನಗುತ ॥೪೬॥ ನಡುಗುವರ್ಜುನ ದೇವನನು ತೆಗೆ । ದಡಿಗಡಿಗೆ ತಕ್ಕೈಸಿ ಭೀತಿಯ । ಬಿಡಿಸಿ ವಾಘೆಯ ಕೊಂಡುತುರಗವನೆಡಬಲಕೆ ತಿರುಹಿ ॥ ನಡಸಿದನು ಕಾಳಗಕೆ ಬಳಿಕವ । ಗಡಮುರಾಂತಕ ರಥವ ಚಕ್ರವ । ತ್ರುಡುಕನೆಂದಸ್ತಮಯಗಿರಿಯನು ದಿನಪ ಮರೆಗೊಂಡ ॥ ... ... ॥೪೮॥

ಅಂತು ಸಂಧಿ ೫ ಕ್ಕೆ ಪದ ೫೪೮ ಕ್ಕಂ ಮಂಗಳಮಸ್ತು.

ಆರನೇಸಂಧಿ.

||ಸೂಚನೆ|| ರಾಯಕಟಕದೊಳಿರಲು ಭೀಷ್ಮನ | ಸಾಯಬೇಕೆಂದೊಡಬಡಿಸಿ ಕಮ | ಲಾಯತಾಂಬಕ ಸಹಿತ ಪಾಳಯಕರಸ ನಡೆತಂದ ||

||ಪದ|| ಕೇಳು ಜನಮೇಜಯಧರಿತ್ರೀ| ಪಾಲ ದಿನವೊಂಬತ್ತಾಯ್ತು ಭೀಷ್ಮನ| ಕಾಳಗದೊಳಲ್ಲಿಂದ ಮೇಲಣವರಕಥಾಮೃತವ|| ಆಲಿಸುವುದೈ ಮೂಡಣಾದ್ರಿಯ| ಮೇಲೆ ಕೆಂಪೆಸೆಯಿತ್ತು ಘನನಿ| ಸ್ಸಾಳವೊಡೆಬಿರಿದವು ನೃಪಾಲರ ಕಟಕವೆರಡರಲಿ ||೧|| ಹಲ್ಲಣಿಸಿ ಹರಿತಂದು ಮೋಹರ| ವಲ್ಲಿಗಲ್ಲಿಗೆ ನಿಂದುದೆರಡರ| ಘುಲ್ಲಣೆಯಗಾಯದ ಗಡಾವಣೆ ಮೀರಿಗಾಡಿಸಿತು|| ಕೆಲ್ಲಗೆಡೆದವು ಕರಿಗಳಸುಗಳ| ಚೆಲ್ಲತಳಿತವು ತೇಜಿಗಳು ರಥ | ವೆಲ್ಲ ಹುಡಿಹುಡಿಯಾಯ್ತು ದಳ ನಿಸ್ಸಾರವಾಯ್ತೆಂದ||೨|| ಅಳಿವುದಾದಿವಸದಲಿ ಪಾಂಡವ | ಬಲದೊಳಗಣಿತಸೇನೆ ಭೀಷ್ಮರು | ಫಲುಗುಣರು ಕಾದಿದರು ದಿನಕರನಪರಜಲನಿಧಿಗೆ || ಇಳಿಯೆ ತೆಗದವು ಬಲವೆರಡು ಮೂ | ಡಲುಮುಗುಳೆ ತಾ ಕೆಂಪೆಸೆಯೆ ಕದನವ | ಕಳನ ತುಂಬಿತು ಮತ್ತೆ ಕೌರವಪಾಂಡವರಸೇನೆ ||೩|| ಬಿದ್ದುದಗಣಿತಸೇನೆ ಪಡುವಲು | ಹೊದ್ದಿದನು ರವಿ ಮತ್ತೆ ಮೂಡಣ | ಗದ್ದುಗೆಯ ವೆಂಠಣಿಸಿದನು ಕುಮುದಾಳಿ ಟೆಂಠಣಿಸೆ || ಎದ್ದುದಮರುತ್ತರಣ ಕೃತಾಂತಗೆ | ಬಿದ್ದನಿಕ್ಕಿದರಥಟರಬುಧಿಯೊ | ಳದ್ದು ಸೂರ್ಯನಬಿಂಬವೆಸೆದುದು ಮೂಡಣಾದ್ರಿಯಲಿ ||೪|| ಏಳನೆಯ ದಿನವೀಮಹಾರಥ | ರೂಳಿಗವೆ ಬಲುಹಾಯ್ತು ಕುರುಭೂ | ಪಾಲಕನ ತಮ್ಮಂದಿರಳಿದುದು ದಿವಸವೆಂಟರಲಿ || ಕೋಲಮೊನೆಯಲಿ ಕೃಷ್ಣರಾಯನ | ನೋಲಗಿಸಿ ಮೆಚ್ಚಿಸಿದನಾಕ | ಟ್ಟಾಳುಭೀಷ್ಮನ ದಿವಸವೊಂಭತ್ತಾಯ್ತು ಸಮರದಲಿ ||೫|| ಇರುಳು ಕೃಷ್ಣನಮನೆಗೆ ಬಂದನು | ಧರಣಿಪತಿ ಮಗುಡದಲಿ ನಿಜಸೋ | ದರರುಸಹಿತ ಮುರಾರಿಗಾನತನಾಗಿ ಕೈಮುಗಿದು || ಸುರನದೀಸುತನಖಿಳಸೇನೆಯ | ನೊರಸಿದನು ನಮ್ಮಲ್ಲಿ ಖ್ಯಾತಿಯ | ಧರಿಸಿದನು ಜಯವಧುವ ವರಿಸಿದ ದೇವ ಕೇಳೆಂದ ||೬|| ನೆರವಣಿಗೆಗುಂದಿತ್ತು ಬಲ ಕೈ | ಮರೆದರದಟರು ಬಿರುದಭಟರಿಗೆ | ಬೆರಗು ಪೊಕ್ಕುದು ಹೂಣಿಗರ ಹೋರಟೆಗಳಳುಕಿದವು || ನೆರೆಹಸಿದಹುಲಿಯಂತೆ ಸಲೆ ಕೈ | ಪರಿದದಿಗ್ಗಜದಂತೆ ಚಿತ್ರದ | ಉರುವಕೇಸರಿಯಂತೆ ಮೆರೆದಿದೆ ನಮ್ಮ ಬಲವೆಂದ ||೭|| ಹಾರಿದವು ಹೆಸರುಗಳಭಂಗದ | ಸೂರೆಗಳ ಕಟ್ಟಿದರು ತಲೆಗಳ ಮಾರುಗಳು ಮರಳಿದವು ರಣರಾಣಿಯರ ತಡೆಯೆಂದು || ದೂರಲರಿಯನು ಸುಭಟರಿಗೆ ಮನ | ಬೇರೆ ನುಡಿಬೇರಾಯ್ತು ಕದನದೊ | ಳೀರಿತಿಂಗುರಿಗೊಂಡು ತಣಿತುದು ನಮ್ಮ ಬಲವೆಂದ ||೮|| ಬಲುಶಿಳೀಮುಖರವಕೆ ಪಟುಭಟ | ರಳುಕಿದರು ವಿರಹಿಗಳವೊಲು ಸಂ | ಮಿಳಿತಶಾಸ್ತ್ರಧ್ವನಿಗೆ ಸೆಡೆದರು ಮೂರ್ಖರಂದದಲಿ || ತಳಿತಬಲಶತಕೋಟಿಗಿದಿರಾ | ಗಳಿದರದ್ರಿಗಳಂತೆ ಹರಿಪದ | ವಳಯವಿದಳಿತವಾಯ್ತು ಮೇಘವ್ರಾತದಂದದಲಿ ||೯|| ರಣರಹಸ್ಯಜ್ಞಾನಿಗಳು ಮನ | ದಣಿದರಿಂದ್ರಿಯವಶಕೆ ರಿಪುಭಟ | ಗಣವಿದಾರಣಕರ್ತವಿದ್ಯಾವೀತರಾಗಿಗಳು || ಸೆಣಸಿನಲಿ ಸಮದರ್ಶಿಗಳು ಧಾ | ರುಣಿಯಪತಿಗಳುರಾಜಸೇವಾ | ಪ್ರಳಯಮೀಮಾಂಸಾಧಿ ಮೂಢರು ನಮ್ಮ ಭಟರೆಂದ ||೧೦|| ಹರಿದರಿಂದಿನದಿನಕೆ ಶತಸಾ | ವಿರಮಹೀಶರು ಯಮನ ನಗರಿಗೆ| ಸರಿದುದುಳಿದರ ವೀರತನ ಗಾಂಗೇಯನುಪಟಳಕೆ || ಅರಿ

ಪಯೋನಿಧಿವೆಡಬನನು ಗೆಲ । ಲರಿದು ಜೀಯ ಮುಕುಂದ ನೀನೇ । ಕರುಣಿಸೈ ವನವಾಸವೋ ನಮ
ಗೇನುಗತಿಯೆಂದ ॥೧೧॥ ಮುಗುಳುನಗೆ ನಸುಸೂಳೆಯ ಭೀಮಾ । ದಿಗಳಿಗೆಂದನು ಕೃಷ್ಣನರಸನ ।
ಸೊಗಸು ಬನದಲಿ ಬರಿಯುವನವೀಕದನಕೇಳಿಯಲಿ ॥ ವಿಗಡತನವಂತಿರಲಿ ಭೀಷ್ಮನ । ಬೆಗಡುಗೊಳಿಸ
ಲು ಹರನಹವಣ । ಲ್ಲಿಗಣಿತನ ಸಾಮುದಲಿ ಮುರಿಯಲುಬೇಕು ನಮಗೆಂದ ॥೧೨॥ ದಂಡನಾಯಕತರು
ಬೆ ರಣದಲಿ । ಖಂಡಿಸುವುಬಟರಾದರಿಪುಗಳ । ದಿಂಡುಗೆಡಹುತ ತೋರಿವಣಿದೊಡೆ ಜೈಸಿ ಬದುಕುವೆ
ವು ॥ ಚಂಡಬಲನೀಭೀಷ್ಮ ಮುನಿದೊಡೆ । ಖಂಡಪರಶುವಗಣಿಸನೆನೆ ಕರ । ದಂಡನಾಥನ ಮತಕೆ ನೃ
ಪತಿ ಹಸಾದವೆನುತಿರ್ದ ॥೧೩॥ ಇರುಳುಗುಪ್ತದಲವನಿಪತಿ ಸೋ । ದರರುಮುರರಿಪುಸಹಿತ ಬಂದನು।
ಸುರನದೀನಂದನನ ಮಂದಿರಕಾಗಿ ವಹಿಲದಲಿ॥ ಕರೆದು ಪಡಿಹಾರರಿಗೆ ಬಂದುದ। ನರುಹಲವದಿರು ಹೊ
ಕ್ಕು ಸಮಯುವ । ನರಿದು ಭೀಷ್ಮಂಗೀಹದನ ಬಿನ್ನಹವ ಮಾಡಿದರು ॥೧೪॥ ಬಂದನೇ ಧರ್ಮಜನು ಕ
ಟಕಟ । ಕೊಂದನೇ ಕೌರವನನಿನ್ನೇ । ನೆಂದು ಮನದಲಿ ಮರುಗಿ ಮೌನದೊಳಿದ್ದ ನಿಮಿಷದಲಿ ॥
ಮಂದಿಯನು ಹೊರಗಿರಿಸಿ ಬರಹೇ । ಳೆಂದೊಡಾಗಲೆ ಕೃಷ್ಣಕುಂತೀ । ನಂದನರು ಬರಲಿದಿರುವಂದ
ನು ಭೀಷ್ಮವಿನಯದಲಿ ॥೧೫॥ ಅರಸಿ ಬರಲಾಪಾಯನಿಕರಕೆ । ತೆರಹುಗುಡದನಿಜಸ್ವರೂಪನು । ಕುರು
ಹುಗೊಂಡೊಡೆ ಮಂದಿವಾಳವೆ ದೇವ ನೀನೊಲಿದು ॥ ಅರಸಿಕೊಂಡ್ಯೆತರಲು ನಾನೇ। ಸರವಸಾಗಲಿ ನಿ
ಮ್ಮಭೃತ್ಯರ । ಮೆರೆವಪಂಬಿಯಿದು ಕೃಷ್ಣ ಜಯಜಯಯೆನುತ ನಿಡುಗೆಡೆದ॥೧೬॥ ನಗುತ ಹರಿ ಗಂಗಾ
ಕುಮಾರನ । ನೆಗಹಿದನು ಬಳಿಕಿವರು ರತುನಾ । ಳಿಗಳ ಕಾಣಿಕೆಯಿತ್ತು ಮೈಯಿಕ್ಕಿದರು ವಿನಯದಲಿ ॥
ತೆಗೆದು ಬಿಗಿಯಪ್ಪಿದನು ಯಮಜಾ । ದಿಗಳ ಮನ್ನಿಸಿ ವೀಳೆಯವನಿ । ತ್ತೊಗುಮಿಗೆಯ ಹರುಷದ
ಲಿ ಹೊಂಪುಳಿವೋದನಾಭೀಷ್ಮ ॥೧೭॥ ಅರಿಯ ಬೀಡಿದು ರಾಯನನುಜನು । ದುರುಳ ರುಚಿತಾನುಚಿ
ತಗೇಡಿಗ । ಳಿರುಳು ದೊರೆಗಳು ನೀವು ಕಾಲೋಚಿತದಲ್ಲೈತಹರೆ ॥ ಹರಿಯ ಬಲುಹುಂಟಾದೊಡೆಯು
ಧಿ । ಕ್ಕರಿಸಲಾಗದು ರಾಜಮಂತ್ರವ । ನರಸ ಸಾಕಿನ್ನೇನು ಬಿನ್ನಹವಮಾಡು ನಿಜಮತವ ॥೧೮॥ ಅರಿಯ
ನುಚಿತವ ನಮ್ಮಭಾರದ। ಹೊರಿಗೆ ನಿಮ್ಮದು ಕೃಷ್ಣನದು ನಾ । ವರಿದೊಡೆಯು ಮೈಮುರಿದೊಡೆಯು
ರಕ್ಷಕರು ನೀವೆಮಗೆ ॥ ಅರಿಯನೇನುವನೆಂದು ಸಲಹಲು । ಮರೆವಳೇ ಬಾಲಕನ ತಾಯ್ಮಾ । ವುರುವ
ವಜ್ರದ ಜೋಡು ನೀವಿರಲಂಜಲೇಕೆಂದ ॥೧೯॥ ಎಮಗೆ ಜಯವೆಂತಹುದು ರಾಜ್ಯ । ಭ್ರಮೆಯ ರಾಜ
ಸಬುದ್ಧಿಗಳ ವಿ । ಕ್ರಮವಿಹೀನರು ನಾವು ನೀವ್ ತ್ರೈಲೋಕ್ಯವಿಜಯಿಗಳು ॥ ಸಮರ ಸೋತುದು ನ
ಮ್ಮ ಸುಭಟರು । ಯಮನಸೇವಕರಾಯ್ತು ಕೃಪೆಯಿಂ । ದೆಮಗೆ ನಿಮ್ಮಭಿಮತವ ಬೆಸಸುವುದೆಂದನಾ
ಭೂಪ ॥೨೦॥ ಆಕೆವಾಳರು ಭೀಮಪಾರ್ಥರು। ನೂಕದಾಹವ ವುಳಿದಸೇನಾ। ನೀಕದಿಂ ನಿಮ್ಮಿದಸವೆದು
ದು ರಾಜಕುಲಸಹಿತ ॥ ಸಾಕುವೊಡೆ ಮೇಣ್ಮುನಿದುಕೊಲುವೊಡೆ । ಬೇಕುಬೇಡೆಂಬವರದಾರೆನೆ। ಕಾಕನಾ
ಡೆನು ಬೆಸಸು ನಿಮ್ಮಭಿಮತವನೆನಗೆಂದ ॥೨೧॥ ತೀದುದೆಮ್ಮಯ ಸೇನೆ ನಸುಸೊ । ಪ್ಪಾದುದಿಲ್ಲರಿಸೇ
ನೆ ನಿಮ್ಮನು । ಕಾದಿಕೊಲುವೊಡೆ ಮೊಲೆಯನೂಡಿದತಾಯಿ ಜಾಹ್ನವಿಯೆ॥ ಕಾದಿದೆವು ಕಟ್ಟಿದೆವು ಗೆಲಿದೆ
ವು। ಮೇದಿನಿಯನಿನ್ನೇನು ಮುನ್ನಿನ। ಹೋದವನವಾಸಕ್ಕೆ ನೇಮವ ಕೊಟ್ಟು ಕಳುಹೆಂದ ॥೨೨॥ ಮನ್ನಿ
ಸ ವೊಡೀವುಭಯರಾಯರು। ನಿನ್ನವೊಮ್ಮಂದಿರುಗಳಿದರೊಳು। ನಿನ್ನ ಕುಣಿಕೆಯಲಿಹುದು ಕುಂತೀಸುತರ

ಜೀವನವು॥ ನಿನ್ನನೇ ನಂಬಿಹರು ನೀನೇ। ಮುನ್ನ ಶಿಶುತನದಿಂದ ಸಲಹಿದ। ಮನ್ನಣೆಯ ನೀ ಬಲ್ಲೆಯೆಂ
ದನು ದಾನವಧ್ವಂಸಿ ॥೨೩॥ ಎನಲು ಮೊಮ್ಮಂದಿರುಗಳೆಳಲಿನ । ಘನತೆಯನು ಕಿವಿಗೊಟ್ಟು ಕೇಳಿದ್ದು।
ನನೆದುದಂತಃಕರಣ ಕಂಬನಿದುಂಬಿ ದುಗುಡದಲಿ ॥ ತನಗೆ ಸಾವು ಸಮೀಪ ಮಗನೇ । ನಿನಗೆ ಭಯಬೇ
ಡಿನ್ನು ಕುರುಪತಿ । ದನುಜವೈರಿಗೆ ತಪ್ಪಿದಂದೇ ನಿಮಗೆ ಜಯವೆಂದ ॥೨೪॥ ಕೊಂದೆನಗಣಿತರಾಯರ
ನು ತಾ। ಮಂದಿಯನು ನಿಮಗಾವು ಮುನಿಯೆವು। ಬಂದು ಪಾರ್ಥನ ರಥವ ತಡೆದೊಡೆ ನೀವು ಧೃತಿಗೆ
ಡದೆ ॥ ಇಂದಿನುದಯದಲಾ ಶಿಖಂಡಿಯ । ತಂದು ನಿಲಿಸಿದೊಡೆಮ್ಮ ತನುವನು । ಹಿಂದುಗಳೆಯದೆ
ನಿಮಗೆ ತೆರುವೆನು ಕಂದ ಕೇಳೆಂದ ॥೨೫॥ ಗಂಡುತನ ತಾನೆರವು ನಿಮ್ಮತಿ। ಖಂಡಿಯನು ಮುಂದಿರಿಸ
ಲಾತನ । ಕಂಡು ನಾನ್ನಾಳಗವಮಾಡೆನು ಕೈದುಗಳ ಬಿಸುಟು ॥ ಚಂಡಿತನವನು ಮಾಡು ಮಿಗೆ ಕೈ ।
ಕೊಂಡು ಫಲುಗುಣನೆಸಲು ತನುವನು । ದಿಂಡುಗೆಡಹಲು ಬಳಿಕ ಗೆಲುವಿರಿ ಕೌರವೇಶ್ವರನ॥೨೬॥ಎನ
ಲು ಶಿವಶಿವಶಿವ ಮಹಾದೇ । ವೆನುತ ಕಿವಿಗಳ ಮುಚ್ಚಿದನು ಕಂ । ಬನಿಯ ಬೆರಳಲಿ ಮಿಡಿದು ನೊಂ
ದನು ಪಾರ್ಥ ಹೃದಯದಲಿ ॥ ಎನಗೆ ಜಯವಾಯಿತ್ತದು ಕೃತಾರ್ಥರು । ಜನದಲೆಮ್ಮವೊಲಾರು ಬಳಿ
ಕೇ । ನೆನಗೆ ನಿಂಮವೊಲಾರು ಹಗೆಗಳು ಜಗದೊಳುಂಟೆಂದ ॥೨೭॥ ಅಳಿವನಪಿಯೊಳಯ್ಯನೆಲ್ಲಿಂ ।
ಬಳಿಕ ಭೀಷ್ಮನ ತೊಡೆಯ ತೊಟ್ಟಿಲಿ । ನೊಳಗೆ ಬೆಳೆದೆವು ಸಲಹಿದನು ಧೂಳಾಟವೊದಲಾಗಿ ॥ ಬಳಿಯ
ಲೆರಕೆಗಳೆಮಗೆ ಭಾವಿಸಿ । ನೆಲನ ಕೊಟ್ಟನು ಭೀಷ್ಮನೀತನ । ಕೊಲೆಗೆ ಬಯಸುವಮನವಿದೆಂತುಟೊ
ಕೃಷ್ಣ ಹೇಳೆಂದ ॥೨೮॥ ಈತನನು ಕೊಲಲಾವು ಭುವನ । ಖ್ಯಾತರಹೆವೈ ಯಿಾಗ ಸುಡುಸುಡು ಭೂತ
ಳವನೀಬೊಡ್ಡಿಗೋಸುಗ ಸುಟ್ಟು ಸುಕೃತವನು ॥ ಘಾತಕರು ಪಾತಕರು ತೆಗೆತೆಗೆ । ಯೋತರವದಿರು
ಪಾಂಡುತನಯರ । ಮಾತನಾಡದಿರೆಂಬಕೀರ್ತಿಯ ನೋಂತುದಿಲ್ಲೆಂದ ॥೨೯॥ ನಿಲ್ಲು ಫಲುಗುಣ ಕೇ
ಳು ಹೊಲ್ಲಹ । ವಲ್ಲ ಸಕಲಕ್ಷಾತ್ರಧರ್ಮವ । ಬಲ್ಲೆ ನೀನೇನಜ್ಞನೇ ನೃಪನೀತಿಬಾಹಿರನೆ ॥ ಎಲ್ಲಿಯಪ
ಕೀರ್ತಿಗಳು ಕೀರ್ತಿಗ । ಳೆಲ್ಲ ವಿಧಿವಶ ನಿಂನಕಾರಣ । ವಿಲ್ಲ ನೀಕೊಲಲೇಸರಾತನು ಪಾರ್ಥ ಹೇಳೆಂದ
॥೩೦॥ ಯಂತ್ರಿ ಮಿಡಿದೊಡೆ ಕಾದಿ ಬೀಳ್ವವು । ಯಂತ್ರಮಯರೂಹುಗಳು ವಧೆಯಾ । ಯಂತ್ರಿಗೋ
ಹಾಹೆಗಳಿಗೋ ನೀ ಹೇಳು ನಿಶ್ಚಯವ ॥ ಯಂತ್ರಿ ಕೃಷ್ಣನು ಸಾವು ನೀವೀ । ತಂತ್ರಸಕಲ ಚರಾಚರಂ
ಗಳು । ಯಂತ್ರರೂಹುಗಳಲ್ಲಿ ಕಾರಣವಿಲ್ಲ ಕೇಳೆಂದ॥೩೧॥ಒಂದು ಮುಖದಲಿಜಗವ ಹೂಡುವ। ನೊಂ
ದುಹೆಸರಲಿ ಜಗವ ಸಲಹುವ । ನೊಂದು ಪರಿಯ ಯುರುಹುವನುನಯನಾಗ್ನಿಯಲಿ ಜಗವ ॥ ಕೊಂದ
ಹಗೆಯಲ್ಲೀತ ಸಲಹಿದ। ನೆಂದು ಮೋಹಿತನಲ್ಲ ಪರಮಾ। ನಂದಹಮಯನಿದಕೆ ಕಾರಣವಿಲ್ಲ ನಿನಗೆಂದ
॥೩೨॥ ಕಾವೊಡೀತನ ಕರುಣ ಮುನಿದೊಡೆ। ಸಾವೆವೀತನ ಕೈಯಬಾಯಲಿ । ನೀವು ತಾವೀಮತ್ತ ಕಲ
ಬರು ಮುನಿದೊಡಂಜುವೆನೆ ॥ ನಾವು ಹೇಳಿದಮಾತು ನಿನಗಿ । ನ್ನಾವಭಯವಿಲ್ಲಿನ್ನು ಚಿತ್ತದ। ಭಾವಶು
ದ್ಧಿಯೊಳೆಮ್ಮ ನಂಬಿರಿ ಹೋಗಿ ನೀವೆಂದ॥೩೩॥ ಹರುಷ ಬಲಿದುದು ಮನದಸಂಶಯ ಹರೆದುದಾಹವ
ವಿಜಯವಾರ್ತೆ । ಹರಹಿನಲಿ ಹೊರೆಯೇರಿ ಹೊಂಪುಳಿವೋದನಡಿಗಡಿಗೆ ॥ ಸುರನದೀನಂದನನು ಹರ
ಸಿದ । ಹರಕೆಯನು ಕೈಕೊಂಡು ಬೀಳ್ಕೊಂ । ಡರಸ ಮುರರಿಪುಸಹಿತ ಬಂದರುತಮ್ಮಪಾಳಯಕೆ॥೩೪॥

ಅಂತು ಸಂಧಿ ೬ಕ್ಕಂ ಪದ ೪೨೩ಕ್ಕಂ ಮಂಗಳಮಸ್ತು.

ಏಳನೆಯ ಸಂಧಿ.

॥ಸೂಚನೆ॥ ಬೆಗಡುಗೊಂಡರು ದ್ರೋಣಶಲ್ಯಾ । ದಿಗಳು ಪಾರ್ಥನ ವಿಕ್ರಮಾನಳ। ಹೊಗೆದು ಸುರಿದುದು ರಾಯಕೌರವಸೈನ್ಯಸಾಗರವ ॥

॥ಪದ॥ ಸೂಳು ಮಿಗಲಳ್ಳಿರಿವಘನನಿ । ಸ್ಸಾಳತತಿ ಮುಂಜಾವದಲಿ ಹೆ । ಗ್ಗಾಳೆ ಮೊರೆದವು ಕುಣಿದು ಗಜಬಿದವಾನೆಕುದುರೆಗಳು ॥ ತೂಳುವರಿಗಳಭಟರ ಹಾಳಾ। ಹಾಳಿ ದೆಸೆಗಳ ಬಗಿಯೆ ಮೂಡಣ । ಶೈಲವಂಚದಲುಪ್ಪವಡಿಸಿದ~~ನಬುಜಿನೀ~~ರಮಣ ॥೧॥ ಉಳಿವುಸಗಿ ತರಹರಿಸಿ ಖುರದಲಿ । ನೆಲನ ಕೆರೆದವು ಕಡುಗುದುರೆ ಹಿಂ । ದೊಲೆದು ಕಂಭವ ಮುರಿದು ಮಿಕ್ಕವು ಸೊಕ್ಕಿದಾನೆಗಳು ॥ ಹೊಳೆಹೊಳೆವಹೊಂದೇರು ನೆರೆದವು । ತಳಪಟಕೆ ಹೊದರೆದ್ದು ಗಗನದ । ಹೊಲಿಗೆ ಬಿಡೆ ಬೊಬ್ಬಿರಿದು ಕವಿದುದು ವಿಗಡಪಾಯದಳ ॥೨॥ ಲಲಿತಮಂಗಳಪಾಠಕರ ಕಳ । ಕಳದಲುಪ್ಪವಡಿಸಿದನವನಿಪ । ತಿಲಕನನುಜರುಸಹಿತ ವೈದಿಕಕ್ರಿಯೆಯನನುಕರಿಸಿ ॥ ನಳಿನನಾಭನ ಮಧುರವಾಣಿಯ । ಉಳಿತಪರಮಾಶೀರ್ವಚನಪರಿ । ಕಲಿತಕವಚಿತಕಾಯ ಪಾಂಡವರಾಯ ಹೊರವಂಟ ॥೩॥ ಗಗನಸರಸಿಯ ಪುಂಡರೀಕಾ । ಳಿಗಳೊ ವಿಮಲಚ್ಛತ್ರಪಙ್ಕ್ತಿಯೊ । ಗಗನಗಂಗಾನದಿಯ ಕಾಲುವೆಯೋ ಪತಾಕೆಗಳೋ ॥ ಗಗನಕುಂಭಿಯುಗುಳದಕೆಲಚೌ। ರಿಗಳೊ ಸೀಗುರಿಗಳೊ ಕೃಪಾಣವೊ । ಗಗನಪೀವರತಾಳಪತ್ರಾವಳಿಯೊ ಹೊಸತಾಯ್ತು ॥೪॥ ಕುಬ್ಬಿಡುವ ಬೊಬ್ಬೆಗಳು ಬಿಲುದನಿ । ಗಬ್ಬರಿಸಿದವು ನಭವ ಗಜಹಯ । ದಬ್ಬರಣೆ ಗರುವಾಯಿಗೆಡಿಸಿತು ಸಿಡಿಲಸಡಗರವ ॥ ಉಬ್ಬಿ ಬಿರಿದುದು ನಿಖಿಲವಾದ್ಯದ। ನಿಬ್ಬರದ ನಿಡುದನಿಗೆ ಜಲನಿಧಿ। ಗಬ್ಬವಿಕ್ಕಿತು ಸೈನ್ಯಜಲಧಿಯ ಬಹಳ ಗರ್ಜನೆಗೆ ॥೫॥ ಕುಣಿದು ಮುಂಚಿತು ಸೇನೆ ಸಮರಾಂ । ಗಣದ ಕೇಣಿಯಬಾಲಕರು ಸಂ । ದಣಿಸಿ ಹೊಕ್ಕರು ಜಯವಧೂಟೀವಿರಹಕಾತುರರು ॥ ಗಣನೆಯಿಲ್ಲದಗಜಹಯದ ಭಾ । ರಣೆಯ ಭಾರಿಯಭಟರೊಡನೆ ಧ । ಟ್ಟಣೆಯಮೇಲೆ ಮಹೀಶ ಪೊಕ್ಕನು ಕಾಳಗದ ಕಳನ ॥೬॥ ಉದಯವಾಗದಮುನ್ನ ಕಳನೊಳು । ಹೊದರುಗಟ್ಟದವೈರಿಸೇನೆಯ । ಹದನಿವರಪಾಳಯಕೆ ಬಂದುದು ದಳದಕಳಕಳಿಕೆ ॥ ಸದೆದುದನಿಬರ ಕಿವಿಯನೊಡೆತುಂ । ಬಿದವು ನಿಸ್ಸಾಳೌಘ ದಿಕ್ಕಿನ । ತುದಿಯ ತಿವಿದವು ಮೀರಿ ಗಳಹುವ ಗೌರುಗಹಳೆಗಳು॥೭॥ ಅರಸನುಪ್ಪವಡಿಸಿದನವನೀ। ಶ್ವರವಿಹಿತಸಂಧ್ಯಾಭಿಧಾನದಿ । ವರಮಹೀಸುರವರ್ಗಸತ್ಕಾರವನು ನೆರೆಮಾಡಿ ॥ ಸುರನದೀಜನ ಮನೆಗೆ ಬ್ರಗಲಂ । ದಿರುಳ ಕಡೆಯಲಿ ನೃಪಮತವ ವಿಸ್ತರಿಸಿ ವಿರಚಿಸಿ ಜೋಡತೊಟ್ಟನು ರಥಕೆ ಮಂಡಿಸಿದ ॥೮॥ ಇಂದಲೇ ಪಾಂಡವರ ಪರಮಾ । ನಂದ ಚಿತ್ತಕೆ ಧೂಮದರ್ಶನ । ವಿಂದಲೇಕೌಂತೇಯರಿಗೆ ಸುರಪುರದವ್ಯಾಹಾಳಿ ॥ ಇಂದಲೇ ಪವನಜನ ಪಾರ್ಥನ । ಸಂದವಿಕ್ರಮವಿಷಕೆ ಗಾರುಡ । ~~ವಿಂದೆನುತ ಬೊಬ್ಬಿರಿದು~~ ನೆರೆದುದು ಸಕಲಕುರುಸೇನೆ ॥೯॥ ತರುಣರವಿಗಳ ಪಙ್ಕ್ತಿಗಳ ಸಂ । ವರಿಸದಿರರೆನೆ ಮಾಣಿಕಂಗಳ ತ । ರತರದಕೀಲಣದ ಹೊಂಗೆಲಸದ ಸುರೇಖೆಗಳ ॥ ಕೊರಳಹಾರಾವಳಿಯ ರಶ್ಮಿಯ । ಹೊರಳಿಗಳ ಹೊದಕೆಗಳ ಕವಚದ । ಲರಿದಿಶಾಪಟಭೀಷ್ಮ ಮೆರೆದನು ರಥದಮಧ್ಯದಲಿ ॥೧೦॥ ವೀರಸೇನಾಪತಿಯ ಸನ್ನೆಗೆ । ಭೂರಿಬಲ ಹಬ್ಬಿದುದು ದಿಕ್ಕುಗ । ಳೋರಣದಿ ಹಿಗ್ಗಿದವು ತಗ್ಗಿದರಹಿಪಕೂರುಮರು ॥ ಚಾರುಚಮರದ

ಸಿಂಧಸತ್ತಿಗೆ । ಯೋರಣದ ಕಲ್ಪಾಂತಮೇಘದ । ಭಾರಣೆಯನೊಡ್ಡೈಸಿ ದಟ್ಟೈಸಿತ್ತು ಕುರುಸೇನೆ
॥೧೧॥ ಭುವನಗರ್ಭಿತವಾಯ್ತು ತಲೆ ಮಾ । ಧವನ ಜಠರದವೋಲು ನೆರೆಭಾ । ಗವತರಂತಿರೆ ವಿಷ್ಣು
ಪದ ಸಂತಪ್ತತನುವಾಯ್ತು ॥ ರವಿಯವೊಲು ಶತಪತ್ರಸಂಘಾ । ತವನು ಪಾದದಲಣೆದು ಕೆಂದೂ ।
ಳವಗಡಿಸೆ ಕುರುಸೇನೆ ಕೈಕೊಂಡುದು ರಣಾಂಗಣವ ॥೧೨॥ ಹೊಗರೊಗುವ ಝಳಪಿಸುವಡಾಯುಧ ।
ನೆಗಹಿ ತೂಗುವಲೌಡಿಗಳ ಮೊನೆ । ಝುಗಝುಗಿಸೆ ಝಾಡಿಸುವ ಸಬಳದ ತಿರುಹುವಂಕುಶವ ॥ ತೆಗೆದೊಗು
ವಬಿಲ್ಲುಗಳ ತಿರುವಿನೊ । ಳುಗಿವ ಕೂರಂಬುಗಳ ಸುಭಟಾ । ಳಿಗಳೊಡನೆ ಗಾಂಗೇಯ ಪೊಕ್ಕನು ಕಾ
ಳಗದ ಕಣನ ॥೧೩॥ ವಿತತವಾಜಿವ್ರಜದ ಘನಹೇ । ಷಿತದ ಘುಲ್ಲಣೆ ಗಜದಳದ ಬೃಂ । ಹಿತದ ಬಹಳಿಕೆ
ರಥಪಯದ ಚಿತ್ಕೃತಿಯ ಚಪ್ಪರಣೆ ॥ ನುತಪದಾತಿಯ ಗರ್ಜನೆಯಗಾ । ಢತೆ ಧನುರ್ಧರರವದ ರೌದ್ರಾ
ಹತ ಚಟಾಳಿಸಲೊಡ್ಡಿದರು ಮಂಡಳಿಸಿ ಮೋಹರವ ॥೧೪॥ ಚೂಣಿ ತಲೆಯೆತ್ತಿದವು ಹರಣದ । ವಾಣಿ
ಕೇಣಿಯ ಕುಹಕವಿಲ್ಲದೆ । ಗೋಣುಮಾರಿಗಳೋಲಗದ ಹಣರುಣವನೀಗಿದರು ॥ ಹೂಣಿಗರು ಹುರಿ
ಬಲಿದು ಹಾಣಾ । ಹಾಣಿಯಲಿ ಹೊಯ್ದಾಡಿದರು ಘನ । ಶೋಣಸಲಿಲದ ಹೊನಲು ಹೊಯ್ದುದು
ಹೊಗುವ ತವಕಿಗರ ॥೧೫॥ ಕೋಡಕೈಗಳು ಭಟರಲಂದೆಡೆ । ಯಾಡಿದವು ಹೆಗಲೆದ್ದವರಿಗೆಯ ನೀಡಿಮೈ
ಮಣಿದೌಂಕಿ ತಿವಿದಾಡಿದರು ಸಬಳಿಗರು ॥ ಕೂಡೆ ತಲೆವರಿಗೆಗಳಲುರೆ ಕೈ । ಮಾಡಿದರು ಖಡ್ಗಿಗರು ಥ
ಟ್ಟಿನ । ಜೋಡುಜರಿಯಲು ಪೊಕ್ಕು ಬೆರಸಿದವಾನೆಕುದುರೆಗಳು ॥೧೬॥ ಹರಿದು ಮೊನೆಕುತ್ತಿನಲಿ
ನೆತ್ತರು । ಸುರಿದವರೆವೊಯ್ಲಿನಲಿ ಖಂಡದ । ಹೊರಳಿ ತಳಿತುದು ಕಾಯವಜಿಗಿಜಿಯಾಯ್ತು ಲೌಡಿ
ಯಲಿ ॥ ಸರಳಸೈಧಾರೆಯಲಿ ಹಾಯ್ದವು । ಕರುಳು ಕಬ್ಬುನಕೋಲಿನಲಿ ಕ । ತ್ತರಿಸಿದವು ಕಾಲುಗ
ಳು ಕೌತುಕವಾಯ್ತು ಸಂಗ್ರಾಮ ॥೧೭॥ ಕಡಿದು ಚಿಂಮಿದ ಬೆರಳುಗಳ ಹಿಂ । ಮಡಿಯ ಗಾಯದ ನಾಳ
ಹರಿದೊಡೆ । ಮಡಿದ ಗೋಣಿನ ಬೆಸುಗೆ ಬಿರಿದ ಕಪಾಲದೋಡುಗಳ ॥ ಉಡಿದ ತೊಡೆಗಳ ಹರಿದ ಹೊಟ್ಟೆಯ ।
ಹೊಡೆಮರಳಿದಾಲಿಗಳ ತೋಳಿನ । ಕಡಿಕುಗಳ ರಣಮಹಿ ಭಯಾನಕರಸಕೆ ಗುರುತಾಯ್ತು ॥೧೮॥
ಕೊರಳ ತೆತ್ತುದು ಚೂಣಿ ರಣಮು । ಖ್ಯರಿಗೆ ಹೇಳಿಕೆಯಾಯ್ತು ಮೋಹರ । ವೆರಡರರಲಿ ಹೆಸರುಳ್ಳ
ನಾಯಕವಾಡಿ ನಲವಿನಲಿ ॥ ಕರಿತುರಗರಥಪಾಯಿದಳದಲಿ । ಹೊರಳಿಗಟ್ಟಿತು ಬಹಳಲಗ್ಗೆಯ । ಧರ
ಧುರದ ದೆಖ್ಖಾಳ ಮಿಗೆ ನೂಕಿದರು ಸಂಗರಕೆ ॥೧೯॥ ತಳಿತ ಸತ್ತಿಗೆಗಳ ಪತಾಕಾ । ವಳಿಯ ಪಡಪಿನ ಬಿ
ರಿದಿನುಬ್ಬಟೆ । ಗಳ ವಿಡಾಯಿಯ ಸಿಂಧಸೀಗುರಿಸೆಳೆಯ ಸುರಿವುಗಳ ॥ ಕಳಕಳಿಕೆ ಕಡುಹೇರಿ ತಳಪಟದೊ
ಳಗೆ ತಲೆದೋರಿದರು ಘಡಘಡ । ಫಲುಗುಣನ ಬರಹೇಳೆನುತ ದ್ರೋಣಾದಿನಾಯಕರು ॥೨೦॥ ದೊದ್ದೆತೆಗೆ
ಯಲಿ ಪಾರ್ಥಪವನಜ । ರಿದ್ದರಾದೊಡೆ ಬರಲಿ ಸಮರವ । ಹೊದ್ದಲಾಪಡೆ ಹೊಗಲಿ ಹರಿ ತೋರಲಿ ಸಹಾ
ಯಿಕೆಯ ॥ ಇದ್ದಡೆಯು ರಣವಿಜಯವನಿತೆಗೆ । ಬಿದ್ದಿನರು ದ್ರುಪದಾದಿರಾಯರ । ಹೊದ್ದಿಸಲು ಬೇಡವರಿ
ಗಂಜುವೆವೆನುತ ನೂಕಿದರು ॥೨೧॥ ಗುರುತನುಜವೃಷಕೇತುಮಾದ್ರೇ । ಶ್ವರಜಯದ್ರಥಶಕುನಿದುಸ್ಸಹ । ಗು
ರುಸುಶರ್ಮವಿಕರ್ಣಭೂರಿಶ್ರವಜಯದ್ರಥರು ॥ ಧರಣಿಪತಿಭಗದತ್ತಯವನೀ । ಶ್ವರಕಳಿಂಗಸುಕೇತುದು
ರ್ಜಯ । ದುರುಳ ದುಶ್ಶಾಸನರುಲಂಬಕರೈದಿದರು ರಣವ ॥೨೨॥ ಗೆದ್ದಡೆಯುಗೆಲವಿಲ್ಲ ಹಾರುವ । ರುದ್ದು
ರುಟತನಕೇನನೆಂಬೆನು । ಗದ್ದುಗೆಯ ಹೊರಗರಸು ಕರೆದೊಡೆ ಭವವ ಮರೆದಿರಲಾ ॥ ಹದ್ದುಕಾಗೆಯ ಮನೆ

ಯಬಾಣಸಿ । ವಿದ್ಯೆಯೆಮ್ಮೊಡು ಯಮುನನಿಳಯಕೆ । ಬಿದ್ದಿನರು ನೀವೆಂದೆನುತ ವೈರಾಟ ಹೊರವಂಟ ॥೨೩॥ ನಕುಲಕುಂತೀಭೋಜಸುತಸೋ । ಮಕಘಟೋತ್ಕಚದ್ರುಪದಶತಪಿಂ ।ಧ್ಯಕಶತಾನೀಕಾಭಿಮನ್ಯುಯುಯುತ್ಸುಸೃಂಜಯರು ॥ ಸಕಲನಾಯಕರಂದು ಯುದ್ಧೋ। ದ್ಯಕುತರಾದರು ಚಕಿತಚಾಪದಿ। ಮುಕುತಶಸ್ತ್ರಾವಳಿಯ ಮಳೆಗಾಲವನು ನಿರ್ಮಿಸುತ ॥೨೪॥ ಹಿಡಿದನಶ್ವತ್ಥಾಮ ದ್ರುಪದನ । ಪಡೆಯೊಡನೆ ಬವರವನು ಕೃಪ ಮುಂಗುಡಿಯೊಳಗೆ ಹೊಕ್ಕಿರಿದು ತಡೆದನು ಸಾತ್ಯಕಿಯ ರಥವ ॥ ಕಡುಹ ಮಿಗೆ ಮೈದೋರಿ ಪವನಜ । ನೊಡನೆ ಗುರು ಕಾದಿದನು ರಾಯನ । ನುಡಿಸಿ ಕೌರವರಾಯ ತಾಗಿದನಾಹವಾಗ್ರದಲಿ ॥೨೫॥ ಸೆಣಸು ಮಿಗಿಲಭಿಮನ್ಯುಭೀಷ್ಮರ । ಕೆಣಕಿದನು ದುಶ್ಶಾಸನನು ಫಲು । ಗುಣನ ತರುಬಿದನಾಘಟೋತ್ಕಚನೊಡನೆ ಭಗದತ್ತ ॥ ಕಣೆಗೆದರಿ ಸಹದೇವ ನಾರಾ । ಯಣನ ಬಲವನು ಬೆರಸಿ ಮತ್ಸ್ಯನ। ಹೊಣಕೆಗೈದಿ ಸುಶರ್ಮ ಕಾದಿದನಾವಿರಾಟನಲಿ ॥೨೬॥ ಬೆರಸಿ ಹೊಯ್ದರು ತಿವಿದರೆಚ್ಚರು । ಹರೆಗಡಿದರರೆಗಡಿದರೌಂಕಿದ । ರೆರೆದರಿರ್ಬ್ಬೊರಟಿಸಿದರು ತರಿದರು ತುಳುಕಿತೂರಿದರು॥ ಸರಳು ಸವೆಯಲು ಜೋಡು ಹರಿಯಲು । ತುರಗ ಧೂಪಿಸಿ ಸಾರಥಿಯ ಕೈ । ಮುರಿಯೆ ಕಾದಿತು ರಾಯನಾಯಕರುಭಯಸೇನೆಯಲಿ ॥ ಕೆಲಬರಾಯುಧ ಮುರಿದು ಸಾರಥಿ । ಯಳಿದು ಕೆಲಬರು ರಥ ವಿಸಂಚಿಸಿ । ಕೆಲರು ಕೆಲಬರು ಬಳಲಿದರು ಘೋರಾಯಗಾಯದಲಿ ॥ ಕೆಲರು ಜಣಗಿತು ಕಂಡಮುಖದಲಿ । ಕೆಲರು ಹರೆದುದು ಕಲುಮನದ ಕಡು । ಗಲಿಗಳಚ್ಚಾಳಾಗಿ ನಿಂದರು ಕೆಲರು ಕಾಳಗಕೆ॥೨೮॥ ಏರಸೂರೆಯ ಕಟ್ಟಿ ಹಿಂಗುವ । ಗಾರುತನ ತಾನೇನು ಸುಡು ಮುಂ । ಮೂರಿಗಳ ಮಾತೆತ್ತಲಡಗಿತು ಬಿರುದಸೈನಿಕರ ॥ ಹಾರಿಹೋಯಿತು ವೀರರಸ ತಲೆ । ದೋರಹೆಳ್ಳೆ ರಣಕೆನುತ ಕೈ । ಮೀರಿ ಕವಿದುದು ದ್ರುಪದಕೈಕೆಯಮತ್ಸ್ಯಸೃಂಜಯರು ॥೨೯॥ ಕಡುಹು ಮುರಿದುದು ಕೌರವೇಂದ್ರನ ।ಪಡೆಯ ತರಹರತಕ್ಕುಗೆಟ್ಟುದು । ಮದಮುರಿಯದಂಘೈಸಿದರು ದುಶ್ಶಾಸನಾದಿಗಳು ॥ ಕಡಲು ಮೈದೆಗೆದಂತೆ ಬಹಬಲು । ಪಡೆಯ ಕಂಡನು ದ್ರೋಣ ಸಡಿಫಡ । ಪಡೆಯ ತೆಗೆದೊಡೆ ರಾಯನಾಣೆಯೆನುತ್ತ ಮಾರಾಂತ ॥೩೦॥ ಸಾಹಸಿಕರೈ ದ್ರುಪದರಿವದಿರ। ಜೋಹದೋಲೆಯಕಾರತನ ಮನ । ಗಾಹಿನಲಿ ಹೆಮ್ಮಕ್ಕಳವದಿರು ಶಿವಶಿವಿವದಿರಿಗೆ ॥ ಆಹವದಲೋಸರಿಸಿದೊಡೆ ಭಟ। ಸಾಹಸಿಕೆ ತಲೆಯೊಡ್ಡದೇ ಸುಡು। ದೇಹವೇತಕೆ ದೆಸೆಯೆಸಾಕೆನುತ್ತೈದಿದನು ದ್ರೋಣ॥೩೧॥ಆವುದಂತರವನಗಕಳಭಕೈ । ರಾವತಕೆ ಮರುಭಾಪು ದ್ರೋಣನ ಡಾವರಕೆ ಪಾಂಚಾಲನೇ ಸೈರಣೆಗೆ ಸೇರುವನೆ ॥ನಾವು ದ್ರುಪದನಕಾಣೆವಾವೆಡೆ। ಗಾವಿರಾಟನು ಸರಿದನೆತ್ತಲು। ತೀವಿದರು ಸೃಂಜಯನೃಪರು ನಾವರಿಯೆವಿದನೆಂದ ॥೩೨॥ ಒಗ್ಗೊಡೆದುದರಿಸೇನೆ ಸರಿದುದು । ತಗ್ಗಿದುಬ್ಬಾಳುಗಳ ನುಡಿಮನ । ನೆಗ್ಗಿದವು ಮಂಡಳಿಕರಿಗೆ ತಲೆಮುಸುಕು ಪಸರಿಸಿತು ॥ ಲಗ್ಗೆವರಿಗಳಿಗಕಟ ಮೌನದ । ಸುಗ್ಗಿಯಾಯಿತು ಬಿರುದ ಬೈಚಿತು । ವಗ್ಗಳೆಯರೊಳಸರಿಯೆ ಕಂಡನುಪಾರ್ಥ ಖತಿಗೊಂಡ ॥೩೩॥ ರಣಕೆ ತವಕಿಸಿ ಬಳಿಕ ತಾಗುವ । ಕಣೆಯಧಾಳಿಗೆ ದಳ್ಳುಬಾರುವ । ಗುಣವಿದೆಂತುಟೊ ಭಂಡರಿವದಿರು ಸಾರಹೇಳೆನುತ ॥ ಕೆಣಕಿದರು ಬಿಲುದಿರುವಿನುರುಮಾ । ರ್ಗಣದ ಹೊದೆಗಳ ಕೆದರಿ ಸಮರಾಂ । ಗಣಕೆ ಸಮ್ಮುಖವಾದನರ್ಜುನ ಸಿಂಹನಾದದಲಿ ॥೩೪॥ ಸಾರಬೇಹುದು ದ್ರುಪದನಾನ । ಲ್ಲಾರಯಿದು ಕಾರುವುದು ಚಾಪದ । ಚಾರುವಿದ್ಯೆಯ ನಿಮ್ಮಲರಿದುದ ನಿಮಗೆ ತೋ

ರುವೆನು ॥ ಸೈರಿಸುವುದೀಬಾಲಭಾಷೆಗೆ । ವೈರಬಂಧವ ಬಿಡುವುದೆನುತಾ । ಚಾರಿಯನ ರಥಹಯವ
ಹೊದಿಸಿದನಸ್ತ್ರನಿಕರದಲಿ॥೩೫॥ ಕವಿವಕಣೆಗಳ ಥಟ್ಟುಗಳನೊಡೆ। ತಿವಿದು ತುಳುಕಿದನಂಬಿನಬುಧಿಯ
ನವಿರಳಾಸ್ತ್ರಾನೀಕವಾವರಿಸಿದವು ದಿಗುತಟವ ॥ ಅವನಿಯೋ ದಿಕ್ಕುಗಳೊ ಪಾರ್ಥನೊ । ರವಿಯು ಕಾ
ಣೆನು ಭಾಪು ಕಲಶೋ । ದ್ಭವನ ಕೈಮೈಯೆನುತ ಬೆರಗಿನೊಳಿದ್ದುದುಭಯಬಲ ॥೩೬॥ ಈತನಸ್ತ್ರವ
ಕಡಿದು ಬಾಣ । ವ್ರಾತವನು ಕೆರಳಿಚಿದನರ್ಜುನ । ಸೇತುವಾದವು ಸರಳು ವೈಹಾಯಸಮಹಾರ್ಣವಕೆ ॥
ಕೇತುವಾದವು ರವಿರಥಕೆ ಪುರು । ಹೂತನಾದವು ಗಿರಿಕುಲಕೆ ಕೈ । ಸೋತುದಿವ ತರಿದೊಟ್ಟೆ ಬಳಲಿದು
ನಿಂದನಾದ್ರೋಣ ॥೩೭॥ ತ್ರಾಣ ಕೋಮಲವಾಯ್ತು ತೆಗೆಯಲಿ । ದ್ರೋಣಸಾವೆಡೆ ಪಾಯಿದಳ ಬಿ
ಡು। ಹೂಣಿಗರ ಬರಹೇಳು ಬಾಣದಭಂಡಿಸಾವಿರವ॥ ಶೋಣಿತದ ಸಾಗರವನವನಿಗೆ। ಕಾಣೆ ಬ್ರೂಳಲು
ಪಾದರಜದಲಿ । ಕೇಣಿಕೊಟ್ಟನು ವೈರಿಸೇನೆಯನಮಮ ಕಲಿಪಾರ್ಥ ॥೩೮॥ ನರನೆ ಪೊಕ್ಕವನಾದಡಯ್ಯ
ನ । ಹರಿಬವೆಂದೆನಗೆನುತ ಬಿಲುದಿರು । ವೊರೆಯೆ ಪ್ರೋಹರಗಡಲ ಕವಿಸಿದನಂದು ಗುರುಸೂನು ॥
ಗುರುಸುತನ ಬಳಿವಿಡಿದ ಕಡುಹಿನ । ಉರುವಣಿಸಿದರು ಶಕುನಿಯುವನೇ । ಶ್ವರಕಳಿಂಗಸುಕೇತುಭೂರಿಶ್ರ
ವರು ಬಿಗುಹಿನಲಿ ॥೩೯॥ ಸಾಲಮಕುಟದವಮಾಣಿಕದ ಮಣಿ । ಮಾಲಿಕೆಯರಶ್ಮಿಗಳು ಸೂರ್ಯನ । ಸೋ
ಲಿಸಲು ಸಮರವನು ಹೊಕ್ಕರು ಕುರುಹಿನತಿಬಲರು ॥ ಕೋಲ ತೆಗಹಿನ ಕಿವಿಗಡಿಯಕ । ಜ್ವಾಲಿಗಳ
ಕೆಂಪುಗಳ ಹೊಗರು । ಛಡಾಳಿಸಿದಬಲುಮುಖದ ಸುಭಟರು ಹಳಚಿತರ್ಜುನನ ॥೪೦॥ ಏನಪೇಳುವೆನ
ರಸ ಶರಸಂ । ಧಾನವನು ಕಲಿಪಾರ್ಥನನುಸಂ । ಧಾನವನು ಕೈಯೊಡನೆಯನಿಬರ ಕಣೆಯ ಖಂಡಿಸಿ
ದ ॥ ದಾನವಾಮರರೊಳಗೆ ಸುಭಟನಿ । ಧಾನವನು ಪಡಿಗಟ್ಟಬಾರದು । ಮಾನವರ ಮಾತೆತ್ತಲೆಂದ
ನು ಸಂಜಯನು ನಗುತ ॥೪೧॥ ಹಿಳುಕು ಹಿಳುಕಿನೊಳೊರಸಿ ದೆಸೆಕ। ತ್ತಲಿಸಿ ಕೈಕೊಂಡವು ಪತಾಕಾ ।
ವಳಿಯು ಪವನನ ಹೊಯ್ಲಿನಲಿ ಬಾಯ್ದೆರೆ ಕಿಡಿಯೇಳೆ ॥ ಬಲುಸರಳ ಬಲ್ಲಾಳದಡ್ಡಿಯ । ಬಲುಹು
ತರುಬಿತು ಪಡಿಮುಖದ ಮಂ । ಡಳಿಕರೆಸುಗೆಯು ಸಮಸಮ ಸಮತಳಿಸಿತ್ತು ರಣಕೇಳಿ ॥೪೨॥ ಎಸುವ
ನೊಬ್ಬನೆ ಪಾರ್ಥನನಿತುವ । ಕುಸುಬುಮವರು ಗುರುಸುತಾದಿಗ । ಳೆಸುವರನಿಬರು ತರಿವನನಿತುವನೆಮ
ರಪತಿಸೂನು ॥ ಎಸುವರಿವರರ್ಜುನನ ಮೈಯಲಿ । ಮಸೆಯ ಕಾಣೆನು ಪಾರ್ಥನನಿಬರ । ವಿಶಿಖವನು
ನೆರೆಕಡಿದು ಮೆತ್ತಿದನೊಡಲೊಳಾಂಬುಗಳ ॥೪೩॥ ಕೋಲ ಕೋಲಾಹಳಕೆ ಸೈರಿಸ । ದಾಳುನಾಯಕ
ವಾಡಿ ಹರಿಗೆಯ । ಹೇಳಿಗೆಯ ಚಾಚಿದರು ಬಲುಬದ್ಧರಪಭಂಡಿಗಳ ॥ ಹೂಳಿ ಬಿಗಿಸಿದಗುಳದ ಕರಿಗ
ಳ । ಮೇಳವಿಸಿದರು ಮುರಿದೊಡಾಸಗೆ । ಮೇಲೆತಾವಿಹೆವೆಂದು ನುಡಿದರು ಗುರುಸುತಾದಿಗಳು ॥೪೪॥
ಹರಿಬಪಾಹವವೆಂಬರಾವೆಡೆ । ಗುರುಸುತ ದ್ರೋಣಾದಿಗಳು ನಡಿ । ಯುರಿಯಹೊರುವುದು ಗಾಯವ
ತಿಶೀತಳವು ಮಹದೇವ ॥ ಅರಮನೆಯಲಿದ್ದಾಳುಕುದುರೆಯು । ಹರೆದರೇನದು ತಮಗೆ ನಷ್ಟಿಯೆ । ಗ
ರುವಕೈ ಗುರುಸೂನುವೆನುತೈದಿದನು ಕಲಿಪಾರ್ಥ ॥೪೫॥ ಒಗ್ಗಿ ಕವಿತಹತುರಗಸೇನೆಯ । ನಗ್ಗಡದೊ
ಳಿಕ್ಕಿದನು ಕರಿಗಳ । ಮೊಗ್ಗರವ ಮೆದೆಗೆಡಹಿದನು ಹುಡಿಮಾಡಿದನು ರಥವ ॥ ಮುಗ್ಗಿ ಬೀಳುವಪಾ
ಯದಳವನು । ನುಗ್ಗುನುಸಿಮಾಡಿದನು ರಕುತದ । ಸುಗ್ಗಿ ಶಾಕಿನಿಯರಿಗೆ ಸೇರಿತು ಕಳನಚೌಕದಲಿ
॥೪೬॥ ಜೋಡುಸಹಿತುಗಿದಂಬು ಧರಣಿಯೊ । ಳಾಡಿದವು ಗುಳಸಹಿತ ಕರಿಗಳ । ತೋಡಿ ಹಾಯ್ದುವು

ಬದ್ಧರಂಗಳಬಾದಣವ ಕೊರೆದು ॥ ಈಡಿರಿದವದ್ರಿಯನು ಸುಭಟರ । ಜೋಡುಗಳ ಜರುಹಿದವು ತಳಪಟ । ಮಾಡಿದವು ಚತುರಂಗಬಲವನು ಪಾರ್ಥನಂಬುಗಳು ॥೪೭॥ ತಾರುಥಟ್ಟಿಗೆಹಾಯ್ದವಾನೆಗ । ಳಾರುಸಾವಿರ ತುರಗದಳದಸು । ಸೂರೆವೋದುದು ಸಮರದಲಿಹದಿನಾರುಸಾವಿರವು ॥ ಕಾರಿದರು ಕರುಳನು ಪದಾತಿಯೊ ಳಾರುಲಕ್ಷವು ಮೊದಲಲಗ್ಗೆಗೆ । ಮೂರುಸಾವಿರ ರಥವು ನೆಗ್ಗಿದುದೊಂದುನಿಮಿಷದಲಿ ॥೪೮॥ ಹೆಣನ ತುಳಿದೊತ್ತೊತ್ತೆಯಲಿ ಸಂ । ದಣಿಸಿ ಕವಿದುದು ಮತ್ತೆ ದಳ ಭಾ । ರಣೆಯ ಬಿಂಕವನೇನನೆಂಬೆನು ಬಲಿದಲಗ್ಗೆಯಲಿ ॥ ಕೆಣಕಿದವು ಕರಿಘಟೆಗಳೊಂದೆಸೆ । ಯಣಕಿಸುತ ಹಯರಥವದೊಂದೆಸೆ ಕಣೆಗೆದರೆ ಕಾಲಾಳದೊಂದೆಸೆ ಮುಸುಕಿತರ್ಜುನನ ॥೪೯॥ ಸವೆದು ಸವೆಯರುಪೂತುಮಝುಕೌ । ರವನ ಸೇನಾಜಲಧಿನಾಯಕ । ನಿವಹವಿನಿತುವನೂಕಿಸವೆಯವು ಗುರುಸುತಾದಿಗಳು ॥ ಕವಿಯಲೀಬಲ ಮತ್ತೆ ಸಂದಣಿ । ತವಕಿಸಲಿ ತಾವಿನಿಬರೂಮಗು । ಳವಗಡಿಸಿನೋಡಲಿ ವಿನೋದವನೆನುತ ತೆಗೆದೆಚ್ಚ ॥೫೦॥ ಅಗಲದಲಿ ದಿಗುವಳೆಯ ವಿಧಿಯಂ । ಬುಗಳನೀದುದೋ ಮೇಣು ಬಾಣದ । ಮುಗಿಲುಮಾಲೆಯ ಕೊಯ್ದರೊ ಜರುಹಿದರೋ ಶರನಿಧಿಯ ॥ ಝುಗಝುಗಿಸಿ ಹೊಳೆಹೊಳೆವ ಬಾಯ್ಧಾ । ರೆಗಳ ಹೊಳಹಿನಧಾರೆ ಬಿಂಕವ । ಮೊಗದರ್ಜುನನಂಬುಗಳು ಚತುರಂಗ ಮೋಹರ॥೫೧॥ ಮತ್ತೆ ಮುರಿದನು ಹತ್ತು ಸಾವಿರ । ಮತ್ತಗಜವನು ರಥಚಯವನು । ಗೊಗ್ತ್ತಿದನು ಹನ್ನೆರಡು ಸಾವಿರವನು ರಣಾಗ್ರದಲಿ ॥ ಹೊತ್ತಿತೀತನ ವಿಕ್ರಮಾಗ್ನಿಗೆ । ಹತ್ತುಕೋಟಿಪದಾತಿರಾವ್ತರು। ಸತ್ತುದಕೆ ಕಡೆಯಿಲ್ಲ ಕೌರವರಾಯಸೇನೆಯಲಿ ॥೫೨॥ ತೀರಿತಡವಿಯಕಡಿತ ಗಿಂಗಳ । ಹೋರಟೆಗೆಹೊಗಬೇಕು ಸೇನೆಯ । ಪಾರುಖಾಣೆಯ ಕೊಟ್ಟರಾವೆಡೆ ಗುರುಸುತಾದಿಗಳು ॥ ಭಾರಣೆಗೆ ಕೊಡಬೇಕು ಸಮಯವ । ನಾರುಭಟೆಯಲಿ ಮಲವುದ್ಯೈ ಕೈ । ವಾರವೇಕ್ಕೆ ಕಾಯದಲಿ ಕಕ್ಕುಲಿತೆ ಬೇಡೆಂದ ॥೫೩॥ ಜೇನುಹುಟ್ಟೆಯ ಹುಳುವಬಡಿದಸ । ಘಾಡತನ ತಾನೇನು ಚೋಣೆಯ । ಸೇನೆಗೀನೆಯ ಸವರಲಾಯಿತೆ ಶೌರ್ಯಸಿರಿ ನಿಮಗೆ ॥ ತಾನದಾರೆಂದರಿಯಲಾ ಗುರು । ಸೂನುವಲ್ಲಾ ವೈರಿತಿಮಿರಕೆ । ಭಾನು ಬಗೆಯಾಯನುತ ಪೊಕ್ಕನು ದ್ರೋಣನಂದನನು ॥೫೪॥ ಬಳಿಯಲೊಡಗವಿಯಿತ್ತು ಚಾತು । ರ್ಬಲ ಸಹಿತ ದ್ರೋಣಾದಿಗಳು ತೋ । ರಳವ ಹಿಡಿಹಿಡಿಧನುವ ಸುರಿಸುರಿ ಸರಳಸರವಳೆಯ ॥ ಚಳೆಯದಲಿ ಕೈದೋರುದಾನವ । ಕುಲದಿಶಾಪಟಕೃಷ್ಣಸಹಿತವೆ । ಕಳಿಯದಿರು ಕಾಲವನೆನುತ ತೆಗೆದೆಚ್ಚರತಿರಥರು ॥೫೫॥ ಗುರುಸುತನ ಕೂರಂಬು ದ್ರೋಣನ । ಸರಳಸಾಗರ ಶಲ್ಯನಂಬಿನ । ಹೊರಳಿ ಶಕುನಿಯ ಬಾಣಪಂಜರ ಕೃಪನ ಶರಮೇಘ ॥ ಕುರುಪತಿಯ ನಾರಾಚದಾದು । ರ್ಧರವರುಷ ಸೈಂಧವನು ಕೃತವ । ರ್ಮರಶರಾವಳಿ ಹೂಳಿದವು ದೇವಾ ಮಹೀತಳವ ॥೫೬॥ ಉರಿಯರಾಜ್ಯವ ಸೂರೆಗೊಳಲೆಂ। ದರಗುಹರಿದವೊಲಾಯ್ತು ಮೇಘದ । ನೆರನಿ ಗಾಳಿಯಮನೆಗೆ ಬಿದ್ದಿನ ಬಂದತೆರನಾಯ್ತು ॥ ಗಿರಿಯಮಕ್ಕಳು ನಗುತ ವಜ್ರದ। ಕರವ ಹೊಯ್ದಂತಾಯ್ತು ಪಾರ್ಥನ । ಸರಳಸೀಮೆಯ ಬೆರಸಿದವು ರಿಪು ಸುಭಟರಂಬುಗಳು ॥೫೭॥ ಸಹಜಕೀತನು ಚಾಪವಿದ್ಯಾ । ರುಹನು ಗುರುಗಳ ಮಗನಿವನು ಗುರು । ವಹನು ನೋಳ್ಪೊಡೆ ಶಿವಶಿವಾ ಕಲಿಶಲ್ಯ ಮಾವನಲೆ ॥ ಮಹಿಮರಿವರೆನ್ನೊಡನೆಯೊಂದಿದ । ರಹುದುನಾವಿನ್ನಾರ ಕಳೆವೆವು । ಸಹಸ ಲೇಸೆನುತೆಚ್ಚನವರವರಸ್ತ್ರಧನು ರಥವ ॥೫೮॥ ಮತ್ತೆ

ಹೊಸರಥ ಸೂತನಾಸ್ತ್ರವ । ನುತ್ತಮಪ್ರತ್ಯಗ್ರಚಾಪದ । ಲಿತ್ತಡಸಿ ಕವಿದರು ಕಿರೀಟಿಯ ರಥವ ಮುರಿದೆಸುತ ॥ ಮತ್ತೆ ಕಡಿದರು ರಥವ ಚಾಪವ । ಮತ್ತೆ ಹೊಸ ಹೂಟೆಯಲಿ ಹೊಕ್ಕರು । ತೆತ್ತುಸವೆಯರು ಶೌರ್ಯದಭಿಮಾನವನು ರಿಪು ಭಟರು ॥೫೯॥ ಸರಳ ಕವಿಸಿದರಿವರು ಮತ್ತವ । ಪರಿಹರಿಸಿದನು ಪಾರ್ಥನಾತನ । ಸರಳುಗಳ ಸಂವರಿಸಿ ಮುಸುಕಿದರರ್ಜುನನ ರಥವ ॥ ತೆರಳೆಗಡಿದನು ಮತ್ತೆ ದ್ರೋಣನ । ಗುರುಸುತನ ಸೈಂಧವನ ಮಾದ್ರೇಶ್ವರನ ಚಾಪವ ಕಡಿದು ಹೂಡಿದನೊಡಲೊಳಂಬುಗಳ ॥೬೦॥ ಗಾಯವಡೆದರು ಸುರಿವ ಸರಳಿಗೆ । ನಾಯಕರು ಬಳಲಿದರು ಪೌರುಷ । ಮಾಯವಾದುದು ತನು ನಡುಗಲಡಿಗೆ ಡೆಂಡಣಿಸಿ ॥ ಕಾಯಗಟ್ಟಿತು ಭೀತಿಬಿರುದಿನ । ಬಾಯ್ಗೊಣಿಕೆ ಬಯಲಾಯ್ತು ತನುವಿನ । ಬೀಯಕವರಂಜಿದರು ನೆನೆದರು ಮನೆಯ ರಮಣಿಯರ ॥೬೧॥ ದಿಟ್ಟತನ ಹಳುವಾಯ್ತು ಶೌರ್ಯದ । ಘಟ್ಟಿ ಕರಗಿತು ಸುಭಟಧರ್ಮವ । ಬಟ್ಟೆಯನು ಹೂಳಿದರು ಹಂಗಿಗರಾದರಿಹಪರಕೆ ॥ ಬೆಟ್ಟವಾಯಿತು ಭಂಗಭಯದಲಿ । ಬಿಟ್ಟುಕೊಂಡರು ರಾಯದಳಜಗ । ಜಟ್ಟಿಗಳು ಭಗದತ್ತ ಸೈಂಧವಗುರುಸುತಾದಿಗಳು ॥೬೨॥ ಉಲಿವಭಟ್ಟರ ಬಾಯಹೊಯ್ ರಥ । ದೊಳಗೆ ಕೆಡಹಲಿ ಧ್ವಜದಕಂಭವ । ಸುಲುಕದಂತಿರೆ ರಥವ ಹರಿಸಲಿ ಸೂತಕುನ್ನಿಗಳು ॥ ತಲೆಮುಸುಕಿನಲಿ ಛತ್ರಚಮರವ । ನೆಲಕೆ ಬಿಸುಡಲಿ ಹೆಸರುಗೊಂಡರ । ನುಳುಹಲಾಗದು ಬೀಳಗುತ್ತುವ್ರದೆನುತ ತಿರುಗಿದರು ॥೬೩॥ ಒಟ್ಟಿದವು ಕೈದುಗಳು ಸತ್ತಿಗೆ । ಬೆಟ್ಟವಾದವು ಸಿಂಧಸೆಳೆಗಳು । ನಟ್ಟಡವಿಪವಡಿಸಿದವೊಲಾಯ್ತಾಹವಾಗ್ರದಲಿ ॥ ಥಟ್ಟು ಮುರಿದುದು ಸೇನೆತೆರೆ ಸಾ । ಲಿಟ್ಟಸಾಗರದಂತೆ ರಾಯಘು । ರಟ್ಟ ಕಂಡನು ಕೌರವೇಶ್ವರನ ಖಳಮೋಹರವ ॥೬೪॥ ಹೊರಳಿಯೊಡೆದು ಮಹಾಪ್ರಧಾನರು । ಮರಳಿದರಲಾ ಪೊತುಮುಝುಧರ । ದುರವ ಮಾಡಿದರೇಕೆ ಕರೆಕರೆ ಬಿರುದಬೆಸಗೊಂಬ ॥ ಗುರುತನಯನೋ ಚಾಪವಿದ್ಯಾ । ಧರನೊ ಶಲ್ಯನೊ ಶಕುನಿಯೋ ಕೃಪ । ವರಮಹಾರಥರಿದ್ದರೋಡುವರಲ್ಲ ದಿಟವೆಂದ ॥೬೫॥ ಹೊರೆದಪತಿ ಕಾರ್ಯಾರ್ಥಲಾಭವ । ಸರಕುಮಾಡರು ಜಯವಧುವನೆ । ದ್ದೆರಗಿ ನೋಡರು ವಾರ್ತೆಗೈಯರು ಮುಕುತಿ ರಾಜ್ಯವನು ॥ ಧರೆಯಪರಮಖ್ಯಾತಿ ಪೂಜೆಯ । ಸಿರಿಯ ಗಣಿಸರು ಶಿವಶಿವಾಸಂ । ಗರಕೆ ದ್ರೋಣಾದಿಗಳವೋಲು ವಿರಕ್ತರಾರೆಂದ ॥೬೬॥ ಆನೆಗಳು ಮರಳಿದವು ಸುಭಟನಿ । ಧಾನರೋಸರಿಸಿದರು ಘಡಸುರ । ಧೇನುಗಳಲಾಕರೆಯಿರೈ ಕರೆಬಲಕೆವಾಂಛಿತವ ॥ ಈನಪುಂಸಕರುಗಳನಂಬಿದ । ತಾನು ನೀತಿಜ್ಞನೆ ಮಹಾದೇ । ವೇನಪೇಳುವೆನೆನುತ ಭೀಷ್ಮನ ಹೊರೆಗೆ ನಡೆತಂದ ... ॥೬೭॥

ಅಂತು ಸಂಧಿ ೭ಕ್ಕಂ ಪದ ೪೯೦ ಕ್ಕಂ ಮಂಗಳಮಸ್ತು.

ಎಂಟನೆಯ ಸಂಧಿ.

॥ಸೂಚನೆ॥ ಗಂಡುಗಲಿಗಾಂಗೇಯ ರಣದು । ದ್ದಂಡಕ್ಷತ್ರಿಯಕುಲವ ತರಿದು । ದ್ದಂಡಭೀಷ್ಮ ಶಿಖಂಡಿಯಿದಿರಲಿ ಬಿಲ್ಲನಿಳುಹಿದನು ॥

॥ಪದ॥ ಜೀಯ ಚಿತ್ತೈಸುವದು ಸೇನಾ । ನಾಯಕರ ಮೋರೆಗಳು ಮುಸುಕುಗ । ಳಾಯಿತವ

ನೀಹೊತ್ತು ಮುನ್ನಿನ ಬಿರುದಿನುಬ್ಬಟೆಯ ॥ ಕಾಯಿದರೆ ಧರ್ಮವನು ಜಠರಪ । ರಾಯಣದ ಪರಿಣ
ತಿಯಲಾದಪ । ಲಾಯನದ ಹೆಚ್ಚುಗೆಯ ನೋಡೆನೆ ಭೀಷ್ಮನಿಂತೆಂದ ॥೧॥ ಅರಸ ಹೊಲ್ಲಹವೇನು ಪಾ
ರ್ಥನ । ಸರಿಸದಲಿ ನಿಲುವೆದೆಯ ಕೆಚ್ಚು । ಕ್ಷರನು ದೇವಾಸುರರೊಳರಿಯೆನು ಮನುಜರೇನಹರು ॥
ತಿರುಗಬೇಕವಗಡಿಸಿದೊಡೆಸಂ । ಗರವ ಪೊಗುವುದು ಸದರಗಿದರವ । ನರಿದು ಕಾದುವುದಿದರಲಾವುದು
ಭಂಗ ಹೇಳೆಂದ ॥೨॥ ನುಡಿಯಲಾವು ಸಮರ್ಥರೆಂದುದೆ । ಕಡುನಿಧಾನವು ಸುಭಟರೋಟವೆ । ಕಡೆಗೆ
ಪರರಹಧರ್ಮಪಾರ್ಥನು ಜಗದೊಳಗ್ಗಳನೆ॥ ನಡುಹೊಳೆಯ ಹರಿಗೋಲಮೂಲೆಯ। ಕಡಿವರಾದೊಡೆ
ನಮ್ಮಪುಣ್ಯದ । ಬಿಡುಗಡೆಯ ಕಾಲವು ಶಿವಾಯೆಂದರಸ ಬಿಸುಸುಯ್ದ ॥೩॥ ಖತಿಯಮಾಡಿದೆನಮ್ಮನು
ಡಿಯನು । ಚಿತಪರಾಯಣವೆಂದುನಿಮ್ಮಯ । ಮತಿಗೆತೋರಿತೆಮಾಣಲದುನೋಡಾದಡಾಹವವ ॥
ಕ್ಷಿತಿಯಹೊರೆಕಾರರಿಗೆಸೌಖ್ಯದ । ಗತಿಯಮಾಡುವೆನಿನ್ನುಕುರುಭೂ । ಪತಿವಿರೋಧಿಯ ದಳವನಿಂದೇ
ನೋಡುನೀನೆಂದ ॥೪॥ ತರಿಸಿದನು ಹದಿನೆಂಟುಸಾವಿರ । ಸರಳಹೊದೆಗಳ ಭಂಡಿಯನು ಹಂ । ನೆರಡು
ಸಾವಿರಧನುವ ತರಿಸಿದನಖಿಳಕೈದುಗಳ ॥ ಕರಸಿದನು ಸೈಂಧವನ ಶಲ್ಯನ । ಗುರುಸುತನ ಕೃತವರ್ಮ
ಭಗದ । ತ್ತರಶಕುನಿದುಶ್ಶಾಸನರ ಕೃಪದ್ರೋಣಾದಿನಾಯಕರ ॥೫॥ ಒತ್ತಗೊಡುವರೆ ಹಗೆಗೆ ಹಜ್ಜೆ
ಯ । ನಿತ್ತು ತೆಗೆವರೆ ಪಾರ್ಥ ಪರಬಲ । ಮೃತ್ಯುವೇ ಸಾಕಿನ್ನು ಹೋಗಲಿಯೆಂದುಫಲವೇನು ॥ ಮ
ತ್ತೆ ಕೆಣಕುವದರ್ಜನನ ನಂ । ಮತ್ತ ಬಿಡದಿರಿ ವೈರಿಬಲವನು ಕಿತ್ತುಬಿಸುಡುವೆ ಯಮಪುರಕೆ ಮೋಹ
ರಿಸಿ ನೀವೆಂದ ॥೬॥ ವಿಗಡನಿಬರ ಮತ್ತೆ ಪಾರ್ಥನ । ತೆಗೆದರೆತ್ತಲು ಭೀಷ್ಮನಿತ್ತಲು । ಹೊಗೆದನಂ
ತ್ಯದ ರುದ್ರನಗ್ನದಕಣ್ಣುರಿಯಂತೆ ॥ ಬಿಗಿದಹೆದೆಗಳ ಹರಿದು ಬಿಲ್ಲಿಂ । ದುಗುಳಿಸಿದರಂಬುಗಳನೆಳವಿ
ಗೆ । ತೆಗೆದು ಪಾಂಡವಬಲವ ಬೆಂಬತ್ತಿದನು ಖಾತಿಯಲಿ ॥೭॥ ಕೊಂಡುಬಹಬಲು ನಾಯಕರ ಕೈ ।
ಕೊಂಡು ಕಡೆಯಲಿ ಹೊಯ್ಸಿ ಸೇನೆಯ । ಹಿಂಡೊಡೆಯದೋಜೆಯಲಿ ಹುರಿಯೇರಿಸಿ ಮಹೀಶ್ವರರ॥
ಗಂಡುಗಲಿಯಭಿಮನ್ಯುಸಾತ್ಯಕಿ । ಚಂಡಬಲಹೈಡಿಂಬರನು ಸಮ । ದಂಡಿಯಲಿ ಸಂವರಿಸಿ ಸಮರಕೆ
ನಡೆದನಾಭೀಷ್ಮ ॥೮॥ ತಳಿತಸೇನಾಜಲಧಿಲಗ್ಗೆಯ । ಮೊಳಗಿನಲಿ ಮೊನೆದೋರಿ ಭೀಷ್ಮನ । ಹಳಚಿದ
ರು ಹರಹಿನಲಿಕವಿದರು ತೋದಕೈಗಳಲಿ ॥ ಎಲೆಲೆ ಪಾಂಡವಸೈನ್ಯಸಾಗರ । ಮಲೆತುದೋ ಬರಹೇಳು
ಮಾರಿಯ । ಬಳಗವನು ಹೆಣದಿಂವಿಕಾರರ ಕರಯಿ ರಕ್ಕಸರ ॥೯॥ ಸೂಸಿದರು ಸರಳುಗಳನಗಲಕೆ ।
ಹಾಸಿಹುಬ್ಬಿದವಿಶ್ವನಿಕರಕೆ । ಕಾಸಿದವು ಕೀಲಿಸಿದವಾನೆಗಳುದರದೆಲುವಿನಲಿ ॥ ಬೀಸೀ ಬಿಸುಟವು ಪಾಯ
ದಳ ರಥ । ರಾಸಿಗಳ ಜರುಹಿದವು ಬಲವಾ । ರಾಶಿಯಲಿ ತಾಯ್ಮಳಲ ಮೊಗೆದವು ಭೀಷ್ಮನಂಬುಗಳು
॥೧೦॥ ಅಡಸಿ ತುಂಬಿತು ಗಗನ ತಲೆಗಳ । ಗಡಣವಲಿ ದೆಸೆಯೆಲ್ಲ ಬಾಣದ । ಕಿಡಿಯಲುಂಮಹವಾ
ಯ್ತು ಹೆಣಮಯವಾಯ್ತು ರಣಭೂಮಿ ॥ ಕಡುಗಲಿಯ ಕೈಚಳಕದಂಬಿಂ । ಗೊಡಲ ತೆತ್ತುದು ವೈ
ರಿಬಲ ಬಿಡೆ । ಜಡಿದುದಂತಕನಗರವದ್ಭುತವಾಯ್ತು ಸಂಗ್ರಾಮ ॥೧೧॥ ಹೊಡೆಗೆಡೆದವಾನೆಗಳು ಥಟ್ಟೆ
ಗೆ । ಕೆಡೆದುದಗ್ಗದತುರಗದಳ ಮೈ । ಗಡತವಲಿ ಮುಂಗಡದು ಹೊರಳಿತು ಕೂಡೆ ಪಾಯದಳ ॥ ಮ
ಡಮುರಿದು ನುಗ್ಗಾಯ್ತು ರಥ ಬೆಳು ।ಗೊಡೆಪತಾಕಾದಂಡಚೌರಿಗ । ಳುಡಿದು ಕೆಡೆದವು ಕೇಣವಿಲ್ಲದೆ
ತರಿದನತಿಬಲರ ॥ ದಂಡಿಸಿತು ನೂರೆರಕುತಕರುಳಿನ। ಜೊಂಡು ಮಸಗಿತು ಕಡಿದಖಂಡವ। ದಿಂಡುತ

ಳಿತುದು ತೊಗಲಕದಳಿಯು ಮುರಿದಮೂಳೆಗಳ ॥ ದೊಂಡೆಗರುಳಿಮಳನಜರಿವಮಿದುಳಿನ। ಗೊಂಡೆಯು ದತೊರಳೆಗಳ ಕೊರಳಿನ । ತುಂಡುಗಳ ಕಾಲಾಂತಕನ ಹೆಬ್ಬೆಳಸು ಹುಲುಸಾಯ್ತು ॥೧೩॥ ಆಗಹೊಡಿ ದನಾಗಬಾಣವ । ತೂಗಿ ಬರಸೆಳೆದೆಚ್ಚ ಸಹಿತರ । ನಾಗತಾಗಿದವೆಂಬು ಬಲ್ಲವರಾರು ಕೈಲುಳಿಯ ॥ ಬಾಗಿಹುದು ಬಲುಬಿಲ್ಲು ಕಿವಿವರೆ । ಗಾಗಿ ರಿಪುಗಳ ನಿಮಿಷನಿಮಿಷಕೆ । ನೀಗಿಹುದು ನಿಟ್ಟುಸುರನೆಲೆ ಭೂಪಾಲ ಕೇಳೆಂದ॥೧೪॥ಬೀಳುತಿರ್ದುದು ಭಟರು ಮತ್ತೆ ಚ। ಡಾಳಿಸಿತು ತಲೆಮಾರಿಗಳು ಹೆಣ। ಸಾಲನೆಡಹಿದರರುಣವಾರಿಯಕೆರೆಯ ನೆನಸಿದರು ॥ ಆಳುಪೊಕ್ಕುದು ದಂತಿಘಟೆಗಳು । ತೂಳಿದವು ಕಡಿಕೆದ್ದು ತುರಗದ । ಮೇಲುರಾವುತರಳಿಮಿಗೊಟ್ಟುದು ತೇರಕಾಹಿನಲಿ ॥೧೫॥ ಆಳುಕುದುರೆಯು ಬೀಯವಮಾಡಿ ನೃ । ಪಾಲವಮಾಡುವುದೇನು ದೊರೆಗಳು । ಕಾಳಗಕೆ ತಲೆದೋರಬಾರದೆ ಭೀಮಫಲುಗುಣರು ॥ ಜಾಳನೊಕಿಸಿ ಹೊತ್ತುಗಳೆವರೆ । ಹೇಳಿ ಫಲವೇನಿನ್ನು ರಣಹೀ । ಹಾಳ ತವುಗಿಲ್ಲೆಂದು ಗಪಗಹಿಸಿದನು ಕಲಿಭೀಷ್ಮ ॥೧೬॥ ದಿವಿಜನಗರಿಯ ಸೂಳೆಗೇರಿಗೆ । ಕವಿವಮನವೇ ಮುಂದೆ ಹಜ್ಜೆಗೆ । ತವಕಿಸುವುದಿಲ್ಲಾದುದೇ ಕೈತಪ್ಪಮಾಡಿಸೆನು ॥ ಕವಿಯಿರ್ದೈ ಕಾಲಾಳುರಾವುತ । ರವಗಡಿಸಿರ್ದೈ ಜೋದವರೆಸೆಯಿರಿ । ನವಮುಹಾರಥರೆಂಬಕರೆಯಿಯೆನುತ್ತ ತೆಗದೆಚ್ಚ ॥೧೭॥ ಕಡಿದು ಬಿಸುಟನು ತುರುಗದಳವನು । ಕೆಡಹಿದನು ಹೇರಾನೆಗಳ ತಡೆ । ಗಡಿ ದನೊಗ್ಗಿನರಥವ ನೆರೆಕೊಚ್ಚಿದನು ಕಾಲಾಳ ॥ ಹೊಡಕರಿಸಿ ಹೊದರೆದ್ದು ಮುಂದಕೆ । ನಡೆನಡೆದು ಕೈಮಾಡಿ ಕಾಯದ । ತೊಡಕನಲ್ಲದೆ ತೆಕ್ಕೆಗಟ್ಟಿತು ಭಟರು ನಾಕದಲಿ ॥೧೮॥ ಆಳು ಮುರಿದುದು ಮೇಲೆ ಹೊಕ್ಕ ನೃ । ಪಾಲಕರು ಬೊಬ್ಬಿರಿದು ಭೀಷ್ಮನ । ಕೋಲ ಕೊಳ್ಳದೆ ಕೊಂಡುಹರಿದುದು ರಥದಹೊರೆಗಾಗಿ ॥ ಆಳುತನದಂಗವಣೆಯೊಳ್ಳಿತು । ಮೇಳವೇ ಬಳಿಕೇನು ಪೃಥ್ವೀ । ಪಾಲಕರಲಾ ಪೊತುರೇಯನುತೆಚ್ಚನಾಭೀಷ್ಮ ॥೧೯॥ ಅಂಗವಿಸಿ ಮರಿಹುಲ್ಲೆ ಖುರದಲಿ । ಸಿಂಗವನು ಹೊಯ್ವಂತೆ ನೃಪರು । ತ್ತುಂಗಸಹಸಿಯಮೇಲೆ ಕೈಮಾಡಿದರು ಖಡ್ಗದಲಿ ॥ ಅಂಗವಣೆಯನು ಪೊಗಳುತವೆ ದಿವಿ । ಜಾಂಗನಾಕಾಮುಕರ ಮಾಡಿಯೆ । ಭಂಗವಿಲ್ಲದೆ ಭೀಷ್ಮಮೆರೆದನು ಬಾಹುವಿಕ್ರಮವ ॥೨೦॥ ಧರಣಿಪತಿಗಳು ಹತ್ತುಸಾವಿರ । ಪುರುಳಿತಾದಿವಸದಲಿ ಹಿಂದಣ । ಕೊರತೆಯುಳಿ ಲೆಕ್ಕಕ್ಕೆ ಕೊಂದನು ಹತ್ತುಸಾವಿರವ ॥ ಮರಳಿಮೂಸಾವಿರವ ಮತ್ತಂ । ತೆರಡುಸಾವಿರಮತ್ತೆಯೈಸಾ। ವಿರವಸವರಿದನಹಿತಬಲದಲಿ ಭೂಪ ಕೇಳೆಂದ ॥೨೧॥ ಭುವನನೆಲೆಹೊಗುವೆಂದು ಹಳಚಿದ। ಶಿವನಖತಿ ಮೈದೋರಿತೆನೆ ರಿಪು । ನಿವಹದಲಿ ನೆಲೆಗೊಂಡುದೀತನ ಖತಿಯಕೋಪಶಿಖಿ ॥ ಜವನಪುರವಿಂಬಿಲ್ಲ ಕೊಂಡೊ । ಯ್ಯುವರು ಕೈಗುಂದಿದರು ಗಂಗಾ । ಭವನು ಖಾತಿಯಬಿಡನಿದೇನೆನುತಿರ್ದುದಮರಗಣ ॥೨೨॥ ಬಲವನದ ಹೊದರಲ್ಲಿ ಸೇನಾ । ಜಲನಿಧಿಯ ಸುಳಿವೆಲ್ಲ ಸುಭಟರ । ಕಳಕಳದ ಕಡುಹೆಲ್ಲಿ ಕರೆಯಿರೆ ರಥಿಕರವರೆಲ್ಲಿ ॥ ಹೊಳೆದು ಮೊಳಗಿದನಲ್ಲಿ ಬಾಣದ। ಬಲೆಯ ಬೀಸಿದನಲ್ಲ ರಕುತದ। ಹೊಳೆಯ ಹರಿಸಿದನಲ್ಲಿ ಗಂಗಾಸೂನು ಖಾತಿಯಲಿ ॥೨೩॥ ಕಡುಹು ಹಿರಿದೋ ಕಾಲರುದ್ರನ । ಪಡೆಯುನಾನುವನೀತನೊಳು ಮೈ । ಗುಡದಿರೀಬಲ ಹೊರಳಿಯೊಡೆಯಲಿ ಹೋಗಿ ದೆಸೆದೆಸೆಗೆ ॥ ತಡೆಯಲರಿದೋ ತಡವಮಾಡದಿ । ರೊಡಲಬದುಕಿಸಿಕೊಳ್ಳಿ ನೋಡುವ । ಪೊಡಯನನು ಬಳಿಕೆನುತ ಮುರಿದುದು ಪಾಂಡು ಸುತಸೇನೆ ॥೨೪॥ ಜರಿದುದಲ್ಲಿಯದಲ್ಲಿ ಹಿಂದಕೆ । ಘುರಿದುದಲ್ಲಿಯದಲ್ಲಿ ಭಯದಲಿ । ತೆರಳಿತಲ್ಲಿ

ಯದಲ್ಲಿ ರಾಯನ ಕಣ್ಣ ಸನ್ನೆಯಲಿ ॥ ತಿರುಗಿತಲ್ಲಿಯದಲ್ಲಿ ಭಟರೆದೆ । ಬಿರಿದುದಲ್ಲಿಯದಲ್ಲಿ ಭೀಷ್ಮನ ।
ಸರಳಘಾತಿಗೆ ಬೆಸುಗೆಯೊಡೆದುದು ವೈರಿಬಲ ಹೆದರಿ ॥೨೫॥ ಬಲವನಿಲಿಸಲು ನೂಕದನಿಲಜ । ನಳುಕಿ
ದನು ಸಹದೇವ ಹಿಂದಣಿ । ಗೊಲೆದ ಧೃಷ್ಟದ್ಯುಮ್ನನಕುಲರು ನೆನೆದರನುಚಿತವ ॥ ಕಲಿಘಟೋತ್ಕಚ
ನಥಮಧರ್ಮವ । ಬಳಸಿದನು ಪಾಂಚಾಲಮತ್ಸ್ಯರು। ಹಲರುನಡದುದೆ ಮಾರ್ಗವೆಂದರು ಮುರುಹಿ
ದರು ಮುಖವ ॥೨೬॥ ಹದುಳವಿಡುವವರಿಲ್ಲಿ ಸೇನೆಯ । ಮೊದಲಿಗರು ಮುನ್ನೋಟವಿಕ್ಕಿತು । ಕದನ
ದಲಿ ಕೈಸೂರೆಗೊಟ್ಟರು ಜಯವ ತಮತಮಗೆ ॥ ಎದೆಯನೀವಿದನಹಿತನೃಪನ । ಭ್ಯುದಯವೆರಡೆಲೆ
ಯಾಯ್ತು ಸಾಹಸಿ । ಸದೆದನೋ ಕಲಿಭೀಷ್ಮನೆಂದುದು ಮೇಲೆ ಸುರಕಟಕ ॥೨೭॥ ಸಕಲದೆಸೆಯಲಿ
ಮುರಿದು ಬಹಸಾ । ಯಕರ ಕಂಡನು ಪಾರ್ಥನಸುರಾಂ । ತಕಗೆ ತೋರಿದನಕಟ ನೋಡೈನಮ್ಮವರ ವಿ
ಧಿಯ ॥ ನಕುಲನಿಲ್ಲಾ ಭೀಮನೋ ಸಾ । ತ್ಯಕಿಯೊ ಸೇನಾಪತಿಯೊ ಕಟಕಟ । ವಿಕಳರೋಡಿದರೈ
ಮುರಾಂತಕ ರಥವ ತಿರುಹೆಂವ ॥೨೮॥ ಮಾತು ಹಿಂಚಿತು ತೇರು ಸೇನಾ । ವ್ರಾತವನು ಹಿಂದಿಕ್ಕಿ
ಗಂಗಾ । ಜಾತಗಿಟರಲಿ ನಿಂದುವೇನೆಂಬೆನು ಮಹಾದ್ಭುತವ॥ ಸೋತುಚೆಲ್ಲಿದ ಸೇನೆ ಮೌನದೊ। ಳಾ
ತು ನಿಂದುವು ಮತ್ತೆ ಭಂಡರ। ಮಾತದೇತಕೆ ಕೇಳು ಜನಮೇಜಯಮಹೀಪಾಲ ॥೨೯॥ಬಲವನಾಯಕ
ವೇ ವೃಥಾಹುಲು । ದಳದೊಳಗೆ ನಿಮ್ಮಗ್ಗಳಿಕೆ ಕೈ । ಯಳವ ಮನದಳಲುಗಳ ನೀಬಿಲುಗಾರತನದನು
ವ॥ ಬಲಿಯರೈ ನಮ್ಮೊಡನೆ ಮೆಚ್ಚಿಸಿ । ಬಳಿಕ ಪಡೆಯಿರೆ ಬಿರುದನೆನುತವೆ । ಫಲುಗುಣನು ಕೈಯಿಕ್ಕಿ
ದನು ಗಂಗಾಕುಮಾರನಲಿ ॥೩೦॥ ನಾವು ವೃದ್ಧರು ಬಿರಿದು ಗಿರಿದಿನ । ಲಾವಣಿಗೆ ನಮಗೇಕೆ ಹೇಳೈ ।
ನೀವಲೇ ಜವ್ವನದಭಂಟರು ರಣದ ಧರಧುರಕೆ ॥ ನೀವಿರಲು ನಿರ್ಣಾಯಕವೆ ಸೇ ।ನಾವಳಿಯ ಮಹದೇ
ವ ಮೊದಲೆ । ಗಾವುಲಕ್ಷ್ಯವೆ ಕೇಳು ಫಲುಗುಣಯೆಂದನಾಭೀಷ್ಮ ॥೩೧॥ ಕಟಕಿಯೇತಕೆ ಪರಶುರಾ
ಮನ । ಪಟುತರಕೆ ಮದ್ದರೆವನೆಂಬೀ । ನಿಟಿಲನೇತ್ರನ ಭುಜದೊಳಗೆ ಸಮಜೋಳಿಗಡ ನಿಮಗೆ ॥
ಕುಟಿಲಭಣಿತೆಯನರಿವುದಿದರೊಳು । ಭಟರು ನೀವಹಿರೆನ್ನ ಶರಸಂ । ಘಟನೆಯನು ಚಿತ್ತೈಸಿಯೆಂದ
ನು ಪಾರ್ಥನಸುನಗುತ ॥೩೨॥ ಅವರುಪೂರ್ವದಪರಶುರಾಮನ । ಪ್ರವರವನು ಮೆಚ್ಚಿಸಿದರೀಗಳಿ ।
ನವರು ಕಮಲಜಾಸ್ಯಾಲ್ಲಂದುಸುರೇಖರೆಂದಿಹರು ॥ ಅವರಮೆಚ್ಚಿಸಬಹುದುನೀವಾ । ಹವಸುವಿದ್ಯಾ
ದುರ್ವಿದಗ್ಧರು । ನಿಮಗೆ ನಾಪಿಯನಾಗಬಲ್ಲೆವೆ ಯೆಂದನಾಭೀಷ್ಮ॥೩೩॥ಬರಿಯಮಾತೋ ಚಾಪವಿದ್ಯದ।
ಲರಿತವುಂಟೋ ಹೊತ್ತುಗಳೆಯದೆ। ಹೆರಿಸಿರೇ ಸಾರಿಯನು ನಿಮ್ಮಯ ಬಾಣಗರ್ಭಿಣಿಯ ॥ ಅರಿಯಲ
ಹುದೆನಲಹುದಹುದು ಕೈ । ಮರೆಯದಿರು ಕೈಕೊಳ್ಳೆನುತ ಬೊ। ಬ್ಬಿರಿದು ಪಾರ್ಥನನೆದ್ದಿದನು ಬಾಣಾಂ
ಬುರಾಶಿಯಲಿ ॥೩೪॥ ಒಳ್ಳಿತಿದು ಕೈಚಳಕವಾವನ । ಲಿಲ್ಲ ಹರಹರ ಪರಶುರಾಮನ । ನಲ್ಲಿ ಮೆಚ್ಚಿಸಿ
ದಂವವಿನಿತೋ ಮತ್ತೆಬೇರುಹುದೊ ॥ ಒಳ್ಳೆಗರಸೋಡಿಸಿದಸಹಸವ । ನಿಲ್ಲಿ ತೋರಲು ನೆನೆದಿರೇ ತ ।
ಪಲ್ಲತಪ್ಪಲ್ಲೆನುತ ಕಣೆಗಳಕವಿದನಾಪಾರ್ಥ ॥೩೫॥ ಬೋಡಿಮಾಡದಿರೆಲೆಕಿರೀಟಿ ವಿ । ಭಾಡಿಸುವುದರಿದೇ
ದೊಠಾರಿಸಿ । ಮಾಡುವುದು ಘೊರೆಗುಚಿತವೇ ಗರುವಾಯಿಗಂಗವಿದೆ ॥ ನೋಡು ನೋಡಾದೊಡೆ ಕ
ಪರ್ದಿಯ । ಕೂಪೆನೀ ಪೊಯಾಟ್ಟಿ ಬಿಲ್ಲಸ ।ಘಾಡನಹೆ ಧಿಟಕಾಯ್ದು ಕೊಳ್ಳೆನುತೆಚ್ಚನಾಭೀಷ್ಮ ॥೩೬॥
ಇದು ಹೊಸತು ಬಾಣಾಬ್ಧಿಪ್ಲಳೆಯ । ನೋಡಿದು ಹಾಯ್ದುದು ಭುವನವಳಿವಂ ।ದುದಯಿಸಿದವಳೆಗಾ

ಲವ್ರೋವಮಾಮಾ ಶರಾವಳಿಯೊ॥ಹೊದರಡಸಿಕಿಡಿಯೆದ್ದು ದೆಸೆಗಳ।ಹೊದಿಸಿಹೊಳೆಹೊಳೆದರ್ಜುನನವಮು।
ತ್ತಿದವು ಕೆತ್ತಿದವರಿಯುಸೀಸಕ ಜೋಡುವೊಚ್ಚೆಯುವ॥೩೭॥ ಹನುಮಂ ಮಸೆಗಂಡನು ಮುರಾಂತಕ । ಕ
ನಲಿದನು ಕಡುನೊಂದು ಪಾರ್ಥನ । ತನುವಿನಲಿ ಹೆಬ್ಬಟ್ಟೆಯಾದುದು ಬಾಣಪಥಕರಿಗೆ ॥ ಮೊನೆಗಣೆ
ಯ ಮುಖದೋರೆ ರಥವನು । ತನುಗೊಡಹಿ ತರಹರಿಸಿ ತೇಜಿಗ । ಳನುವರಕೆ ಮುಖವಿರುಹಿದವು ಕಲಿ
ಭೀಷ್ಮನುಪಟಳಕೆ ॥೩೮॥ ಬಸಿವರಕುತವ ಬಳಿದು ಖಾತಿಯು । ಮಸಕದಲಿ ಮೈಮರೆದು ಮಿಗೆ ಝಳ
ಪಿಸುತ ಹೊಗಂಡುತೌಡುಗಚ್ಚುತ ಹುಬ್ಬುಗಳ ಬಿಗಿದು ॥ ಹೊಸಮಸೆಯ ಬಾಯಧ್ಧಾರೆಗಳ ಶರ । ವಿ
ಸರವನು ತೊಡಚಿದನು ಭೀಷ್ಮನ । ಮುಸುಕಿದನುವುಗುಳೆಚ್ಚುಪುನರಪಿಕರೆದನಂಬುಗಳ ॥೩೯॥ ಮುತ್ತಿ
ದವು ನರನಂಬುಕಣೆಗಳು । ಹುತ್ತುಹೊಗುವಂದದಲಿ ಖಂಡವ । ತುತ್ತಿಹಾಯ್ದವು ಕೆಲವುಕೆಲವೌಕಿದವು
ಕಿಬ್ಬದಿಯು ॥ ಮುತ್ತಿದವು ಮೈಗಳಲಿ ತಲೆಯನು । ಕುತ್ತಿದವು ವಜ್ರಾಂಗಿಯಲಿ ಭಟ । ನೆತ್ತಲಿತ್ತ
ಲೆನಲ್ಕೆ ಬಳಲಿಸಿದನು ನದೀಸುತನ ॥೪೦॥ ಜೋಡುಹರಿದುದು ತಾಳಹಳವಿಗೆ । ನೀಡಿ ಕೆಡೆದುದು ಸಾರ
ಥಿಯ ಅಸು । ಕೂಡಿತಂತಕಪುರಿಗೆ ತೇಜಿಗಳುಸುರ ಕಾರಿದವು ॥ ಗೂಡುಗೊಂಡುದು ವಿಕ್ರಮಾನಳ ।
ಸಾಡಬಾರದು ಭೀಷ್ಮನನು ಕೈ । ಮಾಡಿ ಕವಿಯಲಿ ದ್ರೋಣಗುರುಸುತರೆಂದುದಖಿಳಜನ ॥೪೧॥ ಸಾ
ರು ಫಡ ಕೆಲಬಲದಹಂಗಿನ ।ವೀರತನವೇ ಭೀಷ್ಮಮುನಿದೊಡೆ । ಹೋರಟೆಗೆ ಬರಹೇಳು ಭಾರ್ಗವನಿವ
ರಪಾಡೇನು ॥ ಸೈರಿಸಿದೆನಾವಮಕ್ಕಳೆಂದೇ । ವೈರವನು ಕೈಕೊಳ್ಳೆನಿವನಿರೆ । ಧೀರತನವನು ನೋಡೆನುತ
ಮುನಿದೆಚ್ಚನಾಭೀಷ್ಮ ॥೪೨॥ ಎಸಲು ಕಡಿದನು ಪಾರ್ಥನಾತನ । ವಿಶಿಖವನು ಕಡಿದಿವರು ಕಿಡಿವ । ಳೈ
ಸುವಧಾರೆಯು ಭೂರಿಬಾಣದ ಬಲೆಯು ಬೀಸಿದನು ॥ ಕುಸುರಿದರಿದನು ಮತ್ತೆ ನರನೋ । ಡಿಸಿದನಿವ
ರಂಬುಗಳನವನಿಗೆ । ಹಸುಗೆವಾಡಿದನಾತನೀತನ ಸಮರ ಸಮತಳಿಸಿ ॥೪೩॥ ಉರಗಬಾಣವನೀತ ಕರೆ
ದನು । ಗರುಡಬಾಣವನಾತ ಕವಿಸಿದ । ನುರಿಯವಿಶಿಖವನವರು ಸಂಧಿಸಿವರು ಜಲಾಸ್ತ್ರದಲಿ ॥ ಗಿರಿ
ಶಿಳೀಮುಖಕವರು ವಜ್ರವ । ಹರಿಸಿದರು ತಿಮಿರಾಸ್ತ್ರವೆದ್ದೊಡೆ । ತರಣಿಮಾರ್ಗಣದಿಂದ ಕಡಿದನು
ಭೀಷ್ಮವಹಿಲದಲಿ ॥೪೪॥ ಆವವಿಧದಲಿ ಪಾರ್ಥನೆಸುವನ । ದಾವಬೇಗದಿ ಮುರಿವನೀತನ । ದಾವಚಾಪ
ರಹಸ್ಯವಿದ್ಯೆಗಳೊಳಗೆ ಬಳಸಿದವೊ ॥ ಆವಿಧದಲಾಪರಿಯೆಲಾಸಂ । ಭಾವನೆಯುಲಾಲುಳಿಯುಲಾನಾ ।
ನಾವಿಧಾನದಲೊದಗಿ ಸರಿಮಿಗಿಲೆನಿಸಿದನು ಪಾರ್ಥ ॥೪೫॥ ಎರಡು ಶರದಲಿ ನರನು ಭೀಷ್ಮನ । ಕರದ
ಕಾರ್ಮುಕದಂಡವನು ಕ । ತ್ತರಿಸಿದನು ಕೈಯೊಡನೆ ಕೊಂಡನು ಮತ್ತೆ ಹೊಸಧನುವ ॥ ಸರಳಸೂಠಿ
ಯು ತೋರಿಸಿದನ । ಬ್ಬರಿಸಿ ಫಲುಗುಣನೈದುಬಾಣದ । ಲರಿಭಟನ ಚಾಪವನು ಕೆಡಿಮೂರಾಗಿ ಖಂಡಿ
ಸಿದ ॥೪೬॥ ಮತ್ತೆ ಹೊಸಚಾಪದಲಿ ಭೀಷ್ಮನು । ಮೃತ್ಯು ಖತಿಗೊಂಡಂತೆ ಶರದಲಿ । ಕೆತ್ತನಾಕಾಶ
ವನು ಕಡಿದನು ಪಾರ್ಥ ನಿಮಿಷದಲಿ ॥ ಮುತ್ತಯನಕರತಳದಧನುವನು । ಮತ್ತೆ ಕತ್ತರಿಸಿದನು ರಣದ
ಲಿ । ಹತ್ತುಸಾವಿರಬಿಲ್ಲು ಸವೆದವು ಕುರುಪಿತಾಮಹನ ॥೪೭॥ ಉಲಿವಕಿರುಘಂಟೆಗಳ ಹೊಳೆಹೊಳೆ ।
ಹೊಳೆವಶಕುತಿಯ ತುಡುಕಿ ಭೀಷ್ಮನು । ಫಲುಗುಣನನಿಡೆ ಕಡಿದು ಬಿಸುಟನು ಮೂರುಬಾಣದಲಿ ॥
ಸೆಳೆದು ಫಲುಗುಣ ದಿವ್ಯಶಕ್ತಿಯ।ನೊಲಿದು ಮಂತ್ರಿಸಿ ಹೊನ್ನಘಂಟೆಗ। ಳುಲಿಯೆ ಕಡುಖತಿಯಿಂದ
ಲಿಡೆ ಖಂಡಿಸಿದನಾಭೀಷ್ಮ ॥೪೮॥ ಆವಚಾಪವ ತುಡುಕಿ ಕೆನ್ನೆಗೆ । ತೀವಿಯೆಸೆಯುದಮುನ್ನ ಫಲುಗು

ಣ | ನೋವದೆಸುವನು ಕಡಿದು ಬಿಸುಡುವನವನ ಬಿಲ್ಲುಗಳ || ಅವದಿವ್ಯಾಸ್ತ್ರವನು ಕುಂತಿಯ | ಮಾವ ತೊಟ್ಟನು ತೊಡವಮುನ್ನ ಶ | ರಾವಳಿಯ ಮುಂಕೊಂಡು ಖಂಡಿಸಿ ಪಾರ್ಥನೆಸುತಿರ್ದ ||೪೯|| ಮೇಲೆ ಹೇಳಿಕೆಯಾಯ್ತು ಕೌರವ | ರಾಳಿಸಲಿ ದುಶ್ಶಾಸನಂಗೆ ಕ | ರಾಳ ಭೂರಿಶ್ರವಜಯದ್ರಥಗುರು ಕೃಪಾದ್ಯರಿಗೆ || ಕೋಲಹೊದೆಗಳ ಭಂಡಿಯಲಿ ನಿ | ಸ್ಸಾಳ ಸೂಳಿನ ಲಗ್ಗೆಯಲಿ ಹೇ | ರಾಳದೊಡ್ಡವಣೆಯಲಿ ಪಡಿಬಲ ಕವಿದುದುರವಣಿಸಿ ||೫೦|| ನರನ ಬೆಂಬಲವಾಗಿ ಪಾಂಚಾ | ಲರನು ಮತ್ಸ್ಯನ ಭೀಮಸೇನನ | ವರ ನಕುಲ ಸಹದೇವ ದೃಷ್ಟದ್ಯುಮ್ನ ಸಾತ್ಯಕಿಯ || ಅರಸನಟ್ಟಿದನಿತ್ತಲಂಬಿನ | ತಿರುಹುವೆರಳಿನ ಮೊರೆವಬಿಲ್ಲಿನ | ವರರಥದ ದೂವಾಳಿ ಮೆರೆಯೆ ಶಿಖಂಡಿ ನಡೆತಂದ || ಕಂಡನರ್ಜುನ ನೌಕಿ ಕವಿವಶಿ | ಖಂಡಿಯನು ಮಝುಪೂತುಪಾಯಕು | ಗಂಡುಗಲಿಯಹೆಜಾಗು ತೊಟ್ಟೆಸು ಭೀಷ್ಮನವಯವವ || ಕೊಂಡುನಡೆ ನೀನಂಜದಿರು ಕೈ | ಕೊಂಡು ನಿಲುವೆನೆನುತ್ತ ಫಲುಗುಣ | ಮಂಡಿಸಿದನಾಲಿದನು ಸೆಳೆದನು ಬೋಳೆಯಂಬುಗಳ ||೫೧|| ಒದರಿ ಜೇವಡೆಗೈದು ಬಾಣವ | ಕೆದರಿದನು ಧಟ್ಟಿಸಿ ಚಾಪವ | ನೊದೆದು ಹಾಯ್ದವು ತೋದವಂಬುಗಳರಿಯರಕುತದಲಿ || ಇದಿರೊಳುಲಿದು ಶಿಖಂಡಿ ಶರಸಂ | ಗದಲಿ ಹೂಡಿದನಾಗ ಭೀಷ್ಮನ | ಹೃದಯದಲಿ ವೈರಾಗ್ಯಮನೆಗಟ್ಟಿದುದು ನಿಮಿಷದಲಿ ||೫೨|| ಎಲೆಮಹಾದೇವೀನಪುಂಸಕ | ನಲಿ ನಿರಂತರ ನಮಗೆ ಸಮರವೆ | ಗೆಲವಿದೊಳ್ಳಿತು ಸುಡುಶಿಖಂಡಿಯಕೂಡೆ ಬಿಲುವಿಡಿದು || ಅಳುಕದೆಚ್ಚನಲಾ ದುರಾತ್ಮನ | ನಿಲವ ತೆಗೆತೆಗೆಯೆನುತ ಚಾಪವ | ನಿಳುಹಿದನು ರಥದೊಳಗೆ ಗಂಗಾಸೂನು ತವಕದಲಿ || ... ||೫೩||

ಅಂತು ಸಂಧಿ ೮ಕ್ಕಂ ಪದ ೫೪೫ಕ್ಕಂ ಮಂಗಳಮಸ್ತು.

ಒಂಭತ್ತನೆಯ ಸಂಧಿ.

ಸೂಚನೆ|| ಮಲೆತಕುರುಪಾಂಡವಮಹೀಮಂ | ಡಲದ ಬುಧರಾಹವಧರಿತ್ರೀ | ನಿಳಯದಲಿ ರಂಜಿಸಿತು ಗಂಗಾಸುತನ ಶರಶಯನ ||

ಪದ|| ನರನ ಸರಳಿಗೆ ಮೈಯ ಕೊಟ್ಟನು | ಮುರಿದು ರಥವನು ನೆಮ್ಮಿ ನಿಜಮೋ | ಹರವ ನೋಡಿದ ಶಲ್ಯಗುರುಕೃಪಕೌರವಾನುಜರ || ಕರೆದು ನುಡಿದನು ಪಾರ್ಥನಂಬಿನ | ಹೊರಳಿ ಹೊಳ್ಳಿಸುತಿದೆ ಮದಂತಃ | ಕರಣ ಕಂದಿತು ಕಾಯಲಾಪೊಡೆ ಬನ್ನಿ ನೀವೆಂದ ||೧|| ಇವು ಶಿಖಂಡಿಯಬಾಣವೇ ಪಾ | ಸವನ ಮಗನಂಬುಗಳು ಪ್ರಲಯದ | ಶಿವನ ಶೂಲದ ಗಾಯಕಿವು ಮಿಗಿಲೇನನುಸುರುವೆನು || ಇವನು ಸೈರಸಲಾರೆನಿಂದ್ರನ | ಪವಿಯ ಹೊಯ್ಲನು ಹೊಗುವೆನಂತ್ಯದ | ಜವನ ಲೌಡಿಯ ಹತಿಗೆ ಹೆದರೆನು ಕೇಳಿ ನೀವೆಂದ ||೨|| ಪರಶುರಾಮನ ಕೊಡಲಿಗಡಿತವ | ಧರಿಸಲಾಪೆನು ಪ್ರಲಯಭೈರವ | ನಿರಿದೊಡಂಜೆನು ಸಿಡಿಲು ಹೊಯ್ದೊಡೆ ರೋಮ ಕಂಪಿಸದು|| ಹರನ ಪಾಶುಪತಾಸ್ತ್ರಬಾಣವು | ಕೊರೆದೊಡೆಯು ಲೆಕ್ಕಿಸೆನು ಪಾರ್ಥನ | ಸರಳಬಾಧೆಗೆ ಸಿಲುಕಿದೆನು ಪರಿಹರಿಸಿ ನೀವೆಂದ ||೩|| ಹರಿಯ ಕಾ

ಮೋದಕಿಯ ಹೊಯ್ಲನು । ಬೆರಳಲಾನುವೆನಖಿಳಕುಲಗಿರಿ । ಬಿರಿದು ಬೀಳುವೊಡಾನಲಾಪೆನುನಖದ
ಕೊನೆಯಿಂದ ॥ ಧುರದೊಳಾದಿವರಾಹದಾಡೆಯು। ಲಿರಿದೊಡೆಯು ನರಸಿಂಹನಖವಲಿ । ಕೆರದೊಡೆಯು
ಸೈರಿಸುವೆ ನಂಜುವೆನರ್ಜುನನ ಶರಕೆ ॥೪॥ ಒಡಲನೊಚ್ಚತಗೊಂಡವಂಬಿನ । ಕುಟಿಗೆ ನೆರೆಯದು ರಕು
ತ ಜಲವು । ಗ್ಗಡದಲುಗಿದಂಬುಗಳು ಬಂಬಲುಗರುಳ ಸೇದಿದವು ॥ ಉಡಿದವೆಲು ಬಾಣಂಗಳೆಲುವಾ
ಗಡಸಿದುವು ತನಿರಕುತಬಾಣವ । ನುಡುಗದವು ಶರವಿವು ಶಿಖಂಡಿಯ ಬಾಣವಲ್ಲೆಂದ ॥೫॥ ಚೇಳು ಬೆ
ನ್ನಿನಲೊಡೆದುಮೂಡುವ । ಬಾಲವೃಶ್ಚಿಕನಂತೆ ಮಸಗಿನ । ಬೋಳೆಯಂಬುಗಳೊಡೆದು ಕಣೆದೋರಿದ
ವು ಬೆನ್ನಿನಲಿ ॥ ಕೋಲುಪಾರ್ಥನವಿವುಶಿಖಂಡಿಯ। ಕೋಲುಗಳು ತೃಣವಲ್ಲ ನಿಂದುದು । ಕಾಳಗವು ತಮ
ಗೆನುತ ಮೆಲ್ಲನೆ ಮಲಗಿದನು ಭೀಷ್ಮ ॥೬॥ ವೀರಭಟಭಾಳಾಕ್ಷಭೀಷ್ಮನು । ಸಾರಿದನು ಧಾರುಣಿಯನಕ
ಟಾ । ಕೌರವನ ಸಿರಿ ಸೂರೆವೋಯಿತು ಹಗಗೆ ಗೆಲುವಾಯ್ತು ॥ ಆರನಾವಂಗದಲಿ ಬರಿಸದು । ಘೋ
ರವಿಧಿ ಶಿವಶಿವಯೆನುತಲಾ । ಸಾರಥಿ ಮಹಾಖೇದದಲಿ ತುಂಬಿದನು ಕಂಬನಿಯ ॥೭॥ ಹೂಳಿಹೋ
ಯಿತು ಬಾಣದಲಿ ಮೈ । ತೋಳು ತೊಡೆತುಂಡದ್ದು ರಕುತದ । ಸಾಲು ತೊರಳೆಯ ಕರುಳ ಕುಸು
ರಿಯ ಬಸಿವನೆಣವಸೆಯ ॥ ಮೂಳೆಯೊಟ್ಟಿಲ ನೆಲನ ಮುರಿದೆಲು । ಜಾಳಿಯಲಿಹೊಗರೊಗುವಕೆಂ
ಗರಿ । ಗೋಲ ಮಂಚದಮೇಲೆ ರಣದಲಿ ಭೀಷ್ಮಪವಡಿಸಿದ ॥೮॥ ಒರಲಿಕಡೆದರು ಹಡಪಿಗರು ಸೀ । ಗು
ರಿಯಚಾಮರದವರು ತನ್ನಯ । ಅರಮನೆಯ ವಿಶ್ವಾಸಿಗಳು ಬಿಲುಸರಳ ಹಿಡಿವವರು ॥ ಗುರುವಲಾ
ಮುತ್ತೈಯ ನಮ್ಮನು । ಹೊರೆದದಾತಾರಂಗೆ ತಪ್ಪಿದ । ರುರುನರಕಿ ಪಾಪಿಗಳು ಪಾಂಡವರೆಂದು
ಹೊರಳಿದರು ॥೯॥ ಬೆದರು ತವನಿಧಿಯಾಯ್ತು ಪಟುಭಟ । ರೆದೆಗಳಿಬ್ಬಗಿಯಾಯ್ತು ನೃಪನ । ಭ್ಯು
ದಯ ಕೈಸೆರೆವೋಯ್ತು ಸುಕ್ಕಿತು ಮನದ ಸುಂಮಾನ॥ ಹೊದರೊಡೆದು ಕುರುಸೇನೆ ತೆಗೆದೋ। ಡಿದು
ದು ಭಯಜಲಧಿಯಲಿ ತೇಕಾ । ಡಿದರು ಕೌರವಜನಪರಾಭೀಷ್ಮಾವಸಾನದಲಿ ॥೧೦॥ ಭೀತಿಬೀತುದು ಹ
ರುಷವಲ್ಲರಿ । ಹೂತುದವರಿಗೆ ವಿಜಯಕಾಮಿನಿ । ದೂತಿಯರ ಕಳುಹಿದಳು ತನಿಹೊಗರೇರಿತುತ್ಸಾಹ ॥
ಸೋತುದಾಹವ ಚಿಂತೆ ಸರಿದುದು । ಕಾತುರತೆಗೆಡೆಗುಡದನುಡಿಭಾ । ವಾತಿಶಯವೊಂದಾಯ್ತು ಪಾಂ
ಡವಬಲದ ಸುಭಟರಿಗೆ ॥೧೧॥ ಮಲಗಿದನು ಕಲಿಭೀಷ್ಮನೆನೆ ಕಳ । ವಳಿಸಿದನು ಕುರುರಾಯನುದರ
ದೊ । ಳಿಳಿದುದಾಯುಧವೆಂಬತೆರದಲಿ ತಳ್ಳಬಾರದನು ॥ ಬಲಿದುಸುರ ಬಿಸುಸುಯ್ಲ ಕಾಯದ । ಕಳಕ
ಳದ ಕಂಬನಿಯ ಕಂಗಳ । ಲಿಳಿವಕದಪಿನ ಹೊತ್ತದುಗುಡದ ಮೊಗದಲೈತಂದ ॥೧೨॥ ಎಡೆಮುರಿದು
ದೈಶ್ವರ್ಯವಿನ್ನೇ । ನೊಡೆದಭಿತ್ತಿಯ ಚಿತ್ರದೆಡೆಯನು । ಕಡೆಗೆ ಬಂದುದು ಕೌರವಾನ್ವಯಶಿವಮಹಾ
ದೇವ ॥ ಹಿಡಿದದುಗುಡದ ಕವಿದಮುಸುಕಿನ । ಗಡಣದಲಿ ಗುರುಕೃಪಜಯದ್ರಥ । ರೊಡನೊಡನೆ ಬ
ರುತಿರ್ದುದಖಿಳಮಹೀಶಪರಿವಾರ ॥೧೩॥ ಕುದುರೆ ಕಂಬನಿಯಿಕ್ಕಿದವು ಮೈ । ಬಿದಿರಿದವು ದಂತಿಗಳು
ಕಾಲಾ। ಳೊದುರುತಿರ್ದರು ಕುಂದಿತೇ ಕೌರವನ ಕಡುಹೆನುತ ॥ ಬದರ ಬಂದಿಗೆ ಸಿಲುಕಿತವನಿಪ। ರದ
ಟು ವಿಕ್ರಮವಹ್ನಿ ತಂಪೇ । ರಿದುದು ಕಡುದುಂಮಾನಕೇಣಿಯ ಪಿಡಿದುದರಿಸೇನೆ ॥೧೪॥ ಬಂದು ಭೀ
ಷ್ಮನ ಚರಣಕಮಲದ । ಲಂದು ಕಾಯುವ ಕೆಡಹಿ ವಿಗತಾ । ನಂದಭೂಪತಿ ಹೊರಳಿದನು ಹೇರಾಳ
ಶೋಕದಲಿ ॥ ಬಂದು ಮಗ್ಗುಲ ಕೆಲದಲಿವರ್ಸ್ಮ । ತಂದು ನಿಂದರು ಗುರುಕೃಪಾದಿಗ। ಳೊಂದುಮಗ್ಗ

ಲಕೆಲನ ಸಾಂತ್ರ ಕೃಷ್ಣಸಹಿತಿವರು ॥ ಕವಿದಮುಸುಕಿನ ಕಂದಿದಾನನ । ದವನಿಪತಿಯುಮಸೂನುಗಂ
ಗಾ । ಭವನ ಮಗ್ಗುಲಿಗೈದುತಿರ್ದನು ಬಹಳ ಶೋಕದಲಿ ॥ ಪವನಸುತಸಹದೇವಸಾತ್ಯಕಿ । ದಿವಿಜಪ
ತಿಸುತಾದಿಯಾದವ । ರವಿರಳದಶೋಕಾಗ್ನಿತಪ್ತರು ಹಂತಿಗಟ್ಟಿದರು ॥೧೬॥ ಪನನೆನೆದಾವುದನೊಡ
ರ್ಚಿದೆ । ನೇನ ಹೇಳುವೆನೆನ್ನ ಪುಣ್ಯದ । ಹಾನಿಯನು ಕೈತಪ್ಪನೆನೆದೆನು ನಿಮ್ಮ ಸಿರಿಪದಕೆ ॥ ತಾನದಾವು
ದೊ ಧರ್ಮತತ್ವನಿ । ಧಾನವೆಂದರಿಯದೆ ಕೃತಾಂತಂ । ಗಾನುಹಂಗಿಗನಾದೆನೆಂದೊರಲಿದನು ಯಮಸೂ
ನು ॥೧೭॥ ಭೇದವೇಕೆಲೆಮಗನೆ ನಿನ್ನೋ । ಪಾದಿಯಲಿ ಚರಿತಾರ್ಥನಾವೆನು । ಮೇದಿನಿಯೊಳಾವಮಾ
ತು ಸಾಕೀಕ್ಷಾತ್ರಧರ್ಮವನು ॥ ಆದರಿಸುವುದೆ ಧರ್ಮ ನಿಮಗಪ । ರಾಧಪಾತಕವಿಲ್ಲ ಸುಕೃತ । ಕ್ಷೀದ
ಯಾಂಬುಧಿಕೃಷ್ಣ ಹೊಣೆ ನಿಮಗಂಜಲೇಕೆಂದ ॥೧೮॥ ಮಗನೆ ನಿಂದಿರು ಪಾರ್ಥ ಕೂರಂ । ಬುಗಳ
ಹಾಸಿಕೆಯಂದವಾಯಿತು । ಹೊಗರೆಲಗತಲಗಿಂಬರಚಿಸೆನೆ ಪಾರ್ಥ ಕೈಕೊಂಡು ॥ ಬಿಗಿದಬಿಲುಗೊಂಡೆ
ದ್ದು ಮಂಡಿಸಿ । ಹೊಗರ ಕವಲಂಬೈದನೆಚ್ಚನು । ನೆಗಹಿದನುಮಸ್ತಕವಸಾಕ್ಷಣ ಕೇಳು ಧೃತರಾಷ್ಟ್ರ ॥
ಹೊಳೆವಕಣೆಗಳ ಮಂಚ ತಲೆಗಿಂ । ಬಳವಡಿಕೆಯಲಿ ಭೀಷ್ಮಸುಖದಲಿ । ಮಲಗಿದನು ಬಹಿರಂಗಭುವನ
ವ್ಯಾಪ್ತಿಯನು ಮರೆದು ॥ ನಳಿನನಾಭನ ದಿವ್ಯನಿಜವನು । ಬಲಿದು ಮನದಲಿ ಹಿಡಿದನೋವಿನ । ಕಳಕಳ
ಕೆ ಧೃತಿಗೆಡದೆ ಮೆರೆದೆನು ಶಸ್ತ್ರಶಯನದಲಿ ॥೨೦॥ ಒಡಲ ಜಡಿದವು ರೋಮರೋಮದೊ । ಳಡಸಿ
ದಂಬುಗಳಂಗವೇದನೆ । ತೊಡರುತುಬ್ಬರಿಸಿತ್ತು ಥಗೆ ಗೋನಾಳಿನೀರ್ದಗೆಯೆ ॥ ನುಡಿಯಲಾರೆನು
ಮಕ್ಕಳಿರ ನೀ । ರಡಸಿದೆನು ಪಿರಿದಾಗಿಯೆನೆ ನಡ । ನಡುಗ ದುರಿಯೋಧನನು ದೂತರ ಕರೆದು ನೇ
ಮಿಸಿದ ॥೨೧॥ ತಲಿಸಿದನು ಹಿಮರುಚಿಯ ಹಿಂಡಿದ । ಪರಮ ಶೀತೋದಕವು ತಾನೆನೆ । ಸುರಭಿಪರಿಮ
ಳಪಾನವನು ಪರಿಪರಿಯಕುಡಿನೀರ ॥ ಸರಸಬಹುವಿಧಭಕ್ಷ್ಯಭೋಜ್ಯವ । ನೆರಹಿದನು ಕುಡಿನೀರಗಿಂಡಿಯ
ನರಸನೀಡಲು ಕಂಡು ನಕ್ಕನು ಭೀಷ್ಮನಿಂತೆಂದ ॥೨೨॥ ಪರನೋವಿನಲಾದತೃಷ್ಣೆಯ । ನಾರಿಸಲು
ಯಿವರಳವೆಸಾಕಿವ । ತೋರದಿರು ತೆಗೆ ತೊಲಗು ಮೂಢರಪರಮಗುರು ನೀನು ॥ ಆರಿತೈ ಗೋನಾಳಿ
ಫಲುಗುಣ । ತೋರು ನಿನ್ನರಿಕೆಯನು ಸಲಿಲವ । ಬೀರು ಬೇಗದಲೆನಲು ಬಿಲುಗೊಂಡದ್ದನಾಪಾರ್ಥ
॥೨೩॥ ಜಲದಬಾಣದಲಮಳಗಂಗಾ । ಜಲವ ತೆಗೆದನು ತಪ್ತಲೋಹದ । ಬೆಳಕಿನಂತಿರೆ ಹೊಳೆವಸು
ಲಲಿತಬಹಳಧಾರೆಯನು ॥ ಇಳುಹಿದನು ಸರಳಿಂದ ವದನದ । ಬಳಿಗೆ ಬಲುತೃಷ್ಣೆಯನು ಭೀಷ್ಮಗೆ ।
ತೊಲಗಿಸಿದನಾತಾಪ ವಡಗಿತು ಜಲದಧಾರೆಯಲಿ ॥೨೪॥ ಸಾಕುಸಾಕೈ ತಂದೆ ತನ್ನನು । ಸಾಕಿಕೊಂಡೈ
ಪಾರ್ಥ ಘನತೃ । ಷ್ಣಾಕುಲತೆಬೀಳ್ಕೊಂಡುದತಿಶಯತುಷ್ಟಿ ತನಗಾಯ್ತು ॥ ಸಾಕೆನುತ ಫಲುಗುಣನ
ಪರಮವಿ । ವೇಕವನು ಪತಿಕರಿಸಿ ನೆರೆಚಿಂತಾ । ಕುಳನ ಮಾಡಿದನು ಕೌರವರಾಯನನು ಭೀಷ್ಮ ॥೨೫॥
ತಂದೆ ಕಂಡೈ ಕೌರವೇಶ ಪು । ರಂದರಾತ್ಮಜನಳಬಳವನೇ । ನೆಂದು ಕಾಣಲು ಬೇಹುದೈ ಹಲವಂಗದ
ಲಿ ನರನ ॥ ಹಿಂದಣೆಡೆಯಲಿ ದ್ರೋಣಕೃಪಗುರು । ನಂದನಾದಿಗಳೆಲ್ಲ ಬಲ್ಲರು । ಮಂದಮತಿಯನು
ಬಿಡುವುದರಸ ಕೃಪಾಳುವಾಗೆಂದ ॥೨೬॥ ಅಳಿದರೊಡಹುಟ್ಟಿದರು ಹಲಬರು । ನೆಲನರಾಯರು ಸವೆದು
ದತಿಬಲ । ರಳುಕುವರು ನರನೆಂದೊಡೀದ್ರೋಣಾದಿನಾಯಕರು ॥ ಅಲಗಿನಂಬಿನ ಹಕ್ಕೆ ನಮಗಾ ।
ಯ್ತೊಳಜಗಳ ಸಾಕಿನ್ನು ಸೋದರ । ರೊಳಗೆ ಸಂಪ್ರತಿಯಾಗಿ ಬದುಕುವುದೆಂದನಾಭೀಷ್ಮ ॥೨೭॥ ನಿನಗೆ

ರೋಚಕ ನಮ್ಮಮಾತುಗ । ಳಿನಿಬರಿಗೆ ರುಚಿಸುವವು ಪಾಂಡವ । ರನುಮತವು ಬೇರಿಲ್ಲ ನಿನ್ನನುಮತ
ವ ಬಯಸುವರು ॥ ತನುಜ ಕದನದ ಕಷ್ಟತನ ಬೇ । ಡೆನಗೆ ಉಪಕಾರವು ವೃಥಾಕುರು । ವನಕೆ ವ್ಯಾ
ಯ ಬಿತ್ತಬೇಡೆಕಟೆಂದ ನಾಭೀಷ್ಮ ॥೨೮॥ ಮಾತುಕಿಪಿವೊಗದಾನುಸಮರ । ಕ್ಕಾತುರದ ಛಲದಂಕನೆಂ
ಬೀ । ಮಾತ ಮರೆವವನಲ್ಲ ಕೇಳ್ ರಾಜ್ಯಾಭಿಲಾಷೆಯಲಿ ॥ ಸೋತಮನದವನಲ್ಲ ಭುವನ । ಖ್ಯಾತನೆನಿ
ಪೊಂದಾನುಡಿಯೆ ಧಿಟ । ನೀತಿಗಳೆದರೆ ಬಳಿಕ ನಿಮ್ಮಯ ಮೊಮ್ಮನಲ್ಲೆಂದ ॥೨೯॥ ಮೊದಲೊಳೆಂ
ದಿರಿ ನೀವು ಬಳಿಕೀ । ಯದುಕುಲಾಧಿಪಕೃಷ್ಣನುರೆ ಹೇ । ಳಿದನು ಋಷಿಗಳು ಬೊಪ್ಪನವರೀಹದನ ಹೇ
ಳಿದರು ॥ ವಿದುರ ಹೇಳಿದನೆಲ್ಲರಿಗೆ ತಾ । ನಿದುವೆ ನಿಶ್ಚಯವೆನ್ನಮತನೀ । ಗದಿದು ಬುದ್ಧಿಯ ಹೇಳಬೇ
ಡೆಂದೆರಗಿದನು ಪದಕೆ ॥೩೦॥ ಒಂದುಮತವೆಮಗೊಂದುನುಡಿ ಮನ । ವೊಂದು ಮತ್ತೊಂದಿಲ್ಲ ಸಾಕಿ
ದ । ನೆಂಮ ಫಲವೇನಿನ್ನು ಸಂಧಿಯ ಪಾಂಡುತನಯರಿಗೆ ॥ ಇಂದು ನಿಮಗೀಹದನಸಾನ್ಯೆ । ತಂದು ಬ
ಳಕಿನ್ನೊಡಲ ಸಲಹುವೆ। ಚಂದವೊಳ್ಳಿತು ತಪ್ಪನಾಡಿದರೆಂದು ನೃಪ ನುಡಿದ ॥೩೧॥ ಕಾಯದಲಿ ಕಕ್ಕುಲಿ
ತೆಯೆನಗದ । ರಾಯಸವು ತನಗೇಸುದಿನಕ । ಲ್ಪಾಯುಗಳಿಗೊಳಗಾಗಿ ಕಾಲನ ರಾಜಕಾರಿಯವು ॥ ಹೇ
ಯಸದಸಿರಿಯಿಂದರವ್ಯವಶ । ದಾಯತದ ಮನದಲ್ಲಿ ಪಾಂಡವ । ರಾಯಮಸ್ತಕಶೂಲನೆಂಬೀಬಿರುದ
ಬಿಡೆನೆಂದ ॥೩೨॥ ಎಲವೊ ಭೀಷ್ಮನಮಾತುಗಳ ನೀ। ನೊಲುವೊಡೆಯು ಸಂಧಾನದಲಿ ನೀ । ನಿಲುವೊ
ಡೆಯು ದೇಹಾಭಿಲಾಷೆಗೆ ಬಲಿವೊಡೆಯು ಮನವ ॥ ಬಲಿವೆನೇ ತಾಭೀಮಸಂಧಿಯ । ಕಳಚಿನಿನ್ನೊಡ
ಹುಟ್ಟಿದಾತನ । ತಿಳಿರಕುತವನು ಕುಡಿದೊಡಲ್ಲದೆ ಬರಿದೆಬಿಡೆನೆಂದ ॥೩೩॥ ಹಾನುಡಿಯದಿರು ಕುರುಪಿ
ತಾಮಹ । ನೇನಬೆಸಸಿದುದಕೆ ಹಸಾದವು । ನೀನು ನಡೆ ಪಾಳಯಕೆ ಮಿಡುಗಲಿತನವ ಮಾಣೆಯಲಾ ॥
ಮೌನಮುದ್ರೆಯ ಹಿಡಿಯೆನಲು ಪವ। ಮಾನನಂದನ ಖಾತಿಯಲಿ ಯಮ। ಸೂನುವನು ನೋಡುತ್ತಲೆ
ದ್ದದು ಸರಿದನಲ್ಲಿಂದ ॥೩೪॥ ಬೀಳುಕೊಡಿರೇ ಸಾಕು ಭೀಮನು । ಬಾಲಭಾಷಿತನಾದನೀಭೂ । ಪಾಲ
ಕೌರವನೆಂಬವನು ಮೊದಲಿಗನು ಮೂರ್ಖರಿಗೆ ॥ ಕಾಳಗದೊಳೊಡೆಹಾಯ್ದು ಸಾಯಲಿ। ಬಾಳಲೊಲಿ
ದಂತಾಗಿ ಹೋಗಲಿ । ಹೇಳಿದಿರಿ ನಿಮ್ಮಿಂದ ತಪ್ಪಿಲ್ಲೆಂದನಸುರಾರಿ ॥೩೫॥ ಮುರಹರನ ಮತವಹುದು
ಸಾಕಿ । ನ್ನರಸ ಧರ್ಮಜ ಹೋಗು ದ್ರುಪದಾ। ದ್ಯರಿಗೆ ನೇಮವುಪಾರ್ಥ ಮರಳ್ಯೆ ತಂದೆ ಪಾಳಯಕೆ ॥
ಧರೆಯಲೋಲುಪ್ತಿಯಲಿ ನಮ್ಮನು । ಧುರದೊಳಗೆ ನೋಯಿಸಿದೆವೆಂಬೀ । ಧರಧುರವ ನೆನೆಯದಿರಿ ವಿ
ಜಯಗಳಾಗಿ ಹೋಗೆಂದ ॥೩೬॥ ಇವರು ಕಳುಹಿಸಿಕೊಂಡರೀಮಾ । ಧವನ ಮೆಲ್ಲಡಿಗಳನು ಹೃದಯ
ದ । ಲವುಚಿ ಕಂಗಳಮುಚ್ಚಿ ದೇವನಮೂರ್ತಿಯನು ನೋಡಿ ॥ ಸವಿಯದಚಲಾನಂದಬಹಳಾ । ರ್ಣವ
ದೊಳಗೆ ಮುಳುಗಾಡಿ ಲಕ್ಷ್ಮೀ । ಧನನನ ಕಳುಹಿದ ನಿತ್ತಬೀಳ್ಕೊಟ್ಟನು ಸುಯೋಧನನ ॥೩೭॥ ಭು
ವನದೊಳಗೌಚಿತ್ಯಪರಿಪಾ । ಕವನು ಬಲ್ಲಿರಿ ಕೌರವನ ಪಾಂ । ಡವರ ವೃತ್ತಾಂತದ ರಹಸ್ಯದ ನೆಲೆಯ
ನರಿದಿಹಿರಿ ॥ ನಿಮಗೆ ಬೇರೊಂದಿಲ್ಲ ನಾವ್ಹೇ । ಳುವುದು ಕೃಷ್ಣನು ನೇಮಿಸಿದ ಮಾ । ಡುವುದೆನುತ
ದ್ರೋಣಾದಿಗಳ ಕಳುಹಿದನು ಕಲಿಭೀಷ್ಮ ॥೩೮॥ ಬೀಳುಕೊಂಡರು ರಾಯರಿಬ್ಬರು । ಪಾಳೆಯಂಗಳಿಗಿ
ತ್ತ ಪಡುವಣ। ಶೈಲನಿಗಳಸ್ತಂಭದೀಪಿಕೆಯಂತೆ ರವಿ ಮೆರೆದ॥ ಮೇಲುಮುಸುಕಿನ ಹೊತ್ತುದುಗುಡದ।
ಕಾಳಗದ ದುಮ್ಮಾನಜಲಧಿಯ ಕಾಲುವೆಗಳೆನೆ ಕೌರವನು ಹೊಕ್ಕನು ನಿಜಾಲಯವ ॥೩೯॥ ಇವರು ಭೀ

ಷ್ಮನ ಬೀಳುಕೊಂಡೆು । ತ್ಸಹದಿ ಹರುಷದಲೊಮ್ಮೆಗಂಗಾ । ಭವಗೆ ತಪ್ಪಿದದುಗುಡ ಭಾರದಲೊಮ್ಮೆ ಚಿಂತಿಸುತ ॥ ಕವಲುಮನದಲಿ ಕಂಪಿಸುತ ಶಿಬಿ । ರವನು ಹೊಕ್ಕರು ಭೀಮಸೇನಾ । ನಿವಹಸಹಿತೀ ವೀರನಾರಾಯಣನ ಕರುಣದಲಿ ॥ ... ... ॥೪೦॥

ಅಂತು ಸಂಧಿ ೯ ಕ್ಕಂ ಪದ ೫೯೫ ಕ್ಕಂ ಮಂಗಳಮಸ್ತು.

ಇತಿ ಶ್ರೀಮದಚಿಂತ್ಯಮಹಿಮ ಗದುಗು ವೀರನಾರಾಯಣ ಚರಣಾರವಿಂದ ಮಕರಂದ ಮಧುಪಾನ ಪುಷ್ಟವಚಃ ಷಟ್ಪದಿನಿಕಾಯ ಶ್ರೀಮತ್ಕುಮಾರವ್ಯಾಸಯೋಗೀಂದ್ರ ವಿರಚಿತಮಪ್ಪ ಕರ್ನಾಟ ಭಾರತ ಕಥಾಮಂಜರಿಯೊಳ್ ಭೀಷ್ಮಪರ್ವಂ ಸಮಾಪ್ತ ಮಾದುದು.

ಶ್ರೀರಸ್ತು

ಶ್ರೀ ವೇದವ್ಯಾಸಾಯನಮಃ.

ಕನ್ನಡ ಮಹಾಭಾರತ ದ್ರೋಣಪರ್ವ.

ಮೊದಲನೆಯ ಸಂಧಿ.

॥ಸೂಚನೆ॥ ರಾಯಕಟಕಪಿತಾಮಹನತರು । ವಾಯಲಭಿಷೇಕವನು ಕೌರವ । ರಾಯ ಮಾಡಿಸಿ ಪತಿ ಕರಿಸಿದನು ಕುಂಭಸಂಭವನ ॥

॥ಪದ॥ ಸೋಸಿಲಿತ ಕರ್ಣಾಮೃತದ ಮಳೆ । ಗಾಲನಿಮ್ಮಯ ಕಿವಿಗಳನು ನೆರೆ । ಕೇಳಿದ್ಯೆಕೌರವನ ಕದನದ ಬಾಲಕೇಳಿಗಳ ॥ ಹೇಳುವುದು ತಾನೇನು ಕೆಂಗರಿ ಗೋಲಮಂಚದ ಮಹಿಮನಿರವನು। ಮೇಲು ಪೋಗಿನಕಥೆಯನವಧಾನದಲಿ ಕೇಳೆಂದ ॥೧॥ ಬತ್ತಿತಂಬುಧಿನಿನ್ನಮಗ ಹೊಗು । ವತ್ತ ಕಾದುದು ನೆಲನು ನೃಪತಲೆ ಗುತ್ತಿಹೊಗಲೊಳಕೊಳ್ಳದಂಬರವೇನನುಸುರುವೆನು ॥ ಮೃತ್ಯುನಿನಗೊಲಿದಿಹಳುಬಳಿಕಿ ನ್ನುತ್ತರೋತ್ತರವೆಲ್ಲಿಯದು ನೆರೆ । ಚಿತ್ತಯಿಸುವುದುಜೀಯ ದ್ರೋಣಂಗಾಯ್ತು ಹರಿವೆಂದ ॥೨॥

ಆಯುದ್ಧದಿವಸದೊಳಹಿತಬಲವನು । ಹೊಯ್ದುಹೊಯ್ದುಕಟ್ಟಾಡಿ ರಿಪುಗಳೊ। ಳಾಯ್ದು ದೊರೆಗಳನಿ
ರಿದು ಮೆರೆದನು ಭುಜಮಹೋನ್ನತಿಯ ॥ ಕಯ್ದುಕಾರರಗುರು ವಿಭಾಡಿಸಿ । ಮೆಯ್ದೆಗದು ನಿರ್ಜ
ರರ ನಗರಿಗೆ। ಹಾಯ್ದನೆನಲುರಿ ಜಠರದಲಿಮೋಹರಿಸಿತವನಿಪನ ॥೩॥ ಶಿವಶಿವಾ ಭೀಷ್ಮಾವಸಾನ । ಶ್ರವ
ಣವಿಷವಿದೆ ಮತ್ತೆ ಕಲಶೋ । ದ್ಭವನದೇಹವ್ಯಥೆಯಕೇಳ್ದೆನೆ ಪೂತುವಿಧಿಯೆನುತ ॥ ಅವನಿಪತಿದುಗು
ಡದಲಿ ಮೋರೆಯೊ । ಳವಚಿದನು ಕರತಳವ ಚಿತ್ತದ । ಹವಣಿಗೆಯ ಧಾರಣೆಯ ಕಡುಶೋಕದಲಿ
ಮೈಮರೆದ ॥೪॥ ಶೋಕವೇತಕೆ ಜೀಯ ನೀನವಿ । ವೇಕಿತನದಲಿ ಮಗನ ಹೆಚ್ಚಿಸಿ । ಸಾಕಿ ಕಲಿ
ಸಿದೆ ಕುಟಿಲತನವನು ಖುಲ್ಲವಿದ್ಯೆಗಳ ॥ ಆಕೆವಾಳರು ಹೊರಿಗೆಯುಳ್ಳವಿ । ವೇಕಿಗಳು ನಿಮ್ಮಲ್ಲಿ ಸಲ್ಲ
ರು । ಸಾಕದೇತಕೆ ಸೈರಿಸೆಂದನು ಸಂಜಯನು ನೃಪಗೆ ॥೫॥ ಆರು ಕುಹಕಿಗಳಾರುದುರ್ಜನ । ರಾರು
ಖುಲ್ಲರುನೀತಿಬಾಹಿರ । ರಾರು ದುರ್ಬಲರವರು ನಿನ್ನರಮನೆಯ ಮಂತ್ರಿಗಳು ॥ ಆರು ಹಿತ
ವರು ನೀತಿಕೋವಿದ । ರಾರುಸಜ್ಜನಬಹುಪರಾಕ್ರಮ । ರಾರವರಹೊರಬೀಸಿ ಕಾಬುದು ನಿನ್ನಮ
ತವೆಂದ ॥೬॥ ಹರಿದುದೈಕುರುಸೇನೆ ಬತ್ತಿದ । ಕೆರೆಯೊಳಗೆ ಬಲೆಯಾಕೆಹಗೆಹೊ । ಕ್ಕಿರಿದರಿನ್ನಾರ
ಡ್ಡಬೀಳ್ವರು ನಿನ್ನ ಮಕ್ಕಳಿಗೆ॥ ಬರಿದೆಮನನೋಯದಿರುಸಾಕೆಚ್ಚರುವುದೆನ ತನ್ನೊಳಗೆ ಹದುಳಿಸಿ। ಸರಿ
ಹೃದಯನೀಮಾತನೆಂದನು ಮತ್ತೆ ಸಂಜಯನು ॥೭॥ ಗಾಸಿಯಾದೆನು ಮಗನ ಮೇಲಿ । ನ್ನಾಸೆ ಬೀ
ತುದು ಬೆಂದಹುಣ್ಣಿಲಿ । ಸಾಸವೆಯ ಬಳಿಯದಿರು ಸಂಜಯ ನಿನಗೆದಯವಿಲ್ಲ ॥ ಏಸುಬಲುಹುಂಟಾ
ದೊಡೆಯು ಹಗೆ । ವಾಸುದೇವನಹರಿಬವೆಂದಾ । ಸೋಸನೊರಲಿದೆನೇನು ಮಾಡುವೆನೆಂದನವನೀಶ ॥೮॥
ಬೇಡಮಗನೇ ಪಾಂಡುಸುತರಲಿ । ಮಾಡು ಸಂಧಿಯ ನಸುರವೈರಿಯ । ಕೂಡೆ ವಿಗ್ರಹವೊಳ್ಳಿತೇ ಹಗೆ
ಹೊಲ್ಲದೇವರಲಿ ॥ ಪಾಡುತಪ್ಪಿದಬಳಿಕ ವಿನಯವ । ಮಾಡಿಮೆರೆವುದು ಬಂಧುವರ್ಗದ । ಕೂಡೆವಾಸಿಗ
ಳೇಕೆಕೆಮ್ಮನೆನಿನ್ನ ಮನವರಿಯೆ ॥೯॥ ಹೋಗಲಿನ್ನಾಮಾತುಖೂಳರು । ತಾಗಿಬಾಗರು ಸುಕೃತದುಷ್ಕೃ
ತ । ಭೋಗವದು ಮಾಡಿದರಿಗಪ್ಪುದು ಭೇದ ನಮಗೇಕೆ ॥ ಈಗಳಿನ ಕದನದಲಿ ವಜ್ರಕೆ । ಬೇಗಡೆಯ
ಮಾಡಿದನದಾವನು । ತಾಗಿದ್ರೋಣನ ಮುರಿದಪರಿಯನು ರಚಿಸಿಹೇಳೆಂದ ॥ ಚಿತ್ತವಿಸು ಧೃತರಾ
ಷ್ಟ್ರಮಲಗಿದ । ಮುತ್ತಯನ ಬೀಳ್ಕೊಂಡು ಕೌರವ । ರಿತ್ತಸರಿದರು ಪಾಂಡುನಂದನರತ್ತ ತಿರುಗಿದ
ರು ॥ ಹೊತ್ತಮೌನದ ವಿವಿಧವಾದ್ಯದ । ಕೆತ್ತಬಾಯ್ಗಳ ಪಾಠಕರತಲೆ । ಗುತ್ತಿಗೆಯಮೋರೆಯಮ
ಹಿಪತಿ ಪೊಕ್ಕನರಮನೆಯ ॥೧೧॥ ಗಾಹುಕೊಳ್ಳದು ಭೀಮಪಾರ್ಥರ । ಸಾಹಸವನೆಣಿಸುತ ಕಠಾರಿಯ।
ಮೋಹಳದಮೇಲಿಟ್ಟಗಲ್ಲದ ಮಕುಟದೊಲಹುಗಳ ॥ ಊಹೆದೆಗಹಿನ ಕಂಬನಿಯೆ ತನಿ । ಮೋಹರದ
ಘನಶೋಕವನ್ನಿಯು । ಮೇಹುಗಾಡಿನ ಮನದ ಕೌರವನಿತ್ತನೋಲಗವ ॥೧೨॥ ಗುರುತನುಜವೃಷಸೇನ
ಮಾದ್ರೇ । ಶ್ವರವಿಕರ್ಣಕಳಿಂಗಸೈಂಧವ । ದುರುಳಶಕುನಿಸುಕೇತುಭೂರಿಶ್ರವಜಯದ್ರಥರು ॥ ವರಸು
ಲೋಚನವಿಂಧ್ಯಯವನೇ । ಶ್ವರರು ಕೃಪಕೃತವರ್ಮಭಗದ। ತ್ತರು ಮಹಾಮಂತ್ರಿಗಳು ಬಂದರು ರಾ
ಯನೋಲಗಕೆ ॥೧೩॥ ತೊಡರಝಣಝಣರವದ ಹೆಗಲಲಿ । ಜಡಿವಹಿರಿಯುಬ್ಬಣದಹೆಚ್ಚಿದ। ಮುಡು
ಹುಗಳ ಮಿಗೆ ಹೊಳೆವಹೀರಾವಳಿಯ ಕೊರಳುಗಳ ॥ ಕಡುಮನದ ಕಲಿರಾಜಪುತ್ರರ । ನಡುವೆ ವೈ
ಪರಿಮಳದ ದೆಸೆಕಂ। ಪಿಡುತ ಧಾರವಣೆಯಲಿ ಬಂದನುಕರ್ಣನೊಲವಿನಲಿ ॥೧೪॥ ಇತ್ತಬಾರ್ಥೆಕರ್ಣಕ

ರುಕುಲ । ಮತ್ತವಾರಣ ಕುಳ್ಳಿರ್ದ್ದೆ ಬಾ । ಯಿತ್ತ ಬಾತನ್ನಾಣೆಯೆನುತವೆ ಸೆರಗ ಹಿಡಿದೆಳೆದು ॥ ಹ
ಸ್ತಿರಾತನ ನಿಲಿಸಿ ಬಟ್ಟಲ । ಲಿತ್ತವೀಳೆಯವನು ಸುಯೋಧನ । ಕೆತ್ತು ಕೊಂಡಿರೆ ನುಡಿಸಿದನು ಕಲಿ
ಕರ್ಣನವನಿಪನ ॥೧೫॥ ಜೀಯ ದುಗುಡವಿದೇಕೆ ಬಿಡುಗಾಂ । ಗೇಯನಳುಕಿದೊಡೇನು ಕಾಣಿಯ । ಬೀ
ಯದಲಿ ಬಡವಹುದೆ ಕನಕಾಚಲ ನಿಧಾನಿಸಲು ॥ ರಾಯಜಗಜಟ್ಟಿಗಳು ರಣದೊಳ । ಜೇಯರಿದೆ ಪ
ರಿವಾರವನು ನಿ । ರ್ದಾಯದಲಿ ತೇಜಿಸುವೆನು ರಿಪುಗಳ ಸಿರಿಯ ಸೂರೆಯಲಿ ॥೧೬॥ ಕರ್ಣಕರ್ಕಶಕಠೋ
ರಸಾಹಸ । ನಿರ್ಣಯವೆ ಪರಸೈನ್ಯಸುಭಟವ । ಹಾರ್ಣವಕೆ ಬಿಡು ನಿನ್ನ ವಿಕ್ರಮವಾಡಬಾನಳನ ॥
ಪೂರ್ಣಕಾಮನು ನೀನು ಕುರುಕುಲ । ಕರ್ಣಧಾರನು ನೀನು ವಿಶ್ವವಿ । ಕರ್ಣ ನೀನೇ ರಕ್ಷಿಸೆಂದುದು
ನಿಖಿಳಪರಿವಾರ ॥೧೭॥ ಕಾದುವೆನು ರಿಪುಭಟರ ಜೀವವ । ಸೇದುವೆನು ರಣರಂಗಭೂಮಿಯ । ನಾದು
ವೆನು ನೆಣಗೊಬ್ಬಿನಹಿತರ ಗೋಣರಕುತದಲಿ ॥ ಹೋದದಿವಸಂಗಳಲಿ ಕಾಳಗ । ಮಾದುದಂದಿನ ಭೀ
ಷ್ಮರೊಡನೆ ವಿ । ವಾದಕಾರಣ ಬೇಡಿಕೊಳಬೇಹುದು ನದೀಸುತನ ॥೧೮॥ ಎಂದು ನೃಪತಿಯ ಬೀಳು
ಕೊಂಡಿನ । ನಂದನನು ಬೊಂಬಾಳದೀಪದ। ಸಂದಣಿಗಳೊಳು ಸೆಳೆದಡಾಯುಧಭಟರ ತಿಂಥಿಣಿಯ ॥
ಮುಂದೆ ಪಾಯವಧಾರು ರಿಪುನೃಪ । ಬಂದಿಕಾರವಧಾರು ದಿರುಪಯ । ನೆಂದು ಕಳಕಳಗಜರು ಮಿ
ಗೆ ಕುರುಭೂಮಿಗೈತಂದ ॥೧೯॥ ಹಾಯಿದ್ದವು ನರಿನಾಯಿಗಳು ಕಟ । ವಾಯಲೆಳೆದವುಕರುಳುಗಳಬ
ಸಿ । ವಾಯರಕ್ತದಲೋಡಿದವು ರಣಭೂತ ದೆಸೆದೆಸೆಗೆ ॥ ಆಯುಧದ ತಿಂತಿಣಿಯ ತಲೆಗಳ । ಡೋ
ಯಿಸೆಯ ಕಡಿಖಂಡಮಯದಲ । ನಾಯತದಕಳನೊಳಗೆ ಬಂದನು ಭೀಷ್ಮನಿದ್ದೆಡೆಗೆ ॥೨೦॥ ಸರಳಮಂ
ಚವ ಹೊದ್ದಿ ಭೀಷ್ಮನ । ಚರಣಕಮಲವ ಪಿಡಿದು ನೊಸಲಿನೊ । ಳೊರಸಿಕೊಂಡನು ನಾದಿದನು ಕಂ
ಬನಿಯೊಳಂಘ್ರಿಗಳ ॥ ಕರುಣಿಸೈ ಗಾಂಗೇಯ ಕರುಣಾ । ಶರಧಿಯೇ ಖಳತಿಲಕಕರ್ಣನ । ದುರುಳ
ತನವನು ಮರೆದು ಮೆರವುದು ನಿಮ್ಮ ಸದ್ಗುಣವ ॥೨೧॥ ಎನಲು ಹೃದಯಾಂಬುಜದ ಪೀಠ
ದ । ವನಜನಾಭಧ್ಯಾನಸುಧೆಯಲಿ । ನನೆದು ಹೊಂಗಿದಕರಣ ಹೊರೆಯೇರಿದುದು ನಿಮಿಷದಲಿ॥ ತನು
ಪುಳಕ ತಲೆದೋರೆ ರೋಮಾಂ । ಚನದ ಬಿಗುಹಡಗಿತ್ತು ಕಂಗಳ । ನನೆಗಳರಳಿದವಾಯ್ತು ಭೀಷ್ಮಂ
ಗಿತ್ತಲವಧಾನ ॥೨೨॥ ಅಳಲದಿರು ಬಾಮಗನೆ ಕುರುಕುಲ । ತಿಲಕನವಸರದಾನೆ ರಿಪುಮಂ । ಡಳಿಕ
ಮಸ್ತಕಶೂಲಬಾರೈಕರ್ಣಬಾರೆನುತ ॥ ತುಳಿಕಿದನು ಕಂಬನಿಗಳನು ಕೋ । ಮಲನು ಕೈದಡಹಿದನು
ಕೌರವ । ನುಳಿವು ನಿನ್ನದು ಕಂದಕದನವ ಜೈಸು ಹೋಗೆಂದ ॥೨೩॥ ಗಾರುಗೆಡೆದೆನು ನಿಮ್ಮ ನೋಲಿ
ಯ । ಕಾರತನದುಬ್ಬಿನಲಿತನಿಮದ । ವೇರಿ ನಿಮ್ಮಲಿ ತೊಡಕಿದೆನು ಸೇನಾಧಿಪತ್ಯದಲಿ ॥ ದೂರಹೊತ್ತೆ
ನು ರಣದ ಮಿಾಸಲಿ । ನೇರು ತಪ್ಪಿತು ನೀಲಮಣಿ ತಲೆ । ಗೇರಿಸಿದ ತೃಣವದಕೆ ಸರಿಯೇ ಭೀಷ್ಮಹೇ
ಳೆಂದ ॥೨೪॥ ತನುಜ ತಪ್ಪೇನಿದಕೆ ಕಾಳಗ । ವೆನಗೆ ತನಗೆನಬೇಕು ವೀರರು । ಮನದಕಲಿತನದುಬ್ಬ
ಗೊಬ್ಬಿನಲೆಂಬರಿದಕೇನು ॥ ಮನದೊಳಗೆ ಖತಿಯಿಲ್ಲ ದುರಿಯೋ । ಧನನೃಪತಿಯೋಪಾದಿ ನೀ ಬೇ।
ರೆನೆಗೆ ಲೋಗನೆ ಕಂದ ಕದನವ ಜಯಿಸು ಹೋಗೆಂದ ॥೨೫॥ ಅಳುತನದ ದೊತಾರತನ ಸರಿ । ಯಾ
ಳಿನಲಿ ಸೆಣಸಾದೊಡೊಳ್ಳಿತು । ಮೇಳವೇ ಗುರುದೈವದಲಿ ಕಟ್ಟುವರೆ ತೊಡರುಗಳ ॥ ಹಾಳಿಪಸುಗೆ
ಯನರಿಯದಾಹೀ । ಹಾಳಿಗೆಡಿಸಿದೆನಂದು ಸಭೆಯಲಿ । ಖೂಳನವಗುಣಶತವ ನೋಡದೆ ನಿಮ್ಮ ಮೆರೆ

ಟ್ಟನು ಹಾಣೆಹೊಕ್ಕತಿ । ಬಳವನಿರಿದನು ಗಾಯವಡೆದನು ಘೋರಸಮರದಲಿ ॥೪೧॥ ಕಾದಲೆನ್ನಳವ
ಲ್ಲ ಬಲದು । ಭೇದವಿದುತಿಳಿವಯೆನುತ್ತ ವ್ಯ । ಕೋದರನು ಬೆರಗಾಗಿ ದುಗುಡವ ಕೆತ್ತು ನಿಜಮು
ಖಕೆ ॥ ಕೈದೆಗೆಯೆ ರಿಪುಬಲದ ಸುಭಟರು । ಕಾದಿದನು ಕಲಿಭೀಮ ಗೆಲಿದನು । ಹೋದನೆಂದುದು
ಕೂಡೆಕೈಗಳ ಹೊಯ್ದು ತಮತಮಗೆ ॥೪೨॥ ಆಮಹಾಮೋಹರವನೊಡೆಯಲು । ಸೋಮಕುಲಜರು
ಭೀತರಾದರು । ಹಾಮಹಾದೇವೆನುತ ಧರ್ಮಜ ನೋಡಿ ತಲೆದೂಗಿ ॥ ರಾಮನರಿವನು ಕೃಷ್ಣನರಿವನು
ಸೀಮೆಯಲಿ ಕಲಿಪಾರ್ಥನರಿವನು । ಭೂಮಿಪತಿಗಳೊಳುಳಿದಭಟರಿಗೆ ಹರಿವುದಲ್ಲೆಂದ ॥೪೩॥ ಹೊಗ
ಲುಬಲ್ಲನು ಹೊಕ್ಕವೊಲು ಪರ । ದೆಗೆಯಲರಿಯನು ರಾಯಪಾರ್ಥನ । ಮಗನು ಮತ್ತೀಕೃದನೆಯಮೆಹಿ
ಮರೆ ಕಾಣೆನಾನೆನುತ ॥ ಅಗವಚಿಂತೆಯೊಳರಸವದನದ । ದುಗುಡಭಾರದಲಿರಲು ಮುಂಗೈ । ನಿಗಳವ
ನು ತಿರುಹುತ್ತ ನಸುನಗುತೆಂದನಭಿಮನ್ಯು ॥೪೪॥ ಜನಪನಂಘ್ರಿಗೆ ಮಣಿದು ಕೈಮುಗಿ । ದೆನಗೆ ಬೆಸ
ಸೈಬೊಪ್ಪನಾಬಲ್ಲೆನು ಮಹಾಹವದೊಳಗೆ ಚಕ್ರವ್ಯೂಹಭೇದನವ ॥ ಅನುವರವ ಗೆಲುವೆನು ಕೃತಾಂತ
ನ । ಮನೆಗೆ ಕಳುಹುವೆನಹಿತರನು ನೀ । ವಿನಿತು ಚಿಂತಿಸಲೇಕೆ ಕಾಳಗಕೆನ್ನ ಕಳುಹೆಂದ ॥೪೫॥ ಹಸು
ಳೆಯಧಟನ ನುಡಿಯ ಕೇಳಿದು । ನಸುನಗುತ ಧರ್ಮಜನು ಘನಸಾ । ರುಷವು ನಿನಗುಂಟೆನುತತನ
ಯನ ತೆಗೆದು ಬಿಗಿಯಪ್ಪಿ ॥ ಶಿಶುವು ನೀನೆಲೆಮಗನೆ ಕಾದುವ । ರಸಮಬಲರು ಕಣಾ ಮಹಾರಥ । ರೆ
ಸುಗೆಗಳ ನೀನೆಂತು ಸೈರಿಸಲಾಪೆ ಹೇಳೆಂದ ॥೪೬॥ ಜವನ ಜಕ್ಕಲಿಸುವರನೇಕರು । ಶಿವನ ಸಮಗೈವೀ

ರರಹರದು । ನಮಗೆ ಸಹಿತಳವಲ್ಲ ನೀನೆಂತಲ್ಲ ಪಟುಭಟರ ॥ ತಿವಿದು ಹೋಗುವೈ ಮಗನೆ ನಿನ್ನು । ತ್ಸವದ ನುಡಿಯೇ ಸಾಕೆನುತ ತ । ಕ್ಕವಿಸಿ ಮೋಹದಕಡಲೊಳವನಿಪ ಮೂಡಿ ಮುಳುಗಿದನು ॥೪೭॥ ಇವರ ಗೆಲುವೆನು ನಿಂದರಿಪ್ರವನು ॥ ಇವಗೆ ಜೋನಪಮಾತಪದೇರ್ಗಡೆ । ಬವರವನು ಕಲಕದೆ ಮಹಾರಥರೆನಿಪನಾಯಕರ ॥ ಅವನಿಯೊಗ್ಗೊರಗಿಸದೆ ಮಾರಾಂ । ತರನು ನುಂಗದೊಡಾಬಳಿಕ ನಿಂ । ಮವಗೆಯರ್ಜುನಗೆಂತು ಜನಿಸಿದೆನೆನಗೆಬೆಸಸೆಂದ ॥೪೮॥ ಮಗನೆ ರಾಯರ ವಳಕೆ ನಿನ್ನನು । ಮಗುವ ನರಿದರಿದೆಂತು ಕಳುಹುವ । ಬಗೆಯ ತಹೆನೈ ಭೀಮ ಪೇಳ್ ತಿಶುವಿಂಗೆ ಬುದ್ಧಿಯನು ॥ ಅಗಣಿತದ ರಿಪುಕಟಕವೋರೆಯು । ಪಿಗಡರಿದಿರಿಗೆ ಕಳುಹಲಾರೆನು । ಹಗೆಯ ಗೆಲುವುದು ನಿಲಲಿ ಧರಣಿಯನೊಲ್ಲೆ ನಾನೆಂದ ॥೪೯॥ ಏಕೆ ನಿಮಗಿದಿರಾದವೈರಿಯ । ನೂಕುವೆನು ವೀಳೆಯವ ಕೊಡು ನೀ । ಕಾಕಬಳಸುವ ಹಿರಿದ ಗಳಹುವೊಡೆಮಗೆ ತಾನೆನುತ ॥ ನೂಕಿನೋಡುವುದನುತ ಕರಿ ಕಮ । ಲಾಕರವ ಕಲಕುವವೊಲೀಗಳು । ಲೋಕವನು ಬೆದರಿಸುವಭಾಷೆಯ ಬರಸಿ ಕಳುಹೆಂದ ॥೫೦॥ ಬೇಡ ಮಗನೇ ವೈರಿನಾಯಕ। ವಾಡಿಗಳು ವೆಗ್ಗಳರು ನಿನ್ನನು । ಬೇಡಿಕೊಂಬೆನು ಕಳುಹಲಾರೆನು ನಿನಗೆ ತೀರುವುದೆ ॥ ನೋಡ ನೋಡಲು ಕೊಲುವಮಾರಿಯು । ಕೇಡನಾನಿದ ಕಾಣಲಾರೆನು । ಕಾಡದಿಹುದೈಕಂದ ನೀನೆನುತಿರ್ದನಾ ಭೀಮ ॥೫೧॥ ಮುಡಿಯ ಸುತ್ತೈಸುತ್ತ ಪಾರ್ಥನ । ಮಡದಿ ಹರಿತಂದಳು ಕುಮಾರನ । ಹಿಡಿದು ಬಿಗಿಯಪ್ಪಿದಳು ಮರಣವ ನೆನೆವರೇ ಮಗನೆ ॥ ಮಿಡುಕಲಮ್ಮರು ಹಿರಿಯತಂದೆಯ । ರೆಡಬಳಿಗವೋಹರಕೆ ಬಯಸದೆ । ಕಡುಮನದ ಕಾತರಿಗತನ ಬೇಡೆಂದಳಾಜನನಿ ॥೫೨॥ ತಡೆಯಲಹುದೇ ತಾಯೆ ರಿಪುಗಳ । ತಡೆಗಡಿದು ಸುಖಿಯಾಗು ರಣದ । ಗಳೆಯ ಸುಭಟರ ಪ್ರಸು ಕಾಳಗದೊಳಗೆ ನೀನೆಂದು । ಹಿಡಿದಛಲವನು ಗೆಲಿದು ಜಯಸಿರಿ । ಗೊಡೆಯನಾಗೆಂದೆನ್ನ ಹರಸದೆ । ಯೆಡೆಯೊಗುವರೇ ತಾಯೆ ನೀನೆನುತಿರ್ದನಭಿಮನ್ಯು ॥೫೩॥ ಕಲಕುವೆನು ಭಟಸಾಗರವನಂ । ದಲೆವೆನಹಿತಕುಮಾರಶತಕದ । ತಲೆಯನರಿವೆನು ಸುರರುಘೇಯೆನೆ ಬೀದಿವರಿವರಿದು ॥ ಗೆಲವನೂರೆಯ ಕೊಂಬೆನಿಂದಿನ । ಬಲವ ನಾ ಮನ್ನಿಸಿದೆನಾದೊಡೆ । ಫಲುಗುಣಗೆ ನಿಮಗೆಂತು ಜನಿಸಿದೆ ತಾನು ಹೇಳೆಂದ ॥೫೪॥ ತುಡುಕಿ ವಜ್ರವ ವಾಸವನು ತನ್ನೊಡನೆ ಸಮರಕೆ ಬರಲಿ ಮೇಣ್ ಕೆಂ। ಗೊಡಲಿಗೊರೆವನು ಖಾತಿಯಲಿ ಯಿದಿರಾಗಿ ಹರಿತರಲಿ ॥ ಕಡಲೊಳೊರಗುವಕೃಷ್ಣನರ್ಜುನ । ನೊಡನೆ ಸಮರಕೆ ಬರಲಿ ಗೆಲುವೆನು । ಹಡೆಯದಿರ್ದೊಡೆ ನಿನ್ನಮಗನೇ ತನ್ನ ಕಳುಹೆಂದ ॥೫೫॥ ಸುಳಿಯಬಹುದಂಬುಧಿಯ ನಡುವಣ । ಸುಳಿಯೊಳೇ ಸಂವರ್ತಕನ ಕಣ । ನೊಳಗೆ ಸುಳಿಯಲು ಬಹುದು ಮೃತ್ಯುವಿನಣಲ ಹೊಳಲೊಳಗೆ ॥ ಹೊಳಕಬಹುದಹಿಪತಿಯ ಮಣಿಮಂ । ಡಲದೊಳಾನಲು ಬಹುದು ಕಾಣೆನು । ಗೆಲುವಹದನನು ನಮಗೆ ಪದ್ಮವ್ಯೂಹಭೇದನವ ॥೫೬॥ ಬಿಡು ಮರೀಚಿಯತೊರೆಗೆ ಹರುಗೋ । ಲಿಡುವರುಂಟೇ ಲೆಪ್ಪದುರಗನ । ಹಿಡಿವರೇ ಕೈಗರುಡಮತ ಮತಿಚಪಳನೆನ್ನದಿರು ॥ ಕೊಡನಮಗನ ಕುಮಂತ್ರದೊಡ್ಡಿನ । ಕಡಿತಕಾನಂಜುವೆನೆ ವೆಗ್ಗಳ । ನುಡಿಯಲಿಕ್ಕೆನು ತನ್ನನೀಗಳೆ ಬಿಟ್ಟು ನೋಡೆಂದ ॥೫೭॥ ಕಂದವೈರಿಯವ್ಯೂಹಸಮದಳ । ವೆಂದುದಲ್ಲದರೊಳಗೆ ಕೃಪಗುರು । ನಂದನರು ರಾಧೇಯ ಭೂರಿಶ್ರವಜಯದ್ರಥರು ॥ ಇಂದುಧರನಡಹಾಯ್ದೊಡ್ಡೊಮಗೆ । ಹಿಂನುಮುಂದೆನಿಸುವರ ನೀ ಗೆಲು । ವಂದವೇನೈ ಸಮರವಿ

ದು ಸಾಮಾನ್ಯವಲ್ಲೆಂದ ॥೩೮॥ ಗಾಳಿಬೆಮರುವವುಂಟೆ ವಹ್ನಿ । ಜ್ವಾಲೆ ಹಿಮಕಂಜುವುದೆ ಮಂಜಿಗೆ । ಮೇಲುಗಾಳಗವುಂಟೆ ಬಲುಬೇಸಗೆಯ ಬಿಸಿಲೊಳಗೆ ॥ ಬಾಲನಿವನೇನೆಂದವಜ್ಞೆಯ । ತಾಳಲಾಗದು ಬೊಪ್ಪ ನಿಮ್ಮಡಿ । ಯಾಲೆಗೌತಣವಿಕ್ಕಿ ತೋರುವೆನೊರಸಿ ರಿಪುಬಲವ ॥೩೯॥ ಅಹುದು ಮಗನೆ ಸಮಗ್ರಬಲ ನೀ । ನಹೆ ನಿಧಾನಿಸಲಿಂದು ಪವನಜ । ನಹಮ ಮುರಿದರು ಕಾಯ್ದು ಬಿಟ್ಟರು ನಕುಲಸಾತ್ಯಕಿಯ ॥ ಸಹಸಿದ್ರುಪದವಿರಾಟರುಗಳು । ಮ್ಮಹವವಮುರಿದರು ವಿಜಯಗರ್ವಿತ। ರಿಹಬಲವ ನೀನೊಬ್ಬನೇ ಸಾಧಿಸುವುದರಿದೆಂದ ॥೪೦॥ ಧರಣಿಪತಿ ಕೇಳುಳಿದ ಪುಷ್ಪದ । ಪರಿಮಳವು ಫಲಿಸಿದೊಡೆ ಸಂಪಗೆ । ಯರಳ ಪರಿಮಳ ಪಥ್ಯವೇ ತುಂಬಿಗಳ ತಿಂತಿಣಿಗೆ ॥ ಅರಿಭಟರು ಭೀಮಾದಿಗಳ ಗೆಲಿ । ದ್ದಿರಲಿ ಹೊಲ್ಲೆಯವೇನು ಘನಸಂ । ಗರದೊಳಗೆ ನಮ್ಮೊಡನೆ ತೊಡಕಿದೊಡರಿಯಬಹುದೆಂದ ॥೪೧॥ ಕಯ್ದುಕಾರರ ಬಿಗುಹು ಘನನೀ । ಹೊಯ್ದುವೊದಲಲಿ ಬಿಡಿಸು ಬಳಿಕಾ । ಮೆಯ್ದ ನಿನ್ನನು ಕೂಡಿಕೊಂಬೆವು ಹೊಕ್ಕು ಬಳಿಸಲಿಸಿ ॥ ಎಯ್ದಿಹೊರೆಯಲಿ ಹೂಣೆಹೊಗದಿರು । ಮೆಯ್ದೆಗೆದು ಕಾದುವುದು ಜಯಸಿರಿ । ಗಯ್ದುತನ ನಿನ್ನಿಂದ ಮೆರೆವುದು ಮಗನೆ ಕೇಳೆಂದ ॥ ಕೆತ್ತುಕೊಂಡರೆ ಬಿಸುಡುವೆನು ರಥವೆತ್ತಲುರುಬಿದೊಡತ್ತ ಕೊಳನಲಿ । ಮತ್ತಗಜ ತುಳಿವಂತೆ ಕದಡುವೆ ವೈರಿವಾಹಿನಿಯ ॥ ಹೊತ್ತಿಹೊಗುವಪರಾಕ್ರಮಾಗ್ನಿಯ । ತುತ್ತು ಪದ್ಮವ್ಯೂಹ ದೇವರು । ಚಿತ್ತವಿಸುವುದು ಹೊತ್ತು ನೂಕದೆ ತನ್ನ ಕಳುಹೆಂದ ॥೪೩॥ ಶರನಿಧಿಯ ವಡಬಾನಳನ ದ । ಳ್ಳುರಿಯ ವರ್ಮವ ತಿವಿವತುಂಬಿಯ । ಮರಳುದಲೆಯುಂಟಾದೊಡದು ಭವಭವದ ಪುಣ್ಯಫಲಾ ॥ ಅರಿಬಲವನೀಖಂಡಿಗಳ ಮೋ । ಹರಸಹಿತ ತಾ ಬಹೆನು ನಡೆಯೆಂ । ದರಸನಭಿಮನ್ಯುವಿಗೆ ನೇಮವ ಕೊಟ್ಟನಾಹವಕೆ ॥೪೪॥ ಇಂದುಹರಸಿಯೆಕಳುಹುವುದು ಬೇ। ಡೆಂದೊಡೆಯು ರಿಪುಬಲದಸುಭಟರ। ಕೊಂದೊಡಲ್ಲದೆ ಮಾಣೆನಾದೊಡೆ ನಿನ್ನ ಮೇಲಾಣೆ ॥ ಎಂದು ಪಾದಕ್ಕೆರಗಿ ಭೀಮನ । ವಂದಿಸುತ ಸಹದೇವನಕುಲರಿ । ಗಿಂದುಮುಖಿಯರಿಗೆರಗಿ ನೇಮವ ಕೊಂಡು ತಾ ನಿಂದ ॥೪೫॥ ಶಿವಶಿವಾ ಶಿಶುವಿವನು ರಿಪುಗಳು । ಜವನ ಜೂಜೆನಿಸುವಮಹಾರಥ । ನಿವಹಕೊಬ್ಬಗೆಗಡ ಸಮಾಹಿತವಲ್ಲ ಸಮರಂಗ ॥ ಅವನಿಪತಿ ನಿರ್ದಯನಲಾ ಕಂ । ಡೆವೆಕುಮಾರನನಿಕ್ಕಿ ಬಹರಾ । ಜ್ಯವನು ಸುಡುಸುಡದೇತಕೆಂದುದು ನಿಖಿಳಪರಿವಾರ ॥೪೬॥ ಲಲಿತಚಂದ್ರಿಕೆಯೊಡನೆ ದಾವಾ । ನಳನ ಖಾಡಾಖಾಡಿಸುರಲತೆ । ಯೆಳೆಯ ಕುಡಿಮುರಿದೊತ್ತಲಾಪುವವಜ್ರಧಾರೆಯಲಿ ॥ ನಳಿನನಾಳವು ಗಜದ ಕೈಯೊಡ । ನಳವಿಗೊಡಲಂತರವೆ ಪಾಪಿಗ । ಳೆಳೆಮಗನ ಕಳುಹಿದರು ಕಾಳಗಕೆಂದುದಮರಗಣ ॥೪೭॥ ಬಿಗಿದು ಗಂಡುಡಿಗೆಯನು ಹೊನ್ನಾ । ಯುಗದೆ ಹೊಳೆವಕಠಾರಿಯನು ಮೊನೆ। ಮಗುಚಿಸಾಧುಜವಾಜಿಕತ್ತುರಿಗಂದಲೇಪದಲಿ ॥ ಮುಖಮುಖಿಪಹೊಂದೊಡರಹೀರಾ । ಳಿಗಳನೊಪ್ಪಂಬಡೆದುಕಿರುನಗೆ । ಮೊಗದಸೊಂಪಿನೊಳಾಹವಕ್ಕನುವಾದನಭಿಮನ್ಯು ॥೪೮॥ ಉಲಿವಘಂಟೆಯ ಕುಣಿವತುರಗಾ । ವಳಿಯ ಗಗನದಲಗಿವಬಿರುದಿನ । ಪಳಹರದ ತೆತ್ತಿಸಿದಕನಕದ ಚೌಕಸತ್ತಿಗೆಯ ॥ ಘಳುಘಳಿಪಚೀತ್ಕಾರಕೋಳಾ । ಹಳದ ಸೂತನ ರೇಖೆಯಲಿ ಭಟ । ಕುಲಲಲಾಮನ ತೇರು ಬಂದುದು ತೀವಿದಸ್ತ್ರದಲಿ ॥೪೯॥ ತುರುಗತತಿಗಭಿನಮಿಸಿ ರಥವನು । ತಿರುಗಿ ಬಲವಂದೇರಿ ಚಾಪಕೆ । ಕರವನೊಸಲನುಚಾಚಿ ಭಾರಿಯಭುಜವನೊದವಿಸುತ ॥ ಅರಸನನು ವಂದಿಸುತ ಭೀಮನ

ಹರಕೆಯನು ಕೈಕೊಳುತ ನಕುಲಾ । ದ್ಯರಿಗೆ ಪೊಡವಂಟೇರಿದನು ನವರತ್ನಮಯರಥವ ॥೨೦॥ ಸೂಳವಿಸಿದವುಲಗ್ಗೆಯಲಿನಿ । ಸ್ಸಾಳತತಿ ಸಿಡಿಲೊದರುವವೊಲು । ಬ್ಯಾಳಗಳು ಕೈನೆಗಹಿ ಕೈವಾರಿಸುತ ಗಮಕಿಗಳು ॥ ಕಾಲಹೆಗ್ಗಾಳೆಗಳು ರಿಪುಭೂ । ಪಾಲಕರ ಬೈಬೈದು ಗಜರಿದ । ವಾಳುತನದಾಳಾಪ ಬೀರಿತು ಬೆಗಡನಹಿತರಿಗೆ ॥೨೧॥ ಒಡನೆ ಕಳುಹುತ ಬಂದ ತಾನೆಲ । ದೊಡೆಯನನುಜರುಸಹಿತ ತನಯನ । ಬಿಡುವನಿಯಸಾಲಿನಲಿ ನನೆವುತ ಬಂದು ಕಿರಿದೆಡೆಯ ॥ ನಡೆ ವಿಜಯನಾಗೆಂದು ತನುವನು ತಡವಿದನು ಕಡುಮೋಹದೆಡೆಯಲಿ । ಘುಡಿಘುಡಿಸಿ ಶಿಶು ಬೀಳುಕೊಂಡನು ಪಿತೃಚತುಷ್ಟಯವ ॥೨೨॥ ಎಲೆಕುಮಾರಕ ಹರಕುಮಾರಂ । ಗಳವಿಯಲಿ ನಿಲಲರಿದು ಕೊರಳಿನ । ಬಲುಹನರಿಯದೆ ಗಿರಿಯ ಹೊರಲಂಘೈಸುವರೆ ಭಟರು ॥ ಬಲುಗಡಿಯನೀದ್ರೋಣನೀಕೃಪ । ನಲಘುಭುಜಬಲಭಾನುಸುತನ । ಗ್ಗಳೆಯಸೈಂಧವನೆಂದು ಸಾರಥಿ ತೂಗಿದನು ಶಿರವ ॥೨೩॥ ಮರುಳುಸಾರಥಿ ನಮ್ಮನಾವುಪ। ಚರಿಸಕೊಳಲಾಗದುಕಣಾ ನೀ । ನರಿಯೆ ನಂಮಂತರವನಾವಿನ್ನೆಂದು ಫಲವೇನು ॥ ಗುರುತನುಜನೇ ಕೃಪನೆ ದ್ರೋಣನೆ । ತರಣಿಸುತನೇ ಸೈಂಧವನೆ ಹುಲು । ನರರು ಗಣ್ಯವೆ ಕೇಳು ಭಾಷೆಯನೆಂದನಭಿಮನ್ಯು ॥೨೪॥ ಬವರವಾದೊಡೆ ಹರನ ವದನಕೆ । ಬೆವರ ತಹೆನವಗಡಿಸಿದೊಡೆವಾ । ಸವನ ಸದೆವೆನು ಹೊಕ್ಕೊಡಹುದೆನಿಸುವೆನು ಭಾರ್ಗವನ ॥ ಜವನ ಜವಗೆಡಿಸುವೆನು ಸಾಕಿ । ನ್ನವರಿವರಲೇನರ್ಜುನನುಮಾ । ಧವನು ಮಲೆತೊಡೆ ಗೆಲುವೆನಂಜದೆ ರಥವ ಹರಿಸೆಂದ ॥೨೫॥ ಬಾಲನೆನ್ನದಿರೆನುತ ರಿಪುಭಟ । ಭಾಳಲೋಚನನೆನಿಸುವರ್ಜುನ । ಬಾಳುಗೆನುತುದ್ದಂಡಕೋದಂಡವನು ಜೇವಡೆಯೆ ॥ ಮೇಲುಗಜವಲ್ಲಾಡಿದವು ಕೊರ । ಳೋಳಿಗೆದರಲು ಕುಸಿದನಹಿ ಪಾ । ತಾಳ ಗೂಳೆಯದೆಗೆಯಲಳ್ಳಿರಿಯಿತ್ತು ಬಿಲುರಭಸ ॥೨೬॥ ಎನಲು ಸಾರಥಿ ಹಿಗ್ಗಿ ವಿಜಯನ । ತನಯನನು ಕೊಂಡಾಡಿ ನಿನ್ನಯ ಮನವ ನೋಡಲು ನುಡಿದೆನಲ್ಲದೆ ಮೂರುಲೋಕದಲಿ ॥ ನಿನಗೆ ಸರಿಯಹವೀರನಾವವ । ನೆನುತ ರಥವನು ನಡಿಸೆ ನರನಂ । ದನನು ಚಾಪಕೆ ನಮಿಸಿ ನೆಗಹಿದು ತಿರುವನೇರಿಸಿದ ॥೨೭॥ ಸುರನದಿಗೆ ಶಿವನಾಯ್ತು ಮಕರಾ । ಕರಕೆ ಕಲಶಜನಾಯ್ತು ತರಣಿಗೆ । ಅರಿವಿಧುಂತುದವಾಯ್ತು ರಥಪದ ತಳಿತುದವನಿಯಲಿ ॥ ಅರರೆ ಸತ್ವರಜಸ್ತಮಂಗಳೊ । ಳೆರಡುಗುಣವಡಗಿತು ರಜೋಗುಣ । ದುರುಳಿಯಾದುದು ಲೋಕವಿನೆ ಗಾಢಿಸಿತು ಘನಧೂಳಿ ॥೨೮॥ ಆರರಥವಿದು ಸೈನ್ಯಪಾರಾ । ವಾರವಿದಕಂಘೈಸುವವ ತ್ರಿಪು । ರಾರಿಯೋ ಮೇಣಾತ್ರಿವಿಕ್ರಮನೋ ಸುರೇಶ್ವರನೋ॥ ಧೀರನಹನೋ ಪೂತು ರಣದದೊ । ತಾರನಿವನಾರೆನುತ ತಿರುಗಿತು । ತೋರಹತ್ತರು ತಾಗಿದರು ಸೌಬಲಜಯದ್ರಥರು ॥೨೯॥ ಫಡಜಯದ್ರಥ ಹೋಗು ಹೋಗೆಳ । ವಡಿಕೆಯಲ್ಲಿದುಸಾರು ಸೌಬಲ । ಮಿಡುಕಿದೊಡೆ ಮರುಳಹಿರ ಲೇಸಲ್ಲೆಮ್ಮೊಳತಿಮಥನ ॥ ತುಡುಕಿದೊಡೆ ಕೈಬೇವುವೀಬಲು । ಗಡಿಯತನ ಬಯಲಹುದೆನುತ ತಡೆ । ಗಡಿದು ಬಿಸುಟನು ಭಟನ ಠಕ್ಕಿಯ ಧನುವ ಸಾರಥಿಯ ॥೩೦॥ ರಥ ಮುರಿಯೆ ಮನನೊಂದು ಸುಮಹಾ । ರಥರು ಹಿಮ್ಮೆಟ್ಟಿದರು ಬಳಿಕತಿ । ರಥಭಯಂಕರನೊಡೆದು ಪೊಕ್ಕನು ವೈರಿಮೋಹರವ ॥ ಮಥನದಲಿ ಮುರಿದೊದೆವ ಶೈಲ । ವ್ಯಥಿತಸಾಗರದಂತೆ ಬಿರಿದುವು । ರಥನಿಕರ ಕಾಲಾಳುಕುದುರೆಗಳೊಂದುನಿಮಿಷದಲಿ ॥೩೧॥ ರಾಯಕುವರನಿಭಾಡ ಬಂದನು । ರಾಯಕಟಕಾರಣ್ಯದಾವನು । ರಾಯಸೇನಾಂಭೋಧಿವಡಬಶಿಖಿ

ಲನಿದೆಬಂದ ‖ ರಾಯರಣುಗರು ತುಳಿವ ಕೌರವ । ರಾಯಜೀವಘರಟ್ಟ ಬಂದನು । ಸಾಯದಿರಿ ಸಾರೆಂದು ಸಾರಿದವಹಿತಕಹಳೆಗಳು ‖೮೨‖ ಹಾಳಿಹಸುಗೆಯನರಿಯದದಟನು । ಹೇಳುವೊಡೆ ಹದಿನಾಲ್ಕು ವರುಷದ। ಬಾಲನೈದಿದನಸಮಚಕ್ರವ್ಯೂಹವೋಹರವ ‖ ಜಾಳಿಸಿತು ರಿಪುಕಟಕ ಸುಮನೋ। ಭಾಳಲೋಚನನೆನಿಸುವರ್ಜನ । ಬಾಳುಗೆನುತುದ್ದಂಡಕೋದಂಡವನು ಜೇವಡೆದ ‖೮೩‖ ಒಡೆದುದವನಿಯೆಬ್ರಹ್ಮಾಂಡಮಂಡಲ । ಗಡಗಡನೆ ನಡುಗಿತ್ತು ಬಿಲುಜೇ । ವಡೆಯೆ ದನಿ ಹಬ್ಬಿದುದು ಮಾರ್ಬಲದವರ ಕಿವಿಗಡಲು ‖ ಅಡಸಿ ಕಣೆಗಳ ಕವಿಸಿದನು ಮುಂ । ಗುಡಿಯ ಮುರಿವಿನೊಳರಿಸಮೂಹವ । ಕಡಿದು ಹರಹಿದ ಕಲಕಿ ಹೊಕ್ಕನು ಮೊದಲವಳಯವನು ‖೮೪‖ ಬಾಗಿಲಲಿ ಸೈಂಧವನ ಸೇನಾ । ಸಾಗರವ ಮುಕ್ಕುಳಿಸಿ ತಾಕ್ಕೈ । ಲಾಗು ಮಿಗೆ ಸರಳೆರಡರಿಂದೆಚ್ಚನು ಜಯದ್ರಥನ ‖ ತೂಗಿ ತೆಗೆತೆಗೆದೆಚ್ಚ ಗರುಡಿಯ । ಲಾಗುಕಾರನ ರಥವ ಮುರಿದನು । ಮೇಗಣಮರರು ಪಾಯ್ಕಿನಲು ಕಲಕಿದನು ಪರಬಲವ ‖೮೫‖

ಅಂತು ಸಂಧಿ ೫ ಕ್ಕಂ ಪದ ೩೨೮ ಕ್ಕಂ ಮಂಗಳಂ.

ಆರನೆಯ ಸಂಧಿ.

‖ ಸೂಚನೆ ‖ ವೀರರಿಪುಕೋಲಾಹಳನು ಮದ । ವಾರಣನು ಫಲುಗುಣನ ತನಯನು । ದಾರಚಕ್ರವ್ಯೂಹದಲಿ ಗೆಲಿದನು ಕುಮಾರಕರ‖

‖ ಪದ ‖ ಅವಧರಿಸು ಧೃತರಾಷ್ಟ್ರನೃಪ ಸೈಂ । ಧವನ ಗೆಲಿದಾವ್ಯೂಹಭೇದಾ । ಹವವಿಜಯ ವಿಜಯಾತ್ಮಕನ ಕೌತುಕರಣೋದಯವ ‖ ತಿವಿದು ತರುಬುವರಥಪದಾತಿಯ । ಗವಿಯ ಗರುವತುರಂಗಗಳ ಬಲು ಜವದ ಗಜರಥಕೂಟಕೋಟಿಯ ಹೊದರ ಹೊಸಮಳೆಯ ‖೧‖ ಹರಿಯಚಕ್ರವರೂಥಚಕ್ರದೊ । ಳುರುವಣಿಪತೇಜಿಗಳ ಕಡುಹಿನ । ಖುರದಹೊಯ್ಲಿನಲಿಳೆಯಪವನನ ಗರಿಯ ಗಾಳಿಯಲಿ ‖ ಹರನ ನಯನಜ್ವಾಲೆ ಪಾರ್ಥನ । ಸರಳಕಿಡಿ ಪಲ್ಲಟಿಸಿತೆನೆ ಸಂ । ಗರದೊಳಗೆ ಸೈವರಿದು ಸದೆದನು ಸಕಲಸೈನಿಕವ ‖೨‖ ಮಿಕ್ಕು ನೂಕಿತು ಕುದುರೆಕಾರರ । ತೆಕ್ಕೆ ಕೆಡೆದುದು ಸಂದಣಿಸಿ ಕೈ । ಯಿಕ್ಕಿದಾನೆಯನೇನನೆಂಬೆನು ಕಾಣೆನಳವಿಯಲಿ ‖ ಹೊಕ್ಕು ಹೊಗಿಸುವರಥತುರಗ ಸಾ । ಲಕ್ಕಜವನಿಲಿಸಿದನು ವೀರನ । ಮಕ್ಕಳಾಟಿಕೆ ಮಾರಿಯಾದುದು ವೈರಿರಾಯರಿಗೆ ‖೩‖ ಕದಳಿಯೊಳು ಮದದಾನೆ ಹೊಕ್ಕಂ । ದದಲಿ ಹೊಕ್ಕದಚಾತುರಂಗದ । ಮೆದೆಯಮೆಟ್ಟಿದುಹೂಣೆಹೊಕ್ಕನುಥಟ್ಟೆನೊಡೆಹಾಯ್ದು ‖ ಇದಿರಲೆಚ್ಚನುಸಂಮುಖದಲಿಹ । ಕದನಗಲಿಗಳಸೀಳಿದನು ಕಾ । ಳಗವು ಕಾಲನ ಲೀಲೆಯಾಯಿತು ವಿಷಮಸಮರಂಗ ‖೪‖ ಜೋಡೊಡೆದು ಘಟ್ಟಗಿದು ಬೆನ್ನಲಿ । ಮೂಡಲದಟರ ಸೀಳಿದನು ಖುರ । ಜೋಡು ಹುಡಿಹುಡಿಯಾಗೆ ತೇಜಿಯ ಥಟ್ಟ ಖಂಡಿಸಿದ ‖ ನೋಡಲಮ್ಮುವರಿಲ್ಲ ಮಿಗೆ ಕೈ । ಮಾಡಲಮ್ಮುವರಿಲ್ಲ ಬಲವ । ಲ್ಲಾಡಿತೊಬ್ಬನೆ ಹಸುಳೆ ಹೊಕ್ಕನು ವೈರಿವೋಹರವ ‖೫‖ ಆವವಹಿಲದೊಳಂಬ ತೊಡಚುವ । ನಾವಬೇಗದಲಿದಿರನೆಸುವನ । ದಾವನಿರುತದಲೊಡ್ಡು ಮನೊ ಕೊರಳಿಂಗೆ ಕೋಲುಗಳ ‖ ಆವ

ಧೃಢತೆಯ ದೃಷ್ಟಿಪಾಳಿವಿ । ದಾವಗರುಡಿಯಶ್ರಮವೆನುತ ದಿಪಿ । ಜಾವಳಿಗಳುಲಿಯಲು ವಿಭಾಡಿಸಿದನು ರಿಪುವ್ರಜವ ॥೬॥ ಅಕಟ ಶಿಶುವೋ ನಿಲ್ಲಿ ನೀವ್ನಾ । ಯಕರು ತೆಗೆಯಲಿ ಧರ್ಮಗಾಳಗ । ಸುಕರ ಸುಕುಮಾರಕರ ಬಿಡುಬಿಡು ಲಕ್ಷಣಾದಿಗಳ ॥ ಸಕಲಕುವರರ ಕಪಿಸೆನಲು ಮಾ । ಣಿಕದ ಮಕುಟದ ತಲೆಯ ಗರುವರು । ವಿಕಳರ್ಕ್ಯದರಿತ್ತಲನುವಾಗೆನುತ ಮೊದಲಿಸಿ ॥೭॥ ಮಣಿಮನೋಹರ ಸಂಮುಖಕೆ ಸಂ । ದಣಿಸಿ ಬಿಟ್ಟುದು ರಾಯಕುವರರ । ಹಣಿದವನುತಾಹೊಯ್ದುನರೆಯಟ್ಟಿದ ಮಹಾರಥರ ॥ ಸೆಣಸು ಸವಿಯಾಯ್ತೆನುತ ಹಗೆಯರು । ಕೆಣಕಲಮ್ಮುವರಿಲ್ಲ ಬಿರುದರ । ಹೆಣನ ರಿಂಗಣಗುಣಿಸಿದನು ರಿಪುಬಲಭಯಂಕರನು ॥೮॥ ಎಡದಲೌಕುವರಾವೃತರ ವಂ । ಗಡವನೆಚ್ಚನು ಸಂಮುಖದಲವ । ಗಡಿಸಿದಿಭಕೋಟಿಗಳ ಕೊಂದನು ಸರಳಸಾರದಲಿ ॥ ಕಪುಗ ಬಲದಲಿ ಹರಿವರಥಿಕರ । ಕೆಡಹಿದನು ಕಾಲಾಳುತೇರಿನ । ಗಡಣ ಹುಡಿಹುಡಿಯೆನಲು ಸಂವರಿಸಿದನು ಪರಬಲವ ॥೯॥ ಕೊಡೆನೆಗೆದವಟ್ಟಿಗಳು ರಕುತದ । ಕಡರೊಳರೆಜೀವದಭಟರು ಬಾ । ಯ್ಬಿಡುತ ತೇಕಾಡಿದುದು ಮುಂಡದ ಹಿಂಡು ಮುಳುಗಾಡೆ ॥ ಆಡಸಿ ನೆಗೆವಾನೆಗಳ ತಲೆಗಳ । ಗಡಣ ಮೆರೆದವು ಮಿಗುವತೇಜಿಯ । ಕಡಿಕುಗಳು ಕುಣಿದಾಡಿದವು ಕೆಗ್ಗಡಲ ರಕುತದಲಿ ॥೧೦॥ ಒರವಣಿಸಿದನು ಪಾರ್ಥಭಟನ । ಬ್ಬರಿಸಿ ಖತಿಯಲಿ ನಿಖಿಳಮನ್ನಂ । ತರದ ಕಡೆಯಲಿ ನೆಲನನದ್ದುವಕಡಲ ಕಡುಹಿನಲಿ ॥ ಸರಳ ಕವಿದವು ಸತ್ತಿಸೆಲ್ಲಹ । ಪರಶು ಸುಳಿದವು ಕುಂತಮುದ್ಗರ । ಸುರಗಿಹೊಳೆದವು ಕೈಮ ಹೇರಿದವಖಿಳದಿಗುತಟವ ॥೧೧॥ ಮೊದಲಿಸಿ ಮುಂಚಿದವು ಸುಂಟಗೆ । ಗೊಯ್ದು ಹರಿದವುಕರಗಳೇರಿನ । ಬಾಣಂಗಳನುಸುಳಿದವು ಸವಾರೋಡನೊಡಸೀಳಿ ॥ ತೋರ್ದು ನೆತ್ತರ ನೊರೆಯ ಸುಳಿಯೊಳು । ಸಾದು ನಲಿದಾಡಿದವು ಕಳನೊಳು । ಬೀದಿವಿಡಿದವು ಬಿಲ್ಲುಬಿಲ್ಲಿಗೆ ಬೋಳೆಯಂಬುಗಳು ॥ ತೊಲಗ್ಕೆ ಕಾಲಾಳು ಮೇಲಾ । ಳೆಳವಿಗುಡಲಿ ಮಹಾರಥರು ಕೈ । ಕೊಳಲಿ ಜೋಧರು ದಿಟ್ಟರಾದೊಡೆ ಕಪಿಸಿ ಕರಿಘಟೆಯ ॥ ಕೆಲದದೊರೆಗಳು ಬರಲಿ ಮಾಳವ । ತಲೆಯಭಂಡರು ಹೊತ್ತಿರದೆ ಕೈ । ಕೊಳಲಿ ಕರ್ಣಾದಿಗಳೆನುತ ತೆಗೆದೆಚ್ಚನಭಿಮನ್ಯು ॥೧೩॥ ಕಾರಗಲಸಿಪ್ಪಮವ ರಾಯಕು । ಮಾರಕಂಠೀರವನು ರಿಪುಪರಿ । ವಾರವನು ನಡೆಗೊಳಿಸಿದನು ಯಮರಾಜನಾಲಯಕೆ ॥ ಮಾರಿಮೊಗದಡದೆರೆದಳೋ ಕೈ । ವಾರವೇ ತರುವಲಿಗೆದೆತ್ತಣ । ವೀರವೋ ಶಿವಶಿವಯೆನುತ ಬೆರಗಾದುದಮರಗಣ ॥೧೪॥ ಕಲಿಗಳೆಯ್ದಿದರೊಡನೆ ತೊಡೆಸಂ । ಕಲೆಯ ತೊಲಗದ ಕಂಭದುಗ್ಗಡ । ಲಳಿಯಗಜದಲ್ಲಣದ ಶರಭನ ವೃಷಭಮೊದಲಾದ ॥ ಹುಲಿಯಕೇರಿತಿಮುಖದ ವ್ಯಾಘ್ರನ । ಬಿಳಿಯಚೌರಿಯ ಬಿರುದುಗಳ ಮುಂ । ದಲೆಯ ಸುಭಟರು ಬಂದು ತಾಗಿತು ಪಾರ್ಥನಂದನನ ॥೧೫॥ ದೊರೆಯ ಸುಕುಮಾರಕನು ಹಲಬರ । ಶಿರವನರಿದನು ಪಾಯದಳವನು । ಸರಳ ಮೊನೆಯಲಿ ಸವರಿದನು ಮುಂಕೊಂಡಹೂಣಿಗರ ॥ ಒರಸಿದನು ಮಾಸಾಳಮೊತ್ತವ । ಕೊರಳನರಿದನು ರಣದಭಾಷೆಯ । ಬಿರುದರನು ಮುಂಕೊಂಡು ಕೊಂದನು ರಣದೊಳಭಿಮನ್ಯು ॥೧೬॥ ಕರಿಘಟೆಯ ಕೆದರಿದನು ಹಯಮೋ । ಹರವ ಜರಹಿದರಣಕೆ ಹರಿತಹ । ವರರಥವ ಹುಡಿಗುಟ್ಟಿದನು ಕೆಡಹಿದನು ಕಾಲಾಳ ॥ ಹುರಿಯೊಡೆದು ಮೈದೆಗೆದು ಸಲೆ ಕೈ । ಮರೆದು ಕೈದುವನಿಳುಹಿ ಪಡೆ ಮುಖದಿರುಹಲೆಚ್ಚನು ಕೊಚ್ಚಿದನು ಕೌರವಚತುರ್ಬಲವ ॥೧೭॥ ತಳಿತಹೊಗರಿನ ಬಾಯಧಾರೆಯ । ಹೊಳಹುಗಳ ಹೊಸ

ಮನೆಯ ತಳಪದ ಬೆಳಗುಗಳ ಬಿಟ್ಟೇರಧಾರೆಯ ಬಳ್ಳಿಮಿಂಚುಗಳ ॥ ಉಳಿಯಹಂಗನ ಗರಿಯ ಬಿಗು
ಹಿನ । ಹಿಳುಕುಗಳ ಹೊಗರಂಬು ತಿವಿದವು । ತುಳಿಕಿದವು ತೂರಿದವು ಕೆದರಿದವಹಿತಬಲದಸುವ ॥೧೮॥
ಆಳವಿಗೆಡೆ ಧುಂಮಿಕ್ಕಿ ರಥದವ । ರಿಳಿಯಬಿದ್ದರು ಭಯದಿ ತೇಜಿಯ । ನಿಳಿದು ರಾವ್ತರು ಕರವ ಮು
ಗಿದರು ಕೊರಳ ಸಲಹೆನುತ ॥ ಗುಳವ ಸಡಿಲಿಸಿ ಹಾಯ್ದು ಜೋಡಾ । ವಳಿಗಳಿಳಿದುದು ಕೈಯ ಕೈದು
ವ । ನಿಳುಹಿಬಾಯಲಿ ಬೆರಳನಿಟ್ಟರು ನಿಖಿಳಪರಿವಾರ ॥೧೯॥ ಎಸಳೆಸಳ ಮೋಹರದ ಸಂದಣಿ ।
ಯಸುರನುಳಿದುದು ಕೇಸರಾಕೃತಿ । ಯಸುರ ಸುಭಟರು ಪಥಿಕರಾಯಿತು ಗಗನಮಾರ್ಗದಲಿ ॥ ನು
ಸುಳಿದರು ಕರ್ಣಿಕೆಯಕಾಹಿನ । ವಸುಮತೀಶರು ರಾಯನರನೆಲೆ । ದೆಸೆಗೆಡಲು ಮೊಳಗಿದನುಪಾ
ರ್ಥಕುಮಾರನಳವಿಯಲಿ ॥ ೨೦ ॥ ಜರಿದುದಬುಜವ್ಯೂಹ ನೂಕಿದ । ಕರಿತುರಗಕಾಳಾಳು ರಥಿಕರ ।
ಮರಳುದಲೆ ತಾನಿಲ್ಲ ನೆರೆ ನುಗ್ಗಾಯ್ತು ಕುರುಸೇನೆ ॥ ದೊರೆಗಳಹದ್ರೋಣಾದಿಗಳು ಕೈ । ಮ
ರೆದು ಕಳೆದರುಪಾರ್ಥತನಯನ । ಸರಿದೊರೆಗೆ ಪಡಿಯಾವನೆಂದನು ಕೌರವರರಾಯ ॥ ೨೧ ॥ ತಂ
ದೆ ಹಡೆಮನೆ ಮಗನನಹುದೋ । ಕಂದಕಲ್ಪಸಹಸ್ರ ನೋಂತಳು । ಇಂದುಧರನನು ನಿಮ್ಮತಾಯಿ
ಸುಭದ್ರೆಯಲ್ಲದೊಡೆ ॥ ಇಂದಿನೀಬಲ ವಿಷಮರಣಜಯ । ದಂದವೀಸೌರಂಭವೀಸರ । ಳಂದವೀ
ತೆರಳಿಕೆಯದಾವಂಗೆಂದನವನೀಶ ॥ ೨೨ ॥ ಹುರುಳ ಮರೆದೆನು ಮಗನೆ ಸಾಲದೆ । ಭರತಕುಲದಲಿ
ನಿನ್ನ ಬೆಳವಿಗೆ । ಎರಡುಕವಲನ್ವಯಕೆ ಕೊಡದೇ ಸುಗತಿಸಂಪದವ ॥ ಕಿರುಳು ಬೀಳವೆ ತನ್ನ ಬಸು
ರಿಂ । ದುರುಳಿದವರಿಂದೇನುಫಲ ಮ । ತ್ಸರವೆ ಪಾರ್ಥ ಕೃತಾರ್ಥನೆಂದನು ಕೌರವರರಾಯ ॥ ೨೩ ॥
ಎನುತ ಬಿಲುದುಡುಕಿದನು ಸೇನಾ । ವನಧಿಗಭಯವನಿತ್ತು ಮರಳುವ । ಜನಪರನು ಜರೆದೆಡಬಲದ
ಮನ್ನೆಯರ ಮೊದಲಿಸಿ ॥ ಮೊನೆಗಣೆಯ ತೂಗುತ್ತ ನರನಂ । ದನನ ರಥವನು ತುರುಬಿ ನಿನ್ನ
ಯ । ತನಯನಡ್ಡೈಸಿದನು ಕೌರವರಾಯ ಖಾತಿಯಲಿ ॥೨೪॥ ಮಗುವು ನೀ ಕೆಡಬೇಡ ಹೋಗೆನು ।
ತೆಗಣಿತಾಸ್ತ್ರವ ಸುರಿವುತೈತರೆ । ನಗುತ ನಿಂದಭಿಮನ್ಯು ನುಡಿದನು ಕೌರವೇಶ್ವರನ ॥ ಮಗುವು ತಾ
ನಹೆ ತನ್ನ ಬಾಣಕೆ । ಮಗುವುತನವೇರಿಲ್ಲ ವರಳರು । ಹುಗಳ ನಿಮಿಷವು ನಿಂದು ನೋಡೆಂದೆಚ್ಚನಭಿ
ಮನ್ಯು ॥೨೫॥ ಎಸಲು ಕಣೆ ಮುಕ್ಕುರಿಕಿದವು ಹೊಸ । ಮಸೆಯ ಧಾರೆಯ ತೋರಕಿಡಿಯಲಿ । ಮು
ಸುಕಿತರಸನ ತೇರು ತಳಿತವು ಮೈಯೊಳಂಬುಗಳು ॥ ಬಸಿವರಕುತದ ಜರಿವಜೋಡಿನ । ನಸಿದಗರ್ವದ
ನೆಗ್ಗಿದಾನನ । ದೆಸಕದೊಣಗಿಲಬಾಯ ಭೂಪನ ಕಂಡನಾದ್ರೋಣ ॥೨೬॥ ರಾಯ ಸಿಲುಕಿದನಕಟಕಟ
ರಾ । ಧೇಯ ನಡೆ ಕೃಪ ಹೋಗು ಮಗನೆ ನಿ । ಜಾಯುಧವ ಹಿಡಿ ಶಲ್ಯ ತಡೆಯದಿರೇಳು ಕೃತವರ್ಮ ॥
ರಾಯನನುಜರು ಕೈದುಗೊಳಿ ರಣ । ದಾಯ ತಪ್ಪಿತು ನೃಪತಿ ಮಾರಿಯ। ಬಾಯ ತುತ್ತಾದನು ಶಿವಾ
ಯೆಂದೊರಲಿದನು ದ್ರೋಣ ॥೨೭॥ ಮಾತು ಹಿಂಚಿತು ಮುಂಚಿ ಸುಭಟ। ವ್ರಾತ ಹೊಕ್ಕುದು ಸಿಕ್ಕಿ
ದರಸನ । ಭೀತಿಯನು ಬಿಡಿಸಿದರು ಬೀರಿದರಂಬುಗಳಮಳೆಯ ॥ ಸೋತೆವಾವ್ಹಿನ್ನೇಗೆಲಿದೆ ಕರೆ ನಿ ।
ಮ್ಮಾತಗಳನೀಭ್ರೂಣಹತ್ಯಾ। ಪಾತಕಕ್ಕಂಜುವೆವೆನುತ ಕೈಕೊಂಡನಾದ್ರೋಣ ॥೨೮॥ ರಾಯನನು ತೊ
ಲಗಿಸಿದರಾಕ । ರ್ಣಾಯತಾಸ್ತ್ರರು ರಾಹುವಿನಕಟ । ವಾಯ ಚಂದ್ರನ ಸೆಳವವೋಲರಿದಾಯ್ತು
ಸುಭಟರಿಗೆ ॥ ಸಾಯಕವ ಕೈಕೊಳಿಸಿದನು ವ । ಜ್ರಾಯುಧನ ಮೊಮ್ಮನ ರಥವನಿ। ರ್ದಾಯದಲಿ ಮು

ಧೃಢತೆಯ ದೃಷ್ಟಿಪಾಳವಿ । ದಾವಗರುಡಿಯಶ್ರಮವೆನುತ ದಿಪಿ । ಜಾವಳಿಗಳುಲಿಯಲು ವಿಭಾಡಿಸಿದನು ರಿಪುವ್ರಜವ ॥೬॥ ಅಕಟ ಶಿಶುವೋ ನಿಲ್ಲಿ ನೀವ್ಹಾ । ಯಕರು ತೆಗೆಯಲಿ ಧರ್ಮಗಾಳಗ । ಸುಕರ ಸುಕುಮಾರಕರ ಬಿಡುಬಿಡು ಲಕ್ಷಣಾದಿಗಳ ॥ ಸಕಲಕುವರರ ಕಪಿಸೆನಲು ಮಾ । ಣಿಕದ ಮಕುಟದ ತಲೆಯ ಗರುವರು । ವಿಕಳರ್ಕೆ—ದಿದರೆತ್ತಲನುವಾಗೆನುತ ಮೂದಲಿಸಿ ॥೭॥ ಮಣಿವಪೋಹರ ಸಂಮುಖಕೆ ಸಂ । ದಣಿಸಿ ಬಿಟ್ಟುದು ರಾಯಕುವರರ । ಹಣಿದವನುತಾಹೊಯ್ದು ನರೆಯಟ್ಟಿದ ಮಹಾರಥರ ॥ ಸೆಣಸು ಸವಿಯಾಯ್ತೆನುತ ಹಗೆಯರು । ಕೆಣಕಲಮ್ಮುವರಿಲ್ಲ ಬಿರುದರ । ಹೆಣನ ರಿಂಗಣಗುಣಿಸಿದನು ರಿಪುಬಲಭಯಂಕರನು ॥೮॥ ಎಡದಲೌಕುವರಾವುತರ ವಂ । ಗಡವನೆಚ್ಚನು ಸಂಮುಖದಲವ । ಗಡಿಸಿದಿಭಕೋಟಿಗಳ ಕೊಂದನು ಸರಳಸಾರದಲಿ ॥ ಕಡುಗಿ ಬಲದಲಿ ಹರಿವರಥಿಕರ । ಕೆಡಹಿದನು ಕಾಲಾಳುತೇರಿನ । ಗಡಣ ಹುಡಿಹುಡಿಯೆನಲು ಸಂವರಿಸಿದನು ಪರಬಲವ ॥೯॥ ಕೊಡೆನೆಗೆದವಟ್ಟಿಗಳು ರಕುತದ । ಕಡರೊಳರೆಜೀವದಭಟರು ಬಾ । ಯ್ಬಿಡುತ ತೇಕಾಡಿದುದು ಮುಂಡದ ಹಿಂಡು ಮುಳುಗಾಡೆ ॥ ಆಡಸಿ ನೆಗೆವಾನೆಗಳ ತಲೆಗಳ । ಗಡಣ ಮೆರೆದವು ಮಿಗುವತೇಜಿಯ । ಕಡಿಕುಗಳು ಕುಣಿದಾಡಿದವುಕಿಗ್ಗಡಲ ರಕುತದಲಿ ॥೧೦॥ ಉರವಣಿಸಿದನು ಮತ್ತೆ ಭಟನ । ಬ್ಬರಿಸಿ ಖತಿಯಲಿ ನಿಖಿಳಮನ್ನೆಯಂ । ತರದ ಕಡೆಯಲಿ ನೆಲನನದ್ದುವಕಡಲ ಕಡುಪಿನಲಿ ॥ ಸರಳ ಕವಿದವುಸತ್ತಿಸೆಲ್ಲಹ । ಪರಶುಸುಳಿದವು ಕುಂತಮುದ್ಗರ । ಸುರಗಿಹೊಳೆದವು ಕೈದು ಹೇರಿದವಖಿಳದಿಗುತಟವ ॥೧೧॥ ಮೂದಲಿಸಿ ಮುಂಚಿದವು ಸುಂಟಗೆ । ಗೊಯ್ದು ಹರಿದವುಕರಗಳೇರಿನ । ಬಾದಣಂಗಳನುಸುಳಿದವು ಸಮಜೋಡನೊಡಸೀಳಿ ॥ ತೋದು ನೆತ್ತರ ನೊರೆಯ ಸುಳಿಯೊಳು । ಸಾದು ನಲಿದಾಡಿದವು ಕಳನೊಳು । ಬೀದಿವರಿದವು ಬಿಲ್ಲುಬಿಲ್ಲಿಗೆ ಬೋಳೆಯಂಬುಗಳು ॥ ತೊಲಗಿತ್ತು ಕಾಲಾಳು ಮೇಲಾ । ಳೆಳವಿಗುಡಲಿ ಮಹಾರಥರು ಕೈ । ಕೊಳಲಿ ಜೋಧರು ಬಿಟ್ಟರಾದೊಡೆ ಕಪಿಸಿ ಕರಿಘಟೆಯ ॥ ಕೆಲದದೊರೆಗಳು ಬರಲಿ ಮಾಳವ । ತಲೆಯಭಂಡರು ಹೊತ್ತಿರದೆ ಕೈ । ಕೊಳಲಿ ಕರ್ಣಾದಿಗಳೆನುತ ತೆಗೆದೆಚ್ಚನಭಿಮನ್ಯು ॥೧೩॥ ಕಾರಗಲಸಿದಪ್ರೇಮವು ರಾಯಕು । ಮಾರಕಂಠೀರವನು ರಿಪುಪರಿ । ವಾರವನು ನಡೆಗೊಳಿಸಿದನು ಯಮರಾಜಸಾಲಯಕೆ ॥ ಮಾರಿಮೊಗದಡದೆರೆದಳೋ ಕೈ । ವಾರವೇ ತರುವಲಿಗಿದೆತ್ತಣ । ವೀರವೋ ಶಿವಶಿವಯೆನುತ ಬೆರಗಾದುದಮರಗಣ ॥೧೪॥ ಕಲಿಗಳೆಯ್ದಿದರೊಡನೆ ತೊಡೆಸಂ । ಕಲೆಯ ತೊಲಗದ ಕಂಭದುಗ್ಗಡ । ಲಳಿಯಗಜದಲ್ಲಣದ ಶರಭನ ವೃಷಭಮೊದಲಾದ ॥ ಹುಲಿಯಕೇರಿತಿಮುಖದ ವ್ಯಾಘ್ರನ । ಬಿಳಿಯಚೌರಿಯ ಬಿರುದುಗಳ ಮುಂ । ದಲೆಯ ಸುಭಟರು ಬಂದು ತಾಗಿತು ಪಾರ್ಥನಂದನನ ॥೧೫॥ ದೊರೆಯ ಸುಕುಮಾರಕನು ಹಲಬರ । ಶಿರವನರಿದನು ಪಾಯದಳವನು । ಸರಳ ಮೊನೆಯಲಿ ಸವರಿದನು ಮುಂಕೊಂಡಹೂಣಿಗರ ॥ ಒರಸಿದನು ಮಾಸಾಳಮೊತ್ತವ । ಕೊರಳನರಿದನು ರಣದಭಾಷೆಯ । ಬಿರುದರನು ಮುಂಕೊಂಡು ಕೊಂದನು ರಣದೊಳಭಿಮನ್ಯು ॥ ೧೬ ॥ ಕರಿಘಟೆಯ ಕೆದರಿದನು ಹಯಮೋ । ಹರವ ಜರಹಿದರಣಕೆ ಹರಿತಹ । ವರರಥವ ಹುಡಿಗುಟ್ಟಿದನು ಕೆಡಹಿದನು ಕಾಲಾಳ ॥ ಹುರಿಯೊಡೆದು ಮೈದೆಗೆದು ಸಲೆ ಕೈ । ಮರೆದು ಕೈದುವನಿಳುಹಿ ಪಡೆ ಮುಖದಿರುಹಲೆಚ್ಚನು ಕೊಚ್ಚಿದನು ಕೌರವಚತುರ್ಬಲವ ॥೧೭॥ ತಳಿತಹೊಗರಿನ ಬಾಯಧಾರೆಯ । ಹೊಳಹುಗಳ ಹೊಸ

ಮನೆಯ ತಳಪದ ಬೆಳಗುಗಳ ಬಿಟ್ಟೇರಧಾರೆಯ ಬಳ್ಳಿಮಿಂಚುಗಳ ॥ ಲುಳಿಯಹಂಗನ ಗರಿಯ ಬಿಗು ಹಿನ । ಹಿಳುಕುಗಳ ಹೊಗರಂಬು ತಿವಿದವು । ತುಳಿಕಿದವು ತೂರಿದವು ಕೆದರಿದವಹಿತಬಲದಸುವ ॥೧೮॥ ಆಳವಿಗೆಡೆ ಧುಂಮಿಕ್ಕಿ ರಥದವ । ರಿಳಿಯಬಿದ್ದರು ಭಯದಿ ತೇಜಿಯ । ನಿಳಿದು ರಾವ್ತರು ಕರವ ಮುಗಿದರು ಕೊರಳ ಸಲಹೆನುತ ॥ ಗುಳವ ಸಡಿಲಿಸಿ ಹಾಯ್ದು ಜೋದಾ । ವಳಿಗಳಿಳಿದುದು ಕೈಯ ಕೈದುವ । ನಿಳುಹಿಬಾಯಲಿ ಬೆರಳನಿಟ್ಟರು ನಿಖಿಳಪರಿವಾರ ॥೧೯॥ ಎಸಳೆಸಳ ಮೋಹರದ ಸಂದಣಿ । ಯಸುರನುಳಿದುದು ಕೇಸರಾಕೃತಿ । ಯಸುರ ಸುಭಟರು ಪಥಿಕರಾಯಿತು ಗಗನಮಾರ್ಗದಲಿ ॥ ನುಸುಳಿದರು ಕರ್ಣಿಕೆಯಕಾಹಿನ । ವಸುಮತೀಶರು ರಾಯನರನೆಲೆ । ದೆಸೆಗೆಡಲು ಮೊಳಗಿದನುಪಾರ್ಥಕುಮಾರನಳವಿಯಲಿ ॥ ೨೦ ॥ ಜರಿದುದಬುಜವ್ಯೂಹ ನೂಕಿದ । ಕರಿತುರಗಕಾಲಾಳು ರಥಿಕರ । ಮರಳುದಲೆ ತಾನಿಲ್ಲ ನೆರೆ ನುಗ್ಗಾಯ್ತು ಕುರುಸೇನೆ ॥ ದೊರೆಗಳಹದ್ರೋಣಾದಿಗಳು ಕೈ । ಮರೆದು ಕಳೆದರುಪಾರ್ಥತನಯನ । ಸರಿದೊರೆಗೆ ಪಡಿಯಾವನೆಂದನು ಕೌರವರರಾಯ ॥ ೨೧ ॥ ತಂದೆ ಹಡೆಯನೆ ಮಗನನಹುದೋ । ಕಂದಕಲ್ಪಸಹಸ್ರ ನೋಂತಳು । ಇಂದುಧರನನು ನಿಮ್ಮತಾಯಿ ಸುಭದ್ರೆಯಲ್ಲದೊಡೆ ॥ ಇಂದಿನೀಬಲ ವಿಷಮರಣಜಯ । ದಂದವೀಸೌರಂಭವೀಸರ । ಳಂದವೀ ತೆರಳಿಕೆಯದಾವಂಗೆಂದನವನೀಶ ॥ ೨೨ ॥ ಹುರುಳ ಮರೆದೆನು ಮಗನೆ ಸಾಲದೆ । ಭರತಕುಲದಲಿ ನಿನ್ನ ಬೆಳವಿಗೆ । ಎರಡುಕವಳನ್ವಯಕೆ ಕೊಡದೇ ಸುಗತಿಸಂಪದವ ॥ ಕಿರುಳು ಬೀಳವೆ ತನ್ನ ಬಸುರಿಂ । ದುರುಳಿದವರಿಂದೇನುಫಲ ಮ । ತ್ಸರವೆ ಪಾರ್ಥ ಕೃತಾರ್ಥನೆಂದನು ಕೌರವರರಾಯ ॥ ೨೩ ॥ ಎನುತ ಬಿಲುದುಡುಕಿದನು ಸೇನಾ । ವನಧಿಗಭಯವನಿತ್ತು ಮರಳುವ । ಜನಪರನು ಜರೆದೆಡಬಲದ ಮನ್ನೆಯರೆ ಮೂದಲಿಸಿ ॥ ಮೊನೆಗಣೆಯ ತೂಗುತ್ತ ನರನಂ । ದನನ ರಥವನು ತರುಬಿ ನಿನ್ನಯ । ತನಯನಡ್ಡೈಸಿದನು ಕೌರವರಾಯ ಖಾತಿಯಲಿ ॥೨೪॥ ಮಗುವು ನೀ ಕೆಡಬೇಡ ಹೋಗೆನು । ತೆಗಣಿತಾಸ್ತ್ರವ ಸುರಿವುತ್ತೈತರೆ । ನಗುತ ನಿಂದಭಿಮನ್ಯು ನುಡಿದನು ಕೌರವೇಶ್ವರನ ॥ ಮಗುವು ತಾನಹೆ ತನ್ನ ಬಾಣಕೆ । ಮಗುವುತನಬೇರಿಲ್ಲ ವರೆಅರು । ಹುಗಳ ನಿಮಿಷವು ನಿಂದು ನೋಡೆಂದೆಚ್ಚನಭಿಮನ್ಯು ॥೨೫॥ ಎಸಲು ಕಣೆ ಮುಕ್ಕುರಿಕಿದವು ಹೊಸ । ಮಸೆಯ ಧಾರೆಯ ತೋರಕಿಡಿಯಲಿ । ಮುಸುಕಿತರಸನ ತೇರು ತಳಿತವು ಮೈಯೊಳಂಬುಗಳು ॥ ಬಸಿವರಕುತದ ಜರಿವಜೋಡಿನ । ನಸಿದಗರ್ವದ ನಗ್ಗಿದಾನನ । ದೆಸಕದೊಣಗಿಲಬಾಯ ಭೂಪನ ಕಂಡನಾದ್ರೋಣ ॥೨೬॥ ರಾಯ ಸಿಲುಕಿದನಕಟಕಟರಾ । ಧೇಯ ನಡೆ ಕೃಪ ಹೋಗು ಮಗನೆ ನಿ । ಜಾಯುಧವ ಹಿಡಿ ಶಲ್ಯ ತಡೆಯದಿರೇಳು ಕೃತವರ್ಮ ॥ ರಾಯನನುಜರು ಕೈದುಗೊಳಿ ರಣ । ದಾಯ ತಪ್ಪಿತು ನೃಪತಿ ಮಾರಿಯ। ಬಾಯ ತುತ್ತಾದನು ಶಿವಾಯೆಂದೊರಲಿದನು ದ್ರೋಣ ॥೨೭॥ ಮಾತು ಹಿಂಚಿತು ಮುಂಚಿ ಸುಭಟ। ವ್ರಾತ ಹೊಕ್ಕುದು ಸಿಕ್ಕಿದರಸನ । ಭೀತಿಯನು ಬಿಡಿಸಿದರು ಬೀರಿದರಂಬುಗಳಮಳೆಯ ॥ ಸೋತೆವಾವ್ನೀಗೆಲಿದೆ ಕರೆ ನಿ । ಮ್ಮಾತಗಳನೀಭ್ರೂಣಹತ್ಯಾ। ಪಾತಕಕ್ಕಂಜುವೆವೆನುತ ಕೈಕೊಂಡನಾದ್ರೋಣ ॥೨೮॥ ರಾಯನನು ತೊಲಗಿಸಿದರಾಕ । ರ್ಣಾಯತಾಸ್ತ್ರರು ರಾಹುವಿನಕಟ । ವಾಯ ಚಂದ್ರನ ಸೆಳೆವವೋಲರಿದಾಯ್ತು ಸುಭಟರಿಗೆ ॥ ಸಾಯಕವ ಕೈಕೊಳಿಸಿದನು ವ । ಜ್ರಾಯುಧನ ಮೊಮ್ಮನ ರಥವನಿ। ರ್ದಾಯದಲಿ ಮು

ತ್ತಿದರು ಕೌರವಸೇನೆಯತಿಬಳರು ॥೨೯॥ ಹಸುಳೆತನದಲಿ ಹರನ ಮಗನಾ । ವಿಷಮದೈತ್ಯನ ತರಿದು
ಬಿಸುಡನೆ । ಶಿಶುವಲಾ ಪ್ರದ್ಯುಮ್ನ ಮುರಿಯನೆ ಶಂಬರಾಸುರನ ॥ ಶಿಶುವೆ ನೋಡಭಿಮನ್ಯು ಸುಭಟ ।
ಪ್ರಸರವಿನಿಬರನೊಂದುಗಾಯದ । ಲುಸುರ ತೆಗೆಬಗೆವಾಡಿದನು ಧೃತರಾಷ್ಟ್ರ ಕೇಳೆಂದ ॥೩೦॥ ಗುರು
ಸುತನ ನೋಯಿಸಿದ ಶಲ್ಯನ । ಭರವಸವ ನಿಲಿಸಿದನು ಕೃಪನು । ಬ್ಬರದ ಗರ್ವವ ತೊಡೆದು ಕೃತವ
ರ್ಮಕನನೊಡೆ ಯೆಚ್ಚ ॥ ಅರಸನನುಜರ ಸದೆದು ಸೌಬಲ । ದುರುಳಬಾಹ್ಲಿಕಸೋಮದತ್ತರ ।
ಹುರುಳಗೆಡಿಸಿದನೊಬ್ಬಶಿಶು ಗೆಲಿದನು ಮಹಾರಥರ ॥೩೧॥ ಮುಳುಗಿತಂಬಿನ ಮರುಮೊನೆಯು ವೈ ।
ಗಳ ಮಹಾರಥರಾಜಕದನವ । ನೆಲೆಯು ಬಿಡೆ ಖತಿಗೊಂಡು ಮುರಿದೋಡುವರ ಮೂದಲಿಸಿ ॥ ಬಿಲು
ದುಡುಕಿ ಸಾರಥಿಗೆ ಸೂಚಿಸಿ । ಮಲೆತನೆಲತ್ರೋಮಗನೆ ಘಡಘಡ । ತೊಲಗುತೊಲಗೆಂದೆನುತ ರಿಪುವ
ನು ತರುಬಿದನು ಕರ್ಣ ॥೩೨॥ ಗಾರುಗೆಡೆದೊಡೆ ಮೆರವುದೋಲೆಯು । ಕಾರತನ ನೀ ನೆಮ್ಮೊಡನೆ ವೈ ।
ದೋರಿ ಮಡಮುರಿಯಿಲ್ಲದೆಚ್ಚಾಡಿದೊಡೆಸಫಲವದು ॥ ತೋರುವೆನು ಕೈಗುಣವನೆನುತೈ । ದಾರುಶರ
ದಲಿ ಕರ್ಣನೆದೆಯನು । ಡೋರುಗಳೆಯಲು ಬಳಲಿದನು ಘೂರಾಯಗಾಯದಲಿ ॥೩೩॥ ಬೆದರಿ ಭೂಕಂ
ಪದಲಿ ಕುಲಗಿರಿ । ಯದಿರುವಂತಿರೆ ಚಲಿಸಿ ಕಾಯವು । ಬಿದಿರಿ ಮರಳುವಕಂಗಳಲಿ ಕಲಿಕರ್ಣ ಎಮ್ಮೆಮರೆ
ಯೆ ॥ ಹೆದರಿತೀಬಲವಕಟ ಕರ್ಣನ । ಸದೆದನೋ ಸಾಹಸಿಕಶಿಶು ಕಾ । ದಿದೆವು ನಾವಿನ್ನೆನಲ ಕೆಡುಗ
ಲಿಶಲ್ಯನಿದಿರಾದ ॥೩೪॥ ಬಾಲಕನೆ ಹಿಮ್ಮೆಟ್ಟು ಹಿಮ್ಮೆ । ಟ್ಟಾಳುತನ ನಮ್ಮೊಡನೆಯೋ ಮರು । ಳೇಳಿ
ಗೆಯೊಳುಬ್ಬೆದ್ದ ಕರ್ಣನ ಸದೆದಗರ್ವದಲಿ ॥ ಮೇಲನರಿಯಾ ಶಲ್ಯನೊಡನೆಯು । ಕಾಳಗವೆ ನಿಮ್ಮ್ರಯು
ಗಳಿಗಂ । ದೂಳಿಗವ ತಹುದೆನುತ ಸುರಿದನು ಸರಳ ಸರಿವಳೆಯ ॥೩೫॥ ಬಾಲತನವೇ ಮಾಣೆಯುವೆ
ಕ । ಟ್ಟಾಳುತನವಾಭರಣವವನೀ । ಪಾಲಸುತರಿಗೆ ವಿದ್ಯೆಯೇ ವಿಪ್ರರಿಗಲಂಕಾರ ॥ ಆಳಿನಂಗವನೆತ್ತಬ
ಲ್ಲೆ ಶ । ರಾಳಿಯಲಿ ನಿನ್ನಂಗವಣೆಯ ಛ । ಡಾಳತನವನು ಮುದ್ರಿಸುವೆನೆನುತೆಚ್ಚನಭಿಮನ್ಯು ॥೩೬॥
ಸರಳ ಸರಳಲಿ ಕಡಿದು ಸವೆಯದೆ । ಸರಿಮಿಗಿಲಕಾದಿದೊಡೆ ಶಲ್ಯನ । ಧರಧುರದೆ ದಖ್ಖಾಳತನವನು
ಕಂಡು ಖಾತಿಯುಬ್ಬಿ ॥ ಸರಳುಹದಿನೆಂಟರಲಿ ಶಲ್ಯನ । ಬರಿಯಕೆತ್ತಿದನೈದು ಬಾಣದ । ಲುರವ ತೋ
ಡಿದನೊಂದುನಿಮಿಷಕೆ ಶಲ್ಯ ಸೈಗೆಡದ ॥೩೭॥ ತಲೆತಿರುಗಿ ತುಟಿಯೊಣಗಿ ಕಂಗಳ । ಬಳೆ ಮರಳಿ ಬ
ಸವಳಿಯೆ ಸಾರಥಿ । ತೊಲಗಿಸಿದನಾಶಲ್ಯನೊಡಹುಟ್ಟಿದನು ವೇದನೆಯ ॥ ನಿಲುಕಿ ಕಂಡನು ಶಲ್ಯನನು
ಜನು । ಹಳುಕುಹಿಳುಕಿನ ಮೇಲೆ ಸಂಧಿಸಿ । ಮುಳಿದೆಸುತ ತಾಗಿದನು ಖತಿಯಲಿಪಾರ್ಥನಂದನನ ॥೩೮॥
ಫೂತು ಶಲ್ಯನ ತಮ್ಮನೇ ಮಾ । ರಾಂತನಣ್ಣನ ಹರಿಬವನು ಧಿಟ । ಸೂತ ನೋಡೈ ಸಾಹಸಿಗತನ ಲೇ
ಸುಲೇಸೆನುತ ॥ ಆತನಂ ಬೈದಾರ ಮನ್ನಿಸಿ । ಸೋತವೊಲು ಮನಗೆಲವ ಮಾಡಿ ನಿ । ಶಾತಶರದಿಂದಿಳು
ಹಿದನು ಶಲ್ಯಾನುಜನ ಶಿರವ ॥೩೯॥ ದೊರೆ ಮಡಿಯೆ ಮಾದ್ರಾಧಿಪನ ಬಲ । ತಿರುಗಿತಭಿಮನ್ಯುವಿನ
ಹೊಯ್ಲಲಿ । ಹುರುಳುಗೆಟ್ಟುದು ಹೆಸರನಾಯಕವಾಡಿ ದುಗುಡದಲಿ ॥ ತರಹರವನಾಕಾಣೆ ನೀ ಮೋ ।
ಹರಕೆ ಗತಿಯೆಂತೆನುತ ಭಯದಲಿ । ಕರೆದು ತೋರಿದನಾಕೃಪಾಚಾರ್ಯಂಗೆ ಕಲಿದ್ರೋಣ ॥೪೦॥ ಮಗು
ವೆ ನೋಡಭಿಮನ್ಯು ನಮಗಿದು । ಹೊಗುವೊಡಳವೇ ಕಾಲರುದ್ರನ । ತಗಹು ಬಿಟ್ಟಂತಿವೆ ಕುಮಾರನಕೋ
ಪದಾಟೋಪ ॥ ಮೊಗಸಲರಿದುಭುಜಪ್ರತಾಪದ । ಹೊಗರು ಹೊಸಪರಿಯೆಂದು ರಿಪುವನು । ಹೊಗ

ಳುತಿರೆ ಕೇಳಿದನು ಕೌರವರಾಯ ನೀನುಡಿಯ ॥೪೧॥ ಕೇಳಲೇತಿರ್ದೈ ಕರ್ಣ ಸಲೆ ನ । ಮ್ಮಾಳ ಹೆದರಿಸಿ ರಿಪುಭಟನನಾ । ಳೇಳಿಸುವಬಾಹಿರತನವನಾನೇನ ಹೇಳುವೆನು ॥ ಖೂಳರೆಂಬೆವೆ ಗುರುಗಳಿಂದುಪಿ । ಶಾಲಮತಿಗಳು ನಮ್ಮ ಭಾಗ್ಯದ । ಮೇಲೆ ದೈವವ ಬೈದು ಫಲವೇನೆಂದು ಬಿಸುಸುಯ್ದ ॥೪೨॥ ಎನಲು ದುಶ್ಶಾಸನನು ರಾಯನ । ಕನಲಿದನು ಖತಿಯೇಕೆ ಜೀಯೆಂ । ದೆನಗೆ ಬೆಸಸಾ ಸಾಕು ಭಂಡರಬೈದು ಫಲವೇನು ॥ ದಿನಪ ದೀವಿಗೆಯಾಗಲುಳಿದೀ । ಬಿನುಗುವೆಳಗಿನ ಹಂಗು ಬೇಹುದೆ । ದನುಜ ದಿವಿಜರ ದಳಕೆ ತನ್ನನು ಬಿಟ್ಟುನೋಡೆಂದ ॥೪೩॥ ವೀರರಂಗವನೆತ್ತ ಬಲ್ಲರು । ಹಾರುವರು ಬೆಳದಿಂಗಳಿನ ಬಿರಿ । ಸಾರ ಸುಡುವುದು ಕೈದುವಿಡಿದೊಡೆ ಕಲಿಗಳೇ ದ್ವಿಜರು॥ ವೈರಿಭಟನಿವ ಮಾಗುವಲೇಮನ । ವಾರೆ ಕಾದಲು ಲೆಕ್ಕವಲ್ಲೀ । ಯೂರುಗರ ಬೈದೇನು ಫಲವೆಂದೆನುತ ಹೊರವಂಟ ॥೪೪॥ ತಳಿತುದೆಡಬಲವಂಕದಲಿ ಹೆ । ಬ್ಬಲ ಭಡಾಳಿಸಿ ಮೊರೆವಭೇರಿಯ । ಘುಳುಘುಳುಧ್ವನಿ ನೆಗೆಯೆ ಬಿರಿದುದು ಕಮಲಜಾಂಡಘಟ ॥ ಹಳವಿಗೆಯ ಸೀಗುರಿಯ ಚಮರಾ । ವಳಿಯ ವಿಮಲಚ್ಛತ್ರಸಂಖ್ಯೆಯ । ವಳಯದಲಿ ನಭಮುತ್ತಿ ಮುಸುಕಿತು ಸೇನೆ ರಿಪುಭಟನ ॥೪೫॥ ತಿರುಹಿ ತೇಜಿಯನೆತ್ತಲವದಿರ । ನೊರಸಿ ದುಶ್ಶಾಸನನ ಬೆನ್ನಲಿ । ಕರುಳ ತೆಗೆವೆನು ನೋಡು ಸಾರಥಿ ಬೆಚ್ಚಬೇಡೆನುತ ॥ ಅರಗಿನರಸನು ನಿಲುವನೇ ದ । ಕ್ಷುರಿಯ ಮನೆಯಲಿ ಹೊಕ್ಕು ನಿಮಿಷದೊಳೆರಸಿದನು ಚತುರಂಗಬಲವನು ಕೌರವಾನುಜರ ॥೪೬॥ ಎಲವೊ ಕೌರವನನುಜ ನರಿ ಹೆ । ಬ್ಬುಲಿಯ ಶಿಶುವನು ಬೇಡುವಂದದ । ಲೆಳವನರಿಯದೆಯಧಮರಥಿಕನ ಕೂಡೆ ತೊಡಕುವುದೇ ॥ ಮಲೆತು ನಿಂದೆಚ್ಚಾಡಿ ರಣದಲಿ । ತಲೆವೆರಸಿ ಮರಳಿದೊಡೆ ಕೈದುವ। ನಿಳುಹುವನು ಬಳಿಕೇನು ಶರಸನ್ಯಾಸ ತನಗೆಂದ ॥೪೭॥ ಸಾಕು ತರುವಲಿತನದ ಮಾತುಗ । ಳೇಕೆ ತೆಗೆ ರಣದೊಳಗೆ ನಿನಗವಿ । ವೇಕತನದಲಿ ಮೈಮರೆದು ನೆರೆಹೊಯ್ದ ಹೊಳ್ಳಿಗರ ॥ ಆಕಿರೀಟಿವೃಕೋದರರ ಕೈ । ಸೋಕಿದೊಡೆ ಸಂತೋಷ ನೀನವಿ । ವೇಕಿಬಾಲಕನೇನಮಾಡುವೆನೆಂದನವ ನಗುತ ॥೪೮॥ ಕೊಳಚೆನೀರೊಳು ದಾಂಟಲರಿಯದೆ । ಜಲಧಿಕಾಲ್ವೊಳೆಯಂಬಭಂಡರ । ಮುಳಿದು ಮಾಡುವುದೇನು ಮೊದಲಲಿ ನಮ್ಮ ನೀ ಗೆಲಿದು ॥ ಬಳಿಕ ಭೀಮಾರ್ಜುನರ ಬಯಸುವು । ದೆಲೆ ಮರುಳೆ ನಿನ್ನೊಡಲ ಹೊಳ್ಳಿಸಿ ತಿಳಿರಕುತದಲಿ ತಾಯ ತುರುಬನು ನಾದಿಸುವೆನೆಂದ ॥೪೯॥ ಕಾತರಿಸದಿರು ಬಾಲಭಾಷೆಗ । ಳೇತಕವು ನೀ ಕಲಿತಬಲುವಿ । ದ್ಯಾತಿಶಯವುಂಟಾದೊಡದರತೋರುಳಿದಮಾತೇನು ॥ ಭೀತಭಟರನು ಹೊಳ್ಳುಗಳೆದವ್ವ । ಘಾತಿರೇಕಕೆ ಠಾವಿದಲ್ಲೆಂ । ದೀತನೆಚ್ಚನು ನೂರುಬಾಣದಲೈಂದ್ರಸುತಸುತನ ॥೫೦॥ ಬಿಲ್ಲಹಿಡಿಯಲು ಕೌರವಾನುಜ। ಬಲ್ಲ ನೋಡೈ ಸೂತ ಮಿಗೆ ತ । ಪ್ಪಲ್ಲತಪ್ಪಲ್ಲಂಬು ಬಿದ್ದುವು ಗುರಿಯಸರಿಸದಲಿ॥ ನಿಲ್ಲುನಿಲ್ಲಾದೊಡೆಯೆನುತ ಬಲು। ಬಿಲ್ಲ ನೇವರಿಸಿದಶರೌಘವ । ದಲ್ಲಿ ನೆಲ ನಭವೆತ್ತಲೆನೆ ಗಾಢಿಸಿದವಂಬುಗಳು ॥ ಅವನಕೂರಂಬುಗಳ ಕಡಿದವ । ನವಯವವ ಕೀಲಿಸಿದು ಕೆಲಬಲ । ವವನಿಯಲಿ ಕೆಡೆಬಿಚ್ಚಿ ಮುಗಿದವುಭಟನಕಿಬ್ಬದಿಯ ॥ ಅವಗಡಿಸಿ ಖಾತಿಯಲಿ ಖಳ ಶರ । ನಿವಹವನು ತುಡುಕಿದನು ಕೆದರಿದ । ಲವನನಿಮಿಷದಲರ್ಜುನಾತ್ಮಜನಗಣಿತಾಸ್ತ್ರದಲಿ ॥೫೧॥ ತಾಯ ತುರುಬಿಗೆ ಹಾಯ್ದುಪಾತಕ । ನಾಯ ಕೊಂಡಾಡುವುದೆ ಕೊಬ್ಬಿದ । ಕಾಯವನು ಕಡಿಕಿರಿದು ನೆತ್ತರ ನೊರೆಯ ಬಾಸಣಿಸಿ ॥ ತಾಯ ಕರೆಸುವೆನೆನುತ ಕಮಲದ । ಳಾಯತಾಂಬಕನಳಿಯನನುಪಮ । ಸಾಯಕವ ಹೂಡಿದನು ನೋಡಿದನಂ

ದು ಚಿತ್ತದಲಿ ||೫೩|| ಇವನಕೊಂದೊಡೆ ತಂದೆ ಮಿಗೆ ಮೆ| ಚ್ಚುವನೊ ಮುನಿವನೊ ತನ್ನನುಡಿ ಸಂ| ಭವಿಸಿ ನುಡಿವನೊ ಭೀಮಸೇನನ ಭಾಷೆಗಂಜುವೆನು || ಇವನ ತೊಡಕೇ ಬೇಡ ಕದನದೊ | ಳಿವನ ತಾನೇ ಕೊಲಲಿ ಸಾಕಿ | ನ್ನಿವನ ಭಂಗಿಸಿಬಿಡುವೆನೆಂದನು ತನ್ನ ಮನದೊಳಗೆ ||೫೪|| ಕಾಯ್ದು ಕೊಳ್ಳೈ ಕೌರವಾನುಜ | ಹೊಯ್ದು ಹೋಗಲುಬಹುದು ಹರನೆಡ | ಹಾಯ್ದರೆಯು ಗೆಲುವೆನು ಕಣಾನಿಲ್ಲೆನುತ ತೆಗೆದೆಸಲು || ಬಾಯ್ದೆಗೆದು ಕೇಸುರಿಯ ಕಾರುತ | ಕೈದುವೆದೆಯಲಿಕೊಂಡು ಬೆನ್ನಿಗೆ | ಹಾಯ್ದೊಡವನೊರ್ಗುಡಿಸಿದನು ಕುರುಸೇನೆ ಕಳವಳಿಸೆ ||೫೫|| ಅಹಹ ಕೈತಪ್ಪಾಯ್ತು ರಾಯನ | ಸಹಭವನು ನೊಂದನು ಶಿವಾಯೆನು | ತಹಿತಬಲ ಮುರಿದೋಡೆ ಸಾರಥಿ ತಿರುಹಿದನು ರಥವ || ಬಹಳ ಬಲ ನುಗ್ಗಾಯ್ತು ಶಿಶುವಿನ | ಸಹಸ ಕುಸಿಯದೆನುತ್ತ ಖತಿಯಲಿ | ಮಿಹಿರಸುತನಡಹಾಯ್ದು ತಡೆದನುಮತ್ತೆ ಬಾಲಕನ || ೫೬ || ಸಾರುಸಾರಭಿಮನ್ಯು ಘಡಯಿ | ನ್ನಾರಬಸುರನು ಹೊಗುವೆ ನಿನ್ನನ | ರಾರಸಂತತಿಮಾಡಿಕೊಡಲಿ ಭವದ್ವಿಯೋಗದಲಿ || ಭೂರಿಬಲವನು ಸದೆದಗರ್ವವಿ | ದಾರ ಕೂಡೆ ಧನುರ್ಧರಾಗ್ರಣಿ | ವೀರಕರ್ಣ ಕಣಾ ಯೆನುತ ತೆಗೆದೆಚ್ಚನತಿರಥನ ||೫೭|| ಬಲ್ಲೆನುಂಟುಂಟಖಿಳವೀರರೊ | ಳಿಲ್ಲ ಸರಿದೊರೆ ನಿನಗೆ ಬಾಯಲಿ | ಬಲ್ಲಿದನು ನೀನಹೆ ಭಟಾಂಗದವಾತದಂತಿರಲಿ || ಬಳ್ಳಿಗಡ ಪಾವುಡವವಾಸುಗಿ | ಯಲ್ಲಿಗಟ್ಟಿತುಗಡ ಮಹಾಹವ| ಮಲ್ಲ ಮಡಮುರಿಯದಿರೆನುತ ತೆಗೆದೆಚ್ಚ ನಭಿಮನ್ಯು || ೫೮ || ಇರುಳು ರಾಯನಮನೆಗೆ ಕಪ್ಪವ | ತೆರುವುದೇ ಹಗಲೆಲವೊ ಕೆಲಬರ | ಮುರಿದ ಗರ್ವವಿದಾರೊಡನೆ ಘಡ ಮರುಳುಮರುಳೆನುತ || ಸರಳ ಸರಿವಳೆಯಿಂದ ಸುಭಟನ | ಸರಳ ಕಡಿಸಿದ ನೇನನೆಂಬೆನು | ಗಿರಿಯಮುತ್ತಿದಮಿಂಚುಬುಳುವಿನ ಮಿನುಗಿನಂದದಲಿ ||೫೯|| ಮುಳೆಗೆವೊಗದಿರು ಹುವ್ವುದೆವಡಬಾ | ನಳನೆಲವೊ ನಿನ್ನಂಬು ತಾಗಿದೊ | ಡಳುಕುವೆನೆ ತಾನೆನುತ ರವಿಸುತನೆಚ್ಚನತಿರಥನ || ಹಿಳುಕುಗಳು ಮುಗುಳಂಬುಗಳ ಸಲೆ | ತಳಿತವಭಿಮನ್ಯುವಿನ ಮೈಯಲಿ | ಬಳಿಕ ಮುರಿದವು ಹೇಳು ಕೆಂದಾವರೆಗೆ ಕವಿದಂತೆ ||೬೦|| ಸುರಪನಂಕುಶನುಸುಳಿದೊಡೆ ಮೈ | ಯರಿವುದೈರಾವತಕೆ ಕಬ್ಬಿನ|ಲಿರಿದೊಡಂಜಿಕೆಯುಂಟೆ ನಿನ್ನಯ ಕಣೆಗಳಿಕಿದೊಡೆ|| ತೆರಳುವೆನೆಯಭಿಮನ್ಯುವೆನುತ | ಬ್ಬರಿಸಿ ಕರ್ಣನ ಕಾಯವನು ಹೊಗ | ಲಿರಿದನೆಂಟಂಬಿನಲಿ ತೋದುದು ತೇರು ರಕುತದಲಿ ||೬೧|| ಹೂಣಿಗರು ಕೆಲರಿವದಿರಿವದಿರ| ಗೋಣನರಿವೆನು ಯಿವರ ಜೀವದ | ಕೇಣಿಕಾರರು ಖಾತಿಗೊಂಬರು ಭೀಮಫಲುಗುಣರು || ಮಾಣಲಿವದಿರು ಮತ್ತೆ ರಣವನು | ಕಾಣೆನಗಕಿನ್ನೇನೆನುತ್ತ| ಕ್ಷೀಣಭುಜಬಲನೆಚ್ಚ ಕರ್ಣನ ಧನುವ ಖಂಡಿಸಿದ ||೬೨|| ಕೈದು ಮುರಿಯಲು ಮುಂದುನೂಕದೆ | ಹಾಯ್ದನೀರವಿಸೂನು ಬಳಿಕಡ| ಹಾಯ್ದು ಬವರವ ಹಿಡಿದನಾಕರ್ಣಾತ್ಮಜನು ಕಡುಗಿ || ಐದುಬಾಣದಲವನ ಕೊರಳನು | ಕೊಯ್ದನರ್ಜುನಸೂನು ನಿಮಿಷದೊ | ಳೊಯ್ದು ರಂತಕದೂತರದ್ಭುತವಾಯ್ತು ಸಮರಂಗ ||೬೩|| ಗಾಯವಡೆದನು ಶಲ್ಯನೀಕುರು| ರಾಯ ಕೈದುವ ಬಿಸುಟನಾಕುರು | ರಾಯನನುಜರು ಬದುಕುವರೆ ಮೈಯೆಲ್ಲ ಬಾಣಮಯ || ಸಾಯದುಳಿದವರಿಲ್ಲ ಮಿಕ್ಕಿನ | ನಾಯಕರೊಳಿಂದಕಟ ಕುರುಬಲ | ಬಾಯಬಿಟ್ಟುದು ಶಲ್ಯಸುತನಿದಿರಾದ ನಾಹವಕೆ ||೬೪|| ಆ ಕುಮಾರನ ಸೇನೆ ಗಢಣಿಸಿ | ನೂಕಿತುರುವಣಿಸಿತು ಮಹಾರಥ | ಜೋಕೆಯಿಭತತಿ ತೂಳಿದುವು ತುಡುಕಿದವು ರಥನಿಚಯ || ತೋರಿದವು ಕೈದುಗಳು ಸಮ

ರಣ । ದಾಕೆವಾಳರ ಸನ್ನೆಯಲಿ ಸಮ । ರಾಕುಳರು ಕೆಣಕಿದರು ರಿಪುಕಲ್ಪಾಂತ ಭೈರವನ ॥೬೫॥ ಭಟ ಛಡಾಳಿಸಿದನು ಘೃತಾಹುತಿ। ಘಟಿಸಿದಗ್ನಿಯವೋಲು ರಣಚೌ । ಪಟಚತುರ್ಬಲದೊಳಗೆ ಹೊಕ್ಕನು ಸಿಂಹನಾದದಲಿ ॥ ನಿಟಿಲನೇತ್ರನ ಕೋಪನಿಖಿ ಲಟ । ಲಟಿಸಿದಂತಿರೆ ಹೆಚ್ಚಿದರಿಬಲ । ದಟವಿಯಯನು ಸವರಿದನು ಸುರಿದನು ಸರಳಶೋಣಿತವ ॥೬೬॥ ಧರೆ ಬಿರಿಯೆ ಬೊಬ್ಬೆಯಲಿ ಬಲದ । ಬ್ಬರಣೆ ದೆಕ್ಕಾದೆಕ್ಕಿಯಾಗಲು ಧರಣಿಪತಿ ಹಲುಬಿದನು ಮಗನೇನಾದನಕಟೆನುತ ॥ ಕರೆದು ಭೀಮನ ನಕುಲನನು ಸಂ । ಗರಕೆ ದೃಷ್ಟದ್ಯುಮ್ನದ್ರುಪದರ । ಧುರಕೆ ಪರುಠವಿಸಿದನು ಸೌಭದ್ರಂಗೆ ಪಡಿಬಲವ ॥೬೭॥ ಗದೆಯ ತಿರುಹುತ ಸಿಂಹನಾದದ । ಲೊದರಿ ಮಗನಾವೆಡೆಯೆನುತನೂ । ಕಿದನು ರಥವನು ತನ್ನ ಸೇನೆಗೆ ಚೌರಿಯನು ಬೀಸಿ ॥ ಅದಟರೈತರೆ ಹೋಗಲೀಯದೆ । ಮೊದಲ ಬಾಗಿಲ ಕಟ್ಟಿ ಕೊಂಡೆ । ಗ್ಗದಜಯದ್ರಥ ಭೀಮನಲಿ ಬಲುಗಾಳಗವ ಹಿಡಿದ ॥೬೮॥ ತೆರಹುಗುಡುಗುಡುಯೆಲೆಜಯದ್ರಥ। ಹೆರದೆಗೆದು ಮರಳೆನುತ ಹೂಣಿಗ। ನುರುಬಿದೊಡೆ ಮಾರಾಂತು ಭೀಮನ ಕಡುಹ ನಿಲಿಸಿದನು ॥ ಮರೆದು ಕಳೆಯಭಿಮನ್ಯುವನು ಕೈ । ಮರೆಯದೆನ್ನಲಿ ಕಾದುನೀನೆನು । ತುರುಬಿ ಸೈಂಧವನೈದಿದನು ಕೈಗೋಲವಳೆಗರೆದು ॥೬೯॥ ಬವರದಲಿ ಕಲಿಪಾರ್ಥನಲ್ಲದೆ । ಪವನತನಯಾದಿಗಳು ಗೆಲುವರೆ । ಶಿವನ ವರವೆನಗುಂಟು ಮುನ್ನೆನುತಾಜಯದ್ರಥನು॥ಕವಲುಗೋಲಲಿ ಭೀಮನನು ಪರಿ । ಭವಿಸಿದನು ಸಹದೇವನನು ಕೆಡೆ । ತಿವಿದು ನಕುಲನ ರಥವ ಕಡಿಪಲ್ಲಟವ ಮಾಡಿದನು ॥೭೦॥ ಹೊಗುವಧೃಷ್ಟದ್ಯುಮ್ನನನು ಮೈ । ದೆಗೆಯಲೆಚ್ಚನು ದ್ರುಪದಮೊದಲಾ । ದೆಗಣಿತರ ನೋಯಿಸಿದ ನರಥನುಚಾತುರಂಗವನು ॥ ಹೊಗುವಭರದಲಿ ಮತ್ತೆ ಬಿಲ್ಲನು । ಬಿಗಿದಮುಷ್ಟಾಮುಷ್ಟಿಯಲಿ ಕೋ । ಲುಗಳ ಕವಿಸಿದ ಭೀಮನೊಡನೆವಗಡಿಸಿ ಕಾದಿದನು ॥೭೧॥ ಮರಳುಮರಳೆಲೆಭೀಮ ಮುನಿದೊಡೆ । ಕೊರಳ ಕೊಯ್ವೆನು ನಿನ್ನಹವಣೇ । ಹರನಕಾರುಣ್ಯಾವಲೋಕನ ತನಗೆ ಹಿರಿದೆನುತ ॥ ಸರಳಮಳೆಗಳ ಕರೆದು ಭೀಮನ । ತುರಗವನು ಸೀಳಿದನು ರಣದಲಿ । ವಿರಥನನು ಮಾಡಿದನು ಫಲುಗುಣನೆಳಿಯೆ ಪಾಂಡವರ ॥೭೨॥ ಪಡಿಬಲವ ಬರಲೀಯದನಿಲಜ । ನೊಡನೆ ಸೈಂಧವ ಕಾದುತಿರಲಿ । ತ್ತಡಿಸಿತಾಹವವಿತ್ತ ಮೋಹರಮಧ್ಯರಂಗದಲಿ॥ ತೊಡಚಿಕೆಂಗೋಲಿನಲಿ ವೀರರ । ಕಿಡಿಯಲವನೀಪಾಲರುರುಬೆಗೆ । ಮಿಡುಕಲಮ್ಮದೆ ಮಗ್ನರಾದರು ವೀರನುಪಟಲಕೆ ॥೭೩॥ ತೊಡಚಿ ಕೆಂಗೋಲುಗಳ ಮಳೆಯನು । ಕೆಡಹುತೈತರಲವನಿಪಾಲರು । ಮಿಡುಕಲಮ್ಮದೆ ಮನವನೆಳುಹಿಕುಮಾರನುಪಟಳಕೆ ॥ ಅಡಗಿದರು ಬಳಿಕೀಕುಮಾರನ। ಕಡುಹುಘನವಾಯ್ತೋನನೆಂಬೆನು । ಪಡೆಯ ತಳಪಟಮಾಡಿದನು ಸುರಕಟಕ ಬೆರಗಾಗೆ ॥೭೪॥ ಒರಸಿದನು ಹದಿನೆಂಟುಸಾವಿರ । ಕರಿಘಟೆಯನೈವತ್ತುಸಾವಿರ । ತುರಗವನು ಮೂವತ್ತುಸಾವಿರ ವರಮಹಾರಥರ ॥ ಧುರದಲಕ್ಷಪದಾತಿಯನು ಸಂ । ಹರಿಸಿ ಶಲ್ಯಕುಮಾರಕನ ಕ । ತ್ತರಿಸಿದನು ಗೋನಾಳಿಯನು ದಿವ್ಯಾಸ್ತ್ರಧಾರೆಯಲಿ॥೭೫॥ ಮಡಿದನಕಟಾ ನಮ್ಮಸಖನೆಂ। ದಡಸಿದಳಲಿನೊಳದ್ದ ಕೋಪದ।ಕಡುಜಲಧಿಕಾಲಾಗ್ನಿರುದ್ರನ ಕಣ್ಣಹೋಲುವೆಯ॥ ಸಿಡಿದಮೀಸೆಯ ಬಿಗಿದಹುಬ್ಬಿನ। ಜಡಿದರೋಷಮಾಂಚನದ ಖಾತಿಯ। ಕಡುಹುಕಾರರು ಮಸಗಿದರು ದುರ್ಯೋಧನಾತ್ಮಜರು ॥೭೬॥ ಚಂಡಭುಜಬಲನೊಡನೆ ಮಕ್ಕಳ । ತಂಡವೆದ್ದುದು ಬಿಗಿದಬಿಲ್ಲಿನ। ದಂಡೆವಲಗೆಮುಸುಂಡಿಮುದ್ಗರಪರಶುವುಬ್ಬಣದ ॥ ಗಂಡುಗಲಿಗಳು ಕವಿದರ

ದಿರ । ಖಂಡೆಯುದ ಮುಡುಹುಗಳ ಗಂಧದ । ಮಂಡನದ ಮೈಸಾರಪರಿಮಳಪೂರರೊಗ್ಗಿನಲಿ ೭೭॥ ತಳಿತಸತ್ತಿಗೆಗಳ ವಿಡಾಯಿಯು । ಲೊಲೆವಚೌರಿಯ ವಜ್ರಮಕುಟದ । ಹೊಳಹುಗಳ ಹೊಸ ಮಿಸುನಿಯಿಕ್ಕಿದಬಿರಿದಿನುಬ್ಬಟೆಯು ॥ ಕೆಲಬಲದ ಮೇಳಾಯುತರ ವೆ। ಗ್ಗಳೆಯರಾವ್ತರು ಗಗನ ಸಾಲಗೆ ದಳೆದುದೆನೆಹೊಳೆಹೊಳೆವಡಾಯುಧಭಟರು ನೋಕಿದರು ॥೭೮॥ ಭಾಪುರೇ ಕೌರವಕುಮಾರಾ । ಟೋಪವೊಳ್ಳಿತು ಬಂದಬರವಿನ। ಚಾಪಳದೊಳೊದಗಿದೊಡೆ ಲೇಸಲ್ಲದೊಡೆ ಫಲವೇನು॥ ಕಾಪುರುಷರೈಕಾಣ ಬಹುದೆಂ । ದಾಪುರಂಪರಸುತನಸುತ ನಿಜ । ಚಾಪವನು ನೇವರಿಸುತಿದ್ದನು ಬಗೆಯುದರಿಬಲವ ॥೭೯॥ ಉಗುಳುಗುಳು ಶಲ್ಯಾತ್ಮಜನಸೀ । ನುಗುಳದಿರ್ದೊಡೆ ಸೀಳಿ ಬಸುರಲಿ । ತೆಗೆವೆವೆಮ್ಮಯ ಸಖನನೆನುತವೆ ಲಕ್ಷಣಾದಿಗಳು ॥ ತೆಗೆದೆಸುತವೇಲಿಕ್ಕಿದರು ತಾರೆಗಳು ನೆಣಗೊಬ್ಬಿನಲಿ ರಾಹುವ । ತೆಗೆದುಜೀವಿಸಬಲ್ಲವೇ ಧೃತರಾಷ್ಟ್ರಕೇಳೆಂದ ॥೮೦॥ ದಿಟ್ಟರಹಿರೋ ಲಕ್ಷಣರು ಜಗ । ಜಟ್ಟಿಗಳಲಾ ರಾಜಪುತ್ರರು । ಹುಟ್ಟರೇ ಕೆಲರೀಸುಚಪಳತೆಯಾರಿಗುಂಟೆನುತ ॥ ಕಟ್ಟಿದನು ಕಣೆಗಳನು ಸುತ್ತಲಿ । ತಟ್ಟುವಲೆಯಲಿ ಸೋಹಿದನು ಶರ । ದೊಟ್ಟು ಪಾರ್ಥಕುಮಾರನೆಚ್ಚನು ವೈರಿಮೃಗಕುಲವ ॥೮೧॥ ಘಡ ವಿಕಾರವೆ ದೊದ್ದೆಗರ ಸದೆ । ಬಡಿದಗರ್ವಿತತನವಕಟ ನ । ಮ್ಮೊಡನೆಯೀ ನೋಡಿಲ್ಲಿ ಮೇಳವೆಯೆನುತ ತೆಗೆದೆಸಲು ॥ ಒಡನೊಡನೆ ನಾರಾಚನಿಚಯವ । ಗಡಣಿಸಿದ ರೇನೆಂಬೆನವರು। ಗ್ಗಡದ ಬಿಲುವಿದ್ಯಾತಿಶಯವನು ಸಮರಭೂಮಿಯಲಿ ॥ ೮೨ ॥ ಆಸುಯೋಧನಸುತರ ಸರಳವಿ । ಲಾಸವನು ಖಂಡಿಸಿದನಾತನ। ಬೀಸರಕೆ ಬಂದಡ್ಡಬೀಳುವಭಟರ ಕೆಡೆಯೆಚ್ಚ॥ ರೋಷವಹ್ನಿಯ ಕೆದರಿಸುರಿವಮ। ಹೀಶರನು ಮಾಣಿಸಿದನವನಾ। ವಾಸವನ ಮೊಮ್ಮೊಗನುದಾರಸಮಗ್ರಸಮರದಲಿ ॥೮೩॥ ಸರಳ ಮೊನೆಯಲಿ ವೈರಿಸುಭಟರ। ಕೊರಳಸೆಳೆದನು ರಣದೊಳಾಡುವ । ಮರುಳುಬಳಗವ ತಣಿಸಿದನು ಕಡಲಾದುದರುಣಜಲ ॥ ತರಳನರೆಯಟ್ಟಿದನು ರಣದಲಿ । ದುರುಳದುರಿಯೋಧನನ ಮಕ್ಕಳ । ಮರಳಲೀಯದೆ ಭಟರ ಕೇಣಿಯ ಕೊಂಡನಭಿಮನ್ಯು ॥೮೪॥ ಉರಗನಿಕ್ಕಡಿಗಾರಹುತ್ತಿನ । ಸರವಿಗಂಜುವುದುಂಟೆ ಕರ್ಣಾ । ದ್ಯರನು ಕಡ್ಡಿಗೆ ಬಗೆಯುಸೀಹಾಹೆಗಳ ಗಣಿಸುವನೇ॥ ಎರಡು ಶರದಲಿ ಲಕ್ಷಣನ ಕಾತ್ತರಿಸಿದನು ಹದಿನೆಂಟುಬಾಣದ। ಲರಿದನುಳಿದಕುಮಾರಕರನಭಿಮನ್ಯು ನಿಮಿಷದಲಿ॥೮೫॥ ತಳಿತಚೂತದ ಸಸಿಗಳವನಿಗೆ। ಮಲಗುವಂತಿರೆ ರಾಜಪುತ್ರರು । ಹೊಳೆವಪದಕದ ತೋಳತಲೆಗಿಂಬಾದಕೈದುಗಳ ॥ ಬಳಿರಕುತದಲಿ ನನೆದಸೀರೆಯ। ತಳಿತಖಂಡದ ಬಿಗಿಯುಹುಬ್ಬಿನ । ಹೊಳೆವದಂಷ್ಟ್ರಾವಳಿಯೊಳೆಸೆದರು ಸಾಲಶಯನದಲಿ ॥೮೬॥ ಇಕ್ಕಿದಿರಲಾ ರಾಜಪುತ್ರರ। ನಕ್ಕಟಕಟಾ ಸ್ವಾಮಿದ್ರೋಹರು । ಹೊಕ್ಕಮನೆಹಾಳಹುದಲಾ ದ್ರೋಣಾದಿನಾಯಕರು ॥ ಹಕ್ಕಲಾಯಿತು ನಮ್ಮಬಲ ಶಿಶು । ಸಿಕ್ಕನೇನ್ನೆ ಪಾಂಡವರಪು । ಣ್ಯಕ್ಕೆ ಸರಿಯಿಲ್ಲೆಂದು ಕೌರವರಾಯ ಖತಿಗೊಂಡ ॥ ಕುಲವನೋಡಿದರಿಲ್ಲ ತನ್ನಯ । ಬಲುಹನೋಡಿದರಿಲ್ಲ ಕದನದೊಳುಳಿವ ನೋಡಿದೊಡಿಲ್ಲಲಾ ಪರಿಯೆಂಬ ಪಾತಕಿಯ ॥ ಇಳೆಯೊಳೋಲೆಯಕಾರರೆಂಬರ । ತಲೆಗೆ ತಂದನು ತೃಣವನೆನುತ । ಗ್ಗಳೆಯರನು. ಮೊದಲಿಸಿ ಬೈದನು ಸುಯ್ದು ಕುರುರಾಯ ॥೮೮॥ ಕೈಗೊರಳ ಕೋಳಾಹಳದ ಮುಂ । ಗೈಗಳೇರಿನ ಬಾದಣಂಗಳ । ಸುಯ್ಗಳರಿಮರಳ್ದಾಲಿಗಳ ಬಿಡುವಿದುಳ ಮೋರೆಗಳ ॥ ಸುಯ್ಗಳಲಿ ಜೀವವ ಬಿಡುವಬಲು । ಗೈಗಳಾಹವಜವನ ಕೈಯಲಿ। ಸಾಗಲರು

ಹುಲುಸಾಯ್ತೆನಲು ರಂಜಿಸಿತು ರಣಭೂಮಿ ॥ ೪೯ ॥ ಕೇಳುತಿದ್ದರು ಪತಿಯು ಮೊದಲೆ।ಗಾಳಿಯಲಿ ದಳ್ಳಿಸುವಧೈರ್ಯ । ಜ್ವಾಲೆ ತಳಿತುದು ಖಾತಿಯಲಿ ಹೊಗೆಸೇರಿದಾನನದ ॥ ಆಳುತನಕುಬ್ಬೇರಿ ಕಡುಹೀ। ಹಾಳಿಕಾರರು ಕೈದುಗೊಂಡರುಬಾಲಕನ ತರುಬಿದರುದೊರೆಗಳು ಕೇಳು ಧೃತರಾಷ್ಟ್ರ ॥೫೦॥

ಅಂತು ಸಂಧಿ ೬ಕ್ಕೆ ಪದ ೪೧೮ಕ್ಕಂ ಮಂಗಳಂ.

ಏಳನೆಯ ಸಂಧಿ.

॥ಸೂಚನೆ॥ ರಿಪುಕುಮಾರಕವನಕುಠಾರನು । ಚಪಳನೃಪಸಂಹಾರ ಕಾಲನು । ವಿಪುಳಸಂಗ್ರಾಮದಲಿ ಮಡಿದನು ಫಲುಗುಣನ ತನಯ ॥

॥ಪದ॥ ಬಾಲಬಾಲರ ಕೊಂದನರಸಿನ । ಮೇಲೆಬಿದ್ದುದು ಬವರ ಕೌರವ । ಗೋಳಿಡುತ ಸುಕುಮಾರಕರ ಸಾವಿಂಗೆ ಹಲುಬುತಿರೆ ॥ ಆಳಿದನು ದುಮ್ಮಾನವನು ಕ । ಟ್ಟಾಳುಗಳ ಕಂಡರು ಮಹಾರಥ । ರೋಳಿಯಲಿ ನೂಕಿದರು ಸರಿಸದರಥದಗಡಣದಲಿ ॥೧॥ ಮೇರೆತಪ್ಪಿತು ಕೌರವನ ಪರಿ। ವಾರದಲಿ ಬೇಹವರು ಮಕುಟದ।ಧಾರಿಯಾಳುಗಳಾಂತು ಕೊಂಡರು ಪಾರ್ಥನಂದನನ॥ ಸೂರಿಯಾನ ಸುತ ಶಲ್ಯಗೌತಮ । ಕೌರವಾನುಜನುಭಯಕಟಕಾ।ಚಾರ್ಯನಶ್ವತ್ಥಾಮ ನಿವರೊಗ್ಗಾಯ್ತು ಷಡುರಥರು ॥೨॥ ಹೊಳೆವಸಿಂಧದ ಜಡಿವಕಹಳಾ । ವಳಿಯ ಲಗ್ಗೆಯ ವಿವಿಧವಾದ್ಯದ । ಕಳಕಳದ ಕಾಲಾಳಬೊಬ್ಬೆಯ ಬಹಳ ರಭಸದಲಿ ॥ ಕಳಸಪಲ್ಲವಚೌಕದಲಿ ಮಂ । ಡಳಿಸಿದವು ಸತ್ತಿಗೆಗಳೊದರುವ । ಕೆಲಬಲದಸಂಭಾಳಿಯಲಿ ಸಂದಣಿಸಿತತಿರಥರು ॥೩॥ ಧೃತಿಗೆ ಚಿತ್ತವ ತೆತ್ತರೆನಲಂ । ದತಿಶಯರು ಮಝುಭಾಪುಭಾಪೆನು । ತತಿಪರಾಕ್ರಮನುತಪಯೋಧಿಯ ಕಡೆಯ ಕಾಣಿಸುತ ॥ ನುತಗಜಾರೋಹಕವರೂಥ ಪ್ರತತಿಪರಿಣತರಳವಿಗೊಟ್ಟುದು । ಮತಿಪ್ರಕಾಶರು ಬಂದು ಮುತ್ತಿತು ಮತ್ತೆ ಚೂಣಿಯಲಿ ॥೪॥ ಅಳವಿಗೊಟ್ಟುದು ಮತ್ತೆ ಕೌರವ। ಬಲಪಯೋನಿಧಿ ವೈರಿವಡಬನ। ಬಲುಸರಳ ಬಿಡುಗಿಡಿಯಲೌಕಿತು ಘನತುರಂಗದಲಿ॥ಸಲುವುದೋ ನಿನಗೆನುತ ಕರದಲಿ । ಬಲದನಾಯಕವಾಡಿ ಬಿಲ್ಲಿನ । ಬಲುಸರಳ ಬಿರುಗಿಡಿಯಲೌಕಿತು ಘನತುರಂಗದಲಿ ॥೫॥ ಎಸಲು ತಲೆವರಿಗೆಯಲಿ ಕವಿದುದು। ದೆಸೆಯ ಹಳುವಿಂಗಳುಕುವತಿಬಲ । ರುಸುರುಮಾರಿಗಳೇರಿ ಪೊಯ್ದರು ರಾಯರಾವುತರು ॥ ನುಸುಳುಗಳ ನಾಚಿಕೆಯ ಲಾತನ । ವಿಶಿಖಜಲದಲಿ ತೊಳೆದರತಿಬಲ । ರಸಮಸಂಗರವಾಯ್ತು ಮತ್ತಭಿಮನ್ಯುವಿದಿರಿನಲಿ ॥೬॥ ಕೆಡೆದರಥವರ ಕಾಂಚನಾದ್ರಿಗೆ । ನಡಿಸಿದವುನಾಚಿಕೆಯನಭ್ರದೊ । ಳಿಡಿದತಲೆ ಬೀರಿದವು ಭಂಗವನನುಪಮಾಂಬರಕೆ ॥ ಕಡಲುವರಿದರುಣಾಂಬುಜಲದಲಿ । ಬಿಡಿಸಿದವು ಬಿಂಕವನು ಶಿವಶಿವ । ನುಡಿವಕವಿಯಾರಿನ್ನು ಪಾರ್ಥಕುಮಾರನಾಹವವ ॥೭॥ ಹಳಚಿ ಮುರಿದುದು ಮತ್ತೆ ಕರ್ಣನ । ಬಲಕೃಪಾಚಾರಿಯನ ಸೇನೆಗೆ । ತಲೆಯುಯಣಸಂಬಂಧ ಸವೆದುದು ಕಾತರಿಸಿ ಕವಿವ ॥ ಬಲದಬಿರುದರಿಗಮರನಾರಿಯ। ರೊಳಗೆ ಸೇರುವೆಯಾಯ್ತು ಶಲ್ಯನ । ದಳದಡಗು ಸವಿಯಾಯ್ತು ಜಂಬುಕಕಾಕಸಂತತಿಗೆ ॥೮॥ ಪಡೆ

ಯು ತೆಗೆ ತರುವಲಿಯು ಕೊಲ್ಲದೆ । ಹಿಡಿಯೆನುತ ಬಲುಸರಳ ತಿರುವಿಂ । ಗಡಸಿ ಸೂತಗೆಯುರುಹಿ ಕೆ ಲಬಲದರ್ಗೆ ಕೈವೀಸಿ ॥ ಕಡುಮನದ ಕೆಚ್ಚಾಳುಗಳು ಮುಂ । ಗುಡಿಯಲ್ಯೆತರೆ ರವಿಸುತಾದಿಗ । ಳೊಡನೊಡನೆ ಕೈಕೊಂಡರಿಂದ್ರಕುಮಾರನಂದನನ ॥ ೯ ॥ ಶಿಶುತನದ ಸಾಮರ್ಥ್ಯಸಾಕಿ । ನ್ನೆಸೆಯದಿರು ನೀತೊಲಗು ತೊಲಗೆಂ । ದಸಮಬಲರೈದಿದರು ಷಡುರಥರೊಂದುಮುಖವಾಗಿ ॥ ಎಸುವುದದು ನೀವೆಂದು ನಿದ್ರೆಯ । ಮುಸುಕಿನಲಿ ಗೋಗ್ರಹಣದಲಿ ಜೀವಿಸಿದಜಾಣರು ನೀವೆನುತ ತೆಗೆದೆಚ್ಚನಭಿಮನ್ಯು ॥೧೦॥ ತರಳತನದಲಿ ನುಡಿಯದಿರು ಸಂ । ಗರಕೆ ಕರೆನಿಮ್ಮಯ್ಯನನು ಹೊಸ । ಸರಳು ನಾಚುವವಲ್ಲ ಶಿಶುವಧೆಯೆಂಬುದಪವಾದ ॥ ಮರಳುವದು ಲೇಸೆನುತ ಪಟುಭಟ । ರುರವಣಿಸಿದರು ತೆಗೆದ ಮುಷ್ಟಿಯ । ಗರುಡಿಕಾರನ ಸನ್ನೆಯಲಿ ನೂಕಿದುದು ಪರಿವಾರ ॥ ೧೧ ॥ ಪಾರ್ಥಪರಿಯಂತೇಕೆ ರಣದಲಿ । ವ್ಯರ್ಥಜೀವರು ನೀವು ಕೌರವ । ನರ್ಥವನು ಸಲೆ ತಿಂಬುದಲ್ಲದೆ ಸಮರನಿಮಗೇಕೆ ॥ ಸ್ವಾರ್ಥಲೋಲುಪುತಿಯಲಿ ನಿಲುವೆಸ । ವ್ಯರ್ಥರಾದೊಡೆ ಖಡ್ಗಧಾರಾ । ತೀರ್ಥದೊಳಗೋಲಾಡಿಸುವೆನೆನುತೆಚ್ಚನಭಿಮನ್ಯು ॥೧೨॥ ಮನದ ಕೆಚ್ಚುಳ್ಳದಟನಹೆ ಮಾತಿನ ಸಘಾಡಿಕೆ ಲೇಸುಪಾರ್ಥನ । ತನಯನಲ್ಲಾ ಘೂತು ಪಾಯಕುಯೆನುತ ಷಡುರಥರು ॥ ತನತನಗೆ ಕೆಂಗೋಲಿನಲಿ ಮು । ಮ್ಮೊನೆಯ ಬೋಳೆಯಸರಳಿನಲಿ ಸಾ । ಧನಸಮಗ್ರರು ಶಿಶುವನೆಚ್ಚರು ದೆಸೆದೆಸೆಗೆ ಕವಿದು ॥೧೩॥ ಮಸಗಿ ಮದದಾನೆಗಳು ಸಿಂಹದ । ಶಿಶುವ ಮುತ್ತುವವೋಲು ಕವಿಕವಿ । ದೆಸುತ ಬಂದರು ಮಕುಟವರ್ಧನರಸಮಬಾಲಕನ ॥ ಮಸುಳದವರವರಸ್ತ್ರವನು ಖಂ । ಡಿಸುತ ಸೇನೆಯನೊರಸಿ ಘನಪ । ರುಷದೊಳಿರಿದಾಡಿದನು ಹಲಬರಕೂಡೆ ಸುಕುಮಾರ ॥೧೪॥ ಘೂತುಮಝುಬಿಲ್ಲಾಳುತನವದು । ಭೂತನಾಥನೊಳಿಲ್ಲ ಸುಭಟ । ವ್ರಾತವೀಕ್ಷಿಸೆನುತ್ತ ಕಣೆಗಳ ಕರೆದನಾದ್ರೋಣ ॥ ಏತಕಿದು ಹಿಮ್ಮೆಟ್ಟು ನೀ ದಿಟ । ಸೋತೊಡೆಯು ಗೆಲುವಿಲ್ಲ ಮಗೆ ವ್ಯಗ । ಪೋತನನು ಹರಿ ಹೊಯ್ವುದುಚಿತವೆ ಮಗನೆ ಹೇಳೆಂದ ॥೧೫॥ ವಿನಯವೇಕಿದು ನಿಮ್ಮ ಭುಜಬಲ । ದನುವ ಬಲ್ಲೆನು ನಿಮ್ಮ ಮೈಲಿಗೆ । ಮನದ ಹವಣನು ಬಲ್ಲೆ ನವ್ಮೊಳು ತೊಡಕಿ ಜಯಿಸಿದೊಡೆ ॥ ಧನುವ ಹಿಡಿಯೆನು ಸಾಕು ಡೊಂಬಿನ । ಬಿನುಗುನುಡಿಯಂತಿರಲಿ ಬಲ್ಲೊಡೆ । ವ್ಹೊನೆಗಣೆಯಲೀಮಾತನೊಡೆನುತೆಚ್ಚನಭಿಮನ್ಯು ॥ ೧೬ ॥ ಎಡದಲೌಕುವಕೃಪನನೆಚ್ಚನು । ಕಡೆಯಲಶ್ವತ್ಥಾಮನನು ರಥ । ಕೆಡಿಯಲೆಚ್ಚನು ಕೋಡ ಕೈಯಲಿ ಕೌರವಾನುಜನ ॥ ಮಿಡುಕದೆಚ್ಚನು ಹಿಂದೆಮುಂದವ । ಗಡಿಸಿಯೆಸುತಿಹಕರ್ಣಶಲ್ಯರ । ಒಡಲೊಳಂಬನು ಹೂಳಿದನು ಸೀಳಿದನು ರಿಪುಬಲವ ॥೧೭॥ ಅಡಸಿಹೊಕ್ಕಡೆ ಕೃಪನ ರಥವನು । ಕಡಿದುಬಿಸುಟನು ಸಾರಥಿಯನಡಿ । ಮಿಡುಕಲೀಯದೆ ಬಿಗಿದು ಕರ್ಣನ ಧನುವ ಖಂಡಿಸಿದ ॥ ಕೆಡಹಿದನು ಕೌರವನ ರಥವನು । ತುಡುಕಲೀಯದೆ ದ್ರೋಣನನು ಜವಗೆಡಿಸಿದನು ಜೋಡಿಸಿದಷಡುರಥರೊಗ್ಗನೊಡೆಹಾಯ್ದು ॥ ೧೮ ॥ ಮುರಿಮುರಿದು ಹೀಹಾಳಿಯಲಿ ಮಿಗೆ ಉರವಣಿಸಿ ಗರಿಗಟ್ಟಿಕವಿದುದು । ಹರಿಬಿಡದೆ ಬಿಗುಹಿನಲಿ ಬಾಷೆಯಮಾಡಿ ತಮ್ಮೊಳಗೆ ॥ ಸರಳಸೂಸಿದರೆಡಬಲದಲ । ಬ್ಬರವ ಮಾಡಿದುಮಾಡಿದರು ಹಗೆ । ಯರುಣಜಲದಲಿ ಬಾಣಧಾರೆಯನಾಮಹಾರಥರು ॥ ೧೯ ॥ ವಡಬಗೌತಣವಿಕ್ಕುವೊಡೆ ಕಡ । ಲೊಡೆಯಗಹುದು ಸಮರ್ಥನಲ್ಲಾ । ಬಿಡು ಸರಳ ಬೀರುವೊಡೆ ಕಟಕಾಚಾರ್ಯನೆಂದೆನುತ ॥ ಕುಡಿಮೊನೆಯ ಕೂರಂಬುಗಳ ಮಿಗೆ । ಗಡಣಿಸಿ

ದರೊಗ್ಗೊಡೆದು ಷಡುರಥ । ರೊಡಲೊಳಂಬನು ಹೂಳಿದನು ಕಾರಿಸಿದಶೋಣಿತವ ॥ ೨೦ ॥
ಹೊಸಕದ ಶೌರಿಯುದ ಬಾಳಿಕೆ । ಯೇಸುದಿನವೀಕರ್ಣಕೃಪದು । ಶ್ಯಾಸನರಕ್ಕೆಕೊಂಬಕುವರನೆ ಸುರ
ರಿಗಲಗಣಸು ಗಾಸಿಯಾದರು ಗಾಯವಡೆದು ವಿ । ಳಾಸವಳಿದರು ರಿಪುಭಟನ ಗೆಲು । ವಾಸೆ ಬೀತು
ದು ಥಾತುಗೆಟ್ಟುದು ಸಕಲಪರಿವಾರ ॥ ೨೧ ॥ ವಿರಥನಾದನು ಕರ್ಣನಸ್ತ್ರವ । ತಿರುಹಿ ತಿರುವಿಗೆ
ತೊಟ್ಟನಾಗುರು । ಗುರುತನೂಜನು ತನ್ನ ಸೂತನ ಸಿರವ ಹರಿಯೆಚ್ಚ ॥ ಸುರಗಿಯನು ಬಿಸುಟೊ
ರೆಯ ತಿರುಹಿದ । ನರಸನನುಜನು ಕೃಪನು ಶಲ್ಯನು । ಕೊರಳಲಸುವನು ಹಿಡಿದು ಹಂಗಿಗರಾದರೊ
ಡೆಯಂಗೆ ॥ ೨೨ ॥ ಗನ್ನದಲಿ ಗುರು ಜಾರಿದನು ಕೃಪ ಮುನ್ನವೇ ಹಿಂಗಿದನು ಕರ್ಣನ । ನಿನ್ನಕಾ
ಬವರಾರು ಮೂರ್ಛೆಗೆ ಮೂರುಬಾರಿಯಿದು ॥ ಬೆನ್ನತೆತ್ತರು ಬಿರುದರಾತನ । ಕೆನ್ನೆಗಡಿಮುಗಿದಂಬು
ರಣದಲಿ । ನಿನ್ನ ಮಗನರನೆಲೆಗೆ ಮುರಿದನು ಭೂಪ ಕೇಳೆಂದ ॥೨೩॥ ಕೊಂಡು ಬರುತಿರೆ ಭಟರು ಮ
ನ್ನಿಯ । ಗಂಡನಾರ್ಗೆ ಜೀಯ ಯೆನೆ ಖತಿ । ಗೊಂಡು ಕುರುಪತಿ ನೋಡಿದನು ಮೂಗಿನಲಿ ಬೆರಳಿ
ಡುತ ॥ ಭಂಡರೆಂಬೆವೆ ಜಗದ ಗುರುಗಳು । ಗಂಡುಗಲಿಗಳು ವೈರಿಭಟರಿಗೆ । ಹೆಂಡಿರಾಗಿಯೆ ಹೋ
ಗರ್ಕೆ ಘಡ ಹೋಗಿ ನೀವೆಂದ ॥ ೨೪ ॥ ಕಾಲವಹಿಲವ ಕಳೆಯಲೋಸುಗ । ಕೋಲಗುರು ಜಾರಿ ದ
ನು ಶಲ್ಯನ । ಮೇಲುಮುಸುಕನುವಾಯ್ತು ಬಿರುದೇನಾಯ್ತು ಗುರುಸುತನ ॥ ಆಳುವಾಸಿಯ ಕಡು
ಹು ಕರ್ಣನ । ಬೀಳುಕೊಂಡುದು ಫೂತು ಮರುಳೇ । ಬಾಲ ಯೆಂದವನೀಶ ಮೂದಲಿಸಿದನು ತ
ನ್ನವರ ॥ ೨೫ ॥ ಇದಿರೊಳೀಶನ ಭಾಳನಯನದ । ಕದವು ತೆಗೆದಿದೆ ಹಿಂದೆ ಮರಳುವೊ । ಡಿದೆ ಕೃ
ತಾಂತನ ಕೊಂತವರಸಿನ ಮೂದಲೆಯವಚನ ॥ ಅದಟು ಕೊಳ್ಳದು ರಾಜಸೇವೆಯ । ಪದವಿಪಾತಕವೆಂ
ದೆನುತ ಹೊದ । ರೆದೆಯ ಹೂಣಿಗರೈದೆ ಹೊಕ್ಕರು ಮತ್ತೆ ಸಂಗಡಿಸಿ ॥ ೨೬ ॥ ರಸದ ಬಂಧದ ಬಿ
ಗುಹು ವಹ್ನಿಯ । ಮುಸುಕುನುಗಿದುಳಿವುದೆ ಕುಮಾರನ । ಮುಸುಡಮುಂದಕೆ ಬಿದ್ದು ಬದುಕುವರೇ
ಮಹಾರಥರು ॥ ಎಸುತ ಹೊಗುವರು ಭಟನಗಾಯಕೆ । ಮುಸುಡ ತಿರುಹುವರೆಡಿಗಡಿಗೆ ಸಾ । ಹಸದ
ಸುಗ್ಗಿಗನೊಡನೆ ತಲೆಯೊತ್ತಿದರು ಅತಿಬಲರು ॥ ೨೭ ॥ ಹರಿದು ಬಿದ್ದವು ಜೋಡು ಮೈಯಲಿ ।
ಮುರಿದು ಬಿದ್ದವು ಬಾಣವೇರಿನೊ । ಳುರವರಕುತದ ಧಾರೆ ನಾದಿತು ರಥದ ಹಲಗೆಗಳ ॥ ಹರಿವುದೆ
ಗೆದಪಕೀರ್ತಿನಾರಿಯ । ಸೆರಗಹಿಡಿದರು ಹೇಳಲೇನದ । ನೆರಿಯಲೇಕಾಂತದಲಿ ಕರ್ಣನ ಕರೆದನಾದ್ರೋ
ಣ ॥ ೨೮ ॥ ಇದಿರೊಳಾನುವೊಡರಿದು ಹಸುಳೆಯ । ಕದನ ಹಂಗಿಗರಾದೆವಾಳ್ದನ । ವದನಕಮಲಕೆ
ನಮ್ಮ ಪೌರುಷವಿಂದು ಹಿಮವಾಯ್ತು ॥ ಇದಿರೊಳಾನಿಹೆ ಶಲ್ಯನೆಡವಂ । ಕದಲಿ ಕೃಪ ಬಲನಪರ
ಭಾಗದೊ । ಳೊದವಿನೀಬಂದೆಸು ಕುಮಾರನ ಕರದ ಕಾರ್ಮುಕವ ॥ ೨೯ ॥ ಚಾಪವೀತನ ಕೈಯೊಳಿ
ರ್ದೊಡೆ । ಯಾಪಿನಾಕಿಗೆ ಗೆಲವು ನೂಕದು । ವೈಪರೀತ್ಯಕೆ ಬೆದರವಾಗದು ಸ್ವಾಮಿಕಾರ್ಯವಿದು ॥
ರೂಪುದೋರದೆ ಬಂದು ರಿಪುವಿನ । ಚಾಪವನು ಖಂಡಿಸುವುದಿದು ಕುರು । ಭೂಪನುಳಿವೆಂದಿನಸುತನ
ನೊಡಬಡಿಸಿದನು ದ್ರೋಣ ॥ ೩೦ ॥ ಹಿಂದಣಿಗೆ ತಿರುಗಿದನು ಭಾಸ್ಕರ । ನಂದನನುಕೃಪಮಾದ್ರಪತಿ
ಗುರು । ನಂದನನು ವಾಮದಲಿ ಮಿಗೆಸಂಮುಖದೊಳಾಚಾರ್ಯ ॥ ನಿಂದು ಕದನವ ಕೆಣಕಿದರು ರಿಪು ।
ಬಂದಿಕಾರನೊಳೇರಸೂರೆಗೆ । ಬಂದು ಬಸಿವುತ ಹೋದರಿನಿಬರು ಬೈದು ರವಿಸುತನ ॥ ೩೧ ॥ ದಳವು

ದಳದುಳವಾಯ್ತು ಕೇಸರ । ದೊಳಗೆ ವಿಸಟಂಬರಿದು ಕರ್ಣಿಕೆ । ಯೊಳಗೆ ರಿಂಗಣಗುಣಿದು ಸಂಗರ ಜಯದ ವಧುವಿನಲಿ ॥ ಸಲೆ ಸೊಗಸಿ ತನು ಸೊಕ್ಕಿ ದೆಸೆಪಟ । ದುಳಿವು ಸೌಭದ್ರಾದಿತನಯನ । ಬಿಲುದನಿಯ ರವವಂಜಿಸಿತು ಜಯಯುವತಿವಿರಹಿಗಳ ॥ ೩೨ ॥ ಸೂರಸುತ ಮಗನೆನಿಸುವೀಮಮ । ಕಾರವೀರಗಳು ಪೊಳೆತೊಡಾದಾ । ತಾರನುಳಿಪೆನ್ನಿಂದ ತಪ್ಪುವುದೆನುತ ಮನದೊಳಗೆ ॥ ಕೂರಲಗನಾಕರ್ಣಬರಸೆಳೆ । ದಾರಿ ಹಿಂದಣಿನೆಚ್ಚ ಪಾರ್ಥಕು । ಮಾರಕನ ಚಾಪವನು ಮುಕ್ಕಡಿಯಾಗಿ ಖಂಡಿಸಿದ ॥ ೩೩ ॥ ಉರವ ಜಯುವಧುವೊಕ್ಕತನದಲಿ । ಮುರಿದಕಡ್ಡಿಯಿಡೆನಲು ಕರದಿಂ । ಮುರಿದು ಬಿದ್ದುದು ಚಾಪವಿಂದ್ರಕುಮಾರನಂದನನ ॥ ಬೆರಗಿನಲಿ ಮುಖದಿರುಹಿ ಹಿಂದಣಿ । ಗಿರಿದ ಕರ್ಣನ ನೋಡಿ ಮುಖದಲಿ। ಕಿರುನಗೆಯ ಕೇವಣಿಸಿ ನುಡಿದನು ಬೆರಳನೊಲೆದೊಲೆದು ॥೩೪॥ ಆವಶರಸಂಧಾನವಚ್ಚರಿ। ಯಾವಸರಳವಿಲಾಸ ಭಾಪು ವಿ । ದಾವಪರಿ ಮಝುಪ್ರೊತು ಧಣುಧಣು ದೇವಬಿಲ್ಲಾಳೆ ॥ ಈವಿವೇಕವನಾರುಬಲ್ಲರು । ಭಾವನಹುದ್ಯೆ ಹಿಂದೆ ಬಂದೆಸು। ವೀವಿಗಡತನ ನಿನಗೆ ಸಲುವುದು ಕರ್ಣಕೇಳೆಂದ ॥ ೩೫ ॥ಎನಲು ಲಜ್ಜಿತನಾಗಿ ತಿರುಗಿದ । ನನುವರದೊಳಾಕರ್ಣನೀತನ । ಧನು ಮುರಿಯೆ ಕೈಕೊಂಡರೀದ್ರೋಣಾದಿನಾಯಕರು ॥ ಕನಕರಥವನು ದ್ರೋಣನಾಗುರು। ತನುಜ ಸಾರಥಿಯನು ಕೃಪಾಚಾ। ರ್ಯನು ತುರಂಗವ ಶಲ್ಯ ಕಡಿದನು ಭಟನ ಟೆಕ್ಕೆಯವ ॥ ೩೬ ॥ ತುಡುಕುವೊಡೆ ಧನುವಿಲ್ಲ ಮುಂದಡಿ। ಯಿಡಲು ಸಾರಥಿಯಿಲ್ಲ ರಥಕಡಿ । ವಡೆದುದಿನ್ನೆಂತೊದಗುವನೊ ಸುಕುಮಾರ ತಾನೆನುತ ॥ ಪಡೆ ಬಿಡದೆ ಬೊಬ್ಬಿಡಲು ಬೆದರದೆ । ಕಡುಗಿ ಖಡುಗವ ಕೊಂಡು ರಿಪುಗಳ । ಕಡಿದು ಹರಹುತ ಬೀದಿವರಿದನು ಬಲದಮಧ್ಯದಲಿ ॥ ೩೭ ॥ ಈತನಿರೆ ಕಲ್ಪಾಂತರುದ್ರನ । ಮಾತು ಜಗಕೇಕೆನಲು ವೈರಿ । ವ್ರಾತವನು ಮುಂಕೊಂಡು ಹಾಯ್ದನು ನಿಶಿತಖಡ್ಗದಲಿ ॥ ಸೂತನೇ ಶಿಶು ಷಡುರಥರ ಕರೆ । ಈತನಾರೈ ಹೇಳಿ ಭಯವಿ । ನ್ನೇತಕೆಂದವನೀಶ ಮೂದಲಿಸಿದನು ತನ್ನವರ ॥ ೩೮ ॥ ಗೆಲಿದರಭಿಮನ್ಯುವನು ತನ್ನವರೆಲವೊ ತಾವೀಳೆಯುವನನುತವೆ । ಮೆಲುನಗೆಯಂಕಿರಿರಥರ ಜರೆದನು ಕೌರವೇಂದ್ರಯ ॥ ಬಳಿಕ ಬಲನಡವಂಕದಲಿ ಮಂ । ಡಳಿಸಿತತಿಪೋಹರಿಸಿದುದು ರಿಪು । ಜಲಧಿವಡಬನೊಳಾಂತು ತಾಗಿದರಂದು ವೈರಿಗಳು ॥ ೩೯ ॥ ತುಡುಕಿದವು ತೇಜಿಗಳು ವಾಘೆಯ । ಗಡಣದಲಿ ತೇರುಗಳು ಮುಂಚಿದ । ವೆಡಬಲದ ಬವರಿಯಲಿ ಮುತ್ತಿದವಖಿಳಗಜನಿವಹ ॥ ಕಡುಮನದ ಕಾಲಾಳು ಕರೆದುದು । ಕಡುಗಧಾರೆಯನೀತನಳವಿಯ । ಕೆಡಿಸಿ ತಲೆಯೊತ್ತಿದರು ಭೂಪನ ಮೊನೆಯ ನಾಯಕರು ॥ ೪೦॥ ವಿಷದ ಹುಟ್ಟಿಯೊಳ್ದಗಿ ನೊಣ ಜೇ । ವಿಸುವವೇ ಶಿವಶಿವ ಕುಮಾರನ। ಮುಸುಡ ಮುಂದಕೆ ಬಿದ್ದು ಬದುಕುವರುಂಟೆ ಭಟನಿಕರ ॥ ಕುಸುರಿದರಿದನು ಕರಿರಥವ ನಿ । ಪ್ರಸರದಲಿ ಕಾಲಾಳುಕುದುರೆಗ । ಳಸುವ ಸೂರೆಯಬಿಟ್ಟನಂತಕದೂತಸಂತತಿಗೆ ॥ ೪೧ ॥ ಅರಿಭಟರ ಬೊಬ್ಬೆಗಳ ಮೊಳಗಿನ । ಲರುಣಜಲವರುಷದಲಿ ಸುಭಟರ । ಕೊರಳವನದಲಿ ಕುಣಿದುದೀತನ ಖಡ್ಗವನಕೇಕಿ ॥ ಸುರಿವಖಡ್ಗದ ಮೊನೆಯ ರಕುತಕೆ । ತರತರದಿ ಬಾಯೊಡ್ಡಿ ಶಾಕಿನಿ । ಯರ ಸಮೂಹವು ಬಳಿಯಲ್ಕೈದಿತು ಪಾರ್ಥನಂದನನ ॥ ೪೨ ॥ ಕರುಳಹೂಗೊಂಚಲಿನ ಮೊಳೆಯ । ಬಿರಿಮಗಗಳ ನವಖಂಡದಿಂಡೆಯ । ತರತರದ ತಳಿರೆಲೆಯ ಕಡಿದೋಳುಗಳಕೊಂಬುಗಳ ॥ ಬೆರಳಕಳಿಕೆಯ ತಲೆಯಪಲಬಂ । ಧುರದ ಘಾತದಕ್ಷನವಮಧು । ಕರಭರಣವಿ

ನಲೆಸೆದುದಾತನಖಡ್ಗ ಚೈತ್ರದಲಿ ॥ ೪೩ ॥ ವೈರಿಸುಭಟರಿಗಮರಲೋಕದ । ನಾರಿಯರಿಗೆ ವಿವಾಹವ
ನು ವಿ । ಸ್ತಾರಿಸಿದಸಮಯದೊಳಗಾದಸಿತಾಕ್ಷತಾವಳಿಯ ॥ ತಾರಕಿಗಳೆಸೆದನಭದೋಲ್ ರಿಪು। ವಾರ
ಣದ ಮಸ್ತಕದ ಮುತ್ತುಗ । ಳೋರಣಿಸಲೊಪ್ಪಿದವು ಖಡ್ಗಸುರೇಂದ್ರಸುತಸುತನ ॥ ೪೪ ॥ ಶಾಕಿನಿ
ಯರೋಕುಳಿಯಧಾರೆಯ । ಜೇಕೊಳವಿಯೋಜನವ ಜಲಜಂ । ತ್ರಾಕರುಷಣವೊ ರಕುತಲತೆಗಳ
ಕುಡಿಯಕೊಂಕುಗಳೋ॥ ನೂಕಿಕ್ಕೊಯ್ಯೊಕ್ಕರಳುಗಳೊ ಮುಂಡದಾವೋಕಿನಲಿ ಬಗಿದೊಗುವನೆತ್ತರು।
ನಾಕವನು ನಾದಿತ್ತಸಲು ಸವರಿದನು ಪರಬಲವ ॥ ೪೫ ॥ ಕೆಟ್ಟು ಬಿಟ್ಟೋಡಿದರು ಭಟನರೆ । ಯ
ಟ್ಟಿದನು ಬಲದೊಳಗೆ ರಾಯಘು । ರಟ್ಟಪಾರ್ಥನ ತನಯನೆಲೆಧೃತರಾಷ್ಟ್ರ ಕೇಳೆಂದ ॥೪೬ ॥ ಸೀದ
ದನು ಸೌಬಲರೊಳಿಪ್ಪ । ತ್ತೇಳನಾಕೈಕೆಯರೊಳಗೆ ಹದಿನೇಳನಗ್ಗದ ರವಿಸುತನ ಮಂತ್ರಿಗಳೊಳೈವರ
ನು॥ ಮೇಲೆ ಕೈಕಯರೊಳಗೆ ಹತ್ತುನೃ । ಪಾಲರನು ಕೌಸಲೆಯವರನೇ।ಪಾಳೆಬರ್ಬರರೊಳಗೆ ಕೊಂಳಿ
ನು ಹತ್ತುಸಾವಿರವ॥೪೭॥ ಧನು ಮುರಿದಬಳಿಕಿಮ್ಮಡಿಸಿತೀ। ತನಪರಾಕ್ರಮವೆನುತ ಸೇನಾ।ವನಧಿ ಜರಿ
ದುದು ಭಟರು ಹರಿದುದು ಬಿಟ್ಟಮಂಡೆಯಲಿ॥ ಜನಪತಿಯು ಕಟ್ಟಳವಿಯಲಿ ಕವಿ।ದಿನನಸುತನಡ್ಡೈಸಿ
ದನು ಹೋ।ಗೆನುತ ನಾರಾಚಲದಲಿ ಮುಸುಕಿದನರ್ಜುನಾತ್ಮಜನ॥೪೮॥ ಎಳೆಯರವಿರಶ್ಮಿಗಳು ರಕ್ತೋ
ತ್ಪಲದೊಳಗೆ ಕವಿದಂತೆ ಹೊನ್ನರೆ। ಬಳಿದಹಿಳುಕನೆ ಕಾಣಲಾಯಿತು ಭಟನ ಕಾಯದಲಿ ॥ ಹೊಳೆದು
ಹೊಂಮಿಗ ಹೊಯ್ವವೋಲ । ವ್ವಳಿಸಿ ಕರ್ಣನ ರಥಹಯವನ । ಪ್ಪಳಿಸಿ ಮರಳುತ ಲಾಗಿನಲಿ ಖಂ
ಡೆಯವ ಖಂಡಿಸಿದ ॥ ೪೯ ॥ ಕರದ ಕರವಾಳುಡಿಯೆ ಬೆದರದೆ । ಹರಿದು ಧುರದೊಳು ಗದೆಯ ಕೊಂ
ಡ । ಬ್ಬರದ ರೋಷದೊಳುಲಿದು ಹರಿಗೆಯನಣೆದು ಮುಂದಣಿಗೆ ॥ ಅರರೆ ಸಂಮುಖವಾಗೆನುತ ಸಂ
ಗರದೊಳುರವಣಿಸಿದನು ಕರ್ಣನ । ತೆರಳಿಚಿದನೈ ನೂರುಹೆಜ್ಜೆಯನಿಂದ್ರಸುತಸುತನ ॥ ೫೦ ॥ಗುರು
ಸುತನ ಸಾರಥಿಯ ಮಾದ್ರೇ । ಶ್ವರನ ರಥವನು ಕೃಪನ ತೇರಿನ । ತುರಗವನು ಕೆಡೆಹೊಯ್ದು ದ್ರೋ
ಣನರಥವ ಹುಡಿಮಾಡಿ ॥ ಅರಸನೇರಿದಕರಿಗೆ ಹಾಯ್ದನು। ಮರಳಿ ದುಶ್ಶಾಸನನ ಮುಖವನು। ಚರಣ
ತಳದಿಂದೊದೆದು ಹೊಯ್ದನು ಮತ್ತೆ ರವಿಸುತನ ॥೫೧॥ ಗದೆಯು ಹೊಯ್ಲಿನೊಂದು ರೋಷದೊ ।
ಳದಿರಥಗೆ ಸೈನೆಗೆದರೋಮದ। ಹೊದರುಗಳ ಬಿಡುಗಣ್ಣ ಕೆಂಪಿನಕುಣಿವಮೀಸೆಗಳ॥ ಕುದಿದ ಹೃದಯ
ದಕಾದದೇಹದ। ಕದನದಲಿ ರವಿ ಸೂನು ಮೇಲಿಕ್ಕಿದನು ಹೋಗದಿರೆಲವೊ ಹೋಗದಿರೆನುತ ತೆಗೆದೆಚ್ಚ
॥ ೫೨ ॥ ಸರಳಮಯಸರ್ವಾಂಗವಿನ್ನೀ । ಸರಳ ನಡೆ ವಿಂಬಿಲ್ಲಮೈ ಮಗು । ಳರಿಯನದನಭಿಮನ್ಯು
ಕರ್ಣನಮೇಲುವಾಯಿದನು ॥ ತರಹರಿಸಿ ಕೆಲಸಿಡಿದುರಿಪುಭಟ । ನುರವನುದರವನೆಡಬಲನ ಕಿ । ಬ್ಬರಿ
ಯನೆಚ್ಚನು ಕರ್ಣನರುವತ್ತೈದುಬಾಣದಲಿ ॥ ೫೩ ॥ ಸರಳು ನಡಲುಬ್ಬೆದ್ದು ಬೊಬ್ಬಿರಿ । ದುರವಣಿ
ಸಿಬರೆ ದಿವ್ಯಶರದಲಿ । ಕರವೆರಡ ಹರಿಯೆಚ್ಚೊಡಾಗಲೆ ಕೆಡೆದುದವನಿಯಲಿ ॥ ಇರದೆಗಹಗಹಿಸಿದ
ನು ಭಟನೆಲೆ । ಮರುಳಸೂತಜ ಕ್ಷತ್ರಮುರಿಯೆ ಸಂ । ಗರದಸಿರಿ ಹಿಂಗುವುದೆ ತನ್ನನೆನುತ್ತ ಗರ್ಜಿಸಿ
ದ ॥೫೪॥ ಸುರಿವರುಧಿರದಸರಿಯ ಸೆರಗಿನೊ । ಳೊರಸಿ ರಥದಚ್ಚುಗಳನೊದೆದನು । ತಿರುಹಿ ಗಾಲಿ
ಯ ಕೊಂಡು ಮುಂಗೈಗೊಂಡು ನಡೆನಡೆದು ॥ ಅರಿಬಲವನಿಡೆ ಮುಗ್ಗಿ ಕೆಡೆದವು । ತುರಗವಜಗಿಜಿ
ಯಾದವಿಭರಥ । ಹೊರಳಿದವು ಪುರುಳಿದವು ಹೂಣಿಗರಟ್ಟೆ ಸಮರದಲಿ॥ ಹರಿಯು ಚಕ್ರದ ಸತ್ವವೀತನ

ಧುರದೊಳಾಯ್ತಿನೆ ರಥದ ಚಕ್ರದೊ । ಳರಿಬಲವನಿಡೆ ಮುಗ್ಗಿ ಕೆಡೆದವು ಬಹಳತಳತಂತ್ರ ॥ ಬಿರು
ದಪೊಗಳಿಸಿಕೊಂಬಪಟುಭಟ । ರುರವಣಿಸಿ ಹಿಂದಾಯ್ತು ರಾಯರ । ಗುರುವಕಂಡವರಿಲ್ಲೆನುತ ಕು
ರುರಾಯಬಿಸುಸುಯ್ದ ॥೫೬॥ ಮನದಖತಿ ಬಿಗುಹೇರಿ ದುಶ್ಶಾ । ಸನನ ಸುತನಿದಿರಾಂತು ಖಡುಗದ।
ಮೊನೆಯ ಚೂರಿಸಿ ದಂಡೆವಲಗೆಯ ಗತಿಗಳೊದರಿಸುತ ॥ ತನಗೆ ಮೃತ್ಯುವ ಕರೆವಪೊಲು ಪಾ । ರ್ಥ
ನಕುಮಾರನ ಕರೆದು ಹಳಚಿದ । ನೆನಿಮಿಷಾವಳಿ ಘೂತುಪಾಯ್ಕೆನೆ ಮೊಳಗಿದರು ಭಟರು ॥೫೭॥
ಸೇನೆ ಮುರಿದುದು ಮಕುಟವರ್ಧನ । ರಾನಲಾಪುವರಿಲ್ಲ ಪಾರ್ಥನ । ಸೂನು ರಣದಲಿ ಬೀದಿವರಿದ
ನು ಗದೆಯ ತಿರುಹಿಸುತ ॥ ಮಾನನಿಧಿಗಳು ಮುಂದುಗೆಟ್ಟರೆ । ದೇನುಸಾಹಸವಿವಗೆನುತ ಮದ ।
ದಾನೆಗಳ ಹದಿನೆಂಟು ಸಾವಿರಘಟೆಯ ನೂಕಿದರು ॥೫೮॥ ಮದಕರಿಗಳುರವಣೆಗೆ ಮೇದಿನಿ । ಯದಿ
ರಿತೆನೆ ನಡೆದುದು ಮಹಾದೇ । ವದಟರುರುವಣಿಸಿದರು ಬಲುಗಜಘಟೆಯನಾಯಕರು ॥ ಪದಹತಿಯ
ಕೆಂಧೂಳಿಯಮರರ । ಬೆದರಿಸಿತ್ತು ಕುರುಬಲದ ಜೋದರು । ಕದನದಲಿ ಬಲುಸರಳಮಳೆಗರೆದಾಂಕಿದ
ರು ಭಟನ ॥೫೯॥ ಭುಜವ ಹೊಯ್ದನು ಪೇಲನಮರ । ವ್ರಜವುಘೇಯೆನೆ ಸಿಂಹನಾದದಿ । ನಿಜಗಡೆ
ಯಲೊಳಪೊಕ್ಕು ಹೊಯ್ದನು ಗಜದಮಸ್ತಕವ ॥ ಗಜದಗಾವಳಿ ಕೋಡನೂರಿದ । ವಜಿತವೈರಿವ್ರಾ
ತಪಿಗೆ ಗಜ । ಬಜಿಸೆ ಕೊಂದನು ಕರಿಘಟೆಯ ಹದಿನೆಂಟುಸಾವಿರವ ॥೬೦॥ ಗಾಲಿ ತೀರಿದವೆಂದು
ಬಗೆದನೆ । ಕಾಳಗಕೆ ತಪ್ಪೇನೆನುತ ಕರ । ವಾಳವಾತನಬಗೆಯದೆಳೆಪೊಕ್ಕರಗಿದನುತಿರವ ॥ ಮೇಲು
ವಲಗೆಯಲಣೆದುಹೊಯ್ದನು । ಬಾಲಕನಗಾಯವನುನಸುನಗು । ತೇಳಿಸುತದಂಡೆಯಲಿ ಕಳೆದನು
ತಿವಿದನವನುರವ ॥೬೧॥ ಕರಹತಿಗೆ ಧಡಧಡಿಸಿ ತಿರ್ರನೆ । ತಿರುಗಿಬೀಳುತ ಧೈರ್ಯವನು ಹೊಡ । ಕರಿಸಿ
ಹೊಲಬಿನೊಳೆದ್ದು ತಿವಿದನು ಪಾರ್ಥನಂದನ ॥ ಅರಿಕೃಪಾಣದ ಗಾಯದಲಿ ತರ । ಹರಿಸಲಾರದೆ ಕೆಡ
ಹುತಹಿತನ । ನೆರಗಿದನು ಬಳಿಕವನಿಗೊರಗಿದರಾಕುಮಾರಕರು ॥೬೨॥ ಕಾಳುಗಿಚ್ಚೆದ್ದಡವಿಯನು ಕು
ಡಿ । ನಾಲಿಗೆಯೊಳಳವಡಿಸಿ ದಳ್ಳುರಿ । ಜಾಲ ತಗ್ಗಿದವೋಲು ಗಗನದ ಮುಗಿಲಮೋಹರದ ॥ ಧಾಳಿ
ಯಲಿ ಯರೆಯಟ್ಟಿ ಬಿಸುಡುವ । ಗಾಳಿಯುರವಣೆ ನಿಂದವೊಲು ಸುರ । ಪಾಲತನಯನತನಯಸ್ತ
ಮಿಸಿದನು ರಣದೊಳಗೆ ॥೬೩। ತೋಳತಲೆಗಿಂಬಿನಲಿ ಕೈದುಗ । ಳೋಳಿಗಳ ಹಾಸಿನಲಿ ತನ್ನಯ ।
ಕಾಲದೆಸೆಯಲಿ ಕೆಡೆದ ಕೌರವಸುತರು ನೂರ್ವರಲಿ ॥ ಬಾಲಕನು ಬಳಲಿದನು ಸಮರದ । ಲೀಲೆಯಲಿ
ಕಣ್ಣಿದಾಡಿ ಬಸವಳಿ । ದಾಳುಗಳ ದೇವನು ಮಹಾಹವದೊಳಗೆ ಪವಡಿಸಿದ ॥ ೬೪ ॥ ಸಸಿಯಬಿಂಬವ
ಬಗೆಯದದಟನ । ಮುಸುಡು ಮುರಿಯದು ಮೈಯದೀಧಿತಿ। ಮಸುಳಿಸದು ಕಣ್ಣಾಲಿ ಕರಗದು ಕಾಯ
ಜವಗೆಡದು ॥ ಎಸಕ ಮಸುಳದು ಸಮರದಲಿ ಪೌ । ರುಷವಮಾಡಿ ವಿರೋಧಿರಾಯರ । ಕುಸುರಿದಡೆ
ಗೆಡಹಿದನು ಪಾರ್ಥನಸೂನು ರಂಜಿಸಿದ ॥ ೬೫ ॥ ಬಿಗಿದಹುಬ್ಬಿನಬಿಟ್ಟಕಂಗಳ । ಹೊಗರುಮೋರೆಯ
ಹೆಣಿಲಮಂಡೆಯ । ಬಿಗಿಯಮೊತ್ತರಜೋರಿನೊಡಲಿನತುರುಗಿದಂಬುಗಳ ॥ ಹೆಗಲಕೊಯ್ಲಿನತಗ್ಗಿನಲಿ
ಸೈ । ನೆಗೆದರೋಮದ ವಿಕ್ರಮಾಗ್ನಿಯ। ತಗಹುಬಿಡದಭಿಮನ್ಯುವೆಸೆದನು ಶಸ್ತ್ರಶಯನದಲಿ ॥೬೬॥
ಸಾವಹರೆಯವೆ ಯೆಂದುಗಗನದ । ದೇವತತಿ ಮರುಗಿದುದು ಶಕ್ರನ । ಸಾವಿರಾಲಿಗಳೊರತೆ ಮಸಗಿತು
ಪೌತ್ರಶೋಕದಲಿ ॥ ತಾವುಪಡುರಥರೊಬ್ಬಹಸುಳೆಯ । ಹೇವವಿಲ್ಲದೆ ಕೊಂದರೋ ಸುಡ । ಲಾವವೀರ

ರು ಕೌರವಾಧಿಗಳೆಂದುದಮರಗಣ ||೬೭|| ಮಗುವು ವೇಷವಧರಿಸಿ ಧುರದೊಳ | ಗಗಲಿ ಹೋದೊಡೆ ತನ್ನ ಚಿತ್ತಕೆ | ಡಗೆಯ ಡಾವರವಾಯ್ತು ತನಗೊಳಗಾಯ್ತು ಪರಿತಾಪ || ಮಗನ ಮರಣದೊಳೆಂತು ಜೀವಿಸಿ | ಬಗೆವಳಕಟ ಸುಭದ್ರೆಯನುತವೆ | ಮೃಗುಜಲವ ಬೆರಳಿಂದ ಮಿಡಿದರು ಗೌರಿದೇವಿಯರು ||೬೮|| ಧುರದಪ್ರಳಯಕೃತಾಂತನನು ಪರಿ | ಹರಿಸಿದೆವು ಮೃತ್ಯುವಿನ ಪಾಶದ | ಕೊರಳ ಬಳಚಿದೆವೆನುತ ಕೌರವಬಲದ ನಾಯಕರು || ಶಿರವ ತಡಹುತ ತಮ್ಮ ಶಿಬಿರಕೆ | ತಿರುಗಿದರು ಬಾಲಕನನೀಕ್ಷಿಸ | ಲರಿದು ತನಗೆಂಬಂತೆ ರವಿಜಾರಿದನು ಪಶ್ಚಿಮಕೆ ||೬೯|| ಹಲವುಗಜವೊಂದಾಗಿ ಸಿಂಹದ | ಮೊಲೆಮರಿಯ ಕೊಂಬಂತೆ ಹಾವಿನ | ಬಳಗ ಗರುಡನಮರಿಯನಿರಿದವೊಲಾಯಿತೆಕಟೆನುತ|| ಅಳಲಿದುದು ಸುರಕಟಕವವನಿಗೆ | ಯಿಳಿದರಪ್ಸರಗಣಿಕೆಯರು ಕೋ | ಮಲನ ತಂದರು ವಾಸವನ ಸಿಂಹಾಸನದ ಹೊರೆಗೆ ||೭೦|| ಸೋಲವರಿಗಳಿಗೆಂದು ಹರುಷವ | ತಾಳದಿರು ಧೃತರಾಷ್ಟ್ರ ಕೃಷ್ಣನ | ಸೋಲವದು ಪಾಂಡವರು ಸೋತವರಲ್ಲ ನಂಬುವದು || ಸೋಲವಿದು ನಾಳಿನಲಿ ಪ್ರಳಯದ | ಕಾಲ ಕೌರವಕುಲಕೆ ದಿಟವಿದು | ಸೋಲವುಂಟೇ ವೀರನಾರಾಯಣನ ಭಕ್ತರಿಗೆ || ... ||೭೧||

ಅಂತು ಸಂಧಿ ೭ಕ್ಕೆ ಪದ ೪೪೯ ಕ್ಕಂ ಮಂಗಳಂ.

ಎಂಟನೆಯ ಸಂಧಿ.

||ಸೂಚನೆ|| ಅರಿಮಹೀಶಕುಮಾರಧೀರನು | ವರಕಿರೀಟಿಕುಮಾರ ರಣದಲಿ | ಸುರರನಗರಿಗೆ ನಡೆಯೆ ಹಲುಬಿದನಂದು ಯಮಸೂನು ||

|| ಪದ || ತೆಗೆದುದೀಪರಿವಾರ ಕಹಳಾದಿಗಳ ಸನ್ನೆಯಲುಭಯಬಲ ಕಾ | ಳಗವನುಳಿದರು ಬಂದು ಹೊಕ್ಕರು ತಮ್ಮಪಾಳಯವ || ಮಗನು ರಣದಲಿ ಮಡಿದಹದ ಬೀದಿ | ಗಳೊಳಾದುದು ವಾರ್ತೆ ದೂತರು| ದುಗುಡಭಯದಲಿ ಬಂದು ಹೊಕ್ಕರು ರಾಜಮಂದಿರವ||೧|| ಅವನಿಪನ ಖಂಡೆಯವ ನಕುಲನ | ಪವನಸುತನ ಕಠಾರಿಯನು ನೃಪ | ನಿವಹದಾಯುಧತರೆಯನೊಯ್ಯನೆ ತೆಗೆದು ಬೈಚಿಟ್ಟು || ಬವರದಲಿ ಸುತನಳಿದನೋ ಕೌರವನ ಕೈಯೊಳಗಾದನೋ ಸಂ | ಭವಿಸಿದಾಹದನೆಂಬನೃಪತಿಯ ಕಂಡ ರವರೆಂದು ||೨|| ಅವನಿಪಾಲಕುಮಾರ ಕಂಠೀ| ರವನು ರಣದಲಿ ಬೀದಿವರಿದು | ತ್ರಿವಿದೊಳಹಿತರನಿರಿದು ಕೌರವರಾಯನಂದನರ || ಜವನನಗರಿಗೆ ಕಳುಹಿ ತಾ ವಾ | ಸವನ ಸಿಂಹಾಸನದ ಬಯಕೆಗೆ | ತವಕದಲಿ ಜಾರಿದನೆನಲು ಶಿವಯೆನುತ ಬಸವಳಿದ || ೩ || ಕುಲಿಶಹತಿಯಲಿ ಕುಲಶಿಲೋಚ್ಚಯ | ವಿಳೆಗೆಕೆಡೆವಂದದಲಿ ನಿಜಸುತ | ನಳಿದವಾರ್ತಾವಚನದುಪಟಳಕವನಿಪಾಲಕನು || ಮಲಗಿದನು ಮೈಮರೆದು ದುಮಹಿಮಂ| ಡಲಿಕರೊಳು ಗುಜಗುಜನಲಿರೆ ಕಳ | ವಳಿಕೆ ಮೊಳೆತುದು ಕಟಕದಲಿ ದುಮ್ಮಾನಮಯವಾಗೆ ||೪|| ಅರಮನೆಯ ಗಜಬಜದ ಹವಣಾರಿ | ದರಸನಪಗತನೆಂದು ಪಾಳಯ | ವಿರುಳು ನಡುಗಿತು

ಕೈಯುಸೂರೆಗೆ ಹೊಕ್ಕು ಕೆಲಕಡೆಯು ॥ ನೆರವಿ ಮುಸುಗಿತು ಕೆತ್ತವಂಗಡಿ । ದುರುಳರುಬ್ಬರಿಸಿದರು ಮು
ಸುಕಿನ । ಸುರಗಿ ತೆತ್ತವು ಮಂದಿ ದಳವುಳವಾಯ್ತು ಧನಿಕರಿಗೆ ॥೫॥ ಹೊಳಲು ತಲೆಕೆಳಕಾಯ್ತು ಹು
ಯ್ಯಲು । ತಳಿತುದೊಳತೋಟಿಯಲಿ ಕೆತ್ತವು । ನಿಳಯನಿಳಯದಕದನದುದ್ರೇಕದಲಿ ಮಯವಾಯ್ತು॥
ಎಲೆಲೆ ಕೆಟ್ಟುದು ಕಟಕವೆನುತು । ಮ್ಮಳಿಸಿದರು ಸಚಿವರು ಮಹೀಪತಿ । ಯುಳಿವನರಿಯಲು ಸಾಸಿಕವ
ಲಾರೈದರುಸುರುಗಳ ॥೬॥ ಉರಿಯ ಚೂಣಿಯುವುಸುರವು । ಗನೊಳುರುವಣಿಸುತಿದೆ ಧರಣಿಪತಿ ಸು।
ಸ್ಥಿರನು ಹೊಯ್ ಹೊಯ್ ಹೊಳಲ ಬೆದರಿಸಿ ಸುಲಿವಬಣಗುಗಳ॥ ಹರಿಯೆನಲು ಹೊರವಂಟು ಹೊ
ಯ್ದರು । ತುರಗಗಜರಥ ಬೀದಿವರಿದವು । ನೆರವಿದೊಳಸಿನ ಮನ್ನೆಯರನೆಳಸಿದರು ಶೂಲದಲಿ ॥ ೭ ॥
ಪಾಳೆಯದೊಳೇನ್ನೆಯ ಗಜಬಜ । ವೇಳು ಹೋಗ್ಗೆ ಭೀಮ ಸಾಯ್ಗಳ । ಸೀಳು ತಡವೇಕೆನುತ ಧರ್ಮ
ಜ ನೇಮವನು ಕೊಡಲು ॥ ಮೇಳವಿಸಿ ಯೊಳಸುಳಿವೆನಾಯ್ಗಳ । ಸೀಳಿಸಿದನೊಳತೋಟಿಗುರುವಣಿ।
ಯಾಳುಗಳ ಕೊಲಿಸಿದನು ಸಂತೈಸಿದನು ಪಾಳಯವ ॥ ೮ ॥ ಹೊಳಲ ಗಜಬಜವಡಗಿತರಸನನ। ಹೊ
ಳಲೊಳಗೆ ಪಸರಿಸಿತು ಶೋಕಾ । ನಲನು ಭೂಪಾಲಕನ ಸ್ಮರಣೆಗಾಯ್ತು ಮಹನವಮಿ ॥ ಒಳಗುರಿ
ವಹಸಿಮರದ ತುದಿಯಲಿ । ಜಲವೊಗುವವೊಲು ಹೃದಯಶಿಖಿಯುರೆ । ತಳಿತು ಲೋಚನವಾರಿ ತುಳು
ಕಿದಾವನಿಲಜಾದಿಗಳ ॥ ೯ ॥ ಮರವುತೆಚ್ಚರುತವನಿಪತಿ ಕರೆ । ತರಳನಾವೆಡೆ ತಾರೆನುತ ಕೇ । ಸರಿಯ
ದಾವೆಡೆ ಕಂದ ಬಾರೆನುತಪ್ಪುವನು ಬಯಲ ॥ ಹೊರಳಿದನು ಹೆದರಿದನು ಸಲೆ ಕಾ । ತರಿಸಿದನು ಮೋ
ಹಾಂಧಕಾರದ । ಕರುಣವನು ಕೈಸೂರೆಗೊಂಡನು ಮನದೊಳೆಚ್ಚರುತ ॥ ೧೦ ॥ ಶಿಶುವವನು ಹದಿ
ನಾಲ್ಕುವರುಷಕೆ । ಹಸುಳೆಯನು ರಿಪುಬಲಕೆ ಕೊಲ್ಲಿಂ । ದಸಿಯುಧಾರೆಯ ಮೊನೆಗೆ ನೂಕುತನಾನೆ
ಕೊಲಿಸಿದೆನು॥ ವಸುಮತಿಯನಿದನೊಲ್ಲೆ ಪಲ್ಲವ । ವಸನನಹೆ ನೀನಾಗು ಸೈರಿಸ। ಲಸದಳವು ತನಗೆಂದು
ಶೋಕೋದ್ರೇಕಮನಸಾದ ॥ ೧೧ ॥ ಬಂದು ಫಲುಗುಣನೆನ್ನ ಮೋಹದ । ಕಂದನಾವೆಡೆಯೆಂದೊಡಾ
ವೇ । ನೆಂದು ಮಾರುತ್ತರವ ಕೊಡುವೆನು ವೈರಿಸಾಯಕರು ॥ ಕೊಂದರೆಂಬೆನೊ ಶಿವಮಹಾದೇ । ವೆಂ
ದು ಪುತ್ರಸ್ನೇಹ ಮಿಗೆ ಸಂ । ಬಂಧದಲಿ ಹಂಬಲಿಸಿ ಹಲುಬಿದನಂದು ಯಮಸೂನು ॥ ೧೨ ॥ ಸೋ
ಮವಂಶಕುಲಾಬ್ಧಿಚಂದ್ರ ಸ । ನಾಮ ಸದ್ಗುಣಧಾಮ ರಿಪುನಿ । ಸ್ಸೀಮ ಹಾಯೆನ್ನಗಲಿದೊಡೆಸಾನೆಂ
ತು ತಾಳುವೆನು ॥ ನಾ ಮರೆವಬಗೆಯೆಂತೊ ಕಂದನ । ಪ್ರೇಮಘನವೆನ್ನೊಡಲ ಶೋಕಕೆ । ಭೀಮ
ತೆರನೇನೆಂದು ಕಂಬನಿದುಂಬಿದನು ನೃಪತಿ ॥ ೧೩ ॥ ಅಡವಿಯಲಿ ಜನಿಸಿದವು ಯ್ಯೈವರು । ಪೊಡವಿಪತಿ
ಪಾಂಡವನನಗಲಿಯೆ । ಒಡಲಹೊರದೆವು ಕಾಡಿನೊಳಗೋಲಾಡ್ಡಿನಾವಿನ್ನು ॥ ನುಡಿದಭಾಷೆಯ ಸಲಿ
ಸಿದೆವು ಮಗ । ನೊಡನೆ ಮಡಿವುದೆ ಲೇಸು ನಮಗಿ। ನ್ನೊಡಲು ಹೊರೆಯಲುಬೇಕೆ ಸಾಕೆಂದೆನುತ ಮೈ
ಮರೆದ ॥ ೧೪॥ ಅಸಮಚಕ್ರವ್ಯೂಹವದು ನೀ । ಶಿಶುವು ನಿನಗಸದಳವು ಯೆಂದೊಡೆ । ನಸುನಗುತ ಕೈ
ಕೊಂಡೆ ರಣದಲಿ ನಲಿದು ರಿಪುಗಳನು ॥ ಕುಸುರಿದರಿದಂದವರ ಮರ್ದಿಸಿ । ಯಸುವಕಡೆಯಲಿ ಕಳಚಿ
ನಮಗೀ । ಬಸುರಲಿಕ್ಕಿದೆ ಕಿಚ್ಚ ಹಾಯೆಂದೊರಲಿದನು ಭೀಮ ॥೧೫॥ ಹಾಕುಮಾರಕ ನಿನ್ನನಾವವಿ ।
ವೇಕತನದಲಿ ನೂಕಿ ಕೊಲಿಸಿದೆ । ವೇಕೆ ಯಿವದಿರ ಮುಖವ ತಾ ನೋಡುವೆನೆಯೆಂದೆನುತ ॥ ಶೋಕತ
ರದಿಯೊಳಮ್ಮು ಮುಳುಗಿಸಿ । ಯಾಕದನಗಲಿಗಳನು ಮೆಚ್ಚಿಸಿ । ಯೇಕೆಮರಳದೆ ಪೋದೆಯೆಂದಳಲಿ

ದರು ಮಾದ್ರಿಯರು ‖ ೧೬ ‖ ಅರಮನೆಯ ಗಜಬಜವ ಕೇಳಿದು । ದೊರೆಗಳೊಳಗಿಂದಳಿದರಾರೆಂ ।
ದರಸಿಯರು ಬೆಸಗೊಳಲು ದ್ರೌಪದಿಗರುಹಿದರು ಹದನ ‖ ಉರಿಯ ಡಾವರವೆಳೆಯಬಾಳೆಯು । ಬೆರ
ಸುವಂತಿರೆ ರಾಯ ಕುವರನ । ಮರಣವಾರ್ತೆಯನಾಸುಭದ್ರಾದೇವಿ ಕೇಳಿದಳು ‖ ೧೭ ‖ ತೆಳುವಸಿರ
ಬಿರುಹೊಯ್ಲು ಮುರಜದ । ಬಳಲುಮುಡಿ ನಿಟ್ಟೆಸಳುಗಂಗಳ । ಯುಳಿರವದ ಮುತ್ತಿಗೆಯ ಹಾಹಾರ
ವದ ಗಾಯದಲಿ ಲಲನೆ ಬರೆ ಚಲುವಾಯ್ತು ಧರ್ಮಜ । ನಳಲು ಮಿಗೆ ಹಿರಿದಾಯ್ತು ಸಾಟ್ಯದ ।
ಕಳನ ಹೊಗರಿಡೆಯೆನಲು ಬಂದಳು ದ್ರೌಪದೀದೇವಿ ‖೧೮‖ ಅಳಲುಕಸಿಕಿಯಲಿ ಬಾಡಿದಾನನ। ಜಲಪ
ರುಹದ ಕಡುವೇದನೆಯ ಕಳ । ಕಳದ ಹಾಹಾರವದ ರೌದ್ರ ಸುಭದ್ರೆ ನಡೆತಂದು ‖ ನೆಲಕೆ ಧೊಪ್ಪನೆ
ಕಡೆದು ಸಭೆಯಲಿ । ಹಲುಬಿದಳು ಕೊಳುಗುಳಕೆ ಕಂದನ । ಕಳುಹಿದವರಿಗೆ ಸಂದುದೇ ಪರಿಣಾಮವೆಂ
ದೆನುತ ‖ ೧೯ ‖ ಎಲೆಯುಧಿಷ್ಠಿರದೇವ ಸಾಲದೆ । ಕೆಲನ ಮೆಚ್ಚಿಸುವಳಲು ಲೋಚನ । ಜಲವ ತೂ
ಡೆಯೈಭೀಮ ಬಲ್ಲೆನು ನಿಮ್ಮ ನೆನಹುಗಳ ‖ ಅಳದಿರೈ ಸಹದೇವನಕುಲರು । ನಿಲಿಸಿರೈ ನಿಮ್ಮಿಷ್ಟಸಿ
ದ್ಧಿಯ । ಬೆಳಸುಫಲವಾಯ್ತೇಕೆನೋವಿನ್ನೆಂದಳಿಂದುಮುಖಿ ‖ ೨೦ ‖ ಮಗನು ಪಂಚದ್ರೌಪದೇಯರ
ಬಗೆಯನೆಂದೀರಾಜ್ಯವೆಲ್ಲವ । ಹೊಗಸಲುಗೆಯಿಲ್ಲೆಂದು ಕಳುಹಿದಿರೆನ್ನ ಕಂದನನು ‖ ಹಗೆ ಹರಿದುದಿಂ
ದಿನಲಿ ದ್ರೌಪದಿ । ಮಗಗೆ ರಾಜ್ಯವನಿತ್ತು ಪಟ್ಟವ । ಬಿಗಿಸಿ ಸುಖಸಾಮ್ರಾಜ್ಯವಾಳಿರೆ ಯೆನುತ ಹ
ಲುಬಿದಳು ‖ ೨೧ ‖ ಅಕಟ ಮಗನೇ ಬಹಳಪಾಪಾ । ತ್ಮಕನ ಬಸುರಲಿ ಬಹುದಕಿಂದವೆ । ನಕುಲನುದರ
ದೊಳಾಗಲೀಧರ್ಮಜನಜಠರದಲಿ ‖ ಸುಕೃತದುಷ್ಕೃತವುದಯಿಸಿದೆ ಕಂ । ಟಕಿಗಳಾದರು ಸಾಕು ಕಡು
ಪಾ । ತಕಿಯಲಾನಿಮ್ಮೈಯ್ಯನೆಂದು ಸುಭದ್ರೆ ಹಲುಬಿದಳು ‖ ೨೨ ‖ ಧುರವ ಹೊಗತಕ್ಕವನೆ ಚಿಕ್ಕ
ವ । ನಿರಿಯಲಾಪನೆ ಬಹನೆ ಮರಳಿದು । ಧರೆಯ ವೈಭವಕಾಗಿ ಕಳುಹಿದರೆನ್ನ ಕಂದನನು ‖ ವರಯುಧಿ
ಷ್ಠಿರನೃಪತಿ ಲೋಕದ । ಕರುಣಿಯೆಂಬರು ನಿನ್ನ ಮುನಿಗಳು । ಕೊರಳುಗೊಯಿಕನನರಿಯರೆಂದಳು
ಫಲುಗುಣನರಾಣಿ ‖ ೨೩ ‖ ಕಾಳಗದ ಮಾತೇನು ಹಸುಳೆಯ । ಬೀಳುಕೊಡಲೇಕೈಯ ಮಗನನು ।
ಬೇಳುವಾಡಿಟರಯ್ಯ ನಿಮಗಿನ್ನಾವುದಪರಾಧ ‖ ಕೇಳಿ ಫಲುಗುಣನಲ್ಲಿ ಮಡಿದೊಡೆ । ಹಾಳಿವುಳಿವುದು
ನಿಮಗೆ ರಾಜ್ಯದ । ಮೇಲೆ ರಾಜ್ಯವಸಾಳಿ ನೋವಿಲ್ಲೆಂದಳಿಂದುಮುಖಿ ‖ ೨೪ ‖ ಬೇಡ ಮಗನೆ ರಥಕೆ
ತೇಜಿಯ । ಹೂಡದಿರು ಹರಣವನು ನೀಹೋ । ಗಾಡದಿರು ಪಾರ್ಥಂಗೆ ಮೋಹದಪುತ್ರ ಶೋಕವನು‖
ಮಾಡದಿರು ರಣದೊಳಗೆಯಸುವೀ । ಡಾಡದಿರು ದಿವಿಜಾಂಗನೆಯರೊಡ । ಗೂಡಬೇಡೆಂದೆನಲು ಕೇ
ಳದೆ ಮಡಿದೆ ಕದನದಲಿ ‖ ೨೫ ‖ ತಳಿತಛತ್ರದ ನೆಳಲಿನಲಿ ಥಳ । ಥಳಿಪಮಕುಟದ ಮುಖದಕಾಂತಿ
ಯ । ತಿಳಿಯನೋಡೆನು ದೃಷ್ಟಿತಾಕೀತೆಂದು ನಾ ನಿನ್ನ ‖ ಅಳುಕಿನೋಡುವೆನೋರೆಗಣ್ಣಲಿ । ಕೊ
ಳುಗುಳಕೆಕೊಟ್ಟೆನ್ನ ಕಂದನ । ನುಳಿಯಬೇಕೇ ಶಿವಶಿವಾಯೆಂದಬಲೆ ಮರುಗಿದಳು ‖೨೬‖ ಕಂದ ನಿನ್ನ
ನುಕಾಣದಿರಲೆನ । ಗೊಂದುದಿನ ಯುಗವಾಗಿಹುದು ಮಗ । ನೆಂದುಭಾವಿಸಿ ಯಾರನೋಡುವೆ ಯಾರಿ
ಗುಸುರುವೆನು ‖ ಕಂದ ಬಾರೆಂದಾರ ಕರವೆನು । ಬಂದುಅಮ್ಮಾಯೆಂಬತನಯನು । ಸಂದನೇ ಹಾಯೆ
ನುತ ಹಮ್ಮೈಸಿದಳು ನಿಜಜನನಿ ‖ ೨೭ ‖ ನೀಲಮೇಘಶ್ಯಾಮನಳಿಯನೆ । ಪಾಲದಕ್ಷರತೊಡೆದುದೇ
ಕಡೆ । ಗಾಲವಾದುದೆ ಯುತ‐ರೆಗೆ ಹರಳೋಲೆ ಕಳಚಿತಲೆ ‖ ಓಲೆಬಂದುದೆ ವಾಸವನವೊ । ಡ್ಡೋಲಗ

ಕೆ ಬರಹೇಳಿ ರಣದಲಿ । ಕಾಲವಾದುದೆ ಕಂದಗೆಂದುರುಳಿದಳು ಹುಡಿಯೊಳಗೆ ॥ ೨೮ ॥ ಅಣ್ಣನಿ ನ್ನಂಗವನು ನೋಡುವ । ಕಣ್ಣಿನಲಿ ಕಂಬನಿಯು ತುಂಬಿದೆ । ಬಣ್ಣಿಸಿಯೆಯಭಿಮನ್ಯು ಬಾರೋಯೆಂಬಬಾಯೊಳಗೆ ॥ ಮಣ್ಣು ತುಂಬಿದೆ ಮಗನೆ ನಿನ್ನಯ । ಬಣ್ಣಗುಂದಿತೆ ದೇಹ ರಣದಲಿ । ಹಣ್ಣಚಿಂಸಾಭಿನ್ನವಾದೆ ಯೆನುತ್ತ ಮರುಗಿದಳು ॥ ೨೯ ॥ ಅಗಡುಕೌರವರೆಮಗೆ ಹಗೆಗಳು । ಮಗನೆ ಹೊಗಬೇಡೆಂದೆನಾಗಳೆ । ನಗುತ ಚರಣದೊಳೆರಗಿ ಕಂಗಳ ಲೊಗುವಕಂಬನಿಯು ॥ ತೆಗೆದುಸೆರಗಿನೊಳೊರಸಿ ರಿಪುಗಳ । ಬಗೆದುರಣಬಲಿಗೊಟ್ಟು ಬಹೆನೆಂ । ದಗಲುವರೆ ಬಾ ಕಂದ ಬಾಯೆಂದಪ್ಪುವಳು ಬಯಲ ॥ ೩೦ ॥ ಕಾಣಿರೇ ಕಮಲಾಕ್ಷನಳಿಯನ । ಕಾಣಿರೇ ಕಮಲಾಪ್ತತೇಜನ । ಕಾಣಿರೇ ಕಮಲಾರಿವದನನ ಕಾಣಿರೇ ನೀವು ॥ ಕಾಣಿರೇ ಕಾರುಣ್ಯನಿಧಿಯನು । ಕಾಣಿರೇ ಕದನಪ್ರಚಂಡನ । ಕಾಣಿರೇಯಭಿಮನ್ಯುವಾವೆಡೆಯೆಂದು ಹಲುಬಿದಳು ॥ ೩೧ ॥ ಅಳಿದನಿಂದಭಿಮನ್ಯುವೆನೆ ಕೋ । ಮಲೆ ಮಹಾದೇವಿ ನುತ ವುತ್ತರೆ । ಯುಲುಗುಗೊಂಡವೊಲಬಲೆ ಬಸವಳಿದೆವನಿಗೊರಗಿದಳು ॥ ಅಳಲ ಕಡಲೊಳು ಮೂಡಿ ಮುಳುಗಿದ । ಬಲುಸೆರೆಯ ಕಂಬನಿಯೊಳಗೆ ಧೃತಿ । ಬಳಲಿ ಕಂದಿದತಾಪವಿಗೆ ಪ್ರಜ್ವಲಿಸೆ ಹೊರಳಿದಳು ॥ ೩೨ ॥ ಶೋಕವಿಮ್ಮಡಿಸಿತ್ತು ಚಿಂತಾ । ವ್ಯಾಕುಲಿತೆ ಸತಿ ನುಡಿದನುಡಿಗಳ । ನೇಕಸಾಣೆಯಸರಳು ಮುರಿದವು ನೃಪನ ಹೃದಯದಲಿ ॥ ಈಕುಮಾರನ ಶೋಕವಹ್ನಿಗೆ । ಯಿಾಕೆಯುಳಲು ಸಮಿಾರಪಾಯವಿ । ವೇಕಶರಸಂಮೇಳವೇ ಪುರುಷಾರ್ಥ ತನಗೆಂದ ॥ ೩೩ ॥ ತಾಯೆ ಸೈರಿಸುಸೈರಿಸಕಟಾ । ಮಾಯವಾದನು ಮಗನು ರಣದಲಿ । ಸಾಯಲಟ್ಟಿದೆ ಯೆನಗೆ ಯಿಹಪರಗತಿಯದೆಲ್ಲಿಯದು ॥ ಬಾಯಬಿಡಲೇಕಿನ್ನು ರಣದಲಿ। ಸಾಯಬೇಕೇ ಮಗನನಗಲಿದ । ಕಾಯವಿದನುಳುಹಿದೆ ನೆನುತೆ ಯಮಸೂನು ಶೋಕದಲಿ ॥ ೩೪ ॥ ಎಲೆವೃಕೋದರ ನಕುಲಸಾತ್ಯಕಿ । ನಿಲಿಸಿರೈ ತಂಗಿಯನು ತನ್ನಯ । ಕೊಲೆಗೆ ಮಗನಳಲೊಂದು ಸಾಲದೆ ತನ್ನನುಡಿ ಬೇಕೇ॥ ನಳಿನನಾಭನ ಕರುಣದೊಣಗಿಲು। ಕಳೆದರಾರೇಗುವರು ಶಿವಶಿವ। ನೆಲದೊಳೆನ್ನವೊಲಾರು ಪಾಪಿಗಳೆನುತ ಬಿಸುಸುಯ್ದ ॥ ಧರಣಿಪತಿ ಶೋಕಾತಿಶಯವನು । ವರಸಮಾಧಿಯೊಳರಿದು ಮುನಿಪತಿ । ಕರುಣದಲಿ ಕಡುನೊಂದು ಹೊರವಂಟನು ನಿಜಾಶ್ರಮುವ ॥ ಪರರುಗಳ ಸುಖದುಃಖದಲಿ ಘನ। ಹರುಷಭೇದವ ಹಿಡಿದುದೆಂಬುದು। ಹಿರಿಯರಿಗೆ ಗುಣವಲ್ಲವೆಸುತವೆ ಮುನಿಯು ಹೊರವಂಟ ॥೩೬॥ ಬಂದು ವೇದವ್ಯಾಸಮುನಿ ನಿಜ।ಮಂದಿರವ ಹೊಗಲಂದು ಪದದೊಳು।ಸಂದಣಿಸಿ ಚಾಚಿದನು ಮಕುಟವನವನಿಪಾಲಕನು॥ನೊಂದು ವರಸತ್ಸಂಗತಿಯಲಾ। ನಂದವಡಗುವದೆನುತ ಮುನಿಪತಿ । ಕಂದುಮೋರೆಯ ಮಹಿಪರನು ನೆಗಹಿದನು ಕರುಣದಲಿ ॥೩೭॥ ಎಲೆಯುಧಿಷ್ಠಿರನೃಪತಿ ಪುತ್ರನ । ಪ್ರಳಯದಾಪತ್ತಾಯ್ತು ಭೀಮನ। ನಲವಿಗೂಣೆಯವಾಯ್ತು ಸಹದೇವಗೆ ಮನೋವ್ಯಥೆಯೇ ॥ ಬಲುದುಗುಡ ನಕುಲಾಂತಕನಿಗೆಸಂ । ಗಳಿಸಿತೇ ದ್ರೌಪದಿಸುಭದ್ರಾ।ಲಲನೆಯರಿಗನುಚಿತವು ಘಟಿಸಿತೆ ಯೆಂದು ಮುನಿ ನುಡಿದ ॥ ೩೮ ॥ ಅಡಸಿದಾಪತ್ತಿನಲಿ ಧೈರ್ಯವ । ಹಿಡಿವುದೇ ಸುಪ್ರೌಢಿ ಸಾಕಿ । ನ್ನೊಡಲು ಕರಗಿದೊಡೇಳಬಲ್ಲನೆ ಹಿಂಗಿದಭಿಮನ್ಯು ॥ ಒಡನೆ ಬಂದೈದುವದು ಭವದಲಿ। ತೊಡಕಿ ಸುಕೃತವು ದುಷ್ಕೃತಂಗಳು । ಕಡೆಗೆ ತಿಳಿವಿನೊಳಲ್ಲದಿಹಪರಸೌಖ್ಯವಿಲ್ಲೆಂದ ॥ ೩೯ ॥ ಎಲ್ಲರೋಪಾದಿಯಕುಮಾರಕ । ನಲ್ಲ ಗುಣನಲಿ ವೀರವಿತರಣ । ದಲ್ಲಿ ಛಲಬಲದಲ್ಲಿ ನಯನಾನಾಗುಣಂಗಳಲಿ ॥ ಇಲ್ಲ ಸುಕುಮಾ

ರಂಗೆ ಸರಿ ಮನ। ವಿಲ್ಲದೇಗುವೆನಕಟ ವಚನದ । ಸೆಲ್ಲೆಹದಲಿರಿಯದಿರಿ ಸಾಕಿನ್ನೆಂದನಾಭೂಪ ॥ ೪೦ ॥
ಜನನವೇ ಲಯಬೀಜ ಮರಣವು । ಜನನಬೀಜವು ತೋರಿತೀತನು । ತನುವಿನಭಿರಂಜನೆಗೆ ಸೌಖ್ಯಕೆ ಮಾ
ರದಿರು ಮನವ ॥ ಘನಪರಂಜ್ಯೋತಿಸ್ವರೂಪನ । ನೆನಹ ಮರೆದೀಮೋಹಮಯಬಂ । ಧನದೊಳಗೆ
ಮರುಳಹರೆ ಮಗನೇ ಸಿನ್ನನರಿಯೆಂದ ॥೪೧॥ ಹರನೊಡನೆ ಹೊಯ್ದಾಡಿದಗ್ಗದ। ನರನು ತಂದೆ ಸಮ
ರ್ಥ ಭುವನೇ । ಶ್ವರನಲಾ ಮುರವೈರಿ ಮಾವನು ನಿನ್ನತನುಜಂಗೆ ॥ ಧುರದೊಳೀಹದನಾಯ್ತು ಕಾಲ
ನ । ನರಸ ಮೀರುವರಾರು ಕಾಲನು । ಹರಿಹರಬ್ರಹ್ಮಾದಿಗಳ ಕೈಕೊಂಬನಲ್ಲೆಂದ ॥೪೨॥ ದೇಹತಾ
ನಭಿಮನ್ಯುವೋ ಮೇ । ಣ್ದೇಹಿತಾನಭಿಮನ್ಯುವೋ ಬಡ । ದೇಹಿತಾನಭಿಮನ್ಯುವೆಂದೊಡೆ ಕೆಟ್ಟೆಡೇನಾ
ಯ್ತು ॥ ದೇಹವೆಂಬುದನಿತ್ಯವೋ ನಿ । ಸ್ನೇಹವದೊಳಳಿದವರ ಬಿಡು ಸಂ । ದೇಹಮಮತೆಗಳನ್ನು
ಬೀಳ್ಕೊಟ್ಟಿನ್ನುನೋಡೆಂದ ॥ ೪೩ ॥ ಎನ್ನದೊನೆಂಬೆರಡದಿಂದವೆ । ಬನ್ನಬಡುವನು ಜೀವನಲ್ಲದೆ। ಮು
ನ್ನವೆಲ್ಲಿಂಬಿಲ್ಲ ನೋಡಾತ್ಮಂಗೆ ಭವಬಂಧ ॥ ನಿನ್ನ ನೀನರಿ ಸಾಕು ಮಾಯದ । ಗನ್ನಗತಕವ ಗೆಲುವೆ
ಕನಸಿನ। ಹೊನ್ನಕಾಣದೆ ಶೋಕಬಡುವರೆ ಭೂಪ ಕೇಳೆಂದ ॥೪೪॥ ಇರುಳುಹಗಲಿನ ಬೀಜನೆರವಿಯು। ಕರೆ
ವುದೇ ಮೊದಲುನ್ನತೋನ್ನತ । ಮರುಳ ಕೇಡಿನ ತ್ರಾಣಕೂಟವೆ ವಿರಹನಿರ್ವಾಹ ॥ ಸಿರಿದರಿದ್ರತೆಯೆ
ರಡು ಜನನದ । ಮರಣಫಲವಿದನರಿದುಬುಧರಾ। ಚರಿಸುವದಕೇಳೆಂದುವೇದವ್ಯಾಸಮುನಿನುಡಿದ ॥೪೫॥
ಉರಗನರದಿವಿಜಾದಿಗಳಿಗಿದು । ಪರಿಹರಿಸಲಳವಲ್ಲ ದೈವದ । ಪರುಠವಣೆಮುನ್ನಾದಿಯಲಿ ನೇಮಿಸಿದ
ಮೃತ್ಯುವನು ॥ ಅರಸನಾಗಲಿ ಧನಿಕನಾಗಲಿ । ಹಿರಿಯನಾಗಲಿ ಗರುವನಾಗಲಿ । ಮರಣ ಜನಿಸಿದಬಳಿಕ
ತಪ್ಪದು ಮಗನೆ ಕೇಳೆಂದ ॥ ೪೬॥ ಎಲೆಯುಧಿಷ್ಠಿರ ಕೇಳು ಕೃತಯುಗ । ದೊಳಗೆ ಕಂಪನನೆಂಬಭೂ
ಪಗೆ । ಕುಲತಿಲಕಹರಿಯೆಂಬಮಗನಾತನಿಗೆ ಜನಿಸಿದನು॥ಬಳಿಕ ನವಯೌವನನು ಪರಮಂ। ಡಲಕೆ ನಡೆದ
ನು ವೈರಿರಾಯರ।ವಳಿತವನು ತಾನೊತ್ತಿ ಕಾದಿದನಮಿತಸೇನೆಯಲಿ॥೪೭॥ ಮಗುಳೆ ಕಂಪನನೆಂಬ ಭೂ
ಪನ।ಮಗನು ಮತ್ತೊಮ್ಮೆನಲಿ ಬಲುಗಾಳಗವ ಮಾಡಿದನಹಿತಸೇನೆಯೊಳಾನೆವರಿವರಿದು ॥ ಬಗೆಯೆ
ನಿಮ್ಮಭಿಮನ್ಯುವಿನವೋ।ಲಗಣಿತರನೆಸಿಯರೆದು ಸುರಪನ।ನಗರಿಗೈದಿದನೆನಲು ಕಂಪನು ಕೇಳ್ದು ಬಸವ
ಳಿದ ॥೪೮॥ ನಿನಗೆ ಬಂದಾಪತ್ತಿನಂತಿರ । ಲನಿತು ಬಂದುದು ಕಂಪನೆಂಬಾ। ತನನು ಸಂತವಿಸಲ್ಕೆ ನಾರ
ದನಲ್ಲಿಗೈತಂದು॥ ಜನಪತಿಯ ಸಂತೈಸಿದನು ಕಾ। ಲನನುಮೀರುವರಿಲ್ಲವಾತನ।ಘನಕೃತಕವದು ಮೃತ್ಯು
ವನು ಮಿಗೆ ಗೆಲುವರಾರೆಂದ ॥ ೪೯ ॥ ಮೃತ್ಯುವಾರೆಂದವನಿಪತಿ ಮುನಿ। ಪೋತ್ತಮನ ಬೆಸಗೊಳಲು
ಬೊಮ್ಮನ ಕಿತ್ತಡದ ಕೋಪದಲಿ ಜನಿಸಿದರುದ್ರನಿಂ ಬಳಿಕ ॥ ಮೃತ್ಯುವೆಂದವಳಾದಳಾಸತಿ। ಯತ್ತಕಂ
ಬನಿರುಚೆಗಳಾದವು । ತೆತ್ತಿಗಳ ಷಡುವರ್ಗಕಾಮಕ್ರೋಧಮೊದಲಾಗ ॥ ೫೦ ॥ ಜನದ ಕೊಲೆಗೆಲಸದನಿ
ರೂಪಕೆ । ಮನನ ತಂದಳು ಮೃತ್ಯು ನಿಜಸಾ । ಧನವಕೈಕೊಂಡಬಲೆ ಕೆಲಸವನಾಗುಮಾಡುವಳು ॥ ಜ
ನಪದೃಶ್ಯಂನಷ್ಟವೆಂಬುದ । ನೆನುಕರಿಸಿ ಮೂರ್ತಿತ್ರಯಂಗಳ । ನನುವರವ ಮಾಡಿದಳು ಚಿತ್ತೈಸೆಂದ
ನಾಮುನಿಪ ॥ ೫೧ ॥ ಆದೊಡಾಮೃತ್ಯುವಿನ ಕೈವಶ । ವಾದವರನೆನಗರುಹಬೇಹುದು ಮೇದಿನೀಶರೊ
ಳೊಂದುಬಿನ್ನಹಮಾಡಿದನು ನೃಪತಿ ॥ ಆದಯಾಳುಗಳರಸನಾಶೋ । ಕೋದಧಿಗೆವಡಬಾಗ್ನಿಸಮನೆನಿ।
ಪಾದಿಯಲಿ ಷೋಡಶಮಹೀಶರ ಕಥೆಯ ವಿವರಿಸಿದ ॥ ೫೨ ॥ ಭರತಪೃಥುಪೌರವಭಗೀರಥ । ವರಯ

ಯಾತಿಮರುತ್ತನಹುಷ । ಶ್ವರಪುರೂರವರಂತಿದೇವಗಯಾಂ ಬರೀಷಕರು ॥ ಪರಶುರಾಮದಿಳೀಪ ಮಾಂಧಾ । ತರು ಹರಿಶ್ಚಂದ್ರಾದಿಪೃಥ್ವೀ । ಶ್ವರರನಂತರು ಮೃತ್ಯುವಶವಾದವರುಕೇಳೆಂದ ॥ ೫೩ ॥ ಎಂದು ಷೋಡಶರಾಜರಾಕಥೆ । ಯಿಂದ ನೃಪತಿಯು ಸಂತವಿಟ್ಟನು । ಇಂದುಧರ್ಮಜನೆರಗಿದನು ಮುನಿನಾಥನಂಘ್ರಿಯುಲಿ ॥ ಅಂದು ವೇದವ್ಯಾಸಪಾಳಯುದಿಂದ । ಕಳುಹಿಸಿಕೊಂಡನಿತ್ತಮು । ಕುಂದನಭಿಮನ್ಯುವಿನ ಮರಣವನರಿದಮನದೊಳಗೆ ॥ ... . ॥೫೪॥

ಅಂತು ಸಂಧಿ ೮ಕ್ಕಂ ಪದ ೫೪೩ಕ್ಕಂ ಮಂಗಳಮಸ್ತು.

ಒಂಬತ್ತನೆಯ ಸಂಧಿ.

ಸೂಚನೆ ॥ ಹಾಮಗನೆ ರಣರಂಗಧೀರನೆ । ಹಾಮಗನೆ ನೃಪಕುಲಲಲಾಮನೆ । ಹಾಮಗನೆ ಮುಖದೋರೆನುತ ಹಲುಬಿದನು ಕಲಿಪಾರ್ಥ ॥

ಪದ ॥ ಕೇಳು ಜನಮೇಜಯಧರಿತ್ರೀ । ಪಾಲ ಸಂಶಪ್ತಕರ ಬಲ ನಿಜ । ಪಾಳೆಯಕೆ ತಿರುಗಿದುದು ತಿರುಗಿತು ತರಣಿಯಾಟೋಪ ॥ ಕಾಳಗವ ತೆಗಸಿದರು ಕೌರವ । ರೇಳುಫಲುಗುಣಯೆನುತ್ತಲಕ್ಷ್ಮೀ। ಲೋಲ ವಾಘೆಯ ಮರಳಿಚಿದನಾಹಯವ ಬೋಳೈಸಿ ॥೧॥ ಹರಿಕಿರೀಟಿಗಳಿತ್ತಶಿಬಿರಕೆ । ತಿರುಗಲಾಸುತಶೋಕಸೂಚನೆ । ನರನ ಚಿತ್ತದೊಳಾಗೆ ವೆಂಠಣಿಸಿತ್ತು ಪರಿತಾಪ ॥ ಕೊರಳ ಸೆರೆಹಿಗ್ಗಿದವು ಕಂಬನಿ । ಸುರಿಯಲಾಯ್ತುರಿ ಮಸಗಿ ಜತರದೊ । ಳುರುವಣಿಸಿದಾಕಸ್ಮಿಕದ ಭಯವಾಯ್ತು ಪಾರ್ಥಂಗೆ ॥೨॥ ದೆಸೆದೆಸೆಯು ನೋಡಿದೊಡೆ ಕತ್ತಲೆ । ಮಸಗುವುದು ಪರಿತಾಪ ತನು । ಮುಸುಕುವುದು ಮನ ಮರುಗುವುದು ಕಳವಳಿಸುವುದು ಧೈರ್ಯ ॥ ಮಸೆದಶರವೊಡಲೊಳಗೆ ಮುರಿದವೊ । ಲುಸುರಿಗುಬ್ಬಸವಾಯ್ತು ಬಲ್ಲೊಡೆ । ಬೆಸಸು ಮುರಹರ ಹರಿದು ಬಳಲಿಸಬೇಡ ಹೇಳೆಂದ ॥೩॥ ಅಳಿಯನಳಿವನು ಹೇಳಬಾರದು । ತಿಳಿಯಲುಚಿತವೆಂದೆನುತ ಚಿಂತಿಸಿ । ನಳಿನಲೋಚನ ಬರುತ ಕಂಡನು ಘನಸರೋವರವ ॥ ಇಳಿದು ರಥವನು ರಣಪರಿಶ್ರಮ । ಗಳೆವೆನೆನುತ ಕಿರೀಟಿಸಹಿತಾ । ಕೊಳನ ಹೊಕ್ಕನು ಜಗದುದರಲೀಲಾವತಾರಕನು ॥೪॥ ಧುರದ ಕೋಳಾಹಲದ ಢಗೆ ಡಾ । ವರಿಸಿ ಬಳಲಿ ಧನಂಜಯನು ನಿಜ । ಸರಸಿಯೊಳು ಹೊಕ್ಕಿರಲು ಹರಿ ನೆನೆದೊಂದುಪಾಯದಲಿ ॥ ನರನೊಳಿನ್ನರುಹುವೆನು ನಿಜವೋ । ಹರದೊಳಗೆ ಮಡಿದಾಕುಮಾರನ । ಮರಣವಾರ್ತೆಯನೆಂದು ಮನದಲಿ ನೆನೆವುತಿಂತೆಂದ ॥೫॥ ಎಲೆಸುರೇಂದ್ರಕುಮಾರ ಕೇ । ಳ್ಳಿನ್ನೊಲುಮೆಯಣುಗನು ರಣದೊಳಗೆ ರಿಪು । ಬಲವ ತೊತ್ತಳದುಳಿದು ಕೌರವಸುತರನೂರ್ವರನು ॥ ತಲೆಯನರಿದೇಡಾಡಿತೊಸುರ । ಲಲನೆಯರ ಚೆಲುವಿಂಗೆ ತಾ ಮನ । ವೊಲಿದು ಹಾಯ್ದನೆನುತ್ತ ಹರಿ ನರಗೆರುಹಿ ಮುಳುಗಿದನು ॥೬॥ ಆಸುತನ ಶೋಕದಲಿ ಕಿವಿಗಾ । ಕಾಶವ ಚನದೊಳಾಯ್ತು ಶಿವಶಿವ । ವಾಸುದೇವಾಯೆನುತ ಫಲುಗುಣ ಜಲವ ಬಗಿದೆದ್ದು ॥ ಗಾಸಿಯಾದನು ಮಗನ ಘಟ ಸಂ। ತೋಷವೆಲ್ಲಿಯದೆನುತ ಮಾಯಾ । ವೇಷಿಯನು ಕರೆದನು ವಿಲೋಚನ ವಾರಿಪೂರ

ದಲಿ ॥೭॥ ಎನಲು ಭಿಮ್ಮನೆ ಕೊಳನೊಳಗೆ ನಿಂ । ದನು ಮುಕುಂದನು ಸುರಪಸುತನಾ । ನನವ ನೋಡಿ ಯಿದೇನೆನಲು ನರ ಬಿಕ್ಕಿಬಿರಿದಳುತ ॥ ತನಯನಳಿಯದೆ ಮಾಣ ಗಗನ । ಧ್ವನಿಯೊಳಾದುದು ವೇತನ ಕರ್ಣಕೆ । ಮೊನೆಯ ಸರಳೆನೆ ಬಾರೆನುತ ರಥವೇರಿಸಿದ ನರನ ॥೮॥ ಹಗೆಯ ಪದ್ಮವ್ಯೂಹವೆನ್ನಯ । ಮಗನ ಸಲಿಕೆಗೆ ಬಾಧೆ ಮೋಹಿದು । ದುಗುಡವೇ ಸುತಮರಣ ನಿಶ್ಚಯವೆನ್ನ ಚಿತ್ತದಲಿ ॥ ಹಗೆಯ ಹೊದರಿನ ನಿರುಗೆಯಿದುವೇ । ಮಗಗೆ ನಿಶ್ಚಯವೆಂಬವೊಲು ಮಿಗೆ । ಮಗನ ಮರಣದಲಾಯ್ತು ಯೆನಗೆ ಕೃಶಾನು ಹೊಗರೆಂದ ॥೯॥ ತೆಗೆವುತಿವೆ ಕಣ್ಣಿನಲಿ ಕಂಬನಿ । ಹೊಗೆವುತಿದೆ ಶೋಕಾಗ್ನಿ ಜಠರದಿ । ಬಗೆವುತಿದೆ ಬಾಲಕನ ಮೋಹದ ಕಲೆಯ ನೆನೆನೆನೆದು ॥ ಮಗನ ಕಾಂಬೆನೊ ಕಾಣೆನೋ ಸಂ । ಪಗೆಯೆಸಳ ನಾಸಿಕದ ಕಂದನ । ನಗಲುವೆನೊ ನಾನರಿಯೆನಭಿಮನ್ಯುವನು ಹೇಳೆಂದ ॥೧೦॥ ತಂದೆ ಧೃತಿಗೆಡಬೇಡ ನಡೆ ನಿಜ । ನಂದನನಸಾರ್ಥವೆನುತ್ತೆ । ತಂದು ತೋಟಿಯ ಕಳೆದು ಬಂದರು ರಾಜಬೀದಿಯಲಿ॥ ಕಂದನಿರವನು ಕಾಣಲಾಪೆನೊ । ಕೊಂದರೆಂಬುದ ಕೇಳ್ವೆನೋ ಯೆನ । ಗಿಂದು ಗತಿಯೇನೆನುತ ಬಂದನು ರಾಜಮಂದಿರಕೆ ॥೧೧॥ ತಲೆಯ ಮುಸುಕಿನ ವೀರಸುಭಟರು । ತೊಲಗಿದರು ಬೆಸಗೊಳಲು ನಂದನ । ನೆಳಿವುಹಲಬರ ಮನವ ಮುಚ್ಚಿಸಿ ಹೆಚ್ಚಿತತಿಮೋಹ ॥ ಎಲೆಮುರಾಂತಕ ಕಾಣಲಾಪೆನೊ । ಹೊಳಲೊಳಭಿಮನ್ಯುವನೆನುತ ದೃಗು । ಜಲಕೆ ಕಾಯುವ ತೆರುತ ಬಂದನು ಬಹಳಶೋಕದಲಿ ॥೧೨॥ ತರಣಿ ತೊಲಗಿದಗಗನವೋ ಪಂ । ಕರುಹವಿಲ್ಲದಸರಸಿಯೊ ಕೇ । ಸರಿಯ ವೀರಾಳಾಪವಿಲ್ಲದಬಹಳಕಾನನವೋ ॥ ಪರಮತತ್ವನಿಧಾನವರಿಯದ । ನರನ ವಿದ್ಯಾರಚನೆಯೋ ನಿ । ರ್ಭರಭಯಂಕರವಾಯ್ತು ಪಾಳೆಯವೆನುತ ನಡೆತಂದ ॥೧೩॥ ಸುರನಗರಿ ನಡುಗಿತು ಸುರೇಶ್ವರ । ಹರನ ನೆನೆದನು ಯಮುನ ಪಟ್ಟಣ । ಸರಕುದೆಗೆದುದು ಮೃತ್ಯು ಮರೆಹೊಕ್ಕಳು ಮಹೇಶ್ವರನ ॥ ಬಿರುದರಂಜಿದರಖಿಳದೆಸೆಗಳ । ಧರಣಿಪತಿಗಳು ಮಾಯವಾದರು । ನರನ ಕಡುದುಮ್ಮಾನನೆರೆಯಂಜಿಸಿತು ಮೂಜಗವ ॥ ವೀರರಿದಿರುಗ್ಗಡಣೆಗಳ ಕೈ । ವಾರಿಗಳ ಮಾಣಿಸಿದನೈ ತಹ । ನಾರಿಯರ ರತುನಾರತಿಯ ತಳಿಗೆಗಳ ನೂಕಿಸುತ ॥ ಸಾರೆ ಕೈಗೊಡುವೆದಟರನು ಕಣ್ಣೋರೆಯಲಿ ಕೋಪಿಸುತ ತನ್ನಯ । ತೇರನಿಳಿದನು ಪಾರ್ಥನಸುರಾಂತಕನ ನೇಮದಲಿ ॥೧೪॥ ಹರಿರಥವನಿಳಿದಂತೆ ಪಾರ್ಥನ । ಭರದಕೋಪವ ಕಂಡು ನಿಜಮಂದಿರಕೆ ಮೆಲ್ಲನೆ ಜಣುಗಿದನು ಯಾದವರ ಗಡಣದಲಿ ॥ ವರಧನುವಶಸ್ತ್ರಾಸ್ತ್ರಕವಚವ । ನಿರಿಸಿ ಕೈಗೊಡುವರ್ಗಕನಲುತ । ಅರಮನೆಯ ಪೊಕ್ಕನು ಯುಧಿಷ್ಠಿರರಾಯನೋಲಗವ ॥೧೬॥ ಧರಣಿಪನ ನಿರಿಕೆಯಲಿ ಕಂದನ । ಮರಣವನು ನಿಶ್ಚೈಸಿ ಪ್ರಳಯದ। ಹರನ ಕೋಪವ ಕೇಣಿಗೊಂಡನು ತನ್ನ ಚಿತ್ತದಲಿ॥ ಸುರಿವನಯನಜಲಾಬ್ಧಿಗಾದುದು ವರುಷದುರವಣಿ ವಡಬನೆನೆ ಮುರ । ಹರನ ಮೈದುನನೊಯ್ಯನೈದಿದನವನಿಪಾಲಕನ ॥೧೭॥ ಉಕ್ಕಿ ಶೋಕದ ಕಡಲು ಪಾರ್ಥನ । ಮುಕ್ಕುಳಿಸಿತಾಶೋಕಶರಧಿಯ । ಹೊಕ್ಕು ಬೆಳೆದುದು ಕೋಪಶಿಖಿ ಕಾಲಾಗ್ನಿಯಂದದಲಿ ॥ ಮಕ್ಕಳೊಳು ನೋಡಿದನು ಕಂದನ । ನಿಕ್ಕಿದರಲಾ ಲೇಸು ಮಾಡಿದಿ । ರೆಕ್ಕತುಳದಾಳುಗಳೆನುತ ಭೂಪತಿಗೆ ಪೊಡವಂಟ ॥೧೮॥ ತಲೆಯ ಮುಸುಕಿನ ಕಂಗಳೊರತೆಯ ಜಲದ ದುಗುಡದ ಧರಣಿಪಾಲಕ । ಫಲುಗುಣನನೆತ್ತಿದನು ತಲೆಗುತ್ತಿದನು ಭೀತಿಯಲಿ ॥ ಮಲಗಿದನು ವರಭೀಮಸೇನನು । ಸಲೆ ನರನು ತಾ ಬಂದನೆನೆ ಬಸ । ವಳಿದು ಬಂದು ಸುಭದೆ।

ಪತಿಯಂಘ್ರಿಯಲಿ ಹೊರಳಿದಳು ॥೧೯॥ ಕಂದನಾವೆಡೆ ತನ್ನ ಬಿರುದಿನ । ಸಿಂಧವಾವೆಡೆ ತನುಜ ನವಪೂ । ರ್ಣೆಂದುವಾವೆಡೆ ಹೇಳೆನುತ ತೊಡಲಿಸುತ ಫಲುಗುಣನು ॥ ಕಂದಿದನು ಕಡುಮೋಹದಲಿ ಮನ । ನೊಂದು ಸುತಶೋಕದಲಿ ಬೆದಬೆದ । ಬೆಂದು ಯಮರಾಜನ ಕುಮಾರನ ಮೊಗವನೋಡಿದನು ॥೨೦॥ ಪತಿಯಳಿದಸತಿಯಿರವೊ ನಾಯಕ । ರತುನವಿಲ್ಲದಪದಕ ದೈವ । ಸ್ತುತಿಗಳಿಲ್ಲದಕಾವ್ಯರಚನಾಸುಪ್ರಬಂಧದೋಲು॥ ಕೃತಕವಲ್ಲ ಭಿಮನ್ಯುನಿಲ್ಲದೆ। ಕ್ಷಿತಪ ನಿಸ್ವಾಸ್ಥ್ಯನ ಮೆರೆಯದು । ಸುತನ ಸುದ್ದಿಯಿದೇನು ಮರುಗಿಸಬೇಡ ಹೇಳೆಂದ ॥೨೧॥ ಬರಲು ಬಹನಿದಿರಾಗಿ ರಥವನು । ಹರಿದು ಬಂದೇರುವನು ನಿಜಕರ । ಕರತಳದಿ ಮೈದಡವಿ ಗಾಯವ ನೋಡಿ ಮರುಗುವನು॥ ತರಳನಿದಿರ್ದೈತರಲು ಯೆನ್ನಯ । ಧುರದ ಬಳಲಿಕೆ ಹಿಂಗುವುದು ಕೇ । ಳರಸ ಕಂದನ ಸುಳುಹ ಕಾಣೆನು ಕರಸಿ ತೋರೆಂದ ॥೨೨॥ ಮಗನ ಮಣಿರಥವೆಲ್ಲಿ ಹೂಡಿದ । ವಿಗಡತೇಜಗಳೆಲ್ಲ ಮಣಿವಳೆ । ಗುಗಳ ಛತ್ರವದೆಲ್ಲಿ ಚಾಮರವೆಲ್ಲಿ ಧನುವೆಲ್ಲಿ ॥ ಹಗೆಯರಲಿ ಹತವಾದನೇ ಹಾ । ಸುಗುಣನಿಲ್ಲಿಗೆ ಬಾರನೇ ತಾ । ಮೊಗವ ಕಾಣದೆ ಹೋದೆನೇ ಯೆನಗೇನುಗತಿಯೆಂದ ॥೨೩॥ ಕಂದ ಬಾರೋ ಯೆನ್ನ ಮನಕಾ। ನಂದಬಾರೋ ಬಾಲಕರ ಪೂರ್ಣೇಂದುಬಾರೋ ರಿಪುಕುಲಾಂತಕ ನಿಪುಣ ಮುಖದೋರೋ ॥ ತಂದೆ ನಿನಗೆನ್ನಲ್ಲಿ ರುಣಸಂ । ಬಂಧ ಸವೆದುದೆ ಶಿವಶಿವಾ ತಾ । ಮಂದಭಾಗ್ಯಂಗೆಣಗ ದಕ್ಕುವನಲ್ಲ ಯೆನಗೆಂದ ॥೨೪॥ ಅಸಮಚಕ್ರವ್ಯೂಹವನು ಭೇ । ದಿಸುವನಾವವನೆನಲು ಕೇಳಿದ್ದು । ಶಿಶುತನದ ಸಾಹಸದಿ ನಡೆದನು ನಾವು ಬೇಡೆನಲು ॥ ಕುಸುರಿದರಿದನು ವೈರಿಸೇನಾ । ಪ್ರಸರವನು ಸಂವರ್ತರುದ್ರನು । ಹೊಸಬನಿವನಾರೆನಲು ಸವರಿದನಹಿತಸೇನೆಯನು ॥೨೫॥ ಅರಿನೃಪಾಲರ ನೂರಮಕ್ಕಳ । ಶಿರವನರಿದನು ಷಡುರಥರ ಸಂ । ಹರಿಸಿದನು ರಿಪುಬಲದೊಳೆಡಹಾಯ್ದಾನೆವರಿವರಿದು ॥ ಧುರಕೆ ಹೊರದೆಗೆದೆವ್ಮನಾಲ್ವರ । ಸರಿದು ಹೋದಭಿಮಾನವನು ಕಾ । ಯ್ದುರವಣಿಸಿ ಮಗನೇರಿದನು ವಾಸವನ ಗದ್ದುಗೆಯ ॥೨೬॥ ಈನಕುಲನೀಭಿಮನೀಪಾಂಚಾಲರೀಸಹದೇವನೀಭೂ। ಪಾಲನೀಸಾತ್ಯಕಿಯುಧಾಮನ್ಯೂತ್ತಮೌಂಜಸರು॥ ಕಾಳಗದೊಳಂಗೈಸಲಮ್ಮದೆ । ಬಾಲಕನ ನೂಕಿದಿರೆಲಾ ನಿ । ಮ್ಮಾಳುತನವನು ತೋರಿದಿರಿ ನೀವೆನ್ನಮೇಲೆಂದ ॥೨೭॥ ವೀರರಿನಿಬರು ನೆರೆದು ರಿಪುಪರಿ । ವಾರವನು ಹೊಗಲಂಜಿ ಹೊರಗಣ । ಮಾರಿಹೊರಗೇ ಯೆಂಬವೋಲ್ಲಂದನನ ನಿಕ್ಕಿದಿರಿ ॥ ಆರನಂಬಲುಬಹುದು ನಿಮಿಷವು। ದೂರ ತಾ ತೊಲಗಿದೊಡೆ ತನ್ನ ಕು । ಮಾರನಿದ್ದರೆ ಹರಿವನೆನೆದಿರಿ ಹೊಲ್ಲಹೇನೆಂದ ॥೨೮॥ ಕೆಡೆನುಡಿದು ಫಲವೇನು ಸಾಕಿ । ನ್ನೊಡೆಯನಿಲ್ಲದವಸ್ತುವಾದೆನು । ನುಡಿ ಯುಧಿಷ್ಠಿರ ಹೇಳು ಕೊಂದವರಾರು ನಂದನನ ॥ ಕಡುಹಗೆಯದಾರವನ ಬಲದಲಿ । ನುಡಿನಿಧಾನವನವನ ಜೀವಕೆ । ಹಿಡಿ ಮಹೀಪತಿ ಸಂಚಕಾರವನೆಂದನಾಪಾರ್ಥ ॥೨೯॥ ಹೇಳಿ ಫಲವೇನಿನ್ನು ವಹ್ನಿ । ಜ್ವಾಲೆಯಿಂದಿನಮೋಹರವು ರಿಪು । ಜಾಲವನು ನೀಖಂಡಿಗಳ ಬಹವಾವು ಬಳಿಸಲಿಸಿ ॥ ಕಾಳಗವ ಜಯಿಸುವೆವು ನಡೆ ಯೆನೆ । ಬಾಲನುರವಣಿಸುತ್ತ ಮಸಗಿದ । ಕಾಲರುದ್ರನ ರೂಪುದಾಳ್ದನು ವೈರಿಸೇನೆಯಲಿ ॥೩೦॥ ಅರಸಮಕ್ಕಳ ಕೊಂದನೈ ನೂ । ರ್ವರನುಮೂರಕ್ಷೋಣಿಸೇನೆಯ । ನೊರಸಿದನು ಮಸೆಗಾಣಿಸಿದನಗ್ಗದಮಹಾರಥರ ॥ ಧುರವ ಗೆಲಿದನು ಪಡಿತಳಿಸಿ ನಾ । ವುರವಣಿಸಲಡಹಾಯ್ದು ನಮ್ಮನು । ಹರನ ವರವುಂಟೆಂದು ಗೆಲಿದನು ಸಿಂಧುಭೂಪಾಲ ॥೩೧॥ ವಿರಥ

ಸಾದನು ಭೀಮ ನಕುಲನು । ತಿರುಗಿದನು ಸಹದೇವ ಕೊರಳಲಿ । ಹರಣವಿರೆ ಹಿಂಮೆಟ್ಟಿದರು ದ್ರುಪದಾದಿನಾಯಕರು ॥ ಧುರದೊಳೋಸರಿಸಿದರು ಸೈಂಧವ । ಹರನವರದಲಿ ನಮ್ಮ ಗೆಲಿದನು । ಮರಣವನು ಕಂದಂಗೆ ತಂದವನೆವನು ಕೇಳೆಂದ॥೩೨॥ ಇನ್ನು ಹೇಳುವುದೇನೆನುತ ಕೈ। ಸನ್ನೆಯಲಿ ಮಾತಾಡಿ ಭೂಪತಿ । ಬೆನ್ನ ತೆತ್ತನು ಭೀಮಸೇನನ ವಿಪುಳವಕ್ಷದಲಿ ॥ ತನ್ನ ಮರೆದನು ನಯನಧಾರಾ । ಭಿನ್ನವಾದೊಡೆ ಮುಸುಡ ಮಿಗೆ ಸಂ । ಪೂರ್ಣಶೋಕಾಗ್ನಿಯಲಿ ಬೆಂದುದು ಧರ್ಮಜನ ಹೃದಯ ॥೩೩॥ ಮುಚ್ಚಿದನು ಕಂಗಳನು ಧೈರ್ಯದ । ಕೆಚ್ಚಿನೆದೆ ಕರಗಿದುದು ಶೋಕದ । ಕಿಚ್ಚುಗೊಂಡುದು ಮನವನಖಿಳೇಂದ್ರಿಯದ ಸುಳಿವಡಗಿ ॥ ಎಚ್ಚರಡಗಿತು ನೆಲಕೆ ಕೈಗಳ । ಬಿಚ್ಚಿ ಬಿದ್ದನು ಪುತ್ರಶೋಕದ । ಹೆಚ್ಚುಗೆಯ ತಾಪವನು ಹೆಸರಿಡಲರಿಯೆನರ್ಜುನನ ॥೩೪॥ ಘನವಿಕರ್ಮದ ವಿಲಗದಲಿ ನಿಜ । ತನುಜ ಶೋಕದ ತಗಹು ಬಿಡಲ । ರ್ಜುನನ ಧೃತ್ಯುಪದ್ರವನಾದನದೇನಹೇಳುವೆನು ॥ ಮನಮರುಗಿ ಮೈಬಳಲಿ ತಾಪದ । ಕನಸ ಕಂಡನು ಝುಡಿತ ಮಿಗೆ ಝುಂ । ಮಿನಸುಷುಪ್ತಿಯೊಳಿರ್ದನಿಮಿಷದೊಳೆದ್ದು ಕಣ್ದೆರೆದ ॥೩೫॥ ಅಳಲಮುಕ್ಕುಳಿಸಿದನು ರೋಷದ । ಬೆಳವಿಗೆಯ ಗವಸಣಿಸಿದನು ಕಳ । ವಳಿಕೆ ಹಿಂಗಿದುದಶ್ರುಜಲವನು ಕಣ್ಣಿನಲಿ ಕುಡಿದು ॥ ಪ್ರಳಯರುದ್ರನ ಕೋಪಶಿಖಿ ಕಳ । ವಳಿಸಿತೆನೆ ಕಂಗಳಲಿ ಕಿಡಿಗಳು । ತುಳುಕಿದವು ರೌದ್ರಾನುಭಾವದ ಕೋಪಕಿಡಿಯಿಡಲು ॥೩೬॥ ಹೇಳುಹೇಳಿನ್ನೊಮ್ಮೆ ಮಾರಿಯ ಮೇಳವಾಡಿದನೇ ಜಯದ್ರಥ । ನಾಳುತನವನು ಸಮರದಲಿ ನಮ್ಮೊಡನೆ ತೋರಿದನೆ ॥ ನಾಳೆ ಬೈಗಿಂದೊಳಗೆ ರಿಪುವನು । ಸೀಳುವೆನು ಸೀಳದೊಡೆ ಧರ್ಮಜ । ಕೇಳು ಭಾಷೆಯನೆನುತ ಮಿಗೆ ಗರ್ಜಿಸಿದನಾ ಪಾರ್ಥ ॥೩೭॥ ಹರನ ದುರ್ಗದೊಳಿರಲಿ ಮೇಣೀ । ಹರಿಯ ಕಡೆಲೊಳಗಿರಲಿ ಬ್ರಹ್ಮನ । ಕರಕಮಂಡಲದೊಳಗೆ ಹುದುಗಲಿ ರವಿಯ ಮರೆವೊಗಲಿ ॥ ಉರಗಭವನದೊಳಿರಲಿ ಮೇಣ್ನಾ । ಗರವ ಮುಳುಗಲಿ ನಾಳೆ ಪಡುವಣ । ತರಣಿ ತೊಲಗದಮುನ್ನ ಕೊಲುವೆನು ವೈರಿಸೈಂಧವನ ॥೩೮॥ ಗುರುವಿಘಾತಿಯ ವಧೆಯನಿಂದಾ । ಪರನ ಪರದಾರಾಭಿಗಾಮಿಯ । ಹರಮುರಾಂತಕಭೇದವಾದಿಯ ವಿಪ್ರನಿಂದಕನ ॥ ಪರಗುಣಾಸೂಯಕನ ಹಿಂಸಾ । ಪರನ ಪಿಸುಣನ ಕೃಪಣಚರಿತನ । ನರಕವಾಗಲಿ ಕೊಲ್ಲದಿರ್ದೊಡೆ ನಾಳೆ ಸೈಂಧವನ ॥೪೦॥ ಕುರುಬಲವಬಿಟ್ಟೋಡೆಯುಧಿಷ್ಠಿರ । ನರಮನೆಯ ಹೊಕ್ಕೊಡೆ ಮುರಾರಿಯ। ಶರಣುಹೊಕ್ಕೊಡೆ ಸರ್ವಥಾಕೊಲುವೆನು ಜಯದ್ರಥನ॥ ಧುರದೊಳಿಳಿದಂತಿಂದ್ರಯಮಭಾ । ಸ್ಕರವಿರಿಂಚಿಗಳಡ್ಡಬಿದ್ದೊಡೆ । ಶಿರವನರಿವೆನು ನಾಳೆ ಬೈಗಿಂದೊಳಗೆ ಸೈಂಧವನ ॥೪೧॥ ಖಳನ ಧೂರ್ತನ ನಾಸ್ತಿಕನ ಚಂ । ಚಲನ ಪರನಿಕ್ಷೇಪಹಾರಿಯ । ದಳಿತಮರಿಯಾದನ ಕೃತಘ್ನನ ಭ್ರಾತೃನಿಂದಕನ॥ ಸ್ಖಲಿತವಚನನ ಯೋಗಿನಿಂದಾ । ಕುಲನ ವಿಕಳವ್ರತನಲೋಕಾ । ವಳಿಗಳಾಗಲಿ ಕೊಲ್ಲದಿರ್ದೊಡೆ ನಾಳೆ ಸೈಂಧವನ ॥೪೨॥ ನಾಳೆ ಖಚರೀಜನದ ಕುಚಯುಗ । ತೊಳಲವನಸು ವೊರಗದಿರ್ದೊಡೆ । ಕಾಳಗದೊಳೆನ್ನೊಡಲ ಬಿಡುವೆನು ಅಗ್ನಿಗುಂಡದಲಿ॥ ಕೇಳು ಧರ್ಮಜಯೆಂಬನುಡಿಯನು । ಕಾಳಗದ ಸೊಗಸಾಗಿ ಲಕ್ಷ್ಮೀ । ಲೋಲನೈತಂದರ್ಜನನ ಹೊಗಳಿದನು ಪತಿಕರಿಸಿ ॥೪೩॥ ತೀರಿತಿನ್ನೇನರಿನೃಪನ ಸಂ। ಸಾರ ನೀನೇರಿಸಿದನುಡಿಗಳ । ನಾರು ಕಳಚಲುಬಲ್ಲರಗ್ಗದದೇವದೈತ್ಯರಲಿ ॥ ವೀರರಾಮನ ನುಡಿಗೆ ರಾಮನು। ದಾರಬಾಣಕೆ ನಿನ್ನ ನುಡಿಗಳು। ಕಾಳಗಕೆ ಸಮಜೋಳಿ ಜನದೊಳಗೆಂದನಸುರಾರಿ॥೪೪॥ ನಳಿನ

ನಾಭನು ಪಾಂಚಜನ್ಯವ | ಮೊಳಗಿದನು ನಿಜದೇವದತ್ತವ | ಫಲುಗುಣನು ನುಡಿಸಿದನು ನಿಜಗಾಂಡಿವ ವನೊದರಿಸಲು || ಪ್ರಳಯದಿನದಲಿ ತಿವಿದಸಿಡಿಲ | ಪ್ಪಳಿಸಿದಂತಿರೆ ರೌದ್ರರಸಘುಳು | ಘುಳಿಸಿ ತಲ್ಲಣಿಸಿತ್ತು ಕೌರವನೃಪನ ಪರಿವಾರ ||೪೪|| ಏನಿದೆತ್ತಣ ರಭಸತ್ರೈಲೋ | ಕ್ಯಾನುಕಂಪನವಾಯ್ತು ಶಿವಯೆನು | ತೀನರೇಂದ್ರರ ಕಾಯ ನಡುಗಿತು ಕೌರವಾದಿಗಳ || ಸೇನೆ ತಲೆಕೆಳಕಾಯ್ತು ಪಾರ್ಥನ | ಸೂನು ವಿನ ಮರಣದಲಿ ಮಂತ್ರ | ಧ್ಯಾನ ತಮಗಾಯ್ತೆನುತ ತಲ್ಲಣಿಸಿದುದು ನೃಪಕಟಕ ||೪೫|| ಎಲೆಲೆ ಕವಿಕವಿ ಕಳರುಗಳಿದೆ|ಕೊಳ್ಳಲೆಗೆಡುಗರಿಪುನೃಪರು ಮಗವಡಿ|| ದಳಲುಮಿಗಲನ್ಯಾಯಕಳುಪಿದನೇ ಯುಧಿಷ್ಠಿರನು || ಬಲವ ಕರೆಕರೆಯೆನುತ ಕಾಹಿನ | ತೊಳಲಿಕೆಯನಾಯಕರು ಗಜರಲು | ಬೆಳಗಿದವು ಬಂಬಾಳದೀವಿಗೆ ನೆರೆದುದತಿರಥರು ||೪೬|| ಹೊಳಲು ಮಿಗೆ ಗಜಬಜಿಸಿ ತೊಳಲಿಕೆ | ಯೊಳಗೆ ನೆರೆದುದು ಕೋರಡಿಯಮುಳು | ವೆಲಿಯಗಾಂತುದು ಬೇಹಹರಿಸಿದರಖಿಳದೆಸೆದೆಸೆಗೆ || ಬಲುಗುದುರೆಯೊದಗಿದವು ಮಿಗೆ ಹೆ | ಕ್ಕಳಿಸಿದರು ಭೂಪಾಲಕರು ಹು | ಯ್ಯಲಲಿ ಕಳವಳಗೊಂಡು ತಲ್ಲಣಿಸಿತ್ತು ನೃಪಕಟಕ ||೪೭|| ಕಡಿಯಣವನಾನೆಗಳ ಮೋರೆಗೆ | ತೊಡಿಸಿದರು ತೇಜಿಗಳ ಕೊರಳಲಿ | ನಿಡುನೊಗನ ಕಟ್ಟಿದರು ಕಿವಿಯಲಿ ಕೀಲುಗಳ ನಿಲಿಸಿ|| ಜಡಿಪಗುಳವನು ಹಯಕೆ ಬಿಗಿಸಿದ | ರೊಡನೊಡನೆ ಹಕ್ಕರಿಕೆಜೋಡಿನೊ | ಳೊಡಸಿ ಗಾಲಿಯ ಬಿಗಿದು ಗಜಬಜಿಸಿದುದು ನೃಪಕಟಕ ||೪೮|| ತಿರೆದೊಳಾಂತರು ಮೋಚಯವೆನಾ | ಚರಣದಲಿ ಸೀಸಕವ ಕೊರಳಲಿ | ಬಲಿಯಕವಚವ ಕಟ್ಟಿದರು ಬೆನ್ನಿನಲಿ ಕೈಹೊದೆಯ || ಸುರಗಿಗಳ ನೀಡಾಡಿ ತಿರುಹಿದ | ದೊರೆಗಳನು ಬತ್ತಳಿಕೆಗಳ ಬಿಲು | ದಿರುವಿನಲಿ ಮೋಹಿದರು ಕಳವಳಗೊಂಡುದರಿಸೇನೆ ||೪೯|| ಕರಿಗಳನು ರಾವುತರು ಜೋದರು | ತುರಗವನು ಕಾಲಾಳು ರಥವನು | ವರಮಹಾರಥರೀಟಿಸಬಳಕಠಾರಿಯುಬ್ಬಣವ || ಧುರದಭರವಿಗೆ ಕೊಂಡು ಹೊದರ | ಲೈರಿವೆಬೆರಗಿನ ಬಳಿಯಲೈದಿದ | ರರರೆಹೊಯ್ದಾಡಿದರು ಪಾಂಡವರೆನುತ ತಮ್ಮೊಳಗೆ ||೫೦|| ಪವನಸುತನಿವ ವಾಸವನ ಮಗ | ನಿವನು ಧರ್ಮಜನೀತ ನಕುಲನು | ಇವನು ಸಾತ್ಯಕಿ ದ್ರುಪದ ಧೃಷ್ಟದ್ಯುಮ್ನನಿವನೀಗ || ಇವನು ಸಹದೇವನು ವಿರಾಟನು | ಇವರು ಪಾಂಚಾಲರು ಘಟೋತ್ಕಚ | ರಿವರೆನುತ ಹೊಯ್ದಾಡಿದರುಮೊದಲಿಸಿ ತಮ್ಮೊಳಗೆ ||೫೧|| ಇರುಳು ಬೇಹಿನಚರರು ಪಾಂಡವ | ರರಮನೆಯ ಹೊಕ್ಕರಿದು ಪುರರಳಿದು | ಬರುತ ಕಟಕ ದಗಜಬಜವ ಮಾಣಿಸಿದರಲ್ಲಲ್ಲಿ || ನೆರವಿ ನಗೆಗೆಡೆಯಾಗಿ ಮುಸುಕಿನ | ಮುರಿವಿನಲಿ ಪಾಳೆಯವ ಹೊಕ್ಕರು | ಗರುವಮನ್ನೆಯಮಂಡಲೀಕರು ಕೇಳ್ದರೀಹದನ ||೫೨|| ರವಿತನಯ ಗುರುಸೂನು ಭೂರಿ | ಶ್ರವ ಸುಲೋಚನ ಶಲ್ಯ ಕೃಪ ಸೈಂ | ಧವ ವಿವಿಂಶತಿ ಚಿತ್ರಸೇನನು ಕರ್ಣನಂದನರು || ತವತವಗೆ ಬೆದರಿದರು ಕೌರವ | ಭವನಕೈದಿದರಂದಿನಾಹವ | ರವದ ರೌದ್ರದ ರಾಜಕಾರ್ಯವ ತಿಳಿವತವಕದಲಿ ||೫೩|| ಹರಿದು ಚರರಾಪಾರ್ಥನಾಡಿದ | ನಿರುಪಮಿತಗಾಢಪ್ರತಿಜ್ಞೆಯ | ಚರಿತವನು ಕೌರವನ ಸಭೆಯಲಿ ತಂದು ಹರಹಿದರು|| ಮರಣಸೈಂಧವಗಲ್ಲದಿರ್ದೊಡೆ | ಮರಣಪಾರ್ಥಂಗಲ್ಲದಿನ್ನಿದ | ಪರಿಹರಿಸುವುದ ಕಾಣೆನೆಂದರು ನಾಳಿನದ್ಭುತವ ||೫೪|| ಲೇಸುಲೇಸಭಿಮನ್ಯುವೀದು| ಶಾಸನನ ಮಗನಿಂದ ರಣದಲಿ | ಗಾಸಿಯಾದನು ನಾವು ಮಾಡಿದುದೇನು ಪಾರ್ಥಂಗೆ || ಈಸನೇರಿಸಿ ನುಭದಪಾರ್ಥನ | ಬಾಸೆಹೊಳ್ಳಾಗದು ಸುಯೋಧನ | ದೇಶವನು ಬೀಳ್ಕೊಂಬೆನೆಂದನು ಸೈಂಧವನು ಸಭೆ

ಗೆ ॥೫೫॥ ಅಳಲಿದಾತನು ಕಾಲುಗೆಡೆದೊಡೆ । ಫಲವಹುದೆ ನಿಜಸತಿಯು ಹಿಡಿದಾ । ನೆಳೆದುವೊಯ್ಯಲು ಭೀಮನಾಡಿದಭಾಷೆಯೇನಾಯ್ತು ॥ ಅಳುಕದಿರಿ ಪರಿವಾರವಿವೆ ಕೋಳ । ಗುಳಕೆ ವಜ್ರದಬೋಡು ನೃಪರಿದೆ । ಬಲವಿಹೀನನೆ ನೀನದೇನೆಂದವನಿಪತಿ ನುಡಿದ ॥೫೬॥ ಅವನೋಲೆಯಕಾರತನ ಗಾಂಡೀವಧರನಲಿ ಫಲಿಸುವುದೆ ಮೇ ।ಣಾವನದ್ಭುತಮಂತ್ರಶಕ್ತಿಗೆ ಮಣಿವನಸುರಾರಿ ॥ ಕಾವನಿಲ್ಲರ್ಜುನನ ಕೈಯಲಿ। ಸಾವವನು ತಾನೆನಲು ಮಿಗೆ ರಣ । ಧೀವಶನು ಕುರುರಾಯ ನುಡಿದನು ಮತ್ತೆ ಸೈಂಧವಗೆ ॥೫೭॥ ಗರುಡನೂರವರೆರೆವರೇ ನಾ । ಗರಿಗೆ ತನಿಯನು ನಮ್ಮ ಬಲದಲಿ । ಗುರುವಲಾ ಪಾಲಕನು ಕೈಕೊಂಬನೆ ಧನಂಜಯನ ॥ ನರನ ನುಡಿಗಳ ಹೊಳ್ಳುಗಳೆವೊಡೆ । ಚರಣದಲಿ ಬೀಳುವೆವು ನಡೆ ಯೆಂ । ದಿರುಳು ದ್ರೋಣನ ಮನೆಗೆ ಬಂದನು ಕೌರವರರಾಯ ॥೫೮॥ ನೆಗಳಿದವು ಕೈದೀವಿಗೆಯ ಸಾ। ಲುಗಳು ಹೊಂದಂಡಿಗೆಯವರು ರವ । ಮಿಗಲು ವೆಂಟಣಿಸಿದರು ಸೀಗುರಿ ಮೊಗಕೆ ಮೋಹಿದವು ॥ ಅಗಿವಕಡಿತಲೆಮುಸುಕಿದವು ಚೌ । ರಿಗಳಗೊಂದಣತೂಗಿದವುಮೌ । ಳಿಗಳಮಸ್ತಕದವರುನೆಲನುಕ್ಕಡಿಸಲೈತಂದ ॥೫೯॥ ಗರುಡಿಯೊಡೆಯನ ಪಾಳೆಯಕೆ ಕಡು । ಭರದೊಳೈತರೆ ಕೌರವೇಂದ್ರನ । ಬರವಿದೇನೆಂದೆನುತ ಬಂದನು ದ್ರೋಣನಿದಿರಾಗಿ ॥ ಧರಣಿಪನ ತಕ್ಕೈಸಿ ನೆಲೆಯ । ಪ್ಪರಿಗೆಗೈದಿದನುಸುಳುಗಂಡಿಯ । ಉರವಣಿಸಿದರುಕರ್ಣಕೃಪಮೊದಲಾದಬೇಹವರು ॥೬೦॥ ವೀಳೆಯವಕರ್ಪುರವನಿತ್ತು ನೃ । ಪಾಲಕರ್ಣಾದಿಗಳ ಸ ಭಟರ। ಸಾಲ ಮನ್ನಿಸಿ ದ್ರೋಣ ಬೆಸಗೊಂಡನು ಸುಯೋಧನನ ॥ ಕಾಳಗವ ಕೈಕೊಂಡ ಸಿರಿಮೊಗ । ವೇಳುತಿದೆ ಖತಿಯೇನು ನಿನ್ನಿನ । ಕಾಳಗವು ಜಯ ನಮ್ಮದೀದುಮ್ಮಾನವೇಕೆಂದ ॥೬೧॥ ಏನ ಹೇಳುವೆನರ್ಜುನನು ನಿಜ । ಸೂನು ಮಡಿಯೆ ದುರಾಭಿಘಾತದೊ । ಳೇನನೆಂದನು ಹೇಳಿರೈ ಕರ್ಣಾದಿನಾಯಕರು ॥ ತಾನುಗಡ ಸೈಂಧವನ ತಿರವನು । ಭಾನುವಡಗದಮುನ್ನ ತೆಗೆವೆನು । ಹೀನವಾದೊಡೆ ಹೊಗುವೆನೆಂದನು ಹವ್ಯವಾಹನನ॥೬೨॥ ಕೊಂದವನು ದುಶ್ಶಾಸನನ ಮಗ । ಬಂದುದಪವಾದವು ಜಯದ್ರಥ । ಗಿಂದಿವನ ಪತಿಕರಿಸಬೇಹುದು ರಣದಲರ್ಜುನನ ॥ ಮುಂದುಗೆಡಿಸಲುಬೇಕು ಭೀಷ್ಮರು । ಸಂದಬಳಿಕೆಮಗಾಪ್ತಹಿತವರು । ತಂದೆ ನೀವೆಂದೆರಗಿದನು ನೃಪ ಗುರುವಿನಂಘ್ರಿಯಲಿ ॥೬೩॥ ಮಕುಟವನು ನೆಗಹಿದನು ಭೂಪಾ । ಲಕಶಿರೋಮಣಿ ಶಶಿಯಕುಲವರ । ನಿಕರವಿತ್ತಂಡಕ್ಕೆ ಸರಿಯೆನಬೇಡ ಬುದ್ಧಿಗಳ ॥ ಯುಕುತಿಗಿದಕಿನ್ನಿಲ್ಲಪಾರ್ಥನ । ಸಕುತ್ರಿಘ್ನನವೀರಾಜಕಾರ್ಯದಿ । ಚಕಿತನಾದೆನು ರಾಯ ಚಿತ್ತೈಸೆಂದನಾದ್ರೋಣ ॥೬೪॥ ಕಾವೊಡೆನ್ನಳವಲ್ಲ ಮೇಣಾಂ । ಡೀವಿ ಕೊಲುವವನಲ್ಲ ಕೃಷ್ಣನು । ಕಾವೆಡೆಯ ಕೊಲುವೆಡೆ ಸಮರ್ಥನು ವೇದಸಿದ್ಧವಿದು ॥ ಜೀವಜಾತ ಕ್ಕೊಡೆಯನಾರಾ । ಜೀವನಾಭನು ಬರಿಯಹಂಕಾ । ರಾವಲಂಬನದಿಂದ ಕೆಡುತಿಹುದಖಿಳಜಗವೆಂದ ॥೬೫॥ ಇದು ಮುರಾರಿಯ ಲೀಲೆಗೋಸುಗ । ವುದಯಿಸಿದಜಗವಿದರೊಳೊಬ್ಬನ । ಸದೆದು ಬಿಡುವನು ಹಿಡಿವನೊಬ್ಬನ ಸಲಹಿ ನಡಸುವನು ॥ ಇದರೊಳಾಗಿಂತಲ್ಲ ಕರುಣಾ । ಸ್ಪದದ ಭೂಜಂತ್ರದಲಿ ಯಿಾಜಗ । ದುದರವಾತನ ಕಡೆಯಲಾದುದು ಭುವನಗತಿಯೆಂದ॥೬೬॥ ನರನ ನುಡಿಯೆಂದಿರದಿರಾ ಮುರ । ಹರನ ನುಡಿಗಳು ಗಿರಿಗುಹಾಗ । ಹ್ವರದ ನುಡಿಯೋ ಜಂಗಮಧ್ವನಿಯೋ ವಿಚಾರಿಸಲು ॥ ನರನ ನುಡಿ ಹೊಳ್ಳಾಗದಾಮುರ। ಹರನ ಬಲುಹುಳ್ಳನ್ನ ಬರಪೆನೆ। ಲರಸನಾಲಿಸಿ ಕೇಳುತಿರ್ದನು ಕೈಯುಗಲ್ಲದಲಿ ॥೬೭॥ಕೇಳುತಿರ್ದ್ದ ಕರ್ಣ

ಬೊಮ್ಮನ । ಹೇಳಬಲ್ಲೆವೆ ನಾವು ನಾಳಿನ । ಕಾಳಗವು ಜಯವಾಗಲೋಸುಗ ಬಂದೊಡಿಂದೀಗ ॥ ಹೇಳುತಿರ್ದನ ಸಂಗತಿಯನಿದು । ಹೋಲುವೆಯಲಾ ಮುನಿಕುಮಾರರು । ಕಾಳಗದೊಳೇಗುವರು ಬಳಿಕೇನೆಂದನಾಭೂಪ ॥೬೮॥ ಕಟಕಿಯೋಕಿದು ವಿಪ್ರರಾವು । ತ್ಕಟದಸಾಹಸವಿಲ್ಲ ನಾನ್ದಿಟ । ಘಟಿಸದೆಂದೊಡೆಖಾತಿಯಾಯಿತೆ ನಿಮ್ಮ ಚಿತ್ತದಲಿ ॥ ನಿಟಿಲಲೋಚನ ನೋಡುವರೆ ಸಂ । ಕಟವು ವಿಷಮೋಹರದ ಬಲುಸಂ । ಘುಟನೆಯನು ತೋರುವೆನು ಚಿಂತಿಸಬೇಡ ಹೋಗೆಂದ ॥೬೯॥ ವ್ಯೂಹವನು ರಚಿಸುವೆನು ನಾಳಿನ । ಲಾಹವಕೆ ತಳತಂತ್ರವೊಂದೇ । ಮೋಹರಕೆ ನಡೆತರಲಿ ಷಡುರಥರಾದಿನಾಯಕರು ॥ ಸಾಹಸವನುದಯದಲಿ ತೋರುವೆ । ಬಾಹುಬಲ ಮಿಗೆ ಸೈಂಧವನ ಮೈ। ಗಾಹ ಬಲಿವೆನು ರಾಯ ಚಿತ್ತೈಸೆಂದನಾದ್ರೋಣ ॥೭೦॥ ಸಾಕು ನೀಚಿಂತಿಸಲುಬೇಡ ಪಿ । ನಾಕಧರನಡಹಾಯ್ದೊಡೆಯು ನಾ । ನಾಕೆವಾಳರು ರಣಕೆ ಕೃಷ್ಣಾರ್ಜುನರ ಪಾಡೇನು ॥ ನೂಕಿ ನೋಡಲಿ ಸೈಂಧವನ ಲೋ । ಕೈಕವೀರರು ಕಾವೆವೆಂದು । ದ್ರೇಕ ಮಿಗೆ ಗರ್ಜಿಸುತ ಕರ್ಣಾದಿಗಳು ತಮತಮಗೆ ॥೭೧॥ ಬೀಳುಕೊಂಡುದು ರಾಜಸಭೆ ತ । ಮ್ಮಾಲಯಕೆ ಸೈಂಧವನು ಚಿಂತಾ ॥ ಲೋಲನಿದ್ದನು ಮರಣಜೀವಜ್ಞಾನಸಂಶಯನು ॥ ಕೋಲಗುರುವಿನ ಮಧುರವಚನವ । ಕೇಳಿದನು ನಸುನಗುತ ಪಾರ್ಥಗೆ । ಹೇಳಿದನು ಕರುಣದಲಿ ಗದುಗಿನ ವೀರನಾರಾಯಣ ... ... ॥೭೨॥

ಅಂತು ಸಂಧಿ ೯ ಕ್ಕೆ ಪದ ೬೧೫ ಕ್ಕಂ ಮಂಗಳಂ.

ಹತ್ತನೆಯ ಸಂಧಿ.

॥ಸೂಚನೆ॥ ಜಯಸಮರಸಂರಂಭನಾಹವ । ಭಯಬಹಿರ್ಮುಖ ಶಸ್ತ್ರವಿದ್ಯಾ । ನಿಯುತಮತಿ ಮೋಹಿದನು ಸಮರಕೆದ್ರೋಣನೆನುವಾದ ॥

ಪದ ॥ ಕೇಳು ಜನಮೇಜಯಧರಿತ್ರೀ । ಪಾಲ ಫಲುಗುಣ ಹೊಕ್ಕನಾಯುಧ । ಶಾಲೆಯಲಿ ತೆಗೆಸಿದನು ಧನುಮೊದಲಾದಕೈದುಗಳ ॥ ಸಾಲರಿದು ನಿಲಿಸಿದನು ನಿಶಿತಶ । ರಾಳಿಚಾಪಕೃಪಾಣ ಪರಶುತ್ರಿ । ಶೂಲಮುದ್ಗರಶಕ್ತಿತೋಮರ ಚಕ್ರಮೊದಲಾದ ॥ ಸವಗಮೋಚೆಯಜೋಡುಸೀಸಕ । ವಿವಿಧಕವಚವಬಾಹುರಕ್ಷೆಗ । ಳವನು ಮಿಗೆ ನಿಲಿಸಿದರು ಪುಷ್ಪಸುಗಂಧಧೂಪದಲಿ ॥ ವಿವಿಧಸತ್ಕಾರದಲಿ ದುರ್ಗಾ । ಸ್ತವಗಳದರನುಹೇಳಿಭಜಿಸಿದ । ನವರುಧಿರಮಾಂಸೋಪಹಾರಂಗಳಲಿಪೂಜಿಸಿದ ॥೨॥ ಬಡನೆ ಗಜರುವವಾದ್ಯದಲಿಕಂ । ಪಿಡಿದವೋದನಸಹಿತ ಭೂತಕೆ। ಬಡಿಸಿದರು ಮಂತ್ರಿಗಳು ಪಡೆವೆರಸಿದರು ದೆಸೆದೆಸೆಗೆ॥ ಸೊಡರುವಸನಾದಿಗಳಲೊಪ್ಪಂ । ಬಡೆದುದೆಲ್ಲವ ಹರಿಯೊಳರ್ಪಿಸಿ । ನಡುವಿರುಳು ಕಲಿಪಾರ್ಥನರ್ಚಿಸಿದನು ನಿಜಾಯುಧವ ॥ ೩ ॥ ಇರುಳಿನದ್ಭುತರಭಸವಾಲಿಸಿ । ಮುರಹರನು ಫಲುಗುಣನ ಘನಸಂ । ಗರಜಯಧ್ವನಿ ಮಂತ್ರವೆಂದನು ದಾರುಕನಕರೆದು ॥ ಹರ ಮಹಾದೇವಾದಿಗಳು ಗೆಲ। ಲರಿದು ನಾಳಿನಬವರವಿನ್ನೀ । ನರನ ಜಯವೆಂತೆನುತ ಚಿಂತಿಸುತಲ್ಲಿಗೈತಂದ ॥೪॥ ರಚನೆಚೆಲುವದು ನಾಳಿನಾಹವ । ಖಚರಕಿಂಪುರುಷರಿಗೆಯಸದಳ । ಮಚಲಬಲಗಾಡಿಕೆಯಹರಿಯದು ರಾಜಕಾರ್ಯವಿದು॥ ಉಚಿತದಲಿ ಕೊಂ

ಡೊಯ್ದು ರುದ್ರನ । ವಚನವನು ತಿಳುಹಿಸುವೆನೆಂದಾ । ಶಚಿಯ ಗಂಡನಮಗನನೀಶನಪದವ ಕಾಣಿಸಿದ
॥೫॥ ಶಿವನ ಕರುಣಾಲಾಭ ಪುಣ್ಯ । ಪ್ರವರ ಪಾರ್ಥನ ಮುನ್ನಿನಂದದ । ಶಿವನಿಗಳುಹಿದ ನಿಖಿಲದಿ
ವ್ಯಾಯುಧದ ವೇದಿಕೆಗೆ ॥ ಸವೆದುದಿಂದಿರುಳುತ್ಪಲಂಗಳ। ನಿವಹ ಬಲಿದುದು ಚಕ್ರವಾಕದ । ತವಕ ಮುರಿ
ದುದು ತರಣಿಯಡರಿದನುದಯಪರ್ವತವ ॥೬॥ ವಿಮಲದರ್ಭಾಂಕುರದ ಶಯನದ । ಲಮರಪತಿಸುತ
ಪವಡಿಸಿದನನು । ಪಮವಿಲಾಸದ ಕನಸ ಕಂಡೆನೆನುತ್ತ ಕಣ್ದೆರೆದು ॥ ಸಮರವಿಜಯಕೆ ಶಿವನಕೃಪೆ ಸಂ
ಕ್ರಮಿಸಿತೆನಗೆಂದೆನಲು ಮುಂದಣ । ಕಮಲನಾಭನ ಕಂಡು ಬಿನ್ನಹ ಮಾಡಿದನು ನಗುತ ॥೭॥ ದೇವನಿ
ಮ್ಮಡಿಸಹಿತ ಕಂಡೆನು । ದೇವದೇವನಚರಣವನು ಸಂ । ಭಾವಿಸುವ ನಮ್ಮಿಬ್ಬರನು ದಕ್ಷಾಧ್ವರಧ್ವಂಸಿ॥
ನಾವು ಬಂದುದನರಿದು ವರರಾ । ಜೀವಸರಸಿಗೆ ಕಳುಹಿದನು ಗಾಂ । ಡೀವನಿಜಚಾಪವನು ಕಂಡೆನು
ಕೊಳನಮಧ್ಯದಲಿ ॥೮॥ ಬಳಿಕ ತಿರುವಿಟ್ಟವರೊಳಸ್ತ್ರವ । ಸೆಳೆದು ಬಿಲುವಿದ್ಯಾಸಮಗ್ರದ । ನೆಲೆಯ
ತೋರಿದೊಡಾಗಳೀಶನ ಹೊರೆಗೆ ತಾನೈದಿ॥ ಬಳಿಕ ದಿವ್ಯಾಸ್ತ್ರಪ್ರಯೋಗವ। ಬಲುಹನೀಕ್ಷಿಸಿ ತೆಗೆವ ಬೆ
ಡಗನು। ನಿಲಿಸಿ ಪಾಶುಪತಾಸ್ತ್ರವಾಯ್ತೆನಗಲ್ಲಿ ವಶವರ್ತಿ ॥೯॥ ಕನಸನೀಹದನಾಗಿ ಕಂಡೆನು। ದನುಜ
ಹರಬೆಸಸಿದರ ಫಲವನು । ನನಗೆನಲು ನಸುನಗುತ ನುಡಿದನು ದಾನವಧ್ವಂಸಿ ॥ ನಿನಗೆ ಶೂಲಿಯ ಕ
ರುಣವಾಯ್ತಿಂ । ದಿನಲಿ ಪಾಶುಪತಾಸ್ತ್ರ ನಿನ್ನದು । ದಿನದೊಳಗೆ ಸೈಂಧವವಧವ್ಯಾಪಾರ ವಹುದೆಂ
ದ ॥೧೦॥ ಎನೆ ಹಸಾದವೆನುತ್ತ ನಿಜಕರ । ವನಜಮುಕುಳಿತ ನಿರಲು ಸೇನಾ । ವನಧಿ ಗರ್ಜಿಸಿದವು
ದಿನಾಧಿಪನುದಯಸಮಯದಲಿ ॥ ವನರುಹಾಕ್ಷನ ನೇಮದಲಿ ಸಂದಣಿಸಿ ಶಂಖನಿನಾದ ಭೂಪರ। ಮ
ನೆಯೊಳರಿದೆಖ್ಯಾಳಜಯದಲಿ ಘಟನೆಯೊಗ್ಗಿದವು ॥ ೧೧ ॥ ಉಲಿವಮಂಗಳಪಾಠಕರ ಕಳ । ಕಳದ
ಲುಪ್ಪವಡಿಸಿದನವನಿಪ । ತಿಲಕಮಾಡಿದನಮಲಸಂಧ್ಯಾವಂದನಾದಿಗಳ ॥ ನಳಿನನಾಭನ ಪಾದಕಮಲ
ಕೆ । ನಲವಿನಿಂದಭಿನಮಿಸಿ ಸುಭಟಾ । ವಳಿಗೆ ನೇಮವ ಕೊಟ್ಟನಂತಕಸೂನು ಸಂಗರಕೆ ॥೧೨॥ ನಡೆ
ದುದುರು ಸನ್ನಾಹದಲಿ ಸೂ । ಳಡಸಿ ಮೆರೆವಗಭೀರಭೇರಿಯ । ಕಡುರವವು ರಿಪುಭಟರ ಬೈಗುಳ ಬಿ
ರುಬುಗಹಳೆಗಳ ॥ ಎಡಬಲಕೆ ಮಿಗೆ ಹೊಳೆವ ತೇಜಿಯ । ಕಡುಮನದ ಕರಿಘಟೆಯ ತೇರಿನ । ಗಡಣ
ದಲಿ ಕಾಲಾಳು ಕಳಕಳವಾಯ್ತು ರಣದೊಳಗೆ ॥೧೩॥ ಎದ್ದುದೀಕಟಕದಲಿ ಬಲ ಮಿಂ । ಡೆದ್ದ
ಸುಭಟರು ಸಮರ ಭೂಮಿಯ । ಹೊದ್ದಿದರು ಝಳಪಿಸುತಲಾಯುಧದಹೊಗರ ಹೊಳಹುಗಳ ॥ ಅ
ದ್ದುದದ್ಭುತರವದ ನೆರೆ ಹೊದ । ರೆದ್ದು ನಡೆದುದು ದಂತಿಘಟೆ ಬರು । ತಿರ್ದುದಗಣಿತರಥಪದಾತಿಗ
ಳಾಹವಾಂಗಣಕೆ ॥ ೧೪ ॥ ವಿನುತಸಂಧ್ಯಾವಂದನಾದಿಯ । ನನುಕರಿಸಿ ಹರಿಪದಸರೋಜವ । ನೆನೆದು
ವಿರಚಿತವೇದವಿಪ್ರಾನಲಸಮಾರ್ಚಿತನು ॥ ಕನಕಕವಚವ ತೊಟ್ಟು ಗಡ್ಡದ । ಘನತೆಯನು ಗಂಟಿಕ್ಕಿ ವ
ರಕಾಂ । ಚನಮಯದ ಯಜ್ಞೋಪವೀತವನಿಕ್ಕಿದನು ದ್ರೋಣ ॥ ೧೫ ॥ ನೆರೆಯುಡಿಯಲಾಮಲ್ಲಗಂ
ಟಿನ। ಸೆರಗ ಮೋಹಿಸಿ ಬಿಗಿದು ದರ್ಭೆಯ । ಹರಿದು ಬಿಸುಟನು ಕವಚಸೀಸಕಬಾಹುರಕ್ಷೆಗಳ ॥ ಮು
ರುಹಿ ಬಿಗಿದನು ನಿಖಿಳಭೂಸುರ । ವರರ ಮಂತ್ರಾಕ್ಷತೆಯ ಕೊಳುತ । ಳ್ಬಿರಿವಜಯರವದೊಡನೆ ರಥ
ವೇರಿದನು॥ಕಲಿದ್ರೋಣ ॥ ೧೬ ॥ ಸೂಳವಿಸಿದವು ಸನ್ನೆಯಲಿ ನಿ । ಸ್ಸಾಳಕೋಟಿಗಳುರವಣಿಸಿ ಹೆ ।
ಗ್ಗಾಳೆಗಳು ಸಾರಿದವು ಸುಭಟರವೀರವಿತರಣದ ॥ ಸಾಲಝಲ್ಲರಿಗಳ ಪತಾಕಾ । ಜಾಲಸಬಲದ ಹೊ

ದರುಗಳ ಬಿರು । ಗೋಲ ತೂಗಾಟದಲಿ ಸಮರಕೆ ದ್ರೋಣನನುವಾದ ॥ ೧೭ ॥ ನೆಗಹಿ ಬೀಸುವ ಚೌರಿಗಳ ಸ । ನ್ನೆಗಳ ಚಾತುರ್ಬಲವ ದ್ರೋಣನ । ದೃಗುನಿರೀಕ್ಷೆಯೊಳೇರಿದರು ತಮ್ಮಾಳುಕುದುರೆಗಳ ॥ ತೆಗೆದು ಯೋಜನವಾರರಲಿ ಕಾ । ಳಗಕೆ ಶಕಟವ್ಯೂಹದಲಿ ಚೂ । ಣಿಗಳ ಬಗೆದನು ಕೌರವೇಂದ್ರಾನುಜನ ಗಡಣದಲಿ ॥ ೧೮ ॥ ಇದಿರು ಶಕಟವ್ಯೂಹವದರ । ಗ್ರದಲಿ ದುಶ್ಯಾಸನನ ಬಲ ಕೆಲ । ವದರಬಲದಲಿ ಬಾಹ್ಲಿಕನು ಸೌಬಲನು ಮಾಗಧರು ॥ ಅದರ ಹಿಂದಣ ಮೈಯಲೈಗಾ । ವುದದ ನೀಳದಲೆರಡುವರೆಗಾ । ವುದದ ವಿಸ್ತಾರದಲಿ ಮಕರವ್ಯೂಹವನು ಬಲಿದ ॥ ೧೯ ॥ ಹಿಂದೆ ಯೋಜನವೈದರಳವಿಯೊ । ಳೊಂದು ಚಕ್ರವ್ಯೂಹವನು ನಲ । ವಿಂದ ಬಲಿದನು ನಿಲಿಸಿದನು ಕಾಂಭೋಜಭೂಪತಿಯು ॥ ವಿಂದನನು ವಿಂದಾನುವಿಂದನ । ನಂದು ಸಂಶಪ್ತಕರ ಬಲವನು । ಸಂದಣಿಸಿದರು ಹತ್ತುಸಾವಿರನೃಪರ ಗಡಣವಲಿ ॥ ೨೦ ॥ ತುರಗವರುವತ್ತಾರು ಕೋಟಿಯು । ವರಮದೇಭವನೆಂಟುಲಕ್ಷವ । ವರರಥವನೈವತ್ತು ಸಾವಿರವನು ಸಗಾಢದಲಿ ॥ ಧುರದ ಕಾಲಾಳಗಣಿತವ ಮೋ । ಹರಿಸಿ ಹಂಸವ್ಯೂಹವನು ಸಡ । ಗರಿಸಿದನು ನಿಯುತಾಯುಮೊದಲಾದವರ ಕಾಹಿನಲಿ ॥ ೨೧ ॥ ಕೆಲಬಲದ ಸಬಳಿಗರು ಸಬಳದ । ವಳಯದಲಿ ಹರಿಗೆಗಳು ಹರಿಗೆಯು । ಮಲೆತ ಬಿಲ್ಲಾಳದರ ಮರೆಯಲಿ ವಾಜಿಗಜರಥವ ॥ ನಿಲಸಿ ಗರ್ಭವ್ಯೂಹವನು ಮಂ । ಡಳಿಸಿದನು ಸಂವೀರನನು ಸಿಂ । ಹಳರ ನಿಲಿಸಿದ ಹತ್ತುಸಾವಿರಮಂಡಲೇಶ್ವರರ ॥ ೨೨ ॥ ಅಪರ ಭಾಗದಲಳವಿಯಲಿ ಭೂ । ಮಿಪನು ಭೂರಿಶ್ರವನು ಶಲ್ಯನು । ಕೃಪನು ವೃಷಸೇನನು ಸುಲೋಚನ ದೀರ್ಘಬಾಹುಕನು ॥ ನೃಪತಿಗಳನೆಂಬತ್ತುಸಾವಿರ । ಚಪಳಗಜಹದಿನೆಂಟುಲಕ್ಷವ । ನಪರಿಮಿತ ತೇಜಿಯಲಿ ಶಕಟವ್ಯೂಹವನು ಬಲಿದ ॥ ೨೩ ॥ ಆಮಹಾಮೋಹರದ ಬಳಿಯಲಿ । ಸೋಮದತ್ತನ ದಂಡಧರನನು । ತಾಮರಸಬಂಧುವಿನ ಸುತನನು ಕ್ಷೇಮಧೂರ್ತಕನ ॥ ಆಮಹಾಬಾಹ್ಲಿಕನನಶ್ವ । ತ್ಥಾಮನನು ಕೃತವರ್ಮರನಿಪಸ । ನಾಮರನು ನಿಲಿಸಿದನು ಸೂಚಿವ್ಯೂಹವಳಯದಲಿ ॥ ೨೪ ॥ ಪದುಮಸೂಚಿವ್ಯೂಹಮಧ್ಯದೊ । ಳಧಟರನು ನಿಲಿಸಿದನು ಸಮರಂ । ಗದ ಸಮರ್ಥರನಾಪ್ತರನು ಬಾಂಧವರುಗಳ ನಿಲಸಿ ॥ ಕದನದಲಿ ಸೈಂಧವನನಾಮ । ಧ್ಯದಲಿ ನಿಲಿಸಿದನಮಮ ಸಮರಕೆ । ಮದನಮದಹರ ಮೊಗಸಲಸದಳವೆನಿಸಿ ರಂಜಿಸಿತು ॥ ೨೫ ॥ ಕವಿವ ಸಿಡಿಲೊಬ್ಬುಳಿಯೊ ಪ್ರಳಯದ । ಜವನನೆರವಿಯೊ ಕಾಳಕೂಟಾ । ರ್ಣವದ ಸೀಮಾಲಂಘನವೊ ಮೃತ್ಯುವಿನ ಪಾಳೆಯವೋ ॥ ಅವನಿಕುಸಿದುದು ನೆರೆದ ಸೇನೆಯ । ಹವಣನೀಶ್ವರ ಬಲ್ಲನೈ ಸೈಂ । ಧವನ ಕಾಹಿನ ಮೋಹರಂಗಳು ಕಿಡಿಯನುಗುಳಿದವು ॥ ೨೬ ॥ ಜಡಿವ ಮದದಾನೆಗಳ ಗಗನವ । ನಡರ್ವ ಬಲುಗುದುರೆಗಳ ಸೂಠಿಯೊ । ಳೆಡಬಲಕೆ ಬಿರುವರಿವ ತೇರಿನ ಸೂತರೋಜೆಗಳ ॥ ಖಡುಗಕುಂತವ ನಭಕೆ ಹಾಯಿಕಿ । ಹಿಡಿವ ಸುಭಟವ್ರಜವ ಹೊಯ್ಲಿನ । ಕಡುಮನದ ರಣವಕಿಗರ ಸಂರಂಭ ರಂಜಿಸಿತು ॥ ೨೭ ॥ ಮೊಳಗಿದವು ನಿಸ್ಸಾಳಕೋಳಾ । ಹಳಿಸಿದವು ಕಹಳೆಗಳು ಪರ್ವತ । ಕುಳಿಯೆ ಮೆಚ್ಚಿದ ವಾದ್ಯಪಟಹಮೃದಂಗಡಿಂಡಿಮದ ॥ ಉಲಿವ ಕಹಳೆಯ ಹೇಷಿತದ ಮೆ । ಗ್ಗಳೆಯ ಕರಿಗಳ ಬೃಂಹಿತದ ಗೊಂ । ದಳದ ಗಳಗರ್ಜನೆಯಲಾಯಿತು ಕೌರವನ ಬಲದಿ ॥ ೨೮ ॥ ಮುಂದೆ ಶಕಟವ್ಯೂಹದಲಿ ನಡೆ । ತಂದು ನಿಂದನು ದ್ರೋಣನೀಬಲ । ಸಂದಣಿಯನೆರೆ ನೋಡಿ ಮಕುಟವ ತೂಗಿ ನಲವಿನಲಿ ॥ ಇಂದು ಗೆಲಿದೊಡೆ ಧರ್ಮಸುತನೆಮ । ರಿಂದುಕುಲದಗ್ಗಳರು ಬರಹೇ । ಳೆಂ

ದು ಭಟ್ಟರನಟ್ಟಿದನು ಪಾಂಡವರಪಾಳೆಯಕೆ ॥ ೨೯ ॥ ಕೇಳು ಧೃತರಾಷ್ಟ್ರಾವನಿಪಸಿರಿ । ಲೋಲಸಹಿತ ಯುಧಿಷ್ಠಿರಾದಿಗ । ಳಾಳ ಮೇಳೈಸಿದರು ಹೊಕ್ಕರು ಕಾಳಗದ ಕಳನ ॥ ಸಾಲರಿದು ನಿಜಸೇನೆಯನು ಪಾಂ। ಚಾಲ ಮೋಹರಿಸಿದನು ಪದಕಂ। ಧೂಳಿ ಮಾಣಿಸಿತೆನಿಮಿಷತ್ವವನೆವೆ-ರಸಂತತಿಯ ॥೩೦॥ ವರವಿರಾಟಕುಮಾರಮತ್ಸ್ಯರು । ಬಿರುದ ಕೈಕಯಚೈದ್ಯಕೇರಳ । ಮರುತಯವನರು ಸಂಧಿಕೌಶಲ ಪಾಂಡ್ಯಮಾಗಧರು ॥ ಧರಣಿಪನ ಬಲದಲ್ಲಿ ಸೃಂಜಯ। ವರರು ಪಾಂಚಾಲಕರು ಚೋಣಿಯೊ । ಳುರ ವಣಿಸಿದರು ನಕುಲಸಾತ್ಯಕಿಭೀಮನಂದನರು ॥ ೩೧ ॥ ನರಮುರಾಂತಕರೊಂದುಕಡೆಯಲಿ । ಮುರಿಯೆ ಕಂಡನು ನೃಪತಿ ಕೃಷ್ಣನ । ಹೊರಗೆ ಬಂದನು ನೆಮ್ಮಿ ಬಿನ್ನಹಮಾಡಿದನು ನಗುತ ॥ ನರನಿವನು ಮುಂದಿದಿರುಗಾಣದೆ । ಹಿರಿದನೇರಿಸಿ ನುಡಿದನಿದಪತಿ । ಕಂಸಬೇಹುದು ನಿಮ್ಮ ಕರುಣದಿ ಹರಣವೆನಗೆಂದ ॥ ೩೨ ॥ ಹಗೆಯ ತಲೆಹೋಗದೊಡೆ ವಹ್ನಿಯ । ಹೊಗುವನುಡಿ ತಮ್ಮಂಗೆ ಬಳಿಕಾ । ಸೆಗಳಿಕೆಯ ನುಡಿದೆಮ್ಮನಾಲ್ವರ ದೇಹನಿಕ್ಷೇಪ ॥ ಬಗೆಯಲೈವರ । ಜೀವನದಜೀ । ವಿಗಳು ನೀನೆಂದರಸ ಕರುಣಾ । ಳುಗಳ ದೇವನ ಬೇಡಿಕೊಂಡನು ಕೇಳುಧೃತರಾಷ್ಟ್ರ ॥ ೩೩ ॥ ಪಡೆಕಡಲು ಕುಡಿನೀರುನೆರೆನೀ । ರಡಗಹುದು ಪಾರ್ಥನ ಶರಾವಳಿ । ವಡಬನಿದಿರೊಳು ಕೆಲಬಲದ ಹಂಗೇಕೆ ಕದನದಲಿ ॥ ಕಡುಹಿನಲಿ ಸೈಂಧವನ ತಲೆಯನು। ಹೊಡೆದು ನಿನ್ನಯ ಕಾಲು ದೆಸೆಯಲಿ । ಕೆಡಹುವನು ನಿಮಿಷದಲಿ ಫಲುಗುಣಎಂದನಸುರಾರಿ ॥೩೪॥ ಕರೆದು ಸಾತ್ಯಕಿಭೀಮರಿಗೆ ನೃಪ । ವರನು ಸುಯ್ಧಾನವನು ಹೇಳಿದ । ನರಿಬಲಕೆ ನೂಕಿದನು ಕೈಕಯ ಚೈದ್ಯಸೃಂಜಯರ ॥ ಮುರಮಥನನೊಡಗೂಡಿ ನಿಜಮೋ । ಹರಸಹಿತ ನೈನೂರಬಿಲ್ಲಂ । ತರಕೆ ತೊಲಗಿ ಮಹಾಸ್ತ್ರಮಂತ್ರವ ಜಪಿಸಿದನು ಪಾರ್ಥ ॥೩೫॥ ಇಳಿದು ರಥವನು ಮುರಹರನ ಪದ । ತಳಿತಧೂಳಿಯ ಕೊಂಡನತಿನಿ । ರ್ಮಳಸಮಾಧಾನದಲಿ ಕೃಷ್ಣನ ಚರಣ ಕರಗಿದೊಡೆ ॥ ತಲೆಯ ಹಿಡಿದೆತ್ತಿದನು ಹರಕೋ । ಮಲಕರಾಂಬುಜದಿಂದ ಪಾರ್ಥನ । ನೊಲಿದು ಮೈದಡವಿದನು ಗೆಲು ನೀನೆಂದು ಹರಸಿದನು ॥೩೬॥ ಖುರಕೆ ರತುನವ ಸುರಿದು ತೇರಿನ । ತುರಗವನು ವಂದಿಸಿದನಪ್ಪಳ । ಹರೆದ ಹನುಮಂಗೆರಗಿದನು ಸುರಕುಲಕೆ ಕೈಮುಗಿದು ॥ ವರರಥಕೆ ಬಲವಂದು ಕವಚವ । ಬರಿಗೆ ಬಿಗಿದನು ಕೈಗೆ ವಜ್ರದ । ತಿರುವಿಗೆಯನವಚಿದನು ರಥವೇರಿದನು ಕಲಿಪಾರ್ಥ ॥೩೭॥ ದೇವದತ್ತವ ಮೊಳಗಿದನು ಗಾಂ।ಡೀವಿ ಚಾಪವ ಮಿಡಿದು ನಿಷ್ಠುರ।ತೀವಿದುದು ಜರುಹಿದುದು ಅಡಿಕಿಲಜಗದಚೋಡಿಗಳ ॥ ರಾವು ಫಲುಗುಣಯೆನುತ ಪಾರ್ಥನ । ಭಾವಕುಡಿಚಮ್ಮಟಿಕೆಯಲಿ ತುರ । ಗಾವಳಿಯ ನಡಸುವನು ಸುಳಿಸಿದ ಸಾಹವಕೆ ರಥವ ॥೩೮॥ ಸುರರಿಗಸದಳವಿದು ಮಹಾಮೋ । ಹರದ ತೆರಳಿಕೆ ತನಗೆ ಬಗೆಯದು । ತರಳನಲಿ ತೀರುವುದೆಯಕಟಾಚಾರ್ಯನೊಡ್ಡವಣೆ ॥ ಧರಣಿ ನೆರೆಯದು ಪದಹತಿಗೆ ಹರಹರ ಯಿದೆತ್ತಣದಳವೊ ಮಾರಿಯ । ಕೆರಳಿಯೋ ಮಝಭಾಪೆನುತ ಹೊಗಳಿದನು ಕಲಿಪಾರ್ಥ ॥೩೯॥ ಆರೆನೆಲೆಯ ಕೆಲಸಿಡಿದು ಫಲುಗುಣ । ಹರಿಸಹಿತ ಹೊರವಂಟು ಭೀಮನ । ಕರೆದು ಸಾತ್ಯಕಿಸಹಿತ ಕೊಟ್ಟನು ಕಾಹನವನಿಪಗೆ ॥ ಬರುತ ಧೃಷ್ಟದ್ಯುಮ್ನ ನಕುಲಾ । ದ್ಯರನು ಚೋಣಿಗೆ ಕಳುಹಿ ರಿಪುಬಲ । ಸುರನದಿಗೆ ಸುರನಾಥಸುತನಿದಿರಾಗಲನುವಾದ ॥೪೦॥ ಕುರುಬಲದ ಬೆಳವಿಗೆಯ ಬೆಳಸಿನ । ಹರವ ನೀಕ್ಷಿಸಿ ಶಕ್ರತನಯನು । ಸರಳ ಬಿಡಲೋಲೈಸಲೆಳೆ

ಸಿತು ಯಮುನ ಪರಿವಾರ ॥ ಸುರನಗರಿಯಲಿ ಯಮುನ ಪುರದಲಿ । ಥರಥರದ ಹೊರಕೇರಿ ಕಟ್ಟಿತು । ಉರವಣಿಸಿ ಸಂಗರಕೆ ಸಂಮುಖವಾದನಾಪಾರ್ಥ ॥೪೧॥ ವರಯುಧಾಮನ್ಯೂತ್ತ ಮೌಂಜಸ। ರೆರಡು ಕಡೆಯಲಿ ಬರೆ ಮುರಾರಿಯ । ಪರಮಕಾರುಣ್ಯದಲಿ ಸಾಹಸಮಲ್ಲನುರವಣಿಸೆ ॥ ಅರಿಬಲಕೆ ನೋಡಿದನು ಪಾರ್ಥನ । ಬರವನೀಕ್ಷಿಸಿ ತನ್ನ ಭಟರಿಗೆ । ಬೆರಳ ಚೌರಿಯ ಬೀಸಿದುಶ್ಶಾಸನನು ಮಾರಾಂತ ॥೪೨॥ ಘಡಘಡಲೆ ಕೌರವಕೃತಾಂತನ । ಪಡೆಗೆ ಪಾರಣೆಯಾಗದಿರೆಗಳೆ । ನಡೆಸುವೆನು ನಾಕಕ್ಕೆ ನೆರೆದಮಹಾರಥಾವಳಿಯ ॥ ಬಿಡು ಮದವಸದಿರಾಗದಿರು ಕೊಡು । ಕೊಡು ಪಥವ ನಿನ್ನುದರರಕುತವ । ಕುಡಿವಭಟರ್ಬೇರೆನ್ನ ಕಾಡದಿರೆನುತ ನರನೆಚ್ಚ ॥೪೩॥ ತರಹರಿಸಿ ಸರಳೈದರಲಿ ರಿಪು । ವರನನೆಚ್ಚನು ಕೌರವಾನುಜ । ನೆರಡುಶರದಲಿ ಪಾರ್ಥನೆಚ್ಚನು ವೈರಿಯಂಬುಗಳ ॥ ಸರಳು ತೀರಲು ಕಿತ್ತು ಸುರಗಿಯ । ಉರವಣಿಸಿ ಹಾಯಿದನು ಮುಮ್ಮೊನೆ । ಸುರಗಿಯನು ಖಂಡಿಸಿದನರ್ಜುನದೇವ ಸಮರದಲಿ ॥೪೪॥ ಇವನ ಕೊಂದೊಡೆ ಮುನ್ನಮಾಡಿದ । ಪವನತನಯನ ಭಾಷೆಗೂಣಿಯ । ಯಿವನ ಕೊಲ್ಲದೆ ಗೆಲುವಹವಣೇನೆಂದು ಮನದೊಳಗೆ ॥ ಕವಲುಗೋಲಲಿ ಯರಿಭಟನ ಚಾ । ಪವನು ಸೂತನ ರಥವನಾ ಕವ । ಚವನು ಖಂಡಿಸಿ ಬಿಸುಡಲವ ಜಾರಿದನು ದುಗುಡದಲಿ ॥೪೫॥ ಉರಿವ ಭಂಡಿಯ ಹಿಡಿದು ಹೆಚ್ಚಿದ । ದೊರೆಯಲೇ ಬಿಟಪಾದರಸವೆಲೆ । ಯರಸ ನಿನ್ನ ಕುಮಾರನೇಸರಪಾಡು ಪಾರ್ಥಂಗೆ ॥ ತೆರಳಿದನು ನಿಸ್ತ್ರಾತ ಸೂಟಿಯೊ । ಳುರವಣಿಸಿತಾತೇರು ನರನೈ ॥ ತರುತ ಕಂಡನು ಶಸ್ತ್ರವಿದ್ಯಾಭಾಳಲೋಚನನ ॥೪೬॥ ಅರುಣಮಯರಥವಾಜಿಗಳ ವಿಸ್ತರಿಪಹೇಮದ ಕಳಸಸಿಂಧದ । ಸರಳುತೀವಿದಭಂಡಿಬಳಿಯಲಿ ಲಕ್ಷಸಂಖ್ಯೆಗಳ ॥ ತರಣಿಯನು ಸೋಲಿಸುವರತ್ನಾ । ಭರಣಕಾಂತಿಯ ದೊಗೆಯ ಕಟಕದ । ಗುರುವ ಕಂಡನು ಪಾರ್ಥ ಶಕಟವ್ಯೂಹದಗ್ರದಲಿ ॥೪೭॥ ಅರಿವನು ಕಲಿಪಾರ್ಥನೇ ತ್ರಿಪು । ರಾರಿಹಿಡಿವಂಬಾಯಿತೆಂಬದೊ । ಶೂರನೇ ದೈತ್ಯಾರಿಸಾರಥಿಯೆಂಬಗರ್ವಿತನೇ ॥ ಹಾರುವರು ನಾವ್ಯಸ್ತ್ರವಿದ್ಯಾ । ಪಾರಗರು ನಾವಲ್ಲ ರಣದು । ಧಾರ್ಥರತನವನು ನೋಡೆನುತಲಡಹಾಯ್ದನಾ ದ್ರೋಣ ॥೪೮॥ ನಾಳೆ ಹಗೆವನ ಹೊಯ್ವೆನೆಂಬು । ಬ್ಬಾಳುತನವಿನ್ನೊಮ್ಮೆ ಭೂಪತಿ । ಯೋಲಗಾತಿಯುಬ್ಬಿಗೊಳಾಡಿದಭಾಷೆಯಿನ್ನೊಮ್ಮೆ ॥ ಆಳುನೆರೆದಿದೆ ಚೂಣಿಯೊಳಗೊಂ । ದಾಳ ಹೊಯ್ದೊಡೆ ಗೆಲವುನಿನ್ನದು । ಕಾಳಕೂಟದ ಕಮಲತುಂಬಿಗೆ ಪಥ್ಯವಲ್ಲೆಂದ ॥ ೪೯ ॥ ಎಂಬೊಡಿದುವುತ್ತರವಲೇ ಗರ । ಳಾಂಬುಜದ ಪರಿಮಳಕೆ ಗರುಡನು । ತುಂಬಿಯಾದರೆ ತಿದ್ದುವದಲೇ ನಾಕದಂತಿರಲಿ ॥ ಅಂಬುಗಳಿಗೆಡೆದೆರಹ ಕೊಡಿ ನೀ । ವೆಂಬನುಡಿಗಂಜುವೆನು ಸೈಂಧವ । ನೆಂಬವನ ತೋರಿಸಿರೆಯೆಂದನು ನಗುತ ಕಲಿಪಾರ್ಥ ॥೫೦॥ ಎಲೆಮರುಳೆ ಮುಂದಿರ್ದನವಿಪ್ರ । ವಿಲಗವನು ಪರಿಹರಿಸಿ ಸೈಂಧವ । ನಳಿವುಪಾಯವ ನೋಡು ಗರುವರು ನುಡಿದು ಕೆಡಿಸುವರೆ ॥ ಅಳವಿಗೊಡು ಕೊಳ್ಳೆಂಬನೆನುತ । ಗ್ಗಳೆಯ ನೆಚ್ಚನು ನರನ ಮೈಯಲಿ । ತಳಿತವಂಬುಗಳೇನನೆಂಬೆನು ವಿಗಡವಿಗ್ರಹವ ॥೫೧॥ ಅವರಪಾದಾಂಬುಜಕೆ ಫಲುಗುಣ । ಕವಿಸಿದನು ಸರಳುಗಳ ಲೆಕ್ಕಸ । ದವಗಡಿಸಿ ಗುರುವೆಚ್ಚ ಕಡಿದನು ಗಾಂಡಿವದ ತಿರುವ ॥ ಸವತಳಿಸಿ ಮಾರ್ದಿರುವಿನಲಿ ಸಂ । ತವಿಸಿಕೊಂಡರ್ಜುನನು ದ್ರೋಣನ । ನವಿರಳಾಸ್ತ್ರವ ಕಡಿದು ಹರಹಿದನೊಂದುನಿಮಿಷದಲಿ ॥೫೨॥ ಸರಳ ಸವರಿ ಮಹಾಸ್ತ್ರಶರದಲಿ । ನರನನೆಚ್ಚನು ತ

ನ್ನ ಲಾಗಿನ । ಧುರವ ತಾನಿದು ನಿನ್ನ ಶಿಕ್ಷೆಯು ಪಾರ್ಥ ಲೇಸೆಂದ ॥ ಸರಳು ಸುರಿಯಲು ಕೃಷ್ಣಪಾ
ರ್ಥನ । ಕೆರಳಿದನು ಘಡ ಮರುಳೆ ಗುಣಪಲಿ । ಗುರುವ ಗೆಲುವುದ ಮಾಡುಗೆಲುವಾಕಾದಿನೀನೆಂದ
॥ ೪೩ ॥ ಧುರದೊಳರಿಗಳ ಶರಕೆ ಮನವಳು । ಕಿರಿಯಲಾರದೆ ಶರಣುಹೊಗುವರೆ । ಅರಸುಗ
ಳಿಗಿದು ನೀತಿಯೋ ಮುರಹರನ ಹೇಳೆನಲು॥ ಮರುಳು ಫಲುಗುಣ ಕೇಳು ಗುರು ಶಿಷ್ಯರಿಗೆ ಪಿತನೋ
ಪಾದಿ ಸಾಕಂ । ತಿರಲಿ ವಂದಿಸು ಗುರುಗಳೆಡೆಯಲಿ ದೋಷನಿಲ್ಲೆಂದ ॥ ೪೪ ॥ ಇಳುಹಿದನು ಗಾಂ
ಡಿವವನುರುಬ । ತ್ತಳಿಕೆಯನು ಕಳಚಿದನು ರಥದಿಂ । ಬಳಿಸು ವೈಯಿಕ್ಕಿದನು ದ್ರೋಣನ ಚರಣ
ಕಮಲದಲಿ ॥ ತಿಳಿಯದೆಮ್ಮ ಕೃಪರಿಗೆ ಜೀವನ । ದಳಿವು ನಿಮ್ಮದು ನಿಮ್ಮ ಮಕ್ಕಳ । ಸಲಹು ಮೇಣ್ಕೊ
ಳಿಯೆಂದು ನುಡಿದನು ವಿನಯ ಪರನಾಗಿ ॥೪೫॥ ಅತಿಶುತ್ವದೊಳೆಮ್ಮ ಬೊಪ್ಪನು । ವಾಸವನ ಪುರಗೈ
ದಿದನು ನಿ ।ಮ್ಮಾಶ್ರಯಲಿ ಗಾಂಗೇಯರಿಂದವೆ ಬದುಕಿದೆವು ನಾವು ॥ ಗಾಸಿಯಾದೆವು ಜೂಜಿನಲಿ ವನ ।
ವಾಸವನು ಮಾಡಿದೆವು ವೈಮರೆ । ದೇಸನೇರಿಸಿ ನುಡಿದನುಡಿಗಳ ಕಾಯಬೇಕೆಂದ ॥೪೬॥ ನೀವು ಹೂ
ಣಿಗರಾಗಿ ರಿಪುಗಳ । ಕಾವೊಡಿತ್ತಲೆ ತಿರುಗುವೆನು ಕರು । ಣಾವಲೋಕನವೆನ್ನ ಮೇಲುಂಟಾದೊಡಿದಿ
ರಹೆನು ॥ ಆವುದನುನಯ ನಮ್ಮ ನೀವ್ಮಲೆ । ಗಾವಮತ ಪ್ರೋ ನಿಮ್ಮ ಚಿತ್ತದೊ । ಳಾವಹದನೆನೆ ಮು
ಗುಳುನಗೆಯಲಿ ದ್ರೋಣನಿಂತೆಂದ ॥ ೪೭ ॥ ಕಂದನಶ್ವತ್ಥಾಮ ಹುಸಿಯೆನ । ಗಿಂದು ದೇಹಕುಮಾರ
ಕನು ನಿ । ನ್ನಿಂದಲೆಮ್ಮಯ ಕೀರ್ತಿಮೆರೆವುದು ಮೂರು ಲೋಕದಲಿ ॥ ತಂದೆ ನಿನಗಾವಮುನಿಯಲಾ
ಪೆನೆ । ಸಂದುಮಾಡಿದ ಭಾಷೆ ನೀ ಹೋ । ಗೆಂದು ಗುಣದಲಿ ಬೀಳುಕೊಟ್ಟನು ದ್ರೋಣನರ್ಜುನನ
॥೪೮॥ ಬಲದೊಳಧಿಕರು ಭಟರೊಳತಿಪೆ । ಗ್ಗಳರು ಹೆಸರುಳ್ಳವರು ವಿದ್ಯಾ । ಕುಲತಪೋಧರ್ಮಾದಿ
ಗುಣಿಗಳು ಧೈರ್ಯಸಂಯುತರು ॥ ಹಲಬರಿಹುದುಸುರಿಲ್ಲದೊಡಲಿನ । ಚೆಲುವಿನಂತಿದೆ ನಮ್ಮ ಬಲ
ಹು । ಯೊಲವಿನವರಭ್ಯುದಯವನು ಧೃತರಾಷ್ಟ್ರ ಕೇಳೆಂದ ॥೪೯॥ ಎನಲು ಭುಜವನು ಹೊಯ್ದು
ಚಿತ್ತದ । ವಿನಯದಲಿ ಸಲೆ ಮಾರುಗೊಂಡನು । ಮನವ ಹರುಷದೊಳಡರಿದನು ನಿಜರಥವ ನಾಪಾ
ರ್ಥ ॥ ಧನುವ ಕೊಂಡನು ಕಳಶತನಯನ । ಘನಕೆ ಕೆಲಬಲ ಕೊತ್ತಿದನು ಮು । ಮ್ಮೊನೆಯ ಹಂಸ
ವ್ಯೂಹದಲಿ ಕೆಣಕಿದನು ಕಾಳಗವ ॥೫೦॥ ನರನು ಕಳುಹಿಸಿಕೊಂಡು ಗುರುಮೋ । ಹರವನಪಸವ್ಯದಲಿ
ವಂಚಿಸಿ । ಮುರುಹಿದನು ಮುರವೈರಿ ರಥವನು ಮುಂದನೊಡ್ಡಿಂಗೆ ॥ ಅರರೆ ನರನೋ ನೂಕು ನೂ
ಕಲಿ । ಬಿರುದರಾವೆಡೆ ಪೂತುಮಝಯೆನು । ತರುವಣಿಸಿದನು ಮುರಿದು ಮಕರವ್ಯೂಹದತಿರಥರು
॥೫೧॥ ನೂಕಿತಕ್ಷಿಚತುರಂಗಬಲ ನೆಲ । ನೋಕರಿಸಿತೋ ಪ್ರಳಯ ಜಲಧಿಯ । ನೂಕುತೆರೆಗಳಲಹರಿ
ಯೋ ನಿಲುವಾತನಾರಿದಕೆ ॥ ಸಾಕು ಕಡೆಯಲಿ ಕವಿದು ದಳ ಮಿಗೆ । ನೂಕುನೂಕಾಯಿತ್ತು ನರನ
ವ್ಯಾಕುಲತೆಯಲಿ ಸಮರ ತೊಡಗಿದನಹಿತಭಟನವನ ॥೫೨॥ ಕುಸುರಿದರಿದನು ಜೋಡುಮಪ್ರದ । ರಸು
ಮೆಗಳು ಹಾರಿದವು ರಿಪುಗಳ। ಯೆಸವಸೀಸಕಕವಚವನು ಸೀಳಿದನು ಕೋಲಿನಲಿ । ನೊಸಲ ಭೂಷಣ
ನುಗ್ಗುನುಸಿಬಂ । ಧಿಸಿದಸರಪಳಿ ಹಿಳಿದವರಿಬಲ । ವೆಸಕ ನಿಂದುದು ಪಾರ್ಥನೆಚ್ಚನು ಥಟ್ಟಿನೊಡೆಹೊ
ಯ್ದು ॥೫೩॥ ತುಳುಕುವೆಳಗಿಡಿಗಳಿಗೆ ಧರಣಿಯ । ಹೊಳಹಿನಲಿ ಹೊದರೆದ್ದು ಗಗನದಿ । ಬಲುಗಿಡಿ
ಯಲುಲಿ ಮಸಗ ಬರಹದ ಬಣ್ಣರೇಖೆಗಳು ॥ ಹಿಳುಕುಬೊಬ್ಬಿಡೆ ಹೊದರಡಸಿ ಕಣ । ಗಿಲೆಯ ಕೋ

ಉಳಿಯುಂಬು ಕವಲಂ । ಬಲಗಿನಂಬೀಜಾಡಿದವು ಪರಸೈನ್ಯಸಾಗರವ ॥೧೪॥ ಕರ್ಣನ ಬಲವದರೊಳಗೆ ತಲೆಗಳು । ಕುಣಿದನರ್ಜುನ ನಂಬಿನುರುಬೆಗೆ । ಹೇಣಿನ ದಾವಣಿ ಹಾಸಿದವು ರಿಪುಬಲದಿ ದೊಂಡೆಗಳು॥ ದಣಿದರಂಕನವರು ರಣದಲಿ । ಕುಣಿದವಟ್ಟೆಗಳೈದೆ ರಂಗಣ । ಗುಣಿಯೆ ಕೌರವರಾದ್ಯವಾದುದು ಕಳನಚೌಕದಲಿ ॥೧೫॥ ಪೆರುಗಳು ಬುದುಬುದಿಸಿ ರಕುತವ । ಕಾರಿಕಾಳಿಜ ಖಂಡನೆಣಬಿಗ । ದೋರಿ ಬೆಳುನೊರೆ ಮಸಗಿ ನಸುಬಿಸಿರಕುತ ಹೊನಲಿಡಲು ॥ ಕಾರಿದವು ಕಡಿವಡೆದವೈವೊಗ । ದೋರೆಗಳ ಪೂರಾಯುಗಾಯದ । ತಾರುಥಟ್ಟಿನ ಹೆಣಮೆದೆಯು ಹೇರಾಳ ರಂಜಿಸಿತು ॥೧೬॥ ಎಳೆಲೆ ಪ್ರಳಯದ ರುದ್ರನನು ತಲೆ । ಬಳಚಿ ಬಿಟ್ಟನು ಪಾಪಿದ್ರೋಣನು । ನೆಲನೊಡೆಯಗಪಜಯವ ನೆನೆದನು ಸ್ವಾಮಿ ದ್ರೋಹಿಕೆಯ ॥ ಕೊಲುವವನು ಫಲುಗುಣನೊ ದ್ರೋಣನೊ । ಕೊಲೆಗೆಡುಕನೋ ಕೊಂದವನು ಕುರು । ಕುಲತಿಲಕ ನೆರೆ ಪಾಪಿಯೆಂದುದು ನಿಖಿಳಪರಿವಾರ ॥೧೭॥ ಅದೆ ಕಿರೀಟಿಯ ಸಿಂಹಗರ್ಜನೆ । ಯದೆಸಿತಾಶ್ವನ ಬಿಲ್ಲಜೇವೊಡೆ। ಯದೆ ಮುರಾರಿಯ ಮನಕೆ ಮುಚ್ಚುವಹಯದಖುರನಿನದ॥ ಇದೆ ವಿಜಯನಸ್ತ್ರಘುವಿತ್ತಲು । ಕದನಕಾಲಾನಲನ ತೀವ್ರಕೆ । ಯಿದೆಯೆನುತ ಹೆರರೆದೆಯ ಬಿರುದರು ಬಿಸುಟರುತ್ಸಹವ ॥೧೮॥ ಈತನರ್ಜುನನಿತ್ತಲದೆಪುರು । ಹೂತಸುತನ ವರೂಥವಿದೆ ಕಪಿ । ಕೇತನನ ಬೊಬ್ಬಾಟವಿದೆ ಫಲುಗುಣನ ಶರಜಾಲ ॥ ಆತಪಾರ್ಥನು ಹೊಕ್ಕನಿತ್ತಲು । ಶ್ವೇತಹಯನಿತ್ತಲು ಧನಂಜಯ । ನೀತನೆನೆ ಫಲುಗುಣನಮಯವಾಯ್ತಖಿಳತಳತಂತ್ರ ॥೧೯॥ ಬಂದನಿದೆ ಫಲುಗುಣನು ಬಿರುದಿನ । ಸಿಂಧವಲ್ಲದೆ ಬಿಡದೆ ಹತ್ತಿದ । ಕೊಂದಭೂರಿಶ್ರವನ ಬಲದಲಿ ಕಲಿಕೆ ಕರಘಟೆಯ ॥ ಬಂದನಿಲ್ಲಿಗೆ ಶಲ್ಯ ಹೆದರೆ ಮು । ಕುಂದ ತಿರುಹಿದನಿತ್ತ ತೇಜಿಯ । ಹಿಂದುಮುಂದಾಯ್ತಖಿಳನೃಪರೆಂದುದು ಭಟಸ್ತೋಮ ॥೨೦॥ ಉಡಿದು ಕುಪ್ಪಳಿಸಿದವು ರಥಕಪಿ । ವಡೆದುದಗ್ಗದಸಾರಥಿಗಳೆಡೆ । ಗೆಡೆದರತಿರಥಸಮರಥಾರ್ಧಮಹಾರಥಾದಿಗಳು ॥ ಹೊಡಗೆಡೆದು ದಂತಿಗಳು ನತ್ತರ । ಕಡಲೊಳೀಜಾಡಿದವು ತೇಜಿಯ। ಕಡಿಕುವರಿದುದು ಹೊರೆದನಂತಕನುರುಪರಿಗ್ರಹವ ॥೨೧॥ ಸರಳು ಸೇನೆಯ ತಾಗಿರಿಪುಗಳ । ಕೊರಳನರಿಯದಮುನ್ನ ಘನಸಂ । ಗರವ ಹಿಂದಿಕ್ಕುವುದು ರಥವತಿಜವದ ಜೋಕೆಯಲಿ ॥ ಹೊರಳಿದವು ಭಟರಟ್ಟೆಶೋಣಿತ । ಶರಧಿ ಮಸಗಿತು ಮುಕುಟಬದ್ಧರ । ಹರಣದನಿಲಸಮೂಹ ಬೀಸಿತು ನಭಕೆ ಬಿರಿಸಿನಲಿ ॥೨೨॥ ಮುರಿವಡೆದು ಚತುರಂಗವರ್ಜುನನುರುಬೆಗಾರದೆ ಬರೆಶ್ರುತಾಯುಧ । ನಿರಿಯಲುತ್ಸಾಹಿಸುತನಿದಿರಾದನು ಧನಂಜಯನ ॥ ಮುರಿಯೆಸುತ ಮುಂಕೊಂಡು ಪಾರ್ಥನ । ತರುಬಿದೊಡೆ ಕಲಿಪಾರ್ಥನಾತನ । ನೆರವಣಿಗೆ ಲೇಸೆನುತ ಕೆದರಿದನಂಬಿನಂಬುಧಿಯ ॥೨೩॥ ನರನ ಬಾಣದ ನಿಕರವನು ಕ । ತ್ತರಿಸಿದನು ನಿಜಗದೆಯೊಳಾತನ । ಧುರಚಮತ್ಕಾರವನು ನೋಡುತ ಪಾರ್ಥಬೆರಗಾಗೆ ॥ ಕೆರಳಿವಾಘೆಯ ಕೊಂಡು ರಥವನು । ಧುರಕೆ ದುವ್ವಾಳಿಸಿದ ಮುರಹರ। ನುರವಣೆಗೆ ಕನಲುತ ಶ್ರುತಾಯುಧಹೊಯ್ದನಚ್ಯುತನ ॥೨೪॥ ವರುಣನಿತ್ತುಪದೇಶಬರಿಗೈ । ಯರನು ಹೊಯ್ದೊಡೆ ತನ್ನ ಕೊಲುವುದು । ನಿರುತವಂಬುದ ಮರೆದು ಹೊಯ್ದನು ಹರಿಯ ಮಸ್ತಕವ ॥ ಧುರದಿ ಗದ ಮುರಹರನ ಮುಟ್ಟದೆ । ಮರಳಿ ತನ್ನನು ಕೊಂದುದೇನ। ಚ್ಚರಿಯೊ ದೈವದ್ರೋಹಿಗೆತ್ತಣಲೇಸುಬಹುದೆಂದ॥೨೫॥ ಆಶ್ರುತಾಯುಧ ಮಡಿದನಲ್ಲಿ ಮ।ಹಾಸುರದ ರಣವಾಯ್ತು ಕಾಂಭೋ।ಜೇಶಕೈದುಡುಕಿದನು ಕದನವನಿಂ

ದ್ರಸುತನೊಡನೆ॥ ಸೂಸಿದನು ಸರಳುಗಳನಾತನ। ವಾಸಿಯನು ಮನ್ನಿಸುತ ಫಲುಗುಣ। ಬೇಸರದೆಕೊಂಡಾಡಿ ಕಾದಿದನೊಂದುನಿಮಿಷದಲಿ ॥ ೭೬ ॥ ಸರಳು ಸವೆಯಲು ಶಕ್ತಿಯಲಿ ಕಾ । ತರಿಸಿದೊಡೆ ಕಾಂಭೋಜಭೂಪನ । ಪುರುವಶಕುತಿಯ ಕತ್ತರಿಸಿದನು ಮಕುಟವಮಸ್ತಕವ॥ ಕೊರಳ ತೊಲಗಿಸಿ ಮುಂದೆ ನೂಕುವ । ವರಶ್ರುತಾಯುಧನೊಡನೆಘನಸಂ । ಗರವ ತೆಗೆದನು ಕಳುಹಿದನು ಕಾಂಭೋಜಭೂಪತಿಯ ॥ ೭೭ ॥ ಹರಬದ್ಧೈಕಾಯುಧನು ಮಗುಳಿ । ಬ್ಬರಸುತರ ನಿಯುತಾಯುಧನ ಸಂ । ಗರದ ದೀರ್ಘಾಯುವನು ಕಳುಹಿದನಮರಮಂದಿರಕೆ ॥ ಧುರಕೆ ನೂಕುವವಂಗರಾಜನ । ವರರಥಗಳೆಂಭತ್ತುಸಾವಿರ । ದರಿಭಟರ ಸಂದೋಹ ಮುತ್ತಿತು ಮತ್ತೆ ಫಲುಗುಣನ ॥ ೭೮ ॥ ತೂಳಿದವು ಭರಿಕೈಗಳಲಿ ಕರ । ವಾಳುಪಟ್ಟಿಸಲೌಡಿಯಲಿ ಸಾ । ವಾಳು ನಡೆದುದು ತಡೆದರರ್ಜುನನುರವಣೆಯ ರಥವ ॥ ಮೇಲೆ ಕೈಕೊಂಡೆಸೆವಜೋದರ । ಸಾಳಿವಿಲು ಕೆದರಿದವು ಬಲುಸರ । ಗೋಲಿನದ್ಭುತಸಮರವಾಯಿತು ಮತ್ತೆಪಾರ್ಥನಲಿ ॥ ೭೯ ॥ ಆಳವಿದಪ್ಪದೆ ದಂತಿಘಟೆಗಳ । ನಳುಕದೆಚ್ಚನು ಶಿರವ ತಾಗಿದ । ಹಿಳುಕು ಹೆಚ್ಚುತ ಕಂದಿ ಬಿದ್ದವು ಕರಿಗಳೆಡೆಗೆಡೆಗೆ॥ ತುಳುಕುವರಿಗೆಯ ಗುಳದ ವಜ್ರದ । ಮೊಲಕುಹರಿಯೊಡೆಯೆಚ್ಚು ಜೋದರ । ತಲೆಗಳನು ತುಂಬಿದನು ನಭವನು ಹೊಕ್ಕು ಬೀದಿಯಲಿ ॥ ೮೦ ॥ ಕರಿಯನಂಭೋಟಕನಭೂಪನ । ಶಿರವನೆಚ್ಚನು ಪಾರಸೀಕರ । ತುರಗ ಕವಿಯಲು ಕುಸುರಿದರಿದನು ಕೋಟಿಸಂಖ್ಯೆಗಳ ॥ ಬಿರುದ ಹೊಗಳಿಸಿಕೊಂಡು ನೆರದಾ । ಕುರರ ಹಣವನು ತಿಂದು ಹೆಚ್ಚಿದ । ಹಿರಿಯದೊಳ್ಳಿನ ರಾವುತರ ಕೆಡಹಿದನು ನಿಮಿಷದಲಿ ॥೮೧॥ ಇರಿದು ಚಕ್ರವ್ಯೂಹವನು ಕುರಿ । ದರಿಯ ಮಾಡಿ ಕಿರೀಟಿಯದರಿಂ । ಹೊರಗೆ ಹಂಸವ್ಯೂಹದಲಿ ಕಣಕಿದನು ಕಾಳಗವ॥ ತುರುಗಿದವು ಕೂರಂಬು ತಲೆಗಳ। ತರಿದು ಬಿಸುಟವು ಘುಂಮುಘುಳಿಲೆನೆ । ನೆರೆನಿಳಿಲುನಿಳಿಲೆಂದು ಜರುಹಿತು ಪಾರ್ಥಶರಜಾಲ ॥೮೨॥ ಬಿಲುರವದ ಮೊಳಗಿನಲಿ ಕೃಷ್ಣನ । ಫಲುಗುಣನ ಮೈಕಾಂತಿ ಮೇಘಾ । ವಳಿಗಳಲಿ ಹೊಂಗರಿಯ ಗಾಳಿಯ ಸರಳ ಸೋನೆಯಲಿ ॥ ನಿಲುವಹಂಸವ್ಯೂಹವೆಲ್ಲಿಯ । ದೆಲೆಮಹೀಪತಿ ಕೇಳು ನಿನ್ನ । ಗ್ಗಳೆಯ ಸುಭಟರ ವಿಧಿಯನೆಂದನು ಸಂಜಯನು ನಗುತ ॥ ಅಳಿದುವೈನೂರರಸುಗಳು ಮುಂ । ಮುಳಿತವಾಯ್ತೈವತ್ತುಸಾವಿರ । ಬಲುಗುದುರೆ ನುಗ್ಗಾದುದೊಂಬೈನೂರುಭದ್ರಗಜ ॥ ಅಳಿದುದಕೆ ಕೊಲಿಕುತ್ತುವಡೆದ । ಗ್ಗಳಪದಾತಿಗೆ ಗಣನೆಯಿಲ್ಲೀ । ದಳದಲರ್ಬುದ ನರನಕೈಯಲಿ ಕೆಲಸ ಹೊಸತೆಂದ॥೮೩॥ ಕೆಡಹಿದನು ವಿಂದಾನುವಿಂದರ । ನಡಗದರಿಯಾಯ್ತಖಿಳ ಬಲದು । ಗ್ಗಡದವೀರರು ಕಾದಿ ಬಿದ್ದರು ಕಾಯಮಾರಿಗಳು ॥ ನಡುಹಗಲುಪರಿಯಂತ ಕಾಳಗ । ಬಿಡದೆ ಬಲುಹಾಯ್ತಧಿಕವೇಗದಿ । ಕಡುಗುದುರೆ ಬಳಲಿದವು ಬಗೆಯದೆ ಹರಿಯ ಗರ್ಜನೆಗೆ ॥ ೮೪ ॥ ಕಡಿಯಣವ ಕವರಿದವು ಕಂದವ । ನಡಿಗಡಿಗೆ ಹಾಯ್ಕಿದವು ಸುರಿದವು । ಕುಡಿನೊರೆಯ ಕಟವಾಯಿಲೋಳೆಯ ಮುರಿದಮೈದಡಿಯ ॥ ಬಿಡುವನಿಯ ಬಲುಬೆಮರ ಘುಳುಘುಳು । ಗೊಡುವನಾಸಾಪುಟದ ಲಹರಿಯ । ಕಡುಗುದುರೆ ಬೆಮರಿದವು ಬಗೆಯದೆ ಹರಿಯಗರ್ಜನೆಗೆ ॥ ೮೫ ॥ ಭಾರಿಸಿತು ಮೈಮುಷ್ಟಿಯಲಿ ಲುಳಿ । ಸಾರತನ ಲಂಬಿಸಿತು [illegible] । ಕೂರಲಗು ಗ[illegible]ದವು ರಿಪುಭಟನ ಕಾಯದಲಿ ॥ ಹಾರಿದರ್ಜುನನರಿದನಾದ್ಯ । ತ್ಯಾರಿ[illegible]ನು ದೇವ ಚಿನ್ನ[illegible] । ವಾರುವಂಗಳ ವಹಿಲತೆಯ ಚಿತ್ತೈಸಿದಿರಯೆಂದ ॥ ೮೬ ॥ ಗಮನ ತಪ್ಪ

ಯುವಾಯ್ತು ವೇಗ । ಭ್ರಮಣ ಜಡವಾಯ್ತಡಿಗಡಿಗೆ ನಿ । ರ್ಗಮದೊಳಗೆ ತಡವಾದವೇ ಭಾರವಣೆ ಭರವಸದ ॥ ಸಮತೆ ನಿಂದುದು ಸಾಹಸಿಗರು । ಭ್ರಮಿಸುತಿದೆ ಭಟಜಲಧಿ ತುರಗ । ಶ್ರಮವ ಮಿಗೆ ಪರಿಹರಿಸಿದಲ್ಲದೆ ಕಾದಲರಿದೆಂದ ॥ ೮೮ ॥ ಉಂಟುಹೋಲ್ಲ್ಹವಲ್ಲ ರಣದೊಳ । ಗೆಂಟುಮಡಿ ಬಳಲಿದವು ತೇಜಿಗ । ಳೆಂಟುವೊಡೆ ನೀರಿಲ್ಲ ಮುರಿವೊಡೆ ಹಿಂದೆಬಿಡರವರು ॥ ಎಂಟರಲಿ ನಮ್ಮೊಡನೆ ಸುತ್ತಲು । ಮೆಂಟಣಿಸಿ ಕುರುಸೇನೆಯಿದಕೇನುಂಟುಮಾಡುವುಪಾಯವೆಂದನು ನಗುತ ಮುರವೈರಿ ॥ ೮೯ ॥ ದೇವ ವಾಘೆಯ ಹಿಡಿ ತುರಂಗಕೆ । ಜೀವನವನೀಕ್ಷಿಸೊಳಗೆ ಸಂ । ಭಾವಿಸುವೆ ನೋಡೆನುತ ಧುಮ್ಮಿಕ್ಕಿದನು ಧಾರಿಣಿಗೆ ॥ ತೀವಿ ತೆಗೆದನು ವಜ್ರಶರದಲಿ । ಡಾವರಿಸಿದನು ಕೊಳದೊಳುದಕವ । ಶ್ರೀವಳೆಯಸೆರೆಯಳಿದು ಚೌಕಕೆ ಸೀಳಿದನು ನೆಲನ ॥ ೯೦ ॥ ನೋಡು ನರನುದ್ದಂಡತನವನು । ತೋಡುತ್ತೈದನೆತುರಗನಿಕರಕೆ । ಕ್ರೀಡಿ ಕುಳಿಯನು ಶೌರ್ಯಗರ್ವಿತನೈ ಮಹಾದೇವ ॥ ಕೂಡೆ ಮುಸುಗಿತು ರಿಪುಚತುರ್ಬಲ । ಜೋಡುಮಾಡಿತು ಕಲಹಕಮರರು । ಹೂಡಿದದ್ರಿಯನಂಬುಧಿಯ ತೆರೆಮಸಗಿ ಕವಿವಂತೆ ॥ ೯೧ ॥ ಬಂದರು ಮೇಲಿಕ್ಕಿದರು ನಿಸ್ಸಾಳದ ನಿರಂತರಸೂಳುಹೊಯ್ಲಿನ । ಹೊದರುಗಳ ಹೊಸಮಸೆಯಡಾಯುಧಸಾಲ ಸಂದಣಿಯ ॥ ಸದರವಲ್ಲೀಹೊತ್ತುಗೆಲವಿನ । ಹೊದರುಗಳ ಹೂಣಿಗರ ಕಾಣುತ । ಗದಗದಿಸಿ ಮುರವೈರಿ ಚಾಚಿದನರ್ಜುನನ ರಥವ ॥ ೯೨ ॥ ಆಲಿಕಲುಗಳ ಕಡಿವಡುಕ್ಕಿನ । ಚೀಲಣದ ಹಂಗೇಕೆ ನಿಮ್ಮಡಿ ಮೇಲುನೋಟಗಳಿರಲು ರಥಪರಿಯಂತ ಕಾಳಗವೇ ॥ ಹೋಳುಗರೆವೆನು ಹುಗ್ಗಿಗರನೆನು । ತಾಳೊಳಗೆ ಬೆರಸಿದನು ಬರಿಕಾ । ಲಾಳುತನದಲಿ ಕಾದಿ ಕೊಂದನು ಕೋಟಿಸಂಖ್ಯೆಗಳ ॥ ೯೩ ॥ ವರುಣಬಾಣವಲುದಕವನು ತ । ತ್ಸರಸಿಯಲಿ ತುಂಬಿದನು ತವಗವ । ಸರವಿದೆಂದಾಕಿದಮಹೀಶ್ವರ ಮತ್ತೆ ಸವರಿದನು ॥ ಕರಿರಥಾಶ್ವವರೂಥವನು ಸಂ । ಗರವಿಪತ್ತಿನೊಳೊಬ್ಬನೇ ಸಂ । ಹರಿಸಿದನು ಗುಣಶತವನೊಂದೇಲೋಭ ಗೆಲುವಂತೆ ॥ ೯೪ ॥ ಕೊಳನ ಕೆಲದಲಿ ತಾಡಿದನು ಸಡಿಲಿಸಿಯುವನು ಚಪ್ಪರವನಾತನ । ಬಲುಹಕಂಡಸುರಾರಿ ಮೆಚ್ಚಿ ನನಡಿಗಡಿಗೆ ಹೊಗಳಿ ॥ ತಳೆದು ನೊಗವನು ತೆಗೆದು ಕಂಠಿಯ । ನಿಳುಹಿ ವಾಘೆಯ ಸಡಿಲು ತೇಜಿಗಳೊಲಗಿ ಹಿಡಿಯಲು ಪಾರ್ಗೆ ನೈದಪ ಪಾಳದೆಡಬಲಕೆ ॥ ೯೫ ॥ ಮುರುಹಿ ನಿಂದವು ಕೊಡಹಿದವು । ಕೇ ಸರವನಸ್ತ್ರಶ್ರಮಹತಗೆ ಪರಿ । ಹರಿಸಿ ನೀರೊಳು ಹೊಗಿಸಿದನು ಹರಿಹಯಚತುಷ್ಟಯವ ॥ ಸರಸಿಯಲಿ ಮೊಗವಿಟ್ಟು ಮೊಗೆದವು । ವರಜಲವನೆರಡಳ್ಳೆ ಹಿಗ್ಗಲು । ಮುರಹಿದವು ಮುಖವನು ಮುರಾಂತಕ ತಡಿಯನೇರಿಸಿದ ॥ ೯೬ ॥ ಕರತಳದಿ ಪುಡಪುಡವಿ ಗಾಯವ । ಸರಳ ಕಿತ್ತೌಷಧಿಯ ಲೇಪವ । ನೊರಸಿದನು ಕರುಣದಲಿ ಚಪ್ಪರಿಸಿದನು ಕಂಧರವ ॥ ಹರುಷದಲಿ ಕೊರಳೆತ್ತಿ ನಯದಲಿ । ತಿರುಗಿ ದೇವನ ನೋಡುತಿರ್ದವು । ತುರಗನಾಲ್ಕರ ಪುಣ್ಯ ಸನಕಾದಿಗಳಿಗಿಲ್ಲೆಂದ ॥ ೯೭ ॥ ಮೊಗಕೆ ಕವಣವ ಕಟ್ಟಿ ನೆಳಲಿಗೆ । ತೆಗೆದು ಫಲುಗುಣಸಹಿತ ಕೊಳನನು । ನಗುತ ಹೊಕ್ಕನು ನೋಡುತಿರ್ದುದು ಕೂಡೆ ಕುರುಸೇನೆ ॥ ಬಿಗಿದಪತ್ತಲೆ ದೂರದಲಿ ದೀ । ವಿಗೆಯ ಸುತ್ತಲು ಕಡೆಗೆನಿಂದವೊ । ಲಗಣಿತನೃಪತಿಸುಭಟರಿದ್ದರು ನರನ ಸುಳಿಸಿನಲಿ ॥ ೯೮ ॥ ಚರಣಪದನವ ತೊಳೆದು ನಿರ್ಮಲ । ಸಲಿಲಪಾನೀಯವಿದನು ನಿರುಪಮ । ಸರಸ ತರುಣಸಾರವನು ಸಂಭ್ರಮಸಹಿತ ಸರಸಿಯಲಿ ॥ ಪರಿಪ್ಲುತ ಶ್ರಮರಾಗಿ ಹರುಷೋ । ತ್ಕರುಷಯಲಿ ಹಣ ತಳೆದು ಕೊಂಡನು । ನರಗೆ ಕೊಟ್ಟನುರಾಗಿ ತೋಳಿಸಿದಕ

ಗೆ ॥೫೫॥ ಅಳಲಿದಾತನು ಕಾಲುಗೆಡೆದೊಡೆ । ಫಲವಹುದೆ ನಿಜಸತಿಯ ಹಿಡಿದಾ । ನೆಳೆದುವೊಯ್ಯಲು ಭೀಮನಾಡಿದಭಾಷೆಯೇನಾಯ್ತು ॥ ಅಳುಕದಿರಿ ಪರಿವಾರವಿವ ಕೊಳು । ಗುಳಕೆ ವಜ್ರದಪೋಡು ನೃಪರಿದೆ । ಬಲವಿಹೀನನೆ ನೀನದೇನೆಂದವನಿಪತಿ ನುಡಿದ ॥೫೬॥ ಅವನೋಲೆಯುಕಾರತನ ಗಾಂಡೀವಧರನಲಿ ಫಲಿಸುವುದೆ ಮೇ ।ಘಾವನದ್ಭುತಮಂತ್ರಶಕ್ತಿಗೆ ಮಣಿವನಸುರಾರಿ ॥ ಕಾವನಿಲ್ಲರ್ಜುನನ ಕೈಯಲಿ । ಸಾವವನು ತಾನೆನಲು ಮಿಗೆ ರಣ । ಧೀವಶನು ಕುರುರಾಯ ನುಡಿದನು ಮತ್ತೆ ಸೈಂಧವಗೆ ॥೫೭॥ ಗರುಡನೂರವರೆರೆವರೇ ನಾ । ಗರಿಗೆ ತನಿಯನು ನಮ್ಮ ಬಲದಲಿ । ಗುರುವಲಾ ಪಾಲಕನು ಕೈಕೊಂಬನೆ ಧನಂಜಯನ ॥ ನರನ ನುಡಿಗಳ ಹೊಳ್ಳುಗಳೆವೊಡೆ । ಚರಣದಲಿ ಬೀಳುವೆವು ನಡೆ ಯೆಂ । ದಿರುಳು ದ್ರೋಣನ ಮನೆಗೆ ಬಂದನು ಕೌರವರರಾಯ ॥೫೮॥ ನೆಗಳಿದವು ಕೈದೀವಿಗೆಯ ಸಾ। ಲುಗಳು ಹೊಂದಂಡಿಗೆಯವರು ರವ । ಮಿಗಲು ವೆಂಟಣಿಸಿದರು ಸೀಗುರಿ ಮೊಗಕೆ ಮೋಹಿದವು ॥ ಅಗಿವಕಡಿತಲೆಮುಸುಕಿದವು ಚೌ । ರಿಗಳಗೊಂದಣತೂಗಿದವುಮೌ । ಳಿಗಳಮಸ್ತಕದವರುನೆಲನುಕ್ಕಡಿಸಲೈತಂದ ॥೫೯॥ ಗರುಡಿಯೊಡೆಯನ ಪಾಳೆಯಕೆ ಕಡು । ಭರದೊಳೈತರೆ ಕೌರವೇಂದ್ರನ । ಬರವಿದೇನೆಂದೆನುತ ಬಂದನು ದ್ರೋಣನಿದಿರಾಗಿ ॥ ಧರಣಿಪನ ತಕ್ಕೈಸಿ ನೆಲೆಯು । ಪ್ಪರಿಗೆಗೈದಿದನುಸುಳುಗಂಡಿಯ । ಉರವಣಿಸಿದರುಕರ್ಣಕೃಪಮೊದಲಾದಬೇಹವರು ॥೬೦॥ ಮೀಳೆಯವಕರ್ಪೂರವನಿತ್ತುನೃ । ಪಾಲಕರ್ಣಾದಿಗಳ ಸ ಭಟರ। ಸಾಲ ಮನ್ನಿಸಿ ದ್ರೋಣ ಬೆಸಗೊಂಡನು ಸುಯೋಧನನ ॥ ಕಾಳಗವ ಕೈಕೊಂಡ ಸಿರಿಮೊಗ । ವೇಳುತಿದೆ ಖತಿಯೇನು ನಿನ್ನಿನ । ಕಾಳಗವು ಜಯ ನಮ್ಮದೀದುಮ್ಮಾನವೇಕೆಂದ ॥೬೧॥ ಏನ ಹೇಳುವೆನರ್ಜುನನು ನಿಜ । ಸೂನು ಮಡಿಯೆ ದುರಾಭಿಸಾತದೊ । ಳೇನನೆಂದನು ಹೇಳಿರೈ ಕರ್ಣಾದಿ ನಾಯಕರು ॥ ತಾನುಗಡ ಸೈಂಧವನ ತಿರವನು । ಭಾನುವಡಗದಮುನ್ನ ತೆಗೆವೆನು । ಹೀನವಾದೊಡೆ ಹೊಗುವೆನೆಂದನು ಹವ್ಯವಾಹನನ॥೬೨॥ ಕೊಂದವನು ದುಶ್ಶಾಸನನ ಮಗ । ಬಂದುದಪವಾದವು ಜಯದ್ರಥ । ಗಿಂದಿವನ ಪತಿಕರಿಸಬೇಹುದು ರಣದಲರ್ಜುನನ ॥ ಮುಂದುಗೆಡಿಸಲುಬೇಕು ಭೀಷ್ಮರು । ಸಂದಬಳಿಕಿಮಗಾಪ್ತಹಿತವರು । ತಂದೆ ನೀವೆಂದೆರಗಿದನು ನೃಪ ಗುರುವಿನಂಘ್ರಿಯಲಿ ॥೬೩॥ ಮಕುಟವನು ನೆಗಹಿದನು ಭೂಪಾ । ಲಕತಿರೋಮಣಿ ಶಶಿಯಕುಲವರ । ನಿಕರವಿತ್ತಂಡಕ್ಕೆ ಸರಿಯೆನಬೇಡ ಬುದ್ಧಿಗಳ ॥ ಯುಕುತಿಗಿದಕಿನ್ನಿಲ್ಲಪಾರ್ಥನ । ಸಕುತ್ತಿಘಸಮೀರಾಜಕಾರ್ಯಾದಿ । ಚಕಿತನಾದೆನು ರಾಯ ಚಿತ್ತೈಸೆಂದನಾದ್ರೋಣ ॥೬೪॥ ಕಾವೊಡೆನ್ನಳವಲ್ಲ ಮೇಣ್ಸಾಂ । ಡೀವಿ ಕೊಲುವವನಲ್ಲ ಕೃಷ್ಣನು । ಕಾವೆಡೆಯು ಕೊಲುವೆಡೆ ಸಮರ್ಥನು ವೇದಸಿದ್ಧವಿದು ॥ ಜೀವಜಾತ ಕ್ಕೊಡೆಯನಾರಾ । ಜೀವನಾಭನು ಬರಿಯಹಂಕಾ । ರಾವಲಂಬನದಿಂದ ಕೆಡುತಿಹುದಖಿಳಜಗವೆಂದ ॥೬೫॥ ಇದು ಮುರಾರಿಯ ಲೀಲೆಗೋಸುಗ । ವುದಯಿಸಿದಜಗವಿವರೊಳೊಬ್ಬನ । ಸದೆದು ಬಿಡುವನು ಹಿಡಿವನೊಬ್ಬನ ಸಲಹಿ ನಡಸುವನು ॥ ಇದರೊಳಾಗಿಂತಲ್ಲ ಕರುಣಾ । ಸ್ಪದದ ಭೂಜಂತ್ರದಲಿ ಯಿಾಜಗ । ದುದರವಾತನ ಕಡೆಯಲಾದುದು ಭುವನಗತಿಯೆಂದ॥೬೬॥ ನರನ ನುಡಿಯೆಂದಿರದಿರಾ ಮುರ । ಹರನ ನುಡಿಗಳು ಗಿರಿಗುಹಾಗ । ಹ್ವರದ ನುಡಿಯೋ ಜಂಗಮಧ್ವನಿಯೋ ವಿಚಾರಿಸಲು ॥ ನರನ ನುಡಿ ಹೊಳ್ಳಾಗದಾಮುರ। ಹರನ ಬಲುಹುಳ್ಳನ್ನ ಬರನೆಸ। ಲಗಸನಾಲಿಸಿ ಕೇಳುತಿರ್ದನು ಕೈಯಗಲ್ಲದಲಿ ॥೬೭॥ಕೇಳುತಿರ್ದೈ ಕರ್ಣ

ರೆಯುದು । ಗೆಲಲುಬಂದೆನು ಕೊಳ್ಳು ಹಾಸಂಗಿಗಳನೆನುತೆಚ್ಚ ॥೧೧೧॥ ದುಗನು ಯಿತ್ತಿಗೆ ಬಾರವೆಂದೇ । ಮೊಗೆವ ಪಾತಿಗೆಯಲ್ಲ ನಿನಗಿದು। ಸೊಗಸುದೋರದು ಸಾಕು ಸಾರ್ಕೆ ಸಮರ ನಿನಗೇಕೆ ॥ ವಿಗಡ ಭೀಮನು ನಿನ್ನ ಕರುಳನು । ಬಗಿದು ನೆತ್ತರೆಗುಡಿವನಲ್ಲದೆ । ಬಗಿವ ಫಲುಗುಣವೆಲ್ಲವೆನುತೆಚ್ಚನು ನೃಪಾಲಕನ ॥ ೧೧೨ ॥ ಎಸಲು ಪಾರ್ಥನ ಸರಳುಗಳ ಖಂ । ಡಿಸಿದನೆಲವೋ ತಮ್ಮ ಸಿಸಗೀ । ಯುಸುರೆರಪು ತೆತ್ತಿಗನಲಾ ತ್ರುಡ್ರು ಕಲಿಸುದರ್ಶನವ ॥ ನುಸಿಗಳೌಂಕಿದೊಡೆಕಟ ದಿಗ್ಗಜ । ಗಸಣಿಗೊಂಬುದೆ ನಿನ್ನ ಬಾಣ । ಪ್ರಸರಕಾಸಂಜುವೆನೆ ಫಡ ಹೋಗೆನುತ ನೃಪನೆಚ್ಚ ॥ ೧೧೩ ॥ ಎಲೆಕಿರೀಟಿ ವೃಥಾಮನದ ಹೆ । ಕ್ಕಳಪುದೇತಕೆ ನಿನ್ನ ಮಗನೆಳೆ । ದಳಲತಿಖಿಯಲಿ ಬೆಂದು ನೀ ಮರಣವನು ಯಿಾಕ್ಷಿಸದೆ ॥ ಗಳಹದಿರೆನ್ನ ಗರುವಾಯಿವುಳ್ಳೊಡೆ । ವುಳಿವರೇ ನಿನ್ನಂತೆ ನಿನ್ನವ। ರೆಳವನರಿ ಕೊಳ್ಳೆನುತ ಕೌರವನೆಚ್ಚನರ್ಜುನನ ॥ ೧೧೪ ॥ ಹುದುಮಸೆಚ್ಚನು ಪವನಜನ ತನು । ಬಿರಿಯಲೆಚ್ಚನು ಶರವನಾತನ । ತುರಗದೊಡಲಲಿ ಹೂಳಿದನು ಹೇರಾಳಬಾಬುಗಳ ॥ ವರಕಪೀಂದ್ರನ ಗಾಸಿಮಾಡಿದ । ನುರವಣಿಸಿ ಕವಿದೆಸುವ ಭೂಪನ । ಭರವಸದಬಿಲುಗಾರತನವನು ಪಾರ್ಥ ಹೊಗಳಿದನು ॥ ೧೧೫ ॥ ಕಾಲುಹೊಳೆಗೇಕವನಿಪತಿ ಹರಿ । ಗೋಲು ನೀ ನಿನ್ನ ಯೆದಿದಿರ್ದೊಡೆ । ಹೇಳೆವಾತ್ಮಸ್ತುತಿಯ ಮಾಡೆನು ಸಾಕದಂತಿರಲಿ ॥ ಮೇಲುಕವಚವ ನಂಬಿ ನವ್ಕೊಳು । ಕಾಳಗವ ನೀ ಬಯಸಿ ಬಂದೆ ನೃ । ಪಾಲ ಜೋಡಿನ ಬಲದೊಳೆಮ್ಮನು ಜಯಸದಿರನೆಂದ ॥ ೧೧೬ ॥ ಎಲವೊ ದ್ರೋಣನ ಕವಚಗವಚವ । ಬಲುಹ ನಂಬದೆ ನಮ್ಮ ಬಾಣಕೆ । ತಲೆಯ ತೆರಬಿರು ಭೀಮಸೇನನ ಗದೆಯ ನೀಘುಟಿಸು ॥ ತೊಲಗೆನುತ ನಿಶಿತಾಸ್ತ್ರದಲಿ ನೃಪ । ತಿಲಕನೆಚ್ಚನು ಮುಸುಕಿ ಪಾರ್ಥನ । ಹಿಳುಕು ಹುಡಿಹುಡಿಯಾಗಿ ಕಡಿದುದು ಕವಚವನು ತಾಗಿ ॥೧೧೭ ॥ ಅವಿ ದೀಪನಚೂರ್ಕ್ವಬಲದಲಿ । ವೀರರುದ್ರನು ಜಗವ ನುಂಗಿದ । ನೋರೆಗೆಡೆಯದಿರೆಂಬ ಸುರಿಸುರ ಹೊಳ್ಳುನುಡಿಯೇಕೆ ॥ ಸಾರು ನೀ ಬರಹೇಳು ಕೀಚಕ। ವೈರಿಯನು ಪಡಿಸಣವ ನೋಡಲು। ಭೂರಿಬಾಣದ ಸವಿಯನೆಂದನು ನಗುತ ಕುರುರಾಯ ॥ ೧೧೮ ॥ ಗರುಡನಾರೋಗಣೆಯ ಬೋನಕೆ । ಮರುಳೆ ಪಡಿಸಣವುಂಟೆ ಮಾತಿನ।ಮುರುವುಗಳು ಗೆಲವಲ್ಲ ನೀನಿದ ನೋಡು ಕೈಗುಣವ॥ ಅರಸ ನಿನ್ನಯ ಕೊರಳ ಕಡಿತಕೆ । ಸರಳು ತ್ವರಿತದಲೆನಗೆ ತನಗೆಂ । ದೊರಲುತಿದೆ ನಿನಗಿಂದಿನಲಿ ಸಾವಿಲ್ಲ ಹೋಗೆಂದ ॥ ೧೧೯ ॥ ಎನುತ ಕೂರಂಬಿನಲಿ ದುರಿಯೋ । ಧನನನೆಚ್ಚನು ವಜ್ರಕವಚದೊ । ಳನಿತುಶರ ವಕ್ಕಾಡಿದವು ಸರ್ವಾಂಗರೋಮಗಳು ॥ ಅನಲಗಿರಿವಜ್ರಾಸ್ತ್ರದಲಿ ಫಲು । ಗುಣನು ಬೊಬ್ಬಿರಿದೆಚ್ಚನೆಚ್ಚಂ । ಬನಿತು ಮುರಿದುದು ಮೈಯ ಕಾಣದು ಮೈಮ ಮಹೀಪತಿಯ॥ ೧೨೦ ॥ ಕವಚವಿದೆ ಸರ್ವಾಂಗದಲಿ ನೃಪ । ನವಯವಕೆ ಕೇಡಿಲ್ಲ ಕಲಬಲ । ದವರು ನೆರೆ ಕೈಮಾಡುತಿರೆ ಕರ್ಣಾದಿನಾಯಕರು ॥ ರವಿಯ ಕಿರಣವನಸ್ತಗಿರಿಯಾ । ನುವವೊಳಿದೆ ಮುನಿದಿವನ ಕೊಂದೊಡೆ । ಪವನಜನ ಕೊಂದವನು ಹದನೇನೆನುತ ಚಿಂತಿಸಿದ ॥ ೧೨೧ ॥ ಎನುತ ಕೂರಂಬಿನಲಿ ರಾಯನ । ಧನುವ ಖಂಡಿಸಿ ಮತ್ತೆ ಮೂರಂ । ಬಿನಲಿ ನೃಪನಸಂಸ್ಥೈಪನೆಚ್ಚನು ಬಾಣ ಥಟ್ಟುಗಿಯೆ॥ ಜನಪನೊಂದನು ಬಳಿಕ ಕೃತವ । ರ್ಮನುಕೃಪಾಚಾರಿಯನು ನಿನ್ನಯ । ತನಯನನು ತೊಲಗಿಸಿದರೆ ಧೃತರಾಷ್ಟ್ರಕೇಳೆಂದ ॥ ೧೨೨ ॥ ರಾಯ ನೊಂದನು ಪರಿಬವಿಲ್ಲಾ । ನಾಯಕರ ಸುಡು ಹೊಟ್ಟೆಹೊರಕರ। ನೋಯದಿವದಿರ ಸಂತವಿ

ಟ್ಟನು ಸ್ವಾಮಿದ್ರೋಹಿಗಳ ॥ ಆಯುಧವ ಹಿಡಿದಕಟ ರಣದಲಿ । ಸಾಯಲಮ್ಮರು ಬಿರುದ ಹೊಗಳು ವ । ಬಾಯ ನೋಡೆನುತಿರ್ದುದಾದುಶ್ಶಾಸನಾದಿಗಳು ॥ ೧೨೩ ॥ ಕದಡಿತರಿಬಲಜಲಧಿ ಸುಭಟರು । ಹೊದರುಗಟ್ಟಿತು ಹೊಳೆವಡಾಯುಧ । ಹೊದಕೆಗಳ ಸತ್ತಿಗೆಯ ಬೀಸುವಚಮರಸೀಗುರಿಯ ॥ ತು ಪಿವೆರಳ ಕಿರುದನಿಯ ಕೆಂಪಿನ। ಕದಡುಗಂಗಳ ಕುಣಿವಮೀಸೆಯ । ಕದನಗಲಿಗಳು ಕವಿದರೈ ಕರ್ಣಾದಿ ನಾಯಕರು ॥ ೧೨೪ ॥ ಧರಣಿಪತಿಯೋಸರಿಸಲಾಹದ । ನರಿದು ಕರ್ಣಾದಿಗಳು ತಮ್ಮಯ। ಬಿರುದು ಗಳಟೆಕ್ಕೆಯವನೆತ್ತಿಸಿದರು ರಥಾಗ್ರದಲಿ ॥ ಕರಿಯುಕಕ್ಷಧ ಸಿಂಧ ನೆಗಹಿತು । ತರಣಿಸುತನಲಿ ಗುರುಸು ತನುಕೇ। ಸರಿಯ ಕೇತನ ವೃಷಭಪಳಹರ ಕೃಪನತೇರಿನಲಿ ॥ ೧೨೫ ॥ ನಲಿವಸಿಂಧದೊಳಾನೆ ಶಲ್ಯಗೆ । ಹುಲಿಯಟೆಕ್ಕೆಯ ಮೃಗದಪಳಹರ। ಯುಲಿಯೆ ಭೂರಿಶ್ರವನು ರಥದಲಿ ರಣವ ಮುಂಕೊಂಡು ॥ ಕ ಲಿಸುಯೋಧನನೀಸುಲೋಚನ। ನಲಿ ವರಾಹಧ್ವಜವುಯೂರದ । ಹಳವಿಗೆಯ ವೃಷಸೇನರಿವರೊಗ್ಗಾ ದರಾಹವಕೆ ॥೧೨೬॥ ಆಮಹಾರಥನಿಕರ ಸುಭಟ।ಸ್ತೋಮ ಕೆದರಿತು ನೃಪರು ಭಟರು । ದ್ದಾಮಭೀ ತಿಯ ಬಿಡಿಸಿದರು ಕರ್ಣಾದಿನಾಯಕರು ॥ ಈಮಹಾರಥನಿಕರ ಪಾರ್ಥನ । ಸೀಮೆಯಲಿ ಕೆಣಕಿದರು ಬಲುಸಂ। ಗ್ರಾಮವನು ದನುಜಾರಿಗಿತ್ತನು ಬೆರಗನಹಿತರಿಗೆ ॥ ೧೨೭ ॥ ಮುತ್ತಿದರು ಮುಂದೆಡಬಲ ನ ಸಮ । ತೆತ್ತಿಗರು ಹಿಂದೆತ್ತಲೀಕ್ಷಿಸ । ಲೆತ್ತರಾಯರ ಸರಳು ಕವಿದುದು ತುರಗಗಜರಥವ ॥ ಮು ತ್ತಿದುದು ಫಲುಗುಣನ ತೇರಿನ । ಸುತ್ತುವಳಯವನಾಶರೌಘದ । ಕತ್ತಲೆಗೆ ಹದನೇನೆನುತ ದೈತ್ಯಾರಿ ಚಿಂತಿಸಿದ ॥ ೧೨೮ ॥ ಪೂತುರೇ ಕಲಿಪಾರ್ಥ ದೇವ । ವ್ರಾತಕಚ್ಚರಿ।ನಿನ್ನಬಲುಮೆಮ । ಹೀತಳಕೆ ಹೆಸರಹುದು ನೀವಿದ್ಯಾಕುತೂಹಳಿಕೆ ॥ ಆತುಕೊಳ್ಳೈ ತೊಲಗಿ ನೀವೇ। ಕೈತವದಕಲಿಗಳು ಸಮಗ್ರಭ । ಟಾತಿಶಯರಾವೆನುತ ಕವಿದೆಚ್ಚರು ಮಹಾರಥರು ॥೧೨೯॥ ಅರಿಭಟರು ಕಟ್ಟಳವಿಯಲಿ ಮು । ಕ್ಕ ರಿಕೆ ಮುರರಿಪು ಪಾಂಚಜನ್ಯವ । ನಿರದೆಮೊಳಗಿದಹನುಮ ಗರ್ಜಿಸಿದನು ಪತಾಕೆಯಲಿ ॥ ಸುರರ ದೈ ತ್ಯರ ಸಮರ ಸರಿ ಪಿ । ಸ್ತರಿಸಿತಿತ್ತಲು ದ್ರೋಣನತ್ತಲು । ಕೆರಳಿಚಿದನೈ ಪಾಂಡುಪುತ್ರರ ಸೈನ್ಯಸಾಗ ರವ॥ ೧೩೦ ॥ ನಕುಲನನು ಮೊನೆಗಾಣಿಸಿದ ಸಾ । ತ್ಯಕಿಯ ವಿರಥನ ಮಾಡಿ ಪಾಂಚಾ । ಲಕರನೋ ಡಿಸಿ ಮತ್ಸ್ಯಕೈಕೆಯಬಲವ ಬರಿಕೈದು ॥ ಸಕಲಸಂದಣಿಸಹಿತ ಚೈದ್ಯ।ಪ್ರಕರವನು ನೆರೆ ಕೊಂದು ಭೂ ಪಾ । ಲಕನ ಬೆಂಬತ್ತಿದನು ಭೀಮಘಟೋತ್ಕಚರಗೆಲಿದ ॥ ೧೩೧ ॥ ವಿರಥನಾದನು ಧರ್ಮಸುತ ಸಂ । ಗರಕೆ ಮೊಗದಿರುಹಿದನು ದ್ರುಪದನು ।ಮರಳಿದನು ಸಹದೇವನೋಡಿದ ನಕುಲ ಓಂಮೆಟ್ಟಿ ॥ ತಿ ರುಗಿದನು ಹೈಡಿಂಬಿ ಭೀಮನು । ಸರಿದು ಹೋದನು ವೀರರಂತಿನಿ । ಬರನು ಪರಿಭವಮಾಡಿ ಮಿಗೆ ಕ ಳಶಜನು ಕಾದಿದನು ॥ ೧೩೨ ॥ ದಾನವರು ಬಲುಗೈಗಳಪ್ರತಿ। ಮಾನವರ ಪಾಡೇನು ಸಮರದೊ। ಳಾ ನಲಪಜಯವಸುರರಿಗೆ ಸಂಗ್ರಾಮದಭ್ಯುದಯ ॥ ಏನಹೇಳುವೆ ನಿಲ್ಲಿ ಸುಭಟನಿ।ಧಾನಸವೆದುದು ಪಾಂ ಡವರೊಳವ । ಧಾನಗುಂದದು ರಾಯಗದುಗಿನ ವೀರನಾರಯಣ ॥ ... ॥ ೧೩೩ ॥

ಅಂತು ಸಂಧಿ ೧೦ಕ್ಕೆ ಪದ ೭೪೮ಕ್ಕಂ ಮಂಗಳ.

*

ಹನ್ನೊಂದನೆಯ ಸಂಧಿ.

॥ಸೂಚನೆ॥ ವಿಜಯವಿಗ್ರಹಧೀರನಾಥ । ರ್ಮಜನನೇಮದಲಂದು ವೈರಿ । ವ್ರಜವ ತೊತ್ತಳದುಳಿದು ಸಾತ್ಯಕಿ ಕಂಡನರ್ಜುನನ ॥

॥ಪದ॥ ಬವರದೊಳು ಹರಿಪಾಂಚಜನ್ಯದ । ರವ ಭಯಂಕರವಾಯ್ತು ಬಹಳಾ । ಹವದೊಳಗೆ ಪಾರ್ಥಂಗೆ ಬಿದ್ದುದು ಬಹಳಭಾರಾಂಕ ॥ ಅವನಿ ಬಿರಿದುದು ಧರ್ಮಪುತ್ರನ । ಕಿವಿಗೆ ಗೋಚರವಾಯ್ತು ರಣರೌ । ರವದೊಳರ್ಜುನದೇವನಳಿಯದೆ ಮಾಣನಕಟೆಂದ ॥೧॥ ತಂದೆ ಸಾತ್ಯಕಿ ಹೋಗು ಫಲುಗುಣ । ನೊಂದನೋ ಬಳಲಿದನೊ ಸುರಕುಲ । ವೃಂದವನು ಸೇರಿದನೊ ಮೋಹೆಂಬೀನಿಧಾನವನು॥ ತಂದು ನೀನೆನಗರುಹು ಪಾರ್ಥನ । ಹಿಂದೆ ಬದುಕಿಲ್ಲವನಿಯೊಳು ತನ । ಗೆಂದು ಮುಗುಡವ ಹಿಡಿದು ಸಾತ್ಯಕಿಗರಸ ನೇಮಿಸಿದ ॥೨॥ ಪೊಲನ ಬಲೆಯೊಳು ವನದಮದಕರಿ।ಸಿಲುಕಲರಿವುದೆ ಶಿವಶಿವಾ ನರ। ನಳವನರಿಯದೆ ಕೃಷ್ಣಸಾರೆಂದರಸ ಮರೆದೆಯಲಾ ॥ ಕೊಳುಗುಳವನಾರೈದು ಬಾರೆನೆ । ನಿಲುವುದನುಚಿತವರ್ಜುನನ ನೆಲೆ। ಗೊಳಿಸಿ ಬಹೆನೆಂದಾಯುಧವ ಕೊಂಡಡರಿದನು ರಥವ ॥೩॥ ವಾರುವನ ಬೋಳೈಸಿ ರಥದಲು । ದಾರಸಾತ್ಯಕಿಭೀಮಸೇನಗೆ । ಧಾರುಣೀಶನ ಕಾಪುಕೊಟ್ಟನು ಭೂರಿಭಟಗಣದ ॥ ಭಾರಣೆಯೊಳ್ಪೊತರುತ ನಿಜಪರಿ ।ವಾರವನು ಕೈವೀಸಿ ನಿಸ್ಸಾ। ಳಾರವದ ಧಟ್ಟಣೆಯೊಳಿದಿರಾದನು ರಿಪುವ್ರಜಕೆ ॥೪॥ ತಳೆತಬೆಳುಗೊಡೆಗಳಲಿ ದೆಸೆ ಕ । ತ್ತಲಿಸೆ ಕರಿರಥತುರಗಭಟರು । ಚ್ಚಳಿಸೆ ದೂಳಿಯ ದಂಡು ನಡೆದುದು ಭಾನು ಮಂಡಲಕೆ ॥ ಮೊಳಗಿದವು ಬರಸಿಡಿಲ ಕೇಣಿಯ । ಕಳಚಿದಂತಿರೆ ಕಡುಗಚಯವರಿ । ಬಲಕೆ ನಡೆದನು ಧೀರಸಾತ್ಯಕಿ ಸಕಲದಳಸಹಿತ ॥೫॥ ಬರಬರಲು ಮುಂದುಭಯರಾಯರ । ಗರುಡಿಯಧಿಪತಿ ಕಂಡನೆಲೆಸಂ। ಗರದ ಸಾಹಸಮಗ್ನಸಾತ್ಯಕಿ ಗಮನವಾವೆಡೆಗೆ॥ ಧುರದಬಡವರ ನಮ್ಮವಂಚಿಸಿ । ಮರಳು ಮೇಣ್ಬಲುಸರಳ ಮೊನೆಯಲಿ । ಪರಿಹರಿಸಿ ಹೋಗೆನುತ ಗುರು ಚಾಚಿದನು ನಿಜರಥವ॥ ನಿಂದು ಕಾದುವಮನವೊ ಮೇಣುಪು । ರಂದರಾತ್ಮಜನಂತೆ ಭಯದಲಿ । ವಂದಿಸಿಯೆ ಬೀಳ್ಕೊಂಬಮನವೋ ಹೇಳು ನಿಶ್ಚಯವ ॥ ಎಂದೊಡಾಲಿಸಿ ನಗುತ ಸಾತ್ಯಕಿ । ಎಂದನವಧರಿಸ್ಯೆ ಗುರೋರಪಿ। ಯಿಂದು ನೀಗುರುವೆನುತ ತಲೆವಾಗಿದನು ವಿನಯದಲಿ ॥೭॥ ಇತ್ತಲೀತನ ಕೂಡೆ ಕಾದುವೊ । ಡತ್ತಲರ್ಜುನನಿರವ ಕಾಣೆನು । ಚಿತ್ತದೊಳು ಖತಿಗೊಂಬನವನೀಪಾಲನೆಂದೆನುತ ॥ ಮತ್ತೆ ಸಾತ್ಯಕಿ ಬಿಲ್ಲನಿಳುಹಿದ । ನುತ್ತಮಾಂಗಕೆ ಕರಯುಗವ ಚಾ । ಚುತ್ತ ವಿನಯಾನಮಿತನಾದನು ನಮಿಸಿ ಗುರುವಿಂಗೆ ॥೮॥ ಕಳುಹಿದನು ಯಮಸೂನು ಪಾರ್ಥನ । ಬಳಿಗೆ ನೀ ಕೃಪೆಮಾಡಿ ತನ್ನನು । ಕಳುಹಬೇಹುದು ನಿಮ್ಮೊಳಿದಿರೇ ರಣಕೆ ತಾನೆನುತ ॥ ಸೆಳೆದಬಾಣವನಿಳುಹಿದನು ಗುರು । ತೊಲಗಿ ಕೊಟ್ಟನು ಪಥವನಹಿತಾ । ವಳಿಯ ಸಾತ್ಯಕಿ ಮೊಳಗಿದನು ಕಳಶಜನ ನೇಮದಲಿ ॥೯॥ ಪಾರಸಿಕನೇಪಾಳಸಿಂಹಳ । ವೀರಬಾಹ್ಲಿಕಯವನಕೌಸಲ । ಪಾರಿಯಾತ್ರರು ತುರುಕಬರ್ಬರವಂಗಮಾಗಧರು ॥ ಕೌರವೇಂದ್ರನ ಮನ್ನಣೆಯ ಪರಿ । ವಾರವೀತನ ಕೆಣಕಿದರು ಸರಳೋರಣವ ಸೈಗರೆದನದ್ಭುತವಾಯ್ತು ಸಂಗ್ರಾಮ ॥೧೦॥ ’ವ ಭೋಟಕರಾಳಕೇಶಿಸು । ಜೀನಖುರಸಾರಂಗದೇಶದ।ಮಾನನಿಧಿಗಳು ಕವಿದು ಮುತ್ತಿತು ಕೈಯ

ಕೋಲ್ಗಳಲಿ ॥ ಏನನೆಂಬೆನು ಸಮರದನುಸಂ । ಧಾನವನು ನೋಡುವೆನೆನುತ ಸು । ಜ್ಞಾನನಿಧಿ ಸಾತ್ಯಕಿಯು ಸವರುತ ಹೊಕ್ಕನಾಹವವ॥೧೧॥ಅಸಮಸಮರದೊಳಖಿಳಭೂಭುಜ। ರಸುವ ಬಿಡಿಸಿದ ತೇರುಕಲಿಗಳ । ಕುಸುರಿದರಿದನು ಹಯವ ಕೊಂದನು ಸರಳ ಸಾರದಲಿ॥ ನುಸುಳಲನಿಲಂಗರಿದೆನಲು ಪಸ । ರಿಸಿದನಹಿತರ ತಲೆಯನಭ್ರಕೆ । ಯುಸಮಬಲ ಕಾದಿದನು ಕಟ್ಟಾಳುಗಳು ದೆಸೆಗೆಡಲು ॥ ಕಡಿವನನಿಬರ ಕೈಯ ಕೋಲ್ಗಳ । ನಡಗುದುಳಿದನು ಮೇಲೆ ಭೂಪರ । ಗಡಣವನು ಗಾಢಿಸಿದನೆಂಬಿನ ಸರಿಯನುರವಣಿಸಿ ॥ ಕಡುಗಿ ಸಾತ್ಯಕಿಯೊಡನೆ ಬವರವ । ಹಿಡಿದು ಸಮರಥರೈದೆ ಹೊಕ್ಕುದು । ಬಿಡದೆ ಸಾತ್ಯಕಿ ಕೊಂದನೆಗಣಿತವೈರಿವ್ಯೂಹರವ ॥ ೧೩ ॥ ಹರಿದುದರುಣಜಲೌಘವಭ್ರಕೆ । ತಿರದ ಸಂದಣಿಯಾಯ್ತು ಸಾತ್ಯಕಿ । ನರವೃಕೋದರರಿಂದವಗ್ಗಳನೆನುತ ಬಲಬೆದರೆ ॥ ಉರವಣಿಸಿ ಜಲಸಂಧನೆಂಬವ । ಬಿರುದನಿಭಸೇನೆಯನು ನೂಕಿದ । ಸರಳಮಳೆಗಳ ಕರೆದು ತಡೆದನು ಸಾತ್ಯಕಿಯ ರಥವ ॥ ೧೪ ॥ ಎಡಬಲಕೆ ತೂಳುವಮದೇಭವ । ಕಡಿದು ಹರಸಿದನೌಕಿ ಚೂರಿಸಿ। ಗಡಣಿಸುವರಥಿಕರಿಗೆ ಮಾಡಿದಸಮರಪದವಿಗಳ॥ ಕಡಿದು ಬಿಸುಟನು ಕೇಣವಿಲ್ಲದೆ। ಕಡುಗಲಿಗಳನು ವೈರಿಸೇನೆಯ । ಲಡಗುದರಿದ [illegible] ಕೆಡಹಿದನು ಜಲಸಂಧಭೂಪತಿಯ ॥೧೫ ॥ ಒಂದುಕಡೆಯಲಿ ಪಾರ್ಥಸವರಿದ । ನೊಂದ [illegible] ಸಾತ್ಯಕಿಯ ಸರ। ಳಿಂದ ಸವೆದುದು ಸೇನೆಯೆನೆ ಕೃತವರ್ಮನಿದಿರಾದ ॥ ನಿಂದನೆಲವೋ [illegible] ಳು ಮಿಾರಿದೊ । ಡಿಂದುಧರನಡ ಹಾಯ್ದಡೆಯು ತಾ । ಕೊಂದೊಡಲ್ಲದೆ ಬಿಡೆನೆನುತ ಮಾ [illegible] ತ್ಯೈತಂದ ॥೧೬॥ ನರನ ವ್ಯೆಗಂಡೀತನಲಿ ಸಂ । ಗರವನಾದರಿಸುವೆನೆನುತ ಮಿಗೆ। ಭರದಿಕೃತ [illegible] ಕನ ರಥವನು ಧನುವ ಸಾರಥಿಯ ॥ ಸರಳುಮೂರರೊಳೆಚ್ಚು ರಿಪುವನು । ಧುರದಿ ಹಿಂಗಿಸಿ [illegible] ಸಮಯವೋ । ಹರದೊಳಗೆ ಮೊಳಗಿದನು ಸಾತ್ಯಕಿಯತಿರಥಾವಳಿಯ ॥ ೧೭ ॥ ಹೊಗಿಸದಿರಿ [illegible] ಸಾತ್ಯಕಿಯ ಹಿಂದಕೆ । ತೆಗಸಿ ಫಲುಗುಣನೆಂಬವಗೆ ತೆ । ತ್ತಿಗನಿವನು ಹೊಯ್ವೊಯ್ಯೆನುತ ಹೊ [illegible] ವಂಟರತಿರಥರು ॥ ಬಿಗಿದಬಿಲುಗಳು ತುದಿವೆರಳಬೊ । ಬ್ಬೆಗಳ ಕಿವಿಯಂಬುಗಳಿಗುಗಿದಾ। ಳುಗ [illegible] ದೇವನ ತರುಬಿಗರು ಕೌರವಸಹೋದರರು ॥ ೧೮ ॥ ಅವರಿಗೆಡಬಲವಂಕದಲಿ ಸ್ಯಂ । ಧವನ ಮನ್ನೆಯರೌಂಕಿದರು ಕೌ । ರವನ ಬಳಿಯಲಿ ಸಂದಣಿಸಿದರು ಕರ್ಣನಂದನರು ॥ ಬವರವಸದಳವಾಯ್ತು ರಿಪುಭಟ । ನಿವಹಮಧ್ಯದೊಳಿತ್ತ ಸಿಲುಕಿದ । ನವಿರಾಳಾಸ್ತ್ರವನೆಚ್ಚು ಕಾಣನು ಹಗೆಗೆ ಹರಿವುಗಳ ॥ ೧೯ ॥ ಕವಿದವಾನೆಗಳಲ್ಲಿ ರಾವ್ತರು । ತಿವಿದರಂಬಿನ ಸರಿಯಸಾರದೊ । ಳವಗಡಿಸಿದರು ತೇರ ಸಂಗಡಿಸಿದರು ಸಬಳಿಗರು॥ ಸವಗ ಖಂಡಿಸಲೊದಗಿದರು ಬಿ । ಲ್ಲವರು ಬಿಟ್ಟರೆಗಾರರಾತನ । ಜವಗೆಡಿಸಿದರು ನಾಲ್ಕುದೆಸೆಯಲಿ ಮುಸುಕಿತರಿಸೇನೆ ॥ ೨೦ ॥ ಎಲೆಲೆ ಸಂದಣಿಸಿದುದು ಕೌರವ । ಬಲಪಯೋನಿಧಿ ಘೂತು ಮಝಯೆಂ । ದುಲಿದು ಸಾತ್ಯಕಿ ಕವಿದಚಾತುರ್ಬಲವನೊಡೆಹೊಯ್ದು ॥ ಕಲಕಿ ರಥಗಳನೊಡೆದು ಮಿಗೆ ಮಾರ್ವಲೆತವರ ವ್ಯೆಗಳಲಿ ಬಾಣವ। ಸಿಲುಕಿಸಿದ ಹಯುಗಳಿಗೆ ಅಸುವೀಡಾಡಿತರಿಸೇನೆ॥ ಅಡಗುದರಿದನು ಬಲದಲೆಡದಲಿ । ಗಡಣಿಸುವಸುಭಟರನು ಗಗನಕೆ। ಹೊಡಸಿದನು ಪ್ರಾಣಿಗಳ ಹೊಳಕಿದ ನೃಪರ ತಲೆಚಂಡ ॥ ಮಿಡುಕಿದೊಡೆ ಮೋಹಿದನು ರಕುತದ । ಕಡಲ ಹರಹಿದನಹಿತಸೇನೆಯ । ಕೆಡಹಿ ಯಿಟ್ಟಣಿಸಿದನು ಸಾತ್ಯಕಿಯುಸಮರದಲಿ ॥ ೨೨ ॥ ಅರಿಬಲವ ಸಂಹರಿಸಿ ಸಾತ್ಯಕಿ । ಮುರಿದನಿತ್ತಲು ಹಂಸಮಯವೋ । ಹರದೊಳಗೆ ಭಯಗೊಳಿಸಿದ

ನು ರಿಪುರಾಜವರ್ಗದಲಿ ॥ ದುರುಳಚೈದ್ಯರಲತ್ತ ಮತ್ಸ್ಯರ। ಗುರು ವಿಭಾಡಿಸಿ ಹೊಕ್ಕ ಪಾಂಚಾ।
ರಲಿ ನಿಸ್ವಾಪಿಸಿದಬಲಪಸು ಸೂರೆಗೊಳುತಿರ್ದ ॥ ೨೩ ॥ ಇತ್ತಸಾತ್ಯಕಿಗಾಯ್ತು ಕಾಳಗ । ದೊತ್ತ
ಮೋಹರಮಸ್ವರಂಗದೊ । ಳತ್ತಲರ್ಜನಸಾಹಸವನೇನೆಂಬೆನದ್ಭುತವ ॥ ಮತ್ತೆ ಕೃಷ್ಣನ ಶಂಖನಿ
ದವ । ನತ್ತಸಮನಿಪಾಲಕೇಳಿವ। ಚಿತ್ತಕದಡಿದುದಡಿಗಡಿಗೆ ಮನನೊಂದು ಬಿಸುಸುಯ್ದು॥ ॥ ೨೪

ಅಂತು ಸಂಧಿ ೧೧ಕ್ಕೆ ಪದ ೭೭೦ಕ್ಕಂ ಮಂಗಳಂ.

ಹನ್ನೆರಡನೆಯ ಸಂಧಿ.

॥ ಸೂಚನೆ ॥ ರಾಯಸೇನಾಸೂರೆಗಾರನ । ಜೀಯಮಾರುತಸುತನು ಕೌರವ। ರಾಯನನುಜರ ಸೀ
ದನು ಕಳಶಜನ ಪರಿಭವಿಸಿ ॥

ಪದ ॥ ದ್ಯ ಗವು ನೀರೇರಿದವು ಸೆರೆ । ಬಿಗಿದು ಹಲುಬಿದನಕಟ ಕಡುದೇ । ಸಿಗನು ತಾ
ನ್ನೊಡನೆ ಫಲುಗ್ಗು ದಸ್ಥೊ ॥ ಹಗೆಯ ಹರಹಿಂಗೊಪ್ಪುಗೊಟ್ಟನು । ಮಗನಳಲು ಮಿ
ಹೂಣೆಹೊಕ್ಕನು । ಮಗಳಲ ಶ್ರಮ್ಮನೆನುತವನೀಶ ಚಿಂತಿಸಿದ ॥ ೧ ॥ ಕಳುಹಲತ್ತಲೆ ಹೋ
ದ ಸಾತ್ಯಕಿ । ತಿಳಿವು ಮರಳಿದುದಿಲ್ಲ ಗೊ । ನಳಿದನೋ ಮೇಣುಳಿದನೋ ಶರಹತಿಗೆ ಬಳಲಿ
ನೋ ॥ ತಿಳಿದು ಹೇಳುವರಾರು ಪಟುಭ ೊಳಗೆ ಮಕುಟದ ಮಹಿಮರೆನುತಳ । ವಳಿದು ಭೀವ
ನ ವದನವನು ನೋಡಿದನು ಭೂಪಾಲ ॥ ೨ ॥ ಎಲೆವೃಕೋದರ ವೈರಿಮೋಹರ । ದೊಳಗೆ ಸಿಲುಕಿ
ನೋ ಕಿರೀಟಿಗೆ । ನೆಲನ ರಿಣಸಂಬಂಧ ಸವೆದು ಮೇಣು ಸಮರದಲಿ ॥ ತಿಳಿಯಲಟ್ಟಿದಸಾತ್ಯ
ಗೆ ಕೊಳುಗುಳದ ಭಾರಣೆಯಾಯ್ತು ಫಲುಗುಣ ನಳಬಳವನರಿದಲ್ಲನೆನ್ನಸು ಸೈರಿಸದು ತನುವ ॥೩
ಮುರರಿಪುರೋಥಿಯ ಪಾಂಚಜನ್ಯದ । ಪರಮರವ ಪಾರ್ಥನ ಪತಾಕೆಯ । ವರಕಪೀಂದ್ರನ ರಭಸವ
ತುಂಬಿತು ಜಗತ್ರಯವ॥ ನರನ ಧನುವಿನ ದನಿಯ ಕೇಳೆನು । ಕರಗಿತಂತಃಕರಣವರ್ಜನ । ನಿರವಕಾ
ಸಿ ಬಾರೆನಲು ಕೈಕೊಂಡನಾಭೀಮ ॥ ೪ ॥ ವಿದಿತವರ್ಜನನಿರವು ನಮಗ । ಭ್ಯುದಯವಾತನ ಮರ
ರಣವ । ಭ್ಯುದಯವೇನಾಯ್ತೆಂಬುದನು ನೀನರುಹು ಯೆನಗೆನಲು ॥ ಮದವದರಿ ಭಟಭಟರವಂಗಾ
ಕದನದುತ್ಸಹವಾಯ್ತು ಭೂಪನ। ಪದಕೆರಗಿ ಕೈಕೊಂಡನಣ್ಣನ ನಿರುಪಮಾಜ್ಞೆಯಲಿ॥ ೫ ॥ ಅರೆನೆ
ಯ ಸುಯಾನದ ಪಾಂಚಾ । ಲರಿಗೆ ನೇಮಿಸುತನಿಲತನಯನ । ಬೆರಳ ಸನ್ನಗೆ ತೀವಿದಂಬಿನ ತೇರ ಚ
ಚಿದನು ॥ ಕರೆದು ತನ್ನವಿಶೋಕಗಖಿಳಾ । ಭರಣವನು ಕೊಟ್ಟನು ವರೂಥದ । ಹರಿಗೆ ಪೊಡವಂ
ರಿದನು ವರರತ್ನಸಮಯರಥವ ॥ ೬ ॥ ದೇವಕೌರವರಾಯಕಾನನ । ದಾವಶಿಖಿ ನಿಶ್ಯಂಕಘನಸಮರ
ವಜಿತಚಾಪಟ ವಿರೋಧಿಮನೋಜಲಯರುದ್ರ ॥ ದೇವಕುಲಸಂಭಾವಿಭೂಭುಜ । ರಾವು ಜಗಜಟ್ಟ
ಳು ಸುಸ್ಥಿರ । ಜೀವಿ ಜಯಎಂದೊರಲುತಿರ್ದುದು ಭಟ್ಟಸಂದೋಹ ॥ ೭ ॥ ವೀರನೋ ಕೌರವವ
ಸೀಶಕ । ಠಾರನೋ ಕುರುವಂಶದಡವಿಯ । ದಾರಣನೊ ಕೌರವದಿಶಾಪಟನಹಿತಗಜರಹಿಯೋ

ಕೌರವಾಂಬುಧಿವಡಬನೋ ಕುರು।ಧಾರುಣೀಶಕೃತಾಂತನೋ ಕೈ। ವಾರವೇ ನೆರೆ ಕಾಣಲಾದುದು ರಿಪು ಭಟಸ್ತೋಮ ॥೮॥ ಸೂಳ್ವಿಗಲ್ಲೈರಿವವುರುನಿ । ಸ್ಸಾಳತತಿ ಬಿರುದನಿಗಳೊಳು ಕೈ । ಮೇಳವಿಸಿದವು ತಂಬಟಧ್ವನಿಜಡಿವಕಹಳೆಗಳ ॥ ಕೀಳ ಬಗೆಯದೆ ತೆರಳಿಹೊಯ್ದವು । ಕಾಲಲಿಳೆಯನು ಕುದುರೆ ಮೋರೆಯ । ತೋಳಿನಲಿ ಮೋಹಿದವು ಮಹಿಯನು ಸೊಕ್ಕಿದಾನೆಗಳು ॥ ೯ ॥ ಒದಗಿತೆಡಬಲವಂಕ ವೈಯಾ । ರದಲಿ ರಾವ್ತರು ಮುಂದೆ ತಲೆದೋ । ರಿದರು ಮುಂಗುಡಿಯವರು ಚೂಣಿಯಹೊಂತಕಾರಿಗಳು ॥ ಅಟರ್ವಕಡುಗದ ಕಾಂತಿ ಸೂರ್ಯನ । ಹೊದಿಸಿದುದು ಹೊದರೆದ್ದ ಕುಂತದ । ತುದಿಗಳಿತ್ತವು ರಾಹುಭಯವನು ರವಿಯಮಂಡಲಕೆ ॥ ೧೦ ॥ ಕೆಲಕೆ ಹೊಳೆದವು ಕಡುಗುದುರೆ ನೆಲ । ನಳುಕೆ ನಡೆದುದು ದಂತಿ ದೆಸೆಗಳ । ಹೊಲಿಗೆ ಹರಿಯದೆ ಮೂಣದನೆ ಹೊಕ್ಕವು ರಥಾನೀಕ ॥ ತಳಪಟವ ತುಂಬಿದವು ತೇರುಗ । ಳಿಳೆ ಜರಿಯೆ ಕಾಲಾಳುಗಳ ಕಳ । ಕಳಿಕೆ ಮಿಗೆ ಕೈಗೊಂಡುದನಿಲಕುಮಾರಕನ ಸೇನೆ ॥೧೧॥ ಮುಸುಕಿದನು ರವಿ ಧೂಳಿಯಲಿ ಮೋ । ಹಿಸಿದಮುಸಲಮುಸುಂಡಿಕುಂತ । ಪ್ರಸರಕಾಂತಿಯಲುಳುಹಿದವು ಖದ್ಯೋತವೀಧಿಯಲಿ ॥ ಬಿಸಜಸಖನಡಗಿದೊಡೆ ನಭದಲಿ । ಮಸಗಿದವು ತಾರಕೆಗಳೆನೆ ಶೋ । ಭಿಸಿದುದವನೀಪಾಲಮೌಳಿಸುರತ್ನರಾಜಿಗಳು॥೧೨॥ಎಲೆಲೆ ರಿಪುಸಪ ... ಯಲಿಕೊಳು।ಗುಳವನರ್ಚಿಸಲರಿದೆನಲು ಕಳ । ವಳಿಸಿ ತೆತ್ತುದು ಮನವನವನೀಪಾಲಸಂದೊ ... ಸುಲಭರಿದಕಂಜದಿಂ ಮಿಗೆ ನಿಜ । ಗಳದ ಹಸುಗೆಯ ಹಾರದಿರಿಯತಿ। ಬಲರು ಮಿಗೆ ... ಹೊಕ್ಕುದು ಕಳಶಜನ ಹೊರೆಗೆ ॥೧೩॥ ಬಗಿ ವಿರೋಧಿಯ ಕರುಳನುಗಿ ಕು । ನ್ನಿಗೇ ... ಟಂ । ನಿಗಳ ಹೊಯ್‌ಹೊಯ್‌ರಣಕೆ ಹೆದರುವ ಕೌರವಾನುಜರ ॥ ಹಗೆಯ ... ನೆ ಭೇತಾಳಭೂತಾ । ದಿಗಳನೆನುತ ಸುಧೈರ್ಯ ನಡೆದನು ಗರುಡಿಯಾಚಾ ... ನ । ಮಾನಸುತ ಘಡ ಮರುಳು ನಿನ್ನನು।ಮಾನವಾವುದು ಗ ... ಳ್ಳದುರು ...

ಬುವ । ದಾನವಾಮರರೊಳಗೆ ನಿನ್ನಳ।

ಎಲೆಮರುಳೆ ಗುರುವೆಮಗೆ ನೀವ್ ಹೆ

ನೀವ್ಸಂಗ್ರಾಮಸೌರಂಭ ॥ ಕಲಿಗಳ

ಫಲುಗುಣನ ತಹೆನಣ್ಣದೇವನ ನೇ

ಯಲಿ ಗಮಿಸುವೊಡೆ ಸಾತ್ಯಕಿ । ?

ಡೊಪ್ಪುವದಲ್ಲದೀಬಿರಿ।ಸಾದೊಡಹ

ನನಿಲಜನ ॥ ೧೭ ॥ ತರಳರರ್ಜ

ದಿಸುವವಂದನೆಯುಂಟೆ ಸಮರದಲಿ

ತ್ತದ । ಹುರುಳ ಬಲ್ಲೆನು ಪಥವ ಒ

ಗ । ಳೊಡನೆ ಸರಿಗಂಡೆಮ್ಮ ಬಗೆ

ತೆರುವೆನು ವಿನಯಿಗಳಿಗವ । ಗಡಿ

ತೆಚ್ಚನನಿಲಜನ ॥ ೧೮ ॥ ಈತನೆ

ಎನುತಿದಿರ ಸೂಚಿಸಿ ತುಡುಕಿದನು ಗದೆಯ ॥ ಆತನಸ್ತ್ರಕೆ ದಂಡೆಯೊಡ್ಡಿ ವು । ಹಾತಿಬಲ ಕವಿದನು ವಿರೋಧಿಯ।ಸೂತನನು ಕೆಡೆಹೊಯ್ದು ಕೊಂದನು ರಥದಕುದುರೆಗಳ॥೨೦॥ಇದು ನಿಮಗೆ ವಂದನೆಯೆ ನುತ ನಿಜ । ಗದೆಯಲಾತನ ರಥವ ಹುಡಿಗು। ಟ್ಟಿದನು ಸುರಗಿಯನುಗಿದೊಡಪ್ಪಳಿಸಿದನು ವೋಹರವ ॥ ಇದಿರೊಳಿರಲಳವಡದೆ ಗುರು ಹಿಂ । ಗಿದನು ಶಕಟವ್ಯೂಹವನು ಮ । ಧ್ಯದಲಿ ಥಟ್ಟುಗಿದುರವಣಿಸಿ ಪವಮಾನಸುತ ನಡೆದ ॥ ೨೧ ॥ ಹರಿಯ ಕುಲಿಶದ ಧಾಳಿಯಲಿ ಕುಲ । ಗಿರಿಗಳಿಬ್ಬಗಿಯಾದವೊಲು ವುಂ। ದರದ ಧಾರಾಧಾರಿಯಲಿ ಬಾಯ್ಬಿಡುವಕಡಲಂತೆ ॥ ಅರಿವರೂಥಿನಿ ಕೆದರಿ ತುಳಿದವು । ತುರಗಕರಿರಥಪಾಯದಳಬಲ । ಹೊರಳಿಯೊಡೆದುದು ಹೊದರು ತಗ್ಗಿತು ಹೂಣೆಗರ ಮನದ ॥ ೨೨ ॥ ಹೊಸರಥವ ತಾನೇರಿ ನೆರೆ ಸಂ । ಧಿಸುವೆನಿನ್ನನಿಲಜನ ಕುಂತಿಯ । ಬಸುರ ಹೊಕ್ಕೊಡೆ ಬಿಡುವೆನೆನುತಾದ್ರೋಣ ಗಜಬಜಿಸಿ ॥ ಕುಸುರಿದರಿದನು ಮುಂದೆ ವೈರಿ । ಪ್ರಸರವನು ಸಂವರ್ತರುದ್ರನು । ಹೊಸಬನಿವನಾರೆನುತ ತಲ್ಲಣಿಸಿತ್ತು ನೃಪಸೇನೆ ॥ ೨೩ ॥ ಮೊದಲಲರ್ಜುನಸಾತ್ಯಕಿಯ ಕದ । ನದಲಿ ಬೆಂಡಾಯಿತ್ತು ನಾಯಕ । ರದಟು ನೆಲ್ಲಲ್ಲೆ ತಪ್ಪಭೀಮನನಾರು ಹಳಚುವರು ॥ ಇದು ಮಹಾದ್ಭುತಪದ್ಮವ್ಯೂಹದೊ । ಳಧಿಕವಾದುದು ಛ ... ಮಿಗೆ ಕಂ । ಡುದು ಸುಯೋಧನನುಜಸೈನಿಕವನಿಲನಂದನನ ॥ ೨೪ ॥ ಕಣೆಯ ಕರೆದರು ಬಿಲ್ಲ ... ೧೦ ' ಕಣೆಯುವರು ಡಾವರಿಸಿದರು ಮುಂ । ದಣಿಯುವರುಕೈವೀಸಿ ಕವಿದುದು ಹರಿಗೆಹಲಗೆ ... ಕೊಕ್ಕುದು ಕುದುರೆ ಮದವಾ। ರಣದಘಟೆ ತೂಳಿದವು ರಥಸಂ । ದಣಿಸೆ ಕಾಲಾ ... ತ್ತನಿಲಜನ ॥ ೨೫ ॥ ಎಚ್ಚನುಚ್ಚಳಿಸುವತುರಂಗವ । ನೊಚ್ಚತವ ಕ ... ಕಡಿದನು ಖಂಡಿಸಿದನುರವಣಿಪಕಾಲಾಳ ॥ ಕೆಚ್ಚುಗಿಡಿಕೆದರುವ ... ಸುಗಳ । ಗೆಚ್ಚರಿಯ ತನು ಸೂರೆಬಿಟ್ಟನು ಭೀಮ ... ಗರ । ವೆನಗೆ ತನಗೆಂದಖಿಳಸೇನಾ । ವನ ... ಲಗಿನೆಂಬುಗಳು ಬಿರುದರ। ತನುವ ಹೊ ... ಮಹಾರಥರು ॥ ೨೬ ॥ ಸಿಡಿದಕಣ್ಣಾ ... ಳ ರಾಜಿಗಳ ರಚನೆಯ ರಾಜಹಂಸೆ ... । ನಡುವೆ ನಲಿನಲಿದಾಡುತಿರ್ದು ... ಪ್ರಕರದಲಿ ಛಟಛಟಿಸಿ ತುರಗ । ... ಭೂಜರಾಜಾ । ಧಿಕರೊಳಗೆ ಘು ... ಣ್ಣು ॥ ೨೭ ॥ ಕಲಕಿ ಚಕ್ರವ್ಯೂ ... ರಹರವಾಯ್ತು ಪದ್ಮದಲಿ ॥ ಬಳಿಕ ... ಳಗುಳವ ಕೈಕೊಂಡರಾಕರ್ಣಾದಿ ... ಲು ನಮ್ಮ ಸರಳದು। ಗೆಲವು ನಿನಗಿ ... ಯಲಿ । ಮೊಳಗಿದವು ನಿಸ್ಸಾಳ ... ಸಾಲಗೋವಳಿಗಟ್ಟುಗೆಯ ಕುಂ

ತಾಳಿಗಳ ತೂಗಾಟ ಮಿಗೆ ದು । ವ್ವಾಳಿಯಲಿ ದೆಕ್ಕಾಳದಲಿ ಗಜತುರಗಸೇನೆಯಲಿ ॥ ಮೇಲೆ ಹೇಳಿಕೆಯಾಗಿ ಕವಿವನ್ನ । ಪಾಲರೀಭೀಮಂಗೆ ಹರಣದ । ಸಾಲಿಗರು ಸಂದಣಿಸಿತಬುಜವ್ಯೂಹದಗ್ರದಲಿ ॥೩೨॥ ದುರುಳರುರವಣಿಸಿದರು ಜೌವನ । ದುರುಮದದ ಭರತಾನ್ವಯದ ದು । ರ್ಧರಮದದ ಘನಭುಜಮದದ ದಿವ್ಯಾಸ್ತ್ರದರಕೆಗಳ ॥ ಉರುಮದದ ಕರ್ಕಶವಿಲಾಸದ । ಧುರರಚಿತಪರಿಹಾಸರೆಭಿಜನ । ಕುರುವಿನಾಶರ ಶತಕವನು ಧೃತರಾಷ್ಟ್ರಕೇಳೆಂದ ॥ ೩೩ ॥ ಎಳೆಯಬಾಳೆಯ ಸುಳಿಗೆ ಸೀಗೆಯ । ಮೆಳೆಯೊಳಗೆ ಸರಸವೆ ಕುಮಾರರ । ಬಲುಹ ನೋಡು ವಿಶೋಕ ತೊಡಕಿದರೆಮ್ಮೊಡನೆ ರಣವ ॥ ಕಲಹದಲಿ ವೈದೋರಿದಿವದಿರ । ತಲೆಗಳಿವು ವಾರಕವಲೇ ! ಅರೆ । ಗಳಿಗೆಯಲಿ ತಾ ಕೊಂಬೆನೆಂದನು ನಗುತ ಕಲಿಭೀಮ ॥ ೩೪ ॥ ಬಿಲುದೆಗೆದು ಆಕರ್ಣಪೂರದಿ । ಹಿಳುಕಿನನಿಲಜನಿರಲು ಸಿಂಹದ । ಹೊಲನ ಹೊಗುವವೊಲಾಗ ಹೊಕ್ಕದು ಕೌರವಾನೀಕ ॥ ತೊಲಗದಿರಿ ತಮ್ಮದಿರು ಕೌರವ । ಕುಲಲಲಾಮರು ಜಗದೊಳತಿವೆ । ಗ…ಳೆಯಸುಭಟರು ನೀವೆನುತ ತೆಗೆದೆಚ್ಚನಾಭೀಮ ॥ ೩೫ ॥ ಸರಳ ಸೊಂಪಿನ ಸೋಹಿನಲಿ ನೆರಿ । ಗರುಳ ದಾವಣಿತಲೆಗಳಲಿ ಸಂ । ಗರದ ಸುಭಟವ…ದ ಮದ್ಯದ ಗೂಡುವಲೆಗಳಲಿ ॥ ಉರುಗದೆಯ ದಡಿವಲೆಯಲಸಿಮು । ದ್ಗರದ ಸಿಡಿವಲೆಗಳಲಿ … ದ । ಲರಿಮೃಗವ್ರಾತವನು ಭೀಮಕಿರಾತ ಕೈಕೊಂಡ ॥೩೬॥ ಕೊಂದನನುವಿಂದನನು ಚಿತ್ರ … ನ ಚಿತ್ರಾಂಗವನ ನೃಪ। ನಂದನನ ದುಶ್ಯಂಕುಕರ್ಣನ ದೀರ್ಘಬಾಹುಕನ ॥ ನಂದಚಿ… । ನಂದನನು ಬರಿಕೈದು ಭಾಸ್ಕರ ನಂದನಾ ಶ್ವತ್ಥಾಮರನು ಮೊದಲಿಸಿ ತಾಗಿದ … ಕೇಣವಿಲ್ಲದೆ ।ತೊಡಕಿದಾಹವದೊಳಗೆ ಕೊಂದನ । ಕೊಡನಮಗನೇ ದೂರ … ನುಡಿದು ಫಲವೇನಿನ್ನು ಭೀಮನ। ಬಿಡದೆ ಸುಭಟರು ನೂಕಿಯೆಂಬೀ। … ಕಲಿದ್ರೋಣ॥ ೩೭॥

ಅಂತು ಸ

ಸೂಚನೆ ॥ ಗಂಡುಗಲಿ ಕೊ

ಗೆಲಿದು ರಣದ

ಪದ ॥ ಕೇಳು ಜನಮೇ

ನಿಜಮೋಹರವ ಹಿ

ಲ ಕೋಲಾಹಳವನಿ

ವರೂಥಚಯವಿ

ಹಣ । ಮೆ

ಉರವಣಿಪ ಕೆಡೆ

ಡದೆ

ದು ಸಮರಭೂಮಿಯಲಿ ॥ ವರರತುನಲೋಭದಲಿ ನೀರೊಳು । ಭರದಿ ಮುಳುಗಿ ಕೃತಾಂತನಗರದಿ । ಹ
ರಹರಿಕೆ ಮೊಗಸರವಮೌಕ್ತಿಕವಾದುದೆಂಬಂತೆ ॥ ೩ ॥ ಕಡಿದಖಂಡದ ಕುಸುರಿಗಳ ಚಿನ । ಕಡಿಯಹೀ
ರಾವಳಿಯ ಮುಕುಟವ । ನಡಕಿದನುಪಮರತುನರಾತಿಯ ಮುರಿದಕಂಕಣದ ॥ ಕಡುಕು ಪಸರಿಸೆ ಕೌರ
ವಾನುಜ । ರೆಡೆದೆಗೆದವರಕಾಂಚನಾದ್ರಿಯ । ಸಿಡಿಲಕಾಳಗದಂತೆ ಮೆರೆದಿರೆ ಕಂಡನಾದ್ರೋಣ ॥ ೪ ॥
ಉಡಿದಬೆಳುಗೊಡೆಯಬುಜಪಟ್ಟಿಯ । ಸಿಡಿದಚಮರಿಯಹಾವಸೆಯ ಕೆಸ । ರಿಡುವರಕುತಾಂಬುಗ
ಳ ನರವಿನ ಕಡಿದನಾಲಿಗೆಯ ॥ ಕಡುಮನದ ಕಾಡಾನೆ ಹೊಕ್ಕೊಡ । ನೊಡನೆ ಕದಡಿದಕೊಳನವೋಲ್ಭ
ಯ । ಪಡಿಸುತಿದೆ ಪವಮಾನಜನ ಪಥವೆನುತ ನಡೆತಂದ ॥ ೫ ॥ ಧುರದೊಳಗೆ ವಹಿಲದಲಿ ಗುರುವೈ ।
...ದುದು । ಹಂಸುತನ ಹಯನಾದ ತೇಜಿಯ ರಥದ ನಿಷ್ಠುರವ ॥ ತಿರುವಿನಬ್ಬರವಂ
...ಪ್ಪಂತಮಯಸಾ । ಗರದ ಮೋಹರವಯ್ತು ಭೀಮನ ಸಮರದಾಟೋ
... ಕಳಕಳ । ವತ್ತುಹರಿಸೈ ರಥವ ಬೇಗನ । ನುತ್ತು ಭೀಮನನೈದಿದನು
... ಭೀಮ ಬಣಗುಗ । ಳತ್ತಲೇಕೈ ಶೌರ್ಯವಿದು ನ । ಮ್ಮ
... ೭ ॥ ತಿರುಗಿನೋಡಿದನಸ್ತ್ರವಿದ್ಯಾ । ಗುರುವ ಕಂಡ
... ವಿನಯಪರನಾಗಿ ॥ ಗುರುವೆ ಬಿಜಯಂಗೈದಹ
...ನಿದ್ದೆನೆಂದನು ನಗುತ ಕಲಿಭೀಮ ॥ ೮ ॥
ಕೌರವ । ನನುಜರನು ಕಡೆಹೊಯ್ದು ಗರ್ವ
...ನಲಿ ಕವಿದೆಸುತಿರೆ ವೃಕೋದರ । ...ನಿತು
ಮಿಗೆ ನೀನೆಮಗೆ ವರಡಿಂ । ಗರಿಗಳಾವಿ
...ರಾಗಿಹರು ॥ ನರಯುಧಿಷ್ಠಿರನಕುಲ
ಹೊಸಪು ಬೇಡ ಮರಳೆಂದ ॥ ೧೦ ॥
ಗ । ಳಲಿ ಬಲವನಂಜಿಸಿವಕೊಟ್ಟಗ
ಗಳೊಡನೆಂದಿರ್ದನತಿವೆ । ಗ...ಳ
ಜ ತಪ್ಪಿದವರಾ । ವಲ್ಲ ಫಲುಗುಣ
...॥ ಬಿಲ್ಲಗುರುವಿನ ಬಿಂಕ ಬಯ
ದನು ಮುಂಗೈಯ್ಯ ಮರೆಗೊಂ
...ಸೊಕ್ಕರಿ । ವಿಜಯನಿ
...ನು ಮುಂಗೈಗೊಂ
...ಲುವುದನುಚಿತವೆಂ
...ಥಸೂತಗುರು
...ನೋ ರಿಪು
...ರಣಿಗೆ ಹಾ

ಯ್ದು ಬೀಳಲು । ನಗುತ ಕರಣವ ಹಾಯ್ಕಿ ಮುಂಡಿಯೊಳಿರ್ದನಾದ್ರೋಣ ॥ ಜಗದೊಳಾವಭ್ಯಾಸಿಯೋ ತಾ । ಳಿಗೆಯುದ್ಧಲ್ಲಣದೊಳಗೆ ನೆನಹಿನ । ಸುಗುಣಸಾಹಸಿಯೆಂದು ಮಿಗೆ ಕೊಂಡಾಡಿತಮರಗಣ ॥ ೧೫॥ ತೂಗಿ ಕೆಡೆದನು ತೇರು ಹುಡಿಹುಡಿ । ಯಾಗಿ ಹೋದುದು ದ್ರೋಣ ಮನದನು । ರಾಗ ಮಿಗೆ ಮತ್ತೊಂದು ಹೊಸರಥದೊಳಗೆ ವೆಂಟಣಿಸಿ ॥ ಹೋಗಬಿಡೆ ಸಾಸನಿಲಜನ ತಲೆ । ದೂಗಿಸುವೆನೆಂದೆನುತ ಕಟಕದ । ಬಾಗಿಲಲಿ ಗಿರಿಯಂತೆ ನಿಂದನು ಸಮರಕನುವಾಗಿ ॥ ೧೬ ॥ ನಿಜವರೂಥದೊಳಂದು ಕೌರವ । ವಿಜಯಮಾರುತಿ ಹೊಕ್ಕು ರಿಪುಭೂ । ಭುಜರನರೆಯಟ್ಟಿದನು ಬಹಳಿತಸಿಂಹನಾದದಲಿ ॥ ತ್ರಿಜಗ ತಲ್ಲಣಿಸಿದುದು ವರವಾ । ರಿಜಸುಲೋಚನ ಕೇಳಿದನು ಪವ । ನಜನ ಪಡಿಬಲ ಬಂದುದೆಂದರುಹಿದನು ಪಾರ್ಥಂಗೆ ॥ ೧೭॥ ಭಕತಮುಖದರ್ಪಣನು ಬಹಸಾ । ತ್ಯಕಿಯು ಕಂಡನು ಭೀಮಸೇನನ । ವಿಕಟಸಿಂಹಧ್ವನಿಯ ನಾಲಿಸಿ ಹಿಗ್ಗಿದನು ಪಾರ್ಥ ॥ ವಿಕಳತನವನು ಮರೆದು ಧರ್ಮಜ । ಸುಕರಪರಿತೋಷದೊಳಿರಲು ರಿಪು । ನಿಕರ ಮುರಿದುದು ಪವನಪುತ್ರನ ರಥದ ಖುರಪುಟಕೆ ॥ ೧೮ ॥ ಅರಿಭಟರು ಪವನಜನನರಸುತ । ಮರಳುತುಬ್ಬರಬವರವನು ತಂ । ದರೆನೆಲೆಗೆ ಹಾಯ್ಕಿದರು ಕರ್ಣಾದಿಗಳ ಮುಂಬಿನಲಿ ॥ ಜರಿದುದೀಬಲರಾ

ಹಾಯ್ದುದು ಭೂಮಿಪಾಲರು । ಬಿರುದ ಮುದ್ರಿಸಿದರು ಸಮೀರಕುಮಾರನು

ನು ಗರುವಾಯಿಯೇ ಭಯ । ಬೇಡ ಭೂಮಿಪರೆನ್ನತೇರಿನ । ಕೂಡೆ ಗ

ಗವ ॥ ನೋಡಿ ನಿಮಿಷಕೆ ಭೀಮನಡಗಿನ । ಲೂಡುವೆನು ರಣಭ

ನುರುಬಿದನು ಕಲಿಕರ್ಣ ॥ ೨

ಬಿಗಿದಹುಬ್ಬಿನ ಬಿಲ್ಲದೆಗ

ನಗು

ಯೋರೆಯ ಬಾಗಿದವಂ

ಬ್ಬನೆ । ಬಗೆಯುಬಲುಗ್ಗೆ

ಹಂ । ಕಾರವೇತಕೆ ನು

ಬಿನಲಿ ಪವನಕು ।

ನ ॥ ೨೨ ॥ ದೇವ

ಸಮರ್ಥರು ಕರ್ಣ

ವೆನುತ ಹದಿನೈದು

ನೂರಂಬಿನಲಿ ರವಿ

ಹತ್ತುತರದಲಿ ।

ಷ್ಟ ॥ ೨೪॥

ಮೊಗೆವೆನರುಣಾ

ದಾನೆಯನು ಹಿ

ಳವನಿಗೆ । ಕೆಡೆಯೆ ಕಾಲ

ದು ಬಿಸುಡದೆ ಕರುಣಿಸಿದೊಡಿ

ನುವ ಖಂಡಿಸಿದ ‖ ೨೭ ‖ ಕರದ ಬಿಲು ಕಳಚಿದೊಡೆ ಖಾತಿಯೊ । ಳಿರದೆ ಹೊಸಹೊಂದೇರ ತರಿಸ ಲು । ತಿರುಗಿದನು ವೋಹರಕೆ ದುಗುಡವ ತೆತ್ತು ನಿಜಮುಖವ ‖ ತೆರಹುಗೊಡದೆ ವಿಶೋಕಕರ್ಣನ । ಹರಿಬವೆಂದನು ನೂಕುನೂಕೆಂ । ದುರವಣಿಸಿದುದು ಮತ್ತೆ ಕೌರವನನುಜರವಗಡಿಸಿ ‖ ೨೭ ‖ ಎಲ ವೊ ಕರ್ಣನ ಗೆಲಿದಗರ್ವವ। ಕಲಕುವೆವು ಫಡ ನಿಲ್ಲೆನುತ ಕೈ । ಚಳಕಿಗಳು ಪೂರಾಯಚಾಪದ ಬೆರಳ ಕಿವಿಗಡೆಯ ‖ ಬಲುಗಿಡಿಯು ಸರಿವಳೆಯು ಸಹಸಿಗ । ಳುಲಿದು ಕವಿದೆಸುತ್ತೈದಿ ಬರೆ ಕಂ । ಡೆಲೆಮಿಡುಕ ನೀಭೀಮ ಮೂಗಿನ ಬೆರಳ ಬೆರಗಿನಲಿ ‖ ೨೮ ‖ ರಾಯನೊಡಹುಟ್ಟಿದರಲಾ ಫೂ । ರಾಯುವಿವದಿರ ಲ್ಲೈ ಮಹಾದೇ । ವಾಯುಧದವಮಳೆಗರೆದರ್ರೈ ನಿಲಲರಿದು ನಮಗೆನುತ ‖ ವಾಯುಸುತನಬ್ಬರಿಸಿ ಗೋ ಳಿಡೆ । ವಾಯು ಮೇಘದಮೇಲೆ ಬಿದ್ದಂ।ತಾಯಿತೇನೆಂಬೆನು ಕುಮಾರರ ಹೊಯ್ಲ ಬೆಳೆಸಿರಿಯ ‖೨೯‖ ಬಲ್ಲೊಡಗ್ನಿಸ್ತಂಭವನು ಸಿಡಿಲಲ್ಲಿ ಮೇಳವೆ ಬಿನುಗುಗಳ್ಗೆಲ। ಬಲ್ಲೊಡಿವರಿಗೆ ಭೀಮ ಸದರವೆ ಹೇ ಳಲೇನದನು ‖ ಚೆಲ್ಲಿದನು ಬಳಿವಿಡಿದು ಚೌಪಟ । ಮಲ್ಲ ಹೊಕ್ಕನು ಹೊಯ್ದು ಗದೆಯಲಿ । ಘಲ್ಲಿಸಿ ದನಸಿಯರೆದು ಕೊಂದನು ಕೌರವಾನುಜರ ‖ ೩೦ ‖ ವರಸುಲೋಚನಚಿತ್ರಭುಜದು । ರ್ಮರುಷಣನು ಶತನೀಕನೀಲಾಂ । ಬರವಿವಿಂಶತಿವಜ್ರಬಾಹುಕದೀರ್ಘಲಿ ಕೈಗೈದು ಭೀಮನ ... ‖ ತ... ತಿರುಗಿ ಸುಯೋಧನನ ಮೋ । ಹರಕೆ ಮೊಳಗಲು ಮತ್ತೆ ಬಿಲುಸಹಿತಾಕನಿಯರಿಗೆ ಯುಣಲಿಕೆ । ಬ... ತರುಬಿದನು ಕರ್ಣ ‖೩೧‖ ಫಡ ತೊಲಗು ಪವಮಾನಸುತ ನಿನ್ನೊಚ್ಚಿದನಿನ್ನು ಹಿಂದಕೆ । ಮಿಡುಕದವ... ಡಿಸುವೆನು ಬದುಕುವೊಡೆ ...ತ್ತೆನುತಸಂದಣಿಸಿ ‖ ನುಡಿಗೆ ... ಗಹಗಹಿಸಿ ‖೩೨‖ ತಗರು ತೊಲಗಿದೊ... ಡೇನು ಬಲುಕಾಳಗದ ... ಸೈರಿಸಲರಿಯೆ ಕಲಿತನದಂಗ ನಿನಗೇಕೆ‖ಉಗಿ... ಸರಳ ಬಿಲುಗಾರನಾ ...ತ ತನಿ।ಹೊಗರುಗಣೆಗಳ ಸೂಸಿದನು ರವಿಸೂ... ನು ಮೊದಲಿಸಿ‖೩೩‖ ...ಯೆಚ್ಚೊಡೆ ಪರಿಹರಿಸಿ ಮಗುಳೆಚ್ಚೊಡಾಕಿದ । ನುರವಣಿ... ಸಿದನು ಸಿಂಹಗರ್ಜ ...ರ್ಜಸುತ ‖ ತಿರುಗೆ ತಿರುಗಿವನೊತ್ತಲಗಿದೊ ‖ ತ್ತರಿಸಿದನು ಭುಜಬ... ...ಲೆಚ್ಚಾಡಿದರು ಕಲಿಕರ್ಣಪವನಜರು ‖ ೩೪ ‖ ಬಳಲಿದವು ರಥವಾಜಿ ಸಾರ... ಲಕೆ ಭುಜಬ... ಸರಿ ಶರಹತಿಗೆ ಭೀಮನ। ಬಲುಪತಾಕೆತನುತ್ರರಥ ಕರ್ಣಾಸ್ತ್ರಮಯವಾಯ್ತು ‖ ಹಿಳುಕ ...ಥಿ । ಯ...ದನು ನೆಸೆಯಲಿ । ನಿಲುಕಲರಿಯದೆ ನಿಮಿಷಮಾತ್ರಕೆ । ಕಳಚಿ ಕಳೆದನು ಮತ್ತೆ ಕೊಟ್ಟನು ...ಹೊಗಿಸಿದವಖಿಳ ಣೆಯ ‖ ೩೫ ‖ ಉಳಿಯಲೊಲೆದಿದಿರಾಗಿ ತಾಗಿದ । ಬಲುಗಣೆಯ ಕರವಾಳನಿಕ್ಕಡಿ ಭೀಮ ಮಾರ್ಗ ಯನೆಂಟುಕಡಿಮಾಡಿದನು ಕಲಿಭೀಮ ‖ ತೊಲಗು ಬಾಹಿರ ಮತ್ತೆ ಸಾರಥಿ । ಬಲ ... । ಗಳೆದು ಹಲಗೆ ಡು ಪಾರ್ಥಗೆ । ಕಳೆದವಿಾಸಲು ಕೊಲ್ಲೆನೆಲವೋಕರ್ಣಹೋಗೆಂದ ‖ ೩೬ ‖ ತೇರ ಚಾ...ಥವನಣಿ ಮಾ ಲುಗೈ । ಸಾರಥಿಯು ಬರಹೇಳು ಹಿಂದಣ । ಸಾರಥಿಯದೆಸೆಯಿಂದ ಬಂದುದು ಕರ್ಣನ ...ನುಚಲಿ ಬೇಗ ಬ ವೀರರಾವೆಡೆ ಶೌರ್ಯಪಾರಾ । ವಾರರಾವೆಡೆಯೆನುತ ಕೌರವ । ಧಾರಿಣೀಪತಿ ಬ... ...ಲುವೆನೆ ‖ ದುರ್ಜಯಗೆ ‖ ೩೭ ‖ ಬಿಲುಮಿಡುಕಿ ಪಟುಭಟರೊಳಗೆ ಮುಂ। ಕೊಳಿಸಿ... ತನ್ನನುಜ ಟ್ಟಲವೊಪವನಜ ಬಂದೊಡರಿವೆನು ನಿನ್ನೊಡಲನೆನುತ ‖ಬಳಿಕ ವೊಡ... ...ನು ಹಿಮ್ಮೆ। ...ನು। ಸಲಿಸ

ವೊಡೆ ಸಾವಲ್ಲವೇ ಕುರು । ಕುಲಲಲಾಮರು ತಪ್ಪಿ ನಡೆಯರೆನುತ್ತ ಮಂಡಿಸಿದ ॥ ೩೮ ॥ ಕೀಲಿಸಿದನೆಂ ಟಂಬಿನಲಿ ತುರ । ಗಾಳಿಯನುಸಾರಥಿಯನಾತನ । ಕೋಲಖಂಡಿಸಿದನು ತನುತ್ರವ ಮೂರುಬಾಣದಲಿ॥ ಹೋಳುಗಳೆದನು ಛಟನ ನಿಟ್ಟೆಲು।ಮೂಳಿಯುವ ಮುಂಕೊಂಡು ಬಿರುದರ । ಹೂಳಿದನು ಕರೆ ಮತ್ತೆ ಕರ್ಣನನೆನುತ ಗರ್ಜಿಸಿದ ॥ ೩೯ ॥ ರಥವ ಮೇಳೈಸಿದನು ಹೊಸಸಾ। ರಥಿಯ ಕರಸಿದನಾಹವದೊಳತಿ। ರಥಭಯಂಕರನೈದಿದನು ಬಲುಬಿಲ್ಲನೊದರಿಸುತ ॥ ಪೃಥವಿ ನೆಗ್ಗಲು ಸುಭಟಸಾಗರ । ಮಥನಕರ್ಣ ನು ಭೀಮಸೇನನ । ರಥವನರಸುತ ಬಂದು ಪುನರಪಿ ಕಾಳಗವ ಹಿಡಿದ ॥ ೪೦ ॥ ಗೆಲಿದು ಹೋಗದಿರಿ ನ್ನು ಕರುಳನು । ಕಲಕುವೆನು ನಿಲ್ಲೆನುತ ರವಿಸುತ।ಸೆಳೆದು ಮುಷ್ಟಿಯು ಕೆನ್ನೆಗಡಿಯಂಬಿನಲಿ ಬರೆ ಕಂ ಡು ॥ ಎಲವೊಲೋಕದಭಂಡ ನಿನ್ನೊಡ।ನುಲಿವವರು ಸಾವಲ್ಲ ಮುನಿದೊಡೆ । ತಲೆಯಕಾಯಿದು ಬಿ ಡುವೆನಲ್ಲದೆ ಕೊಲ್ಲೆ ಹೋಗೆಂದ ॥ ೪೧ ॥ ಸರಳ ಸರಿಸೋನೆಯಲಿ ಪವನಜ । ಗಿರಿಗೆ ಕರೆದುದು ಕರ್ಣ ಮೇಘದ। ಹೊರಳಿಯೇನೆಂಬೆನು ಮಹಾ ಸಂಗ್ರಾಮಸಂಭ್ರಮವ ॥ ಸರಳಿನಲಿ ಧನುವಿನಲಿ ಗದೆಯಲಿ। ಕರಹತಿಯಲಹಿತಾಸ್ತ್ರವನು ಸಂ । ವರಸಿ ಬೀಸಿತು ಭೀಮಮಾರುತ ಕರ್ಣಮೇಘದಲಿ ॥ ೪೨ ॥ ಧ ನುವನಿಕ್ಕಡಿಗಳೆದು ರಿಪುಗ ಳ । ತನ ಕೊರಳ ಹರಿಯಿಸಲು ಸಾರಥಿ । ತನವತಾನೇ ಮಾಡುತಿದಿರಾದನು ಕೃಪಾಣದಲಿ ॥ ಕನಲಿ ಖಡುಗವ ಮುರಿಯೆಸಲುಮುಂ। ಮೊನೆಯ ಶೂಲದಲಿಟ್ಟನಂತದ । ಲನಿಲಸು ತ ಖಂಡಿಸಿದ ಮುರಿದನು ಮನದಲಿ ಕರ್ಣ ॥೪೩॥ ಪವನಜನ ಬಡಿಹೋರಿ ಹೋದನು । ರವಿಸುತನು ಹೋಗಲಿ ವೃಕೋದರ।ನವಯುವಕೆ ಕೇಣಿಯನು ಕೊಟ್ಟನು ಬಾಣತತಿಗೆನುತ ॥ ತವೆ ಕುಮಾರರು ಮ ತ್ತೆ ಬಹಳಾ । ಹವವಹೊಕ್ಕರು ಹಕ್ಕಲಾದವ । ರವಗಡಿಸಿ ಕೆಣಕಿದರು ರಿಪುಕಲ್ಪಾಂತಭೈರವನ ॥೪೪॥ ವೀರರೆಂದೆನಿಸುವರು ತೊಡಹದ । ಶೌರಿಯದಸಿರಿವಂತರರಸುಕು । ಮಾರಕರು ನಿನ್ನವರು ಕೋಮಲ ಧೈರ್ಯರಾಹವಕೆ ॥ ವಾರಿ ಮೊಗವೆಡದೆರೆದವೊಲು ನಿ । ಸ್ಸಾರಹೃದಯನು ಭೀಮನವನೊಳು। ಹೋ ರಿದವರೇನಪರು ಕೇಳೈ ನಿನ್ನವರ ವಿಧಿಯ ॥ ೪೫ ॥ ಒಳಗೊಳಗೆ ತಮ್ಮಾಣೆ ಘೋಷಣೆ । ಸಲುವುದಲ್ಲ ವೆ ಸೊಪರು ಬೀದಿಗೆ । ಸುಳಿದರೆಲ್ಲಿಯಚಳಕು ತನ್ನುಳಿಪಿಂಗೆ ಹೊಣೆಯಾರು ॥ ಕೆಲಬಲರ ಮನ್ನೆಯರ ಹೋ[illegible] ಕೊಂಬುದೆ ಭೀಮನಲಿ ಕೈ । ಹೊಲಸುಗಾರನು ಹಿಂಡಿದನು ಕೌರವಸಹೋದರ ರ ॥ ೪೬ ॥ ದುರ್ಮುಖಿಕರ್ಣಸುಷೇಣಚಾರು । ಕ್ರಮುವಿವಿಂಶತಿವಜ್ರಬಾಹುಕ । ದಮನದೀರ್ಘೋ ದರಮಹೋದರಕುಂಡದಾರುಕನ ॥ ಯಮನಕ್ಕೆಲೆಡೆಗೊಟ್ಟು ಘನವಿ । ಕ್ರಮದಸಿರಿಹೊದರೇಳೆ ಜಯವಿ । ಕ್ರಮದೊಳಬ್ಬರಿಸಿದನು ನಿಷ್ಠುರಸಿಂಹನಾದದಲಿ ॥ ೪೭ ॥ ಇದು ಸಮೀರಕುಮಾರಕನ ಜಯ । ಮದದ ಸಿಂಹಧ್ವನಿಯೆನುತ ಹಿ । ಗ್ಗಿದನು ಧರ್ಮಜನೊದರಿದವು ಗಂಭೀರಭೇರಿಗಳು ॥ ಕದನಲಗ್ಗೆಯಕಹಳೆ ಬಲುವಾ । ದ್ಯದ ಮಹಾದ್ಭುತರಭಸ ಮಿಗೆ ಹೊ । ಡಿದನು ಸನ್ನಾಹದಲಿ ಹೊ ಕ್ಕನು ಮತ್ತೆ ಕಲಿಕರ್ಣ ॥ ೪೮ ॥ ನವವರೂಥತುರಂಗಸಾರಥಿ । ನವಗಬಾಹಕ್ಕರಿಕೆಬಹಳಾ । ಹ ವವ ನೆರೆ ಮುಂಕೊಂಡು ಭೀಮನ ಹಳಚಿದನು ಕರ್ಣ ॥ ತವಕಮಿಗಲೆಚ್ಚಾಡಿ ಪುನರಪಿ । ಪವನಜನ ಗಾಸಿಯಲಿ ಸೋಲಿದು । ಬವರಮುಖದಲಿ ಹಿಂಗಿದನು ಹದಿನೆಂಟುಸೂಳಿನಲಿ ॥ ೪೯ ॥ ಮುಳಿದು ಮೀಸೆಯ ಮುರುಹಿ ಹುಬ್ಬನು । ಬಲಿದು ದಳ್ಳುರಿದಿರುಳ ನಕ್ಕಿಗ । ಲೊಳಗೆ [illegible]

ಸಿ ರೋಮಾಳಿ ತನಿಗೆದರೆ ॥ ಹಲುಮೊರೆದು ಹೊಗರಿಡುವಮೋರೆಯ । ಲಿಳಿದಬೆಮರನು ಬೆರಳಕೊನೆ ಯಲಿ । ಬಲಿದು ಭಾರ್ಗವದತ್ತಬಾಣಕೆ ನೀಡಿದನು ಕರವ ॥೫೦॥ ಎಲವೆಲವೊ ಕಲಿಯಾಗು ಮಾರುತಿ। ಗೆಲಿದೆನೆಂದಿರಬೇಡ ಸೋಲವು । ಗೆಲವು ಮಾಯುಮುಹೂರ್ತವಶ ಮೈಗೊಡದೆ ಕಾದುವುದು ॥ ಛಲವ ಬಿಡದೆಚ್ಚಾಡಿ ರಣದಲಿ । ತಲೆವೆರಸಿ ಬದುಕಿದೊಡೆ ಕೈಪವ । ನಿಳುಹುವೆನು ಬಳಿಕಿನ್ನು ಶಸ್ತ್ರತ್ಯಾಗ ತನಗೆಂದ ॥೫೧॥ ಉಂಟು ಶಿವಶಿವ ಹುಸಿಯುನುಡಿ ನಿನಗುಂಟೆಬಲ್ಲೆನು ಗೆಲುವಶೌರ್ಯವಗಂಟುಬಹಳ ವೆಕಂಡುಬಲ್ಲೆನು ಹಲವುಭಾರಿಯಲಿ ॥ ಸುಂಟಿಗೆಯಸಾಯ್ವೆನುಕಣಾ ಬಲು । ಕಂಟಕದಲೇ ನರನ ನುಡಿ ನೀ। ನೆಂಟುಮಡಿ ಗಳಹಿದರೆ ತಪ್ಪೇನೆಂದನಾಭೀಮ॥೫೨॥ಆದೊಡೆಲವೊದುರಾತ್ಮ ಮಾತಿನ । ವಾ ದದಲಿ ಫಲವಿಲ್ಲ ಬಲ್ಲೊಡೆ । ಕಾಮುಕೊಳ್ಳಾ ಸಾಕು ಕಡುಸಾಹಸಿಗಗಡ ನೀನು ॥ ಹೋದೆ ಹೋಗಿನ್ನೆ ನುತ ಕಣೆಹದಿ । ನೈದರಲಿ ಕೆಡಹಿದನು ತುರಗವ । ನೈದು ಬಾಣದೊಳೆಚ್ಚು ಕಡಿಮಾಡಿದನು ರಥದನು ವ ॥೫೩॥ ಎರಡುಶರದಲಿ ಸಾರಥಿಯ ಹೇ । ರುರುವನೆಸೆಯಲು ಗಾಯದಲಿ ನಿಲ । ಲರಿಯದವ ಹಾ ಯ್ದನು ಯುಧಾ[illegible]ಮ್ಯುವಿನ ಹೊರೆಗಾಗಿ ॥ ಮರಳಿಹತ್ತಂಬಿನಲಿ ಭೀಮನ। ಶಿರಳಿಚಿದನಾರಂಬಿನಲಿಹ। ನ್ನೆರಡರಲಿ ಹದಿನೆಂ[illegible]ಲಿ ಮಗುಳೆಚ್ಚುಬೊಬ್ಬಿರಿದ ॥೫೪॥ ಶರಹತಿಗೆ ಸೆಡೆಯದೆ ವೃಕೋದರನೆರಡು ಕವಲಂಬಿನಲಿ ಕರ್ಣನ। ಶಿರವನೆಚ್ಚೊಡೆ ತರಿದನೆಡೆಯಲಿ ಭಾನುಸುತ ನಗುತ॥ ತಿರುಹಿ ಶಕ್ತಿಯಲಿಟ್ಟೊ ಡೆಡೆಯಲಿ। ತರಿದು ಭೀಮನ ಕರದ ಚಾಪವನೆರಡು ಕಡಿಮಾಡಿದನು ಬಳಿಯಲಿ ನೊಸಲನೊಡೆಯೆಚ್ಚ ॥೫೫॥ ವಾಯುಸುತ ಖಾತಿಯಲಿ ಹಲಗೆಯ । ಡಾಯುಧವ ಕೊಂಡರಿಭಟನ ಮೇ । ಲಾಯಿದೊಡೆ ಸಮ್ಮುಖವ ಬಿಟ್ಟನು ಧ್ವಜದ ಕಂಭದಲಿ ॥ ಆಯುಧವ ಕೊಂಡಡರಿದೊಡೆ ಹಗೆ । ಮಾಯವಾದನು ಘೊತುರೆನುತ ಗದಾಯುಧನು ಮರಳಿದೊಡೆ ಕೈಯೊಡನೆಚ್ಚನಾಕರ್ಣ॥೫೬॥ಅರಿ ಬೊಬ್ಬಿರಿದೆಚ್ಚನನಿ ಲಕು । ಮಾರಕನ ಖಂಡೆಯವನೆರಡೇ । ಕೂರಲಗಿನಲಿ ತರಿದು ಬಿಸುಟನು ಹಲಗೆಬಂದುಗೆಯ ॥ ಆ ರುಭಟೆಯಲಿ ಭೀಮ ಕಾಯ್ದುವ। ರಾರು ಕರೆಯಾ ಕರ್ಣ ಕೊಲುವೊಡ। ದಾರು ಮಿಗೆ ಹಿಂದಿಕ್ಕಿ ಕೊಂ ಬುವನೆನುತ ಗರ್ಜಿಸಿದ ॥೫೭॥ ಮಡಿದಕರಿಗಳ ಕಾಯವನು ನಿ । ಟ್ಟೊಡಲತುರಗಂಗಳನು ಮುಗ್ಗಿ ದ । ಕೆಡೆದತೇರಿನ ಗಾಲಿಗಳ ತಿರುಹಿಟ್ಟನಾಭೀಮ ॥ ಎಡೆಯೊಳಾಕಲಿಯೊಡಲನಾಹಯ । [illegible]ದೊಢಲ ನಾರಥಛತ್ರವನು ಹುಡಿ । ಹುಡಿಯ ಮಾಡಿದು ಕಡಿದು ಕಟ್ಟಳವಿಯಲಿ ಕಲಿಕರ್ಣ ॥೫೮॥ ಕೈದುಗ ಳು ತೀರಿದೊಡೆಹೆಣನೇ । ಕೈದುವಾದವು ಪರಬಲಾಂತಕ।ಕೈದುಕಾರರ ಕೈಯಬಾಯಲಿ ಭೀಮ ಸಿಲುಕಿ ದೆಲಾ ॥ ಕಾಯ್ದುಕೊಳ್ಳನೆ ಕೃಷ್ಣ ನಿನ್ನಯ । ಮೈದುನನುಗಡ ಮರೆಯಹೊಗು ಹೋ। ಗೈದೆಯಹ ಳೋ ವಿಧವೆಯೋ ಪಾಂಚಾಲಸುತೆಯೆಂದ ॥೫೯॥ ಬಿಲ್ಲ ಕೊಪ್ಪಿನೊಳಿರಿದು ಭೀಮನ । ಘುಲ್ಲಿಸಿದನೆಲ ವೆಲವೊ ಮಾರುತಿ । ಯುಳ್ಳಗಡ್ಡದ ಹರಿದಲೆಯ ರಣಮೂಢ ಸಿಲುಕಿದೆಲಾ॥ ಎಲ್ಲಿ ನಿನ್ನಾಟೋಪವಂ ದಿನ । ಹೊಳ್ಳುನುಡಿಹಾರಿದವೆ ಕೌರವ । ರೆಲ್ಲರನು ಸವರಿದೆಯಲಾ ಸಂದೇಹವೇನೆಂದ ॥೬೦॥ ಒಡೆ ಯದುಯೋಧನನ ತೊಡೆಗಳ । ನುಡಿವೆ ದುಶ್ಶಾಸನನ ನರಕುತವ । ಕುಡಿವೆನೆಂದುಬ್ಬಟೆಯ ಭಾಷೆ ಯಲ್ಲೆ ಮಹಾದೇವ ॥ ನುಡಿವನುಡಿ ಬಳಿಸಂದುದೇ ಸಂ । ಮಡಿಗಳಿರೆ ಕಲಿಭೀಮ ದುಗುಡವ । ಬಿಡು [illegible]ನಾಕರ್ಣ ॥೬೧॥ ಎಲ್ಲಿ ಷಡುರಸಮಧುರಭೋಜನ । ವೆಲ್ಲಿ ಮಧುರ

ಫಲೌಘದುಬ್ಬರ । ವೆಲ್ಲಿ ನಾನಾಭಕ್ಷ್ಯಗಿರಿಗಳು ಘೃತದ ಕಡಲುಗಳು ॥ ಅಲ್ಲಿ ನಿನ್ನುರವಣೆಗಳೊಪ್ಪವು । ದಲ್ಲದೀಸಂಗ್ರಾಮಮುಖದಲಿ । ಬಿಲ್ಲ ಹಬ್ಬದತುಷ್ಟಿ ನಿನಗೇಕೆಂದ ನಾಕರ್ಣ ॥ ತಾಯ ಮಾತನು ಮೀರಿ ನಿನ್ನನು । ನೋಯಿಸಿದೆನಿದೆ ಸಾಕು ಜೀವವ । ಕಾಯ್ದುಬಿಟ್ಟೆನು ಯಿಲ್ಲೊಪ್ಪನಾರುತಿ ಹೋಗು ಹೋಗೆನಲು ॥ ವಾಯುಸುತ ಸಿಲುಕಿದನಲಾ ಕಾ । ಳಾಯ್ತು ನುತಲೆಸುವಾರಿ ರಥವನು । ಹಾಯಿಸಲು ಮುರಿಯೆಚ್ಚು ಕರ್ಣನ ತೆಗಸಿದನು ಪಾರ್ಥ ॥೬೩॥ ಖೂಳ ಸೂತನ ನುಗುಣ ಬಲುಗೈಯಾಳಲಾ ಮರೆ ಮರೆಯಲಿವರೇ । ಮೇಲುಗೆಲುವೇ ನಿನಗೆ ಸೋಲವೆ ಪವನತನಯಂಗೆ ॥ ಕಾಳುಗೆಡೆದಿರು ನಿನ್ನಬಾಯನು । ಸೀಳುವೆನು ನಿಲ್ಲೆನುತ ಫಲುಗುಣ । ಬೋಳೆಯಂಬೈದರಲಿ ಕರ್ಣನ ಕದಪ ನೊಡೆಯೆಚ್ಚ ॥೬೪॥ ತೇರ ತರಿದನು ರಥಕೆ ಹೂಡಿದ । ವಾರುವಂಗಳ ಕಡಿದು ಬಿಸುಟನು । ಸಾರಥಿಯ ತುಡುಕಿದನು ಮುಕ್ಕಡಿಗಳೆದು ನಿಜಧನುವ ॥ ಕೂರಲಗಿನಂಬಿನಲಿ ಕರ್ಣನ । ಶರೀರದವ ತೋಡಿದನು ನಿಮಿಷಕೆ । ಕಾರಿದನು ರಕುತವನು ಕಳವಳಿಸಿದನು ಕಲಿಕರ್ಣ ॥೬೫॥ ಮುಂಗುಡಿಯ ಮುರಿದೊಟ್ಟಿ ಕರ್ಣನ । ಭಂಗಿಸಿದ ನಡಿಗಡಿಗೆ ರಣದಲಿ । ಹಿಂಗಿ ಹಿಂಸಲೆಗೋಡಿ ದುಗುಡಕೆ ತೆತ್ತು ನಿಜಮುಖವ ॥ ತುಂಗವಿಕ್ರಮ ವಿಜಯನಾರಣ । ರಂಗಧೀರನು ಪಾರ್ಥನಿದಕಿಂ । ನಂಗಪಿಸುವವರುಂಟೆ ನಾರಾಯಣನ ಕರುಣದಲಿ ॥ ... ... ॥೬೬॥

ಅಂತು ಸಂಧಿ ೧೩ ಕ್ಕೆ ಪದ ೮೨೬ ಕ್ಕಂ ಮಂಗಳಂ.

ಹದಿನಾಲ್ಕನೆಯ ಸಂಧಿ.

॥ಸೂಚನೆ॥ ಸಂಗರದೊಳಂದಹಿತಭಟವಾ । ತಂಗಕಂಠೀರವನು ರಣದಲಿ । ಭಂಗವುರಿದನು ಪಾರ್ಥನಾರಿಪುರಾಯ ಸೈಂಧವನ॥

॥ಪದ॥ ಚಿತ್ತವಿಸು ಧೃತರಾಷ್ಟ್ರ ರವಿಸುತ । ನಿತ್ತ ತಿರುಗಿದಸಾತ್ಯಕಿಯ ರಥ । ದತ್ತ ತಿರುಗಿದನನಿಲಸುತ ಭಾರಣೆಯದುಗುಡದಲಿ ॥ ಇತ್ತ ಭೂರಿಶ್ರವನು ಭಾರಿಯ । ಹತ್ತು ಸಾವಿರರಥಸಹಿತಕೈ । ಯೊತ್ತಿದನು ರಣವಿಜಯಲಕ್ಷ್ಮಿಯ ಲಲಿತಕಬರಿಯಲಿ ॥೧॥ ಒಂದುಮುಖದಲಿ ಕರ್ಣಗುರುಸುತ । ರೊಂದು ಕಡೆಯಲಿ ಶಲ್ಯಶಕುನಿಗ । ಳೊಂದುಕಡೆಯಲಿ ಭೂರಿಕೃತವರ್ಮಕಸುಯೋಧನರು ॥ ಮುಂದುಗೆಡಿಸಿದರರ್ಜುನನ ಕಾ। ಬಂದು ಭೂರಿಶ್ರವನ ನಿಲಿಸುವೆ । ನೆಂದು ಸಾತ್ಯಕಿ ಬಿಟ್ಟನಾತನ ಹೊರಗೆ ನಿಜರಥವ ॥೨॥ ಎಲವೆಲವೊ ಭೂರಿಶ್ರವನೆ ಘಡ । ಗೆಲಿದು ಹೋಗದಿಗೆಲ್ಲಿ ಹೊಗುವೈ । ತಲೆವೆರಸಿ ಬದುಕಿದೊಡೆ ಬಿಡುವೆನೆಯೆನುತ ಮೂದಲಿಸೆ ॥ ಎಲವೊ ಸಾತ್ಯಕಿ ಸುಭಟಬಾಹಿರ। ಗಳಹದಿರು ದಿಟ।ವೀರನೇ ಕೂರಲಗಿನಲಿ ಮಾತಾಡು ಬರಿನುಡಿ ಭಂಡತನವೆಂದ ॥೩॥ ಆದೊಡಿದ ಕೊಳ್ಳೆನುತ ಸಾತ್ಯಕಿ । ಕೋದನಭ್ರವನಂಬಿನಲಿ ಬಲು । ಹಾದನ್ನೆ ಮುಝುಯೆನುತ ಕಡಿದನು ಸೋಮದತ್ತಸುತ ॥ ಕಾ

ದುಕೊಳ್ಳೆನುತೆಚ್ಚನಂಬಿನ । ಬೀದಿವರೆ ಬಲುಹಾಯ್ದು ಸುಭಟರು । ಕೈದುಕಾರರು ಮೆಚ್ಚಿಸಿದರವರಾಸುರಾವಳಿಯು ॥೪॥ ದೂರದಲಿ ನಿಂದೊಬ್ಬರೊಬ್ಬರ । ನಾರುಮಾಡುವದೇನು ಸಾತ್ಯಕಿ । ಕೂರಲಗ ನೀ ಬಿಸುಟಕಳೆ ಕೋದಂಡಮಾರ್ಗಣವ ॥ ವೀರನಹೆ ಯಿದಿರಾಗೆನುತ ಬಲು । ಭಾರಣೆಯ ಚೌಪಟದ ಖಡುಗವ । ತೋರಹತ್ತರೆ ಹೊಕ್ಕು ಹೊಯ್ದನು ಖಾತಿಯಲಿ ನಡುಗಿ ॥೫॥ ನೆಲನ ತಗ್ಗಿನಲುಪ್ಪರದ ಮೈ । ಯೊಲವಿನಲಿ ಪೌರುಷದ ಬವರಿಯ । ಸುಳಿವಿನಲಿ ಚಂಮಟದ ಪಯಸಂಚನೆಯುಲಾಜವದ ॥ ಬಲಿದದಂಡೆಯ ಮಸೆಯ ಬಯಕೆಯ । ಲುಳಿಯಮೈಗಳಲವಣಿಕಾರರು । ಕೊಳುಗಿಡಿಯ ಖಂಡೆಯದ ಕಣಿಖಿಟಿಲೆಸೆಯೆ ಕಾದಿದರು ॥೬॥ ತಳಿತಮಿಂಚಿನ ಮುರಿವುಗಳ ತನಿ । ಹೊಳೆಹುಗಳೊ ಖಂಡೆಯದ ಧಾರೆಯ । ಕೊಳುಗಿಡಿಯೊ ಖದ್ಯೋತರಾತಿಯೊ ಹೇಳಲೇನದನು ॥ ನೆಳಿನೆಟಿಲಬಿರಿಹೊಯ್ಲೊ ಸಿಡಿಲಿನ । ಸುಳಿವೊ ಮೈಮಸೆಯುರುಣಧಾರೆಯೊ । ಮಳೆಗಳಿಲ್ಲದಹೊನಲೊ ರಣದಲಿ ಚಿತ್ರವಾಯ್ತೆಂದ ॥೭॥ ಬಳಿಯಪಯಪಾಡುಗಳೊ ಬವರಿಯ । ಸುಳಿವುಗಳೊ ಜಾರುಗಳ ಗಾಯದ । ಕಳವುಗಳ ಕೈಮೇಳಗಳ ಮೋಡಾಮೋಡಿಯುಬ್ಬಣದ ॥ ಲಲಿತ ಚಿತ್ರದ ಚತುರಭಟರುಗ । ಳುಲಿದು ಹೊಯ್ದಾಡಿದರು ನೋಟಕ । ರುಲಿದುದಿಬ್ಬರ ವೀರಶೌರ್ಯವನೇನಹೇಳುವೆನು ॥ ೮ ॥ ಮಸೆಯಮೈಗಳೊಳೊರವುತಿರ್ದವು । ಬಿಸಿರಕುತಮೊನೆಗುತ್ತುಗಳ ಕಿ । ಬ್ಬಸುರಿನಲಿ ಜೋರಿದವು ಕರುಳುಗಳಾಹವದ ಭಟರ॥ ಮಸಕಮಸುಳದು ಮನದ ಖಾತಿಯ । ಮುಸುಡು ಮುರಿಯದು ಬಿಗಿದಹುಬ್ಬಿನ । ಬೆಸುಗೆ ಸಡಿಲದು ಭೂಪಭೂರಿಶ್ರವನ ರಿಪುವರನ ॥೯॥ ಬರಬರಲು ರಿಪುಭಟನ ಹೊಯ್ಗಳ । ಧುರಕೆ ರಿಪುಸಾತ್ಯಕಿಗೆ ಮಿಗೆ ತರ । ಹರಣೆ ತಗ್ಗಿತು ಮಹಿಮೆ ಮುಗ್ಗಿತು ಮುರಿದುದಗ್ಗಳಿಕೆ ॥ ಉರವಣಿಸಿ ಭೂರಿಶ್ರವನು ರಿಪು | ವರನ ಖಡ್ಗವ ಮುರಿಯಹೊಯ್ದು । ಬ್ಬರಿಸಿ ತಡೆಗಾಲಿಕ್ಕಿ ಹೊಯ್ದನು ಹಾಯ್ದು ಮುಂದಲೆಗೆ ॥೧೦॥ ಕೆಡಹಿ ಕುಸುರಿದರೌಂಕಿ ಬಳಿಹಿಂ । ಮಡದಲುರೆ ಘಟ್ಟಿಸಿ ಕೃಪಾಣವ । ನುಡಿದು ಗಂಟಲ ಬಳಿಗೆ ಹೂಡಿದನರಿವಸಮಯದಲಿ ॥ ತೊಡು ಮಹಾಸ್ತ್ರವನಿನ್ನಶಿಷ್ಯನ । ಕಡುನಿರೋಧವ ನೋಡು ಫಲುಗುಣ । ನುಡಿಗೆ ತೆರಹಿಲ್ಲೆಂದು ಜರೆದನು ಕೃಷ್ಣನರ್ಜುನನ ॥ ದೇವ ನಿಮ್ಮದು ಧರ್ಮಯುದ್ಧದೊ । ಳಾವಹದನನು ಬೆಸಸಿದಿರಿ ತಲೆ । ಗಾವುದೇನರಿದಲ್ಲ ಮೊದಲಲಿ ನುಡಿದಭಾಷೆಯನು ॥ ಭಾವಿಸುವುದೆನೆ ಮುಗುಳುನಗೆಯಲಿ । ರಾವಣಾಂತಕನೆಂದನೆಲೆಮರು । ಳಾವನಿರತದ ಧರ್ಮವಿದ್ದುದು ಕೌರವೇಂದ್ರನಲಿ ॥೧೨॥ ನೆರೆದಷಡುರಥರೊಬ್ಬ ಹಸುಳೆಯ । ಕೊರಳನರಿದಂದಾಗ ಧರ್ಮದ । ನಿರುತವನು ನೀಕಂಡೆಯೆನಲುರಿ ಮಸಗಿ ಜಠರದಲಿ ॥ ಸರಳ ಕೆನ್ನೆಗೆ ಸೇದಿದನು ಸಂಗರದಿ ಭೂರಿಶ್ರವನ ಖಡುಗದ । ಕರವ ಕತ್ತರಿಸಿದನು ತಲೆಗಾಯಿದನು ಸಾತ್ಯಕಿಯ ॥೧೩॥ ಭರದೊಳೆತ್ತಿದತೋಳು ಕಡಿವಡೆ। ದುರುಳಿತವನಿಗೆ ಸುರಿವರಕುತವ । ಸೆರಗಿನಲಿ ನೆರೆ ನನದು ಭೂರಿಶ್ರವನು ನಸುನಗುತ ॥ ಮುರಿದುಪಾರ್ಥನ ನೋಡಿ ವಾಮದ । ಬೆರಳನೊಲೆದನು ಲೇಸುಲೇಸ । ಬ್ಬರದ ಬಿರುದಿನ ಧರ್ಮನಿಷ್ಠರು ಪಾಂಡುಸುತರೆಂದ ॥ ೧೪ ॥ ಆರು ಕೊಟ್ಟರು ಶರವನಿದ ಮದ । ನಾರಿಯೋ ನಿಮ್ಮಯ್ಯ ಸಹಜಂ । ಭಾರಿಯೋ ಮಣ್ದರಿಯೊ ದ್ರೋಣನೊ ಹೇಳು ನಿಶ್ಚಯವ ॥ ವೀರನಹೆಯೋ ಪಾರ್ಥ ನಿನ್ನವೊ । ಲಾರು ಬಿಲುಗಾರರು ಮಹಾಸ್ತ್ರವಿದಾರು ಕಲಿಸಿದವಿದ್ಯೆಯುಪಯೋಗಿಸಿತು ನಿನಗೆಂದ ॥೧೫॥ ಅರಿದೆ

ನೀವಿದ್ಯೆಯನು ಕೃಷ್ಣನೊ । ಳರಿದೆಯಾಗಲುಬೇಕು ಕಪಟದ । ನೆರವಣಿಗೆಗಳನರಿಯರಿಂದ್ರದ್ರೋಣ ಶಂಕರರು ॥ ಮರೆಮರೆಯಲಿಬಗಾರನರಿದನ । ಸುರರನೆಂಬರು ಕುಹಕತಂತ್ರದ । ಹೊರಿಗೆವಾಳನ ಸಂಗದಲಿ ನೀವ್ಕೆಟ್ಟಿರಕಟೆಂದ ॥ ೧೬ ॥ ಓಡಿ ಕೊಂದನು ಕಾಲಯವನನು । ಬೇಡಿಕೊಂದನು ಕೈಟಭನ ಕೈ । ಮಾಡಿ ಕೊಲಿಸಿದ ಮಾಗಧನನಭಿಮಾನಗೇಡುಗನ ॥ ಕೂಡಿಕೊಂಡಿರಿ ಮೂರುಲೋಕದ । ಛೀಡ ರೇತರಬಾಹಿರರು ಹರಿ । ಯಾಡಿದಾಟವನಾಡಿ ಕೆಟ್ಟಿರಿಯಕಟ ನೀವೆಂದ ॥ ೧೭ ॥ ಘೋಷವಿಯಲಿ ಯಾದವರು ಕ್ಷತ್ರಿಯ । ಗೆಡುಗುಂದರಲಿ ಹುಟ್ಟಿದನು ಕೊಲೆ । ಗೆಡುಗ ಹಾವಿನ ಹುತ್ತದಲಿ ಹಾಮ್ಕೆ ಕ್ಕೆ ಬೆಳದಂತೆ ॥ ನಡವಳಿಯ ನೋಡುವರೆ ಲೋಗರ । ಮಡದಿಯರು ತನ್ನವರು ತಕ್ಕಿನ । ಕಡಲು ಕೃಷ್ಣನ ನಂಬಿದರಿಗಿಹಪರಗಳಿಲ್ಲೆಂದ ॥ ೧೮ ॥ ಎಂದೊಡೆನ್ನನು ಪಾರ್ಥನೆಲವೋ । ಮಂದಮತಿ ನೀ ನೆಂದರಹುದೆ ಮು । ಕುಂದನನು ಭಜಿಸಿದರಿಗಿಹಪರ ಜನ್ಮಭಯವಿಲ್ಲ ॥ ಇಂದು ಸಾವ್ಮಾಡಿದುದು ಹೊಲ್ಲೆಹ । ವೆಂದು ನೀನದನರಿಯ ಶಿಷ್ಯನ । ಕುಂದುಹೆಚ್ಚುಗಳಾರದೆಂಬುದ ನೋಡು ನೀನೆಂದ ॥ ೧೯ ॥ ಎನಗೆ ಸಾತ್ಯಕಿ ಕೋಲವಾಗಸಾ । ತನ ವಧೆಯ ಸಾವ್ಕಾಣಲಾಗದು । ಮನಕೆ ಮತವೇ ನಮ್ಮ ಹರಿಬಕೆ ಬಂದು ಕಾದುವನ ॥ ನಿನಗೆ ಬಿಡುವೆನೆ ನಮ್ಮ ಧರ್ಮವ । ಜನವರಿಯದೇ ಹೋಗು ಹೋಗೆನೆ । ಮನದೊಳಗೆ ನಗುತಿರ್ದನಾಭೂರಿಶ್ರವಕ್ಷಿತಿಪ ॥ ೨೦ ॥ ಎಲವೊ ಸಾತ್ಯಕಿ ಬದುಕಿದ್ಧೆ ನರ । ನುಳುಹಿಕೊಂಡನು ಹೋಗೆನುತ ಹೆಡ । ತಲೆಯನೊದೆದನು ನಿಂದಭರಿಕ್ಕೆಮುರಿದಗಜದಂತೆ ॥ ಬಲೆವೃತ್ತೆತಂದತ್ತ ರಣಮಂ । ಡಲದೊಳಗೆ ಪದ್ಮಾಸನವನನು । ಕೊಳಿಸಿ ಯೋಗಾರೂಢನಾದನು ಪರಸಮಾಧಿಯಲಿ ॥೨೧॥ ತರಣಿಮಂಡಲದಲ್ಲಿ ದೃಷ್ಟಿಯ । ನಿರಿಸಿ ಬಹಿರಿಂದ್ರಿಯದ ಬಯಕೆಯ । ನುಳಿದು ವೇದಾಂತದರಹಸ್ಯದ ವಸ್ತು ತಾನಾಗಿ॥ ಇರಲು ಸಾತ್ಯಕಿ ಕಂಡು ಖತಿಯಲಿ । ತಿರುಗಿ ಖಡ್ಗವ ಕಿತ್ತು ಭರದಲಿ । ಉರವಣಿಸಿ ಭೂರಿಶ್ರವನ ತುರುಬಿಂಗೆ ಲಾಗಿಸಿದ ॥೨೨॥ ಆಗದಾಗದು ಕಪಟವಿದು ತೆಗೆ। ಬೇಗವೆನಲರ್ಜುನನು ಕೃಷ್ಣನ । ನಾಗಲವ ಕೈಕೊಳ್ಳಲಂದನು ಗೋಣನಾನೃಪನ ॥ ಹೋಗುಹೋಗೆಲೆಪಾಪಿ ಸುಕೃತವ ನೀಗಿ ಹುಟ್ಟಿದರಾಜಋಷಿಯವ । ನೀಗಿದನು ನಿನಗೆನುತ ಬೈದುದು ನಿಖಿಳಪರಿವಾರ ॥ ೨೩ ॥ ಒಡಲ ನೊಡೆದಾಜ್ಯೋತಿ ಗಗನಕೆ । ನಡೆದುದಿತ್ತಲು ಸುರರು ಮರ್ತ್ಯರು। ಮಿಡುಕಿ ಬೈದರು ಸಾತ್ಯಕಿಯ ದುಷ್ಕರ್ಮವಾಸನೆಗೆ ॥ ಹಿಡಿದಮುಗುಡದಲರ್ಜುನನು ಮನ । ಮಿಡುಕಿದನು ಕುರುನೃಪರ ಶೋಕದ । ಕಡಲೊಳದ್ದರು ಬಯ್ಯುತಿರ್ದುದು ಕೃಷ್ಣಫಲುಗುಣರ ॥೨೪॥ ಇತ್ತ ರವಿರಶ್ಮಿಗಳು ನೆರೆ ಕೆಂ । ಪೊತ್ತಿರಲು ಸೈಂಧವನ ನೀರಣ। ದೊತ್ತಿಯಲಿ ನೆರೆ ಕಾಣಬಾರದು ಸಾಕು ದುಮ್ಮಾನ ॥ ಇತ್ತ ಮುರಿಭಾಷೆಗೆ ಪರಾಭವ । ಹತ್ತಿರಾಯಿತು ನರ ನಿಧಾನಿಸೆ । ನುತ್ತ ಮುರಂಪು ರಥವ ಬಿಟ್ಟನು ಕಡೆಯ ಮೋಹರಕೆ ॥ ೨೫ ॥ ಕಾದಿರೈ ಸಮರಥರು ನೃಪತಿಗೆ । ಕಾಯ್ದುಕೊಡಿರೈ ಸೈಂಧವನ ನೀ । ವೈದುಕಾರರ ದಾರು ಸಾಹಸಿಕರಗೆ ಸಮಯವಿದು ॥ ಮೂದಲೆಗಳಿವು ಮುಟ್ಟು ಘಡ ಮುನಿ । ಸಾದೊಡೊಳ್ಳಿತೆಯೆನುತ ಶರದಲಿ । ಕಾದುವಿರಲೈ ಕಾಣಲೆಂದೊದರಿದನು ಕಲಿಪಾರ್ಥ ॥ ೨೬ ॥ ಜರಿದುದೀಬಲರಾಶಿಗಾಳಿಯ । ಹೊರಳಿಗೋಡಿದಹೊಟ್ಟುಹಾರಿದೊ । ಲಿರದೆ ಗಿರಿಗಳು ನೆಲನ ಬಿಟ್ಟುದನೇನಹೇಳುವೆನು ॥ ಗುರುತನುಜಕೃಪಕರ್ಣಮಾದ್ರೇ । ಶ್ವರಸುಯೋಧನಚಿತ್ರಸೇನರು । ಮುರಿದು ತರಹರಿಸಿದರು ಸೂಚಿ

ವ್ಯೂಹಪಾರ್ಶ್ವದಲಿ ॥ ೨೭ ॥ ಹರಿಯ ಬೊಬ್ಬೆ ರಥಾಶ್ವದಬ್ಬರ। ನರನ ಬಿಲುಝೇಂಕಾರ ತೇರಿನ । ಧ
ರಧುರದ ಚೀತ್ಕಾರ ಹನುಮನ ಸಿಂಹನಿರ್ಘೋಷ॥ ಅರಿಬಲವ ತಿವಿದುದು ಚತುರ್ಬಲ।ಹೊರಳಿ ಯೊ
ಡೆದುದು ಸುಭಟರೆದೆ ಜ । ರ್ಝರಿತವಾಗಲು ಪಾರ್ಥ ಹೊಕ್ಕನು ಸೈಂಧವನ ದಳವ ॥ ೨೮ ॥ ಅ
ಳವಿಗೊಂಡು ಮಹಾರಥರು ಕೈ । ಕೊಳಲಿ ಮಿಗೆ ಸೈಂಧವನನೊಂದರೆ । ಗಳಿಗೆ ಕಾಯ್ದರೆ ಸಾಕು
ನೀವ್ಕೊಂದವರು ಫಲುಗುಣನ ॥ ಹೊಳಹು ಕಳಿದುದು ಕಾಲವಿನ್ನರೆ । ಗಳಿಗೆ ಸೈರಿಸಿ ಶಿವಶಿವಾಯೆಂ
ದೊಳಗೆ ಮೂದಲಿಸುತಿರ್ದುದು ಭಟರು ತಮ್ಮೊಳಗೆ ॥ ೨೯ ॥ ಮೀಟೆನಿಸುವತಿರಥರು ಕವಿದರು ।
ಕೋಟಿಫಲುಗುಣಗಡರಪನ್ನಡೆ । ಗೋಟಿಯೋ ರಥಕೋಡುಕಲ್ಗಳೊ ಹಾಮಹಾದೇವ ॥ ದಾಟುವ
ವರಾರೆನುತ ಗರ್ಗ್ಗವದ । ನೋಟಕರು ಬೊಬ್ಬಿಡಲು ಸಮರದ। ಸಾಟಕವನಭಿವರ್ಣಿಸುವೊಡಂದನರಸ ಕೇ
ಳೆಂದ ॥ ೩೦ ॥ ಧನುವನೊದರಿಸಿ ಸಕಲಸುಭಟರು । ಮನವ ಬಲಿದೊಗ್ಗಾಗಿ ಸರಳಿನ । ಜಿನುಗುಮಳೆ
ಯಲಿ ನಾದಿದರು ನಾರಾಯಣಾರ್ಜನರ ॥ ಅನಿಬರಂಬನು ಕಡಿದು ಗುರುನಂ। ದನನ ಕರ್ಣನ ಕೃಪನ
ದುರಿಯೋ । ಧನನ ಮೈಯಲಿ ಮೆತ್ತಿದನು ಮುಂಮೊನೆಯ ವಿಶಿಖಗಳ ॥ ೩೧ ॥ ಫಡಫಡರ್ಜನ
ಹೋಗುಹೋಗೆಳ । ವಡದು ಸೈಂಧವದಳದ ಭಾಷೆಯ । ನಡಸಬಲ್ಲರೆ ಬೇಗ ಬೆಳಗಿಸು ಹವ್ಯವಾಹನನ॥
ಕಡಲ ಮಧ್ಯದ ಗಂಗೆ ಸುರಪತಿ । ಕಡುಗಿ ಮಾಡುವುದೇನೆನುತ ಕೈ । ಗಡಿಯಬಿಲ್ಲಾಳುಗಳು ಬಿಗಿದರು
ಸರಳೊಳಂಬರವ ॥ ೩೨ ॥ ಒಂದುಸಾಲಿನಲೈದೆ ಹಂತಹು । ದೊಂದುಕೋಟಿಶರೌಘದಿದಿರಲಿ । ನಿಂ
ದು ಕಾದುವಭಟ್ಟನಾವನು ದೇವದೈತ್ಯರಲಿ ॥ ಒಂದಕಿಮ್ಮಡಿನೂರುಮಡಿಶರ।ದಿಂದ ಕೆದರಿದನೀಮಹಾರ
ಥ । ವೃಂದವನು ಹೊಗಿಸಿದನು ಹೊದರೆದ್ದುದು ಶರವ್ರಾತ ॥ ೩೩ ॥ ಅಂಬಿನಂಬುಧಿ ಜರಿದುದೋ
ಮೇ । ಣಂಬ ಬೆಸನಾಯಿತ್ತೊ ಕಣೆಗಳ । ನಂಬುಗಮದಂಬರವನೊತ್ತರಿಸಿತೊ ಶರಾಳಿಗಳು ॥ ಅಂ
ಬುಜೋದರ ತನ್ನ ಸೃಷ್ಟಿಕ । ಳಂಬಮಯವಾಯ್ತಲ್ಲಿ ಆವರಿದ । ತುಂಬಿದನೊ ಶರನಿಧಿಯನೆಂಬಂತೆ
ಚ್ಚನಾಪಾರ್ಥ ॥ ೩೪ ॥ ಕಾಲುವಾಳೊಬ್ಬಂಗೆ ನಾಲುಕು । ಬೋಳೆಯಂಬುಗಳೆಂಟು ತುರಗಕೆ । ಕೋ
ಲುನೂರೊಂದಾನೆಗೈನೂರಸ್ತ್ರ ಪದಹತಿಗೆ ॥ ಕೇಳು ಜನಮೇಜಯಧರಿತ್ರೀ । ಪಾಲ ಭಾರ್ಗವಸ್ವಾತಿಗ
ತವಹ । ಕಾಲದಂದಿನ ಕಥೆಯ ಪೋಲ್ದವು ನರನ ಶರಜಾಲ ॥ ೩೫ ॥ ಈನೆಲನು ಆಕಾಶದಿಗ್ದೆಸೆ । ಭಾ
ನುಮಂಡಲವಡಗಿತಂಬಿನ। ಸೋನೆ ಸುರಿದುದು ವರುಣಜಲ ರಣಭೂಮಿಯಗಲದಲಿ ॥ ಆನರಾಧಿಪನು
ಬ್ಬಿ ಬೊಬ್ಬಿಡೆ।ದಾನವಾಂತಕ ರಥವ ನೂಕಿದ । ನೇನಬಣ್ಣಿಪೆನರಸ ಸಮರಾಂಗಣದ ರೌದ್ರತೆಯ ॥೩೬॥
ಹೆಣಗಳೊಟ್ಟಿಲ ಗಜದ ಘಾಟದ । ಕಣೆಗಳೊಟ್ಟಿಲ ಬೀದಿಯಲಿ ರಿಂ। ಗಣಗುಣಿದು ಹೊಗರೆಸವಹೊ
ಸರುಧಿರಾಂಬುಗಳನದಿಯ ॥ ಗಣನೆಗೆಟ್ಟದುದರಿಮೃಗಂಗಳು । ಕಣಿದು ಕೂಗಟ್ಟಸುವ ಶಬರರ ।
ಗಣದಟೀಪನವಾತೆಯೆಚ್ಚನು ರಿಪುಮೃಗಾವಳಿಯ ॥ ೩೭ ॥ ಬೀಳುತಿರ್ದರು ಭಟರು ಸಂಕೆಯ । ಹೇ
ಳಲೆನ್ನಳವಲ್ಲ ಕುಂತಜರು । ಗಾಳಿಯನೆ ನರೆ ಸೀಳಿಬಿಸುಟನು ಪದ್ಮಸಂಖ್ಯೆಯಲಿ॥ಕಾಳುಗಿಚ್ಚರೆಯಟ್ಟಿ ಶೈ
ಲವ । ನಾಳಿಗಳ ಸುಡುವಂತೆ ಕವಿದೆಸು। ವಾಳ ತತ್ತರದವಿದನಕ್ಷೋಹಿಣಿಯ ನಿಮಿಷದಲಿ ॥೩೮॥ ಹರ
ನ ಭಾರಣೆಯದಟು ಅಂಧಾ । ಸುರನ ಹುಮ್ಮಾಷಣ್ಮುಖನ ಧಿ । ಕ್ಕರಣೆ ತಾರಕಹರನ ಧೃತಿ ರಾವಣನ
ಝೇಂಕಾರ ॥ ವರರಘುಕ್ಷಿತಿಪಾಲಲಕ್ಷ್ಮಣ । ನೆರೆಲಘುವು ಸಂಧಾನ ದೇವಾ । ಸುರರ ಚೇತನಬಹಳ

ಯುಡುವಳವಟ್ಟ್ಯದರ್ಜುನಗೆ ॥ ೩೯ ॥ ಎಂದು ಮುರರಿಪು ಹೇಳುತಿರೆ ಕಪಿ । ತಂದುಬನಜನ ಕೃಪನ
ಗುರುಗುರು । ಸಂಪಸಾಟಮಹಾರಥರ ಶರನೊಂದನೊಂದಗಿದು ॥ ಸಂಪುಃಶಸಬಾಣಗಳ ಖಂಡಿಸಿ ।
ಹಿಂದುಮುಂದೆಡಬಲದ ಶೈಲದಾಲೊಂದಿದಿದಿಳರೊತ್ತಿನಲಿ ತರಿಪವು ನರನ ಶರಜಾಲ ॥ ೪೦ ॥ ಬಳಲಿ
ದವು ರಥವಾಜಿ ಹನುಮನು । ಬಲದೊಳಗೆ ಶ್ರಮದೋರಿ ತನ್ನಯ । ಬಲದಡದ ತೋಳುಗಳು ಮರ
ವಿಟ್ಟವು ನಿಧಾನಿಸಲು ॥ ಬಳಲಿದನೆ ನರನಳವಳಿಯೆಮಿಗೆ । ಬಲಿದು ಕಾದುವರಾರು ಯಿಳೆಯೊಳು ।
ಬಲುಭಟರ ಸರಿಗಾಣೆನೆಂದಸುರಾರಿ ಹೊಗಳಿದನು ॥ ೪೧ ॥ ದ್ಯುಮಣಿಯೊದೆದಡೆ ತರಹರಿಸುವುದೆ। ತಿ
ಮಿರರಾಜನ ದೇಹ ವರವಿ । ಕ್ರಮದರಿದ್ರರಿಗಳುಕಿದೊಡೆ ಬಳಿಕವ ಧನಂಜಯನೆ ॥ ಸಮತಳಿಸಿ ಶರವಳ
ಯಕರವು । ಭ್ರಮಿಮಹಾರಥಭಟರ ವಿಜಯದ । ಮಮತೆಗಳ ಮಾಣಿಸಿದನಂಪಮಳಾಸ್ತ್ರಬಾಧೆಯ
ಲಿ ॥ ೪೨ ॥ ನೊಂದನಾಕೃಪನಖಿಳಮೋಹರ । ವಂದು ಅಳಿದುದು ಬಿಲ್ಲಗುರುವಿನ । ನಂದನನು ಮಸೆ
ಗಂಡನಶ್ವತ್ಥಾಮ ಮೈಮರೆದ ॥ ನಿಂದು ಬಾಣದ ಮೊನೆಗೆ ತೆರಳದ । ಮಂದಕರ್ಣನನೆರಡುಬಾಣ
ದೊ । ಳೆಂದು ಗರುವಿಕೆಗೆಡಿಸಿದನು ನಿಮಿಷದಲಿ ಕಲಿಪಾರ್ಥ ॥ ೪೩ ॥ ನೊಂದು ಮಗಳದೆ ಮಸಗಿ
ಸೂರ್ಯಜನ । ನಂದನನು ತಾಗಿದನು ಗುರುಸುತ । ಮುಂದುವರಿದನು ತರಹರಿಸದಿರಿಯಟ್ಟಿ ಕವಿಯೆ
ನುತ ॥ ಇಂದಿನಲಿ ಮಹನವಮಿ ತಲೆಗಳಿ । ಗೆಂದು ಕವಿದುದು ಸಕಲಭಟರರ । ವಿಂದಸಖ ಹೊದ್ದಿ
ದನು ಮೆಲ್ಲನೆ ಪಶ್ಚಿಮಾಂಬುಧಿಯ ॥ ೪೪ ॥ ಮೇಲೆ ಬಿದ್ದುದು ಸೇನೆ ಸವೆಯದು । ಸಾಳೆಪರಿಯಂತರ
ಗಳಿಗೆಯಿನ । ನಾಳುವನು ಜಲಧಿಯಲಿ ಕಾಣೆವು ಸೈಂಧವನ ॥ ಹೇಳಿ ಫಲವೇನಿನ್ನು ವಹ್ನಿ । ಜ್ವಾ
ಲೆ ಕೊಳ್ಳಲಿ ದೇಹವನು ಸಾ। ಕೇಳು ಮುರಹರ ತೇರ ತಿರುಹಿಹೆನ್ನೆಂದನಾಪಾರ್ಥ ॥ ೪೫ ॥ ಸಲಿಸಬೇ
ಹುದು ಭಕತಸಾಡಿದ । ಛಲದಭಾಷೆಯನೆನುತ ರವಿಮಂ । ಡಳಕೆ ಮರೆಮಾಡಿದನು ಮುರರಿಪು ವರ
ಸುದರುಶನವ ॥ ಕಳನೊಳಗೆ ಕತ್ತರಿಸುವಹಿತನ । ತಲೆಗೆ ಕಾವಳ ಮಸಗದವೊಲರ । ಗಳಿಗೆಯಲಿ ಸು
ಮ್ಮಾನವುಕ್ಕಿತು ಸಕಲಕುರುಬಲಕೆ ॥ ೪೬ ॥ ಸೆರಗ ಬೀಸಿದರಾಲಿಪರು ಬೊ । ಬ್ಬಿರಿದು ವರಗಂಭೀರ
ಭೇರಿಯ । ಬಿರುದದನಿಯುಬ್ಬರಿಸಿದವು ಗಬ್ಬರಿಸಿದವು ನಭವ ॥ ತೆರಹುಗೊಡುಗೊಡು ಭಾಷಗಾರನು ।
ಮರೆದು ಹೋಗಲಿ ವಹ್ನಿಕುಂಡದೊ । ಳೊರಗುವದ ನೋಡುವೆವೆನುತ ತನಿಗೆವರಂತರಸೇನೆ ॥ ೪೭ ॥
ಹೊಲಬುದಪ್ಪಿದತಳಪಟದ ಹೆ। ಬ್ಬುಲಿಯವೊಲು ನಿನ್ನಾತ ಸಿಲುಕಿದ । ಸಿಲುಕಿ ನೋಡಿದನೆಲ್ಲಿ ತೋರ
ರ್ಜುನನ ತನಗೆನುತ ॥ ಉಲಿಯೆ ಸೈಂಧವನಿತ್ತ ಪಾರ್ಥನ । ಮುಳಿದು ಜರೆದನು ಕೃಷ್ಣನಹಿತನ । ತಲೆ
ಗೆ ಹರಹಿಡಿವಂಬ ತೊಡುತೊಡು ಬೇಗ ನೀನೆಂದ ॥ ೪೮ ॥ ದೇವ ರವಿಯಸ್ತಮಿಸಿದನು ನೀ । ವಾ
ವುದುಚಿತವ ಕಂಡಿರೆನೆ ನಿನ । ಗಾವಭಯಬೇಡಾತಬಾರದು ತೊಡು ಮಹಾಶರವ ॥ ಈವಿರೋಧಿಯ
ಕೆಡಹು ಸೂರ್ಯನ । ನಾವು ತೋರಿಸಿಕೊಡುವೆನೆನೆ ಗಾಂ । ಡೀವದಲಿ ಹೂಡಿದನು ಫಲುಗುಣ ಪಾಶು
ಪತಶರವ ॥ ೪೯ ॥ ತೆಗೆಯೆ ಜಗ ಕಂಪಿಸಿತು ತಾರೆಯ । ನೊಗಡಿಸಿತು ನಭ ಜಲಧಿ ರತ್ನಾ । ಳಿಗಳ
ನೋಕರಿಸಿತು ಕುಲಾದ್ರಿಗಳೊಲೆವವೆಡಬಲಕೆ ॥ ದಿಗಿಭತತಿ ನಡನಡುಗಿತಲೆವಾ । ನುಗಿ ಫಣಾಳಿಯ ಸೆಳೆ
ಯೆ ಬಲುಸರ । ಳುಗಿದು ದಳ್ಳುರಿದಿರುಳುಕಾರಿತು ಬೆಸಸುಬೆಸಸೆನುತ ॥ ೫೦ ॥ ಕೆರಳಿ ದಳ್ಳುರಿ ಮಸ
ಗಿ ಹೊಗೆ ಭೋ । ರ್ಗರೆದುದಂಬರವೀಥಿಯಲಿ ವೈ । ಮರೆದರಜರಿಂದ್ರಾದಿದಿಕ್ಪಾಲಕರು ಕಳವಳಿಸಿ ॥

ಸುರರು ಕಂಗೆಟ್ಟರು ಮಹಾದ್ಭುತ । ಶರದೊಳಾಯ್ತುರಿಸೇನೆ ಮಿಗೆ ತರ । ಹರಿಸಲರಿಯದೆ ಹರನ ನೆನೆದನು ಧರ್ಮನಂದನನು ॥ ೫೧ ॥ ಬಲಿದು ಮುಷ್ಟಿಯೊಳಾಕಿ ಕೆನ್ನಿಗೆ । ಸೆಳೆದು ಬಿಟ್ಟನು ಪಾರ್ಥನಹಿತನ । ತಲೆಯನೆಚ್ಚನು ಗೋಣ ಕಡಿದುದು ಪಾಶುಪತಬಾಣ ॥ ಹೊಳೆವಮುಕುಟದವದನ ಗಗನದ। ನೆಲೆಗೆ ಚಿಮ್ಮಿತು ರಕುತಧಾರಾ। ವಳಿಯ ರಿಂಗಣವಾಯ್ತು ಮುಂಡದ ತಲೆಯ ಮಧ್ಯದಲಿ ॥ ೫೨ ॥ ಬೀಳುಬೀಳಭಿಮನ್ಯುವಿನ ವಧೆ । ಬಾಳಲೀವುದೆ ನಿನ್ನನೆನುತು । ಬ್ಯಾಳುತನದಲಿ ಪಾರ್ಥ ಬೊಬ್ಬಿಡೆ ಕೃಷ್ಣ ಖಾತಿಯಲಿ ॥ ಖೂಳನಿವ ನೀ ಕೇಳು ತಲೆಯನು। ಸೀಳಿದವನ ಕಪಾಲಸಾವಿರ ॥ ಹೋಳಹುದು ತೊಡು ಪಾಪಿ ಬೇಗದೊಳಂಬ ಕಳುಹೆಂದ ॥ ೫೩ ॥ ಇವನ ತಂದೆಯು ಶಾಪವನು ತಲೆ । ಯವನಿಯೊಳು ಬೀಳ್ಕೆಡಹಿದಾತನು । ಭುವನದಲಿ ತಲೆಬಿರಿದು ಬೀಳಲಿಯೆಂಬುದೀಶವರ ॥ ಇವನ ತಂದೆಯ ಕೈಯೊಳಗೆ ಬೀ । ಳುವವುಪಾಯವ ಮಾಡು ನೀನೆನೆ । ದಿವಿಜಪತಿಸುತನಾಮಹಾಸ್ತ್ರಕೆ ಬೆಸಸಿದನು ಹದನ ॥ ೫೪ ॥ ತುಡುಕಿ ಖಂಡವ ಕಚ್ಚಿ ನಭದೊಳು । ಗಿಡಗಹಾಯ್ವಂದದಲಿ ತಲೆಯನು । ಹಿಡಿದು ಹಾಯ್ದುದು ಬಾಣ ವೃದ್ಧಕ್ಷತ್ರನಿದ್ದೆಡೆಗೆ ॥ ಕುಡಿತೆಯೆರಡರೊಳರ್ಘ್ಯಜಲವನು । ಹಿಡಿದು ಕೊಡುತಿಹಸಮಯದಲಿ ತಲೆ । ನಡುವೆ ಬಿದ್ದುದು ಅರ್ಘ್ಯಜಲ ನವರುಧಿರಮಯವಾಗೆ ॥೫೫॥ ಏನಿದದ್ಭುತವೆನುತ ತಲೆಯನು।ತಾನೆ ಕೊಡಹಿದನಂಜುಳಿಯನೆದ । ನೇನನೆಂಬೆನು ಕೃಷ್ಣರಾಯನ ಮಂತ್ರಶಕ್ತಿಯನು॥ ಆನರೇಂದ್ರನ ತಲೆ ಸಹಸ್ರವಿ । ಧಾನದಲಿ ಬಿರಿದುದು ಸುಯೋಧನ । ಸೇನೆ ಹರೆದುದು ಜರಿದುದರಿಭಟಧೈರ್ಯಗಿರಿನಿಕರ ॥ ೫೬ ॥ ನಡುಗಿ ಸಂಗರಭೀತಿಯಲಿ ಬೆಂ। ಗೊಡುವನಾಯಕವಾಡಿಗಳ ವಂ । ಗಡವ ನೋಡುತ ಮರೆಯಚಕ್ರವತೆಗೆದನಸುರಾರಿ॥ ಪಡುವಲಿಳಿಯದರವಿಯ ಬೈಯುತ। ನಡೆದನಾಕುರುರಾಯನಿತ್ತಲು । ಹಿಡಿದ ಚೌರಿಗಳಾಡಿದವು ಪಾಂಡವರ ಸೇನೆಯಲಿ ॥ ೫೬ ॥ ದೈವಪೌರುಷದೊಳಗೆ ಶಿವಶಿವ। ದೈವಬಲವೇ ಬಲವಲಾ ನಿ । ರ್ದೈವರಂಗೈತಳಕೆ ಬಂದರೆ ಪರಶುಪಾಷಾಣ ॥ ದೈವದೂರರು ಧರ್ಮಹೀನರು । ದೈವದೇಳ್ಗೆಗಳೆನುತ ಮಿಗೆ ಬಿಸು। ಸುಯ್ದುತಿರುಗಿತು ಕರ್ಣಗುರುಕೃಪಗುರುಸುತಾದಿಗಳು ॥ ಕಡಲ ಮೊರೆಹಿನಲಹರಿಲಘುವಿನ । ಪೊಡೆಯನೊಡೆಯಲು ಯುಗಸಹಸ್ರದೊ । ಳೊಡೆಯಬಹುದೇ ದ್ರೋಣ ರಚಿಸಿದವ್ಯೂಹಪರ್ವತವ ॥ ಒಡೆದು ಹೊಯ್ಯೆಯ್ಕೆಯೊಡ್ಡು ಸೈಂಧವ । ನೊಡಲನೀಗಿತು ತಲೆಯನಕಟಾ । ತೊಡಗಿದೆವು ದೈವದಲಿ ಕಲಹವನೆಂದನಾಕರ್ಣ ॥೫೯॥ ಮುನಿದು ಮಾಡುವದೇನು ಕೃಷ್ಣನ । ನೆನಹು ನಮ್ಮಾಯರಸುತನಕಲಿ। ಜನಪತಿಗೆ ಮಾರಿದೆವು ಸಾಕೀಚಿಂತೆಯೇಕೆನುತ ॥ ಇನಸುತಾದಿಗಳದ್ದರಿತ್ತಲು । ಮನದ ಹರುಷದ ಹರಹಿನಲಿ ಪಾ । ರ್ಥನ ರಥನ ತಿರುಹಿದನು ಗದುಗಿನ ವೀರನಾರಯಣ ॥ ... ... ॥ ೬೦ ॥

ಅಂತು ಸಂಧಿ ೧೪ಕ್ಕಂ ಪದ ೯೩೬ಕ್ಕಂ ಮಂಗಳಂ.

ಹದಿನೈದನೆಯ ಸಂಧಿ.

॥ ಸೂಚನೆ ॥ ರಾಯಕಟಕಾಚಾರ್ಯನೊಡ್ಡಿದ । ರಾಯುಧಪ್ಟಿನೊಳಿರುಳು ಕೊಂದನು । ವಾಯುಸುತ
ನುಜನತನುಜನಗ್ಗದದೈತ್ಯಕೋಟಿಗಳ ॥

ಪದ॥ ಕೇಳು ಜನಮೇಜಯಧರಿತ್ರೀಪಾಲ ಕೃಷ್ಣಾರ್ಜುನರು ಬರೆ ಭೂಪಾಲನೊಲಿದಿರಾಗಿ ಬಂ
ದನು ಸಕಲದಳಸಹಿತ ॥ ಹೇಳಲರಿಯನು ಹರುಷದುದಯವ । ಸಾಲಿ ಹೂಳಿದವಶ್ರುಜಲದಲಿ । ಮೇಲು
ವಾಯ್ದಪ್ಪಿದನು ದೇವನ ಪಾದಪಂಜರವ ॥ ೧ ॥ ಮಾತುದೋರದು ಹೆಚ್ಚಿದಾನಂ । ದಾತಿರೇಕಕೆ ಹ
ರುಷ ನರಯುವು । ಮಾತು ಹಿಗ್ಗಿನ ಹರುಷರಾಶಿಗೆ ದೇಹ ಕಿರಿದೆನಲು ॥ ಕಾತರಿಸಿದನು ಪುತ್ತ್ರಮಿತ್ತ್ರ
ಮು । ಹೀತಳಾಧಿಪ ವೈಮರೆಯೆ ತೆಗೆ । ದಾತನನು ತಕ್ಕೈಸಿದನು ಕಾರುಣ್ಯನಿಧಿ ನಗುತ ॥ ೨ ॥ ಫಲಿ
ಸಿತರಸಾ ನಿನ್ನ ಭಾಗ್ಯದ । ಬೆಳಸು ನಿನ್ನೊಡಹುಟ್ಟಿದನ ನುಡಿ । ಕಳಸಗೊಂಡುದು ಕದನವಿದು ಭಾ
ರಾಂಕವುಳಿವಂಗೆ ॥ ಕಳೆದುದೊಂದಪಮೃತ್ಯುವೆನೆ ನೃಪ । ತಿಲಕ ನುಡಿದನು ನಿನ್ನ ಭಾಷೆಯು । ಬಲಿದೆ ನಿ
ನ್ನಯ ಬಿರುದ ಸಲಿಸಿದೆಸೆಮಗದೇನೆಂದ ॥ ೩ ॥ ತೆಗಸು ದಳವನು ಸಾಕು ಬಂದೆ । ಹೊಗಳುತಿಹೆ ನೀನೆಮ್ಮ
ಕಾಳಗ । ಮೊಗದೊಳಳಿವುದು ಹಗೆಯೊಳೇಳಕ್ಷೋಹಿಣೀಸೇನೆ ॥ ಬಗೆಯುದಿರದರು ಭೀಮಪಾರ್ಥರು ।
ಜಗದೊಳದ್ಭುತಪೌರುಷವರೆಂ । ದಘಹರನು ಪತಿಕರಿಸಿ ನುಡಿದನು ಭೀಮಫಲುಗುಣರ ॥ ೪ ॥ ಇತ್ತ
ದುಗುಡದ ಹಿರಿಯ ರಾಯನ । ಕೆತ್ತ ಮುಖವನು ಕಂಡು ಭಟರೆದೆ । ಹೊತ್ತಿದವು ಹೊಗರೇರಿದವು
ಮೋರೆಗಳು ಪಟುಭಟರ ॥ ಚಿತ್ತವಿಸು ಭೂಪಾಲ ಸೈಂಧವ । ನೆತ್ತಲಿಹನತ್ತಲು ಮುರಾರಿಯ । ತೆ
ತ್ತಿಗರ ಕಳುಹಿಸುವನೆಂದನು ಖಾತಿಯಲಿ ಕರ್ಣ ॥ ೫ ॥ ಇನ್ನು ನೋಡಾದೊಡೆ ಕಿರೀಟಿಯು । ಬೆನ್ನ
ನುಗಿವೆನು ಕರುಳನರ್ಜುನ । ಗನ್ನಗತಕದೊಳರಿಯಹೊಯ್ವೆನು ಹಾಯ್ಕು ವೀಳೆಯವ ॥ ನಿನ್ನ ಕಂಗಳ
ಬರವ ಕಳವೆನು । ಬನ್ನಳಿರು ನೃಪ ನೋಡು ಚಿತ್ತವ । ನಿನ್ನು ಪಡೆವೆನೆನುತ್ತ ಭಾಷೆಯನಿತ್ತ ನಾಕ
ರ್ಣ ॥ ಉಂಟು ಗರುಡನನೊಳ್ಳೆ ತುಡುಕುವ । ದುಂಟಲೇ ಬಳಿಕೇನು ರಾಯನ । ನಂಟರಿಪ್ಪರೊಳಧಿ
ಕನಲ್ಲಾ ಕರ್ಣ ಕರುಕುಳನೆ ॥ ಟಂಟಣಿಸದೇ ನಿನ್ನ ಭಾಷೆಗ । ಳುಂಟು ನಿನ್ನಲಿ ನಗುವರಾವ । ಲ್ಲೆಂ
ಟುಕೋಟಿಯ ಸೂರಹು ನೀನೆಂದನು ಕೃಪಾಚಾರ್ಯ ॥ ೭ ॥ ಗುರುವರನು ಮಾನ್ಯರನು ರಣಧೀ । ರ
ರನು ದೂರವಲಿಸುವರು ಪು । ತ್ತ್ರಕೆ ಕರವರು ಬಾಯಿಬಡಿಕರ ಜಗದಭಂಡರನು ॥ ಅರಸುಗಳು ದು
ಶ್ಶೀಲರೆಂಬುದ । ನರಿಯದೇ ಜನವಕಟ ಟಿಕ್ಕೆಯು । ಹರಳು ಮಿಗೆ ಕೌಸ್ತುಭಕೆ ಸರಿಯೇ ಕರ್ಣ ಕೇ
ಳೆಂದ ॥ ೮ ॥ ನೀವು ಮಾಡುವದೇನು ರಣದಲಿ । ಕಾವೆವೆಂದಿರಿ ಸೈಂಧವನ ನಾ । ನಾವಿಧದ ವ್ಯೂಹದ
ಲಿ ನಮ್ಮಾದ್ರೋಣನೆಸಗಿದನು ॥ ತಾವು ಭಟರಾದರೆ ದೊತಾರಿಸಿ । ಹೇವಗೆಡಿಸುವುದುಚಿತ ಭಂಡರು ।
ನೀವು ಲೋಗರ ಚುನ್ನವಾಡುವಿರೆಂದನಾ ಕರ್ಣ ॥ ೯ ॥ ಖಳವೂ ಘಡ ನಮ್ಮನು ತುಟಾರಿಸಿ । ಗಳಹುತಿ
ಹನಾಲಿಗಯ ಕೀಳುವೆ । ನಲೆಮುಹಾಲದೇವಲ್ಲಿ ಮೇಳವೆಯೆನುತ ಖಂಡೆಯವ ॥ ಸೆಳೆದು ಘೂರ್ಣಿಪಿಸಿ ಗು
ರುತನುಜನ । ವ್ಯಳಿಸಲುಗಿದನಡಾಯುಧವನ । ಗ್ಗಳೆಯರವಿಸುತ ಮೇಲುವಾಯ್ದನು ದ್ರೋಣನಂ
ದನನ ॥ ೧೦ ॥ ಬೆಂದುದೊಳದೋಟಿಯಲಿ ಕೌರವ । ವೃಂದವಕಟಾ ಯೆನಲು ಜನವೈ । ತಂದು
ನಿಂದನು ನಡುವೆ ಕೌರವರಾಯ ಖಾತಿಯಲಿ ॥ ಇಂದಿನಾಹವ ಲೇಸುಲೇಸಿದು । ಮಂದಭಾಗ್ಯನು

ತಾನು ಸಾಕಿ । ನ್ನೆಂದು ಮಾಡುವದೇನು ನಿಮ್ಮೊಳು ಕದನವೇಕೆಂದ ॥ ೧೧ ॥ ಹೇವವುಳ್ಳೊಡೆ ಭೀಮ
ಪಾರ್ಥರ । ನೀವು ಕೊಲುವುದು ಮೇಣು ರಣದಲಿ । ಸಾವುದಲ್ಲದೆ ಗರುವರೊಳತೋಟಿಯಲಿ ತೊಡಕು
ವರೆ ॥ ಕಾವೆವೆಂದಿರಿ ಸೈಂಧವನ ಸುಭ । ಟಾವಳಿಯ ಮೂಗುಗಳನರ್ಜುನ । ದೇವ ಕೊಯ್ದನು ಸಾಕು
ಸಾಕೆಂದರಸ ಮಾಣಿಸಿದ ॥ ೧೨ ॥ ನೆರವಣಿಗೆಯುಳ್ಳೊಡೆ ವಿರೋಧಿಯ । ನೆರಿವಿರೋಲಿಯಕಾರತನ
ವನು । ಮೆರವುದುಚಿತವಿದೇಕೆ ಡೊಂಬಿನ ಶೌರ್ಯವೊಳಗೊಳಗೆ ॥ ಕಿರುಕುಳರು ನೀವಲ್ಲ ನಿಮ್ಮಲಿ ।
ಕೊರತೆಯಿಲ್ಲದು ನಮ್ಮ ಪುಣ್ಯದ । ಬರಸಟಗ ನೀವೇನಮಾಡುವಿರೆಂದು ಬಿಸುಸುಯ್ದ ॥ ೧೩ ॥ ಖಾತಿ
ಯೇಕೈ ಸೈಂಧವನ ಕಾ । ಯ್ವಾತನಾರೈ ತ್ರಿಪುರದಹನದ । ಭೂತನಾಥನ ಬಾಣ ಬಂದುದು ನರನ
ಗಾಂಡಿವಕೆ ॥ ಆತನಚ್ಚನು ಪಾಶುಪತವದ । ನಾತುಕೊಂಬುವರಾರು ಬರಿದೆ ಭ । ಟಾತಿಶಯವನು
ಹುರುಳುಗೆಡಿಸುವಿರೆಂದನಾದ್ರೋಣ ॥ ೧೪ ॥ ಒಂದು ಹರಹಿಡಿವಂಬು ಶಕ್ರನ । ದೊಂದು ಕೌಬೇ
ರಾಗ್ನಿವಾಯುವ । ದೊಂದು ಪಾರ್ಥನ ಬತ್ತಳಿಕೆ ಬ್ರಹ್ಮಾಸ್ತ್ರ ತುಂಬಿಹುದು ॥ ಕೊಂದೊಡಲ್ಲದೆ ಮಾಣ
ದದು ನಾ । ಒಂದುಗೊಂಬುದು ಗುರು ನಿಧಾನಿಸ । ಲಿಂದು ನಮಗಳವಡದು ಜಯವೆಂತೆಂದನಾಭೂ
ಪ ॥ ೧೫ ॥ ಅರಸ ಮರುಳೈ ಮೇಲೆ ಸುರರನು । ಸರಕುಮಾಡದು ಸಕಲದೈವದ । ದೊರೆಯಲೇ ಹ
ರನಾತನಸ್ತ್ರವನಾರು ತರುಬುವರು ॥ ಹರನ ಶರವಿನ್ನಿಲ್ಲ ಪಗೆಗಳ । ನಿರುಳು ರಣದಲಿ ಹಿಂಡುವೆನು
ಸಂ । ವರಿಸು ಕೈದೀವಿಗೆಯನೆಂದನು ದ್ರೋಣನರಸಂಗೆ ॥ ೧೬ ॥ ಗಾಯವಡೆದಾನೆಗಳ ಕೈಮೈ ।
ನೋಯೆ ಕಾದಿದರಾಜಪುತ್ರರ । ನಾಯುಧದ ಮಳೆಗಳಲಿ ಬಗೆವಜವಾಯ್ಲ ತೇಜಿಗಳ ॥ ನಾಯಕದಿ ಸೊ
ಪ್ಪಾದಶಕಟನಿ । ಕಾಯವನು ಘೂರಾಯತೇರಿಸ । ನಾಯಕರ ಕರೆಕರೆದು ಬವರಕೆ ಕಳುಹಿದನು ದ್ರೋ
ಣ ॥ ೧೭ ॥ ಜರಿದಜೋಡನು ನೆರೆ ಹರಿದಹ । ಕ್ಕರಿಕೆಗಳ ನುಗ್ಗಾದಗುಳವನು । ಬಿರಿದಸೀಸಕಬಾಹು
ರಕ್ಷೆಯ ಮುರಿದಬಲ್ಲೆಹದ ॥ ಅರೆಗಡಿವಬಿಲ್ಲುಗಳ ನೆಗ್ಗಿದ । ಹರಿಗೆಗಳ ಮುಕ್ಕಾದಕೈದುವ ತರಿಸಿ ಕ
ಳುಹಿಸುತಿರ್ದನತಿರಭಸದಲಿ ಕಲಿದ್ರೋಣ ॥ ೧೮ ॥ ಬಣಿಸಲರಿಯದಭಂಡಿಗಳು ಸಂ । ದಣಿಸಿದವು
ಹಕ್ಕರಿಕೆಗಳಹ । ಲ್ಲಣದ ಕವಚದ । ಸೀಸಕದ ಜೋಡುಗಳ ರೆಂಚೆಗಳ ॥ ಮಣಿಮಯದ ಮೋಹಳದ
ಹಿರಿಯ । ಬ್ಬಣದ ಸಬಳದ ಸೂನಿಗೆಯ ಸಾ । ಕಣೆಯ ಹೊರೆ ಚಾಚಿದವು ಕಟಕಾಚಾರ್ಯನಿದಿರಿನ
ಲಿ ॥ ೧೯ ॥ ಕರೆಕರೆದು ರಥಿಕರಿಗೆ ಮಾವಂ । ತರಿಗೆ ಕಾಲಾಳಿಂಗೆ ವರರಾ । ವ್ತರಿಗೆ ಕೊಡಿಸಿದನೆವರ
ವರಿಗೆವರೆಂಗವಾಯುಧವ ॥ ತರಿಸಿ ನಾದುಜವಾದಿಯನು ಕ । ರ್ಪ್ಪುರದ ವೀಳೆಯವುಡುಗರೆಗಳಲಿ । ಹಿರಿ
ದು ಪತಿಕರಿಸಿದನು ಪರಿವಾರವನು ಕಲಿದ್ರೋಣ ॥ ೨೦ ॥ ಉರವಣಿಸುವುದು ಕೊಂಡಹೆಜ್ಜೆಗೆ । ಮುರಿ
ಯಲಾಗದು ಶಸ್ತ್ರಧಾರಾ । ಪರಮತೀರ್ಥಸ್ನಾನದಲಿ ತೊಳೆವುದು ಭವದ್ವಿಷವ ॥ ಹರಣದಲಿ ಕಕ್ಕುಲಿ
ತೆ ಬೇಡು । ದ್ಧರಿಸುವುದು ಸತ್ಕುಲಿತೆಯನು ಸಂ । ವರಿಸುವದು ಸದ್ಗತಿಯನೆಂದನು ದ್ರೋಣ ನಿಜಬಲ
ಕೆ ॥ ೨೧ ॥ ಲಟಕಟಿಸಿತಾಹವಕೆ ರಾಯನ ಕಟಕ ಸುಮ್ಮಾನದಲಿ ಮೊಳಗುವ । ಪಟಹಶಂಖಮೃದಂ
ಗಘನಗಂಭೀರಭೇರಿಗಳ ॥ ಚಟುಳಕಹಳೆಯ ಗಜರು ಮಿಗೆಯು । ತ್ಕಟಿಸಿತಬುಜಭವಾಂಡನಿರ್ಮಿತ । ಘಟ
ಬಿರಿಯೆ ಬಲುಹಾಯ್ತು ದ್ರೋಣನ ಸಮರಸನ್ನಾಹ ॥ ೨೨ ॥ ಸರಿಸದಲಿ ಲಟಕಟಿಸಿ ದಳ ಮೋ ।
ಹರಿಸಿ ನಿಂದುದು ರಣಕೆ ರಜನೀ । ಚರರ ವೊಡ್ಡಣೆ ಧಾತುಗೆಡಿಸಿತು ದಿಟ್ಟರುಬ್ಬಟೆಯ ॥ ನರನ ಕರೆ

ವೊಡೆ ಸಿಂಧುರಾಜನ । ಹರಿಬ ನಮ್ಮದು ತಮ್ಮದೆಂದ । ಬ್ಬರಿಸಿ ಕವಿದುದು ಕದನಲಂಪಟರಾಗಿ ಪಟುಭಟರು ॥ ೨೩ ॥ ಹಿಂದೆ ಸೆಡೆದುದು ವೈರಿಬಲ ಭಟ । ವೃಂದ ನಿಲಲು ಕಿರೀಟಿಭೀಮರ । ಕುಂದುಗಾಬುದು ಲೋಕ ನಮ್ಮನು ತೆಗೆದುಹಿಂಗದೊಡೆ ॥ ಬಂದಜಯ ದಕ್ಕುವುದು ರಜನಿಯ । ಕೊಂದೆವಾದೊಡೆ ನಮಗೆ ಸರಿಯಿ । ಲ್ಲೆಂದು ಧೃಷ್ಟದ್ಯುಮ್ನ ಕರೆಸಿದನಖಿಳನಾಯಕರ ॥ ೨೪ ॥ ಸೋತಬಲ ಸಂವರಿಸಿಕೊಂಡುದು । ಘಾತುರೇ ರಣವೆಂಬುದೆಮ್ಮಯ । ಘಾತುಕಲಿ ಮೊದಲಿಸಿ ಕರದೊಡೆ ರಾಜ್ಯಸಿರಿಯಹುದು ॥ ಭೀತಿ ಮನದಲಿ ಪೌರುಷಾಂಗದ । ಮಾತು ಮುಖದಲಿ ಮುರಿವು ಕಾಲಲಿ । ಬೂತುಗಳು ಕುರುಧೀರನೆನುತಿದಿರಾದುದರಿಸೇನೆ ॥ ೨೫ ॥ ಇಳಿದುದೀ ಕಳನೊಳಗೆ ದಿಗುವಂ । ಡಲದ ಸಂಧ್ಯಾರಾಗವೆನೆ ಪರಿ । ತಳಿತಚತುರಂಗದಲಿ ಮಸಗಿದುದರುಣಜಲರಾಶಿ ॥ ಕಲಿಗಳುಬ್ಬಿನ ರೋಷತಾಮಸ । ತುಳುಕಿತೆನೆ ದಿಗುವಳಯದಲಿ ತುಳು । ವೆಳಗು ಕುಡಿಕುಡಿದುಗುಳುತಿರ್ದುದು ತಿಮಿರಬಲಚಯವ ॥ ೨೬ ॥ ಬಡಿವಖಡುಗದ ಕಿಡಿಗಳಲಿ ಬೇ । ಗಡೆಗಳಾದವು ಮಕುಟಬದ್ಧರ ಮುಡಿಯ ರತ್ನಪ್ರಭೆಗಳಲಿ ಜರ್ಝರಿತತನವಾಯ್ತು ॥ ಗಡಣದಂಬಿನ ಮಸೆಯ ಬೆಳಗಿನೊ । ಳಡಸಿದಾಕ್ಷಣ ಮತ್ತೆ ನಿಮಿಷಕೆ । ಹೊಡಕರಿಸಿ ಹಬ್ಬಿದುದು ಮಬ್ಬಿನ ಧಾಳಿ ದೆಸೆದೆಸೆಗೆ ॥ ೨೭ ॥ ಖಳರ ಹೃದಯದ ಗರುಡಿ ಘೂಕಾ । ವಳಿಯ ನಯನಾಂಜನ ಧರಿತ್ರಿಯ । ನಳಿನಕರಗಿದತುಂಬಿ ಸುಭಟಸ್ವಾಂತಶಶಿರಾಹು ॥ ಪ್ರಳಯತಿಮಿರದ ಬೀಜ ನೀಲಾ । ಚಲದ ಸಾಯುಜ್ಯವೊ ಸಭಾವಮಂ । ಡಲದೊಡನೆ ಹೇಳಿಕೆಯದೆನೆ ಮಸಗಿತು ಕುರುಸ್ತೋಮ ॥ ೨೮ ॥ ದಳದ ಬೊಬ್ಬೆಯ ಸಿಡಿಲ ಬಲುಗ । ತ್ತಲೆಯ ಝಾಡಿಯ ಮುಗಿಲುಗಳೆ ಹೊಳೆ । ಹೊಳೆವಮಹಿಮರ ಮಕುಟರತ್ನದ ಬಳ್ಳಿಮಿಂಚುಗಳ ॥ ಬಿಲುಸರಳ ನಾರಾಚನಿಕರದ । ಮಳೆಯ ನೆತ್ತರ ಹೊಳೆಹುಗಳ ರತ । ಕುಳದಮಳೆಗಾಲದವೊಲುರೆ ಹೆಚ್ಚಿತು ಭಟಸ್ತೋಮ ॥ ೨೯ ॥ ಹೆಣಗಿ ಮಿಗೆ ತಲೆಯೊತ್ತಿ ಹಾಯ್ದರು । ಹಣಿದವನು ತಮ್ಮೊಳಗೆ ಮಿಗೆ ಸಂ । ದಣಿಗಳಲಿ ಸೈಗರೆದರಂಬಿನ ಸರಿಯನುರವಣಿಸಿ ॥ ರಣಮಹೀಶಂಗೀಸುಷುಪ್ತಿ । ಕ್ಷಣರು ದಿಗ್ಭ್ರಮೆಯಲಿ ಸ್ವಕೀರ್ತಿ । ಕ್ಷಣನವರು ರಚಿಸಿದರು ರೌರವವಾಯ್ತು ರಾತ್ರಿಯಲಿ ॥ ೩೦ ॥ ಆರ ವಂಗಡ ಧಾಳಿಯಿದೆಯಿವ । ನಾರು ಹೆಸರೇನೆಂದು ಬಳಿಕ ವಿ । ಚಾರಿಸುತ ಹೊಯ್ದಾಡಿದರು ಕರೆಕರೆದು ಮೊದಲಿಸಿ ॥ ಭಾರಿಸಿತು ಬಲುತಿಮಿರಬಲಸಂ । ಹಾರವನು ಹವಣಿಸುವನಾವನು । ಭೂರಿಭಟರಂಗವಣೆ ಬೀತುದು ನೃಪತಿ ಕೇಳೆಂದ ॥ ೩೧ ॥ ತೆಗೆಸು ಚೂಣಿಯ ದಳವ ದೀವಟಿ । ಗೆಗಳ ಕರೆಕರೆ ತೈಲಪೂರ್ಣದ । ತೊಗಲ ಕುಣಿಕಿಲ ಭಂಡಿ ಕುಣಿಯಲಿ ಕೋಟಿಸಂಖ್ಯೆಯಲಿ ॥ ಬಿಗಿದಮಳವೆಯ ಯೆಣ್ಣೆಗೊಪ್ಪರಿ । ಗೆಗಳೊಳದ್ದಲಿ ಗಳಿಗಳಲಿ ಸೀ । ರೆಗಳ ಸುತ್ತಲಿಯೆಂದು ಕೈವೀಸಿದನು ಕಲಿದ್ರೋಣ ॥ ೩೨ ॥ ಬೆಳಗಿದವು ಬೊಂಬಾಳದೀವಿಗೆ । ಬಲದೊಳಾನೆಗೆ ಹತ್ತು ರಥಿಕಾ । ವಳಿಗೆ ನಾಲ್ಕು ಹಯಕೆರಡು ಕಾಲಾಳಿಗೊಂದೊಂದು ॥ ಬಲಸಮುದ್ರದೊಳಧಿಕವಡಬಾ । ನಳನ ಝಳವೋ ಮೃತ್ಯುವಿನ ದೀ । ವಳಿಗೆಯಿರುಳೋ ತಿಳಿಯದರಿದೆನೆ ಚಿತ್ರವಾಯ್ತೆಂದ ॥ ೩೩ ॥ ಬಗೆಯಲರಿ ದಿಗುವಾಗ ಬಿಡಿಯದೆ । ಹಗಲನೀದುದೊ ರಾತ್ರಿ ಕುಡಿಕುಡಿ । ದುಗುಳುತಿರ್ದುದು ತಿಮಿರವನು ಕರದೀಪಿಕಾಳಿಗಳು ॥ ಹೊಗರುಗಟ್ಟಿತು ಕುಮುದಕವಳದ । ಬಿಗಿಹು ಬಿಟ್ಟುದು ಚಕ್ರವಾಕದ । ತಗಹು ಕೆಟ್ಟುದು ಹೇಳೆನಲು ರಂಬಿಸಿ

ತು ದೀಪಾಳಿ ॥ ೩೪ ॥ ತಿಮಿರವಡಗಿತು ಮನದದೋಷದ । ತಿಮಿರವಡಗದವುನ್ನ ಭುಜವಿ । ಕ್ರಮದ ಮನ್ನಣೆಯುಳ್ಳೊಡವಸರವಿದು ನೃಪಾಲರಿಗೆ ॥ ನಿಮನಿಮಗೆ ಮುಂಕೊಂಡು ವಂಶೋ । ತ್ತಮಸಮಾಗತಕೀರ್ತಿಸತಿಯಲಿ । ಮಮತೆಗಳ ನೆರೆ ಮಾಡಿಯೆಂದನು ದ್ರೋಣ ನಿಜಬಲಕೆ ॥ ೩೫ ॥ ಮತ್ತೆ ಹೊಕ್ಕರು ಭಟರಮಮ ದಿಗು । ಭಿತ್ತಿ ಜರಿಯಲು ಜರಿವಭೇರಿಯ । ಕಿತ್ತು ನೆಲ ಹೊಡೆಮರಳೆ ಮೊಳಗುವಪಟಹಡಿಂಡಿಮದ ॥ ಹತ್ತುಸಾವಿರನೃಪರು ರಿಪುಗಳ । ಮುತ್ತಿದರ ಮುರುಹಿದರ ಮೈಯಲಿ । ಮೆತ್ತಿದರು ಮೊನೆಗಣೆಗಳನು ಪಾಂಡವರ ಬಲದೊಳಗೆ ॥೩೬॥ ಅಕಟ ಘಡ ಕುನ್ನಿಗಳೆಯಸುರಾಂ । ತಕನ ಕಪಟಕುಮಂತ್ರವೇ ಬಾ । ಧಕವಿದಲ್ಲದೆ ನಿಮಗೆ ಸೋಲುವುದುಂಟೆ ಕುರುಸೇನೆ ॥ ಸಕಲಸನ್ನಾಹದಲಿ ಯಾದವ । ನಿಕರಸಹಿತೀಕ್ಷಿಳು ರಣವನು । ಚಕಿತರಾದೊಡೆಜೋಡಿಸೆನುತಿದಿರಾದನಾದ್ರೋಣ ॥ ೩೭ ॥ ತವಕ ತಗ್ಗಿತು ಭಟರ ದಾಳಿಗೆ । ಜವಳಿ ತೆಗೆದುದು ಮನಕೆ ಭೀತಿಯ । ಗವಸಣಿಗೆ ತೊಡಿಸಿತ್ತು ಜಾಳಿಸಿತಥಟರಪಸರಣ ॥ ಸವೆದಶೌರ್ಯದಗಾಯಘುಲ್ಲಿಸಿ । ದವಯವವ ಮಡಮುರಿಯ ನೋಡಿದ । ನವನಿಪತಿಗಳ ನಿಲವ ಕಂಡಸುರಾರಿ ಯಿಂತೆಂದ ॥ ೩೮ ॥ ನಿಲ್ಲು ಭಯಬೇಡಾವರಣವಿದು । ಸಲ್ಲವಕೆ ತರುವಾಯ ದೀವಿಗೆ । ಕೆಲ್ಲವಿಸಿದುದೊ ವ್ರೌಳ್ಳಿತೇಭುಜಶೌರ್ಯಕುರುಬಲಕೆ ॥ ಖುಲ್ಲರಾರೋ ಬಲವ ತಿರುಹಿದೊ । ಡಿಲ್ಲಿಯಂಜದಿರೆನುತ ಮಿಗೆ ಕರ । ಪಲ್ಲವವ ನೆಗಹಿದನು ಲಕ್ಷ್ಮೀಕಾಂತ ಕರುಣದಲಿ ॥೩೯॥ ಆವನೊಬ್ಬನ ಮಧುರವಚನಕ್ಕ । ಪಾವಲೋಕನದಿಂದ ಸನ್ಕಾ । ಸಾವಳಿಯ ಘನದುರಿತವಹ್ನಿಯಝುಳಕೆಕಡೆಯೆನಲು ॥ ದೇವನೀತನು ಲಲಿತವಚನನು । ಥಾವಿಶೇಷಕದಿಂದ ಸುಭಟರು । ಜೀವಿಸುವುದೇನರಿದು ಕೇಳ್ ಧೃತರಾಷ್ಟ್ರಭೂಪಾಲ ॥ ೪೦ ॥ ಹಿಂಗಿದುದು ಭಯಕಂಠದನು ಸರ್ವಾಂಗದಲಿ ಪಸರಿಸಿತು ಕಾಳಗ । ದಂಗವಣೆ ಹೊಗರೇರಿದುದು ವಿಕ್ರಮ ಚಡಾಳಿಸಿತು ॥ ಹೊಂಗಿದರು ಹೊಂಪುಳಿಯ ಪುಳಕದ । ಮುಂಗುಡಿಯ ರೋಮಾಂಚನದ ರಣ । ರಂಗಧೀರರು ತರುಬಿ ನಿಂದರು ಮತ್ತೆಪರಬಲವ ॥ ೪೧ ॥ ಭಟರು ಬಳಲಿದಿರಿಂದು ರಣವು । ತ್ಕಟವು ಧೀವಸಿಗಳು ಮಹಾರಥ । ರಟಕಟಿಸುತಿದೆ ಮತ್ತೆ ಸಾವಿದನೇನ ಹೇಳುವೆವು ॥ ಕುಟಿಲಭಾರವ್ಯಾಜನಿವಸು । ಬ್ಬಟೆಗೆ ಮದ್ದರಿವೆನು ನಿಶಾಪರೆ । ಯಟನಪಟುಗಳು ಬರಲಿ ಕಾಳಗಕೆಂದನಸುರಾರಿ ॥ ೪೨ ॥ ಕರೆಸು ಧರ್ಮಜಕಲಿಘಟೋತ್ಕಚ । ನಿರುಳು ಬವರಕೆ ನಿಲಲಿ ಸಾಕೀ । ನರವೃಕೋದರ ನಕುಲ ಸಹದೇವಾದಿಗಳಿಗರಿದು ॥ ಇರುಳು ರಣದಾಯತವನವನೇ । ಹಿರಿದುಬಲ್ಲನು ಕರಸೆನಲು ಮುರ । ಹರನ ನೇಮದಲನಿಲತನಯನತನಯನೈತಂದ ॥೪೩॥ ಜಡಿವಹಿರಿಯುಬ್ಬಣದ ಹೆಚ್ಚಿದ । ಮುಡುಹುಗಳ ಮುರಿದತುಳಚರಣದ । ತೊಡರಬೆಳಗಿನ ಬಾವುಲಿಯ ಝಣಝಣದ ನಿಸ್ವನದ ॥ ನಿಡಿಯೊಡಲ ಮುರಿಮೀಸೆಗಳ ಕೆಂ । ಪಡರ್ದಕಂಗಳ ಹೊಳೆವದಾಡೆಯ । ದಡಿಗದಾನವ ಹಜ್ಜೆಯಲಿ ನೆಲ ನೆಗ್ಗಲೈತಂದ ॥ ೪೪ ॥ ಏನುಧರ್ಮಜ ಕರಸಿದ್ದೆ ಕುರು । ಸೇನೆ ಮಲೆತುದೆ ಬಿಡುಬಿಡಾ ತಡ । ವೇನು ತಾ ವೀಳೆಯುವನೆನುತಂಗೈಯನರಳಿಚುತ ॥ ದಾನವಾಮರರೊಳಗೆ ನಿನ್ನಯ । ಸೂನುವಿಗೆ ಸರಿಯಿಲ್ಲೆನಿಸಿ ಗೆಲ । ಲಾನು ಬಲ್ಲೆನು ನೋಡೆನುತ ಬಿದಿರಿದನು ಖಂಡೆಯವ ॥ ೪೫ ॥ ಜಡಿದು ಝೋಂಪಿಸಿ ವೀಳೆಯುವ ಕೊಂ । ಡೆಡದಕೈಯಿಂದೆರೆಗಿ ಮದಮುಖ । ನೆಡಬಲನ ನೋಡಿದೊಡೆ ರಕ್ಕಸಕೋಟಿ ಜೀಯೆನಲು । ಸಿಡಿಲಸರೆ ಬಿಟ್ಟಂತೆ ಭುಜವನು । ಹೊಡೆದು

ಮಿಂಚಿತು ದೈತ್ಯಬಲವ್ರಲಿ । ದಡಿಯಿಡಲು ಮೇಲುಸುರು ಮಸಗಿತು ಫಣಿಪಕಮಠರಿಗೆ ॥ ೪೬ ॥ ಕಾಳರಾತ್ರಿಯ ಕಟಕವೋ ಮೇ। ಣ್ಕಾಲರುದ್ರನ ಪಡೆಯೊ ದಾನವ। ನಾಳಿನಗ್ಗಳಿಕೆಯಲಿ ತೊಳಲಿದಧನು ಶರಂಗಳಲಿ ॥ ಮೇಲುಹೊಗರನು ಜರೆದು ಪಾಡೆಯ । ಘಾಳ ಮಿಗೆ ಗಜಗಲಿಸೆ ದಾನವ। ಕಾಳಗಕ್ಕನುವಾಗಿ ನಿಂದನು ಬಿಗಿದಬಿಲುದೆಗೆದು ॥ ೪೭॥ ಹಯಕೆ ಹಯ ರಥ ರಥಕೆ ಪಯದಳ । ಪಯದಳಕೆ ಗಜಸೇನೆ ಗಜಾನೆಯಲಿ ಭಾರಿಯಭಟರು ಭಾರಿಯಭಟರ ಗಢಣದಲಿ॥ನಿಯತಚಾತುರ್ಬಲವೆರಡು ನಿ। ರ್ಭಯದಲೊದಗಿತು ಮಕುಟಮಸ್ತಕ।ಮಯಮಹೀತಳವೆನಲು ಹಳಚಿತು ಹೊಯ್ದುದುಭಯಬಲ ॥೪೮॥ ಕೌರವನ ತಳತಂತ್ರ ಕಟಕಾ । ಚಾರಿಯನ ಕಾಹಿನಲಿ ರಿಪುಪಂ । ವಾರ ನಿಂದುದು ಭೀಮಸೇನನ ಮಗನ ಕಾಹಿನಲಿ ॥ ಅರಿದನು ಜಗ ನಡುಗೆ ಬೊಬ್ಬೆಯ । ಭಾರಿದೇಹನು ವೈರಿಬಲಸಂ । ಹಾರರುದ್ರನು ಕಲಿಘಟೋತ್ಕಚನೈದಿದನು ರಣವ ॥೪೯॥ ಬೆಳೆದವೋ ಕೈಕಾಲು ನೀಲಾ । ಚಲಕೆ ಹೇಳೆನೆ ಮುಗಿಲು ತುಡುಕುವ । ತಲೆಯ ಟೋಕೆಯ ತೋರಹತ್ತನ ಕಂಪು ಕುರುಸೇನೆ ॥ ಕಳವಳಿಸಿದರು ಕಾಯದಲಿ ಕ । ಕ್ಕುಲಿತೆಕಾರರು ಕೃಪೆಗೆದರ । ಗ್ಗಳೆಯಸುರುಬೆಗೆ ಬೀಳುಕೊಟ್ಟರು ಭಟರು ಸ್ಥಿರಣೆಯ ॥೫೦॥ ಏನ ಹೇಳುವೆನವರ ರಣಸುಂ । ಮಾನವನು ನಮ್ಮವರವೊಗದು । ಮ್ಮಾನವನು ಪರದೇಶದೇಶದೊಳಾದುದೀಹದನ ॥ ದಾನವರ ಥಟ್ಟಣೆಗೆ ನಿಲುವನಿ । ಘಾನರುಂಟೇ ಧಿಟ್ಟತನದಲಿ । ತಾನೆ ನಿಲುವೆನೆನುತ್ತ ಕುರುಭೂಪಾಲ ಬಲಸಹಿತ ॥೫೧॥ ಫಡ ನಿಶಾಚರ ಹೋಗುಹೋಗೆಳ । ವಡದು ಕರೆ ನಿಮ್ಮೈಯನನು ಹೇ। ರೊಡಲ ತೋರಿಸಿ ಬಲವ ಬೆದರಿಸಲಗ್ಗಳೆಯನಹುದೆ ॥ ಮಿಡುಕುವೊಡೆ ಕರೆ ನಿಮ್ಮತೆತ್ತಿಗ। ನಡಗಲೇತಕೆ ಕೃಷ್ಣ ನಿಪುಗಿಂ । ದೊಡಲ ಬಳಿನೆಳಲವಸಹಿತ ಬಾರೆಂದು ಗರ್ಜಿಸಿದ ॥೫೨॥ ಮರುಳೆ ಕೌರವ ಜಂಗಮಸ್ಥಾ। ವರಕೆ ದೇಹದ ನೆಳಲಹುದು ದಿನ। ಕರನ ದೇಹದ ನೆಳಲು ಶ್ರುತವೋ ದೃಷ್ಟವೋ ನಿನಗೆ ॥ ಸುರನಿಶಾಚರಮರ್ತ್ಯರೊಳು ತಾ । ನೆರವಬಯಸುವನಲ್ಲಿ ಹರಿಯಂ । ತಿರಲಿ ಚೈತನ್ಯಾತ್ಮವಾತನ ಮಾತದೇಕೆಂದ ॥೫೩॥ ಹೆಣನನರಸುತ ರಕುತಪಾನಕೆ । ಸೆಣಸಿ ಶಾಕಿನಿಪ್ರೂತಸಿಯರೊಳು । ಹೆಣಗಿ ಗೆಲುವುದೆಯಾಯ್ತು ದಾನವವಿದ್ಯೆ ಜಗವರಿಯೆ ॥ ರಣದೊಳಗ್ಗದಕೈದುಕಾರರು । ಕೆಣಕಿ ಗೆಲುವುದ ಕೇಳಿದರಿಯೆವು । ಹೆಣವಿನಿಹಿಗಳು ಹೇವಮಾರಿಗಳೆಂದನಾಭೂಪ ॥೫೪॥ ಬಯ್ಯಲರದಿರು ಶಕ್ತಿಶರದಲಿ । ಮೆಯ್ಯ ನೆಸುವೆಯೊ ಮೇಣು ಮಾರ್ಗಣೆ। ಕಯ್ಯಲುಂಟೇ ನಿನಗೆ ಸಂಬಳವೇನು ಸಮರದಲಿ ॥ ಅಯ್ಯನನು ಕರೆಯೆಂಬಬಾಯನು । ಕೊಯ್ಯಬೇಡವೆ ಸಿಂಹಕೇಸರ । ದುಯ್ಯಲಾಡುವಗಜವ ನೋಡೆಂದುರುಬಿದನು ನೃಪನ ॥೫೫॥ ಎಸುತ ಹೊಕ್ಕನು ಘಾಳಿಸುವಹೊಸ। ಮಸೆಯಕಣೆ ಮುಕ್ಕಿರಿಕಿದವು ನಿ । ಪ್ಪಸರದಲಿ ನೃಪನೆಚ್ಚ ಕಾಣನು ಹಗೆಯ ಪರಿವುಗಳ ॥ ಕುಸುರಿದರಿದುದು ಜೋಡುಸೀಸಕ। ಬೆಸುಗೆಯೊಡೆದುದು ಗಾಯದಲಿ ಮೈ।ಬಸಿಯೆ ನನೆದುದು ಶೌರ್ಯ ಬೀತುದು ಭೀತಿ ಭೂಪತಿಗೆ॥೫೬॥ ಅಕಟಕಟ ದೊರೆ ಸಿಲುಕಿದನು ಪಾ । ತಕರು ರಥಿಕರು ಕುರುಮಹೀಪಾ । ಲಕನನೊಪ್ಪಿಸಿಕೊಟ್ಟುಕೊಂದರು ದ್ರೋಣಕೃಪರೆನುತ ॥ ಚಕಿತಬಲದಲಿ ನೃಪನ ಸಾರಥಿ । ನಿಕರವೊರಲಲು ಕೇಳ್ದು ಬದ್ಧ । ಭ್ರುಕುಟಿಭೀಷಣಮುಖರು ಮಸಗಿತು ದೈತ್ಯಬಲಜಲಧಿ ॥೫೭॥ ಬಕನಮಕ್ಕಳು ಜಟನಕಿಂಮೀರಾ ।ರಕನಸುತರು ಹಿಡಿಂಬತನುಜರು । ವೃಕಜಪಾಸಂಘಾತ್ಮಜರು ಶಿಶುಪಾಲನಂದನರು ॥ ಸಕಲಸನ್ನಾಹದಲಿ

ದೈತ್ಯ । ಪ್ರಕರ ಹೊಕ್ಕುದು ರಾಯರಥವಾ । ಲಕರ ತರುಬಿಯೆ ತುಡುಕಿದರು ರಣವನು ಘುಟೋತ್ಕಚನ॥೫೮॥ ಕೆಣಕಿದರಲಾ ರಣವ ರಕ್ಕಸ। ಬಣಗುಗಳು ಮುಘುಘೊತು ಸಮರಾಂ। ಗಣದೊಳಗೆ ನಾವಾವಸದರವೊ ನೋಡಿರೈ ಭಟರು॥ ಸೇನಾಗಡ ನಮ್ಮೊಡನೆ ಸಲೆ ಟೆಂ । ಟಣಿಸುವರು ಮಾವಮಾಯೆನುತ ನೆರೆ । ರಣಭಯಂಕರ ಹೊಯ್ದನಾಸಾರಥಿಯು ಕರೆತಳವ ॥೫೯॥ ಹೆಸರುಗೊಂಡೊಡೆ ಕಿವಿಗಳಿಗೆ ಕರ್ಕಶವು ರಕ್ಕಸರೆಂಬಹೆಸರಿನ । ನುಸಿಗಳೊಳಸ್ಸೆರಿಸುತ ಕೊಟ್ಟುದು ಶಿವಶಿವಾಯೆನುತ ॥ ಹೊಸಮಸೆಯ ಹೊಗರಂಬುಗಳನೆ । ಬ್ಬಿಸಿದನು ವಿರೋಧಿಗಳ ಕೈಪ್ಪು । ಯೆಸಕದಲಿ ಭುಜಭಾರಿಯಂಕವ ಹೊಕ್ಕು ಕಾದಿದರು ೬೦॥ ಒಡಲೀಯದೆ ಸಮರಗೊಡುತ ನಿ । ಭಾಡಿಸುತ ಮೇಲಿಕ್ಕಿದೊಡೆ ಕೈ । ಮಾಡಿಸುತ ಶರಪತಿಗೆ ಪ್ರಾಣವ ಕೊಟ್ಟು ಮನ್ನಿಸುತ ॥ ಪ್ರೌಢತನವನು ಬಿಡಿಸಿ ತಾ ಕೊಂ । ಡಾಡಿ ಕಾದಿದನರಸುಜಾತಿಯೊ । ಕೋಟಿ ಪರಿಭವ ತನ್ನದೆಂಬಪದಸ್ತನಾರೆಂದ ॥ ೬೧ ॥ ಎಸುಗೆಯೊಳ್ಳಿತು ವಿವನಶರ ಲಂ । ಬಿಸಿದುದೈ ತಪ್ಪಲ್ಲತಪ್ಪ । ಲ್ಲಸುರನಹೆಯೋ ಬಾರು ಕಂಪಿಮಾರಾತ್ಮಜಾಯೆನುತ ॥ ಅಸಿಪರಶುಪಟ್ಟಸಮುಸುಂಡಿ । ಪ್ರಸರಧಾರಾಪೂರದಲಿ ಪೈ । ಬಸಿಯೆ ರಕುತವ ಸಾವೆಸಾಲಿಡೆ ಬಲದೊಳೊಡೆದುಳಿದ ॥೬೨॥ ಉಬ್ಬುಗಲಿಸಬ್ಬುಧಿಯಲಿ ಮಿಗೆ ಡಾ । ವಸುವುದೆ ಹುಲುಮಿನವಂತರ । ದರಸು ಹೇಳುವುದೇನು ಪೊಗದನು ದೈತ್ಯಜಲನಿಧಿಯ ॥ ಹರಿವ ಕೊರಳಿನ ಬಸಿವಬಂಬಲು । ಗರುಳ ಜರಿದ ಕಪಾಲದುರನೆ । ತ್ತುರಕಶಾವಳಿ ಕರೆವುತಿರ್ದುದು ರೌದ್ರಮಯರಭಸ ॥ ೬೩ ॥ ಬಾಗು ದೈತ್ಯರ ಹರಿಬವಲಿ ಲೇ । ಸಾಗಿ ಕಾದಿದರನ್ನುವೀರನ । ತಾಗಿ ಬದುಕುವರಾರು ಕೆಚ್ಚುಳ್ಳವರು ಕಲಿತನದ ॥ ಆಗಲಿನ್ನಾವುದು ಕಡೆಗೆ ಕೈ। ಲಾಗು ನಿಮ್ಮಸುಗಳು ಶರೀರವ । ನೀಗಕಳವೆನೆನುತ್ತ ಬೊಬ್ಬಿರಿದೆಚ್ಚರತಿಬಲನ ॥೬೪॥ ಸಿಡಿಲ ಸುಳಿವರೆ ಗಿರಿಗಳಂಜುವು। ಸಡಗುವನೆಗರುಡನುಫಣಿಗಿಕೆಡು। ನುಡಿಯನುಡಿದೊಡೆ ದಿಟ್ಟರೆಂಬರೆ ಗರುವರಾದವರು ॥ ಘಪಘಪೆನುತ ಬಕಾಸುರನ ಮಗ । ನಡಸಿದನು ಕೂರಂಬನಾತನ । ಕಡುಪಹೊಗಳುತ ಬೀಸಿವನು ಬಿರುಗದೆಯಲಾಖಳನ॥೬೫॥ ರಥಚಯವ ನುಗ್ಗೊತ್ತಿದನು ಸಾರಥಿಗಳನು ಸೀಳಿವನು ಸುಮುಹಾ । ರಥರ ಬಿಂಕದಬಿಗುಹ ಮುರಿದನು ಹೊಕ್ಕು ಬೀದಿಯಲಿ ॥ ಶಿಥಿಲವಾಯಿತ್ತು ವೈರಿಬಲವತಿ । ಮಥನವಾಯಿತು ದೈತ್ಯರೊಳಿಗ । ಪೃಥವಿ ಲಘುತರವಾಗಿ ಫಣಿಪನ ಕೊರಳು ಸೈಮಿಾರೆ ॥೬೬॥ ಬಿರಿಸಿದನು ರಣದಲಿ ಹಿಡಿಂಬಾ । ಸುರನ ಮಕ್ಕಳ ಚೈದ್ಯಮಾಗಧ। ನರಕ ಕಿಮ್ಮೀರಕಜಟಾಸುರಸೂನುಸಂತತಿಯ ॥ ಬರಲಿ ಕರ್ಣದ್ರೋಣಗುರುಗಳು । ಜರಡಜೋಡಿಸಬೇಡ ಭೀಮನ । ನರನಬಯಸುವರೆನ್ನೊಡನೆ ಕೈಮಾಡಬೇಕೆಂದ ॥೬೭॥ ಎನಲು ಕವಿದುದು ಸೇನೆ ಕಂಗನೆ। ಕನಲಿ ಕರ್ಣದ್ರೋಣರಿಗೆ ನೀ। ನೆನಿತರವ ಘಡ ಬಾಯಬಡಿಕನು ಭೀಮಸುತನೆನುತ ॥ತನತನಗೆ ಕಾಲಾಳು ಮೇಲಾ । ಳನು ಸಮಿತರೌಕಿದರು ಚಾಪ । ಧ್ವನಿಯೊಳಗೆ ನೆರೆ ಮೊಳಗೆ ಬಹುವಿಧವಾದ್ಯನಿರ್ಘೋಷದಲಿ ॥೬೮॥ ಆಳಮಿಟಿ ನಿಮಗಂಜವೆನು ಕಾ । ಲಾಳ ಹೊಯ್ಕೆನು ಕುದುರೆಕಾರರು । ಮೇಲು ವಾಯಲಿ ರಥರಥಿಕರಡಹಾಯ್ಸಿತೇರುಗಳ॥ ತೂಳಿಸಲಿ ಗಜದಳವನಿವರಿಗೆ। ಕೋಲು ತೊಡಚುವನಲ್ಲ ನೆರೆಹೀ। ಯಾಳಿಯುಳ್ಳೊಡೆ ಬರಲಿ ಕರ್ಣದ್ರೋಣಕೃಪರೆಂದ ॥೬೯॥ ಹಲಬರಸುರರು ಮಡಿದರಿವನ । ಗ್ಗಳೆಯನಿರುಳಿನ ಬವರೆದಾಯತ । ಶಿಖಿಪ್ರದೀಪ್ತಂಗನುತಲಿಲಾಗುರುಕೃಪಾದಿಗಳು॥ ಅಳುಕದಿರಿ ಬಳಿಕೆನುತ ಭಕತಿಯಿ। ನೊಲಿಸಿದರಲಾ ಪಾಂಡವರು ಯದು । ಕುಲಲಲಾಮನನಮಲಗದುಗಿನವೀರನಾರಯಣನ॥ ॥೭೦॥

ಅಂತು ಸಂಧಿ ೧೫೫ಕ್ಕೆ ಪದ ೧೦೦೬ ಕ್ಕಂ ಮಂಗಳಮಸ್ತು

ಹದಿನಾರನೆಯ ಸಂಧಿ.

॥ ಸೂಚನೆ ॥ ಚಂಡಬಲಕುರುಪತಿಗೆ ಮುಳಿದರ । ಗಂಡನಿರುಳಿನಕಾಳಗದೊಳು । ದ್ದಂಡಭಟ ಕಲಿಕ
ರ್ಣ ಕೊಂದನು ಭೀಮನಂದನನ ॥

॥ಪದ॥ ಕೇಳು ಧೃತರಾಷ್ಟ್ರಾವನಿಪ ದೊರೆ । ಯಾಳನರಸುತ ಬಿಟ್ಟಸೂಠಿಯೊ । ಳಾಳುಕುದುರೆ
ಯುದಳವನಿಬ್ಬಗಿಗಳೆದು ದಳವುಳಿಸಿ ॥ ಕೋಲತೊಡಚಿರೆ ಕರ್ಣಕೃಪಭೂ । ಪಾಲ ಕ್ರದುವ ಹಿಡಿ ನೃಪಾದಿ
ಗಳ್ಳೇಳಿ ಸಮ್ಮುಖವಾಗೆನುತ ಕೈಮಾಡಿ ಬೊಬ್ಬಿರಿದ॥ ಚೆಲ್ಲಿತೀಬಲಜಲಧಿ ಭಟರ। ಲ್ಲಲ್ಲಿ ಮುಕ್ಕುರಿಕಿದರು
ಸಬಳದ । ಸೆಲ್ಲೆಹದ ತೋಮರದ ಚಿತ್ರದಸರಿಯಸ್ಸೈಗರೆದು ॥ ಘಲ್ಲಿಸಿದವಾನೆಗಳು ತೇರಿನ । ಬಲ್ಲಿದ
ರು ತುಡುಕಿದರು ಕಂಬುಗೆ | ಯಲ್ಲಿ ಖುರ ಕುಣಿದಾಡೆ ಹೊಕ್ಕರು ರಾಯರಾವುತರು ॥೨॥ ಎಡಬಲನ
ಹಿಂದಿದಿರಿನಲಿ ಕೆಲ । ಕಡೆಯ ದಿಕ್ಕಿನೊಳೌಂಕಿದರು ಬಲು । ಕಡಲಮಧ್ಯದ ಗಿರಿಯ ನಡರುತ ತೆರೆಗ
ಳೊದೆದಂತೆ॥ ಕೊಡಹಿದೊಡ್ಡೆ ಕಟ್ಟಿರುಹೆಗಳು ಬೆಂ। ಬಿಡದೆ ಭುಜಗನನಳಲಿಸುವವ್ರೋ। ಲಡಸಿ ತಲೆಯೊ
ತ್ತಿದರು ಬೀಳುವಹೆಣನನೊಡೆದುಳಿದು ॥೩॥ ಹೊಕ್ಕಸುಭಟರು ಮರಳಲಿಂ ಖಳ । ಸಿಕ್ಕಿದನು ಸಿಕ್ಕಿದನು
ಚಲಿಸುವ । ಚುಕ್ಕಿಗಳ ಹೊಯ್ಬೆಳಗುತ್ತೆನುತಸುರರುರವಣಿಸೆ ॥ ಹೊಕ್ಕು ನಿಂದರು ನೀಡು ಹರಿಗೆ
ಯ । ನಿಕ್ಕಿ ನಿಂದರು ತಮತಮಗೆ ಮೇಲಿಕ್ಕಿದರು ಧರೆ ಮುರಿಯೆ ಬಳಿದೆರೆ ಮುಸುಕಿ ಮುರಿವಂತೆ॥೪॥
ಅಗಡುದಾನವನಿವನು ಕಡ್ಡಿಗೆ। ಬಗೆವನೇ ಸಾಗರವನರವ। ಟ್ಟಿಗೆಯನಿಟ್ಟೊಡೆಮಡಬನಲ್ಲಾ ನೀರ ಕುಡಿ
ವವನು ॥ ಹೊಗೆದುದ್ಯೆ ಹೆಚ್ಚಾಳುಗಳ ನಗೆ ಮೊಗದ ಮೋಡಾಮೋಡಿಯಲಿ ಕೈ । ಮುಗುಚಿ ಕಳೆದನು
ನಿಮಿಷದಲಿ ಹೇರಾಳರಾಸೆಗಳ ॥ ೫ ॥ ಕೆಲರ ಮುಷ್ಟಿವಿನಲಿ ಕೊಂದನು । ಕೆಲಬರನು ಹೊರಗೈ
ಯ ಹೊಯ್ಲಲಿ । ಕೆಲಬರನು ಧನುವಿನಲಿ ಗದೆಯಲಿ ಹೊಯ್ದು ಕೆಲಕೆಲರ ॥ ಕಲಕಿದನು ಬಲಜಲಧಿ
ಯನು ಮೇ । ಲಲಿದು ಕವಿದುದು ಮತ್ತೆ ಹೆಣನನು । ತುಳಿದು ಮುಗ್ಗಿತು ಮೇಲೆ ಬಿದ್ದುದು ಮು
ಸುಕಿತರಿಭಟನ ॥೬॥ ಘೂತರೇ ಕುರುಸೈನ್ಯಶರಧಿಯ । ಘಾತವೆಂಟಗೆ ಸವೆದುದೋ ಕೈ । ಸೋತ
ವೇ ಮಿಗೆ ಕೊಲುವೆನೆನುತ ಮುರಾರಿ ಗರ್ಜಿಸಿದ ॥ ಈತಗಳಿಗಿದು ಮದ್ದೆನುತ ಮಾ । ಯಾತಿಶಯ
ಯುದ್ಧದಲಿ ಬಲಸಂ । ಘಾತವನು ಬೆದರಿಸಿದನೇವಣ್ಣಿಸುವೆನಾನೆಂದ ॥೭॥ ಮಾಯದಲಿ ಹುಲಿಯಾಗಿ
ಗರ್ಜಿಸಿ । ಹಾಯಿದನು ಕಲಿಸಿಂಹವಾಗಿ ಗ । ದಾಯುಧದಲಪ್ಪಳಿಸಿದನು ಭೈರವನ ರೂಪಾಗಿ ॥ ಬಾ
ಯಲಡಸಿದನಹಿತರನು ಕಂ । ಪಾಯುಧದ ನಿಲವಿನಲಿ ಸುಭಟರ। ಪಾಯಗೆಡಿಸಿದನೊಂದುನಿಮಿಷದೊ
ಳೊರಸಿದನು ಬಲವ ॥ ೮ ॥ ಬೀಳಹೊಯ್ದನು ಬಿರುದರನು ಬಿರು । ಗಾಳಿಯಾಗಿ ವರೂಥಹಯವ
ನು । ಕಾಳುಗಿಚ್ಚಾಗುರುಹಿದನು ಫಣಿಯಾಗಿ ತುಡುಕಿದನು ॥ ಮೇಲೆ ಕವಿದುದು ಜಲಧಿಯಾಗಿನ್ನ ।
ಪಾಲನಿಕರದೊಳುರುಹಿದನು ಗಿರಿ । ಜಾಲವಾಗಿ ಘಟೋತ್ಕಚನು ಘಲ್ಲಿಸಿದನರಿಬಲವ ॥ ೯ ॥ ಎರಗಿ
ದನು ಸಿಡಿಲಾಗಿ ಕಂಗಳ । ಲುರುಕಿಸಿದ ಮಿಂಚಾಗಿ ಮಳೆಯನು । ಕರೆದು ಸಾದಿದನಾತಪತ್ರತನುತ್ರಸೀ
ಸಕವ ॥ ತುರುಗಿದನು ಹಯವಾಗಿ ಮಿಗೆ ಬೊ । ಬ್ಬಿರಿದನೊಂದೆಡೆಯಲ್ಲಿ ಸುಭಟರ । ನೊರಸಿದನು
ಕೊಂದೆಡೆಯೊಳೇನೆಂಬೆನು ಮಹಾದ್ಭುತವ ॥ ೧೦ ॥ ಸುರಿದಕರುಳಿನ ಸಿಡಿದಹಲುಗಳ । ಜರಿದತಲೆಗ

ಳ ಹಾಯ್ದು ಮೂಳೆಯ। ಹರಿದನರವಿನ ಬಿಗಿದಹುಬ್ಬಿನ ಬಿಟ್ಟಕಣ್ಣುಗಳ ॥ ಮುರಿದಗೋಣಿನ ಬಸಿ
ವತೊರಳೆಯ। ಹುಪರಕ್ತದ ತರಿದಖಂಡದ।ಬಿರಿದಬಸುರಿನ ರೌರವದ ರಣಭೂಮಿ ರಂಜಿಸಿತು॥೧೧॥
ಗರುಡನುಬ್ಬುಟೆಗಹಿನಿಕರ ಜ। ರ್ಝರಿತವಾದವೊಲಿವನ ಕಡುನಿ । ಬ್ಬರದ ಥಾಳಿಗೆ ಧೈರ್ಯಗೆಟ್ಟುದು
ಕೂಡೆ ಕುರುಸೇನೆ ॥ ಹೊರಳಿಯೊಡೆದುದು ಭಟರುಡಿದು ಮಡ। ಮುರಿಯೆ ಜವಗುಂದಿದರು ಬಿರು
ದರು। ನೆರೆದುದ್ಯೆ ಪರಾಭವದ ಸೂರೆಗೆ ರಾಯ ಕೇಳೆಂದ ॥ ೧೨ ॥ ಥಾತುಕೆಟ್ಟದು ದೊಡ್ಡೆಯೆಂ
ದೇ। ಭೂತಳಾಧಿಪ ಬಗೆದೆ ತೆಗೆಯಾ। ಮಾತು ಹುಸಿ ಮರಳಿಪರು ನಿನ್ನಯಪಟ್ಟದಾನೆಗಳು ॥ ಭೀತಿ
ಗೊಂಡರು ದ್ರೋಣ ಸೋಲಕೆ। ಸೇತುವಾದನು ಶಲ್ಯನಪಜಯ। ಮಾತೃಕಾಕ್ಷರನಾದನಶ್ವತ್ಥಾಮನಿಂ
ದಿನಲಿ ॥ ೧೩ ॥ ಇವನ ಧೈರ್ಯವನಿವನಥಾಳಿಯ। ನಿವನ ಹೂಣಿಗತನದ ಹೊರಿಗೆಯ। ನಿವನ ಖಾತಿ
ಯನಿವನವೆಗ್ಗಳತನದ ಸಾಹಸವ ॥ ದಿವಿಜರಾನಲು ನೋಕಟದು ಕ। ಮ್ಮವರ ಪಾಡೇನ್ಯೆ ಪಲಾಯನ।
ತವನಿಧಿಯಲ್ಲೈ ನಮ್ಮಬಲ ಧೃತರಾಷ್ಟ್ರ ಕೇಳೆಂದ ॥ ೧೪ ॥ ಹೋಯೆನುತಬೊಬ್ಬಿಡುವ ಸುಭಟರ।
ಬಾಯ ಹೊಯ್ಲೊಯ್ಯಡಬಡಿಸುತಿದೆ। ಆಯುಧವನೀಡಾಡಿ ಕೊಯ್ಕೊಯ್ಕೋಡಹರಿಗೆಗಳ ॥ ರಾಯ
ಕೊಂದರು ಕೊಲಲಿ ಸುಕೃತವು। ಬೀಯವಾಗಲಿ ಸಾವು ರಕ್ಕಸ। ನಾಯುಕ್ಕೆಯಲಿ ಸಾಯೆವೆನುತೋಡಿ
ಮುರಿದುದತಿರಥರು ॥ ೧೫ ॥ ಇಳಿದು ಕುದುರೆಯ ಬಿಸುಟು ರಥಸಂ। ಕುಳಕೆ ಹಾಯ್ದುವಕ್ವೆದುಕಾ
ರರ। ಬಳಚಿದಾಯುಧತತಿಗೆ ನೂಕುವಜೋಡು ಸೀಸಕಕೆ ॥ ಕಳಚಿದಾಭರಣಾತಪತ್ರಾ। ವಳಿಗೆ ಕಾಣೆ
ನು ಕಡೆಯನೀಪರ। ಕೊಲೆಗೆ ಭಂಗಕೆ ನಿನ್ನ ಬಿರುದರು ಬಂದುದಿಲ್ಲೆಂದ ॥ ೧೬ ॥ ಸಿಡಿದತಲೆಗಳ
ಬಳಿವಿಡಿದಸಾ। ಲಿಡುವರಕ್ತದಲೆರಡುಬಲದಲಿ। ಹಿಡಿದದೀವಿಗೆ ನಂದಿದವು ಕುಂದಿದವು ಚತುರಂ
ಗ ॥ ಮಡಮುರಿಯಮೆಯಪಾಯ್ತು ಸುಭಟರ। ನಿಡುಮುಸುಕು ಮೋಹಿಸಿತು ಮುರುಹಿನ। ಕಡು
ಹುಕಾರರು ಕೇಣಿಗೊಂಡರು ಬಹಳದುಷ್ಕೃತವ ॥ ೧೭॥ ದ್ರೋಣನೆಂಬುವ ಮುನ್ನವೇ ನಿ। ರ್ವಾ
ಣದೀಕ್ಷಿತನಾದನಾತನ। ಕಾಣೆನ್ಯೆ ಗುರುಸುತಗದೃಶ್ಯಾಂಜನವೆ ಸಿದ್ಧಿಸಿತು ॥ ಹೂಣಿಗರು ಮತ್ತಾರು
ಶಲ್ಯ। ಕ್ಷೋಣಿಪತಿಕೃತವರ್ಮಕೃಪರತಿ। ಜಾಣರೋಟದವಿದ್ಯೆಗೆನುತಿರ್ದುದು ಭಟಸ್ತೋಮ ॥೧೮॥
ಏನಹೇಳುವೆನಂದು ಬಹಳಾಂ। ಭೋನಿಧಿಯಲೆದ್ದುರಿಯ ಥಾಳಿಗೆ। ದಾನವಾಮರರಿಂದುಮೌಳಿಯ
ಮರೆಯಹೊಗುವಂತೆ ॥ ದಾನವಾಚಲಮಥಿತಸೇನಾಂ। ಭೋನಿಧಿಯ ಪರಿಭವದೊಳೆಸೆದುರಿ। ಗಾನ
ರೇಂದ್ರರು ಬಂದು ಹೊಕ್ಕರು ರವಿಸುತನಮರೆಯ ॥ ೧೯ ॥ ಶರಣುಹೊಕ್ಕರು ಬಂದು ಮಕುಟದ।
ಗರುವರವನೀಪಾಲಕರ ಮೋ। ಹರಕೆ ತೋರ್ಪಟ್ಟವರು ಭಾರಿಯಬಿರುದಿನತಿರಥರು ॥ ದುರುಳದೈ
ತ್ಯನ ಬಾಧೆಗವಪರಿ। ಹರಿಸಲರಿಯೆವು ಕರ್ಣನೀನೇ। ಮರಳಿ ಸೇನೆಯ ರಕ್ಷಿಸೆಂದುದು ನಿಖಿಳಪರಿವಾ
ರ ॥ ೨೦ ॥ ತಳಿತಮುಸುಕಿನ ಬೆರಳಮೂಗಿನ। ನೆಲನನೋಟದ ಮೈಯತೂಕದ। ಝಳದಸುಯ್ಲಿನ
ಮೊಗದ ಮೌನದ ನಸಿದನೆನಹುಗಳ ॥ ತಳಿತಕಡುಹಿನ ಬೀತಬಿರುದಿನ। ಬಲಿದಭಂಗದ ನೃಪತಿಗಳನ।
ಗ್ಗಳೆಯರವಿಸುತ ಕಂಡು ಹೊಗಳಿದನಾಘಟೋತ್ಕಚನ ॥ ೨೧ ॥ ಶಿವಶಿವಾ ಕೌರವನ ಸುಭಟರು।
ದಿವಿಜರಿಗೆ ವೆಗ್ಗಳರು ನಿನಗಿಂ। ದಿವರುಸೋತರು ಧೂತು ದಾನವ ನೀಕೃತಾರ್ಥನಲೆ॥ ಇವನ ಪಾಡಿ
ನ ಸುಭಟರೇ ನ। ಮ ವರು ಗೆಲವೆನಿವನದೇ ಮಾ । ದವನ ಸೂತ ಗತಂತ ವಿರು ಜಗುಪಾತನದು

ಯೆಂದ ॥ ೨೨ ॥ ಸಾಕು ದೈತ್ಯನ ಕಡಹ ಸೇಸೆಯು । ಸಾಕು ಸುಭಟರು ಬಾಯಬಿಡುತಿದೆ । ನೂಕು
ನೂಕಮರಾಳಿಯನು ತಡೆ ತಡೆಪಮಾಡಟರು ॥ ಆಕೆವಾಳರು ಪಿಗಡಿಸಿರುಪರ । ನೇಕಬಂದೆ ತಲ್ಲಣಿಪ
ತಗಹಿನ । ಲೇಕೆ ಕಾಲಕ್ಷೇಪವೆಂದನು ಕೌರವರಾಯ ॥೨೩॥ ದುಗುಡವೋ ಮುಖ್ಯಕ್ರಮಾಗ್ನಿಯ ।
ಕಡುಹುಗಳ ತಸಹೊಗೆಯೊ ರಾಯರ । ಮೊಗದ ನೋಡ್ಡ ಕೀರ್ತಿಕಾಮುಟ ಕಪಿದಕತ್ತಲೆಯೊ ॥ ಬಿಗಿ
ದಭೀತಿಯ ಮೋರೆಗಳ ಸೂ । ರೆಗಳೂ ಸವಿಮಾತುಗಳ ಸೋನೆಯೊ । ಸೊಗಸುಕಾರರು ನಿಂದನಿಲ
ವನು ಕರ್ಣನೋಡೆಂದ ॥ ೨೪ ॥ ಪಿಗಡತನವನು ವಹಿಲದಲಿ ಕೈ । ಮುಗುಚಿ ಕಳೆದನು ಸೂಸಕದ
ಹೂ । ಣಿಗತನದ ಸೊನ್ನಾರಪಿದ್ಯೆಯ ಸಾಹಸೋನ್ನತಿಯ ॥ ಸೊಗಸುಪುಟ್ಟಿಸ ಸುಲಿವರಸ । ವಾಟ
ಗಳನಿವರಪಿಡಾಯಿಗಳ ನಂ । ಬುಗೆಯ ಕೇಣಿದ ಪಾಡುಕಾರರ ಕರ್ಣನೋಡೆಂದ ॥ ೨೫ ॥ ನಡೆಯು
ತೆಡಹಿನ ಪಟ್ಟದಾನೆಯು । ಪಿಡಿಯ ಹೊಯ್ವರೆ ಜೀಯ ರಣಿಪವ । ಗಡವು ನಮಗಿದು ರಾತ್ರಿ ದೈ
ತ್ಯರಿಗಿದುವೆ ನಡುಹಗಲು ॥ ಮೃಡನನೊಡನವಸರಕೆ ಬಗೆಯದ । ಕಡುಹುಕಾರರು ನಿನ್ನವರು ಕಡೆ ।
ನುಡಿದು ನೋಯಿಸಲೇತಕೆಂದನು ಕರ್ಣಕುರುಪತಿಗೆ ॥ ೨೬ ॥ ತಾಗಿ ವಜ್ರವು ಮುಕ್ಕುಗಳೆವಡೆ । ಸಾ
ಗರವ ಹೊಗಲೇಕೆ ಗಿರಿಗಳು । ಹೋಗಲಿನ್ನಾಮಾತು ಪಿಶಾಚದೈತ್ಯನುಪಟಳವ ॥ ಈಗ ಮಾಣಿಸು
ನಮ್ಮ ಸುಭಟರು । ಯೋಗಿಗಳವೋಲ್ದಂಡಹೀನರು । ಬೇಗಮಾಡಿನ್ನಮರಿಪುವನು ತರಿದು ಬಿಸು
ಡೆಂದ ॥ ೨೭ ॥ ಕಳೆದಪಿಹಾಸಲು ಶಕ್ತಿಪಾರ್ಥನ । ತಲೆಗೆ ಬೈಚಿಟ್ಟಿಹುದು ಯಾಗಳೆ । ಕಳೆದನಾದೊ
ಡೆ ಮುಂದೆ ಫಲುಗುಣನೆನ್ನಲೆಕ್ಕಿಸನು ॥ ಉಳಿದಬಾಣಂಗಳಲಿ ದೈತ್ಯನ । ಗೆಲುವುದರಿದದಕಾವಹದ
ನೋ । ತಿಳಿಯಲರಿಯನು ಜೀಯ ಯೆಂದನು ಕುರುಪತಿಗೆ ಕರ್ಣ ॥ ೨೮ ॥ ಈಗಲೀದಾನವನ ಬಲೆ
ಯಲಿ । ತಾಗಿ ಸಿಲುಕಿತು ನಮ್ಮ ಮೋಹರ । ಮೇಲೆ ಫಲುಗುಣಸಾರು ಗೆಲುವರು ಮರಣ ತಮಗಾ
ಗೆ ॥ ನೀಗಿ ಕಳೆ ಕೊಲೆಗಡಿಗನನು ಜಯ । ವಾಗಲೀಗಲು ಮುಂದೆ ನರನು । ದ್ಯೋಗಕಾರ್ಯವೆವು ಚಿಕಿ
ತ್ಸೆಯನೆಂದನವನೀಶ ॥ ೨೯ ॥ ಆದೊಡಮರಪಿರೋಧಿಯಸುವನು । ಸೇದುವೆನು ಸರಿಸದಲಿ ನಿಂದೊ
ಡೆ । ನಾದುವೆನು ನಿಚ್ಚೊಟ್ಟಡಲ ರಕುತದಲಖಿಳದಿಗುತಟವ ॥ ಕಾದುವರು ನಮ್ಮವರು ಕಳಚಿದ । ಕೈ
ದುವನು ಕೈವಶವ ಮಾಡಿ ಪಿ । ನೋದವನು ನೀವ್ನೋಡಿಯೆಂದನು ಕರ್ಣನರಸಂಗೆ ॥ ೩೦ ॥ ಇತ್ತ
ಲೈ ದನುಜೇಂದ್ರಕದನವ । ನಿತ್ತಲಿತ್ತಲು ಗರುವಸುಭಟರ । ಕತ್ತಲೆಯೊಳೋಡಿಸಿದಕಡುಹನು
ತೋರು ನಮ್ಮೊಡನ॥ ಮೃತ್ಯು ನಿನಗಾನನ್ನೊಡನೆ ತಲೆ। ಯೊತ್ತಿ ನೋಡೆನ್ನನುತ ಬೊಬ್ಬಿರಿ । ಯು
ತ್ತ ದೈತ್ಯನ ತರುಬಿದನು ಬಲವೆಲ್ಲ ಬೆರಗಾಗೆ ॥ ೩೧ ॥ ಎಲವೊ ಗಂಡಸುವಹೆಕಣಾ ನೀ । ಮಲಿತು
ನಿಂದುದು ಸಾಲದೇ ಸುರ । ರೊಳಗೆ ಮಲೆತರ ಸೀಳುವೆನು ಮಾನವರ ಪಾಡೇನು ॥ ಕಲಿತನಕೆ ಮೆ
ಚ್ಚಿದೆನು ಅಳಿದರೆ । ಮೊಳೆಯದಿಹುದೇ ಕೀರ್ತಿ ಯಾಬಲ । ದೊಳಗೆ ದಿಟ್ಟನು ಕರ್ಣನೀನೆನುತಸುರ
ಮಾರಾಂತ ॥ ೩೨ ॥ ತಾನೆತನ್ನನು ಹೊಗಳಿಕೊಂಬನೆ । ಮಾನನಿಧಿಯಾದವನು ಸಾಕೀ । ಮಾನವರ
ಗರುವಾಯಿ ಭಾರಿಯಭಂಡಪಿದ್ಯೆಗಳು ॥ ಪನುಹೊಸತೆಂತೆಂದು ಶರಸಂ । ಧಾನವುಳಿದಗ್ಗಳಿಕೆಗಳ
ನೀ । ನಾನಬಲನ್ನೊಡೆ ಬಿಲ್ಲ ಹಿಡಿಹಿಡಿ ಕಾಣಲಹುದೆಂದ ॥ ೩೩ ॥ ಘಡ ತುಟಾರಿಸಿ ನುಡಿವಜಿಹ್ವೆಯ ।
ಹೆಡತಲೆಯೊಳುಗಿವೆನುಕಣಾ ಕೇ । ಳ್ಪೊಡಕಿ ತನ್ನಲಿ ಬದುಕುವವರಾರಿಂದ್ರಯಮರೊಳಗೆ ॥ ಕಡು

ಹುಕಾರರ ಗರ್ವವಿಷಗಾ। ರುಡವನೆನ್ನಲಿ ನೋಡುನೋಡೆನು । ತೊಡನೊಡನೆ ಶರವಳೆಯ ಕರೆದನುಪ
ವನಸುತಸೂನು॥೩೪॥ ದಾನವರ ಧಕ್ಕಡರು ಧೈರ್ಯದ । ದಾನಶೀಲರು ಗಾಯವನು ಗಿರಿ । ಯಾನಬಾ
ರದು ಮುಷ್ಟಿಬಲಪೆಗ್ಗಳರು ಸತ್ವದಲಿ ॥ ಈನಿರಂತರಬಾಣರಚನೆಯ । ನೀನು ನೋಡಭ್ಯಾಸವಿದ
ನಾ । ಯೇನಹೇಳುವೆಲೇಸೆನುತ ಕಲಿಕರ್ಣ ತೆಗೆದೆಚ್ಚ ॥ ೩೫ ॥ ಹಾರಿದವು ಗರಿಸಹಿತ ದೇಹದ ।
ಡೋರುಗಳೆದಂಬುಗಳು ನೆತ್ತರ । ಜೋರು ಮಸಗಿತು ಬೆಗಡಜವ್ವಗಿನ ಜಿಗಿಯ ರೌಕುಳದ ॥ ಏರೆಬಾ
ಯ್ಗಳ ಖಂಡದಿಂಡೆಯ ಸೂರೆಗೊಂಡವು ಹಿಂದಣಂಬುಗ । ಳಾರೆನಭಿವರ್ಣಿಸಲು ಕರ್ಣಘಟೋತ್ಕ
ಚಾಹವವ ॥ ೩೬ ॥ ತಾರಕನ ಕೈಟಭನ ಜಂಭನ । ವೀರಮಹಿಷನ ಕಾಲನೇಮಿಯ । ತಾರಕಾಕ್ಷನ
ಕುಂಭಕರ್ಣನ ಗುಹನ ರಾವಣನ॥ ಆರುಭಟೆ ರಣದುಬ್ಬಟೆಯ ಜ । ಜ್ಝಾರತನವಿವನೊಬ್ಬನಲಿ ಕೈ ।
ವಾರವೇ ನೆರೆ ಕಾಣಲಾಯ್ತೆಂದುದು ಸುರಸ್ತೋಮ ॥ ೩೭ ॥ ನಿಲುವೊಡಸುರನ ಮುಂದೆ ಕರ್ಣನೆ।
ನಿಲುಹಬೇಹುದು ಕರ್ಣನುರುಬೆಗೆ। ನಿಲುವೊಡೀಯಮುರಾರಿಗೊಪ್ಪುವುದೈ ಮಹಾದೇವ ॥ ಉಳಿದಭೂ
ರಿಯುಬಣಗುಗಳು ಪೆ । ಗ್ಗಳೆಯರೇ ಸಂಗ್ರಾಮದಲಿ ಕುರು । ಬಲದೊಳಗೆ ನೋಡಿದರೆ ಸರಿಯಹ
ಸುಭಟರಿಲ್ಲೆಂದ ॥೩೮॥ ಎರಡುಬಲರಿವರಿಬ್ಬ ರಾಹವ । ದುರವಣೆಯನೇ ನೋಡುತಿರ್ದುದು । ಸರಿ
ಮಿಗಿಲುಕಾದಿದರು ಶಿವಶಿವ ಭಾರಿಯಂಕವಲೆ ॥ ಸರಳು ತೀರಲು ಸುರಗಿತೋಮರ । ಪರಶುಹಿರಿಯು
ಬ್ಬಣದಲೀತನು । ಅರಿಯನಿಟ್ಟೊಡೆ ತರಿದು ಪರಿಘದೊಳಿಟ್ಟನಿನಸುತನ ॥೩೯॥ ಬಗುವಕಿಡಿಗಳ
ಬಾಯಧಾರೆಯ । ಹೊಗರ ಹೊಗೆಗಳ ಸೆಗಳಿನುರಿನಾ । ಲಿಗೆಯ ಭೋಂಕಾರವದ ಮುಂಮೊನೆ
ಶೂಲವೈತರಲು ॥ ನಗುತ ಮೂರಂಬಿನಲಿ ಕೈದುವ । ತೆಗಸಿದನು ನೆರೆಹತ್ತುಶರದಲಿ । ಹಗೆಯ
ಹೇರುರದೊಳಗೆ ಹೂಳಿದು ಕರ್ಣಬೊಬ್ಬಿರಿದ ॥೪೦॥ ಪರಿಘದಲಿ ಕರನಾಳದಲಿ ಮಿಗೆ । ಬೆರಸಿದೊಡೆ
ಗಿರಿ ತೆರಳಬಲ್ಲುದೆ । ಹರಮಹಾದೇವಾವಸತ್ವವೊ ದಾನವೇಶ್ವರನ ॥ ಅರಿಯೆ ಶರಹತಿಗೊಡಲು
ನೆರಜ । ಜ್ಝರಿತವಾದುದು ನೊಂದುದೀಬಲ । ಬೆರಸಿ ಪರಿಘದಲಿಟ್ಟನಂಬುಜಬಂಧುನಂದನನ ॥೪೧॥
ತಿರುಗುತೈತಹಪರಿಘಕಾವೆಡೆ । ಗಿರಿಗಳಡಿಮೇಲಹವು ನಾವಿ । ನ್ನರಸ ಹೇಳುವುದೇನು ಕರ್ಣನಬಾಹು
ವಿಕ್ರಮವ ॥ ಪರಿಘವಮು ನೆಗೆ ಮಾಯವಾದುದು । ಎರಡುಶರದಲಿ ಸಾರಥಿಯನಿ । ಟ್ಟೊರಸಿದನು ಹ
ದಿನೈದುಶರದಲಿ ರಥದಕುದುರೆಗಳ ॥೪೨॥ ಸಮರಸಾಧನ ಸವೆಯೆ ಕೋಪದ। ತಿಮಿರ ಗರಿಗಟ್ಟಿತು ಮ
ಹಾವಿ। ಕ್ರಮನ ಚಳಕವನೇನಪೇಳುವೆ ರಥದ ಬಳಸಿನಲಿ ॥ ಸಮತಳಿಸಿ ಕೈದುಗಳ ಮಳೆಯನು । ದ್ಯು
ಮಣಿತನಯನಮೇಲೆ ಕರೆದನು । ನಿಮಿಷದಲಿ ಪರಿಹರಿಸಿ ದೈತ್ಯನನೆಚ್ಚನಾಕರ್ಣ ॥೪೩॥ ತೂರಿದವನಿ
ರೆಹೊಟ್ಟುಗಾಳಿಗೆ । ಹೋರಿದರೆ ಕುಲಗಿರಿಯ ಬಯಸಿಕೆ । ಜಾರುವುದೆ ನಿನ್ನೆಸುಗೆಗೆವಿಸ್ಮಯಯು ಭಯ
ಕಟಕದಲಿ ॥ ತೋರಲಿಲ್ಲೆಣೆ ಜಗದೊಳೋಲೆಯ । ಕಾರನೀನಹೆಯೆನುತ ರಿಪುಬಲ । ಸೂರೆಗಾರನು
ಕವಿಸಿದನು ಕಲಿಕರ್ಣನಾಖಿಳನ ॥೪೪॥ ಘಡ ದೊತಾರಿಸಿ ನಿಂದರೊಡಲಿ । ಕ್ಕಡಿಯ ಮಾಡುವೆನೆಲವೊ
ನಿನ್ನಯ । ಗಡಣಿಗರ ಕರೆ ಕಾಯ್ದು ಕೊಳಲಿ ಸುಯೋಧನಾದಿಗಳ ॥ ಮಡಮುರಿದು ಪೋಡಿದೊ
ಡೆ ರಕುತವ । ಕುಡಿಸುವೆನು ಖಂಡೆಯಕೆನುತ ಕೊಲೆ । ಗಡಿಗನೌಕಿದೊಡದಿರಬಿಟ್ಟನು ಕರ್ಣ ಕೆಲಸಿಡಿ
ದ॥೪೫॥ ಆಹಹ ಶಿವಶಿವ ದೈತ್ಯರಾಹು। ಗ್ರಹಣವಾಯಿತೆ ಕರ್ಣಸೂರ್ಯರ। ಮಹಿಮೆ ತಗ್ಗಿತು ಕಟಕ

ಟಾ ಯೆಂದೆನುತ ಬಲ ಬೆದರೆ ॥ ಅಹಿತನುಪಟಳಕೆಳುಕಿ ಕೆಲದಲಿ । ಮಿಹಿರನಂದನ ನಿಂದನಂಬಿನ । ಲ
ಹರಿ ಮಸುಗಿತು ಖಳನ ಕಡುಗವನಪೇಕ್ಷಣಕೆ ಕಡಿದ ॥೪೬॥ ಚಾಪವರಿದನು ದನುಜ ಮಡ್ಡುಕ । ತಾರಿ
ಯಲಿ ಕರ್ಣಾಸ್ತ್ರಧಾರಾ । ಸಾರದಲಿ ಮೈನನೆದು ಹೊಣಲಿಡುವರುಣವಾರಿಯಲಿ ॥ ಆರಿವನು ಹೈ
ಡಿಂಬಿ ನಿಶ್ಚಯ । ಚಾರುಭೀಮಜನೀತನಾರು ಬ । ಕಾರಿನಂದನನೆನಲು ಬಲವಿರುಳಸುರಮಯವಾ
ಯ್ತು ॥೪೭॥ ಅಣೆದನಶ್ವತ್ಥಾಮನನು ತತ್। ಕ್ಷಣದಲರಸನ ತಾಗಿ ದ್ರೋಣನ। ಕೆಣಕಿದನು ದುಶ್ಶಾಸ
ನನ ಮಸೆಗಾಣಿಸಿದ ಕೃಪನ ॥ ರಣದೊಳೋಡಿಸಿ ಮುರಿದು ಕರ್ಣನ । ಕೆಣಕಿ ನಿಂದನು ಮತ್ತೆ ಸಮ
ರಾಂ । ಗಣದ ಚೌಪಟಮಲ್ಲನಿತ್ತನು ಪಡೆಗೆ ತಲ್ಲಣವ ॥೪೮॥ ಬಿರಿಯಕಕ್ಕುಲಿತೆಯಲಿ ಕರ್ಣನ । ಮ
ರೆಯಹೊಕ್ಕವು ಕರ್ಣನೀತನ । ತರುಬಿದನಲಾ ಶಕುತಿಯಾವೆಡೆಯೆಂದು ಕೆಲಕೆಲರು ॥ ಕರುಬತನವೇ
ಕಕಟ ಪುಣ್ಯದ । ಕೊರತೆ ನಮ್ಮದು ಕರ್ಣನೇಗುವ । ವಿರಿತಕಂಜವುದಾನೆ ಬಾಹಿರರೆಂದರುಳಿದವರು ॥
॥೪೯॥ ಕಾರಿಸುವೆನವನಸುವ ಮಿಗೆ ಮೈ। ದೋರಿ ನಿಂದೊಡನಿಮಿಷ ಹಲುಬಾ। ಯಾರದಿರಿ ಕಳ್ಳೇರು
ಕಾರನ ಕಡಿವು ಹರಹುವೆನು ॥ ಜಾರದಿರಿ ಯೆನುತಭಯಹಸ್ತವ । ತೋರಿ ತುಡುಕಿದನುಗ್ರದಾಳಿ
ಯ। ತೂರುಗಿಡಿಗಳ ತುಡುಕಿದುರಿಯ ಮಹಾಸ್ತ್ರವನು ಕರ್ಣ ॥೫೦॥ ತಳಿತಕಿಡಿಗಳ ಕೈದುವಿನ ಮೈ।
ಜಳದ ದಾಳಿಯೊಳಭಯಬಲದ । ಗ್ಗಳದಹರುಷವಿಹಾರಶರಧಿಯ ಕಾಲುವೆಯೊಳಾಯ್ತು ॥ ಬಳಿ
ಯಚೌರಿಗಳೆಸೆಯೆರೌದ್ರಾ । ವಳಿಗಳಣಸಿನ ಹೊಗರನುಗುಳುವ । ಹೊಳೆವಧಾರೆಯ ಭಾರಿಯಸ್ತ್ರ
ವ ತೂಗಿದನು ಕರ್ಣ ॥೫೧॥ ಕಾಯಲಾಪೊಡೆ ದನುಜ ಕರೆ ಕಮ । ಲಾಯತಾಕ್ಷನನಿಂದು ಬದುಕುವು।
ಪಾಯವುಳ್ಳೊಡೆ ಬೇಗ ಬೆಸಗೊಳು ಭೀಮಫಲುಗುಣರ॥ ಆಯುಧಕೆ ಕರವಿಟ್ಟೆನೈ ನಿ । ನ್ನಾಯುಷವ
ಹಿಂದಿಕ್ಕಿಕೊಂಬನ । ತಾಯೆನುತ ಬೊಬ್ಬಿರಿದು ಶಕ್ತಿಯೊಳಿಟ್ಟನವನುರವ ॥೫೨॥ ಆರಿದನ, ಪರಿಹ
ರಿಸುವನು ಜಂ । ಭಾರಿ ಕೊಟ್ಟನು ಕಮಲಭವಕಾ । ಮಾರಿಗಳಿಗುಬ್ಬಸದಕೈದುವನೀಗಳಿಂದಿವನು ॥
ಧಾರೆಯಲಿ ದಳ್ಳಿಸುವಕಿಡಿಗಳ । ಭೂರಿಯಾಯುಧವಸುರನೆದೆಯನು । ಡೋರುಗಳೆದುದು ಹಾಯ್ದು
ಹೋದುದು ಅಸು ಕಳೇಬರವ ॥೫೩॥ ಆರಿ ಬೊಬ್ಬಿರಿವುದನು ಕಂಡುದು । ದಾರಕೆಕಣೆಯಮ ಅಸುರನ
ಸು ಬಲು । ಭಾರಿಯೊಡಲೊಳು ವುಡಿದು ಬಿದ್ದುದು ಬಿರಿದ ಗಿರಿಯಂತೆ ॥ ತೇರುತುರಗಪದಾತಿಕರಿ
ಘಟೆ । ವೈರಿಬಲದಲಿ ಯಸುರನಿಂದವೆ । ತೀರಿತೊಂದಕ್ಷೋಣಿಯಸುರನು ಬಿದ್ದಭಾರದಲಿ ॥೫೪॥ ತ
ರಣಿಯೌರಸಪುತ್ರನೀತನ । ಕರಿಯಿರುಳುಮಯನಾಮದೇವರ । ಕರುವಿನಂದದೊಳಸುರನಿದಿರೊಳಗಾ
ರಿಗವಮಾನ ॥ ಅರಸಚಿತ್ತ್ರೈಸೇನಹೇಳುವೆ । ನುರುತರದ ವಿಜಯಾಭ್ಯುದಯ ಮಿಗೆ । ಮೊರೆದುದಿದು
ಕಲ್ಪಾಂತಸಾಗರದಂತೆ ಕುರುಸೇನೆ ॥೫೫॥ ಕುರುಬಲದ ಕಳಕಳದ ಹವಣ । ಲ್ಲರಿಬಲದ ಸಂತೋಷವಿ
ದು ಮುರ । ಹರನ ಮಂತ್ರವು ಜೇಯ ಸೂಳೈಸಿದನು ಭುಜಯುಗವ ॥ ಗರಳವಿಲ್ಲದಕುಪಿತಫಣಿ ಹಲು।
ಮೊರೆದು ಮಾಡುವುದೇನು ಕರ್ಣನ । ನೊರಸಿದೆವು ಹೋಗೆನುತ ಸಂತೈಸಿದನು ಪಾಂಡವರ ॥ ೫೬ ॥
ಸಾರಿದನು ಶರಮಂಚವನು ಭಾ । ಗೀರಥೀನಂದನನು ಕರ್ಣನ । ಬೇರುಹರಿದದ್ರುಮದವೋಲ್ಗತಶೌರ್ಯ
ನಿನ್ನನುತ ॥ ಭಾರಿಯಾಳ್ಕೆ ದ್ರೋಣನಿಂತನು। ತೀರಿದನು ವರಪಾಂಡುಸುತರಿ । ನ್ನಾರ ಮುರಿಯರು
ವೀರನಾರಾಯಣನ ಕರುಣದಲಿ ... ... ॥೫೭॥

ಅಂತು ಸಂಧಿ ೧೬ ಕ್ಕೆ ಪದ ೧೦೬೩ ಕ್ಕಂ ಮಂಗಳಮಸ್ತು.

ಹದಿನೇಳನೆಯ ಸಂಧಿ.

ಸೂಚನೆ || ಇರುಳಸಮಯದೊಳುಭಯರಾಯರ | ಗುರುವಿರೋಧಿಮಹೀಶಸೇನಾ | ಶರಧಿಯನು ಕಲಕಿದನು ಗೆಲಿದನು ಮಕುಟವರ್ಧನರ ||

ಪದ || ಕೇಳು ಧೃತರಾಷ್ಟ್ರಾವನಿಪ ನಿ | ಸ್ಸಾಳನವರಾಳನು ವಿಭಾಡಿಸಿ | ನೀಲಗಿರಿಯೊಡೆ
ಯೊಕ್ಕುದೆನೆ ಖಳನೊಡಲು ನಿಡುಗೆಡೆಯೆ || ಕಾಳಗದ ಕೈಚಳಕದವರು | ಬ್ಬಾಳುತನವನು ಕೆಡಿಸಿ ತಿ
ಮಿರದ | ಥಾಳಿತೆಗೆದುದು ಬಿಗಿದಕತ್ತಲೆಮೊಗೆದುದಂಬರವ ||೧|| ಇನ್ನು ಬದುಕಿದೆವಮಮ ರಕ್ಕಸ |
ಕುನ್ನಿಯೂಳಿಗವಡಗಿತೆಂದೇ | ನಿನ್ನವರ ಸುಮ್ಮಾನವುಕ್ಕಿತು ಸುಕ್ಕಿತತಭೀತಿ || ಇನ್ನು ಸಡಿ ಘಡ ಸೋಂ
ತದನುಚರ | ಬೆನ್ನೊಳುಗವೆವು ಕರುಳಸಾಹವ | ಕೆನ್ನ ತನ್ನನು ಬಿಡಿಯೆನುತ ಗರ್ಜಿಸಿತುಪಂವಾರ ||
||೨|| ಅಂಗವಣೆ ಮನದಲ್ಲಿ ಪಯಣದ| ಮುಂಗುಡಿಯ ದುಮ್ಮಾಯ ಕೈಯಲಿ | ಸಿಂಗವಾಯಿತು ಸಮ
ಯವೆರಡೊಡ್ಡಿನಲಿ ಸುಭಟರಿಗೆ || ಕಂಗಳನು ಕಾರಿರುಳರಕ್ಕಸಿ | ನುಂಗಿದಳು ಸಾವೇನನುಸುರುವೆ |
ನಂಗಪಿಸಿ ಕಡುಗಲಿಗಳಿಂದಾಡಿದರು ತಮ್ಮೊಳಗೆ ||೩|| ಒಳಗೊಳಗೆ ಹೊಯ್ದಾಡಿ ಹೊರಳುವ | ಬಲು
ಭಟರನಗಿದೊಗುವಕತ್ತಲೆ | ಯಳುಕಸಿತು ಕೋಲಾಹಳದ ಭಯ ಚಾತುರಂಗದಲಿ || ಬಲಿದತೂಕಡಿಕೆ
ಗಳು ನಸುಬೆದ | ರೊಲವು ಹೆಚ್ಚಿದಝಳವಝೋಂಪಿನ| ಬಲೆಗೆ ಸಿಲುಕಿದಬಲವನರ್ಜುನದೇವನೀಕ್ಷಿಸಿ
ದ ||೪|| ಶಿವಶಿವಾ ಬಲುಬಳಲಿರೆಂದಾ | ಹವದೊಳಗೆ ಕಡುಗೈದು ನೂಕಿತು | ಬವರವುಬ್ಬಿದತಿಪುರವ
-ಳಯಲಿ ಸಾಕು ರಣವೆನುತ || ಟಪಿಜಪತಿಸುತನೆದ್ದು ಸೇನಾ | ನಿವಹದಲಿ ಸಾರಿದನು ಲಗ್ಗೆಯ | ರ
ವವ ನಿಲಿಸಿದನಖಿಲ ಘನಗಂಭೀರನಾದದಲಿ ||೫|| ಬಳಲಿದರಿ ಹಗಲಿರುಳು ಕಾಳಗ | ದೊಳಗೆ ಕೈಮಾ
ಡಿದರ ಕಗ್ಗ | ತ್ತಲೆಯ ಬಲುಬಂಟಯಲಿ ಸಿಲುಕಿತು ಕಂಗಳಂಗವಣೆ || ನಳಿನರಿಪುವುದಯದಲಿ ಬೆಳು
ದಿಂ | ಗಳಲಿ ಕೈದುವ ಕೊಳ್ಳಿ ನಿದ್ರೆಯ | ನಿಳೆಯ ಬಿಡಬೇಡೆಂದು ಸೇನೆಗೆ ಸಾರಿದನು ಪಾರ್ಥ ||೬||
ನರನ ಮಾತಿಂ ಮುನ್ನ ನಿದ್ರಾ| ಭರದ ಭಾರಿಯ ಹೊರೆಯಲಿದ್ದರು | ಪೊರಗದರು ಸಡಲಿದವು ಧನು
ಕೈದುಗಳು ಕೈಗಳಲಿ || ನೆರೆದು ಸುರಪ್ಪೆಹಾಳಿಗಳನಿ | ಬ್ಬರದ ಮೊರಹಿನ ಮುರಿದಗೋಣಿನ | ಕರದ
ತಲೆಗಿಂಬುಗಳ ಕಾಲಾಳೊರಗಿತವನಿಯಲಿ ||೭|| ಬಲದು ಪೊಡಲನು ಮುರುಹಿ ಬರಿಕೈ | ಗಳನು ದಾ
ಡೆಯೊಳಿಟ್ಟುಪಶ್ರುತಿ | ಬಲಿದನಾಸಾಪುಟದ ಜೋಲಿದಕರ್ಣಪಲ್ಲವದ || ತಳಿತನಿದ್ರಾರಸವ ನೆರ ಮು|
ಕ್ಕುಳಿಸಿ ಥಟ್ಟನೊಳೆರಡು ಕಡೆಯಿಂ | ದುಲಿವತುಂಬಿಯಥರದದಂತಿಗಳೆಸೆದುವೊಗ್ಗಿನಲಿ ||೮|| ಬಾ
ಯ ಲೊದಳೆಗಳಳಿಯೆ ಝುಗೆಹಳು | ವಾಯುಮಿಗೆ ತುದಿಖುರವನೂರಿ ನ | ವಾಯಿಗಳ ನೆರೆನೋಟ
ದಾಲಿಯ ಮಿಡಿಕಿದವಯವದ || ಲಾಯದಲಿ ಲಂಬಿಸಿದವೋಲುವ | ನಾಯುಜದ ಸಾಲೆಸೆದುವೊರಗ
ದ | ರಾಯರಾವುತರ ಮಕುಟಮಣಿ ಮರಗೋಡನೋಲೈಸೆ ||೯|| ಬಲಿದಕಾಂತೆಯಕೂಡೆ ಮನ್ಮಥ |
ಕಲಹದಲಿ ಬೆಂಡಾದಕಾಂತೆಯ | ಕಲಶಕುಚಮಧ್ಯದಲಿ ಮಲಗುವವಿಟರ ರಚನೆಯಲಿ | ಬಲಿದಸಮರ
ಶ್ರಮದಲಿರೆ ವೆ | ಗ್ಗಳಗಜಾರೋಹಕರು ಕುಂಭಸ್ಥಳದಮೇಲೊರಗಿದರು | ನಿದ್ರಾಲುಳಿತಲೋಚನರು
||೧೦|| ಕಲಹವನು ಕನಸಿನಲಿ ಕಂಡ | ವ್ವಳಸಿ ಹಳುಹಳು ಪೊ[illegible]ು ಸಾಯಕು | ಬಲಿರೆ ಬಟ ಮಾಸಾ

ಳು ಜಾಗುಯೆನುತ್ತಲತಿರಥರು ॥ ತೊಲಗದಿರಿ ತಿನ್ನಡಗನಹಿತರ । ಕುಲವ ನೆತ್ತರ ಕುಡಿಯೆನುತ್ತ ಕ ಳ । ವಳಿಸಿ ತೇವದೊತ್ತಿನಲಿ ಸುಭಟರು ನೃಪತಿ ಕೇಳೆಂದ ॥೧೧॥ ಎಳೆಯಿಸುತಕದೆರವೊಡ್ಡು ಲೇಪದ । ಬಲದವೊಲು ನಿದ್ರಾಸವವುದ್ರವಿ । ಮುಳುಗಿ ಝೋಂಪಿನ ಘುಟಿಕೆಯಲಿ ಝೋಂಪಿಸಿದುದರಿಜಾಲ॥ ತಳಿತಪುಲಿನದ ಪಾಯದಲಿ ಕ । ಣ್ಣೊಳಗೆ ಕಪಿನಗುತೊಪದೇಶಾ । ವಳಿಯವೊಲು ಮೈದೋರಿದವು ಹಿಮರುಚಿಯರಶ್ಮಿಗಳು ॥೧೨॥ ದಣಿದುದತ್ತಲು ರಣವ ನಿದ್ರಾ । ಗಣಿಕೆಯರನರ್ಘಯಲಿ ರಂಗಣ । ಗುಣಿಪವನ ಹದುಳಿಸಿತು ತಿಳಿದುದು ಝೋಂಪಿನುಂಮುಹವ ॥ ರಣವಸಾಗಳೆ ಕಾಣಬಹುದೆಂ । ಬಣಕಿಗರನೆಬ್ಬಿಸುವವೊಲು ಸುಳಿ । ದಣಿದು ಹೊಗರೆದ್ದುದು ಸಗಾಢದಲುಭಯಪರಿವಾರ ॥೧೩॥ ಬಾಡಿದವು ತಾರೆಗಳು ಮಿಗೆ ತೆಗೆದೋಡಿದವು ನೈದಿಲೆಗಳಂಬುಧಿ। ಝೂಡಿಮಾಡಲು ಬೆರಸಿದವು ಝುಷಮಕರಕರ್ಕಟನ ॥ ಕೂಡಿ ಸಾಲಿಟ್ಟಖಿಳದೆಸೆಗಳ। ವೀಡಿಬಂದು ಕುಡಿಕುಡಿದು ಬೊಬ್ಬೆ । ಟ್ಟೋಡುತಿರ್ದುದು ಸಾಲ ಚಂದ್ರಿಕೆಯಲಿ ಚಕೋರಿಗಳು ॥೧೪॥ ನಳಿನಗೊಳವೊಳಗೌಂಕಿದವು ನೈ । ದಿಲೆಗಳಲಿ ತನಿಮೋಹತುಂಬಿಯು । ಕಳಕಳಕೆ ಬೆಚ್ಚಿದವು ಬಿಗಿದುದು ಕೂಡೆ ತಿಳಿಗೊಳನ॥ ಝುಳಕೆ ಸ್ವೈರಸದೆಳಲತೆಯು ನೆಳ। ಲೊಳಗೆ ನಿಂದವು ಬೇಗ ಬಲುಹಿಂ । ದೆಳಕಿ ಮುಂಮುಲಮುರುಗುತಿರ್ದವು ಜಕ್ಕವಕ್ಕಿಗಳು ॥೧೫॥ ವಿನುತ ಸುಕವಿಯ ಸೂಕ್ತಿ ತಾಗದ । ಮುನಿಯ ಮಂತಃಕರಣದಂತಿರೆ । ಹೊನಲುವರಿದವು ಚಂದ್ರಕಾಂತರಸಾಲತಿಲೆ ಕರಗಿ ॥ ಮುರಿವ ಕತ್ತಲೆ ಗುರುವರನ ವಾ । ಕ್ಕಿನಲಿ ತೊಲಗುವವೋಲು ತುಂಬಿಯು । ತನತನಗೆ ನೂಕಿದವು ವಿಕಸಿತಕೈರವಾಟಿಗಳು ॥೧೬॥ ವಿರಹಿಜನದೆದೆಗಿಚ್ಚು ಮನ್ಮಥ । ನೆರಸುತನದಭಿಷೇಕಘುಟತಾ । ವರೆಯ ಕಗ್ಗೊಲೆಕಾರನುತ್ಪಲವನವಿದೂಷಕನು ॥ ಹರನ ಹಗೆಯೊಡ್ಡಣ ವಿಲಾಸಿನಿ । ಯರ ಮನೋರಥಫಲವೆನಲು ಮಿಗೆ । ಮೆರೆದನುದಯಾಚಲದ ಚಾವಡಿಯೊಳು ಸುಧಾಸೂತಿ ॥೧೭॥ ತಳಿತ ತಂಪಿನ ತಂಗದಿರ ತೊರೆ । ಯೊಳಗೆ ತೇಕಾಡಿದುದು ಬಲದ । ಗ್ಗಳದ ಬಳಲಿಕೆ ಬೀಳುಕೊಂಡುದು ಬಲಿದು ದಂಗವಣೆ ॥ ಬಲದು ಬರಿಕ್ಕೆ ತೂಗಿ ಕಿಪಿಗಳ । ನಿಲುಕಿದವು ಕರಿನಿಕರ ಹಯವಿ । ಲ್ಲಳವೆನಲು ಕೊಡಹಿದವು ವಳಯವನಖಿಳಹಯನಿಕರ ॥೧೮॥ ತುರುಬ ಬಲಿದೊಳಗೌಂಕಿ ಮೊನೆಮುಂ । ಜೆರಗನಳವಡೆಸೆಕ್ಕೆಸುತ್ತಿನೊ । ಳಿರುಕಿ ಬಿಗಿದು ಕಠಾರಿಧಾರದ ಗೊಂಡೆಯವ ಕೆದರಿ ॥ ಒರಗದೆಡಬಲದವರನೆಬ್ಬಿಸಿ । ಜರೆದು ಮೀಳೆಯಗೊಂಡು ಕೈದುವ । ತಿರುಹುತಾಯತವಾಯ್ತು ಪಡೆಯೆರಡರೊಳು ಪಾಯದಳ ॥೧೯॥ ಬಿಗುಹನೇರಿಸಿ ಮತ್ತೆ ತುರಗಾ । ಳಿಗಳನೆಲ್ಲವ ರಾಹುತರು ಹೊರ । ಜಗಳ ಜೋಡಿಸಿ ತಾಗಗಗಜವಲಿ ಜೋಧರವನುವಾಯ್ತು ॥ ಬಿಗಿದು ಕೀಲಚ್ಚುಗಳ ರಥಿಕಾ । ಳಿಗಳು ಮೇಳೈಸಿದರು ಕೈದುವ । ನೆಗಹಿದು ಕಾಲಾಳುರುಬಿ ನಿಂದುದು ಕದನಕನುವಾಗಿ ॥೨೦॥ ಚೂಣಿ ತೆಗೆಯಲಿ ಮಿಸುಕಿದೊಡೆ ನೃಪ । ನಾಣೆ ಬರಿದೇ ಕಾಳುಕುದುರೆಯ । ಗೋಣನವರಂಗೆ ಮಾರದಿರಿ ಕೌರವನ ಥಟ್ಟಿನಲಿ ॥ ದ್ರೋಣನಲ್ಲಾ ರಕ್ಷಕನು ರಣ । ದಾಣೆಗರು ಕಲಿಭೀಮಪಾರ್ಥರು । ಕಾಣಬಹುದೋ ಕರೆಯೆನುತ ಗರ್ಜಿಸಿದನಾಚಾರ್ಯ॥೨೧॥ ಬಿದಿರಿದರು ಕೊಯ್ದಲೆಗಳನು ಕಾ। ರಿದರು ಕರುಳನು ಕುಸುರಿಖಂಡದ । ಕದಡುಗ್ಗೆಗಳ ಚೂಣಿ ಮಸಗಿತು ತಾರ್ಥಟ್ಟಿನಲಿ॥ ಕದಡಿದವು ಬಲವೆರಡು ಕಲ್ಪದೊ । ಳುದಧಿ ಮೆರೆವಂದದಲಿ ಮಾಸಾ । ಳೊದಗಿ ಕಪಿದುದು [illegible]ಭಯಸೇನೆಯೊಳರಸ ಕೇಳೆಂದ ॥೨೨॥ ರಥವ ಸಂತೈಸಿದನು

ನಿಜಸಾ । ರಥಿಯ ಬೋಳೈಸಿದನು ಬಳಿಕತಿ । ರಥಮಹಾರಥರುಗಳಿಗಿತ್ತನು ರಣಕೆ ವೀಳೆಯವ ॥ ಪೃಥೆಯಮಕ್ಕಳ ಕರೆಯೆನುತ ನೃಪ । ಪ್ರಥಿತಬಲವನು ತನಿಗೆದರಿ ನಿ । ರ್ಮಥಿತರಿಪು ಪರಬಲವ ಹೊಕ್ಕನು ಬಿಟ್ಟಸೂಟಿಯಲಿ॥೨೩॥ ರಾಹುವೆತ್ತಲು ಬಲಿದತಾರಾ। ವ್ಯೂಹವೆತ್ತಲು ದಳ್ಳಿಸುವೊಡೆ ವ।ರಾಹವೆತ್ತಲು ತನಿರಸದ ತೃಣರಾಶಿ ತಾನೆತ್ತ ॥ ಗಾಹುಗತಕವನುಳಿದುಕಾದುವೊ । ಡಾಹವವು ಗುರುಭೀಷ್ಮರಿಗೆ ಸರಿ । ಸಾಹಸಿಗಳಾರುಂಟು ಮುರಿದುದು ಪಾಂಡುಸುತಸೇನೆ ॥೨೪॥ ಉದಧಿಯುದರದೊಳಿಳಿವ ತೆರೆಗಳ । ನೊದೆವಮಂದರದಂತೆ ವನಕರಿ ॥ ಕದಳಿಯಲಿ ಕ್ರಮಮಾಡುವಂದದಿ ಪರರ ಥಟ್ಟಿನಲಿ ॥ ಹೊದರ ಹೊರೆಗಡಿವೌಕಿದವು ತೋ। ಕಿದವು ಸುಭಟರ ಜೀವವನು ಹಳೆ । ಬಿದಿರಮೆಳೆಯಲಿ ಮೊಳಗಿದುಬಯ ವೊಲುರುಹಿದನು ದ್ರೋಣ ॥೨೫॥ ಹೊಕ್ಕಸಾಲರುಣಾಂಬುಮಯ ಕೈ । ಯಿಕ್ಕಿದತ್ತಲು ಖಂಡಮಯ ಮೊಗೆ । ದಿಕ್ಕಿದತ್ತಲು ಹೆಣನಮಯ ತಾನೇನ ಹೇಳುವೆನು ॥ ಮುಕ್ಕುರಿಯ ಬಸುರಚ್ಚುಗಳ ನರ ಸುಕ್ಕಿದೊಳ್ಳಾಸದ ಮಹಾಭಯ । ವೆಕ್ಕಸರದಲಿ ಕಾಣಲಾದುದು ವೈರಿಸೇನೆಯಲಿ ॥೨೬॥ ಹಸಿದ ಹೆಬ್ಬುಲಿ ಮುಸುಗಿದೊಡೆ ಮೃಗ । ವಿಸರವೇನಹವೆರಸ ಕೇಳ್ನೃ । ಪ್ರಸರದಲಿ ಪಾಳಿಸಿದವಂದಿನನುಗಿದನುಸುರುಗಳ ॥ ಕುಶಲರೇ ಭೀಮಾರ್ಜುನರು ಪಾ। ಲಿಸುವೆ ಬರಿದೇ ಕೃಷ್ಣನನುಹರಿ। ಹುಸಿತನವ ಬೆಸಗೊಂಬೆನೆಂದರೆಯಟ್ಟಿದನು ದ್ರೋಣ ॥೨೭॥ ಆರುಸಾವಿರತುರುಗವೊಂಭೈ । ನೂರುಗಜಘಟೆ ಸಾವಿರದ ಮುನ್ನೂರುರಥ ನುಗ್ಗಾಗೆ ಕೆಡೆದುದು ಲಕ್ಷಪಾಯದಳ ॥ ಏರುವಡೆದವರನು ಪಲಾಯನ । ಸೂರೆಗಾರನು ವೈರಿಬಲದಲಿ । ತೋರಿ ಹೇಳುವರೆನ್ನಳವೆ ಧೃತರಾಷ್ಟ್ರ ಕೇಳೆಂದ ॥೨೮॥ ಎಲೆಲೆದೊದ್ದೆಗರೇಕೆ ಕೊಬ್ಬಿದ । ರಳವನರಿಯದೆ ನುಗ್ಗುಮುರಿದೊಡೆ । ದಳದದ್ದೊರೆಗದು ಭಂಗವೇ ಬಾಹಿರರ ಹೊಯ್ಯೆನುತ ॥ ಒಳಸರಿವ ನಾಯಕರ ನೆರೆ ಮೂ । ದಲಿಸಿ ಲಗ್ಗೆಯಲಹರಿಯಲಿ ಪಡಿ । ತಳಿಸಿದನು ಪಾಂಚಾಲ ಸೃಂಜಯಮತ್ಸ್ಯಕೈಕೆಯರು ॥೨೯॥ ಬಲವ ಕಲಿಯೇರಿಸಿ ಚಡಾಳಿಸಿ । ಯುಲಿವಪಟಹಮೃದಂಗಕಹಳಾ । ವಳಿಗಳಲಿ ಬೊಬ್ಬಿರಿವಘನನಿಸ್ಸಾಳಕಹಳೆಗಳ ॥ ತಳಿತಝಲ್ಲರಿಗಳ ಪತಾಕಾ । ವಳಿಯ ಬಿರುದ ಪವಾಡಿಗಳ ಕಳ । ಕಳದ ಕೈವಾರದಲಿ ಕವಿದರು ದ್ರೋಣನಿದಿರಿನಲಿ ॥೩೦॥ ಅರಿಭಟರ ಥಟ್ಟಿನಲಿ ಬಿರಿಸಿನ । ಬರವನೀಕ್ಷಿಸಿ ಪೂತು ಪಾಂಚಾ । ಲರ ಸಗಾಡಿಕೆ ಲೇಸುಲೇಸ್ಸೆ ಶಿವಮಹಾದೇವ ॥ ದೊರೆಯಲಾ ಬಳಿಕೇನು ಪಾಂಡವ। ರರಸಿಯುಯ್ಯನು ದ್ರುಪದನಲ್ಲಾ। ಹರಯೆನುತ ತಲೆದೂಗಿ ಗಹಗಹಿಸಿದನು ಕಲಿದ್ರೋಣ ॥೩೧॥ ಇರುಳುಗಳ್ಳನ ಕೂಡೆ ಸೇರಿದ । ಮರಳಿನಂತಿರೆ ನೀವೆ ರಣದಲಿ । ತರುಬಿಕೊಂಡಿರಿ ಹೊಯ್ವರಿವದಿರು ನಿಮ್ಮನಡೆಯೊಡ್ಡಿ ॥ ಮರಳಿಕೈಕೈಕೆಯರು ಮತ್ಸ್ಯರು । ಬಿರುದಸೃಂಜಯರಕಟಕಟ ಖೂ। ಳರು ವೃಥಾ ನಿಮಗೇಕೆ ಸಾರೆನುತಿರ್ದನಾದ್ರೋಣ ॥೩೨॥ ಬಿಲ್ಲಕೊಪ್ಪಿನ ಮೇಲೆ ಚಾಚಿದ । ಗಲ್ಲದುಪಹಾಸದಲಿ ನುಡಿಗಳ । ಛುಲ್ಲಣೆಯ ರೋಮಾಂಚನದ ಥಟ್ಟಣೆಯ ಚೌಕದಲಿ ॥ ಗೆಲ್ಲದಲಿ ಗಾಢಿಸಿದಚಿತ್ತದ । ಚಲ್ಲಗಂಗಳ ನಗೆಯ ಚೌಪಟ । ಮಲ್ಲನಿದ್ದನು ರಿಪುಬಲವ ಲೆಕ್ಕಿಸದೆ ಕಲಿದ್ರೋಣ ॥೩೩॥ ಕೆಣಕಿದರು ಪಾಂಚಾಲನಾಯಕ । ರಣಕಿಗರು ಕೈಕೊಳ್ಳದೀಸಂ । ದಣಿಸಿದರು ತಾವ್ಕಡುಹು ಮಿಗೆ ನೆರೆ ರಾಯರಾವುತರು ॥ ಕಣೆಗರೆದು ಹೊದ್ದಿದರು ಜೋದರು । ಕುಣಿದು ಕಾಲಾಳೌಕಿತೊಂದ್ರೇ । ಕ್ಷಣದಲನಿಬರನೊರಸಿದನು ಬೆರಸಿದನು ದೊರೆಗಳಲಿ ॥೩೪॥ ಅಡುಸಿದರಿಚತುರಂಗಬಲವ

ನು । ಕಡಿದು ಹರಹಿ ವಿರಾಟನನು ಜವ । ಗೆಡಿಸಿ ದ್ರುಪದನ ಮುರಿದು ವಿರಥನಮಾಡಿ ಕೈಕೆಯರ ॥ ನಡೆದು ಬರೆಬರೆ ನಿಮಿಷದಲಿಯುವ । ಗಡಿಸಿ ಹೊಕ್ಕುದು ಬತ್ತಿದಂಬುಧಿ । ವಡಬನನು ಮೊಗೆವಂತೆ ಮುತ್ತಿತು ಕುಂಭಸಂಭವನ ॥೩೫॥ ಮತ್ತೆ ಮುರಿದನು ವೈರಿಬಲದಲಿ । ಹತ್ತುಸಾವಿರಕರಿಘಟೆಯು ನೈ । ವತ್ತುಸಾವಿರಹಯುವನಿಚ್ಛಾರ್ಗಸಿರಮಹಾರಥರ ॥ ಹತ್ತುಕೋಟಿಪದಾತಿಯುನು ಕೈ । ವರ್ತಿಸಿದ ನಂತಕನವರಿಗಿವ । ರತ್ತ ಬಿಟ್ಟನು ರಥವನಾದ್ರುಪದಾದಿನಾಯಕರ ॥೩೬॥ ಆಳನೊಪ್ಪಿಸಿ ಜಾರದಿರಿ ಪಾಂ। ಚಾಲಪತಿ ಘಡ ನಿಲ್ಲೆನುತ ಕೆಂಗರಿ। ಗೋಲಿನಲಿ ಹೂಳಿದನು ದ್ರುಪದನ ಕೆಲದಬಲದವರ ॥ ಖೂಳ ಘಡ ಹಾರುವರು ಬರುವಾ । ತಾಳಿಗಳು ನೀವೇಕೆ ನಮ್ಮೊಳ । ಗಾಳುತನ ನಿಮಗೆತ್ತಲೆನುತಿದಿರಾದನಾದ್ರುಪದ ॥೩೭॥ ಹಿಂದನರಿಯಾ ಖೂಳಮುಮ್ಮರ್ಗವ । ನಿಂದು ಮರೆದಾಸಾಕದಂತಿರ । ಲೊಂದನಲ್ಲದೆ ನಿನ್ನತಲೆಗೆರಡೆಂಬತೊಡಚಿದೊಡೆ॥ ಇಂದು ನಿನ್ನಯ ಬಾಯತಂಬುಲ। ತಿಂಪವನು ನೋಡೆನುತ ಹೊದೆಯಂ । ಬಿಂದಲಿಕ್ಕಡಿಮಾಡಿದನು ಪಾಂಚಾಲಪತಿ ಶಿರವ ॥೩೮॥ ದೊರೆ ಮಡಿದನೋ ಸ್ವಾಮಿ ದ್ರೋಹರು । ತಿರಿಗಿಯೆನೆ ಪಾಂಚಾಲರಲಿ ಹ । ನ್ನೆರಡುಸಾವಿರರಾಜಪುತ್ರರು ಜರೆದು ಜೋಡಿಸಿತು॥ ಹರಿಬವೆಮ್ಮದು ಸಾರಿ ನೀವೆಂ । ದರಸುಮಕ್ಕಳ ನಿಲಿಸಿ ಬಿಲುಗೊಂ । ಡುರವಣಿಸಿ ತಡೆದನು ವಿರಾಟನು ಕಲಶಜನ ರಥವ ॥೩೯॥ ಅಡಸಿ ಗಿರಿಗಳ ನುಂಗುವನು ಬಾ । ಯ್ದುಡಿಯುದೇ ಪಲ್ಲವನಕಟಾ । ಬಡವಿರಾಟನನಾರು ಬಲ್ಲರು ದ್ರೋಣನಿದಿರಿನಲಿ ॥ ನಡೆದುಬಂದುದ ಕಂಡೆವಾಗಳು । ಮಡಿದನೆಂಬುದನರಿದೆವೈ ಬಿಲು । ದುಡುಕಿ ಕುಂತೀಭೋಜ ಹೊಕ್ಕನು ಮಿಕ್ಕನವರುಗಳ ॥೪೦॥ ಅವರ ಹರಿಬವೆ ಬೇಡ ಸೃಂಜಯ । ರವಗಡಿಸಿ ಕೈಕೆಯರ ವರನೃಪ । ನಿವಹಯಾದವಚೈದ್ಯನಾವಾಳವನು ಮಾಗಧನು ॥ ವಿವಿಧವೀರಾರವದ ಗಜಹಯ । ರವರಥಧ್ವನಿಜಂತ್ರವಿದುಮಿಗೆ । ಕವಿದು ಕೆವರಿ ವಿರೋಧಿಬಲ ಕೆಣಕಿದುದು ಕಲಶಜನ ॥ ೪೧ ॥ ಕೇಳಿದನು ರಭಸವನು ದಿಗುಕೆಂ । ಧೂಳಿಯನೆ ಕಂಡೆನು ವಿರೋಧಿಗ। ಳಾಳಕಾಣೆನು ಕಾಣೆನಿತ್ತಲು ಕಲಶಸಂಭವನ ॥ ಕೇಳು ನಿಮಿಷಾರ್ಧದಲಿ ನೆರೆ ಕೆಂ । ಧೂಳಿ ಕಾಣೆನು ಕಾಣೆನರಿಭೂ । ಪಾಲರನು ಕೇಳರಸ ಕಂಡೆನು ಕಾಲಧೂರ್ಜಟಿಯ ॥೪೨॥ ಅರಸುಮಕ್ಕಳು ಮತ್ಸ್ಯ ಪಾಂಚಾ । ಲರಲಿ ಕೈಕಯ ಚೈದ್ಯ ಮಾಗಧ । ತುರುಕ ಬರ್ಬರ ಹೂಣ ಕೊಂಕಣ ಪಾರಿಯಾತ್ರರಲಿ ॥ ಉರುಳಿತೊಂದೇಲಕ್ಷ ವುಳಿದೀ । ಕರಿ ವರೂಥ ಪದಾತಿ ತುರಗವ । ನರಸಲೆಕ್ಕಿಸರಾರು ಬಲ್ಲರು ವೈರಿಸೇನೆಯಲಿ ॥೪೩॥ ಮುರಿದುದಾಬಲ ವಿಳೆಯೊಡೆಯೆಬೊಬ್ಬೆ । ರಿದುದೀಬಲವಪಜಯದ ಮಳೆ । ಕರೆದುದವರಿಗೆ ಹರೆದುದಿವರಿಗೆ ರಜ್ಜುಸರ್ಪಭಯ ॥ ತೆರಳಿತಾಚೆಯಘಟ್ಟ ಮುಂದಣಿ । ಗುರವಣಿಸಿ ತೀಯೊಡ್ಡು ಕೌರವ । ರರಸನುತ್ಸಾಹವನು ಬಣ್ಣಿಸಲರಿಯೆ ನಾನೆಂದ ॥೪೪॥ ಭೂರಿವಿರಹಾಗ್ನಿಯಲಿ ಲೋಚನ । ವಾರಿ ಹರುಷಾಳಿಗಳಲಿರೆ ರಿಪು । ಮಾರಣಾಧ್ವರವೆಸೆದುದಂದು ರಥಾಂಗದೀಕ್ಷಿತನ ॥ ತಾರಕಿಯ ತಳಿವುಗಳ ಕುಣಿವಸ । ಮೀರಣನ ಶಶಿಯೆಡೆಗೆ ರಜನೀ । ನಾರಿ ತೊಲಗಲು ಹೊರಟನಂಬುಜಬಂಧು ನಲವಿನಲಿ ... ... ॥೪೫॥

ಅಂತು ಸಂಧಿ ೧೭ಕ್ಕಂ ಪದ ೧೧೧೮ಕ್ಕಂ ಮಂಗಳಮಸ್ತು.

ಹದಿನೆಂಟನೆಯ ಸಂಧಿ.

ಸೂಚನೆ ॥ ರಿಪುಬಲವ ಗೆಲುವಲ್ಲಿ ಶಾಪಾ। ದಪಿಶರಾದಪಿಯೆಂಬ ಜಯಶಾಲಿ। ಲುಪನು ಸಂಗ್ರಾಮದಲಿ ಮಡಿದನು ಪುತ್ರಮೋಹದಲಿ ॥

॥ ಪದ ॥ ಸಾಲದೇ ಸಮರಂಗವಿಂದಿನ । ಕಾಳೆಗದ ಜಯನಮ್ಮದರಿಭೂ । ಪಾಲಕನ ಧಟ್ಟಿನಲಿ ಮಡಿದುದು ಬೇಹಬೇಹವರು ॥ ಮೇಲುಗಾಳಗ ನಮ್ಮದೀಸರ । ಮೇಲೆತೆಗೆಸುವುದಶಿಮಥನದಲಿ। ಕಾಳಹುದು ಕೇಳೆಂದು ನೃಪತಿಗೆ ನುಡಿದನಾಚಾರ್ಯ ॥ ೧ ॥ ಅವನಿಪಾಲರು ಕಂಗಳಿಂದವು । ಕಿವಿಗೆ ಕರಮೊಳ್ಳಿದರು ಕಂಡುದ । ನವನು ನಂಬರು ಕೊಂಡೆಯರ ನುಡಿಗೇಳಿ ನಂಬುವರು ॥ ನಿವಗೆ ಹೇಳಿದುದಲ್ಲ ಲೋಗರ। ಹವಣನೆಂಬೆವು ನಾವು ಪಾಂಡವ। ರವರು ನಿನ್ನವರೆಂಬುದನು ನೀನಿಂದು ನೋಡೆಂದ॥ ೨॥ ಬಿಲ್ಲನೊದರಿಸಿ ವೈರಿಭಟರಿಗೆ । ಚಲ್ಲಿದನು ಭೀತಿಯನು ಬರಸಿಡಿ । ಲಲ್ಲಿ ತುಡುಕುವರಾರು ಬಲ್ಲರು ದ್ರೋಣನುರವಣೆಯ ॥ ಘುಲ್ಲಣೆಯ ಖುರಪುಟದ ತುರಗದ । ಹಲ್ಲಣೆಯ ಹೇಷಿತದ ಹಸೆಯೊದೆ । ಝಲ್ಲೆನಲು ಕಾಳಗಕೆ ಕವಿದವು ಕಟಕವೆರಡರಲಿ ॥ ೩ ॥ ಇಳೆಯೊಳದ್ಭುತವಿದು ಕೃತಾಂತನ । ಫಲಿತ ಶಾಲೀವನವ ಮುತ್ತಿದ। ಗಿಳಿಗಳೋ ಗಾಂಡಾಯ್ದವಂಬುಗಳೋ ಮಹಾದೇವ ॥ ಸೆಳಿಸೆಳಲುದೊಗಲೆಂಬಳಟಳಟ । ಛಿಳಿಛಿಳಿಲುಖಣಿಖಣಿಲುಖಣಿಲೆಂ।ದುಲಿವಕಳಕಳದಂಬುಗಳ ರವ ತುಂಬಿತಂಬರವ ।೪॥ ಕಡಿದು ಬೀಳುವಕೈದುಗಳ ನೆರೆ । ಕಡಿದು ಜೋಲುವಜೋಡುಗಳ ನೆರೆ। ಸಿಡಿದುಹಾರುವಸೀಸಕದ ಸುಗ್ಗಿದಹಲಗೆಗಳ ॥ ಹಿಡಿದಸಿಂಧದ ನೆರಕೆ ಹರಿಹಿದ । ತೊಡೆಯಚಮರದ ತಾರುಥಟ್ಟಿಗೆ । ಕೆಡದಚಾತುರ್ಬಲವನಭಿವರ್ಣಿಸುವರಾರೆಂದ ॥೫॥ ಅಳಿದವೈನೂರಾನೆ ಮಗ್ಗುಲ । ನೆಲಕೆ ಕಲಿಸೀಡಾಡಿಗ್ರೊದವು ಬಲುಗುದುರೆ ಹದಿನೈದುಸಾವಿರದೇಳುನೂರುರಥ ॥ ಮಲಗಿದುದು ಕಾಲಾಳು ಲಕ್ಷದ । ತಲೆಯತೊಡೆದರು ರಾಜ ಪುತ್ರರು । ಮಲೆತವರ ಹೊಯ್ದೊಯ್ದು ಹೊಕ್ಕರು ಸುರರ ಪಟ್ಟಣವ ॥ ೬ ॥ ಸಾಲುಮೋಘದ ಮಳೆಗಳಿಗೆ ಬಿರು । ಗಾಳಿ ಬಿದ್ದಿನವಾಗಿ ಬರಲವ । ರಾಳುಗಳ ಸಿರಿ ಮೆರವುದೇ ಧೃತರಾಷ್ಟ್ರ ಚಿತ್ತೈಸು ॥ ಸಾಲ ಹೊಯ್ದನು ಹೊಕ್ಕು ಭೂಮಿಪಾ । ಪಾಲನೆಯ ತಾನೊಲ್ಲೆನೆಂಬವೊ । ಲೂಳಿಗವ ಮಾಡಿದನು ಪರಬಲದೊಳಗೆ ಕಲಿದ್ರೋಣ ॥೭॥ ಮುರಿದು ಬರುತಿದೆ ದೇಸಿಗರ ಸಂ । ತರಿಸಲೈದಿದನಿಮ್ಮಮಾವನ । ತರಿದರಿಗೆ ಖತಿಗೊಂಡು ಕಾದಿವಿರಾಟಕೈಕೆಯರ ॥ ತುರುಗಿದನು ತೆತ್ತಿಸಿದರಲಿ ತೆಗೆ । ಮರೆಯುವಾತೇ ವಿಜಯಲಕ್ಷ್ಮಿಯ । ಸೆರಗ ಹಿಡಿದನು ದ್ರೋಣನೆಂದರು ಭಟರು ಭೂಪತಿಗೆ ॥ ೮ ॥ ಹೊಳೆಹೊಳೆದು ತಂಬುಲದ ರಸದಲಿ । ಮುಳುಗಿ ಮುಡುವಪಗ್ಗದ ದೇಹವ । ಮುಲುನಗೆಯ ಕಳಕಳದಲತಿಮುಕ್ಕಳಿಸಿದಾಲಿಗಳ ॥ ತಳಿತಛಲದಲಿ ರಾಯಧೈರ್ಯದ। ತಳಿತಭೀತಿಗೆ ಕಾಲುಹೊಳೆಯಾ । ದಳಿಮನವ ಮಾಡುವ ಮಹೀಶನ ಕಂಡನಾಪಾರ್ಥ ॥ ೯ ॥ ನಿಲ್ಲುಫಲುಗುಣ ನೀನು ಪರಿಯಂ । ತಲ್ಲಿಯದು ರಣವಕಟ ಹಾರುವ । ನಿಲ್ಲಿ ಕೆಲಬರ ಹೊಯ್ದು ಕೊಂದನು ಬಿನುಗುಬಿಚ್ಚಳಿಯ ॥ ಬಲ್ಲನಾತನ ಬಲುಹನೆರೆ ಗೆಲ । ಬಲ್ಲಹರಿಮೇಖಲೆಯನಾವಿನ್ನೆಲ್ಲವೇತಕೆ ಯೆನುತ ದೃಷ್ಟದ್ಯುಮ್ನನನುವಾದ ॥ ೧೦ ॥ ನಾಯಿಗಳ ಹೊಯ್ಲುಕು ರಣದಲಿ । ಸಾಯಬೇಡಾ ಕ್ಷತ್ರಿಯರು ತ

ಮಾಯುಧಂಗಳ ಹಿಡಿದರೋ ತಾವೇಕದಂಡಿಗಳೊ ॥ ಜೀಯ ಖಾತಿಯಿದೇಕೆ ಬೀಳಲಿ । ನಾಯಕರು ನಿಮಗೇನು ಹರನಡ । ಹಾಯಿದೊಡೆ ರಿಪುಬಲವನುರುಹುವೆನೆಂದನಾಪಾರ್ಥ ॥೧೧॥ ನೇಮವಾಯಿತು ಸಾತ್ಯಕಿಗೆಸುತ । ಸೋಮಕಾದಿಕುಮಾರರಿಗೆ ಸಂ । ಗ್ರಾಮಧೀರಶಿಖಂಡಿಸೃಂಜಯಚೇಕಿತಾನರಿಗೆ ॥ ಆ ಮಹಾರಥರ್ಕೈರಿದರು ಘನ । ತೋಮರದ ಶಕ್ತಿಯಲಿ ತುರುಗಿದ । ತೋಮದಲಿ ಬಹುವಿಧದ ವಾದ್ಯದ ರವದ ರಭಸಸಲಿ ॥೧೨॥ ಸರಕಟಸಿ ನೂಕಿತು ಚತುರ್ಬಲ । ವರರೆ ಹಾರುವನೆಲ್ಲಿ ಯಾವೆಡೆ । ದೊರೆಸುಯೋಧನನೆಲ್ಲಿ ರಾಧಾಸುತನ ಬರಹೇಳು ॥ ಗುರುಸುತನ ಕರೆ ಬರಲಿ ದುಶ್ಶಾ । ಸನನು ಬರಹೇಳೆನುತ ಬಲವ । ಬ್ಬರಿಸಿ ಕವಿದುದು ಮೋಹರಿಸಿಯಾಚಾರ್ಯನಿದಿರಿನಲಿ ॥೧೩॥ ಅಂಗವಣೆಯೊಳ್ಳಿತು ಮಹಾದೇ । ವಂಗೆಮೊಗಸುವೊಡರಿದು ಮೋಹರ । ಸಿಂಗದಾಯತವಂಬು ಸುಳಿದರೆ ಮೊಲನ ಮುಂಚುವಿರಿ ॥ ಭಂಗವಿಲ್ಲದೆ ಬಿದ್ದನಿಮ್ಮ । ಯ್ಯಂಗೆ ಹೊರದಿಹಹಳಿವ ಮಿಗೆಮನ । ದಂಗವಣೆಯುಂಟಾಗೆ ಮೆಚ್ಚುವೆನೆಂದನಾದ್ರೋಣ ॥೧೪॥ ಗಳಹತನ ನಿಮ್ಮಲ್ಲಿ ನೆರೆಯದು । ಕಲಿತನವಲೇ ಮಾತಿನಲಿನೀವ್ । ಗೆಲುವಿರದು ತಪ್ಪಲ್ಲಮುಖದಿಂ ದ್ವಿಜರು ಜನಿಸಿದಿರಿ ॥ ಗೆಲವು ತೋಳಿನೊಳೆರವು ಜನ್ಮ । ಸ್ಥಳವಲೇ ಭುಜವರಸುಗಳಿಗಿ । ನ್ನಳುಕದಿದಿರಿಲಿ ನಿಂದೆಯಾದೊಡೆ ಗೆಲವು ನಿನಗೆಂದ ॥೧೫॥ ಎನ್ನುಮತ್ತೊಮ್ಮೆನ್ನುಯೆನ್ನಾ । ಣೆನ್ನುಗೆಲವೇ ನಮಗೆ ಬಳಿಕೀ । ನಿನ್ನ ಸಮ್ಮುಖದಲಿ ಮಹಾದೇವಹುದು ಮತ್ತೆನಲು ॥ ತನ್ನೊಳುಂಟೀ ಖುರೆಯುತ್ತನ ಬರಿ । ದೆನ್ನಲಿದೆ ಬಾ ಹಲವು ಮಾತಿನೊ । ಳಿನ್ನು ಫಲವೇನೋಡು ನಿಮಿಷದೊಳೆಂದನಾದ್ರೋಣ ॥ ೧೬ ॥ ಈತ ಸೇನಾಪತಿಕಣಾ ತಾ । ನೀತನೈ ಮಿಗೆ ನರನ ಮೈದುನ । ನೀತ ವಿಖ್ಯಾತನು ಬಲಾನ್ವಿತ ದ್ರುಪದತನಯನಲಾ ॥ ಈತ ಸಾತ್ಯಕಿ ಯಾದವರ ಕುಲ । ದಾತನೀತ ಶಿಖಂಡಿ ಮೊದಲಾ । ಗೀತಗಳು ನೆರೆ ಖರೆಯರೆಂದನು ನಗುತ ಸಾರಥಿಗೆ ॥ ೧೭ ॥ ನುಡಿಗೆ ಮುಂಚಿತು ಬಾಣಮಾರುತ । ನಡಸಿ ಬೀಸುವಲಾಗು ತಲೆಗಣೆ । ತೊಡಚಿಗಳಚುವನೇಗವನು ಬಣ್ಣಿಸುವೊಡೆನ್ನಳವೆ ॥ ಕಡಲ ಕಡುಹದಲುರಿವಗರಳವ । ನುಡುಗಿದವರಿಗೆ ನಿವರು ಶಿವಯೆಂ । ದೊಡನೊಡನೆ ಪಡೆ ನಡುಗಲೊರಸಿದನಾಮಹಾರಥರ ॥ ೧೮ ॥ ಕರಿಗಳೈಸಾವಿರ ತುರಂಗವು । ವೆರಡುಸಾವಿರವೆಂಟುಸಾವಿರ । ವರವರೂಥದಥಟ್ಟು ಮುರಿದುದು ಲಕ್ಷಪಾಯದಳ ॥ ಅರಸುಗಳನೈನೂರುಪುನರಪಿ । ಕರಿತುರಗರಥದಿಂದಮೂವ । ತ್ತೆರಡುಸಾವಿರವಳಿದುದೈ ಪಾಂಚಾಲಸೇನೆಯಲಿ ॥೧೯॥ ಮತ್ತೆ ನಡೆದುದು ಹೆಣನ ತುಳಿದೊ । ತ್ತೊತ್ತೆಯಲಿ ರಿಪುಸೇನೆಮಂಜಿನ । ಮುತ್ತಿಗೆಯ ರವಿಯಂತೆಕಾಣೆನು ಕಳಶಜನ ರಥವ ॥ ಮತ್ತೆನಿಮಿಷಾರ್ಧದಲಿ ಕಾಲನ । ತುತ್ತುಚೋಡಿಸಿತೇನನೆಂಬೆನು । ಹತ್ತುಕೋಟಿಯ ಕೆಡಹಿದನು ರಿಪುಚಾತುರಂಗದಲಿ ॥೨೦॥ ಗಾಸಿಯಾಯಿತು ಸೇನೆ ಸುಡಲೆನು । ತಾಸುಭಟರಿದಿರಾಗಿ ಕಾದಿದ । ರೈಸುಬಳಿಕಿನ್ನರಸ ಸರ್ವತ್ರಾಣವೆಲ್ಲರಿಗೆ ॥ ಸೂಸುಗಣೆಗಳ ಸೊಗಸು ಹೊಯ್ದುಪ । ಹಾಸಕೊಡಲಾದರುಮಹಾರಥ । ರೀಸುಭಂಗಕೆ ಬಂದುದಿಲ್ಲ ನೃಪಾಲ ಕೇಳೆಂದ ॥೨೧॥ ಕಂಡುದಿವರನು ರಾಯಮೋಹರ । ಕಂಡುಗೊಂಡುದು ಧೊರೆಗಳಿದು ಕೋ । ದಂಡರುದ್ರನ ರಣಕಣಾ ತಾವೇನನೊದಗುವರು ॥ ಉಂಡುಭಾಸಟದೇರುಮದ್ದಿನ । ಗಂಡನೋ ದ್ರೋಣಾಸ್ತ್ರವನು ಸವಿ । ಗಂಡನೇ ಸಾತ್ಯಕಿಯೆನುತ ಗರ್ಜಿಸಿದನಾಭೀಮ ॥ ನುಡಿಯ ಭಂಗಿಸಲೇಕೆ ಸಮರವ । ಕೊಡುವುದಾಹವದೊಳಗೆ ಮಗುಳವ । ಗಡಿಸುವುದು ವಿಕ್ರಮಕೆ ಕುಂದೇನದು ಮು

ಹೊರ್ತವಶ ॥ ಪಡೆ ಸವೆದುದಿನ್ನೇನೆನುತ ಬಿಲು । ದುಡುಕಿ ಹೊಕ್ಕನು ಪಾರ್ಥನನಿಲಜ । ನೊಡನೆ ಬಳಿ
ಸಂಧಿಸಿತು ಸನ್ನಾಹದಲಿ ಪರಿವಾರ ॥ ೨೩ ॥ ಭೀತಿ ಮಾಣಲಿ ಭೀಮಫಲುಗುಣ। ರಾತುಕೊಂಡರು ಬ
ವರವನು ನೆರೆ | ಸೋತವರು ಸಂವರಿಸಿಕೊಂಬುದು ಯೆನುತ ಚರರುಲಿಯೆ ॥ ಚಾತುರಂಗದ ತರಹ
ರಣನಿ । ಧೂರ್ತಧೂಳೀಮಯವಖಿಳದಿಗು। ಜಾತವೆನೆ ಥಟ್ಟಣೆಯ ನೇರಿತು ಪಾಂಡು ಸುತಸೇನೆ॥೨೪॥
ಆಳಹಿರಿ ನೀವೆನ್ನಕೈಯಿಂ । ಪಾಳುಕುದುರೆಯ ಕೊಲಿಸುವುದು ನಿಮ । ಗಾಳುತನವುಂಟೆಂದು ಗರ್ವವ
ನಿಲ್ಲಿ ತೋರಿದಿರಿ ॥ ಆಳು ನೋಡುತಲಿರಲಿ ನಿಮ್ಮಯ । ಕಾಳಗವನೆಲೆಪಾರ್ಥ ಪವನಜ । ಕೇಳೆನುತ
ಕೈವರ್ತಿಸಿದನಂಬುಗಳೊಳಿವರೊಡಲ ॥ ೨೫ ॥ ನರನನೆಚ್ಚನು ಪವನಜನ ತನು । ಬಿರಿಯಲೆಚ್ಚನು
ಸಾರಥಿಗಳಿ । ಬ್ಬರಲಿ ಹೂಳಿದನಂಬ ನೆರೆ ನೋಯಿಸಿದನಾರಥವ ॥ ನರನ ಕಣೆಯನು ಭೀಮನಂಬನು।
ಹರೆಗಡಿದು ಮಗುಳೆಚ್ಚನವರನು । ಸರಳು ಪುನರಪಿ ಸವರಿ ಸೆಕ್ಕಿದನೊಡಲೊಳಂಬುಗಳ ॥ ೨೬ ॥
ದೃಷ್ಟಿಮುಷ್ಟಿಯ ಸರಿಸದಲಿ ತಲೆ । ಮೆಟ್ಟುಗರೆದರು ಪಾರ್ಥಪವನಜ । ರಿಟ್ಟುಕೊಡಹಿದರಾರು ನಿ
ಲುವರು ದನುಜದಿವಿಜರಲಿ॥ ನೆಟ್ಟನೆಯು ಗುರು ಸಿಲುಕನವತರಿ । ದೊಟ್ಟಿದನು ದೆಕ್ಕಾಯೆಯಲಿ ಗ
ರಿ । ಗಟ್ಟತೀತನ ಖ್ಯಾತಿ ಮೆರೆದುದು ಕೇಣವಿಲ್ಲೆಣಿಸಿ ॥ ೨೭ ॥ ಅಟ್ಟಿ ಜಗವನು ಮುರಿದು ನುಂಗು
ವ । ಥಿಟ್ಟನಹಶಮನಂಗೆ ಸಮರದ । ಕಟ್ಟಳೆಯೊಳಾಯುತದ ಔತಣವನ್ನು ಹೇಳ್ವಂತೆ ॥ ಕಟ್ಟೆವಡೆ
ದಂಬುಧಿಯೊ ಮೇಣ್ಜಗ । ಜಟ್ಟಿ ಸುರಿವಂಬುಗಳೊ ನಿಮಿಷಕೆ । ಕೆಟ್ಟುದಾದೊಡೆಯಬಲತರಹರ
ವರಸ ಕೇಳೆಂದ ॥ ರಾಯನನು ಬರಹೇಳು ನಾವ್ ಕೈ । ಗಾಯ್ದೆವೋ ಕಾದಿದೆವೊ ಕಾಣಲಿ । ಬಾಯಿ
ಬಡಿಕರು ಬಂದು ನೋಡಲಿ ಕರ್ಣಶಕುನಿಗಳು ॥ ಆಯುಧವ ಹಿಡಿದವರು ಮೇಣವ। ರಾಯುತದಲೊ
ಡೆಬೆರಸಿ ನೋಡಲಿ।ರಾಯರಾಣೆಯೆನುತ್ತ ಮೊದಲಿಸಿದನು ತನ್ನವರ॥ ೨೮॥ ಬಾಲಸೂರ್ಯನವೋಲು
ತೀಕ್ಷ್ಣ । ದೇಳಿಗೆಯ ತೇಜದ ವಿಕಾರ ಛ । ಡಾಳಿಸಿತು ವಿಕ್ರಮದಜಳ ಜಗವಳುಕೆ ರೋಂಪಿಸಿತು ॥
ಹೇಳಲೇನರ್ಜುನನ ಭೀಮನ । ಸೋಲುವುದು ತಾಮೃತ್ಯು ವೀಪರಿ । ಕಾಳಗವನಾನರಿಯೆನಮರಾಸುರ
ರ ಸಮರದಲಿ ॥ ೩೦ ॥ ಸಾಕು ನಿಮಗಾಗದು ವೃಥಾನೀ । ವೇಕಹಂಕರಿಸುವಿರಿ ಸೇನಾ । ನೀಕಹೊ
ದ್ದಲಿ ಹೊಗಲಿ ದೃಷ್ಟದ್ಯುಮ್ನಮೊದಲಾದ ॥ ಆಕೆವಾಳರು ನಿಲಲಿ ಕುಪಿತಪ। ನಾಕಿಯರಿಯಾ ದ್ರೋ
ಣನೆನುತ ವ । ರಾಕೃತಿಯಪರಬೊಮ್ಮರೂಪನು ತಿರುಗಿಸಿದ ರಥವ ॥ ೩೧ ॥ ಮೇಲೆ ಬಿದ್ದುದು ಮು
ಳಿಸಿನಲಿ ಪಾಂ । ಚಾಲರಾಯನ ಥಟ್ಟು ನಿಶಿತಶ । ರಾಳಿಯಲಿ ಹೂಳಿದನು ದೃಷ್ಟದ್ಯುಮ್ನನಂಬರವ ॥
ಬಾಲಕರ ಕರಖಡ್ಗಧಾರೆಯ । ಮೇಲೆ ನೋದುವ ಮಧುರಸವಿಯಲಿ । ನಾಲಗೆಯುವವರೊಲ್ಲರೆಂದನು
ನಗುತ ಕಲಿದ್ರೋಣ ॥೩೨॥ ತೆರಹುಗೊಟ್ಟೊಳಹೊಗಿಸಿ ಸದೆದನು । ಬರಸಿಡಿಲು ಬಡಿವಂತೆ ರಿಪುಬ
ಲ। ವರಲಿ ತೆಗೆದುದು ಗಾಯವಡೆದರು ಬೇಹನಾಯಕರು ॥ ದುರಿದುರಿಪತಲೆಮಿದುಳ ದಂಡೆಯ। ಹ
ರಿಗರುಳ ನೆಣವಸೆಯ ಮೂಳೆಯ । ಮುರುಕುಗಳ ಕಡಿಖಂಡಮಯವಾಯ್ತಖಿಳತಳತಂತ್ರ ॥ ೩೩ ॥
ಬೆರಳ ಬಾಯ್ಗಳ ಬಿಸುಟಕೈದುಗ । ಳರೆಗಿರಿದಹಲ್ಲುಗಳ ಕೂಡಿದ । ಕರಪುಟದ ಬಿಡುದಲೆಯ ಬಸಿವೆರ
ಳುಗಳ ಶೋಣಿತದ ॥ ಸರಳಲಾರೋಹಕರ ರಾವ್ತರ । ವರಮಹಾರಥಪಾಯದಳದು । ಬ್ಬರದ ಬೇಗೆ
ಯನೇನನೆಂಬೆನು ವೈರಿಸೇನೆಯಲಿ ॥ ಮುಂದೆ ಹೊಗುವರಬಲರು ಹೋರಿತು । ಹಿಂದಣವರಾಸೆಯ

ಲಿ ನಿಂದುದು । ನಿಂದುದಾಬಲುಹುಯ್ಯಲಿ ಪವನಜಪಾರ್ಥಪರಿಯಂತ ॥ ಅಂದು ಪಾರ್ಥನು ಕೃಷ್ಣಬಲದಲಿ । ನಿಂದನೇವೇಳುವೆನು ನಿನ್ನವ । ರೆಂದು ಗೆಲ್ಲರು ಗಾಹುತದಕವನುಳಿದು ಕಾದುವೊಡೆ ॥ ೩೫ ॥ ಆರು ಸಾವಿರತೇರು ಗಜಹದಿನಾರುಸಾವಿರ ಲಕ್ಷಕುದುರೆಗ। ಳಾರುಕೋಟಿಪದಾತಿ ಮುಗ್ಗಿತು ಮತ್ತೆ ಸಂದಣಿಸಿ ॥ ಆರುಲಕ್ಷತುರಂಗ ನೃಪರ್ಕೆ । ನೂರು ಗಜಘಟೆ ಲಕ್ಷ ರಥಹದಿ । ಮೂರುಸಾವಿರವಳಿದುದಕೆ ಪರಿಗಣನೆಯಿಲ್ಲೆಂದ ॥ ೩೬ ॥ ಅಂಗವಿಸುವವರಿಲ್ಲ ಭಟರಿಂಗೆ । ಭಂಗವಿಕ್ಕಿತು ಕೌರವೇಂದ್ರಗೆ ಸಂಗರದಸಿರಿ ಸಾಗಿತಾ ಕಡೆಗಣ್ಣ ಸೂಸಿದಳೋ ॥ ಮುಂಗುಡಿಯೊಳಿನ್ನಾರು ಸಮರಗಾ । ಪಂಗದಲಿ ಗೆಲವಹುದು ಹದನರ । ಸಂಗೆ ಬಿನ್ನಹವಮಾಡಿಯಾದರು ನಿಖಿಳ ಮಂತ್ರಿಗಳು ॥ ೩೭ ॥ ಕರೆಸಿದನು ಹರಿ ಧರ್ಮಪುತ್ರನ । ನರಸ ಕೇಳಿಂದಿನಲಿ ಗುರುವನು । ಸರಳ ಮೊನೆಯಲಿ ಗೆಲುವು ನೂಕದು ಭೂತನಾಥಂಗೆ ॥ ಧುರದಜಯುವಹುದೊಂದುಪರಿಯಲಿ । ನಿರುತವಲ್ಲದನುಡಿಯನುಡಿದೊಡೆ । ಪರಿಹರಿಸಬಹುದೆಂದನಸುರಾರಾತಿ ನಸುನಗುತ ॥ ೩೮ ॥ ಕಿವಿಯ ಮುಚ್ಚಿದನರ್ಜುನನು ಹರಿ । ಯುವಗಡಿಸಿಕೊಂಡರಸನನುಪಮ । ಪವನಸುತನಾಮಾತ ಕೊಂಡನು ಹೊಕ್ಕನಾಹವವ ॥ ತವಕದಲಿ ತೆಗೆದೆಸುತ ರಿಪುಶರ । ನಿವಹವನು ಖಂಡಿಸುತಲಿಂದಿನ । ಬವರದಲಿ ಕಡಿವಡೆದುದಶ್ವತ್ಥಾಮಗಜವೆಂದ ॥ ಶಿವಶಿವಾ ಕರ್ಣಜ್ವರಾಯತ । ರವವಿದೆತ್ತಣದೋ ಕುಮಾರನ । ತಿವಿದರೇ ತಾನೇನಿದದ್ಭುತವೆನುತ ಮನದೊಳಗೆ॥ ತವಕಿಸುತ ತಿಳಿದನು ವೃಕೋದರ । ನಿವ ದುರಾತ್ಮನು ತನ್ನ ಮಗನಾ। ಶಿವನೊಡನೆ ಸಮಜೋಳಿ ಹುಸಿಹೋಗೆಂದನಾದ್ರೋಣ ॥ ೪೦ ॥ ಮತ್ತೆ ಮಸಗಿತು ಖತಿಯು ಕರ್ಬೊಗೆ। ಸುತ್ತಿತುರಿಯಲಿಮೀಸೆಗಡಿದೌ । ಡೊತ್ತಿಸೆಳೆದನು ಸರಳಲೆಚ್ಚನು ಪವನನಂದನನ ॥ ಹತ್ತೆಗಡಿದನು ಭೀಮಮುರಳಿವ । ಸೊತ್ತಿಹೊಕ್ಕೊಡೆಕೈನೆರವ ಹಾ। ರುತ್ತ ಮುರಿದನು ಬಳಿಕ ಧೃಷ್ಟದ್ಯುಮ್ನನಿದಿರಾದ ॥೪೧॥ ಎನಿತುಬಾರಿ ಪಲಾಯನದ ಸಿರಿ । ನಿನಗೆ ನಿಲುಕದು ವೀರಭಂಡನೊ । ಳೆನಗೆ ನೂಕದು ಸಾರು ಧೃಷ್ಟದ್ಯುಮ್ನ ನಿಲ್ಲೆನುತ ॥ ಅನಿಲಜವದಲಿ ರಥವ ಬಿಟ್ಟನು । ಜನಪತಿಯ ಸಮ್ಮುಖಕೆ ಕವಿದುದು । ತನತನಗೆ ರಾಯನ ವಿಪತ್ತಿನೊಳಖಿಳಪರಿವಾರ ॥ ೪೨ ॥ ಒಲೆದು ಗಜವಿಟ್ಟಣಿಸಿದ್ದವು ಮಿಗೆ । ತಲೆವರಿಗೆಯಲಿ ಪಾಯದಳಪಡಿ । ತಳಿಸುತೊಳಹೊಕ್ಕೊಕಿದವು ಬದ್ದರದ ಭಂಡಿಗಳು ॥ ಸೆಳೆದೊಡಾಯುಧರಾಹುತರು ಕೈ । ನಿಲುಕಿನಿಂದರು ಮುತ್ತಿದರು ಮಂ । ಡಳಿಸಿ ಬೊಬ್ಬಿರಿದಾಲಿದರು ಸಿಲುಕಿದನು ಧೊರೆಯೆನುತ ॥ ೪೩ ॥ ಸಾರಥಿಯ ತುಡುಕಿದರು ತಿವಿದರು । ತೇರ ತೇಜಿಯ ನಿಭದ ಬರಿಕೈ । ತೇರ ಹಿಡಿದವು ಘುಲ್ಲಿಸಿತು ಮಿಗೆ ಪರಶು ತೋಮರವ ॥ ಭಾರಿಸಿತು ಜನ ಮೇಲೆ ಬಿದ್ದವು। ವಾರುವಂಗಳ ಖುರನಿಕರಮಸೆ । ಧಾರೆ ಮುಖದಲಿ ಮಿಂಚಿದವು ಮುತ್ತಿದವು ಕಲಶಜನ ॥೪೪॥ ದ್ರೋಹಿ ಸಿಲುಕಿದನೆನುತ ಜೀವ । ಗ್ರಾಹವೋ ಗಹನವೊ ವಿಚಾರಿಸು । ಬೇಹವರನೆನುತೊದರಿ ಧೃಷ್ಟದ್ಯುಮ್ನನುರವಣಿಸೆ ॥ ಸಾಹಸಿಗಳಳುಕಿದೊಡೆ ಕೌರವ । ಮೋಹರದ ಮೊನೆಯಾಳುಗಳು ಸಂಸಾ । ಹದಲಿ ಪಡಿತಳಿಸಿದರು ಕರ್ಣಾದಿ ನಾಯಕರು ॥೪೫॥ ಗಾಳ ಗಂಟಲೊಳಿಳಿಯದೇ ಮ । ತ್ಸ್ಯಾಳಿಗಳಿಗೀದೊದ್ದೆ ಕವಿದೊಡೆ । ಕೋಲುಗಾರು ಕಳವಳಿಸುವನೆ ಬಯಸುವನೆ ಕೈನೆರವ ॥ ಮೇಲುಗಾಣದೆ ಕವಿದೊಡಿದಿರೇ । ಬಾಲಹರಿಣನ ಹಿಂಡು ಹೆಬ್ಬುಲಿ। ಗಾಳದತ್ತರ ತುಳಿದು ತಳಪಟ ಮಾಡಿದನು ದ್ರೋಣ ॥ ೪೬ ॥ ಆರನೆರವಿನೊಳಂಧಕಾರದ । ಭಾ

ರವನು ರವಿ ಗೆಲುವನಿನ್ನೀ । ವೈರಿಬಲ ಭಂಜನೆಗೆ ಗುರು ಹಿಂಗುವನೆ ಕೆಲಬಲಕೆ ॥ ಭೂರಿರಿಪು ಚತು
ರಂಗಬಲ ಸಂ। ಹಾರದಲಿ ಬಿಗಿಯೆದ್ದು ರಕುತದ । ಪೂರದಲಿ ಮುಳುಗಿದರು ಕರ್ಣಕೃಪಾದಿ ನಾಯ
ಕರು ॥೪೭॥ ಗಾಯವಾಯ್ತರ್ಜುನಗೆ ಮಿಗೆಪ್ರೌ । ಢಾಯ ಗಾಯದೊಳೊದ್ದುಕೊಂಡನು । ವಾಯು
ಸುತನು ಶಿಖಂಡಿ ಕೈಕೆಯ ದ್ರುಪದನಂದನರು ॥ ಬಾಯಬಿಟ್ಟುದು ಭೀತಿಯಲಿ ಕೌಂ । ತೇಯಸುತರಿ
ನ್ನುಳಿದ ಸುಭಟರ। ನಾಯಕರ ಪಾಡೇನು ನಸಿದುದು ಪಾಂಡುಸುತಸೇನೆ॥೪೮॥ ಮೊದಲು ತಾಗಿದ ಚಾ
ತುರಂಗವ । ಸದೆದನೊಂದೇ ಲಕ್ಷವನು ಮಿಗೆ । ರಿದೊಡೆ ಸೋದಿಪನೆಂಟುಲಕ್ಷವನೊಂದು ನಿಮಿಷದಲಿ॥
ಕದನದಲಿ ಘಾರಿಸಿದ ಘಟ್ಟನು । ಸದೆದು ಕೆಡಹಿದನೆಂಟು ಲಕ್ಷವ । ನೊದವಿಸಿದನಂತಕನ ಪುರಿಗವನೀಶ
ಕೇಳೆಂದ ॥೪೯॥ ಧಾರುಣೀಶರು ಮಡಿದರೊಂದೇ । ಸೇರುವೆಯಲೈ ನೂರು ಮತ್ತೆ ಮಹಾರಥರು
ಮುನ್ನೂರು ಪುನರಪಿ ನೂರು ಯಿನ್ನೂರು ॥ ಮಾರ್ಗಣಾಗ್ನಿಗಣವಾಯ್ತು ಯಮುನವ । ದಾರನೋಯ
ಲು ನಾಕದಲಿಹೊರ । ಗೇರಿಗಟ್ಟಿದವೆಸಲು ಕೊಂದನು ರಿಪುಚತುರ್ಬಲವ ॥೫೦॥ ಇಳಿದರಿತ್ತಲು ಗಗನ
ದಿಂ ಹೊಳೆ । ಹೊಳೆವಧವಳದ ಜೋಡಿಯಲಿ ಜಗ । ಮುಳುಗೆ ಭಸ್ಮವಿಭೂಷಿತಾಂಗದ ಜಡಿವಜಡೆ
ದಲೆಯ ॥ ಪುಲಿದೊಗಲ ಸುಲಿಪಲ್ಲ ಮುಕ್ತಾ । ವಳಿಯ ಜಪಮಾಲೆಗಳ ನಿರ್ಮಳ । ಬಲುತಪೋಧನ
ರೈದಿದರು ಸಂಗ್ರಾಮ ಭೂಮಿಯಲಿ ॥೫೧॥ ಅತ್ರಿಭಾರದ್ವಾಜ ವಿಶ್ವಾ । ಮಿತ್ರ ಗೌತಮ ಕಣ್ವಕೌ
ಶಿಕ । ಮೈತ್ರಸುತರು ವಸಿಷ್ಠ ಗಾರ್ಗ್ಯಾಂಗಿರಸ ಭಾರ್ಗವರು ॥ ಸತ್ರಿಗಳು ವಾಲ್ಮೀಕಿ ಭೃಗುವರ । ಚಿ
ತ್ರಚರಿತರು ಬಂದರಲ್ಲಿಗೆ । ಮಿತ್ರಭಾವದಲಿವರಿಗಭಿವಂದಿಸಿದನಾದ್ರೋಣ ॥೫೨॥ ಪರಮುನಿಗಳೆಕ್ಷಿಪಿನ
ಯದಲಿ ಮೂ । ವರಿಗೆ ಗೋಚರವಾದರಿತ್ತಲು । ಮುರವಿರೋಧಿಗೆ ನರಗೆ ಕುರುಸೇನಾಧಿನಾಥಂಗೆ॥
ಅರಿಯರುಳಿದವರಿತ್ತ ಮಿಗೆ ಸಂ । ಸ್ಮರಿಸಿಕೊಂಡರು ನುಡಿದರಾಮುನಿ । ವರರು ಕಡಿದರು ಕೌರವೇಂ
ದ್ರನ ಕಲ್ಪಭೂರುಹವ॥೫೩॥ ಪಾತಕವಲಾ ದ್ರೋಣ ನಿನಗಿದು । ಭೂತಹಿಂಸೆಯದೇಕೆ ಪಾರ್ಥಿವ। ಜಾ
ತಿಯಲಿ ಜನಿಸಿದರು ಕೇಳ್ ನಿನ್ನಂತೆ ನಿರ್ದಯರೆ ॥ ಸೋತರೇನದು ಋಷಿಗಳಿಗಪ । ಖ್ಯಾತಿಯೇ
ಶಸ್ತ್ರೋಪಜೀವನ। ವೇತಕಿದು ನಮಗೆಂದು ಭಾರದ್ವಾಜಮುನಿ ನುಡಿದ ॥೫೪॥ ಲೋಕವೆಂಬುದು ನ
ಮ್ಮಧರ್ಮವ । ನೌಕಿ ನಡೆವುದು ಲೌಕಿಕಕೆ ನಾ । ವಾಕೆವಾಳರು ತಪ್ಪಿನಡೆದೊಡೆ ಬುಧರು ಭ್ರಮಿಸುವ
ರು ॥ ಲೋಕನಮ್ಮನು ಬೋಡಿಗಳೆವುದು । ಕಾಕನೆರೆ ಬಳಸುವುದು ದುರಿಯಶ । ವೇಕೆ ನಮಗಿದು ವಿ
ಹಿತಕರ್ಮಶ್ರುತಿಪರಿತ್ಯಾಗ ॥ ಶ್ರುತಿಪಠನವೋ ತರ್ಪಣವೊ ವೇ । ಣತಿಥಿ ಪೂಜೆಯೊ ಭೂತದಯೆ
ಯೋ । ಹುತವಹಾರಾಧನೆಯೊ ರಣಶಿನ್ನಿದರೊಳಾವಫಲ ॥ ಶ್ರುತಿಸಮಸ್ತಸ್ಮೃತಿಗಳೊಳು ಪಂ। ಡಿ
ತರು ನವೆನ್ನವು ಮೂಢ ಮಾಡುವ । ಗತಿಯನನುಕರಿಸಿದೊಡೆ ಬಳಿಕ ವಿಶೇಷವಿಲ್ಲೆಂದ ॥ ೫೫ ॥
ತನಗನುವ ಹಿಡಿದುವತಿ ಫಲ । ವಾಪುಟಶ್ರವಣಂಗಳಿನ್ನು ಗು । ರೂದಕದಲಿರೆ ಸೇತುಸಂದರ್ಭ
ದಲಿ ಫಲವೇನು ॥ ಈಮಹಾಗ್ರಹ ನಿಲಲಿ ಹಾಯಿಕು । ಕೈದುವನು ಸುಸಮಾಧಿಯೋಗದೊ । ಳೈದು
ವುದು ನಿಜದೇಹ ನಿಸ್ಪೃಹನಾಗು ನೀನೆಂದ ॥ ೫೬ ॥ ದೇಹವಿದು ಭೂತೇಂದ್ರಿಯಾದಿಯ । ಲಾಹವ
ವು ಚಿತ ಕರ್ಮಬಲಸಂ । ದೋಹದಲಿ ತಿರುಗುವುವು ಸುರನರರಿರವ ಗಾಥೆಯಲಿ ॥ ದೇಹಕೆತ್ತಣದೀ
ಪ್ತಿ ಪಂಚವು । ದೈವವೆನಲುಳಿದಾತ್ಮನಲ್ಲಿಹ । ರೂಹ ನೋಡಾದಿತ್ಯನಲಿ ನೀನಿನ್ನು ನೋಡೆಂದ ॥೫೭॥

ನನೆದುದಂತಃಕರಣ ರೋಮಾಂ । ಚನದ ಪುಳಕದಲಶ್ರುಜಲದಲಿ । ತೊನೆದು ಹೊಂಪುಳಿವೋಗಿ ಕಣ್ಣೆವೆ ಮುಚ್ಚಿ ಹೊರೆಹೆಚ್ಚಿ ॥ ನೆನೆವ ನಿಮ್ಮನು ನಿಮ್ಮಪದವರು । ಶನದಿ ಧನ್ಯನು ಬಿಜಯಮಾಡುವುದೆನುತ ಕಂದೆರೆದೀಕ್ಷಿಸಿದ-ಸಭ್ಯುದಯುಸ್ವೈನಿಕವ ॥೫೯॥ ತಿರುಗಿದುದು ಮುನಿನಿಕರವತ್ತಲು । ಮರಳಿತೀತನ ಬುದ್ಧಿಯಿತ್ತಲು । ತೆರಹುವಿಡಿದುದು ಮರವೆ ಸಮ್ಯಜ್ಞಾನದೀಪ್ತಿಯನು ॥ ಅರಸನನು ಬೆಸಗೊಂಬ ತನುಜನ । ಮರಣವಿಟವ್ರೋ ಪುಸಿಯೊ ಭೀಮನ । ಪಂಯು ನಂಬೆನೆನುತ್ತ ರಾಯನನರಸುತ್ರೈತಂದ ॥ ೬೦ ॥ ಎಲೆಯುಧಿಷ್ಠಿರ ಯೆನ್ನಸುತನಿಂ । ದಳಿದನೇ ಹುಸಿಯಲ್ಲಲೇನಿ । ರ್ಮಳವಚೋನಿಧಿ ನೀನು ಹೇಳೆನೆಲಸುರಂಪು ನಗುತ ॥ ಎಲೆಲೆ ನುಡಿಯಾ ಪಾಪಿ ಕದನದೊ । ಳಳಿದುದಶ್ವತ್ಥಾಮ್ನನೆಂಬ । ಗಳದ ಕರಿ ಮಾಳವರೊಳೆಳಿದುದು ಅಂಜಬೇಡೆಂದ ॥ ೬೧ ॥ ಆದೊಡಶ್ವತ್ಥಾಮಗಜವಿದಿ । ರಾದುದಳಿದುದು ನಿರುತವೆನೆ ಬಿಸು । ಸುಯ್ದು ನರಸನನುಡಿಯನಂಬಿದೆನಕಟಮಗನೆನುತ॥ ಕೈದು ಕೈಯ್ಯಲಿ ಝೋಂಪಿಸಿತು ಬಲು। ಖೇದದಲಿ ಕಾತರಿಸಿದಂತ।ಸ್ವೇದದಲಿ ಕಳವಳಿಸಿ ಕರೆದನು ರೋಷತಾಮಸವ ॥ ೬೨ ॥ ಬಿಲುದುಡುಕಿ ಬಲುಸರಳ ತಿರುವಾ।ಯೊಳಿಸಿ ಮಲೆತನು ಮಾರ್ಬಲಕೆ ಬಲ। ಗಳಚಿದೊಡೆ ಕೊಲ್ಗೆದ್ದುದಿರುಬಿನ ಕಾಳಿಯೊಳೆಂಬಾತೆ॥ ತಿಳುಹಿ ಹೋದರು ಮುನಿಗಳೀತನ । ತಿಳುವು ತೊಟ್ಟುದು ಮರವೆಯನು ಮುಂ । ಕೊಳಿಸಿ ಮೊಗೆದನು ಮತ್ತೆ ಪಾಂಡವಸೈನ್ಯಸಾಗರವ ॥ ೬೩ ॥ ತಿರುಗಿ ಭೀಮನನೆಚ್ಚನಿತ್ತಲು। ನರನ ಮುಸೆಗಾಣಿಸಿದನರಸನ। ಹೊರೆಯ ಬಿರುದರ ಮುರಿಯಲೆಚ್ಚನು ಪಾಮದಕ್ಷಿಣವ ॥ ಮರಳಿ ಧೃಷ್ಟದ್ಯುಮ್ನ ಸಾತ್ಯಕಿ । ವರಯುಧಾಮನ್ಯುತ್ತಮೌಂಜಸ । ರರಸುಮಕ್ಕಳ ಹಲಬರನು ಮುರಿಯೆಚ್ಚು ಬೊಬ್ಬಿರಿದ ॥ ೬೪ ॥ ಈಸುಭರದಲಿ ಭೂತಹಿಂಸಾ । ದೋಷವನು ನೆರೆ ಮಾಡಿ ಮಕ್ಕಳಿ । ಗೋಸುಗವಲೇ ಧನವು.ನೆರೆಯಭಿಮಾನಸುತನಳಿಯೆ ॥ ಆಸೆಯಿದರೊಳಗೆಂದು ರಣದೊಳ। ಗಾಸೆಯಾದುದು ತಿವತಿವಾ ಸುತ।ನಾಶವನ [illegible]ಳ್ಳೆನೆಂದನು ನಗುತ ಕಲಿಭೀಮ॥೬೫॥ ಕೇಳಿದನು ಕಡುನೊಂದ ನಡಿಗಡಿ । ಗಾಲಿನೀರ್ದೊರೆದವು ಕೈಯಲಿ। ಕೋಲು ಸಡಿಲಿದುದುದುಳಿದುದೀತನ ಮುಮದ ಕಡುತವಕ ॥ ಮೇಲುದುಗುಡದ ಮುಖದಲವನೀ । ಪಾಲಕರ್ಣಕೃಪಾದಿಭಟರಿಗೆ । ಹೇಳಿದನು ಮಗನಳಿದಡಸ್ತ್ರತ್ಯಾಗ ತನಗೆಂದ ॥ ೬೬ ॥ ಎನುತ ರಥದಲಿ ರಚಿಸಿ ಪದುಮಾ । ಸನವನೆಂದ್ರಿಯಕರಣವೃತ್ತಿಯ । ನನಿತುವನು ತಡೆದೆತ್ತಿ ಮೂಲಾಧಾರಮಾರುತನ ॥ ಇನಶಶಿಗಳೊಂದಾಗೆ ನಾಡಿಗಳನು ಕೊಳಿಸಿ ಮಮಕಾರವಳಿದ । ಧ್ವನಿಕಳಾಪರಿಲುಳಿತನಿದ್ದನು ವರಸಮಾಧಿಯಲಿ ॥ ೬೭ ॥ ನಾಸಿಕಾಗ್ರದೊಳಿಟ್ಟು ಕಂಗಳ। ಸೂಸದುಸುರಿನ ಶೇಷಕಿರಣಪಿ। ಯೂಷಪಾವನರೋಮಪುಳಕದ ಗುಡಿಯ ಬೀಡುಗಳ ॥ ಆಸುಷುಮ್ನಾನಾಡಿಯಲಿ ಮನವು ಕ । ಳಾಸಿಸಿದಪವನನಸಮಾಧಿಪಿ । ಲಾಸನೆಸೆದನು ಸೌಖ್ಯಭಾವದ ಜಡಿಮರ್ಝೋಂಪಿನಲಿ ॥೬೮॥ ತನ್ನೊಳಿತರವನೆನೆವರೇ ತಾ। ತನ್ನೊಳೀಕ್ಷಿಸಿ ತಾನು ತಾನಿಂ । ದನ್ಯವೆರಡರೊಳೈಕ್ಯವೆಂಬಾಚಾರ್ಯಭಾವವನು ॥ ತನ್ನೊಳಗೆ ಹುಸಿಯೆಂದು ನಿತ್ಯಾ। ನನ್ಯನೆಮಲಜ್ಞಾನರೂಪವ । ತನ್ನನಿಲವೆಂಬರವು ತಾನಾಗಿರ್ದನಾದ್ರೋಣ ॥ ೬೯ ॥ ಒಡೆದುದೊಡಲಲಿ ಜ್ಯೋತಿ ತಡೆಯದೆ । ನಡುವೆಳಗು ಥಳಥಳಿಸಿದುದು ಮೇ । ಲ್ವಾತ್ತಡುಕಿ ಭೂಲೋಕಾದಿಯಾಗಿರ್ದಖಿಳಲೋಕವನು॥ ಕುಡಿವೆಳಗನೆಸುರಾರಿಮುನಿಗಳ । ಗಡಣವರ್ಜುನನವರು ಕಂಡರು । ಪಡೆಯೊಳಗೆ ತಾನುಳಿಯೆ ಕಂಡ

ವರಿಲ್ಲ ಬಳಿಕೆಂದ || ೨೦ || ತೀರಿತೇ ಮಗನುಬ್ಬಟೆಯು ಜಾಜ್ಜ್ವಾರತನವಿಂದಾರು ಯಾಪ್ತಿಗೆ | ರಾರು ದೊರೆಯಿನ್ನಾರು ಕಾವವರಾರು ಸಂಗರಕೆ || ಆರು ನಿನಗಿಂದೇಗುವರು ರಣ | ಧೀರರಗ್ಗದ ದೈವವೇ ಮಸ | ವಾರೆ ನಂಬಿಹುವವರೆಸಿನ್ನೇನೆಲಸ ಕೇಳೆಂದ || ... ... || ೨೧ ||

ಅಂತು ಸಂಧಿ ೧೮ಕ್ಕೆ ಪದ ೧೧೫೭ಕ್ಕಂ ಮಂಗಳಮಸ್ತು.

ಹತ್ತೊಂಬತ್ತನೆಯ ಸಂಧಿ.

||ಸೂಚನೆ || ರಾಯಕಟಕವಚಿಗುಳಿಸಿದನಾ | ರಾಯಣಾಸ್ತ್ರದ ಬಾಧೆಯನು ಕಮ | ಲಾಯತಾಂಬಕ ನಿಲಿಸಿ ಸಂತೈಸಿದನು ಪಾಂಡವರ ||

ಪದ || ಕೇಳು ಧೃತರಾಷ್ಟ್ರಾವನಿಪ ಗುರು | ಬೀಳುಕೊಟ್ಟನು ದೇಹವನು ಸ | ಮ್ಮೇಳವಿಧಿಯೋಗಪಜಯದ ತಪಸಿದ್ಧಿಯಲಿ ನಿಮಿಗೆ || ಮೇಲೆ ಬಂದುದು ಕಷ್ಟಪರಿಭವ | ಪಾಲಿಂಗೆ ಕೇಳಿದರು ಮಿಗೆ ಪಾಂ | ಚಾಲಸುತ ಕೈತಂದನಲ್ಲಿಗೆ ಜಡಿವಕಡುಗದಲಿ ||೧|| ಅಯ್ದೆ ಮುಂದಲೆವಿಡಿದು ಭಾಗಿಸಿ ಕೊಯ್ದ ನಾತನ ಕೊರಳ ನೆಸವಲಿ | ಹಾಯ್ದು ಮುಂದನು ಬದಿಯನಪ್ಪಳಿಸಿದನು ಬೆಸ್ಸೆಲುವ || ಕಯ್ದಣಿ ಯೇ ಕಡುಖಾತನುಯುಹೆನೆ | ಹೊಯ್ದು ರಥದಲಿ ಕೆಡೆದುಪುಜಡಿ | ವಾಯ್ದುವನು ಕಡುಗೋಪದಲಿ ನೋಡಿದನು ಭಪುರಿರವ || ೨ || ಎಲೆಲೆ ಪಾತಕ ಹೆಣನ ಹೊಯ್ದುಡೆ | ಬಲುಗಡಿಯ ನೀನೆಂಬರೇ ಸು ಡು | ಕೊಲೆಯನಿವಕಂಗೈಸುವರೆ ತಾರಾಜಪುತ್ರಗಡ || ತಿಳಿದನಾದೊಡೆ ನಿನ್ನ ಭಾಗ್ಯವು | ಪುಳಿದೊ ಡೀತನ ಮಗನು ನಿನ್ನಯ | ಕುಲದ ತಲೆಚೆಂಡಾಡಿವಲ್ಲದೆ ಬಂದಬಿಡನೆಂದ ||೩|| ಎಂದಸೂತನ ಬಾಯ ಹೊರಗೈ | ಯಿಂದ ಹೊಯ್ದನು ತಡಹಿದವರನು | ಹಿಂದಣಾಪ್ತರನಖಿಳಚಮರಚ್ಛತ್ರಧಾರಿಗಳ || ಮುಂದುವರಿದೊಡೆ ಮುಂದು ತಿವಿದನು | ಮಂದಮತಿ ಬಳಿಕಿವನ ಸುಡುಸುಡ | ಲೆಂದು ಧೃಷ್ಟದ್ಯು ಮ್ನನನು ಸೆರೆ ಪ್ರೈದುವಖಿಳಜನ || ೪ || ಕಡುಕುಗಳ ನಾಯ್ದಿರಿಸಿ ರಥದಲಿ | ಗುಡಿಯಸಿಂಧವನೆತ್ತಿ ಸಾರಥಿ | ತುಡುಕೆ ವಾಘೆಯ ಮುರುಹಿ ಮುರ್ಚಿ ರಥದಕುದುರೆಗಳ || ತಡೆಯದಶ್ವತ್ಥಾಮನವನಿ | ದ್ದೆಡೆಗೆ ಬರುತಿರೆ ಕಂಡು ಮನದಲಿ | ಕಡುವಿರೋಧವ | ಹಿಡಿದು ಚಿಂತಿಸುತಿರ್ದನಾದ್ರೋಣಿ || ೫ || ಏನಿದಚ್ಚರಿ ಕೌರವೇಂದ್ರನ | ಸೇನೆ ತಲೆಕೆಳಕಾಗುತಿದೆ ರಿಪು | ಸೇನೆ ಬೊಬ್ಬಿರಿದಾಡುತಿದೆ ಮಡಿದಾತ ನಾವವನೋ || ಸೇನೆಗೊಡೆಯನು ಬೊಪ್ಪನಿದು ತಾ | ನೇನು ರಥವಿದು ಬರಿದೆ ಬರುತಿದೆ | ಹಾನಿ ಜನ ಕಂಗಾಗದಿರದೇ ಶಿವಶಿವಾಯೆಂದ || ೬ || ತಂದು ಸಾರಥಿ ರಥವನೀತನ | ಮುಂದೆ ನಿಲಿಸಿದ ಬಿದ್ದ ಸಂಘ್ರಿಯೊ | ಳಂದು ಗೋಳಿಟ್ಟಳುತ ಕಳಶಜನಾಪ್ತಪರಿಜನವ || ತಂದೆಯೈದನೆ ಚಾಪವೇದ ಮು | ಕುಂದನೈದಿದ ನಿನ್ನ ಕಾಣಲು | ಬಂದನಯ್ಯನನಪ್ಪಿಕೊಳು ಮಾತಾಡು ನೀನೆಂದ || ೭ || ಕ್ರೋಡೆ ಹರಿ ಹಂಚಾದ ತಂದೆಯ | ಗೂಡ ನೋಡದ ಮುನ್ನ ಕಂಬನಿ | ಮೂಡಿ ಮುಳುಗಿದು ಮಾಲಿ ಕಾಣವು ಪಿತನ ಕಳೆವರನ || ನೋಡಲೆಳಸದ ಮುನ್ನ ಕಿಡಿಗಳ | ಝಾಡಿಯನು ಕಣ್ಣುಗುಳಿದವು ಮಿಗೆ | ನೋಡುತ

ಶ್ವತ್ಥಾಮ ಕಾಣನು ಮುಂದೆ ಪರಬಲವ ॥ ೮ ॥ ಅದ್ದನೆಳಲಿನ ಜಲಧಿಯೊಳು ಮುಳು। ಗೆದ್ದಕೋ
ಪಾನಳನ ಝಳದಲಿ।ಬಿದ್ದು ನನೆದನು ನಿರಿಸಿನಲಿ ಕಾಹೇರಿ ಕಿಚ್ಚಿನಲಿ॥ಗೆದ್ದುದುದಕವನನಲನನಲನ। ನದ್ದಿ
ತುದಕವ ದೊಂದನೊಂದನು । ಕದ್ದವೆರಡರ ಹೋರಟೆಗೆ ಗುರುಸೂನು ಬೆಂಬಾದ ॥೯॥ ಕೆದರಿ ಹೊರ
ಳುವಸಾರಥಿಯುನೆ । ತ್ತಿದನು ರಣ ವೃತ್ತಾಂತವನು ಕೇ । ಳಿದನು ಕ್ಷಮೆಸ್ಥೈರ್ಯವಿವೇಕವ ನೂಕಿದನು
ಸೆರೆಗೆ ॥ ಒದೆದನೆಳಲನು ರೋಮಹರುಷವ । ನೊದೆದು ಹೊರೆಹೆಚ್ಚಿದನು ಕಾಹೇ । ರಿದನು ಕಲುಮನ
ವಳುಕಿ ತಗಿತ್ತು ರೋಷಭಾವದಲಿ ॥ ೧೦ ॥ ಚಟುಲಕೋಪಾಗ್ನಿಯಲಿ ಸಾಸಾ । ಪುಟವದಸುಯ್ಲಿನ
ತಿವಿವಜಾತ । ಸ್ಫುಟಸಮಾಧಿಗಳಧಿಕದಲಿ ವಿಗ್ರಹಕಟಾಕ್ಷದಲಿ ॥ ಪಟುತರಣಬಾಹುಪ್ರತಾಪದ । ಘುಟ
ವನೆತ್ತಿದೆ ಮಾಣನೆನೆ ತೂ । ಕಟಿಸುತಿರ್ದುದು ರೌದ್ರವೀರಾದ್ಭುತದರಭಸದಲಿ॥ ನೊಂದಜವನೋ ಜ
ಗವನುರುಹಲು। ಬಂದಶಿವನೋ ಕಂಭದಿಂದೊಡೆ।ತಂದರೌದ್ರಾಟೋಪಮಾನವರೂಪಕೇಸರಿಯೋ॥ತಂ
ದೆಯುಳಲಿಗನಿರವು ವಿಶ್ವವ । ನೊಂದುನಿಮಿಷಕೆ ಸುಡುವುದೋ ಹಾ । ಯೆಂದುದಮರಾನೀಕವೆಲೆಭೂ
ಪಾಲ ಕೇಳೆಂದ ॥ ೧೨ ॥ ಮುರುಹಿದನು ಮೀಸೆಯನು ಕಣ್ಣುಗ । ಳರಳಿದವು ಹೊಗೆಸುತ್ತಿ ಸುಯ್ಲ
ಲಿ । ಸುರಿದುದುರಿಹುಬ್ಬುಗಳು ಬಿಗಿದೌಡುಗಳನೊಡೆಯುಗಿದು ॥ ಬೆರಳ ತುದಿಯಲಿ ಬೊಬ್ಬಿರಿದು
ಹರಿ । ಶರಕೆ ಕೈನೀಡಿದನು ಕಲ್ಪದ । ಹರನವೋಲ್ ರೂಪಾಗಿ ಹೊಂಗಿದನಧಿಕರೋಷದಲಿ ॥ ೧೩ ॥
ದನುಜಹರಮಂತ್ರವನು ಮನದಲಿ । ನೆನೆದು ಕೈನೀಡಿದನು ತುದಿಯಂ । ಬಿನಲಿ ತುರುಗಿದಕಿಡಿಯ
ಬಿಡುಕೇಸರಿಯ ಥಾಳಿಗಳ ॥ ತನಿಹೊಗೆಯ ಬಲುಹೊಗರ ಹೊರಳಿಯ । ಕನಕರಸದೇಳಿಗೆಯ ಮರಮ್ಮ।
ಮಿನುಗುಗಳ ಹೊಂಗರಿಯನಾರಾಯಣಮಹಾಶರವ ॥೧೪॥ ಪ್ರಳಯಮೇಘವಸೋದೆಪಕಲ್ಪವ । ಝು
ಳವಧಾರಾರಕ್ಕಯೊಳು ಜಗ। ದಳಿವಿನಲಿ ಝೊಂಪಿಸುವಹರನುರಿಗಣ್ಣ ಬಲುಮೆಳಗೋ ॥ ಮುಳಿದ
ನರಕೇಸರಿಯ ದಾಡಯ । ಥಳಥಳಾಕಾರವೊ ಮಹಾಸ್ತ್ರದ । ಬೆಳಗು ಹೆಸರಿಡಲಾರುಬಲ್ಲರು ಭೂಪ
ಕೇಳೆಂದ ॥೧೫॥ ಸರಳಚೂಣಿಯ ಝಳದೊಳಗೆ ಸಾ । ವಿರನಿದಾಘದ ಸೂರ್ಯರುಬ್ಬಟೆ । ಕರಗಿಹೋ
ಯಿತು ಬಾಯಧಾರೆಯ ಕಿಡಿಯಚೂಣಿಯಲಿ ॥ ಬರಸಿಡಿಲ ಶತಕೋಟಿ ಸಿಡಿದ್ದವು । ಗಿರಿಹೊಗರಕ
ಬೊಗೆಯ ಕಿಡಿಯಲಿ । ಹೊರೆದವೆಂತ್ಯದಮೇಘವೆನೆ ಘುಗಘುಗಿಸಿತಮಳಾಸ್ತ್ರ ॥೧೬॥ ಒಳಗೆ ಜಲ
ಚರವೊದಗಿ ಕುದಿದುದು । ಜಲಧಿ ಕಾದುದು ಧರಣಿ ಸೀದುದು । ಕುಲಗಿರಿಗಳುರೆ ಸಿಡಿದು ಸೀಕರಿವೋ
ಯ್ತು ವನನಿಕರ ॥ ನೆಲಕೆ ದಾಡೆಯ ಕೊಟ್ಟು ಕುಂಭ । ಸ್ಥಳಕೆ ತೆಗೆದ್ದವು ದಿಗಿಭತತಿಹೆಡ । ತಲೆಯ
ಮಣಿಗಳನಾಂತನವನಿಯನುರಗಪತಿಯೆಂದ ॥೧೭॥ ಗುಳವ ಕೊಯ್ದೆಳುಹಿದರು ಕರಿಸಂ । ಕುಳದಲಾ
ರೋಹಕರು ಜೋಡನು । ಕಳಚಿ ಬಿಸುಟರು ರಾವುತರು ಯಿಳಿದೋಡಿದರು ಹಯವ ॥ ಝಳದಘಾ
ಡಿಗೆಬೇಗೆವರಿವಂ । ಚಲದ ಗಾಳಿಗೆ ಮೊಗವನೆತ್ತಿದ । ರಳುಕಿ ಕಣುಕೋರೈಸಿ ಮಂಮಲಮರುಗಿತು
ಭಯಬಲ ॥೧೮॥ ಮೇಲುಜಗವಲ್ಲಾಡಿದ್ದವು ಧ್ರುವ । ನಾಲಯಕೆ ನೆಲೆತಪ್ಪಿದುದು ಗ್ರಹ। ಜಾಲತಾರಾ
ರಾಶಿಜೋಯಿಸರಂದು ಹುಸಿಯಾಯ್ತು॥ ಜಾಳಿಸಿದಸೆಗಳಿಗೆಯ ತಳಪಾ । ತಾಳವೊದೆದುದು ಕಮಲ
ಜಾಂಡದ । ಮೇಲಣಂತರವಾರಿ ಕುದಿದುದು ಹೇಳಲೇನೆಂದ ॥೧೯॥ ಒಡೆಯರಿಲ್ಲಾ ಜಗಕೆ ಲೋಗರು
ಸುಡುವಿಗೊಪ್ಪಿಸಿಕೊಡುವರೇ ತಾ। ನೊಡೆಯ ಘಡ ತಾನೊಡೆಯರೆಂಬರು ಮೂವರೀಜಗಕೆ ॥ ನುಡಿವ

ರೀಹೊತ್ತಿನಲಿ ನಮಗಾ । ರೊಡೆಯನಾವಿನ್ನಾರ ಬಸುರೊಳಗೆಡ । ಗುವೆವು ಶಿವಶಿವಎನುತ ತವೆತಲ್ಲಣಿ
ಸಿತಮರಗಣ ॥೨೦॥ ಕಪಿದಕೌರವಬಲದ ಸುಪ್ತಾ । ನವನು ತಮ್ಮಂಜಿಕೆಯನಾವಿಗೆ । ಬವರಭಾರಿ
ಯ ಸರಳ ಸೊಗಡಿಗೆ ಬೀವಮೂಜಗವ ॥ ಅವರು ಕಂಡರು ಖಾತಿಯಲಿ ಪಾಂ । ಡವರು ಧೃಷ್ಟದ್ಯು
ಮ್ನನನು ತವ । ತವಗೆ ಬೈದರು ಪಾಪಿ ಲೋಕವ ಕೊಂದೆ ನೀನೆನುತ ॥೨೧॥ ಅಕಟ ಗುರುಹತ್ಯಾಮ
ಹಾಪಾ । ತಕವನೇ ನೆರೆಮಾಡಿದಲ್ಲದೆ । ಸಕಲಲೋಕದ ಬೇರುಗೊಲೆಗೆಲೆಪಾಪಿ ನೀನಾದೆ ॥ ಪ್ರಕಟವಿ
ಕ್ರಮವಿಸ್ಫುಲಿಂಗ । ಪ್ರಕರದಲಿ ಗದಗದಿಸುತಿದೆ ಸಾ । ಯಕವ ನಿಲಿಸಾ ನೀನೆನುತ ಭಂಗಿಸಿತು ಪರಿವಾ
ರ ॥೨೨॥ ಅವನ ಗುರುತನವೇನು ವಿಪ್ರಾ । ಧವನಲಾ ಶಸ್ತ್ರೋಪಜೀವನ । ನಿವನು ಋಷಿಯೋ
ದ್ರೋಣವಧೆಯನ್ಯಾಯವೇ ತನಗೆ ॥ ಇವನು ನಮ್ಮ ಕ್ರಿಯನನು ನೆರೆ ಪರಿ । ಭವಿಸನೇ ಚಿಕ್ಕಂದು ನಿಮ
ಗೇ । ನಿವನನಿಂದೊಡೆಖಾತಿಯೆಂದನು ದ್ರುಪದಸುತ ಮುಳಿದು ॥೨೩॥ ಆವಗಡಿಸಲೇಕಗ್ರಜನನ । ಧ್ರು
ವನೆಯಕಟಾಚಾರ್ಯನೆಲೆನಿ । ನ್ನವರವರ ನುಡಿಯಂತೆ ನುಡಿವರೆ ಗುರುವಲಾ ನಿನಗೆ ॥ ಇವರಿಗೇನುಡಿ
ಯುಲಿಸಿತೇನಿದು । ಶಿವಶಿವಾ ಗುರುನಿಂದೆಯನು ಕೇ । ಳ್ದವರು ನಾವಲ್ಲೆನುತ ಸಾತ್ಯಕಿ ಮುಚ್ಚಿದನು
ಕಿವಿಯ ॥೨೪॥ ಗುರುವಿಘಾತಕರಾವು ನೀನತಿ । ಗುರುವಿನುಪದೇಶಿಕನು ತನ್ನನು । ಕರೆದರಾರಿದಕೆಂ
ದು ಧೃಷ್ಟದ್ಯುಮ್ನನುಲಿದೇಳೆ ॥ ದುರುಳತನವಾರೊಡನೆಯೆಲೆಬಾ। ಹಿರ ಮಹಾಪಾತಕಿಯೆ ಘಡ ನಿ।
ಟ್ಠುರಸುವೆನು ತಾನೆನುತ ಸಾತ್ಯಕಿ ಖಂಡೆಯವ ಜಡಿದ ॥೨೫॥ ಎಲೆಲೆ ಹಿಡಿಹಿಡಿ ಸಾತ್ಯಕಿಯನೊಳ ।
ಗೊಳಗೆ ತೋಟಿಯೆ ಕೌರವೇಂದ್ರನ । ಬಲದ ಪರಬೂತಾಟವಾಯಿತೆ ನಮ್ಮ ಥಟ್ಟಿನಲಿ ॥ ನಿಲಿಸೆನುತ
ನೃಪ ನುಡಿಯೆ ಕಪಿದೊಡ । ಗಲಸಿ ಹಿಡಿದನು ಭೀಮನೀತನ । ಬಲುಭುಜವನೌಚಿದನು ಕೊಂಡನು
ಕರದ ಖಂಡೆಯವ ॥೨೬॥ ಸೆಳೆದನೊರೆಯಲಡಾಯುಧವನ । ವ್ವಳಿಸಿದನು ಪಾಂಚಾಲಸುತನೀ । ಗಳ
ವನನು ಹಿಡಿ ಭೀಮ ಕೊಡು ಸಾತ್ಯಕಿಯ ಖಂಡೆಯವ ॥ ಎಲೆವೊ ಸಾತ್ಯಕಿ ಕೃಷ್ಣದೇವರಿ । ಗಳುಕ ಸೈ
ರಿಸಿದೊಡೆ ತುತಾರಿಸಿ। ಗೆಲನುಡಿವ ಹೆಡತಲೆಯೊಳುಗವನು ನಿನ್ನ ನಾಲಗೆಯ ॥೨೭॥ ತನ್ನೊಳಿರ್ದವ
ಗುಣವ ನೋಡದೆ । ಚುನ್ನವಾಡುವರಬರಲೆಲವೋ। ನಿನ್ನ ಹೋಲುವರಾರು ಬಾಹಿರಭಂಡರವನಿಯ
ಲಿ ॥ ತನ್ನ ಶಸ್ತ್ರಾಸ ಬಿಸುಟು ಯೋಗಪಿ । ಪನ್ನನಾಯನನೇನಮಾಡಿದೆ । ನಿನ್ನ ನೋಡಿದು ಬಳಿಕ
ಪರರನು ಹೇಳು ನೀನೆಂದ ॥೨೮॥ ಮಿಡುಕಿದನು ಸಾತ್ಯಕಿ ವೃಕೋದರ । ನೊಡೆಯವಂಚಿಸಬೇಡ ಪವ
ನಜ । ಬಿಡು ನಿನಗೆ ನೃಪನಾಣೆ ಕುಡಿವೆನು ಖಳನ ಶೋಣಿತವ ॥ ಬಿಡುಬಿಡಕಟಾ ಭೀಮ ಸಾತ್ಯಕಿ । ಹಿ
ಡಿಹಿಡಿಯ ಹಮ್ಮೈಸುವನು ಬಿಡು।ತೊಡಕಿ ನೋಡಲಿಯೆನುತ ಧೃಷ್ಟದ್ಯುಮ್ನನಳ್ಳಿರಿದ ॥೨೯॥ ಮು
ಳಿದು ಯಾದವಸೇನೆ ಕೈದುವ । ಸೆಳೆದುದಾಪಾಂಚಾಲನಾಯಕ। ರುಲಿದು ನಿಂದುದ ಕಂಡನಸುರಧ್ವಂಸಿ
ನಸುನಗುತ ॥ ಎಲೆಲೆಪಾಪಿಗಳಿರ ವೃಥಾತ । ಮ್ಮೊಳಗೆ ಕೋಟಿಶರಾಗ್ನಿಯಿತ್ತಲು । ಮೊಳಗುತಿದೆ ಕೆ
ಡೆ ಬೀಳಹೊಯ್ದೊಯ್ಯುಕನ್ನಿಗಳನೆಂದ ॥೩೦॥ ಬೇರೆ ತನಗೊಂದಾಳುತನವೇ । ಸೂರೆಗೊಳುತಿದೆ ಜಗವ
ನಿತ್ತಲು । ಕಾರಿಡುವಕಾಲಾಗ್ನಿಯಿದೆ ಕರ್ಬೊಗೆಯ ಕವಚದಲಿ ॥ ತೋರಲಾಪರೆ ಬಾಹುಸತ್ವವ ।
ತೋರಿಯಿದಿರಲಿ ಪಂತದೋಲೆಯ । ಕಾರರೆಂದೆನುತಸುರರಿಪು ನಿಲಿಸಿದನು ಗಜಬಜವ ॥೩೧॥ ಇತ್ತ
ಲೋಕದ ಕಂಗಳೆವೆಗಳು । ಕೆತ್ತು ಧಳ್ಳುರವುರಿಯ ತಾಳಿಗೆ । ಮುತ್ತಿದವು ಹರಿದಶ್ವಶತವನು ಶಿವ

ಮಹಾದೇವ॥ಕಿತ್ತು ಶರವನು ತೂಗಿ ಬಿಲ್ಲಲಿ।ತೆತ್ತಿಸಿದನುರೆ ಸೇದಿ ತೋರಿಸಿ। ಹತ್ತುನಿನಗರಿಸೇನೆ ಹೋಗೆಂದೆಚ್ಚ ಬೊಬ್ಬಿರಿದ ॥೩೨॥ ಬಿಗಿದು ಹುಯ್ಯಲು ಜಡಿಯೆ ಭುಪನದ । ಲಗಡು ಕೌರವಸೇನೆ ಹರುಷದ । ಸೊಗಸಿನಲಿ ಹೈಮಾರಿಯು ಮಾರೆಯಾರಲಾ ಕೃಪಾದಿಗಳು॥ ಹೊಗೆಯ ಹೊರಳಿಯ ಘಟ್ಟಿನಲಿ ಮಿಗೆ । ತೆಗೆದುರಿಯುತೆಕ್ಕೆಯಲಿ ಕಿಡಿ ಝುಗ । ಝುಗಿಸೆ ಘಾಳಿಟ್ಟುದು ಮಹಾಶರವಹಿತಮೋಹರಕೆ ॥೩೩॥ ಹಾ ಮುರಾಂತಕ ಹಾ ಯುಧಿಷ್ಠಿರ । ಹಾ ಮರುತಸುತ ಹಾ ಧನಂಜಯ । ಸೋಮವಂಶಸಮಾಪ್ತ ವಾಯ್ತಿಂದಿನಲಿ ಹಾಯೆನುತ ॥ ಭೂಮಿ ತೆರೆಯಳೆ ಬಾಯನಕಟಾ । ಸೋಮಧರನೇ ಬಲ್ಲನಾವಿ । ನ್ನೀ ಮಹಾಸ್ತ್ರಕೆ ಸಿಲುಕಿದೆವು ಯೆಂದೊರಲಿತರಿಸೇನೆ ॥೩೪॥ ಕಳಕಳಿಸಿತರಿಸೇನೆ ಚೂಣಿಯ ಬಲುಗಿಡಿಯು ಸೆಕೆ ತಾಕಿ ಸುಭಟಾ । ವಳಿಯ ಮೀಸೆಗಳುರಿಯೆ ಕರುಬಿದವು ಭಟರ ಮೋರೆಗಳು ॥ ಒಲದ ಸುತ್ತಲು ಕಟ್ಟಿತುರಿ ಮಿಗೆ । ಬೆಳಗುಗುಡಿದವು ಕಬ್ಬೊಗೆಯು ಸಂ । ಚಲದಬಾಣದ ಬಂದಿಯಲಿ ಸಿಲುಕಿದುದು ರಿಪುಸೇನೆ ॥೩೫॥ ಝಳಕೆ ಘೋಳಿಟ್ಟೊರಲಿದವು ಕರಿ । ಕುಲ ತುರಂಗದ ಘಟ್ಟುಖುರದಲಿ । ನೆಲನಹೊಯ್ದುಪ್ಪಳಿಸಿದವು ರಾವುತರನೀಡಾಡಿ ॥ ಬಲುರಥಗಳನು ಬಿಡಿದು ಸೂತರ । ನಿಳುಹಿ ಹಯವೋಡಿದವು ಮುಂದಳ । ಗೊಳುತ ನಿಗುರಿತು ಪುರಿಯಕೋಟಲೆಗೊಂಡುದರಿಸೇನೆ ॥೩೬॥ ರಾಯರಂಜದಿರಂಜದಿರಿ ಮಿಗೆ । ಬಾಯ ಬಿಟ್ಟೊಡೆ ಹೋಹುದೇ ನಿ । ಮ್ಮಾಯತಿಕೆ ಹೊಣೆಗಾನು ಹೇಳಿದ ಮಾತಿ ಬೇಗದಲಿ ॥ ಆಯುಧಂಗಳ ಕಳೆದುಬಿಸುಡಿ ವ । ನಾಯುಜಂಗಳನಿಳಿದು ಬದುಕುವು । ಪಾಯವೆಂದಸುರಾರಿ ಸಾರಿದನಂದು ನಿಜಬಲಕೆ ॥೩೭॥ ತಳಿತಹೂವಿನ ತೊಡಬೆಯೋ ಕಾಳಿ । ದಲೆಯ ತೀಟೆಯಭಾರವೋ ನಿ । ರ್ಮಳದಚಿತ್ತದ ಖಾತಿಯೋ ನವ್ಯಸನಿಯೊಡವೆಗಳೊ ॥ ನಳಿನನಾಭನ ಮಾತು ಹಿಂಚಿತು । ಕಳಚಿದವು ಕೈದುಗಳು ಪಾಯ್ದುಳಿ । ವುಳಿದು ಜೋಕೆಯ ಜೋಡ ತೊಟ್ಟುದು ಪಾಂಡುಸುತಸೇನೆ ॥೩೮॥ ಆತನಾವೆಡೆ ಧರ್ಮಜನು ವಿ। ಖ್ಯಾತನಾಕಲಿಪಾರ್ಥಮಾದ್ರೀ। ಜಾತರೆಲ್ಲಿಹರುಳಿದ ಧರ್ಮಜನನುಜರೆಂದೆನುತ॥ಬೀತಕೈದುಗಳಲ್ಲಿ ಬಲಸಂ। ಘಾತವನು ಬಾಣಾಗ್ನಿ ಬೆರಸಿತು। ಪ್ರೀತು ಭಂಡರೆನುತ್ತ ಬಿಟ್ಟುದು ಬಾಣವರಿಭಟರ ॥೩೯॥ ಹರಿಯಿರದೆ ಭಾರಿಸಲು ವರನೃಪ । ನಿರೆ ನಿರಾಯುಧರಾದವಾದ್ರೀ । ಯರು ಶಿಖಂಡಿಯುಯುಧಾನ್ಯಸಾತ್ಯಕಿ ಸೃಂಜಯಾದಿಗಳು ॥ ಕರದಕದಪಿನ ತಳಿತಮುಸುಕಿನ । ಹೊರೆದವುರೌಸದ ಮುಂದೆ ಹರಹಿದ । ತರದಕೈದುವ ಬಿಸುಟಬಿರುದರ ಕಂಡುದಮಳಾಸ್ತ್ರ ॥೪೦॥ ಏಕೆ ನಾಚಿಕೆ ಧರ್ಮಹಾನಿ । ವ್ಯಾಕುಲಿತೆ ಯಿಂದಿನಲಿ ನಿಮಗಿ । ನ್ನೇಕೆ ವೈದಿಕವೇಗುವೆವು ಜೀವಕ್ಕೆ ಕಲಿಯುಂಟೆ ॥ ಏಕೆ ಭಯ ನಿಮಗಿನ್ನು ಕೈದುವ । ನೂಕಿದವರನು ಭೀತಿಗೊಂಬರ ಸೋಕಿದೊಡೆ ಮುರಹರನಪದದಾಣೆಂದುದಮಳಾಸ್ತ್ರ ॥೪೧॥ ಇವರೊಳುಂಟೇ ಕೈದುವಿಡಿದವ । ರವರೆನರಸುವೆನೆನುತ ಬರಲಾ । ಪವನಜನು ಘಟ್ಟಿಸಲು ಕಂಡಸುರಾರಿ ತಾ ಮುಳಿದು ॥ ಅವನಿಗಿಳಿಬೀಡಾಡಿದನು ಕೈದುವನು ತಾ ಮೊದಲಾಗಿ ನಿಂದರಿ। ದವನು ನೋಡೆನಲನಿಲಸುತ ನಸುನಗುತಲಿಂತೆಂದ ॥೪೨॥ ದೇಹಕೀರ್ತಿಗಳೊಳಗೆ ನಿಲುವುದು । ದೇಹವೋ ಕೀರ್ತಿಯೊ ಮುರಾಂತಕ। ಬೇಹುದನು ಬೆಸಸಿದೊಡೆ ಮಾಡೆನು ಬಲ್ಲೆ ನಿನ್ನನುವ ॥ ಗಾಹುಗತಕದಲುಳಿವಧರ್ಮ। ದ್ರೋಹತನವೇ ಯಿನ್ನು ನೋಡಾ । ಸಾಹಸವನಿನ್ನೆನುತ ಮುರಿದನು ಸರಳ ಸಮ್ಮುಖಕೆ ॥೪೩॥ ಪ್ರೀತು ಪಾಯಿಕು ಭೀಮನೇ ಅತಿ । ಭೀತಬಲದಲಿ

ವೀರ ನೀನೇ । ಯಾತಕಿವದಿರು ಗಂಡುಗೋಹದ ಗರುವಸೂಳೆಯರು ॥ ಸೋತೊಡೆಯು ಜಯ ನಿನ್ನ
ದೆನುತ ವಿ । ಭೂತಧೂಮದ ಝೂಡಿಕಿಡಿಗಳೊ । ಳೀತನನು ಮುಸುಕಿದುದು ತುಂಬಿಸಿತಂಬು ಪವನಜ
ನ ॥೪೪॥ ಗಿರಿಯ ಮುತ್ತಿದಮುಗಿಲವೋಲ್ಮಿಗೆ । ಹೊರಳಿಗಟ್ಟಿತು ಮೇಲೆ ದಳ್ಳುರಿ । ಧರಧುರದಲೊ
ಳಬೀಳುತಿರ್ದವು ಕಿಡಿಯಚೂಣಿಗಳು ॥ ಉರಿಯೊಳದ್ದಿ ತಮ್ಮ ಹಾಯೆಂ । ದರಸುಮೊದಲಾದಖಿಳ
ಭೂಪರು । ಕರೆದ ಬಿರುಹೊಯ್ಲುಗಳ ಬಾಯವರೊರಲಿ ಹಲುಬಿದರು ॥೪೫॥ ವಾಯುಸುತ ಹಾಯೆ
ನುತ ಫಲುಗುಣ । ಬಾಯ ಬಿಡೆ ಹರಿ ಜರೆದನೆಲೆರಣ । ದಾಯ ತಪ್ಪಿತು ಬೇಗ ತೊಡುತೊಡು ವರು
ಣಮಾರ್ಗಣವ ॥ ಸಾಯದಿರನೇ ಭೀಮನೆನೆ ನಾ । ರಾಯಣನ ನುಡಿಗಿಂದ ಮುನ್ನ ಜ । ಲಾಯತಾ
ಸ್ತ್ರವನರ್ಜುನನು ಗಾಂಡಿವದೊಳುಗುಳಿಸಿದ ॥೪೬॥ ಹೊಗೆಯನೊಡೆದೊಳಬಿದ್ದು ಕಿಡಿಗಳ । ನುಗಿ
ದು ದಳ್ಳುರಿಯುರಿಗಳನು ತನು । ಬಿಗಿದು ಭೀಮನ ರಥದ ಸುತ್ತಲು ಸೂಸಿ ತೆರೆಮಸಗಿ ॥ ಹಗೆಯನೆನ
ಗದಿರೊಡ್ಡಿ ಜುಣುಗಲು । ಬಗೆದರೇ ಖಂಡೆಯದ ಮೊನೆಯಲಿ । ಮುಗುಳಿಚುವರೇ ತನ್ನನೆನುತುರವಣಿಸಿ
ತಮಳಾಸ್ತ್ರ ॥೪೭॥ ಉರುಬಿದವು ಕೇಸರಿಗಳುದಕವ । ಸುರಿದುದೊಣಗಿಲುಗಿಡಿಯಹಬ್ಬುಗೆ । ಹೊ
ರಗೆ ಮಸಗಿತು ಉದಕಬಾಣವ ಹೀರಿ ಭೋರ್ಗರೆಯೆ ॥ ಒರತೆಯಾರಿತು ವರುಣಶರ ಬಾ । ಯೊರೆತು
ನೀರಡಸಿದುದು ಭೀಮನ । ಸೆರಗ ಹಿಡಿದುದು ಮೃತ್ಯುವವನೀಪಾಲ ಕೇಳೆಂದ ॥೪೮॥ ಆವಶರವಿದ್ದೇ
ಗುವದು ಮೈ । ಗಾವನಸುರಾಂತಕನಲ್ಲ ತಾ । ನಾವವಹಿಲದೊಳುರಿಯೊಳಡಹಾಯ್ದನಿಲಜನ ತೆಗೆದ ॥
ನಾವರಿಯೆವಾಪವನಜನ ಶ । ಸ್ತ್ರಾವಳಿಯನಾಫಲುಗುಣನ ಗಾಂ । ಡೀವವನು ಹರಿ ಸೆಳೆದುಕೊಂಡನು
ಬಿಸುಟನವನಿಯಲಿ ॥೪೯॥ ಮುರಿಮುರಿದು ಕಬ್ಬೊಗೆಯ ಹೊದಳಸ । ಹೊರಳಿಯೊಡೆದುದು ಸೂಸುಗಿ
ಡಿಗಳ । ನೆರವಿ ಸೀದುದು ನಿಮಿರ್ದ ಹೊಂಗರಿಯಂಬು ಹೊಳೆಹೊಳೆದು ॥ ಮುರಹರನ ಪಾದಾರವಿಂದದ ।
ಹೊರೆಯೊಳಡಗಿತು ಮತ್ತೆ ಜಯದು । ಬ್ಬರದೊಳಗೆ ಬೊಬ್ಬಿರಿದುವುರುನಿಸ್ಸಾಳಕೋಟಿಗಳು ॥ ೫೦ ॥
ಜಗದುಸುರು ಪಸರಿಸಿತು ಸುರುಪಕೆ । ಹೊಗರುಮಸಗಿತು ರಿಪುನೃಪರನಿಂ । ನಗಡುಮನದುತ್ಸಾಹವದ್ದುದು
ಭೇದಪಂಕದಲಿ ॥ ಹೊಗರುಮೋರೆಯ ಕೈಯಗಲ್ಲದ । ಬಿಗಿದಬೆರಗಿನ ಖತಿಯೊಳೊಸರುವ । ನಗೆಯೊ
ಳಶ್ವತ್ಥಾಮನಿದ್ದನು ಮೂಗದಮೌನದಲಿ ॥೫೧॥ ಏನ ಮಾಡುವೆನಿಸ್ಸು ಭಾಗ್ಯವಿ । ಹೀನನಕಟಾ ಕೌ
ರವನು ಸುರ । ಧೇನು ನೆರೆಗೊಡ್ಡಾಯ್ತು ಸುರತರು ಕಾಡಮರನಾಯ್ತು ॥ ಹಾನಿಯವದಿರಿಗಾಯ್ತು
ದಾರಿ । ದ್ವೈನಹುದು ಪರದೈವವತ್ತಲು । ಶೋನವೇತಕೆ ಸುಡಲೆನುತ ತಿರುಗಿದನು ಪಾಳಯಕೆ ॥೫೨॥
ಬಂದು ವೇದವ್ಯಾಸಮುನಿ ಗುರು । ನಂದನಂಗರುಹಿದನು ಪಾರ್ಥಮು । ಕುಂದರೇಪೂರ್ವದಲಿ ನರ
ನಾರಾಯಣಾಹ್ವಯದ ॥ ಸಂದಋಷಿಗಳು ಭೂಮಿಭಾರವ । ನೊಂದುಪಾಯದಿ ಹರಿಸಲಿವರೈ । ತಂ
ದಹದನನು ತಿಳುಹಿ ಬಂದನು ಫಲುಗುಣನ ಹೊರೆಗೆ ॥೫೩॥ ನರನ ಚಿಂತಾಗ್ನಿಯನು ಮಿಗೆ ಪರಿ । ಹ
ರಿಸಿದನು ಶೂಲದಲಿ ಮುಂಕೊಂ । ಡರಿಬಲವನಿರದಾತನಾರೆನಲಿಂದುಧರನೆಂದು ॥ ಹರನ ಕರುಣದ
ಹದನನೀತಂ । ಗೊರೆದು ಶತರುದ್ರೀಯವನು ವಿ । ಸ್ತರಿಸಿ ಬಿಜಯಂಗೈದನಾಮುನಿಪತಿ ನಿಜಾಶ್ರಮಕೆ
॥೫೪॥ ಬಿಸುಟಕೈದುಗಳೆಲ್ಲವನು ಕೈ । ವಶವ ಮಾಡಿತು ಸೇನೆ ಲಜ್ಜಾ । ರಸಕೆ ಗುರಿಯಾಯ್ತೊಮ್ಮೆ
ಮರಳಿತು ಹರುಷಮಯರಸಕೆ ॥ ಮುಸುಕುದಲೆಯಲಿ ಮುರಿಮುರಿದು ಮಧು । ರಸದ ರಹಿಯಲಿ

ತಿರುಗಿತದು ರವಿ । ಮುಸುಡತಿರುಹಿದರಾಗದಲಿ ಬೀಳ್ಕೊಟ್ಟನಂಬರವ ॥ ೫೫ ॥ ಆವಶರದಲಿ ಕೊರತೆ ನಿನ್ನವ! ರಾವಬಲದಲಿ ಕುಂದು ಭುವನದೊ । ಳಾವನೈ ಸಮಜೋಳಿ ನಿನ್ನರವುನೆಯು ಸುಭಟರಿಗೆ ॥ ಆವನಿದ್ದೇಗುವನು ಜಗದಧಿ । ದೈವದಲಿ ಸೆಣಸಿದಿರಿ ಪಾಂಡವ । ಜೀವಿಯೆಂದರುಹಿದನು ಗದುಗಿನ ವೀರನಾರಯಣ ॥ ... ... ॥೫೬॥

ಅಂತು ಸಂಧಿ ೧೯ ಕ್ಕೆ ಪದ ೧೨೫೫ಕ್ಕಂ ಮಂಗಳಮಸ್ತು

ಇತಿ ಶ್ರೀಮದಚಿಂತ್ಯಮಹಿಮ ಗದಗುವೀರನಾರಾಯಣ ಚರಣಾರವಿಂದ ಮಕರಂದಮಧು
ಪಾನಪುಷ್ಟವಚಷ್ಷಟ್ಪದಿನಿಕಾಯ ಶ್ರೀಮತ್ಕುಮಾರವ್ಯಾಸಯೋಗೀಂದ್ರ
ವಿರಚಿತಮಪ್ಪ ಕರ್ನಾಟಭಾರತ ಕಥಾಮಂಜರಿಯೊಳ್
ದ್ರೋಣಪರ್ವಂ ಸಮಾಪ್ತಮಾದುದು.

॥ ಶ್ರೀರಸ್ತು ॥

ಶ್ರೀ ವೇದವ್ಯಾಸಾಯನಮಃ.

ಕನ್ನಡ ಮಹಾಭಾರತ-ಕರ್ಣಪರ್ವ.

ಮೊದಲನೆಯ ಸಂಧಿ.

॥ ಸೂಚನೆ ॥ ರಾಯಕಟಕಾಚಾರಿಯನ ತರು । ವಾಯಸೇನಾಪಟ್ಟವನು ರಾ । ಧೇಯನಲಿರಚಿಸಿದನು ಮುದದಲಿ ಕೌರವರರಾಯ ॥

ಪದ ॥ ಕೇಳು ಜನಮೇಜಯಧರಿತ್ರೀ । ಪಾಲ ತೆಗೆದುದು ದಳವೆರಡು ನಿಜ । ಪಾಳೆಯಕೆ ಪರಿಖೇದತೋಷಸ್ಥಗಿತವಿಗ್ರಹರು ॥ ಕೋಲಗುರುವಿನ ಮರಣವಾರ್ತೆ । ಕಾಲಸರ್ಪನ ತಂದು ಸಂಜಯ । ಹೇಳಿಕೆಯನೀಡಾಡಿದನು ಧೃತರಾಷ್ಟ್ರ ಕೇಳೆಂದು ॥ ೧ ॥ ಬೆದರಿತಾಯಾಸ್ಥಾನ ಧಿಗಿಲೆಂ । ದುದು ಧರಾಧೀಶ್ವರನ ತಂದೆಯ । ಹೃದಯದಲಿ ಹುರುಳೇನು ಬಳಿಕುಳಿದವರ ಮೋರೆಗಳ ॥ ಕುದಿದುದಂತಃಕರಣವರಸನ । ಕದಪು ಕೈಯಲಿ ಕೀಲಿಸಿತು ಹೇ । ಳಿದನು ಸಂಜಯ ಮತ್ತೆ ಮೇಲಣಕದನಕೌತುಕವ ॥೨॥ ಗುಡಿಯ ಕಟ್ಟಿಸು ಜೀಯ ಬರೆತುದು । ಕಡಲು ಮುರಿದುದು ಮೇರು ಕರಗಿತು । ಸಿಡಿಲು ಬಿದ್ದುದು ಭಾನುಮಂಡಲವಹಹ ವಿತಳದಲಿ ॥ ಮಡಿದುದೈ ನಿನ್ನಾನೆನಿನ್ನು । ಗ್ಗಡದಭಟ ಬೀಳ್ಕೊಂಡನೈ ಕಡಿ । ವಡೆದನೈ ಕಲಿಕರ್ಣನೇಳ್ಗೆಯ ಮಾಡಹೇಳೆಂದ ॥ ೩ ॥ ಮೊದಲೊಳಿರ್ದುದು ಜೀವಕಳೆ ಹೃದ । ಯದಲಿ ಹೃದಯವನೊದೆದು ಮಿಗೆ ಕಂ । ಠದಲಿ ಕವಿದುದು ಕೂಡೆ ಭಯದಲಿ

ಮರುಗಿ ಮಲಗಿದನು ॥ ಕೆದರಿತಲ್ಲಾಯದಲಿ ರಾಯನ । ಹದನನರುಹಿದರೊಳಗೆ ಕೇಣಿಯೊ । ಳೊದರಿದಂತಃಪುರದೊಳುಕ್ಕಿತು ಶೋಕರಸಜಲಧಿ ॥ ೪ ॥ ಬಾಯ ಬಸುರಿನ ನೊಸಲ ಹೊಯ್ಲ । ರಾಯನರಸಿಯರತ್ತೆಯುಬ್ಬರಲಿ । ಹಾಯಿದರು ಭಿತ್ತಿಗಳನೊದರಿದರೊಡನೆ ದೆಸೆಯೊದರೆ॥ ರಾಯನಾವೆಡೆಯಕಟ ಕಲಿರಾ । ಧೇಯನಾವೆಡೆ ನೂರುಮಕ್ಕಳು। ಬೀಯವಾದರೆ ಮಾವಯೆಂದರು ಸೊಸೆಯರಡೆಗೆಡೆದು ॥ ೫ ॥ ರಮ್ಯಕುಳವನದನೇನ ಹೇಳುವೆ । ನವನಿಪತಿ ಕೇಳ್ಕರ್ಣಮೊದಲಾ । ದವರ ರಾಣೀವಾಸ ಬಹುಳಾಕ್ರಂದನಧ್ವನಿಯ ॥ ಕವಿದರೊಳಸೂರೆಯಲಿ ತೋಟಿಯ । ತವಕಿಗರು ಗುಜುಗುಜಿಸೆ ಬಿಗಿದವು । ಭವನಭವನಕವಾಟತತಿಗಳಲಾಯ್ತು ಗಜನಗರ ॥ ೬ ॥ ನೆರೆದುದಲ್ಲಿಯದಲ್ಲಿ ಸೂರೆಗೆ । ಹರಿದುದಲ್ಲಿಯದಲ್ಲಿ ಮನವು । ತ್ವರೆದ ಬಳವಿಗೆಸೂಳುಭಂಟರು ಹಾಯ್ದರೊಳಗೊಳಗೆ ॥ ಅರಮನೆಯಲಾಬೊಬ್ಬೆ ಹಸ್ತಿನ । ಪುರದಲೀಬೊಬ್ಬಾಟವಿನ್ನುಳಿ । ದರಸುಗಳ ಪಾಡಾವುದೆಂದನು ಮುನಿ ನೃಪಾಲಂಗೆ ॥ ೭ ॥ ಸೂರೆವೋದುದು ನಗರಿ ಖಳರಿಗೆ । ಮಾರಿದರೆ ಪಟ್ಟಣವನಕಟಾ । ಕಾರುಮದ್ದಿನಲಾಯ್ತಲಾ ಕ್ಷೇಮಸಕವವನಿಪನ ॥ ನೂರುಮಕ್ಕಳನಿಕ್ಕಿ ಸಾಧಿಸ। ಲಾರನೇ ಜಯಸಿರಿಯನೆಂದುದ । ವಿಾರಿ ನುಡಿದರು ಮಂತ್ರಿಗಳು ಧೃತರಾಷ್ಟ್ರನಿದಿರಿನಲಿ ॥ ೮ ॥ ಎರಡುಗಲ್ಲದ ನಯನಸವಾಲಿಯ । ಹರಿಕುಳಿಯ ಕೆಡಿಸಿದನು ಸಂಜಯ । ನರಸನನು ನೂಕೊಳಿಸಿ ಬೆಂಕಿಗೆ ನೂಕಿದನು ಮನಸ ॥ ಅರಸ ಹದುಳಿಸು ನಿನ್ನ ಸೊಸೆಯರ । ಕರೆದು ಸಂತೈಸಕಟ ಹಸ್ತಿನ । ಪುರದ ಗಾವಳಿ ನಿಲಲಿ ಮಿಗೆ ಡಂಗುರವ ಹೊಯ್ಸೆಂದ ॥ ೯ ॥ ಬೀದಿಬೀದಿಗಳೊಳಗೆ ಡಂಗುರ । ನಾದವೆಸೆದವು ಕೇರಿಕೇರಿಯ । ಕೈದುಕಾರರು ನೆರೆದು ನಿಂದರು ಸೂರೆಗರ ಕೆಡಹಿ ॥ ಸುಯ್ದುನಡಿಗಡಿಗೊಲೆದೊಲೆದು ಪರಿ । ಖೇದಶೋಕಜ್ವಲನಜನಿತ । ಸ್ವೇದಸ್ತಿಮಿತದ ಕಾಯ ಚಿಂತಿಸಿ ರಾಯನಿಂತೆಂದ ॥ ೧೦ ॥ ಹೇಳು ಸಂಜಯ ನಮ್ಮ ಭಾಗ್ಯದ । ಶಾಲಿವನ ಫಲವಾಯ್ತಲಾ ಕೈ। ಮೇಳವಿಸಿದನೆ ಕರ್ಣನಮರಸ್ತ್ರೀಕದಂಬದಲಿ॥ ಹೇಳುಹೇಳಿನ್ನಾಸೆಮಾತಿನ ಜಾಳಿಗೆಯ ಜಡ ಬೇಡ ಕುರುಪತಿ । ಕಾಳಗದೊಳಸ್ತಮಿಸಿದನೆ ನುಡಿಯಂಜಬೇಡೆಂದ ॥೧೧॥ ಸಾವೆ ತಾನೆಂದಂಜಿಬರದು ಕ । ರ್ಣಾವಸಾನವ ಹೇಳು ತನ್ನಯ । ಜೀವವಿದೆಲಾ ದೇಹದಲಿ ಜೀಯಿನ್ನು ಕೆಲವರಲಿ॥ ಸಾವೆನೇ ತಾನಿನ್ನು ಕುರುಪತಿ.। ಜೀವಿಸಲಿ ಮೋಣಳಿದೊಡೆಯುಮಿ। ನ್ನಾವಭಯವಿಲ್ಲಕಟ ವಜ್ರಶರೀರಿ ತಾನೆಂದ ॥ ೧೨ ॥ ಗಾಯವಡೆದನು ಭೀಷ್ಮ ಬಳಿಕಿನೊ । ಳಾಯುಧದ ಗುರು ತೊಡಚಿ ಕಳಚಿದ । ನೀಯವಸ್ಥೆಗೆ ತನ್ನ ತಂದನೆ ಭಾನುನಂದನನು ॥ ಸಾಯನೇ ಮಗನಿನ್ನು ಬಳಿಕಾ । ನಾಯ ನುಡಿಯಿನ್ನೇಕೆ ಕರ್ಣನ । ಗಾಯಿತೇ ಕಡೆ ಸಾಕದನು ವಿಸ್ತರಿಸಿ ಹೇಳೆಂದ ॥೧೩॥ ಸರಳ ಕೊರತೆಯೊ ಸಾರಥಿಯ ಮ । ತ್ಸರವೊ ರಥದವಿಘಾತಿಯೋ ದು। ರ್ಧರಧನುರ್ಭಂಗವೋ ಮಹಾಸ್ತ್ರವ್ಯಥೆಯೊ ರವಿಸುತನ ॥ ಹುರುಳುಗೆಡಿಸಿದಿರೆಂತು ರಿಪುರಾ । ಯರಿಗೆ ನಾವ್ಗೋಚರವೆ ದುರಿತೋ । ತ್ಕರುಷವ್ಯಸಲೆ ನಮ್ಮ ಕೆಡಸಿತು ಶಿವಶಿವಾಯೆಂದ ॥ ೧೪ ॥ ಹರುಹುಗೆಟ್ಟವು ತೇರು ಸಾರಥಿ । ಹುರುಳುಗೆಡಿಸಿಯೆ ನುಡಿದನಂಜಿನ । ಕೊರತೆ ತಾ ಮುನ್ನಾಯ್ತು ದೈವದ್ರೋಹಿಗಳು ನಿಮಗೆ ॥ ಅರಿವಿಜಯವೆಲ್ಲಿಯದು ನೀಮ್ಮನ। ಬರಿಸರ್ಕೆ ನಿಮ್ಮನ್ವಯವ ಸಂಹರಿಸಿದಿರಿ ಸಾಕೆಂದು ಸಂಜಯ ಮೂಗಿದನು ಕರವ॥೧೫॥ ಸುರನರೋರಗರಿಯಲಾವ್ಬಾ । ಹಿರರುಭಂಗಿಸಬೇಡ ಸಾಕಂ । ತಿರಲಿ ಕರ್ಣಾದಿಗಳ ವರ್ಣವೃತ್ತ

ವ ಸುರಿಯಿನ್ನು ॥ ಅರಿಗಳಭ್ಯುದಯವನು ನಮ್ಮನೃಪ । ಸರಣಿಯನು ಕಿವಿಯಾರ ಕೇಳುವೆ । ಪರಮ ಸುಕೃತಿಗಳಾವು ನೀ ಹೇಳಂಜಬೇಡೆಂದ ॥ ೧೬ ॥ ಹೇಳಿದನು ಬಳಿಕೆರಡುಥಟ್ಟಿನೊ । ಳಾಳುಕುದುರೆಯು ಗಜರಥವ ಭೂ । ಪಾಲರಳಿದುಳಿದವರಲೆಕ್ಕವನೈದೆ ವಿಸ್ತರಿಸಿ ॥ ಕೇಳು ನಿಸ್ರಾಣತನ ವಿನೋದವ । ಖೂಳ ಬೋಳಿಯತನದ ತನ್ನದ । ಜಾಳಿಗೆಯ ಬೀಸರವನೆಂದನು ಸಂಜಯನು ನೃಪಗೆ ॥ ೧೭ ॥ ತೊಡರ ತೆಗೆದರು ಕೈಯಲಾರುವ । ನುಡಿಸಲಮ್ಮರು ಹೊತ್ತದುಗುಡದ । ನಿಡುಮುಸುಕುಗಳ ಬಿಗಿದಹುಬ್ಬಿನ ಬಿಟ್ಟಕಣ್ಣುಗಳ ॥ ಒಡೆಯನಿದಿರೊಳು ಕುಳ್ಳಿರದೆ ಕೆಲ । ಕಡೆಯ ಕೈಗುಡಿಗೆಯವರ ಬಳಿ । ಹಿಡಿದು ತೊಲಗಿತು ರಾಯನೋಲಗದೊಳಗೆ ಪರಿವಾರ ॥ ೧೮ ॥ ಸಾಲ ಕೈಗುಡಿಗೆಯವರ ಹಿಂ । ದಾಳಿಗಳು ಕಿಯ ನೃಪರ ಮೋರೆಗ । ಳೋಳಿಯನು ನೆರೆಹೊಯ್ದು ಕತ್ತಲೆ ನಿಂದುದಲ್ಲಲ್ಲಿ ॥ ಹೇಳಲೇಸದ ಬಹಳ ದುಗುಡದ । ಪಾಳೆಯವು ನಿಸ್ರಾಣತನೋಲಗ । ಶಾಲೆಯೋ ಸಾನರಿಯೆನೆಂದನು ಸಂಜಯನು ನೃಪಗೆ ॥ ೧೯ ॥ ಎಲೆಮಡಿಕೆಪಾಸ್ಥಾನ ವೀಳೆಯ । ದೆಲೆಯ ಮಡಿಸುವರಭಸವಿಲ್ಲೊಳ । ಗೊಳಗೆ ಸನ್ನೆಗರೋರೆಗೊರಳುಗಳೊಡನೆ ಗಚ್ಚುಗಳ ॥ ಹಳಚಿದಗ್ಗಳಿಕೆಗಳ ಮಿಸಲು । ಗಳೆದಬಿರುಬಿನ ಮಾನಭಂಗದ । ಕಳಕಳದ ಕನಸುಗಳಲಿರ್ದುದು ರಾಯನಾಸ್ಥಾನ ॥ ೨೦ ॥ ಕೆತ್ತುಕೊಂಡಿರಲೇಕೆ ನೀವಿ । ನ್ನುತ್ತರಾಯಿಗಳೆಮ್ಮ ಭಾಗ್ಯದ । ಬಿತ್ತು ಹುದೊಪ ವೀರಭಟರುದ್ದೇನ ಮಾಡುವರು ॥ ಮೊತ್ತದಂಬಿನಮಯ್ಯಭೀಷ್ಮನು । ಹೊತ್ತ ಕೈದುವ ಬಿಸುಟು ಕಳಶಜ।ನುತ್ತಮಿಕೆಗಳನೇನಹೇಳುವೆನೆಂದನಾಭೂಪ॥೨೧॥ ಬಿಗಿದ ತಿಮಿರದ ಥಟ್ಟು ಸೂರ್ಯನ । ಸೊಗಡು ಹುಯಿದರೆ ಮುರಿಯದೇ ಕಾ । ಳಗಕೆ ಕರ್ಣನಕೈದು ಭಂಡಾರಿಸಿದು ದಿನ್ನಬರ ॥ ತೆಗಸುವೆನು ನಾಳಿನಲಿ ರಾಯರ। ಮೊಗದದುಗುಡದ ದಟ್ಟಿಯನು ಮೈ। ತೆಗೆಯದಿರಿ ಕಲಿಯಾಗಿಯೆಂದನು ಕೌರವರರಾಯ ॥ ೨೨ ॥ ಜೀಯಸಂಶಯವಿಲ್ಲ ಗುರುಗಾಂ । ಗೇಯರಳಿದೊಡದೇನು ಕಲಿರಾ । ಧೇಯನೇ ವಜ್ರಾಂಗಿಯಲ್ಲಾ ನಮ್ಮ ಮೋಹರಕೆ ॥ ರಾಯನೀತನ ಪತಿಕರಿಸು ಚಕ್ರಾಯುಧನ ಚಾತುರ್ಯ ಕೊಳ್ಳದು । ಜೀಯ ಕರ್ಣನ ಕೂಡೆಯೆಂದುದು ನಿಖಿಳಪರಿವಾರ ॥ ೨೩ ॥ ಬೇರೆ ನಮಗಗ್ಗಳಿಕೆಯೋಲೆಯ । ಕಾರತನವೇ ರಾಯ ಮನದಲಿ ಯೋಚಿಸಿದರೇಳುವುದು ದೆಸೆ ಮನಮುರಿಯೆ ಕುಂದುವುದು ॥ ತೋರಿ ನುಡಿವರೆ ಭೀಷ್ಮಗುರುವನು । ಬಾರಿಸಿದರಣವೆಮಗೆ ಸದರವೆ । ದೂರುವವರಾವಲ್ಲವೆಂದನು ಭಾನುನಂದನನು ॥ ೨೪ ॥ ಸಾಕದಂತಿರಲಿನ್ನು ಥಟ್ಟಿಂ । ಗಾಕೆವಾಳರ ಮಾಡು ಸಾಕಾ । ಸ್ತೋಕಪುಣ್ಯರ ಮಾತದೇತಕೆ ಗುರುನದೀಸುತರ ॥ ಸಾಕಿ ಸಲಹಿದೆ ಕರ್ಣನನು ಹುರು । ಳೇಕೆ ಗುಣದಲಿ ಕರ್ಣಸೇನಾ। ನೀಕಬಾರದಹೊರಿಗೆಗಹನೆಂದನು ಕೃಪಾಚಾರ್ಯ ॥೨೫॥ ಎಮ್ಮತೋರಿಸಬೇಡ ಸುಖದಲಿ । ನಿಮ್ಮ ಚಿತ್ತಕೆ ಬಹುದೆ ಮಾಡುವು । ದೊಮ್ಮೆ ದೇಹವ್ಯಥೆಯನಾವಿನ್ನೆಂದುಫಲವೇನು ॥ ಎಮ್ಮ ಪುಣ್ಯದ ಬೆಳೆಗಳೊಣಗಿದೊ । ಡಮ್ಮಿ ಮಾಡುವದೇನು ಕರ್ಣನು । ನಮ್ಮದೆಳವೇನೆಂದನಶ್ವತ್ಥಾಮನರಸಂಗೆ ॥ ೨೬ ॥ ಮಹಾರಥಭೀಷ್ಮ ಮಿಗೆ ಸ್ವೇ । ಚ್ಛಾಮರಣಿ ಆಚಾರ್ಯಚಾಪ । ವ್ಯೋಮಕೇಶರು ಹೊಕ್ಕು ಕಾಣರು ಹಗೆಗೆ ಹರಿವುಗಳ ॥ ಈಮಹಾನಾರಾಯಣಾಸ್ತ್ರದ । ಸೀಮೆ ಸೀದುದು ಮಿಕ್ಕಭಟರು । ದ್ದಾಮರೇ ಸಾಕಿನ್ನು ಸೇನಾಪತಿಯ ಮಾಡೆಂದ ॥ ೨೭ ॥ ಕರೆಸಿದನು ಭೂಸುರರಸಾದಿಂ । ಬರದ ಮಡಿವರ್ಗವನು ದೂರ್ವಾಂ। ಕುರಸಿತಾಕ್ಷತೆಥವಳಸರುಷಪವಾ

ಫಲಾವಳಿಯ ॥ ತರಿಸಿದನು ಹೊಂಗಲಸತತಿಯನು । ವರನದೀವಾರಿಗಳನಾಡಂ । ಬರದ ವಾದ್ಯದಲೊದಗಿದವು ನಿಸ್ಸಾಳಕೋಟಿಗಳು ॥ ೨೮ ॥ ವಿರಚಿಸಿತು ಪಟ್ಟಾಭಿಷೇಕೋ । ತ್ಕರುಷಮಂತ್ರಾಕ್ಷತೆಯಮಳೆಗಳು । ಕರೆದವಮಳದ್ವಿಜರು ಜಯರವ ಮೇಘಘೋಷೆಯಲಿ ॥ ಗುರುಸುತಾದಿಮಹಾಪ್ರಧಾನರು। ದರುಶನವನೀಡಿದರು ಕರ್ಣನ । ಬಿರುದಿನುಬ್ಬಟೆ ಲಹರಿಮಸಗಿತು ವಂದಿಜಲಧಿಯಲಿ ॥೨೯॥ ಅರಳಿತರಸನವದನ ಶಕುನಿಗೆ । ಹರುಷವಿಗೆ ದುಶ್ಶಾಸನರುಲಿದು । ಬ್ಬರಿಸೆ ರೋಮಾವಳಿ ವಿಕರ್ಣಾದಿಗಳ ಮನವರಿಯೆ ॥ ಗುರುಜಕೃಪಕೃತವರ್ಮಶಲ್ಯಾ । ದ್ಯರಿಗೆ ಸೊಸಕ ಸೊಗಸು ಮಿಗಲಾ । ಯ್ತಿರುಳು ಕರ್ಣನ ಪಟ್ಟವಾಯಿತು ನೃಪತಿ ಕೇಳೆಂದ ॥ ೩೦ ॥ ನಾರಿಯರು ಮಣಿರತ್ನತೊಡಿಗೆಯ । ಭಾರಿಯರು ಕಂದರ್ಪವನಸಹ । ಕಾರಗಳು ನೆರೆದಡಸಿ ಕೈಕೈಮುಟ್ಟಿ ತಮತಮಗೆ । ವೀರಸೇಸೆಯನಳವಡಿಸಿ ವಿಮ । ಲಾರತಿಯ ಸೂಸಿದರು ನಿಜಪರಿ । ವಾರವೋಲಾಡಿತ್ತು ಬಹಳಾನಂದಲಹರಿಯಲಿ ॥ ೩೧ ॥

ಅಂತು ಸಂಧಿ ೧ ಕ್ಕೆ ಪದ ೩೧ಕ್ಕಂ ಮಂಗಳಮಸ್ತು.

ಎರಡನೆಯ ಸಂಧಿ.

॥ಸೂಚನೆ॥ ಭೀಮವಿಕ್ರಮ ಕುರುಬಲದೊಳು । ದ್ದಾಮಕರ್ಣಾಹವದೊಳಗ್ಗದ । ಕ್ಷೇಮಧೂರ್ತ
ನೃಪಾಲಕನ ಕೆಡಹಿದನು ಕಲಿಭೀಮ ॥

॥ ಪದ ॥ ಮಗನು ದಳಪತಿಯಾದಗಡ ಕಾ । ಳಗವ ನೋಡುವೆನೆಂಬವೊಲು ಜಗ । ದಗಲದಲಿ ಕರಕಡಿತವಿಕ್ಕಿತು ತಿಮಿರವನದೊಳಗೆ ॥ ಹೊಗರು ಕುವಲಯಕಳಿಯೆ ಸೊಂಪಿನ । ನಗೆ ಸರೋರುಹ ಕಿಳಿಯೆ ವಿರಹವ । ಘಗೆ ರಥಾಂಗವ ತುಳಿಯಲಿನನುದಯಾಚಲಕೆ ಬಂದ ॥ ೧ ॥ಸೂಳು ಮಿಗಲಬ್ಬಿರಿದುವುರುನಿ । ಸ್ಸಾಳಕೋಟಿಗಳುದಯದಲಿ ದಿಗು । ಜಾಲ ಜಡಿಯಲು ಹೂಡಿಗೆದರುವಗೌರುಗಹಳೆಗಳ ॥ ತೂಳುವರೆಗಳ ರಾಯಗಿಡಿಗದ । ಗೋಳಘೋರದಘೋಷವವನಿಯ । ಸೀಳಿ ನಡೆದುದು ಸೇನೆ ರವಿನಂದನನ ಸನ್ನೆಯಲಿ ॥ ೨ ॥ ಪೋಹರಿಸಿತದು ನಡೆದು ಮಕರ । ವ್ಯೂಹದಲಿ ಬಳಿಕರ್ಧಚಂದ್ರ । ವ್ಯೂಹದಲಿ ನಡೆದೊಡ್ಡಿ ನಿಂದುದು ಪಾಂಡುಸುತಸೇನೆ ॥ ಮೋಹರಿಸಲೊಡೆವೆರಸಿ ಹೊಯ್ದರು । ಗಾಹುಗತಕಪನುಳಿದು ಚೂಣಿಯ। ಸಾಹಸದ ಸನ್ನಾಹರ್ಕೈದಿದರೆರಡುಥಟ್ಟಿನಲಿ ॥೩॥ ಹೊಯ್ದು ಮುಗ್ಗಿತು ಭಟರು ವೆಗ್ಗಳ ಕೈದುಕಾರರು ತಲೆಗೆ ಸಂದರು। ಮೆಯ್ದೆಗೆಯದೊಡೆವೆರಸಿ ಹೊಕ್ಕರು ಬೇಹ ಬೇಹವರು ॥ ಕೊಯ್ದುಕೊರಳಿನ ಪೊಡೆದ ಪೊಯ್ಲಿನ । ಹೊಯ್ದುಮೂಳೆಯ ಸುರಿದಕರುಳಿನ। ಲೆಯ್ದಿಪಡೆಗೇರಾಯ್ತು ಚೂಣಿಯ ಚಾತುರಂಗದಲಿ ॥೪॥ ಇಂದು ಬರಹೇಳರ್ಜುನನ ರಣ । ದಿಂದಲೇ ಭೀಮಂಗೆ ಭಾರಿಯ । ಕಂದುಕಸರಿಕೆ ಬೇಡ ಕಾದಲಿ ಧರ್ಮನಂದನನು ॥ ಹಿಂದೆ ನಮ್ಮಾಭೀಷ್ಮಗುರುಗಳ । ಕೊಂದಗೆಲವಿನಲುಬ್ಬ ಬೇಡೆಮ । ಗಿಂದು ದಳಪತಿಕರ್ಣನೆಂದುದು ನಿಖಿಳಪರಿವಾರ ॥೫॥ ತೇರು ಬಿಟ್ಟವು ಸೂಠಿಯಲಿ ಜ । ಜ್ಝಾರರಾವ್ತರು ವಾಘೆಸರಿಸದ । ಲೇರಿದರು ಕಾಮುರ್ಗಿಲ ಬಲವೆನೆ ಕವಿದ

ವಾನೆಗಳು ॥ ಆಂದೊಡೆ ನೆಲ ಬಿಂಯು ಬೆರಸಿತು । ಪಾರಕರು ಸಬಳಿಗರು ಬಿಲ್ಲಿನ । ಭೂರಿಭಟರಳ್ಳಿರಿ
ದು ಕೆಣಕಿತು ಕೆದರಿ ರಿಪುಬಲವ ॥೬॥ ಮುರಿಯಲಹಿತರಥಟ್ಟ ನಮ್ಮನು । ತೆರಹುಗೊಡೆದಾಕಿದರು
ದೂರೆಗಳು । ಹೊರಗೆ ಲಗ್ಗೆಯಮಾಡಿ ತೋರಿದರೊಡನೆ ಪಡಿಬಲವ ॥ ಉರುಬಿದರು ವೃಷಸೇನಸೌ
ಬಲ । ಗುರುಜಕೃಪಕೃತವರ್ಮದುರ್ಮುಖ । ವರವಿಕರ್ಣಕ್ಷೇಮಧೂರ್ತಬೃಹದ್ರಥಾದಿಗಳು ॥೭॥ ಸೂತಸು
ತದಳಪತಿಯೊ ಘಡ ಮು । ಯ್ಯಾತರೇ ಮುಂಬಿಗರು ಬಿರುದಿನ । ಭೂತಗಳ ಬೊಬ್ಬಾಟ ಬಿಡದೇ ಕಂ
ಡು ಕಾಣೆವಲಾ ॥ ಸೋತ್ರಸಮರದ ಕೇಣಿಕಾರರು । ಪ್ರೂತುರೇ ಜಯಸಿರಿಗೆ ಹೊಯ್ದೊಯ್ಯಾ । ತಗಳ
ನೆನುತೆದ್ದರಾಪಾಂಡವಮಹಾರಥರು ॥೮॥ ನೂಕಿತೊಂದೇವಾಘೆಯಲಿ ರಥ । ನಾಲ್ಕುಸಾವಿರ ಬಲು
ಗುದುರೆ ಹದಿ । ನಾಲ್ಕುಸಾವಿರ ನೂರುಕರಿಘಟೆ ಲಕ್ಷಪಾಯದಳ ॥ ಜೋಕೆ ಜವಸಿಕೆ ಪುರಿಯೊಡೆದು
ಬಲ । ದಾಕೆವಾಳರು ಸಂಯು ಸೋಲದ । ನೂಕುನೂಕಾಯಿತ್ತು ಕೌರವರಾಯಸೇನೆಯಲಿ ॥೯॥ ಸಡಿ
ಫಡೆತ್ತ್ರಣಸ್ವಾಮಿದ್ರೋಹರು । ಸೆಡದರೋ ನಿಜಕುಲದ ಬೇರನು । ಕಡಿದರೋ ಕುರುಬಲದ ಕಾಪಿನ
ಪಟ್ಟದಾನೆಗಳು ॥ ಕೊಡನ ಘಣಿಯೋ ಪಾಂಡವರ ಬಲ । ತುಡುಕಲೀಯದೆ ಯೆನುತ ಸೇನೆಯ । ತ
ಡೆದು ನಿಂದನು ಕ್ಷೇಮಧೂರ್ತ ಸಹಸ್ರಗಜಸಹಿತ ॥೧೦॥ ತರಿಸಿ ಲೋಹದ ಜಂತವಟ್ಟವ । ನಿರಿಸಿದರು
ಸೂಲಿಗೆಯ ಭಂಡಿಯ । ಹರಿಸಿದರು ಕೆಲಬಲದ ಬೀದಿಯ ಸಬಳಿಗರ ನಿಲಿಸಿ ॥ ತುರಗಗಜಬಿಲ್ಲಾಳನೊ
ತ್ತಾ । ಗಿರಿಸಿ ಲಗ್ಗೆಯಲಹರಿಯಲಿ ಮೋ । ಹರಿಸಿದರು ಪಾಂಚಾಲಕೈಕೆಯರವರ ಘಟ್ಟನಲಿ ॥೧೧॥ ನೀಡಿ
ಭರಿಕೈಗಳಲಿ ತೆಗೆದೀ । ಡಾಡಿದವು ಭಂಡಿಗಳನೌಕಿದ । ಕೋಡಕೈಗಳಸಬಳಿಗರ ಸೀಳಿದವು ದೆಸೆದೆಸೆಗೆ ॥
ಕೂಡೆ ಜಂತ್ರವ ಜಂತವಟ್ಟವ । ನಾಡಲೇತಕೆ ಹಿಂಡಿನೊಡ್ಡನು । ಝಾಡಿಸಿದವಾಕ್ಷೇಮಧೂರ್ತನೃಪಾ
ಲನಾನೆಗಳು ॥೧೨॥ ರಾಯದಳ ಕಳವಳಿಸೆ ಕರಿಘಟೆ । ಗಾಯಗಾಯಕೆ ನೆಲನ ಕೊಂಡವು । ಹಾಯಿ
ದವು ರಥವುರುಬಿ ಹೊಕ್ಕವು ಹೊದರ ಹೊರೆಗಡಿದು ॥ ನಾಯಕರ ಕೆಡೆನುಡಿವಬೈಗುಳ । ಬಾಯಬೊ
ಬ್ಬೆಯ ಕೈಯಹೊಯ್ಲುಗಳ । ದಾಯಿಗರಲೇ ಯೆನುತ ಮೂದಲಿಸಿದರು ತಮ್ಮೊಳಗೆ ॥೧೩॥ ಕೆದರಿ ತಲೆ
ಗಳ ರಾಯದಳವನು । ಬೆದರಿಸಿದವಾನೆಗಳು ರಿಪುಗಳ ಮದಮುಖಕೆ ಮಾರೊತ್ತಿ ಮೆರೆದವು ಪ್ರೂತು
ರೇ ಯೆನುತ ॥ ತುದಿವೆರಳ ತುಟಿಯುಬ್ಬರಕೆ ಗಜ । ಬೆದರೆ ನಿಜಪಾತಕರು ಗರ್ಜಿಸೆ । ಗದೆಯ ತಿರು
ಹುತ ಹೊಕ್ಕನವರೊಡ್ಡಿನಲಿ ಕಲಿಭೀಮ ॥೧೪॥ ಗರುಡನೂರವರೆರೆವರೇ ನಾ । ಗರಿಗೆ ತನಿಯನು ಭೀ
ಮಸೇನನ । ಬಿರುದಿನೋಲೆಯಕಾರರೇನಂಜುವರೆ ಮಾರ್ಬಲಕೆ ॥ ಕರಿಘಟೆಯ ಕೆಣಕಿದರು ಕೆದರಿದ । ಘು
ರವ ಬಗೆಯದೆ ಗಜದ ಕರುಳಲಿ । ಕರುಳ ತೊಡಕಲಿ ಬಿದ್ದುದೈ ಸಾವಿರಮಹಾರಥರು ॥೧೫॥ ಮುಂ
ಗುಡಿಯ ಮುರಿದೌಂಕಿ ಭೀಮಂ । ಗಂಗವಿಸಿದನು ಕ್ಷೇಮಧೂರ್ತಮ । ತಂಗಜದಮೇಲೆಸೆವಸರಿನಾರಾ
ಚಸೋನೆಯಲಿ ॥ ಅಂಗವಣೆಯುಹುದೋ ಮಹಾದೇ । ವಂಗೆ ನೂಕದು ಪ್ರೂತುಮಝರೆಯ । ಭಂ
ಗನೋ ನೀನೆನುತ ಹೊಯ್ದೊಡವೆರಸಿದನು ಭೀಮ ॥೧೬॥ ಮೇಲುವಾಯ್ದಾರೋಹಕರ ಹಿಂ । ಗಾಲ
ಹಿಡಿದೀಡಾಡಿ ರಿಪುಗಜ । ಜಾಲದೊಳಗೊಂದಾನೆಯನು ತಾನೇರಿ ಬೊಬ್ಬಿರಿದು ॥ ಘೀಳಿಡಲು ಕರಿ ಬೆ
ದರಲಂಕುಶ । ದಾಳನೆತ್ತಿಯನೊಡೆದು ದಂತಿಯ । ತೂಳಿಸಿದನಾಕ್ಷೇಮಧೂರ್ತನ ಗಜದ ಸಂಮುಖ
ಕೆ ॥೧೭॥ ಇದು ವಿನೋದವಲಾ ಮದೀಯಾ । ಭ್ಯುದಯಮೈಸಲೆ ನಮ್ಮಕೋಪವ ನಿದಿರುಗೊಂಡವ

ನಿವನೆಲೇ ಯೆನುತೆಚ್ಚನಾಭೀಮ ॥ ಸದೆಗನೋ ನೀಸಾರು ಭಾರಿಯ। ಮದಗಜದ ಬಡಿಹೋರಿ ಹೋಗೆನು । ತೊದರಿ ಭೀಮನ ಮುಸುಕಿದನು ನಾರಾಚಸೋನೆಯಲಿ ॥೧೮॥ ಆಗಲಾನಾಲಿಗೆಯ ಸಾಲವ । ನೀಗ ಕೈಯಲಿ ತಿದ್ದುವೊಡೆ ನಮ । ಗಾಗಲೇ ತಪ್ಪೇನು ಹೇಳೆನುತೆಚ್ಚನಾಭೀಮ ॥ ಈಗಲಾವುದು ನೆಲನು ನಭದಿಗು | ಭಾಗವೆಲ್ಲಿಯದೆನಲು ಕಣೆಗಳು । ತೂಗಿ ತುರುಗಿದವರಿಭಟನ ಕರಿಘಟೆಯ ಮೈಗಳಲಿ ॥೧೯॥ ಸರಳ ಮಳೆಯಲಿ ನನೆದು ಕರಿಘಟೆಯುರುಳಿದವು ಕಲ್ಪಾಂತವರುಷದೊ । ಳುರುಳುವದ್ರಿಗಳಂತೆ ಸವೆದವು ವೈರಿದಂತಿಗಳು ॥ ಎರಡುಸೀಳಾಯ್ತವನ ಕರಿ ಮೇ । ಲಿರದೆ ಧೊಪ್ಪನೆ ಹಾಯ್ದು ಖಾತಿಯ । ಲುರವಣಿಸಿದನು ಕ್ಷೇಮಧೂರ್ತಕ ಸೆಳೆದಡಾಯುಧದಿ॥೨೦॥ಕಣೆದು ಪುಟನೆಗೆದು ಗಜವ ಹೊ। ಯ್ದಣೆದು ಹಿಂಗದಮನ್ನ ತಲೆಮೇ । ಗಣೆಗೆ ಚಿಮ್ಮಿತು ಮುಂಡ ನಡೆದುದು ಮೂರುಹೆಜ್ಜೆಯನು ॥ ಬಣಗು ನೀನೇಕಕಟ ಭೀಮನ । ಕೇಣಿ ಮಾಡಿದೈಯೆನುತಲಪ್ಸರ।ಗಣಿಕೆಯರು ಬಂದವನ ಕೊಂಡೊಯ್ದರು ವಿಮಾನದಲಿ ... ... ॥೨೧॥

ಅಂತು ಸಂಧಿ ೨ ಕ್ಕೆ ಪದ ೫೨ ಕ್ಕಂ ಮಂಗಳಮಸ್ತು.

ಮೂರನೆಯ ಸಂಧಿ.

ಸೂಚನೆ ॥ ಧುರದೊಳಗೆ ವಿಂದಾನುವಿಂದರ । ನೊರಸಿದನು ಸಾತ್ಯಕಿವೃಕೋದರ । ಗುರುಸುತರು ಬಲುಗಾಯದಲಿ ಬಸವಳಿದರು ಭಯದಲಿ ॥

ಪದ ॥ ಬೀಳಲಗ್ಗದ ಕ್ಷೇಮಧೂರ್ತನ । ಪಾಲಕನ ಪರಿವಾರ ರೋಷಕ । ರಾಳಶಿಖಿಪರಿತಪ್ತಕಂಪಿತಖಿನ್ನ ಪ್ರಾಣಿಗಳು ॥ ಆಳಿದನ ಮರಣದಲಿ ಹಿಂದಣ । ಕೂಳಿನಾಸೆಯ ಕುನ್ನಿಗಳನೆನು । ತಾಳು ಕವಿದುದು ಭೀಮ ಘಡಘಡ ನಿಲ್ಲುನಿಲ್ಲೆನುತ ॥೧॥ ಕರೆದು ಮೂದಲಿಸಿದೊಡೆ ಹುಲ್ಲೆಯ । ಮರಿಗಳಿಗೆ ಖತಿಗೊಂಬುದೇ ಮದ । ಕರಿ ಕರೂಷದ ಕೊಬ್ಬಿದವದಿರು ಹಿಂದೆ ಮತ್ತಿರದೆ ॥ ಮರಳಬಲ್ಲನೆ ಭೀಮನಿವರ ಬ್ಬರಿಸಿ ಕವಿದರು ಹತ್ತುಸಾವಿರ । ತುರುಗಸರಿಸದಲೇರಿದರು ಪಡಿಮುಖದ ಬಲ ಬೆದರೆ ॥೨॥ ರಾವುತರು ಮತ್ತೊಂದುಹಂತಿಯ । ಸೊವಿ ಸಾಕಗಳೇರಿದರು ಪರಿ। ಭಾವಿಸಲು ಪದಧೂಳಿ ಮುಸುಕಿತು ತರಣಿಮಂಡಲವ ॥ ಆವೃಕೋದರಗದೆಯ ಕೊಂಡನು । ರಾವುತರ ದೃಢವಾಘೆವಾಘೆಯ । ಲಾವಣಿಗೆ ಲೇಸೆನುತ ಸಾತ್ಯಕಿ ತುಡುಕಿದನು ಧನುವ ॥೩॥ ಅರರೆ ರಾವುತ ಜಾಗು ಸ್ವಾಮಿಯ। ಹರಿಬಕೋಸುಗ ಹಗೆಯ ಹೊಯ್ವರಿ । ಬಿರುದರಹಿರೋ ಎನುತ ಮಿರಿದಹಯವ ಮುರಿಯೆನುತ ॥ ಸರಳನೊಂದನೆತೊಡಚಿ ತುರಗದ । ಕೊರಳ ವಾಘೆಯ ಕರವರಾವುತರ । ಶಿರವನೆಚ್ಚನು ಕೊಂದನೀಪರಿಹತ್ತುಸಾವಿರವ॥

ಬಿದ್ದುದಗ್ಗದತುರಗದಳ ಕೈ । ಮುದ್ದೆಗೊಂಡನು ಕಾಯದಸುಗಳ । ಲಿರ್ದವನನಾಕಾಣೆನವರೊಳು ತೊಡಕಿದವರೊಡನೆ । ಹದ್ದುಕಾಗೆಗೆ ನಿನ್ನವರು ಸಾ । ಲಿರ್ದ ಬೋನವ ಸಲಿಸಿದರು ಬಲ । ಮಿದ್ದು ಮಾಡುವುದೇನು ನಿಮಗಿನ್ನರಸ ಕೇಳೆಂದ ॥ ೫ ॥ ಥಟ್ಟು ಮುರಿದುದು ನಮ್ಮ ಬಲವದು । ಬಿಟ್ಟು ಹಿಂಗಿತು ಕೊಂಡನೆಲನನು । ಮುಟ್ಟಕೈದೋರಿದನು ಸಾತ್ಯಕಿ ದೊರೆಗಳಿದಿರಿನಲಿ ॥ ದಿಟ್ಟನಿವನಾರೀ ಸುಮುಷ್ಟಾ । ಮುಷ್ಟಿಯಲಿ ಸುಳಿದವನೆನುತ ಜಗ । ಜಟ್ಟಿಗಳು ವಿಂದಾನುವಿಂದರು ನಿಂದರಿದಿರಾಗಿ ॥ ೬ ॥ ಕವಿದುದವದಿರ ಸೇನೆ ಸಾತ್ಯಕಿ । ಹವಣನರಿಯನು ಬಳಿಕ ಸಿಲುಕಿದ । ನಿವರೊಳಗೆ ಕಟ್ಟೈದವು ಸುತ್ತಲು ಸಾವಿರಾನೆಗಳು ॥ ನವಸಹಸ್ರತುರಂಗ ಕಾಲಾ । ಳವಗಡಿಸಿತೈವತ್ತುಸಾವಿರ । ಮವನತಳ ನುಗ್ಗಾಯ್ತು ಪದಘಟ್ಟನೆಯ ಘಲ್ಲಣೆಗೆ ॥ ೭ ॥ ಕೆಣಕಿದುದು ಭುಗಿಲೆದ್ದುದಾತನ । ರಣಪರಾಕ್ರಮವಹ್ನಿಕರಡದ । ಬಣಬೆ ಸಿಕ್ಕಿತು ಕಾಳಗಿಚ್ಚಿನ ಬಾಯ ತುತ್ತಾಗೆ ॥ ಕಣೆಯ ಕಾಣೆನು ಸುತ್ತಲೊಟ್ಟೈವ । ಹೆಣನ ಕಂಡೆನಿದಾವಬಾಳೆಯ । ಹಣಿದವೋಲ್ ನಿನ್ನಾಳುಕುದುರೆಗಳರಸ ಕೇಳೆಂದ ॥ ೮ ॥ ದೊರೆಗಳಿವದಿರು ತಮ್ಮ ಬಲಸಂ । ವರಣೆ ನೆಗ್ಗಿದಹೇವದಲಿ ಹೊಡ । ಕರಿಸಿ ಹೊಕ್ಕರು ಹೊಳಿದರು ಸಾತ್ಯಕಿಯನಂಬಿನಲಿ ॥ ಸರಳ ಸರಿವೊಳ್ಳಿತು ಮಹಾದೇ । ವರಸುಮಕ್ಕಳಲೇ ವಿರೋಧವೆ । ಹರಹರರೆ ಸಾಹಸಿಗರಹುದೋ ಯೆನುತ ತೆಗೆದೆಚ್ಚ ॥ ೯ ॥ ಏನನೆಂಬೆನು ಮೊದಲಲಗ್ಗೆಯ । ಲಾನಿಶಾಚರಯುಗಕೆ ತಾವಿಂ । ದಾನುವಿಂದರಜೀವ ಧುಮ್ಮಿಕ್ಕಿದುದು ಯಮಪುರಿಗೆ ॥ ಚೀನಬೋಟಕರೂಷಖರ್ಪರ। ಮಾನಜೋನೆಗತುರುಕಬರ್ಬರ । ಸೇನೆ ತಾಗಿತು ತಾಗಿದಾಕ್ಷಣ ನೀಗಿದರು ತನುವ ॥ ೧೦ ॥ ಮುರಿದುದೈ ನಮ್ಮವರು ಸಾತ್ಯಕಿ । ಯುರುಬೆಗಾನುವರಿಲ್ಲ ದೊರೆಕೈ । ಮರೆದನೋ ಕಾಳಾಯ್ತೆನುತ ಕುರುಸೇನೆ ಕಳವಳಿಸೆ ॥ ಜರೆದು ಮೂದಲಿಸಿದನು ಮಾದ್ರೇ । ಶ್ವರನ ದುಶ್ಶಾಸನನ ಗೌತಮ । ಗುರುಜಕೃತವರ್ಮಾದಿಪರಿವಾರವನು ಕಲಿಕರ್ಣ ॥ ೧೧ ॥ ಯದುಕುಲದ ಜರಡಿನಲಿ ಜನಿಸಿದ । ಸದೆಗಸಾತ್ಯಕಿ ನಮ್ಮ ಸುಭಟರ । ಸದೆದನೇ ದುಷ್ಕಾಲವಿಂದೇನೀಗ ತೋರಿಸಿತೇ ॥ ಬೆದರಲೇತಕೆ ಕಾಣದುದುಕಂ । ಡುದು ಮಹಾದೇವೆನುತ ಬೆರಳಿನ । ತುದಿಯ ಮೀಸೆಗಳಲುಗೆ ತಲೆದೋರಿದನು ಕಲಿಕರ್ಣ ॥ ೧೨ ॥ ಘೂತುಮಝು ದಳಪತಿಯ ಚಿತ್ತದ । ಖಾತಿ ಹೆಚ್ಚಿತು ನಮ್ಮ ಭುಜಬಲ । ವೇತಕಿವು ತಾನೆನ್ನುತ ಸಾತ್ಯಕಿ ಸದರವೇ ನಮಗೆ ॥ ಭೂತನಾಥನ ಕಂಡು ಲೆಕ್ಕಿಸ । ದಾತರೆಲ್ಲಾ ತಾವೆನುತ ನಿಜ । ಸೂತರನು ಬೋಳೈಸಿ ನೂಕಿತು ಗುರುಸುತಾದಿಗಳು ॥ ೧೩ ॥ ಮುರಿದಬಲ ಗರಿಗಟ್ಟಿತೊಗ್ಗಿನ । ಲುರುಬಿದವು ನಿಸ್ಸಾಳಕಹಳೆಯ । ಬಿರುಸರದ ಬಹುವಿಧದವಾದ್ಯಧ್ವನಿಯ ಕಳಕಳದ। ತುರುಗಿತೂಳುವಸಿಂಧಸೆಳೆಮಡ । ಲಿರಿದಝುಲ್ಲರಿಪಲ್ಲವದ ನಿಜ । ನಿರಿಯಧವಳಚ್ಛತ್ರಚಾಮರದೊದಗಿತತಿರಥರು ॥೧೪॥ ಮುಂಕಣಿಯವಿಟ್ಟಣಿಸಿದರು ಭಾ । ರಾಂಕದಲಿ ಭಟರೆಂಟುಸಾವಿರ । ಬಿಂಕದತಿರಥರೊಂದುಕೋಟಿ ತುರಂಗ ಪಾಯದಳ ॥ ಶಂಕಿಸುವನೇ ಬಳಿಕ ಯದುಕುಲ । ದಂತಕಾರನು ನಿಂದನನಿಬರಿ । ಗಂಕೆಝುಂಕೆಯನೇನಹೇಳುವೆ ಸಾತ್ಯಕಿಯ ಮನವ ॥ ೧೫ ॥ ಭಾರಿಯಾಹವವಾಯ್ತಖಿಳದಳ । ಭಾರ ಕವಿದುದು ಸಾತ್ಯಕಿಯ ಸುರ । ನಾರಿಯರ ತೋಳಿನಲಿ ಕಾಬುದು ನೆಲನರಿಣ ಹೋಯ್ತು ॥ ಹೋರಿದೊಡೆ ಹುರುಳಿಲ್ಲೆನುತ ಪರಿ।ವಾರವೊರಲಿತು ಪಾಂಡುಕೇಕಯ।ಕೇರಳರ ಮುಂದಿಕ್ಕಿ ಪಡಿಬಲವಾದನಾಪಾರ್ಥ ॥೧೬॥

ಮುಂದೆ ಹರಿದರು ಪಾಂಡುತನಯರ । ನಂದನರು ತಾರ್ಕ್ಷ್ಯವರಾತನ। ಹಿಂದುಳುಹಿ ಹಿಂಡಿದರು ಹೇರಾಳದ ಚತುರ್ಬಲವ ॥ ಕೊಂದನಗ್ನದಚಿತ್ರಸೇನನ । ಚಂದ್ರಹರಿಭಟಚಿತ್ರರನು ಗುರು । ನಂದನನು ಬಳಿಕಿವರ ಬೆದರಿಸಿ ನೂಕಿದನು ರಥವ ॥ ೧೭ ॥ ಹೆರತೆಗಹಿ ಕೆಲಸಾರಿ ಮಕ್ಕಳು । ಮುರಿಗಳಿಗೆ ರಣವೇಕೆ ಪಾಂಡವ । ರುರುವಸಂತತಿಯುಕಟಿನುತಲವರೊಡ್ಡನೊಡೆದುಳಿದು ॥ ಇರಿವಭಟನಹೆ ಯಾದವರ ಬಡ । ಕರುವೆ ನೀಬಾರಂದು ಚಿಟಕಿಸಿ। ಕರೆದು ಗುರುಸುತ ಕಾದಿದನು ಸಾತ್ಯಕಿಯು ನಗೆಮಾಡಿ ॥ ೧೮ ॥ ಸಾರು ನೀಸಾರಲೆವೊ ಭೀಮನ । ದೋರೆಗರುಳಿನ ದಂಡೆಯನು ಮನ। ವಾರೆ ಮೂರಿಗೆ ಮುಡಿಸುವೆನು ಘಡ ನಿಲ್ಲುನಿಲ್ಲೆನುತ ॥ ಅರಿದನು ಜಗ ನಡನಡುಗೆ ಜಂ । ಭಾರಿ ಜವಗೆಡೆ ಜೋಡಿಸಿದನು ವು । ದಾರದಲಿ ಭಾರವಣೆಯಂಬನು ಭೀಮಸೇನಂಗ ॥ ೧೯ ॥ ಗುರುತನೂಜಕಣಾ ವಿರೋಧಿ । ಸ್ಮರಕಪರ್ದಿಕಣಾ ವೃಕೋದರ । ಕಲಮೃಗೇಂದ್ರಕಣಾ ಶರಾಳಿಯು ಕಾಯ್ದು ಬಾಳೆನುತ ॥ ಸರಳನೆಚ್ಚನು ಸರಳನಾಬಳಿ । ಸರಳು ಮುಂಚಿತು ಆಸರಳ ಬಳಿ । ಸರಳು ಹಿಂದಿಕ್ಕಿದುದು ಚಳಕವನರಿಯೆ ತಾನಂದ ॥ ೨೦ ॥ ತಿರುಗನಿಂದನು ಪವನಸುತನಲೆ । ಗುರುಜ ನಿನ್ನಗ್ಗಳಿಕಗಳ ಜಗ । ವರಿಯದೇ ಪಟುಭಟನದಾವನು ನಿನಗೆ ಸರಿಯೆನುತ ॥ ಸರಳ ಬಲುಸರಳುಗಳನಾಬಳಿ । ಸರಳ ಲೆಕ್ಕದಲೆಸೆವ ವೀರರ । ಪರಿವಿಡಿಯ ವೇಗಾಯ್ಲತನವನು ತೋರಿದನು ಭೀಮ ॥ ೨೧ ॥ ಜಾಗುಮುಝುರೇ ಭೀಮ ಬಲುಕೈ । ಲಾಗು ಮರೆಯದಲಾ ಶರೌಘ । ಪ್ರಾಗುಶಸ್ತ್ರಪ್ರಸರಬಂಧವ ಮತ್ತೆ ನೋಡೆನುತ॥ ಈಗಗನವೀಧರಣಿಯಿದಿಗು। ಭಾಗವಿದು ತಾನೆಂಬವಿವರವ । ನಾಗಳರಿಯೆನು ಗುರುತನೂಭವನೆಚ್ಚನನಿಲಜನ ॥ ೨೨ ॥ ಎಲೆಲೆಹಾರುವ ನಿನಗೆ ಹರಿವೋ । ಖಲೆಯ ಕೇಳಿಕೆಯೇಕೆ ಪಡಿಮು। ದ್ದಳೆಯಬಡಿಕರ ಬಿರುದವೋಳವರಿಲ್ಲಲಾನಿನಗೆ॥ ಹೊಲಬುಗೆಡುವನೆ ಭೀಮನೀಸರ । ಳೊಳಗೆ ಹುಸಿಯೆನುತೆಚ್ಚ ಬಾಣಾ। ವಳಿಯ ನಿಮಿಷಕೆ ಕಡಿದು ಗುರುಜನನೆಚ್ಚನಾಭೀಮ ॥ ೨೩ ॥ ರಥದಮೇಲಂಬುಗಳು ರಪುಸಾ । ರಥಿಯ ಮೈಯಲಿ ಬಾಣ ತುರಗವ್ಯಥೆಯನೇವೇಳುವೆನು ಟೆಕ್ಕಯುಮೈದೆ ಬಾಣಮಯ॥ ಶಿಥಿಲವಾದವು ನಾಗಗಳು ಬಳಿ । ರಥಿಕರೀತನ ಬಿಸುಟುಹಾಯ್ದರು । ಪೃಥುಳಬಳನ್ಮ ಭೀಮನೆಚ್ಚನು ಗುರುತನೂಭವನ ॥ ೨೪ ॥ ನೊಗನನೀಡಾಡಿದವು ಕುದುರಗ । ಳೊಗಡಿಸಲು ರಕುತವನು ಸಾರಥಿ । ಚಗದಹಿಳುಕಗಳೌಕಿದವು ತೇರಿನಲಿ ಸಿಂಧದಲಿ ॥ ಬಗುವನೆತ್ತರ ಸುರಿವಬಾಣಗ । ಳುಗುಳುಗಂಡಿಯ ಮೈಯಭೀಮನ । ಬೆಗಡುಮೊಳೆತುದು ಗುರುತನೂಭವನಚ್ಚನನಿಲಜನ ॥ ೨೫ ॥ ಈತನೆಚ್ಚನು ಮತ್ತೆ ಶರಸೆಂ। ಘಾತವನು ಗುರುಸುತನ ತನುವೋ। ಹೂತಮುತ್ತಕ ತಳಿತಸವ ಕೆಂದಾವರೆಯುವನವೊ ॥ ಭೀತಿ ಮೊಳತುದು ದಿಟ್ಟತನವೇ । ಧಾತುಗುಂದಿತು ನೋಡಿ ಕಂಗಳು । ಸೋತು ಮರಳಿದನಿತ್ತಲಶ್ವತ್ಥಾಮ ಮೈಮರೆದ ॥ ೨೬ ॥ ನನೆದಜಾದಿನಗಿರಿಯೊ ಭೀಮನೆ । ತನುವೊ ಖಂಡಿತರಕ್ತಚಂದನ । ವನವೊ ರಥವೋ ತಳಿತಶೋಕೆಯಮರನೊ ಸಾರಥಿಯೋ ॥ ಮನಹಣುಗಿ ತುಟಿಯೊಣಗಿ ನೋಟದ। ಮನಮುರಿದು ಝೋಂಪಿಸುತ ಮುಂದಣಿ। ಗೊನದು ಬಿದ್ದನು ಭೀಮ ಪಾಂಡವಸೇನ ಕಳವಳಿಸೆ ॥ ೨೭ ॥ ಅಹಹ ವೈರಿಗೆ ಧರಣಿಪಾಣಿ । ಗ್ರಹಣವಾಯ್ತೇ ಪಾಂಡುಸುತರಿಗೆ । ಬಹುವಿಪತ್ತುಗಳಿಗೆ ಯಿದೊಂದೇಕಲಶನಿರ್ವಾಹ ॥ ಅಹಿತರಿಗೆ ಜಯವಾಯ್ತು ಸಮುಗಿ । ನ್ನಿಹುದು ಮತವಲ್ಲೆಂದು ಸಾರಥಿ । ಸಹಸಿಗನ ಸಂತೈಸಿ ತಂದನು ರಾಜಮೋಹರ

ಕೆ ॥ ೨೮ ॥ ತಂದೆಯುಳಿದಾಹೊತ್ತು ರಿಪುಗಳ । ಕೊಂದು ಸಾಯದೆ ದೇಹಮೋಹಕೆ । ನಿಂದು ಸೇ ನಿಸ್ತೇಜನಾದ್ಯೆ ವೈರಿಶರಹತಿಗೆ ॥ ಎಂದು ಸಾರಥಿ ಶೋಕಿಸುತ ಗುರು । ನಂದನನ ಕೊಂಡೊಯ್ದನಿತ್ತಲು । ಸಂದಣಿಸಿತತಿರಥರು ಸೌಬಲಶಲ್ಯಮೊದಲಾಗಿ ॥ ೨೯ ॥ ದೊರೆಗಳಿಬ್ಬರ ಸೋಲವನು ವಿ । ಸ್ತರಿಸಿ ಹೊಕ್ಕರು ಮತ್ತೆ ಮಾದ್ರೇ । ಶ್ವರಶಕುನಿಕೃತವರ್ಮಕೃಪದುಶ್ಶಾಸನಾದಿಗಳು॥ ಅರಬಲದೊಳಾದ್ರೌಪದೇಯರು । ಹರಿಯನುಜಮಾದ್ರೇಯಕೈಕಯ । ವರಯುಧಾಮನ್ಯೂತ್ತಮೌಂಜಸಪಾಂಡ್ಯಸೃಂಜಯರು ॥ ೩೦ ॥ ಬಲಿದುದಾಹವ ಮತ್ತೆ ಚಾತು । ರ್ಬಲ ಛಡಾಳಿಸಿ ಕಾದುತಿರ್ದುದು । ಮುಳಿದು ಶಲ್ಯನಕೂಡೆ ಪಂಚದ್ರೌಪದೀಸುತರು ॥ ಅಳವಿಗೊಟ್ಟರು ಕಟಕಟಾ ಮ । ಕ್ಕಳುಗಳಿಗೆ ರಣವೇಕೆ ಪವನಜ । ಫಲುಗುಣನ ಬರಹೇಳೆನುತಲೆಚ್ಚನು ಮಹಾಸ್ತ್ರದಲಿ ॥ ೩೧ ॥ ಎಚ್ಚನೊಡನೊಡನವರು ಬಾಣವ । ಕೊಚ್ಚಿದರು ಕೊಡಹಿದರು ಶರದಲಿ । ಮುಚ್ಚಿದರು ರಥವಾಜಿಸೂತರ ನಿಮಿಷಮಾತ್ರದಲಿ ॥ ಬೆಚ್ಚಿದವು ರಥವಾಜಿ ಶರಹತಿ । ಬಿಚ್ಚಿದವು ಅಡಿಗಡಿಗೆ ಧೈರ್ಯದ। ಕೆಚ್ಚು ನವೆದುದು ತೊಲಗಿದರು ಪಾಂಡವಕುಮಾರಕರು ॥ ... ... ॥ ೩೨ ॥

ಅಂತು ಸಂಧಿ ೩ ಕ್ಕೆ ಪದ ೭೪ ಕ್ಕಂ ಮಂಗಳಮಸ್ತು.

ನಾಲ್ಕನೆಯ ಸಂಧಿ.

॥ ಸೂಚನೆ ॥ ರಾಯದಳ ಮುಗ್ಗುಪ್ಪತುರೆನೆ ರಿಪು । ರಾಯಸೇನೆಯ ಮುರಿದು ಪಾಂಡವ । ರಾಯಧರ್ಮಕುಮಾರ ಗೆಲಿದನು ಕೌರವೇಶ್ವರನ ॥

॥ಪದ॥ ಫಡಫಡೆಲವೋ ಶಲ್ಯ ಮಕ್ಕಳ।ಬಡಿದು ಬೆರತ್ತೆ ಬಾಹುಬಲದಲಿ।ತೊಡರು ನಿನಗೆಡಗಾಲಿಲಿದೆ ಯೆನುತೊದೆದು ನಿಜರಥವ॥ ಘುಡುಘುಡಿಸಿ ರೋಮಾಂಚನದಹೊರ।ಗುಡಿಯ ಝೋಂಪಿನ ಮೈಯ ಕಡುಗಲಿ । ತಡೆದನೇಕಾಂಗದಲಿ ಸಾತ್ಯಕಿ ಶಲ್ಯಭೂಪತಿಯ ॥ ೧ ॥ ಬಾಯಬಡಿಕರು ಯಾದವರುಗರು । ವಾಯಿ ನಿನಗಲ್ಲಿಯದು ಸುಭಟರ । ಗಾಯಧವೆ ಶೃಂಗಾರವೋ ಮೇಲ್ಕಾಲನೇವುರವೋ॥ ಸಾಯಕವ ಹಿಡಿ ಸಾಕು ಸೋಲಕೆ । ತಾಯಿಮನೆ ನೀನೆರಗಿದೊಡೆ ನಿ। ನ್ನಾಯತವನಾನರಿಯೆನೆನುತೋರಂತೆ ತೆಗೆದೆಚ್ಚ ॥ ೨ ॥ ಎಲವೊ ಫಡ ಮಾದ್ರೇಶ ಲೋಕದ । ಗಳಹತನ ನಮ್ಮೊಡನೆಯೇ ತೊ। ಟ್ಟಳಿಸಿ ಕಡಿವೆನು ನಾಲಗೆಯ ಮಿಗೆ ಮಾಣುಮಾಣೆನುತ ॥ ಬಿಲುದಿರುವನುಗುಳಿಚಿದನಂಬಿನ । ಬೆಳೆಯ ನಾರಳವಡಿಸಿದರು ದಿಗು। ವಳಯ ನೆರೆಯದಿದೆತ್ತಣದು ಬಿಲುಗಾರತನವೆಂದ ॥ ೩ ॥ ಬಾಯಬಡಿಕರು ನಾವು ನೀಗರು। ವಾಯಿಕಾರನೆ ಬೈವಬಿರುದಿನ । ಬಾಯ ನೋಡಾಯೆನುತ ತೋಟಿಗೆ ತೆರಹುಗೊಡದೆಸಲು ॥ ಸಾಯಕದ ಹೊಡೆಹಲವುಶಲ್ಯಗೆ । ಬೀಯವಾಯವು ಬಳಿಕ ಕೌರವ । ರಾಯನನುಜನು ತರುಬಿ ನಿಂದನು ಸಾತ್ಯಕಿಯ ರಥವ ॥ ೪ ॥ ಹಳಚಿದವು ರಥವೆರಡು ಬಲುಗೈ । ಗಳಿಗೆ ಬಲಿದುದು ಬವರ ಕೌರವ । ಬಲದ ಭಟರಲಿ ಹತ್ತುಸಾವಿರರಥಿಕರನುವಾಯ್ತು ॥ ಬಳಹೊಗಿಸಿ ಸಾತ್ಯಕಿಯ ಸಿಲುಕಿಸಿ ।

ಗೆಲುವತವಕವನರಿದು ಕೆಣಕಿದ । ರಳವಿಯಲಿ ಸಹದೇವನಕುಲರು ಕೌರವಾನುಜನ ॥ ೫ ॥ ತೆಗಸಿದರು ಸಾತ್ಯಕಿಯನೀತನ । ಬಿಗಿದನಂಬಿನಲಿವರ ಬಾಣಾ। ದಿಗಳ ಕಡಿದನು ಗಾಸಿಮಾಡಿದನವರ ರಥಹಯವ ॥ ಜಗುಳಿದನು ಕಲಿನಕುಲರಥವಾ । ಜಿಗಳ ಜೋಡಣೆಗೆಟ್ಟು ರಕುತವ । ನೊಗಡಿಸಲು ಸಹದೇವನೆಚ್ಚನು ನಿನ್ನನಂದನನ ॥ ೬ ॥ ಸರಳ ಸೈರಿಸಿ ನಿನ್ನ ಮಗನು । ಬ್ಬರಿಸಿ ಮಾದ್ರೀಸುತನನೆಚ್ಚನು । ತರಹರಿಸಿ ಮಗುಳೆಚ್ಚಸಾತನು ಕೌರವಾನುಜನ ॥ ಮರುಳು ನೀನಹೆ ಯಿಾಮಹಾಸಂ । ಗರಕೆ ಕಳುಹೈ ನಿನ್ನವರ ನೆನು । ತುರವನೆಚ್ಚನು ಜರಿಯೆ ಜೋಡಿನ ಚಿಪ್ಪು ಶರಹತಿಗೆ ॥ ನೋವನೇ ಶರಘಾತದಲಿ ಸಹ। ದೇವ ನೆಲವೋ ನಿನ್ನಕೊಂದರೆ । ಪಾವಮಾನಿಗೆ ಪಂತತಪ್ಪುವುದೆನುತ ಖಾತಿಯಲಿ ॥ ಲಾವಕನ ಸಾರಥಿಯ ರಥತುರ । ಗಾವಳಿಯನಾಯುಧವ ಖಂಡಿಸಿ । ಜೀವಗಳ್ಳರದೇವ ಪೈಸರಿಸಿದಪಲಾಯನವ ॥ ೮ ॥ ರಾಯನನುಜರ ಹಂಬದಲಿ ರಾ । ಧೇಯಹೊಕ್ಕನು ಸ್ವಾಮಿದ್ರೋಹರ । ಕಾಯಿದರೆ ಕೈಕೊಳ್ಳದೌಷಧ ವಾವುದಿವದಿರಿಗೆ ॥ ನೋಯಿಸುವೆನೊಮ್ಮೆನುತ ತಿರುವಿನ । ಸಾಯಕವ ಕಿರಿಗಡಿಯ ನೆಗಹಿನ । ರಾಯ ದಳಪತಿ ತರುಬಿದನು ಮಾದ್ರೀಸುತನ ರಥವ ॥ ೯ ॥ ಸಾರು ನೀ ಸಹದೇವ ಜಗದವಿ । ಕಾರಿಯಲ್ಲಾಕರ್ಣಯಿವನ ತು । ಟಾಉಸುವನಾಲಗೆಯ ಶೂಲಿಗೆ ಶಸ್ತ್ರವಧೆಯೆಂದು ॥ ಸಾರಥಿಯ ಬೋಳೈಸಿ ಚಾಪದ । ಸಾರಿಯನು ದನಿಮಾಡಿ ನಕುಲನು । ದಾರಕರ್ಣನ ಮುಟ್ಟಬಂದನು ಚಾಚಿದನು ರಥವ ॥೧೦॥ ಆರಿವರು ನಕುಲಾಂಕರೇ ಜ । ಜ್ಝರತನವೆಮ್ಮೊಡನೆಯೋ ನೀ । ವಾರು ಪಾಂಡುಕುಮಾರಕರೊ ಮಾದ್ರೀಕುಮಾರಕರೋ ॥ ಭಾರಿಯಾಹವದೊಳಗೆ ನಿಮ್ಮನ । ದಾರುಬಿಟ್ಟರು ಪಾಯದಲಿ ನಿಮ। ಗಾರು ಮುನಿಯುರು ಶಿವಶಿವೆಂದನು ಕರ್ಣನಸುನಗುತ ॥ ೧೧ ॥ ತೊಲತೊಲಗು ತರುವಲಿಗೆ ರಣವಿದು। ಸುಲಭವೇ ಲೋಕೈಕವೀರರು । ಹಲಬರಿದರೊಳಹೊಕ್ಕು ಹೊದಕುಳಿಗೊಂಡುಹೋದರಲಾ ॥ ನಿಲುವನಂಬುದೆನಿನ್ನತಂದುದು । ತಲೆಗೆ ನೋಡಾಯೆನುತ ಮಿಗೆ ಕೈ । ಚಳಕದಲಿ ರಿಪುಶರವ ಖಂಡಿಸಿ ತುಳುಕಿದನು ಶರವ ॥ ೧೨ ॥ ಬಿಗಿದಬಾಣದ ದಡಿಯನುರೆ ತಳ । ಮಗುಚಿದನು ಕೂರಂಬಿನಲಿ ಯೋ । ಳಿಗೆಯ ಮುಚ್ಚಳತೆಗದಹಾವಿನವೋಲು ರೋಂಪಿಸುತ ॥ ಹೊಗರನೀನುವ ಹೊಸಮಸೆಯ ಕೋ । ಲುಗಳ ಕವಿಸಿದನಕುಲನಂಬಿನ। ಝುಗೆಯುಝುಳದಲಿ ಮುಳುಗಿ ಮೋನದೊಳಿರ್ದನಾಕರ್ಣ ॥ ೧೩ ॥ ಆಳು ನೀನಹುದೆಲವೊ ತಮ್ಮವಿ । ಶಾಲಬಲನಹೆ ಲೇಸುಮಾಡಿದೆ । ಬಾಲನಾದೊಡೆ ಭಂಗವೇ ಜೋವಳೆಯನಭಿಮನ್ಯು ॥ ಕೋಲ ಸೈರಿಸುಸೈರಿಸಾದೊಡೆ। ಭಾಳಲಿಪಿಸಂಘರ್ಷವಿಪುಳಶ । ರಾಳಿಯಿದೆ ಕೊಳ್ಳೆನುತ ಮಕುಟವನೆಚ್ಚನಾಕರ್ಣ ॥ ೧೪ ॥ ತಾಗಿದವು ನಾಲ್ಕಂಬುದೇಹದ । ಬೇಗಡೆಯಲೆಂಟಂಬುನುಸುಳಿದೊ। ಡಾಗ ಹದಿನಾರಂಬು ಹಾಯ್ದವು ಮತ್ತೆ ಬಳಿಸಲಿಸಿ॥ ಸೀಗುರಿಸಿ ರೋಂವಿನಲಿ ರಥದಲಿ। ಜೋಗಬೋದನು ಸಾರಥಿಯ । ಕೈ ಲಾಗಿನಲಿ ತಿರುಗಿದನು ನಕುಲನು ರಾಜಮೋಹರಕೆ ॥ ೧೫ ॥ ಹರಿಬದಾಹವವೆಮಗೆ ತಮಗೆಂ । ದುರವಣಿಸಿದರು ಚೇಕಿತಾನಕ । ದುರುಳಧೃಷ್ಟದ್ಯುಮ್ನಪಾಂಡ್ಯ ಶಿಖಂಡಿಸೃಂಜಯರು ॥ ಬರಲಿ ಬವರಕೆ ಹೊಟ್ಟುತೂರುವೊ। ಡರಸುಮೋಹರವೇಕೆ ಸಾಕೆಂ । ದರಿಭಟರ ತರುಬಿದರು ಕೃಪಕೃತವರ್ಮಸೌಬಲರು ॥ ೧೬ ॥ ದಳಪತಿಯ ಹಿಂದಿಕ್ಕಿ ಪಾಂಡವ । ದಳವಮಹಾರಥರುರವಣಿಸಿ ಮೂ । ದಲಿಸಿದರು ಮಿಗೆ ಕೊಂದರಿದಿರೇರಿದಚತುರ್ಬಲವ ॥ ಕೊಲೆಗೆ ಬೆಸಸಿದರಿವರು

ಸಾವುದ । ಕಳುಕದವದಿರು ಹೇಳುವೊಡೆ ನಾ। ನಲಸಿದೆನು ಧೃತರಾಷ್ಟ್ರಯೆಂದನು ಸಂಜಯನು ನಗುತ ॥ ೧೭ ॥ ಧುರವ ಸಾಗಿಸಿ ಭಂಡಿಮೊದಲಾ । ದರಿಭಟರು ಬಾಂದರು ಸುಭಟರ । ನೊರಸಿಕೊಡೇರಿದರು ತೂಗಿದರವರು ರಿಪುಬಲವ ॥ ದೊರೆಗೆ ಹತ್ತಿರೆಯಾಯ್ತು ಕಾಳಗ । ವರಿದೆನಲು ನಿಸ್ಸಾಳಸೂಳಿನ । ಧರಧುರದದೆಖ್ಖಾಳದಲಿ ತಲೆದೋರಿದನು ಪಾರ್ಥ ॥ ೧೮ ॥ ಭಟರ ತೆಗೆತಗೆ ಪಾರ್ಥನೋರಿಪು । ಕಟಕಭೈರವನೋ ವೃಥಾಸಂ । ಕಟದ ಸಂಸಾಹದಲಿ ಸುಭಟರ ಮರೆಯಬೇಕೆನುತ ॥ ಲಟಕಟಿಸಿ ಬಲವೊದರಲಾಪ್ರತಿ । ಭಟರು ಬಳಿಕನುವಾಯ್ತು ವಿಜಯೋ । ತ್ಕಟದೊಳೆಪ್ಪತ್ತೇಳುಸಾವಿರವರವುಹಾರಥರು ॥ ೧೯ ॥ ನೂಕಿದರು ಸಂಶಪ್ತಕರು ಬಲ । ದಾಕೆವಾಳರ ತೆಗಸಿದರು ಬಾ । ಹಾಕತೋರರರ ಸಾಲ ಪರಿಕಂಪಿತಕುಲಾಚಲರು ॥ ತೋಕಿದರು ಶರವಳೆಯನರ್ಜನ । ಸಾಕುಸಾಕಾ ನಿನ್ನ ಜೊತ್ತಿನ । ಜೋಕೆಯಾಹವ ಹುರಿತಲಿಪೆಯೆನುತೆಚ್ಚಿರಿದಿರಾಗ ॥೨೦ ॥ ಆರಿದಿಪ್ಪತ್ತೈದುಸಾವಿರ । ತೇರುಸರಿದವು ವಂದು ವಾಘೆಯ। ಲೇರಿದವು ನಿಪ್ಪಸರದಲಿ ನಿಲುವಾತಸಾರಿದಕೆ॥ ಸಾರಿಗೆಗೆ ಮುರಿಮುರಿದು ಬಾಣಾ। ಸಾರವಿಪ್ಪತ್ತೈದುಸಾವಿರ । ವಾರು ಸ್ಥಿರಿಸಿ ನಿಲುವರೆನುತಿರ್ದುದು ಭಟಸ್ತೋಮ ॥೨೧ ॥ ಸುರಿದು ದತಿಮಳೆಯೆಂದು ಕುಲಗಿರಿ । ಕರಗುವುದೆ ಮೇಗರೆಯಸಿಲೆಗಳ । ಬೆರಳು ನನೆವುದೆ ನಾಡ ದಂತಿಯಲ ಳುಕುವರ್ಜನನೆ ॥ ವರಮಹಾರಥರನಿಬರೆಸುಗೆಯ । ಸರಳಸಂಖ್ಯಾತೀತವವನೊಂ । ದುರವಣಿಗೆ ಪೈಸರಿಸಿತಿಲ್ಲವನೀಶ ಕೇಳೆಂದ ॥ ೨೨ ॥ ಅವರಶರಸಂಘಾತವನು ಕಡಿ । ದವರ ಸಾರಥಿಗಳನು ರಥವಾ । ರುವನು ಧನುವನು ಸಿಂಧವನು ಸೀಗುರಿಯ ಝಲ್ಲರಿಯ ॥ ಅವರ ಪದಕಕಿರೀಟಿಕಂಕಣ । ವವರ ಕರ್ಣಾಭರಣಕೇಯೂ । ರವನು ಕಡಿಕಡಿದೊಟ್ಟಿದನು ಕಲಿಪಾರ್ಥ ನಿಮಿಷದಲಿ ॥ ೨೩ ॥ ಗಾಯುವಡೆದರು ಗಾಸಿಯಾದರು । ಬಾಯೊಳೊಕ್ಕುದು ರಕುತ ಮಕ್ಕಳು । ತಾಯಿಗಾಗದೆ ಹೋದರೆಂಬುದು ತಪ್ಪದಾಯ್ತಿಲ್ಲಿ ॥ ನಾಯಕರು ಹಲರಳಿದು ಹರಿದರು । ಹಾಯಿದರು ಹೂಣಿಗರು ಹರಿಹಂ । ಚಾಯಿತಿಪ್ಪತ್ತೈದುಸಾವಿರವರವುಹಾರಥರು ॥ ೨೪ ॥ ಎಲೆಲೆ ಸಂಶಪ್ತಕರ ಭಾರಿಯ । ಬಲ ಮುರಿದು ಬರುತಿದೆ ವಿಘಾತಿಗೆ। ನಿಲುವರಿಲ್ಲಾ ಸೂರೆವೋದುದು ರಾಯನಭಿಮಾನ ॥ ಜಲಧಿ ಬರತುತುದು ರಾಜಕಾರ್ಯಕೆ। ನಿಲುವೊಡಿದು ಹೊತ್ತೆನುತ ಮಂತ್ರಿಗ । ಳುಲಿಯೆ ಕೌರರರಾಯ ಕಂಡನು ಪಾರ್ಥನುರವಣೆಯ ॥ ೨೫॥ ಕರವ ನೆಗಹಿದನರಸ ಹೋಹೋ। ಬಿರುದರಂಜದಿರಂಜದಿರಿ ನಂ । ಮರಿಭಟಗೆ ನಾಲ್ಕಿಲ್ಲ ಕೈ ಕಣ್ಣಿಲ್ಲ ನೊಸಲಿನಲಿ ॥ ದೊರೆಯ ಕೈಯನು ಕಂಡು ಬಳಿಕೋ । ಸರಿಸಿತ್ತೆ ಪರಿವಾರ ದೂರದ। ಲಿರೆ ವೃಥಾಭಯ ಬೇಡೆನುತ ಕುರುರಾಯನಿದಿರಾದ ॥೨೬॥ ಕೂಡೆ ಗರಿಗಟ್ಟಿತು ಚತುರ್ಬಲ। ಜೋಡು ಮಾಡಿತು ರಾಯನಿದಿರಲಿ। ಹೇಡಿಕರಿಯಹನೆಂದೊಡವದಿರು ಹೇವಮಾರಿಗಳ॥ಝಾಡಿಸುವರ್ಝಲ್ಲರಿಯ ಮೋರೆಗೆ । ನೀಡಿ ಮರಳುವಸೀಗುರಿಯಬಲ। ಪೇಡಿಸಿತು ಕಲ್ಪಾಂತಮಂಡಿತಮೇಘಮಂಡಲವ ॥೨೭॥ ಸರಕಟಿಸಿ ಬಲ ಸರ್ವಲಗ್ಗೆಯ। ಉರವಣಿಸೆ ಯಮಸೂನು ಕಂಡನು । ನರನ ತೆಗೆತೆಗೆಯಿಂದಿನಾಹವ ನಮ್ಮಮೇಲೆನುತ ॥ ಅರಸ ನಡೆದನು ರಾಯಮೋಹರ।ಹೊರಳಿಗಟ್ಟಿತು ವಿಲಯಸಮರ । ಸ್ಫುರದಬಹಳಾರ್ಣವವ ಲಗ್ಗೆಯಲುಳಿಯ ಲಹರಿಯಲಿ॥೨೮॥ ಎರಡುಬಲ ಗಂಟಿಕ್ಕಿದುದು ನೆಲ। ಬಿರಿಯೆ ಬೆರಸಿತು ಹೊಯ್ದು ಮತ್ತೇ । ಳುವವುಬೀಳುವಭಟರ ಮೆದೆಗೆಡೆವಾನೆಕುದುರೆಗಳ ॥ ಪರಿವಿಡಿಯದಂತಿರಲಿ ದೊ

ರೆದೊರೆ । ಯುರವಣಿಸಿ ಹಳಚಿದರು ಪಾಂಡವ । ರರಸಕೌರವರಾಯರೆಚ್ಚಾಡಿದರು ಮೊದಲಿಸಿ ॥೨೯॥ ಅರಸರಿವರೇ ಶಿವಶಿವಾ ನಿ । ಷ್ಕರುಣರೆನೆ ತಾವೆಂಬವೊಲು ಬಲು । ಸರಳುಮಾನ್ಯರನವವೇ ನೀವೇಕೆ ರಣವೇಕೆ॥ ಬರೆಟರರ್ಜನಭೀಮರತಿನಿ । ಷ್ಠುರರು ಸಾವಡಮೇಲೆಬರುವವು । ಮರಳಿ ಬಿಜಯಂಗೈವುದೆಂದನು ಕೌರವರರಾಯ ॥ ೩೦ ॥ ಕೋಲಬಲುಹುಂಟಾಗಿ ಸಾಲಗೆ । ಹೋಲೆನುಡಿವುದು ಹೊಲ್ಲೆಯೇನಿದು । ಖೂಳಕಟಕಿಯಮಾತು ಬೇಡಂಬಿನಲಿ ಮಾತಾಡು ॥ ಆಳುತನವಾಭರಣವೇ ಮಾ । ಸಾಳು ಮೈದೋರೆರಸಲಹಿತರ । ಮೇಲೆಬಾ ಬಲುಬೇಗ ಸುಭಟರ ಹೊಗಳಬೇಕೆಂದ ॥೩೧॥ ಖತೆಯರೆಲ್ಲಾ ನೀವು ಕುಂತಿಯ । ವರಕುಮಾರರು ನಿಮ್ಮೊಡನೆ ಸಂ । ಗರಕೆ ಸರಿಸರೆ ನಾವು ಸಂತೈಸಾದೊಡೆನುತೆಸಲು । ಸರಳುಗಗನವ ಹೊದಿಸಿದವು ಹೂಂ । ಕರಿಸಿದವು ಹರೆಗಡಿದವಂಬಿಮೋ । ಹರವ ಮುರಿದವು ಮುಸುಕಿದವು ಮೋದಿದವು ರಿಪುಶರವ ॥೩೨॥ ಎಚ್ಚನೆಂಟಂಬಿನಲಿ ಕೌರವ । ನೆಚ್ಚಬಾಣವ ಕಡಿದು ನೂರರೊ । ಳೆಚ್ಚನೀತನ ಧನುವನದ ಪರಿಹರಿಸಿ ಕುರುರಾಯ ॥ ಎಚ್ಚನರಸನಸಾಸರಳ ಕಡಿ । ದೆಚ್ಚನವನಿಪಸನುಭಯರಾಯರ । ನಿಚ್ಚಟರು ಮರುಖೂತುರೆಂದುದು ಮೇಲೆ ಸುರಕಟಕ ॥ ೩೩ ॥ ದ್ಯುಮಣಿ ಪಡುವಣಗಿರಿಯ ಸಾರುವ । ಸಮಯವಾಯಿತು ರಾಯರಿಬ್ಬರ । ಸಮರಸೌರಂಭಾತಿಶಯವಿಮ್ಮಡಿಸಿತಡಿಗಡಿಗೆ ॥ ಅಮಿತದೋಷಪಿದೂಷಪಾಣಿ । ಭ್ರಮಿತಶರತತಿವಿಸ್ಫುಲಿಂಗಾ । ಕ್ರಮಿತಭುವನತ್ರಯರು ಕಾದಿದರರಸಕೇಳೆಂದ ॥ ೩೪ ॥ ನೆಲವು ನಮಗಾಯ್ತೆಂದು ಕೌರವ । ರುಲಿದರೆಮಗಗ್ಗಳಿಕೆಯೆಂದವ । ರುಲಿವುತಿರ್ದರು ಕಾದಿದರು ಸಮಜೋಳಿಜೋಕೆಯಲಿ ॥ ಬಳಿಕ ಯಮನಂದನನಕೈವೆ । ಗ್ಗಳಿಸಿ ತಾಗಿತು ನಿನ್ನ ತನುಜನ । ಬಿಲುಸರಳುರಥಸೂತವಾಜಿಗಳೊರಗಿದವು ಧರೆಗೆ ॥ ೩೫ ॥ ಸೆಳೆದುಹಿರಿಯುಬ್ಬಣವನವನಿಪ । ನೆಲಕೆ ಚಿಗಿದನು ಹಾವುಹಾದೇ । ವೆಲೆಲೆ ದೊರೆದೊರೆಹಗೆಗೆ ಸಿಲುಕಿದನೋ ಶಿವಾಯೆನುತ ॥ ಬಿಲುದುಡುಕಿ ಕೃತವರ್ಮಕೃಪಸೌ । ಬಲನೃಪಾಲನು ಶಲ್ಯಗುರುಸುತ । ದಳಪತಿಗಳೈದಿದರು ರಾಯನ ಸುತ್ತ ಮುತ್ತಿದರು ॥೩೬॥ ದೊರೆಗೆ ಬಿದ್ದುದು ಭಾರಿಯಾಹವ । ನರನ ಬರಹೇಳೆನುತ ಕವಿದರು । ಸರಳ ಹೊದಗಳ ಕೆದರಿ ಸಾತ್ಯಕಿಭೀಮಕೈಕಯರು ॥ ಬಿರುದಧೃಷ್ಟದ್ಯುಮ್ನಮಾದ್ರೀ । ಯರು ಶಿಖಂಡಿಯುಯುತ್ಸುಸೃಂಜಯ । ತರಳಪಂಚದ್ರೌಪದೇಯರು ಮುತ್ತಿದರು ನೃಪನ ॥ ೩೭ ॥ ಬಳಿಕ ಸಂಕುಲಸಮರವತಿವೆ । ಗ್ಗಳಿಸಿತದನೇನೆಂಬೆವಂಬುಧಿ । ಗಿಳಿದನಂಬುಜಮಿತ್ರಬೆನ್ನಲಿ ತಿಮಿರ ಬಳಿಸಲಿಸಿ ॥ ಗೆಲಿದು ಹೋಗದಿರೆನುತ ಕೌರವ । ನಳವಿಗೊಟ್ಟನು ಮತ್ತೆ ಧರ್ಮಜ । ಬಿಲುದಿರುವ ನೇರಿಸಿಯೆ ನಿಂದನು ಸಮರಕನುವಾಗಿ ॥ ೩೮ ॥ ರಾಯರಿಬ್ಬರು ಮರೆಯೆ ತ್ರಿಪುರದ । ತಾಯವನೆ ತಾನೆಂಬವೋಲ್ಲಿ । ದಾಳಿಯುದಲಿ ನುಂಗಿದುದು ಕತ್ತಲೆ ನಿಮಿಷದಲಿ ಜಗವ ॥ ರಾಯಮೋಹರದವೆಗೆದವೆರಡುನ । ವಾಯಿಯಲಿ ಬಹುವಿಧವವಾದ್ಯವಿ । ಡಾಯಿ ಮಿಗೆ ನಲವಿಂದ ಹೊಕ್ಕರು ಪಾಳಯಂಗಳನು. ... ... ॥೩೯॥

ಅಂತು ಸಂಧಿ ೪೪ ಪದ ೧೨೩೩ಕ್ಕಂ ಮಂಗಳಮಸ್ತು.

ಐದನೆಯ ಸಂಧಿ.

|| ಸೂಚನೆ || ವೈರಿವಿಜಯಕೆ ತ್ರಿಪುರವಿಜಯದ | ಚಾರುಕಥನವನೊರೆದು ಶಲ್ಯನ | ಸಾರಥಿಯ ಮಾಡಿದನು ಕರ್ಣಗೆ ಕೌರವರರಾಯ ||

ಪದ || ಕೇಳು ಜನಮೇಜಯಧರಿತ್ರೀ | ಪಾಲ ದಿನವೊಂದಾಯ್ತು ಕರ್ಣನ | ತಾಳಗದೊಳಲ್ಲಿಂದ ಮೇಲಣ ವರಕಥಾಮೃತವ || ಕೇಳಿಚಿತ್ತೈಸಿದ ಗತಾಕ್ಷನ | ಪಾಲಕಗೆ ವಿಸ್ತರಿಸಿ ಸಂಜಯ | ಹೇಳಿದನು ಬಳಿಕೆರಡನೆಯ ಸಮರದ ಮಹಾರ್ಣವ || ೧ || ಹೊಗಳಿ ಕೆಲಬರು ಹೊಳ್ಳುಗಳೆವುತ | ನಗುತ ಕೆಲಬದವರವೋಹರ | ದೆಗೆದು ಹೋದುದು ಬಲಿದುದಿದು ತಮತಮ್ಮ ಪಾಳಯಕೆ || ಹೊಗಳ್ವ ಭಟ್ಟರ ಸಾಲಕೈದೀ | ವಿಗೆಯ ಕಹಳಾರವದ ಲಗ್ಗೆಯ | ಬಿಗುಹಿನಲಿ ಕುರುರಾಯ ಹೊಕ್ಕನು ರಾಜಮಂದಿರವ || ೨ || ಗುಳವನಿಳುಹಿದವಾನೆಗಳು ಹ | ಲ್ಲಳವ ಬಿಡೆಭುಲ್ಲವಿಸಿದವು ಹಯ | ಕುಳವರೂಥವನಿಳಿದು ಸೂತರು ನಿಲಿಸಿದರು ರಥವ || ಕಳಚಿ ಸೀಸಕಜೋಡುಕೈದುವ | ನಿಳುಹಿ ಸಮರಶ್ರಮವ ನಿಮಿಷಕೆ | ನಿಳಯವೇದಿಯೊಳಿರ್ದು ಕಳಿದುದು ಕೂಡೆ ಪರಿವಾರ || ೩ || ಗಾಯವಡೆದಾನೆಗಳು ಗುಳವನು | ಹಾಯ್ಕಿಯೆನೆ ನೆಲಕುರುಳಿದುವು ಮಿಗು | ವಾಯುಧಂಗಳ ಬಿಗುಹು ಬಿಡೆರ್ದೊಂಮೆದ್ದುವಾಘೆಯಲಿ || ಆಯದಲಿ ಮುರಿದಂಬನುಗಿದೊಡೆ | ಸಾಯದಿಹರೇ ಭಟರು ಗಜಹಯ | ರಾಯಹತ್ತೊಂದಾಗಿ ಹೆಚ್ಚಿತು ಕೌರವೇಶ್ವರನ || ೪ || ಬಂದುದಿರುಳೋಲಗಕೆ ರಾಯನ | ಮಂದಿ ದಳಪತಿಶಲ್ಯಕೃಪ ಗುರು | ನಂದನಾದಿಮಹಾಪ್ರಧಾನರು ದೊರೆಯ ನೇಮದಲಿ || ಇಂದಿನಾಹವದೊಳಗೆ ಕುಂತೀ | ನಂದನರ ಬೊಬ್ಬಾಟ ಬಲುಹಾ | ಯ್ತೆಂದು ಮೆಲ್ಲನೆ ಮಾತು ತೆಗೆದನು ಕೌರವರರಾಯ || ೫ || ಬಲುಹಲೇ ಬಳಿಕೇನು ಹಗೆಯ | ಗ್ಗಳಿಕೆ ಮೆರೆಯದೆ ಮುರವಿರೋಧಿಯ | ಬಲುಹ ನೋಡಾ ಪಾರ್ಥನೆಂಬವನಾವಮಾನಿಸನು || ಬಲುಹು ಸಾರಥಿಯಿಂದ ರಿಪುಗಳ | ಗೆಲವು ಸಾರಥಿಯಿಂದ ಸಾರಥಿ | ಯೊಲಿದಡೆನಗಹುದೆಂದು ಕರ್ಣನು ಕೌರವನೊಳೆಂದ || ೬ || ಭಾರಿಧನುವಿದ್ದೇನು ತೋಳಿನ | ತೋರಹದ ಫಲವೇನು ಕೃಷ್ಣ | ತೋರಿಯೇ ಗರುವಾಯಿಗೆಡಿಸಿತು ನಮ್ಮ ಮೋಹರವ || ತೋರಬಲುಮೆಯ ಗರೆಯಸಾರಥಿ | ಸೇರಿದೊಡೆ ರಣದೊಳಗೆ ನಾಳಿಗೆ | ವಾರಣದ ಲೌತಣವನಿಕ್ಕುವೆ ಕಾಕಸಂತತಿಗೆ || ೭ || ಲೇಸನಾಡಿದೆ ಕರ್ಣನಿನಗೇ | ನೈಸಲೇ ಸಾರಥಿಯ ಕೊರತೆ ಸು | ರಾಸುರರ ತಟ್ಟಿನಲಿ ತೊಡಕುವ ನಾವನಿನ್ನೊಡನೆ || ಈ ಸಮಸ್ತ ನೃಪಾಲವರ್ಗದ | ಲಾಸೆಯಾರಲಿ ಸೂತಕರ್ಮಾ | ಭ್ಯಾಸಿಯನು ಜೋಡಿಸುವೆನೆಂದನು ಕೌರವರರಾಯ || ಹಲವುಮಾತೇಕರಸ ನುಡಿದುದು | ಫಲಿಸಲರಿಯದು ದೈವಗತಿಯಲಿ | ಫಲಿಸಿತಾದರೆ ರಾಜ್ಯಲಕ್ಷ್ಮಿಗೆ ಸೂಳೆತನವಹುದೆ || ಸುಲಭವಾದೊಡೆ ಮಾದ್ರರಾಜನ | ತಿಳುಹಿ ಸೇರಿಸು ರಿಪುಗಳೈವರ | ತಲೆಗೆ ನೀಹಿಡಿ ಸಂಚಕಾರವನೆಂದನಾಕರ್ಣ || ೯ || ಉಬ್ಬಿದನು ರೋಮಾಂಚ ಮೈಯಲಿ | ಹಬ್ಬಿದುದು ಹೊರೆಹೆಚ್ಚಿ ಮರವೆಯ | ಮುಬ್ಬು ಕವಿದುದು ಕರ್ಣನಾಡಿದಮಾತ ನೆನೆನೆದು || ಟೆಬ್ಬರಿಸುವವಿಂದ್ರಿಯತುರಂಗದ | ಗಬ್ಬ ಕಳಚಿತು ಕೌರವೇಂದ್ರನು | ಸಬ್ಬಲಗ್ಗೆಯಹರುಷದಲಿ ಹೊರವಂಟನರಮನೆಯ || ೧೦ || ಹರಿದರರಸಾಳುಗಳು ರಾಯನ | ಬರವ

ನಾತಂಗರುಹಿದರು ಕಡು। ಹರುಷದಲಿ ಕಲಿಶಲ್ಯ ಹೊರವಂಟನು ನಿಜಾಲಯುವ ॥ ಅರಸುಮಕ್ಕಳವಜ್ರ ಮಣಿಯಾ। ಭರಣಕಿರಣದಸೋಮದೀಪ್ತಿ। ಸ್ಫುರಿತ ಝಳಮಧ್ಯದಲಿ ಕಂಡನು ಕೌರವೇಶ್ವರನ॥೧೧॥ ಅಂದಳವನಿಳಿದರಸನಾತಗೆ।ವಂದಿಸಿದನಾಮಾದ್ರಪತಿ ಸಾ।ನಂದದಲಿ ತೆಗೆದಪ್ಪಿ ತಂದನು ರಾಜಮಂದಿರಕೆ॥ ಇಂದಿದೇನಿದ್ದಿರವು ನೀನೇ। ಬಂದ ಕಾರ್ಯವಿಶೇಷವೇನುಂ ।ಟೆಂದು ಕೌರವರಾಯನನು ಬೆಸಗೊಂಡನಾಶಲ್ಯ ॥ ೧೨ ॥ ಏನ ಹೇಳುವೆನೆನ್ನಪುಣ್ಯದ। ಹಾನಿಯುನು ಸುಗ್ಗಾಯ್ತು ಬಲಸುಂ । ಮಾನ ಬೀತುದು ಬಿರುದರಿಗೆ ಕಾಲೂರಿತವಮಾನ ॥ ಜ್ಞಾನದೀಕ್ಷೆಯ ಹಿಡಿದರೆನ್ನಸು। ಮಾನಸುಭಟರು ಜಯಸಿರಿಯು ಸಂ। ಥಾನ ಮುರಿದುದು ಮಾವ ನಿನ್ನಜ್ಞಾನವೇನೆಂದ ॥ ೧೩ ॥ ಸಮರಜಯುಸಾಧಕರು ಮಂತ್ರ। ಭ್ರಮಿತರಾಯುಪಜಯುವಧೂವಿ। ಭ್ರಮ ಕಟಾಕ್ಷದಗಾಯದಲಿ ಕಳವಳಿಸದವರಾರು ॥ ಸಮತೆಯಾಯಿತು ತವಕಿಗಳಿಗು। ಭ್ರಮಿಗಳಿಗೆ ತಿಳಿವಾಯ್ತು ವಾಸಿಯು। ಮಮತೆಯುವರು ವಿರಕ್ತರಾದರು ಮಾವ ಕೇಳೆಂದ ॥ ೧೪ ॥ ಮುರಿವಡೆದು ಕಲಿಭೀಷ್ಮಸರಳನು ಧರಿಸಿದನು ದ್ರೋಣಂಗೆ ಬಂದುದ। ನರುಹಲೇಕದ ಬಳಿಕ ಕರ್ಣನ ವೀರಪಟ್ಟದಲಿ ॥ ನೆರವಣಿಗೆಯುಂಟಾದೊಡೊಂದೇ। ಕೊರತೆಯಿದು ನಿಮ್ಮಿಂದ ಕಡೆಯಲಿ। ನೆರತೆಯುಹುದೆನಗುತ್ತರೋತ್ತರಸಿದ್ಧಿಯುಹುದೆಂದ ॥೧೫॥ ದ್ರೋಣ ಭೀಷ್ಮರವೋಲು ನೆಟ್ಟನೆ। ಹೂಣಿಗರು ರಾಧೇಯುಮಾದ್ರ। ಕ್ಷೋಣಿಪತಿಯುಂಟೆಂಬನುಡಿಯಿನ್ನೆರಡು ಕಟಕದಲಿ ॥ ಕೇಣವಿಲ್ಲದರವಗತಿಯ ಬಿ। ನ್ನಾಣವನು ತೋರಿದೊಡೆ ತನ್ನಯ। ಗೋಣಿಗೌಕುವ ಕೈದುವನು ನೀವ್ ತೆಗಸಿದವರೆಂದ ॥೧೬॥ ಬರಿದೆಬೋಳೈಸಿದರು ಕಾರ್ಯದ। ಹೊರಗೆ ಯೇನದ ಹೇಳುವೇಗರೆ। ಮೆರೆವವರು ನಾವಲ್ಲನುಡಿಯಾಬಯುಲಡೊಂಬೇಕೆ ॥ ಅರುಹು ಕೇಳುವೆನೆನಲುಶಲ್ಯನ। ಬಿರುನುಡಿಗೆ ಬೆಚ್ಚದೆ ಮಹೀಪತಿ । ಸೊರಹುತಪ್ಪದೆ ಬಿನ್ನವಿಸಿದನು ಮಾದ್ರಭೂಪತಿಗೆ ॥ ಮಾವ ಸಾರಥಿಯಾಗಿ ಕರ್ಣನ। ನೀವು ಕೊಂಡಾಡಿದೊಡೆ ಫಲುಗುಣ। ನಾವಪಾಡು ಸುರಾಸುರರ ಕೈಕೊಂಬೆನೇ ಬಳಿಕ ॥ ಆವುದೆನಗಭ್ಯುದಯುವದನೀ। ವಾವಪರಿಯಲಿ ಮನ್ನಿಸಿದೊಡರೆ । ಜೀವಿಕೌರವವಂಶ ನೆರೆ ಸತ್ಪ್ರಾಣಿಸುವುದೆಂದ ॥ ೧೭ ॥ ಖೂಳನೆಂಬೆನೆನೀನು ನಿಪುಣನು । ಬಾಲನೆಂಬೆನೆ ಸಕಲ ಪ್ರೌಢಿಕೆ। ಮೇಲೆಫಲಿತದಬೀಡು ಬಿಟ್ಟದೆ ಹಾ ಮಹಾದೇವ ॥ ಹೇಳುಹೇಳಿನ್ನೊಮ್ಮೆ ನುಡಿನುಡಿ । ಕೇಳುವೆನು ಕಿವಿಯಾರಕರ್ಣನ। ಕಾಳಗಕೆ ನಾವ್ ಸಾರಥಿಗಳೇ ಶಿವಶಿವಾಯೆಂದ ॥೧೮॥ ಖೂಳನನು ಹಿಡಿತಂದು ಧರಣೀ। ಪಾಲನನು ಮಾಡಿದೊಡೆ ರಾಜ್ಯದ । ಮೇಲೆ ನಿಲಿಸಿದಬಳಿಕ ಬಂದುದು ಖೂಳತನ ನಿನಗೆ ॥ ಕೀಳುಮೇಲಿನವಾಸಿನಿನ್ನಲಿ। ಬೀಳುಕೊಂಡುದುಸಾಕು ನಮಗಿ। ನ್ನಾಳುತನವೇಕೆನುತ ಮಡಮುರಿದೆದ್ದನಾಶಲ್ಯ ॥ ೨೦ ॥ ಒಡನೆ ನಿಂದನು ಸೆರಗಹಿಡಿದವ। ಗಡವಿದೇಕಿನ್ನೆನುತ ಗುಣದಲಿ । ನುಡಿದು ಕುಳ್ಳಿರಿಸಿದನು ಸಂತೈಸಿದನು ವಿನಯುದಲಿ ॥ ನುಡಿಗೆ ಕೋಪಿಸಲೇಕೆ ಮನಕೊಡ। ಬಡುವದೇಕೈಕೊಂಬುದಲ್ಲದೆ। ಯೊಡೆಯುರುಂಟೇ ನಮಗೆ ಯೆಂದನು ಕೌರವರರಾಯ ॥೨೧॥ ಅರುಣ ಸಾರಥಿಯಾಗಿ ತರಣಿಯು। ತುರಗಹಿಡಿಯನೆ ಕೃಷ್ಣನಲ್ಲಾ। ನರನಸಾರಥಿಯಾಗಿ ತೋರನೆ ತನ್ನ ಕೈಗುಣವ ॥ ಹರನ ಸಾರಥಿ ಕಮಲಸಂಭವ। ಸುರರ ಕಾರ್ಯಕ್ಕೊದಗನೇ ಸ। ತ್ಪುರುಷರೇ ಪರಕಾರ್ಯನಿಷ್ಠರು ಮಾವ ಕೇಳೆಂದ ॥ ೨೨ ॥ ಸವರಿದರು ಕುರುವಂಶವನು ಪಾಂ। ಡವರುಸಹಿತ ಮಹಾರಥರು ಸಲೆ। ಸವೆದು

ದಿಲ್ಲಿ ನದೀಸುತದ್ರೋಣಾದಿನಾಯಕರು ‖ ಅವರಲಳಿದವರಿಬ್ಬರೇ ನಂ । ಮವಸರಕೆ ಸಾಹಸಿಗರ್ಳೆ ನಿ
ನ್ನವರಮೇಲನು ಮಾನವಿದ್ದೊಡೆ ಮಾತುಮಾಣೆಂದ ‖ ೨೩ ‖ ನಿನ್ನ ಕೈಯಲಿ ಯಿರಲಿ ಸತ್ತಿಗೆ ।
ಯೆನ್ನಕೈಯಲಿ ಹೊಡಿಸು ಭಂಡಿಯ । ನಿನ್ನತಮ್ಮನ ಹೆಗಲಲಾತನ ಹಡಪ ಹಾಯ್ಕಿರಲಿ ‖ ನಿನ್ನ
ಬಂಧುಗಳವನ ಬೇಟೆಯ । ಕುನ್ನಿಗಳ ಹಿಡಿಯಲಿ ಸುಯೋಧನ । ನಿನ್ನ ಭಾಗ್ಯವನೊದೆದು ಕಳೆ ಕೇ
ಡಾವುದೆನಗೆಂದ ‖ ೨೪ ‖ ಗೆಲಿದೆನಿವದಿರನೆಂಬಬಲುಕ । ಕ್ಕುಲಿತೆಯಲ್ಲದೆ ದ್ರೋಣಭೀಷ್ಮರಿ । ಗಳು
ಕವರಿಭಟರಿವನ ಬಗೆವರೆ ಕಂಡು ಮರುಳಾದೆ ‖ ಬಲುಬಿದಿರನುಚ್ಚಳಿಸುವಳಿಮುಖ । ಕಳೆಯಕಬ್ಬಾನು
ವುದೆ ಕೌರವ । ಕುಲವನದ್ದಿದೆ ಪಾಪಿಕಷ್ಟವನೆನೆದೆ ಹೋಗೆಂದ ‖ ೨೫ ‖ ಅರಿಶಿರವ ಚೆಂಡಾಡಿತೆ
ನ್ನೀ । ಕರವು ವಂದಿವ್ರಾತದೆಡರನು । ಪರಿಹರಿಸಿತೀ ಕರದಳವು ಹಿಂದಣಸುಕಾಲದಲಿ ‖ ಧರಣಿಪತಿ
ನಿನ್ನಿಂದಕರ್ಣನ । ತುರಗಭಾರಿಯುಚಮ್ಮಟಿಕೆಯಾ । ಕರವ ಹೊದ್ದುವುದಾಯ್ತು ಶಿವಶಿವ ಧನ್ಯರಾವೆಂ
ದ ‖ ೨೬ ‖ ಜಾತಿ ಹೀನರಕರ್ಮವೃತ್ತಮು । ಜಾತಿಯುಲಿ ಕರ್ತವ್ಯತೀರಿವಿ । ಜಾತಿಗಳಲತಿಕರ್ಮವೃತ್ತಿ
ಯುಸೇರುವೆಯುನರಿದು ‖ ಆತನಳವಡಿಸಿದನು ವಿಧಿನಿನ । ಗಾತಮಾಡಿದನಳಿವಸಾಮು । ಥ್ಯಾತಿಶಯ
ವುಂಟಾದೊಡೈಸಲೆಯೆಂದನಾಶಲ್ಯ ‖ ೨೭ ‖ ಆಸುರದ ಬೆರಗೇಕೆ ನಮ್ಮೊಡ । ನೀಸುಮಾತೇಕೆಮ್ಮ ರ
ಕ್ಷಿಸು । ವಾಸೆಯುಂಟೀ ಮಾಡು ಮಾಣ್ಬುದುಕರುಣವಿಲ್ಲದೊಡೆ ‖ ವಾಸಿವಟ್ಟವ ನೋಡಿದನೆ ಲಕ್ಷ್ಮೀ
ಶನವರಲಿಸೂತಕರ್ಮ । ಭ್ಯಾಸಿ ಯೀ ಮುರವೈರಿಯೆಂದನು ಕೌರವರಾಯ ‖ ೨೮ ‖ ಮುರಹರನ
ಸಮಜೋಳಿ ನೀವಾ । ನರನ ಸಮಗೈಕರ್ಣನಿಂತಿ । ಬ್ಬರನು ನೀವಿಬ್ಬರು ವಿಭಾಡಿಸಿ ಗೆಲುವುದೇನರಿದು ‖
ಸುರರ ಕಾರ್ಯದಲಂದುಸಾರಥಿ । ಸರಸಿಜೋದ್ಭವನಾಗನೇ ನಂ । ಮರಸುತನವಿಂಪಳಿದುದಿದ ನೀನೊಲಿ
ದು ವುಳುಹೆಂದ ‖ ೨೯ ‖ ಬಣಗುತಿದೆ ಕುರುವಂಶಪೀಫಲು । ಗುಣನ ಕೋಪಾನಲನನಾಲಗೆ । ಕೆಣ
ಕುತಿದೆ ಕಕ್ಕುಲಿತೆ ಪಟ್ಟೊಡೆ ಕಾಣೆ ಕಾವವರ ‖ ಅಣಕಿಸದೆ ಕಾರುಣ್ಯವಗುಪಷವ । ನೊಣಗಿನಲಿ ಸುರಿ
ಪಾಹಿಮಕ್ಕಳ । ಹೆಣನ ಕಾಣುತ ದುಃಖವಿಲ್ಲ ದುರಾತ್ಮನೀನೆಂದ ‖ ೩೦ ‖ ದೇವಕೀಸುತನೆಂದು ಭಂಡಿ
ಯು । ಬೋವ ಕುಲದಲಿ ಹುಟ್ಟಿದನೊ ಮೇ । ಣಾವಿರಿಂಚಿಯುದಾರಸಾರಥಿತನದಪೀಳಿಗೆಯು ‖
ಕಾವುದಿದರೊಳಗೊಬ್ಬರೊಬ್ಬರ । ನಾವಮಾಸಿ ಪರಿಪ್ರಯೋಜನ । ಭಾವಕರುಸತ್ಪುರುಷರಿದಕೆ ವಿಚಾ
ರವೇಕೆಂದ ‖ ೩೧ ‖ ಗುರುಪಿತಾಮಹರಿಂದ ಮೋರೆಯ । ಮುರಿದವಿಜಯುವಧೂಕಟಾಕ್ಷವ । ತಿರುಹಿ
ಹಾಯ್ಕುವವೀರನಾವನು ನೀವು ತಪ್ಪಿದೊಡೆ ‖ ಕುರುಕುಲೋಧ್ಧಾರಕನು ಮಾದ್ರೇ । ಶ್ವರನೆನಿಪವಿಖ್ಯಾ
ತಿ ಬಂದುದು । ಪರಿಹರಿಸದಿರಿ ಮಾವ ಯೆಂದೆರಗಿದನು ಚರಣದಲಿ ‖ ೩೨ ‖ ಶಿವಶಿವಾ ನಿರ್ಬಂಧ
ಮಿದು ಕೌ । ರವನೊಳಾಯ್ತೀ ಮದ್ಯಮಯುಗಂ । ದವಸವಿವಪರಿಯಾಯ್ತಲಾ ತುಂಬೆಗಳ ಸೆರೆವಿ
ಡಿದು ‖ ಅವನಿಪನ ದುಸ್ಸೇವೆಯಿದು । ಕಷ್ಟವೆಲೆ ಮೊದಲಲಿ ಬಳಿಕನಾವಿ । ನ್ನವ ಗಡಿಸಲೇನಹುದು ಸಾ
ರಥಿಯಾದವೇಳೆಂದ ‖ ೩೩ ‖ ಆಯಿತೀ ಸಂತೋಷ ಕಮಲದ । ಳಾಯತಾಕ್ಷನ ನೋಡಿ ಬಂಡಿಯ ।
ಬೋಯಿಕೆಗೆ ವೀಳೆಯುವ ಹಿಡಿದೆವು ಹಲವು ಮಾತೇನು ‖ ದಾಯವಿಲ್ಲದೆ ಬಿಟವಿದಾತ್ರಂ । ಗಾಯ್ತೆಮಿ
ಗೆ ಸಾರಥ್ಯ ವಾದೊಡೆ । ರಾಯ ಹೇಳ್ಕೆ ತ್ರಿಪುರದಹನದ ಕಥೆಯನೆನಗೆಂದ ... ‖೩೪‖

ಅಂತು ಸಂಧಿ ೫ಕ್ಕೆ ಪದ ೧೫೭ಕ್ಕಂ ಮಂಗಳಮಸ್ತು.

ಆರನೆಯ ಸಂಧಿ.

ಸೂಚನೆ॥ ನಗರಮೂರರ ದೂರಕಾರರ । ದುಗುಡವನು ಪರಿಹರಿಸಿ ಕರುಣಾ । ಳುಗಳದೇವನು ಸಂತವಿ
ಟ್ಟನು ಸುರಕದಂಬಕವ ॥

ಪದ ॥ ಕೇಳು ಜನಮೇಜಯಧರಿತ್ರೀ । ಪಾಲ ಕೌರವರಾಯ ಶಲ್ಯಗೆ । ಹೇಳಿದನು ಸಾರಥ್ಯಸಂ
ಯೋಜಕಸಮಾಹಿತವ ॥ ಲೋಲತಾಪಸಕರ್ಮತರುನಿ । ಮೂಲನೈಕಕ್ಷಮಸುಧಾಕರ । ಮೌಳಿಕೇ
ಳೀಕಲಿತಕಮನೀಯಕಕಥಾಮೃತವ ॥೧॥ ತಾರಕನಮಕ್ಕಳುಗಳೆನಿಸುವ । ತಾರತಾಕ್ಷನು ಕಮಲಲೋ
ಚನ । ವೀರವಿದ್ಯುನ್ಮಾಲಿಯೆಂಬೀ ಮೂವರತಿಬಲರು ॥ ಘೋರತರತಪಸುಪ್ರಭಾವಿ । ಸ್ವಾರ್ತಿಗಳ
ಸಂಖ್ಯಾತಯುಗದಲಿ । ವಾರಿಜೋದ್ಭವನನು ವಶೀಕರಿಸಿದರು ಭಕ್ತಿಯಲಿ ॥೨॥ ಬಂದು ಕಮಲಜನವ
ದಿರಿದಿರಲಿ । ನಿಂದನೆಲೆಋಷಿಗಳಿರ ನೀವಿ । ನ್ನೆಂದುಪರಿಯಂತರ ತಪೋನುಷ್ಠಾನದಾಯಾಸ ॥ ನಿಂದು
ಬೇಡುವುದೊಲಿದುದನು ನಾ । ವಿಂದು ಸಲಿಸುವೆವೆನಲು ನಿಮಿಷಕೆ । ಕಂದೆರೆದು ಕಮಲಾಸನನ ಭಜಿಸಿ
ದರು ಭಕ್ತಿಯಲಿ ॥೩॥ ಎನಿತನೋದಿದೊಡೇನಹುದು ದು । ರ್ಜನರು ಪುರುಷಾರ್ಥಗಳೆ ಹಾವಿಂ ।
ಗೆನಿತುಹಾಲಾಹಾರವಾದೊಡೆ ಬಿಡುವುದೇವಿಷವ॥ ದನುಜರದ್ಭುತತಪವ ಮಾಡಿದ । ರನಿಮಿಷಾವಳಿಬೇ
ಟೆಯಾಡಲು । ನೆನೆದು ಬಿನ್ನೈಸಿದರು ಕಮಲಭವಂಗೆ ನಿಜಮತವ ॥೪॥ ರಚಿಸುವೆವು ಪುರಮೂರನಗ್ಗ
ದ । ಖಚರಕಿನ್ನರಯಕ್ಷರಾಕ್ಷಸ । ನಿಚಯ ಬಂದೋಲೈಸಿ ಹೋಗಲಿ ಹಲವುಮಾತೇನು ॥ ಉಚಿತದಲಿ
ನಿಮ್ಮಡಿಗಳನುನ್ನೃಪ । ರಚಿಸಿದೆವು ವೋಲೈಸುವೆವು ದೃಢ । ವಚನ ನಿಮ್ಮದು ಕರುಣಿಸುವುದಮರತ್ವವ
ನು ತಮಗೆ ॥೫॥ ಹಾಮಹಾದೇವಾ ಕುತಾರರ । ತಾಮಸದ ನೆನೆಹಿದ್ದಪರಿಯುಹು । ದೀಮಹಾನು
ಷ್ಠಾನವಿದರಲಿ ಶಾಂತಿ ಲವವಿಲ್ಲ ॥ ಕಾಮಿತವನಿವದಿರಿಗೆ ಕೊಟ್ಟೊಡೆ । ಕಾಮಹರಕಮಲಾಕ್ಷರಿಗೆ ಸಂ ।
ಗ್ರಾಮಜಯವೆಲ್ಲಿಯದೆನುತ್ತ ಡಿಗಡಿಗೆಚಿಂತಿಸಿದ ॥ ೬ ॥ ಹುಲಿಗೆ ಧೈರ್ಯವನೆರಕೆಗಳನಹಿ । ಗಳಿಗೆ ಖಳರಿ
ಗೆ ಲಕ್ಷ್ಮಿಯನು ಕ । ತ್ತಲೆಗೆ ಕಾಠಿಣ್ಯವನು ಚೈತನ್ಯವನು ಗಿರಿಗಳಿಗೆ ॥ ಕೊಲೆಗಡಿಗರಿಗೆ ನಿತ್ಯದೇಹವ।
ನೊಲಿದು ಕೊಟ್ಟರೆ ಲೇಸು ಬಳಿಕೇ।ನೆಲೆಮಹಾದೇವೇನನೆನೆದರೊ ಶಿವಶಿವಾಯೆಂದ॥೭॥ಪುರವ ವಿರಚಿಸಿ
ದಿವ್ಯಸಾಸಿರ । ವರುಷಕವು ಕೂಡಿದೊಡೆ ಯೊಂದೇ । ಸರಳನಾವವನೆಚ್ಚನಾದೊಡೆ ನಿಮಗೆ ಕಡೆಹಾರ
ಬರಲಿ ಬಳಿಕಿಂದ್ರಾದಿನಿರ್ಜರ । ನೊರಜಗಳ ನೀವ್ ಸದೆಯಿ ಹೋಗೆಂ । ದರಸ ಕೇಳ್ಕೆ ಕೊಟ್ಟನವರಿಗೆ
ಕಮಲಭವ ವರವ ॥೮॥ ಕರುಣವಿನಿತೇ ಸಾಕು ನಮಗಿ । ನ್ನುರದಲಾದವೆ ಮೊಲೆಗಳೆಮ್ಮಯ । ಪುರ
ವನೊಂದಂಬಿನಲಿ ಗೆಲುವನ ತಾಯಿ ಹುಸಿಯೆನುತ॥ ದುರುಳರಾತನ ಬೀಳುಕೊಂಡು । ಬ್ಬರದ ಹರು
ಷವ ಹೆಚ್ಚಿ ಮಯನನು । ಕರೆಸಿ ನಿರ್ಮಿಸಿದರು ಮಹಾವಿಭವದಲಿ ನಗರಿಗಳ ॥೯॥ ಕನಕದಲಿ ರಜತದ
ಲಿ ಬಲುಗ । ಬ್ಬುನದಲೊಂದೊಂದಕ್ಕೆ ಶತಯೋ । ಜನದ ವಿಸ್ತಾರದಘನಪ್ರಾಕಾರತೋರಣದ ॥ ವಿ
ನುತನಗರಿಗಳಾದವಲ್ಲಿಯು । ದನುಜರೆಡೆಗಳ ಹಾಕಿ ಗಾಣದ । ಲನಿಮಿಷರನೀಡಾಡಿಕೊಂಡರು ದುರ್ಗ
ವನು ಸುರರ ॥೧೦॥ ಸೂರೆಹೋಯಿತು ಸುರಪತಿಯ ಭಂ। ಡಾರ ಹೆಂಡಿರುಸಹಿತ ನಿರ್ಜರ । ನಾರಿಯ
ರು ತೊತ್ತಾದರಮರಾರಿಗಳ ಮನೆಗಳಲಿ ॥ ಮೂರುಜಗದೊಳಗವದಿರಾಣೆಯ । ಮೀರಿ ಬದುಕುವರಿ

ಲ್ಲ ಕಡೆಯಲಿ । ತಾರಕನಮಕ್ಕಳಿಗೆ ಕ್ರೈವರ್ತಿಸಿತು ಜಗವೆಂದ॥೧೧॥ನೆರೆದುದಮರರಳಾಳು ಹರಿಸಾ। ಗರದ ಕಡೆಯಲಿ ರೋಹುಗಳೆದು । ಟ್ಟರಿವೆಗಳ ಕಾಳಿಕೆಯುಮೋರೆಯು ತಾರಿದೊಡಲುಗಳ ॥ ಹುರಿದಧೈರ್ಯದ ಲಳ್ಳೆಬಾರುವ । ತರಳಹೃದಯದ ದೇವರಿಂದ್ರನ । ನರಸಿ ಕಂಡರು ತಮ್ಮೊಳಾಲೋಚನೆಯ ಮಾಡಿದ ರು ॥ ೧೨ ॥ ತಾರಕನ ಮಕ್ಕಳುಗಳೇ ಮು । ನ್ನಾರ ಗೆಲಿದರು ತಪವಮಾಡಿ ವಿ । ಕಾರಗಳು ಬೊಮ್ಮಂಗೆ ಬಂದಿಯ ನಿಕ್ಕಿದರು ಬಳಿಕ ॥ ವಾರಿಜಾಸನ ಮೇಲನರಿಯ ಕ । ಠೋರನಾಯ್ತು ಳ ಹೆಚ್ಚಿಸಿದ ನಿದ । ನಾರಿಗರುಹುವೆವೆನುತ ಸುಯ್ದುರು ಬೈದು ಕಮಲಜನ॥೧೩॥ ಆದೊಡೆಯು ನಮಗಾತನೇಗತಿ । ಯಿಾದುರಾತ್ಮರಿಗೆಂದು ಹರಿತಂ । ದಾದರಿಸಿ ಕೇಳುವೆವೆನುತ ಕಮಲಜನ ಹೊರೆಗೈದಿ ॥ ಖೇದವನು ಸುರಿಯಲು ಪಿತಾಮಹ । ನಾದಿವಿಜಗಣಸಹಿತ ಬಂದನು । ವೇದಶುದ್ಧವಿಶುದ್ಧದೇವನ ಕಾಬತವಕದಲಿ ॥ ೧೪ ॥ ಬಂದು ಕೈಲಾಸಾದ್ರಿಗಾಗಿರಿ । ನಂದನಾವಕ್ಷೋಜಘುಸೃಣ । ಸ್ಕಂದಚೇತಕನಯನರಂಜನಭೂತಿಪಂಜರನ ॥ ವಂದ್ಯಮಾನಸುರಾಸುರೋರಗ । ವೃಂದಮಕುಟಮಣಿಪ್ರಭಾನಿ । ಷ್ಪಂದಭೂಯಿಷ್ಠವಿಾತಕಾಯನ ಕಂಡನಬುಜಭವ ॥ ೧೫ ॥ ಕೊರಳಕಪ್ಪಿನ ಚಾರುಚಂದ್ರಾ । ಭರಣದೂರ್ಧ್ವದಭಾಳನಯನದ । ಭರಿತಪರಿಮಳಗಂಧವಟ್ಟದ ಜಡಿವಕೆಂಜಡೆಯ ॥ ಕರಗಿಕಾಸಿದ ವಿದ್ಯೆಯನು ಬೇ । ರಿರಿಸಿಶುದ್ಧಬ್ರಹ್ಮವನು ಕಂ । ಡರಸಿದಂತಿರಲೆಸೆವಶಿವನನು ಕಂಡನಬುಜಭವ ॥ ೧೬ ॥ ವೇದವರಿಯದತರ್ಕವಿದ್ಯಾ । ವಾದ ನಿಲುಕದಬುಧರ ಮತಿಸಂ । ಪಾದನೆಗೆ ಮುಖಗುಡದ ಯಮನಿಯಮಾದಿಯೋಗಗಳ ॥ ಹೋದಹೊಲಬಳವಡದ ಬ್ರಹ್ಮೇಂ । ದ್ರಾದಿಸುರರುಬ್ಬಟೆಗೆ ಸೋಲದ । ನಾದಿದೇವರದೇವಶಿವನನು ಕಂಡನಬುಜಭವ ॥ ೧೭ ॥ ಕಂತುಹರನನು ವಿಮಲನನು ವೇ । ದಾಂತವೇದ್ಯನನದ್ವಿತೀಯನ। ನಂತಮಹಿಮನ ಸಚ್ಚಿದಾನಂದೈಕರಸಮಯನ ॥ ಅಂತರಹಿತನನಪ್ರಮೇಯನ। ನಂತರೂಪನನಂಘ್ರಿಭಜಕಭ।ವಾಂತಕನನುದ್ದಂಡದೇವನ ಕಂಡುದಮರಗಣ ॥೧೮॥ ಇದ್ದುದಗ್ನದರುದ್ರಕೋಟಿಗ। ಳಿದ್ದುದಗ್ನದವಿಷ್ಣುಕೋಟಿಗ। ಳಿದ್ದುದಂಬುಜಭವಸುರೇಂದ್ರಾದಿಗಳು ಶತಕೋಟಿ ॥ ಇದ್ದುದಖಿಳಾಮ್ನಾಯಕೋಟಿಗ। ಳಿದ್ದುದಗಣಿತಮಂತ್ರಮಧ್ಯದೊ । ಳಿದ್ದುನಿರ್ಮಳಖಂಡಪರಶುವ ಕಂಡುದಮರಗಣ ॥೧೯॥ ಪುಳಕಜಲವುಬ್ಬರಿಸೆ ಕುಸುಮಾಂ।ಜಲಿಯನಂಘ್ರಿದ್ವಯಕೆ ಹಾಯಿಕಿ। ನಳಿನಭವ ಮೈಯಿಕ್ಕಿದನು ಭಯಭರಿತಭಕ್ತಿಯಲಿ ॥ ಬಳಿಯಲಮರೇಂದ್ರಾದಿದಿವಿಜಾ। ವಳಿಗಳವನಿಗೆ ಮೈಯ ಚಾಚಿದ। ರುಲಿಯಲಿರ್ದುದು ಜಯಜಯಧ್ವಾನದಲಿ ಸುರಕಟಕ ॥೨೦॥ ಪರಮಕರುಣಕಟಾಕ್ಷರಸದಲಿ। ಹೊರೆದು ಕಮಲಾಸನನ ಹತ್ತಿರೆ । ಕರೆದು ಮನ್ನಿಸಿ ನಿಖಿಳನಿರ್ಜರಜನವ ಸಂತೈಸಿ ॥ ಬರವಿದೇನಿಂದಿನದು ವಿಶ್ವಾ। ಮರಕದಂಬಕಸಹಿತಯೆನುತಂ। ಬುರುಹಭವನನು ನಗುತ ನುಡಿದನು ತರಳಶಶಿಮೌಳಿ ॥೨೧॥ ತಾರಕನಮಕ್ಕಳುಗಳಿಗೆ ನೆರೆ । ಸೂರೆಹೋಯಿತು ರಾಜ್ಯಸಿರಿ ಮುಂ । ಮಾರುಹೋದರು ಸುರರಹೆಂಡಿರು ಖಳರ ಮನೆಗಳಿಗೆ ॥ ಚಾರುವೈದಿಕ ಹವ್ಯಕವ್ಯವಿ।ಹಾರವೃತ್ತಿಗಳಳಿದುವಿದ ನೀ । ವಾರಿಸುವುದೆಂದಬುಜಭವ ಮಾಡಿದನು ಬಿನ್ನಹವ ॥ ೨೨ ॥ ನಗೆಯಮೊನೆ ನಸುಹೊಳೆಯೆ ಬ್ರಹ್ಮನ । ಮೊಗವ ನೋಡಿದ ನಭವನೀಶನ । ಬಗೆಯ ಭಾವವನರಿದು ತಲೆಗುತ್ತಿದನು ಕಮಲಭವ ॥ ದುಗುಡವನು ಬಿಡಿನಿಖಿಳದಿವಿಜಾ । ಳಿಗಳು ಪಶುಗಳಲಾ ವಿರಂಚಿಯ । ವಿಗಡವರದಲಿ ಕೆಟ್ಟರಕಟಕಟಂಜಬೇಡೆಂದ ॥ ೨೩ ॥

ಪಶುಪತಿತ್ವವನೆಮಗೆ ಬಿಡಿನೀವ್ । ಪಶುಗಳಾಗಿರಿ ಪಾಶುಪತಶರ । ನಿಶಿತಸರಳಲಿ ದೈತ್ಯದುರ್ಗವನುರುಹಿ ತೋರುವೆನು ॥ ದೆಸೆದೆಸೆಗೆ ಹರೆದಖಿಳದೇವ । ಪ್ರಸರವನು ಮಿಗೆ ನೆರಹಿ ಮೇಲಿ । ನ್ನಸವುಸೆಗೆ ಹೆದರದಿರಿಯೆಂದನು ನಗುತ ಶಶಿಮೌಳಿ ॥ ೨೪ ॥ ಜಾರಿದುಬ್ಬಿನ ಹೊತ್ತ ದುಗುಡದ । ಮೋರೆಗಳ ಮೋನದವಿಹಾರದ । ವಾರಿಜಾಸನಮುಖ್ಯ ಸಕಲಸುರೌಘವಿರೆ ಕಂಡು ॥ ಏರುವಡೆದುದೆ ಮನದವಿದ್ಯೆಯ । ಮೂರುವೋದಿರಲಾ ಯೆನುತ ಶಿವ । ತೋರಿ ನುಡಿದನು ಪಶುಪತಿತ್ವದ ಪರಮಸಂಗತಿಯ ॥ ೨೫ ॥ ಕರ್ಮಕಿಂಕರರಾಗಿ ಕೃತದು । ಷ್ಕರ್ಮವಾಸನೆ ವಿಡಿದು ತಾನೇ । ಕರ್ಮಕರ್ತನುಭೋಕ್ತೃ ತಾನೇದುಃಖಸುಖಿಯಾದ ॥ ನಿರ್ಮಳಾತ್ಮನೊಳೀಯಹಂಕೃತಿ । ಧರ್ಮವನು ನೇವರಿಸಿ ಬದುಕುವೆ । ದುರ್ಮತಿಯೆ ಪಶುವೀಪಶುತ್ವಕೆ ಭೇದವೇನೆಂದ ॥ ೨೬ ॥ ಪಂಚವಿಂಶತಿತತ್ವರೂಪದ । ಸಂಚವರಿಯದನೀತಿಮುಖದಿಂ । ದಂಚೆ ಗಾಣದಸುಗುಣಮಯನೀಹಾರದಲಿ ಮುಳುಗಿ ॥ ಮಿಂಚುವೆಳಗಿನ ಬಳಕೆಯನು ಮನ । ಮುಂಚಿ ಮೈಗೊಡಲಳುಕುವಾತುಮ । ವಂಚಕರ ನೀವ್ ಪಶುಗಳೆಂದೊಡೆಭೇದವೇಕೆಂದ ॥ ೨೭ ॥ ಆದಿಭೌತಿಕದಿಂದ ನೊಂದುವಿ । ರೋಧಿಷಡುವರ್ಗದಲಿ ಮೋಹ । ವ್ಯಾಧಿಯಲಿ ಬೆಂಡಾಗಿ ಭವಪಾಶದಲಿ ಬಿಗಿವಡೆದು ॥ ಬಾಧನಿಚಯದ ಬಲೆಗೆ ಸಿಲುಕಿ ನಿ । ರೋಧದೊಳುಬಿದ್ದಿಹರವಿದ್ಯಾ । ಸಾಧಕರ ನೀವ್ ಪಶುಗಳೆಂದೊಡೆ ಖೇದವೇಕೆಂದ ॥ ೨೮ ॥ ಪಶುಪತಿಯೆ ಪರಮಾತ್ಮರೂಪನು । ಪಶುಗಳೀಪರಿಜೀವಭಾವದ । ಲೆಸಗುವರು ನೀವ್ಪಶುಗಳದರಿಂ ನಿಮ್ಮ ಲಕ್ಷಣವ ॥ ಪಸರಿಸುವಪರಮಾತ್ಮ ತಾನಿರೆ । ಗಸಣಿ ನಿಮಗೇಕೆಂದುದೇವ । ಪ್ರಸರವನು ತಿಳುಹಿದನು ಕಾರುಣ್ಯದಲಿ ಕಾಮಾರಿ ॥ ೨೯ ॥ ಉಬ್ಬುಗೊಂಡುದು ವಿದ್ಯೆಯನುಸಲೆ । ಕೊಬ್ಬುಗರ ಗಂಡಿಗರಗಾಢದ ಗಬ್ಬವನು ಝಾಡಿಸಿತು ಗರಳಗ್ರೀವನುಪದೇಶ ॥ ಹಬ್ಬಿನಲಿಮಾತಾಡಿ ತಮ್ಮೊಳ । ಗೊಬ್ಬರೊಬ್ಬರು ತಿಳಿದು ಸಕಲಸು । ಸಬ್ಬುಜನವೆರಗಿದುದು ಜಯಜಯಯೆನುತ ಪಶುಪತಿಗೆ ॥ ೩೦ ॥ ಜಗವುಘೇಯೆಂದುದು ಜಯಧ್ವನಿ । ಮುಗಿಲರೆಘೋಂಪಿಸಿತೊಗ್ಗಿನಂಜುಳಿ । ಗಗನದಗಲಕೆ ಕುಣಿವುತಿರ್ದುದು ಸುರರು ಭಾಳದಲಿ ॥ ಬೆಡಗು ಬೀತುದು ಬೇಸರಿನ ಜಲು । ತಗಹು ಸೋತುದು ಶಿವಗೆ ರವಿಜಾ । ದಿಗಳು ಮುದದಲಿ ಮಾಡಿದರು ಮೂರ್ಧಾಭಿಷೇಚನವ ॥ ೩೧ ॥ ಪಾಶುಪತ್ಯದ ಪಟ್ಟವಾಯ್ತು ಮ । ಹೇಶನಲಿ ಬ್ರಹ್ಮಾದಿದೇವರು । ವಾಸಿವಟ್ಟವ ಬಿಟ್ಟರೋಲೈಸಿದರು ಪಶುಪತಿಯ ॥ ಪಾಶುಪತಸುವ್ರತವ ಧರಿಸಿದು । ದಾಸುಪರ್ವಸ್ತೋಮ ವಿಶ್ವಾ । ಧೀಶನೆಸೆದನು ಕೋಟಿಸೂರ್ಯನಿಭಪ್ರಕಾಶದಲಿ ॥ ೩೨ ॥ ರಚಿಸಿ ರಥವನು ಭೀತಿ ಬೇಡಿ । ನ್ನುಚಿತವೇನದ ಮಾಡಿ ದೈತ್ಯ । ಪ್ರಚಯವನು ಪರಿಹರಿಸಿಕೊಡುವೆವು ಪಾಶುಪತಶರದಿ ॥ ಕುಚಿತರಿನ್ನೇಗುವರು ಬಳಿಕಿ । ನ್ನಚಲಿತವಲೇ ನಿಮ್ಮಪದವೆನೆ । ನಿಚಿತಹರುಷರು ವಿಶ್ವಕರ್ಮಂಗರುಹಿದರು ಹದನ ॥ ೩೩ ॥ ಮಾವ ಕೇಳದ್ಭುತವನೀವಿ । ಶ್ವಾವನೀತಳವಾಯ್ತು ರಥ ತಾ । ರಾವಚಲವಿರಸಾಯ್ತು ಸತ್ತಿಗೆಯಾಯ್ತು ಕನಕಾದ್ರಿ ॥ ಆವುದಯಘನಶೈಲವಸ್ತ್ರ । ಗ್ರಾವಕೇತನಕಂಭರದಧಿ । ಷ್ಠಾವಲಂಬನದಿಂದ ರಚಿಸಿದನಾತ ನಿಮಿಷದಲಿ ॥ ೩೪ ॥ ಅಸುರವಲೇ ವಿಂಧ್ಯಹಿಮಗಿರಿ । ಹಾಸುಹಲಗೆಗಳಾದವಚ್ಚುಮ । ಹಾಸಮುದ್ರವೆಯಾಯ್ತು ಗಾಲಿಗೆ ಬೇರೆ ತರಲೇಕೆ ॥ ಆಶತಿಯಸೂರಿಯಾನಮಂಡಲ । ವೈಸಲೇ ಗಂಗಾದಿಸಕಲಮ । ಹಾಸರಿತ್ಕುಲವಾಯ್ತು ಚಮರಗ್ರಾಹಿಣೀನಿವಹ ॥ ೩೫ ॥

ರಾಯ ಕೇಳ್ಕೆ ಪುತ್ತ್ರೆಯಾಹವ । ನೀಯುಗಾರುಹಪತ್ಯದಕ್ಷಿಣ । ವಾಯುಸಖಿಯಾದರು ತ್ರಿನೇಣ್ಣೇ ಶರ ರಥಾಗ್ರದಲಿ ॥ ಆಯಿತಲ್ಲಿವರೂಥನಕ್ಷ । ತ್ರಾಯುತವು ಬಳಿಕೆನು ರುಷವ । ಸಾಯುತಗ್ರರಾಶಿ ಯಾವವು ಮಾವಕೇಳೆಂದ ॥ ೩೭ ॥ ಆರಥಾಗ್ರದ ವೇಪನಾಲುಕು । ವಾರುಹ ಯುಯುದರು ನೊಗ ವಾ । ಯ್ವಾರದನಿ ಬಿಡುಪಾಸ ವೃತ್ತರ ವಕ್ಷಣಾಯಸವು ॥ ನಾರಶ್ರುತಿ ಪ್ರೇತ್ರಾಶಿ । ಘಾರವಾದವು ನೊಗನ ಕಲ್ಲಗಳು । ಚಾರುತರಫಣಿನಿಕರ ಹಯ ಬಂಧನದ ನೇಣುಗಳು ॥ ೩೭ ॥ ಪಿಳಗಾದವು ಶ್ರುತಿಸುವಾದ್ಯಾ । ವಳಿಗಳವುಳ ಪ್ರಣವವಾದವು । ಮೊಳೆಯ ಬಲು ಚಪ್ಪುಗ ಪಗ್ಗವು ವರಷಡಂಗಚಯ ॥ ನಿಲಿಸಲತುಳ ಕ್ರತುರಥಾಗ್ರ । ವಳಿಗಳಾದವು ವಿಧನೊ ದ । ಬಲವಪದಲ ಪತಾಕೆಯಾದವು ರಥದಬಳಸಿನಲಿ ॥೩೮॥ ಕಲಲವಂಡದ ದ್ಯುದಂಡಕ । ರಾಳರೋಷದ ಚಕ್ರವಂತಪಿ । ಶಾಲ ವಿಮಲ ಬ್ರಹ್ಮದಂಡದ ಸಾಲು ಚೆಲುವಾಯ್ತು ॥ ಮೇಲುವಲುಗಿಯುಕುತ್ತು ಚದುರಯ ಚಾಲ ಕನಕಧ್ವಜದ ತುದಿಯಲಿ । ಮೇಳವಿಸಿದನು ವಿಶ್ವಕರ್ಮನು ವಿಮಲಸಾಕ್ಷರವ ॥೩೯॥ ಅರಸ ಕೇಳುರು ತರದ ಸಂವ । ತ್ಸರವೆ ಧನು ತತ್ಕಾಳ ರಾತ್ರಿ ಯೆ । ತಿರುವಿದೇ ನಾಶ್ಚರ್ಯಪ್ರಕೃತಿವಹಿದ ಮಹಾದೇವ ॥ ಸರಳ ರಚನೆಗೆ ವಿಷ್ಣುವನು ಸಂ। ಸ್ಮರಿಸಿದನು ವೈಕುಂಠತೇಜಸ್ಫುರಿತಮಾರ್ಗಣ ಸಕಪುಟಂಪ್ರಸ್ತೋ ಮಮಾರ್ಗದಲಿ ॥೪೦ ॥ ಶ್ರುತವೆ ನಿಮಗದು ಮಾವ ಬಹುಳಾ । ದ್ಭುತವನದನೇನೆಂಬ ದೇವ । ಪ್ರತತಿನೆರೆದುದು ಪರಚತುರ್ದಶಭುವನ ವಾಸಿಗಳು ॥ ಶತಮುಖಬ್ರಹ್ಮಾದಿಗಳುತ । ಮ್ಮತಿಶಯದ ತೇಜವನುಳಿದು ಪಶು। ಪತಿಯ ಪದಕೋರೈಸಿದರು ಮಾದ್ರೇಶ ಕೇಳೆಂದ ॥೪೧॥ ಸೋಮಹಾಶಾಂಭವಸುಜೇಶ । ಸ್ತೋಮವೇನದು ಕೊರತೆಯೇ ಮ । ತ್ತೀಮಹೇಂದ್ರಬ್ರಹ್ಮಮುಖತೇಜಸ್ಸು ಶಾಂತಿ ॥ ಆಮಹಾದೇವನಲಿ ಸೇರಿದು । ದೀಮಹಾರಥಕಾಗಿ ವಿಮಲ । ವ್ಯೋಮಕೇಶನು ನಗುತ ಬಿಡಯಂಗೆ ಯ್ಯಲನುವಾದ ॥ ೪೨ ॥ ಕಳಚಿ ತಲೆವಾಲೆಯನು ಕೊಟ್ಟನು । ಕೆಲದವರ ಕೈಯಲಿ ವಿಭೂತಿಯ । ಗುಳಿಗೆಗಳ ನುಗ್ಗೊತ್ತಿ ಸರ್ವಾಂಗದಲಿ ಧೂಳಿಸಿದ ॥ ಹೊಳೆಹೊಳೆವಕೆಂಜಡೆಯನಡಿಸಿ। ಯುಳುಕಿಬಿಗಿದನು ದಂತಿಚರ್ಮವ । ನೆಲಕೆ ಮುಂಜೆರಗೊಲೆಯಲುಟ್ಟನು ದೇಸಿಪಿಪಿಗಲು ॥ ೪೩ ॥ ಕಡಯಸರಪಳಿ ತೋಳಬಂದಿಯ । ಹೆಡೆವಣಿಯ ಮಹಾವುಗಳನಳ । ವಡಿಸಿದನು ಮೋಡಿಸಿದ ಪಕ್ಷದ ಘುಳವಟಿಗೆ ಮೆರೆಯೆ ॥ ಜಡಿವಕಿರುಗೆಜ್ಜೆಗಳ ಬಿಗುಹಿನ । ಬಿಡಯಬದ್ಧಗಥಾರವುರಗನ । ಪದವಣಿಯ ಗೊಂಡೆಯದ ಕಿಗ್ಗಟ್ಟಸೆಯೆ ಪಶುಪತಿಗೆ ॥ ೪೪ ॥ ನೆರದುದಭವನ ಕೆಲಬಲದಲಬ್ಬರದ ಬೊಬ್ಬೆಯ ಬಿಗಿದ ಬಿಲ್ಲಿನ । ಬೆರಳಚಕ್ರದ ಧವರಿಗಳ ಡಾವರಿಪಡಾಯುಧದ ॥ ಪಟಪಟಯ ಕೈಪುಗಳ ಕರ್ಕಶ।ಶರದ ಚರಿತದ ರೌದ್ರರಸದಲಿ। ವರಮಹಾಗಣನಿಕರ ನೆರೆದುದು ಮಾವ ಕೇಳೆಂದ ॥೪೫॥ ಸುರಬಲದ ನಿಸ್ಸಾಳಕೋಟಿಯ। ಮೊರಹು ಮುಳುಗಿತು ಬಿಲುದಿರುವಿನ। ಬ್ಬರೆದಲಾಧ್ವನಿಯಡಗಿತಗಣಿತಪಟಹಘೋಷದಲಿ॥ ಅರರೆ ವಂದಿಧ್ವನಿಯ ಗರ್ಭಿ।ಕರಿಸಿ ಹೆಚ್ಚಿತು ಜಯಜಯಧ್ವನಿ।ಯುರುಚತುರ್ದಶಜಗವ ಬಿಡಿದುದು ಹೇಳಲೇನೆಂದ॥೪೬॥ಮುರಿಯೆ ಬಲವಂಕದಲುಘೇಯೆಂ।ದೊರಲಿದವು ಶ್ರುತಿನಿಕರ ವಾಮದಕೊರಳಕೊಂಕಿನ ಉಪನಿಷತ್ತುಗಳೊರಲಿದವು ಕೋಟಿ ॥ ತಿರುಗೆ ಬೆನ್ನಲಿ ಸಕಲಸಚರಾ । ಚರವುಘೇಯೆಂದುದು ಕಪರ್ದಿಯ । ಸರಿಸದಲಿ ಸಿಡಿಲಂತೆ ಮೊಳಗಿತು ವೀರಗಣನಿಕರ ॥ ೪೭ ॥ ನಡೆದು ರಥದಲಿ

ವಾಮಚರಣವ । ನಿಡುತ ಧೂರ್ಜಟಿ ದಿವಿಜನಿಕರಕೆ । ನುಡಿದನಾವವನಿಲ್ಲಿ ಸಾರಥಿ ಮಾಡಿದಿರಿ ರಥಕೆ॥ ಕಡೆಗೆ ಸಾರಥಿಯಿಲ್ಲದಾರಥ । ನಡೆವುದೇ ದಾನವರ ಧಟ್ಟಣೆ । ಯೊಡೆವುದೇ ಲೇಸಾಯ್ತೆನುತ ಶಿವ ನುಡಿದ ಸುರಪತಿಗೆ ॥ ೪೮ ॥ ಮಾವ ಕೇಳ್ಕೆ ಬಳಿಕ ಹರಿದುದು । ದೇವತತಿ ಪರಮೇಷ್ಠಿಯಲ್ಲಿಗೆ । ಭಾವವನು ಬಿನ್ನೈಸಿದರು ನಿಜರಾಜಕಾರಿಯವ ॥ ಆವಿಭುವನೊಡಬಡಿಸಿದರು । ದೇವಾವಳಿಗಳಂದಿನಲಿ ಕರ್ಣಗೆ । ನೀವು ಸಾರಥಿಯಾದೊಡಭಿಮತಸಿದ್ಧಿ ತನಗೆಂದ ॥ ೪೯ ॥ ಕೋಗಿಲೆಯದಾಯಕ್ಕೆ ಬಂದುದು । ಈಗ ಸನ್ನಯನುಡಿಯದಂತಿರ । ಲಾಗಲಂಬುಜಭವನು ಸಾರಥಿ ಬಳಿಕ ಲೇಸಾಯ್ತು ॥ ಹೋಗಲದು ಸಾರಥ್ಯಕಾಯತ । ವಾಗಿ ಬಂದು ವಿರಂಚಿ ಮಕುಟವ । ತೂಗಿದನು ಹೊಗಳಿದನು ತ್ರಿಪುರನಿವಾಸಿಗಳ ಬಲುಹ ... ... ॥ ೫೦ ॥

ಅಂತು ಸಂಧಿ ೬ ಕ್ಕೆ ಪದ ೨೦೭ ಕ್ಕಂ ಮಂಗಳಮಸ್ತು.

ಏಳನೆಯ ಸಂಧಿ.

॥ ಸೂಚನೆ ॥ ಕಾಮುಕೋಲಾಹಲನು ದಕ್ಷನ । ಹೋಮದಳದುಳಕಾರ ಹರ ನಿ । ಸ್ಸೀಮದಲಿ ಪುರಮೂರ ಗೆಲಿದನು ಸಲಹಿದನು ಸುರರ ॥

। ಪದ ॥ ಹುಸಿಯು ಬಳಿಕದು ಸಕಲಜಗವೂ । ದೆಸೆ ಪುರತ್ರಯದೈತ್ಯಭಟರೊಂ । ದೆಸೆ ಮಹಾದೇವನುತ ಕಮಲಜನೇರಿದನು ರಥವ ॥ ಸಸಿನ ವಾಘೆಯ ತಿದ್ದಿ ತುರಗ । ಪ್ರಸರವನು ಬೋಳೈಸಿ ರಥವನು । ದೆಸೆದೆಸಗೆ ಸುಳಿಸಿದನು ಉಳಿವಡಿಸಿದನು ನಿಮಿಷದಲಿ ॥ ದೇವ ಬಿಜಯಂಗೈವುದೆನೆ ದಿವಿ । ಜಾವಳಿಗಳಬ್ಬರದ ಬೊಬ್ಬೆಯ । ಡಾವರದಲೇರಿದನು ಧೂರ್ಜಟಿ ವೇದಮಯರಥವ ॥ ಮಾವ ಕೇಳದ್ಭುತವನೀ ಪ । ಶ್ಚಾವನೀತಳ ರಥರಥಾಂಗ । ಗ್ರಾವತತಿ ನುಗ್ಗಾಗಿ ಬಿದ್ದುದು ತೇರು ನಿಮಿಷದಲಿ ॥ ೨ ॥ ಕುದುರ ತಲೆಕೆಳಕಾದವಿಳೆಯ । ದ್ದುದು ರಸಾತಳಕದರಭಾರಕೆ । ಕೆದರಿದವು ಕುಲಗಿರಿಯ ಹೂಡಿದ ಸಂಚ ದಸೆದಸೆಗೆ ॥ ಕುಟದುದಮರವ್ರಾತ ಸಂತಾ । ಪದಲಿ ಪಿತಳಕೆ ಹಾಯ್ದು ನಿಮಿಷಾ । ರ್ಧದಲಿ ಹೆಗಲಿಂದೆತ್ತಿದನು ಹರಿ ವೃಷಭರೂಪದಲಿ ॥ ೩ ॥ ಅದ್ದರಥ ಹರಿಯುರವಣೆಗೆ ಬಿಗಿ । ದೆದ್ದು ಸಮವಾಯಿತ್ತು ಹಯ ಮುರಿ । ದೆದ್ದುವಳಯವ ಕೊಡಹಿದವು ವರವೇದವಾಜಿಗಳು ॥ ಎದ್ದುದೋ ರಥ ಖಳಮನೋರಥ । ವದ್ದುದೋ ಮಝುಪೂತರೆನುತು । ಬ್ಬೆದ್ದುದಮರವ್ರಾತ ಭಾರಿಯ ಭುಜದ ಹೊಯ್ಲಿನಲಿ ॥ ೪ ॥ ಪ್ರಣವನಾದಾಹತಿಗೆ ಗತಿಯಲಿ । ಕುಣಿದವಗ್ಗದಮಂತ್ರಹಯ ಹ । ಲ್ಲಣಿಯಹೇಷಿತರವಕೆ ಕೆದರಿತು ರಾಕ್ಷಸವ್ರಾತ ॥ ಗಣಸಮೂಹದ ಚೂಣಿಯಲಿ ಸುರ । ಗಣಸುರಾರಿಗಳೂರ ಮುತ್ತಿತ್ತು । ಕೆಣಕಿದರು ಕಾಳಗವನಮರರು ಮಾವ ಕೇಳೆಂದ ॥ ೫ ॥ ಭಟರು ವಿದ್ಯುನ್ಮಾಲಿಯರು ಸರ । ಕಟಸಿ ನೂಕಿತು ತಾರಕಾಕ್ಷನ । ಚಟುಳಹಯ ಬಲಹೊಕ್ಕು ಹೊಯ್ದುದು ಓಟ್ಟಸೂಟಿಯಲಿ ॥ ಲಟಕಟಿಸಿ ಸುರಸೈನಿಕದ ಗಜ । ಘಟೆಗಳಾಂಕಿತು ದೈತ್ಯಸುರಗಿ । ಘಟಿತಸಮರವನೇನನೆಂಬೆನು ಮಾವ ಕೇಳೆಂದ ॥ ೬ ॥ ಹೊಯ್ದನಮರರನಸುರರಗ್ಗದ । ಕಯ್ದುಕಾರರು ಮತ್ತೆ ನೂಕಿ

ಯ್ದರಥವೇನಾಯ್ತು ನಾಳವ । ಕೊಯ್ದರೋ ನುಗ್ಗುಗಳನೆಂದೊರಲಿದರು ಸುರವರರು ॥೭॥ ಹೊಗಲಿ ಸಮರಕೆ ಸ್ವಾಮಿದ್ರೋಹರ । ತೆಗೆಯಬೇಡವೊ ಬನ್ನಿ ಲಾಕಿಗೆ । ಜಗದೊಡೆಯನೋ ಘಡಘಡಂಜಬಿರಂಜಬಿರ ಯೆನುತ ॥ ಉಗಿದಖಡುಗದ ತರುಹಿನಂಬಿನ । ಬಿಗಿದಬಲ್ಲಿನ ಸುರಪನಿಬರೊಳ । ಗಗಣಿತಾಮರಭಟರು ಹೊಕ್ಕುದು ದೈತ್ಯಬಲದೊಡನೆ ॥ ೮ ॥ ಮೂಲಸಮ್ಮ ಕೈಹೊಯ್ದು ನಕ್ಕುದು । ಹುಲಿಯೊಡನೆಗಡ ಶಿವಶಿವಾ ವೆ । ಗ್ಗಳೆಯರನು ವಿಗ್ರಹದೊಳಂಜುದೆ ಕಂಡು ಕೈಗುಣವ ॥ ಹುಲುಪರಿಯ ದೇವಾಳಿ ತ್ರಿಪುರದ । ನೆಲನ ಮೆಟ್ಟಿತು ನಾಯಿಗಳ ಮಾಂ। ದಲೆಯ ಕೊಯ್ಕುಡಿಬೆರಳನೆಂದರು ಖಳರು ತಮ್ಮೊಳಗೆ ॥ ೯ ॥ ಕಾದಲೋಹದಬಳೆಯವೊಲು ಕೆಂಪಾದವಸುರರ ಮೋರೆಗಳು ಶಿವ । ಯೂದುಗಿಚ್ಚಿನ ಹೊದರಿನಂದದಲುರಿದು ಭುಗಿಲಿಡುತ ॥ ಸೇದುವರಳಿನ ತಿರುಪಿನಂಬಿನ । ವಾದವೆಸುಗೆಯ ಬಿರುದಿನಗ್ಗದ । ಕೈದುಕಾರರು ಕೆಣಕಿನಮರರರಹೊಟ್ಟೆ ತೂಂಬರು ॥ ೧೦ ॥ ಮುರಿಯಿತಿದು ಕಲ್ಪಾಂತವಹ್ನಿಯ । ಸೆರೆಯಬಿಟ್ಟರೊ ಶಿವಶಿವಾ ಖಳ । ರುರುಬೆಯೋ ಸಾವೇಕ ರಣವೇಕವರಕೂಡೆನುತ ॥ ಒರಲುವಮರರ ಬಾಯ ಕೈಗಳ । ಮೋರೆಯ ತೆಗಸಿ ಮಹಾಗಣಂಗಳೊ । ಳುರುವ ನಂದೀಶ್ವರನು ಹೊಕ್ಕನು ಹೊಯ್ದು ದಾನವರ ॥ ೧೧ ॥ ದಂಡುದಂಡನು ದಾನವರ ಕಡಿ । ಖಂಡಮಯವಾಯ್ತು ನಿರುಧಿರದ। ದೊಂಡೆಗಸನೊಳದ್ದದಗಣಿತಗಜರಥಾಶ್ವಚಯ ॥ ಹಿಂಡೊಡೆದು ಹೇರಾಳರಕ್ಕಸ। ದಿಂಡೆಯರು ದಿಕ್ಕಿನಲಿ ಹಾಯ್ದರು । ಖಂಡಪರಶುವಿನಾಳು ಹೊಯ್ದುದು ಸೂಲಹೆಣ ಮೆರೆಯೆ ॥ ೧೨ ॥ ಅರಿನಲೆಯ ಮುರಿಟಟ್ಟಣಿಸಿ ತಲೆ । ವರಿಗೆಯಲಿ ಹೊಕ್ಕಂಕ ದುರ್ಗದ । ಹಿರಿಯಹುಲಿಮುಖದೊಳಗೆ ಕೂಂದರು ಬೇಹಬೇಹವರ ॥ ಅರಸಕೇಳೈ ದೈತ್ಯರೊಂದ । ಚ್ಚರಿಯ ಮಾಡಿದರಳಿದವರನ । ಚ್ಚರಿಸಿದರು ಮಯಪುರಚಿತಾಮೃತಸಲಿಲಕೂಪದಲಿ ॥ ೧೩ ॥ ಮಯನ ಬಿನ್ನಾಣವನು ದೇವ ।। ತ್ರಯವರಿದುದಿದು ತೀರಲಸುರರ । ಲಯವನುತ ಹರ ಧೇನು ತಾನಚ್ಚುತನು ಕರುವಾಗಿ ॥ ಭಯವಿಹೀನರು ಹೊಕ್ಕರಾಭಾ । ವಯನು ಬತ್ತಿಸಿ ಬಳಿಕ ದೈತ್ಯರ । ಜಯವ ಮುರಿದನು ಮೋಹನದಬೌದ್ಧಾವತಾರದಲಿ ॥ ೧೪ ॥ ಭವನಖ್ಯಾತಿಯ ಬಿಡಿಸಿದರು ಶಾಂ । ಭವನ ಸಿದ್ಧಾಂತವನು ಬೌದ್ಧರ । ವ್ಯವಹರಣೆಗಳನಡಸಿದರ ಕೆಡಹಿದರು ಗುಪಿತದಲಿ ॥ ಯುವತಿಯರು ಪರಪುರುಷಯೋಗ । ಪ್ರವರದೀಕ್ಷಿತರಾಯ್ತುಬೌದ್ಧರ। ವಿಪಥಮಾಯಿಗೆ ಮಾರುವೋದುದು ಮನ ಮಹಾಸುರರ ॥ ೧೫ ॥ ಹರಸರೋಜಾಸನರು ಶೂಲಿಯ । ಹೊರಗೆ ಬಂದರು ದೇವದೈತ್ಯರ। ಪುರದ ಧರ್ಮದಬೇಟೆಯಾಯಿತು ನಯನಪಾವಕನ ॥ ಕರೆದು ಬಸಸುವೊಡಿದು ಸಮಯವೀ । ಸುರರ ಸಾಕುವಚಿತ್ತವುಂಟೇ । ಕರುಣಿ ಬಿಜಯಂಗೈವುದೆಂದರು ಪಾರ್ವತೀಪತಿಗೆ ॥ ೧೬ ॥ ಬಿಲ್ಲತುಡುಕಿದನಭವನಡಬಲ । ದಲ್ಲಿ ಜಯಜಯಧ್ವನಿಭಡಾಳಿಸಿ । ಘಲ್ಲಣಿಸಿ ಯುಗಸಪ್ತಭುವನಶ್ರೇಣಿಬೇಟೆಗಳ ॥ ಭುಲ್ಲವಿಸಿ ಹಯಪದಸಮೂಹವ । ಚೆಲ್ಲಿದವು ಪುರುಕ್ರಮದಪಾಳಿಯ । ಪಲ್ಲವಿಕ ಪರಿವಡಿದುದಮಲಪ್ರಮಾಣಮಯವಾಗಿ ॥ ೧೭ ॥ ಅಡಿಗಡಿಗೆ ಚಮ್ಮಟಿಕೆಯಿಂದಲಿ । ತುಡುಕ ಕುಣಿದವು ವೇದಹಯ ಬಲ । ನೆಡವ ಝೂಂಪಿಸಿ ಮದದ ಮುರುಹಿನ ಮಂತ್ರಕೋಟಿಗಳ ॥ ನುಡಿಯಲಂದಾಕಾಶಸರಸಿಯೊ । ಳಿಡಿದತಾವರೆ ಮುಗುಳ್ದವೋ ಸುರಪಡೆಯೊಳೆತ್ತಿದ ಮುಗಿದಕೈಗಳೊ ಚಿತ್ರವಾಯ್ತೆಂದ ॥ ಪರಮಶ್ರುತಿವೇದಾಂತಮಂತ್ರೋ । ತ್ಕರಧರತ್ರಿಕುಲಾದ್ರಿಶ

ಶಿಭಾಸ್ಕರಸುರೋರಗಜಲಧಿನದನಕ್ಷತ್ರರಾಶಿಗಳು ॥ ಸರಸಿರುಹಭವವಿಷ್ಣುವಿವಿಧಾ । ಧ್ವರಮುನೀಂದ್ರ
ಗೃಹವು ಸಚರಾ । ಚರವುಘೋಯೆಂದೊದರುತಿರ್ದುದು ಶಿವನ ಬಳಸಿನಲಿ ॥ ೧೯ ॥ ಏಸುಲೋಕದೊಳಿದ್ದವಸ
ಮಸ್ತ । ತ್ರಿದಶಸಚರಾಚರರು ತಮ್ಮ । ಗ್ಗದಲಿ ರಚಿಸಿದ ವಿಶ್ವಕರ್ಮನ ಕೃತಪಿಯೋಗದಲಿ ॥ ಇದು
ಬಳಿಕ ನಿರ್ಜರಸಮೂಹಾ । ಭ್ಯುದಯವೈಸಲೆ ಧನುವ ಕೊಂಡನು । ಮದನರಿಪು ತಿರುಹಿದನು ಬಿಳಲ
ಪಾಶುಪತಶರವ ॥ ೨೦ ॥ ಕೃತಕವೋ ಸಹಜವೊ ನಿರಂತರ । ಶ್ರುತಿಗಳರಿಯವು ಸಮ್ಮ ಪಿಡುಕುವ । ಮ
ತಿಯ ಪಾಡೇನಿಮಿಷವಬುಜಭವಾಂಡಮಂಡಲವ ॥ ಸಿತಿಗತಿಯನಗ್ಗಳಿಯನಯನಾ । ಹುತಿಯ ಮಾಡು
ವನಾತ್ರಿಪುರಸಂ । ಗತಿಯ ಸಮಯವ ಹಾರಿದನು ಸುರವರುಷಸಾಸಿರವ ॥ ೨೧ ॥ ಕೂಡಿದವು ಪುರ
ಮೂರು ನಿಮಿಷದೊ । ಳೀಡಿರಿಂದ ಭವ ನಯನವನ್ನಿಯು । ಕೂಡೆ ಹುರಿಗೊಂಡೌಂಕಿ ಹರಿದುದು ಪಾಶು
ಪತಬಾಣ ॥ ರೂಢಿಹೊರಳಿಯಹೊಗೆಯ ಝಳದಲಿ । ನೀಡಿ ನಾಲಗೆ ಪುರದ ಸುತ್ತಲು । ಕೂಡೆ ವೇ
ಡೆಯುವಾಯ್ತು ಹರಹಿನ ಕಡಿಯುಗಡಣದಲಿ ॥ ೨೨ ॥ ಕಟ್ಟಿತುರಿ ದೆಸೆಸಾಲ್ಕರಲಿ ಬ । ನ್ನಟ್ಟ ಹಾ
ಯ್ದುದು ಬಿನುಗುಗಳ ಜಗ । ಜಟ್ಟಿಗಳ ನೊರಸಿತ್ತು ಮರುಗಿಸಿತಸುರನಾರಿಯರ ॥ ಘಟ್ಟರುಬ್ಬುದು
ವೀರರಸುಗಳ । ಬಿಟ್ಟುದಭವದ್ರೋಹಿಗಳು ನೆರೆ । ಕೆಟ್ಟಕೇಡಿಂಗಾರು ಮರುಗುವರರಸಕೇಳೆಂದ ॥ ೨೩ ॥
ಸರಳ ಮೊನೆಯಲಿ ಸಿಡಿದಕಿಡಿಯೊಂ । ದೆರಡರಲಿ ಬೆಂದವು ಪುರತ್ರಯ । ವರಸ ಕೇಳ್ಕೈ ಬಳಿಕ ಬಾಣ
ದ ಬಾಯ್ಧಾರೆಗಳ ॥ ಹರನ ನಯನಜ್ವಾಲೆ ಕಾಣದು । ಪುರವನಾಶೂಲಿಯಲಿ ಘಾತಿಸು । ತುರ ಮು
ರಿದು ಸುಡತೊಡಗಿತಬುಜಭವಾಂಡಮಂಡಲವ ॥ ೨೪ ॥ ಎಲೆಚತುರ್ದಶಜಗವನುರಿಯುಪ್ಪಳಿಸಿತೋ ಬಂ
ದುದು ಸುರೌಘದ । ಗಲವುಕರೆಯಾ ಕಲ್ಪಮೇಘವನುರಿಯಮಾಣಿಸಲು ॥ ಬಲುಕಣೆಗಳಿಲ್ಲ ಜನಾರ್ದನ ।
ನಳಿನಭವರಾವೆಡೆಯನುತ ಕಳ । ವಳಿಸಿದುದು ಮೊರೆಯಿಟ್ಟುದಲ್ಲಿಯದಲ್ಲಿ ಸುರಕಟಕ ॥ ೨೫ ॥ ಪುರ
ತ್ರಯ ದಹನವನು ಕರ್ಮ । ಸ್ಫುರಣವಸ್ಮತ್ಕಾರ್ಯವದು ಗೋ । ಚರಿಸಿತಲ್ಲಿಂಮೇಲಣುಚಿತಾನುಚಿತ
ಕೃತ್ಯವನು ॥ ಕರುಣಿ ನೀನೇ ಬಲ್ಲೆ ಜನಸಂ । ಹರಣಕಾಲವೊಮೇಣುರಕ್ಷಣ । ಕರುಣಕಾಲವೊ ದೇವ
ಯೆಂದುದು ಸಕಲಭುವನಜನ ॥ ೨೬ ॥ ತ್ರಾಹಿ ಮದನಾಂತಕ ಪುರತ್ರಯ । ದಾಹಕರಶಂಕರ ಮಹೇ
ಶ । ತ್ರಾಹಿ ಮೃತ್ಯುಂಜಯ ಪುರತ್ರಯಸರ್ವಲೋಕೇಶ ॥ ದ್ರೋಹಿಗಳು ಧೂಳಾಯ್ತು ಬಳಿಕನೊ ।
ಳೀಹದನು ಬಂದಿದೆ ಜಗತ್ತ್ರಯ । ರೂಹುಗೆಡುತಿದೆ ದೇವಯೆಂದೊರಲಿದುದು ಭುವನಜನ ॥ ೨೭ ॥
ಕರುಣರಸದಲಿ ನನೆದು ನಯನವ । ಕುರಸಲಭಯದಹಸ್ತದಲಿ ಶಂ । ಕರನ ಹೂಂಕರಣೆಯಲಿ ತುಳಿ
ತುರಿ ತಗ್ಗಿತಲ್ಲಲ್ಲಿ ॥ ಶಿರವ ತಡಹುತ ದೇವತತಿ ಪುರ । ಹರನಬೀಳ್ಕೊಂಡುದು ಮಹಾರಥ । ಹರೆದುನಿ
ಜಸಂಸ್ಥಾನಸಂಗತವಾಯ್ತು ನಿಮಿಷದಲಿ ॥ ... ... ॥ ೨೮ ॥

ಅಂತು ಸಂಧಿ ೭ಕ್ಕೆ ಪದ ೨೩೪೩ಕ್ಕಂ ಮಂಗಳಮಸ್ತು.

ಎಂಟನೆಯ ಸಂಧಿ.

॥ ಸೂಚನೆ ॥ ಪೃಥುವಿವರ್ತಿ ಮಹೇಶನನು ಸಾ । ರಥಿಯ ಮಾಡಿದನೊಲವಿನಿಂಗಲಿತ । ರಥಭಯಂಕ ರ ಭಾನುಸುತ ಹೊರವಂಟನಾಹವಕೆ ॥

ಪದ ॥ ಹರನ ಬೀಳ್ಕೊಟ್ಟಖಿಳದಿವಿಜರು । ಹರೆದುದೀಪರಿ ಕಮಲಸಂಭವ । ನಿರದೆ ಸಾರಥಿಯಾಗಿ ಸಾರಿದುದಮರರಭ್ಯುದಯ॥ ಹರಿಯ ಸಾರಥಿತನದಿ ಜಯವಂ। ಕುಂಸಿತವರಿಗೆ ನಿಮ್ಮ ಕೃಪೆಯಲಿ । ಕುರುಬಲಕೆ ಜಯವಾದೊಡೊಳ್ಳಿತು ಮಾವ ಕೇಳೆಂದ ॥೧॥ ಹರನು ಬಿಲುವಿದ್ಯೆಯನು ಕೊಡುತವೆ । ಪರಶುರಾಮಗೆಂದನಥಮರು । ಗೊರೆಯಟರು ಸತ್ಪಾತ್ರಕಿದನಾದರಿಸಿ ಕಲಿಸೆಂದು ॥ ಸುರರಮೆಚ್ಚದರಾಮನೀತನ । ಕರೆದು ಗರುಡಿಯ ಹೊಗಿಸಿದನು ಕಡು । ಗರುವನೀರಾಧೇಯನಧಮನೆ ಮಾವ ಕೇಳೆಂದ ॥ ೨ ॥ ಸೂತಕುಲಸಂಭವನ ಭುವನಖ್ಯಾತಕರ್ಣನ ಸಾಕಿದಾತನು । ಸೂತನಾದೊಡೆ ಮಾವ ಕೇಳನ್ವಯಕೆ ಹಳಿವುಂಟೆ ॥ ಸ್ವಾತಿಯುದಕದಲಾದಮುಕ್ತಾ । ವ್ರಾತಕಾವನುಚಿತ್ಯನಿಮಗಿ । ನ್ನೇತಕೀ ಸಂದೇಹ ಸಾರಥಿಯಾಗಿ ಸಾಕೆಂದ ॥ ೩ ॥ ಈದುರಾಗ್ರಹನಿನ್ನ ಚಿತ್ತದೊ । ಳಾದುದೇ ತಪ್ಪೇನು ಕೋಗಿಲೆ । ಯಾದರಿಸಿದೊಡೆ ಬೇವುಮಾವಹುದಾದೊಡೆಮಗೇನು ॥ ಕಾದಿ ಗೆಲುವರೆ ಭಾರಿಗುರುಭೀಷ್ಮಾದಿಭಟರೇನಾದರೈ ತಾ । ನಾದುದಾಗಲಿ ನಾವು ಸಾರಥಿಯಾದೆವೇಳೆಂದ ॥ ೪ ॥ ನಿಮ್ಮ ವಿಜಯಶ್ರೀಯ ಕಡೆಗ । ಣ್ಣೊಮ್ಮೆ ನಿಮ್ಮಲಿ ಮುಂದುವರಿದೊಡೆ । ನಮ್ಮ ಕೊರತೆಯಿದೇಕೆ ಕರಸೈ ಸೂತನಂದನನ ॥ ಎಮ್ಮ ಹೇಳಿಕೆಯಾವುದದನೀ । ತಮ್ಮ ಮೀರದೆ ನಡೆದನಾದೊಡೆ। ನಮ್ಮವಾಸಿಯ ಬೀಳುಕೊಡುವೆವು ರಾಯ ಕೇಳೆಂದ ॥ ೫ ॥ ಹೊತ್ತುದುಗುಡವ ಬಿಟ್ಟುಕೈವಿಡಿ । ದೆತ್ತಿಕರ್ಣನ ಕೊಟ್ಟ ಮೈಗಳೊ । ಳೆತ್ತುಗುಡಿಗಳರೋಮಪುಳಕದ ಮಾನಹರುಷದಲಿ ॥ ಬತ್ತಿತಂತಸ್ತಾಪಜಲನಿಧಿ । ಚಿತ್ತದಲಿ ಸಂದೇಹತರುವಿನ । ಬಿತ್ತು ಕರಿಮೊಳೆಯಾಯ್ತು ನಿನ್ನ ಮಗಂಗೆ ಹರುಷದಲಿ ॥ ೬ ॥ ಬೀಳುಕೊಂಡನು ಶಲ್ಯನನು ಭೂ । ಪಾಲನಿತ್ತಲು ಕರ್ಣನಾಯುಧ । ಶಾಲೆಯಲಿ ಶುಚಿಯಾಗಿ ಶಸ್ತ್ರಾಸ್ತ್ರವನು ಪೂಜಿಸಿದ ॥ ಸಾಲದೀವಿಗೆಗಳನು ಶಸ್ತ್ರೀ । ಜಾಲಮಿಕ್ಕವು ತೀಕ್ಷ್ಣಧಾರಾ । ಭೀಳವಿಕ್ರಮವಿಸ್ಫುಲಿಂಗಿತವಾದವಡಿಗಡಿಗೆ ॥ ೭ ॥ ಕುರಿಯಹಣಿದದ ಕೋಳಿಕೋಣನ । ಮುರಿದಲೆಯ ಮಿಸಲಿನರಕುತದ । ಮುರದುರಿಪದೊಂಡೆಯಲಿ ಕಲಸಿದ ಕೂಳಮುದ್ದೆಗಳ ॥ ಹೊರಗೆಬಡಿಸಿದಭೂತಬಲಿಬೊ । ಬ್ಬಿರಿದರೊಡನುಬ್ಬೇಳ್ವಲಗ್ಗಯ । ಹರೆಗಳಬ್ಬರವಾಯ್ತು ಕರ್ಣನ ಶಸ್ತ್ರಪೂಜೆಯಲಿ ॥ ೮ ॥ ವಿರಚಿಸಿತು ಶಸ್ತ್ರಾಸ್ತ್ರಮಾಲಾ । ಪರಿಕಲಿತರವಿಸೂನುದರ್ಭಾಗ್ರ। ಕುರದ ಶಯನಸ್ಥಾನದಲಿ ಮಾಡಿದನು ಜಾಗರವ ॥ ಕುರುನೃಪಾಲನ ಪಾಳೆಯದಲಾ । ಯ್ತುರುಳು ಮನೆಮನೆಗಳಲಿ ಶಸ್ತ್ರೀ । ತ್ಕರಸಮಾರಾಧನೆಯಲೆಸೆದಿರ್ದುದು ಮಹಾಕಟಕ ॥ ೯ ॥ ಸವೆದುದಿರುಳರುಣೋದಯದಲು । ತ್ಸವದಲದ್ಭುತರಭಸವಾದುದು । ವಿವಿಧಬಲುಭಾರಣೆಯ ಭುಲ್ಲವಣೆಯಚಡಾಳದಲಿ॥ ತವಕಿಸುತ ಬಿಗಿ ವಾರುವನುತಾ । ಸವಗವನು ಭಲ್ಲೆಯವ ತೊಡಿಸಲಿ । ಕವಚಗಳನೆಂಬಬ್ಬರಣೆ ರಂಜಿಸಿತು ರಾವ್ತರಲಿ ॥ ೧೦ ॥ ಬಿಡು ಗಜವೆ ಬಿಗಿರಂಚೆಗಳ ತಾ । ತಡಿಯಹಾಯಿಕು ಗುಳವ ತೆಗೆಮೊಗ । ವಡವ ಕೊಡುವಟ್ಟೆಯವರ ಕೈಲಿ

ಬೀಸು ಚೌರಿಗಳ || ತಡವಿದೇನೋ ಸಾಯಿಸಿಡಿಫಡ | ನಡೆಯೆನುತ ತಮ್ಮೊಬ್ಬರೊಬ್ಬರ | ಜಡಿಯಲ
ಬ್ಬರವಾದುದಾರೋಹಕರ ಕೇರಿಯಲಿ || ೧೧ || ಕೀಲಿತೆಗೆಯುಚ್ಚಗಳ ಜಡಿ ಬಲು | ಗಾಲಿಗಳ ಜೋಡಿ
ಸು ಪತಾಕಾ | ಜಾಲವನು ನಿಲಿಸಿರಲಿತೆಗೆ ಬಲುಮಿಳಿಯ ಬಿಗಿಯೆನುತ || ಮೇಲುಮೇಲುಬ್ಬರದಘೋ
ಳಾ | ಘೋಳಿ ಘಲ್ಲಿಸೆ ದೆಸೆದೆಸೆಯ ರಥ | ಜಾಲ ನೂಕಿತು ನೆರೆದುದತಿರಥರುಗಳ ಕೇರಿಯಲಿ ||೧೨||
ನೀಡುಬಿಲುಬತ್ತಳಿಕೆಯನು ನಡೆ | ಜೋಡ ತೆಗೆ ತಾ ಸಬಳವನು ರಣ | ಹೇಡಿಯೇ ಫಡಗಾಯವನು
ಬಿಗಿ ಮದ್ದ ತೊಡೆಯೆನುತ || ಕೂಡೆ ತವಮತವಮಗಾಹವದ ಖಯ | ಖೋಡಿಯಿಲ್ಲದಸುಭಟರಬ್ಬರ |
ಜೋಡುಕವಿದುದು ಕವನದಲಿ ಕಾವಾಳ ಕೇರಿಯಲಿ || ೧೩ || ಬಿರುದುದಬುಜಭವಾಂಡವೆನೆ ಭೋಂ | ಕ
ರಿಸಿದವು ನಿಸ್ಸಾಳತತಿ ನಿ | ಬ್ಬರದಬಿರುದನು ಬೀರುತಿರ್ದವು ಬಿರುಬುಗಹಳೆಗಳು || ಎರಲು ಸುಳಿದುದು
ದೀಪಶಿಖೆ ಪರಿ | ಹರಿಸಿದವು ಬಲದತಿರಥರ ನಿ | ಷ್ಠುರಕೆಯಂಜದೆ ಮಾಣದೆನೆ ನೆರೆ ಹಿಂಗಿತಾರಜ
ನಿ || ೧೪ || ಸರಸಿರುಹವರಳಿದವು ನೈದಿಲೆ | ಹರುಷ ಹಿಂಗಿತು ಚಕ್ರವಾಕದ | ನೆರವು ನಿಂದವು ಚಂದ್ರ
ಕಾಂತದ ಹೊನಲು ಪೈಸರಿಸೆ || ಕಿರಣತತಿತಲೆದೋರೆ ಮೂಡಣ | ಗಿರಿಯತಿಖರದ ಯಾಮಿನೀಕವೆ |
ತರಣಿ ಬೆನ್ನಟ್ಟುವೊಲು ಹೊಳಸಿದ ರತುನಮಯರಥವ || ೧೫ || ಉಲಿವಮಂಗಳಪಾಠಕರ ಕಳ | ಕ
ಳಿಕೆಮೆರೆದುದು ಹೊಳೆವಹೊಂಬ | ಟ್ಟಲಲಿ ಸೂಸಿದನರ್ಘ್ಯಜಲವನು ಜನಕನಿದಿರಿನಲಿ || ಲಲಿತಮಂ
ತ್ರಾಕ್ಷತೆಗಳನು ಕರ | ತಳದೊಳಾಂತುಮಹೀಸುರರಿಗ | ಗ್ಗಳೆಯನಿತ್ತನು ಧೇನುಮಣಿಕನಕಾದಿವಸ್ತು
ಗಳ || ೧೬ || ವರನಿಖಾರಿಯಬಿಳಿದಿನಲಿ ಬಲ | ಮುರಿಯ ಬಲಿದನು ಪದಮುಖಕೆ ಮುಂ | ಜೆರಗ
ಬಿಟ್ಟನು ಬಿಗಿದಬದ್ದುಗಥಾರಗೊಂಡೆಯವ || ಕರಣಲಹರಿಯ ವಜ್ರಮಾಣಿಕ | ಪರಿರಚಿತಭುಜಕಂತ
ಕರ್ಣಾ| ಭರಣಚರಣದ ಕಡೆಯದಲಿ ರಂಜಿಸಿದನಾಕರ್ಣ || ೧೭ || ದಿನಗಣನೆ ಹದಿನೆಂಟುಕೋಟಿಯ
ಕನಕವಂದಿನಟನಸ ಚೆಲ್ಲಿದ | ನನುಪಮಿತಧನಭಾರವನು ಭಂಡಾರವನು ತೆಗಸಿ || ತನತನಗೆ ಯಾ
ಚಕರು ಹೊತ್ತುದ| ನೆನಗೆಬಣ್ಣಿಸಲರಿದು ಕೇಳೈ | ಜನಪಕರ್ಣನು ಯೇನನಿಶ್ಚೈಸಿದನೊ ಮನದೊಳ
ಗೆ || ೧೮ || ಹೊಳೆಹೊಳೆದ ವಾಭರಣ ತಾರಾ | ವಳಿಗಳಂತಿರ ಪೂರ್ಣಶಶಿಮಂ | ಡಲದವೊಲು
ತನುಕಾಂತಿ ಮುಸುಕಿತು ಸಕಲದಿಗುತಟವ || ತಳಿತಪಿಕ್ರಮಸುಪ್ರತಾಪೋ | ಜ್ವಲಿತ ಸೂರ್ಯಪ್ರಭೆ ಜಗ
ತ್ರಯದೊಳಗೆ ಝಳಪಿಸೆ ಕರ್ಣನೆದ್ದನು ದಿವ್ಯತೇಜದಲಿ || ೧೯ || ದೇವಗುರುವಿಪ್ರರಿಗೆ ಬಹುಸಂ|
ಭಾವನೆಯ ಮಾಡಿದನು ಶಸ್ತ್ರಾ | ಸ್ತ್ರಾವಳಿಯ ತರಿಸಿದನು ತುಂಬಿಸಿದನು ವರೂಥದಲಿ || ರಾವುತ
ರಿಗಾರೋಹಕರಿಗೆ ಭ | ಟಾವಳಿಗೆ ರಥಿಕರಿಗೆ ಚೆಲ್ಲಿದ|ನಾವಿಧದಸೌಗಂಧಭಾವಿತಯಕ್ಷಕರ್ದಮವ||೨೦||
ನಡೆದು ಬರದನು ರಥಕೆ ದೆಸೆಕಂ| ಪಿಡುತ ನಡವ ಮಹಾಪ್ರಧಾನರ | ನಡುವೆ ಚಿಮ್ಮುವಚಾಮರಂಗಳ
ಸುಳಿಯ ಸಂದಣಿಯ || ಒಡನೆ ನೆಲನನಳ್ಳಿರವಾದ್ಯದ | ಗಡಣರಭಸದ ಪಾಠಕರ ಗಡ | ಬಡಕಗಳ
ರವ ಬಿಗಿದುದಬುಜಭವಾಂಡಮಂಡಲವ || ೨೧ || ಅತಿರಭಸವಿಂದಾಯ್ತು ಸೇನಾ | ಪತಿಯ ಪಯ
ಣವಲಾಯೆನುತ ಗುರು | ಸುತಶಕುನಿಕೃತವರ್ಮಕೃಪದುಶ್ಶಾಸನಾದಿಗಳು || ವಿತತಸನ್ನಾಹದಲಿ ಕು
ರುಭೂ | ಪತಿಸಹಿತ ಹೊರವಂಟು ಭಾಸ್ಕರ | ಸುತನ ಸನ್ನಿಯಮೇಲೆ ನಡೆದುದು ಮುಂದೆ ಸಂದಣಿ
ಸಿ || ೨೨ || ಬಳಿಯ ನೆಲನುಗ್ಗಡಣೆಗಳ ವೆ | ಗ್ಗಳೆಯಸುಭಟರ ಮೇಳವಲಿ ಬಂ | ದಳಿದು ದಂಡಿ

ಗೆಯಿಂದ ನಸುನಗುತೇರಿದನು ರಥವ ॥ ಚಳಕದಲಿ ಹರಿಹಯ ಹಯಂಗಳ । ನಳವಡಿಸಿ ಬಲನೆಡಕೆ ತೇಜಿಯ । ಸುಳಿಸಿ ಸಾರಥಿತನವ ತೋರಿದನಂದು ಮಾದ್ರೇಶ ॥ ೨೩ ॥ ಬಳಿಯಪಾಂಸುವಧಾರುಗಳಕ ಳ । ಕಳದೊಳಗೆ ರಥವೇರಿದನು ನೆಲ । ಹಿಳಿಯೆ ಹೇರಾಳಿಸಿತು ಬಹುವಿಧವಾದ್ಯನಿರ್ಘೋಷ ॥ ತಳಿತ ವಮಲಚ್ಛತ್ರಚಮರಾ । ವಳಿಯಝಲ್ಲಿಯ ಚೌರಿಗಳನವ । ಪಳಹರಧ್ವಜದಂಡವೆತ್ತಿತು ವರರಥಾಗ್ರ ದಲಿ ॥ ೨೪ ॥ ಇಕ್ಕೆಲದ ರಾವುತರ ತೇರಿನ । ತೆಕ್ಕೆಗಳ ಗಜಘಟೆಯ ಕಾಲಾ । ಳಕ್ಕಜದ ನಿಸ್ಸಾಳದೊ ಳಗಿನ ಲಗ್ಗತಂಬಟದ ॥ ಉಕ್ಕಿ ಚಲಿಸಿದುದಬ್ಧಿಯೆನೆ ಸಾ । ಲಿಕ್ಕಿನಡೆದುದು ಸೇನೆ ರಾಯನ । ನುಕ್ಕಿ ನವಸರದಾನೆ ನಿಜಪಾಳೆಯವ ಬೀಳ್ಕೊಟ್ಟ ॥ ೨೫ ॥ ರಾಯ ಕೇಳ್ಳೆ ಬಳಿಕ ಕಲಿರಾ । ಧೇಯಬರುತಿರೆ ತೋರಿತುತ್ಪಾ । ತಾಯತವನೇನೆಂಬೆನೈ ಶಿವಶಿವ ಮಹಾದೇವ ॥ ವಾಯಸದಬಲ ಭೂಮಿಕಂಪ ನಿ । ಜಾಯುಧಂಗಳ ಕಡಿಗಳಧ್ವನಿ । ಕಾಯದಲಿ ನೆರೆಸುರಿವಕಂಬನಿ ಕಾಣಲಾಯ್ತೆಂದ ॥ ೨೬ ॥ ಒದರಿದ ವು ನರಿ ಮುಂದೆ ಕರ್ಣನ । ಕುದುರೆಗಳು ಮುಗ್ಗಿದವು ಪರಿವೇ । ಷದಲಿ ಸಪ್ತಗ್ರಹದ ವಕ್ರತೆ ಸೂರ್ಯ ನಿದಿರಿನಲಿ ॥ ಕದುಬಿತತಿಬಿರುಗಾಳಿ ಧೂಳಿಯ । ಕೆದರಿ ಬೀಸಿತ್ತಖಿಳಬಲಮು । ಚ್ಚಿದುದು ಕಂಗಳನವನಿ ಪತಿ ಕಂಡನು ಮಹಾದ್ಭುತವ ॥ ೨೭ ॥ ತೃಣಕೆ ಕೊಂಬನೆ ಕರ್ಣನಿದನಾ । ರೆಣಿಸುವರು ದುಷ್ಕರ್ಮ ಪಾಶಾ । ರುಣನಿಬದ್ಧರು ಕಂಡು ಮಾಡುವದೇನು ಕೌರವರು ॥ ರಣಮನೋರಾಗದಲಿ ದಳ ಸಂ । ದ ಣಿಯ ನಿಲಿಸಿದನತಿರಥರಲಾ । ವಣಿಗೆಕೊಂಡನು ಕರ್ಣಪರಿವಾರಕ್ಕೆ ಕೈಮುಗಿದು ॥ ೨೮ ॥ ನೊಂದವ ರು ನಿಲಿ ಸ್ವಾಮಿಕಾರ್ಯಕೆ । ಹಿಂದುಗಳೆವರು ಮರಳಿ ಮನೆಗಳ । ಮುಂದಣಾಶೆಯಹೇವಮಾರಿಗಳಿಗಿ ದೆ ಮಾಸೌಮಿ ॥ ನಿಂದೊಡೊಳ್ಳಿತು ನೃಪನದೆಸೆಯಲಿ । ಕಂದುಕಳೆಯಳ್ಕಿವರು ಕಾಳಗ । ವಿಂದುಬೀ ಳ್ಕೊಂಬುವದು ನಿಮಗೆಯು ಭೀತಿ ಬೇಡೆಂದ ॥ ೨೯ ॥ ಓಡಿ ನಾಚಿಸುವವರು ನಿಲಿ ರಣ । ಖೇಡರೀ ಗಳೆ ಹೋಗಿ ಮನವ। ಲ್ಲಾಡಿ ಮರುಗುವರೇಳಿ ಮರಣದಲಾವಫಲಸಿದ್ಧಿ ॥ ಕೂಡಗಲಿಗರು ನಿಲ್ಲಿ ಯಿ ಹಪರ । ಗೇಡಿಗಳು ಹೆರಸಾರಿ ಗುಣದಲಿ । ಬೇಡಿಕೊಂಡೆನು ಖಾತಿಗೊಳ್ಳೆನು ಮರಳಿ ಸಾಕೆಂದ ॥೩೦॥ ಸಂದಸುಭಟರು ಬನ್ನಿ ಸಗ್ಗದ । ಬಂದಿಕಾರರು ಬನ್ನಿಮನದಿಂ । ಮುಂದುಹೆಜ್ಜೆಯ ತವಕಿಗರು ಬ ಹುದೆಮ್ಮಸಂಗಾತ ॥ ನೊಂದೊಡುಬ್ಬುವರಿತ್ತ ಬನ್ನಿ ಪು । ರಂದರನಸ ಮಗದ್ದುಗೆಯಮನ । ಸಂದ ವರು ಹೊಗಿ ರಣವನೆಂದನು ಕರ್ಣ ಕೈಮುಗಿದು ॥೩೧॥ವೀರಭಟರಾಹವವ ಹೊಗಿ ಜ। ಜ್ಝಾರರಿತ್ತಲು ಮರಳಿ ಕದನಕು । ತಾರರೂಪರು ಮುಂದೆ ನಡಯಿ ಮಹಾರಥಾದಿಗಳು ॥ ಸಾರಿ ಬಲ್ಲರೆಸಮರಯ ಜ್ಝಾದ। ಸಾರವನು ಪಾಪಿಗಳುಯಕಟ ಶರೀರವನು ಕೊಡಿ ಪಡೆಯಿ ಮುಕ್ತಿಯನೆಂದನಾಕರ್ಣ॥೩೨॥ ರಾಯ ಕೇಳ್ಳೆ ಕರ್ಪುರದ ತವ। ಲಾಯಿಗಳನೊಡೆದೊಡೆದು ಭಟರಿಗೆ । ಹಾಯಿಕುತ್ತಂಜುಳಿಗಳಲಿ ಮೊ ಗೆಮೊಗೆದು ಬೇಸರದೆ ॥ ಸಾಯದಿಹರೇ ರಣದೊಳಗೆ ರಾ। ಧೇಯನಿಂ ಮನ್ನಣೆಗೆ ಬದುಕುವ। ನಾಯಿ ಗಿಹಪರವುಂಟೆಯೆಂದುದು ಕೂಡೆ ಕುರುಸೇನೆ ॥ ೩೩ ॥ ಕೇಳಿರೈ ಪರಿವಾರ ಯಿಂದಿನ । ಕಾಳಗವಲೇನ ಮಗೆ ಭೀಷ್ಮನ । ಕೋಲಗುರುವಿನ ಹರಿಬವನು ಮನವಾರೆ ಹೊತ್ತೆನಲಾ ॥ ಸೋಲವೋ ಕುರುಪತಿ ಯ ಭಾಗ್ಯದ। ಕಾಲವೋ ಹರಿಬಲ್ಲನೆನ್ನಯ।ತೋಳಬಲುಹನು ಹಗೆಗೆ ತೋರುವೆನೆಂದನಾಕರ್ಣ॥೩೪॥ ಆವತೋರಿಸಲಾವನರ್ಜುನ। ದೇವನನು ರಿಪುಬಲದೊಳಾತಂ । ಗೀವೆನೀಪದಕವನು ಕಡೆಯುವ ವಜ್ರವಾ

ಣಿಕದ ॥ ಆವನಾಫಲುಗುಣನ ತೇರಿನ । ಠಾವದೇಯೆಂದವಗೆ ಯಿದೆವು । ಕ್ರಾವಳಿಯ ಲಂಕಾರವೆಂದನು ಕರ್ಣ ನಿಜಬಲಕೆ ॥ ೩೫ ॥ ನರನ ನೆಲೆಗಾಣಿಸಿದವಗೆ ಸಾ । ವಿರದಸಟ,ಣವರ್ಜುನನ ಮೋ । ಹರವದೇಯೆಂದವಗೆ ಕೊಡುವೆನು ಹತ್ತುಸಾವಿರವ ॥ ನರನ ಕೆರಳಿಚಿ ತಂದು [illegible] ಗೆ ಗಜನೂರು ಹಯಸಾ । ವಿರದ ವಳಿತವ ಬರಸಿ ಕೊಡುವೆನು ರಾಯನಾಣೆಂದ ॥ ೩೬ ॥ ತೋರಿರ್ಯೆ ಫಲುಗುಣನನಿದಿರಲಿ । ತೋರಿರ್ಯೆ ಸಿತಹಯನನಕಟಾ । ತೋರಿರ್ಯೆ ವಿಜಯನನು ನಿಮಗಿದು ಸ್ವಾಮಿಕಾರ್ಯವಲಾ॥ ತೋರಿ ಪಾರ್ಥನ ನರನ ರಕುತದ। ಸೂರೆ ಶಾಕಿನಿಯರಿಗೆ ನಿಮಗುರೆ । ಸೂರೆಯೊ ಭಂಡಾರವೆಂದನು ಕರ್ಣನಿಜಬಲಕೆ ॥ ೩೭ ॥ ನರನ ಶರಹತಿಗೆನ್ನತನು ಜ । ಜ್ಜರಿತವಾಗಲಿ ಯೆನ್ನ ಕಣೆಯಲಿ । ಬಿರಿಯಲಾತನ ದೇಹ ಖಾಡಾಖಾಡಿಯುದ್ಧದಲಿ ॥ ಕರುಳು ಕರುಳಲಿ ತೊಡಕಿ ನೊರೆನೆತ್ತರಲಿ ನೆತ್ತರುಗೂಡಿ ಕಡಿಕಡಿ । ವೆರಸಿ ಮಿಗೆ ಪಲ್ಲಟಿಸಿ ಕಾದುವೆನಿಂದು ಹಗೆಯೊಡನೆ ॥ ೩೮ ॥ ಸರುಳುಸರಳಿಂಗೊಮ್ಮೆ ರೋಮಾಂ । ಕುರದ ಗುಡಿಯಲಿ ರಕ್ತಜಲದಲಿ । ಕರುಳ ಹೂಮಾಲೆಯಲಿ ವೀರರಣಾಭಿಷೇಕವನು ॥ ಧರಿಸಿದರೆ ಪ್ರತಿಗಾಯಗಾಯದೆ।ಧರಧುರಕೆ ಮೈಹೆಚ್ಚಿ ಮನದು। ಬ್ಬರದಲಿರಿದಾಡಿದೊಡೆಭಟ ಕೃತಕೃತ್ಯತಾನೆಂದ ॥ ೩೯ ॥ ಅವನ ಮುಂದಲೆ ತನ್ನಕೈಯಲಿ । ಅವನಕೈಯಲಿ ತನ್ನ ಮುಂದಲೆ । ಅವನ ಗಾಯವ ತನ್ನ ದೇಹದ ಗಾಯ ಚುಂಬಿಸುತ ॥ ಅವನ ಖಡುಗಕೆ ತನ್ನ ಮೈ ತಾ । ತಿವಿದಖಡುಗಕೆ ತನ್ನ ಮೈ ಲವ । ಲವಿಸಲಡಿ ಮೇಲಾಗಿ ಹೊರಳ್ದೊಡೆ ಧನ್ಯ ತಾನೆಂದ ॥ ೪೦ ॥ ಕಯ್ದುಣಿಯೆಹೊಯ್ದುಣಿಯೆಸೀಳಿದು । ಬಾಯ್ದುಣಿಯೆ ಮೂದಲಿಸಿ ಹೆಚ್ಚಿದ । ಮೈಯ್ದುಣಿಯೆ ರಿಪುಭಟನ ಹೊಯ್ಲಲಿ ಗಾಯವನುಪಡೆದು ॥ ಹಾಯ್ದುಕರುಳಿನ ಮಿದುಳ ಜೋರಿನ । ತೊಯ್ದುರಕ್ತಾಂಬರದಲಾನಿರ । ಯ್ದು ಕುರುಪತಿ ಬಂದುಕಂಡೊಡೆ ಧನ್ಯ ತಾನೆಂದ ॥ ೪೧ ॥ ನರನ ರಕುತದ ಮದ್ಯಪಾನವ । ನೆರೆದು ಶಾಕಿನಿಯರಿಗೆ ಪಾರ್ಥನ । ಕರುಳದಂಡೆಯ ಕೊಳಮುದ್ದೆಯ ಬಡಿಸಿ ದೈತ್ಯರಿಗೆ ॥ ಅರಿಯ ಖಂಡವ ಹರಿಯಸುಂಟಿಗೆ । ವೆರಸಿ ಭೂತಾವಳಿಯ ತಣಿಸಿದೊ । ಡರಸುಕೌರವರಾಯ ಸಾಕಿದುದಕ್ಕೆ ಫಲವೆಂದ ॥ ... ... ॥೪೨॥

ಅಂತು ಸಂಧಿ ೮ಕ್ಕೆ ಪದ ೨೭೭ಕ್ಕಂ ಮಂಗಳಮಸ್ತು.

ಒಂಭತ್ತನೆಯ ಸಂಧಿ.

॥ ಸೂಚನೆ ॥ ಸೇಣಸುಮಿಗಿಲೊಳಗೊಳಗೆ ಖತಿಯಲಿ । ಕೇಣಕಿಚ್ಚೈದಾಡಿದರು ಸಮರಾಂ । ಗಣಭಯಂಕರಶಲ್ಯಭಾಸ್ಕರಸುತರು ತಮ್ಮೊಳಗೆ ॥

ಪದ ॥ ಕೇಳು ಧೃತರಾಷ್ಟ್ರಾವನಿಪ ನಿ । ನ್ನಾಳಹಂಕೃತಿ ನುಡಿಯನಾಲಿಸಿ । ಕೇಳಿದನು ಕಲಿಶಲ್ಯ ಕುದಿದನು ಕೋಪತಾಪದಲಿ ॥ ಹೇಳುಹೇಳಿನ್ನೊಮ್ಮೆಪಾರ್ಥನ । ಹೇಳಿ ತೋರಿಸಲೇನ ಕೊಡುವೆನ್ನ । ಪಾಲಕನ ಪದಪಾಣೆ ನುಡಿನುಡಿ ಕರ್ಣನುಡಿಯೆಂದ ॥ ಊರುಗಳ ಕೊಡಬೇಡ ಗಜಹಯ । ನಾರಿಯರ ಕೊಡಬೇಡ ಪಾರ್ಥನ । ತೋರಿಕೊಡುವೆನು ನನಗೆ ಹೇಳದೆ ಬರಿದೆ ಹಲುಗಿರಿದ್ಯೆ ॥

ಸ್ಫುರಿಸೀಗಳೆ ನಿನ್ನ ಕರುಳಿನ।ತೋರಣವ ಬಾಗಿಲಲಿ ವಿಜಯ।ಶ್ರೀರಮಣಿತಹನೀಕಿರೀಟಿಯು ತೋರಿಸುವೆ ನೆಂದ॥೨॥ ಮೊಲನಕಾಹಿನ ಕಾಡಿನಲಿ ಹೆಬ್ಬುಲಿ ವಿಭಾಡಿಸುವಂತೆ ನರಿಗಳು।ಬಲಿದಬೇಲಿಯು ಕದಳಿಯಲಿ ಕಾಡಾನೆ ಹೊಗುವಂತೆ ॥ ದಳವ ಬಗಿದು ಮಹಾರಥರನೊಡೆ । ದುಳಿದು ನಿನ್ನಯ ನಾಲಗೆಯ ಹಿಡೆ । ದಲೆಯಲುಗಿವರ್ಜನನನೀಗಳೆ ತೋರಿಸುವೆನೆಂದ ॥೩॥ ಹೊರಗೆ ಕೊಡುವವನಿತ್ತ ತಾನಾ । ನರಸಿ ತಹೆ ನರ್ಜನನನೇತಕೆ । ಬರಿದೆ ಭಟರಿಗೆ ಬಾಯ ಬಿಡುತಿಹೆ ಸಾರು ಖೂಳನಲಾ ॥ ಅರಸಲೇತಕೆ ಕಾಲಮೃತ್ಯುವ । ನರಸುವರೆ ಕಾಳಾಹಿಯನು ಧಿಟ। ವರಸಲೇತಕೆ ಯರ್ಜನನನಿದೆ ತೋರಿಸುವೆನೆಂದ ॥ ೪ ॥ ಆವನೊಬ್ಬನ ಬಿಲ್ಲಬೊಬ್ಬೆಯ । ತಾವರೆದಿನೆದೆ ಬಿರಿವುದಹಿತರ। ದಾವನೊಬ್ಬನದನಿಗೆ ಜರಿವುದು ಧೈರ್ಯ ಗಿರಿಶಿಖರ ॥ ಆವನೊಬ್ಬನ ಕಂಡುದರಗಳ । ಚೀವ ತಲೆಕೆಳಗಹುದು ಸುಭಟರ । ದೇವಸಾತನೆ ಪಾರ್ಥ ನೀಗಲೆ ತೋರಿಸುವೆನೆಂದ ॥೫॥ ಹಸಿದನಿದ್ರೆಯ ಹಾವ ಬಡಿದೆ । ಬ್ಬಿಸುವುದೇಕ್ಕೆ ಮುರಿದಮಾರಿಯ ಮುಸುಕುದೆಗೆವುದು ಬುದ್ಧಿಯೇ ಜೀವಾಭಿಲಾಷರಿಗೆ ॥ ನುಸಿಗಳುರಿಜಾಲಗಳೊಡನೆ ಲಂ । ಘಿಸುವುದೇಕ್ಕೆ ಕರ್ಣ ಪಾರ್ಥನ । ಗಸಣಿಯೇಕ್ಕೆ ನಿನಗೆ ಸ್ಫುರಿಸು ತೋರಿಸುವೆನೆಂದ ॥೬॥ ಗರುಡನೆತ್ತಲು ಕೊಬ್ಬಿದೊಳ್ಳೆಯ । ಮೃಗಗಳೆತ್ತಲು ಸಿಂಹವೆತ್ತಲು । ನರಿಗಳೆತ್ತಲು ಹುಲಿಯಸರಸಕೆ ನಾಯಮರಿ ಯೆತ್ತ ॥ ನರಪಶುವೆ ನಿನ್ನೆಂದುಡಿಯಿಯೇ ಜಗ । ವರಿಯದೇ ನಿನ್ನಾತನಬ್ಬಂ । ತರವನರಿಯಾ ಕರ್ಣ ಸುಡು ನೀ ಕಷ್ಟ ಹೋಗೆಂದ ॥೭॥ ಬಿಟಕೆ ಪಾರ್ಥನ ತೋರಿದೊಡೆ ಸಂ । ಕಟವ ಮಾಡದೆ ಮೋಹಲಕಟಾ । ಕಟ ಧನಂಜಯನೆಂದು ಸೋತನು ಹಿಂದೆ ನಿನ್ನೊಡನೆ ॥ ಕುಟಿಲಮತಿ ಗೋಗ್ರಹಣದಲಿ ಲಟ । ಪಟಿಸಿದೆಯಲಾ ಮಹಾಪಿಯೊಳಗು । ಬ್ಬಟದ ಬಿಲ್ಲಿನೊಳೊದೆಸಿಕೊಂಡವ ಪಾರ್ಥನೇ ಯೆಂದ ॥೮॥ ನರನ ತೋರಿದವಂಗೆ ಸತತಸಾ । ವಿರದಪಟ್ಟಣವೀವೆಲಾನಿ । ಸ್ಫುರಸನನು ಗಂಧರ್ವರೆಳದೊಯ್ಯಂದು ಗಗನದಲಿ ॥ ಅರಸಿಯರು ಸಚಿವರು ಕುಮಾರರು । ಮೊರೆಯಿಡಲ್ಕಾಖೇಚರನ ಹೊ । ಯ್ದರಸನನು ಬಿಡಿಸಿದವ ನೀನೋ ಪಾರ್ಥನೋ ಯೆಂದ ॥೯॥ ಕಂಡು ಮಾಡುವುದೇನು ಭೀಷ್ಮರು । ಕಂಡುದಿಲ್ಲಾ ಚಾಪವಿದ್ಯಾ। ಖಂಡಪರಶುದ್ರೋಣನರ್ಜನನನು ರಣಾಗ್ರದಲಿ ॥ ಕಂಡು ನೀನೇಗುವೆ ಸುಯೋಧನ । ಭಂಡನೋ ಸಾರಥಿತನದ ನಾ । ಭಂಡನೋ ನೀ ಭಂಡನೋ ತಾನರಿಯೆನಿದನೆಂದ ॥೧೦॥ ಕಡುಪರಾಕ್ರಮವಿದನು ನೆತ್ತಿಯ।ಪಿಡಿದು ನೀ ಗಳಹಿದೊಡೆ ನಿನ್ನಯ। ಹಡಪದವರೀಛತ್ರದವರೀಚಮರಧಾರಿಗಳು॥ ಒಡೆಯ ನೀನೆಂದಂಜಿ ನಿರುತವ । ನುಡಿಯಲಮ್ಮರು ತಮ್ಮ ಮನದೊಳ । ಗೊಡಬಡುವರೇ ಸದನ ಬಾಹಿರಕರ್ಣ ಹೋಗೆಂದ ॥೧೧॥ ಕೇಳುತಿರ್ದನು ಕರ್ಣನೀತನ । ಬೀಳುವಚನವನಧಿಕರೋಷ । ಜ್ವಾಲೆ ಝಳಪಿಸೆಕಡಿದನೌಡನು ತೂಗಿದನು ಶಿರವ ॥ ಖೂಳನಿವನನು ಹೊಯ್ದು ರೋಷದ । ಗಾಳುದೊಟ್ಟಿ ವಿಕಾರವಿಪ್ರನ।ಗಾಳಿಶಾಪದ ಫಲವಲಾ ಸಂಪ್ರಾಪ್ತವಾಯ್ತೆಂದ ॥೧೨॥ ಈಸು ನೀನರ್ಜನನ ಪಕ್ಷಾ। ಪೇಕ್ಷಿಯೆನಿಸಿದ ಮಹಾದೇ । ವೇಸುನಂಬಿಹನೋ ಸುಯೋಧನನೇನಮಾಡುವನೋ ॥ ಶೀಸನೇ ರವಿ ಕಾಂತವಾಗದಿ । ನೇಶನನು ಕೆಣಕಿದಪೊಲೀಗ ವ । ನೀಶನೀತನನಿಂದೆ ಕೆಟ್ಟನು ಕೆಟ್ಟನೆಂದ ॥೧೩॥ ಸೇನಸು ಮೇಲೆಸೆನ್ನೊಡನೆಯೋ ಫಲು । ಗಾನನೊಡನೆಯೋ ಮರಣ ನೃಪತಿಯ । ರಣವಿಜಯವಿದ್ವೇಷಿಯೋ ನಾವೆಂಬ ಫಲವೇನು ॥ ಅಣಕವೇ ಕುರಿಗಾಹಿ ಗಾಜಿನ । ಮಣಿಯಬಲ್ಲನುಗಡ ಕಿರೀಟಿಯ।

ಗುಣಪರಾಕ್ರಮತನವ ನೀನೇ ಬಲ್ಲೆ ದಿಟವೆಂದ ॥೧೪॥ ರೂಢಿಯೋಲೆಯಕಾರನರ್ಜುನ। ನಾಡ ಪತಿಕರಿ
ಸುವೊಡೆ ನೀನದ। ನೋಡಿ ಸಂತಸಬಡುವರಿಬ್ಬರುಕೃಪರುಗುರುಸುತರು ॥ ಕೋಡಗದ ಮೊಗಸಿರಿಗೆ ಕಾ
ವಲಿ । ಯೋಡು ಕನ್ನಡಿಯಾಯ್ತುಗಡ ಕೃಪೆ । ಗೇಡಿಗುಚಿತವನೇನುಮಾಡುವೆನೆಂದನಾಕರ್ಣ ॥೧೫
ಹಗೆಯನೇ ಕೊಂಡಾಡಿ ಸ್ವಾಮಿಗೆ । ಬೆಗಡುಬೆರಸಿ ತದೀಯಸುಭಟರ । ನಗಡುಮಾಡಿ ನಿಜಾಪ್ತಬಲ
ನಿಸ್ತೇಜರೆಂದೆನಿಸಿ । ಹೊಗಳಿಕೆಗೆ ಗುರಿಯಾದರ್ರೈವರು ವಿಗಡರವರೊಳಗಳಿದಂಬ್ಬರು । ಹಗೆಗಳುಳಿದಿ
ರಿ ಮೂವರೆಂದನುಭಾನುಸುತ ಮುಳಿದು ॥೧೬॥ ನಾವು ಭಂಡರು ಗರುವರಾಯರು। ನೀವಲಾ ಭುವನ
ದಲಿ ಬಾಹಿರ। ರಾವು ನೀವತಿಸುಜನರಾದಿರಲಾ ಮಹಾದೇವ ॥ ತಾವು ತಮ್ಮಯ ಹೆಚ್ಚುಕುಂದಿನ । ಜೀ
ವಕಳೆಯುಡಿಯದನಿರರ್ಥಕ । ಜೀವಿಗಳ ಬಂಘಾಲತನಕೇನೆಂಬುದಿದಕೆಂದ ॥೧೭॥ ಮುನಿದೆನಾದೊಡೆ
ಕೋಟಿಕೃಷ್ಣಾ । ರ್ಜುನರ ಕೊಂಬೆನೆ ರಣಕೆ ಮರ್ತ್ಯೇ । ಧನಗೆ ಮಲೆವರ ಮಾರಿಪಾಂಡವಮೋಘುಪವೆ
ಮಾನ ॥ ತನಗೆ ಸರಿಯಾರಿನ್ನು ನೆಣಗೋ । ಬ್ಬಿನಲಿ ನುಡಿದೀನಿನ್ನ ಬಾಂಧವ । ಜನಸಹಿತ ಹಿಂಡುವೆ
ನು ಹಿಂದಿಕ್ಕುವರ ತೋರೆಂದ ॥೧೮॥ ಸೂರಿಗಾವುದು ದೇಶವಾಸಂ। ಸ್ಕಾರವವರಿಗೆ ಬಿಡಿದು ಬುದ್ಧಿಗೆ।
ಬೇರೆ ಬಗೆಯಿಲ್ಲಾ ಕುದೇಶ ಕುವಂಶಸಂಭೂತ ॥ ಊರುಗರಲಾವ ಮಾದ್ರದೇಶದ । ಭೂರಿಚರಿತಕ್ಷತ್ರತಿ
ಮಿರವಿ । ಕಾರಿಗಳ ಜಾತಿಯಲಿ ಜನಿಸಿದ ಶಲ್ಯ ಕೇಳೆಂದ ॥೧೯॥ ಖೂಳರಿಗೆ ಸೌಜನ್ಯಭೂಮಿ ವಿ । ಟಾ
ಳಚರಿತರ ತವರುಮನೆ ದು । ಶ್ಶೀಲರಿಗೆ ದರ್ಪಣ ವಿಕಾರಿಗಳಿಗೆ ವಿಹಾರವನ ॥ ಹೇಳುವೊಡೆ ಪರಮಾ
ಣು ಗುಣವಾ । ಬಾಲವೃದ್ಧರಿಗಿಲ್ಲ ತಕ್ಕಿನ। ಕಾಳುಕಾರರು ಮಾದ್ರಜವದಿರು ಶಲ್ಯ ಕೇಳೆಂದ ॥೨೦॥ ರ
ಣದೊಳೊಡೆಯನ ಬಡಿದು ಜಾರುವ । ಗುಣಸಮುದ್ರರು ಮಾದ್ರರವದಿರ। ಭಣಿತೆತಾನಿದು ಬೇರ ಧಿ
ಟ್ಟರ ದಂಡಿಯದು ಬೇರೆ ॥ ಗಣಿಕೆಯರ ಮಧ್ಯದಲಿ ಮದ್ಯದ । ತನುವಿನಲಿ ತನುಸೊಕ್ಕಿ ಜೆತ್ತಲೆ ।
ಕುಣಿವಭಂಗಿಯ ಭಂಡರೆಲವೋ ಶಲ್ಯ ಕೇಳೆಂದ ॥೨೧॥ ಗರುಡಮತದಲಿ ಸರ್ಪವಿಷ ಪರಿ । ಹರಿಸು
ವುದು ದುರ್ಜನವಚೋನಿ । ಷ್ಠುರಮಹಾವಿಷಕಾವಗಾರುಡವಾವಮಂತ್ರಮುಖ ॥ ದುರುಳನೀ ದುರು
ದುಂಬಿತನದಲಿ । ಹುರುಳುಗೆಡಿಸಿದರೀಸರಲಿ ನೀ। ಗರುವನೇ ಬಾಹಿರನು ನೀನಾಶಲ್ಯ ಕೇಳೆಂದ ॥೨೨॥
ಈಸುಪರಿಯಲಿ ನುಡಿದು ನಮ್ಮಯ । ದೇಶವನು ನೀಹಳಿದೊಡೆಯುನೀ । ನೀಸುಪರಿಯಲಿ ಬೈದು ಭಂ
ಗಿಸಿ ನಮ್ಮದೂರಿದೊಡೆ ॥ ಆಸಿತಾಶ್ವನ ಬಿಲ್ಲನೊದೆದಾ । ಕಾಶಕವ್ವಳಿಸುವಶರೌಘಕೆ । ಮೀಸಲರಿಯಾ
ಕರ್ಣ ನಿನ್ನೊಡಲೆಂದನಾಶಲ್ಯ ॥ ೨೩ ॥ ಅರಳಿದಂಬುಜದೆಸಳಿನಲಿ ಕಡು । ದುರು ಲಸನ್ಮಧುಕರನವೋ
ಲಾ । ಪರಿಮಳವನುಣಬಲ್ಲುದೇ ಕೇಳ್ ಕರ್ಣನಿನ್ನೊಡನೆ ॥ ನರನ ಸರಿದೂಗುವರೆ ತೋರಿದ। ಪರಿ
ಯಲೆಮ್ಮನು ಹೊಕ್ಕುಗಳೆ ಸಾ। ವಿರವನದರಲಿ ಖಾತಿಗೊಂಡೊಡೆ ರಾಯನಾಣೆಂದ ॥೨೪॥ ಕ್ಷಣದೊ
ಳೀಗಲೆ ಭೀಮಪಾರ್ಥರ । ರಣದೊಳಗೆ ತೋರುವೆನು ಬಾಳೆಯ । ಹಣಿದವೋಲ್ನಿನ್ನಾಳುಕುದುರೆಯ
ಕಾಣಲಹುದೀಗ ॥ ಬಣಗುನೀಭಾರಾಂಕಭಟನೊಡ । ನಣಕಿಸುವೆ ಫಡ ಪಾಡನರಿಯದೆ । ಸೆಣಸಿದೊಡೆ
ನೀ ಶೂರನೆಂಬರೆ ಕರ್ಣಕೇಳೆಂದ ॥ ೨೫ ॥ ಜಲಧಿಗಹನವೆ ನ್ನಿನೊಡನೆ ಹೆ । ಕ್ಕಳವಿಗೊದಗುವೆನೆಂ
ದು ವಾಯಸ । ಕುಲ ನುಡಿದು ಹಾರಿದುದು ಹಂಸೆಯ ಕೂಡೆ ಗಗನದಲಿ ॥ ಬಳಿಕ ತಲೆಕೆಳಕಾಗಿ ಸಾಗ
ರ । ದೊಳಗೆ ಬಿದ್ದುದು ಹಂಸೆ ತಂದಿಳೆ । ಗಿಳಿದುದಾಪರಿ ಕಾಕಪೌರುಷಕರ್ಣನೀನೆಂದ ॥ ೨೬ ॥

ಆಡಲರಿಯದೆ ಬರಿದೆ ಸೇನೆಯು । ಹೂಡಿ ಹಲಬರಕೊಲಿಸಿ ಬಲವ । ಕ್ಕಾಡಿ ಕುರುಪತಿ ಕಟ್ಟುವಡೆಯು ನೆ ಚೌಕಮಧ್ಯದಲಿ ॥ ಆಡಿದಾತನೆಗೆಲವನರಸಗೆ । ಮಾಡಿದಾತನೆ ಸಾಕು ಪಾರ್ಥನ । ಕೂಡೆ ನಿನಗಳ ವಡದು ತೆಗೆ ಮರಳೆಂದನಾಶಲ್ಯ ॥ ೨೭ ॥ ಬರಿಯಪಕ್ಷಭ್ರಮೆಯನಾಡಿದ । ದುರುಪನುಡಿಯೇ ಶಲ್ಯ ಪಾರ್ಥನ । ನರಿವೆನಾನೆಂದಂಗವಣೆಯನು ಬಲ್ಲನಾಪಾರ್ಥ ॥ ಸರಿಹೃದಯನಿಸ್ಸೂಡನೆ ಸರಿಗಾ । ನೊರಲಲಾರೆನು ಭೀಮಪಾರ್ಥರ । ನೊರಲಿಸುವೆನೀಬಾಣದಲಿ ಮಾದ್ರೇಶ ಕೇಳೆಂದ ॥ ೨೮ ॥ ಝಳದ ಜೋಡಿಗೆ ಹೆದರ ಸೂರ್ಯನ । ನುಳುಹುವನೆ ಕಲಿರಾಹು ಪಾಪಾ। ನಳನ ಪಕ್ಷಂಗಂಜುವದೆ ಜೀಮೂತಸಂದೋಹ ॥ ಫಲುಗುಣನ ಕಣೆಗಿನೆಯು ಪವನಜ । ನಳಬಲವಕ್ಕೆಕೊಂಬ ಕರ್ಣನೆ । ತಿಳಿಯಲಾವಮಾದ್ರೇಶ ತನ್ನಯ ಬತೆಯು ಕೇಳೆಂದ ॥ ಪರಶುರಾಮನ ಕಂಡು ಹೊಕ್ಕೆನು । ಗರುಡಿಯನು ಬ್ರಾಹ್ಮಣನೆಂದು ಕಲಿತೆನು । ಪರಮನುವಿದ್ಯೆಯನು ಪಡೆದನು ದಿವ್ಯಮಾರ್ಗಣವ ॥ ಗುರುತಿಯು ಬೇಳೆಂಬವನು ವಿ । ಸ್ತರಿಸಲೇತಕೆ ವಜ್ರಕೀಟೋ । ತ್ಕರವ ಕಳುಹಿದೊಡೆನ್ನ ತೊಡೆಗಳನುಗಿದವವು ಬಳಿಕ ॥೩೦॥ ಅರುಣಜಲವುಬ್ಬೆದ್ದು ಮಗ್ಗುಲ । ನುರವಣಿಸಲಾರಾಮನಿದ್ರಾ । ಭರದಲಿದ್ದವನೆದ್ದು ನೋಡಿದನೆನಗೆ ಕಡುಮುಳಿದು ॥ ಧರಣಿಸುರ ನೀನೆಂದು ಠಕ್ಕಿಸಿ । ಶರನಬೇಡಿದೆ ಕಾಳಗದೊಳೀ । ಶರ ನಿರರ್ಥಕವಾಗಲೆಂದನು ಶಾಪಹಸ್ತದಲಿ ॥ ೩೧ ॥ ಅದರಿನೀದಿವ್ಯಾಸ್ತ್ರಕಾಳಗ । ಕೊದಗಲರಿಯವು ಶಲ್ಯ ಪಾರ್ಥನ । ಸದೆವುದೇನರಿದಲ್ಲ ಕುರುಪತಿ ಪುಣ್ಯಹೀನನಲೆ॥ ಇದು ನಿಧಾನವು ಬಾಣ ಮತ್ತೆನ। ಗೊದಗುವವು ಬೇರುಂಟು ನೃಪಗ । ಭ್ಯುದಯವುಳ್ಳೊಡೆ ಗೆಲುವನಹಿತರನೆಂದನಾಕರ್ಣ ॥ ೩೨ ॥ ಅರಸನಭ್ಯುದಯವನು ನೀನ ಧಿ । ಕರಿಸಿ ಗೆಲುವೊಡೆ ನಿನ್ನ ಹಂಗೇ । ಕರಿಗಳನು ಜೈಸುವರು ನಿನ್ನಿಂಚವುರಧಾರಿಗಳು ॥ ಸೊರಹರು ಸಾಕತ್ತ ತಾಗಿತು । ಪರಶುರಾಮನ ಶಾಪಗಡ ಮರು । ಳರಸುಕೌರವ ನಿನ್ನ ಸಾಕಿದನೆಂದನಾಶಲ್ಯ॥ ಕುಲಕೆ ಸೇರುವಮಾತುಮಾತಿನ । ಬಳಿಗೆ ಹೊಲುವ ಬಾಹುಬಲಭುಜ । ಬಲದ ತೂಕದ ಕೀರ್ತಿಕೀರ್ತಿಗೆಸರಿಯೆ ಪರಲೋಕ॥ ಇಳೆಯೊಳಗೆ ನಿನಗಲ್ಲದಾರಿಗೆ । ಫಲಿಸುವುದು ಘಡ ಸೂತಸುತ ನಿ । ರ್ಮಳಪುರುಷ ನಿನ್ನಂಗದೇಶದ ವಿಧಿಯು ಕೇಳೆಂದ ॥ ೩೪॥ ವೇದಧರ್ಮವಿರೋಧಿಗಳು ಪರ । ವಾದಶೀಲರು ವರ್ಣಜಾತಿವಿ । ಭೇದಹೀನರು ಸಾರಸಪ್ತವ್ಯಸನಸಂಗತರು ॥ ಕಾದುವರು ಬೆನ್ನಲ್ಲಿ ಗೆಲುವರು । ಪಾದದಲಿಪರಬಲವನಿರಿವರು । ಬೀದಿಯಲಿ ನಿನ್ನಂಗದೇಶದ ವಿಧಿಯು ಕೇಳೆಂದ ॥ ೩೫ ॥ ನಿನಗೆಸಾರಥಿಯಾದ ಬಾಹಿರ । ತನವೆ ಸಾಲದೆ ಬೇರೆ ಮತ್ತಿ । ನ್ನೆನಗೆ ತಲೆಗುತ್ತಾತ್ತವುದೆನುತವೆ ಬಿಸುಟವಾಘೆಯನು॥ ಮನಕತದ ಮೋರೆಯಲಿ ತತ್ಸ್ಯಂ । ದನವನಿಳಿಯಲು ಭಂಡ ಘಡ ಹೋ । ಗೆನುತ ಕಡುಗವ ಜಡಿದು ನುಡಿದನು ಭಾನುಸುತ ಮುಳಿದು ॥ ೩೬ ॥ ಒಡೆದು ತಲೆಯನು ನಿನ್ನರಕುತವ । ಕುಡಿಸುವೆನು ಕೂರಸಿಗೆ ಪವನಜ । ನೊಡಲನೆತ್ತರ ತುಂಬುವೆನು ಪಾರ್ಥನಕಪಾಲದಲಿ ॥ ಮಿಡುಕಬಾರದಲೇ ಸುಯೋಧನ । ತೊಡಗಿದಗ್ಗದರಾಜಕಾರ್ಯವು । ಕೆಡುವುದೆಂದೇ ನಿನ್ನನುಳುಹಿದೆನೆಂದನಾಕರ್ಣ ॥ ೩೭ ॥ ಬಳಗೆ ಗಜಬಜವಾಯ್ತು ಶಲ್ಯನ । ಬಲುಭಟರು ಮುಕ್ಕುರಿಕಿದರು ಕುರು । ಬಲದ ನೃಪಮಾಲ್ಯಾಡಿತಲ್ಲಿಯದಲ್ಲಿ ಗುಜುಗುಜುಜಿಸಿ ॥ ಬಳಿಕ ಕೌರವರಾಯ ಹರಿತಂ । ದಿಳಿದುವಾರುವನಿಂದ ಗಜಾವಲಿ । ತಿಳುಹಿ ಶಲ್ಯನ ಬೇಡಿಕೊಂಡನು ರಥಕೆ ಮರಳಿಚಿದ ॥ ೩೮ ॥ ನುಡಿದು ಕರ್ಣನ ತಿಳುಹಿ ಶಲ್ಯನ । ನೊಡಬಡಿಸಿ ರವಿ

ಸುತನಂಘ್ರಿಗೆ । ಕಡಹಿ ಮಾದ್ರೇಶನ ಮನಸ್ತಾಪವನು ನೆರೆಬಿಡಿಸಿ॥ ಕಡೆಹದಂಬುಧಿಯಂತೆ ವಾದ್ಯದ । ಗಡಣ ಮೊರೆದುದು ವಿಳಯಸಮಯದ । ಸಿಡಿಲವೊಲು ಸೂಳೈಸಿದವು ನಿಸ್ಸಾಳಕೋಟಿಗಳು ॥ ೩೯ ॥

ಅಂತು ಸಂಧಿ ೯ಕ್ಕೆ ಪದ ೩೧೬ಕ್ಕಂ ಮಂಗಳಮಸ್ತು.

ಹತ್ತನೆಯ ಸಂಧಿ.

ಸೂಚನೆ ॥ ರಾಯದಳ ಹಳಚಿದುದು ಕಲಿರಾ । ಧೇಯನೊಳು ಸಂಕುಳದೊಳೊದಗಿದ । ವಾಯುಸುತ ಸಮರದಲಿ ಕೊಂದನು ಕರ್ಣನಂದನನ ॥

॥ ಪದ ॥ ಕೇಳು ಧೃತರಾಷ್ಟ್ರಾವನಿಪ ತ । ವ್ಯಾಳಮೇಳಾಪದಲಿ ಪಾಂಡುನೃ । ಪಾಲಕರ ದಳ ನಡೆದು ಬಂದುದು ಭೂರಿರಭಸದಲಿ ॥ ಆಳೊಳಗ್ಗಳೆಯರಿಗೆ ಕೊಟ್ಟನು । ವೀಳೆಯವ ಸಾಕರ್ಣನತಿರಥ ಜಾಲವನು ಕನೆಕರೆದು ನಿಲಿಸಿದನೆರಡುಪಕ್ಕದಲಿ ॥ ೧ ॥ ಗುರುಸುತನ ಕೂಡೆಂಟುಸಾವಿರ । ವರ ಮಹಾರಥರೈದುಸಾವಿರ । ಕರಿಘಟೆಯಯಿಪ್ಪತ್ತುಸಾವಿರತುರಗದತಿರಥರು ॥ ಧರಣಿಪತಿ ಕೃತವರ್ಮ ಕೃಪಹ । ನ್ನೆರಡುಸಾವಿರರಥಸಹಿತ ಮೋ । ಹರಿಸಿದರು ಬಲವಂಕದಲಿ ದಳಪತಿಯ ಸೇವೆಯಲಿ ॥ ೨ ॥ ರಾಯಘಟ್ಟಿಸಲೆರಡುಬಾಹೆಯ । ಸಾಯಕರು ಸಂಶಪ್ತಕರು ವಿವಿ । ಧಾಯುಧದ ಕಾಂಭೋಜಬರ್ಬರಯವನಬೋಟಕರು॥ ಸಾಯಕದ ಕಿವಿವರೆಗೆ ತೆಗಹಿನ । ಲಾಯುಧವ ತೆಗೆವೆರಡುಬಾಹೆಯ । ರಾಯನನುಜರು ರಂಚಿಸಿತು ದುಶ್ಶಾಸನಾದಿಗಳು ॥ ೩ ॥ ಘಟ್ಟಿಸೆಡವಂಕದಲಿ ಹಗೆಗಳ । ಗೆಟ್ಟಿನಿಂದರು ಕುರುಬಲದ ಜಗ । ಜಟ್ಟಿಗಳು ವೃಷಸೇನಚಿತ್ರಕಸೇನಶಕುನಿಗಳು ॥ ಬೆಟ್ಟಬೀಳಲುವರಿದಪೆನೆ ಕೃ । ಪಟ್ಟಿ ಮಹಿಯನು ನಂತಿಷುಟಿ ನಾ । ಲಿಟ್ಟುದೆತ್ತಣಸೇನೆಯೋ ನಾನರಿಯೆನಿದನೆಂದ ॥ ೪ ॥ ಅನಲನಂದನನ ಸಮರದ । ಸೇನೆಸವೆದುದನಂತಬಳಿಕಿನ । ಸೇನೆ ಗುರುಸೋಂಪಿಲ್ಲದಿರ್ದುದು ದ್ರೋಣಯುದ್ಧದಲಿ ॥ ಏನನೆಂಬೆನು ಜೀಯ ಮತ್ತೀ । ಭಾನುತನಯನ ಕದನಕೊದಗಿದ । ಸೇನೆ ಸಂಖ್ಯಾತೀತವೆಂದನು ಸಂಜಯನು ನೃಪಗೆ ॥ ೫ ॥ ಒಡ್ಡಿತೀಬಲರಿಪುಭಟರು ಮಾ । ರೊಡ್ಡ ಮೆರೆದರು ತಮ್ಮ ನೆರವಿಯೊ । ಳೊಡ್ಡಿಗೊಬ್ಬರ ಕರೆದು ಪರುತಪಿಸಿದನು ಮುರವೈರಿ ॥ ಒಡ್ಡಿನೆಡದಲಿ ಭೀಮಸಾಬಲ । ದೊಡ್ಡಿನಲಿ ಕಲಿಪಾರ್ಥ ದಳಪತಿ। ಯೊಡ್ಡಿನಲಿ ನಿಂದಾಯುಧಿಷ್ಠಿರರಾಯ ದಳಸಹಿತ ॥೬॥ ಈಮಹಾಮೋಹರವನತಿನಿ । ಸ್ಸೀಮಕಾಂತರು ಮೂವರೇಬಳಿ । ಕಾಮಹಾರಥರಾಜಿಯಡಗಿತ್ತವರರಶ್ಮಿಯಲಿ ॥ ಸೋಮಸೂರ್ಯಾಗ್ನಿಗಳಕೋಟಾರು । ದ್ದಾಮತೇಜಸ್ಸುಗಳು ಕೆಲಬರು । ಭೂಮಿಪತಿ ಹೇಳೆಂದು ನುಡಿದನು ಸಂಜಯನು ನಗುತ ॥೭॥ ಎರಡು ಬಲವುಬ್ಬೆದ್ದುದದರೊಳು । ಮೊರೆವ ಭೇರಿಯ ಭಟರ ಬೊಬ್ಬೆಯ । ಕರಿಯಗರ್ಜನೆ ಹಯದ ಹೇಷಾರವದ ಹಲ್ಲಣೆಯ ॥ ಜರೆವಕಹಳೆಯ ರೂಢಿಸುವಬ । ಜ್ಜರದ ಡಿಂಡಿಮನಿಸ್ಸಾಳರವದ । ಘರಘುರವ ದನಿಧೈರ್ಯಗೆಡಿಸಿತು ಸಕಲಸಾಗರವ ॥ ೮ ॥ ಬೆರಸಿದವು ದಳನೆರವು ಮೊಕ್ಕಳ । ಕರಿಘಟೆಗಳೇರಿದವು ಕುದುರೆಗ । ಳುರವಣಿಸಿ ತೇರುಗಳು ಕವಿದುದು ಹೊಂತ

ಕಾರಿಗಳು ॥ ಉರುಳ್ದ ತಲೆಗಳ ಬಸಿವಮಿದುಳಿನ । ಸುರಿವಕರುಳಿನ ಸೂಸಿದೆಲುವಿನ। ಹೊರಳಿ ಮುಂಡ
ದ ರೌದ್ರರಸ ರಂಜಿಸಿತು ಚೂಣಿಯಲಿ ॥೯॥ ಜೋಡನೊಡೆದವಮಯಪದಿ ರಕುತವ । ತೋಡಿದವು ಕೂ
ರಂಬುಸಬಳದ । ನೀಡುವೊನೆನಿಡುಗರುಳನೆಂಚಲಿಸಿದವು ಪಟುಭಟರ ॥ ಬೇಡರಸ ಬೆನ್ನೀಯನೆತ್ತಿಯ
ಬೀಡಿ ಬಿರಿಯಲು ಬಿದ್ದಲೌಡಿಗ । ಕೀಡಿರಿದವೈ ಚಾತುರಂಗದ ಚಪಳಚೂಣಿಯಲಿ ॥೧೦॥ ತೆಗೆಯಹೇ
ಳೋ ಕಾಳಗದಕೌ ॥ ತುಗವನೋಡುವೊಡಿತ್ತ ದೊರೆಗಳು । ಹೊಗಲಿ ದಳನಾಯಕರು ನುಗ್ಗಿನ ಗಾ
ಯಕಳುಕರಲಾ ॥ ವಿಗಡ ಭೀಮಾರ್ಜುನರ ನೆತ್ತಿಯ । ನುಗ್ಗುಕರುಳನೆನುತುಬ್ಬರವಬೊ । ಬೈಗಳ ಬಿ
ರುದರು ಕೆಣಕಿದರು ಸಂಶಪ್ತಕರು ನರನ ॥೧೧॥ ರಾಯಸಾವೆಡೆ ಕೌರವೇಂದ್ರನ । ದಾಯಿಗಳ ಬರ
ಹೇಳು ಭೇದೋ । ಪಾಯ ಕೊಳ್ಳದು ನಿಮ್ಮ ಭೀಷ್ಮದ್ರೋಣರಾವಲ್ಲ ॥ ಕಾಯುವೆನು ಕೈಮುಗಿದರಾ
ದೊಡೆ। ಸಾಯಬಲ್ಲರೆ ತಿರುವನೊದೆಯಲಿ।ಸಾಯಕದ ಹಿಳುಕೆನುತ ಬಿಟ್ಟನು ರಾಯಮೋಹರಕೆ॥೧೨॥
ಬಿಟ್ಟಸೂಠಿಯಲಗಿವಕರ್ಣನ । ಥಟ್ಟಣೆಯ ಕಂಡನಿಲಸುತನಡ । ಗಟ್ಟಿದನು ಹದಿನೆಂಟುಸಾವಿರರಥ
ಕರೊಗ್ಗಿನಲಿ ॥ ಇಟ್ಟಣಿಸಿ ಬರೆ ರವಿತಸುತನ ಕೈ । ಮುಟ್ಟಲೀಸದೆ ಕೌರವೇಂದ್ರನ। ಥಟ್ಟಿನಲಿ ಮೂ
ವತ್ತುಸಾವಿರಕರಿಗಳೌಕಿದವು ॥ ೧೩ ॥ ಕರಿಘಟೆಯಲಾನಮ್ಮಪುಣ್ಯದ । ಪಂಣತಿಯಲಾಸಮ್ಮ ರಥಿಕ
ರು । ಸರಳಸೂಸದೆ ಸೈರಿಸುವೊಡರೆಗಳಿಗೆಮಾತ್ರದಲಿ ॥ ಅರಿಹಿರಣ್ಯನ ಬಲಕೆ ನರಕೇ । ಸರಿಯಪಾಡೆ
ನಿಸುವೆನು ಕಣ್ಣವೆ । ಮರೆಗೆಮುರಿವೆನೆನುತ್ತ ಹೊಕ್ಕನು ಭೀಮ ಗಜಬಲವ ॥ ೧೪ ॥ ಬಿರಿದಮೀತನ
ಸಿಂಹನಾದಕೆ । ಕರಿಗಳೆದೆ ಬಲುಗದೆಯ ಗಾಯಕೆ । ತಿರುಗಿಕೋಡಡಿಯಾಗಿ ಕೆಡೆದವು ಮಡಿದವಾಕ್ಷಣ
ಕೆ ॥ ಉರುಳಿದವು ಪರ್ವತದವಜ್ರದ । ಸರಿಸಹೋರಟೆ ಕಾಣಲಾದುದು। ಕರಿಘಟೆಯಪವನಜನ ರಣದಲಿ
ರಾಯಕೇಳೆಂದ ॥ ೧೫ ॥ ನೀಲಗಿರಿಗಳ ನೆಮ್ಮಿ ಘನಮೇ । ಘಾಳಿ ಸುರಿಸೈ ಮಳೆಯನೆನೆ ಶರ। ಜಾ
ಳ ಕವಿದವು ಗಜದ ಜೋದರ ಜಡಿವಜೋಡಿಯಲಿ॥ ಕೋಲುಕೊಂಬನೆ ಭೀಮ ಸಿಡಿಲುರಿ । ನಾಲಗೆಗೆ
ನೀರೇರುವುದೆ ಮೇ । ಲಾಳ ಮುರಿದನು ವಿವಿಧಶಸ್ತ್ರಾಸ್ತ್ರಪ್ರಹಾರದಲಿ ॥ ೧೬ ॥ ಕರಿಯ ಭರಿಕೈ
ಜೋದರೆಸುಗೆಯ । ಕರ ಮಹಾಂಕುಶದವರ ಕೈಕ । ತ್ತರಿಸಲೊಂದೇಸದಳನೆಚ್ಚನು ಮತ್ತೆ ಗದೆಗೊಂ
ಡು ॥ ತಿರುಗಿ ಹೊಯ್ದೊಡೆಜೋದರುರವಾ । ಕರಿಯೊಡಲುಸಮ ಸೀಳಸೀಳಿ । ತ್ತರಸ ಬಣ್ಣಿಸಲಾರು
ಬಲ್ಲರು ಭೀಮನುರವಣೆಯ ॥ ೧೭ ॥ ಹಿಂಡೊಡೆದು ಗಜಸೇನೆ ಮುಂಮಳಿ । ಗೊಂಡು ಮುರಿ
ದುದು ಮುಳಿದು ಭೀಮನ । ಗಂಡುಗೆಡಿಸುವರಿಲ್ಲಲಾ ಕೌರವರ ವೀರರಲಿ ॥ ಅಂಡುಗೊಂಡೊಡೆ ವಿಗ
ಡಬಿರುದಿನ । ಭಂಡರಕಟಾಯೆನುತ ನಿಜಕೋದಂಡವನು ಧ್ವನಿಮಾಡುತಶ್ವತ್ಥಾಮನಿದಿರಾದ ॥೧೮॥
ಎಲೆಲೆ ರಾಯನತಮ್ಮನೋ ಗಜ । ಬಲದೊಡನೆ ಬಳಲಿದನು ಗುರುಸುತ । ನಳವು ಹಿರಿದೋ ಸ್ವಾಮಿ
ದ್ರೋಹರ ನೂಕುನೂಕೆನುತ ॥ ಉಲಿಯೆ ದೃಷ್ಟದ್ಯುಮ್ನನಯ ಪಡೆ । ತಳಿಸಿನೂಕಿತು ಭೀಮಸೇನನ ।
ನೆಲನ ಕೊಂದರು ಕಡುಹಿನಲಿ ಪಾಂಚಾಲನಾಯಕರು ॥ ೧೯ ॥ ಮರುಗದಿರಿ ಪಾಂಚಾಲರಾಯನ ।
ಮರಿಗಳಿ ರತಪ್ಪೇನು ಭೀಮಂ। ಗುರುವದೊರೆ ಸೊಂಪಾಗಲಾತಿರೆ ನೀವು ಕಾದುವರೆ॥ ಅರಿವೆವಾದೊಡೆ
ಯನುತ ಬಾಣವ । ತಿರುವಲಾನಿಮಿಷದಲಿ ಸಂದನು । ಗುರುಸುತನ ಹಿಂದಿಕ್ಕಿ ಪಾಂಚಾಲರಲಿ ಕಲಿಕ
ರ್ಣ ॥ ೨೦ ॥ ಕ್ಷಮಿಸುವುಮ ಗುರುಸೂನು ರಣದಲಿ । ನಿಮಿಷ ಚಿತ್ತೈಸುವುದು ಧೈರ್ಯ । ಭ್ರಮಿ

ತರಲಿ ಪಾಂಚಾಲರನು ಬರಿಕೈದುತೋರುವೆನು ॥ ದ್ಯುಮಣಿಪರಿಯಂತೇಕೆ ರಶ್ಮಿಗೆ । ತಿಮಿರವಿದಿರೇ
ನೀವು ನೋಟಕೆ । ನಮಗೆ ರಣದಖ್ಯಾಳಿವೆಂದನು ಕರ್ಣ ಗುರುಸುತನ ॥ ೨೧ ॥ ಬಳಿಕ ಹೇಳುವುದೇ
ನು ರಣದ। ಗಗ್ಗಳೆಯರೀತನ ಮುತ್ತಿದರು ಕೈ । ಚಳಕಿಗರು ಕಪಿದೆಚ್ಚರೀತನನೆಂಟುದೆಸೆಗಳಲಿ ॥ ಉ
ಳಿತಜಲಧರಪಟಲಜಠರದೊ । ಳಿಳಿದರವಿಮಂಡಲದವೊಲಿರೆ ಗಳಿಗೆ ಕರ್ಣನ ಕಾಣೆನೈ ನರನಾಥ ಕೇಳೆಂ
ದ ॥ ೨೨ ॥ ಗಾಳಿಯೆತ್ತಲು ಗಾಡಿಸಿದವೋ । ಘಾಳಿಯೆತ್ತಲು ವೈರಿಸೇನೆಯ । ಲಾಳಗಡಿತರ ನೊ
ರೆಯನೆತ್ತರು ನೂರುಕುದುರೆಗಳ ॥ ಏಳಿಗೆಯಲಾಛತ್ರಚಮರದ । ಜಾಲನನೆದವು ಕರ್ಣನಂಬಿನ। ಕೋ
ಲಕರೆದೊಡನೊಡನೆ ಕೊಂದನು ಕೋಟಿಸಂಖ್ಯೆಗಳ ॥ ೨೩ ॥ ಮೇಲೆ ಬಿದ್ದುದು ಮತ್ತರಿಪುಪಾಂ ।
ಚಾಲಬಲ ಸಾವುದಕೆ ಕಡೆಯಿ । ಲ್ಲಾಳಬರಹಿಗ್ಗರಿಹೆನಾನವಸಾನವನು ಮರಳೆ ॥ ಕೋಲುಗಳ ತೆಗೆದೆ
ಸುವನೋ ಶರ । ಜಾಲವನು ಜಡಿಯೊಡೆವನೋ ಹಗೆ । ಯಾಳಬಿದ್ದುದಕಾಬೆಸಸುಗೆಯ ಕಾಣೆ ತಾನೆಂ
ದ ॥ ೨೪ ॥ ವೈರಿಪಾಂಚಾಲಕರೊಳೈವರು । ಧಾರಿಣೀಶ್ವರರಸುವ ಬಿಟ್ಟರು । ಚಾರುಚಾಪದ ಚಾತು
ರಂಗದ ಲಯದ ನಿರ್ಣಯವ॥ಆರು ಬಲ್ಲರು ಖಾತಿಯಲಿ ಜ । ಜ್ಝಾರರೆದ್ದುದು ಮತ್ತೆ ಸಕಲಮ। ಹಾ
ರಥರು ನೂಕಿದರು ಲಗ್ಗೆಯ ಲುಳಿಯ ಲಹರಿಯಲಿ ॥ ೨೫ ॥ ನಕುಲದೃಷ್ಟದ್ಯುಮ್ನಸುತಸೋ ।
ಮಕಶಿಖಂಡಿಯುಯುತ್ಸುವರಸಾ। ತ್ಯಕಿಶತಾನೀಕಾದಿಪ್ರತಿವಿಂಧ್ಯಕರುಶ್ರುತಕೀರ್ತಿ ॥ ಸಕಲಬಲಕೈಕೇಯ
ಪಾಂಡ್ಯರು । ಭ್ರುಕುಟಿಮುಖಭೀಷಣರು ಶಿಶುಪಾ । ಲಕಸುತರು ಸಹದೇವಮೊದಲಾಗೈದಿತೊಗ್ಗಿನ
ಲಿ ॥ ೨೬ ॥ ಭೀಮಫಲುಗುಣಕೃಷ್ಣಧರ್ಮಜ । ರೀಮಹಾರಥರೆಲ್ಲರೀತನ । ಸ್ತೋಮವಳಿಪಿಯ
ಮೀರಿ ಕವಿದುದು ಕರ್ಣಸದಿರಿನಲಿ ॥ ಆಮಹಾಮಹಿಮರು ಸಮಸ್ತಸ । ನಾಮರದ್ದರು ಕರ್ಣನೊ।
ಬ್ಬನೆ । ಕಾಮಿಸಿದರೈ ಕದನಕ್ಷಿತೀಪಾಲ ಕೇಳೆಂದ ॥ ೨೭ ॥ ಉರಿಯುವೆಡೆಗಳಲೀಪತಂಗದ । ಸರಕು
ಮಾರದೆಮಾಣ್ಬುದೇಬ । ಷ್ಪರದಲೈತಂದೀಮಹಾರಥರಾಜರವಿಸುತನ ॥ ಕೆರಳಿಚಿದರೈ ಕೇಣವಿಲ್ಲದೆ
ಉರುಬಿದರು ಬೆರಸಿದರು ಮಿಗೆ ಹೊಡ। ಕರಿಸಿದರು ಹೊಯ್ದರು ವಿಭಾಡಿಸಿದರು ವಿಘಾತಿಯಲಿ॥೨೮॥
ತಮ್ಮಬಲುಮೆಯನವರುತೋರಿದ । ಡೊಮ್ಮಮೊಗೆದನು ಬಳಿಕ ರಾಯನ । ಸೊಮ್ಮನವರಲಿ ಸೀಳಿದ
ನು ಹದಿನೆಂಟುಸಾವಿರವ ॥ ಹಮ್ಮುಗೆಯ ಕೈಮನದ ಹೊಣಕೆಯ । ಹಮ್ಮಿದುಬ್ಬಟೆಯಂದು ಪಾರ್ಥ
ನ । ತಮ್ಮದಿರ ಸಾಹಸಿಕೆ ಸೇರಿದುದೈ ಪಲಾಯನವ ॥೨೯॥ ರಥ ಮುರಿದು ಬಲುಗಾಯದಲಿ ಸವ್ಯ
ಥಿಕಸಾತ್ಯಕಿ ಹಿಂಗಿದನುಸಾ । ರಥಿಗಳಳವಿನಲೋಡಿದರು ಸುತಸೋಮಕಾದಿಗಳು॥ ಪೃಥಿವಿಗೊರಗಿತು
ನಾಲ್ಕುಸಾವಿರ । ರಥಗಳುಳಿದಪದಾತಿಗಜಹಯ । ರಥವ ಕೆಡಹಿದನೆನಿತನೆಂಬುದನರಿಯೆನಾನೆಂದ॥೩೦॥
ಮುರಿದು ಮತ್ತೆ ಮಹಾರಥರು ಸಂ । ವರಿಸಿಕೊಂಡು ಶಿಖಂಡಿಸಾತ್ಯಕಿ । ವರನಕುಲಸಹದೇವದ್ಧೃ
ಷ್ಟದ್ಯುಮ್ನಸೃಂಜಯರು ॥ ಸರಳಬಿರುಬಿನಭಾಯಬೈಗುಳ। ಬಿರುದುಕಹಳೆಯ ವಾದ್ಯತತಿಯ । ಬ್ಬರಿ
ಸಿ ಕವಿದುದು ಕರ್ಣನಾವೆಡೆ ತೋರುತೋರೆನುತ ॥ ೩೧ ॥ ನುಸಿಗಳಿರ ನಿಮಗೇಕೆ ಕರ್ಣನ । ಗಸಣಿ
ಸಾವೇ ನಿಮ್ಮ ನೆತ್ತಿಯ । ಮುಸಲವಲ್ಲಾ ಘಡ ನಕುಲ ಸಹದೇವ ನಿಲ್ಲೆನುತ ॥ ಮುಸುಡಹೊಗರಿನ
ಕಣ್ಣ ಕೆಂಪಿನ । ವಿಷಮತುರಗದ ಕರ್ಣತನುಜರು । ಮಸಗಿ ಮುಂಚುವ ಮೋಹರವನಡಹಾಯ್ದು
ತರುಬಿದರು ॥ ೩೨ ॥ ಏನ ಹೇಳುವೆನವರ ಶರಸಂ । ಧಾನಸೌರಂಭವನು ಕಲಿವೃಷ । ಸೇನವೀರಸು

ಷೇಣರೆಚ್ಚರು ಮಿಗಿಲದತಿರಥರ ॥ ಭಾನುಸುತನಿಂದೆಂಟುಮಡಿಯುಸ । ಘಾನಬಲರೋ ಪ್ರೊತುಮಯ್ಯು
ಯೆನು । ತಾನಿಖಿಳರಥಿಕಾಳಿ ಕವಿದುದು ಮತ್ತೆ ಸಂಧಣಿಸಿ ॥ ೩೩ ॥ ಕಡಿದು ಬಿಸುಟರು ತೇರುಗಳನ
ಡ । ಗೆಡಹಿದರು ಹೇರಾನೆಗಳ ಕೆಲ । ಕಡೆಯಲೌಕಿದರಾವುತರ ರಚಿಸಿದರು ರಕುತವಲಿ ॥ ತುಡುಕಿದರೆ
ಕಾಲಾಳನಪ್ಪಿಯು ನುಡಿಯಲರಿಯನು ಕರ್ಣತನುಜರ। ಕಡುಹುನಕುಲಾದಿಗಳ ಬೆವರಿಸಿತರಸಕೇಳೆಂದ
॥ ೩೪ ॥ ತಿರುಗಿ ನೋಡಿದ ಭೀಮನೀತರು । ವರಿಗಳನು ಕೊಂಡಾಡಿ ತಾವುವ । ದೊರೆಗಳಹನಕುಲಾ
ದಿಗಳ ತೆಗೆ ಹೇಳುಹೇಳೆನುತ ॥ ಸರಳ ಕೆನ್ನಯ ಬಿಗಿದಹುಬ್ಬಿನ । ಮುರಿದಮೀಸೆಯಸೌಡುಗಚ್ಚಿನ ।
ಕುರುಕುಲಾಂತಕಭೀಮ ಹೊಕ್ಕನು ಬಿಟ್ಟಸೂಠಿಯಲಿ ॥ ೩೫ ॥ ರಾಯದಳದಲಿ ಸೆಣಸಲಿದು ಕ ।
ಜ್ಜಾಯವೇ ಮಕ್ಕಳಿರ ಕರುಣಿಸಿ। ಕಾಯಿದೆನು ಬಳಿಕೇನು ನಿಮ್ಮಂಗವಣೆ ಲೇಸೆನುತ॥ ಸಾಯಲೊಲ್ಲದೆ
ಹಿಂಗಿ ನಿಮ್ಮನು । ನೋಯಿಸುವರಾವಲ್ಲ ಸೇನಾ । ನಾಯಕನು ನಿಮ್ಮಯ್ಯಸಾತನ ಕಳುಹಿ ಸಾಕೆಂ
ದ ॥ ೩೬ ॥ ಮರುಳಲಾ ಪವಮಾನಸುತ ನಿ । ನ್ನೊರೆಗೆವರೆ ಸಂತೂಕತೂಕಕೆ । ಸರಿಸವಾವಿರೆ ಕರ್ಣ
ಪರಿಯಂತೇಕೆ ಬಹುಮಾತು ॥ ತರಣಿಬಿಂಬದ ತತಿಗಳನು ಮಿಗೆ । ತುಸಿತೋರುವ ತಿಮಿರವುಂಟೇ ।
ಸರಳ ತೋರೈತೋರೆನುತ ತೆಗೆದೆಚ್ಚನನಿಲಜನ ॥ ೩೭ ॥ ಗಳಹತನವಿದು ನಿಮ್ಮತಂದೆಯು । ಗಳಿಸಿದ
ರ್ಥವ ನಿಮ್ಮಬೀಯಕೆ । ಬಳಸುವಿರಿ ತಪ್ಪಾವುದೆನುತೆಚ್ಚಂಬುಹರಿಗಡಿದು ॥ ಹಿಳುಕ ಕವಿಸಿದನಾತ
ನಾತನ । ಹಿಳುಕಮುರಿದೊಡನೊಡನೆ ಭೀಮನ । ಮುಳುಗಿಸಿದರೈಕರ್ಣನಂದನರರಸ ಕೇಳೆಂದ ॥೩೮॥
ಬಾಲರೆಂದಾಂಮನ್ನಿಸಿದೊಡೆ ಛ । ಡಾಳಿಸಿತೆ ಚಪಳತ್ವವಾಗಲಿ । ಖೂಳರಾವೈಸಲೆಯೆನುತ ನಾರಾಚ
ನಿಕರದಲಿ ॥ ಬೀಳಲೆಚ್ಚನು ರಥವ ಗಡಹಿಸು । ಜಾಲವನು ಸಾರಥಿಗಳನು ಬಳಿ । ಗೋಲಿನಲಿ ಕರ್ಣಾ
ತ್ಮಜನ ಕೆಡೆಯೆಚ್ಚ ಬೊಬ್ಬಿರಿದ ॥೩೯॥ ಕೆಡದ ವೀರಸುಷೇಣನವನಿಗೆ ಸುಡವುರಿದ ವೃಷಸೇನಸೇ
ನಯು । ಗಡಣ ಬಿದ್ದುದು ಕಿರಿದುಕಿರಿದೊಡೆ ಮುರಿದು ತಮತಮಗೆ ॥ ಪೊಡವಿಪನ ಮುಂದೊದರಲ
ತಿವರು । ಗಡದಲೈದಿತು ವೀರಭಟರು । ಗ್ಗಡದಕಹಳಾರವದ ಲಗ್ಗೆಯಲಹು ತನಿವುಸಗ ॥ ೪೦ ॥ ತಿ
ವಶಿವಾ ಕರ್ಣಾತ್ಮಜನು ಮಡಿ। ದವನೊ ದಳಪತಿಯುಳಿವನೋ ಕೌರವನ ಕೇಡೋ ಹಾಯೆನುತ ಕುರು
ಸೇನೆ ಕಳವಳಿಸೆ ॥ ಕವಿದುದಶ್ವತ್ಥಾಮಕೃಪಕೌ । ರವಶಕುನಿದುಶ್ಶಾಸನಾದಿಗ । ಳವಗಡಿಸಲನಿಬರನು
ತೊಲಗಿಸಿ ಕರ್ಣನಿದಿರಾದ ॥೪೧॥ ಆತುಕೊಳ್ಳೈ ಭ್ರೂಣಹತ್ಯಾ । ಪಾತಕಿಯೆ ಪರಿಹಂಸು ವಿಶಿಖ
ವ್ರಾತವಿದೆ ಯೆನುತೆಚ್ಚ ರವಿಸುತನನಿಲನಂದನನ ॥ ಆತುಕೊಂಬರೆ ಸರಿಸನಲ್ಲ ಕು । ಜಾತಿ ನೀ ಪರಿ
ಭವಿಸುವರೆ ಘಡ । ಸೂತನಂದನ ಯೆನುತ ಕರ್ಣನನೆಚ್ಚನಾಭೀಮ ॥೪೨॥ ಎಚ್ಚನೊಡನೊಡೆಯೆಚ್ಚ
ರೆಡೆಯಲಿ ಕೊಚ್ಚಿದನು ಕಲಿಕರ್ಣನಾತನ । ನೆಚ್ಚನಂಬಿನಮೇಲೆ ಮೇಲಂಬುಗಳ ಮಹಲದಲಿ ॥ ಎಚ್ಚ
ಕವಿಸಿದೊದದನು ಪವನಜ।ನೆಚ್ಚೊಡದ ಪರಿಹಂಸಿ ರವಿಸುತ।ನೆಚ್ಚರಬ್ಬರು ಕಾದಿದರು ಕೈಮೈಯ ಮನ್ನಿ
ಸದೆ ॥೪೩॥ ಭಾರಿಯಂಕವೊ ದಳಪತಿಗೆ ಪಡಿ । ಸಾರಿಕೆಯ ಭಟರಿಲ್ಲಲಾ ಪರಿ । ವಾರಕಿದು ಪಂಥವೆ
ಯೆನುತ ಕುರುರಾಯ ಮೂದಲಿಸೆ ॥ ಕೂರಲಗನಂಬುಗಿಯೆ ಬಿಳಿಯಮ । ಹಾರಥರ ಕೈಮೀಸಿ ರವಿ
ಸುತ। ಸಾರೆನುತ ಕೆಣಕಿದನು ದುಶ್ಶಾಸನನು ಪವನಜನ ॥ ೪೪ ॥ ಎಲವೊ ಕರ್ಣಾತ್ಮಜನ ಹೊಯ್ದ ।
ಗಳಿಕೆಯಲಿ ಹೊರಯೇರದಿರು ಪಡಿ। ಬಲಕೆ ಕರೆಸಾಕೃಷ್ಣಪಾರ್ಥರ ನಿನ್ನೊಳೇನಹುದು॥ ಬಳಿಯ ಬಿ

ನುಗಿನ ಬಿಂಕ ನಿನ್ನಯ । ತಲೆಗೆ ತಹುದಾವರಿಯನೆನುತತಿ । ಬಳಸನೆಚ್ಚನು ನಿನ್ನನಂದನನರಸ ಕೇಳೆಂದ ॥೪೫॥ ಟಗರು ಮುಳಿಪೆಸಿದೊಡೆ ತೋಳನು । ತೆಗೆದು ಜೀವಿಸಿ ನಿಲುವುದೇ ನಾ । ಲಗೆಯ ವೀರರು ನೀವು ಮೂಢರು ಸಾವು ಸುಡಿಗಳಲಿ ॥ ಉಗಿದಡಾಯುಧವೊನೆಯ ತುದಿಸಾ । ಲಗೆಗಳಲಿ ಮಾತಾಡಬಲ್ಲರೆ । ಸೊಗಸುವೆವು ಸಾಪೆನುತ ಪವನಜನಚ್ಚ ನಂನೃಪನ ॥ ೪೬ ॥ ಪವನಸುತನೆಚ್ಚಂಬನುರೆ ಕಡಿ । ದವಿರಳಾಸ್ತ್ರವನೀತ ಕವಿಸಿದ । ನಿವನ ಬಳಿಯ ಮಹಾರಥರು ಸುರಿದರು ಶರಾವಳಿಯ ॥ ರವಿಯ ಮೈಮಂಜಿನ ತುಷಾರದ । ತಿವಿಗಳಿಗೆ ತೆರಳುವುದೆ ರಿಪುಶರ । ನಿವಹವನು ಕೆಡೆಯಚ್ಚು ಕೆದರಿದನಾಮಹಾರಥರ ॥ ೪೭ ॥ ಸಿಕ್ಕಿದರೆ ಬಳಿಕೇನು ತಾಯಿಗೆ । ಮಕ್ಕಳಾಗದೆ ನಿನ್ನತನುಜರ । ನಿಕ್ಕಿಹಾಯ್ದರು ಹಿಂದೊಡೆದು ನೀ ಸಾಕಿದವರುಗಳು॥ ಹೊಕ್ಕಬಳಿಕೊಂದೆರಡುಪಸರದ । ಲುಕ್ಕಡಿಯುಳಿದಗಿದನು ನಿನ್ನವ । ನೆಕ್ಕತುಳದಲಿ ಸುಮಿಗಿಲಕಾದಿದನು ಹಗೆಯೊಡನೆ ॥ ೪೮ ॥ ತೇರು ಹುಡಿಹುಡಿಯಾಗಿ ತನ್ನಯ । ಸಾರಥಿಯು ತಲೆಹೋಗಿ ಕಾಲಿನ । ಲಾರುಭಟೆಯಲಿ ನಿನ್ನಮಗನೆನುತಿರ್ದನನಿಲಜನ ॥ ಸಾರುಸಾರೆಂದನುತಕರ್ಣಕು । ಮಾರನಡಹಾಯಿದನು ಭೀಮನ। ಭೂರಿಬಾಣದ ಪಂಜರವ ಭಂಜಿಸಿತು ನಿಮಿಷದಲಿ ॥ ೪೯ ॥ ಎಲೆಲೆ ಕರ್ಣಕುಮಾರನೋ ಪಡಿ । ಬಲಕೆ ಹೇಳೋಬಾಲನೊಬ್ಬನೆ । ನಿಲುವುದರಿದೋ ಸ್ವಾಮಿದ್ರೋಹರ ನೂಕುನೂಕೆನುತ ॥ ಉಲಿಯೆ ಕೌರವರಾಯನುರಿ ಕಳ । ಕಳದ ಬಹುವಿಧವಾದ್ಯಕಹಳಾ । ವಳಿಯ ದೆಖ್ಖಾದೆಖ್ಖಿಯಲಿ ಕಲಿಕರ್ಣನಡೆತಂದ ॥ ॥೫೦॥

ಅಂತು ಸಂಧಿ ೧೦ಕ್ಕೆ ಪದ ೩೬೬ಕ್ಕಂ ಮಂಗಳಮಸ್ತು.

ಹನ್ನೊಂದನೆಯ ಸಂಧಿ.

॥ ಸೂಚನೆ ॥ ರಾಯೆರಿಪುಶಿರಾಹುಹೊಂಡವ । ರಾಯುಸೇನಾಜಲಧಿವಡಬನ । ಜೀಯನಹೆರವಿಸೂಗೆಲಿದನು ಧರ್ಮನಂದನನ ॥

ಪದ ॥ ಮಗನ ತೊಲಗಿಸಿ ಹೊಗುವಚೂಣಿಯ । ತೆಗಸಿ ಬಲವಂಕದ ಭಟಾಳಿಗೆ । ಮೊಗದಸನ್ನೆಯ ಮಾಡುತೆಡವಂಕದ ಕಟಾಕ್ಷದಲಿ ॥ ತೆಗೆದು ಕೂರಂಬಿನಲಿ ಭೀಮನ । ಬಿಗಿದನಾವೆಡೆಧರಣಿಯಾವೆಡೆ । ಗಗನವಾವೆಡೆ ದೆಸೆಗಳನು ತುರುಗಿದವು ಶರಜಾಲ ॥ ೧ ॥ ಭೀಮನೋ ನಿಮಷಾರ್ಧದಲಿನಿ । ನಾಮನೋತಳುವಿಲ್ಲ ರಿಪುವೇ । ಕಾಮನೋ ಕರ್ಣನೊ ಕಪರ್ದಿಯೊ ಘೂತುಮಝುಯೆನುತ ಈ ಮಹಾದಳ ಭುಜದಹೊಯ್ಲಲಿ । ಭೂಮಿಪನ ಮುಂದೊದರೆ ವೈರಿ । ಸ್ತೋಮ ಕಂಡುದು ಪವನತನಯನ ರಣದಭಾರಣೆಯ ॥೨॥ ಉಲಿವುತಿದೆ ಕೌರವನಸೇನಾ । ಜಲಧಿ ಹರುಷದಲಿತ್ತಲನಿಲಜ । ನಳುಕದೊಬ್ಬನೆ ಕಾದುತೈದನೆ ಕರ್ಣ ನೋಡೆನುತ ॥ ತಳಿತವರುಣಚ್ಛತ್ರಚಮರಾ । ವಳಿಯ ಮಧ್ಯದಲವನಿಪತಿ ನಿಜ । ಬಲಸಹಿತ ನೂಕಿದನು ಬಹುವಿಧವಾದ್ಯ ರಭಸದಲಿ ॥ ೩ ॥ ರಾಯದಳಡುಳಿ ಯೆದ್ದು

ನು ॥ ರಾಯ ಕೌರವಸಹಿತ ನೀವ್ ನಿ । ಮ್ಮಾಯತದಲಿರಿಯೆನುತ ಬಹುವಿಧ । ಸಾಯಕದ ಸರಿವಳೆಯ ಕರೆದನು ಭಾನುಸುತ ಮುಳಿದು ॥ ೪ ॥ ಒಂದುಕಡೆಯಲಿ ಭೀಮಸಾತ್ಯಕಿ । ಪೊಂದು ಕಡೆಯಲಿ ನಕುಲಸನ್ಬರ । ವೊಂದುಕಡೆಯಲಿ ಚೇಕಿತಾನ ಶಿಖಂಡಿಸೃಂಜಯರು ॥ ಒಂದುಕಡೆ ಸಹದೇವನೀಪರಿಹಿಂ । ದಮುಂದೆಷಮಂಕಬಲದಲಿ । ಸಂದಣಿಸಿ ಮುತ್ತಿದರು ಮುಕ್ಕುರಿಕಿದರು ರವಿಸುತನ ॥ ೫ ॥ ಧನುವಿನಲಿ ಸಾತ್ಯಕಿಯು ಮಾದ್ರೀ । ತನುಜರನು ತೇರಿನಲಿ ದ್ರುಪದನ । ತನಯನನು ಸಾರಥಿಗಳಲಿ ಜೋಡಿನಲಿ ಪವನಜನ ॥ ಬಿನುಗರವರವರಂಗದಲಿ ಕೈ । ಮನವ ಖಂಡಿಸಿ ಸಕಲರಿಪುಸಾ । ಧನವನೊಬ್ಬನೆ ಕರ್ಣ ಗೆಲಿದನು ಕೇಳು ಧೃತರಾಷ್ಟ್ರ ॥೬॥ ಮುಂದುಗೆಟ್ಟದು ದೊರೆಗಳೆನೆರವಿ । ನಂದನನ ರಥಕಾಗಿ ಸೇನಾ । ವೃಂದ ಕವಿದುದು ಚೈದ್ಯಕೈಕೆಯಮತ್ಸ್ಯ ಸೃಂಜಯರು ॥ ಸಂದಣಿಸಿ ಪಾಂಚಾಲ ಕೇರಳ । ವೃಂದಮಗಧದ್ರವಿಳವಂಗವು । ಳಿಂದಬರ್ಬರರೊತ್ತಿ ಮುತ್ತಿತು ಮತ್ತೆ ರವಿಸುತನ ॥ ೭ ॥ ಒದೆದಮಂದರವನು ತರಂಗದ । ಉದಧಿಹೊಯಿವಂದದಲಿ ಬಿಟ್ಟವು । ಕುದುರೆತೂಳಿದವಾನೆಹೊಕ್ಕವು ರಥಗಳೊಳಬಿದ್ದು ॥ ಕೆದರಿ ವಿವಿಧಾಯುಧವ ಕಾಲಾ । ಳೊದಗಿ ಕೈದೋರಿಸಿದನನಿಬರ । ಸದೆದನೊಬ್ಬನೆಕರ್ಣ ಕೆದರಿದರಿಮಹಾರಥರ ॥೮॥ ಬೀಳುವಂಬನಹೊಯ್ದುಕಡುಗದ । ತೂಳುವೀಟಿಯನೊಕಿ ತಾಗುವ । ಶೂಲಿಗೆಯ ತುಂಡಿಸುವವಂಕಿಯನೆಡೆವಭಲ್ಲೆಯದ ॥ ಸೀಳುಕತ್ತಿಯ ಮುರಿವಪರಿಘದ । ಸಾಳಿಸುವಪರಿಶುವಿನ ಥಾಳಾ । ಥೂಳಿ ಮಸಗಿತು ಮತ್ತೆ ಕರ್ಣನ ರಥದ ಬಳಿಸಿನಲಿ ॥೯॥ ತುರಗರಾವುತರವರ ಖಡುಗಕೆ । ಕರಿಗೆ ಜೋದರಿಗವರ ಶಸ್ತ್ರಕೆ । ವರರಥಕೆ ಸಾರಥಿಗೆ ರಥಿಕರ ಚಾಪಮಾರ್ಗಣಕೆ ॥ ಸರಳೆಗೊಂದೊಂದರಲಿ ನೆರೆ ಕತ್ತರಿಸಿದನು ಕಾಲಾಳವೊಂದೇ । ಶರದಲೈನೂರಳಿಯೆ ಕೊಂದನು ಕರ್ಣ ಪರಬಲವ ॥೧೦॥ ನಕುಲನನು ಹದಿನೈದರಲಿ ಸಾ । ತ್ಯಕಿಯನೈದಂಬಿನಲಿ ಸಹದೇ । ವಕನನೊಂಭತ್ತರಲಿ ಭೀಮನನೆಂಟುಬಾಣದಲಿ ॥ ಸಕಲರಥಿಕರನೈದೆ ಶತಸ । ಯಕದೊಳುರಗಿಸಿ ಚೈದ್ಯಪಾಂಚಾ । ಲಕರಥಟ್ಟಿನೊಳೊಕ್ಕಲಿಕ್ಕಿದನರಸ ಕೇಳೆಂದ ॥೧೧॥ ಅದು ಬಳಿಕ ಹೇರಾಳಪಡೆಬೀ । ತುದು ಮಹಾರಥರೆಸುಗೆಯಲಿ ಹೂ । ಳಿದುದು ನಭ ನುಗ್ಗಾಯ್ತು ನೆಲ ಚತುರಂಗಪದಹತಿಗೆ ॥ ಕುದುರೆ ಕರಿ ತೇರಾಳಟಿಕ್ಕೆಯ । ಹೊದರಿನೊಳು ಮುಳುಗಿದನು ನಿನ್ನವ । ನದುಭುತವನೇವೇಳುವೆನು ಧೃತರಾಷ್ಟ್ರ ಕೇಳೆಂದ ॥೧೨॥ ತಾರಕನ ಥಟ್ಟಿನಲಿ ಹರನಕು । ಮಾರ ಹೊಗುವಂದದಲಿ ವೃತ್ರನ । ತಾರಕಾಕ್ಷನ ಜೋಡಿಯನು ಹೊಕ್ಕ ಭಾರಿ ಜಡಿವಂತೆ ॥ ಆರಿದೆಚ್ಚನು ಶಿವಶಿವಾ ಕಾ । ಮೂರಿಯೋ ಪಾಂಡವಬಲಕೆ ಹಿಂ । ಮಾರಿಯೋ ನಿಸ್ಸಾನೆ ಸವರಿತು ವೈರಿಭಟವನವ ॥ ೧೩ ॥ ವಾಘೆ ಸುಸದರಾವುತರ ಧ್ವಸ್ತ । ವಾಘೆ ಪೋಟಿದತೇರುಗಳ ಕಾ । ರ್ಮೇಘದೊಡ್ಡಣೆ ಮೆರವ ಬಲುಗಜಘಟೆಯ ಸಂದಣಿಯ ॥ ಲಾಘವದ ಲುಳಿ ಸಾರತರದ ಶ । ರೌಘರಚನೆಯ ನದಟಯೂಥ । ಶ್ಲಾಘೆಯನು ನಾಕಾಣೆನೊಂದರೆಗಳಿಗೆ ಮಾತ್ರದಲಿ ॥ ೧೪ ॥ ಬೇರೆ ಲಗ್ಗೆಯಮಾಡಿಕೋ ಯೆಂ । ದೇರಿತೋರುವರಭಸ ಕಿವಿಗಳ । ಕೀರಿದವು ಮೊದಲಿಸಿ ಕರ್ಣನ ತಾಗಿದಾಕ್ಷಣಕೆ ॥ ತಾರುಥಟ್ಟಿಗೆ ಕಡೆದು ರೌದ್ರವ । ಹೇರಿದವು ಕಣ್ಣಗಳು ರಿಪುಬಲ । ವಿಾರಿ ಸಾಲಗೆ ಹೊಗಳಲಮ್ಮದು ನೃಪತಿ ಕೇಳೆಂದ ॥೧೫॥ ಆಳುಕೊಂದನು ಲಕ್ಷವನು ತುರಗಾಳಿಯನು ಸಾಲ್ಸಾಸಿರವ ಶುಂ । ಡಾಲಘಟೆಯನು ಖಂಡಿಸಿದನೊಂದೆರಡುಸಾಸಿರವ ॥ ಮೌಳಿಮ

ನುಗಿನ ಬಿಂಕ ನಿನ್ನಯ । ತಲೆಗೆ ತಹುದಾವರಿಯನೆನುತತಿ । ಬಳಸನೆಚ್ಚನು ನಿನ್ನನಂದನನರಸ ಕೇಳೆಂದ ॥೪೫॥ ಟಗರು ಮುರಿಪಾಕಿದೊಡೆ ತೋಳಸು । ತೆಗೆದು ಜೀವಿಸಿ ನಿಲುವುದೇ ನಾ । ಲಗೆಯ ವೀರರು ನೀವು ಮೂಢರು ಸಾವು ಸುಡಿಗಳಲಿ ॥ ಉಗಿದಡಾಯುಧಮೊನೆಯ ತುದಿಸಾ । ಲಗೆಗಳಲಿ ಮಾತಾಡಬಲ್ಲರೆ । ಸೊಗಸುವೆವು ಸಾವೆನುತ ಪವನಜನಚ್ಚ ನಂನೃಪನ ॥ ೪೬ ॥ ಪವನಸುತನೆಚ್ಚಂಬನುರೆ ಕಡಿ । ದವಿರಳಾಸ್ತ್ರವನೀತ ಕವಿಸಿದ । ನಿವನ ಬಳಿಯ ಮಹಾರಥರು ಸುರಿದರು ಶರಾವಳಿಯ ॥ ರವಿಯ ಮೈಮಂಜಿನ ತುಷಾರದ । ತಿವಿಗಳಿಗೆ ತೆರಳುವುದೆ ರಿಪುಶರ । ನಿವಹವನು ಕೆಡೆಯಚ್ಚು ಕೆದರಿದನಾಮಹಾರಥರ ॥ ೪೭ ॥ ಸಿಕ್ಕಿದರೆ ಬಳಿಕೇನು ತಾಯಿಗೆ । ಮಕ್ಕಳಾಗದೆ ನಿನ್ನತನುಜರ । ನಿಕ್ಕಿಹಾಯ್ದರು ಹಿಂದೊಡೆದು ನೀ ಸಾಕಿದವರುಗಳು॥ ಹೊಕ್ಕಬಳಿಕೊಂದೆರಡುಪಸರದ । ಲುಕ್ಕಡಿಯಳೊದಗಿದನು ನಿನ್ನವ । ನೆಕ್ಕತುಳದಲಿ ಸುಮಿಗಿಲಕಾದಿದನು ಹಗೆಯೊಡನೆ ॥ ೪೮ ॥ ತೇರು ಹುಡಿಹುಡಿಯಾಗಿ ತನ್ನಯ । ಸಾರಥಿಯು ತಲೆಹೋಗಿ ಕಾಲಿನ । ಲಾರುಭಟೆಯಲಿ ನಿನ್ನಮಗನೆನುತಿರ್ದನನಿಲಜನ ॥ ಸಾರುಸಾರೆಂದನುತಕರ್ಣಕು । ಮಾರನಡಹಾಯ್ದನು ಭೀಮನ। ಭೂರಿಬಾಣದ ಪಂಜರವ ಭಂಜಿಸಿತು ನಿಮಿಷದಲಿ ॥ ೪೯ ॥ ಎಲೆಲೆ ಕರ್ಣಕುಮಾರನೋ ಪಡಿ । ಬಲಕೆ ಹೇಳೋಬಾಲನೊಬ್ಬನೆ । ನಿಲುವುದರಿದೋ ಸ್ವಾಮಿದ್ರೋಹರ ನೂಕುನೂಕೆನುತ ॥ ಉಲಿಯೆ ಕೌರವರಾಯನುರೆ ಕಳ । ಕಳದ ಬಹುವಿಧವಾದ್ಯಕಹಳಾ । ವಳಿಯ ದೆಖ್ಖಾದೆಖ್ಖಿಯಲಿ ಕಲಿಕರ್ಣನಡೆತಂದ ॥ ॥೫೦॥

ಅಂತು ಸಂಧಿ ೧೦ಕ್ಕೆ ಪದ ೩೬೬ಕ್ಕಂ ಮಂಗಳಮಸ್ತು.

ಹನ್ನೊಂದನೆಯ ಸಂಧಿ.

॥ ಸೂಚನೆ ॥ ರಾಯರಿಪುಶಿರಾಹುಹಿಂಡವ । ರಾಯಸೇನಾಜಲಧಿವಡಬನ । ಜೀಯನಹೆರವಿಸೂ
ಗೆಲಿದನು ಧರ್ಮನಂದನನ ॥

ಪದ ॥ ಮಗನ ತೊಲಗಿಸಿ ಹೊಗುವಚೂಣಿಯ । ತೆಗಸಿ ಬಲವಂಕದ ಭಟಾಳಿಗೆ । ಮೊಗದಸನ್ನೆಯ ಮಾಡುತೆಡವಂಕದ ಕಟಾಕ್ಷದಲಿ ॥ ತೆಗೆದು ಕೂರಂಬಿನಲಿ ಭೀಮನ । ಬಿಗಿದನಾವೆಡೆಧರಣಿಯಾವೆಡೆ । ಗಗನವಾವೆಡೆ ದೆಸೆಗಳನು ತುರುಗಿದವು ಶರಜಾಲ ॥ ೧ ॥ ಭೀಮನೋ ನಿಮಿಷಾರ್ಧದಲಿನಿ । ರ್ನಾಮನೋ ತಳುವಿಲ್ಲ ರಿಪುವೇ । ಕಾಮನೋ ಕರ್ಣನೊ ಕಪರ್ದಿಯೊ ಪೂತುಮಝುಯೆನುತ ಈ ಮಹಾದಳ ಭುಜದಹೊಯ್ಲಲಿ । ಭೂಮಿಪನ ಮುಂದೊದರೆ ವೈರಿ । ಸ್ತೋಮ ಕಂಡುದು ಪವನತನಯನ ರಣದಭಾರಣೆಯ ॥೨॥ ಉಲಿವುತಿದೆ ಕೌರವನಸೇನಾ । ಜಲಧಿ ಹರುಷದಲಿತ್ತಲನಿಲಜ । ನಳುಕದೊಬ್ಬನೆ ಕಾದುತೈದನೆ ಕರ್ಣ ನೋಡೆನುತ ॥ ತಳಿತವರುಣಚ್ಛತ್ರಚಮರಾ । ವಳಿಯ ಮಧ್ಯದಲವನಿಪತಿ ನಿಜ । ಬಲಸಹಿತ ನೂಕಿದನು ಬಹುವಿಧವಾದ್ಯ ರಭಸದಲಿ ॥ ೩ ॥ ರಾಯದಳದುಳಿ ಯೆದ್ದುದೊಬ್ಬನ । ಬೀಯಮಾಡುವೆನೆನುತ ನಿಮಿಷಕೆ । ವಾಯುಜನ ಘಾಡಣೆಯ ಗರ್ವಗ್ರಹವ ಕಳಚುವೆ

ನು ॥ ರಾಯ ಕೌರವಸಹಿತ ನೀವ್ ನಿ । ಮ್ಮಾಯತದಲಿಂಯೆನುತ ಬಹುವಿಧ । ಸಾಯಕವ ಸರಿವಳೆ ಯ ಕರೆದನು ಭಾನುಸುತ ಮುಳಿದು ॥ ೪ ॥ ಒಂದುಕಡೆಯಲಿ ಭೀಮಸಾತ್ಯಕಿ । ವೊಂದು ಕಡೆಯಲಿ ನಕುಲಸಬ್ಬರೆ । ವೊಂದುಕಡೆಯಲಿ ಚೇಕಿತಾನ ಶಿಖಂಡಿಸೃಂಜಯರು ॥ ಒಂದುಕಡೆ ಸಹದೇವನೀಪರಿ ಹಿಂ । ದೆಮುಂದೆಪಷಪಂಕಬಲದಲಿ । ಸಂದಣಿಸಿ ಮುತ್ತಿದರು ಮುಕ್ಕುರಿಕಿದರು ರವಿಸುತನ ॥ ೫ ॥ ಧನುವಿನಲಿ ಸಾತ್ಯಕಿಯ ಮಾದ್ರೀ । ತನುಜರನು ತೇರಿನಲಿ ದ್ರುಪದನ । ತನಯನನು ಸಾರಥಿಗಳಲಿ ಜೋಡಿನಲಿ ಪವನಜನ ॥ ಬಿನುಗರವರವರಂಗದಲಿ ಕೈ । ಮನವ ಖಂಡಿಸಿ ಸಕಲರಿಪುಸಾ । ಧನವನೊ ಬ್ಬನೆ ಕರ್ಣ ಗೆಲಿದನು ಕೇಳು ಧೃತರಾಷ್ಟ್ರ ॥೬॥ ಮುಂಮುಗೆಟ್ಟದು ದೊರೆಗಳೆನೆರವಿ । ನಂದನನ ರಥಕಾಗಿ ಸೇನಾ । ವೃಂದ ಕವಿದುದು ಚೈದ್ಯಕೈಕೆಯಮತ್ಸ್ಯ ಸೃಂಜಯರು ॥ ಸಂದಣಿಸಿ ಪಾಂಚಾಲ ಕೇರಳ । ವೃಂದಮಗಧದ್ರವಿಳವಂಗಪು । ಳಿಂದಬರ್ಬರರೊತ್ತಿ ಮುತ್ತಿತು ಮತ್ತೆ ರವಿಸುತನ ॥ ೭ ॥ ಒದೆದಮಂದರವನು ತರಂಗದ । ಉದಧಿಹೊಯಿಮಂದದಲಿ ಬಿಟ್ಟವು । ಕುದುರೆತೂಳಿದವಾನೆಹೊಕ್ಕವು ರಥಗಳೊಳಬಿದ್ದ ॥ ಕೆದರಿ ವಿವಿಧಾಯುಧವ ಕಾಲಾ । ಳೊದಗಿ ಕೈದೋರಿಸಿದನನಿಬರ । ಸದೆದನೊ ಬ್ಬನೆಕರ್ಣ ಕೆದರಿದರೀಮಹಾರಥರ ॥೮॥ ಬೀಳುವಂಬನಹೊಯ್ದುಕಡುಗದ । ತೂಳುವೀಟಿಯನೊಕಿ ತಾಗುವ । ಶೂಲಿಗೆಯ ತುಂಡಿಸುವವಂಕಿಯನೆಡೆವಭಲ್ಲೆಯದ ॥ ಸೀಳುಕತ್ತಿಯ ಮುರಿವಪರಿಘದ । ಪಾಳಿಸುವಪರಿಶುವಿನ ಧಾಳಾ । ಧೂಳಿ ಮಸಗಿತು ಮತ್ತೆ ಕರ್ಣನ ರಥದ ಬಳಿಸಿನಲಿ ॥೯॥ ತುರಗರಾ ವುತರವರ ಖಡುಗಕೆ । ಕರಿಗೆ ಜೋದರಿಗವರ ಶಸ್ತ್ರಕೆ । ವರರಥಕೆ ಸಾರಥಿಗೆ ರಥಿಕರ ಚಾಪಮಾರ್ಗ ಣಕೆ ॥ ಸರಳಿಗೊಂದೊಂದರಲಿ ನೆರೆ ಕತ್ತರಿಸಿದನು ಕಾಲಾಳವೊಂದೇ । ಶರದಲೈನೂರಳಿಯೆ ಕೊಂದ ನು ಕರ್ಣ ಪರಬಲವ ॥೧೦॥ ನಕುಲನನು ಹದಿನೈದರಲಿ ಸಾ । ತ್ಯಕಿಯನೈದಂಬಿನಲಿ ಸಹದೇ । ವಕನ ನೊಂಭತ್ತರಲಿ ಭೀಮನನೆಂಟುಬಾಣದಲಿ ॥ ಸಕಲರಥಿಕರನೈದೆ ಶತಸಾ । ಯಕದೊಳುರಗಿಸಿ ಚೈದ್ಯ ಪಾಂಚಾ । ಲಕರಥಟ್ಟಿನೊಳೊಕ್ಕಲಿಕ್ಕಿದನರಸ ಕೇಳೆಂದ ॥೧೧॥ ಅದು ಬಳಿಕ ಹೇರಾಳಪಡೆಬೀ । ತುದು ಮಹಾರಥರೆಸುಗೆಯಲಿ ಹೂ । ಳಿದುದು ನಭ ನುಗ್ಗಾಯ್ತು ನೆಲ ಚತುರಂಗಪದಹತಿಗೆ ॥ ಕುದುರೆ ಕರಿ ತೇರಾಳಟೆಕ್ಕೆಯ । ಹೊದರಿನೊಳು ಮುಳುಗಿದನು ನನ್ನವ । ನದುಭುತವನೇವೇಳುವೆನು ಧೃತರಾ ಷ್ಟ್ರ ಕೇಳೆಂದ ॥೧೨॥ ತಾರಕನ ಥಟ್ಟಿನಲಿ ಹರನಕು । ಮಾರ ಹೊಗುವಂದದಲಿ ವೃತ್ತನ । ತಾರಕಾ ಕ್ಷನ ಜೋಡಿಯನು ಜಂಭಾರಿ ಜಡಿವಂತೆ ॥ ಆರಿದೆಚ್ಚನು ಶಿವಶಿವಾ ಕಾ । ಮಾರಿಯೋ ಪಾಂಡವಬ ಲಕೆ ಹೆಂ । ಮಾರಿಯೋ ನಿಸ್ತ್ರಾನೆ ಸವರಿತು ವೈರಿಭಟವನವ ॥ ೧೩ ॥ ವಾಘೆ ಸುಸದರಾವುತರ ಧೃ ತ। ವಾಘೆ ಪೋಹಿದತೇರುಗಳ ಕಾ । ರ್ಮೇಘದೊಡ್ಡಣೆ ಮೆರವ ಬಲುಗಜಘಟೆಯ ಸಂದಣಿಯ॥ ಲಾಘ ವದ ಲುಳಿ ಸಾರತರದ ಶ । ರೌಘರಚನೆಯ ನದಟಯೂಥ । ಶ್ಲಾಘೆಯನು ನಾಕಾಣೆನೊಂದರೆಗಳಿಗೆ ಮಾತ್ರದಲಿ ॥ ೧೪ ॥ ಬೇರೆ ಲಗ್ಗೆಯಮಾಡಿಕೋ ಯೆಂ । ದೇರಿತೋರುವರಭಸ ಕಿವಿಗಳ । ಕೀರಿದವು ಮೊದಲಿಸಿ ಕರ್ಣನ ತಾಗಿದಾಕ್ಷಣಕೆ ॥ ತಾರುಥಟ್ಟಿಗೆ ಕಡೆದು ರೌದ್ರವ । ಹೇರಿದವು ಕಣ್ಣುಗಳು ರಿಪು ಬಲ । ಮಿಾರಿ ನಾಲಗೆ ಹೊಗಳಲಮ್ಮದು ನೃಪತಿ ಕೇಳೆಂದ ॥೧೫॥ ಆಳುಕೊಂದನು ಲಕ್ಷವನು ತುರ ಗಾಳಿಯನು ನಾಲ್ಸಾಸಿರವ ಶುಂ । ಡಾಲಘಟೆಯನು ಖಂಡಿಸಿದನೊಂದೆರಡುಸಾಸಿರವ ॥ ಮುಳಿವು

ಣಿಯಲಿ ಹೊಳೆವರಥಿಕರ । ನೇಳುನೂರುಮಹಾರಥರ ನೆರೆ । ಸೀಳಿಬಿಟ್ಟನು ಚೈದ್ಯಪಾಂಚಾಲರಲಿ ಲಿಕ
ಕರ್ಣ ॥ ತೆರಳಿದನು ಸಹದೇವಕನುಪ್ರೈ । ಸರಿಸಿದನು ನಕುಲನು ಶಿಖಂಡಿಯು । ವರರಥವನಾನಲ್ಲಿ ಕಾಣೆ
ನು ಸಾತ್ಯಕಿಯ ರಥವ ॥ ಮುರಿವ ಕಂಡೆನು ಭೀಮ ದುಗುಡದ। ಭರದಲಿದ್ದನು ಮಿಕ್ಕವರು ಸಾ । ಲ್ಕೆ
ರಡುಯೆರಡೊಂದೆನಲು ನಿಂದುದು ಚೋದ್ಯವಾಯ್ತೆಂದ ॥೧೭॥ ಇಟ್ಟಣಿಸಿಕೊಂಡೆತ್ತಿ ರಾಯನ ।
ಥಟ್ಟುಹೊಕ್ಕನು ಜರುಹಿದನು ಜಗ । ಜಟ್ಟಿಗಳನೊಡೆದುಳಿದನಂಗೈಸಿದಸಘಾಡಿಕೆಯು ॥ ಕಟ್ಟದಳವ
ನಘಾಟದವರೊಳಗಿಟ್ಟುಕೊಳ್ಳಿರಿದೇಕೆ ರಾಯನ। ಮುಟ್ಟುತಿರಲಾರೌದ್ರರಣವೆನುತೆಚ್ಚನಾಕರ್ಣ॥೧೮॥
ಕುರುಬಲದ ಸುವರ್ಮ್ಮಾನಗಹಳೆಯು । ಮೊರೆವನಿಸ್ಸಾಳದ ನೃಪಾಲರ । ಹರುಷಪುಳಕವ ಭುಜದ ಹೊ
ಯ್ಲಿನ ಬಲಿದಬೊಬ್ಬೆಗಳ ॥ ಅಂಬಲದೊಳಕಟಕಟ ವಿಧಿ ನಿ। ಷ್ಕರುಣಿ ಹಾಹಾ ಯೆಂಬರವದ । ಬ್ಬ
ರದ ನಿಬ್ಬರ ಕೇಳಲಾದುದು ನೃಪತಿ ಕೇಳೆಂದ ॥ ೧೯ ॥ ಎಲೆಲೆ ರಾಯನಮೇಲೆ ಬಿದ್ದುದು । ಕಲಹವಕ
ಟಾ ನೂಕುನೂಕಿ । ಟ್ಟಳಿಸಿವವ ಹಗೆ ನಮ್ಮ ಭೀಷ್ಮದ್ರೋಣನಿವನಲ್ಲ ॥ ಅಳುಕದಿರಿ ಕವಿಕವಿಯೆನುತ
ಹೆ । ಬ್ಬಲಸಘಾಡವಲೌಕಿ ಕರ್ಣನ । ಹೊಲಬುಗೆಡಿಸಿದನಂಬುಗಳ ನಾರಾಚಸೋನೆಯಲಿ ॥ ೨೦ ॥
ಕೊಂಬನೇ ಬಳಿಕಾಮಹಾರಥ । ರಂಬುಗಿಂಬನು ನಿಮ್ಮ ಹಿರಿಯರ । ದೊಂಬಿನಾಹವವಲ್ಲಲೇ ತಮಗೇ
ನು ತುಡುಕುವೂಡೆ ॥ ಅಂಬುನಿಧಿ ಮಕರಂದವಾದಡೆ । ತುಂಬಿಯಾಗನೆ ವಡಬನೀತನ । ನೆಂಬಸುಭಟ
ರು ಖುಲ್ಲರೈ ಧೃತರಾಷ್ಟ್ರ ಕೇಳೆಂದ ॥೨೧॥ ರಾಯದಳದೊಳು ಮಡಿದಕರಿವಾ । ನಾಯುಜಕೆ ಕಡೆ
ಯಿಲ್ಲ ರಥಿಕರು । ಪಾಯದಳವೆಂತಳಿದುದೋ ನಾನರಿಯೆವದರೊಳಗೆ ॥ ಬಾಯಬಿಟ್ಟುದು ಸೇನೆ ಕಡಿ
ಖಂ । ಡಾಯುತದ ಹೆಣದೊಟ್ಟಿನಲಿ ಮುರಿ । ದಾಯುಧದ ಸಂದಣಿಯು ನಿಲಿಸಿತು ಮತ್ತೆ ರವಿಸುತ
ನ ॥ ೨೨ ॥ ತರಿದಹೆಣಸಕ್ಕ[illegible]ಘುಂಬಿಯೊಳಗೆ ರಥ । ಹರಿಯಬಹುದೇ ಕರ್ಣನಾವಿಂ । ದರಿದೆವೈದಿಟ್ಟ
ನ್ನನೋಲೆಯ[illegible]ರನೆಂಬುದನ ॥ ಇರಿತವಿದಕಾರಿದಿರಹರು ನಿ । ನ್ನುರವಣೆಯನಾರಾನುವರು ಮ ।
ತ್ಸರವ ಬಿಟ್ಟೆನು ಘೂತು ರವಿಸುತ ಯೆಂದನಾಶಲ್ಯ ॥ ೨೩ ॥ ಕಾಲಿಡಲು ದುರ್ಘಟವಿದೆನುತಾ । ಸಾ
ಲಬಿಟ್ಟನು ದಕ್ಷಿಣಕೆ ದು । ವ್ವಾಳಿಸಿದನಾರಥವನವನೀಪತಿಯ ಮೋಹರಕೆ॥ ಏಳು ಕಲಿಯಾಗಿನ್ನು ಕೆಲ
ಬಲ। ದಾಳ ಹಾರದಿರೆನುತ ರಾಯನ ।ಮೇಲೆ ಕರೆದನು ಕರ್ಣ ಖತಿಯಲಿ ಕಣೆಯ ಬಿರುವಳೆಯ॥೨೪॥
ಗಳಹದಿರು ಕೆಲಬಲನ ಹಂಗಿನ । ಬಳಕೆಯೇ ಘಡ ಸೂತಸುತ ಬಾ । ಳ್ಕೊಲೆಯ ಬಾಹೆಯ ಬಿನುಗ
ಗಳ ಸದೆಬಡಿದಗರ್ವದಲಿ ॥ ಉಳುಕಿದರೆ ನಾಲಗೆಯ ತೊಡಬೆಯ। ಕಳಚುವೆನು ಮಿಗೆ ನಿಲ್ಲೆನುತಕುಂ
ಡಲಿತಕಾರ್ಮುಕನೆಚ್ಚು ಕಡಿದನು ಕರ್ಣನಂಬುಗಳ ॥೨೫॥ ಸೋಲಿಕಲುಗಳು ಸಿಡಿಲಮರಿಗಳ । ಮೇ
ಲುವಾಯ್ದವುಗಡ ಯುಧಿಷ್ಠಿರ । ನಾಳುತನದಲಿ ನಮ್ಮ ಜರೆವನುಶಲ್ಯನೋಡೆನುತ ॥ಬೋಳೆಯಂಬೈ
ದರಲಿ ರಾಯನ । ತೋಳನೆಚ್ಚನು ಜಡಿವಜೋಡಿನ । ಮೇಲೆಮುರಿದವು ಬಾಣ ನೃಪ ಮಗುಳೆಚ್ಚ ರ
ವಿಸುತನ ॥೨೬॥ ಬಲುಹುಕ್ಕೆಗಳಲುಂಟೆ ತೋರುವು।ದುಲಿವಹೊತ್ತದು ಮತ್ತೆನುತ ಮುಂ । ಕೊಳಿಸಿ
ಕರ್ಣನ ಧನುವ ಕಡಿದೀರೇಳುಬಾಣದಲಿ ॥ ಅಳುಕದೆಚ್ಚನು ತೇರು ತುರಗಾ । ವಳಿಯ ಧವಳಚ್ಛತ್ರ
ಚಮರಿಯ । ನಿಳುಹಿದನು ಧ್ವಜದಂಡಸಹಿತೈವತ್ತುಬಾಣದಲಿ ॥ ೨೭ ॥ ಬೇಗೆವರಿ ಬೆಳುದಿಂಗಳಲಿ
ನವ । ಗೀಗ ತೋರಿತಲಾಯೆನುತ ಮುಷು । ದಾಗಲೇ ಸಂಧಿಸಿದನಾತನು ರಥದ ಹಲಿಗೆಗಳ ॥ ಈಗಲ

ರಿಯಾದರೆಯೆನುತ ಕಿವಿ । ವರೆಗೆ ತೆಗೆದನು ನಿಶಿತಬಾಣವ । ತೂಗಿಬಿಟ್ಟನು ಬೀಳೆನುತ ಬೊಬ್ಬಿರಿದನಾ ಕ
ರ್ಣ ॥ ೨೮ ॥ ಅರಸ ಕೇಳಾಶ್ಚರ್ಯವನು ರಿಪು । ಶರವನೆಡೆಯಲಿ ಕಡಿದು ರವಿಸುತ । ಸುರುವನೆಚ್ಚನು
ಧರ್ಮನಂದನನೆಂಟುಬಾಣದಲಿ ॥ ಬಿರಿಯೆ ಬಲುವಜ್ರಾಂಗಿ ಹಾಯ್ದವು । ಗರಿಸಹಿತಲುಚ್ಚಳಿಸಿ ನೆಲದಲಿ
ಸರಳುನಟ್ಟವು ನನೆದುದಾಸರ್ವಾಂಗರಕುತದಲಿ ॥ ೨೯ ॥ ತೂಗುವೊಡಲರೆಮುಚ್ಚುಗಂಗಳ । ಜೋ
ಗರಿಸುವಂಗದ ವಿಕಾರದ । ಮೂಗಿನುಸುರಿನ ಮೂರ್ಛೆಯಲಿ ರವಿಸೂನು ಮೈಮರೆದ ॥ ಸೋಗಲಂತಿ
ರೆ ಹೊರೆಯವರ ಕೈ । ಲಾಗುಮದ್ದಿನ ಕವಳಜಲಮಂ । ತ್ಯಾಗಮದಲೆಚ್ಚತ್ತನೊಂದರೆಗಳಿಗೆಯಲಿ ಕ
ರ್ಣ ॥ ೩೦ ॥ ಬಸಿವರಕುತವ ತೊಳೆತೊಳೆದು ಮಂ । ತ್ರಿಸಿದಸಲಿಲವ ಮುಕ್ಕುಳಿಸಿ ಯುಗು । ಳ್ದಸಮ
ಸಾಹಸಿ ಕೊಂಡ ವರಕರ್ಪೂರದವೀಳೆಯವ ॥ ಮುಸುಡದುಗುಡದ ತನ್ನ ಸೇನಾ । ಪ್ರಸರಕಭಯವನಿ
ತ್ತು ಮಾರಿಯ । ಮುಸುಕನುಗಿದನ ತೋರೆನುತ ತಾಗಿದನು ಭೂಪತಿಯ ॥ ೩೧ ॥ ಮಂದಿಕವಿಯಲಿ
ಗಾಯ ತಾಗಿದ । ಹಂದಿಯೋ ರಾಧೇಯನರಸನ । ಮುಂದುಗೆಡಿಸದೆ ಮಾಣನೋ ತೆಗೆ ನೂಕುನೂ
ಕೆನುತ ॥ ಸಂದಣಿಸಿತತಿರಥರು ರಾಯನ । ಮುಂದೆ ತಲೆವರಿಗೆಯಲಿ ಸೇನಾ । ವೃಂದ ತೊಡಕಿತು ಕು
ಪಿತಕಾಳೋರಗನ ನಾಲಗೆಯ ॥ ೩೨ ॥ ರಾಯನಳವಿಗರಿವರು ಘಾಟದ । ನಾಯಕರು ಕಾಣಿರೆ ಸ
ಮೀರನ । ಲಾಯದಲಿ ಲಂಬಿಸಿದವಕಟ ತುಷಾರತೇಜಿಗಳು ॥ ಆಯಿತಿದು ತಪ್ಪೇನೆನುತ ಕ । ರ್ಣಾಯ
ತಾಸ್ತ್ರದಿ ಹರೆಗಡಿದು ರಿಪು । ರಾಯನಲ್ಲಿಗೆ ರಥವ ದುವ್ವಾಳಿಸಿದನಾಕರ್ಣ ॥ ೩೩ ॥ ಹೊಟ್ಟ ನೂಕಿವ್ರ
ಥಾಪ್ರರದ ಜಗ । ಜಟ್ಟಿ ನೀ ಹೆರಸಾರಿ ನಿಂದೊಡೆ । ಬಿಟ್ಟೆನೇ ನಾ ಕರ್ಣನಯ್ಯಾ ಕಾಯ್ದು ಕೊಳ್ಳೆನು
ತ ॥ ಕಟ್ಟಳವಿಯಲಿ ವೈರಿರಾಯನ । ನಿಟ್ಟಣಿಸಿ ಮುರಿಯೆಸುತ ಬರಲಡ । ಗಟ್ಟಿ ತಡೆದರು ಮತ್ತೆ ಸ
ಕಲಮಹಾರಥರು ಭಟನ ॥ ೩೪ ॥ ನಿಲ್ಲು ಸೈರಿಸು ಸೂತಸುತ ಜವ । ನ[illegible]ಳಕೆ [illegible]ವರಿಗೆ ಭೂ । ವ
ಲ್ಲಭನ ಸಮಜೋಳಿಯೇ ನೀ ಸಾರು ಸಾರೆನುತ ॥ ಚೆಲ್ಲಿದರು ಕೂರಂಬುಗಳನೆಡ । ದಲ್ಲಿ [illegible]ಲದಲಿ ಹಿಂದು
ಮುಂದೆಸೆ । ಝಲ್ಲರಿಯ ಸಿಂಧದ ಮಹಾರಥರೈದಿ ತಿನಸುತನ ॥ ೩೫ ॥ ತುರಗದಳವೊಂದೆಸೆಯಲೌಕಿತು ।
ಕರಿಘಟೆಗಳೊಂದೆಸೆಯಲತಿರಥ । ರುರವಣೆಯ ಪದಹತಿಯ ಧೂಳಿಯ ಮಬ್ಬಿನಬ್ಬರದ ॥ ಧರಧುರವನೊಂ
ದೆಸೆ ಪದಾತಿಯ । ಹೊರಳಿಗಳದೊಂದೆಸೆ ವಿಘಾತಿಸಿ । ತರಿಭಟನ ಮುಸುಕಿರ್ದದಮರಾಸುರರಣೋಪ
ಮವ ॥ ೩೬ ॥ ಮುಸುಕುವುದು ಮುಗಿಲೆಮ್ಮೆ ಸೂರ್ಯನ । ಮಸಕಮಿಗಿಲಹುದೊಮ್ಮೆ ಮೇಘ । ಪ್ರಸ
ರ ಹಿರಿದಹುದೊಮ್ಮೆ ರವಿ ತೋರುವನು ಮಗುಳೊಮ್ಮೆ ॥ ಅಸಮಸಮರದೊಳೀತನಾಪರಿ । ಮಸುಳುವ
ನು ತೋರುವನು ತೊಡೆವನು । ದೆಸೆಗೆಡಿಸುವನು ಬಳಿಕ ಕವಿಕವಿತಹಮಹಾರಥರ ॥ ೩೭ ॥ ಬಿದ್ದುದೈ
ನೂರಾನೆ ರುಧಿರದೊ । ಳದ್ದುದಿನ್ನೂರರಸುಮಕ್ಕಳು । ಕದ್ದನಂತಕನಾರುಸಾವಿರತುರಗದಸುವುಗಳ ॥
ಬಿದ್ದವರನೊಡೆದುಳಿದು ಮೇಲು । ಬ್ಬೆದ್ದು ಕವಿತಹರಿಪುಸಮೂಹದ । ಬಿದ್ದಿನಲಿ ಬೆದರಿಸಿದನಾಪಿತೃಪತಿ
ಯ ಪರಿಜನವ ॥ ೩೮ ॥ ಆಳನೋಯಿಸಿ ನೋಡುತಿಹಹೋ । ಹಾಳಿ ತಾನೇಕಕಟಕಟ ದೊರೆ । ಯಾಳ
ತೆಗಸಾರೆನುತ ಸಹದೇವಾದಿಗಳು ಜರೆದು ॥ ತೋಳು ಬೀಳಲು ತೆಗೆದೆಸುತ ಸಮ । ಜೋಳಿಯಲಿ ನೂ
ಕಿದರು ಕರ್ಣನ । ಮೇಲೆ ಸಾತ್ಯಕಿ ಭೀಮನವನೀಪಾಲನಿದಿರಿನಲಿ ॥ ೩೯ ॥ ಘೂತುಮಝರೇ ಭೀಮಸಾ
ತ್ಯಕಿ । ಯಾತರೈತಮ್ಮೊಡೆಯನಿದಿರಲಿ । ಘಾತಕರ ಘುಟ್ಟಿಸುವೆನೀಗಳೆ ಶಲ್ಯನೋಡೆನುತ ॥ ಭೂತನಾ

ಥನ ಭಾಳನಯನೋ । ದ್ಧೂತಧೂಮಧ್ವಜಶಿಖಾಸಂ । ಘಾತವಿದೆಯೆನೆ ಕೆದರಿದನು ಮಾರ್ಗಣಾವ
ಹೋದಥಿಯು ॥ ೪೦ ॥ ಪವನಸುತ ಮುಖದಿರುಹಿದನು ಯಾ । ದವನ ಕಂಡವರಾರು ಸೇನಾ । ನಿವಹ
ಗಿವಹದ ಪಾಡೆ ಕರ್ಣನ ಖಾತಿಖೊಪ್ಪರಿಸೆ ॥ ಬವರ ಮುರಿದುದು ವಿಜಯಲಕ್ಷ್ಮಿಯು । ತವಕವಾರಿತು
ಸುಭಟರಿಗೆ ಬಳಿ । ಕವನಿಪತಿಯೇ ತರುಬಿ ನಿಂದನು ಭಾನುನಂದನನ ॥ ೪೧ ॥ ಅಂಜಪೆವು ನಿಮಗರ
ಸನೀವೆ । ಪಂಜರದಗಿಳಿ ಮಾರಿ ಬಂದೀ । ಮಂಜರನ ಪಡಿಮುಖಕೆ ಮಲೆವುದು ನೀತಿಯೇ ನಿಮಗೆ ॥
ಭಂಜನೆಗೆ ಬಲುಹುಳ್ಳೊಡೆಯ್ಯನಿಮ । ಗಂಜವರು ಗುರುಭೀಷ್ಮರಾಪರಿ । ರಂಜಕರು ನಾವಲ್ಲೆನುತ
ತಾಗಿದನು ಭೂಪತಿಯು ॥ ೪೨ ॥ ಕಲಿತನವೆ ಹೃದಯದಲಿ ಕಾರ್ಯದ । ಬಳಕೆ ಕೈಯಲಿ ಬಲುಹನಾಲಿಗೆ।
ಯುಲಿದೊಡೇನಗಳಿಕೆಯಹುದೋ ವೀರಸಿರಿಯಹುದೋ ॥ ಕಲಿಮನದ ಕೈತವಕದೆಸುಗೆಯು । ಸುಳಿ
ವರ್ತೋರಾ ಸಾಕೆನುತ ನೃಪ । ತಿಲಕಬತ್ತಳಿಕೆಯಲಿ ತೆಗೆದನು ಹೂಡಿದನು ಸರಳ ॥ ೪೩ ॥ ರೂಪಿದೊ
ಳ್ಳಿತು ರೇಖೆಯುಚಿತಕ । ಲಾಪವತಿಹೊಸತಾಯ್ತುಬಾಣ । ಸ್ಥಾಪನೆಗೆ ಮೆಚ್ಚಿದೆನು ಮೇಲಣ ತೂಕ
ಥಾಳವನು॥ ಈಪರಿಯವೆಂದಯೆನಹುದೈ । ಭಾಪು ವಿದ್ಯಾಪಾತ್ರನಹುದವೆ । ನೀಪತಿಯಲಾವ್ರೂತು
ಮಝುಯೆಂದೆಚ್ಚನಾಕರ್ಣ ॥ ೪೪ ॥ ಗಂಡುಗರ್ವವನೆನ್ನೊಡನೆ ಕೋ । ದಂಡದಲಿಮೆರೆ ಸೋಕು
ನಿನ್ನಯ । ಭಂಡವಿದ್ಯೆಯಮೆರೆವೊಡಿದೆಲಾ ಕೌರವಾಸ್ಥಾನ ॥ ಬಂಡುದರಿವೆನು ಸ್ವರಿಸೆನುತವ। ಖಂಡಶ
ರನಿಕರದಲಿ ರಿಪುವಮಾ । ರ್ತಾಂಡತನಯನನೆಚ್ಚುಬೊಬ್ಬಿರಿದನು ಮಹೀಪಾಲ ॥ ೪೫ ॥ ಇರಿತವುನ್ನ
ವೊ ಸುಭಟರಿಗೆ ಬೊ । ಬ್ಬಿರಿತ ಮುನ್ನವೊ ನಿಮ್ಮನುಡಿಯಲಿ। ಮುರಿವಡೆದಿರ್ದೈ ನೀವೆನುತ ನೃಪನಂಬ
ಹರೆಗಡಿದು ॥ ತೆರಹುಗೊಡದೆಚ್ಚನು ನೃಪಾಸ್ತ್ರವ । ತರಿದು ಮಗುಳೆಚ್ಚನು ಶರಾಳಿಗ। ಳೆರಗಿದವು ತು
ರುಗಿದವು ತೆತ್ತಿಸಿದವುರಥಾಂಗಸ್ಥಳಿ ॥ ೪೬ ॥ ಕಾಯಲಾಪರೆ ಕರೆದುಕೊಳ್ಳಾ । ವಾಯುತನುಜನನರ್ಜ
ನನನಾನಾ । ಯಕರೊಳಗಳಿಯರಥಿರಥರೊಳು ಮಹಾರಥರ॥ ಸಾಯಲಂಜವೊಡಿಳುಹುಧನುವನು ।
ನೋಯಿಸೆನು ನುಡಿಸಿದೊಡೆ ಕೌರವ।ರಾಯನಾಣೆ ನೃಪಾಲ ಕೇಳೆಂದೆಚ್ಚನಾಕರ್ಣ ॥ ೪೭ ॥ ಅರಸ ಕೇ
ಳೈ ಕರ್ಣಶರವನು । ಪರಿಹರಿಸಿ ಮಗುಳೆಚ್ಚೊಡೀತನು । ಧರಣಿಪನನಿನಸೂನು ವೆಚ್ಚನು ಹಗೆಯ ರಥ
ಹಯವ ॥ ಮರಳಿ ಶಲ್ಯನನೆಚ್ಚನಾತನ । ಹೊರೆಯವರನೆಚ್ಚನು ರಥಾಂಗವ । ಹುರುಳುಗೆಡಿಸಿ ಮಹೀ
ಶನೆಚ್ಚನು ಭಾನುನಂದನನ ॥ ೪೮ ॥ ಅಕಟ ಚಂದ್ರಿಕೆ ಗೆದ್ದುದೋ ಪಾ। ವಕನ ಝಳವೀಧರ್ಮಪುತ್ರ
ನ। ವಿಕಳಶರದಲಿ ಕರ್ಣನೊಂದನಲಾ ಮಹಾದೇವ॥ಅಕುಟಿಲರು ನೀವೆಮ್ಮವೊಲುಬಾ। ಧಕರೆ ಪರರಿಗೆ
ಪರುಷತರಸಾ। ಯಕದ ಸವಿನೋಡಾದೊಡೆನುತೆಚ್ಚನು ಮಹೀಪತಿಯ ॥೪೯॥ ಏನಹೇಳುವೆನವನಿಪತಿ
ನಿ । ಸ್ವಾನೆಯಗ್ಗಳಿಕೆಯನು ಪಾಂಡವ। ಸೇನೆ ಮಗುಳಿದ್ದೈಸ್ಥಿತವನೀಶನ ರಥಾಗ್ರದಲಿ ॥ ಆನೆ ಹೊಕ್ಕು
ದು ಬದ್ದರದಬಲು । ಮಾನಿಸರು ಭಂಡಿಗಳನೋಡಿದ । ರಾನಿರಂತರಸರಳತಡೆದರು ತೆಕ್ಕೆವರಿಗೆಯ
ಲುಗುಣ ಧರ್ಮಜನ ಮದ । ದಾನೆಯೇನೆಲೆತಂದೆ ದುಗುಡವಿ । ದೇನು ಹೇಳೆಂದಸುರರಿಪು ಕೇಳಿದೊ
ಡೆ ಮನಮರುಗಿ ॥ ದಾನವಾಂತಕ ಕಪಟನಾಟಕ । ನೀನಲಾ ತಪ್ಪೇನು ದುಷ್ಕೃತ । ವೇನುಮಾಡದೆ
ನುತ್ತ ಮೇಗರೆನುಡಿದನಾಪಾರ್ಥ ॥ ೨೬ ॥ ಹೇಳುಹೇಳೆನ್ನಾಣೆ ಚಿತ್ತದೊ । ಳಾಳುವುದ ಮರೆಮಾಡದಿ
ರುಜಿಯು । ಲೋಲಧರ್ಮಜನಾಣೆ ನಿನಗೆನೆಪಾರ್ಥ ನಸುನಗುತ ॥ ಕಾಲಗುಣವೆಂದರಿಯೆ ಮೇಣ್ ನಿ ।
ನ್ನಾಳುತನ ಹುಸಿಯಾಯ್ತುರಿಪುಭಟ । ನಾಳುತನದಿಟವಾಯ್ತು ಕೌತುಕವೆನ್ನ ಮನಕೆಂದ ॥ ೨೭ ॥
ಒಂದುಯೋಜನವರೆಗೆ ತೆರಳಿತು । ಹಿಂದಕಹಿತನ ತೇರುಮರಿಶರ । ಕೊಂದು ಬಿಲ್ಲಂತರಕೆ ತೆರಳಿತು ನ
ಮ್ಮರಥವೇಗ ॥ ಇಂದು ಕರ್ಣನ ಸಾಹಸವ ಮನ । ಬಂದು ಪತಿಕರಿಸಿದಿರಿ ಕೌತುಕ । ವೆಂದು ಪಾರ್ಥ
ನು ನುಡಿದನಸುರಾರಾತಿಗುಚಿತದಲಿ ॥ ೨೮ ॥ ಆಳುತನದಲಿ ವೀರಕರ್ಣನ । ಹೋಲುವರ ನಾ ಕಾಣೆ
ನ್ಯೆ ಸುರ । ಪಾಲಕರು ತಾವಾನಬಹುದೇ ಕರ್ಣನುರವಣೆಯ ॥ ಕೋಲು ಯೋಜನವರೆಗೆ ತಿರುಗಿಸಿ ।
ಚಾಳಿಸಿದುದನನುಡಿವೆ ನಿಜಬಿ । ಲ್ಲಾಳುತನವನು ನಿನ್ನ ಮನದಲಿ ತಿಳಿದುನೋಡೆಂದ ॥ ೨೯ ॥ ಬಸು
ರೊಳಗೆ ಬ್ರಹ್ಮಾಂಡಕೋಟಿಯ । ಮುಸುಕಿಕೊಂಡಿಹೆತಾಸಹಿತಮೇ । ಲೆಸೆವಸಿಂಧದಹನುಮಸಹಿತೀದಿ
ವ್ಯಧನುಸಹಿತ ॥ ಎಸುಗೆಯಲಿ ತೊಲಗಿಸಿದವನ ಸಾ । ಹಸವುಹಿರಿದೋ ಹುಲುರಥವನೆ । ಬ್ಬಿಸಿದವನ
ಸಾಹಸಹಿರಿದೊ ಹೇಳೆಂದನಸುರಾರಿ ॥ ೩೦ ॥ ಎನಲು ತಲೆವಾಗಿದನು ಫಲುಗುಣ । ಧನುವ ಕೊಂಡ
ನು ದೈತ್ಯಮದನಗೆ । ವಿನಯದಿಂದೆರಗಿದನು ಕರುಣವ ಪಡೆದು ಮದವೇರಿ ॥ ಮೊನೆಯಲಗಿನಂಬಿನಲಿ
ಬೊಬ್ಬಿರಿ । ದಿನಸುತನ ಮೂದಲಿಸಿ ಫಲುಗುಣ । ನನುವರದೊಳತಿಮತ್ಸರಿಸಿ ಕಾದಿದನು ಖಾತಿಯ
ಲಿ ॥ ೩೧ ॥ ರಾಯ ಕೇಳಭಿಮಂತ್ರಿಸಿದನಾ । ಗ್ನೇಯವನು ಹೂಡಿದನು ಸುರಕುಲ । ಬಾಯಬಿಡೆ ಚಿ
ಗಿದಂಬು ಹಾಯ್ದುವು ಬಿಲುದಿರುವನೊದೆದು ॥ ವಾಯು ಪಡಿಬಲವಾಗೆ ಕಿಡಿಗಳ । ಬಾಯಧಾರೆಯ
ಹೊದರಕಬ್ಬೊಗೆ । ಲಾಯದಲಿ ಲವಣಿಸುವ ದಳ್ಳುರಿದಿರುಳು ಚೂಣಿಯಲಿ ॥ ೩೨ ॥ ಅಹಹ ಬೆಂ
ದುದು ಲೋಕವಿನ್ನು । ರವಿಮುಖವ ಚುಂಬಿಸುವರೋ ವಿ । ಗ್ರಹದ ಫಲನಿಗ್ರಹವಲಾ ಜಗಕೆನುತ
ಸುರರುಲಿಯೆ ॥ ವಹಿಲ ಮಿಗೆ ವರುಣಾಸ್ತ್ರದಲಿ ಹುತ । ವಹನ ಬಿಂಕವ ಬಿಡಿಸಿದನು ಜಯ । ವಹು
ದೆ ಪರರಿಗೆ ಪಾರ್ಥನಿರೆ ನರನಾಥ ಕೇಳೆಂದ ॥ ೩೩ ॥ ಸರಳ ಜಡಿಝಡಿಸಿದುದುಕಬ್ಬೊಗೆ । ಹರೆದುದ
ಳ್ಳಿಯದಲ್ಲಿ ತಂಪಿನ । ಸರಳಮೊನೆಯಲಿ ಸೊಂಪಿಸಿತು ತುಂತುರ ತುಷಾರದಲಿ ॥ ಅರಿಬಲದ ಬೊಬ್ಬಾ
ಟದಲಿ ಧರೆ । ಬಿರಿಯಲರ್ಜುನ ಹೂಡಿದನು ಹೂಂ । ಕರಣಮಾನಿತಮಂತ್ರಮಂಡಿತಮೇಘಮಾರ್ಗಣ
ವ ॥ ೩೪ ॥ ಹೊಗೆಯ ಹೊರಳಿಯ ವಿವಿಧವರ್ಣದ । ಮುಗಿಲ ಪಾಳೆಯಮೆತ್ತಿ ಬಿಟ್ಟುದು । ಗಗನದಗ
ಲದಲಾಕಿದುದು ದೆಸೆದೆಸೆಯ ಮೂಲೆಗಳು ॥ ಹಗಲುಗತ್ತಲೆ ಕಟ್ಟಿತೇನಿದು । ಜಗದ ಕಡೆಯೋ ಶಿವ
ಶಿವಾಯೆನೆ । ಜಗಜಗತ್ಪ್ರಾಣಾಸ್ತ್ರವನು ಹೂಡಿದನು ಕಲಿಪಾರ್ಥ ॥ ೩೫ ॥ ಬಿಟ್ಟುಹೋದುದು ನಿರಿ
ಮುಗಿಲುನೆರೆ । ಯಟ್ಟಿ ತೊಡಕಿತು ತಳಿತಮೇಘದ । ಘಟ್ಟು ಮುರಿದುದು ಬೀಸಿದುದು ಬಿರುಗಾಳಿವ
ಹಿಲದಲಿ ॥ ಇಟ್ಟಣಿಸಿ ಕೈಯೊಡನೆ ಕೊಂಡನು । ಬೆಟ್ಟವುದುರುವಬಾಣವನು ಜಗ । ಜಟ್ಟಿಕೌರವ
ರಾಯ ಬಾಳೆನುತಚ್ಚ ಸಾಕರ್ಣ ॥ ೩೬ ॥ ಗಿರಿಯ ಡೆಂಕಣಿಯಂತ್ರವನು ತರ । ಹರಿಸುವವನಾರರಸ
ಧಾರಿಣಿ । ಗಿರಿಯಧಾರೆಗೆ ಧಾತುಗೆಟ್ಟುದು ಪಾಂಡುಸುತಸೇನೆ ॥ ಅರರೆ ಫಡಫಡಯೆನುತ ವಜ್ರವ ।
ಸರಳ ಬಲುಹಿಂದಾವವಹಿಲವ । ಉರುಳೆಗಡಿದನು ಪರ್ವತಾಸ್ತ್ರವನಿಂದ್ರನಂದನನು ॥ ೩೭ ॥

ಆವಚಳಳಕದಲರ್ಜುನನು ತಿಮಿ । ರಾವಲಂಬನಸರಳನೆಚ್ಚನು । ನಾವರಿಯೆವು ಮಹಾಂಧತಮ ಮುದ್ರಿಸಿತು ದೃಷ್ಟಿಗಳ ॥ ಅವನಾವನನರಿವನೋ ತಾ । ನಾವನಿದಿರಾರೆಂಬರೂಪಿನ । ಭಾವ ತೋರಿದುದಿಲ್ಲ ಮುಸುಕಿತು ನಿಮಿಷದಲಿ ಜಗವ ॥ ೩೮ ॥ ವೈರಿಶರಕೇನರಿಯನೇಪ್ರತಿ । ಕಾರವನು ನಿನ್ನಾತನಗ್ಗದ । ಸೌರಮಯಮಂತ್ರಾಭಿಮಂತ್ರಿತಭಾನುಮಾರ್ಗಣವ ॥ ಆರುಕಂಡರು ತಿಮಿರಜನಿತವಿ । ಕಾರವನು ಹೇಳಿಗೆಯ ಮುಚ್ಚಳ । ಜಾರಿಸಿದಫಣಿಯಂತೆ ಭುಲ್ಲೈಸಿತ್ತು ಕುರುಸೇನೆ ॥ ೩೯ ॥ ಆಗಲೇ ತೆಗೆದುರಗಬಾಣವ । ತೂಗಿ ಬಿಟ್ಟನು ನಿಮ್ಮ ಕರ್ಣನ । ಲಾಗುವೇಗವನಾರು ಬಲ್ಲರು ಚಾಪತಂತ್ರಕವ ॥ ಸೂಗಿಸುವುರಿವಿಷದ ಲೋಳೆಯ । ಲಾಗಿಸುವನಾಲಗೆಯ ಸುಯ್ಲಿನ । ಬೇಗುದಿಯ ತೊಡೆಬೆಗಳ ಹಾವ್ ತುಡುಕಿದವು ಥಟ್ಟಿನಲಿ ॥ ೪೦ ॥ ಎಲೆಲೆಹಾವೋ ಹಾವು ಕೆಂಡದ । ಮಳೆಯ ಕಾವರ ಕರೆಯೆನುತ ಕಳ । ವಳಿಸಿತಲ್ಲಿಯದಲ್ಲಿ ಹರೆದುದು ಹುದುಗಿ ಹುರಿಯೊಡೆದು ॥ ಬಲುವಿಷದ ಕಿರುವನಿಯ ಹಾವಿನ । ಮಳೆಗೆ ಗರುಡಾಸ್ತ್ರದಲಿ ತನ್ನಯ । ದಳಕೆ ಹಿಡಿದನು ಕೊಡೆಯನರೆಗಳಿಗೆಯಲಿ ಕಲಿಪಾರ್ಥ ॥೪೧॥ ಏಸುಹಾವೆರಗಿದವೊ ಥಟ್ಟಿನೊ । ಳೈಸುಹದ್ದೆರಗಿದವು ತುಂಡಿಸಿ । ಬೀಸಿ ಬಿಸುಟವು ಕಡಿಗಳನು ಕೌರವನ ಥಟ್ಟಿನಲಿ॥ಏಸುಪರಿಯಲಿ ನರನ ಬಿನ್ನಣ। ವೈಸುಪರಿ ಕರ್ಣನಲಿ ಕರ್ಣನ। ಕೌಶಲವದೆಂತೆನಿತುಪರಿಯನು ಕಂಡೆನಿಬ್ಬರಲಿ ॥ ೪೨ ॥ ಬಲುಹು ಭೀಷ್ಮದ್ರೋಣರಿಂದ । ಗ್ಗಳವಲಾ ಕರ್ಣಂಗೆನುತ ಪಡಿ । ಬಲವ ಬಂದರು ಭೀಮಸಾತ್ಯಕಿನಕುಲಸಹದೇವ ॥ ದಳದ ಥಟ್ಟುಬ್ಬೆವರು ಪಾರ್ಥನ। ಕೆಲದಲೋರಣಿಸಿದರು ಬಲುವೆ । ಗ್ಗಳೆಯನ್ಯೆ ನಿನ್ನಾತನಿಂದಿನೊಳರಸ ಕೇಳೆಂದ ॥ ೪೩ ॥ ಎಲೆಧನಂಜಯ ಸಾಲದೇ ಹೆ । ಬ್ಬುಲಿಯ ಕಾಲಾಟದಲಿ ಮೃಗಶಿಶು । ವಲೆತೊಡೇನಗ್ಗಳೆಯನೇ ಮೂಲೋಕವರಿವುದಲೆ ॥ ಅಳವಿಗೊಡದಿರು ಸೂತತನಯನ । ತಲೆಯ ಬೆಸುಗೆಯ ಬಿಡಿಸುವಂಬಿನ । ಹಿಳುಕನರಿಯಾ ಹೊಳ್ಳುಕಣೆಯೇಕೆಂದನಾಭೀಮ ॥ ೪೪ ॥ ಹುಸಿಯೆ ಭೀಮನ ಮಾತು ಪೊಸರ । ದೆಸುಗೆ ತಾನೇಕಿನ್ನು ರಿಪುನಿ । ಪ್ಪಸರದಲಿ ಕಲಿಯೇರಿದನು ಕೈಕೊಳ್ಳನೀಶ್ವರನ ॥ ನುಸಿಗಣೆಯಲೇನಹುದು ತೆಗೆ ಹರ । ವಿಶಿಖವನು ತೊಡು ಬೇಗ ಮಾಡೆಂ । ದಸುರರಿಪುವರ್ಜುನನ ಜರೆದನು ಕೇಳು ಧೃತರಾಷ್ಟ್ರ ॥ ೪೫ ॥ ಕ್ರೋಧಶಿಖಿ ಭುಲ್ಲೈಸಿ ಮುಳಿದು ವಿ । ರೋಧಿಯನು ನೋಡಿದನು ಮುಳುಗಲಿ । ರಾಧೆ ಕಂಬನಿಗಳಲಿ ಬೆತೆಯಲಿ ಪುತ್ರಶೋಕದಲಿ ॥ ಆಧಿ ತೀರಲಿ ನಮ್ಮ ಸೇನಾ । ವ್ಯಾಧಿಗಿದೆ ಮದ್ದೆನುತ ಪರಬಲ । ಸಾಧಕ ಬ್ರಹ್ಮಾಸ್ತ್ರವನು ತೊಟ್ಟೆಚ್ಚನಾಪಾರ್ಥ ॥ ೪೬ ॥ ಶಿವಶಿವಾ ಬ್ರಹ್ಮಾಸ್ತ್ರವಿದಲಾ । ಭುವನಜನಸಂಹಾರವೇ ಸಂ । ಭವಿಸಿತೇ ಹಾಯೆನುತ ಹರೆದುದು ಮೇಲೆ ದಿವಿಜಗಣ ॥ ತವಕದಲಿ ತತ್ಪ್ರತಿಮಹಾಸ್ತ್ರವ । ಜವಳಿವೆರಳಿಂದುಗಿದು ಬಿಡೆ ತಿವಿ । ತಿಪಿದು ಹಮ್ಮೊಳಗಡಗಿದವು ದಿವ್ಯಾಸ್ತ್ರವಭ್ರದಲಿ ॥ ೪೭ ॥ ಆಮಹಾಸ್ತ್ರದ ಹಾನಿ ರೋಷದ । ತಾಮಸಾಗ್ನಿಯ ಸೂದಿಬಿಡಲು। ದ್ದಾಮನರ್ಜುನ ಕೊಂಡನಗ್ಗದಶಾತಮನ್ಯುವನು ॥ ಆಮಹಾಬಾಣಾಭಿಮುಖದಲಿ । ಸೋಮಧರಮಾರ್ಗಣವೆನಿನ್ನೀ । ಭೀಮವಿಕ್ರಮಕರ್ಣನೆಚ್ಚನು ರಾಯ ಕೇಳೆಂದ ॥ ೪೮ ॥ ಆತನಲಿ ಕೌಬೇರಮಾರ್ಗಣ। ವೀತನಲಿ ವಾಯವ್ಯ ಕಬಳಿಸಿ । ತಾತನಲಿ ನೈರುತ್ಯವಿತ್ತಲು ಸಾಮವರ್ತಿಶರ ॥ ಆತನಲಿ ಸಾಮುದ್ರರೋಷಣವೀತನಲಿ ವಡಬಾಸ್ತ್ರವಿಂತಿರ । ಲಾತನೀತನ ಮಥನದಲಿ ನರನಾಥಕೇಳೆಂದ ॥ ೪೯ ॥

ಅಂತು ಸಂಧಿ ೨೩ಕ್ಕಂ ಪದ ೯೫೬೬ಕ್ಕೆ ಮಂಗಳಮಸ್ತು.

ಇಪ್ಪತ್ತನಾಲ್ಕನೆಯ ಸಂಧಿ.

॥ ಸೂಚನೆ ॥ ರಾಯಸಾಹಸಮಲ್ಲ ವೆಗ್ಗಳ । ರಾಯಸುಭಟಶಿರೋರತುನ ರಾಧೇಯಪಾರ್ಥರ ವಿಷಮರಣ ರಂಜಿಸಿತು ವ್ಯೋಮಜಗವ ॥

॥ ಪದ ॥ ರಾಯ ಕೇಳೈ ಮತ್ತೆ ಕರ್ಣರ । ಸಾಯಕವೆ ಕಟ್ಟಾಳು ರಣದಲಿ । ಸಾಯಲಾಗದೆ ಶಿವಶಿವಾ ಸಾಯರೆ ಸುರಾಸುರರು ॥ ಬಾಯ ಬಿಡೆ ನೃಪಸೇನೆ ಭೀತಿಯ । ಲಾಯುಧದಲಿ ಕಟ್ಟಿದನು ಪಾರ್ಥನ। ವಾಯುಜನ ಕರಣೇಂದ್ರಿಯಾಶ್ವಂಗಳನು ಕಲಿಕರ್ಣ ॥೧॥ ಎಲೆ ಮುರಾಂತಕ ಸಾಕು ರಥದಿಂ । ದಿಳಿ ಸುದರ್ಶನವೆಲ್ಲಿ ಚಾಪವ । ಕಳೆದುಕೋ ಕೌಮೋದಕಿಯ ಹಿಡಿ ಹಾಯ್ಕು ವಾಘೆಯವ ॥ ಉಳುಹುವವರಾವಲ್ಲ ಕೊಳ್ಳೆನು । ತಳವಿಯಲಿ ಕೈಮಾಡಿ ಕೃಷ್ಣನ । ನಳುಕದೆಚ್ಚನು ನೂರುಶರದಲಿ ಕರ್ಣ ಬೊಬ್ಬಿರಿದು ॥೨॥ ಜೋಡಿನಲಿ ಸೀಸಕದ ಮೇಲ । ಕ್ಕಾಡಿದವು ಕವಲಂಬು ಕವಚವ । ತೋಡಿ ನಟ್ಟವು ನೊಕಿದವು ನಾರಾಚ ಗರಿಸಹಿತ ॥ ನೋಡಲೀವ್ಯಥೆಯುಂಟೆ ಭುವನದ । ಗೂಡು ಕೃಷ್ಣನ ದೇಹವಿದು ನಾ । ಡಾಡಿಗಳ ನಾಟಕವಲೇ ನರನಾಥ ಕೇಳೆಂದ ॥೩॥ ಏನ ಹೇಳುವೆ ಹೂಡಿದನು ಸಂ । ಧಾನದಲಿ ರಥಹಯವ ವಾಘೆಯ । ಜೀನಗೆಲಸದ ಹಕ್ಕರಿಗೆಯನು ನೊಗನ ಜೊತ್ತಿಗೆಯ ॥ ಭಾನುಸುತ ಮುರಿಯೆಚ್ಚ ನಿಮಿಗಿ । ನ್ನೇನುಹದನ್ಯ ಹನುಮ ಲಂಕೆಯ । ದಾನವರು ನಾವಲ್ಲೆನುತ ಕೈಮಾಡಿ ಬೊಬ್ಬಿರಿದ ॥೪॥ ಸ್ವೈರಿ ಸರ್ಜನ ಶಿವನೊಡನೆ ನೀ । ಹೋರಿದಾತನೆ ನಿನ್ನ ಕೊಲುವೊಡೆ। ತೀರದೇ ತಪ್ಪೇನು ತಳುವಿತು ಹೇಳಲೇನೆನುತ ॥ ಕೂರಲಗಿನಂಬುಗಳ ಹಿಳುಕಿನ । ಸಾರವನು ಮುದ್ರಿಸಿದನುದಯದ । ಲಾರನಿದಿರಲಿ ಕಂಡನೋ ಕಡುನೊಂದನಾಪಾರ್ಥ ॥೫॥ ಹರಿದುದಿಮ್ಮೈಜೋಡು ನೆತ್ತರಿ। ನೊರತೆ ನೊಕಿತು ಭದ್ರಪೀಠವ । ಲೊರಗು ನನೆದುದು ರೋಮದಿನಲಿ ಜೋಲಿದನು ಮೈಮರೆದು ॥ ಉರುಕುಗೊಂಡುದು ಕರಣಚಯವತಿ । ದೆರೆದ ಕಂಗಳ ರೋಮಕಂಪದ । ಲರಿದ ದಿಲ್ಲರೆಗಳಿಗೆ ಕೋಲಾಹಲವೆನಾಪಾರ್ಥ ॥೬॥ ಮತ್ತೆ ಕೇಳವನೀಶ ಭೀಮನ । ನೆತ್ತಿ ಬಿಟ್ಟವು ಬಾಣ ನಕುಲನ । ಕುತ್ತಿದವು ಸಹದೇವನೊಡಲಲಿ ಮಾಡಿದವು ಪಥವ । ಇತ್ತ ಸಾತ್ಯಕಿ ಚೇಕಿತಾನಕ । ನುತ್ತಮೌಂಜಶಿಖಂಡಿದಳಪತಿ । ಕೆತ್ತಿತೊಡಲಿನ ಜೋಲಿನಲಿ ಹೊರಳಿದರು ಹುಡಿ ನೆನೆಯೆ ॥೭॥ ಒಸಗೆಯೊಡೆದುದು ನೆಲನ ದಿಕ್ಕಿನ । ಬೆಸುಗೆ ಬಿಡೆ ನಿಸ್ಸಾಳತತಿ ಗ । ರ್ಜಿಸಿದವುಬ್ಬಿದಬೊಬ್ಬೆಯುಡರಿತು ಧ್ರುವನಮಂಡಲವ ॥ ಅಸಮಭುಜಬಲ ಫೂತುರೇ ಸಾ । ಹಸಿಗ ಮಝರೇ ಭಾಪುರೇ ಧಣುಧಣು । ವಿಷಮರಣಸರಸಿಂಹ ಜಾಗೆಂದುದು ಭಟಸ್ತೋಮ ॥೮॥ ಜನಪ ಕೇಳೈ ಮತ್ತೆ ಸುತಸೋ । ಮನಶತಾನೀಕಾದಿ ಪುತ್ರನಂ । ದನರನೈವರನೆಚ್ಚ ಬೆರಸಿದ ನರಸುಘಟ್ಟನಲಿ ॥ ಅನಿಲಜನ ಮಗುಳೆಚ್ಚ ಪಾಂಚಾ । ಲನ ವಿಭಾಡಿಸಿ ಸರಳಿನಲಿ ಧ್ಯುಂ । ಫೊನ್ನೆಯ ಬೋಳೆಯಸರಿಯ ಸುರಿದುದು ಕರ್ಣನವಮೇಘ ॥೯॥ ಸಾಲಝಲ್ಲರಿಗಳ ಪತಾಕಾ । ಜಾಲವನು ಚಾಮರವ ಗೋವಳಿಗೋಲ ಡೊಂಕಣಿಗಳ ಕಣೆಯ ಸೀಗುರಿಯ ಸಿಂಧಗಳ ॥ ಧೂಳಿಪಟ್ಟವಮಾಡಿದನು ಮಿಡುಕು । ಳ್ಳಾಳ ಸದೆದನು ಗಜರಥಾಶ್ವದ । ಮಾಲೆಯನು ಮುತ್ತಿದುದು ಕರ್ಣ ಶಿಲೀಮುಖವ್ರಾತ॥

ಅರೆಸ ಕೇಳಾನರನನಾಮುರ । ಹರನಸಾಕಪಿವರನಸಾರಥಿ । ತುರಗನಿಕರವನಾಥನುವ ಟೆಕ್ಕೆಯುವ ಕಪಿವೆ ರನ ॥ ಹುರುಳುಗೆಡಿಸಿದಭುಜಪರಾಕ್ರಮ । ದುರಿಯೊಳಗೆ ಬಿಡೆ ಕಾಶಿಹಗೆತರ । ಲಿರೆ ನಿರೂಧಿಸಿ ಧನುವ ನಿಜಶರನಿಕರವನು ಕರ್ಣ ॥ ೧೧ ॥ ಹೇಳಲರಿಯೆನು ವಿಕ್ರಮಾಗ್ನಿ ಛ । ಡಾಳಿಸಿದುದಡಿಗಡಿಗೆ ಸೇನಾ । ಜಾಲವನು ಬೇಳಿದನು ಕೂರಂಬುಗಳ ಕೆಂಡದಲಿ ॥ ಆಲಿಗಳು ಸವಿನೋಡಲಿಂದಿ । ನ ಕಾಳಗವ ನೋಡುವೊಡೆ ಕುರುಭೂ । ಪಾಲಕನ ಬರಹೇಳು ಬರಹೇಳೆನುತ ಬೊಬ್ಬಿರಿದ ॥ ೧೨ ॥ ಶರವಳೆಗೆ ಮುಖದಿರುಹಿ ಕಾಲಾ । ಳ್ತುರಗಸೇನೆಯು ಮರೆಗೆ ಸಾರಿತು । ತುರಗದಳ ಬಗಿದಿಂಬುಗೊಂಡುದು ಕರಿಘಟಾವಳಿಯ ॥ ಕರಿಘಟಾವಳಿ ಕೋಲಿನುಬ್ಬಿಗೆ । ತೆರಳಿದವು ತೇರುಗಳ ಮರೆಯಲಿ ಹೊರಳಿ ಯೊಡೆದುದು ತೇರು ಥಟ್ಟು ನಿಹಾರದೆಸುಗೆಯಲಿ ॥ ೧೩ ॥ ಕೋಲ ಕೋಳಾಹಳಕೆ ತೇರಿನ । ಗಾಲಿಗಳ ನೊಡ್ಡಿದರು ಹರಿಗೆಯ । ಹೇಳದಿರು ಹಂಮುಗೆಯ ಕೊಯ್ದೊಡ್ಡಿದರು ರೆಂಚೆಗಳ ॥ ಮೇಳಯುವ ಮಾಡಿದರು ತಂಬುಗೆ । ನೂಲಹರಿಗೆತನುತ್ರಸೀಸಕ । ಜಾಲಗುಳಹಕ್ಕರಿಕೆಹಲ್ಲಣಬಾಹುರಕ್ಷೆಗಳ ॥ ೧೪ ॥ ಉರಿಯ ಮಳೆಗಾಲದಲಿ ದಡ್ಡಿಯ । ನರಗಿನಲಿ ಮಾಡಿದರು ಮಿಗೆ ಕಾ । ರಿರುಳು ಕೋಟೆಯ ರಚಿಸಿದರು ಗಡ ರವಿಯುಮುತ್ತಿಗೆಗೆ ॥ ಹರಿಗೆಸೀಸಕಜೋಡುಕಾವವೆ । ಕೆರಳಿದೊಡೆಕರ್ಣಾಸ್ತ್ರಕೀನಿ । ಬ್ಬರದ ರಣದುಬ್ಬಟೆಯ ಕಂಡುಬ್ಬಿದನು ಕುರುರಾಯ ॥ ೧೫ ॥ ನೋಡಿರೈ ನಿಮ್ಮವರ ದಳ ಕೈ । ಮಾಡುತಿದೆ ನಮ್ಮಾತನನು ನೀವ್ । ಖೋಡಿಗಾಬಿರಿ ನಿಮ್ಮ ಪವನಜಪಾರ್ಥರುಬ್ಬಟೆಯ ॥ ನೋಡಿರೈ ಲೇಸಾಗಿ ನೀವ್ ಮಾ । ತಾಡಬಾರದೆ ನಿಮ್ಮನಾಲಿಗೆ । ಗೂಡುಗೊಂಡುದೆ ಯೆಂದನವನಿಪನಾಕೃಪಾದಿಗಳ ॥ ನರನ ಬಿಗಿದುದು ಮೂರ್ಛೆ ಭೀಮನ । ಹರಣಕೊರಳಲಿ ಮಿಡುಕುತಿದೆ ಮುರ । ಹರನ ವೃಷುರೊಯ್ಯಾಳಿಯಿದೆ ಮೂಗಿನಲಿ ಮೋಹರಿಸಿ ॥ ಬಿರುದಸಾತ್ಯಕಿನಕುಲಸಹದೇ । ವರಿಗದಾವುದು ಹದನು ಬಲುಧರೆ । ಧುರವ ನೋಡಿರೆ ನೀವು ಯೆಂದೆನು ನಗುತ ಕುರುರಾಯ ॥ ೧೬ ॥ ಕೂಡೆ ಮಕ್ಕಳನಿಕ್ಕಿ ತಂದೆಗಳೋಡುತಿದೆ ಸರಳಂಗೆ ತಮ್ಮನ । ನೀಡಿ ತೋರಿಸಿ ಜಾರುತಿದೆ ಯಣ್ಣಂದಿರಾದವರು ॥ ಓಡುತಿದೆಯಾಳೊಡೆಯನನು ಬಿಸು । ಟೋಡಿ ತಾಯಿಗೆ ಮಕ್ಕಳಾಗದೆ । ಕೂಡಿ ಮುಂಮುಳಿಮುಸುಗುತಿದೆ ಗುರುಸೂನು ನೋಡೆಂದ ॥ ೧೭ ॥ ಅರಿಬಲದ ಕಡುಗೇಡು ಹಬ್ಬಿತು । ಸುರಟಲವನಕಟಕಟ ನೋಡೈ । ಸುರಪತಿಗೆ ದುಮ್ಮಾನವೆಡಿಸಿತಲೇ ಮಹಾದೇವ ॥ ಸುರನದೀಜದ್ರೋಣರೀಪರಿ । ಪರಮಶೌರ್ಯಪಲಿಸಿದುಗಿದೊಡೆನಿ । ಷ್ಠುರದನುಡಿಯೆನ್ನದಿರು ಕಂಡುದನಾಡಬೇಕೆಂದ ॥ ೧೮ ॥ ಉಂಟು ಜೇಯ ವಿರೋಧಿಬಲಮತಿ । ಕಂಟಣಿಸುತಿದೆ ಪಾಂಡುಪುತ್ರರ । ನೆಂಟರಿಷ್ಟರಿಗಾದುದೈ ದುಮ್ಮಾನ ಹುಸಿಯಲ್ಲ ॥ ಎಂಟುಮಡಿ ನಿಮಗಾಗೆ ಜಯ ಹದಿ । ನೆಂಟುಮಡಿ ಜಯುಮವರಸೇರುವು । ದುಂಟು ಹುಸಿದರೆ ಕೂಡಾಸಿಕೊಡುವೆನು ತನ್ನನಾಲಿಗೆಯ ॥ ೨೦ ॥ ಮುಗುಳುನಗೆಯೊಬ್ಬನಲಿ ಸವಿವಾ । ತುಗಳ ರಸವೊಬ್ಬನಲಿ ಕಡೆಗ । ಣ್ಣುಗಳ ಮಿಂಚೊಬ್ಬನಲಿ ಸೇವುರವಳೆಮೊಳಗುಸಹಿತ ॥ ಸೊಗಸು ಬೇರೊಬ್ಬನಲಿ ಸ್ನೇಹದ । ತಗಹು ಮತ್ತೊಬ್ಬನಲಿ ಸತಿಯರ । ವಿಗಡತನಕಿದುಸಹಜ ಜಯವಧುಜಾರೆ ನೋಡೆಂದ ॥ ೨೧ ॥ ಒಂದು ಕಡೆಗಣ್ಣಿನಲಿ ಕೌರವ । ವೃಂದವನು ನೋಡುವಳು ಕೈಯೊತ । ನೊಂದು ಕಡೆಗಣ್ಣಿನಲಿ ಮಾತಾಡಿಸುವಳಿಂಬಲವ ॥ ಇಂದುಜಯವಧು ದಿಟ ಪತಿವ್ರತೆ । ಯೆಂದು ಬಗದೈ ಭೂಪ ಹುಸಿ ಹೋ । ಗೆಂ

ದು ಗುರುಸುತ ಜರೆದು ಹೊಕ್ಕನು ತನ್ನ ಮೋಹರವ ॥ ೨೨ ॥ ಅರಸ ಚಿತ್ತೈಸಿತ್ತಲರ್ಜುನ । ಗರೆ
ಮುಗಿದಕಣ್ಣಾರಳ್ದವಂತಃ । ಕರಣಪಂಚೇಂದ್ರಿಯಕೆ ಬಿಟ್ಟುದು ತಗಹು ಕಳವಳದ ॥ ಮುರಿಹುಮು
ರಿದೆಡಬಲದತನ್ನವ। ರಿರವನೀಕ್ಷಿಸಿಕೋಪಶಿಖಿಯು।ಬ್ಬರದಲಿಬ್ಬಗಿಯಾದುದಂತರ್ಭಾವವಡಿಗಡಿಗೆ ॥೨೩॥
ಕಲಶಜಲದಲಿ ಮೈಯ ನೆತ್ತರ । ತೊಳೆದು ಹೊಸಮಡಿವರ್ಗದಲಿ ಮುರಿ । ಮಲಕ ಬಿಗಿದನು ಧರಿಸಿ
ಸಾದುಜವಾಜಿಪರಿಮಳವ ॥ ಲುಳಿಯಹೊಸಸೀಸಕವ ಕವಚವ। ನಳವಡಿಸಿ ಕರ್ಪುರದ ಕವಳದ। ಹಳುಕ
ಹಾಯಿಕಿಕೊಳುತ ಕೊಂಡನು ಮತ್ತೆ ಗಾಂಡಿವವ ॥ ೨೪ ॥ ನಿಮ್ಮಸಿರಿಯೊಡಲಿನಲಿ ಜೋಡಿನ।ಹಂ
ಮುಗೆಯ ನೋಡಂಬು ಹಾಯ್ದವು । ನಮ್ಮ ದುಷ್ಕೃತವೈಸಲೇ ನಿಮಗೆತ್ತಲೀವ್ಯಸನ ॥ ನಿಮ್ಮಡಿಗ
ಳೇ ಬಲ್ಲಿರಂತಿರ । ಲೆಮ್ಮ ರಾಜ್ಯದ ಹುದುವೆ ನೊಂದನು । ನಮ್ಮಹನುಮನೆನುತ್ತ ಹುಂಮಲಮುರು
ಗಿದನು ಪಾರ್ಥ ॥ ೨೫ ॥ ಸಾಕದಂತಿರಲಾಹವಕೆ ಬರ । ಲೇಕೆ ಕಬ್ಬಿನಬನವೆ ಬಾಣಾ । ನೀಕಕಭಿಮು
ಖರಾಗಿ ಸಾವರು ನೋವರೆದಕೇನು ॥ ಆಕುಠಾರನಲೀಕ್ಷಣಕೆ ಕೈ । ತೂಕದಲಿ ಕಾದೈ ರಣಾಗ್ರದೊ। ಳಾ
ಕರಿಸು ಜಯಸಿರಿಯನೆಂದನು ಕೃಷ್ಣನರ್ಜುನನ ॥ ೨೬ ॥ ಹರಿಸು ರಥವನು ವೈರಿಯುರುಬೆಗೆ । ತೆರ
ಳುತಿದೆ ನಮ್ಮವರು ಕರ್ಣನ। ಕೊರಳ ಬಾಯಲಿ ಕೀಲಿಸುವೆನೀಶರಸಲಾಖೆಗಳ ॥ ಅರಸ ಕೇಳಾಮಾತು
ಹಿಂಚಿತು । ನರನ ರಥ ಜೋಡಿಸಿತು ಕರ್ಣನ । ಸರಿಸದಲಿ ಜೋಡಿಸಿತು ಪಾಂಡವಸೇನೆ ನಿಮಿಷದ
ಲಿ ॥ ೨೭ ॥ ಎಲೆಲೆಕರ್ಣ ಕಿರೀಟಿಯುರುಬೆಗೆ । ನಿಲುವೊಡರಿದೈ ಹಾವನರೆಗಡಿ । ದುಳುಹಿ ಕೆಡಿಸಿದೆ
ಪಾಪಿ ರಾಯನ ರಾಜಕಾರಿಯವ ॥ ತೊಲಗಿಸುವೆನೇ ರಥವನೆನೆ ತೆ । ಕ್ಕಳಿಸಿ ಜರೆದನು ಕರ್ಣಶಲ್ಯನ
ನೆಲವೊ ಫಡಹೋಗೆನುತ ಮುರಿದೆಚ್ಚನು ಧನಂಜಯನ ॥ ೨೮ ॥ ಎಡೆಯಲೀತನ ಸರಳಸಾರವ। ಕಡಿ
ದು ಕೈಯೊಡನೆಚ್ಚ ಮಗುಳೆ। ಚ್ಚಡಿಗಡಿಗೆ ಬಿಡದೆಚ್ಚು ಪುನರಪಿಯೆಚ್ಚು ಬಿಡದೆಚ್ಚು ॥ ಪಡಿಮುಖಕೆ
ದಾವಾಗ್ನಿಯದನಿಂ । ಮಡಿಸಿ ಬೀಸುವಭೇದಪವನನು । ಸುಡದೆ ಬಿಡುವನೆ ಕಲಿಧನಂಜಯನಹಿತತೃಣ
ವನವ ॥ ೨೯ ॥ ಒದೆದು ಕವಚವನೊದೆದು ಗರಿದೋ । ರಿದವು ಮೈಯಲಿ ಕೂಡೆ ಮೊನೆದೋರಿ ।
ದವು ಬೆನ್ನಲಿ ಕರ್ಣನನದ್ದನು ರುಧಿರವಾರಿಯಲಿ ॥ ಉದುರಿದವು ಕೈಯಂಬು ಬಲುಕಾ । ರಿದನು ರ
ಕುತವ ಕಳಕಳದಕಂ । ಪದಲಿ ಝೋಂಪಿಸಿ ಮಲಗಿದನು ಮಣಿಮಯದ ಗದ್ದುಗೆಯ ॥ ೩೦ ॥ ತೋ
ರಿಸಾ ನಿನ್ನೊಡೆಯನೋಲೆಯ । ಕಾರತನವನು ನಮ್ಮ ಬಲವನು। ಮೂರುಮೂಲೆಯಹಾಯ್ಸಿಬೆಚ್ಚಿ
ಸಿ ಗೆಲಿದಗರುವನಲಾ॥ ಜಾರಿದವು ಬಿಲ್ಲಂಬು ಬಿದ್ದವು । ವೀರರಲಿ ಹಳಚಿಸಿದೈ ಕೈಯಲಿ । ಮೋರೆಗೇತ
ಕೆ ಮುರುಕವೆಂದನು ಭಾನುನಂದನನ ॥ ೩೧ ॥ ಮರಳಿ ಶಲ್ಯನನೆಚ್ಚನಾತನ । ಕರದ ಧನುವನು ಕಡಿದು
ಸಾರಥಿಯ । ತುರಗದೊಡಲಲಿ ಹೂಳಿದನು ಹೇರಾಳದಂಬುಗಳ ॥ ಹೊರೆಯ ಹಡಪದ ಚಾಹಿಯರ
ಚಾ । ಮರಿಗರನು ಸೋಯಿಸಿದ ಗೆಲವಿನ । ಗರುವತನವನು ಬದ್ದಿಸಹಿತುಗುಳಿಚಿದನಾಪಾರ್ಥ ॥೩೨॥
ದಳಪತಿಯ ದುಮ್ಮಾನದಲಿ ಕಳ । ವಳಿಸಿತೀಚೆಯ ಸೇನೆ ಪಾರ್ಥನ। ಹಿಳುಕು ಹೊಕ್ಕವು ಹರಹಿ ಶಿವಿದ
ವು ರಾಯನಿದಿರಿನಲಿ ॥ ಹಲವುಮಾತೇನಾಕೃಪನ ಸಾ । ಬಲನನಾಗುರುಸುತನನಾಕೌ । ತಲನನಾಕೃತವ
ರ್ಮಕನ ಮುರಿಯೆಚ್ಚುಬೊಬ್ಬಿರಿದ ॥ ೩೩ ॥ ಸಿಕ್ಕಿದನು ಕುರುರಾಯನಾದುದು । ಮಕ್ಕಳಾಟಿಕೆ ಗು
ಣನದೀಸುತ । ರಿಕ್ತ ಹಾಯ್ಸರು ನಮ್ಮ ದಳಪತಿ ಕಾದಿ ಬಳಲಿದನು ॥ ಹೊಕ್ಕನರ್ಜುನನಿವರದರ್ಪವ ।

ನೊಕ್ಕಲಿಕ್ಕಿದೊಡಿನ್ನು ಪರಿವಾ । ರಕ್ಕೆ ಬಂದುದು ಪಂತವೆಂದುಲಿದುದು ಭಟಸ್ತೋಮ ॥ ೩೪ ॥ ಅ
ರಸಚಿತ್ತ್ಯಸಾರುಸಾವಿರ । ವರಮಹಾರಥರೌಂಕಿದರು ಝು । ಲ್ಲರಿಯ ಝಾಡಿಯ ಸೆಳೆಯ ಸಿಂಧದ
ಸುಳಿಯ ಸೀಗುರಿಯ ॥ ಬಿರಿಯೆ ನೆಲನಳ್ಳಿರಿವವಾದ್ಯದ । ಮುರುಜಡಿಂಡಿಮಪಟಹದಾಡಂ। ಬರದರವೆ
ವಡಗಿತ್ತು ಕೈವಾರಿಗಳರಭಸದಲಿ ॥ ೩೫ ॥ ಫಡಫಡೆಲವೋ ಪಾರ್ಥ ರಾಯನ। ತುಡುಕಬಹುದೇ ಕೂಟ
ಗಿರಿಯಲಿ । ಕಡಲು ಮುಳುಗುವದೇನು ಸದರವೆ ಶಿವಮಹಾದೇವ ॥ ಹಿಡಿ ಮಹಾಸ್ತ್ರವನಿನ್ನು ಮುಂ
ದಡಿ । ಮಿಡುಕಿದೊಡೆ ನಮ್ಮಾಣೆಯೆಂದವ । ಗಡಿಸಿ ನೂಕಿತು ನಿನ್ನವನ ಮನ್ನಣೆಯ ಪರಿವಾರ॥೩೬॥
ಜನಪ ಕೇಳ್ಕರ ಕುತಜಲದಲಿ । ನನೆದನೆಲ ಹುಡಿಮಸಗಿ ಕೆಂಧೂ । ಳಿನಲಿ ಕತ್ತಲಿಸಿದುದು ದಿಗ್ಭ್ರಮೆ
ಯಾದುದಡಿಗಡಿಗೆ ॥ ಅನಿಬರಾವೆಡೆ ಕರ್ಣನೋ ಫಲು । ಗುಣನೊ ಪಾಂಡವಬಲವೊ ನಿನ್ನಾ । ತನೊ
ನಿಧಾನಿಸಲರಿಯನೆಂದನು ಸಂಜಯನು ನಗುತ ॥ ೩೭ ॥ ಬಳಿಗೆ ಹೆಚ್ಚಿದಧೂಳಿನುಬ್ಬರ । ಮುಳಿದವೊ
ಲು ವಿಜಯಾಸ್ತ್ರಹತಿಯಲಿ । ಹಿಳಿದಕರಿನ ತುರಗದೊಡಲರುಣಾಂಬುಪೂರದಲಿ ॥ ಕಳಚಿತಾಕೆಂಧೂ
ಳಿ ಬಾಣಾ । ವಳಿಯ ಕತ್ತಲೆಯೊಳಗೆ ಕಾಣೆನು । ದಳದೊಳಾರಾರೆಂದು ಮತ್ತರೆಘಳಿಗೆಮಾತ್ರದ
ಲಿ ॥ ೩೮ ॥ ಬೆರಸಿ ಹೊಯ್ದರು ರಾವುತರು ರಥ । ತುರಗತತಿ ಯಿಟ್ಟಣಿಸಿದವು ಮದ । ಕರಿಗಳಂಗೈ
ಸಿದವು ಪಡಿಚಾಚಿದವು ಮುಂಕಣಿಗೆ ॥ ಹರಿಗೆಗಳ ಶಿರಕೊಡ್ಡಿ ಕಕ್ಕಡೆ । ಪರಶುಮುಸಲಮುಸುಂಡಿಗಳ
ಕೊಂ । ಡಿರದೆ ತರುಬಿದನರ್ಜುನನ ರಥದೆರಡುಬಾಹೆಯಲಿ ॥ ೩೯ ॥ ಅರಸ ಕೇಳು ಜಯದ್ರಥನ ಮೋ
ಹರದ ಮಧ್ಯದೊಳಂದು ಸಿಲುಕಿದ। ನರನ ರಥವೀಹೊಳ್ಳುಗರ ಹೋರಟೆಗೆ ಹೆದರುವುದೆ ॥ ಕರಿಘಟಾ
ವಳಿಗೊಂದುಸರಳಾ । ತುರಗದಳಕೊಂದಂಬು ಬಳಿಕೆರ । ಡೆರಡುಶರದಲಿ ಕೊಚ್ಚಿದನು ಕಾಲಾಳುತೇ
ರುಗಳ ॥ ೪೦ ॥ ಆಳುಮುರಿದುದಲೇ ಮಹಾರಥ । ರೇಳಿರ್ಕೈ ನೀವಾರುಸಾವಿರ । ಮೇಲುದಳದವರಾ
ಕೆವಾಳರು ನಿಮ್ಮಘಟ್ಟನಲಿ ॥ ಕಾಳಗದಪರಿಲೇಸು ಕರ್ಣನ । ಸೋಲದಲಿ ಸೀವರಿಸದಿರಿ ಭೂ । ಪಾಲ
ನಾಣೆ ದೊತಾರರಹಿರೆನುತೆಚ್ಚನಾಸಾರ್ಥ ॥ ೪೧ ॥ ಬಾಣಹತಿಗುಕ್ಕುಡಿಸಿ ಸುಭಟ । ಶ್ರೇಣಿ ಹೆದರಿತು
ಶೌರ್ಯನಗರದ । ವಾಣಿಯರು ಹೊಕ್ಕೆಚ್ಚು ಹೋಗಾಡಿದರು ಪತಿರಿಣವ ॥ ಗೋಣಕೊಯ್ಲಿನ ಕಾರ
ಣದ ಮುಂ । ಗೇಣಿಕಾರನು ಮೊಳಗಿದನು ಫಡ । ಕೇಣವಿನ್ನೇಕೆನುತ ಕೈದೋರಿತು ಭಟವ್ರಾತ॥೪೨॥
ಸೀಳಿದನು ಸಮರಥರ ಸುಳಿಗೊಂ । ಡಾಳೆ ಸದೆದನು ಸವರಿದನು ಭೂ । ಪಾಲಪುತ್ರನನಖಿಳದೇಶದ್ವೀ
ಪಪಾಲಕರ ॥ ಆಳು ಮುರಿದುದು ಮಾನಹಾನಿಯ । ಹೇಳುವೊಡೆ ನಗೆಯಿಂದು ಕುರುಬಲ । ಜಾಲದ
ಲಿ ಜಿಳ್ಳುಗರು ಬಂದರು ಭಂಗಜಲಧಿಯಲಿ ॥ ೪೩ ॥ ಬಿಡುದಲೆಯಲೋಡಿದರು ಬಿರುದಿನ । ತೊಡರ
ಬಿಸುಟರು ವಾಹನಂಗಳ । ಗೊಡವೆಬಿಟ್ಟುದು ನೆಲಕೆ ಕೈಯೊಡಗೊಟ್ಟು ಕೈದುಗಳ ॥ ಅಡಸಿದೀತನ ಸ
ತ್ಪ್ರತಾಪದ । ಕಡುಬಿಸಿಲ ಬೇಸಿಗೆಗೆ ವೀರರ । ಮಡುವುಗಳು ಬತ್ತಿದವು ಮೋರೆಗಳೊಣಗಿ ಪಟುಭಟ
ರ ॥ ೪೪ ॥ ಹೋಗದಿರಿಹೋಗದಿರಿ ದಳಪತಿ । ಯಾಗುಹೋಗರಿಯದೆ ನೃಪಾಲನ । ಮೊಗನಾರಿಗೆ
ಮಾರಿದಿರಿ ಕೊಂಬವರು ಸಾವಲ್ಲಾ ॥ ಈಗರುವರೀಷರಿ ಭಲಾಯನ । ಯೋಗಸಿದ್ಧರೆ ಸಾಹಸಿಗೆಟ್ಟೈ ।
ಬಾಗೆನುತ ಬೆಂಬತ್ತಿ ಹುಡಿಗುಟ್ಟಿದನು ಕಲಿಪಾರ್ಥ ॥ ೪೫ ॥ ಇವರ ಹೆದಸಿದು ಕರ್ಣನಾಡಿದ । ಕಣ
ದಿಶೆಯ ಬೆಸಗೊಳ್ಳಿರ್ಕೈ ಕೌ । ರವನ ಗರುವಗ್ರಾಸಕಿವ ರಾಹುಗಳು ಲಟಕಟಿಸಿ ॥ ನಿವಗೆ ಬವರದೊ

ಳೊಂದುಮುಷ್ಟಿಗೆ । ರಮಣವುಂಟೇ ಹಾಯ್ಕಿ ನಿಮ್ಮಾ । ಯುಮನು ನೋಡುವೆನೆನುತ ಕರೆದನು ಕೃಪನ ಗುರುಸುತನ ॥ ೪೭ ॥ ಅರಸ ಕೇಳಾಕ್ಷಣಕೆ ಮುಗ್ಗಿತು । ಮರೆವೆ ನೆಗ್ಗಿತು ಭೀತಿ ಶೌರ್ಯದ ।ತಿರುಳು ಬಲಿದುದು ಕೋಪ ತಳಿತುದು ಕೋಡಿನೀರೇರೆ ॥ ಕರಣಪಲ್ಲವ ಪಾಡಿನಲಿ ಸಂ । ವರಿಸಿಕೊಂಡುದು ವೀರರಸವು। ಬ್ಬರಿಸಿ ಸರ್ವೇಂದ್ರಿಯವ ಮುಸುಕಿತು ನಿನ್ನ ದಳಪತಿಯ ॥ ೪೮ ॥ ನೋಡಿದನು ಕೆಲಬಲನನುಗಿದೀ । ಡಾಡಿದನು ನೆಟ್ಟಂಬುಗಳ ಹರಿ । ಜೋಡತೆಗೆದನು ತೊಳೆದನಂಗೋಪಾಂಗಶೋಣಿತವ ॥ ಕೂಡೆ ಕತ್ತುರಿಗಂಧದಲಿ ಮುಳು । ಗಾಡಿ ದಿವ್ಯದುಕೂಲವನು ಮೈ । ಗೂಡಿ ಮೆರೆದನು ಕರ್ಣನನುಪಮದಿವ್ಯತೇಜದಲಿ ॥ ಭೋಳವಿಸಿದನು ಕರ್ಣಶಲ್ಯನ ।ಸೂಳವಿಸಿದನು ಭುಜವನುಬ್ಬಿನೊ । ಳಾಳವಿಸಿದನು ಚಾಪಗಾನಸ್ಥಾನಕವನರಿದು ॥ ಮೇಳವಿಸಿದನು ರಥವ ಕೆಲದಲಿ । ಬೋಳೆಯಂಬಿನ ಹೊದೆಯುಲಹಿತನ । ಪಾಳಿಸುವಸರಳಿದೆ ಯೆನುತ ತೂಗಿದನು ಕಲಿಕರ್ಣ ॥ ೪೯ ॥ ಘಡಘಡೆಲವೋ ಪಾರ್ಥ ಜೂಜಿಂ । ಗೊಡಬಡಿಕೆ ನಿನಗೇಕೆ ಬಿನುಗುಗ । ಳೊಡನೆ ಹೆಕ್ಕಳಬೇಡ ಹೋಗದಿರಿತ್ತಲಿದಿರಾಗು ॥ ಹಿಡಿದಮುಷ್ಟಿಯ ನಿನ್ನ ರಸಣವ । ಕೊಡಹಿ ನಿನ್ನದವೆರಳ ಕೊಳ್ಳದೆ । ಬಿಡುವೆನೇ ತಾನೆನುತ ಕರೆದನು ಕರ್ಣನರ್ಜುನನ ॥ ೫೦ ॥ ಅರಸಕೇಳೈ ಕರಿಯ ಗರ್ಜನೆ । ಗುರುಮಣಿಪಕೇಸರಿಯವೊಲು ಕೃಪ । ಗುರುಸುತರ ಬಿಟ್ಟತ್ತ ಹರಿದನು ಹಗೆಯ ಸಮ್ಮುಖಕೆ ॥ ತಿರುಪುಸದರವೆ ನಿನಗೆ ಗತಿ ಕಾ । ಹುರಕಣಾವಳಿಕಂಠಗತಬಾ । ಹಿರನು ನೀನೆಲೆಕರ್ಣ ಘಡ ಹೋಗೆನುತ ತೆಗೆದೆಚ್ಚ ॥ ೫೧ ॥ ಭರತಭಾಷೆಯಲಾವಿಧಾವಂ । ತರುವಿರಾಟನ ಮನೆಯಲಿದನಾ । ರರಿವರ್ಕ್ಕೆ ನಾವೆತ್ತಬಲ್ಲೆವು ನಿಮ್ಮ ವಿದ್ಯೆಗಳ ॥ ಪರರಮಾತಂತಿರಲಿ ಬಾಹು । ಸ್ಫುರಣವಭಿನವವಂಗಹಾರದ । ಪರಿಯ ತೋರಾ ಯೆನುತ ತೆಗೆದೆಚ್ಚನು ಧನಂಜಯನ ॥ ೫೨ ॥ ಝಳಪಿಸಿದುದೆರಡಂಕದಲಿ ನಿ । ಷ್ಫಲಿತತೇಜಃಪುಂಜವಿಬ್ಬರ । ಹಳಹಳಿಕೆ ಹಬ್ಬಿದುದು ಗಬ್ಬರಿಸಿದುದು ಗಗನದಲಿ ॥ ಹಿಳುಕನುಗಿದವೊ ಹಿಳುಕ ಮುಂಮೊನೆ । ಯಲಗನುಗುಳುವಕಣೆಗಳಲಿ ಕಣೆ । ತಳಿತವೋ ತ್ರೈಲೋಕ್ಯ ಬಾಣಾದ್ವ್ಯೈತವಾಯ್ತೆಂದ ॥ ೫೩ ॥ ಪರಶುರಾಮನ ಕಾರ್ತವೀರ್ಯಾರ್ಜುನ । ವರದಿಳೀಪನ ದುಂದುಮಾರನ । ಭರತದಶರಥನಹುಷನಳರಾಘವನ ಲಕ್ಷ್ಮಣನ ॥ ಸರಿಮಿಗಲು ಕಲಿಪಾರ್ಥನೀಗಳಿ । ನರಸುಗಳ ಪಾಡೇಕಿರೀಟಿಯು। ಧರೆಗೆನುತ ಕೊಂಡಾಡಿತಮರಸ್ತೋಮವರ್ಜುನನ ॥ ೫೪ ॥ ತಾರಕನ ಜಂಭನ ನಿಕುಂಭನ । ತಾರಕಾಕ್ಷನ ಕಾಲನೇಮಿಯ। ವೀರಮಹಿಷಾಸುರನ ಬಾಣಾಸುರನ ರಾವಣನ ॥ತೋರಹತ್ತರ ಬಾಹುಬಲವದು। ಸೇರಿತೀಕರ್ಣಂಗೆ ವಿಕ್ರಮ। ರಾರುಪಡಿಯ್ಯೈ ಕದನದಲಿ ಸರಯೆಂದುದಮರಗಣ ॥ ೫೫ ॥ ಪೂತುಮಝರೇ ಕರ್ಣವಿಶಿಖ । ವ್ರಾತವೊಂದಿನಿತಿಲ್ಲ ಲಂಕೆಯ । ಪಾತಕರ ಚಾಪಳವ ಕಂಡೆನು ಚಾಪತಂತ್ರಕವ ॥ ಈತನತಿಶಯಬಾಣರಚನಾ। ಖ್ಯಾತಿಯಿದು ಭೀಷ್ಮಾದಿಸುಭಟ । ವ್ರಾತಕಲ್ಲಿಯದೆಂದು ತಲೆದೂಗಿದನು ಹನುಮಂತ ॥೫೬ ॥ ಅದ್ದುದು ಮಸ್ತಕದಲಿ ಹೊಡೆಮಗು । ಳೆದ್ದುದೀಕುರುಸೇನೆ ತಡಿಯಲಿ । ಬಿದ್ದುದೈ ಸಂತೋಷಸಾರಕ್ಷೀರಜಲಧಿಯಲಿ ॥ ಗೆದ್ದನೈ ನಿನ್ನಾತನೊಸಗೆಯ । ಬಿದ್ದಿನರಲ್ಲೈ ನಾವು ಪರರಿಂಗೆ। ಬಿದ್ದುದೊಂದಪಘಾತಿಯೆಂದನು ಸಂಜಯನು ನಗುತ ॥ ... ... ॥ ೫೭ ॥

ಅಂತು ಸಂಧಿ ೨೪ಕ್ಕಂ ಪದ ೧೦೧೩ಕ್ಕೆ ಮಂಗಳಮಸ್ತು.

ಇಪ್ಪತ್ತ್ರೈದನೆಯ ಸಂಧಿ.

ಸೂಚನೆ ॥ ರಾಯಪರಬಲಮಥನ ಕೌರವ । ರಾಯಧರಣಿವರಾಹ ಕಲಿರಾ । ಧೇಯನೆಚ್ಚನು ರೌದ್ರದರ್ಪದ ಸರ್ಪಬಾಣವನು ॥

ಪದ ॥ ಹೇಳು ಸಂಜಯ ಹಗೆಗೆ ಬಿದ್ದವೆ! ತಾಳವಾವುದು ಕಿವಿಗಳೊಲಿದವು! ನಾಲಿಗೆಯು ನೋಡುವೆನು ವಚನಾಂಮೃತದ ಸವಿ ಹಿರಿದು ॥ ಜಾಳಿಸಿತೆ ಹಗೆ ಕರ್ಣ ಗೆಲಿದನೆ । ಕಾಳಗವನೀಮಾತುಗಳನೀ । ಹೇಳುತಿರೆ ಸಾಕೆಂದು ನುಡಿದನು ನಗುತ ನರನಾಥ ॥ ೧ ॥ ಅವನಿಪತಿ ಕೇಳುವೊಡೆಸಾವಿರ । ಕಿವಿಗಳೈದವು ನಿಮ್ಮ ಕರ್ಣನ । ಬವರದಲಿ ರೂಢಿಸಿದರೌದ್ರವರಾಜಕಾರಿಯವ ॥ ಸವಡಿವೆರಳಿನ ಸೇದುವಂಬಿನ । ತವಕಿಗನ ತಗ್ಗಿಸುವೆ ನಿಲ್ಲೆನು । ತವಗಡದ ಕೋಪದಲಿ ಕಿಡಿಕಿಡಿವೋದನಾಕರ್ಣ ॥ ೨ ॥ ವಿಾರಿತುರಿ ಸುಯ್ಲಿನಲಿ ಕಂಗಳು । ಹೇರಿದವು ಕಡುಗೆಂಪನೊಗಡಿಸಿ । ಕಾರಿದವು ರೋಮಾಳಿ ರೋಷಸ್ವೇದಬಿಂದುಗಳ ॥ ಕೌರಿಡಲು ಕುಡಿಮಿಾಸೆ ಕಾದುದು । ಮೋರೆ ಬದ್ಧ ಭ್ರುಕುಟಿಯಲಿ ಹುರಿಯೇರಿತಧಿಕ ಕ್ರೋಧತಾಮಸ ನಿನ್ನ ದಳಪತಿಯ ॥೩॥ ಉಗಿದನು ರಗಾಸ್ತ್ರವನು ಹೊಂಮುಖ । ಡಿಗೆಯೊಳಗೆ ಹೊರಕ್ಕೈಯ ಗಾಳಿಗೆ । ಹೊಗೆಯ ಹೊದರಿನ ಹೊರಳಿ ಹಬ್ಬಿತು ಕೂಡೆ ಖಿಡಿಯಿಡುತ ॥ ಗಗನಗಮನದ ನಿಖಿಳವಿಹಗಾ । ಳಿಗಳು ಬೆಂದವು ಗಾಢಗರಳದ । ಸೆಗೆಗಳುಕಿ ಸಲೆ ಮಸಗಿ ದಿವಿಜರ ಥಟ್ಟು ಕಳವಳಿಸೆ ॥೪॥ ಉಗಿಯೆಜಗ ಕಂಪಿಸಿತು ತಾರೆಯ । ನೊಗಡಿಸಿತು ನಭಜಲಧಿ ರತುನಾ । ಳಿಗಳನೋಕರಿಸಿತು ಕುಲಾದ್ರಿಗಳೊಲೆದವೆಡಬಲಕೆ । ದಿಗಿಭತತಿ ನಡನಡುಗೆ ಕಮಠನು ॥ ಬೆಗಡುಗೊಂಡೋಡಿದನು ನಭದಲಿ । ಭುಗಿಲಿಡಲು ಫಣಿಬಾಣ ಹೆದರಿಸಿತಖಿಲಲೋಕಗಳ ॥ ೫ ॥ ಬೆರಳಲಂಬನು ತೂಗಲುರಿಹೂಂ । ಕರಣೆಯಲಿ ಪಂಟಿಸಿತು ಸೂಯ್ಲಿನ । ಧರಧುರದ ಬೆಳ್ನೊರೆಯಲೊದಳೆಯ ವಿಷದಲಹರಿಗಳು ॥ ಉರವಣಿಸಿದವು ಗರಳರಸದು । ಬ್ಬರದ ಬೊಬ್ಬುಳಿಕೆಗಳ ಮುಸುಕದ । ಹೊರಳಿಹೊಗೆಗಳ ಛಟಛಟಧ್ವನಿ ಮಸಗಿ ತಡಿಗಡಿಗೆ ॥೬॥ ಹೊರೆಯವರು ಮರನಾದರಾರಥ । ತುರಗ ಲಟಕಟಿಸಿದವು ಅತಿನಿಬ್ಬರದ ಬೆರಗಿನೊಳದ್ದುಹೋದನು ಶಲ್ಯ ನಿಮಿಷದಲಿ ॥ ಉರಿ ಛಡಾಳಿಸಿ ಹೂಂಕೃತಿಯ ಪಂ । ಜರದೊಳಗೆ ಪಲ್ಲವಿಸಿ ತುಂಬಿದ । ಹೊರಳಿಹೊಗೆಯಂಬರವ ತುಂಬಿತು ರಾಯ ಕೇಳೆಂದ ॥೭॥ ಆವರಿಸಿಸಿದವು ಪುಷ್ಕಳಾವ । ರ್ತಾವಳಿಗಳಿಗೆ ಧೂತವಿಷಧೂ । ಮಾವಳಿಯಲೇ ಧಾತುಗೆಟ್ಟುದು ಸಕಲಭುವನಜನ ॥ ದೇವತತಿ ಬೆಂಡಾಯ್ತು ಮೊದಲಿನ । ದೇವರುಬ್ಬಿದರುರಗಪತಿಯ ಫ । ಣಾವಳಿಯು ಗುಡಿಸಗೆದವು ಪಾತಾಳಲೋಕದಲಿ ॥೮॥ ಭುಜವ ಹೊಯ್ದರು ಸೂರ್ಯತಕ್ಷಕ । ರಜನಸಭೆಯಲಿ ಭಯದಿಸುರಪತಿ । ಭಜಿಸಿದನು ಗರುಡನನು ನಿರ್ವಿಷಮಸ್ತುತರಗೆನುತ ॥ ಗಜರಿದವು ನಿಸ್ಸಾಳವಾದ್ಯ । ವ್ರಜದ ಕಹಳೆಯ ಭಟರ ಬೊಬ್ಬೆಯ । ಗಜಬಜೆಗೆ ಗಾಡಿಸಿತು ಕೌರವಸೈನ್ಯತರಧಿಯಲಿ ॥೯॥ ಹಣುಗಿದರು ಭೀಮಾದಿಗಳು ಕ । ಟ್ಟೊಣಗಿಲಾದವು ಭಟರ ಮೋರೆಗ । ಳೆಣಿಸುತಿರ್ದರು ಜಪವನರ್ಜುನಕೃಷ್ಣರೆಂಬಿವರು ॥ ಸೆಣಸುವರು ಕುರುರಾಯನೊಪನಿ । ನ್ನುಣಲಿ ದರೆಯನು ಧರ್ಮಸುತನೆಂ । ದೆಣಿಕವಾಯಿತು ನಿನ್ನ ದುಷ್ಟರಿಕಾರ ಹರುಷದಲಿ ॥೧೦॥ ಮೊಡಿಗೆಯಲಂಬುಗಿದು ತಿರುವಿಗೆ । ಹೂಡಲೀಹದ ನಾಯ್ತು ಚಾತ

ದ । ಲೋಡಿಸಿದೊಡೇನಹುದೊ ಹರಹರಹರ ಮಹಾಸ್ತ್ರವಲಾ ॥ ನೋಡಿರೈ ಗುರುಸುತಕೃಪಾದಿಗ ಳೋಡದಿರಿ ನೀವೆನುತ ಹರುಷದ । ಬೇಡಿನಲಿ ಮನಮುಳುಗೆ ತೂಗಾಡಿದನು ಕರುರಾಯ ॥೧೧॥ ಉ ರಿಯುಚೀರ್ಕೊಳವೆಗಳವೊಲು ಘೂ । ತ್ಕರಿಸಿದವು ಫಣಿವದನದಲಿ ದ । ಳ್ಳುರಿಯು ಸಿಮಿಸಿಮಿಸಿಮಿತು ಷಾರದ ಕಡಿಯತುಂತುರಿನ ॥ ಹೊರಳಿಗಿಡಿಗಳ ಕಾರ್ಬೊಗೆಯ । ಕಾ ಹುರದ ಸೂಯ್ಲಿನ ಝಳದಗರ ಳಾ । ಕ್ಷರದ ಜಗಿಯುರೆ ಮಾತುದೋರಿತು ಬೆಸಸುಬೆಸಸೆನುತ ॥೧೨॥ ಹೂಡಿದನು ತಿರುವಿನಲಿ ಬಾಣ ದ । ಝಾಡಿಯುರಿ ನಾಲಿಗೆಗೆ ನಿರುತವ । ನೋಡಿ ಪಾರ್ಥನ ಗಳಕೆ ಸಂಧಾನವ ನಿಧಾನಿಸುತ ॥ ನೋ ಡಿದನು ಶಲ್ಯನನು ಮಿಗೆ ಮಾ । ತಾಡಿದನು ಕುರುಪತಿಯ ಪುಣ್ಯದ । ಬೀಡುಬಿಡುವರೆಕಾಣಲಿನ್ನಹು ದೆಂದನಾಕರ್ಣ ॥೧೩॥ ಏನುಸಾರಥಿ ಸರಳು ಪಾಂಡವ । ಸೇನೆಯನು ಗೆಲಲಹುದೆ ಪಾರ್ಥನ । ಮಾನ ನಿಗೆ ವೈಧವ್ಯದೀಕ್ಷಾವಿಧಿಯ ಕೊಡಬಹುದೆ ॥ ಆನಲಮ್ಮುವರುಂಟೆ ನಿನಗಿದು । ಸಾನುರಾಗವೆ ಹೇಳೆನ ಲು ರವಿಸೂನುವಿನ ಸರ್ಪಾಸ್ತ್ರವನು ಹೊಗಳಿದನು ಮಾದ್ರೇಶ ॥ ೧೪ ॥ ಲೇಸನಾಡಿದೆ ಕರ್ಣಕೌರವ ನೀಸುದಿನಸಾಕಿದ ಫಲವನೀ । ನ್ನೆಸಲೇ ತೋರಿಸಿದವನು ಶಿವಶಿವಮಹಾದೇವಾ ॥ ಏಸುಕಾಳಗವಾದುದೀ ಕ । ಟ್ವಾಸುರದ ಶರವೆಲ್ಲಿ ಗುಪ್ತಾವಾಸವಾದುದೊ ಘೂತುರೆಂದನು ಶಲ್ಯನಿನಸುತನ ॥೧೫॥ ಆಯಿತಿ ದು ಶರವೊಳ್ಳಿತ್ತೈ ಕುರು । ರಾಯನಭ್ಯುದಯಪ್ರಪಂಚವಿ । ದಾಯತವು ಸಂಧಾನವಡಬಡದೆನ್ನ ಚಿತ್ತ ದಲಿ ॥ ಸಾಯಕವ ನೀ ತಿರುಗಿ ತೊಡುನಿ । ದಾಯದಲಿ ಗೆಲಬಹುದೆಲಾ ರಾ । ಧೇಯಎಂದನು ಶಲ್ಯ ನವನೀಪಾಲ ಕೇಳೆಂದ ॥೧೬॥ ಕೊರಳಿಗೊಡ್ಡಿದೆ ಹೊಳ್ಳುವಾರಿದು । ಸರಳು ಮಕುಟವ ತಾಗುವುದು ತೆಗೆ । ದುರಕೆಕೊಟ್ಟೊಡೆಕೊಯ್ವುದೀಗಳೆ ಕೊರಳನರ್ಜುನನ ॥ ಮರಳಿ ತೊಡುತೊಡು ಬೇಗ ಕೌರವ । ನರಸುತನವುಳಿವುದುಕಣಾ ಹೇ । ವರಿಸದಿರು ಹೇಳುವೊಡೆ ಪಂಥವಿದೆಂದನಾಶಲ್ಯ ॥೧೭॥ ಒಂದುಶರಸಂ ಧಾನ ನಾಲಿಗೆ । ಯೊಂದು ನಂಮಲಿ ಕುಟಿಲವಿದ್ಯೆಯ । ನೆಂದು ಕಂಡೈ ಶಲ್ಯನಾವಡಿಯಿಡುವಧರ್ಮ ದಲಿ ॥ ಇಂದು ಹೂಡಿದಸರಳನಿಳುಹುವು । ದಂದವೇ ನೀನರಿಯೆ ಹೆರಸಾ । ರೆಂದು ತಿರುವಿನಲಂಬ ನೊದೆದನು ಕರ್ಣಬೊಬ್ಬಿರಿದು ॥ ಏನ ಹೇಳುವೆ ಬಳಿಕ ಭುವನ । ಜ್ಞಾನವನು ತೆಗೆದೋಡಿದರು ವೈ ಮಾನಿಕರು ವೆಂತಣಿಸಿತುರಿಯುಪ್ಪಳಿಸಿತಂಬರವ ॥ ತಾನಿಡುವಕರ್ಬೊಗೆಯ ಚೂರಿಸು । ವಾನನದ ತ ಟವಾಯು ಲೊದಳೆಯ । ಜೇನಹುಟ್ಟೆಯ ಬಸಿವವಿಷದಲಿ ಬಂದುದುರಗಾಸ್ತ್ರ ॥೧೯॥ ಜನಪ ಕೇಳೈ ಬಳಿಕ ಭೀಮಾ । ರ್ಜುನ ನಕುಲಸಹದೇವಸಾತ್ಯಕಿ । ತನತನಗೆ ದಿವ್ಯಾಸ್ತ್ರನಿಕರದಲೆಚ್ಚರಹಿಶರವ ॥ ಅ ನಿತುಶರವನು ನುಂಗಿ ಮುಗುಳೆ । ಚ್ಚನಿತನೊಳಕೊಳುತಾಜ್ಯಧಾರೆಗೆ । ನನೆದಹುತವಹನಂತೆ ಹೆಚ್ಚಿತು ಮತ್ತೆ ಫಣಿಬಾಣ ॥೨೦॥ ಹಾವ್ಮಕೋದರ ನಕುಲ ಹಾಸಹ । ದೇವ ಧರ್ಮಜ ಹಾ ಧನಂಜಯ । ಹಾ ವಿಷ್ಣುಗೆ ಹವಿಗಳಾದಿರೆ ಹಾಮಹಾದೇವ ॥ ಸಾವೊಡೆಯಿ ಶಸ್ತ್ರಾಸ್ತ್ರಘಾತದ । ಸಾವುಕ್ಷತ್ರಿ ಯಕುಲಕೆ ಭಂಗವೆ । ಹಾವಿಧಿಯೆ ಯಂದೊದರಿ ಮರುಗಿತು ಪಾಂಡುಸುತಸೇನೆ ॥೨೧॥ ತುರಗತತಿ ಕಳವಳಿಸಿದವು ಮದ । ಕರಿಗಳೊದರಿಬವು ಬಸವಳಿದು ರಥ । ತುರುಗವಳದವು ತೇರ್ಗಳುರಿದವು ವಿಷದ ಹಳಹೊಯ್ಲು ॥ ಸುರಿಮಗರಳದ ಗಾಳಿ ಸೋಂಕಿದ । ನರರು ನಂಜೇರಿತು ಮಹಾದ್ಭುತ । ಶರದ ಭಾ ರಿಯವಿಷಕೆ ಕೊಂಗುದಿಗೊಂಡುದರಿಸೇನೆ ॥೨೨॥ ಗರುಡಪಂಚಾಕ್ಷರಿಯ ಮಂತ್ರಿ । ಚ್ಚರಣೆಯಲಿ

ಭೂನಾಗಸತ್ವದ । ಬೆರಳಮುದ್ರಿಕೆಗಳಲಿ ರಕ್ಷಾಯಂತ್ರತಂತ್ರದಲಿ ॥ ಮರಕತದ ಘುಟಿಕೆಯಲಿ ವಿಷಸಂ।
ಹರಣವಿವಿಧೋಪಾಯದಲಿ ನೃಪ । ವರರು ನಿಂದರು ಭೀಮಸೇನಾದಿಗಳುದುಗುಡದಲಿ ॥ ೨೩॥ ಹಿಂದೆ
ಭಗದತ್ತಾಂಕುಶದೊಳುರೆ । ನೊಂದು ಬದುಕಿದಬಳಿಕಲಾಗುರು । ನಂದನನ ನಾರಾಯಣಾಸ್ತ್ರದಲಾ
ದುದಪಘಾತ॥ ಅಂದುಪಾಯದಲುಳುಹಿದನು ಗೋ।ವಿಂದನಿಂದಪಮೃತ್ಯುವಿದನು ಮು । ಕುಂದತಾ
ನೇಬಲ್ಲನೆನುತಿರ್ದುದು ಭಟಸ್ತೋಮ ॥ ೨೪ ॥ ಆರು ನಿಲಿಸುವರಕಟ ನಿಷ್ಪ್ರತಿ। ಕಾರತರವಿದು ಭೀ
ಮಪಾರ್ಥರ । ಕೂರಲಗುಗಣೆ ಶಿವಶಿವಾ ಕೆಚ್ಚಾಯ್ತು ಕದಳಿಗಳು ॥ ಕೌರವನ ಜಯವಧುವಿನೊಡನೆ
ಯು । ಸೇರುವೆಯು ಕಂಟಣಿಯೊಳರವಿ । ನ್ನಾರಿಗೊರಲುವವೆನುತ ಮರುಗಿತು ಪಾಂಡುಸುತಸೇನೆ
॥ ೨೫ ॥ ನಾಲಿಗೆಯ ಚೂರಣದ ದುಷ್ಕರಿ । ಜಾಳಿಗೆಯ ಚಂಮಟದ ಗರಳದ । ಜ್ವಾಲೆಗಳ ಭಾರ
ಣೆಯಕಿಡಿಗಳ ಝುಳಕಠೋರಕದ ॥ ಧೂಳಿಹೊಗೆಯುಬ್ಬರದ ಬಲುನೊರೆ । ಯೋಳಿಯಲಿ ಭುಗಿಭುಗಿ
ಲಬಿಡೆಯದ । ವೋಲುವಾಯ್ದುದು ಕೊರಳ ಸರಿಸಕೆ ಕಲಿಧನಂಜಯನ ॥ ೨೬ ॥ ಅರಸಕೇಳೇಸೇಸ
ಭಾರಿಯ । ಕೊರಳಡಾಯುಧ ಕಳಚುವೈಸು । ಬ್ಬರದ ಮಾರಿಯು ಬಿಂಕ ಮುರಿಯದೆ ಪಾಂಡುತನ
ಯರಿಗೆ ॥ ಹರಿಯು ಹರಹಿನ ವಜ್ರಪಂಜರ । ದರಗಿಳಿಯಲೇ ಪಾರ್ಥನಹಿ ಮಂ । ಜರನ ಮುರಕುವೆ
ಕೊಂಬುದೇ ಜನಮೇಜಯಕ್ಷಿತಿಪ ॥ ೨೭ ॥ ನಡುಗುತಿರ್ದುದು ಸುರನಿಕರ ಬೊ । ಬ್ಬಿಡುತಲಿರ್ದುದು
ನಮ್ಮವರು ಬಾ । ಯ್ಬಿಡುತಲಿರ್ದುದು ಪಾರ್ಥನಳವಿಗೆಪಾಂಡುಸುತಸೇನೆ ॥ ತಡೆಯದ್ವ್ಯದಂಗುಲಕೆ ರ
ಥವನು । ನಡಿಸಿ ತುಳಿದನು ನೆಲಕೆ ಪಾರ್ಥನ । ಮುಡಿಯ ಸರಿಸಕೆ ಬಾಣಬಂದುದು ಕೊಲುವ ತವಕ
ದಲಿ ॥ ೨೮ ॥ ಅಣೆದುದಾಮಕುಟವನುತಾರಾ । ಗಣದ ಮಧ್ಯದ ಚಂದ್ರಮನ ಭಾ । ರಣೆಯೊಳಡ
ಗಿದರಾಹುವಿನ ರಹಿಯಾಯ್ತು ನಿಮಿಷದಲಿ ॥ ಕುಣಿಕೆಮುರಿದುದು ಮೌಕ್ತಿಕದ ಕೀ । ಲಣದ ವಜ್ರದ
ಮಾಣಿಕದ ವರ । ಮಣಿಗಳೊಕ್ಕವು ರಕುತದೊಳದೊಡೆಗಲಸಿದಂದದಲಿ ॥೨೯ ॥ ಬಿದ್ದುದೇ ಫಲುಗು
ಣನ ತಲೆ ನೆರಯು । ದ್ದುದೇನಮ್ಮಾಟ ಜಯಸಿರಿ । ಕದ್ದಳೇ ರಣದೊಸಗೆಗದ್ದಳೆ ದ್ರೌಪದೀದೇವಿ ॥ ಇ
ದ್ದುದೇ ಧರ್ಮಜನಸಿರಿ ತಳ । ಕದ್ದುದೇನಮ್ಮೊಡಲನಸುಬಿಡ । ದಿರ್ದುದೇಹರಯೆನುತ ಭೀಮಾದಿಗಳ
ಹೊರಳಿದರು ॥ ೩೦ ॥ ವಿಷವ ತೆಗೆದಳು ದ್ರುಪದಸುತಕ್ಕೆ । ಮುಸುಕಿನಲಿ ಚೀಲಾಯನುಗಿದನು। ವಸು
ಮತೀಶನನಾಮುಹೂರ್ತಕೆ ದೂತರೈತಂದು ॥ ಒಸಗೆ ಜೀಯರ್ಜುನನ ಮಕುಟದ । ಬೆಸುಗೆ ಸಡಲಿ
ತು ಹರಿವರೂಥವ । ಕುಸಿಯಲೊತ್ತಿದನಿಂದು ತಪ್ಪಿತು ತೀವ್ರಫಣಿಬಾಣ ॥ ೩೧ ॥ ಎನಲು ಸಂತೈಸಿ
ತ್ತುರಾಯನ । ಮನೆಯುವರು ಪಾಂಡವರು ಸೇನಾ । ವಸಧಿ ಬಿಡೆಗರ್ಜಸಿತು ಬಹುವಿಧವಾದ್ಯರಭಸದ
ಲಿ ॥ ವಿನುತಮಕುಟವನುಗಿದು ಕಂಗನೆ । ಕನಲಿಮುರಿತಲೆ ಬದುಕಿತೇ ಹಾ । ಯನುತ ಹಲುಮೊರೆ
ತ್ತುಮಲಿತು ಕರ್ಣನಿದ್ದೆಡೆಗೆ ॥ ೩೨ ॥ ತುಡುಕಿ ತೊಡುಯಿನ್ನೊಮ್ಮೆಯಕಟಾ । ಕೆಡಿಸಿದೆಯಲ
ಸ್ವಾಮಿಕಾರ್ಯವ । ನುಡಿದುಹೇಳೆನೆ ನಿನ್ನಸಾರಥಿಲಕ್ಷ್ಯಭೇದನವ ॥ ಅಡಗಲಿನ್ನೀರೇಳುಭುವನವ ।
ಡಗ ತಿಂಬೆನು ನರನನೆನುತವ । ಗಡಿಸಿ ಕರ್ಣನ ಬೆಸನಬೇಡಿತು ಮತ್ತೆ ಫಣಿಬಾಣ ॥ ೩೩ ॥ ಶಿವನ
ದೊಳಿರಲಿ ಮೇಣ್ವಾ । ಸವನ ಸೀಮೆಯೊಳಿರಲಿ ಪಾತಾಳವನು ಹೊಗಲಂಬುಧಿಯ ಮುಳುಗಲಿ
ನ ಕೆಳೆಗೊಳಲಿ ॥ ತಿವಿದು ಕೆಡಹುವೆನಹಿತನನು ಪಂ । ತವನು ಹಾರದಿರೆನಲು ಕೇಳಿದು । ರವಿಯ

ಗ ಬೆರಗಾಗಿ ನೋಡಿದನಂದು ಫಣಿಶರವ ॥ ೩೪ ॥ ಎಸಲು ಸರಳುಗಳತ್ತಲೇಕೀ । ಲಿಸುವದಲ್ಲದೆ ಮ
ತ್ತೆ ಮರಳಿದು। ಬೆಸನ ಬೇಡುವಬಾಣವೆಂಬುದನರಿಯೆನಾ ಕೇಳ್ದು ॥ ವಿಷಮ ನೀನಾರೆನಲು ಕಿಡಿಗಳ।
ಕುಸುರಿಗಳನುದಿರಿಸುತ ನುಡಿದುದು । ವಿಷಮನರಿಯಾಕಾಳಕೂಟಕರಂಡಕರ್ದಮನ ॥ ೩೫ ॥ ಉರಗ
ಪತಿಸಾನಶ್ವಸೇನನು । ಸುರಪತಿಯ ಕಾಂಡವದೊಳಿರಲದ । ನುರುಹುವಂದಿನಲೆನ್ನನರೆಗಡಿದೀದುರಾ
ತ್ಮಕನ॥ಶಿರವನರಿವೆನು ಬೇಗ ತೊಡುತೊಡು।ಬೆರಗಹಾರದಿರೆನಲು ಸತ್ಯದ। ಪರಮಸೀಮೆಗೆ ತಪ್ಪಲರಿಯ
ದೆ ಕರ್ಣನಿಂತೆಂದ ॥೩೬॥ ಅರಿಯೆನಾನೀನೆಂದುಲೋಗರ। ಮರೆಯುಲಹಿತರೆನಿರಿವಕರ್ಣನೆ। ಮರೆದೆಲಾ
ನೀನೆನ್ನ ಪರಿಯನು ತೊಡುವದಿಲ್ಲೆನಲು॥ ಮರುಗಿದನು ಶಲ್ಯನು ನೃಪಾಲನ। ನಿರಿದೆಯೋ ರಾಧೇಯ
ನೀನೆಂ। ದುರುಬು ಮಿಗೆ ಗರ್ಜಿಸುತ ಕರ್ಣನ ಬೈದು ಕೋಪಿಸಿದ ॥ ೩೭ ॥ ತಿರುಹಿತೊಡು ಸಂಧಾನವೆ
ನು ನಿ । ಮ್ಮರಸನಭ್ಯುದಯಾರ್ಥವೆನೆ ಧಿಕ್ಕರಿಸಿ ನಮ್ಮನು ನೂಕಿ ಕಳೆದೆ ಮಹಾಹಿಮಾರ್ಗಣವ ॥ ನರ
ವತಲೆ ಬದುಕಿದುದು ಸಾಕಂ । ತಿರಲಿ ಸರಳೇ ತನ್ನ ಕಳುಹೆಂ । ದೊರಲುತಿದೆ ತೊಡು ಮರಳಿ ಯೆಂ
ದನು ಶಲ್ಯನಿನಸುತನ ॥ ೩೮ ॥ ತೊಡುತೊಡೆಲವೋ ಸರಳರಿಪುವನು । ತಡೆಗಡಿವೆನೆಂದೊರಲುತಿದೆ
ನೃಪ । ನೊಡೆತನವ ನೀಬಯಸುವಾಯತವುಂಟೆ ರಿಪುಗಳಲಿ ॥ ನುಡಿದ ಮಾತೇ ನಾವು ಹೇಳಿದ ಕೊಡಬ
ಡುವನೀನಲ್ಲ ಕುರುಪತಿ । ಬಿಡದೆ ನಿನ್ನನು ಸಲಹಿದಕ್ಕುಪಕಾರವಾಯ್ತೆಂದ ॥ ೩೯ ॥ ಎಲವೊ ನಿನ್ನ
ನು ಜಗವರಿಯೆ ಕ । ಬ್ಬಿಲನ ಮಗನನು ತಂದು ಮಂಚಿಸಿ । ಕುಲಜನನು ಮಾಡಿದನಲಾ ವೊಡಸುಂ
ಡುಪತಿಕರಿಸಿ ॥ ನೆಲನು ಹೇಸದೆ ನಿನ್ನ ಕೀರ್ತಿಯ । ಬೆಳಗುಮಾಸದೆ ಬಿಡದೆ ಸಾಕಿದ । ಹೊಲೆಯನವ
ಸರಕೊದಗುವನು ನೀ ಕಷ್ಟಹೋಗೆಂದ ॥ ೪೦ ॥ ಕೌರವನ ಮನ್ನಣೆಯಲಾವುದು । ದೂರವಾದುದು
ನಿನಗೆ ನಿಜ ದಾ । ತಾರನಲಿ ವಂಚಿಸಿದೆ ನಿನಗಿನ್ನಾವಗತಿಯಹುದೋ ॥ ಭಾರವಿದು ವಿಶ್ವಾಸಘಾತ
ಕ । ಕೌರವಾಕರ್ಷಣವು ಸ್ವರ್ಗಕೆ । ದೂರವಹರೇ ಕರ್ಣಕೆಡಿಸದಿರಿಹಪರವನೆಂದ ॥ ೪೧ ॥ ನಂಬಿ ಹಿ
ಡಿದರೆ ನದಿಯ ಮಗ ಹಗೆ । ಯಂಬಿಗಿತ್ತನು ಕಾಯವನು ಮಗ । ನೆಂಬ ನೆವದಲಿ ತನುವ ಬಿಸುಟನು
ಗರುಡಿಯಾಚಾರ್ಯ ॥ ಅಂಬು ಬೆಸನನು ಬೇಡಿದರೆ ನೀ । ನೆಂಬನೀವಿಧಿಯಾದ ಮೂವರ । ನಂಬಿ ಕೆಟ್ಟ
ಟ್ಟನು ಕೌರವೇಶ್ವರನೆಂದನಾಶಲ್ಯ ॥ ೪೨ ॥ ಮಾತಗಿತ್ತನು ಭಾಷೆಯನು ನಿ । ನ್ನಾತಗಳೊಳ್ಳೈವರೊ
ಳಗಾರಿದಿ। ರಾದರೆಯುತಲೆಗಾಯ್ವೆನೆಂದನು ಮರಳಿತೊಡೆನೆಂಬ ॥ ಮಾತುಗಳು ಕವಲಾದಬಳಿಕಿ। ನ್ನೇ
ತಕೇತನುವಿದನು ಪಾರ್ಥನ । ಘಾತಿಗೊಪ್ಪಿಸಿ ಕಳೆವೆನೆಂದನು ತನ್ನ ಮನದೊಳಗೆ ॥೪೩॥ ಮರುಳೆ ಮಾ
ದ್ರಾಧೀಶ ಮರಳಿತೆ। ಸರಳ ತೊಡುವೆನೆಸ್ಯರಿಸನೆ ಕಾತರಿಸಿ ವಾಘೆಯ ಬಿಸಟು ಕಿಡಿಕಿಡಿವೋಗಿ ಖಾತಿಯ
ಲಿ ॥ ಅರಸನೊಲಿದಂತಾಗಲೆನ್ನದು । ಮರಳುತನ ಕುಲಹೀನನಲಿ ಗುಣ । ವರಸಲೇನಹುದೆನುತ
ಘುಂಮಿಕ್ಕಿದನು ಧಾರುಣಿಗೆ ॥ ೪೪ ॥ ಕಂಡು ದೀವ್ಯತಿಕರವನೀತನ । ನಂಡಲೆದು ಫಲವಿಲ್ಲಲಾಕ್ರೈ ।
ಕೊಂಡು ನೋಡುವೆನೆನ್ನ ಸಾಮರ್ಥ್ಯದ ಸಘಾಡಿಕೆಯ ॥ ಚಂಡಿಯಾದನೆ ತಾನೆನುತ ಖತಿ । ಗೊಂಡು
ಮರಳಿತು ಸರ್ಪಶರವಾ । ಖಂಡಲಾತ್ಮಜನತ್ತ ಹಾಣಾಹಣಿದಚೂಣಿಯಲಿ ॥ ೪೫ ॥ ಇವನ ಬಲ್ಲೈ
ಪಾರ್ಥ ಚಕ್ಷು। ಶ್ರವನಸುತ ತಕ್ಷಕನಮಗಖಾಂ । ಡವದ ಬೇಳಂಬದಲಿ ಬದುಕಿದತಲೆಯನಡಹಾಯ್ತು ॥
ಇವನ ಮೂಡಿಗೆಯೊಳಗೆ ಶರವಾ । ಯಿ .ವನು ತಾನೇಮರಳಿದನು ನೀ । ನವದರಿಸಿಕೊಳೆಂದು ನುಡಿ

ದನು ಕೃಷ್ಣನರ್ಜುನನ ॥ ೪೮ ॥ ಅರಸಕೇಳ್ಕೈಕರ್ಣಶಕ್ತಿ । ಸ್ಫುರಸಹಿತವೀಬಾಣವತಿನಿಷ್ಠುರವಿದಲ್ಲದೆ ಬರಿಯವಿಷದುಬ್ಬರದ ಸಾಹಸವ ॥ ನರನಲೇ ಕೈಕೊಳ್ಳಸೇಬಹ । ಸರಳನೈದಂಬುಗಳಲೆಡೆಯಲಿ । ತರಿದುಬಿಸುಟನು ವೀರನಾರಾಯಣನಕರುಣದಲಿ ... ... ॥ ೪೯ ॥

ಅಂತು ಸಂಧಿ ೨೫ಕ್ಕೆ ಪದ ೧೦೬೦ಕ್ಕಂ ಮಂಗಳಮಸ್ತು.

ಇಪ್ಪತ್ತಾರನೆಯ ಸಂಧಿ

ಸೂಚನೆ ॥ ಚಂಡಭುಜಬಲವಿಕ್ರಮದ ಮಾ । ರ್ತಾಂಡತನಯದವಿಜಸಿರಿ ಮುಂ । ಕೊಂಡುಮನ್ನಿಸಿ ಭುಜಕೆ ಬಂದಳು ಕಲಿಧನಂಜಯನ ॥

ಪದ ॥ ಕೇಳು ಧೃತರಾಷ್ಟ್ರಾವನಿಪ ನಿ । ನ್ನಾಳ ಜಯಸಿರಿ ಸರ್ಪಬಾಣದ । ಮೇಳಯದ ಸೀಮೆಯಲಿ ನಿಂದುದು ಹಲವುಮಾತೇನು ॥ ಹೇಳಿ ಫಲವೇನಿನ್ನು ಮುಂದಣ । ಕಾಳಗದ ಕರ್ಣಾರ್ಜುನವ್ಯಾಪೃತದ ಮಳೆ । ಗಾಲ ಮೂಡುವಿಲೋಚನದ ಮಳೆಗಾಲವಾಯ್ತೆಂದ ॥ ೧ ॥ ತಳಿತಹೂವಿನ ಪರಿಮಳವೊ ಧರೆ । ಗಿಳಿದಸೂರ್ಯಪ್ರಭೆಯೊವಿರಜದ । ಹೊಳೆಯೊ ಮೇಘಸ್ಥಿತಿಯೊ ಸುರಪತಿಚಾಪವಿಭ್ರಮವೊ ॥ ಇಳಿದ ಜವ್ವನದೊಳುಮೆಯೋ ಕುರು । ಬಲವಕಂಡೆನು ಜೀಯ ಜಯದ । ಗ್ಗಳಿಕೆಗಳ ಚಾರುಗಳಲಿ ದುರ್ದು ನಿನ್ನ ಪರಿವಾರ ॥ ೨ ॥ ಆಗಳಿಳಿದುದು ಸರ್ಪಶರ ತಾ । ನಾಗಲೇ ಕುರುರಾಜಭುಜವನು । ನೀಗಿದಳು ಜಯವಧು ಧರಾವಧು ಭಾಗ್ಯವಧುವೆಂದು॥ ಆಗಲೇ ಬಿನ್ನೈಸನೇರಣ । ದಾಗುಹೋಗಿನ ಹೊರಿಗೆಯನುತಾ । ನೀಗಿ ಬಿಸುಟನು ತನ್ನ ಸತ್ಯಸ್ಥಿತಿಗೆ ಕಲಿಕರ್ಣ ॥ ೩ ॥ ಅದೊಡೇನದು ಮತ್ತೆ ಕರ್ಣನ । ಕೈದುಕಾರತಿನಕ್ಕ ಸುಭಟರು। ಮೇದಿನಿಯಲಾರುಂಟು ಘಡ ದೈವಾಭಿಮುಖವುಳಿಯೆ ॥ ಹೋದೆ ಹೋಗಿನ್ನೆನುತ ಕಣೆಗಳ। ನಾದರಿಸಿ ತನಿವೀರರಸದಲಿ । ತೇದುಚಿತ್ತವ ಬರೆದನರ್ಜುನನಂಗಭಿತ್ತಿಯಲಿ ॥ ೪ ॥ ಇಳಿದುಹೋದೊಡೆ ಶಲ್ಯನೊಡನ । ಗ್ಗಳಿಕೆ ಹೋಯಿತೆ ಯೆನ್ನಭುಜಬಲ । ತೊಲಗಿತೇನಸಹಾಯಶೂರಗೆ ಪರರ ಹಂಗೇಕೆ ॥ ಗೆಲುವೆ ಹಗೆಯನು ಯೆನುತ ಮಿಗೆ ಕೈ । ಚಳಕದಲಿ ತೆಗೆದೆಸುತ ತಾವರೆ। ಗೆಳೆಯನಣುಗನ ಧೃತಿಗೆ ಬೆರಗಾಯಿತ್ತು ಸುರಕಟಕ ॥ ೫ ॥ ಚಳಕದಲಿ ತೆಗೆದೆಸಮಚಾಪವ । ನಿಳುಹುವಸು ರಥದೊಳಗೆ ಪಾರ್ಥನ । ಸೆಳೆದು ತುರಗವ ತಿರುಹಿ ಸುಳಿಸುವನೆಡಬಲಕೆ ರಥವ॥ ಬಲಹುತನ್ನದು ಸಾರಥಿತ್ವದ । ಬಲಹು ತನ್ನದು ರಣದ ಕೌತುಕ । ಹಳದ ಕರ್ಣನೊಳಾರುಸರಿಯನುಶಿದುರ್ದದಮರಗಣ ॥ ೬ ॥ ಮತ್ತೆ ಕೃಷ್ಣನನೆಚ್ಚುಹನುಮನ । ತೆತ್ತಿಸಿದನೆರಡಂಬಿನಲಿ ಕೈ । ವರ್ತಿಸಿದನೀರೈದುಶರವನು ತುರಗದೇಹದಲಿ॥ ಹೊತ್ತಿತದು ಕಡುಗೋಪವಹ್ನಿಯೊ । ಳೆತ್ತಲಿದ ನಿಲ್ಲೆನುತ ಪಾರ್ಥನ । ನೊತ್ತಿ ಕೂರ್ಗಂಬಿನಲಿ ಪುನರಪಿ ಕಪಿಯನೊಡೆಯಚ್ಚ ॥ ೭ ॥ ನೆಲನ ಬೆಟ್ಟದಬೇಗೆಗೋಸುಗ । ಸುಳಿದರೆದಿರು ಪಾಂಡುನಂದನ । ರಳಿಯತಿವದಿರಬಳಿಯೆವೇಳಾಯಿತ್ತು ಕೃಷ್ಣಗಡ ॥ ಅಳಿಯಲಡವಾಗಿಲಲಿಹಣುಹಂ । ಪಲುವೆ ಧನನೀನಿವರ ಬಲೆಯಲಿ । ಸಿಲುಕಿ ನೊಂದ್ಯ ತಂದೆ ಪವನಜ

ಯೆಂದನಾಕರ್ಣ ॥ ೮ ॥ ಬಾಯಬಡಿಕನಲಾ ವೃಥಾರಾ। ಧೇಯ ಮದವೇಕಿನ್ನು ನಿನವಗಹಿ । ಸಾಯ
ಕದ ಸಾಲಿನಲಿ ನೀರಿಳಿಸುವೆನು ನೆತ್ತರಲಿ ॥ ತಾಯ ಬಸರಿಂಬಿಲ್ಲನೀನುಳಿ । ವಾಯತಿಕೆಯಿನ್ನೆಂತು ಕೌ
ರವ । ರಾಯ ನೋಡಲಿ ಕರೆಯೆನುತ ತೆಗೆದೆಚ್ಚನಾಪಾರ್ಥ ॥ ೯ ॥ ಆರುತರದಿಂದೆಚ್ಚು ಮಗುಳೀ ।
ರಾರುಬಾಣದಲೌಕಿ ಮೂವ । ತ್ತಾರುಮಾರ್ಗಣದಿಂದ ಮುಕ್ಕರಿಕಿದನು ರಿಪುಭಟನ ॥ ಮೂರುಕಣೆ
ಗಳಲರಿಯ ದೇಹವ । ಕೀರಿದನು ಮತ್ತೆರಡುಶರದಲಿ । ಜಾರಲೆಚ್ಚನು ಜರೆದು ಕರ್ಣನ ಕರ್ಣಕುಂಡ
ಲವ ॥ ೧೦ ॥ ಜೋಡ ಕಡಿದನು ಸೀಸಕವ ನೀಡಾಡಿದನು ಕೆಲಬಲದ ಕಣೆಗಳ । ನೀಡುಕಾರರನಿಕ್ಕಿದ
ನು ಗರಿಸಹಿತ ಕಣೆಯುಗಿಯೆ ॥ ಹೂಡಿದಂಬಿನ ಹೊದೆಯ ಭಂಡಿಯ । ಜೋಡ ತರಿದನು ಛತ್ರಚ
ಮರಿಯ । ಝಾಡಿಯನು ಜರುಗೆಡಹಿದನು ಕಲಿಪಾರ್ಥ ನಿಮಿಷದಲಿ ॥ ೧೧ ॥ ಈತನೇನಳುಕುವನೆ ಬ
ಳಿಕಿನೊ । ಳಾತತುಕ್ಷಣವರ್ಜನನ ಚಮು । ರಾತಪತ್ರವ್ಯೂಹವನು ಕೈದುಗಳ ಭಂಡಿಗಳ ॥ ಘಾತಿಸಿದನೆ
ಡಬಲದ ಸುಭಟ । ವ್ರಾತವನು ಕೆಡಹಿದನು ಸರಳಲಿ । ಘಾತಿಯಲಿ ಬಲುಗಾಯವಡೆದನು ಪಾರ್ಥನಿ
ಮಿಷದಲಿ ॥ ೧೨ ॥ ಅರಸ ಹೇಳುವುದೇನುರಾಯನ । ಶಿರಿಯಪೈಸರವನು ಸುಯೋಧನ । ನರಸುತನ
ದಾಥಾರಮೂಲಸ್ತಂಭಭಂಜನವ ॥ ನರನ ಗೆಲವೆಲ್ಲಿಯದು ದೈವವ । ಮರುಳು ಮಾಡಿದರವರು ನಿ
ಮ್ಮಯ । ಧರಣಿ ನಿಮಗನುಚಿತವಸೆನದಳು ಹೇಳಲೇನೆಂದ ॥ ೧೩ ॥ ಧರೆ ನೆನೆದಮುಷ್ಕರ್ಮವೇನಂ ।
ದರಸ ಬೆಸಗೊಂಬೈನಿರಂತರ । ಸುರಿವರುಧಿರದಸಾರದಲಿ ಕೆಸರೆದ್ದಕಳನೊಳಗೆ ॥ ಹರಿವಬಿಂಕದ ರಥದ
ಗಾಲಿಯ । ಗರುವತನಗಾಳಾಯ್ತು ನೆಲಖೊ । ಪ್ಪರಿಸಿತಗ್ಗಿತು ತೇರು ತಡೆದುದು ರಥವನಿಳೆಯಿಂ
ದ ॥ ೧೪ ॥ ಗಾಲಿಯದ್ದವು ಕೂಡೆಯಂತ್ರದ। ಕೀಲುಗಳು ಸಡಲಿದವು ಹಯತತಿ।ತೂಳಿಸತ್ವದಲೌಕಿ ಸೆ
ಳೆದವು ಕುಸಿದು ನಿಜಮುಖವ ॥ ಮೇಲು ಮಿಡುಕದು ತೇರು ಕುರುಬಲ । ಜಾಲಜರುಗಿತು ವೈರಿಬಲ
ದಲಿ । ಸೂಳವಿಸಿದರು ಭುಜವನೂದರಿತು ಬೆರಳಬಾಯ್ಗಳಲಿ ॥ ೧೫ ॥ ದುರುಳದುರ್‍ಯೋಧನನ ನಿಖಿ
ಳೈ । ಶ್ವರಿಯಮಿಳೆಗದ್ದಂತೆ ಕರ್ಣನ । ತುರಗಸಹಿತವನಿಯೊಳಗದ್ದುದು ತೇರು ಕುಕ್ಕರಿಸೆ ॥ ಕೆರಳಿಕಂ
ಬಿಯ ಸೆಳೆದು ವಾಘೆಯ । ತಿರುಹಿ ಚಪ್ಪರಿಸಿದರೆ ಸತ್ವದ । ಲುಮಣಿಸಿ ತಲೆವಾಗಿ ಜವಗುಂದಿದವು ತೇ
ಜಿಗಳು ॥ ೧೬ ॥ ಮೂಗಿನಲಿ ಬೆರಳಿಟ್ಟು ಮಕುಟವ ತೂಗಿ ತೊನೆದನು ಭಾಪು ವಿಧಿನಿ । ಭಾರ್ಗಧೇ
ಯನು ರಾಯನಕಟಾ ಶಿವಮಹದೇವ ॥ ಈಗಲಿದು ತಾನೇನವಿಧಿಬರೆ । ದೋಗಟೆಯೊ ಕುರುವಂಶವ
ಜ್ರದ। ಬೇಗಡೆಯೊ ಮಾಮಾಯೆನುತ ಮರುಗಿದನು ಕಲಿಕರ್ಣ ॥ ೧೭ ॥ ಇಳುಹಿದನು ರಥದೊಳಗೆ
ಚಾಪನ । ನಳವಡಿಸಿದನು ಸೆರಗನಲ್ಲಿಂ । ದಿಳಿದುಗಾಲಿಯನಲುಗಿ ಪಾರ್ಥನ ನೋಡಿ ನಸುನಗುತ ॥ ಎ
ಲೆಧನಂಜಯ ಸೈರಿಸಿನ್ನರಗಳಿಗೆಯಲಿ ರಥವೆತ್ತಿ ನಿನಗಾ । ನಳಪಿಗೊಡುವೆನು ತನ್ನ ಪರಿಯನು ಬಳಿಕ
ನೋಡೆಂದ॥೧೮॥ಶಿವನ ಬಲುಹುಂಟೆಂಬನೇ ಶಿವ। ನವರ ಕಡೆ ಹರಿಯೆಂಬನೇ ಪಾಂ। ಡವರ ಭಂಡಿಯ
ಬೋವನಿಂದ್ರಾದ್ಯರು ಸಹಾಯಿಗಳು॥ಅವರು ಸಾಕ್ಷಾತ್ಪರ್ಜನ ನರುನಂಮವನಿ ನಮಗುಂಟೆಂಬನೇ ಕೌ
ರವನಪುಣ್ಯವಿದೇ ಯೆನುತ ಮರುಗಿದನು ಕಲಿಕರ್ಣ॥೧೯॥ ರೂಢಿಸಿದಭಟ ನೀನು ಪಂತದ । ಪಾಡುಗ
ಳ ನೀ ಬಲ್ಲೆ ಶಾಸ್ತ್ರವ । ಖೋಡಿಗಳೆವವನಲ್ಲ ವೈದಿಕಲೌಕಿಕಸ್ಥಿತಿಯ ॥ ನಾಡೆ ಬಲ್ಲಿರಿ ಶಸ್ತ್ರಹೀನರ
ಕೂಡೆ ವಾಹನರಹಿತರಲಿ ಕೈ । ಮಾಡಲನುಚಿತವೆಂಬಮಾರ್ಗವನೆಂದನಾಕರ್ಣ ॥ ೨೦ ॥ ಎನುತ ಗಾ

ಲಿಯುಸಲುಗಿ ಕೀಲ । ಚ್ಚಿನಲಿ ಮುಂಗೈಕೊಟ್ಟು ಮೊಳಕಾ । ಲಿನಲಿ ಧರಣಿಯನೌಗಿ ಮುಗ್ಗಿದರಥವ
ನೆಗಹುತಿರೆ ॥ ದನುಜರಿಪು ಚರಮಟಿಕೆಯಲಿ ಫಲು । ಗುಣನ ತಿವಿದನು ನೋಡು ರಾಧಾ । ತನುಜನಿರ
ವನು ಬೇಗ ಮಾಡೆಂದರ್ಜುನನ ಜರೆದ ॥ ೨೧ ॥ ಎಸೆಮರುಳೆ ಗಾಂಡೀವಿ ಆಪ । ತ್ತೆಸಗಿದಾಗಲೆ ಹಗೆ
ಯು ಗೆಲುವುದು । ವಸುಮತೀಶರ ನೀತಿ ತೊಡುತೊಡು ದಿವ್ಯಮಾರ್ಗಣವ ॥ ವಿಷಮವೀರನು ರಥವ
ಮೇಳಾ । ಪಿಸದಮುನ್ನವೆ ಹರುವ ನೆನೆ ನೀ । ವೊಸೆದು ಯೇರಿದಬಳಿಕ ಕೈಕೊಂಬನೆ ತ್ರಿಯಂಬಕನ॥ ೨೨॥
ಏನನೆಂಬೆನು ಜೀಯ ಕರ್ಣಗೆ । ಯೇನಹನೊ ಫಲುಗುಣನು ಬಳಿಕಾ । ದಾನವಾರಿಯ ನುಡಿಯ ಕೇ
ಳಿದು ಕೇಳಿ ದಾಕ್ಷಿಣಕೆ ॥ ಗಾನದಲಿ ಮುಳುಗಿದನು ಮನದಪ । ಮಾನದರ್ಪವ ತುಡುಕಿ ಧೈರ್ಯನಿ । ಧಾ
ನವನು ಕೈಸೂರೆಗೊಂಡುದು ಶೋಕವರ್ಜುನನ ॥ ೨೩ ॥ ಮುಕ್ಕಿದನು ಮಹಿಮೆಯನು ಕಣ್ಣಲಿ । ಮು
ಕ್ಕುಳಿಸಿದನು ನೀರನಹಿತನೊ । ಳುಕ್ಕಿದನು ರಾಗದಲಿ ಕೊಂಡನು ಬಳಿಕ ವೀಳೆಯವ ॥ ಸಿಕ್ಕಿದನು ಕರು
ಣಾಲತಾಂಗಿಯ । ತೆಕ್ಕೆಯಲಿ ನಾನೇನಹೇಳುವೆ । ನೊಕ್ಕಲಿಕ್ಕಿತು ಶೋಕವರ್ಜುನನಂತರಂಗದಲಿ ॥ ೨೪॥
ತೇರಿನಲಿ ಚಾಚಿದನು ಮೆಲ್ಲನೆ । ಭಾರಿಧನುವನು ಕೈಯ ಕಣೆಗಳ । ನೋರೆಯಲಿ ಸೈರಿಸಲು ಕಂಡನು ಮ
ತ್ತೆ ಮುರವೈರಿ ॥ ಹಾರವೇಕೈ ಕಂಗಳಲಿ ಕ । ಸ್ತೂರಿಯೇಕೈಕ ದಪಿನಲಿ ಶೃಂ । ಗಾರವಿದು ವಿಪರೀ
ತವೇನಲೆ ಪಾರ್ಥ ಹೇಳೆಂದ ॥ ೨೫ ॥ ದೇವ ಹಗೆಯಾಗಿರನು ಕರ್ಣನ । ದಾವಹದನೆಂದರಿಯೆ ಮ
ನದಲಿ । ನೋವು ಮಿಗುತಿದೆ ಕೈಗಳೇಳವು ತುಡುಕವರೆ ಧನುವ ॥ ಜೀವವಾತನಮೇಲೆ ಕರಗುವು । ದಾ
ವಸುಖನೋ ಶತ್ರುವೆಂಬೀ । ಭಾವನೆಯ ಬಗೆಬೀಳುಕೊಂಡುದು ಕರ್ಣನಾರೆಂದ ॥ ೨೬ ॥ ಈತನೀಭವ
ದಲ್ಲಿ ಯೊಡವಂ । ದಾತನೋ ಮೇಣ್ಪೋದಜನ್ಮದ । ಲೀತನೊಡವಂದಾತನೋ ಮೇಣೆನ್ನ ಸಂದೇಹ॥
ಮಾತಿನಲಿ ಮನದಲ್ಲಿ ಗುಣದಲಿ । ನೀತಿಯಲಿ ಸತ್ವಾತಿಶಯದಲಿ । ಸೂತ ಕುಲದವನಲ್ಲ ಕರ್ಣನದಾರು
ಹೇಳೆಂದ ॥ ೨೭ ॥ ಕೌರವನಮೇಲಿಲ್ಲವಗ್ಗದ । ವೈರವೀತನಮೇಲೆನಮಗಪ । ಕಾರಿಯಾತನು ಮರಣ
ವನುಸಂಧಾನವಿನ್ನುಬರ ॥ ವೈರವುಪಶಮಿಸತು ಯುಧಿಷ್ಠಿರ । ವೀರನಿಂದಿಮ್ಮಡಿಯ ನೇಹದ । ಭಾರವ
ಣೆತೋರುವುದಿದೇನ್ಕೆ ಕರ್ಣನಾರೆಂದ ॥ ೨೮ ॥ ಆಸುರದವ್ಯಾಮೋಹವಿದು ಡೊ । ಳ್ಳಾಸವೋ ಕೌರವ
ನ ತಕ್ಕಿನ । ವೈಸಿಕವೊ ನಿಮ್ಮಡಿಯ ಮಾಯಾಮಯದಮಾಲೆಗಳೊ ॥ ವಾಸಿ ಬೀತುದು ಛಲದಗಲದ
ಕ । ಳಾಸ ಸೋತುದು ಕರ್ನನಲಿ ಹಿರಿ । ದಾಸೆಯಾಯಿತು ಕೃಷ್ಣ ಕರುಣಿಸು ಕರ್ಣನಾರೆಂದ ॥ ೨೯॥
ಋಷಿಗಳನುಮತದಿಂದ ಕುಂತಿಯ । ಬಸುರಲೇ ವುದಯಿಸನಲೇನೀ । ನಸುರರಿಪು ಬಹುಕಬಟನಾಟಕ
ಸೂತ್ರಧಾರನಲೆ ॥ ವಸುಮತಿಯ ಭಾರವನು ಮಿಗೆ ಭಂ । ಗಿಸುವಕೃತ್ಯವು ನಿನ್ನದೆನಗು । ಬ್ಬಸವದೇ
ಕೈ ಕೃಷ್ಣ ಕರುಣಿಸು ಕರ್ಣನಾರೆಂದ ॥ ೩೦ ॥ ಭೇದವನು ಕಡೆಯೊತ್ತಿ ರೋಷವಿ । ಷಾದ ತಲೆಯೊ
ತ್ತುವುದು ರೋಷವಿ । ಷಾದಶಿಖಿಯನು ನಂದಿಸುವುವೀನಯನವಾರಿಗಳು ॥ ಕೈದುವಲ್ಲವು ಕೈಗಳೀಮು ।
ನ್ನಾದಿಯಲಿ ಹಿಂಗಿದವು ಮನಲೇ । ಸಾದುದೆಂದಾನರಿಯೆನಕಟಾ ಕರ್ಣ ನಾರೆಂದ ॥ ೩೧ ॥ ಕಾಲಯು
ವನನುಪಾಯದಿಂದವೆ । ಬೀಳಿಸಿದೆ ಮಗಧನನು ಯಾಪರಿ । ಶೀಳಿಸಿದೆ ಭೀಷ್ಮಾದಿಗಳ ಸೋಲಿಸಿದೆ ಸಾಮ
ದಲಿ ॥ ಧಾಳೆನಶಿಥಕ್ಕುಳಿಯತಕ್ಕಿನ । ತೌಳಿಕಾರನು ನಿನ್ನ ಮಾಯೆಯ । ಹೇಳಲಮ್ಮೆನು ಕೃಷ್ಣ ಕರು
ಣಿಸು ಕರ್ಣನಾರೆಂದ ॥ ೩೨ ॥ ದೂರುವವರಾವಲ್ಲ ಕರುಣವ । ತೋರುಬಿನ್ನಹಮಾಡಿದೆನು ಹಗೆ । ಏ

ಧಧಿವನಲಿ ತೋರುವುದು ಸೋದರದಸಂಬಂಧ ॥ ಆರನೀತನ ಕೊಲೆಗೆ ಹೃದಯುವ । ಸೂರೆಗೊಂಡನು
ಕರ್ಣನಕಟಾ । ತೋರಿನುಡಿಯಲು ಕೃಷ್ಣ ಕರುಣಿಸು ಕರ್ಣನಾರೆಂದ ॥ ೩೩ ॥ ಧರೆಯಬಿಟ್ಟವು ಕು
ರುಪತಿಗೆನಾ । ವರುವರೊಡಹುಟ್ಟಿದರು ವಿಪಿನಾಂ। ತರದೊಳಗೆ ಭಜಿಸುವೆವುನಿಮ್ಮನು ಭಾವಶುದ್ಧಿ
ಯಲಿ ॥ ತೆರಳುವೀಸಿರಿಗೋಸುಗವು ಸೋ । ದರನ ಕೊಲುವೆನೆ ಕೃಷ್ಣ ಕರುಣಿಸು । ಕರುಣಿಸಕಟಾ
ಕೃಷ್ಣ ಹೇಳ್ಕೆ ಕರ್ಣನಾರೆಂದ ॥ ೩೪ ॥ ಅರಸ ಕೇಳ್ಕೆ ಬಳಿಕ ಪಾರ್ಥನ । ಕರುಣರಸವಾರೆಗಳ ವಾ
ಗ್ಮಿ । ಸ್ತರಕೆ ಮನದಲಿ ಮರುಗಿದನು ಮುರವೈರಿ ನಸುನಗುತ ॥ ಕೆರಳಿದನು ವೋತಿನಲಿ ಸುಡುಬಾ ।
ಹಿರನಲಾ ನೀನಿನ್ನವಂಶಕೆ । ಸರಿಯೆ ಸೂತಜನೆಂದು ಮುರರಿಪು ಜರೆದನರ್ಜುನನ ॥ ವಾಸಿಬೀತುದು
ಜಾತಿ ಶೌರ್ಯಕೆ । ಬೇಸರಾದುದು ಧೃತಿಗೆ ಕಲಿತನ । ಕೀಸುಮೊಲೆಗಳು ಮೂಡಿದವಲಾ ಪಾರ್ಥಸಮ
ರದಲಿ ॥ ಹೂಸರದ ವಿಸ್ತರದ ಹೂಂಕೃತಿ। ವಿಾಸಲಳಿದುದು ಶಿವಶಿವಾ ನಿ। ದೋಷದಲಿ ಬಹುದೋ
ಷವಾಯ್ತೆಂದನು ಮುರಧ್ವಂಸಿ ॥ ೩೬ ॥ ಕ್ಷಿತಿಯೊಳಗೆ ಕ್ಷತ್ರಿಯರ ಧರ್ಮ । ಸ್ಥಿತಿಯನರಿಯಾ ಕೃ
ಷ್ಣ ಚಾಪ । ಚ್ಯುತರನಪಗತವಾಹನರ ಪರಿಮುಕ್ತಕೇಶಿಗಳ ॥ ಗತಿವಿಹೀನರ ದೈನ್ಯವಾಚಾ । ಯುತರ
ವಲ್ಮೀಕರನು ಜಲಸಂ । ಗತರನಿರಿವುದು ಧರ್ಮವೇನಾವರಿಯೆವಿದನೆಂದ ॥ ೩೭ ॥ ಹೇಳುಹೇಳಿನ್ನೊ
ಮ್ಮೆ ಧರ್ಮವ । ಕೇಳಿದರಿಯವುನಿನ್ನಕೃಪೆಯಲಿ। ಕೇಳಲಾಗದೆ ರಾಜಧರ್ಮಪುರಾಣಸಂಗತಿಯ ॥ ಆಳುತ
ನದಾಟವ ದೊರಾರಿಸಿ । ಸೋಲಿಸುವುದೇನರಿದೆ ಬಲುಗೈ । ಯಾಳಲಾ ಧಿಟ ರಣಕೆ ನೀ ವಸುದೇವ
ನಾಣೆಂದ ॥೩೮॥ ಈಗ ಧರ್ಮಶ್ರವಣವಿದು ನೀ ನಾಗಳೇರಿಸಿ ನುಡಿನಭಾಷೆಯ । ಮೂಗು ಹೋದು
ದು ಮರೆದೆಲಾ ಮಾತುಗಳು ಹೆಚ್ಚುವರೆ ॥ ಹೋಗಲೆಲೆಮರುಳೇ ವಿಭಾಡಿಸು । ಬೇಗದಲಿ ಬಹುರಾಜ
ಕಾರ್ಯವ । ನೀಗಲೇ ತಿದ್ದಿಸುವೆ ತೊಲಗಿಸು ಸೂತಜನ ಶಿರವ ॥ ೩೯ ॥ ಅಕಟ ನಿಷ್ಕರುಣಿಯೆ ವೃ
ಥಾಪಾ । ತಕವಿದೇಕೆ ನಿನಗೆ ಜಯುಕಾ । ಮುಕರು ನಾವ್ ಕೊಲ್ಲದೊಡೆ ನಿಮಗೇಕೀಸುನಿರ್ಬಂಧ ॥
ಪ್ರಕಟಕುರುವಂಶದಲಿ ಯದುರಾ । ಜಕದೊಳಗೆ ಹಗೆಯಿಲ್ಲಲೇ ಮತಿ । ವಿಕಳನಾದೆನು ಕೃಷ್ಣಕರ್ಣ
ನ ಕೊಲ್ಲುವನಲ್ಲೆಂದ ॥ ೪೦ ॥ ಬಿಸುಟುಹೋದನು ರಥವ ಸಾರಥಿ । ವಸುಧೆಯೊಳು ತೇರದ್ದಿಕೆಡೆದು
ದು । ವಿಶಿತಮಾರ್ಗಣವಿಲ್ಲಕೈಯಲಿ ದಿವ್ಯಧನುವಿಲ್ಲ ॥ಎಸೆಯಲೆಂತೇಳುವುದು ಕೈ ನೀ ಬೆಸಸುವೊಡೆಮ
ನವೆಂತು ಬಂದುದು । ಬಸುರ ಶಿಖಿ ಬಲುಹಾಯ್ತು ಕರ್ಣನಕೊಲುವನಲ್ಲೆಂದ॥೪೧॥ಗುರುವನಸುವೊ
ಡೆಮೇಣುಭೀಷ್ಮರ । ಸರಳುಮಂಚಕಚಾಚುವೊಡೆಧಿ । ಕ್ಕರಿಸಿದನೆ ಕುರುಪತಿಯ ಶಕುನಿಯಶಲ್ಯಸೈಂಧ
ವರ ॥ ಕೆರಳಿಚಲು ತೇರ್ರೈಸಿದನೆ ಹಾ । ಮರುಗಿದನೆಕರ್ಣನಲಿಕಲಿತನ । ಕರಗಿತೇನೆಂದರಿಯೆ ಕರ್ಣನ
ಕೊಲ್ಲುವನಲ್ಲೆಂದ ॥ ೪೨ ॥ ಬಳಿಕ ಭೀಮಾದಿಗಳ ಮನದಲಿ । ಸುಳಿದುದೈಸಂದೇಹವೀತನ ಕೊಲುವು
ದೇನನುಚಿತವೊ ಮೇಣುಚಿತವೊ ಶಿವಾಯೆನುತ ॥ ಅಳುಕಿದಳು ದ್ರೌಪದಿಯುಧಿಷ್ಠಿರ । ರೊಳಗೊಳ
ಗೆ ಸಂತಾಪಶಿಖಿಯಲಿ ।ತಳದತದುಗುಡದಿಬಿಗಿದಬೆರಗಿನಲಿದುರ್ದಾಚೆಯಲಿ ॥೪೩॥ ಮೊದಲಲೆರಡೊಡ್ಡ
ನಲಿ ಸುಂಮಾ । ನದ ಸಘಾಡವ ಕಂಡೆನೀಗಲು । ತುದಿಗೆ ಬರೆಬರೆ ಕಂಡೆನವರಿವೆರರಡುಧಟ್ಟಿನಲಿ ॥
ತುದಿವೆರಳ ಕಂಬನಿಯ ಬಳಸಿದ । ಚೆದರುಗಳ ಕುಕ್ಕುರಿಕಿಡುತ್ತ । ಹವಿತ್ರಾಳಿದನುಚಿಂತೆಯನರಸ
ಕೇಳೆಂದ ॥ ೪೪ ॥ ಮತ್ತೆ ಜರಿದನು ದನುಜರಿಪುತಲೆ । ಗುತ್ತಿಹನು ಕಲಿಪಾರ್ಥನಾತನ । ಕುತ್ತಿ

ಬರಸೆಳೆದಂತೆ ಭಂಗಿಸಿದನು ಮುರಧ್ವಂಸಿ ॥ ಒತ್ತುವುದು ಫಲುಗುಣನ ನುಡಿ ಮಿಗೆ । ಕುತ್ತುವುದು ಹರಿವಚನವಾತನ । ಚಿತ್ತವನು ಹರಿ ತಿಳುಹಿ ಸಂತೈಸಿದನು ಸಾಮದಲಿ ॥ ಎಲೆಧನಂಜಯ ವಿಮಲಹಿಮಕರ । ಕುಲದ ಸುಕುಮಾರಕನು ಲೋಕದ । ಕುಲವಿಹೀನನು ಕರ್ಣನವ ನಿನಗೆಂತು ಸರಿಯಹನು ॥ ತಲೆಯಮಾರಿ ಶರೀರವನು ನೆರೆ । ಸಲಹಲೋಸುಗ ಕೌರವನ ತಂಬುಲಕೆ ಕೈಯಾಂತವನು ಬಂಧುವೆ ಪಾರ್ಥ ಹೇಳೆಂದ ॥೪೬॥ ಕಾಡಿನೆಡೆಯೊಳು ನಿಮ್ಮ ಬೇಟೆಯ । ನಾಡಿದವನಿವ ಜೂಜನಾಡಿಸಿ । ನಾಡ ಕೊಳಿಸಿದಹಿಸುಣನಿವ ನಿಮ್ಮೆಲ್ಲರನು ಕೆಡಿಸಿ ॥ ನಾಡ ಸಂಧಾನವನು ನಾವ್ ಮಾ । ತಾಡಲೆಮ್ಮನು ಬಿಗಿಯಲನುವನು । ಮಾಡಿದವನೀ ಕರ್ಣ ನಿನಗತಿಹಿತವನೆಹನೆಂದ ॥೪೭॥ ಮೊಲೆಯ ಮೇಲಿರಿದವನನಂಗಿಸಿ । ಸಲಹುವರು ಪುರುಷಾರ್ಥಜೀವಿಯ । ನಿಳಿಕೆಗಾಬರು ಸ್ವಾಮಿ ದ್ರೋಹಿಯನೊಲಿದು ನಂಬುವರು ॥ ತಿಳಿಯಲೀಕ್ಷತ್ರಿಯರ ಸಹಜದ । ಬಳಿಕ ನೀನರಸಾಗಿ ನಿನ್ನನು । ಕೊಲುವ ಕರ್ಣನ ನೀತಿವಚನದಿ ದಿಟ್ಟನಡೆವೆಂದ ॥೪೮॥ ಕೊಲ್ಲನೇ ಅಭಿಮನ್ಯುವನು ಹಗೆ । ಯಲ್ಲವೇ ಮಾರುತಿಯ ಕೊರಳನು । ಬಿಲ್ಲ ಕೊಪ್ಪಿನಲೆಳೆಯನೇ ಕೆಡೆಯೆಸನೆ ಧರ್ಮಜನ ॥ ನಿಲ್ಲು ನೀತಿಯು ನೆನೆಯದಿರು ನೀ । ನೆಲ್ಲಿಯವನಿವ ವೈರಿ ಕರ್ಣನ । ದೆಲ್ಲಿಯಾವ ನೆಸೆಮರುಳೆಯಂದನು ನಿಜವ ತೋರಿಸಿದ ॥೪೯॥ ಬೀಸಿದನು ನಿಜಮಾಯೆಯನು ಡೊಳ್ಳಾಸದಲಿ ಹರಹಿದನು ತಮವನು। ರೋಷವನು ಬಿತ್ತಿದನು ಮನದಲಿ ನರನ ಕಲಿಮಾಡಿ ॥ ಐಸೆ ಬಳಿಕಿನ್ನೇನಖಿಲಗುಣ । ದೋಷ ನಿನ್ನದು ಪುಣ್ಯಪಾಪದ । ವಾಸಿ ಯನಗೇಕೆನುತ ಕೊಂಡನು ಧನುವನಾಪಾರ್ಥ ॥೫೦॥ ಹಿಡಿ ಧನುವನನುವಾಗು ಸಾಕಿ । ನ್ನೆಡಬಲನ ಹಾರದಿರೆನುತ ಕೈ । ಗಡಿಯಲೆಚ್ಚನು ನೂರುಶರದಲಿ ಸೂತನಂದನನ ॥ ತೊಡಗಿತೇ ಕಕ್ಕುಲಿತೆ ಮನದಲಿ । ಫಡಯನುತ ನೂರಂಬನೆಡೆಯಲಿ । ಕಡಿದು ಬಿಸುಟನು ಶಳದು ಕಿಗ್ಗಟ್ಟಿನ ಕಠಾರಿಯಲಿ ॥೫೧॥ ರಥವ ಸಂವರಿಸಿದನು ಬಳಿಕತಿ । ರಥಭಯಂಕರನೇರಿದನು ನಿಜ । ರಥವ ನತಿಹರುಷದಲಿ ತೊಳೆದನು ಚರಣಕರತಳವ ॥ ಪೃಥುವಿ ನೆನೆದಪಕಾರ ಲೋಕ । ಪ್ರಥಿತವಾಯಿತೆ ಸಾಕು ಬದುಕಲಿ । ಪೃಥೆಯ ಮಕ್ಕಳೆನುತ್ತ ಕೊಂಡನು ನಗುತ ವೀಳೆಯವ ॥೫೨॥ ಧನುವ ಕೊಂಡನು ಹಗೆಯ ಜರೆದ । ರ್ಜುನನ ತರುಬಿದನಖಿಳ ಕುರುಬಲ । ವನಧಿಗಭಯವನಿತ್ತು ಮುಸುಕಿದನಂಬಿನಲಿನರನ ॥ ಕನಲಿದವು ನಿಸ್ಸಾಳ ನೃಪರಿಪು । ಜನವ ಬೈದವು ಕಹಳೆಯದಟರ । ತನು ಬಿರಿಯೆ ಗರ್ಜಿಸಿದವೆರಡೊಡ್ಡಿನಲಿ ಘನವಾದ್ಯ ॥೫೩॥ ಅಳುಕಿದನೆ ರಥ ಮುಗ್ಗಿದೊಡೆಕಳೆ । ವೆಳಿಸಿದನ ತಲ್ಲಾಪಸರಣಕೆ । ಕೆಲಬಲನ ಹಾರಿದನೆ ನರಸವಗಡಿಸಿ ಕಾದಿದೊಡೆ ॥ ಬಲಿಮಥನ ಮಝಭಾಪು ಪಾಂಡವ । ಬಲದಿಶಾಪಟ ರಾಯಮದನ । ಪ್ರಳಯಹರ ಭಾಪೆಂದು ಹೊಗಳಿತು ಭಟ್ಟಸಂದೋಹ ॥೫೪॥ ಅರಸ ಕೇಳ್ ಜೂಜುಗಾರರ । ಸಿರಿಯ ಸಡಗರ ಕಳಿವಗಲತಾ । ವರೆಯನೆಗೆ ಸಜ್ಜನರ ಖ್ಯಾತಿ ನಿತಂಬಿನೀಸ್ನೇಹ ॥ ಪರಮಯೋಗಿಯ ಲೀಲೆ ಕೌರವ । ರರಸನೊಡ್ಡಿನಜಯವಿದೀಸರ । ಗರುಡಿವ್ರೊಂದೇಶ್ರಮವ ಕೊಡುವುದು ತತ್ಕಧನುವೆಂದ ॥೫೫॥ ಉಬ್ಬಿದನು ನಿಸ್ಸಾತನಾತನ । ತಬ್ಬಿದನು ಕುರುಬಲದ ಹರುಷದ । ಜಬ್ಬುರಿಯ ಹುರಿಗೂಡಿ ತೋರಿತು ಚತುರಚತುರಂಗ ॥ ತಬ್ಬಿ ತುಳುಕುವ ಕಣೆಯ ಕಣೆ ಶರೆ । ಹಬ್ಬ ಹರೆದುದು ರೋಷದಲಿ ಬಲಿ । ದುಬ್ಬುಗವಳವ ಕೊಂಡವ್ರೊಲು ಕರ್ಣಾವಸಾನದಲಿ ॥೫೬॥ ಹತ್ತು ಶರದಲಿ ತುರಗವನು ವ ಘ । ವತ್ತುರಲಿ ಮುರವೈರಿಯನು ತೊಂ।

ಭತ್ತರಲಿ ಫಲುಗುಣನನ್ನೆವತ್ತಂಬಿನಲಿ ಕಪಿಯ ॥ ಮತ್ತೆ ಮೂವತ್ತರಲಿ ನರನರ । ಥೊತ್ತುಮವ ಬಿಡದೆಚ್ಚು ನೂರರ । ವತ್ತುಶರದಲಿ ಗಾಯಗಾಣಿಸಿದನು ಚತುರ್ಬಲವ ॥೫೭॥ ಬಲಜಲಧಿ ಸುಳಿಗೊಂಡು ಪಾರ್ಥನ ಬಳಿಗೆ ತೆಗೆದುದು ತೆಗೆದುದೀತನ । ಕಲಿತನವವಿಕ್ರಮಧನಂಜಯನಾಥನಂಜಯನ ॥ ಅಳುಕಿದರು ಭೀಮಾದಿಗಳು ಕಳ । ವಳಿಸಿತೀಚೆಯ ಥಟ್ಟು ಕೌರವ । ಬಲವು ತಲ್ಲಣಗೆಟ್ಟುದೊಂದರಗಳಿಗೆಮಾತ್ರದಲಿ॥ ... ... ॥೫೮॥

ಅಂತು ಸಂಧಿ ೨೬ಕ್ಕೆ ಪದ ೧೧೧೮ಕ್ಕಂ ಮಂಗಳಮಸ್ತು.

ಇಪ್ಪತ್ತೇಳನೆಯ ಸಂಧಿ.

॥ಸೂಚನೆ॥ ಸಮರಸಾಹಸಮಲ್ಲ ನನುಪಮ । ಕಮಲಸಖನ ಕುಮಾರ ಕರ್ಣನು । ಅಮರನಗರಿಗೆ ನಡೆಯೆ ಹಲುಬಿದನಂದು ಕುರುರಾಯ॥

॥ಪದ॥ ಸಾಲದೇ ಕಥೆಯನ್ನುಮೇಲಣ । ಕಾಳಗದ ಮಾತುಗಳನಾಲಿಸಿ । ಕೇಳಿಜೀವವ ಹಿಡಿಯಲಾಪ್ಪೆತಂದೆ ಧೃತರಾಷ್ಟ್ರ ॥ ಹೇಳುವೊಡೆ ಕರ್ಣವ್ಯಥೆಯ ನೀ । ನಾಲಿಸುವಡೇನರಿದು ನುಡಿಗಳ । ಕಾಳಕೂಟವ ಬಡಿಸುವೆನು ಕಿವಿಯಾರ ಕೇಳೆಂದ ॥ ೧ ॥ ತೂಳಿದನು ಕಲಿಪಾರ್ಥನೀತನ । ಮೇಲೆ ಶಿವ ಶಿವ ಕಣೆಯ ಕಡೆವಳೆ । ಗಾಲತಪ್ಪಲೆನುತ್ತ ತರಿದನು ಕರ್ಣನಂಬುಗಳ ॥ ಮೇಲೆಮೇಲೆಚ್ಚಂಬುಗಳ ಸಲೆ । ಸೀಳಿ ಕರ್ಣಧ್ವಜದ ಕಂಭದ । ಕೂಲ ಮುರಿಯೆಸಲುಡಿದು ಬಿದ್ದುದು ವರರಥಾಗ್ರದಲಿ॥೨॥ ಆಮಹಾಧ್ವಜದಂಡಪಾತದ । ಡಾಮರಕೆ ಕಳವಳಿಸಿ ಬೆದರಿತು । ಹಾಮಹಾದೇವೇನಹೇಳುವೆನ್ನೆ ಮಹೀಪತಿಯೆ ॥ ಧೂಮಚುಂಬಿತಚಿತ್ರದಂತೆ ಸ । ನಾಮರಿದ್ದುದು ಸೌಬಲಾಶ್ವ । ತ್ಥಾಮಕೃಪಕೃತವರ್ಮಕಾದಿಗಳೊಂದುನಿಮಿಷದಲಿ ॥ ೩ ॥ ಮತ್ತೆ ಕೇಳರಿವಿಕ್ರಮವ ನಭ । ಕೊತ್ತಿತೀತನ ಶೌರ್ಯವಾತನ । ನತ್ತರಲಿ ನಾದಿದನು ನಾನಾವಿಧಶರಾಳಿಯಲಿ ॥ ಹತ್ತುಶರದಲಿ ಕರ್ಣಚಾಪವ । ಕತ್ತರಿಸಿದನು ಪಾರ್ಥನೀತನ । ಚಿತ್ತದಲಿ ಕರುಣಾರಸದ ಕಾಲಾಟವಾಯ್ತೆಂದ ॥ ೪ ॥ ದ್ರೋಣಭೀಷ್ಮರ ನಚ್ಚಿದರ ಮುಂಗಾಣಿಕೆಯಲೇ ಮಡಿದಿರೆನ್ನಯ । ಗೋಣ ಕೊಯ್ದನು ಕೃಷ್ಣ ಮುನ್ನಿನಕುಲವನೆಚ್ಚರಿಸಿ ॥ ಪ್ರಾಣ ಪಾಂಡವರೆಂಬನುಡಿಯನು । ಜಾಣಿನಲಿ ಹರಿ ಬಲಿದನೊಡೆಯಗೆ । ಕಾಣೆನಾಪ್ತರನೆಂದು ಮುಂಮಲಮರುಗಿದನು ಕರ್ಣ ॥ ೫ ॥ ಕುಲಕೆ ಕೇಳಿವನೆಂದು ಠಿಕ್ಕರಿಗಳೆಯಲಾಗಲಿ ಬಂಧುವರ್ಗಕೆ । ಮುಳಿದುಸಿಹ್ಮಾಸನದಲೆನಗಭಿಷೇಕವನು ಮಾಡಿ ॥ ಕುಲಮಲಿರ್ನ್ನವ ತೊಳೆದು ತನ್ನಯ । ಕುಲದೊಳಗೆ ಬೆಚ್ಚವನಿಪಾಲಕ । ತಿಲಕಕುರುಪತಿಗಾಪ್ತರಿಲ್ಲೆಂದಳಲಿದನುಕರ್ಣ ॥ ೬ ॥ ನೋಡಿ ತಣಿಯನು ನಿಚ್ಚಲುಚಿತವ ಮಾಡಿತಣಿಯನು ಕೇಳ ಮೇಳದ । ಲಾಡಿತಣಿಯನು ಶಿವಶಿವಾಯೆನ್ನೊಡೆಯಕುರುರಾಯ ॥ ನೂತಲಳಿದುದು ದ್ರೋಣಭೀಷ್ಮರ । ಗೂಡಿ ತಲೆಗೊಟ್ಟೆಸರಿಂತಾ । ಮಾಡಿತೇನರಸಂಗೆನುತ ಸಲೆ ಮರ

ದನು ಕರ್ಣ ‖ ೭ ‖ ಮೊದಲಲಾತ್ಮಜರಳಿವನೊಡಹು । ಟ್ಟಿದರಮರೆಯಲಿ ಮರೆದನೊಡಹು ।
ಟ್ಟಿದರು ನೂರ್ವರು ಮಡಿಯೆ ಮರೆದನು ಯೆನ್ನಸುಳುವಿನಲಿ ‖ ಕದನವೆನ್ನಯ ಸುಳಿವನೊಳಕೊಂ।
ಡುದು ಸುಯೋಧನನೃಪತಿಗಿನ್ನಾ । ವುದನು ಕಾಣೆನು ಶಿವಶಿವಾಯೆಂದೊರಲಿದನು ಕರ್ಣ ‖ ೮ ‖
ಕಲಹದೊಡೆಯನ ಜೋಳವಾಳಿಗೆ । ತಲೆಯ ಮಾರುವದೊಂದುಪುಣ್ಯದ । ಬೆಳಸು ಮರಣದಹೊ
ತ್ತು ಕೃಷ್ಣನಕಾಬಸುಕೃತಫಲ ‖ ಇಳೆಯೊಳಿಂದೆನಗಿಲ್ಲದಾರಿಗೆ । ಫಲಿಸುವುದು ತಾ ಧನ್ಯನೆನುತವೆ ।
ಕಳಚದಸುರಾಂತಕನ ನೀಕ್ಷಿಸುತಿರ್ದನಾಕರ್ಣ ‖ ೯ ‖ ಒಳಗೆ ಹೃದಯಾಂಬುಜದ ಮಧ್ಯ । ಸ್ಥಳ
ನೊಳಗೆ ಮುರವೈರಿಯನು ಹೊರ । ವಳಯದಲಿ ಫಲುಗುಣನ ಮಣಿರಥದಗ್ರಭಾಗದಲಿ ‖ ಹೊಳೆ
ವಹರಿಯನು ಕಂಡನಿದು ಹೊರ । ಗೊಳಗು ಹರಿತಾನೆಂಬಭೇದವ । ತಿಳಿದುನಿಜದೆಚ್ಚರಿನ ತವಕದೊ
ಳಿರ್ದನಾಕರ್ಣ ‖ ೧೦ ‖ ಅರಸಚಿತ್ತೈಸಾಚೆಯಲಿ ಮುರ । ಹರನಲೇ ನಿಮ್ಮನ್ವಯವ ಸಂ । ಹರಿ
ಸಿದಾತನು ಭೀಮಸೇನನೊ ಮೇಣ್ಧನಂಜಯನೊ ‖ ಸರಳ ತೊಡು ಬೇಗದಲಿ ಕರ್ಣನ । ಶಿರವನಿಳು
ಹಾ ಹಾರದಿರುಹೇ । ವರಿಸದಿರು ತೆಗೆ ದಿವ್ಯಶರವ ಪ ಬೇಗ ಮಾಡೆಂದ ‖ ೧೧ ‖ ಕರಗುವರೆ ನೀ
ವಾರು ಭೀಮನ । ಕರೆದು ಕೊಲಿಸುವೆನೀತನನು । ನಿಷ್ಠುರನಲಾ ಯೆನ್ನದಿರು ತೆಗೆ ನಿನ್ನಿಂದತ
ನ್ನಿಂದ ‖ ಹರಿಯದೇ ಹಗೆ ನಮ್ಮ ಚಕ್ರದ। ಲರಿಭಟನ ಮುಂಲವನು ಯುಧಿಷ್ಠಿರ । ನರಸುತವನು ನಿಲಿ
ಸಿ ತೋರುವೆನೆಂದನಸುರಾರಿ ‖ ೧೨ ‖ ಈಸುಕರ್ಣನಮೇಲೆ ಬಹಳ । ದ್ವೇಷವೇನೋ ಯೆನುತ ಮನ
ದಲಿ । ಗಾಸಿಯಾದನುಪಾರ್ಥ ಕರುಣಕ್ರೋಧದುಪಟಳಕೆ ‖ ಆಸಯನ್ನೇಕೆನುತ ಸೆಳೆದನು । ಸೂಸಿಗ
ಡಗಳ ಸುಳಿಯಹೊಗರಿನ। ಮಿಸಲಳಿದಾರೆಂಜಲಿಸದಂಜಳಿತಮಾರ್ಗಣವ ‖ ೧೩ ‖ ಉರಿಯನುಗುಳು
ವ ಬಾಣದಲಿ ವಿ । ಸ್ತರಿಸಿ ಕರ್ಣನನೆಸಲು ಸಮರದೊಳುರವ ಕೀಲಿಸಿದಂಬುಗಂಗಡಿಯಾಗಿ ಗಾಢದ
ಲಿ ‖ ಹರಣ ತೊಲಗದಮರ್ಮವನು ಮುರ । ಹರನು ಕಂಡನು ರಥದವಾಘುಯ । ನಿಂಸಿ ಕರ್ಣನ ಹೊ
ರಗೆ ಬಂದನು ವಿಪ್ರವೇಷದಲ ‖ ೧೪ ‖ ಬಳಲಿದನು ಬಸವಳಿದು ಮಲ್ಲನೆ । ಹಳವಿಗೆಯ ನಮ್ಮಿದನು
ಲಕ್ಷ್ಮೀ । ನಿಳಯನನು ನೋಡುತ್ತರವಿಸುತನಿರಲು ಕಂಡಾಗ ‖ ಹೊಳೆದಕುಂಡಲವಿರಲು ಪ್ರಾಣವು।
ತೊಲಗದಲ್ಲಿಂದಾಗ ಕೃಷ್ಣನು। ತಿಳಿದು ವಿಪ್ರನ ರೂಪತಾಳ್ದವನಲ್ಲಿಗೈತಂದ ‖ ೧೫ ‖ ತ್ಯಾಗಿ ಜಗದೊ
ಳಗೆಂಬಕೀರ್ತಿಯ । ಲೋಗರಿಂದವೆ ಕೇಳಿ ಬಂದೆವು । ಈಗಲತಿಶಯಫಲವನೊಲುವರಮನಥಬಯಿ
ಯನು ‖ ಈಗಲಾವುದು ನಿನ್ನಭೀಷ್ಟವು । ತ್ರೀಗೆ ಮಂಗಳವೆಂದು ಹರಸಿದ । ನಾಗಲಂದನು ಕರ್ಣ ನ
ಸುನಗುತಿರ್ದ ಮನದೊಳಗ ‖ ೧೬ ‖ ತ್ಯಾಗಸಿಂಹಾಸನದಮೇಲಿ । ದ್ದಾಗಬೇಡಿದೊಡೀವನಾನೀ
ವೀಗ ರಣದಲಿ ಬಂದು ಬೇಡುವುದುಂಟೆ ಹೇಳನಲು । ತೂಗುತಿಹಕುಂಡಲವನೀಗಲೆ । ಬೇಗಧಾರೆಯ
ನೆರೆದುಕೊಡುಯೆನ । ಲಾಗಲುದಕವನರಸಿ ಕರ್ಣನು ಕೆಲನ ನೋಡಿದನು ‖ ೧೭ ‖ ಉದಕವನು
ಹೊರಗರಸುತಿರಲಾ । ಪದುಮನಾಭನು ನುಡಿವನಿನ್ನಯ । ಹೃದಯದೊಳಗಿದ್ದಮಲಗಂಗಾಜಲವ
ತೆಗೆದೆನಗೆ ‖ ಪದುಳದಿಂದೆರೆ ಧಾರೆಯನು ಸಂ । ಪದದ ಮುಕ್ತಿಯ ಪದವನೊಲುವೊಡೆ । ಇದು ತು
ಭೋದಯವೆಂದು ಮಾಯಾವಿಪ್ರನರುಹಿದನು ‖ ೧೮ ‖ ಸರಳ ತಗದನು ಸರಸಿಜಪ್ರಿಯ। ವರಸುತನು
ತನು ವರ ಬಗಿದನು । ಘುರಿಘುಂಲುಘುರಿಲನಲು ತೆಗದನು ನಿರ್ಮಲೋದಕವ ‖ ಪರಮಸಂತೋಷದಲಿ

ಧಾರೆಯ|ನಿರದೆ ಮಾಡುತ್ತಿರಲು ವೆ|ಲಣಾಸುರರುಘೋ|ಯೆಂದೆನಲು ಪುಷ್ಪ ಕವಿಳಿದುದಂಬರದಿ ||೧೯||
ಬೇಡಿದೊಡೆ ಕುಂಡಲವ ತೆಗೆದೀ | ಡಾಡಿದನು ಲೋ|ಕೈಕಸಾಧನ | ನೋ|ಡಿ ಧನ್ಯನೆನುತ್ತ ರವಿಸುತನಿರ
ಲು ಭಕ್ತಿಯುಲಿ || ನೋಡಿದನು ಕರುಣಾಳು ಧಾರೆಯ | ಮಾಡಿದಾನವ ನೀ|ವ್ರದೆನೆ ಕೈ | ನೀ|ಡಿ ಹೃದ
ಯುವ ಬಗಿದನಮೃತದ ಬಿಂದುಗಳು ಸುರಿಯೆ || ೨೦ || ಪರಮಕರುಣಾಸಿಂಧು ಕರ್ಣ೦ | ಗಿರಿದೆ ನಿಜ
ಮೂರ್ತಿಯನು ತೋ|ರಿಸಿ | ಯುರುತರಪ್ರೇ|ಮದಲಿ ಮುಕ್ತಿಯುಪದವ ನೇಮಿಸಿದ || ನರನೊಳೆಚ್ಚರಿಸಿ
ದನು ಕರುಣಾ | ಕರನು ಅನುಸಂಧಾನಮಾಡಲು | ಧರೆಯೊಳೇ|ನೆಚ್ಚರಿಯೆನುತ ಬೆರಗಾಯ್ತು ಸುರೆ
ಕಟಕ || ೨೧ || ಅಂದು ಪಾಶುಪತಕ್ಕೆ ಬಲುವಳಿ| ಬಂದುದಂಜನಬಾಣವನು ಡೊಣೆ | ಯಿಂದ ತೆಗೆ
ದನು ಗಿರಿಜೆಯಂಘ್ರಿಯು ನೆನೆದು ಮಂತ್ರಿಸುತ || ಮಂದರಾಚಲ ನಡುಗೆ ಕಿಡಿಗಳ | ಸಂದಣಿಯು ಬಾ
ಯ್ದಾರೆಯಂಬಿನೊ | ಳಂದು ಕರ್ಣನ ಶಿರವನೆಚ್ಚನು ವಾಸವನಸೂನು || ೨೨ || ಶಿವಶಿವಾಯೆನುತಿ
ರ್ದೈತ್ಯ | ಭುವನಜನವಾದಿವ್ಯಶರಗಾಂ|ಡಿವವನೊದೆದುದು ಸದೆದುದೀ|ತನಬಹಳರಶ್ಮಿಯಲಿ || ಅ
ವೆಘೊಡಿಸಿತೀ|ವ್ರಭಯಬಲದೃಗು | ನಿವಹವನು ಧಾರಾಳಿವನ್ಹಿ | ಪ್ರವರಬಹಳಜ್ವಾಲೆ ಝಡಿತೆಯಲ್ಗೈದಿ
ಕರಿಭಟನ || ೨೩ || ಆಮಹಾಸ್ತ್ರದ ಬಹಳತೇಜ | ಸ್ತೋ|ಮದಲಿ ಕಣ್ಮುಳುಗಿ ಮುಚ್ಚಿದು | ದೀಮ
ಹೀಶವ್ರಾತವೆರಡೊಡ್ಡಿನಲಿ ಕಣ್ದೆರೆಯೆ || ಆಮುಹೂರ್ತಕೆ ಕರ್ಣಶಿರವು | ದ್ದಾಮಮಣಿಗಳು ರುಚಿರ
ನಾಮ | ಸ್ತೋ|ಮದಲಿ ಪಲ್ಲಟಿಸಿ ಮೆರೆದುದು ಗಗನಮಾರ್ಗದಲಿ || ೨೪ || ಅರಸಕೇಳ್ಕೆ ಕರ್ಣನೊ
ಡಲಲಿ | ಪರಮತೇಜಃಪುಂಜ ಹೊಳೆದು | ಪ್ಪರಿಸಿ ನೆಗೆದುದು ಹೋ|ದುದಿನಮಂಡಲದಮಧ್ಯದಲಿ || ಅ
ರರೆ ಭಾಪುರೆ ಕರ್ಣಮಜಭಾ | ಪುರೆ ಭಟಾಗ್ರಣಿ ನಿನ್ನ ಸರಿಧೊರೆ | ಯೆರಡುಯುಗದಲಿ ಕಾಣೆನೆಂದ
ಳಲಿದನು ಕಲಿಹನುಮ || ೨೫ ||(ಕೊಟ್ಟಭಾಷೆಯ ಮಿರಾರಿ ಬಾಣವ|ತೊಟ್ಟನೇ| ತಾನೊಡೆಯನೆಂದರೆ|
ಯಟ್ಟಿದನೆ ಪಾಂಡವರೊಳನುಸಂಧಾನವನು ಬಿಸುಟು || ನೆಟ್ಟಕಣೆಗಳ|ಕಿದನೆ ಕೌರವ | ಕಟ್ಟನಕಟಕ
ಟೆಂದು ಕಾಯುವ | ಬಿಟ್ಟಕರ್ಣ೦ಗಾರುಸರಿಯನುತಿರ್ದುದಮರಗಣ)|| ೨೬ || ಬಲುವಿಡಿಯಬಿಲು ವಾ
ಮದಲಿ ಬೆರ | ಳೊಳಗೆ ಸವಡಿಸಿ ತೆಗೆದತಿರುಚಿನ | ಹಿಳುಕು ನಿಮಿರಿದತೋ|ಳತೋ|ರಿಕೆ ಬಲದಭಾಗದ
ಲಿ || ಬಲಿದಮಂಡಿಯಬಾಗಿದೊಡಲಿನ | ಹೊಳೆವತನುಕಾಂತಿಯಮಹೀ|ಪತಿ | ತಿಲಕ ಕೇಳ್ಕೆ ಕರ್ಣನೆಸ
ದನು ರಥದ ಮಧ್ಯದಲಿ || ೨೭ || ಕಳಚಿ ದುರ್ಯೋ|ಧನನ ಬೆಳುಗೊಡೆ | ನೆಲಕೆ ಬೀಳ್ವಂದದಲಿ ಕೌರ
ವ | ಕುಲದ ನಿಖಿಳೈಶ್ವರ್ಯವಿಳೆಗೋ|ರ್ಗುಡಿಸಿ ಕೆಡೆದಂತೆ || ಥಳಥಳಿಪನಗೆಮೊಗದ ಬಿಗುಹೆ | ಕ್ಕಳೆದಹು
ಬ್ಬಿನ ಬಿಟ್ಟಕಂಗಳ | ಹೊಳೆವಹಲುಗಳ ಕರ್ಣಶಿರ ಕೆಡೆದುದು ಧರಿತ್ರಿಯಲಿ || ೨೮ || ಕರ್ಣಹಾಹಾ
ಸೂತಸುತ ಹಾ | ಕರ್ಣ ಹಾ ರಾಧಾತನಯ ಹಾ | ಕರ್ಣ ಹಾ ಯೆನ್ನಾಣೆ ಬಹಿರಂಗಜೀವನನೆ || ನಿ
ರ್ಣಯವು ಕುರುಬಲಕೆ ಹಾಹಾ | ಕರ್ಣಬಾರೈ ತಂದೆಯನುತವೆ | ನಿನ್ನ ಮಗ ರಥದಿಂದ ಧೊಪ್ಪನೆ
ಕೆಡೆದನವನಿಯಲಿ || ೨೯ || ರಾಯ ಹಮ್ಮೈಸಿದನು ಹಾರಾ | ಧೇಯ ಹಾಯೆಂನಾನೆ ಬಾರೈ | ದೂ
ಯವಾಗದೆ ನಿನ್ನ ತೋ|ರಾ ಕರ್ಣತೋ|ರೆನುತ || ಬಾಯ ಬಿಟ್ಟದು ಕೈಯ ಕೈದುವ | ಹಾಯಿಕಿತು
ಕಂಬನಿಯ ಸರಿಯೊಳು | ಹಾಯಿದುದು ನೆರೆ ಹೊರಳತಿರ್ದುದು ನಿಖಿಳಪರಿವಾರ || ೩೦ || ಸರಗೆ
ಸ್ಥರಣೆಯಲ್ಲಿಯದು ಕರಿ | ತುರಗಕಂಬನಿಗರೆದುದ್ದ ಘರ | ಘರಡತೋ|ಕಾಂಬುಧಿಯು ಲಳಿಯಲಿ ಸಿಲ್ಕು

ತರಿಸೇನೆ ॥ ಅರಸ ಕೇಳಾಚೆಯಲಿ ಭೀಮನು । ವರನಕುಲಸಹದೇವನರ್ಜುನ । ಧರಣಿಪತಿ ದ್ರೌಪದಿಯ ಚಿಂತೆ ದುರಂತವಾಯ್ತೆಂದ ॥ ೩೧ ॥ ಕಿತ್ತರೋ ಕಲ್ಪದ್ರುಮವ ಕಡೆ । ಕುತ್ತಿದರೊ ಸುರಧೇನುವ ನುಕ್ಕೈ । ವರ್ತಿಸಿದರೋ ಪರುಷವನು ಹಾಜಲಧಿಮಧ್ಯದಲಿ ॥ ಎತ್ತಣದು ಭಾರತದ ರಣ ತಾ । ನೆತ್ತಲರಸುತ ಬಂದುದಕಟಾ । ಮೃತ್ಯುವೆಂದೊರಲಿತ್ತು ವಂದಿಗಳೆರಡುಘಟ್ಟಿಸನಲಿ ॥ ೩೨ ॥ ಅರಸ ನೀ ಸ್ತೈರಿಸದೆಲಾ ಶಂ । ಕರವಿರಿಂಚಾದಿಗಳು ಕರ್ಣನ । ಪರಮಸತ್ಯವ್ರತವ ಕೊಂಡಾಡಿದರು ಅಕಟೆನುತ॥ ಎರಡುಘಟ್ಟಿನ ದುಃಖಮಯಸಾ । ಗರವನತಿಹೇರಾಳವರ್ಜುನ। ತಿರುಗಿದನು ಪಾಳೆಯಕೆ ದುಮ್ಮಾನದಲಿ ಹರಿಸಹಿತ ॥ ೩೩ ॥ ಇತ್ತ ಪರವಶವಾದರಾಯನ । ತೆತ್ತಿಗರು ದಂಡಿಗೆಯೊಳರಸನ । ನೆತ್ತಿತಂದರು ಪಾಳೆಯದ ದುಸ್ಥಿತಿಯ ಮೇಳದಲಿ ॥ ತೆತ್ತನೇ ಮಗನಸುವನಕಟೆನು । ತೆತ್ತ ಚಿಂತಾರಾಗದಲಿ ಕಡ । ಲತ್ತ ಹಾಯ್ದನು ಬಿಸುಟನಂಬುಜಮಿತ್ರನಂಬರವ ॥ ೩೪ ॥ ದ್ಯುಮಣಿಕರ್ಣದ್ಯುಮಣಿಯೊಡ। ನ ಸ್ತಮಿಸ ಕಮಲಿನಿ ಕೌರವನಮುಖ । ಕಮಲ ಬಾಡಿತು ತಿಮಿರ ಹೆಚ್ಚಿತು ಶೋಕತಮದೊಡನೆ ॥ ಅಮಳಚಕ್ರಾಂಗಕ್ಕೆ ಭೂಪೋ । ತ್ತಮನ ವಿಜಯಾಂಗನೆಗೆ ಯಗಲಿಕೆ । ಸಮನಿಸಿತು ನೀ ಕೇಳು ಜನಮೇಜಯಮಹೀಪಾಲ ॥ ೩೫ ॥ ಕುದಿದು ಕೃಷ್ಣನು ಕರ್ಣನಳಿವನು । ವಿದಿತವೆಂದವೆ ಬಯಸಲಾಯಿತು । ಉದಧಿ ಹೆಚ್ಚಿತು ಹರುಷದಲಿ ಭೂಭಾರ ಹೋಯ್ತೆನುತ ॥ ಸದನವನು ಹೊಕ್ಕನು ನಿರಂತರ । ಕದಡು ದುರ್ಯೋಧನನಮೇಲಿರೆ । ಕದನದಲಿ ಪಾಂಡವರ ಸಲಹಿದ ವೀರನಾರಾಯಣ ॥ ೩೬ ॥ ಮರುಗುವರು ಪಾಂಡವರು ಕರ್ಣನ । ಮರಣದಲಿ ಯಡಿಗಡಿಗೆ ಮಿಗೆ ಸೋ । ದರದ ಸಂಬಂಧದಲಿ ಹೆಚ್ಚಿತು ಮನದಸಂತಾಪ ॥ ಬೆರಸಿತಕಟಾಯೆನುತ ಮುರರಿಪು। ಕರಗಿದಂತಃಕರಣದಿಂದವೆ। ನೆರೆ ಮರುಗಿ ಪಾಂಡವರ ಸಲಹಿದ ವೀರನಾರಯಣ ॥ ... ... ॥೩೭॥

ಅಂತು ಸಂಧಿ ೨೭ಕ್ಕಂ ಪದ ೧೧೫೫ಕ್ಕೆ ಮಂಗಳಮಸ್ತು.

ಇತಿ ಶ್ರೀಮದಚಿಂತ್ಯ ಮಹಿಮ ಗದುಗು ವೀರನಾರಾಯಣ ಚರಣಾರವಿಂದ ಮಕರಂದ ಮಧುಪಾನ ಪುಷ್ಟ ವಚಃ ಷಟ್ಪದಿನಿಕಾಯ ಶ್ರೀಮತ್ಕುಮಾರ ವ್ಯಾಸಯೋಗೀಂದ್ರ ವಿರಚಿತಮಪ್ಪ ಕರ್ಣಾಟ ಭಾರತ ಕಥಾಮಂಜರಿಯೊಳ್ ಕರ್ಣಪರ್ವಂ ಸಮಾಪ್ತಮಾದುದು.

ಶ್ರೀರಸ್ತು.

॥ಶ್ರೀ ವೇದವ್ಯಾಸಾಯನಮಃ.॥

ಕನ್ನಡಮಹಾಭಾರತ-ಶಲ್ಯಪರ್ವ.

ಮೊದಲನೆಯಸಂಧಿ.

॥ಸೂಚನೆ॥ ರಾಯ ಕೇಳೈ ಕದನದಲಿ ಕಲಿರಾ । ಧೇಯನವಸಾನದಲಿ ಕೌರವ।ರಾಯದಳವತಿಯಾಗಿ ಹೊಕ್ಕನು ಶಲ್ಯನಾಹವವ ॥

॥ಪದ॥ ಹೇಳರೇ ಭೀಷ್ಮಾದಿಹಿರಿಯರು । ಮೇಲುದಾಯವ ಬಲ್ಲವರು ಹೆ । ಚ್ಚಾಳುತನದಲಿ
ಬಗ್ಗಿ ಕಂಡಿರಿ ಜಯದ ಜಾರುಗಳ ॥ ಮೇಲಣಾಹವದೊಳಗೆ ದೇಹವ । ಬೀಳುಕೊಟ್ಟನು ಶಲ್ಯನಲ್ಲಿಂ
ನ್ನೇಲೆ ದೊರೆಗೇನಾಯ್ತು ಯೆಂಬುದನರಿಯೆ ತಾನೆಂದ ॥೧॥ ಮರುಳೆ ಸಂಜಯ ಗಾಳಿಯಲಿ ಕುಲ
ಗಿರಿಯ ಬೈಸಿಕೆ ಬಿಚ್ಚಿದ್ದರೆ ಹುಲು । ಮೊರಡಿಗಳ ಪಾಡೇನು ಬೀತುದು ಕರ್ಣನೊಡ್ಡವಣೆ ॥ ಕುರುಪ
ತಿಯ ಪಾಡೇನು ಮಾದ್ರೇ । ಶ್ವರನ ಮತ್ಸರವೇನು ಸಾಕಂತಿರಲಿ ಸವರಿತು ಕೌರವಾನ್ವಯವೆಂದನಂಧ
ನೃಪ ॥೨॥ ಬೇಯದೆನ್ನೆದೆ ಶೋಕವಹ್ನಿಯ । ಬಾಯಲಕಟಾ ಕರ್ಣಕೌರವ । ರಾಯರಳಿವಿನಲುಳಿದು
ಪುತ್ರದ್ರೋಹಿಯಾಗಿನ್ನು ॥ ಸಾಯಿಸುವ ಸಾವಂಜತೆನಗೆ ಚಿ । ರಾಯು ತೊಡರಿಕ್ಕಿದನು ಮಾರ್ಕಂ
ಡೇಯಮುನಿಯೆಂದರಸ ಥೊಪ್ಪನೆ ಕೆಡೆದನವನಿಯಲಿ ॥ ೩ ॥ ಹದುಳಿಸೈ ರಾಜೇಂದ್ರ ನೀ ಬಿ। ತ್ತಿದವಿಷ
ದ್ರುಮ ಫಲಿತವಾಯಿತು । ಬೆದರ ಲೇಕನುಭವಿಸುಸಾಕಿನ್ನುಳಿದಮಾತೇನು ॥ ಕದನದಲಿ ಸುರನದಿಯ
ಹೋಗಾ । ಡಿದೆ ನಿಜಾನ್ವಯಕಲ್ಪತರುವನು।ಮದಕರಿಗೆ ಮಾರಿದೆಯೆನುತ ನೆಗಹಿದನು ಧರಣಿಪನ ॥೪॥
ಮಲಗಿಸಿದ ನೊರಗಿನಲಿ ನಯನ । ಸ್ಥಳವನೇರಿಸಿದವನು ಶೋಕಾ । ನಳನ ತಾಪಕೆ ತಂಪನೆರೆದನು ನೀ
ತಿಮಯರಸದ ॥ ಅಳಲಸರವಮಾಡಿದ ನದೀಸುತ । ರಳಿವಿನಲಿ ಗುರುಕರ್ಣಶಲ್ಯನ । ತಳುವಿನಲಿ ಕಟ್ಟ
ಳಲ ಬಹಳಾಭ್ಯಾಸಿ ನೀನೆಂದ ॥೫॥ ಅಹುದು ಸಂಜಯ ಶೋಕಶಿಖಿ ನೆರೆ । ದಹಿಸದೆನ್ನನು ಬೆಂದದೇ
ಹಕೆ । ದಹನವುಂಟೇ ಯೆಂಬನಾಣ್ನುಡಿ ನಿನ್ನೊಳಾದುದಲಾ ॥ ಮಿಹಿರಸುತ ಪರಿಯಂತ ಕಥೆ ನಿ ।
ರ್ವಹಿಸಿ ಬಂದುದು ಶಲ್ಯಕೌರವ । ರಹಿಗನೆಗಳಿದರೆಂಬುದನು ವಿಸ್ತರಿಸಿ ಹೇಳೆಂದ ॥೬॥ ತೆಗೆದು ದಾಚೆ
ಯಲವರ ಬಲ ಜಿಗ । ದಗಲದುಬ್ಬಿನ ಬೊಬ್ಬೆಯಲಿ ಮೊರೆ । ಮುಗಿಲ ಮದದಂದದಲಿ ಬಹುವಿಧವಾ
ದ್ಯ ರಭಸನಲಿ ॥ ಬಿಗಿದಮೋನದ ಬೀತಹರುಷದ । ಹೊಗರುಮೋರೆಯ ಹೊತ್ತ ವ್ಯಥೆಗಳ । ದುಗುಡ
ದೊಡಲಿನ ನಿನ್ನ ಮೋಹರ ತೆಗೆದುದೀಚೆಯಲಿ ॥ ೭ ॥ ಸಿಡಿದು ಕರ್ಣನ ತಲೆ ಧರಿತ್ರಿಗೆ । ಕೆಡೆಯೆ

ಭೂಪ್ಪನೆ ಮೂರ್ಛೆಯಲಿ ನೃಪ । ಕೆಡೆದು ಕಣ್ಮುಚ್ಚಿದನು ಶೋಕಜ್ವರದ ಝಳ ಝಡಿಯೆ ॥ ಹಡಪಿ
ಗರು ಚಾಮರದ ಚವುರಿಯ । ರೊಡೆಯ ನಿದಿರಿನಲೊದರೆ ಕಂಬಿಯು । ಕಡಿಯಣದ ಕುಡಿನೇಣು
ಕೊಂಡನು ತಿರುಹಿದನು ರಥವ ॥ ೮ ॥ ಇಂದು ಕರ್ಣನ ಹಾನಿ ಕೌರವ । ವೃಂದವನು ಮೇಳೈ
ಸಿತೇ ಹಾ । ಯೆಂದು ಕೃಪಗುರುಸುತರು ರಥವನು ಬಿಸುಟ ಸೂಠಿಯಲಿ ॥ ತಂದು ನಿಲಿಸಿದರರಸ ನಿ
ರವೆಂ। ತೆಂದುಸುರನಾರೈದು ವಿಧಿಯನು । ನಿಂದಿಸಿದವರವಧಾನು ಜೀಯೆನುತಾವುಹಾರಥರು ॥ ೯ ॥
ತಳಿತಳದು ಪಂನೀರನಕ್ಷಿಗೆ । ಚಳೆಯುವನು ಹಿಡಿದೆತ್ತಿ ಗುರುಸುತ । ಮಲಗಿಸಿದೊಡೇನ್ಮೆಯು ಕರ್ಣನ
ಯೆನುತ್ತ ಕಣ್ದೆರದು ॥ ಗಳಿಲನೆದ್ದನು ಕರ್ಣ ತೆಗಸ್ಕ । ದಳವನಿರುಳಾಯ್ತೆನುತ ಶೋಕದ । ಕಳವಳ
ದಲಿರೆ ಮುಚ್ಚುಗಣ್ಣಿಲಿ ಮತ್ತೆ ಪವಡಿಸಿದ ॥೧೦॥ ರಾಯ ಹದುಳಿಸು ಹದುಳಿಸಕಟಾ । ದಾಯಿಗಂಗೆ
ಡೆಗೊಟ್ಟೆಲಾ ನಿ । ರ್ದಾಯದಲಿ ನೆಲಹೋಯ್ತು ಭೀಮನ [illegible] ಸಂದುದಲ ॥ ವಾಯುಜನ ಜಠರ
ದಲಿ ತೆಗೆಯಾ । ಜೀಯ ನಿನ್ನನುಜರನು ಪಾರ್ಥನ । ಬಾಯ[illegible]ತನನೆಂದನು ಜರೆದು ಕುರು
ಪತಿಯ ॥೧೧॥ ಏನು ಗುರುಸುತ ಮಡಿದನೇ ತಂ । ನ್ನಾನೆ ಬವರದೊಳಿಂದು ಕುಂತೀ । ಸೂನುವೇಕೈ
ತಪ್ಪಮಾಡಿದನೇ ಮಹಾದೇವ ॥ ಭಾನುನಂದನ ಸರಿದನೇ ತ । ಪ್ಪೇನು ಪಾರ್ಥನ ಬಸುರಲಿನ್ನನಿ ।
ಧಾನವಿದ್ದುದು ತೆಗೆವೆನ್ನೆಸಲೆಯೆನುತ ಮುರಿದೆದ್ದ ॥ ೧೨ ॥ ತಾಪವಡಗಿತು ಮನದ ಕಡುಹಿನ । ಕೋ
ಪ ತಳಿತುದು ಭೀಮಪಾರ್ಥರ । ರೂಪು ಮುಖದಲಿ ಕರ್ಣದುಶ್ಶಾಸನರ ಕಲ್ಪಿಸಿದ ॥ ಭೂಪ ಕೇಳೈ ಪಾ
ಳೆಯಕೆ ಕುರು । ಭೂಪ ಬಂದನು ನಾಳೆ ಕರ್ಣೋ । ತ್ಥಾಪನವಲಾ ಯೆನುತ ಹೊಕ್ಕನು ಭದ್ರಮಂ
ಟಪವ ॥೧೩॥ ಶಕುನಿಕೃಪಗುರುಸೂನುಕೃತವರ್ಮಕಸು ಕೇತುಸುಶರ್ಮಸಂಸ । ಪ್ತಕರು ಮಾದ್ರೇಶ್ವ
ರಸುಬಾಹುಸುನಂದಚಿತ್ರರಥ॥ ಸಕಲಸುಭಟರು ಹಾರಿಣೀನಾ। ಯಕರು ಬಂದರು ಕರ್ಣಹಾನಿ। ಪ್ರಕಟ
ತಳಿತಶಿರೋವಿಕುಂಠನವೈಮನಸ್ಯದಲಿ ॥೧೪॥ ಹಿಮದ ಹೊಯ್ಲಲಿ ಸೀದು ಸಿಕ್ಕಿದ । ಕಮಲವನಂದದಲಿ
ಹತವಿ । ಕ್ರಮದ ಕೀರ್ತಿಯ ಬಹಳಭಂಗಕೆ ಬಂದುದಾಸ್ಥಾನ ॥ ಸುಮುಖತಾವಿಚ್ಛೇದಕಲುಷ । ಸ್ಥಿ
ಮಿತರಿವರನು ಕಂಡು ನಾಳಿನ । ಸಮರಕೇನುದ್ಯೋಗವೆಂದನು ಕೃಪನಗುರುಸುತನ ॥೧೫॥ ಅರಸ ಕ
ರ್ಣಚ್ಛೇದವೇ ಜಯ । ಸಿರಿಯ ನಾಸಾಚ್ಛೇದವಿನ್ನಾ । ವರಿಸದಿರು ಹೋರಾಡಿ ಹೊಗೆಳಿಸು ಬಾಹು
ವಿಕ್ರಮವ ॥ ಗುರುನದೀಸುತರಳಿದಬಳಿಕೀ । ಧರೆಗೆ ನಿನನಗಸ್ತ್ರಮಯ ಕರ್ಣನ । ಮರಣದಲಿ ನೀನರ್ಥ
ದೇಹನು ರಾಯ ಕೇಳೆಂದ ॥ ಅವೃಕೋದರನರನೊಳಂತ । ರ್ಭಾವದುಶ್ಶಾಸನಿಗೆ ತನ್ನಯ । ಜೀವಸ
ಖರಾಧೇಯನಾತನ ಮರಣಸಿದ್ಧಿಯಲಿ ॥ ಕೈವಿಡಿಯಲೇಕರ್ಣನಿಹನೆಂ । ದಾವು ನಿಶ್ಚೈಸಿದೆವು ಕರ್ಣನ
ಸಾವು ನಾಳಿನೊಳರಿವೆವೆಂದನು ನಿನ್ನಮಗ ನಗುತ ॥೧೬॥ ನಾವು ಹೊಯ್ದಾಡುವೆವು ಜಯಸ । ತ್ಯಾವ
ಲಂಬವ ತೋರುವೆವು ಕ । ರ್ಣಾವಸಾನವ ಕಂಡು ಬಳಿಕುಳಿಯನು ಯಥಾರ್ಥವಲೆ॥ನೀವುಸೇನಾಪತ್ಯ
ದಲಿ ಸಂಭಾವಿಸಿರೆ ಸಾಕಿನ್ನು ಮಿಗಿಲಾ। ದೈವಕೃತಪೌರುಷವ ನಾಳಿನಲರಿಯಬಹುದೆಂದ॥೧೭॥ ಧರಣಿ
ಪತಿಚಿತ್ತೈಸುಸೇನಾ।ಧುರವನೀವುದು ಮಾದ್ರಭೂಪತಿ। ಗರಿದಲಾ ಜಯಲಕ್ಷ್ಮಿ ಬಳಿಕಾಪಾಂಡುತನಯ
ರಿಗೆ॥ಸುರನದೀಜದ್ರೋಣರಾಧೇ।ಯರಿಗೆ ಸರಿಮಿಗಿಲೆನಿಸಿ ಮಾದ್ರೇ।ಶ್ವರನುಳಿಯೆ ಬಳಿಕಾರು ಧಿಟ್ಟರು
ನಿನ್ನ ಥಟ್ಟಿನಲೆ ॥೧೮॥ ನೀವು ಕಟಕಾಚಾರ್ಯಪುತ್ರರು।ನೀವಿರಲು ಕೃಪನಿರಲು ದಳಪತಿ।ನಾವಹವೆ ವೀ

ವಿಂದು ತೇಜೋದ್ವಹದ ರಥಿಕರಲಾ ॥ ನಾವುತರುವಾಯುವರುಗಳು ಜಯ । ಜೀವಿಗಳು ನೀವೆನ್ನಗು
ಣಸಂ । ಭಾವನರಲಾ ಯೆಂದನಶ್ವತ್ಥಾಮ ಶಲ್ಯಂಗೆ ॥ ೨೦ ॥ ಉಚಿತವಿತರೇತರಪದಸ್ತುತಿ । ರಚನೆ
ಗುಣಯುಕ್ತರಿಗೆ ವಿಜಯೋ । ಪಚಿತರಣಸಾಟಕಕೆ ಜವನಿಗಯಾಯ್ತುಲೇರಜನಿ ॥ ಅಚಲಮೂಲರ
ಪ್ರಸರದ ಬಲ । ನಿಚಯ ನಂಮದುವೀರಸುಭಟ । ಪ್ರಚಯ ಮುಖ್ಯರಮಾಡಿಯೆಂದನು ಕೃಪನು
ಕುರುಪತಿಗೆ ॥೨೧॥ ಸುರನದೀಜದ್ರೋಣಕೃಪರೀ । ಕುರುಬಲಕೆ ಕರ್ತೃಗಳೆಯುರವರಿ । ಬ್ಬರುಗಳಳಿವಿನ
ಲಾದದಿಲ್ಲಯ ಹಾನಿವೃದ್ಧಿಗಳು ॥ ಗುರುಸುತನೊ ಶಲ್ಯನೊಚಮೂಪ । ಖ್ಯರನು ನೀವೇ ಬಸಸಿ
ಯೆಂದನು । ಧರಣಿಪತಿ ಕೇಳ್ಕೆ ಕೃಪಾಚಾರಿಯಗೆ ಕುರುರಾಯ ॥೨೨॥ ಆದರಾಭೀಷ್ಮಾದಿಸುಭಟರು
ಕಾಧಿ ನೆಗ್ಗಿದಕಳನ ಹೊಗುವಾ । ಕೈದುಕಾರರ ಕಾಣೆನೀವಾದ್ರೇಶಹೊರತಾಗಿ ॥ ಈಹುರಂತರ ಸಮರ
ಜಯ ನಮ । ಗಾದೊಡೊಳ್ಳಿತು ಶಲ್ಯನಲಿ ಸಂಪಾದಿಸಿರೆ ಸೇನಾಧಿಪತ್ಯವನೆಂದನರಸಂಗೆ ॥೨೩॥ ತರಿಸಿ
ಮಂಗಳವಸ್ತುಗಳನಾ । ದರಿಸಿ ಭದ್ರಾಸನದೊಳೀತನ। ನಿರಿಸಿ ನೃಪವಿಸ್ತರಿಸಿದನು ಮೂರ್ಧಾಭಿಷೇಚನ
ವ ॥ ಮೊರೆವವಾದ್ಯದಸಿಡಿಲ ಧರಣೀ । ಸುರರ ಮಂತ್ರಾಕ್ಷತೆಯ ಮಳೆಗಳೊ । ಳಿರುಳನುಗಿದವು ಮ
ಕುಟಮಣಿ ರಾಜಿಗಳ ಮಿಂಚುಗಳು ॥೨೪॥ ಆದುದುತ್ಸವ ಕರ್ಣಮರಣ । ಚ್ಛೇದವೃಕ್ತಿತು ಹಗೆಗೆ ಕಾ
ಲ್ಬಳೆ । ಯಾದವೀರಸಮುದ್ರನೆಲೆತಪ್ಪಿದುದು ನಿಮಿಷದಲಿ ॥ ಬೀದಿವರಿದುದು ಬಿಂಕ ಮನೆಕೊನೆ । ವೋ
ದುದಾಶಾಬೀಜ ಲಜ್ಜೆಯು । ಹೋದವಮೂಗಿಗೆ ಕದಪ ಕೊಯ್ದನು ನಿನ್ನಮಗ ಬಳಿಕ ॥ ಕಾಣಿಕೆಯ
ನಿತ್ತಖಿಳಸುಭಟ । ಶ್ರೇಣಿ ಕಂಡುದು ನುಡಿಯ ಹಾಣಾ । ಹಾಣಿಗಳ ಭಾಷೆಗಳ ಹಕ್ಕಲು ವೀರರು
ಕ್ಕಗಳ ॥ ಪ್ರಾಣನಾಶಿಯನುಳಿದಹೂಯ್ಕಲ । ಹೂಣಿಗರು ವಿಜಯಂಗನಾಗ । ಕ್ಷೀಣಮಾನಸರೊಪ್ಪಿ
ದರು ಕುರುಪತಿಯ ಪರಿವಾರ ॥ ೨೫ ॥ ಪತಿಕರಿಸಿದ್ರೆ ಸಕಲಸುಭಟ । ಪ್ರತತಿಮಧ್ಯದಲೆನ್ನನಹಿತ ।
ಚ್ಯುತಿಗೆಸಾಧಸವೆಂದು ನಿಜಸೇನಾಧಿಪತ್ಯದಲಿ ॥ ಕೃತಕವಿಲ್ಲದೆ ಕಾದುವೆನು ಯಮ । ಸುತನೊಡನೆ ಜ
ಯಸಿರಿಗೆ ನೀನೇ । ಗತಿಯೆನಿಸಿ ತೋರಿಸುವೆನೆಂದನು ಶಲ್ಯ ಕುರುಪತಿಗೆ ॥೨೬॥ ಉಬ್ಬಿದನಲೇ ಮಧು
ರವಚನದ । ಹಬ್ಬದಲಿ ನಿನ್ನಾತನತ್ತಲು । ಮಬ್ಬಿನಪದಿರು ತಂದು ಬಿಸುಟರು ನಿನ್ನ ಪಾಳೆಯದ ॥
ಸರ್ಬವೃತ್ತಾಂತವನು ಗಾಢದ । ಗಬ್ಬ ಮುರಿದುದು ಕೃಷ್ಣರಾಯನ । ನೆಬ್ಬಿಸಿದನಿರುಳವನಿಪತಿ ಬಿನ್ನೈ
ಸಿದನು ಹದನ ॥೨೮॥ ದೇವ ಚಿತ್ತೈಸಿದರೆ ಬೊಪ್ಪನ । ಭಾವನನು ಸೇನಾಧಿಪತ್ಯವ । ನೋವಿದರೆಲೇ
ಶಲ್ಯ ಮಾಡಿದಭಾಷೆ ನಮ್ಮೊಡನೆ ॥ ಆವನಂಗೈಸುವನು ಪಾರ್ಥನೊ । ಪಾವಮಾನಿಯೊ ನಕುಲನೋ
ಸಹ । ದೇವನೋ ತಾನೋ ನಿಧಾನಿಸಲರಿಯೆ ತಾನೆಂದ ॥ ಕಲಹವೆಂವದು ದಳಪತಿಗೆ ನಾ । ವಿಲುವೆ
ನೆಂದನು ಭೀಮನೆನ್ನನು । ಕಳುಹಿ ನೋಡೆಂದನು ಧನಂಜಯನೆಸ್ನು ವಹಾವನಲಿ ॥ ಸಲುಗೆಯೆನಗೆಂದ
ನು ನಕುಲನಂ । ದೊಲವಿಸರ್ಜಿಸುಲೆನ್ನ ಕಳುಹದ । ರುಳುಹಿದವರೆಂದರಗ್ಗಿದನು ಸಹದೇವಚರಣದಲಿ
॥೩೦॥ ಹರಿಯುವರ್ಜನನಿಂದ ಭೀಮನ । ಸೆರವಣಿಗೆ ನೋಯಿಸದು ನಕುಲನ। ಹೊರಗೆಯೊದಗದು ಸ್ಮ
ರಿಸಹು ಸಹದೇವನಾಟೋಪ ॥ ಇರಿವರೇ ಮಾದ್ರೇಶ್ವರನ ನೆರೆ । ಮುರಿವೊಡಯು ನಿನಗಹುದು ನಿನ್ನ
ನು । ತರುಬಿಹವರೇ ಕಟ್ಟಕಂದನು ನಗುತ ಮುರವೈರಿ ॥೩೧॥ ಲೇಸನಾಡಿದೆ ಕೃಷ್ಣ ಶಲ್ಯಂ । ಗೀಸುಬ
ಲುಹುಂಟಾಪೊಡನುಜರು । ಗಾಸಿಯಾದರು ಹಿಂದೆ ಭೀಷ್ಮಾದಿಗಳ ಕದನದಲಿ ॥ ಈಸಮರದುರವಣೆ

ಗೆನಾಳಿನೊ । ಳೈಸಲೇ ನಳನಹುಷಭರತಮ । ಹೀತವಂಶೋತ್ಪನ್ನನಾನೆಂದನು ಮಹೀಪಾಲ ॥ ೩೨ ॥ ನಾಯಿ ಹೆರಳೇ ಮಗನ-ನಿನ್ನನು । ಸಾಯಕನೆ ಲೋಕೈಕವೀರರ । ತಾಯಲಾ ನಿಮ್ಮವ್ವೆಯರ ಮೊಲೆ ಹಾಲಬಲುಹಿನಲಿ ॥ ರಾಯ ನೀಕ್ಷತ್ರಿಯನು ಸೇಸೆಯ । ತಾಯೆನುತ ತೂಪಿರಿದು ಕಮಲದ । ಳಾಯ ತಾಂಬೆಕೆ ಬೀಳುಕೊಂಡನು ಧರ್ಮನಂದನನ ॥೩೩॥ ಸಂದುದೈ ಹದಿನೇಳು ರಾತ್ರಿಗ । ಳಂದಿನಿರುಳಾ ಸೇನೆ ನಿರ್ಭಯ । ದಿಂದ ನಿದ್ರಾವ್ಯಸನವಿಹ್ವಳಪೂರಣಹರುಷದಲಿ ॥ ನಿಂದುದೈ ನಿನ್ನವರು ರಾಧಾನಂದನವ್ಯಪಗಮನನಷ್ಟ । ನಂದವಿಹ್ವಳಕರಣರಿದ್ದರು ನೃಪತಿ ಕೇಳೆಂದ ॥೩೪॥ ಆಶಿಖಂಡಿಯ ತೋರಿ ಸರಳಿನ । ಹಾಸಿಕೆಯ ಲೊಬ್ಬನನು ಮಾತಿನ । ವಾಸಿಯಿಂದೊಬ್ಬನನು ಮುನ್ನಿನ ಕುಲವನೆಚ್ಚರಿಸಿ ॥ ಗಾಸಿಮಾಡಿದನೊಬ್ಬನನು ಧರ । ಣೀಶಚೇಷ್ಟೆಯೊಳೊಬ್ಬನನು ಕೃಪೆ । ಯೇಸು ಬಲುಹೋ ವೀರನಾರಾಯಣನಭಕ್ತರಲಿ॥ ... ... ॥೩೫॥

ಅಂತು ಸಂಧಿ ೧ಕ್ಕೆ ಪದ ೩೫ ಕ್ಕಂ ಮಂಗಳಮಸ್ತು.

ಎರಡನೆಯ ಸಂಧಿ.

॥ ಸೂಚನೆ ॥ ಗಂಡುಗಲಿ ಕದನಪ್ರಚಂಡನ । ಖಂಡಭುಜಬಲಧರ್ಮಸುತ ಮುಂ । ಕೊಂಡು ರಣದಲಿ ಕಾದಿದನು ಮಾದ್ರೇಶಭೂಪತಿಯ ॥

ಒಳಗೆಡಗೆ ನಗೆ ಹೊರಗೆ ಕಳಕಳ । ವಳಗೆಹೊರಗೆನವಾಯಿದಳವಾ । ಯೊಳಗೆ ಹೊರಗೆ ಸಘಾಡತನ ಬಲುಬಗೆಯತೊಳಲೊಳಗೆ॥ ಬಲುಹು ಹೊರಗೆ ಪರಾಭವದಕಂ । ದೊಳಗೆ ಕಡುಹಿನ ಕಲಿತನದ ಕೈ । ಚಳಕ ಹೊರಗೆ ಮಹೀಶಹದನಿದು ನಿನ್ನ ನಂದನನ ॥ ೧ ॥ ನೆಗ್ಗಿದನು ಗಾಂಗೇಯನಮರರೊ । ಳೊಗ್ಗಿದನು ಕಲಿದ್ರೋಣ ತನ್ನವ । ರಗ್ಗಳಿಕೆಗೂಣೆಯವ । ಬೆರಸಿದಬಿಂಬದಂದದಲಿ ॥ ಉಗ್ಗಡದ ರಣವಿದಕೆ ಶಲ್ಯನ । ನೆಗ್ಗಿಸಿದನೇ ಕೌರವೇಶ್ವರ ।ನೆಗ್ಗ ನೋಡುವೆನೆಂಬವೋಲ್ ರವಿಯುಡಿರ್ದನಂಬರವ ॥ ೨ ॥ ಸೂಳವಿಸಿದವು ಲಗ್ಗಯಲಿ ನಿ । ಸ್ಸಾಳ ದಳಪತಿಕುರುಬಲದಡೆ । ಖ್ಯಾಳವನು ನೋಡಿದನು ತೂಗಾಡಿದನು ಮಣಿಶಿರವ ॥ ಆಳು ನೆರೆದೊಡೆ ನಾಲ್ಕುದಿಕ್ಕಿನ । ಮೂಲೆ ನೆರೆಯದುಮುಸ್ನವೀಗಲು। ಪಾಳೆಯದ ಕಡೆವೀಧಿಗೈದುದು ಶಿವಶಿವಾಯೆಂದ ॥ ೩ ॥ ಗಜಕೆ ಗುಳ ಬೀಸಿದವು ವಾಜಿವ್ರಜಕೆ ಹಲ್ಲಣಿಸಿದರು ಗಾಲಿಯ । ಗಜರು ಘೀಳಿಡೆ ಕೊರಳ ನೊಗದಲಿ ಕುಣಿದವಶ್ವಚಯ ॥ ಭುಜದ ಹೊಯ್ಲಿನ ಹರಿಗೆಗಳ ಗಜ । ಬಜದ ಬಿಲುಜೇವಡೆಯ ರವದ । ಕ್ಕಜದ ಕಾಲಾಳೊದಗಿತವನೀಪತಿಯ ಸನ್ನೆಯಲಿ ॥ ೪ ॥ ಮೊರೆವಕಹಳಾರವದ ಡಿಂಡಿಮ । ಮುರಜಗೋಮುಖಪಟಹಜರ್ಝರ। ಕರಡೆಪಣಹಮೃದಂಗಡಮರುಗಡಕ್ಕಡೌಡೆಗಳ॥ಬಿರಿಯೆ ನೆಲನಳ್ಳಿರಿವವಾದ್ಯದ । ಪರುಠವದ ನಿರ್ಘೋಷದಬ್ಬರ। ಜರುಹಿತಡಿಕಿಲು ಜಗದ ಜೋಡಿಯನರಸ ಕೇಳೆಂದ ॥ ೫ ॥ ವಿಾರಿಬರುವಮಹಾರಥರ ಕೈ। ಸೇರಿ ಬರುತಿಹರಾವುತರ ಮುಂ । ದಾರಿಬಹಕಾಲಾಳಗಮಕದ ಗಜದ ಗಾಡಿಕೆಯ ॥ ಭೋರು ಮೆರೆವ

ಮಹಾರಥಸರಣಿ। ಬೀರಿದಂಧಂಧಣಾಧಣಂಧಣಾಧಾರಿಣಿಯು ಪರ್ಬಿದುದು ಬಲುವಾದ್ಯದ ಮಹಾಘೋ
ಷ ॥ ಮುರಿದು ಬಲುಗುದುರೆಗಳ ಬಾಂದಣ । ಗೊರೆದಮೈಯಾನೆಗಳ ಹಂತಿಗೆ। ಹರಿದಗಾಲಿಯು ರಥ
ದ ಚಿನಿಕಡಿಗೊಡದಕಾಲಾಳ ॥ ಅರುಹಿದರು ಭೂಪತಿಗೆ ಸೇನೆಯೊ । ಳೆರಸಿ ತೆಗೆಥಾಯುಧಚತುರ್ಬ
ಲ । ಹೊರಗೆ ನಿಂದುದು ಹೊಗೆದೆಗೆದಕೇಸುರಿಯ ತಿರುಳಂತೆ ॥ ೭ ॥ ಹತ್ತುಸಾವಿರದೇಳುನೂರರ ।
ಹತ್ತು ರಥಹನ್ನೆರೆಡುಸಾವಿರ । ಮತ್ತಗಜಘಟೆಯೆರಡುಲಕ್ಷವನೆಣಿಸಿದರು ಹಯವ ॥ ಪತ್ತಿ ಮೂರೇ
ಕೋಟಿಯದು ಕ್ಕೆ । ವರ್ತಿಸಿತು ದಳಪತಿಗೆ ಸಾಗರ । ಬತ್ತಲೆಡೆಯಲಿ ನಿಂದನೀರವೊಲಾಯ್ತು ಕುರು
ಸೇನೆ ॥ ೮ ॥ ವೈರಿಬಲದೊಳಗಾರುಸಾವಿರ । ತೇರು ಗಜಘಟೆ ಮೂರುಸಾವಿರ । ವಾರುವಂಗಳ
ನೆಣಿಸಿ ತೆಗೆದರು ಹತ್ತುಸಾವಿರವ ॥ ವೀರಚರರಾಯೊಂದುಕೋಟಿ ಮ । ಹೀರಮಣ ಕೇಳುಭಯಬ
ಲವಿ । ಸ್ತಾರ ಹದಿನೆಂಟಣಿಸಿದಕ್ಷೋಹಿಣಿಯ ಶೇಷವಿದು ॥ ೯ ॥ ಶಕುನಿ ಮೋಹರಿಸಿದನು ಸಂಸ
ಪ್ತಕರುಬೆರೊಂದಿದರುಕ್ಕ್ರತವ । ವರ್ಮಕಕ್ಕ್ರಪಾಶ್ವತ್ಥಾಮರೊದಗಿದರೊಂದುಬಾಹೆಯಲಿ ॥ ಸಕಲಬಲ
ಮಾದ್ರೇಶ್ವರನ ಹೇ । ಳಿಕೆಯೊಳೊಯ್ಯಾರಿಸಿತು ಕುರುಬಲ। ನಿಕರ ಶಳಿದುದು ಥರವಿಡಿದು ಕಳನೊಂ
ದುಮೂಲೆಯಲಿ ॥ ೧೦ ॥ ಇದಿರೊಳೌಕಿತು ಗಾಳಿಪಟ್ಟದ । ಮದಗಜಾವಳಿ ಮುಗ್ಗಿದವು ಧ್ವಜ । ಪೆ
ದುರಿದವು ಹೊಡೆಗೆಡೆದು ಹೊಳೆದುದು ತೇರುದಳಪತಿಯ ॥ ಬಿದಿರಿದವು ತಡಿಸಹಿತ ಥಟ್ಟೈನ । ಕುದುರೆ
ಮೈಗಳ ನಾಯುಧದಕಿಡಿ । ಯುದುರಿದವು ಕುರುಬಲದಲದ್ಭುತವಾಯ್ತು ನಿಮಿಷದಲಿ ॥ ೧೧ ॥ ಬಂ
ದುದಾಮೋಹರಬಲೌಘದ । ಮುಂದೆ ಪಾಠಕರ ವರಕಾಹಿನ । ಹಿಂದೆ ಬಿಲ್ಲವರವರೆ ಸುಯ್ದಾನದಲಿ ಸ
ಬಳಿಗರು । ಹಿಂದೆ ತುರಗಸಮೂಹವಲ್ಲಿಂ । ಹಿಂದೆ ಗಜಘಟೆಗಜದಬಳಿಯಲಿ । ಸಂದಣಿಸಿದುದು ರಾ
ಯದಳ ಮಣಿರಥನಿಕಾಯದಲಿ ॥ ೧೨ ॥ ಅರಸನೆಡವಂಕದಲಿ ಸಾತ್ಯಕಿ । ವರನಕುಲಸಹದೇವಸುತ
ಸೋ । ಮರು ಯುಧಾಮನ್ಯೂತ್ತಮೌಂಜಸಸ್ಸಂಜಯಾದಿಗಳು॥ ನೆರೆದುದಾಬಲವಂಕದಲಿ ತನು । ಜ
ರುವ್ವೆಕೋದರದ್ರುಪದಸುತದು । ರ್ಧರಸಿಖಂಡಿಪ್ರಮುಖರಾಪಾಂಚಾಲನಾಯಕರು ॥ ೧೩ ॥ ಆಯತಿಕೆ
ಯಲಿ ಬಂದು ಪಾಂಡವ । ರಾಯದಳ ಮೋಹರಿಸಿನಿಂದುದು । ರಾಯರಿಬ್ಬರ ಬೀಸುಗೈಗಳ ಸನ್ನೆ ಸ
ಮವಾಗೆ ॥ ತಾಯಿಮಳಲನು ತರುಬುವಬುಧಿಯ । ದಾಯಿಗರು ತಾವಿವರೆನಲು ಬಿಡೆ । ನೋಯಬೆರೆ
ಸಿದುದುಭಯಬಲ ಬಲುಖತಿಯಬಿಂಕದಲಿ ॥ ೧೪ ॥ ಕೇಣವಿಲ್ಲದಭಟರಹಾಣಾ । ಹಾಣಿಕೆಮಸಗಿತು
ಖಣಿಕಟಿಲಹೊ । ಯ್ದಾಣಿಗಳ ಬಿಡುಗಿಡಿಯ ಹಿರಿಯುಬ್ಬಣದ ಹೋರಟೆಯ ॥ ಹೂಣಿಕೆಯ ಸಬಳಿ
ಗರೊಳಿಮ್ಮ . । ಗಾಣಿಕೆಯ ಹೂಂಕ್ರತವ ಬಾಣದ । ಚೂಣಿಗಳ ಬಿಲ್ಲವರ ಥಾಳಾಧೂಳಿ ಬಲುಹಾ।
ಯ್ತು ॥ ೧೫ ॥ ರಾವುತರು ಝುಲ್ಲಿಸಿದರಗ್ಗದ । ಮಾವುತರು ಆನೆಗಳ ತುಡುಕಿ ಹ । ಯಾವಳಿಯ
ಬೀಸಿದವು ರಥಿಕರು ಸೂತರೋಜೆಯಲಿ ॥ ಸಾವಿಗೆಣಿಸದೆ ಬೆರಸಿ ಮಾವುತ । ಮಾವುತರು ಮುಕ್ಕುರಿಕಿ
ರಾವುತು । ರಾವುತರ ಚೂಣಿಯಲಿ ಮಸಗಿತು ತಾರುಥಟ್ಟೈನಲಿ ॥ ೧೬ ॥ ಅರಸ ಕೇಳೈ ಹೊಕ್ಕಚೂ
ಣಿಯು । ಲೆರಡುದಳದಲಿ ಕಾಣೆಸಗ್ಗದ। ಧೊರೆಗಳಸುವಾಯ್ತಾಚೆಯಲಿ ಧರ್ಮಜನ ಸನ್ನೆಯಲಿ ॥ ಗು
ರುಜಕ್ಕ್ರಪಕ್ಕ್ರತವರ್ಮರ್ಯವನೇ । ಶ್ವರಸುಬಾಹುಸುಶರ್ಮಶಕುನಿಗಳ । ಉರುವಣಿಸಿತೀಚೆಯಲಿ ಶಲ್ಯನ
ಬೆರಳಸನ್ನೆಯಲಿ ॥ ೧೭ ॥ ನಿಲಿಸಿದರು ನಿನ್ನವರು ಬಲದ । ಗ್ಗಳೆಯರಿಸ್ಸುಬ್ಬಿದರು ಬಿರುದಾ । ವಳಿ

ಯ ಮೊದಲಿಸಿದರು ವಿಮಲಾನ್ವಯಮಹೋನ್ನತರ ॥ ಬಲನೆಡನ ತುದಿವೆರಳ ಮುಡಿಮುಂ। ದಲೆಯ ಲಘುವಾಗದಿರಿ ಶಸ್ತ್ರಾ। ವಳಿಯ ಬಾಯ್ಧಾರೆಗಳ ತೆಗೆಯದಿರೆಂದರುಬ್ಬಿನಲಿ ॥ ೧೮ ॥ ಧೊರೆಯೊಳೊಬ್ಬನಹಾನಿ ಘಟರೆ । ಲ್ಲರಿಗೆ ಧೊರೆಧೊರೆತತ್ತರುಣಯದೆ। ನೆರಹುಬಹುದೋರೆಂದರೊಮ್ಮುಖರೊಂದಸಂಕೇತ ॥ ಉರವಣಿಸದಿರಿ ಕಂಡಮುಖದಲಿ । ತುರಗರಥಹಯಪತ್ತಿರಣಕು । ಬ್ಬರಿಸದಿರಿ ಕೃತಸಮಯವೆಂದರು ಸಾರಿಸುಭಟರಿಗೆ ॥ ೧೯ ॥ ನೂಕಿದರು ನಿನ್ನವರು ಹಿನ್ನೆಲೆ । ಗಾಳಿವಾಳರಜೋಡಿಯಲಿ ರಣ । ವ್ಯೋಕರಿಸಿತರುಣಾಂಬುವನು ಗಜಹಯದ ಮೈಗಳಲಿ ॥ ವ್ಯಾಕುಳರ ಬೈಬ್ಬೈದು ಚಪಳಾ । ನೀಕ ಝುಡಿಸಿತು ಚಂಡಪಾಕನಿ। ರಾಕರಿಷ್ಣುಗಳೊಕ್ಕಲಿಕ್ಕಿತು ದಳದ ಮಧ್ಯದಲಿ ॥೨೦॥ ಕವಿದುದೊಂದೇವಾಘೆಯಲಿ ರಿಪು । ನಿವಹನಿಬ್ಬರದಬ್ಬರದ ಶರ । ಲವಣಿಗಳ ಲಾವಣಿಯ ಮಿಗೆ ಲಂಬನದ ಘನದ ॥ ಪವನಜನ ಪಡಿಬಲದಲೌಂಕಿದ । ನವನಿಪತಿಸಹದೇವನಕುಲರ । ಸವಡಿರಥಸಂಮುಖಕೆ ಬಿಟ್ಟವು ಮಾದ್ರಭೂಪತಿಯು ॥ ೨೧ ॥ ಆರಿವರು ಸಹದೇವನಕುಳರೆ । ಭಾರಿಯಾಳುಗಳಹುದಲೇ ಬಿಲು । ಗಾರರಲ್ಲಾ ಕಳಸಸಿಂಧದಬಿರಿದನುಳ್ಳವರೆ ॥ ಸ್ಕರಿಸಿದೊಡೊಪ್ಪುವದಲಾ ಜ । ಝುಜ್ಝರತನವಾಭರಣವಹುದೆನು । ತಾರುಭಟೆಯಲಿ ಶಲ್ಯ ಹಳಚಿದನರ್ಜುನಾನುಜರ ॥ ಪಡಿತಳಿಸಿ ಸಹದೇವನಕುಲರೆ । ನೆಡೆಗಲಿಸಿತರ್ಜುನನ ರಥ ನರ ॥ ನೊಡನೆ ಹೊಕ್ಕನುಭೀಮನುರುಪಾಂಚಾಲಬಲಸಹಿತ ॥ ಝುಡಿವನಿಸ್ಸಾಳದಲಿ ಜಗ ಫೀ ।ಳಿಡೆ ಯುಧಿಷ್ಠಿರದೇವನೌಕಿದ ।ನೆಡಬಲನ ಕೊಂಡರು ಯುಯುತ್ಸುಶಿಖಂಡಿಸೃಂಜಯರು ॥ ೨೩ ॥ ಏರಿತೊಬ್ಬನ ಮೇಲೆ ರಿಪುರಥ । ವಾರುಸಾವಿರ ಮತ್ತಗಜಘಟೆ । ಮೂರುಸಾವಿರ ಹತ್ತುಸಾವಿರತುರಗದಳಸಹಿತ ॥ ತೋರುವಂಬಿನ ತುಂಡಿಸುವಬಿ । ಟ್ಟೇರುಗಳ ಚೂರಿಸಿದಸಬಳದ । ನೇರುಗಳ ಕಾಲಾಳು ಕವಿದುದು ಶಲ್ಯನಳವಿಯಲಿ ॥ ೨೪ ॥ ದಳಪತಿಯ ಮುಕ್ಕುರಿಕಿದರು ಪಡಿ । ಬಲಕೆ ಬರಹೇಳೆನುತ ಕವಿದರು । ಹಿಳುಕುಗೆನ್ನೆಯ ಹೊಗರುಮೋರೆಯ ಬಿಗಿದಹುಬ್ಬುಗಳ ॥ ಕಳಶಜನ ಮಗನೌಂಕಿದನು ಕೃಪ । ನಳವಿಗೊಟ್ಟನು ಸುಬಲಸುತರಿ। ಟ್ಟಳಿಸಿದರು ಶಲ್ಯಾತ್ಮಜರು ಕೈಕೊಂಡರೊಗ್ಗಿನಲಿ ॥ ೨೫ ॥ ಮೂರುಕೋಟಿಪದಾತಿಯಲಿ ಮೈ । ದೋರಿದನಲೈ ನಿನ್ನಮಗನು । ಬ್ಬೇರಿರಾವ್ತರು ಹೊಕ್ಕರೆಡಬಲಕಿಕ್ಕಿ ತೇಜಿಗಳ ॥ ಕೇರಿದರು ಮಾರೊಡ್ಡ ನಿವರವ । ರೇರಿಹೊಯ್ದರು ನಿನ್ನವರಲೊಗು । ವೀರಬಾಯ್ಗಳ ರುಧಿರಜಲವೆಳೆದುದು ಚತುರ್ಬಲವ ॥ ೨೬ ॥ ಚಿಪ್ಪೊಡೆದು ಬಲುಮೈಗಳಲ್ಲಿಳಿ। ತಪ್ಪರಕುತದ ಸುರಿವಕೆಂಧೂ । ಳುಪ್ಪರಿಸಿದುದು ಚತುರಚಾತುರ್ಬಲದ ಪದಹತಿಯ ॥ ಅಪ್ಪಿದುದು ಕೆಂಧೂಳಿಯೊಡ್ಡಿನ । ದರ್ಪಣವನೀರಕುತವೆರಡರ। ದರ್ಪವಡಗದು ನಿಮಿಷದಲಿ ನರನಾಥ ಕೇಳೆಂದ॥೨೭॥ ತೆಗೆದರ್ಜುನನನು ಸುಶರ್ಮನ । ವಿಗಡರಥಿಕರು ಭೀಮಸೇನನ । ನುಗಿದನತ್ತಲು ನಿನ್ನಮಗನಾಸಾತ್ಯಕಿಯ ರಥವ ॥ ಹೊಗರುಗಣೆಯಲಿ ಹೂಳಿದನು ಹೂ । ಣಿಗನಲೈ ಗುರುಸೂನು ನಕುಲನ । ತೆಗೆಸಿದನು ಕೂರಂಬಿನಲಿ ತಡೆಯದೆ ಕೃಪಾಚಾರ್ಯ ॥ ೨೮ ॥ ಹಳಚಿದನು ದಳಪತಿಯುನವನಿಪ । ತಿಲಕನೆಚ್ಚನು ನೂರುಶರದಲಿ । ಕಳಚಿ ಕೈಯೊಡನೆಚ್ಚು ಬೇಗಡೆಗಳೆದನವನಿಪನ ॥ ಅಳುಕದಿರದೇಸಿಡಿಲ ಹೊಯ್ಲಲಿ । ಕುಲಕುಧರವೀಧರ್ಮಸುತನ । ಗ್ಗಳಿಕೆಗಿದೆಗುಪ್ಪಾರತಿಗಳಾದವು ಶಲ್ಯನಂಬುಗಳು ॥ ೨೯ ॥ ಅರಸಕೇಳೈ ಮುಳಿದಮಾದ್ರೇ । ಶ್ವರನ ಖಾತಿಯೊ ಕುಪಿತಯಮನು। ಬ್ಬರದ ಖತಿಯೋ ವಿಲಯರು

ಥ್ಯನ ಹಣೆಯು ಹಗ್ಗಡಿಯೊ ॥ ಉರಿದನುಗ್ರದ ಕೋಪದಲಿ ಹೊಗೆ । ಹೊರಳಿಗಟ್ಟಿತು ಸುಯ್ಲಿನೆಲಿ
ಸಂ । ವರಿಸಿಕೊಳುತ ಕೌಂತೇಯ ಯೆನುತೆಚ್ಚನು ಮಹೀಪತಿಯ ॥ ೩೦ ॥ ಮುಂದಣಂಬಿನ ಹಿಳುಕನೊ
ದೆದವು । ಹಿಂದಣಂಬುಗಳವರ ಮೊನೆಗಳ । ಹಿಂದಣಂಬಿನ ಹಿಳುಕು ಹೊಕ್ಕವು ಮುಂಚಿದಂಬುಗಳು॥
ಹಿಂದಣವು ಹಿಂದಿಕ್ಕಿದವು ಮಿಗೆ । ಹಿಂದಣಂಬುಗಳಂಜಲಿಸಿ ಬಳಿ । ಸಂದವುಳಿದಂಬುಗಳೆನಲು ಕವಿದೆ
ಚ್ಚನವನಿಪನ ॥ ೩೧ ॥ ತೋಡಿ ನೆಟ್ಟವು ಸೀಸಕವನೊಡ । ದೋಡಿದವು ಕವಚದಲಿ ಕುದುರೆಯ। ಜೋ
ಡುಹಕ್ಕರಿಕೆಯಲಿ ತಳಿತವು ಹಿಳುಕುಪರಹಿನಲಿ ॥ ಕೊಡೆ ರಥದಲಿ ಹಾಯ್ದು ಮಿಗೆ ವ್ಯ । ಗೂಡೆಗಾಲಿ
ಗಳರಿವರೂಥದ । ಲೀಡಿರಿದವಂಬುಗಳು ಕಲಿಮಾದ್ರೇಶನೆಸುಗೆಯಲಿ ॥ ೩೨ ॥ ಧೊರೆಗೆ ಬಲುಹೋ ಸ
ಮರಶಲ್ಯನ । ಶರವಳಿಗೆ ಹಿಡಿ ಕೊಡೆಯನೆಂದ । ಬ್ಬರಿಸಿ ಯಿಬ್ಬಿಗಿಯಾದುದೀಗಳೆ ಗಾಲಿಘುಲ್ಲಣೆಗೆ ॥
ಸರಳುಹೊದೆಯನು ತುಂಬಿ ರಥಸಾ । ವಿರಸಹಿತ ಪಾಂಚಾಲಬಲವು । ಪ್ಪರಗುಡಿಯು ಸಿಂಧದ ಸಗಾಡ
ದಲ್ಯೆದಿತರಿಭಟನ ॥ ೩೩ ॥ ಧೃತರೇ ಪಾಂಚಾಲಬಲ ಬಂ । ದಾತು ಕೊಂಡುದೆ ಧರ್ಮಪುತ್ರನ ।
ಗಾತಿಯನು ಘಟ್ಟಿಸಿದರೇ ಧಟ್ಟಿಸಿದನೇ ನೃಪತಿ ॥ ಈತಗಳ ಕೊಳ್ಳೆನುತ ಶರಸಂ। ಘಾತವನು ಕೆದರಿದ
ನು ಮಾದ್ರೀ । ಜಾತರಡಹಾಯಿದರು ಶಲ್ಯನ ರಥದ ಸಂಮುಖಕೆ ॥ ೩೪ ॥ ಮಕ್ಕಳಿರ ನಿಮಗೇಕೆರಣ
ವಿದು । ಮಕ್ಕಳಾಟಿಕೆಯಾಯ್ತಲಾಹಿಂ । ದಿಕ್ಕಿದರಲಾಧೊರೆಯಧೂಳಿಯಬೆನ್ನ ತೊಡದಿರಲಾ॥ ಎಕ್ಕತು
ಳದಲಿ ನಿಮ್ಮರಾಯರ । ಸೆಕ್ಕಿಭೀಮಾರ್ಜುನರಿಗೌತಣ । ವಿಕ್ಕುವೆನು ಬರಹೇಳೆನುತ ಬೊಬ್ಬಿರಿದನಾಶ
ಲ್ಯ ॥ ೩೫ ॥ ದಳಪತಿಯ ದುಮ್ಮಾಳಿ ಪಾಂಡವ । ಬಲವ ಕೆದರಿತು ಕಲ್ಪಮೇಘದ । ಹೊಲಿಗೆ ಹರಿದ
ವೊಲಾಯ್ತು ಮಾದ್ರೇಶ್ವರನ ಕೈಚಳಕ ॥ ಅಳುಕದಿರಿ ಬದ್ಧರದೆ ಭಂಡಿಯ। ನಿಲಿಸಿ ಹರಿಗೆಯ ಪಾಠ
ಕರು ಮುಂ । ಕೊಳಿಸಿಮುಂದಣ ನೆಲನನೆನುತುಬ್ಬರಿಸಿತರಿಸೇನೆ ॥ ೩೬ ॥ ಅರಸ ಕೇಳ್ಕೆ ಬಳಿಕ ಶಲ್ಯನ।
ಶರವಳಿಗೆ ಬೆಚ್ಚಿದವು ಹೊಡಿದ । ಹರಿಗೆಯಲಿ ನೆರೆಬಿಗಿದವಾಬದ್ಧರದ ಭಂಡಿಗಳು ॥ ಸರಳುಗಳ ಬಳಿ
ಸರಳಬೆಂಬಳಿ।ಸರಳಹಿಂದಣಸರಳುಗಳ ಪಡಿ। ಸರಳ ಸಾರದ ಸೋನೆ ಸದೆದುದು ವೈರಿವಾಹಿನಿಯ॥೩೭॥
ಗಾಯವಡೆದನು ದ್ರುಪದಸುತ ಧೃ । ಷ್ಟಾಯುಧೇರಿನಲೋಡಿದರು ಮಾ । ದ್ರೇಯರುಬ್ಬಟೆ ನಿಂದು ಬೆ
ಚ್ಚಳೆಯೋದನವನೀಶ ॥ ರಾಯದಳ ದೆಸೆಗೆಟ್ಟುದೊಗ್ಗಿನ । ನಾಯಕರು ನುಗ್ಗಾಗೆ ಯಾದವ ರಾಯ
ಕಂಡನು ರಥವನಡಹಾಯಿಸಿದನರ್ಜುನನ ॥ ೩೮ ॥ ಎಲೆಲೆಹನುಮನಹಳವಿಗೆಯ ರಥ । ಹೊಳೆವುತಿದೆ
ದಳಪತಿಗೆ ಕಾಳಗ । ಬಲಹು ಬರಹೇಳುವುದು ಗೌತಮಗುರುಸುತಾದಿಗಳ ॥ ದಳವ ಕರೆ ಸಂಸಪ್ತಕರು
ನಿ । ಟ್ಟಿಳಿಸಿ ನೂಕಲಿ ಶಲ್ಯಸುತರೆಂ। ದುಲಿದು ಹೊಕ್ಕನು ನಿನ್ನಮಗನ್ನೆನೂರುರಥಸಹಿತ ॥ ೩೯ ॥ ಉ
ಲಿದು ಕೌರವಸರ್ವದಳವಿ । ಟ್ಟಳಿಸಿ ನೂಕಿತು ಶಲ್ಯನನು ಪಡಿ । ತಳಿಸಿ ಹೊಕ್ಕುದು ಸುಬಲಸುತಕೃಪ
ಗುರುಸುತಾದಿಗಳು ॥ ಪ್ರಳಯದಿನದಲಿ ಪಂಠಿಸಿದುಸುಡಿ । ಲೆಳಮುದೆನೆ ಬಹುವಿಧದ ವಾದ್ಯದ । ಮೊಳ
ಗುಗಳ ತುದಿ ತುಡುಕಿತಾಬ್ರಂಹಾಂಡಮಂಡಲವ ॥ ೪೦ ॥ ಧರಣಿಪತಿ ಕೇಳ್ ಭೀಮಸೇನನ । ಕಂಥಳಿಗ
ಳಿಟ್ಟಣಿಸಿದವು ಸಂ । ವರಿಸಿದವು ಸಾತ್ಯಕಿಯ ರಥವಾದ್ರೌಪದೀಸುತರ ॥ ತುರಗದಳವೊತ್ತಿದವು ರಾಯು
ನ । ಧುರನಿವಾಸಿಗಳುರೆ ನಿಹಾರದ । ಉರವಣಿಸಿದರು ಶಲ್ಯನಂಬಿನ ಮೊನೆಯ ಮನ್ನಿಸದೆ ॥ ೪೧ ॥
ಶರಹರಿಸಿದುದು ರಾಯದಳ ತಲೆ । ವರಿಗೆಯಲಿ ಮೊಗವೊಡದರುಳ್ಳಿಯು । ಉರರೆ ರಾವುತ್ತನುತ ಕವಿ

ದದು ಬಿಟ್ಟಸೂಠಿಯಲಿ ॥ ತುರಗವಳ ಮಗರಂಬದಲಿ ಮೊಗ । ವರಿಗೆಗಳಲಾರೋಹಕರು ಚ। ಪ್ಪರಿಸಿ ಚಾಚಿದರಾನೆಗಳನಾಶಲ್ಯನಿದಿರಿನಲಿ ॥ ೪೨ ॥ ಚೂರಿಸುವಮೊಗಸೂರಿಗೆಯ ಕೊ । ಲ್ಹಾರಗಳ ಶರ ಖಂಡಿಗಳ ಹೊಂ । ದೇರು ಕವಿದವು ಕೋಲಕೋಲಾಹಳದತೋಹಿನಲಿ ॥ ಧೀರರುಬ್ಬಿನ ಬೊಬ್ಬೆಗಳ ಜ । ಜ್ಝಾರರೇರಿತುಸರಳಧಾರಾ । ಸಾರದಕ್ಕಡತನದ ಬಿಲ್ಲವರ್ರೈದಿತರಿಭಟನ ॥ ೪೩ ॥ ಕಡಿದು ಬಿಸು ಟನು ತಲವರಿಗೆಗಳ । ಲಡತಿ ದತಿಪಾಯ್ದುಳದಲೊಗ್ಗಿನ । ತುಡುಕುಗುದುರೆಯೊಳರುವನೆಚ್ಚನು ಸರ ಳ ರಚನೆಯಲಿ ॥ ಗಡಣದಾನೆಯ ಥಟ್ಟನುಪ್ಪರ । ಗುಡಿಯ ರಥಗಾಜಿಗಳ ರುಧಿರದ । ಕಡಲಲದ್ದಿದ ಧರ್ಮಜನ ಮೋರ್ಬಲದ ಗರ್ವಿತರ ॥ ೪೪ ॥ ಮುರಿದುದೇ ಚತುರಂಗಬಲನಿ ನ್ನಿರಿತವಾದೊಡೆಧರ್ಮ ಸುತ ಕೈ । ಮರದಲಾ ಕಲಿಭೀಮಪಾರ್ಥರ ಬಿಂಕ ಬೀತುದಲಾ ॥ ಮೊರೆಯಬಾಯಲಿನಿನ್ನಮೈದುನ। ಹೊರಗಿರಲಿ ಸಹದೇವನಕುಲರ । ನರಿಯಬಹುದೆರೆದೆನುತ ಹೊಕ್ಕನು ಶಲ್ಯ ಪರಬಲವ ॥ ೪೫ ॥ ಸು ರನದೀಸುತರೆಸಗೆ ದ್ರೋಣನ । ಶರಚಮತ್ಕೃತಿಕರ್ಣಸಂಬಿನ । ಪರಿಹು ದೋರಿತು ದಳಪತಿಯ ಶರ ಸೋನೆ ಸಾರವಲ ॥ ಧೊರೆಯ ಸುಯ್ದಾನದಲಿ ಸಾತ್ಯಕಿ । ಯಿರಿದು ದೃಷ್ಟದ್ಯುಮ್ನನಭಿಮ೦ । ದ್ಯರ ನಿರೀಕ್ಷಿಸಿ ಹೇಳಿದನು ತಾಗಿದನು ಕಲಿಪಾರ್ಥ ॥ ೪೬ ॥ ಅರಸ ಕೇಳ್ಕೆ ಶಲ್ಯಪಾರ್ಥರ । ಶರನಿಧಾನವ ನವರಬಾಣೋ । ತ್ಕರವನವರಂಬುಗಳ ಬಹಳಾಡಂಬರಧ್ವನಿಯ ॥ ನಿರುಪಮಾಸ್ತ್ರಪ್ರೌಢಿಯನು ದು । ರ್ಧರಶಿಳೀಮುಖಸರ್ಗಬಂಧು । ಸ್ಫುರಣವನು ಹಿಂದೀಸುದಿನ ಕಾಣೆನು ರಣಾಗ್ರದಲಿ ॥ ೪೭ ॥ ಎಸೆವನರ್ಜುನನರ್ಜುನಾಸ್ತ್ರವ। ಕುಸುರಿದರಿವನು ಶಲ್ಯ ಶಲ್ಯನ । ವಿಶಿಖವನು ಮುರಿವನು ಧನಂಜಯ ನಾಧನಂಜಯನ॥ ಮಸಕವನು ಮಾದ್ರೇಶನುರೆ ಝೋಂ । ಪಿಸುವನಾಮಾದ್ರೇಶನಂಬಿನ। ಹಸರವನು ಹ ರೆಗಡಿವನರ್ಜುನನಗಣಿತಾಸ್ತ್ರವಲಿ ॥ ೪೮ ॥ ಕಂಡನಾಶಲ್ಯಾರ್ಜುನರ ಕೋ । ದಂಡಸಾರಶ್ರುತಿರಹಸ್ಯ ದ । ದಾಡಿಯನು ಕುರುರಾಯ ಕೈವೀಸಿದನು ತನ್ನವರ ॥ ಗಾಡುಗಲಿಗಳೊ ವೀರಸಿರಿಯಲಿ । ಮಿಂಡ ರೋ ನಗೆಗೆಡೆಯ ಬಿರುದಿನ । ಭಂಡರೋ ನೀವಾರೆನುತ ಮೂದಲಿಸಿದನು ಭಟರ ॥ ೪೯ ॥ ದಳವ ಕ ರೆ ದಳಪತಿಗೆ ಕಾಳಗ । ಬಲುಹು ಪಾರ್ಥನಕೂಡೆ ಗುರುಸುತ। ನಳವಿಗೊಡಲಿ ಸುಶರ್ಮ ತಾಗಲಿ ಶಕುನಿ ಗೌತಮರು ॥ ನಿಲಲಿ ಸುಭಟರು ಜೋಡಿಯಲಿ ಪರ। ಬಲಕೆ ಜಾರುವಜಯ ಸಿರಿಯ ಮುಂ। ದಲೆಯ ಹಿಡಿಹಿಡಿಯೆನುತ ಹೆಕ್ಕಳಿಸಿದನು ಕುರುರಾಯ ॥ ೫೦ ॥ ನೂಕಿದರು ಶಲ್ಯಂಗೆ ಪಡಿಬಲ । ರಾಕೆವಾಳೆ ರು ಗುರುಸುತಾದ್ಯರು। ಸೋಕಿದವು ಶರನಿಕರವರ್ಜುನನಂಬಿನಂಬುಧಿಯ ॥ ಕಾಕಭಟನಿವನುಬ್ಬಿದೊಡೆ ಸು । ವ್ಯಾಕುಳರು ತಪ್ಪಿದೊಡೆ ತಪ್ಪೇ । ನೀಕಳೆಂಬವಕೊಯ್ದುಕೊಳ್ಳೆನುತೆಚ್ಚನಾಪಾರ್ಥ ॥ ೫೧ ॥ ಮುರಿಯೆಸುತ ಮಾದ್ರೇಶ್ವರನ ಹೊ । ಕ್ಕುರಿಬಿದನು ಗುರುಸುತನ ಶಕುನಿಯ । ನಿರಿದು ಸಂಶಪ್ತಕರ ನೋಯಿಸಿ ಕೃಪನನೊಡೆಹಾಯ್ದು ॥ ತರುಬಿದನು ಕುರುಪತಿಯನರ್ಜುನ । ನೊರಸಿದನು ನೀಸ್ರೈನ್ಯಸು ಭಟರ । ನೆರವಣಿಗೆಯಸ್ತ್ರದಲಿಮುಸುಕಿತು ಕಲಿಧನಂಜಯನ ॥ ೫೨ ॥ ಅರಸಕೇಳಿತ್ತಲುಯುಧಿಷ್ಠಿ ರ । ನರಪತಿಯನರಸಿದನು ಮಾದ್ರೇ । ಶ್ವರನು ಸರಳಸರಾಗದಿಂ ಮುಸುಕಿದನು ಧರ್ಮಜನ ॥ ಧರೆಗೆ ಕಾಮಿಸಿದ್ಯೆ ಸುಯೋಧನ । ನರಸಿಯಲ್ಲಾ ಧಾತ್ರಿ ನಿಮ್ಮ । ವರಿಗೆ ಹುದುವಲ್ಲೆನುತ ಕವಿದೆಚ್ಚನು ನೃಪತಿಯ ॥ ೫೩ ॥ ಮಾವ ಮಾಯಾಡಂಬರದ ದು । ರ್ಭಾವವೇತಕೆ ಕೌರವ ನೊಳೆ ಮ । ಗೀತ

ಸುಧೆಹುದುವಲ್ಲ ನೆಲನೇಕಾಧಿಪತ್ಯದಲಿ ॥ ನೀವು ಕೌರವಸರ್ವಭಾಗದು । ರಾವಹದಲೇ ಬಾಣಸೃಷ್ಟಿಕೃ। ತ್ರಾವಧನವನು ಕೊಡೆನೆನುತ ತೆಗದೆಚ್ಚುಬೊಬ್ಬಿರಿದ ॥ ೫೪ ॥ ಬರಿಯಬೊಬ್ಬಾಟವೊ ಶರಾಳಿಯೊ । ಳಿರಿಗೆಲಸವೇನುಂಟೊ ಧರಣಿಯೊ । ಳಿರಕ ನಿಂವ್ವೈವರಿಗೆ ದ್ರೌಪದಿಯೆಸೆದು ವಧುವಾಗಿ ॥ ಹೊರಗು ಗಡ ಕುರುರಾಯನೀಗಳು । ಮರುದಿವಸವೋ ಸಿರಿಮುಡಿಗೆ ನೀ । ತಿರವಪಟ್ಟವದೆಂದೆನುತ ತೆಗೆದೆಚ್ಚ ನಾಶಲ್ಯ ॥ ೫೫ ॥ ಕಡಿದು ಬಿಸುಟನು ಶಲ್ಯನಸ್ತ್ರಾವ । ನೆಡೆಗೊಡದೆ ಮೂರಂಬುಗಳಲವ । ಗಡಿಸಿದನು ನೃಪನವರ ಶರಸಂತತಿಯ ಸಂತೈಸಿ ॥ ಒಡನೊಡನೆ ಕೈಮಾಡಿದನು ಕೈ । ಗಡಿಯನಂಬಿನಧಾರೆ ದಳ್ಳಿಸಿ । ಕಿಡಿಗೆದರಿದವು ನೃಪನ ರಥಸಾರಥಿಹಯಾಳಿಯಲಿ ॥ ೫೬ ॥ ಗೆಲಿದನೋ ಮಾದ್ರೇಶನವನಿಪ । ತಿಲಕನನು ಘಡ ಧರ್ಮಸುತನೀ । ದಳಪತಿಯನದ್ದಿದನು ಮಿಗೆ ಪರಿಭವಸಮುದ್ರದಲಿ ॥ ಅಳುಕಿದನು ನೃಪನೀಧರಾಧಿಪ । ನುಲುಕಲಂಜದನೆಂಬಲಗ್ಗಿಗೆ । ಲಳಿಮಸಗಿ ವ್ಯೈದೋರಿದಾಚೆಯ ಸೇನೆ ಸಂದಣಿಸಿ ॥ ೫೭ ॥ ನೆಲ ಬಿರಿಯೆಲಕ್ಷರಿವವಾದ್ಯದ । ಕಳಕಳದ ಕೊಲ್ಲಣಿಗೆಯಲಿ ಮುಂ । ಕೊಳಿಸಿದರು ಸಹದೇವಸಾತ್ಯಕಿ ಸೃಂಜಯಾದಿಗಳು ॥ ದಳದ ಪದಹತಿಧೂಳಿಯಲಿ ಕ । ತ್ತಲಿಸೆ ದೆಸೆ ಪಾಂಚಾಲದ ಳವಿ। ಟ್ಟಳಿಸಿ ನೂಕಿತು ಧರ್ಮಪುತ್ರನ ರಥದ ಶೋಣಿಯಲಿ ॥ ೫೮ ॥ ಸರ್ಬ್ಬಲಗ್ಗೆಯಲರರೆ ಪಾಂಡವ । ಸರ್ಬದಳವಳಪತಿಯ ರೋಂಪಿಸ । ಲೊಬ್ಬನೊದಗಿದೊಡೇನಹುದು ಕರೆ ನೂಕುನೂಕೆನುತ ॥ ಬೊಬ್ಬಿಡಲು ಕುರುರಾಯನೀಬಲ । ದಬ್ಬರಣೆ ವಾರಿಜಭವಾಂಡವ । ನಬ್ಬರಿಸೆ ಥಾಡಿಸಿತು ಶಲ್ಯನ ರಥವ ಬಳಸಿನಲಿ ॥ ೫೯ ॥ ಸೆಳೆದುಹೊಯ್ದಾಡಿದರು ಚಾತು । ರ್ಬಲ ಥಡಾಳಿಸಿ ವಿವಿಧಶಸ್ತ್ರಾ । ವಳಿಯ ಮಾರ್ಗದೊಳಾಗಲೇ ಹೊನಲೆದ್ದುದರುಣಜಲ ॥ ಉಳಿದರಿಬ್ಬರುಧೊರೆಗಳೆನೆ ಮುಂ । ಮುಳಿತವಾಯಿತು ಸೇನೆ ನೃಪತಿಯ । ಹಳಚಿದನು ಮಾದ್ರೇಶನಾವೆಡೆ ಧರ್ಮಸುತನೆನುತ ॥ ೬೦ ॥ ಮತ್ತೆ ತರುಬಿದನವನಿಪನನಿದು । ಜೊತ್ತಿನಾಹವವಲ್ಲಲೇ ನರೆ । ಹೊತ್ತುಹೊರಿಗೆಯನೆರವಣಿಗೆ ಸೇನಾಧಿಪತ್ಯವಲೆ ॥ ತೆತ್ತಿಸಿದನಂಬುಗಳ ಜೋಡಿನ । ಹತ್ತಿತೆರಿಗೆಯ ಚಿಪ್ಪನೊಡೆದೊಳ । ನೆತ್ತರೋಕುಳಿಯಾಡಿದವು ಮಾದ್ರೇಶನಂಬುಗಳು ॥ ೬೧ ॥ ಏನ ಹೇಳುವೆನರಸ ಕುಂತೀ । ಸೂನುವೇ ಕಿರುಕುಳನೆ ಶಲ್ಯನ । ನೂನಶರಜಾಲದಲಿ ನೆನೆದನು ಬಹಳಧೈರ್ಯದಲಿ ॥ ಭಾನುವಿದಿರಲಿ ತಿಮಿರದನುಸಂ। ಧಾನದಂತಿರಲಹಿತಭಟನನಿ । ಧಾನತೆಯ ಕೆತ್ತಿದನು ಕುತ್ತಿದವಂಬು ದಳಪತಿಯ ॥ ... ॥ ೬೨ ॥

ಅಂತು ಸಂಧಿ ೨ಕ್ಕಂ ಪದ ೬೨ಕ್ಕೆ ಮಂಗಳಮಸ್ತು.

ಮೂರನೆಯ ಸಂಧಿ

ಸೂಚನೆ ॥ ಸವೆದುದಗ್ಗದ ಹೊಂತಕಾರರ । ರವಿಬಲಾಂಬುಧಿ ಧರ್ಮತನಯನ । ನವಬಿಡಿಸಿ ಸಮ
ರದಲಿ ಮಡಿದನು ಮಹಾದ್ರಭೂಪಾಲ ॥

॥ ಪದ ॥ ಕೇಳು ಧೃತರಾಷ್ಟ್ರಾವನಿಪ ಭೂ । ಪಾಲಶಲ್ಯನ ಸಮರದೊಳಗಸು । ಕೊಳ್ಗರಾದ

ಲೈ ಕೃಪಾದಿಗಳಿತ್ತಲಾಚೆಯಲಿ ॥ ಮೇಳವಿಶಿತ್ರಜರ್ಜನನಕುಲಪಾಂ । ಚಾಲಬಲಭೀಮಾದಿಗಳ ಪದ। ಧೂಳಿಯಲಿ ಜಗ ಮುಳುಗಿ ಜೋಡಿಸಿ ಜಡಿದುದುಭಯಬಲ ॥ ೧ ॥ ಕೆದರಿದನು ಕಲಿಭೀಮ ಬಲವಂ । ಕದಲಿ ಮಾದ್ರೀತನಯರೆಡವಂ । ಕನಲಿ ಚರೋಣಿಗೆ ಚಿಮ್ಮಿದರು ಪಾಂಚಾಲನಾಯಕರು ॥ ಮದಮುಖ ವನೆತ್ತಿದರು ಬಾಣೌ । ಘದಲಿ ಫಲುಗುಣನನೊಂದವೆಸಯಲಿ । ಸದೆದು ಸವರಿದರೊಂದುದೆಸೆಯಲಿ ದ್ರೌಪದೀಸುತರು ॥೨॥ ಕ್ಷಿತಿಪ ಚಿತ್ರೈಸೇಚೆಯಲಿ ಗುರುಸುತ ಸುಶರ್ಮಕ ಸಾಲ್ವ ನಿಸ್ತ್ರಯಸುತನು ಕೃತವರ್ಮಕಕೃಪಾಚಾರ್ಯಾದಿಗಳು ಮಸಗಿ ॥ ಘೃತಸಮುದ್ರದಸೆರಗು ಸೋಂಕಿದ । ಹುತವಹನಸೋಂಪಿನಲಿ ವೈರಿ। ವ್ರತತಿಯನು ತರುಬಿದರು ತರಿದರು ಸರಳ ಸಾರದಲಿ ॥ ೩ ॥ ಕೆಣಕಿದನು ಯಮಸೂನು ವೊಡಹಾ । ಯ್ದಣದಲಂಬಿನಲರ್ಜನನ ಮಾ । ರ್ಗಣಮಹಾರಣ್ಯದಲಿ ಕೆಡೆದುದು ಕಡಿತ ಗುರುಸುತನ ॥ ರಣವಿಶಾರದವರಹಿರಲ್ಕೆ ನಿ । ಮ್ಮಣಕವೇತಕೆ ರಾಜಗುರುಗಳು । ಸೆಣಸುವೊಡೆ ಸ್ವರಿಸುವುದೆಂದೆನುತೆಚ್ಚನಾಪಾರ್ಥ ॥ ೪ ॥ ಮೊಗೆದನಶ್ವತ್ಥಾಮನೆಚ್ಚಂ । ಬುಗಳನರ್ಜನನಂಬು ಪಾರ್ಥನ । ಬಿಗಿದ ವಾನಿಮಿಷದಲಿ ಭಾರದ್ವಾಜಶರಜಾಲ ॥ ಹೊಗರುಗಿಡಿಗಳ ಸೂಸುವುರಿಧಾ, ರೆಗಳ ಘೃತಲೇಪನದಬಂಧದ । ಹೊಗರುಗಣೆ ಹೂಳಿದವು ಗುರುಸುತನಂಬಿನಂಬುಧಿಯ ॥ ೫ ॥ ಅರಸ ಕೇಳತಹಾಯ್ದು ಪಾರ್ಥನ । ವರರಥವ ಹಿಂದಿಕ್ಕಿ ಪವನಜ । ನುರುಮಣಿಸಿದನು ನಕುಲಸಾತ್ಯಕಿಸಹಿತ ಗುರುಸುತನ ॥ ಸರಳ ಸರಿವಳೆಗಳ ಸಗಾಡದ । ಲರಿಭಟನ ಮುಸುಕಿದಮಹೋಗ್ರದ । ಧುರವಕಂಡನು ನೃಪತಿ ಬಂದನು ಬಿಟ್ಟಸೂಠಿಯಲಿ ॥ ೬ ॥ ರಾಯ ಹೊಕ್ಕನು ಭೀಮಸೇನನ । ದಾಯ ಬಲುಹೋ ಧರ್ಮಪುತ್ರನ । ದಾಯವಲ್ಲೀಮತ್ತೆನುತ ಕೃತವರ್ಮಗುರುಸುತರು ॥ ಸಾಯಕದ ಮಳೆಗರೆದು ಕೌರವ। ರಾಯನನು ಹಿಂದಿಕ್ಕಿ ಪಡಿಬಲ । ವಾಯುಜನ ಮಂಗಡವ ಮುರಿದರು ತರಿದರರಿಬಲವ ॥ ೭ ॥ ಪಡಿಬಲಕೆ ಹೊಕ್ಕುದು ತ್ರಿಗರ್ತರ । ಗಡಣ ಕೃಪಕೃತವರ್ಮರಿಗೆ ಸಂ । ಗಡವನಶ್ವತ್ಥಾಮ ನೀ ಹೇರಾಳದಳಸಹಿತ ॥ ಕೊಡಹಿದರು ಪಾಂಡವರಬಲವವ । ಗಡಿಸಿದರು ಪವಮಾನಜನ ಬ । ಕ್ಕುಡಿಯುಬೆಳವಿಗೆಯಾಯ್ತು ಭೀಮನ ಭಾರಣೆಯುಭಟರು ॥ ೮ ॥ ಫಡಯೆನುತಪಾಂಚಾಲಬಲಸಂ । ಗಡಿಸಿತನಿಲಜನೊಡನೆ ಸೃಂಜಯ। ರೆಡೆಯಲೆಡೆಹಾಯಿದರು ಸುತ ಸೋಮಕಶಿಖಂಡಿಗಳು ॥ ಕಡಿಯಿಡುತ ಕಲಿಪಾರ್ಥನಂಬಿನ । ಮಡಬನೆದ್ದುದು ಕುರುಬಲವ ಹೆ । ಗ್ಗಡಲು ಬರತುದು ಹೇಳಲೇನವನೀಶಕೇಳೆಂದ ॥ ೯ ॥ ಆಸಮಯದಲಿ ಬಹಳ ಶೌರ್ಯಾ । ವೇಶದಲಿನಿಸ್ತ್ರಾತನೌಕಿದ । ನಾತಕುನಿಐವತ್ತುಸಾವಿರತುರಗದಳಸಹಿತ ॥ ಕೇಸುರಿಯ ಕಾರ್ಮೊಗೆಯವೊಲು ನಿ । ರ್ಘೋಷದಾಯುಧದಾನೆಗಳು ಕೈ । ವೀಸಿದಲ್ಲಿಂಮುನ್ನ ಮೊಗೆದವು ವೈರಿಮೋಹರವ ॥ ೧೦ ॥ ಗಜರಥದ ಗಾಢಿಕೆಯ ವಾಜಿ । ವ್ರಜದ ವೇಢೆಗೆ ಭೀಮನೇಗಜ। ಬಜಸುವಪಕೊಡಚಂಡನಾಡಿದನಹಿತಮೋಹರವ ॥ ಗುಜರುಗುಲ್ಮನಿಕುಂಜವೇಣು । ವ್ರಜದ ಮೆಳೆಯಲಿ ತಿಲುಕಿಪವ ಹನಿ । ಸಜಪರಾಶಿ ಕ್ರಮಿತಿಖಿಯ ಝಳ ಝೋಂಪಿಸಿತುಮೇಡೆಯಲಿ ॥ ೧೧ ॥ ಅಳಿದುದೈಸೂರಾನೆ ಸಾವಿರ। ಬಲುಗುದುರೆ ರಥಮೂರುಸಾವಿರ । ನೆಲಕೆ ಕೃಮಿತಿಸಿತುಭೀಮನ ಹೊಯ್ಲು ಹೋರಟೆಗೆ ॥ ಬಿರುಮೆರಿಗೆ ಸಬಳದ ಪದಾತಿಯ । ತಲೆಯ ತೊಡಿಸಿದನೆಂಟುಲಕ್ಷವ । ನುಳಿದಬಲವೋಲೈಸುತಿರ್ದುದು ಕೌರವೇಶನನ ॥ ೧೨ ॥ ಕಡೆದನಶ್ವತ್ಥಾಮನುಹತನ । ಕಡುಹನಾಸೆಹದೇವನಕುಲರ । ನಡುಗಿಸಿ

ಸಾಟೋಪವನು ನಿಲಿಸಿದನು ಪವನಜನ ‖ ಇಡಿದುದಂಬರವಳಯದಲಿ ಕೈ । ಗಡಿಯನೆಸುಗೆಯಲಕ್ಷ್ಯವೆನುಮಿಗೆ । ನುಡಿಯಬಲ್ಲವನಾರು ಗುರುನಂದನನ ಸಮರದಲಿ ‖ ೧೩ ‖ ಪವನಜನನೆಂಟಂಬಿನಲಿ ಪಾಂ। ಡವಬಲವನ್ನೈವತ್ತರಲಿ ಯಾ । ದವಸನಿಪ್ಪತ್ತಂಬಿನಲಿ ಮಾದ್ರೀಕುಮಾರಕರ ‖ ಕವಲುಗೋಲಿಪ್ಪತ್ತರಲಿ ಮುರಿ । ದವಘಡಿಸಿ ಪಾಂಚಾಲಸೃಂಜಯ । ನಿವಹವನು ನೂರಂಬಿನಲಿ ಕೆಡೆಯೆಚ್ಚ ಬೊಬ್ಬಿರಿದ ‖ ೧೪ ‖ ಏನ ಹೇಳುವೆ ಗಜಘಟಪ್ರತಿ । ಮಾನದಲಿ ಕೊಂಡಂಬುಗಳು ಹಿಂ । ದಾನೆಗಳನೇಳೆಂಟನೊಡೆದೋಡಿದವುಪಂಚಕಕೆ ‖ ಭಾನುರಶ್ಮಿಗಳಂಧಕಾರದ । ಮಾನಗರ್ವವಮುರಿವ ವೊಲುಗುರು । ಸೂನುವಿನ ಶರವೌಂಕಿದವು ಗಜಘಟೆಯ ಬಲುಮೆಳೆಯ ‖ ೧೫ ‖ ತಾಗಿದವು ಕಂಧರದಿ ತಾಳಿಗೆ । ಗಾಗಿ ಹೊರವಂಟಶ್ವನಿಕರವ । ನೀಗಿದವು ಶರವೊಂದುಸಾವಿರರಥಹಯಾವಳಿಯ ‖ ಬಾಗಿದವು ಕಾಲುಗಳು ಕಬಳಿಸಿ । ತೇಗಿದವು ಚತುರಂಗಬಲವ ನಿ । ಯೋಗಿಸಿದವಂತಕನವರಿಗಂಬುಗಳು ಗುರುಸುತನ ‖೧೬‖ ಕಡಿವಡೆದವೈನೂರುಗಜ ಧರೆ । ಗುಡಿದು ಬಿದ್ದವು ತೇರುಸಾವಿರ । ವಡಗುದರಿಯಾಯ್ತಶ್ವಚಯ ಸಾವಿರದಮುನ್ನೂರು ‖ ಕಡುಗಲಿಗಳೆರವತ್ತುಸಾವಿರ । ವೊಡಲುನೀಗಿತುಪಾಯಿದಳವು । ಗ್ಗಡದಡಾವರದಡಿಗಳಾಯಿತು ವೈರಿರಾಯರಿಗೆ ‖ ೧೭ ‖ ಮತ್ತೆ ಕವಿದುದು ಪಾಂಡುಬಲವರೆ। ವತ್ತುಸಾವಿರಕುದುರೆ ನೂರರರ । ವತ್ತುಗಜರಥನೂರುಮೀರಿತು ಲಕ್ಷಪಾಯದಳ ‖ ಸತ್ತಿಗೆಯ ಸಾಲುಗಳು ಧರಣಿಯ । ಕಿತ್ತು ಮಗುಚುವವಾದ್ಯರವ ಮೀ। ರಿತ್ತುಕಮಲಭವಾಂಡವಿಪುಳಕಟಾಹಖರ್ಪರವ ‖ ೧೮ ‖ ಇತ್ತ ಹೇಳಿಕೆಯಾಯ್ತು ಹಯಮಿ । ಪ್ಪತ್ತುಸಾವಿರದಂತಿಘಟೆಐ । ವತ್ತುಸಾವಿರರಥದೊಳಗೆ ಸಾವಿರದಮುನ್ನೂರು ‖ ತೆತ್ತಿಗರು ಕಾಳಾಳು ಲಕ್ಷವು । ಹತ್ತಿತಲ್ಲಿಯವಾದ್ಯರಭಸದ । ಲೆತ್ತಿನೂಕಿತು ಗುರುತನೂ। ಜನ ರಥದ ಚೂಣಿಯಲಿ ‖ ೧೯ ‖ ಉರವಣಿಸಿತಿದು ಗುರುಸುತನ ಹಿಂ । ದಿರಿಸಿ ಪರಬಲದಭಿಮುಖಕೆ ಮೋ । ಹರಿಸಿ ನಿಂದುದು ಕಂಡನಿತ್ತಲು ಶಲ್ಯ ನಿಜಬಲವ ‖ ಧುರಕೆನಾವಿರೆ ಸೇನೆಯುಪಸಂ । ಹರಿಸಬಹುದೇ ದ್ರೋಣಭೀಷ್ಮಾ । ದ್ಯರಿಗೆ ನಗೆಗೆಡೆಯಾಹವವ ತೆಗೆಯೆನುತ ನಡೆತಂದ ‖ ೨೦ ‖ ಬಲವ ತೆಗೆತೆಗೆನಾನಿರಲು ಕುರು । ಬಲಕೆ ಬೀಯವೆ ಕೌರವೇಂದ್ರನ । ಕೆಲಬಲವ ಸುಯ್ದಾನದಲಿ ಕೃಪಗುರುಸುತಾದಿಗಳು ‖ ನಿಲಲಿಶಕುನಿಯ ತುರಗಗಳು ಹಿಂ । ನೆಲೆಗೆಹೋಗಲಿ ರಾಯದಳ ನ । ಮ್ಮಳವ ನೋಡುತ್ತಿರಲಿಯೆಂದನು ಶಲ್ಯ ಕುರುಪತಿಗೆ ‖ ೨೧ ‖ ಕೇಳುಕೃಪಕೃತವರ್ಮ ಗುರುಸುತ । ಕೇಳುಶಕುನಿಸುಶರ್ಮಸಾಲ್ವನೃ । ಪಾಲರಾಯನಮಂತ್ರಿಸಚಿವಪಸಾಯಕಾದಿಗಳು ‖ ಕೇಳಿರೈ ಭೀಷ್ಮಾದಿಸುಭಟರ। ಕಾಳೆಗವ ಕಂಡಿರಿ ಮದೀಯಕ । ರಾಳಕದನೋತ್ಸವವ ನೋಡುವುದೆಂದನಾಶಲ್ಯ ‖ ತರಿಸಿಕಾಂಚನಮಯರಥವ ಸಂ । ವರಿಸಿದನು ಟಿಕ್ಕೆಯವನೆತ್ತಿಸಿ । ಸರಳ ತುಂಬಿಸಿ ಭಂಡಿಗಳನೆಡಬಲಕೆ ಜೋಡಿಸಿದ ‖ ಬಿರುದನೊದರುವಪಾಠಕರ ಮೋ । ಹರಕೆ ಮಣಿಕಾಂಚನವ ವೊಗದಿ । ತ್ತಿರೆಕರೆ ಧರ್ಮಜನನೆನುತುಬ್ಬಿದನು ಮಾದ್ರೇಶ ‖ ೨೨ ‖ ರಾಯನೋ ನಿಲುವವನು ಪಾರ್ಥನೊ । ವಾಯುಸುತನೋ ನಿಮ್ಮತುಳಿವರೊ । ಳಾಯುಧವಕೊಂಡಾರುನಿಲುವರು ನಿಲುವೆನವರೊಡನೆ ‖ ನಾಯಕರು ಮಿಕ್ಕವರೊಡನೆ ಬಲು । ಸಾಯಕವ ತೊಡಚಿದೊಡೆಕೌರವ। ರಾಯನಾಣೆಯೆನುತ್ತ ಮದವೇರಿದನು ಕಲಿಶಲ್ಯ‖೨೩‖ ಚಿರಳತುಟಿಗಳ ಬೊಬ್ಬೆ ಮಿಗಲ । ಬ್ಬರಿಸಿದವು ನಿಸ್ಸಾಳಶತ ಜ । ರ್ಝರಮೃದಂಗದ ಗೋಣಪಟಹ

ಹವಗೌತುಗಹಳೆಗಳ ॥ ಉರುರಥಸವಳ್ಳಿರಿಯೆ ರಥಚೀ । ತ್ಕರದ ರಥಹಯಹೇಷಿತದ ನಿ । ಷ್ಠುರನಿನಾ ದದಲೌಂಕಿ ಹೊಕ್ಕನು ಶಲ್ಯನಾಹವವ ॥ ೨೬ ॥ ದಳಪತಿಯ ಸುವ್ಯೂಹಮುಖ ಕಳ । ವಳಿಸುತಿದೆ ಗಂ ಗಾಕುಮಾರನ । ಕಲಶಜನ ರಾಧಾತನೂಜನ ಸಮರಭೂಮಿಯಲಿ ॥ ಕಳನನಿನ್ನಾಕ್ರಮಿಸುವೊಡವೆ । ಗ್ಗಳೆಯಮಾದ್ರಮಹೀಶನಲ್ಲದೆ । ಕೆಲರಿಗೇನಹುದೆನುತ ಕೊಂಡಾಡಿದುದು ಕುರುಸೇನೆ ॥ ಪೊತುಮು ಝುರೇ ಶಲ್ಯ ಹೊಕ್ಕನು । ಸೂತಜನ ಹರಿಬದಲಿ ವೀರವ್ರಾತ ಗಣನೆಯಲೀತನೊಬ್ಬನೆ ಹಾಮಹಾದೇ ವ ॥ ಧಾತುವೊಳ್ಳಿತು ಧಿಟ್ಟನೈನಿ । ರ್ಭೀತನಹನೆಂದುಲಿದು ರಿಪುಭಟ । ರೀತನನು ಹೊಗಳಿದರು ಸಾ ತ್ಯಕಿ ಸೃಂಜಯಾದಿಗಳು ॥ ೨೭ ॥ ಒಡೆದು ನಿಂದನು ಪರಬಲವ ನಿ । ರ್ಮ್ಮಡಯ ನಾವೆಡೆ ಸೇನೆ ಬವ ರವ । ಕೊಡಲುಕೊಂಬವರಲ್ಲ ಕೈದುವನಿಳೆಯ ಸುಳಿವರಿಗೆ ॥ ಪೊಡವಿಯಲಿಹುದು ಕೌರವೇಶ್ವರ । ನೊ ಡನೆ ಸಲ್ಲದುಗಡ ಶರೌಘವ । ನುಡಿಸಹೇಳಾನೃಪನನೆಂದುರುಬಿದನುಕಲಿಶಲ್ಯ ॥ ೨೮ ॥ ಚೆಲ್ಲಿತದು ನಾ ನಾಮುಖಕೆ ನಿಂ । ದಲ್ಲಿಯಿಲ್ಲವೆ ಸೋಮಕಾದ್ಯರ । ನಲ್ಲಿಕಾಣೆನು ಸೃಂಜಯರ ಪಾಂಚಾಲನಾಯಕರ ॥ ಕೆಲ್ಲೆಯಲಿ ಭೀಮಾರ್ಜುನರು ಬರೆ । ಬಿಲ್ಲನೊದಿರಿಸಿ ಕವನಚೌಪಟ । ಮಲ್ಲ ತಾನಿದಿರಾಗಿ ನಿಂದ ನು ಪಾಂಡವರರಾಯ ॥ ೨೯ ॥ ಜೀಯಬುಧನ ಪುರೂರವನಸುತ । ನಾಯುವಿನ ನಹುಷನ ಯ ಯಾತಿಯ । ದಾಯಭಾಗವ ಭೋಗನಿಧಿಯವತರಿಸಿದೈ ಧರೆಗೆ ॥ ಜೇಯನೆನಿಸಿದೆ ಜೂಜಿನಲಿ ರಣ । ಜೇಯನಹನೀಕೌರವನು ನಿ । ರ್ಮ್ಮಾಯತಿಯ ಸಂಭಾವಿಸೆಂದುದು ವಂದಿಸಂದೋಹ ॥ ೩೦ ॥ ಹರಿಗೆ ಹೊಡವಂಟಸ್ತ್ರವಿದ್ಯೆಯ । ಗುರುವ ನೆನೆದುಶರಾಸನಕೆ ಹೊಸ । ತಿರುವನೇರಿಸಿ ಮಿಡಿದು ನಿಜಸಾರಥಿಯ ಬೋಳೈಸಿ ॥ ಅರಸನಿದಿರಾದನು ವೃಕೋದರ । ವರನಕುಲಸಹದೇವಸಾತ್ಯಕಿ । ಬರಲು ಬಲನೆಡವಂಕದಲಿ ನರನಾಥ ಕೇಳೆಂದ ॥ ೩೧ ॥ ಮಾವನವರೇ ನಿಮ್ಮ ಹಿಂಸೆಗೆ । ನಾವು ಹೋದರೆ ಕ್ಷ ತ್ರಜಾತಿಯ । ಜೀವನವಲೇ ಕಷ್ಟವಿದು ಕಾರ್ಪಣ್ಯವಶರಾಗಿ ॥ ನೀವು ಸ್ಮರಿಸಬೇಕು ನಮ್ಮನ । ರಾವಳಿ ಯನೆನುತವನಿಪತಿ ಬಾ । ಣಾವಳಿಯ ಕೆದರಿದನು ಸೇನಾಪತಿಯ ಸಂಮುಖಕೆ ॥ ೩೨ ॥ ನಿನಗೆ ಮಾತು ಳರಾವು ಮಾಣಳಿ । ಮುನಿಯಮಗ ಮೊರೆಯಲ್ಲ ದುಶ್ಶಾ । ಸನಜಯದ್ರಥರಲ್ಲಲಾ ಸಂಬಂಧಿಗಳು ನಿ ನಗೆ ॥ ಜನಪಥಮರ್ದದ ಹಿಂಸೆ ಬಂದುದು । ನಿನಗೆ ಸಾವದನಾಡಲೇತಕೆ । ಮನದಗರ್ವದ ಗಾಢವ್ಯಸಳ ಯೆನುತ ತೆಗೆದೆಚ್ಚ ॥ ೩೩ ॥ ಅರಸ ಕೇಳ್ ಶಲ್ಯನ ಯುಧಿಷ್ಠಿರ । ನರಪತಿಯ ಸಂಗ್ರಾಮವಂದಿನ ಸುರನದೀನಂದನನ ದ್ರೋಣನ ಸೂತನಂದನನ ॥ ನರನ ಭೂರಿಶ್ರವ ಸುಷೇಣನ । ಕುರುಪತಿಯ ವೃಷ ಸೇನಸೌಭ । ದ್ರರ ಮಹಾಸಂಗರವ ಮರಸಿತು ಹೇಳಲೇನೆಂದ ॥ ೩೪ ॥ ಧಿಟ್ಟನಹೆ ಭೂಪತಿಗಳಲಿ ಜ ಗ । ಜಟ್ಟಿಯಹೆ ನಿನಗಸ್ತ್ರವಿದ್ಯೆಯ । ಕೊಟ್ಟವರ ನಾಬಲ್ಲೆ ನಿನ್ನದನಾಡಿ ಫಲವೇನು ॥ ತೊಟ್ಟ ಚೋಹದವಾಸಿಯೆಂಬುದ । ಬಿಟ್ಟು ನಮಗೋಡುವುದು ನಿನ್ನೊಡ । ಹುಟ್ಟಿದರ ನಿಬ್ಬರವೆನುತ ತೆಗೆ ದೆಚ್ಚನಾಶಲ್ಯ ॥ ೩೫ ॥ ಮಾವ ಭೀಮಾರ್ಜುನರ ಭಾರಣೆ । ಗಾವನಿಲುವನು ಸಾಕದಂತಿರ । ಲೀವಿಚ ತ್ರಕಳಂಬಖಂಡನಪಂಡಿತತ್ವವನು ॥ ನೀವು ತೋರಿರೆ ಸಾಕು ಸಾವು । ಧಾರ್ಯವಲಂಬನವುಳ್ಳೊಡೀತ ಸ್ತ್ರಾತ್ರಿಯ ಸ್ಮರಿಸಿಯೆನುತ ಯಮಸೂನು ತೆಗೆದೆಚ್ಚ ॥ ೩೬ ॥ ಧರಣಿಪತಿಯಂಬುಗಳನೆಡೆಯಲಿ ಕಡಿದು ತುಳುಕಿದನಂಬನಂಬಿನ । ಗರಿಯ ಗಾಳಿಯ ದಾಳಿ ಪಸರಿಸಿದುದು ಪರೀತವ ॥ ಮೊರವ ಜ

ಮಾರ್ಗಣೆಗಳಲಿ ಕ । ತ್ತರಿಸಿದವು ಬಳಿಯಂಬುಗಳು ಪಡಿ । ಸರಳನುಗುಳಿದವೆಚ್ಚೊಡೆಚ್ಚನು ಮೆಚ್ಚ
ಲುಭಯಬಲ ॥ ೩೮ ॥ ಸೈರಿಸಾದೊಡೆಯೆನುತ ಮುಳಿದು ಮ । ಹೀರಮಣಮಾದ್ರೇಶ್ವರನನೆ। ಚ್ಚಾ
ರಿದನು ಮಗುಳೆಚ್ಚು ಪುನರಪಿಯುಚ್ಚು ಬಳಿಯೆಸಲು ॥ ಕೂರಲಗು ಸೀಸಕದ ಕವಚವ । ಹೋರುಗಳೆ
ದೊಳನೆತ್ತರಿನ ಬಾ । ಯ್ದಾರೆಗಳ ತೋರಿದವು ದಳಪತಿಯಪರಭಾಗದಲಿ ॥ ಪ್ರಳಯಪವನನ ಹೊ
ಯ್ಲಿನಲಿ ಕಳ । ವಳಿಸಿದಮರಾದ್ರಿಯವೊಲುದುರಿದ । ಬಿಲುಸರಳ ಹೊಗೆಲೋರೆಗೊರಳಿನ ಮುಚ್ಚ
ಕಣ್ಣುಗಳ ॥ ತಳಿತರಕುತಾಂಕುರದ ಬಳಕೆಗೆ । ಬಳಲಿದಿಂದ್ರಿಯಕರಣಮೂರ್ಛಾ । ವಿಲಸಿತಾಂಗದ
ಶಲ್ಯನಿದ್ದನು ವರರಥಾಗ್ರದಲಿ ॥ ೩೯ ॥ ಅರಸ ಕೇಳ್ಳೆ ಮರವೆಗಾತನ । ನೆರವ ಕೊಟ್ಟು ಮುಹೂರ್ತ
ಮಾತ್ರಕೆ । ಮರದವೊಲು ಕಣ್ದೆರೆದು ನೋಡಿದನಲ್ಲಿ ಕೆಲಬಲವ ॥ ಸರಳ ಕಿತ್ತೌಷಧಿಯ ಲೇಪವ। ನೊ
ರಸಿದನು ತೊಳೆತೊಳೆದು ನೂತನ । ವರದುಕೂಲವನುಟ್ಟುಕೊಂಡನು ನಗುತ ವೀಳೆಯವ ॥ ೪೦ ॥
ತುಡುಕಿದನು ಬಲುಸರಳನಟ್ಟುವ । ಗಡಿಸಿದನಲಾ ಧರ್ಮಸುತನು । ಗ್ಗಡಿವಲೊಂದುಮುಹೂರ್ತವಾ
ಯಿತೆ ಹಗೆಗೆ ಸುಮ್ಮಾನ ॥ ತೊಡಕಿದೊಡೆ ಜಯವೆಪಜಯವು ಸಂ। ಗಡಿಸುವುದುತಪ್ಪೇನು ಯಮಸುತ
ಹಿಡಿಧನುವನನುವಾಗೆನುತ ಘೂಡಲಿಸಿದನು ಶಲ್ಯ ॥ ೪೧ ॥ ನರನ ರಥವನೆ ಮೊರೆಯಹೊಗು ಮುರ
ಹರನ ಮೊರೆಹೋಗು ಭೀಮಸೇನನ । ಕರಸಿ ನೂಕು ಶಿಖಂಡಿಸಾತ್ಯಕಿಸೃಂಜಯಾದಿಗಳ ॥ ಅರಸುಗುದಿ
ಗೆಳ ಹೊಯ್ಲು ಗೆಲುವಿನ । ಗರುವನಾದೊಡೆ ನಿಲ್ಲೆನುತಲ। ಬ್ಬರಿಸಿ ಮಾದ್ರಮಹೀಶನೆಚ್ಚನು ಧರ್ಮ
ನಂದನನ ॥ ೪೨ ॥ ಏನ ಹೇಳುವೆನರಸ ಶರಸಂ । ಧಾನವನು ಪುಂಖಾನುಪುಂಖನಿ । ಧಾನವನು ಜಂ
ಘಾಳಶರಜಾಲಪ್ರಸಂದಣಿಯ ॥ ಆನಿರಂತರಸರಳಸಾರದ । ಸೋನೆ ಸುರಿದುದು ಧರ್ಮಸುತ ಸರಣಾ
ತುರಾಗವ ಕೊಳ್ಳದದುಭುತವಾಯ್ತು ನಿಮಿಷದಲಿ ॥ ೪೩ ॥ ಸರಳ ಮುರಿಯೆಸಲಾಸರಳಕ । ತ್ತರಿಸಿ
ಹತ್ತೆಂಬಿನಲಿ ರಾಯನ । ಬರಿಯ ಕವಚವ ಹರಿಯಲೆಚ್ಚನು ಮೂರುಬಾಣದಲಿ ॥ ಸಿರದ ಸೀಸಕವನು
ವಿಘಾತಿಯ । ಲೆರಡುಶರದಲಿ ಮತ್ತೆ ಭೂಪತಿ । ಯುರವನುಗುಳಿದನೆಂಟರಲಿ ಮಗುಳೆಚ್ಚು ಬೊಬ್ಬಿ
ರಿದ ॥ ೪೪ ॥ ಗರುಡತುಂಡದ ಹತಿಗೆ ಫಣಿಯೆಂದೆ । ಬಿರಿದವೊಲು ಯಮಸುತನ ತನು ಜ । ರ್ಜರಿತ
ವಾದುದು ಜಡಿವಘೋಡಿನ ಜಗಿಯ ಜೋರಿನಲಿ ॥ ಮುರಿದಕಂಗಳ ಮಾಲಗಿಸಲಿ ಪೈ । ಸರಿಸಿದಗ್ಗದ
ಗಾಢವೇದನೆ । ಯುರವಣಿಗೆ ಸೊಪ್ಪಡಗಿ ನಿಮಿಷ ಮಹೀಶ ಮೈಮರೆದ॥ ೪೫ ॥ ಬಿದ್ದನಾಚೆಯ ದೊ
। ಸುಯೋಧನ । ಗೆದ್ದನಿನ್ನೇನೆನುತ ಸುಭಟರ । ನದ್ದಿತತಿಸಂತೋಷಸಾಗರ ನಿನ್ನ ಮೋಹರವ ॥ ಇ
ದ್ದರೋ ಶೋಕಾಂಬುಧಿಯೊಳೊತ್ತೆ । ಬಿದ್ದರೋ ಭೀಮಾರ್ಜುನಂಗುಸು । ರಿದ್ದುದೋ ಬರಹೇಳೆನು
। ಬೊಬ್ಬಿರಿದನಾಶಲ್ಯ ॥ ೪೬ ॥ ಗಜಬಜಿಸಿದುದು ವೈರಿಸುಭಟ । ವ್ರಜನಕುಲಸಹದೇವಸಾತ್ಯಕಿ । ಧೃ
ಷ್ಟದ್ಯುಮ್ನ ಭೀಮದ್ರೌಪದೀಸುತರು ॥ ವಿಜಿತನೋ ವಿಗತಾಸುವೋ ಧ । ರ್ಮಜನ ಹದನೇ
[illegible] ಚಿಂತಾ । ರಜನಿಯಲಿ ಕಂಗೆಟ್ಟುದಾಬಲವರಸ ಕೇಳೆಂದ ॥ ೪೭ ॥ [illegible] ಮುಖಳೆತ್ತ ತ್ರಸ್ತ್ರ
[illegible] ಕೊಳೆದನು ಗಾಯದಲಿ ಕೇ । ವಣಿಸಿ ದಿವ್ಯೌಷಧಿಯ ವರಗಂಧ[illegible]ದನವ ॥ [illegible]
[illegible]ವಸ್ತ್ರ ಮಣಿಭೂ । ಷಣಪರಿಶ್ರುತನಾಗಿ ತಿರುವಿನ । ಗೊನೆಯುವನು ನೇವಂಸಿ ಸಂತೈಸಿದನು ಸಾ
ಹಸ ॥ ೪೮ ॥ ಮರವೆ ಮಸುಳಿಸಿ ಭೂಮಿಪತಿ ಕಂ । ದೆರೆದರಲು ಭೀಮಾರ್ಜುನರು । [illegible]

ದಾದುದಿಲ್ಲಲ್ಲಾ ನೀವೇಕೆ ರಣವೇಕೆ ॥ ನರೆಧನುರ್ವೇದಾರ್ಥಸಾರವ । ನರಿದೆಯಾದರೆ ಕೊಳ್ಳೆನುತ ಬಿಡೆ । ತರಿದನೆಂಟಂಬಿನಲಿ ಧ್ವಜರಥಹಯವನಾಶಲ್ಯ ॥ ೪೯ ॥ ಧನುವನೆರಡಂಬಿನಲಿ ಮುಗುಳೆ । ಚ್ಚನು ಮಹೀಶನ ಸಾರಥಿಯ ಮೈ । ನೆನೆಯಸವರುಧಿರದಲಿ ಮುಗುಳೆಚ್ಚನು ಮಹೀಶ್ವರನ । ಮನನಶಾಸ್ತ್ರ ಶ್ರವಣನಿಯಮಾ । ಸನಸಮಾಧಿಧ್ಯಾನವಿಧ್ಯಾ । ವಿನಯವಲ್ಲದೆ ರಣದಜಂಜಡವೇಕೆ ನಿನಗೆಂದ ॥೫೦॥ ಉಡಿದು ಬಿದ್ದುದು ಚಾಪ ಸಾರಥಿ । ಕಡಿವರಥ ನೆರೆನುಗ್ಗುನುಸಿಯಾ । ಯ್ತುಡುಗುದರಿಯಾಯ್ತು ಶ್ವೇತ ಯಸಂಜೋಡುದಡಿಸಹಿತ ॥ ನಡುಗಿತರಿಬಲವವನಿಪತಿ ಕಾ । ಲ್ನಡಗೆ ಬಂದನು ಮತ್ತೆ ಹೊಸವಂ । ಗಡವ ಮೇಳೈಸಿದರು ನಗುತಡರಿದನು ಮಣಿರಥವ ॥ ೫೧ ॥ ಬೊಬ್ಬಿರಿದುದಾಸೇನೆ ರಾಯನ । ಸರ್ಬದಳ ಜೋಡಿಸಿತು ಸೋಲದ । ಮಬ್ಬು ಹೊಡೆದುದು ಜಯದ ಜಸವೇರಿದನು ನರನಾಥ । ಉಬ್ಬಿದನು ಸುಕ್ಷಾತ್ರತೇಜದ । ಗರ್ಭಗಾಡಿಸಿತಾಲಿಮಿಡಿದನು । ತೆಬ್ಬಿನಸ್ತ್ರ ಪ ತೂಗಿ ತುಡುಕಿದನಂಬಿನಂಬುಧಿಯ ॥ ೫೨ ॥ ಕಾದುಕೊಳು ಮಾದ್ರೇಶ ಕುರುಬಲ । ಮೈದಿ ಬರಲಿಂದಿನಲಿ ನಿನ್ನಯ । ಮೈದುನನ ಕಾಣಿಕೆಯಲೇ ಸಂಘಟನೆಗೀಸರಳು ॥ ಕೈದುಕಾರರೊಳಂಟಿಕರೆ ನೀ । ನೈದಲಾರೆಯೆನುತ್ತ ಮುನ್ನೊ । ರೈದುಶರದಲಿ ಕಡಿದನಾಸಾರಥಿಯ ರಥಹಯವ ॥ ೫೩ ॥ ತೇರು ಹುಡಿಹುಡಿಯಾಯ್ತು ಹೊಡಿದ । ವಾರುವಂಗಳನಲ್ಲಿ ಕಾಣೆನು । ಸಾರಥಿಯ ತಲೆ ಕಳಚಿ ಬಿದ್ದುದು ಮಿದುಳ ಜೋಡಿನಲಿ ॥ ಆರಿ ಬೊಬ್ಬಿರಿದರಸನೆಸಲ । ವ್ವಾರದಲಿ ಕಣೆಯಡಸಿದವು ಕೈ । ವಾರವೇಕೆ ಚಡಾಳಿಸಿತು ಚಪಳತೆ ಯುಧಿಷ್ಠಿರನ ॥ ೫೪ ॥ ಅರಸ ಕೇಳೈ ಬಳಿಕಮಾದ್ರೇ । ಶ್ವರನ ರಥಸಾರಥಿವಿಸಂಚಿಸ । ಲುರಿದನಧಿಕಕ್ರೋಧಶಿಖಿ ಮೋಹರಿಸಿತಕ್ಷಿಯಲಿ ॥ ಕುರುಬಲದ ತಲ್ಲಣವನುಪಸಂ । ಹರಿಸಿ ಹುಗೆಯಡಾಯುಧದಲಾ । ಧರಣಿಪನ ಮೇಲ್ವಾಯ್ದು ಹೊಯ್ದನು ಹಯರಥಾವಳಿಯ ॥ ೫೫ ॥ ವಾರುವನ ಭಯನಿತ್ಯಕಡಸಂ । ಹಾರದಲಿ ಸಾರಥಿನರೇಂದ್ರನ । ತೇರ ತಿರುಗಿಸಿದನು ನಿಹಾರದಲೊಂದುಬಾಹೆಯಲಿ ॥ ಆರಿ ಹೊಯ್ದನು ಹಯವನಗ್ಗದ । ವಾರಣಾವಳಿಗಳ ಪದಾತಿಯ । ತೇರತೆಕ್ಕೆಯನಿಕ್ಕಿದನು ಪ್ರತ್ಯೇಕಸಾವಿರವ ॥ ೫೬ ॥ ಮಲೆತು ದೃಷ್ಟದ್ಯುಮ್ನನನು ಭಯ । ಗೊಳಿಸಿ ಸೋಮಕಸೃಂಜಯರನ । ಪ್ಪಳಿಸಿದನು ಸಾತ್ಯಕಿಯ ಧಾಮನ್ಯೂತ್ತಮೌಂಜಸರ ॥ ದಳದೊಳೋಡಿಸಿ ಮುರಿದು ಚಾತು । ರ್ಬಲವ ಸವರಿ ಸಿಖಂಡಿನಕುಲರ ಹೊಲಬುಗೆಡಿಸಿ ಮಹೀಪತಿಯ ಪಡಿಬಲಕೆ ಮಂಡಿಸಿದ ॥ ೫೭ ॥ ಎಸೆಯುಧಿಷ್ಠಿರ ಹಲಗೆಕಡುಗವ । ಕುಸುರಿದರಿಯಾ ಚಾಪವಿದ್ಯಾ । ಕುಶಲನೆಂಬರಲೇ ತನುತ್ರರಥಂಗಳಲಿ ನಿಮಗೆ ॥ ಅಸುವ ಕಡೆವರೆ ರಣಪಲಾಯನ । ವೆಸವುದೈ ಕ್ಷತ್ರಿಯರಿಗತಿಸಾ । ಹಸಿಗನಾದೊಡೆ ನಿಲ್ಲೆನುತ ಮೊದಲಿಸಿದನು ಶಲ್ಯ ॥ ೫೮ ॥ ಅಕಟಕಟ ಧರ್ಮಜನ ನೀಂಕಂ । ಟಕಕೆ ಕ್ರವರ್ತಿಸಿವರೇ ಪಾತಕಿಗಳೋ ಪಾಂಡವರೆನುತ ಬಲವೆಲ್ಲ ತಲ್ಲಣಿಸೆ ॥ ವಿಕಟರೋಷದಿ ವಿಸ್ಫುಲಿಂಗ । ಪ್ರಕಟಭೀಷಣಸಹಿತನಲಿ । ಸಾಯಕವ ಖಂಡಿಸಿ ಧರೆ ಬಿರಿಯೆ ಬೊಬ್ಬಿರಿದನಾಭೀಮ ॥ ೫೯ ॥ ಲೇಸ ಮಾಡಿದೆ ಭೀಮ ಕಟ್ಟಾ । ಳೈಸಲೇ ನಿನ್ನವರೊಳಗೆ ನಿಂ । ನಾತೆಯಲ್ಲಾ ಧರ್ಮಪುತ್ರನ ಸತ್ಯತತ್ವದಕೆ ॥ ಐಸೆ ತಪ್ಪೇನೆನುತ ಮಾದ್ರಮ । ಹೀಶ ಮುರಿಯಲು ಹೊಸರಥವ ಮೇಳೈಸಿ ಸಾರಥಿ ಸಂಧಿಸಿದನವಧಾನ ದೇಯೆನುತ ॥ ೬೦ ॥ ರಥಕೆ ಬಂದು ಪಸಾಯವನು ಸಾ । ರಥಿಗೆ ಕೊಟ್ಟನು ಚಾಪಶರವನು । ರಥದೊಳಗೆ ತುಂಬಿಸಿದನಂಬಿಸಿದನು ಸುರಥೋ

ಧನನ ‖ ವ್ಯರ್ಥೆಯುಮಕ್ಕಳ ರಣಪರಾಕ್ರಮು । ವ್ಯರ್ಥಕರ್ಣಾ ಕರ್ಣಾದಿಸುಭಟ ‖ ವ್ಯರ್ಥೆಯು ನಿಲಿಸುವೆನೆನುತ ಮೂಲಿಸಿದನು ಧರ್ಮಜನ ‖ ೬೧ ‖ ಸಾರಥಿಗೆ ಸೂಚಿಸಿ ನೃಪಾಲನ । ಸಾರೆ ದುವ್ವಾಳಿಸಿತು ರಥ ನೃಪ । ನೋರೆಬಿಲಿದನು ಬಾಗಿ ತಿರುಗಿದನೊಲೆದೊಡಲನೊಲೆದ‖ ಚೂರಿಸಿದನಾರಾಚವಿಶ್ರಮ । ದೋರಣದ ನಾರಾಚನೆಸೇತ್ತುವಿ । ಹಾರದಲಿ ವಿರಚಿಸಿದಶಲ್ಯನ ಸಮರಸಾಗರವ ‖ ೬೨ ‖ ಹಿಂದೆ ಕರ್ಣಧನಂಜಯರು ಬಳಿ । ಕಿಂದು ಶಲ್ಯಯುಧಿಷ್ಠಿರರು ಸಾ । ನಂದದಲಿ ಸಮತಲಿಸಿ ಕಾದಿದರುಭಯಬಲದೊಳಗೆ ‖ ಇಂದು ಮದ್ರಮಹೀಶರನು ಯಮ । ನಂದನಗೆ ಪಡಿ ಮದ್ರರಾಜಗೆ । ಸಂದುದೀಯಮಸುತಗೆ ಯೆಂದುದು ಸಕಲಪರಿವಾರ ‖ ೬೩ ‖ ಅರಸ ಕೇಳೈ ಕೃಷ್ಣಶಕ್ತಿ । ಸ್ಫುರಣವ್ಯಸಲೆ ನಿಮ್ಮಟಲಸಂ । ಹರಣಕಾವುದು ಬೀಜ ನಿರ್ದೈವರ ವಿಲಾಸವಿದು ‖ ಹರಿಯುಧಿಷ್ಠಿರನೃಪನನೆಕ್ಕಟಿ । ಗರೆದು ವರಶಕ್ತಿಪ್ರಯೋಗವ । ನೊರೆದರೊಡಬಟ್ಟನು ಹಸಾಧದಮಧುರವಚನದಲಿ ‖ ೬೪ ‖ ಆಯದಲಿ ಶಸ್ತ್ರಾಸ್ತ್ರದಲಿ ದಿ । ವ್ಯಾಯುಧವ ನೆರೆಬಲಿದವರ ತಪ । ನೀಯರೇಖೆಯ ಹೊಳವಕೊಂಗಿರುಗೆಜ್ಜೆಘಂಟೆಗಳ ‖ ಬಾಯಧಾರೆಯ ತೈಲಲೇಪನ । ದಾಯತದ ಬವರಿಗಳ ರಿಪುಭಟ । ನಾಯುಷದ ಕಡೆವೊನಲ ಮುರಿಯನು ಶಕ್ತಿಯನು ನೃಪತಿ ‖ ೬೫ ‖ ತುಡುಕಿದನು ಹೊಸರವಿಯ ತೇಜದ । ದಡಿಯ ನುಗುವಂದದಲಿ ಹೊಳೆಹೊಳೆ । ವುಡುಗಣಂಗಳ ಸಮವೆನಿಪಮಣಿಮಯದ ಕಾಂತಿಗಳ ‖ ಕಡುಮೊನೆಯ ಪಡಿಮುಖವಲುದಿರುವ । ಕಿಡಿಯ ಘಂಟಾರವದ ರಭಸದ । ಕಡುಝಳವಝಳಿಸುವಶಕುತಿಯಲಿಟ್ಟನವನೀಶ ‖೬೬‖ ಇದಿರೊಳೆಚ್ಚನು ಶಲ್ಯನಂಬಿನ । ಹೊದೆ ಸವೆಯೆ ಹರಿತಪ್ಪಶಕುತಿಯ । ತುದಿಗೆ ಕಬಳಗ್ರಾಸವಾದನೆಲೇ ಮಹಾದೇವ ‖ ಹೊದರುಗಿಡಿಗಳ ಕೇಸುರಿಯ ಹಾ । ರದಲಿ ಹರಿತಂದಖಿಳ ದಳಪತಿ । ಯದೆಯನೊದೆದು ನೆಲಕೆ ನೆಟ್ಟಿತು ನಾಲ್ಕುಮುಷ್ಟಿಯಲಿ ‖ ೬೭ ‖ ಕಾರಿದನು ರಕುತವನು ಧರಣಿಗೆ । ಹಾರಿಬಿದ್ದನು ಮಾದ್ರಪತಿಯದೆ । ಡೋರಿನಲಿ ಡಾವರಿಸಿದವು ರಕುತಾಂಬುಧಾರೆಗಳು ‖ ಮಿಾರಿತಸು ಕಂಠದಲಿ ನಾಶಿಕ ‖ ಕೇರಿದುದು ನಿಟ್ಟುಸುರಿನಗಲಕೆ । ಚೀರಿದುದು ಕುರುರಾಯದಳಶಲ್ಯಾವಸಾನದಲಿ ‖ ೬೮ ‖ ಅಹಹ ಸೇನಾಪತಿಯ ಮಗ್ನಲು । ಮಹಿಗೆ ಮೆಚ್ಚಿದು ಬಿಚ್ಚಿತೀಚೆಯ । ಬಹಳಬಲವಿನ್ನಾರು ಕುರುಸೇನೆಗೆ ಧುರಂಧರರು ‖ ಮಿಹಿರಸುತಗುರುಭೀಷ್ಮರವಿಸಂ । ನಹಿತನಾದನು ರಾಯರೆನೆ ಕಿಂ । ಗಹನವೇ ರಣವೆನುತ ಶಲ್ಯತನೂಜಮಾರಾಂತ ‖ ಗೆಲವು ನಿಮಗಾಯ್ತರಸ ಹರಿಬಕೆ । ನಿಲುಕಿದಮ್ಮನು ಸಂತವಿಸಿ ನಿಜ । ಬಲದಲೊಸಗೆಯ ಮಾಡಿ ಸಾ ಮದ್ರೇಶಮಾರಣವ ‖ ಅಳುಕದಿದಿರಾಗೆನುತ ಬಾಣಾ । ವಳಿಯ ಕೆದರಿ ನಿರಂತರಾಸ್ತ್ರದ । ಜಲನಿಧಿಗೆ ವಡಬಾಗ್ನಿಯಾದನು ನಗುತ ಯಮಸೂನು ‖ ೭೦ ‖ ಆತನಸ್ತ್ರವ ಮುರಿಯೆನುತ ರಥ । ಸೂತಹಯವನು ತರಿದು ಬಾಣವ್ರಾತದಲಿ ಶಲ್ಯಾತ್ಮಜನ ಹೂಳಿದನು ಹರಹಿನಲಿ ‖ ಈತನನು ಕೆಡಹಿದನು ಸಾಲ್ವಮ । ಹೀತಳಾಧಿಪನವರ ಹರಿಬಕೆ । ಭೂತಳೇಶನ ಕಣಕಿದನು ಕುರುರಾಯ ಸಾಮಜವ ‖ ೭೧ ‖ ಅರಿ ಹೊಕ್ಕನು ಶಲ್ಯನೊಳು ಪರಿ । ವಾರಮಾದ್ರರನಾಯಕರು ಜಿ । ಜ್ಝಾರಮನ್ನೆಯಮಂಡಲಿಕಸಾಮಂತಸಂದೋಹ ‖ ಭೂರಿಬಲಸಾಲ್ವನು ಭಟಾವಳಿ । ಯಾರುಭಟೆಯಲಿ ನೂಕಿದುದು । ವಿಸ್ತಾರಿಸಿತ್ತಲ್ಲಿ ಧರ್ಮನಂದನನೊಡನೆ ಘನಸಮರ ‖ ೭೨ ‖ ಕೇಳಿದನು ಕುರುರಾಯಮಾವ್ರನ್ನ । ಘಾಲನವಸಾನವನು ಕನಸಿವ ।

ಸಾಳುಕುದುರೆಯರಥಮದೋತ್ಕಟಗಜಘಟಾವಳಿಯು ॥ ಮೇಳವದ ಮೋಡಿಯಲಿ ಬಲದು । ವ್ಯಾಳಿಸಿ
ತಳ್ಕೆ ಪಾಂಡುಪುತ್ರರ । ಸಾಲ ಹೊಯ್ದೊಯೆನುತ ಹೊಕ್ಕನು ಲಳಿಯಲಗ್ಗಳಿಯಲಿ ॥ ೨೩ ॥ ರಾಯ
ನೊಡನೆ ಸಮಸ್ತ ಬಲವದು । ಪಾಯಲೌಕಿತು ಪಾರ್ಥಸಾತ್ಯಕಿ । ವಾಯುಸುತರಾಚೆಯಲಿ ಮೋಹರಿ
ಸಿತ್ತು ರಿಪುಸೇನೆ ॥ ಸಾಯಕದ ಕಿಡಿವರೆಯ ಸಬಳದ । ಪಾಯದಳರಥವಾಜಿಕರಿಘಟೆ । ಯಾಯುಶುದ್ಧ
ದತೇಜಿ ಹೊಕ್ಕವು ವಾಘೆ ಸಡಿಸದಲಿ ॥ ೨೪ ॥ ಥಟ್ಟಿನೊಡೆಹೊಯ್ದವನಿಪತಿ ಜಗ । ಜಟ್ಟಿಗಳ ಕೆಣಕಿ
ದನು ನಕುಲನ । ನಟ್ಟಿದನು ಸಹದೇವನಡಹಾಯ್ದರೆ ವಿಭಾಡಿಸಿದ ॥ ಬಿಟ್ಟದೃಷ್ಟದ್ಯುಮ್ನನನು ಹು
ಡಿ । ಗುಟ್ಟಿದನು ಸಾತ್ಯಕಿಯ ಜೋಡಿನೊ। ಳೊಟ್ಟಿದನು ಕೂರಂಬುಗಳನಾವೀರಕುರುರಾಯ ॥೨೫॥
ಮುರಿಳಿ ಪಂಚದ್ರೌಪದೇಯರ । ಪರಿಭವಿಸಿದನು ಧರ್ಮಪುತ್ರನ । ತೆರಳಿಚಿದಸಹದೇವನಕುಲರ ಮತ್ತೆ
ಸೋಲಿಸಿದ ॥ ಮರಯುಧಾಮನ್ಯುತ್ತಮೌಂಜಸ । ರುರುಳಿಚಿದನವನಿಯಲಿ ಭೀಮಾ । ದ್ಯರಿಗೆ ಭೀತಿ
ಯ ಬೀರಿದನು ಬೇಗದಲಿ ಕುರುರಾಯ ॥೨೬ ॥ ಕೆದರುತಿದೆ ನಮ್ಮವರು ಬಲಧೊರೆ ॥ ಯಧಟು
ಕಿನು ರಾಯನೊಬ್ಬನೆ ॥ ಕದನದಲಿ ಕೈದೋರಿ ಭಂಗಿಸಿದನು ಮಹಾದೇವ ॥ ಹೆದರಿ ಹೊಕ್ಕರು ಲ
ಮರವಾ । ನದಲಿ ಮರಳ್ದವು ಪಾರ್ಥ ದಿವ್ಯಾ । ಸ್ತ್ರದಲಿ ಕೈಮಾಡೆಂದು ಮುನಿದನು ವೀರನಾರಾ
ಯಣ ॥ ... ... ॥ ೨೭ ॥

ಅಂತು ಸಂಧಿ ೩ ಕ್ಕೆ ಪದ ೧೭೪ಕ್ಕಂ ಮಂಗಳಮಸ್ತು.

ಇತಿ ಶ್ರೀಮದಚಿಂತ್ಯ ಮಹಿಮ ಗದುಗು ವೀರನಾರಾಯಣ ಚರಣಾರವಿಂದ ಮಕರಂದ ಮಧುಪಾನ ಪುಷ್ಟ
ವಚಃ ಷಟ್ಪದಿನಿಕಾಯ ಶ್ರೀಮತ್ಕುಮಾರ ವ್ಯಾಸಯೋಗೀಂದ್ರ ವಿರಚಿತಮಪ್ಪ ಕರ್ಣಾಟ ಭಾರತ
ಕಥಾಮಂಜರಿಯೊಳ್ ಶಲ್ಯಪರ್ವ ಸಮಾಪ್ತಮಾದುದು.

ಶ್ರೀರಸ್ತು.

॥ಶ್ರೀ ವೇದವ್ಯಾಸಾಯನಮಃ.॥

ಕನ್ನಡ ಮಹಾಭಾರತ—ಗದಾಪರ್ವ.

ಮೊದಲನೆಯ ಸಂಧಿ.

ಸೂಚನೆ ॥ ಶಲ್ಯನವಸಾನದಲಿ ಕೌರವ । ನುಲ್ಲ ರಣದಲಿ ಕಾದಿಯಲ್ಲಿಯೆ । ನಿಲ್ಲದಡಗಿದನಿತ್ತ
ಸಂಜಯ ಬಂಧಸಾಹಸಕೆ ॥

ಪದ ॥ ಕೇಳು ಧೃತರಾಷ್ಟ್ರನೃಪ ಸಿರಿ । ಲೋಲಸಹಿತರ್ಜುನನು ಸೇನಾ । ಜಾಲವನು ಸಂ
ತೈಸಿ ಧೊರೆ ಸುಯ್ಧಾನವೆಂದೆನುತ ॥ ಆಳೊಡನೆ ಬೆರಸಿದನು ಕುರುಭೂ । ಪಾಲಕನ ಥಟ್ಟಿನಲಿ ತಸ್ತ

ಜ್ವಾಲೆಗಳ ಕೆದರಿದನು ಹೊದರಿನ ಹಿಂಡಹರೆಗಡಿದು ॥ ೧ ॥ ಎಲವೊ ಕಪಟದ್ಯೂತ ಕೇಳಿಯ । ಕಲ್ಮಷಿತಾಂತಃಕರಣನಿನ್ನೀ । ಬಲಕೆ ಪತಿ ನೀನೋ ಕೃಪಾಚಾರಿಯನೊ ಗುರುಸುತನೊ॥ ಖಳಸುಶರ್ಮನೊ ಶಕುನಿಯೋ ನಿಂ । ನುಳಿದವೊಡಹುಟ್ಟಿದನೊ ರಾಜಾ। ವಳಿಯೊಳಾರಳವಿಗರು ನಿನಗೆನುತೆಚ್ಚನಾಪಾರ್ಥ ॥ ೨ ॥ ಅರಸ ಕೇಳೈ ಮೂರುಸಾವಿರ । ಕರಿಘಟೆಗಳಿಪ್ಪತ್ತುಸಾವಿರ । ತುರಗರಥದಳವೆಂಟುಸಾವಿರಲಕ್ಷಪಾಯದಳ ॥ ಅರಸುಗಳು ಮುನ್ನೂರುನಿಂದುದು । ಕುರುಬಲದವಿಸ್ತಾರಕೌರವ । ಧರಣಿಪತಿಏಕಾದಶಕ್ಷೋಹಿಣಿಯಶೇಷದಲಿ ॥ ೩ ॥ ಕರಿಘಟೆಗಳೈನೂರುಮೂವ । ತ್ತೆರಡುಸಾವಿರಪಾಯದಳಸಾ । ವಿರದನೂರ್ವರು ಧೊರೆಸಹಿತ ನಿಂದನು ಮಹೀಪಾಲ ॥ ತುರಕಖರ್ಪರಪಾರಸೀಕರ । ತುರಗವೈಸಾವಿರಸಹಿತಮೋ । ಹರಿಸಿ ನಿಂದನು ಪಾರ್ಥನಿದಿರಿಲಿ ಶಕುನಿ ಮೊನೆದೋರಿ ॥ ೪ ॥ ನೂರುರಥವಿನ್ನೂರುಗಜವೈ । ನೂರುಹಯಗಳು ಸಾವಿರದಮುಂ । ನ್ನೂರುಸುಭಟರುಸಹಿತ ಮೋಹರವೆರಡುಬಾಹೆಯಲಿ ॥ ತೋರಿದರು ಕೃತವರ್ಮಕೃಪರೈ । ನೂರುಗಜ ಗುರುತನುಜಸಹಿತೀ । ಮೂರುದಳಕೊತ್ತಾಗಿ ನಿಂದನು ಕೌರವರರಾಯ ॥ ೫ ॥ ಕವಿದು ದುವ್ವಾಳಿಸುತಲಾರಥ । ನಿವಹ ಬಿಟ್ಟುದು ಕುದುರೆ ಸೂಠಿಯೊ । ಳವಗಡಿಸಿ ತೂಳಿದವು ಹೇರಾನೆಗಳು ಸಂದಣಿಸಿ ॥ ಸವಡಿವೆರಳಿನ ಸೇದುವಂಬಿನ । ತವಕಿಗರು ತುರುಬಿದರು ಬಲುಬಿಲ್ಲವರು ಮೊನೆಮುಂತಾಗಿ ಮೋಹಿತು ಮಿಕ್ಕ ಸಬಳಿಗರು॥೬॥ರಣಪರಿಚ್ಛೇದಿಗಳು ಮಿಗೆ ಸಂ।ದಣಿಸಿತಾಕುರುಸೇನೆ।ವಾದ್ಯದಿ।ಧರಣಿಪತಿಗಳು ನೋಡಿ ವುಬ್ಬಿದಬೊಬ್ಬೆಗಳಧ್ವನಿಗೆ ॥ ಕುಣಿದವಂದರ್ಜನನ ರಥಮುಂ।ಕಣಿಯಲಾರೋಹಕರ ರಥಹಯ । ಹಣಗಿದವುಹಯದೊಡನೆ ಕಂದದ ಖುರದ ಹೊಯ್ಲಿನಲಿ ॥ ೭ ॥ ಸುತ್ತುವಲಗೆಯಮೇಲೆ ಕಣೆಗಳ। ತೆತ್ತಿಸಿದರುಬ್ಬಿನಲಿ ಸಬಳಿಗ । ರೆತ್ತಿದರು ರಾವುತರುಹೊಯ್ದರು ರಥಹಯಾವಳಿಯ ॥ ಮುತ್ತಿದವು ಗಜಸೇನೆ ಪಾರ್ಥನ । ತೆತ್ತಿಗರ ಬರಹೇಳು ಯೆಡೆಯಲಿ । ಕಿತ್ತು ಮಗುಚುವರಾರಸುತ ತಲ್ಲಣಿಸಿತರಿಸೇನೆ ॥ ೮ ॥ ಅರಸ ಕೇಳೈ ಬಳಿಕ ಪಾರ್ಥನ । ಕೆರಳಿಚಿದರೋ ಕಾಲರುದ್ರನ । ಸರಸವಾಡಿದರೋ ಪ್ರಚಂಡಪ್ರಳಯಭೈರವನ ॥ ಪರಿಭವಿಸಿದರೊ ಲಯಕೃತಾಂತನ । ಕರೆದು ಮೂದಲಿಸಿದರು ನಾವಿ । ನ್ನರಿಯೆವರ್ಜನನೆಸುಗೆಯಲಿ ವರ್ಣನೆಯ ನಿರ್ಣಯವ ॥ ೯ ॥ ಎಡದಲೌಂಕಿದಭಟರನಾನಂ । ಗಡದರಾವ್ತರ ಸಮುಖದಲವ । ಗಡಿಸುವಾನೆಯ ಥಟ್ಟಿನಾಸವುರಥರ ತೇರುಗಳ ॥ ಕಡಿದನೊಂದೇಸರಳಿನಲಿ ಚಿನ । ಕಡಿಗಳನು ರುಧಿರಾಂಬುರಾಶಿಯೊ । ಳಡಗಿದಚತುರಂಗಬಲವನು ಒಂದುನಿಮಿಷದಲಿ ॥ ಅಳಿದವಿನ್ನೂರಾನೆಸರಳು । ಚ್ಛಳಿಸಿದವು ಮುನ್ನೂರು ಪುನರಪಿ । ಮಲಗಿದವು ನೂರಾನೆ ಕೆಡೆದವು ತಾರುಥಟ್ಟಿನಲಿ ॥ ಬಳಿಕ ನೂರು ನಿರಂತರಾಸ್ತ್ರ । ವಳಿ ವಿಭ್ರಾಂತಿಗೆ ನೂರಲೆಬ್ಬುವ । ಕಳೆದವಿನ್ನೂರಾನೆ ಪಾರ್ಥನ ಕೋಲ ತೋಹಿನಲಿ॥೧೧॥ ರಥ ಮುರಿದವೈನೂರು ತತ್ಸಾ । ರಥಿಗಳದ್ದುದು ನೂರು ಮಿಕ್ಕದು । ರಥವನಿಳಿದೋಡಿದುದು ಸಮರದೊಳೆಂಟುನೂರೈದು ॥ ಪೃಥವಿಗೋರಗಿದವೆಂಟುಸಾವಿರ । ಪೃಥುಳಹಯ ಸುಗ್ಗಾಯ್ತು ಗೂಸೆಯ ಗತಿಸದಾತಿಯೊಳೆತ್ತಲಿನ ಸವರಿದನು ಬರಿಬಲವ ॥ ೧೨ ॥ ಒದೆದು ರಥವನು ಸೂತರಿಳಿದೋ । ಡಿದರು ಚಾಪವನಿಳುಹಿ ಸಮರಥ । ರಿದೆಯನೀವೃತಕರೆದ ಖಂಡೆಯದೂಹತಿಯನಿಳುಹಿ ॥ ಕೆದರಿತಾರೋಹಕರು ವಿಕ್ರಮ । ವಿದಿತನಿಪುಣಪದಸ್ಥಭೂಪರು । ಹುದುಗಿತಲ್ಲಿಯದಲ್ಲಿ ಪಾರ್ಥನ ಸರಳ ಧಾಳಿಯಲಿ

॥ ೧೩ ॥ ಬಿರುದ ಬಿಸುಟರು ಧ್ವಜದಕಂಭವ । ಹರಿಯಹೊಯ್ದರು ಕಾಲತೊಡರನು । ಧರೆಯೊಳೀ
ಡಾಡಿದರು ಹಾಯ್ದರು ಚಟುಳಪಟುಭಟರು ॥ ಸುರಗಿಯನು ಸೆಕ್ಕಿದರು ರಥದಲಿ । ಕರಿಗಳಲಿ ವಾ
ರುವದಲಿಳಿಗು । ಪ್ಪರಿಸಿದರು ಹರಹಿನಲಿ ಯ್ಯೆದಿತು ಹೊತ್ತುಮುಸುಕಿನಲಿ ॥ ೧೪ ॥ ಕೆದರಿ ಗಜಮುಂ
ಡಾಸನದೊಳೋ । ಡಿದವು ಚಮರೀಮೃಗದವೊಲು ಬಲು । ಗುದುರೆ ಬಿಟ್ಟೋಡಿದವು ಕಂದದನೊಗನ
ನೀಡಾಡಿ ॥ ಕುದುರೆ ಸೆಳೆದವು ಬರಿರಥವನೊ । ಟ್ಟಿದಪದಾತಿಯು ಬಿಸುಟಕೈದುವ । ಹೊದೆದದುದಿಳೆ ಕ
ಳನಗಲದಲಿ ಕಂಡೆನು ಮಹಾದ್ಭುತವ ॥ ೧೫ ॥ ಮರಳಿ ವಾಘೆಯ ಕೊಂಡರಾವ್ತರು । ತಿರುಗಿದರು
ಹಮ್ಮುಗೆಯನೀಣ್ಗಳ । ಹರಿದು ಹಕ್ಕರಿಕೆಗಳ ಹಾಯಿಕಿ ಖಂಡೆಯವ ಬಿಸುಟು ॥ ಬಿರುದ ಸಂಭಾವಿಸು
ವಭಟ್ಟರ । ನಿರಿದರಾರೋಹಕರು ಕಲಿಗಳ । ತಿರುಹಿಗಳ ರಂಚೆಗಳ ಕೊಯ್ದಾಡಿದರು ನೆಲಕೆ ॥ ೧೬ ॥
ರಾಯಕೇಳ್ಕೆ ಬಲದ ಬಾಹೆಯ । ನಾಯಕರು ಕಾದಿದರು ವಾಮದ । ನಾಯಕರು ಕೆಲಸಿಡಿದು ತರಹರಿ
ಸಿದರು ದೂರದಲಿ ॥ ರಾಯ ಕಂಡನು ಬಳಿಕ ರಣದಪಲಾಯನದ ಪರಿವಿಡಿಯನಸುವಿನ । ಬೀಯಕವ
ರಂಜಿದರೆನುತ ಮೊದಲಿಸಿದನು ನೃಪರ ॥ ೧೭ ॥ ಎಲೆಮಹೀಪತಿ ಗಳಿರ ಪುಣ್ಯ । ಸ್ಥಳಕುರುಕ್ಷೇತ್ರವು
ಮಹಾಸಂ । ಗರದೊಳಗೆ ತೆಗೆದೋಟವೇ ನೀವ್ ಕ್ಷತ್ರಿಯೋತ್ತಮರು ॥ ಅಳುಕದಂಗೈಸಿದೊಡೆ ಸು
ರಸಂ । ಕುಳದ ಸೇರುವೆ ತಪ್ಪಿದೊಡೆ ನೀ । ವಿಳಿವಿರೈ ರೌರವದೊಳಾವುದುಲೇಸು ನಿಮಗೆಂದ ॥ ೧೮ ॥
ವೀರಮಾತೆಗಳೆಂದು ತಾಯ್ಗಳ । ನಾರುಕೊಂಡಾಡುವರು ಸತಿಯರ । ವೀರಪತ್ನಿಯರೆಂದು ಸುಡಿವರೆ
ಸುರರರಾಣಿಯರು ॥ ವೀರಸಿರಿ ನಿಮಗೆಂದು ಮಂದಿಯೊ । ಳಾರ ಹೇಳುವೆವೆನ್ನಲೇಕೈ । ವಾರಿಸದೆ
ಕಲಿನಿಕರ ನಾಚದೆ ಶಿವಶಿವಾಯೆಂದ ॥ ೧೯ ॥ ನರಶಿರದ ದರ್ಭೆಗಳ ಮಿದುಳಿನ । ಚರುವಿನೆಲುವಿನಸ
ಮಿಧೆಗಳ ಬಿಲು । ದಿರುವರವಚತುರಂಗರಭಸದಸಾಮವೇದಿಗಳ ॥ ಅರುಣಜಲದಾಜ್ಯಾಶ್ರುವಾರಿಯ ।
ಸಿರಕಪಾಲದ ವೈರಿಪಶುಬಂ । ಧುರದ ಸಂಗರಯಜ್ಞದೀಕ್ಷೆಯ ಮರೆದಿರಕಟೆಂದ ॥ ೨೦ ॥ ಇಲ್ಲಿ ಮ
ನುಜಸ್ತ್ರೀಯ ಮೇಳವ । ವಲ್ಲಿಸುರನಾರಿಯರ ರತಿ ನಿಮ । ಗಿಲ್ಲಿ ಸಾರೋದ್ಯಾನರಸ ಪೀಯೂಷರಸ
ವಲ್ಲಿ ॥ ಇಲ್ಲಿಯದ್ಧ್ರುವವಿಭವವಿಮಲತೆ । ಯಲ್ಲಿ ಕಿಲ್ಬಿಷವಿಲ್ಲಿ ಶಿವಮಯ । ವಲ್ಲಿನೀವಿಂನೇನ ನೋಂ
ತಿರೊ ಶಿವಶಿವಾಯೆಂದ ॥ ೨೧ ॥ ಅವಭವದಲಿನಿಮ್ಮರಾಜ್ಯವ । ದಾವಬಂಧದ ಮಂತ್ರಮಿತ್ರರ । ವಾ
ವಜನ್ಮಂಗಳಸ ಮಾಗವು ನಿಮ್ಮರಾಣಿಯರು ॥ ಈವಿಡಂಬದದೇಹವಿದಸಂ । ಭಾವಿಸುತಪರಲೋಕಹಿತ
ವನು । ನೀವುನೆನೆಯದೆ ಕೆಟ್ಟುದಕೆ ಬೆರಗಾದೆವಾವೆಂದ ॥ ೨೨ ॥ ನೃಪನ ಮೊದಲೆ ನಿಜಕುಲಕ್ರಮ ।
ಕಪಟಶೋಭೆಯ ಪಾರಲೌಕಿಕ । ದುಪಹತಿ ಪ್ರತಿಭಟರ ನಗೆಸದ್ಭಟಪರಿತ್ಯಾಗ ॥ ಕೃಪಣತನ ದುಷ್ಕೀ ।
ರ್ತಿ ಭುಜಬಲ । ದಪದಶಾದುರ್ಭೇದವೀಭೂ । ಮಿಪರ ಮರಳಿಚಿತ್ತೇನನೆಂಬೆನು ರಾಯ ಕೇಳೆಂದ ॥ ೨೩ ॥
ಕರೆದರೊಬ್ಬರನೊಬ್ಬರುರೆ ಧಿ । ಕ್ಕರಿಸಿದರು ತಮ್ಮೊಬ್ಬರೊಬ್ಬರ ॥ ಬಿರುದ ಹಳಿದರು ಬೈದರಪಮಾ
ನಾನುತಾಪದಲಿ ॥ ತಿರುಗಿ ಹೇಳಾರಾವುತರಥಿ । ಕ್ಕರಿಗಜಾರೋಹಕರನೆಂದ । ಬ್ಬರಿಸಿ ಚೌರಿಯ ಬೀಸಿ
ಮರಳಿತು ಭೂಪತಿವ್ರಾತ ॥ ೨೪ ॥ ವಾರುವಂಗಳ ಬಿಗುಹನೇರಿಸಿ । ವಾರಣಾಘುದಗುಳವ ಜೋಡಿಸಿ ।
ತೇರುಗಳ ಕೀಲಚ್ಚುಕೂಬರಯುಗವನಾರೈದು ॥ ವೀರಪಣವನು ರಚಿಸಿ ಕಂಕಣ । ಧಾರವನು ಕಟ್ಟಿದ
ರು ಸಂಗರ । ವೀರಸಿರಿಯ ವಿವಾಹಸಮಯದ ಸೌಮನಸ್ಯದಲಿ ॥ ೨೫ ॥ ಧೂಪಿಸಿದಬಳಿದೊಗಲನು

ಟ್ಟನು । ಲೇಪನಂಗಳ ಪೂಸಿ ಮಧುರಾ । ಳಾಪದಲಿ ಬೋಳೈಸಿ ಸಾರಥಿರಥಹಯಾದಿಗಳ ॥ ಭೂಪ ನೀರಣಯಜ್ಞಮುಖದಲಿ । ಚಾಪಘನಪೂರ್ಣಾಹುತಿಯಲಾ । ಶ್ರೀಪತಿಯ ಸಾಯುಜ್ಯವೆನುತಿದಿರಾಯ್ತು ನೃಪಕಟಕ ॥ ೨೬ ॥ ಅರಿಯಬಹುದ್ಯೆ ಭಾವವ್ಯೈದುನ । ಮೆರೆ ಭುಜಾಟೋಪವನು ಹಿಂದಣ। ಕೊರತೆಯನು ಕಳೆ ಮಗನೆ ಬೊಪ್ಪಕುಲಕ್ರಮಾಗತವ ॥ ಮರೆಯದಿರೆ ಮುಂಗೈತನಕೆ ತಾ । ನಿದುವೆ ತಾ ಮುನ್ನೆಂದು ತಮ್ಮೊಳು । ಜರೆದರೊಡಹುಟ್ಟಿದರು ಬಾಂಧವಮಿತ್ರಭೂಭುಜರ ॥ ೨೭ ॥ ನೂಕಿತೊಂದೇವಾಘೆಯಲಿ ಹಯ । ನಾಲ್ಕುಸಾವಿರರಥದ ಜೋಡಿನ । ಜೋಕೆ ಜರಿದುದು ಮೂರು ಸಾವಿರರಾಜಪುತ್ರರಲಿ ॥ ತೋಕುವಂಬಿನ ಜೋಕೆ ಜೋಡಿನೊ । ಳೌಕಿದವು ಸಾವಿರಮದೇಭಾ । ನೀಕ ಬೊಬ್ಬೆಯಲಗ್ಗಿತು ಲಕ್ಷಪಾಯಿದಳ ॥೨೮॥ ಸುರಿದುದಂಬಿನಸೋನೆ ರಥಿಕರ। ಕರಿಘಟೆಯ ಧಟ್ಟಿಂವಕಕ್ಕಡೆ।ಪರಶುಶೂಲಮುಸುಂಡಿಶಲ್ಯಹಸಬಳಶಕ್ತಿಗಳು ॥ ಅರಿಬಲಾಬ್ಧಿಯ ಬೀಸಿದವು ತತ್ತುರಗರಥವನು ಬೀಸಿದವುಮದ।ಕರಿಗಳಿಕ್ಕಡಿಗಾಯಕೊದಗಿತು ರಾಯರಾವುತರು ॥೨೯॥ ನೆರೆ ಪರಿಚ್ಛೇದಿಸಿದಬಲವು । ಕ್ಕರಿಕಿತೋ ನಿಜಸೈನ್ಯಸಾಗರ।ಹರದುದೋ ಬಲುಗಲಿಗಳೆದೆಗಳಕಿಚ್ಚು ತಗ್ಗಿತಲ॥ ಮುರಿದು ಬರುತಿದೆ ಸೃಂಜಯರು ಕೈಮರೆದಿರೇ ಪಾಂಚಾಲಭಟರೆಂ । ದೊರಲಿದರು ಮಂತ್ರಿಗಳು ರಾಯನದಳದ ಬಳಸಿನಲಿ॥೩೦॥ ಅರಸ ಕೇಳು ಯುಧಿಷ್ಠಿರನ ಮೇಲುರವಣಿಸಿತೀಸೇನೆ ಭೀಮನ।ಬಿರುದ ತಡೆವುತ ಸಾವಿರಾನೆಗಳೊಂದುಬಾಹೆಯಲಿ ॥ ಅರರೆ ರಾವುತ್ತೆನುತ ಕವಿದುದು । ತುರಗಸಾವಿರ ನಕುಲಸಹದೇ । ವರಿಗೆ ಸಾತ್ಯಕಿಗಾಗಿ ಬಿಟ್ಟನು ರಥವನಾದ್ರೋಣಿ ॥ ೩೧ ॥ ರಾಯದಳದಲಿ ಚಾತುರಂಗದ । ಬೀಯಬೆದರಿಸಿ ತದಟರನುಬಲು । ನಾಯಕರಿಗಿದಿರೊಡ್ಡಿದರು ಕೃಪಭೋಜಗೌತಮರು ॥ ಆಯತಿಕೆ ರಣವೆನುತ ಪಾಂಡವ । ರಾಯ ಹೊಯ್ದನು ಬಳಿಕಲಾಕ । ರ್ಣಾಯತಾಸ್ತ್ರನು ಕಂಡನರ್ಜನನೀಮಹಾಬಲವ ॥೩೨॥ ಮೇಲುಲೋಕವ ಬಯಸಿ ಕುರುಬಲ । ಮೇಲೆ ಬಿದ್ದುದು ಜೀಯ ಜಡಿದು ನೃ । ಪಾಲನೇಕಾಂಗದಲಿ ಹೊಕ್ಕನು ಹೊದರ ಹೊರೆಗಡಿದು ॥ ಮೇಲುದಾಯದಲವನಿಪನ ಸಂ । ಭಾವಿಸುವೆನೆನಗುತ ಲಕ್ಷ್ಮೀಲೋಲಚಪ್ಪರಿಸಿದನು ತೇಜಿಯ ತಿರುಹಿ ರಿಪುಬಲಕೆ ॥ ೩೩ ॥ ಅರಸ ಕೇಳೈ ನಿಮಿಷದಲಿ ನೃಪ । ವರನ ರಥದಿಂ ಮುಂದೆ ಪಾರ್ಥನ । ದಿರುವಿನಬ್ಬರ ಕೇಳಲಾದುದು ಕಳನ ಚೌಕದಲಿ ॥ ಅರರೆ ಧೊರೆಯೋ ಕೊಳ್ಳವನಕ್ಕೆ । ಮರೆಯದಿರಿಕುರುಧರಣಿಪನ ಹಗೆ । ಹರಿಯಲೆಂದುರವಣಿಸಿ ಹೊಯ್ದುದು ರಿಪುಭಟವ್ರಾತ ॥ ೩೪ ॥ ಮೋಹಿದವು ಬರಿಕೈಯ ಗಜಹಯ । ವ್ಯೂಹಬಿಡದೌಕಿದವು ವಂಶ । ದ್ರೋಹಿಸಿಲುಕಿದನೆನುತ ತಡೆವರು ರಥಿಕರೆಡಬಲನ ॥ ಗಾಹಿಸಿದವದೂಹತ್ತಿಲೌಡಿಯ । ರಾವುತರು ಕಟ್ಟಳವಿಯಲಿವ್ರುಸ್ಸಾಹಿಸುತಲೌಕಿತು ಪದಾತಿಧನಂಜಯನರಥವ ॥ ೩೫ ॥ ಏನನೆಂಬೆನು ಜೀಯ ಕರುಬಲ । ದಾನೆಗಳ ವಿಕ್ರಮವನತಿರಥ। ರೇನನಿಲುವರು ಕೆಲಬರೀಚತುರಂಗದುಪಹತಿಗೆ ॥ ಭಾನುಮಂಡಲವಧಿಕತಿಮಿರಾಂಭೋನಿಧಿಯನೊಗ್ಗಡಿತಗೊಂಬವೊ । ಲಾನಿರಂತರರಥದ ಘಟ್ಟಣೆ ಧೂಳಿಪಟವಾಯ್ತು ॥ ೩೬ ॥ ಮೆಯಿಂಡಿಯ ಹಿಡಿವಾನೆಗಳನೆಡ । ವಂಕಕೌಕಿದರಥಚಯವ ಬಲ । ವಂಕಕೋಡಿವರಾವುತರನುಬ್ಬೆಸ್ವಸಾಪ್ದಳದ ॥ ಸಂಕೆಯನು ನಾಕಾಣೆ ಬಲನಡ । ವಂಕವನು ತರಿದೊಟ್ಟಿದನು ವಾ । ರ್ರಾಂಕ ನಿಲುವುದೆ ಪಾರ್ಥ ಮುನಿದರೆ ನೃಪತಿ ಕೇಳೆಂದ ॥ ೩೭ ॥ ಉಡಿಯೆ ಮೋರೆಗಳಿರದೆಜೋಧರ । ಕೊಡಹಿ

ಹಾಯ್ದುವು ದಂತಿಘಟೆ ಖುರ। ಕಡಿವಡೆದು ಕುದುರೆಗಳು ಹರಿದವು ಹಾಯ್ಕಿ ರಾವುತರ॥ ಮಡಿಯೆ ಸಾರಥಿ ಮುಗ್ಗಿದವು ರಥ । ನಡೆದುಕಾದಿ ಮಹಾರಥರು ಮದೆ । ಗೆಡದುದುಳಿದಪದಾತಿ ಸಂಖ್ಯೆಯನರಿಯೆ ನಾನೆಂದ ॥ ೩೮ ॥ ಕರಿಘಟೆಗಳೈನೂರು ರಥಸಾ । ವಿರದಮುನ್ನೂರೆರಡು ಸಾವಿರ । ತುರಗದಳವೆಂಭತ್ತುಸಾವಿರ ವಿಗಡಪಾಳೆಯದ ॥ ತೆರೆಳಿತೆಂತಕಪುರಕೆ ಪುನರಪಿ । ತುರಗಸಾವಿರನೂರು ರಥವಿದ। ಕರಿಗಳಿನ್ನೂರೈದುಸಾವಿರವಾಯ್ತು ಪಾಯದಳ ॥ ೩೯ ॥ ಮತ್ತೆ ಮೇಲೊಡೆಗವಿದು ನೂರೆರು । ವತ್ತು ಗಜರಥಯೂಥ ನೂರಿ । ಪ್ಪತ್ತು ಮುನ್ನೂರಶ್ವಚಯ ಸಾವಿರದನಾನೂರು ॥ ಪತ್ತಿ ಮರಳೈವತ್ತುಗಜ ಮೂ । ವತ್ತುರಥವಿನ್ನೂರುಹಯವೆರು । ವತ್ತುನಾಸೂರಿಂದ ಮೆರೆಯಿತ್ತುಳಿದಪಾಯದಳ ॥ ೪೦ ॥ ಬಿರುದುಪಾಡಿನ ಭಾಷೆಗಳ ವಿ । ಸ್ತರದ ನುಡಿಗಳ ರಾಜವರ್ಗದ । ಮರುಳದಲೆಗಳ ಕಾಣೆನರ್ಜುನನಾಹವಾಗ್ರದಲಿ ॥ ಹರಿವರೆಕುತದ ತಳಿರ ಖಂಡದ ಸಿರದ ಹರಹಿನ ಕುಣಿವ ಮುಂಡದ । ತುರಗಪಯದಳ ಗಜದಹೆಣಮಯವಾಯ್ತು ರಣಭೂಮಿ ॥ ೪೧ ॥ ಮುರಿದುದೆಡಬಲವೆಂಕ ಪಾರ್ಥನ । ತರುಬಿದನು ನಿನ್ನಾತ ಸೈರಿಸಿ । ಹರಿದಳವ ಕೂಡಿದನು ಕೈಮಾಡಿದನು ಕಾತರಿಸಿ ॥ ಒರಲಿದವು ಬಹುವಿಧದವಾದ್ಯದ । ಬಿರುದನಿಗಳುಬ್ಬೆದ್ದು ಮಾರಿಯ । ಸೆರೆಗ ಹಿಡಿದನು ಕೌರವೇಶ್ವರನರ್ಜುನನ ಕಣಕೆ ॥ ೪೨ ॥ ಕೊಲುವುದನುಚಿತವೆಂದು ಭೀಮನ । ಕಳೆದಮಿಾಸಲು ನಿನ್ನತನು ನೀ । ನೊಲಿದಪರಿಯಿಂದೆಸು ವಿಭಾಡಿಸು ರಚಿಸು ಭಾಷೆಗಳ॥ಅಳುಕಿದೆವು ನಿಮಗೆಂದು ರಾಯನ। ಬಳಿಯ ಜೋಡರ ರಾವುತರ ತಲೆ । ಗಳ ಪದಾತಿಯನಿಕ್ಕಿದನು ಸೆಕ್ಕಿದನು ಸರಳುಗಳ ॥ ೪೩ ॥ ಜನಪ ಕೇಳೈ ನಿನ್ನ ಮಗನ । ರ್ಜುನನನೆಚ್ಚನು ಫಲುಗುಣಾಸ್ತ್ರವ। ಚಿನಗಡಿದು ಮರಳೆಚ್ಚು ಪಾರ್ಥನೊಳೆರವ ತೋರಿಸಿದ ॥ ಮನದ ಮದ ಮಿಾರಿತು ಕಿರೀಟಿಯ। ಮೊನೆಗಣೆಯ ಮನ್ನಿಸದೆ ದುರ್ಯೋ । ಧನನು ದುವ್ವಾಳಿಸಿದನವನೀಪತಿಯ ಮೋಹರಕೆ ॥ ೪೪ ॥ ಅರಸುಮೋಹರ ಸಿಲುಕಿದುದು ದೊರೆ ಬೆರಸಿ ಹೊಯ್ದನು ಬೇಹಸುಭಟರು। ಮರಳಿಯೆನೆ ವ[illegible]ಡಿದರ ಪಂಚದ್ರೌಪದೀಸುತರು ॥ ಧರಣಿಪತಿಯ ವಿಘಾತಿಗೊಪ್ಪಿಸಿ । ತಿರುವನೆನು ತುಬ್ಬಿದ್ದು ಪಾರ್ಥ[illegible]ಪ್ರಬುದ್ಧಕಸೃಂಜಯರು ರಂಜಿಸಿತು ಚೂಣಿಯಲಿ ॥ ೪೫ ॥ ಇತ್ತ ಪಡಿಬಲವಾಗಿ ನಿ[illegible]ತ್ತುಗಜಘಟೆ ಕೌರವೇಂದ್ರನ । ತೆತ್ತಿಗರು ತೂಳಿದರು ಪಾಂಚಾಲಪ್ರಬುದ್ಧಕರು ॥ ಹತ್ತುಸ[illegible]ಯದಳ ಹೊಗ । ರೆತ್ತಿಮಿಂಚಿನ ಹೊಗರಿನಂತಿರೆ। ಮುತ್ತಿತವನೀಪತಿಯಮೋಹರವೆರಡುಬಾಹೆಯಲಿ ॥ ೪೬ ॥ ನೂರುರಥದಲಿ ಬಲುಗುದುರೆ ನಾ । ನೂರರಲಿ ಕುರುರಾಯ ಸೂತಿಯ। ಲೇರಿದನು ಧರ್ಮಜನ ದಳ ಸುಗ್ಗಾಯ್ತು ನಿಮಿಷದಲಿ ॥ ಮಿಾರಿದವು ಗಜಘಟೆಗಳಾವೆಡೆ।ತೋರು ದೊರೆಗಳೆನುತ ಬೊಬ್ಬಿರಿ । ದೇರಿಸಿದರರಿಭಟರ ನೃಪತಿಗೆ ಜೋದರಂಬುಗಳು ॥ ೪೭ ॥ ಏನ ಹೇಳುವೆನವನಿಪತಿ ಯಮ । ಸೂನುವಿನ ಸಾಮರ್ಥ್ಯವನು ವಿ । ನ್ಯಾನಗಳನಗ್ಗಳೆಯರಾವುತ ರಥಪದಾತಿಗಳ ॥ ಭಾನುಬಿಂಬವ ತೆಗೆವತಮದವಿ । ತಾನದಂತಿರೆ ವಿರಥರಾಯ್ತು ತ । ದಾನುಗತಶರಜಾಲದನನದಕಾಲವಾಯ್ತೆಂದ ॥ ೪೮ ॥ ಆಳ ಕೊಂದನು ನೂರ ಪುನರಪಿ । ಸೀಳಿದನು ಮುಂನೂರ ಘುಂವೊನ। ಬೋಳೆಯಂಬಿಗೆ ಬೀರಿದನು ನಾಲ್ಕೆರಡುಸಾವಿರವ ॥ ಮೇಳ ನಾಲ್ಸಾವಿರದ ಸವಡಿಯ । ಸೀಳಿಸಿದನಿನ್ನೂರುಕುದುರೆಗೆ । ಕಾಲನೂರಲಿ ಲಾಯ ನೀಡಿತು ರಾಯ ಕೇಳೆಂದ ॥ ೪೯ ॥ ಚೆಲ್ಲಿದವು ರಥ

ಗಾಲಿ ಮುರಿದವು । ಗೆಲ್ಲಗೆಡದವು ಕೂಬರಂಗಳ । ನಲ್ಲಿ ಕಾಣೆನು ಕೊಚ್ಚಿದನು ಚಿನಕಡಿಯ ಬಿಲ್ಲುಗಳ॥ ಎಲ್ಲಿಯವು ರಥವಾಜಿಗಳು ತಾ । ವೆಲ್ಲಿಯವು ಸಾವಿರಿಯೆವಾಗಲೆ । ಗಲ್ಲಿದರ ಕುರುಳಿಂಗೆ ಹಾಯ್ದರು ಸುರರ ಸೂಳೆಯರು ॥ ೫೦ ॥ ಅಳಿದಗಜನಾನೂರು ಕುದುರೆಗ। ಳಳಿದವರಸನ ಶರಹತಿಗೆ ಮೂಂ। ಮು ಳಿತವಾದುದು ತೇರುಸಾವಿರ ವಿಗಡಪಾಯದಳ ॥ ಕಳಚಿ ಕೆಡೆದುದು ನೂರು ನೃಪರ । ಗ್ಗಳೆಯುತನವಲಿ ರಾಯರಲಿ ಹೆ । ಕ್ಕಳಿಸಿದನು ಕಳವಳಿಸಿದನು ಕುರುರಾಯ ಖಾತಿಯಲಿ ॥ ೫೧ ॥ ಜೋಡಿಸಿದಸಾವಿರ ಗಜಂಗಳ । ನೀಡಿರಿದರಂಕುಶದಿ ನೆತ್ತಿಯ । ತೋಡಿಬಿಟ್ಟರು ನೃಪನ ಮತದಲಿ ದೊರೆಯ ಸಾಮ್ಮುಖ ಕೆ ॥ ರೂಢಿಸುವಬರಿಕೈಯಪರಿಘದ । ಲೌಡಿಗಳ ಪಟ್ಟೆಯದಲೊಬ್ಬುಳಿ । ಗೂಡಿ ತೂಳಿದವಾನೆಗಳು ಯಮಸುತನ ಸಂಮುಖಕೆ ॥ ೫೨ ॥ ಎಲೆಲೆಭೂಪತಿ ಸಿಕ್ಕಿದನು ಗಜ । ದಳದ ಭಾರಣೆ ಬಲುಹೆನುತ ಬಲ । ಕಳವಳಿಸೆ ಕೇಳಿದನಲ್ಲಿ ಕಲಿಭೀಮನಾಚೆಯಲಿ ॥ ಪ್ರಳಯವಿಪಿನದ ಶಿಖಿಯ ಡಾವರ। ದೊಳಗೆ ಶ್ರಮಮಾಡಿದನೆನಲು ಮಿಗೆ। ಮೊಳಗಿ ಮಂದಿಯನಿಕ್ಕಿ ಮಲೆತನು ಸಿಂಹನಾದದಲಿ ॥ ೫೩ ॥ ಚೆಲ್ಲಿದವು ಗಜಯೂಥವಪ್ರತಿ । ಮಲ್ಲಭೀಮನ ಗದೆಯಘಾತಿಯ । ಘಿಲ್ಲಣೆಗೆ ವೆಂಟಣಿಸಿದಾನೆಗಳೆಲ್ಲ ಚೆಲ್ಲಿದವು ॥ ಸೆಲ್ಲಹದಮಳೆಗರೆದು ಝಾಡಿಯ । ಝಲ್ಲರಿಯ ತುರುಗಿದರು ಗಗನಕೆ । ಬಿಲ್ಲಜಂತ್ರದ ನಾಳಿಯಂಬಿನ ಸರಳಸಾರದಲಿ ॥ ೫೪ ॥ ಅವನಿಪನ ಹಿಂದಿಕ್ಕಿ ಗಜಯೂ । ಥವವಿಭಾಡಿಸಿ ಹಿಂಡ ಕೆಡಹಿದ । ನವಗ ಡಿಸಿದನು ಹಾರಲೂದಿದನೊದೆದು ಬೊಬ್ಬಿರಿದ ॥ ತಿವಿದನಣಸಿನ ಮೋರುಮೊನೆಯಲಿ। ಸವಡಿಯಾನೆಯ ನೆತ್ತಿದನು ಬಲ । ಬವರಿಯಲಿ ಯೆಡಬವರಿಯಲಿ ಸವರಿದನು ಕಲಿಭೀಮ ॥ ೫೫ ॥ ಒರಲಿ ತಿವಿದನು ಕರಿಯ ಬರಿಕೈ । ಮುರಿಯಲೆಲುಗಳನೊದೆದುದಾಡೆಯ । ತಿರುಹಿ ಕಿತ್ತನು ಸೆಕ್ಕಿದನು ಬೆನ್ನಿನಲಿ ಬಲು ಗದೆಯ ॥ ಜರೆದನಾರೋಹಕರ ತಲೆಗಳ । ತರಿದು ಬಿಸುಟನು ಗಜಘಟೆಯ ಥ । ಟ್ಟೊರಗಿದವು ದಡಿ ಸಹಿತ ನವರುಧಿರಾಂಬುಪೂರದಲಿ॥೫೬॥ಗುಳವನುಡಿದಾರೋಹಕರ ಮೂಂ । ದಲೆಯ ಸೆಳೆದೊಡ ಮ ಟ್ಟಿದನು ಮುಂ । ಡಳಿಸಿದೊಡ್ಡಿನಮೇಲೆ ಹಾಯ್ದನು ಹೊಯ್ದನುರವಣಿಸಿ ॥ ಕಳಚಿದನು ದಾಡೆಗಳಬ ರಿಕೈ । ಗಳನು ತುಂಡಿಸಿ ನಾಳಹಸ್ತವ । ಸೆಳೆದು ಕೊಡಹಿದನಾನೆಗಳ [illegible] ಘಾನದಲಿ ॥ ೫೭ ॥ ಕೋಡ ಕಿತ್ತನು ನೂರುಗಜವ ವಿ। ಭಾಡಿಸಿದನಿನ್ನೂರನಡಹಾ। ಯ್ದೋಡೆ [illegible] ರಾನೆಭೀಮನ ಗದೆಯ ಗಾಯದಲಿ ॥ ಝಾಡಿಗೆಡೆದವು ಮೂರುಮಗ್ಗುಲ । ನೀಡಿದವು ನಾನೂರು [illegible] । ಕೇಡುಗೊಂಡವು ನೂರು ಭೀಮನ ಗದೆಯ ಹೊಯ್ಲಿನಲಿ ॥ ೫೮ ॥ ಧರಣಿಪತಿ ಕೇಳ್ಭೀಮಸೇನನ । ಧರಧುರದ ದ ಕ್ಷಾಳದಲಿ ಸ। ಮ್ಮರಸ ನಿಂದನು ಕಾದಿದನು ನೂರಾನೆಯಲಿ ಮಲೆತು ॥ ಸರಳಸಾರದಲನಿಲಜನ ರಥ। ತುರಗವನು ಸಾರಥಿಯನಾತನ । ಭರವಸವ ನಿಲಿಸಿದನು ನಿಮಿಷಾರ್ಧದಲಿ ಕುರುರಾಯ ॥ ೫೯ ॥ ಒ ಡೆದು ರಥವನು ಧರೆಗೆ ಧುಮ್ಮಿ । ಕ್ಕಿದನು ಕೌರವರಾಯ ರಥವೇ। ರಿದೆಯಲಾ ಕಲಿಯಾಗು ಪಾಲಿಸದಿ ರುಪಟಾಯನವ ॥ ಕದನದಲಿ ರೌದ್ರಾಹವದ ಕೋ । ವಿದನಲೇ ಕೊಳ್ಳೆನುತ ಕೆಂಗಳ । ಕಿದಿರಿದನು ಕಲಿಕೋದರಂಬಿನ ಸರಿಯ ಸೃಂಸುತ ॥ ೬೦ ॥ ಏನಹೇಳುವೆನವನಿಪನ ಮುಡು।ದಾನೆ ಮುರಿದುದು ಭೀ ಮಸೇನನು।ವೃಸತೇಯನ ಕಂಗಳೋ ಕಾಳೋರಗನ ದಳವೋ ॥ ಮಾನವಿಧಿ ಮುರಿವಡೆದನ್ಯೈ । ಕಾ ನುಬಂಧದ ಬೇಗುದಿಯ ದು । ಮ್ಮಾನ ದಳವೇರಿದುದು ಹಾರಿತು ವಾಸಿ ಕುರುಪತಿಯ ॥ ೬೧ ॥

ನೂರುಗಜವಕ್ಕಾಡಲವನಿಪ । ನೇರಿದನು ವಾರುವವನೆಡದಲಿ । ಜಾರಿದನು ಸೂರಿಯಲಿ ದುವ್ವಾಳಿಸಿ ತುರಂಗವನು ॥ ಆರುಸಾವಿರಕುದುರೆ ರಥವಿ । ನ್ನೂರು ಗಜಘಟೆ ನೂರು ಮೂವ । ತ್ತಾರುಸಾವಿರಪಾಯದಳದಲಿ ಬಂದನಾಶಕುನಿ ॥೬೨॥ ಶಕುನಿ ಕಂಡನು ಕೌರವೇಂದ್ರನ । ನಕಟ ನೀನೇಕಾಂಗದಲಿ ಬಾ । ಳಿಕೆಗೆ ಬಂದೈ ಗರುವ ಗುರುಸುತಭೋಜಗೌತಮರು ॥ ಸಕಲಬಲವೇನಾಯ್ತು ಸಂಶಪ್ತಕರು ನಿನ್ನಯ ಮೂಲಬಲವಿದೆ । ವಿಕಳನಾಗದಿರೆಂದು ಸಂತೈಸಿದನು ಕುರುಪತಿಯ ॥ ೬೩ ॥ ದಳಪತಿಯು ಪವಡಿಸಿದನರಸನ । ಸುಳಿವು ಸಿಲುಕಿತು ಭಯದಬಲೆಯಲಿ । ಮೊಳಗುತಿದೆ ನಿಸ್ಸಾಳ ಸುವಮ್ಮಾನದಲಿ ರಿಪುಭಟರ ॥ ಉಳಿದರೋ ಗುರುಸೂನುಕೃಪರೇ । ನಳಿದರೋ ಪಾಳೆಯದೊಳಗೆ ರಥ । ವಿಳಿದರೋ ತಾವೆನುತ ಮಿಗೆ ಚಿಂತಿಸಿತು ಕುರುಸೇನೆ ॥೬೪॥ ಕೂಡೆ ಹರಿಹಂಚಾದಸುಭಟರು । ಕೂಡಿಕೊಂಡರು ನೊಂದು ನಸಿದವ ॥ ರೋಡಿದವರೊಗ್ಗಾಯ್ತು ಕುರುರಾಯನ ಪರೋಕ್ಷದಲಿ ॥ ನೋಡಲಹುದಾಹವದೊಳಗೆ ಕೈ । ಮಾಡಿದವರಮರಾಂಗನೆಯರೊಡ । ಗೂಡುವುದು ಮತವೆಂದು ಕವಿದುದು ಮತ್ತೆ ಕುರುಸೇನೆ ॥೬೫॥ ಬಿಡದಲಾ ಕುರುಸೇನೆ ಹಕ್ಕಲು ಗಡಿಯ ಭಟರೊಗ್ಗಾಯ್ತಲಾ ನೃಪ । ಮಡಿದನೋ ಬಳಲಿದನೊ ಮಿಗೆ ಪೂರಾಯಗಾಯದಲಿ ॥ ತಡೆಯದೀಕ್ಷಿಸೆನುತ್ತೆ ಕೌರವ । ರೊಡೆಯನಾವೆಡೆ ನೋಡುನೋಡೆಂ । ದೊಡನೊಡನೆ ಪವಮಾನಸುತನರಸಿದನು ಕುರುಪತಿಯ ॥೬೬॥ ಅರಸ ಕೇಳೈ ಕೌರವೇಂದ್ರನ । ನರಸುತರ್ಜುನಭೀಮಸಾತ್ಯಕಿ। ಧರಣಿಪತಿಸಹದೇವನಕುಲರು ಕೂಡೆ ಕಳನೊಳಗೆ॥ ತಿರುಗಿದರು ಬಳಿಕಿತ್ತಲಾಮೋ । ಹರವ ಧೃಷ್ಟದ್ಯುಮ್ನ ಸೃಂಜಯ । ರೊರಸಿದರು ನಿಶ್ಶೇಷಕೌರವನೃಪ ಚತುರ್ಬಲವ ॥ ೬೭ ॥ ಧರಣಿಪತಿ ಕೇಳಿನ್ನು ಮೇಲಣ । ಧುರದವೃತ್ತಾಂತವನು ಕುರುಪತಿ। ಯಿರವನರಿಯೆನು ಕಂಡುಬಹೆನೆನೆ ನೇಮವೇ ಯೆನಗೆ ॥ ಗುರುಸುತನು ಕೃಪಭೋಜಶಕುನಿಗ । ಳರಸನನು ಪರಿವೇಷ್ಟಿಸಿದರೆಂ । ದರಿದು ಬಹೆನೆನೆ ಕಳುಹಿದನು ಧೃತರಾಷ್ಟ್ರ ಸಂಜಯನ॥ ... ॥೬೮॥

ಅಂತು ಸಂಧಿ ೧ ಕ್ಕೆ ಪದ ೬೮ ಕ್ಕಂ ಮಂಗಳಮಸ್ತು.

ಎರಡನೆಯ ಸಂಧಿ.

॥ ಸೂಚನೆ ॥ ಸಕಲಬಲ ನುಗ್ಗಾಯ್ತುಸಂಶ । ಪ್ತಕರು ಮಡಿದರು ಪಾರ್ಥಶರದಲಿ । ಶಕುನಿಯನು ಸೀಳಿದನು ಸಂಗ್ರಾಮದಲಿ ಸಹದೇವ ॥

॥ ಪದ ॥ ಕೇಳು ಜನಮೇಜಯಧರಿತ್ರೀ । ಪಾಲ ಸಂಜಯ ಬಂದು ಕುರುಭೂ । ಪಾಲಕನನರಸಿದನು ಸಂಗರರಂಗಭೂಮಿಯಲಿ ॥ ಮೇಲುಸುಯ್ದಾನದ ತುರಂಗವ । ಜಾಲಸಹಿತಗಲದಲಿ ಕುರುಭೂ । ಪಾಲನಾವೆಡೆಯೆನುತ ಬೆಸಗೊಳುತಲ್ಲಿಗೈತಂದ ॥ ೧ ॥ ವಂದಿಗಳ ನಿಸ್ಸಾಳಬಡಿಕರ । ಮಂದಿ ಹಡಪಿಗಬಾಹಿಸೂತರ । ಸಂದಣಿಗಳಂ ನೂಕಿ ಹಯಗಜಸಂಪಿದಾಯಕರು ॥ ನಿಂದುದಾಸಂಖ್ಯಾತಸನ್ನಿಟರ । ನೆಂದು ಸಂಜಯ ಕರೆದು ಕೇಳಿದ । ನಿಂದುಕುಲಸಂಭವನ ಕಂಡಿರೆ ಕೌರವೇಶ್ವರನ ॥ ೨ ॥ ಕೂಡೆ

ಸಂಜಯನರಸಿವನು ಪಯ । ಪಾಡಿನಲಿ ನಾನೂರುಕುದುರೆಯ । ಕೂಡಿ ಕೌರವನೃಪನ ಚಲಿಸಿದ ಕಳನ ಚೌಕದಲಿ ॥ ನೋಡುತಿರೆ ಸಾತ್ಯಕಿ ಚತುರ್ಬಲ । ಗೂಡಿ ಕವಿದನು ಹಯಬಲವ ಹುಡಿ । ಮಾಡಿದನು ನಾನೂರ ಕೊಂದನು ಸರಳ ಸಾರದಲಿ ॥ ೩ ॥ ಹಿಡಿದು ಸಂಜಯನನು ವಿಭಾಡಿಸಿ । ಕೆಡಹಿದನು ಬಲು ರಾವುತರನವ । ಗಡವ ಕೇಳಿದು ದ್ರೋಣಸುತಕೃತವರ್ಮಗೌತಮರು ॥ ಘಡಘಡೆಲವೋ ಸಂಜಯನ ಬಿಡು । ಬಿಡು ಮದೀಯಮಹಾಶರಕೆ ತಲೆ । ಗೊಡುವೊಡಿದಿರಾಗೆನುತ ತರುಬಿದರಿವರು ಸಾತ್ಯಕಿಯ ॥೪॥ ದ್ರೋಣಸುತ ಕುರುಪತಿಯ ಕದನಕೆ । ಹೂಣಿಗರು ಕೃತವರ್ಮಕರು ನೆರೆ । ಬಾಣವಿದ್ಯೆಯ ಬೀರಿ ಬಿಡಿಸುವರಿವರು ಸಂಜಯನ ॥ ಕಾಣಬಹುದಂತಿರಲಿ ನಮಗೀ । ಕೇಣದಲಿ ಫಲವಿಲ್ಲ ಕೃಪಯೆ । ನ್ನಾಣೆನೀ ಮರಳೆಂದು ಸಾತ್ಯಕಿ ಸುರಿದನಂಬುಗಳ ॥ ೫ ॥ ಕೋಡ ಕೈಯಲಿ ತಿರುಗಿ ಕೃಪ ಕೈ । ಮಾಡಿದನು ಕೃತವರ್ಮನೆಸುಗೆಯ । ತೋಡುಬೀಡಿನ ಭರವ ಬಲ್ಲವರಾರು ಸಮರದಲಿ ॥ ನೋಡಲೀತನ ಗರುಡಿಯಲಿ ಶ್ರಮ । ಮಾಡಿದವರೇ ಮೂರುಜಗವ ವಿ । ಭಾಡಿಸುವಿರೆನೆ ಪೊಗಳ್ವರಾರೀದ್ರೋಣನಂದನನ ॥ ೬ ॥ ಎಚ್ಚನಶ್ವತ್ಥಾಮನಾ ಕೃಪ । ನೆಚ್ಚನಾ ಕೃತವರ್ಮಕನು ಕವಿ । ದೆಚ್ಚನೀ ಶರಜಾಲ ಜಡಿದವು ಕಿಡಿಯಗಡಣದಲಿ ॥ ಬೆಚ್ಚಿದನೆ ಬೆದರಿದನೆ ಕೈಕೊಂಡೆಚ್ಚ ಸಾತ್ಯಕಿ ರಿಪುಶರಾಳಿಯ । ಕೊಚ್ಚಿದನು ಕೊಡಹಿದನು ಭಂಗಿಸಿ ಸಲೆ ವಿಭಾಡಿಸಿದ ॥ ೭ ॥ ಎಲೆಲೆ ಸಾತ್ಯಕಿಯಾಹವದ ಭರ । ಬಲುಹೆನಲು ಸೃಂಜಯನು ಸೋಮಕ । ಬಲಶಿಖಂಡಿದ್ರುಪದನಂದನಪಾಂಡವಾತ್ಮಜರು ॥ ಚಲಪತಾಕೆಯ ವಿವಿಧವಾದ್ಯದ । ಕಳಕಳದ ಕೈದುಗಳ ಹೊಳಹಿನ । ತಿಳುಪ ಝಳಪಿಸೆ ಜೋಡಿಸಿತು ಸಾತ್ಯಕಿಯ ಬಳಸಿನಲಿ ॥ ೮ ॥ ಹರಿಯದಿಲ್ಲಿಯ ಬವರ ರಾಯನ । ನರಸಬೇಹುದು ಕುರುಪತಿಯ ಮುಂ । ದಿರಿದು ಮೆರವುದು ಕೀರ್ತಿ ನಿಷ್ಫಲವಿಲ್ಲಿ ತರರಚನೆ ॥ ಅರಿವೆವೀ ಸಾತ್ಯಕಿಯ ಸಮರದ । ಮರುಕವನು ಬಳಿಕೆನುತ ಕೌರವ । ನರಸುತತ್ತಲು ತಿರುಗಿ ಕೃಪಕೃತವರ್ಮಗುರುಸುತರು ॥ ೯ ॥ ತೆರಳಿದರು ಗುರುನಂದನಾದಿಗ । ಳರಸನೃಪಾಲನ ಕಾಣೆನಾತನ । ನರಸಬೇಹುದು ಶಕುನಿದುರ್ಯೋಧನಸುಶರ್ಮಕರು ॥ ದೊರೆಗಳಿದು ಪರಿವೇಷದ ಪಸಂಹರಣವೇ ಕರ್ತವ್ಯವಿದು ದುಸ್ತರಣಶ್ರಮಫಲ ಸಫಲವೆಂದನು ಧರ್ಮಸುತ ನಗುತ ॥ ೧೦ ॥ ಮಸಗಿದುದು ಪರಿವಾರ ಕೌರವ । ವಸುಮತೀಶ್ವರನಿರಿಕೆಯಲಿ ಸಲೆ । ಪಸರಿಸಿತು ಬಂದಿವರ ಕಾಡರು ಕಳನ ಮೂಲೆಯಲಿ ॥ ಮಿಸುಪ ಸಿಂಧದ ಸೀಗುರಿಯ ಝಳ । ಪಿಸುವೆಖಡ್ಗಸಿತಾತಪತ್ರ । ಪ್ರಸರದಲಿ ಹೊಳೆಹೊಳೆವತಕುನಿಯ ಬಹಳಮೋಹರವ ॥ ೧೧ ॥ ಆದೆ ಸುಯೋಧನನೊಡ್ಡನಸುದೂರದಲಿ ಕವಿಕವಿಯೆನುತ ಥಾಳಿ । ಟ್ಟದು ಚತುರ್ಬಲ ಭೀಮಪಾರ್ಥರ ರಥದಸೋಹಿನಲಿ ॥ ಒದವಿ ಹಳಚಿತು ಭಟರು ಭುಜಗ । ರ್ವದಲಿ ಗುರುವರ ಗಾಢಶೌರ್ಯದ । ಮದಕೆ ಮಡಮುರಿಯಾಯ್ತು ಸಿಲುಕಿತು ಮಾನಮೋನದಲಿ ॥ ೧೨ ॥ ಹೆಗಲ ಹಿರಿಯುಬ್ಬಣದ ಕೈತಳ । ಮಗುಚಲಮ್ಮದು ವಾಘೆಯಲಿ ಕೈ । ಬಿಗಿದು ಡಂಕಣೆತೊಳಕಿನಲಿ ಮರನಾದವಂಘ್ರಿಗಳು ॥ ಬಗೆಯಮದ ಮಸುಳಿಸಿತು ಬಳಕೆಯ । ಬೆಗಡು ಹುದುವನೆಯಾಯ್ತು ಕೈನಂ । ಬುಗೆಗೆ ಮರಳಿದರೊಬ್ಬರೊಬ್ಬರು ರಾಯರಾವುತರು ॥ ೧೩ ॥ ಬಂದುದಾ ಮೋಹರ ಸಗಾಢದಿ । ನಿಂದುದೀಬಲ ಸೂಠಿಯಲಿ ಹಯ । ವೃಂದ ಬಿಟ್ಟವು ತೂಳಿದವು ಹೇರಾನೆ ಸರಿಸವಳಿ ॥ ಸೊಂದುದಾಚೆಯ ಭಟರು ಗಾಯದ । ಲೊಂದಿತೀಚೆಯ ಭಟರು ವ್ಯಥೆಯದ । ಮಂದಿ ಬಿದ್ದು

ದು ಚೂಣಿಯೊದ್ದುದು ಕಳನ ಚೌಕದಲಿ ॥ ೧೪ ॥ ಜಾರಿದನೆ ಕುರುಪತಿಯಕಟ ವೈ । ದೋರನೇ ನ
ಮಗೂರುಗಳ ಕೊಡ। ಲಾರದೀ(ಕಾಳಗವ ಕೊಟ್ಟನು ಮತ್ತೆ ಕೊಂಡನಲಾ॥ತೋರಿಸನೆ ಖಂಡೆಯದಸಿ
ರಿ ವೈ। ದೋರಹೇಳಾ ಕರೆಯೆನುತ ತಲೆ।ದೋರಿದರು ಭೀಮಾರ್ಜುನರು ಸೌಬಲರ ಥಟ್ಟಿನಲಿ॥೧೫॥
ಫಡಫಡೆಲವೋ ಪಾರ್ಥಕುರುಪತಿ । ಯಡಗುವನೆ ನಿನ್ನಡಗತರಿದುಣ । ಬಡಿಸನೇ ಭೇತಾಳರಿಗೆ ವೈತಾ
ಳಿಕನೆ ನೀನು ॥ ಗಡಬಡಿಸಿ ಪರರುನ್ನತಿಯ ಕೆಡೆ । ನುಡಿದು ಫಲವಿನ್ನೇನೆನುತ ನರ। ತಡೆದನಂದು ಸು
ಶರ್ಮಸಂಶಸಪ್ತಕರ ದಳಸಹಿತ ॥ ೧೬ ॥ ಮುತ್ತಿದವು ರಥವೇಳನೂರರು। ವತ್ತುಹಯುವೈನೂರುಸಾ
ವಿರ । ಮತ್ತಗಜವಿಪ್ಪತ್ತುಸಾವಿರ ಪಾಯದಳಸಹಿತ ॥ ತೆತ್ತಿಸಿದವಂಬುರವಣಿಸಿ ದೂ । ಹತ್ತಿಹೊಳೆ
ದವು ಸುರಗಿ ಝುಳಪಿಸಿ । ಮತ್ತೆಬಲುಗೈದುಗಳು ರುಚಿ ವೇಢೈಸಿತರ್ಜುನನ ॥ ೧೭ ॥ ಶಕುನಿಸಹದೇ
ವನನುಲೂಕನು । ನಕುಲನನು ಕುರುರಾಯನನುಜನು । ಚಕಿತಚಾಪನ ಕೆಣಕಿದನು ಪವಮಾನನಂದನ
ನ ॥ ಅಕಟ ಫಲುಗುಣಯೆನುತ ಸಂಶ । ಪ್ತಕರು ಕವಿದರು ನೂರುಗಜದಲಿ । ಸಕಲಬಲಕೊತ್ತಾಗಿ
ನಿಂದನು ಕೌರವರರಾಯ ॥ ೧೮ ॥ ಏರಿದರು ಸಂಶಪ್ತಕರು ಕೈ । ದೋರಿದರು ಫಲುಗುಣನ ಜೋ
ಡಿನ।ಜೋರು ತಳಿತುದು ನೊಂದುದಡಿಗಡಿಗಾತನಶ್ವಚಯ ॥ ನೂರುಶರದಲಿ ಕಡಿದ ವಿಶಿಖವ । ನೂ
ರರಲಿ ಬಳಿಸರಳ ಬಳಿಶರ । ಮೂರುಸಾವಿರದಿಂದ ಕಡಿದನು ಪಾರ್ಥನತಿಬಲರ ॥ ೧೯ ॥ ಕಡಿವಡೆದವೇ
ಳ್ನೂರುರಥ ಮುರಿ।ವಡದವೈಷ್ಟೂರಶ್ವಚಯ ಮುಂ । ಗೆಡೆದವಂದ್ಯೆನೂರುಗಜವಿಪ್ಪತ್ತುಸಾವಿರದ ॥ ಕ
ಡುಗಲಿಗಳುರುಳಿತು ತ್ರಿಗರ್ತರ।ಪಡೆ ಕುರುಕ್ಷೇತ್ರದಲಿ ಪಾರ್ಥನ । ಬಿಡದೆ ಬಳಲಿಸಿದನಿಬರಳಿದುದು ಕೇ
ಳು ಕ್ಷಿತಿಪಾಲ ॥ ೨೦ ॥ ದೊರೆಗಳವರಲಿ ಸತ್ಯಧರ್ಮನು। ವರಸುಶರ್ಮನ ದ್ರೋಣಸಮರದೊ । ಳೆರ
ಡನೆಯದಿವಸದಲಿ ರಚಿಸಿದನಗ್ನಿಸಾಕ್ಷಿಕವ ॥ ಧುರದಶಪಥದಲರ್ಜುನನ ಸಂ।ಗರಕೆ ಬೆದರಿಸಿದರು ಪರಾಕ್ರ
ಮ । ಪರಿಣತರು ಪವಡಿಸಿದರಿಂದುಧನಂಜಯಾಸ್ತ್ರದಲಿ ॥ ೨೧ ॥ ತರಿದನಗ್ನದಸತ್ಯಧರ್ಮನ । ಧುರ
ವ ಸಂತೈಸುವತ್ರಿಗರ್ತರ। ದೊರೆಸುಶರ್ಮನನವನ ಸಹಭವಗೋತ್ರಬಾಂಧವರ ॥ ಬರಸಿದನು ಕುರುರಾ
ಯನಾವೆಡೆ । ಬರಲಿ ತನ್ನಾಪ್ತರಿಗೆ ಕೊಟ್ಟನು । ಹರುವನಿನ್ನಾಹವವಿಳಂಬವ ಮಾಡಬೇಡೆಂದ॥೨೨॥
ಇತ್ತ ಭೀಮನಕೂಡೆ ನೂರರು। ವತ್ತುಗಜಸಹಿತರಿಭಟನು ರಥ । ದತ್ತನಿದಿರಾದನು ಸುಶರ್ಮಕನಂಥ
ನೃಪಸೂನು ॥ ಹೆತ್ತಳವ್ವೆವಿರೋಧಿಸೇನೆಯ । ಮತ್ತಗಜಘಟಿಗೋಸುಗೆರವಿವು । ಮತ್ತೆ ದೊರಕವು
ಕೊಂದರೆಂದುಮ್ಮಳಿಸಿದನು ಭೀಮ ॥ ೨೩ ॥ ಸೊಕ್ಕಿದಾನೆಯಕೈಯ ಕದಳಿಯ । ಸಿಕ್ಕ ಬಿಡಿಸುವರಾರು
ಪವನಜ । ನೆಕ್ಕತುಳದಲಿ ದಂತಿವನವನು ಮುರಿದನುರವಣಿಸಿ ॥ ಇಕ್ಕಡಿಯ ಬಸುರುಟ್ಟಿಗಳೆವರ । ಸು
ಕ್ಕುಗಳ ನಾಟಕದವೊಲು ಕೈ । ಯಿಕ್ಕಿದಾನೆಯ ಹಿಂಡು ಹರಿದುದು ನಿಮಿಷಮಾತ್ರದಲಿ ॥ ೨೪ ॥ ಕೆ
ಡಹಿ ದುರ್ಯೋಧನನ ತಮ್ಮನ। ನಡಗುದರಿಮಾಡಿದನುಲೂಕನ । ಕಡಿದು ಬಿಸುಟನು ನಕುಲನಿಪ್ಪತ್ತೈ
ದುಬಾಣವಲಿ ॥ ತುಡುಕಿದನು ಸಹದೇವನಂಬಿನ। ಗಡಣದಲಿ ಸೌಬಲನಸೇನೆಯ । ಕೆಡಲ ಮೊಗೆದನು
ನಿಮಿಷದಲಿ ನರನಾಥಕೇಳೆಂದ ॥ ೨೫ ॥ ಎಲವೊ ಕಪಟದ್ಯೂತಬಂಧದೊ । ಳೆಳಲಿಸಿದೆಯೋ ಪಾಪಿ
ಕೌರವ । ಕುಲದ ತಲೆಚೆಂಡಾಡಿದವ ನೀನೋ ಮದಗ್ರಜನೋ ॥ ಸಿಲುಕಿದೆಯಲಾ ನಮ್ಮಬಾಣದ।ಬಲೆ
ಗೆ ನಿನ್ನನು ಕಾವನಾವವ। ನೆಲೆಕುಠಾರ ಯೆನುತ ನುಡಿದನು ನಗುತ ಸಹದೇವ ॥ ೨೬ ॥ ಮಾತುಳನ

ಲೆಸಹದೇವ ನಿನ್ನಕ । ದರ್ಪದಲಿ ಫಲವಿಲ್ಲ ನೀಕಲ । ಹಾರ್ಥಿಯೆ ದಿಟ ತೋರಿಸಾದೊಡೆ ಬಾಹುವಿ
ಕ್ರಮವ ॥ ಪಾರ್ಥಭೀಮರ ಮರೆಯಲಿದ್ದ ನಿ । ರರ್ಥಕರನಿರಿದಿರಿದು ಜಯವ ಸ। ಮರ್ಥಿಸುವೆ ಫಡ
ಹೋಗೆನುತ ತೆಗೆದೆಚ್ಚನಾಶಕುನಿ ॥ ೨೭ ॥ ಮರುಗದಿರು ನಿನ್ನುಭಯಪಕ್ಷವ। ತರಿದು ತುಂಡವ ಸೀಳು
ವೆನು ನಾ । ವರೆವೆನೇ ಭವದೀಯರಚಿತಾಕಾರವಿಭ್ರಮವ ॥ ನೆರೆಪತತ್ರಿಗಳಿವೆ ಪತತ್ರಿಯ । ನುರುವೆಸ
ರು ನಿಮಗಿವರ ಕೇಳಿಗೆ । ತೆರಪುಗೊಡು ನೀನೆನುತ ಮಾದ್ರೀತನುಜ ಮಗುಳೆಚ್ಚ ॥ ೨೮ ॥ ಎಸಲು ಸ
ಹದೇವಾಸ್ತ್ರವನು ಖಂ । ಡಿಸಿ ಶರೌಘದಿನಹಿತವೀರನ। ಮುಸುಕಿದನು ಮೊನೆಗಣೆಗಳೀಡಿರಿದವು ರಥಾ
ಗ್ರದಲಿ ॥ ಕುಸುರಿದರಿದೊಡೆ ರಥಿಕಬಾಣ । ಪ್ರಸರವನು ಭಯರಸದಲದ್ದಿದ। ನುಸುರ ತೆಗೆಬಗೆಮಾಡಿ
ದನು ಸಹದೇವ ಸೌಬಲನ ॥ ೨೯ ॥ ತೇರು ಹುಡಿಹುಡಿಯಾಗೆ ಹೊಯ್ದನು । ವಾರುವನಮೇಲುಗಿದ
ಡಾಯುಧ । ಲಾರಿಬಿದ್ದನು ಸೂಠಿಯಲಿ ಸಹದೇವನಭಿಮುಖಕೆ ॥ ವೀರನಹೆಯೋ ಶಕುನಿ ಜೂಜಿನ ।
ಚೋರವಿದ್ಯೆಯಬಿಟ್ಟೆಲಾ ಜ । ಝ್ಝಾರನಹೆ ಮರುಳೆ ಪೂತೆನುತ ಖಂಡಿಸಿದನಾಹಯವ ॥ ೩೦ ॥ ಬ
ಳಿಕ ಕಾಲಾಳಾಗಿ ಖಡುಗವ । ಝಳಪಿಸುತ ಬರೆ ಶಕ್ತಿಯಲಿ ಕೈ । ಚಳಕದಲಿ ಸಹದೇವನಿಟ್ಟನು ಸುಬ
ಲನಂದನನ ॥ ಖಳನೆದೆಯನೊದೆದಪರಭಾಗಕೆ। ನಿಲುಕಿತದು ಗಾಂಧಾರಬಲ ಕಳ।ವಳಿಸೆ ಸುಳಿದನು ಶಕು
ನಿ ಸುರತರುಣಿಯರ ತೋಳಿನಲಿ ॥ ೩೧ ॥ ಕವಿದುದಾಪರಿವಾರ ವಡಬನ । ತಿವಿವತುಂಬಿಗಳಂತೆ ಶಕುನಿ
ಯ । ಭವರಿಗಳು ಮುಂಡಿಸಿತು ಸಹದೇವನ ರಥಾಗ್ರದಲಿ ॥ ತೆವರಿಸಿದನನಿಬರ ಚತುರ್ಬಲ । ನಿವಹವ
ನು ನಿಮಿಷಾರ್ಧದಲಿ ಸಂ। ತವಿಸಿದನು ಸಹದೇವ ಕೊಂದನು ಸೌಬಲನ ಬಲವ ॥ ೩೨ ॥ ಹರಿಬದಲಿ
ಹೊಕ್ಕೆರಡುಸಾವಿರ । ತುರಗವನು ಸಲೆ ನೂರುಮದಸಿಂ। ಧುರಕೆ ನಿಧನವದಾಯ್ತು ಪಯದಳವೆಂಟು
ಸಾವಿರದ ॥ ಬರೆಹ ತೊಡೆದುದು ನೂರುರಥ ಯಮ । ಪುರಿಗೆ ಲಕ್ಕಾಡಿತು ವಿಡಂಬದ । ಕುರುಬಲಾಂ
ಬುಧಿ ಕೊಡೆಬರೆತುದು ನೃಪತಿ ಕೇಳೆಂದ ॥ ೩೩ ॥ ಓಡಿದವರಲ್ಲಲ್ಲಿ ಧೈರ್ಯವ । ಮಾಡಿಹರಿಹಂಚಾದ
ಸುಭಟರು । ಕೂಡಿಕೊಂಡರು ನೂರುಮದದಾನೆಯಲಿ ಕುರುಪತಿಯ ॥ ಓಡಲೇಕಿನ್ನೊಂದುಹಲಗೆ
ಯ । ಮಾಡಿ ನೋಡುವೆನೆಂಬವೊಲು ಕೈ । ಮಾಡಿದನು ಕುರುರಾಯನಾಸಹದೇವನಿದಿರಿನಲಿ ॥ ೩೪ ॥
ಧರಣಿಪತಿ ಧಟ್ಟಣೆಗೆ ನಿಲ್ಲದೆ । ತೆರಳಿದನು ಸಹದೇವನಾತನ । ಹಿರಿಯನಡ್ಡೈಸಿದೊಡೆ ತೊಟ್ಟನುಕೋ
ಲ ಬಿಲ್ಲಿನಲಿ ॥ ಶರಹತಿಗೆ ಸೆಡೆದಾನಕುಲ ಪೈ । ಸರಿಸಿದನು ನೂರಾನೆಯಲಿ ಡಾ । ವರಿಸಿದನು ಧರ್ಮ
ಜನ ದಳದಲಿ ಧೀರಕುರುರಾಯ ॥ ೩೫ ॥ ಎಲೆನಪುಂಸಕ ಧರ್ಮಸುತ ಫಡ । ತೊಲಗು ಕರೆಯಾ ನಿ
ನ್ನ ಭೀಮನ । ಬಲುಹು ಬಲುಹರ್ಜುನನ । ವಿಕ್ರಮ ವಿಕ್ರಮವು ನಿನಗೆ ॥ ಮಲೆತು ಮರೆಯಾ ಕ್ಷತ್ರಧ
ರ್ಮವೆ। ನಳುಕದಿರು ನಿಲ್ಲೆನುತ ಕವಿದಿ । ಟ್ಟಳಿಸಿ ಬರಲೂಳಿಗದ ಬೊಬ್ಬೆಯ ಕೇಳಿವನು ಭೀಮ॥೩೬॥
ತೂಳಿ ತುಳಿದವು ನೂರುಗಜ ಭೂ । ಪಾಲಕನ ನೆರೆ ಕಡಿತದಡವಿಗೆ ಬಾಳೆಕಮ್ಮರನಾಯ್ತುಗಡ ಫಡ
ನೂಕುನೂಕೆನುತ ॥ ಆಲಿಕುಡಿಯಿಡೆ ಕೋಣೆವಪಿಸೆ ಕೆ । ರಳಿವೆದನೆದ ಬಿಗಿದಹುಬ್ಬಿನ । ಮೇಲುಗೋ
ಪದ ಭೀಮ ಟಂಪನು ಬಿಟ್ಟಸೂಠಿಯಲಿ ॥ ೩೭ ॥ ನೆತ್ತಿಗುಳಿಯೊಳಗೂರಿದಂಕುಶ। ಪೆತ್ತಿಪೊಡೆ ತಲೆ
ಗೊಡಹಿದವು ಬೆರು । ಳೊತ್ತಿಗಿವಿಗಳ ಡವಕಿಸ್ತುವಡಾವರದ ಡಬ್ಬುಕವ ॥ ಕುತ್ತುವಾರೆಯ ಬಗೆಯ
ದಾನೆಗ। ಳತ್ತ ಮುರಿದವು ಸಿಂಹನಾದಕೆ।ಮತ್ತಗಜ ಘುಳುಘಿರುಹಿದವು ದಳವುಳಿಸಿದನು ಭೀಮ ॥೩೮॥

ಮೆಟ್ಟಿದನು ಬಲವಂಕದಲಿ ಹೊರ । ಕಟ್ಟಿದನು ವಾಮದ ಗಜಂಗಳ । ನಿಟ್ಟನೊಂದರೊಳೊಂದನಪ್ಪ ಳಿಸಿದನು ಪರಿಘದಲಿ ॥ ಘಟ್ಟಿಸಿದನೊಗ್ಗಿನ ಗಜಂಗಳ । ಥಟ್ಟುಗೆಡಹಿದನವುವು ಹೆಣ ಸಾ । ಲಿಟ್ಟುದೈ ಕುರುನೃಪನ ನೂರಾನೆಗಳು ನಿಮಿಷದಲಿ ॥ ೪೯ ॥ ಉಳಿದವಿದರೊಳು ಛತ್ರಚಮರಾ । ವಳಿಯವರು ಹಡಪಿದರು ಬಿರುದಾ । ವಳಿಯ ಪಾಠಕವಾದ್ಯವಾದಕಮಲ್ಲಗಾಯಕರು ॥ ಸಲಿಲಭಕ್ಷವಿಧಾನಗಜಹಯ । ಕುಳದರಕ್ಷಾವ್ರಜಚಿಕಿತ್ಸಕ । ರುಳಿದರಥಕಾರರು ಧನುರ್ಧರಕರರಸಂಖ್ಯಾತ ॥ ೫೦ ॥ ಕುದುರೆರಾವ್ತರು ಜೋದಸಂತತಿ । ಮದಗಜವ್ರಜ ರಥಿರಥಾವಳಿ । ಪದಚರರು ಚತುರಂಗಬಲವೊಂದುಳಿಯದಿದರೊಳಗೆ ॥ ಪದದಲೇ ಕುರುರಾಯ ನೆರೆ ಜಾ । ರಿದನು ಕುಂತೀಸುತರು ಬಹಳಾ । ಭ್ಯುದಯರಾದರು ವೀರನಾರಾಯಣನ ಕರುಣದಲಿ ॥ ... ... ॥ ೫೧ ॥

ಅಂತು ಸಂಧಿ ೨ಕ್ಕಂ ಪದ ೧೦೯ಕ್ಕಂ ಮಂಗಳಮಸ್ತು.

ಮೂ ರ ನೆ ಯ ಸ ೦ ಧಿ .

॥ಸೂಚನೆ॥ ರಾಯದಳವದು ಸವೆಯೆ ಸಮರದ । ನಾಯಕರು ನೆರೆಮುರಿಯಲಾದ್ವೈ । ಪಾಯನಸರೋವರವ ಹೊಕ್ಕನು ಕೌರವರರಾಯ

॥ಪದ॥ ಕೇಳು ಜನಮೇಜಯಧರಿತ್ರೀ । ಪಾಲ ಕುರುಪತಿ ಹೆಗಲ ಗದೆಯಲಿ । ಕಾಲುನಡೆಯಲಿ ಹಾಯ್ದನೇಕಾಂಗದಲಿ ಕಳನೊಳಗೆ ॥ ಆಳ ಕಾಣೆನು ಛತ್ರಚಮರದ । ವೀಳೆಯದ ವಿಸ್ತಾರವಿಭವವೆ । ಬೀಳುಕೊಟ್ಟನು ನಡೆದನಿಂದ್ರದಿಶಾಭಿಮುಖವಾಗಿ ॥೧॥ ಅಕಟ ನಮ್ಮಯ ಪೂರ್ವರಾಜ । ಪ್ರಕಟಕೀವಿಧಿಯಾಯ್ತಲಾ ಕಂ । ಟಕನಲಾ ಧರ್ಮಪ್ರಭಾವಕೆ ಕೌರವೇಶ್ವರನು ॥ ಶಕುನಿಮತವಿಷಬೀಜವೇ ಬಾ । ಧಕವದಂತಿರಲಾಯುಧಿಷ್ಠಿರ । ಸಕಲಬಲಪರಿಶೇಷವೇನೆಂದರಸ ಬೆಸಗೊಂಡ ॥೨॥ ಧರಣಿಪತಿ ಕೇಳ್ದರ್ಮಜನ ಮೋ । ಹರದೊಳುಳಿದುದು ತೇರು ಸಾವಿರ । ವೆರಡುಗಜವೇಳ್ನೂರು ಮಿಕ್ಕುದು ಲಕ್ಷಪಾಯದಳ ॥ ತುರಗಸಾವಿರವೇಳು ಸಾತ್ಯಕಿ । ವರಯುಧಾಮನ್ಯೂತ್ತಮೌಂಜಸ । ರುರುಶಿಖಂಡಿದ್ರುಪದಸೂನುದ್ರೌಪದೀಸುತರು ॥೩॥ ಆಸುಯೋಧನಸೇನೆಯಲಿ ಧರ । ಣೀಶಕೃಪಕೃತವರ್ಮಗುರುಸುತ । ರೈಸುಬಲದಲಿ ನಾಲ್ವರುಳಿದರು ಹೇಳಲೇನದನು ॥ ಏಸುಬಹಳೈಶ್ವರ್ಯವಿದ್ದೇ । ನೇಸುಭಟರೆನಿತಗ್ಗಳಿಯರಿ । ದ್ದೇಸರಲಿ ಫಲವೇನು ದೈವವಿಹೀನರವರೆಂದ ॥೪॥ ಇತ್ತಲೀಸಂಜಯನ ತಂದುದು । ಮೃತ್ಯುದೃಷ್ಟದ್ಯುಮ್ನನೀತನ । ಕುತ್ತಿ ಕೆಡಹಿದರಾಗದೇ ಕುರುಡಂಗೆ ರಣಕಥೆಯ ॥ ಬಿತ್ತರಿಸಿ ಹೇಳುವನು ಕೌರವ । ದತ್ತಲೀಕೆ ದುರಾತ್ಮಕನ ಕೈ । ವರ್ತಿಸಾ ಯಮನಗರಿಗೆಂದನು ಸಾತ್ಯಕಿಯ ಕರೆದು ॥೫॥ ಸೆಳೆದು ಕಡುಗವ ಸಂಜಯನ ಹೆಡ । ತಲೆಗೆ ಮೋಹಿದೊಡರಿವಸಮಯಕೆ । ಸುಳಿದನಗ್ಗದಬಾದರಾಯಣನವನ ಪುಣ್ಯದಲಿ ॥ ಎಲೆಲೆ ಸಾತ್ಯಕಿ ಲೇಸಮಾಡಿದೆ । ಖಳನೆ ಸಂಜಯ ನಮ್ಮಶಿಷ್ಯನ । ಕೊಲುವ

ವರೇ ವೀನೆನುತ ಕೊಂಡನು ಕೈಯುಡಾಯುಧವ ॥ ೬ ॥ ದೇವನಿಮ್ಮಯ ಶಿಷ್ಯನೇ ಪರಿ । ಭಾವಿಸೆನು ತಾಸರಿದೆನಾದೊಡೆ । ದೇವಕೀಸುತನಾಣೆ ಬಿಟ್ಟೆನು ಸಂಜಯನ ವಧೆಯ ॥ ನೀವು ಬಿಜಯಂಗೈಯ್ಯುವುದೆನೆಬದ । ರಾವಳಿಯ ಮಂದಿರಕೆ ಮರಳಿದ । ನಾವಿಗಡಮುನಿ ಖೇದಕಲುಷಿತ ಸಂಜಯನ ಬಿಡಿಸಿ ॥೭॥ ಕುರುಪತಿಯ ಸಂತೈಸಿ ನೀನಾ । ಸರಸನಯ್ಯಗೆ ಯಿನ್ನು ಹಳುಚುವ । ವರಗದಾಯುದ್ಧವೆನು ಪೇಳ್ವುದು ನುನ್ನಿನಂದದಲಿ ॥ ಅರಿತವಾಗಲಿ ನಿನಗೆನುತ ಮುನಿ । ಸರಿಯಲಿತ್ತಲು ಸಂಜಯನು ಪದ । ಸರಸಿರುಹಕಭಿನಮಿಸಿ ಬೀಳ್ಕೊಂಡನು ಮುನೀಶ್ವರನ ॥ ೮ ॥ ಅಸ ಕೇಳ್ಕೆ ಸಂಜಯನು ಬರಬರಲು ಕಂಡನು ದೂರದಲಿ ನಿರಿ । ಗರುಳ ಕಾಲ್ದೊಡಕುಗಳ ಖಂಡದ ಜಗಿಯಜಾರುಗಳ॥ ಕರಿಗಳೊಟ್ಟಿಲ ಸೇರಿಳಿದು ಪೆ ಸೈಸರಿಸಿ ಮಿದುಳಿನ ಜೋರು ಜೋಡಿನ । ತೊರಳೆಯಲಿ ದಡಧಡಿಸಿ ಜಾರುತ ಬೀಳುತೇಳುವನ ॥೯॥ ಎಡಹುದಲೆಗಳ ದಾಟಿ ರಕುತದ । ಮಡುವಿನೊಳು ಗದೆಯೂರಿ ನೆಲೆಗಳ । ಪಡೆದು ಕಂಪಿಸಿ ಕುಣಿವಮುಂಡವ ಗದೆಯೊಳಪ್ಪಳಿಸಿ ॥ ಅಡಿಗಡಿಗೆ ಹೇರಾನೆಗಳ ಹೇರೊಡಲ ಹತ್ತಿಳಿದೇರಿ ಝೊಂಪಿಸಿ । ಮಿಡುಕಿ ನಿಲುವನು ಬಳಲಿಯೂರ್ಧ್ವಶ್ವಾಸಲಹರಿಯಲಿ ॥೧೦॥ ಓಡದಿಹ ನರಿಹದ್ದು ಕಾಗೆಗೆ। ಕೂಡೆ ಗದೆಯನು ಬೀಸುವನು ಬಿಡೆ । ನೋಡುವನು ಹೆಣದಿನಿಹಿಗಳ ಹೇರಾಳರಕ್ಕಸರ॥ ಕೋಡುಕೈಗಳ ಮಿದುಳ ಬಾಯ್ಗಳ । ಬಾಡುಕರುಳಿನ ಚಿತ್ರಕೃತಿಯ ತಲೆ । ಯೋಡುಗಳನೀರಕ್ತಪಾನದ ಶಾಕಿನೀಜನವ ॥೧೧॥ ಕಂದಪಖ್ಖಲೆಗಳಲಿ ತೀವಿದ । ಮಂದರಕುತದ ತೊಯ್ದ ತಲೆಗಳ । ತಿಂದುಬಿಸುಡುವನೆಣನ ಕಾರುವಬಗೆಯ ಬಾಡಿಸುವ ॥ ಸಂದಣಿಸಿ ಹರಿದೇರಿ ಬಾಯ್ಗಳ । ಲೊಂದಿ ಬಾಯ್ಗಳ ಬಿಡುವವೃಂತನಿ । ವೃಂಪವನು ಕೊಂಡೋಸರಿಸುವನದೊಂದು ದೆಸೆಗಾಗಿ ॥೧೨॥ ಕುಣಿವಕರಿಗಳ ತಲೆಯ ಮುಡುಹಿನ । ಲಣೆದು ಹಜ್ಜೆಯನಿಡುವಭೂತದ । ಹೆಣನ ತಿನಿಹಿಗೆ ತವಕಿಸುವಭೇತಾಳಸಂತತಿಯ ॥ ರಣದೊಳಂಜಿಸುತಿರೆ ನರದಕಾ । ವಣದೊಳಗೆ ಕೈಯಾರೆ ಮಿಗೆ ಹಳೆ । ಹೆಣನ ಹೊಲಸಿಗೆ ಹೇಸಿ ಹರಿಹರಿದೆಡೆಗೆ ಬಳಲುವನ ॥೧೩॥ ಕಡಿದಹಕ್ಕರಿಕೆಗಳ ರೆಂಚೆಯ । ಕಡಿಗಳಲಿ ಕುಳ್ಳಿರ್ದಮೊಳಕಾ । ಲಡಿಯ ಗಾಢವ್ರಣದ ನೆಣವಸೆಗೇರಬಳಿಬಳಿದು ॥ ನಡೆದು ಹೆಣದೆರಹುಗಳೊಳಗೆ ಕಾ । ಲಿಡುತ ತೋಧಿಸಿ ಮುಂದೆ ಹಜ್ಜೆಯ । ನಿಡುತ ಪ್ರಸರವಾಗಿ ಮಾರ್ಗಶ್ರಮಕೆ ಬೆಮರುವನ ॥ ೧೪ ॥ ಕಡಿದ ಕೈದುಗಳೊಟ್ಟಿಲಲಿ ತನಿ । ಗೆಡದಗಾಲಿಯ ಹಾಯ್ಕಿ ಮೇಲಡಿ। ಯಿಡುತ ಹಜ್ಜೆಯ ಮಿದುಳ ಕೆಸರಲಿ ಛತ್ರಚಮರಗಳ ॥ ಅಡಸಿ ಹಜ್ಜೆಯನಿಡುತ ರಕ್ತದ । ಮಡುವನೆಡಬಲಕಿಕ್ಕಿ ಮೆಲ್ಲನೆ । ನಡೆದು ದೈವವ ಬೈದು ಬೈದಡಿಗಡಿಗೆ ಸುಯ್ವವನ ॥ ಭೂತರಣಭೇತಾಳ ಕಲಹವಿ । ಧೂತಜಂಬುಕಘೂಕಕಾಕ । ವ್ರಾತರಭಸಕೆ ಮೆಚ್ಚುವನು ಪಾಂಡವರಬಲವೆಂದು ॥ ಆತ ಮರಳಿದಹಿಂದೆ ನೋಡಿ ಪ । ರೇತವಿಭವವಲಾಯಿಸುತ ಚಲ । ಚೇತನನು ಸಲೆ ಚಂಡಿಯಾದನು ಕಳನ ಚೌಕದಲಿ ॥೧೫॥ ಹೇಳುವೊಡೆ ಕುರುಪತಿಯನೇ ನೆರೆ । ಹೋಲುವೆನು ಗದೆ ಹೆಗಲಲದೆ ಮೊಳ । ಕಾಲ ಕಾಣೆನು ಛತ್ರಚಾಮರಗಜತುರಗಾವಳಿಯ ॥ ಹೋಲುವದು ಜನವೊಬ್ಬರೊಬ್ಬರೊ । ಳಾಳೊಳೊಬ್ಬನೊ ಮೇಣು ಕುರುಭೂ । ಪಾಲಕನೊ ನೋಡುವೆನೆನುತ ಸಂಜಯನು ನಡೆತಂದ ॥೧೬॥ ಬಂದು ಕಂಡನು ರಾಜವನವಾ । ಕಂದನನು ಧೃತರಾಷ್ಟ್ರರಾಯನ । ನಂದನನ ಸೌಜನ್ಯವಲ್ಲೀ ವಿಪುಲಕಂದರನ॥ ಮುಂದುವರಿವವಿಲೋಚನಾಂಭುಗ-

ಳಿಂದ ಸ್ವೈರಣೆ ಮಿಗದೆ ಸಂಜಯನಿಂದು ಧೊಪ್ಪನೆ ಕೆಡೆದು ಹೊರಳಿದನರಸನಂಘ್ರಿಯಲಿ ॥೧೮॥ ಕಡಲ
ತಡಿಪರಿಯಂತ ರಾಯರ । ಗಡಣದಲಿ ನೀನೊಬ್ಬನೆಂಬೀ । ನುಡಿಗೆ ನಿಶ್ಚಯವೀಗಳಾದುದೆ ತಂದೆಕು
ರುರಾಯ ॥ ಬಿಡದೆ ಬಾಗುವನೃಪರ ಮಕುಟದೊಳಿಡುವಕೋಮಲಚರಣವಿದರೊಳು । ನಡೆಯಲೆಂ
ತ್ಯೈಕಲಿತೆ ಯೆಂದನು ಸಂಜಯನು ನೃಪನ ॥೧೯॥ ರಣಮುಖದೊಳೇಕಾದಶಾಕ್ಷೋಣೀ । ಹಿಣಿಗೆ ಹರಿವಾ
ಯ್ತೇ ಯುಧಿಷ್ಠಿರ। ನುಣಲಿ ಧರೆಯನು ಗೋತ್ರವಧೆಯನ್ಯಾಯಕಿಲ್ಬಿಷವ॥ ಸೆಣಸಮಾಡಿದೆ ದೈವದಲಿ
ಧಾ । ರುಣಿಯ ಹುದುವಿನ ಸಿರಿಗೆ ಸೇರದೆ । ಹಣಿದವಾಡಿದೆ ರಾಜವಂಶದ ಕಲ್ಪತರುವನವ ॥೨೦॥
ಶಶಿರುಚಿಗೆ ಸ್ವೈರಿಸದಸಿರಿಮುಖ । ಬಿಸಿಲಸೆಕೆಗಾಂತುದೆ ಸುಗಂಧ । ಪ್ರಸರಪೂರಘ್ರಾಣಗಳು ಹಳೆವೆಣ
ನ ಹೊಲಸಿನಲಿ ॥ ಉಸುರದೆಗೆವಂತಾಯ್ತೆ ಗೀತದ । ರಸದಮಧುರವನಾಂತಕಿವಿವಾ। ಯಸಸ್ಯಗಾಲಧ್ವ
ನಿಗೆ ಸೊಗಸಿತೆ ಯೆನುತ ಹೊರಳಿದನು ॥೨೧॥ ಲಲಿತಮೃದುತರ ಹಂಸತೂಳದ । ಲುಳಿತಕೋಮಲ
ಕಾಯಕೈದುಗ । ಳೆಲುಗಳೊಟ್ಟಿಲುವಾಸಿನಲಿ ಪೈಸರಿಸಿ ಮಲಗಿದೆಲಾ ॥ ಸುಳಿಯೆ ಕೈಗೊಡುವರಸುಗಳ
ಕೆಲ । ಬಲದ ಪಾಯವಧಾರು ಯಿವರನು । ಕಳುಹಿ ಬಂದ್ಯೆ ಸಾರ್ವಭೌಮರನ್ಯೆದೆನೀನೆಂದ ॥೨೨॥ ಎ
ತ್ತಣೇಕಾದಶಚಮೂಪತಿ । ಎತ್ತಣೀಯೆಕಾಕಿತನ ತಾ । ನೆತ್ತಹಯಗಜರಥಸುಖಾಸನದತಿಶಯದ ಸು
ಳಿವು ॥ ಎತ್ತಣೀಕೊಳುಗುಳದ ಕಾಲ್ನಡೆ । ಯೆತ್ತಣಾಹವದಭಿಮುಖಕೆ ಬಳಿ । ಕೆತ್ತಣಾಪಜಯವಿಧಿ
ಯ ಘಟನೆ ನೃಪಾಲ ನಿನಗೆಂದ ॥೨೩॥ ಮುಳಿದೊಡಗ್ನದಪರಶುರಾಮನ । ಗೆಲಿದನೊಬ್ಬನೆಭೀಷ್ಮ
ಪಾಂಡವ । ಬಲದ ಸಕಲಮಹಾರಥರ ಸಂಹರಿಸಿದನು ದ್ರೋಣ ॥ ದಳಪತಿಯು ಮಾಡಿದೊಡೆ ಪಾರ್ಥ
ನ । ತಲೆಗೆ ತಂದನು ಕರ್ಣನೀಯ । ಗ್ಗಳೆಯರೆನಿತ್ತೆ ಕಡೆಯಲೊಬ್ಬನೆ ಕೆಟ್ಟೆನೀನೆಂದ ॥೨೪॥ ಆವರು
ಬದುಕಿದರ್ಯೆವರುಂ ನಿ । ನ್ನವರೊಳಗೆ ನೀನುಳಿಯೆ ನೂರ್ವರು । ಸವರಿತಪರ್ಯೆವರು ಕುಮಾರರು ಸೌ
ಖ್ಯಜೀವಿಗಳು ॥ ಜವನ ನಗರಿಗೆ ಹತ್ತಿದರು ನಿ । ನ್ನವರು ಮಕ್ಕಳುನೂರುದೈವವ । ಸವಗಡಿಸಿ ದ್ದು
ಸ್ಥಿತಿಗೆ ಬಂದ್ಯೆ ತಂದೆ ಕುರುರಾಯ ॥೨೫॥ ಗೆಲಿದನರಸನು ಹಸ್ತಿನಾಪುರ । ದೊಳಗೆ ಕಟ್ಟಸು ಗುಡಿ
ಯನೆಂಬೆನೊ । ತಲೆಬೆರಸಿ ತಾ ನೋಡಿಬದುಕಿದೆನೆಂಬೆನೋ ಮೇಣು॥ಲಲನೆಯರಿಗೇನೊಸಗೆ ಕುರುಡನ
ನಳಿಸುವೆನೊ ನಗಿಸುವೆನೊ ತಾಯಿಗೆ । ಕಲಿಸುಬುದ್ಧಿಯನೇನನೆಂಬೆನು ಕೇಳು ಕುರುರಾಯ॥೨೬॥
ಹಿಂದೆ ರಾಯನ ಪಟ್ಟದರಸಿಯ । ತಂದು ಭಾರಿಯ ಭಂಗಪಡಿಸಿದೆ । ಬಂದು ಹರಿಯೈದೂರಬೇಡಿ
ದೊಡವನ ಚಿತ್ತದಲಿ ॥ ಕಂದ ಬಿತ್ತಿದೆ ಕದನದಲಿ ನೀ । ನೊಂದು ನೆಳಲುಳಿಯಲು ಸಹೋದರ । ವೃಂ
ದತನುಜಜ್ಞಾತಿಬಾಂಧವರಳಿದರದರಿಂದ ॥೨೭॥ ಮದದ ಮೋಡಿಯಲಂದು ಕೃಷ್ಣನ । ಸದರವೆಂದೇ
ಬಗೆದೆ ದೈವದ । ಹೃದಯವರಿಯದೆ ಕದನಕೇಳಿಗೆ ಮನವ ನೀ ಮಾಡಿ ॥ ವಿದುರನನು ಕೆಡೆನುಡಿದು ಸ
ಭೆಯಲಿ । ಹದನನರಿಯದೆ ಧನುವ ಹೋಗಾ । ಡಿದೆ ಮರುಳೆಸಾಕಿನ್ನು ಮೇಲಣಹದನ ಹೇಳೆಂದ
॥೨೮॥ ಪರಶುರಾಮನ ಬುದ್ಧಿ ಗಾಲವ । ನೊರೆದನೀತಿ ವಿಕರ್ಣಭೀಷ್ಮರ । ಪರಮವಚನಾಮೃತವ ಕ
ಣ್ವನನುಡಿಯ ನಾರದನ । ಪರಮತತ್ವದ ಮಂತ್ರವಂಗೀ । ಕರಿಸಲರಿಯದೆ ಯಿಂತು ಘನಸಂ । ಗರ
ದಿ ಚಿಂತಿಸಲೇನುಫಲ ಕುರುರಾಯ ಹೇಳೆಂದ ॥೨೯॥ ಕೇಳು ಸಂಜಯ ಪೂರ್ವಸುಕೃತದ । ಶಾಲಿವನ
ಪೂಣಾಗದೊಡೆ ಭಾರಿಯ । ತೋಳಗುತ್ತಿನ ಜಯದ ಸಿರಿ ಯಂಗಳವದಾಂಟದೊಡೆ ॥ ಭಾಳಲಿಪಿಗಳ

ಲೆಕ್ಕವನು ಪ್ರತಿ । ಕೂಲವಿಧಿ ಪಲ್ಲಟಿಸಿ ಬರೆದೊಡೆ । ಹೇಳಿ ಫಲವೇನೆನುತ ತುಂಬಿದನರಸ ಕಂಬನಿಯ ॥ ಕದಡಿತಂತಃಕರಣವಿಕ್ರಮ । ದುದಧಿ ನೆಲೆಯಾದುದು ನಿರರ್ಥಕ । ಕೊದರದಿರು ಬೆದರದಿರು ಸಂಜಯ ಹಿಂದನೆಣಿಸದಿರು ॥ ಕದನದಲಿ ದುಶ್ಶಾಸನನ ತೇಗಿದನಲಾ ಬಕವೈರಿ ತಮ್ಮನ । ನುದರದಲಿ ತೆಗೆವೆನು ವಿಚಿತ್ರವ ನೋಡು ನೀನೆಂದ ॥೩೧॥ ನರನ ಬಸುರಲಿ ಕರ್ಣನನು ನೃಪ । ವರನೊಳಾಶಲ್ಯನನು ನೀಕಾ । ತರಿಸಿದಿರು ಶಕುನಿಯನುಲೂಕನ ಯಮಳರಿಬ್ಬರಲಿ ॥ ಹರಿಬಕೆದೆಲಾ ಗದೆ ಮುರಾಂತಕ । ಹರಹಿಕೊಳಲಿ ಮದೀಯಬಾಹು । ಸ್ಫುರಣಶಕ್ತಿಗೆ ಭಂಗಬಾರದು ನೋಡು ನೀನೆಂದ ॥೩೨॥ ಕಾನನಕೆ ಕೈಯಿಕ್ಕುವೊಡೆ ಪವ । ಮಾನಕನಪಾವಕನು ಬಯಸುವೆ । ಭಾನು ಭಾರಿಯತಮವೆ ತಿವಿವರದಾರ ನೆರವಿಯಲಿ ॥ ಈನಿಭೃತಗದೆ ಯಿರಲಿ ಕುಂತೀ । ಸೂನುಗಳ ಕೈಕೊಂಬೆನೇ ಮನ । ಹೀನನೇ ತಾನಕಟ ಸಂಜಯ ಯೆಂದನಾಭೂಪ ॥೩೩॥ ಆಳು ಬಿದ್ದುದು ಬೇಹನಾಯಕ । ರೋಲಗಿಸಿತವರಿಯರ ನೀರಣ । ದೂಳಿಗಕೆ ನಾನೊಬ್ಬನೆಂದೇ ನಿನಗೆ ತೋರಿತಲಾ ॥ ಆಳ ಹಂಗಿನ ನಾಯಕರ ಬಿಲುಗೋಲ ಜೋಡಿನ ಬಲವ ಚಿತ್ತದಿ । ತಾಳಿದರ ಧೃತರಾಷ್ಟ್ರರಾಯನ ಕಂದನಲ್ಲೆಂದ ॥೩೪॥ ಖ್ಯಾತಿ ಗುಂದದು ಮನದ ಧೈರ್ಯದ । ಘಾತುಕುಂದದು ಲಜ್ಜೆಯಭಿಮತ । ಜಾತಿಗೆಡೆದು ವಿರೋಧಬಿಡದು ಯುಧಿಷ್ಠಿರಾದಿಗಳ ॥ ಏತಕೀನಿನ್ನೀಪ್ರಳಾಪ ವಿ । ಧೂತರಿಪು ಕುರುರಾಯನೆಂಬೀ । ಖ್ಯಾತಿಯಿಲ್ಲದೆ ಬೇರೆ ರಾಜ್ಯವನೊಲ್ಲೆ ತಾನೆಂದ ॥೩೫॥ ಜೀಯ ನಿಮ್ಮಡಿಗಳಿಗೆ ಗುರುಗಾಂ । ಗೇಯವಿದುರಾದಿಗಳು ಹೇಳಿದ । ಜೋಯಿಸುವ ಕೈಕೊಂಡಿರೇ ನಮ್ಮೀಪ್ರಳಾಪದಲಿ ॥ ರಾಯ ಫಲವೇನೈ ಯುಧಿಷ್ಠಿರ । ರಾಯನೊಲಿದಂತಿರಲಿ ನಿಮ್ಮಯ । ತಾಯಿತಂದೆಗೆ ಹೇಳಲೇನನು ಬುದ್ಧಿಗಲಿಸೆಂದ ॥೩೬॥ ಇದೆ ಸರೋವರವೊಂದು ಹರಿದೂರದಲಿ ಭುವನ ಖ್ಯಾತಿಯೊಳು ಧ್ಯಾ । ನದಲಿ ಮುಳುಗಿಹೆನೊಂದುದಿನಪರಿಯಂತ ಸಲಿಲದಲಿ ॥ ಕದನದಲಿ ಕೌಂತೇಯರನು ಯಮ । ಸದನದಲಿ ತೋರುವೆನು ತಾನೆಂಬುದು ರಹಸ್ಯವು ಜನನಿಜನಕರಿಗರುಹು ನೀನೆಂದ ॥೩೭॥ ತೆಗಸು ಪಾಳೆಯವೆಲ್ಲವನು ಗಜ । ನಗರಿಗೈದಿಸು ರಾಣಿಯರ ದಂ । ಡಿಗೆಯ ಕಳುಹಿಸು ಸೂತಸುತದುಶ್ಶಾಸನಾದಿಗಳ ॥ ಹಗೆಯ ವಿಜಯವ ಹರಹದಿರು ನಂ । ಬುಗೆಯ ನುಡಿಯಲಿ ಭಾನುಮತಿಯರ ಬಗೆಯ ಸಂತೈಸೆಂದು ಬೋಳೈಸಿದನು ಸಂಜಯನ ॥೩೮॥ ಎನುತ ಸಂಜಯಸಹಿತ ಕೌರವ । ಜನಪಬಂದನು ತತ್ಸರೋವರ । ಕನಿಲನಿದಿರಾದನು ಸುಗಂಧದ ಶೈತ್ಯಪೂರದಲಿ ॥ ತನುವಿಗಾಪ್ಯಾಯನದಿನಂತ । ರ್ಮನಕೆ ಪಲ್ಲಟವಾಯ್ತು ಭೀಮನ । ಜನಕನರಿದನು ತನ್ನಗುಪ್ತಸ್ಥಾನಸಂಗತಿಯ ॥೩೯॥ ಉಲಿವಕೋಕಿಲಪಾಠಕರ ಮೆರೆ । ವಳಿಕುಲದ ಗಾಯಕರ ಹಂಸಾ । ವಳಿಯ ಸುಭಟರ ಜಡಿವ ಕೊಳರ್ವಕ್ಕಿಗಳ ಪಡಿಯರರ ॥ ಅಲರ್ದಹೊಂದಾವರೆಯ ನವಪರಿ । ಮಳದ ಸಿಂಹಾಸನದಿ ಲಕ್ಷ್ಮೀ । ಲಲನೆಯೋಲಗಶಾಲೆಯಂತಿರೆ ಮೆರೆದುದಾಸರಸಿ ॥೪೦॥ ಬಂದು ತಡಿಯಲಿ ಸಂಜಯಾನಕರ । ದೆಂದ ನೀಸರಸಿಯಲಿ ಮುಳುಗಿಹೆ । ನಿಂದಿ ನೀದಿವಸವನು ಕಳಿವೆನು ಕೊಳನಮಧ್ಯದಲಿ ॥ ಮುಂದೆಪಾಂಡವರ್ವೈರರನು ಗೆಲಿ । ದಂದು ಹೊಗುವೆನು ಗಜಪುರವನಿಂ । ತೆಂದು ಜನನಿಗೆ ಜನಕವಿದುರರಿಗರುಹು ನೀನೆಂದ ॥೪೧॥ ಚಾರುಚಂದ್ರೋತ್ಪಲದ ರಮ್ಯಾ । ಗಾರದಲಿ ಮಣಿಮಯದ ರಚನೋ । ದಾರದಿಂ ಹೊಳೆಹೊಳೆವಭವನದ ಚಿತ್ರಶಾಲೆಯಲಿ ॥ ಸಾರಮಣಿಪರಿಯಂಕಪರಿಸಂ । ಸ್ಕಾರದಲಿ ಮಲಗುವ

ಮಹೀಪತಿ । ನೀರಲೊರಗುವನೆಂದು ಸಂಜಯ ನೊರಲಿದನು ಹೊರಳಿ ॥೪೨॥ ಒರಲದಿರು ಸಂಜಯ ವಿರೋಧಿಗ । ಳರಿವರೆನ್ನಿದ್ದೆಡೆಯನಿಲ್ಲಿಯು। ಮರೆದು ಕಳೆ ಪಾಳಯವ ತೆಗೆಸಬುಜಾಕ್ಷಿಯರ ಕಳುಹು॥ ತೆರಹುಗೊಡು ನೀ ಹೋಗೆನುತ ವುಂ। ಜೆರಗನಳವಡಿಸಿಕ್ಕಿ ಪೂರ್ವದ । ಲರಿದಸಲಿಲಸ್ತಂಭವಿದ್ಯೆಯ ನರಸ ಚಿಂತಿಸಿದ ॥ ೪೩ ॥ ಚರಣವದನಕ್ಷಾಳನಾನಂ । ತರಪದತ್ರಯದಾಚಮನವಿ । ಸ್ತರಣದಲಿ ಸ ಪ್ರಣವಮದಂಗನ್ಯಾಸವಿಧಿಗಳಲಿ ॥ ವರುಣಮಂತ್ರಾಕ್ಷರದಿ ಜಪಪರಿ । ಕರಣದಲಿ ನಿರ್ಮುಕ್ತಚಿತ್ತ । ಸ್ಫುರಣಸಲಿಲಸ್ತಂಭನವನನೀಶ ಮಂತ್ರಿಸಿದ ॥ ದ್ಯುಮಣಿಮೊದಲಾದಖಿಳಸುರರಿಗೆ। ನಮಿಸಿ ವರುಣ ಧ್ಯಾನವನು ಹೃ । ತ್ಕಮಲದಲಿ ನೆಲೆಗೊಳಿಸಿ ನಾಲುಕುದೆಸೆಯನಾರೈದು ॥ ಕುಮತಿಯಿಳಿದನು ಜಾನು ಕಟಿಹೃ । ತ್ಕಮಲವಾನನಮೂರ್ಧಪರಿಯಂ । ತಮರಿದುದುಜಲಕೊಳನ ಮಧ್ಯದಲರಸ ಪವಡಿಸಿ ದ ॥ ೪೪ ॥ ಕುರುಪತಿಯು ಬೀಳ್ಕೊಂಡು ಸಂಜಯ । ಮರಳಿದನು ತನಗಾದಹಂದಣ । ಪರಿಭವವನೆನೆ ದಡಿಗಡಿಗೆ ಕಂಪಿಸುತ ಮನದೊಳಗೆ ॥ ಧುರದ ಮಧ್ಯದೊಳೊಬ್ಬನೇ ನಡೆ। ತರುತ ಭೂತಾವಳಿಯನೀ ಕ್ಷಿಸಿ।ಗುರುವ ನೆನೆದನು ಕೇಳು ಜನಮೇಜಯಮಹೀಪಾಲ ॥೪೫॥ ಬರುತ ಸಂಜಯ ದೂರದಲಿ ಕೃಪ । ಗುರುಸುತರ ಕೃತವರ್ಮಕನ ಕಂ । ಡರಿರಥಿಕರಿವರಲ್ಲಲೇ ಶಿವಶಿವಮಹಾದೇವ ॥ ಭರತ ಕುಲಮೊದ ಲೊಂದು ಬಳಿಕಾ । ಯ್ತೆರಡುಕವಲೊಬ್ಬರಿಗೆ ಜಯವಿ । ಸ್ತರಣ ಗದುಗಿನ ವೀರ ನಾರಾಯಣನ ಕರುಣದಲಿ ॥ ... ... ॥ ೪೬ ॥

ಅಂತು ಸಂಧಿ ೩ಕ್ಕಂ ಪದ ೧೫೬ಕ್ಕಂ ಮಂಗಳಮಸ್ತು.

ನಾಲ್ಕನೆಯ ಸಂಧಿ.

॥ ಸೂಚನೆ ॥ ರಾಯಧರ್ಮಜ ಯಮಳಫಲುಗುಣ। ವಾಯುಸುತರರಸಿದರು ಕೌರವ । ರಾಯನನು ಕಳನೊಳಗೆ ಕಾಣದೆ ಮುತ್ತಿದರು ಕೊಳನ ॥

ಕೇಳು ಜನಮೇಜಯಧರಿತ್ರೀ । ಪಾಲ-ಸಂಜಯ ಬರುತ ಕುರುಭೂ । ಪಾಲನರಿಕೆಯ ಭೀಮನ ವರಿವರಲ್ಲಲೇಯೆನುತ ॥ ಮೇಲೆ ಹತ್ತಿರೆ ಬರಬರಲು ಸಮ । ಪಾಳಿಯಲಿ ರಥಮೂರರಲಿ ಕೃಪ। ಕೋ ಲಗುರುವಿನ ಮಗನಲಾ ಯೆನುತಲ್ಲಿಗೈತಂದ ॥ ೧ ॥ ಇಳಿದು ರಥವನು ಸಂಜಯನ ಬರ । ಸೆಳೆದು ತ ಕ್ಕೈಸಿದರು ಹಗೆಯಲಿ । ಸಿಲುಕಿ ಬಂದ್ಯೆ ಭಾಗ್ಯದಲಿ ಧೃತರಾಷ್ಟ್ರಭೂಪತಿಯ ॥ ಕಲಹಗತಿಯೇನಾ ಯ್ತು ಶಕುನಿಯ। ದಳದೊಳಿದ್ದನೊ ಕೌರವೇಶ್ವರ।ನುಳಿದನೋ ಹದನಾವುದೆಂದರು ಭಟರು ಸಂಜಯ ನ ॥ ೨ ॥ ಅರಿದುದಿಲ್ಲಾ ಕೌರವೇಂದ್ರನ।ನರಸಿಶಕುನಿಯ ದಳವ ಮುತ್ತಿದ । ರಿರಿದರವರು ತ್ರಿಗರ್ತ ಕನು ಸೌಬಲಸುಶರ್ಮಕರ ॥ ಮುರಿದಬವರದ ಬಲಿದು ಗಜನೂ । ರರಲಿ ಹೊಕ್ಕನು ರಾಯನಹಿತರ । ಚಿರಿದು ಝಾಡಿಸಿ ಬೀದಿವರಿದನು ರಾಯದಳದೊಳಗೆ ॥ ೩ ॥ ಬಳಿಕ ಭೀಮನ ಗದೆಯಲಿಘಾತ । ಕೆ

ದನೊಬ್ಬನ ತಿರುಗಿ ಹಾಯ್ದನು । ಕೊಳುಗುಳದ ಕೋಲಾಹಳದ ಕೋಳ್ಗುದಿಯ ಕೆಸರಿನಲಿ ॥ ತಲೆಗೆ ಬಂದುದು ತನಗೆಯಾಕ್ಷಣ । ಸುಳಿದೊಡೆಪರಾರಾಧ್ಯಮುನಿಪತಿ।ತಿಲಕವೇದವ್ಯಾಸದೇವರ ಕೃಪೆಯ ಭಾರವಲಿ ॥ ೪ ॥ ಸೆಳೆದುಕೊಂಡನು ಮೃತ್ಯುವಿನ ಕೆಡ । ತಲೆಯ ನೊದೆದು ಕೃಪಾಳುವೆನ್ನನು । ತಲೆಬಳಚಿ ಕಳುಹಿದೊಡೆ ಬಂದೆನು ರಾಯನರಿಕೆಯಲಿ॥ ಬಳಲುತೇಳುತ ಬೀಳುತೊಬ್ಬನೆ।ತಲೆಮುಸುಕಿನಲಿ ನಡೆಯೆ ಕಂಡೆನು । ನೆಲನೊಡೆಯನಹುದಲ್ಲೆನುತ ಸುಳಿದೆನು ಸವಿಹಾಪದಲಿ ॥ ೫ ॥ ಕಂಡೆನರಸನೆ ನಿಬ್ಬರದ ಬಳಿ । ಕಂಡಲೆದುದತಿಶೋಕಶಿಖಿ ಕೈ । ಕೊಂಡುದಿಲ್ಲರೆಗಳಿಗೆ ಬಳಿಕೆನ್ನ ಚಿತ್ತ ಕಣ್ದೆರೆಯೆ ॥ ಖಂಡಿಸಿಯೆ ಯೆನ್ನುಭ್ಭಯನು ಹುರಿ । ಗೊಂಡುದಾತನ ಸತ್ವಪಾತನ । ದಂಡಿಯಲಿ ಬಹರಾರು ಸುರನರನಾಗಲೋಕದಲಿ ॥ ೬ ॥ ಬಂದನೆನ್ನನು ಸಂತವಿಡುತವ । ನೊಂದುಸರಸಿಯ ತಡಿಯಲಳವಡೆ। ನಿಂದು ಸಂವರಿಸಿದನು ಗದೆಯಲಿ ಬಾಹುಮೂಲೆಯಲಿ ॥ ತಂದೆಗರುಹೆಂದೆನಗೆ ಹೇಳಿದು । ಹಿಂದೆಮುಂದೆ ಡಬಲನನಾರ್ತೆ । ದಂಡವಳಿಯದೆ ನೀರ ಹೊಕ್ಕನು ಕಾಣೆನವನಿಪನ ॥ ೭ ॥ ಅವರು ಕಂಬನಿದುಂಬಿದರು ಕೌ । ರವಮಹಾವಂಶಾಭಿಭಾರಾ । ಭ್ಯವಸಿತಕೆ ಫಲವಾಯ್ತಲಾ । ಯಮುನಂದನಾದಿಗಳ ॥ ಶಿವಶಿವಾ ಪವಡಿಸಿತೆ ಚತುರಾ । ರ್ಣವತಟೀಪರಿಧಾನಪೃಥ್ವೀ । ಯುವತಿಬಾಳಿಕೆ ನೀರೊಳೆಂದಳಲಿದನು ಗುರುಸೂನು ॥ ೮ ॥ ಅಳಲದಿರಿ ಗಜಪುರಿಗೆ ಸತಿಯರ । ಕಳುಹುವೆನು ನೀವವನಿಪಾಲನ । ತಿಳುಹಲಾಪೊಡೆ ಸಂಧಿಗೊಡಬಡಿಸುವುದುಕುರುಪತಿಯ ॥ ಕೊಳನ ತಡಿಯಲಿ ಕಾಹಿದಂತಿರೆ । ಬಳಸಿ ನೀವೆಂದವರನತ್ತಲು। ಕಳುಹಿ ಸಂಜಯ ಬಂದು ಹೊಕ್ಕನು ನೃಪನ ಪಾಳೆಯವ ॥ ೯ ॥ ಅರಮನೆಗೆ ಬಂದಖಿಳಸಚಿವರ । ಕರೆಸಿದನು ಸರಹಸ್ಯವನು । ವಿಸ್ತರಿಸಿದನು ಸರ್ವಾಪಹಾರದ ನೃಪಪಲಾಯನವ ॥ ಅರಸಿಯರಿದಳು ಭಾನುಮತಿ ಮಿ । ಕ್ಕರಸಿಯರಿಗರುಹಿಸಿದಳಂತಃ । ಪುರದೊಳಲ್ಲಿಯದಲ್ಲಿ ಹರೆದುದು ಕೂಡೆ ರಣಭೀತಿ ॥ ೧೦ ॥ ಕೂಡೆ ಗಜಬಜವಾಯ್ತು ಪಾಳೆಯ । ವೂಡಿತಲ್ಲಿಯದಲ್ಲಿ ಜನವ । ಲ್ಲಾಡಿದುಘು ಕ್ರಯವಿಕ್ರಯದ ವಾಣಿಜವಿಸಂಧಿಯಲಿ ॥ ಹೂಡಿದವು ಭಂಡಿಗಳು ಹರಿದೆಡೆ । ಯಾಡಿದವುಕೊಲ್ಲಾರಿಗಳು ರಥ । ಜೋಡಿಸಿತು ಬದ್ದರದಬಂಡಿಗೆ ಬಂದವರಮನೆಗೆ ॥ ಭಾನುಮತಿ ಹೊರವಂಟಳರಸನ । ಮಾನಿನಿಯರು ಸಹಸ್ರಸಂಖ್ಯೆಯೊ । ಳಾನನೇಂದುಪ್ರಭೆ ವಿಭಾಡಿಸೆ ಬಿಸಿಲ ಬೇಗೆಗಳ ॥ ಭಾನುದತ್ತನ ಸೈಂಧವನ ರವಿ । ಸೂನುವಿನ ದುಶ್ಶಾಸನನ ಜಲ। ಜಾನನೆಯರೊಗ್ಗಿನಲಿ ರಥವೇರಿದರು ದುಗುಡದಲಿ ॥ ೧೧ ॥ ಸರಕ ಹಿಡಿದವು ಭಂಡಿ ಶತಸಾ । ವಿರ ನೃಪಾಲಯದಿಂದ ವಿವಿಧಾ । ಭರಣಭರಿತದ ಭೂರಿಪೆಟ್ಟಿಗೆ ವೂರಿಸಿತು ರಥವ ॥ ವರೆದುಕೂಲದ ಪಟ್ಟೆ ವರ್ಣದ । ಥರದದಿಂದೊಟ್ಟಿದವು ಚಾಮಿಹಾ । ಕರದ ಬಹುವಿಧಮಯದ ಭಾಂಡದ ಭಂಡಿ ನೂಕಿದವು ॥ ೧೨ ॥ ಬಳಿಯ ಚಾರಿಯ ಹೊರೆಯ ಚಿತ್ರಾ । ವಳಿವಿತಾನದ ಹಾಸುಗಳಹೊಂ । ಬಳಿಯ ತೆರೆಸೀರೆಗಳ ಛತ್ರದ ಧ್ವಜಸಸೀಗುರಿಯ ॥ ಹೊಳೆವಪಟ್ಟೆಯಮಲೋಡಿಗೆಯ ಹೊಂ । ಗೆಲಸದೊಳು ಝಗೆಗಳ ಸುವರ್ಣಾ । ವಳಿಯದಿಂಡುಗಳೊಟ್ಟಿದವು ಭಂಡಿಗಳ ಜವಗೆಡಿಸಿ ॥ ೧೩ ॥ ಕರವತಿಗೆ ಹೊಂಗಳಸ ಹೊಂಗೊ । ಪ್ಪರಿಗೆ ದೀಪಸ್ತಂಭಹೆಮದ । ಸರಘಳಿಯಮಣಿಮಯದಜಂತ್ರದ ಜೀನಸೂತ್ರಗಳ ॥ ಮರಕತದಮಣಿಪಾತ್ರನೀಲದ । ಕಲಶಮೈಡೂರಿಂಯಪಡಿಗವ । ಚಲರು ತಂದೊಟ್ಟಿದರು ಬಂಡಿಗೆ ಭಾರಸಂಖ್ಯೆಯಲಿ ॥ ೧೪ ॥ ಮರೆಮಗಜ

ಹಯಶಾಲೆಯಲಿ ಮೈ । ಮುರುಕವೃದ್ಧವ್ಯಾಧಿತಾವಳಿ । ಮರಿಗುದುರೆ ಮರಿಯಾನೆ ತೆಗೆದವು ಕೋಟಿ
ಸಂಖ್ಯೆಯಲಿ ॥ ಉರುವಭಂಡಾರದ ಮಹಾರ್ಘವ । ಕಿರುವೆಡೆಗೆ ಗಾಡಿಸಿತು ಬೀದಿಯು । ತೆರಹ ಕೆತ್ತ
ವು ಹೊತ್ತಸರಕಿನ ಭರದ ಭಂಡಿಗಳು ॥ ೧೬ ॥ ರಾಯನರಮನೆಮಂಡಲಿಗೆ ವೇದಿ । ಲಾಯಚೌಕಿಗೆ
ನಿಖಿಳಭವನನಿ । ಕಾಯವನು ತೆಗೆದೊಟ್ಟಿದರು ಬಂಡಿಗಳ ಹಂತಿಗಳ ॥ ರಾಯನನುಜರು ದ್ರೋಣಕೃ
ಪರಾ । ಧೇಯಸೈಂಧವಶಕುನಿರಾಜಿವ । ಸಾಯಿತರ ಗುಡಿಗೂಡಚಂಪೆಯವೇರಿದರು ರಥವ ॥ ೧೭ ॥
ಪಾಳೆಯಕೆ ಗಜಪುರದ ವಂಕಕೆ । ಕೀಲಿಸಿತು ದಂಡಿಗೆಯ ಸಂದಣಿ । ಮೇಲುಸರಕಿನ ಬಂಡಿ ತಲೆದೋರಿ
ದವು ಕಂಬಿಗಳ॥ ಹೇಳಲೇನು ಮಹಾಸಮುದ್ರವನೇಳಿಸುವಪಾಳೆಯದಸಿರಿ ಶೂನ್ಯಾಲಯಕೆ ಜೋಡಿಸಿತ
ಲೈ ಜನಮೇಜಯಕ್ಷಿತಿಪ ॥ ೧೮ ॥ ತುಂಬಿದುದು ಗಜಪುರವನಲ್ಲಿಯು । ಕಂಬನಿಯ ಕಾಲುವೆಯನದನೇ।
ನೆಂಬೆನೈ ಗಜಬಜಕೆ ಮೊಳೆತುದು ಕೇರಿಕೇರಿಯಲಿ ॥ ಲಂಬಿಸಿತು ಭಯತಿಮಿರ ಶೋಕಾ । ಡಂಬರದ
ಡಾವರೆ ವಿವೇಕವ । ಚುಂಬಿಸಿತು ಧೃತರಾಷ್ಟ್ರವಿದುರರ ಪೌರಪುರಜನವ ॥ ೧೯ ॥ ಬಂದು ಸಂಜಯ
ನಂಧನೃಪತಿಯ । ಮಂದಿರವ ಹೊಕ್ಕಖಿಳನಾರೀ । ವೃಂದವನು ಕಳುಹಿದನು ದಂಡಿಗೆಗಳಲಿ ಮನೆಮ
ನೆಗೆ ॥ ಬಂದರಾರೆನೆ ಸಂಜಯನು ಜೀ । ಯೆಂದೊಡುತ್ಸವದಲ್ಲಿ ಬಂದೈ । ತಂದೆ ಸಂಜಯ ಬಾರೆನು
ತ ಬೋಳೈಸಿದನು ನೃಪತಿ ॥ ೨೦॥ ಹೋಗಿ ತಳುವಿದೆ ಕೌರವೇಂದ್ರನ। ನೀಗಿದಳಲೋ ಜಯವು ಪಾಂ
ಡವ । ರಾಗುಹೋಗೇನಾಯ್ತು ಶಕುನಿಯ ಹಯದ ಮೋಹರವ ॥ ತಾಗಿ ಮುರಿದನೆ ಭೀಮ ನೀ
ಮೇ । ಲ್ಪೋಗಿನಾಹವವೇನು ರಾಯನ । ತಾಗುಥಟ್ಟೇನಾಯ್ತು ಮಡಿದವರಾರು ರಣದೊಳಗೆ ॥೨೧॥
ಏನುಸಂಜಯ ಕೌರವೇಶ್ವರ । ನೇನಮಾಡಿದನಲ್ಲಿ ಕುಂತೀ । ಸೂನುಗಳೊಳಾರಳಿದವರು ಸಲೆ ನಮ್ಮಥ
ಟ್ಟಿನಲಿ ॥ ಏನುಹದನೈ ಶಕುನಿ ರಣದೊಳ।ಗೇನಮಾಡಿದನೆಂದು ಬೆಸಗೊಳಲೇನನೆಂಬೆನು ತಾಯಿಗಾಂ
ಧಾರಿಗೆ ರಣೋತ್ಸವವ ॥ ೨೨ ॥ ಶಕುನಿ ಬಿದ್ದನು ಜೀಯ ಸಹದೇ । ವಕನ ಕೈಯಲುಲೂಕ ಮಡಿದ
ನು । ನಕುಲನಂಬಿನಲಾತ್ರಿಗರ್ತಸುಶರ್ಮಕಾದಿಗಳು ॥ ಸಕಲಗಜಹಯಸೇನೆ ಸಂಶ । ಪ್ತಕರು ಪಾರ್ಥ
ನ ಶರದಲಮರೀ । ನಿಕರವನು ಸೇರಿದರು ಹೇಳುವುದೇನು ರಣರಸವ ॥ ೨೩ ॥ ಬಳಿಕ ನೂರಾನೆಯಲಿ
ನಿನ್ನವ । ನಳವಿಗೊಟ್ಟನು ಭೀಮಸೇನನ । ಚಳಗತಿಯ ಚಾತುರದ ಪೀಠಪದಪ್ರಹಾರದಲಿ ॥ ಕಳನೊ
ಳಗೆ ಕೋಲೂರಿ ಮುಗ್ಗಿ ಲ । ನೆಲಕೆ ಕೀಲಿಸಲಾನೆಯಿಂದಿಳೆ । ಗಿಳಿದನೇಕಾಂಗದಲಿ ಹಾಯ್ದನು ಭಯದಿ
ಕುರುರಾಯ ॥ ೨೪ ॥ ಕುರುಪತಿಯನರಸುತ್ತ ತಾನೈ । ತರಲು ಸಾತ್ಯಕಿ ಕಂಡು ಸೂಠಿಯ । ಲುರವ
ಣಿಸಿ ಹರಿತಂದು ಹಿಡಿದನು ಹೊಯ್ದು ಕೆಲಬಲನ ॥ ಕರೆದು ದೃಷ್ಟದ್ಯುಮ್ನತನ್ನಯ। ಶಿರವ ಕಡಿವನೆ
ಬಳಿಕ ಸಾತ್ಯಕಿ । ಕರದ ಸಬಳವನುಗಿದು ಹೂಡಿದನೆನ್ನ ಗಂಟಲಲಿ ॥ ೨೫ ॥ ಜಲಧಿಯಲಿ ಭಣಿವಳ
ಯದಲಿ ರಿಪು । ಬಲದಮುಖದಲಿ ಸಿಡಿಲಹೊಯ್ಲಿನ । ಹಳುವದಲಿ ಗಿರಿಶಿಖರದಲಿ ದಾವಾಗ್ನಿಮಧ್ಯದ
ಲಿ ॥ ಸಿಲುಕಿದೊಡೆ ಬಿಡಿಸುವವಳೇ ಪ್ರತಿ । ಫಲಿತಪೂರ್ವಾರ್ಜಿತದ ಪುಣ್ಯಾ । ವಳಿಗಳೆಂಬುದು ತನ್ನೊ
ಳಾದುದು ಕೇಳು ಧೃತರಾಷ್ಟ್ರ ॥ ೨೬ ॥ ಆಹವಹಿಲದೊಳಾದುದಾವಿ । ಭಾರ್ಗವವೆಂದಾಸೆರಿಯೆನ್ನಾ
ಗಳು । ದೇವಮುನಿಯದ್ಧ್ಯೈಸಿ ಹಿಡಿದನು ಕೈಯಡಾಯುಧವ॥ ಸಾವು ತಪ್ಪಿತು ಬಾದರಾಯಣ । ನೋ
ಡಿ [illegible]ಯಲಿ ವ್ಯಾಧಿಷವಿ ಸಂ । ಭಾವಿಸುತ ಕುರುಪತಿಯನರಸೆಂದೆನಗೆ ನೇಮಿಸಿದ ॥ ೨೭ ॥ ಬಳಿ

ಕೊಂಡನು ಮುನಿಯನವನೀಪಾಲಕನನರಸಿದೆನು ಕೆಳನೊಳು । ಸಾಲಹೆಣನೊಟ್ಟಿಲ ಕದಂಬದರು ಧಿರ ಘೂರ್ತದಲಿ ॥ ಬೀಳುತೇಳುತ ನಿಲುತ ನಿಲ್ಲುತ । ಕಾಲುನಡೆಯಲಿ ಸುಳಿವಕುರುಭೂ। ಪಾಲಕನ ಕಂಡೊಡನೆ ಬಂದೆನು ಕೊಳನ ತಡಿಗಾಗಿ ॥ ೨೮ ॥ ಇಳಿದು ಸರಸಿಯ ಮಧ್ಯದಲಿ ನೃಪ। ತಿಲಕನೆಂದನು ಪಾಳೆಯವನೀ । ಕಳುಹು ಗಜಪುರಿಗೆನಲು ಬಂದೆನು ಪಥದಮಧ್ಯದಲಿ ॥ ಸುಳಿವ ಕಂಡೆನು ಕೃಪನನಾಗುರು। ಗಳಮಗನ ಕೃತವರ್ಮಕನನಿಂ । ತುಳಿದಮೂವರ ಕಳುಹಿದೆನು ಕುರುಪತಿಯ ಹೊರೆಗಾಗಿ ॥ ೨೯ ॥ ತಂದೆನಿಲ್ಲಿಗೆ ಸಕಲನಾರೀ । ವೃಂದವನು ಕುರುಪತಿಯ ನೇಮದಿ । ನಿಂದಿನೀವೃತ್ತಾಂತ ವರ್ತಿಸಿತಿಲ್ಲಿಪರಿಯಂತ ॥ ಮುಂದೆ ಹೇಳುವುದೇನು ನೀ ಬೆಸ । ಸೆಂದೊಡವನೀಪತಿಯ ಹೊರೆಗೈ । ತಂದನೇ ಗುರುಸುತನು ಮೇಲಣಹದನ ಹೇಳೆಂದ ॥ ೩೦ ॥ ಅರಸ ಕೇಳ್ ಕೃಪಗುರುಜಕೃತವ । ರ್ಮರು ರಥಾಶ್ವಂಗಳನು ದೂರದ । ಲಿರಿಸಿ ತಲೆಮುಸುಕಿನಲಿ ಬಂದರು ಕೊಳನ ತಡಿಗಾಗಿ ॥ ತರುಲತೆಗಳುಬ್ಬಿನಲಿ ಕಂಜಾ । ಕರದೊಳೊಯ್ಯನೆ ನಿಲುಕಿ ಮೆಲ್ಲನೆ । ಕರೆದು ಸೂಚಿಸಿ ಹೇಳಿದರು ತಮತಮ್ಮಹೆಸರುಗಳ ॥೩೧॥ ಬದುಕಿ ಬಂದೊಡೆ ಭೀಮ ನಿಮ್ಮನು । ಗದೆಯ ಸವಿಗಾಣಿಸನಲಾ ಸಾ । ಕಿದನ ಸಮರಕೆ ಸುಳಿದಿರ್ದೈ ಸಾಹಿತ್ಯ ರೇಖೆಯಲಿ ॥ ಕದನದಲಿ ಸೌಬಲಸುಶರ್ಮರ । ಹೊದರ ಹರೆಗಡಿತದಲಿ ನೀವ್ಮಾ । ಡಿದ ಪರಾಕ್ರಮವಾವುದೆಂದನು ನೃಪತಿ ಖಾತಿಯಲಿ ॥ ಜೀಯ ಖತಿಯೇಕೆಮ್ಮೊಡನೆ ಚ । ಕ್ರಾಯುಧನ ಚಾತುರ್ಯದಲಿ ರಣ । ದಾಯ ತಪ್ಪಿತು ಭಟರು ಬಿದ್ದರು ಹೇಳಲೇನದನು ॥ ಕಾಯಿದರೊ ಕಾದಿದರೊ ಗುರುಗಾಂ । ಗೇಯಸೈಂಧವಮಾದ್ರಪತಿರಾ । ಧೇಯರನುಗತಿವೊಗದಿಹುದಪರಾಧ ನಮಗೆಂದ ॥ ೩೩ ॥ ಅರಸ ಪೊರಮಡು ಭೀಮಪಾರ್ಥರ। ಕರುಳ ಬೀಯುವ ಭೂರಿನಿಕರಕೆ । ಬರಿಸುವೆವು ನೀನೋಡಲೊಡ್ಡುವೆವಸ್ತ್ರಸಂತತಿಯ ॥ ಗರುವರಿಹರೇ ನೀರೊಳಾಹಿಮ । ಕರಮಹಾನ್ವಯಕೀರ್ತಿಜಲದೊಳು । ಕರಗದಿಹುದೇ ಕಷ್ಟವೃತ್ತಿಯಿದೆಂದನವನಿಪನ ॥ ೩೪ ॥ ಕೇಳು ಕುರುಪತಿ ಪಾಂಡುಸುತಶ್ರಮ । ಡಾಲಸೇನೆಗೆ ಸಿಂಹವಿಪಿನ। ನ್ನಾಳೆ ಬಿಡು ನೀ ನೋಡುತಿರು ಕರ್ಣಾದಿಸುಭಟರಲಿ ॥ ಜಾಳಿಸಿದಜಯಕಾಮಿನಿಯ ಜಂ। ಘಾಳಿತನವನು ನಿಲಿಸಿ ನಿನ್ನಯ । ತೋಳಿನಲಿ ತೋರುವೆನು ವೈದೋರೆಂದರವನಿಪನ ॥ ೩೫ ॥ ಒಪ್ಪದಿದು ಭೀಷ್ಮಾದಿಯರೌವನ । ದರ್ಪದಲಿ ಜಾರಿದಜಯಾಂಗನೆ। ಮುಪ್ಪಿನಲಿ ನಮಗೊಲಿವುದರಿದೇಕಾಕಿಯಾದವಳೆ ॥ ತಪ್ಪಿದುದು ಸಲಿಲವಾಸದೊ । ಳೊಪ್ಪಲಿಡುವೆನು ನಾಳೆ ನೀವ್ ತೊಲ । ಗಿಪ್ಪುದಿಂದಿನೊಳಿದನವನಿಪನಾಕೃಪಾದಿಗಳ ॥ ೩೬ ॥ ಇವೆ ಮಹಾಮಂತ್ರಾಸ್ತ್ರಸಂತತಿ । ಇವೆ ಮಹಾಥರ್ವಣಸಂಸ್ಕೃತಿ । ಪವನಸುತಾಪೇಕ್ಷಂಗಳಿವೆ ತ್ರೈರಥಿಕರೊಂದಾಗಿ ॥ ಅವನಿಪತಿನೀ ಸೇಸದಳಿ ಮಿ । ಕ್ಕವರಶೇಷವಿರೋಧಿವರ್ಗಕೆ । ದಿವವೊ ಧರೆಯೋ ನೋಡಲಿಸ್ನಹುದೆಂದನಾದ್ರೌಣಿ ॥ ೩೭ ॥ ಸೇಸದೆಳೆದನು ಭೀಷ್ಮನಗ್ಗದ । ಭಾಸೆ ನಿಮ್ಮಯ್ಯನಲಿ ಗತವಾ । ಯ್ತೀಸ ಪತಿಕರಿಸಿದನು ಕರ್ಣನ ಸಂದು ನೀನರಿಯ ॥ ಓಸರಿಸಿದನ ಮಾದ್ರಪತಿ ಬಳಿ । ಕೈಸು ಬಂದುದು ದೈವದೊಲುಮೆಯ । ಲೈಸರಳ ಸೀವೇಸ ಮಾಡುವಿರೆಂದನಾಭೂಪ ॥ ೩೮ ॥ ರಣದೊಳಾಗಾಂಗೇಯ ನಿಮ್ಮಡಿ । ಗುಣವ ತೋರುವೆಸಪ್ಪರವರಿಂ । ದೆಣಿಸಿಕೊಳು ಮುಂವಡಿಯನಗ್ಗದಸೂತನಂದನನ ॥ ರಣಕೆ ನಾಲ್ವಡಿ [illegible]ರಾಜನೆ । ಹೊಣಿಕೆಗ್ಗೆದು ಸುಶರ್ಮಕಶಕುನಿಯು । ಬಣಗುಗಳು ಸರಿಯಿಲ್ಲ ನೋಡೇಳೆಂದನಾ

ದ್ರೌಣಿ ॥ ೩೯ ॥ ಖರೆಯಲ್ಕೆ ನೀವ್ ಉಭಯರಾಯರ । ಗುರುಗಳಲಿ ಕುಂದಿಲ್ಲ ಕೃಪರೇ । ಹಿರಿಯ ರಾಚಾರಿಯರು ಯಾದವರೊಳಗೆ ಕೃತವರ್ಮ ॥ ಗರುವರ್ತ್ತೆ ನೀವಿಲ್ಲಿ ರಣಬಾ। ಹಿರರೆ ಸಾಕಂತಿರಲಿ ಸು ಕೃತದ । ಲರೆಗೆಲಸಿಗಳು ನಾವು ನಿಮ್ಮಲಿ ಕೊರತೆಯಿಲ್ಲೆಂದ ॥ ೪೦ ॥ ಅರಸ ಕೇಳತಿಸುಕೃತವನು ವಿ । ಸ್ತರಿಸುವೆನು ಪೂರಾಯವೆನೆ ಕಾ । ಹುರದನುಡಿ ಬೇಡೇಳು ನಡೆವುದು ಹಸ್ತಿನಾಪುರಿಗೆ ॥ ಅರಿಗಳ್ಕೆ ತಂಪೌಕಿದೊಡೆ ಗಜ। ಪುರದ ದುರ್ಗವ ಬಲಿದು ನಿಲುವುದು । ಪರಮಮಂತ್ರವಿದೆಂದನಶ್ವತ್ಥಾಮನವ ನಿಪಗೆ ॥ ೪೧ ॥ ಸಲಿಲವಾಸದೊಳಿಂದಿನಿರುಳನು । ಕಳಿದೆನಾದೊಡೆ ಪಾಂಡುಪುತ್ರರ । ಗೆಲುವೆನುದಯ ದೊಳಿದುವೆ ನಿಶ್ಚಯವೆನ್ನ ಚಿತ್ತದಲಿ॥ ಅಳುಕಿ ಕದನದೊಳೋಡಿದೊಡೆ ಸಲೆ। ಲಲನೆಯರ ಮರೆಗೊಂಬೆನೇ ನೀವ್। ತೊಲಗಿ ಭೀಮನ ಬೇಹು ಬಹುದಿರಬೇಡ ನೀವೆಂದ ॥೪೨॥ಅರಸ ಕೇಳ್ಕೆ ದೈವಯೋಗವ। ಪರಿಹರಿಸಲಾರಳವು ಪವನಜ । ನರಮಸೆಯ ಮೃಗಬೇಂಟೆಕಾರರು ಮಾಂಸಭಾರದಲಿ ॥ ಬರುತ ನೀರಡಸಿದರು ಕಂಡರು । ಸರಸಿಯನು ನೀರ್ಗುಡಿಯಲ್ಕೆತಂ । ದಿರಿಸಿದರು ತೀರದಲಿ ಬಹಳಾಮಿಷದಕಂಬಿಗಳ ॥ ೪೩ ॥ ಚರಣವದನವ ತೊಳೆದು ನಿರ್ಮಳತರವರಾಂಬುವನೀಂಟಿದರು ಕೃಪ।ಗುರುಸುತರ ನುಡಿಗಳನು ನಡುನೀರಿನಲಿ ನೃಪಧ್ವನಿಯ ॥ ಅರಿದರಿವರಾಲಿಸಿದರೇನಿದು । ಕುರುಪತಿಯ ತತ್ಸಭಟವಾಚೋ । ತ್ತರವಲಾ ಲೇಸಾಯ್ತೆನುತ ಕೇಳಿದರು ಮರೆವಿಡಿದು ॥ ೪೪ ॥ ಆಯಿತಿದು ನೃಪ ರಾಜಕಾರ್ಯದ । ದಾಯಕಿದ್ದುದು ಫಲವಲಾ ಕುರು। ರಾಯಗುಪ್ತನಿವಾಸವಾರ್ತಾಪ್ರದವಲಾ ನಮಗೆ ॥ ಕಾಯದಿರಿ ಕಂಡಾಸರೋಜದ। ತಾಯೆ ಸರಸಿಯೆನುತ್ತ ಹಾಯ್ದರು । ವಾಯುತನುಜನ ಬೇಂಟೆಕಾರರು ನಗುತ ಪಾಳೆಯಕೆ ॥ ೪೫ ॥ ಅರಸ ಕೇಳ್ ಸಂಶಪ್ತಕರ ಸಂ । ಹರಿಸಿ ಶಕುನಿಯ ಮುರಿದು ಕಳನಲಿ। ದೊರೆಯ ಕಾಣದೆ ಭೀಮಸೇನಾದಿಗಳ ದುಗುಡದಲಿ ॥ ಹರಿಸಿದರು ದೂತರನು ಕೌರವ । ಧರಣಿಪನ ಪಾಳೆಯಕೆ ಹಸ್ತಿನ । ಪುರಿಗೆ ಕೂಡೆ ದಿಗಂತದಲಿ ಚರರರಸಿದರು ನೃಪನ ॥ ೪೬ ॥ ಹರಿದು ದೂತರು ನೃಪನ ಕಾಣದೆ । ಮರಳಿದೊಡೆ ಯಮಸೂನು ದುಗುಡದ । ಭರದ ಭಾರವಣೆಯಲಿ ಹೊಕ್ಕರು ತಮ್ಮ ಪಾಳೆಯವ ॥ ಕುರುನೃಪತಿ ತಪ್ಪಿದನು ಭೀಷ್ಮಾ । ದ್ಯರ ವಿಜಯ ನಿಷ್ಫಲವು ಹಸ್ತಿನ । ಪುರದ ಸಿರಿ ಜಾರಿದಳು ನಮಗೆಂದರಸ ಬಿಸುಸುಯ್ದ ॥ ೪೭ ॥ ಹೇಣನ ಬಗಿದರಸಿದರು ಕರಿಗಳ। ಹೆಣಿದವಲಿ ನೋಡಿದರು ರಥಸಂ । ದಣಿಗಳೊಟ್ಟಿಲ ಕೆದರಿ ಭೀಷ್ಮನ ಸರಳ ಮಂಚದಲಿ ॥ ಹೇಣಗಿದರು ಭಗದತ್ತನಾನೆಯ । ಸಣೆದು ನೋಡಿದರರಣವಾರಿಯ । ಕೆಣಕಿ ಕೂಡರಸಿದರು ಚಾರರು ಕಣನ ಚೌಕದಲಿ ॥೪೮ ॥ ಹರಿಹರಿದು ಕೂಡರಸಿ ದೂತರು । ಮರಳಿ ಬಂದರು ದುಗುಡಭರದಲಿ । ಬೆರಳ ಮೂಗಿನಲಿದ್ದುದವನಿಪಸಹಿತ ಪರಿವಾರ ॥ ಇರುಳ ಬೇಗೆಯ ಚಕ್ರವಾಕಕೆ । ತರಣಿ ತಲೆದೋರುವವೊಲಟವೀ । ಚರರ ರಥಸದ ಭಂಗಿಭಾವನೆ ಚಿತ್ರವಾಯ್ತೆಂದ ॥ ೪೯ ॥ ತಂದವಮಾಂಸದ ಕಂಬಿಗಳನು ಪು । ಳಿಂದರೊಪ್ಪಿಸಿ ಭೀಮಸೇನನ । ಮಂದಿರವ ಸಾರಿದರು ಕಂಡರು ಜನದ ಕಳವಳವ ॥ ಇಂದಿನೀಸಂಗ್ರಾಮಜಯದಲಿ । ಬಂದಜಾಡ್ಯವಿದೇನು ಬಿನ್ನಹ । ವೆಂದು ಸಲುಗೆಯ ಶಬರಪತಿ ನುಡಿಸಿದನು ಪವನಜನ ॥ ೫೦ ॥ ರಣವಟದೊಳೇಕಾದಶಾಕ್ಷೌ । ಹಿಣಿಯ ಗೆಲಿದುದು ವಿಫಲವಾದುದು । ಜಣುಗಿದೆರಿನೃಪನಾವಜವನಿಕೆಯೊಳಡಗಿದನೊ ॥ ತೃಣವನದೊಳಿರುಬಿನಲಿ ಮೆಳೆ ಸಂ । ದಣಿಗಳಲಿ ಮರಗೋಡಿನಲಿ ಮೃಗ ।ಗುಣ

ದ ನೆಲೆಯಲಿ ಕಾಣಿರೇ ನೀವೆಂದನಾಭೀಮ ॥ ೫೧ ॥ ಆದರಕಟಾ ಬಿನ್ನಹವನೀ । ವಾದರಿಪುದೆನೆ ತು ಷ್ಟನಾಗಿ ವೃ । ಕೋದರನು ಕರೆಸಿದನು ಪರಿಮಿತಕಾಪ್ಪುಳಿಂದಕರ॥ ಅದುದೇನೆಲೆಕುರುಪತಿಯು ದುರ್ಭೇ ದವಿದು ಮೆಚ್ಚಿಂಟೆ ನಿನಗೆನ । ಲಾ ದುರಾತ್ಮಕನರುಹಿದನು ಕೇಳೆಲೆಮಹೀಪಾಲ ॥ ೫೨ ॥ ಜೀಯ ಕುರುಪತಿ ಗುಪ್ತದಲಿದ್ದೆಪ್ಪ । ಪಾಯನನ ಸರಸಿಯಲಿ ಸಮರವಿ। ದಾಯತದವಾರ್ತೆಯನು ತನ್ನವರೊ ಡನೆ ತೀರದಲಿ ॥ ಬಾಯಿಗೇಳಿಸುತಿರ್ದನಾವ್ ತ । ತ್ತೋಯಪಾನಕೆ ಬಂದು ಕಂಡೆವು । ರಾಯನಂಘ್ರಿ ಗಳಾಣೆಯೆಂದನು ಶಬರನನಿಲಜಗೆ ॥ ೫೩ ॥ ಇತ್ತನವರಿಗೆಯಂಗಚಿತ್ತವ । ನುತ್ತಮಾಂಬರವೀರನೂ ಪುರ । ಮುತ್ತಿನೇಕಾವಳಿಯ ಕರ್ಣಾಭರಣಮುದ್ರಿಕೆಯ ॥ ಹೊತ್ತಹರುಷದ ಹೊಳೆವಕಂಗಳ। ತೆತ್ತಿ ಸಿದಪುಳಕದ ಸರ್ಥಾಡಿಕೆ । ವೆತ್ತಸುಮ್ಮಾನದಲಿ ಬಂದನು ರಾಯನರಮನೆಗೆ ॥೫೪॥ ಗುಡಿಯ ಕಟ್ಟಿ ಸು ಜೀಯ ಚರರಿಗೆ। ಕೊಡು ಪಸಾಯವನವನೃಪನ ತಲೆ । ವಿಡಿದರ್ಪ್ಪೆ ದ್ವೈಪಾಯನ ಸರೋವರದ ಮ ಧ್ಯದಲಿ ॥ ಅಡಗಿದನು ತಡಿವಿಡಿದು ತನ್ನವ । ರೊಡನೆ ಮಾತಾಡಿದನು ಗಡ ನಿ । ಮ್ಮಡಿಯೆ ಬಲ್ಲಿರಿ ರಾಜಕಾರ್ಯವನೆಂದನಾಭೀಮ ॥ ೫೫ ॥ ಕರೆ ಮುಕುಂದನನರ್ಜುನನ ಸಂ । ವರಣೆ ಬರಲಿ ಶಿಖಂಡಿ ಪಾಂಚಾ । ಲರಿಗೆ ನೇಮಿಸು ಕರೆಸು ದೃಷ್ಟದ್ಯುಮ್ನಸೃಂಜಯರ ॥ ಕರಿತುರಗವಿಶ್ರಮವನವನಿಂ । ದಿ ರುಳು ಮಾಡಲಿ ಬೇಗ ಪೊರಮಡು । ಪೊರಮಡೆನೆ ನಿಸ್ಸಾಳ ಸೂಳೈಸಿದವು ಸನ್ನೆಯಲಿ ॥ ೫೬ ॥ ಅ ವರ ಸುಮ್ಮಾನವನು ಸೇನಾ । ನಿವಹರಭಸವ ಭೂರಿಭೇರಿಯ । ವಿವಿಧವಾದ್ಯಧ್ವನಿಯ ರಥಹಯಗಜದ ಗರ್ಜನೆಯ ॥ ಇವರು ಕೇಳಿದರಕಟಕಟ ಕೌ । ರವನ ಗುಪ್ತಪ್ರಕಟವಾದುದೆ।ಶಿವಶಿವಾ ಹರಿ ಸರ್ವಗತನ ಹನೆಂದನಾದ್ರೌಣಿ ॥ ೫೭ ॥ ಏಳು ಕುರುಪತಿ ಪಾಂಡುನಂದನ । ರಾಳು ಬರುತಿದೆ ನಾವು ನಾಲ್ವರು । ಕಾಳಗವನಂಘೈಸುವೆವು ಬಿಡುಬಿಡು ಸರೋರುವರ ॥ ಹೇಳು ಮನವೇನೆನಲು ನೀವಿ । ನ್ನೇಳಿ ದೂರದಲಿ ರಿ ವಿರೋಧಿಗ । ಳಾಳು ಮಾಡುವುದೇನು ಸಲಿಲದೊಳೆಂದನಾಭೂಪ ॥೫೮॥ ಅನಿಮಿಷರು ಗಂಧರ್ವ ಯಕ್ಷರು । ಮುನಿದು ಮಾಡುವುದಿಲ್ಲ ಮಾಯದ । ಮನುಜರಿಗೆ ತಾ ಸಾಧ್ಯವಹನೇ ತನ್ನನರಿಯರಲಾ॥ ವಿನುತಸಲಿಲಸ್ತಂಭವಿದ್ಯೆಯೊ । ಳೆನಗಿರವು ಪಾತಾಳದಲಿ ಯಮ । ತನುಜನೇಗುವ ರೂಹುದೋರದೆ ಹೋಗಿ ನೀವೆಂದ ॥ ೫೯ ॥ ಉರವಣಿಸಿತರಿಸೇನೆ ಮುತ್ತಿತು । ಸರಸಿಯನು ಪೊಡ್ಚೈಸಿ ಗಿಡಮೆಳೆ। ತರುಲತೆಯನೊಳಕೊಂಡು ನಿಂದುದು ಚತುರಚತುರಂಗ ॥ ಚರರ ಗರ್ಜನೆ ವಾದ್ಯರವ ಕರಿ । ತುರಗ ರಥನಿರ್ಘೋಷ ಪರ್ವತ । ಬಿರಿಯ ಮೊಳಗಿತು ಸಿಲುಕಿದನು ಸಿಲುಕಿದನು ದೊರೆಯೆನುತ ॥ ೬೦ ॥ ಇವರು ತಿರುಗಿದರಿತ್ತ ದೈವ। ವ್ಯವಹರಣೆ ಫಲಿಸುವುದಲಾ ಕೌ । ರವನ ಸಿರಿ ಪುಣ್ಯಾಂಗನಾವಿಭ್ರಮವ ವರಿಸತಲಾ ॥ ಅವರಿಗಿದನಾರರುಹಿದರೊ ಪಾಂ। ಡವರಿಗಾವುದು ಕೊರತೆ ಪುಣ್ಯ । ಪ್ರವರಗದುಗಿನವೀ ರನಾರಾಯಣನ ಕರುಣದಲಿ ॥ ... ... ॥ ೬೧ ॥

ಅಂತು ಸಂಧಿ ೪೬ಕ್ಕೆ ಪದ ೨೫೭೫ಕ್ಕಂ ಮಂಗಳಮಸ್ತು

ಐದನೆಯ ಸಂಧಿ.

॥ಸೂಚನೆ॥ ಮುತ್ತಿ ಮುಚ್ಚವಲಿಸಿವರು ಕುರುರಾ । ಜೋತ್ತಮನನುದಕದಲಿ ಹೊರವಡಿ । ಸುತ್ತ ಕಂಡ
ರು ಪಾಂಡುತನುಜರು ರೋಹಿಣೀಸುತನ ॥

ಪದ ॥ ಕೇಳು ಧೃತರಾಷ್ಟ್ರಾವನಿಪ ರಿಪು । ಜಾಲ ಜಡಿದುದು ಕೊಳನ ತಡಿಯಲಿ । ತೂಳಿದುದು ಬಲುಬೊಬ್ಬೆಯಬ್ಬರವಭ್ರಮಂಡಲವ ॥ ಸೂಳವಿಸಿದವು ಲಗ್ಗೆಯಲಿ ನಿ । ಸ್ಸಾಳಬಹುವಿಧವಾದ್ಯರವ ಹೆ । ಗ್ಗಾಳೆಗಳು ಚೀರಿದವು ಬೈಸಿಕೆ ಬಿಡೆ ಕುಲಾದ್ರಿಗಳು ॥ ೧ ॥ ತಳಮಳಲ ಮೊಗೆಮೊಗೆದು ಕವಡಿತು । ಕೊಳನ ಜಲಚರನಿಚಯ ಬಲುಬೊ । ಬ್ಬುಳಿಕೆ ಮಿಾಯೊಬ್ಬುಳಿಗೆ ನೆರೆದವು ಬೆದರ ಹೊಯ್ಲಿನಲಿ ॥ ದಳವ ಬಗಿದಂಬುಜವ ಮೊಳಡಗಿದ । ವಳಿನಿಕರ ಹಾರಿದವು ಹಂಸಾ। ವಳಿ ಜವಾಯ್ಲರತ ನದಿ ಜಗುಳ್ದವು ಚಕ್ರವಕ್ಕಿಗಳು ॥ ೨ ॥ ಬಂದುದರಿಬಲ ಕೊಳನತೀರದ । ಲಂದು ವೇಢೈಸಿದರು ಸರಸಿಯ । ಬಂದಿಕಾರರು ಬೊಬ್ಬಿರಿತದಬ್ಬರಕೆ ಧರೆ ಬಿರಿಯೆ ॥ ಅಂದವಳದಲೈತಂದು ಧರ್ಮಜ । ನಂದನಜ್ರ್ಜನಭೀಮಯಮಳರು । ಕುಂದ ಸಾತ್ಯಕಿ ದ್ರುಪದಸೂನುಶಿಖಂಡಿಗಳುಸಹಿತ ॥ ೩ ॥ ವರಯುಧಾಮನ್ಯೂತ್ತಮೌಂಜಸ । ರಿರಲು ಪಂಚದ್ರೌಪದೀಸುತ । ರರಸ ನಿಮ್ಮಯುಯುತ್ಸುಸೃಂಜಯಸೋಮಕಾದಿಗಳು ॥ ಕರಿಗಳೈನೂರೈದುಸಾವಿರ । ತುರಗಪಾಯ್ದಳವೆಂಟುಸಾವಿರ । ವೆರಡುಸಾವಿರರಥವಿದರಿ ಮೋಹರದಪರಿಶೇಷ ॥ ೪ ॥ ದೇವ ಕಂಡಿರೆ ಕುರುಪತಿಯ ಮಾ । ಯಾವಿಡಂಬದ ವಿದ್ಯೆಯನು ನಿ । ರ್ಭಾವನಾವಿರ್ಭೂತಸಲಿಲಸ್ತಂಭಡಂಬರವ ॥ ಆವುದಲ್ಲಿಯ ವಿಹಿತಸಮರ । ವ್ಯಾವಹಾರಿಕವಿಷಯ ತಪ್ಪದೆ। ನೀನು ಬೆಸಸುವುದೆಂದನರಸನು ದೇವಕೀಸುತನ ॥ ೫ ॥ ಭರತವಂಶಲಲಾಮ ಕೇಳ್ ನೃಪ । ವರ ರ ಪದ್ಧತಿ ಕಂಟಕದಿನು । ದ್ಧರಿಸುವುದು ಕಂಟಕರ ಮಾಯಾವಿಗಳ ವಿದ್ಯೆಗಳ ॥ ಪರಿಹರಿಸುವುದು ಮಾಯೆಯಲಿ ಪ್ರತಿ । ಗರಳದಲಿ ಗರಳವನು ಮಾಯಾ । ಪರರು ಮಾಯೋಪಾಯವೈದ್ಯರು ನೃಪತಿ ಕೇಳೆಂದ ॥ ೬ ॥ ಮರಣವೊಂದಿಂಗಾಗದಂತಿರೆ । ವರವ ಕೊಂಡು ಹಿರಣ್ಯಕಾಸುರ । ಸುರನರೋರಗರನು ವಿಭಾಡಿಸಿ ಧರ್ಮ ಪದ್ಧತಿಗೆ ॥ ಧರಧುರವ ಮಾಡಿದೊಡೆ ನರಕೇ। ಸರಿಯ ರೂಪಿನಲಾದಿವಿಷ್ಣುವ । ಭರನು ಗಲಿದನು ಮಾಯೆಯಲಿ ಮಾಯಾ ಪ್ರಪಂಚವನು ॥ ೭ ॥ ಲಲಿತವೈದಿಕಧರ್ಮಮಾರ್ಗವ । ನಳಿದು ಹೆಚ್ಚಿದಕಾಲನೇಮಿಯ। ತಲೆಯ ಕೊಂಡನು ಚಕ್ರದಲಿ ದೈತ್ಯಾರಿ ಪೂರ್ವದಲಿ ॥ ಬಲನ ಭಂಜಿಸ ವೃತ್ರನನು ಶ್ರುಂ । ಖಲಿತಮಾಯದ ಮಾಯದಿಂದವೆ।ಬಲವಿರೋಧಿ ವಿಭಾಡಿಸಿದನವನೀಶ ಕೇಳೆಂದ ॥ ೮ ॥ ಹರನ ವರದಲಿ ಹೆಚ್ಚಿಭಸ್ಮಾ । ಸುರನು ಶಿವನ ವಿಭಾಡಿಸಿದೊಡೆ । ಬ್ಬರದವನನುರುಹಿದನು ಹರಿ ಮಾಯಾ ಪ್ರಯೋಗದಲಿ ॥ ಸುರರ ನೆರೆಯಾಳಿದನ ಭುವನವ। ನೊರಸಿದಾರಾವಣನ ರೂಢಿಯ। ಶಿರವ ನರರೂಪಿಂದ ಚತುರತೆಯಲಿ ರಾಮ ಖಂಡಿಸಿದ ॥ ೯ ॥ ಎಮಗೆ ತಾಯೊಡಹುಟ್ಟಿದನ ನಿ। ರ್ಮಮತೆಯಲಿ ನಿರ್ದಾಟಿಸಿದೊಡಾ । ಕ್ರಮದಲೇ ಕಂಸಂಗೆ ಹಿಂಸಾಕೃತಿಯ ರಚಿಸಿದೆಲಾ ॥ ಸಮರದಲ್ಲಿ ಸೃಗಾಲನೃಪನಾ । ಕ್ರಮಿಸಿದನು ತಕ್ಕನಲಿ ಮಾಯಾ । ತಿಮಿರವನು ಮಾಯೆಯಲಿಗೆಲಿದೆನು ರಾಯ ಕೇಳೆಂದ ॥ ೧೦ ॥ ಕಾಲಯವನನ ದಂತವಕ್ರನ । ಸಾಲುವನ ಮಾಗಧನ ನರಕನ । ಸೀಳಿದೆನು ಕೃತಮಾ

ಯರನು ಮಾಯಾಪ್ರಪಂಚದಲಿ ॥ ಧಾಳೆರನು ಧವಳೆರನು ತಕ್ಕಿನ । ಠೌಳಿಕಾರರ ವಿದ್ಯೆಯೆಲ್ಲವ । ನಾ
ಳಿಗೊಂಡರೆ ದೋಷವಿಲ್ಲವನೀಶ ಕೇಳೆಂದ ॥ ೧೧ ॥ ದ್ಯೂತಮೃಗಯಾವ್ಯಸನಿಗಳು ನೃಪ । ಜಾತಿಗಾದ
ವಿನೋದಕಪಟ । ದ್ಯೂತವಿದು ನೃಪಧರ್ಮವೇ ಮಾಯಾಭಿಯೋಗದಲಿ ॥ ಸೋತರಿಳೆಯನದಂತಿರಲಿ
ನಿ । ರ್ಭೀತಿಯಲಿ ನಿಮ್ಮ ರಸಿಯುಟ್ಟುದ । ನೀತ ಸುಲಿದನು ಯಿವನು ಸುಜನನೆ ನೃಪತಿ ಹೇಳೆಂ
ದ ॥ ೧೨ ॥ ಐಹಿಕದ ಸಂಭಾವನೆಯು ಸಂ । ಮೋಹನಕೆ ಮರುಳಾಗಿ ಸುಕೃತದ । ದ್ರೋಹವಾಗದಲೇ
ಸುಯೋಧನವಧೆಯುದೆಸೆಯಿಂದ ॥ ಈಹದಕೆ ಬಿನ್ನೈಸಿದೊಡೆ ನೀ । ವಾಹದಕೆ ಧರ್ಮಾರ್ಥಶಾಸ್ತ್ರವ ॥
ನೂಹಿಸಿದರೆಂದರಸನುಡಿಸಿದನಿತ್ತ ಕುರುಪತಿಯು ॥ ೧೩ ॥ ಏಳು ಕೌರವರಾಯ ಸಲಿಲ । ವ್ಯಾಳನೇ
ನೀನಕಟ ಜಲದೊಳ । ಗಾಳುವರೆ ಕಾಳಾಯ್ತು ನಿನ್ನಲಿ ಗರುವಶಶಿವಂಶ ॥ ಕಾಳಗದೊಳದ್ದಿದೆ ಸ
ಹೋದರ । ಜಾಲಪುತ್ರಜ್ಞಾತಿಬಂಧು ನೃ । ಪಾಲರನು ನೀನೀರೊಳಡಗಿದೆ ಕಷ್ಟ ಹೋಗೆಂದ ॥ ೧೪ ॥
ಜಾತಮಾತ್ರದಮೇಲೆ ಬಂದವು । ಖ್ಯಾತಿವಿಖ್ಯಾತಿಗಳು ನಮಗೆನೆ । ಖ್ಯಾತರಾದೆವು ನಾವು ನಿರ್ಮಳ
ಸೋಮವಂಶದಲಿ ॥ ಭೀತಿಯಲಿ ನೀ ನೀರ ಹೊಕ್ಕೊಡೆ । ಮಾತುಹೊರದೇನಮ್ಮನಕಟಾ । ಬೂತುಗಳ
ಕೈಬಾಯ್ಗೆ ಬಂದೈತಂದೆ ಕುರುರಾಯ ॥ ನಾಡೊಳರ್ಧವ ಕೊಡದೆಹೋದರೆ । ಬೇಡಿದೈದೂರುಗಳ
ಕೊಡೆನಂ । ದೇಡಿಸಿದೆ ಸೂಚ್ಯಗ್ರದಲಿ ಸಂಮಿಳಿತಧಾರುಣಿಯು ॥ ನಾಡೆ ನೀ ಕೊಡೆನೆಂದು ದರ್ಪವ ।
ಮಾಡಿ ಸಕಲಮಹೀತಳವ ಹೋ । ಗಾಡಿ ಹೊಕ್ಕೈ ಜಲವನಾವೆಡೆ ನಿನ್ನ ಛಲವೆಂದ ॥ ೧೬ ॥ ಹೇಳಿ
ದರಲಾ ವಿದುರ ಭೀಷ್ಮರ । ಮೇಲುದಾಯದ ತಾಗುಥಟ್ಟನು । ಕೇಳದಖಿಳಾಹಿಣಿಯು ಕ್ಷತ್ರಿಯರ ।
ತಡೆಗಡಿಸ್ಸು ॥ ಕಾಳಗವನೊಟ್ಟೈಸಿ ನೀರೊಳ । ಗಾಳುವುದು ನಿನಗಾರು ಬುದ್ಧಿಯು । ಹೇಳಿದರು ನುಡಿ
ನುಡಿ ಸುಯೋಧನಯೆಂದನಾನೃಪತಿ ॥ ೧೭ ॥ ಕಂಡೆನೆಂದೊಬ್ಬನ ಪಲಾಯನ । ಪಂಡಿತನನುತ್ತರನ
ನಾತನ । ಗಂಡ ನೀನಾದೈ ಪಲಾಯನಸಿರಿಯ ಸೂರೆಯಲಿ ॥ ಭಂಡರಿಬ್ಬರು ಭೂಮಿಪರೊಳಾ । ಭಂಡ
ನೀನೇ ಮಿಗಿಲು ಸಲಿಲದ । ಕೊಂಡವನು ಹೊಕ್ಕನೆ ವಿರಾಟಜನೆಂದನಾರಾಯ ॥ ೧೮ ॥ ಅಡವಿಯೇ
ನೆಲೆ ಪಾಂಡುಸುತರಿಗೆ । ಕೊಡೆನುಧರಣಿಯನೆಂದು ಖಡುಗವ ಝಡಿದೆಲಾ ನಿನ್ನೋಲಗದ ನಾರಿಯರ
ಸಂಮುಖದಿ ॥ ಖಡುಗವನು ಖಳನೊಳಗೆ ಹಾಯಿಕಿ । ಮಡುಗೊಳನ ನೀ ನೋಡಿ ಹೊಕ್ಕೊಡೆ । ಮಡ
ದಿಯರು ತಮತಮಗೆ ನಗರೇ ಹೊಯ್ದು ಕರತಳವ ॥ ೧೯ ॥ ಜೀವಸಖರಾಧೇಯನಾತನ । ಸಾವಿನಲಿ
ಹಿಂದುಳಿದ ಸೋದರ । ಮಾವಶಕುನಿಯು ಸೈಂಧವನ ದುಶ್ಶಾಸನಾದಿಗಳ ॥ ಸಾವಿನಲಿ ಹಿಂದುಳಿದ
ಜೀವನ । ಜೀವನವ ಜೀವನ ನಿವಾಸದೊ । ಳಾವಗಸುವಿಕೆ ಕೊಳನ ಹೊರದುಡು ಕೈದುಕೊಳ್ಳೆಂ
ದ ॥ ೨೦ ॥ ಓಡಿ ಕೈದುವ ಹಾಯ್ಕಿ ರಣದಲಿ । ಹೇಡಿಗರ ಹಿಡಿದಳುಕಿ ಬದುಕಿದ । ಗೂಡಿತುದೆ ಗ
ರುವಾಯಿಯಲಿ ಕಲ್ಪಾಂತಪರಿಯಂತ ॥ ಓಡಿ ಪಾತಾಳದಲಿ ಹೊಕ್ಕೊಡೆ । ಕೂಡೆ ಸಂಧಿಸಿ ನಿನ್ನ
ಬೇಂಟೆಯ । ನಾಡದಿಹವೇ ನಾವು ಕುರುಪತಿ ಕೈದುಕೊಳ್ಳೆಂದ ॥ ೨೧ ॥ ಭರತನಹುಷಯಯಾತಿಗಳ
ಸಂ । ವರಣಸಗರದಿಳೀಪನೃಗರಘು । ವರಪುರೂರವದುಂದುಮಾರಭಗೀರಥಾದಿಗಳು ॥ ಧರಣಿಪಾಲ
ರನಂತಸಮರದೊ । ಳರಿನೃಪರ ಸವರಿದರು ನಿನ್ನವೊ । ಲುರುಳಿದವರಿಲ್ಲುದಕದಲಿ ನೃಪ ಕೈದುಕೊ
ಳ್ಳೆಂದ ॥ ೨೨ ॥ ಕೊಳನ ಬಿಡು ಕಾದೇಳು ಹಿಂಪಣಾ । ಹಳಿವ ತೂಡ ಹೇರಾಳ ಬಾಂಧವ । ಬಳಗ

ಭೂಮಿಪಾಲಶ್ವರರ ಬಹಳಾ ಕ್ಷೌಹಿಣೀದಳವ ‖ ಅಳಿದಕೀರ್ತಿಯು ಕೆಸರ ತೊಡೆ ಭೂ । ವಳಯವಮಾನ್ಯ ನು ದೈನ್ಯವೃತ್ತಿಯು । ಬಳಸುವರೆ ಸುಡು ಮರುಳೆ ಕುರುಪತಿ ಕೈದುವಿಡಿಯೆಂದ ‖೨೩‖ ಅನಿಲಸುತ ಬಾ ಕುರುಕಕುಲಾನ್ವಯ । ವನದವಾನಲ ವೈರಿ ಪುತ್ರಜ।ಘನಶರಧಿವಡಬಾಗ್ನಿ ಬಾರೈ ನುಡಿಸು ಕುರು ಪತಿಯು ‖ ಎನೆ ಹಸಾದವ ಹಾಯ್ಕಿ ಯಮಸಂ । ದನನ ನೇಮವ ಕೊಂಡು ಕೌರವ । ನನು ವಿಭಾಡಿ ಸಿ ಬೈದು ನುಡಿದನು ಖಾತಿಯಲಿ ಭೀಮ ‖ ೨೪ ‖ ವಿಷವನಿಕ್ಕಿದೆ ಹಾವಿನಲಿ ಬಂ । ಧಿಸಿದೆ ಮಡುವಿ ನೊಳಿಟ್ಟು ಬಳಿಕು । ಬ್ಬಸವ ಮಾಡಿದೆ ಹಿಂದೆ ಮನವಮುನಿಸಾಗಿ ಬಾಲ್ಯದಲಿ ‖ ವಸತಿಯಲಿ ಬಳಿಕಗ್ನಿ ದೇವರ । ಪಸರಿಸಿದೆ ಪುಣ್ಯದಲಿ ನಾವ' ಜೀ । ವಿಸಿದೆವಡಗಿದೊಡಿನ್ನು ಬಿಡುವೆವೆಯೆಂದನಾಭೀಮ ‖ ೨೫ ‖ ಎಲವೊ ರಾಯನ ಪಟ್ಟದರಸಿಯು । ಸುಲಿಸಿದಾಭಲವೆಲ್ಲಿ ಹಗೆಗಳ । ಹಳುವದಲಿ ಹೊಗಿಸಿದ ಮಹಾಪೌರುಷದ ಸಿರಿಯೆಲ್ಲಿ ‖ ಖಳಶಿರೋಮಣಿ ನಿನ್ನತಲೆಕೂ। ದಲಲಿ ಕೈದುವ ಕಟ್ಟಿ ಖೇಚರ । ನೆ ಳೆಯ ಬಿಡಿಸಿದನಾರು ಕೌರವ ಯೆಂದನಾಭೀಮ ‖ ೨೬ ‖ ಭೀಮನೆನೆ ಭುಗಿಲೆಂಬರೋಷದ । ತಾಮ ಸವ ಬೀಳ್ಕೊಟ್ಟೆಲಾ ನಿ । ರ್ನಾಮವಾಯಿತೆ ಬಿರುದುಪಾಂಡವತಿಮಿರರವಿಯೆಂಬ ‖ ಭೀಮವನದಾವಾ ಗ್ನಿ ಹೊರವಡು । ಭೀಮಭಾಸ್ಕರರಾಹು ಹೊರವಡು । ಭೀಮಗರ್ಜನೆಮಧುರಗೀತವೆ ನೃಪತಿಬಾರೆಂ ದ ‖ ೨೭ ‖ ಕೆಡಹಿ ದುಶ್ಶಾಸನನ ರಕುತವ । ಕುಡಿದವನು ತಾನಲ್ಲಲೇ ನಿ । ನ್ನೊಡನೆಹುಟ್ಟಿದನೂ ರನುಂಗಿದಕಾಲಯಮನಲಾ‖ ಅಡಗಿದೊಡೆ ಬಿಡುವೆನೆ ಭುಜುಜ್ವರ। ಹಿಡಿದು ನಿನ್ನನು ಸೆಳೆದು ರಣದಲಿ। ತೊಡೆಯ ಕಳಚುವಮೃತ್ಯು ಭೀಮನ ಕೈಯ ನೋಡೆಂದ ‖ ೨೮ ‖ ಜಲವ ಹೊಕ್ಕನ ಹುಲ್ಲಕಚ್ಚಿದ । ನರನನುರುಗಿರಿಶಿಖರದಲಿ ಕಾ । ಲ್ತೊಳಿಸಿದನ ವಲ್ಮೀಕಸಂಗತನನು ನಿರಾಯುಧನ ‖ ಕೊಲುವುದನು ಚಿತವೆಂಬಶಾಸ್ತ್ರವೆ । ತಿಳಿದು ನಂಬಿದೆ ನಿನ್ನನೊಬ್ಬನ । ಕೊಲುವುದಕೆ ಶ್ರುತಿಶಾಸ್ತ್ರ ತನಗಿಲ್ಲೆಂದ ನಾಭೀಮ ‖ ೨೯ ‖ ಅರಸನಲಿ ಹಗೆಯಿಲ್ಲ ಯಮಳರು । ತರಳರಲಿ ಮುನಿಸಿಲ್ಲ ಫಲುಗುಣ । ಮುರ ವಿರೋಧಿಸವರ್ಗಭೀಮನ ತನುವ ನೆರೆ ಕಡಿದು ‖ ಮುರುಳ ಬಳಗವ ತಣಿಸಿದರ ಹಿರಿ । ಯರಸನಲಿ ಸಂಧಾನವೆಂಬೀ । ಮರುಳೆ ಕುರುಪತಿ ಭೀಮಸೇನನ ಸೀಳಲೇಳೆಂದ ‖ ೩೦ ‖ ತನತನಗೆ ಸಾತ್ಯಕಿಯು ಮಳರ । ರ್ಜನನು ಪಂಚದ್ರೌಪದೀನಂ । ದನರು ದೃಷ್ಟದ್ಯುಮ್ನಸೃಂಜಯಸೋಮಕಾದಿಗಳು ‖ ಅನುಚಿತವು ಸಲಿಲಪ್ರವೇಶವು । ಜನಪತಿಗೆ ಕರ್ತವ್ಯವೆಂಬುದು । ಜನಜನಿತವೆಂದುಲಿದುದಲ್ಲಿ ಸಮುದ್ರ ಘೋಷದಲಿ ‖ ೩೧ ‖ ಅರಸ ಕೇಳೈ ನಿನ್ನ ಮಗನು । ಬ್ಬರಿಸಿದನು ರೋಷಾಂಚದಲಿ ಗ । ಬ್ಬರಿಸಿದ ಧಿಕಕ್ರೋಧಶಿಖಿಕರಣೇಂದ್ರಿಯಾದಿಗಳು ‖ ತರುಬಿದಂತಃಖೇದಮಂತ್ರಾ । ಕ್ಷರಕೆ ಜವನಿಕೆಯಾದುದಾನಿ ರ್ಭರದ ವೀರಾವೇಶದಲಿ ಪಲ್ಲಟಿಸಿದನು ನೃಪತಿ ‖ ೩೨ ‖ ಮರೆದುದುದಕಸ್ತಂಭಸಲಿಲದ । ಹೊರಗೆ ಬೊಬ್ಬುಳಿಗಳಕೆ ತೆರೆನೊರೆ । ತರುಬಿದವು ಘುಳಿಘುಳಿಸಿ ಬಲುಬುದ್ಬುದದ ಚೂಣಿಯಲಿ‖ ದುರುದು ರಿಪಬಿಸುಸುಯ್ಲ ಸೆಕೆಯಲಿ । ಮರುಗಿ ಕುದಿದುದು ನೀರು ಭೀಮನ । ಬಿರುನುಡಿಯ ಬೇಳಂಬದಲಿ ಬೆಂಡಾದನಾಭೂಪ ‖ ೩೩ ‖ ಜ್ಞಾನವಳಿದುದು ವೀರಪಣದಭಿ । ಮಾನ ಮಸೆದುದು ಮಂತ್ರದೃಷ್ಟಿ ಯು । ಮೌನ ಹೆಬ್ಬೆಳಸಾಯ್ತು ಮೋಹಿದುದಾಹವವ್ಯಸನ ‖ ಧ್ಯಾನವನುಹೊರೆಗಳೆದು ಧಾರಣ । ಸಾ ನ್ನಭಾವಕೆ ನಾಚಿದನು ತವ। ಸೂನು ಕಳವಳವೋದನಹಿತವಚೋವಿಘಾತಿಯಲಿ ‖ ೩೪ ‖ ಜಲಧಿಮಧ್ಯ

ದೊಳೇಳ್ವವಡಬಾ । ನಲನವ್ರೊಲು ತವಕದಲಿ ತಡಿಗು । ಚ್ಛಳಿಸಿದನು ತತ್ಕ್ರೋಧಶಿಖಿ ಕಿಡಿವಸಗೆ ಕಂ
ಗಳಲಿ ॥ ಹೊಳೆವಭಾರಿಯಹೆಗಲಗದೆ ಕರ । ತಳದ ವಿಪುಳಸಘಾಟಗರ್ವದ । ಚಲನಯನದ ಚೆಡಾಳ
ಛಲದ ನೃಪಾಲ ಹೊರವಂಟ ॥ ೩೫ ॥ ಅರಳಿತರಸನ ವದನ ಭೀಮನ । ಹರುಷವುಕ್ಕಿತು ಪಾರ್ಥನು
ಬ್ಬಿದ । ನುರುಮುದದಲಿರೆ ನಕುಲನುಬ್ಬರಿಸಿದನು ಸಹದೇವ ॥ ಹರಕೆಯುಲಿ ದೈವಂಗಳಿತ್ತವು । ವರವ
ನೆಂವರು ದ್ರೌಪದೀಸುತ । ರುರುಶಿಖಂಡಿದ್ರುಪದಸುತಸಾತ್ಯಕಿಗಳೊಲವಿನಲಿ ॥ ೩೬ ॥ ನಗೆಮುಗಿ ಕರ
ತಳವ ಹೊಯ್ದ್ಯೊಂ। ದೊಗುಮಿಗೆಯು ಹರುಷದಲಿ ನಕುಲಾ । ದಿಗಳು ಬೊಬ್ಬಿರಿವಾಲಿವರು ಬಹುವಾ
ದ್ಯ ರಭಸದಲಿ ॥ ಅಗಿದು ಗುಡಿ ಗಟ್ಟಿದವು ಮುಂಗಾ । ಲುಗಳ ಹೊಯ್ಲಲಿ ತೇಜಿಗಳು ಕೈ । ನೆಗಹಿ
ಚಿಯಸೂಚನೆಯಲೊದೆದವು ಪಟ್ಟದಾನೆಗಳು ॥೩೭॥ ಧರಣಿಪತಿ ಕೇಳ್ಕೊಳನ ತಡಿಯಲಿ। ಕುರುಕುಲಾ
ಗ್ರಣಿನಿಂದು ನೋಡಿದ । ನರಿಭಟರ ಸುಮ್ಮಾನವನು ಸುಭ್ರಾಂತಿಚೇತನವ ॥ ಉರವಮಾ ಮಸ್ತಕದ
ಮರುಕೊ । ತ್ತರದ ಝಳ ಝಾಡಿಸಿತು ಸತ್ವ। ಸ್ಫುರಣ ಕಿಡಿಯಿಡಲಮಮ ರೋಷಿತನಾದನಾರಾಯ॥
॥ ೩೮॥ ಘ್ರೂತುಮಝ ಕುರುರಾಯ ಘನಸ । ತ್ವಾತಿಶಯನ್ಕೆ ಕೌರವಾನ್ವಯ । ಜಾತನಲ್ಲಾ ಬುಧ
ಪುರೂರವವಿಕ್ರಮಾಗತರ ॥ ಖ್ಯಾತನಲ್ಲಾ ಬಂದುದೊಂದ । ಖ್ಯಾತಿಸಲಿಲವಗಾಹದುಳಿದಂ । ದೀತನೊ
ಲು ದೊರೆಯಾರು ಸರಿಯೆಂದನು ಮಹೀಪಾಲ ॥ ೩೯ ॥ ಅರಸ ತೊಡು ಕವಚವನು ಚಾಮಿಾ । ಕರ
ಪರಿಷ್ಕೃತವಜ್ರಮಯಬಂ । ಧುರದ ಸೀಸಕವಿದೆ ದುಕೂಲವರಾನುಲೇಪನವ ॥ ಪರಿಹರಿಸಬೇಡೊಲವಿ
ನಲಿ ಪತಿ । ಕರಿಸೆನುತ ಪೆಟ್ಟಿಗೆಯ ಮುಚ್ಚಳ । ದೆರೆದು ಮುಂದಿರಿಸಿದನು ಸೌಹಾರ್ದ್ರದಲಿ ಯಮ
ಸೂನು ॥ ೪೦ ॥ ಪೂರವಿಸಿದನು ಗಂಧವನು ಸರ । ಳೋರೆಪೋರೆಯ ವ್ರೈಯಗಾಯವ। ಹೋರುಗ
ಳ ಮೆತ್ತಿದನು ಘಟ್ಟಿಸಿ ಗಂಧಸಾರದಲಿ ॥ ಸಾರತರಸಾದಿನ ಜವಾದಿಯ । ಭೂರಿಪರಿಮಳದಿಂದವರ
ಕ । ತ್ತೂರಿತಿಲಕವ ರಚಿಸಿ ಗೆಲಿದನು ತಿಗುರ ತವಕದಲಿ ॥ ೪೧ ॥ ತೆಗೆದು ವಜ್ರಾಂಗಿಯನು ವ್ರೈಯ
ಲಿ । ಬಿಗಿದು ಹೊಂಬರಹದ ಸುರತ್ನಾ । ಳಿಗಳ ಬಲುಸೀಸಕವನಳವಡಿಸಿದನು ಸಿರಿಮುಡಿಗೆ॥ ಝಗಝ
ಗಿಪಬೆಳುದಿಂಗಳಿನ ತೆಳು ॥ದಗಡೆನಲು ತೊಳಗುವದುಕೂಲವ । ಬಿಗಿದು ಮೊನೆಮುಂಜೆರಗನಳವಡಿಸಿದ
ನು ಭೂಪಾಲ ॥ ೪೨ ॥ ಗಾಳಿಸಿದಕತ್ತೂರಿಯ ಕರ್ಪೂರ । ವೀಳೆಯವ ಕೊಂಡೆದ್ದು ಸಮರಾ । ಭೀಳ
ಗದೆಯನು ತುಡುಕಿದನು ಪಯಪಾಡನಾರೈದು ॥ ಆಳು ಕವಿಯಲು ರಾವುತರು ಸಮ । ಜೋಳಿಯಲಿ ಸಿ
ಡಿಜೋದರಾನೆಯ । ತೂಳಿಸಲಿ ಸಮರಥರು ಸರಳಿನೊಳೆಂದನಾನೃಪತಿ ॥೪೩॥ಹಿಡಿ ಧನುವನೆಲೆರಾಯ ಪ
ವನಜ । ತುಡುಕು ಗದೆಯನು ಪಾರ್ಥ ಸಮರಕೆ । ತಡೆಯದಿರು ಮಾದ್ರೀಕುಮಾರಕರೇಳಿಕಾಳಗಕೆ ॥
ಮಿಡುಕು ಧೃಷ್ಟದ್ಯುಮ್ನ ಸಾತ್ಯಕಿ । ಹೊಡೆಕರಿಸು ಪಾಂಚಾಲ ನೀವಂ । ಗಡದಲೆಮ್ಮೊಡನೇಳ್ವುದೊ
ಬ್ಬನೆ ನಿಲುವೆ ತಾನೆಂದ ॥ ೪೪॥ ಮೆಚ್ಚಿದನು ಯಮಸೂನು ಛಲ ನಿನ । ಗೊಚ್ಚತವಲ್ಲೈ ವೈರಿಬಲದ
ಲಿ । ಬೆಚ್ಚದಾಡಿದ ಯೋಧರೆಮ್ಮೃವರೊಳಗೊಬ್ಬನನು ॥ ಮೆಚ್ಚಿದವರನು ವರಿಸು ಕಾದುವೃ । ದಚ್ಚ
ರಿಯ ಮಾಡುವುದು ಗೆಲುವಿನ । ನಿಚ್ಚಟನೆ ನೆಲಕೊಡೆಯನಹುದಿದು ಸಮಯಕೃತವೆಂದ ॥ ೪೫ ॥
ನಿನಗೆ ಬಲುಹೋ ನಾವು ಭೂಕಾ । ಮಿನಿಯನಾಳೆವು ನಮ್ಮೊಳೊಬ್ಬರು । ನಿನಗೆ ಸೋತೊಡೆಮಿಕ್ಕನಾ
ಲ್ವರು ನಿನಗೆ ಕಿಂಕರರು ॥ ನಿನಗೆ ಹಸ್ತಿನಪುರದ ಸಿರಿಸಂ । ಜನಿತವೀಸಂಕೇತವೇ ಸಾ । ಕಹವು ನಿಮಗೆ

ಮಗೆಂದು ನುಡಿದನು ಧರ್ಮಸುತ ನಗುತ ॥ ೪೬ ॥ ದಿಟ್ಟನೈ ನೃಪರಾವು ಮಝುಜಿಗ । ಜಿಟ್ಟಿಯಲ್ಲಾ ದೊರೆಗಳೊಳಗೀ । ಥಟ್ಟಿಗೊಬ್ಬನೆ ನಿಲುವೆನೆಂದನಿದಾವಸಾಹಸವೋ ॥ ಹುಟ್ಟಿದವರಿಗೆ ಸಾವು ಹಣೆಯ ಲಿ । ಕಟ್ಟಿಹುದು ವಿಧಿಯಿಂದಲೀಪರಿ । ಮುಟ್ಟಿದವನೀಯಾವನೆಂದುದು ನಿಖಿಳಪರಿವಾರ ॥ ೪೭ ॥ ಹಾ ಯುಧಿಷ್ಠಿರ ನಿಮ್ಮ ಕೊಡೆವು । ಗಾಯಛಲವಿಲ್ಲರ್ಜುನನು ಮಗು । ವೀಯಮಳರಲಿ ಕೈದುಗೊಳ್ಳೆನು ಹೊಯ್ದು ಕೆಣಕಿದರೆ ॥ ಬಾಯಬಡಿಕನು ಸತ್ವದಲಿ ನಾ । ಗಾಯುತದ ಬಲನೆಂಬಡೊಂಬಿನ । ವಾ ಯುವಿನ ಮಗನೆನ್ನೊಡನೆ ಮಾರಾಂತೊಡಹುದೆಂದ ॥ ೪೮ ॥ ವರಿಸಿದೆನು ಭೀಮನನು ನೀವಾ । ದರಿ ಸುವೊಡೆ ಧರ್ಮವನು ದುರ್ಜನ । ಸರಣಿಯಲಿ ನಿಲು ಬಹಡೆ ದಳಸಹಿತೇಳಿ ಕಾಳಗಕೆ ॥ ತೆರಳುವರು ನಾವಲ್ಲ ನೀವ್‌ಪತಿ। ಕರಿಸಿದುದು ನಿಮ್ಮಿಷ್ಟವೆನೆ ಮುರ । ಹರಯುಧಿಷ್ಠಿರನೃಪನನೆಕ್ಕಟಿಕರೆದುಗರ್ಜಿ ಸಿದ ॥ ೪೯ ॥ ಮರುಳೆ ನೀಹೆಚ್ಚಾಳ್ತನದಿಯು ' ಬ್ಬರಿಸಿ ನುಡಿದೆ ಸುಯೋಧನನ ನೀ । ನರಿಯಲಾ ಗದೆ ಕೈಗೆ ಬಂದೊಡೆ ಕದನಭೂಮಿಯಲಿ ॥ ಸರಿಸದಲಿ ಮಲೆತವನು ಜೀವಿಸಿ । ಮರಳಲರಿವನೆ ನಿಮ್ಮೊ ಳೊಬ್ಬರ । ವರಿಸು ವಿಗ್ರಹಕೆಂದು ನಮ್ಮನು ಕೊಂದೆ ನೀನೆಂದ ॥ ೫೦ ॥ ಗೆಲಿದರೈವರೊಳೊಬ್ಬನೆನು ವಿ ॥ ಕ್ಕಳಿದನಾಲ್ವರು ಕಿಂಕರರುಗಡ । ತಿಳಿದು ನುಡಿದಾ ನಿನ್ನಸಾಹವ ಮುಖಕೆ ವರಿಸುವೊಡೆ ॥ ಗೆ ಲಲುಬಲ್ಲಾ ಮೇಲುಫಲುಗುಣ । ಗೆಲುವನೇ ಯಿನ್ನುಳಿದರಿಬ್ಬರು । ನಿಲುವರೇ ಕುರುಪತಿಯ ಗಾಢ ದ ಗದೆಯಗಾಳಿಯಲಿ ॥೫೧॥ ಇಂದು ನಿಮ್ಮಯ ಭಾಗ್ಯಲಕ್ಷ್ಮಿಯ। ಕಂದೆರವೆಯಲಿ ಭೀಮ ಕಾದುವು। ದೆಂದು ಜಾರಿಸಿ ನಿಮ್ಮ ಬಿಟ್ಟನು ನಮ್ಮಪುಣ್ಯದಲಿ ॥ ಇಂದಿನೀಸಮರದಲಿ ಪವನಜ । ಸಂದೊಡೇನಹು ದೆಂಬಚಿತ್ತದ । ಸಂದೆಗವು ನಮಗುಂಟು ಕೌರವನೈಸುಬಲುಹೆಂದ ॥ ೫೨ ॥ ಎಲೆಮುರಾಂತಕ ನಿಮ್ಮಮುಂದ । ಗ್ಗಳೆಯತನವೆನಗೇಕೆ ನಿಮ್ಮಡಿ । ಗಳ ಸುಧಾಕರುಣಾವಲೋಕನವಜ್ರಕವಚವಲಾ॥ ಮಲೆತಹಗೆವನ ಪಡಿಮುಖದ ತನಿ। ಹೊಳೆವಗದೆಯಿಂದೇನು ರಾಯನ । ಬಲುಹು ಬಿರುದಾವಳಿಯಲೀ ನಹುದೆಂದನಾರಾಯ ॥ ೫೩ ॥ ಪೂತುಮಝು ಭಾಪೆನುತ ಕಂಸಾ । ರಾತಿ ಕೊಂಡಾಡಿದನು ಸಾತ್ಯ ಕಿ । ಭೂತಳಾಧಿಪಪಾರ್ಥಯಮಳಾದಿಗಳು ನಲಿವಿನಲಿ ॥ ವಾತಜನ ಹೊಗಳಿದರು ಸುಭಟ । ವ್ರಾತ ಸೌಹಾರ್ದದಲಿ ಶೌರ್ಯ । ಖ್ಯಾತಿಯನು ಬಣ್ಣಿಸಿದುದವನೀಪಾಲ ಕೇಳೆಂದ ॥ ೫೪ ॥ ಗದೆಯ ಕೊಂಡ ನು ಕೌರವೇಂದ್ರನ । ನಿದಿರುಗೊಂಡನು ಭೀಮ ಬಲವಂ । ಕದಲಿ ವಾಮದಲಿವರು ಬಳಸಿದರಗ್ರಜಾ ನುಜರು ॥ ಕದನಭೂಮಿಯ ಬಿಡವರಿದು ನಿಂ। ದುದು ಚತುರ್ಬಲವೈದೆ ಗಗನದೊ । ಳೊದಗಿದುದು ಸುರನಿಕರ ವಿವಿಧವಿಮಾನವೀಧಿಯಲಿ ॥ ೫೫ ॥ ಚಟುಳತರಭಾರಂಕದಲಿ ಬಲು । ಭಟರು ತರುಬಿದ ಝುಬ್ಬಿನಲಿ ಲಟ । ಕಟಸಿದವು ಕಣ್ಣಾಲಿ ಬದ್ಧಭ್ರುಕುಟಿಭಂಗಿಯಲಿ ॥ ಕಟುವಚನವಿಕ್ಷೇಪರೋಷ। ಸ್ಫು ಟನದಲಿ ತದ್ವಾಕ್ಯಭಂಗಿಯ । ಘಟನವಿಘಟನದಿಂದ ಮೂದಲಿಸಿದರು ಮುಳಿಸಿನಲಿ ॥ ೫೬ ॥ ಅರಸ ಕೇಳಿವರಿಬ್ಬರುಬ್ಬಿನ। ಥರಥುಡಿದ ದನಿ ಥಟ್ಟೈಸಿತು ಸುರ। ನರರಸಾಸಮಯದಲಿ ಪೂರೈಸಿತ್ತು ರಣ ಭಾ ಗದಲಿ ॥ ಪರಮುನಿಸ್ತೋತ್ರಮಹ ನಡುವೆ ಕಂ । ಧರದ ಮುಸಲದ ವಿಪುಲನೀಲಾಂ॥ ಬರದ ರಾವುನ ಬ ರವ ಕಂಡಳು ಕೃಷ್ಣ ಪಾಂಡವರು ॥ ೫೭ ॥ ಅನಿಖಿಲಪರಿವಾರದನುಸರ । ಭಾನದೃಷ್ಟಿಗಳೆತ್ತಿ ತಿರು ಗಿದ । ವೇನನೆಂಬೆನು ಮುಸಲಧರನಾಗಮನಸಂಗತಿಯ ॥ ಈನರೇಂದ್ರನ ಸುಮುಖತೆಯ ಸುಂ । ಮಾ

ನ ಹೊಳೆದುದು ಭಯದಿ ಕುಂತೀ । ಸೂನುಗಳು ಮತಿಗೊಳುತಲಿರ್ದರು ವೀರಸರ
ಯಣನ ... ... ॥ ೫೮ ॥

ಅಂತು ಸಂಧಿ ೫ಕ್ಕೆ ಪದ ೨೭೫ಕ್ಕಂ ಮಂಗಳಮಸ್ತು.

ಆರನೆಯ ಸಂಧಿ.

ಸೂಚನೆ ॥ ರಂಜಿಸಿತು ತ್ರಿಭುವನವನರಿರಿಪು । ಭಂಜನೆಯ ಭಾರಣೆಯ ಸುಭಟರ । ನಂಜಿಸಿ
ತು ಕಲಿಭೀಮದುರ್ಯೋಧನರ ಸಂಗ್ರಾಮ ॥

ಪದ ॥ ಕೇಳು ಧೃತರಾಷ್ಟ್ರಾವನಿಪ ಸಿರಿ । ಲೋಲಸಹಿತ ಯುಧಿಷ್ಠಿರಾದಿನೃ । ಪಾಲಕರು ಕಾ
ಣಿಕೆಯನಿತ್ತರು ನಮಿಸಿ ಹಲಧರನ ॥ ಮೇಲುದುಗುಡದ ಮೊಗದ ನೀರೊರೆ। ವಾಲಿಗಳ ಕಕ್ಷದಗದೆಯ
ಭೂ । ಪಾಲ ಬಂದನು ನೊಸಲ ಚಾಚಿದನವರಚರಣದಲಿ॥೧॥ಇಳಿದು ಗಜಹಯರಥವ ಸುಭಟಾ ವಳಿಕೃ
ತಾಂಜಳಿ ನೊಸಲೊಳಿರೆ ಕೆಲ । ಬಲಕೆ ಸಾರ್ದರ ನೋಡಿದನು ಪಾಂಡವಪತಾಕಿನಿಯ ॥ ಉಳಿದುದೀಚೆ
ಯಲವರ ಬಲವಿದ । ನುಳಿದನೊಬ್ಬನೆ ದೈವಕೃತಿಗಾ। ರಳಲಿ ಮಾಡುವುದೇನೆನುತ ನುಡಿಸಿದನು ಕುರುಪ
ತಿಯ ॥ ೨ ॥ ಗುರುವೊ ಗಂಗಾಸುತನೊ ಮಾದ್ರೇ । ಶ್ವರನೊ ಕರ್ಣನೊ ಸೈಂಧವನೊ ಸೋ । ದರ
ರ ಶತಕವೊ ಪುತ್ರಮಿತ್ರಜ್ಞಾತಿಬಾಂಧವರೋ॥ ಹರಸಿ ಬಲಿಗಳನಿಕ್ಕಿದೊಡೆ ಗೋ । ಚರಿಸದೇ ರಣ
ವಿಜಯನಿಧಿ ಹರ । ಹರಯೆನುತ ಕರಗಿದನು ಘನಕರುಣದಲಿ ಬಲರಾಮ ॥ ೩ ॥ ಆಹವಕೆ ಪಾಂಡವ
ಮಮಪ್ರಾಣಾಹಿ ಯೆಂಬೀನುಡಿಯ ಸಲಿಸಿದೆ । ಬೇಹವರನುಳುಹಿದೆ ಕುಮಾರರ ನಿನ್ನ ವೈರಿದನರ ॥
ಗಾಹುಗತಕದೊಳೆಮ್ಮ ಶಿಷ್ಯಂ । ಗೀಹದನ ವಿರಚಿಸಿದೆ ನಿನ್ನಯ । ಮೋಹದವರೇ ಗೆಲಲಿಯೆಂದನು
ಹರಿಗೆ ಬಲರಾಮ॥೪॥ತಿಳಿದು ನೋಡಿರೆ ರಾಮಧರ್ಮಸ್ಥಳಕೆ ನೀವು ಸಹಾಯವಿನಿಬರ।ಗೆಲವು ನಿರ್ಮ
ಳಧರ್ಮಮೂಲವೊ ಧರ್ಮವಿರಹಿತವೊ॥ಛಲವ ಬಿಡಿರೇ ನಿಮ್ಮ ಶಿಷ್ಯನು। ಸಲೆ ಸುಯೋಧನನಲ್ಲದಿರ್ದೊಡೆ।
ಬಳಸಬಹುದೇ ಪಕ್ಷಪಾತದೊಳೆಂದನಸುರಾರಿ ॥ ೫ ॥ ನಿಮಗೆ ಪಾಂಡವಪಕ್ಷಪಾತ । ವ್ಯವಹರಣೆ ಹುಸಿ
ನಾವಲೇ ಕೌ । ರವರ ಪಕ್ಷೋದ್ದೇಶಿಗಳು ಸಾಕಿನ್ನದಂತಿರಲಿ ॥ ಎಮಗೆ ಸರಿಯಿಬ್ಬರು ಗದಾಭ್ಯಾ । ಸ
ಮನು ಸಮ್ಮಲಿ ಮಾಡಿಪರು ತಾ । ವಿವರು ಕಾದಲಿ ನಾವು ನೋಡುವೆವೆಂದನಾರಾಮ ॥೬॥ಎಲೆಮುನೀ
ಶ್ವರ ಪೂರ್ವದಲಿ ಯದು । ಬಲವಿಭಾಗದಲವರದೆಸೆಯಲಿ । ಹಲಧರನು ಕೃತವರ್ಮ ನೀಪಾಂಡವರಿ
ಗಸುರಾರಿ ॥ಬಳಿಕ ಸಾತ್ಯಕಿ ಯೀಹಸುಗೆಯ । ಸ್ಖಲಿತವಿದರಲಿ ರಾಮನೀ ಕುರು । ಬಲವ ಬಿಟ್ಟನಿದೇ
ಕೆನುತ ಜನಮೇಜಯನು ನುಡಿದ ॥೭॥ ಕೇಳು ಜನಮೇಜಯಧರಿತ್ರೀ । ಪಾಲ ಸಂಧಿಯ ಮುರಿದು ಲ
ಕ್ಷ್ಮೀ । ಲೋಲ ಬಿಜಯಂಗೈಯನೇ ಕುರುಪತಿಯನವಗಡಿಸಿ ॥ ಕಾಳಹಳವಿಗೆಯುವನು ಯಾದವ। ಜಾ
ಲಸಹಿತೈತಂದು ಕಾರ್ಯದ । ಮೇಲುದಾಗಿನ ಹದನನರಿದನು ಕೃಷ್ಣನಭಿಮತವ ॥ ೮ ॥ ಎಮಗೆ ಸರಿಯಿ

ತ್ತೆಂದವೀಕೆ । ರವನ ಮುರಿವೆ ಯುಧಿಷ್ಠಿರನನಾ । ಹವದಿ ಗೆಲಿಸುವೆ ಸಾಕು ನೃಪರಿಗೆ ಈಸುಸಂವಾ
ದ ॥ ಎವಗೆ ತೀರ್ಥಕ್ಷೇತ್ರಯಾತ್ರಾ । ವ್ಯವಸಿತಕೆ ಮನವಾಯಿತೆಂದು । ತ್ಸವದಿನಸುರಾರಾತಿಯುನು
ಬೀಳ್ಕೊಂಡನಾರಾನು ॥ ೯ ॥ ರಾಮ ಕಳುಹಿಸಿಕೊಂಡು ವಿಪ್ರ । ಸ್ತೋಮಸಹಿತ ಸಮಸ್ತಋಷಿಗ
ಳು । ರಾಮಣೀಯಕವಸ್ತುದಾನವ್ಯಯುದವೈಭವಕೆ ॥ ಸೌಮನಸ್ಯದ ರೋಮಹರುಷಮು । ಹಾಮಹಿಮ
ತೀರ್ಥಾಭಿರತಿಯುಲಿ । ಗೋಮಹೀಧನವಸ್ತ್ರದಿಂ ದ್ವಿಜಜನವನರ್ಚಿಸಿದ ॥ ೧೦ ॥ ಗಂಗೆಮೊದಲಾದಖಿ
ಳವತೀ । ರ್ಥಂಗಳಲಿ ತದ್ವಾರಣಾಖ್ಯಾ । ನಂಗಳಲಿ ತತ್ತದ್ವಿಶೇಷವಿಧಾನದಾನದಲಿ ॥ ತುಂಗವಿಕ
ಮನಾಸಮಸ್ತ್ರಜ । ನಂಗಳೊಡನೆ ಸುತೀರ್ಥಯಾತ್ರಾ । ಸಂಗತಿಯುಲೀ ಬಳಸಿ ಬಂದನು ಭೂಪ್ರದಕ್ಷಿ
ಣವ ॥ ೧೧ ॥ ಆನನಿಪತಿ ಕೇಳ್ಪುಷ್ಯದಲಿ ಸಂ । ಭವಿಸಿದುಮು ನಿರ್ಗಮನ ಬಳಿಕೀ । ಶ್ರವಣನಕ್ಷತ್ರದಲಿ
ಕಂಡನು ಕೃಷ್ಣಪಾಂಡವರ ॥ ಅವರು ನೋಟಕರಾದರೀಕ್ಕೌ । ರವವೃಕೋದರರರಂಕ ಮಸೆದು । ತ್ಸವ
ದಿ ಕಳನೇರಿದರು ಹಾಯಿಕಿ ಹಿಡಿದು ನಿಜಗದೆಯು ॥ ೧೨ ॥ ಧಾರಿಣೀಪತಿ ಕೇಳಿರೈ ಪರಿ । ವಾರ ಕು
ಳ್ಳಿರಿ ಪಾರ್ಥಸಾತ್ಯಕಿ । ವೀರಧೃಷ್ಟದ್ಯುಮ್ನಯುಮುಳತಿಖಂಡಿಮೊದಲಾದ ॥ ವೀರಭಟರೆಮ್ಮಾಹವದ
ಪಿ । ಸ್ತಾರವನು ಸಮವಿಷಮಪಯಗತಿ । ಯೋರೆಪೋರೆಯನರಿವುದೆಂದನು ನಗುತ ಕುರುರಾಯು
॥ ೧೩ ॥ ಚಿತ್ತವಿಸು ಬಲರಾಮ ರಿಪುಗಳ । ತೆತ್ತಿಗದೆ ಲೇಸಾಗಿ ನೋಡು ನೃ । ಪೋತ್ತಮರು ಪಾಂ
ಚಾಲಸೋಮಕಸೃಂಜಯಾದಿಗಳು ॥ ಇತ್ತಲಭಿಮುಖರಾಗಿ ರಥಿಕರು । ಮತ್ತಗಜರೋಹಕರು ರಾವು
ತ । ರಿತ್ತಲೀಕ್ಷಿಸಿ ನಮ್ಮಸಮರವನೆಂದನವನೀಶ ॥ ೧೪ ॥ ಓಡಿ ಜಲದೊಳು ಮುಳುಗಿದವರಿಗೆ। ಓ
ಡಿಯುಂಟೇ ರಥವಿಳಿದರಣ । ಖೇಡಕಾಲಾಳಿಂಗೆ ಪಯಗತಿಯೋರೆಪೋರೆಗಳ ॥ ನೋಡುತಿದೆ ಪರಿವಾರ
ನೀ ಕೈ । ಮಾಡಿ ತೋರಾ ಬಯಲ ಕಂತದ। ಮೂಡಿಗೆಯುವಾಕ್ಷರದಲೇನಹುದೆಂದನಾಭೀಮ ॥ ೧೫ ॥
ಆಟವಿಕ ಸಂಘದಲಿ ಬಲುವಾ । ಚಾಟ ನೀನಹೆ ನಿಮ್ಮಪುಣ್ಯದ । ತೋಟವನು ತರಿದೊಟ್ಟನಿಮ್ಮಮಿತ್ರ
ವರನು ಯಮಪುರದ ॥ ಗೋಟಿನಲಿ ಗುರಿಮಾಡುವೆನು ಜೂ। ಜಾಟದಲಿ ನೀವರಿಯಿರೇ ಬೊ । ಬ್ಬಾ
ಟವೇನಾಯ್ತೆಂದು ಜರೆದನು ವೀರಕುರುರಾಯು ॥ ೧೬ ॥ ಶಕುನಿ ಕಲಿಸಿದಕಪಟದಲಿ ಕೌ।ಳಿಕದಲುಬ್ಬಿ
ದೆಯುದರವಿಸ್ತಾ । ರಕವಲೇ ನಾವಿಂದಿನಲಿ ದುಶ್ಯಾಸನಾದಿಗಳ॥ ರಕುತಪಾನ ಭವತ್ಸಹೋದರ । ನಿಕ
ರನಾಶವನರುಹದೇ ಸು । ಪ್ರಕಟವಿದು ಗಜವೆಂದು ಗದೆಯನು ತೂಗಿದನು ಭೀಮ ॥೧೭॥ ಸಾಯಲಾ
ಗದೆ ಸುಭಟರಾಚೆಂ। ದ್ರಾಯುತವೆ ತನುವಿಧಿಯುಟಿಪ್ಪಣ । ದಾಯುಷವು ತೀರಿದೊಡೆಸಾವರು ನಿನ್ನೊ
ಳೇನಹುದು ॥ ಕಾಯಲಳವೇ ನಿನಗೆ ಮುನಿದೊಡೆ । ನೋಯಿಸುವೊಡಳವಲ್ಲ ಫಡ ದೈ। ವಾಯತನನೀ
ನೇಕೆ ಬೆರತಿಹೆ ಯೆಂದನಾಭೂಪ ॥ ೧೮ ॥ ಎಲವೊ ದುರ್ಮತಿ ಕೇಳು ನಿನ್ನಯ । ಕುಲದ ಶಿಕ್ಷಾರಕ್ಷೆ
ಗಿನಸ್ಸಿ । ರೊಳರು ಹೊರಬಿಗದೈವವುಂಟೇ ನಾನೆ ದೈವಕಣಾ ॥ ಕಳಚಿದನಲಾ ಹಿಂದೆ ಸೋರ್ವರ। ತಲೆ
ಯನಿನ್ನರಗಳಿಗೆಯಲಿ ಹಿಡ । ತಲೆಯನೊದೆವೆನು ನೋಡೆನುತ ಹೊಯ್ದನು ಸುಯೋಧನನ ॥ ೧೯ ॥
ಬಿಡಿಸಿದನು ಗದೆಯಿಂದ ಹೊಯ್ಲಳ । ತಡೆದು ತಿವಿದನು ನಿನ್ನ ಮಗನವ । ಗಡೆಯುಗಾಯಕೆ ಗದೆಯ
ನೊಡ್ಡಿದೊಡಾಗ ಕೋಪದಲಿ ॥ ತುಡುಕಿದನು ಕಲಿಭೀಮ ಹಜ್ಜೆಯ। ನೊಡೆಮುರಿದು ನಿನ್ನಾತನಾಕಿದ।
ರೊಡನೊಡನೆ ಗಾಹಿಸಿದರುಚಿತದ ಗತಿಯ ಗಮಕದಲಿ ॥ ೨೦ ॥ ಹೊಯ್ಲು ಬಿಡಿಸಿದನನಿಲಸುತ ಮೇ।

ನ ಹೊಳೆವುದು ಭಯದಿ ಕುಂತೀ । ಸೂನುಗಳು ಮತಿಗೊಳುತಲಿರ್ದರು ವೀರಸರ ಯಣಾನ ... ... ॥ ೫೮ ॥

ಅಂತು ಸಂಧಿ ೫ಕ್ಕೆ ಪದ ೨೭೫ಕ್ಕಂ ಮಂಗಳಮಸ್ತು.

ಆರನೆಯ ಸಂಧಿ.

ಸೂಚನೆ ॥ ರಂಜಿಸಿತು ತ್ರಿಭುವನವನರಿರಿಪು । ಭಂಜನೆಯ ಭಾರಣೆಯ ಸುಭಟರ । ನಂಜಿಸಿತು ಕಲಿಭೀಮದುರ್ಯೋಧನರ ಸಂಗ್ರಾಮ ॥

ಪದ ॥ ಕೇಳು ಧೃತರಾಷ್ಟ್ರಾವನಿಪ ಸಿರಿ । ಲೋಲಸಹಿತ ಯುಧಿಷ್ಠಿರಾದಿನೃ । ಪಾಲಕರು ಕಾಣಿಕೆಯನಿತ್ತರು ನಮಿಸಿ ಹಲಧರನ ॥ ಮೇಲುದುಗುಡದ ಮೊಗದ ನೀರೊರೆ। ವಾಲಿಗಳ ಕಕ್ಷದಗದೆಯ ಭೂ । ಪಾಲ ಬಂದನು ನೊಸಲ ಚಾಚಿದನವರಚರಣದಲಿ॥೧॥ಇಳಿದು ಗಜಹಯರಥವ ಸುಭಟಾ ವಳಿಕೃತಾಂಜಳಿ ನೊಸಲೊಳಿರೆ ಕೆಲ । ಬಲಕೆ ಸಾರ್ದರ ನೋಡಿದನು ಪಾಂಡವಪತಾಕಿನಿಯ ॥ ಉಳಿದುದೀಚೆಯಲವರ ಬಲವಿದ । ನುಳಿದನೊಬ್ಬನೆ ದೈವಕೃತಿಗಾ। ರಳಲಿ ಮಾಡುವುದೇನೆನುತ ನುಡಿಸಿದನು ಕುರುಪತಿಯ ॥ ೨ ॥ ಗುರುವೊ ಗಂಗಾಸುತನೊ ಮಾದ್ರೇ । ಶ್ವರನೊ ಕರ್ಣನೊ ಸೈಂಧವನೊ ಸೋ । ದರರ ಶತಕವೊ ಪುತ್ರಮಿತ್ರಜ್ಞಾತಿಬಾಂಧವರೋ॥ ಹರಸಿ ಬಲಿಗಳನಿಕ್ಕಿದೊಡೆ ಗೋ । ಚರಿಸದೇ ರಣವಿಜಯನಿಧಿ ಹರ । ಹರಯೆನುತ ಕರಗಿದನು ಘನಕರುಣದಲಿ ಬಲರಾಮ ॥ ೩ ॥ ಆಹವಕೆ ಪಾಂಡವ ಮಮಪ್ರಾಣಾಹಿ ಯೆಂಬೀನುಡಿಯ ಸಲಿಸಿದೆ । ಬೇಹವರನುಳುಹಿದೆ ಕುಮಾರರ ನಿನ್ನ ಮೈದುನರ ॥ ಗಾಹುಗತಕದೊಳೆಮ್ಮ ಶಿಷ್ಯಂ । ಗೀಹದನ ವಿರಚಿಸಿದೆ ನಿನ್ನಯ । ಮೋಹದವರೇ ಗೆಲಲಿಯೆಂದನು ಹರಿಗೆ ಬಲರಾಮ॥೪॥ತಿಳಿದು ನೋಡಿರೆ ರಾಮಧರ್ಮಸ್ಥಳಕೆ ನೀವು ಸಹಾಯವಿನಿಬರ।ಗೆಲವು ನಿರ್ಮಳಧರ್ಮಮೂಲವೊ ಧರ್ಮವಿರಹಿತವೊ॥ಛಲವ ಬಿಡಿರೇ ನಿಮ್ಮ ಶಿಷ್ಯನು। ಸಲೆ ಸುಯೋಧನನಲ್ಲದಿರ್ದೊಡೆ। ಬಳಸಬಹುದೇ ಪಕ್ಷಪಾತದೊಳೆಂದನಸುರಾರಿ ॥ ೫ ॥ ನಿಮಗೆ ಪಾಂಡವಪಕ್ಷಪಾತ । ವ್ಯವಹರಣೆ ಹುಸಿ ನಾವಲೇ ಕೌ । ರವರ ಪಕ್ಷೋದ್ದೇಶಿಗಳು ಸಾಕಿನ್ನದಂತಿರಲಿ ॥ ಎಮಗೆ ಸರಿಯಿಬ್ಬರು ಗದಾಭ್ಯಾ । ಸವನು ನಮ್ಮಲಿ ಮಾಡಿದರು ತಾ । ವಿವರು ಕಾದಲಿ ನಾವು ನೋಡುವೆವೆಂದನಾರಾಮ ॥೬॥ಎಲೆಮುನೀಶ್ವರ ಪೂರ್ವದಲಿ ಯದು । ಬಲವಿಭಾಗದಲವರದೆಸೆಯಲಿ । ಹಲಧರನು ಕೃತವರ್ಮ ನೀಪಾಂಡವರಿಗಸುರಾರಿ ॥ಬಳಿಕ ಸಾತ್ಯಕಿ ಯಾಹಸುಗೆಯ । ಸ್ಖಲಿತವಿದರಲಿ ರಾಮನೀ ಕುರು । ಬಲವ ಬಿಟ್ಟನಿದೇಕೆನುತ ಜನಮೇಜಯನು ನುಡಿದ ॥೭॥ ಕೇಳು ಜನಮೇಜಯಧರಿತ್ರೀ । ಪಾಲ ಸಂಧಿಯ ಮುರಿದು ಲಕ್ಷ್ಮೀ । ಲೋಲ ವಿಜಯಂಗೈಯನೇ ಕುರುಪತಿಯನವಗಡಿಸಿ ॥ ಕಾಳಹಳವಿಗೆಯವನು ಯಾದವ। ಜಾಲಸಹಿತ್ತೈತಂದು ಕಾರ್ಯದ । ಮೇಲುದಾಗಿನ ಹದನನರಿದನು ಕೃಷ್ಣನಭಿಮತವ ॥ ೮ ॥ ಎಮಗೆ ಸರಿಯಿ

ತ್ತಂತವೀಕ್ಷೌ । ರವನ ಮುರಿವೆ ಯುಧಿಷ್ಠಿರನನಾ । ಹವದಿ ಗೆಲಿಸುವೆ ಸಾಕು ನೃಪರಿಗೆ ಈಸುಸಂವಾ
ದ ॥ ಎಮಗೆ ತೀರ್ಥಕ್ಷೇತ್ರಯಾತ್ರಾ । ವ್ಯವಸಿತಕೆ ಮನವಾಯಿತೆಂದು । ತ್ಸವದಿನಸುರಾರಾತಿಯನು
ಬೀಳ್ಕೊಂಡನಾರಾಮನು ॥ ೯ ॥ ರಾಮ ಕಳುಹಿಸಿಕೊಂಡು ವಿಪ್ರ । ಸ್ತೋಮಸಹಿತ ಸಮಸ್ತಋಷಿಗ
ಳು । ರಾಮಣೀಯಕವಸ್ತುದಾನವ್ಯಯದವೈಭವಕೆ ॥ ಸೌಮನಸ್ಯದ ರೋಮಹರುಷವ । ಹಾಮಹಿಮ
ತೀರ್ಥಾಭಿರತಿಯಲಿ । ಗೋಮಹೀಧನವಸ್ತ್ರದಿಂ ದ್ವಿಜಜನವನರ್ಚಿಸಿದ ॥ ೧೦ ॥ ಗಂಗೆಮೊದಲಾದಖಿ
ಳವರತೀ । ರ್ಥಂಗಳಲಿ ತದ್ವಾರಣಾಖ್ಯಾ । ನಂಗಳಲಿ ತತ್ತದ್ವಿಶೇಷವಿಧಾನದಾನದಲಿ ॥ ತುಂಗವಿಕ್ರ
ಮನಾಸಮಸ್ತಜ । ನಂಗಳೊಡನೆ ಸುತೀರ್ಥಯಾತ್ರಾ । ಸಂಗತಿಯಲೇ ಬಳಸಿ ಬಂದನು ಭೂಪ್ರದಕ್ಷಿ
ಣವ ॥ ೧೧ ॥ ಆನೆನಿಪತಿ ಕೇಳ್ಪುಷ್ಯದಲಿ ಸಂ । ಭವಿಸಿದುದು ನಿರ್ಗಮನ ಬಳಿಕೀ । ಶ್ರವಣನಕ್ಷತ್ರದಲಿ
ಕಂಡನು ಕೃಷ್ಣಪಾಂಡವರ ॥ ಅವರು ನೋಟಕರಾದರೀಕ್ಷೌ । ರವವೃಕೋದರರಂಕ ಮಸೆದು । ತ್ಸವ
ದಿ ಕಳನೇರಿದರು ಹಾಯಿಕಿ ಹಿಡಿದು ನಿಜಗದೆಯ ॥ ೧೨ ॥ ಧಾರಿಣೀಪತಿ ಕೇಳಿರೈ ಪರಿ । ವಾರ ಕು
ಳ್ಳಿರಿ ಪಾರ್ಥಸಾತ್ಯಕಿ । ವೀರದೃಷ್ಟದ್ಯುಮ್ನಯಮಳಶಿಖಂಡಿಮೊದಲಾದ ॥ ವೀರಭಟರಮ್ಮಾಹವದ
ಪಿ । ಸ್ತಾರವನು ಸಮವಿಷಮಪಯಗತಿ । ಯೋರೆಪೋರೆಯನರಿವುದೆಂದನು ನಗುತ ಕುರುರಾಯ
॥ ೧೩ ॥ ಚಿತ್ತವಿಸು ಬಲರಾಮ ರಿಪುಗಳ । ತೆತ್ತಿಗಿದೆ ಲೇಸಾಗಿ ನೋಡು ನೃ । ಪೋತ್ತಮರು ಪಾಂ
ಚಾಲಸೋಮಕಸೃಂಜಯಾದಿಗಳು ॥ ಇತ್ತಲಭಿಮುಖರಾಗಿ ರಥಿಕರು । ಮತ್ತಗಜರೋಹಕರು ರಾವು
ತ । ರಿತ್ತಲೀಕ್ಷಿಸಿ ನಮ್ಮ ಸಮರವನೆಂದನವನೀಶ ॥ ೧೪ ॥ ಓಡಿ ಜಲದೊಳು ಮುಳುಗಿದವರಿಗೆ। ಖೋ
ಡಿಯುಂಟೇ ರಥವಿಳಿದರಣ । ಖೇಡಕಾಲಾಳಿಂಗೆ ಪಯಗತಿಯೋರೆಪೋರೆಗಳ ॥ ನೋಡುತಿದೆ ಪರಿವಾರ
ನೀ ಕೈ । ಮಾಡಿ ತೋರಾ ಬಯಲ ಕಂತದ। ಮೂಡಿಗೆಯವಾಕ್ಷರವಲೇನಹುದೆಂದನಾಭೀಮ ॥ ೧೫ ॥
ಆಟವಿಕ ಸಂಘದಲಿ ಬಲುವಾ । ಚಾಟ ನೀನಹೆ ನಿಮ್ಮ ಪುಣ್ಯದ । ತೋಟವನು ತರಿದೊಟ್ಟಿನಿಮ್ಮಮಿತ್ರ
ವರನು ಯಮಪುರದ ॥ ಗೋಟಿನಲಿ ಗುರಿಮಾಡುವೆನು ಜೂ। ಜಾಟದಲಿ ನೀಮರಿಯಿರೇ ಬೊ । ಬ್ಬಾ
ಟವೇನಾಯ್ತೆಂದು ಜರೆದನು ವೀರಕುರುರಾಯ ॥ ೧೬ ॥ ಶಕುನಿ ಕಲಿಸಿದಕಪಟದಲಿ ಕೌ ।ಳಿಕದುಬ್ಬಿ
ದೆಯುದರವಿಸ್ತಾ । ರಕವಲೇ ನಾವಿಂದಿನಲಿ ದುಶ್ಶಾಸನಾದಿಗಳ॥ ರಕುತಪಾನ ಭವತ್ಸಹೋದರ । ನಿಕ
ರನಾಶವನರುಹದೇ ಸು । ಪ್ರಕಟವಿದು ಗಜವೆಂದು ಗದೆಯನು ತೂಗಿದನು ಭೀಮ ॥೧೭॥ ಸಾಯಲಾ
ಗದೆ ಸುಭಟರಾಚೆಂ। ದ್ರಾಯತವೆ ತನುವಿಧಿಯಟಿಪ್ಪಣ । ದಾಯುಷವು ತೀರಿದೊಡೆಸಾವರು ನಿನ್ನೊ
ಳೇನಹುದು ॥ ಕಾಯಲಳವೇ ನಿನಗೆ ಮುನಿದೊಡೆ । ನೋಯಿಸುವೊಡಳವಲ್ಲ ಘಡ ದೈ। ವಾಯತನನೀ
ನೇಕೆ ಬೆರತಿಹೆ ಯೆಂದನಾಭೂಪ ॥ ೧೮ ॥ ಎಲವೊ ದುರ್ಮತಿ ಕೇಳು ನಿನ್ನಯ । ಕುಲದ ಶಿಕ್ಷಾರಕ್ಷೆ
ಗಿನ್ನು । ರೊಳರು ಹೊರಬಿಗದೈವವುಂಟೇ ನಾನೆ ದೈವಕಣಾ ॥ ಕಳಚಿದೆನಲಾ ಹಿಂದೆ ಪೂರ್ವರ। ತಲೆ
ಯನಿನ್ನರಗಳಿಗೆಯಲಿ ಹಡ । ತಲೆಯನೊದೆವೆನು ನೋಡೆನುತ ಹೊಯ್ದನು ಸುಯೋಧನನ ॥ ೧೯ ॥
ಬಿಡಿಸಿದನು ಗದೆಯಿಂದ ಹೊಯ್ಲ ಳ । ತಡೆದು ತಿವಿದನು ನಿನ್ನ ಮಗನವ । ಗಡೆಯಗಾಯಕೆ ಗದೆಯ
ನೊಡ್ಡಿದೊಡಾಗ ಕೋಪದಲಿ ॥ ತುಡುಕಿದನು ಕಲಿಭೀಮ ಹಜ್ಜೆಯ। ನೊಡೆಮುರಿದು ನಿನ್ನಾತನೌಕಿದ।
ರೊಡನೊಡನೆ ಗಾಹಿಸಿದರುಚಿತದ ಗತಿಯ ಗಮಕದಲಿ ॥ ೨೦ ॥ ಹೊಯ್ಲು ಬಿಡಿಸಿದನನಿಲಸುತ ಮೇ।

ಲ್ಲಾಯ್ದನವನಿಪನೊಡ್ಡಿಗದೆಯಲಿ । ಕಾಯ್ದು ತಿವಿದನು ಭೀಮಸೇನನು ನೃಪತಿ ವಂಚಿಸಿದ ॥ ಮೈದೆಗೆದರಿಟ್ಟಳಿಸಿ ಪವನಜ । ಹೊಯ್ದೊಡೊಲೆದನು ಭೂಪನಿಬ್ಬರ । ಕೈದುಕಾರತನಕ್ಕೆ ಬೆರಗಾದುದು ಸುರಸ್ತೋಮ ॥ ೨೧ ॥ ಸುಳಿದರೆಡಬಲಚಾರಿಯಲಿ ಚಾ । ಪಳದ ಪಯಪಾಡಿನಲಿ ಚಿತ್ರದ । ಚಳೆಗತಿಯ ಚೌಪಟದ ಚಾರಣೆಗಳ ಛಡಾಳದಲಿ ॥ ಹೊಳೆದರಾವರ್ತದಲಿ ಪರಿಮಂ । ಡಳಿಸಿದರು ತಾಣದಲಿ ಜರಿಘೆಯ । ಲುಳಿಯಲವತಾಣದಲಿ ಮೆರೆದರು ಭೀಮಕೌರವರು ॥ ೨೨ ॥ ಒಳಹೊಗುವಹೆರೆದೆಗೆವಗಾಯ । ಕ್ಕಳೆರಿಚುವ ತಾನಡರಿ ದೃಷ್ಟಿಯ । ಉಳಿಗೆ ಕೈಮಾಡುವವಿಘಾತಿಗೆ ಜಗುಳಜೋಡಿಸುವ ॥ ಸುಳಿವ ಸಂತೈಸುವ ಸುಸಂಚದೊ । ಳಗಲಿಯೊಡ್ಡಾಗಿಸುವ ಗಮಕದ । ಲಳಬಳವನಾರೈವ ಭಟರೊದಗಿದರು ಸಮರದಲಿ ॥೨೩॥ ಬಿಡುವ ಬಿಡಿಸುವ ಪರರಗಾಯವ । ತಡೆವಗೋಮೂತ್ರಿಕನ ಜಡಿಪದ । ಜಡಿಪದವಘಾನದಲಿ ದಾಯದ ಗಾಯಖಂಡಗಳ ॥ ತುಡುಕಲವ್ವಳಿಸುವ ವಿಸಂಧಿಯ । ಹಿಡಿವ ಬೆಚ್ಚುವ ಬಿಗಿವಸೆಳೆದವ । ಗಡಿಸು ವೌಕುವಕುಶಲದಲಿ ಕಾದಿದರು ಸಮರದಲಿ ॥ ೨೪ ॥ ಬವರಿ ಮೊಚ್ಚೆಯತೇವಿ ಲಂಘನೆ । ವಿವಳಿತಾಂಗ ವರಾಹಮತ ಸಂ । ಪ್ಲವನ ಪಾರಿಪ್ಲವ ಗದಾಪರಿರಂಭ ನಿಕ್ಷೇಪ ॥ ಲವಣಿ ಲಹರಿಯವಂಚನ ದವಿ। ದ್ರವಣ ಲಘುವಿನ್ಯಾಸವೆಂಬೀ। ವಿವರದಲಿ ಕಾದಿದರು ಕೌತುಕವೇನನುಸುರುವೆನು ॥೨೫॥ ನೂಕಿದೊಡೆ ಹೆರದೆಗವ ಹೆರದೆಗೆ । ದೌಕಲೌಕುವಡೊತ್ತಲೊತ್ತಿದ । ಡಾಕೆಯಲಿ ಪಂಠಿಸುವ ಪಂಠಿಸೆ ಕೂಡೆ ಸಂಧಿಸುವ ॥ ಆಕಠೋರದ ಕೈದು ಕಿಡಿಗಳ । ನೋಕರಿಸೆ ಖಣಿಖಟಿಲಜೋಡಿಯ । ಜೋಕೆಯಲಿ ಕಾದಿದರು ಸಮಬಲರಾಹವಾಗ್ರದಲಿ ॥ ೨೬ ॥ ಮರಹ ಹಡೆಯರುಗಾಯಖಂಡಿಗೆ । ತೆರಹುಗಾಣರು ಹೊಯ್ಲ ಹೋರಟೆ । ಹೊರಗೆ ಬಿದ್ದವು ಕದ್ದವಿಬ್ಬರದೃಷ್ಟಿಮನವನವ ॥ ಇರಿವಗದೆ ನೆಗ್ಗಿದವು ರೋಷದಿ । ಜರೆವನುಡಿ ತಾಗಿದವು ಹೊಗಳಿ:ವೊ। ಡರಿಯೆನಗ್ಗದಭೀಮದುರ್ಯೋಧನರ ರಣರಭಸ ॥ ೨೭ ॥ ಗಾಹಿನಲಿ ಗಾಢಿಸಿದಗದೆ ಹೊರೆ । ಬಾಹೆಯಲಿ ಹಿಂದೌಕಿ ತಾಣದೊ । ಳೊಹಿಸಿದಮನ ಮುಗ್ಗಿದುದು ಕಂಧೊಳಲ ತೋಹಿನಲಿ ॥ ಕಾಹುರದ ಹೊಯ್ಗಳಿನ ನೋಟದ । ಕಾಹಿನಲಿ ಕಿರಿದೌಕಿ ಗಾಯದ । ಸೋಹೆಯಲಿ ಮಸುಜಾಣರೊದಗಿದರರಸ ಕೇಳೆಂದ ॥ ೨೮ ॥ ನೆನಹು ನೆಗ್ಗಿದುದುಪ್ಪರದ ಕೈ । ಮನವ ಕಬಳಿಸಿ ತೆರಹು ಬಲುಬಿ । ಮ್ಮಿನಲಿ ಬಿಗಿದುದು ತಗದವಿಬ್ಬರಗಾಯಘಾತಿಗಳ ॥ ಕೊನರ್ವಕೋಪದ ಕುದಿವಕರಣದ। ತನುವಿನುಬ್ಬಿನ ಜಯದತವಕದ। ತನಿಮನದ ಕಡುತೋಟಿಕಾರರು ಕಾದಿದರು ಕಡುಗಿ॥೨೯॥ಜಾಣು ಜಗುಳಿತು ಹೊಯ್ಲಮೊನೆ ಮೈ।ಗಾಣಿಕೆಗೆ ಲಟಕಟಿಸಿದುದು ಬರಿ। ರೇಣುಜನನದ ಜಾಡ್ಯ ಘಡಘಡವಾಯ್ತು ಪಯಗತಿಗೆ॥ ತ್ರಾಣ ತಳವಾದುದು ಶ್ರಮದಬಿನ । ಸ್ನಾಣ ಮೇಲ್ವಾಯಿತ್ತು ಕುಶಲದ । ಕೇಣದಲಿ ಕಾದಿದರು ಗದೆಗಳ ಖಡೆಯಕಿಡಿ ಕವಿಯೆ ॥ ೩೦ ॥ ವಿಳಸದಪಸವ್ಯದಲಿ ಪರಿಮಂ । ಡಳಿಸೆ ಹೊಯ್ದನು ಸತ್ಯಮಂಡಲ । ಮೆಳಯುತನನಾಭೀಮಸೇನನೆ ಹೊಯ್ಲಹೊರಬೀಸಿ ॥ ವಳಿಬಗಿದು ಕಬ್ಬದಿಯು ಕಂಡೆ। ಫ್ಘಳಿಸಿದನು ನಿನ್ನಾತನಾಚೆಯ । ದಳದ ಭಟಶತಿ ಹಾಯೆನಲು ಝೋಂಪಿಸಿದನಾಭೀಮ ॥೩೧॥ ಆಗಳೇ ಸಂತೈಸಿ ರಿಪು ಕೈ । ತಾಗಿಸಿದನರಸನನು ಗಾಯದ । ಬೇಗಡೆಯಲವ್ವಳಿಸಿದುದು ಬಿಸಿರಕುತ ಹುಡಿ ನೆನೆಯೆ ॥ ಆಗರುಮನಿಪಜಗದನೇಸಂ । ಭಾಗರಕುತಮನನಿಲಸುತನಲಿ । ತೂಗ ತೆಗೆದವೊಲಾಯ್ತು ಹೊಯ್ದನು ಪವನನಂದನನ ॥೩೨॥

ಸ್ಫುರಿಸಿದವರೆಡಂಕದೆಗೆದವು । ದೂರದಲಿ ದುರಿದುರಿಪ ಶೋಣಿತ । ವಾರಿಗಳ ತೊಳೆದೊರಸಿದರು ಶ್ರೀಗಂಧಕರ್ದಮವ ॥ ವೀರ ಕೇಳ್ಕೈ ಶ್ರಮವಡಗೆ ಕ । ರ್ಪೂರಕವಳವ ಕೊಂಡು ಮಸ್ತಕ । ವಾರುಭಟೆಯಲಿ ಸುಭಟರೆದ್ದರು ತೂಗಿ ನಿಜಗದೆಯ ॥ ೩೩ ॥ ಮತ್ತೆ ಹೊಕ್ಕರು ದಿಗ್ಗಜಕೆಮದ । ವೆತ್ತ ದಿಗ್ಗಜವುಲಿತವೋಲ್ಮಿಗೆ। ಹತ್ತಿದರು ಶತಮನ್ಯುಶುಂಭ ವರಜರೊಳಿತೆಗೆದಂತೆ । ತತ್ತರಿಸಿಬರುವಂಧಕಾಸುರ। ಕೃತ್ತಿವಾಸರವೋಲುರಣವೀ । ರೋತ್ತಮರು ಕೈಮಾಡಿದರು ಕೌರವವೃಕೋದರರು ॥ ೩೪ ॥ ಏನನೆಂಬೆನು ಜೀಯ ಕುರುಪತಿ । ಯಾನುವನು ಕಲಿಭೀಮನುಬ್ಬೆಯ । ನಾನುವನು ದುರ್ಯೋಧನನ ಧಟ್ಟಣೆಯನಾಭೀಮ ॥ ದಾನವರ ಮಾನವರೊಳಿನ್ನುಸ। ಮಾನರಾರಿವರಂತೆ ಪಾಂಡವ । ಗೇಸಸಾಷ್ಯವು ವೀರನಾರಾಯಣನ ಕರುಣದಲಿ ॥ ... ... ॥ ೩೫ ॥

ಅಂತು ಸಂಧಿ ೬ಕ್ಕಂ ಪದ ೨೧೦ಕ್ಕಂ ಮಂಗಳಮಸ್ತು.

ಏಳನೆಯ ಸಂಧಿ.

ಸೂಚನೆ ॥ ರಾಯಭಾರತಮಲ್ಲರಾಯರ । ರಾಯವನದಾವಾನಲನು ಕಲಿ । ವಾಯುಸುತನಲಿ ಹಳಚಿ ಮಡಿದನು ಕೌರವರರಾಯ ॥

ಪದ ॥ ಕೇಳು ಧೃತರಾಷ್ಟ್ರಾವನಿಪ ಕೈ । ಮೇಳವಿಸಿದರು ವಿಷಮಸಮರಕ । ರಾಳರೋಷಶ್ವಾಸಧೂಮದ ಮುಖಭಯಂಕರರು ॥ ಚಾಳನದಚೌಪಟರು ಶಸ್ತ್ರ । ಸ್ಫಾಲನದ ವಜ್ರಾಭಿಘಾತಾ । ಭೀಳನಿಷ್ಠುರರೊದಗಿದರು ಕೌರವವೃಕೋದರರು ॥ ೧ ॥ ಹಳಚಿದರು ಸುಳಿಗಾಳಿಯಂತಿರೆ । ಸುಳಿಮುಖಗಪತಿಯಂತೆ ಹೊಯ್ದರು ಬಳಸಿ ಬಗಿದೆರಗಿದರು ಬಿಡೆಯದ ಮತ್ತಗಜದಂತೆ॥ ನಿಲುಕಿದರು ಶಿಖಿಯಂತೆ ಚೂರಿಸಿ । ತುಳುಕಿದರು ಫಣಿಯಂತೆ ಪಯಮ್ಯ । ಲುಳಿಯಲೊಲೆದರು ಪಾದರಸದಂದದಲಿ ಪಟುಭಟರು ॥ ೨ ॥ ಎರಗಿದರು ಸಿಡಿಲಂತೆ ಮಿಂಚಿನ । ಮಿಡುಗಿನಂತಿರೆ ಹೊಳೆದು ಹಜ್ಜೆಯ । ಹೆರೆದೆಗೆದು ಹಾಯಿದರು ತಗರಂದದಲಿ ತವಕಿಸುತ ॥ ಇರುಕಿದರು ಗ್ರಹದಂತೆ ಮಿಗೆ ಮು। ಕ್ಕುರಿಕಿದರು ಮುಗಿಲಂತೆ ರೋಷಕೆ। ನೆರೆಯದಿಬ್ಬರ ಮನವೆನಲು ಹೊಯ್ದಾಡಿದರು ಭಟರು ॥ ೩ ॥ ಗದೆಗದೆಯ ಹೊಯ್ಲಳಲಿ ಖಣಿಖಣಿ । ಲೊದಗಿತಿಬ್ಬರ ಬೊಬ್ಬೆ ಭುವನವ । ಬೆದರಿಸಿತು ಪದಘಟ್ಟನೆಯ ಘಲ್ಲಣೆಯ ಘಾತಿಯಲಿ ॥ ಅದುರಿತಿಳೆ ಮರುಭಾಷು ಭಟರಂ । ದೊದರುವಾಪರಿವಾರದಬ್ಬರ । ತ್ರಿದಶನಿಕರದ ಸಾಧುರವವಂಚಿಸಿತು ಮೂಜಗವ ॥ ೪ ॥ ಬೆರಳತೂಗಿದನಡಿಗಡಿಗೆ ಹಲ । ಧರನುದಗ್ರಗದಾಭಿಘಾತಕೆ। ಶಿರವನೊಲೆದನು ಶೌಂ ಮಿಗೆ ಮೆಚ್ಚಿದನು ಯಮಸೂನು ॥ ವರಗದಾಯುದ್ಧದ ರಹಸ್ಯದ [illegible] ತತ್ವವಿಧೇಯನರ್ಜನ । ನರರ ಮಝರೇ ಚಾಗುಚಾಗೆಂದುದು ಭಟವ್ರಾತ ॥ [illegible] ಲಜಿಸ ತನು । ಕವಚ ಬಿರಿದುದು ಕೈಯೊಡನೆ ರಣ । ದವಕಿ ಕೈದೋರಿದನು

ಸವೆಗ ಸೀಳಿತು ಮರಳಿ ಹೊಯ್ದನು । ಪವನಜನ ಸೀಸಕವ ವರಮಣಿ । ನಿವಹ ಸಿಡಿದವು ಸಿಡಿಲುಮು
ಟ್ಟಿದಮೇರುಗಿರಿಯಂತೆ ॥ ೭ ॥ ಅಡಿಗಡಿಗೆ ಕರ್ಪೂರದ ಕವಳವ । ನಡಸಿದರು ತಾಳಿಗೆಗೆ ಬಳಿಕಡಿ । ಗ
ಡಿಗೆ ಹೆರಸಾರಿದರು ಸಮರಶ್ರಮನಿವಾರಣೆಗೆ ॥ ಕಡುಹು ತಳಿತುದು ಹೂತಫಲವಾ । ಯ್ತಡಿಗಡಿಗೆಮ
ತ್ಸರದ ಮಸಕದ । ತಡಿವಲಗೆ ನುಗ್ಗಾಯ್ತು ಮನೆ ಕುರುಪತಿಯ ಪವನಜನ ॥ ಶ್ವಾಸದಲಿ ಕಿಡಿಸಹಿತ
ಕರ್ಬೊಗೆ । ಸೂಸಿದವು ಕಣ್ಣಾಲಿಗಳು ಕ । ಟ್ವಾಸುರದಿ ಕೆಂಪೇರಿದವು ಬಿಗುಹೇರಿ ಹುಬ್ಬುಗಳು ॥
ರೋಷ ಮಿಗೆ ಯೌಡೊತ್ತಿ ಬಹಳಾಭ್ಯಾಸಿಗಳು ಡಾವರಿಸಿದರು ಡೊ । ಳ್ಳಾಸವನು ರಿಪುಸೇನೆ ಕಾಣ
ದು ಚಿತ್ರಮಯಗತಿಯ ॥ ೮ ॥ ಹೊಕ್ಕು ಕುರುಪತಿ ಭೀಮಸೇನನ । ನಿಕ್ಕಿದನು ಕಂದದಲಿ ಗದೆಯನು
ಸೆಕ್ಕಿದನು ವಾಮಾಂಗದಲಿ ಪವಮಾನನಂದನನ ॥ ಜಕ್ಕುಲಿಸಿದವೊಲಾಯ್ತು ಜರೆದು ನ । ಭಕ್ಕೆ ಪುಟನೆ
ಗೆದನಿಲಜನ ಸೀ । ಸಕ್ಕಮುರಿಯಲು ಹೊಯ್ದು ಕೌರವನೃಪನು ಖಾತಿಯಲಿ ॥ ೯ ॥ ಬಾಯೊಳೊ
ಕ್ಕುದು ರುಧಿರ ಕಂಗಳ । ದಾಯ ತಪ್ಪಿತು ಡೆಂಡಣಿಸಿ ಕಲಿ । ವಾಯುಸುತನವ್ವಳಿಸಿ ಬಿದ್ದನು ಕೈಯ
ಗದೆ ಕಳಚಿ ॥ ಹಾಯೆನುತ ತನ್ನವರು ಭಯದಲಿ । ಬಾಯಬಿಡೆ ನಿಮಿಷಾರ್ಧದಲಿ ನಿರ । ಪಾಯನೆದ್ದ
ನು ಚೇತರಿಸಿ ನೋಡಿದನು ಕೆಲಬಲನ ॥ ೧೦ ॥ ಹೆದರು ಹಿಂಗಿತು ಕೆಲಕೆ ಮಾರು । ದ್ದಿದನು ಕರವನು
ಸೂಸಿ ಹಾರಿದ । ಗದೆಯ ಕೊಂಡನು ಸೆರಗಿನಲಿ ಸಂತೈಸಿದನು ಶೋಣಿತವ ॥ ಅದಿರೆ ನೆಲನವ್ವಳಿಸೆ
ಮೇಲ್ವಾ । ಯಿದನು ಹೊಳಹಿನ ಹೊಯ್ಲು ಹೊದರೆ । ದ್ದುದು ವಿಭಾಡಿಸಿ ಭೀಮಹೊಯ್ದನು ನೃಪನ
ಮಸ್ತಕವ ॥ ೧೧ ॥ ದಾಟಿ ಬಿದ್ದವು ಸೀಸಕವು ಸಮ । ತೋಟಿಗಾಯದ ಘಟ್ಟಣೆಗೆ ಶತ । ಕೋಟಿ
ಗಾಯಕೆ ಸಿಡಿದಹೇಮಾಚಲದ ತುದಿಯಂತೆ ॥ ತಾಟಿಸಿತು ಕಂಠದಲುಸುರು ನಿಜ । ನೋಟ ತಪ್ಪಿತು
ಮೃತ್ಯುವಿನ ದರ । ಚೀಟಿಹಿಡಿದನೊ ಹೇಳೆನಲು ಮೈಮರೆದು ಮಲಗಿದನು ॥ ೧೨ ॥ ಹಾರಿತೊಂದೆಸೆ
ಗಾಗಿ ಗದೆ ಮುರಿ । ದೇರಿದವು ಕಣ್ಣಾಲಿ ನೆತ್ತಿಯ । ಜೋರುಮುಸುಕಿತು ಮುಖವನೊಂದರೆಗಳಿಗೆಮಾ
ತ್ರದಲಿ ॥ ಚಾರಿತಂತತಸ್ತಿಮಿರ ಭಯ ಹುರಿ । ಯೇರಿತಧಿಕಕ್ರೋಧಕರಣದ । ತಾರ:ಘಟ್ಟಡಗಿದುದು
ಪಸರಿಸುತಸು ನಿಜಾಂಗದಲಿ ॥ ನಿಮಿಷದಲಿ ಕಂದೆರೆದನಂತಃ । ಶ್ರಮದ ಝಳವಡಗಿತು ವಿಪಕ್ಷ । ಧೃಮ
ದ ತೇಜೋಭಾವಭವನದ ಮುಖವಿಲಾಸದಲಿ ॥ ತಮದ ತನಿಮಸಕದಲಿ ಭುಜವಿ । ಕ್ರಮ ಛಡಾಳಿಸೆ
ಲಿದ್ದು ಭೂಪೋ । ತ್ತಮನು ಕೊಂಡನು ಗದೆಯನೆಸುವಾಗೆಂದನನಿಲಜನ ॥ ೧೩ ॥ ಈಗಳಾದೊಡ
ವಿನಾಥರಿತ್ರಿಯ । ಭಾಗವನು ಬೇಡಿದೊಡೆ ಕೊಡೆನಂ । ದಾಗಳನುವಾದುದು ಕಣಾ ಗದೆ ನಿನ್ನ ತೊಡೆಗ
ಳಿಗೆ ॥ ತಾಗಿ ನೋಡಿನ್ನೊಮ್ಮೆನುತ ಮ್ಮ । ಲಾಗಿನಲಿ ಹೊಳೆಹೊಳೆದು ಕೈದುವ । ತೂಗಿ ತುಡುಕಿದನ
[illegible]ನನು ಬೊಬ್ಬಿರಿದು ಕಲಿಭೀಮ ॥ ೧೪ ॥ ಉಬ್ಬುಬೇಡಲೆಭೀಮ ಗದೆಯೋ । ಬೊಬ್ಬೆಯೋ ಬಲು
[illegible] ಸಿಸ್ತ್ರುಟು । ಗರ್ಭಗಿರಿಗಡೆ ಸಿಡಿಲೆನುತ ಹೊಯ್ದನು ವೃಕೋದರನ ॥ ನಿರ್ಭರದ ಗದೆಯಿಂದಗಾ
ಮವ [illegible]ದನು ವಾಯುಜನ ಖತಿಯಲಿ । ಕೊಬ್ಬಿದೊಡೆ ಹೊಯ್ಲುಗಳಡಿಸಿ ಕಿವಿಗಡಿಸೆ ಮೂಜ
[illegible] ಕೇಳ್ಭೀಮಸೇನನ । ಥರಥುರದ ಹೊಯ್ಲುಗಳ ಗದೆಯಲಿ । ಹೂತಳಗಡಿ
[illegible] । ಪ್ಪುಲಿಸಿ ಹೊ[illegible]ವಮಂಡಲವ ॥ ಅರಸನೆರಗಾದನನಿಲಸುತ ಪ್ರ । ಸರಸಿ ಕಳಚಿದನಾಕ್ಷಣದ
[illegible]ರವನೃಪನ ಕಂದರವ ॥ ೧೬ ॥ ನೋಡಿದನು ದಂಡೆಯಲಿ ಛಾಗಿ ।

ಹೊಡಿದನು ನೃಪ ಭೀಮನಲಿ ಪಯ।ಪಾಡಿನಲಿ ಪಲ್ಲಟಿಸಿದನು ಪಡಿತಳಕೆ ಕುರುರಾಯ॥೧೭॥ ಗಾಡಿಸಿದ
ನುಪ್ಪರದ ಗಾಯಕೆ। ಕೂಡೆ ತಗ್ಗಿದನನಿಲಸುತ ಖಯ।ಖೋಡಿಯಿಲ್ಲದೆ ಭಟರು ಹೊಯ್ದಾಡಿದರುಖಾ
ತಿಯಲಿ ॥ ೧೮ ॥ ತೊಲಗಿ ನಿಂದರು ಮತ್ತೆ ಭಾರಿಯ । ಬಳಲಿಕೆಯ ಬೇಳುವೆಯ ಚಿತ್ತ । ಸ್ಖಲಿತ
ರಂಗೀಕರಿಸಿದರು ಕರ್ಪುರದವೀಳೆಯವ ॥ ಗಳಿಲನೆದ್ದರು ನಿಮಿಷಮಾತ್ರಕೆ।ಮಲೆತು ನಿಂದರು ಗಾಯ
ಘಾತಿಗೆ । ಸುಳಿವನವಧಾನಿಸುತ ತೂಗಿದರಾಯುಧದ್ವಯವ ॥ ೧೯ ॥ ಲಾಗಿಸುತ ಲಳಿಯೆದ್ದು ಭೀಮ
ನ। ತಾಗಿಸಿದನವನೀಶನಾತನ।ಭಾಗದೇಯವನೇನನೆಂಬೆನು ಹೊಯ್ಲುಹೊರಗಾಯ್ತು ॥ ಬೇಗುದಿಯಲು
ಬ್ಬೆದ್ದು ನೃಪತಿ ವಿ । ಭಾಗಿಸುವೊಲನಿಲಜನ ಹೊಯ್ದನು । ಬೇಗದಲಿ ಕಳಚಿದನು ಪವನಜ ಪಯದ
ಬವರಿಯಲಿ ॥ ೨೦ ॥ ತಪ್ಪಿದೊಡೆ ಗಾಯವನು ಘಡಘಡ । ತಪ್ಪಿಸೆನ್ನಾದರೆಯೆನುತ ಕಡು। ದರ್ಪದಲಿ
ಹೊಯ್ದನು ಸಮೀರಾತ್ಮಜನನವನೀಶ ॥ ತಪ್ಪಿಸಿತು ಗದೆ ತನುವ ರಕುತದ। ದರ್ಪಣದ ರಹಿಯಾಯ್ತು
ಗದೆ ಮಾ। ರಪ್ಪಿತರಸನನೆದ್ದುಹಾಯ್ದನು ಭಾಳದಲಿ ಭೀಮ ॥ ೨೧ ॥ ಒಟ್ಟೆ ಮುರಿದುದು ಸೀಸಕದ
ಗದೆ । ನೆಟ್ಟತರಸನ ನೊಸಲರುಧಿರದ । ಕಟ್ಟೆಯೊಡೆದಾದದಲಿ ಕವಿದುದು ನೃಪನ ತನು ನೆನೆಯೆ ॥
ಕೊಟ್ಟಗಾಯಕೆ ಬಳಲಿ ಮರವೆಗೆ । ಬಿಟ್ಟ ಮನವನು ನಿಮಿಷದಲಿ ಜಗ। ಜಟ್ಟಿ ಕೌರವರಾಯ ಕೊಂ
ಡನು ನಿಜಗದಾಯುಧವ ॥ ೨೨ ॥ ಗಾಯಗತಿ ಲೇಸಾಯ್ತು ಪೂತುರೆ। ವಾಯುಸುತ ನೀ ಸೈರಿಸೆನ್ನ
ಯ । ಗಾಯವನು ಘೋರಪ್ರಹಾರಸಹಿಷ್ಣುಗಡ ನೀನು ॥ ಕಾಯಲಾಪರೆ ಫಲುಗುಣನನಬು । ಜಾ
ಯತಾಕ್ಷನ ಕರೆಯೆನುತ ಕುರು । ರಾಯನೆರಗಿದನನಿಲಜನ ಕರ್ಣಪ್ರದೇಶದಲಿ ॥ ೨೩ ॥ ಎಡದದಂಡೆ
ಯನೊತ್ತಿ ಹೊಯ್ಲಳ । ಕಡುಹ ತಪ್ಪಿಸಿ ಕೌರವೇಂದ್ರನ । ಮುಡುಹ ಹೊಯ್ದನು ಭೀಮ ಮಝು
ಭಾಪೆನೆ ಸುರಸ್ತೋಮ॥೨೪॥ ತಡೆದನಾಗಾಯವನು ಗದೆಯಲಿ।ನಡುವನಪ್ಪಳಿಸಿದನು ಭೀಮನ।ಮಿಡು
ಕು ನಿಂದುದು ನಗುವಪಾಂಡವಬಲದ ತಲೆ ಮಣಿಯೆ ॥ ೨೫ ॥ ಒಲೆದು ಬಿದ್ದನು ಭೀಮ ಕುಲಗಿರಿ।
ಮಲಗುವಂದದಿ ನೆರವು ಬಾಯಿಂ । ದಿಳಿದಶೋಣಿತಧಾರೆ ಮಗ್ಗುಲ ಮುಸುಕಿತವನಿಯಲಿ ॥ ಎಲೆಮ
ಹಾದೇವಾ ವೃಕೋದರ । ನಳಿದನೇ ಹಾ ಭೀಮ ಹಾ ಯೆಂ । ದೊರಲಿದರು ಪರಿವಾರಸಾತ್ಯಕಿ ಸೃಂಜ
ಯಾದಿಗಳು ॥ ೨೬ ॥ ಮೈಮರೆದನರಗಳಿಗೆಮಾತ್ರಕೆ । ಮೈಮನಸ್ಸದ ಜಾಡ್ಯರೇಖೆಯ । ಸುಯ್ಮಹಾ
ದ್ಭುತವಾಯ್ತು ಪರಿಣತಪಾರವಶ್ಯದಲಿ ॥ ಹೈ ಮಹಾದೇವೆನುತ ಹಗೆವನ। ಕೈಮೆಯನು ಬಣ್ಣಿಸುತಲೆ
ದ್ದನ । ಲೈಮರುತ್ಸುತ ಸೂಸಿ ಹಾರಿದಗದೆಯ ತಡವಂಸಿ ॥ ೨೭ ॥ ಕಾದುಕೊಳು ಕೌರವಗದಾಶ್ರಮ।
ಭೇದವಭ್ಯಾಸಿಗಳಿಗೀಡು । ಭೇದ ನೋಡಾ ಹೊಯ್ಲನಿದ ಮರೆಹೊಗುಮಹೇಶ್ವರನ ॥ ಹೋದೆಹೋ
ಗೆನ್ನನುತ ಜಡಿದು ವಿ । ಷಾದಭರದಲಿ ಮುಂದುಗಾಣದೆ । ಕೈದಣಿಯಲಪ್ಪಳಿಸಿದನು ಕಲಿಭೀಮ ಕು
ರುಪತಿಯ ॥ ೨೮ ॥ ಹಾರಿತೊಂದೆಸೆಗಾಗಿ ಗದೆ ಮೈ । ಹೇರಿತುರುಗಾಯವನು ಮೋಹಿತಾ । ಲೂರಿ
ಬಿದ್ದನು ವದನದಲಿ ರಣಧೂಳಿ ಮೆಂಟಣಿಸೆ॥ ಕಾರಿದನು ರಕುತವನು ಕೌರವ।ನೇರು ಬಲುಹೋ ಹೊ
ಡೆನೆನುತಮೆ। ಚೀರಿತಾಪರಿವಾರ ಸುಮ್ಮಾನದ ಸಘಾಡದಲಿ ॥ ೨೯ ॥ ಭಾಪು ಮಝರೇ ಭೀಮ ಕೌರವ
ಭೂಪವಿಲಯಕೃತಾಂತ ಕುರುಕುಲ । ದೀಪಚಂಡಸಮೀರ ಕುರುಪತಿತಿಮಿರಮಾರ್ತಾಂಡ । ಕೋಪನ
ಕೃತಿಪಕ್ಷಕಾಲನಿ । ರ್ವ್ಯಾಪನ್ನಕಸಮರ್ಥಯೆನುತಭಿ । ರೂಪನನು ಹೊಗಳಿದರು ವಂದಿಗಳಬುಧಿಘೋ

ಷದಲಿ ॥ ೨೯ ॥ ಜಾಳಿಸಿದವೇದನೆಯ ಝೊಂಪಿನ । ಜಾಳಿಗೆಯ ಜವ ಹರಿದುದೆಚ್ಚರ । ಮೇಲುಮ
ರವೆಯ ಮುಸುಕು ಜಾರಿತು ಹಾರಿತರಿಭೀತಿ॥ ಬೇಳುವೆಯ ಕರಣೇಂದ್ರಿಯದ ವೈ । ಹಾಳಿ ನಿಂದುದು
ಬಿಗಿದ ಬಳಲಿಕೆ । ಯೂಳಿಗದ ಮೊನೆ ಮುರಿದು ಸಂತೈಸಿದನು ಕುರುರಾಯ ॥ ೩೦ ॥ ಒರೆವರಕುತವ
ಧೂಳಿಯಿಂದವೆ । ಹೊರಗೆ ತೊಡೆತೊಡೆದೌಕಿ ರೋಷದ । ಹೊರಗೆ ಝಳಿಪಿಸಿ ಹುಬ್ಬಿನಲಿ ಕಂಗಳಲಿ
ಸುಯ್ಲಿನಲಿ ॥ ಮುರುಕಿಸುವರಿಪುಭಟನ ಮೋರೆಯೊ । ಳೆರಗಿ ನೋಡುತ ಸಾರಸತ್ವದ । ನೆರವಣಿಗೆ
ವೈಗೂಡಲೆದ್ದರು ಗದೆಗೆ ಕೈನೀಡಿ ॥ ೩೧ ॥ ಹಾನಿಯೆಮಗಾಯ್ತೆಂದು ಕಡುಸುಂ । ಮಾನವುಕ್ಕಿತೆ
ನಿಮಿಷದಲಿ ದುಃ। ಮಾನಜಲಧಿಯೊಳದ್ದುವೆನು ತಿದ್ದುವೆನುನಿನ್ನವನ ॥ ಈನಗೆಯನೀಬಗೆಯನೀವಿಜ।
ಯಾನುರಾಗವ ನಿಲಿಸುವೆನು ಯಮ। ಸೂನು ಸೈರಿಸೆನುತ್ತ ಜರೆದನು ವಾಮಹಸ್ತದಲಿ ॥೩೨॥ ಎಲವೊ
ಭೀಮ ವಿಘಾತಿಗಳ ಕಂ । ದೊಡವಿನಲಿ ತೆರಹಾಯ್ತು ನೀನಿ । ಟ್ಟೆಳಿಸುವರೆ ನಿನಗಾದುದಸ್ಮತ್ಪತನದ
ಭ್ಯುದಯ ॥ ಛಲವ ಸಲಿಸುವೊಡೇಳು ನೀ ಮನ । ವಳುಕುವರೆ ನಿನ್ನವರ ಕರೆಹೊ । ಯ್ಯೊಳಗದೊಂ
ದೇಹೊಯ್ಲೆನುತ ಹೊಕ್ಕನು ಮಹೀಪಾಲ ॥ ೩೩ ॥ ಹೌದು ತೋರಾ ಬಂಜೆನುಡಿಗಳ । ಬೈದೊಡ
ಧಿಕನೆ ಬಾಹುವಿಂ ಹೊರ । ಹೊಯ್ದವನೊ ಮೇಣ್ಮುಖಜನೋ ನೀನಾರು ಜಾತಿಯಲಿ ॥ ಕೈದುನಿನಗಿ
ದೆ ಸಮರಮುಖದಲಿ । ಯೈದುವಡೆ ಗುಪ್ತಪ್ರತಾಪವ । ನೈದೆ ಪಲ್ಲೈಸೆನುತ ತಿವಿದನು ಭೀಮ ಕು
ರುಪತಿಯ ॥ ೩೪ ॥ ಅವನಿಪತಿ ಕೇಳ್ ಭೀಮಸೇನನ । ತಿವಿಗಳನು ತಪ್ಪಿಸಿ ಸುಯೋಧನ । ಕವಿದು ಸಾ
ಧಿಗೆ ತೋರಿ ಜಂಘೆಗೆ ಹೊಡಿ ಝಳಪದಲಿ ॥ ಲವಣೆಯಲಿ ಲಳಿಯೆದ್ದು ಹೊಯ್ದನು। ಪವನಜನ ಭು
ಜಶಿರವ ಸೀಸಕ । ಕವಚವಜಿಗಿಜಿಗಿಯಾಗೆ ಬೀಳೆನುತರಸ ಬೊಬ್ಬಿರಿದ ॥ ೩೫ ॥ ಮತ್ತೆ ಹಾಯ್ದನು
ಭೀಮಸೇನನ । ನೆತ್ತಿಯನು ನಿಪ್ಪಸರದಲಿ ಖಳ । ಹತ್ತಿ ಝೊಂಪಿಸಿ ತಿರುಗಿ ಬಿದ್ದನು ಬಿಗಿದಮೂ
ರ್ಛೆಯಲಿ ॥ ತೆತ್ತಕಂಗಳ ಸುಯ್ಲಲಹರಿಯ । ಸುತ್ತಲೊಗುವರುಣಾಂಬುಗಳ ಕೆಲ । ದತ್ತ ಜಾರಿದಗ
ದೆಯ ಭಟನೊರಗಿದನು ಮರವೆಯಲಿ ॥ ೩೬ ॥ ಮಡಿದವನಹೊಯ್ಕೈನು ಧನಂಜಯ । ತೊಡು ಮ
ಹಾಸ್ತ್ರವನವನಿಪತಿ ಬಿಲು। ದುಡುಕು ಯಮಳರು ಕೈದುಗೊಳಿ ಸಾತ್ಯಕಿ ಶರಾಸನವ । ಹಿಡಿ ಶಿಖಂಡಿ
ದ್ರುಪದಸುತರವ । ಗಡಿಸಿರೇ ನಿಮ್ಮವನ ಹರಿಬಕೆ । ಮಿಡುಕುವೊಡೆ ಬಹುದೆನುತ ತೂಗಿದನವನಿಪತಿ
ಗದೆಯ ॥ ೩೭ ॥ ಮೇಲೆ ಕಳವಳವಾಯ್ತು ದಿಕ್ಕಿನ । ಮೂಲೆ ಬಿರಿಯೆ ಪಿಶಾಚರಾಕ್ಷಸ । ಜಾಲವಿ
ದ್ಯಾಧರ ಮಹೋರಗಯಕ್ಷಕಿನ್ನರರು ॥ ಆಳು ನೀನಹೆ ನಳನಹುಷಭೂ । ಪಾಲಕುಲದಲಭಂಗನಾದೆ
ಯೆ । ತಾಳಭುಜಬಲ ನೀನೆನುತ ಕೊಂಡಾಡಿತಮರಗಣ ॥ ೩೮ ॥ ಅರಸ ಕೇಳಾಶ್ಚರ್ಯವನು ನಿ । ಮ್ಮರ
ಸನಾತನವನಖಿಲ ಸುರಕುಲ । ಪರಳೆಮಳೆಗರೆದುದು ಕಣಾ ಕುರುಪತಿಯ ಸಿರಿಮುಡಿಗೆ ॥ ಅರಿಭಟರು
ತಲೆಗುತ್ತಿದರು ಮರ । ಹರಯುಧಿಷ್ಠಿರಪಾರ್ಥಯಮಳರು । ಬೆರಳ ಮೂಗಿನಲಿದ್ದು ಬೈದರು ಸು
ಚಿತ್ತ ದುಷ್ಕೃತವೆ ॥ ೩೯ ॥ ಮಿಡಿದನರ್ಜುನ ಧನುವ ಯಮಳರು । ತುಡುಕಿದರು ಕೈದುಗಳ ಸಾ
ತ್ಯಕಿ । ಮಿಡುಕಿದನು ಮರುಗಿದರು ಪಂಚದ್ರೌಪದೀಸುತರು ॥ ಒಡೆಯನಳಿವಿನೊಳೆಲ್ಲಿಯದು ನೃಪ ।
ನುಡಿದನುಡಿಯೆನುತನಿಲತನಯನ। ಪಡೆ ಗಜಾಶ್ವದ ಬಿಗಿಯೆ ಗಜಬಜಿಸಿತು ಭಟಸ್ತೋಮ ॥ ೪೦ ॥
ಮುಗುಡವಳಿ ಹರಿ ರೋಹಿಣೇಯನ। ಮೊಗವ ನೋಡಿದೊಡಾತನಿದು ಕಾ। ಳಗವಲೇ ಕ್ಷೇಸನುಯುದಾ

ದಿರಿ ಪೂರ್ವಕಾಲದಲಿ ॥ ಹಗೆಯು ಬಿಡು ಕುರುಪತಿಯು ಸಂಧಿಗೆ । ಸೊಗಸಿನಲ್ಲಿ ಯುಧಿಷ್ಠಿರನ ಮಾ । ತುಗಳ ಕೆಡಿಸದಿರೆಂದನಾಕೃಷ್ಣಂಗೆ ಬಲರಾಮ॥೪೧॥ ಅರಸ ಕೇಳೈ ಬಿದ್ದ ಭೀಮನ।ಹೊರಗೆ ಬಂದರ್ಜು ನನು ಮೂಗಿನ । ಬೆರಳ ನೋಡಿ ಸಮೀರನಂದನನುಸುರನಾರೈದು ॥ ಮರಳಿದನು ಮುರಹರನನೆಕ್ಕಟಿ। ಗರೆದು ಸತ್ರಾಣನು ಗದಾನಿ । ರ್ಭರಪರಿಶ್ರಮಭೀಮ ಬಳಲಿದನೆಂದನಾಪಾರ್ಥ ॥ ೪೨ ॥ ದೇವ ಬೆಸ ಸಿನ್ನನಿಲಸೂನು ಸ । ಜೀವನನು ನಿಮ್ಮಡಿಗಳಾಡಿದ । ಭಾವನನು ಕರುಣಿಸುವುದಾತನ ಧರ್ಮವಿಕೃತಿಗ ಳ ॥ ನೀವು ಕಂಡಿರೆ ನಾಭಿಜಂಘೆಗೆ। ಡಾವರಿಸಿದನು ಹಲವುಬಾರಿ ಜ। ಯಾವಲಂಬನವೆಂತು ಕೃಪೆಮಾ ಡೆಂದನಾಪಾರ್ಥ ॥ ೪೩ ॥ ನೀವು ಮೊದಲಲಿ ಬೆಸಸಿದಿರಿ ಮಾ । ಯಾವಿಗಳ ಮಾಯೆಯಲಿ ಗೆಲುವು ದು । ದೈವಕೃತವಿದು ರಾಜಧರ್ಮದ ಸಾರತರವೆಂದು ॥ ಈವಿರೋಧಿಯ ಧರ್ಮಗತಿಸಂ । ಭಾವಕನು ಕರ್ತವ್ಯಭಾವವ । ನೀವುಬಲ್ಲಿರೆ ಯೆಂದ ನರ್ಜುನದೇವ ವಿನಯದಲಿ ॥ ೪೪ ॥ ಧಾತುಗೆಟ್ಟನು ಭೀಮ ಮುಸುಕಿತು । ಭೀತಿ ನಮ್ಮೆಲ್ಲರನು ದೇವ । ವ್ರಾತವಾತನ ಕೊಂಡು ಕೊನರಿತು ಹೊಯ್ದುಹೊಮಳೆ ಯು ॥ ಪಾತಕಕೆ ಫಲವಾಗದವಳ । ಖ್ಯಾತಿ ಕಂದದೆ ವಿಜಯಸಿರಿ ರಾ। ಗಾತಿಶಯದಲಿ ನಮ್ಮರವಿಸು ವಬಗೆಯ ಹೇಳೆಂದ ॥ ೪೫ ॥ ಅನಿಲಸುತ ಸತ್ರಾಣಿಸಲು ನೃಪ । ಜನಪನೂರುವಿಭಾಗವೇ ಮುನ್ನಿ ನಪ್ರತಿಜ್ಞೆಯಲಾಸಭಾಮಧ್ಯದಲಿ ಕುರುಪತಿಯ ॥ ನೆನಸಿಕೊಡು ಸಾಕಿನ್ನು ಬೇರೊಂ । ದನುನಯವು ತಾನೇನು ವಿಜಯಾಂ । ಗನೆಗೆ ದ್ರುಪದ ಕುಮಾರಿ ತಪ್ಪದೆ ಸವತಿಯಹಳೆಂದ ॥ ೪೬ ॥ ಅರಸ ಕೇಳಾಕ್ಷ ಣದೊಳನಿಲ । ಸ್ಮರಣೆಯನು ಹರಿ ಮಾಡಿದೊಡೆ ಸಂ।ಚರಿಸಿದನು ತತ್ತನುಜನಂಗೋಪಾಂಗವೀಧಿಯ ಲಿ ॥ ಥರಥರದ ನಾಡಿಗಳೊಳಗೆ ವಿ । ಸ್ತರಿಸಿ ಮೂಲಾಧಾರದಲಿ ಚೇ । ತರಿಸಿ ಸರ್ವಾಂಗದಲಿ ಜೀವಸ ಮೀರ ಪಸರಿಸಿದ ॥ ೪೭ ॥ ಪ್ರಾಣವಿಮ್ಮಡಿಸಿತ್ತು ತಿರುಗಿದ । ಗೋಣು ಮರಳಿತು ರೋಷವಹ್ನಿಗೆ । ಸಾಣೆಹಿಡಿದವೊಲಾಯ್ತು ಕಣ್ಣುಗಳಿಡಿದು ಕೇಸುರಿಯ ॥ ತ್ರಾಣಸಡಲಿದದೆಸೆಯ ರಣಬಿ । ನ್ನಾಣಿಮ ಸುಳಿಪಮಾನಮರ್ದನ।ದೂಣೆಯುದ ಸಂವ್ಯಥೆಯ ಭಟ ಸಂತೈಸಿದನು ತನುವ॥೪೮॥ ಕೊಡಹಿದನು ತನು ಧೂಳಿಯನು ಧಾ । ರಿಡುವರುಧಿರದ ಸರವಿನಲಿ ತೊಡೆ । ತೊಡೆದು ವರಕರ್ಪೂರರಕವಳವನೊಳಲೊಳೆಡ ಸಿದನು ॥ ತೊಡೆಯ ಹೊಯ್ದಾಡುವಮುರಾರಿಯ । ನೆಡೆಯುಡುಗವೀಕ್ಷಿಸುತ ದೂರಕೆ । ಸಿಡಿದಗದೆ ಯನು ತುಡುಕಿ ನೃಪತಿಯ ತೊಡೆಗೆ ಲಾಗಿಸಿದ ॥ ೪೯ ॥ ಭಾಷೆಗಳುಪರು ಪಾಂಡುಸುತರೆಂ । ಬಾಸೆ ಯಲಿ ನಿಶ್ಚಿಂತ ಮೈಮರೆ । ದೋಸರಿಸನಿದಿರಾದನೂರುದ್ವಯವ ವಂಚಿಸದೆ ॥ ಶ್ವಾಸಮರಳಿತೆ ನಿನಗೆ ರಿಪುಗಿರಿ । ಧ್ವಂಸಿಯನು ಜಂಭಾರಿ ಭೀಮ ಸ್ಮರಣೆ । ಲೇಸು ಮೆಚ್ಚಿದೆನೆನುತ ನೃಪನರಗಿದನು ಪವನಜ ನ ॥ ೫೦ ॥ ಜೊಡೆಯ್ದುಬ್ಬಳಿಯಲಿ ಕದಣಗತಿಯಲಿ।ಜೊಯ್ದು ನಭಕುಪ್ಪರಿಸಿ ಮರಳಿದು । ಹೊಯ್ದು ಹಿರಿಗುವನೃಪನ ತೊಡೆಗಳನಿಟ್ಟನಾಭೀಮ ॥ ಹೊಯ್ಲುಗದೆ ಹೆದ್ದೊಡೆಗಳನು ಮುರಿ । ದೈದಿತವನಿ ಕುಲರುಣಜಲದಲಿ । ತೊಯ್ದುಧೊಪ್ಪನೆ ಕೆಡೆದನಿಳೆಯಲಿ ಕೌರವರರಾಯ ॥ ೫೧ ॥ ಹಾರಿ ಹರಿ ದುದು ಕರ್ಣಪೂರದ । ಚಾರುಮೌಕ್ತಿಕನಿಕರ ಸಿಡಿದವು । ಥಾರಿಡುವರಕ್ತಾಂಬು ಮಡುಗಟ್ಟಿದುದು ಪೊಳ್ಮಲಲಿ ॥ ಧೀರಭೀಮನ ಮಹಿಮೆಸುತ ಬಲ । ವಾರಿದುದು ನಿಸ್ಸಾಳಸೂಳಿನ । ಭೇರಿಪಟಹದ ಬಗೆ ಮಸಗಿತು ಪಟರ ಪಟ್ಟಣಸಲಿ ॥ ೫೨ ॥ ಬಿದನೆ ನಿನಾನ್ನೆ ತನೇನನೆ । ದಿದುದಾಯ್ದೇ ಜೂಜಿನಲಿ

ನೃಪ । ಗೆದ್ದುದಕೆ ಫಲ ಬಂದುದೇ ಸಂಧಾನದಲಿ ಛಲವ ॥ ಹೊದ್ದಿದಕೆ ಹುಲುಸಾಯ್ತು ಬಲುವಗೆ । ಬಿದ್ದನೆಂದುಳಿಹಿದೆನು ಪವನಜ । ನುದ್ಧುರುಟತನಕೇನನೆಂಬೆನು ನೃಪತಿ ಕೇಳೆಂದ ॥ ೫೩ ॥ ಏಕೆ ಸಂಜಯ ಕೌರವೇಂದ್ರನ । ಸಾಕಿದಕೆ ಫಲವಾಯ್ತು ನೀ ಬರಿ । ದೇಕೆ ಚುಚ್ಚುವೆ ಕಾಸಿಬಾಣದಕೊರದಗಾಯದಲಿ ॥ ನೂಕಿದರೆ ಬಲಭದ್ರನನು ಬಳಿ । ಕೇಕೆ ಪವನಜ ಮುನಿದನವರ। ವ್ಯಾಕುಲರಲ್ಲೈ ವೀರನಾರಾಯಣನ ಕರುಣದಲಿ ॥ ... ... ॥ ೫೪ ॥

ಅಂತು ಸಂಧಿ ೭೬ಕ್ಕಂ ಪದ ೩೬೪೮ಕ್ಕಂ ಮಂಗಳಮಸ್ತು.

ಎಂಟನೆಯ ಸಂಧಿ.

॥ಸೂಚನೆ॥ ಕೆಡೆದ ಕೌರವನೃಪನ ನೇಮವ । ಪಡೆದು ಕೃಪಕೃತವರ್ಮಗುರುಸುತ । ರೊಡನೆ ಬಂದರು ಸಾರಿದರು ಪಾಂಡವರ ಪಾಳೆಯವ ॥

॥ಪದ॥ ಕೇಳು ಧೃತರಾಷ್ಟ್ರಾವನಿಪ ಕ । ಟ್ಟಾಳು ವಜ್ರಗದಾಭಿಹತಿಗೆ ನೃಪಾಲ ಬಿದ್ದನು ಭಾರತದ ದುಸ್ಸಂಗಭಂಗದಲಿ ॥ ಮೇಲೆ ಭಾರಣೆ ಸೂತಮಾಗಧ । ಜಾಲ ಹೊಗಳಿತು ಗರುವಕುರುಭೂಪಾಲ ಗಂಡಿಗನಕಟಿನುತ ಕೊಂಡಾಡಿತಮರಗಣ ॥೧॥ ಏನನೆಂಬೆನು ಜೀಯ ಮಹಿಯಲಿ । ಮಾನನಿಧಿ ಮಲಗಿದನಲೈ ತವ । ಸೂನು ರುಧಿರದ ತಿಲಕವಾದನಲೈ ಧರಾಂಗನೆಗೆ ॥ ಭಾನುಮತಿ ವೈಧವ್ಯವಿಧಿಗಂ । ದೇನ ನೋಂತಳೊ ರಾಜರವಿಯವ । ಸಾನ ಸಮಯದಲಾದುದದ್ಭುತವರಸ ಕೇಳೆಂದ ॥ ೨ ॥ ನಡುಗಿತಿಳೆ ನಿರ್ಘಾತದಲಿ ಬರ । ಸಿಡಿಲು ಸುಳಿದವು ನೆಣನವಸೆಸಹಿ । ತಡಗು ಸುರಿದುದು ಕದಡಿ ಹರಿದುದು ರಕುತದರೆವೊನಲು ॥ ಸಿಡಿದವರೆಗಳು ಕೆರೆಗಳುಕ್ಕಿದ । ವಡಿಗಡಿಗೆ ಹೆಮ್ಮರ ವಿಘಾತದ । ಲುಡಿದು ಬಿದ್ದುದು ಕೌರವೇಂದ್ರನ ಪತನಕಾಲದಲಿ ॥೩॥ ಬೀಸಿದುದು ಬಿರುಗಾಳಿ ಕತ್ತಲೆ । ಸೂಸಿದುದು ಹಗುವಳಯವನು ಪರಿ । ವೇಷದಲಿ ಗ್ರಹ ನೆರೆದವೈ ದಾರೆಗಳು ರವಿಯೊಡನೆ ॥ ಸೂಸಿದವು ಹಗಲಲ್ಲಿ ಮೃಗಗಣ । ವಾಸುರದಲೊದಾದವು ಕಂಡಿತು । ವಾಸರಪ್ರಭೆ ಕೌರವೇಂದ್ರನ ಪತನಕಾಲದಲಿ ॥೪॥ ಪರಸಹಿತ ಕೈದುಗಳು ಕರದಿಂ । ಮುರಿದು ಬಿದ್ದವು ಗಜಹಯದ ಕ । ಣ್ಣೊರತೆಯೆದ್ದವು ಕಡಿದು ಬಿದ್ದವು ಧ್ವಜಪತಾಕೆಗಳು ॥ ತುರುಗದಂತಸ್ತಾಪದಲಿ ಮನ । ಮುರುಗಿತಾಪರವಾರ ಸುಭಟರ । ಗರುವತಾಕಸ್ಮಿಕದ ಭಯವವನೀಶ ಕೇಳೆಂದ॥೫॥ ದ್ರುಪದತನುಜಶಿಖಂಡಿಸೃಂಜಯ।ನೃಪಯುಧಾಮನ್ಯೂತ್ತಮೌಂಜಸ।ಚಪಳಪಂಚದ್ರೌಪದೀಸುತಸೋಮಕಾದಿಗಳು॥ ಅಪದಶಾವಿದ್ಭೂತಚೇತಸ । ಕ್ಷಪಣರತಿಚಿಂತಿಪರಂಧಿರು । ಳಪಹತಿಯ ಸೂಚಿಸುವವಾಮಭುಜಾಕ್ಷಿಕಂಪದಲಿ ॥ ೬ ॥ ಅವನಿಪತಿ ಕೇಳೀಚೆಯಲಿ । ರಥನ ಹೊರಗೈತಂದು ನಿಂದನು । ಸವಡಿಕೈಗದೆಯಸುಗಳ್ದದ ಗಾಢಗರ್ವದಲಿ ॥ ಪವನಸುತನ

ನುಡಿಸಿದನಲ್ಲೆ ನಿ । ನ್ನವನನೇಸ್ತ್ವಿಭೂಪ ಕೊಡುವೈ । ನವಗೆ ನೆಲನರ್ಧವನು ನಾಚಿಕೆಯಿಕೆ ನುಡಿಯೆ
ದ ॥೭॥ ಊರುಬೇಡಿದವೈದೆ ನೀನೆರ । ಡೂರುಗಳನೇಕೊಟ್ಟೆಯ್ಯೆ ನಿಜ । ಧಾರಿಣಿಯು ಕೊಡೆನೆಂ
ಲಾಸೂಚ್ಯಗ್ರ ಸಂಮಿತವೆ॥ನಾರಿ ರುತುಮತಿಯೆಂದೊಡೆಯು ಸುಲಿ।ಸೀರೆಗಳನೆಂಬಗ್ಗಳಿಕೆ ಕಾ। ಸಾರ
ಲಿ ಕರಗಿತೆ ಸುಯೋಧನ ಯೆಂದನಾಭೀಮ ॥೮॥ ಎತ್ತಿ ಕಳುಹಿದೆ ವನಕೆ ನಾವ್ ನಿ । ಮ್ಮೆತ್ತುಗಳ
ಬೆರಳಲೇಡಿಸಿ । ದೆತ್ತುಗಳ ಕೂಡೇಕೆ ಸರಿನುಡಿ ಸಾರ್ವಭೌಮರಿಗೆ ॥ ಇತ್ತಲೇತಕೆ ಬಿಜಯಮಾಡಿದಿ
ರೆತ್ತನೀಕಲುನೆಲನು ಪವಡಿಸಿ । ಮತ್ತೆ ತೊಡೆಗಳ ತಿವಿಯಲೇಕಿನ್ನೆಂದನಾಭೀಮ ॥೯॥ ಕೃತ್ರಿಮವ
ರ್ವಿರ್ಗಿಸಿದಫಲ ಕೈ । ವರ್ತಿಸಿತೆ ನೀಗರುವನೆಮ್ಮಲಿ।ಹೊತ್ತಿಸಿದಛಲ ಬಂದುದೇ ವ್ಯವಧಾನವಾದುದೆಲಾ
ಬಿತ್ತಿದಿರಿ ವಿಷಬೀಜವನು ನೆರೆ । ದತ್ತ ಫಲಕ್ಕೆ ಸಾದುರ್ದಾಗಲಿ।ತೆತ್ತುಕೊಂಡಿರಲೇಕೆ ನುಡಿಯೆನ್ನಾ
ನುಡಿಯೆಂದ ॥೧೦॥ ಸಂದವೈ ನೀ ಮೆಚ್ಚಿ ಸಭೆಯಲಿ । ಹಿಂದೆ ಮಾಡಿದಭಾಷೆ ಕುರುಡನ । ನಂದನ
ನಿಮ್ಮಡಿಸಿದ್ದೈವತ್ತನು ರಣಾಗ್ರದಲಿ ॥ ಕೊಂದು ದುಶ್ಶಾಸನನ ಖಂಡವ । ತಿಂದು ನೆತ್ತರಗುಡಿದು ಬೀ
ಗದೆ । ಯಿಂದ ನಿನ್ನಯ ತೊಡೆಯ ಮುರಿದೆನು ನೃಪತಿಕೇಳೆಂದ ॥೧೧॥ ರಾಯನಾಸ್ಥಾನದಲಿ ಖೂ
ರ । ರಾಯ ನೀನೇ ಭಂಗಬಡಿಸಿದ । ವಾಯಿಯಲಿ ನಿಮ್ಮೊರಿಗೆಮ್ಮೊ ವರನು ನೀಕರೆಸಿ ॥ ದಾಯದ
ಜೂಜಾಡಿ ಕಪಟದ । ದಾಯದಲಿ ಸೋಲಿಸಿ ಯುಧಿಷ್ಠಿರ । ರಾಯನರಸಿಯ ಸುಲಿದುದಕೆ ಫಲ
ಯ್ತೆ ಕೇಳೆಂದ ॥೧೨॥ ಹಿಂದಣಪಕಾರವನು ಲೆಕ್ಕಿಸು । ತೊಂದೆರಡು ಮೂರಾಯ್ತು ನಾಲ್ಕೈ । ದ
ದು ಮೆಟ್ಟಿದವನಿಪಾಲನ ಮುಕುಟ ಮಸ್ತಕವ ॥ ಇಂದುಮುಖಿಯನು ಬೂತುಗೆಡೆದುದ। ಕೊಂದು
ಯಾವ ಕೊಳ್ಳೆನುತ ಮದ । ದಿಂದ ವದನವನೊದೆದು ಹಲುಗಳ ಕಳೆದನಾಭೀಮ ॥ ೧೩॥ ಉಚಿತವೆಂ
ರು ಕೆಲರು ಕೆಲವರ । ನುಚಿತವೆಂದರು ಪೂರ್ವಜನ್ಮೋ । ಪಚಿತದುಷ್ಕೃತವೈಸಲೇ ಶಿವಯೆಂದು
ಲಕೆಲರು ॥ ಖಚರಕಿನ್ನರಯಕ್ಷನಿರ್ಜರ । ನಿಚಯ ಭೀಮನ ಬೈದು ಕುರುಪತಿ । ಯಚಲಬಲವನು
ಣ್ಣಿಸುತ ಹೊಕ್ಕರು ನಿಜಾಲಯವ ॥೧೪॥ ಹಳುವದಲಿ ನಾನಾಪ್ರಕಾರದ । ಲಳಲಿಸಿದ ಫಲಭೋಗ
ನು ನೀ । ತಲೆಯಲೇ ಧರಿಸೆಂದು ವಾಮಾಂಘ್ರಿಯನು ಮುಕುಟದಲಿ ॥ ಇಳುಹಿದನು ಕುರುಕುಲದ
ವಿಯೆಂ । ದುಲಿದೆಲಾ ಯೆನುತೊದೆದು ಮುಕುಟವ । ಕಳಚಿದನು ಕೀಲಣದ ಮಣಿಗಳು ಕೆದರೆ ದ
ದೆಸೆಗೆ ॥೧೫॥ ಭೀಮ ಹಾಹಾ ಕಷ್ಟವಿದುಸಂ । ಗ್ರಾಮಜಯವೇ ಸಾಲದೇ ಕುರು । ಭೂಮಿಪತಿ
ಶ್ಲಾಘ್ಯನೇಲೋಕೈಕವಾನ್ಯನಲಾ ॥ ನೀ ಮರುಳಲಾ ಸಾಕೆನುತ ತ । ತ್ಸ್ತ್ರೀಮಗ್ನೆತಂದನಿಲತನುಜನ
ನಾಮಹೀಪತಿ ನೂಕಿ ಸಂತೈಸಿದನು ಕುರುಪತಿಯ ॥ ೧೬ ॥ ಗುಣನಿಧಿಯನೇಕಾದಶಾಕ್ಷೋ । ಹಿ
ಯ ಪತಿಯನಶೇಷಪಾರ್ಥಿವ । ಮಣಿಮುಕುಟಕಿರಣೋಪಲಾಲಿತಪಾದಪಲ್ಲವನ ॥ ರಣದೊಳನ್ಯಾಯ
ಲಿ ತೊಡೆಗಳ । ಹಣಿದುದಲ್ಲದೆ ಪಾದದಲಿ ನೀ । ಕೆಣಕುವರೆ ಕುರುರಾಯಮೌಳಿಯನೆಂದನಾರಾ
॥೧೭॥ ಅನುಬಿರಳಿದುದು ನೂರು ರಣದಲಿ । ತನುಜರಳಿದುದು ಮಾವಮೈದುನ । ಜನಪಿತಾಮಹ
ತ್ರಮಿತ್ರಜ್ಞಾತಿಬಾಂಧವರು ॥ ಇನಿಬರವನೀಶ್ವರರು ಸಮರಾ । ವನಿಯೊಳಡಗಿತು ದೇಶದೇಶ
ಜನಪರನು ಮುರಿದಿದುವೆ ಸಾಲದೆ ಭೀಮ ನಿನಗೆಂದ ॥೧೮॥ ಆವಮೋರೆಯೊಳಪ್ಪದೇವನ।ನಾವು
[illegible] ಶರ । ಬಾವಿಸುವೆವಾವಂಗದಲಿ ಗಾಂಧಾರಿ ಕಡುಗೋಪಿ ॥ ದೇವಿಯರುಗಳನಾ

ಧವಲಿ । ನಾವು ನಿಲಿಸುವೆನೀನೃಪನ ಕಾಂ । ತಾವಳಿಗಳೇನೆಂದು ಬೈಯರು ಭೀಮ ಹೇಳೆಂದ ॥ ೧೯ ॥
ಅಳಲುದತಿಭಂಗಿಸಲು ಧರಪಂ। ಡಳಿಕರೇ ನಾವ್ ಪಾಂಡುವಿನ ಮ । ಕ್ಕಳುಗಳಾಧೃತರಾಷ್ಟ್ರತನುಸಂ
ಭವರು ಕೌರವನರು ॥ ನೆಲನ ಹುದುವಿನ ದಾಯಭಾಗದ। ಕಳವಳದೊಳಾಯ್ತಲ್ಲದುಳಿದಂ । ತೊಳಗು
ಭಿನ್ನವೆ ಭೀಮ ಬಿಡು ಭಂಗಿಸದೆ ಸಾಕೆಂದ ॥ ೨೦ ॥ ಸ್ಮರಿಸೆನ್ನುಪಕಾರವನು ಕುರು । ವೀರಸನ್ನುತಪಾ
ಪಕರ್ಮಳವಿ । ಕಾರವಿದು ಭೋಕ್ತವ್ಯ ನಿನಗೆಂದರಸ ದುಗುಡದಲಿ ॥ ನೀರೊರೆವಕಣ್ಣುಗಳನೊರಸುತ ।
ಸೀರೆಯಲಿ ಗದಗದಿತ ಗಳದಲಿ । ಸಾರಹೃದಯಮಹೀಶನಿದ್ದನು ಖೇದಪಂಕದಲಿ ॥೨೧॥ ಕಂಡ ನೀವ್ಯ
ತಿಕರವೆನರಸನ । ಮಂಡೆಯಂಘ್ರಿಯ ಭೀಮಸೇನನ । ದಂಡಿಯನು ಘಟ್ಟಿಸಿ ದಕ್ಷರಿತಿರುಳ ಚೋಣಿ
ಯುಲಿ ॥ ಗಂಡುಗೆದರಿದರೋಪತಿಖಿ ಹುರಿ । ಗೊಂಡುದಕ್ಷಿಗಳಲಿ ವೃಕೋದರ । ಕೊಂಡನೇ ತಪ್ಪಲ್ಲ
ನುತ ನಿಂದಿರ್ದನಾರಾಮ ॥೨೨॥ ಎಲವೆಲವೊ ಪಾಂಡವರಿರಾ ನೀವಳುಪಿದಿರೆಲಾ ನಾಭಿಯಿಂದವೆ । ಕೆ
ಳಗೆಕೈಮಾಡುವುದು ಸಲ್ಲದು ಗದೆಯ ಕದನದಲಿ ॥ ಚರಿಸಲಾಗದು ಧರ್ಮನಿನ್ನಯ ದೊಳಗಿದೊಂದೇ
ಭಾಷಮಾಡಿದಿ । ರಳಿದರನ್ಯಾಯದಲಿ ಕೊಂದಿರಿ ಕೌರವೇಶ್ವರನ ॥೨೩॥ ನೀವುಮಾಡಿದಸತ್ಯಭಾಷೆಗೆ ।
ನೀವಲಾ ತಪ್ಪಿದಿರಿ ನೋಟಕ । ರಾವು ಮಧ್ಯಸ್ಥರಲೇ ಧರ್ಮಕ್ರಿಯರಕ್ಷಕರು ॥ ನಾವು ಸಾಕ್ಷಿಕರಬಲರೆಂ
ದೇ । ನೀವು ನೃಪತಿಯ ತೊಡೆಯನುಡಿದಿರಿ । ಡಾವರವೆ ಸಾಕ್ಷಿಸೆ ಕಾಲಿಕ್ಕಿದಿರಿ ಸಿರಿಮುಡಿಗೆ ॥೨೪॥
ಎಂದು ನೇಗಿಲ ತುದುಕಿಯೆಡಗೈ । ಯಿಂದ ನೆಗಹಿ ಮಹೋಗ್ರಮುಸಲವ । ನೊಂದುಕರದಲಿ ತಿರುಹಿ
ಕೊಬ್ಬಿದಖತಿಯಭಾರದಲಿ ॥ ಮುಂದೆ ನಡೆತರೆ ಸಕಲಸೇನಾ । ವೃಂದ ನಡುಗಿತು ಬಹಳ ಭೀತಿಯ ।
ಬಂದಿಯಲಿ ಜರುಹಿದವು ಜವಳಿಯ ಜವದಜೋಡುಗಳ ॥ ಬಿಲ್ಲ ಮಿಡಿದನು ಪಾರ್ಥ ಭಾರತ । ಮಲ್ಲ
ಕೊಂಡನು ಗದೆಯ ನೃಪ ನಿಂದಲಿ ಬೆರಗಾದನು ರಣೋತ್ಸವವಾಯ್ತು ಯಮಳರಿಗೆ ॥ ತಲ್ಲಣಿಸಿತು
ಳಿದರಸುಮಕ್ಕಳು । ಚೆಲ್ಲಿತಾಸುಭಟಾಂಗವಿಜಯದ । ಭಲ್ಲವಸೆ ಪಲ್ಲಟಿಸುತಿರ್ದುದು ಖೇದತನುದೊ
ಡನೆ ॥೨೬॥ ಹಲಧರನ ಖತಿ ಬಲುಹು ಕದನಕೆ । ಮಲೆತವಾದರ ಹಾನಿ ತಪ್ಪದು । ಗೆಲವಿನಲಿ ಸೋ
ಲವಲಿ ತಾನೌಚಿತ್ಯವೇನಿದಕೆ ॥ ಒಳಗೆ ಬಿದ್ದವಿಘಾತಿ ಮುರರಿಪು । ತಿಳುಹುವನೊ ತವಕಿಸುವನೋ
ಸಾ । ವಳಿದವಿಂದೇನೆನುತ ನಡನಡುಗಿದನು ಯಮಸೂನು ॥೨೭॥ ಹಲಧರನ ಮುಸಕವನು ಪಾಂಡವ।
ಬಲದ ದುಶ್ಚೇಷ್ಟೆಯನು ಭೀಮನ । ಫಲುಗುಣನ ಧರ್ಮಜನ ಯಮಳರ ಚಿತ್ತವಿಭ್ರಮವ ॥ ಬಲಿ
ಶೋಷನನೀಕ್ಷಿಸುತ ರಜತಾ । ಚಲವ ತರುಬುವನೀಲಗಿರಿಯವೊ । ಲಳುಕದಿದಿರಲಿ ನಿಂದು ಹಿಡಿದನು
ಬಲನ ಬಲಗೈಯ ॥೨೮॥ ಚಿತ್ತವಿಸಿದಿರೆ ಬರಿದೆ ದೋಷಕೆ । ತೆತ್ತರೇನಹುದಂತರಂಗವ । ನುತ್ತಮರ
ಪದ್ಧತಿಗಳನು ಶಾಸ್ತ್ರಾರ್ಥನಿಶ್ಚಯವ ॥ ಬಿತ್ತರಿಸುವುದು ಕೌರವೇಂದ್ರನ । ಕಿತ್ತಡವ ನೀವರಿಯಿರೇ।
ನಿಡು । ಗೆತ್ತಣಾಗ್ರಹ ನಿಲಲಿತಿಳುಹುವೆನೆಂದನಸುರಾರಿ ॥ ೨೯॥ ಏನ ತಿಳುಹುವೆ ನೀನು ಶಾಸ್ತ್ರದ ।
ಲೇಸನರಿವರು ನಿನ್ನವರು ಯಮ। ಸೂನು ನುಡಿಯನೆ ಸಮಯವನು ತಸ್ತ್ರಾರ್ಥಸಂಗತಿಯ ॥ ಹೀನ
ಗತಿಬಡಿತಳದ ಹೋಯ್ದು । ತ್ತಾನಗಾಯವನೊದಗಬೇಕೆಂ । ಬೀನಿಬಂಧನವಾರೊಳಳಿದುದು ಕೃಷ್ಣ
ಹೇಳೆಂದ ॥೩೦॥ ಅದರನೀಕೌರವನ ತೊಡೆಗಳ । ಸದೆದನನ್ಯಾಯದಲಿ ನಿನ್ನವ । ನಿದಕೆ ಸೈರಿಸಬಹು
ದೆ ಹೇಳ್ಕೆ ಧರ್ಮನಿರ್ಣಯಕೆ ॥ ಮದ ಮುಖನ ಭುಜಬಲವ ನೋಡುವ । ನಿದೆ ವಿಕಾರವಲಾಗಿಸುತ

ಮುರು । ಬಿಸನು ಬಲ ಬಲಗೈಯನುರುವಣಿಸಿದನು ಖಾತಿಯಲಿ ॥೩೧॥ ಹರಿದು ಹಿಡಿದನು ಮತ್ತೆ
ನೀಲಾಂ । ಬರನ ಸೆರಗನು ನಿಮ್ಮ ಕುರುಪತಿ । ಚರಿಸಿದನಲಾ ಧರ್ಮವಿಸ್ತರವನು ವಿಚಾರಿಸದೆ ॥ ಕರೆಸಿ
ಕಪಟದ್ಯೂತದಲಿ ನೃಪ । ವರನ ಸೋಲಿಸಿ ಪಟ್ಟದರಸಿಯ । ಕರೆಸಿ ಸುಲಿಸುವುದಾವಯುಷಿಮತ ಧರ್ಮ
ಶಾಸ್ತ್ರದಲಿ ॥೩೨॥ ಎಣಿಸಬಹುದೇ ನಿಮ್ಮ ನೃಪನವ । ಗುಣವನನ್ಯಾಯಪ್ರಬಂಧಕೆ । ಗಣನೆಯುಂ
ಟೇ ಭೀಮಗಡ ತುಂಡಿಸಿದತೊಡೆಗಳನು ॥ ಕೆಣಕಿದನು ಮೈತ್ರೇಯನನು ನೃಪ । ನಣಕಿಸಲು ಶಪಿಸಿದ
ನು ತೊಡೆಯಲಿ । ಹಣಿದವಾಗಲಿ ಯೆಂದನದು ತಪ್ಪುವುದೆ ಋಷಿವಚನ ॥೩೩॥ ಆಪತಿವ್ರತೆ ಬೈದಳೀ
ಕುರು । ಭೂಪ ತೊಡೆಗಳ ತೋರಿ ಜರಿಯಲು । ದ್ರೌಪದಿಯ ನುಡಿ ತಪ್ಪುವುದೆ ಋಷಿವಚನದನುಗತಿ
ಗೆ ॥ ಕೋಪಕೊನರಿಡಲೀ ವೃಕೋದರ । ಭೂಪನನು ನುಡಿದಪ್ರತಿಜ್ಞಾ । ಸ್ಥಾಪನಕೆ ಬಳಿಕೇನ ಮಾ
ಡುವುದೆಂದನಸುರಾರಿ ॥೩೪॥ ಎಂದು ರಾಮನ ಮನವ ನಯನುಡಿ । ಯಿಂದ ತಿಳುಹಿದನೈಸಲೇ ಬಳಿ ।
ಕೆಂದು ದುಗುಡದಲವರು ನಡೆದರು ದ್ವಾರಕಾಪುರಿಗೆ॥ ಬಂದಕಂಟಕ ಕಳೆಚಿತೇ ಹಾಯೆಂದು ಹರಿ ಕು
ರುಪತಿಯ ಹೊರೆಗೈ । ತಂದು ಬೊಳೈಸಿದನು ಭೀಮಾರ್ಜುನಯುಧಿಷ್ಠಿರರ॥೩೫॥ ಈಸುದಿನಪರಿಯಂ
ತ ಧರ್ಮದ । ವಿಸಲಳಿಯದೆ ಬಳಸಿ ಬಹಳಾ । ಯಾಸವನು ಸೈರಿಸಿದಿರಿಂದಿನ ಯುದ್ಧಕೇಳಿಯಲಿ॥
ಗಾಸಿಯಾದುದು ಧರ್ಮಗತಿ ಬುಧ । ರೈಸುಮನಗಾಣರು ವೃಥಾಭಿನಿ। ವೇಶವಾಯಿತು ಮಕುಟಭಂಗ
ದೊಳೆಂದನವನೀಶ ॥ ಅರಸ ತಲೆಗುತ್ತಿದನು ದೃಗುಜಲ । ಉರವಣಿಸಿ ಮೋನದಲಿ ಘಲುಗುಣ । ನಿ
ರೆ ಮುರಾರಿ ಸುಯೋಧನನ ಸರ್ವಾವಗುಣಗಣವ ॥ ಪರಿಪರಿಯಲೆಚ್ಚರಿಸಿ ದುಗುಡವ । ಪರಿಹರಿಸಿ
ಸಂತೈಸಿದವಡೆ ಮುರ । ಹರನ ಬೈದನು ನಿನ್ನಮಗ ನಾನಾವಿಡಂಬದಲಿ ॥೩೭॥ ಆರಬಸುರಲಿ ಬಂದು
ಮೊಲೆಯುಂ । ಡಾರಮಡಿಲೊಳು ಬೆಳದು ಬಳಿಕಿನೊ । ಳಾರ ಹೆಂಡಿರ ಕೊಂಡು ಕರುತುರುಗಾಯ್ದು
ಕಳವಿನಲಿ ॥ ವೀರದೈತ್ಯರ ಸದೆಬಡಿದು ಕುರು । ವೀರವಂಶದ ರಾಯರೆಮ್ಮೊಳು । ವೈರಬಂಧವ ಬಿ
ತ್ತಿಕೊಂದವ ಕೃಷ್ಣನೀನೆಂದ ॥೩೮॥ ಬಣಗುಗಳು ಭೀಮಾರ್ಜುನರು ಕಾ । ರುಣಿಕ ನೀನೆಡುಪಾಯ್ದು
ಧರ್ಮದ । ಕಣಿಯುಧಿಷ್ಠಿರನತ್ತಬಲ್ಲನು ನಿನ್ನಮಾಯೆಗಳ ॥ ಸೆಣಸನಿಕ್ಕಿದೆ ಸಂಮೊಳಗೆ ಧಾ । ರು
ಣಿಯ ಭಾರವ ಕಳೆಯಲೋಸುಗ । ರಣವ ಹೊತ್ತಿಸಿ ನಮ್ಮ ಭೇಂಟೆಯನಾಡಿಸಿದೆಯೆಂದ ॥೩೯॥ ಪಾ
ಪಿ ನಿನಗೀಗೋತ್ರವಧೆಯನು । ತಾಪನಿನ್ನನು ತಾಗಲೀಸ । ರ್ವಾಪರಾಧವು ನಿನ್ನದೀಕೌರವರ
ಪಾಂಡವರ ॥ ಕೋಪವನು ತೊಲಗಿಸುವ ನೃಪನನು । ತಾಪವನು ತುಳುಕುವಕುಬುದ್ಧಿ । ವ್ಯಾಪ
ಕನು ನೀವೈರಿಯಲ್ಲದೆ ಭೀಮನಲ್ಲೆಂದ ॥ ೪೦ ॥ ರಣಮುಖದೊಳೀಕ್ಷಾತ್ರ ಧರ್ಮದ । ಕರುಣಿಕೆ ತಪ್ಪದ
ವೇದಶಾಸ್ತ್ರದ । ಭಣಿತೆ ನೋಯದೆ ವೀರವೃತ್ತಿಯ ಪದದ ಪಾಡರಿದು ॥ ಸೆಣಸು ಸೋಲದ ಭ
ಛಡಾಳಿಯೊ । ಳನುವ ಹಿಂಗದೆ ಜೀವದಾಶೆಗೆ । ಮಣಿಯದಳಿದುದನೆಲ್ಲ ಬಲ್ಲರು ಕೃಷ್ಣಕೇಳೆಂದ॥೪೧॥
ಮತ್ತೆ ಹೂವಿನಮಳೆಗಳೀತನ । ನೆತ್ತಿಯಲಿ ಸುರಿದವು ಮುರಾಂತಕ । ನತ್ತ ತಿರುಗಿದನವನಿಪನ ಕರು
ಳವ ತಳಕಿಕ್ಕಿ ॥ ಮುತ್ತಿದರು ಮಾಗಧರು ವಂದಿಗ । ಳೆತ್ತಣದೊ ನಾನಂಯೆನರಸ ವಿ । ಯತ್ತ
ವನಳ್ಳಿರಿದುದಾಸ್ತುತಿಪಾಠಕರ ರಭಸ ॥೪೨॥ ಗರುವ ಸುಭಟರು ಗಾಸಿಯಾದಿರಿ । ತುರಗಗಜ ಬಳ
ಲವು ಸೂರ್ಯನ । ತುರಗ ಬಿಡುತಿದೆ ಪಶ್ಚಿಮಾದ್ರಿಯ ತಡಿಯ ತಪ್ಪಲಲಿ ॥ ತ್ವರಿತದಲಿ ಪಾಂಚಾ

ಸೃಂಜಯು । ಧರಣಿಪರು ನೀವ್ ಹೋಗಿ ನಿದ್ರೆಯು । ನಿರುಳನೂಕುವುದೆಂದು ನುಡಿದನು ದೈತ್ಯರಿಪು
ನಗುತ ॥ ೪೩ ॥ ನಡೆಯಿ ಪಂಚದ್ರೌಪದೇಯರ । ಗಡಣ ಧೃಷ್ಟದ್ಯುಮ್ನನಿಳಯಕೆ । ನಡೆಯುಧಾಮ
ನ್ಯುತ್ತಮೌಂಜಸಕಲಿಶಿಖಂಡಿಗಳು ॥ ತಡೆಯಿದಿರಿ ಭಟರೇಳಿ ವಾದ್ಯದ । ಗಡಿಬಡಿಗರೀಸಕಲಬಲ ನೀ
ವ್ಕಡುಬಳಲಿದಿರಿ ಹೋಗಿ ಪಾಳೆಯಕೆಂದು ನೃಪ ನುಡಿದ ॥೪೪॥ ಬೀಳುಕೊಂಡುದು ಸಕಲಬಲ ಪಾಂ
ಚಾಲಪಂಚದ್ರೌಪದೇಯರು । ಪಾಳೆಯವ ಹೊಕ್ಕರು ಯುಧಿಷ್ಠಿರನೃಪನ ನೇಮದಲಿ ॥ ಏಳು ನಾವೀ
ಕೌರವೇಂದ್ರನ । ಪಾಳೆಯವ ನೋಡುವೆವೆನುತ ವನ । ಮಾಲಿ ರಥವೇರಿದನವರು ತಮತಂಮ ರಥವೇ
ರೆ ॥೪೫॥ ನರಯುಧಿಷ್ಠಿರ ಭೀಮ ಸಹದೇ । ವರು ನಕುಲ ಸಾತ್ಯಕಿಸಹಿತ ಮುರ । ಹರನು ಹೊಕ್ಕ
ನು ಕೌರವೇಂದ್ರನ ಶೂನ್ಯಶಿಬಿರವನು ॥ ಅರಸ ಕರ್ಣದ್ರೋಣಮಾದ್ರೇ । ಶ್ವರನ ಭಗದತ್ತನ ನದೀ
ಜಾ । ದ್ಯರ ನಿವಾಸದ ನಿಳಯಗಳ ಕಂಡಳಲಿದನು ನೃಪತಿ ॥೪೬॥ ಸೂತನಿಳಿದನು ಮುನ್ನ ರಥವನು ।
ಭೂತಳಾಧಿಪನಿಳಿದನಶ್ವ । ವ್ರಾತವನು ಕಡಿಯಣದ ನೇಣಿಲಿ ತೆಗೆದು ಬಂಧಿಸಿದ॥ ವಾತಜನ ಸಾತ್ಯಕಿಯ
ಯಮಳರ । ಸೂತರಿಳಿದರು ಮುನ್ನ ತುರಗವ । ನಾತಗಳು ಸಂತೈಸಿದರು ಸಂಗರಪರಿಶ್ರಮವ॥೪೭॥
ಇಳಿ ರಥವನೆಲೆ ಪಾರ್ಥ ಬಳಿಕಾ । ನಿಳಿವೆನೆಂದನು ಶೌರಿ ನೀ ಮು । ನ್ನಿಳಿವುದೆಂದನು ಪಾರ್ಥನಾ
ಯ್ತು ವಿವಾದವಿಬ್ಬರಿಗೆ ॥ ಎಲೆಲೆ ನಾವುನ್ನಿಳಿಯೆನೀನಿ । ನ್ನಿಳಿವೆಲಾಸಾಕಿನ್ನು ಗರ್ವದ । ಗಳಹತ
ನವನು ಬಳಿಕ ತೋರುವೆ ರಥವನಿಳಿಯೆಂದ ॥೪೮॥ ಬಳಿಕ ಫಲುಗುಣರಥದ ಮೇಲಿಂ । ದಿಳಿಗೆ ಹಾ
ಯ್ದನು ಕೃಷ್ಣ ನೀನಿ । ನ್ನಿಳಿಯೆನಲು ಚಂಮಟಿಗೆವಾಘೆಯ ನೇಣ ರಥದೊಳಗೆ ॥ ಇಳುಹಿ ನಗು
ತ ಮುಕುಂದ ರಥದಿಂ । ದಿಳಿಯೆ ಭಟಭಟಯೆಂದು ಕಿಡಿಯು । ಚ್ಚಳಿಸಲುರಿದುದು ತೇರು ಕೇಸು
ರಿ ನಥವನಪ್ಪಳಿಸಿ ॥೪೯॥ ಧ್ವಜದ ಹಲಗೆಯನೊಡೆದು ಹಾಯ್ದನು । ನಿಜನಿವಾಸಕೆ ಹನುಮ ಧೂಮ।
ಧ್ವಜನ ಮಯವಾದುದು ರಥಾಶ್ವರಥಾಂಗರಾಜಿಗಳು ॥ ವಿಜಯಭೀಮಾಧಿಗಳು ಕಂಡ । ಕ್ಕಜದೊ
ಳಾಕಸ್ಮಿಕದ ಕಿಚ್ಚಿನ । ಗಜಬಜವಿದೇನೆನುತ ಬೆಚ್ಚಿದರವರು ತಮತಮಗೆ ॥೫೦॥ ಹರಿಯಿದೇನಾಕಸ್ಮಿಕದ
ದ । ಳ್ಳುರಿಯೊಳದ್ದುದು ತೇರು ನಮಗೀ । ಯುರಿಯಭಯ ಭಾರ್ಯಸಿತೇನು ನಿಮಿತ್ತವಿದಕೆನಲು ।
ಉರಿದುದಂದೇ ತೇರು ಕರ್ಣನ । ಗುರುನದೀನಂದನರು ದೈವಿಕ । ಶರಹತಿಯೊಳೆಮ್ಮಿಂದಲುಳಿದುದು
ಪಾರ್ಥ ಕೇಳೆಂದ ॥ನಾವಿಳಿದಬಳಿಕೀರಥದೊಳಿರ । ಲಾವಹದನೋ ನಿನಗೆ ಕಂಡ್ಯೆ । ದೈವಿಕಾಸ್ತ್ರದ ಮ
ಹಿಮೆಗಳನೆನೆ ಪಾರ್ಥ ತಲೆವಾಗಿ ॥ ನೀವೆಬಲ್ಲಿರಿ ದೇವ ನೀ ಮಾ। ಯಾವಿ ಮಾಯಾಪಾಶಬದ್ಧರು।ನಾವ
ಬಲ್ಲೆವೆ ನಿಮ್ಮನೆಂದರಗಿದನು ಚರಣದಲಿ ॥೫೧॥ ಧರಣಿಪತಿ ಕೇಳೀಚೆಯಲಿ ಕೃಪ । ಗುರುಸುತರು
ಕೃತವರ್ಮಕರು ನ । ಮ್ಮರಸನೇನಾದನೊ ವಿರೋಧಿಯ ದಳಕವೆ ಡ್ಕೈಸಿ ॥ ತರಣಿ ತಿಮಿರಕೆ ತೆ
ಹುಗೊಟ್ಟನು । ಧರತಖಂಡವನಿನ್ನು ರಾಯನ । ಪರಿಗತಿಯಸಾರ್ಶ್ವವೆವೆನುತೇರಿದರು ನಿಜರಥವ
॥೫೨॥ ಭರದಲಿವರು ನೃಪಾಲನಡಗಿದ । ಸರಸಿಗೈತಂದಿಳಿದು ತಡಿಯಲಿ । ತುರಗವನು ಬಿಡಿಸಿದರು ಸಾ
ರಥಿ ಹೊಗಿಸಿದನು ಕೊಳನ ॥ ತ್ವರಿತದಲಿ ಶೌಚಾಚಮನವಿ । ಸ್ತರಣಸಂಧ್ಯಾವಂದನಾದಿಯ । ವಿರಚ
ಸಿದರರಸಿದರು ಕೊಳನಲಿ ಕೌರವೇಶ್ವರನ ॥೫೩॥ ಬಳಸಿ ಜಂಬುಕಘೂಕಕಾಕಾ । ಗಳಿಗಳೆದ್ದವು ಮ
ಹುವಾಯಿದ । ವಿಳಿಸಲವು,ದೆ ಗಾಢತರಗರ್ಜನೆಗೆ ಕುರುಪತಿಯು ॥ [illegible]

ವಳಿಸಿ ಬಂದು ಮಹಾರಥರು ನೃಪ। ತಿಲಕನಿದ್ದನು ಕಂಡುಧೊಪ್ಪನೆ ಕೆಡೆದರವನಿಯಲಿ ॥೫೫॥ ಉಡಿದ
ತೊಡೆಗಳ ಮಗ್ಗುಲಲಿ ಹೊಸ । ಲಿಡುವರಕುತದ ಭೀಮಸೇನನ । ಮಡದಗಾಯಕೆ ಕೆಲಕೆ ಸೂಸಿದಮ
ಕುಟಮಣಿಗಣವ ॥ ಕಡಿದಮೈವೇದನೆಗೆ ಸರಳುವ । ನಿಡುಸರದ ಖಗಜಂಬುಕೌಘದ । ಲಿಡುವ ಕೈಗ
ಲ್ಲುಗಳ ನೃಪತಿಯು ಕಂಡರವರೆಂಬು ॥ ಒರಲಿದರು ಧರೆ ಬಿರಿಯೆ ಹುಡಿಯಲಿ । ಹೊರಳಿದರು ಬಾ
ಯ್ಗಳನು ಹೊಯ್ಯೊ । ಯ್ದುರಿಚಿ ಕೆಡೆದರು ಕಂಡಿವರು ಕಾತರಿಸಿ ಕಳವಳಿಸಿ॥ ಮರುಗಿದರು ಮನಸುಂ
ದಿದರು ಮೈ । ಮರೆದರದ್ದರು ಶೋಕಜಲಧಿಯೊ । ರೊರಲುಗೊಂಡರು ತಳ್ಳಬಾರದರವರು ನಿಮಿ
ಷದಲಿ ॥೫೭॥ ಹದುಳಿಸಿರೆ ಸಾಕೇಳಿನೀವಿ । ನ್ನಿದರಲೇನಹುದಿನ್ನು ದೈವದ । ಕದಡು ಮನಗೊಳಿಸಿತು
ಸಮಗ್ರೀಕಂಟಕವ್ಯಥೆಯು ॥ ಉದಯದಲಿ ನಾವೀಶರೀರವ । ನೊದೆದು ಹಾಯ್ವೆವು ನೀವು ನಿಜಮಾ ।
ರ್ಗದಲಿ ಬಿಜಯಂಗೈವುದೆಂದನು ನಗುತ ಕುರುರಾಯ॥೫೮॥ ಶೋಕವಡಗಿದುದಿವರಿಗಂತ । ರ್ವ್ಯಾಕು
ಲತೆ ಬೀಳ್ಕೊಂಡುದಹುದಿ । ನ್ನೇಕೆ ಸಂಸಾರಾನುಭೂತಾವೇಶದುರ್ವ್ಯಸನ ॥ ಸಾಕದಂತಿರಲಿನ್ನು ಬಿಡು
ನೀ । ಸಾಕಿದಕೆ ಫಲವೆನಿಸಿ ರಜನಿಯೊ । ಳಾಕುಮಾರರ ತಲೆಗಳನು ತಹೆವೆಂದನಾದ್ರೌಣಿ ॥೫೯॥ ಅರ
ಟ ಮರುಳೆ ಗುರುಸುತನ ಮಾತಿ । ವಿಕಳತನವನು ಕೃಪರು ಕೃತವ । ರ್ಮಕರು ಕಂಡಿರೆ ಪಾಂಡವಕ
ತಲೆ ತನಗೆ ಗೋಚರವೆ ॥ ಬಕನ ಧರ್ಮಶ್ರುತಿಯುವೊಲು ದೇ । ವಕಿಯಮಗ ಕಾದಿಹನಲ್ಲೆ ಕೌ । ಳಿಕ
ದಸಿದ್ಧನ ಕೃತಿಯಸಾರಿಗೆ ವಿಚಾರಬಹುದೆಂದ ॥೬೦॥ ಹರಿಹರಬ್ರಹ್ಮಾದಿದೇವರು । ಮರೆಸಿಕಾಯಲಿ ರಾ
ತ್ರಿಯಲಿ ರಿಪು । ಶಿರವ ತಹೆನಿದಕೇನುಸಂಶಯವೆನ್ನ ಕಳುಹುವುದು ॥ ಇರಲಿ ಕೃಪಕೃತವರ್ಮಕರು
ಹ । ತ್ತಿರೆ ರಣಾಧ್ಯಕ್ಷದಲಿ ಭೂಪಾ । ಭರಣವೈಸರಿಸಿದೊಡೆ ದ್ರೋಣನ ತನುಜನಲ್ಲೆಂದ ॥೬೧॥ ಆಗ
ಲಾಪಾಂಡವರ ವಧೆ ನಿನ । ಗಾಗಲರಿಯದು ನಿನ್ನ ಭುಜಬಲ । ವಾಗುರೆಯ ಮೇಡೆಯಲಿ ಬೀಳದು
ಕೃಷ್ಣಬುದ್ಧಿಮೃಗ ॥ ಈಗಳಿನ ನಿರ್ಬಂಧವಚನವಿ । ರಾಗವೆಮಗೇಕಾಲಿಗಾವುದು । ಭಾಗದೈವವದಾಗ
ಲೆಂದನು ಕೌರವೇಶ್ವರನು ॥೬೨॥ ವರಚಮೂಪತಿ ನೀನು ಬಳಿಕ । ಬ್ಬರುಚಮೂವಿಸ್ತಾರವೇ ವಿನ
ಸ್ತರಿಸಿ ರಚಿಸುವುದೆಂದು ರಥಿಕತ್ರಯಕೆ ನೇಮಿಸಿದ ॥ ಗುರುಜಕೃಪಕೃತವರ್ಮರೀ ಮೂ । ವರು
ರೇಂದ್ರನ ಬೀಳುಕೊಂಡರು । ಕರೆದು ಸೂತರ ಸನ್ನೆಯಲಿ ಬಂದೇರಿದರು ರಥವ ॥೬೩॥ ಇವರು ಬಂ
ದರು ದಕ್ಷಿಣದ ದೆಸೆ । ಗವರ ಪಾಳೆಯಕಾಗಿ ಸುತ್ತಲು । ಸವಡಿಗತ್ತಲೆಯಾಯ್ತು ಘನರೋಷಾಂಧ
ಕಾರದಲಿ ॥ ಇವರು ಮಡದಲಿ ಕುದಿವರುಚಿತಾ । ರ್ಣವವದಿವರಿ ಗೋಚರವೆ । ಪಾಂಡವರು ಗದು
ಗವೀರನಾರಾಯಣನ ಕರುಣದಲಿ॥ ... ... ॥೬೪

ಅಂತು ಸಂಧಿ ೮ ಕ್ಕಂ ಪದ ೪೨೮ ಕ್ಕಂ ಮಂಗಳಮಸ್ತು.

ಒಂಬತ್ತನೆಯ ಸಂಧಿ.

॥ಸೂಚನೆ॥ ರಾಯವರಬಲಮಥನ ಹರರಿಪು । ರಾಯಕುವರರುಸಹಿತ ಪಾಂಡವ । ರಾಯಕಟಕವ ಕೊಂದನಶ್ವತ್ಥಾಮರಜನಿಯಲಿ॥

॥ಪದ॥ ಕೇಳು ಧೃತರಾಷ್ಟ್ರಾವನಿಪ ನಿ । ನ್ನಾಳಚಿತ್ತದ ಪಟುಳಪಣವಚ । ಡಾಳತನವನು ಸಂಗರದೊಳುದ್ದಾಮಸತ್ವದಲಿ ॥ ಪಾಳೆಯವ ಸಾರಿದರು ವಿಟಪಿನಿ । ತಾಳಮಿಶ್ರಮತಿಮಿರಗಹನ ವಿಶಾಲವಟಕುಜವಿರಲು ಕಂಡರು ನಿಲಿಸಿದರು ರಥವ ॥ ೧॥ ನಿಲುವುದಿಲ್ಲಿ ವಿರೋಧಿಸಂಗತಿ । ಯಾಲುಹ ನಾಲಿಸಬಹುದು ಕೋಟಾ। ವಳಯವಿದೆ ಹತ್ತಿರೆಯೆನುತ ಗುರುಸೂನು ರಥವಿಳಿಯೆ ॥ ಇಳಿದರಿಬ್ಬರು ಸೂತರಿಗೆ ಕೈ । ಗೊಳಿಸಿದರು ಕುದುರೆಗಳ ನಾಲುಕು । ನೆಲದೊಳೊರಗಿದರಿವರು ಸಮರಶ್ರಮದ ಭಾರವಲಿ ॥೨॥ ಬಳಗೆ ತೊಳಲಿಕೆ ಯಬ್ಬರಕೆ ಕಳ । ವಳಿಸಿ ಹೊಯ್ದುರದೊಂದುಮತ್ತಂ । ತಲೆಮಿಡುಕದಾಲಿಸಿ ನಿದಾನಿಸಿ ಸಾರಿದರು ಮರನ ॥ ಬಳಲಿಕೆಯ ಬೇಸರಿನೊಳಾಕೃಪ । ಮಲಗಿದನು ಕೃತವರ್ಮನೊಲೆವಾ । ಕಳಿಸಿ ತೂಕಡಿಸಿದನು ತೆಗೆದುದೆನಿ ದ್ರೌತನುಮನಸವ॥೩॥ ಕುಸಿದರೊಂಗೆ ಮಿನಜಾಡ್ಯದಲಿರ್ದೊಂ। ಪಿಸಿದರಿಬ್ಬರುರಾಜಕಾರ್ಯದ । ಜಸದ ರಹಿಯಲಿ ಸ್ವಾಮಿಕಾರ್ಯದ ಹೊತ್ತುಹೊರಿಗೆಯಲಿ ॥ ಉಸುರು ಮಿಡುಕದೆ ನಿದ್ರೆ ನೆನಹಿನ । ಮುಸುಕನುಗಿಯದೆಯಿಷ್ಟಸಿದ್ಧಿಯ । ವಿಷಮಸಮಸಂಧಿಗಳ ಸರುವಿನೊಳಿರ್ದನಾದ್ರೌಣಿ ॥೪॥ ಭಾಗ ಬೀತುದು ರಜನಿಯಲಿ ಸರಿ । ಭಾಗವಿದ್ದುದು ಮೇಲೆ ತತ್ಕ್ಷಣ । ಗೂಗೆ ಬಂದುದದೊಂದುವಟಕುಜದಗ್ರಭಾಗದಲಿ ॥ ಕಾಗೆಗಳ ಗೂಡುಗಳ ಹೊಯ್ದುವಿ । ಭಾಗಿಸಿತು ತುಂಡದಲಿ ಬಿದ್ದವು । ಕಾಗೆ ಸುಭಟನ ಸಮ್ಮುಖದಲಿ ಸಹಸ್ರಸಂಖ್ಯೆಯಲಿ॥೫॥ ಇದುಮದೀಯಮನೋಹೃದಯಸ್ಥಾ । ಹೃದಯದೊಲು ಸಂಕಲ್ಪಕಾರ್ಯಾ । ಭ್ಯುದಯಸೂಚಕವೆನುತ ನಿದ್ರಾಮುದ್ರಿತೇಕ್ಷಣರ॥ ಪದವ ಹಿಡಿದಲ್ಲಾಡಿದೊಡೆ ಮೈ । ಬೆದರದೇನೇನೆನುತ ನಿದ್ರಾ। ಮದವಿಘೂರ್ಣನವಡಗೆ ಕುಳ್ಳಿರ್ದರು ಮಹಾರಥರು ॥೬॥ ಏನುಗುರುಸುತಕಾರ್ಯದನುಸಂ । ಧಾನವೇನೆನೆ ವಾಯಸಂಗಳ । ನಾನಿಶಾಟನನಿರಿವುತಿದೆ ಗೂಡುಗಳ ಗಬ್ಬರಿಸಿ ॥ ಈನಿದರ್ಶನದಿಂದ ಪಾಂಡವ । ಸೇನೆಯನು ಕಲ್ಲೋಲೆಯೊಳಗೆ ಕೊಲೇನುಸಂಶಯವಾವುದೆಂದನು ಕೃಪಗೆ ಗುರುಸೂನು ॥ ೭ ॥ ಲೇಸಲೇ ಕೃತವರ್ಮ ಬಳಿಕೇ । ನಾಸುರದ ಕಲ್ಲೋಲಿಗೆ ರಾಜಾ । ದೇಶದಲಿ ನಾವ್ಬಂದೆವೈ ಪಾಂಡವರ ಪಾಳಯಕೆ ॥ ಗಾಸಿಯಾದರು ಪಾಂಡುಸುತರಿಗೆ । ವಾಸುದೇವನ ಕಾಹು ಘನಕಾ । ಳಾಸ ತಪ್ಪಿದಬಳಿಕ ನಮಗಪಕೀರ್ತಿಯಹುದೆಂದ ॥ ೮ ॥ ಕ್ರತುಹರನ ಸಮಜೋಳಿ ಗಂಗಾ । ಸುತನ ಜೈಸಿದರವರತೂಕದ । ವಿತತಬಳರ್ಕೈ ಧಾವನವರೊಗ್ಗಿದರು ದಿವಿಜರಲಿ ॥ ಅತಿರಥರೊಳಗ್ಗಳೆಯರಾಧಾ । ಸುತಸುಯೋಧನಮಾದ್ರಪತಿಯಾ । ವ್ಯತಿಕರದೊಳೇನಾದರೈ ಮುರಹರನ ಕೃಪೆಯಿಂದ ॥೯॥ ಇರಿಸನಿಲ್ಲಿ ಮುರಾರಿಕೌಂತೇ । ಯರನಿದೊಂದನುಮತವು ಮೇಣಿಲ್ಲಿರಿಸದೊಡೆ ಕೊಲಲೀಯನಡ್ಡೈಸುವನು ಚಕ್ರದಲಿ । ಇರುಳುಹಗಲಡವಿಯಲಿ ಮನೆಯಲಿ । ಸರಸಿಯಲಿ ಪರ್ವತದೊಳಗ್ನಿಯೊ । ಳಿರಲಿ ತನ್ನವರಲ್ಲಿ ಹರಿಗವಧಾನ ಬಲುಹೆಂದ॥೧೦॥ ಮರಹಿನಲಿ ಮಡುಹುವುದು ಸರ್ವದ । ಹೊರಗೆಯೇನೀನಿದ್ರೆಗೈವರ । ನಿರಿವುದೇನಿದು ಪಂಥವೇ

ಪೌರಾಣಮಾರ್ಗದಲಿ॥ ಅರಿಯದಾವಂಗೈಸಿದಿವರಲಿ।ಪರಿಸಮಾಪ್ತಿಯು ಕಂಡೆವಾದೊಡೆ।ನೆರೆ ಕೃತಾರ್ಥ ರು ವಿಘ್ನಶತವಷ್ಟೈಸದಿರದೆಂದ ॥ ೧೧ ॥ ತಪ್ಪದಾಚಾರಿಯನ ನುಡಿ ಮೇ । ಲಪ್ಪುದನು ದೈವಾಭಿ ಯೋಗದೊ । ಟೊಪ್ಪವಿಡುವುದು ರಜನಿಯಲಿ ಕಳ್ಳೇರುಕದನದಲಿ ॥ ಒಪ್ಪದಿದು ಸೌಭಟವಿಧಾನಕೆ । ನೊಪ್ಪಿ ತಹುದಿದರಿಂದರಿಪುಗಳ।ತಪ್ಪಿಸುವನಸುರಾರಿಯೆಂದನು ನಗುತ ಕೃತವರ್ಮ॥೧೨॥ ಆದೊಡರಿ ನೀವಿಬ್ಬರಿಲ್ಲಿ ವಿ । ವಾದನಿಮ್ಮೊಡನೇಕೆ ಜನಪತಿ । ವಾದಭಯವೆಮಗಿಲ್ಲ ಸಾರಥಿ ರಥವ ತಾರೆನುತ ॥ ಕೈದುಗಳ ಸಂವರಿಸಿ ರಥದಲಿ । ಹಾಯ್ದು ಪೊರವಂಡೆ ಭೋಜಕೃಪರನು । ವಾದರೆಮಗೇನೆನುತ ಬಂದರು ಪಾಳೆಯದ ಹೊರೆಗೆ ॥೧೩॥ ಮುರಿದು ಕೋಟೆಯ ನೊಂದುಕಡೆಯಲಿ । ತೆರಹುಮಾಡಿ ಮ ಹಾರಥರು ಜನ । ವರಿಯದವೊಲೊಳಹೊಕ್ಕು ಹೆಬ್ಬಾಗಿಲಲಿ ರಥವಿಳಿವು ॥ ತಳವರೆರ ತೊಳಲಿಕೆಯ ಮೇಲೆ । ಚ್ಚರಿಕೆ ಮಸುಳಲು ಮಧ್ಯರಾತ್ರಿಯೊ । ಳಿರಿತದಂಗವಣೆಯಲಿ ಪರುಠವಿಸಿದನು ಗುರುಸೂ ನು ॥೧೪॥ ಎರಡುಬಾಗಿಲು ಪಾಳೆಯಕೆ ಕೃಪ । ನಿರಲಿ ಮೂಡಲು ಪಶ್ಚಿಮಾಂಕದೊ । ಳಿರಲಿ ಕೃತವ ರ್ಮಕನು ಬಾಗಿಲೊಳಾಂತನೃಪಜನವ ॥ ಕರಿತುರಗರಥಪತ್ತಿಗಳ ಸಂ । ವರಿಸುವದು ನೀವಿಲ್ಲಿ ಮಧ್ಯ ದೊ । ಳಿರಸುವೊತ್ತಕೆ ಮೃತ್ಯುತಾನಹೆನೆಂದು ಕೈಕೊಂಡ ॥೧೫॥ ಎರಡು ಬಾಗಿಲಲಿವರನಿಬ್ಬರ । ನಿರಿ ಸಿ ಚಾಪವ ಮಿಡಿದು ಬಾಣವ। ತಿರುಹುತೊಬ್ಬನೆ ರಥವ ಬಿಟ್ಟನು ರಾಜಬೀದಿಯಲಿ ॥ ಅರಸ ಕೇಳದ್ಭು ತವನಾನಡು । ವಿರಳು ನೃಪವೀಧಿಯಲಿ ಸಾದುದು । ಧರೆಗೆ ಗಗನಕೆ ಕೀಲನಿಕ್ಕಿದವೊಲ್ಮಹಾಭೂತ ॥೧೬॥ ನಿಟಿಲನಯನದ ಜಡಿವಜೂಟದ । ಜಟೆಯ ಹೂಂಕೃತಿಯಲ್ಲಿ ನಾಸಾ । ಪುಟದ ಕಕ್ಷದಲೆಸೆವವಿಷ ಧರ ಪತಿಯ ವಾಸುಗಿಯ ॥ ಚಟುಳಕಪಳಪ್ರಭೆಯ ಘನಸಂ।ಘಟಿತವೆನೆ ಘರ್ಘರದ ಘೋರ । ಸ್ಫು ಟರವದ ರೌದ್ರಾಭಿನಯದಲಿ ರಂಜಿಸಿತು ರಭಸ॥೧೭॥ ಬೆಚ್ಚಿದನೆ ಭಾರಣೆಯ ಭೂತವ।ನೆಚ್ಚ ಬೊಬ್ಬಿ ರಿದಾಲಿದನು ಮಗು । ಳೆಚ್ಚನೈದಾರೇಳುನೂರೈನೂರುಸಾಸಿರವ ॥ ಹೆಚ್ಚಿಹಾಯ್ದಂಬುಗಳಭೂತದ ಕಿಚ್ಚ ಕಂಗಳ ಕೊಂಡವುರಿಯಲಿ । ಪೆಚ್ಚಿಸಿದವರೆಸೆದು ಸೀಕರಿವೊಯ್ತು ನಿಮಿಷದಲಿ ॥ ೧೮ ॥ ತೆ ಗೆದು ಮಂತ್ರಾಸ್ತ್ರದಲಿ ತಿರುವಿಂ । ದುಗುಳಿಚಿದೊಡಾಭೂತವಂಘ್ರಿಗೆ । ಮುಗಿದಕೈಗಳಲೆರಗಿದರು ಶಸ್ತ್ರಾಧಿದೇವಿಯರು ॥ ಉಗಿದನೊರೆಯಲಡಾಯುಧವನು। ಬ್ಬೆಗವಲಪ್ಪಳಿಸಿದೊಡೆ ಕೈಯಿಂ । ಜಗು ಳಿ ಬಿದ್ದುದು ಜಂಕೆಯಿದ್ದುದು ಭಯದಜೋಡಿಯಲಿ ॥೧೯॥ ಕಾಕಮುಖದಮಯೂರಟಿಟ್ಟಿಭ । ಕೋ ಕವದನದ ಹಂಸಕಂಕಬ । ಳಾಕವಕ್ತ್ರದ ಗೌಜಗೀಜಗಚಾತಕಾನನದ ॥ ಘೂಕಮೃಗದ ಸೃಗಾಲಶಾ ರ್ದೂಲ । ಲಾಕೃತಿಯ ಬಹುವಿಧದ ರೂಪದ। ನೇಕಭೂತವ್ರಾತ ನೆರೆದವು ಕೇಳು ಧೃತರಾಷ್ಟ್ರ॥೨೦॥ ಇದು ವಿರೂಪಾಕ್ಷನ ಮನಃಕ್ಷೋಭದ ವಿಕಾರವಲಾ ಪಿನಾಕಿಯ।ಪದವ ಹಿಡಿದೋಲೈಸುವೆನು ಸವಾಂ ಗಯಜ್ಞದಲಿ ॥ ಇದಕುಪಾಯವೆ ಬಲ್ಲೆನೆನುತು । ಬ್ಬಿದನು ಬೊಬ್ಬಿರಿದಾರಿ ತೋಡಿದ । ನುದರದ ಹ್ನಿಯನಿದಿರೊಳಗ್ನಿತ್ರಯವ ನಿರ್ಮಿಸಿದ ॥ ೨೧ ॥ ಸೆರೆನರಂಗಳ ದರ್ಭೆ ಮಿದುಳಿನ। ಚೆರು ಕಪಾಲದ ಪಾತ್ರೆಯೆಲುವಿನ । ಬೆರಳಸಮಿಧೆಯ ಸಾಲಡಗುಮಜ್ಜೆಗಳಪೃಷದಾಜ್ಯ ॥ ಅರುಣಜಲದಾಹುತಿಯ ವಿಸ್ತರಿಕರಣವನು ವಿರಚಿಸಿದಮಂತ್ರೋಚ್ಚಾರಣೆಯಲಿ ಪೂರ್ಣಾಹುತಿಗೆ ತನ್ನೊಡಲನೊಪ್ಪಿಸಿದ॥೨೨॥ ನೆಟ್ಟದನು ಮದನಾರಿ ಹೋಮದ । ಕಿಚ್ಚು ತೊಡಕದ ಮುನ್ನ ತೆಗೆದನು । ಬಿಚ್ಚಿ ಜಡೆಗಳ ಜನು

ಸುತೆಯಲಿ ನಾದಿದನು ಭಟನ॥ ಅಚ್ಚ ಶರವಿದೆ ಖಡ್ಗವಿದೆ ಕೋ। ಮುಚ್ಚುಮರೆಯೇಕಿನ್ನು ಸುತರಲಿ । ಚೊಚ್ಚಲವ ನೀನೆಂದು ಮೈದಡವಿದನು ಶಶಿಮೌಳಿ ॥ ೨೩ ॥ ಸಾರಥಿತ್ವದೊಳಿಳಿಸಿದನು ಭೂ। ಭಾರಘಂಜನೆಗಸುರಹರಗೇ । ಭಾರ ಬಿದ್ದುದು ನಮಗೆ ಪಾಂಚಾಲಪ್ರಬದ್ಧಕರ ॥ ತೀರಿತಮು ನಿನ್ನಲ್ಲಿ ನಿನ್ನವಿ । ಹಾರವೆಡೆಬೆಚ್ಚುವುದರಿವ್ರಜ । ಮಾರಣಾಧ್ವರಕೃತಿಯು ನೀ ಕೈಮೆಳಸು ಹೋಗೆಂದ ॥ ೨೪ ॥ ಎನೆ ಪುರಾರಿಯ ಪದಯುಗಕೆ ಗುರು । ತನುಜ ಮೈಯಿಕ್ಕಿದನು ಬಿಳ್ಕೊಂ । ಡನು ತಿರೋಹಿತನಾದನೀಶ್ವರನೀತನನು ಕಳುಹಿ ॥ ಧನುವ ಕೊಂಡನು ಧೂರ್ಜಟಿಯು ರೂ । ಹಿನ ಮಹಾರಥ ರಥವನೇರಿದ । ನನುವರದ ರೌರವವನಂಗೈಸಿದನು ರಜನಿಯಲಿ ॥ ೨೫ ॥ ಧರಣಿಪತಿ ಕೇಳ್ ರಾಜಬೀದಿಯೊ । ಳುರವಣಿಸಿ ಗುರುಸೂನು ರಥದಲಿ । ಬರುತ ಕಂಡನಲೈ ಯುಧಿಷ್ಠಿರರಾಜಮಂದಿರವ ॥ ಇವರು ಪಾಂಡವರಿಲ್ಲಿ ಮೇಣಿವ । ರಿರಲಿ ಬಳಿಕಾವೈವೆನಯ್ಯನ । ಹರಿಬಹೋಗಲಿ ಮುನ್ನಕೊಲುವೆನು ದ್ರುಪದನಂದನನ ॥ ೨೬ ॥ ಎಂದು ರಾಯನ ಗುಡಿಯ ಗೂಢವ। ಮಂದಿರದ ಬಲವಂಕವೀಧಿಯ । ಮುಂದೆ ಧೃಷ್ಟದ್ಯುಮ್ನನರಮನೆಗಾಗಿ ನಡೆತಂದು ॥ ಬಂದು ಬಾಗಿಲ ಮುರಿದು ಕಾಹಿನ । ಮಂದಿಯನು ನಿಡುನಿದ್ರೆಗೈಸಿದ । ನೆಂದು ನುಣ್ಣನೆ ಹೊಕ್ಕನಾತನ ಸಜ್ಜೆಯರಮನೆಯ ॥ ೨೭ ॥ ತೊಳತೊಳಗುವಿಕ್ಕಲದ ದೀಪದ । ಬೆಳಕಿನಲಿ ಮಣಿರುಚಿಯ ಚಿತ್ರಾ । ವಳಿಯ ಮೇಲ್ಕಟ್ಟನಲಿ ಲಲಿತಾಸ್ತರಣಮಧ್ಯದಲಿ ॥ ಹೊಳೆಹೊಳೆವನವರತ್ನಭೂಷಣ । ಕಲಿತಕಾಯನ ಕಂಡು ರೋಷ । ಪ್ರಳಯಭೈರವರೂಪನೊದೆದನು ವಾಮಪಾದದಲಿ ॥ ೨೮ ॥ ಗಳಿಲನೆದ್ದನಿದಾರು ನಿದ್ರೆಯ । ನಳಿದವನ ತಿವಿಯೆನುತ ಮುಂದಣ । ಪ್ರಳಯರುದ್ರನ ರಹಿಯ ರೌದ್ರದ ರಣಭಯಂಕರನ ॥ ನಿಲವ ಕಂಡವನಾಯುಧವ ತಾ । ಹಲಗೆಯಾವೆಡೆಯೆಂಬವನ ಮುಂ । ದಲೆಯ ಹಿಡಿವಡಗೆಡಹಿ ಕುಸುಕಿರಿದವನ ಸದೆಬಡಿದ ॥ ೨೯ ॥ ಉಗಿದು ಬಿಲ್ಲಿನ ತಿರುವ ಕೊರಳಲಿ । ಬಿಗಿಯೆ ದ್ರುಪದಾತ್ಮಜನು ತಾ ಬೆರ । ಳುಗಳ ಬಾಯಲಿ ಬೇಡಿಕೊಂಡನು ದ್ರೋಣನಂದನನ ॥ ಉಗಿದಖಡ್ಗದಲೆನ್ನ ತಿರವನು । ತೆಗೆದುಕಳೆಯೈ ಶಸ್ತ್ರಘಾತದಿ । ನುಗುಳಿಸುವನು ತನಗೆ ವೀರಸ್ವರ್ಗವಹುದೆಂದ ॥ ೩೦ ॥ ಅಕಟ ಗುರುಹತ್ಯಾಮಹಾಪಾ। ತಕಿಯೆ ನಿನಗೇಸ್ವರ್ಗದೇಶ । ಪ್ರಕರ ನಿನ್ನನು ಹೊಗಿಸಿದೊಡೆ ಸುಡುವೆನು ಸುರಾಲಯವ॥ ಪ್ರಕಟಕುಂಭೀಪಾಕಮುಖನಾ । ರಕದೊಳಿರಮನೆ ನಿನಗೆ ಕೌಂತೇ । ಯಕದಹರಿಗೆಳೆತನವೆನುತ ಕಟ್ಟಿದನು ತಿರುವಿನಲಿ ॥ ೩೧ ॥ ಉಗಲು ಹತ್ತಿಸಿ ಸೆಳೆದು ಗೋಣಿಲಿ। ಗುರುಗುರಿಸಲಸು ಜಾರಿದುದು ಬೊಬ್ಬಿರಿದು ಹೊಕ್ಕನು ಕದವನೊದೆದು ಶಿಖಂಡಿಯರಮನೆಯ ॥ ತರಿದನಾತನನುತ್ತಮೌಂಜಸ । ನರಸಿಹೊಯ್ದನು ಹೊಕ್ಕು ಬಾಗಿಲಮುರಿದು ಮೈಯುರುಹಿಸಿ ಯುಧಾಮನ್ಯುವ ವಿಭಾಡಿಸಿದ ॥ ೩೨ ॥ ಗಜಬಜವಿದೇನೆನುತ ನಿದ್ರೆಯ । [illegible]ರೊಳಗೊಳಗೆಂದರೀತನ । ಭುಜಬಲಕೆ ಮಲೆತವರ ಕಾಣೆನು ಸೃಂಜಯಾದಿಗಳ ॥ ರಜನಿಯು । ಳಿಕುಳವ ಮಾಡಿದ । ನಜಿತಸಾಹಸನಿತ್ತ ದ್ರುಪದಾ । ತ್ಮಜೆಯ ಭವನದ ಹೊರಗೆ ಬಂದನು ಪಾಂಡರನೆರಸಿ ॥ ೩೩ ॥ ಇದು ಯುಧಿಷ್ಠಿರರಾಜಗೃಹವೆಂ । ದೊಡೆದು ಕಳೆದನು ಕಾಹಿನವರನು । ಸದೆಹೊಕ್ಕನು ಸಜ್ಜೆಯಲಿ ಧರ್ಮಜನ ನಂದನನ ॥ ಒದೆಮೊಡೆದ್ದನು ಸುರಗಿಯಲಿ ಕಾ। ದಿದನು ಖಡ್ಗ[illegible]ಸಾ । ದದಳವನ ತಡೆಗಡಿದು ಪ್ರತಿವಿಂಧ್ಯಕನನಸುಗಳೆದೆ ॥ ೩೪ ॥ ಜನಪ ಕೇಳು ಬ

ಸುತಸೋ । ಮನನು ಶ್ರುತಕೀರ್ತಿಯ ಶತಾನೀ। ಕನನು ಶ್ರುತವರ್ಮಕನ ತರಿದನು ಪ್ರೌಪದೀಸುತರ॥ ಜನಪವೈರಿಯ ತಲೆಗಳೆಂದೇ । ಕನಕರಥದೊಳಗಿರಿಸಿ ಹೊಕ್ಕನು । ಮನೆಮನೆಗಳಲಿ ಸವರಿದನು ಸೋಮ ಪ್ರಬುದ್ಧಕರ ॥ ೩೫ ॥ ಸೀಳಿದನು ಸಮರಥರುಗಳ ಪಾಂ । ಚಾಲರಾವುತರೆಸು ಮಹಾರಥ । ಜಾಲವನು ಜೋದರರ ಭಾರಿಯಪಾರಕವ್ರಜವ ॥ ಸಾಲ ಹೊಯ್ದನು ಹುಯ್ಯಲಿಗೆ ಹೊಗು । ವಾಳ ತರಿದನು ಖಡ್ಗದಲಿ ರಿಪು । ಕಾಲಭೈರವ ಬೀದಿವರಿದನು ಕೇರಿಕೇರಿಯಲಿ ॥ ೩೬ ॥ ಎಲೆಲೆ ಕಪಿ ಕಳ್ಳೇರುಕಾರನ । ತಲೆಯ ಹೊಯ್ಯೊಯ್ಯೆನುತ ನಿದ್ರಾ । ಕುಳರು ಗರ್ಜಿಸಿತಾಗುಳಿಸಿ ತೂಕಡಿಸಿದರು ಮರಳಿ ॥ ಕೆಲಕೆಲರು ನಿದ್ರೆಗಳ ಮರವೆಯ । ಕಳವಳಿಗರೊರೆಗೊಂಡು ಖಡುಗವ । ನೆಲಕೆ ಬಿಸುಟರು ಬತ್ತಳಿಕೆಯಲಿ ಹೂಡಿದರು ಧನುವ ॥ ೩೭ ॥ ಗಜವ ಹಲ್ಲಣಿಸಿದರು ವಾಜಿ । ವ್ರಜಕೆ ರೆಂಚೆಯ ಬೀಸಿದರು ಗಜ। ಬಜವಿದೇನೆನುತ ಗಾಲಿಗೆ ಬಿಗಿದು ಕುದುರೆಗಳ ॥ ರಜನಿ ಹೋಯ್ತುದೆ ಹಗಲು ಬಂದುದೆ । ಗಜಬಜದಲಕಟಕಟೆನುತ ಸುಭಟ । ವ್ರಜ ಸುವಿಹ್ವಲಕರಣರಿರಿದಾಡಿದರು ತಮ್ಮೊಳಗೆ ॥ ೩೮ ॥ ಲಾಯದಲಿ ಹೊಕ್ಕಿರಿದು ಕುದುರೆಯ । ಬೀಯವಮಾಡಿದನಂತಕಂಗೆ ಯ । ಡಾಯುಧದ ಧಾರೆಯಲಿ ಕೊಟ್ಟನು ಕುಂಜರವ್ರಜವ ॥ ರಾಯದಳ ಧರೆಯಂತೆ ನವಖಂ। ಡಾಯುವಮಾನವೆಯಾಯ್ತು ಪಾಂಡವ । ರಾಯಕಟಕವ ಕೊಂದನಶ್ವತ್ಥಾಮ ರಜನಿಯಲಿ ॥ ೩೯ ॥ ದೊರೆಗಳೇನಾದರೊ ಯುಧಿಷ್ಠಿರ । ನರವೃಕೋದರನಕುಲಸಹದೇ । ವರು ಮುರಾಂತಕಸಾತ್ಯಕಿಗಳೊಳಗಹರೆ ರೌಕುಳಕೆ ॥ ಹರನ ಖತಿಯ್ಸ ... ಕೃತಾಂತನ। ವಿರಸಧೃತಿಯೋ ಸರ್ವದಳಸಂ । ಹರಣಕೇನುನಿಮಿತ್ತವೆಂಬುದು ಭೂಸುರವ್ರಾತ ... ॥ ಉಳಿದುದೇಳಕ್ಷೌಹಿಣೀಬಲ । ದೊಳಗೆ ನಾರೀನಿಕರ ವಿಪ್ರಾ । ವಳಿ ಕುಶೀಲವಸೂತಮಾಗಧವಂದಿಸಂದೋಹ ॥ ಸುಳಿವ ಕಾಣೆನು ಕೈದುಹಿಡಿದವ । ರುಳಿದು ಜೀವಿಸಲಾನೆಕುದುರೆಗ । ಳೊಳಗೆ ಜಯವಿಲ್ಲೆನನೆಂಬನು ಕೇಳು ಧರಣೀಶ ॥ ೪೧ ॥ ಕೂಡೆ ಕಟ್ಟಿತು ಕಿಚ್ಚು ತೆರಹಿನ । ಲಾಡುವರೆ ಗುರುಸುತನ ಶರ ವಿ । ಕ್ರೋಡು ವರೆ ಬಾಗಿಲುಗಳಲಿ ಕೃತವರ್ಮಕೃಪರೆಸುಗೆ ॥ ಕೂಡೆ ಮುಮ್ಮಳಿಯ ... ಪದೀಶರ । ಮಾಡಿಗೆಯ ಚತುರಂಗಬಲವೆ । ಕ್ಕಾಡಿತೇನೆಂಬೆನು ಯುಧಿಷ್ಠಿರನೃಪನ ಪರಿವಾರ ॥ ... ೨ ಬಸಿವರಕ್ತದಡಾಯುಧದ ನೆಣ। ವಸೆಯತೊಂಗಲಗರುಳ ಬಂಧದ। ಲಸಮಕೈಮೈಗಳ ಕಠೋರಭ್ರುಕುಟಿಭೀಷಣದ ॥ ಮುಸುಡುಹೊಗರಿನ ದಂತದಂಶಿತ । ದಶನವಾಸದ ವೈರಿಹಿಂಸಾ । ವ್ಯಸನವೀರಾವೇಶಿ ಬಂದನು ಕೃಪನ ಸಂಮುಖಕೆ ॥ ೪೩ ॥ ಹೇಳಿದನು ಸೃಂಜಯವಧೆಯ ಪಾಂ । ಚಾಲರಾಜಕುಮಾರವರ್ಗದ । ಮೌಳಿಗಳ ಬಲಿಗೊಟ್ಟಪರಿಯನು ಖಡ್ಗಧೃತನಿಗೆ ॥ ಪಾಳೆಯದೊಳರಸಿದನು ಪಾಂಡುಸ್ತ್ರ । ಪಾಲತನುಜರನವಘ ಕೆಡುವರೆ। ಮೇಲುಗಾಹಿನ ವೀರನಾರಾಯಣನ ಕರುಣದಲಿ ॥ ... ... ॥೪೪॥

ಅಂತು ಸಂಧಿ ೯ಕ್ಕಂ ಪದ ೫೭೦ಕ್ಕಂ ಮಂಗಳಮಸ್ತು.

*

ಹತ್ತ್ರನೆಯ ಸಂಧಿ.

॥ ಸೂಚನೆ ॥ ರಾಯಕಟಕವನಿರಿದಗುರುಸುತ । ನಾಯುಧದ ವಿಗ್ರಹದೊಳಗೆ ಹರಿ ಕಾಯಿದನು ಕೃಪೆಯಿಂದಲಭಿಮನ್ಯುವಿನನಂದನನ ॥

॥ಪದ॥ ಕೇಳು ಧೃತರಾಷ್ಟ್ರಾವನಿಪ ರಿಪು । ಜಾಲಗೀರ್ವಾಣಕಕದಂಬ । ಸ್ಥೂಲಲಕ್ಷನು ಬಂದು ಕಂಡನು ಭೋಜಗೌತಮರ ॥ ಲೀಲೆಯಲಿ ರಥವೇರಿ ಕುರುಭೂ । ಪಾಲನಲ್ಲಿಗೆ ಬಂದರುಬ್ಬಿನ । ಮೇಲುಮದದ ಜಯಪ್ರಚಂಡರು ಕಂಡರವನಿಪನ ॥ ೧ ॥ ಬಲಿದಮರವೆಯ ಕರಣವೃತ್ತಿಯ । ಕಳಕಳದ ನಿಖಿಳೇಂದ್ರಿಯದ ಪರಿ । ಚಲನಸಂಚದ ಶಿಥಿಲಮೂಲಾಧಾರಮಾರುತನ ॥ ಅಲಗತದಪರಿವೇದನಾವಿ । ಹ್ವಲಿತಕಂಠಗತಾತ್ಮನೂರ್ಧ್ವ । ಸ್ಖಲಿತದೀರ್ಘಶ್ವಾಸನಿರ್ದನು ಕೌರವೇಶ್ವರನು ॥ ೨ ॥ ಕಂಡು ಕಂಬನಿದುಂಬಿದರು ಭೂ । ಮಂಡಲಾಧಿಪವೈರಿಮದವೇ । ತಂಡಕೇಸರಿನಿನಗಿದೇ ಮರುಪೂತು ವಿಧಿಯೆನುತ ॥ ಗಂಡುಗಲಿಯವಧಾನ ರಿಪುಬಲ । ದಂಡಧರವವಧಾನ ಕುರುಕುಲ । ಚಂಡಕರನವಧಾನವೆಂದೆಚ್ಚರಿಸಿದನು ನೃಪನ ॥ ೩ ॥ ಕೆದರಿದುದು ಕುಡಿನೋಟಕರಣದ । ಕದಡು ಹರಿದುದು ಯಿಂದ್ರಿಯಾವಳಿ । ಕುದಿಗೊಳಿಸಿದುದು ಪವನ ನಟಿಸಿತು ನಾಭಿಪರಿಯಂತ ॥ ವದನವನು ನಸುನೆಗಹಿ ನೃಪನುಡಿ । ಸಿದನಿದಾರ್ಕೈ ಸತ ರೋಭಾ । ಗದಲಿ ಸೇವಾಮಧುರಸಚನವಿಲಾಸಪರರೆಂದ ॥ ೪ ॥ ನಾವು ನಿಮ್ಮವರೆಮ್ಮ ಬೊಪ್ಪನ. ಭಾವಕೃಪಕೃತವರ್ಮನೀತನು । ದೇವರವಧರಿಸುವುದು ರಜನಿಯ ರಾಜಕಾರಿಯವ ॥ ನೀವು ಬಿನ್ನಹಮಾಡಬೇಹುದು । ಮಾವ ರಣಸಂಗತಿಯ ಸಾತ್ಮ । ಸ್ತ್ರಾವಕರು ನಾವಲ್ಲವೆಂದನು ಕೃಪಗೆ ಗುರುಸೂನು ॥ ೫ ॥ ಏನನೆಂಬೆನು ಜೀಯ ದ್ರುಪದನ । ಸೂನು ಪಂಚದ್ರೌಪದೇಯರ । ಹಾನಿಯನು ಸ್ಸಂಜಯಶಿಖಂಡಿಯ ಮುಖರುಪಹತಿಯ ॥ ವೈನತೇಯನ ಲಳಿಯನಹಿಕುಲ । ವಾನುವುದೆ ಪಾಂಚಾಲಕದಳೀ । ಏನನವನಿಪ ನೆ ಸವರಿತು ಹೇಳಲೇನೆಂದ ॥ ೬ ॥ ದೈವಕೃಪೆ ಜವನಿಕೆಯ ಮರೆಗೊಂ. । ಡೈವರುಳಿದರು ಪಾಲ ಸಾತ್ಯಕಿ । ದೈವದೊಡಹುಟ್ಟಿದನಲೇಯವರಿಲ್ಲ ಶಿಬಿರದಲಿ ॥ ದ್ರೌಪದಿ ಲವಿನಿತಕ್ಕಥಿಟ ನಿ । ದೈವಬಲ ನಿಶ್ಚೇಷ್ಟವನಿತ್ತೈ । ದೈವವೆತ್ತಿದಭೆಲವ ಭಾಷೆಯರಾಯ ಕೇಳೆಂದ ॥ ೭ ॥ ಎಲೆ ಕೃಪಾಚಾರಿಯ ವಿರೋಧಿಗ । ಳುಳಿದರೈವರು ಬಲ್ಲೆನಾನಸ । ವಳೆದ ಕೃಪೆಯಲಿ ಬಸಿದು ಬೀಳುವನವನ್ನ ಮುರವೈರಿ ॥ ಅಳಿದುದೇ ನಿಶ್ಶೇಷಪಾಂಡವ । ದಳ ಕುಮಾರರುಸಹಿತವಿನ್ನ । ಗ್ಗಳೆಯ ನಶ್ವತ್ಥಾಮ ಸಕಹನೆಂದನು ಮಹೀಪಾಲ ॥ ೮ ॥ ಏನನೆಸಗಿದರೆಮಗೆ ಗಂಗಾ । ಸೂನು ಭಾರದ್ವಾಜನೊಲಿದವ । ಗೇನನಮಾಡಿದನೆಪ್ಪತ್ತಿಧಟ್ಟ್ನ ಭದ್ರಗಜವೆಂಬ ॥ ಮಾನನಿಧಿ ರಾಧಾತನುಜನಿಂ । ದೇನುಹರಿದುದು ಹರಿಬವನು ಗುರು । ಸೂನುವೇ ಮರಳಿಚಿದನೆಂದನು ಕೌರವರರಾಯ ॥ ೯ ॥ ಹರಿಬ ಬಿಡದ ಪಾಂಡುಸುತರುಳಿ । ದಿರಲಿ ಸಾಕಂತಿರಲಿ ನಿಮ್ಮಡಿ । ಪುರಕೆ ಬಿಜಯಂಗೈವುದೆಂದನು ಕೌರವೇರರಾಯ ॥ ಹರಣವುಳಿದೊಡೆ ಪಾಂಡುತನುಜರ । ತಿರವ ನೇವಣಿಸುವೆನು ತಾಕೇ । ಸರಿಯ ಪೀಠದಲೆಂದವನಶ್ವತ್ಥಾಮ ಕೈಮುಗಿದು ॥ ೧೦ ॥ ಸಾಕದಂತಿರಲಿನ್ನು ವೈರಿ । ವ್ಯಾಕರಣಪಾಂಡಿತ್ಯದಲ್ಲಿವಿ । ವೇಕಶೂನ್ಯ

ರು ನಾವು ಮೊದಲಾಗೂರ್ಧ್ವದೈಹಿಕದ ॥ ಆಕೆವಾಳರಿಗರುಹಿ ನೀನಾ । ಶೋಕಪೂರ್ಣರ ತಿಳುಹಿವಿದಳಿ ತ । ಶೋಕರೆನಿಸುವುಪಾಂಧನೃಪಗಾಂಧಾರಿದೇವಿಯರ ॥ ೧೧ ॥ ಎಂದು ಮೂರಂಗುಲವನೆಣಿಸುತ । ಮಂದಮತಿಕುರುರಾಯನಿರಲವ । ನಂದವನು ಹರಿ ತಿಳಿದು ಯಮಪುರಿಗೈದಿಸುವೆನೆನುತ ॥ ಬಂಧುಬಿ ಸಗೊಂಡನು ಸುಯೋಧನ । ಸಂದರಾಗವೆ ಬಿಡು ಮನೋವ್ಯಥೆ । ಯಿಂದ ಬೆರಳ್ಗಳ ಮಡಿಪಕಾರಣ ವೇನು ಹೇಳೆಂದ ॥ ೧೨ ॥ ಗುರುಸುತನ ದಳಪತಿಯ ಮಾಡದೆ । ಸರಸಿಯೊಳು ಪೂರಿಸದೆ ಜಪವ ನು । ವರಜನನಿ ಯಿಕ್ಷಿಸಿದಳೆನ್ನಂಗವನು ತೊಡೆಗಳಿಗೆ॥ ಮರೆಯಮಾಡಿದೆ ಲಜ್ಜಸುತ ಮು। ನ್ನರಿಯ ದಾದನು ಪೋಸಮೂರರ । ಲಿರದೆ ಬಂದುದು ತನಗೆನಲು ನಸುನಗುತ ಹರಿನುಡಿದ ॥ ೧೩ ॥ ಗುರು ಜ ದಳಪತಿಯಾದೊಡೆ ಯುಧಿ । ಷ್ಠಿರನ ಗಜವೇರಿಸುವೆ ಮಂತ್ರೋ । ಚ್ಚರಣೆ ನಿನ್ನಲಿ ಫಲಿಸೆಯದ ಕಾನಕುಲನನು ಕರಸಿ ॥ ತುರಗವಾರೋಹಿಸುವೆ ಜನನಿಯ । ಕರುಣದಲಿ ವಜ್ರಾಂಗನಾಗಲು । ಧರಿಸು ವೆನು ತಾ ಚಕ್ರವೆನೆ ನಿಶ್ಚಿಂತೆಯಲಿ ನುಡಿದ ॥ ೧೪ ॥ ದೇವ ನೀ ಸಚರಾಚರಂಗಳ । ತಾವಿನಲಿ ವ್ಯಾ ದೋರಿ ಮೆರವವ । ನಾವ ರಿವನು ಯೆನ್ನಮನದೊಳಗಿರ್ದಭೀಷ್ಟ್ಯಯದ ॥ ಭಾವವನು ನೆರೆಮುರಿದೆ ಯಿನ್ನಿನ । ಗಾವಸುಕೃತದ ಫಲವೊ ಪಾಂಡವ । ಜೀವ ನೀನಹುದೆನುತ ಕೊಂಡಾಡಿದನು ಕುರುನೃಪ ತಿ ॥ ೧೫ ॥ ಎನುತ ಕಣ್ಮುಚ್ಚಿದನು ಜೀವಾ । ತ್ಮನು ಜವಾಯಿಲತನವಿನದಹಾ । ಯ್ದನು ಸುರರಸಾ ಲಂಬಿತಶ್ವಾಸದ ಸಮಾಪ್ತಿಯಲಿ ॥ ಜನಪ ಮರೆದೊರಗಿದನಲಾಹಾ । ಯೆನುತ ವದನಾಂಜಳಿಯ ಪು ಟತಾ । ದನದಲಿವೆರಳಲಿದರು ಕುರುರಾಜಾವಸಾನದಲಿ ॥೧೬॥ ತಿರುಗಿದರು ಕೈಬಾವ ಬಿಸುಟು ಮೂ । ವರು ಮಹಾರಥರಂದು ಶಿಬಿರಕೆ । ತರಣಿಕಿರಣದ ಥಾಳಿ ಹರಿದುದು ಕೂಡೆ ದೆಸೆದೆಸೆಗೆ ॥ ಅರಸನು ಪ್ಪವಡಿಸಿ ಮುರಾರಿಯ । ಸಿರಿಮೊಗವ ನೋಡಿದನು ತವ್ಕಾಂ । ದಿರುಸಹಿತ ಹೊರವಂಟನಾಕುರುಪತಿ ಯ ಪಾಳೆಯಾ ॥ ೧೭ ॥ ಪಾಳ್ಯದಲ್ಲಿ ಕುಮಾರರನು ಪಾಂ । ಚಾಲರನು ನೋಡುವೆನೆನುತ ಭೂ । ಪಾಲ ನಡೆತರಲಿದಿರುವಂದವರು ಯುವತಿನಿಕುರುಂಬ ॥ ಸೂಳುಹೊಯ್ಲಿನ ತೆಳುವಸುರ ಕರ । ತಾಳದ ಲಿ ಹಾಹಾವಿರಾವದ । ಮೇಳವದಗೀತದಲಿ ಬಂದಳು ದ್ರೌಪದೀದೇವಿ ॥ ೧೮ ॥ ಏನಿದೇನದ್ಭುತವೆನು ತ ದುಂ । ಮಾನದಲಿ ಹರಿತಂದು ಹಿಡಿದನು । ಮಾನಿನಿಯ ಕೈಗಳನು ಕಂಬನಿದೊಡೆದು ಸೆರಗಿನಲಿ ॥ ಹಾನಿಯೇನೆನೆ ಮಡಿದರೆನ್ನಯ । ಸೂನುಗಳು ತನ್ನನುಜರೆನೆ ಪವ। ಮಾನಸುತ ಕೇಳಿದನು ಕೋಳಾ ಹಳೆವ ಗುರುಸುತನ ॥ ೧ ॥ ಸುತರ ತಲೆಯ್ದಿದಕ್ಕೆ ರಿಪುಗುರು । ಸುತನ ತಲೆಯೇ ಹೊಣೆಕಣಾ ಬಿ ಡು । ಸತಿಯೆ ಶೋಕವನೆನುತ ಬಿಟ್ಟನು ಸೂಥಿಯಲಿ ರಥವ ॥ ವ್ಯತಿಕರದನವಗಡ ಸಮೀರನ । ಸುತ ಗೆ ಹರಿಯದು ಬವರ ಸಾಹಸಿಯಂ। ದತಿರಥನ ಬಳಿಸಲಿಸಿದರು ನೃಪಹರಿಧನಂಜಯರು ॥ ೨೦ ॥ ನಿಲ್ಲು ಗುರುತ ಶೌರ್ಯಪಣಿನ।ವ್ಮಲ್ಲಿಯೇ ಹುಲುಚೀವರಿಗೆಜವ ।ನಲ್ಲಿ ಮೇಳವಿಯುಗುಳುಬಂಚೆದ್ರೌಪದೀಸುತ ರ ॥ ಬಿಲ್ಲಗುರು ನೀನಾದೊಡೆಮಗೇ । ನಿಲ್ಲಿದ್ರೌಪದಿಯಕ್ಷಿಜಲ ಕೃಪೆ । ಯಲ್ಲಿ ಲಂಬಿಸಬೇಕೆನುತಮೂ ದಲಿಸಿದನು ಭೀಮ ॥ ೨೧ ॥ ಎಲವೊ ಶರಸನ್ಯಾಸವನು ಕುರು । ತಿಲಕನವಸಾನದಲಿ ಮಾಡಿದೆ । ಬೆಳಲಿದೊಡೆ ಫಲವೇನು ನಾನೀಸ್ವಾಮಿಕಾರ್ಯದಲಿ ॥ ತಲೆಯ ಹೊಯ್ದೆನು ನಿನ್ನವರ ನೀ । ವಳುಕಿ ದಣದೊಳಗಡಗಿಜೀವವ । ನುಳುಹಿಕೊಂಡಿರಿ ಕೊಲುವೆನಲ್ಲದೊಡೆಂದನಾದ್ರೌಣಿ ॥ ೨೨ ॥ ಮರುಳೆ

ಲಾ ಗುರುಸುತ ಯುಧಿಷ್ಠಿರ । ನರೆ ವಿಭಾಡಿಸುವಾಮೃಗೇಂದ್ರನ । ಗರವಟಿಕೆಯಲಿಗಡ ಸೃಗಾಲನ
ಬಾಧೆ ಬಲುಹುಗಡ ॥ ಕುರುನೃಪತಿಯಾಸ್ಥಾನದಲ್ಲಿ । ಬ್ಬರಿಸಿ ಬೊಬ್ಬಿಡಲಾಹವಾಂತ । ಸ್ಮರಣೆ ಗು
ರುಸುತ ನಿನಗೆ ಸದರವೆ ಯೆಂದನಸುರಾರಿ ॥ ೨೩ ॥ ಕಾಯಬಲ್ಲೆ ಪಾಂಡವರನು ನಿ । ರಾಯುಧ
ರು ನಾವೆಂದು ನೀ । ನಿರ್ವಾಣಯದಲಿ ಪಾಂಡವರು ಹೊಗುವರೆ ಹಸ್ತಿನಾಪುರವ ॥ ಸಾಯಕವನಪಹರಿ
ಸು ಪಾಂಡವ।ರಾಯ ಜೀವಿಗನೆನುತವರಜ। ಕ್ರಾಯುಧನ ಬೋಳೈಸಿ ತೃಣದಿಂದಿಟ್ಟನಾಪ್ರಾಣಿ ॥೨೪॥
ಆಮಹಾಮಂತ್ರಾದಿಮಂತ್ರದಿ । ಭೀಮವಿಕ್ರಮತೃಣವನಶ್ವ । ತ್ಥಾಮನಿಡೆ ಲೋಕತ್ರಯಾಕ್ಷಾರಪ್ರಚಂ
ಡಮಯ ॥ ವ್ಯೋಮಕೇಶಲಲಾಟವಿಶ್ರಮ । ಧೂಮಕೇತುಶಿಖಾವಿಸಂಸ್ಫೂಳ । ಧಾಮಚುಂಬಿತವನ್ಹಿ
ಭಯ ಭಾರಿಸಿತುವರಿನೃಪರ ॥ ೨೫ ॥ ಅವನಿಪತಿ ಕೇಳ್ಮೆ ಮಹಾಸ್ತ್ರ। ಪ್ಪವದ ಸತ್ರಾಣವನು ಗುರು
ಸಂ । ಭವನ ಮಂತ್ರದ ಪಾಡೆ ತಾ ಪಾಲಿಸಿತು ಪಾಂಡವರ ॥ ತವಕವಲಿ ತೃಣಬಾಣವಭಿಮ। ನ್ಯುವಿನ
ರಾಣೀವಾಸದುದರೋ । ದ್ಭವದ ಗರ್ಭಕೆ ಮುಳಿದು ಹರಿದುದು ಸೂಕ್ಷ್ಮರೂಪಿನಲಿ ॥ ೨೬ ॥ ಜಗವ
ಹಿಂಡುವ ಮೋಹ್ಣಾತುದರ್ಶ । ಜಗದಜೀವರ ನೋಡಿಯಡಿಸುವ। ಜಗವನಂತರ್ಭಾಗವವಲಿ ಭರಿಸುವಗು
ಣತ್ರಯವ ॥ ಸೊಗಸು ತನ್ನ ಸಹಸ್ರದೇವತ । ಬಗೆಯೊಳೆನಿಪಮಹಾಸುದರ್ಶನ । ಬಿಗಿದು ಸುತ್ತಲು
ವೇಡೆಯಾಯ್ತುತ್ತರೆಯ ಗರ್ಭದಲಿ ॥ ೨೭ ॥ ಕಳೆದುಕೊಂಡನು ಮೃತ್ಯುವಿನ ಗಂ । ಟಲನು ಮಾ
ರ್ಕಂಡೇಯನನು ರಣ । ದೊಳಗೆ ಭಗದತ್ತಾಂಕುಶದಿ ನಾರಾಯಣಾಸ್ತ್ರದಲಿ ॥ ಉಳುಹಿದನು ಪಾಂ
ಡವರ ಗುರುಸುತ । ಕಳುಹಿದಾಕುಶೆಯಸ್ತ್ರದಲಿ ಶಶಿ । ಕುಲದ ರಾಜಾಂಕುರನ ಕರುಣಿಸಿ ಕಾಯ್ದನ
ಸುರಾರಿ ॥ ೨೮ ॥ ತೀರಿತೀ ಕುಶೆಯಸ್ತ್ರಘಾತಿಸು । ರಾರಿಗುರುಸುತರೊಬ್ಬರೊಬ್ಬರು । ವೀರಪಣ
ವಾಸಿಯಲಿ ತಗುಳಿದರಧಿಕರೋಷದಲಿ॥ ನಾರಿಯರಿತ್ತ ಸ್ತ್ರೀಪವಸ್ಥಿನಿವಾರಣಿಕೆ ಚಲವೀತನೆಂದಾ । ಚಾರಿ
ಯನ ನಂದನನ ಹಿಡಿದರು ಭೀಮಫಲುಗುಣರು ॥ ೨೯ ॥ ಬಂದಳಾದ್ರೌಪದಿಯ ವರಗುರು । ನಂದ
ನನ ಕೊಲಬಾರದಕಟೀ । ನಂದನರ ಮರಣದ ಮಹಾವ್ಯಥೆಯಿರಾತ್ರನಳಿವಿನಲಿ ॥ ಕೊಂದು ಕೂಗದೆ ಕೃ
ಪೆಯನಬಲಾ । ವೃಂದಸಮಸುಖದುಃಖಿಗಳು ಸಾರೆರೆಂದು ಭೀಮಾರ್ಜುನರ ತೆಗೆದಳು ಬಳಿಕ ಪಾಂಚಾ
ಲಿ ॥ ೩೦ ॥ ತಲೆಯ ಕೊಂಬವಗಡದ ಭಾಷೆಯ । ಸಲಿಸಲೆಂದಾದ್ರೋಣತನುಜನ । ಹೊಳೆವಮಕು
ಟದ ಮಾಣಿಕವ ಕೊಂಡುತ್ತರಾಯದಲಿ ॥ ಗೆಲಿದು ತಿರುಗಿದನವರಸಾಹವ । ವಳುಕಿಸದೆ ಮೂಜಗವ
ಯದುಕುಲ । ತಿಲಕಗದುಗಿನವೀರನಾರಾಯಣನ ಕರುಣದಲಿ ॥ ... ॥ ೩೧ ॥

ಅಂತು ಸಂಧಿ ೧೦ಕ್ಕೆ ಪದ ೫೦೪ಕ್ಕಂ ಮಂಗಳಮಸ್ತು.

ಹನ್ನೊಂದನೆಯ ಸಂಧಿ.

॥ ಸೂಚನೆ ॥ ರಾಯನಯ್ಯನ ತಿಳುಹಿದನು ದ್ವೈ । ಪಾಯನನು ಸಾವುದಲಿ ಕಮಲದ । ಳಾಯತಾಕ್ಷಿಯು ಶಾಪವಿತ್ತಳು ಮುಳಿದು ಗಾಂಧಾರಿ ॥

॥ ಪದ ॥ ಕೇಳು ಜನಮೇಜಯಧರಿತ್ರೀ । ಪಾಲ ಕುರುಪತಿನಿಲಯ ಶೋಕ । ವ್ಯಾಳವಿಷವೆಡ್ಡೈಸಿದುದು ಗಜಪುರದ ಜನಮನವ ॥ ಹೂಳಿದುಬ್ಬೆಯ ಹುದಿದವೋನವ । ಸೂಳುಚಿಂತೆಯ ಬಲಿದಭೀತಿಯ । ಮೇಲುದುಗುಡದ ದಡಿಯವದನದಲಿರ್ದುದಖಿಳಜನ ॥ ೧ ॥ ಆಸಮಯದಲಿ ದೇವವೇದ । ವ್ಯಾಸಮುನಿ ಬಂದನು ಗತಾಕ್ಷಮಹೀಶನನು ಚರಣದಲಿ ಹೊರಳಿದೊಡೆತ್ತಿದನು ಹಿಡಿದು ॥ ಆಸತಿಯ ಕರಸಿದನು ರಾಣೀ । ವಾಸವೆಲ್ಲವ ಬರಿಸಿ ಧರ್ಮವಿ । ಲಾಸವನು ವಿಸ್ತರಿಸಿದನು ವೈದಿಕವಿಧಾನದಲಿ ॥ ೨ ॥ ನಿನ್ನ ಸುತನುದ್ದಂಡತನದಲಿ । ನಿನ್ನ ತಮ್ಮನತನುಜರನು ಪರಿ । ಭಿನ್ನರನು ಮಾಡಿದನು ಕಪಟದ್ಯೂತಕೇಳಿಯಲಿ ॥ ನಿನ್ನಮತ ವಿದುರೋಕ್ತಿಗಳ ಮ । ನ್ನಿಸಿದನೇ ಜಗವರಿಯೆ ಸಂಪನ್ನ ಶತನಹನ್ಯಸುಯೋಧನನೆಂದನಾಮುನಿಪ ॥ ೩ ॥ ಸೈರಿಸುವರೇ ಪಾಂಡುಸುತರಂ । ಭೋರುಹಾಕ್ಷಿರಜಸ್ವಲೆಯ ಸುಲಿ । ಸೀರೆಯಲಿ ತತ್ಪೂರ್ವಕೃತಜತುಗೇಹದಾಹದಲಿ ॥ ವೈರಬಂಧವ ವಿವಿಧವಿಷಮವಿ । ಕಾರದಲಿ ವಿಗ್ರಹಮುಖವ ವಿಸ್ತಾರಿಸಿದರೇ ಪಾಂಡುಸುತರರುತ್ತಮರೆ ಹೇಳೆಂದ ॥ ೪ ॥ ಅವರು ಸುಚರಿತರೆಂದರೆಲೆಮಾ । ಧವನು ನೆರೆಮರುಳಾದನವರಿಗೆ । ಶಿವನುಮೆಚ್ಚಿಯೆ ಶರವನಿತ್ತನು ನರನ ಪತಿಕರಿಸಿ ॥ ಭುವನವೆರಡಾವಲ್ಲಿ ಸಾಧುಗ । ಳವರ ದೆಸೆ ದುಷ್ಪಾಧುಗಳು ನಿ । ನ್ನವರದೆಸೆಯಾಯ್ತರ್ಜುನನ ಸೂತಜನ ಸಮರದಲಿ ॥ ೫ ॥ ಅಹುದು ನಿಮ್ಮಯಯುಧಿಷ್ಠಿರನು ಗುಣಿ । ಯಹನು ಭೀಮಾರ್ಜುನರು ಬಲ್ಲಿದ । ರಹರು ಕೃಷ್ಣನ ಕೂರ್ಮೆ ಹಿರಿದು ಕಪರ್ದಿಯೊಲವಿನಲಿ ॥ ಕುಹಕಿಯನ್ನವನವನೊಳಗೆ ನಿ । ಸ್ಪೃಹರು ವಿದುರಪ್ರಮುಖಸುಜನರು । ವಿಹಿತವೆನಗಿನ್ನಾವುದದ ನೀವ್ ಬೆಸಸಿ ಸಾಕೆಂದ ॥ ೬ ॥ ಧರ್ಮವೆಲ್ಲಿಹುದಲ್ಲಿ ಜಯ ಸ । ತ್ಕರ್ಮವೆಲ್ಲಿಹುದಲ್ಲಿ ಸಿರಿ ಸ । ದ್ಧರ್ಮಸಂರಕ್ಷಕರು ಹರಿಧೂರ್ಜಟಿಪಿತಾಮಹರು ॥ ಧರ್ಮದೂರರು ನಿನ್ನವರು ಸ । ತ್ಕರ್ಮಬಾಹಿರನಾತ್ಮರಚಿತವಿಕರ್ಮದೋಷದೇಳಿದ ನಿನ್ನವನೆಂದನಾಮುನಿಪ ॥ ೭ ॥ ಎನಲು ಬಿದ್ದನು ನೆಲಕೆ ಸಿಂಹಾ । ಸನದಿನಾಮುನಿವಚನಶರ ಮರು । ಮೊನೆಗೆ ಬಾದುದು ಬಹಳಮೂರ್ಛಾಪಾರವಶ್ಯಯಲಿ ॥ ಜನಪನಿರೆ ಗಾಂಧಾರಿ ನೃಪಮಾ । ನಿನಿಯರೊರಲಿತು ರಾಜಗೃಹವೋ । ಗ[illegible]ಧ್ವನಿ [illegible] ಮೊಗೆದುದು ಹಸ್ತಿನಾಪುರವ ॥ ೮ ॥ ಆರು ಸಂತೈಸುವರು ಲೋಚನ ' ವಾರಿ ಹೊನಲಾಯ್ತರಮನೆಯ ನೃಪ । ನಾರಿಯರ ಬಹಳಪ್ರಲಾಪವ್ಯಥೆಯ ಬೇಳುವಗೆ ॥ ಆರು ಮರುಗರು ಶೋಕಪನ್ನಗ । ಘೋರವಿಷಮುನಿವರನ ಹೃದಯವ । ಡೋರಿತೇನೆಂಬೆನು ಲತಾಂಗಿಯರಳವ ಕಳವಳವ ॥ ೯ ॥ ಎತ್ತಿದರು ಧರಣಿಪನ ಕಂಗಳ । ಲೊತ್ತಿದರು ಪನ್ನೀರನುಸುಳಿನ । ತತ್ತಳವನಾರೈದರೊಯ್ಯನೆತಾಲವೃಂತದಲಿ ॥ ಬಿತ್ತಿ ತಂಗಾಳಿಯನು ಶೋಕದ । ಹತ್ತಿಗೆಗೆ ಹರೆದೆಗೆದು ಮರವೆಯ । ಚಿತ್ತವನು ಚೇತರಿಸಿ ಮೆಲ್ಲನೆ ನುಡಿಸಿದನು ಮುನಿಪ ॥ ೧೦ ॥ ಏನನೆಂದವು

ಹಿಂದೆ ಧರ್ಮಜನಿ । ಧಾನವನು ಕೈಯೊಡನೆ ಮರೆವೈ । ಮಾನವಿಧಿ ಕೇಳ್ ಮರೆಯಲಾಗದು ನಮ್ಮ ಹೇಳಿಕೆಯ ॥ ಭಾನುಮತಿಯನು ತಿಳಿಹು ನಿನ್ನಯ । ಮಾನಿನಿಯ ಸಂತೈಸು ಸಂಸಾ । ರಾನುಗತಿ ತಾವಿದು ಚತುರ್ದಶಜಗದ ಜೀವರಿಗೆ ॥ ೧೧ ॥ ಬಹುವಿಪತ್ತಿನರಕಭಯವಿದು । ಬಹುದಲಾ ಸುವಿವೇಕಗತಿನಿ । ರ್ದಹಿಸದೇ ಶೋಕಾಗ್ನಿ ಧರ್ಮದ್ರುಮದ ಬೇರುಗಳ ॥ ಅಹಿತರೇ ಜನಿಸಿದರು ಸುತರೆನ । ಬಹುದೆ ದುರ್ಯೋಧನನೆ ಹಗೆ ನಿನ । ಗಿಹಪರದ ಸುಖಗತಿಗೆ ಸಾಧನ ಧರ್ಮಸುತನೆಂದ ॥ ೧೨ ॥ ಕೇಳು ಮುನಿಭಾಷಿತವ ನೃಪ ನೀ । ನಾಲಿಸುವುದಾತ್ಮಜರಿಗಿಲ್ಲಿಂ । ಮೇಲೆ ಸಲಿಲಾಂಜಳಿಗಳನು ವೈದಿಕವಿಧಾನದಲಿ॥ ಪಾಲಿಸುವುದಾಪಾಂಡುಸುತರ ಸ । ಮೇಳದಲಿ ಸೇರುವುದು ಚಿತ್ತಕೆ । ತಾಳದಿರು ರಾಜಸವಿಕಾರವನೆಂದನಾವಿದುರ ॥೧೩॥ ತಾಯೆ ಹದುಳಿಸು ದೇವಲೋಕದ । ಲಾಯದಲಿ ಸಲಿಸಾ ಕುಮಾರರ । ನಾಯುಷದಲಿಪಿ ಹಣೆಯಲೊರಸಿದೊಡಾರವಶವಿದಕೆ ॥ ರಾಯನಲಿ ಸೊಸೆಯರಿಗೆ ಮಿಕ್ಕಬು । ಜಾಯತಾಕ್ಷಿಯರಿಗೆ ವಿಶೋಕದ । ಬಾಯಿನವ ಕೊಡಿಸೆಂದನಾಮುನಿ ಸುಬಲನಂದನೆಗೆ ॥ ೧೪ ॥ ಧರಣಿಪತಿ ಹೊರವಂಟನಂತಃ । ಪುರವ ಬಿಸುಟರು ಭಾನುಮತಿಸಹಿ । ತರಸಿಯರು ಹೊರವಂಟರೇಕಾಂಬರದ ಬಿಡುಮುಡಿಯ ॥ ಕರದ ಬಸುರಿನ ಹೊಯ್ಲ ಕಜ್ಜಳ । ಪರಿಲುಳಿತನಯನಾಂಬುಗಳ ಕಾ । ತರಿತಕಮಲಾಕ್ಷಿಯರು ನೆರೆದರು ಕೋಟಿಸಂಖ್ಯೆಯಲಿ ॥ ೧೫ ॥ ವಣಿಜಸತಿಯರು ಶಿಲ್ಪಿಜನದುಪ । ವಣಿಜದಬಲಾಜನವಘಾಟದ । ಗಣಿಕೆಯರು ನಾನಾದಿಗಂತದ ರಾಜಪತ್ನಿಯರು ॥ ಹಿಣಿಲಕಬರಿಯ ಹೊಳೆವಮುಂದಲೆ । ಮಣಿಯ ಮುಕುರಮುಖಾಂಬುಜದ ಸರ । ಝಣಕು ಝಾಡಿಸೆ ಕೂಡೆ ನಡೆದುದು ಬೀದಿಬೀದಿಯಲಿ ॥ ೧೬ ॥ ಎಸಳುಗಂಗಳ ಬೆಳಗನಶ್ರು । ಪ್ರಸರತಡೆದುದು ಶೋಕಮಯಶಿಖಿ । ಮುಸುಡ ಕಾಂತಿಯ ಕುಡಿಗುದೊಸರುವಬಿಸಿಲಬೇಗೆಗಳ ॥ ಮಿಸುಪಲಾವಣ್ಯಾಂಬುವನು ಬ । ತ್ತಿಸಿದವಂಗುಲಿಯುಪಹತಿಯ ಸ್ತ್ರೀ । ಬಿಸಜಸೆಳೆದುದು ಕುಚದಚೆಲುವನು ಕೋಮಲಾಂಗಿಯರ ॥ ೧೭ ॥ ತಮ್ಮೊಳೇಕತ್ವದ ಸಖಿತ್ವದ । ಸೊಮ್ಮಿನಲಿ ಸುರಿವಶ್ರುಜಲವನು । ನಿರ್ಮಿಸಿದರೆನೆ ಕರ್ಪೂರದ ಮುತ್ತುಸೂಸಿದವು ॥ ನೆಮ್ಮಿದತಿಶಯಶೋಕವಹ್ನಿಯೊ । ಳೊಮ್ಮೆಗೆಯ ಕರಣಂಗಳಲಿ ನೃಪ । ಧರ್ಮ
[illegible]ರೆಳುತ ಹೊರವಂಟರು ಪುರಾಂತರವ ॥೧೮॥ ಉಡಿದು ಬಿದ್ದವು ಸೂಸಕವು ಬಿಗು । ಮಡಗಿ
[illegible] ಡನೊಡನೆ ಚೆಲ್ಲಿದವು ಮುತ್ತಿನ ಹಾರಚಯ ಹರಿದು॥ ಬಿಡುಮುಡಿಯ
[illegible]ನೆನೆ ಸೂಸಕದ ಮು । ತ್ತಡರಿ ಸುರಿದವು ನೆಲಕೆ ನೃಪವನಿತಾಕ
[illegible]ಂಕದ ಪೂರ್ವರೂಪಿನ । ಮೇಲೆ
[illegible]ಮು । ರಾಳಿಯಾರಿದನೆಲೆ
[illegible]ವರು ಹಸ್ತಿ
[illegible]ರನ ॥ ಅರ
[illegible]ಸರ ರಾಣಿ
[illegible]ವಿಧಜನವ
। ಸ್ಪಣಾಲಿ

ಧರಣಿಯನೆಂದು ಸುಯ್ದರು ಬೈದು ಕಮಲಜನ ॥ ೨೨ ॥ ಬಂದು ಧೃತರಾಷ್ಟ್ರಾವನೀಶನ । ಮುಂದೆ ನಿಂದರು ರಾಯಕಟಕವ । ಕೊಂದರಜನಿಯೊಳಗೆಲವನಭಿವರ್ಣಿಸಿದರರಸಂಗೆ ॥ ಸಂದುದೇ ಫಲವೆಮ್ಮ ಮಗನೇ । ನೆಂದನೈ ಹರಿಬದಲಿ ಹರುಷವ । ತಂದಿರೈ ರಾಯಂಗೆ ಲೇಸಾಯ್ತೆಂದನಂಧನೃಪ ॥ ೨೩ ॥ ಪತಿಕರಿಸಿದನು ನಮ್ಮನಹಿತ । ಸ್ಥಿತಿಯನೆಲ್ಲವ ತಿಳಿದನಮರಾ । ಪತಿಯ ಸತಿಯರ ಸೋಂಕಿನಲಿ ಸೇರಿದನು ನಿಮಿಷದಲಿ ॥ ಕ್ಷಿತಿಪನಂತ್ಯದೊಳಲ್ಲಿ ಶಸ್ತ್ರ । ಚ್ಯುತಿಯ ಮಾಡಿ ವಿರಾಗದಲಿ ಮನ । ಗತಿಗೆ ಸಾಸ್ತೆಂದೆವೆಂದರು ಗುರುಸುತಾದಿಗಳು ॥ ೨೪ ॥ ಲೇಸ ಮಾಡಿದಿರಿನ್ನು ನಿಮಗಿ । ನ್ನೈಸಲೇ ಕರ್ತವ್ಯವೆನೆ ಧರ । ಣೀಶನನು ಬೀಳ್ಕೊಂಡರವರಗಲಿದರು ತಮ್ಮೊಳಗೆ ॥ ವ್ಯಾಸಮುನಿಯಾಶ್ರಮದ ಗಂಗಾ । ದೇಶವನು ತದ್ದ್ವಾರಕಿಯ ಸಂ । ವೇಶಿಸಿದರೈ ಗುರುಜಕೃಪಕೃತವರ್ಮಕಾದಿಗಳು ॥ ೨೫ ॥ ತಿರುಗಿದರು ಬಳಿಕಿತ್ತಲೀಮೋ । ಹರದ ಕಾಂತಾಕೋಟಿ ಬಂದುದು । ಹರಳು ಕಲುಮುಳ್ಳೊತ್ತು ಗಾಲಿನ ದೂರತರಪಥವ ॥ ಉರಿಯಜಠರದ ಬಿಸಿಲ ಝಳದಲಿ । ಹುರಿದಕದಪುಗಳೆರಡುಕಡೆಯಲಿ । ಸುರಿವನಯನಾಂಬುಗಳ ರಾಜನಿತಂಬಿನೀನಿಕರ ॥ ೨೬ ॥ ಬಂದುದೀಗಜಪುರದ ನಾರೀ । ವೃಂದ ಧೃತರಾಷ್ಟ್ರಾವನೀಶನ । ಮುಂದೆ ವೇದವ್ಯಾಸಸಂಜಯವಿದುರಪೌರಜನ ॥ ಮುಂದ ಸಾಹಪರಂಗಧಾರುಣಿ । ಹೊದ್ದಕಲನುಪವನದ ನೆಳಲಲಿ । ನಿಂದುದಿವರಾಗಮನವನು ಕೇಳಿದನು ಯಮಸೂನು ॥ ೨೭ ॥ ಮುರಮಥನಸಾತ್ಯಕಿಯುಧಿಷ್ಠಿರ । ಧರಣಿಪತಿನರಭೀಮಮಾದ್ರೀ । ಯರುಗಳೈವರು ಸಾರಥಿಗಳು ಯುಯುತ್ಸುದಾರುಕರು ॥ ತೆರಳಿತೇಳಕ್ಷೋಹಿಣಿಯು ನೃಪ । ರರಸಿಯರು ದ್ರೌಪದಿಯರೋದನ । ಸರವ ಗಾನದ ಜಠರತಾಡನತಾಳಮೇಳದಲಿ ॥ ೨೮ ॥ ಇವರು ಬಂದರು ದೂರದಲಿ ಯಾ । ದವನ ಮತದಲಿ ನಿಂದರಾಚೆಯು । ಯುವತಿಜನ ಗಾಂಧಾರಿಕುಂತೀಭಾನುಮತಿಸಹಿತ ॥ ವಿವಿಧವಿಕೃತವಿಲಾಪನಯನೋ । ದ್ಭವನಯಸ್ಥಗಿತಾಂಶುಕೆಯರೆಂ । ದವನಿಯಲಿ ಕೆಡೆದೊರಲುತಿರ್ದರು ತಾರುಥಟ್ಟಿನಲಿ ॥ ೨೯ ॥ ಅರಸ ಕೇಳ್ ಧೃತರಾಷ್ಟ್ರಸಂಜಯ । ವರಮುನಿಪವಿದುರಾದಿಪರಿಜನ । ಪುರಜನಾವಳಿಯಿದ್ದುದುಪವನದೊಂದುಬಾಹೆಯಲಿ ॥ ನೆರೆದುದೀಚೆಯೊಳೊಂದೆಸೆಯೊಳುತ್ತರೆಸುಭದ್ರಾದೇವಿಮೊದಲಾದರಸಿಯರುಸಹಿತೊರಲುತಿರ್ದರು ದ್ರೌಪದಿಯುಸಹಿತ ॥ ೩೦ ॥ ಹರಿಸಹಿತ ಪಾಂಡವರದೊಂದೆಸೆಯಿರೆ ಚತುರ್ವಿಧ ವಾದುದೀಮೋಹರದೊಳಾಯ್ತೊಡೆಯಾಟ ವೇದವ್ಯಾಸವಿದುರರಿಗೆ ॥ ಧರಣಿಪನ ಕಾಣಿಸುವುದಂಧನನಿರುಪಮಿತಶೋಕಾನಳನ ಸಂಹರಿಸುವುದು ನಯವೆಂದು ವೇದವ್ಯಾಸಮುನಿ ನುಡಿದ ॥ ೩೧ ॥ ಇದಕೆ ಸಂಶಯವೇನು ಬೊಪ್ಪನ । ಪದಯುಗವ ಕಾಣಿಸುವುದೆಮ್ಮನು । ಹದುಳವಿಡುವುದು ಹಸ್ತಿನಾಪುರದರಸುತನ ನಮಗೆ ॥ ಒದೆದು ನೂಕಿದಹದನ ಮಕುಟಾ । ಗ್ರದಲಿ ಧರಿಸುವೆವೆಂದು ಬಿನ್ನೈ । ಸಿದುದು ಮಹೀಪತಿಗೆಂದು ಮುನಿಗರುಹಿದನು ಯಮಸೂನು ॥ ೩೨ ॥ ಲೇಸನಾಡಿದೆ ಮಗನೆ ಧರ್ಮದ ವಿಸಾಸಲಲ್ಲಾ ನಿನ್ನಮತಿ ಬಳಿ । ಕೈಸಲೇಯೆನುತಿವರು ಬಂದರು ಭೂಪತಿಯ ಹೊರೆಗೆ ॥ ಆಸುಯೋಧನ ನಿನಗೆ ಮಗನ । ಲ್ಲೀಸಮಂಜಸಧರ್ಮಜನೆ ಹಿಡಿ । ದೀಸುವುದು ಭವಜಲನಿಧಿಯನೆಂದಮಲಮುನಿ ನುಡಿದ ॥ ೩೩ ॥ ನೃಪನಕಾಣಿಸಿಕೊಂಬುದನಿಬರನುಪಚರಿಸುವುದು ನಿನ್ನ ಮಕ್ಕಳ । ಕೃಪಣತೆಯನಾರೈವರಲ್ಲವರೈವರುತ್ತಮರು ॥ ಉಪಹತಿಯ ನೆನೆಯದಿರು ದುರ್ಜನ । ರಪಕೃತಿಗೆ ಫಲವಾಯ್ತು ಧರ್ಮದ । ರಪಣವಿಹ ಪರಲೋಕಕೆ

ಲೆಧೃತರಾಷ್ಟ್ರ ಕೇಳೆಂದ ॥೩೪॥ ಹೈಹಸಾಧವು ನಿಮ್ಮಚಿತ್ತಕೆ । ಬೇಹಹದನೇ ಕಾರ್ಯಗತಿ ಸಂ । ದೇ
ಹವೇ ಪಾಂಡುವಿನ ಮಕ್ಕಳು ಮಕ್ಕಳವರೆನಗೆ ॥ ಕಾಹುರರು ಕಲ್ಮಷರು ಬಂಧು । ದ್ರೋಹಿಗಳುಗತ
ವಾಯ್ತು ನಿಷ್ಪ್ರ । ತ್ಯೂಹವಿನ್ನೇನವರಿಗೆಂದನು ಮುನಿಗೆ ಧೃತರಾಷ್ಟ್ರ ॥೩೫॥ ಖಳನ ಹೃದಯದ
ಕಾಳಕೂಟದ । ಗುಳಿಗೆಗಳನಿವರೆತ್ತಬಲ್ಲರು । ತಿಳುಹಿ ನುಡಿದೊಡಬಡಿಸಿದರು ನಾನಾಪ್ರಕಾರದಲಿ ॥
ಗಳಿಲನೀಚೆಗೆ ಬಂದು ಹದನನು । ನಳಿನನಾಭಂಗರುಹಿ ನಸುನಗುತೊಳಗೊಳಗೆ ಹರಿ ವಿಶ್ವಕರ್ಮನನೆ
ನೆದು ನೇಮಿಸಿದ ॥೩೬॥ ನೆನೆವಗಳಿಗೆಯೊಳಾತ ಕಟ್ಟು । ಕ್ಕಿನಲಿಸರ್ವಾವಯವ ತಾಸಂ । ಜನಿಸಿದನು
ಪ್ರತಿರೂಪವನು ಪವಮಾನನಂದನನ ॥ ದನುಜರಿಪುಸಹಿತಿವರು ಬಂದರು । ಮುನಿಯೊಡನೆಬಳಿಕಂಧ
ನೃಪತಿಗೆ । ವಿನಯದಲಿ ಪ್ರಯಿಕ್ಕಿದನು ಭಕ್ತಿಯಲಿ ಯಮಸೂನು ॥೩೭॥ ಬಾ ಮಗನೆ ಕುರುರಾಜ
ವಂಶಶಿ । ರೋಮಣಿಯೆ ನಿರ್ಧೂತರಾಜಸ । ತಾಮಸನೆ ಸತ್ಯೈಕನಿಧಿ ಬಾ ತಂದೆ ಬಾರೆನುತ ॥ ಭೂ
ಮಿಪನ ತೆಗೆದಪ್ಪಿಬಹಳ । ಪ್ರೇಮದಲಿ ಮುಂಡಾಡಿದನು ಕಲಿ । ಭೀಮನೋ ಬಾ ಮಗನೆ ಬಾರೈತನು
ಜ ಬಾರೆಂದ ॥೩೮॥ ಭೀಮನನು ಹಿಂದಿಕ್ಕಿ ಲೋಹದಭೀಮನನು ಮುಂದಿರಿಸಲಾಸು । ಪ್ರೇಮನಪ್ಪಿದ
ನೇನನೆಂಬೆನು ಮೋಹವನುಮಗನ ॥ ಅಮಹಾವಜ್ರಾಯುಧಪ್ರೋ । ದ್ದಾಮದಾಯಸಭೀಮತನ ನಿ।
ರ್ನಾಮವೆನೆ ನುಗ್ಗಾಗಿಬಿದ್ದುದು ನೃಪನ ತೆಕ್ಕೆಯಲಿ ॥೩೯॥ ಮಗನೆ ಹಾಹಾ ಭೀಮನೊಂದೈ। ಮಗನೆ
ಕೆಟ್ಟೆನು ಮಗನೆ ಮಗನೆಂ।ದೊಗುಮಿಗೆಯು ಶೋಕದಲಿ ನೆರೆಮರುಗಿದನು ಧೃತರಾಷ್ಟ್ರ॥ದುಗುಡಬೇ
ಡೊಮ್ಮಿಂಗೆನಿನ್ನಯ । ಮಗನುಳಿದ ನಿಂಮಧಿಕರೋಷದ । ಹಗರಣದ ಹಗೆ ಹೋಯಿತೆಂದನು ನಗುತ
ಮುರವೈರಿ ॥೪೦॥ ತ್ರಾಣವಿಮ್ಮಡಿಸಿತ್ತು ಕೋಪದಕೇಣವೆಚ್ಚರಿಸಿದೊಡೆ ನೃಪನಾ । ತ್ರಾಣದಲಿ ತನು
ಬಿರಿಯೆ ನುಗ್ಗಾಯ್ತಾಯಸಪ್ರತಿಮೆ ॥ ಮಾಣಭಯವನು ಭೀಮಭೂಪನ । ಕಾಣು ಹೋಗೆನೆ ನಡು
ಗಿ ಭುವನ । ಪ್ರಾಣನಾತ್ಮಜ ಬಿದ್ದನಾಧೃತರಾಷ್ಟ್ರನಂಘ್ರಿಯಲಿ ॥೪೧॥ ಪವನಸುತನೇ ಬಾರೆನುತ ತ।
ಕ್ಕವಿಸುವನು ಬಳಿಕೆರಗಿದೊಡೆ ವಾ । ಸವನ ಸುತ ಬಾ ಕಂದಬಾರೆಂದಪ್ಪಿದನು ಮಗನ ॥ ತವಕದಿಂದೆ
ರಗಿದೊಡೆ ಮಾದ್ರಿಯ । ಜವಳಿಮಕ್ಕಳನಪ್ಪಿದನು ಕೌ। ರವಕುಲಾಗ್ರಣಿಗಳಿರ ಕುಳ್ಳಿರಿಯೆಂದನಂಧನೃಪ
॥೪೨॥ ಕುರುಮಹೀಪತಿ ನಮ್ಮ ಪೂರ್ವದ । ಲರಸು ತತ್ಸಂತಾನಪಾರಂ । ಪರೆಯನಳಿವರೆ ಕೆಲಬರಾ
ವರು ಹೋದವನ್ನಿವರು ॥ ಭರತಕುಲವನು ಹೊರೆದು ಮಿಗೆ ವಿ । ಸ್ತರಿಸು ಮಗನೆ ಸುಯೋಧನಾದ್ಯ
ರ । ದುರುಳತನದವಗುಣವನೆಮ್ಮನು ನೋಡಿ ಮರೆಯೆಂದ ॥೪೩॥ ಅವರೊಳವಗುಣವೇ ನಿರಂತರ ।
ಭವದ ಕಿಲ್ಬಿಷಕರ್ಮಪಾಕ । ಪ್ರಪರವೇ ದುರ್ಯೋಧನವ್ಯಪದೇಶಮಾತ್ರದಲಿ॥ ಎಮಗೆ ರಚಿಸಿತು ರಾಜ
ವಿಭ್ರಂ । ಶವನು ತತ್ಸುಕೃತೋದಯಾಂಶ । ಪ್ರವರ ತಿರಿಗಿಸಿತೆಂದು ನಯದಲಿ ಧರ್ಮಸುತ ನುಡಿದ
॥೪೪॥ ಸಾಕದಂತಿರಲಬಲೆಯರೊಳು । ದ್ರೇಕಿ ನಿಮ್ಮಯ ಹಿರಿಯತಾಯಿ । ದ್ರೇಕವನು ಪರಿಹರಿಸು
ಶೋಕಕ್ರೋಧದುಪಟಳಕೆ ॥ ಆಕೆ ಸೈರಿಸಲರಿಯಳರುಮಿನೊ । ಳಾಕೆವಾಳರು ತಿಳುಹಿ ತಮ್ಮನು ।
ಶಾಖೆಯನು ಕಾಣಿಸುವುದೆಂದನು ವ್ಯಾಸವಿದುರರಿಗೆ ॥೪೫॥ ವಿದುರವೇದವ್ಯಾಸಮುನಿಯೀ । ಹದನನ
ರುಹುವೆವೆಂದು ರಾಯನ । ಸುದತಿಯಲ್ಲಿಗೆ ಬಂದು ನುಡಿದರು ಮಧುರವಚನದಲಿ ॥ ಕದಪನಂಗೈಗಿ
ತ್ತು ತಲೆಗು । ತ್ತಿದಳು ನಯನೋದಕದ ಪರಿವಾ । ಹದಲಿ ನನೆದಳು ಮಹಿಳೆಯಿದ್ದಳು ಬಹಳಮೌ

ನದಲಿ ॥೪೬॥ ದುಗುಡವನು ಬಿಡು ಮೋಹಬಂಧವು । ತಗದ ಚಿತ್ತದ ಕದಡು ಹಣಿಯಲು । ಮಗಳೆ
ಮರುಳಾದವು ವಿಲಾಸದವಿಹಿತವಿಹಪರಕೆ ॥ ಅಗಡುಮಕ್ಕಳು ತಾಯ್ಗೆ ತಪ್ಪದು । ಬೆಗಡು ಬೇಗೆ ಸು
ಯೋಧನಾದ್ಯರ । ವಿಗಡತನವನು ನೆನೆದು ನೀನೋಡೆಂದನಾಮುನಿಪ ॥೪೭॥ ಮುನಿಯದಿರು ಗಾಂ
ಧಾರಿ ದಿಟವನಿ । ನ್ನನುಜನಿಕ್ಕಿದಸಾರಿ ನಿನ್ನಯ। ತನುಜರನು ನಿನ್ನಖಿಳಮಿತ್ರಜ್ಞಾತಿಬಾಂಧವರ ॥ ಮ
ನುಜಪತಿಗಳನಂತವನು ರಿಪು । ಜನಪಶರವನ್ಹಿಯಲಿ ಬೇಳಿದು । ದಿನಿತು ಶೋಕೋದ್ರೇಕ ನಿನಗೇಕೆಂದ
ನಾಮುನಿಪ ॥೪೮॥ ಅಳಿದವರಿಗಳಲುವುದು ಸಲ್ಲದು । ನಿಲಲಿಸಾಕದು ನಿಮ್ಮ ಚಿತ್ತದ । ನೆಲೆಯು ಬ
ಯಕೆಯು ಬಯಸುವುದು ಕರ್ತವ್ಯವೇ ನಿನಗೆ ॥ ಕಳವಳಿಪಕುಂತೀಸುತರ ಕಂ । ಗಳಿಗನುಗ್ರಹವಾಗುನಿ
ರ್ಜರ । ರೊಳಗೆ ಮಕ್ಕಳಮಾನ್ಯರನು ಮಾಡೆಂದನಾಮುನಿಪ ॥೪೯॥ ನಂಬಿಸುವುದ್ಯೆವರನು ಕಾಣಿಸು ।
ಕೊಂಬುದನಿಬರ ಕರಣವೃತ್ತಿಗೆ । ತುಂಬುವುದು ತನಿಹರುಷವನು ಸೌಹಾರ್ದಶೋಭೆಯಲಿ ॥ ಲಂಬಿ
ಸಲಿ ಕೌರವರ ನಾಕನಿ । ತಂಬಿನಿಯರಳಕವನು ಮಗಗೆ ಪಿ । ಡಂಬಿಸುವಖಳರಭಿಮತಕೆ ಮನವೀಯಬೇ
ಡೆಂವ ॥೫೦॥ ವಿಷವನಿಕ್ಕಿದರಂದು ಮಡುವಿನ । ಲಸಬಡಿದುಹಾಯ್ಕಿದರು ಅರಗಿನ । ವಸತಿಯಲಿ ಬೇ
ಳಿದರು ಹೇಳುವುದೇನು ದುರ್ಜನವ ॥ ವಸುಮತೀಶನವಲ್ಲಭೆಯನೆಳೆ । ದುಸುರತೆಗೆಬಗೆಮಾಡಿದಲ್ಲದೆ
ವಸನವನು ಸುಲಿಸಿದರಿದಾವುದು ಧರ್ಮಹೇಳೆಂದ॥೫೧॥ ರಾಯನನು ಕಾಣಿಸಿದಿರೇ ಪ್ರ ।ಜ್ಞಾಯತಾಕ್ಷ
ನ ತಿಳುಹಿ ಬಂದಿರೆ । ತಾಯಿಗಳು ತಾವ್ಯೆಸಲೇ ಬಹುದುಂಟೆ ನಮಗಿವ್ನು ॥ ಸಾಯೆ ಸಾವೆನು ಕುರು
ಕುಲಾಗ್ರಣಿ । ನೋಯೆ ನೋವೆನು ತನಗೆ ದುರಭಿ । ಪ್ರಾಯವುಂಟೇ ಮಾವಯೊಂದಳು ಮುನಿಗೆ
ಗಾಂಧಾರಿ ॥೫೨॥ ನಿನ್ನವರು ಮಾಡಿದವಿಘಾತಿಗ । ಳೆನ್ನಹವಣೇ ಬಣ್ಣಿಸಲು ತಾ । ತನ್ನದುಷ್ಕೃ
ತ ಫಲವಳಳಿದನು ನಿನ್ನ ಮಗನಿಂದು । ಮನ್ನಿಸೌ ಯಮತನುಜನನು ಕೇಳನ್ಯರೇ ಶಿವಶಿವಮಹಾದೇ।
ವಿನ್ನು ಖತಿಯನು ಬಿಟ್ಟು ರಕ್ಷಿಸು ಪಾಂಡುನಂದನರ ॥೫೩॥ ಐಸಲೇ ಗುಣಮಯವಚೋವಿ । ನ್ಯಾ
ಸವನು ಸಾಕೇನು ಮರಳಿದು । ಭೂಸುರಾಗ್ರಣಿ ಬಂದು ನುಡಿದನು ಧರ್ಮನಂದನನ ॥ ರೋಷವಹ್ನಿ
ಯನುಪಶಮಾಂಬುವಿ । ಲಾಸದಲಿ ನಿಲಿಸೇಳು ನೃಪನ ಮ । ಹಾಸತಿಯ ಖತಿ ಹಿರಿದು ಯೆನಗೊಳ
ಗಾಗಿ ಭಯವೆಂದ ॥ ೫೪ ॥ ಎಂದು ಗಾಂಧಾರಿಯನು ನಾನಾ । ಚಂದದಲಿ ಮುನಿ ತಿಳುಹಿ ಮರಳಿ
ಮು । ಕುಂದವಿದುರಯುಧಿಷ್ಠಿರನಿಲಜಪಾರ್ಥರಿದ್ದೆಡೆಗೆ ॥ ಬಂದು ಹೇಳಿದ ಸತಿಯಿರವ ಯಮ ।ನಂ
ದನನ ಮೃದುವಾವವಾಕ್ಸುಧೆ । ಯಿಂದ ಸಂತೈಸುವಳು ಬನ್ನಿಯೆನುತ್ತ ಕೊಂಡೊಯ್ದ ॥೫೫॥ ಹರಿ
ವಿದುರಸಂಜಯರು ಪಾರಾ । ಶರಮಹೀಪತಿಭೀಮಮಾದ್ರೇ । ಯರು ಧನಂಜಯಸಹಿತ ಬಂದರು ಬ
ಹಳ ವಿನಯದಲಿ ॥ ಚರಣದಲಿ ಮೈಯಿಕ್ಕಿದೊಡೆ ನೃಪ । ವರನ ನೆಗಹಿದಲನಿಲಸುತಸಿತ । ತುರಗವಹ
ದ್ರೀಸುತರು ಪವಕೆರಗಿದರು ಭೀತಿಯಲಿ ॥ ೫೬ ॥ ಏಳಿರೈ ಸಾಕೇ ಮಕ್ಕಳಿ । ರೇಳಿರೈ ದೇಸಿಗರು ನಾ
ವ್ಹು । ಪಾಲಕರು ನೀವೀಸುತವ್ಮಲಿ ಭೀತಿನಿಮಗೇಕೆ ॥ ಬಾಲೆಯರು ನಾವಂಥಕರು ನಿ । ಮ್ಮಾಳಿಕೆ
ಯೊಳೇ ನಿಮ್ಮ ಹಂತಿಯು । ಕೂಳಿನಲಿ ಬೆಂದೊಡೆಲ ಸೂರೆವವಳೆಂದಳಬುಜಾಕ್ಷಿ ॥ ೫೭ ॥ ತಾಯೆ
ಖತಿ ಬೇಡಿನ್ನು ಧರಣಿಗೆ । ರಾಯನೇ ಧೃತರಾಷ್ಟ್ರನಾತನ । ಬಾಯದಂಬುಲಬೀಳ್ವೆಡೆಯ ಬಲದಿಂ
ದ ಬದುಕುವೆವು ॥ ತಾಯೆ ನೀವಿಂದೆಮಗೆ ಕುಂತಿಯ । ತಾಯತನುವಂತಿರಲಿ ಕರುಣಿಸಿ । ಕಾಯಬೇ

ಕೆಂಪರಸ ಪುಗುಳೆರಗಿದನು ಚರಣದಲಿ ॥ ೪೮ ॥ ಧರ್ಮನಿಮ್ಮದು ಮಗನೆ ಬರಿಯಲಿ। ಕರ್ಮ ನಮ್ಮ
ದುಯೋಧನ ಮಕ್ಕಳು । ದುರ್ಮತಿಗಳನ್ಯಾಯಶೀಲರಸಾಧುಸಂಗತರು ॥ ನಿರ್ಮಳರು ನೀವೈವರಾಹವ।
ಕರ್ಮಕುಶಲರು ಲೋಕಮೆಚ್ಚಲು । ಧರ್ಮ ನಿಮಗೆಂದೆನುತ ತಲೆಗುತ್ತಿದಳು ಗಾಂಧಾರಿ ॥ ೪೯ ॥
ಧರ್ಮವಾಗಲಿ ಮೇಣಾರಣದಲಿ । ಧರ್ಮವಾಗಲಿ ನೀತಿಯಲಿ ಪರ । ಧರ್ಮಘಾತಕವಾಯ್ತಲೇ
ಸಾಕಿನ್ನು ಫಲವೇನು ॥ ನಿರ್ಮಳಾಂತಃಕರಣಕೃತಪರಿ । ಕರ್ಮವಿಲಸಿತೆ ತಾಯೆ ಸೈರಿಸು । ನಿರ್ಮ
ಮರೆ ಬೇಡೆಂದು ಮೈಯಿಕ್ಕಿದನು ಕಲಿಭೀಮ ॥ ೫೦ ॥ ಏಳು ತಮ್ಮ ವೃಥಾವಿಡಂಬನ । ಧಾಳಿ
ಯಾಟವಿವೇಕ ಸೈರಿಸ । ಹೇಳಿದ್ದೈ ಸೈರಿಸಿದೆ ಮುನಿದೊಡೆ ನಿಮಗೆ ಕೇಡಹುದೆ ॥ ಕಾಳಗವಕೃತಸಮ
ಯಸತ್ಯವ । ಪಾಲಿಸಿದವರು ನೀವಲ್ಲೈ ದಿಟ । ಖೂಳರಾವೈಸಲೆಯೆನುತ ಗಜರಿದಳು ಗಾಂಧಾರಿ॥ ೫೧॥
ಕೂರಿಸುವರೆ ದುಷ್ಕೀರ್ತಿ ನಮ್ಮಲಿ । ಹೋಗೆಯಾಯಿತು ನಾಭಿಯಿಂಕೆಳ । ಗೆರಗುವುದು ಗದೆಯಿಂದ
ಸಲ್ಲದು ಶಸ್ತ್ರವಿದ್ಯೆಯಲಿ ॥ ಅರಿಕೆಯಿಂದನ್ಯಾಯವಿದುಜಗ । ವರಿಯೆ ನಮ್ಮದು ತಾಯೆ ನೀ ಮುನ ।
ನುರಿಯದವಧರಿಸುವೊಡೆ ಬಿನ್ನಹವೆಂದನಾಭೀಮ ॥ ೫೨ ॥ ಅರಗಿನರಮನೆ ಕೊಂಡವೆಮ್ಮ ।
ವರುಷವಿಂತ್ಯಗಳಾಸುಯೋಧನ । ಪರಮಯುಜವಾನನು ಜಯಾಧ್ವರವಿಘ್ನಯಪೂರ್ವನನು ॥ ಕುರು
ನೃಪತಿಯನುಭವಿಸಿದನು ಸ । ಚ್ಚರಿತವೇನನ್ಯಾಯಪಥವೇ । ಧುರದೊಳೆಮಗನ್ಯಾಯವೈಸಲೆ ದೈವ
ಕೃತವೆಂದ ॥ ೫೩ ॥ ಕಪಟದಲಿ ಜೂಜಾಡಿ ರಾಜ್ಯವ । ನಪಹರಿಸಿದೊಡೆ ಧರ್ಮ ನಿಮ್ಮದು । ಕೃಪ
ಣತೆಯನಾನೇನ ಹೇಳುವೆನಾಸುಯೋಧನನ ॥ ದ್ರುಪದಪುತ್ರಿಯ ಗಾಢಗರುವಿಕೆ । ಗುಪತಿಶಿಯ ಮಾ
ಡುವುದು ಧರ್ಮದ । ವಿಪುಳಪಥ ನಿಮ್ಮದು ಮಹಾಧರ್ಮಜ್ಞರಹಿರೆಂದ ॥ ೫೪ ॥ ಲಲನೆ ರುತು
ಮತಿಯೆಂದೊಡೆಯು ಸಭೆ । ಗೆಳೆದುತಂದವರಧಿಕಸಜ್ಜನ । ರಳಿಕುಲಾಳಕಿಯುಟ್ಟ ಸೀರೆಯನೂ
ರುಮಧ್ಯದಲಿ ॥ ಸುಲಿವವರು ಧಾರ್ಮಿಕರು ನಾವೇ । ಖಳರು ನೀವೇ ಸುಜನರೆಮ್ಮ । ಸ್ಖಲಿತವನು
ನೀವಿಂದು ಸೈರಿಸಿ ತಾಯೆ ನಮಗೆಂದ ॥ ೫೫ ॥ ಕದನವಿಜಯದ ಬಂಗಿ ತಲೆಗೇ । ರಿದುದು ಮೋ
ಲಂಕದೊಳಗೊಡಹು । ಟ್ಟಿದನ ನೆತ್ತರಗುಡುಹಿ ನಿನ್ನೊಳಗೆಮಗೆ ಮಾತೇನು ॥ ಇದಿರಲಿರದಿರು
ಸಾಕು ಕರೆ ಧ । ರ್ಮದ ವಿಡಂಬದ ಧರ್ಮಪುತ್ರನ । ಹದನ ಕೇಳುವೆನೆಂದು ಕಳವಳಿಸಿದಳು ಗಾಂ
ಧಾರಿ ॥ ೫೬ ॥ ಧರಣಿಪತಿ ಕೇಳ್ಸುಬಲಸುತೆ ನಿ । ಷ್ಠುರವ ನುಡಿಯಲು ನಡುಗಿ ಭೂಪತಿ । ಕರವ
ಮುಗಿದನು ವಿನಯಭರದಲಿ ಬಾಗಿ ಭೀತಿಯಲಿ॥ ಕರುಣಿಸೌ ಗಾಂಧಾರಿ ನಿರ್ಮಳೆ। ಕುರುಕುಲಾಗ್ರಣಿ
ಜನನಿ ಕೋಪ । ಸ್ಫುರಣದಲಿ ಶಪಿಸೆನಗೆ ಶಾಪಕ್ಕರುಹ ತಾನೆಂದ ॥೫೭॥ ಶಾಪವನು ನೀ ಹೆಸರುಗೌ
ಸ । ರ್ವಾಪರಾಧಿಗಳಾವು ನಿಮ್ಮಯ।ಕೋಪ ತಿಳಿಯಲಿ ತಾಯೆ ಫಲಿಸಲಿ ಬಂಧುವಧೆ ನಮಗೆ॥ ನೀ ಪತಿ
ವ್ರತೆ ನಿನ್ನ ಖತಿ ಜೀ । ವಾಪಹಾರವು ತನಗೆ ನಿಮ್ಮನು । ತಾಪವಡಗಲಿ ಯೆನ್ನನುಳುಹೆಂದೆರಗಿದನು
ಪದಕೆ ॥೫೮॥ ನೆನೆದುದಂತಃಕರಣ ಕರುಣಾ । ವಿನುತರಸದಲಿ ಖತಿಯು ಝಳಝೋಂ । ಮಿನಲಿ ಜರಿ
ದುದು ಜಾರಿತಗ್ಗದಪುತ್ರಶತಶೋಕ॥ಜನಪ ಕೇಳ್ಕೆ ರಾಜಪದ ಸಂ। ಜನಿತತಾಮಸಬೀಜಶೇಷದ । ವನಜ
ಮುಖಿ ನೋಡಿದಳು ನಖಪಙ್ಕ್ತಿಗಳನವನಿಪನ ॥೫೯॥ ಉರಿದವರಸನ ಕನಿಕರದ ಹೊಗೆ।ಪೆರಸಿ ಕೌರಿಡ
ಲೋಡಿ ಹೊಕ್ಕರು । ನರವೃಕೋದರರಸುರರಿಪು ವಿನ ಪಶ್ಚಿಮಾಂಗದಲಿ ॥ ಹರಿಯಭಯಕರವೆತ್ತಿ ಯ

ಮಜಾ । ದ್ಯರನು ಸಂತೈಸಿದನು ರೋಷ । ಸ್ಫುರಣವಡಗಿತು ಸುಬಲಸುತೆ ನೀನಂಜಬೇಡೆಂದ ॥೨೦॥
ಕೃತಕಭೀಮನ ಕೊಂದು ಮುಳುಗಿತು । ಕ್ಷಿತಿಪತಿಯ ಕೋಪಾಗ್ನಿಯಾತನ । ಸತಿಯ ಖತಿ ಮುಗ್ಗಿತು
ಮಹೀಶನ ನಖದಕಾಂತಿಯಲಿ ॥ ಜಿತವಿರೋಧವ್ಯಾಪ್ತಿ ಬಹಳ । ವ್ಯತಿಕರದೊಳಾಯ್ತೆಂದು ಲಕ್ಷ್ಮೀ ।
ಪತಿ ನರೇಂದ್ರನ ಸಂತವಿಟ್ಟನು ಸಾರವಚನದಲಿ ॥ ೨೧॥ ಲೇಸುಮಾಡಿದೆ ಮಗಳೆ ಯಮಸುತ । ನೀಸ
ಸೈರಿಸಲಾಪನೇ ನಿನ । ಗೇಸ ತಿಳುಹಲು ಕಡೆಗೆ ತಾಮಸಬುದ್ಧಿ ಮಿಗಿಲಾಯ್ತು ॥ ಆಸುಯೋಧನ ನಿನ
ಗೆ ಮಗನೆಂ । ಬಾಸೆ ಬಿಡದಾದುದೆ ಸುಧರ್ಮದ । ವಾಸಿಗೋಸುಗ ನೀಗಿದೆಯಲೇ ಯೆಂದನಾಮುನಿ
ಪ ॥೨೨॥ ನಿನ್ನವರು ಮಾಡಿದವಿಘಾತಿಗ । ಳೆನ್ನಹವಣೇ ವರ್ಣಿಸಲು ಮಿಗೆ । ತನ್ನದುಷ್ಕೃತ ತನಗೆ
ಫಲಿಸಿತು ಹಲವುಮಾತೇನು ॥ ನಿನ್ನಮನಸಿನ ಗಸಣಿಯನು ಮಾಡಿನ್ನು ಲೇಸನು ಮೆರೆದು ಗುಣದಲಿ।
ಮನ್ನಿಸಾ ಯಮಸುತನನೆನಲಿಂತೆಂದಳಾಕಾಂತೆ॥೨೩॥ ಭೀತಿಬೇಡಲೆ ಮಕ್ಕಳಿರ ನಿ। ರ್ಧೂತಧರ್ಮಸ್ಥಿತಿ
ಗಳನ್ವಯ । ಘಾತಕರು ತಮ್ಮಿಂದ ತಾವಳಿದರು ರಣಾಗ್ರದಲಿ ॥ ಖ್ಯಾತಿಯಲಿ ನೀವಿನ್ನು ಪಾಲಿಸಿ ।
ಭೂತಳವ ನೆರೆಕಳಿವ ಬಂಧು । ವ್ರಾತಕುದಕವನೀವುದೆಂದಳು ನೃಪಗೆ ಗಾಂಧಾರಿ ॥೨೪॥ ಅನುನಯ
ವ ರಚಿಸಿದಳು ಕೌರವಜನನಿ ಲೇಸಾಯ್ತೆನುತ ಬಂದರು । ವಿನಯದಲಿ ಮೈಯಿಕ್ಕಿದರು ನಿಜಮಾತೆ
ಯಂಘ್ರಿಯಲಿ ॥ ನೆನೆದವಕ್ಷಿಪಯಃಪ್ರವಾಹದೊ । ಳನಿಬರನು ತೆಗೆದಪ್ಪಿ ಕುಂತೀ। ವನಿತೆ ಸಂತೈಸಿದಳು
ನಯದಲಿ ತನ್ನನಂದನರ ॥೨೫॥ ಏಳ ಧರ್ಮಜ ಪುತ್ರ ಶೋಕ।ವ್ಯಾಳವಿಷಮೂರ್ಛಿತೆಯಲಾ ಪಾಂ ।
ಚಾಲಸುತೆಯನು ತಿಳುಹಿ ಕಾಣಿಸು ಸುಬಲನಂದನೆಯ॥ಬಾಲೆಯರನಾಭಾನುಮತಿಯ ಚ। ಡಾಳದುಃಖ
ವನಪಹರಿಸು ಪರಿ । ತಾಳಬೇಡನೆ ಬಂದರೈವರು ದ್ರೌಪದಿಯಹೊರೆಗೆ ॥೨೬॥ ಕರೆದುತಂದರು ವಿಗ
ತಲೋಚನ । ನರಸಿಯನು ಕಾಣಿಸಿದರತ್ತೆಯ।ಚರಣದಲಿ ಹೊರಳಿದೊಡೆ ಹಿಡಿದೆತ್ತಿದಳುಗಾಂಧಾರಿ ॥
ಮರುಳುಮಗಳೆ ಕುಮಾರವರ್ಗದ । ಹರಣ ಸೊಸೆಯತ್ತೆಯರಿಗೊಂದೇ । ಪರಿ ವೃಥಾವ್ಯಥೆಯೇಕೆ
ನುತ ಸಂತೈಸಿದಳು ಸೊಸೆಯ ॥೨೭॥ ಸರಿಯೆ ತಾ ಪುತ್ರಶೋಕ ನಮ್ಮ । ಬ್ಬರಿಗೆ ನಮ್ಮೊಳು ಬೆರಸಿ
ವೈರೋ । ತ್ತರವಿಸಂಸ್ಮೃತಿರಣವಿಧಾನವನವ್ಮೊಳಗೆ ರಚಿಸಿ ॥ ಎರಡು ಬಲದಲಿ ಸಕಲಭೂಮೀ । ಶ್ವ
ರರ ಚಾತುರ್ಬಲವನುಪಸಂ । ಹರಿಸಿದಾತನು ತಾನೆ ಗದುಗಿನವೀರನಾರಯಣ ॥ ॥೨೮॥

ಅಂತು ಸಂಧಿ ೧೧ಕ್ಕಂ ಪದ ೪೧೧ಕ್ಕಂ ಮಂಗಳಮಸ್ತು.

ಹನ್ನೆರಡನೆಯ ಸಂಧಿ.

**॥ಸೂಚನೆ॥ ರಣವ ಶೋಧಿಸಲೆಂದು ಕಣನಲಿ । ಹೆಣನ ತುಳಿತುಳಿಯರಸಿ ಕುರು ಧಾ । ರಿಣಿಯುವತಿಯು
ನು ಕಂಡು ಮಿಗೆ ಹೊರಳಿದಳು ಗಾಂಧಾರಿ ॥**

॥ಪದ॥ ಕೇಳು ಜನಮೇಜಯಧರಿತ್ರೀ।ಪಾಲ ಕೃಷ್ಣನ ಕರೆದುನಯವಲಿ।ಲೋಲಲೋಚನೆ ನುಡಿ

ದಳೆಂತಸ್ಸಾಪತಿಖಿಜಿಡಿಯೆ ॥ ಹೇಳು ತಂದೆ ಮುಕುಂದ ಕದನ। ವ್ಯಾಳವಿಷದಿಂ ಬಿದ್ದ ಧರಣೀ। ಪಾಲವರ್ಗವ ತೋರೆನೆಂದಳು ಹರಿಗೆ ಗಾಂಧಾರಿ ॥ ೧ ॥ ನಿನ್ನಲೀಲೆಯು ಬೆಳೆಸಿರಿಯಸಂ। ಪನ್ನಮಾಯೆಯರಚನೆಯದುನಿ। ರ್ಭಿನ್ನಭಾರತಬಹಳರಚಿತಾಕ್ಷೌಹಿಣೀಬಲದ॥ ನಿನ್ನೊಡನೆ ಹಗೆ ಬೆಳೆದಶೌರ್ಯವಿ। ಪನ್ನರನು ತೋರೆನೆ ಜನಾರ್ದನ। ವನ್ನುಸೆಂದಳು ನಯನಜಲವನು ಮಿಡಿದು ಗಾಂಧಾರಿ ॥ ೨ ॥ ತಾಯೆ ಬಾ ಗಾಂಧಾರಿ ಮನದಲಿ। ನೋಯದಿರು ಪೌರಾಣಜನ್ಮದ। ದಾಯಭಾಗದ ಭೋಗಭಂಗಿ ಸಲಳಲಕಲೇಕಿನ್ನು ॥ ಸಾಯಲಾಗದೆ ಸುಭಟರಸುಗಳು। ಬೀಯವೇ ಬ್ರಹ್ಮಾದಿಗಳಿಗಿದು। ವಾಯಲೀಸಂಸಾರವೆಂದನು ನಗುತ ಮುರವೈರಿ ॥ ೩ ॥ ಎಂದು ಕೈಗೊಟ್ಟಬಲೆಯನು ಹರಿ। ತಂದನಾಸಂಗ್ರಾಮಭೂಮಿಗೆ। ಹಿಂದೆಬರಲಷ್ಟಾದಶಾಕ್ಷೌಹಿಣಿಯನಾರಿಯರು ॥ ಮುಂದೆ ಹೆಣದಿನಿಹಿಗಳು ಖಗಮೃಗ। ವೃಂದಚಲ್ಲಿತು ಭೂತಘಾತನಿ।ವೃಂದ ತೆರಳಿತು ಹೊಕ್ಕರಿವರದ್ಭುತರಣಾಂಗಣವ ॥ ೪ ॥ ಸೂಸಿತ ಬಲಾವೃಂದ ಕೆದರಿದ।ಕೇಶಪಾಶದ ತೆಳುವಸುರನಿ।ಟ್ಟಾಸುರಿನ ಹೊಯ್ಲುಗಳ ಲೋಚನವಾರಿಧಾರೆಗಳ॥ ಆಸುರಾತೋದನದಶೋಕ।ಕ್ಲೇಶಬಹಳದ ಬಾಲೆಯರು ಪ್ರಾ। ಣೇಶ ಮೈದೋರೆನುತ ಹೊಕ್ಕರಸಿದರು ಕಳನೊಳಗೆ ॥ ೫ ॥ ಹರಿವರಗಲಕೆ ನಾರಿಯರು ಕುರು। ಧರಣಿಯಲಿ ತಮತಮ್ಮ ಪತಿಗಳ। ಕರಿಗಳಲಿ ತುರಗದಲಿ ರಥದಲಿ ಕಂಡರಲ್ಲಲ್ಲಿ ॥ ಶಿರವ ಮುಂಡಾಡಿದರು ಹೆಣನಲಿ। ಹೊರಳಿದರು ವಿವಿಧಪ್ರಳಾಪದ ಪರಿತವವನೆಂತರಿದರೋ ವಣ್ಣಿಸುವೊಡರಿದೆಂದ ॥೬॥ ನಡೆದಳಾಗಾಂಧಾರಿ ಶೋಕದ। ಕಡಲೊಳೇಳು।ತ ಮುಳಿಗಿದಂಘ್ರಿಯು। ತೊಡಹುಕರುಣಾಂಬುವಿನ ಹೊನಲಿನ ಜಾನುಜಂಘೆಯಲಿ ॥ ಅಡಗಿನಲಿ ಕಾಲೂರಿ ಸಿಲುಕಿದ। ರೊಡನೆ ಹರಿ ನೆಗಹುವನು ನೆರವಿನ। ತೊಡಕ ಬಿಡಿಸುತ ಪೋಪಳಂಗನೆ ಹೆಣನ ಮಧ್ಯದಲಿ ॥ ೭ ॥ ಇತ್ತ ನೋಡೈ ದೇವಕೀಸುತ। ಮತ್ತಗಜಕಂದದಲಿ ಭಗ। ದತ್ತನನು ಕಂಡಾತ ನರಸಿಯ ರೈದೆ ಮೊಗನೆಗಹಿ ॥ ಸುತ್ತಿ ಬರುತಿದೆ ಭಾರಿದಂತಿಯು। ಹತ್ತಲರಿಯದೆ ನೂರು ಮಡಿಶೋ। ಕೋತ್ತರದಲಿದೆ ಶಿವಯನುತ ಮರುಗಿದಳು ಗಾಂಧಾರಿ ॥ ೮ ॥ ದೇವ ನೋಡಾ ಶೋಕವಹ್ನಿಯ। ಡಾವರವ ಕಾಂಭೋಜರರಸಿಯ। ರಾವನೋಂಪಿಯನೋಂತರೋ ಶಿವಶಿವಮಹಾದೇವ॥ ಆವನಾತನು ನಿಮ್ಮವರುಗಳ। ಮಾವನೈ ಪಾಂಚಾಲ ಸತಿಯನು। ಜೀವದಲಿ ಜಾರಿದರು ರಮಣರ ಮೇಲೆ ಶಲೆ ಹೊರಳಿ ॥ ೯ ॥ ಅದೆವಿರಾಟನ ಸತಿಯರೀಚೆಯ। ಲಿದೆ ಘಟೋತ್ಕಚನಂಗನೆಯರೀ। ಸುದತಿಯರ ಶೋಕವ ನಿರೀಕ್ಷಿಸು ಪಂಚಕೈಕೆಯರ ॥ ಒದರಿ ಪಾಂಡ್ಯನ ಹೆಂಡಿರಾಚೆಯ। ಲದೆ ಸುಸೋಮಕಸೃಂಜಯಾದ್ಯರು। ಕೆದರಿ ಹೊರಳುತಲಿದೆ ಮುರಾಂತಕ ನಿನ್ನ ಥಟ್ಟಿನಲಿ ॥ ೧೦ ॥ ಸುಖಿಕಣಾ ಭೂರಿಶ್ರವನ ವರ। ಸಖಿಯುದೇ ಪಾಡಳಿವ ನಿಮ್ಮಯ। ಸಖನ ಗೆಲಿಸಿದಿರಿವನ ಮುರಿದಿರಿ ರಾಧೆಯಾತ್ಮಜನ ॥ ನಿಖಿಳಯಾಚಕಜನಸಹಿತ ತ। ತ್ಸಖಿಯರಳುತಿದೆ ಕರ್ಣ ಮರಣಕೆ। ನಿಖಿಳಜಗ ನೀನೊಬ್ಬ ತಪ್ಪಿಸಿ ಮರುಗಿತಂದಿನಲಿ ॥ ೧೧ ॥ ಭಾನುದತ್ತನ ಮೇಲೆ ಹೊರಳುವ। ಮಾನನೀಯರನೀಕ್ಷಿಸೈ ಮಾತ್ಸ್ಯನುಗಳ ನೋಡಿತ್ತಲಿದೆ ದುಶ್ಶಾಸನಾದಿಗಳ ॥ ಏನನೆಂಬೆನು ತನ್ನ ಸೊಸೆಯರ। ಹಾನಿಯನು ಮಾದ್ರೇಶನರಸಿಯ। ರೇನುಧರ್ಮದಲಿದ್ದರೆಂದಳಲಿದಳು ಗಾಂಧಾರಿ ॥ ೧೨ ॥ ತಂದೆ ನೋಡೈ ಕೃಷ್ಣ ತನ್ನಯ। ನಂದನನ ಸೊಸೆಗೆ ಕಿರಿಯಳ। ನಿಂದು ಮುಖಮುಶ್ಶಳೆಯನಾ ಸೈಂಧವನವಲ್ಲಭ

ಭೆಯು ॥ ಅಂದು ಕಲಿವಿವಿಧವ್ಯೂಹದರಿಗುರು। ನಿಂದೊಡೆಯು ಹುಸಿರಾತ್ರಿಯಲಿ ನೀ । ಕೊಂದಲ್ಲೈ ತನ್ನಳಿಯನೆನು ವರಸಿಂಧು ಭೂಪತಿಯ ॥ ೧೩ ॥ ಎನುತ ಬರೆಬರೆ ಮುಂದೆ ಕಂಡಳು। ತನುಜನನು ಭೀಮನ ಗದಾಘು । ಟ್ಟನದ ಗಾಯದವ್ವೈಯ ಖಂಡಿಸಿದೂರುಮಂಡಲದ ॥ ನನೆದಹುಡಿಮುಗ್ಗುಲಿನ ರಕ್ತದ । ಹೊನಲ ಹೊಲಸಿನ ಘೂಕಕಾಕ । ಧ್ವನಿಭಯಂಕರಸಂವಿದಾನದಕೌರವೇಶ್ವರನ ॥ ೧೪ ॥ ಇತ್ತ ನೋಡ್ಕೆ ಕೃಷ್ಣ ತನ್ನಯ । ಮತ್ತದಂತಿಯನಿಂದುಕುಲರಾ । ಜೋತ್ತಮನನೇಕಾದಶಾಕ್ಷೌಹಿಣಿಯವಲ್ಲಭನ ॥ ಹತ್ತೆ ಹಿಡಿದೊಲ್ದೈಸುವವರು ವರ । ಮತ್ತಗಜಗಾಮಿನಿಯರೀಗಳು । ಸುತ್ತುಮುತ್ತಿತು ಘೋಕವಾಯಸಜಂಬುಕವ್ರಾತ ॥ ೧೫ ॥ ಎನುತ ಬಿದ್ದಳು ಮೂರ್ಛೆಯಲಿ ಮಾ । ನಿನಿಯನೆತ್ತಿದನಸುರರಿಪು ನೃಪ । ವನಿತೆಯರು ವರಭಾನುಮತಿಮೊದಲಾದ ನಾರಿಯರು ॥ ಜನಪತಿಯ ಮುಕ್ಕುರಿಕಿದರು ಸಂ । ಜನಿತಶೋಕಾದ್ಭುತದ ಹಾಹಾ । ಧ್ವನಿಯ ಧಟ್ಟಣೆ ಘಟ್ಟಿಸಿತು ಬ್ರಹ್ಮಾಂಡಮಂಡಲವ ॥ ೧೬ ॥ ಕ್ಷೇಮಧೂರ್ತನನಾಕಳಿಂಗನ । ಸೋಮದತ್ತನ ಚಿತ್ರಸೇನನ । ಭೀಮವೈರಿಯ ಲಂಬಸನ ಕಿಂಮಿರಾರ ನಂದನನ ॥ ಭೌಮಸುತನ ಸುಶರ್ಮಕನ ಸು । ತ್ರಾಮರಿಪುಗಳ ಭೂರಿಬಲದಸ । ನಾಮರರಸಿಯರಿಂದೆ ನಿಜೇಶರಮೇಲೆ ತನು ಹೊರಳೆ ॥ ೧೭ ॥ ಜನಪ ಕೇಳೀಚೆಯಲಿ ಕುಂತೀ । ವನಿತೆ ಕರ್ಣನಮೇಲೆ ಹೊರಳಿದ । ಳಿನತನುಜ ಹಾ ಕರ್ಣ ಹಾಹಾಯೆನುತ ಹಂಬಲಿಸಿ॥ ನಿನಗೆ ಧರ್ಮಸುತಾದಿಭೂಮಿಪ । ರನುಜರೀ ಮಾಯಾವಿ ಮಧುಸೂ । ದನನೆ ಮರೆಯಿಸಿಕೊಂದನಕಟೆಂದಳಲಿದಳು ಕುಂತಿ ॥ ೧೮ ॥ ಅರಿದನಂತಕಸೂನು ಮುರಹರ । ನಿರಿದನೈ ನಾವಿಂದು ಕರ್ಣಗೆ । ಕಿರಿಯರ್ರೈಲೇಸಾಯ್ತು ಗುರುಜನ ಬಂಧುಜನಹನನ ॥ ಉರುವ ಶಶಿವಂಶದ ಮಹಾನೃಪ। ರೆರಗಿದೊಡೆ ಪಾತಕಕೆ ಮುನ್ನೆ । ಚ್ಚರಿಸದಕಟಾ ತಾಯಿ ಕೆಡಿಸಿದಳೆಂದು ಬಿಸುಸುಯ್ದ ॥ ೧೯ ॥ ನುಡಿಯದಿಹರೇ ತಾಯೆ ಕರ್ಣನ । ಪೊಡನೆ ನೀವ್ ಬಂಡವರು ಯೆನ್ನದೆ । ಕೆಡಿಸಿದೆಯಲಾ ಧರಣಿಪತಿಯಾತನನು ಯೆನಿಸುವದ ॥ ಬಿಡಿಸಿದೆಯಲಾ ಯಿನ್ನು ಲೋಕದ । ಸಡಗರದ ನಾರಿಯರ ಹೃದಯದೊ। ಳೊಡೆದು ಹೋಗಲಿ ಯಂತರಂಗವು ಬಾಹ್ಯರಂಗದಲಿ ॥ ೨೦ ॥ ಹೋಗಲಿನ್ನಾ ಕ್ಷತ್ರಧರ್ಮ। ತ್ಯಾಗದುರ್ವ್ಯಸನಪ್ರಪಂಚವ । ನೀಗಿ ಕಳೆಯೆಂದಸುರರಿಪು ವೃತಂದು ಮನ್ನಿಸಿದ ॥ ಮೇಗಿವರ ಸಂಸ್ಕಾರಕಾರ್ಯನಿ । ಯೋಗವಿವೆ ಭಾರಾಂಕ ನಿನಗೆ ಸ । ರಾಗದಲಿ ಸಂತೈಸಿಯೆಂದನು ಭೂಪತಿಗೆ ಶೌರಿ ॥ ೨೧ ॥ ವ್ಯಾಸನಾರದವಿದುರಸಾತ್ಯಕಿ । ಕೇಶವರು ದಾರುಕಯುಯುತ್ಸುಮ । ಹೀಶಮೊದಲಾದನಿಬರರಸರ ಸಾರಥಿವ್ರಾತ ॥ ಆಸಚಿವರಾಹಸ್ತಿನಾಪುರ । ದಾಸಮಸ್ತಪ್ರಕೃತಿಜನ ಸಂ । ತ್ರಾಸಿದರು ಸಂಸ್ಕಾರವಿಧಿಯನು ಹತಮಹೀಶರಿಗೆ ॥೨೨॥ ಕುರುಪತಿಯ ರವಿಸುತನ ಮಾದ್ರೇ । ಶ್ವರನ ದುಶ್ಶಾಸನ ವಿಕರ್ಣ । ದ್ಗರ ಜಯದ್ರಥಬಾಹ್ಲಿಕನಭಗದತ್ತಲಕ್ಷಣನ ॥ ಗುರುವರನು ಪಾಂಚಾಲಮತ್ಸ್ಯೇಶ್ವರನ ಕುಂತೀಭೋಜನೃಪನು । ಖ್ಯರನು ವಿಧಿಪೂರ್ವಕದಿದಹಿಸಿದರಾಹಿತಾಗ್ನಿಯಲಿ ॥೨೩॥ ಕಳಚೌಕವ ಸುತ್ತಲೊಟ್ಟಿಸಿ । ತಳಿಗಳನು ಬಹಳಾಗ್ನಿಯನು ಕೈ । ಗೊಳಿಸಿದರು ದಹಿಸಿದರು ಬಹಳಾಕ್ಷೌಹಿಣೀಭಟರ ॥ ಬಳಿಕ ಹಸ್ತಿನಪುರದ ಸಿಂಹಾಸ್ಥಳಕೆ ಬಂದರು ನಿಖಿಳಕಾಂತಾ । ವಳಿಸಹಿತ ಗಂಗಾವಗಹನವ ಮಾಡಿದನು ನೃಪತಿ ॥೨೪॥ ಆನದಿಯ ತೀರದಲಿ ತಿಂಗಳು । ಮಾನನಿಧಿ ತತ್ಪ್ರೇತರಿಗೆ ಜಲ । ದಾ

ನವಿಧಿವಿಹಿತಪ್ರಪಂಚದ ಸಕಲಸತ್ಕ್ರಿಯೆಯು ॥ ಭೂನೃಪತಿ ಮಾಡಿದುದು ಬಂದುದು । ಜಾನಪದಜನ ವೈದೆ ಕುಂತೀ। ಸೂನುವನು ದರುಶನವ ಮಾಡಿತು ಕಾಣಿಕೆಯನೀಡಿ ॥೨೫॥ ತಿಳುಹಿರಾಯನ ಹೃದಯ ಸಂಚಿತ । ಕಲುಷವನು ಖಂಡಿಸಿ ಗತಾಕ್ಷನ । ಬಲಿದಚಿತ್ತವ್ಯಥೆಯನಾರಿಸಿ ನೃಪವಧೂಜನದ ॥ ಅಳಲ ನಾರಿಸಿ ಗಜಪುರದ ನೃಪ । ನಿಳಯವನು ಹೊಗಿಸಿದನು ಯದುಕುಲ । ತಿಲಕಗದುಗಿನವೀರನಾರಾಯಣ ನು ಕರುಣದಲಿ ॥ ... ... ॥೨೬॥

ಅಂತು ಸಂಧಿ ೧೨ಕ್ಕಂ ಪದ ೬೦೭ಕ್ಕಂ ಮಂಗಳಮಸ್ತು.

ಹದಿಮೂರನೆಯ ಸಂಧಿ.

॥ಸೂಚನೆ॥ ದೇವಸಂತತಿ ನಲಿಯೆ ಪಾಂಡವ । ಜೀವಹರಿಯೆಂಬೀ ಪ್ರತಿಜ್ಞೆಯು । ಭಾವ ಸಂದುದು ಧರ್ಮಜನ ಪಟ್ಟಾಭಿಷೇಕದಲಿ॥

॥ ಪದ ॥ ಕೇಳು ಜನಮೇಜಯಧರಿತ್ರೀ । ಪಾಲ ಹಿಮಗಿರಿ ತೊಡಗಿ ಸಾಗರ। ವೇಳಾಪರಿಯಂ ತಖಿಳನಗರಗ್ರಾಮಪುರ ವರದ ॥ ಮೇಲುವರ್ಣಪ್ರಮುಖರಾಚಾಂ । ಡಾಲರವಧಿಯ ಸಕಲಭೂಜನ । ಜಾಲ ಹಸ್ತಿನಪುರಿಗೆ ಬಂದುದು ಕಂಡುದವನಿಪನ ॥ ೧ ॥ ಭುವನಮುದ್ದಲಕಣ್ವಕರಭಾ । ರ್ಗವಭರ ದ್ವಾಜಾಂಗಿರಸ ಗಾ । ಲವಪುಲಸ್ತ್ಯವಸಿಷ್ಠಗೌತಮ ಯಾಜ್ಞವಲ್ಕ್ಯಮುನಿ ॥ ಧ್ರುವವಿಭಾಂಡಕಗಾ ರ್ಗ್ಯಘಟಸಂ । ಭವಮೃಕಂಡುಸುತಾದಿಭೂಮಿ । ಪ್ರವರಮುನಿಗಳು ಬಂದು ಕಂಡರು ಧರ್ಮನಂದ ನನ ॥ ೨ ॥ ಜಲಧಿಮಧ್ಯದಕುರುವಘಟ್ಟಾ । ವಳಿಯಕೊಳ್ಳದ ಕುಹರಕುಂಜರ । ನೆಲೆಯ ಗಿರಿಸಾನು ಗಳ ಶಿಖರದ ದುರ್ಗವೀಥಿಗಳ ॥ ನೆಲನಶೇಷಪ್ರಜೆ ನಿಖಿಳಮಂ । ಡಳಿಕಮನ್ನೆಯಮಂದಿಜನಸಂ । ಕುಲ ಮತಂಗಜಪುರಕೆ ಬಂದುದು ನೃಪನಕಾಣಿಕೆಗೆ ॥ ೩ ॥ ವ್ಯಾಸನಾರದ ಕೃಷ್ಣ ಮೊದಲಾ । ಗೀಸಮಸ್ತ ಮುನೀಂದ್ರನಿಕರ ಮ । ಹೀಶನನು ಪಟ್ಟಾಭಿಷೇಕಕೆ ಮನವನೊಡಬಡಿಸಿ ॥ ದೋಷರಹಿತಮುಹೂರ್ತ ಲಗ್ನದಿ । ನೇಶವಾರಶುಭಗ್ರಹೋದಯ । ಲೇಸೆನಲು ನೋಡಿದರು ಮಿಗೆ ಗಾರ್ಗ್ಯಾದಿಜೋಯಿಸ ರು ॥ ೪ ॥ ತರಿಸಿ ಮಂಗಳವಸ್ತುಗಳ ಸಂ । ವರಿಸಿ ಬಹುವಿಧವಾದ್ಯರವವಿ । ಸ್ತರದ ಪಂಚಮಹಾನಿ ನಾದದ ಸರ್ವಜನ ಮನದ ॥ ಹರುಷಪೂರದ ವೇದಮಂತ್ರೋ । ಚ್ಚರಣ ಸಾರದನೃಪನ ಪಟ್ಟದ । ವರಮಹೋತ್ಸವವೆಸೆಯಲೆಸಗಿದನಸುರರಿಪುವಂದು ॥ ೫ ॥ ಸುರಪತಿಖಿಯಮನಿರುತಿವರುಣಾ । ದ್ಯರು ಮರುತಹರಸಖನುಯಿಶಾ । ನ್ಯರು ಮಹೋರಗ ಗರುಡಗಂಧರ್ವರು ವಿಮಾನದಲಿ ॥ ನೆರೆದು ಕಿ ನ್ನರಕಿಂಪುರುಷರ । ಪ್ಸರಿಯರಾನಂದದಲಿ ವೀಣಾ । ವರಸುಗಾನವಿನೋದನೃತ್ಯದೊಳೊಲಿಸಿದರು ಸ

ಭೆಯು ॥ ೬ ॥ ಧರಣಿಪತಿಧೃತರಾಷ್ಟ್ರ ವಿದುರರು ವರಪುರೋಹಿತಧೌಮ್ಯ ನೀಲಾಂ । ಬರರು ಯಾ
ದವರೆರಸ ವೇದವ್ಯಾಸ ನಾರದರು ॥ ತರುಣಿಯರು ಗಾಂಧಾರಿ ಕುಂತಿಯು ಪರಮಮುನಿವಧುನಿಕರ
ಧರಣೀ । ಸುರರು ಮಂತ್ರಾಕ್ಷತೆಯ ಸೂಸಿದರವನಿಪನ ಹರಸಿ ॥ ೭ ॥ ಆಮುದಾ ಪಟ್ಟಾಭಿಷೇಕದೊ ।
ಳಾದುರಾತ್ಮಕಭಾಷ್ಯಳನ ಪರಿ। ವಾದವನು ಋಷಿನಿಕರ ಕೇಳಿದು ಖತಿಯು ಭಾರದಲಿ ॥ ಭೇದಿಸಿದನಿವನ
ಸುರನೆಂದು ವಿ । ಷಾದವನ್ನಿಯಲುರುಹಿದರು ಬಳಿ । ಕಾದರಿಸಿ ಧರ್ಮಜನ ಸಂತೈಸಿದನು ಮುರವೈ
ರಿ ॥ ೮ ॥ ವರಮುನೀಂದ್ರರನಖಿಳದೇಶಾಂ । ತರದ ಭೂಸುರವರ್ಗವನು ಸ । ತ್ಕರಿಸಿದನು ಗೋಭೂ
ಮಿದಾನಹಿರಣ್ಯ ವಸನದಲಿ॥ಪರಿಜನವ ಪುರುಜನವ ರತ್ನಾ । ಕರಪರೀತಮಹೀಜನವ ಮಿಗೆ ಸ । ತ್ಕ
ರಿಸಿ ವೈಭವ ವಿಭವಹಿತಸನ್ಮಾನ ದಾನದಲಿ ॥೯ ॥ ಅರಸಕೇಳ್ಳೆ ಪಟ್ಟವದು ಹಿರಿ। ಯರಸನದು ಯುವ
ರಾಜಪಟ್ಟಕೆ । ಹರಿತನೂಜನೊಳಾಯ್ತು ಸೇನಾಪತಿ ಧನಂಜಯನು ॥ ವರಕುಮಾರರು ಯಮಳರ
ಲ್ಲಿಗೆ । ಹಿರಿಯಸಚಿವರು ವಿದುರನವನಿಪ । ಪರುಠವಿಸಿದಯುಯುತ್ಸುವನು ಸರ್ವಾಧಿಕಾರದಲಿ ॥೧೦॥
ಆಸುಯೋಧನನರಮನೆಯನವ । ನೀಶಹೊಕ್ಕನು ಪವನಸುತದು । ಶ್ಯಾಸನನ ಸದನದಲಿ ಪಾ
ರ್ಥಗೆ ಕರ್ಣಭವನವನು ॥ ವಾಸವಾದುದು ಯಮಳರಿಗೆ ದು । ಶ್ಯಾಸನಾನುಜರರಮನೆಗಳಲಿ ।
ದೈಸುಮನೆ ಭಂಡಾರಕೋಠಾರಕ್ಕೆ ಸಮನಿಸಿತು ॥ ೧೧ ॥ ಮನ್ನಣೆಯಲಿ ಯುಯುತ್ಸು ಹೊಕ್ಕನು ।
ತನ್ನಮನೆಯನು ಭೀಷ್ಮಗುರುಕೃಪ । ರುನ್ನತಾಲಯವಾಯ್ತು ನೃಪನ ಪಸಾಯ್ತಸಂತತಿಗೆ ॥ ಮು
ನ್ನಿನವರೇ ಮಂತ್ರಿಸಚಿವರು । ಮುನ್ನದಾವಂಗಾವಪರುಠವ । ಭಿನ್ನವಿಲ್ಲದೆ ಪೌರಜನವೆಸೆದಿರ್ದುದಿಭ
ಪುರಿಯ ॥ ೧೨ ॥ ಅರಸು ಧರ್ಮಜನಾದ ನಮಗಿ । ನ್ನುರವಣಿಪಮನ ಬೇಡಬೇಡು । ತ್ತರಿಸು ವಿ
ಹಪರವೆರಡ ಪಡೆವೆವು ನಿಖಿಳಜನ ಹೊಗಳೆ ॥ ಪರಿಮಿತದ ಜನತಮ್ಮಸುಬಲವ । ನಿರದೆ ಮಾಡುವೆವೆಂ
ದು ಮುನಿಜನ । ಧರಣಿಸುರರೊಳಗಾದಪುರಜನರೊಲಿದು ಹರಸಿದರು ॥ ೧೩ ॥ ಗೌಳಬರ್ಬರಮ
ಗಧಸಿಂಧುನೆ । ಪಾಳವಾಂಧ್ರವಿದೇಹಕುರುಮಳೆ । ಯಾಳವತ್ಸತ್ರಿಗರ್ತಮತ್ಸ್ಯವಿದರ್ಭಕಾಂಭೋಜ॥
ಮಾಳವಾಂಗಕಿರಾತಭಲಿ ಬಂ । ಗಾಳಜೋನೆಗಚೀನಖರ್ಪರ । ಚೋಳಕೊಡಗನೃಪಾಲಕೊಂಕಣಕರು
ಕಹಹರಾಷ್ಟ್ರ ॥ ೧೪॥ ಶೂರಸೇನಮರಾಟಬಾಹ್ಲಿಕ ಕೇರಳಯುಗಂಧರಕುಕುರಸಂ । ವೀರಕೊಂಕಣ
ಚೇದಿಕೋಸಲನಿಷಧ ಸೌರಾಷ್ಟ್ರ ॥ ಪಾರಶಿಕಪಾಂಚಾಲವರಗಾಂ । ಧಾರಕರ್ಣಾಟಕ ಪುಳಿಂದಕಾ ।
ಶ್ಮೀರನಿಷಧವಿದರ್ಭಘೋಟಕವಂತಿಕಾಂಭೋಜ ॥ ೧೫ ॥ ಅಂಗಕುಂತಲಲಾಟಪೌಂಡ್ರಕ । ಲಿಂಗಗು
ರ್ಜರಪಾಂಡ್ಯಕೇಕಯ । ಸಿಂಗಳದಶಾರ್ಣವತುರುಷ್ಕಸಮುದ್ರಹೋಸಲದ ॥ ತುಂಗವಿಕ್ರಮನೃಪರನ
ವರವ । ರಂಗಚಿತ್ತವನಿತ್ತು ಲಾಲಿಸಿಮಂಗಳೋತ್ಸವದಿಂದ ಮನ್ನಿಸಿ ಕಳುಹಿದನು ನೃಪತಿ ॥ ೧೬ ॥
ಬಳಿಕ ಭೀಷ್ಮನಬಾಣಶಯನ । ಸ್ಥಳಕೆ ಧರ್ಮಜ ಬಂದು ಧರ್ಮಂ । ಗಳನುಕೇಳ್ದನು ರಾಜ
ಧರ್ಮಪುರಾಣಸಂಗತಿಯ ॥ ತಿಳಿದನಗ್ಗದದಾನಧರ್ಮಾ । ವಳಿಯನಾತನ ರಾಜಪಾಲನ ।
ನಳನಹುಷಭರತಾದಿಭೂಪರ ಗತಿಗೆ ಗುರುವಾಯ್ತು ॥ ೧೭ ॥ ಕದನದಲಿ ಕೈಯಾರೆ ದೈತ್ಯರ । ಸದೆ
ದು ಭೂಭಾರವನು ಪರಹಸ್ತದಲಿ ಮಾಡಿಸಿ ಕೊಟ್ಟಭಾಷಗೆ ಯುತ್ತರಾಯೆನಿಸಿ॥ ನದಿಯನಂದನನನು
ಪರಾನಂ । ದದಲಿ ಸೇರಿಸಿ ಪರಮಪರಿತೋ। ಷದಲಿ ಪಯಣವ ಮಾಡಿದನು ಮುರವೈರಿ ನಿಜಪುರಿಗೆ ॥

॥ ೧೮ ॥ ಯಮಸುತನ ತಕ್ಕೈಸಿ ಭೀಮನ । ಮಮತೆಯನು ಭುಲ್ಲೈಸಿ ಪಾರ್ಥನ । ನಮಿತಮಕು
ಟವ ನೆಗಹಿದನು ಪುಳಕಾಶ್ರುಪೂರದಲಿ ॥ ಯಮಳರನು ಸಂತೈಸಿ ರಾಯನ ।ರಮಣಿಯನು ಬೋಳೈ
ಸಿ ವಿದುರ । ಪ್ರಮುಖರನು ಬೀಳ್ಕೊಟ್ಟು ಬಿಜಯಂಗೈದನಸುರಾರಿ ॥ ೧೯ ॥ ದೇವದುಂದುಭಿರವದ
ಗಗನದ । ಪೂವಳೆಯ ಪೂರದ ಸಮಸ್ತಜ । ನಾವಳಿಯ ಜಯರವದ ನಿರ್ಘೋಷದಗಡಾವಣೆಯ ॥
ದೇವಕಿಯುವಸುದೇವರುಕುಮಿಣಿ । ದೇವಿಯರುಗಳ ಹರುಷದಲಿ ನಿ । ರ್ಭಾವ ಮಿಗೆ ನಿಜಪುರವ ಹೊ
ಕ್ಕನು ವೀರನಾರಯಣ ॥ ೨೦ ॥ ಭೂಸುರರ ಋಷಿಗಳನು ದಿಗ್ಧರ । ಣೀಶರನು ಮನ್ನಿಯರ ದಿಕ್ಕಿ
ನ । ದೇಶದೇಶದ ಮಂಡಲೀಕರ ನಗರಪಟ್ಟಣವ ॥ ಕಾಶಿಮೊದಲಾದಖಿಳತೀರ್ಥನಿ । ವಾಸಿಗಳ ಕಳುಹಿ
ದನು ಧರ್ಮಜ । ನಾಸಹೋದರರೊಡನೆ ರಾಜ್ಯವನಾಳಿದನು ನೃಪತಿ ॥ ೨೧ ॥ ನೆಲೆನೆಲೆಯ ಸೌಧಂ
ಗಳಲ್ಲಿಹ । ಲಲನೆಯರು ಶತಸಾಸಿರಪ್ರ ಮ್ಕೆ । ಯೊಲವಿನಲಿ ದ್ರೌಪದಿಸುಭದ್ರಾದೇವಿಯರಕೂಡೆ॥ ಒ
ಲಿದು ಗಾನವಿನೋದದಲಿ ಕೆಲ । ಕೆಲರು ವೀಣಾವಾದ್ಯದಲಿ ಕೆಲ। ಕೆಲರು ನಾನಾವಿದ್ಯೆಯಲಿ ರಂಜಿಸಿದ
ರೊಲವಿನಲಿ ॥ ೨೨ ॥ ರಚಿತಮಂತ್ರಿಪಸಾಯ್ತರು ಘಟೋ । ತ್ಕಚನ ತನಯನು ಮೇಘನಾದನು ।
ಪ್ರಚುರತರನಾಕರ್ಣಸುತವೃಷಕೇತುಮೊದಲಾದ ॥ ಸಚಿವರಾಪ್ತಕುಮಾರಬಾಂಧವ । ನಿಚಯವರ್ಗ
ದಲರಸ ರಂಜಿಸಿ । ಯುಚಿತದಿಂಪಾಲಿಸಿದನೇಕಚ್ಛತ್ರದಲಿ ನೆಲನ॥೨೩॥ ಭರತನಹುಷಯಯಾತಿನಳಕೂ।
ಬರಹರಿಶ್ಚಂದ್ರನುಪುರೂರವ । ವರದಿಳೀಪನುಸಗರದಶರಥರಾಮಮೊದಲಾದ॥ಧರಣಿಪರಿಗೈವಡಿಯೆನಿಸಿ
ಸು । ಸ್ಥಿರದಿ ನೃಪನಾಳಿದನು ರಾಜ್ಯದ । ಸಿರಿಯ ವರ್ಣಿಸಲರಿಯೆ ಕೇಳ್ ಜನಮೇಜಯಕ್ಷಿತಿಪ॥೨೪॥
ವಾಸವನ ವೈಭವಕೆ ಮಿಗಿಲೆಂ । ದಾಸುರರು ಕೊಂಡಾಡೆ ಶ್ರೀಲ । ಕ್ಷ್ಮೀಶನಂಘ್ರಿಯ ಭಜಿಸುತವೆ ಸಾ
ಮ್ರಾಜ್ಯಭೋಗದಲಿ ॥ ಭಾಸುರದ ನವರತ್ನಮಯಸಿಂ । ಹಾಸನದ ವಿಭವದಲಿ ರಂಜಿಸೆ । ದೇಶ ನಲಿ
ದುದು ಕೀರ್ತಿಲತೆ ಹಬ್ಬಿದುದು ತ್ರೈಜಗವ ॥ ೨೫ ॥ ಈತೆರದಿ ಪಾಂಡವರ ಸಲಹಿದ । ಪೀತವಸನಮು
ಕುಂದಕಂಸಾ । ರಾತಿಕೃಷ್ಣನ ಚರಿತಪೀಯೂಷವನು ಸಲಿಸಲಿದು ॥ ಸೂತಮುನಿ ಪೇಳಿದನು ತಪಸಿ ।
ವ್ರಾತವಾನಂದದಲಿ ಕೇಳ್ದತಿ ।ಪ್ರೀತಿಯಿಂ ಮನ್ನಿಸಿದರಾಮುನಿವರನ ಕರುಣದಲಿ ॥ ೨೬ ॥ ಅರಸ ಕೇ
ಳೈ ಸಕಲವೇದದ । ತಿರುಳೆನಿಪಭಾರತದ ಕಥೆಯನು । ವಿರಚಿಸಿದಜಗದಘವ ಸಂಹರಿಸಲ್ಕೆ ಕೃತಿಯೆನಿ
ಸಿ ॥ ಹರಹಿದನು ತ್ರೈಲೋಕ್ಯದಲಿ ಕೇ । ಳರಸ ವೇದವ್ಯಾಸಮುನಿ ಮುರ। ಹರಚರಿತ್ರವಿದಖಿಳಲೋಕ
ದ ದುರಿತಹರವೆನಿಸಿ ॥ ೨೭ ॥ ಹರನ ಸಭೆಯೊಳಗೀಕೃತಿಯು ಮುರ । ಹರನಸಭೆಯೊಳು ಸಕಲವಿ
ದ್ಯಾ । ಧರರ ಸಭೆಯೊಳು ಕಮಲಭವನುದ್ದಂಡಸಭೆಯೊಳಗ ॥ ಸುರಪತಿಯ ಸಭೆಯಲ್ಲಿ ಪಾವಕ। ತ
ರಣಿಜನ ಸಭೆಯಲ್ಲಿ ನೈರುತಿ । ವರುಣಸಭೆಯಲಿ ಮೆರದುದ್ಮೆ ಭಾರತಕಥಾಮೃತವು ॥ ೨೮ ॥ ಸರ್ಪ
ಯಾಗದೊಳಾದಕರ್ಮದ । ದರ್ಪವನು ಕೆಡಯೊದೆದು ತೊಳಗಿದ । ನುಪ್ಪರದರವಿತೇಜದಲಿ ಸುರಸಭೆ
ಯು ಬೆರಗಾಗೆ ॥ ತಪ್ಪದೀಭಾರತವಕೇಳ್ದಂ । ಗಪ್ಪುದಮರಶ್ರೀಕದಂಬದೊ। ಳೊಪ್ಪವಿಂದ್ರನ ವಾಡಿ
ಯಲೆ ಜನಮೇಜಯಕ್ಷಿತಿಪ ॥ ೨೯ ॥ ಮುನಿಗಳೆಂಭತ್ತೆಂಟುಸಾವಿರ। ಘನಕಥಾಪೀಯೂಷವನು ಕೇ।
ಳ್ದನಿಬರಿತ್ತರು ಸೂತ ಮನದಣಿವಂತೆ ವಸ್ತುಗಳ ॥ ವನವಸಂಗಳಿಬಂದು ತಾಪಸ।ರನಿಬರುಂ ಸ್ವಸ್ಥಾ
ನಸಂಗತ । ರೆನಿಸಿ ಭಾರತಕಥೆಯ ಕೊಂಡಾಡಿದರು ಮನದಣಿಯೆ ॥ ೩೦ ॥ ಸನಕಕಶ್ಯಪಜನ್ಹುಜೈಮಿ

ನಿ । ವಿನುತವಿಶ್ವಾಮಿತ್ರನಾಂಗಿರ । ಮನುಮತಂಗನಗಸ್ತ್ಯಕಶ್ಯಪಗಾರ್ಗ್ಯಗೌತಮರು ॥ ಘನತರದವಾ
ಲ್ಮೀಕಿವಾಸಿಷ್ಠನನು ವೇದವ್ಯಾಸರೊಳಗಾದನಿಬರನು ಜನಮೇಜಯನು ಮನ್ನಿಸಿದನುಚಿತದಲಿ ॥೩೧॥
ನಿಮ್ಮ ಕಾರುಣ್ಯಾವಲೋಕನ । ವೆಮ್ಮಮೇಲುಂಟಾಗಿ ಭಾರತ । ಗಮ್ಯವೆನಿಸುವ ಕಥೆಯ ಪೇಳ್ದರಿಸೂ
ತನಂದದಲಿ ॥ ನಿರ್ಮಳಿತವಾಯ್ತೆನ್ನ ತನು ಸ । ದ್ಧರ್ಮವೈಶಂಪಾಯನನ್ನನು । ಬೊಮ್ಮ ರಥಗೂ
ಬೆನುಕಣಾ ಯೆಂದರಸ ಹೊಗಳಿದನು ॥ ೩೨ ॥ ಕೇಳು ಜನಮೇಜಯನೃಪಾಲ ಸಿಂ । ಲೋಲಕಥೆಯದ
ನಾದರಿಸಿಯಾ। ಕೇಳಿದೊಡೆ ಶತಯಾಗಫಲವಹುದಮರಲೋಕದಲಿ॥ ಲೋಲಲೋಚನೆಯರ ಸಮೇಳ
ದ । ಲಾಳುವರು ಹದಿನಾಲ್ಕುಲೋಕದ । ರಾಳುಗೆಲಸವ ಮಾಡುವರು ತೆತ್ತೀಸಕೋಟಿಗಳು ॥ ೩೩ ॥
ಧರೆಯೊಳೀಸತ್ಕಥೆಯ ಕೇಳಿದ । ನರರ್ಗೆ ಸಕಲೈಶ್ವರ್ಯಸಂತತಿ । ವರಶುಭೋದಯಭುಕ್ತಿಮುಕ್ತಿಯ
ನೀವುದನವರತ ॥ ಹರನಸಾರೂಪ್ಯವನು ಕೇಳ್ಮರ । ಹರನ ಸಾಲೋಕ್ಯವನು ಭಾರತಿ । ವರನ ಸಾಯು
ಜ್ಯವನು ಪಡೆವರು ನೃಪತಿಕೇಳೆಂದ ॥ ೩೪ ॥ ಪುಣ್ಯಕಥೆಯನು ಪೊಗಳ್ದಜನರಿಗ । ಗಣ್ಯದೈಶ್ವರ್ಯ
ವನು ಹರಿ ಕಾ । ರುಣ್ಯದಲಿ ಕೊಟ್ಟಿಹಪರಂಗಳಲ್ಲಿದ ಸಲಹುವನು ॥ ಹಣ್ಣಿತಲೆಗೇರಿಸಿ ಮೆರವಮು ।
ಕ್ಕಣ್ಣನಿಷ್ಟವನೀವನೀಲಾ । ವಣ್ಯಮಯ ಸತ್ಕೃತಿಯ ಕೊಂಡಾಡವವರಾರಂದ ॥ ೩೫ ॥ ಸರಸಿಜೋ
ದ್ಭವನರಸಿ ಭಾರತಿ । ಹಿಮಯಮಧುಗೋಮಿನಿಯ ಸಭೆಯಲಿ । ಸುರಸತಿಯರಾಸ್ಥಾನವಲಿ ದಿಗ್ವನಿತೆಯ
ರ ಹೊರೆಯ ॥ ವರವನಿತೆಶಚಿದೇವಿಯೂರ್ವಶಿ । ಯರ ಸಮೀಪದರಂಭೆಯಿದಿರಲಿ । ವರಕಥಾಪೀ
ಯೂಷಪಾನಿಗಳಾದರೊಲವಿನಲಿ ॥ ೩೬ ॥ ವಿಪ್ರಜನರಾದರಿಸಿ ಕೇಳ। ಲ್ಕಪ್ಪುದೈ ಸಚ್ಚರಿತ ಸದ್ಗುಣ।
ಸುಪ್ರತಿಷ್ಠಿತವಪ್ಪಪುತ್ರಕಳತ್ರಸಂಪದವು ॥ ಗೊಪ್ಪವೆನಿಸುವ ಶ್ರುತಿಸುಯೋಗ್ಯತೆ। ಕ್ಷಿಪ್ರದಲಿ ಕೈಸಾರು
ವುದುತಾ।ವೊಪ್ಪುವರಲೈ ಬ್ರಹ್ಮಸಭೆಯೊಳಗೆಂದನಾಮುನಿಪ ॥೩೭॥ ಭವದುರಂತದುರವಕಟ ಹಂಸಾ। ವು
ವನೆ ನೆನೆವರು ಕಾಲಚಕ್ರದ । ಜವನವೇಗೆಯ ಜಣಾಗಜಾರುವರಖಿಳಮಾನವರು ॥ ಕವಿಕುಮಾರವ್ಯಾಸ
ಸೂಕ್ತದ । ಸವಿಯದಮೃತವನೊಲಿದೊಲಿದು ಸು । ಶ್ರವಣದಲಿ ಕುಡಿಕುಡಿದು ಪದವಿಯಪಡೆವುದೀ
ಲೋಕ ॥ ೩೮ ॥ ವೇದಪಾರಾಯಣದಫಲ ಗಂ । ಗಾದಿತೀರ್ಥಸ್ನಾನಫಲ ಕೃಚ್ಛ್ರಾದಿತಪಸಿನಫಲವು
ಜ್ಯೋತಿಷ್ಟೋಮಯಾಗಫಲ ॥ ಮೇದಿನಿಯನೊಲಿದಿತ್ತಫಲವ । ಸ್ತ್ರಾದಿಕನ್ಯಾದಾನಫಲವಹು । ದಾ
ದರಿಸಿ ಭಾರತದೊಳೊಂದಕ್ಷರವ ಕೇಳ್ದರಿಗೆ ॥ ೩೯ ॥ ಹೇಮಖುರಶೃಂಗಾರಭರಣವು। ಕಾಮಧೇನುಸಹ
ಸ್ರಕಪಿಲೆಯು । ಸೋಮಸೂರ್ಯಗ್ರಹಣದಲಿ ಸುರನದಿಯತೀರದಲಿ ॥ ಶ್ರೀಮುಕುಂದಾರ್ಪಣವೆನಿ
ಸಿ ಶತ। ಭೂಮಿದೇವರಿಗಿತ್ತಫಲವಹು।ದೀಮಹಾಭಾರತದೊಳೊಂದಕ್ಷರವ ಕೇಳ್ದರಿಗೆ ॥೪೦॥ ಚೋರ
ನಿಂದಿಸಿ ಶಶಿಯಬೈದೊಡೆ।ಕ್ಷೀರವನು ಕ್ಷಯರೋಗಿ ಹಳಿದೊಡೆ।ವಾರಣಾಶಿಯ ಹಳವ ನಿಂದಿಸಿ ನಕ್ಕೊಡೇ
ನಹುದು ॥ ಭಾರತದ ಕಥನಪ್ರಸಂಗವ । ಕ್ರೂರಕಮಿರ್ಗಗಳೇನಬಲ್ಲರು । ಘೋರತರರೌರವವ ಕೆಡಿಪುದು
ಕೇಳ್ದಸುಜನಂಗೆ ॥ ೪೧ ॥ ಶ್ರೀಮದಮರಾಧೀಶನುತ ಗುಣ । ತಾಮರಸಪದ ವಿಪುಳನಿರ್ಮಳ । ನಾ
ಮನೆನ್ನುಪಮನಿಖಿಳಯತಿಪತಿದಿವಿಜವಂದಿತನು ॥ ರಾಮನೂರ್ಜಿತನಾಮ ಸುಧೆಯಾ । ರಾಮನಾಹವ
ಭೀಮ ರಘುಕುಲ । ರಾಮ ಪಾಲಿಸು ವೊಲಿದು ಗದುಗಿನವೀರನಾರಯಣ॥೪೨॥ರಾಮಮಂಗಳನಾಮ
ಪ್ಲವಗ । ಸ್ತೋಮಭವಕುಲಭೀಮ ಸುಗುಣೋ । ದ್ದಾಮಜಯಸಂಗ್ರಾಮ ಸೀತಾರಾಮನಿಸ್ಸೀ

ಮ ॥ ಸಾಮಗಾನಪ್ರೇಮ ರಿಪುನಿ । ರ್ಧೂಮ ಕಾರುಣ್ಯಾಭಿರಾಮನೆ । ರಾಮ ರಕ್ಷಿಸು ಬೇಗ ದಶರಥ ರಾಮನೊಲಿದೆನ್ನ ॥ ೪೩ ॥ ಅರಸ ವೈಶಂಪಾಯನಿಗೆ ನಿಜ । ಕರವನುಗಿದಂ ಸುವರ್ಣವಸ್ತ್ರಾ । ಭರಣಗೋವ್ರಜಭೂಮಿಕನ್ಯಾದಾನಮಣಿಗಣದಿ ॥ ಹಿರಿದು ಪರಿಯಲಿ ಮನದಣಿವವೋಲ್ । ಉರುತರದ ದ್ರವ್ಯಾದಿಗಳ ಭೂ । ಸುರರಿಗಿತ್ತನು ರಾಯಜನಮೇಜಯಮಹೀಪಾಲ ॥ ... ॥ ೪೪ ॥

ಅಂತು ಸಂಧಿ ೧೩ಕ್ಕಂ ಪದ ೬೫೭ಕ್ಕಂ ಮಂಗಳಮಸ್ತು

ಇತಿ ಶ್ರೀಮದಚಿಂತ್ಯಮಹಿಮ ಗದುಗು ವೀರನಾರಾಯಣ ಚರಣಾರವಿಂದ ಮಕರಂದ ಮಧುಪಾನ ಪುಷ್ಟವಚಃ ಷಟ್ಪದೀನಿಕಾಯ ಶ್ರೀಮತ್ಕುಮಾರವ್ಯಾಸಯೋಗೀಂದ್ರ ವಿರಚಿತಮಪ್ಪ ಕರ್ಣಾಟ ಭಾರತ ಕಥಾಮಂಜರಿಯೋಳ್ ಗದಾಪರ್ವಂ ಸಮಾಪ್ತಮಾದುದು.

ದಶಪರ್ವ ಭಾರತಂ ಸಂಪೂರ್ಣಂ.